ಸ್ವದೇಶಾಭಿಮಾನಿ

Swadeshabhimani. Estd 1906

ಗಾಂಧಿಜಯಂತಿ ಸಂಚಿಕೆ

KANNADA ILLUSTRATED WEEKLY

[illegible]-ವಿಮರ್ಶೆ

[illegible] — ಬರೆದವರು, ಶ್ರೀ ಯೋಗ[illegible], ಪ್ರಕಾಶಕರು: ಮನೋಹರ ಗ್ರಂಥ ಭಂಡಾರ, ಧಾರವಾಡ, ಪುಟಗಳು ೧/೮ ಆಕಾರದ ೩೬, ಬೆಲೆ [illegible]

ಕನ್ನಡದಲ್ಲಿ ಶಿಶು ಸಾಹಿತ್ಯವು ಹೆಚ್ಚಾಗಿ ಬೆಳೆ [illegible] ಈ ವಿಷಯ ದಲ್ಲಿ [illegible] ಅನೇಕರು [illegible] ಯಲ್ಲಿ ಬಹಳ [illegible] ಕಾರ್ಯಗಳನ್ನು ಮಾಡಿದ್ದಾರೆ. ಕನ್ನಡದಲ್ಲಿ ಶಿಶು ಸಾಹಿತ್ಯವನ್ನು ವಿಪುಲಗೊಳಿಸಿದ್ದಾರೆ. ಹಾಸನದ ಶ್ರೀ. ಯೋಗೆ ರು ಈ 'ಪುಟ್ಟಿ' ಪುಸ್ತಕದಲ್ಲಿ ತಮ್ಮ ಇಪ್ಪತ್ತು ಶಿಶುಗೀತೆಗಳನ್ನು ಒಟ್ಟು ಕೂಡಿಸಿದ್ದಾರೆ.

ಮೊದಲನೆಯ ಪದ್ಯ 'ಆಗ ಕೃಷ್ಣ ಸರ್ಪ' ಕಥಾಗೀತೆ. ಪಂಚತಂತ್ರದ ಈ ಕತೆಯನ್ನು ಶ್ರೀ ಯೋಗರು ಲಲಿತ ಶೈಲಿಯಲ್ಲಿ ಹಾಡಿದ್ದಾರೆ. 'ದೀವಳಿಗೆ' ಪ್ರಾಸಮಯವಾಗಿ ಚೆನ್ನಾಗಿದೆ. 'ಓದಿ ಬನ್ನಿ' ಎಂಬುದು ಕನ್ನಡದ ಮಕ್ಕಳಲ್ಲಿ ಕನ್ನಡದ ಅಭಿಮಾನ ಹುಟ್ಟಿಸುತ್ತದೆ. 'ನರಿಯ ಯುಕ್ತಿ'ಯೂ ಒಂದು ಕಥಾಗೀತೆ. ಮತ್ತೊಂದು ಚಿಕ್ಕ 'ಚುಟುಕು'. 'ಮೆಣಸಿನ ಕಾಯಿ' ತನ್ನ ಸ್ವಭಾವಕ್ಕೆ ಸರಿಯಾಗಿಯೋ ಏನೋ ಸ್ವಾರಸ್ಯವೆನಿಸುವುದಿಲ್ಲ. 'ನಮ್ಮ ನಾಡು' ಮೈಸೂರ ಮಕ್ಕಳ ಹಾಡು. ಇನ್ನೊಂದು ಸಣ್ಣ 'ತ್ರಿಣುಕು' 'ಗಾಳಿಪಟ'ವನ್ನೂ ಕವಿಗಳು ಅಷ್ಟು ಚೆಂದವಾಗಿ ಕಟ್ಟಿಲ್ಲ. ಛಂದಸ್ಸೂ ಕೆಲಕಡೆ ವಿಷಮಗೊಂಡಿದೆ. 'ಮಿಠಾಯಿ' ಮಕ್ಕಳಿಗೆ ಚೆನ್ನಾಗಿ ರುಚಿಸೀತು. ಮೈಸೂರು ಹುಡುಗನ ಕೆಲಸವಾದರೂ 'ನನ್ನ ಕೆಲಸ' ಚೆನ್ನಾಗಿಯೇ ಇದೆ. 'ಮೂರ್ಖ' ಒಂದು ಕಥಾಗೀತೆ. ಮಕ್ಕಳ ಕೈಯಲ್ಲಿ ತಿರುಗುವ 'ಬುಗರಿ' ರಮ್ಯವಾದುದೇ. 'ಬಣ್ಣದ ಬಯಲ'ಯಲ್ಲಿ ಮಕ್ಕಳು ಕಟ್ಟುವ ಗಾಳಿಗೋಪುರದ ಕಲ್ಪನೆಯಿದೆ. 'ಆನೆ ಮತ್ತು ಮಗು' ಮತ್ತೊಂದು ಕಥಾಗೀತೆ. 'ಬಿಡುವು' ಮಕ್ಕಳು ರಜೆಯ ಕಾಲದಲ್ಲಿ ಪಡುವ ಆನಂದದಾಟಗಳ ಕಲ್ಪನೆಯ ವರ್ಣನೆ. 'ಮಾತಿನ ಮಂಗ' ಒಂದು ಸಂಭಾಷಣಾ ರೂಪವಾದ ಅಭಿನಯ ಗೀತೆ. 'ನಮ್ಮ ಕುದ್ರೆ' ಗಂಡು ಮಕ್ಕಳಿಗೆ ಅತ್ಯಂತ ಮೆಚ್ಚಿಗೆಯ ಗೀತೆಯೆನಿಸೀತು. 'ಬೀಸಣಿಗೆ'ಯಲ್ಲಿ ನಮಗೆ ಹೆಚ್ಚಿನ ಚಂದ ಕಾಣುಬರುವುದಿಲ್ಲ. 'ತಾಯಿ'ಯ ನೆನಪು ಕೊನೆಯಲ್ಲಿ ಇದೆ. ಹೀಗೆ ಇಪ್ಪತ್ತು ಶಿಶುಗೀತೆಗಳಿಂದ ಕೂಡಿದೆ ಈ ಪುಸ್ತಕ.

'ಗೋತ' 'ಕಲ್ಲುಪಟಿ' 'ಶ್ಯಾನೆ' 'ಚಕ್ಕಾಟ' ಇಂತಹ ಶಬ್ದಗಳು ನಮ್ಮ ಕಡೆಯ ಮಕ್ಕಳಿಗೆ ಅರ್ಥವಾಗಲಾರವು. 'ಜಿಡದೆಲೆ ಕಾಯುವ' (ಪು. ೪) 'ಜಗವನೆಲ್ಲನೊಂದೆ ಸಾರಿ' (ಪು. ೧೦). 'ಸೊಂಡಲಿ ಎತ್ತಿ' (ಪು. ೧೪) ಇಂತಹ ತಪ್ಪು ಪ್ರಯೋಗಗಳನ್ನು ಸಂಗೋಳಿಸಲುಹುದಾಗಿತ್ತು. ಛಂದಸ್ಸಿನ ಹಿಡಿತ ಹಲವು ಕಡೆಗಳಲ್ಲಿ ತಪ್ಪಿ ಹೋಗಿದೆ. ಹೇಗಿದ್ದರೂ ಶಿಶುಗೀತದಲ್ಲಿ ಶ್ರೀ ಯೋಗರವು ಕುಶಲತೆಯನ್ನು ಪಡೆಯತಕ್ಕ ಶ್ರೈಯಂಬುದಕ್ಕೆ ಇದರಲ್ಲಿಯೇ ಸಾಕಷ್ಟು ನಿದರ್ಶನಗಳಿವೆ. ಹೆಚ್ಚಾಗಿ ಕಥಾಗೀತೆಗಳನ್ನೇ ಕೊಟ್ಟಿರುವುದರಿಂದ ಮಕ್ಕಳಿಗೆ ಈ ಪುಸ್ತಕವು ಹೆಚ್ಚು ಆನಂದವನ್ನು ಕೊಡಬಹುದೆಂದು ನಮ್ಮ ಅಭಿಪ್ರಾಯ. ಪುಸ್ತಕಕ್ಕೆ ಕೇವಲ ಒಂದಾಣೆಯ ಬೆಲೆಯಿಟ್ಟು ಪ್ರಕಟಿಸಿ ಲೇಖಕ ಪ್ರಕಾಶಕರು ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಕಾರ ಮಾಡಿದ್ದಾರೆ. ಪುಸ್ತಕವು ಶಾಲೆಯ ಮಕ್ಕಳ ಉಪಯೋಗಾರ್ಹವಾದುದು.

— ಜಯನ್ನಾರ

HALFTONE & LINE BLOCK MAKING UNDERTAKEN

Sharada Press, MANGALORE

ಯುದ್ಧ ನಿಧಿ

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

ರೂ. 9—0—0

[illegible] ಎಂ. [illegible]; ಉಡುಪಿ ಸರಕಾರಿ ಆಸ್ಪತ್ರೆಯ ಶಿಬಂದಿ.

ರೂ. 8—0—0

ಎ. ಎಸ್. ಮಹಮದ್ ಹೈದರ್ ಸಾಹೇಬ್; ಎ. ವೆಂಕಟಪ್ಪ.

ರೂ. 7—0—0

ಕುಕ್ಕುಂದೂರು ಪಂಚಾಯತು ಬೋರ್ಡು; ಹಳೆ ಪಂಚಾಯತ ಬೋರ್ಡು; ಕುಂಟಳಿ ಪಂಚಾಯತ ಬೋರ್ಡು; ಎಲ್ಲೂರು ಪಂಚಾಯತ ಬೋರ್ಡು; ರಾಮಣ್ಣ ಹೆಗಡೆ.

ರೂ. 6—0—0

ಉದ್ಯಾವರ ಪಂಚಾಯತ ಬೋರ್ಡು; ಮೂಲ್ಕಿ ಲೋಕಲ್ ಫಂಡ್ ಆಸ್ಪತ್ರೆ; ಪಿ. ಶ್ರೀನಿವಾಸ ನಾಯಕ್; ಶಾಂತಪ್ಪ ಶೆಟ್ಟಿ, ಗ್ರೇಸಿಯನ್ ರೇಗೊ.

ರೂ. 5—14—0

ಉಡುಪಿ ಪೋಲೀಸ್ ಸ್ಟೇಶನ್ ಶಿಬಂದಿ.

ರೂ. 5—4—0

ಬೈಲೂರು ಪಂಚಾಯತ ಬೋರ್ಡು, ಪುತ್ತೂರು ಫೋರೆಸ್ಟ್ ರೇಂಜಿನ ಶಿಬಂದಿ; ಎಚ್. ಎಸ್. ಹುಸೇನ್ ಸಾಹೇಬ್.

ರೂ. 5—0—0

ಲಿಂಗಪ್ಪ; ಎಂ. ದೇವಪ್ಪ ಕಾಮತ್; ನೆಂಯೂರು ರಾಮಣ್ಣ ಗೌಡ; ಕೃಷ್ಣಪ್ಪ ಗೌಡ; ಸೀತಾರಾಮ ಕೋಟ್ಯಾಧಿಕಾರ್ಯ; ಬಡೆಕಿಲ ಶಂಭು ಶರ್ಮ; ಬಿ. ಅಚ್ಯುತ ಬಾಳಿಗ; ಮೂಳ ನಾರಾಯಣ ಭಟ್ಟ; ವೈ. ತೀಜಪ್ಪ ಶೆಟ್ಟಿ; ಕೆ. ಎನ್. ಶೆಣೈ ಮತ್ತು ಕೆ. ಆರ್. ಶೆಣೈ; ಟಿ. ಸಂಜೀವ ರಾವ್; ಎಂ. ಮಾಧಪ್ಪ ಉರಾಳ; ಕುಂದಾಪುರ ಬಾಡಿನ ಸಿಂಪೆತ್ಯಾಚರ್ ಮೆಂಬರ್; ಕುಂದಾಪುರ ಆಸ್ಪತ್ರೆಯ ಶಿಬಂದಿ; ಮಿಸೆಸ್. ವೈ. ಆರ್. ಶೆಟ್ಟಿ; ಮಿಸೆಸ್. ರಾಧಾಬಾಯಿ ಕಾಮತ್; ಚಂದಪ್ಪ ಶ್ಯಾನುಭಾಗ; ಕೆ. ಗೋವಿಂದ ಶೆಟ್ಟಿ; ಸಿ. ಎಂ. ಕುಂಜುಂಬು ನಾಯರ್; ಕಡೆವರತ್ ಅಹಮ್ಮದ್; ಕೆ. ಶ್ರೀಧರ ಶೆಣೈ; ಟಿ. ವಿ. ಹೆಗಡೆ; ಸರ್ವೋತ್ತಮ ಪೈ; ದಾಮೋದರ ಪೈ; ಮಂಜುನಾಥ ಕಾಮತ್; ಬಿ. ಕೆ. ಸದಾಶಿವ ರಾವ್; ಯುವರಾಜ ಹೆಗಡೆ; ಉಗ್ಗಪ್ಪ ಅದ್ಧಂತಾಯ; ಟಿ. ವೆಂಕಪ್ಪ ಗೌಡ; ಮಹಮ್ಮದ್ ಮುಸಲಿಯಾರ್; ಪೆರ್ಗಡೆ ಗೌಡ; ಕೊಡಿಕಲ್ ಸುಂದರ ರಾವ್; ಕೆ. ವೆಂಕಟ್ರಾಯ ಪೈ ಬ್ರದರ್ಸ್; ಯು. ಮಮ್ಮದ ಬ್ಯಾರಿ; ಎಚ್. ಎಸ್. ಶಾಸ್ತ್ರಿ; ವೈ. ರಾಮಚಂದ್ರ ಶ್ಯಾನುಭಾಗ; ಬಿ. ದಾಸ ರೈ; ಸರಾಫ ಶಿವ ಭಟ್; ಡಾ. ಎಂ. ಸತ್ಯಸುಂದರ ರಾವ್; ಪುತ್ತೂರು ಮುಹಿದಂ ಇಸ್ಮಾಯಿಲ್ ಸಾಹೆಬ್; ಡಾ. ಕೆ. ಶೀನಪ್ಪ ಭಂಡಾರಿ; ಪಿ. ಬ್ರಹ್ಮಯ್ಯ ಶೆಟ್ಟಿ; ಪೆರಾಜೆ ನಾರಾಯಣ ಭಟ್ಟ; ರೆ. ಫಾದರ್. ಎಲ್. ಎಂ. ಪಿಂಟೊ; ಸುಬ್ರಾಯ ಹೆಬ್ಬಾರ; ಸೂರಪ್ಪ ಪೂಜಾರಿ; ನಾರಾಯಣ ರೈ; ಪದ್ಮನಾಭ ಏಡಪಡಿತ್ತಾಯ; ಪಿ. ಸಂಜೀವ ರಾವ; ಕೆ. ವ್ಯಾಸ ರಾವ್; ಎಸ್. ಎಸ್. ಅಪ್ಪಾಜಿ ರಾವ್; ಬಲ್ನಾಡ ವೀರ ಜೈನ; ಜತ್ತಪ್ಪ ರೈ; ಅಪ್ಪಯ್ಯ ರೈ; ಕೋಟೆ ಕೃಷ್ಣ ಭಟ್ಟ; ಯು. ರಾಮಪ್ಪ ಗೌಡ; ಕಾರ್ಕಳ ಲೋಕಲ್ ಬೋರ್ಡ್ ಸರ್ವೆಂಟ್ಸ್ ಕೋ-ಒಪರೇಟಿವ್ ಕ್ರೆಡಿಟ್ ಸೊಸೈಟಿ; ಕೆ. ಲಿಂಗಪ್ಪ ರೈ; ಎಂ. ಅನಂತ ರಾವ್; ಎಚ್. ಎಸ್. ಮಸ್ಕರೇಂಜಸ್; ನಾಗಪ್ಪ ಪೂಜಾರಿ; ಶೀನಪ್ಪ ಅರಿಗ; ಎಸ್. ಸುಬ್ಬರಾವ್; ಚನ್ನಪ್ಪ ಪೂವಣಿ; ಬ್ಯಾದಿನ್ ಕುಂಞಿ; ಶಿರ್ಲಾಲು ಪಂಚಾಯತ ಬೋರ್ಡ್; ಡಾ. ಎಂ. ಉಮೇಶ ರಾವ್; ಶ್ರೀ ವೆಂಕಣ್ಣ; ಪಿ. ನಾರಾಯಣನ್; ಜಿ. ಗೋವಿಂದ ಮೆನನ್; ಎನ್. ಕರುಣಾಕರನ್; ಬೆಳ್ತಂಗಡಿ ಪಂಚಾಯತ ಬೋರ್ಡ್; ರಾವ್ ಸಾಹೇಬ್ ಡಾ. ಪಿ. ಕುಡ್ವಾ; ಗವರ್ನ್‌ಮೆಂಟ್ ಬೋರ್ಡರ್ಸ್ ಸ್ಕೂಲ್, ಮಂಗಳೂರು;



'ಓವಲ್ಟಿನ್'

ನಿಮ್ಮ ತ್ರಾಣವನ್ನೂ ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ನೆನೆಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೋಸ್ಫೈಡ್. ಇತರ ಬದಲು ಪಾನೀಯಗಳನ್ನು ದೂರಮಾಡಿರಿ.

'ಓವಲ್ಟಿನ್'

OVALTINE [illegible]

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.

ವಿತರಣಕಾರರು: ಮೆಸರ್ಸ್

ಗ್ರೇಹೆಮ್ಸ್ ಟ್ರೇಡಿಂಗ್ ಕೊ, (ಇಂಡಿಯಾ) ಲಿಮಿಟೆಡ್

ಕ್ವೈಟನೆಸ್ ಹೋಲ್ ಥರ್ಡ್ ಫ್ಲೋರ್ 310, 311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು. ಕಲ್ಕತ್ತಾ, ಕರಾಚಿ ಮತ್ತು ಬೊಂಬೈ.

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ದೊರಕುತ್ತದೆ.

QV/70/39

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

4-10-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೪-೧೦-೧೯೪೦]

ಮಹಾತ್ಮಾಜಿಯವರಿಗೆ ವೈಸರಾಯರ ನಕಾರಾತ್ಮಕ ಉತ್ತರ!

ವಾಕ್ ಸ್ವಾತಂತ್ರ್ಯ ಕೊಡಲು ಸಾಧ್ಯವಿಲ್ಲ!

ಗಾಂಧಿಜಿಯವರಿಗೆ ವೈಸರಾಯರ ಪತ್ರ

ಕಾಂಗ್ರೆಸ್-ಸರಕಾರಗಳ ಸಂಧಾನ ಮುರಿಯಿತೆ?

ಮುಂಬಯಿಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾಜಿಯವರಿಗೆ ಕಾಂಗ್ರೆಸಿನ ಸರ್ವ ಸೇನಾಧಿಪತ್ಯವು ಒಪ್ಪಿಸಲ್ಪಟ್ಟಿತಷ್ಟೆ? ಮುಂದಿನ ಕಾರ್ಯಕ್ರಮವನ್ನು ಗೊತ್ತುಮಾಡುವ ಮೊದಲು, ತಾನು ವೈಸರಾಯರೊಡನೆ ಮಾತನಾಡುವೆನು ಭಾರತವು ಯುದ್ಧದಲ್ಲಿ ಸೇರಿಲ್ಲವೆಂದು ಪ್ರಚಾರ ಮಾಡಲು ಅವರ ಸಮ್ಮತಿ ಕೇಳುವೆನು ಎಂದು ಅವರು ಪ್ರಕಟಿಸಿ, ವೈಸರಾಯರ ಆಮಂತ್ರಣದಂತೆ ಸಿಮ್ಲಾಕ್ಕೆ ತಾ ೨೭ರಂದು ಹೋಗಿ ಭೇಟಿಯಾದರು, ಗಾಂಧಿಜಿಯವರಿಗೆ ವೈಸರಾಯರಿಂದ ಈ ರೀತಿ ನಕಾರಾತ್ಮಕ ಉತ್ತರ ಬಂತು

"ನೀವು ಕೇಳಿದ ವಾಕ್‌ಸ್ವಾತಂತ್ರ್ಯದಿಂದ ಯುದ್ಧಪ್ರಯತ್ನಕ್ಕೆ ಬಹಳ ಅಡ್ಡಿಯಾಗುವುದು. ಆ ಕಾರಣ ಭಾರತದ ವಿಷಮದೀ ಕಾಲದಲ್ಲಿ, ಅದರ ಹಿತದ ಸಲುವಾಗಿಯೇ, ಇದರಲ್ಲಿಯೂ ಅತ್ಯಂತ ಬಿಕ್ಕಟ್ಟಿನ ಈ ಕಾಲದಲ್ಲಿ ಅದನ್ನು ಕೊಡಲು ಎಂದಿಗೂ ಸಾಧ್ಯವಿಲ್ಲ".

ಅದಕ್ಕೆ ಮಹಾತ್ಮರು ಈ ರೀತಿ ಉತ್ತರ ಬರೆದಿರುವರು.

"ಇಷ್ಟಾದರೂ ಬ್ರಿಟಿಷ್ ಸರಕಾರಕ್ಕೆ ತೊಂದರೆ ಕೊಡಬೇಕೆಂದು ಕಾಂಗ್ರೆಸು ಬಯಸುವುದಿಲ್ಲ ಆದರೆ ಮಾನವ ಜಗತ್ತಿಗೆ ಬಂದೊದಗಿದ ಈ ಕಠಿಣ ಕಾಲದಲ್ಲಿ ಕಾಂಗ್ರೆಸು ತನ್ನ ಧರ್ಮವನ್ನು ಮರೆತು ತನ್ನ ಧೋರಣೆಯು ಬರಿಯ ಒಂದು ಪೂಜೆಯ ವಸ್ತು ಎಂದು ತಿಳಿದುಕೊಳ್ಳಲಾರದು ಕಾಂಗ್ರೆಸು ಮರಣ ಹೊಂದುವ ಪ್ರಸಂಗ ಬಂದರೆ ತನ್ನ ಧರ್ಮವನ್ನು ಉಚ್ಚರಿಸುತ್ತಾ ಜೀವ ಬಿಡುವುದು. ವಾಕ್ ಸ್ವಾತಂತ್ರ್ಯ ವೆಂಬ ಒಂದೇ ಒಂದು ವಿಷಯದ ಬಗ್ಗೆ ನಮ್ಮಿಬ್ಬರಲ್ಲಿ ಒಮ್ಮತವಾಗದಿದ್ದುದು ಅತ್ಯಂತ ದುರ್ದೈವದ ಸಂಗತಿ ಆದರೆ ಕಾಂಗ್ರೆಸಿನ ಸದುದ್ದೇಶವರಿತು ಅದೇ ದೃಷ್ಟಿಯಿಂದ ಧೋರಣವನ್ನು ಕೈಕೊಳ್ಳುವುದು ಸರಕಾರದವರಿಗೆ ಶಕ್ಯವಾದೀತೆಂದು ನಾನು ಇನ್ನೂ ಆಶೆ ತಳೆಯುತ್ತೇನೆ"

ಮಹಾತ್ಮರು ಸಿಮ್ಲಾದಿಂದ ವಾರ್ಧಾಕ್ಕೆ ನಲ್ಲಿ ಕಳೆದ ಡಿಲ್ಲಿಗೆ ಪ್ರಯಾಣ ಬೆಳೆಸಿದರು ಗಾಂಧಿ ಮತ್ತು ವೈಸರಾಯರೊಳಗೆ ಈ ವಿಷಯವಾಗಿಯೇ ನಡೆದ ಪತ್ರವ್ಯವಹಾರವು ಪ್ರಸಿದ್ಧವಾಗಿದೆ

ಈಗ ಭಾರತದ ರಾಜಕೀಯದಲ್ಲಿ ಬಹಳ ಬಿಕ್ಕಟ್ಟಿನ ಪ್ರಸಂಗವೇ ಬಂದೊದಗಿದೆ. ಗಾಂಧಿಜಿಯವರ ಬ್ರಿಟನಿನ ಬಗ್ಗೆ ಸಹಾನುಭೂತಿ ತೋರಿಸಬಲ್ಲರು ಆದರೆ ಇಂದಿನ ಹಿಂಸಾತ್ಮಕ ಯುದ್ಧವು ನಡೆಯುತ್ತಿರುವ ವರೆಗೆ ಅದಕ್ಕೆ ಬೆಂಬಲ ಕೊಡುವಂತಿಲ್ಲ ಮಾತ್ರವಲ್ಲದೆ ಭಾರತದ ಬಗ್ಗೆ ಬ್ರಿಟನು ನಡೆದುಕೊಂಡ ರೀತಿಯು ನ್ಯಾಯವಾದದ್ದೇ ಎಂಬ ಸ್ಪಷ್ಟೀಕರಣವು ಗಾಂಧಿಜಿಯವರಿಗೆ ಬೇಕಾಗಿತ್ತು ಅದರ ಪರಿಣಾಮವಾಗಿಯೇ ಭಾರತವು ಯುದ್ಧದಲ್ಲಿ ಸೇರಿಲ್ಲವೆಂದು ಸಾರಲು ನಮಗೆ ವಾಕ್ ಸ್ವಾತಂತ್ರ್ಯವನ್ನು ಕೊಡಬೇಕೆಂದು ಕೇಳಿದ್ದರು ಅದಕ್ಕೆ ಈಗ ನಕಾರವೆಂಬ ಉತ್ತರ ಬಂದಿದೆ

ಇಂದು ಯಾವುದಾದರೂ ಕಾರ್ಯ

ವೈಸರಾಯರು

ಕಾಂಗ್ರೆಸ ಕಾರ್ಯಕರ್ತರ ಪ್ರಸಂಗ ಬಂದಾಗ ಗಾಂಧಿಜಿಯವರ ... ಸರ್ವಸೇನಾಧಿಪತಿಯಾಗಿರುವುದು ... ಆಗದೆ ನ್ಯಾಯಮಾರ್ಗವನ್ನು ತೊರೆದು, ಹಿಂಸೆ ಅಸತ್ಯಗಳನ್ನು ... ಭಾರತವು ಸ್ವಾತಂತ್ರ್ಯವನ್ನು ಪಡೆಯುವ ಮಹಾ ಸಾಧನವನ್ನು ಮಾಡಬೇಕಾಗಿದೆ ಅದಕ್ಕಾಗಿ ಅತುಲ ಸ್ವಾರ್ಥತ್ಯಾಗವನ್ನಾದರೂ ... ಹಿಂದಿನಂತೆ ಮತ್ತೊಮ್ಮೆ ... ಸಹಿಸಬೇಕಾಗಿ ಬರಬಹುದು.

ಕಾಂಗ್ರೆಸಿನ ಧೋರಣೆಯು ಬ್ರಿಟನಿಗೆ ಪೀಡೆ ಕೊಡುವಂತಹುದಲ್ಲವೆಂಬುದನ್ನು ಹಿಂದೆ ಹಲವು ಸಾರಿ ಪ್ರಕಟಿಸಲಾಗಿದೆ. ಕೊನೆಯ ತನಕವೂ ಕಾಂಗ್ರೆಸು ಅದನ್ನೇ ಪ್ರಕಟಮಾಡಿದೆ. ಕಾಂಗ್ರೆಸಿನ ಅಂತರಾಳದಲ್ಲಿರುವ ಸದುದ್ದೇಶವನ್ನು ಮನಗಂಡು ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳನ್ನು, ಧೋರಣೆಗಳನ್ನು ಅದೇ ದೃಷ್ಟಿಯಿಂದ ನೋಡಿಕೊಳ್ಳುವುದು ಸರಕಾರಕ್ಕೆ ಶಕ್ಯವಾಗಬಹುದೆಂದು ಗಾಂಧಿಜಿಯವರು ಬಯಸುತ್ತಾರೆ

ಕಾಂಗ್ರೆಸ್ ಮತ್ತು ಸರಕಾರಗಳ ಒಡಂಬಡಿಕೆಯ ಸಂಭವವಿಲ್ಲವೆಂಬುದು ಸ್ಪಷ್ಟವಾಗಿದೆ. ಮುಂದಿನ ಕಾರ್ಯಕ್ರಮಗಳೇನೆಂಬುದು ಗಂಭೀರವಾದ ವಿಚಾರವಾಗಿದೆ

ನೋಟೀಸು

ಪುತ್ತೂರು ಡಿ. ಮು ಕೋರ್ಟಿನಲ್ಲಿ
OS 54/1939 R.I.A 844/1940

ವಾದಿದು, ಮುದ್ದನಾಯ್ಕ ಕೂಡ Petitioners
ಪ್ರತಿವಾದಿದು—ಗೋವಿಂದ ನಾಯ್ಕ ಕೂಡ ೩ ಜನರು—Respts

2ನೇ ಎದ್ರಿ ಶ್ರೀನಿವಾಸ ನಾಯ್ಕ—ಗೋವಿಂದ ನಾಯ್ಕನ ಮಗ, ಮಂಗಳೂರು ಶಹರು ಬಿಕ್ರ್ಣಕಟ್ಟೆ

ಮೇಲಿನ ನಂಬ್ರ ವ್ಯವಹಾರದಲ್ಲಿ ಅರ್ಜಿದಾರರಿಗೆ ಬರ ... ಎದ್ರಿ ... ಮತ್ತಿ ಕಾರಣದಿಂದ ... ಹೋದುದರ ಬಗ್ಗೆ ಅರ್ಜಿ ... ತಾ. 18-10-1940ಕ್ಕೆ ಇಟ್ಟಿರುತ್ತದೆ ಆದ್ದರಿಂದ ಆ ದಿವಸಕ್ಕೆ ಎದ್ರಿರು ತಮ್ಮ ಆಕ್ಷೇಪಗಳ ... ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಅವರನ್ನು ಹೊರತಾಗಿ ಎಂತ ಮಾಡಿ ಈ ವ್ಯವಹಾರವ ... ತೀರ್ಮಾನಿಸಲ್ಪಡುತ್ತದೆ ಎಂತ ಈ ಕೋರ್ಟಿನ ಹುಕುಂ ಪ್ರಕಾರ ... ಈ ನೋಟೀಸು ಕೊಡಲಾಯಿತು.

Puttur } B. Ramchandra Rau
19-9-40 } Pleader for Petitioner

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O S, 226/1940
ವೆಂಕಪ್ಪಗೌಡ—ವಾದಿ

ಮುಕ್ರಪ್ಪರೈ ಕೂಡ 4 ಜನರು—ಪ್ರತಿವಾದಿದು
2 ಪರಮೇಶ್ವರ—ವ್ಯಾಲಪ್ಪ ರೈ ಸೊಸೆ
3 ನಂಜಪ್ಪ , ಮುದ್ದಯ್ಯಗೌಡ
4 ವ್ಯಾಸರ ಸುಂದರ ... ಮಕ್ಕಳು ... ದಿಯಾನ ಅಣ್ಣ 3ನೇ ಪ್ರತಿವಾದಿ ನಂಜಪ್ಪ ... ಆಲೆಟ್ಟಿ ಗ್ರಾಮದ ಕುಡೆಕಲ್ಲು

ಪ್ರತಿವಾದಿರಿಂದ ತನಗೆ ... ವಸೂಲಿ ಬಗ್ಗೆ ವಾದಿಯು ದಾವಾ ಹೂಡಿ ಪ್ರತಿವಾದಿ ... ತಾ. 15-10-1940 ಕ್ಕೆ ಇಟ್ಟಿರುತ್ತದೆ, ಆದ್ದರಿಂದ ಆ ದಿವಸಕ್ಕೆ ಮೇಲ್ಕಂಡ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ಹೊರತಾಗಿ ಎಂತ ಮಾಡಿ ... ತೀರ್ಮಾನಿಸಲಾಗುತ್ತದೆಂತ ಈ ಮೂಲಕ ತಿಳಿಸಿಯದೆ. ಈ ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿದೆ.

Puttur } B.Ramchandra Rau
19-9-40 } Pleader for Plaintiff

ಸ್ವದೇಶಾಭಿಮಾನಿ

ತಾರೀಕು 4—10—1940

ಮಹಾತ್ಮರು ಚಿರಾಯುಗಳಾಗಲಿ!

ಮಹಾತ್ಮಾ ಗಾಂಧಿಯವರ ಜನ್ಮವಾರವು ಅಖಿಲ ಭಾರತದಲ್ಲಿ ಅತ್ಯಂತ ಉತ್ಸಾಹದಿಂದ ಆಚರಿಸಲ್ಪಡುತ್ತದೆ. ಭರತಮಾತೆಯ ಮಹಾಪುತ್ರನನ್ನು ಭಾರತೀಯರೆಲ್ಲರೂ ಕೂಡಿ ಸನ್ಮಾನಿಸುತ್ತಾರೆ. ಈ ಸಲದ ಅವರ ಜಯಂತಿ ವಾರವು ಅವರ ಜೀವನದಲ್ಲಿಯೇ ಮಾತ್ರವಲ್ಲ, ಇಡೀ ರಾಷ್ಟ್ರದ ಚರಿತ್ರೆಯಲ್ಲಿಯೇ ಹೆಚ್ಚಿನ ಮಹತ್ವದ ಐತಿಹಾಸಿಕ ವಿಶೇಷತೆಯುಳ್ಳದ್ದಾಗಿದೆ. ಏಕೆಂದರೆ, ಈ ವಾರದಲ್ಲಿ ಆಗುವ ಅವರ ಮತ್ತು ವೈಸರಾಯರೊಳಗಿನ ಭೇಟಿಯ ಪರಿಣಾಮವು ಭಾರತದ ಭವಿಷ್ಯವನ್ನು ನಿರ್ಮಾಣ ಮಾಡುವಷ್ಟು ವಿಶೇಷದ್ದಾಗಿದೆ. ಹಾಗಾಗಿ ಈ ಸಲದ ಗಾಂಧೀ ಜಯಂತಿಯು ಅಭೂತಪೂರ್ವ ಉತ್ಸಾಹದಿಂದ ಆಚರಿಸಲ್ಪಡುತ್ತದೆ.

ಇಂದಿನ ಲೋಕದ ಮಹಾವ್ಯಕ್ತಿಗಳಲ್ಲಿ ಗಾಂಧಿಜಿಯವರು ಅಗ್ರಗಣ್ಯರೆನ್ನಬಹುದು. ಲೋಕ ಹಿಂಸೆಯನ್ನು ಮಾಡುತ್ತಾ ಸರ್ವರ ದೃಷ್ಟಿಗೂ ಬಿದ್ದ ಹಿಟ್ಲರರಂಥವರ ಪ್ರಶಸ್ತಿಗೂ, ಲೋಕಶಾಂತಿಗಾಗಿ, ಸತ್ಯ ಅಹಿಂಸೆಗಳ ಶಾಂತಿ ಸಂದೇಶವನ್ನು ಸಾರುವ ಗಾಂಧಿಜಿಯಂಥವರ ಕೀರ್ತಿಗೂ ರಾತ್ರಿ ಹಗಲುಗಳಷ್ಟು ವ್ಯತ್ಯಾಸವಿದೆ. ಗಾಂಧಿಜಿಯವರು ತನ್ನ ನಿರ್ಮಲ ಜೀವನ ಧ್ಯೇಯಗಳಿಂದ ಶತ್ರುಗಳ ಪ್ರೀತಿಗೂ ಪಾತ್ರರಾಗಿದ್ದಾರೆ. ಗೌರವ ಪಡೆಯುತ್ತಾರೆ. ಮಹಾತ್ಮರು ಇಂದು ಕೇವಲ ಭಾರತದ ಒಬ್ಬ ಮಹಾ ವ್ಯಕ್ತಿಯಲ್ಲ, ಅಖಿಲ ಜಗತ್ತಿನ ಒಬ್ಬ ಮಹಾ ಪುರುಷರಾಗಿರುವರು.

ಮಹಾತ್ಮರು ಹುಟ್ಟಿದ ಹಬ್ಬದ ಆಚರಣೆಯು ಈ ತಿಂಗಳ ತಾ. ೨ರಿಂದ ಆರಂಭಿಸಿ ಒಂದು ವಾರಗಳ ವರೆಗೆ ನಡೆಯುವುದು. ಈ ಸಮಯದಲ್ಲಿ ಅವರನ್ನು ಹೊಗಳಿ ಹಾಡಿಕೊಂಡಾಡುವುದರಿಂದ ಮಾತ್ರ ಹೆಚ್ಚಿನ ಪ್ರಯೋಜನವಿಲ್ಲ. ಅವರ ಜೀವನ ಧ್ಯೇಯಗಳನ್ನು ಕಾರ್ಯರೂಪಕ್ಕಿಳಿಸುವ ಕೆಲಸದಲ್ಲಿ ನಿರತರಾಗಬೇಕು. ಮಹಾತ್ಮಾಜಿಯವರೇ ಈ ವಾರವನ್ನು ಖಾದೀ ವಾರವೆಂದು ಆಚರಿಸಬೇಕಾಗಿ ಸಾರಿರುವರು. ಖಾದಿಯಲ್ಲಿರುವ ಆಧ್ಯಾತ್ಮಿಕತೆ ಮತ್ತು ಆರ್ಥಿಕ ಮಹತ್ವಗಳನ್ನು ಮನಗಂಡು ಖಾದೀ ವಾರವನ್ನು ಯಶಸ್ವಿಯಾಗಿ ಮಾಡುವುದರಲ್ಲಿಯೇ ನಿಜವಾದ ಗಾಂಧಿ ಜಯಂತಿಯ ಆಚರಣೆಯ ಮಹತ್ವವಿದೆಯೆಂಬುದು ವ್ಯಕ್ತವಾಗುವುದು. ಇದು ಮಾತ್ರವಲ್ಲದೆ, ಗಾಂಧಿಜಿಯವರು ಭಾರತದ ಸ್ವಾತಂತ್ರ್ಯದ ಹೋರಾಟದಲ್ಲಿ ರಚನಾತ್ಮಕ ಕಾರ್ಯಗಳನ್ನು ಮುಂದಿಟ್ಟಿದ್ದಾರೆ. ಹರಿಜನ ಸೇವೆ, ಗ್ರಾಮೋದ್ಧಾರ ಹಿಂದೂ ಮುಸ್ಲಿಂ ಐಕ್ಯ ಇವೇ ಮೊದಲಾದ ಕಾರ್ಯಗಳನ್ನು ಬಹಳ ಯಶಸ್ವಿಯಾಗಿ ಆಚರಿಸಬೇಕು. ಸ್ವಾತಂತ್ರ್ಯದ ಮಾರ್ಗದಲ್ಲಿ ಭಾರತವು ಮುಂದಡಿಯಿಡುವಾಗ ಅದರಿಂದ ಹೆಚ್ಚಿನ ಪ್ರಯೋಜನವಾಗಲಿದೆ.

ಇಂದು ತಿರಿಗಿ ಗಾಂಧಿಜಿಯವರು ಕಾಂಗ್ರೆಸಿನ ಸರ್ವಾಸೇನಾಧಿಪತಿಗಳಾಗಿ ಮುಂದೆ ಬಂದಿದ್ದಾರೆ. ರಾಜಕೀಯದಲ್ಲಿ ಇದು ವಿಷಮಕಾಲ; ಸಂದುಕಾಲ, ಇಂತಹ ಸಂದರ್ಭದಲ್ಲಿ ಗಾಂಧಿಜಿಯಂತಹ ಪರಿಪಕ್ವಬುದ್ಧಿಯ ಮುಂದಾಳುವಿನ ಅವಶ್ಯಕತೆಯೇ ಇದೆಯೆಂಬುದು ಸರ್ವರಿಗೂ ತಿಳಿದಿದೆ. ಈ ಸಲದ ಅವರ ಸೇನಾಪತಿತ್ವದಲ್ಲಿ ಭಾರತವು ಸ್ವಾತಂತ್ರ್ಯವನ್ನು ಪಡೆಯುವ ಆಸೆ ಎಲ್ಲರಿಗೂ ಇದೆ. ಇಂತಹ ಸಂದರ್ಭ ಗಾಂಧಿಗಳಿಗೆ ಸಂಪೂರ್ಣ ವಿಧೇಯತೆ ತೋರಿಸಿ ಅವರ ಮಾತುಗಳನ್ನು ಶಿಸ್ತಿನಿಂದ ಪಾಲಿಸುವುದು ಅವಶ್ಯವಿದೆ. ಸತ್ಯ ಅಹಿಂಸೆಗಳನ್ನು ಪಾಲಿಸತಕ್ಕದಾಗಿದೆ. ಸತ್ಯ ಅಹಿಂಸೆಗಳಿಂದ ಭಾರತಕ್ಕೆ ಮಾತ್ರವಲ್ಲ ವಿಶಾಲವಿಶ್ವಕ್ಕೇ ಮಂಗಳವನ್ನುಂಟು ಮಾಡಲು ಗಾಂಧಿಜಿಯವರು ಪ್ರಯತ್ನಮಾಡುತ್ತಿದ್ದಾರೆ. ಅವರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಲಿ!

ತ್ರಿರಾಷ್ಟ್ರಗಳ ಒಪ್ಪಂದ

ಇಟಲಿ ಜರ್ಮನಿ ಮತ್ತು ಜಪಾನು ಈ ತ್ರಿರಾಷ್ಟ್ರಗಳು ಹತ್ತು ವರ್ಷಗಳ ರಾಜಕೀಯ ಒಪ್ಪಂದ ಮಾಡಿಕೊಂಡ ವಿಚಾರವು ಯುರೋಪಿನ ಹಾಗೂ ಏಶ್ಯಾದ ರಾಜಕೀಯ ವಾತಾವರಣದಲ್ಲಿ ಪ್ರಚಂಡ ವಿಚಾರ ಕ್ರಾಂತಿಯನ್ನು ಹುಟ್ಟಿಸಿದೆ. ಇದರಿಂದ ಇಂದು ನಡೆಯುತ್ತಿರುವ ಪ್ರಪಂಚ ಯುದ್ಧವು ಬೇಗನೇ ಕೊನೆಗಾಣಬಹುದೇ ಎಂಬ ಆಶೆಯು ನಿರ್ನಾಮಹೊಂದಿದಂತಾಗಿದೆ. ಯುದ್ಧಸಿದ್ಧತೆಯು ಮತ್ತಷ್ಟು ಶಕ್ತಿಪೂರ್ಣವಾಗಿ ನಡೆಯುವಂತಾಗಿದೆ. ಅನರ್ಥಗಳು ಹೆಚ್ಚುವುದು ಸಂಭವನೀಯವೆನಿಸಿದೆ.

ಈ ಒಪ್ಪಂದದ ವಿಚಾರವು ಹಲವು ಘಟನೆಗಳನ್ನು ಮುಂದೆ ತರುತ್ತದೆ. ಬ್ರಿಟನು ಫ್ರಾನ್ಸಿನ ಪತನವಾದ ಮೇಲೆ ಏಕಾಂಗಿಯಾಗಿ ನಾಜೀ ಆಕ್ರಮಣವನ್ನು ಇದಿರಿಸಬೇಕಾಯಿತು. ಅತ್ತ ಇಟೆಲಿಯು ಜರ್ಮನಿಯೊಡನೆ ಸೇರಿಕೊಂಡು, ಯುದ್ಧವು ಭೀಕರವಾಯಿತು. ಬ್ರಿಟನನ್ನು ಸರ್ವತ್ರ ಯುದ್ಧದಲ್ಲಿ ಪೀಡಿಸುವ ಘೋರತೆಯನ್ನು ಸಂಯುಕ್ತ ಶಕ್ತಿಗಳು ಕೈಗೊಂಡವು, ಬ್ರಿಟನು ಆಫ್ರಿಕದ ಯುದ್ಧದಲ್ಲಿ, ಬ್ರಿಟಿಷ್ ಸೋಮಾಲಿಲೇಂಡಿನಲ್ಲಿ ಪರಾಜಿತವಾದ ವಿಚಾರವು ಅಷ್ಟೇನೂ ಕ್ಷುಲ್ಲಕವಲ್ಲ. ಇದರಿಂದೆಲ್ಲಾ ಬ್ರಿಟನು ಅಮೆರಿಕವನ್ನು ತನ್ನ ಪಕ್ಷಕ್ಕೆ ಎಳೆದುಕೊಂಡು ಯುದ್ಧವನ್ನು ಭರದಿಂದ ಸಾಗಿಸುವ ತೀವ್ರ ಪ್ರಯತ್ನವನ್ನೇ ಮಾಡಿತು. ಇದರ ಫಲರೂಪವಾಗಿ ಆಂಗ್ಲೋ-ಅಮೇರಿಕನ್ ಒಪ್ಪಂದವು ಮೊನ್ನೆ ನೆರವೇರಿತು. ಅಮೇರಿಕದಂತಹ ಪ್ರಬಲ ರಾಷ್ಟ್ರವು ರಾಜಕೀಯದಲ್ಲಿ ಬ್ರಿಟನಿಗೆ ಹೆಚ್ಚು ಬೆಂಬಲ ಕೊಡುವ ಒಪ್ಪಂದ ಮಾಡಿಕೊಂಡಾಗ, ಸಹಜವಾಗಿ ಆಂಗ್ಲೇಯರು ಆನಂದಗೊಂಡರು. ಇದರ ಸಂದರ್ಭದಲ್ಲಿಯೇ ಇಟಲಿ ಜರ್ಮನಿಗಳು ಜಪಾನಿನೊಡನೆ ಒಪ್ಪಂದವನ್ನು ಮಾಡಿಕೊಂಡಿವೆ. ಈ ಒಪ್ಪಂದಗಳಿಗೆ ಹೀಗೆ ಪರಸ್ಪರ ಸಂಬಂಧವು ರಾಜಕೀಯದ ಕುರಿತು ವಿಚಾರ ಮಾಡುವವರಿಗೆ ಕಂಡು ಬಾರದೆ ಇರದು. ಆಂಗ್ಲೇಯರು ಅಮೇರಿಕದ ಒಪ್ಪಂದದಿಂದ ಆನಂದಿತರಾದಾಗ, ಇಟಲಿ ಜರ್ಮನಿಗಳು ಜಪಾನಿನ ಒಪ್ಪಂದದಿಂದ ವಿಜೃಂಭಿಸಿವೆ. ಅಂತೂ ಇದರ ಪರಿಣಾಮವಾಗಿ ಪ್ರಪಂಚ ಯುದ್ಧವು ತೀವ್ರ ತೀವ್ರವಾಗಿಯೇ ಆಗುವ ಹಾಗಾಗಿದೆ.

ಏಶಿಯಾ ಖಂಡದಲ್ಲಿ ಹೊಸ ರಾಜ್ಯವ್ಯವಸ್ಥೆಯನ್ನು ಸ್ಥಾಪಿಸುವುದು ಜಪಾನಿನ ಉದ್ದೇಶವಾಗಿದೆಯೆಂದು ಜಪಾನು ಸಾರುತ್ತಿದೆ. ಇದಕ್ಕೆ ಆಂಗ್ಲೋ ಅಮೇರಿಕನ್ ಒಪ್ಪಂದವು ದೊಡ್ಡ ತಡೆಯಾಗಬಹುದೆಂದು ವಿಚಾರಿಸಿ ಜಪಾನು ಸರ್ವಾಧಿಕಾರಿಗಳ ಸ್ನೇಹಕ್ಕೆ ಕೈಯೊಡ್ಡಿರುವುದಾಗಿ ಊಹಿಸಲು ಆಸ್ಪದವಿದೆ. ಸರ್ವಾಧಿಕಾರಿಗಳಿಗಾದರೂ ಜಪಾನಿನ ಬೆಂಬಲವು ಇಂದು ಹೆಚ್ಚಿನ ಸಹಾಯ ಕಾರಣವಾಗಬಹುದೆಂದ ಅವುಗಳು ಜಪಾನನ್ನು ಸಮೀಪ ಸೆಳೆಕೊಂಡಿವೆ.

ಅಮೇರಿಕವು ಇದು ವರೆಗೂ ಯುದ್ಧದಲ್ಲಿ ಇಳಿದಿಲ್ಲ. ಅದಕ್ಕಾಗಿ ಹಲಸಮಯಗಳಿಂದ ಯತ್ನಗಳೇನೋ ನಡೆಯುತ್ತಿರಬಹುದು. ಆದರೆ ಅಮೇರಿಕವು ತೀವ್ರ ವಿಚಾರ ಮಾಡುತ್ತಿದೆ. ತಾನು ಯುದ್ಧಕ್ಕಿಳಿದರೆ ತನ್ನ ಬೆನ್ನು ಹತ್ತಿ ಜಪಾನಿನ ಭೀತಿಯೇನು ಬರಬಹುದೆಂಬ ವಿಚಾರವು ಅಮೇರಿಕವನ್ನು ಇನ್ನೂ ದೀರ್ಘಾಲೋಚನೆಯಲ್ಲಿಯೇ ಮುಳುಗಿಸಲು ಅವಕಾಶವಾಗಿದೆ.

ತ್ರಿರಾಷ್ಟ್ರಗಳ ಒಪ್ಪಂದವು ಭಾರತದಲ್ಲಿಯೂ ಪರಿಣಾಮವನ್ನು ಹುಟ್ಟಿಸದಿರಲಾರದು. ಜಪಾನಿನ ಏಶಿಯಾ ನವರಚನೆಯ ಉದ್ದೇಶಕ್ಕೆ ಸರ್ವಾಧಿಕಾರಿಗಳ ಬೆಂಬಲವೂ ದೊರಕಬಹುದು. ಭಾರತದ ಯಾರಿಗೂ ಬಾಗಿಲು ತೆರೆದೇ ಇದೆ. ಭವಿಷ್ಯತ್ತಿನ ಗರ್ಭದಲ್ಲಿ ಎಂತಹ ವಿಷಜ್ವಾಲೆಯು ತುಂಬಿದೆಯೋ ಯಾರು ಹೇಳಬಲ್ಲರು?

ವಾಕ್ ಸ್ವಾತಂತ್ರ್ಯ

ಭಾರತದ ಜನತಾ ದೃಷ್ಟಿಯು ಈಗ ಕೆಲದಿನಗಳಿಂದ ಸಿಮ್ಲಾದಲ್ಲಿ ಗಾಂಧಿ ವೈಸರಾಯರೊಳಗೆ ನಡೆಯುತ್ತಿದ್ದ ಮಾತುಕತೆಗಳ ಕಡೆಗೆ ಹರಿದಿತ್ತು. ಇಂದು ಅದರ ವಿಷಯವಾಗಿ ಪೂರ್ಣ ಪ್ರಕಟಣೆ ಬಂದಿಲ್ಲವಾದರೂ, ವೈಸರಾಯರು ಮಹಾತ್ಮಾಜಿಯವರು ಕೇಳಿದ್ದ ವಾಕ್ ಸ್ವಾತಂತ್ರ್ಯಕ್ಕೆ ನಕಾರಾತ್ಮಕವಾದ ಉತ್ತರವನ್ನು ಕೊಟ್ಟರೆಂದು ಖಂಡಿತ ತಿಳಿದು ಬಂದಿದೆ.

ಗಾಂಧಿಜಿಯವರು ಮುಂದಿನ ಕಾರ್ಯಕ್ರಮಗಳ ವಿಚಾರವಾಗಿ ಪ್ರಕಟಣೆಯನ್ನು ಕೊಡುವ ವರೆಗೆ ಆ ಕುರಿತು ಊಹಿಸಿ ಬರೆಯುವುದು ತಪ್ಪು. ಆದರೂ ಅವರ ಹಿಂದಿನ ಮಾತುಗಳನ್ನು ಮಥಿಸಿ ನೋಡಿದಲ್ಲಿ ಅವರು ಮುಂದಾದರೂ ವಾಕ್ ಸ್ವಾತಂತ್ರ್ಯದ ವಿಚಾರವಾಗಿಯೇ ಕಾರ್ಯಕ್ರಮವನ್ನು ಅಣಿಗೊಳಿಸುವರೆಂದು ವಿಚಾರಿಸಲು ಆಸ್ಪದವಿದೆ.

ರಾಜಾಜಿಯವರು ಮೊನ್ನೆ ತಾನೇ ಗಾಂಧಿಜಿಯವರಿಗೊಂದು ಪತ್ರವನ್ನು ಬರೆದಿರುವರು. ಭಾರತದ ಅಸಂಖ್ಯ ಮಿಲಿಯ ಜನರೊಡನೆ ಒಂದೇ ಒಂದು ಮಾತೂ ಕೇಳದೆ, ಏಕಾಏಕಿ ಜರ್ಮನರ ವಿರುದ್ಧ ಭಾರತವು ಯುದ್ಧ ಹೂಡಿದೆಯೆಂದು ಸಾರಿದ ಬ್ರಿಟಿಷ್ ಮನೋಧರ್ಮವು ತಪ್ಪಾದುದು ಎಂದು ಅವರು ಅದರಲ್ಲಿ ಹೇಳಿರುವರು. ಬ್ರಿಟನು ಜಯಹೊಂದಬೇಕೆಂದು ಭಾರತವು ಆಶಿಸುತ್ತದೆ; ಆದರೆ ಅದಕ್ಕೆ ಬೆಂಬಲ ಕೊಡುವುದು ಸಾಧ್ಯವಿಲ್ಲವೆಂದು ಜನತೆಯು ನಿರ್ಧರಿಸಿದರೆ ಅಂತಹ ಅಭಿಪ್ರಾಯ ಸ್ವಾತಂತ್ರ್ಯವು ತಪ್ಪೆಂದು ಬ್ರಿಟಿಷರು ಯಾಕೆ ತಿಳಿಯಬೇಕು? ಚೀನದ ಕುರಿತು ಭಾರತವು ಬಹಳ ಸಹಸಂತಾಪವನ್ನು ಸೂಚಿಸಿತು, ಆದರೆ ಜಪಾನಿನ ವಿರುದ್ಧ ಯುದ್ಧಕ್ಕೆ ಹೋಗಲಿಲ್ಲ. ಸಹಸಂತಾಪವನ್ನು ಸೂಚಿಸುವುದಕ್ಕೂ ಯುದ್ಧಕ್ಕಿಳಿಯುವುದಕ್ಕೂ ಬಹಳ ವ್ಯತ್ಯಾಸವಿದೆ. ಭಾರತವು ಯುದ್ಧದಲ್ಲಿ ಪ್ರವೇಶಿಸಲ್ಲವೆಂದು ಪ್ರಚಾರ ಮಾಡಲು ಬ್ರಿಟಿಷರು ಯಾಕೆ ಆಕ್ಷೇಪಿಸಬೇಕು?

ಅಮೇರಿಕವು ಬಹುಕಾಲದಿಂದ ಬ್ರಿಟನಿಗೆ ಸಹಾನುಭೂತಿ ತೋರಿಸುತ್ತದೆ. ಹಾಗಾದರೂ ಅಮೇರಿಕವು ಇದುವರೆಗೆ ಯುದ್ಧಕ್ಕಿಳಿದಿಲ್ಲ. ಅವರಿಗೆ ಅಭಿಪ್ರಾಯ ಸ್ವಾತಂತ್ರ್ಯವುಂಟು, ಭಾರತೀಯರಿಗೆ ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕಿಲ್ಲ. ಹೀಗಾಗಿಯೇ ಗಾಂಧಿಜಿಯವರು ಎಲ್ಲದಕ್ಕಿಂತಲೂ ಮೊದಲಾಗಿ ಅಭಿಪ್ರಾಯ ಸ್ವಾತಂತ್ರ್ಯವೇ ಬೇಕಾಗಿದೆಯೆಂದು ಒತ್ತಿ ಒತ್ತಿ ಸಾರುತ್ತಿರುವರು.

ಯುರೋಪಿನಲ್ಲಿ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಅಷ್ಟೊಂದು ಮನ್ನಣೆಯಿರುವಾಗ ಭಾರತದಲ್ಲಿ ಮಾತ್ರ ಬ್ರಿಟಿಷರು ಅದಕ್ಕೆ ಪುರಸ್ಕಾರ ಕೊಡುವುದಿಲ್ಲವೇಕೋ ಅರ್ಥವಾಗುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದಿಂದ ಮೊನ್ನೆ ಮೊನ್ನೆ ಅಗಲಿ ನಿಂತು ಅಂತರ್ಗತ ಸ್ವರಾಜ್ಯವನ್ನು ಪಡೆದ ಐಯರ್ಲೆಂಡೂ ಇಂದು ಜರ್ಮನರ ವಕ್ರದೃಷ್ಟಿಯಲ್ಲಿದೆ. ಹಾಗಿದ್ದರೂ ಅದು ಈಗಲೂ ತಟಸ್ಥವಾಗಿಯೇ ಇರುವುದಿಲ್ಲವೆ? ಇಂತಹ ಅಭಿಪ್ರಾಯ ಸ್ವಾತಂತ್ರ್ಯವು, ನ್ಯಾಯವಾದೀ ನಾಗರಿಕ ಹಕ್ಕು ಭಾರತೀಯರಿಗೆ ಮಾತ್ರ ವಂಚಿತವಾಗಿದೆಯೆಂಬುದನ್ನು ಗಾಂಧಿಜಿಯವರು ತಿಳಿಸುತ್ತಾರೆ.

ಮಹಾತ್ಮಾಜಿಯವರಿಗೆ ರಾಜಾಜಿಯವರ ಒಂದು ಪತ್ರ!

'ಪೂನಾ ನಿರ್ಣಯವನ್ನು ತಪ್ಪೆನ್ನಲಾರೆನು'

ಯುದ್ಧಕ್ಕೆ ಸೇರದೇನೇ ಬ್ರಿಟನಿಗೆ ಬೆಂಬಲ ಕೊಡಬಹುದು

ನನ್ನ ಪ್ರಿಯ [illegible]

ಪೂನಾದಲ್ಲಿ ಶ್ರೀ ಚಂದ್ರಶೇಖರರ ಮೂಲಕ ನಾನು ತಾ. ೨೨ರಂದು ಪ್ರಕಟವಾದ ಹರಿಜನದ ಅಗ್ರಲೇಖದ ಹಸ್ತಪ್ರತಿಯನ್ನು ಓದಿದ್ದೆ. ನೀವು ಆ ಲೇಖನವನ್ನು ಯಾಕೆ ಬರೆದಿರಿ ಎಂಬುದನ್ನು ನಾನು ತಿಳಿದಿರುವೆ. ಆದರೆ ಅದನ್ನು ಪ್ರಕಟಿಸದ ಹಾಗೆ ಮಾಡಬೇಕೆಂದು ಇಲ್ಲವೇ ಅದಕ್ಕೆ ನನ್ನ ಸೂಚನೆಗಳನ್ನೂ ಸೇರಿಸಬೇಕೆಂದು ನಾನು ವಿಚಾರಿಸಿದ್ದೆ. ಈಗ ಆ ಲೇಖನವು ಪ್ರಕಟವಾದ ಮೇಲಾದರೂ ನಾನು ನನ್ನ ವಿಚಾರವನ್ನು ವಿವರಿಸುವುದು ಒಳ್ಳೆಯದೆಂದು ತಿಳಿಯುತ್ತೇನೆ

ನೀವು ನನ್ನನ್ನು ಯಾವುದೇ ತರದ ನಿಂದೆಯಿಂದ ವಿಮೋಚನೆಗೊಳಿಸಿದಿರೆಂದು ನಾನು ತಿಳಿಯುವುದಿಲ್ಲ. ಪೂನಾ ನಿರ್ಣಯದ ವಿಚಾರವಾಗಿ ಬೊಂಬಾಯಿಯಲ್ಲಿ ನನ್ನ ಮೇಲೆ ಮಾಡಿದ ಟೀಕೆಗಳಿಗಾಗಿ ನಾನು ಸ್ವಲ್ಪವೂ ಬೇಸರಗೊಂಡಿಲ್ಲ. ಅಥವಾ ನಾನು ಪೂನಾ ನಿರ್ಣಯ ಮಾಡಿದ್ದಕ್ಕಾಗಿಯೂ ಕೊಂಚವೂ ವಿಷಾದಗೊಂಡಿಲ್ಲ. ಆ ಸಂದರ್ಭದಲ್ಲಿ ನಾವು ಯಾವುದನ್ನು ಮಾಡುವುದು ನ್ಯಾಯವಾಗಿತ್ತು ಎಂಬುದನ್ನು ಆ ನಿರ್ಣಯವು ಸ್ಪಷ್ಟಪಡಿಸಿತು. ಬ್ರಿಟಿಷ್ ಸರಕಾರವು ಒಪ್ಪಲಿಲ್ಲ, ಪರಿಣಾಮವಾಗಿ ನಮ್ಮ ಸೂಚನೆಯು ಬಿದ್ದುಬಿಟ್ಟಿತು. ಆದರೆ ಅದರಿಂದ ನಾವು ಮಾಡಿದ ಕಾರ್ಯಗಳ ನ್ಯಾಯದ ವಿಚಾರದಲ್ಲಿ ಯಾವುದೇ ರೀತಿಯ ಸಂಶಯಕ್ಕೆ ಅಸ್ಪದವಿಲ್ಲ. ಭಾರತದಲ್ಲಿರುವ ಬುದ್ಧಿವಂತರಾದವರೆಲ್ಲರೂ ಪೂನಾ ನಿರ್ಣಯವನ್ನು ನ್ಯಾಯವಾದುದೆಂದು ಸ್ವಾಗತಿಸಿದ್ದಾರೆ. ಆದರೆ ನೀವು, ಅದರಿಂದ ಭಾರತದ ರಕ್ಷಣೆಯ ಸಲುವಾಗಿಯಾದರೂ, ಯುದ್ಧದಲ್ಲಿ ಸಹಕರಿಸಬೇಕಾಗುತ್ತದೆಯೆಂಬುದರಿಂದ, ಯುದ್ಧ ತಪ್ಪೆಂದು ತಿಳಿದಿರಿ. ಬೇರೆ ಕೆಲವರು, ಈ ನಿರ್ಣಯವನ್ನು ಬ್ರಿಟಿಷ್ ಸರಕಾರವು ಅಂಗೀಕರಿಸಿದರೆ, ತಮಗೆ ಹಿತವಿಲ್ಲದಿದ್ದರೂ ಬ್ರಿಟಿಷರಿಗೆ ಯುದ್ಧದಲ್ಲಿ ಮುಂದೆ ಸಹಾಯಮಾಡಬೇಕಾಗಿ ಬರಬಹುದಲ್ಲ ಎಂದೂ ವಿಚಾರಿಸಿದ್ದರು

ಇನ್ನೂ ಕೆಲವು ಭಿನ್ನ ವಿಚಾರದ ಪಂಗಡಗಳಿವೆ, ಅವುಗಳನ್ನೆಲ್ಲಾ ಬಿಟ್ಟು, ಬುದ್ಧಿವಂತರಲ್ಲಿ ಹೆಚ್ಚಿನ ಮಂದಿಯನ್ನು ತೆಗೆದುಕೊಂಡರೆ ಅವರೆಲ್ಲರೂ ಪೂನಾ ನಿರ್ಣಯವು ನ್ಯಾಯವಾದುದೆಂದೂ, ಯುಕ್ತಿಯುಕ್ತವಾದುದೆಂದೂ ತಿಳಿದಿದ್ದರು ಮಾತ್ರವಲ್ಲದೆ ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಚುನಾಯಿಸಿ ರಾಷ್ಟ್ರೀಯ ಸರಕಾರವನ್ನು ರಚಿಸಿದಲ್ಲಿ ಅದರಿಂದ ಭಾರತದ ಇಂದಿನ ರಾಜಕೀಯ ಪ್ರತಿಬಂಧವು ನಿವೃತ್ತಿಯಾಗುತ್ತದೆಯೆಂದೂ ಅಭಿಪ್ರಾಯಪಟ್ಟಿದ್ದರು. ನೀವು ಕಾಂಗ್ರೆಸು ಯುದ್ಧವಿಲ್ಲದಂತೆ ಮಾಡಲು ಹಿಂದಿನಂತೆಯೇ ಇಂದೂ ಪ್ರಯತ್ನಿಸಬೇಕೆಂದೂ ಕೂಡಾ ವಿಚಾರಮಾಡುತ್ತೀರಿ. ನಮ್ಮ ಧ್ಯೇಯಸಾಧನೆಯು ನಿಮ್ಮ ಅಭಿಪ್ರಾಯದಂತೆ ಆ ದಾರಿಯಲ್ಲಿ ಕೆಲಸ ಮಾಡುವುದರಿಂದ ಮಾತ್ರ ಆಗುವುದು ಆದ್ದರಿಂದ, ಯಾವುದೇ ತರತದಿಂದಾಗಲಿ, ಇಂದಿನ ಯುದ್ಧದಲ್ಲಿ ಸಹಕರಿಸುವುದು ತಪ್ಪು ಎಂಬುದಾಗಿ ನೀವು ವಿಚಾರಿಸುತ್ತೀರಿ. ನಾನೂ ಕೂಡಾ ಜಗತ್ತು ಶಾಂತಿಯ ನೆಲೆಯನ್ನು ಹೊಂದಬೇಕು, ಆದಷ್ಟು ಬೇಗ ಯುದ್ಧವನ್ನು ಕೊನೆಗೊಳಿಸಬೇಕು ಎಂದು ಆಶಿಸುತ್ತೇನೆ ಆದರೆ ನನ್ನ ಅಭಿಪ್ರಾಯವೆಂದರೆ, ಅಂತಹ ವ್ಯವಸ್ಥೆಯಾಗಬೇಕಾದರೆ, ನಾವು ಅಂತರಾಷ್ಟ್ರೀಯ ದೃಷ್ಟಿಯಿಂದ ಉತ್ತಮ ರೀತಿಯಲ್ಲಿ ನುರಿತುಕೊಳ್ಳಬೇಕಲ್ಲದೆ, ಒಬ್ಬರ ಆಶೆ ಉದ್ದೇಶಗಳನ್ನು ಇನ್ನೊಬ್ಬರು ಪರಿದಿಕ್ಕುವುದರಿಂದಲ್ಲವೆಂದು. ನಮ್ಮ ಸೂಚನೆಯನ್ನು ಬ್ರಿಟಿಷ್ ಸರಕಾರವು ಒಪ್ಪದ್ದರಿಂದ ನಮಗೆ ಅನರ್ಥ ತಪ್ಪಿತು ಎಂದು ನೀವು ತಿಳಕೊಂಡಂತೆ ನಾನು ತಿಳಿಯಲಾರೆ

ಪೂನಾ ನಿರ್ಣಯವು ತಪ್ಪು ಎಂಬುದರಿಂದ ನಾನು ಬೊಂಬಾಯಿ ನಿರ್ಣಯವನ್ನು [illegible]ನ ಮೋದಿಸಿದುದಲ್ಲ. ನನ್ನ ಅನುಮೋದನೆಗಳಿಗೆ ಕೆಳಗಿನ ವಿಷಯಗಳು ಕಾರಣಗಳಾಗಿವೆ

ಬ್ರಿಟಿಷರು, ಭಾರತದ ಜನರನ್ನು ವಿಚಾರಮಾಡದೇನೇ ಭಾರತವು ಯಾವುದೇ ಇತರ ರಾಷ್ಟ್ರದೊಡನೆ ಯುದ್ಧ ಹೂಡಿದೆಯೆಂದು ಸಾರಿದ್ದು ತಪ್ಪು. ಯುದ್ಧವೆಂದರೆ ಕೇವಲ ಸ್ವಲ್ಪ ಹಣ ಕೊಡಿಸುವುದು ಮತ್ತು ಶಸ್ತ್ರಸಿದ್ಧತೆ ಮಾಡುವುದು ಎಂಬುದೇ ಅರ್ಥವಲ್ಲ. ಲಂಡನಿನಲ್ಲಿ ಆಗುತ್ತಿರುವಂತೆಯೇ ನಮ್ಮಲ್ಲಿಯೂ ಆಗಬಹುದು. ನಮಗೂ ಅದೇ ಅವಸ್ಥೆ ಬರಬಹುದು. ನೂರು ಮಿಲಿಯ ಜನರು, ಅವರೊಡನೆ ಕೇಳದೇನೇ, ಅಂತಹ ಪರಿಸ್ಥಿತಿಗೆ ಬೀಳುವುದು ಅನ್ಯಾಯವಾಗಿದೆ. ನಾವು ಯುದ್ಧಕ್ಕೆ ಸೇರದೇನೇ ಜರ್ಮನಿ ವಿರುದ್ಧ ಯುದ್ಧಮಾಡುವ ಬ್ರಿಟನಿನ ನ್ಯಾಯವನ್ನು ಸಮರ್ಥಿಸುವುದು ಸಾಧ್ಯವಿದೆ. ಅಮೇರಿಕವು ಬ್ರಿಟನು ನ್ಯಾಯವಾಗಿದೆಯೆಂದು ತೀರ್ಮಾನಿಸಿದ್ದರೂ, ಯುದ್ಧದಲ್ಲಿ ಸೇರಲು ತಿರಸ್ಕರಿಸುತ್ತದೆ. ಚೈನವು ನ್ಯಾಯಕ್ಕಾಗಿ ಕಾದಾಡುತ್ತಿದೆಯೆಂದು ತಿಳಿದಿದ್ದರೂ, ನಾವು ಚೈನಾ ಯುದ್ಧದಲ್ಲಿ ಸೇರಲಿಲ್ಲ

ಪೂನಾ ನಿರ್ಣಯವು ಫಲವತ್ತಾಗಿ ಮತ್ತು ಮರ್ಯಾದಿತವಾಗಿ ಯುದ್ಧದಲ್ಲಿ ಸಹಭಾಗಿಯಾಗಲು ಸೂಚನೆ ಕೊಟ್ಟಿತು. ಆದರೆ ಸೂಚನೆಯು ಬ್ರಿಟಿಷ್ ಸರಕಾರದಿಂದ ತಿರಸ್ಕರಿಸಲ್ಪಟ್ಟಿತು. ಆದ್ದರಿಂದ ಭಾರತವು ಯುದ್ಧದಲ್ಲಿ ಸಹಕರಿಸುವುದನ್ನೇ ತಿರಸ್ಕರಿಸಬಹುದಾಗಿದೆ. ಆದರೆ ಯುದ್ಧದಲ್ಲಿ ಸೇರಬೇಕೋ ಬೇಡವೋ ಎಂಬ ವಿಚಾರ ಮಾಡಲು ಸ್ವಾತಂತ್ರ್ಯವಿಲ್ಲದೆ, ಸಾಮ್ರಾಜ್ಯದ ಆಶ್ರಿತ ರಾಜ್ಯವಾಗಿರುವುದರಿಂದ, ಯುದ್ಧದಲ್ಲಿ ಭಾರತವು ಒತ್ತಾಯದಿಂದ ಸೇರಬೇಕಾಗಿಯೂ ಸಹಕರಿಸಬೇಕಾಗಿಯೂ ಬಂದಿತು. ಆದರೆ ಬ್ರಿಟನು ಹೇಳುವುದು, ಭಾರತದಿಂದ ಅದು ಪಡೆದ ಸಹಾಯವು ಸ್ವಯಂ ಪ್ರೀತಿಯದಾಗಿದೆಯೆಂದು. ಆ ವಾದವನ್ನು ಅವರು, ಯುದ್ಧದಲ್ಲಿ ಸಹಕರಿಸಬಾರದು ಎಂದು ಪ್ರಚಾರ ಮಾಡುವವರನ್ನು ತಡೆಯದೆ ಇರುವುದರಿಂದ ಸಮರ್ಥಿಸಬಹುದು, ಇಲ್ಲವೇ ಆಕ್ಷೇಪಗಳನ್ನು ಕಡಿಮೆಮಾಡಬಹುದು. ಭಾರತದ ಜನರನ್ನು ಅವರ ಒಪ್ಪಿಗೆಯಿಲ್ಲದೆ ಆಧುನಿಕ ಯುದ್ಧದ ಭೀಕರತೆಗೆ ದೂಡಿದ ಅಪರಾಧವನ್ನು ಶಾಂತಮಾಡಲು ಯತ್ನಿಸಿದೆಯೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ

ಸಿ. ರಾಜಗೋಪಾಲಾಚಾರ್.

೧,೦೦೦ ರೂಪಾಯಿಗಳ ಬಕ್ಷೀಸು

ಕೆಳಗಿನ ಔಷಧಗಳಲ್ಲಿ ಗುಣವಿಲ್ಲೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ ಇನಾಮು

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು: ೪—೮—೦

ಪ್ರಮೇಹ ವ್ಯಾಧಿಯಲ್ಲಿ ಭೇದಿಸಿದರೆ ತಮ್ಮ ಮತ್ತು ತಮ್ಮ ಭಾವೀ ಪೀಳಿಗೆಯ ನಾಶಮಾಡದೆ ಬಿಡಲಾರದು. ಇಂಥ ಮಹಾ ಹಾನಿಕಾರಕ ಎಲ್ಲ ೫೦ (ಐವತ್ತು) ಪ್ರಕಾರದ ಪ್ರಮೇಹ ಪರಮಾ ಅದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು [illegible] ಗುಣಕಾರಿ ಅದೆ

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತದೆ. ಮೂತ್ರ ಮಾರ್ಗ ಸ್ವಚ್ಛವಾಗಿ ಮೂತ್ರದ ಕಾಲಕ್ಕೆ ಉಂಟಾಗುವ ವೇದನೆ ಮತ್ತು ಉರುಪು ಇಲ್ಲದಂತಾಗುತ್ತದೆ. ಕೀವು ಮತ್ತು ಪ್ರಮೇಹ ಹೋಗುವದು ಬಂದಾಗುತ್ತದೆ. ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ. ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ ಏನೂ ಇಲ್ಲ. ಕಿಮ್ಮತ್ತಿನ ಹೊರತಾಗಿ ಅಂಚೆ ವೆಚ್ಚ ಬೇರೆ

೨] ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪದರ ಶೆರಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ-ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಾದ ಕಾಲಕ್ಕೆ ರಕ್ತಸ್ರಾವ ಳಗಡೆ ಗುಲಾಬಿ, ಹಳದಿ, ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟುನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತೆ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟುದೋಷ ಇವುಗಳಿಂದ ಕಿಬ್ಬೊಟ್ಟೆ ಗರ್ಭಾಶಯ ಇಲ್ಲವೆ ಕುಸುಮದಲ್ಲಿ ಆಗುವ ವೇದನೆ, ನಡ, ತಲೆ, ತೊಡೆ ಮತ್ತು ಸಂದು ಇವುಗಳಲ್ಲಿ ನೋವು, ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ ಆಗದಿರುವಿಕೆ, ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಇಲ್ಲ. ಅ. ವೆ. ಬೇರೆ.

ಪತ್ತೆ:—ವೈದ್ಯರಾಜ ಎ. ಬಿ. ಸಿದನಾಳ,

ಮನೆ ನಂಬರ [illegible], ಎಸ್. ಎಮ್. ಬಸವಣಗಲ್ಲಿ, ಬೆಳಗಾವಿ.

ಪಂಡಿತ ಡಿ. ಗೋಪಾಲಾಚಾರ್ಲು

ಇವರ ದಿನಾಚರಣೆಯು ಮದ್ರಾಸಿನಲ್ಲಿ ಆಯುರ್ವೇದಾಶ್ರಮ ಬಿಲ್ಡಿಂಗಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಪಂಡಿತರ ಶ್ವೇತ ಶಿಲಾಪ್ರತಿಮೆಯನ್ನು ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರರು ಅನಾವರಣ ಮಾಡಿದರು. ಶ್ರೀನಿವಾಸ ರೋಹಿಣಿಯರ ನರ್ತನ ಕುಮಾರಿ ವರಲಕ್ಷ್ಮಿಯವರ ಸಂಗೀತ, ಡಾ। ಲಕ್ಷ್ಮೀಪತಿ ಮೊದಲಾದವರ ಭಾಷಣಗಳಿದ್ದವು

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 97/1937 R I A 706/1940

ಇಸೂಬು ಬ್ಯಾರಿ ವಾದಿ. Peti.

ತಿಮ್ಮಪ್ಪ ಕೂಡ 6 ಜನರು—ಎದುರು Respts

1ನೇ ಎದುರು ತಿಮ್ಮಪ್ಪ ಮಂಜುನಾಥ ಪೈ ಮಗ, ಪಾಣಾಜೆ ಗ್ರಾಮ

ಮೇಲಿನ ಡಿಕ್ರಿ ವ್ಯವಹಾರದಲ್ಲಿ ಅರ್ಜಿದಾರಗೆ ಬರ ಡಿಕ್ರಿ ಧನವನ್ನು ವಸೂಲಿಗೆ ದಾವಾ ಆಸ್ತಿ ಮಾರಾಟದಿಂದ ಧನವನ್ನು ವಸೂಲು ಹೊಂದುವಂತೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ವಗೈರೆ ಅರ್ಜಿ ಬರಕೊಂಡು ಆ ಕುರಿತು ನೋಟೀಸಿನ ತನ್ನಿಖೆಯು ಬರುವ ತಾ. 16-10-1940ಕ್ಕೆ ಇಟ್ಟಿರುತ್ತದೆ. ಆ ವ್ಯಾದಿಗೆ ಎದುರು ತನ್ನ ಆಕ್ಷೇಪಗಳೇನಾದರೂ ಹೇಳಿಕೊಳ್ಳುವುದಿದ್ದರೆ ಆ ವ್ಯಾದಿಗೆ ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇಲ್ಲದಿದ್ದರೆ [illegible] ತೀರ್ಮಾನಿಸಲಾಗುತ್ತದೆ [illegible] ಕೋರ್ಟಿನ ಮುದ್ರೆ [illegible] ನೋಟೀಸು [illegible]

Puttur } B. Ramachandra Rao
19-9-40 } Pleader for Petitioner.

ಎಮೆರಿಯವರು ಹೇಳುತ್ತಾರೆ!

ಯುದ್ಧ ಮುಗಿದ ಮೇಲೆ ವಿಚಾರ

ಒಮ್ಮತವಾಗದೆ ಸ್ವರಾಜ್ಯವಿಲ್ಲ

"ಬಹಳ ವರ್ಷಗಳಿಂದ ಪಾರ್ಲಿಮೆಂಟು ತಾನು ಪ್ರತಿಷ್ಠಿಸಿದ ಹೊರೆಯನ್ನು ಹಿಂದೀಯರಿಗೆ ಒಪ್ಪಿಸಿ, ಅದು ಕ್ಷೇಮವಾಗಿ ನಡೆಯುವಂತೆ ಮಾಡಲು ಪ್ರಯತ್ನಪಟ್ಟಿತು. ಈ ಬಗ್ಗೆ ಭಾರತದ ಹಲವರೂ ಸಹಕರಿಸಿದರು. ಇದರ ಫಲವಾಗಿ ಒಂದು ಹೊಸ ರಾಜ್ಯ ಘಟನೆಯು ಜಾರಿಗೆ ಬಂತು. ಇದರ ಒಂದಂಶ ಇಂದು ಜಾರಿಯಲ್ಲಿದೆ. ಇದರ ಎರಡನೆಯ ಅಂಶ ಜಾರಿಗೆ ಬಂದಿಲ್ಲ. ಈ ಘಟನೆಯಲ್ಲಿ ಸಂಸ್ಥಾನಗಳಿಗೆ ಹೆಚ್ಚಿನ ಪ್ರಾತಿನಿಧ್ಯವಿದೆಯೆಂದು ಕಾಂಗ್ರೆಸಿನವರು ಹೇಳುತ್ತಾರೆ. ಸಂಸ್ಥಾನದವರೂ ಒಂದು ಬಗೆಯ ಆಕ್ಷೇಪ ಮಾಡುತ್ತಾರೆ. ಮುಸಲ್ಮಾನರು ಬಹುಸಂಖ್ಯಾಕ ಹಿಂದುಗಳಿಗೆ ತಮ್ಮ ಭವಿತವ್ಯವನ್ನು ಒಪ್ಪಿಸಲು ತಿರಸ್ಕರಿಸುತ್ತಾರೆ. ಹಿಂದುಗಳಲ್ಲಿಯೂ ಕಾಂಗ್ರೆಸನ್ನು ವಿರೋಧಿಸುವವರಿದ್ದಾರೆ. ಇವರೆಲ್ಲಾ ಅತ್ಯಂತ ಪ್ರಾಮಾಣಿಕ ಬುದ್ಧಿಯಿಂದಲೆ ವಿರೋಧ ಮಾಡುತ್ತಿರುವುದರಿಂದ ನಾವೀ ಅಭಿಪ್ರಾಯಗಳಿಗೆ ಬೆಲೆ ಕೊಡಲೇಬೇಕಾಗಿದೆ."

ಹೀಗೆಂದು ತಾ. ೨೫ರಂದು ಭಾರತ ಸಚಿವ ಎಮೆರಿಯವರು ಭಾರತದ ಪರಿಸ್ಥಿತಿಯ ಕುರಿತು ಮಾಡಿದ ಒಂದು ಭಾಷಣದಲ್ಲಿ ತಮ್ಮ ಹಿಂದಿನ ರಾಗವನ್ನೇ ಆಲಾಪಿಸಿ ಹೇಳಿದರು.

ಭಾರತದ ಸಹಾಯ

ಅವರು ತಮ್ಮ ಭಾಷಣದಲ್ಲಿ ಭಾರತವು ತನು ಮನ ಧನಗಳಿಂದ ಯುದ್ಧಕ್ಕೆ ಸಹಾಯಮಾಡುತ್ತಿದೆಯೆಂದು ಹೇಳಿದರು. ನಾಜಿಗಳ ನೀತಿಯನ್ನು ಭಾರತವು ವಿರೋಧಿಸುತ್ತದೆಯೆಂದು ಜರ್ಮನರನ್ನು ನಿಂದಿಸಿದರು. ಭಾರತೀಯರ ಧರ್ಮ ನಾಗರಿಕತೆಗಳಿಗೆ ನಾಜಿಗಳ ನೀತಿಯು ವಿರೋಧವಾದುದೆಂದು ಅಭಿಪ್ರಾಯವನ್ನು ಹೇಳಿದರು.

ಭಾರತದಲ್ಲಿ ಐಕ್ಯವಿಲ್ಲ

ಆ ಮೇಲೆ ಭಾರತದ ಇಂದಿನ ರಾಜಕೀಯ ಸಮಸ್ಯೆಯ ಕುರಿತು ಕೆಲವು ಮಾತುಗಳನ್ನು ಹೇಳಿದರು. ಬೇರೆ ಬೇರೆ ಪಂಗಡಗಳು ಒಂದಾಗಿ ನಿಲ್ಲದ ಇರುವುದು ಇಂದಿನ ತೊಡಕಿಗೆ ಕಾರಣವಾಗದೆಯೆಂದರು. ಭಾರತವು ಏಕಾಭಿಪ್ರಾಯದ ರಾಷ್ಟ್ರವಾಗಿಲ್ಲವೆಂದರು. ಇಡೀ ರಾಷ್ಟ್ರದ ಪರವಾಗಿ ಮಾತನಾಡಬಲ್ಲ ಬಹುಮತ ಪಕ್ಷವೇ ಒಂದೂ ಇಲ್ಲವೆಂದರು. ಇನ್ನೂ ಅನೇಕ ಕಾರಣದಿಂದ ಭಾರತದ ರಾಜಕೀಯದಲ್ಲಿ ತೊಂದರೆ ಬಂದಿದೆಯೆಂದರು.

ಆ ಬಳಿಕ, ಕಾಂಗ್ರೆಸಿನವರ ಕೈಯ್ಯಲ್ಲಿ ಅಧಿಕಾರ ಕೊಡುವರೆ ಇತರ ಅನೇಕರ ಆಕ್ಷೇಪವಿದೆಯೆಂದರು, ಅವರ ಅಭಿಪ್ರಾಯಗಳೂ ಪ್ರಾಮಾಣಿಕವಾದುದರಿಂದ ಅವರದನ್ನು ಮನ್ನಿಸಬೇಕೆಂದೂ ಹೇಳಿದರು. ಹೀಗೆ ಹೇಳುವುದರಿಂದ, ಬ್ರಿಟಿಷರು ಭಾರತೀಯರ ಒಡಕನ್ನು ಎತ್ತಿ ತೋರಿಸಿ ಭಿನ್ನತೆಯ ವಿಷಬೀಜವನ್ನು ಬಿತ್ತುವರೆಂದು ಹೇಳಬಾರದು ಎಂದೂ ಹೇಳಿಕೊಂಡರು. ಭಾರತದಲ್ಲಿರುವ ಹಲವಾರು ಸಮಸ್ಯೆಗಳನ್ನು ಒಮ್ಮೆಲೇ ಬಿಡಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಧಾನದಿಂದಲೂ ತಾಳ್ಮೆಯಿಂದಲೂ ಕೆಲಸ ಮಾಡಬೇಕೆಂದೂ, ತ್ಯಾಗಬುದ್ಧಿಯಿಂದ ಪರಸ್ಪರ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾಗಬೇಕೆಂದೂ ಹೇಳಿದರು. ಭಾರತದಲ್ಲಿ ಭಿನ್ನ ಮತಭೇದಗಳಿದ್ದರೂ, ಮುಂದಿನ ಉದ್ದೇಶದ ಬಗ್ಗೆ ಎಲ್ಲರೂ ಒಂದೇ ಅಭಿಪ್ರಾಯದವರಾಗಿರುವರೆಂದೂ ಒಪ್ಪಿದರು. ಭಾರತವು ಸ್ವತಂತ್ರವಾದ ರಾಜ್ಯಭರಣವನ್ನು ನಡೆಸಬೇಕೆಂದು ಬ್ರಿಟಿಷರ ಆಶೆಯೆಂದೂ, ಆದರೆ ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವನ್ನೇ ಕಡಿದೊಗೆಯಬೇಕೆಂದು ಕೆಲವರು ಭಾರತದಲ್ಲಿ ಬಗೆಯುವುದು ತಪ್ಪೆಂದೂ, ಅದು ಸಾಧ್ಯವಿಲ್ಲವೆಂದೂ ಹೇಳಿದರು.

ಯುದ್ಧವಾದ ಮೇಲೆ ವಿಚಾರ

ಭಾರತದ ಭಾವೀ ರಾಜ್ಯಘಟನೆಯನ್ನು ಭಾರತೀಯರೇ ನಿಷ್ಕರ್ಷಿಸಬೇಕು. ಆದರೆ ಅವರೊಳಗೆ ಒಮ್ಮತವಿರಬೇಕು. ಒಮ್ಮತವಿಲ್ಲದೆ ಸ್ವರಾಜ್ಯ ಸಿಗಲಾರದು ಎಂದರು.

ಇಂದು ಬ್ರಿಟಿಷ್ ಸಾಮ್ರಾಜ್ಯವು ತನ್ನ ಅಸ್ತಿತ್ವಕ್ಕಾಗಿಯೇ ಪ್ರಚಂಡವಾಗಿ ಹೋರಾಡುತ್ತಿರುವಾಗ ಭಾರತದಲ್ಲಿ ತೀವ್ರ ಬದಲಾವಣೆಯಾಗುವಂತಹ ಸುಧಾರಣೆಯು ಸಾಧ್ಯವಿಲ್ಲವೆಂದೂ, ಯುದ್ಧವಾದ ಮೇಲೆ ಆ ಕುರಿತು ವಿಚಾರಿಸಬಹುದೆಂದೂ, ತತ್ಕಾಲಕ್ಕೆ ವೈಸರಾಯರ ಕಾರ್ಯಕಾರೀ ಮಂಡಲವನ್ನೂ ಯುದ್ಧಬೋಧಕ ಸಮಿತಿಯನ್ನೂ ವಿಸ್ತರಿಸಬಹುದೆಂದೂ ಹೇಳಿದರು. ಸದ್ಯದ ಪರಿಸ್ಥಿತಿಯಲ್ಲಿ ಬೇರೆ ಯಾವ ಸುಧಾರಣೆ ಮಾಡಲೂ ಸಾಧ್ಯವಿಲ್ಲವೆಂದರು. ಕಾಂಗ್ರೆಸು ಪಕ್ಷದವರು ರಾಷ್ಟ್ರೀಯ ಸರಕಾರದ ಸೂಚನೆ ಮಾಡಿದರು. ಆದರೆ ಅನೇಕ ವಿಷಯಗಳು ಬಗೆಹರಿಯದಿರುವುದರಿಂದ ಅದಕ್ಕೆ ಒಪ್ಪಲು ಸಾಧ್ಯವಿಲ್ಲವೆಂದರು, ಯಾವ ಶಾಸನ ಮಂಡಲದ ರಚನೆಯ ಬಗ್ಗೆ ಒಪ್ಪಂದವಾಗಿಲ್ಲವೋ, ಅಂತಹ ಶಾಸನ ಮಂಡಲದ ರಚನೆಗೆ ಜವಾಬ್ದಾರಿಯಾದ ರಾಷ್ಟ್ರೀಯ ಸರಕಾರವನ್ನು ರಚಿಸಿರೆನ್ನುವುದು ಹೇಗೆ ಸಾಧ್ಯವಾದೀತೆಂದರು!

ಸಿಮ್ಲಾ ಸಂಧಾನ

ಕೊನೆಗೆ ಕಾಂಗ್ರೆಸಿನವರು, ವೈಸರಾಯರ ಯೋಜನೆಯನ್ನು ತಿರಸ್ಕರಿಸಿ, ಬಂದೊದಗಿದ ಸುಸಂಧಿಯನ್ನು ಕಳೆದುಕೊಳ್ಳುತ್ತಿರುವರೆಂದೂ, ಅವರು ಈ ಸಂಧಿಯನ್ನು ಕಳೆದುಕೊಳ್ಳದಿದ್ದರೆ ಯುದ್ಧದಲ್ಲಿ ಸಹಾಯಮಾಡಬಹುದಾಗಿತ್ತಲ್ಲದೆ, ಭಾರತದ ರಾಜಕೀಯ ಪ್ರಗತಿಯೂ ಆಗುತಿತ್ತೆಂದೂ ಹೇಳಿದರು. ಕಾಂಗ್ರೆಸಿನವರು ಅದನ್ನು ಬಿಟ್ಟು ಗಾಂಧಿಜಿಯವರ ಮಾರ್ಗವನ್ನು ಅನುಸರಿಸಿ, ಅಹಿಂಸಾತ್ಮಕ ಅಸಹಕಾರ ಮಾಡಲು ಸಿದ್ಧರಿರುವರೆಂದೂ, ಯುದ್ಧದಲ್ಲಿ ಭಾಗ ತೆಗೆದುಕೊಳ್ಳುವುದಿಲ್ಲವೆಂದು ತಿಳಿಸಿರುವರೆಂದೂ ಹೇಳಿದರು.

ಶಾಂತಿವಾದಿಗಳಾದ ಗಾಂಧಿಜಿಯವರ ಪ್ರಾಮಾಣಿಕ ಬುದ್ಧಿಯನ್ನು ಒಪ್ಪಿಕೊಂಡು, ಅವರು ಅಭಿಪ್ರಾಯ ಸ್ವಾತಂತ್ರ್ಯವನ್ನು ಕೇಳುತ್ತಿರುವುದೂ, ಬ್ರಿಟಿಷರಿಗೆ ತೊಂದರೆ ಕೊಡುವುದಿಲ್ಲವೆಂದು ಹೇಳುವುದೂ ಹೊಂದಿಕೆಯಾಗುವುದಿಲ್ಲವೆಂದರು.

ಈಗ ಆಗುತ್ತಿರುವ ವೈಸರಾಯರ ಮತ್ತು ಗಾಂಧಿಜಿಯವರ ಮಾತುಕತೆಯ ವಿಷಯದಲ್ಲಿ ಏನೂ ಸ್ಪಷ್ಟೀಕರಿಸದೆ, ಭಾರತವು ಬ್ರಿಟಿಷರಿಗೆ ಸಂಪೂರ್ಣ ಸಹಾಯ ಕೊಡಬೇಕೆಂದೂ ವೈಸರಾಯರ ಮತ್ತು ಗಾಂಧಿಜಿಯವರೊಳಗೆ ವಿವೇಕಪೂರ್ಣವಾದ ಒಪ್ಪಂದವಾಗಲೆಂದೂ ಹಾರೈಸಿದರು.

ಕೊನೆಯ ಮಾತಿನಲ್ಲಿಯೂ ಭಾರತದ ಬೇರೆ ಬೇರೆ ಪಂಗಡದವರು ಒಂದಾಗಿ ಮುಂದಿನ ವಿಚಾರ ಮಾಡಲೆಂದೂ ಅದಕ್ಕೆ ಬ್ರಿಟಿಷರು ಬೆಂಬಲ ಕೊಡುವರೆಂದೂ ಹಿಂದೆ ಆಡಿದ ಮಾತನ್ನೇ ಮತ್ತೂ ಹಾಡಿದರು.

ಎಮೆರಿಯವರಿಗೆ ರಾಜಾಜಿಯವರ ಉತ್ತರ

"ಬ್ರಿಟಿಷರ ಮತ್ತು ಭಾರತೀಯರೊಳಗೆ ಹಾರ್ದಿಕ ಸ್ನೇಹ ಸಂಬಂಧವುಂಟಾಗಲು ಕಾಂಗ್ರೆಸಿನ ಪುಣೆಯ ಬೇಡಿಕೆಯು ಉತ್ತಮ ಸಂದರ್ಭವಾಗಿತ್ತು. ಆದರೆ ಭಾರತ ಸಚಿವರು ಅದನ್ನು ಅಲ್ಲಗಳೆಯಲು ಸಲಹೆಯಿತ್ತು, ವಿಷಮ ಸಮಯದಲ್ಲಿ ಅವರು ತಮ್ಮ ದೇಶಕ್ಕೆ ಹೆಚ್ಚಿನ ಅನ್ಯಾಯವನ್ನು ಮಾಡಿದರು. ಹೀಗೆಂದು ರಾಜಾಜಿಯವರು, ಎಮೆರಿಯವರು ತಾ. ೨೫ರಂದು ಮಾಡಿದ ಭಾಷಣಕ್ಕೆ ಉತ್ತರವೀಯುತ್ತ ಹೇಳಿದರು.

ರಾಜಾಜಿಯವರು ಮುಂದುವರಿಸಿ ಭಾರತ ಸಚಿವರು ಪುಣೆಯ ಠರಾವಿನ ಕುರಿತು ವ್ಯಕ್ತಮಾಡಿದ ಅಭಿಪ್ರಾಯವು ದುರ್ಬಲವಾಗಿದ್ದು ಯಾರಿಗೂ ಅರ್ಥವಾಗದುದಾಗಿದೆಯೆಂದೂ, ಭಾರತ ಸಚಿವರು ನಿಜವಾಗಿ ಭಾರತ ಬ್ರಿಟನುಗಳ ಮಧುರ ಸಂಬಂಧವನ್ನು ಆಶಿಸುವುದಿದ್ದರೆ ಅವರು ಗಾಂಧಿಜಿಯವರಲ್ಲಿ ವಿಶ್ವಾಸವಿಟ್ಟು ನಡೆಯಬೇಕೆಂದೂ, ಗಾಂಧಿಜಿಯವರೇ ಅದನ್ನು ಮಾಡುವರೆಂದೂ ಹೇಳಿದರು. ಆದರೆ ಇದು ಸಾಧ್ಯವಾಗಬೇಕಾದರೆ ಮೊದಲಾಗಿ ತಾವು ಭಾರತಕ್ಕೆ ಸ್ವತಂತ್ರ ರಾಜ್ಯಭರಣವನ್ನು ಕೊಡಲು ಸಿದ್ಧರಿರುವುದಾಗಿಯೂ, ಭಾರತದ ರಾಷ್ಟ್ರೀಯ ಭಾವನೆಯನ್ನೂ ಭಾರತದಲ್ಲಿರುವ ಪ್ರಜಾಪ್ರಭುತ್ವ ಜಾಗೃತಿಯನ್ನೂ ಮರ್ದಿಸುವುದು ತಮ್ಮ ಇಚ್ಛೆಯಲ್ಲವೆಂದು ಗಾಂಧಿಜಿಯವರಿಗೆ ಮನವರಿಕೆ ಮಾಡಿ ಕೊಡಬೇಕೆಂದೂ ಸೂಚಿಸಿದರು.

A well-rounded programme

SAVING

DO YOU WANT YOUR MONEY TO GROW?

If so, this should interest you.

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:-UDIPI, S. India.

ಎರಡು ಶತಮಾನಗಳ ಹಿಂದಿನ ಮಾತು.

ಸಮ್ರಾಟ ಬಹದ್ದೂರಶಾಹನು ದೇಹಲಿಯ ಸಿಂಹಾಸನದ ಮೇಲೆ ಆಸೀನನಾಗಿದ್ದನು.

ಬಹದ್ದೂರಶಾಹನು ಹೆಸರಿಗೆ ಮಾತ್ರ ಸಮ್ರಾಟನಾಗಿದ್ದನು. ಆದರೆ ಕೆಂಪು ಕೋಟೆಯಲ್ಲಿ ಆಗಲೂ ಮೊಗಲರಾಯರ ಆಡಂಬರದ ದೀಪ ಜಾಜ್ವಲ್ಯಮಾನವಾಗಿ ಉರಿಯುತಿತ್ತು. ದಾಸದಾಸಿಯರು ಬರುತಿದ್ದರು, ಹೋಗುತಿದ್ದರು; ರಾಜಕುಮಾರರು ಕುಮಾರಿಯರು ಅಟ್ಟಹಾಸದಿಂದ ತಿರುಗುತಿದ್ದರು, ಮೆರೆಯುತಿದ್ದರು. ಮೊದಲಿನ ಸಂಭ್ರಮವು ಆಗಲೂ ಇದ್ದಿತು.

ಒಂದು ದಿನ ಸಾಯಂಕಾಲ—

ಶಾಹಜಾದಾ ಜವಾನಬಖ್ತನು ಅರಮನೆಯ ಉಪವನದಲ್ಲಿ ವಿಹರಿಸುತ್ತ ಸುಗಂಧಿತ ಮಂದಮಾರುತನನ್ನು ಸೇವಿಸುತಿದ್ದನು.

ಅಷ್ಟರಲ್ಲಿ ಅವನು ನೋಡಿದ—

ಹರಿದ ಹಳೆ ಬಟ್ಟೆಯನ್ನು ತಲೆಯ ಮೇಲೆ ಬುರಖೆ ಹಾಕಿಕೊಂಡು ಒಬ್ಬ ಸ್ತ್ರೀ ಮೂರ್ತಿ ಅವನ ಕಡೆಗೇ ಬರುತಿದ್ದಾಳೆ.

ಆಗ ಕೋಟೆಯೊಳಗೆ ಬಂದು ಹೋಗಲಿಕ್ಕೆ ಯಾರಿಗೂ ಅಡಚಣೆ ಇದ್ದಿಲ್ಲ. ಯಾರೂ ಟಿಕೇಟು ಕೊಂಡುಕೊಳ್ಳಬೇಕಾಗಿದ್ದಿಲ್ಲ. ಬಡವರಲ್ಲಿ ಬಡವ ದೀನರಲ್ಲಿ ದೀನನು ಸಹ ಅರಮನೆಯನ್ನು ಪ್ರವೇಶಿಸಬಹುದಾಗಿದ್ದಿತು.

ಶಾಹಜಾದಾ ಸಿಂತಲ್ಲೇ ನಿಂತು ನೋಡಿದ—ಬುರಖೆ ಹಾಕಿಕೊಂಡು ಬಡ ಮಹಿಳೊಬ್ಬಳು ಕರುಣೆಯಂತೆ ತೋರಿಬಂದಳು. ಅವಳು ಅವನ ಕಡೆಗೇ ನಡೆದು ಬರುತಿದ್ದಳು.

ಜವಾನಬಖ್ತನು ನಡೆದಾಡುವುದನ್ನು ನಿಲ್ಲಿಸಿದ.

ಸ್ತ್ರೀ ನೆಟ್ಟಗೆ ಅವನ ಸಮೀಪ ಬಂದಳು. ಅವಳು ಬಗ್ಗಿ ಅವನಿಗೆ ಸಲಾಮು ಮಾಡಿದಳು.

'ಏನು ವಿಷಯ?' ಎಂದು ಶಾಹಜಾದಾ ಕೇಳಿದ.

'ಸ್ವಾಮಿ!' ಸ್ತ್ರೀ ಬಿಕ್ಕಳಿಸುತ್ತ ಹೇಳಿದಳು—'ಬಹಳ ಕಷ್ಟದಲ್ಲಿ ಬಿದ್ದು ತಮ್ಮ ಕಡೆಗೆ ಬಂದಿದ್ದೇನೆ.'

ಶಾಹಜಾದಾ ಕೇಳಿದ. ಬಹಳ ಮಧುರ ಸ್ವರವಾಗಿದ್ದಿತು.

'ಹೇಳು' ಅವನೆಂದ.

'ಸ್ವಾಮಿ!' ಪುನಃ ಸ್ತ್ರೀ ಅಂದಳು—'ನನ್ನ ತಂದೆಯನ್ನು ಶಹರ ಕೊತವಾಲನು ಬಂಧಿಸಿಟ್ಟಿರುವನು.'

'ಕಾರಣ?'

ಅವಳು ಒಂದು ಕ್ಷಣ ತಡೆದಳು. ಆ ಮೇಲೆ ಆ ಯುವತಿ ಸಂಪಿಗೆಯಂಥ ಸ್ವರ್ಣವರ್ಣದ ತನ್ನ ಸುಂದರ ಕಿರುಬೆರಳಿನಿಂದ ತಲೆಯ ಮೇಲಿನ ಬುರುಖೆಯನ್ನು ಕೆಳಕ್ಕೆ ಇಳಿಸಿದಳು.

ಶಾಹಜಾದನ ರೋಮ ರೋಮಗಳ ಒಳಗೆ ಮಿಂಚಿನ ಸಂಚಾರವಾದಂತೆ ಆಯಿತು. ಅವನು ನೋಡುತ್ತ ನಿಂತ.

ಈ ವಾರದ ಕಥೆ:

ಸ್ತ್ರೀ . . . . ಪುರುಷ!

ಅಷ್ಟು ರೂಪ! ಆ ಬಡ ಯುವತಿಯ ಕೃಶ ಕಾಯದಲ್ಲಿ!

ಯುವತಿ ಮತ್ತು ಶಾಹಜಾದಾನ ನಾಲ್ಕು ನೇತ್ರಗಳು ಒಂದಾದುವು. ಇಬ್ಬರೂ ನತಮಸ್ತಕರಾದರು. ಯುವತಿ ಬಿಕ್ಕಿ ಬಿಕ್ಕಿ ಅಳತೊಡಗಿದಳು.

'ನನ್ನ ಕಾರಣದಿಂದ' ಎಂದು ಅವಳು ತಡೆತಡೆದು ಹೇಳಿದಳು.

ಶಾಹಜಾದಾನ ಹುಬ್ಬುಗಳು ಗಂಟು ಹಾಕಿಕೊಂಡವು. ಯುವತಿಯ ಹೆಸರು, ವಿಳಾಸ, ತಂದೆಯ ಹೆಸರು ಉದ್ಯೋಗಗಳನ್ನು ಒಂದು ಚೀಟಿಯ ಮೇಲೆ ಬರೆಕೊಂಡು ಅವನು ಅವಳನ್ನು ಹೋಗಹೇಳಿದ.

ಮರುದಿನವೇ ಶಹರ ಕೊತವಾಲನು ಕೆಲಸದಿಂದ ತೆಗೆದು ಹಾಕಲ್ಪಟ್ಟ. ಬಂಧನದಿಂದ ಯುವತಿಯ ತಂದೆಯ ಬಿಡುಗಡೆಯಾಯಿತು.

◈

ಈ ಘಟನೆಯು ಘಟಿಸಿ ಬಹಳ ದಿನಗಳು ಕಳೆದುವು.

ಕಾಲಚಕ್ರವು ಉರುಳಿತು. ದೇಹಲಿ ಶಹರು ಅಗ್ನಿಪ ಕೋಪದಿಂದ ಉರಿಯುತಿದ್ದಿತು. ದೇಹಲಿಯಿಂದ ಹೊರಗೆ ಇಂಗ್ಲೀಷರ ಸೇನೆಯು ಅದನ್ನು ಮುತ್ತಿದ್ದಿತು. ಕೋಟೆಯಲ್ಲಿ ಶೋಕದ ತಾಂಡವ ನೃತ್ಯವು ಆಗುತಲಿದ್ದಿತು. ಅದು ಮೊಗಲರ ಕೊನೆಗಾಲವಾಗಿದ್ದಿತು.

ಜವಾನಬಖ್ತನು ಆಲೋಚಿಸುತ್ತಿದ್ದ. ಈಗ ಈ ಕೋಟೆಯಲ್ಲಿ ಇನ್ನು ಯಾರ ಶಾಸನವಾಗಬಹುದ? ಸಿಂಹಾಸನದ ಮೇಲೆ ಇನ್ನು ಯಾರು ಆಸೀನರಾಗಬಹುದ?

ಪಾಪ

ಆಗಲೇ ಅವನು ನೋಡಿದ—ಬುರಖೆಯಿಂದ ಮುಚ್ಚಿದ ಒಬ್ಬ ಸ್ತ್ರೀ ಅವನ ಕಡೆಗೆ ಬರುತಿದ್ದಾಳೆ. ಬುರುಖೆಯನ್ನು ಇಳಿಸಿದೊಡನೆ ಅವನು ನೋಡಿದ—'ಅವಳು ಅದೇ ಆ ಬಡವೆಯಾಗಿದ್ದಳು.'

'ಏನು? ಏನಾದರೂ ಹೇಳತಕ್ಕ ಮಾತು ಇದೆಯೆ? ನಾನು ಏನು ಮಾಡಬಹುದು, ಈ ಸಮಯದಲ್ಲಿ—?' ವ್ಯಾಕುಲನಾಗಿ ಶಾಹಜಾದಾ ಕೇಳಿದ.

ಯುವತಿ ಮಾತಿನ ಸರವನ್ನು ಅಲ್ಲೇ ಕಡಿದು ಹೇಳಿದಳು 'ಸ್ವಾಮಿ! ತಾವು ಈಗಲೇ ಕೋಟೆಯಿಂದ ಹೊರಟು ಹೋಗಿ!'

ಶಾಹಜಾದಾ ಮಾತಾಡಲಿಲ್ಲ.

ಅವಳು ಪುನಃ ಹೇಳಿದಳು—'ಸ್ವಾಮಿ! ಈಗಲೂ ಸಮಯವಿದೆ. ನಾನು ತಮ್ಮನ್ನು ಹೊರಗೆ ಕಳುಹಿಸುವೆನು.'

'ನೀನು?' ಶಾಹಜಾದಾ ಖೇದಾಶ್ಚರ್ಯಗಳಿಂದ ಕೇಳಿದ—'ದೇಹಲಿಯನ್ನು ನಾಲ್ಕು ದಿಕ್ಕುಗಳಿಂದ ಮುತ್ತಿರುವಾಗ ನೀನು ನನ್ನನ್ನು ಹೊರಗೆ ಮಾಡುವಿ?'

ಯುವತಿಯ ಮುಖಮಂಡಲವು ಲಜ್ಜೆಯಿಂದ ರಕ್ತವರ್ಣವಾಯಿತು. ಯಾವ ಕಾರಣದಿಂದಾಗಿಯೋ ಗೊತ್ತಾಗಲಿಲ್ಲ.

ನತಮಸ್ತಕಳಾಗಿ ಕಾಲ ಹೆಬ್ಬೆರಳುಗಳನ್ನು ನೋಡುತ್ತ ಅವಳು ಹೇಳಿದಳು—'ಸ್ವಾಮೀ! ಆ ಕಡೆಯ ಕಾವಲುಗಾರರ ಸರದಾರನು ನನಗೋಸ್ಕರ ತಮ್ಮನ್ನು'

ಜವಾನಬಖ್ತನು ಮೈಕೆಗೆದು ನಿಂತ. ಅವನು ಕೇಳಿದ—'ಏನು? ನೀನು ನನಗೋಸ್ಕರ ಈ ಕೆಲಸವನ್ನು ಮಾಡುವಿಯಾ?'

ಅವಳ ಮತ್ತು ಅವನ ನಾಲ್ಕು ಕಣ್ಣುಗಳೂ ಒಂದಾದುವು. ಅವಳು ಹೇಳಿದಳು 'ಸ್ತ್ರೀಯು ಪುರುಷನಿಗಾಗಿ ಏನನ್ನು ಮಾಡುವುದಿಲ್ಲ.'

'ಸ್ತ್ರೀ ಪುರುಷ ಹೋ!' ಶಾಹಜಾದಾನ ತಲೆ ತಿರುಗಲಾರಂಭಿಸಿತು.

ಸಹಸಾ ಅವನು ಹೇಳಿದ—'ನೀನು ನಾಳೆ ಬಾ!'

ಯುವತಿ ಅಂಜಿದಳು. ಆದರೆ ಉಪಾಯವಿರಲಿಲ್ಲ. ಅವಳು ಹೊರಟುಹೋದಳು.

ಕಾಲನ ಮಹಿಮೆ. ಅವಳ 'ನಾಳೆ' ಬರಲಿಲ್ಲ. ಅಷ್ಟರಲ್ಲಿ ದೇಹಲಿಯು ಶತ್ರುಗಳ ಹಸ್ತಗತವಾಗಿದ್ದಿತು.

ಸಮ್ರಾಟ ಬಹಾದೂರ ಶಾಹನನ್ನೂ ಮತ್ತು ಅವನ ಮಕ್ಕಳು ಮರಿಗಳನ್ನೂ ಬಂಧು ಬಾಂಧವರನ್ನೂ ದಯಾಳು ಹಮಾಯೂನನ ಗೋರಿಯ ಸಮೀಪ ಶತ್ರುಗಳು ಸೆರೆಹಿಡಿದಿದ್ದರು.

ಮತ್ತೆ ಕೋಟೆಯ ಹೆಬ್ಬಾಗಿಲಿನ ಬಳಿ ಕೊಂಗಡ ಶನ ಮಸೆದ ಕೊಡಲಿಯು ಓಡಾಡಿ ರಾಜಕುಮಾರರು ಬಲಿಯಾದರು.

ರಕ್ತದ ಕಾಲುವೆಯು ಹರಿಯಿತು. ರಾಜಸಿಂಹಾಸನವು ರಕ್ತರಂಜಿತವಾಗಿಯೇ ದೃಢವಾಗುವದಷ್ಟೆ!

ದೇಹಲಿಯ ಸಿಪಾಯಿಗಳು ಭಯದಿಂದ ತತ್ತರಿಸುತ್ತ ಅಲ್ಲಿ ನಿಂತಿದ್ದರು. ಆ ಹೆದರಿದ ಜನಸಂದಣಿಯಿಂದ ಒಬ್ಬ ಯುವತಿ, ಮೆಲ್ಲಮೆಲ್ಲಗೆ ರಾಜಕುಮಾರರ ಸತ್ತುಬಿದ್ದ ಶವಗಳ ಕಡೆಗೆ ಬರುತ್ತಿರುವುದನ್ನು ಇಂಗ್ಲಿಷ್ ಸೇನೆಗಳ ಅಧಿಕಾರಿಯು ನೋಡಿದ. ಆದರೆ ಅವಳನ್ನು ತಡೆಯುವುದು ಅವನಿಗೂ ಸಾಧ್ಯವಾಗಲಿಲ್ಲ.

ಅವಳು ಹೋಗಿ ಜವಾನಬಖ್ತನ ಸತ್ತುಬಿದ್ದ ಶವದ ಪಾದದ ಧೂಳಿಯನ್ನು ತಲೆಯ ಮೇಲೆ ಏರಿಸಿಕೊಂಡು ಅದಕ್ಕೆ ಬಗ್ಗಿ ಸಲಾಮು ಮಾಡಿದಳು ಮತ್ತೆ...

ಕಮಾಂಡರು, ಫೌಜು ಯಾರೂ ಅವಳನ್ನು ಹಿಡಿಯಲಾರದಾದರು. ಅವಳು ಮಿಂಚಿನಂತೆ ಮಿಂಚಿ ಎಲ್ಲಿಯೋ ಮಾಯವಾದಳು.

ಇದಾಗಿ ಮತ್ತೆ ಹಲವು ವರ್ಷಗಳು ಕಳೆದುವು. ದೇಹಲಿಯ ಆ ಉಪವನದಲ್ಲಿ ಶಾಹಜಾದಾ ಜವಾನಬಖ್ತನ ಸುಣ್ಣಗಾರೆಯ ಒಂದು ಸಾಮಾನ್ಯ ಗೋರಿ ಇದ್ದಿತು. ಪ್ರತಿದಿನ ಸಾಯಂಕಾಲ ಒಬ್ಬ ಸ್ತ್ರೀ ಅಲ್ಲಿ ಒಂದು ದೀಪವನ್ನು ಉರಿಸಿಟ್ಟು ಹೋಗುತಿದ್ದಳು.

ಒಂದು ದಿನ ಬೆಳಗಾತ, ತಿರುಗಾಡಲಿಕ್ಕೆ ಹೋದ ಕೆಲವರು—ಆ ಉಪವನದಲ್ಲಿ ನೋಡಿದರು—ಗೋರಿಯ ಬುಡದಲ್ಲಿ ಮುದುಕಿಯಾದ ಒಬ್ಬ ಬಡವೆ. ಸತ್ತು ಬಿದ್ದಿದ್ದಾಳೆ! ಯಾರು ಏನೆಂದು ಯಾರು ತಿಳಿದಿಲ್ಲ.

ಅವರು ಒಟ್ಟೊರಾಗಿ ನೋಡಿದರು, ಮತ್ತು ನೋಡುತ್ತ ನೋಡುತ್ತ ಒಂದೊಂದು ನಿಟ್ಟುಸಿರು ಬಿಟ್ಟು ಬೇರೆ ಕಡೆಗೆ ಹೊರಟುಹೋದರು.

('ನಯಾ ಕಹಾನಿಯಾ' ಅನುವಾದಕರು ಕಟಪಾಡಿ ಶ್ರೀನಿವಾಸ ಶೆಣೈ)

ನೋಟೀಸು

ಪುತ್ತೂರು ಡಿ. ಮು ಕೋರ್ಟಿನಲ್ಲಿ

ಕ್ರಮಸಂಖ್ಯೆ 71/1937

R I A No 573/1940

ಚಿಲ್ಮತಾರು ಗುಡ್ಡಪ್ಪ ರೈ—ಅರ್ಜಿದಾರ

ಮತ್ತು

ದೇವಪ್ಪ ರೈ ಸಹಾ 30 ಜನರು—ಎದ್ರಿದು

9ನೇ ಎದ್ರಿ ದಾಸಪ್ಪ ರೈ ಅಮ್ಮ ದೇವಪ್ಪ ರೈ ಅಳಿಯ 10ನೇ ಎದ್ರಿ ಶಿದ್ದಕ್ಕೆ ಹೆಂಗ್ಸು, ಅಮ್ಮ ದೇವಪ್ಪ ರೈ ಸೊಸೆ 11ನೇ ಎದ್ರಿ ಎಲಿಯಂಣ ರೈ, ಅಪ್ಪ ದೇವಪ್ಪ ರೈ ಅಳಿಯ	ಪುತ್ತೂರು ತಾಲೂಕು ಚಿಕ್ಕಮುಡ್ನೂರು ಗ್ರಾಮದ ಕಡಂಬಿಮಾರು ಎಂಬಲ್ಲಿರುವವರು

30ನೇ ಎದ್ರಿ ಕೊಯಪ್ಪ ಬಂಟ, ಸೊರಕೆ ಪೆರ್ಗಡೆ ಬಂಟರ ಕೊಮ್ಮು—ಪುತ್ತೂರು ತಾಲೂಕು ಕುರಿಯ ಗ್ರಾಮದಲ್ಲಿರುವವ

ಸದ್ರಿ ನಾಲ್ಕು ಜನ ಎದ್ರಿಂಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದರಿ ವ್ಯಾಜ್ಯದಲ್ಲಿ ಕೊಡಲ್ಪಟ್ಟ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಬಡಾಫೋಣೆ ಬರೇಕು ವಸೂಲು ಬಾಬ್ತಿಂದ ಸ್ಥಿರಾಸ್ತಿ ವಿಲಂ ವಗ್ಗೆ ಏವೇಜು ವಸೂಲು ಮಾಡುವರೆ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ ಸದರಿ ಅರ್ಜಿ ವಿಚಾರಣೆಯು ತನಿಖೆ ಬಗ್ಗೆ ತಾ 15-10-1940ಕ್ಕೆ ಇಟ್ಟಿರುವುದರಿಂದ ಸದರಿ ದಿವಸ ನೀವು/ನಿಮ್ಮ ಉದಾಹರಣೆಯನ್ನು ದಾಖಲು ಮಾಡುವರೆ ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯವಹರಣೆಯು ತೀರ್ಮಾನವಾಗುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ

ಪುತ್ತೂರು 23-9-40 } H Ganapath Rau
ಅರ್ಜಿದಾರನ ಕಡೆ ವಕೀಲ

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ. ಮೇಹರೋಗ, ಶರೀರ ದುರ್ಬಲತೆ,ನಿಸ್ಸತ್ವ,ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ,ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ. 1-4-0 (ವಿ.ಪಿ.ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ
P. O. Peridepi (ನೆಲ್ಲೂರು ಡಿ)

ಪ್ರಶ್ನೆನಿಸ್ತಾರ ಸಾಹಿತ್ಯ ಸಮ್ಮೇಳನಾಧ್ಯಕ್ಷ ಸ್ಥಾನಕ್ಕೆ ಶ್ರೀ ಕಲ್ಯಾಣಮ್ಮ ನವರನ್ನು ಸೂಚನೆ

ಮೈಸೂರಿನ ಶ್ರೀಮತಿ ಲಕ್ಷ್ಮಿ, ಇವರು ಹೀಗೆ ಸೂಚಿಸುತ್ತಾರೆ:—

"ಈ ಸಲದ ಮಾಗಿಯಲ್ಲಿ ಸೇರಲಿರುವ ಸಾಹಿತ್ಯ ಸಮ್ಮೇಳನಕ್ಕೆ ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಕನ್ನಡಿಗರಲ್ಲಿ ನನ್ನ ಬಿನ್ನಹ. ಇವರು ಸಾರ್ವಜನಿಕ ಸೇವೆಯಲ್ಲಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವವರು. ಸಂಸ್ಥಾನದಲ್ಲಿಲ್ಲ ಅತಿ ದೊಡ್ಡ ಊರಾದ ಬೆಂಗಳೂರು ನಗರದ ಪೌರ ಸಭೆಯ ಉಪಾಧ್ಯಕ್ಷ ಪದವಿಯಲ್ಲಿದ್ದು ಇವರು ಜನತೆಗೆ ಅಪಾರ ಉಪಕಾರ ಮಾಡಿದ್ದಾರೆ, ಬೆಂಗಳೂರು ನಗರದ ಗೌರವ ನ್ಯಾಯಾಧೀಶರಾಗಿದ್ದು ನ್ಯಾಯ ಸ್ಥಾಪನೆಗೆ ಹೆಚ್ಚು ಬೆಂಬಲವಿತ್ತಿದ್ದಾರೆ; ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು ಸ್ತ್ರೀಯರ ನೂರಾರು ಸಮಸ್ಯೆಗಳಿಗೆ ಸಾಧ್ಯವಾದಷ್ಟು ಸಮರ್ಪಕವಾದ ಉತ್ತರಗಳು ದೊರೆಯುವಂತೆ ಸತತ ಪ್ರಯತ್ನ ಮಾಡುತ್ತಿದ್ದಾರೆ. ಅಖಿಲ ಕರ್ನಾಟಕ ಮಕ್ಕಳ ಕೂಟದ ಅಧ್ಯಕ್ಷರಾಗಿದ್ದು ಭಾವೀ ಜನಾಂಗದ ಏಳಿಗೆಗಾಗಿ ತಮ್ಮ ತನುಮನ ಧನಗಳನ್ನೆಲ್ಲ ಸವೆಯುತ್ತಿದ್ದಾರೆ. ಇವರ ಸೇವಾತತ್ಪರತೆಯನ್ನು ಮನಗಂಡ ಶ್ರೀ ಮನ್ಮಹಾರಾಜರವರು ಇವರಿಗೆ ಸಾರ್ವಜನಿಕ ಸೇವಾ ಪದಕವನ್ನು ದಯಪಾಲಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಶ್ರೀ. ಕಲ್ಯಾಣಮ್ಮನವರ ದುಡಿಮೆ ಬಹಳ ಸ್ತುತ್ಯವಾದುದು. ಕನ್ನಡದಲ್ಲಿ ಪತ್ರಿಕೆಗಳನ್ನು ನಡೆಸುವುದು ಎಷ್ಟು ಕಷ್ಟವೆಂಬುದು ಅನುಭವಿಸಿದವರಿಗೆ ಗೊತ್ತಿದೆ.

ಎಂತೆಂತಹ ಎಡರುಗಳು ಬಂದರೂ ಲಕ್ಷಿಸದೆ ಶ್ರೀಮತಿಯವರು 'ಸ್ತ್ರೀಯರ ಉನ್ನತಿಗಾಗಿಯೇ ಮೀಸಲಾಗಿರುವ 'ಸರಸ್ವತಿ' ಮಾಸ ಪತ್ರಿಕೆಯ ಸಂಪಾದಕಿಯವರಾಗಿ ಅದನ್ನು ಇಪ್ಪತ್ತು ವರ್ಷಗಳಿಂದಲೂ ಉತ್ತಮ ರೀತಿಯಲ್ಲಿ ನಡೆಸುತ್ತಿರುವ ಅವರ ಎದೆಗಾರಿಕೆಯನ್ನು ನೋಡಿದರೆ ಕನ್ನಡದ ಪ್ರತಿಯೊಬ್ಬ ಅಭಿಮಾನಿಗೂ ಅವರ ವಿಷಯದಲ್ಲಿ ಆದರ ಬುದ್ಧಿ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಹತ್ತಾರು ಬಗೆಯ ಸಾರ್ವಜನಿಕ ಕಾರ್ಯ, ಪತ್ರಿಕೆಯ ಕೆಲಸ, ಮನೆಗೆಲಸ ಇವುಗಳ ಮಧ್ಯೆ "ಸುಖಲತಾ" "ನೀರದೆ" ಮೊದಲಾದ ಕನ್ನಡ ಪುಸ್ತಕಗಳನ್ನು ಬರೆದು ಪ್ರಕಟಿಸಿರುವುದೂ ಶ್ರೀಮತಿಯವರಿಗೆ ಕನ್ನಡ ನುಡಿಯಲ್ಲಿರುವ ಮಮತೆ ಆಸಕ್ತಿಗಳನ್ನು ತೋರಿಸುತ್ತದೆ. ಹೀಗಿರುವುದರಿಂದಲೇ ಶ್ರೀಮತಿ ಆರ್. ಕಲ್ಯಾಣಮ್ಮನವರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸುತ್ತೇನೆ."

ಭಾರತದ ಸ್ನೇಹ; ಬ್ರಿಟನಿಗೆ ಬೆಂಬಲ!

ಆಂಗ್ಲ ಪ್ರಮುಖರ ಹೇಳಿಕೆ!

ಬ್ರಿಟನು ಹಿಂದುಸ್ತಾನದೊಂದಿಗೆ ಸ್ನೇಹದಿಂದ ಇರುವದಾದರೆ, ಅದಕ್ಕೆ ಹಿಂದುಸ್ತಾನದ ಸಂಪೂರ್ಣ ಜನಧನ ಬಲಗಳು ಪ್ರಾಪ್ತವಾಗುವವು. ಈ ಜನಧನ ಬಲಗಳು ಅಲ್ಪವೇನೂ ಅಲ್ಲ. ಹಿಂದುಸ್ತಾನದಲ್ಲಿ ಮೂವತ್ತೈದು ಕೋಟಿ ಜನರು ವಾಸವಾಗಿದ್ದಾರೆ. ಪೂರ್ವದಲ್ಲಿ ಸಾಮ್ರಾಜ್ಯದ ಸಂರಕ್ಷಣೆಗೆ ಬೇಕಾದ ಸೈನ್ಯ ಸಾಧನಗಳನ್ನೆಲ್ಲಾ ಹಿಂದುಸ್ತಾನ ಒಂದರಿಂದಲೇ ಪ್ರಾಪ್ತಮಾಡಿಕೊಳ್ಳಬಹುದುಹೀಗೆಂದು ಲಾರ್ಡ ಸ್ಟ್ಯಾಬೊಲಿಗಿಯವರು ವೀಕ್ಲಿ ನ್ಯೂಸ್ ಎಂಬ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿರುವರು.

ಅದರ ಸಾರಾಂಶ ಹೀಗಿದೆ:

ಅಮೆರಿಕದ ಸಹಾಯವುಂಟು

ಹಿಂದುಸ್ತಾನದ ಪರಿಚಯವು ಚೆನ್ನಾಗಿರುವ ಬ್ರಿಟಿಷನು ಹಿಂದುಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲೇ ಕೂಡಬೇಕೆಂದು ಯಾವಾಗಲೂ ಹೇಳದಿರನು. ಆದರೆ ಅವರಿಗೆ ಸ್ವಾತಂತ್ರ್ಯವನ್ನು ಕೊಡುವ ಸಂದರ್ಭದಲ್ಲಿ ಅವರು ಯುದ್ಧದಲ್ಲಿ ಬ್ರಿಟಿಷರಿಗೆ ಹಾರ್ದಿಕ ಸಹಾಯ ಸಹಕಾರಗಳನ್ನು ಕೊಡಬೇಕು. ಅಂಥ ಸಂದರ್ಭದಲ್ಲಿ ಅವರ ಒಳಗಿನ ಸಮಸ್ಯೆಗಳನ್ನು ತೀರ್ಮಾನಿಸಲಿಕ್ಕೆ ಅವರನ್ನು ಅವರಷ್ಟಕ್ಕೆ ಬಿಟ್ಟುಬಿಡುವುದೂ ವಿಹಿತವಾಗಿರುವದು.

ಹೀಗೆ ಬ್ರಿಟಿಷರಿಗೆ ಹಿಂದುಸ್ತಾನದ ಸಂಪೂರ್ಣ ಸಹಾಯ ಸಹಕಾರಗಳು ಪ್ರಾಪ್ತವಾಗುವುದಾದರೆ, ಬ್ರಿಟಿಷರು ಪಶ್ಚಿಮದಲ್ಲಿ ನಾಝಿಗಳನ್ನೂ ಪೂರ್ವದಲ್ಲಿ ಜಪಾನಿನವರನ್ನೂ ವಿರೋಧಿಸಿ ತಡೆಯಲಿಕ್ಕೆ ಸಮರ್ಥರಾಗುವರು. ಇದರಿಂದ ಅಮೆರಿಕದ ಮೇಲೆ ಬ್ರಿಟಿಷರ ವಿಷಯವಾಗಿ ಸದ್ಭಾವವು ಬೆಳೆಯುವುದು. ಹಿಂದುಸ್ತಾನದ ರಾಷ್ಟ್ರೀಯ ಆಂದೋಲನದ ಕುರಿತು ಅಮೆರಿಕಕ್ಕೆ ಬಹಳ ಸಹಾನುಭೂತಿಯು ಇರುವದು. ಬ್ರಿಟಿಷರು ಪ್ರಜಾಸತ್ತೆಗಾಗಿ ಅಲ್ಲ, ಆದರೆ ಸಾಮ್ರಾಜ್ಯ ರಕ್ಷಣೆಗಾಗಿ ಯುದ್ಧ ಮಾಡುತ್ತಲಿದ್ದಾರೆ ಎಂಬ ಭಾವನೆಯು ಅಮೆರಿಕದಲ್ಲಿ ಹರಡಿರುವುದೇ, ಅಮೆರಿಕವು ಯುದ್ಧದಲ್ಲಿ ಸೇರಿಕೊಳ್ಳದಿರುವದರ ಕಾರಣವಾಗಿರುವದು. ಬ್ರಿಟಿಷರು ಹಿಂದುಸ್ತಾನಕ್ಕೆ ಕೂಡಲೇ ಸ್ವಾತಂತ್ರ್ಯವನ್ನು ಕೊಡಲು ಸಿದ್ಧರಾದರೆ, ಅಮೆರಿಕಕ್ಕೆ ಬ್ರಿಟನಿನ ವಿಷಯ ಇರುವ ತಪ್ಪು ಭಾವನೆಯು ಕೂಡಲೇ ದೂರವಾಗುತ್ತದೆ. ಹೀಗಾಗುವದು ಬ್ರಿಟಿಷರ ಯುದ್ಧ ವಿಜಯಕ್ಕೆ ಪ್ರಥಮ ಸೋಪಾನವಾಗುತದೆ.

ಜಗತ್ತಿನಲ್ಲಿಯೇ ಅತ್ಯಂತ ಪ್ರಸಿದ್ಧವಾದ ಚರ್ಮರೋಗ ನಿವಾರಕವಾದ ಔಷಧಿ!



ಜಾಂಬಕ್ ವಿಷವನ್ನು ತಡೆಯುತ್ತದೆ. ಮಂತ್ರಶಕ್ತಿಯಂತೆ ಗುಣ ಕೊಡುತ್ತದೆ!

ನಿಮಗೆ ಎಂಥಾದ್ದೇ ಚರ್ಮರೋಗವಿರಲಿ, ಗಾಯವಿರಲಿ ಜಾಂಬಕ್ಕನ್ನು ಹಚ್ಚಿರಿ. ಅವುಗಳನ್ನು ಗುಣಪಡಿಸಲು ಇದೇ ನಿಜವಾದ ದಾರಿ. ವಿಷವಾಗದಂತೆ ತಡೆಯುತ್ತದೆ. ರೋಗವನ್ನು ಗುಣಪಡಿಸುವದು. ಜಾಂಬಕಿನಲ್ಲಿರುವ ಬಹಳ ಅಮೂಲ್ಯವಾದ ಔಷಧೀ ತೈಲವು ಚರ್ಮದಲ್ಲಿ ಹೀರಿಕೊಂಡು, ನೋವನ್ನು ಗುಣಪಡಿಸಿ, ಬಾತುಹೋದುದನ್ನು ಇಳಿಸಿ ಬೇಗನ್ನೇ ಬೇನೆಯನ್ನು ಒಣಗಿಸಿಬಿಡುತ್ತದೆ. ಕಡಿತ, ಸುಟ್ಟುಹೋದುದು, ತುರಿಕಜ್ಜಿ, ಗಜಕರ್ಣ ಮತ್ತು ಮೂಲವ್ಯಾಧಿಗಳಿಗೆ ಇದು ಅಸದೃಶವಾದ ಔಷಧ! ಜಾಂಬಕ್ ಲೇಪವು 1 ರೂ. ಮತ್ತು 2-4-0 ಕ್ಕೆ ಸಿಗುವುದು. ಜಾಂಬಕು ಸಾಬೂನಿಗೆ ರೂ. 1. ಜಾಂಬಕ್ ಪೌಡರಿಗೆ ರೂ. 1.

ಏಜೆಂಟ್ಸ್:

ಮೆಸರ್ಸ್ ದಾಥಾ ಮತ್ತು ಕಂಪನಿ ಪಾರ್ಕಟೌನ್ ಮದ್ರಾಸು

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಚರ್ಬಿಯಿಂದ ವಿರಹಿತವಾದುದು

THE

BANK OF MANGALORE LTD.,

MANGALORE.

ESTD 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 3 Years 5% 1 Year 4½% For 6 months 4% 3 months 3½%

Auction [illegible] Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars

K. R. GURU, *Managing Director.*

ಜಿಲ್ಲಾ ಸಮಾಚಾರ



ಮಂಗಳೂರು

ಗಾಂಧಿ ಸಪ್ತಾಹ:—ಗಾಂಧೀ ಸಪ್ತಾಹವು ತಾ. ೨-೧೦-೪೦ರಿಂದ ೮-೧೦-೪೦ರ ವರೆಗೆ ಮಂಗಳೂರಲ್ಲಿ ಆಚರಿಸಲ್ಪಡುವದು. ೫-೨ರಿಂದ ೮ರ ವರೆಗೆ ಸ್ವಯಂ ಸೇವಕರು ನಿತ್ಯವೂ ಮನೆ ಮನೆಗೆ ಖಾದಿ ಹೊತ್ತು ಕೊಂಡು ಪ್ರಚಾರ ಮಾಡುವರು. ಜನ್ಮದಿನೋತ್ಸವದ ಸಪ್ತಾಹವನ್ನು ಈ ಬಾರಿಯಿಂದ 'ಖಾದಿ ಸಪ್ತಾಹ'ವೆಂದು ಹೆಸರಿರಿಸಿ, ಖಾದಿ ಧೋರಣೆಯಿಂದ ಆಚರಿಸಬೇಕೆಂದು ಮಹಾತ್ಮಾಜಿಯವರೇ ಒಂದು ಪ್ರಕಟಣೆ ಕೊಟ್ಟಿರುವರು. ತಾ. ೬-೧೦-೪೦ನೇ ರವಿವಾರ ಸಾಯಂಕಾಲ ೬ಕ್ಕೆ ಮೈದಾನಿನಲ್ಲಿ ಸಾರ್ವಜನಿಕ ಸಭೆ ಸೇರಿ, ಮಹಾತ್ಮಾಜಿಯವರ ಜೀವನ ತತ್ವಗಳನ್ನು ಸಭೆಯಲ್ಲಿ ವಿವರಿಸಲಾಗುವುದು.

ಕನ್ನಡ ಲೆಕ್ಚರರ್ ಶಿಪ್:—ಮದ್ರಾಸಿನ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟಿನಲ್ಲಿ ಸೀನಿಯರ್ ಕನ್ನಡ ಲೆಕ್ಚರರ ಸ್ಥಾನಕ್ಕೆ ಶ್ರೀ ಎಂ. ಎಂ. ಭಟ್ ವಿದ್ವಾನ್, ಎಂ. ಎ. ಎಲ್. ಟಿ. ಇವರು ನೇಮಕ ಹೊಂದಿದ್ದಾರೆಂದು ತಿಳಿಯುತ್ತದೆ.

ಬೆಸೆಂಟ್ ದಿನಾಚರಣೆ:—ಅಕ್ಟೋಬರ ತಾ. 1ನೇ ಸಾಯಂಕಾಲ ೫-೩೦ಕ್ಕೆ ಬೆಸೆಂಟ್ ಶಾಲೆಯಲ್ಲಿ 'ಬೆಸೆಂಟ್ ದಿನಾಚರಣೆಯು' ನಡೆಯಿತು. ಶ್ರೀಮತಿ ಸರೋಜಿನಿ ರಾಮಚಂದ್ರನ್‌ರವರು ಅಧ್ಯಕ್ಷತೆ ವಹಿಸಿದ್ದರು.

ಆಪಾದಿತರ ಬಿಡುಗಡೆ:—ಕುಂದಾಪುರ ತಾಲೂಕು ಹಳ್ನಾಡಿ ಗ್ರಾಮದ ಗೋವಿಂದ ಸೆಟ್ಟಿ ಮತ್ತು ನಾಲ್ಕು ಜನರ ಮೇಲಿನ ಮೊಕದ್ದಮೆ. ಕಳೆದ ೧೯೪೦ನೇ ... ದಿನ ಸಾಯಂಕಾಲ ೬ಗಂಟೆಗೆ ಜೊಂಪಿ ನಡೆಸಿ ಅದೇ ಗ್ರಾಮದ ಪುಟ್ಟಯ್ಯ ಶೆಟ್ಟಿ ಮಗ್ಗೆರೆರನ್ನು ಬಲಾಂ ಪಡಿಸಿದ ... ಪುಟ್ಟಯ್ಯ ಶೆಟ್ಟಿಯು ಏಟಿನಿಂದ ಮೃತ ಪಟ್ಟಿದ್ದನು. ಈ ತಪ್ಪಿನಾಗಿ ಮೇಲೆ ಹೇಳಿದ ಐದು ಜನರನ್ನು ಸೆಶ್ಯನ್ ಕೋರ್ಟಿಗೆ ಕಮಿಟು ಮಾಡಲಾಗಿತ್ತು. ಆಪಾದಿತರ ಪೈಕಿ ಕೆಲವರು ತಾವು ಆ ಸ್ಥಳದಲ್ಲಿ ಇರಲಿಲ್ಲವಾಗಿಯೂ ಉಳಿದವರು ತಾವು ಪುಟ್ಟಯ್ಯ ಮಗ್ಗೆರೆರನ್ನು ಹೊಡೆಯಲಿಲ್ಲವಾಗಿಯೂ ಸಾಧಿಸಿದ್ದರು.

ಎಲ್ಲಾ ಎಸೆಸರು ಆಪಾದಿತರು ತಪ್ಪುಗಾರರಲ್ಲವೆಂಬದಾಗಿ ಕೊಟ್ಟ ಅಭಿಪ್ರಾಯವನ್ನು ಮಂಜೂರು ಮಾಡಿ ಮಂಗಳೂರಿನ ಸೆಶ್ಯನ್ಸ್ ಜಡ್ಜರಾದ ಶ್ರೀ. ಟಿ. ಎಸ್. ರಾಮಚಂದ್ರನ್ ಅವರು ಆಪಾದಿತರನ್ನು ಬಿಡುಗಡೆ ಮಾಡಿದರು.

ಗಣಪತಿ ಹೈಸ್ಕೂಲಿನಲ್ಲಿ:—ಹಳೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ವಿಜಯ ದಶಮಿ ಕಾರ್ಯಕ್ರಮಗಳು ಮೂರು ದಿನಗಳ ವರೆಗೆ ನಡೆಯಲಿರುವವು.

ಕಾರ್ಕಳ

ಸಹಕಾರಿ ಸಭೆ:—ಕಾರ್ಕಳ ಕೋಆಪರೇಟಿವ್ ಸ್ಟೋರ್ಸಿನ ಪಾಲುದಾರರ ಒಂದು ಮಹಾಸಭೆಯು ತಾ. ೨೭-೯-೪೦ರ ದಿನ ಸಾಯಂಕಾಲ ಬೋರ್ಡ್‌ಮೆನ್ನನ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವಕೀಲ ಯಂ. ಮುಕುಂದ ಕಾಮತರ ಅಧ್ಯಕ್ಷತೆಯಲ್ಲಿ ಕೂಡಿ ಕೆಲವೇ ಗ್ರಾಮಗಳ ಮಟ್ಟಿಗೆ ಇದ್ದ ಇದರ ವ್ಯವಹಾರ ಕ್ಷೇತ್ರವನ್ನು ಇಡೀ ಕಾರ್ಕಳ ತಾಲೂಕಿನ ತನಕ ವಿಸ್ತರಿಸಬೇಕೆಂಬ ಒಂದು ಮುಖ್ಯವಾದ ಠರಾವು ಮಂಜೂರಾಗಿದೆ.

ಪರೀಕ್ಷಾ ಫಲಿತಾಂಶ:—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಕಳೆದ ಆಗೋಸ್ತು ತಿಂಗಳ ಪರೀಕ್ಷೆಗಳನ್ನು ಕೊಟ್ಟಿತ್ತು. ... ರಲ್ಲಿ ೧೩ರಲ್ಲಿ ೮ ಮಂದಿಯೂ ಮಧ್ಯಮದ ೧೭ರಲ್ಲಿ ೧೫ ಮಂದಿಯೂ ರಾಷ್ಟ್ರಭಾಷೆಯ ೬ರಲ್ಲಿ ೩ಮಂದಿಯೂ, ಒಟ್ಟಿಗೆ ೩೬ರಲ್ಲಿ ೨೬ ಮಂದಿಯೂ ತೇರ್ಗಡೆಯಾಗಿದ್ದಾರೆಂದೂ ಅವರಲ್ಲಿ ಪ್ರಾಥಮಿಕದ ೨ಮತ್ತು ಮಧ್ಯಮದ ೨ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದೂ ಹಿಂದೀ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಪುತ್ತೂರು

ದಸರಾ ಮಹೋತ್ಸವದ ಕಾರ್ಯಕ್ರಮ

ತಾ. ೨ನೇ ಬುಧವಾರ—ಉಪನ್ಯಾಸ "ಕಾಳಿದಾಸನ ವ್ಯಕ್ತಿತ್ವ" ಶ್ರೀ ಎಸ್. ಶಿವರಾಮ ಶಾಸ್ತ್ರಿಗಳು, ಎಂ. ಎ., ಮೈಸೂರು. ವಿನೋದ "ಕಾಳಪರಿಣಯ" (ನೃತ್ಯ)

ತಾ. ೩ನೇ ಗುರುವಾರ ಉಪನ್ಯಾಸ "ಪಶೀಕರಣದ ಅವಶ್ಯಕತೆ" ಶ್ರೀ ಜನರಾಜ ಹೆಗ್ಗಡೆಯವರು, ಮಂಗಳೂರು. ವಿನೋದ "ಮೃತ್ಯುಯಾತ್ರೆ" (ನಾಟ್ಯ ಗೀತೆ)

ತಾ. ೪ನೇ ಶುಕ್ರವಾರ—ಉಪನ್ಯಾಸ "...ಮಹಾತ್ಮೆ" ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಎಂ. ಎ., ಮೈಸೂರು. ವಿನೋದ ಜಂಬದ ಜಾನಕಿ ಗದ್ಯ ನಾಟಕ, ಜಲಸಾ (ಶ್ರೀ ಬಂಟ್ವಾಳಕಾರ್ ಎಂಡ್ ಪಾರ್ಟಿ)

ತಾ. ೫ನೇ ಶನಿವಾರ—ಉಪನ್ಯಾಸ 'ಆಧುನಿಕ ದೃಷ್ಟಿ' ಶ್ರೀ ಎಸ್. ವಿ. ಶ್ರೀನಿವಾಸ ರಾಯರು, ಎಂ. ಎ., ಮೈಸೂರು. ವಿನೋದ 'ವೀಣಾವಾದನ' (ಶ್ರೀ ರಾಜೇರಾಯರು, ಬೆಂಗಳೂರು) 'ಕೃಷ್ಣಗೌತಮಿ' (ಗೀತಾನಾಟಕ)

ತಾ. ೬ನೇ ಆದಿತ್ಯವಾರ ಉಪನ್ಯಾಸ 'ಮತಗಳು ಬೇಕೇ?' ಶ್ರೀ ಡಿ. ವಿ. ಗುಂಡಪ್ಪನವರು, ಬೆಂಗಳೂರು. ವಿನೋದ 'ಘೋಷಯಾತ್ರೆ' (ಕಿನ್ನರ ನೃತ್ಯ)

ತಾ. ೭ನೇ ಸೋಮವಾರ 'ಉಪನ್ಯಾಸ ವಿದ್ಯುಚ್ಛಕ್ತಿನ ಯುಗ', 'ಆಧುನಿಕ ಇಂಗ್ಲಿಷ ಸಾಹಿತ್ಯ' ಶ್ರೀ ಪಿ. ಶ್ರೀನಿವಾಸ ರಾಯರು, ಶ್ರೀ ವೀ. ಸೀ.ಯವರು. ವಿನೋದ ಯಕ್ಷಗಾನ

ತಾ. ೮ನೇ ಮಂಗಳವಾರ ಉಪನ್ಯಾಸ 'ಕುಮಾರವ್ಯಾಸ' ಶ್ರೀ ಕೆ. ಶಂಕರ ಭಟ್ಟರು, ಮಂಗಳೂರು. ವಿನೋದ ವೀಣಾವಾದನ ಶ್ರೀ ರಾಜೇರಾಯರು, ಬೆಂಗಳೂರು. ಭಾರತ ರಮಣಿಯರು (ನಾಟ್ಯರೂಪ ಚಿತ್ರ)

ತಾ. ೯ನೇ ಬುಧವಾರ—ಉಪನ್ಯಾಸ 'ಮಕ್ಕಳ ಮನೋಧರ್ಮವೂ ತಂದೆತಾಯಿಗಳೂ' ಶ್ರೀಮತಿ ಬಿ. ಇಂದಿರಮ್ಮನವರು, ಮೈಸೂರು. ವಿನೋದ ಅದಲ್ಬದಲಿ (ಗದ್ಯ ನಾಟಕ)

ತಾ. ೧೦ನೇ ಗುರುವಾರ—ಉಪನ್ಯಾಸ 'ಸಾಹಿತ್ಯ ಮತ್ತು ಸತ್ಯ' ಶ್ರೀ ಎ. ಎನ್. ಮೂರ್ತಿರಾವ್, ಎಂ. ಎ., ಶಿವಮೊಗ್ಗ 'ಘೋಷಯಾತ್ರೆ' (ಪುನರಾವರ್ತನೆ)

ಉಪನ್ಯಾಸಗಳು ಹುಡುಗಿಯರ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಸಾಯಂ. ೬ಕ್ಕೆ. ವಿನೋದಾವಳಿಗಳು ಹುಡುಗರ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಸಾಯಂ. ೭-೧೫ಕ್ಕೆ. ಇದಲ್ಲದೆ ಪ್ರತಿದಿನ ಸಾಯಂ ೫ರ ಬಳಿಕ ಸ್ಪರ್ಧೆಗಳಿವೆ.

ಹೊಸ ಕಾವ್ಯ—ಕನ್ನಡದಲ್ಲಿ ಹಲವು ಭಾವಗೀತೆಗಳನ್ನು ಬರೆದು ಪ್ರಸಿದ್ಧರಾದ ಶ್ರೀ ಪಾಂಡೇಶ್ವರ ಗಣಪತಿರಾಯರ 'ಬೆಂಗಳಿವೆ' ಎಂಬ ಕಾವ್ಯ ಪುಸ್ತಕ (ಕವನ ಸಂಗ್ರಹ) ವೊಂದು ಶ್ರೀ ಗೋವಿಂದ ಪೈಗಳ ಮುನ್ನುಡಿಯೊಡನೆ ಬರುವ ವಿಜಯ ದಶಮಿಯೊಳಗೆ ಪ್ರಸಿದ್ಧವಾಗಲಿರುವುದೆಂದು ತಿಳಿಯುತ್ತೇವೆ.

ಕಾಡುಹಂದಿಯು ತಿವಿದು ಮರಣ—ಇಲ್ಲಿಗೆ ಸಮೀಪದ ಕಟಾರ ಕಾಡಿನಲ್ಲಿ ಕಳೆದ ತಾ. ೧೬ರಲ್ಲಿ ಒಬ್ಬ ಹರಿಜನನಿಗೆ ಕಾಡು ಹಂದಿಯೊಂದು ತಿವಿದು ತೀವ್ರ ಗಾಯಗಳುಂಟಾಗಿ ಇಲ್ಲಿಯ ಸರಕಾರಿ ಆಸ್ಪತ್ರೆಗೆ ಒಯ್ಯಲ್ಪಟ್ಟು ಚಿಕಿತ್ಸೆ ಹೊಂದುತಿದ್ದ ಅವನು ತಾ. ೨೧ರಲ್ಲಿ ಮೃತ ಪಟ್ಟಿರುತ್ತಾನೆಂದು ತಿಳಿದು ಬರುತ್ತದೆ.

ಪೆರಡಾಲ

ದಸರಾ ಮಹೋತ್ಸವದ ಕಾರ್ಯಕ್ರಮ—ಇಲ್ಲಿನ ಪ್ರೇಮಕೂಟದ ಆಶ್ರಯದಲ್ಲಿ ಈ ವರ್ಷ ದಸರಾ ಮಹೋತ್ಸವವು ೭, ೮ ಮತ್ತು ೯ರಲ್ಲು ನಡೆಯುವುದು. ಪ್ರತಿದಿನ ಪ್ರಾತಃಕಾಲ ೯ರಿಂದ ೧೧-೩೦ರ ವರೆಗೆ ಆಟ ಸ್ಪರ್ಧೆಗಳು. (ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಸಂಬಂಧಿಸಿದವುಗಳು) ಸಂಜೆಗೆ ೫-೩೦ರಿಂದ ೭ರ ವರೆಗೆ ಭಾಷಣಗಳು. ಒಂದು ಉಪನ್ಯಾಸ ದೇಶದ ರಾಜಕೀಯ, ಸಂಸ್ಕೃತಿ ಸಾಹಿತ್ಯಗಳ ವಿಷಯವಾಗಿ, ಇನ್ನೊಂದು ಕೃಷಿ, ಆರೋಗ್ಯ, ಸಹಕಾರ ಮೊದಲಾದ ವಿಚಾರವಾಗಿ. ರಾತ್ರೆಗೆ ಪ್ರತಿದಿನವೂ ನಾಟಕ ಯಕ್ಷಗಾನ ಮೊದಲಾದ ವಿವಿಧ ವಿನೋದಾವಳಿಗಳಿವೆ.

ಡಾ. ಬಿ. ಕೃಷ್ಣಭಟ್ಟ ಎಂ. ಬಿ. ಬಿ. ಎಸ್. ಪುತ್ತೂರು, (ತಾ. ೭ರಂದು) ಆಯುರ್ವೇದ ಭೂಷಣ ಶ್ರೀ ಎಂ. ವಿ. ಶಾಸ್ತ್ರಿ, ಮಂಗಳೂರು, (ತಾ. ೮ರಂದು) ದೇಶಭಕ್ತ ನಾರಾಯಣ ಕಿಲ್ಲೆ, ಮಂಗಳೂರು, (ತಾ. ೯ರಂದು) ಇವರೇ ಮೊದಲಾದ ಮಹನೀಯರು ಭಾಷಣ ಕೊಡಲಿರುವರು.

ದಸರಾ ಕಾರ್ಯಕ್ರಮದ ಭಾಷಣ, ವಿವಿಧ ವಿನೋದಾವಳಿಗಳು ನಡೆಯುವ ಸ್ಥಳ, ಪೆರಡಾಲ ಬೋರ್ಡ್ ಹಯ್ಯರ್ ಎಲಿಮೆಂಟರಿ ಶಾಲೆ.

ಮುಂಬಯಿ

ಬಿಲ್ಲವರ ಸಂಘಗಳ ಕೇಂದ್ರ ಸಮಿತಿ:—ಬಾಕರ್ಗು ಬಿಲ್ಲವ ಚಾರಿಟಿ ಸಂಘ, ವಿದ್ಯಾದಾಯಿನಿ ಸಭಾ, ಮತ್ತು ಬಿಲ್ಲವ ಯುವಕ ಸಂಘ—ಈ ಸಂಸ್ಥೆಗಳ ಪ್ರತಿನಿಧಿಗಳ ಮೇಲಿನ ಸಮಿತಿಯ ನೇತೃತ್ವದಲ್ಲಿ, ಪೂಜ್ಯ ಬ್ರಹ್ಮಶ್ರೀ ನಾರಾಯಣ ಗುರುದೇವರ ಹನ್ನೆರಡನೆಯ ಮಹಾಸಮಾಧಿ ದಿನವನ್ನು ಇದೇ ಬರುವ ಅಕ್ಟೋಬರ ತಿಂಗಳ ತಾ. ೧೩ನೇ ರವಿವಾರ ಅಪರಾಹ್ನ ಘಂಟೆ ೩-೩೦ಕ್ಕೆ (ಸ್ಟೈ. ಟೈ.) ಸರಿಯಾಗಿ ಕೋಟೆಯೊಳಗಿನ ದೋಬಿತಾವ್ ರಸ್ತೆಯಲ್ಲಿರುವ ಮುಂಗ್ರೋಲ್ ಮೆನ್ಶನಿನಲ್ಲಿ ಆಚರಿಸಲಾಗುವುದು.



ಜರ್ಮನ್-ಇಟಲಿ-ಜಪಾನುಗಳ ಒಪ್ಪಂದ!

★ ಯುದ್ಧ ವಾರ್ತೆ



ರಶ್ಯವೂ ಇದಕ್ಕೆ ಸಹಿ ಹಾಕುವುದೆ?

ಆಂಗ್ಲೋ ಅಮೇರಿಕನ್ ಒಪ್ಪಂದದ ಪ್ರತಿಧ್ವನಿ

ಡಿಗಾಲೆಯವರ ಕಾದಾಟದ ಸುದ್ದಿ

ತ್ರಿರಾಷ್ಟ್ರಗಳ ಒಪ್ಪಂದ

ಈ ವಾರದಲ್ಲಿ ಯೂರೋಪಿನಲ್ಲಿಯೂ ಬಹಳ ವಿಚಿತ್ರ ಕ್ರಾಂತಿಕಾರೀ ಪರಿವರ್ತನೆಗಳಾದುವು. ಇಟಲಿ ಜರ್ಮನಿಗಳು ಜಪಾನಿನೊಡನೆ ಹತ್ತು ವರ್ಷಗಳ ಸೈನಿಕ ಒಪ್ಪಂದವನ್ನು ಮಾಡಿಕೊಂಡವು. ಇದರಿಂದ ಯೂರೋಪು ಆಶ್ಯಖಂಡಗಳ ಶಾಂತಿಗೆ ಬಹಳ ಆಘಾತವಾಗಿದೆ. ಯುದ್ಧವು ಬಹಳ ಬೇಗನೇ ನಿಲ್ಲುವುದೆಂಬ ಆಶೆಯು ಕನಸಾಗಿದೆ.

ಆಂಗ್ಲೋ-ಅಮೇರಿಕ

ಇತ್ತ ಆಂಗ್ಲೋ ಅಮೇರಿಕಗಳೂ ಒಪ್ಪಂದ ಮಾಡಿಕೊಂಡಿವೆ. ಮೊದಲಿಗಿಂತ ಹೆಚ್ಚು ಸಹಾಯವು ಇಂಗ್ಲೆಂಡಿಗೆ ಅಮೇರಿಕದಿಂದ ದೊರೆಯುತ್ತದೆ. ಆದರೆ ಅಮೇರಿಕವು ಇದುವರೆಗೂ ಯುದ್ಧಕ್ಕಿಳಿದಿಲ್ಲ; ಜಪಾನೂ ಹಾಗೆಯೇ!

ರಶ್ಯವೂ ಒಪ್ಪಂದ ಮಾಡುವುದೇ?

ಜರ್ಮನಿಯೊಡನೆ ರಶ್ಯವೂ ಒಪ್ಪಂದ ಮಾಡಿಕೊಳ್ಳುವುದೇ ಎಂಬ ವಿಚಾರವು ರಾಜಕೀಯ ಕೇಂದ್ರದಲ್ಲಿ ಪ್ರಚಾರವಾಗಿದೆ. ಆದಕ್ಕಾಗಿಯೇ ಜರ್ಮನ್ ಮಂತ್ರಿ ರಿಬ್ಬನ್‌ಟ್ರಾಪನು ಮಾಸ್ಕೋಗೆ ತೆರಳಿರುವನೆಂದು ಸುದ್ದಿ.

ಜಪಾನಿನೊಡನೆ ಇಟಲಿ-ಜರ್ಮನಿಗಳ ಒಪ್ಪಂದ

ಇಟಲಿ, ಜರ್ಮನಿ ಮತ್ತು ಜಪಾನರೊಳಗೆ ಮಿಲಿಟರಿ, ರಾಜಕೀಯ ಹಾಗೂ ಆರ್ಥಿಕ ವಿಷಯಗಳ ಉದ್ದೇಶ್ಯ ಹತ್ತು ವರ್ಷಗಳ ಮಟ್ಟಿಗೆ ಒಂದು ಕರಾರು ಆಯಿತು. ಯೂರೋಪಿನ ಮಟ್ಟಿಗೆ ಜರ್ಮನರ ಹಾಗೂ ಇಟಲಿಯವರ ದೊರೆತನವನ್ನು ಜಪಾನು ಒಪ್ಪಿದೆ. ಮೂರ್ನ ಆಶ್ಯದ ಮಟ್ಟಿಗೆ ಜರ್ಮನಿ ಮತ್ತು ಇಟಲಿಯು ಜಪಾನಿನ ದೊರೆತನವನ್ನು ಮನ್ನಿಸಿವೆಯಂತೆ. ಜರ್ಮನಿ ಮತ್ತು ಇಟಲಿ, ಯುರೋಪಿನಲ್ಲಿ ಹೊಸ ಕಲ್ಪ ಸ್ಥಾಪಿಸಬಹುದೆಂದು ಜಪಾನು ಒಪ್ಪಿದೆ. ಹಾಗೆಯೇ ಜಪಾನು ಆಶ್ಯಾಪ್ರದೇಶದಲ್ಲಿ ಹೊಸ ಕ್ರಮ ನಿರ್ಮಿಸುವರೆ ಜರ್ಮನಿ ಮತ್ತು ಇಟಲಿ ಒಪ್ಪಿವೆ. ಈಗ ನಡೆಯುತ್ತಿರುವ ಗ್ರೇಟ್ ಬ್ರಿಟನ್ ಯುದ್ಧ ಮತ್ತು ಚೀನ-ಜಪಾನ ಯುದ್ಧದಲ್ಲಿ ಸೇರದಿರುವವರು ಮೇಲೆ ಹೇಳಿದ ಒಪ್ಪಂದಕ್ಕೆ ಸೇರಿದ ಮೂರು ರಾಷ್ಟ್ರಗಳ ಮೇಲೆ ಬೀಳುವ ಪಕ್ಷದಲ್ಲಿ [illegible] [illegible]

ಡಾಕರಿನ ದಾಳಿ ಮುಗಿಯಿತು

ಡಿ'ಗಾಲೆಯವರ ಡಾಕರಿನ ದಾಳಿ ಮುಗಿಯಿತು. ಈ ದಾಳಿ ಪ್ರಾಮುಖ್ಯವಾದ ಆ ಪ್ರದೇಶದಲ್ಲಿ ನಡೆದಿದ್ದು ಹೀಗೆ ಮುಕ್ತಾಯವಾದುದು ಚೆನ್ನಾಗಿಲ್ಲವೆಂದು ಹಲವು ಇಂಗ್ಲಿಷ್ ಮತ್ತು ಅಮೇರಿಕ ಪತ್ರಿಕೆಗಳ ಟೀಕೆ. ಈ ದಾಳಿಯು ಫ್ರೆಂಚರಿಗೆ ನಿರುತ್ಸಾಹಜನಕವೆಂದು ಅವುಗಳ ಹೇಳಿಕೆ.

ಲೀಗ್ ಆಫ್ ನೇಶನ್ಸಿನ ಹಲವು ಅಧಿಕಾರಿಗಳಿಗೆ ಸ್ಪೈನಿನೊಳಗೆ ಪ್ರವೇಶಿಸಲು ಬಿಡಲಿಲ್ಲ. ಅವರು ವಾಪಸ, ಜನೀವಾಕ್ಕೆ ಹಿಂದಿರುಗಿ ಬರುವಂತಾಯಿತು.

ಬಾಲ್ಕನಿನಲ್ಲಿ ಅಸಮಾಧಾನ

ಏಕ್ಸಿಸ್ ರಾಷ್ಟ್ರಗಳು ತಮ್ಮ ಯುದ್ಧಕಾರ್ಯಗಳಿಗಾಗಿ ತಮ್ಮ ನೆರೆಕರೆಯ ಯಾವತ್ತು ಆಹಾರ ಸಾಮಾಗ್ರಿಗಳನ್ನೂ ಸುಲಿದೊಯ್ಯುತ್ತಿರುವರೆಂದು ರುಮೇನಿಯಾ, ಬಲ್ಗೇರಿಯಾ, ಯುಗೋಸ್ಲಾವಿಯಗಳಲ್ಲಿ ಅತೃಪ್ತಿ ಹೆಚ್ಚುತ್ತಿದೆ. ಆಹಾರ ಸಾಧನಗಳ ಬೆಲೆ ಹೆಚ್ಚಿರುವುದೊಂದು, ನಾಜಿಗಳು ಅಲ್ಲಲ್ಲಿನ ಹೊಟೆಲುಗಳಲ್ಲಿ ತಿಂದು ತೇಗುತ್ತಿರುವುದೊಂದು ಇವೂ ಸಹಿಸಲಾರದ ಸಂಗತಿಗಳಾಗಿವೆ.

ಕೀಲ್‌ನಲ್ಲಿ ರಾಯಲ್ ವಿಮಾನಗಳ ಆಘಾತ

ಕಾಲಿವೆಯ ಬಂದರುಗಳು ಮತ್ತು ಕೀಲ್‌ನ ಮೇಲೆ ಬ್ರಿಟಿಷ್ ವಿಮಾನಗಳು ದಾಳಿ ನಡೆಸಿದುವು. ಕೀಲ್‌ನಲ್ಲಿಯೂ ಜರ್ಮನಿಯ ಪಶ್ಚಿಮೋತ್ತರ ಭಾಗಗಳಲ್ಲಿಯೂ ಮಿಲಿಟರಿ ಕ್ಷೇತ್ರಗಳಲ್ಲಿ ಅತಿಶಯ ನಷ್ಟವಾಗಿದೆ. ಉಗ್ರ ಸ್ವರೂಪದ ಹಲವು ಕಡೆಯ ಬೆಂಕಿಯಿಂದ ಲೀ ಹಾವ್ರೆಯು ಕಂಗೆಟ್ಟಿದೆ.

ಮುಂದಿನ ನಾಜಿ ಹಂಚಿಕೆ ಏನು?

ನಾಜಿಗಳು ಬ್ರಿಟನಿನ ಮೇಲಿನ ಕೈಯನ್ನು ಕೊಂಚ ಸಡಲಿಸಿ, ಇಡೀ ಫ್ರಾನ್ಸನ್ನು ನುಂಗಿ, ಸ್ಪೈನಿನ ಗಡಿಗಳಲ್ಲಿ (ಜರ್ಮನ್) ಸೈನ್ಯಗಳನ್ನು ತಂದು ತುಂಬಿ ಅಲ್ಲಿಂದ ಜಿಬ್ರಾಲ್ಟರನ್ನು ಪುಡಿ ಮಾಡಿ ಅದರೊಡನೆ ಮೆಡಿಟರೇನಿಯನ್ ನೌಕಾ ಬಲವನ್ನು ಅತ್ತಿತ್ತ ಚಲಿಸದಂತೆ ಮಾಡುವ ಯೋಜನೆಯಲ್ಲಿರುವರೆಂದು ಒಂದು ಪತ್ರಿಕೆ ಹೇಳುತ್ತಿದೆ.

ಜರ್ಮನರು ದಿನೇ ದಿನೇ ಫ್ರಾನ್ಸನ್ನು ಕೊಂಚ ಕೊಂಚವಾಗಿ ನುಂಗುವ ಯತ್ನ ಫ್ರೆಂಕೋ ಒಪ್ಪದಿದ್ದರೂ, ಜರ್ಮನಿ ಆ ದೇಶದ ಮೂಲಕವಾಗಿ ಹೋಗಿ ಜಿಬ್ರಾಲ್ಟರನ್ನು ಆಕ್ರಮಿಸುವುದರಲ್ಲಿದೆ ಎಂದು ಹೇಳಲಾಗಿದೆ. ಇಷ್ಟೇ ಅಲ್ಲದೆ, ವಿಚೀ ಸರಕಾರವೀಗ ಬ್ರಿಟಿಷರ ವಿಜಯವನ್ನೇ ಹಾರೈಸುತ್ತ ಕುಳಿತಿದೆ ಎಂದೂ ಸುದ್ದಿ.

ಇಟಲಿಗೆ ವಿಪರೀತ ನಷ್ಟ; ಎರಡನೆ ದಾಳಿಗೆ ಪ್ರಯತ್ನ, ಸಿದ್ಧತೆ

ಇಟಲಿಯವರ ಪ್ರಥಮ ದಾಳಿ ಕೃತಾರ್ಥವಾಗಲಿಲ್ಲ. ಅವರ ಸೈನ್ಯ, ಸರಂಜಾಮುಗಳು ನಷ್ಟವಾದುದೇ ವಿಪರೀತ. ಹೀಗಾಗಿ ಅವರು ಎರಡನೇ ಆಕ್ರಮಣಕ್ಕಾಗಿ ಸಿದ್ಧತೆಮಾಡುತ್ತಿದ್ದಾರೆ. ಇಷ್ಟರಲ್ಲಿ ಬ್ರಿಟಿಷ್ ವಿಮಾನಗಳೂ ಅಬಿಸೀನಿಯಾದಲ್ಲಿ ಬಲವಾದ ಆಘಾತಗಳಿಗೇ ತೊಡಗಿವೆ ಎಂದು ಸುದ್ದಿ.

ಬ್ರಿಟನಿನಲ್ಲಿ ನಾಜಿಗಳ ಉಗ್ರ ದಾಳಿ; ವಿಪರೀತ ನಷ್ಟ

ಕಳೆದ ತಾ. ೨೭ರಲ್ಲಿ ತೇಮ್ಸ್ ನದೀ ಮುಖದಲ್ಲಿ ಘಾಡಾಘಾಡಿ ಯುದ್ಧ; ೧ ಗಂಟೆಯ ೮ ವಿಮಾನ ಯುದ್ಧದಲ್ಲಿ ಜರ್ಮನ್ ವಿಮಾನಗಳು ಹಿಂದಕ್ಕೋಡಿದುವು. ಕಳೆದ ತಿಂಗಳ ತಾ. ೧೧ರಿಂದ ನಾಜಿಗಳ ೧ ಸಾವಿರ ವಿಮಾನಗಳು ನಷ್ಟವಾಗಿವೆ.

ಕಳೆದ ಗುರುವಾರದ ಕಾದಾಟದಲ್ಲಿ ಒಂದು ಆಸ್ಪತ್ರೆಗೆ ಪೆಟ್ಟಾಗಿದೆ; ಮಧ್ಯ ಲಂಡನಿನ ಕೆಲವು ವ್ಯಾಪಾರೀ ಕಟ್ಟಡಗಳ ಮೇಲೆ ಬಾಂಬು ಬಿದ್ದವೆ. ಕೆಂಟಿನಲ್ಲಿ ಕೆಲವರಿಗೆ ಬಾಂಬುಗಳಿಂದ ಗಾಯಗಳಾಗಿವೆ; ಕೆಲವರು ಮೃತರಾಗಿದ್ದಾರೆ.

ಲಾರ್ಡ್ ಲೋಥಿಯನರೂ ಪ್ರೆಸಿಡೆಂಟ್ ರೂಸ್‌ವೆಲ್ಟರೂ

ಬ್ರಿಟಿಷ್ ರಾಯಭಾರಿ ಲಾರ್ಡ್ ಲೋಥಿಯನರು ಪ್ರೆಸಿಡೆಂಟ್ ವಿಲ್ಸನರ ಭೇಟಿ ಮಾಡಿ, ಬ್ರಿಟನ್ನಿಗೆ ಇನ್ನೂ ಬೇಗನೇ ಇನ್ನೂ ಹೆಚ್ಚಿಗೆಯಾಗಿ ಅಮೇರಿಕದ ಸಹಾಯ ಅಗತ್ಯವೆಂದಿರುವರು. ಮದ್ದುಗುಂಡು, ಡಿಸ್ಟ್ರಾಯರು ಇತ್ಯಾದಿಗಳು ಸಾಗುವ ವೇಗತೆ ಅಧಿಕವಾಗಬೇಕೆಂದು ಕೇಳಿರುವರು.

ಲಂಡನಿನ ಇನ್ನೊಂದು ಇಂಡಿಯನ್ ಹೊಸ್ಟೆಲಿನ ಮೇಲೆ ಬಾಂಬು

ಮಧ್ಯ ಲಂಡನಿನಲ್ಲಿದ್ದ ಒಂದು ಭಾರತೀಯ [illegible] ಡನೆಯ ಬಾರಿಯಾಗಿ ನಾಜಿ ಬಾಂಬುಗಳು ಬಿದ್ದುವು. ಆದರೆ ಅಲ್ಲಿದ್ದ ೬ ಹಿಂದೂ ವಿದ್ಯಾರ್ಥಿಗಳಿಗೂ ಪೆಟ್ಟಾಗಲಿಲ್ಲ. ಕಲ್ಕತ್ತೆಯ ಶ್ರೀ. ಆರ್. ಸಿ. ಚ್ಯಾಟರ್ಜಿ ಎಂಬವನಿಗೆ ಮಾತ್ರ ಕೊಂಚ ತರಚಿದ ಗುರುತುಗಳು ಆಗಿವೆ.

ಬರ್ಲಿನಿನಲ್ಲಿ ಮಹಾ ಸಮ್ಮೇಳನ

ಸರ್ವಾಧಿಕಾರಿಗಳ ಸಂತೋಷ ಕೂಟ

ಜರ್ಮನ್ ಸರಕಾರದ ಮುಖ್ಯ ಕಚೇರಿಯಲ್ಲಿ, (ಬರ್ಲಿನ್) ಒಂದು ಮಹಾ ಸಂತೋಷ ಕೂಟವೇರ್ಪಟ್ಟಿತು. ಜಪಾನು ಇಟಲಿ ಜರ್ಮನ್‌ಗಳೊಳಗೆ ಆದ ಒಪ್ಪಂದದ ಸಂತೋಷ ಪ್ರದರ್ಶನವಾಗಿ ಆಯಾಯ ದೇಶಗಳ ಪ್ರತಿನಿಧಿಗಳು ಬಂದಿದ್ದರು.

ಒಳಗ ಮಂಟಪದಲ್ಲಿ ಹಿಟ್ಲರ್ ಕುಳಿತಿದ್ದನು. ಅವನ ಪಾರ್ಶ್ವದಲ್ಲಿ ರಿಬನ್‌ಟ್ರಾಪ್, ಗೋರಿಂಗ್, ಗೊಬೆಲ್ಸ್, ಹೆಸ್, ಕೀಟಲ್ ಪ್ರಭೃತಿ ಜರ್ಮನ್ ಅಧಿಕಾರಿಗಳು ಆಸೀನರಾಗಿದ್ದರು. ಇನ್ನೊಂದು ಪಾರ್ಶ್ವದಲ್ಲಿ ಇಟಲಿಯ ಕೌಂಟ್ ಸಿಯಾನೋ ಮತ್ತು ಜಪಾನಿನ ರಾಯಭಾರಿ ಕುರುಸೂ ಇವರು ಕುಳಿತಿದ್ದರು. ಅವರ ಹಿಂದೆ ಅನೇಕ ಜಪಾನ್ ಇಟಲಿ ಅಧಿಕಾರಿಗಳು ಮಂಡಿತರಾಗಿದ್ದರು.

ಮೊದಲು ಮೂರು ರಾಷ್ಟ್ರಗಳ ಪ್ರತಿನಿಧಿಗಳೂ ಒಪ್ಪಂದಕ್ಕೆ ಸಹಿಹಾಕಿದರು. ಬಳಿಕ ಭಾಷಣಗಳಾದುವು. ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರಗಳಾದ ಇಟಲಿ ಜರ್ಮನ್ ಜಪಾನುಗಳು ಇನ್ನು ಮುಂದೆ ಪರಸ್ಪರ ಸಹಾಯದಿಂದ ನಡೆಯುವುವೆಂದು ರಿಬನ್ ಟ್ರಾಪ್ ಹೇಳಿದ. ನಾವಾಗಿ ಯಾರನ್ನೂ ಹೆದರಿಸುವುದಿಲ್ಲ ಎಂದು ಸಿಯಾನೋ ಅಂದ ನ್ಯಾಯವಾಗಿ ಹೊಸ ಜಗತನ್ನು ನಿರ್ಮಿಸುವುದೇ ನಮ್ಮ ಧ್ಯೇಯವೆಂದು ಕುರುಸೂ ಹೇಳಿದ.

ಆಕ್ರಮಣ ನಡೆಸಿದರೆ ಇಟಲಿಯೊಡನೆ ಯುದ್ಧ ಸಾರುವೆವು

ಈಜಿಪ್ತ ಮುಖ್ಯ ಮಂತ್ರಿಗಳ ಹೇಳಿಕೆ

ಇಟಲಿಯು ಈಜಿಪ್ತಿಗೆ ಕಳೆದ ಕೆಲವು ವಾರಗಳಿಂದ ತೊಂದರೆ ಕೊಡುತ್ತಿದೆಯಷ್ಟೆ? ಈ ವಿಚಾರವಾಗಿ ಇಟಲಿಯೊಡನೆ ಈಜಿಪ್ತ್ ಯುದ್ಧ ಸಾರಬೇಕೆಂಬೋ ಎಂಬ ವಿಚಾರವು ದೀರ್ಘಕಾಲಗಳು ನಡೆದಿತ್ತು. ಮುಂದೆ ಇಟಲಿಯು ಆಕ್ರಮಿಸಿಬಂದರೆ ಖಂಡಿತ ಯುದ್ಧ ಸಾರಲಾಗುವುದೆಂದು ತಿಳಿಸಿರುವರು. ಈಜಿಪ್ತಿನಲ್ಲಿ ಸೈನ್ಯ ಸಾಮಾಗ್ರಿಗಳ ಸಿದ್ಧತೆಗಳು ಆಗುತ್ತಿವೆ.

ಡಕಾರ್ ಬಂದರಕ್ಕೆ ಡಿಗೌಲೆಯವರ ಮುತ್ತಿಗೆ

'ಫ್ರೆಂಚರೊಳಗೆ ಕಾದಾಟ ಬೇಡ'

ಫ್ರೆಂಚ ವೆಸ್ಟ ಆಫ್ರಿಕೆಯ ಪಶ್ಚಿಮ ಸಮುದ್ರ ತೀರದಲ್ಲಿರುವ ಡಕಾರ ಬಂದರವನ್ನು ತಮ್ಮ ಸ್ವಾಧೀನ ಪಡಿಸಿಕೊಳ್ಳಲು ಜರ್ಮನರು ಸಾಹಸಪಡುತ್ತಿದ್ದರು. ಕೆಲವು ಫ್ರೆಂಚ ಹಡಗಗಳು ಜರ್ಮನರ ಅಪ್ಪಣೆಯಿಂದ ಇಲ್ಲಿಗೆ ಬಂದಿವೆ. ಆದರೆ ಡಕಾರದಲ್ಲಿರುವ ಅನೇಕ ಜನರು ಪಿಟೇನ ಸರಕಾರವನ್ನು ಧಿಕ್ಕರಿಸಿ ಜನರಲ್ ಡಿಗ್ಗಾಲೆಯವರನ್ನು ಕೂಡಿಕೊಂಡಿದ್ದಾರೆ, ಆದ್ದರಿಂದ ಡಿಗೌಲಿಯವರು ಸಹಾಯಮಾಡುವದಕ್ಕಾಗಿ ಡಕಾರಕ್ಕೆ ಹೋಗಿದ್ದಾರೆ. ಡಿಗೌಲಿಯವರ ಹತ್ತರ ಕೆಲವು ದಂಡುಗಳು, ಹಡಗಗಳು, ಮತ್ತು ವಿಮಾನಗಳಿವೆ. ಫ್ರೆಂಚ ಸೈನಿಕ ಸಂರಕ್ಷಣೆಗಾಗಿ ಡಿಗೌಲಿಯವರು ಒಂಬೆರಡು ಯುದ್ಧ ಹಡಗಗಳನ್ನು ತೆಗೆದುಕೊಂಡು ಹೋಗಿರುವರು.

ಡಿಗೌಲಿಯವರ ದಂಡುಗಳು ಡಕಾರದಲ್ಲಿ ಇಳಿದ ಕೂಡಲೇ ಡಕಾರ ಅಧಿಕಾರಿಗಳೇ ಮೊದಲು ಅವರ ಮೇಲೆ ಗುಂಡಿನ ಮಳೆಗರೆದರು. ಫ್ರೆಂಚ ಹಡಗಗಳಲ್ಲಿದ್ದ ಅನೇಕರಿಗೆ ಗಾಯಗಳಾಗಿವೆ. ಅವರಲ್ಲಿ ಕೆಲವರು ಸತ್ತರು. ಫ್ರೆಂಚರಲ್ಲಿಯೇ ಕಾಳಗವಾಗುವದು ಸರಿಯಲ್ಲವೆಂದು ಡಿಗೌಲಯವರು ತಮ್ಮ ದಂಡುಗಳನ್ನು ಬೇರೆಡೆಗೆ ಕರೆದುಕೊಂಡು ಹೋದರು.

ಮುಂದಿನ ವಿಚಾರವೇನು?

ಈ ವಾರದ ಭಾರತದ ರಾಜಕೀಯದಲ್ಲಿ ಕೆಲವು ಘಟನೆಗಳಿವೆ. ಮೊದಲನೆಯದಾಗಿ ವೈಸರಾಯರು ಮತ್ತು ಗಾಂಧಿಜಿಯವರೊಳಗೆ ಆದ ಮಾತುಕತೆಯ ವಿಷಯ. ವೈಸರಾಯರು ಗಾಂಧಿಜಿಯವರಿಗೆ ಕೊಟ್ಟ ನಕಾರ ರೂಪವಾದ ಉತ್ತರ. ಮುಂದೆ ವಾಕ್ ಸ್ವಾತಂತ್ರ್ಯಕ್ಕಾಗಿ ಮಹಾತ್ಮರು ಆಂದೋಲನವನ್ನು ಆರಂಭಿಸುವುದೇ ನೋಡಬೇಕಾಗಿದೆ!

ಮುಸ್ಲಿಂ ಲೀಗೂ

[illegible]



ಮಹಾತ್ಮರು ಸಿಮ್ಲಾದಿಂದ ಮರಳಿದರು

ವೈಸರಾಯರು 'ನಕಾರ'ವೆಂದರು

ವಾಕ್ ಸ್ವಾತಂತ್ರ್ಯ ಕೊಡಲಾಗುವುದಿಲ್ಲ!

'ವೈಸರಾಯರ ಯೋಜನೆಯಲ್ಲಿ ಅರ್ಥವಿಲ್ಲ'

ಮುಸ್ಲಿಂ ಲೀಗಿನ ನಿರ್ಣಯ!

ಯಾಯಿತಷ್ಟೆ? ಈ ಸಂದರ್ಭದಲ್ಲಿ ವೈಸರಾಯರು ಹೇಳಿದ ಸೂಚನೆಗಳು ಮುಸ್ಲಿಂ ಲೀಗಿಗೆ ಅಂಗೀಕಾರವೇ ಅಲ್ಲವೇ ಎಂಬ ಕುರಿತು ಅದರ ವರ್ಕಿಂಗ್ ಕಮಿಟಿ ಸಭೆ ಸೇರಿ, ವೈಸರಾಯರ ಇಂದಿನ ಯೋಜನೆಯು ಲೀಗಿಗೂ ಮಾನ್ಯವಿಲ್ಲವೆಂದೂ, ಬ್ರಿಟಿಷರಿಗೆ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿರುವಂತೆ ತೋರುವುದಿಲ್ಲವೆಂದೂ ತಿಳಿಸಲಾಗಿದೆ.

ರಾಗೂರರ ಅನಾರೋಗ್ಯ

ರಾಗೂರರು ಮೂತ್ರಾಶಯದ ಅಸೌಖ್ಯದಿಂದಿರುವರು. ಒಮ್ಮೆ ಅಸೌಖ್ಯ ವಿಷಮ ತೆಗೆದಿತ್ತು. ಆದರೆ ಈಗ ಕಡಿಮೆಗಿಳಿದಿದೆಯೆಂದು ತಿಳಿಯುತ್ತದೆ. ಪರಮಾತ್ಮನು ಅವರಿಗೆ ಆಯುರಾರೋಗ್ಯಗಳನ್ನು ಒದಗಿಸಿಕೊಡಲಿ!

ವೈಸರಾಯರ ಯೋಜನೆಯನ್ನು ಮುಸ್ಲಿಂ ಲೀಗು ತಿರಸ್ಕರಿಸಿತು

ಮುಸ್ಲಿಂ ಲೀಗಿನ ನಿರ್ಧಾರ!

ಅಖಿಲ ಭಾರತ ಮುಸ್ಲಿಂ ಲೀಗಿನ ವರ್ಕಿಂಗ್ ಕಮಿಟಿಯ ಸಭೆಯು ಸೇರಿ, ಜಿನ್ನಾ ವೈಸರಾಯ್ ಭೇಟಿಯ ವಿಚಾರ ದೀರ್ಘ ಚರ್ಚೆಯಾಗಿ, ವೈಸರಾಯರ ಸದ್ಯದ ಯೋಜನೆಯನ್ನು ಸ್ವೀಕರಿಸಲು ಸಾಧ್ಯವಿಲ್ಲವೆಂದು ಸರ್ವಾನುಮತದಿಂದ ನಿರ್ಧಾರವಾಗಿದೆ. ಚರ್ಚೆ ಮೂರು ದಿನ ನಡೆದಿತ್ತು.

ರಾಗೂರರಿಗೆ ತೀವ್ರ ಅಸ್ವಸ್ಥ!

ಕೆಲಿಪಾಂಗಿನಿಂದ ಕಲ್ಕತ್ತೆಗೆ ಕರೆತಂದರು

ಮೂತ್ರಾಶಯದ ಅಸ್ವಸ್ಥದ ದೆಸೆಯಿಂದ ಒಂದು ವಾರದ ಹಿಂದೆ ಕೆಲಿಪಾಂಗಿಗೆ ಹೋಗಿದ್ದ ರವೀಂದ್ರನಾಥ ರಾಗೂರರ ಪ್ರಕೃತಿಯು ಅಲ್ಲಿ ತೀವ್ರವಾಗಿರುವ ಸುದ್ದಿ ಬಂತು.

ಈಗ ಸ್ವಲ್ಪ ಸುಧಾರಿಸಿರುವುದರಿಂದ ಅವರನ್ನು ತಿರುಗಿ ಕಲ್ಕತ್ತೆಗೆ ಕರೆತಂದಿರುವರು.

ಭಾರತೀಯ ವಿದ್ಯಾರ್ಥಿ ಮಂದಿರಕ್ಕೆ ಬಾಂಬು

ಲಂಡನ್ನಿನ ಗೋವರ್ ರಸ್ತೆಯಲ್ಲಿದ್ದ ಭಾರತೀಯ ವಿದ್ಯಾರ್ಥಿ ಮಂದಿರಕ್ಕೆ ಜರ್ಮನರು ಬಾಂಬು ಹಾಕಿದುದರ ಪರಿಣಾಮವಾಗಿ ೪॥ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ವಿದ್ಯಾರ್ಥಿಗಳಲ್ಲಿ ಅನೇಕರು ರಕ್ಷಣಾಗೃಹದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಆದರೆ ವಿಶ್ರಾಂತಿಗೃಹದಲ್ಲಿದ್ದ ಆರು ಜನರಲ್ಲಿ ಐವರು ಕೊಂಚ ಗಾಯಗಳಿಗೊಳಗಾಗಿ ತಪ್ಪಿಸಿಕೊಂಡರು. ಬಂಗಾಳದ ಶ್ರೀ ಬಲೀಂದ್ರನಾಥ ಸೇನರು ಮರಣಕ್ಕೆ ತುತ್ತಾದರು.

ಸಿಂಧ್ ಪ್ರಾಂತದ ಮಂತ್ರಿಮಂಡಲ

ಈ ಪ್ರಾಂತದಲ್ಲಿ, ಯಾವತ್ತು ಪಂಗಡಗಳ ಪ್ರಾತಿನಿಧ್ಯವುಳ್ಳ ಒಂದು ಸರಕಾರದ ಸ್ಥಾಪನೆಯಾಗುವಂತೆ ಚರ್ಚಿಸಲಾಗುತ್ತಿದೆ. ಇದರ ಕೊನೆಯ ಫಲಿತಾಂಶವೇನೆಂದು ಬೇಗನೇ ಪ್ರಕಟವಾಗಲಿದೆ.

ಶ್ರೀ ಎ. ವಿಟ್ಠಲ ಪೈಗಳು

ಸಿಲೋನಿನಲ್ಲಿ ಭಾರತ ಸರಕಾರದ ಏಜೆಂಟರಾಗಿ ಜನಪ್ರಿಯರಾಗಿದ್ದ ಶ್ರೀ ಅಮ್ಮೆಂಬಳ ವಿಟ್ಠಲ ಪೈಗಳು ಆ ಅಧಿಕಾರ ಸ್ಥಾನದಿಂದ ನಿವೃತ್ತರಾಗಿ ಮರಳುವ ಕಾಲ ಸಿಲೋನಿಯರು ಅವರನ್ನು ಅತ್ಯಂತ ಗೌರವದಿಂದ ಸನ್ಮಾನಿಸಿದರು.

ಮಂತ್ರಿಮಂಡಳದ ಮುಖ್ಯಸ್ಥರಾದ ಶ್ರೀ ಬ್ಯಾರನ್ ಜಯತಿಲಕರು ಶ್ರೀಯುತರ ಗುಣಕಥನ ಮಾಡಿದರು. ಶ್ರೀ ಮತ್ತು ಶ್ರೀಮತಿ ಪೈಗಳು ಕೆಲದಿನ ಮದ್ರಾಸಿನಲ್ಲೇ ಇದ್ದು ಮುಂದೆ ತಮ್ಮ ಹುಟ್ಟೂರಾದ ದಕ್ಷಿಣ ಕನ್ನಡ ಜಿಲ್ಲೆಗೆ ಬರುವರೆಂದು ತಿಳಿದಿದೆ.

ಮದ್ರಾಸಿನ ಎಂ. ಎಲ್. ಎ.ಗಳಿಗೆ ದಂಡನೆ

ಸರಕಾರದ ಆಜ್ಞೆಯನ್ನು ಉಲ್ಲಂಘಿಸಿದ ತಪ್ಪಿಗೆ, ಶ್ರೀ ಮುತ್ತು ರಾಮಲಿಂಗ ತೇವಾರ ಎಂ. ಎಲ್. ಎ. ಗಳಿಗೆ ಡಿಫೆನ್ಸ್ ಆಕ್ಟಿನಂತೆ, ಮಧುರೆಯ ಎಡಿ. ಡಿ॥ ಮ್ಯಾಜಿಸ್ಟ್ರೇಟರು ೧೮ ತಿಂಗಳ ಕಠಿಣ ಸಜೆ ವಿಧಿಸಿರುವರು. ಇವರನ್ನು 'ಬಿ' ಕ್ಲಾಸಿನಲ್ಲಿ ಇರಿಸಲಾಗಿದೆ.

ಮದ್ರಾಸ್ ಪ್ರಾಂತವನ್ನು ಬಿಡಲು ಆಜ್ಞೆ

ನೆಲ್ಲೂರು ಜಿಲ್ಲಾ ರಾಜಕೀಯ ಸಮ್ಮೇಳನದ ಚುನಾಯಿತ ಅಧ್ಯಕ್ಷರಾದ ಬಂಗಾಳದ ಪ್ರಾಂತಿಕ ಕಾಂ. ಕಮಿಟಿ ಪ್ರೆಸಿಡೆಂಟ್ ಶ್ರೀ. ಸುರೇಂದ್ರ ಮೋಹನ ಘೋಷ್‌ರವರು, ನೆಲ್ಲೂರಿಗೆ ಆ ಕಾನ್ಫರೆನ್ಸಿನ ನಿಮಿತ್ತ ಪಯಣ ಬೆಳೆಸುತ್ತಿದ್ದಾಗ ಅವರು ೨೪ ಗಂಟೆಯೊಳಗೆ ಮದ್ರಾಸ ಪ್ರಾಂತವನ್ನು ಬಿಟ್ಟು ಹೊರಡತಕ್ಕದೆಂದು ರಾಜಾಜ್ಞೆಯೊಂದು ಅವರಿಗೆ ಟ್ರೇನಿನಲ್ಲಿ ಜಾರಿ ಮಾಡಲಾಗಿದೆ. ಅವರೀಗ ಕಲ್ಕತ್ತೆಗೆ ಹಿಂದಕ್ಕೆ ತೆರಳಿದ್ದಾರೆ.

ಗವರ್ನರರ ಯುದ್ಧ ನಿಧಿ

ಕಳೆದ ತಾ ೨೬ರ ವರೆಗೆ ಮದ್ರಾಸ ಗವರ್ನರರ ಯುದ್ಧ ನಿಧಿಯು ಮೊತ್ತ ರೂಪಾಯಿ ೩೮,೯೩,೪೯೬-೧೪-೯ ರಷ್ಟಾಗಿದೆ. ಇದರಲ್ಲಿ ಇದುವರೆಗೆ ಬ್ರಿಟಿಷ್ ವಿಮಾನ ಮಂತ್ರಿಮಂಡಲಕ್ಕೆ ೯೪ ಜ ಕೊಟ್ಟ ಮೊತ್ತ ಕಾಲು ಮಿಲ್ಯಸ್ಟರ್ಲಿಂಗಿನಷ್ಟಾಗಿದೆ.

ದೈವಯತ್ನದಿಂದ ಬದುಕಿದರು

ಕೌನ್ಪುರದ ವಿಮಾನದ ಕ್ಲಬ್ಬಿನಲ್ಲಿ ತರಬೇತಿ ಪಡೆಯುತ್ತಿದ್ದ ಶ್ರೀ ಎಸ್. ಪಿ. ಮಕೂರ್‌ರು ವಿಮಾನದಲ್ಲಿ ಹಾರುತ್ತಿದ್ದಾಗ ವಿಮಾನ ಕೆಳಗೆ ಬಿದ್ದು ಪುಡಿಯಾಯಿತು. ವೈಮಾನಿಕರು ದೈವಯತ್ನದಿಂದ ಉಳಿದರು.

ಮಂಗಳೂರಿನಲ್ಲಿ ಹರಿಜನ ವಾರ

ಹರಿಜನವಾರ

ಮಂಗಳೂರು ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಹರಿಜನವಾರವು ತಾ ೨೪ರಿಂದ ತಾ ೩೦ರ ವರೆಗೆ ವಿವಿಧ ಕಾರ್ಯಕ್ರಮಗಳಲ್ಲಿ ಆಚರಿಸಲ್ಪಟ್ಟಿತು. ತಾ ೨೪ರಂದು ಡಿ. ವಿ. ಮಿಶನಿನಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಗಳಾದ ಕೃಷ್ಣರಾವ್, ಕೆ. ಈಶ್ವರ ಎಂ. ಎಲ್. ಎ, ಎಂ. ಎಸ್. ಮಾಧವರಾವ್ ಇವರು ಭಾಷಣ ಮಾಡಿದರು. ತಾ ೨೫ರಂದು, ಬಜ್ಜೈ ಕೊಲನಿಗೆ ಮೆರವಣಿಗೆ, ಶ್ರೀ. ಎಂ. ಎಸ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಆಟ, ಭಜನೆ, ಶ್ರೀ ಕಿಲ್ಲೆಯವರ ಭಾಷಣಗಳಾದುವು. ತಾ. ೨೬ಕ್ಕೆ ಮೆರವಣಿಗೆ ವೆಲ್ಸ್‌ಪೇಟೆ ಕೊಲನಿಗೆ, ಶ್ರೀ. ಈಶ್ವರ ಎಂ. ಎಲ್. ಎ ಯವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ವಿ. ಕೃಷ್ಣ, ಟಿ. ರಂಗ, ಅಣ್ಣಪ್ಪ, ಪೂವಪ್ಪ, ಕಿಲ್ಲೆ ಇವರು ಮಾತನಾಡಿದರು. ತಾ. ೨೭ಕ್ಕೆ ಬಾಬುಗುಡ್ಡೆಯಲ್ಲಿ ಅಧ್ಯಕ್ಷರು ಶ್ರೀ. ಯು. ಲಕ್ಷ್ಮಣ. ಶ್ರೀಗಳಾದ ಕೆ. ಈಶ್ವರ, ಮತ್ತು ಕೆಲವರು ಮಾತನಾಡಿದರು. ಭಾರತ ಸ್ಕೌಟ್ ಟ್ರೂಪಿನವರ ಶಿಬಿರಾಗ್ನಿಪ್ರದರ್ಶನವಿತ್ತು. ತಾ. ೨೮ಕ್ಕೆ ಸೂಟರ್ ಪೇಟೆಗೆ ಮೆರವಣಿಗೆ, ಶ್ರೀ. ಪಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಹಲವರ ಭಾಷಣಗಳಿದ್ದುವು. ಭಾರತ ಸ್ಕೌಟ್ ಶಿಬಿರಾಗ್ನಿಯಿತ್ತು. ತಾ ೨೯ಕ್ಕೆ ಸೀರೇಶ್ವಾಲ್ಯವಾರ್ಡ್ ಮೆರವಣಿಗೆ, ಶ್ರೀ ಈಶ್ವರ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಈಶ್ವರಾನಂದ ಮತ್ತು ಭಾರತ ಸ್ಕೌಟುಗಳ ಶಿಬಿರಾಗ್ನಿ ಇತ್ತು. ಆರ್ಯ ಭಜನಾ ಮಂಡಳಿಯವರು ಸಹಕರಿಸಿದ್ದರು. ತಾ ೩೦ಕ್ಕೆ ಯಕ್ಷಗಾನ ಕೆನರಾ ಹೈಸ್ಕೂಲಿನಲ್ಲಿ ಶ್ರೀಗಳಾದ ಬಾಲಕೃಷ್ಣರಾವ್, ಸುಬ್ರಾಯಾಚಾರಿ, ಪೊಳಲಿ ಶಾಸ್ತ್ರಿ, ಎಂ. ಆರ್. ಶಾಸ್ತ್ರಿ, ಕಿಲ್ಲೆ, ವಿಟ್ಠ ಶಾಸ್ತ್ರಿ, ಕದ್ರಿ ರಾಮರಾವ್ ಇವರೇ ಮೊದಲಾದವರು ಪಾತ್ರವಹಿಸಿದ್ದರು. ಶ್ರೀನೋಂಡರಹಾಡುವಿಕೆ, ಮೃದಂಗವಾದನ ಶ್ರೀ ಅಂಬುಣ್ಣನವರು. ತಾ ೧ರಂದು ಕೆನರಾ ಹೈಸ್ಕೂಲಿನ ಆಟದಂಗದಲ್ಲಿ ಆಟಗಳು. ಡಾ. ಯು. ಪಿ. ಮಲ್ಯರು ೫೦೦ ಮಕ್ಕಳಿಗೆ ತಿಂಡಿ ಹಂಚಿದರು. ಬಿ. ಸಿ. ಮಿಶನಿನ ಶ್ರೀ ವೆಂಕಟೇಶ ನಾಯ್ಕರು, ಕೆನರಾ ಹೈಸ್ಕೂಲಿನ ಶ್ರೀ. ಕೆ. ಕೆ. ನಾಯ್ಕರು ಇದರ ವ್ಯವಸ್ಥೆ ಮಾಡಿದ್ದರು. ತಾ. ೨ರಂದು ಮೈದಾನಿನಲ್ಲಿ ಸಾರ್ವಜನಿಕ ಸಭೆ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಹಲವರು ಗಾಂಧಿಜಿಯವರ ಕುರಿತೂ, ಹರಿಜನೋದ್ಧಾರದ ಕುರಿತೂ ಭಾಷಣಗಳನ್ನಿತ್ತರು.

ಹೀಗೆ ಹರಿಜನವಾರವು ಅತ್ಯಂತ ಯಶಸ್ವಿಯಾಗಿ ಆಚರಿಸಲ್ಪಟ್ಟಿತು.

ನೋಟೀಸು

ಕಾರ್ಕಳ ಡಿ॥ ಮು॥ ಕೋರ್ಟಿನ
O S. No 138/194

ಮೋಟು ಶೆಟ್ಟಿ ಕೂಡಾ . ವಾದಿರ

ಮತ್ತು

ಜಾಗಿ ಶೆಟ್ಟಿ ಕೂಡಾ . ಪ್ರತಿವಾದಿರ

10ನೇ ಪ್ರತಿವಾದಿ, ವಾಸು ಶೆಟ್ಟಿ, ವೆಂಕಟ ಶೆಟ್ಟಿ ಮಗ ಉಡ್ಪಿ ತಾಲೂಕು ನಂದಿಕೂರು ಗ್ರಾಮದ ಅಡ್ವೆ ಕೆಳಗಿನ ಮನೆ ಎಂಬಲ್ಲಿರುವ ಈತಗೆ ಈ ಮೂಲಕ ತಿಳಿಸುವುದೇನಂದರೆ—

ವಾದಿರು ಪ್ರತಿವಾದರ ಮೇಲೆ ಅದವಿನ ಬಗ್ಗೆ ಮತ್ತು ... ಬಗ್ಗೆ ಬರಮಾಡಿಕೊಳ್ಳುವರೆ ವಾದಿ ಮೇಲ್ಕಾಣಿಸಿದ ದಾವೆಯು ತಾ. 28-10-'40 ತನ್ನಗೆ ಇಟ್ಟಿರುತ್ತದೆ. ಅದ್ದರಿಂದ ಈ ದಾವೆಯಲ್ಲಿ ನೀವು ಉಜಾರಿಸುವುದಿದ್ದರೆ, ತಾರೀಕಿನ ಮುಂಚಿತವಾಗಿ ನಿಮ್ಮ ಸರಿಯಾದ ವಿಳಾಸವನ್ನು ಕೋರ್ಟಿಗೆ ದಾಖಲು ಮಾಡಬೇಕು ಮತ್ತು ತಾ. 28-10-'40ನೇ ದಿನ ಹಗಲು ಗಂಟೆ 10ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಉಜಾರನ್ನು ದಾಖಲು ಮಾಡತಕ್ಕದು. ತಪ್ಪಿದರೆ ನಿಮ್ಮನ್ನು ಆ ದಿನ ಗೈರ್ಹಾಜರು ಮಾಡಿ ದಾವೆಯ ತೀರ್ಪು ನಡಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟಿನ ಹುಕುಂ ಪ್ರಕಾರ,

Karkal, 30—9—'40 } K. Mahabala Hegde
Vakil for Plaintiff

ದೇವರಲ್ಲಿ ವಿಶ್ವಾಸವಿಟ್ಟು ಯುದ್ಧಕ್ಕಿಳಿದೆವು

ಬ್ರಿಟಿಷ್ ಸಾಮ್ರಾಟರ ಭಾಷಣ

ಇಂಗ್ಲೆಂಡು ನಾಶವಾಗಲಾರದು

ಲಂಡನ್ ನಗರದ ದುರ್ಗಗಳು ಕುಸಿದಿರಬಹುದು. ಆದ್ದರಿ ಜನರು ಮಾತ್ರ ಧೈರ್ಯಗೆಟ್ಟಿಲ್ಲ; ಉತ್ಸಾಹ ಕುಂದಿಲ್ಲ. ಲಂಡನಿನಂತೆ ಇನ್ನೂ ಅನೇಕ ಸ್ಥಳಗಳಲ್ಲಿ ಜರ್ಮನರು ಅತ್ಯಂತ ಅಮಾನುಷ ಅತ್ಯಾಚಾರಗಳನ್ನು ಮಾಡುತಿದ್ದಾರೆ. 'ಸುಂದರವಾದ ಕಟ್ಟಡಗಳನ್ನು ಧ್ವಂಸಮಾಡುತ್ತಾರೆ. ಆದರೆ ಇಂಗ್ಲೆಂಡನ್ನು ಮಾತ್ರ ಅವರೆಂದಿಗೂ ನಾಶಮಾಡಲಾರರು. ಜಗತ್ತಿನ ಸ್ವಾತಂತ್ರ್ಯ ರಕ್ಷಣೆಗಾಗಿ ಬದ್ಧಕಂಕಣವಾದ ಇಂಗ್ಲೆಂಡು ಜಗತ್ತಿನಲ್ಲಿ ಸದಾ ಇದ್ದೇ ಇರುವುದು' ಹೀಗೆ ಬ್ರಿಟಿಷ್ ಸಾಮ್ರಾಜ್ಯದ ಅರಸು ಜಾರ್ಜರು ತಾ. ೨೪ರಂದು ಒಂದು ಆಕಾಶವಾಣಿ ಭಾಷಣದಲ್ಲಿ ಮಾತನಾಡುತ್ತಾ ಹೇಳಿದರು.

ಅವರ ಭಾಷಣದಲ್ಲಿ ಈ ಅಂಶಗಳು ಇದ್ದುವು.

ವೈರಿಯ ಶಕ್ತಿ ನಮಗೆ ಮೊದಲೇ ತಿಳಿದಿದ್ದರೂ, ಸತ್ಯಕ್ಕೆ ಜಯವಾಗುವುದೆಂದು, ಪರಮಾತ್ಮನಲ್ಲಿ ವಿಶ್ವಾಸವಿಟ್ಟು ನಾವು ಯುದ್ಧಕ್ಕಿಳಿದೆವು. ಈ ಒಂದು ವರ್ಷದ ಯುದ್ಧಕಾಲದಲ್ಲಿ ಅನೇಕ ರಾಷ್ಟ್ರಗಳು ನೆಲಸಮವಾದುವು. ಬಹುದೂರದಲ್ಲಿದ್ದ ಯುದ್ಧವು ಇಂದು ನಮ್ಮ ದೇಶದ ಬಾಗಿಲಿಗೆ ಬಂದಿದೆ. ಶತ್ರುಗಳು ನಮ್ಮ ಮೇಲೆ ಕೇವಲ ಇಪ್ಪತ್ತೇ ಮೈಲುಗಳ ಅಂತರದಲ್ಲಿ ಸಿದ್ಧರಾಗಿ ನಿಂತಿರುವರು ಅಸಂಖ್ಯ ವಿಮಾನಗಳು ಹಗಲಿರುಳು ನಮ್ಮ ನಗರದ ಮೇಲೆ ರಣದಾಳಿ ಮಾಡುತ್ತಿವೆ

ಜಗತ್ತಿನ ಸಹಾಯವಿದೆ

'ಇಂದು ಪ್ರಬಲ ಶತ್ರುವಿನೆದುರು ನಾವು ಏಕಾಂಗಿಗಳಾಗಿ ಹೋರಾಡಬೇಕಾಗಿದೆ. ಆದರೂ ನಾವು ನಿರಾಶರಾಗಿಲ್ಲ. ಒಂದು ಉಚ್ಚ ಧ್ಯೇಯದ ಸಲುವಾಗಿ ನಾವು ಹೋರಾಡುತ್ತೇವೆ. ನಮಗೆ ಅಖಿಲ-ಪ್ರಪಂಚದ ಜನರ ಸಹಾನುಭೂತಿಯಿದೆ. ಅಮೇರಿಕವಂತೂ ನಾನಾ ತರದ ಸಹಾಯಗಳನ್ನು ಕೊಡುತ್ತದೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ರಾಷ್ಟ್ರಗಳೆಲ್ಲವೂ ಈ ಯುದ್ಧವು ತಮ್ಮದೆಂದೇ ಸಹಾಯ ಮಾಡುತ್ತವೆ.

'ಲಂಡನ್ ನಗರದ ಮೇಲೆ ಜರ್ಮನ್ ದಾಳಿಯಾಗಿ ಅದರಿಂದ ಸಂಕಷ್ಟಕ್ಕೀಡಾದವರಿಗೆಲ್ಲಾ ನನ್ನ ಸಹಾನುಭೂತಿ ಸಮರ್ಪಿಸುತ್ತೇನೆ. ಜರ್ಮನರ ದಾಳಿಯಿಂದ ಆದ ಹಾನಿಯನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಜನರು ನಿರಾಶರಾಗದೆ ಉತ್ಸಾಹದಿಂದ ಯುದ್ಧವನ್ನು ಮುಂದೆ ಸಾಗಿಸಲು ಯತ್ನಿಸುವುದು ಬಹಳ ಅಭಿನಂದನೀಯವು. ಇಡೀ ಜಗತ್ತಿನ ಆಗುಹೋಗುಗಳನ್ನು ನಿರ್ಣಯಿಸುವ ಈ ಯುದ್ಧದಲ್ಲಿ ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪಾಲಿಸುತಿದ್ದಾರೆ. ಯುದ್ಧಕ್ಕೆ ನೆರವಾಗಲು ದುಡಿಯುತ್ತಿರುವ ಕೆಲಸಗಾರರು ಹೋರಾಡುವ ಸೈನಿಕರಷ್ಟೇ ಸಾಹಸಿಗಳು. ಅಪಾರ ಹಾನಿ ಸಂಭವಿಸಿದರೂ ಯುದ್ಧದಲ್ಲಿ ದುಡಿಯುತ್ತಿರುವ ಅಸಂಖ್ಯಾತ ಸ್ತ್ರೀಪುರುಷರನ್ನು ನಾನು ಮರೆ

ಯಲಾರೆ. ನಮ್ಮ ದೇಶದ ಇತಿಹಾಸದಲ್ಲಿ ಈ ಕಾಲ ಅತ್ಯಂತ ಸಾಹಸದ ಕಾಲವಾಗಿದೆ.

'ಬ್ರಿಟನ್ನರ ಮಕ್ಕಳನ್ನೊಯ್ಯುತ್ತಿದ್ದ ಹಡಗವನ್ನು ಜರ್ಮನರು 'ಮುಳುಗಿಸಿದ ಸುದ್ದಿ ನಿಮಗೆ ತಿಳಿದಿರಬಹುದು. 'ಆ ಮಕ್ಕಳ ದುಃಖಿತ ತಂದೆತಾಯಿಗಳಿಗಾದಷ್ಟೇ ದುಃಖ ನನಗೂ ಆಗಿದೆ.

ನಾವೀಗ ಗಂಡಾಂತರದಲ್ಲಿದ್ದೇವೆ. ಇದಕ್ಕಿಂತಲೂ ಹೆಚ್ಚಿನ ಗಂಡಾಂತರ ಬರಬಹುದು. ಇಂದಿನ ಗಂಡಾಂತರದ ದಿನಗಳು ಕಳೆದ ಮೇಲೆ ನಮಗೆ ಜಯ ಬರುವುದು ಖಂಡಿತ ನೀವೆಲ್ಲರೂ ನಮ್ಮಂತೆ ಪರಮಾತ್ಮನಲ್ಲಿ ವಿಶ್ವಾಸವಿಡಿರಿ.'

ಬರ್ಲಿನ್ ಪತ್ರಿಕೆಯ ಅಭಿಪ್ರಾಯ

"ಬೋರ್ಸೆನ್ ಜೇಟಂಗ್" ಎಂಬ ಒಂದು ಪತ್ರಿಕೆಯು ಬ್ರಿಟಿಷ್ ಮೇಲಣ ದಂಡಯಾತ್ರೆಯು ಬಹುಶಃ ಲಂಡನ್ನಿನ ದಾಳಿಗಳ ಬೆನ್ನಿನಲ್ಲಿಯೇ ಹೊರಡುವುದೆಂದು ಒಂದು ಭವಿಷ್ಯವಾಣಿ ಹೊರಡಿಸಿದೆ. ಜರ್ಮನ್ ಪತ್ರಿಕೆಗಳು ಈ ಕುರಿತು ಪ್ರಕಟಿಸಿದುದು ಇದೇ ಪ್ರಥಮ ಸಲವಂತೆ. ಈ ತನಕದ ಈ ರೀತಿಯ ಪತೀಕ್ಷೆಗಳೆಲ್ಲ ಪರರಾಷ್ಟ್ರಗಳ ಊಹನೆಗಳಿಂದ ಸಂಗ್ರಹಿಸಲ್ಪಟ್ಟಿದ್ದುವಲ್ಲದೆ, ಜರ್ಮನರ ಬಾಯಿಯಿಂದ ಅವು ಹೊರಬಂದುದಲ್ಲವಂತೆ.

ಹಿಂದೂ ದೇಶವನ್ನು ಬಲಗೊಳಿಸಿರಿ

ನಿಮ್ಮ ಭವಿಷ್ಯತ್ತನ್ನು ರಕ್ಷಿಸಲು ನಿಮ್ಮ ಹಣವು ಸದುಪಯೋಗಿಯಾಗಲಿ. ಹಿಂದೂಸ್ಥಾನದ ಬಲವೇ ನಿಮ್ಮ ಶ್ರೇಷ್ಠ ರಕ್ಷಣೆ. ನಿಮ್ಮ ಕರ್ತವ್ಯವನ್ನು ಈಗ ಪಾಲಿಸಿ ನಿಮ್ಮ ರಕ್ಷಣೆಗೆ ಶಸ್ತ್ರಾಸ್ತ್ರಗಳನ್ನು ಮತ್ತು ಮನುಷ್ಯರನ್ನು ಒದಗಿಸಲು ಸಹಾಯಮಾಡಿರಿ.

ಇಂಡಿಯಾ ಡಿಫೆನ್ಸ್ ಲೋನ್‌ಗಳನ್ನು ಕೊಳ್ಳುವುದರಿಂದ ನೀವು ದೇಶವನ್ನು ಮತ್ತು ನಿಮ್ಮನ್ನು ಸಂರಕ್ಷಿತಗೊಳಿಸುವದಲ್ಲದೆ ನಿಮ್ಮ ಹಣವು ಸಂಪೂರ್ಣ ಸುರಕ್ಷಿತವಾಗಿದ್ದು ನಿಮಗೆ ಒಳ್ಳೆ ಬಡ್ಡಿ ಸಹ ದೊರೆಯುತ್ತೆ.



ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು ರೂ. ೧೦, ರೂ.೫೦, ರೂ.೫೦೦ ಗಳಿಗೆ ಕೊಡುತ್ತಾರೆ. ಈ ಪತ್ರಗಳು ಹತ್ತು ವರ್ಷದ ನಂತರ ಪ್ರತಿ ರೂ. ೧೦ಕ್ಕೆ ೧೩—೯—೦ ಆಗಿ ವಾಪಸು ಸಿಗುವುದು.- ಸುಮಾರು ಶೇಕಡ ೩ ಚಕ್ರಬಡ್ಡಿಯು ದೊರೆಯುತ್ತದೆ. ಇದಕ್ಕೆ ಆದಾಯ ತೆರಿಗೆಯಿಲ್ಲ. ಪ್ರತಿ ಒಬ್ಬರೂ ರೂ. ೫೦೦೦ ಗಳಿಗಿಂತ ಹೆಚ್ಚು ಬಾಂಡ ಪಡೆಯಲು ಸಾಧ್ಯವಿಲ್ಲ! ನಿಮ್ಮ ಸಮೀಪದ ಅಂಚೆ ಕಚೇರಿಯಲ್ಲಿ ಕೇಳಿ.

೬ ವರ್ಷದ ಡಿಫೆನ್ಸ್ ಬಾಂಡ್‌ಗಳು ರೂ. ೧೦೦ ಅಥವಾ ನೂರರ ಅಪವರ್ತ್ಯಗಳಲ್ಲಿ ಸಿಗುವುವು ಈ ಹಣವು ೧೯೪೬ ಆಗಸ್ಟ ೧ನೇ ತಾರೀಖಿಗೆ ನೂರಕ್ಕೆ ೧೦೧ರಂತೆ ಹಿಂದಕ್ಕೆ ಕೊಡಲ್ಪಡುತ್ತೆ ಶೇಕಡ ೩ರಂತೆ ಬಡ್ಡಿ ಆರು ತಿಂಗಳಿಗೊಂದು ಸಾರಿ ಪಡೆಯಬಹುದು. ಒಬ್ಬರೇ ಎಷ್ಟು ಬಾಂಡುಗಳನ್ನಾದರೂ ಕೊಳ್ಳಬಹುದು. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಸರ್ಕಾರಿ ಟ್ರಿಜರಿ ಇವುಗಳಲ್ಲಿ ಅರ್ಜಿಮಾಡಿಕೊಳ್ಳಿರಿ.

ಬಡ್ಡಿಯಿಲ್ಲದ ಬಾಂಡುಗಳು ರೂ. ೫೦ಕ್ಕೆ ಮೇಲ್ಪಟ್ಟು ಸಿಗುತ್ತವೆ. ೩ ವರ್ಷಗಳ ನಂತರ ಹಣ ವಾಪಸು ಪಡೆಯಬಹುದು. ೧ ವರ್ಷದನಂತರ ಹಣ ಪಡೆಯಬೇಕಾದರೆ ೩ ತಿಂಗಳಿಗೆ ಮುಂಚೆ ನೋಟೀಸ್ ಕೊಡಬೇಕು. ಅತ್ಯಗತ್ಯವಿದ್ದೆಂದು ರುಜುವಾತು ಮಾಡಿಕೊಟ್ಟರೆ ಯಾವಾಗಲಾದರೂ ಪಡೆಯಬಹುದು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ, ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ, ಅಥವಾ ಸರ್ಕಾರಿ ಟ್ರಿಜರಿ ಇವುಗಳಲ್ಲ ಅರ್ಜಿಮಾಡಿಕೊಳ್ಳಿರಿ.

ಇಂಡಿಯಾ ಡಿಫೆನ್ಸ್ ಲೋನ್‌ಗಳನ್ನು ಕೊಳ್ಳಿರಿ

GI-Kn6.

ವಿಚಿತ್ರ ಪ್ರಪಂಚ

ಮನುಷ್ಯನಲ್ಲ, ನಾಯಿ!

ಈಗ ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಜರ್ಮನ ಸೈನಿಕರು ವಾಯುಕೊಡೆಗಳಿಂದ ಹಾರಿ ಶತ್ರುರಾಷ್ಟ್ರಗಳಲ್ಲಿ ತುಂಬಾ ಹಾವಳಿಮಾಡುತ್ತಾರೆಂದು ಕೇಳುತ್ತೇವೆ. ಆದರೆ ವಾಯುಕೊಡೆಗಳಿಂದ ಹಾರಿದವರಲ್ಲಿ ಮೊದಲಿಗರು ಯಾರು? ಜರ್ಮನ ಸೈನಿಕರೆ? ಅಲ್ಲ. ವಾಯುಕೊಡೆಯಿಂದ ಮೊದಲು ಹಾರಿದವ ಎಂಬ ಕೀರ್ತಿ ಒಂದು ನಾಯಿಗೆ ಸಲ್ಲುವದೆಂದು ಬ್ರಿಟನಿನ ಒಂದು ಪತ್ರಿಕೆ ಬರೆದಿದೆ! ೧೭೮೫ರ ಮಾತು. ಆ ವರ್ಷ ಬೆಲೂನಿನಲ್ಲಿ ಒಂದು ನಾಯಿಯನ್ನು ಮೇಲೆ ತೆಗೆದುಕೊಂಡು, ಅದನ್ನು ವಾಯುಕೊಡೆಗೆ ಕಟ್ಟಿ ಕೆಳಗೆ ಬಿಟ್ಟರಂತೆ. ಆ ನಂತರ ೧೨ ವರ್ಷಗಳ ವರೆಗೆ ವಾಯುಕೊಡೆಯಿಂದ ಕೆಳಗಿಳಿಯಲಿಕ್ಕೆ ಯಾರೂ ಪ್ರಯತ್ನಿಸಲಿಲ್ಲ. ೧೭೯೭ರಲ್ಲಿ ಎಂಡ್ರ್ಯೂ ಜಾಕ್ಸ ಪೆರಿಸ್ ನಗರದ ಮೇಲೆ ೨೨೩೮ ಅಡಿಗಳ ಎತ್ತರದಿಂದ ಕೆಳಗೆ ಹಾರಿದ. ೧೮೦೨ರಲ್ಲಿ ತನ್ನ ಹಾರುವ ಸಾಧನವನ್ನು ಇಂಗ್ಲಂಡಿಗೆ ತಂದು ಇಲ್ಲಿಯ ಜನರಿಗೆ ತನ್ನ ಶಕ್ತಿಯ ಪ್ರದರ್ಶನ ಮಾಡಿ ತೋರಿಸಿದನು. ಆ ಮೇಲೆ ಜಾತ್ರೆ ಉತ್ಸವಗಳಲ್ಲಿ ಸಾಹಸಿಗರು ವಿಮಾನಗಳಿಂದ ವಾಯುಕೊಡೆಗಳಲ್ಲಿ ಕೆಳಗಿಳಿಯುವದು ಪ್ರೇಕ್ಷಕರಿಗೆ ಒಂದು ಆನಂದದ ವಿಷಯವಾಯಿತು.

ಪಾದರಕ್ಷೆಗಾಗಿ ಮಾರಾಮಾರಿ!

ವಕೀಲರಿಬ್ಬರ ಬಡಿದಾಟ!

ಫರೀದಕೋಟೆಯ ಇಬ್ಬರು ವಕೀಲರು ವಿಚಿತ್ರ ರೀತಿಯಿಂದ ತಮ್ಮೊಳಗೆ ಕಾದಾಡಿಕೊಂಡ ಒಂದು ವರ್ತಮಾನವು ಕಳೆದ ವಾರದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಒಬ್ಬ ವಕೀಲನು ತವಾಷೆಗಾಗಿ ಇನ್ನೊಬ್ಬನ ಒಂದು ಪಾದರಕ್ಷೆಯನ್ನು ಅಡಗಿಸಿಟ್ಟ. ನ್ಯಾಯಾಧೀಶರು ಕಕ್ಷಿಗಾರನ ವ್ಯಾಜ್ಯವನ್ನು ವ್ಯವಹರಿಸಲಿಕ್ಕೆ ಕರೆದಾಗ ಆ ಎರಡನೆಯ ವಕೀಲನಿಗೆ ತನ್ನ ಕಾಲಿನ ಒಂದು ಪಾದರಕ್ಷೆ ದೊರೆಯಲಿಲ್ಲ. ಅದು ಎಲ್ಲಿದೆ, ಏನು ಮಾಡಿದರು ಎಂದು ತನ್ನ ಸಂಗಾತಿಗಳನ್ನು ಎಷ್ಟು ಕೇಳಿದರೂ ಯಾರೂ ಮಾತಾಡಲಿಲ್ಲ. ಅವನು ಪಾದರಕ್ಷೆಯನ್ನು ಹುಡುಕಿ ಅಡೆ ಇಡೆ ಓಡಾಡುತ್ತಿರುವಾಗ ಗೆಳೆಯರು ನಸುನಗುತಿದ್ದರೆಂದು ಅವನಿಗೆ ಸಿಟ್ಟು ನೆತ್ತಿಗೇರಿತು. ಅವರನ್ನು ಬಾಯಿಗೆ ಬಂದಂತೆ ಬೈಯ್ಯತೊಡಗಿದ. ಅಷ್ಟರಿಂದಲೂ ತೃಪ್ತನಾಗದೆ ಆ ಉಳಿದ ಇನ್ನೊಂದು ಪಾದರಕ್ಷೆಯನ್ನು ಎದುರಿಗಿದ್ದ ತನ್ನ ವಕೀಲ ಬಾಂಧವನ ಮುಖಕ್ಕೆ ಎಸೆದುಬಿಟ್ಟ. ಕೂಡಲೇ ಅವರಿಬ್ಬರೊಳಗೆ ಹೊಡೆದಾಟವಾರಂಭವಾಗಿ ಆ ಇಬ್ಬರೂ ಬರಾಬರಿ ಪೆಟ್ಟು ಗುದ್ದುಗಳನ್ನು ತಿಂದರು. ಬೇರೆ ವಕೀಲರು ಬಂದು ಅವರೊಳಗಿನ ವ್ಯಾಜ್ಯವನ್ನು ತೀರ್ಮಾನಿಸಿದ ಬಳಿಕ, ಈ ವಕೀಲರು ತಮ್ಮ ಕಕ್ಷಿಗಾರರ ವ್ಯಾಜ್ಯಗಳನ್ನು ತೀರ್ಮಾನಿಸಲಿಕ್ಕೆ ನ್ಯಾಯಾಧೀಶರ ಮುಂದೆ ಹೋದರು.

ಎರಡುವರೆ ಅಡಿ ಎತ್ತರದ ವಿಚಿತ್ರ ಕುದುರೆಗಳು!

ಅಮೆರಿಕದ ಕೊಲರೊಡೊ ಎಂಬ ನದಿಯು ಹರಿದು ಹೋಗುವ ಗ್ರೆಂಡ ಕೇನಿಯನ ಎಂಬ ಮೈದಾನು ಪ್ರದೇಶದಲ್ಲಿ ಬರೀ ಮೂವತ್ತು ಅಂಗುಲ ಎತ್ತರವಾಗಿರುವ ಕುಳ್ಳ ಕುದುರೆಗಳು ವಾಸವಾಗಿರುತ್ತವೆಂದು ಗಜೆಟ ಎಂಬ ಪತ್ರಿಕೆ ಬರೆಯುತ್ತದೆ. ಇವುಗಳ ಭಾರ ೯೦ ರಾತಲುಗಳಿಗಿಂತ ಹೆಚ್ಚಾಗಿರುವುದಿಲ್ಲ. ಎಷ್ಟೋ ಶತಮಾನಗಳ ಹಿಂದೆ ಯಾವನೋ ಒಬ್ಬ ಮೂಲನಿವಾಸಿ ರಾಜನು ಆ ಜಾತಿಯ ಕುದುರೆಗಳನ್ನು ಎಲ್ಲಿಂದಲೋ ಸಂಪಾದಿಸಿ ಅಲ್ಲಿ ಅಡಗಿಸಿ ಇಟ್ಟನೆಂದೂ, ಶತ್ರುಗಳ ಹಾವಳಿ ಮುಗಿಯಿತಾದರೂ, ಅವನ್ನು ಕೊಂಡುಹೋಗಲಿಕ್ಕೆ ಅವನು ಮತ್ತೆ ಮರಳಲಿಲ್ಲವೆಂದೂ, ಅದ್ದರಿಂದ ಮನುಷ್ಯನ ಗಮನಕ್ಕೆ ದುಸ್ಸಾಧ್ಯವಾಗಿರುವ ಆ ಮೈದಾನಿನಲ್ಲಿ ಅವುಗಳ ಜಾತಿ ಈ ಹೊತ್ತಿಗೂ ನಾಮಾವಶೇಷವಾಗದೆ ಉಳಿಯಿತೆಂದೂ ದಂತಕಥೆಗಳು ಇವೆ.

ಅಜ್ಞಾತವಾಸಿಗಳು!

ಹಿಟ್ಲರ ಮುಸಲೋನಿಯರ ಹೆಸರುಗಳನ್ನು ಕೇಳದವರು ಇಂದು ನಮ್ಮಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿ ಯಾರೂ ಇರುವದಿಲ್ಲವೆಂದು ಹೇಳಬಹುದು. ಯೂರೋಪಿನಿಂದ ಹೊರಟು ದಕ್ಷಿಣ ಅಮೆರಿಕದ ಎಂಡೆಸ ಪರ್ವತ ಪ್ರದೇಶಗಳಲ್ಲಿ ಮನೆ ಮಾಡಿಕೊಂಡಿರುವ ೮೦ ಕುಟುಂಬಗಳು ಈ ವರೆಗೂ ಹಿಟ್ಲರ ಮುಸಲೋನಿಯರ ಹೆಸರುಗಳನ್ನು ಕೇಳಿರುವದಿಲ್ಲ. ೧೯೧೫ರಿಂದ ಹೊರಗಿನ ಪ್ರಪಂಚದ ಯಾವ ಸುದ್ದಿಯನ್ನೂ ಕಂಡು ಕೇಳರಿದ ಈ ಕುಟುಂಬಿಗಳ ವಸತಿಯನ್ನು ಇತ್ತೀಚೆಗೆ ತಾನೇ ಇಬ್ಬರು ವೈಮಾನಿಕರು, ತಮ್ಮ ವಿಮಾನಗಳ ಮೇಲೆ ಹಾರಾಡುತಿದ್ದಾಗ ಕಂಡುಕೊಂಡರು. ೧೯೧೪–೧೮ರ ಯುದ್ಧದ ಕೊನೆ ಹೇಗಾಯಿತು, ಮತ್ತೆ ಯೂರೋಪದಲ್ಲಿ ಏನು ನಡೆಯಿತು ಎಂಬ ಯಾವ ವಿಷಯವೂ ಅವರಿಗೆ ತಿಳಿದಿಲ್ಲ. ಯಾಕೆಂದರೆ ಯೂರೋಪದಲ್ಲಿ ೧೯೧೪ರಲ್ಲಿ ಯುದ್ಧವಾರಂಭವಾದೊಡನೆಯೇ ಅವರು ತಲೆಮರಸಿಕೊಂಡು ಅಲ್ಲಿ ನೆಲಸಿದ್ದರು. ಈಗ ಅವರಿಗೆ ಪ್ರಪಂಚದ ಹೊರಗಿನ ವ್ಯವಹಾರಗಳನ್ನು ಕಂಡು ಕೇಳಿ ಏನಾದರೂ ಆಗಬೇಕೆಂದು ಅನ್ನಿಸುವುದಿಲ್ಲ. ತಾವು ನೆಲಸಿರುವ ಆ ಪ್ರದೇಶದಲ್ಲಿ ಅವರ ಜೀವನವು ಸುಖವಾಗಿ ನಡೆಯುತ್ತಿರುವದರಿಂದ ಹೊರಗಿನ ಪ್ರಪಂಚದೊಡನೆ ಸಂಬಂಧವನ್ನು ಬೆಳೆಸುವ ಇಚ್ಛೆಯು ಅವರಿಗೆ ಸ್ವಲ್ಪವಾದರೂ ಇರುವದಿಲ್ಲ.

ರಜಪುತಾನದ ಮೃತ್ಯುಕುಂಡ

ಪೂರ್ವ ರಜಪುತಾನದ ಸಂಜೌಲಿ ಎಂಬಲ್ಲಿ ಒಂದು ಚಿಕ್ಕ ಸರೋವರವಿದೆ. ಜನರು ಇದಕ್ಕೆ ಮೃತ್ಯುಕುಂಡವೆಂದು ಹೆಸರಿಟ್ಟಿದ್ದಾರೆ. ಪ್ರತಿ ವರ್ಷವೂ ಅನೇಕ ಜನರ ಪ್ರಾಣಗಳನ್ನು ಇದು ಬಲಿ ತೆಗೆದುಕೊಳ್ಳುವದರಿಂದ ಅವರು ಇದಕ್ಕೆ ಆ ಹೆಸರನ್ನು ಇಟ್ಟಿರುವದು ಯುಕ್ತಾರ್ಥವಾಗಿದೆ. ಸರೋವರದ ಆಳವೇನೂ ಹೆಚ್ಚಾಗಿರುವದಿಲ್ಲ. ಎಲ್ಲಿ ನೋಡಿದರೂ ಸೊಂಟದಷ್ಟಲ್ಲದೆ ಹೆಚ್ಚಿಗೆ ನೀರಿಲ್ಲ. ಆದರೆ ಪ್ರಯಾಣಿಕರು ಈ ಸರೋವರದ ಸಮೀಪದಾಗುತ್ತಲೇ ಅವರು ಹೇಗೋ ಆಗ ಬಹಳ ಬಾಯಾರಿ ಬಳಲುತ್ತಾರೆ. ನೀರು ಬಾಯಾರಾಗಿ ಈ ಸರೋವರದ ನೀರಿಗೆ ಇಳಿಯುತ್ತಾರೆ. ನೀರು ಕುಡಿಯಲಿಕ್ಕೆ ಬಗ್ಗಿದೊಡನೆಯೇ ಅವರ ಕಾಲು ಜಾರಿ ಹೋಗುವದು. ನೀರಿನಲ್ಲಿ ಮುಳುಗಿ ಅವರು ಸಾಯುವರು. ಸತ್ತವರ ಶವಗಳು ಸಹ ಏನಾದುವು, ಎಲ್ಲಿಗೆ ಹೋದವು ಎಂಬುದು ಯಾರಿಗೂ ತಿಳಿಯುವದಿಲ್ಲ. ಪ್ರತಿ ವರ್ಷ ಯಾಕೆ ಹೀಗಾಗುತ್ತದೆ ಎಂಬುದನ್ನು ಗೊತ್ತುಹಚ್ಚಲಿಕ್ಕೆ ಭೂಗರ್ಭ ಶಾಸ್ತ್ರಜ್ಞರು ಬಹಳ ಪ್ರಯತ್ನಪಟ್ಟಿದ್ದಾರೆ. ಪರಂತು ಈ ರಹಸ್ಯವನ್ನು ವಿವರಿಸಲಿಕ್ಕೆ ಅವರು ಇದುವರೆಗೆ ಸಮರ್ಥರಾಗಿರುವದಿಲ್ಲ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ ★ ಬೆಂಕಿಯ ಅನಾಹುತ ★ ಕಡಲಿನ ಅಪಾಯು ★ ವ ಇತರ ಅಪಘಡಗಳಿಗೆ ಸಂಬಂಧಿಸಿದಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯು ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★ ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/- + ಸರ್ವಸಾಧಾರಣ ಬೋನಸ್ ರೂ. 11 ═ ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ—ಬೊಂಬಾಯಿ
ಅಥವಾ

ಕೆ. ಎನ್. ನಾಯಕ್ ಆರ್ಗನೈಜರ್ ವೆಂಕಟ್ರಮಣ ಪೇಟೆ, ಮಂಗಳೂರು.

ಕೆ. ಕೆ. ಶ್ರೀನಿವಾಸನ್ ಬ್ರಾಂಚ್ ಮ್ಯಾನೇಜರ್ 4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ಲೋಕಶಾಂತಿ ಮತ್ತು ಜನತಾ ಸೇವೆಗಳಿಗಾಗಿ

ಗಾಂಧೀಜಿಯವರ ಜೀವನ!

— ಶ್ರೀ ಸತ್ಯಮೂರ್ತಿಗಳ ಲೇಖನ —

"ಮಹಾತ್ಮಾ ಗಾಂಧಿಯವರು ಭಾರತೀಯರ ಮುಂದಾಳು ಮಾತ್ರವೇ ಅಲ್ಲ, ಅವರು ಮಾನವ ಪ್ರಪಂಚದ ಮುಖಂಡರೂ ಆಗಿದ್ದಾರೆಂದು ಧಾರಾಳವಾಗಿ ಹೇಳಬಹುದು. ಯೂರೋಪಿನಲ್ಲಿ ಪ್ರಜ್ವಲಿಸಿ, ಏಸ್ಯ ಆಫ್ರಿಕಗಳನ್ನೂ, ಕೊನೆಗೆ ಅಮೇರಿಕವನ್ನೂ, ಅಂದರೆ ಇಡೀ ಪ್ರಪಂಚವನ್ನೇ ಆವರಿಸಲಿರುವ ಮಹಾಯುದ್ಧವು ಪ್ರಪಂಚದ ಮುಂದಿನ ಸ್ಥಿತಿಗಳ ಕಡೆಗೆ ನಮ್ಮ ಕಣ್ಣುಗಳನ್ನು ತೆರೆದಿದೆ. ಇಂದಿನ ಕಾಲದವರಾದ ನಾವು ನಾಗರಿಕರು, ನಾವು ಸಭ್ಯರು, ನಾವು ಸುಸಂಸ್ಕೃತರು ಎಂದು ನಮ್ಮನ್ನು ನಾವು ಎಷ್ಟು ಹೊಗಳಿಕೊಂಡರೂ, ಇತಿಹಾಸದ ಆದಿಯ ಪುರಾತನ ಕಾಲದ ಅಸಭ್ಯ ಅನಾಗರಿಕರಿಗೂ ನಮಗೂ ಯಾವ ವ್ಯತ್ಯಾಸವೂ ಇರುವುದಿಲ್ಲವೆಂಬುದನ್ನು ಈ ಯುದ್ಧವು ತೋರಿಸಿ ಕೊಟ್ಟಿದೆ. ಆ ಪುರಾತನ ಕಾಲದ ಅಸಭ್ಯರಿಗಿಂತಲೂ ವನ್ಯ ಹಿಂಸ್ರ ಪಶುಪ್ರಾಣಿಗಳಿಗಿಂತಲೂ ಹೆಚ್ಚಾದ ಅವನತ ಸ್ಥಿತಿಯಲ್ಲಿ ಇದ್ದೇವೆಂದರೂ ಸರಿಯೇ! ಈಗ ಯುದ್ಧ ಮೂಲಕ ನಡೆದಿರುವ ಹತ್ಯಾಕಾಂಡ ಮತ್ತು ಪ್ರವಾಹ ಕಟ್ಟಿ ಹರಿಯುತ್ತಿರುವ ರಕ್ತವನ್ನು ನೋಡಿದರೆ, ಅವುಗಳಿಗೂ ನಮಗೂ ಹೆಚ್ಚು ವ್ಯತ್ಯಾಸವು ಕಂಡುಬರುವುದಿಲ್ಲ."

ಬ್ರಿಟನಿಗೆ ಅಹಿಂಸೆಯ ಉಪದೇಶ

ಈ ದಾಸ್ಯ ಜನಾಂಗದಲ್ಲಿ ಹುಟ್ಟಿದ ಮಹಾತ್ಮಾ ಗಾಂಧಿಯಂತಹ ಒಬ್ಬ ದುರ್ಬಲ ಶರೀರದ ವ್ಯಕ್ತಿ, ಒಬ್ಬ ಭಾರತೀಯನು, ಬ್ರಿಟನಿನಂತಹ ಪ್ರಬಲ ಸಾಮ್ರಾಜ್ಯ ಶಕ್ತಿಗೆ ಅದರ ಶಸ್ತ್ರಾಸ್ತ್ರಗಳನ್ನು ಒದಗಿಟ್ಟು ಅಹಿಂಸೆಯ ಮೂಲಕ ಹಿಟ್ಲರನ್ನು ಗೆಲ್ಲಿರಿ ಎಂದು ಬೋಧಿಸಲಿಕ್ಕೆ ಬೇಕಾದ ದಿವ್ಯ ದೃಷ್ಟಿಯುಳ್ಳವನಾಗಿದ್ದಾನೆ ಎಂದರೆ ಅದಕ್ಕಾಗಿ ನಾವೆಲ್ಲ ಅಭಿಮಾನದಿಂದ ತಲೆ ಎತ್ತಿ ಇರಬೇಕು. ಮಹಾತ್ಮಾ ಗಾಂಧಿಯವರ ಅಹಿಂಸೆಯ ಸಂದೇಶದ ಅರ್ಥ ಮಾಡಲಿಕ್ಕಾಗದೆ, ಅಥವಾ ಅದರ ಅಪಾರ್ಥ ಮಾಡಿಕೊಂಡು ನಾಝಿಗಳ ಅತ್ಯಾಚಾರ ಅನಾಚಾರಗಳನ್ನು ಹೇಡಿಗಳಂತೆ ಸುಮ್ಮಗೆ ಅನುಭವಿಸಿ ಬರಲು ಅವರು ಹೇಳುತ್ತಾರೆಂದು ಅನೇಕ ಮಂದಿ ಬ್ರಿಟಿಷರು ಎಣಿಸಬಹುದು. ಆದರೆ ಮಹಾತ್ಮರ ಅಹಿಂಸೆಯು ಹೇಡಿಗಳ ಮತ್ತು ದುರ್ಬಲರ ಶಸ್ತ್ರವಾಗಿಲ್ಲ. ಅದು ಧೈರ್ಯಶಾಲಿಗಳ ಮತ್ತು ಸಾಹಸಿಗಳ ಅಸ್ತ್ರವಾಗಿದೆ. ಹಿಟ್ಲರ ಮತ್ತು ಅವನ ಹಿಟ್ಲರಿಸವನ್ನು ಅಹಿಂಸೆಯ ಮೂಲಕವಾಗಿಯೂ, ಯುದ್ಧವನ್ನು ಶಾಂತಿಯ ಮೂಲಕವಾಗಿಯೂ ಗೆಲ್ಲಬೇಕೆಂದು ಮಹಾತ್ಮರು ಇಚ್ಛಿಸುತ್ತಾರೆ.

ಬ್ರಿಟಿಷರು ಮಹಾತ್ಮರನ್ನು ತಪ್ಪಾಗಿ ಗ್ರಹಿಸುವುದರಲ್ಲಿ ಆಶ್ಚರ್ಯವಿಲ್ಲ. ಮಹಾತ್ಮರ ಅನುಯಾಯಿಗಳೆಂದು ಹೇಳಿಸಿಕೊಳ್ಳುವ ನಾವೇ ಅವರ ಅಹಿಂಸೆಯ ತತ್ವವನ್ನು ಚೆನ್ನಾಗಿ ತಿಳಿದು ಅದನ್ನು ನಮ್ಮ ನಿತ್ಯ ಜೀವನದಲ್ಲಿ ಅನುಸರಿಸುವುದಿಲ್ಲ. ಸದಾ ಕಾಲ ಸತ್ಯವನ್ನಾಡುವುದಿಲ್ಲ ಮತ್ತು ಸತ್ಯಮಾರ್ಗದಲ್ಲಿ ನಡೆಯುವುದಿಲ್ಲ ಎಂಬ ಕಾರಣದಿಂದ ನಮಗೆ ಸತ್ಯದ ಮೇಲಿನ ವಿಶ್ವಾಸವನ್ನು ಹೇಗೆ ಕಳಕೊಳ್ಳಲಿಕ್ಕಾಗುವುದಿಲ್ಲವೋ ಹಾಗೆಯೇ ಮಹಾತ್ಮರು ಪ್ರತಿಪಾದಿಸಿ ಅಹಿಂಸಾಮಾರ್ಗದಲ್ಲಿ ನಡೆಯಲಿಕ್ಕೆ ನಾವು ಇನ್ನೂ ಪೂರ್ಣ ಸಮರ್ಥರಾಗಿಲ್ಲ ಎಂಬ ಕಾರಣದಿಂದ ಆ ದಿವ್ಯ ಮತ್ತು ಪವಿತ್ರ ತತ್ವದ ಮೇಲಿನ ಶ್ರದ್ಧೆಯನ್ನು ನಮ್ಮಿಂದ ಬಿಟ್ಟುಬಿಡಲಾಗದು.

ನಮ್ಮ ಸುತ್ತಮುತ್ತು, ಜಗತ್ತಿನಲ್ಲೆಲ್ಲ ಗಾಢಾಂಧಕಾರವು ತುಂಬಿಕೊಂಡಿದೆ. ಹಿಂದುಸ್ಥಾನದ ಪರಿಸ್ಥಿತಿಯು ವಿಚಿತ್ರವಾಗಿದೆ. ಆದ್ದರಿಂದ ಪೋಲೀಸಿನ ಸಹಾಯವಿಲ್ಲದ ಆಂತರಿಕ ಶಾಂತಿಯನ್ನೂ, ಸೈನ್ಯ ಸಾಧನಗಳಿಲ್ಲದೆ ಹೊರಗಿನ ದಾಳಿಗಳಿಂದ ನಮ್ಮ ರಕ್ಷಣೆಯನ್ನೂ ಮಾಡಲಿಕ್ಕಾಗುವುದಿಲ್ಲವೆಂದು ನಾವು ತಿಳಿಯಬಹುದು. ಆದರೆ ಸ್ವತಂತ್ರ ಹಿಂದುಸ್ಥಾನವು ಮಹಾತ್ಮರು ತೋರಿಸಿದ ಅಹಿಂಸಾಪಥದಲ್ಲಿಯೇ ನಡೆದು ಸ್ವದೇಶದಲ್ಲಿ ಮಾತ್ರವಲ್ಲ, ಪ್ರಪಂಚದಲ್ಲಿ ಕೂಡ ಶಾಂತಿಯನ್ನು ಸ್ಥಾಪಿಸಲಿಕ್ಕೆ ತನ್ನ ಎಲ್ಲಾ ಪ್ರಯತ್ನಗಳನ್ನೂ ಮಾಡುವುದು. ಇದು ಸ್ವತಂತ್ರ ಹಿಂದುಸ್ಥಾನದ ಕರ್ತವ್ಯವೂ ಆಗಿದೆ. ಸ್ವತಂತ್ರ ಹಿಂದುಸ್ಥಾನವು ಸಂಪೂರ್ಣ ಶಸ್ತ್ರತ್ಯಾಗ ಮಾಡಿ, ಸಾಮ್ರಾಜ್ಯ ಸ್ಥಾಪನೆ ಅಥವಾ ರಾಜ್ಯ ವಿಸ್ತರಣೆ ಯತ್ನಗಳಿಗೆ ತಿಲಾಂಜಲಿ ಕೊಟ್ಟು, ಪ್ರಪಂಚಕ್ಕೆ ಲೋಕ ಶಾಂತಿಯ ಉಪಾಯವನ್ನು ತೋರಿಸಿ ಕೊಡುವುದು ಮತ್ತು ಶಾಂತಿ ರಕ್ಷಣೆಗೆ ಸಹಾಯ ಮಾಡುವುದು.

> "ಹಿಟ್ಲರಿಸಮು ಕೆಟ್ಟದು; ನಾವದನ್ನು ಒಪ್ಪಲೇ ಬೇಕು. ಅದರಂತೆ ನಾಝಿಸಮೂ ಕೆಟ್ಟದಾಗಿದೆ; ಫೆಸೀಸಮೂ ಕೆಟ್ಟದಾಗಿದೆ; ಸ್ಟಾಲೀನಿಸಮೂ ಕೆಟ್ಟದೇ! ಆದರೆ ಇಂಪೀರಿಲಿಯಸಮು ಇವುಗಳಿಗಿಂತೆಲ್ಲಾ ಒಳ್ಳೇಯದೇನೂ ಅಲ್ಲವೆಂದು ಖಂಡಿತ. ಆದ್ದರಿಂದ ಈಗ ಜಗತ್ತಿನಲ್ಲಿ ಇವು ಯಾವುವೂ ಅಲ್ಲದ ಒಂದು ಹೊಸ ತತ್ವವನ್ನು, ಒಂದು ಹೊಸ ವ್ಯವಸ್ಥೆಯನ್ನು ಸ್ಥಿರಗೊಳಿಸುವ ಹೊತ್ತು ಈಗ ಬಂದಿದೆ. ಮಹಾತ್ಮಾ ಗಾಂಧಿಯವರು ಪ್ರತಿಪಾದಿಸುತ್ತಿರುವ ಅಹಿಂಸೆಯ ಮೂಲಕವಲ್ಲದೆ ಬೇರೆ ಯಾವ ರೀತಿಯಿಂದಲೂ ಜಗತ್ತಿನ ನವನಿರ್ಮಾಣಕ್ಕೆ ದಾರಿಯಿಲ್ಲ"
>
> — ಶ್ರೀ. ಸತ್ಯಮೂರ್ತಿ.

ಮಹಾತ್ಮಾ ಗಾಂಧಿಯವರು ಇದೇ ಪವಿತ್ರ ಸಂದೇಶವನ್ನು ಹಿಂದುಸ್ಥಾನಕ್ಕೂ ಪ್ರಪಂಚಕ್ಕೂ ಕೊಟ್ಟಿರುತ್ತಾರೆ. ಅವರ ದೇಶವಾಸಿಗಳಾದ ನಾವು ಅವರ ಈ ೭೨ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಪರಮಾತ್ಮನು ಅವರಿಗೆ ಭಾರತದ ಹಾಗೂ ಪ್ರಪಂಚದ ಹಿತದ ಸಲುವಾಗಿ ಅನೇಕ ವರುಷಗಳ ಸುಖ ಮತ್ತು ಆರೋಗ್ಯ ಜೀವನ್ನು ಅನುಗ್ರಹಿಸಲೆಂದು ಪ್ರಾರ್ಥಿಸಬೇಕು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 67/1938

R. I. A. No. 810/1940

ನಡಚರದಯ್ಯ ವಾಜ್ಯ—ಅರ್ಜಿದಾರ

ಮತ್ತು

1 ಅನಂತರಾಜ ಕದಂಬ
2 ಚಂದ್ರಾವತಿ
3 ಜೀವೇಂದ್ರ ಯಾನೆ ವಾದಿರಾಜ } ಪ್ರತಿ

ಸದರಿ ವ್ಯವಹರಣೆಯ 3ನೇ ಎದ್ರಿ ಕಂಗಾಯು ಗ್ರಾಮದ ಮೀದಂತ ದೆಟ್ಟಿನಲ್ಲಿರುವ ಅನಂತರಾಜ ಕದಂಬರ ಮಗ ಜೀವೇಂದ್ರ ಯಾನೆ ವಾದಿರಾಜರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದರಿ ವ್ಯಾಜ್ಯವನ್ನು ಪುನರ್ವಿಚಾರಣೆಗೆ ತೆಗೆದು ತನ್ನಿಯಿಂದ ತೀರ್ಮಾನಿಸಬೇಕಾಗಿ ಅರ್ಜಿದಾರನು ಕೊಟ್ಟ ಸದ್ರಿ ಅರ್ಜಿ ವ್ಯವಹರಣೆಯು ತನ್ನ ಬಗ್ಗೆ ತಾ. 16-10-1940ಕ್ಕೆ ಇಟ್ಟಿರುವುದರಿಂದ ಸದರಿ ದಿವಸ ನೀವು ನಿಮ್ಮ ಉದಾಹರಣೆಯನ್ನು ದಾಖಲು ಮಾಡುವದೆ ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದರಿ ವ್ಯವಹರಣೆಯು ತೀರ್ಮಾನವಾಗುವುದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು 16-9-40 } H. Ganapath Rau
ಅರ್ಜಿದಾರರ ಕಡೆ ವಕೀಲ.

DIAMONDS! DIAMONDS!
BEST BRILLIANCY!

K. R. K. SHET,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

ನಿತ್ಯಜೀವನದಲ್ಲಿ ಅಹಿಂಸೆಯ ಪ್ರಯೋಗ

ಮಹಾದೇವ ದೇಸಾಯಿಗಳ ಲೇಖ

ಅಹಿಂಸಾ ಪರಮೋ ಧರ್ಮಃವೆಂದು ಬಾಯಿಂದ ಆಡುತ್ತಿರುವೆವಾದರೂ, ನಿತ್ಯಜೀವನದ ಸಣ್ಣ ಸಣ್ಣ ಸಂಗತಿಗಳಲ್ಲಿ ಕೂಡ ನಾವು ಅಹಿಂಸಾ ನಿಯಮದ ಭಂಗ ಮಾಡುತ್ತೇವೆ. ವಿರೋಧಿಯು ಪ್ರಜ್ವಲಿಸುವ ಕ್ರೋಧಾಗ್ನಿಯನ್ನು ತಣಿಸಲಿಕ್ಕೆ ಅನೇಕ ಬಾರಿ ಮಧುರವಾದ ಒಂದೇ ಒಂದು ಮಾತು ಸಾಕಾಗುತ್ತದೆ. ಆದರೆ ಸರಿಯಾದ ಸಮಯಕ್ಕೆ ನಮ್ಮ ಬಾಯಿಯಿಂದ ಆ ಮಾತು ಹೊರಡುವುದಿಲ್ಲ. ಹಾಗೆಯೇ ಮೌನವು ನೂರಾರು ಕೆಡುಕುಗಳನ್ನು ತಡೆಯುತ್ತದೆ. ಆದರೆ ಸರಿಯಾದ ಸಮಯದಲ್ಲಿ ನಮಗೆ ನಾಲಗೆಯನ್ನು ಹಿಡಿತದಲ್ಲಿಟ್ಟುಕೊಳ್ಳಲಾಗುವುದಿಲ್ಲ. ಆ ಸಮಯದಲ್ಲಿ ಸ್ವಲ್ಪ ಮಾತ್ರ ಸಂಯಮದಿಂದಿದ್ದರೆ ನಾವು ಮನಸ್ತಾಪಗಳಿಂದ ದೂರವಾಗಬಹುದು. ನಿತ್ಯಜೀವನದ ಸಣ್ಣ ಸಣ್ಣ ಸಂಗತಿಗಳ ಮೇಲೆಯೇ ಅಹಿಂಸೆಯ ಭವ್ಯ ಭವನವು ಕಟ್ಟಲ್ಪಡುವುದು ಎಂಬುದನ್ನು ಅಹಿಂಸೆಯ ಸಾಧಕರು ತಿಳಿದಿರಬೇಕು.

ಶ್ರೀ. ಮಹಾದೇವ ದೇಸಾಯಿಯವರು ಹೀಗೆ ಬರೆಯುತ್ತ ಒಬ್ಬ ವ್ಯಾಪಾರಿಯು ತನ್ನ ಜೀವನದಲ್ಲಿ ಘಟಿಸಿದ ಒಂದು ಸಣ್ಣ ಘಟನೆಯನ್ನು ವರ್ಣಿಸಿ ಬರೆದ ಒಂದು ಪತ್ರವನ್ನು ಹರಿಜನ ಸೇವಕದಲ್ಲಿ ಪ್ರಕಟಿಸಿರುವರು. ಈ ವ್ಯಾಪಾರಿಯು ಸತ್ಯಾಗ್ರಹಿಯೇನೂ ಅಲ್ಲ. ಸರಿಮನೆಯ ಯಾತ್ರೆಯನ್ನೂ ಮಾಡಿಲ್ಲ. ಅವನು ಬರೆದ ಕೆಳಗಿನ ಪತ್ರವು ಬಹಳ ಬೋಧಪ್ರದವಾಗಿದೆ.

"ಒಂದು ದಿನ ಬೆಳಿಗ್ಗೆ ನನ್ನ ತಮ್ಮನೊಬ್ಬನು ಜಟ್ಕಾಗಾಡಿ ಮಾಡಿ ಸ್ಟೇಶನಿಂದ ನನ್ನ ಮನೆಗೆ ಬಂದ. ತಮ್ಮನಿಗೆ ನನ್ನ ಮನೆ ಎಲ್ಲಿ ಎಂದು ಗೊತ್ತಿರಲಿಲ್ಲ. ಕೇಳಿದಾಗ ಅವನು ೧೪ ಆಣೆ ಬಾಡಿಗೆ ನಿರ್ಣಯಿಸಿ ಗಾಡಿ ಹತ್ತಿ ಬಂದಿದ್ದನೆಂದು ತಿಳಿಯಿತು. ಇದನ್ನು ಕೇಳಿ ನಾನು ಸಿಟ್ಟಿನಿಂದ ಸಂತಪ್ತನಾದೆ. ಗಾಡಿಯವನನ್ನು ಅವನ ಮೋಸಕ್ಕಾಗಿ ಬಹಳ ಗದರಿಸಿದೆ. ಗಾಡಿಯವರು ಅಪರಿಚಿತರನ್ನು ಇದೇ ರೀತಿ ಬಾಡಿಗೆ ಹೆಚ್ಚು ತೆಗೆದುಕೊಂಡು ಅವರನ್ನು ಮೋಸ ಮಾಡುವರೆಂದು ಅವನನ್ನು ಭಂಗಿಸಿದೆ. ಮುನಿಸಿಪಾಲಿಟಿಯು ನಿರ್ಣಯಿಸಿದ ದರವು ೮ ಆಣೆ ಆಗಿರುವುದರಿಂದ ಅದಕ್ಕಿಂತ ಒಂದು ಕಾಸು ಜಾಸ್ತಿ ಕೊಡಲಿಕ್ಕಾಗುವುದಿಲ್ಲವೆಂದು ಹೇಳಿದೆ. ಆದರೆ ತಮ್ಮನು ೧೪ ಆಣೆ ಬಾಡಿಗೆ ಕೊಡಲು ಒಪ್ಪಿ ಬಂದಿರುವುದರಿಂದ ಅದಕ್ಕಿಂತ ಒಂದು ಕಾಸು ಕಡಿಮೆ ತೆಗೆದುಕೊಳ್ಳುವುದಿಲ್ಲವೆಂದು ಗಾಡಿಯವನು ಹಠಹಿಡಿದ. ಅವನ ಛಲವನ್ನು ನೋಡಿ ನನ್ನ ಸಿಟ್ಟು ನೆತ್ತಿಗೇರಿತು. ೧೦ ಆಣೆ ಕೊಟ್ಟು ಅವನನ್ನು ಕಳುಹಿಸಿ ಕೊಡಲಿಕ್ಕೆ ತಮ್ಮನು ಇಚ್ಛಿಸಿದ. ಆದರೆ ನಾನು ಕೇಳಲಿಲ್ಲ. ಗಾಡಿಯವನೂ ತನ್ನ ಹಟವನ್ನು ಬಿಡಲಿಲ್ಲ. ಅವನನ್ನು ಪೋಲೀಸರ ವಶ ಮಾಡುವೆನೆಂದು ಬೆದರಿಕೆ ಹಾಕಿದರೂ ಅವನು ತನ್ನ ನಿಶ್ಚಯದಿಂದ ಒಂದಿಷ್ಟು ಆಚೆ ಈಚೆ ಆಗಲಿಲ್ಲ. ಮಾತ್ರವಲ್ಲ; 'ಆಂಠಣೆಗೆ ನಾನು ಇವರನ್ನು ತರಲೊಪ್ಪಿ ಮತ್ತೆ ಇಲ್ಲಿ ಮುಟ್ಟಿದ ತರುವಾಯ ಮುನ್ಸಿಪಾಲಿಟಿ ದರ ಎಂಟಾಣೆಯನ್ನು ನಾನು ಕೇಳಿದ್ದರೆ ನೀವು ಕೊಡುತಿದ್ದಿರೋ?'' ಎಂದು ಅವನು ಕೇಳಿದ. ಅವನ ಮಾತಿನಲ್ಲಿ ನ್ಯಾಯವಿತ್ತು. ಆರಾಣೆ ನಿರ್ಣಯಿಸಿ ಬಂದಾಗ ನಾನು ಎಷ್ಟು ಮಾತ್ರಕ್ಕೂ ಅವನಿಗೆ ಎಂಟಾಣೆ ಕೊಡುತಿದ್ದಿಲ್ಲ. ೧೪ ಆಣೆ ನಿರ್ಣಯಿಸಿ ಬಂದಾಗ ಮಾತ್ರ ಅವನು ಎಂಟಾಣೆಗೆ ಯಾಕೆ ಒಪ್ಪಬೇಕು? ಆದರೆ ಗರ್ವದಿಂದ ಮತ್ತನಾದ ನಾನು ನ್ಯಾಯವನ್ನು ಒಪ್ಪಲು ಸಿದ್ಧನಾಗಲಿಲ್ಲ. ಮಾತ್ರವಲ್ಲ; ತಮ್ಮನು ಅವನಿಗೆ ೧೪ ಆಣೆ ಕೊಡಹೋದಾಗ ಕೂಡಾ ನಾನು ಅವನನ್ನು ತಡೆದು ಹಿಡಿದೆ.

"ಜಣತರ್ಕವಿತರ್ಕಗಳಲ್ಲಿ ನಾನು ಸಮಯವನ್ನು ಹಾಳುಮಾಡಲು ಸಿದ್ಧನಿದ್ದೆನಾದರೂ, ಗಾಡಿಯವನು ಸಿದ್ಧನಿರಲಿಲ್ಲ. ಕೊನೆಗೆ ಒಡನಾಯ ಮಾಡ ಅವನು ೧೦ ಆಣೆ ತೆಗೆದುಕೊಂಡು ನನ್ನನ್ನು ಬೈಯುತ್ತ ಹೊರಟು ಹೋದ. ಇದರಿಂದ ನನ್ನ ತಮ್ಮನ ಹೃದಯವು ಬಹಳ ನೊಂದಿತು. ನನ್ನ ಸಿಟ್ಟು ಇಳಿದು ನಾನು ಶಾಂತನಾಗಿದ್ದ ಸಮಯವನ್ನು ಸಾಧಿಸಿ ತಮ್ಮನು ನನ್ನ ಹತ್ತಿರ—'ಗಾಡಿಯವನ ನ್ಯಾಯಯುತವಾದ ಮಾತಿನ ಅವಹೇಳನೆಯನ್ನು ಯಾಕೆ ಮಾಡಿದಿರಿ?' ಎಂದು ಕೇಳಿದ. ನಾನು ಆಗ ನನ್ನ ಅಪರಾಧ ವಾಯಿತೆಂದು ತಿಳಿಯ ತೊಡಗಿದ್ದ. ತಮ್ಮನ ಪ್ರಶ್ನೆಯಿಂದ ನನ್ನ ದೊಡ್ಡಸ್ತಿಕೆಯ ಅಹಂಭಾವಕ್ಕಾಗಿ ನನಗೆ ಬಹಳ ಪಶ್ಚಾತ್ತಾಪವಾಯಿತು. ಗಾಡಿಯವನಿಗೆ ಅವನ ನಾಲ್ಕಾಣೆಯನ್ನು ಕೊಟ್ಟು ಈ ಪಾಪದಿಂದ ಕೈತೊಳೆಕೊಳ್ಳಬೇಕೆಂದು ನಾನು ದೃಢ ನಿರ್ಧಾರ ಮಾಡಿದೆ. ನಾನು ಅವನನ್ನು ಹುಡುಕಿ ಅವನ ನಾಲ್ಕಾಣೆಯನ್ನು ಅವನಿಗೆ ಕೊಟ್ಟಿದ್ದು ಮಾತ್ರವಲ್ಲದೆ, ನನ್ನ ವಿಚಾರವನ್ನು ಅವನಿಗೆ ಹೇಳಿ ಕ್ಷಮೆ ಬೇಡಿದೆ. ಇದರಿಂದ ಅವನ ಆಶ್ಚರ್ಯಕ್ಕೆ ಪಾರವೇ ಉಳಿಯಲಿಲ್ಲ. ಸಂತೋಷ ಆನಂದಗಳಿಂದ ಆ ಬಡ ಗಾಡಿಯವನು ಉಬ್ಬಿ ಹೋದನು. ಈ ಘಟನೆಯನ್ನು ಬಚ್ಚಿಟ್ಟು ಇವ್ವರತನಕ ನನ್ನ ಹೃದಯದಲ್ಲಿ ಒಂದು ಅಜ್ಞಾನವೇದನೆ ಇತ್ತು. ಅದೀಗ ದೂರವಾಯಿತು. ಕಳೆದು ಹೋದ-ಶಾಂತಿಯು ಈಗ ನನಗೆ ಪ್ರಾಪ್ತವಾಯಿತು.

ಕಂಠದ ಬೇನೆ ಖಂಡಿತ ಗುಣ

ನಿಮ್ಮ ಕಂಠವು ಬೇನೆಗೊಂಡಿದ್ದಾದರೆ, ನಿಮಗೆ ಯಾವುದನ್ನಾದರೂ ನುಂಗುವಾಗ ನೋವಾಗುತ್ತಿದ್ದಾದರೆ ಖಂಡಿತವಾಗಿ ಪೆಪ್ಸನ್ನು ತೆಗೆದುಕೊಳ್ಳಿರಿ. ಇದು ವಿಷಹಾರಿಯಾದ ಶ್ವಾಸ ಯೋಗ್ಯವಾದ ಮಾತ್ರೆಗಳು. ಎಲ್ಲಾ ಬಗೆಯ ಕಂಠದ ಉಪದ್ರವಗಳನ್ನು ಬೇಗನೇ ಗುಣಮಾಡುವುದು.

ಬಾಯಲ್ಲಿ ಹಾಕಿದ ಕೂಡಲೇ ಅದು ಕರಗುವುದು. ಅದರಿಂದ ಒಳ್ಳೆಯ ಮನೋಹರವಾದ ಔಷಧಿ ಗುಣವುಳ್ಳ ರಸವು ಹೊರಟು, ನಿಮ್ಮ ಶ್ವಾಸಕೋಶವನ್ನು ಸೇರುವುದು. ಪೆಪ್ಸು ಹೀಗೆ ನೋವನ್ನು ಕಡಿಮೆ ಮಾಡಿ, ನೋವಿನಿಂದ ಬೇನೆಗೊಂಡ ನಿಮ್ಮ ಕಂಠನಾಳಕ್ಕೆ ಶಕ್ತಿಯನ್ನು ಕೊಡುತ್ತದೆ. ಮಾತ್ರವಲ್ಲದೆ ರೋಗಾಣುಗಳನ್ನೂ ನಾಶಗೊಳಿಸುತ್ತದೆ. ಪೆಪ್ಸನ್ನು ತೆಗೆದುಕೊಳ್ಳಲು ಬಹಳ ಆನಂದ. ಗಾರ್ಗಲ್‌ಗಳಿಗಿಂತ ಹೆಚ್ಚು ಬಾಳಿಕೆಯುಳ್ಳದ್ದೂ ಆಗಿದೆ.



ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 1 ರೂ.ಗೆ ದೊರಕುವುದು.

ಏಜಂಟ್ಸ್:

ಮೆಸರ್ಸ್ ದಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು

ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಕವಾದ ಶ್ವಾಸನೀಯ ಗುಳಿಗೆಗಳು

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಪೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಆದೆಂತಹ ಬಲವೋ

'ಎಳ್ಳು ಹಿಂಡಿ ಎಣ್ಣೆ ತೆಗೆದು ಅನ್ನದೊಂದಿಗೆ ಬೆರಸಿ ಊಟಮಾಡುತಿದ್ದರು ನಮ್ಮ ತಾತನವರು' ಎಂದು ಪೂರ್ವಕಾಲದವರು ಹೇಳುತ್ತಿದ್ದರು. ಅದು ಸತ್ಯವೋ ಅಸತ್ಯವೋ ನಾವು ನೋಡಲಿಲ್ಲವಾದರೂ ಪೂರ್ವಿಕರು ಮಾತ್ರ ಶರೀರ ಕಷ್ಟದಿಂದ ದೃಢಕಾಯರಾಗಿದ್ದರೆಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತೇವೆ.

ನಮ್ಮಲ್ಲಿ ಅನೇಕರಿಗೆ ಆ ಶಕ್ತಿ, ಆ ಬಲ, ಆ ಪಟುತ್ವ ಇರುವುದಿಲ್ಲ. ದೇಹಶ್ರಮದಿಂದ ಕೆಲಸ ಮಾಡಲು ಅವಕಾಶವಿಲ್ಲವೆಂದು ಈ ನೀರಸ ಜೀವನವನ್ನು ಕಳೆಯಬಾರದು. ನಾವು ಒಳ್ಳೇ ಆರೋಗ್ಯವಂತರಾಗಿಯೂ, ತೇಜಸ್ವಿಗಳಾಗಿಯೂ, ಕಳೆ ಕಾಂತಿಗಳಿಂದ ಕೂಡಿರಬೇಕು. ಆದುದರಿಂದ 'ಅಮೃತ' ಔಷಧವನ್ನು ಶೀಘ್ರವಾಗಿ ಸೇವಿಸಬೇಕು. ಅಮೃತವನ್ನು ಸೇವಿಸಿದರೆ ನಿಮಗೆ ಜೀವನ ಸೌಖ್ಯಗಳನ್ನು ಅನುಭವಿಸಲು ಬೇಕಾದ ಶುಷ್ಕ ರಕ್ತವೂ, ಬಲವೂ ಉಂಟಾಗುತ್ತದೆ.

"ಅಮೃತ"ವು ಎಲ್ಲಾ ಔಷಧಿ ಶಾಪುಗಳಲ್ಲಿಯೂ ದೊರೆಯುತ್ತದೆ.

ಕೇಸರಿ ಕುಟೀರಂ ಮದ್ರಾಸು

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೆ ಬಂದು ವಿಚಾರಿಸಿರಿ.

[illegible]ನಿಮಾ ಪುಟ

[illegible]ಕ್ಮನ್ 'ಗೀತಾ' [illegible]ಂದು ಬೊಂಬಾಯಿ [illegible]ಸುವುದು. [illegible] [illegible]ದ ಗಾರ್ಮೋಟಿ [illegible]ನಡಿಸುವರು.

[illegible]ರ ಪತಿದೇವ ಚಿತ್ರ [illegible]ಸ್ಟುಡಿಯೋದಲ್ಲಿ [illegible]ಂದು ಪಕ್ಷದೊಳಗೆ [illegible]ನಕ್ಕೆ ತಯಾರಿ

[illegible]ಚಂದ್ರ

[illegible]

[illegible]ಯಿಲ್ಲ

ವಾಗ್ಮಿತೆ

ವಿಚಾರಣೆ ನಡೆ[illegible] ಅನೇಕ ಮಹನೀ[illegible] ಜನಜಂಗುಳಿಯೇ [illegible] ವಿಷಯವನ್ನು [illegible] ಯುಕ್ತಿಕ್ತು ಪ್ರತಿ [illegible]ಹೂಡಿ ಶೈಲಿಕನ [illegible] ಹೇಳಿದ ಅವಧಿ [illegible]ಸಲು ಅಸಮರ್ಥ [illegible]ನ್ಯಾಸಾಂಗೆ ಅತನು [illegible] ಎಂದು ಎಲ್ಲರೂ [illegible] ಯೆಹೂದಿ ಕಕ್ಷಿ [illegible] ಆತನು ಬೊಂದಿನ [illegible] ನ್ಯಾಸಾಧಿಯು [illegible] ಕೇಳುವನು. [illegible] ರಕೀಲನ ವೇಷ [illegible] ಬಂದಳು!

ಯೆಹೂದ್ಯನು ತನ್ನ ಜಾತಿ ಮತ ಧರ್ಮಗಳ ಸಲುವಾಗಿ ಹಟಕ್ಕೆ ನಿಲ್ಲುತ್ತಾನೆ. ಕಾನೂನು ಅವನಿಗೆ ಅನುಕೂಲವಾಗಿತ್ತು. ಕ್ರಿಶ್ಚಿಯನ್ ವ್ಯಾಪಾರಿಗಳು ತನ್ನ ಕುಲಕ್ಕೆ, ಯೆಹೂದ್ಯರಿಗೆ ಮಾಡಿದ ಅನ್ಯಾಯಗಳ ಕುರಿತು ಆತನು ಮಾತನಾಡುತ್ತಾನೆ. ಅದಕ್ಕಾಗಿ ಪ್ರತೀಕಾರ ಮಾಡಲು [illegible]ತ್ತಾನೆ. ನ್ಯಾಯಾಧಿಪತಿ ಕಾನೂನಿನ [illegible] ನಿಸ್ಸಹಾಯಕನಾಗಿರುವನು. ಆದರೆ ವಕೀಲ ವೇಷದ ಪೋರ್ಶಿಯಳು [illegible] ನ್ಯಾಯವನ್ನು ಸರಿಯಾಗಿ ತೀರ್ಮಾನಿಸುವಳು. [illegible] ಯೆಹೂದ್ಯನ [illegible] ವಕೀಲ ವೇಷದ ಪೋರ್ಶಿಯಳಿಗೆ [illegible] [illegible] ಕೃತಜ್ಞತೆ[illegible] [illegible] [illegible] ಆದನ್ನು ತೆಗೆದುಕೊಂಡ ಪೋರ್ಶಿಯಾ [illegible] [illegible] ಬಿಟ್ಟಳು.

ಈ ಕಥೆಯು [illegible] ಸ್ಟುಡಿಯೋದಲಿ ತಯಾರಾಗುತ್ತಿದೆ.

ತಿರಸ್ಕೃತಳಾದ ನಟಿಯಾಗಿ ದ್ದಳು ಲೀಲಾಚಿಟ್ನಿಸಳು!

ಲೀಲಾಚಿಟ್ನಿಸ[illegible] [illegible]

[illegible]

ಲೀಲಾಚಿಟ್ನಿಸರನ್ನು [illegible] ಚಿತ್ರ [illegible] ಪ್ರಭಾತ [illegible] ನಟಿಯರನ್ನು ಸುಪರೀಕ್ಷೆಗೆ [illegible] ಕೀರ್ತಿ ಅದಕ್ಕೆ ಅಲ್ಲಿಯೇ ಆಕೆ ಪ್ರಥಮ ಪಂಕ್ತಿಯ ನಟಿಯಾದಳು.

ಲೀಲಳ ಜೀವನ ಹೀಗೆ ವಿಜಯ ಮಾರ್ಗದಲ್ಲಿ ಮುಂದುವರಿಯಿತು.

NOTICE

THE BOMBAY LIFE ASSURANCE COMPANY, Ltd.

Notice having been given of the loss of Policy No. 19959 on the life of M. Govinda Kamath a duplicate policy will be issued unless objection is lodged with us within one month from this date.

Bombay, 1—10—'40 | Jyotindra L. Mehta, Managing Director.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ಶಕ್ಯವಾದ ಸುಲಭ ರೀತಿಯಲ್ಲಿ ನಾಶಪಡಿಸಿರಿ. [illegible] ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (Cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು Cuticura Ointment ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮೊಡ್ಡವ [illegible] ಮುಂತಾದ ಭಯಂಕರ [illegible]ಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು Cuticura Ointment ಚರ್ಮವ್ಯಾಧಿಯು ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು Cuticura Ointment [illegible] ಕ್ರಿಮಿಗಳು [illegible] ಅದುದರಿಂದ [illegible] ಇದು [illegible] ಶಕ್ತಿಯುಳ್ಳದ್ದು. [illegible] ಒಂದು ಟಿನ್ನು Cuticura ಮುಲಾಮು [illegible] ಕುಟಿಕೂರವು Cuticura ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದು ವರ್ಷ ಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು Cuticura Ointment [illegible] ಹುಣ್ಣು, ಮೊಡ್ಡವ [illegible] ಮುಂತಾದ ಎಲ್ಲಾ ಚರ್ಮ[illegible]ಗಳನ್ನೂ ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್
Cuticura Ointment

ಜೀವವಿಮೆಯೇ [illegible]

ಪ್ರತಿ ವರ್ಷವೂ [illegible] ಅತ್ಯಂತ ಜನಪ್ರಿಯವಾದ 'ಓರಿಯಂಟಲ್'ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗ॥ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 874 ಮುಖ್ಯ ಕಛೇರಿ: ಬೊಂಬಾಯಿ.

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ಸಿನೆಮಾ ಪುಟ

ಗೀತಾ

ಸಿರ್ಕೋ ಪ್ರೊಡಕ್ಷನ್ 'ಗೀತಾ' ಇದು ಅಕ್ಟೋಬರ ಎರಡು ಬೊಂಬಾಯಿಯಲ್ಲಿ ಪ್ರದರ್ಶಿತವಾಗುವುದು. ಚಂದ್ರಮೋಹನ ಮತ್ತು ದ ಗರ್ಗಾಖೋಟೆ ಇವರು ಇದರಲ್ಲಿ ಅಭಿನಯಿಸುವರು.

ಪತಿದೇವ

ಹಿಂದೂಸ್ತಾನ್‌ದವರ ಪತಿದೇವ ಚಿತ್ರವು ಚಿತ್ರಮಂದಿರ ಸ್ಟುಡಿಯೋದಲ್ಲಿ ತಯಾರಾಗುತ್ತಿದೆ. ಒಂದು ಪಕ್ಷದೊಳಗೆ ಚಿತ್ರಪಟವು ಪ್ರದರ್ಶನಕ್ಕೆ ತಯಾರಿಯಾಗಬಹುದು.

ನಿರ್ದೇಶಕ ಹರಿಶ್ಚಂದ್ರ

ಇವರು ತಿರಿಗಿ ತಮ್ಮ ಹೊಸ ಚಿತ್ರವೊಂದರ ತಯಾರಿಕೆಯಲ್ಲಿ ಮಗ್ನರಾಗಿರುವರು. ಇದು ಹಿಂದಿನವುಗಳಂತೆ, ಉಭಯ ಭಾಷೆಗಳಲ್ಲಿ ತಯಾರಿಸಲ್ಪಡುವುದು. ಅದರ ಕಥೆಯು ಪ್ರಸಿದ್ಧ ನಾಟಕಕಾರರಾದ ಬಿನೊಯ್ ಚಟರ್ಜಿಯವರಿಂದ ಬರೆಯಲ್ಪಟ್ಟಿದು.

ವನಮೋಹಿನಿ

ಅರಣ್ಯ ಸಾಹಸದ ಚಿತ್ರವೊಂದನ್ನು ಮದ್ರಾಸು ಸ್ಟುಡಿಯೋದವರ ಸಿದ್ಧಮಾಡುತ್ತಿರುವರು. ಇದು ಸೌತ್ ಇಂಡಿಯನ್ ಯುನೈಟೆಡ್ ಆರ್ಟಿಸ್ಟ್ಸ್ ಕಾರ್ಪೊರೇಶನವರ ತಯಾರಿಕೆಯಾಗಿದೆ. ಇದಕ್ಕಾಗಿ ಮಲಬಾರಿನಿಂದ ಒಂದು ಬಹಳ ದೊಡ್ಡ ಆನೆಯೊಂದನ್ನು ತರಿಸಲಾಗಿದೆ.

ಡೊರೋತಿ ಲೇಮರಳ ರೂಪಸಾದೃಶ್ಯದ ಒಬ್ಬ ಹುಡುಗಿಯನ್ನು ಅವರ ಇದಕ್ಕಾಗಿ ಸಿದ್ಧ ಮಾಡಿರುವುದಾಗಿ ತಿಳಿದು ಬರುತ್ತದೆ.

ಜಿಪುಣನಿಗೆ ಕೃಪೆಯಿಲ್ಲ

ಪೋರ್ಶಿಯಳ ವಾಗ್ಮಿತೆ

ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆಯುತ್ತಿತ್ತು. ನಗರದ ಅನೇಕ ಮಹನೀಯರು ಮಹಿಳೆಯರು, ಜನಜಂಗುಳಿಯೇ ಬಂದು ವಿಚಾರಣೆಯ ವಿಷಯವನ್ನು ಮೂಕಮೌನದಲ್ಲಿ ಕೇಳುತ್ತಿತ್ತು. ಪ್ರತಿಯೊಬ್ಬರೂ ಜಿಪುಣ ಯೆಹೂದಿ ಶೈಲಕನ ಕಡೆಗೆ ನೋಡುತ್ತಿದ್ದರು. ಹೇಳಿದ ಅವಧಿಯಲ್ಲಿ ಋಣವನ್ನು ಸಲ್ಲಿಸಲು ಅಸಮರ್ಥನಾದ ಕ್ರಿಶ್ಚಿಯನ್ ವ್ಯಾಪಾರಿಗೆ ಆತನು ದಯೆ ತೋರಿಸುವವನೇ ಎಂದು ಎಲ್ಲರೂ ಉತ್ಕಂಠಿತರಾಗಿದ್ದರು. ಯೆಹೂದಿ ಕಠಿಣ ಹೃದಯದವನಾಗಿದ್ದ. ಆತನು ಬೊಂಡಿನ ಕರಾರಿನಂತೆ ಕ್ರಿಶ್ಚಿಯನ್ ವ್ಯಾಪಾರಿಯ ಮಾಂಸದ ತುಂಡನ್ನೇ ಕೇಳುವನು. ಪೋರ್ಶಿಯಳು ವಕೀಲನ ವೇಷ ಧರಿಸಿ ನ್ಯಾಯಸ್ಥಾನಕ್ಕೆ ಬಂದಳು!

ಯೆಹೂದ್ಯನು ತನ್ನ ಜಾತಿ ಮತಧರ್ಮಗಳ ಸಲುವಾಗಿ ಹಟಕ್ಕೆ ನಿಲ್ಲುತ್ತಾನೆ. ಕಾನೂನು ಅವನಿಗೆ ಅನುಕೂಲವಾಗಿತ್ತು. ಕ್ರಿಶ್ಚಿಯನ್ ವ್ಯಾಪಾರಿಗಳು ತನ್ನ ಕುಲಕ್ಕೆ, ಯೆಹೂದ್ಯರಿಗೆ ಮಾಡಿದ ಅನ್ಯಾಯಗಳ ಕುರಿತು ಆತನು ಮಾತನಾಡುತ್ತಾನೆ. ಅದಕ್ಕಾಗಿ ಪ್ರತೀಕಾರ ಮಾಡಲು ಬಯಸುತ್ತಾನೆ. ನ್ಯಾಯಾಧಿಪತಿ ಕಾನೂನಿನೆದುರು ನಿಸ್ಸಹಾಯಕನಾಗಿರುವನು. ಆದರೆ ವಕೀಲ ವೇಷದ ಪೋರ್ಶಿಯಳು ಆ ನ್ಯಾಯವನ್ನು ಸರಿಯಾಗಿ ತೀರ್ಮಾನಿಸುವಳು. ಲೋಭಿ ಯೆಹೂದ್ಯನು ಮೋಸಹೋದನು. ವಕೀಲ ವೇಷದ ಪೋರ್ಶಿಯಳಿಗೆ ಬಸ್ಸಾನಿಯೋ ಕೃತಜ್ಞತೆಯ ಗುರುತಾಗಿ ಉಂಗುರವೊಂದನ್ನು ಕೊಡುವನು. ಅದನ್ನು ತೆಗೆದುಕೊಂಡು ಪೋರ್ಶಿಯಳು ವಿಜಯಗೊಂಡಂತೆ ನಡೆದುಬಿಟ್ಟಳು.

ಈ ಕಥೆಯು ಜಯಾ ಸ್ಟುಡಿಯೋದಲ್ಲಿ ತಯಾರಾಗುತ್ತದೆ.

ತಿರಸ್ಕೃತಳಾದ ನಟಿಯಾಗಿ ದ್ದಳು ಲೀಲಾಚಿಟ್ನಿಸಳು!

ಲೀಲಾಚಿಟ್ನಿಸಳ ಇಂದು ಉತ್ತಮ ನಟಿಯಾಗಿ ಬಹಳ ಬಹುಮಾನಗಳನ್ನು ಪಡೆದಿರುವಳ. ಆದರೆ ಆಕೆಯ ಇದರ ಸಲುವಾಗಿ ಬಹಳ ಸಾಹಸಗಳನ್ನು ಮಾಡಬೇಕಾಯಿತಂತೆ.

ಸಿನೆಮಾ ನಟಿಯಾಗಬೇಕೆಂಬದು ಮೊದಲೆ ಅವಳ ಆಕಾಂಕ್ಷೆಯಾಗಿತ್ತು. ಅನೇಕ ಕಂಪೆನಿಗಳನ್ನು, ನಿರ್ದೇಶಕರನ್ನು ಸಂದರ್ಶಿಸಿದಳು. ಯಾರೂ ಆಕೆಯನ್ನು ಮನ್ನಿಸಲಿಲ್ಲ.

ಲೀಲಾಚಿಟ್ನಿಸಳನ್ನು ಮುಂದೆ ತಂದ ಚಿತ್ರಕಂಪನಿ ಪ್ರಭಾತ. ಹಲವು ಅಜ್ಞಾತ ನಟಿಯರನ್ನು ಸುಪ್ರಸಿದ್ಧಿಗೆ ಏರಿಸಿದ ಕೀರ್ತಿ ಅದಕ್ಕೆ. ಅಲ್ಲಿಯೇ ಆಕೆ ಪ್ರಥಮ ಪಂಕ್ತಿಯ ನಟಿಯಾದಳು.

ಲೀಲಳ ಜೀವನ ಹೀಗೆ ವಿಜಯ ಮಾರ್ಗದಲ್ಲಿ ಮುಂದುವರಿಯಿತು!

NOTICE

THE BOMBAY LIFE ASSURANCE COMPANY, Ltd.

Notice having been given of the loss of Policy No 19959 on the life of M. Govinda Kamath a duplicate policy will be issued unless objection is lodged with us within one month from this date.

Bombay, 1—10—'40 | Jitendra L. Mehta, Managing Director.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ ಕಾಲು ಕಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆದುರು ಯಾವ ಕ್ರಿಮಿಗಳು ತಡೆಯವು. ಆದುದರಿಂದ ರೋಗವು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು. ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

ಕುಟಿಕೂರಾ ಮುಲಾಮನ್ನು (cuticura ointment) ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್

Cuticura Ointment

ಜೀವವಿಮೆಯೇ ಸಂಭವಾದ ಕಂತುಗಳಲ್ಲಿ ಹಣ ಪಾವತಿ ಮಾಡಿ ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಲು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತಿಯುಳ್ಳ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.—

ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್

ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳನ್ನೂ ಪ್ರತಿನಿಧಿಗಳಿದ್ದಾರೆ.

ವಿಜ್ಞಾನಯುಗ

ಹೋಣಿಗಾರನಿಲ್ಲದ ದೋಣಿ!

ಸಂಯುಕ್ತ ಸಂಸ್ಥಾನಗಳ ನೌಕಾಪಡೆಗೆ ಸೇರಿದ ಕೆಲವು ವಿಜ್ಞಾನಿಗಳು ಯುದ್ಧಕಾಲದಲ್ಲಿ ಉಪಯೋಗಕ್ಕೆ ಬೀಳುವಂಥ ಒಂದು ದೋಣಿಯನ್ನು ತಯಾರಿಸಿದ್ದಾರೆ. ನೀರಿನಲ್ಲಿ ಬಿಟ್ಟಾಗ ಅದನ್ನು ನಡೆಸಲಿಕ್ಕೆ ದೋಣಿಗಾರನ ಅಗತ್ಯ ಇರುವದಿಲ್ಲ. ಈ ದೋಣಿ ರೇಡಿಯೋ ಯಂತ್ರದ ಮೂಲಕ ಬೇಕಾದಲ್ಲಿಗೆ ಹೋಗಬಲ್ಲುದು. ಅದರಲ್ಲಿ ಸಿಡಿಮದ್ದುಗಳನ್ನು ತುಂಬಿಸಿ ವೈರಿಹಡಗು ಬರುವ ದಾರಿಗೆ ಎದುರಾಗಿ ಬಿಟ್ಟುಬಿಟ್ಟರೆ ಯಾರೂ ಗುರುತಿಸದ ಹಾಗೆ ಓಡಿ ಅದು ಆ ವೈರಿಹಡಗನ್ನು ಅಪ್ಪಳಿಸಿಬಿಡುವದು. ಆಗ ಅದರೊಳಗೆ ತುಂಬಿದ್ದ ಸಿಡಿಮದ್ದು ಸಿಡಿದು ಒಡೆದು ವೈರಿಹಡಗನ್ನು ಸಟ್ಟನೆ ಪಾತಾಳಕ್ಕೆ ಕಳುಹಿಸುವದು. ಈ ದೋಣಿಯ ಮಾದರಿಯನ್ನು ಮೊನ್ನೆ ತಾನೇ ನೀರಿನಲ್ಲಿ ಬಿಟ್ಟು ಅಮೇರಿಕದ ನೌಕಾಪಡೆಯವರು ಅದರ ಶಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸಿರುವರು.

ಕಾಡುಸಿಂಹಗಳು ನಾಡುಮೃಗಗಳಾಗುವವು!

ಆಫ್ರಿಕದ ಗೊಂಡಾರಣ್ಯಗಳಲ್ಲಿ ತಾನೇ ತಾನಾಗಿ ಮೆರೆಯುವ ಮೃಗರಾಜ ಸಿಂಹವು ತನ್ನ ಸ್ವಭಾವವನ್ನು ಬದಲಿಸಿಕೊಂಡು ಆಡು ಕುರಿಗಳಂತೆ ಸಾಧುಪ್ರಾಣಿ ಆಗಬಹುದೆ? ಇದು ಅಸಂಭವವೆಂದು ನಾವು ಹೇಳಬಹುದು. ಆದರೆ ಕೆಲಿಫೋರ್ನಿಯದ ಇಬ್ಬರು ವಿಜ್ಞಾನಿಗಳು ಈಗ ಇದೇ ಮಹತ್ಕಾರ್ಯದಲ್ಲಿ ತೊಡಗಿದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ ಹಂಗೇರಿಯದ ಒಬ್ಬ ಶರೀರವಿಜ್ಞಾನಿಯು ಮೆದುಳಿನ ಗುಣ ಕ್ರಿಯೆ ಸ್ವಭಾವಗಳನ್ನು ಬದಲಿಸುವ ಒಂದು ಬಗೆಯ ಔಷಧಿ ದ್ರವ್ಯವನ್ನು ಕಂಡುಹಿಡಿದನು. ಈ ದ್ರಾವಕವನ್ನು ಮೆದುಳು ರೋಗದ ಮನುಷ್ಯರಿಗೆ ಇಂಜೆಕ್ಷನ ಮೂಲಕ ಮೆದುಳಿನಲ್ಲಿ ಸೇರಿಸಿದಾಗ, ಮೆದುಳು ಆರೋಗ್ಯ ಸ್ಥಿತಿಯನ್ನು ಸೂಚಿಸಿತು. ಮಾತ್ರವಲ್ಲ ಮೊದಲು ಆ ರೋಗಿಗಳಲ್ಲಿ ಇದ್ದ ಹೊಡೆಯುವದು, ಬಡಿಯುವದು, ಕಡಿಯುವುದು, ಕಚ್ಚುವುದು ಮೊದಲಾದ ದುಷ್ಟ ಗುಣಗಳ ಬದಲಾಗಿ ಅವರು ಕೇವಲ ಸಾಧುಸಜ್ಜನರಂತೆ ಇರತೊಡಗಿದರು. ಇದೇ ಔಷಧಿಯನ್ನು ಕಾಡಪ್ರಾಣಿಗಳ ತಲೆಗೂ ಇಂಜೆಕ್ಷನ ಮಾಡಿದರೆ ಅವು ಸಾಕುಪ್ರಾಣಿಗಳಾಗಬಹುದೆಂದು ಕೆಲಿಫೋರ್ನಿಯದ ವಿಜ್ಞಾನಿಗಳು ಆಲೋಚಿಸಿದ್ದಾರೆ. ಆದ್ದರಿಂದ ಆಫ್ರಿಕದಿಂದ ಎರಡು ಸಿಂಹಗಳನ್ನು ತರಿಸಿ ಯಾವ ಪ್ರಮಾಣದಲ್ಲಿ ಮೇಲೆಹೇಳಿದ ಔಷಧಿಯನ್ನು ಇಂಜೆಕ್ಷನ ಮಾಡಿದರೆ ಅವುಗಳ ಸ್ವಭಾವ ಗುಣಗಳು ಬದಲಾಗುತ್ತವೆ ಎಂಬುದನ್ನು ಪರೀಕ್ಷಿಸುತ್ತಿದ್ದಾರೆ.

ಹಲ್ಲುಜ್ಜಲಿಕ್ಕೂ ಯಂತ್ರವಾಯಿತು!

ಈ ಹಲ್ಲುಗಳನ್ನು ಉಜ್ಜಬೇಕಾದರೆ ಬ್ರಶ್ಶುಗಳನ್ನು ಕೈಯಲ್ಲಿ ಹಿಡಿದ ಅವುಗಳಿಂದ ಹಲ್ಲುಗಳನ್ನು ಚೆನ್ನಾಗಿ ತಿಕ್ಕಿ ತೊಳೆಯಬೇಕು. ಕಾರ್ಯಾವಸರದಲ್ಲಿರುವ ಮನುಷ್ಯರಿಗೆ ಕೈಗೆ ಇದೊಂದು ಕೆಲಸವನ್ನು ಕೊಡುವ ಇಚ್ಛೆ ಇಲ್ಲ! ಆದ್ದರಿಂದ ಅಂಥವರಿಗಾಗಿ ಅಮೇರಿಕದವರು ಮೂರು ವರ್ಷಗಳ ಕಠಿನ ಪರಿಶ್ರಮದಿಂದ ಒಂದು ಚಿಕ್ಕ ಯಂತ್ರವನ್ನು ಕಂಡುಹಿಡಿದಿದ್ದಾರೆ. ಈ ಯಂತ್ರವೊಂದು ಇದ್ದರೆ, ಹಲ್ಲಿನ ಅಂಟನ್ನು ಬ್ರಶ್ಶಿಗೆ ಹಾಕಬೇಕಾದ್ದಿಲ್ಲ, ಬ್ರಶ್ಶನ್ನು ಬಾಯಲ್ಲಿಟ್ಟು ತಿಕ್ಕಿ ತೊಳೆಯಬೇಕಾದ್ದಿಲ್ಲ. ಹಲ್ಲು ತಿಕ್ಕಿ ಬಾಯಿ ತೊಳೆಯುವ ಎಲ್ಲಾ ಕೆಲಸಗಳನ್ನು ಈ ಯಂತ್ರವೊಂದೇ ಮಾಡುತ್ತದೆ. ಮನೆಗೊಂದು ಇಂಥ ಯಂತ್ರವಿದ್ದರಾಯಿತು. ಜನರು ತಮ್ಮ ತಮ್ಮ ಬ್ರಶ್ಶುಗಳನ್ನು ಸರತಿ ಮೇರೆಗೆ ಯಂತ್ರದಲ್ಲಿರುವ ಹಿಡಿಗೆ ಸಿಕ್ಕಿಸಿ, ಎದುರಿಗಿದ್ದ ಕುರ್ಚಿಯ ಮೇಲೆ ಕೂತು ವಿದ್ಯುಚ್ಛಕ್ತಿಯ ಗುಬ್ಬಿಯನ್ನು ಒತ್ತಿದರಾಯಿತು. ಬ್ರಶ್ಶು ಹಲ್ಲಿನ ಅಂಟು ತೆಗೆದುಕೊಂಡು ಆಕಳಿಸಿದ ಬಾಯೊಳಗೆ ಬಂದು ಹಲ್ಲುಗಳನ್ನು ಬೇಕುಬೇಕಾದ ಹಾಗೆ ತಿಕ್ಕಿ ತೊಳೆದು ಶುಭ್ರಮಾಡುತ್ತದೆ. ಕುರ್ಚಿಯ ಮೇಲೆ ಕೂತವರಿಗೆ ಶ್ರಮವೇ ಇಲ್ಲ.

ಹಸ್ತಕೌಶಲ್ಯದ ಪರಮಾವಧಿ!

ಸ್ವಿಜರ್ಲೆಂಡಿನಲ್ಲಿ ಗಡಿಯಾರಗಳನ್ನು ತಯಾರಿಸುವ ಕೈಗಾರಿಕೆಯಲ್ಲಿ ಕುಶಲನಾದ ಯಂ. ಹ್ಯೂಜಿನಿನ್ ಎಂಬವನು ಸ್ವಲ್ಪ ಸಮಯದ ಮೊದಲು ಗೇವಿನ ಆರನೆ ಒಂದರಷ್ಟು ತೂಕದ ಒಂದು ಇಲೆಕ್ಟ್ರಿಕ್ ಮೋಟರನ್ನು ತಯಾರಿಸಿ ಪ್ರಖ್ಯಾತಿಯನ್ನು ಹೊಂದಿದ್ದ. ಈಗ ಅದೇ ಮನುಷ್ಯನು ಅದಕ್ಕೂ ಚಿಕ್ಕದಾದ ಇನ್ನೊಂದು ಇಲೆಕ್ಟ್ರಿಕ್ ಮೋಟರನ್ನು ತಯಾರಿಸಿ ಪ್ರಪಂಚದ ಹಸ್ತಕುಶಲ ಕರ್ಮಗಾರರನ್ನು ಬೆರಗುಗೊಳಿಸಿರುವನು. ಈ ಮೋಟರು ಒಂದು ಔನ್ಸಿನ ೫೦೦ನೇ ಒಂದು ಪಾಲಿಗಿಂತ ಕಡಿಮೆ ಭಾರವುಳ್ಳದ್ದಾಗಿರುವದು. ಒಂದು ಡ್ರೈ ಬೆಟರಿಯ ಬಲದಿಂದ ಇದು ದೊಡ್ಡ ಮೋಟರುಗಳಂತೆಯೇ ಚೆನ್ನಾಗಿ ನಡೆಯುತ್ತದೆ. ಈ ಮೋಟರು ಎಷ್ಟು ಚಿಕ್ಕದಾಗಿರುವದೆಂದರೆ, ಒಂದು ಮುತ್ತಿನ ಕಣವನ್ನು ಎರಡು ಹೋಳುಗಳಾಗಿ ಒಡೆದು, ಹ್ಯೂಜಿನನು ಅದನ್ನು ಆ ಹೋಳುಗಳ ಎಡೆಯಲ್ಲಿ ಹೊಂದಿಸಿ ಇಟ್ಟಿರುವನು. ಇದರ ಬೇರೆ ಬೇರೆ ಯಂತ್ರಭಾಗಗಳನ್ನು ಬಲಿಷ್ಠ ದುರ್ಬೀನಿನ ಮೂಲಕ ಮಾತ್ರ ನೋಡಬಹುದಾಗಿದೆ.

'ಇಲೆಕ್ಟ್ರೊ' ಮನುಷ್ಯನಿಗೆ 'ಇಲೆಕ್ಟ್ರೊ' ನಾಯಿ!

ಅಮೇರಿಕದ ಕೆಲವು ವಿಜ್ಞಾನಿಗಳ ನ್ಯೂಯೋರ್ಕದಲ್ಲಿ ವಿದ್ಯುತ್ತಿನ ಬಲದಿಂದಲೇ ನಡೆಯುವ, ಮಾತನಾಡುವ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುವ 'ಇಲೆಕ್ಟ್ರೊ' ಎಂಬ ಲೋಹದ ಮನುಷ್ಯನನ್ನು ತಯಾರಿಸಿ ಇಟ್ಟಿದ್ದಾರೆ. ಈಗ ಈ ಲೋಹದ ಮನುಷ್ಯನಿಗೆ ಒಬ್ಬನೇ ಇರಲಿಕ್ಕೆ ಬೇಸರವಾಗದಂತೆ ವಿದ್ಯುತ್ತಿನ ಬಲದಿಂದಲೇ ನಡೆಯುವ ಒಂದು ಲೋಹದ ನಾಯಿಯನ್ನು ತಯಾರಿಸಿ ಅವನ ಬಳಿಯಲ್ಲಿ ಇಟ್ಟಿರುವರು. ಈ ನಾಯಿ ಲೋಹದಿಂದ ನಿರ್ಮಿತವಾದರೂ ಅದು ವಿದ್ಯುತ್ತಿನ ಬಲದಿಂದ ಓಡುತ್ತದೆ, ಬೊಗಳುತ್ತದೆ, ಕಚ್ಚುತ್ತದೆ ಮತ್ತು ಜೀವಂತ ನಾಯಿಯು ಎಲ್ಲ ಕೆಲಸಗಳನ್ನು ಇದೂ ಮಾಡುತ್ತದೆ!

PHYSICAL FITNESS
is the first essential in games and in every social activity

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ
ಕಟಪಾಡಿ, - ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನಾಯ್ಕ್, ರಥಬೀದಿ, ಮಂಗಳೂರು

ದಿ ಕಂಬೈನ್ಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸ್

ಮಂಗಳೂರು. ★ ಕೊಡಿಯಾಲಬೈಲು.

ತಾ. 1-10-1940ರಿಂದ ತಿರುಪತಿ ತಾ. 10-10-1940ರ ವರೆ

ಶ್ರೀ ತಿರುಮಲೆ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆಯುವ

ಬ್ರಹ್ಮೋತ್ಸವ ಸಮಾರಂಭ

ತಾ. 2—10—1940ರಿಂದ ತಾ. 10—10—1940ರ ವರೆ

ಮೈಸೂರು ದಸರಾ ಮಹೋತ್ಸವ

(ತಾರೀಕು 10—10—1940ರಲ್ಲು)

ಜಂಬೂಸವಾರಿ ಮೆರವಣಿಗೆಯ ಮನಮೋಹಕ ನೋಟ

ತಾ. 15-10-1940ರಿಂದ **ಶ್ರೀ ತುಲಾ ಕಾವೇರಿ ಸಂಕ್ರಮಣ** ತಾ. 17-10-1940ರ ವರೆ

ಮುಹೂರ್ತ ಕಾಲ: ತಾರೀಕು 16—10—1940ರಲ್ಲು ರಾತ್ರಿ 12 ಗಂಟೆಗೆ

ಮಂಗಳೂರಿನಿಂದ 6-15 A.M. ಗೆ ಬಿಡುವ ಮೊಡರ್ನ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಸಾಯಂಕಾಲ 3-30 ಗಂಟೆಯ ಒಳಗೆ ಮೈಸೂರು ತಲುಪಿ, ಮೈಸೂರಿನಿಂದ ಆ ಕೂಡ್ಲೆ 4P.M.ಗೆ ಬಿಡುವ ರೈಲಿನಲ್ಲಿ ಹೊರಟು ಬೆಂಗಳೂರಿಗಾಗಿ, ತಿರುಪತಿಗೆ ಮರುದಿನ 9 10A.M.ನ ಒಳಗೆ ತಲಪಬಹುದು

ಮಂಗಳೂರಿಂದ ಮೈಸೂರಿಗೆ ಬಸ್ ಚಾರ್ಜು ರೂ. **4-8-0.**

ಮೈಸೂರಿನಿಂದ ತಿರುಪತಿಗೆ ರೈಲು ಚಾರ್ಜು ರೂ **4-14-0** ರೈಲಿನ ರಿಟರ್ನ್ ಟಿಕೇಟು ಪಡಕೊಂಡವರಿಗೆ ಕನ್ಸೆಶ್ಶನ್ ಸಿಗುತ್ತದೆ

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS,

The Combined Booking Agency, MANGALORE.

The Joint Booking Offic KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗದೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಬೇಕಾದ್ದಂತೆ ಸರಿಯಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ, ಮುಂಬ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾದಸಾಹಿಬ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ಜನ ಗರ್ಭಧಾರಣವೂ ಆಗುವುದಿಲ್ಲ." ಪೂರ್ಣ ಗುಣಕಾರಿ ದಪ್ಪಿಯ ಕ್ರಯರೂ. ೪-೦-೦

ವಿ. ಪಿ. ೧ : ೫

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶಿ... ಗಳೂ, ದೋತಿಗಳೂ, ಶಾಲುಗಳೂ ಸುಲಭ ಧರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ ಕ್ರಿ. ಶ. 1858]

ಉಜ್ವಲ ಕಾಂತಿಯ

ವಸ್ತ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ಸ್ಥಾಪನೆಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	—	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,		
,, ದುಯಂ ,, ,,		
ಅಕ್ಕಿ ಅವ್ವಲ್ ಗುಡ್ಡ ,,	4—8—0	4—1
,, ದುಯಂ ,, ,,	4—6—0	4—
,, ಅವ್ವಲ್ ಸುಗ್ಗಿ ,,	4—9—0	4—1
,, ದುಯಂ ,, ,,	4—4—0	4—
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—
,, ಸಿಪ್ಪೆ ಇದ್ದದ್ದು ,,	37—[illegible]—0	42—
ಕೊಬ್ಬರಿ ಅಲೆಪ್ಪಿ ಖಂಡಿಗೆ	58—0—0	
,, ದಿಳ್ಳಿಸಂದಿ ,,	—	
ತೆಂಗಿನ ಎಣ್ಣೆ ಮಣಕ್ಕೆ	4—0—0	4—
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	3—8—0	4—
ಗೇರುಬೀಜ ಮುಡಿಗೆ	3—12—0	4—
ಕಡ್ಲೆ ಬೇಳೆ ಖಂಡಿಗೆ	35—0—0	40—
ಕೈಲೆಮೆಣಸು ಹಂಡರ್ವೆಟ್ಟಿಗೆ	13—8—0	14—

ಸ್ವದೇಶಾಭಿಮಾನಿ

ಪುಟ 34] ತಾರೀಖು 4-10-1940 [ಸಂಚಿಕೆ 40

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 1.42 Crores
Total Funds exceed	Rs. 1.52 Crores.
Premium income during the year exceeds	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to any of our following Offices:—

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No: 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆಬೇನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ, ಮುಂಕಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ!

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಎಲ್ಲಾ ಊರುಗಳಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

ಇಂದು ಜಿಲ್ಲೆಯಲ್ಲಿ ಜನರ ಪ್ರೀತಿಯ ಉಪಯೋಗದಲ್ಲಿರುವ ವಸ್ತುವಿದಲ್ಲ

ನಂಜನಗೂಡು ಟೂತ್ ಪೌಡರ್

ಸದ್ವಿದ್ಯಾಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

ಇದು ಕನ್ನಡ ನಾಡಿನ ಸೊಬಗು!

ಪಶ್ಚಿಮ ಸಮುದ್ರತೀರದ ಒಂದು ಮನಮೋಹಕ ದೃಶ್ಯ!

KANNAAD ILLUSTRATED WEELKY

...ಕಾಂಗ್ರೆಸು ಸಂಸ್ಥೆ ...ಕುವುದು!

ಇಂದಿನ ಕಾಂಗ್ರೆಸ್ ... ಹೋರಣೆಯನ್ನು ಟೀಕಿಸಿ, ಕಾಂಗ್ರೆಸ್ ... ರ್ಣಯಕ್ಕೆ ವಿರೋಧವಾಗಿ ಪ್ರತಿ ... ಗೆ ಶರಣವಿಲ್ಲದೆ ಸಹಾಯ ... ಕೊಂಡಿತ್ಯಾದಿ ಪ್ರಚಾರ ಮಾಡುತ್ತ ... ಂದ ಕಾರಣ, ಕಾಮ್ರೇಡ್ ಎಂ. ... ನ್ ರಾಯಿಗಳನ್ನು ಒಂದು ... ರ್ಷದ ಕಠಿಣ ಶಿಸ್ತುಭಂಗಕ್ಕಾಗಿ ... ಾಂಗ್ರೆಸಿನಿಂದ ಹೊರಗಿರಿಸಲಾಗಿದೆ ... ಷ್ಟೆ? ಈಗ ಶರಿಗೆ ಅವರು ಮತ್ತ ... ಉಗ್ರರಾಗಿ, ತಮ್ಮ ವಾರಪತ್ರಿಕೆ ... ಂಡಿಪೆಂಡೆಂಟ್ ಇಂಡಿಯಾದಲ್ಲಿ ... ೀಗೆಂದು ಬರೆಯುತ್ತಾರೆ:

'ಕಾಂಗ್ರೆಸಿನ ಇಂದಿನ ಧುರೀಣರು ... ಾಜಕೀಯ ದೃಷ್ಟಿಯಲ್ಲಿ ಕಾಂಗ್ರೆಸನ್ನು ... ಕ್ತಿಹೀನವಾಗಿ ಮಾಡಿರುತ್ತಾರೆ. ಕಾಂ ... ್ರೆಸಿನ ಶಕ್ತಿಯ ಉಗಮವನ್ನೇ ಕೆಡಿಸಿ ... ಟ್ಟಿದ್ದಾರೆ. ಅವರು ತಮ್ಮ ಸ್ವಂತದ ... ರ್ಟೆಸ್ಸಿನ ಬಗ್ಗೆ ಕಾಂಗ್ರೆಸಿನ ಬಲವನ್ನು ... ುಗ್ಗಿಸಿದ್ದಾರೆ. ಕಾಂಗ್ರೆಸಿನ ಒಳಗಿನ ... ೇರೆ ಬೇರೆ ಪಂಗಡಗಳ ಸಾಲಿನಲ್ಲಿ ... ಮ್ಮ ಪಂಗಡವು ಹೆಚ್ಚು ಬಲಶಾಲಿ ... ರಾಗಬೇಕೆಂದು ಅವರು ಸಾಧಿಸು ... ದ್ದಾರೆ. ಅವರು ಇಂದಿನ ಯುದ್ಧದ ... ಗ್ಗೆ ಕೇವಲ ತಪ್ಪು ಧೋರಣೆಯನ್ನೇ ... ಕೈಗೊಂಡಿದ್ದಾರೆ. ಇದು ಒಂದು ಆತ್ಮ ... ಾಶದ ಉದಾತ್ತ ಉದಾಹರಣೆಯಾಗಿದೆ. ... ಕಾಂಗ್ರೆಸಿಗೆ, ಇಂತಹ ಆತ್ಮನಾಶದ ಕಾರ ... ಣವನ್ನು, ಸಾಮ್ರಾಜ್ಯಶಾಹಿಯು ತಂದಿ ... ತೆಂದು ಹೇಳುವುದು ಸರಿಯಲ್ಲ.

'...ಕಾಂಗ್ರೆಸಿಗೆ ಇಂದು ಈ ಭಯಂಕರ ... ಸ್ಥಿತಿ ... ಪ್ರಾಪ್ತವಾಗಿದೆ. ... ಮುಂಬಯಿಯ ನಿರ್ಣಯ ... ಬೆದರಿಕೆಯನ್ನು ... ಇಂತಹ ಭಯಂಕರ ಅಪತ್ತು ಕಾಂಗ್ರೆಸಿಗೆ ಒದಗಬಾರದೆಂದು ನಾವು ನಮ್ಮ ಶಕ್ತಿ ... ಪ್ರಯತ್ನ ಮಾಡಿದೆವು. ಇಂದು ಕಾಂಗ್ರೆಸಿನ ಅವತಾರ ಕಾರ್ಯವೇ ಸಮಾಪನವಾಗಿರಬಹುದೆಂದೆನಿಸುತ್ತದೆ. ಅಂದಮೇಲೆ ಅದರ ಶಕ್ತಿಯು ಭಂಗವಾಗಲೇ ಬೇಕು. ಒಂದೇ ಒಂದು ವ್ಯಕ್ತಿಯ ಇಚ್ಛೆಯನ್ನು ರಾಷ್ಟ್ರದ ಮೇಲೆ ಹೇರ ಹತ್ತಿರುವ ಕಾಂಗ್ರೆಸ್ ಸಂಸ್ಥೆಯ ಬದಲು ಹಾಗೆ ಮಾಡದಿರುವ ಬೇರೊಂದು ಸಂಸ್ಥೆಯು ನಮಗೆ ಬೇಕಾಗಿದೆ. ಕೈಗೆ ಬಂದ ಅಧಿಕಾರವನ್ನು ಬಿಸುಟ ಇವರು ಇತಿಹಾಸದ ಮೂಲೆಪಾಲಾಗಲು ಯೋಗ್ಯರಾಗಿರುವರು. ಇದು ನಿಶ್ಚಯವಾಗಿ ಆಗಿಯೇ ಆಗುವುದು. ಮುಂಬಯಿಯಲ್ಲಿ ಸೇರಿ, ಇವರು ತಮ್ಮ ಕೈಯಿಂದ ತಾವೇ ಆತ್ಮಹತ್ಯೆ ಮಾಡಿಕೊಂಡರು. ಇದರಿಂದ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರತಿನಿಧಿಯಾದ ಕಾಂಗ್ರೆಸಿಗೆ ಬಾಧೆ ತಟ್ಟಿದೆ. ಕಳೆದ ಇಪ್ಪತ್ತು ವರ್ಷಗಳಿಂದ ಕಾಂಗ್ರೆಸ್ಸನ್ನು ತಪ್ಪುದಾರಿಯಲ್ಲಿ ಒಯ್ಯಹತ್ತಿದವರು ನಷ್ಟವಾದರೂ ಸಹ ಕಾಂಗ್ರೆಸು ಉಳಿಯುವುದು. ... ಪಕ್ಷಿಯಂತೆ ಅದು ಚಿತಾಭಸ್ಮದೊಳಗಿಂದ ಲೂ ನವಚೈತನ್ಯ ಹೊಂದಿ ಮತ್ತೆ ಹಾರಾಡುವುದು.

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

ಕ್ರಮ ನಂಬ್ರ 625/1938.

R. E. P. No. 916/1940.

ಕಲ್ಯಾಣಿ ಹೆಂಗ್ಸು ವಾದಿಳು ಅರ್ಜಿದಾರಳು

ಮತ್ತು

1. ಬಿ. ಬಾಲಕೃಷ್ಣ } ಪ್ರತಿವಾದಿರು.
2. ಬೆಂಜಮಿನ್ ಶಿಕೇರಾ } ಎದ್ರಿರು

2ನೇ ಪ್ರತಿವಾದಿ 2ನೇ ಎದ್ರಿ ಬೆಂಜಮಿನ್ ಶಿಕೇರಾ ದೋಸ್ತ ಶಿಕೇರರ ಮಗ ಮಂಗಳೂರು ಕಸಬಾ ... ವಾಸವಾಗಿರುವವರಿಗೆ—

... 4-11-1940 ... R. E. A. No. 1055/1940 ... 4-11-1940 ... 10 ...

...) A. N. S. Achar.

NOTICE

In the Court of the District Munsif of Mangalore

S. C. No. 526 of 1940

Between:—

A. Srinivas Nagappa Churya . . . *Plaintiff.*

and

Tacker Daramsee Bhimjee Shet . . . *Defendant.*

To

The defendant - Tacker Daramsee Bhimjee Shet son of Bhimjee Shet residing in Sarajkot of Malwan Ratnagiri District.

Take Notice that the above suit filed by the plaintiff against you for recovery of Rs. 962-1-0 being the balance principal sum & interest due by you in respect of the dealings carried on by you with him has been posted to 11 A.M. on 31-10-1940 for hearing & your appearance. If you fail to appear and contest the suit in person or by pleader on the said date, it will be proceeded with exparte.

(By order of the Court)

Mangalore) ... Pai

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸಪಟ್ಟಾಗ, ಉದಾಸೀನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣುವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳೂ ಮಾಡವು.

'ಓವಲ್ಟಿನ್' ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ... ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಪದಾರ್ಥಗಳಿಂದ ತಯಾರಿಸಲ್ಪಟ್ಟದ್ದು—ನೆನೆಹಾಕಿ ಹುರಿದ ಮಾಗಿದ ... ಅನುಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಾತು ಮತ್ತು ಪೊಸ್ಪಟೈಡ್ಸನಿಂದ ತಯಾರಿಸಿಟ್ಟ 'ಓವಲ್ಟಿನ್' ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಕಾರರು:

ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ., (ಇಂಡಿಯಾ) ಲಿಮಿಟೆಡ್

ಕೈಸರ್ ಹೋಲ್ ಥರ್ಡ್ ಫ್ಲೋರ್, 310-311

ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು.

ಕಲ್ಕತ್ತಾ, ಕರಾಚಿ ಮತ್ತು ಬೊಂಬಾಯಿ.

'ಓವಲ್ಟಿನ್'

OVALTINE ... ಪುಷ್ಟಿಕರವಾದ ಆಹಾರಪಾನೀಯ'

'ಓವಲ್ಟಿನ್' ಬಿಸ್ಕತುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕತುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆರೆಯು 'ಓವಲ್ಟಿನ್' ಸೇರಿರುವುದು. 4 ಮತ್ತು 8 ಔನ್ಸಿನ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

“ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

11-10-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟಿವಾಗುವ ವಾರಪತ್ರಿಕೆ ೧೧—೧೦—೧೯೪೦]

ಮಹಾತ್ಮರು ಸಿಮ್ಲಾದಿಂದ ಬಲಿಷ್ಠರಾಗಿ ಮರಳಿದರು!

“ಮೌಲಾನಾ ಸಾಹೇಬರು ತಾ. ೧೧ರಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯನ್ನು ಕರೆದಿರುವರು. ಅಷ್ಟರೊಳಗಾಗಿ ಮುಂದಿನ ಕಾರ್ಯದ ಯೋಜನೆಯನ್ನು ನಾನು ಸಿದ್ಧಪಡಿಸುವೆನು. ಅದು ಏನೇ ಇದ್ದರೂ, ಇದೇ ಶಾಸ್ತ್ರವಲ್ಲದಿದ್ದರೂ, ಎಲ್ಲಾ ಕಾಂಗ್ರೆಸ್ ಕೆಲಸಗಾರರ ಬೆಂಬಲವು ಆಗ ದೊರೆತರೆ ಕೆಲಸವು ಒಳ್ಳೆಯದಾಗುವುದು. ಈ ಮಧ್ಯದಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಶಾಸನಭಂಗ ಚಳವಳವು ಇಲ್ಲವೆಂಬುದನ್ನು ನೀವು ನೆನಪಿನಲ್ಲಿಡಿರಿ. ಇದರಲ್ಲಿ ತಪ್ಪಿ ನಡೆದರೆ ನಮ್ಮ ಧ್ಯೇಯಕ್ಕೆ ಧಕ್ಕೆ ತಗಲುವುದು.”

ಹೀಗೆಂದು ಮಹಾತ್ಮಾಜಿಯವರು ಕಾಂಗ್ರೆಸು ಕೆಲಸಗಾರರ ಸಲುವಾಗಿ ಪತ್ರಿಕೆಗಳಿಗೆ ಒಂದು ಪ್ರಕಟಣೆಯನ್ನು ಕೊಟ್ಟಿರುವರು.

ಅದರಲ್ಲಿ ಈ ವಿಷಯಗಳೂ ಇವೆ

“ವೈಸರಾಯರನ್ನು ಕಂಡು ಮಾತನಾಡಿಯಾಯಿತು. ಇನ್ನು ಸಂಗ್ರಾಮಕ್ಕೆ ನೀವು ನಮಗೆ ಎಂದು ಆಜ್ಞೆಯನ್ನು ಕೊಡುವಿರಿ. ನಮ್ಮವರಲ್ಲಿ ಹಲವರು ಮೊದಲು ಯಾವುದನ್ನು ಹೇಳಿದ್ದರೋ ಅದೇ ನಿಮಗೆ ಸಿಮ್ಲಾದಲ್ಲಿ ದೊರಕಿತು, ಹೀಗೆಂದು ಸತ್ಯಾಗ್ರಹಿಗಳು ಆತುರರಾಗಿ ನನ್ನೊಡನೆ ವಾದ ಹೂಡಲಾರರೆಂದು ನಾನು ಭಾವಿಸುತ್ತೇನೆ. ಸತ್ಯಾಗ್ರಹಿಗಳು ನನಗೆ ಹೇಳಿದ್ದು ಅಷ್ಟು ವಿಶೇಷದ್ದಲ್ಲ. ನಾನು ಮಾಡಿದ ಪ್ರಯತ್ನವು ಬಹಳ ಮಹತ್ವದ್ದಾಗಿತ್ತು.

ವೈಸರಾಯರಿಂದ ಏನೂ ಸಿಗದೆ ನಾನು ತಿರಿಗಿ ಬಂದರೆ, ನನಗೆ ನನ್ನ ಮಟ್ಟಿಗಾದರೂ ಹೆಚ್ಚು ಸಾಮರ್ಥ್ಯವನ್ನು ಗಳಿಸಿ ಬರುವೆನೆಂದು ನಾನು ಹೇಳಿದ್ದೆನು. ಸಹಜವಾಗಿ ಏನೂ ಶಕ್ತಿಯಿಲ್ಲದೆ ಸಿಕ್ಕುವ ಕೀರ್ತಿಗಿಂತಲೂ ಹೆಚ್ಚು ಸಾಮರ್ಥ್ಯ ಸಂಪಾದನೆಯು ಶ್ರೇಯಸ್ಕರವಲ್ಲವೆಂದು ಯಾರು ಹೇಳುವರು? ಆದರೆ ಈ ಶಕ್ತಿಯನ್ನು ನಾನು ಹೇಗೆ ಉಪಯೋಗಿಸಿಕೊಳ್ಳುವೆನೆಂಬುದರಲ್ಲಿ ನನ್ನ ಬುದ್ಧಿ ಶಕ್ತಿಯು ಪರೀಕ್ಷೆಯಾಗುವುದು.

ರಾಜಾಜಿಯವರ ಅಭಿಪ್ರಾಯ!

‘ವರ್ಕಿಂಗ್ ಕಮಿಟಿ ಕೂಡುವುದರೊಳಗೆ ಯೋಜನೆ ತಯಾರಿಸುವೆ’

ಗಾಂಧಿಜಿಯವರ ಹೇಳಿಕೆ

ತಾ. ೧೧ರಂದು ವರ್ಕಿಂಗ್ ಕಮಿಟಿ ಸಭೆ!

‘ರಾಷ್ಟ್ರಪತಿ ಆಜಾದರು ತಾ ೧೧ಕ್ಕೆ ವರ್ಕಿಂಗ್ ಕಮಿಟಿಯ ಸಭೆಯನ್ನು ಕರೆದಿರುವರು ಅದರೊಳಗೆ ನಾನು ಮುಂದಿನ ಕಾರ್ಯದ ಯೋಜನೆಯನ್ನು ಸಿದ್ಧಪಡಿಸುವೆನು ಅದರೊಳಗೆ ಯಾವುದೇ ರೂಪದ ಶಾಸನಭಂಗ ಚಳವಳವೂ ಇಲ್ಲ ಇದರಲ್ಲಿ ಯಾರಾದರೂ ತಪ್ಪಿ ನಡೆದರೆ ನಮ್ಮ ಧ್ಯೇಯಕ್ಕೆ ಬಹಳ ಆಘಾತವಾಗುವುದು. ಈ ಸಂದರ್ಭದಲ್ಲಿ ಇದೇ ರಾಷ್ಟ್ರವಲ್ಲದಿದ್ದರೂ. ಕಾಂಗ್ರೆಸಿನವರು ಒಕ್ಕಟ್ಟಿನಿಂದ ಶಿಸ್ತಿನಿಂದ ಇರಬೇಕು ನೀವು ತಪ್ಪಿ ನಡೆದರೆ, ಶಿಸ್ತಿಗೆ ಬಹಳ ಮಹತ್ವ ಕೊಟ್ಟ ನಿಮ್ಮ ಸೇನಾಪತಿಯ ಶಕ್ತಿಯು ತಗ್ಗುವುದು ಜನರು ಕೊಟ್ಟ ಶಕ್ತಿಯನ್ನು ಬಿಟ್ಟು ಸೇನಾಪತಿಗೆ ಬೇರೆ ಶಕ್ತಿಯಿರುವುದಿಲ್ಲ’’

ಗಾಂಧಿಜಿ ಬಲಿಷ್ಠರಾಗಿ ಬಂದರು

ರಾಜಾಜಿಯವರ ಹೇಳಿಕೆ

ಮದ್ರಾಸಿನಲ್ಲಿ ಗಾಂಧಿಜಯಂತಿಯನ್ನು ಪ್ರಾರಂಭಿಸುತ್ತಾ ಚಕ್ರವರ್ತಿ ರಾಜಗೋಪಾಲಾಚಾರ್ಯರು ಒಂದು ಮಹತ್ವದ ಸುದೀರ್ಘವಾದ ಭಾಷಣ ಕೊಟ್ಟರು ಅದರ ಸಾರಾಂಶವು ಹೀಗಿದೆ

‘ಗಾಂಧಿಜಿಯವರು ಸಿಮ್ಲಾದಿಂದ ಬರಿಗೈಯಾಗಿ ಬಂದರು ಎಂದರು ಹೇಳುವುದಕ್ಕಿಂತ ಅವರು ಬಲಿಷ್ಠರಾಗಿ ಬಂದರು ಎಂದು ಹೇಳುವುದೇ ಸರಿಯಾದುದಾಗಿದು ಅವರ ಮುಂದಿನ ಕಾರ್ಯಕ್ರಮಕ್ಕೆ ಇದೇ ಮೊದಲನೆಯ ಮೆಟ್ಟಲಾಗಿದೆ ಆದಕಾರಣ, ಇನ್ನು ಮುಂದೆ ಅವರು ಕೊಡುವ ಆಜ್ಞೆಯನ್ನು ಸರ್ವರೂ ಪಾಲಿಸುವರೆಂದು ನಾನು ಭರವಸೆಯುಳ್ಳವನಾಗಿರುವೆನು ಮುಸ್ಲಿಂ ಲೀಗು ಮತ್ತು ಕಾಂಗ್ರೆಸುಗಳು ತಮ್ಮ ಮತಭೇದಗಳನ್ನು ಬೇಗನೇ ಮರೆಯಬೇಕು, ತಮ್ಮ ಧ್ಯೇಯವಾದ ರಾಷ್ಟ್ರದ ಸ್ವತಂತ್ರ್ಯಪ್ರಾಪ್ತಿಗಾಗಿ ಹೋರಾಡಬೇಕು ಮುಸಲ್ಮಾನರು ಹೆಚ್ಚು ಹೆಚ್ಚಾಗಿ ಕಾಂಗ್ರೆಸನ್ನು ಸ್ವಾಧೀನಪಡಿಸಿಕೊಳ್ಳಬಹುದು’’ ಎಂದರು

An Invitation

Deposits flowing in more quickly than we can invest them are steadily increasing our idle funds Thus our deposits increased by over Rupees Five Lacs since the first of July, 1940.

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE. Estd: 1906 CANARA BANK, LIMITED.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸ್ವದೇಶಾಭಿಮಾನಿ

ತಾರೀಕು 11—10—1940

ನಾಡ ಹಬ್ಬ

ಈ ವಾರ ಅಖಿಲ ಕರ್ನಾಟಕದಲ್ಲಿ ಎಲ್ಲೆಡೆಗಳಲ್ಲಿಯೂ ನಾಡ ಹಬ್ಬವಾದ ದಸರೆಯು ಜರಗುತ್ತಿದೆ. ಕರ್ನಾಟಕದ ದೇಶದಲ್ಲಿರುವವರೆಲ್ಲರೂ, ಜಾತಿಮತಗಳ ಸಂಕೋಚ ದೃಷ್ಟಿಯಿಲ್ಲದೆ ತಮ್ಮ ನಾಡಿನ ಹಬ್ಬ, ರಾಷ್ಟ್ರೀಯೋತ್ಸವ ಎಂಬ ದೃಷ್ಟಿಯಿಂದ ಒಟ್ಟುಗೂಡಿ ಈ ಹಬ್ಬವನ್ನು ಆಚರಿಸುತ್ತಾರೆ. ಇಂದು ದಸರಾ ಮಹೋತ್ಸವವು ಕೇವಲ ಹಿಂದುಗಳ ನವರಾತ್ರಿ ಉತ್ಸವ ಮಾತ್ರವಾಗಿಲ್ಲ; ಕನ್ನಡನಾಡಿನಲ್ಲಿರುವ ಎಲ್ಲಾ ಜನರಿಗೆ ಸಂಬಂಧಿಸಿದ ಉತ್ಸವವೆನ್ನುವ ವಿಶಾಲ ತತ್ವ, ವಿಶೇಷ ದೃಷ್ಟಿಗಳು ಕನ್ನಡಿಗರಲ್ಲಿ ಐಕ್ಯ ಜಾಗೃತಿಗಳನ್ನುಂಟುಮಾಡುತ್ತಿವೆ. ಕನ್ನಡ ನಾಡಿನಲ್ಲಿ ವಿಶೇಷ ಚಟುವಟಿಕೆಗಳು ಕಂಡು ಬರುತ್ತವೆ.

ದಸರಾ ಮಹೋತ್ಸವವು ಒಂದು ರೀತಿಯಿಂದ ಪ್ರಕೃತಿಯ ಉತ್ಸವ. ಮಳೆ ನಿಂತು ಶರತ್ಕಾಲವು ಕಾಲಿಡುವಾಗ, ಸುತ್ತಲೂ ಬಯಲುಗಳಲ್ಲಿ ಬೆಳೆಗಳು ಫಲಭಾರದಿಂದ ನಲಿಯುತ್ತಿದ್ದಾಗ, ಸಸ್ಯಶಾಲಿನಿಯಾದ ಭೂದೇವಿಯು ಆನಂದದಿಂದಿರುತ್ತಾಳೆ. ನಿಸರ್ಗವನ್ನು ಆರಾಧಿಸುವುದು ಸರ್ವ ಜೀವಕೋಟಿಗಳ ಚೈತನ್ಯದ ಕುರುಹು. ಹೀಗೆ ನಿಸರ್ಗದ ಪೂಜೆ ದಸರಾ ಪೂಜೆ. ಕನ್ನಡಿಗರು ಈ ತೆರದ ನಿಸರ್ಗ ಸೌಂದರ್ಯಾರಾಧನೆಯನ್ನು, ಆನಂದದಿಂದ ಎಲ್ಲೆಡೆ ಆಚರಿಸುತ್ತಿದ್ದಾರೆ. ಅವರ ನಾಡ ಹಬ್ಬದಲ್ಲಿ ಇಂತಹ ಜೀವಜಾಲಗಳ ಆನಂದ ಹೇತುವಾದ ನೈಸರ್ಗಿಕ ಶಕ್ತಿ ಅಡಕವಾಗಿದೆಯೆಂಬುದು ಒಂದು ವೈಶಿಷ್ಟ್ಯವಾಗಿದೆ.

ನವರಾತ್ರಿಯ ಈ ಹಬ್ಬವನ್ನು ಕನ್ನಡ ನಾಡಿನಲ್ಲಿ ಬಹು ಹಿಂದಿನಿಂದಲೇ ಆಚರಿಸುತ್ತಾ ಬರುತ್ತಿದ್ದರು. ಕನ್ನಡದರಸರು ಇದಕ್ಕೆ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದರು. ಇಂದಾದರೂ ದಸರೆಯೆಂದಾಗ ಮೈಸೂರನ್ನು ನೆನೆಯದವರಿಲ್ಲ. ಹೀಗೆ ಪರಂಪರೆಯಿಂದ ಬಂದ ಈ ಹಬ್ಬವು ಕನ್ನಡ ನಾಡಿನ ನಾಡಿನಾಡಿಯಲ್ಲಿ ಸೇರಿಕೊಂಡು ಕನ್ನಡತನವನ್ನು ಕಳೆಯೇರಿಸಿದೆ.

ಈಗ ಕೆಲವು ವರ್ಷಗಳಿಂದ ಇದನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸುವ ಕಾರ್ಯಕ್ರಮಗಳನ್ನು ಎಲ್ಲಾ ನಗರಗ್ರಾಮಗಳಲ್ಲಿಯೂ ಆರಂಭಿಸಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಪುತ್ತೂರಿನಲ್ಲಿ ಇದನ್ನು ಒಂಬತ್ತು ದಿವಸಗಳೂ ವಿಶೇಷ ಕಾರ್ಯಕ್ರಮಗಳಿಂದ ಆಚರಿಸುತ್ತಾರೆ. ಮೈಸೂರು, ಧಾರವಾಡ, ಬೆಂಗಳೂರು ಮೊದಲಾದ ಕಡೆಯ ಸುಪ್ರಸಿದ್ಧ ವಿದ್ವಾಂಸರನ್ನು ಆಮಂತ್ರಿಸಿ ಇದನ್ನು ಆಚರಿಸುತ್ತಾರೆ. ಮಂಗಳೂರಿನ ಮಿತ್ರಮಂಡಳಿಯವರು ಯುಕ್ತವಾದ ಕಾರ್ಯಕ್ರಮಗಳಿಂದ ಇದನ್ನು ಆಚರಿಸುತ್ತಾರೆ. ಈ ವರ್ಷ ಜಿಲ್ಲೆಯ ಮೂಡಬಿದ್ರೆ ಮೊದಲಾದ ಕಡೆಗಳಲ್ಲಿ, ಹಳ್ಳಿಗಳಲ್ಲಿಯೂ ಇದನ್ನು ವಿಶೇಷ ಉತ್ಸಾಹದಿಂದ ನಡೆಸುತ್ತಾ ಬರುತ್ತಿರುವರೆಂಬುದು ಜಾಗೃತಿಗೊಳ್ಳುತ್ತಿರುವ ಜಗತ್ತಿನಲ್ಲಿ ನಮ್ಮ ಜಿಲ್ಲೆಯವರೂ ಸಾಕಷ್ಟು ಎಚ್ಚರಗೊಂಡಿದ್ದಾರೆಯೆಂಬುದನ್ನು ತೋರಿಸುತ್ತದೆ. ಹೊರಗಡೆಯ ಕನ್ನಡ ನಾಡಿನ ವಿದ್ವಾಂಸರನ್ನು, ಕಲಾವಂತರನ್ನು, ರಾಜನೀತಿಜ್ಞರನ್ನು ಆಮಂತ್ರಿಸಿ ಅವರ ಪರಿಚಯ ಸಂಪರ್ಕವನ್ನು ಮಾಡಿಕೊಳ್ಳುವುದು, ಹೊರಗಡೆಯಲ್ಲಿ ನಡೆವ ಈ ಉತ್ಸವಗಳಿಗೆ ನಾವು ಹೋಗಿ ಸಹಕರಿಸುವುದು, ಹೀಗೆ ಮಾಡುವುದರಿಂದ ಕನ್ನಡಿಗರಲ್ಲಿ ಪ್ರೇಮ ಸೌಹಾರ್ದಗಳು ಹೆಚ್ಚಾಗಲು ಆಸ್ಪದವಾಗುತ್ತದೆ.

ಇಂದು ರಾಷ್ಟ್ರೀಯ ಅಂತರಾಷ್ಟ್ರೀಯ ವಿಚಾರಗಳಲ್ಲಿ ಬಹಳ ಗೊಂದಲದ ಸಂಧಿಕಾಲ ಬಂದಿದೆ. ಇಂತಹ ಸಮಯದಲ್ಲಿಯಾದರೂ ನಾವು ನಮ್ಮ ಕರ್ತವ್ಯವನ್ನು ಮರೆತು ಸುಮ್ಮಗಿರಲಾಗದು. ಕನ್ನಡದ ಕೀರ್ತಿಯನ್ನು ಬೆಳಗಬೇಕು. ಬೃಹತ್ ಕರ್ನಾಟಕದ ವಿಶಾಲಕ್ಷೇತ್ರವು ಸಿದ್ಧವಾಗಬೇಕು. ದಸರಾ ಮಹೋತ್ಸವದಂತಹ ನಾಡಹಬ್ಬಗಳ ಕಾಲದಲ್ಲಿ, ಈ ಕಾರ್ಯಕ್ರಮಗಳಲ್ಲಿ ಆ ಕೆಲಸವು ಚೆನ್ನಾಗಿ ಸಾಧಿಸುತ್ತದೆ. ಅದು ನಿರಂತರ ನಡೆಯುತ್ತಿದ್ದು ನಮ್ಮ ನಾಡು, ನಮ್ಮ ನುಡಿ, ನಮ್ಮ ಜನತೆಗಳೂ ಜಗತ್ತಿನ ಹೊಸ ಯುಗದ ನಿರ್ಮಾಣ ಕಾಲದಲ್ಲಿ ಶಕ್ತಿ ಸಂಪನ್ನವಾಗಬೇಕು.

ಬ್ರೆನ್ನರ್ ಕಣಿವೆಯಲ್ಲಿ

ಅಂತರ್ ರಾಷ್ಟ್ರೀಯ ರಾಜಕೀಯದಲ್ಲಿ ದಿನದಿನವೂ ಅನಿರೀಕ್ಷಿತವಾದ ವಿದ್ಯಮಾನಗಳು ಆಗುತ್ತಿವೆ; ಹಲವಾರು ಕಾರಸ್ಥಾನಗಳು ನಡೆಯುತ್ತಿವೆ. ಪ್ರಪಂಚ ಯುದ್ಧವು ಇನ್ನಷ್ಟು ಭೀಕರವಾಗುವ ಸರ್ವಸನ್ನಾಹಗಳೇ ಇಂದು ಭರದಿಂದ ಮುನ್ನಡೆಯುತ್ತಿವೆ!

ಮೊನ್ನೆ ಮೊನ್ನೆ ಅಮೇರಿಕಾ ಬ್ರಿಟನುಗಳು ತಮ್ಮ ಸ್ನೇಹ ಸಂಬಂಧವನ್ನು ಹೊಸ ಒಪ್ಪಂದದ ಮೂಲಕ ಮತ್ತಷ್ಟು ಸಮೀಪ ಮಾಡಿಕೊಂಡರು. ಇದರ ಪ್ರತಿಕ್ರಿಯೆಯೋ ಎಂಬ ಹಾಗೆ ಸರ್ವಾಧಿಕಾರಿಗಳು ಜಪಾನಿನೊಡನೆ ಒಪ್ಪಂದವನ್ನು ಮಾಡಿಕೊಂಡರು. ಅತ್ತ ರಶ್ಯ ಸ್ಪೈನುಗಳನ್ನು ತಮ್ಮೆಡೆಗೆ ಒಲಿಸಿಕೊಳ್ಳುವ ಕಾರ್ಯಗಳೇ ಗುಪ್ತ ಗುಪ್ತವಾಗಿ ಭರದಿಂದ ನಡೆಯುತ್ತಲೇ ಇವೆಯೆಂದು ಯೂರೋಪಿನ ರಾಜಕಾರಣವನ್ನು ನಿರೀಕ್ಷಿಸುತ್ತಿರುವವರಿಗೆ ತಿಳಿದು ಬಾರದಿರದು.

ಈ ಸಂದರ್ಭದಲ್ಲಿ ಇಬ್ಬರು ಸರ್ವಾಧಿಕಾರಿಗಳೂ, ಹಿಟ್ಲರ್ ಮುಸಲನಿಗಳು— ಬ್ರೆನ್ನರ್ ಕಣಿವೆಯಲ್ಲಿ ಒಟ್ಟುಕೂಡಿ ಮಾತುಕತೆ ನಡೆಸಿದರೆಂಬ ವಿಚಾರವು ಎಲ್ಲರ ಗಮನವನ್ನೂ ಆ ಕಡೆ ಸೆಳೆದಿದೆ. ಆ ಎರಡು ರಾಷ್ಟ್ರಗಳ ಸರ್ವಾಧಿಕಾರಿಗಳೊಡನೆ, ಅಲ್ಲಿನ ವಿದೇಶಾಂಗ ಮಂತ್ರಿಗಳು ಬಂದಿದ್ದರೆಂಬುದರಿಂದ ಅವರ ರಾಜಕೀಯ ಗುಪ್ತಾಲೋಚನೆ ಸ್ಥಾನದ ವಿಚಾರವು ಬಯಲಾಗಿದೆ. ಇಬ್ಬರೂ ಸುಮಾರು ಎರಡು ಮೂರು ತಾಸುಗಳ ತನಕ ಮಾತುಕತೆ ಮಾಡಿದರೆಂದು ಸುದ್ದಿ ಬಂದಿದೆ.

ಅಂತೂ ಯುದ್ಧವನ್ನು ಭರದಿಂದ ಸಾಗಿಸಲು, ಇನ್ನಷ್ಟು ತೀವ್ರಮಾಡಲು, ಈ ಸರ್ವಾಧಿಕಾರಿಗಳು ತಿರಿಗಿ ಒಮ್ಮೆ ಕೂಡಿ ವಿಚಾರ ಮಾಡಿ ಸಂಯುಕ್ತ ಕಾರ್ಯಕ್ರಮವನ್ನು ಸಿದ್ಧ ಮಾಡುತ್ತಿರಬೇಕೆಂದು ಕಲ್ಪಿಸುವುದೇನೂ ಅಸಮಂಜಸವೆನಿಸಲಾರದು. ಅದೇ ಕಾರ್ಯದಲ್ಲಿ ಅವರು ಇಂದು ನಿಶ್ಚಿತ ಬಿದ್ದಿರುವಾಗ, ಈಗ ಹೀಗೆ ಭೇಟಿಯಾದುದು, ಆ ವಿಷಯದ ವಿಚಾರ ವಿನಿಮಯಕ್ಕಾಗಿಯಲ್ಲದೆ ಬೇರೆ ಏನಾದರೂ ಆಗಿರಲು ಸಾಧ್ಯವಿಲ್ಲ.

ಆ ಕುರಿತು ಅನೇಕ ಊಹಾಪೋಹನೆಗಳು ಉಂಟಾಗುವುದೂ ಸಹಜವಿದೆ. ಆಫ್ರಿಕದಲ್ಲಿ ಯುದ್ಧವನ್ನು ತೀವ್ರಗೊಳಿಸಿ ಬ್ರಿಟನಿನ ಬಲವನ್ನು ತಗ್ಗಿಸುವ ಯತ್ನ ವಿರಬಹುದೆಂಬುದು ಒಂದು ಪ್ರಬಲವಾದ ವದಂತಿ. ಸರ್ವಾಧಿಕಾರಿಗಳ ವಿಚಾರದಲ್ಲಿ ಇದು ಇರಲು ಸಾಧ್ಯವಿದೆ; ಲಂಡನಿಗೆ ಮುತ್ತಿಗೆ ಹಾಕಿ ಸ್ವಾಧೀನ ಪಡಿಸುವ ಹಿಟ್ಲರನ ಹಲವು ಕಾಲದ ಕನಸು ಬಯಲಾದ ಮೇಲೆ, ಇನ್ನು ಬೇರೆ ಬೇರೆ ವಿಧಗಳಿಂದ ಬ್ರಿಟನಿಗೆ ಪೀಡೆ ಕೊಡುವುದರಲ್ಲಾದರೂ ಆತನು ಕೆಲಸಗಳನ್ನು ಮಾಡುವನು.

ಈ ಸರ್ವಾಧಿಕಾರಿಗಳು ಇನ್ನು ಎಂತಹ ಪ್ರಚಂಡತೆಯನ್ನು ವಿಚಾರ ಮಾಡಿದ್ದಾರೋ ಎಂಬುದು ಊಹನಾತೀತ. ಆದರೆ ಲೋಕದ ವಿಪತ್ತು ಇವರ ಸಂಯುಕ್ತ ಕಾರ್ಯಕ್ರಮಗಳಿಂದ ಹೆಚ್ಚುತ್ತಿದೆಯೆನ್ನಬೇಕು.

ಉದ್ದೇಶ ಸ್ಪಷ್ಟವಾಗಿಲ್ಲ

ನೆಲ್ಲೂರಿನ ಸಾರ್ವಜನಿಕರಿಗೆ ಭಾಷಣ ಕೊಡುತ್ತಾ ಮದ್ರಾಸಿನ ಗವರ್ನರರು ಹೇಳಿದ ಕೆಲವು ವಿಷಯಗಳ ಕುರಿತು ರಾಜಾಜಿಯವರು ಒಂದು ದೀರ್ಘವಾದ ಪ್ರಕಟಣೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಕಾಂಗ್ರೆಸಿನವರ ಅಹಿಂಸಾ ಸಮರವು ನಿಜವಾಗಿ ಲೋಕದ ಹಿತಕ್ಕಿದೆಯೆಂದು ಸಾರಿ, ಬ್ರಿಟನು ತನ್ನ ಪ್ರಜಾಪ್ರಭುತ್ವಕ್ಕಾಗಿ ಯುದ್ಧ ಮಾಡುತ್ತಿದೆಯೆಂದು ಅರ್ಥವಾಗುವುದಿಲ್ಲವೆಂದೂ, ಜಗತ್ತಿನಲ್ಲಿ ಪ್ರಜಾಪ್ರಭುತ್ವ ತತ್ವದ ರಕ್ಷಣೆಯ ಸಲುವಾಗಿ ಬ್ರಿಟನು ಹೋರಾಡುತ್ತಿದೆಯೆಂಬ ವಿಚಾರ ಬ್ರಿಟಿಷರ ವರ್ತನೆಯಿಂದ ಸ್ಪಷ್ಟವಾಗುತ್ತಿಲ್ಲವೆಂಬುದಾಗಿಯೂ ಹೇಳಿರುವರು.

"ಬ್ರಿಟನು ಪ್ರಜಾಪ್ರಭುತ್ವ ತತ್ವದ ಪಾಲನೆಯ ಸಲುವಾಗಿ ಯುದ್ಧ ಮಾಡುತ್ತಿದೆಯೆಂಬ, ಅದರ ಪ್ರನಿಧಿಗಳ ಹೇಳಿಕೆಯ ವಿಷಯದಲ್ಲಿ ನಾವು ಆಕ್ಷೇಪ ಕೆತ್ತುತ್ತೇವೆ. ಬ್ರಿಟನಿನ ಅಥವಾ ಅದರ ನೆರೆಯ ರಾಷ್ಟ್ರಗಳ ಪ್ರಜಾಪ್ರಭುತ್ವದ ಸಲುವಾಗಿ ಬ್ರಿಟನು ಇಂದು ಹೋರಾಡುತ್ತಿದ್ದರೆ, ಭಾರತದ ದೃಷ್ಟಿಯಲ್ಲಿ, ಅದು ಪ್ರಜಾಪ್ರಭುತ್ವ ಪಾಲನೆಯ ಯುದ್ಧವೆಂದು ಖಚಿತವೆನಿಸಲಾರದು. ಏಕೆಂದರೆ ಭಾರತದಲ್ಲಿ ಪ್ರಜಾಪ್ರಭುತ್ವದ ಸಲುವಾಗಿ ಮಾಡುವ ಚಳವಳವನ್ನು ಬ್ರಿಟನು ಪ್ರೋತ್ಸಾಹಿಸಿ ಸಹಾಯ ಕೊಡುವುದಿಲ್ಲವೆಂಬುದರಿಂದ ಇದು ಖಚಿತವಾಗುವುದು. ಇಂದು ಪ್ರಜಾಪ್ರಭುತ್ವದ ತತ್ವಗಳುಳ್ಳ ಕೆಲವು ರಾಷ್ಟ್ರಗಳು, ತಾವಾಗಿ ಜಗತ್ತನ್ನು ಆಳಬೇಕೆಂದು ಬಯಸುತ್ತಿವೆ; ಅದಕ್ಕೆ ವಿರುದ್ಧವಾಗಿ ಸರ್ವಾಧಿಕಾರಿಗಳು ಬಂದು ನಿಂತಿದ್ದಾರೆ; ಅದು ಅವರ ಸ್ವಾರ್ಥಕ್ಕಾಗಿ, ಈ ಇಬ್ಬರ ಸ್ವಾರ್ಥಗಳ ಸಲುವಾಗಿ ಈಗ ಹೋರಾಟ ನಡೆಯುತ್ತಿದೆ. ಯಾವುದಾದರೂ ಒಂದು ಪ್ರಜಾಪ್ರಭುತ್ವ ತತ್ವವನ್ನು ಇಟ್ಟುಕೊಂಡ ರಾಷ್ಟ್ರವು ತನ್ನ ಸಲುವಾಗಿ ಮಾಡುವ ಹೋರಾಟಕ್ಕಿಂತ, ನಿಜವಾಗಿ ಪ್ರಜಾಪ್ರಭುತ್ವದ ಸಲುವಾಗಿರುವ ಹೋರಾಟವು ತೀರಾ ಬೇರೆಯಾದುದು. ಬ್ರಿಟನಿನ ಪ್ರಜಾಪ್ರಭುತ್ವವು ಭಾರತದ ಜನರ ಸಲುವಾಗಿರುವ ಪ್ರಜಾಪ್ರಭುತ್ವವಾಗಲಾರದು. ಆದಕಾರಣ, ಇದುವರೆಗಿನ ಬ್ರಿಟನು ಜರ್ಮನಿಗಳೊಳಗಿನ ಯುದ್ಧವು ಭಾರತಕ್ಕೆ ಸಂಬಂಧಿಸಿದ ಯುದ್ಧವಾಗಿಲ್ಲ."

ಹೀಗೆಂದು ರಾಜಾಜಿಯವರು ಹೇಳಿದರು. ಬ್ರಿಟನು ಯುದ್ಧೋದ್ದೇಶವನ್ನು ಭಾರತದ ವಿಷಯದಲ್ಲಿ ಪ್ರಯೋಗಕ್ಕಿಳಿಸಿ ಭಾರತದ ರಾಷ್ಟ್ರೀಯ ಧರ್ಮಕ್ಕೆ ಸಹಾಯ ಕೊಡುವುದರಿಂದ ಮಾತ್ರ ಅದರ ಯುದ್ಧೋದ್ದೇಶ ಮತ್ತು ಪ್ರಜಾಪ್ರಭುತ್ವದ ಸಲುವಾಗಿ ಮಾಡುವ ಹೋರಾಟಗಳ ಕಡೆಗೆ ಭಾರತೀಯರು ಪೂರ್ಣ ಮನಸ್ಸಿನಿಂದ ಸಹಕರಿಸುವುದು ಸಾಧ್ಯವಿದೆಯೆಂದು ಅವರ ಅಭಿಪ್ರಾಯ.

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

R. E. A. 984/1940
(in R. E. P. 457/1922
in O. S. 402/1922

ವೆಂಕಟ್ರಮಣ ತಂತ್ರಿ . . . . ಅರ್ಜಿದಾರ

ಮತ್ತು

ವಾದಿರಾಜ ಆಚಾರ್ಯ–ಬೇರಿಗೆ ಶ್ರೀನಿವಾಸ ಆಚಾರ್ಯರ ಮಗ–ತಿರುವಾಂಕೂರು ಸಂಸ್ಥಾನದ ಕೋಟೆ ಕಲ್ಲುಲಂ ತಾಲೂಕು ಪದ್ಮನಾಭಪುರದಲ್ಲಿ ರಾಮಸ್ವಾಮಿ ದೇವಸ್ಥಾನದ ಕೊಟ್ಟಾರ ಹೋಸ್ಟುಪುರ ಎಂಬಲ್ಲಿರುವವನ—

ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಎದ್ರಿಯ ಮೇಲೆ ಅರ್ಜಿದಾರನ ತಂದೆ ಈಗ ಮೃತಪಟ್ಟಿರುವ ಲಕ್ಷ್ಮೀನಾರಾಯಣ ತಂತ್ರಿಯು ಪಡೆದಿದ್ದ ಮೇಲ್ಕಾಣುವ ಡಿಕ್ರಿ–ಅಮಲ್ಜಾರಿ ಸಂದಾಯಕ್ಕಾಗಿ ಎದ್ರಿಯು ಕೋರ್ಟು ಡಿಪೊಜಿಟು ಮಾಡಿದ್ದ ಹ್ರಮೇಜನ್ನು ಸದ್ರಿ ಲಕ್ಷ್ಮೀನಾರಾಯಣ ತಂತ್ರಿರ ಒಬ್ಬನೇ ಮಗನಾದ ತನಗೆ ಕೊಡಬೇಕೆಂದು ಅರ್ಜಿದಾರನು ದಾಖಲು ಮಾಡಿರುವ ಈ ಅರ್ಜಿಯ ತನಿಖೆಯು ತಾ. 25–10–'40 ರಂದು ಇಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಆ ದಿನ ಬೆಳಿಗ್ಗೆ 10 ಘಂಟೆಯೊಳಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳುಹಿಸಿಕೊಳ್ಳಬೇಕು. ತಪ್ಪಿದ್ದಲ್ಲಿ ಈ ಅರ್ಜಿಯು ನಿಮ್ಮ ಗೈರುಹಾಜರಿಯಿಂದ ತೀರ್ಮಾನವಾಗುತ್ತದೆ. ತಿಳಿದಿರಲಿ.

(By Court Order)

ಮೊಕ್ಕಾಂ ಕಾರ್ಕಳ, 7–10–1940. | P. V. Upadhyaya B. A., LL. B. Vakil for Petitioner

ಗಾಂಧೀ ಆಶ್ರಮದ ಸುದ್ದಿ!



ಮಾಂಸಾಹಾರಿಯ ಪಶ್ಚಾತ್ತಾಪ!
ಪ್ರಾಯಶ್ಚಿತ್ತವೆಂದು ದನದ ಹಾಲೇ ಕುಡಿವುದಿಲ್ಲ!

ಮಹಾತ್ಮರು ವಾಸವಾಗಿರುವ ಸೇವಾಗ್ರಾಮದಲ್ಲಿ ಆಂಧ್ರ ದೇಶದ ಪ್ರಭಾಕರನೆಂಬ ವಿದ್ಯಾರ್ಥಿಯಿದ್ದಾನೆ. ಕಾಗದ, ಜೇನುಹುಟ್ಟು, ಸಬಕಾರ ಮೊದಲಾದ ಉದ್ಯೋಗಗಳನ್ನು ಕಲಿತುಕೊಂಡು ಆತನು ಸ್ವಗ್ರಾಮಕ್ಕೆ ತೆರಳಿದನು. ಆತನು ದನಗಳ ಹಾಲು ಕುಡಿಯುತ್ತಿದ್ದಿಲ್ಲ. ಇದರ ಕಾರಣವೇನೆಂದು ಮಹಾತ್ಮರು ಕೇಳಲು, ಆತ ನುಡಿದ್ದೇನೆಂದರೆ:- "ನಾನು ಮಾಂಸ ತಿನ್ನುವ ಜಾತಿಯವ, ಗೋಮಾಂಸ ತಿನ್ನುತ್ತಿದ್ದೆ, ಹಂದಿಯ ಮಾಂಸ ತಿನ್ನುತ್ತಿದ್ದೆ, ಇತರ ಮಾಂಸ ತಿನ್ನುತ್ತಿದ್ದೆ. ಕೆಲವು ಕಾಲ ಮಾಂಸ ತಿನ್ನುತ್ತಿದ್ದೆ. ಬಹು ದಿನಗಳ ತನಕ ಕೊಳೆಯುತ್ತಲಿದ್ದ ಗೋವುಗಳ ಹೆಣಗಳನ್ನು ಕಳ್ಳತನದಿಂದ ಅಗೆದು ತೆಗೆದು ನಾವು ಉಲ್ಲಾಸದಿಂದ ಭೋಜನವನ್ನು ಮಾಡುತ್ತಿದ್ದೆವು. ನಮಗೆ ಅದೊಂದು ತರದ ಆನಂದೋತ್ಸವವಾಗಿತ್ತು. ಶಾಲೆಯ ಮೇಲೆ ನನಗೆ ಬಹು ಮಮತೆ; ನನ್ನ ವಿಧವೆ ತಾಯಿ ನನ್ನ ಸಲುವಾಗಿ ಕೂಲಿ ತೆಗೆಸಿಕೊಡಲು ಕಷ್ಟಾರ್ಜಿತ ಹಣವನ್ನು ಖರ್ಚು ಮಾಡಿದ್ದಾಳೆ. ಶಾಲೆಗೆ ಹೋಗುವುದು ನನಗೊಂದು ಸಂಕಟವಾಗಿತ್ತು. ಎರಡಾವರ್ತಿ ನಾನು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹೋದೆ, ಆದರೆ ತೇರ್ಗಡೆ ಹೊಂದಲಿಲ್ಲ. ಆ ಮೇಲೆ ಆಂಧ್ರ ಜಾತಿಯ ಕಲಾಶಾಲೆಗೆ ಹೋದೆ. ಅಲ್ಲಿ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಓದಲಾರಂಭಿಸಿದೆ. ಮಹಾತ್ಮರೂ ಇತರರೂ ಗೋರಕ್ಷಣೆಯ ಬಗ್ಗೆ ಬರೆದ ಲೇಖನಗಳನ್ನು ಓದಿದೆ. ಅಸಹ್ಯಪದಾರ್ಥಗಳ ತ್ಯಾಗ ಮಾಡಿದೆ. ಆ ಕಲಾಶಾಲೆಯಲ್ಲಿ ಗ್ರಾಮಪುನರ್ಘಟನೆಯ ಅಭ್ಯಾಸಕ್ರಮವನ್ನು ಮುಗಿಸಿಕೊಂಡು ಮಗನವಾಡಿಗೆ ಹೋದೆ. ಅಲ್ಲಿ ರಾತ್ರೆ ನನಗೆ ನಿದ್ದೆ ಬೀಳಲಿಲ್ಲ. ದಿನಂಪ್ರತಿ ಗೋಮಾತೆಯ ಮೇಲೆ ಮಾಡಿದ ಅಪರಾಧಗಳನ್ನು ಪರಿಹರಿಸುವ ಬಗ್ಗೆ ಹೇಗೆಂದು ಆಲೋಚಿಸುತ್ತಿದ್ದೆ. ಪಾಪಕ್ಷಾಲನಕ್ಕಾಗಿ ಹಾಲನ್ನು ಬಿಡಬೇಕೆಂದು ನಿರ್ಧಾರ ಮಾಡಿದೆ."

ಹೀಗೆ ಪ್ರಭಾಕರನು ಹೇಳಿ ಮುಗಿಸಿದ್ದೇನಂದರೆ:- "ಗೋವು ತಾಯಿಯಂತಿದ್ದಾಳೆ. ತಾಯಿಯು ೧-೨ ವರ್ಷ ನಮಗೆ ಮೊಲೆಯುಣಿಸುತ್ತಾಳೆ. ಆದರೆ ಗೋಮಾತೆ ಇಡೀ ಜನ್ಮ ಹಾಲು ಕೊಡುತ್ತದೆ."

ಮಹಾತ್ಮರು ಉತ್ತರಕೊಟ್ಟದ್ದೇನೆಂದರೆ "ನಮಗೆ ಜನ್ಮ ಕೊಟ್ಟ ತಾಯಿಗಿಂತ ಗೋಮಾತೆ ವಿವಿಧ ತರದಿಂದ ಶ್ರೇಷ್ಠಳಾದವಳೆಂದು ನಾನು ಹೇಳಬಲ್ಲೆ. ಒಂದೆರಡು ವರ್ಷ ಹಾಲುಣಿಸಿದ ತಾಯಿ, ನಾವು ದೊಡ್ಡವರಾದ ಬಳಿಕ ನಮ್ಮಿಂದ ಸೇವೆಯನ್ನಪೇಕ್ಷಿಸುತ್ತಾಳೆ. ಹುಲ್ಲು-ಕಾಳು ಕಡ್ಡಿಗಳ ಹೊರತು ಇನ್ನೇನನ್ನೂ ಗೋಮಾತೆ ನಮ್ಮಿಂದ ಅಪೇಕ್ಷಿಸುವದಿಲ್ಲ. ತಾಯಿ ಆಗಿಂದಾಗ ಅಸ್ವಸ್ಥ ಬೀಳುತ್ತಾಳೆ; ನಮ್ಮಿಂದ ಉಪಚಾರ ಅಪೇಕ್ಷಿಸುತ್ತಾಳೆ. ಗೋಮಾತೆ ಅಸ್ವಸ್ಥ ಬೀಳುವದು ಅಪರೂಪ. ಸಾಯುವ ತನಕ ಸತತವಾಗಿ ಅದು ನಮ್ಮ ಸೇವೆ ಮಾಡುತ್ತದೆ. ಸತ್ತ ಮೇಲೆ ಸಹ ನಮ್ಮ ಸೇವೆ ಅದು ಮಾಡುತ್ತದೆ. ತಾಯಿ ಸತ್ತರೆ ದಹನಕ್ಕಾಗಲಿ ದಫನಕ್ಕಾಗಲಿ ನಾವು ಖರ್ಚು ಮಾಡಬೇಕು. ಗೋಮಾತೆ ಸತ್ತರೂ ಅವಳ ಪ್ರತಿಯೊಂದು ದೇಹಾಂಶದ ಮಾಂಸ, ಎಲುಬು, ಕರುಳು, ಕೋಡು, ಚರ್ಮ ಇವೆಲ್ಲ ನಮ್ಮ ಉಪಯೋಗಕ್ಕೆ ಬರುತ್ತವೆ. ಜನ್ಮ ಕೊಟ್ಟ ತಾಯಿಯ ಅಪಮಾನ ಮಾಡಬೇಕೆಂದು ನಾನು ಈ ಮಾತನ್ನು ಹೇಳುವದಿಲ್ಲ. ನಾನು ಗೋವನ್ನು ಪೂಜಿಸುವ ಪ್ರಧಾನ ಕಾರಣಗಳನ್ನು ವಿವರಿಸಿದ್ದೇನೆ. ಈ ಪ್ರಕಾರ ನಾನು ಗೋಪೂಜೆ ಮಾಡುತ್ತಿದ್ದಾಗ್ಯೂ, ನೀನು ಹಾಲನ್ನುಣ್ಣಬೇಕಾಗಿ ನಾನು ಹೇಳುತ್ತೇನೆ. ನಾನು ಹಾಲನ್ನು ಸೇವಿಸುವದಿಲ್ಲ. ಅದೊಂದು ವ್ರತವಾಗಿದೆ ನನಗೆ. ನೀನೇನು ಪ್ರತಿಜ್ಞೆ ಕೊಳ್ಳಲಿಲ್ಲ. ನಾನು ಇಲ್ಲಿ ದುಗ್ಧಾಲಯವನ್ನು ವಿಸ್ತಾರ ಮಾಡುತ್ತಿದ್ದೇನೆ. ನೀನು ಗೋಸೇವೆಗಾಗಿ ಇಡೀ ಜನ್ಮವನ್ನು ಕಳೆದು ಜನ್ಮಸಾರ್ಥಕ ಮಾಡಿಕೊಳ್ಳಬಹುದು."

ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ. ಮಹಾದೇವ ದೇಸಾಯಿಯವರು ಪ್ರಭಾಕರನ ಕಡೆಯಿಂದಲೇ ಈ ಸಂಗತಿ ಕೇಳಿಕೊಂಡು, ಆತನ ವಿಧವೆ ತಾಯಿಯ ಅವಸ್ಥೆಯೇನೆಂದು ಕೇಳಲು, ಪ್ರಭಾಕರನು ನುಡಿದದ್ದೇನಂದರೆ -'ನನ್ನ ತಾಯಿಗೆ ನನ್ನಲ್ಲುಂಟಾದ ಅವಸ್ಥಾಂತರ ಗೊತ್ತಿದೆ. ಅವಳು ಶೇಂದಿ ಕುಡಿಯುವುದನ್ನು ಬಿಟ್ಟಿದ್ದಾಳೆ, ಹೆಣದ ಮಾಂಸ ತಿನ್ನುವುದನ್ನೂ ಬಿಟ್ಟಿದ್ದಾಳೆ. ನಾನು ಮನೆ ಬಿಟ್ಟು ೩ ವರ್ಷಗಳಾದುವು. ಮನೆಗೆ ಒರಲು ನನಗೆ ತಾಯಿಯು ಬಹಳ ಆಗ್ರಹ ಮಾಡುತ್ತಾಳೆ. ಅವಳು ಒಂದು ಆಸ್ಪತ್ರೆಯಲ್ಲಿ ದಾದಿಯಾಗಿದ್ದಾಳೆ. ರೋಗಿಗಳ ಕಡೆಯಿಂದ ಅವಳು ಕೆಲ ಇನಾಮು ಪಡೆಯುತ್ತಿದ್ದಳು, ಅವನ್ನು ಕೊಳ್ಳದಂತೆ ನಾನವಳ ಮನವೊಲಿಸಿದ್ದೇನೆ. ಸರಕಾರದಿಂದ ಅವಳಿಗೆ ಉಡಿಗೆ ತೊಡಿಗೆ ಸಿಗುತ್ತಿತ್ತು, ಅವನ್ನು ಕೊಳ್ಳಬೇಡವೆಂದು ನಾನು ಹೇಳಿದ್ದೇನೆ. ಬೇಕಾದಷ್ಟು ಅರಿವೆ ಅಂಚಡಿಗಳನ್ನು ನನ್ನ ನೂಲಿನಿಂದ ನಾನು ತಯಾರಿಸಿ ಕೊಡುತ್ತೇನಾಗಿ ನಾನು ಹೇಳಿದ್ದೇನೆ. ಧನುಷ್ಯ-ಬೊಗರಿಯ ಮೇಲೆ ನೂಲುತ್ತ ಗ್ರಾಮ ಗ್ರಾಮಾಂತರಗಳನ್ನು ಸಂಚರಿಸಿ ಕೈಗಾರಿಕೆ, ಗೋರಕ್ಷಣ ಇವುಗಳ ಪ್ರಚಾರ ಮಾಡುತ್ತ, ಶಾಂತಿಸಂದೇಶ ಬೀರುತ್ತ, ಕಾಲ ಕಳೆಯಬೇಕೆಂದು ನಾನು ನಿರ್ಧರಿಸಿದ್ದೇನೆ." ಹೀಗೆ ಪ್ರಭಾಕರನು ಶ್ರೀ. ಮಹಾದೇವ ದೇಸಾಯಿಯವರ ಕಡೆ ಸಾತ್ವಿಕ ಉಲ್ಲಾಸದಿಂದ ನುಡಿದನಂತೆ.

(ಕಾ. ವೃ.)

'ನೀವು, ಇನ್ನೂ ಕೆಲಕಾಲ ಬಾಳಬೇಕು'
ಗುರುದೇವರಿಗೆ ಮಹಾತ್ಮರ ಪತ್ರ

ಮಹಾತ್ಮಾಜಿಯವರು ತಮ್ಮ ಕಾರ್ಯದರ್ಶಿಗಳಾದ ಮಹಾದೇವ್ ದೇಸಾಯಿಯವರ ಕೈಯಲ್ಲಿ ಒಂದು ಪತ್ರ ಕೊಟ್ಟು ಅಸ್ವಸ್ಥದಲ್ಲಿರುವ ಕವೀಂದ್ರ ಠಾಗೂರರ ಕಡೆಗೆ ಕಳುಹಿಸಿದರು. ಅಸ್ವಸ್ಥದ ನಿಮಿತ್ತ, ಕೆಲಕಾಲದಿಂದ ಯಾರನ್ನೂ ಠಾಗೂರರು ಮಲಗಿದ್ದ ಕೋಣೆಗೆ ಬಿಟ್ಟಿರಲಿಲ್ಲ. ಆದರೆ ಮಹಾದೇವ ದೇಸಾಯರನ್ನು ಬಿಡಲಾಯಿತು. ಅವರು ಕೂಡಲೇ ಗಾಂಧಿಜಿಯವರ ಪತ್ರವನ್ನು ಗುರುದೇವರಿಗೆ ಕೊಟ್ಟರು. ರವೀಂದ್ರರಿಗೆ ಬಹಳ ಆನಂದವಾಯಿತು.

ಮಹಾತ್ಮರು ಪತ್ರದಲ್ಲಿ ಹೀಗೆಂದು ಬರೆದಿದ್ದರು:

"ಪ್ರೀತಿಯ ಗುರುದೇವ,

ನೀವು ಇನ್ನೂ ಕೆಲಕಾಲ ಬಾಳಬೇಕು. ಮಾನವ ಪ್ರಪಂಚಕ್ಕೆ ನಿಮ್ಮ ಆಗತ್ಯವಿದೆ. ನೀವು ಸುಧಾರಿಸುತ್ತಿರುವುದನ್ನು ಕೇಳಿ ನನಗೆ ಅಮಿತ ಆನಂದವಾಯಿತು. ಪ್ರೇಮವಿರಲಿ

— ಗಾಂಧಿ.

ಭಾರತವು ಇಚ್ಛಾಪೂರ್ವಕ ಯುದ್ಧದಲ್ಲಿ ಸೇರಿದ್ದೆ?
ಗಾಂಧಿಜಿಯವರು ಟೀಕಿಸುತ್ತಾರೆ

'ಗಾಂಧಿಜಿಯವರು ಬ್ರಿಟಿಷರು ಭಾರತದ ವಿಷಯದಲ್ಲಿ ತೋರಿಸಿದ ಧೋರಣೆಯನ್ನು ಟೀಕಿಸಿ ಹೀಗೆಂದು ಬರೆಯುತ್ತಾರೆ.

"ಬ್ರಿಟಿಷ್ ರಾಜನೀತಿಜ್ಞರು ಯೋಗ್ಯವಾಗಿದ್ದ ಕಾರ್ಯವನ್ನು ನ್ಯಾಯವಾದ ಸಂದರ್ಭದಲ್ಲಿ ಮಾಡಲು ತಪ್ಪಿದ್ದಾರೆ. ಭಾರತವು ಇಚ್ಛಾಪೂರ್ವಕವಾಗಿ ಯುದ್ಧದಲ್ಲಿ ಸೇರಿದ್ದಾಗಿದ್ದರೆ (ಅವರು ಹೇಳುವಂತೆ) ಅಹಿಂಸಾ ರೂಪದಿಂದ ಯುದ್ಧ ವಿರುದ್ಧ ಪ್ರಚಾರ ಮಾಡುವುದನ್ನು ಅವರು ನಿರ್ಬಂಧಿಸುವ ಅವಶ್ಯವಿದ್ದಿಲ್ಲ. ಹಾಗೆ ವಾಕ್ ಸ್ವಾತಂತ್ರ್ಯವನ್ನು ಕೊಡಲು ಹಿಂಜರಿಯುವುದೇ ಅವರು ಹೇಳುವಂತೆ ಭಾರತವು ಸ್ವೇಚ್ಛೆಯಿಂದ ಯುದ್ಧಕ್ಕೆ ಸೇರಿದೆ ಎಂಬ ಮಾತಿನ ಸತ್ವವನ್ನು ನಿರ್ಮೂಲಗೊಳಿಸುತ್ತದೆ. ಕಾಂಗ್ರೆಸಿನ ಕೇಳಿಕೆಗಳನ್ನು ಮನ್ನಿಸಿದ್ದರೆ, ಭಾರತದಿಂದ ಬ್ರಿಟನಿಗೆ ಸಿಗಬಹುದಾಗಿದ್ದ ಸಹಕಾರವು ಅತ್ಯಂತ ಅನಮೋಲ್ಯಕರದ್ದಾಗಿರುತಿತ್ತು. ಅಹಿಂಸಾ ಸಾಧಕ ಪಕ್ಷವಾದ ಕಾಂಗ್ರೆಸು ಜಗತ್ತಿನ ಶಾಂತಿಯ ಸ್ಥಾಪನೆಯ ಕಾರ್ಯದಲ್ಲಿ ಬಹಳ ಪರಿಣಾಮಕಾರಿ ರೂಪದ ಬೆಂಬಲವನ್ನು ಕೊಡುತಿತ್ತು. 'ಟೈಮ್ಸ್' ನನ್ನ ಕುರಿತು ಹೇಳಿದ ಹೊಗಳಿಕೆಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ಬ್ರಿಟನು ಸಹಕಾರಕ್ಕೆ ಸಿದ್ಧವಿರಬೇಕಿತ್ತು. ವೈಸರಾಯರು ಬಹಳ ಸೌಜನ್ಯದಿಂದ ಮಾತುಕತೆ ಮಾಡಿದರು. ಆದರೆ ಅವರು ಯಾವುದಕ್ಕೂ ಒಪ್ಪುವ ಹಾಗಿರಲಿಲ್ಲ. ರಾಷ್ಟ್ರೀಯ ಭಾರತದಲ್ಲಿ ಅವರು ತಮ್ಮ ವಿಶ್ವಾಸವನ್ನು ತೋರ್ಪಡಿಸಲಿಲ್ಲ.

ಬ್ರಿಟಿಷರು ಯುದ್ಧ ಕ್ಷೇತ್ರದಲ್ಲಿ ಅಸಾಮಾನ್ಯ ಧೀರತೆಯನ್ನು ತೋರಿಸುತ್ತಿರುವರು. ಆದರೆ ಈ ಕಡೆ ಅವರು ನೈತಿಕ ಶಕ್ತಿಯನ್ನೇ ಕಡಿಮೆ ಮಾಡಿಕೊಂಡಿರುವುದನ್ನು ನೋಡಿ ನಾನು ವಿಷಾದಗೊಂಡಿದ್ದೇನೆ."

ನೋಟೀಸು

ಪುತ್ತೂರು ಡಿ॥ ಮು॥ ಕೋರ್ಟಿನಲ್ಲಿ

O. S. 259/1940.

ಕಮಿರ್ನ ಲೂಯಿಸ್ . . . . ವಾದಿ

ದುಜಾರಿ ಮಸ್ಕರೇಂಹಾಸ್ ಕೂಡಾ 4 ಜನರು

ಪ್ರತಿವಾದಿರು

2. ದೂಜ ಮಸ್ಕರೇಂಹಾಸ್ }
4. ಪೆದ್ರು ಮಸ್ಕರೇಂಹಾಸ್ } 1ನೇ ಪ್ರತಿವಾದಿ ದುಜಾರಿ ಮಸ್ಕರೇಂಹಾಸ್‌ನ ಮಕ್ಕಳು ಹಾಲಿ Room No. 15 Shiraz Manzil, Masland Road, Byculla Bombay No. 8—

ಇವರಿಗೆ ಪ್ರತಿವಾದಿಯಿಂದ [illegible] 21-10-'40 [illegible] 11 [illegible]

Puttur, S K. 24—9—1940

B Ramchandra Rao, Pleader for Plaintiff

ಸ್ವಾತಂತ್ರ್ಯದ ಮಾರ್ಗದಲ್ಲಿ ಮುಂದಡಿಯಿಡುತ್ತಿದ್ದಾಗ-

-ಚೈನಕ್ಕೆ ಒದಗಿದ ಜಪಾನಿನ ಉಪದ್ರವ!

ಅವರ ಕಣ್ಣ ಮುಂದಿರುವ ಭವ್ಯ ಚಿತ್ರ!

ಸ್ವಾತಂತ್ರ್ಯ ವೀರರ ದೃಢ ನಿಶ್ಚಯ!

ಡಾ॥ ಟಿ. ಎಫ್. ಟಿಸಾಂಗ್ ಇವರು ಚೈನ ಸರಕಾರದ ರಾಜಕೀಯ ವಿಭಾಗದ ಡೈರೆಕ್ಟರರು. ಅವರು ಇತ್ತೀಚೆಗೆ ಮಾಡಿದ ಒಂದು ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಚೈನದ ರಾಷ್ಟ್ರೀಯ ಧೋರಣೆಯನ್ನು ಬಹಳ ಆವೇಶಯುಕ್ತವಾದ ಶೈಲಿಯಿಂದ ಗಂಭೀರವಾಗಿ ವಿವರಿಸಿರುವರು. ಚೈನದ ಸ್ವಾತಂತ್ರ್ಯಾಭಿಲಾಷೆ, ಹೊಸ ರಾಜಕೀಯ ಪ್ರವಾಹ, ಅಂತರಾಷ್ಟ್ರೀಯ ವಿಚಾರಕ್ರಾಂತಿಯೊಡನೆ ಚೈನದ ರಾಷ್ಟ್ರೀಯ ವಿಚಾರಕ್ರಾಂತಿಯು ಬೆಳೆದು ಬಂದ ಸಂಗತಿಗಳನ್ನು ಅವರು ತಮ್ಮ ಭಾಷಣದಲ್ಲಿ ಬಹಳ ಮನೋರಂಜಕವಾಗಿ ವಿವರಿಸಿರುವರು. ಜಗತ್ತಿನಲ್ಲಿ ಸ್ವಾತಂತ್ರ್ಯವನ್ನು ಬಯಸುವ ಜನಾಂಗಗಳೊಡನೆ ಚೈನವೂ ಸಹಕರಿಸುತ್ತಿರುವುದೆಂದು ಇದನ್ನು ಓದುವವರಿಗೆ ಮನಕ್ಕೆ ಬರದಿರದು.

ಅವರ ಭಾಷಣದ ಸಾರಾಂಶ ಹೀಗಿದೆ –

ನಾವು ರಾಷ್ಟ್ರೀಯ ವಾದಿಗಳು

"ನಾವು ಎಲ್ಲದಕ್ಕಿಂತಲೂ ಹಿಂದಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಕಾಂಕ್ಷಿಗಳು ನಾವು ನಮ್ಮ ರಾಷ್ಟ್ರವನ್ನು ಬಹಳವಾಗಿ ಪ್ರೀತಿಸುತ್ತೇವೆ. ನಮ್ಮ ರಾಷ್ಟ್ರದ ನಾಗರಿಕತೆಯು ನಮಗೆ ಪಾವನತರವಾದುದು ಆ ನಾಗರಿಕತೆಯು ಚೈನಕ್ಕೆ ಮಾತ್ರವಲ್ಲ ಅಖಿಲ ಜಗತ್ತಿಗೆ ಏನಾದರೂ ಫಲಪ್ರಯೋಜನವನ್ನು ತೋರಿಸುವುದು. ನಮ್ಮ ರಾಷ್ಟ್ರವು ಸ್ವಾತಂತ್ರ್ಯದಿಂದ ತಲೆಯೆತ್ತಿ ನಿಲ್ಲಬೇಕೆಂದು ನಮ್ಮ ನಿರಂತರ ಹಾರೈಕೆ. ಇತರ ಸ್ವಾತಂತ್ರ್ಯ ರಾಷ್ಟ್ರಗಳ ಕೂಟದಲ್ಲಿ ನಮ್ಮ ರಾಷ್ಟ್ರಕ್ಕೂ ಸ್ಥಾನವಿರಬೇಕೆಂದು ನಮ್ಮ ಹಂಬಲ. ಈ ಆಶೆ ಜಗತ್ತಿನ ಎಲ್ಲಾ ಜನಾಂಗಗಳಿಗೂ ಇದ್ದೇ ಇರುವುದರಿಂದ, ಇದು ನ್ಯಾಯವೇ ಅನ್ಯಾಯವೇ ಎಂಬ ಪ್ರಶ್ನೆಯೇ ಹುಟ್ಟುವುದಿಲ್ಲ. ಚೈನದ ಜಾರ್ಜ್ ವಾಶಿಂಗ್‌ಟನರೆನಿಸಿದ ಡಾ॥ ಸನ್‌ಯಾತ್ ಸೇನರು, ಚೈನದ ಆ ಕ್ರಾಂತಿಕಾರೀ ಧುರೀಣರು ಯಾವುದನ್ನು ಬಯಸಿದ್ದರೋ ಅದೇ ನಮ್ಮೆಲ್ಲರ ಕೊನೆಯ ಗುರಿಯಾಗಿದೆ. ಡಾ॥ ಸನ್ನರ ಉಪದೇಶಗಳಿಗೆ ರಾಷ್ಟ್ರೀಯತೆ ಮತ್ತು ಅಂತರ್ ರಾಷ್ಟ್ರೀಯತೆಗಳು ಜತೆಜತೆಯಾಗಿ ಕೂಡಿಕೊಂಡಿರುವವು. ಅವರು ಚೈನವನ್ನು ಸ್ವತಂತ್ರ ಮಾಡಲು ಪ್ರಯತ್ನಿಸುತ್ತಿದ್ದುದರೊಡನೆ, ಸ್ವತಂತ್ರ ಚೈನವು ಇತರ ಸ್ವಾತಂತ್ರ್ಯ ರಾಷ್ಟ್ರಗಳೊಡನೆ ಸಹಕರಿಸಿರಬೇಕೆಂದೂ ಹೇಳಿದರು ಅವರು ಜಗತ್ತಿನ ರಾಜಕಾರಣ ಸಮಸ್ಯೆಗೆ ಬೇಕಾದ ಕಾರ್ಯರೂಪವಾದ ಸೂಚನೆಗಳನ್ನು ಮುಂದಿಡದಿದ್ದರೂ, ತಮ್ಮ ಜಗತ್ತಿನ ಜನರೊಡನೆ ಒಂದಾಗಿ ಸೇರಿರುವುದುದರ ಅವಶ್ಯಕತೆಯನ್ನು ಮುಂದಟ್ಟಿಗೊಳಿಸಿದ್ದರು. ಇಂದು ಚೈನವು ಆ ದೃಷ್ಟಿಯಿಂದಲೇ ಮುಂದುವರಿವ ಸಾಹಸಮಾಡುತ್ತಿದೆ

ಹೀಗೆ ವಿಶಾಲ ದೃಷ್ಟಿಯ ರಾಷ್ಟ್ರೀಯ ತತ್ವವು ಜಗತ್ತಿಗೇ ಹಿತಕರವಾದುದು. ಆದರೆ ಸಂಕೋಚದ ರಾಷ್ಟ್ರೀಯತೆಯೂ ಮಹಾನರ್ಥಕಾರಿಯು. ಇಂದಿನ ಆರ್ಥಿಕತೆಯು ಅಭಿವೃದ್ಧಿ ಹೊಂದಬೇಕಾದರೆ ಸ್ವತಂತ್ರ ವ್ಯಾಪಾರ ಸ್ಥಳವಿರಬೇಕು. ವ್ಯಾಪಾರದ ತಡೆಯು ಅನೇಕ ತೊಂದರೆಗಳನ್ನು ತಂದೊಡ್ಡುತ್ತದೆ, ಈ ವಿಚಾರವನ್ನು ಡಾ॥ ಸನ್ನರು ಮೊದಲಾಗಿ ಪ್ರಸಾರ ಪಡಿಸಿದರೆ, ಆಗ ಜ್ಞಾನಿಗಳಿಗೆ ಅದರ ಅರ್ಥವಾಗಲಿಲ್ಲ. ಚೈನವು ಇತರ ರಾಷ್ಟ್ರಗಳ ಸಹಾಯ ಆಗಬಹುದೆಂದು ಹಲವರ ಟೀಕಿಸಿದರ. ಆದರೆ ಮುಂದೆ ವಿಚಾರವಂತರೆಲ್ಲರೂ ಅದು ಉತ್ಕೃತವ ವಿಚಾರವೆಂದು ಈಗ ನಗಂಡಿರವರ

ನಾವು ಪ್ರಜಾಪ್ರಭುತ್ವ ವಾದಿಗಳು

'ಎರಡನೆಯದಾಗಿ' ನಾವು ಪ್ರಜಾಪ್ರಭುತ್ವ ವಾದಿಗಳ ಪ್ರಜಾಪ್ರಭುತ್ವ ಹಾದಿಯಲ್ಲಿ ಎಷ್ಟೇ ಎಡರುಗಳಿದ್ದರೂ ಕೊನೆಗೆ ಅದೇ ಯೋಗ್ಯವಾದ ಸಮಸ್ಯಾ ಪರಿಹಾರೋಪಾಯವೆಂದು ನಾವು ನಿಶ್ಚಯವಾಗಿ ನಂಬಿದ್ದೇವೆ. ಚೈನದಲ್ಲಿ ಬಹಳ ಕಾಲದಿಂದ ರಾಜನ ಆಡಳಿತೆಯು ಹೆಸರಿಗಿದ್ದರೂ, ನಿಜವಾದ ಅಧಿಕಾರ ಜನತೆಯದಾಗಿತ್ತು. ಗ್ರಾಮಪಂಚಾಯತುಗಳು ಸ್ಥಾಪಿತವಾಗಿ ಕಾರ್ಯಗಳನ್ನು ನಡೆಸುತ್ತಿದ್ದವು. ಡಾ॥ ಸನ್ನರ ಮೊದಲಾದ ಮಹಾ ಮುಂದಾಳುಗಳು ನಮಗೆ ಜನರೇ ರಾಷ್ಟ್ರದ ಒಡೆಯರೆಂದು ಚೆನ್ನಾಗಿ ತಿಳಿಸಿ ಹೇಳಿದ್ದಾರೆ. ಇದೇ ದಾರಿಯಲ್ಲಿ ಯುದ್ಧ ಪ್ರಾರಂಭವಾದೊಡನೆಯೇ ಚೈನದಲ್ಲಿ ಪ್ರಜಾಪ್ರಭುತ್ವ ಸರಕಾರವೇ ಸ್ಥಾಪಿತವಾಗಿ ಇಂದ್ಯು ಕಾರ್ಯ ನಡೆಸುತ್ತಿದೆ. ಪ್ರಾಂತದಲ್ಲಿ, ಜಿಲ್ಲೆಯಲ್ಲಿ ಹಳ್ಳಿಗ್ರಾಮಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಕೌನ್ಸಿಲುಗಳು ಸ್ಥಾಪಿತವಾಗಿ ಕಾರ್ಯ ಮಾಡುತ್ತಿವೆ. ಪ್ರಾಥಮಿಕ ವಿದ್ಯಾಭ್ಯಾಸ ಸಾರ್ವಜನಿಕ ಆರೋಗ್ಯ, ಸಹಕಾರ ಮಾರ್ಗಗಳು, ಅರಣ್ಯ ವಿಚಾರ, ಇವೆ ಮೊದಲಾದವು ಈ ಕೌನ್ಸಿಲುಗಳ ಸ್ವಾಧೀನದಲ್ಲಿವೆ

ಈ ಯುದ್ಧದ ಕಾವಿನಲ್ಲಿಯೂ ಚೈನವು ಪ್ರಜಾಪ್ರಭುತ್ವದ ದಾರಿಯಲ್ಲಿಯೇ ರಚಿಸಿದ [illegible] ಸಾಗುತ್ತಿದೆಯೆಂದ ಬಲ್ಲ ನಾವು ಎದೆ ತಟ್ಟಿ ಸಾರಬಲ್ಲೆವು!

ಜಪಾನಿನ ನಿರ್ದಯ ಆಕ್ರಮಣ

ಈ ತಹ [illegible] ದರ್ಭದಲ್ಲಿ ಯಾ ಪ್ರದೇ [illegible] ಗತಿಯಿಂದ [illegible] ವು ಚೈನದ ದಾರಿಯಲ್ಲಿ ಅತಂಕವನ್ನ ತಂದೊಡ್ಡಲಾರದೆಂದು ಧೈರ್ಯದರ ತಿಳಿಯಬಹುದಾಗಿದೆ ಆದರೆ ನ [illegible] ಗಿದ ಜಪಾನಿನ ಪ್ರಬಲ ತೊಂದರೆ [illegible] ನಮ್ಮ ಪ್ರಗತಿಯನ್ನು ಅ [illegible] ದಕ್ಕಳೆಯುತ್ತಿದೆ ನಾವು ಜಪಾನೊಡನೆ ಹಿಂದೆಯೂ ಇಂದೂ ಶಾಂತಿ [illegible] ನೆರೆಕೆರೆಯ ಬಾಂಧವ್ಯದಿಂದಿರಲು ಬಯಸುವೆವು ನಮ್ಮ ಮೇಲೆ ಯುದ್ಧವನ್ನ ಹೂಡಿದ ನಿಮಿತ್ತ ನಾವು ಕಾದಾಡಬೇಕಾಗಿದೆ ನಾವು ಯುದ್ಧಮಾಡುತ್ತಿರುವಾಗ ನಮ್ಮ ದೃಷ್ಟಿಪಥದ ಮುಂದೆ ಸ್ವತಂತ್ರ ಚೈನದ ಭವ್ಯ ಚಿತ್ರವೇ ಒಂದು ನಿಲ್ಲುತ್ತದೆ'

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER ORIGINAL

ಡಾ॥ ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು "ಗೊನೊಕಿಲರ್" ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ ಗೊನೊಕಿಲರ್ ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊರೊಹಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾಸದ ವಿಕಾರಗಳೆಲ್ಲ, ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವಿ. ಪಿ' ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕೆಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಾಯಿ 4

Sole Manufacturer: **Dr. D. N. JASANI,** (S.B.M) Vithalbhai Patel Road, BOMABY 4

Madras Agent: **Appah & Co, China Bazar Madras.**

HALFTONE & LINE BLOCK MAKING UNDERTAKEN

Sharada Press, MANGALOR

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೆ ಬಂದು ವಿಚಾರಿಸಿರಿ.

ನಾರಾಯಣರಾಯರು ಕಲ್ಲಿಕೋಟೆಯಲ್ಲಿ ...ನ ಇನ್ಸ್‌ಪೆಕ್ಟರರಾಗಿದ್ದರು. ಲಕ್ಷ್ಮಿ ಅವರ ...ರೇ ಮಗಳು. ಅವಳ ನಂತರ ಅವರಿಗೆ ...ಲ್ಕು ಹೆಣ್ಣು ಮಕ್ಕಳೂ ಇಬ್ಬರು ಗಂಡು ಮಕ್ಕಳೂ ಆಗಿದ್ದಾರೆ. ಆದರೆ ಲಕ್ಷ್ಮಿ ಮೊದಲು ...ಟ್ಟಿದವಳಾದ್ದರಿಂದ ತಾಯ್ತಂದೆಗಳ ವಾತ್ಸಲ್ಯ ...ನುಗಳ ದೊಡ್ಡ ಪಾಲಿನ ಆನಂದವನ್ನು ಅವ ...ಳು ಅನುಭವಿಸುತ್ತಿದ್ದಳು. ರಾಯರು ...ಚೀನ ಆರ್ಯ ಸಭ್ಯತೆಯ ಅಭಿಮಾನಿಗಳು ...ಲ ಶಿಕ್ಷಣವು ಮುಗಿದ ಅನಂತರ ಅವರು ...ಂದಿನ ವಿದ್ಯಾಭ್ಯಾಸಕ್ಕಾಗಿ ಲಕ್ಷ್ಮಿಯನ್ನು ...ರುಕುಲಕ್ಕೆ ಕಳುಹಿಸಿದ್ದರು. ೧೫ ವರ್ಷದವ ...ಗುವಾಗ ಲಕ್ಷ್ಮಿ ಸಮ್ಮಾನಪೂರ್ವಕ ಕೊನೆಯ ...ರೀಕ್ಷೆಯನ್ನು ಕೊಟ್ಟು ಗುರುಕುಲದ ಪದವೀ ...ರೆಯಾದಳು. ಅವಳು ಹುಟ್ಟಿನಿಂದಲೂ ...ಂದರಿ. ಈಗ ಯೌವನದ ಆಗಮನದಿಂದ ...ವಳ ಸೌಂದರ್ಯವು ಅಂಗಾಂಗಗಳಿಂದ ಹೊರ ...ಸೂಸಲಾರಂಭಿಸಿತು. ಲಜ್ಜೆ, ವಿನಯ, ಸರಳತೆ, ...ಮೃದು ಭಾಷಣಗಳಲ್ಲಿ ಅವಳು ಅದ್ವಿತೀಯ ...ಳಾಗಿದ್ದಳು. ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ...ಬಹಳ ಆಸಕ್ತಿ. ಈ ಕನ್ಯಾರತ್ನವನ್ನು ಪಡೆದು ...ರಾಯರು ಬಹು ಪ್ರಸನ್ನರಾಗಿದ್ದರು ಆದರೆ ...ಅವಳಿಗೆ ಯೋಗ್ಯ ವರನನ್ನು ಹುಡುಕುವದು ...ಬಹು ಪ್ರಯಾಸದ ಕಾರ್ಯವಾಯಿತು.

ಸವರ್ಣ ಹಿಂದುಗಳೆಲ್ಲರೂ ವರದಕ್ಷಿಣೆಯ ...ತದಿಂದ ಪೀಡಿತರಾಗಿಯೇ ಇದ್ದಾರೆ. ಈ ...ಪಿಶಾಚಿ ರೂಢಿಯ ಕಾರಣದಿಂದ ಎಷ್ಟೋ ...ಮನೆತನಗಳು ನಷ್ಟಭ್ರಷ್ಟವಾಗಿರುವವು. ಎಷ್ಟೋ ...ಸೌಮ್ಯ, ಸದಾಚಾರಿಣಿ, ಸುಶಿಕ್ಷಿತ, ಯೋಗ್ಯ ಬಾಲಿಕೆಯರು ಉದ್ದಂಡ, ಮದ್ಯಪಾಯಿ, ದುರಾ...ಚಾರಿಗಳಾದ ನರಪಿಶಾಚಿಗಳ ಕೊರಳಿಗೆ ಜಿಗಿ ...ಯಾಗಿ ಬಿಗಿಯಲ್ಪಟ್ಟು, ವಿಷಮ ಮತ್ತು ಪ್ರತಿಕೂಲ ದಾಂಪತ್ಯದ ದೆಸೆಯಿಂದ ನಾರಕೀಯ ಯಾತನೆಗಳನ್ನು ಅನುಭವಿಸುತ್ತಿದ್ದಾರೆ. ಆದರೂ ಸಮಾಜವು ಕಣ್ಣು ತೆರೆಯುವದಿಲ್ಲ. ಈ ಬಾಲಿಕೆಯರ ಬಿಸಿಯುಸಿರಿನಲ್ಲಿ ಸಮಾಜವು ಸುಟ್ಟು ಭಸ್ಮವಾಗುವದನ್ನು ನೋಡಿಯೂ ನೋಡದವರಂತೆ ಸಮಾಜದ ಮುಖಂಡರು ಉದಾಸೀನರಾಗಿದ್ದಾರೆ. ಸುಧಾರಕರೆನ್ನಿಸುವವರು ಕೂಡ ಇತರ ಸಮಯಗಳಲ್ಲಿ ವರದಕ್ಷಿಣೆಯ ಬಗ್ಗೆ ಕುರಿತು ಪರ್ವತ ಶಿಖರಗಳ ಮೇಲೆ ನಿಂತು ಉಚ್ಚ ಕಂಠದಿಂದ ಸ್ಫೂರ್ತಿದಾಯಕ ಭಾಷಣಗಳನ್ನು ಕೊಡುವವರಾದರೂ, ತಮ್ಮ ಗಂಡು ಮಕ್ಕಳ ವಿವಾಹ ಕಾಲವು ಬಂದಾಗ ಮಾತ್ರ ವರದಕ್ಷಿಣೆಯ ಮೋಹನಾಸ್ತ್ರಕ್ಕೆ ಮರುಳಾಗಿ ತಮ್ಮನ್ನೂ ತಮ್ಮ ಸಮಾಜವನ್ನೂ ಪತನದ ಆಳವಾದ ಹೊಂಡಕ್ಕೆ ದೂಡುತ್ತಾರೆ.

ಲಕ್ಷ್ಮಿಗೆ ಯೋಗ್ಯ ವರನನ್ನು ಹುಡುಕುವದು ಪ್ರಯಾಸದ ಕಾರ್ಯವಾಯಿತು. ವರಾನ್ವೇಷಣದ ಓಡಾಟದಲ್ಲಿ ನಾರಾಯಣರಾಯರು ಮೂರು ನಾಲ್ಕು ವರ್ಷಗಳನ್ನು ಕಳೆದರು. ಆದರೆ ಹೋದಲ್ಲೆಲ್ಲ ಎರಡು ಸಾವಿರ, ನಾಲ್ಕು ಸಾವಿರಗಳ ಕಡಿಮೆಗೆ ಮಾತೇ ಬಾರದಿರುವದನ್ನು ನೋಡಿ ಅವರು ಬಹಳ ನಿರಾಶರಾಗಿದ್ದರು.

೩

ರಘುನಾಥ ಆನಂದರಾಯರ ಒಬ್ಬನೇ ಮಗ. ಪರಮಾತ್ಮನು ರಾಯರಿಗೆ ಯಾವದರಲ್ಲಿಯೂ ಕಡಿಮೆ ಮಾಡಿರಲಿಲ್ಲ. ಅವರು ಲಕ್ಷಾಂತರ ರೂಪಾಯಿಗಳ ಧನಿಕರಾಗಿದ್ದರು. ಪೌರಾಣಿಕ ವಿಚಾರದವರಾಗಿದ್ದರು. ಸುಧಾರಣೆ ಅಂದರೆ ದೂರ ಸರಿಯುತ್ತಿದ್ದರು. ಅದರಲ್ಲೂ ಹಣ ಕಾಸು ಕಳಕೊಂಡು ಸುಧಾರಣೆ ಮಾಡುವದೆನ್ನುವಾಗ ಸಾವಿರ ಮಾರು ಓಡಿಹೋಗುತ್ತಿದ್ದರು. ಹಣದ ಲೋಭವು ಅವರನ್ನು ಬಿಗಿಯಾಗಿ ಹಿಡಿದಿತ್ತು.

ಈ ವಾರದ ಕಥೆ:

ಆದರ್ಶ ವಿವಾಹ!

ರಘುನಾಥನು ಪ್ರಾಯಕ್ಕೆ ಬಂದಿದ್ದ. ಸದ್ಗುಣಿಯೂ ಸುಶಿಕ್ಷಿತನೂ ಆಗಿದ್ದ. ವರಾಪೇಕ್ಷಿಗಳಾಗಿ ಬಹುಮಂದಿ ಕನ್ಯಾಪಿತರು ಆನಂದರಾಯರಲ್ಲಿಗೆ ಬಂದಿದ್ದರು. ಆದರೆ ಅವರು ಐದು ಸಾವಿರ ಹತ್ತು ಸಾವಿರಗಳ ಮಂತ್ರ ಜಪಮಾಡುವದನ್ನು ನೋಡಿ ಆ ಕನ್ಯಾಪಿತರು ಬಂದ ಹಾಗೆ ಹಿಂತೆರಳಿದ್ದರು. ತಂದೆಯ ಈ ದುರ್ವ್ಯವಹಾರವನ್ನು ನೋಡಿ ರಘುನಾಥನು ಹಲ್ಲು ಕಡಿಯುತ್ತಿದ್ದನು. ಧನಪಿಶಾಚಿಯ ಮೇಲೆ ತಂದೆಗಿರುವ ಲೋಭವನ್ನು ನೋಡಿ ಅವನು ಹುಬ್ಬು ಗಂಟುಹಾಕುತ್ತಿದ್ದನು. ಆದ್ದರಿಂದಲೇ ತನಗೆ ಯೋಗ್ಯ ಕನ್ಯಾರತ್ನವು ದೊರೆಯುವದಾದರೆ ವರದಕ್ಷಿಣೆ ತೆಗೆದುಕೊಳ್ಳದೇನೇ ವಿವಾಹವಾಗುವದಾಗಿ ಅವನು ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಂಡಿದ್ದ. ಈಗ ಆ ನಿರ್ಧಾರವನ್ನು ಕಾರ್ಯರೂಪಕ್ಕೆ ತರುವ ಅನುಕೂಲ ಸಂದರ್ಭವು ಅವನಿಗೆ ಒದಗಿ ಬಂದಿತು.

ರಘುನಾಥ ಬೇಗ ಬೇಗ ಉಟ್ಟು ರೈಲ್ವೆಸ್ಟೇಶನಿನ ಕಡೆಗೆ ಧಾವಿಸಿದ. ರೈಲು ಬಿಡಲಿಕ್ಕೆ ಇನ್ನೂ ೧೫ ೨೦ ಮಿನಿಟುಗಳ ವಿಳಂಬವಿದ್ದಿತು. ಅಲ್ಲಿ ನಾರಾಯಣರಾಯರು ಟಿಕೇಟು ತೆಗೆದುಕೊಂಡು ಊರಿಗೆ ಹೊರಟಿದ್ದರು. ಅವರು ಆನಂದರಾಯರಲ್ಲಿ ವರಾಪೇಕ್ಷೆಯಿಂದ ಬಂದಿದ್ದರು. ಆದರೆ ಆನಂದರಾಯರ ತುಚ್ಛ ವ್ಯವಹಾರ ಮತ್ತು ಹಣದ ಮೇಲಿನ ಆಸಕ್ತಿಯನ್ನು ನೋಡಿ, ಬಹಳ ನೊಂದು ಮನೆಗೆ ಹಿಂತಿರುಗಿದ್ದರು. ತಂದೆ ಮತ್ತು ಅವರೊಳಗೆ ಆದ ಸಂಭಾಷಣೆಯನ್ನು ರಘುನಾಥ ಮರೆಯಲ್ಲಿ ನಿಂತು ಕೇಳಿದ್ದ.

ತಂದೆಯ ವ್ಯವಹಾರದಿಂದ ಅವನಿಗೆ ಬಹಳ ವ್ಯಸನವಾಗಿತ್ತು. ಲಕ್ಷ್ಮಿ ಗುರುಕುಲದ ಪದವೀಧರೆ, ಸುಗುಣೆ, ಸುಶೀಲೆ, ಸುಂದರಿ, ಗೃಹಕಾರ್ಯಗಳಲ್ಲಿ ದಕ್ಷಳು, ಸಂಗೀತ ಕಸೂತಿ ಕಲಾನಿಪುಣೆ ಎಂದಿತ್ಯಾದಿ ನಾರಾಯಣರಾಯರು ಮಗಳ ವರ್ಣನೆ ಮಾಡಿರುವದನ್ನು ಕೇಳಿ ಯಥಾರ್ಥವಾಗಿಯೂ ಅವಳು ಹಾಗೆ ಇರುವಳಾದರೆ, ಅವಳು ತನಗೆ ಅನುರೂಪಳೆಂದು ಅವನು ಭಾವಿಸಿದ. ಆದ್ದರಿಂದ ಸ್ಟೇಶನಿಗೆ ಬಂದು ರಾಯರಿಗೆ ಭರವಸೆ ಕೊಟ್ಟು ತಾನು ಒಂದು ದಿನ ಲಕ್ಷ್ಮಿಯನ್ನು ನೋಡಿ ಪರಿಚಯ ಮಾಡಿಕೊಳ್ಳಲಿಕ್ಕೆ ಬರುವೆನೆಂದನು. ರಾಯರು ರಘುನಾಥನ ಶಿಷ್ಟ ಮಾತುಗಳ ಅಭಯವನ್ನು ಪಡೆದು ಮನೆಗೆ ಹಿಂತೆರಳಿದರು.

೪

ಲಕ್ಷ್ಮಿಗೂ ರಘುನಾಥನಿಗೂ ವಿವಾಹವಾಯಿತು. ವಿವಾಹವನ್ನು ಸುಧಾರಕರೂ ಪತ್ರ ಪತ್ರಿಕೆಗಳೂ ಮುಕ್ತಕಂಠದಿಂದ ಪ್ರಶಂಸಿಸಿದುವು. ರಘುನಾಥನೂರ ಪರವೂರ ಇಷ್ಟಮಿತ್ರರ ಮತ್ತು ಸಮಾಜ ಹಿತೇಚ್ಛುಗಳ ನೂರಾರು ಅಭಿನಂದನೆಗಳಿಗೆ ಪಾತ್ರನಾದನು. ವಿವಾಹವಾಗುವ ತನಕ ಅದರ ಯಾವ ಸಮಾಚಾರವೂ ಆನಂದರಾಯರಿಗೆ ಗೊತ್ತಾಗಿರಲಿಲ್ಲ. ರಘೋತ್ತಮನೆಂದು ತನ್ನ ತಾಯಿಯನ್ನು ಕರೆತಂದ, ಅವಳ ಸಮಕ್ಷಮದಲ್ಲಿ, ಅವಳ ಹಾರ್ದಿಕ ಆಶೀರ್ವಾದಗಳನ್ನು ಪಡೆದು ರಘುನಾಥನು ಲಕ್ಷ್ಮಿಯನ್ನು ಮದುವೆಯಾದನು.

ರಘುನಾಥನ ವಿವಾಹ ವಿಷಯವು, ಅವನ ಮನೆಗೆ ಮರಳಬೇಕಾದರೆ ಆನಂದರಾಯರಿಗೆ ಪತ್ರಿಕೆಗಳ ಮೂಲಕ ತಿಳಿಯಿತು. ಏನೂ ವರದಕ್ಷಿಣೆ ತೆಗೆದುಕೊಳ್ಳದೆ ರಘುನಾಥ ಲಕ್ಷ್ಮಿಯನ್ನು ಮದುವೆಯಾಗಿದ್ದಾನೆಂದು ತಿಳಿದು ಅವರು ಕಿಡಿಕಿಡಿ ಆದರು. ಇಂಥ ಒಂದು ಮದುವೆ ಮಾಡಿಕೊಂಡು ಸಮಾಜದ ಮುಂದೆ ಒಂದು ಉಚ್ಚ ಆದರ್ಶವನ್ನು ಇಟ್ಟು ರಘುನಾಥನನ್ನು ಅಭಿನಂದಿಸುವದಕ್ಕಾಗಿ ಸ್ಥಳೀಯ ಮೈದಾನಿನಲ್ಲಿ ಸಾವಿರಾರು ಜನರ ಬೃಹತ್ಸಭೆಯು ಕೂಡಿತ್ತು. ಅದರ ಒಂದು ಚಿತ್ರ ಮದ್ರಾಸಿನ ಇಂಗ್ಲಿಷ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಅದರಲ್ಲಿ ರಘುನಾಥ ಲಕ್ಷ್ಮಿಯರು ಒತ್ತೊತ್ತಾಗಿ ಕುರ್ಚಿಗಳಲ್ಲಿ ಕೂತಿದ್ದರು. ಕೊರಳಿಗೆ ನೂರಾರು ಹೂಮಾಲೆಗಳು ಬಿದ್ದಿದ್ದುವು. ಮೋರೆಯಲ್ಲಿ ನಸುನಗು ಮಿನುಗುತ್ತಿದ್ದಿತು. ಊರ ಮುನ್ಸಿಪಾಲಿಟಿಯ ಅಧ್ಯಕ್ಷನು ಸನ್ಮಾನ ಪತ್ರವನ್ನು ಓದುತ್ತಿದ್ದನು. ರಾಯರು ಚಿತ್ರದಲ್ಲಿ ಅದನ್ನೆಲ್ಲಾ ನೋಡಿ ಹಲ್ಲುಗಳನ್ನು ಕಟಕಟನೆ ಕಡಿದರು. ಮಗನ ಮೂರ್ಖತನದಿಂದ ಹತ್ತು ಸಾವಿರ ರೂಪಾಯಿಗಳ ವರದಕ್ಷಿಣೆಗೆ ಗೀಟು ಬಂದಿತೆಂದು ಅವರು ಬಹಳ ಪಶ್ಚಾತ್ತಾಪಪಟ್ಟರು.

ದಿಬ್ಬಣವು ಆನಂದರಾಯರ ಮನೆ ಸೇರಿತು. ರಘುನಾಥ ಅವನ ತಾಯಿ, ಲಕ್ಷ್ಮಿ ಮತ್ತು ಅವಳ ತಂದೆ ಎಲ್ಲರೂ ಆನಂದರಾಯರ ಕಾಲುಗಳ ಮೇಲೆ ಬಿದ್ದು ಅವರ ಕ್ಷಮಾಯಾಚನೆ ಮಾಡಿದರು. ಆದರೆ ಆನಂದರಾಯರ ಹೃದಯವು ರಘುನಾಥನನ್ನು ಕ್ಷಮಿಸಲಿಲ್ಲ. ಅವನ ಅಂತರಂಗದಲ್ಲಿ ತಂದೆಯನ್ನು ಕರೆದ - ಅಪ್ಪಾ! ನಿಮಗೆ ರೂಪಾಯಿಗಳ ಚಿಂತೆ ಹಿಡಿದಿದ್ದಿತು. ವಿವಾಹದ ವ್ಯಾಪಾರದಲ್ಲಿ ಲಾಭದಾಸೆಯಿಂದ ನೀವು ಎಂಥ ಹೆಣ್ಣನ್ನು ತಂದು ನನ್ನ ಕೊರಳಿಗೆ ಕಟ್ಟುವಿರೋ ಎಂದು ನನಗೂ ಚಿಂತೆ ಹಿಡಿದಿದ್ದಿತು. ದೇವರ ದಯೆಯಿಂದ ನಮಗೇನೂ ಕಡಿಮೆಯಾಗಿಲ್ಲ. ವರದಕ್ಷಿಣೆಯ ಕೆಲವು ಸಾವಿರ ರೂಪಾಯಿ ಹೋದರೇನಾಯಿತು. ನಾನು ಈ ವಿವಾಹದಿಂದ ಸುಖವಾಗಿದ್ದೇನೆಂಬ ಸಂತೋಷವು ನಿಮಗೆ ಪ್ರಾಪ್ತವಾಗಿರುವದಿಲ್ಲವೆ? ಆ ಸಂತೋಷಕ್ಕಿಂತ ಈ ರೂಪಾಯಿ ನಿಮಗೆ ಹೆಚ್ಚೆ? ಎಂದು ಸಮಜಾಯಿಸಿದನು. ಆದರೂ ಆನಂದರಾಯರು ಕೆಲವು ದಿನಗಳ ತನಕ ಸಿಡುಕಿನಿಂದಿದ್ದರು. ಪರಂತು ಬಾಣವು ಕೈಬಿಟ್ಟು ಹೋದ ಮೇಲೆ ಪಶ್ಚಾತ್ತಾಪದಿಂದ ಏನು ಫಲ? ಎಂದು ದಿನಗಳು ಹೋದಂತೆ ಅವರು ಶಾಂತರಾಗುತ್ತ ಬಂದರು. ಲಕ್ಷ್ಮಿ-ರಘುನಾಥರ ಸದ್ವ್ಯವಹಾರವೂ ಅವರನ್ನು ಮೋಹಿಸುತ್ತ ಬಂದಿತು. ಲಕ್ಷ್ಮಿ ಕೆಲವೇ ದಿನಗಳಲ್ಲಿ ಅತ್ತೆ ಮಾವಂದಿರ ಪ್ರೇಮಭಾಜನೆಯಾದಳು. ರಘುನಾಥ ಈಗಲೂ ಜಾತಿ ಸಮಾಜಗಳ ಗೌರವಮೂರ್ತಿಯಾಗಿದ್ದಾನೆ.

ಆರ್ಯಮಿತ್ರ, ಅನುವಾದಕರು ಶ್ರೀ, ಕೆ. ಶ್ರೀನಿವಾಸ ಶೆಟ್ಟಿ, ಕಾರ್ಕಳ.

THE
BANK OF MANGALORE LTD.,
MANGALORE
ESTD 1931
Branches -
Mudabidri & Padubidri.
Fixed Deposits will be received at following rates of interest.

For	3 months		3½%
"	6 "		4%
"	12 "		5%
"	24 "	& upwards	5½%

Interest Payable Quarterly.
Savings Bank deposit 3½% on daily balances.
... kinds of banking business transacted

ಹಿಟ್ಲರನನ್ನು ಏಕಾಂಗಿಯಾಗಿ ಬ್ರಿಟನು ಇದಿರಿಸುತ್ತದೆ!

ಯೂರೋಪಿನ ಮಹಾಯುದ್ಧವು ಆರಂಭವಾಗಿ ಒಂದು ವರ್ಷವು ಕಳೆಯಿತು. ಜೆಕೊಸ್ಲೊವೆಕಿಯವನ್ನು ನುಂಗಿ, ಪೋಲಾಂಡಿನ ಮೇಲೆ ದಂಡೆತ್ತಿ ಹೋದ ಹಿಟ್ಲರನಿಗೆ ಒಂದು ಒಳ್ಳೆಯ ಪಾಠವನ್ನು ಕಲಿಸಲಿಕ್ಕೆ ಯಾರು ಎಷ್ಟು ಹಿಂದೆ ಮುಂದೆ ನೋಡಿದರೂ ಬ್ರಿಟನು ಧೈರ್ಯದಿಂದ ಸಿದ್ಧವಾಗಿ ನಿಂತಿತು. ಕ್ರೂರ ದೇಶದ ಆಕ್ರಮಣಗಳಿಂದ ನಿಮ್ಮನ್ನು ಕಾಪಾಡುವೆವೆಂದು ಫ್ರಾನ್ಸು ಬ್ರಿಟನೂ ಕೂಡಿಯೇ ಪೋಲಾಂಡಿಗೆ ಮಾತು ಕೊಟ್ಟಿದ್ದುವು. ಆದರೆ ಸಹಾಯವನ್ನು ಕಳುಹಿಸುವ ಸಮಯವು ಬಂದಾಗ ಫ್ರಾನ್ಸು ಹಿಂಜರಿಯಿತು. ಬ್ರಿಟನು ಯುದ್ಧವನ್ನು ಸಾರಿದ ಏದು ತಾಸುಗಳು ಕಳೆದ ಬಳಿಕವೇ ಫ್ರಾನ್ಸು ಹಿಟ್ಲರನ ವಿರುದ್ಧ ಯುದ್ಧವನ್ನು ಸಾರಿತು. ಈಗಲಾದರೂ ಬ್ರಿಟನು ಏಕಾಂಗಿನಿಯಾಗಿ ಹಿಟ್ಲರನ ವಿರುದ್ಧ ಯುದ್ಧಕಾರ್ಯವನ್ನು ಮುಂದೊತ್ತುತ್ತಾ ಇದೆ. ತನ್ನ ಮತ್ತು ಇತರರ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟನು ಒಂದೇ ಆಗಿ ಹೋರಾಡುತ್ತಿರುವದು ಆದಕ್ಕೆ ಹೆಮ್ಮೆಯ ವಿಷಯವಾಗಿದೆ.

ಅಂದು ಇಂದಿನ ಸ್ಥಿತಿ

ಬ್ರಿಟನಿನ ಅಂದಿನ ಸ್ಥಿತಿ ಹೇಗಿತ್ತೋ, ಇಂದಿನ ಸ್ಥಿತಿ ಹಾಗೆಯೇ ಇದೆ. ಅಂದಿನ ಅವರ ಸಂತೋಷ ಆನಂದಗಳಿಗೆ ಸ್ವಲ್ಪವಾದರೂ ಲೋಪವಾಗಿಲ್ಲ. ಬ್ರಿಟಿಷರ ಧೈರ್ಯ ಸ್ಥೈರ್ಯಗಳು ಅಚ್ಚಳಿಯದೆ ಇವೆ. ಯಾರು ಎಷ್ಟು ಕರ್ತವ್ಯಚ್ಯುತರಾದರೂ ತಾವು ತಮ್ಮ ಕೆಲಸಗಳನ್ನು ಮಾಡುತ್ತಿರುವೆವೆಂಬ ತೃಪ್ತಿಯೂ ಸಮಾಧಾನವೂ ಅವರಿಗಿದೆ. ಹಿಟ್ಲರನ ರಾಕ್ಷಸೀ ಕಾಂಕ್ಷೆಗೆ ಜೆಕೊಸ್ಲೊವೇಕಿಯ, ಪೋಲಾಂಡು, ಡೆನ್ಮಾರ್ಕು, ಹೊಲ್ಲೆಂಡು, ನೋರ್ವೆ, ಬೆಲ್ಜಿಯಮು, ಫ್ರಾನ್ಸು ಒಂದೊಂದಾಗಿ ಬಲಿಯಾದುವು. ಹಿಟ್ಲರನು ಹೋದಹೋದಲ್ಲಿ ಅವನ ವಿಜಯದುಂದುಭಿಯು ಮೊಳಗಿದೆ. ಜಯಲಕ್ಷ್ಮಿಯು ಅವನಿಗೇ ಒಲಿದಿದ್ದಾಳೆ. ಇದನ್ನೆಲ್ಲ ನೋಡಿ ಬ್ರಿಟಿಷರಿಗೆ ಯುದ್ಧದಲ್ಲಿ ಜಯವಾಗುವದೆಂದು ಯಾರು ಯಾವ ಧೈರ್ಯದಿಂದ ಹೇಳಬಹುದು? ಆದರೆ ಇಲ್ಲಿ ವಿಚಾರಿಸತಕ್ಕ ಅನೇಕ ಸಂಗತಿಗಳಿವೆ. ಹಿಟ್ಲರನ ವಿಜಯವು ತಾತ್ಕಾಲಿಕವಾಗಿದೆ, ಅದು ಚಿರಸ್ಥಾಯಿಯಾಗಿ ಇರುವದಿಲ್ಲ. ಅವನ ಅತ್ಯಾಚಾರಗಳಿಗೆ ಬಲಿಯಾದ ರಾಷ್ಟ್ರಗಳಲ್ಲಿ ಘೋರ ಅಸಂತೋಷವು ಹರಡಿದೆ. ಬ್ರಿಟನಿನ ಸಮುದ್ರ ಬಲವನ್ನು ಮುರಿಯುವದು ಹಿಟ್ಲರನಿಗೆ ಸಾಧ್ಯವಾಗಿಲ್ಲ. ವಾಯುವಿಮಾನಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಗುಣದಲ್ಲಿ ಅವು ಜರ್ಮನ್ ವಿಮಾನಗಳಿಗಿಂತ ಉತ್ಕೃಷ್ಟವಾಗಿರುವವೆಂದು ಈಗ ಪ್ರಮಾಣಿತವಾಗಿದೆ. ಬ್ರಿಟಿಷ ವೈಮಾನಿಕರು ಜರ್ಮನ್ನರಿಗಿಂತ ಎಲ್ಲಾ ವಿಷಯಗಳಲ್ಲಿ ನಿಗ್ಗಳಿಸಿದ್ದಾರೆ. ಜರ್ಮನಿಯ ಜಲ, ನೆಲ, ವಾಯುಸೇನೆಗಳು ಒಂದು ವರ್ಷದ ಯುದ್ಧದೊಳಗಾಗಿ ಜರ್ಝರಿತವಾಗಿರುವವು. ಜರ್ಮನಿಗೆ ದಿನಹೋಗುತ್ತ ಜಗತ್ತಿನ ಸಹಾಯ ಸಹಾನುಭೂತಿಗಳು ಕಡಿಮೆಯಾಗುತ್ತ ಬರುತ್ತಿವೆ. ಬ್ರಿಟನಿಗೆ ಸಾಮ್ರಾಜ್ಯದ ಎಲ್ಲೆಡೆಗಳಿಂದ ಮತ್ತು ಅಮೆರಿಕದಿಂದ ಸಹಾಯ ಸಹಕಾರಗಳು ಒದಗಿ ಬಂದಿವೆ. ಯುದ್ಧಕಾರ್ಯವನ್ನು ಜಯಶೀಲವಾಗಿ ಮುಂದೊತ್ತಲಿಕ್ಕೆ ಬ್ರಿಟಿಷರು ತಮ್ಮ ಎಲ್ಲಾ ಮತಭೇದಗಳನ್ನು ಮರೆತು ಒಂದಾಗಿದ್ದಾರೆ. ಆದ್ದರಿಂದಲೇ ಬ್ರಿಟನನ್ನು ನುಗ್ಗುವ ತನಕ ಹಿಟ್ಲರನು ಹೇಳಿದ ಹಾಗೆ ಅವನ ಕೆಲಸಗಳು ಆಗಿ ಮುಗಿಯುತ್ತ ಬಂದವಾದರೂ, ಬ್ರಿಟನಿನ ಮಟ್ಟಿಗೆ ಅವನ ಮಾತುಗಳು ಸುಳ್ಳಾಗಿ ಪರಿಣಮಿಸಿರುವವು. ಹಿಟ್ಲರನು ಹೇಳಿದಂತೆ ಆಗೋಸ್ತು ೧೫ಕ್ಕೆ ಅವನು ಲಂಡನನ್ನು ಸೇರಬೇಕಾಗಿತ್ತು. ಆದರೆ ಅದು ಈ ವರೆಗೂ ಸಾಧ್ಯವಾಗಿಲ್ಲ.

ಮುಂದಿನ ಪರಿಣಾಮ

ಹೀಗೆ ಯುದ್ಧದ ಮೊದಲನೆ ಅವಸ್ಥೆ ಮುಗಿದಿದೆ. ಇಷ್ಟರ ತನಕ ಯುದ್ಧದಲ್ಲಿ ಹಿಟ್ಲರನು ವಿಜಯದುಂದುಭಿಯನ್ನು ಬಾರಿಸುತ್ತ ಮುಂದರಿಸಿದ್ದಾನಾದರೂ, ಬ್ರಿಟನು ಸೋತಿಲ್ಲ. ಅದು ಒಂದು ವರ್ಷದ ಮೊದಲು ಹೇಗೆಯೋ, ಈಗಲೂ ಹಾಗೆ ಅಜೇಯವಾಗಿ ನಿಂತಿದೆ. ಭವಿಷ್ಯದ ಗರ್ಭದಲ್ಲಿ ಏನು ಅಡಗಿದೆ ಎಂದು ಹೇಳುವದು ಯಾರಿಗೂ ಸಾಧ್ಯವಲ್ಲ. ಆದರೆ ಬ್ರಿಟನಿನ ಭವಿಷ್ಯವು ಉಜ್ವಲವಾಗಿರುವದನ್ನು ತೋರುತ್ತದೆ. ಬ್ರಿಟಿಷ ವಿಮಾನಗಳು, ಯುದ್ಧನಾವೆಗಳು, ಇತರ ಸಾಧನಗಳು ಒಂದಕ್ಕೆ ಮೂರರಂತೆ ನಾಜಿ ವಿಮಾನ, ನಾವೆ ಮೊದಲಾದವನ್ನು ಧ್ವಂಸಮಾಡುತ್ತಾ ಇವೆ. ಬ್ರಿಟಿಷರ ಧೈರ್ಯ ಸ್ಥೈರ್ಯಗಳನ್ನು ಕುಂದಿಸುವದು ಯಾರಿಗೂ ಸಾಧ್ಯವಲ್ಲ. ತಾವು ತಮ್ಮ ಮತ್ತು ಪ್ರಪಂಚದ ಶಾಂತಿ ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತಿರುವೆವೆಂದು ಪ್ರತಿಯೊಬ್ಬ ಬ್ರಿಟಿಷನೂ ತಿಳಿದಿದ್ದಾನೆ. ಬ್ರಿಟಿಷರನ್ನು ಮುರಿಯುವೆನು, ಇಲ್ಲವೆ ತಾನು ಸಾಯುವೆನು ಎಂದು ಹಿಟ್ಲರನು ಹೇಳಿದ್ದಾನೆ. ಬೇರೆ ರಾಷ್ಟ್ರಗಳ ಕುರಿತು ಹಿಟ್ಲರನಾಡಿದ ಮಾತುಗಳು ಸತ್ಯವಾದರೂ, ಬ್ರಿಟನಿನ ಮಟ್ಟಿಗೆ ಅವು ಸುಳ್ಳಾಗಿ ಪರಿಣಮಿಸಿರುವದನ್ನು ನೋಡುವಾಗ, ಅವರನ್ನು ಮುರಿಯುವದು ಹಿಟ್ಲರನಿಗೆ ಸಾಧ್ಯವಿಲ್ಲವೆಂಬ ಹಾಗೆ ತೋರುತ್ತದೆ. ಆದ್ದರಿಂದ ಈಗ ಅವನಿಗೆ ಪಲಾಯನಮಾಡುವ ಅಥವಾ ಸಾಯುವ ಒಂದೇ ಉಪಾಯವು ಉಳಿದಿದೆ. ಅದರ ದಿನಗಳು ಬಹಳ ದೂರ ಇರಲಾರವು.

ಸುಂದರ ಯುವತಿಯರು ನರಳಲಾಗದು

ಅರುಣ

ಗರ್ಭಾಶಯಕ್ಕೆ ಅತ್ಯುತ್ತಮ ಟಾನಿಕ್

ಮುಟ್ಟುದೋಷಗಳನ್ನೆಲ್ಲಾ ಪರಿಹರಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ಮದ್ದು ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE

Canara Banking Corporation Ltd.,

(INCORPORATED IN BRITISH INDIA)

Estd. 1906

Head Office UDIPI S. Kanara

Our attractive Rates on Deposits.

FIXED DEPOSITS

3 to 6 months	2½% p. a.
to 9	3% „
One year	3½%
Two years	4% „
SHORT TERM Deposits	2½% p. a.
Current Account	1% p. a.
Savings Bank	2½% *

Particulars of other kinds of deposits on application.

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current accou at 2½% per annum. Savings Bank Deposits at 4½% per annu

FIXED DEPOSITS

For 2 Years 5% 1 Year 4½% For 6 months 4% 3 months 3

Auction ... ranging from Rs. 100/ to Rs. 500 run regularly on systematic lines. Unique Banking faciliti to Businessmen and interested Public

Apply for particulars—

K. R. GURU, *Managing Directo*

ಜಿಲ್ಲಾ ಸಮಾಚಾರ

★

ಮಂಗಳೂರು

ರೈಲ್ವೆ ಲೈನಿನಲ್ಲಿ ಶವ:—ಮಂಜೇಶ್ವರ ಮಂಗ್ಲಪಾಡಿ ರೈಲ್ವೆ ಲೈನಿನ ಮಧ್ಯದಲ್ಲಿ ಒಂದು ಹೆಂಗುಸಿನ ಶವವು ತಾ ೬ರಂದು ಬಿದ್ದಿತ್ತು. ಶವವು ವಿಶೇಷ ಜಖಂ ಗೊಂಡಿತ್ತು.

ಕೆನರಾ ಹೈಸ್ಕೂಲಿನಲ್ಲಿ ಗಾಂಧಿ ಜಯಂತಿ:—ಸ್ಥಳೀಯ ಕೆನರಾ ಹೈಸ್ಕೂಲಿನ ಶ್ರೀ ಕೃಷ್ಣ ಮಂದಿರದಲ್ಲಿ ಗಾಂಧಿಜಯಂತಿಯು ೩ನೇ ಪ್ರಾತಃಕಾಲ ಶ್ರೀ ಬಿ ವಿ. ಬಾಳಿಗ ಯಂ ಎಲ್. ಎ ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಬಾಳಿಗರು ರಾಷ್ಟ್ರ ಧ್ವಜವನ್ನು ಏರಿಸಿ, ಮಹಾತ್ಮರ ಉದಾತ್ತಧ್ಯೇಯಗಳ ವಿಷಯವಾಗಿ ಮಾತಾಡಿದರು.

ವಿದ್ಯಾರ್ಥಿ ಭವನ—ಗಾಂಧಿ ಜಯಂತಿ—ಸ್ಥಳೀಯ ವಿದ್ಯಾರ್ಥಿ ಭವನದಲ್ಲಿ ಗಾಂಧಿಯವರ ೭೨ನೇ ವರ್ಧಂತ್ಯುತ್ಸವವು ಶ್ರೀ ಹರಿದಾಸರಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ ೨ರಲ್ಲಿ ಸಂಭ್ರಮದಿಂದ ಜರಗಿತು. ವಿದ್ಯಾರ್ಥಿಗಳ ಭಾಷಣಗಳಾದ ಮೇಲೆ ಅಧ್ಯಕ್ಷರು ಗಾಂಧಿಯವರ ಸಂಕ್ಷಿಪ್ತ ಜೀವನ ಚರಿತ್ರೆಯನ್ನೂ ಅವರ ತತ್ವಗಳನ್ನೂ ವಿವರಿಸಿ ಭಾಷಣವಿತ್ತರು. ಕಾರ್ಯದರ್ಶಿಯವರಾದ ಶ್ರೀ ನಾರಾಯಣ ಸಟ್ಟರು ಧನ್ಯವಾದಗಳನ್ನರ್ಪಿಸಲು ಸಭೆಯು ಮುಕ್ತಾಯವಾಯಿತು.

ಮೈದಾನಿನಲ್ಲಿ ಸಭೆ:— ಮಂಗಳೂರು ಟೌನ್ ಕಾಂ ಸಮಿತಿಯ ಆಶ್ರಯದಲ್ಲಿ ಈ ದಿನ (ತಾ ೬ ೧೦ ೪೦ ಸಾಯಂಕಾಲ ಗಾಂಧಿ ಜಿಯವರ ಜಯಂತಿಯ ಸಂಬಂಧ ಸಾರ್ವಜನಿಕ ಸಭೆಯು ಮೈದಾನಿನಲ್ಲಿ ಸೇರಿತು. ಶ್ರೀ ಬಿ ವೈಕುಂಠ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು.

ಹರಿಜನ ಲೇಬರ್ ಲೀಗ್: ಪರೀಕ್ಷೆಯಲ್ಲಿ ಫೈಲಾದ ಹರಿಜನ ಮಕ್ಕಳಿಗೆ ಹರಿಜನ ಬೋರ್ಡಿಂಗಿನಲ್ಲಿ ಪ್ರವೇಶ ದೊರೆಯುವುದಿಲ್ಲ. ಹಾಗೆ ಫೈಲಾದ ವಿದ್ಯಾರ್ಥಿಗಳಿಗೂ, ಇನ್ನು ಪರವೂರಿನಿಂದ ಕೆಲಸದ ನಿಮಿತ್ತ ಮಂಗಳೂರಿಗೆ ಬರುವವರಿಗೂ ಅನುಕೂಲವಾಗುವಂತೆ ಹರಿಜನ ಲೇಬರ್ ಲೀಗಿನ ಆಶ್ರಯದಲ್ಲಿ ಒಂದು ವಿದ್ಯಾರ್ಥಿ ಭವನವನ್ನು ೧೯೪೧ನೆ ಇಸವಿಯಿಂದ ಏರ್ಪಡಿಸುವ ಆಲೋಚನೆ ನಡೆದಿದೆಯೆಂದು ಲೀಗಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪಾಣೆಮಂಗಳೂರು: ಹರಿಜನರಿಗೆ ಅನ್ನದಾನ—ಪಾಣೆಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಇಲ್ಲಿಯ ಯುವಕ ಸಮಾಜದವರು ಹರಿಜನರಿಗೆ ಇದೇ ತಾ ೭-೧೦-೪೦ನೇ ಸೋಮವಾರ ಒಂದು ಭೋಜನದ ಏರ್ಪಾಡು ಮಾಡಿರುವರು.

ವೇಣೂರು

ಕೃಷಿಕಮಂಡಳದ ಮಹಾಸಭೆ:—ಇದರ ಮಹಾಸಭೆಯು ಈ ತಿಂಗಳ ತಾ. ೨೦ರಂದು ವೇಣೂರು ಗ್ರಾಮದ ಕಾಯಾಲಿಯನಲ್ಲಿ ಜರಗುವುದು. ಅಧ್ಯಕ್ಷತೆ ವಹಿಸಲು ಧರ್ಮಸ್ಥಳದ ಶ್ರೀ. ಮಂಜಯ್ಯ ಹೆಗ್ಗಡೆಯವರನ್ನು ಕೇಳಿಕೊಳ್ಳಲಾಗಿದೆ. ಕೃಷಿ ಪ್ರದರ್ಶನ, ಕೃಷಿಕ ವಾಚನಾಲಯದ ಉದ್ಘಾಟನೆ, ಕೃಷಿ ವಿಷಯದ ಭಾಷಣಗಳು ಜರಗಲಿವೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ

ಸಹಕಾರಿಗಳ ಸಭೆ:—ಕಾರ್ಕಳ ಪರಸ್ಪರ ಸಹಕಾರ ಸಂಘದ ಒಂದು ಸಭೆಯು ತಾ. ೩೦-೯ರಂದ ದಿನ ಶ್ರೀ ಡಾಕ್ಟರ್ ಯನ್. ಯಂ. ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಕೂಡಿ, ಸಂಘದ ಕೊಮನ್ ಗುಡ್ ಫಂಡಿನಿಂದ ದೇವಸ್ಥಾನಕ್ಕೆ ೧೦, ಹರಿಜನ ಸೇವೆಗೆ ೧೦, ಕ್ರಿಕೆಟ್ ಕಪ್ಪಿಗೆ ೧೫ ರೂಪಾಯಿಗಳು ಮಂಜೂರಾಗಿವೆ.

ಮನವಿ:—ಈ ತಾಲೂಕಿನ ಬೋರ್ಡ್ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಯೂನಿಯನಿನ ಒಂದು ಸಭೆಯು ಶ್ರೀ ಎ ಪಾಂಡುರಂಗಶೆಣೈಯರ ಅಧ್ಯಕ್ಷತೆಯಲ್ಲಿ ಜರಗಿ ಉಪಾಧ್ಯಾಯರ ಬಾಕಿನಿಂತ ಸಂಬಳದ ಬಡತಿಯನ್ನು ಅವರಿಗೆ ಕೊಡಿಸುವ ಕುರಿತು, ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಮೇಲೆ ಮಾತ್ರ ಹಾಕಿರುವ ಸಂಬಳದ ಕಡಿತದ ಅನ್ಯಾಯವನ್ನು ದೂರಪಡಿಸುವ ಕುರಿತು ಮುಂದಕ್ಕೆ ಅವರ ಮೇಲೆ ಕಡಿತ ಹಾಕಬಾರದೆಂಬ ಕುರಿತು ಠರಾವುಗಳಿಂದ ಆ ಪ್ರಕಾರ ಸಂಘಕ್ಕೆ ವಿದ್ಯಾ ಇಲಾಖಾ ಡೈರೆಕ್ಟರರ ಮೂಲಕ ಸರಕಾರಕ್ಕೆ ಮನವಿ ಮಾಡಿದ.

ಸ್ಕೌಟ್ ಆಂದೋಲನ—ಕಾರ್ಕಳ ತಾಲೂಕು ಹಿಂದು ಸ್ಕೌಟ್ ಎಸ್ಸೋಸಿಯೇಶನಿನ ಒಂದು ಸಭೆಯು ತಾ ೧-೧೦ ರಂದ ದಿನ ಶ್ರೀ ಕೆ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ಸಂಘದ ನಿಬಂಧನೆಗಳನ್ನು ಸ್ವೀಕರಿಸಿದುದಲ್ಲದೆ ಶ್ರೀ ಕೆ ಕೃಷ್ಣಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಕೆ ಓ. ನರಸಿಂಹ ವೆಂಕಟೇಶ ಶೆಣೈ ಜನಾಬ್ ಯಚ್ ಯಸ್ ಹುಸ್ಸೇನ ಮತ್ತು ಶ್ರೀ ಯಚ್ ಭವಾನಿ ಬಾಯಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಶ್ರೀನಿವಾಸ ಹೆಗ್ಡೆ ನಕ್ರೆ ಕೆ. ಪಿ ಡಿ ಶ್ರೀನಿವಾಸಶೆಣೈಯವರು ಕ್ರಮವಾಗಿ ಕಾರ್ಯದರ್ಶಿ ಮತ್ತು ಖಜಾನಜಿಯರಾಗಿಯೂ ಇರುವ ಒಂದು ಕಾರ್ಯಕಾರಿ ಮಂಡಳಿಯ ಚುನಾವಣೆಯೂ ಆಗಿದೆ.

ಸಪ್ತಾಹ ಆಚರಣೆ — ಹರಿಜನವಾರ ಗಾಂಧೀಜಯಂತಿ ವಾರ ಮತ್ತು ಹಿಂದೀ ಪ್ರಚಾರ ಸಪ್ತಾಹಗಳು ಇಲ್ಲಿ ಯೋಗ್ಯ ಕಾರ್ಯಕ್ರಮದಿಂದ ಕೂಡಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿವೆ. ಮೊದಲಿನ ಎರಡು ಸಪ್ತಾಹ ಸಮಾರಂಭಗಳಿಗೆ ಶ್ರೀ ವಕೀಲ ಲಕ್ಷ್ಮಣ ಕುಡ್ವರೂ ಹಿಂ ಪ್ರ ಸಪ್ತಾಹಕ್ಕೆ ಶ್ರೀ. ಗೀ. ಪಿ. ನರಸಿಂಹ ವೆಂಕಟೇಶ ಶೆಣೈ ಬಿ ಎ. ಎಲ್ ಟಿ. ಯವರೂ ಅಧ್ಯಕ್ಷರಾಗಿ ಇದ್ದರು. ಈ ಸಂಬಂಧ ನಡೆದ ಸಭೆಗಳಲ್ಲಿ ಶ್ರೀಗಳಾದ ಕೆ ಮಹಾಬಲ ಹೆಗ್ಡೆ ಕಟೀಲ ಗಣಪತಿ ಶರ್ಮ, ಧರ್ಮರಾಜ ಅಧಿಕಾರಿ, ಕಬೆಪಾದಿ ಶ್ರೀನಿವಾಸ ಶೆಣೈ ಕೇಶವರಾಮಚಂದ್ರ ಶೆಣೈ, ವಿ ವಿ ಶೆಣೈ ಆರ್ ಮಂಜುನಾಥ ಶೆಣೈ ಮತ್ತು ಯಂ ಸರ್ವೋತ್ತಮ ಕಾಮತರು ಬೋಧ ಪ್ರದವಾದ ಭಾಷಣಗಳನ್ನು ಕೊಟ್ಟರು. ಅಧ್ಯಕ್ಷರ ಸಂದರ್ಭೋಚಿತ ಭಾಷಣಗಳಾದ ಬಳಿಕ ಶ್ರೀ ವಿ ವಿ ಶೆಣೈಯವರು ತಮ್ಮ ಖರ್ಚಿನಿಂದ ಸಕ್ಕರೆ ಮಿಠಾಯಿ ಹಂಚಿದರು. ಧನ್ಯವಾದ ಸಮರ್ಪಣೆಗಳೊಡನೆ ಸಮಾರಂಭಗಳು ಕೊನೆಗಂಡವು.

ಬೈಂದೂರು:—ತಾರೀಕು ೨-೧೦-೪೦ನೇ ದಿನ ಸಾಯಂಕಾಲ ೪ ಘಂಟೆ ಸಮಯ ಬೈಂದೂರಲ್ಲಿ ಶ್ರೀ ಗಾಂಧಿಜಯಂತಿ ಉತ್ಸವವು ಶ್ರೀ. ಬಿ. ಸುಬ್ಬಣ್ಣಶೆಟ್ರು ನೇತೃತ್ವದಲ್ಲಿ ಜರಗಿತು. ಸಾರ್ವಜನಿಕರು ಬಾಲಾಬಾಲಕರು ಕೂಡಿ ಬೈಂದೂರಿನ ಕೇರಿ ಕೇರಿಗಳಲ್ಲಿ ಜಯಜಯಕಾರ ಮಾಡುತ್ತಾ ಮೆರವಣಿಗೆ ಮಾಡಿ ೧೨ ಘಂಟೆ ಸಮಯ ಬೈಂದೂರ ಮೈದಾನಿನಲ್ಲಿ ಶ್ರೀ. ಬಿ. ಶ್ರೀನಿವಾಸ ಹೊಳ್ಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಶ್ರೀಗಳಾದ ಬಿ. ಸುಬ್ಬಣ್ಣ ಶೆಟ್ಟಿ ಬಿ. ಜನಾರ್ಧನ ರಾವ್ ಹರ್ದೀಕರ್, ಕೆ. ದತ್ತಾರಾಮರಾವ್, ಬಿ ಗೋವಿಂದ ಮತ್ತು ಶ್ರೀಯೋಗೇಶ್ವರ ಹೊಳ್ಳರು, ಗಾಂಧಿಜಿಯವರ ತತ್ವಗಳನ್ನು ಸಭಿಕರಿಗೆ ತಿಳಿಸಿ ಭಾಷಣವಿತ್ತರು.

ಬೈಂದೂರು ಸರ್ಕಲಿನ ತಗ್ಗರ್ಸೆ ಗ್ರಾಮಕ್ಕೆ ಕೆಲವು ದಿವಸಗಳ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಸರಕಾರಿ ಕಾಡಿನಿಂದ ಒಂದು ಆನೆಯು ಬಂದು ಕೆಲವು ಬತ್ತದ ಮತ್ತು ಕಬ್ಬಿನ ಗದ್ದೆಗಳನ್ನು ನಾಶಪಡಿಸಿ ಬಡರೈತರಿಗೆ ನಷ್ಟವನ್ನುಂಟು ಮಾಡಿಯದೆ. ಈ ಆನೆಯನ್ನು ಕೊಲ್ಲಿಸಲು ತಕ್ಕ ವ್ಯವಸ್ಥೆ ಮಾಡಬೇಕೆಂತಲೂ ಅಲ್ಲದೇ ಸ್ಥಳೀಕ ಕೋವಿ ಲೈಸನ್ಸ್‌ದಾರರಿಗೆ ಅದನ್ನು ಕೊಲ್ಲಲು ಹುಕುಂ ಕೊಡಬೇಕೆಂತಲೂ ಜಿಲ್ಲಾ ಕಲೆಕ್ಟರರನ್ನು ಮತ್ತು ಕುಂದಾಪುರ ಸಬ್‌ಕಲೆಕ್ಟರರನ್ನು ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ. ಬಿ ಸುಬ್ಬಣ್ಣಸೆಟ್ರು ವಿನಂತಿಸಿಕೊಂಡಿದ್ದಾರೆ.

ತಾರೀಕು ೪-೧೦-೪೦ರಲ್ಲು ಕುಂದಾಪುರ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀ ಬಿ ಸುಬ್ಬಣ್ಣ ಗುಪ್ತರ ಅಧ್ಯಕ್ಷತೆಯಲ್ಲಿ ಅಪರಾಹ್ನ ೪ ಘಂಟೆಯ ಸಮಯ ಸಭೆ ಜರಗಿ, ಶ್ರೀ ಸುಬ್ಬಣ್ಣ ಸೆಟ್ರು ಅಧ್ಯಕ್ಷರಾಗಿಯೂ ಶ್ರೀಮತಿ ಸುಶಿಲಾ ಬಾಯಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಬಿ ಎಸ್ ಸೂರಪ್ಪ ಸೆಟ್ಟರು ಮತ್ತು ಶ್ರೀ ಕೆ ಮಹಾಬಲ ಸೆಟ್ರು ಜೊತೆಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಶ್ರೀ. ಬಿ ಸುಬ್ಬಣ್ಣ ಸೆಟ್ಟಿ, ಶ್ರೀ ಬಿ. ಸುಬ್ಬಣ್ಣ ಗುಪ್ತ, ಶ್ರೀ ಕೆ ಕೃಷ್ಣರಾಯ ಕೊಡ್ಗಿ, ಶ್ರೀಮತಿ ಸುಶಿಲಾಬಾಯಿ, ಶ್ರೀ ಬಿ ಎಸ್. ಸೂರಪ್ಪ ಸೆಟ್ಟಿ ಶ್ರೀ ಕೆ ಸಿ ಸುಬ್ಬ ಶ್ರೀ ಕೆ ಸಂಜೀವ್‌ರಾವ್, ಎಚ್ ಡಿ ರಾವ್, ಶ್ರೀ ಕೆ ರಾಮಣ್ಣ ಸೆಟ್ಟಿ, ಶ್ರೀ ಕೆ ವಿ ಐತಾಳ, ಶ್ರೀ ಕೆ ಮಹಾಬಲ ಸೆಟ್ಟಿ, ಮತ್ತು ಶ್ರೀ ಎಸ್ ಎಸ್ ಶೇಷಗಿರಿರಾವ್ ಇವರು ಸತ್ಯಾಗ್ರಹ ಕಮಿಟಿಯ ಮೆಂಬರರಾಗಿ ಆರಿಸಲ್ಪಟ್ಟರು.

ತಾರೀಕು ೨೮-೯-೪೦ನೇ ದಿನ ಬೆಳಿಗ್ಗೆ ಬೈಂದೂರು ಸರ್ಕಲಿನ ಮರವಂತೆಗೆ ಜಿಲ್ಲಾ ಪಂಚಾಯಿತ ಆಫೀಸರರಿಬ್ಬರು ಮತ್ತು ಜಿಲ್ಲಾ ಬೋರ್ಡ್ ಮೆಂಬರ್ ಶ್ರೀ ಬಿ ಸುಬ್ಬಣ್ಣ ಶೆಟ್ರು ಮರುವಂತೆ ಮತ್ತು ಬಡಾಕೆರೆ ಗ್ರಾಮಗಳ ಉಪಯೋಗಕ್ಕಾಗಿ ಒಂದು ಪಂಚಾಯಿತ ಬೋರ್ಡನ್ನು ಸ್ಥಾಪಿಸಿ ತೆರಳಿದರು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 443/40

ದಿ ಪ್ಯಾಪ್ಯುಲರ್ ಬೇಂಕ್ ಲಿಮಿಟೆಡ್ ಮಂಗಳೂರು ಇದರ ಮೆನೆಜಿಂಗ ಡೈರೆಕ್ಟರ್ ಕೆ ಅಣ್ಣಪ್ಪಗುಡ — ವಾದಿ

ಮತ್ತು

1 ಯು ಯಂ ಕೇಶವ ಆರಸ ಪ್ರಭು ಮಗ ಮಂಗ್ಳೂರು ಕ್ಯಾಪ್ಹಾರ ಕಂಕನಾಡಿ ಗ್ರಾಮ

2 ಜೆ ಯಂ ಲಾಸ್ರಾದೊ ಜೆ ಯಂ ಲಾಸ್ರಾದೊರ ಮಗ ಮಂಗ್ಳೂರು ಕ್ಯಾಪ್ಹಾರ ಕಂಕನಾಡಿ ಗ್ರಾಮ

3. ಜೊಸೆಫ್ ಡಿ ಅಲ್ಮೆದಾ ಜೋನ ಡಿ ಅಲ್ಮೆದರ ಮಗ ಮಂಗ್ಳೂರು ಕ್ಯಾಪ್ಹಾರ ಕಂಕನಾಡಿ ಗ್ರಾಮದಲ್ಲಿರುವವ

ಸದ್ರಿ ಮೇಲ್ಕಂಡ 1ನೇವ 3ನೇ ಪ್ರತಿವಾದಿರಿಗೆ.

ಮೇಲ್ಕಂಡ ಕೋರ್ಟಿನಲ್ಲಿ ವಾದಿಯು ಸದ್ರಿ ೬ ಜನ ಪ್ರತಿವಾದಿರ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 1ನೇವ 3ನೇ ಪ್ರತಿವಾದ್ರಿಗೆ ಸಬ್‌ಸ್ಟಿಟ್ಯೂಟೆಡ್ ಸರ್ವಿಸ್ ಹುಕುಂ ಆಗಿರುತ್ತದೆ. ಆದ್ರಿಂದ ಸದ್ರಿ 1ನೇವ 3ನೇ ಪ್ರತಿವಾದಿರಿಗೆ ಉದಾಹರಣೆ ಯಾ ಆಕ್ಷೇಪ ಕೊಡುವದಿದ್ದರೆ ತಾರೀಕು 14-10-40ಕ್ಕೆ ತಪ್ಪಗೆ ಇಟ್ಟಿದ್ದ ಸದ್ರಿಯವರು ಖುದ್ದಾಗಲ್ಲಿ ಯಾ ವಕೀಲ ದ್ವಾರವಾಗಲ್ಲಿ ಹಗಲು 10-30 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹೇಳಿಕೊಳ್ಳದಿದ್ರೆ ವ್ಯಾಜ್ಯವು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು. ತಿಳಿದಿರುವದು.

Mangalore } G. Narayana Rao.
6-10-40 } Vakil For Plaintiff

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

R. E. P. No. 94/1940.
R. E. A. No. 1003/1940
O. S. No. 22/1937

ಬೋಮಕ್ಕ — ವಾದಿ— *Petitioner*

1 ನಾರಾಯಣ ಕಲ್ಲೂರಾಯ ಬುದ್ಧಿ ಸ್ವಾಸ್ಥ್ಯ ಇಲ್ಲದವ ಗಾರ್ಡಿಯನರು ಶೀತಮ್ಮ ಸಕಲೇಶಪುರ ತಾಲ್ಕು ದೇವಲ್‌ಕೆರೆ ದೇವಸ್ಥಾನದಲ್ಲಿರುವವಳು.

2 ಪುಲ್ಲಯ್ಯ ಸುಬ್ರಾವ್-ಕಬೆಮೂಲೆ ರಾಮಕೃಷ್ಣಯ್ಯನ ಮಗ ಗುತ್ತಿಗಾರು ಗ್ರಾಮದ ಪುಲ್ಲಯ್ಯ

3 ಅಂಜು ಗೌಡ

4 ಚನಮು ಗೌಡ

5 ಮಾಚಿಜ ಗೌಡ — ನಾಣ ಗೌಡನ ಮಕ್ಕಳು ಬಳ್ಪ ಗ್ರಾಮದ ವಿಷ್ಣು ಮಂಗಲ

ಸದಿ ಅಮಲ್ಜಾರಿಯಲ್ಲಿ ಅರ್ಜಿದಾರಳ ಕಡೆಯಿಂದ ಎದುರ ಸ್ಥಿರಆಸ್ತಿಯನ್ನು ಏಲಮಿಗೆ ಇಡಿಸಿ, ಆದರೆ ಏಲಂ ಇಸ್ತಿಹಾರಿನಲ್ಲಿ ಕಾಣಿಸಿರಂತೆ ದಾವಾ ಆಸ್ತಿಯು ಅಂದಾಜು ಕ್ರಯವನ್ನು ರೂ 1107 0-0 ಎಂತ ತಗ್ಗಿಸಿ ಆ ರೀತಿ ಇಸ್ತಿಹಾರು ದುರಸ್ತಿಪಡಿಸಿ ಏಲಂಹಾಕುವಂತೆ ಹುಕ್ಕುಂ ಆಗ ಬೇಕೆಂದು ತಾ. 14 10 1940ಕ್ಕೆ ಎಸ್ತಿರ ನೋಟೀಸಿನ ಬಗ್ಗೆ ತಪ್ಪ ದ್ಯಾದೆ ಆಗಿರುತ್ತದೆ. ಅದುದರಿಂದ ಆ ದ್ಯಾದೆಗೆ ಎದ್ರಿದು ತಮ್ಮ ಆಕ್ಷೇಪಣೆಗಳೇನಾದರೂ ಹೇಳುವುದಿದ್ದರೆ 11 ಘಂಟೆಗೆ ಕೋರ್ಟಿಗೆ ತಪ್ಪದೆ ಹಾಜರಾಗಿ ಬರೆದ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ರೆ ಎದ್ರಿರಸ್ನು ತಿಪ್ಪಾ ಎಂತ ಮಾಡಿ ದಾಂಬಿನ ತನ್ನಿಯಿಂದ ತೀರ್ಮಾನಿಸೋಣಾಗುತ್ತದೆ ಎಂತ ಅರ್ಜಿದಾರಳ ಕಡೆಯಿಂದ ಕೊಟ್ಟ R. E. A. 1003/1940ನೇ ಅರ್ಜಿ ಮೇಲಾದ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿರುವದಿ.

Puttur S. K. } B. Ramchandra Rao,
26—9—1940 } Pleader for Petitioner

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಯುದ್ಧ ವಾರ್ತೆ

ಜರ್ಮನಿಯನ್ನು ಮುತ್ತಲು ಬ್ರಿಟನಿನ ಸಿದ್ಧತೆ



ಹಿಟ್ಲರ-ಮುಸಲೋನಿಗಳ ಭೇಟಿ.

ಸ್ಪೈನು ಯುದ್ಧಕ್ಕಿಳಿಯಲಾರದು!

ಬರ್ಮಾ ಮಾರ್ಗವನ್ನು ತೆರೆಯುವ ಯೋಚನೆ.

ಜರ್ಮನಿಯ ಆಕ್ರಮಣ

ಬ್ರಿಟನು ಈ ಬಗ್ಗೆ ಯೋಜನೆಗಳನ್ನು ಮಾಡುತ್ತದೆ.

ಜರ್ಮನರು ಬ್ರಿಟನನ್ನು ಅತಿಕ್ರಮಣ ಮಾಡುವ ವಿಚಾರ ಈಗ ಬಹಳ ಹಿಂದೆ ಸರಿದಿದೆಯಾಗಿಯೂ, ಆದರೆ ಜರ್ಮನಿಯನ್ನು ಅತಿಕ್ರಮಿಸುವ ಕುರಿತು ಬ್ರಿಟನಿನ ಸರ್ವ ಸಂಗ್ರಾಮಾಧಿಕಾರಿಗಳು ಯೋಜನೆಗಳನ್ನು ಸಿದ್ಧಪಡಿಸುತ್ತಿರುವ ರಾಗಿ ರೂಟರ್ ಮೂಲಕ ತಿಳಿದುಬರುತ್ತದೆ.

ಜರ್ಮನಿಯ ಅತಿಕ್ರಮಣಕ್ಕೆ ಅತ್ಯಂತ ಬಲಾಢ್ಯವಾದ ವಿಮಾನ ಪಡೆಯೂ, ನೌಕಾಪಡೆಯೂ ಸಿದ್ಧವಾಗುತ್ತಿದೆಯಂತೆ.

ಇಷ್ಟರ ತನಕ ಯುದ್ಧದಿಂದ ಪಾಠಗಳನ್ನು ಕಲಿತು ಜರ್ಮನಿಯನ್ನು ದಂಗುಬಡಿಯುವ ಖಂಡಿತ ಉಪಾಯಗಳು ಶೀಘ್ರದಲ್ಲಿ ಉಪಯೋಗಿಸಲಾಗುವುದಂತೆ.

ಅಮೇರಿಕದಲ್ಲೇನು?

ಅಮೇರಿಕವು ಮುಂದಕ್ಕೆ ಒದಗಬಹುದಾದ ಯುದ್ಧ ಪ್ರಸಂಗಕ್ಕೆ ಸಿದ್ಧವೇ ಇದೆ ಎಂದು ಅಲ್ಲಿನ ಸರಕಾರಿ ಅಧಿಕಾರಿಗಳೊಬ್ಬರು ಸಾರಿರುವರು. ಯುದ್ಧ ಪ್ರಸಂಗದ ಬಗ್ಗೆ ಅಲ್ಲೀಗ ಸರ್ವ ಸಿದ್ಧತೆಗಳು ಅತಿ ಬಿರುಸಾಗಿ ನಡೆಯುತ್ತಿವೆ. ಪೂರ್ವ ಪ್ರದೇಶದಲ್ಲಿ ಬದಲಾವಣೆಗಳಾಗುವ ಕುರಿತು ಅಮೇರಿಕಾಕ್ಕೆ ಆಕ್ಷೇಪವಿರುವುದಾದರೆ, ಅದರಿಂದ ಶಾಂತ ಸಾಗರದಲ್ಲೂ ಯುದ್ಧ ಉಂಟಾಗಬಹುದೆಂದು ಜಪಾನೀಯ ವಿದೇಶ ಮಂತ್ರಿಗಳ ಎಚ್ಚರಿಕೆಯೊಂದು ಹೊರಡಿರುವುದು.

ಬ್ರಿಟಿಷ್ ವೈಮಾನಿಕರ ಸಾಹಸ

ಮಹಾ ಯುದ್ಧದ ಆಫ್ರಿಕಾ ಪ್ರದೇಶದಲ್ಲಿ ಅಂದರೆ ಇಟೆಲಿಯಾನ ಪ್ರದೇಶಗಳ ಮೇಲೆ ಬ್ರಿಟಿಷರ ವೈಮಾನಿಕರು ಮತ್ತು ನೌಕಾಪಡೆಗಳು ಕಠಿಣ ತರದ ಹಲ್ಲೆ ನಡೆಯಿಸಿದರಾಗಿಯೂ, ಅದರಿಂದ ಅಲ್ಲಿ ಇಟೆಲಿಯಾನರಿಗೆ ಮಹತ್ವದ ಕಡೆಯಾಗಿರುವುದೆಂದು ತಿಳಿಯುತ್ತದೆ.

ಇದೇ ರೀತಿಯಲ್ಲಿ ಜರ್ಮನಿ ಮತ್ತು ಜರ್ಮನಿ ಅತಿಕ್ರಮಿಸಿದ ಪ್ರದೇಶಗಳ ಮೇಲೆ ಬ್ರಿಟಿಷ ವೈಮಾನಿಕರಿಂದ ಉಚ್ಚ ತರದ ಧಾಳಿಯು ನಡೆಯಿಸಲಾಗಿದೆ. ಈ ಧಾಳಿಯಿಂದ ಹಿಟ್ಲರನು ಬ್ರಿಟನನ್ನು ಅತಿಕ್ರಮಿಸುವ ಯೋಜನೆ ಮಹಾ ಕಷ್ಟವೂ ಉಂಟಾದುದಲ್ಲದೆ, ಆತನು ಈಗ ಅಂಥ ಅತಿಕ್ರಮದ ಆಲೋಚನೆಯನ್ನೇ ಬಿಟ್ಟಂತೆ ಕಾಣುತ್ತದೆ.

ಸರ್ವಾಧಿಕಾರಿಗಳು ಬ್ರೆನ್ನರ್ ಕಣಿವೆಯಲ್ಲಿ

ಮಂತ್ರಾಲೋಚನೆ ಮಾಡುತ್ತಾರೆ!

ಸರ್ವಾಧಿಕಾರಿಗಳಾದ ಹಿಟ್ಲರ್ ಮುಸಲನಿಗಳು ಬ್ರೆನ್ನರ್ ಕಣಿವೆಯಲ್ಲಿ ಭೇಟಿಯಾಗಿದ್ದಾರೆ. ಅವರೊಡನೆ ಕೌಂಟ್ ಸಿಯಾನೋ ಮತ್ತು ರಿಬನ್‌ಟ್ರಾಪರೂ ಜತೆಯಲ್ಲಿದ್ದಾರೆ. ಯುದ್ಧದ ವಿಷಯವನ್ನು ಮುಂದೆ ಹೇಗೆ ಹೇಗೆ ಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂದು ಅವರು ಒಟ್ಟುಗೂಡಿ ಮಂತ್ರಾಲೋಚನೆ ಮಾಡುತ್ತಿರುವರೆಂದು ತಿಳಿದು ಬಂದಿದೆ! ಸ್ಪೆಶಲ್ ಟ್ರೈನಿನಲ್ಲಿ ಕುಳಿತು ಮಧ್ಯರಾತ್ರಿ ವೇಳೆಗೆ ಮ್ಯುನಿಕ್ ಹಾದಿಯಾಗಿ ಹಿಟ್ಲರನು ಬ್ರೆನ್ನರ್ ಕಣಿವೆಯ ಕಡೆಗೆ ಧಾವಿಸಿರುವನಂತೆ! ರಿಬನ್‌ಟ್ರಾಪನ ಟ್ರೈನ್ ಅದರ ಹಿಂದು ಗಡೆಯಿತ್ತಂತೆ! ಈ ಭೇಟಿಯು ರಾಜಕೀಯ ವರ್ತುಲದಲ್ಲಿ ವಿಶೇಷ ನಿರೀಕ್ಷೆಯನ್ನು ಹುಟ್ಟಿಸಿದೆ. ಇಬ್ಬರು ಸರ್ವಾಧಿಕಾರಿಗಳೂ, ತಮ್ಮ ತಮ್ಮ ವಿದೇಶಾಂಗ ಮಂತ್ರಿಗಳ ಸಮಕ್ಷಮದಲ್ಲಿ ಎರಡು ತಾಸಿನ ತನಕ ರಾಜಕೀಯ ವಿಚಾರಗಳನ್ನು ಚರ್ಚಿಸಿದರೆಂದು ತಿಳಿದು ಬಂದಿದೆ.

ಸ್ಪೈನು ಯುದ್ಧಕ್ಕಿಳಿಯಲಾರದಂತೆ!

ಸ್ಪೈನಿನಿಂದ ಬಂದ ಸುದ್ದಿಗಳಿಂದ, ಸ್ಪೈನು ಯುದ್ಧದಿಂದ ದೂರಲಗಿ ನಿಲ್ಲುವುದೆಂಬ ಅಭಿಪ್ರಾಯವೇ ತಿಳಿದುಬರುತ್ತದೆ. ಅಮೇರಿಕ ಪ್ರೆಸಿಡೆಂಟರು ಈ ಕುರಿತು, ಸ್ಪೈನನ್ನು ಯುದ್ಧಕ್ಕಿಳಿಯದಂತೆ ಪ್ರಯತ್ನಪಡುತ್ತಿರುವರೆಂದು ಒಂದು ಸುದ್ದಿ. ಸ್ವಬುದ್ಧಿಯಿಂದಲೇ ಫ್ರಾಂಕೋ ಹೀಗೆ ತಟಸ್ಥನಾಗಿರುವನೆಂದು ಇನ್ನೊಂದು ಸುದ್ದಿ.

ಜರ್ಮನಿಗೆ ಯುದ್ಧ ಸಾಕಾಗಿದೆಯಂತೆ!

ಜರ್ಮನಿಯಿಂದ ಬರುವ ಹಲವು ಗುಪ್ತ ಸುದ್ದಿಗಳಿಂದ ಇಂದು ಜರ್ಮನಿಯು ಕಂಗಾಲಾಗಿದೆಯೆಂದೂ, ಬ್ರಿಟನು ಮುತ್ತಿಗೆ ಹಾಕುವ ಸಾಹಸ ಮಾಡಿ ಸೋತುಹೋಗಿದೆಯೆಂದೂ, ಮುಂದೆ ಹಿಂದಿನಂತೆಯೂ ರಭಸದಿಂದ ದಾಳಿಯಿಡಲು ವೈಮಾನಿಕರು ಉತ್ಸಾಹಗೊಂಡಿಲ್ಲವೆಂದೂ ತಿಳಿದುಬರುತ್ತದೆ.

ಫ್ರಾನ್ಸಿಗೂ ಬ್ರಿಟನಿಗೂ ಯುದ್ಧಾರಂಭವೇ?

ಹಿಟ್ಲರ ಮುಸಲೋನಿಯವರು ಬ್ರೆನ್ನರ್ ಕಣಿವೆಯಲ್ಲಿ ಸೇರಿ ಮಾತನಾಡಿದಾಗ ಫ್ರಾನ್ಸ್ ದೇಶವು ಬ್ರಿಟನಿನೊಂದಿಗೆ ನೇರವಾಗಿ ಯುದ್ಧ ಭಾಗಿಯಾಗಬೇಕೆಂಬ ವಿಷಯವು ಚರ್ಚೆಗೆ ಬಂದಿತೆಂದು ನ್ಯೂಯಾರ್ಕಿಗೆ ಬಂದಿರುವ ವರದಿಗಳಿಂದ ಗೊತ್ತಾಗಿದೆ.

ಪ್ರಾಯಶಃ ಈ ಸಂಬಂಧದಲ್ಲಿ ಜರ್ಮನಿಗೂ ಫ್ರಾನ್ಸಿಗೂ ಒಪ್ಪಂದವಾಗಬಹುದೆಂದು ಇಲ್ಲಿನ ವರದಿಗಳ ಪ್ರಕಾರ ಗೊತ್ತಾಗಿದೆ.

ಬರ್ಮಾ ಮಾರ್ಗವನ್ನು ತೆರೆಯುವ ಆಲೋಚನೆ

ಬ್ರಿಟಿಷ್ ಮುಖ್ಯ ಮಂತ್ರಿಯೊಡನೆ ಚೀನೀ ರಾಯಭಾರಿಯು, ಆಹ್ವಾನದ ಮೇಲೆ ಬಂದು ತಾ. ೩ರಲ್ಲಿ ಮಾತುಕತೆ ನಡೆಸಿದರು. ಬರ್ಮಾ ಮಾರ್ಗ ಸಮಸ್ಯೆಯನ್ನು ಅವರು ಕೂಲಂಕಷವಾಗಿ ವಿಮರ್ಶಿಸಿದರೆಂದು ಗೊತ್ತಾಗಿದೆ. ಬರ್ಮಾ ಮಾರ್ಗವನ್ನು ಮತ್ತೆ ತೆರೆಯುವ ಬಗ್ಗೆ ಬ್ರಿಟನಿನ ನಿರ್ಧಾರವನ್ನು ಸ್ಪಷ್ಟಪಡಿಸುವ ಹೇಳಿಕೆಯೊಂದನ್ನು ಶೀಘ್ರದಲ್ಲಿಯೇ ಹೊರಪಡಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ಜರ್ಮನ್-ಸ್ಪೈನ್‌ಗಳ ಸಖ್ಯ

ಸ್ಪೈನಿನಲ್ಲಿ ಇಟೆಲಿಯ ಪ್ರಭಾವ ಇಳಿದಿದೆ

ಟೈಂಸ್ ಪತ್ರಿಕೆಯ ವಾಷಿಂಗ್‌ಟನ್ ಬಾತ್ಮೀದಾರರು ತಿಳಿಸುವುದೇನಂದರೆ:

ಜಿಬ್ರಾಲ್ಟರೇನಾದರೂ ಪರ ಹಸ್ತಗತವಾಗುವುದಾದರೆ ಅದು ಯಾವ ಸಂದರ್ಭದಲ್ಲಿಯೂ ಕೂಡ ಇಟೆಲಿಯ ಹಸ್ತಗತವಾಗಕೂಡದು. ಜರ್ಮನ್ ಪ್ರಭಾವದಿಂದ ಸ್ಪೈನು ಅದನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂಬುದು ಜರ್ಮನಿಯ ದೃಢ ನಿಶ್ಚಯ.

ಫ್ರಾನ್ಸು ಯಾವಾಗ ಉರುಳಿ ಬಿತ್ತೋ ಮತ್ತು ಹೊಸ ವಿಚಿ ಸರಕಾರದಲ್ಲಿ ಲಾವಲ್‌ರವರು ಪ್ರಮುಖ ವ್ಯಕ್ತಿಯಾಗಿ ನಿಂತರೋ ಆಗಲೇ ಇಟಲಿ ಮತ್ತು ಸ್ಪೈನ್‌ಗಳ ಸಂಯುಕ್ತತೆಯಾಗಿ ಜರ್ಮನಿಗೆ ಎದುರಾಗಿ ನಿಲ್ಲುವ ಆಶೆಯೇ ನಿರಾಶೆಯಾದಂತಾಯಿತು. ಅದಕ್ಕೆ ಬದಲಾಗಿ ಸ್ಪೈನಿನ ಮೇಲೆ ಜರ್ಮನಿಯ ಪ್ರಭಾವ ಜಾಸ್ತಿಯಾಗಿ ಇಟಲಿಯ ಪ್ರಭಾವ ಇಳಿಮುಖವಾಯಿತು.

ಜರ್ಮನಿಗೂ ಸ್ಪೈನಿಗೂ ಒಂದು ರೀತಿಯ ಒಪ್ಪಂದವಾಗಿದೆಯೆಂದು ಅಮೇರಿಕದಲ್ಲಿ ಸಂಯುಕ್ತ ಸಂಸ್ಥಾನದ ಪ್ರಭಾವವನ್ನು ಇಳಿಸುವ ಉದ್ದಿಶ್ಯದಿಂದ ಅಲ್ಲಿನ ಸ್ಪೈನ್ ಸಂಬಂಧವನ್ನು ಉಪಯೋಗಿಸಿಕೊಳ್ಳಲು ಜರ್ಮನಿ ಪ್ರಯತ್ನಿಸುತ್ತಿದೆಯೆಂದು ಗೊತ್ತಾಗಿದೆ. ಇದಕ್ಕಾಗಿ ಸ್ಪೈನಿಗೆ ಜರ್ಮನಿಯು ಧನಸಹಾಯವನ್ನೂ ಸೈನ್ಯ ಸಹಾಯವನ್ನೂ ಕೊಡುಗುವುದು. ಸಿನಾರ ಸುನರ್‌ರವರು ಬರ್ಲಿನಿಗೆ ಬೇಟಿಯಿತ್ತಿರುವುದರಲ್ಲಿ ಒಂದು ಮಹತ್ವವಿದೆಯೆಂದು ಹೇಳಲಾಗಿದೆ.

ಜಪಾನಿನಲ್ಲಿ ಬ್ರಿಟಿಷರಿಗೆ ಶಿಕ್ಷೆ

ಕಳೆದ ಜುಲಾಯಿ ತಿಂಗಳಲ್ಲಿ ಕೆಲವು ಆಂಗ್ಲೇಯರನ್ನು ಜಪಾನಿನಲ್ಲಿ ಕೈದು ಮಾಡಲಾಗಿತ್ತು. ಅವರನ್ನು ಈಗ ವಿಚಾರಣೆ ಮಾಡಿ, ಅವರ ಮೇಲೆ ಹೊರಿಸಿದ ತಪ್ಪು ಸ್ಥಾಪನೆಯಾಗಿದೆ. ಜಪಾನಿನ ಸೈನ್ಯ ಚಟುವಟಿಕೆಗಳ ಕುರಿತಾಗಿರುವ ಕೆಲವು ಗುಪ್ತ ವಿಷಯಗಳನ್ನು ಅವರು ಹೊರ ಹಾಕಿರುವರೆಂಬುದು ಅವರ ಮೇಲೆ ಆರೋಪವಾಗಿತ್ತು.

ರಶ್ಯದ ಮೂಕ ಗಂಭೀರತೆ!

ಪ್ರಪಂಚದ ರಾಜಕಾರಣದಲ್ಲಿ ರಶ್ಯವು ಇಂದು ಜರ್ಮನಿಯಂತೆಯೋ, ಬ್ರಿಟನಿನಂತೆಯೋ ಇನ್ನು ಯಾವುದೇ ಆದರೂ ಒಂದು ಪ್ರಬಲ ರಾಷ್ಟ್ರದಂತೆ ಚಟುವಟಿಕೆ ನಡೆಸಲು ಸಮರ್ಥ್ಯವಾದ ರಾಷ್ಟ್ರವಾಗಿದೆ. ಆದರೆ ಪ್ರಪಂಚ ಯುದ್ಧವು ವಿಸ್ತಾರ್ಯಕವಾಗುತ್ತಿದ್ದು, ಹಲವಾರು ರಾಷ್ಟ್ರಗಳು ಯುದ್ಧದಲ್ಲಿ ಪ್ರತ್ಯಕ್ಷ ಸೇರುತ್ತಿದ್ದರೂ ರಶ್ಯವು ಇನ್ನೂ ತನ್ನ ಮೂಕಗಂಭೀರತೆಯನ್ನು ಬಿಟ್ಟಿಲ್ಲ. ಹೇಗಿದ್ದರೂ ತನ್ನ ಬಳಿಯ ರಾಷ್ಟ್ರಗಳು ಬಿಕ್ಕಟ್ಟಿನಿಂದಿರುವುದರಿಂದ ರಶ್ಯವು ಸಂತೋಷದಿಂದಿರಲಾರದು. ಯೂರೋಪಿನಲ್ಲಿ ಹಿಟ್ಲರನು ವಿಜೃಂಭಿಸುವುದನ್ನು ಸ್ಟಾಲಿನನು ಸಹಿಸಿಕೊಂಡಿರಲಾರನೆಂದು ದಟ್ಟ ಸುದ್ದಿಯಿದೆ.

ಬರ್ಲಿನ್ ಲಂಡನುಗಳ ಮೇಲೆ ದಾಳಿಗಳು

ಜರ್ಮನರ ವೈಮಾನಿಕರು ಲಂಡನಿನ ಮೇಲೆಯೂ, ಬ್ರಿಟನಿನ ವೈಮಾನಿಕರು ಬರ್ಲಿನಿನ ಮೇಲೆ ಹಿಂದಿನಂತೆ ಇಂದೂ ನಿರಂತರ ದಾಳಿ ಮಾಡುತ್ತಿರುವರು. ದಾಳಿಯಿಂದ ಪ್ರತಿಸಲವೂ ಅಘಾತವು ಆಗದೆ ಇಲ್ಲ.

ಎಪ್ರಿಲ್ ತಿಂಗಳಲ್ಲಿ ಅಮೇರಿಕವು ಯುದ್ಧಕ್ಕೆ ಸೇರುವುದು

ಇಂದು ಬ್ರಿಟನು ಅಮೇರಿಕಗಳ ಸೌಹಾರ್ದವು ಹಿಂದಿಗಿಂತ ಸ್ನೇಹಾ ಸಮೀಪ ಸಮೀಪವಾಗುತ್ತಿದೆ. ಹೀಗಾಗಿ ಬರುವ ವಸಂತಕಾಲದ ಪ್ರಾರಂಭದಲ್ಲಿಯೇ ಅಮೇರಿಕವು ಯುದ್ಧದಲ್ಲಿ ಸೇರುವುದು ಎಂದು ಯೂರೋಪಿನ ರಾಜಕಾರಣಿಗಳು ಅಭಿಪ್ರಾಯ ಪಡುತ್ತಾರೆ. ಅಮೇರಿಕದ ಅಧ್ಯಕ್ಷೀಯ ಚುನಾವಣೆಯು ಅದರೊಳಗೆ ನಡೆಯುವುದು.

ರಶ್ಯಾ ಜರ್ಮನ್ ರೈಲ್ವೆ ಒಪ್ಪಂದ

ರಶ್ಯಾ ಮತ್ತು ಜರ್ಮನುಗಳೊಳಗೆ ರೈಲ್ವೆ ಸಂಬಂಧವಾಗಿ ಒಂದು ಒಪ್ಪಂದವಾಗಿದೆ.

ಚೈನದ ಯುದ್ಧ

ಇಂಡೋ ಚೈನವು ಜಪಾನಿಗೆ ಶರಣಂದಿತಷ್ಟೆ? ಇದರಿಂದ ಚೈನಕ್ಕೆ ಬಹಳ ಆತಂಕವಾಗಿದೆ. ಜಪಾನು ಬೇರೆ ಬೇರೆ ಕಡೆಗಳಿಂದ ಚೈನವನ್ನು ಮುತ್ತಲು ಇದರಿಂದ ಅವಕಾಶವಾಗುವುದು. ಎರಡು ಲಕ್ಷ ಚೈನಾ ಸೈನಿಕರು ಇಂಡೋ ಚೈನಾ ಗಡಿಯಲ್ಲಿರುವರು.

ರಕ್ತಪಾತವಿಲ್ಲದೆ ಜಯ ಸಾಧ್ಯವಿಲ್ಲ

ಜರ್ಮನಿಯಲ್ಲಿ ಜನರಿಗೆ ನಿರಾಶೆ

ರಕ್ತಪಾತವಿಲ್ಲದೆ ಜಯವನ್ನು ಪಡೆಯುವೆವು ಎಂಬುದಾಗಿ ಹೆರ್ ಹಿಟ್ಲರನು ಹಿಂದೆ ಮಾಡಿದ್ದ ಭಾಷಣದಿಂದ ಜರ್ಮನರಲ್ಲಿ ಆಶಾಭಾವನೆ ಹುಟ್ಟಿತ್ತು. ಆದರೆ ಈಗ ಆ ಆಶಾಭಾವನೆಯೆಲ್ಲ ಮಾಸಿ ಹೋಗುತ್ತಿದೆ. ಹೆರ್ ಹಿಟ್ಲರನು ಗುಪ್ತವಾಗಿ ನಡೆಸುತ್ತಿದ್ದ ಶಾಂತಿ ಸಂಧಾನಗಳೆಲ್ಲಾ ನಿರರ್ಥಕವಾಗಿರುವ ಅಂಶವನ್ನು ಎಷ್ಟೋ ಮುಚ್ಚಿಡಲು ಅಧಿಕಾರಿಗಳು ಯತ್ನಿಸಿದರೂ ಅದು ಜರ್ಮನ್ ಜನರಲ್ಲಿ ಹೊರಕ್ಕೆ ಬಿದ್ದೇ ಇದೆ. ಇದರಿಂದಲೇ ಅವರಲ್ಲಿ ನಿರಾಶಾಭಾವನೆ ಹುಟ್ಟುತ್ತಿರುವುದು ಎಂಬುದಾಗಿ ಡೈಲಿ ಟೆಲಿಗ್ರಾಫ್ ಪತ್ರಿಕೆಗೆ ಜರ್ಮನ್ ಸರಹದ್ದಿನಿಂದ ಆ ಪತ್ರಿಕೆಯ ಬಾತ್ಮೀದಾರರು ತಿಳಿಸುತ್ತಾರೆ.

ಈ ರೈಕ್ ಸರಕಾರದಲ್ಲಿ ಬಹುಮಟ್ಟಿನ ನಿರಾಶಾಭಾವನೆಯೂ ವ್ಯಥೆಯೂ ಆವರಿಸಿಕೊಂಡಿದೆ. ಏಕೆಂದರೆ ಹಿಟ್ಲರ್ ಮುಸೋಲಿನಿಗಳು ಪ್ರಪಂಚದಲ್ಲಿ ಕೂಡಲೇ



ಭಾರತದ ಆತ್ಮನಿರ್ಣಯದ ಹಕ್ಕು

'ಅದಕ್ಕೆ ಕಾಂಗ್ರೆಸು ಕಡೆತನಕವೂ ಹೋರಾಡುವುದು'

[ಮೌಲಾನಾ ಅಜಾದ್]

ಕಾಂಗ್ರೆಸಿನ ಶಿಷ್ಟಮಂಡಲಕ್ಕೆ ತಡೆ

ಕಾಂಗ್ರೆಸಿಗೆ ಕೂಲಿಕಾರರ ಬೆಂಬಲ!

ಶಾಂತಿ ಏರ್ಪಡುವುದೆಂಬ ಹಿಟ್ಲರನ ಮಾಯಾಜಾಲದಿಂದ ಜನರೆಲ್ಲರೂ ಈಗ ಎಚ್ಚೆತ್ತಿದ್ದಾರೆ. ಈ ಅಂಶವನ್ನು ತಾಟಸ್ಥ್ಯ ರಾಷ್ಟ್ರಗಳ ಬಾತ್ಮೀದಾರರುಗಳು ತಮ್ಮ ವರದಿಗಳಲ್ಲಿ ಸ್ಪಷ್ಟಪಡಿಸುತ್ತಿದ್ದಾರೆ.

ಗಾಂಧಿ-ವೈಸರಾಯ್ ಭೇಟಿಯು ಬ್ರಿಟನಿನಲ್ಲಿ ವಿಶೇಷ ಪರಿಣಾಮ ಮಾಡಿಲ್ಲ!

ಇತ್ತೀಚೆಗೆ ಗಾಂಧಿ ಮತ್ತು ವೈಸರಾಯರು ಸಿಮ್ಲಾದಲ್ಲಿ ಭೇಟಿಯಾದ ವಿಚಾರವು ಬ್ರಿಟನಿನಲ್ಲಿ ಹೆಚ್ಚಿನ ಪರಿಣಾಮವನ್ನುಂಟು ಮಾಡಿಲ್ಲವೆಂದು ಹಿಂದೂ ಪತ್ರಿಕೆಯ ಲಂಡನ್ ಸುದ್ದಿಗಾರನ ಅಭಿಪ್ರಾಯ. ಮಡುತ್ತಾನೆ ಟೈಮ್ಸ್ ಪತ್ರಿಕೆಯು ಈ ಕುರಿತು ಒಂದು ಟೀಕೆ ಬರೆಯುತ್ತಾ, ಗಾಂಧೀಜಿಯವರು ಇಂತಹ ಸಂದರ್ಭದಲ್ಲಿ ಶಾಸನಭಂಗವನ್ನು ಆರಂಭಿಸಿದರೆ ಅದಕ್ಕೆ ಜನತೆಯ ಬೆಂಬಲ ಸಿಗಲಾರದೆಂದೂ ಆದಕಾರಣ ಗಾಂಧೀಜಿಯು ಸತ್ಯಾಗ್ರಹವನ್ನು ಆರಂಭಿಸುವುದು ಸಾಧ್ಯವಲ್ಲವೆಂದೂ ಹೇಳಿದೆ

ವಜೀರಿಸ್ಥಾನಕ್ಕೆ ಹೋಗಲು ಸಮ್ಮತಿಯಿಲ್ಲ!

ಕಾಂಗ್ರೆಸಿನ ಶಿಷ್ಟಮಂಡಲಕ್ಕೆ ತಡೆ!

ವಜೀರಿಸ್ಥಾನಕ್ಕೆ ಪರಿಸ್ಥಿತಿಯನ್ನು ಪರಿಶೀಲಿಸುವರೆ ಅಖಿಲಭಾರತ ಕಾಂಗ್ರೆಸು ಸಂಸ್ಥೆಯು ನಿಯಮಿತ ಶಿಷ್ಟಮಂಡಲದ ಪರಾಢ ಭುಲಾಭಾಯಿದೇಸಾಯಿ ಮತ್ತು ಅಸಫ್ ಅಲಿ ಇವರಿಬ್ಬರೂ ತೆರಳಿದ್ದರು ಅಲ್ಲಿಗೆ ಹೋಗುವರೆ ಗಡಿನಾಡಿನ ಗವರ್ನರ ಅನುಮತಿಯು ಅವರಿಗೆ ಸಿಗಲಿಲ್ಲವೆಂಬ ವಿಚಾರವು ಭಾರತದ ಮುಂದಾಳುಗಳ ಮನಸ್ಸಿನಲ್ಲಿ ಬಹಳ ಉದ್ವೇಗವನ್ನು ಹುಟ್ಟಿಸಿದೆ. ಗಡಿನಾಡಿನ ಗವರ್ನರರೊಡನೆ ಸ್ನೇಹವ್ಯವಹಾರದಿಂದಲೇ ಇರುವ ಅಲ್ಲಿ ಸಮಾಜ ಮಂತ್ರಿ ಖಾನ್ ಸಾಹೇಬರೂ ಈ ವಿಷಯದಲ್ಲಿ ಮಾಡಿದ ಪ್ರಯತ್ನಗಳು ವಿಫಲವಾಗಿರುವುದೆಂದು ಸುದ್ದಿ.

ಕಾಂಗ್ರೆಸಿಗೆ ಕೂಲಿಗಾರರ ಬೆಂಬಲ

ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧಿವೇಶನ

ಬೊಂಬಾಯಿಯಲ್ಲಿ ಕಳೆದವಾರ ಕೂಲಿಗಾರರ ಸಂಘವಾದ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧಿವೇಶನವು ಜರುಗಿತು. ಡಾ. ಸುರೇಶಚಂದ್ರ ಬೆನರ್ಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕೂಲಿಗಾರರು ಕಾಂಗ್ರೆಸಿಗೆ ಬೆಂಬಲ ಕೊಡಬೇಕೆಂಬ ವಿಚಾರ ಬಹಳ ಅರ್ಥಗರ್ಭಿತವಾದ ಆವೇಶಪೂರ್ಣ ಭಾಷಣವಿತ್ತರು ಮಹಾತ್ಮಾಜಿಯವರು ತಿರಿಗಿ ಕಾಂಗ್ರೆಸಿನ ಸರ್ವಸೇನಾಪತಿಯಾದುದು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಜಯಶೀಲತೆಯ ಚಿಹ್ನೆಯೆಂದೂ, ಇಂದು ಸರ್ವರೂ ಒಮ್ಮತದಿಂದ ರಾಷ್ಟ್ರ ಸಭೆಯ ಆಶ್ರಯದಲ್ಲಿ ಒಟ್ಟುಗೂಡಿ ಸ್ವಾತಂತ್ರ್ಯ ಸಾಧನೆಯ ಯತ್ನಗಳನ್ನು ಮಾಡತಕ್ಕದ್ದೆಂದೂ ಅವರು ಕೂಲಿಗಾರರಿಗೆ ಹಿತವಾದ ಸೂಚನೆಗಳನ್ನಿತ್ತರು

ಬಲೂಚಿಸ್ಥಾನಕ್ಕೂ ಪ್ರವೇಶವಿಲ್ಲ!

ಬಲೂಚಿಸ್ಥಾನಕ್ಕೆ ಬರಬೇಕೆಂದು ರಾಷ್ಟ್ರಪತಿ ಅಜಾದ್ ಮತ್ತು ನೆಹರುಗಳಿಗೆ ಅಲ್ಲಿನ ಮುಖಂಡರು ಆಮಂತ್ರಣ ಕೊಟ್ಟಿದ್ದರ ಆದರೆ ಅವರ ಪ್ರಯಾಣವನ್ನು ಸರಕಾರದವರು ನಿಷೇಧಿಸಿ ನಿರ್ಬಂಧ ಹಾಕಿರುವರೆಂದು ತಿಳಿದಿದೆ ಈ ವಿಷಯದಲ್ಲಿ ಅವರನ್ನು ಆಮಂತ್ರಿಸಿದ, ಖಾನ್ ಅಬ್ದುಲ್ ಸಾಮದ್ ಖಾನರು ಈ ಕುರಿತು ತಮ್ಮ ಸಂತಾಪವನ್ನು ಸೂಚಿಸಿದ್ದಾರೆ ಕಳೆದ ಸರ್, ಮುಸ್ಲಿಂ ಲೀಗಿನ ಮುಖಂಡರನ್ನು ವಜೀರಿಸ್ಥಾನಕ್ಕೆ ಬರಲು ಬಿಟ್ಟಿದ್ದು, ಇಂದು ರಾಷ್ಟ್ರೀಯ ಮುಖಂಡರನ್ನು ಬರಲಿಕ್ಕೆ ಬಿಡದಿರುವುದರಲ್ಲಿ ಅರ್ಥವೇನಿದೆ? ಸರಕಾರದವರು ಜಾತೀಯತೆಗಿಂತ ರಾಷ್ಟ್ರೀಯತೆಗೆ ಪ್ರೋತ್ಸಾಹ ಕೊಡಲಾರರೇ ಎಂದವರು ಸಂದೇಹಗೊಂಡಿದ್ದಾರೆ

ಅದರ ಆಲೋಚನೆಯೇ ಮಾಡುವುದಿಲ್ಲ

ಸುಭಾಸರ ಹೇಳಿಕೆ

ಕಳೆದ ಫೆಬ್ರವರಿ ತಿಂಗಳಲ್ಲಿ ಸುಭಾಸ ಬೋಸರನ್ನು ಬಂಧನದಲ್ಲಿರಿಸಿದ್ದರಷ್ಟೆ? ಅವರ ಮೇಲೆ ಹಾಲ್ವೆಲ್ ಸತ್ಯಾಗ್ರಹ ಮಾತ್ರವಲ್ಲ, ಇನ್ನೂ ಹಲವಾರು ಅಪಾದನೆಗಳು ಇವೆ. ಶಾಸನವಿರೋಧವಾಗಿ ಭಾಷಣಮಾಡಿರುವರೆಂದು ಪೋಲೀಸರು ವರದಿ ಕೊಟ್ಟಿದ್ದುದರ ಬಗ್ಗೆ ಅಲಿಪುರದ ಮೆಜಿಸ್ಟ್ರೇಟರ ಮುಂದೆ ಅವರ ವಿಚಾರಣೆ ನಡೆಯಿತು. ಈ ಕುರಿತು ಅವರ ಅಭಿಪ್ರಾಯವನ್ನು ಕೇಳಿದಾಗ, ಆ ಕುರಿತು ನಾನಿದರ ಆಲೋಚನೆಯೇ ಮಾಡುತ್ತಿಲ್ಲವೆಂದು ಅವರು ನಿರ್ಲಕ್ಷ್ಯದ ಉತ್ತರವಿತ್ತರು.

ಟ್ರೇಡ್ ಯೂನಿಯನ್ ಕಾಂಗ್ರೆಸ್

ಇದರ ೧೮ನೆಯ ಅಧಿವೇಶನವು ಬೊಂಬಾಯಿಯಲ್ಲಿ ಡಾ। ಸುರೇಶ ಚಂದ್ರ ಬೆನರ್ಜಿಯವರ ಅಧ್ಯಕ್ಷತೆಯಿಂದ ಮಹಾ ವಿಜೃಂಭಣೆಯಲ್ಲಿ ಜರಗಿತು ನಾಡಿನ ಕೂಲಿಗಾರರೆಲ್ಲರೂ ಇಂದು ಕಾಂಗ್ರೆಸನ್ನು ಹಿಂಬಾಲಿಸಿ, ಮಹಾತ್ಮರ ಮುಂದಾಳುತನವನ್ನು ಶಿಸ್ತು ವಿಧೇಯತೆಗಳಿಂದ ಮನ್ನಿಸಿ, ಸ್ವಾತಂತ್ರ್ಯವನ್ನು ದೊರಕಿಸಕೊಳ್ಳಲು ಒಟ್ಟಾಗಬೇಕು ಎಂದು ಅವರು ಸ್ಫೂರ್ತಿಮತ್ತದ ಭಾಷಣವನ್ನಿತ್ತರು

ವಿಮಾನದಾಳಿಯನ್ನು ತಪ್ಪಿಸಲು ಮದ್ರಾಸಿನಲ್ಲಿ ಎಚ್ಚರ

ಶತ್ರುಗಳ ಅಕಸ್ಮಾತ್ ವಿಮಾನದಾಳಿಯನ್ನು ತಪ್ಪಿಸುವ ಸಲುವಾಗಿ ಮದ್ರಾಸ್ ನಗರದಲ್ಲಿ ತಾ ೧೫ರಿಂದ ರಾತ್ರಿಕಾಲದಲ್ಲಿ ಇಡೀ ನಗರವು ಕಗ್ಗತ್ತಲೆಯಿಂದಲೇ ಮುಸುಕಿ ಕಾಣುವಂತೆ, ದೀಪಗಳು ಉರಿಯದೆ ಇಡುವ ವ್ಯವಸ್ಥೆಯಾಗುತ್ತಿದೆ ಮನೆಯ ಒಳಗಡೆ ಉರಿಸುವ ದೀಪಗಳ ಬೆಳಕೂ ಹೊರಗಡೆ ಕಾಣದಂತೆ ಮಾಡುವ ಏರ್ಪಾಡ ಆಗುತ್ತಿರುವುದು

ಮದ್ರಾಸ್ ಗವರ್ನರರ ಭಾಷಣ

ಬ್ರಿಟನಿನ ಜಯದಲ್ಲಿ ಭಾರತದ ಗೆಲವು ಇದೆ ಜರ್ಮನಿಯು ಸೋಲಬೇಕು ಜನಾಂಗ ಹಿತ, ಪ್ರಜಾಪ್ರಭುತ ಉದ್ಧಾರಗಳಿಗಾಗಿ ಬ್ರಿಟನ್ನು ಹೋರಾಡುತ್ತದೆ ಎಂದು ಮದ್ರಾಸಿನ ಗವರ್ನರರು ನೆಲ್ಲೂರಿನಲ್ಲಿ ಹೇಳಿದರು.

ಭಾರತದ ಆತ್ಮನಿರ್ಣಯದ ಹಕ್ಕು

'ಅದಕ್ಕೆ ಕಾಂಗ್ರೆಸ್ಸು ಕೊನೆಯವರೆಗೂ ಹೋರಾಡುವುದು'

'ಗಾಂಧಿ–ವೈಸರಾಯ್ ಸಂಧಾನದ ಪರಿಣಾಮವು ನಮಗೆ ಗೊತ್ತೇ ಇತ್ತು ಬ್ರಿಟಿಷ್ ಸರಕಾರವು ಭಾರತಕ್ಕೆ ಯಾವ ವಿಧವಾದ ಸ್ವಾತಂತ್ರ್ಯವನ್ನೂ ಕೊಡುವುದಿಲ್ಲವೆಂಬುದು ಖಚಿತವಾಗಿಬಿಟ್ಟಿದೆ' ಎಂದು ಕಾಂಗ್ರೆಸ್ ಪ್ರೆಸಿಡೆಂಟ್ ಮೌಲಾನಾ ಅಬುಲ್ ಕಲಾಂ ಅಜಾದರು ಸಿಮ್ಲಾ ಸಂಧಾನ ಕುರಿತು ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು.

ಮೌಲಾನಾ ಅಜಾದರು ತಮ್ಮ ಹೇಳಿಕೆಯನ್ನು ಮುಂದುವರಿಸುತ್ತಾ ನುಡಿದಿರುವುದೇನೆಂದರೆ–'ಯುದ್ಧ ವಿಚಾರದಲ್ಲಿ ಭಾರತವು ತನ್ನ ಮನೋಭಿಪ್ರಾಯವನ್ನು ಸ್ವಾತಂತ್ರ್ಯದಿಂದ ಅಹಿಂಸಾ ರೀತಿಯಲ್ಲಿ ತಿಳಿಸುವುದಕ್ಕೆ ಸಹಾ ನಮಗೆ ಅವಕಾಶವಿಲ್ಲ ಭಾರತವು ತನ್ನ ಸ್ವಂತ ನಿರ್ಧಾರದಿಂದ ಯುದ್ಧದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಬೇಕೆಂದು ಕಳೆದ ೧೩ ತಿಂಗಳಿನಿಂದಲೂ ಕೇಳಿತು ನಮ್ಮ ಕೇಳಿಕೆಗಳೆಲ್ಲವೂ ನಿರರ್ಥಕವಾದುವು ಭಾರತವನ್ನು ಬಲಾತ್ಕಾರವಾಗಿ ಯುದ್ಧಕ್ಕೆ ಸೇರಿಸಲಾಗಿದೆ ಕಾಂಗ್ರೆಸು ಭಾರತದ ಆತ್ಮನಿರ್ಣಯ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ಸರ್ವಪ್ರಯತ್ನ ಮಾಡುವುದು ಈ ಹೋರಾಟದಲ್ಲಿ ಕಾಂಗ್ರೆಸು ವಿನಾಶವಾದರೂ ಚಿಂತೆಯಿಲ್ಲ ಕಾಂಗ್ರೆಸ ಶಾಂತವಾದದ ಬರಿಯ ಒಂದು ಪಂಗಡವಲ್ಲ ಇಂಗ್ಲೆಂಡಿನಲ್ಲಿ ಶಾಂತವಾದದ ಪಂಗಡವೊಂದಿರಬಹುದು ಆದರೆ ಕಾಂಗ್ರೆಸು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಸಂಸ್ಥೆ. ಇದನ್ನು ಬ್ರಿಟನು ಗಮನಿಸಬೇಕು.

ಉಗ್ರಪಕ್ಷದ ಪ್ರಮುಖರಾದ ಕಾಮ್ರೇಡ ಎಂ ಎನ್. ರಾಯರನ್ನು ಸಂಯುಕ್ತ ಪ್ರಾಂತ ಕಾಂಗ್ರೆಸ್ ಕಮಿಟಿಯವರು ಒಂದು ವರ್ಷ ಹೊರಗೆ ಹಾಕಿದರು

TO ALL WHOM IT MAY CONCERN:

Please take notice that Messrs. Panemangalore Venkatraya Pai son of Sri P. Srinivasa Pai residing in Panemangalore, Mangalore Taluk and Sri P. Madhava Rao son of P. Narayana Shenoi, residing in Mangalore, have retired from the firm known as Messrs. P V. Pai & Co., and that by Release Deed executed by the said persons on 2-8-'40 the continuing partners viz., Kasturi Vasudeva Pai, Kasturi Seshagiri Pai and Kasturi Laxman Pai are solely entitled to all the assets of the said firm including the outstandings, the goodwill as well as the trade name of the firm.

Mangalore, 7—10—1940 } (Sd.) Kasturi Laxman Pai.

ಆಸ್ಟ್ರೇಲಿಯನ್ ಸೈನಿಕರ ಬರ್ಬರ ವರ್ತನೆ

ಮಹಾತ್ಮ ಗಾಂಧಿಯವರ ಲೇಖ

ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಈ ವಾರ ಬರೆದ ಅಗ್ರಲೇಖದ ಸಂಕ್ಷಿಪ್ತಾಂಶವು ಈ ಕೆಳಗಿನಂತೆ ಇದೆ. ಮುಂಬಯಿ ಪಟ್ಟಣದಲ್ಲಿ ಆಸ್ಟ್ರೇಲಿಯದಿಂದ ಅನೇಕ ಸೋಲ್ಜರರು ಬಂದು ಊರಲ್ಲಿ ಮರ್ಕಟ ಚೇಷ್ಟೆಗಳನ್ನು ಮಾಡುತ್ತಿರುವ ಸಂದರ್ಭದಲ್ಲಿ ಅವರಿಗೆ ಅನೇಕರು ಪತ್ರಗಳನ್ನು ಬರೆದಿರುವರು. ಅವುಗಳಲ್ಲಿ ಒಂದನ್ನು ಉದಾಹರಿಸಿ ಅವರು ಬರೆದಿರುವರು.

ಓರ್ವ ಪತ್ರಲೇಖಕನು ನನಗೆ ಬರೆದ ಪತ್ರದ ಸಾರಾಂಶವು ಈ ರೀತಿ ಇದೆ.

ನೀವು ನಾಗರಿಕ ಸ್ವಾತಂತ್ರ್ಯದ ಹಕ್ಕುಗಳನ್ನು ಕುರಿತು ಕೇಳಲು ವ್ಹಾಯಿಸರಾಯರತ್ತ ಹೋಗುತ್ತಿರುವಾಗ ಈ ಪತ್ರವು ನಿಮಗೆ ಪ್ರಯೋಜನಕಾರಿ ಆಗುವುದು.

ಈಗ ಮುಂಬಯಿ ಪಟ್ಟಣದಲ್ಲಿ ನೂರಾರು ಆಸ್ಟ್ರೇಲಿಯನ ಸೋಲ್ಜರರು ಕುಣಿದಾಡುತ್ತಿರುವರು. ಯಾವುದೇ ವಿಶಿಷ್ಟ ಜನಾಂಗ ಜಾತಿ ಮುಂತಾದವುಗಳ ಬಗ್ಗೆ ನನಗೆ ಯಾವ ದೂಷಿತಗ್ರಹವೂ ಇಲ್ಲ. ಆದರೆ ಒಂದು ವಾರದ ವರೆಗೆ ಅವರು ಈ ಊರಲ್ಲಿ ನಡೆಸಿದ ಕ್ರೀಡೆಗಳನ್ನು ನಿರೀಕ್ಷಿಸಿದರೆ ಅವರು ಮಾನವರಲ್ಲ ಎಂದು ಬಹಳ ದುಃಖದಿಂದ ಅನ್ನಬೇಕಾಗುತ್ತಿದೆ. ಹೀಗೆ ಅನ್ನಲು ನನಗೆ ಸಾಕಷ್ಟು ಆಧಾರಗಳಿವೆ. ಬ್ರಿಟಿಷರು ಜರ್ಮನರನ್ನು ಪಶುಗಳೆಂದು ಸಂಬೋಧಿಸುತ್ತಿರುವರು; ತಮ್ಮ ಸೈನಿಕರು ವೀರರು, ಶೂರರು ಎಂದು ಹೇಳಿಕೊಳ್ಳುವರು. ಆದರೆ ನಾನು ನೋಡಿದ ಪ್ರಕಾರಗಳು ಬೇರೆ ಭಾವನೆಯನ್ನುಂಟುಮಾಡುತ್ತಿವೆ.

ಈ ಆಸ್ಟ್ರೇಲಿಯನ್ ಸೈನಿಕರು ಬಹಳ ಗಂಭೀರ ಪೀಡೆ ಕೊಡುತ್ತಿರುವರು. ನಿಮಗೆ ಯಥಾರ್ಥ ಕಲ್ಪನೆಯಾಗಬೇಕೆಂಬ ಉದ್ದೇಶದಿಂದ ನಾನು ಹಲವು ಉದಾಹರಣೆಗಳನ್ನು ಕೊಡುತ್ತಿರುವೆನು.

(೧) ಒಬ್ಬ ಸೈನಿಕನು ಓರ್ವ ಗುಜರಾಥಿ ಹುಡುಗಿಯನ್ನು ಹಿಡಿದು ಆಕೆ ತನ್ನೊಡನೆ ಬೀದಿಯಲ್ಲಿಯೇ ಕುಣಿಯುವಂತೆ ಮಾಡಿದನು. ಉಳಿದ ಏಳು ಜನರು ಸುತ್ತಲೂ ಕುಣಿದು ನಲಿದಾಡಿದರು. ಇದೊಂದು ನಿರ್ಜನ ಬೀದಿಯಲ್ಲಿ ಆದ ಸಂಗತಿ.

(೨) ಇನ್ನೊಬ್ಬನು ಒಬ್ಬ ಹುಡುಗಿಯ ಗಲ್ಲ ಕಡಿದು ಆಕೆಯನ್ನು ರಕ್ತಬಂಭಾಳ ಸ್ಥಿತಿಯಲ್ಲಿಯೆ ಬಿಟ್ಟು ಹೊರಟುಹೋದನು.

(೩) ಒಂದು ದಿನ ಸಾಯಂಕಾಲ ಓರ್ವ ಪಾರ್ಶಿಜಾತಿಯ ಹೆಣ್ಣುಮಗಳನ್ನು ಪ್ರಿನ್ಸ ಆಫ್ ವೇಲ್ಸ ಮ್ಯುಜಿಯಮದ ಹತ್ತಿರ ಹಲವರು ಎಳೆಯುತ್ತಿರುವದನ್ನು ನೋಡಿದೆನು.

(೪) ಆರ್ಮಿ ನೇವ್ಹಿ ಸ್ಟೋರದೊಳಗಿಂದ ಸುಮಾರು ೨೦ ಸೈನಿಕರು ಬ್ರ್ಯಾಂಡಿ ಬಾಟಲಿಗಳನ್ನು ಹಿಡಕೊಂಡು ಕುದಿದು ಧುಂದರಾಗಿ ಹೊರಗೆ ಬಂದರು. ಒಬ್ಬನು ತನ್ನ ಚೊಣ್ಣ ಕಳೆದು ಬೀದಿಯಲ್ಲಿಯೇ ಬತ್ತಲೆ ಆದನು.

(೫) ಟ್ಯಾಕ್ಸಿ ಮತ್ತು ವಿಕ್ಟೋರಿಯಾದವರನ್ನು ಪೀಡಿಸುವದಂತೂ ಸಾಮಾನ್ಯವಾಗಿದೆ. ಆರೆಂಟು ಜನರು ಟ್ಯಾಕ್ಸಿಯಲ್ಲಿ ಇಲ್ಲವೆ ವಿಕ್ಟೋರಿಯಾದಲ್ಲಿ ಕುಳಿತು ತಿರುಗಾಡಿ ಅವರಿಗೆ ಬಾಡಿಗೆ ಕೊಡದೆ ಹೋಗುವರು.

(೬) ಬೇಕಾದ ಹಾಟೆಲುಗಳಲ್ಲಿ ಸೇರಿ ಬೇಕಾದ್ದನ್ನು ತಿಂದು ಹಣಕೊಡದೆ ಹೊರಟು ಹೋಗುವರು. ಇವುಗಳಲ್ಲಿ ೩,೪, ೫ ಮತ್ತು ೬ ಇವುಗಳನ್ನು ನಾನು ಸ್ವತಃ ನೋಡಿರುವೆನು. ಉಳಿದವುಗಳನ್ನು ಗೆಳೆಯರು ಹೇಳಿರುವರು.

ಇದನ್ನೆಲ್ಲ ವ್ಹಾಯಿಸರಾಯರು ಅರಿತುಕೊಳ್ಳಬೇಕು ಅಂದರೆ ಯಾವ ಬಗೆಯ ಸೈನಿಕರನ್ನು ಕಟ್ಟಿಕೊಂಡು ಅವರು ಯುದ್ಧವನ್ನು ಹೂಡಿರುವರೆಂಬುದು ಅವರಿಗೆ ಗೊತ್ತಾಗುವುದು. ಎಲ್ಲ ಸೈನಿಕರು ಹೀಗೆ ಇರುವರೆಂದು ನನ್ನ ಅಂಬೋಣವಲ್ಲ ಆದರೆ ನಾನು ನೋಡಿದ್ದನ್ನು ಹೇಳಿದ್ದೇನೆ.

ನನಗೆ (ಗಾಂಧಿಯವರಿಗೆ) ಈ ಬಗೆಯ ಅನೇಕ ಪತ್ರಗಳು ಬಂದಿವೆ. ಇಂಥ ಕಥೆಗಳು ಸುಳ್ಳಿರಬಹುದೆಂದು ಮೊದಲು ನಾನು ತಿಳಕೊಂಡಿದ್ದೆನು. ನಾನು ವಾರ್ಧಾಕ್ಕೆ ಹೋಗುವಾಗ ಹಲವರು (ಸೈನಿಕರು) ಸ್ಟೇಷನ್ನಿನ ಮೇಲೆ ಇದ್ದರು. ಅವರಿಗೆ ನಾನು ಕೇಳಿದ ಮಾತುಗಳನ್ನು ಹೇಳಿದೆನು. ಅದನ್ನೆಲ್ಲ ಸರಿಪಡಿಸುವೆವೆಂದು ಅವರು ಹೇಳಿದರು. ಆದರೆ ಅವರ ಕೈಯಲ್ಲಿಲ್ಲವೆಂದು ಈಗ ಊಹಿಸಬಹುದಾಗಿದೆ.

ವ್ಹಾಯಿಸರಾಯರಿಗೆ ನಾನು ಈ ಸಂಗತಿಗಳನ್ನೆಲ್ಲ ಹೇಳಿದೆನು. ಇದರ ಬಗ್ಗೆ ವಿಚಾರಣೆ ಮಾಡುವೆನು ಎಂದು ಅವರು ವಚನಕೊಟ್ಟರು. ಇದೆಲ್ಲ ನಿಜವಿದ್ದರೆ ಪರಿಸ್ಥಿತಿ ಗಂಭೀರವಿದೆ ಎಂದು ಅವರು ಅಂದರು. ದಕ್ಷಿಣ ಆಫ್ರಿಕದಲ್ಲಿದ್ದಷ್ಟೆ ವರ್ಣ ದ್ವೇಷವು ಆಸ್ಟ್ರೇಲಿಯದಲ್ಲಿಯೂ ಇದ್ದಂತೆ ತೋರುತ್ತದೆ. ೪೦ ಕೋಟಿ ಜನರ ರಾಷ್ಟ್ರವನ್ನು ಒಂದೇ ಲಕ್ಷ ಜನರು ಆಳುತ್ತಿರುವರೆಂಬ ಬಳಿಕ ಈ ರಾಷ್ಟ್ರದ ಜನರನ್ನು ಆ ಆಸ್ಟ್ರೇಲಿಯನ್ ಸೈನಿಕರು ನಮ್ಮ ಹುಡುಗೆಯರನ್ನು, ವಿಕ್ಟೋರಿಯಾದವರನ್ನು ಅಥವಾ ಪೋಲೀಸರನ್ನು ಸಹ ನಡೆಸಿಕೊಳ್ಳುತ್ತಿರುವಂತೆ ನಡೆಸಲು ಚಿಂತೆಯಿಲ್ಲ ಎಂದು ಬಿಳಿಯರು ತಿಳಿದಿರಲಿಕ್ಕೆ ಸಾಕು. ಯುದ್ಧದ ಮೂಲಕ ಬಿಳಿಯರ ವರ್ತನೆಯಲ್ಲಿ ಏನೂ ಬದಲಾವಣೆ ಆದಂತಿಲ್ಲ.

ಈ ವಿಷಯವೆಲ್ಲ ನಿಜವಿದ್ದುದಾದರೆ ಇದರಲ್ಲಿ ಎರಡು ಮಹತ್ವದ ಸಂಗತಿಗಳಿವೆ. ನನಗೆ ಬರೆದವರೆಲ್ಲರೂ ಕಾಲ್ಪನಿಕ ಸಂಗತಿಗಳನ್ನು ಬರೆದಿರುವುದು ಅಶಕ್ಯವು. ಈಗ ಸೈನ್ಯಾಧಿಕಾರಿಗಳು ಈ ಬಗ್ಗೆ ಏನು ಕೆಲಸ ನಡೆಸಿರುವರು? ವ್ಹಾಯಿಸರಾಯರು ಪಾಪ, ಒಂದೇ ಒಂದು ವ್ಯಕ್ತಿ. ಕೆಳಗಿನ ಅಧಿಕಾರಿಗಳ ಸಹಕಾರವಿಲ್ಲದಿದ್ದರೆ ಅವನು ನಿರ್ಮಾಲ್ಯದಂತೆ ಆಗುವನು. ಕೆಳಾಧಿಕಾರಿಗಳ ಕೈಯು ನಡೆದು ವ್ಹಾಯಿಸರಾಯನು ಕೇವಲ ಒಂದು ಗೊಂಬೆಯ ಸ್ಥಿತಿಗೆ ಇಳಿಯುವನು. ಗಾಂಧಿ ಇರ್ವಿನ್ ಪಾಕ್ಟದ ಗತಿ ಹೀಗೆಯೇ ಆಯಿತು. ಆದುದರಿಂದ ಈಗ ವ್ಹಾಯಿಸರಾಯನು ಏನು ಮಾಡುವನು ಎಂಬುದಕ್ಕಿಂತ ಆ ಸೈನ್ಯಾಧಿಕಾರಿ ಏನು ಮಾಡುತ್ತಿರುವನು ಎಂಬುದು ಹೆಚ್ಚು ಮಹತ್ವದ್ದಿದೆ. ಅವನು ತನ್ನ ಕೆಳಾಧಿಕಾರಿಗಳಿಗೆ ಯೋಗ್ಯವಾದ ಹುಕುಮುಗಳನ್ನು ಕೊಟ್ಟಿರುವನೋ? ಪೋಲೀಸ ಕಮಿಶನರನು ಏನು ಮಾಡಿರುವನು? ಕಲೆಕ್ಟರನು ಏನು ಮಾಡಿರುವನು? ಗವರ್ನರನು ಸ್ವತಃ ಏನು ಮಾಡುತ್ತಿರುವನು?

ಎರಡನೆಯ ಪ್ರಶ್ನೆಯೆಂದರೆ, ಜನರು ಈ ಬಗ್ಗೆ ನಿರ್ದೋಷ ಹುಡುಗೆಯರ ಸಂರಕ್ಷಣದ ಬಗ್ಗೆ ಏನು ಮಾಡುತ್ತಿರುವರು? ನಗರಾಧ್ಯಕ್ಷನು ಏನು ಮಾಡಿರುವನು? ಅವನು ಈ ಎಲ್ಲ ಸಂಗತಿಗಳನ್ನು ಅಧಿಕಾರಿಗಳಿಗೆ ತಿಳಿಸಿರುವನೋ? ಮುಂಬಯಿ ಕಾಂಗ್ರೆಸ ಕಮೀಟಿಯವರು ಏನು ನಡೆಸಿರುವರು? ಜನಸಾಮಾನ್ಯರು ಏನು ಮಾಡುತ್ತಿರುವರು?

ನಮ್ಮಲ್ಲಿ ಸಾಕಷ್ಟು ಸ್ವಾಭಿಮಾನ ಮತ್ತು ಸಾರ್ವಜನಿಕ ದೃಷ್ಟಿ ಇದ್ದುದಾದರೆ, ಅದು ಹಿಂಸಾತ್ಮಕವೇ ಇರಲಿ ಅಹಿಂಸಾತ್ಮಕವೇ ಇರಲಿ, ಬಿಳಿಯರಾಗಿ, ಕರಿಯರಾಗಲಿ ಅವರವರ ಇಚ್ಛೆಯ ವಿರುದ್ಧ ಯಾವ ಹುಡುಗೆಯ ಮೈಗೂ ಕೈ ಹಚ್ಚುವುದು ಸಾಧ್ಯವಿರಲಿಲ್ಲ. ಇದೆಲ್ಲದರ ಪೂರ್ಣ ವಿಚಾರಣೆಯಾಗಲಿಕ್ಕೆಬೇಕು.

(ಸ್ವ. ಕ.)

ಸೇವಾಗ್ರಾಮದಲ್ಲಿ ಗಾಂಧಿ ಜಯಂತಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಸೇವಾಗ್ರಾಮದ ಪ್ರಶಾಂತ ವಾತಾವರಣದಲ್ಲಿ ಗಾಂಧಿಜಯಂತಿ ಸಪ್ತಾಹವು ಗ್ರಾಮಸ್ಥರ ಸರಳಜೀವನ ಕ್ರಮಾನುಸಾರವಾಗಿ ಅತ್ಯಂತ ನಿಯಮದಿಂದ ಆಚರಿಸಲ್ಪಟ್ಟಿತು.

ತಾ. ೨೬ರಂದು ಸೂತ್ರಯಜ್ಞವು ಪ್ರಾರಂಭವಾಯಿತು. ಅಂದರೆ ದಿನಕ್ಕೆ ೨೪ ತಾಸಿನಂತೆ ಒಂದು ವಾರದ ತನಕ ನೂಲುವುದು ಈ ಯಜ್ಞದ ವ್ರತ.

ಇಲ್ಲಿ ವಾರ್ಧಾಶಿಕ್ಷಣದಲ್ಲಿ ಪದ್ಧತಿಗನುಗುಣವಾಗಿ ನಡೆಸಲ್ಪಡುತ್ತಿರುವ ಚಿಕ್ಕ ಪ್ರಯೋಗ ಶಾಲೆಯ ಮಕ್ಕಳ ಕಾರ್ಯಕಲಾಪಗಳ ಪ್ರದರ್ಶನವು ತಾ. ೨೮ರಂದು ಶ್ರೀ. ಕಿಶೋರಿಲಾಲ್ ಮುಶ್ರುವಾಲಾ ಇವರಿಂದ ತೆರೆಯಲ್ಪಟ್ಟಿತು. ೭ರಿಂದ ೧೪ ವರ್ಷದೊಳಗಿನ ಹುಡುಗರು ತಮ್ಮ ಸ್ವಂತ ನೂಲು ಬಟ್ಟೆಗಳನ್ನು ತಯಾರಿಸಿದುದನ್ನು ಪ್ರದರ್ಶಿಸಲಾಯಿತು. ವಿದ್ಯಾಭ್ಯಾಸವು ಸ್ವಾವಲಂಬಿಯಾಗಿ ನಡೆಸಬಹುದೆಂಬ ತತ್ವದ ಪ್ರಥಮ ಚಿನ್ಹಗಳು ಉತ್ತೇಜನ ಯುಕ್ತವಾಗಿದ್ದವು. ಮುಂದೆ ಈ ಶಾಲೆಯು ಅಖಿಲ ಹಿಂದೂಸ್ಥಾನಕ್ಕೆ ಮಾದರಿಯಾಗಬಹುದೆಂದು ನಿರೀಕ್ಷಿಸಲಾಗಿದೆ.

ತಾ. ೨೯ರಂದು ಚರಕಾ ಸ್ಪರ್ಧೆಯು ನಡೆಯಿತು. ಇದರಲ್ಲಿ ೬ ವರ್ಷದ ಮಕ್ಕಳಿಂದ ೬೦ ವರ್ಷದ ಮುದುಕರ ತನಕ ಮಂದಿಗಳು ಭಾಗವಹಿಸಿದ್ದರು. ೧೨ ವರ್ಷದ ಬಾಲಕನೊಬ್ಬನು ಗಂಟೆಗೆ ೬೫೦ ಗಜ ದಾರವನ್ನು ನೂಲಿದನು. ಅವನಿಗೆ ಮಹಾತ್ಮರು ಪ್ರಥಮ ಬಹುಮಾನ ಕೊಟ್ಟರು. ಇದಲ್ಲದೆ ನೇಯುವುದು, ನೂಲುವ ಹತ್ತಿ ತಯಾರಿಸುವುದು, ಟಕಳಿ, ಧನುಷ್ಯ ತಕಲಿ, ಇವೇ ಮೊದಲಾದ ಅನೇಕ ಖಾದಿ ಸಂಬಂಧ ಕಾರ್ಯಕ್ರಮಗಳಲ್ಲಿ ಸ್ಪರ್ಧೆಗಳೂ ನಡೆದವು.

ತಾ. ೨ರಂದು ವಿವಿಧ ನೂಲುಸಾಧನಗಳಲ್ಲಿ ನೂಲುವ ಪ್ರದರ್ಶನವು ಇತ್ತು. ಒಂದು ಮತ್ತು ಎರಡು ಕೈಯಿಂದ ನೂಲುವ ೧೪ ನಮೂನೆಯ ಚರ್ಕಗಳಲ್ಲಿ ನೂಲುವ ವಿಧಾನವನ್ನು ನಲ್ವಾಡಿಯ ಆಶ್ರಮವಾಸಿ ವಿದ್ಯಾರ್ಥಿಗಳು ಪ್ರದರ್ಶಿಸಿದರು.

ತಾ. ೨ರಂದು ಸಾಯಂಕಾಲ ಮಹಾತ್ಮರು ದಿಲ್ಲಿಯಿಂದ ಇಲ್ಲಿಗೆ ದಯಮಾಡಿಸಿದರು. ಬಹಳ ದಣಿದಿದ್ದರಾದರೂ ಗಾಂಧೀಜಿಯವರು ಅತ್ಯುತ್ಸಾಹ ಆನಂದದಲ್ಲಿದ್ದರು. ಸೇವಾಗ್ರಾಮದ ಹಳ್ಳಿಯಲ್ಲಿ ಅವರ ಭಾಷಣವು ಏರ್ಪಡಿಸಿತ್ತು. ರೈಲಿನಿಂದ ಇಳಿದ ಮಹಾತ್ಮರು ನೆಟ್ಟಗೆ ಭಾಷಣ ವೇದಿಕೆಗೆ ಬಂದು ತಮ್ಮ ಕಾರ್ಯಕ್ರಮವನ್ನು ಪೂರೈಸಿದರು.

ವೈಸ್‌ರಾಯ್ ಭೇಟಿಯ ಸಮ್ಮಂಧ ಪ್ರಶ್ನಿಸಲಾಗಿ ಮಹಾತ್ಮರು ಹೆಚ್ಚೇನೂ ಹೇಳಲಿಷ್ಟಪಡಲಿಲ್ಲ. ಕಾಂಗ್ರೆಸಿನ ಶರ್ತಗಳನ್ನು ಒಪ್ಪುವರೆ ತಮಗಿರುವ ಅಡಚಣಿ ಸಂಕಷ್ಟವನ್ನು ವೈಸ್‌ರಾಯ್ ಸಾಹೇಬರು ಸೂಚಿಸಿದ ವಿಷಯವನ್ನಷ್ಟೆ ಹೇಳಿ ಮಹಾತ್ಮರು "ಹೇಗೂ ಇರಲಿ ಅಹಿಂಸಾವ್ರತವು ನಮ್ಮನ್ನು ಬಿಟ್ಟುಹೋಗಲಾರದು" ಹೀಗೆಂದು ಅಂತ್ಯದಲ್ಲಿ ಬಹಳ ಧೃಢವಾದ ಮಾತಿನಲ್ಲಿ ಗಂಭೀರಯುಕ್ತವಾಗಿ ಹೇಳಿದುದರಲ್ಲಿ ಬಹಳ ಅರ್ಥವಿದೆ.

ಸೇವಾಗ್ರಾಮವನ್ನು ಆದರ್ಶ ಹಳ್ಳಿಯನ್ನಾಗಿ ಮಾಡಲು ಮಹಾತ್ಮರು ತಮ್ಮ ೭೨ನೇ ಜನ್ಮೋತ್ಸವ ಕಾಲದಲ್ಲಿ ನಿರ್ಧಾರ ಮಾಡಿದಂತೆ ತೋರುತ್ತದೆ. ಭಾಷಣ ಮಧ್ಯದಲ್ಲಿ ಅವರು ಹೀಗೆಂದರು "ಯಾರಿಗಾದರೂ ಪಾರಮಾರ್ಥಿಕ ಸಾಧನೆಬೇಕಾದರೆ ಅವರು ಸೇವಾಗ್ರಾಮಕ್ಕೆ ಬರಬೇಕು. ದೇಶೋದ್ಧಾರ ಸಾಧಕರೂ, ಗ್ರಾಮೋದ್ಧಾರ ಸೇವಕರೂ, ಶರೀರಶ್ರಮ ಸಾಧಕರೂ, ಯಂತ್ರಶೋಧಕರೂ, ಆರೋಗ್ಯ ಸಾಧಕರೇ ಆದಿಯಾಗಿ ಸರ್ವರೂ ಸೇವಾಗ್ರಾಮದ ಕಡೆಗೆ ಧಾವಿಸಿ ಬಂದು ತಮ್ಮ ತಮ್ಮ ಉದ್ದೇಶವನ್ನು ಪೂರೈಸಿಕೊಳ್ಳಲು ಶಕ್ತರಾಗುವಂತೆ ತಮ್ಮೆಲ್ಲರ ಸಹಾಯವು ಒದಗಲೆಂದು ನಾನು ಪ್ರಾರ್ಥಿಸುತ್ತೇನೆ."

ವಿಚಿತ್ರ ಪ್ರಪಂಚ

ಫ್ರೆಡ್‌ಸ್ನ್ಯಾಟನ ಹೆಂಡತಿ ಗರ್ಭಿಣಿಯಾಗಿದ್ದಾಳೆ!

ಸಾಯಲಿಕ್ಕಾದವರನ್ನು ಮಾತ್ರ ಕಬ್ಬಿಣದ ಶ್ವಾಸಕೋಶಗಳಲ್ಲಿ ಇಟ್ಟು ಕೃತ್ರಿಮ ಶ್ವಾಸದ ಮೂಲಕ ಅವರನ್ನು ಸ್ವಲ್ಪ ಹೊತ್ತು ಬದುಕಿಸುವುದುಂಟು. ಆದರೆ ಅಮೇರಿಕದ ಒಬ್ಬ ಮಿಲಿಯಾಧಿಪತಿಯ ಮಗನಿಗೆ ನಾಲ್ಕು ವರ್ಷಗಳ ಮೊದಲು ಕೆಲವು ವೈದ್ಯರು ಆರನೂರು ರಾತಲು ಭಾರದ ಉಕ್ಕಿನ ಶ್ವಾಸಕೋಶಗಳನ್ನು ತೊಡಿಸಿ ಅವನನ್ನು ಈ ದಿನದ ತನಕವೂ ಬದುಕಿಸಿರುವರು ಮಾತ್ರವಲ್ಲ ಇನ್ನೂ ಅವನು ಬದುಕುವ ಹಾಗೆ ತೋರುತ್ತಾನೆ. ಅಷ್ಟು ಭಾರದ ಶ್ವಾಸಕೋಶಗಳನ್ನು ಇಟ್ಟಿರುವುದರಿಂದ ಅವನಿಗೆ ನಿಂತು ನಡೆಯಲಿಕ್ಕೆ ಆಗುವುದಿಲ್ಲ. ಎರಡು ಹೆಜ್ಜೆಗಳನ್ನು ಇಡಬೇಕಾದರೂ ಅವನು ಇಬ್ಬರು ಆಳುಗಳ ಸಹಾಯವನ್ನು ಪಡೆಯಬೇಕಾಗುತ್ತದೆ. ಫ್ರೆಡಸ್ನ್ಯಾಟನೆಂದು ಪ್ರಸಿದ್ಧನಾಗಿರುವ ಈ ಮಹಾಶಯನು ನಡೆಯಲಿಕ್ಕಾಗದ ಈ ವಿಕಲಾಂಗಿಯು ಕಳೆದ ಆಗೋಸ್ತು ತಿಂಗಳಲ್ಲಿ ಒಬ್ಬ ಹುಡುಗಿಯನ್ನು ಮೋಹಿಸಿ ಅವಳನ್ನು ಮದುವೆಯಾದ. ಈಗ ಅವಳು ಗರ್ಭಿಣಿಯಾಗಿದ್ದಾಳೆ ಆಶ್ಚರ್ಯವಲ್ಲವೇ?

ಮಾನವರೂಪದ ಕುದುರೆ

ಈ ಹೆಸರಿನಿಂದ ಅಮೇರಿಕದಲ್ಲೆಲ್ಲ ಪ್ರಸಿದ್ಧನಾದ ಜೋರ್ಜ ಎಶರನು ಸ್ವಲ್ಪ ಸಮಯದ ಮೊದಲು ಗತನಾದ. ಇದರಿಂದ ಅಮೇರಿಕದ ಒಂದು ವಿಚಿತ್ರ ಜೀವಿಯು ಕಣ್ಮರೆಯಾದ ಹಾಗಾಯಿತು. ಇವನು ಒಬ್ಬ ಲಕ್ಷಾಧಿಪತಿಯ ಮಗನಾಗಿದ್ದ. ಆತನಿಗೆ ಪ್ರಪಂಚದ ಎಲ್ಲಾ ಸುಖಗಳು ಪ್ರಾಪ್ತವಾಗಿದ್ದುವು. ತಾನು ಮೆಚ್ಚಿದ ಒಬ್ಬ ಹೆಣ್ಣಿನ ಸುಖವು ಪ್ರಾಪ್ತವಾಗಿರಲಿಲ್ಲ. ಅವನು ಮೇರಿಯನ್ನು ಮೋಹಿಸಿ ಅವಳು ತನ್ನನ್ನು ವಿವಾಹವಾಗುವಂತೆ ಪರಿಪರಿಯಿಂದ ಕೇಳಿಕೊಂಡ ಅವಳು ಅದಕ್ಕೆ ಒಪ್ಪಲಿಲ್ಲ. ಮಾತ್ರವಲ್ಲ 'ನೀನು ಕುದುರೆ ಮುಖದವ, ನಿನ್ನನ್ನು ಹೇಗೆ ಮದುವೆಯಾಗಲಿ?' ಎಂದು ಬೈದು ಭಂಗಿಸಿದಳು. ಅವಳ ಈ ಮಾತುಗಳಿಂದ ಅವನ ತಲೆಯೇ ಕೆಟ್ಟಿತು. ಜೀವನದಲ್ಲಿ ಅವನಿಗೆ ಜಿಗುಪ್ಸೆ ಹುಟ್ಟಿತು ಮುಂದೆ ಅವನು ಕುದುರೆಯ ಹಾಗೆ ಗಡ್ಡಮೀಸೆಗಳನ್ನು ಬೆಳಸಿ, ಕುದುರೆಯ ಹಾಗೆಯೇ ಕೈಕಾಲುಗಳಿಂದ ನಡೆಯುತ್ತಿದ್ದ ಕುದುರೆಯ ಹಾಗೆಯೇ ಕಾಳು ಕಡ್ಡಿ ತಿಂದು ಕುದುರೆಯ ಹಾಗೆಯೇ ಜೀವಿಸುತ್ತಿದ್ದ ಅಮೇರಿಕಕ್ಕೆ ಹೋದವರಿಗೆಲ್ಲ ಅವನೊಬ್ಬ ಪ್ರದರ್ಶನದ ವಸ್ತುವಾಗಿ ಪರಿಣಮಿಸಿದ್ದ

ಪ್ರತಿಕೂಲ ದಾಂಪತ್ಯದ ವಿಚಿತ್ರ ಮಾದರಿ!

ವಿಲಾಯತಿಯಲ್ಲಿ ಆಧುನಿಕ ಶಿಕ್ಷಣವನ್ನು ಪಡೆದು ಭದ್ರಪಹಿಳೆ ಎಂದು ಹೆಸರು ಪಡೆದ ಡಿಲ್ಲಿಯ ಛಿದರ್ಗನ್ನ ಜೇಹಾನ ಬೇಗಮು ಎಂಬ ಒಬ್ಬ ಮುಸಲ್ಮಾನ ಹೆಂಗಸು ತನ್ನ ಪತಿ ತನ್ನ ಶೋಕವನ್ನು ಮೆಚ್ಚುವದಿಲ್ಲವೆಂದು ಢಿಲ್ಲಿಯ ಒಂದು ಕೋರ್ಟಿನಲ್ಲಿ ದಾಂಪತ್ಯ ವಿಚ್ಛೇದಕ್ಕೆ ಅರ್ಜಿ ಹಾಕಿರುವಳು. ಶೋಕಾದ ಈ ಹುಡುಗಿಯ ಗಂಡನಿಗೆ ಅವಳ ರೀತಿ ನೀತಿ, ಶೃಂಗಾರ, ಅಲಂಕಾರ, ಒನಪು ಒಯ್ಯಾರಗಳು ರುಚಿಸುವುದಿಲ್ಲವಂತೆ. ಆದ್ದರಿಂದ ಅವನು ಅವಳನ್ನು ಯಾವಾಗಲೂ ಹೊಡೆಯುತ್ತ, ಬಡೆಯುತ್ತ ಇರುತ್ತಾನೆ. ಆದ್ದರಿಂದ ಅವಳು ಈ ದಾವೆಯನ್ನು ತಂದಿದ್ದಾಳೆ. 'ಇದು ಸಾಮಾನ್ಯ ವಿಷಯ. ಹೇಗಾದರೂ ರಾಜಿ ಮಾಡಿಕೊಂಡು ಸುಖದಿಂದ ಇರಿ' ಎಂದು ಜಡ್ಜರು ಬೋಧನೆ ಕೊಟ್ಟರೂ ಅವಳು ಕೇಳಿರುವುದಿಲ್ಲ 'ಶೋಕನ್ನು ಮೆಚ್ಚದ ಗಂಡನೊಂದಿಗೆ ಇದ್ದರೆ ಪ್ರಾಣಕ್ಕೆ ಸಂಚಕಾರವಾದೀತ.' ಎಂದು ಅವಳು ಹೇಳಿದ್ದಾಳೆ ಪ್ರತಿಕೂಲ ದಾಂಪತ್ಯಕ್ಕೆ ಇದೊಂದು ವಿಚಿತ್ರ ದೃಷ್ಟಾಂತವಾಗಿದೆ

ಮನುಷ್ಯರನ್ನು ಪೋಷಿಸುವ ಹುಳುಗಳು!

ತಾನು ಪ್ರಪಂಚವನ್ನೇ ಪೋಷಿಸುವವ ಎಂಬ ಹೆಮ್ಮೆ ಮನುಷ್ಯನಿಗೆ ಇದ್ದಿರಬಹುದು. ಆದರೆ ಅಲ್ಪವಾದ ಹುಳುಗಳು ಮಿಲಿಯಾಂತರ ಮನುಷ್ಯರನ್ನು ಪೋಷಿಸುತ್ತವೆ ಚಿನ್ನದ ಸವುಟಿಗಾದರೂ ಮಣ್ಣಿಗೋಡೆಯ ಆಧಾರ ಬೇಕೆಂಬುದನ್ನು ಅವುಗಳು ಚೆನ್ನಾಗಿ ತೋರಿಸಿಕೊಟ್ಟಿವೆ ಜಪಾನು ರೇಶ್ಮೆ ಹುಳುಗಳಿಗಾಗಿ ಬಹಳ ಪ್ರಸಿದ್ಧವಾಗಿದೆ ಜಪಾನಿನ ರೇಶ್ಮೆಯು ಪ್ರಪಂಚದ ಎಲ್ಲ ಭಾಗಗಳಿಗೆ ರಫ್ತಾಗುತ್ತದೆ ರೇಶ್ಮೆಹುಳು ಅಂದರೆ ಒಂದು ಸಣ್ಣ ಜೀವಿ ಆದರೆ ಅದು ಜಪಾನಿನ ಹದಿನೆಂಟು ಮಿಲಿಯ ಜನರಿಗೆ ಅನ್ನಬಟ್ಟೆಗಳನ್ನು ಕೊಟ್ಟು ಪೋಷಿಸುತ್ತದೆ ಚೀನದಲ್ಲಿ ನ ತ್ತೈಪ್ಪೋ ಮಿಲಿಯ ಜನರು ರೇಶ್ಮೆಹುಳುಗಳನ್ನು ಸಾಕಿ ಬದುಕುತ್ತಿರುವರು

ಸಂತತಿ ಬೆಳೆಸಲಿಕ್ಕೆ ಪ್ರೋತ್ಸಾಹ

ನಮ್ಮ ದೇಶದಲ್ಲಾದರೆ ಬೇಕುಬೇಕಿಲ್ಲದೆ ಹುಟ್ಟಿದ ಮಕ್ಕಳನ್ನು ಸಾಕುವುದು ಹೇಗೆಂಬ ಚಿಂತೆ ಪ್ರತಿಯೊಬ್ಬ ಹೆತ್ತವನ ತಲೆ ಹತ್ತಿರುವಾಗ ರಷ್ಯ,ಜರ್ಮನಿ ಇಟಲಿ ಜಪಾನು ಮೊದಲಾದ ದೇಶಗಳಲ್ಲಿ ಸಂತತಿಯನ್ನು ಬೆಳೆಸಲಿಕ್ಕೆ ಸರಕಾರಗಳೇ ಪ್ರೋತ್ಸಾಹ ಕೊಡುತ್ತವೆ ಸಂತತಿ ಇಲ್ಲದವರನ್ನು ಅಲ್ಲಿಯ ಜನರು ದುರ್ಭಾಗಿಗಳೆಂದು ತಿಳಿಯುತ್ತಾರೆ. ಯಾರು ಎಷ್ಟು ಹೆಚ್ಚಿಗೆ ಮಕ್ಕಳನ್ನು ಜನಿಸುತ್ತಾರೋ, ಅಷ್ಟಕ್ಕೆ ಅವರ ಭಾಗ್ಯವು ಬೆಳೆಸುತ್ತದೆ ಪ್ರಾಯಕ್ಕೆ ಬಂದವರು ಮಕ್ಕಳನ್ನು ಜನಿಸದಿದ್ದರೆ ಅದು ಅಪರಾಧವಾಗುತ್ತದೆ. ಹೆಚ್ಚು ಮಕ್ಕಳನ್ನು ಜನಿಸಿದವರಿಗೆ ಬಹುಮಾನಗಳನ್ನೂ ಪುರಸ್ಕಾರಗಳನ್ನೂ ಕೊಟ್ಟು ಮನ್ನಿಸುತ್ತಾರೆ. ಅಕ್ರಮ ಸಂಬಂಧದಿಂದ ಮಕ್ಕಳು ಹುಟ್ಟಿದರೂ ಯಾರೂ ಅವರನ್ನು ತೆಗಳುವುದಿಲ್ಲ ಸರಕಾರವು ಅವುಗಳನ್ನು ತನ್ನ ಪೋಷಣೆಗೆ ತೆಗೆದುಕೊಳ್ಳುತ್ತದೆ ಅಲ್ಲಿ ಆಗಾಗ ಆಗುತ್ತಿರುವ ಸಂಶೋಧಗಳಿಗ ಮಕ್ಕಳ ಸಂಖ್ಯೆ ಬೆಳೆಯುವುದು ಅಗತ್ಯವೆಂದು ಹೇಳುತ್ತಾರೆ ಈ ಯುದ್ಧದಲ್ಲಿ ಫ್ರಾನ್ಸಿನ ಪತನವಾಗಲಿಕ್ಕೆ ಅಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದದೇ ಕಾರಣವಾಯಿತೆಂದು ಅನೇಕ ಮಂದಿ ಊಹಿಸಿದ್ದಾರೆ

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

'BHUVANENDRA AMRITHPRASH"

which will tone the nervous system. build healthy tissues and enrich the blood.

Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, - ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟಿ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಕನ್ನಡವೆಂದರೆ ನನ್ನದೆ ನಲಿವುದು!

ನಾಡಹಬ್ಬದ ಹಾಡು!

ದಸರೆಯ ಪೂಜೆ—ಪ್ರಕೃತಿ ಪೂಜೆ!

ದಸರೆಯು ಹಬ್ಬ ಕನ್ನಡ ನಾಡ ಹಬ್ಬ! ಕನ್ನಡ ನಾಡು, ದಸರಾ ಮಹೋತ್ಸವದ ಸಮಯದಲ್ಲಿ, ಪ್ರಕೃತಿ ಸುಂದರವಾಗಿ ನವೋಲ್ಲಾಸಗೊಂಡು ನಲಿಯುತ್ತದೆ! ಮಳೆಗಾಲವು ಮುಗಿದು, ಶುಭ್ರ ಶರತ್ಕಾಲವು ಕಾಲಿಡುವಂದು ಜೀವಕೋಟಿಗಳೆಲ್ಲಾ ನೂತನ ಚೇತನದಿಂದ ಹುರುಪುಗೊಳ್ಳುತ್ತವೆ! ನೆಲವು ಸುತ್ತಲು ಬೆಳೆಗಳಿಂದ ತುಂಬಿದ ಫಲಗಳಿಂದ ಕಂಗೊಳಿಸುತ್ತದೆ! ನಿರ್ಮಲ ಸಲಿಲದಿಂದ ನದಿಗಳು ನಿನದಿಸುತ್ತವೆ. ಹಕ್ಕಿಗಳು ಆತ್ಮಾನಂದದಿಂದ ಎಲ್ಲೆಡೆಗಳಲ್ಲಿಯೂ ಹಾಡುತ್ತವೆ. ನಕ್ಷತ್ರ ಮಂಡಲದೊಡನೆ ಚಂದ್ರಮನು ಶುಭ್ರನಾಗಿ ಬೆಳಗುತ್ತಾನೆ! ಇಂತಹ ಅಪೂರ್ವ ಆನಂದ ಸಮಯದಲ್ಲಿ ಕನ್ನಡ ನಾಡಿನ ನಾಡಹಬ್ಬ ದಸರೆಯು ಬರುವುದು!

ಪ್ರಕೃತಿ ಪೂಜೆಗೆ ಧಾರ್ಮಿಕ ರೂಪ

ಹಿಂದಿನ ಕಾಲದಲ್ಲಿ ದಸರೆಯು, ನವರಾತ್ರಿಯು, ಒಂದು ಧಾರ್ಮಿಕ ಉತ್ಸವವಾಗಿತ್ತು! ನವರಾತ್ರಿಯೆಂದರೆ ಒಂಬತ್ತು ರಾತ್ರಿ. ಪ್ರತಿ ರಾತ್ರಿಯೂ ವಿವಿಧ ರೂಪ ರಂಜಿತಳಾದ ದೇವಿಗೆ, ಪ್ರಕೃತಿ ಮಾತೆಗೆ ಅರ್ಚನೆ ಸಲಿಸುತ್ತಾರೆ. ಕೊನೆಯ ದಿನ ವಾಗೀಶ್ವರಿಯಾದ ಸರಸ್ವತಿಯನ್ನು ಆರಾಧಿಸುತ್ತಾರೆ. ನಮ್ಮ ಮಾತನ್ನು, ಮನಸ್ಸನ್ನು, ಜೀವನವನ್ನು ಪಾವನಗೊಳಿಸುವ ಶಾರದೆಯನ್ನು ವಿಶೇಷವಾಗಿ ಅಂದು ಪೂಜಿಸುತ್ತಾರೆ.

ಅಂತೂ ಈ ತೆರದ ಧಾರ್ಮಿಕ ಆಚರಣೆಯಲ್ಲಿಯೂ ವಿಶೇಷವಾಗಿ ಪ್ರಕೃತಿ ಪೂಜೆಯೇ ತುಂಬಿದೆ. ಪ್ರಕೃತಿಯೇ ಪ್ರತ್ಯಕ್ಷ ದೇವರು. ನಿಜವಾಗಿ ನೋಡಿದರೆ ದಸರಾ ಪೂಜೆಯು ಪ್ರಕೃತಿ ಪೂಜೆಯೆನ್ನಲು ಯಾವ ಅಡ್ಡಿಯೂ ಇಲ್ಲ. ಈ ಪೂಜೆಗೆ ಯಾವ ಜಾತಿ, ಯಾವ ಕುಲದವರಾದರೇನು? ಕನ್ನಡಿಗರೆಲ್ಲರೂ ಇಂತಹ ಆತ್ಮಾನಂದದ ಕಾಲದಲ್ಲಿ ತಮ್ಮ ನಾಡಹಬ್ಬವನ್ನು ಇಂದು ಆಚರಿಸುತ್ತಿದ್ದಾರೆ. ತಾವೆಲ್ಲರೂ ಒಂದೇ ತಾಯಿಯ ಮಕ್ಕಳೆಂದು ಆನಂದದಿಂದ ಒಟ್ಟುಗೂಡಿ ಹಬ್ಬದೂಟವನ್ನುಣ್ಣುತ್ತಾರೆ!

ರಾಷ್ಟ್ರೀಯ ಸ್ವರೂಪ

ದಸರೆಯ ಹಬ್ಬಕ್ಕೆ ಕನ್ನಡನಾಡಿನ ರಾಷ್ಟ್ರೀಯೋತ್ಸವದ ರೂಪವು ಬಂದುದು ಇಂದು ನಿನ್ನೆಯಿಂದಲ್ಲ. ಕನ್ನಡ ಕಾವ್ಯಗಳಲ್ಲಿ ಇತಿಹಾಸಗಳಲ್ಲಿ, ಪರಂಪರೆಯಿಂದ ನಾಡಹಬ್ಬವಾಗಿರುವ ಉಲ್ಲೇಖವಿದೆ. ನವರಾತ್ರಿಯು ಇಂದು ಕನ್ನಡನಾಡಿನ ಹಿರಿಯ ದೊರೆಗಳೆನಿಸಿದ, ಮೈಸೂರ ಪ್ರಭುಗಳು ದಸರೆಯ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಬಹು ಹಿಂದಿನಿಂದಲೇ ಆಚರಿಸುತ್ತಾ ಬಂದಿದ್ದಾರೆ. ಮೈಸೂರ ದಸರೆಯೇ ಒಂದು ರೀತಿಯಿಂದ ಕನ್ನಡಿಗರಲ್ಲಿ ನವರಾತ್ರಿಯು ಕನ್ನಡದ ವಿಶಾಲವಾದ ನಾಡಹಬ್ಬವೆಂಬ ಭಾವನೆಯನ್ನು ಅಚ್ಚಳಿಯದೆ ನಿಲ್ಲುವಂತೆ ಮಾಡಿತು ಎಂದರೂ ಸರಿಯಾಗಬಹುದು.

ಎಚ್ಚತ್ತ ಕರ್ನಾಟಕದಲ್ಲಿ

ಈ ಗಾಂಧೀ ಯುಗದಲ್ಲಿ ಅಖಿಲ ಭಾರತವೇ ಎಚ್ಚರಗೊಂಡಿತು. ಕನ್ನಡಿಗರೂ ಹೊಸ ಹುಮ್ಮಸಿನಿಂದ ಎಚ್ಚತ್ತರು! ವಂಗವಿಭಜನೆಯಿಂದ ಬಂಗಾಳವು ಎಚ್ಚರವಾಯಿತು. ಅಲ್ಲಲ್ಲಿ ನಡೆದ ಹಲವು ಘಟನೆಗಳು ಆಯಾಯ ಪ್ರಾಂತದ ಜನರನ್ನು ಇನ್ನೆಂದೂ ನಿದ್ರಿಸದಂತೆ ಜಾಗೃತಗೊಳಿಸಿತು! ಲೋಕಮಾನ್ಯರ ನೇತೃತ್ವದಲ್ಲಿ ಮಹಾರಾಷ್ಟ್ರವು ಹುರುಪುಗೊಂಡಿತು; ಗಣೇಶೋತ್ಸವವು ಅಲ್ಲಿನ ನಾಡಹಬ್ಬವಾಯಿತು. ಆ ಜಾಗೃತಿಯ ಹುರುಪು, ನೆರೆಯ ನಾಡಾದ ಕನ್ನಡಿಗರಲ್ಲಿಯೂ ಹೆಚ್ಚಿನ ಪರಿಣಾಮವನ್ನುಂಟುಮಾಡದೆ ಬಿಡಲಿಲ್ಲ. ಕನ್ನಡಿಗರೂ ಹುರಿಗೊಂಡರು. ರಾಷ್ಟ್ರಾಭಿಮಾನದ ಜತೆಯಲ್ಲಿ ಅದಕ್ಕೆ ಸಹಾಯಕವಾಗಿ, ಪ್ರಾಂತಾಭಿಮಾನವೂ ತಲೆಯೆತ್ತಿತು! ಹರಿದು ಹಂಚಿದ ಕರ್ನಾಟಕದ ದೀನ ಹೀನ ಸ್ಥಿತಿಯನ್ನು ವರ್ಣಿಸಿ ಶ್ರೀ ಆಲೂರರು, ದಿ. ಕಾರ್ನಾಡು ಸದಾಶಿವರಾಯರು ಮೊದಲಾದವರು ಕನ್ನಡಿಗರಲ್ಲಿದ್ದ ಗುಪ್ತ ಶಕ್ತಿಯನ್ನು ಜಾಗೃತಿಗೊಳಿಸಿದರು. ಕನ್ನಡಿಗರು ಬಲಶಾಲಿಗಳು. ಮಹತ್ವದ ವೈಭವದ ಕದಂಬತತಿಯುಳ್ಳ ಜನರು, ಇಂದಿನ ಈ ಭಿನ್ನಭಿನ್ನತೆಯು ಅಳಿದು ನಾಡು ಒಂದಾಗಬೇಕು, ಜನರು ಮುಂದಾಗಬೇಕು ಎಂಬೀ ಭಾವನೆಯು ಎಲ್ಲರಲ್ಲಿಯೂ ಹೊಸ ಉತ್ಸಾಹವನ್ನು ಹುಟ್ಟಿಸಿತು. ಪ್ರಾಂತ ಸರ್ವತ್ರ ಈ ಉತ್ಸಾಹವೇ ನಡೆಯುತ್ತಿದ್ದಾಗ ದಸರೆಯು ಕನ್ನಡ ನಾಡಿನ ನಾಡಹಬ್ಬವಾಗಿ ಆಚರಿಸಲ್ಪಟ್ಟು, ಎಚ್ಚತ್ತ ಕನ್ನಡಿಗರನ್ನು ನಿರಂತರ ಜಾಗೃತಿಯ ಪಥದಲ್ಲಿ ಮುನ್ನಡೆಸಲು ಸಹಕಾರಿಯಾಯಿತು.

ಇಂದಿನ ನಾಡಹಬ್ಬ

ಇಂದು ದಸರೆಯು ಕನ್ನಡ ನಾಡಿನ ಧಾರ್ಮಿಕ ಹಬ್ಬವಲ್ಲ, ನಾಡಹಬ್ಬವಾಗಿದೆ; ಕೇವಲ ಹಿಂದುಗಳು ಮಾತ್ರವಲ್ಲ ಮುಸಲ್ಮಾನರು ಮಾತ್ರವಲ್ಲ; ಕ್ರೈಸ್ತರು ಮಾತ್ರವಲ್ಲ, ಕನ್ನಡ ನಾಡಿನಲ್ಲಿ ಹುಟ್ಟಿದ ಸರ್ವರಿಗೂ ಸೇರಿದ ಒಂದೇ ಒಂದು ಹಬ್ಬ ಅದಾಗಿದೆ. ಕನ್ನಡ ಸಂಸ್ಕೃತಿ, ಸಾಹಿತ್ಯ, ರಾಜಕೀಯ, ಕಲೆ, ಮೊದಲಾದ ಸರ್ವಾಂಗ ಸಮುನ್ನತಿಯ ದೃಷ್ಟಿಯಲ್ಲಿ ಸರ್ವತ್ರ ಆಚರಿಸಲ್ಪಡುವ ಹಬ್ಬವಿದಾಗಿದೆ.

ಈಗ ಕೆಲವು ವರ್ಷಗಳಿಂದ ಈ ವಿಧವಾಗಿ ಕನ್ನಡ ನಾಡಿನ ನಗರಗಳಲ್ಲಿ ಮಾತ್ರವಲ್ಲ ಮೂಲೆ ಮೂಲೆಯ ಹಳ್ಳಿಹಳ್ಳಿಗಳಲ್ಲಿಯೂ ಈ ಹಬ್ಬವು ಆಚರಿಸಲ್ಪಡುತ್ತದೆ! ಬೇರೆ ಬೇರೆ ಕಡೆಗಳಿಂದ ವಿದ್ವಾಂಸರು ಉಪನ್ಯಾಸಕರು, ಕಲಾವಂತರು, ರಾಜನೀತಿಜ್ಞರು, ಸಾಹಿತಿಗಳು ಮೊದಲಾದವರು ಇತರ ಕಡೆಗಳಿಗೆ ಹೋಗಿ, ವಿಚಾರ ವಿನಿಮಯ ಮಾಡಿಕೊಂಡು, ತಮ್ಮ ತಾಯ್ನಾಡಿನ ಏಳಿಗೆಯ ಬಗೆಗೆ, ಅನ್ಯೋನ್ಯ ಸೌಹಾರ್ದದಿಂದ ಕೂಡಿ ನಡೆಯುವ ಸುಸಂದರ್ಭವು ಒದಗಿ ಬರುತ್ತದೆ. ಕನ್ನಡ ನಾಡಹಬ್ಬವು-ದಸರೆಯ ಹಬ್ಬವು ಹೇಗೆ ಯಶಸ್ವಿಯಾಗಿ ಒದಗುತ್ತಿದೆ. ಆದರೆ ಈ ನಾಡಹಬ್ಬವನ್ನು, ಮೇಲ್ಪಟ್ಟದ ಜನರ ಮಾತ್ರವಲ್ಲ, ಜನತೆಯ ಸಾಮಾನ್ಯ ಜನತೆಯ ಹಬ್ಬವಾಗಿ ಮಾಡಲು ಬೇಕಾದ ಕಾರ್ಯಕ್ರಮಗಳನ್ನು ನೆರವೇರಿಸುವುದು ಕನ್ನಡ ಲೋಕವನ್ನೇ ಈ ಹಬ್ಬದಲ್ಲಿ ಮೈನೆರೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

—[illegible]

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ ★ ಬೆಂಕಿಯ ಅನಾಹುತ ★ ಕಡಲಿನ ಅಪಾಯ ★ ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/- + ಸರ್ವಸಾಧಾರಣ ಬೋನಸ್ ರೂ 11/ — ಹೀಗೆ ಜುಮ್ಲಾ ರೂ 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್, ಆರ್ಗನೈಸರ್, ಸೆಂಟ್ರಲ್ ಪೇಟೆ, ಮಂಗಳೂರು.
ಅಥವಾ
ಕೆ. ಕೆ. ಶ್ರೀನಿವಾಸನ್, ಬ್ರಾಂಚ್ ಮ್ಯಾನೆಜರ್, 4/5 ಫಸ್ಟ್ ಲೈನ್ ಬೀಚ್ ಮದ್ರಾಸು

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು. ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಯಿಲ್ಲದೆ ಪರೀಕ್ಷಿಸಿನೋಡಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್.

ಸಿನೆಮಾ ಪುಟ

ಸ್ನೇಹಪ್ರಭಾ ಕಿಶೋರ ಶಾಹುವನ್ನು ವರಿಸಿದಳು

ಕುಮಾರಿ ಸ್ನೇಹಪ್ರಭಾ ಪ್ರಧಾನಳು ಈಗ ಶ್ರೀಮತಿ ಸ್ನೇಹಪ್ರಭಾ ಶಾಹು ಆಗಿದ್ದಾಳೆ. ಆದರೆ ಸಿನೆಮಾ ಲೋಕದಲ್ಲಿ 'ಸ್ನೇಹಪ್ರಭಾ' ಎಂದೇ ಕರೆಯಲ್ಪಡುವಳು.

ಸ್ನೇಹಪ್ರಭಳು ಉತ್ತಮ ತರಗತಿಯ ನರ್ತಕಿ ಮತ್ತು ಹಾಡುಗಾರ್ತಿ. ಮೊದಲನೆಯ ಒಂದೆರಡು ಅಭಿನಯದಲ್ಲಿಯೇ ಸ್ನೇಹಪ್ರಭಳು ಸಿನೆಮಾ ಪ್ರಿಯರ ಪ್ರೀತಿಗೆ ಪಾತ್ರಳಾದಳು. ಸಿನೆಮಾ ಪ್ರೇಕ್ಷಕರು ಅವಳ ಅಭಿನಯವನ್ನು ನೋಡಲು ಹಾರೈಸಿದರು. ಸ್ಟುಡಿಯೋಗಳಿಂದ ಕರೆ ಬಂತು. ಮೂರು ಚಿತ್ರಗಳ ಸಲುವಾಗಿ ಮೂರು ಸ್ಟುಡಿಯೋಗಳಲ್ಲಿ ಆಕೆ ಅಭಿನಯಿಸಿದಳು. ಮುಂದೆ ಅವಳ ಕೀರ್ತಿ ಬೆಳೆಯಿತು. ಬಾಂಬೇ ಟಾಕೀಸಿನವರ ಮುಂದಿನ ಚಿತ್ರದಲ್ಲಿ ಅವಳು ಅಭಿನಯಿಸುವಳು.

ಬೊಂಬೆ ಟಾಕೀಸಿನವರ 'ಜೀವನ ಪ್ರಭಾತ'ದಲ್ಲಿ ನಾಯಕನ ಪಾತ್ರವನ್ನು ವಹಿಸಿ ಕಿಶೋರ ಶಾಹೂ ನಟಿಸಿದನು. ಮುಂದೆ ಇಂಡಿಯಾ ಆರ್ಟಿಸ್ಟರ 'ಪುನರ್ಮಿಲನ'ದಲ್ಲಿ ಅವರು ನಾಯಕಾ ನಾಯಕಿಯರಾದರು. ಅವರು ಸಿನೆಮಾ ನಟನೆಯ ಕಾಲದಲ್ಲಿ ಸೂಚಿತ ಪತಿ ಪತ್ನಿಯರಾಗಿದ್ದರು, ಆದರೆ ಮುಂದಿನ ಬೊಂಬೇ ಟಾಕೀಸಿನ ಚಿತ್ರದಲ್ಲಿ ನಿಜವಾಗ ಪತಿ ಪತ್ನಿಯರೇ ನಾಯಕಾ ನಾಯಕಿಯರಾಗಿ ಅಭಿನಯಿಸುವರು.

ಈ ಕಲಾವಂತರ ದಾಂಪತ್ಯ ಜೀವನವು ಸುಖಮಯವಾಗಲಿ!

ಸಂತ ಧ್ಯಾನೇಶ್ವರ

೬೦೦ ವರ್ಷಗಳ ಹಿಂದೆ ಮಹಾರಾಷ್ಟ್ರದ ಆಲಂದಿಯೆಂಬ ಗ್ರಾಮದಲ್ಲಿ, ವಿಟ್ಠಲಪಂತನೆಂಬ ವಿವಾಹಿತ ಯುವಕನೊಬ್ಬನು ಗುರುವಿನಿಂದ ದೀಕ್ಷೆ ಪಡೆದು ಸನ್ಯಾಸಿಯಾದನು. ಆ ಮೇಲೆ, ತನ್ನ ಗುರುವಿನ ಆಜ್ಞೆಯಿಂದಲೇ, ವಿಟ್ಠಲಪಂತನು, ತನ್ನ ಸನ್ಯಾಸ ವ್ರತವನ್ನು ಬಿಟ್ಟು ಹೆಂಡತಿಯೊಡನೆ ಸಂಸಾರಮಾಡಿಕೊಂಡು ಹಳ್ಳಿಯಲ್ಲಿ ವಾಸವಾಗಿದ್ದನು. ಆದರೆ ಊರ ಸನಾತನಿಗಳಿಗೆ ಇದನ್ನು ಕಂಡು ಸಹಿಸಲಿಲ್ಲ. ಅವರೆಲ್ಲರೂ ಆತನನ್ನು ಜಾತಿಬಾಹಿರನೆಂದರು. ಅವರ ನಿಂದೆಯು ತನ್ನ ಮತ್ತು ಪತ್ನಿಯ ಮೇಲೆ ಇದ್ದರೂ ಇರಲಿ, ತನ್ನ ಪೂರ್ವಾಶ್ರಮದ ಮಕ್ಕಳನ್ನು ಪ್ರಾಯಶ್ಚಿತ್ತ ಮಾಡಿ ಜಾತಿಗೆ ಸೇರಿಸಿಕೊಳ್ಳಬೇಕೆಂದು ವಿಟ್ಠಲಪಂತನು ಬಹಳವಾಗಿ ಬಿನ್ನವಿಸಿಕೊಂಡರು. ಅವನ ಮಕ್ಕಳು ನಿವೃತ್ತಿ, ಧ್ಯಾನ, ಸೋಪಾನ ಮತ್ತು ಮುಕ್ತಾ ಎಂಬವರೂ ಸನಾತನಿಗಳ ನೈಷ್ಠುರ್ಯಕ್ಕೆ ಪಾತ್ರರಾಗಿದ್ದರು.

ವಿಸೋಬನೆಂಬ ಸನಾತನಿಗಳ ಮುಖ್ಯಸ್ಥನು ಇವರ ಮುಖಂಡನು. ಅವನು ಜನರನ್ನು ಹೇಗೆ ತನ್ನ ಮೇಲೆ ಎತ್ತಿ ಕಟ್ಟುತ್ತ ಉಪದ್ರವಿಸುತ್ತಿರುವುದನ್ನು ನೋಡಿ ಸಹಿಸದೆ ತಂದೆತಾಯಿಗಳಿಬ್ಬರೂ ಆತ್ಮಹತ್ಯೆ ಮಾಡಿಕೊಂಡರು. ವಿಟ್ಠಲಪಂತನು ಸಾಯುವ ಸಮಯ, ಮಗನಾದ ಧ್ಯಾನೇಶ್ವರನನ್ನು ಕರೆದು, ಲೋಕದಲ್ಲಿ ಜನರೆಲ್ಲರೂ ಸಮಾನ ಸಹೋದರರು ಎಂಬ ಸಂದೇಶವನ್ನು ಸಾರಬೇಕೆಂದು ತಿಳಿಸುವನು. ಮುಂದೆ ಮಗನು ತಂದೆಯ ವಾಕ್ಯವನ್ನು ಎಷ್ಟು ನಿಷ್ಠೆಯಿಂದ ಪಾಲಿಸಿದನೆಂಬುದು ಸಂತ ಧ್ಯಾನೇಶ್ವರದ ಕಥೆ!

ಪ್ರಭಾತ ಚಿತ್ರದವರ ಅತ್ಯಂತ ಯಶಸ್ವಿಯಾದ ಮನೋರಂಜಕ ಚಿತ್ರ. ದಾಮ್ಲೆ ಫತೇಲಾಲರ ನಿರ್ದೇಶಕತ್ವ. ಯಶವಂತ, ಶಾಹು ಮೋಡಕ್, ಸುಮತಿ ಗುಪ್ತೆ, ಭಾಗ್ವತ್, ಮೊಂಡು, ಮೊದಲಾದವರ ಇದರ ನಟವರ್ಗ.

ನ್ಯೂ ಥಿಯೇಟರ್ಸ್

ಅಮರ ಮಲ್ಲಿಕರ ಮುಂದಿನ ಚಿತ್ರವು ಎರಡು ಭಾಷೆಗಳಲ್ಲಿ ಸಿದ್ಧವಾಗಿ ('ಹರ ಜೀತ್' ಎಂದು ಹಿಂದುಸ್ಥಾನಿಯಲ್ಲಿ, 'ಅಭಿನೇತ್ರಿ' ಎಂದು ಬಂಗಾಲಿಯಲ್ಲಿ) ಬೇಗನೇ ಪ್ರಕಟವಾಗಲಿರುವುದು. ಈ ತಿಂಗಳ ಮೊದಲ ವಾರದಲ್ಲಿಯೇ ಹಿಂದೀ ಭಾಷಾಂತರವು ಭಾರತದ ಪ್ರಮುಖ ಸ್ಥಳಗಳಲ್ಲಿ ತೋರಿಸಲ್ಪಡುವುದೆಂದು ತಿಳಿದಿದೆ. ಬಂಗಾಲಿ ಭಾಷಾಂತರವು ಸಂಪೂರ್ಣತೆಗೊಂಡಿಲ್ಲ.

'ಸ್ವಪ್ನಪುರೀ' ಚಿತ್ರವು ಸಿದ್ಧವಾಗುತ್ತಿದೆ. ಲೀಲಾ ದೇಸಾಯಿ 'ನರ್ತಕಿ'ಯಾಗಿಯೂ, ಸುಂದರ ಮಲ್ಲಿಕ್ 'ಕವಿ'ಯಾಗಿಯೂ ಸ್ವರ್ಗೀಯ ಸೌಂದರ್ಯದಿಂದ ಅಭಿನಯಿಸಿದ್ದಾರೆ. ನಿರ್ದೇಶಕ ನಿತಿನ್ ಬೋಸರು ಈ ಉಭಯ ಭಾಷಾ ಚಿತ್ರದಿಂದ ಬಹಳ ಪ್ರಖ್ಯಾತಿಯನ್ನು ಪಡೆಯುವರೆಂದು ಎಲ್ಲರೂ ತಿಳಿದಿರುವರು. ಕನನ್, ಸೈಗಲ್, ನವಾಬ್ ರತಿನ್ ಇವರೆಲ್ಲರೂ ಇದರಲ್ಲಿ ಸೇರಿ ಅಭಿನಯಿಸುವರು.

ಡಾಕ್ಟರ್

ನ್ಯೂ ಥಿಯೇಟರ್ಸಿನ ನೂತನ ಚಿತ್ರ 'ಡಾಕ್ಟರ್' ಎಂಬುದು. ಕಲ್ಕತ್ತದ ಚಿತ್ರಾ ಮತ್ತು ಪೂನಾದ ಥಿಯೇಟರುಗಳೆರಡರಲ್ಲಿಯೂ ಏಕಕಾಲದಲ್ಲಿ ಪ್ರದರ್ಶಿಸಲ್ಪಟ್ಟು ಈಗ ಐದನೆಯ ವಾರವನ್ನು ಮುಟ್ಟಿದೆ. ಈ ಚಿತ್ರವು ಸಿನೆಮಾ ಲೋಕದಲ್ಲಿ ಪ್ರತ್ಯೇಕವಾದೊಂದು ಸ್ಥಾನವನ್ನು ಹೊಂದಿದೆ. ನ್ಯೂ ಥಿಯೇಟರ್ಸಿನವರ ಕೀರ್ತಿಯನ್ನು ಹೆಚ್ಚಿಸಿದೆ.

ಪ್ರಭಾತ ನಗರ

'ಪಡೋಶಿ'ಯು ಸಂಪೂರ್ಣ ನೂತನ ಸ್ವಪ್ನ ಕೃತಿ [illegible] ಶಕ [illegible] ವನ್ನು ಈ ಚಿತ್ರದಲ್ಲಿ [illegible] ಜೀವನ ಚಿತ್ರವು [illegible] ಹರ್ [illegible] ಮೊದಲಾದವರು ಇದರ ನಟವರ್ಗ.

ಹೋಳಿ

ರಣಜಿತ್ ಕಂಪೆನಿಯವರ ಹೊಸ ಚಿತ್ರ 'ಹೋಳಿ' ಎಂಬುದು. ಹೊಸ ಮಾದರಿಯ ಸಾಮಾಜಿಕ ಚಿತ್ರವಿದು. ಸಾಮಾನ್ಯ ತರಗತಿಯ ಪ್ರೇಕ್ಷಕರನ್ನು ಮೆಚ್ಚಿಸುವಂತಹ ನೂತನತೆಯಿಂದ ಕೂಡಿದೆ. ಮೋತಿಲಾಲ, ಈಶ್ವರಲಾಲ, ಖುರ್ಶಿದ್, ಸಿತಾರಾ, ದಿಕ್ಷಿತ್, ದಾತೆ, ಗೋರಿ ಮೊದಲಾದ ಪ್ರಖ್ಯಾತ ನಟರು ಅಭಿನಯಿಸುವರು.

ಬಂಧನ

ಇತ್ತೀಚೆಗೆ ಪ್ರಕಟವಾದ ಚಿತ್ರಗಳಲ್ಲಿ ಬೊಂಬೇ ಟಾಕೀಸಿನವರ ಬಂಧನವು ಬಹಳ ಯಶಸ್ವಿಯಾಗಿರುವುದಾಗಿ ತಿಳಿದಿದೆ. ಸಿನೆಮಾ ಪ್ರೇಕ್ಷಕ ಲೋಕವು ಎಲ್ಲೆಲ್ಲಿ ಅದು ಪ್ರದರ್ಶಿತವಾಗುತ್ತದೋ ಅಲ್ಲಿ ಗುಂಪುಗುಂಪಾಗಿ ವಾರವಾರಗಳವರೆಗೆ ನೋಡಲು ಹಾತೊರೆಯುತ್ತಾರೆ.

ಫಿಲ್ಮ್ ಕಾರ್ಪೊರೇಶನ್ ಓಪ್ ಇಂಡಿಯಾ

ಈ ಕಂಪನಿಯು ಮುಂದಿನ ಸಮಸ್ತ ಚಿತ್ರಗಳನ್ನು ಶ್ರೀ ಬಿ ಎಲ್ ಕೇಮ್ ಕಾರ್ವ ದಿಗ್ದರ್ಶಿಸುವರೆಂದು ತಿಳಿಯುತ್ತದೆ. ಅವರ ನಿರ್ದೇಶಕತೆಯಲ್ಲಿ ಕಂಪೆನಿಯವರ ಉತ್ತಮ ತರಗತಿಯ ಚಿತ್ರಗಳನ್ನು ತಯಾರಿಸುವರೆಂದು ತಿಳಿದಿದೆ.

ಶ್ರೀ ಶರ್ಮರು 'ಕಬೀರ'ದ ತಯಾರಿಯಲ್ಲಿ ನಿರತರಾಗಿದ್ದಾರೆ.

'ಹಿಂದೂಸ್ಥಾನ್ ಹಮಾರಾ' ಚಿತ್ರವನ್ನು ಬೊಂಬಾಯಿಯಲ್ಲಿ ಭೂಲಾಭಾಯಿ ದೇಸಾಯಿಯವರಿಂದ ಉದ್ಘಾಟನೆ ಮಾಡಿಸುವರಾಗಿ ತಿಳಿದಿದೆ.

'ಅಮರ ಗೀತ'ವು ಪೂರ್ಣತೆ ಹೊಂದಿದೆ. 'ಕೈದಿ'ಯು ಪೂರ್ಣವಾಗಿ ಪ್ರಕಟಣೆಗೆ ಸಿದ್ಧವಾಗಿರುವುದು.

'ಚಿತ್ರಲೇಖಾ' ಸಿದ್ಧತೆಗೆ ಹೋಗುವುದು. ಶ್ರೀ. ಶರ್ಮರೇ ಇದರ ನಿರ್ದೇಶಕರು. ಮೆಹತಾಬ್, ನಂದ್ರೇಕರ್, ಮಾನಿಕಾ ದೇಸಾಯಿ ಮತ್ತು ಗಿಯಾನಿ ಇವರೇ ಪ್ರಾಮುಖ್ಯ ನಟವರ್ಗದವರು.

ತಾಯಿಯೇ! ನಿನಗೆ ಆಗಾಗ ಅಗತ್ಯಬೀಳುವ ಸ್ನೇಹಿತಳಿಲ್ಲಿರುವಳು.

ಮಕ್ಕಳಿಗೆ ಆಗಾಗ ಕೆಳಗೆ ಬಿದ್ದು ಗಾಯ, ಪೆಟ್ಟುಗಳಾಗುತ್ತವೆ. ಇದಕ್ಕಾಗಿ ಪ್ರತೀ ಒಂದು ಮನೆಯಲ್ಲಿಯೂ ಅಗತ್ಯ ಬೇಕಾಗುವುದಾವುದೆಂದರೆ ಕ್ರಿಮಿನಾಶಕ ಔಷಧಿ. ಒಂದು ಟಿನ್ನು ಕುಟಿಕೂರಾ ಮುಲಾಮನ್ನು (Cuticura Ointment) ನಿಮ್ಮ ಬಳಿ ಇರಿಸಿ ನಂತರ ಯಾವ ಪೆಟ್ಟು ಗಾಯಗಳಿಗೂ ತಯಾರಾಗಿರಿ.

ಗಾಯವು ಕೂಡಲೇ ಗುಣವಾಗಬೇಕಾದರೆ, ಬಾತುವಿಕೆಯು ಮಾಯವಾಗಬೇಕಾದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಗಾಯ, ಪೆಟ್ಟು, ತರಚುವಿಕೆ, ಮುದ್ದೆ ಇವುಗಳಿಗೆ ಹಚ್ಚಿರಿ. ರಶಿಗೆ ಯಾದೀತೆಂಬ ಹೆದರಿಕೆಯಿಲ್ಲ. ಕುಟಿಕೂರಾ ಮುಲಾಮು (Cuticura Ointment) ಸುಟ್ಟುಹೋದ ಯಾ ಬೆಂದುಹೋದ ಭಾಗಗಳಿಗೆ ಹಚ್ಚಲು ಕೂಡಾ ಬಹಳ ಉತ್ತಮ. ಸಹಿಸಲಸದಳವಾದ ವೇದನೆಯನ್ನು ನಿಲ್ಲಿಸಿ ಗಾಯಗಳು ಹರಡದಂತೆ ಮಾಡುತ್ತದೆ. ಚರ್ಮರೋಗಗಳಿಗೆ ಕೂಡಾ ಉತ್ತಮ ಔಷಧಿ. ಅಸಹ್ಯವಾದ ತುರಿಗಜ್ಜಿಗಳು ಇದರ ಸ್ಪರ್ಶದಿಂದಲೇ ಮಾಯವಾಗುತ್ತವೆ. ಇಷ್ಟಲ್ಲದೆ ದೀರ್ಘಕಾಲದ ಚರ್ಮವ್ಯಾಧಿಗಳು ಕೂಡ ಕುಟಿಕೂರಾ ಮುಲಾಮಿನಿಂದ (Cuticura Ointment) ಗುಣವಾಗುತ್ತವೆ. ನಿಮ್ಮ ಕೆಮಿಸ್ಟರಲ್ಲಿಂದ ಒಂದು ಟಿನ್ನನ್ನು ಕೊಂಡುಕೊಳ್ಳಿರಿ.

ಕುಟಿಕೂರಾ ಮುಲಾಮನ್ನು (Cuticura Ointment) ಕಜ್ಜಿ, ಕುರ, ಗಾಯ, ಪೆಟ್ಟು, ವ್ರಣ, ಮುದ್ದೆ, ಬಾತುವಿಕೆ, ತರಚಿ [illegible] ವಾದ ಗಾಯ [illegible] ಲಾದ [illegible] ವ್ಯಾಧಿಗಳಿಗೆ ಉಪಯೋಗಿಸಿ.

ಕುಟಿಕೂರಾ ಮುಲಾಮು
Cuticura Ointment

ಬ್ರಿಟನ್ ಮಂತ್ರಿಮಂಡಲದಲ್ಲಿ ಮಹತ್ವದ ಬದಲಾವಣೆಗಳು

ಚೇಂಬರ್ಲೀನರ ರಾಜೀನಾಮೆ

ಬ್ರಿಟಿಷ್ ಮಂತ್ರಿಮಂಡಳವು ಈಗ ತಿರುಗಿ ಒಮ್ಮೆ ಬದಲಾವಣೆಗೊಂಡಿದೆ. ಚೇಂಬರ್ಲೀನರು ತನ್ನ ಸ್ಥಾನಕ್ಕೆ ರಾಜಿನಾಮೆಯನ್ನೇ ಕೊಟ್ಟಿರುವರು. ಬದಲಾವಣೆಯ ವಿವರವನ್ನು ಚರ್ಚಿಲ್ಲರು ಹೀಗೆ ತಿಳಿಸುತ್ತಾರೆ.

"ಲಾರ್ಡ್ ಪ್ರೆಸಿಡೆಂಟರಾದ ಚೇಂಬರ್ಲೀನರು ರಾಜಿನಾಮೆ ಕೊಟ್ಟರು. ಅದನ್ನು ಚಕ್ರವರ್ತಿಗಳು ಅಂಗೀಕರಿಸಿದ್ದಾರೆ. ಅವರ ಸಂಸ್ಥಾನದಲ್ಲಿ ಸರ್ ಜಾನ್ ಅಂಡರ್‌ಸನರನ್ನು ನೇಮಿಸಲಾಗಿದೆ

ಹರ್ಬರ್ಟ್ ಮಾರಿಸನ್ನರನ್ನು ರಾಷ್ಟ್ರ ರಕ್ಷಣಾ ಖಾತೆಯ ಮಂತ್ರಿಯಾಗಿ ನೇಮಿಸಿದೆ

ವೆಕೌಂಟ್ ಕ್ರ್ಯಾನ ಬರ್ನರನ್ನು ಸಾಮಂತ ರಾಷ್ಟ್ರಗಳ ಮಂತ್ರಿಯಾಗಿ ನಿಯಮಿಸಲಾಗಿದೆ

ಕ್ಯಾಪ್ಟನ್ ಅಲಿವರ್ ಲಿಟಿನ್ ಟನ್ನರು ವಾಣಿಜ್ಯ ಮಂಡಳದ ಅಧ್ಯಕ್ಷರಾಗಿರುವರು.

ಸರ್ ಆಂಡ್ರೂ ಡಂಕನರನ್ನು ಪೂರೈಕೆ ಖಾತೆಯ ಮಂತ್ರಿಯಾಗಿ ನಿಯಮಿಸಿದೆ

ಲೆಫ್ಟಿನೆಂಟ್ ಕರ್ನಲ್ ಮಾರ್ ಬೆಬ್ರಾಝೊನರನ್ನು ವಾಹನ ಸೌಕರ್ಯ ಖಾತೆಯ ಮಂತ್ರಿಯಾಗಿ ಮಾಡಿದೆ

ಸರ್ ಜಾನ್ ಕೀತರನ್ನು ಕಟ್ಟಡಕಟ್ಟುವ ಖಾತೆಯ ಮಂತ್ರಿಯಾಗಿರಿಸಿದೆ.

ಯುದ್ಧ ಮಂಡಲದ ಸದಸ್ಯರು

ಯುದ್ಧ ಮಂಡಲದ ಹೊಸ ಸದಸ್ಯರಾಗಲು ಚರ್ಚಿಲ್ಲರು ಕಿಂಗ್‌ಸ್ಟೆಉಡ್ ಮತ್ತು ಬೆವಿನರನ್ನು ನಿಯಮಿಸಿರುವರು

ಮುಖ್ಯ ನ್ಯಾಯಾಧೀಶರ ರಾಜೆನಾಮೆ

ಲಂಡನಿನ ಮುಖ್ಯ ನ್ಯಾಯಾಧೀಶ ಲಾರ್ಡ್ ಹಿವಾರ್ಟರು ರಾಜಿನಾಮೆ ಕೊಟ್ಟುದರಿಂದ ಅವರ ಸ್ಥಳದಲ್ಲಿ ವೈಕೌಂಟ್ ಕ್ಯಾಲ್ಡಕಾಟರನ್ನು ನಿಯಮಿಸಲಾಗಿದೆ

ಚೆಂಬರ್ಲೀನರ ರಾಜೆನಾಮೆಯ ಪತ್ರ

ಚರ್ಚಿಲ್ಲರಿಗೆ ಚೆಂಬರ್ಲೀನರು ಹೀಗೆಂದು ಪತ್ರ ಬರೆದರು.

ನಾನು, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿರುವುದು ನಿಮಗೆ ಗೊತ್ತಿದೆ ಯುದ್ಧ ಮಂತ್ರಿಯೆಂದು ನನ್ನ ಮೇಲೆ ಹೊರಿಸಿದ ಕರ್ತವ್ಯವನ್ನು ಪುನಃ ಕೈಗೊಳ್ಳಲು ಇನ್ನೂ ಹಲವು ದಿನಗಳು ಬೇಕಾಗಬಹುದು ಆದುದರಿಂದ ರಾಷ್ಟ್ರೀಯ ಹಿತದ ದೃಷ್ಟಿಯಿಂದ ನನ್ನನ್ನು ಈ ಹೊಣೆಯಿಂದ ಮುಕ್ತನಾಗಿ ಮಾಡಬೇಕು'

ಚರ್ಚಿಲರು ಅದಕ್ಕೆ ಈ ರೀತಿ ಉತ್ತರ ಬರೆದಿರುವರು

ನಿಮ್ಮ ಧೈರ್ಯ ಮತ್ತು ದೃಢಮನಸ್ಸು ಪ್ರಶಂಸಾರ್ಹವಾದುದು. ಮುಖ್ಯ ಮಂತ್ರಿತ್ವದಿಂದ ನಿವೃತ್ತರಾದ ಮೇಲೆ ನಮಗೆ ಕೊಟ್ಟ ಸಲಹೆಗಳು ಅಮೂಲ್ಯವಾದವುಗಳು. ಜಯ ಸಂಪಾದಿಸಲು ಶಕ್ಯವಿರುವುದನ್ನೆಲ್ಲಾ ನೀವು ಮಾಡಿರುವಿರಿ. ಈಗ ನಿವೃತ್ತರಾಗಬೇಕೆಂದು ನೀವು ಬಯಸಿದರೆ ನಿಮ್ಮ ಇಚ್ಛೆಯನ್ನು ನಡೆಸುವೆನು".

ಯುದ್ಧ ನಿಧಿ

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

ರೂ. 5—0—0

ರಾವ್ ಬಹದ್ದೂರ್ ಸಿ. ಡಿ. ಜೆ. ಪಿಂಟೊ, ಯು. ಕಣ್ಣಪ್ಪ ಎಂ. ಬಿ ಶಂಕರ ರಾವ್, ಡಿ. ಬಿ. ಮಹಾಬಲ ಹೆಗಡೆ, ಪೋಪಟ್‌ಲಾಲ್ ಗಿರಿಧರಲಾಲ್ ಎಂಡ್ ಕೊ, ಜಯಂತಿಲಾಲ್ ಬ್ರದರ್ಸ್, ಎಂ. ವಿ. ಕೆಲ್ಕಾರ್, ಆರ್ ಬಿ. ಶೇಟ್, ಭಿಕ್ಕುಭಾಯಿ ಹುಕ್ಕುಂದ್, ಎನ್. ಕೆ. ಕರುಣಾಕರನ್, ಎಂ. ಪುತ್ತು ವೈಕುಂಠ ಶೇಟ್, ರಾವ್ ಸಾಹೇಬ್ ಎ ಎಲ್ ಪಿಂಟೊ, ಕೆ. ವಿಲ್ಲಪ್ಪ ಆಚಿಲ ಎ ಎಸ್, ಶೀನಾರಾಮಾಚಾರ್, ಪಿ ಎಸ್. ಶೆಟ್ಟಿ, ಎಂ. ವಿ ಕಾಮತ್, ವಿ ವಿ ಉಪಾಧ್ಯಾಯ ಪಿ ಆರ್ ರಾವ್, ಎಫ್ ಗುಲಾಂ ಹುಸೇನ್ ಸಾಹೇಬ್, ರಾವ್‌ಸಾಹೇಬ್ ಪಿ ರಂಗನಾಥ ಪೂಂಜ ಟಿ ಎಂ. ಆರಾನಿ ಎಂ. ಅಪ್ಪು ರಾವ್, ಡಿ ವೆಂಕಟೇಶ ಭಟ್ ವಿ ಪೋಲಾ ರೆಡ್ಡಿ, ನಾರಾಯಣ ಹೆಗಡೆ ಕೆ. ಸದಾಶಿವ ಭಟ್, ಕೆ ಕೃಷ್ಣಯ್ಯ, ಸಿ ಕುಂಞಂಬು ನಾಯರ್, ಬಿ ಅನಂತ ಶೆಣೈ ಬಿ. ಅಚ್ಯುತ ಬ್ರಾಳಿಗ ಪಿ ಕೆ ಮಾಧವ ಮೆನನ್, ಚೇಳಿಂಜೆ ವಿಠಲ ಹೆಗಡೆ, ಚೆನ್ನ ಕೇಶವ ಅಡಿಗ, ಕೆ ನರಸಿಂಹ ಕಾಮತ್ ಎಸ್ ಎಸ್ ಕೆ ಆಚಾರಿ, ಬಿ ಸುಶೀಲಾ ಬಾಯಿ, ಕೆ ಚಂದ್ರಶೇಖರ ಅಡಿಗ, ಬಾಬಯ್ಯ ಯಾನೆ ವೆಂಕಟ್ರಮಣ ಶ್ಯಾನುಭಾಗ, ಜೆ ಸಂಜೀವ ರಾವ್, ದೇಜು ಶೆಟ್ಟಿ, ನರ್ಸು ಶೆಟ್ಟಿ, ಕುದ್ದು ಯಾನೆ ಮಹಾಬಲ ಹೆಗಡೆ ಶ್ರೀಧರ ಶ್ಯಾನುಭಾಗ ಡಾ ಬಿ ಕೆ ಬೇಕಲ ವೈ ಶಾಂತಿರಾಜಯ್ಯ, ಬಿ ಗಣೇಶ ಪಿ ನಾರಾಯಣಯ್ಯ, ಮಿಸೆಸ್ ಎ ಸೋನ್ಸ್ ಸಿ ಎಲ್ ಲೋಬೊ, ಎಫ್ ಸೋನ್ಸ್, ಬಿ ಪಿ ರೋಬರ್ಟ್ಸ್, ಎಚ್ ಖಾನ್ ಅಕ್ಬರ್ ಸಾಹೇಬ್ ಚಿಕ್ಕಯ್ಯ ಶೆಟ್ಟಿ ಮಹಾಲಿಂಗ ಶೆಟ್ಟಿ ಎಂ ವರದರಾಜುಲು ನಾಯ್ಡು, ಪಟೇಲ ಶೇಷ ಶೆಟ್ಟಿ, ಬಿ. ಮಾಧವ ಪ್ರಭು ಎಂ ಆನಂದ ಶ್ಯಾನುಭಾಗ ಪಿ ಅಬ್ದುಲ್ ಹಲ್ಲಿ, ಎಮ್ ಕೋಮನ್ ನಾಯರ್, ಪಿ ವಿ ಅಬ್ಬುಬಕರ್, ಕೆ ಬಾಳಪ್ಪ ಶೆಟ್ಟಿ ಎಂ ಎಸ್ ಶೆಟ್ಟಿ, ರಾವ್‌ಸಾಹೇಬ್ ಎಫ್ ಲೋಬೊ ಕುಂಬ್ಳಾ ಖಾದಿರ್ ಬ್ಯಾರಿ, ಶಂಕರನಾರಾಯಣಪ್ಪಯ್ಯ, ಕೆ ನರಸಿಂಹ ಕಾಮತ, ಯು ಬಿ ಲಿಂಗಪ್ಪ ಗೌಡ, ಕೆ ಶಂಕರ ಭಟ್ಟ, ಶಂಕರ ಭಟ್ಟ ಪಿ ಮುರಿ ಭಟ್ಟ, ತಿಮ್ಮಪ್ಪ ಗೌಡ, ಕುಂಜಿಮಾಮು ಫಕೀರ [redacted] ಫ ವೆಂಕಟ್ರಾಯ ನಾಯಕ್ ಕೆ ವೇಣುಗೋಪಾಲ ನಾಯರ್ ಬಿ ಇಸ್ಮಾಯಿಲ್ ಬ್ಯಾರಿ ಎಸ್ ರಾಮಚಂದ್ರ ಅಯ್ಯರ್ ವಿ ಜೆ ಜೋಸೆಫ್, ವಿ ಎಂ ಜೋಸೆಫ್ ಎ ಸಿ ಮತ್ತು ಪಿ ಜೆ ಡಿ ಸೋಜ ಯು ಕುಮಾರಯ್ಯ ಅರಬಿ ಬ್ಯಾರಿ, ಡಾ ಕೆ ವಾಮನ್‌ರಾವ್, ಕುಂಬಳೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ಶಿಬಂದಿ, ಡಾ. ಯು ಸುಂದರರಾವ್ ಪೈ ಡಾ. ಟಿ. ಮಾಧವ ಪೈ ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್, ದಾಸರ ಬೆಟ್ಟು ಕೃಷ್ಣಯ್ಯ ಶೆಟ್ಟಿ, ಬೆಳ್ತಂಗಡಿ ಪಡು ಪಣಂಬೂರು ಪಂಚಾಯತ ಬೋರ್ಡು, ಎಚ್. ಎಚ್. ಸುಬ್ಬರಾವ್ ಡಾ ಎಸ್ ಆರ್. ಹೆಗಡೆ; ಎಚ್ ಸಿರಿಲ್ ಫೆರ್ನಾಂಡಿಸ್ ಕೆ. ಜಿ. ಒಲ್ಲಾಳ, ಡಿ. ಆನಂದ ರಾವ್, ಎಂ. ಅಣ್ಣಪ್ಪ ಕಾಮತ್, ಕೆ ಸದಾಶಿವ ರಾವ್, ಶೆಟ್ಟಿ ಬೆಟ್ಟು ಧ್ಯಾಸಪ್ಪ ಹೆಗಡೆ, ಮಂಗಳೂರು ಇನ್ ಕಮ್‌ಟ್ಯಾಕ್ಸ್ ಆಫೀಸಿನ ಶಿಬಂದಿ, ಛಡೆ ನಾರಾಯಣ ಭಟ್ಟ, ಉಳ್ಯಾಲ ವೆಂಕಟ್ರಾಯ ಶೆಣೈ, ಮಿಸ್ ಎ. ಎಂ. ಪಿ ಸಿಕೇರ, ಜಿ. ನಾರಾಯಣ ರಾವ್, ಎಚ್ ಶಂಕರ ರಾವ್, ಎಂ. ಎಸ್. ಕೃಷ್ಣರಾವ್, ಉಳ್ಯಾಲ ಸುಬ್ರಾಯ ನಾಯಕ್, ಸಾಂತಪ್ಪ ಪಾಳ್, ರೆ. ಫಾದರ್ ಎಂ ಮಿನೇಜಸ್ ಕಮಲಾಕ್ಷ ರಾವ್, ಕೋಟೇಶ್ವರ ಪಂಚಾಯತ ಬೋರ್ಡು; ವಾರಂಗ ಪಂಚಾಯತ ಬೋರ್ಡು; ಎಂ. ಸಿ. ಸಿ. ಬ್ಯಾಂಕ್ ಲಿಮಿಟೆಡ್; ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್. ಎ. ನಾರಾಯಣ ಹೆಗಡೆ, ರಾವ್ ಬಹದ್ದೂರ್ ಎನ್ ಎನ್ ಸುವರ್ಣ, ಪಿ ವಾಸುದೇವ ರಾವ್, ಪೊಸಬೆಟ್ಟು ಶಾಲೆ, ರೆ ಫಾದರ್ ಎ ಜೆ ಸಿಲ್ವ, ಬೊಂಬೆ ಸ್ಟೋರ್ಸ್, ಜೆ. ಪುತ್ರನ್, ಎಂ ರಾಘವೇಂದ್ರ ಶ್ಯಾನುಭೋಗ್ ಸೂಜೀಕಾರ್ ಬ್ರದರ್ಸ್, ಸುರತ್ಕಲ್ ಇಸ್ಯ ಪಂಚಾಯತ ಬೋರ್ಡು ರೆ ಫಾದರ್ ಡಿ ಜೆ ಡಿ'ಸೋಜ, ರೆ ಫಾದರ್ ಎ ಎಸ್ ಟೆಲ್ಲಿಸ್, ಜೆ. ಎಂ ಟೆಲ್ಲಿಸ್ ಪಂಡಿತ ಶಿವರಾವ್ ಬಾಕರ್ಗರು ಪಂಚಾಯತ ಬೋರ್ಡು, ತೆಂಕ ಪಂಚಾಯತ ಬೋರ್ಡು

ನಿಮ್ಮ ರೂಪಾಯಿಗಳು ಅವರನ್ನು ಕಾಪಾಡುತ್ತವೆ

ರಕ್ಷಣಾ ಸೇವಿಂಗ್ ಸರ್ಟಿಫಿಕೇಟುಗಳನ್ನು ಕೊಳ್ಳಿರಿ

GI Kn 7

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 215/1940

ದೇವಕಿ ಅಂತರ್ಜನಂ ಕೂಡಾ . ವಾದಿರು

ಮತ್ತು

ಜಕ್ಕು ಅಂಡು . . . . . ಎದ್ರಿಳು

ಇವರೊಳಗೆ

ಮೃತ ನೀಲಮನೆ ಶಂಕರನ್ ಎಂಬ್ರಾಂತ್ರಿಯು ಪಡೆದ S. C. No. 171/1939ರಲ್ಲಾದ ಡಿಕ್ರಿ ಐವಜಿನ ಧನ ಮುಟ್ಟಿಗೆ Succession Certificate ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ 25-10-'40 ಕ್ಕೆ ಎತ್ತಿಯುಕ ವಾಜರಿಗೆ ಇಟ್ಟಿರುತ್ತದೆ ತಕ್ಕಿದ್ರಿ ವಿಶೇಕ್ಷವಾಗಿ ತಿಳುಯಬೇಕು.

Kasaragod, 2—10—'40 | C. Padmanabha Rao, Vakil for Petitioner.

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

R I A 658/1940

O S 229/1940

ರಾವ್ ಸಾಹೇಬ್ ರಾಜಲಕ್ಷ್ಮಿನಾಥ ಸ್ವಾಮಿ ಆದಿಸುಗಳು ವಾದಿ

ದೂಮಾಲು ಕೂಡಾ 2 ಜನರು ಪ್ರತಿವಾದಿರು

2ನೇ ಪ್ರತಿವಾದಿ ಲ್ಯತಪ್ಪ ಪೂಜಾರಿ, ಪತಿ ವಾದಿ ಕೊರಗ ಪೂಜಾರಿ ಅಳಿಯ 1ನೇ ಪ್ರತಿವಾದಿ ದೂಮಾಲು ಹೆಗ್ಗಿನ ಅಣ್ಣ—ಪಾಲಿ ವಿಟ್ಲ ಕಸಬಾ ಗ್ರಾಮದಲ್ಲಿ ....

ವಾದಿಯು ಆಸ್ತಿ ಸ್ವಾಧೀನತೆಗೂ, ಗೇಣಿ ಬಾಕಿಗೂ ಕೂಡಾ ಪ್ರತಿವಾದಿರ ಮೇಲೆ ದಾವಾ ಮಾಡಿ ಅದರ ನೋಟೀಸಿನ ಪ್ಯಾದೆಯು ಮತ್ತು ದಾವಾ ಆಸ್ತಿ ಕುರಿತು ಒಪ್ಪ ಯೋಗ್ಯ ರಿಸೀವರರನ್ನು ನೇಮಿಸಿ ಅವರ ಸ್ವಾಧೀನಕ್ಕೆ ಆಸ್ತಿ ಬಿಡಿಸಿಕೊಡಬೇಕಾಗಿ ವಾದಿ ಕಡೆಯಿಂದ ಬರಕೊಂಡ R. I. A. 658/'40ನೇ ಅರ್ಜಿಯ ನೋಟೀಸಿಗೂ ಕೂಡಾ ತಾ. 15–10–1940ಕ್ಕೆ ತಕ್ಕ ಪ್ಯಾದೆ ತಕ್ಕೊಂಡಿರುವುದರಿಂದ ಆ ದ್ಯಾದೆಗೆ ಮೇಲ್ಕಂಡ ಪ್ರತಿವಾದಿರು ತಮ್ಮ ಆಕ್ಷೇಪಗಳೇನಾದರೂ ಹೇಳುವುದಿದ್ದರೆ ಕೋರ್ಟಿಗೆ 11 ಘಂಟೆಗೆ ತಪ್ಪದೆ ವಾಜರಿಗೆ ಹೋಗಬೇಕಾಗುತ್ತದೆ. ಇದಕ್ಕೆ ತಪ್ಪಿದ್ದು ಅವರನ್ನು ಶಿಕ್ಷಿಸುತ್ತ ದಾವೆ ಈ ದಾವೆಯನ್ನು ತನ್ನಯಿಂದ ತೀರ್ಮಾನಿಸಲಾಗುವುದು ಎಂತ ವಾದಿ ಕಡೆಯಿಂದ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ,

Puttur, S K 21—9—1940 } S. Ramachandra Rao Pleader for Plaintiff.



ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪರಿಸ್ಥಿತಿಗಳು ಇಂದು ವಿಷಮಸ್ಥಿತಿಗೇರಿವೆ. ಲೋಕದ ಎಲ್ಲಾ ಜನಾಂಗಗಳ ಜೀವನದಲ್ಲಿಯೂ ಇಂದು ಸಂಧಿಕಾಲವು ಬಂದೊದಗಿದೆ.

◆

ಗಾಂಧೀಜಿಯವರು ಸಿಮ್ಲಾದಿಂದ ಬರಿಗೈಯ್ಯಿಂದ ಮರಳಿಬಂದರೆಂದು ಹಲವರು ನಿರೀಕ್ಷಿಸಿಕೊಂಡಿದ್ದಾರೆ ಆದರೆ, ತಾನು ಬಲಶಾಲಿಯಾಗಿ ಮರಳಿಬಂದೆನೆಂದು ಗಾಂಧೀಜಿಯವರು ಹೇಳಿದರು. ಮಹಾತ್ಮರ ಮಾತೂ ಮತ್ತು ಕೃತಿ ಇವೆರಡು ಗೂಢಾರ್ಥವುಳ್ಳದ್ದು!

◆

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧಾದಲ್ಲಿ ಸೇರುವುದು. ಅದರೊಳಗೆ ಮುಂದಿನ ಕಾರ್ಯಕ್ರಮದ ಯೋಜನೆಯನ್ನು ಸಿದ್ಧಪಡಿಸುವೆನೆಂದಿದ್ದಾರೆ ಗಾಂಧೀಜಿ! ಈ ಮಧ್ಯಕಾಲದಲ್ಲಿ ಯಾರೂ ಕೂಡಾ ಯಾವುದೇ ರೀತಿಯ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಚಳವಳಿಗೆ ಕೈಹಾಕಬಾರದು ಎಂಬುದು ಕಾಂಗ್ರೆಸ್ ಕೆಲಸಗಾರರಿಗೆ ಅವರ ಆಜ್ಞೆ. ಗಾಂಧೀಜಿಯ ಆಜ್ಞೆ, ಕಾಂಗ್ರೆಸಿನ ಸರ್ವಸೇನಾಪತಿಯ ಆಜ್ಞೆ!

◆

ಗಾಂಧೀಜಿಯವರ ಮುಂದಿರುವ ಸಮಸ್ಯೆಗಳ ಕುರಿತು ಟೈಮ್ಸ್ ತನಗೆ ಅನುಕೂಲವಾಗಿ ಉಲ್ಲೇಖಿಸಿದೆ. ಭಾಗಶಃ ಧುರೀಣರ ಮಾತಿನ ಮತ್ತು ಕೆಲಸಗಳ ವಿಷಯವನ್ನು ತನಗೆ ಬೇಕಾದಂತೆ ತಿರುಗಿಸಿಕೊಳ್ಳುವ ಬುದ್ಧಿಯನ್ನು 'ಟೈಮ್ಸ್' ಇನ್ನೂ ಬಿಟ್ಟಿಲ್ಲ!

◆

"ಭಾರತದ ರಾಜಕೀಯ ಜಾಗ್ರತಿಯನ್ನು ಹುಟ್ಟಿಸುವ ಸಲುವಾಗಿ, ಶಾಸನ ಭಂಗವನ್ನು ಆರಂಭಿಸಿದರೆ, ಖಂಡಿತವಾಗಿಯೂ ಇಡೀ ಭಾರತದಲ್ಲಿ ಅದಕ್ಕೆ ಜನತೆಯ ಆಕ್ಷೇಪವು ಬರುವುದು, ಅದಲ್ಲದೆ ಈ ಸಮಯದಲ್ಲಿ ಏನೂ ಕಾರ್ಯಕ್ರಮವನ್ನು ಮಾಡದೆ ಇರುವುದೆಂದರೆ, ಕಾಂಗ್ರೆಸು ತನ್ನ ಸ್ವೀಕೃತ ತತ್ವವನ್ನೇ ಪರಿಪಾಲಿಸಿದಂತೆ, ಇಂತಹ ಸಂದರ್ಭದಲ್ಲಿ ಬಹಳ ಚುರುಕು ಬುದ್ಧಿಯ, ರಾಜಕೀಯ ತಂತ್ರಗಾರನಾದ ಗಾಂಧೀಜಿ ಸಂಕಷ್ಟದಲ್ಲಿ ಬೀಳುವನಾದರೂ, ಸತ್ಯಾಗ್ರಹವನ್ನಾರಂಭಿಸುವುದಂತೂ ಸಾಧ್ಯವಿಲ್ಲ" ಹೀಗೆಂದು ಟೈಮ್ಸಿನ ಊಹಾಪೋಹಗಳು!

◆

ಬ್ರಿಟಿಷರಿಗೆ, ಆಪತ್ತಿನ ಈ ಸಮಯದಲ್ಲಿ ಪೇಚಾಟ ಮಾಡಬಾರದು ಎಂಬ ಗಾಂಧೀಜಿಯವರ, ಹೃದಯದ ಉದಾರತೆಯನ್ನು ಹೀಗೆ ಅಪಾರ್ಥಮಾಡಿಕೊಂಡು ಜನತೆಯ ಬೆಂಬಲ ಸಿಗದೆ ಗಾಂಧೀಜಿ ಸತ್ಯಾಗ್ರಹ ಮಾಡಲು ಹಿಂಜರಿಯುತ್ತಾರೆ ಎನ್ನುವುದಕ್ಕಿಂತ ಹೆಚ್ಚಿನ ಅನ್ಯಾಯದ ಅಪಪ್ರಚಾರ ಬೇರಿರಲಾರದು.

◆

ಯೂರೋಪಿನ ರಾಜಕಾರಣದಲ್ಲಿ ಬಹಳ ತೀವ್ರವಾದ ಚಲನವಲನಗಳು ಈ ವಾರ ನಡೆದವು! ಯುದ್ಧವು ಇನ್ನಷ್ಟು ಭೀಕರ ಸ್ವರೂಪವನ್ನು ಹೊಂದುವ ಸಿದ್ಧತೆಗಳು ಭರದಿಂದ ನಡೆಯುತ್ತಿವೆ!

ಬ್ರಿಟನನ್ನು ಆಕ್ರಮಿಸುವ ಯತ್ನವು ವಿಫಲವಾಗುತ್ತಾ ಬಂದಂತೆ, ಸರ್ವಾಧಿಕಾರಿಗಳು ಬಹಳ ತಳಮಳಗೊಂಡಿದ್ದಾರೆ. ಬ್ರಿಟನಿಗೆ ಅಮೇರಿಕದ ಸಹಾನುಭೂತಿಯು ಹೆಚ್ಚುತ್ತಾ ಬರುವುದನ್ನು ಕಂಡು ಅವರಿಗೆ ಸುಮ್ಮಗೆ ಇರವುದು ಸಾಧ್ಯವಿಲ್ಲವೆಂದು ಕಂಡುಬಂದಿರಬೇಕು. ಅಮೇರಿಕವು ಬೇಗನೇ ಬ್ರಿಟನಿನ ಬೆಂಬಲಕ್ಕೆ ತನ್ನ ಮೇಲೆ ಕೈಯೆತ್ತುವುದೆಂದು ಸರ್ವಾಧಿಕಾರಿಗಳಿಗೂ ಆಶ್ಚರ್ಯವಾಗಿ ಹೋಗಿದೆ!

◆

ಹಾಗಾಗಿ ತ್ರಿರಾಷ್ಟ್ರಗಳ ಒಪ್ಪಂದವು ಆಶ್ಚರ್ಯಕರವಲ್ಲದಿದ್ದರೂ ವಿಶೇಷ ಅವಸರವಸರವಾಗಿಯೇ ನಡೆಯಿತು! ಎಲ್ಲರೂ ಊಹಿಸಿದ್ದಂತೆ, ತನ್ನ ಸ್ವಭಾವಗುಣಕ್ಕೆ ಅನುಸರಿಸಿ ಜಪಾನ ಹಿಟ್ಲರನ ಬೆನ್ನು ಹಿಡಿದ ಬಂದಿದೆ. ಅತ್ತ ಮೋಸ್ಕೋಗೆ ಸರ್ವಾಧಿಕಾರಿಗಳ ಸಂಧಾನ ದೂತರ ಪ್ರಯಾಣ ಬೆಳೆಸಿದ್ದಾರೆ! ಸ್ಟೇಲಿನ್ನನ್ನಂತೂ ಬಹುಕಾಲದಿಂದ ಕಾದಾಟಕ್ಕೆಳಸಬೇಕೆಂದು ಹಿಟ್ಲರ್‌ಮುಸಲಿನಿಗಳು ಬ್ರೆನ್ನರ್‌ಕಣಿವೆಯಲ್ಲಿ ನಿಂತು ಗುಪ್ತ ಕಾರಸ್ಥಾನವನ್ನು ನಡೆಸುತ್ತಿದ್ದಾರೆ!

◆

ಹೀಗೆ ಹಿಟ್ಲರನು ಕೋಲಾಹಲಗೊಂಡಿರುವನೆಂಬುದು ಸ್ಪಷ್ಟವೇ! ಬರುವ ವಸಂತದೊಳಗೆ ಅಮೇರಿಕವು ಬ್ರಿಟನಿನ ಸಹಾಯವಾಗಿ ಪ್ರತ್ಯಕ್ಷ ರಣರಂಗಕ್ಕಿಳಿಯುವುದೆಂದು ಅಮೇರಿಕನ್ ಪತ್ರಿಕೆಗಳೇ ಸಾರುತ್ತಿವೆ!

◆

ಅಮೇರಿಕದಲ್ಲಿ ಎಂದಿಗಿಂತಲೂ ಹೆಚ್ಚಾಗಿ ಯುದ್ಧ ಸಾಮಗ್ರಿಗಳ ಸಿದ್ಧತೆ ಇಂದು ನಡೆಯುತ್ತಿರುವುದಾಗಿ ಕೇಳಿಬರುತ್ತದೆ. ಹೆಚ್ಚಿನ ವಿವಾದಗಳು ಇನ್ನೂ ತಿಳಿಯಲಿಕ್ಕಿದೆ. ಅಂತೂ ಅಮೇರಿಕದ ಬೆಂಬಲದಿಂದ ಬ್ರಿಟನ ಇಮ್ಮಡಿ ಶಕ್ತಿಗೊಂಡು ಸರ್ವಾಧಿಕಾರಿಗಳ ಕುತಂತ್ರವನ್ನು ತಲೆಕೆಳಗು ಮಾಡುವುದೆಂದ ಇಡೀ ಪ್ರಪಂಚವೇ ನಂಬಿದೆ!

◆

ಇಷ್ಟರಲ್ಲಿ ಬ್ರಿಟನಿನಲ್ಲಿ ಮಂತ್ರಿಮಂಡಲದಲ್ಲಿ ವಿಶೇಷ ಬದಲಾವಣೆಗಳಾದವು! ಹಿಂದಿನ ಮಂತ್ರಿಗಳ ಅನೇಕರ ಸ್ಥಾನಚ್ಯುತರಾದರು. ಚೇಂಬರ್ಲಿನರು ಮಂತ್ರಿಪದವಿಗೆ ಮಾತವಲ್ಲದೆ ತನ್ನ ಪಕ್ಷದ ಮುಂದಾಳುತನಕ್ಕೂ ರಾಜಿನಾಮೆ ಕೊಟ್ಟಿರುವರು!

◆

ಬ್ರಿಟನಿನ ರಾಷ್ಟ್ರೀಯ ಸರಕಾರವು ಹೊಸ ಹುರುಪಿನ ಮುಂದಾಳುಗಳಿಂದ ಬಲಗೊಂಡಿದೆ. ಚರ್ಚಿಲ್ಲರ ರಣಗರ್ಜನೆಗೆ ಮತ್ತಷ್ಟು ಪುಷ್ಟಿಯನ್ನು ಕೊಡುವುದೆಂದು ಎಲ್ಲರೂ ನಂಬಿದ್ದಾರೆ!

◆

ಹೀಗೆ ಪ್ರಚಂಡಕಾಳಗದ ಹೊಸ ಅಧ್ಯಾಯವು ಆರಂಭವಾಗಿದೆ! ಶಾಂತಿ ಸಂಧಾನಗಳು ಕನಸಿನ ಗೋಪುರವಾಗಿವೆ, ಯುದ್ಧ ಸಾಹಸಕ್ಕೆ, ಭೀಷಣ ಹತ್ಯಾಕಾಂಡಕ್ಕೆ ಯೂರೋಪಿನ ಜನಾಂಗಗಳು ಮಸೆದು ನಿಂತಿವೆ!

◆

ಬಲಿದಾನಕ್ಕೆ ಸಿದ್ಧರಾಗಿರಿ!

ರಾಷ್ಟ್ರಪತಿಗಳ ಸಂದೇಶ

ಕಲ್ಕತ್ತದಲ್ಲಿ ಒಂದು ಭಾಷಣ ಮಾಡುತ್ತಾ ರಾಷ್ಟ್ರಪತಿ ಅಜಾದರು ಇಂದು ಕಾಂಗ್ರೆಸಿನವರು ಗಾಂಧೀಜಿಯವರನ್ನು ಐಕ್ಯಮತ್ಯದಿಂದ ಹಿಂಬಾಲಿಸಿ ಶಿಸ್ತು ವಿಧೇಯತೆಗಳಿಂದ ನಡೆಯಬೇಕೆಂದೂ, ಎಂತಹ ಬಲಿದಾನಕ್ಕೂ ಸಿದ್ಧರಾಗಿರಬೇಕೆಂದೂ ಹೇಳಿದರು.





ಕಾಯಕಷ್ಟವು

ಕಾಯಕಷ್ಟ ಮಾಡುತ್ತಿದ್ದ ದಿವಸಗಳಲ್ಲಿ ಸ್ತ್ರೀಯರಿಗೆ ಹೊಟ್ಟೆನೋವು, ಮುಟ್ಟುಕಟ್ಟು, ಬಂಜೆತನ ಮುಂತಾದವು ಇರಲಿಲ್ಲ. ಆಗ ಎಲ್ಲರೂ ಆರೋಗ್ಯವಾಗಿಯೇ ಇದ್ದರು.

ಆದರೆ, ಈಗಿನ ಕಾಲದಲ್ಲಿ ಪರಿಸ್ಥಿತಿಗಳು ಬದಲಾಗಿವೆ. ಸ್ತ್ರೀಯರಿಗೆ ಗರ್ಭಸಂಬಂಧವಾದ ಅನೇಕ ರೋಗಗಳು ಉಂಟಾಗುತ್ತಿವೆ. ಆದುದರಿಂದ ಸ್ತ್ರೀಯರು ಸೌಖ್ಯವಾಗಿಯೂ ಆರೋಗ್ಯವಾಗಿಯೂ ಇರಬೇಕಾದರೆ 'ಲೋಧ್ರ'ಸೇವನೆ ಬಿಟ್ಟರೆ ಬೇರೆ ದಾರಿಯಿಲ್ಲ. ಗರ್ಭಾಶಯ ರೋಗಗಳನ್ನು ನಿವಾರಿಸಿ ಆರೋಗ್ಯ ಜೀವನವನ್ನು ಜೀವಿಸುವಂತೆ ಮಾಡುವುದೆಂದರೆ

'ಲೋಧ್ರ'

ಕೇಸರಿ ಕುಟೀರಂ
ರಾಯಪೇಟೆ :: ಮದರಾಸು.
ಮಂಗಳೂರು ಪ್ರವರ್ತಕರು.
ಪೊಣ್ಣೈಲರ್ ಸ್ಟೋರ್ಸ್ ರಥಬೀದಿ.

ವಿಜ್ಞಾನಯುಗ

ಹೊಯಿಗೆ ತುಂಬಿದ ಟೊಳ್ಳು ಇಟ್ಟಿಗೆ

ವಿಲಾಯತಿಯ ಒಬ್ಬ ವಿಜ್ಞಾನಿಯು ಹೊಯಿಗೆ ತುಂಬಿರುವ ಟೊಳ್ಳು ಇಟ್ಟಿಗೆಗಳನ್ನು ತಯಾರಿಸಿದ್ದಾನೆ. ಇವುಗಳನ್ನು ಎರಕ ಹಾಕಲಿಕ್ಕೆ ಬರುತ್ತದೆ ಇವುಗಳನ್ನು ಒಂದನ್ನೊಂದು ಕೂಡಿಸಲಿಕ್ಕೆ ಸುಣ್ಣಗಾರೆಗಳ ಅಗತ್ಯವಿಲ್ಲ ಆದುದರಿಂದ ಇವುಗಳಿಂದ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ಖರ್ಚೂ ಪರಿಶ್ರಮವೂ ಕಡಿಮೆ ವಿಮಾನ ದಾಳಿಗಳಿಂದ ಸುರಕ್ಷಿತವಾಗಿರುವ ಭದ್ರವಾದ ಆಶ್ರಯ ಸ್ಥಾನಗಳನ್ನು ಕಟ್ಟಿಸಲಿಕ್ಕೆ ಈ ಇಟ್ಟಿಗೆಗಳು ಬಹಳ ಉಪಯುಕ್ತವಾಗಿರುವವು ಇನ್ನೊಬ್ಬ ವಿಜ್ಞಾನಿಯು ಸುಣ್ಣಗಾರೆಯಂತ, ಆದರೆ ಗಾಳಿ, ಮಳೆ, ಬಿಸಿಲುಗಳಿಗೆ ಕೆಡದಂಥ ಒಂದು ವಸ್ತುವನ್ನು ತಯಾರಿಸಿದ್ದಾನೆ ಸಂದು ಇಲ್ಲದ ಗೋಡೆ, ನೆಲ ಸಿಲಿಂಗು ಇತ್ಯಾದಿ ಕೊಂಕ್ರೀಟಿನಿಂದಾಗುವ ಕೆಲಸಗಳನ್ನು ಇದರಿಂದ ಪೂರೈಸಬಹುದು ಇದರ ರಚನೆಗಳು ಕಣ್ಣಿಗೆ ರಮ್ಯವಾಗುವಂತೆ ಈ ವಸ್ತುವಿನೊಂದಿಗೆ ಬೇಕುಬೇಕಾದ ಬಣ್ಣಗಳನ್ನು ಬೆರೆಸಲಿಕ್ಕೂ ಆಗ ತ್ತದೆ

ಬೆಳಕನ್ನು ಬೀರುವ ಕನ್ನಡಕ

ಸಾಮಾನ್ಯ ಕನ್ನಡಕಗಳನ್ನು ಇಟ್ಟುಕೊಂಡರೆ ರಾತ್ರಿಕಾಲದಲ್ಲಿ ನೋಡಲಾಗುವುದಿಲ್ಲ ಒಬ್ಬ ವಿಜ್ಞಾನಿಯು ರಾತ್ರಿಕಾಲದಲ್ಲಿಯೂ ಕತ್ತಲೆಯಲ್ಲಿ ನೋಡಲಿಕ್ಕಾಗುವ ಕನ್ನಡಕಗಳನ್ನು ತಯಾರಿಸಿರುವನು ಕನ್ನಡಕದ ಎರಡು ಹರಳುಗಳ ನಡುವೆ ಮೂಗಿನ ಬಳಿ ಒಂದು ಗೋಲಕವಿದೆ ಕನ್ನಡಕವನ್ನಿಟ್ಟು ತಲೆಯನ್ನು ಒಂದು ರೀತಿಯಿಂದ ಆಡಿಸಿದಾಗ ಕನ್ನಡಕದ ಕಾಲುಗಳಿಂದ ವಿದ್ಯುತ್ತು ಹರಿದು ಗೋಲಕದಿಂದ ಪ್ರಕಾಶವು ಹೊರಡುತ್ತದೆ. ಈ ಪ್ರಕಾಶದ ಮೂಲಕ ರಾತ್ರಿಕಾಲದಲ್ಲೂ, ಕತ್ತಲೆ ಇದ್ದಾಗಲೂ ಹಗಲಿನಲ್ಲಿದ್ದಂತೆ ಕೆಲಸ ಕಾರ್ಯಗಳನ್ನು ನಿರ್ವಹಿಸಬಹುದು.

ಪೆನ್ಸಿಲು ಮೊನೆಗೆ ವಿದ್ಯುದ್ಯಂತ್ರ

ದೊಡ್ಡ ದೊಡ್ಡ ಕಾರ್ಯಾಲಯಗಳಲ್ಲಿ ಪೆನ್ಸಿಲು ಮೊನೆ ಮಾಡಲಿಕ್ಕೇ ಬಹಳ ಸಮಯವು ಖರ್ಚಾಗುತ್ತದೆ. ಈ ಸಮಯವನ್ನು ಉಳಿಸುವದಕ್ಕೋಸ್ಕರ ಒಬ್ಬ ವಿಜ್ಞಾನಿಯು ವಿದ್ಯುಕ್ತಿನ ಒಂದು ಉಪಕರಣಗಳನ್ನು ಮಾಡಿದ್ದಾನೆ. ಈ ಉಪಕರಣದಲ್ಲಿ ಪೆನ್ಸಿಲನ್ನು ಇಟ್ಟು ಮೇಜಿನ ಮೇಲಿದ್ದ ವಿದ್ಯುಕ್ತಿನ ಗುಂಡಿಯನ್ನು ಒತ್ತಿದಾಗ, ಉಪಕರಣದಲ್ಲಿ ಪೆನ್ಸಿಲು ತಿರುಗಿ ಹದವಾಗಿ ಮೊನೆಯಾಗುತ್ತದೆ. ಒಂದು ಮಿನಿಟಿನಲ್ಲಿ ಹೀಗೆ ಹತ್ತಿಪ್ಪತ್ತು ಪೆನ್ಸಿಲುಗಳಿಗೆ ಸುಂದರವಾದ ಮೊನೆ ಮಾಡಲಿಕ್ಕೆ ಆಗುತ್ತದೆ.

ಗಿಡಗಳು ಬೆಳೆಯಲಿಕ್ಕೆ ಮಣ್ಣು ಬೇಡ

ಮಣ್ಣಿದ್ದರೆ ಮಾತ್ರ ಗಿಡಗಳನ್ನು ಬೆಳೆಸಬಹುದೆಂಬುದು ಸಾಮಾನ್ಯ ಜನರ ಭಾವನೆ ಆದರೆ ಇದು ತಪ್ಪೆಂದು ಒಬ್ಬ ವಿಜ್ಞಾನಿಯು ಪ್ರತ್ಯಕ್ಷ ಪ್ರಮಾಣದಿಂದ ತೋರಿಸಿ ಕೊಟ್ಟಿದ್ದಾನೆ ಒಂದು ಬಾಟಲಿಯಲ್ಲಿ ಮಣ್ಣು ಅಂಟಿರದ ಒಂದು ಗಿಡವನ್ನು ಇಟ್ಟು ಅದಕ್ಕೆ ಮಣ್ಣಿನ ಸಾರವಿರುವ ನೀರನ್ನು ಹಾಕಿದರೆ, ಗಿಡವು ಮಣ್ಣು ಇಲ್ಲದೆಯೇ ಬೆಳೆಯುತ್ತದೆ. ಅದರ ಬೆಳವಣಿಗೆ ಮಣ್ಣಿನಲ್ಲಿ ಬೆಳೆಯುವ ಗಿಡಗಳಿಗಿಂತ ಶೀಘ್ರವಾಗಿರುವುದು ಮಾತ್ರವಲ್ಲದೆ ಅದು ಮಣ್ಣಿನಲ್ಲಿ ಬೆಳೆಯುವ ಗಿಡಗಳಿಗಿಂತಲೂ ಬೇಗ ಮತ್ತು ಉತ್ತಮವಾದ ಹೂ ಹಣ್ಣುಗಳನ್ನು ಹೆಚ್ಚು ಕಾಲದ ತನಕ ಕೊಡುತ್ತಾ ಇರುವದು ಜಮೀನು ಭೂಮಿ ಇಲ್ಲದವರು ಹೂ ಅಥವಾ ತರಕಾರಿ ತೋಟ ಮೊದಲಾದವನ್ನು ಬೆಳೆಸಲಿಕ್ಕೆ ಈ ಉಪಾಯವು ಬಹಳ ಅನುಕೂಲವಾಗಿರುವದು

ಕಿರೀಟದಲ್ಲೇ ಶಿರಸ್ತ್ರಾಣ

ಪೋಲೀಸರು, ಸೈನಿಕರು ಮೊದಲಾದ ಜನಗಳು ತಲೆಗೆ ಇಟ್ಟುಕೊಳ್ಳುವ ಉಕ್ಕಿನ ಕುಲಾವಿಗಳು ಬಹಳ ಭಾರವಾಗಿ ಇರುತ್ತವೆ ಅವುಗಳಿಗೆ ಪೆಟ್ಟು ಬಿದ್ದರೂ ತಲೆಗೆ ನೋವಾಗುವದು ಆದ್ದರಿಂದ ಅವನ್ನು ಇಟ್ಟುಕೊಳ್ಳಲಿಕ್ಕೆ ಅಭ್ಯಾಸವಾಗಬೇಕು ಅಮೇರಿಕದ ಒಬ್ಬ ವಿಜ್ಞಾನಿಯು ತಯಾರು ಮಾಡಿದ ಒಂದು ಕುಲಾವಿಯು ಬಹಳ ಹಗುರವಾಗಿರುತ್ತದೆ. ಅದು ಟೊಳ್ಳಾಗಿರುವದರಿಂದ ಅದಕ್ಕೆ ತಾಗಿದ ಪೆಟ್ಟು ತಲೆಗೆ ನೋವನ್ನು ಉಂಟು ಮಾಡುವದಿಲ್ಲ ಸಮಯ ಬಂದಾಗ ಈ ಕುಲಾವಿಯನ್ನು ಕಿರೀಟವಾಗಿಯೂ ಉಪಯೋಗಿಸಬಹುದು ಆದ್ದರಿಂದ ಇದು ಪೋಲೀಸರ ಮತ್ತು ಸೈನಿಕರಿಗೆ ಮಾತ್ರವಲ್ಲ, ಇತರರಿಗೂ ಉಪಯುಕ್ತವಾಗಿ ಇರುತ್ತದೆ ಕಿರೀಟದೊಳಗೆ ಶಿರಸ್ತ್ರಾಣ-ಶಿರಸ್ತ್ರಾಣದೊಳಗೆ ಕಿರೀಟ ಎಂಬ ಹಾಗೆ ಇದರ ರಚನೆ ಇರುತ್ತದೆ

ಗುಂಡು ತಾಗಿದರೂ ಒಡೆಯದ ಟಾಯರು

ಅಮೇರಿಕದ ರಬ್ಬರು ಕಂಪೆನಿಯ ಒಬ್ಬ ವಿಜ್ಞಾನಿಯು ಗುಂಡು ತಾಗಿದರೂ ಒಡೆಯದ ಒಂದು ಜಾತಿಯ ಟಾಯರನ್ನು ತಯಾರಿಸಿದ್ದಾನೆ ಇದು ಹರಿದು ಹೋಗುವ ಅಥವಾ ತೂತು ಬೀಳುವ ಭಯವಿರುವದಿಲ್ಲ ಒಂದು ಗುಂಡು ಅಥವಾ ಬೇರೆ ಯಾವುದಾದರ ಪ್ರಯೋಗದಿಂದ ಟಾಯರು ಹರಿದು ಹೋದಾಗ ಅಥವಾ ತೂತು ಬಿದ್ದಾಗ ರಬ್ಬರು ಅಲ್ಲಿಯೇ ಕರಗಿ ಹರಿದ ಅಥವಾ ತೂತು ಬಿದ್ದ ಟಾಯರಿನ ಅಷ್ಟು ಅಂಶವನ್ನು ಚೆನ್ನಾಗಿ ಸಂದು ಕೂಡಿಸಿ ಪೂರ್ವ ಸ್ಥಿತಿಗೆ ತರುತ್ತದೆ. ಈ ಕೆಲಸವನ್ನು ಮಾಡಲಿಕ್ಕೆ ಅದಕ್ಕೆ ಒಂದು ಮಿನಿಟೂ ಬೇಡ ಸದ್ಯಕ್ಕೆ ಸೇನೆಯಲ್ಲಿ ಮಾತ್ರ ಇಂಥ ಟಾಯರುಗಳನ್ನು ಉಪಯೋಗಕ್ಕೆ ತರುವರು ಈ ಟಾಯರುಗಳನ್ನು ಜನ ಸಾಮಾನ್ಯರ ಉಪಯೋಗಕ್ಕೆ ಮಾರಾಟಕ್ಕಿಟ್ಟರೆ ಅದರಿಂದ ರಬ್ಬರು ಕೈಗಾರಿಕೆಗೆ ಆರ್ಥಿಕ ನಷ್ಟವುಂಟಾಗುವ ಭಯವಿರುವದರಿಂದ ಅಂಥ ಟಾಯರುಗಳನ್ನು ಜನರಿಗೆ ಮಾರಾಟಕ್ಕಿಡುವ ವಿಚಾರ ಇರುವದಿಲ್ಲ

೧,೦೦೦ ರೂಪಾಯಿಗಳ ಬಕ್ಷೀಸು

ಕೆಳಗಿನ ಔಷಧಗಳಲ್ಲಿ ಗುಣವಿಲ್ಲೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ ರೂ ಇನಾಮು

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು: ೪—೮—೦

ಪ್ರಮೇಹ ವ್ಯಾಧಿಯಲ್ಲಿ ಭೇದಿಸಿದರೆ ತನ್ನ ಮತ್ತು ತನ್ನ ಭಾವೀ ಪೀಳಿಗೆಯ ನಾಶಮಾಡದೆ ಬಿಡಲಾರದು ಇಂಥ ಮಹಾ ಹಾನಿಕಾರಕ ಎಲ್ಲ ೨೦ (ಇಪ್ಪತ್ತು) ಪ್ರಕಾರದ ಪ್ರಮೇಹ ಪರಮಾ ಆದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಇದೆ

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತಿದೆ ಮೂತ್ರ ಮಾರ್ಗ ಸ್ವಚ್ಛವಾಗಿ ಮೂತ್ರದ ಕಾಲಕ್ಕೆ ಉಂಟಾಗುವ ವೇದನೆ ಮತ್ತು ಉರುಪು ಇಲ್ಲದಂತಾಗುತ್ತದೆ ಕೀವು ಮತ್ತು ಪ್ರಮೇಹ ಹೋಗುವದು ಬಂದಾಗುತ್ತದೆ ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ ಅಶುದ್ಧ ತತ್ವಗಳನ್ನು ಮೂತ್ರ ಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿಗಳನ್ನು ಸಮೂಲ ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ ಅನುಪಾನ ಪತ್ರಿಕೆ ಔಷಧದ ಕೂಡ ಪಥ್ಯ ಏನೂ ಇಲ್ಲ ಕಿಮ್ಮತ್ತಿನ ಹೊರ್ತಾಗಿ ಅಂಚೆ ವೆಚ್ಚ ಬೇರೆ

ಕಿ॥ ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪದರ ಶೆರಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ ಇವುಗಳ ಮೇಲೆ ಅತ್ಯಂತ ಉಪಯುಕ್ತವಿದೆ—

ಶ್ವೇತ-ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಾದ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳದಿ, ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟುನೀರಿನಂತೆ ಹೋಗುವಿಕೆ ಇವೆಲ್ಲವುಗಳನ್ನು ಖಂಡಿತವಾಗಿ ನಷ್ಟಪಡಿಸುತ್ತೆ. ಇದರ ಸೇವನೆಯಿಂದ ಪ್ರದರ ಮತ್ತು ಮುಟ್ಟುದೋಷ ಇವುಗಳಿಂದ ಕಿಬ್ಬೊಟ್ಟೆ ಗರ್ಭಾಶಯ ಇಲ್ಲವೆ ಕುಸುಮಿಧಲ್ಲಿ ಆಗುವ ವೇದನೆ, ನಡ, ತಲೆ, ತೊಡೆ ಮತ್ತು ಸಂದು ಇವುಗಳಲ್ಲಿ ನೋವು, ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ ಆಗದಿರುವಿಕೆ, ಆದರೂ ಗರ್ಭಪಾತ ಮುಂತಾದ ಎಲ್ಲ ವಿಕಾರ ಮತ್ತು ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಇಲ್ಲ. ಅಂ. ವೆ. ಬೇರೆ.

ಪತ್ತೆ:—ವೈದ್ಯರಾಜ ಎ. ಬಿ. ಸಿದನಾಳ,

ಮನೆ ನಂಬರ ೧೩೮೪, ಎಸ್. ಎಮ್. ಬಸವಣಗಲ್ಲಿ, ಬೆಳಗಾವಿ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C No 284/1940

ಮಂಗಳೂರು ಟ್ರೈಲ್ ಕಂಪೆನಿ, ಇದರ ಟ್ರಸ್ಟೀ ಎಫ್ ಪಿ ಎಸ್. ಅಲ್ಬುಕರ್ಕ್ — ವಾದಿ

ತ್ಯಾಂಪ ಶೈ (ಪೌತಿ) ಕೂಡಾ ಪ್ರತಿವಾದಿರು

2ನೇ ಪ್ರತಿವಾದಿಗೆ ನಾರಾಯಣಆಳ್ವ, 3ನೇ ಪ್ರತಿವಾದಿಗೆ ಬಾಬ ಆಳ್ವ, ಇಬ್ಬರೂ ತ್ಯಾಂಪ ಶೈಗಳ ಅಳಿಯಂದಿರು, ಮಂಗಳೂರು ತಾಲೂಕು ಪಾವೂರು ಗ್ರಾಮದ ಇನೋಳಿಯಲ್ಲಿರುವವರು—

ವಾದಿಯು ಮೃತಪಟ್ಟ 1ನೇ ಪ್ರತಿವಾದಿಯು ಬಾಕಿ ಮಾಡಿಕೊಂಡ ಗೇಣಿಯನ್ನು ಆತನ ಸೊತ್ತುಗಳಿಂದ ವಸೂಲು ಮಾಡುವ ಬಗ್ಗೆ ದಾಖಲು ಮಾಡಿದ ಮೇಲೆ ಕಾಣಿಸಿದ ವ್ಯಾಜ್ಯವು 1940ನೇ ಇಸವಿ ಅಕ್ಟೋಬರ ತಿಂಗಳು ತಾ 21ನೇ ಸೋಮವಾರ ದಿವಸ ಹಗಲು 11 ಘಂಟೆಗೆ ಈ ಕೋರ್ಟಿನ ಮುಂದೆ ಇಟ್ಟಿರುತ್ತದೆ. ಆ ದಿವಸ ನೀವು ಹಾಜರಾಗಲಿಕ್ಕೆ ತಪ್ಪಿದರೆ ವ್ಯಾಜ್ಯವು ನಿಮ್ಮ ಗೈರುಹಾಜರಿಯಲ್ಲಿ ತೀರ್ಪು ಫೈಸಲು ಮಾಡಲಾಗುವದೆಂದು ಈ ಮೂಲಕ ತಿಳಿಸಲಾಗುತ್ತದೆ

ಮಂಗಳೂರು, 4–10–'40. N. E. L Peris, Vakil for Plaintiff

ದಿ ಕಂಬೈನ್ಡ್ ಬುಕ್ಕಿಂಗ್ ಏಜೆನ್ಸಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 1-10-1940ರಿಂದ ತಿರುಪತಿ ತಾ. 10-10-1940ರ ವರೆಗೆ

ಶ್ರೀ ತಿರುಮಲೆ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆಯುವ

ಬ್ರಹ್ಮೋತ್ಸವ ಸಮಾರಂಭ

ತಾ. 2-10-1940ರಿಂದ ತಾ. 10-10-1940ರ ವರೆಗೆ

ಮೈಸೂರು ದಸರಾ ಮಹೋತ್ಸವ

(ತಾರೀಖು 10-10-1940ರಲ್ಲು)

ಜಂಬೂಸವಾರಿ ಮೆರವಣಿಗೆಯ ಮನಮೋಹಕ ನೋಟ

ತಾ. 15-10-1940ರಿಂದ **ಶ್ರೀ ತುಲಾ ಕಾವೇರಿ ಸಂಕ್ರಮಣ** ತಾ 17-10-1940ರ ವರೆಗೆ

ಮುಹೂರ್ತ ಕಾಲ: ತಾರೀಕು 16-10-1940ರಲ್ಲು ರಾತ್ರಿ 12 ಗಂಟೆಗೆ

ಮಂಗಳೂರಿನಿಂದ 5-15 A.M ಗೆ ಬಿಡುವ ಮೊಡರ್ನ್ ಸರ್ವಿಸಿನಲ್ಲಿ ಹೊರಟರೆ ಅದೇ ದಿನ ಸಾಯಂಕಾಲ 3-30 ಗಂಟೆಯ ವಳಗೆ ಮೈಸೂರಿಗೆ ತಲುಪಿ, ಮೈಸೂರಿನಿಂದ ಆ ಕೂಡ್ಲೆ 4P.Mಗೆ ಬಿಡುವ ಮೈಲಿನಲ್ಲಿ ಹೊರಟು ಬೆಂಗಳೂರಿಗಾಗಿ, ತಿರುಪತಿಗೆ ಮರುದಿನ 9 10 \ \l ನ ವಳಗೆ ತಲಪಬಹುದು

ಮಂಗಳೂರಿಂದ ಮೈಸೂರಿಗೆ ಬಸ್ ಚಾರ್ಜು ರೂ **4-8-0.**

ಮೈಸೂರಿನಿಂದ ತಿರುಪತಿಗೆ ರೈಲು ಚಾರ್ಜು ರೂ 4-14-0 ರೈಲಿನ ರಿಟರ್ನ್ ಟಿಕೇಟು ಪಡಕೊಂಡವರಿಗೆ ಕನ್ಸೆಶ್ಯನ್ ಸಿಗುತ್ತದೆ

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ, ಮುಂಬ್ಯ ಸರ್ಟಿಫಿಕೇಟು ಡಾ. ವೈದ್ಯ ಎಲ್ ಸಿ ಪಿ ಎಸ್. ಕೊಡಮಾಡಿರುವ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦ ವಿ.ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ವಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪೆ

[ಸ್ಥಾಪನೆ, ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡ ಮುಡಿಗೆ	—	
„ ದುಯಂ „ „	1—15—0	
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುಡ್ಡ „	4—8—0	4—10—0
„ ದುಯಂ „ „	4—5—0	4—7—0
„ ಅವ್ವಲ್ ಸುಗ್ಗಿ „	4—9—0	4—10—0
„ ದುಯಂ „ „	4—4—0	4—6—0
ತೆಂಗಿನ ಕಾಯಿ—ಸುಲಿದದ್ದು 1000ಕ್ಕೆ	35—0—0	40—0—0
„ ಸಿಪ್ಪೆ ಇದ್ದದು „	37—[illegible]—0	42—8—0
ಕೊಬ್ಬರಿ ಆಫೀಸು ಖಂಡಿಗೆ	56—0—0	
„ ದಿಲ್‌ಪಸಂದ „	—	—
ತೆಂಗಿನ ಎಣ್ಣೆ ಮುಡಿಕ್ಕೆ	4—0—0	4—1—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	8—8—0	4—8—0
ಗೇರುಬೀಜ ಮುಡಿಗೆ	8—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	40—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	18—8—0	14—0—0

ಅಂಚೆ ವೆಚ್ಚ ಸೇರಿ ರೂ. 2-13-0 Regd. No. M 3406

ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 11-10-1940 [ಸಂಚಿಕೆ 41

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs. 1.42 Crores
Total Funds exceed	Rs. 1.52 Crores
Premium income during the year exceeds	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.

Car Street, Mangalore.

Central Station Road, Trivandrum.

Gautam Nivas, Charni Road, Girgaum, Bombay No. 4.

Post Box No. 337 Mount Road, Madras.

Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರ್ಷೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುಂಡಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರ

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kathomalies at tharada Press, Car Street, Mangalore.

ಸ್ವದೇಶಾಭಿಮಾನಿ
Swadeshabhimani. Estd 1906

ಎರಡು ಸಾವಿರ ವರ್ಷಗಳ ಹಿಂದಿನ ಪ್ರತಿಮೆ!
(ಕುರಾಡಿ ಶಾಂತಿನಿಕೇತನದ ಕಲಾಭವನದಲ್ಲಿ)

KANNADA ILLUSTRATED WEEKLY

[illegible]

[illegible] ಕುರಿತು [illegible] ಸ್ತು. ನಾಡಹಬ್ಬವೆಂದು ಹೆಸರಿಟ್ಟರೂ [illegible] ನಾಡನನ್ನು ಜನತೆಗೆ, ಹಳ್ಳಿಯ ವರೆಗೆ ಅದನ್ನು [illegible] ವೈಶಿಷ್ಟ್ಯತೆ ತಿಳಿದಿರಲಿಲ್ಲ. ಇಂತಹ ಸಂದರ್ಭ [illegible] ದಲ್ಲಿ ಈ ವರ್ಷ ಕನ್ನಡದ ಗಡಿನಾಡಾದ ಕಾಸರಗೋಡು ತಾಲೂಕಿನ ಪೆರಡಾಲ ಎಂಬಲ್ಲಿ, ಅಲ್ಲಿನ ಪ್ರೇಮ ಕೂಟದವರು ಅತ್ಯಂತ ಯಶಸ್ವಿಯಾಗಿ ನಾಲ್ಕು ದಿನಗಳ ಉತ್ಸವವನ್ನು ಆಚರಿಸಿದ್ದು ಬಹಳ ಪ್ರಶಂಸನೀಯವಾಗಿದೆ. ಪ್ರಗತಿಯನ್ನು ಹೊಂದುತ್ತಿರುವ ನಮ್ಮ ನಾಡಿನಲ್ಲಿ ಪೆರಡಾಲದ ತರುಣರು ಚಟುವಟಿಕೆಯಿಂದ ದುಡಿಯುತ್ತಿರುವುದು, ನಾಡತಾಯಿಯ ಸೇವೆಯನ್ನು ಸಲ್ಲಿಸುವಲ್ಲಿ ಅವರಿಗಿರುವ ಅತ್ಯಂತ ಅತುರವನ್ನೇ ತೋರಿಸುತ್ತದೆ.

ತಾ. ೭ರಂದು ದಸರಾ ಮಹೋತ್ಸವವು ಪ್ರಾರಂಭವಾಯಿತು. ಬೆಳಗ್ಗೆ ಸೂರ್ಯೋದಯಕ್ಕೆ ಪ್ರಾರಂಭವಾದರೆ ಒಂದಿಲ್ಲೊಂದು ರೀತಿಯಿಂದ ಪ್ರತಿ ದಿನದ ಕಾರ್ಯಕ್ರಮವೂ ಸುಮಾರು ಮಧ್ಯ ರಾತ್ರಿಯ ತನಕ ಸಾಗುತ್ತಿತ್ತು. ಹಲವು ವಿಧದ ಆಟ, ಸ್ಪರ್ಧೆಗಳು, ಪ್ರಬಂಧ, ಭಾಷಣ ಮೊದಲಾದ ಸ್ಪರ್ಧೆಗಳು, ಭಾಷಣ, ನಾಟಕ, ವಿನೋದ ಇವುಗಳಲ್ಲಿ ಭಾಗವಹಿಸುತ್ತಾ ಅವುಗಳನ್ನು ಸುವ್ಯವಸ್ಥೆಯಿಂದ ಸಾಗಿಸುತ್ತಾ ಪ್ರೇಮ ಕೂಟದ ಸದಸ್ಯರೆಲ್ಲರೂ ಕುಗ್ಗದ ಉತ್ಸಾಹದಿಂದ ಎಲ್ಲೆಡೆಗಳಲ್ಲಿಯೂ ತಾನ ಮುಂದು ತಾನು ಮುಂದು ಎಂದು ಮುಂಬಂದು ದುಡಿಯುತ್ತಿದ್ದರು. ಮೊದಲನೆಯ ದಿನದ ಸ್ಪರ್ಧೆಗಳು ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರವಾಗಿತ್ತು.

ಪ್ರತಿದಿನವೂ ಮುಖ್ಯವಾಗಿ ಹೇಳತಕ್ಕ ವಿಚಾರ ಭಾಷಣಗಳು. ಮೊದಲಿನ ದಿವಸ ಎರಡು ಪ್ರಾಮುಖ್ಯ ಭಾಷಣಗಳಿದ್ದುವು. ಒಂದು ಪುತ್ತೂರಿನ ಡಾ। ಟಿ ಕೃಷ್ಣಭಟ್ಟ, ಎಂ ಬಿ ಬಿ, ಎಸ್, ಇವರಿಂದ 'ಗ್ರಾಮೋದ್ಧಾರ' ಎಂಬ ವಿಷಯದ ಕುರಿತು. ಹಳ್ಳಿಯಲ್ಲಿಯಲ್ಲಿಯೇ ಹುಟ್ಟಿ, ನಗರಗಳಲ್ಲಿ ವ್ಯಾಸಂಗ ಮಾಡಿ ನೆಲಸಿ ಪರಿಚಯವುಳ್ಳ, ಮಾತ್ರವಲ್ಲದೆ, ಪೌರ್ವಾತ್ಯ ಪಾಶ್ಚಾತ್ಯ ಸಂಸ್ಕೃತಿಗಳನ್ನು ತುಲನೆ ಮಾಡಿ ಅಧಿಕಾರವಾಣಿಯಿಂದ ತಿಳಿಸಬಲ್ಲ ಇವರು, ತಮ್ಮ ವಿಷಯ ಗರ್ಭಿತವಾದ ಭಾಷಣವನ್ನು ಬಹಳ ಸ್ವಾರಸ್ಯವಾಗಿಯೇ ಮಾಡಿದರು. ಎರಡನೆಯ ಭಾಷಣವು ಶ್ರೀ. ತ್ಯಾಗರಾಜ ಅಯ್ಯರ್ ಇವರದು. ಇವರು ಟೂರಿಂಗ್ ವೆಟರ್ನರಿ ಸರ್ಜನರು. ಸಾರ್ವಜನಿಕ ಆರೋಗ್ಯ ಮತ್ತು ಪ್ರಾಣಿಗಳ ರೋಗ ಎಂಬ ವಿಷಯವನ್ನೆತ್ತಿ ಅನೇಕ ಮಹತ್ವದ ಸೂಚನೆಗಳನ್ನು ಕೊಟ್ಟರು. ಹಳ್ಳಿಯ ಜನರಲ್ಲಿ ಇವರ ಭಾಷಣವು ಒಳ್ಳೆಯ ಪರಿಣಾಮವನ್ನು ಹುಟ್ಟಿಸಿತ್ತು. ಈ ಎರಡು ಭಾಷಣಗಳ ಪ್ರಾರಂಭದಲ್ಲಿ ಪ್ರೇಮಕೂಟದ ಅಧ್ಯಕ್ಷರೂ ಪೆರಡಾಲ ಬೋ। ಹೈ। ಎ। ಶಾಲೆಯ ಮುಖ್ಯೋಪಾಧ್ಯಾಯರೂ, ಇಂತಹ ಚಟುವಟಿಕೆಗಳಲ್ಲಿ ದಣಿವಿಲ್ಲದೆ ದುಡಿದು ಹೆಸರಾಗಿ ನುರಿತವರೂ ಆದ ಶ್ರೀ. ಯಂ. ರಾಮಕೃಷ್ಣರಾಯರು ಸ್ವಾಗತ ಭಾಷಣ ಮಾಡಿ, ನಾಡಹಬ್ಬವನ್ನು ಆಚರಿಸಬೇಕಾದ ಆವಶ್ಯಕತೆ ಅವುಗಳಲ್ಲಿ ಊರವರು ಸಹ ಕರಿಸಬೇಕಾದ ವಿಷಯಗಳನ್ನು ಕುರಿತು ಸೊಗಸಾಗಿ ತಿಳಿಸಿದರು. ಪ್ರೇಮಕೂಟದ ಕಾರ್ಯದರ್ಶಿಗಳಾದ ಶ್ರೀ. ಪಿ. ಮೂರ್ಧನ ಭಟ್ಟ ಬಿ ಎ, ಇವರು ಕೃತಜ್ಞತೆಗಳನ್ನು ಹೇಳಿದರು. ರಾತ್ರಿ ಶಾಲಾ ವಿದ್ಯಾರ್ಥಿನಿಯರಿಂದ ಒಂದು ನಾಟಕ, ವಿದ್ಯಾರ್ಥಿಗಳಿಂದ ಎರಡು ನಾಟಕಗಳು ಹೀಗೆ ಮೂರು ವಿಳಾಂಕ ನಾಟಕಗಳು ಆಭಿನಯಿಸಲ್ಪಟ್ಟವು.

ಈ ದಿನ ಸಂಜೆಯ ಕಾರ್ಯಕ್ರಮದಲ್ಲಿ ಶ್ರೀ ಯಡನೀರ ಶ್ರೀಮದಾಚಾರ್ಯಗಳವರು ಮತ್ತು ಕಾಡು ಯಸಿ ಫಲಿಮಾರ ಶ್ರೀಪಾದಂಗಳವರೂ ಚಿತ್ತೈಸಿ [illegible] ಈ ದಿನದ ಭಾಷಣಕಾರರು [illegible] ಸುಪ್ರಸಿದ್ಧ [illegible] ಶ್ರೀ. [illegible] ಹರಿದಾಸರು [illegible] ವಾಕ್ ಶಕ್ತಿಯಿಂದ ಪ್ರೇಕ್ಷಕರನ್ನು ತಲೆದೂಗಿಸಿ ಮಾತನಾಡಿದರು. ಹರಿಜನೋದ್ಧಾರಕ್ಕೂ ನಾಡಹಬ್ಬಕ್ಕೂ ಇರುವ ಸಂಬಂಧವನ್ನು ಅವರು ವಿವರಿಸಿದರು. ಹರಿಜನ ಕಾರ್ಯದಲ್ಲಿಯೇ ದುಡಿಯುತ್ತಿರುವ ಅವರ ಮಾತು ವಿಶೇಷ ಅನುಭವ ಪೂರ್ಣವಾಗಿ ಜನರನ್ನು ಸಮ್ಮತಿ ಪಡಿಸುವಂತಿತ್ತು. ಎರಡನೆಯ ಭಾಷಣಕರ್ತರು ಹೆಲ್ತ್ ಆಫೀಸರರಾದ ಶ್ರೀ ನಾರಾಯಣ ಅಯ್ಯರರು. ಕಾಂಗ್ರೆಸ್ ಸರಕಾರದವರು ಮಾಡಿದ ಸಾರ್ವಜನಿಕ ಆರೋಗ್ಯ ಮಸೂದೆಯ ವಿಷಯವಾಗಿ ಅವರು ಮಾತನಾಡಿದರು. ಜನರು ಅತ್ಯಂತ ಆಸಕ್ತಿಯಿಂದ ಅದರ ಮಾತುಗಳನ್ನು ಕೇಳುತ್ತಿದ್ದರು. ರಾತ್ರಿ ಊರ ಯಕ್ಷಗಾನ ಕಲಾಭಿಮಾನಿಗಳು ತಾಳಮದ್ದಳೆ ಮಾಡಿದರು. ವಾದ, ತರ್ಕಗಳಿಲ್ಲದೆ, ಬಹಳ ಸ್ವಾರಸ್ಯವಾಗಿ ಪುರಾಣ ತತ್ವಗಳಿಗೆ ಹೊಂದಿಕೊಂಡು ಅರ್ಥ ವಿವರಣೆ ಮಾಡಿದ್ದು ಒಂದು ವೈಶಿಷ್ಟ್ಯವು.

ತಾ. ೯ರಂದೂ ಇಡೀ ದಿವಸ ಕಾರ್ಯಕ್ರಮವಿತ್ತು. ಈ ದಿನ ಸಾರ್ವಜನಿಕರಿಗಾಗಿ ಹಲವು ಸ್ಪರ್ಧೆಗಳಿದ್ದುವು. ಹಳ್ಳಿಯ ಜನರಾದರೂ ಬಹಳ ಉತ್ಸಾಹದಿಂದ ಶಿಸ್ತಿನಿಂದ, ಈ ಸ್ಪರ್ಧೆಗಳಲ್ಲಿ ತಾ ಮುಂದೆ ತಾ ಮುಂದೆಯೆಂದು ಭಾಗವಹಿಸುತ್ತಿದ್ದರು. ಈ ದಿನದ ಭಾಷಣಕರ್ತರು ಶ್ರೀ. ಯಂ. ವಿ ಶಾಸ್ತ್ರಿಗಳು. ಅಖಿಲ ಕರ್ನಾಟಕದಲ್ಲಿ ಹೆಸರಾಂತ ವೈದ್ಯರು, ಪಂಡಿತರು 'ಆರೋಗ್ಯ ಜೀವನ' ಎಂಬ ಕುರಿತು ಬಹಳ ಅನುಭವಪೂರ್ಣವಾದ ಮಾತುಗಳನ್ನು ಹೇಳಿದರು. ಅವರಿಗೆ ಆ ದಿನವೇ ಸಂಜೆಗೆ ಮಂಗಳೂರಿಗೆ ಮರಳಬೇಕಾದ ಅಗತ್ಯವಿದ್ದುದರಿಂದ ಭಾಷಣವು ದೀರ್ಘವಾಗಿ, ವಿವರವಾಗಿ ಆಗಲಿಲ್ಲವಾದರೂ ಅವರ ಮಾತುಗಳು ಬಹಳವಾಗಿ ಸಭಿಕರಿಗೆ ಮೆಚ್ಚಿಗೆಯನ್ನುಂಟುಮಾಡಿದುವು, ಪ್ರಯೋಜನಕಾರಿಯಾದುವು. ಆ ದಿನ ರಾತ್ರಿ ಪ್ರೇಮಕೂಟದ ಸದಸ್ಯರು ಕೆಲವರು ಒಂದು ನಾಟಕವನ್ನು ಆಡಿ ತೋರಿಸಿದರು. ಈ ದಿನ ಬಹಳಮಂದಿ ಪ್ರೇಕ್ಷಕರು ಬಂದಿದ್ದರು.

ತಾ ೧೦ರಂದು ಕೊನೆ ದಿನದ ಕಾರ್ಯಕ್ರಮವಾಗಿತ್ತು. ಮೊದಲು ಹಗಲು ವೇಷ ಸ್ಪರ್ಧೆ ನಡೆಯಿತು. ಆ ಮೇಲೆ ಇಷ್ಟು ದಿನಗಳ ಸ್ಪರ್ಧೆಗಳಲ್ಲಿ ಭಾಗವಹಿಸಿದವರಿಗೆ ಇನಾಮು ಹಂಚುವಿಕೆಯ ಕಾರ್ಯಕ್ರಮವು ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಈ ದಿನ ಸಭೆಯಲ್ಲಿ ಶ್ರೀಗಳಾದ ಕೂಳಂತೋಡಿ ಕೃಷ್ಣಭಟ್ಟರು, ಖಂಡಿಗೆ ಶಾಮ ಭಟ್ಟರು, ಡಾ. ಪಿ. ಯಸ್. ಶಾಸ್ತ್ರಿಗಳು, ಯಂ. ರಾಮಕೃಷ್ಣರಾಯರು ಎಂ. ಜಿ. ಮಹಾಲಿಂಗ ಭಟ್ಟರು, ಅಣ್ಣಯ್ಯ ಶೆಟ್ಟರು, ಕಯ್ಯಾರ ಕಿಞ್ಞಣ್ಣರೈಗಳು ಮೊದಲಾದವರು ಮಾತನಾಡುತ್ತ ನಾಡಹಬ್ಬವನ್ನು ಆಚರಿಸುವುದರ ಮೂಲಕ ನಾವು ನಮ್ಮ ನಮ್ಮ ಇಡೀ ಗ್ರಾಮದ, ಆ ಮೂಲಕ ಇಡೀ ದೇಶದ ಚಟುವಟಿಕೆಗಳನ್ನು ಹೆಚ್ಚಿಸಿದಂತಾಗುತ್ತದೆಯೆಂದು ವಿವರಿಸಿ ಹೇಳಿದರು.

ಹೀಗೆ ಅತ್ಯಂತ ಉತ್ಸಾಹದಿಂದ ಪೆರಡಾಲದ ದಸರೆಯ ಕಾರ್ಯಕ್ರಮವು ಜರಗಿತು. ಪೆರಡಾಲು ಇಂದು ಪ್ರಗತಿಯನ್ನು ತೋರುವ ಗ್ರಾಮ ಇಲ್ಲಿನ ಉತ್ಸಾಹೀ ಕೆಲಸಗಾರರು ಇಂದು ಬಹಳ ವಾಗಿ ಚಟುವಟಿಕೆಗಳನ್ನು ತೋರಿಸುತ್ತಿದ್ದಾರೆ. ಎಲ್ಲರೂ ಬಹಳ ಉತ್ಸಾಹಿತರು, ಅನುಭವಶಾಲಿಗಳು, ಸಾರ್ವಜನಿಕ ಕಾರ್ಯಗಳಲ್ಲಿ ಮುಂದೆ ಬಂದು ಕೆಲಸಮಾಡಲು ಆತುರವುಳ್ಳವರು. ಇವರ ಪ್ರೇಮ ಕೂಟವು ಹೆಸರಿಗೆ ತಕ್ಕಂತೆ ನಿಜವಾಗಿ ಅನ್ಯೋನ್ಯ [illegible] ನೆಲೆ, ಕಾರ್ಯಗಳಿಗೆ ಸಾಕ್ಷಿಯಾಗಿದೆ. ಕನ್ನಡದ ಗಡಿನಾಡಿನಲ್ಲಿ ಹೀಗೆ ಚಟುವಟಿಕೆಗಳು ನಡೆಯುವುದು ಕನ್ನಡಿಗರ ಜಾಗೃತಿಯ ಕುರುಹು. ಹೆಚ್ಚಿನ ದೇಶಸೇವೆಯ ಕಾರ್ಯಗಳನ್ನು ಪ್ರೇಮಕೂಟದವರು ಸಾಧಿಸಿ ಎಂಬುದು ನನ್ನ ಹಾರೈಕೆ.

[illegible] ಕೋರ್ಟಿನಲ್ಲಿ

[illegible] 1940

[illegible] ಅರ್ಜಿದಾರ

1. ನಾಗಮ್ಮ—ನಿನ್ನು ಬಂಗರ ವಿಧವೆ [illegible] ಅಮಟೂರು ಗ್ರಾಮ } ಶ

2. ಚೆಂಬಕ್ಕಪಕ್ಕ— ನಾಗರಾಜ ಬಂಗರ ವಿಧವೆ } ಇ

ಎದ್ರಿಗೆ ಮೆ ಮೃತ ನಾಗರಾಜ ಬಂಗರಿಗೆ ಸಂಬಂಧಪಟ್ಟ ಎಲ್ಲಾ ಜನರಿಗೆ ತಿಳಿಸುವುದೇ ನೆಂದರೆ—

ಸದ್ರಿ ವ್ಯವಹಾರದಲ್ಲಿ ಅರ್ಜಿದಾರನೆ ಅಣ್ಣ ಮೃತ ಅಮಟೂರು ನಾಗರಾಜ ಬಂಗರ ಬಾಬ್ತು ಬಿಹ ದಿ ಪ್ರಾಮಿಸರಿ ನೋಟಿನ ಹಣವು ವಸೂಲಿ ಕುರಿತು ತಾನು ಹಕ್ಕುದಾರನಂತ ಅರ್ಜಿದಾರನ ಹೆಸರಿಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಬರಕೊಂಡ ಮೇಲಿನ ಅರ್ಜಿಯ ನೋಟೀಸಿನ ತನಿಖಿ ವ್ಯಾದೆಯು ತಾ 31—10—1940 ಕ್ಕೆಂತ ವ್ಯಾದೆ ನಿಶ್ಚಯಿಸಿರುವುದರಿಂದ ಆ ಕುರಿತು ಎದ್ರಿರು ಯಾ ಸಂಬಂಧಪಟ್ಟವರು ಏನಾದರೂ ಆಕ್ಷೇಪ ಹೇಳುವದಿದ್ದರೆ ಆ ವ್ಯಾದೆಗೆ ಕೋರ್ಟಿಗೆ 11 ಘಂಟೆಗೆ ತಪ್ಪದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅವರನ್ನು ಸಿವಾಯಿ ಎಂತ ಮಾಡಿ ಈ ವ್ಯವಹಾರವನ್ನು ತನಿಖಿಯಿಂದ ತೀರ್ಮಾನಿಸೋಣಾಗುತ್ತದೆ ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಅರ್ಜಿದಾರನ ಕಡೆಯಿಂದ ಈ ನೋಟೀಸು ಮಾಡಿಸಿಯದೆ

7-10 '40 — B Ramchandra Rau
Puttur. — Pleader for Petitioner

DIAMONDS! DIAMONDS!
BEST BRILLIANCY!
K. R. K. SHET
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ.

ವಜ್ರಗಳು!

ಎಮ್ ಸ್ಟರ್ಡಮ್ಮಿನಿಂದ ಬರುವ ವಜ್ರಗಳು, ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ, ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ ಸಲ್ಲಕ್ಷಣಗಳೂ ತಮಗೆಯೇ ತಿಳಿದುಬರುವುವು

ನಿಮಗೆ ಬೇಕಾದ್ದನ್ನು ಏನೊಂದೂ ಅಡ್ಡಿಲ್ಲದೆ ಪರೀಕ್ಷಿಸಿನೋಡಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಪಂಜನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್ ಕೆ ಶೆಟ್, ಜವೆಲ್ಲರ್

ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

"ಮಗ ವು ಮನುಷ್ಯನ ತಂದೆ" [illegible] ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯವನ್ನವಲಂಬಿಸಿದೆ. ನಿರುತ್ಸಾಹಿಗಳಾದ ಮತ್ತು ದುರ್ಬಲರಾದ ಮಕ್ಕಳು [illegible] ಉತ್ತಮರಾಗೊಂದು ಬೆಳೆಯುವರು. ಅದರ [illegible] ಕಂಡರೆ ಮಕ್ಕಳಿಗೆ ಪ್ರೀತಿ

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ



ಬಾಲಪ್ರಾಶ

ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

K. A. 4

[illegible]

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

18—10—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೮—೧೦—೧೯೪೦

ಮಹಾತ್ಮಾಜಿಯವರು ವೈಯುಕ್ತಿಕ ಸತ್ಯಾಗ್ರಹವನ್ನು ಹೂಡುವರು

ವಾರ್ಧಾದಲ್ಲಿ ತಾ. ೧೧ರಿಂದ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮೂರು ದಿನಗಳ ವರೆಗೆ ಚರ್ಚಿಸಿ ಮಹಾತ್ಮಾ ಗಾಂಧಿಯವರು ಸೂಚಿಸಿದ ನಿಶ್ಚಿತವಾದ ವೈಯುಕ್ತಿಕ ಸತ್ಯಾಗ್ರಹದ ಯೋಜನೆಗೆ ಸಮ್ಮತಿ ಕೊಟ್ಟಿತು

ನಿಶ್ಚಿತರಾದ ಸತ್ಯಾಗ್ರಹಿಗಳು ಮಾತ್ರ ಶಾಸನಭಂಗ ಮಾಡುವರು ಆ ಸತ್ಯಾಗ್ರಹಿಗಳನ್ನು ಗಾಂಧಿಜಿಯವರೇ ಆರಿಸುವರು. ಅಹಿಂಸೆಯಲ್ಲಿ ಅಚಲ ವಿಶ್ವಾಸವುಳ್ಳ, ವರ್ಕಿಂಗ್ ಕಮಿಟಿಯ ಸದಸ್ಯರಲ್ಲದವರನ್ನು ಸತ್ಯಾಗ್ರಹಕ್ಕೆ ಆರಿಸುವರು

ವರ್ಕಿಂಗ್ ಕಮಿಟಿಯವರು ಸಭೆ ಮುಗಿಯುವುದರ ಮೊದಲು ಈ ಪ್ರಕಟಣೆಯನ್ನು ಕೊಟ್ಟಿರುವರು

ವರ್ಕಿಂಗ್ ಕಮಿಟಿಯ ಪ್ರಕಟಣೆ

"ಮಹಾತ್ಮಾ ಗಾಂಧಿಜಿಯವರ ಸೂಚನೆಯ ಮೇರೆಗೆ ವರ್ಕಿಂಗ್ ಕಮಿಟಿಯ ಸಭೆ ಸೇರಿತು ವ್ಹೈಸರಾಯರೊಡನೆ ಆದ ಭಾಷಣವನ್ನು ಮಹಾತ್ಮರು ಕಮಿಟಿಗೆ ತಿಳಿಸಿದರು ಅಲ್ಲದೆ ತಾವು ಕೈಕೊಳ್ಳಬೇಕೆಂದು ನಿಶ್ಚಯಿಸಿದ ಹೋರಾಟದ ಯೋಜನೆಯನ್ನೂ ತಿಳಿಸಿದರು ವರ್ಕಿಂಗ್ ಕಮಿಟಿಯು ಇದನ್ನೆಲ್ಲಾ ಒಪ್ಪಿಕೊಂಡು ಅದಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿತು

'ಮುಂಬಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಕಾಂಗ್ರೆಸ್ ಕಮಿಟಿಗಳಿಗೆ ಮತ್ತು ಕಾಂಗ್ರೆಸ್ ಕೆಲಸಗಾರರಿಗೆ ಕೊಟ್ಟಿರುವ ಸೂಚನೆಗಳನ್ನೇ ತಿರಿಗಿ ವರ್ಕಿಂಗ್ ಕಮಿಟಿಯೂ ಕೊಡಲು ಬಯಸುತ್ತದೆ ಮಹಾತ್ಮಾಜಿಯವರಿಗೆ ಅವರೆಲ್ಲರೂ ಸಹಾಯಮಾಡಬೇಕು. ಯಾವ ಯಾವ ಸಂದರ್ಭದಲ್ಲಿ ಯಾರು ಯಾರು ಹೇಗೆ ಹೇಗೆ ಮಾಡಬೇಕು ಎಂದು ಅವರು ಹೇಳುವ ವರೆಗೆ ಯಾರೂ ದುಡುಕಬಾರದು.

ಪ್ರಾರಂಭದಲ್ಲಿ ಕೆಲವು ಜನರು ಮಾತ್ರ ಶಾಸನಭಂಗ ಮಾಡುವರೆಂಬ ಮಹಾತ್ಮರ ಯೋಜನೆಗೆ ಕಮಿಟಿಯು ಒಪ್ಪಿಗೆಯಿತ್ತಿದೆ.

ವ್ಹೈಸರಾಯರಿಗೆ ತಿಳಿಸುವರೆ?

ಮಹಾತ್ಮಾಜಿಯವರು ಈ ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿ

ಸತ್ಯಾಗ್ರಹಿಗಳನ್ನು ಗಾಂಧಿಜಿ ಆರಿಸುವರು

ವಾರ್ಧಾ ವರ್ಕಿಂಗ್ ಕಮಿಟಿಯ ನಿರ್ಧಾರ

ಆಚಾರ್ಯ ವಿನೋಬರು ಸತ್ಯಾಗ್ರಹದ ಪ್ರಥಮ ಸೇನಾಪತಿಗಳೆ?

ಸುವ ಮೊದಲು ಹಿಂದಿನ ದಂಡೀಯಾತ್ರೆಯ ಮೊದಲು ತಿಳಿಸಿದ್ದಂತೆ ವ್ಹೈಸರಾಯರಿಗೆ ತಿಳಿಸುವರೆಂದ ತಿಳಿದು ಬರುತ್ತದೆ. ಮಹಾತ್ಮರು ವ್ಹೈಸರಾಯರಿಗೆ ಬರೆವ ಪತ್ರದಲ್ಲಿ ತಮ್ಮ ಯೋಜನೆಯ ಕ್ರಮವಿಧಾನಗಳನ್ನೂ ಉದ್ದೇಶಗಳನ್ನೂ ವಿವರಿಸುವರಂತೆ 'ಭಾಷಣ ಸ್ವಾತಂತ್ರ್ಯವಿರಬೇಕು' ಎಂಬ ಕುರಿತು ಹೋರಾಟವಾಗಲಿರುದೆಂದು ತಿಳಿದು ಬರುತ್ತದೆ.

ಗಾಂಧಿಜಿ ಸೆರೆಮನೆಗೆ ಹೋಗುವುದಿಲ್ಲ?

ಈ ಸಲ ತಾವಾಗಿ ಗಾಂಧಿಜಿ ಸೆರೆಮನೆಗೆ ಹೋಗುವುದಿಲ್ಲವೆಂದು ಅಭಿಪ್ರಾಯವಿದೆ ಮುಂಬಯಿಯಲ್ಲಿ ಮೊನ್ನೆ ಭಾಷಣ ಮಾಡಿದಾಗ ಅವರು ಅದೇ ಧ್ವನಿಯ ಮಾತನ್ನು ಹೇಳಿದ್ದರಿಂದು ಈ ಊಹೆಗೆ ಆಧಾರ ಕೊಡಲಾಗುತ್ತದೆ ಆದರೆ ಸರಕಾರದವರು ತಮ್ಮನ್ನು ಯಾವಾಗ ಬೇಕಾದರೂ ಸೆರೆಮನೆಯಲ್ಲಿಡಬಹುದೆಂದು ಅವರು ಅದೇ ಕಾಲದಲ್ಲಿ ಹೇಳಿರುವರು

ಆಚಾರ್ಯ ವಿನೋಬರು ಸತ್ಯಾಗ್ರಹ ಮುನ್ನಡೆಸುವರು

ಈ ಸಲದ ಸತ್ಯಾಗ್ರಹವನ್ನು ಆಚಾರ್ಯ ವಿನೋಬರವರು ನಡೆಸುವರೆಂದು ತಿಳಿದಿದೆ ವ್ಹೈಸರಾಯರಿಗೆ ಪತ್ರ ಕಳುಹಿಸಿದ ಅದರಲ್ಲಿ ಎಲ್ಲಿ ಯಾವಾಗ ಸತ್ಯಾಗ್ರಹ ಸಂಮಾಡುವುದೆಂದೂ ತಿಳಿಸಿದೆ, ಅವರ ಉತ್ತರ ಬಂದ ಕೂಡಲೇ ವಾಕ್ ಸ್ವಾತಂತ್ರ್ಯದ ವಿಷಯವಾಗಿ ಸತ್ಯಾಗ್ರಹದ ಮೊದಲನೆಯ ದಳವನ್ನು ವಿನೋಬಾರವರು ನಡೆಸಲಿರುವರು. ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಬಲೂಚಿಸ್ತಾನಕ್ಕೆ ಕಾಂಗ್ರೆಸ್ ರಾಯಭಾರಿಗಳಾಗಿ ಹೋದ ಬುಲಾಭಾಯಿದೇಸಾಯಿ ಮತ್ತು ಯುಸಫ್ ಅಲಿಯವರ ವಿಷಯವಾಗಿ ಒಂದು ನಿರ್ಣಯವಾಗಿ, ಅದರಲ್ಲಿ ಸರಕಾರವು ವರ್ತಿಸಿದ ಧೋರಣೆಯನ್ನು ಖಂಡಿಸಲಾಗಿದೆ ಪರಸ್ಪರಹಿತವೇ ಕಾಂಗ್ರೆಸಿನ ಗುರಿಯಾಗಿದೆಯೆಂದು ಅದರಲ್ಲಿ ತಿಳಿಸಿದೆ

ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿ

ಈ ಕುರಿತು ಡಾ। ಸುಬ್ಬರಾಯನ್ ಮತ್ತು ಆರ್ ಕೆ ಎಲ್ ನಂದಕೋಲಿಯವರು ಒಪ್ಪಿಸಿದ ವರದಿಯನ್ನು ವರ್ಕಿಂಗ್ ಕಮಿಟಿಯವರು ವಿಚಾರಿಸಿ ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೆಲಸವನ್ನು ಶ್ರೀಗಳಾದ ಪಿ ಕೆ ಎಲ್. ನಂದಕೋಲಿಯಾರ, ಎಂ. ಟಿ ಗೋವಿಂದನ್ ಜಿ ಕೆ ಗೋವಿಂದ ನಾಯರ್ ಇವರು ವಹಿಸಬೇಕಾಗಿಯೂ ಮುಂದೆ ಬೇರೆ ಆಜ್ಞೆಯಾಗುವ ವರೆಗೆ ಈ ಮೂವರೇ ಆ ಕಮಿಟಿಯ ಕಾರ್ಯಕಲಾಪಗಳನ್ನು ನಡೆಸಬೇಕಾಗಿಯೂ ಆ ನಿರ್ಣಯವಾಗಿದೆ

ಸರ್ ಸಿಕಂದರರಿಗೆ ಮಹಾತ್ಮರ ಉತ್ತರ

ಗಾಂಧಿ ವ್ಹೈಸರಾಯರ ಪತ್ರವ್ಯವಹಾರದ ಕುರಿತು ಸರ್ ಸಿಕಂದರರ ಅಭಿಪ್ರಾಯ ಪ್ರಕಟಣೆಮಾಡುತ್ತಾ "ಇದು ಹಿಂಬದಿಯಿಂದ ಇರಿಯುವಂತೆ" ಎಂದಿರುವರು. ಆ ಸಂಬಂಧವಾಗಿ ಗಾಂಧಿಜಿಯವರು ಹರಿಜನದಲ್ಲಿ ಹೀಗೆಂದು ಬರೆದಿರುವರು.

"ಸರ್ ಸಿಕಂದರರು ಈ ರೀತಿ ಉದ್ಗಾರ ತೆಗೆದಿರುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ ಸಂಪೂರ್ಣ ಚರ್ಚೆಯಾದ ನಂತರ ಎಲ್ಲವೂ ಬಹಿರಂಗವಾಗಿಯೇ ನಡೆದಿರುವಾಗ ಇದನ್ನು ಹಿಂದಿನಿಂದ ಇರಿಯುವುದೆನ್ನುವುದು ಹೇಗೆ ಹಾಗೆನ್ನುವುದಕ್ಕೆ ಅರ್ಥವೇನಿದೆ? ಅವಶ್ಯಕ್ಕಿಂತ ಹೆಚ್ಚು ವಾದಿಸುವವನು ಸಮರ್ಥನಾದ ವಕೀಲನೆನಿಸಿಕೊಳ್ಳಲಾರನು ಅದರಂತೆ ಸಿಕಂದರರ ಅವಸ್ಥೆಯಾಗಿರುವುದು.

ಪಂಜಾಬಿನಲ್ಲಿ ಸೇಕಡಾ ೯೦ ಮಂದಿ ಯುದ್ಧದಲ್ಲಿ ಭಾಗವಹಿಸಲು ಉತ್ಸುಕರಾಗಿರುವರೆಂದು ಅವರು ಹೇಳುವರಾದರೆ, ಕಾಂಗ್ರೆಸು ಬಹುಮತವಿದ್ದಲ್ಲಿ ನೂರಕ್ಕೆ ೯೯ರಷ್ಟು ಯುದ್ಧಕ್ಕೆ ಪ್ರತಿಕೂಲವಿರುವರೆಂದು ಅವರಿಗಿಂತ ಹೆಚ್ಚು ಜೋರಿನಲ್ಲಿ ಹೇಳಬಹುದಾಗಿದೆ. ಆದರೆ ಈ ರೀತಿ ವಾದ ಮಾಡುವುದು ನನಗೆ ಇಚ್ಛೆಯಿಲ್ಲ ಯುದ್ಧದಲ್ಲಿ ಸೇರಲು ಇಚ್ಛೆಯುಳ್ಳವರನ್ನೂ ಇಲ್ಲದವರನ್ನೂ ಅವರಷ್ಟಕ್ಕೇ ಬಿಟ್ಟುಬಿಡಬೇಕೆಂದು ನನ್ನ ಸೂಚನೆ"

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತುಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"
ಇಂಡಿಯನ್ ಕೆಮಿಸ್ಟ್ ಎಂಡ್ ಡ್ರುಗ್ಗಿಸ್ಟ್
ರಾಯಪೇಟೆ, ಮದ್ರಾಸು.

ಸ್ವದೇಶಾಭಿಮಾನಿ

ತಾರೀಕು 18—10—1940

ಸತ್ಯಾಗ್ರಹ ನಿರ್ಧಾರ

ಬ್ರಿಟನಿನ ಕಷ್ಟಕಾಲದಲ್ಲಿ ಭಾರತವು ಗೊಂದಲವನ್ನೆಬ್ಬಿಸುವುದು ಬೇಡವೆಂಬ ವಿಷಯ ಎಲ್ಲಾ ಕಾಂಗ್ರೆಸು ಮುಖಂಡರೂ ಒಮ್ಮತಕ್ಕೆ ಬಂದು ಸ್ವಾತಂತ್ರ್ಯಕ್ಕಾಗಿ ತಾವು ಹೂಡುವ ಹೋರಾಟವನ್ನು ಮುಂದಕ್ಕಿಟ್ಟ ವಿಚಾರವು ಇಂದು ಜಗತ್ತಿಗೇ ತಿಳಿದಿದೆ. ಇಂತಹ ಸಂದರ್ಭದಲ್ಲಿ ಬ್ರಿಟನು ಕಾಂಗ್ರೆಸಿನ ಈ ಉದಾತ್ತ ನೀತಿಯನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳದೆ, ಸ್ವಾತಂತ್ರ್ಯದ ವಿಷಯವಾಗಿ ನಕಾರವೆಂದ ಕಾರಣ, ಮುಂಬಯಿ ಕಾಂಗ್ರೆಸಿನಲ್ಲಿ ನಿರ್ಧಾರವಾದಂತೆ ಮಹಾತ್ಮಾ ಗಾಂಧಿಜಿಯವರ ಸೇನಾಪತಿತ್ವದಲ್ಲಿ, ಅವರು ತಯಾರಿಸಿದ ಯೋಜನೆಯಂತೆ ಅವರೇ ಆರಿಸಿದ ಕೆಲವೇ ಮಂದಿಯ ವೈಯುಕ್ತಿಕ ಸತ್ಯಾಗ್ರಹವು ಆರಂಭವಾಗುವುದಾಗಿ ವರ್ಧಾದಲ್ಲಿ ಸೇರಿದ ವರ್ಕಿಂಗ್ ಕಮಿಟಿಯು ಈಗ ನಿರ್ಧಾರಮಾಡಿದೆ

ಗಾಂಧಿಜಿಯವರು ಇಂತಹ ಸಂಕಟಕಾಲದಲ್ಲಿ ರಾಷ್ಟ್ರವನ್ನು ಸನ್ಮಾರ್ಗದಲ್ಲಿ ನಡೆಸಬಲ್ಲ ವಿವೇಕಶಾಲಿಗಳೆಂದು ಸಂಪೂರ್ಣ ತಿಳಿದವರಾಗಿ ಕಾಂಗ್ರೆಸಿನವರೆಲ್ಲರೂ, ತಮ್ಮೊಳಗೆ ಎಷ್ಟೇ ತತ್ವಭೇದಗಳಿದ್ದರೂ, ಸ್ವಾತಂತ್ರ್ಯ ಪ್ರಾಪ್ತಿಯ ಒಂದು ಪಾವನವಾದ ಉದ್ದೇಶದ ಸಲುವಾಗಿ ಗಾಂಧಿಜಿಯವರನ್ನು ತಮ್ಮ ಸಮಗ್ರ ಸೇನಾಪತಿಯಾಗಿ ಚುನಾಯಿಸಿ ಅವರು ಹೇಳಿದಂತೆ ನಡೆಯುವುದಾಗಿ ಒಪ್ಪಿಕೊಂಡರು. ಗಾಂಧಿಜಿಯವರು ತಮ್ಮ ಮೇಲೆ ಹೊರಿಸಿದ ಈ ವಿಪುಲ ಭಾರವನ್ನಾದರೂ ರಾಷ್ಟ್ರಹಿತ ದೃಷ್ಟಿಯಿಂದ ವಹಿಸಿಕೊಂಡವರಾಗಿ ವೈಸರಾಯರನ್ನು ಕಂಡು ಮಾತನಾಡಿದರು. ನಮಗೆ ಇಂದು ವಾಕ್‌ಸ್ವಾತಂತ್ರ್ಯವು ಬೇಕಾಗಿದೆ. ಭಾರತವು ಇಂದಿನ ಯುದ್ಧದಲ್ಲಿ ಸ್ವೇಚ್ಛೆಯಿಂದ ಸೇರಿದೆಯೆಂದು ಬ್ರಿಟನು ಸಾರಿದ್ದರೂ, ಕಾಂಗ್ರೆಸಿನವರು ಯುದ್ಧದ ಕುರಿತು ಶಾಂತ ರೀತಿಯಿಂದ ಅಹಿಂಸಾ ಕ್ರಮದಿಂದ ಭಾರತವು ಯುದ್ಧಾಸಕ್ತವಾಗಿಲ್ಲವೆಂದು ಸಾರಿದರೆ ಅದಕ್ಕೆ ಅಡ್ಡಿ ಬರಬಾರದು ಎಂದು ಕೇಳಿದರು. ಆದರೆ ವೈಸರಾಯರು ವಾಕ್‌ಸ್ವಾತಂತ್ರ್ಯದ ವಿಷಯ ತಮ್ಮ ನಕಾರವನ್ನು ಹೇಳಿದುದೂ ಮತ್ತೂ ಗಾಂಧಿ ವೈಸರಾಯರೊಳಗೆ ಆದ ಪತ್ರವ್ಯವಹಾರಗಳೆಲ್ಲವೂ ಈಗಾಗಲೇ ಪ್ರಕಟವಾಗಿ ಜನಜನಿತವಾಗಿದೆ.

ಇನ್ನಾಗಲು ಮಹಾತ್ಮಾಜಿಯವರು ಮುಂದಿನ ವಿಚಾರವನ್ನು ಮಾಡಲೇಬೇಕಾಯಿತು. ಇಂತಹ ಸಂದರ್ಭದಲ್ಲಿ [illegible] ತನ್ನ ಅಭಿಪ್ರಾಯವನ್ನು ತಿಳಿಸಿ ಅದರ ಸ್ವರೂಪ. [illegible] ಅವರು [illegible]. ಆ ಬಗ್ಗೆ ವರ್ಧಾದಲ್ಲಿ ವರ್ಕಿಂಗ್ ಕಮಿಟಿಯ ಸಭೆಯು ತಾ. ೧೧ರಂದು ಸೇರಿತು. ಮೂರು ದಿನಗಳ ತನಕ ಚರ್ಚೆಯಾಯಿತು. ಮಹಾತ್ಮಾಜಿಯವರು ಆ ಸಭೆಯಲ್ಲಿ ತನಗೂ ವೈಸರಾಯರಿಗೂ ಆದ ಮಾತುಕತೆಗಳ ವಿಷಯವನ್ನು ತಿಳಿಸಿದರು. ಕೊನೆಗೆ ಇಂತಹ ಸಂದರ್ಭದಲ್ಲಿ ಮುಂದಕ್ಕೆ ತಾನೇ ಆರಿಸಿದ ಕೆಲವೇ ಮಂದಿ ಸತ್ಯ ಅಹಿಂಸಾ ಪಾಲಕರಾದ ಸತ್ಯಾಗ್ರಹಿಗಳಿಂದ ಶಾಸನಭಂಗ ಕಾರ್ಯಕ್ರಮವನ್ನು ಆರಂಭಿಸುವುದಾಗಿ ಒಂದು ಯೋಜನೆಯನ್ನು ಸಿದ್ಧಮಾಡಿ ಕಮಿಟಿಯ ಮುಂದಿಟ್ಟರು. ಕಮಿಟಿಯು ಅದೇ ಯುಕ್ತ ಮಾರ್ಗವೆಂದು ತನ್ನ ಒಪ್ಪಿಗೆಯನ್ನೂ ಕೊಟ್ಟಿತು

ಹೀಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸು, ಭಾರತದ ಸ್ವಾತಂತ್ರ್ಯ ವಿಚಾರವೇ ಇಂದು ಪೂರ್ಣ ನಿರಾಕರಿಸಲ್ಪಡುತ್ತಿರುವಾಗ, ಅದನ್ನು ಸಹಿಸದೆ, ಸತ್ಯಾಗ್ರಹವನ್ನು ಆರಂಭಿಸಲು ನಿಶ್ಚಯ ಮಾಡಿದೆ. ಇಂದಿನ ಈ ಸತ್ಯಾಗ್ರಹವು ಹಿಂದಿನ ಸತ್ಯಾಗ್ರಹಗಳಂತಿರದೆ ಪೂರಾ ಭಿನ್ನವಾಗಿದೆ. ಜನತೆಯು ಈ ಶಾಸನಭಂಗದಿಂದ ಕೆರಳಿ ಶಾಂತಿಗೆಡುವ ಸಂದರ್ಭವಿಲ್ಲ. ಗೊಂದಲಗೊಳ್ಳುವ ಕಾರಣವಿಲ್ಲ. ಇದು ಜನತಾ ಸತ್ಯಾಗ್ರಹವಲ್ಲ. ಇದು ಕೇವಲ ಕೆಲವು ವ್ಯಕ್ತಿಗಳು ಹೂಡುವ ಸತ್ಯಾಗ್ರಹ. ಹಾಗೆ ಸತ್ಯಾಗ್ರಹವನ್ನು ಹೂಡುವ ವ್ಯಕ್ತಿಗಳಾದರೂ ಯಾರೆಂಬ ವಿಚಾರವನ್ನು ಮಹಾತ್ಮಾ ಗಾಂಧಿಜಿಯವರೇ ಸೂಚಿಸಲಿರುವರು. ಅಂತಹವರು ಮಾತ್ರ ಸತ್ಯಾಗ್ರಹ ಹೂಡಬಹುದಲ್ಲದೆ ಇತರರು ಕೂಡದು. ಸ್ವಾತಂತ್ರ್ಯದ ಸಲುವಾಗಿ ಕಾದಾಡುವ ಬ್ರಿಟನು ಭಾರತದಲ್ಲಿ ಸ್ವಾತಂತ್ರ್ಯದ ವಿಚಾರ ಹೇಗೆ ವರ್ತಿಸುತ್ತಿದೆಯೆಂಬುದನ್ನು ಇದರಿಂದ ಮಹಾತ್ಮರು ಜಗತ್ತಿಗೇ ಸಾರಲಿರುವರೆಂದು ಮುಖಂಡರ ಅಭಿಪ್ರಾಯವಾಗಿದೆ

ಇಂದು ಮಹಾತ್ಮಾಜಿಯವರು ಆರಂಭಿಸುವುದಾಗಿ ತಿಳಿಸಿದ ಈ ಸತ್ಯಾಗ್ರಹವು ಮೇಲಿಂದ ಮೇಲೆ ನೋಡುವವರಿಗೆ ಅಷ್ಟೇನೂ ಗಂಭೀರವಾಗಿ ಕಾಣುವುದಿಲ್ಲ. ಆದರೆ ಗಾಂಧಿಜಿಯವರು ತಮ್ಮದೇ ಆದ ಒಂದು ನಿಶ್ಚಿತ ಮಾರ್ಗವನ್ನು ಸರಿಯಾಗಿ ಗೊತ್ತುಪಡಿಸಿ ಮುಂದುವರಿಯುವವರು, ಅಂದು ಗಾಂಧಿಜಿ ಉಪ್ಪು ಹೆಕ್ಕಲು ದಂಡೀಯಾತ್ರೆಗೆ ತೆರಳಿದರು. ಹಲವು ಕಾಂಗ್ರೆಸ್ ಮುಂದಾಳುಗಳೇ ಗಾಂಧಿಜಿಯವರನ್ನು ಕಂಡು ನಗಾಡಿದ್ದರು.. ಆದರೆ ಮುಂದೆ ಅದರಿಂದ ಅಖಿಲ ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ಉಂಟಾದ ಹೊಸ ಪರಿಣಾಮವನ್ನು ನೆನೆಸುವಾಗ ಇಂದೂ ಮೈ ನವಿರೇಳುತ್ತದೆ. ಮಹಾತ್ಮರ ಮಾರ್ಗ ಸಾಮಾನ್ಯರಿಗೆ ಅರ್ಥವಾಗುವಂತಹದಿಲ್ಲ, ನ್ಯಾಯವಾದ ರೀತಿಯಲ್ಲಿಯೇ ನಡೆದು, ಬ್ರಿಟನಿಗೆ ಕಾಂಗ್ರೆಸಿನ ಈ ಹೋರಾಟವನ್ನು ತಿಳಿಸುವುದು ಮಾತ್ರವಲ್ಲದೆ ಕಾಂಗ್ರೆಸಿನ ಬಲದಂತವಾದ ನೈತಿಕ ಬೆಂಬಲವನ್ನು ಪಡೆವುದೂ ಸಾಧ್ಯವಿತ್ತು ಮತ್ತು ಸಾಧ್ಯವಿದೆ. ಕಾಂಗ್ರೆಸು ಹಾಗೂ ಗಾಂಧಿಜಿಯವರು ಇಂದು ಕೇಳುತ್ತಿರುವುದು ನಮಗೆ ವಾಕ್‌ಸ್ವಾತಂತ್ರ್ಯವನ್ನು ಕೊಡಿರೆಂದು. ಯೂರೋಪಿನ ರಾಷ್ಟ್ರಗಳಲ್ಲಿ ವಾಕ್‌ಸ್ವಾತಂತ್ರ್ಯಕ್ಕೆ ಅಡ್ಡಿಯಿಲ್ಲ. ಐರ್ಲೆಂಡು ಒಂದು ರೀತಿಯಿಂದ ಇಂಗ್ಲೆಂಡಿನ ಹಂಗಿನಲ್ಲಿದ್ದು ಅದರ ಸಮೀಪದಲ್ಲೇ ಇರುವುದಾದರೂ ಅದು ಜರ್ಮನಿಯ ವಿರುದ್ಧವಾಗಿ ಬ್ರಿಟನಿಗೆ ಸಹಾಯವಾಗಿ ಯುದ್ಧ ಪ್ರಕಟಮಾಡಿಲ್ಲ. ಆದರೆ ಭಾರತಕ್ಕೆ ಮಾತ್ರ ಅಂತಹ ವಾಕ್‌ಸ್ವಾತಂತ್ರ್ಯವಿಲ್ಲವೆ? ಜನತೆಯ ಪ್ರತಿನಿಧಿಗಳು ಮಂತ್ರಿಮಂಡಳಗಳನ್ನು ನಡೆಸುತ್ತಿದ್ದಾಗ, ಭಾರತವು ವಿದೇಶವೊಂದರೊಡನೆ ಯುದ್ಧಮಾಡುವಂತಹ ಪ್ರಾಮುಖ್ಯ ಪ್ರಶ್ನೆ ಎದ್ದಾಗ ಅವರೊಡನೆ ಒಂದು ಮಾತು ಕೇಳುವುದು ಬೇಡವೆ? ಇಂದಾದರೂ ಕಾಂಗ್ರೆಸ ಮುಂದಾಳುಗಳು, ಭಾರತವು ಯುದ್ಧದಲಿ ಸೇರಿಲ್ಲವೆಂದು ಶಾಂತ ಅಹಿಂಸೆಯ ರೀತಿಯಲ್ಲಿ ಪ್ರಚಾರಪಡಿಸಿದರೆ ಅದು ದೇಶದ್ರೋಹವಾದೀತೆ? ಇವುಗಳೆಲ್ಲಾ ಅಸ್ಪಷ್ಟ [illegible] ಭಾರತಕ್ಕೆ ವಾಕ್ ಸ್ವಾತಂತ್ರ್ಯವನ್ನು ಕೊಡದ ಪಕ್ಷದಲ್ಲಿ [illegible] ಹೋರಾಟವು ಆಗಲಿದೆ [illegible] ಬ್ರಿಟನಿನ ಪ್ರತಿನಿಧಿಗಳ [illegible] ಮುಖಂಡರ ಈ [illegible] ಪ್ರಶ್ನೆ [illegible] ಗಂಭೀರ ಸಂಕಟವನ್ನೇ ಕೊಟ್ಟಿದ್ದಾರೆ. ಇಂತಹ ನಕಾರದಿಂದ ಬ್ರಿಟನಿನ ನೈತಿಕ ಶಕ್ತಿಯೇ ಕೆಳಮಟ್ಟಕ್ಕೆ ಇಳಿಬಹುದು. ಒಂದು ದೇಶವನ್ನು ಗುಲಾಮಗಿರಿಯಲ್ಲಿಟ್ಟು ಇನ್ನೊಂದು ದೇಶದಲ್ಲಿ ಸ್ವಾತಂತ್ರ್ಯದ ಕಹಳೆಯನ್ನು ಬಾರಿಸುತ್ತಿರುವುದು ಅಪಹಾಸ್ಯದ ವಿಷಯವು. ಇನ್ನಾದರೂ ಈ ವಿಷಯಗಳನ್ನು ಬ್ರಿಟನಿನ ಮುಂದಾಳುಗಳು ಆಲೋಚಿಸಿ ಮುಂಬರುವ ವಿಷಮತೆಯನ್ನು ತಪ್ಪಿಸುವುದು ಸಾಧ್ಯವಿದೆ. ಎರಡು ದೇಶಗಳಿಗೂ ಹಿತಕರವಾಗಿದೆ.

ಬರ್ಮಾ ದಾರಿಯನ್ನು—

ಈಗ ತಿರಿಗಿ ತೆರೆಯುವರೆಂದು ಕೇಳಿ ಸಂತೋಷಗೊಳ್ಳದ ಪ್ರಜಾಪ್ರಭುತ್ವವಾದಿಯು ಇರಲಾರನು. ಈ ಕುರಿತು ಪ್ರತಿಯೊಬ್ಬ ಭಾರತೀಯನೂ ಸಂತುಷ್ಟಿಗೊಂಡಿರುವನೆಂಬ ವಿಷಯವನ್ನು ರಾಷ್ಟ್ರಪತಿ ಅಜಾದರು ಕೊಟ್ಟಿರುವ ಒಂದು ಪ್ರಕಟಣೆಯಲ್ಲಿಯೇ ತಿಳಿಸಿರುವರು. ಮೂರು ತಿಂಗಳ ಹಿಂದೆ, ಚರ್ಚಿಲ್ ಮಂತ್ರಿಮಂಡಲವು ಬರ್ಮಾ ದಾರಿಯನ್ನು ಮುಚ್ಚುವುದರ ಮೂಲಕ ತೋರಿಸಿದ ದೌರ್ಬಲ್ಯವನ್ನು, ಇಂದು ತಿರಿಗಿ ತೆರೆಯುವುದಾಗಿ ಮಾಡಿದ ನಿರ್ಧಾರದ ಮೂಲಕ ಸರಿಪಡಿಸಿಕೊಂಡಿದೆಯೆಂದು ರಾಷ್ಟ್ರಪತಿಗಳೇ ಸ್ಪಷ್ಟ ಮಾತಿನಿಂದ ತಿಳಿಸಿರುವರು. ತಮ್ಮ ಕಾರ್ಯವು ಅವಿಚಾರದ್ದಾಯಿತು ಎಂದು ಬ್ರಿಟಿಷ್ ಸರಕಾರವು [illegible] ಆಲೋಚಿಸಿ ಪುನಃ ಈ ನಿರ್ಧಾರಕ್ಕೆ ಬರದುದರಿಂದ ಕೇವಲ ಚೈನ ಮಾತ್ರವಲ್ಲ, ಜಗತ್ತಿನ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳೆಲ್ಲಾ ಆನಂದಿತವಾಗಿವೆ.

ಚೀನಾ ಜಪಾನುಗಳೊಳಗೆ ಯುದ್ಧವು ಕಳೆದ ಮೂರು ವರ್ಷಗಳಿಂದ ನಡೆಯುತ್ತಿದೆ. ಸ್ವಾತಂತ್ರ್ಯವನ್ನು ಪಡೆದು ತನ್ನ ಕಾಲಲ್ಲಿ ತಾನು ನಿಲ್ಲಲು ಯತ್ನಿಸುತ್ತಿದ್ದ ಚೈನಕ್ಕೆ ಜಪಾನು ಆಕ್ರಮಿಸಿ ಮಾಡಿದ ಅನ್ಯಾಯವನ್ನು ಜಗತ್ತಿನಲ್ಲಿ ಖಂಡಿಸದ ಸ್ವಾತಂತ್ರ್ಯಪ್ರಿಯನಿರಲಾರನು. ಭಾರತವಂತೂ ತನ್ನ ಸ್ಪಷ್ಟವಾದ ಖಂಡನೆಯನ್ನು ಅನೇಕ ಸಲ ಸಾರಿ ತಿಳಿಸಿರುವುದು. ಇಂತಹ ಸಂದರ್ಭದಲ್ಲಿ ಚೈನೀಯರು, ತಮ್ಮ ನಾಡಿನ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಬಹಳ ಸಾಹಸದಿಂದ ಕಾದಾಡಿದರ [illegible] ಕುಗ್ಗದ ಉತ್ಸಾಹ ಆವೇಶಗಳಿಂದ ಹೋರಾಡಿದರು. ಚೀನದ ಸಹಾಯಕ್ಕೆ ಯಾವ ಪ್ರಜಾಪ್ರಭುತ್ವವಾದಿಯೆನ್ನುವ ರಾಷ್ಟ್ರವೂ ಬರಲಿಲ್ಲವಾದರೂ, ಅದು ಎಷ್ಟೂ ಧೈರ್ಯಗುಂದದೆ ಕಾದಾಡುತ್ತಿದೆ

ಇಂತಹ ಸಂದರ್ಭದಲ್ಲಿ ಮೊನ್ನೆ ಜುಲಾಯಿ ತಿಂಗಳಲ್ಲಿ ಚರ್ಚಿಲ್ ಮಂತ್ರಿಮಂಡಳವು ಅಧಿಕಾರಕ್ಕೆ ಬಂದ ಮೇಲೆ ಬರ್ಮಾದ ಮೂಲಕ ಚೈನಕ್ಕೆ ಸಾಗುತ್ತಿದ್ದ ಸಹಾಯ ಸಾಮಗ್ರಿಗಳಿಗೆ ತಡೆಯಾಗಿ ಬರ್ಮಾ ದಾರಿಯನ್ನು ಮುಚ್ಚಿ [illegible] ಕೈಗೊಂಡಿತು [illegible] ಪ್ರಜಾಪ್ರಭುತ್ವ [illegible] ಹೋರಾಡುತ್ತಿ [illegible] ಚೈನದ ಸ್ವಾತಂತ್ರ್ಯಕ್ಕೆ [illegible] ಬಲವಾದ ಆಘಾತವನ್ನುಂಟು ಮಾಡಿತು [illegible] ಕಾರಣವೆಂದರೆ ನಾವೇ ಜೀವನ ಮರಣಗಳ ಹೋರಾಟದಲ್ಲಿರುವಾಗ ಜಪಾನಿನೊಡನೆ ನಾವಿಂದು ಕಲಹವನ್ನು ತಂದುಕೊಳ್ಳಲಿಚ್ಛಿಸುವುದಿಲ್ಲವೆಂಬುದು ಚರ್ಚಿಲ್ಲರ ಆಗಿನ ಸಮಾಧಾನವಾಗಿತ್ತು

ಆದರೆ, ಇದರಿಂದ ಜಪಾನು ಬ್ರಿಟನಿಗೆ ಮಾತ್ರವಲ್ಲ ಜಗತ್ತಿಗೇ ಒಳ್ಳೆಯ ಪಾಠ ಕಲಿಸಿತು. ಅದು ಇಂಡೋ ಚೈನವನ್ನು ಆಕ್ರಮಿಸಿ ಮುಂದೆ ಬಂದದ್ದು ಮಾತ್ರವಲ್ಲದೆ, ತ್ರಿರಾಷ್ಟ್ರಗಳ ಒಪ್ಪಂದ ಮಾಡಿಕೊಂಡು ಸರ್ವಾಧಿಕಾರಿಗಳ ಸಹಾಯಕ್ಕೆ ನಿಂತಿತು. ಇದರಿಂದ ಬ್ರಿಟನಿನೊಡನೆ ಅಮೇರಿಕಕ್ಕೂ ಆಪತ್ತು ಸನ್ನಿಹಿತವಾದಂತಾಯಿತು. ಈ ಸಂದರ್ಭದಲ್ಲಿ ಚರ್ಚಿಲ್ ಮಂತ್ರಿಮಂಡಳವು ತಾನು ಮಾಡಿದ ಅವಿಚಾರದ ವರ್ತನೆಯನ್ನು ತಿದ್ದಿಕೊಳ್ಳುವಂತೆ ಈಗ ತಿರಿಗಿ ಬರ್ಮಾ ದಾರಿಯನ್ನು ತೆರೆಯುವುದಾಗಿ ಸಾರಿದೆ. ಪ್ರಮಾದವನ್ನು ಅರಿತುಕೊಂಡು ಇಂದಾದರೂ ತಿರಿಗಿ ಬರ್ಮಾ ರಸ್ತೆಯನ್ನು ತೆರೆಯಲು ಮಾಡಿದ ಬ್ರಿಟನಿನ ನಿರ್ಧಾರವನ್ನು ಸ್ವಾತಂತ್ರ್ಯ ಪ್ರೇಮಿಗಳೆಲ್ಲರೂ ಕೊಂಡಾಡದಿರಲಾರರು.

ಕ್ರಾಂತಿಗೆ ಕಾರಣರಾಗಿರುವ ಕೂಲಿಗಾರರು!

ಇವರ ಸಮಸ್ಯೆಗೆ ಪರಿಹಾರವೇನು?

ಪ್ರಾಚೀನ ಭಾರತದಲ್ಲಿದ್ದ ನಿಯಮಗಳು!

ಪರದೇಶಗಳ ತತ್ವಗಳನ್ನು ನಾವು ಅನುಸರಿಸಬೇಕೆ?

ಕೂಲಿಕಾರ ಸಮಸ್ಯೆಗೆ ಇಂದು ಪ್ರಾಪ್ತವಾಗಿರುವಷ್ಟು ಮಹತ್ವ ಈ ಮೊದಲೆಂದೂ ಪ್ರಾಪ್ತವಾಗಿರಲಿಲ್ಲ. ಇತ್ತೀಚಿನ ರಾಜ್ಯ ಪದ್ಧತಿಗಳಲ್ಲಿ ರಾಷ್ಟ್ರೀಯ ಮತ್ತು ಔದ್ಯೋಗಿಕ ಪುನರ್ಘಟನೆಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವು ಸಿಕ್ಕುತ್ತಲಿದೆ. ಸಾವಿರಾರು ವರುಷಗಳಿಂದ ನಡೆದು ಬಂದಿರುವ ರಾಜ್ಯಪದ್ಧತಿ, ಸಾಮಾಜಿಕ ರಚನೆಗಳನ್ನು ಬುಡಮೇಲು ಮಾಡಲು ರಾಜಕಾರಣಿಗಳು ಈ ಸಮಸ್ಯೆಯನ್ನು ಆಯುಧವಾಗಿ ಉಪಯೋಗಿಸಿಕೊಳ್ಳುತ್ತಿರುವರೆಂದು ಕಂಡುಬರುತ್ತಿದೆ. ಮಹಾಯುದ್ಧದ ನಂತರದ ಸಮತಾವಾದ, ಕ್ರಾಂತಿವಾದಗಳು ಈ ಸಮಸ್ಯೆಯನ್ನು ಮುಂದೆ ಮಾಡಿಕೊಂಡು ಕೂಲಿಕಾರರ ಹಿತವೇ ರಾಷ್ಟ್ರಹಿತವೆಂದು ಹೇಳುತ್ತ ತಮ್ಮ ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

* ಇಂದು ನಡೆದಷ್ಟು ದೊಡ್ಡ ಪ್ರಮಾಣದ ಮೇಲೆ ವಿವಿಧ ವಸ್ತುಗಳ ಹುಟ್ಟುವಳಿ ಈ ಮೊದಲು ಜಗತ್ತಿನಲ್ಲಿ ನಡೆದಿರಲಿಲ್ಲ. ಒಂದೇ ವ್ಯಕ್ತಿಯು ಕೆಳಗೆ ಲಕ್ಷಗಟ್ಟಲೆ ಜನರು ಎಂದೂ ದುಡಿದಿರಲಿಲ್ಲ. ಸಾವಿರಾರು ಜನರು ಒಬ್ಬನ ಮೇಲೆ ಅವಲಂಬಿಸುವ ಪ್ರಸಂಗವೂ ಇರಲಿಲ್ಲ. ಕೂಲಿಕಾರರಿಂದ ಆದಷ್ಟು ಹೆಚ್ಚು ದುಡಿಸಿಕೊಂಡು ಅವರಿಗೆ ಶಕ್ಯವಿದ್ದಷ್ಟು ಕಡಿಮೆ ಕೂಲಿ ಕೊಡಬೇಕೆಂಬ ಪ್ರವೃತ್ತಿ ಒಡೆಯರಲ್ಲಿ ಬೆಳೆಯಿತು. ಇದರಿಂದ ಜನಾಂಗದಲ್ಲಿ ದುಡಿಯುವವರು ದುಡಿಸಿಕೊಳ್ಳುವವರು ಎಂಬೆರಡು ವಂಗಡಗಳಾಗಿವೆ. ಆದರೆ ಇಂದಿಗಿಂತ ಸಣ್ಣ ಪ್ರಮಾಣದ ಮೇಲೆ ಒಡೆಯರು ಕೂಲಿಕಾರರೆಂಬ ವಂಗಡಗಳು ಸಾವಿರಾರು ವರುಷಗಳಿಂದ ಇದ್ದೇ ಇವೆ. ಕೂಲಿಕಾರರ ರಕ್ಷಣೆ ಅವರ ಸೌಖ್ಯಗಳೇ ರಾಷ್ಟ್ರದ ಸುಖ ಸಂಪತ್ತುಗಳೆಂಬುದನ್ನು ಹಿಂದಿನ ರಾಜಕಾರಣಿಗಳು ಮುತ್ಸದ್ದಿಗಳು ತಿಳಿದಿದ್ದರು. ಅದಕ್ಕನುಗುಣವಾಗಿ ಒಡೆಯರ ಆಶೆಬುರುಕವೃತ್ತಿ, ಕ್ರೌರ್ಯಗಳಿಂದ ಕೂಲಿಕಾರರ ಹಿತಸಂಬಂಧ, ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ ಅವರನ್ನು ಮತ್ತು ಅದರ ಮುಖಾಂತರ ರಾಷ್ಟ್ರವನ್ನು ಶಾಂತವಾಗಿಡಲು ಯೋಗ್ಯವಾದ ನಿಯಮಗಳು ಅವರಿಂದ ಮಾಡಲ್ಪಟ್ಟಿದ್ದವು. *

ಪ್ರಾಚೀನ ಗ್ರಂಥಗಳ ಆಧಾರ

* ಶುಕ್ರಾಚಾರ್ಯರ ಅರ್ಥಶಾಸ್ತ್ರ, ಅಶೋಕನ ಕಲ್ಲಿನ ಕಂಬಗಳಲ್ಲಿಯ ಬರೆಹಗಳು, ಬುದ್ಧನ ಕಾಲದ ವಿವಿಧ ಆಧಾರ ಗ್ರಂಥಗಳಲ್ಲಿ, ನಾರದ ಬೃಹಸ್ಪತಿ ಇವರ ಗ್ರಂಥಗಳಲ್ಲಿಯೂ ಕೂಲಿಕಾರರ ಪರಿಸ್ಥಿತಿ ಹಾಗು ಅವರ ಕಷ್ಟ ಪರಿಹಾರದ ಬಗ್ಗೆ ವಿವಿಧ ನಿಯಮಾವಳಿಗಳಿದ್ದುದು ಕಂಡುಬರುವದು. ದೇಶದಲ್ಲಿಯ ಕೂಲಿಕಾರರು ಸಂತುಷ್ಟರಾಗಿರದಿದ್ದರೆ ಆ ದೇಶದ ಏಳ್ಗೆ ಅಸಾಧ್ಯವೆಂದು ಹಿಂದೂ ಧರ್ಮಶಾಸ್ತ್ರಕಾರರು ಮನಗಂಡಿದ್ದರು. ಅದ್ದರಿಂದಲೇ ರಾಜನು ಕೂಲಿಕಾರರ ಕಷ್ಟಪರಿಹಾರದ ಕಡೆಗೆ ವಿಶೇಷವಾದ ಲಕ್ಷ್ಯ ಕೊಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ವಿಧಿಸಲಾಗಿದ್ದಿತು. ಒಡೆಯರು ಹಾಗೂ ಕೂಲಿಕಾರರಲ್ಲಿ ತಂಟೆ ಉದ್ಭವಿಸಿದರೆ ಸ್ವತಃ ರಾಜನೇ ಎರಡೂ ಪಕ್ಷಗಳ ಹೇಳಿಕೆ ಕೇಳಿಕೊಂಡು ಹಾಗೂ ವಿಶ್ವಾಸಯೋಗ್ಯ ಜನರ ಸಾಕ್ಷ್ಯಗಳನ್ನು ತೆರೆದುಕೊಂಡು ಯೋಗ್ಯವಾದ ನಿರ್ಣಯ ಕೊಡುತ್ತಿದ್ದನು. ಒಡೆಯ ಕೂಲಿಕಾರರಲ್ಲಿ ಉಂಟಾದ ತಂಟೆಯ ನಿಜವಾದ ಕಾರಣ ತಿಳಿಸುವ ವಿಶ್ವಾಸಿಗರು ಸಿಕ್ಕದಿದ್ದಲ್ಲಿ ಒಡೆಯನನ್ನು ಕರೆಯಿಸಿ ಅವನ ಜವಾಬುಗಳನ್ನು ತೆಗೆದುಕೊಳ್ಳಲಾಗುತ್ತಿದ್ದಿತೆಂದು ಕೌಟಿಲ್ಯನ ಬರಹಗಳಲ್ಲಿ ಉಲ್ಲೇಖವಿದೆ. ರೈತರು, ಮನೆಗೆಲಸ ಮಾಡುವವರು ಮತ್ತು ವಿವಿಧ ಕೈಗಾರಿಕೆಗಳಿಂದ ಉಪಜೀವನ ಸಾಗಿಸುವವರೆಲ್ಲರಿಗೂ ಕೂಲಿಕಾರ ವರ್ಗವೆಂದು ಹೆಸರಿದ್ದಿತು. ಬೇರೆಬೇರೆ ಉದ್ಯೋಗಗಳಿಗನುಸರಿಸಿ ಉಪವರ್ಗಗಳನ್ನು ಮಾಡಲಾಗಿದ್ದಿತು. ರೈತರು, ಬೆಳೆಕೊಯ್ಯುವವರು, ಹುಲ್ಲು ಕೊಯ್ಯುವವರು, ನೇಕಾರರು, ಬೇಡರು ಮನೆಗೆಲಸ ಮಾಡುವವರು ಎಂಬ ವಿವಿಧ ಉಪವರ್ಗಗಳಿದ್ದವು.

ಕೂಲಿಯ ಪ್ರಮಾಣ

ಕೂಲಿಯ ಪ್ರಮಾಣ ಹೇಗಿರಬೇಕು, ಎಷ್ಟಿರಬೇಕೆಂಬುದನ್ನು ಅಂದು ಸರಕಾರದವರೇ ನಿರ್ಣಯಿಸುತ್ತಿದ್ದರು. ಈ ರೀತಿ ನಿರ್ಣಯ ಮಾಡುವಾಗ ಕೆಲಸಗಾರರ ಕೌಶಲ್ಯ, ಆದ ಕೆಲಸ ಮತ್ತು ಅದರ ದರ್ಜೆ ಮತ್ತು ಆ ಕೆಲಸ ಮಾಡುವಾಗ ಕೆಲಸಗಾರನಿಗೆ ಅದರ ಬಗ್ಗೆ ಇರುವ ಆಸ್ಥೆ ಮುಂತಾದವುಗಳನ್ನು ಗಣನೆಗೆ ತರಲಾಗುತ್ತಿದ್ದಿತು. ಆದರೆ ಕೂಲಿಕಾರನ ಜೀವನಕ್ಕೆ ಯಾವ ರೀತಿಯಿಂದಲೂ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತಿದ್ದಿತು. * ಒಡೆಯನು ತನ್ನ ಆಳುಗಳ ಅಥವಾ ಕೂಲಿಕಾರರ ಅಪಮಾನ ಮಾಡದೆ, ಯೋಗ್ಯ ಕೂಲಿಕೊಟ್ಟು ಅವರ ಸುಖದುಃಖಗಳ ವಿಚಾರ ಮಾಡುತ್ತಿದ್ದರೆ ಕೂಲಿಕಾರನು ಒಡೆಯನ ವೈರಿಯಾಗದೆ ಅವನಿಗೆ ಜೀವಕ್ಕೆ ಜೀವ ಕೊಡುವ ಮಿತ್ರನಾಗಿ ಪರಿಣಮಿಸುವನು. * ಕೂಲಿಕಾರ ಒಡೆಯರಲ್ಲಿ ಪರಸ್ಪರ ಸೌಹಾರ್ದಭಾವ ವೃದ್ಧಿಯಾಗಿ ಅದರಿಂದ ರಾಷ್ಟ್ರದಲ್ಲಿಯ ಶಾಂತಿ ಸುಖ ಸಂಪತ್ತುಗಳ ವೃದ್ಧಿಯಾಗುವಲ್ಲಿ ಸಂಶಯವಿಲ್ಲ. ಇವೆಲ್ಲ ಸಂಗತಿಗಳನ್ನೂ ನಮ್ಮ ಶಾಸ್ತ್ರಕಾರರು ವಿಚಾರಿಸಿ ನಿಯಮಗಳನ್ನು ಮಾಡಿದ್ದರು.

* ಕೂಲಿಯಲ್ಲಿ ಶುಕ್ರಾಚಾರ್ಯರು ಮೂರು ದರ್ಜೆಗಳನ್ನು ಮಾಡಿದ್ದಾರೆ. ಉತ್ತಮವೆಂದರೆ ಹೊಟ್ಟೆಗೆ ಬಟ್ಟೆಗೆ ಏನೂ ತೊಂದರೆಯಿಲ್ಲದೆ ಸಾಕಾಗುವಷ್ಟು ಕೂಲಿ ದೊರೆಯುವದು, ಪ್ರಪಂಚಕ್ಕೆ ಸಾಲುವಷ್ಟೆ ಸಿಕ್ಕರೆ ಅದು ಮಧ್ಯಮ. ತರಗತಿಯ ಕೂಲಿ, ಆಹಾರ ಅಥವಾ ವಸ್ತ್ರ ಇವೆರಡರಲ್ಲೊಂದು ಸಿಕ್ಕದೆ ಪರತಾಪ ಪಡುವಂತೆ ಕೂಲಿ ಸಿಕ್ಕರೆ ಅದು ಕನಿಷ್ಠ ತರಗತಿಯದು.

ಅಕ್ಕಸಾಲಿಗನು ಬಂಗಾರದ ಆಭರಣ ಮಾಡಿದರೆ ಅದರ ಬೆಲೆಯ ೧/೩೦. ಸಾಧಾರಣ ಕೆಲಸ ಮಾಡಿದರೆ ೧/೬೦ ಕೆಲಸ ನೆಟ್ಟಗೆ ಮಾಡದಿದ್ದರೆ ೧/೧೨೦ ಮತ್ತು ಬೆಳ್ಳಿಯ ಸಾಮಾನುಗಳನ್ನು ಮಾಡಿದರೆ ಬಂಗಾರದ ಆಭರಣಕ್ಕೆ ಸಿಕ್ಕುವ ಕೂಲಿಯ ೧/೨ ಈ ರೀತಿ ಕೂಲಿ ಸಿಕ್ಕುತಿತ್ತು. ಒಕ್ಕಲತನದಲ್ಲಿ ಸಹಾಯ ಮಾಡುವವನಿಗೆ ಬಂದ ಬೆಳೆಯ ೧/೧೦ ದಷ್ಟು ಕೂಲಿ ಕೊಡಲಾಗುತಿತ್ತು. ಇದರಂತೆ ವ್ಯಾಪಾರ ಮಾಡುವವನು ತಾನು ಮಾಡಿದ ಸರಕಿನ ಬೆಲೆಗನುಸಾರವಾಗಿ ಇದೇ ಪ್ರಮಾಣದಲ್ಲಿ ತನ್ನ ಸಹಾಯಕನಿಗೆ ಕೊಡಬೇಕಾಗುತ್ತಿತ್ತು. ಎಷ್ಟೊ ಸಲ ಕೂಲಿಯನ್ನು ನಾಣ್ಯ ರೂಪದಲ್ಲಿ ಕೊಡಲಾಗುತ್ತಿತ್ತು. ಆದರೆ ವಿವಿಧವಸ್ತುಗಳ ರೂಪದಲ್ಲಿ ಕೂಲಿ ಕೊಡುವ ಪದ್ಧತಿ ಇರಲಿಲ್ಲವೆಂತಲ್ಲ. ಭೂಮಿ, ದನಕರು, ಕಾಳುಕಡ್ಡಿ ಮುಂತಾದ ವಿವಿಧ ವಸ್ತುಗಳನ್ನು ಸಹ ಕೂಲಿಕೊಡಲಿಕ್ಕೆ ಉಪಯೋಗಿಸಲಾಗುತ್ತಿತ್ತು.

ಧನಗಾರನೊಬ್ಬನು ನೂರು ದನಗಳನ್ನು ಒಂದು ವರ್ಷ ಕಾಯ್ದರೆ ಅವನಿಗೆ ಆ ಹಿಂಡಿನ ಹಾಲನೆಲ್ಲ ಕೊಡುವದಲ್ಲದೆ ಒಂದು ದನವನ್ನೂ ಪ್ರತಿವರ್ಷ ಕೊಡಬೇಕೆಂದು ನಾರದರು ಬರೆದಿದ್ದಾರೆ.

* ಕೂಲಿಗೊತ್ತು ಪಡಿಸುವಾಗ ಒಡೆಯನು ಕೂಲಿಕಾರನ ಮನೆಯ ವೆಚ್ಚವನ್ನು ಯಾವಾಗಲೂ ಗಮನಿಸಿ ಅವನಿಗೆ ಸಾಲುವಷ್ಟು ಕೂಲಿ ಸಿಕ್ಕುವಂತೆ ನೋಡಿಕೊಳ್ಳಬೇಕಾಗಿದ್ದಿತು.

* ಕಾರ್ಯ ಪ್ರಾರಂಭಕ್ಕೆ ಅಥವಾ ಕೆಲಸ ಅಥವಾ ಕನಿಷ್ಟ ಅದು ಮುಗಿದ ಕೂಡಲೇ ಕೂಲಿ ಕೊಡಬೇಕೆಂದು ನಾರದರ ಅಭಿಪ್ರಾಯ.

ಕೂಲಿಯನ್ನು ನಿರ್ದಿಷ್ಟ ಸಮಯದಲ್ಲಿ ಕೊಡದಿದ್ದರೆ ಆ ಕೂಲಿಯ ೫ ಪಾಲಿನಷ್ಟು ದಂಡ ಮಾಡಲಾಗುತ್ತಿದ್ದಿತು. * ಒಡೆಯನಿಂದ ಕೂಲಿಕಾರನಿಗೆ ಬರಬೇಕಾಗಿದ್ದ ಹಣ ಕೊಡಿಸುವುದಲ್ಲದೆ ಒಡೆಯನಿಗೆ ಶಿಕ್ಷೆಯನ್ನೂ ವಿಧಿಸಬೇಕೆಂದು ಈ ರೀತಿ ಮಾಡಲು ಆಡಳಿತಗಾರರಿಗೆ ಅಧಿಕಾರವಿದೆಯೆಂದೂ ಬೃಹಸ್ಪತಿಯು ಪ್ರತಿಪಾದಿಸಿದ್ದಾನೆ.

ವಿರಾಮ ನಿವೃತ್ತಿ ವೇತನ

* ಒಂದೇ ಸವನೆ ಅನೇಕ ವರ್ಷಗಳವರೆಗೆ ಕೆಲಸ ಮಾಡುವವನಿಗೆ ಪ್ರತಿವರ್ಷ ೧೫ ದಿವಸ ರಜೆ ಸಿಕ್ಕುತ್ತಿತ್ತು. ಇದಲ್ಲದೆ ತನ್ನ ಸಂಬಳದ ೧/೪ ದಷ್ಟು ಹಣ ಅವನಿಗೆ ಪ್ರತಿವರ್ಷ ಬಹುಮಾನ ರೂಪದಲ್ಲಿ ಸಿಕ್ಕುತ್ತಿದ್ದಿತು.

ಅನಾರೋಗ್ಯದ ಮೂಲಕ ಕೂಲಿಕಾರನಿಗೆ ಕೆಲಸಕ್ಕೆ ಬರಲಾಗದಿದ್ದರೆ * ಮೊದಲಿನ ೧೫ ದಿನಗಳ ವರೆಗೆ ಪೂರ್ಣವೇತನ ಅನಂತರ ೧/೨ ವೇತನ ಅವನಿಗೆ ಸಿಕ್ಕುತ್ತಿತ್ತು. ಮುಂದೆ ಕೆಲಸಕೆ ಬರುವದು ಅಸಾಧ್ಯವಾದರೆ ೫ ವರ್ಷ ಕೆಲಸಮಾಡಿದ ಕೂಲಿಗಾರನಿಗೆ ಮೂರುತಿಂಗಳ ಸಂಬಳ, ಅದಕ್ಕಿಂತ ಹೆಚ್ಚು ಸಮಯ ಕೆಲಸಮಾಡಿದ್ದರೆ ಆರು ತಿಂಗಳ ಸಂಬಳ ಕೊಟ್ಟು ಕೆಲಸದಿಂದ ದೂರಮಾಡಲಾಗುತ್ತಿದ್ದಿತು. ೪೦ ವರ್ಷಕ್ಕಿಂತ ಹೆಚ್ಚು ಕೆಲಸಮಾಡಿದ್ದರೆ ಅವನಿಗೆ ಒಟ್ಟು ಕೊಡಲ್ಪಟ್ಟ ಕೂಲಿಹಣದ ಅರ್ಧದಷ್ಟು ಹಣವನ್ನು ಅವನು ಕೆಲಸ ಬಿಡುವ ಮುಂದೆ ಕೊಡಲಾಗುತ್ತಿದ್ದಿತು. ಇದಕ್ಕಾಗಿ ಒಡೆಯನು ಒಂದು ನಿಧಿಯನ್ನೇ ಸ್ಥಾಪಿಸಬೇಕಾಗುತ್ತಿದ್ದಿತು. ಕೂಲಿಕಾರರಿಗೆ ಕೊಡಬೇಕಾದ ಹಣದ ೧/೪ ದಷ್ಟು ಹಣವು ಈ ನಿಧಿಯಲ್ಲಿರುತ್ತಿದ್ದಿತು. ಹಣ ಕೊಡುವಾಗ ಒಡೆಯನು ಅದರಷ್ಟೇ ಹಣ ಕೂಡಿಸಿ ಕೂಲಿಕಾರರಿಗೆ ಕೊಡುತ್ತಿದ್ದನು.

ವಾಸಸ್ಥಾನ ಸೌಕರ್ಯ

ಕೂಲಿಕಾರರ ವಸತಿಗಾಗಿ ಮನೆಗಳನ್ನೂ ಕಟ್ಟಲಾಗುತ್ತಿದಿತು. ಮನೆ ಕಟ್ಟುವಾಗ ಕೆಲಸಗಾರರಿಗೆ ಎಲ್ಲ ಸೌಕರ್ಯಗಳು ಸಿಕ್ಕುವಂತೆ ಹಾಗೂ ಅವು ಆರೋಗ್ಯಕರವಾಗಿರುವಂತೆ ನೋಡಿಕೊಳ್ಳಲಾಗುತ್ತಿದ್ದಿತು.

ಹೀಗೆ ಕೂಲಿಕಾರರ ಹಿತವರ್ಧನೆಗಾಗಿ ಮಾಡಲ್ಪಟ್ಟಿರುವ ನಿಯಮಗಳೆಲ್ಲವೂ ಸಾವಿರೆರಡು ಸಾವಿರ ವರ್ಷಗಳ ಹಿಂದೆಯೇ ಭಾರತ ದೇಶದಲ್ಲಿದ್ದವೆಂದು ಹೇಳಿದರೆ ಅನೇಕರಿಗೆ ಆಶ್ಚರ್ಯವಾಗದಿರದು. *

ಇಂದು ನಡೆದಿರುವ ದೊಡ್ಡ ಪ್ರಮಾಣದ ಉತ್ಪತ್ತಿ ಅಂದು ಇರಲಿಲ್ಲ. ಕಾರಖಾನೆಗಳಿರಲಿಲ್ಲ. ಈಗಿನ ಕಾರಖಾನೆಗಳಲ್ಲಿಯಂತೆ ಸಾವಿರಾರು ಜನರು ಒಂದೆಡೆಗೆ, ಒಬ್ಬನಿಗೆ ಅಧೀನರಾಗಿ ದುಡಿಯುತ್ತಿರಲಿಲ್ಲ. ಇದರಿಂದ ಆ ಸಮಯದಲ್ಲಿದ್ದ ಮತ್ತು ಈಗ ಸದ್ಯಕ್ಕೆ ಇರುವ ಪರಿಸ್ಥಿತಿಗಳಲ್ಲಿ ಅಂತರವಿದ್ದತೆಂಬುದು ಸ್ಪಷ್ಟವಾಗುವದು. ಆದರೆ ಪ್ರತ್ಯಕ್ಷ ಅನುಭವದಿಂದ ಸಿದ್ಧಪಡಿಸಲ್ಪಟ್ಟ ನಿಯಮಗಳಲ್ಲಿ ಕೆಲವು ಅವಶ್ಯ ಬದಲಾವಣೆಗಳನ್ನು ಮಾಡಿಕೊಂಡು ಯಾವ ಸಮಯದಲ್ಲಾದರೂ ಅವನ್ನು ಉಪಯೋಗಿಸಕೊಳ್ಳಬಹುದು.

ಕೂಲಿಕಾರರೇ ಸಮಾಜದಲ್ಲಿ ದೊಡ್ಡ ವರ್ಗವಾಗಿದ್ದು ಈ ಬಹು ಸಂಖ್ಯಾಕ ಜನರು ಇಂದು ಅನುಭವಿಸುತ್ತಿರುವ ಕಷ್ಟಪರಂಪರೆಗಳಿಂದ ಅವರನ್ನು ಮುಕ್ತ ಮಾಡುವದು ಅತ್ಯವಶ್ಯ. * ಸುಧಾರಣೆ ಮಾಡಬೇಕೆನ್ನುವ ಉಬ್ಬಿನಲ್ಲಿ ಇಲ್ಲಿಯ ಅನೇಕ ಸಂಗತಿಗಳನ್ನು ಮರೆತು ರಶಿಯ ಮುಂತಾದ ಪರದೇಶಗಳನ್ನನುಸರಿಸಬೇಕೆಂಬ ಪ್ರವೃತ್ತಿ ಮೇಲಿನ ಸಂಸ್ಥೆಗಳಲ್ಲಿದ್ದುದು ಕಂಡುಬಂದಿದೆ. ಕೂಲಿಕಾರರ ಕಷ್ಟ ಪರಿಹರಿಸಬೇಕು? ಎಂದೀ ವಿಷಯಗಳನ್ನು ತಿಳಿದುಕೊಳ್ಳಬಿಚ್ಛಿಸುವವರು ರಶಿಯ ಅಥವಾ ಅಮೇರಿಕೆಗಳಲ್ಲಿಯ ಕೂಲಿಕಾರ ಸಮಸ್ಯೆಯನ್ನೇ ಅಭ್ಯಸಿಸಬೇಕಾಗಿಲ್ಲ. * ನಮ್ಮ ಕೂಲಿಕಾರ ಸಮಸ್ಯೆಗೆ ಉತ್ತರ ಹುಡುಕುತ್ತಿರುವವರು ಈ ಮಾರ್ಗ ಹಿಡಿದು ಪ್ರಯತ್ನಿಸಿದರೆ ಹೆಚ್ಚು ಒಳ್ಳೆಯದಾಗದಿರದು.

(—ಕ. ಪಿ.)

ಸ್ವದೇಶಾಭಿಮಾನಿ

ತಾರೀಕು 18—10—1940

ಸತ್ಯಾಗ್ರಹ ನಿರ್ಧಾರ

ಬ್ರಿಟನಿನ ಕಷ್ಟಕಾಲದಲ್ಲಿ ಭಾರತವು ಗೊಂದಲವನ್ನೆಬ್ಬಿಸುವುದು ಬೇಡವೆಂಬ ವಿಷಯ ಎಲ್ಲಾ ಕಾಂಗ್ರೆಸ್ಸು ಮುಖಂಡರೂ ಒಮ್ಮತಕ್ಕೆ ಬಂದು ಸ್ವಾತಂತ್ರ್ಯಕ್ಕಾಗಿ ತಾವು ಹೂಡುವ ಹೋರಾಟವನ್ನು ಮುಂದಕ್ಕಿಟ್ಟ ವಿಚಾರವು ಇಂದು ಜಗತ್ತಿಗೇ ತಿಳಿದಿದೆ. ಇಂತಹ ಸಂದರ್ಭದಲ್ಲಿ ಬ್ರಿಟನು ಕಾಂಗ್ರೆಸಿನ ಈ ಉದಾತ್ತ ನೀತಿಯನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳದೆ, ಸ್ವಾತಂತ್ರ್ಯದ ವಿಷಯವಾಗಿ ನಕಾರವೆಂದ ಕಾರಣ, ಮುಂಬಯಿ ಕಾಂಗ್ರೆಸಿನಲ್ಲಿ ನಿರ್ಧಾರವಾದಂತೆ ಮಹಾತ್ಮಾ ಗಾಂಧಿಜಿಯವರ ಸೇನಾಪತಿತ್ವದಲ್ಲಿ, ಅವರು ತಯಾರಿಸಿದ ಯೋಜನೆಯಂತೆ ಅವರೇ ಆರಿಸಿದ ಕೆಲವೇ ಮಂದಿಯ ವೈಯಕ್ತಿಕ ಸತ್ಯಾಗ್ರಹವು ಆರಂಭವಾಗುವುದಾಗಿ ವರ್ಧಾದಲ್ಲಿ ಸೇರಿದ ವರ್ಕಿಂಗ್ ಕಮಿಟಿಯು ಈಗ ನಿರ್ಧಾರಮಾಡಿದೆ.

ಗಾಂಧಿಜಿಯವರು ಇಂತಹ ಸಂಕಟಕಾಲದಲ್ಲಿ ರಾಷ್ಟ್ರವನ್ನು ಸನ್ಮಾರ್ಗದಲ್ಲಿ ನಡೆಸಬಲ್ಲ ವಿವೇಕಶಾಲಿಗಳೆಂದು ಸಂಪೂರ್ಣ ತಿಳಿದವರಾಗಿ ಕಾಂಗ್ರೆಸಿನವರೆಲ್ಲರೂ, ತಮ್ಮೊಳಗೆ ಎಷ್ಟೇ ಮತಭೇದಗಳಿದ್ದರೂ, ಸ್ವಾತಂತ್ರ್ಯ ಪ್ರಾಪ್ತಿಯ ಒಂದು ಘನವಾದ ಉದ್ದೇಶದ ಸಲುವಾಗಿ ಗಾಂಧಿಜಿಯವರನ್ನು ತಮ್ಮ ಸಮಗ್ರ ಸೇನಾಪತಿಯಾಗಿ ಚುನಾಯಿಸಿ ಅವರು ಹೇಳಿದಂತೆ ನಡೆಯುವುದಾಗಿ ಒಪ್ಪಿಕೊಂಡರು. ಗಾಂಧಿಜಿಯವರು ತಮ್ಮ ಮೇಲೆ ಹೊರಿಸಿದ ಈ ವಿಪುಲ ಭಾರವನ್ನಾದರೂ ರಾಷ್ಟ್ರಹಿತ ದೃಷ್ಟಿಯಿಂದ ವಹಿಸಿಕೊಂಡವರಾಗಿ ವೈಸರಾಯರನ್ನು ಕಂಡು ಮಾತನಾಡಿದರು. ನಮಗೆ ಇಂದು ವಾಕ್‌ಸ್ವಾತಂತ್ರ್ಯವು ಬೇಕಾಗಿದೆ. ಭಾರತವು ಇಂದಿನ ಯುದ್ಧದಲ್ಲಿ ಸ್ವೇಚ್ಛೆಯಿಂದ ಸೇರಿದೆಯೆಂದು ಬ್ರಿಟನು ಸಾರಿದ್ದರೂ, ಕಾಂಗ್ರೆಸಿನವರು ಯುದ್ಧದ ಕುರಿತು ಶಾಂತ ರೀತಿಯಿಂದ ಅಹಿಂಸಾಕ್ರಮದಿಂದ ಭಾರತವು ಯುದ್ಧಾಸಕ್ತವಾಗಿಲ್ಲವೆಂದು ಸಾರಿದರೆ ಅದಕ್ಕೆ ಅಡ್ಡಿ ಬರಬಾರದು ಎಂದು ಕೇಳಿದರು. ಆದರೆ ವೈಸರಾಯರು ವಾಕ್‌ಸ್ವಾತಂತ್ರ್ಯದ ವಿಷಯ ತಮ್ಮ ನಕಾರವನ್ನು ಹೇಳಿದುದೂ ಮತ್ತೂ ಗಾಂಧಿ ವೈಸರಾಯರೊಳಗೆ ಆದ ಪತ್ರವ್ಯವಹಾರಗಳೆಲ್ಲವೂ ಈಗಾಗಲೇ ಪ್ರಕಟವಾಗಿ ಜನಜನಿತವಾಗಿದೆ.

ಇನ್ನಾಗಲು ಮಹಾತ್ಮಾಜಿಯವರು ಮುಂದಿನ ನಿಷ್ಕರ್ಷೆಯನ್ನು ಮಾಡಲೇಬೇಕಾಯಿತು. ಇಂತಹ ಸಂದರ್ಭದಲ್ಲಿ [illegible] ತನ್ನ ಅಭಿಪ್ರಾಯವನ್ನು ತಿಳಿಸಿ ಅದರ ಸಮ್ಮತಿ [illegible] ಬಯಸಿ ಕೇಳಿಕೊಂಡರು. ಆ ಬಗ್ಗೆ ವರ್ಧಾದಲ್ಲಿ ವರ್ಕಿಂಗ್ ಕಮಿಟಿಯು ಸಭೆಯು ತಾ. ೧೧ರಂದು ಸೇರಿತು. ಮೂರು ದಿನಗಳ ತನಕ ಚರ್ಚೆಯಾಯಿತು. ಮಹಾತ್ಮಾಜಿಯವರು ಆ ಸಭೆಯಲ್ಲಿ ತನಗೂ ವೈಸರಾಯರಿಗೂ ಆದ ಮಾತುಕತೆಗಳ ವಿಷಯವನ್ನು ತಿಳಿಸಿದರು. ಕೊನೆಗೆ ಇಂತಹ ಸಂದರ್ಭದಲ್ಲಿ ಮೊದಲಿಗೆ ತಾನೇ ಆರಿಸಿದ ಕೆಲವೇ ಮಂದಿ ಸತ್ಯ ಅಹಿಂಸಾ ಪಾಲಕರಾದ ಸತ್ಯಾಗ್ರಹಿಗಳಿಂದ ಶಾಸನಭಂಗ ಕಾರ್ಯಕ್ರಮವನ್ನು ಆರಂಭಿಸುವುದಾಗಿ ಒಂದು ಯೋಜನೆಯನ್ನು ಸಿದ್ಧಮಾಡಿ ಕಮಿಟಿಯ ಮುಂದಿಟ್ಟರು. ಕಮಿಟಿಯು ಅದೇ ಯುಕ್ತ ಮಾರ್ಗವೆಂದು ತನ್ನ ಒಪ್ಪಿಗೆಯನ್ನೂ ಕೊಟ್ಟಿತು.

ಹೀಗೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಕಾಂಗ್ರೆಸ್ಸು, ಭಾರತದ ಸ್ವಾತಂತ್ರ್ಯ ವಿಚಾರವೇ ಇಂದು ಪೂರ್ಣ ನಿರಾಕರಿಸಲ್ಪಡುತ್ತಿರುವಾಗ, ಅದನ್ನು ಸಹಿಸದೆ, ಸತ್ಯಾಗ್ರಹವನ್ನು ಆರಂಭಿಸಲು ನಿಶ್ಚಯ ಮಾಡಿದೆ. ಇಂದಿನ ಈ ಸತ್ಯಾಗ್ರಹವು ಹಿಂದಿನ ಸತ್ಯಾಗ್ರಹಗಳಂತಿರದೆ ಪೂರಾ ಭಿನ್ನವಾಗಿದೆ. ಜನತೆಯು ಈ ಶಾಸನಭಂಗದಿಂದ ಕೆರಳಿ ಶಾಂತಿಗೆಡುವ ಸಂದರ್ಭವಿಲ್ಲ. ಗೊಂದಲಗೊಳ್ಳುವ ಕಾರಣವಿಲ್ಲ. ಇದು ಜನತಾ ಸತ್ಯಾಗ್ರಹವಲ್ಲ. ಇದು ಕೇವಲ ಕೆಲವು ವ್ಯಕ್ತಿಗಳು ಹೂಡುವ ಸತ್ಯಾಗ್ರಹ. ಹಾಗೆ ಸತ್ಯಾಗ್ರಹವನ್ನು ಹೂಡುವ ವ್ಯಕ್ತಿಗಳಾದರೂ ಯಾರೆಂಬ ವಿಚಾರವನ್ನು ಮಹಾತ್ಮಾ ಗಾಂಧಿಜಿಯವರೇ ಸೂಚಿಸಲಿರುವರು. ಅಂತಹವರು ಮಾತ್ರ ಸತ್ಯಾಗ್ರಹ ಹೂಡಬಹುದಲ್ಲದೆ ಇತರರು ಕೂಡದು. ಸ್ವಾತಂತ್ರ್ಯದ ಸಲುವಾಗಿ ಕಾದಾಡುವ ಬ್ರಿಟನು ಭಾರತದಲ್ಲಿ ಸ್ವಾತಂತ್ರ್ಯದ ವಿಚಾರ ಹೇಗೆ ವರ್ತಿಸುತ್ತಿದೆಯೆಂಬುದನ್ನು ಇದರಿಂದ ಮಹಾತ್ಮರು ಜಗತ್ತಿಗೇ ಸಾರಲಿರುವರೆಂದು ಮುಖಂಡರ ಅಭಿಪ್ರಾಯವಾಗಿದೆ.

ಇಂದು ಮಹಾತ್ಮಾಜಿಯವರು ಆರಂಭಿಸುವುದಾಗಿ ತಿಳಿಸಿದ ಈ ಸತ್ಯಾಗ್ರಹವು ಮೇಲಿಂದ ಮೇಲೆ ನೋಡುವವರಿಗೆ ಅಷ್ಟೇನೂ ಗಂಭೀರವಾಗಿ ಕಾಣುವುದಿಲ್ಲ. ಆದರೆ ಗಾಂಧಿಜಿಯವರು ತಮ್ಮದೇ ಆದ ಒಂದು ನಿಶ್ಚಿತ ಮಾರ್ಗವನ್ನು ಸರಿಯಾಗಿ ಗೊತ್ತುಪಡಿಸಿ ಮುಂದುವರಿಯುವವರು; ಅಂದು ಗಾಂಧಿಜಿ ಉಪ್ಪು ಹೆಕ್ಕಲು ದಂಡೀಯಾತ್ರೆಗೆ ತೆರಳಿದರು. ಹಲವು ಕಾಂಗ್ರೆಸ್ ಮುಂದಾಳುಗಳೇ ಗಾಂಧಿಜಿಯವರನ್ನು ಕಂಡು ನಗಾಡಿದ್ದರು. ಆದರೆ ಮುಂದೆ ಅದರಿಂದ ಅಖಿಲ ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ಉಂಟಾದ ಹೊಸ ಪರಿಣಾಮವನ್ನು ನೆನೆಸುವಾಗ ಇಂದೂ ಮೈ ನವಿರೇಳುತ್ತದೆ. ಮಹಾತ್ಮರ ಮಾರ್ಗ ಸಾಮಾನ್ಯರಿಗೆ ಅರ್ಥವಾಗುವಂತಹದಲ್ಲ.

ನ್ಯಾಯವಾದ ರೀತಿಯಲ್ಲಿಯೇ ನಡೆದು, ಬ್ರಿಟನಿಗೆ ಕಾಂಗ್ರೆಸಿನ ಈ ಹೋರಾಟವನ್ನು ತಪ್ಪಿಸುವುದು ಶಕ್ಯವಲ್ಲದೆ ಕಾಂಗ್ರೆಸಿನ ಬಲವಂತವಾದ ನೈತಿಕ ಬೆಂಬಲವನ್ನು ಪಡೆವುದೂ ಸಾಧ್ಯವಿತ್ತು ಮತ್ತು ಸಾಧ್ಯವಿದೆ. ಕಾಂಗ್ರೆಸು ಹಾಗೂ ಗಾಂಧಿಜಿಯವರು ಇಂದು ಕೇಳುತ್ತಿರುವುದು ನಮಗೆ ವಾಕ್‌ಸ್ವಾತಂತ್ರ್ಯವನ್ನು ಕೊಡಿರೆಂದು. ಯೂರೋಪಿನ ರಾಷ್ಟ್ರಗಳಲ್ಲಿ ವಾಕ್‌ಸ್ವಾತಂತ್ರ್ಯಕ್ಕೆ ಅಡ್ಡಿಯಿಲ್ಲ. ಐಯರ್ಲೆಂಡು ಒಂದು ರೀತಿಯಿಂದ ಇಂಗ್ಲೆಂಡಿನ ಹಂಗಿನಲ್ಲಿದ್ದು ಅದರ ಸಮೀಪದಲ್ಲೇ ಇರುವುದಾದರೂ ಅದು ಜರ್ಮನಿಯ ವಿರುದ್ಧವಾಗಿ ಬ್ರಿಟನಿಗೆ ಸಹಾಯವಾಗಿ ಯುದ್ಧ ಪ್ರಕಟಮಾಡಿಲ್ಲ. ಆದರೆ ಭಾರತಕ್ಕೆ ಮಾತ್ರ ಅಂತಹ ವಾಕ್‌ಸ್ವಾತಂತ್ರ್ಯವಿಲ್ಲವೆ? ಜನತೆಯ ಪ್ರತಿನಿಧಿಗಳು ಮಂತ್ರಿಮಂಡಳಗಳನ್ನು ನಡೆಸುತ್ತಿದ್ದಾಗ, ಭಾರತವು ವಿದೇಶವೊಂದರೊಡನೆ ಯುದ್ಧಮಾಡುವಂತಹ ಪ್ರಾಮುಖ್ಯ ಪ್ರಶ್ನೆ ಎದ್ದಾಗ ಅವರೊಡನೆ ಒಂದು ಮಾತು ಕೇಳುವುದು ಬೇಡವೆ? ಇಂದಾದರೂ ಕಾಂಗ್ರೆಸು ಮುಂದಾಳುಗಳು, ಭಾರತವು ಯುದ್ಧದಲ್ಲಿ ಸೇರಿಲ್ಲವೆಂದು ಶಾಂತ ಅಹಿಂಸೆಯ ರೀತಿಯಲ್ಲಿ ಪ್ರಚಾರಮಾಡಿದರೆ ಅದು ದೇಶದ್ರೋಹವಾದೀತೆ? ಇವುಗಳಿಗೆಲ್ಲಾ ಆಸ್ಪದ ಕೊಡದೆ, ಭಾರತಕ್ಕೆ ವಾಕ್ ಸ್ವಾತಂತ್ರ್ಯವನ್ನು ಕೊಡದ ವಿಚಾರದಲ್ಲಿ ಮುಂದಿನ ಹೋರಾಟವು ಆಗಲಿದೆ. ಇದುವರೆಗೆ ಬ್ರಿಟನಿನ ಪ್ರತಿನಿಧಿಗಳು ಕಾಂಗ್ರೆಸಿನ ಮುಖಂಡರ ಈ ತೆರದ ಪ್ರಶ್ನೆಗಳಿಗೆ ಗಂಭೀರ ನಕಾರವನ್ನೇ ಕೊಟ್ಟಿದ್ದಾರೆ. ಇಂತಹ ನಕಾರದಿಂದ ಬ್ರಿಟನಿನ ನೈತಿಕ ಶಕ್ತಿಯೇ ಕೆಳಮಟ್ಟಕ್ಕೆ ಬರಬಹುದು. ಒಂದು ದೇಶವನ್ನು ಗುಲಾಮಗಿರಿಯಲ್ಲಿಟ್ಟು ಇನ್ನೊಂದು ದೇಶದಲ್ಲಿ ಸ್ವಾತಂತ್ರ್ಯದ ಕಹಳೆಯನ್ನು ಬಾರಿಸುತ್ತಿರುವುದು ಅಪಹಾಸ್ಯದ ವಿಷಯವು. ಇನ್ನಾದರೂ ಈ ವಿಷಯಗಳನ್ನು ಬ್ರಿಟನಿನ ಮುಂದಾಳುಗಳು ಆಲೋಚಿಸಿ ಮುಂಬರುವ ವಿಷಮತೆಯನ್ನು ತಪ್ಪಿಸುವುದು ಸಾಧ್ಯವಿದೆ. ಎರಡು ದೇಶಗಳಿಗೂ ಹಿತಕರವಾಗಿದೆ.

ಬರ್ಮಾ ದಾರಿಯನ್ನು—

ಈಗ ತಿಂಗಿ ತೆರೆಯುವರೆಂದು ಕೇಳಿ ಸಂತೋಷಗೊಳ್ಳದ ಪ್ರಜಾಪ್ರಭುತ್ವವಾದಿಯು ಇರಲಾರನು. ಈ ಕುರಿತು ಪ್ರತಿಯೊಬ್ಬ ಭಾರತೀಯನೂ ಸಂತುಷ್ಟಿಗೊಂಡಿರುವನೆಂಬ ವಿಷಯವನ್ನು ರಾಷ್ಟ್ರಪತಿ ಅಜಾದರು ಕೊಟ್ಟಿರುವ ಒಂದು ಪ್ರಕಟಣೆಯಲ್ಲಿಯೇ ತಿಳಿಸಿರುವರು. ಮೂರು ತಿಂಗಳ ಹಿಂದೆ, ಚರ್ಚಿಲ್ ಮಂತ್ರಿಮಂಡಲವು ಬರ್ಮಾ ದಾರಿಯನ್ನು ಮುಚ್ಚುವುದರ ಮೂಲಕ ತೋರಿಸಿದ ದೌರ್ಬಲ್ಯವನ್ನು, ಇಂದು ತಿಂಗಿ ತೆರೆಯುವುದಾಗಿ ಮಾಡಿದ ನಿರ್ಧಾರದ ಮೂಲಕ ಸರಿಪಡಿಸಿಕೊಂಡಿದೆಯೆಂದು ರಾಷ್ಟ್ರಪತಿಗಳೇ ಸ್ಪಷ್ಟ ಮಾತಿನಿಂದ ತಿಳಿಸಿರುವರು. ತಮ್ಮ ಕಾರ್ಯವು ಅವಿಚಾರದ್ದಾಯಿತು ಎಂದು ಬ್ರಿಟಿಷ್ ಸರಕಾರವು [illegible] ಆಲೋಚಿಸಿ ಪುನಃ ಈ ನಿರ್ಧಾರಕ್ಕೆ ಬಂದುದರಿಂದ ಕೇವಲ ಚೈನ ಮಾತ್ರವಲ್ಲ, ಜಗತ್ತಿನ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳೆಲ್ಲಾ ಆನಂದಿತವಾಗಿವೆ.

ಚೀನಾ ಜಪಾನುಗಳೊಳಗೆ ಯುದ್ಧವು ಕಳೆದ ಮೂರು ವರ್ಷಗಳಿಂದ ನಡೆಯುತ್ತಿದೆ. ಸ್ವಾತಂತ್ರ್ಯವನ್ನು ಪಡೆದು ತನ್ನ ಕಾಲಲ್ಲಿ ತಾನು ನಿಲ್ಲಲು ಯತ್ನಿಸುತ್ತಿದ್ದ ಚೈನಕ್ಕೆ ಜಪಾನು ಆಕ್ರಮಿಸಿ ಮಾಡಿದ ಅನ್ಯಾಯವನ್ನು ಜಗತ್ತಿನಲ್ಲಿ ಖಂಡಿಸದ ಸ್ವಾತಂತ್ರ್ಯಪ್ರಿಯನಿರಲಾರನು. ಭಾರತವಂತೂ ತನ್ನ ಸ್ಪಷ್ಟವಾದ ಖಂಡನೆಯನ್ನು ಅನೇಕ ಸಲ ಸಾರಿ ತಿಳಿಸಿರುವುದು. ಇಂತಹ ಸಂದರ್ಭದಲ್ಲಿ ಚೈನೀಯರು, ತಮ್ಮ ನಾಡಿನ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಬಹಳ ಸಾಹಸದಿಂದ ಕಾದಾಡಿದರು. ಕುಗ್ಗದ ಉತ್ಸಾಹ ಆವೇಶಗಳಿಂದ ಹೋರಾಡಿದರು. ಚೀನದ ಸಹಾಯಕ್ಕೆ ಯಾವ ಪ್ರಜಾಪ್ರಭುತ್ವವಾದಿಯೆನ್ನುವ ರಾಷ್ಟ್ರವೂ ಬರಲಿಲ್ಲವಾದರೂ, ಅದು ಇನ್ನೂ ಧೈರ್ಯದಿಂದ ಕಾದಾಡುತ್ತದೆ.

ಇಂತಹ ಸಂದರ್ಭದಲ್ಲಿ ಮೊನ್ನೆ ಜುಲಾಯಿ ತಿಂಗಳಲ್ಲಿ ಚರ್ಚಿಲ್ ಮಂತ್ರಿಮಂಡಳವು ಅಧಿಕಾರಕ್ಕೆ ಬಂದ ಮೇಲೆ ಬರ್ಮಾದ ಮೂಲಕ ಚೈನಕ್ಕೆ ಸಾಗುತ್ತಿದ್ದ ಸಹಾಯ ಸಾಮಗ್ರಿಗಳಿಗೆ ತಡೆಯಾಗುವ ಬರ್ಮಾ ದಾರಿಯನ್ನು ಮುಚ್ಚುವ ಕಾರ್ಯವನ್ನು ಕೈಗೊಂಡಿತು. ಜಗತ್ತಿನ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ರಕ್ಷಣೆಗಳಿಗಾಗಿ ಇಂದು ಹೋರಾಡುತ್ತಿರುವೆವೆಂದು ಸಾರುವ ಬ್ರಿಟಿಷರು, ಚೈನದ ಸ್ವಾತಂತ್ರ್ಯಕ್ಕೆ ಈ ಮೂಲಕ ಒಮ್ಮೆ ಪ್ರಬಲವಾದ ಆಘಾತವನ್ನುಂಟುಮಾಡುವ ಕೆಲಸಕ್ಕೆ ಕಾರಣರಾದರು. ಸಾವೇ ಜೀವನ ಮರಣಗಳ ಹೋರಾಟದಲ್ಲಿರುವಾಗ, ಜಪಾನಿನೊಡನೆ ನಾವಿಂದು ಕಲಹವನ್ನು ತಂದುಕೊಳ್ಳಲಿಚ್ಛಿಸುವುದಿಲ್ಲವೆಂಬುದು ಚರ್ಚಿಲ್ಲರ ಆಗಿನ ಸಮಾಧಾನವಾಗಿತ್ತು.

ಆದರೆ, ಇದರಿಂದ ಜಪಾನು ಬ್ರಿಟನಿಗೆ ಮಾತ್ರವಲ್ಲ ಜಗತ್ತಿಗೇ ಒಳ್ಳೆಯ ಪಾಠ ಕಲಿಸಿತು. ಅದು ಇಂಡೋ ಚೈನವನ್ನು ಆಕ್ರಮಿಸಿ ಮುಂದೆ ಬಂದದ್ದು ಮಾತ್ರವಲ್ಲದೆ, ತ್ರಿರಾಷ್ಟ್ರಗಳ ಒಪ್ಪಂದ ಮಾಡಿಕೊಂಡು ಸರ್ವಾಧಿಕಾರಿಗಳ ಸಹಾಯಕ್ಕೆ ನಿಂತಿತು. ಇದರಿಂದ ಬ್ರಿಟನಿನೊಡನೆ ಅಮೇರಿಕಕ್ಕೂ ಆಪತ್ತು ಸನ್ನಿಹಿತವಾದಂತಾಯಿತು. ಈ ಸಂದರ್ಭದಲ್ಲಿ ಚರ್ಚಿಲ್ ಮಂತ್ರಿಮಂಡಳವು ತಾನು ಮಾಡಿದ ಅವಿಚಾರದ ವರ್ತನೆಯನ್ನು ತಿದ್ದಿಕೊಳ್ಳುವಂತೆ ಈಗ ತಿಂಗಿ ಬರ್ಮಾ ದಾರಿಯನ್ನು ತೆರೆಯುವುದಾಗಿ ಸಾರಿದೆ. ಪ್ರಮಾದವನ್ನು ಅರಿತುಕೊಂಡು ಇಂದಾದರೂ ತಿಂಗಿ ಬರ್ಮಾ ರಸ್ತೆಯನ್ನು ತೆರೆಯಲು ಮಾಡಿದ ಬ್ರಿಟನಿನ ನಿರ್ಧಾರವನ್ನು ಸ್ವಾತಂತ್ರ್ಯ ಪ್ರೇಮಿಗಳೆಲ್ಲರೂ ಕೊಂಡಾಡದಿರಲಾರರು.

ಕ್ರಾಂತಿಗೆ ಕಾರಣರಾಗಿರುವ ಕೂಲಿಗಾರರು!

ಇವರ ಸಮಸ್ಯೆಗೆ ಪರಿಹಾರವೇನು?

ಪ್ರಾಚೀನ ಭಾರತದಲ್ಲಿದ್ದ ನಿಯಮಗಳು!

ಪರದೇಶಗಳ ತತ್ವಗಳನ್ನು ನಾವು ಅನುಸರಿಸಬೇಕೆ?

ಕೂಲಿಕಾರ ಸಮಸ್ಯೆಗೆ ಇಂದು ಪ್ರಾಪ್ತವಾಗಿರುವಷ್ಟು ಮಹತ್ವ ಈ ಮೊದಲೆಂದೂ ಪ್ರಾಪ್ತವಾಗಿರಲಿಲ್ಲ. ಇತ್ತೀಚಿನ ರಾಜ್ಯ ಪದ್ಧತಿಗಳಲ್ಲಿ ರಾಷ್ಟ್ರೀಯ ಮತ್ತು ಔದ್ಯೋಗಿಕ ಪುನರ್ಘಟನೆಗಳಲ್ಲಿ ಇದಕ್ಕೆ ಪ್ರಮುಖ ಸ್ಥಾನವು ಸಿಕ್ಕುತ್ತಲಿದೆ. ಸಾವಿರಾರು ವರುಷಗಳಿಂದ ನಡೆದು ಬಂದಿರುವ ರಾಜ್ಯಪದ್ಧತಿ, ಸಾಮಾಜಿಕ ರಚನೆಗಳನ್ನು ಬುಡಮೇಲು ಮಾಡಲು ರಾಜಕಾರಣಿಗಳು ಈ ಸಮಸ್ಯೆಯನ್ನು ಆಯುಧವಾಗಿ ಉಪಯೋಗಿಸಿಕೊಳ್ಳುತ್ತಿರುವರೆಂದು ಕಂಡುಬರಹತ್ತಿದೆ. ಮಹಾಯುದ್ಧದ ನಂತರದ ಸಮತಾವಾದ, ಕ್ರಾಂತಿವಾದಗಳು ಈ ಸಮಸ್ಯೆಯನ್ನು ಮುಂದೆ ಮಾಡಿಕೊಂಡು ಕೂಲಿಕಾರರ ಹಿತವೇ ರಾಷ್ಟ್ರಹಿತವೆಂದು ಹೇಳುತ್ತ ತಮ್ಮ ಗುರಿಗಳನ್ನು ಸಾಧಿಸಲು ಪ್ರಯತ್ನಿಸುತ್ತಿವೆ.

* ಇಂದು ನಡೆದಿರುವಷ್ಟು ದೊಡ್ಡ ಪ್ರಮಾಣದ ಮೇಲೆ ವಿವಿಧ ವಸ್ತುಗಳ ಹುಟ್ಟುವಳಿ ಈ ಮೊದಲು ಜಗತ್ತಿನಲ್ಲಿ ನಡೆದಿರಲಿಲ್ಲ. ಒಂದೇ ವ್ಯಕ್ತಿಯ ಕೆಳಗೆ ಲಕ್ಷಗಟ್ಟಲೆ ಜನರು ಎಂದೂ ದುಡಿದಿರಲಿಲ್ಲ. ಸಾವಿರಾರು ಜನರು ಒಬ್ಬನ ಮೇಲೆ ಅವಲಂಬಿಸುವ ಪ್ರಸಂಗವೂ ಇರಲಿಲ್ಲ. ಕೂಲಿಕಾರರಿಂದ ಆದಷ್ಟು ಹೆಚ್ಚಿನ ದುಡಿತಕೊಂಡು ಅವರಿಗೆ ಶಕ್ಯವಿದ್ದಷ್ಟು ಕಡಿಮೆ ಕೂಲಿ ಕೊಡಬೇಕೆಂಬ ಪ್ರವೃತ್ತಿ ಒಡೆಯರಲ್ಲಿ ಬೆಳೆಯಿತು. ಇದರಿಂದ ಜನಾಂಗದಲ್ಲಿ ದುಡಿಯುವವರು ದುಡಿಸಿಕೊಳ್ಳುವವರು ಎಂಬೆರಡು ಪಂಗಡಗಳಾಗಿವೆ. ಆದರೆ ಇಂದಿಗಿಂತ ಸಣ್ಣ ಪ್ರಮಾಣದ ಮೇಲೆ ಒಡೆಯರು ಕೂಲಿಕಾರರೆಂಬ ಪಂಗಡಗಳು ಸಾವಿರಾರು ವರುಷಗಳಿಂದ ಇದ್ದೇ ಇವೆ. ಕೂಲಿಕಾರರ ರಕ್ಷಣೆ ಅವರ ಸೌಖ್ಯಗಳೇ ರಾಷ್ಟ್ರದ ಸುಖಸಂಪತ್ತುಗಳೆಂಬುದನ್ನು ಹಿಂದಿನ ರಾಜಕಾರಣಿಗಳು ಮುತ್ಸದ್ದಿಗಳು ತಿಳಿದಿದ್ದರು. ಇದಕ್ಕನುಗುಣವಾಗಿ ಒಡೆಯರ ಆಶೆಬುರುಕವೃತ್ತಿ, ಕ್ರೌರ್ಯಗಳಿಂದ ಕೂಲಿಕಾರರ ಹಿತಸಂಬಂಧ, ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ ಅವರನ್ನು ಮತ್ತು ಅದರ ಮುಖಾಂತರ ರಾಷ್ಟ್ರವನ್ನು ಶಾಂತವಾಗಿಡಲು ಯೋಗ್ಯವಾದ ನಿಯಮಗಳು ಅವರಿಂದ ಮಾಡಲ್ಪಟ್ಟಿದ್ದವು.

ಪ್ರಾಚೀನ ಗ್ರಂಥಗಳ ಆಧಾರ

* ಶುಕ್ರಾಚಾರ್ಯರ ಅರ್ಥಶಾಸ್ತ್ರ, ಅಶೋಕನ ಕಲ್ಲಿನ ಕಂಬಗಳಲ್ಲಿಯ ಬರಹಗಳು, ಬುದ್ಧನ ಕಾಲದ ವಿವಿಧ ಆಧಾರ ಗ್ರಂಥಗಳಲ್ಲಿ, ನಾರದ ಬೃಹಸ್ಪತಿ ಇವರ ಗ್ರಂಥಗಳಲ್ಲಿಯೂ ಕೂಲಿಕಾರರ ಪರಿಸ್ಥಿತಿ ಹಾಗು ಅವರ ಕಷ್ಟ ಪರಿಹಾರದ ಬಗ್ಗೆ ವಿವಿಧ ನಿಯಮಾವಳಿಗಳಿದ್ದುದು ಕಂಡು ಬರುವದು. ದೇಶದಲ್ಲಿಯ ಕೂಲಿಕಾರರು ಸಂತುಷ್ಟರಾಗಿರದಿದ್ದರೆ ಆ ದೇಶದ ಏಳ್ಗೆ ಅಸಾಧ್ಯವೆಂದು ಹಿಂದೂ ಧರ್ಮಶಾಸ್ತ್ರಕಾರರು ಮನಗಂಡಿದ್ದರು. ಆದ್ದರಿಂದಲೇ ರಾಜನು ಕೂಲಿಕಾರರ ಕಷ್ಟಪರಿಹಾರದ ಕಡೆಗೆ ವಿಶೇಷವಾದ ಲಕ್ಷ್ಯಕೊಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ವಿಧಿಸಲಾಗಿತ್ತು. ಒಡೆಯರು ಹಾಗೂ ಕೂಲಿಕಾರರಲ್ಲಿ ತಂಟೆ ಉದ್ಭವಿಸಿದರೆ ಸ್ವತಃ ರಾಜನೇ ಎರಡೂ ಪಕ್ಷಗಳ ಹೇಳಿಕೆ ಕೇಳಿಕೊಂಡು ಹಾಗೂ ವಿಶ್ವಾಸಯೋಗ್ಯ ಜನರ ಸಾಕ್ಷ್ಯಗಳನ್ನು ತೆಗೆದುಕೊಂಡು ಯೋಗ್ಯವಾದ ನಿರ್ಣಯ ಕೊಡುತ್ತಿದ್ದನು. ಒಡೆಯ ಕೂಲಿಕಾರರಲ್ಲಿ ಉಂಟಾದ ತಂಟೆಯ ನಿಜವಾದ ಕಾರಣ ತಿಳಿಸುವ ವಿಶ್ವಾಸಿಗರು ಸಿಕ್ಕದಿದ್ದಲ್ಲಿ ಒಡೆಯನನ್ನು ಕರೆಯಿಸಿ ಅವನ ಜವಾಬು ತೆಗೆದುಕೊಳ್ಳಲಾಗುತಿತ್ತೆಂದು ಕೌಟಿಲ್ಯನ ಬರಹಗಳಲ್ಲಿ ಉಲ್ಲೇಖವಿದೆ. ರೈತರು, ಮನೆಗೆಲಸ ಮಾಡುವವರು ಮತ್ತು ವಿವಿಧ ಕೈಗಾರಿಕೆಗಳಿಂದ ಉಪಜೀವನ ಸಾಗಿಸುವವರೆಲ್ಲರಿಗೂ ಕೂಲಿಕಾರ ವರ್ಗವೆಂದು ಹೆಸರಿದ್ದಿತು. ಬೇರೆಬೇರೆ ಉದ್ಯೋಗಗಳಿಗನುಸರಿಸಿ ಉಪವರ್ಗಗಳನ್ನು ಮಾಡಲಾಗಿತ್ತು. ರೈತರು, ಬೆಳೆ ಕೊಯ್ಯುವವರ, ಹಲ್ಲು ಕೊಯ್ಯುವವರ, ನೇಕಾರರ, ಜೇಡರು, ಮನೆಗೆಲಸ ಮಾಡುವವರು ಎಂಬ ವಿವಿಧ ಉಪವರ್ಗಗಳಿದ್ದವು.

ಕೂಲಿಯ ಪ್ರಮಾಣ

ಕೂಲಿಯ ಪ್ರಮಾಣ ಹೇಗಿರಬೇಕು ಎಷ್ಟಿರಬೇಕೆಂಬುದನ್ನು ಅಂದು ಸರಕಾರದವರೇ ನಿರ್ಣಯಿಸುತ್ತಿದ್ದರು. ಈ ರೀತಿ ನಿರ್ಣಯ ಮಾಡುವಾಗ ಕೆಲಸಗಾರರ ಕೌಶಲ್ಯ, ಆ ಕೆಲಸ ಮತ್ತು ಅದರ ದರ್ಜೆ ಮತ್ತು ಆ ಕೆಲಸಮಾಡುವಾಗ ಕೆಲಸಗಾರನಿಗೆ ಅದರ ಬಗ್ಗೆ ಇರುವ ಆಸ್ಥೆ ಮುಂತಾದವುಗಳನ್ನು ಗಣನೆಗೆ ತರಲಾಗುತ್ತಿದ್ದಿತು. ಆದರೆ ಕೂಲಿಕಾರನ ಜೀವನಕ್ಕೆ ಯಾವ ರೀತಿಯಿಂದಲೂ ಕೊರತೆಯಾಗದಂತೆ ನೋಡಿಕೊಳ್ಳಲಾಗುತ್ತಿದ್ದಿತು. * ಒಡೆಯನು ತನ್ನ ಆಳುಗಳ ಅಥವಾ ಕೂಲಿಕಾರರ ಅಪಮಾನ ಮಾಡದೆ, ಯೋಗ್ಯ ಕೂಲಿಕೊಟ್ಟು ಅವರ ಸುಖದುಃಖಗಳ ವಿಚಾರ ಮಾಡುತ್ತಿದ್ದರೆ ಕೂಲಿಕಾರನು ಒಡೆಯನ ವೈರಿಯಾಗದೆ ಅವನಿಗೆ ಜೀವಕ್ಕೆ ಜೀವ ಕೊಡುವ ಮಿತ್ರನಾಗಿ ಪರಿಣಮಿಸುವನು. * ಕೂಲಿಕಾರ ಒಡೆಯರಲ್ಲಿ ಪರಸ್ಪರ ಸೌಹಾರ್ದಭಾವ ವೃದ್ಧಿಯಾಗಿ ಅದರಿಂದ ರಾಷ್ಟ್ರೀಯ ಶಾಂತಿ ಸುಖ ಸಂಪತ್ತುಗಳ ವೃದ್ಧಿಯಾಗುವಲ್ಲಿ ಸಂಶಯವಿಲ್ಲ. ಇವೆಲ್ಲ ಸಂಗತಿಗಳನ್ನೂ ನಮ್ಮ ಶಾಸ್ತ್ರಕಾರರು ವಿಚಾರಿಸಿ ನಿಯಮಗಳನ್ನು ಮಾಡಿದ್ದರು.

* ಕೂಲಿಯಲ್ಲಿ ಶುಕ್ರಾಚಾರ್ಯರು ಮೂರು ದರ್ಜೆಗಳನ್ನು ಮಾಡಿದ್ದಾರೆ. ಉತ್ತಮವೆಂದರೆ ಹೊಟ್ಟೆಗೆ ಬಟ್ಟೆಗೆ ಏನೂ ತೊಂದರೆಯಿಲ್ಲದೆ ಸಾಕಾಗುವಷ್ಟು ಕೂಲಿ ದೊರೆಯುವದು, ಪ್ರಪಂಚಕ್ಕೆ ಸಾಲುವಷ್ಟು ಸಿಕ್ಕರೆ ಅದು ಮಧ್ಯಮ ತರಗತಿಯ ಕೂಲಿ, ಆಹಾರ ಅಥವಾ ವಸ್ತ್ರ ಇವೆರಡರಲ್ಲೊಂದು ಸಿಕ್ಕದೆ ಪರಿತಾಪ ಪಡುವಂತೆ ಕೂಲಿ ಸಿಕ್ಕರೆ ಅದು ಕನಿಷ್ಠ ತರಗತಿಯದು.

ಅಕ್ಕಸಾಲಿಗನು ಬಂಗಾರದ ಆಭರಣ ಮಾಡಿದರೆ ಅದರ ಬೆಲೆಯ ೧।೩೦. ಸಾಧಾರಣ ಕೆಲಸ ಮಾಡಿದರೆ ೧।೬೦ ಕೆಲಸ ನೆಟ್ಟಗೆ ಮಾಡದಿದ್ದರೆ ೧।೧೨೦ ಮತ್ತು ಬೆಳ್ಳಿಯ ಸಾಮಾನುಗಳನ್ನು ಮಾಡಿದರೆ ಬಂಗಾರದ ಆಭರಣಕ್ಕೆ ಸಿಕ್ಕುವ ಕೂಲಿಯ ೧/೨ ಈ ರೀತಿ ಕೂಲಿ ಸಿಕ್ಕುತಿತ್ತು. ಒಕ್ಕಲುತನದಲ್ಲಿ ಸಹಾಯ ಮಾಡುವವನಿಗೆ ಬಂದ ಬೆಳೆಯ ೧।೧೦ ದಷ್ಟು ಕೂಲಿ ಕೊಡಲಾಗುತಿತ್ತು. ಇದರಂತೆ ವ್ಯಾಪಾರ ಮಾಡುವವನು ತಾನು ಮಾಡಿದ ಸರಕಿನ ಬೆಲೆಗನುಸಾರವಾಗಿ ಇದೇ ಪ್ರಮಾಣದಲ್ಲಿ ತನ್ನ ಸಹಾಯಕನಿಗೆ ಕೊಡಬೇಕಾಗುತ್ತಿತ್ತು. ಎಷ್ಟೋ ಸಲ ಕೂಲಿಯನ್ನು ನಾಣ್ಯ ರೂಪದಲ್ಲಿ ಕೊಡಲಾಗುತ್ತಿತ್ತು. ಆದರೆ ವಿವಿಧವಸ್ತುಗಳ ರೂಪದಲ್ಲಿ ಕೂಲಿ ಕೊಡುವ ಪದ್ಧತಿ ಇರಲಿಲ್ಲವೆಂತಲ್ಲ. ಭೂಮಿ, ದನಕರು, ಕಾಳು-ಕಡ್ಡಿ ಮುಂತಾದ ವಿವಿಧ ವಸ್ತುಗಳನ್ನು ಸಹ ಕೂಲಿಕೊಡಲಿಕ್ಕೆ ಉಪಯೋಗಿಸಲಾಗುತ್ತಿತ್ತು.

ದನಗಾರನೊಬ್ಬನು ನೂರು ದನಗಳನ್ನು ಒಂದು ವರ್ಷ ಕಾಯ್ದರೆ ಅವನಿಗೆ ಆ ೬ ದಿನ ಹಾಲನೆಲ್ಲ ಕೊಡುವದಲ್ಲದೆ ಒಂದು ದನವನ್ನೂ ಪ್ರತಿವರ್ಷ ಕೊಡಬೇಕೆಂದು ನಾರದರು ಬರೆದಿದ್ದಾರೆ.

* ಕೂಲಿಗೊತ್ತು ಪಡಿಸುವಾಗ ಒಡೆಯನು ಕೂಲಿಕಾರನ ಮನೆಯ ವೆಚ್ಚವನ್ನು ಯಾವಾಗಲೂ ಗಮನಿಸಿ ಅವನಿಗೆ ಸಾಲುವಷ್ಟು ಕೂಲಿ ಸಿಕ್ಕುವಂತೆ ನೋಡಿಕೊಳ್ಳಬೇಕಾಗಿದ್ದಿತು.

* ಕಾರ್ಯ ಪ್ರಾರಂಭಕ್ಕೆ ಅಥವಾ ಕೆಲಸ ಅಥವಾ ಕನಿಷ್ಠ ಅದು ಮುಗಿದ ಕೂಡಲೇ ಕೂಲಿ ಕೊಡಬೇಕೆಂದು ನಾರದರ ಅಭಿಪ್ರಾಯ.

ಕೂಲಿಯನ್ನು ನಿರ್ದಿಷ್ಟ ಸಮಯದಲ್ಲಿ ಕೊಡದಿದ್ದರೆ ಆ ಕೂಲಿಯ ೫ ಪಾಲಿನಷ್ಟು ದಂಡ ಮಾಡಲಾಗುತ್ತಿದ್ದಿತು. * ಒಡೆಯನಿಂದ ಕೂಲಿಕಾರನಿಗೆ ಬರಬೇಕಾಗಿದ್ದ ಹಣ ಕೊಡಿಸುವದಲ್ಲದೆ ಒಡೆಯನಿಗೆ ಶಿಕ್ಷೆಯನ್ನೂ ವಿಧಿಸಬೇಕೆಂದು ಈ ರೀತಿ ಮಾಡಲು ಅದಾಲತಗಾರರಿಗೆ ಅಧಿಕಾರವಿದೆಯೆಂದೂ ಬೃಹಸ್ಪತಿಯು ಪ್ರತಿಪಾದಿಸಿದ್ದಾನೆ.

ವಿರಾಮ ನಿವೃತ್ತಿ ವೇತನ

* ಒಂದೇ ಸವನೆ ಅನೇಕ ವರ್ಷಗಳವರೆಗೆ ಕೆಲಸ ಮಾಡುವವರಿಗೆ ಪ್ರತಿವರ್ಷ ೧೫ ದಿವಸ ರಜೆ ಸಿಕ್ಕುತ್ತಿತ್ತು. ಇದಲ್ಲದೆ ತನ್ನ ಸಂಬಳದ ೧/೮ದಷ್ಟು ಹಣ ಅವನಿಗೆ ಪ್ರತಿವರ್ಷ ಬಹುಮಾನ ರೂಪದಲ್ಲಿ ಸಿಕ್ಕುತ್ತಿದ್ದಿತು.

ಅನಾರೋಗ್ಯದ ಮೂಲಕ ಕೂಲಿಕಾರನಿಗೆ ಕೆಲಸಕ್ಕೆ ಬರಲಾಗದಿದ್ದರೆ * ಮೊದಲಿನ ೧೫ ದಿನಗಳ ವರೆಗೆ ಪೂರ್ಣವೇತನ ಅನಂತರ ೧/೨ ವೇತನ ಅವನಿಗೆ ಸಿಕ್ಕುತ್ತಿತ್ತು. ಮುಂದೆ ಕೆಲಸಕ್ಕೆ ಬರುವದು ಅಸಾಧ್ಯವಾದರೆ ೫ ವರ್ಷ ಕೆಲಸಮಾಡಿದ ಕೂಲಿಗಾರನಿಗೆ ಮೂರು ತಿಂಗಳ ಸಂಬಳ, ಅದಕ್ಕಿಂತ ಹೆಚ್ಚು ಸಮಯ ಕೆಲಸಮಾಡಿದ್ದರೆ ಆರು ತಿಂಗಳ ಸಂಬಳ ಕೊಟ್ಟು ಕೆಲಸದಿಂದ ದೂರಮಾಡಲಾಗುತ್ತಿದ್ದಿತು. ೪೦ ವರ್ಷಕ್ಕಿಂತ ಹೆಚ್ಚು ಕೆಲಸಮಾಡಿದ್ದರೆ ಅವನಿಗೆ ಒಟ್ಟು ಕೊಡಲ್ಪಟ್ಟ ಕೂಲಿಹಣದ ಅರ್ಧದಷ್ಟು ಹಣವನ್ನು ಅವನು ಕೆಲಸ ಬಿಡುವ ಮುಂದೆ ಕೊಡಲಾಗುತ್ತಿದ್ದಿತು. ಇದಕ್ಕಾಗಿ ಒಡೆಯನು ಒಂದು ನಿಧಿಯನ್ನೇ ಸ್ಥಾಪಿಸಬೇಕಾಗುತ್ತಿದ್ದಿತು. ಕೂಲಿಕಾರನಿಗೆ ಕೊಡಬೇಕಾದ ಹಣದ ೧/೪ ದಷ್ಟು ಹಣವು ಈ ನಿಧಿಯಲ್ಲಿರುತ್ತಿದ್ದಿತು. ಹಣ ಕೊಡುವಾಗ ಒಡೆಯನು ಅದರಷ್ಟೇ ಹಣ ಕೂಡಿಸಿ ಕೂಲಿಕಾರರಿಗೆ ಕೊಡುತ್ತಿದ್ದನು.

ವಾಸಸ್ಥಾನ ಸೌಕರ್ಯ

ಕೂಲಿಕಾರರ ವಸತಿಗಾಗಿ ಮನೆಗಳನ್ನೂ ಕಟ್ಟಲಾಗುತ್ತಿದಿತು. ಮನೆ ಕಟ್ಟುವಾಗ ಕೆಲಸಗಾರರಿಗೆ ಎಲ್ಲ ಸೌಕರ್ಯಗಳು ಸಿಕ್ಕುವಂತೆ ಹಾಗೂ ಅವು ಆರೋಗ್ಯಕರವಾಗಿರುವಂತೆ ನೋಡಿಕೊಳ್ಳಲಾಗುತ್ತಿದ್ದಿತು.

ಹೀಗೆ ಕೂಲಿಕಾರ ಹಿತವರ್ಧನೆಗಾಗಿ ಮಾಡಲ್ಪಟ್ಟಿರುವ ನಿಯಮಗಳೆಲ್ಲವೂ ಸಾವಿರೆರಡು ಸಾವಿರ ವರ್ಷಗಳ ಹಿಂದೆಯೇ ಭಾರತ ದೇಶದಲ್ಲಿದ್ದವೆಂದು ಹೇಳಿದರೆ ಅನೇಕರಿಗೆ ಆಶ್ಚರ್ಯವಾಗದಿರದು *

ಇಂದು ನಡೆದಿರುವ ದೊಡ್ಡ ಪ್ರಮಾಣದ ಉತ್ಪತ್ತಿ ಅಂದು ಇರಲಿಲ್ಲ. ಕಾರಖಾನೆಗಳಿರಲಿಲ್ಲ. ಈಗಿನ ಕಾರಖಾನೆಗಳಲ್ಲಿಯಂತೆ ಸಾವಿರಾರು ಜನರು ಒಂದೆಡೆಗೆ, ಒಬ್ಬನಿಗೆ ಅಧೀನರಾಗಿ ದುಡಿಯುತ್ತಿರಲಿಲ್ಲ. ಇದರಿಂದ ಆ ಸಮಯದಲ್ಲಿದ್ದ ಮತ್ತು ಈಗ ಸದ್ಯಕ್ಕೆ ಇರುವ ಪರಿಸ್ಥಿತಿಗಳಲ್ಲಿ ಅಂತರವಿದ್ದಿತೆಂಬುದು ಸ್ಪಷ್ಟವಾಗುವದು. ಆದರೆ ಪ್ರತ್ಯಕ್ಷ ಅನುಭವದಿಂದ ಸಿದ್ಧಪಡಿಸಲ್ಪಟ್ಟ ನಿಯಮಗಳಲ್ಲಿ ಕೆಲವು ಅವಶ್ಯ ಬದಲಾವಣೆಗಳನ್ನು ಮಾಡಿಕೊಂಡು ಯಾವ ಸಮಯದಲ್ಲಾದರೂ ಅವನ್ನು ಉಪಯೋಗಿಸಿಕೊಳ್ಳಬಹುದು.

ಕೂಲಿಕಾರರೇ ಸಮಾಜದಲ್ಲಿ ದೊಡ್ಡ ವರ್ಗವಾಗಿದ್ದು ಈ ಬಹು ಸಂಖ್ಯಾಕ ಜನರು ಇಂದು ಅನುಭವಿಸುತ್ತಿರುವ ಕಷ್ಟಪರಂಪರೆಗಳಿಂದ ಅವರನ್ನು ಮುಕ್ತ ಮಾಡುವದು ಅತ್ಯವಶ್ಯ. * ಸುಧಾರಣೆ ಮಾಡಬೇಕೆನ್ನುವ ಉಬ್ಬಿನಲ್ಲಿ ಇಲ್ಲಿಯ ಅನೇಕ ಸಂಗತಿಗಳನ್ನು ಮರೆತು ರಶಿಯ ಮುಂತಾದ ಪರದೇಶಗಳನ್ನನುಸರಿಸಬೇಕೆಂಬ ಪ್ರವೃತ್ತಿ ಮೇಲಿನ ಸಂಸ್ಥೆಗಳಲ್ಲಿದ್ದುದು ಕಂಡುಬಂದಿದೆ. ಕೂಲಿಕಾರರ ಕಷ್ಟ ಪರಿಹರಿಸಬೇಕು? ಎಂಬೀ ವಿಷಯಗಳನ್ನು ತಿಳಿದುಕೊಳ್ಳಲಿಚ್ಛಿಸುವವರು ರಶಿಯ ಅಥವಾ ಅಮೇರಿಕೆಗಳಲ್ಲಿಯ ಕೂಲಿಕಾರ ಸಮಸ್ಯೆಯನ್ನೇ ಅಭ್ಯಸಿಸಬೇಕಾಗಿಲ್ಲ * ನಮ್ಮ ಕೂಲಿಕಾರ ಸಮಸ್ಯೆಗೆ ಉತ್ತರ ಹುಡುಕುತ್ತಿರುವವರು ಈ ಮಾರ್ಗ ಹಿಡಿದು ಪ್ರಯತ್ನಿಸಿದರೆ ಹೆಚ್ಚು ಒಳ್ಳೆಯದಾಗದಿರದು.

(—ಕ ವಿ)

ದೀರ್ಘಕಾಲದ ಯುದ್ಧದಲ್ಲಿ—

ಜರ್ಮನಿಗೆ ಜಯದಾಸೆಯಿಲ್ಲ!

ಆರ್ಥಿಕ ಸ್ಥಿತಿಯು ದರಿದ್ರವಾಗುವುದು!

೧೯೧೪ರಲ್ಲಿ ಜರ್ಮನಿಯು ಬ್ರಿಟನಿನ ಮೇಲೆ ಯುದ್ಧಕ್ಕೆ ಹೊರಟಾಗ ಅದು ಕೆಲವೇ ವಾರಗಳಲ್ಲಿ ಬ್ರಿಟನನ್ನು ಮುರಿದು ಹಾಕುವದೆಂದು ಊಹಿಸಿತ್ತು. ಆದರೆ ಯುದ್ಧವು ನಾಲ್ಕು ವರ್ಷಗಳ ತನಕ ನಡೆಯಿತು ಮತ್ತು ಅದರಲ್ಲಿ ಜರ್ಮನು ಬ್ರಿಟನನ್ನು ಸೋಲಿಸುವದರ ಬದಲಿಗೆ, ಬ್ರಿಟನು ಜರ್ಮನಿಯನ್ನು ಸೋಲಿಸಿತು. ಆಧುನಿಕ ಯುದ್ಧಗಳು ಸ್ವಲ್ಪ ಕಾಲಾವಧಿಯೊಳಗೆ ಮುಗಿಯುವುದಿಲ್ಲವೆಂಬುದಕ್ಕೆ ಸ್ಪೈನಿನ ಅಂತಃಕಲಹವು ಒಂದು ದೃಷ್ಟಾಂತವಾಗಿದೆ. ಈಗಿನ ಯುದ್ಧಗಳಲ್ಲಿ ಒಂದು ರಾಷ್ಟ್ರದ ಸೋಲು ಗೆಲವುಗಳು ಕೇವಲ ಅದರ ಯುದ್ಧೋಪಕರಣ ಮತ್ತು ಶಸ್ತ್ರಾಸ್ತ್ರಗಳ ಬಲಾಬಲವನ್ನು ಹೊಂದಿಕೊಂಡಿರುವದಿಲ್ಲ. ಆದ್ದರಿಂದ ಯುದ್ಧವನ್ನು ಬಹುಬೇಗ ಮುಗಿಸಲಿಕ್ಕೆ ಹಿಟ್ಲರನು ಭಗೀರಥ ಪ್ರಯತ್ನವನ್ನು ಮಾಡುತಿದ್ದನಾದರೂ, ಅದು ಹಾಗೆ ಬೇಗ ಮುಗಿಯುವ ಸಂಭವವು ತೋರುವದಿಲ್ಲ.

ದೀರ್ಘಕಾಲದ ಯುದ್ಧ

ಯುದ್ಧವು ದೀರ್ಘಕಾಲ ನಡೆಯುವದಾದರೆ ಒಂದು ರಾಷ್ಟ್ರದ ಸೋಲು ಗೆಲುಗಳು ಅದರ ಸೈನಿಕ ಶಕ್ತಿಯನ್ನು ಅವಲಂಬಿಸಿರುವದಕ್ಕಿಂತಲೂ ಹೆಚ್ಚಾಗಿ ಅದರ ಸಾಂಪತ್ತಿಕ ಸ್ಥಿತಿಯನ್ನು ಹೊಂದಿಇರುತ್ತದೆ. ಅದು ೧೯೧೪–೧೮ರ ಯುದ್ಧದಲ್ಲಿ ಸಿದ್ಧಾಂತವಾಗಿದೆ. ಜರ್ಮನಿಯು ಯುದ್ಧವಾರಂಭವಾಗುವ ಎಷ್ಟೋ ಸಮಯದ ಮೊದಲಿನಿಂದ ಯುದ್ಧಸ್ಥಿತಿಗೆ ಬೇಕಾದ ಆರ್ಥಿಕ ನೀತಿಯನ್ನು ಅವಲಂಬಿಸಿದೆ. ಆದ್ದರಿಂದ ಜರ್ಮನಿಯ ಜನರು ಯುದ್ಧಪ್ರಾರಂಭವಾಗುವ ಅನೇಕ ವರ್ಷಗಳ ಮೊದಲಿನಿಂದ ಯುದ್ಧದ ಕಷ್ಟನಷ್ಟಗಳನ್ನು ಅನುಭವಿಸುತ್ತ ಬಂದಿದ್ದಾರೆ. ಜರ್ಮನಿಯು ಗೋದಿ ಮತ್ತು ಎಣ್ಣೆಯ ಸಂಪಾದನೆಗಾಗಿ ಯೂರೋಪಿನ ಪೂರ್ವ ರಾಷ್ಟ್ರಗಳು ಅನುಸರಿಸಿದ ಧೋರಣೆಯು ನಮ್ಮ ಮಾತಿಗೆ ಸಾಕ್ಷಿಯಾಗಿದೆ.

ಆರ್ಥಿಕ ಯುದ್ಧದ ಸಿದ್ಧತೆ

ದೀರ್ಘಕಾಲ ಆರ್ಥಿಕ ಯುದ್ಧವನ್ನು ಹೂಡಲಿಕ್ಕೆ ೧೯೧೪ರಲ್ಲಿ ಜರ್ಮನಿಯು ಎಷ್ಟು ಸಿದ್ಧವಾಗಿದ್ದಿತೋ, ಈಗ ಅದರ ಸಿದ್ಧತೆಯು ಅದಕ್ಕಿಂತ ಎಷ್ಟೋ ಪಾಲು ಕಡಿಮೆ ಆಗಿರುವದು. ಈಗ ಜರ್ಮನಿಯ ಸಂಪತ್ತು ಕಡಿಮೆ. ಆಹಾರ ಸಾಮಗ್ರಿಗಳನ್ನಾಗಲೀ ಯುದ್ಧ ಸಾಮಗ್ರಿಗಳನ್ನಾಗಲೀ ಬೇಕಾದಷ್ಟು ಪೂರೈಸಿಕೊಳ್ಳುವದು ಅದಕ್ಕೆ ಸಾಧ್ಯವಾಗುವದಿಲ್ಲ. ಆದರ ಹತ್ತಿರ ಚಿನ್ನದ ಸಂಗ್ರಹವಿಲ್ಲ. ಅದು ಮಾರುವದಕ್ಕಿಂತಲೂ ಕೊಳ್ಳುವ ಸಾಮಗ್ರಿಗಳ ಬೆಲೆಯು ಹೆಚ್ಚಾಗಿದೆ. ಜರ್ಮನಿಯ ಹತ್ತಿರ ಚಿನ್ನದ ಸಂಗ್ರಹವು ಬಹಳ ಕಡಿಮೆಯಾಗಿರುವ ಈ ಒಂದು ಕಾರಣದಿಂದಲೇ, ವ್ಯಾಪಾರ ಸಾಪಾರಗಳ ಮೇಲಿನ ನಿರ್ಬಂಧ ಮತ್ತು ಸೈನಿಕ ಸುತ್ತು ಹಾಕುವದಕ್ಕಿಂತಲೂ ಹೆಚ್ಚಾದ ದುಷ್ಪರಿಣಾಮವು ಜರ್ಮನಿಯ ಮೇಲೆ ಕಾಣಿಸಲಿಕ್ಕಿದೆ. ಜರ್ಮನಿಯ ಸೈನಿಕ ಶಕ್ತಿ ೧೯೧೪ರಕ್ಕಿಂತಲೂ ಉತ್ತಮವಾಗಿದೆ. ಆದರೆ ಅದರ ಸಾಂಪತ್ತಿಕ ಸ್ಥಿತಿ ಆಗಿನದಕ್ಕಿಂತಲೂ ಹೆಚ್ಚು ಕೆಟ್ಟಿದೆ. ಕಳೆದ ಬಾರಿ ಯುದ್ಧವಾರಂಭವಾದ ಎರಡು ವರ್ಷಗಳ ಅನಂತರ, ಅಂದರೆ ೧೯೧೬ರಲ್ಲಿ ಜರ್ಮನಿಯು ಶಾಂತ ಪ್ರಜೆಗಳ ಆಹಾರ ಉಪಯೋಗದ ಮೇಲೆ ಆಮಂತ್ರಣವನ್ನಿಟ್ಟಿತು. ಆದರೆ ಈಗ ಅದು ಆ ಆಮಂತ್ರಣವನ್ನು ಯುದ್ಧದ ಆದಿಯಿಂದಲೇ ಪ್ರಾರಂಭಿಸಿದೆ. ಹಿಟ್ಲರನು ಸೈನಿಕ ಬಲದಿಂದ ಎಷ್ಟು ರಾಜ್ಯಗಳನ್ನು ಅಟಕಾಯಿಸಿದ್ದರೂ, ಜರ್ಮನಿಯು ಸಾಂಪತ್ತಿಕ ಸ್ಥಿತಿಯ ದೃಷ್ಟಿಯಿಂದ ಕಳೆಗುಂದಿದೆ.

ಪೆಟ್ರೋಲಿನ ದೃಷ್ಟಾಂತ

ಯುದ್ಧಕಾಲದಲ್ಲಿ ಜರ್ಮನಿಗೆ ವರ್ಷ ಒಂದರ ೨೦ ಮಿಲಿಯ ಟನ್ನುಗಳಿಗೆ ಕಡಿಮೆಯಾಗದಷ್ಟು ಪೆಟ್ರೋಲು ಬೇಕಾಗಿರುವದೆಂದು ಡಾಕ್ಟರ ಫ್ರೀಡನ್ಸಬರ್ಗ ಎಂಬ ಜರ್ಮನ ವಿಜ್ಞಾನಿ ಹೇಳಿದ್ದಾನೆ. ಆದರೆ ಜರ್ಮನಿಯಲ್ಲಿ ವರ್ಷ ಒಂದರ ೩ ಮಿಲಿಯಕ್ಕಿಂತಲೂ ಹೆಚ್ಚಿಗೆ ಪೆಟ್ರೋಲು ತಯ್ಯಾರಾಗುವದಿಲ್ಲ. ಇಟಲಿಯ ಪುರವಟೆಯು ಬಹಳ ಕಡಿಮೆಯಾಗಿದೆ. ರುಮೇನಿಯದಿಂದ ಅದಕ್ಕೆ ಪೆಟ್ರೋಲು ದೊರೆಯುವದಾದರೂ ಅದು ವರ್ಷ ಒಂದರ ೮–೧೦ ಮಿ.ಲಿಯ ಟನ್ನುಗಳಿಗಿಂತ ಹೆಚ್ಚಾಗಿರುವದಿಲ್ಲ. ಆದರೆ ಬ್ರಿಟನಿನ ಸ್ಥಿತಿ ಹೀಗಿಲ್ಲ. ೧೯೧೪ರಕ್ಕಿಂತಲೂ ಈ ಬಾರಿ ಅದರ ಸಿದ್ಧತೆ ಚೆನ್ನಾಗಿ ನಡೆದಿದೆ. ಬ್ರಿಟನ್ನಿನ ಸಾಂಪತ್ತಿಕ ಸ್ಥಿತಿ ಜರ್ಮನಿಗಿಂತ ಹತ್ತಾರು ಪಾಲು ಹೆಚ್ಚಾಗಿ ಇದೆ. ಜಗತ್ತಿನ ಅತ್ಯಂತ ಸಂಪನ್ನ ಮತ್ತು ಸಬಲರಾಷ್ಟ್ರವಾದ ಅಮೇರಿಕದ ಸಹಾನುಭೂತಿಯು ಬ್ರಿಟನಿಗೆ ಇದೆ. ಆದ್ದರಿಂದ ಸಾಂಪತ್ತಿಕ ಬಲವು ಬ್ರಿಟನಿಗೆ ಜರ್ಮನಿಗಿಂತ ಅತಿಶಯವಾಗಿದೆ. ಹಿಟ್ಲರನು ಇದನ್ನು ಚೆನ್ನಾಗಿ ತಿಳಿದಿದ್ದಾನೆ. ದೀರ್ಘಕಾಲದ ಯುದ್ಧದಲ್ಲಿ ಜರ್ಮನರಿಗೆ ವಿಜಯದ ಆಸೆಯೇ ಇರುವದಿಲ್ಲ. ಆದ್ದರಿಂದ ಶೀಘ್ರ ಯುದ್ಧವನ್ನು ಮುಗಿಸುವ ಆತುರವನ್ನು ಅವನು ಬಹಳ ತೋರಿಸುತಿದ್ದಾನೆ. ಜರ್ಮನರ ದೌರ್ಭಾಗ್ಯದಿಂದ ಯುದ್ಧವು ಮಾತ್ರ ದೀರ್ಘಕಾಲದ ತನಕ ನಡೆದೇ ನಡೆಯುವದು.

ಕೆಮ್ಮು, ಶೀತ ಮತ್ತು ಚಳಿಗಳು

ಕೂಡಲೇ ಗುಣವಾಗುವುದು

ತೊಂದರೆ ಕೊಡುವ ಕಫವು, ನಿಮ್ಮ ಕೊರಳನ್ನು ಬೇನೆಗೊಳಿಸುವುದು. ಕಫದಿಂದ ವಾಯುನಾಳವು ಉದ್ರೇಕಗೊಂಡು ಅಪಾಯ ಸಂಭವಿಸಬಹುದು. ಆದ್ದರಿಂದ ಕೂಡಲೇ ಕಫ ನಿವಾರಕವಾದ ಪೆಪ್ಸನ್ನು ತೆಕ್ಕೊಳ್ಳಿರಿ. ಪೆಪ್ಸು ಕೂಡಲೇ ನಿಮ್ಮ ಬಾಯಿಯಲ್ಲಿ ಕರಗುತ್ತವೆ. ಅವರಿಂದ ಔಷಧಿ ರಸವು ಹೊರಡುತ್ತದೆ. ಅದು ಶ್ವಾಸಮಾರ್ಗವಾಗಿ ಹೃದಯಕೋಶಕ್ಕೆ ಒಯ್ಯಲ್ಪಡುವುದು. ಹಾಗೆ ಪೆಪ್ಸು ರೋಗವನ್ನುಂಟುಮಾಡುವ ಕ್ರಿಮಿಗಳನ್ನು ನಿರ್ಮೂಲಗೊಳಿಸುವುದು. ಕಂಠನಾಳವನ್ನು ಶುದ್ಧಗೊಳಿಸುವುದು. ಎದೆಯನ್ನು ವಿಶಾಲಗೊಳಿಸುವುದು. ಕೆಟ್ಟ ಕಫವನ್ನು ಹೊಗಲಾಡಿಸುವುದು

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಬೆಲೆಗೆ ಸಿಗುವುದು.

ಏಜಂಟ್ಸ್—

ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

R E A 662/1940

in

R E P 670 1938

ಕೆ ಪಿ ಕುಮಾರನ್ ನಾಯರ್ ಅರ್ಜಿದಾರ

ಲಕ್ಷ್ಮಿ ಕೂಡಾ ಎದುರು

ಸದ್ರಿ ವ್ಯವಹರಣೆಯ ೨ರಿಂದ ೫ರ ವರೇಗಿನ ಪ್ರತಿವಾದಿಗಳಾದ ಹುಲಿ ಸೋಮಯ್ಯ ಗೌಡನ ಮಕ್ಕಳಾದ ಅರಂತೋಡು ಗ್ರಾಮದಲ್ಲಿ ರುವ ಹುಲಿ ರಾಮಯ್ಯ ಗೌಡ, ಹುಲಿ ಕೃಷ್ಣಪ್ಪ ಗೌಡ, ಹುಲಿ ಯಲಿಯಣ್ಣ ಯಾನೆ ವೆಂಕಪ್ಪ ಗೌಡ, ಹುಲಿ ಅಮ್ಮು ಗೌಡ ಕೂಡಾ ನಾಲ್ಕು ಜನರಿಗೆ ವ ಇತರರಿಗೆ ಕೂಡಾ ಈ ಮೂಲಕ ತಿಳಿಸುವುದೇನ ದರೆ—

ಮೇಲೆ ಕಾಣಿಸಿದ ಅರ್ಜಿದಾರನಾದ ಕೆ ಪಿ ಕುಮಾರನ್ ನಾಯರು R. E P 670/39 ನೇ ಅಮಲ್ದಾರಿಯಲ್ಲಿ ಆದ ಸ್ಥಿರ ಆಸ್ತಿ ಏಲಂ ರದ್ದಾಗದೇ ಬಗ್ಗೆ R. E A 662/1940ನೇ ಅರ್ಜಿಯನ್ನು ದಾಖಲು ಮಾಡಿರುವುದರಿಂದ ಸದ್ರಿ ಅರ್ಜಿಗೆ ಆಕ್ಷೇಪಿಸುವವರು ತಮ್ಮ ಆಕ್ಷೇಪಣೆಯನ್ನು ಖುದ್ದಾಗಲೀ ವ ವಕೀಲರ ಮುಖಾಂತರವಾಗಲೀ ದಾಖಲು ಮಾಡಿ ತಾ. 29–10–'40ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದೆಂದು ಮೇಲೆ ಕಾಣಿಸಿದ ಪ್ರತಿವಾದಿಗಳಾದ ಎದ್ರಿಗಳಿಗೆ ಈ ಮೂಲಕ ತಿಳಿಸಲಾಗುತ್ತದೆ. ಇದಕ್ಕೆ ತಪ್ಪಿದರೆ ಅವರನ್ನು ಬಿಟ್ಟು ಮಾಡಿ ಸದ್ರಿ ವ್ಯವಹರಣೆ ಮುಂದ ರಿಸಲಾಗುವುದು. ತಿಳಿದಿರಲಿ

Puttur, 7-10-'40 } ಕೃಷ್ಣ ನಾರಾಯಣ ಮಲ್ಯ, ಅರ್ಜಿದಾರನ ಕಡೆ ವಕೀಲ್.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

O S No 327 of 1940

ಪರಮೇಶ್ವರಿ ಯಾನೆ ಸೀತಮ್ಮ ದೊಡ್ಡಮನೆ ರಾಮಪ್ಪಯ್ಯನವರ ವಿಧವೆ ಮಂಗಳೂರು ತಾಲೂಕು ಅಡೂರು ಗ್ರಾಮದ ಕೋಡಿಬೆಟ್ಟುಯೆಂಬಲ್ಲಿರುವವರು ಗುರುಪುರ ಪೋಸ್ಟು } ವಾದಿ

ಮತ್ತು

1 ಕೆ ದೇಜು ಶೆಟ್ಟಿ ದೂಮಣ್ಣ ಶೆಟ್ರಿ ಅವರ ಮಗ ಪಟೇಲ್ ಕಾರ್ಕಳ ತಾಲೂಕು ಕಡಂದಲೆ ಗ್ರಾಮದ ಕಡಂದಲೆ ಗುತ್ತಿನಲ್ಲಿರುವವ
2 ನಾರಾಯಣ ಭಟ್ಟ ಸಲಗುಳಿ ನಾಗಪ್ಪ ಭಟ್ರ ಮಗ ಕಾರ್ಕಳ ತಾಲೂಕು ಕಡಂದಲೆ ಗ್ರಾಮಸ್ಥ
3 ಶಂಕರನಾರಾಯಣಭಟ್ಟ ಮುನ್ನೂಡು ತಿಮ್ಮಪ್ಪಯ್ಯ ಭಟ್ರ ಮಗ ಮಂಗಳೂರು ತಾಲೂಕು ಪಣಂಬೂರು ಗ್ರಾಮಸ್ಥ
4 ಯಸ್ ಕೃಷ್ಣಯ್ಯ ಶರ್ಮಾದಿ ಮಾಬಲಯ್ಯನವರ ಮಗ The Bombay Steam Navigation ಕಂಪೆನಿಯಲ್ಲಿ ಕ್ಲಾರ್ಕ ಮಂಗಳೂರು ಟೌನು ಮಣ್ಣಗುಡ್ಡೆಯಲ್ಲಿರುವವರು.
5 ಸುಬ್ಬರಾವ್
6 ಗೋಪಾಲಕೃಷ್ಣ } ಬಗ್ಗತಿ ಕಾರಿಂಗುತ್ತು ರಾಮರಾಯರ ಮಕ್ಕಳು ಮಂಗಳೂರು ತಾಲ್ಲೂ ಪಣಂಬೂರು ಗ್ರಾಮಸ್ಥರು
} ಪ್ರತಿವಾದಿಗಳು

ಇವರೊಳಗೆ

ಮೇಲಿನ ದಾವೆಯಲ್ಲಿ ವಾದಿಯು ಆಕೆಗೆ ಸಲ್ಲತಕ್ಕ ಗತ ಅಳಸಾರ್ಥದ ಬಗ್ಗೆ ಪ್ರತಿವಾದಿಯ ಮೇಲೆ ಪ್ಲೈಂಟು ಆಸ್ತಿ ಆಧಾರದಿಂದ ರೂಪಾಯಿ 980–13–4 ಕೇಳಿ ದಾವೆ ಮಾಡಿರುತ್ತಾಳೆ. ಸದ್ರಿ ದಾವೆಯ 2 ಮತ್ತು 3ನೇ ಪ್ರತಿವಾದಿಗೆ ನೋಟೀಸು ಬಗ್ಗೆ ತಾರೀಖು 31–10–1940ಕ್ಕೆ ಇಟ್ಟಿರುತ್ತದೆ. ಆ ದಿವಸ ಸದ್ರಿಯವರು ಬೆಳಿಗ್ಗೆ 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸದಿದ್ದರೆ ಸದ್ರಿಯವರನ್ನು ಬಿಟ್ಟು ಮಾಡಿ ದಾವಾ ತೀರ್ಮಾನಮಾಡಲಾಗುವುದು. ತಿಳಿದಿರಲಿ.

ಕೋರ್ಟು ಹುಕುಂ ಪ್ರಕಾರ

I. S. Rao,
Advocate

ಈ ವಾರದ ಕಥೆ:

ಮಗನ ಪತ್ರಗಳು...

(ಪ್ರಮೋದ ಕುಮಾರ)

ಅಮ್ಮಾ,

ನೀನು ಸಮಾಧಾನಚಿತ್ತದಿಂದ ತುಂಬಾ ಸಹನೆಯಿಂದ ಕೇಳುತ್ತೀಯಾದರೆ ಈ ಪತ್ರವನ್ನು ಓದಿ ವಿಷಯವನ್ನು ತಿಳಿದುಕೊಳ್ಳಬೇಕು. ನಾನು ತಂದೆಯವರೊಡನೆ ಸುಖವಾಗಿದ್ದೇನೆ. ಆದರೊಂದಿಗೆ ಸುಖ ಎಂದರೆ ಏನು, ದುಃಖ ಎಂದರೆ ಏನೆಂದು ಸ್ವಲ್ಪ ಸ್ವಲ್ಪ ಅನುಭವವಾಗುತ್ತ ಬರುತ್ತದೆ. ನಿನ್ನ ಚಿಕ್ಕಂದಿನ ಕಥೆಯನ್ನು ನೀನೇ ಒಂದೆರಡು ಬಾರಿ ನನಗೆ ಹೇಳಿರುತ್ತಿ. ನನ್ನ ತಂದೆಯು ಆಗಿನ ಸ್ಥಿತಿಗಳನ್ನು ನೀನು ಬಣ್ಣಿಸಿದ್ದಿ. ಅವರ ಗುಣಗಳನ್ನು ಆಗಾಗ ಹೊಗಳುತಿದ್ದಿ. ಸುಮ್ಮನೆ ಕೆಲಸವಿಲ್ಲದೆ ಸಂತೆಗೆ ಹೋಗುವ ನಾಯಿಗಳಂತೆ ತಿರುಗುವ ಬದಲು ಈ ಕೆಲಸಕ್ಕೆ ಮನಸ್ಸು ಮಾಡಿದ್ದಾರೆಂದು ನನಗೆ ಗೊತ್ತು. ತನ್ನಡಿಯಲ್ಲಿ ನಿಂತು ಕರಕನ್ನ ಉಂಡರೂ ಮೃಷ್ಟಾನ್ನ. ಆದರೆ ಗುಲಾಮನ ಸಿರಿತನವು ಬೇಡ. ನೀನು ಬರುವಾಗ ನಿನ್ನಪ್ಪನ ಮನೆಯಿಂದ ತಂದುದೇ ಸಾಕಾಗಬಹುದಿತ್ತು. ಅದರಿಂದಲೇ ಏನಾದರೂ ತನ್ನ ಪಾಡನ್ನರಿವ ದಾರಿ ನೋಡಬಹುದಿತ್ತು. ಇವತ್ತು ಅವರು ಪಡುವ ಕಷ್ಟನೋಡಿದರೆ ನಾಯಿ ತಿಳಿ ಕುಡಿಯಲಿಕ್ಕಿಲ್ಲ. ತಂದೆ ಮನೆಗೆ ಬಂದರೆ 'ನಮ್ಮ ಧನಿ ಹೀಗೆ' ಎಂದು ಅವರೊಬ್ಬ ದೈವೀಸ್ವರೂಪರೆಂಬಂತೆ ಹೊಗಳುತ್ತ ಅವರ ಧ್ಯಾನದ ಸಹಸ್ರನಾಮವನ್ನೇ ಹೇಳುತಿದ್ದರು. ಅಂತ ಧನಿಯ ಅವಸ್ಥೆ, ನಮ್ಮ ತಂದೆಯ ಗತಿ ನೋಡಿದರೆ ನನ್ನ ಕಣ್ಣುಗಳಿಂದ ಕಂಬನಿಯನ್ನು ತಡೆಯಲು ಕಷ್ಟವಾಗುತ್ತದೆ.

ಮೊನ್ನೆ ನಾನು ರಜೆಗೆ ಊರಿಗೆ ಬಂದಿದ್ದೆನಲ್ಲಾ? ಆಗ ರಾಯರು ಬೇಕಾದಂತೆ ಸರಾಯಿಯಲ್ಲಿ ಮಿಂದುಕೊಂಡು ಮತಿಗೆಟ್ಟ ಯಾವುದೋ ಒಬ್ಬ ಸಾಧ್ವಿಯ ಹೆಸರನ್ನೆತ್ತಿ ಅವಳನ್ನು ನನಗೆ ಮಾಡಿಕೊಡು ಎಂದು ಹೇಳಿದರಂತೆ. ತಂದೆ 'ನನ್ನಿಂದಾಗದು' ಎಂದುಬಿಟ್ಟರಂತೆ. ಆ ಕೋಪದಿಂದ 'ನಿನಗೊಬ್ಬ ಹೆಂಗಸನ್ನು ಮಾತಾಡಿಸಲು ಬಾರದಿದ್ದರೆ ಇನ್ನು ಬೇರೆ ಏನು ಆದೀತು ನಿನ್ನಿಂದ?' ಇದಾಗದಿದ್ದರೆ ನಿನ್ನ ಹೆಂಡತಿಯನ್ನಾದರೂ ತಂದುಕೊಡು—ಗುಲಾಮ? ಎಂದೆಲ್ಲಾ ಕೂಗಿದರಂತೆ. ಇದು ನಾನು ನರಸೀಪುರದಿಂದ ಬಂದಾಗ ರಾಯರ ಡ್ರೈವರ್ ಹೇಳಿದ. ಸುತ್ತೂ ಏನೇನೋ ಹೇಳಿದ್ದರು ಎಂದ; ನಾನು ಕೇಳಿದರೆ ಅವನು ಹೇಳುವುದಿಲ್ಲ. ಈಗ ಎರಡು ದಿನಗಳ ಮೊದಲು ಹೀಗೆ ನಡೆಯಿತು; ನಾನು ಶಾಲೆಗೆ ಹೋಗುವಾಗ ಕೆಲವು ಗೆಳೆಯರೂ ಸಂಗಡ ಇದ್ದರು. ಅವರೆಲ್ಲ ಚಂದ ಚಂದ ಅಂಗಿಗಳನ್ನು ತೊಟ್ಟುಕೊಂಡಿದ್ದರು. ನಾನು ನೀನು ಮೊನ್ನೆ ಹೊಲಿಸಿಕೊಟ್ಟ ಹೊಸ ಅಂಗಿಯನ್ನೂ ಪಾಯಿಜಾಮೆಯನ್ನೂ ಹಾಕಿಕೊಂಡಿದ್ದೆ. ಶಾಲೆಗೆ ಹೋಗುವಾಗ ರಾಯರ ಮನೆದಾಟಿ ಹೋಗಬೇಕಾಗಿತ್ತು. ರಾಯರ ಹೆಂಡತಿ ಮಾರ್ಗದ ಕರೆಗೆ ನಿಂತು ನಮ್ಮನ್ನು ನೋಡಿದರು. ಎಂದಿನಂತೆ ನಾನು ಅವರ ಮುಖ ನೋಡಿದಂತೆ ನಗುಗೊಂಡೆನು.

ಆದರೆ ಅವರು ನನ್ನ ಮುಖವನ್ನೊಂದಿಷ್ಟು ನೋಡಿದರಲ್ಲದೆ ನಗಲಿಲ್ಲ. ಅವರ ಮನಸ್ಸು ಆಗ ಸ್ವಲ್ಪ ವಿಪರೀತ ಸ್ಥಿತಿಯಲ್ಲಿದ್ದಿರಬಹುದೆಂದು ನನಗೆ ಗೊತ್ತಾಯಿತು. ನಾನು ನೆಟ್ಟನೆ ಶಾಲೆಗೆ ಹೋದೆ. ಸಂಜೆ ಶಾಲೆ ಬಿಟ್ಟು ಹೋಟಲಿಗೆ ಬರುವಾಗ ರಾಯರು ಕಾರಿನಲ್ಲಿ ಕೋರ್ಟಿನಿಂದ ಬರುತ್ತಿದ್ದರು. ಅವರು ಹಾಗೇ ನನ್ನನ್ನು ನೋಡಿದರು. ನನಗೇನೂ ಇದೊಂದೂ ಅರ್ಥವಾಗಲಿಲ್ಲ. ಆ ದಿನ ಸುಮಾರು ೭ ಗಂಟೆಗೆ ತಂದೆಯವರು ಅವರ ಕಚೇರಿಗೆ ಹೋದರಂತೆ. 'ಹೊರಗೆ ನಿಲ್ಲು' ಎಂದು ಭರವಿನಲ್ಲಿ ಹೇಳಿದರಂತೆ. ಒಂದೂ ಗೊತ್ತಿಲ್ಲದೆ ತಂದೆ ಮೇಲೆ ಕೆಳಗೆ ನೋಡಿದರಂತೆ. ಏನೆಂದು ವಿಚಾರ ಮಾಡಲು ಅವಕಾಶವಿರಲಿಲ್ಲ. 'ನಾಳೆ ನನಗೆ ಅಗತ್ಯ ೬೦ ರೂಪಾಯಿ ಬೇಕು. ಇಲ್ಲದೆ ಉಪಾಯವಿಲ್ಲ. ಮರ್ಯಾದೆ ಹೋಗುವ ಕಾಲ ಬಂದಿದೆ, ನಿನ್ನಿಂದಾಗಿ ನನ್ನ ಮಾನ ಹೋಯಿತು' ಎಂದು ಏನೇನೋ ಬುಸುಗುಟ್ಟುತ್ತಲಿದ್ದರು. ತಂದೆ ಆ ಮೇಲೆ ಮನೆಗೆ ಬಂದರು. ಅವರ ಮುಖ ಆಗ ನೋಡಬೇಕಿತ್ತು! ಮಾಡುವುದೇನು? ನರಸೀಪುರವಾಗುತ್ತಿದ್ದರೆ ಮಾವನಿಗೆ ಈ ವರ್ತಮಾನ ಗೊತ್ತಾದರೆ ರಾಯರ ವಂಶ ಇರಲಾರದು! ಕೂಡಲೇ ರಾಯರಿಂದ ಒಬ್ಬರ ಹಿಂದೆ ಒಬ್ಬರು ಹೀಗೆ ನಾಲ್ಕು ಜನ ಬಂದರು ತಂದೆಯನ್ನು ಕರೆದು ಕೊಂಡೊಯ್ಯಲಿಕ್ಕೆ. ತಂದೆ ಹೋದರು. ಅವರನ್ನು ಒಳಗೆ ಕರೆದು—ನನಗೆ ಹೇಳುವುದಕ್ಕೆ ಬೇಸರವೂ ಬರುತ್ತದೆ ವಿಷಾದವೂ ಉಂಟಾಗುತ್ತದೆ – ತಂದೆಗೆ ಮೆಟ್ಟಿನಿಂದ ಸರಿಯಾಗಿ ಏಟುಕೊಟ್ಟು ಸಾಕ್ಷಿಗಾರರ ಹಣ ತಿಂದು ಹಾಕಿದೆಯೆಂದು ಅರಚಿದರಂತೆ. ತಂದೆ ಉದ್ಯೋಗ ಮಾಡುವುದಲ್ಲ. ನರಕದ ದಾರಿಹಿಡಿದದ್ದು! ಹೇಗೂ ಬಂದವರೇ ನನ್ನೆದುರಿಗೆ ಈ ಮಾತು ತೋಡಿದರು. ಅವರಳುವಾಗ ನಾನೂ ಅತ್ತುಬಿಟ್ಟೆ. ನಾನು ನೆನೆಸದ ಅಪವಾದ ಹೊರಿಸಿದರಲ್ಲಾ ಎಂದು ಗೋಳಿಟ್ಟರು. ಅವರಿಗೊಂದು ದಿನವಾದರೆ ದೇವರಿಗೊಂದು ದಿನ ಎಂದು ಕಣ್ಣೀರ್ಗರೆದರು. ನಾನು ಹುಟ್ಟಿದ ಮೇಲೆ ಹೀಗೆ ಅವರು ಅತ್ತದ್ದನ್ನು ಈವರೆಗೆ ಕಂಡಿದ್ದಿಲ್ಲ. ಆ ದಿನ ನಮ್ಮಿಬ್ಬರಿಗೂ ನಿದ್ದೆಯಿಲ್ಲ. ರಾತ್ರಿ ಮಲಗುವಾಗ 'ಅಮ್ಮನಿಗೆ ಹೇಳಬೇಡ' ಎಂದು ಒಂದು ಹತ್ತಾರು ಬಾರಿ ಹೇಳಿದರು. ಇಲ್ಲ ಎಂದೇ ಹೇಳಿದೆ. ರಾತ್ರಿಯಿಡೀ ಅವರನ್ನು ಕಾಯ್ದುಕೊಂಡಿದ್ದೆ. ಅವರ ದುಃಖ ಮೇರೆ ಮೀರಬಾರದೆಂದು ಬಹಳ ಜಾಗರೂಕತೆಯಿಂದ ಇದ್ದೆ. ಹುಟ್ಟಿದ ಮೇಲೆ ಇಷ್ಟೊಂದು ಹಾರ್ದಿಕವಾಗಿ ನಾನೂ ಅಳಲಿಲ್ಲ. ನನ್ನ ದೊಡ್ಡಪ್ಪ ತೀರಿಕೊಂಡರು, ಆಗ ಹೀಗೆ ಅಳು ಬರಲಿಲ್ಲ; ಮಾವ ತೀರಿಕೊಂಡರು ಆಗ ಇಷ್ಟು ದುಃಖ ಬರಲಿಲ್ಲ. ಅಕ್ಕ ಅಕಾಲ ಮೃತ್ಯುವಿಗೆ ಸಿಕ್ಕಳು: ಆಗ ಇಷ್ಟು ಮನೋವೇದನೆಯುಂಟಾಗಲಿಲ್ಲ. ಅತ್ತೆನೆಂದುದರಿಂದ ನನ್ನ ಮಾತು ತೀರಲಿಲ್ಲ. ನೀನೂ ಅತ್ತರೆ ಆ ಕಣ್ಣೀರಿನ ಧಾರೆಯಂತೆ ಈ ರಾಯರೆದೆಯ ಬೆಂಡು ಒಡೆಯಬಾರದೇಕೆ? ಎಂದು ನನ್ನೆದೆಯು ಬಿಸಿಯುಸಿರು ಹೇಳುವುದು. ಬಿಸಿ ರಕ್ತವೊಮ್ಮೆ ಕುದಿದಂತೆ, ಎಳೆತನದ ಆವೇಶವಾನೆ?—ಮುಂದಿನ ಮಾತು ಬಂದು ಎದೆ ತಣಿವುದು.

ಇವತ್ತು ಬೆಳಗ್ಗೆ ನಾನು ಶಾಲೆಗೆ ಹೋಗುವಾಗ ರಾಯರ ಹೆಂಡತಿ ಕರೆದರು. ನಾನು ಹೋಗಲಿಚ್ಛೆಯಿಲ್ಲದವನಾದರೂ ಹೋದೆ. 'ಬಹಳ ಶೋಕಾಗಿದ್ದೀಯಲ್ಲಾ?' ಎಂದರು. ನನಗೆ ಏನೇನೋ ವಿಚಾರ ಬಂತು. 'ಇದ್ಯಾರು ನಿನಗೆ ಕನ್ನಡಕ ತೆಗೆದುಕೊಟ್ಟವರು?' ಎಂದು ಕೇಳಿದರು. 'ತಾಯಿ' ಎಂದು ಹೇಳಿದೆ. 'ನೀನು ಕ್ರಾಪ್ ಮಾಡಿ ಬಹಳ ಚಂದ ಆಗಿದ್ದಿ' ಎಂದರು. 'ಹೌದು' ಎಂದೆ. ಅಷ್ಟರಲ್ಲಿ ಹೊತ್ತಾಯಿತೆಂದು ತಪ್ಪಿಸಿ ಬಂದೆ.

ಹೇಗಮ್ಮಾ! ಇದು ಜೀವನ. ಅಪ್ಪನಿಗೆ ಇಲ್ಲಿದುಬೇಡ, ಈ ನೌಕರಿ ಎಂದು ಹೇಳಿದೆ. 'ಮತ್ತೇನು? ಕುಳಿತು ತಿನ್ನುವುದೇ?' ಅಂತಾರೆ. ಮತ್ತೂ ಆ ರಾಕ್ಷಸನ ಆಶ್ರಯ ಬಿಡಲೊಲ್ಲರು. ಕೈಕೆಲಸದವನೆಂದರೆ ಏಸಿಷ್ಟೊಂದು ಕೀಳು ಭಾವನೆ? ಬೇಗನೆ ಬರಿ. ತಂದೆಗೆ ಬಿಟ್ಟು ಬಂದುಬಿಡೆಂದು ಹೇಳಿ ಅಗತ್ಯ ನೀನು ಬರೆಯಬೇಕು. ನನಗೂ ಸಾಕಾಯಿತು.

ನಿನ್ನ ಮಗ, ರಾಧಾಕೃಷ್ಣ

೨

ಅಮ್ಮಾ,

ಹೀಗೆ ಎಷ್ಟು ದಿನ ಇರೋಣ? ಅಪ್ಪನ ಈ ಕಷ್ಟ ನೋಡಿದರೆ ಕರುಳು ಕತ್ತರಿಸಿ ಬರುತ್ತದೆ. ಹೀಗೆ ಇನ್ನೂ ಭಗ್ನವಾದರೆ ರಾಯರು ಏನು ಮಾಡಿಯಾರು. ನನಗೆ ಒಂದೊಂದು ವೇಳೆ ಊರುಬಿಟ್ಟು ಎಲ್ಲಿಗಾದರೂ ಹೋಗೋಣ ಅನ್ನಿಸುತ್ತದೆ. ನೀನು ಅಪ್ಪನಿಗೆ ಬರೆದ ಕಾಗದ ಓದಿದೆ. ಊರಿಗೆ ಬಾ ಎಂದೇನೂ ಬರೆಯಲಿಲ್ಲ! ನಿನ್ನ ಹೃದಯವಾದರೂ ಎಂಥದ್ದು? ನನಗೆ ಇಲ್ಲಿ ನಿಲ್ಲಲು ಮನಸ್ಸಿಲ್ಲ. ಅಲ್ಲಿಯೇ ಶಾಲೆಗೆ ಹೋಗಿಕೊಂಡು ಇರುತ್ತೇನೆ. ನನಗೆ ಇಲ್ಲಿ ಶಾಲೆಗೆ ಹೋಗುವುದಕ್ಕೂ ನಾಚಿಗೆಯಾಗುತ್ತಿದೆ. ವಸಂತ ಕುಮಾರರು ಇಲ್ಲಿಯ ಎಕ್ಸೈಸ್ ಇನ್ಸ್ಪೆಕ್ಟರ್: ಅವರು ರಾಯರ ಆಪ್ತ ಸ್ನೇಹಿತರು. ಅವರ ಒಬ್ಬ ಮಗಳು ಮತ್ತು ಮಗ ಹೀಗೆ ಇಬ್ಬರು ನಮ್ಮ ಶಾಲೆಗೆ ಬರುತ್ತಾರೆ. ಇಬ್ಬರೂ ನನ್ನ ತರಗತಿಯಲ್ಲಿಯೇ ಓದುತಿದ್ದಾರೆ. ಮೊನ್ನೆ ಏನೋ ಅವರ ಮಗ ನನ್ನೊಡನೆ ರಾಯರು ಹೊಡೆದ ವಿಚಾರ ಕೇಳಿದ. ನನಗೆ ಸಿಡಿಲು ಬಡಿದಂತಾಯಿತು. ಅವನು ಒಳ್ಳೆಯ ಹುಡುಗ—'ನಿನಗೆ ನೋವು ಮಾಡಬೇಕೆಂದು ಕೇಳಲಿಲ್ಲ ರಾಧಾಕೃಷ್ಣ. ರಾಯರ ದುಷ್ಟತನವನ್ನಷ್ಟೆ ಮಾತನಾಡಿದೆ. ನನ್ನ ತಂದೆ ಅವರಿಗೆ ಸ್ವಲ್ಪ ನಗದು ಹಣ ಕೊಟ್ಟಿದ್ದಾರೆ. ಮತ್ತು ನನ್ನ ತಂಗಿ

[೧೧ನೆಯ ಪುಟವನ್ನು ನೋಡಿರಿ]

THE

BANK OF MANGALORE LTD.,

MANGALORE.

ESTD 1931

Branches:-

Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted

ಹಿಟ್ಲರನನ್ನೂ

ಹೆದರಿಸುವ ಉಗ್ರ ಮೂರ್ತಿ!

ಡಾ। ಒಟ್ಟೊ ಸ್ಟ್ರಾಸರನ ನಾಜೀ ವಿರೋಧ!
ತಲೆಮರೆಸಿಕೊಂಡು ವಿದೇಶಗಳಲ್ಲಿ ಪರ್ಯಟನ!
ಜರ್ಮನಿಯ ಭವಿಷ್ಯತ್ತು ಸ್ಟ್ರಾಸರನ ಕೈಯ್ಯಲ್ಲಿದೆಯೆ?

ಲೋಕದಲ್ಲಿ ಯಾರಿಗೂ ಹೆದರದ ಪ್ರಚಂಡನೆನಿಸಿದ್ದಾನೆ ಹಿಟ್ಲರ್! ಆದರೆ ಆತನೂ ಒಬ್ಬನಿಗೆ ಅಂಜುತ್ತಿರುವನೆಂದರೆ, ಅದು ಬಹಳ ಕುತೂಹಲದ ಸುದ್ದಿಯಲ್ಲವೆ? ಹಿಟ್ಲರನನ್ನು ಹೆದರಿಸಿ ಆತನ ಜೀವಕ್ಕೆ ಅಪಾಯರೆನಿಸಿ ಬದುಕಿಕೊಂಡವರು ಜರ್ಮನಿಯಲ್ಲಿಲ್ಲ. ಯಾವಾಗಲೂ ಅವರ ಜೀವವು ಗೆಸ್ಟಪೋದಳದವರ ಉಗ್ರ ನಿರೀಕ್ಷೆಗೊಳಗಾಗುವುದು. ಹೀಗೆ ಅನೇಕರು, ಮೊದಲು ಹಿಟ್ಲರನ ಗೆಳೆಯರೇ ಆಗಿದ್ದವರು, ಮತ್ತೆ ಗೆಸ್ಟಪೋ ದಳದ ಖಡ್ಗದ ಬಾಯಿಗೆ ಬಲಿಯಾದರು. ಆದರೆ ಡಾ। ಒಟ್ಟೊ ಸ್ಟ್ರಾಸರನು ಮಾತ್ರ ಆತನ ಹಿಡಿತದಿಂದ ತಪ್ಪಿಸಿ ತಲೆ ಮರೆಸಿಕೊಂಡು ಹಿಟ್ಲರನಿಗೆ ಎಂದೆಂದೂ ಹೆದರಿಕೆ ಹುಟ್ಟಿಸುವವನಾಗಿ ಉಳಿದಿದ್ದಾನೆ!

ಡಾ. ಒಟ್ಟೋ ಸ್ಟ್ರಾಸರನು ಅಸಾಮಾನ್ಯ ವ್ಯಕ್ತಿ! ಹಿಟ್ಲರನ ಅವಸ್ಥೆಯು ಕೊನೆಗೊಂಡಾಗ, ಮುಂದೆ ಜರ್ಮನಿಯ ಅದೃಷ್ಟವನ್ನು ನಿರ್ಮಿಸುವ, ನಡೆಸುವ ಯೋಗ್ಯತೆ ಡಾ. ಒಟ್ಟೋವಿನ ಕೈಗೆ ಬರಬಹುದೆಂದು ಹಲವರು ನಂಬಿದ್ದಾರೆ; ಆದಕಾರಣ ಆತನ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಳ್ಳುವುದು ಅವಶ್ಯವಾಗಿದೆ.

ಕಳೆದ ಮಹಾಯುದ್ಧದಲ್ಲಿ

ಕಳೆದ ೧೯೧೪ರ ಮಹಾಯುದ್ಧದಲ್ಲಿ ಡಾ. ಒಟ್ಟೋವನು ಸೈನಿಕರ ದಳದಲ್ಲಿ ಮುಂದಾಳುವಾಗಿ ಕಾದಾಡಿದ್ದ. ಅವನು ತೋರಿಸಿದ ಧೀರತೆಗಾಗಿ ಅವನಿಗೆ ಅಯರ್ನ್ ಕ್ರಾಸ್ ಫಸ್ಟ್‌ಕ್ಲಾಸ್ ಬಹುಮಾನವೂ ಕೊಡಲ್ಪಟ್ಟಿತು. ಅದೇ ವರ್ಷದ ಶಾಂತಿ ಕಾಲದಲ್ಲಿ ಡಾ. ಒಟ್ಟೋವನು ತನ್ನ ಗಾಯಗಳಿಂದ ಗುಣಹೊಂದಿದನು. ಬೋಲ್ಷೆವಿಕರು ಆಗ ತಲೆಯೆತ್ತುತ್ತಿರುವುದನ್ನು ಕಂಡನು.

ಹೃದಯದಲ್ಲಿ ಒಬ್ಬ ಸಮತಾವಾದಿಯಾಗಿದ್ದು ಸರ್ವಾಧಿಕಾರಿಗಳ ತುತ್ತಿನಿಂದ ತನ್ನ ರಾಷ್ಟ್ರವನ್ನು ಕಾಪಾಡಬೇಕೆಂಬ ಹೊಸ ಹುಮ್ಮಸಿನಿಂದ, ಒಟ್ಟೋವನು ತನ್ನ ಸಹೋದರ ಗ್ರೆಗರನು ಕೂಡಿಸಿದ ಸ್ವಯಂಸೇವಕ ದಳದೊಡನೆ, ಸೇರಿ ಇತಿಹಾಸ ಪ್ರಸಿದ್ಧವಾದ 'ರೆಡ್ ಮುನಿಕ್' ದಂಗೆಯನ್ನು ಮುನ್ನಡೆಸಿದನು. ಎರಡೇ ದಿನಗಳಲ್ಲಿ ಆ ನಗರವನ್ನು ಸ್ವಾಧೀನಪಡಿಸಿಕೊಂಡು ಬೋಲ್ಷೆವಿಸಮಿಗೆ ಪ್ರಾರಂಭದಲ್ಲಿಯೇ ಪ್ರಬಲ ತಡೆಯನ್ನುಂಟುಮಾಡಿ ಒಮ್ಮೆಗೆ ರಾಷ್ಟ್ರಕ್ಕೆ ಸ್ಫುರಿತದ ಸಂಕಟವನ್ನು ಪರಿಹರಿಸಿದನು.

೧೯೨೫ರಲ್ಲಿ ಆತನು ನೇಶನಲ್ ಸೋಶಿಯಲಿಸ್ಟ್ ಪಂಗಡದೊಡನೆ ಬಹಿರಂಗವಾಗಿ ಸೇರಿಕೊಂಡನು. ತನ್ನ ಪಕ್ಷವನ್ನು ಬಲಪಡಿಸಿದನು. ಆತನ ತಮ್ಮ ಗ್ರೆಗರನು ಉತ್ತರ ಜರ್ಮನ್ ಪಾರ್ಲಿಮೆಂಟಿಗೆ ಸದಸ್ಯನಾಗಿ ಚುನಾಯಿತನಾದನು. ಕೆಲವೇ ದಿನಗಳಲ್ಲಿ ಆತನು ಆಗ ಸೆರೆಮನೆಯಲ್ಲಿದ್ದ ಹಿಟ್ಲರನ ಸ್ನೇಹ ಸಹಕಾರವನ್ನೂ ಪಡೆದಿದ್ದನು.

ಹಿಟ್ಲರನು ಬಂಧವಿಮುಕ್ತನಾದನು. ಸ್ಟ್ರಾಸರ್ ಸಹೋದರರ ಸಹಕಾರದಿಂದ ಹಿಟ್ಲರನು ನವ ಜರ್ಮನಿಯ ರಚನೆಯ ಕಾರ್ಯವನ್ನು ಭರದಿಂದ ಕೈಗೊಂಡನು.

ಭಿನ್ನಾಭಿಪ್ರಾಯಗಳು

ನಿಜವಾದ ಹಿಟ್ಲರನು ಇಂಥ ಸ್ವಭಾವದವನೇ ಎಂದು ತಿಳಿಯಲು ಡಾ.ಒಟ್ಟೋವಿಗೆ ಐದು ವರ್ಷಗಳ ಕಾಲ ಹಿಡಿಯಿತು. ೧೯೩೦ರಲ್ಲಿ ಅದು ತೀರಾ ಪ್ರಕಟವಾಯಿತು. ಸೋಶಿಯಲಿಸ್ಟರ ತತ್ವವನ್ನು ಅವರು ಆರಿಸಿದ ಮುಖಂಡನಾದ ಹಿಟ್ಲರನು ಅನುಸರಿಸುತ್ತಿರಲಿಲ್ಲ. ಹಿಟ್ಲರನು ಸ್ಪೈಥೆಸ್, ಕ್ರುಪ್ ಮೊದಲಾದ ಭಂಡವಾಳಗಾರರ ಕೈಗೊಂಬೆಯಾಗಿ ಸಮತಾವಾದದ ಮರಣ ಸಂದೇಶವನ್ನು ಸಾರುತ್ತಿದ್ದನು.

ಸ್ಟ್ರಾಸರನು ಮೊದಲಿಂದಲೇ ಒಳ್ಳೇ ಮರ್ಯಾದಿತ ಮನುಷ್ಯನಾಗಿದ್ದ. ಇದನ್ನು ಆತನಿಗೆ ತಡೆಯುವುದಾಗಲಿಲ್ಲ. ಹಿಟ್ಲರನಿಗೆ ವಿರುದ್ಧ ಸ್ಟ್ರಾಸರ್ ದಂಗೆಯೆದ್ದ. ಹಿಟ್ಲರನನ್ನು 'ಘಟಿಂಗ'ನೆಂದು ಸಾರಿ ಆತನು, ಹಿಟ್ಲರ್ ಪಕ್ಷದಿಂದ ದೂರವಾಗಿ 'ಬ್ಲೇಕ್ ಫ್ರಂಟ್' ಪಕ್ಷವನ್ನು ಸ್ಥಾಪಿಸಿದನು.

ಈ ಕಾಲದಲ್ಲಿ ಹಿಟ್ಲರಶಾಹಿಯನ್ನು ನಿರ್ನಾಮಗೊಳಿಸಲು ಒಂದು ಪ್ರಬಲ ರಾಜಕೀಯ ಪಕ್ಷವೇ ಜರ್ಮನಿಯಲ್ಲಿ ಇತ್ತು. ಗೆಸ್ಟಪೋ ದಳವು ಅಂತವರ ಮೇಲೆ ಕಣ್ಣಿಟ್ಟುಕೊಂಡು, ಹಿಟ್ಲರನನ್ನು ಅಂದಿನಿಂದ ಇದು ವರೆಗೆ ಜೀವರಕ್ಷಣೆಗಾಗಿ ಕಾಯುತ್ತ ಬಂದಿದೆ.

ದೇಶಭ್ರಷ್ಟನಾದನು

೧೯೩೦ರ ಚುನಾವಣೆಯಲ್ಲಿ ಒಟ್ಟೋ ಪ್ರಬಲನಾಗಿ ಜನಪ್ರಿಯನಾಗಿದ್ದ ೨೦೦,೦೦೦ ಮತಗಳನ್ನು ಹೆಚ್ಚು ಪಡೆದು ಆತನು ನಾಜೀ ಪಕ್ಷವನ್ನು ಚುನಾವಣೆಯಲ್ಲಿ ಸೋಲಿಸಿದ. ಪಾರ್ಲಿಮೆಂಟಿನಲ್ಲಿ ನಾಜಿಗಳಿಗೆ ಬಹುಮತವಿರಲಿಲ್ಲ. ಆದರೆ ಜರ್ಮನಿಯ ದುರ್ಭಾಗ್ಯದಿಂದ ಒಟ್ಟೋವಿಗೆ ಯಾಕೋ ಕೂಡಲೇ ದೌರ್ಬಲ್ಯವೊದಗಿತು. ಆತನು ರಾಷ್ಟ್ರವನ್ನೇ ಬಿಟ್ಟು ಓಡಿ ಹೋಗಬೇಕಾಯಿತು.

ಮುಂದೆ ಆತನು ಬಹಳ ಸಾಹಸದಿಂದ ಜೀವಮಾನ ಮಾಡಬೇಕಾಯಿತು. ಆಸಿಗೆ ಗತಿಯಿಲ್ಲದೆ ಗೆಸ್ಟಪೋ ದಳದಿಂದ ಬೆಂಬತ್ತಲ್ಪಟ್ಟವನಾಗಿ, ಸ್ಥಳದಿಂದ ಸ್ಥಳಕ್ಕೆ ತಲೆಮರೆಸಿಕೊಂಡು ಆತನು ದಿನಯಾಪನೆ ಮಾಡಿದ. ಆದರೂ ಅದರೆಡೆಯಲ್ಲಿ ಬ್ಲೇಕ್ ಫ್ರಂಟಿನ ತತ್ವಗಳನ್ನು ತಿಳಿಸುವ ಪತ್ರಿಕೆಗಳನ್ನು ಗುಪ್ತವಾಗಿ ಅಚ್ಚುಹಾಕಿ ಹಿಟ್ಲರನ ಅನ್ಯಾಯಗಳನ್ನು ಬಯಲಿಗೆಳೆಯುತ್ತಿದ್ದನು. ಆಸ್ಟ್ರೀಯದಿಂದ ಡೆನ್ಮಾರ್ಕ, ಅಲ್ಲಿಂದ ಜೆಕೊಸ್ಲವೇಕಿಯಾ ಹೀಗೆ ಹಿಟ್ಲರನ ವಿರುದ್ಧ ಪ್ರಚಾರ ಮಾಡುತ್ತಾ ಸಾಗಿದನು. ಎಲ್ಲಾ ಕಡೆಗಳಲ್ಲಿಯೂ ಗೆಸ್ಟಪೋ ದಳದವರಿಂದ ಪ್ರಾಣ ಉಳಿಸಿಕೊಳ್ಳುವುದು ಆತನಿಗೆ ಪ್ರಾಣಾಂತಿಕವಾಗುತ್ತಿತ್ತು.

ಕೊನೆಗೆ ಪ್ಯಾರಿಸಿನಲ್ಲಿ ಆತನು ಬಂದು ನೆಲಸಿದ್ದ. ಆದರೆ ಮುಂದೆ ಆತನು ಎಲ್ಲಿ ಅಡಗಿರುವನೆಂಬುದು ಯಾರಿಗೂ ಗೊತ್ತಿಲ್ಲ. ಇಂದಿನ ಈ ಘೋರ ಯುದ್ಧವು ಮುಗಿವ ತನಕ ಆತನ ವಿಚಾರವೇನೆಂದು ತಿಳಿಯುವಹಾಗಿಲ್ಲ. ಆದರೆ ಮುಂದೇನು? ಎಂಬ ವಿಚಾರವನ್ನು ಯಾರು ಈಗ ಹೇಳಬಲ್ಲರು?

ಅಂತೂ ಹಿಟ್ಲರನು ಆತನಿಗೊಬ್ಬನಿಗೆ ಬಹಳವಾಗಿ, ರಾತ್ರಿಹಗಲೆನ್ನದೆ ಅಂಜುತ್ತಲೇ ಇದ್ದಾನೆ.

HALFTONE & LINE
BLOCK MAKING
UNDERTAKEN
Sharada Press,
MANGALORE

ಅಂದವಾದ ಮುದ್ರಣಕ್ಕೆ
ಶಾರದಾ ಛಾಪಖಾನೆಗೆ
ಬಂದು ವಿಚಾರಿಸಿರಿ.

ಜಿಲ್ಲಾ ಸಮಾಚಾರ



ಮಂಗಳೂರು

ಮಿತ್ರಮಂಡಳಿಯಲ್ಲಿ ಸಾಹಿತ್ಯೋತ್ಸವ:—ಮಂಗಳೂರಿನ ಮಿತ್ರಮಂಡಳಿಯು ಈ ವರ್ಷ ದಸರಾ ಸಾಹಿತ್ಯೋತ್ಸವವನ್ನು ಯಶಸ್ವಿಯಾಗಿ ಜರಗಿಸಿತು. ಮೊದಲ ದಿನ ತಾ ೭ರಲ್ಲಿ ಶ್ರೀ. ಟಿ. ನಾರಾಯಣ ಭಟ್ಟರು, ಸಾಹಿತ್ಯದಲ್ಲಿ ಸರಸವಿನೋದ ಎಂಬ ಭಾಷಣವನ್ನು ಮನೋಹರವಾಗಿ ಕೊಟ್ಟರು. ಘಂಟೆ ೭ಕ್ಕೆ ಶ್ರೀ ಚೂರ್ಯ ಮತ್ತು ಪಾರ್ಟಿಯವರು ಶ್ರೀ ಕುಡ್ಪಿ ವಾಸುದೇವ ಶೆಣ್ಯೆಯವರ ನಾರೀಶ್ವರರು' ಎಂಬ ಹಾಸ್ಯಮಯವಾದ ನಾಟಕವನ್ನು ಮನೋರಂಜಕವಾಗಿ ಅಭಿನಯಿಸಿದರು ಶ್ರೀನಗರ ಬಾಲಕೃಷ್ಣ ಶೆಣ್ಯೆಯವರ ಚಿಕ್ಕ ಹುಡುಗಿಯ ಟೊಳ್ಕ ನರ್ತನವಾಯಿತು ಶ್ರೀ ಗೋಪಾಲಕೃಷ್ಣರಾಯರ ದೇಹದಾರ್ಢ್ಯ ಪ್ರದರ್ಶನವು ನಡದು ಅವರಿಗೆ ಅವರ ಶಿಷ್ಯಮಂಡಳಿಯಿಂದ ಒಂದು ಸ್ವರ್ಣ ಪದಕದ ಸಮರ್ಪಣೆಯೂ ಆಯಿತು

ತಾ ೮ರಲ್ಲಿ ಶ್ರೀಮಾನ್ ಕಡೆಂಗೋಡ್ಲು ಶಂಕರಭಟ್ಟರು, 'ಸಾಹಿತ್ಯವೂ ಲಕ್ಷಣವೂ' ಎಂಬ ಹೃದಯಂಗಮವಾದ ಭಾಷಣದ ಬಳಿಕ ಶ್ರೀ ಚೂರ್ಯ ಮತ್ತು ಪಾರ್ಟಿಯವರಿಂದ, ಶ್ರೀಕುಡ್ಪಿಯವರ 'ಚಿತ್ರಗಾರ' ಎಂಬ ವಿನೋದಪೂರ್ಣವಾದ ನಾಟಕದ ಅಭಿನಯವು ಶ್ಲಾಘ್ಯಂತ ಜಯಶಾಲಿಯಾಗಿ ನೆರವೇರಿತು ಶ್ರೀ ರಘುನಾಥ ಕಿಣಿಯವರ ಸಿತಾರು ಗಾಯನವು ಸಭಿಕರನ್ನು ಆನಂದ ಲೋಲರಾಗಿ ಮಾಡಿತು

ತಾ ೯ರಲ್ಲಿ, ಪೂರ್ವಾಹ್ನ ಘಂಟೆ ೧೧ಕ್ಕೆ ಕನ್ನಡ ಸಾಹಿತಿಗಳ ಮತ್ತು ಸಾಹಿತ್ಯ ಪ್ರೇಮಿಗಳ ಕೂಟವು ಶ್ರೀ ಟಿ ರಾಮರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿಯವರ ಸ್ವಾಗತ ಭಾಷಣವಾದ ಮೇಲೆ ಶ್ರೀ ಮುಳಿಯ ತಿಮ್ಮಪ್ಪಯ್ಯ ಕನ್ನಡ ಪತ್ರಿಕಾ ವ್ಯವಸಾಯ ... ಎಂಬ ಭಾಷಣವನ್ನೂ, ಶ್ರೀ ಬಿ ದಾಮೋದರ ಬಾಳಿಗ, ಇವರು 'ಸಾಹಿತ್ಯವೂ ವಿಜ್ಞಾನವೂ' ಎಂಬ ವಿಷಯದ ಮೇಲೆ ಭಾಷಣವನ್ನೂ, ಶ್ರೀ ಎಂ ಸುಬ್ರಾಯನ್, ಇವರು ಮಹಾಕವಿ ಕಾಳಿದಾಸನ 'ರಘುವೇಗ್ವದ' ವಿಷಯ ಭಾಷಣವನ್ನೂ ಕೊಟ್ಟರು

ಆ ಮೇಲೆ ಶ್ರೀ ರಾಮಶರ್ಮ, ಬೈಂದೂರು ಶ್ರೀ ಆನಂದರಾವ್, ಶ್ರೀ ಸೇಡಿಯಾಪು ಕೃಷ್ಣಭಟ್ಟ, ಇವರುಗಳ ಸ್ವಂತ ಕವಿತೆಗಳ ವಾಚನ, ಮಾಸ್ಟರ್ ವೆಂಕಣ್ಣನವರಿಂದ ನಿಡ್ಪಳ್ಳಿ ಶ್ರೀ. ಪಾಂಡೇಶ್ವರ ಗಣಪತಿರಾಯರ ಕವನಗಳ ವಾಚನ ಇವುಗಳು ಜರಗಿದುವು ಶ್ರೀ. ಜಿ ವಾಮನ ಭಟ್ಟ, ಎಂ ಸುಬ್ರಾಯನ್ ಇವರ ಕವಿತೆ ಮತ್ತು ಶಿಶುಗೀತೆಗಳ ವಾಚನವೂ ಸಾಗುತ್ತಲೇ ಘಂಟೆ ೪ ೩೦ಕ್ಕೆ ಫಲಾಹಾರ ಸತ್ಕಾರವಾಯಿತು. ಈ ಸಂದರ್ಭದಲ್ಲೇ ಶ್ರೀ ಟಿ. ನಾರಾಯಣ ಭಟ್ಟರ, ಕನ್ನಡ ನಾಡಿಗೆ ಸ್ವಸ್ತಿವಾಚನ ಮಾಡಿದರಲ್ಲದೆ ಶ್ರೀ ರಂಗರಾವ್ ತಲಚೇರಿಕಾರರು ಅದಕ್ಕೆ ತಕ್ಕ ಪ್ರತಿಭಾಷಣವಿತ್ತರು ಮಾನ್ಯ ಅಧ್ಯಕ್ಷರು ಕನ್ನಡ ಜಿಲ್ಲೆಗೆ ಸ್ವಸ್ತಿವಾಚನವನ್ನು ಅರ್ಪಿಸುತ್ತಲೇ ಶ್ರೀ. ಕೆ. ಆರ್ ಆಚಾರ್ ಅದಕ್ಕೆ ಪ್ರತ್ಯುತ್ತರವಿತ್ತರು. ಆ ಬಳಿಕ ಶ್ರೀ ರಘುನಾಥ ಕಿಣಿಯವರು ರಮ್ಯವಾದ ಸಿತಾರು ಗಾಯನದಿಂದಲೂ, ಶ್ರೀ. ಎಮ್. ವಾಸುದೇವ ಪ್ರಭು, ಮತ್ತು ಪಾರ್ಟಿಯವರು ತಮ್ಮ ಮಂಜುಳವಾದ ಕೊಳಲಗಾನದಿಂದಲೂ ಸಭಿಕರನ್ನು ಸಂತೋಷದಲ್ಲಿ ತೇಲಾಡಿಸಿದರು. ಘಂಟೆ ೬ಕ್ಕೆ "ಪ್ರಕಾಶ ಸಮಿತಿ" ಯವರು ಒಂದು ಹಿಂದೀ ದೃಶ್ಯವನ್ನು ಶ್ರೀ. ದಿವಂಗತ ಎಮ್. ಎನ್ ಕಾಮತರ 'ಶಿಕ್ಷಣವೇತನ' ಎಂಬ ಕನ್ನಡ ನಾಟಕವನ್ನೂ ಚಲೋದಾಗಿ ಅಭಿನಯಿಸಿ ಮಿತ್ರಮಂಡಳಿಯ ಈ ಸಮಾರಂಭವನ್ನು ಸಾಂಗಗೊಳಿಸಿದರು

ಪಾಣೆಮಂಗಳೂರು

ಶಾರದಾಪೂಜೆ —ಇಲ್ಲಿ ಇದೇ ತಾ ೧೦ರಲ್ಲಿ ಶಾರದಾ ಪೂಜೆಯ ಕೊನೆಯ ದಿನದ ಕಾರ್ಯಕ್ರಮವು ಅತೀ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು

ಗಾಂಧಿ ಜಯಂತ್ಯುತ್ಸವವು ಅತೀ ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಭಾತ ಪೇರಿ ಧ್ವಜವಂದನೆ, ಕೊಂಗ್ರೆಸ್ ಸದಸ್ಯರನ್ನು ಸೇರಿಸುವಿಕೆ ಮತ್ತು ಖಾದಿ ಮಾರಾಟ, ಭಾಷಣ ಮೊದಲಾದುವುಗಳಿದ್ದುವು

ಕಾರ್ಕಳ

ದಸರಾ ಮಹೋತ್ಸವ:— ಸ್ಥಳೀಯ ಕಾಸ್ಮಪೊಲಿಟನ ಕ್ಲಬ್ಬಿನಲ್ಲಿ ಜನಾಬ್ ಯಚ್ ಯಸ್ ಹುಸ್ಸೇನ ಸಾಹೇಬರವರ ಅಧ್ಯಕ್ಷತೆಯಲ್ಲಿ ದಸರಾಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಆ ಸಂಬಂಧ ಬೇರೆ ಬೇರೆ ದಿನಗಳಲ್ಲಿ ಶ್ರೀಗಳಾದ ಪಿ ವಿ. ಉಪಾಧ್ಯಾಯ, ಯಸ್ ಪಿ ಎ ಟ್ರೋಸಿ ಕಟಪಾದಿ ಶ್ರೀನಿವಾಸ ಶೆಣೈ, ವಕೀಲ ಕೆ ಸದಾನಂದ ಹೆಗ್ಡೆ, ಯಂ ಯಸ್ ಕಾಮತ್, ಬಿ ವಿ ರಮಣ ಮೊದಲಾದವರು ದಸರೆಯ ಮಹತ್ವ ವೇದಾಂತ ಸಾಹಿತ್ಯಾಧ್ಯಯನ, ಅಂತರಾಷ್ಟ್ರೀಯ ರಾಜಕೀಯ, ಜಗತ್ತಿನ ಮಹಾಪುರುಷರು, ಆಧುನಿಕ ಕನ್ನಡ ಪದ್ಯಸಾಹಿತ್ಯ ಮೊದಲಾದ ವಿಷಯಗಳ ಮೇಲೆ ಭಾಷಣಗಳನ್ನು ಕೊಟ್ಟಿದ್ದರು

ಹರಿಜನ ಸಂಘಕ್ಕೆ ಸಹಾಯ —ಹರಿಜನ ಸಪ್ತಾಹ ಕಾಲದಲ್ಲಿ ಸ್ಥಳೀಯ ಹರಿಜನ ಸೇವಾಸಂಘಕ್ಕೆ ಊರ ಪರಊರ ಸಗೃಹಸ್ಥರ ಮೂಲಕ ೪೭ ೫ ರಗಳ ಸಹಾಯ ಎರಡು ಚರಕ ಮತ್ತು ಒಂದು ಕುರ್ಚಿ ದಾನವಾಗಿ ದೊರೆತಿರುತ್ತದೆಂದೂ ಈ ಸಹಾಯ ಮಾಡಿದ ಎಲ್ಲರಿಗೆ ಸಂಘವು ಕೃತಜ್ಞವಾಗಿದೆಯೆಂದೂ ಅಧ್ಯಕ್ಷ ಶ್ರೀ ಕೆ ಮಹಾಬಲ ಹೆಗ್ಡೆಯವರು ತಿಳಿಸಿದ್ದಾರೆ

ಸಾಹಿತಿಗಳ ಭಾಷಣ:— ತಾ ೧೦ ೧೧ರ ದಿನ ಸಾಯಂಕಾಲ ಮೈನ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ ವಿ ರಮಣರವರ ಅಧ್ಯಕ್ಷತೆಯಲ್ಲಿ ಕಾರ್ಕಳದ ಸಾಹಿತ್ಯ ಪ್ರೇಮಿಗಳ ಒಂದು ಸಾರ್ವಜನಿಕ ಸಭೆಸೇರಿ ಅದರಲ್ಲಿ ಮೈಸೂರು ಮಹಾರಾಜಾ ಕೊಲೇಜಿನ ಪ್ರೊಫೆಸರುಗಳಾದ ಶ್ರೀ. ನರಸಿಂಹಾಚಾರ್ಯ ಮತ್ತು ಶ್ರೀ ಶಿವರಾಮ ಶಾಸ್ತ್ರಿಯವರು ಕ್ರಮವಾಗಿ ಲಕ್ಷ್ಮೀಶನ ಜೈಮಿನಿ ಭಾರತ ಹಾಗೂ ಕಾಳಿದಾಸನ ಶಾಕುಂತಳದ ಕುರಿತು ರಸವತ್ತಾದ ಭಾಷಣಗಳನ್ನು ಕೊಟ್ಟರು

ಉಪಾಧ್ಯಾಯರ ಸಭೆ:— ಈ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಭೆಯು ತಾ ೫ ೧೦ ೪೦ರ ದಿನ ಶ್ರೀ. ಯಂ ಯಸ್. ಕಾಮತರ ಅಧ್ಯಕ್ಷತೆಯಲ್ಲಿ ಸೇರಿತು.

ಶಾರದಾಪೂಜೆ:—ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಮತ್ತು ಇನ್ನಿತರ ವಿದ್ಯಾ ಸಂಸ್ಥೆಗಳಲ್ಲಿ ಶಾರದಾಪೂಜೆಯು ವಿಜೃಂಭಣೆಯಿಂದ ನಡೆದಿರುತ್ತದೆ.

ಉಡುಪಿ

ನವಯುಗ ಮುದ್ರಣಾಲಯ:—ನವಯುಗ ಎಂಟರ್‌ಪ್ರೈಸಿನರು ಇಂದು ತಮ್ಮ ಸ್ವಂತ ಮುದ್ರಣಾಲಯವೊಂದನ್ನು ತೆರೆದಿರುವರು ಇದರ ಉದ್ಘಾಟನಾ ಸಮಾರಂಭವು 'ನವಯುಗ' ಪತ್ರಿಕೆಯ ಸಂಸ್ಥಾಪಕರಾದ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರಿಂದ ತಾ. ೯ರಂದು ನೆರವೇರಿಸಲ್ಪಟ್ಟಿತು ಶ್ರೀ ಶೆಟ್ಟರು ಉದ್ಘಾಟನೆ ಮಾಡುತ್ತಾ ವಾಕ್ ಸ್ವಾತಂತ್ರ್ಯ ಲೇಖನ ಸ್ವಾತಂತ್ರ್ಯಗಳ ವಿಷಯವು ರಾಷ್ಟ್ರದ ಜೀವಂತ ಪ್ರಶ್ನೆಯೆಂದು ತಿಳಿಸಿ, ಮುದ್ರಣಾಲಯವನ್ನು ಹರಸಿದರು.

ಕಲ್ಯಾಣಪುರ:— ಕಳೆದ ಒಂದು ವರ್ಷದಿಂದೀಚೆಗೆ ಸ್ಥಳೀಯ ಮಹಾಜನರ ಪ್ರೋತ್ಸಾಹದಿಂದ ಹಿಂದೀ ಪ್ರಚಾರವು ಸಾಗುತಿದ್ದು, ಪ್ರಾಥಮಿಕ, ಮಧ್ಯಮಾ ಹಾಗೂ ರಾಷ್ಟ್ರಭಾಷಾ ವರ್ಗಗಳು ನಡೆಯುತ್ತವೆ ಇಲ್ಲಿ ಕಳೆದ ತಾರೀಕು ೩೦ರಿಂದ ೬ರ ವರೆಗೆ ಹಿಂದೀ ಪ್ರಚಾರ ಸಭೆಯವರ ಆದೇಶಾನುಸಾರವಾಗಿ ಹಿಂದೀ ಪ್ರಚಾರ ಸಪ್ತಾಹವು ಯಶಸ್ವಿಯಾಗಿ ಹಿಂದೀ ಪ್ರಚಾರ ಸಪ್ತಾಹ ಕಮಿಟಿಯವರ ನೇತೃತ್ವದಲ್ಲಿ ಜರಗಿತು ಪ್ರಚಾರ ಕಾರ್ಯವಿನ್ನು ಇನ್ನಷ್ಟು ಭರದಿಂದ ಸಾಗಿಸುವರೆ ಇದೇ ಸಂದರ್ಭದಲ್ಲಿ 'ಭಾಷಾ ಪ್ರೇಮಿ ಸಮಿತಿ' ಎಂಬೊಂದು ಸಂಘದ ಉದ್ಘಾಟನೆಯು ಆಯಿತು. ಸದರಿ ಸಂಘಕ್ಕೂ ಶೀಘ್ರದಲ್ಲೇ ತೆರೆಯಲಿರುವ ಹಿಂದೀ ವಾಚನಾಲಯಕ್ಕೂ ಮಹಾಜನರ ಸಹಾಯವು ಅಪೇಕ್ಷಿಸೋಣಾಗಿಯದೆ

ಕಾಸರಗೋಡು

ಗರ್ಲ್ಸ್ ಸ್ಕೂಲ್

ಇಲ್ಲಿಯ ಊರವರು ನವೀನವಾಗಿ ಕಟ್ಟಿಸಿದ ಫ್ಯೂಚರ್ ಎಲಿಮೆಂಟರಿ ಗರ್ಲ್ಸ್‌ಸ್ಕೂಲನ್ನು ಡಿಸ್ಟ್ರಿಕ್ಟ ಬೋರ್ಡಿಗೆ ವಹಿಸಿ ಕೊಡುವ ಮಹಾ ಸಭೆಯು ಇದೇ ಕಳೆದ ತಾ ೯ನೇ ಬುಧವಾರ ಅಪರಾಹ್ನ ೪ಗಂಟೆಗೆ ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ ಕೆ ಶಂಕರ ಉಣ್ಣಿ ನಾಯರ್ ಬಿ ಎ (ಒಕ್ಸನ್) ಬಾರ್ ಎಟ್ ಲೊ ಇವರು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದರು ಕಮಿಟಿಯ ಚೆಯರ್‌ಮೆನ್ ಶ್ರೀ ಎಡ್ವೊಕೇಟ್ ಎ ಶ್ರೀನಿವಾಸ ಪೈಗಳವರು ಈ ಕಾರ್ಯದಲ್ಲಿ ಜೆಟ್ಟಿನ ಸಾಧನೆಯನ್ನು ಮಾಡಿದವರೆಲ್ಲರ ಸಹಕಾರವನ್ನು ವಿವರಿಸಿ ಕಟ್ಟಡವನ್ನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಒಗ್ಗೆ, ಅಲ್ಲಿಗೆ ಬಂದಿದ್ದ ಡಿ ಬೊ ಎಡ್ಯುಕೇಶನಲ್ ಆಫೀಸರ್ ಶ್ರೀ ಕೆ ಸಂಜೀವ ಭಟ್ಟರವರ ಸ್ವಾಧೀನಕ್ಕೆ ಒಪ್ಪಿಸಿದರು. ಶ್ರೀ ಭಟ್ಟರು ಅದನ್ನು ಸ್ವೀಕರಿಸಿ ಕೆಲವು ಮಾತುಗಳನ್ನಾಡಿದರು. ಉಪಾಧ್ಯಾಯಿನಿಯರಲ್ಲೊಬ್ಬರು ತಮ್ಮ ಕೃತಜ್ಞತೆಯನ್ನು ಓದಿ ಹೇಳಿದರು. ಆ ಮೇಲೆ ಸಭಿಕರ ಅಪೇಕ್ಷೆಯಂತೆ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರು ಭಾಷಣ ಮಾಡಿದರು ಡಾ ಪಿ ಎನ್ ಭಟ್ಟರು ಧನ್ಯವಾದಗಳನಿತ್ತರು ಕೊನೆಗೆ ಸಂಗೀತ ವಿನೋದಾದಿಗಳಾಗಿ ಈ ಸಮಾರಂಭವು ಮುಕ್ತಾಯವಾಯಿತು

ಕಾಟುಕುಕ್ಕೆ:— ಕಾಟುಕುಕ್ಕೆ ಯೈಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶಾರದಾ ಪೂಜೆಯು ೧೦ರಂದು ಬಹಳ ಯಶಸ್ವಿಯಾಗಿ ಜರಗಿಸಲ್ಪಟ್ಟಿತು ಸಂಜೆಗೆ ಚಿಕ್ಕದೊಂದು ಯಕ್ಷಗಾನ ಸಮಾರಂಭವೂ ಜರಗಿತು

ಪೆರ್ಲ:— ಶ್ರೀ ಸತ್ಯನಾರಾಯಣ ಹೈಯರ್ ಎಲಿಮೆಂಟರಿ ಶಾಲೆಯಲ್ಲಿಯೂ ಶಾರದಾ ಪೂಜೆಯನ್ನು ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಪೆರಡಾಲ

ಸಾಹಿತ್ಯೋತ್ಸವ:—ಸ್ಥಳೀಯ ಮಹಾಜನ ಸಂಸ್ಕೃತ ಕಾಲೇಜಿನ ಸಾಹಿತ್ಯ ಸಮಿತಿಯ ಆಶ್ರಯದಲ್ಲಿ ಇದೇ ತಾ. ೬ರಂದು ಶ್ರೀ. ಸ್ವಿ. ಗೋಪಾಲಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಶ್ರೀ. ಏ. ಯು. ಮುಕ್ತಣ್ಣನವರು ಶ್ರೀ. ಕಡೆಂಗೋಡ್ಲು ಶಂಕರ ಭಟ್ಟರ 'ನಲ್ಲೆ' ಯಲ್ಲಿನ ಹೊನ್ನಿಯ ಮದುವೆಯೆಂಬ ಭಾಗವನ್ನು ಬಲು ಸರಸವಾಗಿ ಓದಿದರು ಆ ಮೇಲೆ ಸಾಮಾಜಿಕರು ಭಾಷಣ ಮಾಡಿದರು ಅಧ್ಯಕ್ಷರ ಸರಸ ಭಾಷಣದೊಂದಿಗೆ ಅಂದಿನ ಸಭೆಯು ಕೊನೆಗಂಡಿತು ರಾತ್ರಿ 'ಕಾಳವ ಸ್ವಾತಂತ್ರ್ಯ' ವೆಂಬ ನಾಟಕವು ಅಭಿನಯಿಸಲ್ಪಟ್ಟಿತು ತಾ ೮ರಂದು ಶ್ರೀ ಏ ಯಂ ಮುಕ್ತಣ್ಣನವರ ಅಧ್ಯಕ್ಷತೆಯಲ್ಲಿ ಕವಿತಾವಾಚನ ಭಾಷಣ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಇನಾಮು ಹಂಚೋಣ ಮೊದಲಾದ ಕಾರ್ಯಕ್ರಮಗಳು ನಡೆದವು ರಾತ್ರಿ 'ಗದಾಯುದ್ಧ' ನಾಟಕವೂ ದುರ್ಗಾದಾಸ ಎಂಬ ಹಿಂದೀ ನಾಟಕವು ಅಭಿನಯಿಸಲ್ಪಟ್ಟುವು ತಾ ೯ರಲ್ಲಿ ಶ್ರೀ ಅಜ್ಜಕಾನ ಗೋಪಾಲಕೃಷ್ಣ ಭಟ್ಟರವರ ಹರಿಕೀರ್ತನೆಯೂ ಶ್ರೀ ಪರಿಕ್ಕಳ ಶ್ರೀನಿವಾಸಯ್ಯನವರ ಮೃದಂಗವಾದನ ಮತ್ತು ಕೋಡಿಂಗಾರ ಕಿಂಞಣ್ಣ ಭಂಡಾರಿಗಳ ಸಂಗೀತದೊಡನೆ ಮನೋರಂಜಕವಾಗಿ ನೆರವೇರಿತು ರಾತ್ರಿ ದಕ್ಷೇಶ್ವರ ಪ್ರಸಾಧನವೆಂಬ ಸಂಸ್ಕೃತ ನಾಟಕವು ಅಭಿನಯಿಸಲ್ಪಟ್ಟಿತು ತಾ ೧೦ಕ್ಕೆ ವಿದ್ಯಾರಂಭವಾದ ನಂತರ ಕಾಲೇಜಿನ ಎಲ್ಲಾ ಉಪಾಧ್ಯಾಯರು ಮತ್ತು ಡಾ। ಪಿ ಎಸ್ ಶಾಸ್ತ್ರಿಗಳು ಕೂಡಿ ವಿದ್ಯಾರ್ಥಿಗಳನ್ನು ಮೃಷ್ಟಾನ್ನ ಭೋಜನಾದಿಗಳಿಂದ ಹರಸಿದರು.

ಪುತ್ತೂರು

ಪುತ್ತೂರು ರೆವೆನ್ಯೂ ಡಿವಿಜನಲ್ ಆಫೀಸರವರಿಂದ ನೋಟೀಸು :—

ದಕ್ಷಿಣಕನ್ನಡಾ ಜಿಲ್ಲಾ ಪುತ್ತೂರು ತಾಲೂಕು ಸುಬ್ರಮಣ್ಯ ಗ್ರಾಮದ ಕುಮಾರಧಾರದಲ್ಲಿ ವರುಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ ೧೯೪೦ನೇ ಇಸವಿ ನವಂಬರ ತಿಂಗಳ ೧೫ನೇ ತಾರೀಕಿನಿಂದ ಅದೇ ತಿಂಗಳ ೨೯ನೇ ತಾರೀಕಿನ ವರೆಗೆ ಜರಗುವದು ಅಂದರೆ ಕಾರ್ತಿಕ ಶುದ್ಧ ಹುಣ್ಣಿಮೆ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆ ದಿವಸ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ದಿನಸದ ಪರಿಯಂತರ ಜರಗುವುದು ಸಂತೆಗೆ ತರಲ್ಪಡಲಿರುವ ಪ್ರತಿಯೊಂದು ಜಾನುವಾರಿನ ಮೇಲೆ ಎರಡಾಣೆ ಪ್ರಕಾರ ಫೀಸು ವಸೂಲುಮಾಡಲಾದೀತು.

ಅಡಿಕೆ ತೋಟಗಾರರ ಸಂಕಷ್ಟ—ಪುತ್ತೂರು ಮತ್ತು ಕಾಸರಗೋಡು ತಾಲೂಕಿನ ಅಡಿಕೆ ತೋಟಗಾರರ ಸಭೆಯೊಂದು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಎಂ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ಜರಗಿ, ಈ ವರ್ಷವೂ ಮಹಾಳಿ ರೋಗದಿಂದ ತೋಟಗಾರರಿಗೆ ಬಂದ ಸಂಕಷ್ಟದ ಕುರಿತು ಚರ್ಚಿಸಿ ಸರಕಾರದವರು ಕೂಡಲೇ ಬಂದು ಪ್ರತಿತೋಟದ ಪರಿಶೀಲನೆ ಮಾಡಿ ಅದಕ್ಕೆ ಅನುಗುಣ ಅವರಿಗೆ ತೀರ್ವೆ ಮಾಫಿಮಾಡಬೇಕೆಂಬ ನಿರ್ಣಯವನ್ನು ಮಂಜೂರು ಮಾಡಿದೆ.

ಮುಂಬಯಿ

ಕನ್ನಡ ನಾಡಹಬ್ಬ:—ಕನ್ನಡ ನಾಡಹಬ್ಬ ಮಹೋತ್ಸವವನ್ನು ಈ ಸಲವೂ ಮುಂಬಯಿ ಪಟ್ಟಣದ ಬಹುತರ ಎಲ್ಲ ಕನ್ನಡ ಸಂಸ್ಥೆಗಳೂ ಒಟ್ಟುಗೂಡಿ ಜರಗಿಸಿವೆ. ಶ್ರೀವಾನ್ ಮಾಸ್ತಿ ವೆಂಕಟೇಶಅಯ್ಯಂಗಾರರು ಈ ಮಹೋತ್ಸವ ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಅಮೇರಿಕದಲ್ಲಿ ತೀವ್ರ ಯುದ್ಧೋತ್ಸಾಹ!

ಮಾಸ್ಕೋಗೆ ಜರ್ಮನ್ ಶಿಷ್ಟಮಂಡಳಿ

ಜಪಾನಿಯರಿಗೆ ಅಪಾರ ನಷ್ಟ
ಸ್ಯಾಂಟ್ ಪಾಲ್ಸಿಗೆ ಪುನಃ ಬಾಂಬು
ಬರ್ಮಾ ರಸ್ತೆಯನ್ನು ತೆರೆಯುವರು!



ಯೂರೋಪಿನ ಯುದ್ಧವು ಈ ವಾರಹೆಚ್ಚಿನ ತೀವ್ರವಾಗಿದೆಯೆಂದು ಹೇಳುವಂತಿಲ್ಲ. ಅಲ್ಪ ಸ್ವಲ್ಪ ದಾಳಿಗಳಾಗಿವೆ, ಆದರೆ ಶತ್ರುಗಳ ಗತಿಯು ಬೇರೆ ಕಡೆಗೆ ಹರಿದಿದೆ.

ರುಮೇನಿಯಾ ಆಕ್ರಮಣ

ಜರ್ಮನಿಯು ರುಮೇನಿಯವನ್ನು ಆಕ್ರಮಿಸಿದೆ. ಈಗಾಗಲೇ ಬಹಳ ಮಂದಿ ನಾಜೀ ಸೈನಿಕರು ಮುಂದೆ ನುಗ್ಗಿ ಬಂದಿರುವರು.

ಚೀನಾ ಜಪಾನ್ ಯುದ್ಧ

ಈ ವಾರದಲ್ಲಿ ಚೀನಾ ಜಪಾನು ಯುದ್ಧವು ಬಹಳ ವಿಷಮತೆ ಗೇರಿತು. ಚೀನಿಯರು ಅಸಮ ಸಾಹಸ ತೋರಿ ಕಾದಾಡಿ ಜಪಾನಿಯರನ್ನು ಹಿಂದಕ್ಕಟ್ಟಿದರು.

ರಶ್ಯದ ಒಳಗುಟ್ಟೇನು?

ರಶ್ಯ ಆರಗ್ಲ ಸಂಬಂಧವು ಮುರಿವಂತೆ ಜರ್ಮನಿಯು ಕಾರಸ್ಥಾನ ನಡೆಸಿರುವುದೆಂದೂ ರಶ್ಯ ದೊಡನೆ ಮಾತುಕತೆಗಾಗಿ ಶಿಷ್ಟ ಮಂಡಲವೊಂದು ಮಾಸ್ಕೋಗೆ ತೆರಳಿರುವುದೆಂದೂ ತಿಳಿದಿದೆ.

ಬರ್ಮಾರಸ್ತೆ

ಚರ್ಚಿಲ್ ಮಂತ್ರಿ ಮಂಡಳವು ಇಂದು ತಿರಿಗಿ ಬರ್ಮಾ ರಸ್ತೆಯನ್ನು ತೆರೆದಿದೆ. ಬರ್ಮಾರಸ್ತೆಯನ್ನು ಮುಚ್ಚಿದ ಮೇಲೆ ಜಪಾನು ಕೈಕೊಂಡ ಧೋರಣೆಗಳು ಬ್ರಿಟನು ಅಮೇರಿಕಗಳನ್ನು ಎಚ್ಚರಿಸಿವೆ.

ಅಮೇರಿಕವು ಬಲಪಡಿಸುತ್ತಿದೆ

ಕೆಲದಿನಗಳಿಂದ ಅಮೇರಿಕವು ಬಲಗೊಳ್ಳುವ ವಾರ್ತೆ ಬರುತ್ತದೆ. ಎಲ್ಲಾ ಕಡೆಗಳಲ್ಲಿಯೂ ಯುದ್ಧ ಸಿದ್ಧತೆಯ ಕಾರ್ಯ ಕಲಾಪಗಳು ಆಗುತ್ತಿವೆ. ಪೆಸಿಫಿಕ್ ಸಾಗರದಲ್ಲಿರುವ ಅಮೇರಿಕದ ನೌಕಾಬಲವನ್ನು ಈಗ ಇನ್ನಷ್ಟು ಬಲಪಡಿಸಲಾಗಿದೆ. ಜಪಾನಿಗೂ ಅಮೇರಿಕಕ್ಕೂ ಯುದ್ಧ ಸುರುವಾದೀತೇ ಎಂದು ಸಂದೇಹಹುಟ್ಟಿದೆ.

ಬರ್ಮಾರಸ್ತೆಯ ಕುರಿತು ಜಪಾನಿನ ಹೇಳಿಕೆ

ಜಪಾನಿನ ವಿದೇಶೀ ಮಂತ್ರಿಗಳು ಬರ್ಮಾರಸ್ತೆಯನ್ನು ಬ್ರಿಟನು ತೆರೆದ ...ರವಾದಿದ ವಿಷಯು ಹೀಗೆಂದರು.

"ಪೂರ್ವದೇಶದಲ್ಲಿ ಶಾಂತಿಯನ್ನು ಮಾಡಬೇಕೆನ್ನುವವರು ಬ್ರಿಟಿಷರೇ. ಅದರೊಡನೆ ಬರ್ಮಾರಸ್ತೆಯನ್ನು ತೆರೆದು ಚಿಯಾಂಗ್ ಕೈಶೇಕರ ಬೆನ್ನುತಟ್ಟುವವರೂ ಅವರೇ! ಬರ್ಮಾರಸ್ತೆಯ ಪ್ರಶ್ನೆ ಈಗ ಅಷ್ಟು ಮುಖ್ಯವಲ್ಲ. ತ್ರಿರಾಷ್ಟ್ರಗಳ ಒಪ್ಪಂದ ಶಾಂತಿಗಾಗಿ. ಅದರಿಂದ ಅಮೇರಿಕಕ್ಕೆ ತೊಂದರೆಯಿಲ್ಲ."

ಜರ್ಮನಿ ರುಮೇನಿಯವನ್ನು ಆಕ್ರಮಿಸಿತು

ಜರ್ಮನಿಯು ಇಂದು ರುಮೇನಿಯವನ್ನು ಆಕ್ರಮಿಸಿದೆ. ಇದರಿಂದ ರಶಿಯಕ್ಕೆ ಹೆಚ್ಚಿನ ಗಂಡಾಂತರವಿದ್ದು ಅದು ವಿಚಾರ ಮಾಡತಕ್ಕದ್ದಿದೆಯೆಂದು ಅಂಕಾರದಲ್ಲಿ ಸುದ್ದಿ ಹರಡಿದೆ.

ರಶ್ಯಾ ಜರ್ಮನಿಗಳು ಕೂಡುವವೆ?

ರಶ್ಯಾ–ಆಂಗ್ಲೋ ಸಂಬಂಧವನ್ನು ಕಡಿದು ಹಾಕುವಂತೆ ಜರ್ಮನಿಯು ಇಂದು ಕಾರ್ಯಗಳನ್ನು ಕೈಕೊಳ್ಳುತ್ತಿರುವುದಾಗಿ ಒಂದು ವಾರ್ತೆ. ಜರ್ಮನಿಯನ್ನು ಬಾಲ್ಕನಿನಲ್ಲಿ ವಿಜೃಂಭಿಸ ಬಿಟ್ಟರೆ, ಬಲೂಚಿಸ್ಥಾನ ಇರಾನುಗಳನ್ನು ರಶ್ಯಕ್ಕೆ ಬಿಡುಗಡೆ ಮಾಡುವ ರೀತಿ ರಶ್ಯ ಜರ್ಮನ್‌ಗಳೊಳಗೆ ಒಪ್ಪಂದವಾಗಬಹುದೆಂದು ಆ ಕಡೆಯ ಸುದ್ದಿಯಿದೆ. ಈ ಸಂಬಂಧ ಜರ್ಮನರ ಶಿಷ್ಟಮಂಡಲವೊಂದು ರಶ್ಯಕ್ಕೆ ಹೋಗಿದೆಯಂತೆ.

ರೂಸ್‌ವೆಲ್ಟರ ಎಚ್ಚರಿಕೆ

ರೂಸ್‌ವೆಲ್ಟರು ಆಕಾಶ ಭಾಷಣವೊಂದನ್ನು ಮಾಡುತ್ತ ಲೋಕಕಂಟಕರು ಮುಂದೊತ್ತಿ ಬರುತ್ತಿರುವಾಗ ಅಮೇರಿಕವು ತನ್ನ ಧೋರಣವನ್ನು ಎಚ್ಚರಿಕೆಯಿಂದ ಮಾಡಿಕೊಂಡಿರ ಬೇಕಾಗಿದೆಯೆಂದರು.

ಡೋವರಿನ ಮೇಲೆ ಗುಂಡುಗಳು

ಈ ವಾರವೂ ಡೋವರಿನ ಮೇಲೆ ಜರ್ಮನರ ಗುಂಡುಗಳು ಹಾರಿಸಲ್ಪಟ್ಟವು. ಅರ್ಧ ಗಂಟೆಯ ವರೆಗೆ ಗುಂಡುಗಳು ಮಳೆಯಂತೆ ಬೀಳುತಿದ್ದುವು.

ವಿಮಾನ ಕಾಳಗ

ಬ್ರಿಟಿಷ್ ಕಡಲ್ಗಾಲುವೆಯ ಮೇಲೆ ಜರ್ಮನ್ ಬ್ರಿಟನ್ ವೈಮಾನಿಕರಿಗೆ ಭಯಂಕರವಾದ ಕಾಳಗವು ನಡೆಯಿತು. ಲಂಡನಿನ ಮೇಲೆಯೂ ಅನೇಕ ಬಾಂಬುಗಳು ಸಿಡಿದಿವೆ.

ಸ್ಯಾಂಟ್‌ಪಾಲಿಗೆ ಪುನಃ ಬಾಂಬು

ಲಂಡನಿನ ಮೇಲೆ ಇತ್ತೀಚೆಗೆ ನಡೆದ ವಿಮಾನದಾಳಿಯಲ್ಲಿ ಸ್ಯಾಂಟ್ ಪಾಲ್ ಇಗರ್ಜಿಗೆ ಪುನಃ ಬಾಂಬುಗಳು ಬಿದ್ದವೆಯೆಂದು ತಿಳಿದು ಬರುತ್ತದೆ. ಚರ್ಚಿನ ಒಳಗಿನ ವೇದಿಕೆಯು ಇದರಿಂದ ನಾಶವಾಗಿದೆ.

ರುಮೇನಿಯದಲ್ಲಿ ೩೦ ಸಾವಿರ ಜರ್ಮನರು

ರುಮೇನಿಯವನ್ನು ಜರ್ಮನಿಯು ಆಕ್ರಮಣ ಮಾಡಿ ಈಗಾಗಲೇ ಅದರ ಬೇರೆ ಬೇರೆ ಭಾಗಗಳಿಗೆ ಒಟ್ಟು ೩೦ಸಾವಿರ ಜರ್ಮನರು ನುಗ್ಗಿ ಬಂದಿರುವರೆಂದು ತಿಳಿದಿದೆ.

ರುಮೇನಿಯದಲ್ಲಿ ಬ್ರಿಟಿಷ್ ಪ್ರಜೆಗಳು ಸ್ವದೇಶಕ್ಕೆ ಮರಳಬೇಕಾಗಿ ತಿಳಿಸಲಾಗಿದೆ.

ಕ್ಯೂಬಾದಲ್ಲಿ ಹೊಸರಾಜ್ಯ ಪದ್ಧತಿ

ಜನರಲ್ ಬಾಟಿಸ್ಟರವರು ಕ್ಯೂಬಾ ಸರಕಾರದ ಅಧ್ಯಕ್ಷತೆಯನ್ನು ವಹಿಸಿಕೊಂಡು, ಕ್ಯೂಬಾದಲ್ಲಿ ಹೊಸಪದ್ಧತಿಯ ರಾಜ್ಯಭಾರ ಕ್ರಮವನ್ನು ಪ್ರಾರಂಭಿಸಿರುವರು.

ಡಿಗೋಲೆ

ಇವರು ತಾ. ೧೦ರಂದು ಕ್ಯಾಮರೂನ್ ಪ್ರಾಂತಕ್ಕೆ ತೆರಳಿರುವರು. ಅಲ್ಲಿನ ಗವರ್ನರರು ಅವರನ್ನು ಸ್ವಾಗತಿಸಿದರು. ಡಿಗೋಲೆಯವರು ಕ್ಯಾಮರೂನಿನ ಪ್ರಜೆಗಳನ್ನು ಅವರ ಸ್ವತಂತ್ರ್ಯ ಪ್ರೀತಿಗಾಗಿ ಅಭಿನಯಿಸಿದರು. (ಕ್ಯಾಮರೂನ್ ಆಫ್ರಿಕದ ಪಶ್ಚಿಮ ಭಾಗದಲ್ಲಿದೆ. ಇದು ಫ್ರಾನ್ಸಿನ ಸ್ವಾಧೀನದಲ್ಲಿದೆ.)

ಇಟೆಲಿಯನ್ ಕೇಂದ್ರಗಳ ಮೇಲೆ ದಾಳಿ

ಬ್ರಿಟಿಷ್ ವೈಮಾನಿಕ ದಳದವರು ಇಟೆಲಿಯನ್ ಸೈನಿಕ ಕೇಂದ್ರದ ಮೇಲೆ ದಾಳಿ ನಡೆಸಿ ಬಾಂಬಿನ ಮಳೆ ಕರೆದರೆಂದು ಸುದ್ದಿ.

ಕುನಮಿಂಗದ ಮೇಲೆ ಜಪಾನ್ ದಾಳಿ

ಯೂನಾನ ಪ್ರಾಂತ್ಯದ ರಾಜಧಾನಿಯಾದ ಕುನಮಿಂಗದ ಮೇಲೆ ಜಪಾನಿನವರು ದಾಳಿನಡೆಸಿರುವರು. ರೈಲ್ವೇ ಸ್ಟೇಶನಿನ ಮೇಲೆ ಮೊದಲು ಬಾಂಬು ಹಾಕಿದರು. ಅನೇಕ ಕಡೆಗಳಲ್ಲಿ ಇದರಿಂದ ಬೆಂಕಿಯೆದ್ದು ಅರ್ಧ ಊರೇ ಸುಟ್ಟುಹೋಗಿರುವುದಂತೆ.

ಮಾಲ್ಟಾದ ಆಚೆ ಯುದ್ಧ

ಮಾಲ್ಟಾದ ಆಚೆಗೆ ನಡೆದ ನೌಕಾ ಯುದ್ಧದಲ್ಲಿ ಇಟೆಲಿಯನ್ನರು ಒಂದು ನಾಶಿಕೆಯನ್ನೂ ಎರಡು ಜಲಸುರಂಗಗಳನ್ನೂ ಕಳೆದುಕೊಂಡರೆಂದು ವಾರ್ತೆ.

ಮಾಲ್ಟಾದ ಮೇಲೂ ವಿಮಾನ ದಾಳಿಯ ಬೆದರಿಕೆ ಎರಡು ಮೂರು ಸಲ ಆಯಿತು. ಬ್ರಿಟಿಷ್ ವೈಮಾನಿಕರು ಬಹಳಎಚ್ಚರಿಕೆಯಿಂದ ವೈರಿದಾಳಿಯನ್ನು ಮುರಿಸಲು ಕಾದಿದ್ದರು.

ಜಪಾನರಿಗೆ ಅಪಾರ ಹಾನಿ

೨೦೦೦ ಸೈನಿಕರು ಸತ್ತರು

ಯಾಂಗ್ಸ್ಟೀ ನದಿಯ ದಂಡೆಯಲ್ಲಿ ಮವ ಮಾತಂಗ ಎಂಬ ದುರ್ಗದ ಬಳಿ ಚೀನ ಮತ್ತು ಜಪಾನ್ ಸೈನಿಕರಿಗೆ ಘೋರ ಯುದ್ಧವು ನಡೆಯಿತು. ಈ ಕಾಳಗದಲ್ಲಿ ಚೀನಿಯರಿಗೆ ಜಯವಾಗಿ ಜಪಾನದಲ್ಲಿ ೨೦೦೦ ಸೈನಿಕರು ಮೃತರಾಗಿರುವರೆಂದು ತಿಳಿದಿದೆ. ಮಾತುಂಗವು ಸೈನಿಕ ದೃಷ್ಟಿಯಿಂದ ಬಹಳ ಪ್ರಾಮುಖ್ಯ ಸ್ಥಳವಾಗಿದ್ದು ಈ ವಿಜಯದ ಸುದ್ದಿಯಿಂದ ಚೈನೀಯರು ಬಹಳ ಆನಂದಿತರಾದಿರುವರು.

ಹಿಂದೀ ವಿದ್ಯಾರ್ಥೀ ನಿಲಯದ ಮೇಲೆ ಬಾಂಬುಗಳು

ಲಂಡನಿನಲ್ಲಿ ವಾಸವಾಡುತ್ತಿರುವ ಹಿಂದೀ ವಿದ್ಯಾರ್ಥಿನಿಲಯದ ಮೇಲೆ ಬಾಂಬುಗಳು ಬಿದ್ದಿರುವುದಾಗಿ ತಿಳಿದು ಬರುತ್ತದೆ. ಆದರೆ ಸುದೈವದಿಂದ ಯಾರಿಗೂ ಗಾಯವಾಗಿಲ್ಲವಂತೆ.

ಸೋವಿಯೆಟ್ ಫಿನ್‌ಲೆಂಡ್ ಒಪ್ಪಂದ

ಬಾಲ್ಟಿಕ್‌ನಲ್ಲಿ ಸ್ಥಾನ ಭದ್ರತೆ

ಫಿನ್‌ಲೆಂಡ್ ಮತ್ತು ರಶ್ಯಗಳೊಳಗೆ ಒಂದು ಒಪ್ಪಂದವಾಗಿದೆ. ಬಾಲ್ಟಿಕ್ ಸಾಗರದ ತಮ್ಮ ಭದ್ರತೆಯನ್ನು ಮಾಡಿಕೊಂಡು, ಶಾಂತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಹೀಗೆ ಮಾಡಲಾಗಿದೆಯಂತೆ.

ಕನ್ಸರ್ವೇಟಿವ್ ಪಕ್ಷದ ಧುರೀಣತೆ

ಚರ್ಚಿಲರು ವಹಿಸಿದರು

ತಾ. ೯ರಂದು ಕನ್ಸರ್ವೇಟಿವ್ ಪಕ್ಷದ ಸಭೆಸೇರಿ ಅವರ ಮುಂದಾಳುತನವನ್ನು ಚರ್ಚಿಲ್ಲರು ಸ್ವೀಕರಿಸಿದರು. ಆಗ ಅವರು ಮಾಡಿದ ಭಾಷಣವು ಗಂಭೀರವಾಗಿತ್ತು. ಸರ್ವ ಯತ್ನಗಳಿಂದಲೂ ವಿಜಯವನ್ನು ಸಂಪಾದಿಸುವುದಾಗಿ ಹೇಳಿದರು.

ಕನ್ನಡ ಸಾಹಿತ್ಯದಲ್ಲಿ ಅಪೂರ್ವ ಗ್ರಂಥಗಳು!

ವರ್ಧಾಯಾತ್ರೆ:— ಬರೆದವರು ಶ್ರೀ ಕೃಷ್ಣ ಶರ್ಮರು.

ಇಂದಿನ ಯುಗದೇವನಾದ ಗಾಂಧಿಜಿಯ ಕಾರ್ಯರಂಗ ವರ್ಧಾ. ಅಲ್ಲಿನ ಜೀವನ, ಪ್ರಯೋಗ, ವ್ಯಕ್ತಿಗಳು, ಅನುಭವ ದೃಶ್ಯಗಳು ಇವುಗಳನ್ನು ತಮ್ಮ ಸರಸವಾದ ಶೈಲಿಯಿಂದ ಲೇಖಕರು ತಿಳಿಸಿದ್ದಾರೆ.

'ಪುಸ್ತಕವು ಕನ್ನಡಿಗರಿಗೆ ದೊರೆತ ಅಪೂರ್ವ ಲಾಭ. ಗಾಂಧಿಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ಸಿನ ಇತಿಹಾಸ ಈ ಗ್ರಂಥಗಳ ಜತೆಯಲ್ಲಿ ಈ ಪುಟ್ಟ ಪುಸ್ತಕವನ್ನಿಡಬೇಕು.''

ವಿಶ್ವಕರ್ನಾಟಕ

'Wardha Yatre is a new departure in Kannada literature'

ಭಾರತೀಯ ಕಥಾವಳಿ:— ಹಿಂದುಸ್ಥಾನದಲ್ಲಿರುವ ಈಗಿನ ಪ್ರಾಮುಖ್ಯ ಒಂದೊಂದು ಭಾಷೆಯ ಪ್ರಸಿದ್ಧ ಕತೆಗಳನ್ನು ಆಯ್ದು ಸಂಗ್ರಹಿಸಿಕೊಡುವ ಸಾಹಸವನ್ನು ಕೈಗೊಂಡಿದೆ. ಇದರಿಂದ ಭಾರತೀಯರೆಲ್ಲರ ಜೀವನದ ಅರಿವು ಆಗುವುದು. ಪ್ರತಿಯೊಂದು ಮನೆಗೂ ಶೀರಾ ಅವಶ್ಯ ಇರಬೇಕಾದ ಕಥಾ ಸಂಗ್ರಹ.

ಈಗ ಆದ ಕಥಾ ಸಂಗ್ರಹಗಳು

೧. ತೆಲುಗಿನ ಕಥೆಗಳು:—ಕ್ರೌನ್ ೧/೮ ಆಕಾರದ ೧೭೦ ಪುಟಗಳು, ಬೆಲೆ ಕೇವಲ ೮ ಆಣೆ.
೨. ಅಸಾಮಿಯಾ ಕಥೆಗಳು:—ಕ್ರೌನ್ ೧/೮ ಆಕಾರದ ೧೨೦ ಪುಟಗಳು, ಬೆಲೆ ಕೇವಲ ೮ ಆಣೆ.

ಮುಂದಿನ ಪ್ರಕಟಣೆಗಳು

೧. ಪರ್ಣಕುಟಿ:—ಲೇಖಕರು: ಎಸ್. ಕೃಷ್ಣಶರ್ಮ (ಅಚ್ಚಿನಲ್ಲಿದೆ).
೨. ತಮಿಳು ಕತೆಗಳು:—(ಅಚ್ಚಿನಲ್ಲಿದೆ).

ಮಹಾಪೂರ:— (ಸಾಮಾಜಿಕ ಕಾದಂಬರಿ) ಬರೆದವರು: ಶೇಷಗಿರಿರಾವ್ ಕುಲಕರ್ಣಿ. ಕ್ರೌನ್ ೧/೮ ಆಕಾರದ ೧೮೦ ಪುಟಗಳು. ಬೆಲೆ ೧೨ ಆಣೆ.

ಸಾಧನ ಮುದ್ರಣಾಲಯ, ಧಾರವಾಡ.



ಕಾಂಗ್ರೆಸು ಸತ್ಯಾಗ್ರಹವನ್ನು ಹೂಡುವುದು!

ಆದರೆ ಜನತಾ ಸತ್ಯಾಗ್ರಹವಿಲ್ಲ!

ಆರಿಸಿದ ವ್ಯಕ್ತಿಗಳು ಶಾಸನಭಂಗ ಮಾಡುವರು!
ವೈಸರಾಯ ಧೋರಣೆ ತೃಪ್ತಿಕರವಲ್ಲ!
ಹಿಂದೂ ಲೀಗಿನವರ ನಿರ್ಣಯ

ಈ ವಾರದ ಭಾರತದ ರಾಜಕೀಯದಲ್ಲಿ ವರ್ಕಿಂಗ್ ಕಮಿಟಿಯ ನಿರ್ಧಾರವೇ ಮಹತ್ವವಾದುದು. ಪೂನದಲ್ಲಿ ಸೇರಿದ ವರ್ಕಿಂಗ್ ಕಮಿಟಿಯ ಮುಂದೆ ಮಹಾತ್ಮರು ತಾನು ತಯಾರಿಸಿದ ಯೋಜನೆಯನ್ನು ಮುಂದಿರಿಸಿದರು. ಅವರು ಗಾಂಧಿಜಿಯವರ ಯೋಜನೆಯನ್ನು ಒಪ್ಪಿರುವರು.

ಸತ್ಯಾಗ್ರಹವಾಗುವುದು

ಜನತಾ ಸತ್ಯಾಗ್ರಹವಲ್ಲ. ಸತ್ಯಾಗ್ರಹವನ್ನು ಗಾಂಧಿಜಿಯವರು ಆರಿಸಿದ ಕೆಲವೇ ಜನರು ಮಾಡುವರು. ವಾಕ್ ಸ್ವಾತಂತ್ರ್ಯದ ವಿಷಯವಾಗಿ ಶಾಸನಭಂಗವಾಗುವುದು. ವೈಸರಾಯರಿಗೆ ಈ ವಿಷಯವಾಗಿ ಮಹಾತ್ಮರು ಪತ್ರಬರೆದಿರುವರೆಂದು ತಿಳಿದಿದೆ. ವೈಸರಾಯರ ಉತ್ತರವು ಬಂದ ಕೂಡಲೇ ಮೊದಲನೆಯ ಸತ್ಯಾಗ್ರಹ ಸೇನೆಯನ್ನು ಆಚಾರ್ಯ ವಿನೋಬಾರವರೇ ಮುನ್ನಡೆಸಲಿರುವರೆಂದೂ ಗೊತ್ತಾಗಿದೆ.

ವೈಸರಾಯರ ಧೋರಣೆ ತೃಪ್ತಿಕರವಲ್ಲ

ರಾಷ್ಟ್ರೀಯ ಸರಕಾರವಾಗಬೇಕು

ಹಿಂದೂ ಲೀಗಿನವರ ನಿರ್ಣಯ

ಅಖಿಲಭಾರತ ಹಿಂದೂ ಲೀಗಿನ ವರ್ಕಿಂಗ್ ಕಮಿಟಿಯವರು ದಿಲ್ಲಿಯಲ್ಲಿ ಸಭೆಸೇರಿ ಏಳು ನಿರ್ಣಯಗಳನ್ನು ಮಾಡಿರುವರು. ಅದರಲ್ಲಿ ಮುಖ್ಯವಾದುದು ವೈಸರಾಯರ ಪ್ರಕಟನೆಯ ವಿಷಯವಾಗಿಯೇ ಆಗಿದೆ. ಅದರಲ್ಲಿ ವೈಸರಾಯರು ಸಾರಿದ ಹೇಳಿಕೆಯು ತೃಪ್ತಿಕರವಾಗಿಲ್ಲವೆಂದೂ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಬೇಕೆಂದೂ ಹೇಳುವ ನಿರ್ಣಯವೇ ಮುಖ್ಯವಾದುದು.

ಆನಂದಸಿಂಗರ ರಾಜೀನಾಮೆ

ಕಾಂಗ್ರೆಸಿನ ಧೋರಣೆ ತೃಪ್ತಿಯಿಲ್ಲ!

ಸಂಯುಕ್ತ ಪ್ರಾಂತ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಮುಖ್ಯಸ್ಥರಾದ ಶ್ರೀ. ಆನಂದ ಸಿಂಗರು, ಇಂದು ಭಾರತಕ್ಕೆ ವಿದೇಶಗಳ ದಾಳಿಯ ಭೀತಿಯಿರಲು, ರಾಷ್ಟ್ರೀಯ ಸರಕಾರವಾಗಬೇಕಾದ ಅವಶ್ಯವಿರುವಾಗ, ಕಾಂಗ್ರೆಸು ಆ ಕುರಿತು ಇಂದು ಯತ್ನಿಸುವುದಿಲ್ಲವೆಂಬ ಕಾರಣದಿಂದ ಕಾಂಗ್ರೆಸ್ ಪಕ್ಷಕ್ಕೆ ತನ್ನ ರಾಜಿನಾಮೆಯನ್ನು ಕಳುಹಿಸಿರುವರು.

ಗಡಿನಾಡಿನಲ್ಲಿ ಪುಂಡರ ಹಾವಳಿ

ಉತ್ತರ ವಜೀರ ಸ್ಥಾನದಲ್ಲಿ ಪುಂಡರು ಈಗಲೂ ಉಪದ್ರವ ಕೊಡುತ್ತಲೇ ಇರುವರು. ಪುಂಡರು ಒಂದು ಲಾರಿಯನ್ನೂ ಮತ್ತು ೫ ಜನರನ್ನೂ ಅಪಹರಿಸಿಕೊಂಡಿರುವರು.

ಗಡಿನಾಡಿನ ಗಾಂಧಿ

ಇವರು ಸರೋಜಿನಿ ನಾಯಿಡು ಇವರೊಡನೆ ಹೈದರಾಬಾದಿಗೆ ಬಂದಿರುವರು.

ಮದ್ರಾಸಿನ ಕಾಂಗ್ರೆಸ್ ಮಂತ್ರಿ ಮಂಡಳದ ಪ್ರಶಂಸನೆ

ಲಾರ್ಡ್ ಇರಸ್ಕಿನರ ಹೊಗಳಿಕೆ

ಈಸ್ಟ್ ಇಂಡಿಯಾ ಸಂಘದ ಲಂಡನಿನ ಸಭೆಯಲ್ಲಿ ಮದ್ರಾಸಿನ ಮಾಜೀ ಗವರ್ನರರಾದ ಲಾರ್ಡ ಇರಸ್ಕಿನರು ಒಂದು ಭಾಷಣವನ್ನೀಯುತ್ತ ಮದ್ರಾಸಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಳವು ಮಾಡಿದ ಜನ ಹಿತ ಕಾರ್ಯಗಳನ್ನು ಮುಕ್ತ ಕಂಠವಾಗಿ ಹೊಗಳಿದರು. ಆ ದಿನದ ಸಭೆಗೆ ಭಾರತ ಸಚಿವರಾದ ಅಮೆರಿಯವರು ಅಧ್ಯಕ್ಷರಾಗಿದ್ದರು.

ಮದ್ರಾಸಿನಲ್ಲಿ ಮಿಕ್ಕೆಲ್ಲ ಕಡೆಗಳಿಗಿಂತಲೂ ೧೯೩೫ ನೆಯ ಇಸವಿಯ ಇಂಡಿಯಾ ಆಕ್ಟಿನ ಸುಧಾರಣೆಗಳು ಚೆನ್ನಾಗಿ ಜಾರಿಗೆ ಬಂದವು ಎಂಬುದನ್ನವರು ಸಮರ್ಥಿಸಿದರು.

ಜಸ್ಟಿಸ್ ಪಾರ್ಟಿಯ ಅಪಜಯ

ಜಸ್ಟಿಸ್ ಪಾರ್ಟಿಯು ಮದ್ರಾಸಿನಲ್ಲಿ ಜನಹಿತಕಾರ್ಯವನ್ನು ಕೈಕೊಳ್ಳಲು ಸಮರ್ಥವಾಗದಿರುವ ವಿಷಯವಾಗಿ ಅವರು ಹೀಗೆಂದರು "ಜಸ್ಟಿಸ್ ಪಾರ್ಟಿಯ ಸೋಲಿಗೆ ಅದರ ಸರಕುಚಿತ ಜಾತಿಯತೆಯ ಧೋರಣೆಯೇ ಕಾರಣ. ಅದು ದೇಶದ ಆರ್ಥಿಕ ವಿಷಯಗಳಿಗಿಂತಲೂ ಜಾತಿಯ ವಿಷಯಗಳಿಗೆ ಹೆಚ್ಚು ಮನಸ್ಸು ಕೊಟ್ಟಿತು. ಜಸ್ಟಿಸ ಪಾರ್ಟಿಯು ಶಾಸನ ಸುವ್ಯವಸ್ಥೆಗಳ ಹೆಸರಲ್ಲಿ ಕೈಕೊಂಡ ಹಲವು ಅಸಮಾಧಾನಕರ ಧೋರಣೆಗಳ ದೆಸೆಯಿಂದ ಅದರ ತಲೆಯ ಮೇಲೆ ಅಪಮಾನದ ಹೊರೆಯೇ ಬಿತ್ತು.

ಕಾಂಗ್ರೆಸ್ ಪಕ್ಷದ ವಿಜಯ

ಕಾಂಗ್ರೆಸು ಪಕ್ಷಕ್ಕೆ ಅಂತಹ ಸರಕುಚಿತ ಮನೋವೃತ್ತಿಯಿರಲಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯು ಪಕ್ಷದ ಮುಖಂಡರು ಬಹಳ ಉದಾತ್ತ ಮನೋವೃತ್ತಿಯ ದೇಶಹಿತೇಚ್ಛುಗಳಾದ ಸತ್ಪುರುಷರಿಂದೇ ಭಾವನೆಯಿತ್ತು. ಅದರ ಪಕ್ಷವ್ಯವಸ್ಥೆಯೂ ಚನ್ನಾಗಿತ್ತು. ಪ್ರಧಾನರಾಗಿದ್ದ ರಾಜಗೋಪಾಲಾಚಾರ್ಯರು ಒಳ್ಳೆಯ ನಿಪುಣರು, ಕಷ್ಟಪಟ್ಟು ಕೆಲಸ ಮಾಡುವವರು. ಗವರನರರ ದೃಷ್ಟಿಯಿಂದಲೂ ಅವರು ಸಮರ್ಥರಾಗಿದ್ದರು. ಅವರು ಸಾಧ್ಯವಿದ್ದಲ್ಲೆಲ್ಲಾ ನಿರ್ವಂಚನೆಯ ಬುದ್ಧಿಯಿಂದಲೇ ಕೆಲಸಮಾಡುತ್ತಿದ್ದರು."

ಕಾಂಗ್ರೆಸ್ ಮಂತ್ರಿಮಂಡಳದ ಉದಾತ್ತ ಧೋರಣೆಗೆ ಇದಕ್ಕಿಂತ ಹೆಚ್ಚಿನ "ಸರ್ಟಿಫಿಕೇಟು" ಬೇಕೆ?

ಕಾಸರಗೋಡು

ಗಾಂಧಿಜಯಂತಿ: ಕಾಸರಗೋಡು ತಾಲೂಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಗಾಂಧಿ ಸಪ್ತಾಹವು ಬಹಳ ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಪ್ರಭಾತಫೇರಿ ಧ್ವಜಾರೋಹಣದಿಂದ ಕೊಡಗಿ ಬಡಜನರಿಗೆ ಅನ್ನದಾನ, ಸಾರ್ವಜನಿಕ ಸಭೆಗಳ ವಿಶೇಷ ಸಮಾರಂಭಗಳು ನಡೆಸಲ್ಪಟ್ಟವು. ತಾ ೩, ೪ ಮತ್ತು ೫ನೇ ದಿನಗಳಲ್ಲಿ ಖಾದಿ ಮಾರಾಟಕ್ಕೆ ಮಾಡಿದ್ದರು.

ಯುವಜನ ಸಂಘ — ಈ ಸಂಘದ ಆಶ್ರಯದಲ್ಲಿ ಮೊನ್ನೆ ತಾ. ೬ನೇ ಆದಿತ್ಯವಾರ "ಅಹಿಂಸಾ ತತ್ವವು ರಾಜಕೀಯ ರಂಗದಲ್ಲಿ ಸಫಲತೆಯನ್ನು ಹೊಂದಿಲ್ಲ" ಎಂಬ ವಿಷಯದ ಕುರಿತು ಚರ್ಚೆಯಾಯಿತು. ಶ್ರೀಮಾನ್ ಕೆ. ಬಾಬು ಸೆಟ್ಟಿಯವರು ಮೇಲಿನ ವಿಷಯವನ್ನು ಸಭೆಯ ಮುಂದಿಟ್ಟರು. ಪುರಾಣೇತಿಹಾಸಗಳ ಅನೇಕ ಉದಾಹರಣೆಗಳಿಂದ ಅನೇಕ ಸಂಧರ್ಭಗಳನ್ನು ಸೂಚಿಸಿ ಬೇರೆ ಬೇರೆ ರಾಜಕೀಯ ಮುಂದಾಳುಗಳ ಈ ಸಾಹಸವು ನಿಷ್ಫಲವಾದುದನ್ನು ಹೇಳಿದರು. ಅವರನ್ನು ವಿರೋಧಿಸಿ ಶ್ರೀ. ಎ. ಅಚ್ಯುತನ್ ಅವರು ಗಾಂಧಿಜಿಯವರ ತತ್ವವನ್ನು ಸಮರ್ಥಿಸಿ ನಮ್ಮ ರಾಷ್ಟ್ರೀಯ ಚಳವಳದಲ್ಲಿ ಹಿಂದೆ ಅನೇಕ ಕಡೆಗಳಲ್ಲಿ ಅಹಿಂಸಾತ್ಮಕ ದೃಷ್ಟಿಯಿಂದ ಕಂಡುಬಂದ ಹೊಸ ಜೀವವು ನಮ್ಮ ಜನರ ಎದೆಯಲ್ಲೆಲ್ಲ ತುಂಬಿಕೊಂಡಿದೆಯೆಂದು ಮುನಷ್ಯನ ಆದಿಯಿಂದಲೂ ಸಂಸ್ಕೃತಿಯ ಮಾರ್ಗವನ್ನು ಹಿಡಿದಂತೆ ಕ್ರೂರತನದಿಂದ ಶಾಂತಿಸ್ವಭಾವವನ್ನು ಹೇಗೆ ಹೊಂದಿದನೆಂದು ಸಕಾರಣಗಳಿಂದ ಯೋಗ್ಯ ಉದಾಹರಣೆಗಳಿಂದ ಸಮರ್ಥಿಸಿದರು. ಅವರನ್ನು ಅನುಮೋದಿಸಿ ಶ್ರೀ. ಕೆ. ರಾಮಕೃಷ್ಣ ಶೆಟ್ಟಿಯವರು ಮಾತನಾಡಿದರು. ಶ್ರೀ ಕೆ ನಾರಾಯಣ ಶೆಟ್ಟರು ಲಕ್ಷ್ಮಣ ಬಲ್ಲಾಳರು ಮತ್ತು ಕೆದಿಲ್ಲಾಯರು ಮೊದಲನೆಯವರನ್ನು ಸಮರ್ಥಿಸಿ ಮಾತನಾಡಿದರು. ಕಡೆಗೆ ಶ್ರೀ ಬಾಬು ಶೆಟ್ಟಿಯವರು ಉಳಿದವರಿಗೆ ಉತ್ತರವನ್ನು ಕೊಡುತ್ತಾ ಈ ತತ್ವವು ಎಲ್ಲಿಯೂ ಇದು ಸಫಲ ಹೊಂದಿದುದಿಲ್ಲವೆಂದು ವಾದಿಸಿದರು.

ಆ ಮೇಲೆ, ಅಧ್ಯಕ್ಷರಾದ ಮಿ ಕೆ. ಕೆ. ಕೋರಿಣ್ ರವರು ಎರಡನೆ ಪಕ್ಷವನ್ನು ಹಿಡಿದು ಒಂದೆರಡು ಉದಾಹರಣೆಗಳಿಂದ ಹಿಂದೂದೇಶದಲ್ಲಿ ಕಾಂಗ್ರೆಸ್ಸಿನ ಪ್ರಾಬಲ್ಯಕ್ಕೆ ಅಹಿಂಸಾತತ್ವವೇ ಕಾರಣವೆಂದು ಹೇಳಿ ಸಭೆಯನ್ನು ಕೊನೆಗೊಳಿಸಿದರು.

ತಾಲೂಕು ಹರಿಜನ ಸೇವಕ ಸಂಘ:

ತಾಲೂಕು ಹರಿಜನ ಸೇವಕ ಸಂಘದ ಸ್ಥಾಪನೆಯ ಸಲುವಾಗಿ ತಾಲೂಕಿನ ಬೇರೆ ಬೇರೆ ಕಡೆಯ ಸಾರ್ವಜನಿಕ ಕೆಲಸಗಾರರ ಸಭೆಯೊಂದು ತಾ. ೧೩ರಂದು ಸೇರಿತು. ಆ ದಿನದ ಸಭೆಯಲ್ಲಿ ಜಿಲ್ಲಾ ಹರಿಜನ ಸೇವಕರಾದ ಶ್ರೀ. ನಾರಾಯಣ ಕಿಲ್ಲೆಯವರು ಜಿಲ್ಲೆಯ ಹರಿಜನ ಕಾರ್ಯವನ್ನು ವಿವರಿಸಿ ಹೇಳಿದರು. ಆ ಮೇಲೆ ಈ ಕೆಳಗಿನ ಮಹನೀಯರಿಂದ ಕೂಡಿದ ಒಂದು ಸಮಿತಿಯು ರಚಿತವಾಯಿತು. ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈ (ಅಧ್ಯಕ್ಷರು) ಶ್ರೀ ಬಿ ಶ್ರೀಧರ ಕಕ್ಕಿಲ್ಲಾಯ (ಉಪಾಧ್ಯಕ್ಷರು) ಶ್ರೀಗಳಾದ ಬಾಬು ಶೆಟ್ಟಿ ಮತ್ತು ಡಾ। ಪಿ ಎಸ್ ಶಾಸ್ತ್ರಿ (ಜತೆಕಾರ್ಯದರ್ಶಿಗಳು) ತಾಲೂಕಿನ ಬೇರೆ ಬೇರೆ ಕೇಂದ್ರಗಳಲ್ಲಿ ಕೆಲಸಗಳನ್ನು ಮಾಡುವ ಕಾರ್ಯಕ್ರಮವು ಚರ್ಚಿಸಲ್ಪಟ್ಟಿತು.

ಮಂಗಳೂರು

ಕರ್ನಾಟಕ ಆಯುರ್ವೇದ ಮಂಡಲ

ನಿಖಿಲ ಕರ್ನಾಟಕಾಯುರ್ವೇದ ಮಂಡಲದ ೩ನೇ ಸ್ಥಾಯಿ ಸಮಿತಿಯ ಅಧಿವೇಶನವು ತಾ. ೨೨-೧೦-೪೦ನೇ ಮಂಗಳವಾರ ಮುಂಜಾನೆ ೮-೩೦ಕ್ಕೆ ವೈದ್ಯ ಬಿ. ಆರ್. ಹರಿದಾಸರ ಶ್ರೀ. ಸಮರ್ಥ ಆಯುರ್ವೇದಿಕ್ ಫಾರ್ಮೆಸಿಯಲ್ಲಿ ನಡೆಯುವುದು.

[illegible] ಸ್ವರಾಜ್ಯದ [illegible] ಇದು ಸ್ವಾತಂತ್ರ್ಯದ ಪ್ರಶ್ನೆಗಿಂತಲೂ ಮಹತ್ವದ್ದು. [illegible] ಭಾರತದ ೭ ಲಕ್ಷ ಹಳ್ಳಿಗಳಲ್ಲಿ ಜೀವನವನ್ನುಂಟುಮಾಡಬೇಕು; ಮುಂದೆ ಕೈಕೊಳ್ಳಬಹುದಾದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಹಳ್ಳಿಗರು ಶ್ರದ್ಧೆ ಆಸಕ್ತಿಗಳನ್ನು ಇಟ್ಟು ಸಹಕರಿಸುವಂತೆ ಮಾಡಬೇಕು; ಇದಕ್ಕಾಗಿ ದೊಡ್ಡದೊಂದು ಸಂಸ್ಥೆಯು ಆಗಬೇಕು. ಸಂಸ್ಥೆಗೆ ಅಪಾರ ಧನ ಸಹಾಯವು ಬೇಕು; ಎಲ್ಲಾ ಪ್ರಾಂತ್ಯಗಳಲ್ಲಿನ ಪ್ರಭಾವಶಾಲಿ ಶ್ರೀಮಂತರಾದ ಸಕಲ ದೇಶ ಪ್ರೇಮಿಗಳ ಸಹಾಯಸಹಾನುಭೂತಿಗಳನ್ನೂ ಸಂಪಾದಿಸಬೇಕು; ಇಂತಹ ಅಮೋಘ ಆಂದೋಲನವನ್ನು ಮಹಾತ್ಮರು ನಾಯಕತ್ವ ವಹಿಸಿ ನಡೆಸದಿದ್ದರೆ ಮತ್ತಾರಿಂದಲೂ ಸಾಧ್ಯವಿರಲಿಲ್ಲ.

ಮಹಾತ್ಮರ ನಿರ್ಧಾರವೆಂದರೆ ಹಿಮಾಚಲದಂತೆ. ಸತ್ಯಾಗ್ರಹದ ಮೊದಲ ಪ್ರಯೋಗ ಕಾಲದಲ್ಲಿ ಸತ್ಯಾಗ್ರಹಿಯ ಪ್ರಥಮ ಶಪಥವೆಂದರೆ ನೂಲುವುದು. ಖಾದಿಯೇ ಭಾರತದ ಉದ್ಧಾರಕ್ಕೆ ಪ್ರಥಮ ಸೋಪಾನ ಈ ಆಂದೋಲನವು ಪ್ರಾರಂಭವಾದ ಕೂಡಲೇ ಖಾದಿಯ ಕಡೆಗೆ ಜನಾಂಗದ ಮನಸ್ಸು ಸೆಳೆಯಿತು "ಖದ್ದರ್" ಬಟ್ಟೆಯ ಖರ್ಚು ವಿಪರೀತವಾಗುತ್ತಲೇ ಹಳ್ಳಿಗರು ನೂಲುವುದರಲ್ಲಿ ಗಮನ ಕೊಡತೊಡಗಿದರು ಗ್ರಾಮಗಳಲ್ಲೆಲ್ಲಾ ನೂಲುವ ಚರಕ ಅಥವಾ ರಾಟೆಗಳು ಜನಪ್ರಿಯವಾದುವು ಮಾತ್ರವಲ್ಲದೆ ಪ್ರಥಮದಲ್ಲಿಯೇ ಅವುಗಳಿಂದ ಉಂಟಾಗುವ ಆದಾಯವು ಹಳ್ಳಿಗರ ಜೀವನದ ಹೊರೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಲನುಕೂಲವಾಯಿತು.

ಒಂದು ಸಲಕ್ಕೆ ಹಳ್ಳಿಗಳಲ್ಲಿ ಪ್ರಚಾರಕ್ಕೆ ಬಂದ ಚರಕಗಳ ಸಂಖ್ಯೆಯನ್ನೂ ಮತ್ತು ಅದರೊಂದಿಗೆ ಉಂಟಾದ ಉತ್ಸಾಹವನ್ನೂ ಕುಗ್ಗಲು ಬಿಡಬಾರದೆಂಬದಾಗಿ ಮಹಾತ್ಮರು ಅಖಿಲ ಭಾರತ ಚರಕಾ ಸಂಘ, ಗಾಂಧಿ ಸೇವಾ ಸಂಘ, ಗ್ರಾಮೋದ್ಧಾರ ಸಂಘ ಮೊದಲಾದ ಅನೇಕ ಸಂಸ್ಥೆಗಳನ್ನು ಸಂಘಟಿಸಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಮುಖಾಂತರ ಅವುಗಳಿಗೆ ಧನ ಜನ ಬಲ ಒದಗುವಂತೆ ಮಾಡಿದರು

ಈ ಕೆಲಸದಲ್ಲಿ ಗಾಂಧಿಜೀಯವರಿಗೆ ಅನೇಕಾನೇಕ ಕೋಟ್ಯಾಧೀಶ್ವರ ಪ್ರಭೃತಿಗಳ ಸಹಾಯವು ದೊರಕಿದುದು ಗಮನೀಯವಾದ ವಿಚಾರ. ಗಾಂಧಿಜೀಯವರು ಜಗತ್ತಿನ ದೊಡ್ಡ ಭಿಕ್ಷುಕರು. ಅವರ ಬೇಡುವಿಕೆಯೆಂದರೆ ಹೃದಯಂಗಮವಾದುದು. ಹೃದಯವನ್ನು ಪರಿವರ್ತಿಸುವಂತಹುದು. ಸೇಟ್ ಜಮ್ನಾಲಾಲ್ ಬಜಾಜ್, ಬಿರ್ಲಾ ಬಂಧುಗಳು, ನಾಗೇಶ್ವರರಾವ್ ಪಂತುಲು ಇವರು, ಅಲ್ಲದೆ ಗುಜರಾತ್, ಬಂಗಾಳ, ಪಂಜಾಬ್, ಗಡಿನಾಡಿನ ಅನೇಕ ಜಮೀನ್ದಾರರುಗಳು ಮಹಾತ್ಮರಿಗೆ ತಮ್ಮ ಸಹಾಯಹಸ್ತವನ್ನು ನೀಡಿದರು.

ರಚನಾತ್ಮಕ ಕಾರ್ಯಕ್ರಮ

[ಲೇಖಾಂಕ ೨]

ಮಹಾತ್ಮರ ಮುಂದಾಳುತನದಲ್ಲಿ

ಬರೆದವರು:— ಸಿ. ಪಿ. ಕಾಮತ್, ನಲ್ಪಾಡಿ

ಗ್ರಾಮೋದ್ಧಾರದ ಸಂಸ್ಥಾ ಸಂಘಟನೆಗೆ, ಪ್ರಭಾವಶಾಲಿ ಶ್ರೀಮಂತರುಗಳ ಸಹಾಯವು ಅವಶ್ಯವಿದ್ದಂತೆ ಈ ಸಂಸ್ಥೆಗಳನ್ನು ನಡೆಸಲು ನಿಸ್ವಾರ್ಥ ಕರ್ಮಯೋಗಿಗಳ ಅವಶ್ಯಕತೆಯೂ ಅಷ್ಟೆ ಪ್ರಾಮುಖ್ಯದ್ದಿರುತ್ತದೆ. ಸಬರಮತಿಯ ಆಶ್ರಮದಲ್ಲಿ ತರಬೇತಿ ಹೊಂದಿದ ಬಹು ಮಂದಿಗಳಿಗೆ ಪ್ರಥಮದಲ್ಲಿ ಗ್ರಾಮಸೇವೆಯ ದೀಕ್ಷೆ ಕೊಡಲಾಯಿತು. ಈ ಕರ್ಮವೀರರು ಸನ್ಯಾಸಿಗಳಂತೆ ಅತ್ಯಂತ ಸರಳ ಜೀವನಕ್ರಮವನ್ನು ಜನ್ಮಾಂತ್ಯದವರೇಗೆ ಶಿಸ್ತಿನಿಂದ ಪಾಲಿಸಲು ಪ್ರತಿಜ್ಞೆ ಕೊಟ್ಟಂಥವರು. ಗ್ರಾಮಗಳಲ್ಲಿ, ಗ್ರಾಮಸ್ಥರಂತೆ ಉಂಡುಟ್ಟು ಈ ನಿಸ್ವಾರ್ಥ ಪುರುಷರು ಆರಂಭದಲ್ಲಿ ಗ್ರಾಮೋದ್ಧಾರದ ತಳಹದಿಯನ್ನು ಹಾಕಿದರು ಇವರು ತಮ್ಮ ಸೇವೆಗೆ ಪ್ರತಿಫಲವಾಗಿ ಏನನ್ನೂ ಸಂಸ್ಥೆಯಿಂದ ಪಡೆಯುತ್ತಿದ್ದಿಲ್ಲ. ತಮ್ಮ ಜೀವನದ ಖರ್ಚಿಗೆ ಬೇಕಾಗುವ ಹಣವನ್ನು ದಿನದಲ್ಲಿ ಹತ್ತು ತಾಸುಗಳ ತನಕ ಶ್ರಮಪಟ್ಟು ಕೆಲಸ ಮಾಡಿ ಸಂಪಾದಿಸುತ್ತಿದ್ದರು. ಇವರ ಜೀವನವು ಅತ್ಯಂತ ಆದರ್ಶಪೂರ್ಣವಾದದು

ಮಹಾತ್ಮಾಜಿಯವರು ಮೇಲೆ ವಿವರಿಸಿದ ನಿಸ್ವಾರ್ಥೀ ಸಂಗಡದರ ಪುಡಾರಿಗಳೆನ್ನಬಹುದು ಸ್ವತಃ ತಮ್ಮ ಜೀವನವನ್ನು ಇತರರಿಗೆ ಆದರ್ಶಕವಾಗುವಂತೆ ನಿಯಮವಿಟ್ಟಿದ್ದಾರೆ ಇದರಿಂದ ತಮ್ಮ ನೈತಿಕ ಶಕ್ತಿಯನ್ನು ವಿಕಾಸಗೊಳಿಸಿದ್ದಾರೆ ಮಹಾತ್ಮರೊಡನೆ ಹತ್ತಿರದ ಸಂಪರ್ಕದ ಭಾಗ್ಯವುಳ್ಳವರೆಲ್ಲರೂ ಹೆಚ್ಚಾಗಿ ಅವರಂತೆ ಸರಳ ಜೀವಿಗಳಾಗಲು ಪ್ರಯತ್ನಿಸುವವರೇ ಆಗಿರುತ್ತಾರೆ

ಮಹಾತ್ಮರು ಗ್ರಾಮೋದ್ಧಾರ ಆಂದೋಲನದ ವರ್ಚಸ್ಸನ್ನು ಹೆಚ್ಚಿಸಲು ತಮ್ಮ ಅನುಯಾಯಿ ವರ್ಗದಲ್ಲಿ ಅನೇಕ ಪ್ರಭಾವಶಾಲಿ ಪ್ರಮುಖರನ್ನು ಅನೇಕ ರೀತಿಯ ಗ್ರಾಮೋದ್ಧಾರದ ಪ್ರತಿಜ್ಞೆಯನ್ನು ತೆಗೆದುಕೊಳ್ಳುವಂತೆ ಮಾಡಿದ್ದಾರೆ

ಇಂತಹ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಸೆರ್ ಪಿ. ಸಿ. ರೇಯವರೂ ಒಬ್ಬರೆನ್ನಬಹುದು ಇವರು ಬಂಗಾಳದ ಗ್ರಾಮಗಳಲ್ಲಿ ಸ್ವತಂತ್ರ ರೀತಿಯಲ್ಲಿ ಸೇವೆ ಮಾಡುವವರಿದ್ದಾರೆ. ಖಾದಿಧಾರಿಗಳು, ಸರಳ ಜೀವಿಗಳು, ಮುಖ ಕ್ಷೌರ ಕೂಡ ಮಾಡಿಕೊಳ್ಳುವುದಿಲ್ಲ. ಇವರಂತೆ ವಿಶ್ವಕವಿ ರವೀಂದ್ರನಾಥ ಟಾಗೋರರೂ ಕೂಡ ಪ್ರಾಚೀನ ಗ್ರಾಮ್ಯ ನಾಗರೀಕತೆಯನ್ನು ಪುನರುದ್ಧಾರಗೊಳಿಸಲು ಶಾಂತಿನಿಕೇತನ ಅಥವಾ ಗ್ರಾಮ ವಿಶ್ವವಿದ್ಯಾಲಯವೆನ್ನಬಹುದಾದ ಸಂಸ್ಥೆಯನ್ನು ಸಂಸ್ಥಾಪಿಸಿ ಭಾರತದ ಸಂಸ್ಕೃತಿಯ ಸೊಬಗನ್ನು ಜಗತ್ತಿಗೆ ಬೆಳಗಿಸುವವರಾಗಿದ್ದಾರೆ.

ಇಂದು ಜಮನಾಲಾಲ್ ಬಜಾಜ್, ಗಣೇಶಶ್ಯಾಮ್ ದಾಸ್ ಬಿರ್ಲಾ, ಡಾ. ಗೋಪಿಚಂದ ಭಾರ್ಗವಾ, ಡಾ ಬಿಧನ್ ಚಂದ್ರ ರಾಯ್ ಇವರೇ ಮೊದಲಾದ ಅನೇಕಾನೇಕ ಕೋಟ್ಯಾಧೀಶ್ವರರು ತಮ್ಮ ನಿಯಮಿತ ಗಜದಷ್ಟು ನೂಲನ್ನು ತಕಲಿಯಲ್ಲಾಗಲಿ ಚರಕದಲ್ಲಾಗಲಿ ನೂಲದೆ ಆಹಾರವನ್ನು ತೆಗೆದುಕೊಳ್ಳಲಾರರೆಂಬ ವಿಷಯವು ಅನೇಕರನ್ನು ಆಶ್ಚರ್ಯಗೊಳಿಸಬಹುದು ಗಾಂಧಿವಾದಿಗಳೊಂದಿಗೆ ಈ ನಿಯಮವು ಸಾಮಾನ್ಯದ್ದಾದರೂ ಸಾಮಾನ್ಯ ಹಳ್ಳಿಗನ ಮೇಲೆ ಇದು ಹುರುಪಿನ ಪರಿಣಾಮವನ್ನುಂಟುಮಾಡುವಂತಹದ್ದಿದೆ ಜ ನೆಹರು, ಸರೋಜಿನಿ, ಖಾನ್ ಸಹೋದರರು, ರಾಜಗೋಪಾಲಾಚಾರ್ಯರು, ರಾಜೇಂದ್ರ ಬಾಬುಗಳು ಮತ್ತು ಇತರರೂ ಈ ಪಂಗಡದವರಿರುವರು.

ಒಟ್ಟಿನಲ್ಲಿ ಹೇಳುವದಾದರೆ ಒಂದೊಂದು ಪ್ರಾಂತ್ಯದಲ್ಲಿ ಒಬ್ಬೊಬ್ಬರಂತೆ ಪ್ರಭಾವ ಶಾಲಿಗಳನ್ನು ತಮ್ಮ ತತ್ವಕ್ಕೆ ಮತಾಂತರ ಗೊಳಿಸಿದ "ಮಿಶನರಿ" ಈ ಮುದುಕ ಗಾಂಧಿ ಎನ್ನಬಹುದು ನಮ್ಮ ಮದ್ರಾಸ್ ಪ್ರಾಂತ್ಯದಲ್ಲಿ ಕೊಂಡೆ ವೆಂಕಟಪ್ಪಯ್ಯ, ಸಾಂಬ ಮೂರ್ತಿ, ರಾಜಗೋಪಾಲಾಚಾರಿ ಇವರು ಕೆಲವು ಇಂತಹ ನಿದರ್ಶನಗಳ

ರಾಜಗೋಪಾಲಾಚಾರಿ ಎಂದರೆ ಗಾಂಧಿ ಕೇಂದ್ರಗಳಲ್ಲೆ ಬಹಳ ಸನಾತನ ವ್ಯಕ್ತಿ ಗಾಂಧಿಜಿಯವರು ಗ್ರಾಮೋದ್ಧಾರಿಗಳಾಗುವ ಮೊದಲೇ ಅದರ ಪ್ರಚಾರ ಕೈಕೊಂಡಿದ್ದು ತಮ್ಮ ಸ್ವಂತ ಆಶ್ರಮವೊಂದನ್ನು ನಡೆಸಿಕೊಂಡು ಬರುತ್ತಿದ್ದವರು. ಗಾಂಧಿಜೀಯವರು ಹರಿಜನೋದ್ಧಾರಕ್ಕೆ ಕೈಕೊಂಡ ಬಹು ವರ್ಷಗಳ ಹಿಂದೆ ಸೇಲಂ ನಗರಾಧ್ಯಕ್ಷರಾಗಿದ್ದ ಆಚಾರ್ಯರು ಸಾರ್ವಜನಿಕ ಬಾವಿ ಕೆರೆಗಳನ್ನು ಹರಿಜನರಿಗೂ ಉಪಯೋಗವಾಗುವಂತೆ ಮಾಡಿ ಕೀರ್ತಿಗಳಿಸಿದ ಮಹಾ ಮೇಧಾವಿಗಳು–ನಮ್ಮ ಮಾಜೀ ಅಮಾತ್ಯರು

ಇದೇ ರೀತಿ ಆದರೆ ಇನ್ನೊಂದು ತರದಲ್ಲಿ ಕೀರ್ತಿಗಳಿಸಿದವರು ಗಡಿನಾಡಿನ ಗಾಂಧಿಗಳು. ಈ ಮಹಾನುಭಾವರು ಗ್ರಾಮೋಧ್ಧಾರವನ್ನು ಕೈಕೊಂಡದ್ದು ಮಾತ್ರವಲ್ಲದೆ ಗಡಿನಾಡಿನ ಪಟಾಣರನ್ನು ಅಹಿಂಸಾತ್ಮಕ ಸೇವೆಯಲ್ಲಿ ತರಬೇತಿ ಮಾಡಲು ಪಣತೊಟ್ಟಿದ್ದಾರೆ. ಇವರ ವಾಸಸ್ಥಾನ ಹಳ್ಳಿಯಲ್ಲಿ. ನೋಡಲು ಶುದ್ಧ ಹಳ್ಳಿಗನಂತೆ ಇರುವರು. ಇವರು ಪ್ರತಿದಿನ ಮೂರು ಗಂಟೆ ಕಾಲ ತಕಲಿಯಿಂದ ಎಳೆಬೆ ನೂಲುವ ಅಭ್ಯಾಸ ಮಾಡಿರುವರು.

ಹಿಂದೆ ಹೇಳಿದ ವ್ಯಕ್ತಿಗಳಲ್ಲಿ ಹೆಚ್ಚಿನವರು ರಾಜಕೀಯ ರಂಗದಲ್ಲಿಯೂ ಖ್ಯಾತಿಗಳಿಸಿಕೊಂಡವರಿದ್ದಾರೆ. ಇವರ ವಿಚಾರವನ್ನೂ ಆರಂಭದಲ್ಲಿ ಪ್ರಸ್ತಾಪಿಸುವ ಉದ್ದೇಶವೆಂದರೆ ಓದುಗರಲ್ಲಿ ಗ್ರಾಮೋದ್ಧಾರದ ಅಭಿರುಚಿಯನ್ನುಂಟುಮಾಡುವುದು. ಈ ಲೇಖನದಿಂದ ಓದುಗರಲ್ಲಿ ಗ್ರಾಮಸೇವಕರ ಮೇಲೆ ಸಹಾನುಭೂತಿ ದೃಷ್ಟಿ ಉಂಟಾದರೆ ಈ ಲೇಖನದ ಉದ್ದೇಶವು ಪರಿಪೂರ್ಣವಾಯಿತೆನ್ನಬಹುದು.

ಈ ಲೇಖನದ ಸಾರಾಂಶವೆಂದರೆ: ಗ್ರಾಮಸೇವೆಯು ನಮ್ಮ ಸಮೀಪ ಭವಿಷ್ಯದ ಕರ್ತವ್ಯ. ಇದಕ್ಕಾಗಿ ಪ್ರಭಾವಶಾಲೀ ಪುರುಷರನ್ನೊಳಗೊಂಡ ಸಂಸ್ಥೆಯ ಆವಶ್ಯಕತೆಯೂ, ನಿಸ್ವಾರ್ಥ ಕೆಲಸಗಾರರ ಅವಶ್ಯಕತೆಯೂ ಇರಲೇ ಬೇಕು ಬಲವಾದ ಒಂದು ಸಂಘ ಸ್ಥಾಪಿಸುವರೆ ಸಾಹಸವಾಗಬೇಕು ಇದಕ್ಕಾಗಿ ಆಯಾಯ ಪ್ರಾಂತ್ಯ ಅಥವಾ ಜಿಲ್ಲೆಯ ಸಾಹಸಿಗಳು ಅಖಿಲ ಭಾರತ ಗ್ರಾಮೋದ್ಧಾರ ಸಂಸ್ಥೆಯ ಸಲಹೆಯನ್ನು ಕೇಳಬೇಕು. ಒಂದು ಜಿಲ್ಲೆಯಲ್ಲಿ ಗ್ರಾಮಸೇವೆಯ ಸಂಘವೊಂದರ ಘಟನೆಗಾಗಿ ಒಂದಿಷ್ಟು ಗಣನೀಯ ಮೊಬಲಗು ಮೂಲಧನ ರೂಪವಾಗಿ ಸಂಗ್ರಹಿಸಲ್ಪಟ್ಟಿತೆಂದರೆ ಈ ಮುಂದಿನ ಕೆಲಸದ ದಾರಿಯನ್ನು ಅಖಿಲ ಭಾರತ ಸಂಸ್ಥೆಯು ತೋರಿಸಿ ಸಹಾಯ ಮಾಡುವುದು

[ಮುಂದಿನ ಲೇಖನದಲ್ಲಿ ಗ್ರಾಮೋದ್ಧಾರದ ಪ್ರಸಾರ, ಪ್ರಭಾವ, ಅದರ ಕಾರ್ಯಕ್ರಮವು ಹೇಗೆ ನಡೆಸಲ್ಪಡುತ್ತದೆ ಇವೇ ಮೊದಲಾದ ಸವಿಸ್ತಾರ ವಿಷಯಗಳನ್ನು ಕೊಡಲಾಗುವುದು –ಲೇ]

(ಮುಂದುವರಿಯುವುದು)

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S D A 281/1940

in

S C 1031/1935

ಪಿ ಯಸ್ ಫೆರ್ನಾಂಡೀಸ್ ಅರ್ಜಿದಾರ

ಮತ್ತು

1 ಅಪ್ಪಣ್ಣ ಶೆಟ್ಟಿ
2 ವೆಂಕು ಸಡ್ತಿ
3 ಗೋಪಾಲ ಶೆಟ್ಟಿ
} ರೆಸ್ಪಾಂಡೆಂಟರು

ಮೇಲ್ಕಂಡ ಅರ್ಜಿಯಲ್ಲಿ ಅರ್ಜಿದಾರನನ್ನು ಮೃತ ಫಾದರ್ M. S. ಫೆರ್ನಾಂಡೀಸರ, ವಾರಿಸ್ದಾರನನ್ನಾಗಿ ತಕ್ತೆಯಲ್ಲಿ ಅರ್ಜಿದಾರನ ಸ್ಥಾನಕ್ಕೆ ಸೇರ್ಸಿ ಸಡ್ತಿ ದಿಕ್ರಿಯು ಮುಂದಕ್ಕೆ ಅಮಲ್ಜಾರಿ ಬಗ್ಗೆ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿಗೆ ಟ್ರಾನ್ಸ್ಫರ್ ಮಾಡಬೇಕೆಂತ ವಗೈರೆ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ ಸದ್ರಿ ಅರ್ಜಿಯು ವಿಚಾರಣೆ ಬಗ್ಗೆ ಈ ಕೋರ್ಟಿನಲ್ಲಿ ತಾರೀಕು 1—11—1940ಕ್ಕೆ 10-30ಕ್ಕೆ ಇಟ್ಟಿರುವುದರಿಂದ ಆ ಬಾಬ್ತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಖುದ್ದಾಗಲೀ, ಯ ವಕೀಲ್ ದ್ವಾರವಾಗಲೀ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಹೇಳಬೇಕು ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ, ತೀರ್ಮಾನಿಸಲಾಗುವುದೆಂಬ ಸಂಗತಿಯನ್ನು ಈ ಮೂಲಕ ನಿಮಗೆ ತಿಳಿಸಲಾಗಿಯದೆ.

ಮಂಗಳೂರು 14–10–'40 } J.M. Sequeira, Vakil for Petitioner

ವಿಚಿತ್ರ ಪ್ರಪಂಚ

ಮುಖಕ್ಕೆ ಕೊಡುವ ಮುತ್ತಿನ ಭಾರ

ಅಮೇರಿಕದ ಒಂದು ಸಿನಿಮಾ ಕಂಪನಿಯಲ್ಲಿ ಒಬ್ಬ ನಟಿಯಿದ್ದಾಳೆ ಅವಳು ಮುತ್ತು ಕೊಡುವದರಲ್ಲಿ ಬಹಳ ಪ್ರಸಿದ್ಧಳು. ಮುತ್ತು ಕೊಡಲಿಕ್ಕಾಗಿಯೇ ಕಂಪನಿಯವರು ಅವಳನ್ನು ವೇತನ ಕೊಟ್ಟು ಇಟ್ಟುಕೊಂಡಿದ್ದಾರೆ. ಇವಳ ಮುತ್ತು ಬಹಳ ಬಲವಾಗಿರುವದಂತೆ ಅವಳ ಮುತ್ತಿನ ಭಾರವು ೨೫ ರಾತಲು ಅಥವಾ ಒಂದು ಮಣ ಭಾರವಾಗಿರುವದಂತೆ. ಮುಖಕ್ಕೆ ಮುಖವನ್ನು ಅಷ್ಟು ಒತ್ತಿಕೊಂಡು ಅವಳು ಮುತ್ತು ಕೊಡುವಳು. ಅವಳ ಮುತ್ತಿನಿಂದ ಯಾರದಾದರೂ ಹಲ್ಲುಗಳು ಉದುರಿ ಬೀಳದಿದ್ದರೆ ಅಥವಾ ತುಟಿ ಗಲ್ಲಗಳು ಒಡೆದ ಹೋಗದಿದ್ದರೆ ಅವನ ಪುಣ್ಯವೆನ್ನಬೇಕು

ಸಮುದ್ರ ತಲದಲ್ಲಿ ಅಂಚೆಕಟ್ಟೆ

ಜಗತ್ತಿನ ಎಲ್ಲಾ ಅಂಚೆಕಟ್ಟೆಗಳು ನೆಲದ ಮೇಲೆ ಕಟ್ಟಲ್ಪಟ್ಟಿರುತ್ತವೆ ಇತ್ತೀಚೆಗೆ ಒಂದು ಅಂಚೆಕಟ್ಟೆಯನ್ನು ಮಾತ್ರ ನಸಾವೂ ಎಂಬಲ್ಲಿ ಸಮುದ್ರ ತಲದಲ್ಲಿ ಕಟ್ಟುವರು ಸಮುದ್ರದೊಳಗೆ ಸಂಚರಿಸುವ ಹಡಗ ಮೊದಲಾದವುಗಳ ಅನುಕೂಲತೆಗಾಗಿ ಈ ಅಂಚೆಕಟ್ಟೆ ಇರುವದಂತೆ ಇದರ ಉದ್ಘಾಟನವು ಸ್ವಲ್ಪ ಸಮಯದ ಮೊದಲು ನಡೆಯಿತು. ಆರನೇ ಜಾರ್ಜರಿಗೂ ಅಮೇರಿಕದ ಪ್ರೆಸಿಡೆಂಟ ರೂಸ್‌ವೆಲ್ಟರಿಗೂ ಈ ಅಂಚೆ ಕಟ್ಟೆಯ ಮೂಲಕ ಮೊದಲನೆ ಎರಡು ಪತ್ರಗಳು ಕಳುಹಿಸಲ್ಪಟ್ಟವು ಇನ್ನು ಆಕಾಶದಲ್ಲಿ ಸಂಚರಿಸುವ ವಾಯು ವಿಮಾನಗಳ ಅನುಕೂಲತೆಗಾಗಿ ಅಲ್ಲಿ ಯಾರಾದರೂ ಒಂದು ರೀತಿಯಿಂದ ಅಂಚೆ ಕಟ್ಟೆ ತೆರೆಯಲ್ಪಡುವದು ಬಾಕಿ ಇದೆ

ರಶ್ಯನರ ಚದರಂಗ ಆಟ

ರಶ್ಯನರು ಚದರಂಗ ಆಟವೆಂದರೆ ಪ್ರಾಣ ಕೊಡುವರು ಆದರೆ ಚದರಂಗ ಆಟದಲ್ಲಿ ಅರಸು, ಆನೆ, ಕುದುರೆ, ಕಾಲಾಳು ಇದ್ದಾರೆ ರಶ್ಯದ ಕಮ್ಯೂನಿಷ್ಟರಿಗೆ ಅರಸು ಎಂಬ ಶಬ್ದವನ್ನು ಕೇಳಿದರೆ ವಾಕರಿಕೆ ಬರುತ್ತದೆ ರಶ್ಯದ ಅರಸನನ್ನೂ ಆತನ ಕುಟುಂಬದ ದೂರದ ಸಂಬಂಧಿಗಳನ್ನು ಕೂಡ ಕಡಿದುಹಾಕಿದ ರಾಜಶತ್ರುಗಳು ಅವರು ಆದ್ದರಿಂದ ಅರಸು ಇಲ್ಲದೆ ಅವರು ಚದರಂಗವನ್ನು ಹೇಗೆ ಆಡಬಹುದು? ಅದಕ್ಕೆ ಅವರ ಒಂದು ಉಪಾಯ ಮಾಡಿದ್ದಾರೆ ಚದರಂಗದಲ್ಲಿ ರಾಜ–ರಾಣಿಯರ ಬದಲಿಗೆ ಸ್ಟಾಲಿನ ಮತ್ತು ಆತನ ಹೆಂಡತಿಯ ಹೆಸರನ್ನು ಉಪಯೋಗಿಸುವರು ಹಾಗೆಯೇ ಅವರು ಚದರಂಗದ ಇತರ ದಾಳಗಳಿಗೆ ರಶ್ಯದ ಕಮ್ಯೂನಿಷ್ಟ ಸರಕಾರದ ಬೇರೆ ಬೇರೆ ಪದಾಧಿಕಾರಿಗಳ ಹೆಸರುಗಳನ್ನು ಕೊಟ್ಟಿರುವರು ಅವರ ಈ ರೀತಿಯಿಂದ ಆಟಕ್ಕೆ ಆಟವೂ ಆಯಿತು, ರಶ್ಯದ ಗೌರವವೂ ಉಳಿಯಿತು ಎಂಬಂತೆ ಆಗಿದೆ

ಪ್ರಸಿದ್ಧಿಗೆ ಬರಲಿಕ್ಕೆ ಪ್ರಾಯ ಬೇಡ

ಒಬ್ಬನು ಪ್ರಸಿದ್ಧಿಗೆ ಬರಬೇಕಾದರೆ ಪ್ರಾಯದ ನಿಯಮವಿಲ್ಲ ಕೆಲವರು ಸಣ್ಣ ಪ್ರಾಯದಲ್ಲೇ ಪ್ರಸಿದ್ಧಿಗೆ ಬಂದಿದ್ದಾರಾದರೆ, ಇನ್ನು ಕೆಲವರು ಪ್ರಸಿದ್ಧಿಗೆ ಬರಲಿಕ್ಕೆ ೭೦–೮೦ ವರ್ಷಗಳು ಕಳೆದು ಹೋಗಿರುವವು ಮೊಜಾರ್ಟ ಎಂಬ ಸಂಗೀತಗಾರನು ೬ ವರ್ಷ ಪ್ರಾಯದಲ್ಲಿಯೇ ತನ್ನ ಕರ್ಣಮಧುರ ಹಾಡುಗಾರಿಕೆಯಿಂದ ಜನರನ್ನು ಮುಗ್ಧಗೊಳಿಸಿದ್ದ ಆದರೆ ಮಿಕೆಲೆಂಜೆಲೋ ಎಂಬವನು ತನ್ನ ಅತಿ ಪ್ರಸಿದ್ಧ ಕೃತಿಯನ್ನು ಮುಗಿಸುವಾಗ ಆತನಿಗೆ ೮೭ ವರ್ಷ ಪ್ರಾಯ ಆಗಿತ್ತು ಗೋತೆ ಎಂಬತ್ತು ವರ್ಷ ಆಗುವಾಗ ಕೈಗೆ ಲೇಖನಿಯನ್ನು ತೆಗೆದುಕೊಂಡಿದ್ದ ಆದರೆ ತನ್ನ ಅಮರ ಕೃತಿ ಫಾಸ್ಟ ಎಂಬುದನ್ನು ಮುಗಿಸುವಾಗ ಅವನು ೮೦ ವರ್ಷದ ವೃದ್ಧನಾಗಿದ್ದ ಲಿಯೊನಾರ್ಡಾ ವಿನ್ಸಿ ಎಂಬ ಚಿತ್ರಗಾರ ತನ್ನ ಪ್ರಸಿದ್ಧ ಚಿತ್ರ–ಲಾಸ್ಟ ಸಪ್ಪರನ್ನು ಚಿತ್ರಿಸವಾಗ ೭೭ ವರ್ಷಗಳಾಗಿದ್ದವು ಫ್ರಾನ್ಸಿನ ವೀರ ಮಹಿಳೆ ಜ್ಯೋನ್ ಆಫ ಆರ್ಕಳ ೧೬ ವರ್ಷ ಪ್ರಾಯದಲ್ಲಿ ದೇಶಕ್ಕಾಗಿ ಪ್ರಾಣ ಕೊಟ್ಟು ವೀರಸ್ವರ್ಗ ಪಡೆದಳು ಕ್ರೊಮವೆಲ್ಲನು ೪೦ ವರ್ಷಗಳಾಗುವ ತನಕ ಅಜ್ಞಾತನಾಗಿದ್ದ ಲೋರ್ಡ ಕೆಲ್ವಿನನು ಪ್ರಥಮ ವೈಜ್ಞಾನಿಕ ಶೋಧವನ್ನು ಮಾಡುವಾಗ ಆತನಿಗೆ ೧೬ ವರ್ಷ ಆಗಿತ್ತು ಆದರೆ ನಾವಿಕರ ದಿಕ್ಚಕ್ರವಲ್ಲಿ ಅವನ ಕೊನೆಯ ಆವಿಷ್ಕಾರಗಳಾದಾಗ ಆತನಿಗೆ ೮೩ ವರ್ಷಗಳಾಗಿದ್ದವು

ಗಂಡನೆಂದು ಹೇಳಿ ಹೆಂಗಸಿಗೆ ಮೋಸ!

ನಾನು ನಿನ್ನ ಗಂಡ – ನೀನು ನನ್ನ ಹೆಂಡತಿ – ಹೀಗೆಂದು ಹೇಳಿ ಕಾದಿಯಾವಾಡದ ಒಬ್ಬ ದುರಾತ್ಮನು ಒಬ್ಬ ಹೆಂಗಸನ್ನು ವಂಚಿಸಿ ಅವಳ ನಗನಾಣ್ಯಗಳನ್ನು ದೋಚಿಕೊಂಡು ಹೋದ ಒಂದು ಕತೆಯು ಪ್ರಕಟವಾಗಿದೆ ಈ ಹೆಂಗಸಿನ ವಿವಾಹವು ೧೫ ವರ್ಷಗಳ ಮೊದಲು ಆಗಿತ್ತು ಆದರೆ ಅವಳಿಗೆ ತನ್ನ ಗಂಡನ ಅಥವಾ ಗಂಡನಿಗೆ ಅವಳ ಗುರುತು ಪರಿಚಯಗಳಿರಲಿಲ್ಲ. ಅಂದು ಆ ಹೆಂಗಸು ಮೊದಲನೆ ಬಾರಿಗೆ ಗಂಡನ ಮನೆಗೆ ಬಂದಿದ್ದಳು ಗಂಡನು ಮನೆಯಲ್ಲಿ ಇಲ್ಲದ ಸಮಯವನ್ನು ಸಾಧಿಸಿ ಒಬ್ಬ ದುರಾತ್ಮನು ತಾನೇ ಅವಳ ಗಂಡನೆಂದು ಹೇಳಿ, ಅವಳಿಂದ ತಿಂಡಿ ಕಾಫಿ ಕುಡಿದು, ಒಂದು ಅಗತ್ಯ ಕೆಲಸಕ್ಕಾಗಿ ಅವಳ ಆಭರಣಗಳು ಬೇಕಾಗಿವೆ ಎಂದ ಸರಲ ಸ್ವಭಾವದ ಅವಳು ಅವನನ್ನೇ ಗಂಡನೆಂದು ಭಾವಿಸಿ ಅವನಿಗೆ ಆಭರಣಗಳನ್ನು ಕೊಟ್ಟಳು ಅವನು ಅವನ್ನು ತೆಗೆದುಕೊಂಡು ಎಲ್ಲಿಯೋ ಪಲಾಯನಮಾಡಿದ ಸಮಾಚಾರವನ್ನು ಅವಳು ತನ್ನ ಅತ್ತೆಯೊಂದಿಗೆ ಹೇಳಿದಾಗ ಅವನು ಗಂಡನಲ್ಲವೆಂಬುದು ಅವಳಿಗೆ ಗೊತ್ತಾಯಿತು!

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

"BHUVANENDRA AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N. KANARA)

Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ,— ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಸ್ಥಳೀಯ ಸ್ಟೋಕಿಸ್ಟರು: ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ಶಾಂತಿ ಸ್ಥಾಪಕರಾದ

ಮಹಮ್ಮದ್ ಪೈಗಂಬರರು!

— ಇಸ್ಲಾಂ ಎಂದರೆ ಶಾಂತಿ —

ರಬೀವುಲ್ ಅವ್ವಲ್--ತಿಂಗಳ ಮಹತ್ವ!

[ಬರೆದವರು ಶ್ರೀ ಅಬ್ದುಲ್ಲ.]

[illegible] ಸರ್ವ ಭಾಗಗಳಲ್ಲಿ ನೆಲಸಿರುವ ಮುಸ್ಲಿಂಮರಿಗೆಲ್ಲಾ ಏಕಪ್ರಕಾರವಾಗಿ ಪ್ರಧಾನವೆಂದು ಪರಿಗಣಿಸಲ್ಪಡುತ್ತಿರುವ 'ರಬೀವುಲ್ ಅವ್ವಲ್' ತಿಂಗಳು ಇಂದು ಬಂದಿದೆ. ಈ ತಿಂಗಳ ಆರಂಭದಿಂದ ಅಂತ್ಯದ ವರೆಗೆ ಪ್ರತಿಯೊಂದು ಮುಸ್ಲಿಂ ಗೃಹವೂ ಒಂದಲ್ಲೊಂದು ಪ್ರಕಾರವಾಗಿ ಗುರು ಮಹಮ್ಮದ್ ಪೈಗಂಬರರ ಜೀವನ ಸ್ಮಾರಕವನ್ನು ಆಚರಿಸದಿರಲಾರದು. ಲೋಕದಲ್ಲಿ ಇಸ್ಲಾಂ ಧರ್ಮವು ನೆಲಸಿ ಇಂದಿಗೆ ೧೪ ಶತಮಾನಗಳು ಸಂದು ಹೋದವು. ಅದರ ಮತ ತತ್ವಗಳು ಇಂದಿಗೂ ಏಕಪ್ರಕಾರವಾಗಿ ಪ್ರತಿಯೊಬ್ಬ ಮುಸ್ಲಿಂ—ಏಕೆ? ಆ ತತ್ವವನ್ನು ಮನಗಂಡ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಳ್ಳೆಯ ಪರಿಣಾಮವನ್ನು ಹುಟ್ಟಿಸುವುದು.

ಜನ್ಮಕಾಲ

ಅಂದು ಲೋಕದಲ್ಲಿ ಶಾಂತಿಯು ಅಳಿದ ಕಾಲ. ಸ್ವಾರ್ಥವು ಪರಾರ್ಥವನ್ನು ನುಂಗಿ ನೀರು ಕುಡಿದ ಕಾಲ. ಅಜ್ಞಾನತಮವು ಸುಜ್ಞಾನದ ಪ್ರಭೆಯನ್ನು ಅಡಗಿಸಿರುವ ಕಾಲ. ಅನಾಚಾರ ಅಧರ್ಮಗಳು ಸರ್ವತ್ರ ವ್ಯಾಪಿಸಿಕೊಂಡು ಜಗತ್ತಿನ ವಾತಾವರಣವನ್ನು ಕೆಡಿಸಿರುವ ಕಾಲ. ಅದರಲ್ಲಿಯೂ ಅರಬೀ ದೇಶವು ತನಗೊಂದು ಮುಂದಾಳು ಇಲ್ಲದೆ ಅಂತಃಕಲಹಗಳಿಂದ ತುಂಬಿಕೊಂಡು ಜರ್ಜರಿತವಾಗಿತ್ತು. ಈ ಜಗತ್ತಿನ ಮಿಕ್ಕುಳಿದ ರಾಷ್ಟ್ರಗಳೂ ಆ ದೇಶದ ಮೇಲೆ ದೃಷ್ಟಿಯನ್ನಿಟ್ಟುಕೊಂಡಿದ್ದುವು. ಪ್ರಾಚೀನದ ಮಹಾ ಭೂಖಂಡಗಳಾಗಿದ್ದ ಆಫ್ರಿಕ, ಯುರೋಪ್, ಮತ್ತು ಏಶ್ಯಾ ಎಂಬೀ ತ್ರಿಖಂಡಗಳು ಒಂದು ಕಡೆ ಸೇರಲ್ಪಟ್ಟ ಆ ಅರಬೀ ದೇಶದಲ್ಲಿ ಸಂದರ್ಭಾನುಸಾರವಾಗಿ ಹಜರತ್ ಮಹಮ್ಮದ್ ಪೈಗಂಬರರು ಜನ್ಮತಾಳಿದರು.

ನವೀನ ಸಂದೇಶ

ಮಹಮ್ಮದ್ ಪೈಗಂಬರರು ಕ್ರಿ ಶ॥ ೫೭೦ನೇ ಸಂವತ್ಸರದ ಅಬೊಂದು ಸೋಮವಾರ ಪ್ರಾತಃಕಾಲದ ಪುಣ್ಯಗಳಿಗೆಯಲ್ಲಿ ಜನ್ಮವೆತ್ತಿದರು. 'ಅಬ್ದುಲ್ಲ' ಎಂಬುದವರ ತಂದೆಯ ಹೆಸರು. ಅವರ ತಾಯಿ 'ಅಮೀನ'. ಅವರ ಕುಟುಂಬವು "ಬನೀಹಾಸಂ" ಎಂದು ಕರೆಯಲ್ಪಡುತ್ತಿದ್ದ ಮಕ್ಕಾ ಪಟ್ಟಣದೊಂದತೀ ಪ್ರಾಚೀನ ಪಂಗಡಗಳಲ್ಲೊಂದಾಗಿತ್ತು. ಮಹಮ್ಮದರು ಭೂಪತನರಾಗುವ ಮೊದಲೇ ಅಬ್ದುಲ್ಲರು ಪರಲೋಕವನ್ನೈದಿದ್ದರು. ಹೀಗೆ ಶೈಶವವು ಅವರ ಪಿತಾಮಹರಾದ 'ಅಬ್ದುಲ್ ಮುತ್ತಾಲಿಬ್' ಅವರ ಸಂರಕ್ಷಣೆಯಲ್ಲಿ ಕಳೆಯಬೇಕಾಯಿತು. 'ಹಲೀಮ' ಎಂಬವರೇ ಪೈಗಂಬರ ಸಾಕುತಾಯಿ. ಪೈಗಂಬರರು ನಾಲ್ವತ್ತನೇ ವಯಸ್ಸಿನ ಮೇಲೆ ಪ್ರವಾಚಕತ್ವವನ್ನು ವಹಿಸಿ ಇಸ್ಲಾಂ ಧರ್ಮಬೋಧೆಯನ್ನು—ಆ ಅಧೋಗತ ಅರಬೀ ಸಮಾಜದ ಮಧ್ಯದಲ್ಲಿ ಬೋಧಿಸತೊಡಗಿದರು.

ಶಾಂತಿಸ್ಥಾಪನೆ

ಮಹಮ್ಮದ್ ಪೈಗಂಬರರು ತಮ್ಮ ಧರ್ಮಬೋಧನೆಯಿಂದಾಗಿ ಅತೀ ಕಠೋರವಾದ ಕಷ್ಟಪರಂಪರೆಗಳನ್ನು ಒಂದೊಂದಾಗಿ ದಾಟಬೇಕಾಗಿ ಬಂತು. ಅಂದಿನ ಆ ಕ್ರೂರ ಅರಬಿಗಳ ಹಿಂಸಾತ್ಮಕ ಜೀವನದಿಂದ ಅವರಿಗೆ ಬೇಸರು ಬಂತು. ಕಂಡ-ಕಂಡಲ್ಲೆಲ್ಲ ಪೈಗಂಬರರನ್ನು ಕಲ್ಲೆಸೆದು ಹಿಂಸಿಸುತ್ತಿದ್ದರು. ಕೊಲೆ ಮಾಡುವುದಕ್ಕೂ ಹಿಂಜರಿದಿರಲಿಲ್ಲ. ಆದರೆ ಪೈಗಂಬರರು ಮಾತ್ರ ಈ ಒಂದು ವಿಧದ ಬಾಧಕಕ್ಕೂ ಅಳುಕದೆ ಒಂದೆಡೆಯಿಂದ ಇನ್ನೊಂದೆಡೆಗೆ ನಿರ್ಭಯದಿಂದ ಸ್ವಚ್ಛಂದವಾಗಿ ಸಂಚರಿಸುತ್ತಾ ಸದ್ಧರ್ಮವನ್ನು ಪ್ರಚಾರ ಮಾಡಿದರು. ಇಸ್ಲಾಂ ಧರ್ಮವು ಇತ್ತ ಮೆಲ್ಲ ಮೆಲ್ಲನೆ ಎಲ್ಲೆಡೆಯಲ್ಲಿಯೂ ಪಸರಿಸಿತು. ಅನೈಕ್ಯತೆಯಿಂದಲೂ ದುರಾಚಾರದಿಂದಲೂ ದುಸ್ಥಿತಿಗೊಳಗಾದ ಅರಬಿ ಜನರಲ್ಲಿ ಒಕ್ಕಟ್ಟಿನ ಭಾವನೆಯನ್ನು ತುಂಬಿ ಶಾಂತಿಯನ್ನು ನೆಲೆಗೊಳಿಸಿದರು.

ಮಹಮ್ಮದ್ ಪೈಗಂಬರರು ತನ್ನ ಹಿಂದಿನ ಪ್ರವಾದಿಗಳಿಂದ ಬೋಧಿಸಲ್ಪಟ್ಟಿದ್ದ ಧರ್ಮವನ್ನು ಪುನರುದ್ಧರಿಸಿ ಅದರ ಪರಿಪೂರ್ಣತೆಯನ್ನು ಚಿರಸ್ಥಾಯಿಯಾಗಿ ಮಾಡಿದರು. ಇದಕ್ಕೆ ಪವಿತ್ರ ಖುರಾನಿನಲ್ಲಿನ "ಪ್ರತಿಯೊಂದು ಜನಾಂಗಕ್ಕೂ ಒಬ್ಬ ಪ್ರವಾಚಕರನ್ನು ಕಳುಹದೆ ಇಲ್ಲ. ಅವರಲ್ಲಿ ಕೆಲವರನ್ನು ನಿಮಗೆ ತಿಳಿಸಿರುವೆನು. ಇನ್ನು ಕೆಲವರನ್ನು ತಿಳಿಸಿರುವುದಿಲ್ಲ," ಎಂಬ ವಚನವೇ ಸಾಕ್ಷಿಯಾಗಿದೆ.

ಇಸ್ಲಾಮಿನ ತತ್ವಗಳು

'ಇಸ್ಲಾಂ' ಎಂದರೆ 'ಶಾಂತಿ'ಯೆಂದರ್ಥವು. ಮನುಷ್ಯ ಜೀವನಕ್ಕೆ ಮುಖ್ಯವಾಗಿ ಬೇಕಾದುದು ಶಾಂತಿ. 'ಸಲಾಂ' ಎಂದರೆ ಮುಸಲ್ಮಾನ ಜನರಲ್ಲಿ ಪ್ರಚಾರದಲ್ಲಿರುವ ನಮಸ್ಕಾರವೀಯುವ ಒಂದು ಸಾಮಾನ್ಯ ಕ್ರಮ. "ನಿನಗೆ ಶಾಂತಿಯಿರಲಿ" ಎಂದದರ ಭಾವ. ಇಸ್ಲಾಂ ಧರ್ಮವು ಸಂಪೂರ್ಣ ಶಾಂತಿದಾಯಕವಾಗಿದೆ.

ಮಹಮ್ಮದ್ ಪೈಗಂಬರರು ಆ ದೇಶದ ಜನರಿಗೆ ವಿದ್ಯೆಯಿಲ್ಲದಿದ್ದುದೇ ಈ ದುಃಸ್ಥಿತಿಗೆ ಕಾರಣವೆಂದು ತಿಳಿದಿದ್ದರು. ಬೇರೆ ಬೇರೆ ದೇಶಗಳನ್ನು ಸುತ್ತಿ ಬಂದ ಅನುಭವ ಅವರಿಗುಂಟು ಎಂದು ಹಲವರು ಹೇಳುತ್ತಾರೆ. ಬೇರೆ ಬೇರೆ ದೇಶದಲ್ಲಿ ವಿದ್ಯಾಭ್ಯಾಸದಿಂದ ಎಷ್ಟೊಂದು ಮುಂದುವರಿದಿತ್ತೆಂದು ಅವರು ಬಲ್ಲವರಿದ್ದರು. ವಿದ್ಯಾಭ್ಯಾಸವು ಜನತೆಯ ಅಭಿವೃದ್ಧಿಗೂ ಒಕ್ಕಟ್ಟಿಗೂ ಒಂದು ಸಾಧನವಾಗುವುದೆಂದವರ ನಂಬಿಕೆ. ಇಸ್ಲಾಂ ಧರ್ಮದಲ್ಲಿ ಸ್ತ್ರೀ ಪುರುಷರು ಎಂದು ಇಲ್ಲ—ಎಲ್ಲರಿಗೂ ವಿದ್ಯೆಯು ಬೇಕಾದುದೆಂದು ಕಟ್ಟಿದೆ. ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡದ ತಂದೆಯು ಮಹಾಪಾಪಿಯಾಗುವನೆಂಬುದಕ್ಕೆ ಖುರಾನಿನಲ್ಲಿ ಸಾಕಷ್ಟು ಉದಾಹರಣೆಗಳಿವೆ. ವಿದ್ಯಾಭ್ಯಾಸದ ಕುರಿತು ಪೈಗಂಬರರು ಹೀಗೆ ಹೇಳಿದ್ದಾರೆ—

"ವಿದ್ಯಾವಂತನ ಲೇಖನಿಯ ಶಾಯಿಯು ಧರ್ಮಯುದ್ಧದಲ್ಲಿ ಮಾಡಿದ ರಣಶೂರನ ರಕ್ತಕ್ಕಿಂತಲೂ ಪವಿತ್ರವಾಗಿದೆ. ಜ್ಞಾನವು ಇಸ್ಲಾಮಿನ (ಶಾಂತಿಯ) ಜೀವವೂ ಮತ(ಜೆಂಬ ಮಂದಿರ)ದ ಆಧಾರಸ್ತಂಭವೂ ಆಗಿರುವುದು. ಚೈನಾದೇಶದಿಂದಲಾದರೂ ಸರಿಯೆ, ನೀವು ವಿದ್ಯೆಯನ್ನು ಸಂಪಾದಿಸಿರಿ. ಏಕೆಂದರೆ ವಿದ್ಯೆಯನ್ನು ಗಳಿಸುವುದು ಪ್ರತಿಯೊಬ್ಬ ಸ್ತ್ರೀ ಪುರುಷನ ಆದ್ಯಕರ್ತವ್ಯವಾಗಿದೆ." ಇಸ್ಲಾಂ ಧರ್ಮವು ವಿದ್ಯೆಗೆ ಹೆಚ್ಚಿನ ಪ್ರಾಧಾನ್ಯತೆಯನ್ನಿತ್ತಿದೆ.

ಮಹಮ್ಮದ ಪೈಗಂಬರರ ಸಂಪೂರ್ಣ ಜೀವನ ವೃತ್ತಾಂತವನ್ನು ಬರೆಯುವುದು ಈ ಚಿಕ್ಕ ಲೇಖನದಲ್ಲಿ ಅಸಾಧ್ಯ. ಅವರ ಉದಾತ್ತ ಜೀವನವು ಹಲವು ಮಹತ್ವದ ಘಟನೆಗಳಿಂದ ಕೂಡಿ ಲೋಕದಲ್ಲಿ ಶಾಂತಿಯು ತುಂಬಿರುವಂತೆ ಪ್ರಯತ್ನಿಸಬೇಕೆಂದು ಅವರು ಆಶಿಸಿದ್ದರು. ಹಾಗೆ ವಿಶ್ವಧರ್ಮದ ತತ್ವವನ್ನು ಲೋಕಕ್ಕೆ ಸಾರಿದರು.

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮ ಇತರ ಅವಗಢಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯನ್ನು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/
+
ಸರ್ವಸಾಧಾರಣ ಬೋನಸ್ ರೂ 11/
═
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್
ಆರ್ಗನೈಸರ್
ಸೆಂಟ್ರಲ್ ಪೇಟೆ, ಮಂಗಳೂರು.

ಅಥವಾ

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸ

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಮಗನ ಪತ್ರಗಳು

(ಕಳೆಯ ಪುಟದಿಂದ ಮುಂದುವರಿದುದು)

ಸುಶೀಲಳ ಕತ್ತಿನ ಸರ ಮತ್ತು ತಾಯಿಯ ಕೈಗಳ ಬಳೆ ಗಟ್ಟಿಗಟ್ಟಿ ಚಿನ್ನದ್ದು ಒಮ್ಮೆ ಮದುವೆಗೆ ಎಂತ ತೆಗೆದುಕೊಂಡು ಒತ್ತಿ ಇಟ್ಟಿದ್ದಾರೆ ಬೇಂಕಿನಲ್ಲಿ ಕೇಳಿದಾಗ ಅಗತ್ಯ ಒಂತು ಬೇಂಕಿನಲ್ಲಿಟ್ಟಿದ್ದೇನೆ ಬರುವ ತಿಂಗಳು ಬಿಡಿಸಿಕೊಡುವೆನೆಂದು ಹೇಳಿ ತಿಂಗಳು ಮೂರು ದಾಟಿತು ನೋಡು. ಅವರ ಸಂಗವೇ ಬೇಡವೆಂದು ಮಾಡಿದ್ದಾರೆ ಎಂದು ಹೇಳಿದ ಇದೂ ನನಗೆ ಸ್ವಲ್ಪ ತಡೆಯಲಾರದಾಯಿತು. ನಗವನ್ನು ತಂದವರು, ತಂದೆ ವಸಂತ ರಾಯರು. ಆಗಾಗ ತಂದೆಗೆ ಜನ ಕಳುಹಿಸಿ ತಂದೆಯನ್ನು ಗದರಿಸುತ್ತಾರೆ. ಒಳ್ಳೆ ಮಾತಿನಲ್ಲಿ ನಮ್ಮ ನಗ ತಂದು ಕೊಡದಿಲ್ಲವಾದರೆ . ' ಎಂತ ಬೆದರಿಕೆ ಹಾಕಿದ್ದಾರಂತ ಕೇಳಿದೆ ತಂದೆ ಇದಕ್ಕೆ ಹೆದರಿ ರಾಯರಿಗೆ ನೆನಪು ಮಾಡಿದರು ಒಂದೆರಡು ಬಾರಿ ಆಗ—'ನೀನು ಎನು ಕಲಿಗ ಎರಿದ್ದಿ? ನಿನ್ನದೇನು ಹೇಳು ಚಿನ್ನ ಆವರತ್ರ ನಾನು ಕೇಳಿ ತರಿಸಿದ್ದೇನಲ್ಲ ನಾನು ಕೊಡುತ್ತೇನೆ ನೀನೇನು ಕೇಳುತ್ತಿ ಅವರು ಬೇಕಾದರೆ ಕೇಳುತ್ತಾರೆ ಎನ್ನುವರಂತೆ 'ನನಗೆ ಗದರಿಸುತ್ತಾರೆ'ಂದು ತಂದೆ ಹೇಳಿದಕ್ಕೆ, 'ಅವರಪ್ಪನೂ ನಿನ್ನತ್ರ ಮಾತನಾಡಲಿಕ್ಕಿಲ್ಲ ನಾನು ಕೊಟ್ರೇನು. ನೀನು ಮಾತನಾಡದೆ ಬೀಳಲ್ಲಿ ಎಂದು ಗದರಿಸುವರು ಹೀಗೆ ತ್ರಿಶಂಕು ಸ್ವರ್ಗ ಸಿಕ್ಕಿದ ತಂದೆಗೆ ತಂದೆಗೆ ಒಟ್ಟಾರೆ ಅದುವೇ ಮಹಾಮಂತ್ರವಾಗಿದೆ ಅವರು ಆವಾಗಲೂ ಬೇಸರದ ಮೊಗ ಹಾಕಿದಾಗ ನನಗೆ ದುಃಖಬರುತ್ತದೆ ನನಗೆ ಪಾಠಕಷ್ಟ ಈಗಲೀಗ ಮನಸ್ಸು ಬರುತ್ತಿಲ್ಲ

ಮೊನ್ನೆ ವಸಂತರಾಯರ ಮಗ ರಮೇಶ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದ. ನಡೆದ ವೃತ್ತಾಂತ ಎಲ್ಲ ಅವನ ತಾಯಿ ಕೇಳಿದರು ನಾನು ನಡೆದುದನ್ನು ಹೇಳಿದೆ ಅವರೆಲ್ಲರಿಗೂ ಬಹಳ ಬೇಸರವಾಯಿತು ವಸಂತರಾಯರು ಕೇಳಿದ ಮೇಲೆ 'ನಾಳೆ ನಿನ್ನ ತಂದೆಗೆ ಬರಹೇಳು ಅಂದರು ಚಿನ್ನದ ವಿಷಯ ಏನೂ ಅಲ್ಲ ಅನ್ನು ಎಂತ ಒತ್ತಿ ಹೇಳಿದರು. ನಾನು ಆಗಬಹುದು ಎಂದೆ. ಆ ಮೇಲೆ ನನಗೆ ಪ್ರೀತಿಯಿಂದ ಕಾಫಿಯಲ್ಲ ಕೊಟ್ಟು ಯಾವಾಗಲೂ ಬರುತ್ತಿರಪ್ಪ ಎಂದರು ವಸಂತರಾಯರ ಹೆಂಡತಿ.

ನಿನ್ನೆ ಸಂಜೆ ತಂದೆ ಮನೆಗೆ ಬಂದವರು ನೀನು ಇನ್ಸ್‌ಪೆಕ್ಟರರ ಮನೆಗೆ ಹೋಗಿದ್ದಿಯಾ ಅಂದರು. ನಾನು ಹೌದು ಎಂದು ಹೇಳಿದೆ. ಅವರಿಗೆ ಎಲ್ಲಿಲ್ಲದ ಸಿಟ್ಟು ಬಂತು. 'ಅಲ್ಲಿ ಏನೆಲ್ಲ ಹೇಳಿದ್ದಿ ಎಂದರು. ಏನೂ ಇಲ್ಲ ಎಂದರೂ ಕೇಳಲಿಲ್ಲ ನನಗೆ ಚೆನ್ನಾಗಿ ಹೊಡೆದುಬಿಟ್ಟರು. ಅವರಿಗೇನೊ ಸಿಟ್ಟುಬಂದರಬೇಕೆಂದು ಗೊತ್ತು ನಾನು ಮಾತನಾಡಲಿಲ್ಲ ಅಷ್ಟರಲ್ಲಿ ರಾಯರ ಆಳು ಬಂದು ನಮ್ಮಿಬ್ಬರನ್ನೂ ಅವರ ಮನೆಗೆ ಕರೆದುಕೊಂಡು ಹೋದ ರಾಯರು ಚೆನ್ನಾಗಿ ಕುಡಿದು ಇಂಗ್ಲಿಷ್ ಕುರ್ಚಿಯಲ್ಲಿ ಕುಳಿತುಕೊಂಡು ಬರಾಬರಿ ಸವಾರಿ ಮಾಡುತ್ತಿದ್ದರು. ಒಳಗೆ ಹೋದ ಕೂಡಲೆ 'ಲವುಡಿ ಮಗ ಬಾ ಇಲ್ಲಿ! ನೀನು ವಸಂತರಾಯರ ಹತ್ತಿರ ಏನ ಹೇಳಿದ್ದಿ ನನ್ನ ವಿಷಯ ಸತ್ಯಹೇಳು' ಎಂತ ಬೂಟ್ಸಿನಿಂದ ನನಗೂ ನಾಲ್ಕೈದು ಏಟು ಕೊಟ್ಟರು. ತಂದೆ ಈ ಚಿತ್ರವನ್ನು ಕಣ್ಣುಬಿಟ್ಟು ನೋಡುತ್ತಿದ್ದ ನಾನು ಅಳುತ್ತ ಏನೊಂದು ಉತ್ತರವನ್ನೂ ಕೊಡಲಿಲ್ಲ. ಕಡೆಗೆ ತಂದೆಯ ಬಳಿಗೆ ಹೋಗಿ ಅವರ ಕೆಪ್ಪೆಗೊಂದೇಟು ಏರಿಸಿ 'ಕಲಿಸು ನಿನ್ನ ಮಗನಿಗೆ ಬುದ್ಧಿ' ಎಂದು ಹೇಳಿ ತಂದೆ ಮತ್ತು ನನ್ನ ಕತ್ತಿಗೆ ಕೈಹಾಕಿ ಹೊರಗೆ ದಬ್ಬಿದರು. ನಾನು ಇನ್ನೇಕೆ ಜೀವಿಸಬೇಕು? ಈ ತಂದೆಯಿಂದ ಇಷ್ಟಾದುದೂ ಸಾಲದೆ ಇದ್ದರೆ ಕೆರೆ ಬಾವಿಯಾದರೂ ನನಗೆ ಪಾಲಿಯಿರಬಹುದೆಂದು ತೋರುತ್ತದೆ ಆದರೆ ನಿನ್ನ ನೆನಪು ಬಂದಾಗಲೆಲ್ಲ ಬಚ್ಚಿಡಲಾರದ ಕಂಬನಿಗಳು ದುರಿ ಬರುತ್ತವೆ ಇವತ್ತು ನಾನು ಸಾಲೆಗೆ ಹೋಗಲಿಲ್ಲ ನನಗೆ ಒಂದೂ ಬೇಡ ಅನ್ನಿಸುತ್ತದೆ ನಿನಗೆ ಬೇಸರಾದರೆ ಕ್ಷಮಿಸು.

ನಿನ್ನ ಮಗ ರಾಧಾಕೃಷ್ಣ

*

ಅಮ್ಮಾ,

ನೀನು ಮನಸ್ಸಿಗೆ ತುಂಬಾ ತಗೊಳ್ಳುವಿಯೆಂದು ನನಗೆ ಗೊತ್ತಿರಲಿಲ್ಲ ಹಾಗೆಂದೇ ಅಪ್ಪ ಬೇಡಂದರೂ ನಾನು ಇದ್ದುದನ್ನು ಬರೆದು ತಿಳಿಸಿದೆ ಆಯಿತು. ಅದರಿಂದ ನಿನ್ನ ಮನಸ್ಸಿಗೂ ನೋವು ಮಾಡಿದೆ, ಅಪ್ಪನಿಗೂ ನೋವು ಮಾಡಿದೆ ಅದರ ಪ್ರತಿಫಲವನ್ನೀಗ ನಾನು ಅನುಭವಿಸುತ್ತೇನೆ ನಿನ್ನೆ ಸಂಜೆ ತಂದೆ ರಾಯರ ಮನೆಗೆ ಹೋಗಿಬರುತ್ತೇನೆಂದು ಹೊರಟು ಹೋದವರು ಈ ವರೆಗೂ ಬರಲಿಲ್ಲ. ಅಲ್ಲಿ ಇಲ್ಲಿ ಎಂದು ಕಂಡು ಗೊತ್ತಿದ್ದವರನ್ನೆಲ್ಲ ಕೇಳಿದೆ ಯಾರೂ ಹೇಳಲಿಲ್ಲ, 'ನನಗೆ ಗೊತ್ತಿಲ್ಲ' ಎಂತಲೇ ಹೇಳುತ್ತಾರೆ ರಾಯರ ಡ್ರೈವರನನ್ನು ಕೇಳಿದಾಗ ನಿನ್ನೆ ಸಂಜೆ ವಸಂತರಾಯರ ಮನೆಯಿಂದ ಬರುವುದನ್ನು ನೋಡಿದೆನೆಂದು ಹೇಳಿದ, ಅಲ್ಲಿಯೂ ಹೋಗಿ ಕೇಳಿದೆ ಸಂಜೆ ಬಂದು ಹೋಗಿದ್ದಾರೆ ಮತ್ತೆ ಗೊತ್ತಿಲ್ಲ ಎಂದರು. ಅವರ ಹೆಂಡತಿ ಮತ್ತೆ ಯಾರನ್ನು ಕೇಳಿದರೂ ಅದೇ ಉತ್ತರ ರಾಯರ ಮನೆಗೆ ಇವತ್ತು ಬರಲೇ ಇಲ್ಲ ಎನ್ನುತ್ತಾರೆ. ಈ ಊರಿನಲ್ಲೇ ಇಲ್ಲ ಎಲ್ಲಿಯಾದರೂ ನರಸಾಪುರಕ್ಕೆ ಬಂದಿದ್ದರೆ ಅಲ್ಲಿಯೇ ನಿಲ್ಲಿಸಿಕೊ ಇಲ್ಲದಿದ್ದರೆ ಬೇಗನೆ ಎಲ್ಲಿಯಾದರೂ ಹುಡುಕುವ ಏರ್ಪಾಡು ಮಾಡಬೇಕು. ಬರುವ ವಾರ ನಮಗೆ ರಜೆ ಉಂಟು. ಊರಿಗೆ ಬರುತ್ತೇನೆ.

ಇತಿ, ನಿನ್ನ ಮಗ ರಾಧಾಕೃಷ್ಣ.

ಮೂರು ದಿನಗಳ ಅನಂತರ ಟೆಲಿಗ್ರಾಮ್.

ತಂದೆಯ ಶವವು ಕಾವೇರಿಯಲ್ಲಿ ದೊರಕಿದೆ. ಕೂಡಲೇ ಹೊರಡು

—ರಾಧಾಕೃಷ್ಣ.

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀತದಾ ನೂರರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಔಷಧೀಕರಿಸಲ್ಪಟ್ಟದ್ದು ಮಗುವಿನ ಕೋಮಲವಾದ ಮೈ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಇರಿಸುತ್ತದೆ ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಕಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತಿದ್ದಾರೆ ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳೆಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

THE

Canara Banking Corporation Ltd.,

(INCORPORATED IN BRITISH INDIA)

Estd 1906

Head Office UDIPI S. Kanara

Our attractive Rates on Deposits.

FIXED DEPOSITS

[illegible] months	2½% p a
to [illegible]	3% „
One year	3½%
Two years	4% „
SHORT TERM Deposits	2½% p a
Current Account	1% p a.
Savings Bank	2½% *

Particulars of other kinds of deposits on application.

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum. Savings Bank Deposits at 4½% per annum

— FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000 run regularly on systematic lines. Unique Banking facilities to Businessmen and interested Public

Apply for particulars—

K R. GURU, *Managing Director*

ರೇಡಿಯೋದಲ್ಲಿ ಕನ್ನಡ

ರೇಡಿಯೋದಲ್ಲಿ ಕನ್ನಡ ಸುದ್ದಿ ಹೇಳುವ ವ್ಯವಸ್ಥೆ ಮಾಡಬೇಕೆಂದು ಕನ್ನಡಿಗರು ಈಗ ಹಲವಾರು ತಿಂಗಳುಗಳಿಂದ ಚಳವಳಿ ಮಾಡುತ್ತ ಬಂದಿರುವರು; ಮಾಡುತ್ತಿರುವರು. ಆದರೂ ಸಿಗಬೇಕಾದ ಯಶಸ್ಸು ಇನ್ನೂ ಸಿಕ್ಕಿಲ್ಲ. ಇಷ್ಟಕ್ಕೆ ನಾವು ಕೈಕಾಲು ಬಿಟ್ಟು ತಣ್ಣಗೆ ಕುಳಿತುಕೊಳ್ಳಬೇಕಾಗಿಲ್ಲ. ಬ್ರಿಟಿಷ ಅಧಿಕಾರಿಗಳನ್ನು 'ಹೂಂ' ಎನಿಸುವದು ಹಗುರವಾದ ಮಾತಲ್ಲ. ಪರ್ವತಪ್ರಾಯದ ಪ್ರಯತ್ನ ಬೇಕು. ಕಾರಣ ನಮ್ಮ ಚಳವಳಿಯನ್ನು ಮತ್ತಷ್ಟು ಪರಿಣಾಮಕಾರವಾಗಿ ಮಾಡುವದು ಅವಶ್ಯವು. ಈ ಸಂದರ್ಭದಲ್ಲಿ ಇಲ್ಲಿಯ ವರೆಗೆ ಏನು ಆಗಿದೆ ಎಂಬದನ್ನು ನೆನೆದು ಮುಂದೆ ಯಾವ ಮಾರ್ಗ ಕೈಕೊಳ್ಳಬೇಕು ಎಂಬದನ್ನು ಸೂಚಿಸುವದು ಯುಕ್ತವೆಂದು ನಮಗನಿಸುತ್ತದೆ

ಇಲ್ಲಿಯ ವರೆಗೆ ಏನು ಆಗಿದೆ?

ಕೇಂದ್ರ ಸರಕಾರದ ಕಮ್ಯುನಿಕೇಶನ್ಸ ಮೆಂಬರರಾದ ಸರ್ ಆ್ಯಂಡ್ರೂ ಕ್ಲೊ ಸಾಹೇಬರು ಈ ವಿಷಯದಲ್ಲಿ ಮುಖ್ಯ ಸೂತ್ರಧಾರರು. ನಮ್ಮ ಹಕ್ಕು ಮತ್ತು ಅದರ ಪೂರೈಕೆಯು ಎಷ್ಟು ನ್ಯಾಯವಾಗಿದೆಯೆಂಬ ಸಂಗತಿಯನ್ನು ಅವರ ಗಮನಕ್ಕೆ ತಂದರೆ ನಮ್ಮ ಕೆಲಸವಾಗುವದು ಎಂದು ಬಯಸಿ ಕೇಂದ್ರ ಅಸೆಂಬ್ಲಿಯ ಕನ್ನಡ ಸದಸ್ಯರಾದ ಶ್ರೀ ಸಿದ್ದಪ್ಪಾ ಹೊಸಮನಿ ಮತ್ತು ಶ್ರೀ ಜನರಾಜ ಹೆಗ್ಡೆ ಮಂಗಳೂರು ಇವರು ಕ್ಲೊ ಸಾಹೇಬರನ್ನು ಕಳೆದ ಮಾರ್ಚ ತಿಂಗಳಲ್ಲಿ ಕಂಡು ಎಲ್ಲವನ್ನೂ ವಿವರಿಸಿದರು. ಕ್ಲೊ ಸಾಹೇಬರು ಕನ್ನಡಿಗರ ಬೇಡಿಕೆಯನ್ನು ಸಹಾನುಭೂತಿಪೂರ್ವಕವಾಗಿ ವಿಚಾರಿಸುವದಾಗಿ ಆಗ ಉತ್ತರ ಕೊಟ್ಟಿದ್ದರು. ಅನಂತರ ಮತ್ತೋರ್ವ ಪ್ರಮುಖ ಅಧಿಕಾರಿಗಳೂ ಕನ್ನಡಿಗರೂ ಆದ ಸರ್ ಬೆಪೂರ ಗುರುರಾಯರು—ಹಿಂದುಸ್ಥಾನದ ಅಂಚೆ ಮತ್ತು ತಂತಿ ಖಾತೆಯ ಡಾಯರೆಕ್ಟರ ಜನರಲರು—ಇವರನ್ನು ಸಹ ಭೆಟ್ಟಿಯಾಗಿ ಕನ್ನಡಿಗರ ಹಕ್ಕು ಹೇಗೆ ಹತ್ತಿಕ್ಕಲ್ಪಟ್ಟಿದೆ ಎಂಬುದನ್ನು ತಿಳಿಸಲಾಯಿತು. ಇದರ ಹೊರ್ತು ರೇಡಿಯೋಗಳನ್ನು ಮನೆಯಲ್ಲಿಟ್ಟುಕೊಂಡ ಹಲವಾರು ಸದ್ಗೃಹಸ್ಥರು ವೈಯಕ್ತಿಕವಾಗಿ ಕ್ಲೊ ಸಾಹೇಬರಿಗೆ ಪತ್ರ ಬರೆದಿರುವರು. ಹೀಗೆ ನಮ್ಮ ಚಳವಳಿಯ ಅಲೆಗಳು, ಸಾವಕಾಶವಾಗಿಯಾದರೂ ಚಿಂತೆಯಿಲ್ಲ, ದಿಲ್ಲಿಯ ವರೆಗೆ ಮುಟ್ಟುತ್ತಲಿವೆ. ಕೊನೆಗಾದರೂ ಇವುಗಳ ಪರಿಣಾಮವಾಗದಿರದು.

ಹಿಂದುಸ್ಥಾನ ಟಾಯಿಮ್ಸದ ಬೆಂಬಲ

ನಮ್ಮ ದೇಶದ ರಾಜಧಾನಿಯಾದ ದಿಲ್ಲಿಯಲ್ಲಿ ಪ್ರಸಿದ್ಧವಾಗುವ 'ಹಿಂದುಸ್ಥಾನ ಟಾಯಿಮ್ಸ' ಎಂಬ ಸುಪ್ರಸಿದ್ಧ ಇಂಗ್ಲೀಷ ದಿನಪತ್ರಿಕೆಯು ನಮ್ಮ ಬೇಡಿಕೆಗೆ ತುಂಬಾ ಬೆಂಬಲ ಕೊಟ್ಟಿದೆ. 'ಕನ್ನಡ ಮತ್ತು ಇನ್ನಿತರ ಪ್ರಾಂತಿಕ ಭಾಷೆಗಳ ಜನರ ಬೇಡಿಕೆಗಳನ್ನು ಪೂರೈಸದೆ ಹಿಂದುಸ್ಥಾನಕ್ಕೆ ಪರಕೀಯವಾದ ಪರ್ಶಿಯನ್ ಮೊದಲಾದ ಭಾಷೆಗಳಲ್ಲಿ ಧ್ವನಿವಾಹನ (Broadcast) ಮಾಡುವದು ಹಿಂದೀ ಜನರು ಕೊಟ್ಟ ಹಣದ ದುಂದುಗಾರಿಕೆ (Scandalous waste of Indian money)' ಎಂದು ಆ ಪತ್ರಿಕೆಯು ಬಿಡಿ ನುಡಿ ಬರೆದು ಸರಕಾರದ ಧೋರಣೆಯನ್ನು ಮಾರ್ಮಿಕವಾಗಿ ಟೀಕಿಸಿದೆ.

ಆಶಾಂಕುರ

ಹೀಗೆ ನಾನಾ ತರದಿಂದ ನಡೆದ ಚಳವಳಿಯ ಪರಿಣಾಮವಾಗಿಯೋ ಏನೋ ಇದೀಗ ಸ್ವಲ್ಪ ಆಶಾಂಕುರವು ತೋರಬರಹತ್ತಿದೆ. ತಿರುಚಿನಾಪಳ್ಳಿ ಅಥವಾ ಮದ್ರಾಸದಿಂದ ಕನ್ನಡ ಸುದ್ದಿ ಹೇಳಿಸುವ ವ್ಯವಸ್ಥೆ ಮಾಡಬೇಕೆಂದು ಪ್ರಯತ್ನಗಳು ನಡೆದಿವೆಯೆಂದು ತಿಳಿದುಬರುತ್ತದೆ. ತಿರುಚಿನಾಪಳ್ಳಿಯ ಸ್ಟೇಶನದಿಂದ ಸರಕಾರಕ್ಕೆ ಹಾನಿಯಾಗುತ್ತಿದೆ. ಕಾರಣ ಮತ್ತೊಂದು ಪ್ರಾಂತಿಕ ಭಾಷೆಯನ್ನು ಅದಕ್ಕೆ ಜೋಡಿಸಿ ಲಾಭದಾಯಕ ಮಾಡಲು ಸರಕಾರದವರು ಉದ್ಯುಕ್ತರಾಗಿರುವರೆಂದೂ ಕೇಳಿದ್ದೇವೆ. ಅದು ಏನೇ ಇರಲಿ ಕನ್ನಡಕ್ಕೊಂದು ಸ್ಥಾನ ದೊರೆತರೆ ಸಾಕು. ಸರಕಾರದವರು ಸದುದ್ದೇಶ ಪ್ರೇರಿತರಾಗಿರಲಿ ಅಥವಾ ಸ್ವಾರ್ಥಪರರಾಗಿರಲಿ ನಮ್ಮ ನ್ಯಾಯವಾದ ಉದ್ದೇಶವು ಈಡೇರಿದರೆ ಸಾಕು. ಸರಕಾರದ ಸ್ವಾರ್ಥದಲ್ಲಿಯೆ ನಮ್ಮ ಹಿತವಿದ್ದರೆ ಅವನ್ನಾದರೂ ಏಕೆ ಬಿಡಬೇಕ?

ಇದೇ ಸಮಯ

ಅಂತೂ ಪರಿಸ್ಥಿತಿಯು ಪರಿಪಕ್ವಕ್ಕೆ ಬಂದಿದೆಯೆಂದು ಕಾಣುತ್ತದೆ. ಕಬ್ಬಿಣವು ಕಾದು ಕೆಂಪಾದಾಗ ಸುತ್ತಿಗೆಯ ಹೊಡೆತಕ್ಕೆ ಆಶೆಯಾಗಿ ಸಿಂತಂತೆ ತೋರುತ್ತದೆ. ಆದದರಿಂದ ಕನ್ನಡಿಗರು, ಕನ್ನಡಾಭಿಮಾನಿಗಳು ಈ ಅನುಕೂಲ ಸಮಯವನ್ನು ಹೋಗಗೊಡದೆ ಅದರ ಲಾಭ ಪೂರ್ಣ ಪಡೆದು ಚಳವಳಿಯನ್ನು ಇಮ್ಮಡಿ ಉಮ್ಮಡಿಯಾಗಿ ಸಾಗಿಸಬೇಕು. ಅಂದರೆ ಪ್ರತಿಫಲ ದೊರೆಯದೆ ಹೋಗಲಾರದು.

ಈ ಸಂದರ್ಭದಲ್ಲಿ ನಾವು ಏನು ಮಾಡಬೇಕು ಎಂಬದು ತಿಳಿಯದಂತಾಗಿದೆ ಎಂದು ಅನೇಕರು ನಮ್ಮನ್ನು ಕೇಳುತ್ತಿರುವರು, ಪತ್ರ ಬರೆಯುತ್ತಿರುವರು. ಅವರಿಗೆ ನಾವು ಹೇಳುವದು ಇಷ್ಟೆ: ಸತ್ಯಾಗ್ರಹ ಮಾಡಿ ತುರಂಗಕ್ಕೆ ಹೋಗುವ ಕಾರಣವಿಲ್ಲ! ಕೇವಲ ಒಂದೆರಡಾಣೆಗಳನ್ನು ವೆಚ್ಚಮಾಡಿ ನಮ್ಮ ಬೇಡಿಕೆ ಹೇಗೆ ನ್ಯಾಯವಾಗಿದೆ, ಅದನ್ನು ಪೂರೈಸುವದು ಸರಕಾರದ ಕರ್ತವ್ಯ ಎಂಬ ವಿಷಯವನ್ನು ಕುರಿತು ಕ್ಲೋ ಸಾಹೇಬರಿಗೆ ಮುಂಬಯಿ ಮತ್ತು ಮದ್ರಾಸ ಸ್ಟೇಶನ್ ಅಧಿಕಾರಿಗಳಿಗೆ ಪತ್ರ ಬರೆದರೆ ಸಾಕು. ಇದು ಕಾಣಲಿಕ್ಕೆ ಅಲ್ಪಸೇವೆಯಾದರೂ ಈ ವಿಷಯದಲ್ಲಿ ಅದು ಬ್ರಹ್ಮಾಸ್ತ್ರವೇ ಆಗಿದೆ. ಅದುದರಿಂದ ಎಲ್ಲ ಕನ್ನಡ ಎಂ. ಎಲ್. ಎ. ಮತ್ತು ಎಂ. ಎಲ್. ಸಿ ಗಳು ರೇಡಿಯೋ ಇಟ್ಟ ಮುನಿಸಿಪಾಲಿಟಿಗಳು, ಶಾಲೆಗಳು ಮತ್ತು ಇನ್ನಿತರ ಸಂಸ್ಥೆಗಳೂ, ವಾರ್ಡ ಕಮಿಟಿಗಳು ಮತ್ತು ವೈಯಕ್ತಿಕವಾಗಿ ಸನ್ನದ್ಧರಾದರು ಈ ಕಾರ್ಯವನ್ನು ಬೇಗನೆ ಕೈಕೊಳ್ಳಬೇಕು. ವಾರ್ ಕಮಿಟಿಗಳು ಹಣ ಕೂಡಿಸಲು ಪ್ರಯತ್ನಿಸುತ್ತಿವೆ. ಆದರೆ ಆ ಹಣ ಕೊಡುವವರಿಗೆ ಯುದ್ಧದ ಸುದ್ದಿಗಳನ್ನು ಅವರ ಮಾತೃಭಾಷೆಯಲ್ಲಿ ರೇಡಿಯೋ ಮೂಲಕ ಹೇಳಿಸುವ ವ್ಯವಸ್ಥೆ ಮಾಡದಿದ್ದರೆ ಅವರಿಗೆ ಅನ್ಯಾಯಮಾಡಿದಂತಾಗುವದು. ಕನ್ನಡಿಗರ ನೆರೆಯವರಾದ ಮರಾಠಿಗರು ಮತ್ತು ತೆಲುಗರು ದಿನಾಲೂ ಸಾಯಂಕಾಲ ಒಳ್ಳೇ ಲವಲವಿಕೆಯಿಂದ ಯುದ್ಧದ ಸುದ್ದಿಗಳನ್ನು ಕೇಳುತ್ತಿರುವಾಗ ಇವರು ಮಾತ್ರ 'ಯುದ್ಧ ಏನಾಯಿತರಿ' ಮತ್ತು ರೇಡಿಯೋದ ಮುಂದೆ ನಿಂತಿದ್ದರೂ 'ಏನು ಹೇಳುತ್ತಾರ್ರಿ' ಎಂದು ಅಶಾವದನರಾಗಿ ಕೇಳುವ ದುಸ್ಥಿತಿ ಇನ್ನೂ ಇದೆ. ಧಾರವಾಡ ಯುದ್ಧಮಂಡಲದವರು ಇದನ್ನು ಮುಂಬಯಿ ಗವ್ಹರ್ನರರಿಗೆ ತಿಳಿಸಿರುವರೆಂದೂ ಅವರು ಅದನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿರುವರೆಂದು ಕೇಳುತ್ತೇವೆ. ಇದು ನಿಜವಿದ್ದರೆ ಸಂತೋಷದ ಸಂಗತಿ. ಇದರಂತೆ ಉಳಿದ ಯುದ್ಧ ಮಂಡಳಗಳೂ ಒತ್ತಾಯಮಾಡಿದರೆ ಕನ್ನಡಿಗರ ಬೇಡಿಕೆಯು ಬೇಗನೆ ಪೂರೈಸಲ್ಪಡುವದರಲ್ಲಿ ಸಂದೇಹವಿಲ್ಲ.

(ಸಂ. ಕ.)

ಬರ್ಮಾ ರಸ್ತೆ ತೆರೆಯುವರು!

ಬ್ರಿಟನಿನ ನಿರ್ಧಾರ!

ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರ ಹೇಳಿಕೆ

'ಚೀನಾ—ಜಪಾನುಗಳಲ್ಲಿ ಒಪ್ಪಂದವಾಗಿ ಪೂರ್ವ ಏಶಿಯದಲ್ಲಿ ಶಾಂತಿ ಸ್ಥಾಪನೆಯಾಗಬಹುದೆಂಬ ಉದ್ದೇಶದಿಂದ ನಾವು ಬರ್ಮಾ ರಸ್ತೆಯನ್ನು ಮುಚ್ಚಿದ್ದೆವು. ಆದರೆ, ಆ ಉದ್ದೇಶ ನೆರವೇರಲಿಲ್ಲ. ಆದ್ದರಿಂದ ಆ ರಸ್ತೆಯನ್ನು ಪುನಃ ತೆರೆಯಲು ನಿರ್ಧರಿಸಿದ್ದೇವೆ'

ಹೀಗೆಂದು ಚರ್ಚಿಲರು ಕಾಮನ್ಸ ಸಭೆಯಲ್ಲಿ ಹೇಳಿದರು. ಅವರು ಈ ಒಪ್ಪಂದವಾದ ಮೇಲೆ ಜಪಾನಿನ ಧೋರಣವು ಹೇಗೆ ಬದಲಾಗಿದೆಯೆಂಬುದನ್ನು ತಿಳಿಸಿದರು. ಬರ್ಲಿನ್ ಒಪ್ಪಂದದ ಕುರಿತು ಹೀಗೆಂದರು: 'ಈ ಒಪ್ಪಂದದಿಂದ ಜಪಾನಿಗೆ ಏನೂ ಲಾಭವಿಲ್ಲ. ಇಂತಹ ಒಪ್ಪಂದಕ್ಕೆ ಜಪಾನು ಹೇಗೆ ಒಪ್ಪಿತೋ ನನಗೆ ತಿಳಿಯುವುದಿಲ್ಲ. ಬಹುಶಃ ಈ ಒಪ್ಪಂದಕ್ಕೆ ಕೆಲವು ಗುಪ್ತ ವಿಷಯಗಳಿರಬೇಕೆಂದು ನನಗೆ ಅನಿಸುತ್ತದೆ. ಇಟಲಿ ಜರ್ಮನಿಗಳು, ಬ್ರಿಟನ್ ಮತ್ತು ಅಮೇರಿಕಗಳ ನೌಕಾಬಲವನ್ನು ಎದುರಿಸಿ ಜಪಾನಿಗೆ ಸಹಾಯಮಾಡಬಲ್ಲನೆಂದು ನನಗಂತೂ ಅನಿಸುವುದಿಲ್ಲ. ಅಮೇರಿಕವನ್ನು ಬೆದರಿಸುವ ಸಲುವಾಗಿಯೋ ಈ ಬರ್ಲಿನ್ ಒಪ್ಪಂದವಾಗಿರುವುದು. ಇದರಿಂದ ರಕ್ತಕಕ್ಕೂ ಹಾನಿಯಾಗುವ ಸಂಭವವಿದೆ'

ಅವರ ಭಾಷಣದ ಇನ್ನು ಕೆಲವು ವಿಷಯಗಳು ಹೀಗಿವೆ

'ಡಕಾರಿನಲ್ಲಿ ನಡೆದ ಸಂಗತಿಗಳಿಗೆ ಫ್ರೆಂಚರೇ ಪೂರ್ಣ ಜವಾಬ್ದಾರರಾಗಿರುವರು. ನಾವು ದಿಗೋಲೆಯವರಿಗೆ ಸಹಾಯ ಮಾಡಲು ಹೋದುದು ನಿಜ. ಆದರೆ ವಿಶಿ ಸರಕಾರದ ವಿರುದ್ಧ ದೊಡ್ಡ ನೌಕಾಯುದ್ಧವನ್ನು ಪ್ರಾರಂಭಿಸುವ ಅಭಿಪ್ರಾಯವು ನಮಗಿರಲಿಲ್ಲ, ದಿಗೋಲೆಯವರಿಗೂ ಇರಲಿಲ್ಲ'

ವಿಮಾನ ದಾಳಿ

'ಇಂದು ವಿಮಾನ ದಾಳಿಯಿಂದ ಸತ್ತವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಆಸ್ತಿ ಹಾನಿ ವಿಶೇಷವಾಗಿದೆ. ಈಗಿನಂತಾದರೆ ಲಂಡನ್ ಪಟ್ಟಣದ ಅರ್ಧ ಭಾಗವನ್ನು ನಾಶಪಡಿಸಲಿಕ್ಕೂ ಕನಿಷ್ಟ ಪಕ್ಷ ಹತ್ತು ವರ್ಷಗಳಾದರೂ ಬೇಕು. ಆದರೆ ಇದರೊಳಗೆ ಜರ್ಮನಿಯ ಅವಸ್ಥೆಯೂ ಕೀರವುದು. ಹೇಡಿಯಂತೆ ಹಿಂದೆ ಬಂದು ಫ್ರೆಂಚ್ ಸಾಮ್ರಾಜ್ಯದ ಮೇಲೆ ಬಿದ್ದ ಮುಸಲಿನಿಯೂ ಮುಂದೆ ಕಟುವಾದ ಅನುಭವವನ್ನು ಹೊಂದಬೇಕಾಗಿದೆ.

ದಾಳಿಯ ಭಯ ಇನ್ನೂ ಇದೆ. ಅದನ್ನೆದುರಿಸಲು ಸದಾ ಸಿದ್ಧರಿರಬೇಕು. ಬ್ರಿಟಿಷ ವಿಮಾನ ದಳದ ಸಾಹಸಕ್ಕೆ ಹಿಟ್ಲರನು ಅಂಜಿರುವುದರಿಂದಲೇ ಆತನ ದಾಳಿ ಕಡಿಮೆಯಾಗಿದೆ'

—ಬರ್ಮಾ ರಸ್ತೆಯನ್ನು ತೆರೆಯುವ ವಿಷಯವನ್ನು ಜಪಾನಿಗೂ ತಿಳಿಸಿರುವುದಾಗಿ ತಿಳಿದಿದೆ

—ಲಾರ್ಡ್ಸ ಸಭೆಯಲ್ಲಿ ಬರ್ಮಾದ ರಸ್ತೆಯ ವಿಷಯ ಹೇಳುತ್ತಾ ಹೆಲಿಫಾಕ್ಸರು ಇದನ್ನು ರಷ್ಯಕ್ಕೆ ತಿಳಿಸಿದ್ದೇವೆ, ಅಮೇರಿಕವು ಒಪ್ಪಿದೆ ಎಂದರು

ಬರ್ಮಾರಸ್ತೆಯ ಬಗ್ಗೆ ರಾಷ್ಟ್ರಪತಿಗಳ ಆನಂದದ ಹೇಳಿಕೆ

ಬರ್ಮಾರಸ್ತೆಯನ್ನು ಪುನ ತೆರೆಯಲಾಗುವುದೆಂಬ ಸುದ್ದಿಯನ್ನು ಕೇಳಿ ರಾಷ್ಟ್ರಪತಿ ಅಜಾದರು ಹೀಗೆಂದು ಪ್ರಕಟಣೆ ಕೊಟ್ಟಿರುವರು

"ಬರ್ಮಾರಸ್ತೆಯನ್ನು ಈ ತಿಂಗಳ ೧೭ರಿಂದ ತೆರೆಯಲಿರುವರೆಂಬ ಸುದ್ದಿಯನ್ನು ಕೇಳಿ ಹಿಂದೀಯರಿಗೆ ಆನಂದವಾಗಿದೆ. ಈ ಬಗ್ಗೆ ಚರ್ಚಿಲ್ ಮಂತ್ರಿಮಂಡಲದವರು ತೋರಿಸಿದ ದುರ್ಬಲತೆಯನ್ನು ಸ್ವಾತಂತ್ರ್ಯ ಪ್ರಿಯರಾದ ಜನರೆಲ್ಲರೂ ನಿಷೇಧಿಸಿದ್ದರು. ಆದರೆ ಈ ದೌರ್ಬಲ್ಯದ ಅವಧಿ ಮೂರೇ ತಿಂಗಳಲ್ಲಿ ಮುಗಿದದ್ದು ಒಂದು ರೀತಿಯಿಂದ ಒಳಿತೇ ಆಯಿತು"

ಶರಚ್ಚಂದ್ರಬೋಸರ ಮೇಲೆ ಶಿಸ್ತು!

ಅಸೆಂಬ್ಲಿ ಕಾಂಗ್ರೆಸ್ ಪಕ್ಷದಿಂದ ತಳ್ಳಿದರು!

ಸದಸ್ಯತ್ವಕ್ಕೆ ರಾಜಿಕೊಡಬೇಕು

ಬಂಗಾಳದ ಪ್ರಮುಖ ಮುಂದಾಳುಗಳೂ ಬಂಗಾಳ ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಸದಸ್ಯರೂ ಆದ ಶರಚ್ಚಂದ್ರಬೋಸರ ಮೇಲೆ ಅ. ಭಾ. ಕಾಂ ಪಾರ್ಲಿಮೆಂಟು ಕಮಿಟಿಯವರು ಶಿಸ್ತಿನ ಕಾರ್ಯಕ್ರಮವನ್ನು ಹೂಡಿರುವರು. ಅವರನ್ನು ಅಸೆಂಬ್ಲಿ ಕಾಂಗ್ರೆಸ್ ಪಕ್ಷದಿಂದ ತಳ್ಳಿಹಾಕಲಾಗಿದೆ.

ಶರಚ್ಚಂದ್ರಬೋಸರು ತಿಳಿದು ತಿಳಿದೂ ಕಾಂಗ್ರೆಸ್ ನೀತಿಗೆ ಅನ್ಯಾಯ ಮಾಡಿದುದರಿಂದ ಹೀಗೆ ಮಾಡಲೇಬೇಕಾಗಿದೆಯೆಂದೂ ಅವರು ಕಾಂಗ್ರೆಸ್ ಪಕ್ಷದ ಗೌರವಕ್ಕೆ ಹಾನಿಯಾಗುವಂತೆ ನಡೆದಿರುವರೆಂದೂ, ಅವರು ಕಾಂಗ್ರೆಸಿನ ವಿರುದ್ಧ ಕೆಲಸ ಮಾಡಿರುವರೆಂದೂ ಅವರು ನಿಯಮ ಪಾಲಿಸಲಿಲ್ಲವೆಂದೂ ಅವರ ಮೇಲೆ ತಪ್ಪು ಸೂಚಿಸಲಾಗಿದೆ

ಕೂಲಿಕಾರರ ಬಲವನ್ನು ಹೆಚ್ಚಿಸಬೇಕು

ಶ್ರೀ. ಗಿರಿಯವರ ಸಂದೇಶ

ಮದ್ರಾಸು ಸರಕಾರದ ಹಿಂದಿನ ಉದ್ಯೋಗ ಮಂತ್ರಿಗಳೂ ಕೂಲಿಕಾರ ವರ್ಗದ ಪ್ರಮುಖ ಮುಂದಾಳುಗಳೂ ಆದ ಶ್ರೀ ಗಿರಿಯವರು ಟ್ರೇಡ ಯೂನಿಯನ್ನ ಕಾಂಗ್ರೆಸ ಹಾಗೂ ಟ್ರೇಡ ಯೂನಿಯನ್ನ ಫೆಡರೇಶನ ಇವರಡ ಸಮಾವಿಷ್ಟವಾದ ಒಗ್ಗೆ ಈ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ

ಇವೆರಡೂ ಸಂಸ್ಥೆಗಳ ಒಂದ ಗೂಡಿದ್ದರಿಂದ ಟ್ರೇಡ ಯೂನಿಯನ ಕಾಂಗ್ರೆಸಿನ ಮುಂಬೈ ಅಧಿವೇಶನವು ಒಳ್ಳೇ ಯಶಸ್ವಿಯಾಗಿದೆ ಹಾಗೂ ಅದರಿಂದ ದೇಶದಲ್ಲಿಯ ಕೂಲಿಕಾರ ಚಳವಳಕ್ಕೆ ಒಂದು ಹೊಸ ಗತಿಯುಂಟಾಗುವದು

ಬೇರೆ ಬೇರೆ ಸಂಗಡದವರು ತಮ್ಮ ಮೇಲಿನ ಹೊಣೆಯನ್ನರಿತು ಟ್ರೇಡ ಯೂನಿಯನಿನ ಬಲವನ್ನು ಬೆಳೆಸುವ ಪ್ರಯತ್ನ ಮಾಡಿದರೆ ಬಂಡವಲುಗಾರರು ಹಾಗು ಸರಕಾರದವರು ಇವರೊಂದಿಗೆ ಅಧಿಕಾರಯುಕ್ತವಾಣಿಯಿಂದ ಮಾತಾಡಲು ಟ್ರೇಡ ಯೂನಿಯನಿನ ಕಾಂಗ್ರೆಸಿಗೆ ಅನುವಾಗುವದು.

ಯುದ್ಧದ ಬಗ್ಗೆ ನಮ್ಮ ಅಭಿಪ್ರಾಯವೇನಿರುವದೆಂಬುದು ನಮ್ಮ ಗೊತ್ತುವಳಿಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ ಪರಿಸ್ಥಿತಿಯು ಸ್ಥಿತ್ಯಂತರ ಹೊಂದಿದರೆ, ಜನರಲ್ ಕೌನ್ಸಿಲಿನ ಸಭೆಗಳನ್ನು ಮೇಲಿಂದ ಮೇಲೆ ಕರೆದು ಅದರ ಬಗ್ಗೆ ವಿಚಾರ ವಿನಿಮಯ ಮಾಡಬಹುದು. ಅತ್ಯವಶ್ಯವೆನಿಸಿದ್ದಲ್ಲಿ ಟ್ರೇಡ ಯೂನಿಯನ್ನ ಕಾಂಗ್ರೆಸ್ಸಿನ ಪ್ರತ್ಯೇಕ ಅಧಿವೇಶನವನ್ನು ಕರೆಯಲಾಗುವದು.

ಸಿನೆಮಾ ಸುದ್ದಿ!

ಕರ್ನಾಟಕದಲ್ಲಿ ಚಲಚ್ಚಿತ್ರೋದ್ಯೋಗ

ಬೆಳಗಾಮಿನಲ್ಲಿ ಬೇಗನೇ ಒಂದು ಚಲಚ್ಚಿತ್ರ ಸಂಸ್ಥೆಯು ಸ್ಥಾಪಿಸಲ್ಪಡುವುದೆಂದು ಸುದ್ದಿಯಿದೆ. ಶ್ರೀ ಕರಂದೀಕರರು ಫಿಲ್ಮ್ ಸ್ಟುಡಿಯೋವನ್ನು ಸ್ಥಾಪಿಸುವ ಹೊಣೆಗಾರಿಕೆಯನ್ನು ಹೊಂದಿಕೊಂಡಿರುವರಂತೆ ಇವರು ಕನ್ನಡದಲ್ಲಿಯೂ ಹಿಂದಿಯಲ್ಲಿಯೂ ಚಿತ್ರಗಳನ್ನು ತಯಾರಿಸುವರಂತೆ.

ದೇವಿಕಾರಾಣಿ

ಬಾಂಬೇ ಟಾಕೀಸಿನ ಜೀವ ದೇವಿಕಾರಾಣಿ ತನ್ನ ಪತಿಯು ತೀರಿಕೊಂಡ ಮೇಲೆ ಕೆಲ ಕಾಲ ಸಹಜವಾಗಿ ಸಹಿಸಲಾರದ ದುಃಖದಲ್ಲಿದ್ದಳಾದರೂ, ಇಂದು ತನ್ನ ಸಂಸ್ಥೆಯಾದ ಬಾಂಬೇ ಟಾಕೀಸಿನ ಅಭಿವೃದ್ಧಿಯ ವಿಷಯದಲ್ಲಿ ಬಹಳ ಉತ್ಸಾಹದಿಂದ ದುಡಿಯುತ್ತಿರುವಳೆಂದು ತಿಳಿದಿದೆ

ಶಾಂತಾ ಹುಬ್ಳೀಕರ್

ಶಾಂತಾ ಹುಬ್ಳೀಕರ್, ಇಂದು ನಿರ್ದೇಶಕ ಶಾಂತಾರಾಮರು ಸಿದ್ಧ ತಯಾರಿಸಿದ ಹೊಸ ತಾರೆ ಈಕೆ ಕನ್ನಡತಿ ಪ್ರಭಾತ ಕಂಪನಿಯ ಆದ್ಮಿ ಚಿತ್ರದಲ್ಲಿ ಅಭಿನಯಿಸಿ ಸಿನೇಮಾ ಲೋಕದಲ್ಲಿ ಬಹಳ ಪ್ರಖ್ಯಾತಿಯನ್ನು ಪಡೆದಿರುವಳು ಈಕೆ ಈಗ ಪುಣೆಯಲ್ಲಿ ತಯಾರಾಗುತ್ತಿರುವ 'ಸುಭದ್ರ' ಎಂಬ ಕನ್ನಡ ನಾಟ್ಯಪಟದಲ್ಲಿ ಅಭಿನಯಿಸುವಳೆಂದು ತಿಳಿದು ಬಂದಿದೆ

ಲೀಲಾ ಚಿಟ್ನೀಸಳ ಹೊಸ ಸಂಸ್ಥೆ

ಲೀಲಾ ಚಿಟ್ನೀಸಳು ಇಂದ ಚಿತ್ರ ಪಿಕ್ಚರ್ಸ್ ಎಂಬ ಹೆಸರಿನ ಹೊಸ ಸಂಸ್ಥೆಯೊಂದನ್ನು ತೆರೆದಳು ಇದರ ಉದ್ಘಾಟನಾ ಸಮಾರಂಭವು ಮೊನ್ನೆ ನೆರವೇರಿತು ಇದರ ಮೊದಲನೆಯ ಚಿತ್ರವು ರಣಜಿತ್ ಸ್ಟುಡಿಯೋದಲ್ಲಿ ತಯಾರಾಗುತ್ತಿದೆ ಸಾಗರದ 'ಒನ್ಲಿ ವೇ' ಎಂಬ ಚಿತ್ರದಲ್ಲಿ ಅಭಿನಯಿಸಿದ ಅರುಣನು ಇದರಲ್ಲಿ ಲೀಲಾ ಚಿಟ್ನಿಸಳೊಡನೆ ಪಾತ್ರ ವಹಿಸುವನು

ಮಾನಿಕಾ ದೇಸಾಯಿ

ನೇಶನಲ್ ಸ್ಟುಡಿಯೋದವರು, ಸುಪ್ರಸಿದ್ಧ ನಟಿ ಲೀಲಾ ದೇಸಾಯಿಯ ಸಹೋದರಿ ಮಾನಿಕಾ ದೇಸಾಯಿಯ ಸಹಕಾರವನ್ನು ಪಡೆದಿರುವರು. ಎರಡು ವರ್ಷಗಳ ತನಕ ಆಕೆ ಅದರಲ್ಲಿ ಅಭಿನಯಿಸುವುದಾಗಿ ಕರಾರು ಆಗಿರುವುದಂತೆ.

ಅಶೋಕ

ನೇಶನಲ್ ಪಿಕ್ಚರ್ಸಿನವರು ಮನ್ಮಥರೈಯವರ 'ಅಶೋಕ' ಕಾದಂಬರಿಯನ್ನು ಚಿತ್ರ ತಯಾರಿಸುವರೆಂದು ತಿಳಿದಿದೆ

ಹಿಂದುಸ್ಥಾನ್ ಹಮಾರಾ

ಬ್ರಿಟಿಷ್ ಮುನಿಸಿಪೋಲಿಟಿಯವರ ಹಿಂದುಸ್ಥಾನ್ ಹಮಾರಾ ಚಿತ್ರವು ಪಂಜಾಬಿನಲ್ಲಿ ಬಹಿಷ್ಕರಿಸಲ್ಪಟ್ಟಿದೆ.

ಮದ್ರಾಸ್ ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದ ಸರಕಾರಿ ಉದ್ಯೋಗಸ್ಥರು

ರೂ 324 ಟಿ ಎಸ್ ರಾಮಚಂದ್ರನ್, ರೂ. 270 ಎಸ್ ಕೆ ಚಿಟ್ಟೂರ್, ರೂ 259 ಕಾಸರಗೋಡು ಅಬಕಾರಿ ಸರ್ಕಲಿನ ಸಿಬಂದಿ, ರೂ 228 ಎಂ ಕೇಶವನ್ನುಣ್ಣಿ ನಾಯರ್, ರೂ 222 ಖಾನ್‌ಸಾಹೇಬ್ ಎಂ ಜೀಯಾಉದ್ದಿನ್, ರೂ. 170 ಡಿ ಎಸ್ ರಾಜಾರಾವ್, ರೂ. 163 ಪಿ. ಜಿ ಪೀರಿಸ್, ರೂ 130 ಕ್ಯಾಪ್ಟನ್ ಸಿ ಆರ್ ನಾಯ್ಡು ಎಸ್ ಸಿ ನಾಯಕ್, ರೂ 120 ಎಂ ವಿ. ಸುಬ್ರಹ್ಮಣ್ಯನ್, ಟಿ ಡಿ. ರಾಮಯ್ಯ, ಕೆ ಸರ್ವೋತ್ತಮ ರಾವ್, ಪಿ ಜಿ ಮ್ಯಾಥ್ಯೂ, ರೂ 110 ಯು ಕಣ್ಣಪ್ಪ, ಈ ಕೃಷ್ಣಮೂರ್ತಿ, ರೂ 100 ಡಾ ಪ್ಯಾ ಶಿವರಾಮಯ್ಯ, ಕೆ ಎಸ್ ಯು ನಾಯರ್, ರೂ 90 ರಾವ್ ಸಾಹೇಬ್ ಕೆ ಆರ್ ತೊಂಭತ್, ಜಿ ಜಿ ಪಟಿಕೋ, ಡಾ ಕೆ ಮಾಧವ ನಾಯಕ್, ಡಾ ಸಿ ಕೃಷ್ಣ ಮೆನನ್ ಕೆ ಇ ಪೋತನ್ ಡಾ ಸಿ ಭವಾನಿ ರಾವ್ ಡಾ ಎಂ ಸಂಜೀವ ರಾವ್, ರೂ 75 ಕೆ ಎಸ್ ಪೊನ್ನಪ್ಪ, ರೂ 72 ಎಲ್ ಎ ವೈದ್ಯನಾಥ ಅಯ್ಯರ್, ರೂ 70 ಪಿ ಪೋಲಾ ರೆಡ್ಡಿ ಬಿ ಕೊರಗಪ್ಪ ರೂ 60 ಎಂ ವರದರಾಜುಲು ನಾಯ್ಡು ರೂ 55 ಎ. ಮೊಂತೇರೊ, ಜಿ ಗಣೇಶ ಸುಂದರ ರಾವ್ ರೂ 52 ಬಿ ಎಂ ಮುತ್ತಣ್ಣ ರೂ 50 ಪಿ ಕೆ ಮಾಧವ ಮೆನನ್ ರೂ 8 ಯು ಮಂಗೇಶ ರಾವ್ ಬಿ ಪಿ ರೋಬರ್ಟ್ಸ್, ರೂ 46 ಜಿ ದತ್ತಾತ್ರೇಯ ರಾವ್, ಎಂ ವೆಂಕಟಪ್ಪ ರೂ. 45 ಯು ಎನ್ ಕೃಷ್ಣರಾವ್ ಎನ್ ಸಂಜೀವ ರಾವ್, ರೂ 44 ಎಫ್ ಎ ಪ್ರೈಟರ್ ರೂ 42 ಯು ನಾಗಪ್ಪ ರೂ 40 ಡಾ ಜಿ ಸುಬ್ರಾಯ ಬಾಳಿಗ, ಓ ಡಿ ಪೆರಿಯತ್, ಎಂ ಎನ್ ಭಂಡಾರಿ ರೂ 36 ಕೆ ಕೇಶವ ಕಿಣಿ, ರೂ 9 ಎಂ ರಾಮಪ್ಪ ಬಿ ಗೋಪಾಲಕೃಷ್ಣ ಬಾಳಿಗ ಜಿ ವೆಂಕಟ ಸುಬ್ರಹ್ಮಣ್ಯ ಕೆ ದೂಮ ಶೆಟ್ಟಿ ರೂ 90 ಡಿ ಕಲ್ಯಾಣಿ ಅಮ್ಮ, ಮಿಸೆಸ್ ಈ ಎಂ ಕರ ಪಿಳ್ಳೆ ರೂ 34 ಕೆ ಪಿ ರಾಮಸ್ವಾಮಿ ಅಯ್ಯರ್ ಕೆ ಎಸ್ ರಾಮಣ್ಣ ರೈ ಡಾ ವಾಸುದೇವ ರಾವ್ ಡಾ ಎಚ್ ಮಂಜುನಾಥ ಎಂ ಸಮಿಉಲ್ಲಾ ರೂ 3 ಜಿ ಗಣೇಶ ಡಾ ಎಸ್ ರಾಮನಾಥನ್ ಬಿ ರಾಮಕೃಷ್ಣ ರಾವ್ ಯು ಜನಾರ್ಧನ, ರೂ 32 ಬಿ ಪುರುಷೋತ್ತಮ ರೂ 30 ಕೆ ರಾಮಚಂದ್ರ ರಾವ್ ಎಂ ಪಿ ದೇವೇಶ ಪಿಶಾರೋಟಿ, ಪಿ ಕರುಣಾಕರ ಮೆನನ್, ಎಚ್ ರಾಮ ರಾವ್ ಎಂ ಮಾರ್ಟಿನ್, ಎನ್ ಸುಬ್ಬ ರಾವ್, ಕೆ ರಾಮಯ್ಯ ನಾಯ್ಕ ಎಚ್ ನಾಗೇಶ ರಾವ್, ಮಿಸ್ ಇ ಬ್ರಿಟೊ, ಕೊಲೊಡುನ್ ಡೊಸುವಾ, ಯು ಪಳ್ಳಿಯಾರಿ ಎಂ ಅಬ್ದುಲ್ ರಹಿಮಾನ್, ಎಂ ಬಿ ಶಂಕರ ರಾವ್, ಓ ಮೈಕಾ, ಸಿ ಎಂ ಡಿ ಸೋಜಾ, ಪಿ ಭೋಜ ರಾವ್, ಆರ್ ಎಚ್ ಪೈನ್, ಎಂ ಜೆ ಪಿ ನಜರೆತ್, ರೂ. 29 ಪಿ. ಸಂಬಂದಂ, ಪಿ ಎಸ್ ಟಿ ಶೆಟ್ಟಿ, ಎಚ್ ಸುಂದರ ರಾವ್, ರೂ. 28 ಎಚ್ ಸಂಜೀವ ರಾವ್, ಎ ಆರ್ ಶಂಕರ ನಾಯರ್, ಪಿ. ಎಸ್. ಕೇಶವ ಸ್ವಾಮಿ, ಎನ್. ಲಕ್ಷ್ಮಣ ರಾವ್, ಕೆ. ರಾಮ, ಯು. ನಾಗೇಶ; ಎಚ್ ಟಿ. ಜೋನ್ಸ್‌ಟನ್, ರೂ 26 ಕೆ. ನಾರಾಯಣ, ಜೂಲಿಯನ್ ಅರಾನಾ ಡಿ. ಆರ್. ವೆಂಕಟೇಶ ಅಯ್ಯರ್, ರೂ. 25 ಪಿ. ಆರ್. ರಾವ್, ಬಿ ಅಣ್ಣಪ್ಪ, ಡಬ್ಲ್ಯು. ಜೆ. ಡಿಸೋಜ, ಎನ್. ಕೃಷ್ಣಸ್ವಾಮಿ ಅಯ್ಯರ್, ರೂ. 24 ಎಲ್. ವಿ. ಗೋಪಾಲಕೃಷ್ಣ ಐಯ್ಯರ್, ಎಂ. ಗೋವಿಂದಾಚಾರಿ, ಪಿ. ಶಿವರಾಮ ಶೆಟ್ಟಿ; ಎಚ್. ಎಲ್. ಪಿಂಟೋ; ವಿ. ಪರಮೇಶ್ವರ ಮೆನನ್; ಕೆ. ಗೋಪಾಲನ್ ನಾಯರ್, ಆರ್. ಪ್ರಸನ್ನ ರಾವ್, ಪಿ. ದೇವ ರಾವ್, ಎಂ. ದಾಮೋದರ ಪ್ರಭು; ಎಲ್. ಕೃಷ್ಣ ಭಟ್ಟ, ಎಚ್. ನರಸಿಂಹ;

ಪುಸ್ತಕ ವಿಮರ್ಶೆ

ದ್ವಿತೀಯ ಮಹಾಯುದ್ಧ:—ಲೇಖಕರು. ಹರಿದಾಸ್. ತ್ರಿವೇಣೀಗ್ರಂಥಮಾಲೆ, ಮಂಗಳೂರು ಇದರ ನಾಲ್ಕನೆಯ ಗ್ರಂಥ. ಕ್ರೌನ್ 1/8 ಆಕಾರದ 180 ಪುಟಗಳು ಬೆಲೆ 0—8—0

1914 ರಲ್ಲಿ ಮೊದಲನೆಯ ಮಹಾಯುದ್ಧವು ನಡೆಯಿತು ಅದು ನಾಲ್ಕು ವರ್ಷಗಳ ಮೇಲೆ ವರ್ಸೇಲ್ ಒಪ್ಪಂದದೊಡನೆ ಕೊನೆಗೊಂಡಿತು ಒಂದು ರೀತಿಯಿಂದ ಆ ಒಪ್ಪಂದವೇ ಮೂಲವಾದ ಇಂದು ನಡೆಯುವ ದ್ವಿತೀಯ ಮಹಾಯುದ್ಧವು ಹಿಂದಿನ ಯುದ್ಧಕ್ಕಿಂತ ಪ್ರಚಂಡವೇ ಆಗಿದೆ ಇದರ ವಿನಾಶ ರೀತಿಯು ಎಷ್ಟೆಷ್ಟು ಉಗ್ರತರವಾಗುವುದೋ ಊಹಿಸಲ ಸದಳವಾಗಿದೆ ಈ ಯುದ್ಧದ ಕಾಲದಲ್ಲಿ ನಾವು ಬೆರಗಾಗಿ ನಿಂತಿದ್ದೇವೆ ಆದರೆ ಇದರ ಕಾರ್ಯಕಾರಣಗಳನ್ನು ತಿಳಿದುಕೊಳ್ಳಲು ಕುತೂಹಲ ಹುಟ್ಟುವುದಿಲ್ಲವೆ? ಇಂತಹ ವಿಷಯಗಳನ್ನು ಇದುವರೆಗೆ ಇಂಗ್ಲಿಷ್ ಭಾಷಾಜ್ಞಾನವುಳ್ಳ ಕೆಲವರು ಮಾತ್ರ ತಿಳಿದುಕೊಳ್ಳಲು ಅವಕಾಶವಿತ್ತು. ಆದರೆ ಇಂದು ಶ್ರೀ ಹರಿದಾಸರು ಕನ್ನಡದಲ್ಲಿ ಅಪೂರ್ವವಾಗಿರುವ ಈ ರೀತಿಯ ರಾಜಕೀಯ ಗ್ರಂಥವೊಂದನ್ನು ಬರೆದು ಕನ್ನಡಿಗರಿಗೆ ಬಹು ಉಪಕಾರ ಮಾಡಿದ್ದಾರೆ ದ್ವಿತೀಯ ಮಹಾ ಯುದ್ಧದ ವಿಷಯವಾಗಿ ವಿಪುಲವಾಗಿ ವಿಷಯಗಳನ್ನು ಈ ಕಾಲದಲ್ಲಿ ತಿಳಿಸಿ ಯುರೋಪಿನ ಸಮರದ ಹಿನ್ನೆಲೆಯನ್ನು ಅರಿತುಕೊಳ್ಳಲು ಸಹಾಯಮಾಡಿದ್ದಾರೆ

ಮೊದಲನೆಯ ಅಧ್ಯಾಯದಲ್ಲಿ ಮಹಾಯುದ್ಧದ ಹಿನ್ನೆಲೆಯನ್ನು ಕೊಟ್ಟಿದ್ದಾರೆ ಎರಡನೇಯದರಲ್ಲಿ ನಾಜೀ ಪ್ರಾಬಲ್ಯವನ್ನು ವಿವರಿಸಿದ್ದಾರೆ, ಮೂರನೇಯದರಲ್ಲಿ ಅಬಿಸೀನಿಯಾ ಕಲಹ, ರೋಮ್ ಬರ್ಲಿನ್ ಟೋಕಿಯೋ ಸಂಬಂಧಗಳನ್ನು ತಿಳಿಸಿದ್ದಾರೆ ಆ ಮೇಲೆ ಸ್ಪೈನಿನ ಅಂತಃಕಲಹ ಚೀನಾ ಜಪಾನ್ ಯುದ್ಧ ಆಸ್ಟ್ರಿಯ ಮೊದನೆ ಐಕ್ಯ ಮ್ಯೂನಿಕ್ ಒಪ್ಪಂದ, ಮತ್ತೆ ನಡೆದ ಹಲವಾರು ಯುದ್ಧಗಳು, ನಾಜಿಗಳ ಮುಂದೊತ್ತುವಿಕೆಗಳನ್ನು ವಿವರಿಸುತ್ತಾ ಬ್ರಿಟನು ಯುದ್ಧ ಸಾರಿದ ಮೇಲೆ ನಡೆದ ಇತ್ತೀಚೆಯ ಘಟನೆಗಳನ್ನೂ ತಿಳಿಸಿರುವರು ಒಟ್ಟು ಪುಸ್ತಕವು ಹನ್ನೊಂದು ಅಧ್ಯಾಯಗಳಿಂದ ಕೂಡಿದೆ ಇಂದಿನ ಮಹಾ ಯುದ್ಧದ ಕುರಿತು ತಿಳಿವ ಕುತೂಹಲವುಳ್ಳವರು ಅವಶ್ಯವಾಗಿ ಓದಲೇಬೇಕಾದ ಪುಸ್ತಕ ಅಲ್ಲದೆ ವಿಷಯಗಳನ್ನು ಮಂದಟ್ಟು ಮಾಡಲು ಭೂಪಟಗಳನ್ನು ಕೊಟ್ಟಿರುವರು ಭೌಗೋಳಿಕ ಸ್ಥಿತಿಗಳನ್ನು ತಿಳಿಸಿರುವರು ಪತ್ರಿಕೋದ್ಯಮದಲ್ಲಿ ನುರಿತ ಲೇಖಕರು ಈ ಕಾರ್ಯವನ್ನು ಅದಷ್ಟು ಸಮಂಜಸವಾಗಿಯೇ ಮಾಡಿರುವರು ಇತರ ಯಾವುದೇ ತರದ ಪುಸ್ತಕಗಳಿಗಿಂತಲೂ ಇಂದು ಈ ತರದ ಪುಸ್ತಕಗಳಿಗೆ ಹೆಚ್ಚಿನ ಮಹತ್ವವಿದೆ ಶ್ರೀ ಹರಿದಾಸರು ಈ ತರದ ಹೊಸ ದಾರಿಯಲ್ಲಿ ಕನ್ನಡ ನುಡಿಯ, ನಾಡಿನ ಸೇವೆಯನ್ನು ಸಲ್ಲಿಸುತ್ತಿರುವುದು ಸಂತೋಷದ ವಿಷಯ ಅವರ ಲೇಖನ ಶಕ್ತಿಯು ವರ್ಧಿಷ್ಣುವಾಗಲಿ, ಹೆಚ್ಚಿನ ಪ್ರೋತ್ಸಾಹವನ್ನು ಪಡೆಯಲಿ ಎಂದು ನಮ್ಮ ಹಾರೈಕೆ.

ನೋಟೀಸು

ಪುತ್ತೂರು ಡಿ॥ ಮು॥ ಕೋರ್ಟಿನಲ್ಲಿ

S E P No. 315 of 1939

ಅರ್ಜಿದಾರಳು ಯಚ್ಚಮ್ಮ ವಾದಿಳು

ಯಪ್ಪಿ ಗೋಪಾಲ ಭಟ್ಟ, ಲಕ್ಷ್ಮೀನಾರಾಯಣ ಭಟ್ಟರ ಮಗ ಮೂಲಾಡಿ ಗ್ರಾಮದ ಕಾರಿ ಬಡಗ ಕಳೆಕಾರು ಗ್ರಾಮದ ಮಠದ ದೇವಸ್ಥಾನದಲ್ಲಿ ಅರ್ಚಕ . . . ಪ್ರತಿವಾದಿ

ಸದ್ರಿ ಪ್ರತಿವಾದಿಯಾದ ಎಪ್ಪಿಗೆ:—

ಮೇಲಿನ ಅಮಲ್ದಾರಿಯಲ್ಲಿ ಜಪ್ತಿ ಮಾಡಲ್ಪಟ್ಟ ಸ್ಥಿರ ಆಸ್ತಿ ಕ್ರಯದ ಪ್ರತಿಫಲದ ಬಾಕಿಯನ್ನು ಅಸ್ತು ರುಪ್ಯಾ ಆರ್ಡರ ಪಸೂಲಿ ಡಿಕ್ರಿ ವಿಕ್ರಯದ ಬಗ್ಗೆ ಅರ್ಜಿದಾರರು ಅರ್ಜಿ ಮಾಡಿದ್ದಾಳೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾರೀಕು 22—10—1940ಕ್ಕೆ ನಿಶ್ಚಯಿಸಲಾಗಿದೆ ಎಂತಲೂ ಆ ಕುರಿತು ಆಕ್ಷೇಪ ಇದ್ದರೆ ಸದ್ರಿ ತ್ಯಾದಿಯ ಹಗಲ ಬೆಳಗ್ಗೆ ಘಂಟೆ 10ಕ್ಕೆ ಈ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಹಾಜರು ಮಾಡಿಕೊಳ್ಳತಕ್ಕದ್ದೆಂತಲೂ ಎಪ್ಪಿಗೆ ಈ ಮೂಲಕ ತಿಳಿಸಲಾಗಿರುತ್ತದೆ

ಪುತ್ತೂರು, 7—10—'40 } M. Shiva Rao, Pleader for Petitioner.



ನೀರಿನ ಮೇಲೆ ನಡೆಯಲಿಕ್ಕೆ ಪಾದರಕ್ಷೆ

ಜರ್ಮನಿಯ ಒಬ್ಬ ಸಂಶೋಧಕ ಸ್ಪ್ರೆಡಂಕ ಎಂಬವನು ನೀರಿನ ಮೇಲೆ ನಡೆಯಲಿಕ್ಕಾಗುವ ಒಂದು ಜಾತಿಯ ಪಾದರಕ್ಷೆಗಳನ್ನು ಮಾಡಿದ್ದಾನೆ ಈ ಪಾದರಕ್ಷೆಗಳನ್ನು ತಯಾರಿಸಿದ ಸಾಮಗ್ರಿಯು ಯಾವದೆಂಬುದು ಒಂದು ರಹಸ್ಯವಾಗಿದೆ ಈ ಪಾದರಕ್ಷೆಗಳನ್ನು ಕಾಲಿಗೆ ಸಿಕ್ಕಿಸಿಕೊಂಡರೆ ರಸ್ತೆಯ ಮೇಲೆ ನಡೆದು ಹೋಗುವಂತೆ ನೀರಿನ ಮೇಲೂ ಹೆಜ್ಜೆ ಹಾಕಿ ನಡೆಯಬಹುದು ಇವು ಆಕಾರದಲ್ಲಿ ದೋಣಿಯ ಹಾಗೆ ಇದ್ದು, ಆರಡಿ ಉದ್ದವಾಗಿಯೂ ಎಂಟಂಗುಲ ಆಳವಾಗಿಯೂ ಹತ್ತಂಗುಲ ಅಗಲವಾಗಿಯೂ ಇರುತ್ತವೆ ಈ ಮೆಟ್ಟುಗಳನ್ನು ಹಾಕಿಕೊಂಡು ಅನ್ವೇಷಕನು ಕೆಲವು ತಿಂಗಳುಗಳ ಹಿಂದೆ ಗೋವರ ಜಲಸಂಧನ್ನು ನಡೆದಿದ್ದಾನೆ ಈಗ ಇಂಗ್ಲಿಷ ಚೆನಲನ್ನು ನಡೆದು ದಾಟುವ ಆಲೋಚನೆಯಲ್ಲಿ ಇದ್ದಾನಂತೆ!

ಗಿಡಮರಗಳಿಂದ ಕಾಕೀಬಣ್ಣ

ಯುದ್ಧಕಾಲವಾಗಿರುವದರಿಂದ ಖನಿಜಗಳಿಂದ ಆದ ಬಣ್ಣಗಳು ವಿದೇಶಗಳಿಂದ ಭಾರತಕ್ಕೆ ಬರುವದು ನಿಂತುಹೋಗಿದೆ ಆದ್ದರಿಂದ ಇಲ್ಲಿಯ ಕೆಲವು ವಿಜ್ಞಾನಿಗಳು ಗಿಡಮರಗಳಿಂದ ಬಣ್ಣ ತಯಾರಿಸುವ ಹಲವು ಪ್ರಯತ್ನಗಳನ್ನು ಮಾಡಿದ್ದಾರೆ ಇವರು ಗಿಡಮರಗಳಿಂದ ತಯಾರಿಸಿರುವ ಕಾಕಿ ಬಣ್ಣವು ಖನಿಜಗಳಿಂದಾದ ವಿದೇಶೀ ಬಣ್ಣದಷ್ಟು ಉತ್ತಮವಾಗಿಲ್ಲವಾದರೂ ನಾವಾನ್ಯ ಕೆಲಸಗಳಿಗೆ ಅದನ್ನೇ ಉಪಯೋಗಿಸಬಹುದಾಗಿದೆ. ಈ ಸ್ವದೇಶೀ ವನಸ್ಪತಿ ಕಾಕಿ ಬಣ್ಣವು ಬಹುಕಾಲ ಮಾಸದ ಹಾಗೆ ಮಾಡಲು ವಿಜ್ಞಾನಿಗಳು ಬೇರೆ ಕೆಲವು ಉಪಾಯಗಳನ್ನು ಕಂಡುಕೊಳ್ಳುತ್ತಿರುವರು. ಇನ್ನು ಮುಂದೆ ಅತಿ ಮುಖ್ಯ ವಿಷಯಗಳಿಗೆ ಮಾತ್ರ ಖನಿಜಗಳಿಂದ ತಯಾರಿಸಿದ ಕಾಕಿ ಬಣ್ಣವನ್ನು ಉಪಯೋಗಿಸಿ ಉಳಿದ ಕಾರ್ಯಗಳಿಗೆ ಗಿಡಮರಗಳ ಕಾಕಿ ಬಣ್ಣವನ್ನೇ ಉಪಯೋಗಿಸಬಹುದು.

ಕಾಫಿಯಲ್ಲಿ ಹೊಸ ಪ್ರಯೋಗ

ಕಾಫಿಯು ವಿಶೇಷವಾಗಿ ಬೆಳೆದು, ಅದರ ಬೆಲೆ ಇಳಿಯುತ್ತಿರುವದರಿಂದ ವ್ಯವಸಾಯಗಾರರು ತುಂಬಾ ನಷ್ಟ ಹೊಂದುತಿದ್ದಾರೆ ಆದ್ದರಿಂದ ಕಾಫಿಯನ್ನು ಕುಡಿಯಲಿಕ್ಕೆ ಮಾತ್ರವಲ್ಲ, ಮಿಕ್ಕ ಕಾರ್ಯಗಳಿಗೂ ಉಪಯೋಗಿಸುವ ಕುರಿತ ವಿಜ್ಞಾನಿಗಳು ಆಲೋಚಿಸುತಿದ್ದಾರೆ ಕಾಫಿಬೀಜದಿಂದ ತೆಗೆದ ಎಣ್ಣೆಯು ಔಷಧಗಳನ್ನು ತಯಾರಿಸಲಿಕ್ಕೆ ಆಗುತ್ತದೆ ಕಾಫಿಯನ್ನು ಗಂಳಿಸಿ ತೆಗೆದ ಮೇಲೆ ಉಳಿದ ಹುಡಿಯಿಂದ ದಪ್ಪದ ಬಟ್ಟೆಯನ್ನು ತಯಾರಿಸಬಹುದು ಈ ಬಟ್ಟೆಯನ್ನು ಹರಿದು, ಕತ್ತರಿಸಿ ಅಥವಾ ಎರಕ ಹಾಕಿ ಬೇರೆ ಬೇರೆ ಆಕಾರ ಪರಿಮಾಣಗಳ ಪಾತ್ರೆ ಒಟ್ಟಿಲುಗಳನ್ನು ತಯಾರಿಸಬಹುದ ಕಾಫಿಯನ್ನು ಕಾಫಿಯ ಬಟ್ಟಲುಗಳಲಿಯೇ ಕುಡಿಯುವ ದಿನಗಳು ಇನ್ನು ದೂರವಿರಲಾರದು

ಕಾಡುಗಳಿಂದ ಹವೆ ಬದಲಾವಣೆ

ಕಾಡುಗಳು ದಟ್ಟವಾಗಿಯೂ ವಿಶಾಲವಾಗಿಯೂ ಬೆಳೆದಿರುವಲ್ಲಿ ಮಳೆ ಚೆನ್ನಾಗಿ ಸುರಿದು ಹವೆಯಲ್ಲಿ ಅದಕ್ಕನುಗುಣವಾದ ಸ್ಥಿತ್ಯಂತರಗಳುಂಟಾಗುತ್ತವೆಂಬುದು ಸಾಮಾನ್ಯ ಊಹೆಯಾಗಿದೆ ಆದರೆ ಕಾರ್ಬನ್ ಮತ್ತು ಶಿಲ್ಲನಾವ್ ಎಂಬಿಬ್ಬರು ಫ್ರೆಂಚ ವಿಜ್ಞಾನಿಗಳು ಅನೇಕ ಪರಿಶೋಧನೆಗಳನ್ನು ಮಾಡಿ ಈ ಊಹೆಯು ತಪ್ಪಾಗಿರುವದೆಂದು ತೋರಿಸಿಕೊಟ್ಟಿರುವರು ಕಾಡುಗಳು ಬೆಳೆದಿರುವಲ್ಲಿ ಅಲ್ಲಲ್ಲಿ ಸ್ವಲ್ಪ ಜಾಸ್ತಿ ಮಳೆ ಆಗಬಹುದು ಆದರೆ ಮಳೆ ಬರಲಿಕ್ಕೆ ಬೇಕಾದ ಬೇರೆ ಅನುಕೂಲತೆಗಳು ಇರುವದಿಲ್ಲವಾದರೆ ಕಾಡುಗಳನ್ನು ಬೆಳೆಸಿ ಫಲವಿಲ್ಲ ಅಂಥ ಅನುಕೂಲಗಳಿಲ್ಲದಲ್ಲಿ ಕಾಡ ಬೆಳೆವುದರಿಂದ ಮಳೆ ಬರುವದಾಗಲೀ ಹವೆಯಲ್ಲಿ ಸ್ಥಿತ್ಯಂತರಗಳಾಗುವದಾಗಲೀ ಇಲ್ಲ ಕಾಡ ಬಳಸಿ ಬೆಂಗಾಡುಗಳಲ್ಲಿ ಮಳೆ ಬರವಂತೆ ಮಾಡುವ ಪ್ರಯತ್ನಗಳು ವ್ಯರ್ಥವೇ ಸರಿ

ಹಾವಿನೆಣ್ಣೆಯಿಂದ ಸೌಂದರ್ಯ ವೃದ್ಧಿ

ಹಾವಿನ ಎಣ್ಣೆಯನ್ನು ಮೈಗೆ ಹಚ್ಚಿ ಸ್ನಾನ ಮಾಡಿದರೆ ಮೈಯೊಳಗಿನ ಎಲ್ಲ ಕುಂದುಕೊರತೆಗಳು ದೂರವಾಗಿ ಶರೀರವು ಸುಂದರವೂ ಸುದೃಢವೂ ಕೋಮಲವೂ ಆಗುತ್ತದೆಂದು ಸಂಡೇ ಡಿಸ್ಪ್ಯಾಚ್ ಎಂಬ ಪತ್ರಿಕೆಯಲ್ಲಿ ಒಬ್ಬ ಆಂಗ್ಲ ಮಹಿಳೆಯು ಸ್ವಾನುಭವದಿಂದ ಹೇಳಿದ್ದಾಳೆ ಆದರೆ ಸೌಂದರ್ಯಕ್ಕಾಗಿ ಉಪಯೋಗಿಸುವ ಈ ಎಣ್ಣೆಯು ಜೀವಂತ ಹಾವುಗಳ ಕೊಬ್ಬಿನಿಂದ ತಯಾರಿಸಿದ್ದು ಆಗಿರಬೇಕಂತೆ

ಮರುಭೂಮಿಗಳಲ್ಲಿ ಸಸ್ಯ ಬೆಳವಣಿಗೆ

ಮರಳಿನಲ್ಲಿ ಯಾವ ಸಸ್ಯಾಹಾರವೂ ಇರುವದಿಲ್ಲ ಅಮೆರಿಕದ ಒಬ್ಬ ವಿಜ್ಞಾನಿಯು ಸಸ್ಯಗಳ ಬೆಳವಣಿಗೆಗೆ ಬೇಕಾದ ಎಲ್ಲ ಪದಾರ್ಥಗಳೂ ಇರುವ ಒಂದು ಮಿಶ್ರಣವನ್ನು ಮರಳಿನಲ್ಲಿ ಬೆರಸಿ, ಅದರಲ್ಲಿ ಸಸ್ಯಗಳನ್ನು ಬೆಳಸಿದ್ದಾನೆ ಹೀಗೆ ಬೆಳಸಿದ ಹೂಗಿಡಗಳು ಒಳ್ಳೆಯ ಹೂವುಗಳನ್ನು ಕೊಟ್ಟಿವೆ ಈಗ ಅವನು ಮರಳಿನಲ್ಲಿ ಅದೇ ಮಿಶ್ರಣವನ್ನು ಬೆರಸಿ ಹಣ್ಣು ಗಿಡಗಳ ಬೆಳವಣಿಗೆಯನ್ನು ಪರೀಕ್ಷಿಸುತ್ತಲಿರುವನು ಅವನ ಈ ಪ್ರಯತ್ನಗಳು ಸಫಲವಾದರೆ ಮುಂದೆ ಸಹಾರಾ ಮರುಭೂಮಿಯಲ್ಲಿ ಸಸ್ಯಾದಿಗಳನ್ನು ಬೆಳಸಿ ಲಾಭ ಪಡೆಯಬಹುದು.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ನೋಟೀಸು

ಪುತ್ತೂರು ಡಿ॥ ಮು॥ ಕೋರ್ಟಿನಲ್ಲಿ

ಕ್ರಮ ನಂಬ್ರ 1 ।4/1 40

ಹೊಸದುರ್ಗ ಗಣಪತಿ ರಾವ್ ವಾದಿ.

ನೇಮಕ್ಕು ಹೆಂಗ್ಸು ಕೂಡಾ 9 ಜನರು } ಪ್ರತಿವಾದಿರು

2ನೇ ಪ್ರತಿವಾದಿಳು ಶೀತು ಹೆಂಗ್ಸು ನೇಮಕ್ಕು ಹೆಂಗ್ಸಿನ ಮಗಳ ಮ ನೋಣಯ್ಯ ಪೂಜಾರಿ ಹೆಂಡ್ತಿ ಪುತ್ತೂರು ತಾಲೂಕು ಪಾರಂ ಗ್ರಾಮದ ಬೈದಲಕ್ಕಿ ಎಂಬಲ್ಲಿರುವವಳು

ಸದ್ರಿ 2ನೇ ಪ್ರತಿವಾದಿಳಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ

ವಾದಿಯು ಶೀರ್ವ ಬಾಬ್ತು ರೂಪಾಯಿ 32 3-2 ಬರಮಾಡುವರೆ ನಿಮ್ಮ ಮೇಲೆ ಕೂಡಾ ಮಾಡಿದ ಫೋಲಣ ದ್ಯಾಜ್ಯದ ತಾರೀಖು 25–10–1940 ಕ್ಕೆ ತನಖೆಗೆ ಇಟ್ಟಿರುತ್ತದೆ ಸದರಿ ದಿವಸ ನೀವೂ ನಿಮ್ಮ ಉದಾಹರಣೆಯನ್ನು ದಾಖಲು ಮಾಡುವದೆ ತಪ್ಪಿದಲ್ಲಿ ನಿಮ್ಮ ಗೈರ ಹಾಜ್ರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನವಾಗುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು 2–10–'40 } H. Ganapathi Rao, ವಾದಿ

An Invitation

Deposits flowing in more quickly than we can invest them are steadily increasing our idle funds Thus our deposits increased by over Rupees Five Lacs since the first of July 1940

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE.

Estd: 1906

CANARA BANK, LIMITED.

ದಿ ಕಂಬೈನ್ಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 15-11-1940ರಿಂದ ಕುಳುಗುಂದ ಜಾನುವಾರ ಸಂತೆ ತಾ. 29-11-1940ರ ವರೆಗೆ

ತಾ. 25-11-1940ರಿಂದ ಶ್ರೀ ಧರ್ಮಸ್ಥಳ ಲಕ್ಷ ದೀಪೋತ್ಸವ ತಾ. 29-11-1940ರ ವರೆಗೆ

(ತಾರೀಕು 29—11—1940ರಲ್ಲಿ ಲಕ್ಷದೀಪೋತ್ಸವ)

ತಾ. 30-11-1940ರಿಂದ ಶ್ರೀ ಸುಬ್ರಹ್ಮಣ್ಯ ಷಷ್ಠೀ ಸಮಾರಂಭ 5-12-1940ರ ವರೆಗೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ವಿಷೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಬೇಕೆಂದರ ವಿಷೂ ಮಾಡಿದರೂ ಸುರುವಾಗುವುದಿಲ್ಲ. ಬೊಧಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಂಬೈ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಣುಹಿವರು, ಕಾಕೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦

ವಿ. ಪಿ. ...

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಸಾವಕಾರ ಶ್ರೀನಿವಾಸ ರಂಗಪ್ಪೆ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
" ದುಯಂ " "	1—15—0	
" ಅವ್ವಲ್ ಸುಗ್ಗಿ "		
" ದುಯಂ " "		
ಅಕ್ಕಿ ಅವ್ವಲ್ ಗುಡ್ಡು "	4—8—0	4—10—0
" ದುಯಂ " "	4—5—0	4—7—0
" ಅವ್ವಲ್ ಸುಗ್ಗಿ "	4—9—0	4—10—0
" ದುಯಂ " "	4—4—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
" ಸಿಪ್ಪೆ ಇದ್ದದು "	37—8—0	42—8—0
ಕೊಬ್ಬರಿ ಆಫೀಸು ಖಂಡಿಗೆ	56—0—0	
" ದಿಲ್‌ಪಸಂದ "	—	—
ತೆಂಗಿನ ಎಣ್ಣೆ ಮುಡಿಗೆ	4—0—0	4—1—0
ಸಿಪ್ಪೆಯದ್ದು ಅಡಿಕೆ 1000ಕ್ಕೆ	3—8—0	4—8—0
ನೇರುಳ್ಳಿ ಮುಡಿಗೆ	3—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ	35—0—0	40—0—0
ಎಳ್ಳೆಣ್ಣೆ ಚಂದ್ರಸ್ಟೇಟಿಗೆ	13—8—0	14—0—0

ಸ್ವದೇಶಾಭಿಮಾನಿ

ಸಂಪುಟ 34]   ತಾರೀಖು 18—10—1940   [ಸಂಚಿಕೆ 42

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 1 42 Crores
Total Funds exceed	Rs 1 52 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time This is the unique opportunity to Agents to put through larger business To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay [illegible]

The Bombay Life Building,

Sir Lalubhai Samaldas Road

Gandhi Nagar, UDIPI.

OR ANY OF OUR FOLLOWING OFFICES AT

Pathiyara Calicut	Car Street Mangalore	[illegible] [illegible]
Gautam Nivas Charni Road Girgaum Bombay No 4	Post Box No [illegible] Mount Road Madras	Visvesvarapuram Circle Bangalore City

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕ್ಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊಡಿವೆ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ,

ಶ್ರೀಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

EditedPrinted & Published byA. S. Kathmahe8 at tharada Press, Car Street, Mangalore.

ಸ್ವದೇಶಾಭಿಮಾನಿ

Swadeshabhimani. Estd 1906

KANNADA ILLUSTRATED WEEKLY

ರ ರುಮೇನಿಯದ ಮೇಲೆ ಹಿಟ್ಲರನ ದಂಡಯಾತ್ರೆ ... ಸ್ಥಾನ ... ಸೈನ್ಯ ... ಬೇಟೆ ... ಕಾರಣ

ಹಿಟ್ಲರನು ತನ್ನ ನಾಝಿಸೇನೆಯ ಒಂದು ದೊಡ್ಡ ಅಂಶವನ್ನು ರುಮೇನಿಯದ ಮೇಲೆ ತೆಗೆದುಕೊಂಡು ಹೋದುದರ ರಹಸ್ಯವು ಈಗ ಗೊತ್ತಾಗಿದೆ. ಈಗ ರುಮೇನಿಯದಲ್ಲಿ ಹಿಟ್ಲರನ ಸುಮಾರು ಒಂದು ಲಕ್ಷದಷ್ಟು ಸೇನೆ ಇರುತ್ತದೆ. ಸಾವಿರಾರು ವೈಮಾನಿಕರೂ ಅಲ್ಲಿ ಬಂದಿರುವರು. ಅಲ್ಲಲ್ಲಿ ಸಂದುಕಟ್ಟಿನ ಸ್ಥಾನಗಳಲ್ಲಿ, ವಿಮಾನ ಠಾಣೆಗಳನ್ನು ಕಟ್ಟಿಸುವ ಕೆಲಸವೂ ರುಮೇನಿಯದಲ್ಲಿ ಅತ್ಯವಸರದಿಂದ ನಡೆಯುತ್ತಲಿರುವುದು.

ಪೂರ್ವಕ್ಕೆ ದಂಡಯಾತ್ರೆ

ಬ್ರಿಟಿಷ್ ದ್ವೀಪಗಳನ್ನು ಮುತ್ತಿ ಬ್ರಿಟಿಷರನ್ನು ಅಲ್ಲಿ ಸೋಲಿಸುವ ವಿಚಾರವನ್ನು ಈಗ ಹಿಟ್ಲರನು ಪೂರ್ತಿ ಬಿಟ್ಟುಕೊಟ್ಟ ಹಾಗೆ ತೋರುತ್ತದೆ. ಬ್ರಿಟನಿನ ಮೇಲೆ ಭಯಂಕರ ವಿಮಾನ ದಾಳಿಗಳಾದುವಾದರೂ, ಬ್ರಿಟಿಷರ ಧೈರ್ಯಸ್ಥೈರ್ಯಗಳನ್ನು ಕೆಡಿಸಲಿಕ್ಕೆ ಹಿಟ್ಲರನು ಸಮರ್ಥನಾಗಿರುವುದಿಲ್ಲ. ಅವನ ಆ ಸಂಬಂಧವಾದ ಪ್ರಯತ್ನಗಳು ಸಂಪೂರ್ಣ ವ್ಯರ್ಥವಾಗಿರುವುವು. ಆದಕಾರಣದಿಂದ ಬ್ರಿಟಿಷರನ್ನು ಬೇರೆ ಉಪಾಯಗಳಿಂದ ಸೋಲಿಸುವ ವಿಚಾರವನ್ನು ಹಿಟ್ಲರ ಮುಸಲೋನಿಯರು ಕೂಡಿ ಮಾತನಾಡಿ ಅದಕ್ಕನುಸಾರವಾಗಿಯೇ ಹಿಟ್ಲರನು ರುಮೇನಿಯಕ್ಕೆ ದಂಡು ಕಳುಹಿಸಿದ ಹಾಗೆ ಕಾಣುತ್ತದೆ.

ಹೊಸ ಉಪಾಯ

ರುಮೇನಿಯದ ಮೂಲಕ ಕೆಳಗಿಳಿದ ಸುಯೇಜ್ ಕಾಲುವೆಯ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುವ ಉದ್ದೇಶವು ಹಿಟ್ಲರನಿಗಿರುವುದು ಖಚಿತವಾಗುತ್ತದೆ. ಸ್ಪೈನಿನಲ್ಲಿ ಫ್ರಾಂಕೋವನ್ನು ತಮ್ಮ ಪಕ್ಷಕ್ಕೆ ಮಾಡಿಕೊಳ್ಳುವ ಪ್ರಯತ್ನಗಳಲ್ಲಿ ಹಿಟ್ಲರ್ ಮುಸಲೋನಿಯರು ಸಫಲರಾದರೆ ಅವರು ಜಿಬ್ರಾಲ್ಟರನ್ನು ಮುತ್ತುವ ಪ್ರಯತ್ನಗಳನ್ನು ಮಾಡಲೂ ಬಹುದು. ಅಂಥ ಸಂದರ್ಭದಲ್ಲಿ ಪರಿಸ್ಥಿತಿಯು ತುಂಬ ವಿಷಮತೆಗೆ ಬಂದು ಮುಟ್ಟುವುದು. ನಾಜೀಸಮ್ ಮತ್ತು ಫೆಸಿಸಮುಗಳನ್ನು ನಿರ್ನಾಮ ಮಾಡುವುದು ಬ್ರಿಟಿಷರಿಗೆ ಮತ್ತಷ್ಟು ಕಠಿಣವಾಗುವುದು.

ಆಶಾಕಿರಣ

ಆದರೂ ಅದರಿಂದ ನಿರಾಶರಾಗುವಂತೆ ಇಲ್ಲ. ಎಲ್ಲಾ ಸಂಘಟನೆಗಳಲ್ಲಿ ಪ್ರಯತ್ನಗಳೂ ಬ್ರಿಟನಿನ ಪರವಾಗಿ ಹೋರಾಡುವೆನೆಂದು ಟರ್ಕಿಯು ಸ್ಪಷ್ಟಪಡಿಸಿರುವುದು. ಸುತ್ತಲೂ ಕವಿದಿರುವ ಅಂಧಕಾರದಲ್ಲಿ ಒಂದು ಆಶಾಕಿರಣವಾಗಿದೆ. ಮೊತ್ತವಲ್ಲ ಈಜಿಪ್ಟ ಮತ್ತು ಪ್ಯಾಲೆಸ್ಟೈನದ ಇತರ ಸೈನಿಕ ಠಾಣೆಗಳಲ್ಲಿ

ನಿಮ್ಮ ದೇಹ, ಮಿದುಳು ಮತ್ತು ನರಗಳು ಬಳಲಿದಾಗ

ನಿಮ್ಮ ದೇಹವು ದಣಿದು ಬಳಲುವುದು, ನಿಮ್ಮ ಮಿದುಳು ಆಯಾಸಪಡುವುದು, ನರನಾಡಿಗಳು ಅಸ್ವಸ್ಥಪಡುವುದು ಇವೆಲ್ಲವು ನಿಮ್ಮ ದಿನನಿತ್ಯದ ಆಹಾರ ಮತ್ತು ಪೋಷಣೆಯು ಸರಿಯಿಲ್ಲವೆಂಬುದರ ಚಿಹ್ನೆಯಾಗಿರುತ್ತದೆ.

ನಿಮ್ಮ ಈ ಆಸಡ್ಡೆ ಮತ್ತು ಬಳಲಿಕೆಯು ಮಾಯವಾಗಬೇಕಾದರೆ, ನಿಮ್ಮ ದೇಹ, ಮಿದುಳು ಮತ್ತು ನರನಾಡಿಗಳಿಗೆ ತಕ್ಕುದಾದ ಪೋಷಣೆ ಸಿಕ್ಕಬೇಕು. ಈ ಪೋಷಣೆಯು ಉತ್ತಮ ಟೋನಿಕಿನ ಗುಣವುಳ್ಳ 'ಓವಲ್ಟಿನ್' ಪಾನೀಯದಲ್ಲಿ ದೊರಕುವುದು.

ರುಚಿಕರವಾದ ಈ 'ಓವಲ್ಟಿನ್' ಪಾನೀಯವು ದೇಹಕ್ಕೆ ಉತ್ತಮವೂ ತಕ್ಕುದೂ ಆದ ಆಹಾರವಾಗಿರುತ್ತದೆ. ಉತ್ತಮ ನಿದ್ರೆ, ಆರೋಗ್ಯವನ್ನು ಸಂಪಾದಿಸಲು ಬೆಳಿಗ್ಗೆ ಮತ್ತು ರಾತ್ರಿ ಒಂದು ಕಪ್ಪು 'ಓವಲ್ಟಿನ್' ಕುಡಿಯಿರಿ. ಇತರ ಪಾನೀಯಗಳನ್ನು ನಿರಾಕರಿಸಿ.

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರಲ್ಪಡುವುದು.

ವಿತರಣಾಕಾರರು:—

ಮೆಸರ್ಸ್

ಗ್ರೆಹೆಮ್ಸ್ ಟ್ರೇಡಿಂಗ್ ಕೊ.

(ಇಂಡಿಯಾ) ಲಿಮಿಟೆಡ್

ಕೈತನಿಜ್ ಹೋಟೆಲ್ ಥರ್ಡ್ ಫ್ಲೋರ್ 310-311

ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು

ಕಲ್ಕತ್ತ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್'

'OVALTINE ... ಪುಷ್ಟಿಕರವಾದ ... ಪಾನೀಯವು'

ಓವಲ್‌ಟಿನ್ ಬಿಸ್ಕತುಗಳು

ರುಚಿಕರ, ಜೀರ್ಣಕರ ಮತ್ತು ಪೋಷಣಾಯುಕ್ತವಾದುವು. ಎಲ್ಲಾ ಸಮಯಗಳಿಗೂ ಉತ್ತಮವಾದ ಬಿಸ್ಕತುಗಳು. ಇವುಗಳಲ್ಲಿ ವೈಶಿಷ್ಟ್ಯ ಬೆಲೆಯ 'ಓವಲ್ಟಿನ್' ಸೇರಿರುತ್ತದೆ. 4 ಮತ್ತು 8 ಔನ್ಸಿನ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ತಲ ಟಿನ್ನುಗಳಲ್ಲಿ ದೊರಕುತ್ತವೆ.

ಬ್ರಿಟನು ವಿಪುಲ ಸೇನೆ ಸಾಮಗ್ರಿ ... ಘಟನೆಗಳಿಂದ ಪಾಠ ಕಲಿತ ಬ್ರಿಟನು ಪಾಠವನ್ನು ಕಲಿಸುವರೆಂಬುದರಲ್ಲಿ ... ಗಳನ್ನು ಸಜ್ಜುಗೊಳಿಸಿದೆ, ಹಿಂದಿನ ಅನೇಕ ಈಗ ಹಿಟ್ಲರನಿಗೆ ಒಂದು ಸರಿಯಾದ ದೇಹವಿಲ್ಲ.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

25–10–1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೫—೧೦—೧೯೪೦

ಹಿಟ್ಲರ್ ನೀತಿಯನ್ನು ನಾವೂ ವಿರೋಧಿಸುತ್ತೇವೆ!

-ಆದರೆ ನಮಗೆ ಸ್ವರಾಜ್ಯ ಬೇಕಾಗಿದೆ

ಗಾಂಧಿಜಿ. ಬ್ರಿಟನಿಗೆ ತೊಂದರೆ ಕೊಡುವುದಿಲ್ಲ!

ಮಂಗಳೂರಲ್ಲಿ ಸತ್ಯಮೂರ್ತಿಗಳ ಭಾಷಣ!

"ಈ ದಿನ ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಮಹತ್ವದ ದಿನ: ಸತ್ಯಾಗ್ರಹವು ಇಂದು ಆರಂಭವಾಗಿದೆ ನಾನು ಒಬ್ಬ ಕಾಂಗ್ರೆಸಿನ ಸೈನಿಕ ಮಹಾತ್ಮರ ಅಪ್ಪಣೆಯನ್ನು ಶಿರಸಾ ವಹಿಸಿ ನಡೆಯಲು ಸಿದ್ಧನಾಗಿರುವವ ಆದರೆ ನಾವೀಗ ಮಾಡತಕ್ಕದ್ದೇನು? ನೀವು ಮಂಗಳೂರಲ್ಲಿ ಈ ತಿಂಗಳ ಕೊನೆಗೆ ೧೩,೦೦೦ ಮಂದಿಯನ್ನಾದರೂ ಕಾಂಗ್ರೆಸು ಸದಸ್ಯರನ್ನು ಮಾಡಿ ರಾಷ್ಟ್ರಧ್ವಜವನ್ನು ಮೇಲಕ್ಕೆತ್ತಿ ಹಿಡಿಯಿರಿ ಖಾದಿಯನ್ನು ಪ್ರೋತ್ಸಾಹಿಸಿರಿ ಖಾದಿಯುಡದವನು ತನ್ನ ಕರ್ತವ್ಯವನ್ನು ಮಾಡುವುದಿಲ್ಲವೆಂದು ತಿಳಿದಿರಬೇಕು. ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತರಾಗಿರಿ" ಹೀಗೆಂದು ಮೊನ್ನೆ ತಾ ೧೭ ರಂದು ಕಾಂಗ್ರೆಸು ಧುರೀಣರಾದ ಶ್ರೀ ಸತ್ಯಮೂರ್ತಿಯವರು ಮಂಗಳೂರು ಮೈದಾನಿನಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಒಂದು ಪ್ರಚಂಡ ಭಾಷಣ ಮಾಡಿದರು.

ಆ ಜನದ ಸಭೆಗೆ ಶ್ರೀ ಎ ಬಿ ಶೆಟ್ಟರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಪ್ರಾರಂಭದಲ್ಲಿ ಶ್ರೀ ಸತ್ಯಮೂರ್ತಿಯವರ ಪರಿಚಯವನ್ನು ಮಾಡಿಕೊಟ್ಟರು ಆ ಮೇಲೆ ಪ್ರಚಂಡ ಕರತಾಡನದ ಮಧ್ಯೆ ಶ್ರೀ ಸತ್ಯಮೂರ್ತಿಗಳು ತಮ್ಮ ಅಪ್ರತಿಮ ವಾಗ್ಮಿತೆಯಿಂದ ಈ ಸಾರಾಂಶದ ಭಾಷಣವನ್ನು ಮಾಡಿದರು:

ನಮಗೂ ಪ್ರಜಾ ಪ್ರಭುತ್ವಬೇಕು

"ಕಾಂಗ್ರೆಸನ್ನು ಕೆಲವರು ಉಗ್ರವಾಗಿ ಟೀಕಿಸುತ್ತಾರೆ ಕೋಪವನ್ನು ನಾವು ತರ್ಕದಿಂದ ಜಯಿಸಬೇಕು ನಾವು ಹಿಟ್ಲರ್‌ಗೆ ಸಹಾಯಮಾಡುತ್ತೇವೆಂದ ಅವರ ಆರೋಪ ಆ ಮಾತು ಎಷ್ಟು ಮಂತಿಕೆಯ ಶೂನ್ಯತೆಯದು ಹಿಟ್ಲರ್ ನೀತಿಯು ಸೋಲಬೇಕೆಂದೇ ನಮ್ಮ ಮತ ನಮಗೆ ಹೊಸ ಪ್ರಪಂಚ ಬೇಕಾಗಿದೆ ಆದಕಾರಣ ಈ ಯುದ್ಧವನ್ನು ಕೊನೆಗಾಣಿಸಬೇಕು ಪ್ರಜಾಪ್ರಭುತ್ವವು ಸುಮ್ಮನೆ ಪಶ್ಚಿಮ ರಾಷ್ಟ್ರಗಳಿಗೆ ಮಾತ್ರವಲ್ಲ, ಅದರ ಪೂರ್ವ ರಾಷ್ಟ್ರಗಳಿಗೂ ಬೇಕಾಗಿದೆ ಕಪ್ಪು ಜನರಿಗೂ ಎಲ್ಲಾ ಬಣ್ಣದವರಿಗೂ ಅದು ಬೇಕಾಗಿದೆ.

ಬ್ರಿಟನಿಗೆ ತೊಂದರೆಯಾಗುವುದೇ?

"ಯುದ್ಧವಿರುದ್ಧ ಪ್ರಚಾರದಿಂದ ಬ್ರಿಟನಿಗೆ ತೊಂದರೆಯಾಗುವುದೆಂದು ಕೆಲವರು ಹೇಳುತ್ತಾರೆ ತೊಂದರೆಯಾಗದಂತೆ ಮಾಡಬೇಕೆಂದು ಮಹಾತ್ಮರು ಯತ್ನಿಸುತ್ತಾರೆ ಅದಕ್ಕೆ ಹಲವು ನಿದರ್ಶನಗಳನ್ನು ಕೊಡಬಹುದು ಜನತಾ ಸತ್ಯಾಗ್ರಹವನ್ನು ಆರಂಭಿಸಿದರೆ ಸರಕಾರಕ್ಕೆ ತೊಂದರೆ ಕೊಟ್ಟಂತಾಗುವುದೆಂದು ಮಹಾತ್ಮರು ವೈಯುಕ್ತಿಕ ಆಂದೋಲನವನ್ನು ಆರಂಭಿಸಿದ್ದಾರೆ. ತಾನು ಸೆರೆಮನೆಗೆ ಹೋದರೆ ಹೋರಾಟವು ಪ್ರಬಲವಾಗಿ ಸರಕಾರಕ್ಕೆ ತೊಂದರೆಯಾಗುವದೆಂದ ತಾನು ಹೊರಗಡೆಸಿಂತೇ ಸತ್ಯಾಗ್ರಹವನ್ನು ಮಾಡುವುದಾಗಿ ಮಹಾತ್ಮರು ಹೇಳಿದ್ದಾರೆ

ನಮಗೆ ಆ ಹಕ್ಕು ಬೇಕು

'ಮಹಾತ್ಮರು ಕೇಳುವುದು ಯುದ್ಧವಿರುದ್ಧ ಪ್ರಚಾರಮಾಡಲು ನಮಗೆ ಭಾಷಣ ಸ್ವಾತಂತ್ರ್ಯವಿರಬೇಕೆಂಬ ಹಕ್ಕನ್ನು ನಮಗೆ ಆ ಹಕ್ಕು ಬೇಕು ಅಹಿಂಸೆಯಲ್ಲಿ ವಿಶ್ವಾಸವಿಟ್ಟಿದವರಿಗೆ ಆ ಹಕ್ಕು ಅವಶ್ಯವಿದೆಯೆಂದು ಗಾಂಧಿಜಿ ಹೇಳಿದ್ದಾರೆ ದಕ್ಷಿಣ ಆಫ್ರಿಕದಲ್ಲಿ ಜನರಲ್ ಹರ್ಟ್‌ಜಾಗರು ಯುದ್ಧಕ್ಕೆ ವಿರುದ್ಧವಾಗಿ ಶಾಸನಸಭೆಯ ಒಳಗೂ ಹೊರಗೂ ಪ್ರಚಾರಮಾಡುತ್ತ ಇದ್ದಾರೆ ಐಯರ್ಲೆಂಡು ತಟಸ್ಥವೇ ಆಗಿ ಉಳಿದಿದೆ ಬ್ರಿಟಿಷ್ ನೌಕೆಗಳು ಐಯರ್ಲೆಂಡನ್ನು ಸಂಗ ಬಹುದು, ಆದರೆ ಅದನ್ನು ಯುದ್ಧಕ್ಕೆ ಸೇರಲು ಯಾ ಒತ್ತಾಯ ಪಡಿಸಲಿಲ್ಲ? ಈಜಿಪ್ಷಿಯನರನ್ನು ಯುದ್ಧಕ್ಕೆ ಯಾಕೆ ಇಳಿಸಲಿಲ್ಲ? ಇದನ್ನೆಲ್ಲಾ ವಿಚಾರಿಸದೆ ಕಾಂಗ್ರೆಸು ಕೇಳುವ ಭಾಷಣ ಸ್ವಾತಂತ್ರ್ಯ ಯುದ್ಧವಿರುದ್ಧ ಪ್ರಚಾರದ ವಿಷಯಗಳನ್ನು ಕೆಲವರು ಟೀಕಿಸುತ್ತಾರೆ. ಬ್ರಿಟನು ಪ್ರಜಾಪ್ರಭುತ್ವದ ಸಲುವಾಗಿ ಹೋರಾಡುವುದೆಂದು ಹಿಂದೆ ಪ್ರಕಟಮಾಡಲಾಗಿತ್ತು

ಇತ್ತೀಚೆಗೆ ಚರ್ಚಿಲ್ಲರು ಒಡೆತನವುದರ ಸಲುವಾಗಿ ನಾವು ಹೋರಾಡುತ್ತಿರುವೆವೆಂದು ಸ್ಪಷ್ಟವಾಗಿ ಹೇಳಿದ್ದಾರೆ, ನಮಗೂ ಬದುಕ ಬೇಕಾಗಿದೆ

ಹಿಟ್ಲರ್ ರಾಜ್ಯ ಬೇಡ, ಸ್ವರಾಜ್ಯ ಬೇಕಾಗಿದೆ

ಪೂನಾದಲ್ಲಿ ಕಾಂಗ್ರೆಸು ಸಮಿತಿ ಸೇರಿ, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿದ್ದರೆ ಯುದ್ಧದಲ್ಲಿ ಸಹಕರಿಸುವುದಾಗಿ ಹೇಳಿತು ಬ್ರಿಟನು ಅದನ್ನು ಅಂಗೀಕರಿಸಲಿಲ್ಲ ಬ್ರಿಟಿಷ ಸರಕಾರವು ಯುದ್ಧಾನಂತರ ಸ್ವಾತಂತ್ರ್ಯವನ್ನು ಕೊಡುವುದಂತೆ ಆದರೆ ಇದರ ಸೂಚನೆಯು ಒಂದಾದರೂ ಕಾಣುತ್ತದೆಯೆ? ನಮಗೆ ಬ್ರಿಟಿಷ ರಾಜ್ಯದ ಬದಲು ಹಿಟ್ಲರ್ ರಾಜ್ಯ ಬೇಡ, ಸ್ವರಾಜ್ಯ ಬೇಕಾಗಿದೆ"

ಪರಮ ರಹಸ್ಯ

ನಯನಾನಂದಕರವಾದ ಸೌಂದರ್ಯಕ್ಕೆ ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದೆ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾನ್ವಿತ ರಸಾಯನವೇ ಲೋಧ್ರ ಸ್ತ್ರೀಯರಿಗೆ ಆರೋಗ್ಯವು ಮುಖ್ಯ ಅದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು

TENDER NOTICE

Sealed tenders from registered contractors will be received up to 2 P. M. on the 7th of November 1940 for reconstruction of the bridge in 31/5 of Mangalore Mercara Trunk Road No. A 16–Estimate for Rs. 7300/ Tender documents, plans etc., can be seen in the District Board Engineer's office, Mangalore during office hours and can be obtained on payment of Rs 10/ per set, which amount on no account will be refunded.

Mangalore } District Board
16–10–1940 } Engineer, S. K

ಸ್ವದೇಶಾಭಿಮಾನಿ

ತಾರೀಕು 25—10—1940

ರೇಡಿಯೋದಲ್ಲಿ ಕನ್ನಡಕ್ಕೆ ಸ್ಥಾನವಿಲ್ಲವೆ?

ಈ ಕುರಿತು ಈಗ ಹಲವು ಸಮಯಗಳಿಂದ ಚಳವಳವು ನಡೆಯುತ್ತಿದೆ. ಶ್ರೀಗಳಾದ ರಂಗರಾವ್ ದಿವಾಕರ, ಜಿನರಾಜ ಹೆಗ್ಡೆ ಮೊದಲಾದವರು ಸಂಬಂಧಪಟ್ಟವರನ್ನು ಕಂಡು ಮಾತನಾಡಿ ಕನ್ನಡಕ್ಕೂ ಅಖಿಲ ಭಾರತ ರೇಡಿಯೋದಲ್ಲಿ ಸ್ಥಾನಕೊಡುವುದು ನ್ಯಾಯವಿದೆಯೆಂಬ ಕುರಿತು ಕೇಳಿಕೊಂಡಿದ್ದರು. ಅದು ಮಾತ್ರವಲ್ಲದೆ, ರೇಡಿಯೋ ಇಟ್ಟುಕೊಂಡಿರುವ ಅನೇಕ ಗೃಹಸ್ಥರು ಅಧಿಕಾರಿಗಳಿಗೆ ಆ ಕುರಿತು ವೈಯುಕ್ತಿಕ ಪತ್ರಗಳನ್ನೂ ಬರೆದಿರುವರು. ಆದರೂ ಇದು ವರೆಗೆ ಅದರ ಕುರಿತು ಯೋಗ್ಯ ಧೋರಣೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಕೈಕೊಳ್ಳಲಿಲ್ಲವೆಂಬುದು ಬಹಳ ಶೋಚನೀಯವಾಗಿದೆ.

ಕನ್ನಡದ ನೆಲೆ

ರೇಡಿಯೋದಲ್ಲಿ ಕನ್ನಡಕ್ಕೆ ಸ್ಥಾನ ಕೊಡಲು ಯೋಗ್ಯತೆಯುಂಟೇ ಎಂಬುದನ್ನು ವಿಚಾರಿಸುವುದು ಅವಶ್ಯವಿದೆ. ಕನ್ನಡವು ಒಂದುವರೆ ಕೋಟಿ ಜನರು ಆಡುವ ಭಾಷೆ. ಕನ್ನಡವೆಂಬುದು ಒಂದು ವಿಶಾಲವಾದ ಪ್ರಾಂತದ ಭಾಷೆ. ಮಿಕ್ಕ ಎಲ್ಲಾ ಪ್ರಾಂತೀಯ ಭಾಷೆಗಳಿಗೂ ರೇಡಿಯೋದಲ್ಲಿ ತಕ್ಕ ಸ್ಥಾನ ಕೊಡುತ್ತಿರುವಾಗ್ಗೆ ಕನ್ನಡಿಗರಿಗೆ ಮಾತ್ರ, ಜಗತ್ತಿನ ಸುದ್ದಿಯನ್ನು ತಮ್ಮ ತಾಯ್ನುಡಿಯಲ್ಲಿ ಕೇಳುವ ಭಾಗ್ಯವನ್ನು ಯಾಕೆ ವಂಚಿಸುವರೋ ತಿಳಿಯುವುದಿಲ್ಲ. ಪುಸ್ತು ಮೊದಲಾದ ಚಿಕ್ಕ ಭಾಷೆಗಳಿಗೂ ರೇಡಿಯೋದಲ್ಲಿ ಸ್ಥಾನ ದೊರೆತಿದೆ. ಅಸಾಮು, ಸಿಂಧ ಪ್ರಾಂತಗಳಿಗಿಂತಲೂ ಕನ್ನಡನಾಡು ನುಡಿಗಳು ವಿಶಾಲವಾಗಿರುವಾಗ, ಕನ್ನಡದ ಸ್ಥಾನಮಾನಗಳ ಕುರಿತು ಇಂತಹ ನಿರ್ಲಕ್ಷ್ಯಭಾವವನ್ನು ತೋರಿಸಿದ್ದು ನ್ಯಾಯವೆನಿಸಲಾರದು. ಇಂದಿನ ನೂತನ ಸಮಾಜವ್ಯವಸ್ಥೆಯ ಕಾಲದಲ್ಲಿ, ಎಲ್ಲೆಡೆಗಳಲ್ಲಿ ಎಲ್ಲಾ ತರದವರೂ ತಪ್ಪು ಕೈ ಆದಂತೆ ನೂತನ ಸಮಾಜ ವ್ಯವಸ್ಥೆಗೆ ಸಹಾಯ ಮಾಡುತ್ತಿರುವಾಗ, ಅಖಿಲ ಭಾರತ ರೇಡಿಯೋದವರು ಕನ್ನಡದ ಬೆಳವಣಿಗೆಗೆ ಸೌಕರ್ಯಗಳಿಗೆ ಅವಕಾಶವಾಗುವ ಈ ಸಂದರ್ಭದಲ್ಲಿ, ನಿರಾಕೆಯ ತಿರಸ್ಕಾರಣೆಯನ್ನೇ ತೋರಿಸಿದುದು ಕನ್ನಡಿಗರನ್ನು ನೋಯಿಸದಿರಲಾರದು.

ವ್ಯಾಪಾರದ ಯುಕ್ತಿಗಳು

ಕನ್ನಡಿಗರು ತಮಗೆ ನ್ಯಾಯವಾಗಿ ಸಿಗಬೇಕಾದ ಹಕ್ಕಿನ ಕುರಿತು ಸಂಬಂಧಪಟ್ಟವರಿಗೆ ತಿಳಿಸಿದ್ದೇನೆಂಬ ಆವಶ್ಯ...

ದವು ಬರುವ ಹಾಗಿಲ್ಲ. ಸುದ್ದಿ ವಾರ್ತೆಯ ಮುಂತಾಗಿರುವ ಕೆಲ್ಲವನ್ನು ಹೇಬರಿಗೆ ಕೇಂದ್ರ ಸಭೆಯ ಕನ್ನಡ ಸದಸ್ಯರಿಂದ ಕೂಡಿದ ಶಿಷ್ಟ ಮಂಡಲವನ್ನು ಕಳುಹಿಸಲಾಗಿತ್ತು. ಮೊನ್ನೆ ಅಖಿಲ ಭಾರತ ರೇಡಿಯೋ ಸಂಘದವರ ಸಭೆ ನೆರೆದು ಇಂಗ್ಲಿಷ್ ಹಿಂದಿಗಳಲ್ಲಿ ಮಾತ್ರವಲ್ಲ ಇತರ ಪ್ರಾಂತೀಯ ಭಾಷೆಗಳಲ್ಲಿಯೂ ಯುದ್ಧ ಸುದ್ದಿಯನ್ನು ಕೊಡಬೇಕೆಂದು ನಿರ್ಣಯವಾಗಿತ್ತು. ಆಗ ಬಲು ಚಿಕ್ಕ ಭಾಷೆಯಾದ “ಪುಸ್ತು” ಭಾಷೆಗೂ ರೇಡಿಯೋದಲ್ಲಿ ಸ್ಥಾನವನ್ನು ಕಲ್ಪಿಸಿಕೊಡಲಾಯಿತು.

ಅಂತಹ ಸಂದರ್ಭದಲ್ಲಿಯೂ ಕನ್ನಡದ ವಿಷಯ ಯಾವ ಲಕ್ಷ್ಯವನ್ನೂ ಕೊಡದೇ ಇದ್ದುದು ವಿಷಾದಕರ. ಇತರ ಪ್ರಾಂತೀಯ ಭಾಷೆಗಳ ಬಗೆಗೆ ಹೆಚ್ಚಿನ ಆದರ, ಕನ್ನಡದ ಕಡೆಗೆ ಅನಾದರವನ್ನು ತೋರಿಸಲು ಕನ್ನಡಭಾಷೆಯಾದರೂ ಅಖಿಲ ಭಾರತ ರೇಡಿಯೋದವರಿಗೆ ಮಾಡಿದ ಅನ್ಯಾಯ ಯಾವುದೋ ತಿಳಿಯುವುದಿಲ್ಲ.

ಇಂದಿನ ಅವಶ್ಯಕತೆ

ಇಂದು ಯುದ್ಧದ ವರ್ತಮಾನವನ್ನು ತಿಳಿಯಲು ಜನರ ಕುತೂಹಲವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಆಯಾಯ ನಾಡಿನ ನುಡಿಯಲ್ಲಿ ಸುದ್ದಿಯನ್ನು ತಿಳಿಸುವ ಏರ್ಪಾಡು ಮಾಡುವುದರಿಂದ ಜನರ ಕುತೂಹಲವನ್ನು ತಣಿಸಿದಂತೆ ಆಗುವುದು ಮಾತ್ರವಲ್ಲದೆ, ಸತ್ಯಾಂಶವು ಪ್ರಕಟವಾಗಿ ಲೋಕವ್ಯವಸ್ಥೆಗೆ ಹೆಚ್ಚಿನ ಸಹಾಯವಾಗುತ್ತದೆ. ಇಲ್ಲದಿದ್ದಲ್ಲಿ ಜನರು ಅನೇಕ ಊಹಾಪೋಹಗಳನ್ನು ಕಲ್ಪಿಸಿ ಕೊಳ್ಳುತ್ತಾರೆ. ಅಪಪ್ರಚಾರಗಳು ಹರಡಲು ಅವಕಾಶವಾಗುತ್ತದೆ. ಇಂತಹ ಸಂದರ್ಭದಲ್ಲಿ ಸರಕಾರೀ ಅಧಿಕಾರಿಗಳಾದರೂ ಗಮನಕೊಟ್ಟು ಸತ್ಯಸಮಾಚಾರದ ಪ್ರಕಟಣೆಯ ದೃಷ್ಟಿಯಿಂದಲಾದರೂ ಕನ್ನಡದಲ್ಲಿ ಸುದ್ದಿಯನ್ನು ಹರಡಿಸುವ ವ್ಯವಸ್ಥೆಯನ್ನು ಮಾಡಿಸುವುದು ಅವಶ್ಯವಾಗಿದೆ. ಇಂದಿನ ಈ ಅವಶ್ಯಕತೆಯನ್ನು ಎಲ್ಲರೂ ಚೆನ್ನಾಗಿ ಮನಗಾಣಬೇಕಾಗಿದೆ.

ನಮ್ಮ ಕಾರ್ಯಗಳು

ಇಂತಹ ಸಂದರ್ಭದಲ್ಲಿ ಕನ್ನಡಿಗರಂತೂ ಕೈಕಟ್ಟಿ ಕುಳಿತಿರಲು ಸಾಧ್ಯವಿಲ್ಲ. ೫೬ ಲಕ್ಷ ಜನಸಂಖ್ಯೆಯುಳ್ಳ ನೇಪಾಳಕ್ಕೂ, ೮೬ ಲಕ್ಷ ಜನಸಂಖ್ಯೆಯುಳ್ಳ ಅಸಾಮಿಗೂ ರೇಡಿಯೋದಲ್ಲಿ ಸ್ಥಾನ ಸಿಕ್ಕಿದೆ. ಈ ಭಾಷೆಗಳಿಗೆ ಸ್ಥಾನದೊರೆತುದಕ್ಕಾಗಿ ಕನ್ನಡಿಗರು ಬೇಸರಪಡುವುದಿಲ್ಲ. ಹಾಗಾದರೆ ಒಂದುವರೆ ಕೋಟಿ ಜನಸಂಖ್ಯೆಯುಳ್ಳ ತಮಗೆ ನ್ಯಾಯವು ದೊರೆತಿಲ್ಲದೆಂಬುದರ ಬಗ್ಗೆ, ತಮ್ಮ ಹಕ್ಕಿಗಾಗಿ ಇನ್ನೂ ಆ ಕುರಿತು ತೀವ್ರವಾಗಿ ಚಳವಳವನ್ನು ಹೂಡಬೇಕಾಗಿದೆ. ತಮ್ಮ ತೀವ್ರ ಆಂದೋಲನದಿಂದ ಅಖಿಲಭಾರತ ರೇಡಿಯೋದವರ ಮತ್ತು ಸರಕಾರದವರ ಲಕ್ಷ್ಯವನ್ನು ತಮ್ಮ ಕಡೆ ಸೆಳೆಯಬೇಕಾಗಿದೆ. ಕನ್ನಡಿಗರು ಸುದ್ದಿ, ಸಂಗೀತ, ಭಾಷಣಗಳನ್ನು ತಮ್ಮ ಭಾಷೆಯಲ್ಲಿ ಇಂದು ಕೇಳುವ ಭಾಗ್ಯವಿಲ್ಲ. ಕನ್ನಡನಾಡಿನಲ್ಲಿಯೂ ಕೆಲಸಾವಿರ ರೇಡಿಯೋಗಳಿವೆ. ಇಂದು ಕನ್ನಡಕ್ಕೆ ಅನ್ಯಾಯವಾಗಿದೆ. ಅಪಮಾನವಾಗಿದೆಯೆಂಬುದನ್ನು ಕನ್ನಡಿಗರು ತಿಳಿದುಕೊಳ್ಳಬೇಕು. ಕನ್ನಡ ಸಂಘಗಳು, ಕನ್ನಡ ಪ್ರಮುಖರು, ಕನ್ನಡ ಪತ್ರಿಕೆಗಳು ಈ ಕುರಿತು ತಮ್ಮ ನ್ಯಾಯವಾದ ಈ ಹಕ್ಕಿಗಾಗಿ ಚಳವಳವನ್ನು ತೀವ್ರವಾಗಿ ನಡೆಸಿ ನ್ಯಾಯವನ್ನು ಪಡೆಯಲು ಯತ್ನಿಸಬೇಕು.

ಸರ್ ವಿಶ್ವೇಶ್ವರಯ್ಯನವರ ಹೊಸ ಯೋಜನೆ

ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಂತಹ ವ್ಯಕ್ತಿಗಳ ಬಗ್ಗೆ, ಅಸಾಧಾರಣ ಧೀಶಕ್ತಿಯುಳ್ಳ ಮಹನೀಯರ ಬಗ್ಗೆ, ಅಂತಹವರನ್ನು ಪಡೆದ ಯಾವುದೇ ನಾಡಾದರೂ ಅಭಿಮಾನ ಗೊಳ್ಳಬೇಕು. ಕನ್ನಡನಾಡಿನ ಈ ಮಹಾ ಎಂಜಿನಿಯರಿಂಗ್ ಕುಶಲರು ಹಲವು ತರದ ಯೋಜನೆಗಳನ್ನು ಈಗಾಗಲೇ ಮಾಡಿ, ತನ್ನ ಬುದ್ಧಿ ಶಕ್ತಿಯನ್ನು, ಆ ಕೆಲಸಗಳ ಯಶಸ್ವಿತೆಯಿಂದ, ಪ್ರಯೋಜನದಿಂದ, ಸರ್ವರಿಗೂ ವಿದಿತಗೊಳಿಸಿದ್ದಾರೆ. ಜನಪ್ರಿಯರಾಗಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಇವರು ಮೋಟರು ಕೈಗಾರಿಕೆಯನ್ನು ಮಾಡುವ ವಿಷಯದಲ್ಲಿ ತನ್ನ ಗಮನವನ್ನು ಕೊಟ್ಟರು. ಆ ಕುರಿತು ಹೆಚ್ಚಿನ ಅನುಭವಗಳನ್ನು ಪಡೆದುಕೊಳ್ಳುವ ಸಲುವಾಗಿ, ದೇಶ ವಿದೇಶಗಳಲ್ಲಿ ಪ್ರಯಾಣ ಬೆಳೆಸಿದರು. ಆ ಪ್ರಯಾಣದ ಫಲವಾಗಿ ಒಂದು ಯೋಜನೆಯನ್ನು, ಪರಿಣಾಮಕಾರಿಯಾದ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕಿಳಿಸಲು ಸಿದ್ಧರಾಗಿರುವರು.

ಇಂತಹ ಸಂದರ್ಭದಲ್ಲಿ ಅವರ ಯೋಜನೆಯನ್ನು ನಮ್ಮ ರಾಷ್ಟ್ರದ ಏಳಿಗೆ ದೃಷ್ಟಿಯಲ್ಲಿ, ಪ್ರಯೋಜನವಾಗುವಂತೆ ಮಾಡಿಕೊಳ್ಳುವ ವಿಷಯವು ಮುಖ್ಯವಾಗಿದೆ. ಅವರು ಆರಂಭಿಸಲು ಮನಸ್ಸು ಮಾಡಿದ ಈ ಮೋಟಾರು ಕೈಗಾರಿಕೆಯ ಯೋಜನೆಯ ಯಶಸ್ವಿತೆಯನ್ನು ಚೆನ್ನಾಗಿ ತಿಳಿದ ವಿದೇಶದ ಬಂಡವಾಳಗಾರರು, ಅಮೇರಿಕದ ಧನಾಧಿಪರೂ ಆ ಕೈಗಾರಿಕೆಯ ಬಂಡವಾಳದಲ್ಲಿ ಪಾಲುದಾರರಾಗಲು ಉತ್ಸುಕತೆಯನ್ನು ತೋರಿಸಿದ್ದರು. ಆದರೆ, ಇಂತಹ ವಿಷಯಗಳಲ್ಲಿ ರಾಷ್ಟ್ರೀಯ ದೃಷ್ಟಿಯಿರಬೇಕಾದುದು ಅಗತ್ಯವಾಗಿದೆ. ಭಾರತದಲ್ಲಿ ಇಂತಹ ರಾಷ್ಟ್ರೀಯ ಹಿತದ ಕೈಗಾರಿಕೆಗಳ ಅಭಿವೃದ್ಧಿಗೆ ಬಂದೊದಗುವ ಒಂದು ಬಲವಾದ ಕೊರತೆಯೆಂದರೆ ಸರಕಾರದ ಬೆಂಬಲ ಪ್ರೋತ್ಸಾಹಗಳು ಸಾಕಷ್ಟು ಸಿಗದೆ ಇರುವುದು.

ಬೊಂಬಾಯಿಯ ಕಾಂಗ್ರೆಸ್ ಸರಕಾರವು ಸರ್ ವಿಶ್ವೇಶ್ವರಯ್ಯನವರ ಈ ಯೋಜನೆಯಲ್ಲಿ ಬಹಳ ಉತ್ಸುಕತೆಯನ್ನು, ಸಹಕಾರವನ್ನು ವ್ಯಕ್ತಗೊಳಿಸಿತ್ತು. ಆದರೆ ಅದು ತನ್ನ ಯಾವುದೇ ರೀತಿಯ ಪರಿಣಾಮಕಾರಿಯಾದ ಸಹಕಾರ ಸಹಾಯಗಳನ್ನು ನೀಡುವ ಮೊದಲು ಅಧಿಕಾರ ನಿವೃತ್ತವಾಯಿತು. ಅದರೊಡನೆ ಪ್ರಾಂತಿಕ ಸರಕಾರದ ಸಹಾನುಭೂತಿಯೂ ಈ ಯೋಜನೆಗೆ ದೂರಸರಿದಂತಾಯಿತು. ಸರ್ ವಿಶ್ವೇಶ್ವರಯ್ಯನವರ ಯೋಜನೆಗೆ ಈಗ ಈ ತೆರದ ಆತಂಕ ಬಂದೊದಗಿದೆಯೆಂಬುದು ವಿಷಾದಕರವಾಗಿದೆ.

ಸರ್ ವಿಶ್ವೇಶ್ವರಯ್ಯನವರಂತಹ ಪ್ರತಿಭಾಶಾಲಿಗಳ ಇಂತಹ ಯಶಸ್ವೀ ಯೋಜನೆಯಿಂದ ಮುಂದಕ್ಕೆ ತುಂಬಾ ರಾಷ್ಟ್ರೀಯಾಭಿವೃದ್ಧಿಯಾಗುವಂತಾಗಲಿ ಎಂದು ನಮ್ಮ ಹಾರೈಕೆ.

ಅಹಿಂಸೆಯಿಂದ ಹಿಂಸೆಯನ್ನು ಜಯಿಸುವುದು

ಇದು ಸಾಧ್ಯವುಂಟೆಂದು ಮಹಾತ್ಮಾಜಿಯವರು ಅಚಲ ವಿಶ್ವಾಸವುಳ್ಳವರು. ಇಂದಿನ ಜಗತ್ತಿನಲ್ಲಿ ಹಿಂಸಾಮಯವು ಕ್ರೂರ ಯುದ್ಧವೇ ನಡೆಯುತ್ತಿರುವಾಗ ಹಿಂಸೆಗೆ ಪ್ರತಿ ಹಿಂಸೆಯು ಉತ್ತರವಲ್ಲವೆಂದು ಗಾಂಧಿಜಿಯವರು ಹಿಂದೆ ಒಮ್ಮೆ ಬ್ರಿಟಿಸರಿಗೆ ಮನವಿಮಾಡಿಕೊಂಡಿದ್ದರು. ಅಹಿಂಸೆಯನ್ನಾಚರಿಸಿರೆಂದು ಹೇಳಿದರು.

ಗಾಂಧಿಜಿಯವರಿಗೆ ಬ್ರಿಟಿಷ್ ಪ್ರಮುಖರಿಂದ ಸಹಿ ಹಾಕಲ್ಪಟ್ಟ ಒಂದು ಈಗ ಪತ್ರವು ಬಂದಿದೆ. ಅಹಿಂಸಾ ಮಾರ್ಗವನ್ನು ಅನುಸರಿಸಿ ಯುದ್ಧವನ್ನು ನಿಲ್ಲಿಸಿ, ವೈರವನ್ನು ಕಡಿಮೆ ಮಾಡಿ ಲೋಕಶಾಂತಿಗೆ ಸಿದ್ಧರಾಗಿರೆಂದು ಮಹಾತ್ಮಾಜಿಯವರು ಹಿಂದೆ ಕೊಟ್ಟ ಹೇಳಿಕೆಯು ಅತ್ಯಂತ ಉದಾತ್ತವಾದುದು, ನ್ಯಾಯವಾದುದು, ಎಂಬ ಬಗ್ಗೆ ಅವರು ತಮ್ಮ ನಿಶ್ಚಿತ ಸಮ್ಮತಿಯನ್ನು ಅದರಲ್ಲಿ ವ್ಯಕ್ತಪಡಿಸಿರುತ್ತಾರೆ. ಇಂದಿನ ಈ ವಾತಾವರಣದಲ್ಲಿ ತಮಗೆ, ತಮ್ಮ ನಾಡಿನ ಜನರ ಮಧ್ಯೆ ಈ ಕುರಿತು ಹೆಚ್ಚಿನ ಕೆಲಸ ಮಾಡಲು ಶಕ್ತಿಯಿಲ್ಲದಿದ್ದರೂ ಇಂದು ಗಾಂಧಿಜಿಯವರ ಅಹಿಂಸಾ ಮಾರ್ಗದ ತತ್ವ ನೀತಿಯನ್ನು ಪಾಶ್ಚಾತ್ಯರೆಲ್ಲ ಅನೇಕರು ಅರ್ಥಮಾಡಿಕೊಂಡಿಲ್ಲವಾದರೂ, ಮುಂದೆ ನಿಮ್ಮದೇ ದಾರಿಯನ್ನು ಅವಲಂಬಿಸಿ ಅಹಿಂಸೆಯಿಂದಲೇ ಹಿಂಸೆಯ ವಿಜಯವನ್ನು ಹಾಗೂ ಲೋಕಶಾಂತಿಯನ್ನು ಸಂಪಾದಿಸಬೇಕಾಗಿದೆಯೆಂದು ತಿಳಿಸಿರುತ್ತಾರೆ.

ಈ ಚಳಿಗಾಲದಲ್ಲಿ ಮುಂದೆ ಬಹಳ ಗಂಡಾಂತರಗಳು ಒದಗಬಹುದಾದುದರಿಂದ, ಮಹಾತ್ಮಾಜಿಯವರು ಅಷ್ಟರಲ್ಲಿ ಯೇಲೋಕದ ಆಧ್ಯಾತ್ಮಿಕ ಮುಂದಾಳುಗಳಿಗೆ ಹೊಸತೊಂದು ಅಹಿಂಸೆಯ ಸಂದೇಶವನ್ನು ಕಳುಹಿಸಬೇಕಾಗಿಯೂ ಅವರು ಬಿನ್ನವಿಸಿಕೊಂಡಿದ್ದಾರೆ.

ಇದಕ್ಕೆ ಗಾಂಧಿಜಿಯವರು ಬ್ರಿಟಿಷ್ ಮಿತ್ರರ ಈ ತೆರದ ಉತ್ತೇಜಕ ಪತ್ರಕ್ಕೆ ತಮ್ಮ ಕೃತಜ್ಞತೆಯನ್ನು ತಿಳಿಸಿ, ಅವರ ಅಪೇಕ್ಷೆಯಂತೆ, ಅನುಕೂಲ ಸಂದರ್ಭವು ಒದಗಿದರೆ, ಲೋಕದ ಆಧ್ಯಾತ್ಮಿಕ ಮುಖಂಡರಿಗೆ ಪುನಃ ಒಮ್ಮೆ ತಾನು ವಿನಂತಿಸಿಕೊಳ್ಳುವುದಾಗಿ ತಿಳಿಸಿರುವರು. ಕೊನೆ ಭಯಂಕರ ವಿಪತ್ತಿಗೆ ಭಯಂಕರ ವಿಪತ್ತಿ ಕೊಡಬೇಕಾದಂತೆ, ತೀವ್ರ ಹಿಂಸೆಯ ನಾಶಗಳನ್ನು ಪೂರ್ಣ ಅಹಿಂಸೆಯ ಕ್ರಮದಿಂದಲೇ ಜಯಿಸಬಹುದಾಗಿದೆಯೆಂದೂ ಬರೆದಿರುವರು.

"ನನಗೆ ಇಂದು ಒಂದೇ ಹೆಜ್ಜೆ ಸಾಕಾಗಿದೆ"

ಮುಂದೆ ದೇವರು ನಡೆಸುವನು!

ಮಹಾತ್ಮಾ ಗಾಂಧಿಯವರ ಮಹತ್ವದ ಪ್ರಕಟಣೆ!

ಭಾಷಣ ಸ್ವಾತಂತ್ರ್ಯವು ಜನ್ಮಸಿದ್ಧವಾದ ಹಕ್ಕು!

'ನನ್ನ ಕೊನೆಯ ಸತ್ಯಾಗ್ರಹವಾಗಬಹುದು'

ಮಹಾತ್ಮಾಜಿಯವರು ಈ ಸಲದ ಸತ್ಯಾಗ್ರಹ ವನ್ನು ಪ್ರಾರಂಭಿಸುವ ಮೊದಲು ಒಂದು ಮಹ ತ್ವದ ಪ್ರಕಟಣೆಯನ್ನು ಕೊಟ್ಟಿರುವರು. ಆದರಲ್ಲಿ ಅವರು ಕಾಂಗ್ರೆಸು ತನಗೆ ಸರ್ವಾಧಿಕಾರವನ್ನು ಕೊಟ್ಟಿದ್ದರೂ, ತಾನು ಇಂತಹ ಮಹತ್ವದ ಸಂದ ರ್ಭದಲ್ಲಿ ವರ್ಕಿಂಗ್ ಕಮಿಟಿಯೊಡನೆ ಆಲೋಚ ನೆ ಕೇಳದೆ ಪ್ರಾರಂಭಿಸುವುದು ಉಚಿತವಲ್ಲವೆಂದು ಅವರನ್ನು ಕರೆಸಿದುದಾಗಿಯೂ ಆ ಹಿಂಸಾ ಕಾರ್ಯಕ್ರಮದಲ್ಲಿ ಸಹೋದ್ಯೋಗಿಗಳ ಮನಸ್ಸು ಒಲಿಸಿಯೇ ಕಾರ್ಯವೆಸಗುವುದು ಒಳ್ಳೆಯ ದೆಂದೂ ವರ್ಕಿಂಗ್ ಕಮಿಟಿಯ ಸದಸ್ಯರಲ್ಲಿಯೇ ಇಬ್ಬರು ತನ್ನ ಯೋಜನೆಯನ್ನು ಒಪ್ಪಲಿಲ್ಲವೆಂದೂ ಶಿಸ್ತಿನ ಸಲುವಾಗಿ ಅವರು ನಿಸ್ಸಂಶಯವಾಗಿ ನಾನು ಹೇಳಿದಂತೆ ಕೇಳುವರೆಂದೂ ಹೇಳಿದ್ದಾರೆ. ಅದೇ ಸಂದರ್ಭದಲ್ಲಿ ಅವರು ಈ ರೀತಿ ಯ ತನ್ನ ಯೋಜನೆಗೆ ಸಮ್ಮತಿಯಿಲ್ಲದವರು ತಾಳ್ಮೆಯಿಂದಿದ್ದು ತನ್ನ ಯೋಜನೆಯು ಮುಂದೇ ನಾಗುವುದೆಂಬುದನ್ನು ನೋಡಬೇಕೆಂದೂ ನಾನು ಕೊಟ್ಟ ಸಲಹೆಗಳನ್ನು ಪಾಲಿಸಬೇಕೆಂದೂ ಆ ಯೋಜನೆಗೆ ಸಮ್ಮತಿಯಿಲ್ಲದಿದ್ದರೆ ಕಾಂಗ್ರೆಸಿನಿಂದ ಮುಕ್ತರಾಗಿ ಜನತೆಗೆ ಒಳ್ಳೆಯ ಕಾರ್ಯಕ್ರಮ ವನ್ನು ಹೇಳಿ ಜನರನ್ನು ತಮ್ಮ ಕಡೆಗೆ ಸೆಳೆದು ಕೊಳ್ಳಬಹುದೆಂದೂ, ಆದರೆ ಕಾಂಗ್ರೆಸಿನಲ್ಲಿಯೇ ಇದ್ದು ಕಾಂಗ್ರೆಸಿಗೆ ವಿರುದ್ಧ ಮಾಡಬೇಡಿರೆಂದೂ ಇಂತಹ ಸಮಯದಲ್ಲಿ ಗೊಂದಲ ಹುಟ್ಟಿಸ ಬೇಡಿರೆಂದೂ ಕೇಳಿಕೊಂಡಿರುವರು.

ಈ ಸಲದ ಸತ್ಯಾಗ್ರಹ

ಈ ಸಲದ ಸತ್ಯಾಗ್ರಹದ ವಿಷಯ ಹೇಳುತ್ತಾ ಅದನ್ನು ಎಷ್ಟು ಜನರು ಮಾ ಡುವರೆಂಬುದು ಮುಖ್ಯವಲ್ಲ, ಒಬ್ಬನೇ ಅದನ್ನು ಮಾಡಬಹುದು. ಮಿಕ್ಕವರು ಶಕ್ಯವಿದ್ದಷ್ಟು ಸಹಕಾರ ಮಾಡಬೇಕೆಂದಿ ರುವರು. ಆವೇಳೆ ವಿನೋಬಭಾವೆಯ ವರು ಈ ಸಲದ ಸತ್ಯಾಗ್ರಹದ ಪ್ರಥಮ ಸೇನಾಪತಿಯಾಗುವರೆಂದು ತಿಳಿಸಿ, ಈ **ಸತ್ಯಾಗ್ರಹವು ಭಾಷಣ ಸ್ವಾತಂತ್ರ್ಯದ ಕುರಿತಾಗಿ ಹೂಡಲ್ಪಡುವುದೆಂದೂ ಆದ್ದರಿಂದ ಇದರಲ್ಲಿ ಸಾರ್ವಜನಿಕ ರೂ ಭಾಗವಹಿಸಬೇಕಾಗಿ ಬರಬಹು ದಾದುದರಿಂದ, ಮುಂದೆ ಇದು ಯಾವ ರೂಪವನ್ನು ಹೊಂದುವು ದೆಂಬುದು ಸರಕಾರದ ವರ್ತನೆ ಯನ್ನು ಅವಲಂಬಿಸಿಕೊಂಡಿದೆಯೆಂದಿ**

ರುವರು. ಆದರೆ ಸರಕಾರದವರು ಈ ಗಂಡಾಂತರದ ಪ್ರಸಂಗವನ್ನು ತಂದೊಡ್ಡ ಬಾರದೆಂದೂ, ಅಹಿಂಸೆಯ ಕಾರ್ಯ ಕ್ರಮವನ್ನು ಇಂದು ನಾನು ಆರಂಭಿಸಿರು ವೆನೆಂದೂ ಇದರ ಪರಿಣಾಮವನ್ನು ಅಳೆ ವುದು ಸಾಧ್ಯವಿಲ್ಲವೆಂದೂ ಹೇಳಿದ್ದಾರೆ.

ನನ್ನ ಕೊನೆಯ ಸತ್ಯಾಗ್ರಹ

ಆವೇಳೆ ಅವರು ವಿನೋಬಾರವರ ಪರಿಚಯ ನನ್ನ ಕೊಟ್ಟಿರುವರು (ಅದನ್ನು ಬೇರೆ ಕಡೆ ಕೊಟ್ಟಿದೆ) ಆ ಮೇಲೆ ಅವ ರ ಇದ ಬಹುಶ ನನ್ನ ಕೊನೆಯ ಸತ್ಯಾಗ್ರಹ ಆಗಬಹುದು, ಆದ ರಿಂದ ಇದಕ್ಕೆ ಯೋಗ್ಯರಾದವರನ್ನು ಆರಿಸಿದ್ದೇನೆ. ಎಲ್ಲ ಕಾಂಗ್ರೆಸ್ ಕೆಲಸ ಗಾರರು ಹೃತ್ಪೂರ್ವಕ ಸಹಾಯ ಸಹ ಕಾರಗಳನ್ನು ನೀಡಬೇಕು. ಬಾಯಮಾತಿ ನಿಂದ ಪ್ರಯೋಜನವಿಲ್ಲ. ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು, ಶಿಸ್ತಿನಿಂದ ನಡೆಯಬೇಕು. ಇದರಂತೆ ನಡೆದರೆ ನನಗೆ ಭಾಷಣ ಸ್ವಾತಂತ್ರ್ಯ ವೂ ರಾಜ್ಯವೂ ಸಿಗುವುದು ಎಂದಿರು ವರು.

ಭಾಷಣ ಸ್ವಾತಂತ್ರ್ಯ

"ನನಗೆ ಭಾಷಣ ಸ್ವಾತಂತ್ರ್ಯ ಬೇಕು. ಅದೇ ಇಂದು ನಮ್ಮ ಪ್ರಶ್ನೆ. ಯುದ್ಧದ ಕುರಿತು ನನ್ನ ಅಭಿಪ್ರಾಯವನ್ನು ತಿಳಿಸಿ ಹೇಳಲು ನನಗೆ ಅಧಿಕಾರವಿದೆ. ಈ ಅಧಿಕಾರವನ್ನು ಪಡೆಯಲು ನಾವಿ ದ ಘೋರ ಸಂಗ್ರಾಮ ಹೂಡಿದ್ದೇವೆ. ಇದೇ ನನ್ನ ಸತ್ಯಾಗ್ರಹಗಳಲ್ಲಿ ಕೊನೆಯದಾಗ ಬಹುದಾದುದರಿಂದ ಆದಷ್ಟು ಇದು ನಿರ್ಮಲವಾಗಿರಬೇಕು. ಸರಕಾರಕ್ಕೆ ತೊಂದರೆ ಕೊಡಬಾರದು; ಈ ಸತ್ಯಾ ಗ್ರಹದಲ್ಲಿ ಹೆಚ್ಚು ಜನರನ್ನು ಸೇರಿಸುವು ದಕ್ಕಿಂತ ಉತ್ತಮರನ್ನು ಸೇರಿಸಿದುದಕ್ಕೂ ಇದೇ ಕಾರಣ" ಎಂದಿರುವರು.

ಜನರ ಕರ್ತವ್ಯ

ಕಾಂಗ್ರೆಸ ಕೆಲಸಗಾರರ ರಚನಾತ್ಮಕ ಕಾರ್ಯದಲ್ಲಿ ಮನಸ್ಸಿಲ್ಲದಿದ್ದರೆ, ರಾಷ್ಟ್ರ ದ ಪ್ರತಿನಿಧಿಗಳಾಗುವುದಿಲ್ಲ. ನೂಲುವು ದು, ಜಾತಿಜಾತಿಗಳ ಸಹೋದರತೆ ಇವು ಹೆಚ್ಚಬೇಕು. ನಾನು ಹೇಳದೆ ಯಾರೂ ಶಾಸನಭಂಗ ಮಾಡಬಾರದು. ವೇಳೆ ವಿನಾಶದ ಸಹಕಾರವು ಕಾಂಗ್ರೆಸು ಕೆಲಸ ಗಾರರಿಂದ ದೊರೆತರೆ ಭಾಷಣ ಸ್ವಾತಂತ್ರ್ಯ ವಲ್ಲದೆ ಪೂರ್ಣ ಸ್ವರಾಜ್ಯವೇ ಸಮೀಪಿಸು ವುದು' ಎಂದೂ ತಿಳಿಸಿರುವರು.

ನಮ್ಮ ಹಕ್ಕು

"ಇಂದಿನ ನಮ್ಮ ಹಕ್ಕು—ಯುದ್ಧ ವಿರುದ್ಧ ಅಥವಾ ಯುದ್ಧಕ್ಕೆ ಸಹಾ ಯ ಮಾಡಬೇಡಿ ಎಂಬ ಹಕ್ಕು— ಇವೆರಡು ಮಹತ್ವದ ಹಕ್ಕುಗಳು ಬಹಿ ರಂಗವಾಗಿ ಗ್ರಹಿಸುವಷ್ಟು ಅಲ್ಪವಲ್ಲ. ಇದರಿಂದ ಬ್ರಿಟಿಷರಿಗೆ ಹಾನಿಯಾಗ ವು ದಿಲ್ಲ. ಅದವಾ ಹಿಂದ ಸ್ಥಾನವು ಸದ ತಂತ್ರವಾಗಿದ್ದರೆ ಇಲ್ಲಿನ ಸಹಾಯ ಸ್ವ ಯಂಪ್ರೇರಿತವೆನ್ನಲಾಗುವುದಿಲ್ಲ. ಅದು ಬಲಾತ್ಕಾರದ್ದಾಗುವುದು. ಸ್ವತಂತ್ರವಾದ ಭಾರತದ ನೈತಿಕ ಸಹಾಯದಿಂದ ಮಾತ್ರ ವಿಜಯಸಿಗುವುದು. ಒತ್ತಾಯದಿಂ ದಲ್ಲ. ಅಹಿಂಸೆಯಲ್ಲಿ ವಿಶ್ವಾಸವುಳ್ಳ ಕಾಂ ಗ್ರೆಸು, ಬ್ರಿಟನಿಗೆ ಅಪಜಯವನ್ನು ಬಯಸ ಲಾರದು. ಆದರೆ ಕಾಂಗ್ರೆಸು ಹಿಂಸಾತ್ಮಕ ಯುದ್ಧಕ್ಕೆ ಸಹಾಯ ಮಾಡಲಾರದು. ಈ ಸಮಯದಲ್ಲಿ ಅಹಿಂಸೆಯನ್ನು ಬೋ ಧಿಸಲು ಕಾಂಗ್ರೆಸು ಬೆದರಿದರೆ ಅದು ನಾಶಹೊಂದುವುದು. ನಮಗೆ ಸಹ ಇದು ಜೀವನ ಮರಣಗಳ ಹೋರಾಟ" ಎಂದು ವಿವರಿಸಿರುವರು.

ನೀವೇಕೆ ಸತ್ಯಾಗ್ರಹ ಮಾಡುವುದಿಲ್ಲ?

"ಹೀಗೆಂದು ಒಬ್ಬರು ಕೇಳಿದರು. ನಾನು ಸೆರೆಮನೆಗೆ ಹೋಗುವುದರಿಂದ ಸರಕಾರಕ್ಕೆ ಹೆಚ್ಚಿನ ತೊಂದರೆಯಾಗು ವುದು. ಈ ಸಲ ನಾನು ಹಾಗೆ ಮಾಡು ವುದಿಲ್ಲ. ಈ ನಡುವೆ ಏನಾದರೂ ಕೆಡು ಕೂ ಆದರೆ ಅದನ್ನು ಸರಿಪಡಿಸಲು ನಾನು ಸೆರೆಮನೆಗೆ ಹೋದರೆ ಎಲ್ಲ ಕಾಂಗ್ರೆಸು ಕೆಲಸಗಾರರೂ ಹೋಗುವರು" ಎಂದು ಹೇಳಿದ್ದಾರೆ.

ಕೊನೆಯದಾಗಿ ಅವರು ಹೀಗೆಂದಿರು ವರು "ಮುಂದಿನ ಪರಿಣಾಮವೇನಾಗು ವುದೆಂದು ನನಗೇ ಗೊತ್ತಿಲ್ಲ. ನಾನು ನಂಬಿಗೆಯ ಮನುಷ್ಯ. ನನ್ನ ಭಾರದೇವರ ಮೇಲೆ. ನನಗೆ ಇಂದು ಒಂದೇ ಒಂದು ಹೆಜ್ಜೆ ಸಾಕಾಗಿದೆ. ಸಮಯ ಬಂದರೆ ಅದನ್ನು ಮುಂದೆ ನಡೆಸಲು ದೇವರು ನನಗೆ ತಿಳಿಸುವನು—ಇದ ರಿಂದ ಲೋಕದಲ್ಲಿ ಶಾಂತಿಯಾಗಲಾರ ದೆಂದು ಯಾರಿಗೆ ಗೊತ್ತು? ನನ್ನದಿದು ನಿಶ್ಚಲ ನಂಬಿಕೆ. ನನ್ನದಿದು ಬಣ ಹೆಮ್ಮೆ ಯಲ್ಲ, ಆತ್ಮವಿಶ್ವಾಸದ್ದು."

ನಮ್ಮ ಕಂಪೆನಿಯಲ್ಲಿ

★

ಬೆಂಕಿಯ ಅನಾಹುತ

★

ಕಡಲಿನ ಅಪಾಯ

★

ಮ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-

+

ಸರ್ವಸಾಧಾರಣ ಬೋನಸ್ ರೂ 11/

—ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಹೆಡ್ ಆಫೀಸ್—ಮುಂಬಯಿ

ಕೆ. ಎನ್. ನಾಯಕ್ ಆರ್ಗನೈಸರ್ ವೆಂಕಟ್ರಮಣ ಪೇಟೆ, ಮಂಗಳೂರು

ಕೆ. ಶ್ರೀನಿವಾಸನ್ ಬ್ರಾಂಚ್ ಮ್ಯಾನೇಜರ್ ... ಫೀಲ್ಡ್ ಮದ್ರಾಸ್

ಗಾಂಧೀಜಿ ಇನ್ನೊಂದು ಉಪವಾಸ ಮಾಡುವರೆ?

ಹರಿಜನದಲ್ಲಿ ಮಹಾತ್ಮರ ಲೇಖನ

'ನನ್ನ ಜೀವನದಲ್ಲಿ ಇನ್ನೊಂದು ಉಪವಾಸವಿದೆ!'

[illegible] ಉಪವಾಸವನ್ನು ಕೈಕೊಳ್ಳುವ [illegible] ಶಕ್ತಿಗಳು [illegible] ನಾನು ಸೇವಾಗ್ರಾಮದಿಂದ ದಿಲ್ಲಿಗೆ ಹೊರಟ ದಿನ ಮುಂಚಿತವಾಗಿ ಉಪವಾಸವನ್ನು ಕೈಕೊಳ್ಳ ಕೂಡದೆಂದು ಶಕ್ತಿ ನನಗೆ ಹತ್ತಿರ ಇದ್ದರೂ ಆ ಪರಿಮಾಣದಲ್ಲಿ ಸ್ವಲ್ಪ ಸಂಶಯವಿದೆಯೆಂದು ನಾನು ಒಪ್ಪಿಕೊಳ್ಳಬೇಕಾಗಿದೆ. ನನ್ನ ಜೀವನದಲ್ಲಿ ಇನ್ನೊಂದು ಉಪವಾಸವನ್ನು ಮಾಡಬೇಕಾಗುವದೆಂದೂ ಮತ್ತು ನಾನು ಆಲೋಚನೆ ಮಾಡಿದುದಕ್ಕಿಂತ ಮುಂಚಿತವಾಗಿ ಆಗಬಹುದೆಂಬ ನಿಶ್ಚಯವೂ ನನಗೆ ಈಗಾಗಲೇ ಕಂಡುಬಂದಿದೆ.

ನಾನು ಸಾರ್ವಜನಿಕ ಉಪವಾಸ ಯಾವುದನ್ನೂ ಮೊದಲಾಗಿ ಆಲೋಚನೆ ಮಾಡಿ ಕೈಕೊಂಡಿರುವುದಿಲ್ಲ. ಅಂತಹ ಉಪವಾಸಗಳೆಲ್ಲವೂ ಆ ಕ್ಷಣದಲ್ಲಿ ದೇವರ ದಾನದ ಹಾಗೆ ಬಂದುವಾಗಿವೆ. ಅವುಗಳ ಫಲಿತಾಂಶವು ಯಾವಾಗಲೂ ಒಳ್ಳೆಯದಾಗಿದೆ. ಹೇಗೂ ಅವುಗಳ ಸಂಬಂಧ ನಾನು ಎಂದಿಗೂ ಶೋಕಿಸಿರುವುದಿಲ್ಲ.

ನಾನು ಉಪವಾಸ ಮಾಡಬೇಕೆಂದು ದೇವರು ಇಚ್ಛಿಸಿದರೆ ಅದು ಖಂಡಿತವಾಗಿ ಬರುವುದು. ಅದರೊಂದಿಗೆ ಉತ್ತಮ ಫಲಿತಾಂಶವೂ ಬರುವುದು. ಎಲ್ಲಾ ವಿಷಯಗಳಲ್ಲೂ ಆತನ ಇಚ್ಛೆಯು ಕೈಗೂಡುವುದು. ಈಗಿನ ಕಾಲದಲ್ಲಿ ಸತ್ಯಾಗ್ರಹದ ಹೆಸರಿನಲ್ಲಿ ಹಲವು ಉಪವಾಸ ವ್ರತಗಳು ಕೈಗೊಳ್ಳಲ್ಪಡುತ್ತಿವೆ. ಗೊತ್ತಿರುವ ಹಲವು ಉಪವಾಸಗಳು ಅರ್ಥವಿಲ್ಲದವಾಗಿವೆ ಮತ್ತು ಹಲವು ಅಪವಿತ್ರವಾಗಿದೆ.

ಉಪವಾಸವು ಭಯಂಕರ ಆಯುಧವಾಗಿದೆ. ಅದಕ್ಕೊಂದು ಶಾಸ್ತ್ರವೇ ಇದೆ. ನನಗೆ ಗೊತ್ತಿರುವ ಮಟ್ಟಿಗೆ ಅದರ ಸಂಪೂರ್ಣ ತಿಳುವಳಿಕೆ ಇರುವವರೇ ಇಲ್ಲ. ಅದರ ಅಶಾಸ್ತ್ರೀಯವಾದ ಪರೀಕ್ಷೆಯು ಅದನ್ನು ಕೈಗೊಳ್ಳುವವನಿಗೆ ಕೇಡನ್ನುಂಟುಮಾಡುವುದು. ಮತ್ತು ಉಪವಾಸದ ಉದ್ದೇಶವನ್ನು ಕೆಡಿಸಬಹುದು. ಅದನ್ನು ಕೈಕೊಳ್ಳುವ ಹಕ್ಕನ್ನು ಪಡೆಯದವರಾರೂ ಈ ಆಯುಧವನ್ನು ಉಪಯೋಗಿಸಬಾರದು. ಯಾರಿಗೆ ವಿರುದ್ಧವಾಗಿ ಉಪವಾಸವು ಕೈಕೊಳ್ಳಲ್ಪಡುವುದೋ ಅಂಥವನೊಂದಿಗೆ ಒಡನಾಡುವವನು ಮಾತ್ರ ಉಪವಾಸವನ್ನು ಕೈಕೊಳ್ಳಬಹುದು. ಯಾರಿಗೆ ವಿರುದ್ಧವಾಗಿ ಉಪವಾಸವು ಕೈಕೊಳ್ಳಲ್ಪಡುವದೋ ಅವನು ಉಪವಾಸದ ಉದ್ದೇಶಕ್ಕೆ ನೇರಾ ಸಂಬಂಧಿಸಿದವನಾಗಿರಬೇಕು.

ನನ್ನ ಸಾರ್ವಜನಿಕ ಉಪವಾಸಗಳೆಲ್ಲವೂ ಈ ತರದವೇ ಆಗಿವೆ. ರಾಜಕೋಟೆ ಉಪವಾಸದಿಂದ ಹೆಚ್ಚು ಕಲಿಯಬೇಕಾಗಿದೆ. ಹಲವರು ಇದನ್ನು ಪೂರ್ಣ ಖಂಡಿಸಿರುವರು. ಮೊಟ್ಟಮೊದಲು ಅದು ಪವಿತ್ರವಾಗಿಯೂ ಅವಶ್ಯವಾಗಿಯೂ ಇತ್ತು. ನಾನು ವೈಸರಾಯರ ಸಹಾಯವನ್ನು ಕೇಳಿದಾಗ ತಪ್ಪು ಅದರೊಳಗೆ ಹೊಕ್ಕಿತ್ತು. ನಾನು ಹಾಗೆ ಮಾಡದಿದ್ದ ಪಕ್ಷದಲ್ಲಿ ಅದರ ಫಲಿತಾಂಶವು ಉತ್ಕೃಷ್ಟವಾಗುತ್ತಿತ್ತೆಂದು ನನಗೆ ನಂಬಿಕೆಯಾಗಿದೆ. ಅದು ಇದ್ದ ಹಾಗೆ ಅದರ ಉದ್ದೇಶವು ಜಯವೆಂದು ಹೇಳಬೇಕು. ನನ್ನ ಕಣ್ಣನ್ನು ತೆರೆಯಿಸುವ ಉದ್ದೇಶ ದೇವರು ನನ್ನ ಬಾಯಿಂದ ರೊಟ್ಟಿಯನ್ನು ತೆಗೆದು ಬಿಟ್ಟರೆಂದೇ ಹೇಳಬೇಕಾಗಿದೆ. ರಾಜಕೋಟೆ ಉಪವಾಸವು ಹಾಗೆ ಸತ್ಯಾಗ್ರಹಿಗೆ ಉಪಯುಕ್ತವಾದ ಪಾಠವಾಗಿದೆ. ಉಪವಾಸಕ್ಕೆ ನಾನು ಹಾಕಿರುವ ತತ್ವಗಳನ್ನು ಒಪ್ಪಿಕೊಂಡರೆ ಅದರ ಅವಶ್ಯಕತೆಯ ವಿಷಯ ಸಂಶಯವಿಲ್ಲ. ಪರಿಶುದ್ಧವಾದ ಕೆಲಸವು ಸಹ ಸರಿಯಾದ ತಳಹದಿಯಿಲ್ಲದಿದ್ದರೆ ಹೇಗೆ ತನ್ನ ನಿರ್ಮಲತ್ವವನ್ನು ಕಳೆಕೊಳ್ಳುತ್ತದೆಯೆಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಪರಿಶುದ್ಧವಾದ ಉಪವಾಸದಲ್ಲಿ ಸ್ವಾರ್ಥತೆಗೆ, ಸಿಟ್ಟಿಗೆ, ಅಪನಂಬಿಕೆಗೆ, ಅಥವಾ ಅಸಹನೆಗೆ ಸ್ಥಾನವಿಲ್ಲ.

ಅಲ್ಲಿಯ ಠಾಕೂರಸಾಹೇಬರು ನಮ್ಮ ಕೇಳಿಕೆಯಲ್ಲಿ ಅಲ್ಪ ಭಾಗವನ್ನು ಸಲ್ಲಿಸಿದ್ದರೂ ನಾನು ನನ್ನ ಪ್ರಯತ್ನದ ಪೂರ್ಣ ಫಲವನ್ನು ಹೊಂದಬೇಕೆಂದು ಪಣತೊಟ್ಟೆನು. ನನ್ನಲ್ಲಿ ಸಿಟ್ಟು ಇಲ್ಲದಿದ್ದ ಪಕ್ಷ ವೈಸರಾಯರ ಸಹಾಯವನ್ನು ನಾನು ಬಯಸುತ್ತಿದ್ದಿಲ್ಲ. ಹಾಗೆ ಮಾಡಲಿಕ್ಕೆ ನನ್ನ ಪ್ರೀತಿಯು ಖಂಡಿತ ಅಡಂಕಬರಬೇಕಿತ್ತು. ಠಾಕೂರಸಾಹೇಬರು ನನ್ನ ಉಪವಾಸದಿಂದ ಕರಗಲಿಕ್ಕಿಲ್ಲವೆಂಬ ಅಪನಂಬಿಕೆಯನ್ನಿಟ್ಟು ನಾನು [illegible] ಬಿದ್ದು ನನ್ನಲವಾಯಿತು. ಈ ರೀತಿಯ ತಪ್ಪುಗಳು ನನ್ನ ಉಪವಾಸದಲ್ಲಿದ್ದುದರಿಂದ ಅದು ಫಲಕಾರಿಯಾಗಿಲ್ಲ. ನನ್ನ ರಾಜಕೋಟೆ ಉಪವಾಸದ ಫಲಿತಾಂಶವನ್ನು ಇಲ್ಲಿ ವಿವರಿಸುವದು ಅಧಿಕಪ್ರಸಂಗವಾಗುವದರಿಂದ ಅದರ ಗೋಜಿಗೆ ನಾನು ಹೋಗಬಯಸುವದಿಲ್ಲ. ಆದರೆ ಉಪವಾಸವ್ರತ ಕೈಕೊಳ್ಳುವವನು ನಮ್ಮ ಎಚ್ಚರಿಕೆಯಿಂದಿರಬೇಕು, ಹೇಗೆ ಒಂದು ಅಲ್ಪ ತಪ್ಪು ಸಹ ಹಿಡಿದ ಕಾರ್ಯವನ್ನೇ ನಾಶಮಾಡಿತು ಎಂಬ ವಿಚಾರ ಮಾತ್ರ ಇದರಿಂದ ವಿಶದವಾಗುತ್ತದೆ. ಆದ್ದರಿಂದ ಉಪವಾಸದಲ್ಲಿ ಸತ್ಯ ಮತ್ತು ಅಹಿಂಸೆಯೇ ಅಲ್ಲ ದೇವರೂ ಬೇಕಾದ ಶಕ್ತಿಯನ್ನು ಕರುಣಿಸಿ ಹಿಡಿದ ಕಾರ್ಯವನ್ನು ಜಯಪ್ರದವಾಗಿ ನಡೆಸುವನೆಂಬ ಅಚಲವಾದ ಭಕ್ತಿಯೂ ಇರಬೇಕು. ಅಲ್ಲದೆ ಉಪವಾಸದಲ್ಲಿ ಸ್ವಲ್ಪ ತಪ್ಪುಗಳಾದರೂ ಸಹ ದೇವರು ಉಪವಾಸಕ್ಕೆ ಸತ್ವವನ್ನು ಕೊಡನೆಂಬ ನಂಬಿಕೆಯೂ ಇರಬೇಕು. ಅಸಾಧಾರಣವಾದ ಸಹನೆ, ದೃಢ ನಿರ್ಧಾರ, ಏಕಾಗ್ರತೆ, ಶಾಂತತೆ, ಇವು ಪರಿಶುದ್ಧ ಉಪವಾಸದಲ್ಲಿ ಮೂರ್ತಿಮತ್ತಾಗಿರಬೇಕು. ಆದರೆ ಒಬ್ಬ ವ್ಯಕ್ತಿಗೆ ಇವೆಲ್ಲಾ ಗುಣಗಳನ್ನು ಒಂದೇ ಬಾರಿ ಅಭ್ಯಾಸಿಸಲು ಅಸಾಧ್ಯವಾದ ಪ್ರಯುಕ್ತ ಅಹಿಂಸೆಯಲ್ಲಿ ನಂಬಿಕೆಯಿರುವ ಯಾವನೊಬ್ಬನಾದರೂ ಸತ್ಯಾಗ್ರಹ ಉಪವಾಸವನ್ನು ಕೈಕೊಳ್ಳಕೂಡದು.

ಮೇಲೆ ವಿಚಾರಿಸುವ ವಿಷಯಗಳು ಸತ್ಯಾಗ್ರಹದಲ್ಲಿ ಉಪವಾಸದ ಕುರಿತಾದದೆ. ಆರೋಗ್ಯದ ಬಗ್ಗೆ ಉಪವಾಸಕ್ಕೆ ಡಾಕ್ಟರರನ್ನು ವಿಚಾರಿಸಬೇಕು; ದೈವಿ ಮಾನಸಿಕ ಪರಿಶುದ್ಧತೆಗೆ ಉಪವಾಸ ಕೈಕೊಳ್ಳುವ ಬಗ್ಗೆ ಅದಕ್ಕೆ ಸಂಬಂಧಿಸಿದವರನ್ನು ವಿಚಾರಿಸಬೇಕು. ದೈವಿಕ ವಿಚಾರದಲ್ಲಿ ಮಾನಸಿಕ ಪರಿಶುದ್ಧತೆಯ ಬಗೆ ಉಪವಾಸ ಮಾಡುವ ಪದ್ಧತಿಯು ಇಂದು ನಮ್ಮಲ್ಲಿ ಅಳಿಸಿಹೋಗಿದೆ. ಹೇ[illegible]ವರು ವಂಶಪಾರಂಪರ್ಯ [illegible]ವೆಂದು ಇದನ್ನು ಪರಿಗಣಿಸಿ ಅನುಸರಿಸುವರು. ಆದಪ್ರಯುಕ್ತ ಈ ಉಪವಾಸಗಳಲ್ಲಿ ಬರಬೇಕಾದಷ್ಟು ಫಲ ಸಿಗುವದಿಲ್ಲ. ಸತ್ಯಾಗ್ರಹೀ ಉಪವಾಸ ಕೈಕೊಳ್ಳುವನಿಗೆ ನಿಜವಾಗಿಯೂ ಪಾರಮಾರ್ಥಿಕ ವಿಚಾರದ ಉಪವಾಸದ ಸ್ವಲ್ಪ ಅನುಭವ ಬೇಕೇ ಬೇಕು. ಶರೀರವನ್ನು ಕತ್ತಲಿನಿಂದ ದೂರಮಾಡುವ ಬಗ್ಗೆ ಕೈಕೊಳ್ಳುವ ಉಪವಾಸವಾದರೂ ಉಪಯೋಗಕ್ಕೆ ಬಾರದಿದ್ದ್ದೆ. ಯಾವ ರೀತಿಯ ಉಪವಾಸವನ್ನು ಕೈಕೊಂಡರೂ ಅದರ ಅಂತಿಮ ಫಲವು ಪರಿಶುದ್ಧತೆಯೇ ಆಗಿದೆ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ
ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ
ಜಗತ್ಪ್ರಸಿದ್ಧ

GONO KILLER

ಗೊನೋಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.
ಎಲ್ಲಾ ಪ್ರಕಾರದ [illegible] ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ [illegible] ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನ [illegible] ಗೊನೊ[illegible] ಎಂಬ ವಿಕಾರ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು [illegible] ಅನೇಕ [illegible] ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.
ಬೆಲೆ: 50 ಮಾತ್ರೆಗಳ ಬಾಟ್ಲ 1ಕ್ಕೆ ರೂ. 3-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ.
ತಯಾರಿಸುವ [illegible]: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: Dr. D. N. JASANI, (S.B.M.) Vithalbhai Patel Road, BOMABY 4.
Madras Agent: Appah & Co. China Bazar Madras.

[ಪ್ರತ್ಯಕ್ಷವಾಗಿಯೂ, ದಿನದ ಜೀವನದಲ್ಲಿ ಎಂತಹ ಅನೇಕ ಚಿತ್ರಗಳನ್ನು ನೋಡುತ್ತೇವೆ. ಕರುಣ, ಹಾಸ್ಯ, ಭಯಾನಕ, ವೀರ, ರೌದ್ರ, ಬೀಭತ್ಸ ಎಲ್ಲ ತರದ ರಸಗಳೂ ಅಲ್ಲಿ ತುಂಬಿ ತುಳುಕುತ್ತಿವೆ. ಅಂತಹ ಘಟನೆಗಳನ್ನು ಕಲ್ಪಿಸಿ ಇಲ್ಲಿ ಪ್ರೇಮಜೀವನದ ಕೆಲವು ಚಿತ್ರಗಳನ್ನು ಕೊಟ್ಟಿದ್ದೇನೆ.-ಲೇ]

ನಾಲ್ಕು ಕತೆಗಳು:

ಪ್ರೇಮ ಜೀವಿಗಳು!

(ದುರ್ಗಾದಾಸ)

ಪ್ರೇಮಾಗ್ನಿಯಲ್ಲಿ-

ಚೆನ್ನ ಆತನ ಹೆಸರು. ಚೆನ್ನಿ ಆತನಿಗೆ ಅನುರೂಪಳಾದ ಅನುಕೂಲಳಾದ ಪತ್ನಿ. ನವದಂಪತಿಗಳು ಮದುವೆಯಾಗಿ ನಾಲ್ಕು ತಿಂಗಳುಗಳನ್ನು ನಾಲ್ಕು ನಿಮಿಷಗಳಂತೆ ಕಳೆದರು.

ಹೊಟ್ಟೆ ಬಟ್ಟೆಗೆ ಬಡತನವಿತ್ತು ಅವರಿಗೆ. ಚಿನ್ನಾಭರಣ ಅಲಂಕಾರಗಳಿಗೆ ದಾರಿದ್ರ್ಯವಿತ್ತು ಚೆನ್ನಿಗೆ. ಆದರೆ ಅದು ಒಂದೂ ಆವಳ ಮನಸ್ಸಿಗೆ ಬಂದಿರಲೇ ಇಲ್ಲ. ಇನಿಯನ ಪ್ರೇಮ ಜೀವನದಲ್ಲಿ ಇನಿಯಳಿಗೆ ಜೀವಸಾಫಲ್ಯ ದೊರಕಿತ್ತು! ಬಂದೂ ಬರದಂತೆ, ಕಳೆದೂ ಕಳೆಯದಂತೆ ದಿನದಿನಗಳು ಹಾರಿ, ನಾಲ್ಕು ತಿಂಗಳುಗಳೂ ಮಿಂಚಿ ಹೋಗಿದ್ದವು!

ಸಂಜೆ ಹೊಲದಿಂದ, ಗೇದು ಬಳಲಿ ಬಂದನು ಚೆನ್ನ. ಎಂದಿನಂತೆ ಸವಿಮಾತನಾಡಲಿಲ್ಲ. ಚೆನ್ನಿಯೊಡನೆ ಚೆನ್ನಾಟವಾಡಲಿಲ್ಲ; ಚೆನ್ನಿ ಅಕ್ಕರೆಯಿಂದ ಬಡಿಸಿದರೂ ಉಣ್ಣುವ ಬಯಕೆಯಿಲ್ಲದೆ ಉಂಡ. ಚೆನ್ನಿಗೆ ದಿಗ್ಭ್ರಾಂತಿಯಾಯಿತು . . . . ಮತ್ತೆ ವಿಷಮ ಜ್ವರ ಹಿಡಿಯಿತು. ಮುಂದೆ, ನಾಲ್ಕೇ ತಾಸುಗಳಲ್ಲಿ ಚೆನ್ನ ಕೊನೆಯುಸಿರೆಳೆದನು.

ಚೆನ್ನಿಯು ತಲೆಗೆ ಸಿಡಿಲು ಬಡಿದಂತಾಯಿತು. ಅಯ್ಯೋ! ಅಜೆ ಹುಚ್ಚಿ! ಇನಿಯನ ಶವವನ್ನು ಬಂಧುಗಳು ಸೇರಿ ಮಸಣದೆಡೆಗೊಯ್ದರು! ಸೀರೆ ಇತ್ತ ಶೃಂಗಾರವಾದಳು. ತನ್ನ ವಿವಾಹಕಾಲದ ಸೀರೆಯನ್ನು ತೆಗೆದುಟ್ಟಳು; ಚಿನ್ನಾಭರಣಗಳನ್ನು ಧರಿಸಿದಳು. ಹೀಗೆ ಅಲಂಕಾರವಾದಳು. ಉರಿಯುತ್ತಿದ್ದ ದೀಪದಿಂದ ತನ್ನ ಸೀರೆಯ ಸೆರಗಿಗೆ ಬೆಂಕಿಕೊಟ್ಟಳು; ಬೆಂಕಿ ನಾಲಿಗೆನೀಡಿ ಉರಿಯಹತ್ತಿತ್ತು.

ಜನರು ಅವಳ ಮೈಗೆಹಿಡಿದ ಬೆಂಕಿಯನ್ನು ನಂದಿಸಬಂದರು; ಆದರೆ ಚೆನ್ನಿ ಅಂದು ಹುಚ್ಚಿ ಮಾತ್ರವಲ್ಲ, ಕರಾಳಿ! ಅವಳ ಸಮೀಪ ಬರಲು ಯಾರಿಗೂ ಎದೆಯಿಲ್ಲ. ಬೆಂಕಿ ಅಷ್ಟರಲ್ಲಿಯೇ ತನ್ನ ಕಾರ್ಯವನ್ನು ತೀರಿಸಿತ್ತು!

ಪ್ರೇಮಾಗ್ನಿಯಲ್ಲಿ ಚೆನ್ನಿ ಸುಟ್ಟು ಬೂದಿಯಾದಳು!

★

ಏಕಾಂಗಿಯಾಗಿ-

ಮಾದಿಗ ಬೋರನಿಗೆ ಮದುವೆಯಾಗಿ ವರ್ಷವೊಂದು ದಾಟಿತ್ತು! ಅವನಾಕೆ ಇದು ವರೆಗೂ ಅವನ ಗುಡಿಸಲಿಗೆ ಕಾಲಿಟ್ಟಿರಲಿಲ್ಲ. ಆಕೆಯ ಮಾವನ ಮಗ ತೋಮ, ಅವಳಿಗೆ ಪ್ರೇಮದ ಹುಚ್ಚುಹಿಡಿಸಿದ್ದನೆಂದು ಜನರು ಗುಜುಗುಜು ಹೇಳುತ್ತಿದ್ದರು. ಬೋರ ಯಾವುದನ್ನೂ ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಒಂದು ದಿನ ಆಕೆಗೆ ದೇವರು ಬುದ್ಧಿಕೊಟ್ಟಾನು; ಆಕೆ ಬಂದು ತನ್ನ ಮನೆ, ತನ್ನೆದೆ ಬೆಳಗಿಸುವಳು; ತಾನು ಗೃಹಸ್ಥನಾಗುವೆನು ಪಾಪ ಬೋರ ಹೀಗೆಂದು ಕನವರಿಸುತ್ತಿದ್ದ! ಆಕೆಗಾಗಿ ಕೊರಳುದ್ದ ಮಾಡಿ ಕಾದು ಕಾದುಕೊಂಡಿದ್ದ.

ಜೀವನವನ್ನು ಬಹುಕಾಲ ಮತ್ತೆ ಏಕಾಂಗಿಯಾಗಿ ನಡೆಸುವುದು ಆತನಿಂದ ಆಗಲಿಲ್ಲ. ಬದುಕಿಗೆ ಸವಿಯನ್ನು ತರುವ ಜೊತೆಗಾತಿಯಿಲ್ಲದ ಕೊರತೆ, ಆ ವ್ಯಥೆ ಅವನೆದೆಯನ್ನು ನಿತ್ಯ ಕೊರೆಯುತಿತ್ತು. ಮಹಾರಾಣಿಯ ಸನ್ನಿಧಿಗೆ ಹಲವು ಬೇಡಿಕೆಗಳು ಹೋದವು. ಅವುಗಳಿಗೆ ಯಾವ ಉತ್ತರವೂ ಇಲ್ಲ; ಕಡೆಗೂ ಅವಳು ಬರಲೇ ಇಲ್ಲ.

ಇನ್ನೊಬ್ಬಳ ಕೈ ಹಿಡಿದಾದರೂ ಜೀವನ ರಥ ಸಾಗಿಸುವ ಸಾಹಸಕ್ಕೆ ಬೋರ ಮನಮಾಡಿದ. ಕೊನೆಗೆ ಒಂದು ಕಡೆ ನಿಶ್ಚಯವೂ ಆಯಿತು. ಆದರೆ ಹೊಸ ಮಹಾರಾಣಿಯದು ಒಂದು ಶರತ್ತು, ತನ್ನನ್ನು ಮದುವೆಯಾಗಬೇಕಾದರೆ ಮೊದಲಿನಾಕೆಯ ಸಮ್ಮತಿ ಪಡೆಯಬೇಕೆಂದು.

ಪಾಪ ಬೋರ ಓಡಿದ-ಮೊದಲಿನಾಕೆಯಲ್ಲಿಗೆ. 'ಸಮ್ಮತಿಕೊಡು ಮಹಾರಾಣಿ' ಎಂದು ಅಂಗಲಾಚಿ ಬೇಡಿದ. ಆದಕ್ಕೂ ಅವಳು ಒಪ್ಪಲೇ ಇಲ್ಲ. 'ನಾನೇ ನಿನ್ನ ಕೈ ಹಿಡಿದಾಕೆ ಇರುವಾಗ ಇನ್ನೊಬ್ಬಳನ್ನು ಮದುವೆಯಾಗುವಿಯೇ' ಎಂದು ಹಂಗಿಸಿದಳು; ಜರೆದಳು. ತಾನು ಆವನ ಗುಡಿಸಲಿಗೆ ಇದುವರೆಗೆ ಕಾಲಿಡಲಿಲ್ಲವಾದರೂ, ತಾನೇ ಆತನ ಧರ್ಮಪತ್ನಿ ಎಂಬುದು ಅವಳ ಸಾಧನೆಯಾಗಿತ್ತು! (-ತೋಮನ ಗೆಳೆತನದಿಂದ ಬಸುರಿಯಾಗಿದ್ದಾಳೆಂದೂ ಮತ್ತೆ ತಿಳಿಯಿತು!-) ಅಂತೂ ಬೋರನ ಎರಡನೆಯ ಮದುವೆಗೆ ಆಕೆ ಸರ್ವಥಾ ಸಮ್ಮತಿಸಲಿಲ್ಲ. ಬೋರನ ಬೇಡಿಕೆ, ಕರುಣೆಯ ಕೂಗು, ಬರಿಯ ಅರಣ್ಯ ರೋದನವಾಯಿತು!

ಬಾಗಿದ ಬೆನ್ನು ಬಳಲಿತು! ಕೂಗಿದ ಕಂಠ ಕುಗ್ಗಿತು! ಪ್ರೇಮಕ್ಕಾಗಿ, ಸುಖಕ್ಕಾಗಿ, ಸಂಸಾರದ ಸವಿಗಾಗಿ ಅಲೆದ ಬೋರನ್ನು, ತನ್ನ ಜೀವನಯಾತ್ರೆಯಲ್ಲಿ ಬರಿಯ ಬಿಸಿಲ್ಗುದುರೆಯನ್ನು ಹಿಂಬಾಲಿಸಿದ!

ಪ್ರೇಮಭಗ್ನ ಹೃದಯದಿಂದ ನಿರಾಶೆಯ-ತೀವ್ರ ನಿರಾಶೆಯ ನಿಟ್ಟುಸಿರೊಂದು ಹೊರಟಿತು.

ಮರುದಿನ, ಊರ ಕೆರೆಯ ಬಾವಿಯಲ್ಲಿ ಬೋರನ ಶವ ತೇಲುತ್ತಿತ್ತು!

★

ಮೃತ್ಯುಮುಖದಿಂದ-

ಹೆನ್ರಿ ಸುಂದರ ತರುಣ! ನಗೆಮೊಗದ ಜವ್ವನಿಗ! ಎಂದೆಂದೂ ಸಾಹಸಜೀವನವನ್ನು ಬಯಸುವವ! ಆತನನ್ನು ಮೆಚ್ಚದವರಿಲ್ಲ ಆ ಊರಲ್ಲಿ.

ರೋಸಿ, ಆತನಿಗೆ ಮನವೊಲಿದಿದ್ದಳು. ಇಬ್ಬರೂ ಅನ್ಯೋನ್ಯ ಸ್ನೇಹಪಾಶದಲ್ಲಿ ಬಂಧಿತರೇ ಆಗಿ ಹೋಗಿದ್ದರು!

ಬಹುಕಾಲ ಕಳೆದಿರಲಿಲ್ಲ!—ರಾಜಕೀಯ ಕೈದಿಯೊಬ್ಬನಿಗೆ ರಹಸ್ಯವಾಗಿ ಸಹಾಯ ಮಾಡುತ್ತಿರುವನೆಂಬ ಅಪವಾದದ ಮೇಲೆ ಹೆನ್ರಿಯನ್ನು ಸರಕಾರದವರು ಸೆರೆಮನೆಯಲ್ಲಿಟ್ಟರು!

ಆತನ ಮೇಲಿನ ಅಪವಾದ ಹೆಚ್ಚಿನದು! ಕ್ರಾಂತಿಕಾರರಿಗೆ ನೆರವಾಗುವುದು! ವಿರುದ್ಧ ರಾಜಕೀಯ ಪಕ್ಷದವರ ವಿಚಾರಗಳನ್ನು ಸಹಿಸುವ ಸಹನೆಯೂ ಸರಕಾರಕ್ಕಿರಲಿಲ್ಲ! ಹೆನ್ರಿಗೆ ಮರಣದಂಡನೆಯ ತೀರ್ಮಾನವಾಯಿತು!

ರೋಸಿ ಕಂಗೆಟ್ಟಳು. ಹಗಲು ಹಸಿವಿಲ್ಲ; ರಾತ್ರಿ ನಿದ್ದೆಯಿಲ್ಲ. ಮನಸ್ಸಿಗೆ ಸ್ವಸ್ಥವಿಲ್ಲ. ತನ್ನ ಹೃದಯ ವಲ್ಲಭನನ್ನು ಮೃತ್ಯುಮುಖದಿಂದ ಬಿಡುಗಡೆ ಮಾಡಬೇಕೆಂದು ಯೋಚಿಸಿ ಯೋಚಿಸಿ ಹೊತ್ತು ಕಳೆದಳು.

ಹೆನ್ರಿಯನ್ನು ಮರಣದಂಡನೆಗೆ ಗುರಿಮಾಡುವ ಮುಂಚಿನ ದಿನ, ಆತನನ್ನು ಸೆರೆಮನೆಯಿಂದ ಬಿಡಿಸಿ, ಪ್ರತ್ಯೇಕ ಸ್ಥಳದಲ್ಲಿ ಇರಿಸಬೇಕಾಗಿತ್ತು! ಸರಕಾರೀ ಅಧಿಕಾರಿಯು ಆತನನ್ನು ಸೆರೆಮನೆಯಿಂದ ಬೇರೊಂದುಕಡೆಗೆ ಕರೆದೊಯ್ದನು!

ಮುಂದೆ ಹೆನ್ರಿ ಅಧಿಕಾರಿಗಳ ಕೈಗೆ ಸಿಗಲೇ ಇಲ್ಲ. ಅವರ ಕಣ್ಣುತಪ್ಪಿಸಿ ನಲ್ಲೆನಲ್ಲೆಯರು ಎಲ್ಲಿಗೋ ಏಕಾಂತಕ್ಕೆ ಸಾಗಿದ್ದರು! ಅಂದು ಆತನನ್ನು ಸೆರೆಮನೆಯಿಂದ ಬಿಡಿಸಿ ಬೇರೆಡೆಗೆ ಕರೆದೊಯ್ದ ಸರಕಾರೀ ಅಧಿಕಾರಿ ರೋಸಿಯೇ ಆಗಿದ್ದಳು! ಅದಕ್ಕಾಗಿ ಆಕೆ ಬಹಳ ಸಾಹಸಗಳನ್ನು ಮಾಡಿದಳು!

ಗುಪ್ತ ಪೋಲೀಸರು ಎಲ್ಲೆಡೆಯಲ್ಲಿಯೂ ಅರಸಿದರು. ಆದರೆ ಅವರು ದುಷ್ಟ ಜನರ ಆ ದೇಶದಿಂದ ದೂರ ದೂರ ತೊಲಗಿಹೋದರು.

★

ಜೀವನದ ಕೊನೆಯಲ್ಲಿ-

ಒಂದು ಸುಂದರ ಹಳ್ಳಿಯಲ್ಲಿ ಅವರು ವಾಸವಾಗಿದ್ದರು! ಆತನ ಹೆಸರು ಇ.ಜಿ. ವಿಲ್ಸ್. ಅವನ ಪ್ರಾಯ ಎಪತ್ತಕ್ಕೆ ಮಿಕ್ಕಿತ್ತು. ಆತನ ಪತ್ನಿ ಅವನಿಗಿಂತ ಹತ್ತು ವರ್ಷಕ್ಕೆ ಹಿರಿಯಳು—(ಯೂರೋಪಿನಲ್ಲಿ ಇದು ನಿಷಿದ್ಧ ಆಚಾರವಲ್ಲ.)

ಗಂಡನು 'ಚರ್ಚ್'ನಲ್ಲಿ ಉಪದೇಶಿ. ಆಕೆ ಬಳಿಯ ಶಾಲೆಯೊಂದರಲ್ಲಿ ಅಧ್ಯಾಪಕಿ. ಅವರ ಜೀವನ ಸುಖಮಯವಾಗಿ ಸಾಗಿತ್ತು. ಆ ಸುಂದರ ವಾತಾವರಣದಲ್ಲಿ ಆ ಸುಖೀ ದಂಪತಿಗಳು ಜೀವನಾನಂದವನ್ನು ಕಂಡಿದ್ದರು. ಬಹುಕಾಲ ಹೀಗೆ ಬಾಳಿದರು. ನಿಷ್ಠುರ ಮಾತುಗಳನ್ನು ಒಮ್ಮೆಯೂ ನುಡಿದವರಲ್ಲ. ನಿಷ್ಠುರ ಜಗತ್ತಿನೊಡನೆ ಅವರ ಸಂಪರ್ಕವೇ ಇರಲಿಲ್ಲ. ಅವರ ದಿನದಿನದ ಕರ್ತವ್ಯ, ಅವರ ಸಂಸಾರ, ಅಲ್ಲಿನ ಸುಂದರ ಶಾಂತ ಜೀವನ ಇಷ್ಟರಲ್ಲಿಯೇ ಅವರು ಪ್ರಪಂಚದ ಸೌಖ್ಯವನ್ನೆಲ್ಲಾ ಒಟ್ಟುಗೂಡಿಸಿ ಸವಿಯುತ್ತಿದ್ದರು.

ಅಕಸ್ಮಾತ್ ಒಮ್ಮೆ ಕಾಯಿಲೆಯಲ್ಲಿ ಮಲಗಿದಳು ವಿಲ್ಸನ ಪತ್ನಿ. ಮಲಗಿದವಳು ಮತ್ತೆ ಎದ್ದು ಬರಲಿಲ್ಲ. ಕರುಣೆಯ ಕಡಲಲ್ಲಿ, ಜೀವನದ ದುರಂತ ಯಾತನೆಯಲ್ಲಿ-ಆತನನ್ನು ಜೀವನದ ಕೊನೆಯಲ್ಲಿ ಏಕಾಂಗಿಯಾಗಿ ಬಿಟ್ಟು ಪರಲೋಕ ಸಾಗಿ ಹೋದಳು!

ನೆರೆಯವರೆಲ್ಲಾ ಬಂದು ಸ್ಮಶಾನಯಾತ್ರೆಗೆ ಅಣಿಮಾಡಿದರು. ಶವವನ್ನು 'ಚಟ್ಟ'ದಲ್ಲಿಟ್ಟು ಆತನ ಬರುವಿಕೆಯನ್ನು ಎದಿರು ನೋಡುತ್ತಿದ್ದರು.

ಗುಂಡಿನ ಭೀಷಣಧ್ವನಿಯೊಂದು ಅಲ್ಲಿನ ಸ್ಮಶಾನ ಮೌನವನ್ನು ಭೇದಿಸಿತು! ನೆರೆದವರೆಲ್ಲರೂ ಕೋಣೆಯೊಳಗಡೆಗೆ-ಶಬ್ದವು ಕೇಳಿಬಂದೆಡೆಗೆ ಧಾವಿಸಿದರು! ಆತನು ತನ್ನ ಗೆಳತಿಯ ನಲ್ಲಳ ಭಾವಚಿತ್ರವನ್ನು ಎದೆಗಪ್ಪಿಕೊಂಡು ಗುಂಡಿನೇಟಿನಿಂದ ನರಳುತ್ತಾ ನೆಲದಮೇಲೆ ಹೊರಳಾಡುತ್ತಿದ್ದ.

ಒಮ್ಮೆ ಒಂದುಗೂಡಿದ ಜೀವಗಳು ಮತ್ತೆ ಅಗಲಲಾರದೆ ಪುನಃ ಒಂದಾದುವು!

THE PIE-MONEY BANK LTD.,
Maidan Road, MANGALORE.
Undertakes all kinds of Banking Business. Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars
K. R. GURU, Managing Director.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಕಾಂಗ್ರೆಸಿನೊಡನೆ ಸರಕಾರವು ಹೊಂದಿಕೊಳ್ಳುವುದೆ?

ಪುನಃ ಚುನಾವಣೆ ಮಾಡಿ ನೋಡಲಿ!

ಶ್ರೀ। ಎಸ್. ಆರ್. ಪಂಡಿತರ ಧೀರೋಕ್ತಿ!

ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು.

ಭಾರತೀಯರಿಗೆ ಶಾಸನಾಧಿಕಾರವನ್ನು ಕೊಟ್ಟೇ ಕೊಡುವೆನೆಂದು ಬ್ರಿಟಿನು ಆಡುತ್ತಿರುವುದು ಯಥಾರ್ಥವಾದರೆ ಬ್ರಿಟಿಷ್ ಸರಕಾರವು ಯಥಾರ್ಥ ಮಾತನ್ನೇ ಆಡುತ್ತಿರುವದಾದರೆ ಅದು ಕಾಂಗ್ರೆಸಿನೊಂದಿಗೆ ದ್ವೇಷವನ್ನು ಕಟ್ಟಿಕೊಳ್ಳುವದರಲ್ಲಿ ಅರ್ಥವಿಲ್ಲ. ಕಾಂಗ್ರೆಸು ದೇಶದ ಅತಿ ದೊಡ್ಡ ರಾಜಕೀಯ ಸಂಸ್ಥೆಯಾಗಿರುವುದು; ಮಾತ್ರವಲ್ಲದೆ ಪ್ರಜಾಪ್ರಭುತ್ವ ಕ್ರಮಗಳಲ್ಲಿ ಮತ್ತು ಸ್ವಾತಂತ್ರ್ಯ ರಕ್ಷಣೆಯ ವಿಧಾನಗಳಲ್ಲಿ ಜನತೆಗೆ ಅಗತ್ಯವುಳ್ಳ ಅನುಭವ ತರಬೇತಿಗಳನ್ನು ಕೊಡುತ್ತಿರುವ ಒಂದೇ ಒಂದು ಸಂಸ್ಥೆಯಾಗಿರುತ್ತದೆ ಎಂದು ಶ್ರೀ. ಆರ್. ಯಸ್. ಪಂಡಿತರು ಹಿಂದುಸ್ತಾನ ಟೈಮ್ಸ್ ಪತ್ರಿಕೆಯಲ್ಲಿ ಬರೆಯುತ್ತಾರೆ.

ಬಿಡಿಸಬೇಕಾದ ಸಮಸ್ಯೆ

“ಮಹಾಯುದ್ಧಗಳು ಪ್ರಪಂಚದ ಯಾವ ಭಾಗದಲ್ಲಿ ಬೇಕಾದರೂ ನಡೆದಿರಲಿ, ಆ ಯುದ್ಧಗಳ ಪರಿಣಾಮವಾಗಿ ಸಮಾಜದಲ್ಲಿ ಘೋರ ಅಸಂತೋಷ, ಅಸಮಾಧಾನಗಳು ಹರಡಿ, ಜಗತ್ತಿನ ಮೂಲೆ ಮೂಲೆಗಳಲ್ಲಿ ಕೂಡ ಕ್ರಾಂತಿಯಾಗುವದು ಐತಿಹಾಸಿಕ ಸತ್ಯವಾಗಿದೆ. ಇದನ್ನು ಬ್ರಿಟಿಷ ಸರಕಾರವು ಮನಗಾಣಬೇಕು.

“ಫೆಸಿಸಮು ಮತ್ತು ನಾಜೀಸಮುಗಳನ್ನು ಸಮೂಲ ನಾಶಮಾಡುವದಕ್ಕೋಸ್ಕರ, ಹಿಂದುಸ್ತಾನದಲ್ಲಿ ಪ್ರಾಂತೀಯ ಎಸೆಂಬ್ಲಿ ಕೌನ್ಸಿಲುಗಳಿಗೆ ಹೊಸ ಚುನಾವಣೆಗಳನ್ನು ಮಾಡಬೇಕು. ಮತ್ತು ಹಿಂದೀಯರು ಬ್ರಿಟಿಷರಿಗೆ ಯುದ್ಧದಲ್ಲಿ ಸಹಾಯ ಕೊಡುವದೊಂದು ವಿಷಯವು ಮಾತ್ರ ಚುನಾವಣೆಯ ಮೂಲಕ ನಿರ್ಧರಿಸಬೇಕಾದ ಸಂಗತಿಯಾಗಿರಬೇಕೆಂದು ಕೆಲವರು ಹೇಳುತ್ತಾರೆ. ಜನತೆಯ ಅಭಿಪ್ರಾಯವನ್ನು ಕೇಳದೆ, ಯುರೋಪಿನ ಯುದ್ಧದಲ್ಲಿ ಹಿಂದುಸ್ತಾನವು ಬ್ರಿಟಿಷರ ಪರವಾಗಿ ಯುದ್ಧಾಸಕ್ತವಾಗಿದೆ ಎಂದು ಬ್ರಿಟಿಷು ಸರಕಾರವು ಸಾರಿದುದನ್ನು ನಿಷೇಧಿಸುವ ನಿಮಿತ್ತವಾಗಿಯೇ ಕಾಂಗ್ರೆಸ ಮಂತ್ರಿಮಂಡಲಗಳು ತಮ್ಮ ಪದವಿಗೆ ರಾಜಿನಾಮೆ ಕೊಟ್ಟವು. ಆದರೆ ಬ್ರಿಟಿಷ ಸರಕಾರವು ಕಾಂಗ್ರೆಸಿನ ಈ ಧೋರಣೆಗೆ ಜನರ ಬೆಂಬಲವು ಎಷ್ಟಿದೆಎಂದು ತಿಳಕೊಳ್ಳುವ ಈ ಪ್ರಾಮುಖ್ಯ ವಿಷಯವನ್ನು ಅಲಕ್ಷಿಸಿ, ಇಲ್ಲಿಯ ಜಾತಿಮತಗಳೊಳಗಿನ ಕಲಹಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟಿದೆ. ಬ್ರಿಟಿಷ ಸರಕಾರವು ಹಿಂದುಸ್ತಾನಕ್ಕೆ ನ್ಯಾಯಮಾಡಬೇಕೆಂದು ಇಚ್ಛಿಸವುದಾದರೆ ಹಿಂದುಸ್ತಾನದ ಯುದ್ಧಾಸಕ್ತಿ ವಿಷಯವನ್ನು ತಿಳಕೊಳ್ಳುವ ಈ ಸಮಸ್ಯೆಯನ್ನು ನಿಷ್ಪಕ್ಷಪಾತವಾಗಿ ಬಿಡಿಸಲಿ.

ಸರಕಾರದೊಡನೆ ಪಂಥ!

“ಯುದ್ಧ ಸಹಾಯದ ವಿಷಯವಾಗಿ ಬ್ರಿಟಿಷ ಸರಕಾರವು ಇಲ್ಲಿ ಎಸೆಂಬ್ಲಿ ಕೌನ್ಸಿಲುಗಳಿಗೆ ಹೊಸ ಚುನಾವಣೆಗಳನ್ನು ಮಾಡಲು ಸಿದ್ಧವಿದೆಯಾದರೆ ಕಾಂಗ್ರೆಸು ಅದರೊಡನೆ ಪಂಥವನ್ನು ಹೂಡಲು ತಯಾರಿದೆ. ಚುನಾವಣೆಗಳಲ್ಲಿ ಜಯಶೀಲವಾಗಲಿಕ್ಕೆ ಸರಕಾರಕ್ಕೆ ತುಂಬಾ ಅನುಕೂಲತೆಗಳಿವೆ. ಸಮರ್ಥರಾದ ಅಧಿಕಾರಿಗಳು ಸರಕಾರದ ಪರವಾಗಿ ಇರುವರು. ಜಮೀನುದಾರರು, ಬಂಡವಾಳಗಾರರು, ಧನಿಕರು, ಇತರ ಸ್ವಹಿತಾಸಕ್ತಿಯುಳ್ಳವರು - ಇವರೆಲ್ಲರು ಸರಕಾರದ ಪರವಾಗಿ ಚುನಾವಣೆಗಳಲ್ಲಿ ಕೆಲಸಮಾಡುವುದು ಸಹಜವಾಗಿದೆ. ಅವರು ತನುಮನ ಧನಗಳ ಮೂಲಕ ಸರಕಾರಕ್ಕೆ ಜಯವಾಗುವಂತೆ ಪ್ರಯತ್ನಿಸುವರು. ಮತದಾರರ ಸಂಖ್ಯೆ ಮಿತವಾಗಿದೆ. ಅದನ್ನು ಕ್ರಮಪಡಿಸಿದವರು ಬ್ರಿಟಿಷ ಸರಕಾರದಧಿಕಾರಿಗಳೇ ಆಗಿದ್ದಾರೆ. ಕಾಂಗ್ರೆಸಿಗಾದರೋ ಇಂಥ ಸರಕಾರವನ್ನು ಚುನಾವಣೆಯಲ್ಲಿ ಸೋಲಿಸಲಿಕ್ಕೆ ಬಹಳ ಅನಾನುಕೂಲತೆಗಳು ಇರುವವು. ಆದರೂ ಕೂಡ ಅದು ಸರಕಾರದೊಡನೆ ಪಂಥವನ್ನು ಹೂಡಲಿಕ್ಕೆ ಮತ್ತು ಅದು ಮಾತ್ರವೇ ಜನತೆಯ ನಿಜವಾದ ಪ್ರಾತಿನಿಧಿಕ ಸಂಸ್ಥೆ ಆಗಿದೆ ಎಂಬುದನ್ನು ಸಿದ್ಧಮಾಡಲಿಕ್ಕೆ ತಯಾರಿದೆ. ಸರಕಾರವು ಈ ಪಂಥಕ್ಕೆ ಒಪ್ಪುವುದೆ?” ಹೀಗೆಂದು ಅವರು ಆ ಲೇಖನದಲ್ಲಿ ಬರೆದಿರುವರು.

ಅಂದವಾದ ಮುದ್ರಣಕ್ಕೆ ಶಾರದಾ ಛಾಪಖಾನೆಗೆ ಬಂದು ವಿಚಾರಿಸಿರಿ.

ಅರುಣ ಸ್ತ್ರೀಯರಿಗೆ

★

ಬಾಲಪ್ರಾಶ ಮಕ್ಕಳಿಗೆ

★

ಜೀವಾಮೃತಂ ಪುರುಷರಿಗೆ

★

3 ಟಾನಿಕ್ ರತ್ನಗಳು

ಆಯುರ್ವೇದಾಶ್ರಮಂ

1898ರಲ್ಲಿ ಸ್ಥಾಪಿತವಾದುದು ಮದರಾಸು.

K.A.I.

ಕನ್ನಡ ಸಾಹಿತ್ಯದಲ್ಲಿ ಅಪೂರ್ವ ಗ್ರಂಥಗಳು!

ವರ್ಧಾಯಾತ್ರೆ:—ಬರೆದವರು ಎಸ್. ಕೃಷ್ಣ ಶರ್ಮರು.

ಇಂದಿನ ಯುಗದೇವನಾದ ಗಾಂಧಿಜಿಯ ಕಾರ್ಯರಂಗ ವರ್ಧಾ. ಅಲ್ಲಿನ ಜೀವನ, ಪ್ರಯೋಗ, ವ್ಯಕ್ತಿಗಳು, ಅನುಭವ ದೃಶ್ಯಗಳು ಇವುಗಳನ್ನು ತಮ್ಮ ಸರಸವಾದ ಶೈಲಿಯಿಂದ ಲೇಖಕರು ತಿಳಿಸಿದ್ದಾರೆ.

‘ಪುಸ್ತಕವು ಕನ್ನಡಿಗರಿಗೆ ದೊರೆತ ಅಪೂರ್ವ ಲಾಭ. ಗಾಂಧಿಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸಿನ ಇತಿಹಾಸ ಈ ಗ್ರಂಥಗಳ ಜತೆಯಲ್ಲಿ ಈ ಪುಟ್ಟ ಪುಸ್ತಕವನ್ನು ಓದಬೇಕು.”

ವಿಶ್ವಕರ್ನಾಟಕ

‘Wardha-Yatre is a new departure in Kannada literature’

ಭಾರತೀಯ ಕಥಾವಳಿ:—ಹಿಂದುಸ್ಥಾನದಲ್ಲಿರುವ ಈಗಿನ ಪ್ರಾಮುಖ್ಯ ಒಂದೊಂದು ಭಾಷೆಯ ಪ್ರಸಿದ್ಧ ಕತೆಗಳನ್ನು ಆಯ್ದು ಸಂಗ್ರಹಿಸಿಕೊಡುವ ಸಾಹಸವನ್ನು ಕೈಗೊಂಡಿದೆ. ಇದರಿಂದ ಭಾರತೀಯರೆಲ್ಲರ ಜೀವನದ ಅರಿವು ಆಗುವುದು. ಪ್ರತಿಯೊಂದು ಮನೆಗೂ ತೀರಾ ಅವಶ್ಯ ಇರಬೇಕಾದ ಕಥಾ ಸಂಗ್ರಹ.

ಈಗ ಆದ ಕಥಾ ಸಂಗ್ರಹಗಳು

೧. ತೆಲುಗಿನ ಕಥೆಗಳು:—ಕ್ರೌನ್ ೧/೮ ಆಕಾರದ ೧೨೦ ಪುಟಗಳು, ಬೆಲೆ ಕೇವಲ ೮ ಆಣೆ.
೨. ಅಸಾಮಿಯಾ ಕಥೆಗಳು:—ಕ್ರೌನ್ ೧/೮ ಆಕಾರದ ೧೨೦ ಪುಟಗಳು, ಬೆಲೆ ಕೇವಲ ೮ ಆಣೆ.

ಮುಂದಿನ ಪ್ರಕಟಣೆಗಳು

೧. ಪರ್ಣಕುಟಿ:—ಲೇಖಕರು: ಎಸ್. ಕೃಷ್ಣಶರ್ಮ (ಅಚ್ಚಿನಲ್ಲಿದೆ).
೨. ತಮಿಳು ಕತೆಗಳು:—(ಅಚ್ಚಿನಲ್ಲಿದೆ).

ಮಹಾಪೂರ:—(ಸಾಮಾಜಿಕ ಕಾದಂಬರಿ) ಬರೆದವರು: ಶೇಷಗಿರಿರಾವ್ ಕುಲಕರ್ಣಿ. ಕ್ರೌನ್ ೧/೮ ಆಕಾರದ ೧೮೦ ಪುಟಗಳು. ಬೆಲೆ ೧೨ ಆಣೆ.

ಸಾಧನ ಮುದ್ರಣಾಲಯ, ಧಾರವಾಡ.

ಜಿಲ್ಲಾ ಸಮಾಚಾರ

ಮಂಗಳೂರು

ಶ್ರೀ ಸತ್ಯಮೂರ್ತಿಗಳಿಗೆ ದ. ಕ. ಪತ್ರಿಕೋದ್ಯಮಿಗಳ ಮಾನಪತ್ರ ತಾ. ೧೮ರಲ್ಲು ಬೆಳಿಗ್ಗೆ ದ. ಕ. ಜಿಲ್ಲಾ ಪತ್ರಿಕೋದ್ಯಮಿ ಸಂಘದವರು ಶ್ರೀ ಸತ್ಯಮೂರ್ತಿಗಳಿಗೆ ಮಾನಪತ್ರವನ್ನರ್ಪಿಸಿದರು. ಶ್ರೀ ಹುರುಳಿ ಭೀಮರಾಯರು ಮಾನಪತ್ರವನ್ನೋದಿದರು. ಶ್ರೀ ಸತ್ಯಮೂರ್ತಿಗಳು ಮಾನಪತ್ರಕ್ಕೆ ಉತ್ತರ ವಿತ್ತುತ್ತ ಪತ್ರಿಕೋದ್ಯಮ ಕಾರ್ಯವನ್ನು ಪ್ರಶಂಸಿಸಿ, ಕರ್ನಾಟಕದ ಏಕೀಕರಣದ ಇಂದಿನ ಅಭಿಪ್ರಾಯಕ್ಕೆ ತಾನು ಅನುಕೂಲನಾಗಿಲ್ಲವೆಂದೂ ಭಾರತವನ್ನು ಸಣ್ಣಸಣ್ಣದಾಗಿ ವಿಂಗಡಿಸುವುದು ಸರಿಯಲ್ಲವೆಂದೂ ಹೇಳಿ, ಕರ್ನಾಟಕವು, ದೇಶೀಯ ಸಂಸ್ಥಾನಗಳು ಉಳಿದವಾದರೆ ಮೈಸೂರೊಡನೆ ಸೇರಿಕೊಂಡು ಒಂದಾಗುವುದು ವಿಹಿತವೆಂದೂ ಅಭಿಪ್ರಾಯಪಟ್ಟರು. ಶ್ರೀ ಜಾರ್ಜ್ ಕರ್ಟಲಿಯರು ಕೃತಜ್ಞತೆ ಹೇಳಿದರು. ಆ ದಿನ ಮಂಗಳೂರಿಂದ ಉಡುಪಿಗೆ ತೆರಳಿದರು.

ಡಿಫೆನ್ಸ್ ಕಾನೂನು ಡಿಫೆನ್ಸ್ ಕಾನೂನಿನಂತೆ ಬಂಧಿತರಾದ ಶ್ರೀ ಸೀಲೇಶ್ವರ ಸುಬ್ರಹ್ಮಣ್ಯ ತಿರುಮಂಬು ಇವರಿಗೆ ಎರಡು ತಪ್ಪಿತಗಳಿಗಾಗಿ ಒಂದೊಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಚೆರ್ವತ್ತೂರಿನ ಶ್ರೀ ನಾರಾಯಣವಾರಿಯರಿಗೆ ಈ ಕಾನೂನಿನಂತೆ ಒಂದು ವರ್ಷ ಸಜೆ ವಿಧಿಸಲಾಗಿದೆ.

ಸೀಲೇಶ್ವರದ ಶ್ರೀ ಕೆ ಕುಂಜಿ ರಾಮನ್‌ರನ್ನು ಡಿಫೆನ್ಸ್ ಕಾನೂನಿನಂತೆ ಸೆರೆಹಿಡಿಯಲಾಗಿದೆ. ತಾ ೨೫ಕ್ಕೆ ಇವರ ವಿಚಾರಣೆಯಿದೆ.

ಕ್ರಿಕೆಟ್:—ಇಂಟರ್‌ಸ್ಕೂಲ್ ಜೂನಿಯರ್ ಕ್ರಿಕೆಟ್ ಪಂದ್ಯಾಟದ ಫೈನಲ್‌ನಲ್ಲಿ, ಕೆನರಾ ಹೈಸ್ಕೂಲಿನವರು ಗಣಪತಿ ಹೈಸ್ಕೂಲಿನವರನ್ನು ೬ ರನ್ನಿಗೆ ಗೆದ್ದರು.

ಹರಿಜನ ನಿವಾಸಕ್ಕೆ ಶ್ರೀ ಸತ್ಯಮೂರ್ತಿಗಳ ಆಗಮನ—ತಾ. ೧೮ರಂದು ಶ್ರೀ ಸತ್ಯಮೂರ್ತಿಗಳು ಡಾ. ಕಾರ್ನಾಡರವರ ಹರಿಜನನಿವಾಸವನ್ನು ಸಂದರ್ಶಿಸಿ ಹರಿಜನ ಮಕ್ಕಳಿಗೆ ಉಪದೇಶಕರ ಭಾಷಣವಿತ್ತರು. ಶ್ರೀ ಕಿಲ್ಲೆಯವರು ಭಾಷಣವನ್ನು ಭಾಷಾಂತರಿಸಿದರು.

ರಿಕ್ರೂಟಿಂಗ್ ಆಫೀಸರರು: ರೋಯಲ್ ಇಂಡಿಯನ್ ನೇವಿರಿಕ್ರೂಟಿಂಗ್ ಆಫೀಸರರು ಇಲ್ಲಿಂದ ೧೫೦ ಮಂದಿಯನ್ನು ನೌಕಾ ಪಡೆಗೆ ಸೇರಿಸಲು ನವಂಬರ ತಾ. ೪ರಿಂದ ೬ರ ತನಕ ಇಲ್ಲಿ ಬರಲಿರುವರು. ಮಹಮ್ಮದೀಯ ಹಾಗೂ ಕ್ರೈಸ್ತರನ್ನು ಸೇರಿಸಲಾಗುವುದು. ತಾಲೂಕು ಆಫೀಸಿನಲ್ಲಿ ರಿಕ್ರೂಟಿಂಗ್ ಕೆಲಸ ಆಗುವುದು ಎಂದು ಮರು ತಾ ತಹಶೀಲ್ದಾರರೂ ತಿಳಿಸುತ್ತಾರೆ.

ಸ್ವದೇಶೀ ಸ್ಟೋರ್ಸ್:— ಗಾಂಧಿ ಜಯಂತಿಯನ್ನು ಯಶಸ್ವಿಯಾಗಿ ಆಚರಿಸಿರುವರೆಂದೂ ಮಾತ್ರವಲ್ಲದೆ ಅನೇಕ ಖಾದಿಹುಂಡಿಗಳನ್ನು ಮಾರಾಟಮಾಡಿರುವರೆಂದೂ, ಎ. ಐ. ಎಸ್. ಎ.ಯಿಂದ ಅಧಿಕೃತರಾಗಿರುವರೆಂದೂ ಇದರ ಸಂಚಾಲಕರು ತಿಳಿಸುತ್ತಾರೆ.

ಶಿಕ್ಷಣಸಪ್ತಾಹ:—ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನವರು ಶಿಕ್ಷಣ ಸಪ್ತಾಹವನ್ನು ತಾ. ೨೧ರಿಂದ ಆರಂಭಿಸಿ ತಾ. ೨೬ರ ವರೆಗೆ ಜರಗಿಸಿದರು. ತಾ. ೨೧ರಲ್ಲು ಸೈ. ಎ. ಕಾಲೇಜಿನ ಎಳಕವು ಹಾಲಿನಲ್ಲಿ ಸಪ್ತಾಹದ ಉದ್ಘಾಟನೆ, ಶ್ರೀ ವೆಂಕಟರಾಯ ಬಾಳಿಗರಿಂದ, ತಾ. ೨೨ರಂದು ಗಣಪತಿ ಹೈಸ್ಕೂಲಲ್ಲಿ 'ನಿರಕ್ಷರತಾನಿವಾರಣೆ', ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಿಂದ ತಾ. ೨೪ರಂದು ಬಿ ಸಿ ಮಿಶನಿನಲ್ಲಿ ಹೆತ್ತವರ ದಿನಾಚರಣೆ ತಾ ೨೬ರಲ್ಲು ಕೆನರಾ ಹೈಸ್ಕೂಲಿನ ಆಟದ ಬಯಲಲ್ಲಿ ಸ್ಕೌಟ್ ಚಟುವಟಿಕೆಗಳ ಪ್ರದರ್ಶನ.

ಮಂಗಳೂರು ಮುನಿಸಿಪಾಲಿಟಿಯ ಮಾನಪತ್ರಕ್ಕೆ ಶ್ರೀ ಸತ್ಯಮೂರ್ತಿಗಳ ಉತ್ತರ:—ಮಂಗಳೂರು ಮುನ್ಸಿಪಾಲಿಟಿಯವರು ತಾ ೧೮ರಂದು ಮದ್ರಾಸಿನ ಮೇಯರರೂ, ರಾಷ್ಟ್ರಧುರೀಣರೂ ಆದ ಶ್ರೀ ಸತ್ಯಮೂರ್ತಿಗಳಿಗೆ ಒಂದು ಮಾನಪತ್ರವಿತ್ತರು. ಸಭೆಗೆ ಹಲವು ಗಣ್ಯ ಪುರಪ್ರಮುಖರು ಆಮಂತ್ರಿತರಾಗಿದ್ದರು. ಚ್ಯಾರ್‌ಮ್ಯಾನರಾದ ಶ್ರೀ ವೆಂಕಟರಾಯ ಬಾಳಿಗರು ಅವರಿಗೆ ಹೂಮಾಲೆ ಹಾಕಿ ಮಾನಪತ್ರವನ್ನೋದಿದರು. ಮಾನಪತ್ರದಲ್ಲಿ ಸತ್ಯಮೂರ್ತಿಗಳ ಸಾರ್ವಜನಿಕ ಸೇವೆ, ದೇಶಾಭಿಮಾನ ಮದ್ರಾಸಿನ ಮೇಯರರಾಗಿ ನಡೆಸಿದ ಚಟುವಟಿಕೆ ಇವುಗಳ ಬಗ್ಗೆ ತಮ್ಮ ಸಂತೋಷಸೂಚನೆಯಿತ್ತು.

ಆ ಮಾನಪತ್ರಕ್ಕೆ ಉತ್ತರವೀಯುತ್ತಾ ಶ್ರೀ ಸತ್ಯಮೂರ್ತಿಗಳು ತಾನು ಮಂಗಳೂರಿಗೆ ಹೊಸಬನಲ್ಲವೆಂದೂ ಮಂಗಳೂರು ಮದ್ರಾಸುಗಳಿಗೆ ಮಿತ್ರತ್ವವಿದೆಯೆಂದೂ, ಮದ್ರಾಸಿನ ಪ್ರಗತಿಗೆ ಮಂಗಳೂರಿನವರು ಸಹಾಯ ಮಾಡಿರುವರೆಂದೂ, ಮಂಗಳೂರು ಪರೀಕ್ಷೆಗಾಗಿ ಮದ್ರಾಸಿಗಿಂತ ಬಿಡುಗಡೆಯಾಗುವುದು. ತನಗೆ ವ್ಯಸನಕರವೆಂದೂ ನಾಡ್ತ ಒಟ್ಟಾಗಿಟ್ಟೆ ಕೆಂದೂ ಹೇಳಿ ಭಾಷಣವನ್ನು ಪ್ರಾರಂಭಿಸಿದರು.

ಬಳಿಕ ಹೀಗೆಂದರು: 'ನನ್ನ ದೇಶಸೇವೆಯ ಕರಿತು ನೀವು ಮೆಚ್ಚಿಗೆಯ ಮಾತುಗಳನ್ನು ಹೇಳಿದ್ದೀರಿ. ಗುಲಾಮ ದೇಶದಲ್ಲಿ ಸಾರ್ವಜನಿಕ ಸೇವೆ ಮಾಡುವವನಿಗೆ ತನ್ನ ಜನರ ಮೆಚ್ಚಿಗೆ ವಿಶ್ವಾಸವೇ ದೊಡ್ಡದು. ನಾನು ಪಾರ್ಲಿಮೆಂಟರಿ ರೀತಿಯ ಸರಕಾರದಲ್ಲಿ ನಂಬಿಕೆಯುಳ್ಳವನು. ಕೆಲವರು ಇದು ಪ್ರಯೋಜನವಿಲ್ಲವೆಂದು ಹೇಳುವರು. ನೀವು ನನ್ನ ಅಭಿಪ್ರಾಯದಂತೆ ಅಭಿಪ್ರಾಯಪಟ್ಟದ್ದಕ್ಕಾಗಿ ನನಗೆ ಸಂತೋಷ. ಯಾವುದೇ ದೇಶವಾದರೂ ಒಂದು ದಿನ ಮುಂಚಾನೆಯೆದ್ದು, ಶಾಸನಸಭೆಗಳನ್ನು ಮಂತ್ರಿಮಂಡಲಗಳನ್ನು ರಚಿಸುವುದು ಅಸಾಧ್ಯ. ಅದಕ್ಕಾಗಿ ನಾವಿಂದೇ ತಯಾರಿಮಾಡಬೇಕು. ಭಾರತವು ಸ್ವತಂತ್ರನಾಗಿಯೇ ಆಗುವುದು.

"ನಾನು ಮದ್ರಾಸಿನ ಮೇಯರನಾಗಿ ಕೆಲಸಮಾಡಿದುದನ್ನು ನೀವು ಪ್ರಶಂಸಿಸಿರುವಿರಿ. ನನ್ನ ಅವಧಿ ಈಗಾಗಲೇ ಮುಗಿಯುತ್ತಾ ಬಂತು. ಕೆಲಸಮಾಡಲು ಗೊತ್ತಿದ್ದವನಿಗೆ ಇಂತಹ ಅಧಿಕಾರ ಕೇವಲ ಒಂದೇ ವರ್ಷ ವಿದ್ದರೂ ಸಾಕು.

ನಿಮ್ಮ ನಗರದಲ್ಲಿ ಶುದ್ಧ ನೀರಿನ ಸರಬರಾಯಿಯಿಲ್ಲ, ರಸ್ತೆಗಳು ಧೂಳಿಂದ ಕೂಡಿವೆ, ಭೂಮಿಯೊಳಗಿನ ಚರಂಡಿಗಳಿಲ್ಲ ಇವು ಆಗಕ್ಕ ಆಗಬೇಕು. ಇದರ ಸಲುವಾಗಿ ಐಶ್ವರ್ಯವಂತರಿಗೆ ಸ್ವಲ್ಪ ತೆರಿಗೆ ಹೆಚ್ಚಿಸಬೇಕಾಗಬಹುದು. ಇದಕ್ಕೆ ಸರಕಾರವೂ ಸಹಾಯ ಮಾಡುವುದು.

ನೀವು ಇಲ್ಲಿ ಕಾಂಗ್ರೆಸ್ ಬಹುಮತವಿದ್ದೀರೆಂಬುದು ಸಂತೋಷ, ಕಾಂಗ್ರೆಸ್ ಪಕ್ಷದವರು ದೇಶದ ಹಿತದ ಸಲುವಾಗಿ ದುಡಿಯಬೇಕು, ಇತರ ಪಕ್ಷಗಳನ್ನು ಬದಿಗೊತ್ತಿ ತನ್ನ ಪಕ್ಷದ ಹಿತವನ್ನು ಕಾಂಗ್ರೆಸ್ ಪಕ್ಷವೇ ನೋಡಕೂಡದು"

ಹೆಜಮಾಡಿ—ಇಲ್ಲಿ ಹುಚ್ಚುನಾಯಿಗಳ ಕಾಟವು ವಿಶೇಷವಾಗಿದ್ದು ಈ ಕುರಿತು ಗ್ರಾಮಸ್ಥರು ಸಂಬಂಧ ಪಟ್ಟ ಮುಲ್ಕಿ ಪಂಚಾಯತ ಬೋರ್ಡಿಗೆ ಮನವಿ ಮಾಡಿದ್ದರಿಂದ ಬೋರ್ಡಿನವರು ಉದಾರ ಮನಸ್ಸಿನಿಂದ ಕೂಡಲೇ ತಿರುಗಾಡಿಗಳಾಗಿ ತಿರುಗುವ ನಾಯಿಗಳನ್ನು ಕೊಲ್ಲಿಸುವ ಏರ್ಪಾಡು ಮಾಡಿದುದು ತುಂಬಾ ಅಭಿನಂದನೀಯವಾಗಿರುತ್ತದೆ. ಇಂತಹ ನಾಯಿಗಳನ್ನು ತೀವ್ರವೇ ಕೊಲ್ಲಿಸಿ ಗ್ರಾಮಸ್ಥರನ್ನು ಈ ತರ ಕಷ್ಟದಿಂದ ಪಾರುಗಾಣಿಸ ಬೇಕಾಗಿ ಬಾಕಿ.

ಪೆರಡಾಲ

ಕೃಷಿಕಮಂಡಲಿಯ ಮಹಾಸಭೆ

ಪೆರಡಾಲ ಗ್ರಾಮದ ಕಾರ್ಯಾಲಯದಲ್ಲಿ ಕೂಡಿತು. ಕಾಸರಗೋಡಿನ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರವರು ತಮ್ಮ ಸಿಬಂದಿಯೊಡನೆ ಬಂದಿದ್ದರಲ್ಲದೆ ಬೇರೆ ಬೇರೆ ಗ್ರಾಮಗಳಿಂದ ಕೂಡಿ ಸುಮಾರು ೧೫೦ ಮಂದಿ ಕೃಷಿಕರು ನೆರೆದಿದ್ದರು. ಪೂರ್ವಾಹ್ನ ಕೃಷಿಕ ಮಂಡಲಿಯ ಉಪಯೋಗಾರ್ಥವಾಗಿ ಏರ್ಪಡಿಸಿದ ವಾಚನಾಲಯದ ಉದ್ಘಾಟನೆಯು ಮಹಾಜನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಿಂದ ನೆರವೇರಿಸಲ್ಪಟ್ಟಿತು. ಆಧುನಿಕ ರೀತಿಯಿಂದ ವ್ಯವಸಾಯ ಮಾಡಿದ ಕೃಷಿಕ್ಷೇತ್ರಗಳನ್ನು ಸಂದರ್ಶನ ಮಾಡಿ ಅಲ್ಲಲ್ಲಿ ಅಡಿಕೆಯ ಕೃಷಿಯಲ್ಲಿರುವ "ಕೊಳೆರೋಗ"ವನ್ನು ಈಚೆಗೆ ಕಂಡು ಹಿಡಿದ ಸುಧಾರಿತ ವಿಧಾನಗಳನ್ನೂ ವಿವರಿಸಿ ವಿವರಿಸಲಾಯಿತು. ಇವುಗಳಲ್ಲಿ ತೆಂಗು ಮತ್ತು ಕಂಗುಗಳಿಗೆ ಬರುವ ಕೆಲವು ಸಾಮಾನ್ಯ ರೋಗಗಳನ್ನು ಅವುಗಳ ಕಾರಣಗಳನ್ನೂ ಮತ್ತು ನಿವಾರಣೋಪಾಯಗಳನ್ನೂ ವಿವರಿಸಿ, ಕೆಲವು ರೋಗ ಹಿಡಿದ ಮರಗಳಿಗೆ ಅವುಗಳ ಚಿಕಿತ್ಸಾ ಕ್ರಮವನ್ನು ಪ್ರತ್ಯಕ್ಷವಾಗಿ ತೋರಿಸಲಾಯಿತು. ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರು ಕಬ್ಬಿಣದ ಹೊಸ ನಮೂನೆಯ ತರತರದ ನೇಗಿಲುಗಳನ್ನೂ, ದಂಡೆ ಮೊದಲಾದ ಯಂತ್ರಗಳನ್ನೂ ಜನರಿಗೆ ತೋರಿಸಿ ಅವರ ಮೇಸ್ತ್ರಿಯಿಂದ ಅವುಗಳ ಉಪಯೋಗ ಕ್ರಮವನ್ನು ಕೃಷಿಕರಿಗೆ ತೋರಿಸಿದರು. ಆ ಮೇಲೆ ಹಿಂಡಿಗೆಯ ಮರ ಬೀಜದ ಕೋರಿಗಳನ್ನೂ ಅವುಗಳ ಕೆಲವು ಸಂತತಿಗಳನ್ನೂ ಪ್ರದರ್ಶಿಸಲಾಯಿತು.

ಮಧ್ಯಾಹ್ನದ ನಂತರ ಸ್ಥಳೀಯ ಶ್ರೀ ಸಿ ಯಂ ವೆಂಕಟ್ರಮಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಿವಿಧ ವಿಷಯಗಳಲ್ಲಿ ಬೇರೆ ಬೇರೆ ಜನರಿಂದ ಭಾಷಣಗಳು ನಡೆದವು. ಕೊನೆಗಿನ ತೋಟಗಾರರಾದ ಶ್ರೀ ಸಿ ಯಂ ವೆಂಕಟ್ರಮಣಯ್ಯನವರು ಸಭೆಯಲ್ಲಿ ಎಗ್ರಿಕಲ್ಚರಲ್ ಇಲಾಖೆಯ ಕೆಲವು ಬೀಜಗಳನ್ನೂ ಮತ್ತು ಫಲಗಳನ್ನೂ ಹತ್ಯಾರುಗಳನ್ನೂ ಡೆಮೊನ್‌ಸ್ಟ್ರೇಟರವರು ಸಭಿಕರ ಮುಂದಿಟ್ಟು ಅವುಗಳ ಗುಣಗಳನ್ನು ವಿವರಿಸಿದರು.

ಕಾರ್ಕಳ

ಶ್ರೀ. ಸತ್ಯಮೂರ್ತಿಯವರಿಗೆ ಮಾನ ಪತ್ರ:—ಶ್ರೀ. ಯಸ್. ಸತ್ಯಮೂರ್ತಿಯವರು ತಾ. ೧೮ರ ದಿವ್ಸ ಬೆಳಿಗ್ಗೆ ಇಲ್ಲಿಗೆ ಚಿತ್ತೈಸಿದ್ದರು. ಅವರಿಗೆ ಸಾರ್ವಜನಿಕ ಪ್ರಭಸ್ತೆಯಲ್ಲಿ ಸ್ಥಳೀಯ ಪಂಚಾಯತ ಬೋರ್ಡಿನ ಕಡೆಯಿಂದ ಅದರ ಅಧ್ಯಕ್ಷ ಜನಾಬ್. ಯಚ್. ಯಸ್. ಜಸ್ಟೀಸರವರು ಮಾನ ಪತ್ರವನ್ನು ಸಮರ್ಪಿಸಿದರು. ಶ್ರೀ. ಸತ್ಯಮೂರ್ತಿಯವರು ಭಾಷಣ ಮಾಡುತ್ತ ಈಗ ಮುಖ್ಯ ಹಿಂದುಸ್ತಾನವು ಸ್ವತಂತ್ರವಾದಾಗಲೂ ಪಂಚಾಯತುಗಳಿಗೆ ಇರುವ ಸ್ಥಾನಮಾನ ಮಹತ್ವ ಅವು ನಿರ್ವಹಿಸಬೇಕಾದ ಕೆಲಸ ಜನರು ಅವುಗಳಿಗೆ ಕೊಡಬೇಕಾದ ಸಹಾಯ ಸಹಕಾರಗಳ ಕುರಿತು ವಿವರಿಸಿದರು.

ಯುದ್ಧ ಸಹಾಯದ ಸೋಡ್ತಿ:—ಇಲ್ಲಿಯ ಯುದ್ಧ ಸಹಾಯ ಸಮಿತಿಯವರು ಏರ್ಪಡಿಸಿದ ಸೋಡ್ತಿಯು ತಾ ೧೩—೧೦—೪೦ರ ದಿನ ಕುಂದಾಪುರದ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಡೆದು ನಂಬ್ರ ೪೨, ೩೩೮, ೨೫೪೯, ೫೨೮ ಮತ್ತು ೪೯೬ನೆಯವರಿಗೆ ಕ್ರಮವಾಗಿ ಮೊದಲಿನ ಐದು ಬಹುಮಾನಗಳು ಬಂದಿರುವುವು. ಇತರ ಬೇರೆ ೫೦ ಬಹುಮಾನಗಳೂ ಇವೆ. ಅವೆಲ್ಲವನ್ನು ತಾ ೨೮—೧೦—೪೦ರ ದಿನ ಕೊಡುವರು. ಈ ಸೋಡ್ತಿಯಿಂದ ಖರ್ಚು ಕಳೆದು ಸುಮಾರು ೯೦೦ ರೂಪಾಯಿಗಳು ಇಲ್ಲಿಂದ ಯುದ್ಧ ಸಹಾಯಕ್ಕೆ ಪ್ರಾಪ್ತವಾಗಿದೆ.

ಉಡುಪಿ.

ಉಡುಪಿಯಲ್ಲಿ ಸತ್ಯಮೂರ್ತಿಗಳು:—ತಾ. ೧೮ಕ್ಕೆ ಶ್ರೀ ಸತ್ಯಮೂರ್ತಿಗಳು ಉಡುಪಿಗೆ ಚಿತ್ತೈಸಿದರು. ಮುನ್ಸಿಪಾಲಿಟಿಯ ಉಪಹಾರ ಸತ್ಕಾರವಾಗಿ ಹೊಸ ಮುನ್ಸಿಪಲ್ ಮಂದಿರದ ಶಂಕುಸ್ಥಾಪನೆ ಅವರಿಂದ ನೆರವೇರಿತು. ಆ ಮೇಲೆ ಶ್ರೀ ಕೃಷ್ಣ ಸಂದರ್ಶನವಾಗಿ, ಉಡುಪಿ ಕ್ಲಬ್ಬಿನಲ್ಲಿ ಉಪಹಾರವಾಗಿ ಅಜ್ಜರಕಾಡಿನ ಮಹಾಸಭೆಯಲ್ಲಿ ಮುನ್ಸಿಪಲ್ ಚ್ಯಾರ್‌ಮ್ಯಾನರ ಮಾನಪತ್ರವನ್ನು ಸ್ವೀಕರಿಸಿ ಡಾ ಯು ಎಲ್ ನಾರಾಯಣರಾಯರು ಸಮರ್ಪಿಸಿದ ಧ್ವನಿವಾಹಕ ಯಂತ್ರದ ಉದ್ಘಾಟನೆ ನೆರವೇರಿಸಿದರು. ಇಂದಿನ ರಾಜಕೀಯ ಪರಿಸ್ಥಿತಿಯ ಕುರಿತು ಒಂದು ಉದಾತ್ತ ಭಾಷಣವಿತ್ತರು. ಆ ಮೇಲೆ ಅಜ್ಜರಕಾಡು ಆಟದ ಮೈದಾನಿನಲ್ಲಿ ಶ್ರೀ ಅಂದ್ರಾದೆಯವರು ಕಟ್ಟಿಸಲಿರುವ ಪ್ರೇಕ್ಷಕ ಭವನದ ಶಂಕುಸ್ಥಾಪನೆ ಮಾಡಿದರು. ಆ ದಿನ ರಾತ್ರಿಯೇ ಮಂಗಳೂರಿಗೆ ಮರಳಿಬಂದರು.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ. 207/39

R. E. P. 643/1940

1. ವಾದಿ- ಸದರ್ನ ಲೆಂಡ್ ಟ್ರಸ್ಟ್ ಲಿಮಿಟೆಡ್ ಯಿದರ ರಿಜಿಸ್ಟರ್ಡ್ ಆಫೀಸ ಮಂಗಳೂರು. ಅದರ ಮೇನೇಜರ್ ಶ್ರೀ ಕೆ ಮಾಧವಪ್ಪಾಳ ಮಂಗಳೂರು ಕಚೇರಿಯಲ್ಲಿರುವವರು.

2. ಪ್ರತಿವಾದಿಗಳು—ದುರ್ಗಮ್ಮ ಯಾನೆ ... ಕ್ಯಾನುಭೋಗರ ವಿಧವೆ, ಕುಂದಾಪುರದ ... ಯಾನೆ ... ಗ್ರಾಮದಲ್ಲಿರುವವರು.

3 ಸದ್ರಿ ಡಿಕ್ರಿಯಲ್ಲಿ ಜವಾಬ್ದಾರಿ ಯಿರುವ ಆಸ್ತಿಗಳನ್ನು ಏಲಂ ಬಗ್ಗೆ ಯೇಲಂ ಯಿಸ್ತಿಹಾರು ಜಾಬ್ತುವಿನ್ನ ಸದ್ರಿ ಯೇಲಂ ಯಿಸ್ತಿಹಾರಿನ ಶರತುಗಳನ್ನು ನಿರ್ಣಯಿಸುವದಕ್ಕೆ ತಾರೀಕು 1-11-40ಕ್ಕೆ ಕಚ್ಚಿಗೆ ಯಿಟ್ಟಿದೆ. ಆ ತಾರೀಕು ಪ್ರತಿವಾದಿ ಯದ್ವಾಕೆ ಸದ್ರಿ ತಾರೀಕಿಗೆ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಹೇಳತಕ್ಕದ್ದು. ಯಿದ್ದು ತಪ್ಪಿದರೆ ಸದ್ರಿ ಅಮ್ಲುಜಾರಿಯಲ್ಲಿ ಸದ್ರಿ ಪ್ರತಿವಾದಿಯನ್ನು ಯೆಕ್ಸಪಾರ್ಟಿಯಾಗಿ ... ಸದ್ರಿ ಅಮ್ಲುಜಾರಿಯಲ್ಲಿ ಮುಂದಿನ ಕ್ರಮ ಆಗುತ್ತ ಹೋಗುವದು.

ತಾ. 18-10-40] R. Raghavendra Pai.
ಡಿಸ್ಟ್ರಿಕ್ಟ ಕುಂದಾಪುರ] ವಾದಿಯ ಪರ ವಕೀಲ

ಬರ್ಮಾ ದಾರಿಗೆ ಜಪಾನೀಯರು ಬಾಂಬೆಸೆದರು!

ಮಕ್ಕಾ ಪಟ್ಟಣದ ಮೇಲೆ ಇಟಲಿ ವಿಮಾನದಾಳಿ

ಮಾಸ್ಕೋ ನಗರದಲ್ಲಿ ಮಾತುಕತೆ ಲಂಡನಿನಿಂದ ಸರಕಾರ ಹೋಗುವುದಿಲ್ಲ

ರೂಸ್‌ವೆಲ್ಟರು ತಿರಿಗಿ ಅಧ್ಯಕ್ಷರಾಗುವರೆ?



ಈ ವಾರದಲ್ಲಿಯೂ ಯುರೋಪಿನಲ್ಲಿ ಹೆಚ್ಚಿನ ಪ್ರಚಂಡ ಕಾಳಗವು ನಡೆದಿಲ್ಲ. ಹಿಟ್ಲರನು ಇಂಗ್ಲೆಂಡನ್ನು ಆಕ್ರಮಿಸುವ ಯತ್ನವು ಅಸಾಧ್ಯವೆಂದು ದೂರ ಸರಿದು ನಿಂತಂತೆ ತೋರುತ್ತದೆ. ಆಗಾಗ ಬಮ್ಮೊಮ್ಮೆ ಲಂಡನಿಗೆ ದಾಳಿಯಾಗುತ್ತಿದೆ. ಆತನ ಚಟುವಟಿಕೆಗಳು ಬೇರೆ ಕಡೆಗೆ ಹರಿದಿವೆ.

ರುಮೇನಿಯ ವಶವಾಯಿತು

ಹಿಟ್ಲರನು ರುಮೇನಿಯವನ್ನು ವಶಪಡಿಸಿಕೊಂಡನು. ಇದರಿಂದ ಜರ್ಮನಿಗೆ ಅಪಾರ ಎಣ್ಣೆಯು ದೊರೆತಂತಾಯಿತು. ರುಮೇನಿಯವನ್ನು ವಶಪಡಿಸಿಕೊಂಡ ಮೇಲೆ ಮುಂದೆ ಬಲ್ಗೇರಿಯದ ಕಡೆಗೂ ಆತನ ದೃಷ್ಟಿ ಹರಿದಿದೆಯೆಂದು ಸುದ್ದಿಗಳು ಬರಹತ್ತಿವೆ.

ಇಟಲಿಯ ಆಫ್ರಿಕಾ ಯುದ್ಧ

ಇಟಲಿಯು ಆಫ್ರಿಕಾದಲ್ಲಿ ತೀವ್ರ ಕಾದಾಡುತ್ತಿದೆ. ಇಜಿಪ್ತಿಗೆ ಬಾಂಬಿನ ಸುರಿಮಳೆ ಸುರಿಸುತ್ತಿದೆ. ಮುಸಲ್ಮಾನರ ಪುಣ್ಯಕ್ಷೇತ್ರ ಮಕ್ಕಾ ನಗರದ ಮೇಲೆ ಇಟಲಿಯನ್ ವಿಮಾನ ದಾಳಿ ನಡೆದಿದೆಯೆಂಬ ವರ್ತಮಾನವಿದೆ.

ಜಪಾನಿನ ಚಟುವಟಿಕೆ

ಅತ್ತ ಜಪಾನೂ ಚಟುವಟಿಕೆ ನಡೆಸುತ್ತಿದೆ. ಬರ್ಮಾ ಮಾರ್ಗವನ್ನು ತೆರೆದ ಬಗ್ಗೆ ಅದಕ್ಕೆ ಅತೃಪ್ತಿಯಿರುವುದು ಸಹಜವಷ್ಟೆ? ಬರ್ಮಾ ಮಾರ್ಗದ ಮೇಲೆ ಜಪಾನು ವೈಮಾನಿಕರು ಬಾಂಬೆಸೆದಿರುವರೆಂದು ತಿಳಿದಿದೆ. ಸೇತುವೆಯೊಂದು ಅದರಿಂದ ಮುರಿದುಹೋಗಿದೆಯೆಂತೆ.

ಜಪಾನೀಯರು ಯುನಾನ ಪ್ರಾಂತಕ್ಕೂ ಆಕ್ರಮಣ ಮಾಡಲು ದಂಡು ಹೊರಡಿಸಿರುವರೆಂದು ಸುದ್ದಿ.

ಮಾಸ್ಕೋದಲ್ಲಿ ಮಾತುಕತೆ

ರಶ್ಯವು ಮುಂದೆ ಏನು ಮಾಡುತ್ತಿದೆಯೆಂಬ ಕುರಿತು ಯಾರಿಗೂ ಏನೆಂದೂ ನಿರ್ಧಾರ ಹೇಳಬರುವುದಿಲ್ಲ. ರಶ್ಯನ್ ವಿದೇಶೀ ಮಂತ್ರಿ ಮೊಲೊಟೋವರು ಅನೇಕ ದೇಶಗಳ ರಾಯಭಾರಿಗಳನ್ನು ಮಾಸ್ಕೋಗೆ ಬರಮಾಡಿ ಅವರೊಡನೆ ಮಾತುಕತೆ ನಡೆಸಿದರು.

ಪಾರ್ಲಿಮೆಂಟಿನ ಜೀವದಾನ

ಪಾರ್ಲಿಮೆಂಟಿನ ಹಿಂದಿನ ಅವಧಿಯು ಬೇಗನೇ ಮುಗಿಯಲಿರುವುದರಿಂದ, ಈಗ ತಿರಿಗಿ ಚುನಾವಣೆ ಮಾಡುವುದು ಬೇಡವೆಂದು, ಹೌಸ್ ಒಫ್ ಕಾಮನ್ಸಿನಲ್ಲಿ ಪ್ರಧಾನ ಮಂತ್ರಿ ಚರ್ಚಿಲ್ಲರು ಒಂದು ನಿರ್ಣಯವನ್ನು ತಂದರು. ಒಂದು ವರ್ಷದ ಮಟ್ಟಿಗೆ ತಿರಿಗಿ ಪಾರ್ಲಿಮೆಂಟಿಗೆ ಜೀವದಾನ ಮಾಡಲಾಯಿತು. ಕಳೆದ ಯುದ್ಧದ ಕಾಲದಲ್ಲಿಯೂ ಪಾರ್ಲಿಮೆಂಟಿನ ಅವಧಿಯನ್ನು ಹೆಚ್ಚಿಸಲಾಗಿತ್ತು.

ಲಂಡನಿನಿಂದ ಸರಕಾರ ಹೋಗುವುದಿಲ್ಲ

ಸರಕಾರವನ್ನು ಲಂಡನಿನಿಂದ ಬೇರೆ ಕಡೆಗೆ ಒಯ್ಯುವುದಿಲ್ಲವಾಗಿ ತಿಳಿದಿದೆ. ಆದರೆ ಇಷ್ಟವಿದ್ದವರು ಲಂಡನ್ ಬಿಟ್ಟು ತೆರಳಬಹುದಂತೆ. ಅಂದರೆ, ಕೆಲವರು ಲಂಡನಿನಿಂದ ಸರಕಾರವನ್ನು ತೆಗೆದು ಎಲ್ಲರೂ ಬೇರೆ ಕಡೆಗೆ ಹೋಗಬೇಕೆಂಬ ಆತುರ ತೋರಿಸಿದ್ದರಂತೆ.

ಆಫ್ರಿಕ ಯುದ್ಧ

ಆಫ್ರಿಕದಲ್ಲಿ ಇಟಲಿಯವರು ಯುದ್ಧ ಮಾಡುತಿದ್ದಾರೆ. ಒಂದು ಕುಟುಂಬ ಯಾತ್ರೆ ಮಾಡುತಿದ್ದ ಟ್ರೈನಿನ ಮೇಲೆ ಅವರು ಬಾಂಬೆಸೆದರು.

ಎಡಿಸ್ ಅಬಾಬಾ ಜಿಬೂಟ್ ಲೈನಿನಲ್ಲಿಯೂ ಶತ್ರುಗಳು ಇಳಿವ ನಿಲ್ದಾಣದ ಮೇಲೂ, ಡೆರ್ನಾ ಮಿಲಿಟರಿ ಕ್ಷೇತ್ರದ ಮೇಲೂ ಇಂಗ್ಲಿಷರು ಬಾಂಬೆಸೆದರು.

ಕಾಲುವೆಯಲ್ಲಿ ಯುದ್ಧ

ಜರ್ಮನ್ ಮತ್ತು ಬ್ರಿಟಿಷ್ ನೌಕಾ ಬಲದವರಿಗೆ ಬ್ರಿಟಿಷ್ ಜಲಕಾಲುವೆಯಲ್ಲಿ ಯುದ್ಧ ನಡೆಯಿತು.

ಮೊಸ್ಕೋವಿನಲ್ಲಿ ಮಾತುಕತೆಗಳು

ರಶ್ಯನ್ ವಿದೇಶೀ ಮಂತ್ರಿಗಳಾದ ಮೊಲೊಟೋವರು ಮಾಸ್ಕೋ ನಗರದಲ್ಲಿ ಜಪಾನ್, ಟರ್ಕಿ, ಚೀನೀ ಮತ್ತು ಜರ್ಮನ್ ರಾಯಭಾರಿಗಳನ್ನು ಬರಮಾಡಿ ಮಾತುಕತೆ ನಡೆಸಿದರು.

ಚೀನಕ್ಕೆ ಅಮೇರಿಕದ ಸಾಲ

ಅಮೇರಿಕದವರು ಇದುವರೆಗೆ ಚೀನಕ್ಕೆ ಕೊಟ್ಟ ಸಾಲವು ೮೫ ಮಿಲಿಯ ಡಾಲರುಗಳು. ಇನ್ನೂ ೫೦ ಮಿಲಿಯ ಡಾಲರುಗಳನ್ನು ಕೊಡಲು ನಿಶ್ಚಯಮಾಡಿರುವರಂತೆ.

ರಶ್ಯ-ಜಪಾನ್

ಇವುಗಳೊಳಗೆ ಪರಸ್ಪರ ಕಲಹ ನಿವಾರಣೆಯ ಒಂದು ಒಪ್ಪಂದವಾಗಬಹುದೆಂದು ಪೂರ್ವದೇಶದಲ್ಲಿ ಊಹಿಸಲಾಗಿದೆ.

ಬ್ರಿಟನಿನಲ್ಲಿ ಹಾನಿ

ಕಳೆದ ಸೆಪ್ಟೆಂಬರ ತಿಂಗಳಲ್ಲಿ ಬ್ರಿಟನಿನಲ್ಲಿ ಜರ್ಮನ್ ಬಾಂಬುಗಳಿಂದ ಸತ್ತವರು ೬೯೫೪ ಮಂದಿ; ಕಠಿಣ ಗಾಯವಾದವರು ೧೦,೬೫೦ ಮಂದಿ; ಮೃತರಲ್ಲಿ ಅರ್ಧದಷ್ಟು ಬ್ರಿಟಿಷ್ ಹೆಂಗುಸರೆಂದು ತಿಳಿದುಬಂದಿದೆ.

ಏಡನರು

ಬ್ರಿಟನಿನ ಯುದ್ಧಶಾಖೆಯ ಮಂತ್ರಿಗಳಾದ ಏಡನರು ಈಜಿಪ್ಟಿನಲ್ಲಿ ಅದರ ಅರಸು ಫರೋಕರನ್ನೂ, ಇತರ ಹಲವು ರಾಜಕೀಯ ಮುಖಂಡರನ್ನೂ ಕಂಡು ಮಾತನಾಡಿದರು.

ಜರ್ಮನ್ ಮಕ್ಕಳು

೨ ಲಕ್ಷ ಜರ್ಮನ್ ಮಕ್ಕಳನ್ನು ರುಮೇನಿಯಕ್ಕೆ ಸಾಗಿಸುವ ಏರ್ಪಾಡು ಆಗಿದೆಯೆಂದು ತಿಳಿದಿದೆ.

ಜಪಾನಿಯರಿಗೆ ಬಂಗಾರದ ಗನಿ

ಹೊಕ್ಕೈಡೋವಿನಲ್ಲಿ ಜಪಾನಿಯರಿಗೆ ಒಂದು ಬಂಗಾರದ ಗನಿಯು ಸಿಕ್ಕಿದೆಯೆಂದು ತಿಳಿದುಬಂದಿದೆ. ಇಲ್ಲಿ ಬೆಳ್ಳಿ ತಾಮ್ರ ಮೊದಲಾದ ಇತರ ಲೋಹಗಳೂ ಧಾರಾಳ ಇವೆ.

ಬರ್ಮಾ ರಸ್ತೆಗೆ ಬಾಂಬು

ಬರ್ಮಾ ರಸ್ತೆಗೆ ಜಪಾನಿಯರು ಬಾಂಬು ಮಾಡಿದರೆಂದು ತಿಳಿದಿದೆ. ಬಾಂಬಿನಿಂದ ಸೇತುವೆಯೊಂದು ಮುರಿದಿದೆಯಾಗಿಯೂ ತಿಳಿದಿದೆ. ಸಾಮಾನು ತುಂಬಿ ಸಾಗುತಿದ್ದ ೬೦೦ ಲಾರಿಗಳಿಗೆ ಪೆಟ್ಟಾದುದು ತಿಳಿದಿಲ್ಲ.

ಬರ್ಮಾ ರಸ್ತೆ ತೆರೆಯಲ್ಪಟ್ಟಿತು

ಜಪಾನು ಯುದ್ಧಕ್ಕಿಳಿವುದಿಲ್ಲವಂತೆ

ತಾ. ೧೭ರಂದು ಮೊದಲು ಪ್ರಕಟ ಮಾಡಿದಂತೆ ನಾಲ್ಕು ತಿಂಗಳ ಹಿಂದೆ ಮುಚ್ಚಿದ ಬರ್ಮಾ ರಸ್ತೆಯು ತಿರಿಗಿ ತೆರೆಯಲ್ಪಟ್ಟಿತು. ನೂರಾರು ಲೋರಿಗಳು ಚೀನೀಯರಿಗೆ ಅವಶ್ಯವಾಗಿರುವ ಯುದ್ಧಸಾಮಗ್ರಿಗಳನ್ನು ತುಂಬಿಕೊಂಡು ಮೊದಲೇ ಕಾದುನಿಂತಿದ್ದವು. ರಂಗೂನಿನಿಂದ ಮೈಲ್ ಗಾಡಿಯೊಂದು ಚೀನಕ್ಕೆ ತುಂಬಾ ಸಾಮಗ್ರಿಗಳನ್ನು ತಂದು ನಿಂತಿತ್ತು.

ಜಪಾನಿನ ಅಭಿಪ್ರಾಯ

ಈ ಕುರಿತು ಜಪಾನ್ ಮಂತ್ರಿಮಂಡಳದಲ್ಲಿ ವಿಚಾರ ಮಾಡಲಾಯಿತೆಂದು ತಿಳಿದುಬರುತ್ತದೆ. ಬರ್ಲಿನ್ ಒಪ್ಪಂದ ಆದ ಕೂಡಲೇ ಹೀಗೆ ಆಗಬಹುದೆಂದು ಜಪಾನೂ ತರ್ಕಿಸಿತ್ತಂತೆ. ಆದರೆ ಇದರಿಂದ ಬ್ರಿಟನು ಜಪಾನಿಗೆ ಯುದ್ಧಕ್ಕೆ ಬರಲು ಆಹ್ವಾನ ಕೊಟ್ಟಂತಾಯಿತೆಂದು ಜಪಾನೀ ಪತ್ರಿಕೆಯೊಂದು ಬರೆಯುತ್ತದೆ. ಏನೇ ಇದ್ದರೂ ಜಪಾನು ಈ ಯುದ್ಧಕ್ಕೆ ಸೇರುವುದಿಲ್ಲವೆಂದು ತಿಳಿಯಲಾಗಿದೆ.

ರೂಸ್‌ವೆಲ್ಟರು ಈ ಸಲವೂ ಅಧ್ಯಕ್ಷರಾಗುವರು

ಸುದ್ದಿಗಾರನ ಭವಿಷ್ಯ

ರೂಸ್‌ವೆಲ್ಟರು.

ನವಂಬರ ೫ರಂದು ನಡೆಯುವ ಚುನಾವಣೆಯಲ್ಲಿ ಅಮೇರಿಕದ ಇಂದಿನ ಅಧ್ಯಕ್ಷ ರೂಸ್‌ವೆಲ್ಟರು ತನ್ನ ಪ್ರತಿಸ್ಪರ್ಧಿ ವೆಂಡಿಲ್ ವಿಲ್ಕಿಯವರಿಗಿಂತ ಇಮ್ಮಡಿ ಮತಗಳನ್ನು ಪಡೆದು ಜಯಶಾಲಿಗಳಾಗುವರೆಂದು ರಾಯಿಟರ್ ಸುದ್ದಿಗಾರನ ಭವಿಷ್ಯವಾಗಿದೆ.

ಅಮೇರಿಕ ನಿಷೇಧಿಸಬಹುದು

ಅರೇಬಿಯದ ಮೇಲೆ ಇಟಲಿಯನ್ ದಾಳಿ ನಡೆದ ವಿಚಾರವಾಗಿ ಅಮೇರಿಕವು ತನ್ನ ನಿಷೇಧವನ್ನು ಪ್ರಕಟಮಾಡುವುದಾಗಿ ತಿಳಿಯುತ್ತದೆ.

ಸರ್ವಾಧಿಕಾರಿಗಳನ್ನು ಸಮಾಧಾನಗೊಳಿಸಲು ಸಾಧ್ಯವಿಲ್ಲ

ಅಮೇರಿಕನ್ ರಾಯಭಾರಿ ಹೇಳಿಕೆ.

ಫ್ರಾನ್ಸಿನಲ್ಲಿದ್ದ ಅಮೇರಿಕನ್ ರಾಯಭಾರಿಯು ಇಂದಿನ ಪರಿಸ್ಥಿತಿಗಳನ್ನು ವಿಚಾರಿಸಿದಲ್ಲಿ ಯಾವ ವಿಧದಲ್ಲಿಯೂ ಸರ್ವಾಧಿಕಾರಿಗಳನ್ನು ಶಾಂತಗೊಳಿಸಲು ಸಾಧ್ಯವಿಲ್ಲವೆಂದು ಕಂಡುಬರುವುದರಿಂದ ಆ ಯತ್ನಕ್ಕೆ ನಾವು ಹೋಗುವುದಿಲ್ಲ" ಎಂದಿರುವನು.

ಬರ್ಲಿನಿನ ಮೇಲೆ ದಾಳಿ

ಬ್ರಿಟಿಷ್ ವೈಮಾನಿಕರು ಎರಡು ಸಲ ಬರ್ಲಿನಿನ ಮೇಲೆ ತೀವ್ರ ದಾಳಿ ನಡೆಸಿದರು.

ಕೈರೋ ಪ್ರದೇಶದಲ್ಲಿ ಬಾಂಬುಗಳು

ಕೈರೋ ಪ್ರದೇಶದಲ್ಲಿ ಬಾಂಬುಗಳನ್ನೆಸೆದು ಹಾನಿಗಳೊದಗಿವೆ. ಹೆಚ್ಚಿನ ಜೀವಹಾನಿಯೊದಗಲಿಲ್ಲ.

ಅನೇಕ ಇಟಲಿಯನ್ ವಿಮಾನಗಳನ್ನು ಬ್ರಿಟಿಷ್ ವೈಮಾನಿಕದಳದವರು ಎದುರಿಸಿ ಹೋರಾಡಿರುವರು. ಬ್ರಿಟಿಷ್ ವೈಮಾನಿಕದಳದವರು ಅಡಿಸ್ ಅಬಾಬಾ ಲೈನಿಗೆ ದಾಳಿಯಿಟ್ಟರು.

ಯುನಾನ್ ಪ್ರಾಂತಕ್ಕೆ ಜಪಾನ್ಯ ಸೈನ್ಯ

ಯುನಾನ್ ಪ್ರಾಂತವನ್ನು ಆಕ್ರಮಿಸಲು ಜಪಾನು ಸೈನ್ಯವು ತೆರಳಿದೆಯೆಂದು ಗೊತ್ತಾಗಿದೆ.

ಮುಸಲನಿ ಮಾತು ಮುರಿದ

ಸ್ವಿಜಿ ಜಾಸಿನ್ನಲ್ಲಿ ಮುಸಲ್ಮಾನರ ರಾಷ್ಟ್ರಕ್ಕೆ ದಾಳಿಮಾಡುವುದಿಲ್ಲವೆಂದು ಮುಸಲನಿ ಹೇಳಿದ್ದರೂ ಈಗ ಸೌದಿ ಅರೇಬಿಯದ ಮೇಲೆ ಬಾಂಬಿನ ಸುರಿಮಳೆ ಸುರಿಸಿರುವುದಾಗಿ ತಿಳಿದಿದೆ. ಮಕ್ಕಾ ಪಟ್ಟಣಕ್ಕೂ ಬಾಂಬು ಬಿದ್ದಿದೆಯೆಂದು ಸುದ್ದಿ.

ಹಿಂದೂಸ್ಥಾನ

ಈ ವಾರದಲ್ಲಿ ಭಾರತದ ರಾಜಕೀಯ ವಾತಾವರಣದಲ್ಲಿ ವಿಶೇಷ ಬದಲಾವಣೆಗಳುಂಟಾಗಿವೆ. ಮಹಾತ್ಮಾಜಿಯವರ ಸೂಚನೆಯಂತೆ ಈ ಸಲದ ಸತ್ಯಾಗ್ರಹದ ಮೊದಲನೆಯ ಸೇನಾಪತಿಯಾಗಿ ಶ್ರೀ. ವಿನೋಬಾ ಬಾವೆಯವರು ತಾ. ೧೭, ೧೮, ೧೯ರಲ್ಲಿ ವರ್ಧಾದ ಪವನೂರು, ಸರ್ಜನ್ ಸೇಲೂ ಎಂಬಲ್ಲಿ ಮೂರು ಭಾಷಣಗಳನ್ನು ಮಾಡಿದರು. ಅವರ ಭಾಷಣವು ಯುದ್ಧ ವಿರೋಧಕರವಾಗಿತ್ತು.

ವಿನೋಬರ ಬಂಧನ

ಯುದ್ಧ ವಿರೋಧಕರವಾದ ಭಾಷಣವಿತ್ತ ಬಗ್ಗೆ ಅವರನ್ನು ಬಂಧಿಸಲಾಗಿದೆ. ಅವರ ಮೇಲೆ ಮೂರು ಆರೋಪಗಳಿದ್ದು ಪ್ರತಿಯೊಂದು ಆರೋಪಕ್ಕೂ ಮೂರು ಮೂರು ತಿಂಗಳ ಶಿಕ್ಷೆಯು ವಿಧಿಸಲಾಗಿದೆ.

ವಿನೋಬಾರವರು ಶಿಕ್ಷೆಗೆ ಗುರಿಯಾದುದು ... ಮೂರನೆಯ



ವಿನೋಬಾಬಾವೆ ಬಂಧಿತರಾದರು!

ಗಾಂಧಿಜಿ ೨೪ ಜನರನ್ನು ಆರಿಸಿರುವರಂತೆ.

ಅಶಾಂತರಾಗಬೇಡಿರಿ ಗಾಂಧಿಜಿಯವರ ಹೇಳಿಕೆ

ಬೊಂಬಾಯಿಯಲ್ಲಿ ಬಿರುಗಾಳಿಯ ಅವಾಂತರ!

ಸಲವಾಗಿದೆ. ಮೊದಲು ೧೯೨೩ರ ನಾಗಪುರ ಧ್ವಜ ಸತ್ಯಾಗ್ರಹದಲ್ಲಿ, ಎರಡನೆಯದು ೧೯೩೨ರ ವೈಯುಕ್ತಿಕ ಸತ್ಯಾಗ್ರಹದಲ್ಲಿ.

೨೪-ಮಂದಿಯನ್ನು ಆರಿಸಿರುವರು

ಗಾಂಧಿಜಿಯವರು ವಿನೋಬಾರ ನಂತರ ೨೪ ಮಂದಿಯನ್ನು ಅಹಿಂಸೆಯಲ್ಲಿ ಅಚಲ ವಿಶ್ವಾಸವುಳ್ಳಂತವರನ್ನೇ ಆರಿಸಿರುವರೆಂದು ಸುದ್ದಿ. ಇವರ ಪೈಕಿ ಇಬ್ಬರು ಮಹಿಳೆಯರಾಗಿರುವರೆಂದೂ ವರ್ತಮಾನವಿದೆ

ಗಾಂಧಿಜಿ ಸೆರೆಮನೆಗೆ ಹೋಗುವುದಿಲ್ಲ

ಈ ಸಲದ ಸತ್ಯಾಗ್ರಹದಲ್ಲಿ ಗಾಂಧಿಜಿ ಸೆರೆಮನೆಗೆ ಹೋಗುವುದಿಲ್ಲವೆಂದು ಅವರೇ ಹೇಳಿರುವರು. ತಾನು ಹೋದರೆ, ಜನರೆಲ್ಲರೂ ನನ್ನನ್ನು ಹಿಂಬಾಲಿಸಿ ಸೆರೆಮನೆಗೆ ಹೋಗಬಹುದಾದುದರಿಂದ, ಹಾಗೆ ಮಾಡಿದರೆ, ಸರಕಾರಕ್ಕೆ ತೊಂದರೆ ಕೊಟ್ಟಂತಾಗುವುದರಿಂದ ತಾನು ಹಿಂದುಳಿದು ಸರ್ವರನ್ನೂ ಸುವ್ಯವಸ್ಥೆಗೊಳಿಸುವುದಾಗಿ ಅವರ ಹೇಳಿಕೆ. ವರ್ಕಿಂಗ್ ಕಮಿಟಿಯ ಸದಸ್ಯರೂ ಸತ್ಯಾಗ್ರಹಿಗಳಾಗಿ ಕಳುಹಿಸಲ್ಪಡುವುದಿಲ್ಲವಂತೆ.

ಮುಂದಿನ ಹೆಜ್ಜೆ ಗಾಂಧಿಜಿಯವರ ಹೇಳಿಕೆ

ಅಶಾಂತರಾಗಬೇಡಿರಿ.

"ವಿನೋಬಾವೆಯವರನ್ನು ಸೆರೆಮನೆಗೊಯ್ದು ವಿಚಾರವು ಮೊದಲಾಗಿಯೇ ಆಲೋಚನೆ ಮಾಡಿದ್ದೇ ಮುಂದಿನ ವಿಚಾರ ಮಾಡುತ್ತಿದ್ದೇನೆ. ಇಂದು ಭಾರತದಲ್ಲಿ ಪ್ರಜಾಪ್ರಭುತ್ವವಿದೆಯೆಂಬ ಹೇಳಿಕೆ ಭಿನ್ನವಾಗಿದೆ. ಒಂದೇ ರೀತಿಯಿಂದ ಸತ್ಯಾಗ್ರಹಿಗಳನ್ನು ಎಡೆಬಿಡದೆ ಕಳುಹಿಸುವುದಿಲ್ಲ." ಎಂದು ಹೇಳಿರುವರು ಗಾಂಧಿಜಿ.

ಕೂಲಿಕಾರರು ಮತ್ತು ಸತ್ಯಾಗ್ರಹ

ಅನುಮತಿಯಿಲ್ಲದೆ ಚಳವಳಿ ಕೂಡದು

ಕೂಲಿಗಾರರ ಮುಖಂಡರೊಡನೆ ಮಹಾತ್ಮಾಜಿಯವರು ಈ ಸಲದ ಸತ್ಯಾಗ್ರಹದಲ್ಲಿ ಕೂಲಿಗಾರರು ತನ್ನ ಅನುಮತಿಯಿಲ್ಲದೆ ಸತ್ಯಾಗ್ರಹವನ್ನು ಪ್ರಾರಂಭಿಸಬಾರದಾಗಿ ಹೇಳಿದರು.

ಪ್ರೆಸ್ಸಿನಿಂದ ಸೆಕ್ಯೂರಿಟಿ

ಪೂನಾದ ಲೋಕಶಕ್ತಿ ಪ್ರೆಸ್ಸಿನ ಮಾಲಿಕರಿಂದ ಎರಡು ಸಾವಿರ ರೂಪಾಯಿಗಳ ಸೆಕ್ಯೂರಿಟಿ ಕೇಳಿದೆ. ಆಕ್ಷೇಪಕರ ಕರಪತ್ರಗಳನ್ನು ಪ್ರಕಟಿಸಿದ್ದರಿಂದು ಅಪಾದನೆ. ಅಹಮ್ಮದಾಬಾದಿನ ಇನ್ನೊಂದು ಪ್ರೆಸ್ಸಿನಿಂದಲೂ ಹೀಗೆ ಕೇಳಿದೆ.

ಮಿಸ್ ಮೇಯೋ ತೀರಿದಳು

ಮದರ್ ಇಂಡಿಯಾ ಎಂಬ ಗ್ರಂಥವನ್ನು ಬರೆದು ಭಾರತದ ವಿಷಯ ಅಪಪ್ರಚಾರಮಾಡಿದ ಮಿಸ್ ಮೇಯೋ ಎಂಬ ಅಮೇರಿಕನ್ ಹೆಂಗುಸು ಮರಣ ಹೊಂದಿದಳು. ಇವಳ ಪುಸ್ತಕವನ್ನು ರಾಷ್ಟ್ರದ ಮುಖಂಡರೆಲ್ಲರು ಬಹಿರಂಗವಾಗಿ ನಿಷೇಧಿಸಿದ್ದರು.

ಅಜಾದರಿಗೆ ಅಸೌಖ್ಯ



ವರ್ಧಾದ ವರ್ಕಿಂಗ್ ಕಮಿಟಿಯ ಸಭೆಯಿಂದ ಮರಳಿ ಬಂದ ರಾಷ್ಟ್ರಪತಿ ಅಜಾದರು ಇನ್‌ಪ್ಲುಯೆಂಜಾದಿಂದ ಅಸ್ವಸ್ಥರಾಗಿ ಮಲಗಿರುವರು. ಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಸಲಹೆಯಿತ್ತಿರುವರು.

ಕಾಂಗ್ರೆಸ್ ಭವನ ಜಪ್ತಿ

ಪುಣೆಯ ಪೋಲೀಸರು ಮಹಾರಾಷ್ಟ್ರ ಕಾಂಗ್ರೆಸ್ ಕಮಿಟಿಯ ಆಫೀಸನ್ನು ಜಪ್ತಿ ಮಾಡಿ ಯುದ್ಧದೊಡನೆ ಅಸಹಕಾರವೇಕೆ ಎಂಬ ಪುಸ್ತಕವನ್ನೊಯ್ದಿರುವರು.

ಕೇಂದ್ರ ಎಸೆಂಬ್ಲಿಯಲ್ಲಿ ವೈಸರಾಯರ ಭಾಷಣ

ನವಂಬರದಲ್ಲಿ ಕೂಡಲಿರುವ ಕೇಂದ್ರ ಎಸೆಂಬ್ಲಿಯಲ್ಲಿ ವೈಸರಾಯರು ಭಾಷಣ ಕೊಡಲಿರುವರೆಂದು ತಿಳಿದಿದೆ.

ಅಹಿಂಸೆಯಿಂದ ನಾಜೀ ಹಿಂಸೆ ತಡೆಯಬಹುದು

ಮಹಾತ್ಮರಿಗೆ ಆಂಗ್ಲ ಮಿತ್ರರ ಪತ್ರ

ಮಹಾತ್ಮಾಜೀಯವರಿಗೆ, ಹಲವು ಆಂಗ್ಲ ಮಿತ್ರರು ಒಂದು ಪತ್ರ ಬರೆದು ಅದರಲ್ಲಿ ಅಹಿಂಸೆಯಿಂದ ನಾಜೀ ಹಿಂಸೆಯನ್ನು ತಡೆಯಬಹುದೆಂದು ತಮ್ಮ ವಿಶ್ವಾಸವನ್ನು ಪ್ರಕಟಿಸಿರುವರು. ಅದರಿಂದ ಮಹಾತ್ಮರು ತಿರಿಗೊಮ್ಮೆ ಪ್ರಪಂಚದ ಮುಂದಾಳುಗಳಿಗೆ ಅಂತಹ ಮನವಿ ಮಾಡಬೇಕಾಗಿ ಸೂಚಿಸಿರುವರು.

ಬೊಂಬಾಯಿಯಲ್ಲಿ ಬಿರುಗಾಳಿಯ ಅವಾಂತರ!

ನಾರ್ವೆ ಹಡಗೊಂದು ಮುಳುಗಿತು

೩೦೦ ಮಂಜುಗಳು ಮುಳುಗಿದವು!

ಅನೇಕರು ಮರಣ ಪಟ್ಟಿರುವರು

ತಾ. ೧೯ರಲ್ಲಿ ಮುಂಬಯಿಯ ಬಂದರದ ಬಳಿ ಪ್ರಚಂಡ ಬಿರುಗಾಳಿಯೆದ್ದು ವಿಶೇಷ ಹಾನಿ ಸಂಭವಿಸಿತು. ಮರಗಳು ಕಿತ್ತುಹೋದವು. ಟ್ರಾಮ್, ರೈಲುಗಳು ನಿಂತು ಹೋದವು. ಅನೇಕ ಮಂದಿ ಮಡಿದರು. ಬಂದರದ ಬಳಿಯಿಂದ ಮುನ್ನೂರು ಮಂಜುಗಳು ಮುಳುಗಿದವು. ಮಾರಿ ಎಂಬ ನಾರ್ವೆ ಹಡಗೊಂದು ಮುಳುಗಿತು. ಮೀನು ಹಿಡಿಯಲು ಹೋಗಿದ್ದ ಅನೇಕ ಬೆಸ್ತರ ಪತ್ತೆಯೇ ಇಲ್ಲ. ಅನೇಕರು ಮರಣಪಟ್ಟಿರುವರು.

ಈ ದೋಣಿಯಲ್ಲಿ ಮಂಗಳೂರಿನ ಬಂದರದಿಂದ ಸಾಗಿಸಿದ ಅನೇಕ ಸಾಮಾನುಗಳೂ ಇದ್ದುವು. ಇಲ್ಲಿನ ಹಂಚು ಕಾರ್ಖಾನೆಯೊಂದಕ್ಕೆ ಅಪಾರ ನಷ್ಟವುಂಟಾಗಿದೆಯೆಂದು ಸುದ್ದಿಯಿದೆ. ಮಂಗಳೂರಿನ ಪ್ರಸಿದ್ಧ ಧೀರನಾವಿಕನೊಬ್ಬ 'ಅಜಪ್ಪೆ'ಯೆಂಬವನ ಪತ್ತೆಯೂ ಆಗಿಲ್ಲವಂತೆ!

ಜಯಪ್ರಕಾಶ ನಾರಾಯಣರು ತಿರಿಗಿ ಸೆರೆಯಲ್ಲಿ?

ಮೊದಲಿನ ಅವರ ಶಿಕ್ಷೆಯು ಅವಧಿಯು ಮುಗಿಯುತ್ತಾ ಬಂದರೂ, ತಿರಿಗಿಯೂ ಅವರನ್ನು ಸೆರೆಮನೆಯಲ್ಲಿಯೇ ಇರಿಸಲಾಗುವುದೆಂದು ವದಂತಿ. ಇದು ಅವರ ಪತ್ನಿ ಪ್ರಭಾವತಿ ದೇವಿಯವರು ತನ್ನ ಗಂಡನನ್ನು ಸೆರೆಮನೆಯಲ್ಲಿ ಭೇಟಿಯಾಗಲು ಹೋದಾಗ ಅಲ್ಲಿ ತಿಳಿದ ವಾರ್ತೆಯಂತೆ. ಇದನ್ನು ಅವರು ನೆಹರುಗಳೊಡನೆ ಹೇಳಿದರು. ಇದರ ಸತ್ಯತೆಯ ವಿಚಾರವಾಗಿ ತಾನೇನೂ ಹೇಳಲಾರೆನೆಂದು ನೆಹರುಗಳೇ ಹೇಳಿರುವರು.

೨೪ ಮಂದಿಯನ್ನು ಮಹಾತ್ಮರು ಆರಿಸಿರುವರು

ಅಹಿಂಸೆಯಲ್ಲಿ ಅಚಲ ವಿಶ್ವಾಸವುಳ್ಳ ೨೪ ಮಂದಿಯನ್ನು ಒಬ್ಬರ ಮತ್ತೆ ಒಬ್ಬರಾಗಿ ಸತ್ಯಾಗ್ರಹ ಹೂಡುವರೆ ಮಹಾತ್ಮಾಜಿಯವರು ಆರಿಸಿರುವರಾಗಿ ತಿಳಿದಿದೆ. ಇವರಲ್ಲಿ ಹೆಚ್ಚಿನವರು ಗಾಂಧಿ ಆಶ್ರಮದವರು ಮತ್ತು ಗಾಂಧಿ ಸೇವಾ ಸಂಘದವರಂತೆ. ಇದರಲ್ಲಿ ಇಬ್ಬರು ಮಹಿಳೆಯರೂ ಇರುವರಂತೆ.

ಗಾಂಧಿಜಿ ಹೇಳಿದರೆ ನಾನು ಹೋಗುತ್ತೇನೆ

ನೆಹರುಗಳ ಹೇಳಿಕೆ

ವಿನೋಬಾಬಾವೆಯ ನಂತರ ನೆಹರುಗಳನ್ನು ದಳಪತಿಯಾಗಿ ಆರಿಸಿರುವರೆಂಬ ವಾರ್ತೆಯ ಕುರಿತು ಅವರೊಡನೆ ವಿಚಾರಿಸುವಾಗ ಅವರು 'ನಾನೇನೂ ಈಗ ಹೋಗಲಾರೆ, ಗಾಂಧಿಜಿ ನನ್ನನ್ನು ಹೋಗಬೇಕೆಂದು ಹೇಳಿದರೆ ಹೋಗುತ್ತೇನೆ' ಎಂದರು.

ಮಂಗಳೂರು

ಕ್ರಿಕೆಟ್

ಮಂಗಳೂರು ಅಲೋಶಿಯಸ್ ಕಾಲೇಜ್ ಟೀಮಿಗೂ ಮದ್ರಾಸ್ ಮಿನೆರ್ವ ಕ್ರಿಕೆಟ್‌ಗೂ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಅಲೋಶಿಯಸ್ ಕಾಲೇಜಿನವರು ಒಂದು ವಿಕೆಟ್ ಹೋಗುವುದರೊಳಗೆ ವಿಜಯಿಗಳಾದರು. ಮಂಗಳೂರು ಟೀಮಿನಲ್ಲಿ ಸಿರಿಲ್ ಎಂಬವರು, ಮಿನೆರ್ವದಲ್ಲಿ ರಾಮಸಿಂಗ್ ಸೆಂಚುರಿ ಹೊಡೆದರು.

ಪುಸ್ತಕ ವಿಮರ್ಶೆ

ಚೆಂಗಲವೆ

ಕನ್ನಡ ಸಾಹಿತ್ಯದಲ್ಲಿ ಚಿರಂತನವಾಗಿ ಬೆಳಗುವ ಹಲವು ಕಾವ್ಯ ರತ್ನಗಳನ್ನು ಕನ್ನಡ ನಾಡಿಗೆ ಕೊಟ್ಟವರು ತುಳುನಾಡಿನ ಕವಿಗಳು. ಮುದ್ದಣ ರತ್ನಾಕರ ವರ್ಣಿ ಯಂತಹವರು ಎಂಬುದು ನಮ್ಮ ಹೆಮ್ಮೆ. ಕನ್ನಡ ಕಾವ್ಯಲೋಕದಲ್ಲಿ ಉಂಟಾದ ಇಂದಿನ ನೂತನ ಕ್ರಾಂತಿಯ ಕಾಲದಲ್ಲಿಯೂ ಸಣ್ಣ ಕತೆಗಳಿಂದ, ಭಾವ ಗೀತೆಗಳಿಂದ ಕನ್ನಡ ಸಾಹಿತ್ಯದಲ್ಲಿ ಹೊಸ ಪ್ರಭೆಯನ್ನು ಆರಂಭಿಸಿದ ಸಾಹಸಿಗರು ದ್ವಿತೀಯ ಪಂಕ್ತಿಯವರು ಶ್ರೀ ಗೋವಿಂದ ಪೈಗಳೇ ಮೊದಲಾದವರು ಎಂಬುದು ನಮಗೆ ಅಭಿಮಾನ. ಅಂತಹವರ ಒಡನಾಟದಲ್ಲಿದ್ದು, ತನ್ನ ಕವಿ ಸಹಜವಾದ ಸ್ಫೂರ್ತಿಯಿಂದ, ಹೊಸಕಾಲದ ಹುರುಪಿನಿಂದ, ಜೀವನದಲ್ಲಿ ನೆಲೆಯಿಲ್ಲದ ಅಲೆದಾಟವೊದಗಿದ್ದರೂ, ಕವಿತಾ ದೇಶವನ್ನು ತಣಿಯದೆ, "ಹಾರಿ ಏರುತ್ತಲೂ ಏರಿ ಹಾಡುತ್ತಲೂ ಇರುವ, ತುಳುನಾಡಿನದೊಂದು ಹಾಡು ಹಕ್ಕಿ, ಹಾರುಹಕ್ಕಿ" ಶ್ರೀ ಪಾಂಡೇಶ್ವರ ಗಣಪತಿರಾಯರೇ "ಚೆಂಗಲವೆ" ಎಂಬೀ ಭಾವಗೀತೆಗಳ ಕಾವ್ಯವನ್ನು ರಚಿಸಿದ ಕವಿ.

ಈ ಕವನ ಸಂಗ್ರಹಕ್ಕೆ ಶ್ರೀ ಮಂಜೇಶ್ವರ ಗೋವಿಂದಪೈಗಳು ನಲ್ನುಡಿಯ ಮುನ್ನುಡಿಯನ್ನು ಬರೆದಿದ್ದಾರೆ. ಮುನ್ನುಡಿಯಲ್ಲಿ, ಅಜ್ಞಾತ ಜೀವನದಲ್ಲಿ ಮೋಡಗಳ ಮರೆಯಲ್ಲಿ ನಿಂತು ಹಾಡಿದ ಕವಿಯ ಜೀವನ ಸುಖದುಃಖಗಳ ನೆನಸುಗಳ ಈ ಹಾಡುಗಳನ್ನು ತನ್ನ ಮತ್ತು ಕವಿಯ ಸವಿನಾಪ ಪರಿಚಯದೊಡನೆ ಹೃದಯಂಗಮವಾಗಿ ತಿಳಿಸಿದ್ದಾರೆ, "O Cuckoo! shall I call the Bird, Or but a wondering Voice" ಎಂಬ ಈ ಆಂಗ್ಲ ಕವಿಯ ಮಾತನ್ನುದ್ಧರಿಸಿ ಕವಿಯ ಉತ್ತಮ ಭಾವಗೀತೆಗಳ ಬಗೆಗೆ ತನ್ನ ಸಂತೋಷವನ್ನು ಸೂಚಿಸಿದ್ದಾರೆ.

ಒಟ್ಟಿಗೆ ಇದರಲ್ಲಿ ೩೬ ಕವನಗಳಿವೆ. ಹೆಚ್ಚಿನ ಕವಿತೆಗಳಲ್ಲೆಲ್ಲಾ ಕವಿಯ ಹೃದಯ ನಿವೇದನೆಯೇ ಹೊರಸೂಸುತ್ತದೆ; ಅದರೊಡನೆ ಕವಿಯ ಜೀವನ ಘಟನೆಗಳೂ ಹೆಣೆದುಕೊಂಡು, ಕೆರಳಿದ ಭಾವನೆಗಳು ಎಲ್ಲೆಲ್ಲೂ ಸಿಡಿದು ಸಿಡಿದು ಎದೆಯಿಗೆ ಅಂಟಿಕೊಳ್ಳುತ್ತವೆ. ಮೊದಲ ಕವನದಲ್ಲಿಯೇ ಕವಿಯು 'ಎದೆಯೊಳಾವುದೊ ಅರಳಿ ಉಲಿಸುತಿಹುದೆನ್ನ' ಎಂದು ಹೃದ್ಗತವನ್ನು ಹೇಳಿಕೊಂಡಿದ್ದಾರೆ. ಮುಂದಿನ ಕವನಗಳನ್ನೋದುತ್ತಿದ್ದಂತೆ, ಕವಿಗೆ ಅಂತಹ ನೈಸರ್ಗಿಕ ಭಾವಾವೇಶವೊಂದು ಇಲ್ಲದಿದ್ದರೆ, ಜೀವನದ ಹೋರಾಟದಲ್ಲಿಯೂ ಈ ಕಾವ್ಯ ಸ್ಫೂರ್ತಿ ಉಳಿಯುತ್ತಿರಲಿಲ್ಲವೆಂಬುದು ಚೆನ್ನಾಗಿ ಮನದಟ್ಟಾಗುತ್ತದೆ. ಎರಡನೆಯ ಪದ್ಯದಲ್ಲಿ 'ಕಾವ್ಯಪ್ರಾಸಗಳ' ಕುರಿತು ತನ್ನ ಮನದ ಸಿದ್ಧಾಂತವನ್ನು ಸಾರಿದ್ದಾರೆ. 'ಪಂಡಿತ ಹಕ್ಕಿ' ಎಂಬ ಕವನದಲ್ಲಿ ಕವಿಯು ಒಬ್ಬ ಸಂಶೋಧಕನನ್ನು ವಿಡಂಬಿಸುತ್ತಾರೆ. ಸಂಶೋಧಕನು ಹಕ್ಕಿಯ ಹಾಡುಗಾರ, 'ದನ್ನ ಪಂಡಿತಾದಿಗಳ ಕಾವ್ಯ ಕಾನನದಲ್ಲಿ, ಸತ್ಯಮಿಥ್ಯಗಳ ಸಂವಾದ ಚಿತ್ತಗಳಿಂದು ತೃಪ್ತಿ ತೋರದ ಹಕ್ಕಿ. ಹೀಗೆ ಬುದ್ಧ್ಯಾಡಲಿ ತನ್ನ ಕಾನನದ ಹಾಡುವುದನ್ನು ಮರೆತು' ಕಳೆಯುದಕ್ಕಾಗಿ ಕವಿವಿಷಾದಿಸುತ್ತಾರೆ; 'ಮುಂದಿರುವ ಮೃತ್ಯುವನು ಕಾಣಕಣ್ಣಿಕ್ಕಿ' ಎಂದು ಪ್ರೀತಿಯಿಂದ ಬೆದರಿಸುತ್ತಾರೆ. ಕೊನೆಗೆ ಆ 'ಸವಿಗೊರಲ ಕೋಗಿಲೆ' ಯೊಡನೆ 'ಸಲಿಸು ಕಾಮನೆ' ಯ ಎಂದು ಬೇಡಿಕೊಳ್ಳುತ್ತಾರೆ. ಹೃದಯಂಗಮವಾಗಿ ಹಾಡಬಲ್ಲ, ಹಾಡಿನಿಂದ ರಸಿಕರನ್ನು ತಲೆದೂಗಿಸಬಲ್ಲ ಕವಿಯೊಬ್ಬನು ಸಂಶೋಧನೆಯಲ್ಲಿ ತನ್ಮಯತೆಗೊಂಡ ವಿಷಯವಾಗಿ ಹೀಗೆ ಆ 'ಪಂಡಿತಹಕ್ಕಿ' ಯನ್ನು ಒಂದು ರೀತಿಯಿಂದ ಕೊಂಡಾಡಿದ್ದಾರೆನ್ನಲೂಬಹುದು. 'ತನುಗೊಳಲು' ಎಂಬುದರಲ್ಲಿ ರವೀಂದ್ರರ ಭಾವನೆಯ ಅನುಕರಣವಿದೆ. 'ಅರುಣನೆಂದೆನ್ನ ಕೇಳದವರುಂಟೆ'_ಇಂತಹ ಚುಟುಕು ಗೀತೆಗಳು ಹೃದಯಸ್ಪರ್ಶಿಯಾಗಿವೆ. 'ಮಧುಮಾಸದುದಯ' 'ಸುಖ್ಯಸಿಹುದೇಕೆ'—ಇವು ಉತ್ತಮ ತರದ ಪ್ರೇಮ ಗೀತೆಗಳು. ಉಷೆ, ಒಂದು ಪ್ರಾಂತಕಾಲ, ಮುಗಿಲ ತಾರೆಗಳು, ಒಂದು ಸಂಜೆ, ಹೂಗಳು, ಮಲೆನಾಡಿನ ಹಳ್ಳಿ, ಇವುಗಳು ಚೆಲುವಾದ ನಿಸರ್ಗ ಕವನಗಳು. ಮುಂದೆ ಕವಿಯು, ಮನೆಯ ನೆನಪು, ಹಾಲೂರ ಕತೆ, ಅಕಾಲ ಮೃತ್ಯು, ಒಡಹುಟ್ಟಿದರ ಸ್ಮೃತಿ, ಎಂಬೀ ಕವಿತೆಗಳಲ್ಲಿ ಆತ್ಮಗೀತೆಯನ್ನು ಹಾಡಿದ್ದಾರೆ. ಕನ್ನಡದಲ್ಲಿ ಹೀಗೆ ಹೃದಯವನ್ನು ತೋಡಿ ಹಾಡಿನ ಕೊನಲು ಹರಿಸಿದ ಕವಿಗಳು ಕಡಿಮೆ. 'ಮನೆಯ ನೆನಪು' ನಲ್ಲಿ ತುಳುನಾಡಿಂದ ದೂರಾದ ಕವಿ, 'ಕಡಲ ಗಾಳಿ ಪಡುವಲೂ ನಂಜಿಗೆ ಕರೆವುದೆನ್ನ' ಎಂದು ಹುಟ್ಟೂರಿನ ಬಗೆಗೆ ಹಾತೊರೆದು ಹೇಳಿಕೊಳ್ಳುತ್ತಾರೆ. 'ಹಾಲೂರ ಕತೆ' ಕವಿಯು ಹಾಡುತ್ತ ಕಂಬನಿ ಕರೆದ ಕತೆ; ಓದುಗರೂ ಕಣ್ಣೀರು ಸುರಿಸಬೇಕು. ಅಷ್ಟು ಕರುಣಾಮಯವಾಗಿದೆ. 'ದಾಂಪತ್ಯದ ಮುನ್ನುಡಿ' ಚೆನ್ನಾದ ಒಂದು ಪ್ರಣಯ ಗೀತೆ. 'ಅಂಬಿಕಾತನಯದತ್ತ'ರ 'ಕಣಿಯೋಣ ಬಾರ' ದ ಹಲವು ಭಾವನೆಗಳನ್ನು ಒಳಗೊಂಡಿದೆ. ಘೋರವಾದ ಧಾಟಿಯಲ್ಲಿದೆ. 'ಕ್ರಿಸ್ತಪುರಾಣ'ವನ್ನು ಮಥಿಸಿ ಅದರ ಸೌಂದರ್ಯವನ್ನು ಕನ್ನಡಿಗರಿಗೆ ಕಾವ್ಯವಾಣಿಯಲ್ಲಿ ತಿಳಿಸಿದವರಲ್ಲಿ ಶ್ರೀ ಗೋವಿಂದಪೈಗಳ ನಂತರ ಇವರೇ ಎಂದು ನನ್ನ ತಿಳುವಳಿಕೆ. 'ಕ್ರಿಸ್ತಜನ್ನ' ಎಂಬಾ ಕವಿತೆ ವಾರ್ಧಕ ಷಟ್ಪದಿಯಲ್ಲಿದ್ದು ಗಂಭೀರವಾಗಿದೆ. ಸನ್ಯಾಸಿ ಎಂಬೀ ಕವನ ಈ ಸಂಗ್ರಹದಲ್ಲಿ ಎಲ್ಲದಕ್ಕಿಂತಲೂ ಉತ್ತಮವಾದದು. ಭಾರತದ ನಗ್ನ ದಾರಿದ್ರ್ಯ ದುಃಖಕ್ಕಾಗಿ ಕವಿ ಮರುಗುತ್ತಾರೆ; ತಾಯಿಗೆ ಮಂಗಲೋತ್ಸವವುಂಟೆಂದು ಹಾರೈಸುತ್ತಾರೆ. ಆ ಮಂಗಳವು 'ಶಾಂತಿಮಂತ್ರ ಸ್ಫುರಣಕೊಲಿವು'ದಲ್ಲ; 'ಉದಿಪ ಉತ್ಕ್ರಾಂತಿಯೇ ನಿನಗೊಂದು ಮಂಗಲಂ'ಎಂದು ಕ್ರಾಂತಿನಾದ ಮಾಡಿದ್ದಾರೆ. ಕೆರಳಿದ ಕವಿಯ ಭಾವನೆಯಲ್ಲಿ ಈ ಸಿದ್ಧಾಂತವು ಮೂಡಿದೆ. ಕೊನೆಯ ಪದ್ಯದಲ್ಲಿ ಕನ್ನಡತಾಯ ಕುರಿತು "ಮುನ್ನೆಸೆವ ಅನಂತ ಕಾಲವೆ ನುಡಿಯಲಿ, ಅಂ ನಿನ್ನ ಬಣ್ಣಿಸಿ ದಣಿಯೆ ಇಲ್ಲವೊ ಎಂಬ ನಿಜವ" ಎಂದು, ಒಂದು ರೀತಿಯ ಆರತಿ(ಒಂದು ರೀತಿಯ ವಂದನೆಂದರೂ ಸಲ್ಲುವುದು) ಯನ್ನು ಮಾಡಿಕೊಂಡಿದ್ದಾರೆ. ಹೀಗೆ ಶ್ರೀ ಪಾಂಡೇಶ್ವರರು ಹಲವಿಧದ ಭಾವನೆಗಳನ್ನು ತುಂಬಿಸಿ ರಸಾವೇಶದಲ್ಲಿ ಹಾಡಿದ ಹಾಡುಗಳ ಸಂಗ್ರಹ ಈ 'ಚೆಂಗಲವೆ'. ಕನ್ನಡ ಸಾಹಿತ್ಯದಲ್ಲಿ ಚಿರಂತನವಾಗಿ ಬೆಳಗತಕ್ಕ ಒಂದು ಕಾವ್ಯವು ಇದಾಗಿದೆ.

ಶ್ರೀ ಪಾಂಡೇಶ್ವರರಿಗೆ ವಿಧವಿಧದ ಛಂದಸ್ಸುಗಳ ಹಿಡಿತವಿದೆ. ಭಾಷಾ ಪ್ರಭುತ್ವವಿದೆ; ಭಾವನೆಯಲ್ಲಿ ಬಿಗುವಿದೆ; ನವನವೋನ್ಮೇಷವಿದೆ, ಅಂತರಂಗವನ್ನೇ ತೆರೆದು ಹಾಡುವ ಅಂತಃಸಾಕ್ಷಿಯಿದೆ. ಹೊಸಹೊಸವಾಗಲು ಹಾಡುತ್ತ ಇರಬೇಕೆಂಬ ಹಂಬಲವಿದೆ; ಇವಿಷ್ಟಿದ್ದರೆ ಸಾಕು; ಮುಂದೆಯೂ ಅವರಿಂದ ಕನ್ನಡಿಗರು ಅನೇಕ ಮಧುರಭಾವ ಗೀತೆಗಳನ್ನು ಕೇಳಿ ಆನಂದಿಸಬಹುದೆಂಬ ಆಸೆಯಿಟ್ಟುಕೊಳ್ಳಬಹುದು.

ಸಾಹಿತ್ಯಕೃತಿಗಳಿಗೆ ಹೆಚ್ಚಿನ ಪ್ರೋತ್ಸಾಹವಿಲ್ಲದ ಈ ಕಾಲದಲ್ಲಿ, ಪುಸ್ತಕಪ್ರಕಾಶಕರು ಪಠ್ಯಪುಸ್ತಕಗಳ ಪ್ರಕಾಶನದಲ್ಲಿಯೇ ತೃಪ್ತಿಗೊಂಡಿರುವುದು ಸಹಜ. ಆದರೆ ಸಾಹಿತ್ಯಪ್ರೇಮದಿಂದ ಇಂತಹ ಕೃತಿಯೊಂದನ್ನು ಪ್ರಕಾಶಪಡಿಸಿದ ಶ್ರೀ ಬಾಳಿಗರನ್ನೂ ನಾವು ಅಭಿನಂದಿಸದಿರಲಾರೆವು.

— ಕಯ್ಯಾರ

× ಲೇಖಕರು:_ಶ್ರೀ ಪಾಂಡೇಶ್ವರ ಗಣಪತಿ ರಾವ್, ಪ್ರಕಾಶಕರು, ಬಾಳಿಗಾ ಎಂಡ್ ಸನ್ಸ್, ಪುತ್ತೂರು_ಮಂಗಳೂರು. ಕ್ರಾನ್ ೧/೮ ಆಕಾರದ ೩೬೪ ಪುಟಗಳು. ಬೆಲೆ ಹತ್ತಾಣೆ.

HALFTONE & LINE
BLOCK MAKING
UNDERTAKEN
Sharada Press,
MANGALORE

NOTICE

IN THE COURT OF THE DISTRICT MUNSIF OF KARKALA

O. S. No. 133/1925.
R. E. P. No. 245/1939

E. Krishnamoorti—son of E. Vasudevayya-residing at Karkal Kasba-Karkal Taluq— Petitioner.

VERSUS

1. Dejamma-mother of Aribettu BhojappaHegde and daughter of Padmakke Hengsu residing at Aribettu, Shirlal Village Nalkur Magane Karkal Taluq.
2. Vimalu Hengsu Daughter of Padmakke Hengsu residing at Bellaru, Uppinangadi village Uppinangadi Taluq.
3. Kusumaji Hengsu Daughter of Seshamma Hengsu residing at Thellaru, of Durga Village, Karkal Taluq.
4. Kusu alias Sankamma widow of Mundli Manjappa residing at Kairabettu, Kallya village; Karkal Taluq . . . . Respondents

To the 2nd respondent Vimalu Hengsu,

Whereas the above named petitioner has made application to this Court for sale of the properties belonging to respondents 1, 2 and 4 and also for permission to bid and setoff at the time of sale, you are hereby warned to appear in this Court in person or by Pleader duly instructed on 19-11-1940 at 10 A. M. before this Court, failing which the said application will be heard and determined exparte.

By order of the Court,

Karkala 20-10-40 } K. L. Kudva Pleader for petitioner

An Invitation

Deposits flowing in more quickly than we can invest them are steadily increasing our idle funds. Thus our deposits increased by over Rupees Five Lacs since the first of July, 1940.

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE. Estd: 1906 CANARA BANK, LIMITED.

THE
Canara Banking Corporation Ltd.
(INCORPORATED IN BRITISH INDIA)
Estd: 1906
Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	......	2½% p. a.
6 to 9 „	......	3% „
One year	......	3½% „
Two years	......	4% „
SHORT TERM Deposits:		2½% p. a.
Current Account:		1% p. a.
Savings Bank:		2½% *

Particulars of other kinds of deposits on application.

ವಿಚಿತ್ರ ಪ್ರಪಂಚ

ಹೊಟ್ಟೆಯಲ್ಲಿ ಹೃದಯ!

ಹೃದಯ ಅಥವಾ ಎದೆಗುಂಡಿಗೆ ಇರುವದು ಎದೆಯ ಒಳಗೆ ಎರಡು ಶ್ವಾಸಕೋಶಗಳ ನಡುವೆ, ಸ್ವಲ್ಪ ಎಡಕ್ಕೆ ಹೊಂದಿಕೊಂಡು. ಹೀಗಿದ್ದರೂ ಕೂಡ ಕೋಪನ ಹೇಗನಿನ ಒಂದು ಆಸ್ಪತ್ರೆಯಲ್ಲಿ ಹುಟ್ಟಿದ ಮಗುವಿಗೆ ಈ ಎದೆಗುಂಡಿಗೆಯು ಹೊಟ್ಟೆಯಲ್ಲಿದ್ದ ಸಂಗತಿಯು ಈಗ ಗೊತ್ತಾಗಿದೆ ಈ ವಿಚಿತ್ರವಾದ ಮಗುವು ಹುಟ್ಟಿದ ಮೇಲೆ ಕೆಲವು ತಾಸುಗಳ ತನಕ ಮಾತ್ರ ಬದುಕಿತ್ತು ಅಲ್ಲವಾದರೆ ಅದು ಜಗತ್ತಿನ ಪ್ರದರ್ಶನದ ಒಂದು ಅದ್ಭುತ ವಸ್ತು ಎನ್ನಿಸಿಕೊಳ್ಳುವದರಲ್ಲಿ ಸಂದೇಹವಿರಲಿಲ್ಲ

ಹುಲಿಗೂ ಸಂಗೀತದ ಹುಚ್ಚು!

ಅಮೇರಿಕದ ಅಂಡರ್‌ವುಡ್ ಎಂಬೊಬ್ಬ ವಿವಾಹಿತ ಹೆಂಗಸು ಒಂದು ಕಾಡಿನ ಮಾರ್ಗವಾಗಿ ಮನೆಗೆ ಬರುತ್ತಾ ನಡುದಾರಿಯಲ್ಲಿ ಒಂದು ಹುಲಿ ಅವಳನ್ನು ಸಂಧಿಸಿ ತಿನ್ನಲಿಕ್ಕೆ ಬಂದಿತು. ಸಂಗೀತಕ್ಕೆ ಮೂಕ ಪ್ರಾಣಿಗಳೂ ವಶವಾಗುವವು ಎಂದು ಅವಳು ಕೇಳಿದ್ದಳು ಅವಳಿಗೆ ಮಧುರವಾಗಿ ಹಾಡಲಿಕ್ಕೆ ಬರುತ್ತಿತ್ತು ಆದ್ದರಿಂದ ಪ್ರಾಣಗಳನ್ನು ಕಾಪಾಡಿಕೊಳ್ಳುವ ಕೊನೆಯ ಉಪಾಯವಾಗಿ ಇವಳು ಹುಲಿಯ ಎದುರಿಗೆ ಹಾಡತೊಡಗಿದಳು ಅವಳ ಇಂಪಾದ ಕಂಠದಿಂದ ಹೊರಟ ಮಧುರವಾದ ಹಾಡುಗಳು ಹುಲಿಯನ್ನು ಹುಚ್ಚುಮಾಡಿದವು ಮನೆಯಿಂದ ಅವಳ ಗಂಡನು ಬಂದು ಆ ಹುಲಿಯನ್ನು ಗುಂಡಿಟ್ಟು ಕೊಂದ. ಹಾಕುವ ತನಕ ಅವಳು ಹಾಡುತ್ತ ಇದ್ದಳು

ಶತಮಾನಗಳ ಹಿಂದಿನ ಮೊಟ್ಟೆಗಳು!

ಬಕ್ಕಿಂಗ್ಹಾಮಶಾಯರಿನ ಒಂದು ಮರದ ಕಾರ್ಖಾನೆಗೆ ಬಂದ ಕೆಲವು ಮರಗಳಲ್ಲಿ ಹಲವು ಅದ್ಭುತ ಸಂಗತಿಗಳು ಕಂಡುಬಂದಿವೆ ಒಂದು ಮರದ ಕುಂಡಿನ ಟೊಳ್ಳಿನಲ್ಲಿ ನಿನ್ನೆ ತಾನೆ ಕಟ್ಟಿ ಮುಗಿಸಿದಂಥ ಒಂದು ಹಕ್ಕಿಯ ಗೂಡಿದ್ದು ಶತಮಾನಗಳ ಹಿಂದಿನ ಕೆಲವು ಮೊಟ್ಟೆಗಳು ದೊರೆತಿವೆ ಗೂಡಾಗಲೀ ಮೊಟ್ಟೆಗಳಾಗಲೀ ಒಂದಿಷ್ಟು ಕೆಟ್ಟಿರುವುದಿಲ್ಲ. ಹಕ್ಕಿಯು ಗೂಡನ್ನು ಬಿಟ್ಟು ಯಾಕೆ ಹೊರಟುಹೋಯಿತೆಂಬುದು ಒಂದು ಸಮಸ್ಯೆಯಾಗಿದೆ ಇನ್ನೊಂದು ಮರದ ಟೊಳ್ಳಿನಲ್ಲಿ ಅರಿಗಳೊಳಗೆಯೇ ಸತ್ತು ಹೋದ ಜೇನುನೊಣಗಳಿರುವ ಒಂದು ಹಳೆಯ ಗೂಡು ದೊರತಿದೆ ಮತ್ತೊಂದರಲ್ಲಿ ನೂರಾರು ವರ್ಷಗಳ ಹಿಂದೆ ಬಳಕೆಯಲ್ಲಿದ್ದಂಥ ಕೆಲವು ಸಸ್ಯದ ಪೆಟ್ಟಿಗೆಗಳು ದೊರೆತಿವೆ ಅಲ್ಲಿ ಅವು ಹೇಗೆ ಬಂದುವೆಂಬುದ ತಿಳಿಯದಾಗಿರುವದು.

ಬೆಂಕಿ ಕೊಡುವ ಆನಂದ!

ಕೆನಡದಲ್ಲಿ ಚಿನ್ನದ ಗಣಿಗಳ ಮಾಲೀಕನಾಗಿದ್ದ ಜೇಕಿನ್ಸ್ ಬಾಶೀ ಎಂಬ ಆಯರ್ಲೆಂಡ ದೇಶದವನಿಗೆ ಮನೆಗೆ ಬೆಂಕಿ ಕೊಟ್ಟು ಆನಂದಿಸುವ ಒಂದು ಹುಚ್ಚು ಇದ್ದಿತು. ಅವನು ಕಾಲವಾಗಿ ಈಗ ಕೆಲವೇ ದಿನಗಳು ಸಂದಿರುವವು ಬದುಕಿದ್ದಾಗ ಅವನು ತನ್ನ ಆರಾಮದ ಸಮಯವನ್ನು ಕಟ್ಟಡಗಳಿಗೆ ಬೆಂಕಿಕೊಡುವ ಮತ್ತು ಅವುಗಳನ್ನು ಆಧುನಿಕ ಯಂತ್ರೋಪಕರಣಗಳಿಂದ ನಂದಿಸುವ ಆನಂದದಲ್ಲಿ ಕಳೆಯುತ್ತಿದ್ದನಂತೆ ಒಮ್ಮೆ ಒಂದ ಮನೆಗೆ ಬೆಂಕಿ ಕೊಟ್ಟಿದ್ದಾಗ, ಅದರೊಳಗೆ ಕಾಲುಬಾರದ ಒಂದು ಮಗು ಇದ್ದಿತೆಂದು ಗೊತ್ತಾಯಿತು. ಅವನು ಜೀವದಾಸೆಯನ್ನು ಬಿಟ್ಟು, ಧಗಧಗನೆ ಉರಿಯುತ್ತಿರುವ ಬೆಂಕಿಯೊಳಗೆ ನುಗ್ಗಿ ಅದರ ಪ್ರಾಣಗಳನ್ನು ಕಾಪಾಡಿದ, ಮಾತ್ರವಲ್ಲದೆ, ಬಹಳ ಹಣ ಖರ್ಚುಮಾಡಿ ಅದಕ್ಕೆ ಕಾಲುಬರುವಂತೆ ಮಾಡಿದ್ದ. ಬಾಶಿಯ ಜೀವನವು ಇಂಥ ಅನೇಕ ಸಾಹಸ ಕಾರ್ಯಗಳಿಂದ ತುಂಬಿತ್ತು ಅವನು ಮತ್ತೆ ಆ ಮಗುವನ್ನು ದತ್ತಕ್ಕೆ ತೆಗೆದುಕೊಂಡ. ಸಾಯುವಾಗ ತನ್ನ ೭೫೦೦೦ ಪವನು ಬೆಲೆಬಾಳುವ ಎಲ್ಲಾ ಸಂಪತ್ತನ್ನು ಅದರ ಹೆಸರಿನಲ್ಲಿ ಬರೆದಿಟ್ಟಿದ್ದ

ಸಮುದ್ರದ ಆಳ ೬೦೦ ಅಡಿ ಕಡಿಮೆಯಾದರೆ?

ಏನಾದರೊಂದು ಕಾರಣದಿಂದ ಸಮುದ್ರದ ಆಳವು ೬೦೦ ಅಡಿ ಕಡಿಮೆಯಾದರೆ ಪ್ರಪಂಚವು ಹೇಗೆ ತೋರೀತು ಎಂದು ಕೆಲವರು ಊಹಿಸಿಕೊಂಡಿದ್ದಾರೆ ಅವರ ಊಹನೆಯಂತೆ ಈಗ ಬ್ರಿಟನು ಮತ್ತು ಐರ್ಲೆಂಡು ಬೇರೆ ಬೇರೆ ದ್ವೀಪಗಳಾಗಿ ಇರದೆ, ಅವೆರಡು ಒಂದಾಗಿ ಯೂರೋಪವನ್ನು ಕೂಡಿಕೊಳ್ಳುವವು ೧೫೦೦ ಅಡಿಯಷ್ಟು ಅಗಲವಾದ ಭೂಪಟ್ಟಿಯು ಉತ್ತರ ಅಮೇರಿಕವನ್ನು ಏಷ್ಯದೊಂದಿಗೆ ಜೋಡಿಸುವದು ನ್ಯೂಗಿನಿಯು ಆಸ್ಟ್ರೇಲಿಯವನ್ನು ಸೇರುವದು ಹೀಗೆ ಪ್ರಪಂಚವು ಸುತ್ತಲೂ ಸಮುದ್ರವಿರುವ ಒಂದೇ ಒಂದು ಭೂಖಂಡವಾಗುವದು.

THE
Jupiter General Insurance Co Ltd.;
LIFE DEPARTMENT

AGENCY applications are invited from young energetic and influential men from South Kanara and Coorg.

Apply by post —
Chief Agent,
MANGALORE.

PHYSICAL FITNESS
is the first essential in games and in every social activity.

You need not worry hereafter for your impaired vitality premature old age and nervous break-down if you try
"BHUVANENDRA AMRITHPRASH"
which will tone the nervous system, build healthy tissues and enrich the blood.
Thus keeps you fresh and sprightly.

Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕಡುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ
ಸ್ಟಾಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನಾಯಕ್, ರಥಬೀದಿ, ಮಂಗಳೂರು.

ಸಂಯಮಿಶ್ರೇಷ್ಠ
ವಿನೋಬಾ ಭಾವೆ-
(ಜೀವನ ಪರಿಚಯ)

ವಿನೋಬಾ ಅಂದರೆ ಗಾಂಧಿಜಿಯವರಿಗೆ ಬಹು ಅಕ್ಕರೆ. ವಿನೋಬಾ ಗಾಂಧಿವಾದಿಗಳಲ್ಲಿ ಅತಿ ಮುಖ್ಯ.

ಇತ್ತೀಚೆಗ ರಾಜಕೀಯ ರಂಗವನ್ನು ಬಿಟ್ಟು ಅಧ್ಯಾತ್ಮ ಲೋಕದಲ್ಲೇ ಓಡಾಡುತ್ತಾರೆ. ಗಾಂಧಿ ಶಿಷ್ಯರಲ್ಲಿ ತಮ್ಮದೇ ಆದ ಒಂದು ವರ್ಚಸ್ಸನ್ನು ಸಂಪಾದಿಸಿಕೊಂಡಿದ್ದಾರೆ." ಹೀಗೆಂದು ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮಾ ಇವರು ತಮ್ಮ "ವರ್ಧಾಯಾತ್ರೆ" ಯೆಂಬ ಪುಸ್ತಕದಲ್ಲಿ ಬರೆಯುತ್ತಾ ಈ ಸಲದ ಸತ್ಯಾಗ್ರಹದ ಮೊದಲನೆಯ ಸೇನಾಪತಿಯಾದ ಸಂಯಮಿಶ್ರೇಷ್ಠ ವಿನೋಬಾ ಇವರ ಉಜ್ವಲ ಜೀವನದ ಚಿತ್ರವನ್ನು ರಮಣೀಯವಾಗಿ ತೋರಿಸಿರುವರು.

ಶ್ರೀ ಶರ್ಮರು ಹೀಗೆ ಮುಂದುವರಿಸುತ್ತಾರೆ.

"ಒಂದು ವರ್ಷದ ಕೆಳಗೆ ವಿನೋಬಾ ಬಹಳ ಬೇನೆ ಬಿದ್ದರು. ಆ ಹೊಡೆತದಿಂದ ಇನ್ನೂ ಚೇತರಿಸಿರಲಿಲ್ಲ. ಆರೋಗ್ಯಕ್ಕಾಗಿ ವರ್ಧಾದಿಂದ ಪೌನಾರಿಗೆ ಅವರನ್ನು ಕಳುಹಿಸಲಾಗಿತ್ತು. ಅವರಿಗೆ ಮದುವೆಯಿಲ್ಲ. ಗಾಂಧಿಜಿಯವರ ಸಬರಮತಿ ಆಶ್ರಮವನ್ನು ಸೇರಿದಾಗಲೇ ಅವರು ಬ್ರಹ್ಮಚರ್ಯ ವ್ರತವನ್ನು ಹಿಡಿದರು. ಬ್ರಹ್ಮಚರ್ಯವು ಅವರಿಗೆ ಕೇವಲ ಮದುವೆಯಾಗದಿರುವ ಒಂದು ಆರ್ಥಿಕೋಪಾಯವಲ್ಲ. ಸಂಸಾರದ ಹೊರೆಯನ್ನು ತಪ್ಪಿಸಿಕೊಂಡು ಸುಖವಾಗಿರುವ ನಾಗರಿಕ ತಂತ್ರವೂ ಅಲ್ಲ. ಸಂತಾನ ನಿರೋಧವಲ್ಲ. ಸಂಯಮಶೀಲತೆ ಅವರ ಪಾಲಿಗೆ ಅದೊಂದು ಧ್ಯೇಯ.

...ನಾವು ಹೋದಾಗ ರಾತ್ರಿ ೯ ಗಂಟೆ. ಪೌನಾರ್ ಮೌನದಲ್ಲಿ ಮುಳುಗಿತ್ತು. ಆ ನೀರವವಾದ ಕತ್ತಲಲ್ಲಿ ಚಿಕ್ಕೆಯಂತೆ ಬಂಗಲೆಯಲ್ಲಿ ದೀಪವೊಂದು ಉರಿಯುತ್ತಿತ್ತು. ದೃಢಕಂಠದಿಂದ ಸುಶ್ರಾವ್ಯವಾಗಿ ಭಗವದ್ಗೀತೆಯ ಶ್ಲೋಕಗಳು ಕೇಳಬರುತ್ತಿದ್ದುವು.. ಆ ತಂಪು ಹೊತ್ತು! ತುಂಬಿದ್ದ ಶಾಂತಿ! ಎಲ್ಲ ಭೇದಗಳನ್ನು ಅಳಿಸುವ ಕತ್ತಲೆ. ನಿದ್ದೆ ಹೋಗುತ್ತಿದ್ದ ಜಗತ್ತು. ಬ್ರಾಹ್ಮೀಸ್ಥಿತಿಯನ್ನು ಚಿಂತನೆ ಮಾಡುತ್ತಿದ್ದ ಸಂಯಮಿ ಶ್ರೇಷ್ಠರು. ಧ್ಯೇಯ, ಬ್ರಹ್ಮನಿರ್ವಾಣ! ಇಂಥ ಅನುಭವ, ಪುಣ್ಯವಿಶೇಷವಿಲ್ಲದೆ ಒದಗುವುದಿಲ್ಲವೆಂದು ನಮ್ಮ ತಾಯಿ ಹೇಳುತ್ತಿದ್ದರು.

ಬಂಗಲೆಯ ನಡುಮನೆಯಲ್ಲಿ ಬಾಗಿಲಿಗೆ ಸ್ವಲ್ಪ ಓರೆಯಾಗಿ ವಿನೋಬಾ ಕುಳಿತಿದ್ದರು. ಪದ್ಮಾಸನ ಹಾಕಿ ಮಂಡಿಸಿದ್ದರು. ಮಗ್ಗುಲಲ್ಲಿ ಲಾಂದ್ರ. ಇದಿರಲ್ಲಿ ವ್ಯಾಸಪೀಠ. ಅದರಲ್ಲಿ ಗೀತಾ. ಆಚಾರ್ಯರ ಮೇಲೆ ಅಂಗಿ ಬಹಳ ಇರಲಿಲ್ಲ. ಪುಸ್ತಕ ನೋಡಲು ಸಾಧನವೆಂದು ಕಣ್ಣಿಗೊಂದು ಕನ್ನಡಕ ಇಟ್ಟಿದ್ದರು.

ಹೋದವರಲ್ಲಿ ನನ್ನ ಗೆಳೆಯ ದಾಮು ಅವರಿಗೆ ಚೆನ್ನಾಗಿ ಪರಿಚಿತನು.

"ಏನು ಈ ಅಪರ ರಾತ್ರಿಯಲ್ಲಿ ಬಂದಿರಿ! ಇವರು ಯಾರು!" ವಿನೋಬಾ ಕೇಳಿದರು. ಪರಿಚಯಮಾಡಿ ಕೊಟ್ಟುದಾಯಿತು.

... ಪೂರ್ಣವಾದ ಈ ಅಮೃತಯೋಗದಲ್ಲಿ ಹೈದರಾಬಾದಿನ ಸತ್ಯಾಗ್ರಹದ ಮಾತು ಆಡಿ ಕಾಲ ಕಳೆಯುವುದು ರುಚಿಸಲಿಲ್ಲ. ಗೀತೆಯನ್ನು ನಾವು ಬರುವಾಗ ವಿನೋಬಾ ಮೆಲುಕು ಹಾಕುತ್ತಿದ್ದರು.

'ನಾವು ಬಂದಾಗ ಗೀತೆಯ ಪುರಾಣ ನಡೆದಿತ್ತು. ಅದಕ್ಕೆ ಅಡ್ಡಿಯಾಗಬಾರದೆಂದು ನನ್ನ ಆಶೆ. ಗೀತೆಯ ಮೇಲೆ ತಮ್ಮ ಅಭಿಮಾನ ಬಹಳ ಎಂದು ಕೇಳಿದ್ದೇನೆ''

'ನಿಜ ಗೀತೆ ಅಂದರೆ ನನಗೆ ಬಹಳ ಆದರ. ಇಪ್ಪತ್ತು ವರ್ಷವಾಯಿತು. ಗೀತೆಯನ್ನು ಪಾರಾಯಣ ಮಾಡದೆಯೊ ಚಿಂತನೆ ಮಾಡದೆಯೊ ಒಂದಾದರೂ ದಿನವನ್ನು ಕಳೆದೆನೆಂದು ನನಗನಿಸುವುದಿಲ್ಲ. ಗೀತಾಧೇನುವಿನ ಬಳಿ ಕುಳಿತು ದಿನ ದಿನವೂ ನನ್ನ ಆತ್ಮದ ತೃಷೆಯನ್ನು ಹಿಂಗಿಸಿದ್ದೇನೆ'

ವಿನೋಬಾ ಮಹಾರಾಷ್ಟ್ರದವರು. ಅವರ ಪೂರ್ಣ ಹೆಸರು ವಿನೋಬಾ ಭಾವೆ.

ನಾನು ಕೇಳಿದೆ ''ಪ್ರಸ್ಥಾನತ್ರಯದಲ್ಲಿ ವೇದೋಪನಿಷತ್ತುಗಳಿಗಿಂತ ತಾವು ಗೀತೆಗೇ ಪ್ರಾಮುಖ್ಯತೆ ಕೊಡುವಂತೆ ಕಾಣುತ್ತದೆ''

''ಅಹುದು. ವೇದೋಪನಿಷತ್ತುಗಳು ಮಹಾ ಸಾಗರಗಳಂತೆ. ಆಳವಾಗಿ ಮುಳುಗಿ ರತ್ನಗಳನ್ನು ಹುಡುಕುವ ಕಲೆ ಗೊತ್ತಿರಬೇಕು. ಗೊತ್ತಿಲ್ಲದ ಸಾಮಾನ್ಯ ಜನರಿಗೆ ಉಪ್ಪುನೀರೇ ಗತಿ. ಗೀತೆ ಹಾಗಲ್ಲ. ಇಡೀ ಮಾನವ ಕೋಟಿಗೇ ಕಲ್ಯಾಣದಾಯಿ. ಸುಲಭವಾಗಿ ಸರಲವಾಗಿ ಬ್ರಹ್ಮಮಾರ್ಗವನ್ನು ಸೂಚಿಸುತ್ತದೆ. ಎಲ್ಲರ ಬಾಳಿನ ಒಗಟನ್ನು ಬಿಡಿಸುತ್ತದೆ. ಜೀವನದ ಅನೇಕ ಕ್ಲಿಷ್ಟ ಸಮಯಗಳಲ್ಲಿ, ಸಂದಿಗ್ಧ ಸಮಯಗಳಲ್ಲಿ ಗೀತೆಯೇ ನನಗೆ ಬೆಳಕು ತೋರಿತು ಎಂದು ಗಾಂಧಿಜಿ ಹೇಳುವುದು ಸುಳ್ಳಲ್ಲ''

ಕಣ್ಣಿಗಿದ್ದ ಕನ್ನಡಕ ಇಳಿಸಿದರು. ನಂದಾದೀಪದಂತೆ ಸ್ಥಿರವಾಗಿದ್ದ ಕಣ್ಣುಗಳು ಕಾಣಬಂದವು.... ತಪೋಜೀವನದ ನಿಷ್ಠುರ ಸಂಯಮಕ್ಕೊಳಗಾದ ಮೈ. ಇದ್ದುದೂ ಕರಗಿ ಹೋಗಿದೆ. ಸ್ವಭಾವ ಬಹಳ ಸಂಕೋಚದ್ದು. ತೆಂಗಿನ ಕಾಯಂತೆ. ಮೇಲಿನ ಚಿಪ್ಪನ್ನು ಒಡೆದರೆ ಒಳಗೆ ಪಾನಯೋಗ್ಯವಾದ ಎಳನೀರು. ಸ್ವಲ್ಪ ಅಲುಗಾಡಿಸಬೇಕು....

ಬ್ರಹ್ಮಚರ್ಯದ ವ್ರತವು ಜೀವನದ ಆನಂದದಲ್ಲಿ ಅವರಿಗಿರುವ ಶ್ರದ್ಧೆ ಆಸಕ್ತಿಗಳನ್ನು ಕಡಿಮೆ ಮಾಡಿಲ್ಲ. ಅಂತರ್ಜ್ಯೋತಿಯನ್ನು ಅಖಂಡವಾಗಿ ದೇದೀಪ್ಯಮಾನವಾಗಿ ಬೆಳಗಿಸುವುದು. ದೇಹವು ಒಂದು ರಥ. ಇಂದ್ರಿಯಗಳು ಕುದುರೆಗಳು. ಅವನ್ನು ಪಳಗಿಸಿಕೊಳ್ಳಬೇಕು. ವಿವೇಕಕ್ಕೆ ವಿಧೇಯವಾಗಿರುವಂತೆ ಅವನ್ನು ತಿದ್ದಬೇಕು.

ವಿನೋಬಾ ಹಿರಿಯ ಪಂಡಿತರು. ಇಷ್ಟು ಬಹಳವಾಗಿ ಅಭ್ಯಾಸ ಮಾಡಿದವರು ವಿರಳ. ವೇದಪುರಾಣಾದಿಗಳು ಅವರಿಗೆ ಕನ್ನಡಿಯಿದ್ದಂತೆ. ಕೆಲವರಿಗಾದರೂ ಅಗಾಧ ಪಾಂಡಿತ್ಯ ಬಂದೀತು. ಆದರೆ ಪಾಂಡಿತ್ಯವನ್ನು ಜೀರ್ಣಿಸಿಕೊಂಡು ಜೀವನದ ಪಥದಲ್ಲಿ ಅದನ್ನು ಊರುಗೋಲಾಗಿ ಮಾಡಿಕೊಂಡವರ ಮಾತ ಬಹಳ ಇಲ್ಲ. ವಿನೋಬಾ ತಮ್ಮ ಪಾಂಡಿತ್ಯದಿಂದ ಬಾಳಿನ ದಾರಿ ಹುಡುಕುತ್ತಾರೆ. ಇದ್ದ ದಾರಿಗಳನ್ನು ಮುಚ್ಚಲು ಹೋಗುವುದಿಲ್ಲ.

ಗಾಂಧಿಜಿಯವರ ಜೀವನಸಾರಕ್ಕೆ ಮನಸೋತು ಓಡಿ ಹೋದ ದುಂಬಿಗಳಲ್ಲಿ ಇವರೂ ಒಬ್ಬರು. ಕಾಲೇಜಿಗೆ ಶರಣುಹೊಡೆದು ಸತ್ಯಾಗ್ರಹಾಶ್ರಮವನ್ನು ಸೇರಿದರು. ಇತರ ತಾಪಸಿಕ ಜೀವನದ ಸಮುಖ ಪಾವಿತ್ರ್ಯಗಳು ಗಾಂಧಿಜಿಯವರನ್ನು ಮೆಚ್ಚಿಸಿದವು. ಕೆಲದಿನಗಳಲ್ಲಿಯೇ ಸೇಟ್ ಜಮ್ನಾಲಾಲ ಬಜಾಜರು ಸಾಬರಮತಿಯ ಮಾದರಿಯಲ್ಲಿಯೇ ಆಶ್ರಮವೊಂದನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು. ವರ್ಧಾ ಆಶ್ರಮಕ್ಕೆ ವಿನೋಬಾರವರನ್ನು ಕಳುಹಿಸಿಕೊಟ್ಟರು. ಅಂದಿನಿಂದ ಇಂದಿನವರೆಗೂ ವಿನೋಬಾ ಅಲ್ಲೇ ಇದ್ದಾರೆ.

'ವಿನೋಬಾ ಒಬ್ಬ ಆಧ್ಯಾತ್ಮಿಕ ಲೋಕದ ಮರುಳರಲ್ಲ. ಅವರ ಆಶ್ರಮ ಜೀವನದಲ್ಲಿ ಹತ್ತಿ ಹಿಂಜುವುದು, ನೂಲುವುದು, ನೇಯುವುದು, ಬೇಸಾಯಗಳು ಮುಖ್ಯವಾದ ಶಿಕ್ಷಣ. ಗಾಂಧಿಜಿಯ ವಿದ್ಯಾವಿಧಾನ ಪ್ರಯೋಗ ಇಲ್ಲಿ ದೀರ್ಘಕಾಲ ನಡೆಯಿತು. ಆಶ್ರಮವಾಸಿಗಳು ತಮ್ಮ ಅಡಿಗೆ ತಾವೇ ಮಾಡಿಕೊಳ್ಳುತ್ತಿದ್ದಾರೆ. ಆಹಾರ ಅತಿಸಾದಾ ಮತ್ತು ಸಾತ್ವಿಕ. ತಾವು ನೂತು ನೇದ ಬಟ್ಟೆಯಿಂದಲೇ ತಮ್ಮ ಉಡುಗೆ. ದಿನವೂ ತಾಸೆರಡು ತಾಸು ಆಶ್ರಮವಾಸಿಗಳಿಗೆ ತಮ್ಮ ಅನುಭವ ಗ್ರಂಥಗಳಿಂದ ಅನೇಕ ವಿಷಯಗಳ ಬಗ್ಗೆ ಉಪದೇಶ ಮಾಡುತಿದ್ದಾರೆ.

ನಾಗಪುರದಲ್ಲಿ ಧ್ವಜಸತ್ಯಾಗ್ರಹ ನಡೆದಾಗ ವರ್ಧಾ ಆಶ್ರಮವೇ ಆ ಚಳವಳಿಯ ಸ್ಫೂರ್ತಿ ಕೇಂದ್ರವಾಯಿತು. ಅದರ ಫಲವಾಗಿ ವಿನೋಬಾ ಸೆರೆಮನೆಯನ್ನು ನೋಡಿದ್ದರು...''

ಮಹಾತ್ಮರ ಅಭಿಪ್ರಾಯ

ಈ ಸಲದ ಸತ್ಯಾಗ್ರಹದ ಮೊದಲನೆಯ ಸೇನಾಪತಿಯಾಗಿ ವಿನೋಬಾ ಭಾವೆಯವರನ್ನು ಆರಿಸಿದ ವಿಷಯವಾಗಿ ವಿವರಿಸುತ್ತಾ ಮಹಾತ್ಮಾಜಿಯವರು ಅವರ ಪರಿಚಯವನ್ನು ಹೀಗೆ ಮಾಡಿಕೊಡುತ್ತಾರೆ:—

''ವಿನೋಬಾಭಾವೆಯವರು ಕಾಲೇಜಿನಲ್ಲಿ ಓದುತ್ತಿದ್ದರು. ೧೯೧೬ರಲ್ಲಿ ಇವರು, ನಾನು ಭಾರತಕ್ಕೆ ಮರಳಿ ಬಂದ ಮೇಲೆ ಕಾಲೇಜು ಬಿಟ್ಟರು. ಸಂಸ್ಕೃತದಲ್ಲಿ ಇವರು ಪಂಡಿತರು. ಸಾಬರಮತಿ ಆಶ್ರಮ ಸ್ಥಾಪಿಸಲ್ಪಟ್ಟಂದಿನಿಂದ ಅಲ್ಲಿದ್ದರು. ಸಂಸ್ಕೃತದಲ್ಲಿ ಹೆಚ್ಚಿನ ಪಾಂಡಿತ್ಯ ಪಡೆವುದಕ್ಕಾಗಿ ಒಂದು ವರ್ಷ ಆಶ್ರಮ ಬಿಟ್ಟು ಹೋದರು. ಆ ಅವಧಿ ಮುಗಿದ ದಿನವೇ ಮರಳಿ ಆಶ್ರಮಕ್ಕೆ ಬಂದರು.

''ಆಶ್ರಮದಲ್ಲಿ ಅಡಿಗೆ ಮಾಡುವುದು, ಕಸ ಗುಡಿಸುವುದು ಮೊದಲಾದ ಕೆಲಸವನ್ನು ಸಹ ಅವರೇ ಮಾಡುತ್ತಿದ್ದರು. ಅವರಿಗೆ ಅದ್ಭುತ ಸ್ಮರಣಶಕ್ತಿಯಿದೆ. ಸೃಷ್ಟಿ ಚಮತ್ಕಾರವನ್ನು ಚೆನ್ನಾಗಿ ಅಭ್ಯಾಸಿಸಿದ್ದಾರೆ. ನೂಲುವ ಕೆಲಸದಲ್ಲಿ ಜೀವಿತದ ಬಹು ಭಾಗ ಕಳೆದು ಅದರಲ್ಲಿ ಪಾಂಡಿತ್ಯ ಸಂಪಾದಿಸಿದ್ದಾರೆ. ಇವರಂತೆ ಪಾಂಡಿತ್ಯ ಪಡೆದಿರುವವರು ಬಹಳ ಕಡಿಮೆ. ನೂಲುವುದರಿಂದಲೇ ಹಳ್ಳಿಗಳ ಉದ್ಧಾರವೆಂದು ಅವರ ನಿರ್ಧಾರ.

'ಅವರು ಅಪ್ರತಿಮ ಶಿಕ್ಷಕರು. ಕೈಕೆಲಸದಿಂದ ಶಿಕ್ಷಣ ಸುಧಾರಣೆಯಾಗಬೇಕೆಂಬ ಆಶಾದೇವಿಯವರ ಯೋಜನೆಗೆ ತುಂಬಾ ಸಹಾಯ ಮಾಡಿದರು. ಈ ವಿಷಯ ಒಂದು ಪುಸ್ತಕವೂ ಬರೆದಿರುವರು. ತಕಲಿಯಿಂದ ನೂಲುವುದರಲ್ಲಿ ಸಹ ಅವರು ಹಲವು ಸುಧಾರಣೆ ಮಾಡಿದ್ದಾರೆ. ಇವರಲ್ಲಿ ಅಸ್ಪೃಶ್ಯತೆಯ ಸ್ಪರ್ಶವೇ ಇಲ್ಲ. ಜಾತೀಯ ಐಕ್ಯಕ್ಕಾಗಿ ನನ್ನಂತೆ ಅವರಿಗೂ ಉತ್ಕಟೇಚ್ಛೆಯಿದೆ. ಇಸ್ಲಾಂ ಧರ್ಮದ ಸಾರ ತಿಳಿಯಲು ಒಂದು ವರ್ಷ ಕೊರಾನ್ ಅಭ್ಯಾಸ ಮಾಡಿದರು. ಅವರೊಡನೆ ಅನೇಕ ಶಿಷ್ಯರಿದ್ದಾರೆ. ಅವರ ಒಬ್ಬ ಶಿಷ್ಯರು ಕುಷ್ಠರೋಗ ನಿವಾರಣೆಯ ಸಲುವಾಗಿ ತನ್ನ ಜೀವನವನ್ನು ಅರ್ಪಿಸಿದ್ದಾರೆ. ಅದರ ಪರಿಶ್ರಮದಿಂದ ನೂರಾರು ಜನ ಗುಣ ಹೊಂದಿರುವರು.

ವಿನೋಬಾ ಕೆಲವು ವರ್ಷ ವರ್ಧಾ ಮಹಿಳಾಶ್ರಮದ ಸಂಚಾಲಕರಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆಂದು ಇವರ ಅಭಿಪ್ರಾಯ. ಜಗತ್ತಿನ ಇತಿಹಾಸವನ್ನು ಇವರು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಇವರ ಕಾರ್ಯಕ್ರಮದಲ್ಲಿ ಖಾದಿ ಚರಕಗಳಿಗೆ ಬಹಳ ಮಹತ್ವವಿದೆ. ಹಿಂದಿನ ಸತ್ಯಾಗ್ರಹಗಳಲ್ಲಿ ಅವರು ಭಾಗವಹಿಸಿದ್ದಾರೆ. ಮುಂದಾಳಾಗುವ ಹಂಬಲ ಅವರಿಗಿಲ್ಲ. ಯಾವಾಗಲೂ ಮರೆಯಲ್ಲಿದ್ದು ನಿಧಾನವಾಗಿ ರಚನಾತ್ಮಕ ಕಾರ್ಯ ಮಾಡುವುದೇ ಹೆಚ್ಚು ಪರಿಣಾಮಕಾರಿಯೆಂದು ಅವರು ತಿಳಿಯುತ್ತಾರೆ.

ಕಾಂಗ್ರೆಸ್ಸಿಗೆ ೧ ಲಕ್ಷ ರೂ. ಕಾಣಿಕೆ
ವಿಠ್ಠಲಭಾಯಿಯವರ ಆಸ್ತಿಯಿಂದ

ಸರದಾರ ವಲ್ಲಭಭಾಯಿ ಪಟೇಲರು ತಮ್ಮ ಹಾಗೂ ದಿವಂಗತ ವಿಠ್ಠಲಭಾಯಿ ಪಟೇಲರ ಇನ್ನಿತರ ವಾರಸುದಾರರ ಪರವಾಗಿ ಅವರು ಬಿಟ್ಟುಕೊಟ್ಟ ಹಣದಲ್ಲಿ ೧ ಲಕ್ಷ ರೂಪಾಯಿಗಳನ್ನು ಚೆಕ್ಕ ಮೂಲಕ ಕಾಂಗ್ರೆಸ್ ಕೋಶಾಧ್ಯಕ್ಷರಿಗೆ ಕಳಿಸಿ ಅದನ್ನು ಸಂದೋರಿದಂತೆ ವೆಚ್ಚ ಮಾಡಲು ಜವಾಹರಲಾಲ ನೆಹರು, ಸೇಟ ಜಮನಾಲಾಲ ಬಜಾಜ, ಶ್ರೀ ಭೂಲಾಭಾಯಿ ದೇಸಾಯಿ, ಸರದಾರ ಪಟೇಲ ಮತ್ತು ರಾಷ್ಟ್ರಪತಿ ಈ ಜನರ ಒಂದು ಧರ್ಮದರ್ಶಿ ಮಂಡಳ ನೇಮಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಿಗೆ ಬಿನ್ನವಿಸಿಕೊಂಡಿರುವರು. ರಾಷ್ಟ್ರಪತಿಗಳು ಹಣವನ್ನು ಸ್ವೀಕರಿಸಿ ಶ್ರೀ ವಲ್ಲಭಭಾಯಿ ಮತ್ತು ಇನ್ನಿತರ ವಾರಸುದಾರರನ್ನು ಅಭಿನಂದಿಸಿರುವರು.

★ ಸಿನೆಮಾ ಪುಟ ★

ಶಾಂತಾ ಆಪ್ಟೆ ಚಿತ್ರ

ತಮಿಳು ಚಿತ್ರವೊಂದರಲ್ಲಿ ಶಾಂತಾ ಆಪ್ಟೆಯು ಅಭಿನಯ ಮಾಡುವುದಾಗಿ ಕರಾರು ಮಾಡಿಕೊಂಡಿರುವಳಷ್ಟೆ? ಈ ಚಿತ್ರವು ಈಗ ಕಲ್ಕತ್ತದಲ್ಲಿ ನ್ಯೂಥಿಯೇಟರ್ಸ್ ಸ್ಟುಡಿಯೋದಲ್ಲಿ ತಯಾರಾಗುತ್ತಲಿದೆ. ಈ ಚಿತ್ರವನ್ನು ಶ್ರೀ ವೈ ವಿ. ರಾವ್ ಅವರು ನಿರ್ದೇಶಿಸುವರು ವಿದ್ಯಾಪತಿ ಚಿತ್ರದ ಪ್ರಸಿದ್ಧ ಯುಸವ್ ಮುಲ್ಜಿ ಮತ್ತು ಚಟರ್ಜಿಯವರು ಕೆಮರಾ ಮತ್ತು ಧ್ವನಿಗಳ ನಿರ್ದೇಶಕರಾಗಿರುವರು. ರಾಯಲ್ ಟಾಕೀಸಿನವರು ಇದನ್ನು ತಯಾರಿಸುವರು

ಮೀನಾಕ್ಷಿ ರಾಮರಾವ್

ರಣಜಿತ್ ಕಂಪನಿಯವರು ಮೀನಾಕ್ಷಿ ರಾಮರಾವ್ ಮುಖ್ಯ ಪಾತ್ರದವಳಾಗಿರುವ ಒಂದು ಚಿತ್ರವನ್ನು ಬೇಗನೇ ತಯಾರಿಸಲು ಯೋಜನೆ ಮಾಡಿರುವರೆಂದು ಗೊತ್ತಾಗಿದೆ ಇದರ ನಿರ್ದೇಶಕರು ಶ್ರೀ ಮೋಹನ್ ಭವನಾನಿಯವರೆಂದೂ ತಿಳಿದಿದೆ.

ರ ನಿರ್ದೇಶಕರು ಶ್ರೀ ರಾಮಚಂದ್ರ ರಾ ಕೋ...ರು.

ನಾಸ್ಸೀಂಬಾನು

ಮಿನರ್ವಾದಲ್ಲಿ ಅಭಿನಯಿಸುತ್ತಿರುವ ನಾಸ್ಸೀಂ ಬಾನುವಿನ ಕರಾರು ಮಾಯಿದೆಯು ಕಳೆದಿದೆ. ಈಗ ಪುನಃ ಹೊಸ ಕರಾರು ಆಗಬೇಕಾದರೆ, ಹಿಂದಿಗಿಂತ ಹೆಚ್ಚು ಪ್ರತಿಫಲ ಸಿಗಬೇಕೆಂದು ಕೇಳುತ್ತಿರುವಳೆಂದೂ ಸುದ್ದಿ, ಇತರ ಚಿತ್ರ ಕಂಪನಿಯವರು ಅವಳನ್ನು ಕರೆಯುತ್ತಿರುವುದರಿಂದ ಸೋಹ್ರಾಬ್ ಮೋದಿಯು ತಿಂಗಳೊಂದರ ಮೂರು ಸಾವಿರದ ಐನೂರು ರೂಪಾಯಿ ಸಂಬಳವನ್ನು ಕೊಡಲು ಒಪ್ಪಿರುವನಾಗಿ ತಿಳಿದಿದೆ

ಪ್ರಭಾತ ನಗರದಿಂದ-

ಪ್ರಭಾತ ಫಿಲ್ಮ್ ಕಂಪೆನಿಯವರು ಇತ್ತೀಚೆಗೆ ಆದ್ಮಿ ಚಿತ್ರವನ್ನು ತಯಾರಿಸಿದರಷ್ಟೆ? ಅದರ ಜಾಹೀರಾತಿನೊಂದಿಗೆ ವ್ಯಂಗದ ಒಂದು ವ್ಯಂಗ ಚಿತ್ರವನ್ನೂ ಅವರು ಪ್ರಕಟಿಸಿದ್ದರು. ಇದು ತನ್ನನ್ನು ಅಪಹಾಸ್ಯ ಮಾಡುವ ಸಲುವಾಗಿ ಮಾಡಿಸಿದ್ದೆಂದು, ಬೊಂಬಾಯಿಯ ಒಂದು ಫಿಲ್ಮ್ ಕಂಪೆನಿಯ ಪ್ರಕಟಣ ಶಾಖಾಧಿಕಾರಿಯಾದ ಮುರಾರಿಯೆಂಬವನು ಪ್ರಭಾತಕಂಪನಿಯ ಪಾಲುಗಾರರ ಮತ್ತು ಪ್ರಕಟನೆಗಾರರ ಮೇಲೆ ವ್ಯಾಜ್ಯ ಹೂಡಿರುತ್ತಾನೆ

ಕಾನನ್‌ಬಾಲಾ ವಿವಾಹಿತಳಾಗುವಳು?

ಸುಪ್ರಸಿದ್ಧ ಸಿನೆಮಾನಟಿ, ಕಾನನ್ ಬಾಲಾ ಬೇಗನೇ ವಿವಾಹಿತಳಾಗುವಳೆಂದು ಕಲ್ಕತ್ತದ್ದ ಸುದ್ದಿಯೊಂದರಿಂದ ತಿಳಿದು ಬರುತ್ತದೆ

ಮಿಲನ

ಬಾಂಬೇ ಟಾಕೀಸಿನವರು ತಯಾರಿಸುತ್ತಿರುವ 'ಮಿಲನ' ಚಿತ್ರವು ಈಗ ಪೂರ್ಣಗೊಳ್ಳುತ್ತಲಿದೆ. 'ಬಂಧನ' ಚಿತ್ರವನ್ನು ಬೇಗನೇ ಸಿದ್ಧಪಡಿಸಬೇಕಾಗಿರುವುದರಿಂದ ಇದನ್ನು ಕೂಡಲೇ ಪ್ರದರ್ಶನಕ್ಕೆ ಅನುಗೊಳಿಸಲಾಗುವುದೆಂದು ವಾರ್ತೆ

ಚಂದ್ರಮೋಹನ

ಸಿರ್ಕಾರ್ ಚಿತ್ರಕಂಪನಿಯವರು ಚಂದ್ರಮೋಹನನು ಮುಖ್ಯ ಪಾತ್ರದವನಾಗಿರುವ ಒಂದು ಚಿತ್ರವನ್ನು ಬೇಗನೇ ತಯಾರಿಸಲಿರುವರಂತೆ.

ನೇಶನಲ್ ಸ್ಟುಡಿಯೋ

ಇವರು ರೋಸ್, ಪ್ರಹ್ಲಾದ್, ಸಿನಿ... ಇವರಿಂದ ಕೂಡಿದ ಒಂದು ಚಿತ್ರವನ್ನು ತಯಾರಿಸುವರೆ ಬೊನ್ನೆ ದಸರಾ ಸಮಯದಲ್ಲಿ ಪ್ರಾರಂಭಿಸುವರು. 'ಇದ

ಮೋತಿ ಮತ್ತು ವಸಂತಿ

ರಣಜಿತ್ ಕಂಪೆನಿಯ 'ದಿವಾಳಿ' ಚಿತ್ರದಲ್ಲಿ ಮೋತಿ ಮತ್ತು ವಸಂತಿ ಇವರು ಒಂದಾಗಿ ನಟಿಸಿರುವರು

ದೀಪಕ್ ಮಹಾಲ್

ಮೋಹನ್ ಪಿಕ್ಚರ್ಸಿನವರು ದೀಪಕ್ ಮಹಾಲ್ ಎಂಬ ಚಿತ್ರವನ್ನು ಬೇಗನೇ ಪ್ರದರ್ಶನಕ್ಕೆಳಿಸುವರು ಮಿಸ್ ಸರೋಜಿನಿ ಇದರಲ್ಲಿ ಅಭಿನಯಿಸುವಳು.

ಶ್ರೀಮತಿ ಸುಬ್ಬು ಲಕ್ಷ್ಮಿ

ದಕ್ಷಿಣ ಭಾರತದ ಪ್ರಸಿದ್ಧ ನಟಿಯಾದ ಶ್ರೀಮತಿ ಸುಬ್ಬು ಲಕ್ಷ್ಮಿಯು ಶ್ರೀ ಸದಾಶಿವನ್ ಮತ್ತು ಸಂಗಡದೊಡನೆ, ಸಂಗೀತ ಕಚೇರಿಗಾಗಿ ಆಮಂತ್ರಿತಳಾಗಿ ಬೊಂಬಾಯಿಗೆ ತೆರಳಿರುವಳು.

ತವಮಣಿ ದೇವಿ

ಸಿಲೋನಿನ ಕುಲೀನ ಕುಟುಂಬದ ತವಮಣಿ ದೇವಿಯೆಂಬವಳು ಇಂದು ಚಲಚ್ಚಿತ್ರ ಪ್ರಪಂಚಕ್ಕೆ ಕಾಲಿಟ್ಟಿರುವಳು. ಅವಳ ಅಭಿನಯವೂ ನೃತ್ಯವೂ ಉತ್ಕೃಷ್ಟವಾಗಿದೆ. ಕಿಸ್ಸಿಂಗ್ ಕುದುರೆ ಸವಾರಿ, ಖಡ್ಗ ಬೀಸುವಿಕೆ, ಈಜಾಟ ಮೊದಲಾದುವುಗಳಲ್ಲಿ ಚನ್ನಾಗಿ ನುರಿತ ಈಕೆ ಹೆಚ್ಚು ಪ್ರಸಿದ್ಧಿಗೆ ಬರುವಳೆಂದು ತಿಳಿಯಬಹುದಾಗಿದೆ.

ತೆನ್ನಾಲಿ ರಾಮಕೃಷ್ಣ

ನಿರ್ದೇಶಕ ರೆಡ್ಡಿಯವರು ಪ್ರಸಿದ್ಧ ಹಾಸ್ಯಗಾರನ ಕಥೆ ತೆನ್ನಾಲಿ ರಾಮಕೃಷ್ಣ ಎಂಬ ಚಿತ್ರವನ್ನು ತಯಾರಿಸುತ್ತಿರುವರು.



ಕೋಮಲವಾದ ಚರ್ಮಕ್ಕೆ
ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ವಾಲೆಟ್ ಸಾಬೂನಿನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ, ಗುಣಪಡಿಸುವ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿಯೂ ಕೋಮಲವಾಗಿಯೂ ಇಡುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ದೊರಕುತ್ತದೆ

ಕುಟಿಕೂರಾ ಸೋಪ್
CUTICURA SOAP

THE

BANK OF MANGALORE LTD.,

MANGALORE

ESTD 193

Branches Mudabidri & Padubidri.

Fixed Deposits will be received at the following rates of interest.

For 3 months		3½%
6		4%
1_		5%
24	& upwards	5½%

Interest Payable Quarterly

Savings Bank deposit 3½% on daily balances.

kinds of banking business transacted

ಬರ್ಮಾ ಮಾರ್ಗದ ಪರಿಚಯ
(Burma Road)

ಚೀನಾದೇಶದ ಪೂರ್ವ ಕರಾವಳಿಯನ್ನು ಜಪಾನ್ ದೇಶದವರು ಸ್ವಾಧೀನ ಮಾಡಿಕೊಂಡ ನಂತರ ಚೀನಾ ದೇಶದವರು ಕರಾವಳಿಯನ್ನು ಬಿಟ್ಟು ಒಳಪ್ರದೇಶಗಳಿಗೆ ಸೇರಬೇಕಾಯಿತು. ಇತರ ಪರರಾಜ್ಯಗಳ ಕೂಡೆ ವ್ಯಾಪಾರ ನಡೆಸುವರೆ ಅವರಿಗೆ ಬೇಕಾದ ಮಾರ್ಗಗಳು ಇರಲಿಲ್ಲ. ಫ್ರೆಂಚ್ ಇಂಡೋ ಚೀನಾ ದೇಶದ ಕರಾವಳಿಯಿಂದ ಹೊರಟು ಹೆನ್ನೊಯಿ ಎಂಬ ಮುಖ್ಯ ಪಟ್ಟಣವನ್ನು ಸೇರಿ ಅಲ್ಲಿಂದ ಕುಮಿಂಗ ವರೆಗೆ ಇದ್ದ ರೈಲು ಮಾರ್ಗದ ಮುಖಾಂತರ ಅವರು ಯುದ್ಧ ಸಾಮಾಗ್ರಿಗಳನ್ನು ತರಿಸುತ್ತಿದ್ದರು. ಫ್ರೆಂಚ ಜನರು ಸೋತ ನಂತರ ಮಾರ್ಗವು ಸಹಾ ಅವರಿಗೆ ಪ್ರಯೋಜನವಾಗಲಿಲ್ಲ. ಜಪಾನಿಯರು ಇಟಲಿ ಜರ್ಮನಿಯವರ ಒಪ್ಪಂದದ ಸಂಬಂಧ ಅಧೀನ ಫ್ರೆಂಚ ಸರಕಾರವು ಆ ಮಾರ್ಗವನ್ನು ಉಪಯೋಗಿಸಲು ಚೀನಾ ದೇಶದವರಿಗೆ ಬಿಡಲಿಲ್ಲ. ರಾಷ್ಟ್ರಪತಿಯಾಗಿದ್ದ ಜವಾಹರ್‌ಲಾಲರು ಆಕಾಶ ಮಾರ್ಗದಿಂದ ಚೀನಾದೇಶದ ಯುದ್ಧವನ್ನು ನೋಡುವರೆ ಹೋಗಬೇಕಾಯಿತು. ರಂಗೂನಿನಿಂದ ಆಕಾಶ ಮಾರ್ಗವಾಗಿ (ಸಿಯಾಮ್) ದೇಶಕ್ಕೆ ಹೋಗಿ ಅಲ್ಲಿಂದ ಅವರು ಕುಮಿಂಗ ಮೊದಲಾದ ರಣರಂಗಕ್ಕೆ ಹೋದರು. ರಶ್ಯದ ಮುಖಾಂತರ ದೊಡ್ಡ ಮಾರ್ಗವಿದ್ದರೂ ಅದು ಅತೀ ದೂರವಾದದರಿಂದ ಚೀನಾದೇಶದವರಿಗೆ ಅದರಿಂದ ಪ್ರಯೋಜನವಿಲ್ಲ. ಈಗ ಇತ್ತೀಚೆಗೆ ಬ್ರಿಟಿಷ ಮುಖ್ಯಮಂತ್ರಿ ಚರ್ಚಿಲರು ಆಮದ ರಸ್ತಿಗೆ ಬಿಟ್ಟ ಮಾರ್ಗವೇ ಬರ್ಮಾ ಮಾರ್ಗವಾಗಿರುತ್ತದೆ. ಅದು ಈಗ ಚೀನಾದೇಶಿಯರ ಪ್ರಮುಖ್ಯ ಮಾರ್ಗ.

ಬ್ರಿಟಿಷ್ ಬರ್ಮಾದಲ್ಲಿರುವ ಲೋಶಿಯೋ ಎಂಬ ಊರಿನಿಂದ ಸುರು ಆಗಿ ಅದು ೭೦೦ ಮೈಲು ಉದ್ದವಿದೆ. ಅದು ಮಿಖೊಂಗ್ ಮತ್ತು ಯಾಂಗ ಎಂಬ ನದಿಗಳನ್ನು ದಾಟುತ್ತದೆ. ಈ ೭೦೦ ಮೈಲುಗಳ ಪೈಕಿ ೬೦೦ ಮೈಲು ಮಾರ್ಗವು ಚೀನಾದೇಶದಲ್ಲಿಯೂ ಇರುತ್ತದೆ. ಆಧುನಿಕ ಯಂತ್ರಗಳ ಸಹಾಯವಿಲ್ಲದೆ ಈ ಮಾರ್ಗವನ್ನು ಚೀನಾ ದೇಶದ ಜನರು ಒಂದು ವರುಷದ ಒಳಗೆ ಕಟ್ಟಿದರು. ಬೇರೆ ಯಾವ ಜನಾಂಗದಿಂದಲೂ ಇದು ಸಾಧ್ಯವಿರಲಿಲ್ಲ. ಮೊದಲು ಕೂಲಿಜನರನ್ನು ಬಿಟ್ಟಿಗೆ ಹಿಡಿದು ಮಾಡಬೇಕಾದರೂ ಒಂದು ಮಳೆಗಾಲದ ನಂತರ ೭೦೦೦೦ ಜನರು ಈ ಕೆಲಸವನ್ನು ಸಂಬಳವನ್ನು ಪಡೆದು ಮಾಡಿದರು. ಈ ಮಾರ್ಗವನ್ನು ಸಾವಿರಾರು ಮೋಟರ್ ಬಂಡಿಗಳು ಉಪಯೋಗಿಸಿದರಿಂದ ಈ ಮಾರ್ಗದ ಮೇಲೆ ಇದ್ದ ಸಣ್ಣ ಸಣ್ಣ ಸಂಕಗಳನ್ನು ಸರಿಗೊಳಿಸುವ ಕೆಲಸವು ತುಂಬಾಯಿತು. ಬ್ರಿಟಿಷರು ತಮ್ಮ ಬರ್ಮಾದೇಶದ ಕಡೆ ಮಾರ್ಗವನ್ನು ಸಹಾ ಸರಿಗೊಳಿಸಿದರಿಂದ ಕೆಲಸವು ಸುಗಮವಾಯಿತು.

ಚೀನಾದೇಶದ ಅಪಾರವಾದ ದೇಶಭಕ್ತಿಯಿಂದಲೂ ತ್ಯಾಗದಿಂದಲೂ ಅವರು ಜಪಾನಿಯವರ ಕೂಡೆ ತಮ್ಮ ಮಹಾ ಯುದ್ಧವನ್ನು ನಡೆಸುತ್ತಲಿರುವರು. ಈ ವರೆಗೆ ಪರದೇಶದೊಡನೆ ಸಂಪರ್ಕವಿಲ್ಲದ ಚೀನಾದೇಶದ ಪ್ರಾಂತ್ಯಗಳಿಗೂ ಪರದೇಶದವರಿಗೂ ಈಗ ಮೊದಲನೆ ಬಾರಿ ಪರಸ್ಪರ ಸಂಬಂಧವುಂಟಾಯಿತು. ಚೀನಾ ದೇಶದ ವಿಶ್ವವಿದ್ಯಾಲಯಗಳು ಈ ಕುಮಿಂಗನಲ್ಲಿವೆ. ಬೇಕಾದ ಯುದ್ಧ ಸಾಮಾಗ್ರಿಗಳು ಪೆಟ್ರೋಲ್ ಮೊದಲಾದ ಅಗತ್ಯದ ಸಾಮಾನುಗಳು ಈ ಮಾರ್ಗದಿಂದಲೇ ಅಲ್ಲಿಗೆ ಬರಬೇಕು. ಬ್ರಿಟಿಷ ಸಾಮ್ರಾಜ್ಯಕ್ಕೂ ಮತ್ತು ಚೀನಾದೇಶಕ್ಕೂ [illegible] ಆಗುವರೆ ಸಂದರ್ಭ ಒದಗಿಯದೆ.

ಆದರೂ ಈ ಮಾರ್ಗದಿಂದ ಚೀನಾ ದೇಶದವರು ತೃಪ್ತಿಪಡುವದಿಲ್ಲ. ಈಗಲೂ ಸಹಾ ತಮ್ಮ ದೇಶಕ್ಕೂ ಬರ್ಮಾದೇಶದ ಮುಖ್ಯ ಪಟ್ಟಣವಾದ ರಂಗೂನಿಗೂ ರೈಲು ಮಾರ್ಗವಾಗಬೇಕೆಂಬ ಮಹಾ ಪ್ರಯತ್ನವು ನಡೆಯುತ್ತಲಿದೆ. ಬ್ರಿಟಿಷ ಸರಕಾರದವರು ಖರ್ಚು ಮಾಡಬಹುದಾದ ಹಣದ ಮೇಲೆ ತಾವು ಬಡ್ಡಿಯನ್ನು ನಷ್ಟವಾಗದಂತೆ ಕೊಡುವರೆ ಸಮ್ಮತಿ ಇದೆಯೆಂದು (ಚೀನಾದೇಶದರು) ತಿಳಿಸಿರುವರು.

K. L. Kudva.

ಮಂದ್ರಾಸ್ ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದ ಸರಕಾರಿ ಉದ್ಯೋಗಸ್ಥರ ಪಟ್ಟಿ

ಕ್ಯಾಪ್ಟನ್ ಕೆ/ಮಿಸೆಸ್ ಕುರಿಯನ್; ಮಿಸ್. ಆರ್. ಥೋಮಸ್, ಎಂ ಡಿ. ಸಿಲ್ವ, ಬಿ. ನಾರಾಯಣರಾವ್, ಬಿ ವಿ. ವೆಂಕಟ್ರಮಣ, ಬಿ. ನಾರಾಯಣ ಹೆಗಡೆ, ಕೆ. ಕೇಶವ ಮೆನನ್, ಕೆ. ಕಾಳಪ್ಪ ಶೆತ್ತನ್ನ; ರೂ. 23-14-0 ಬಿ. ಸೂರ್ಯನಾರಾಯಣ ರಾವ್; ರೂ. 23 ಪಿ. ಕೃಷ್ಣರಾವ್, ಒ. ಎಸ್. ಅಂಚನ್, ರೂ. 22 ರಾವ್ ಸಾಹೇಬ್ ಬಿ. ಆನಂದ ಬಾಳಿಗ, ಸಿ. ಎನ್. ನೀಲಕಂಠ ಅಯ್ಯರ್, ಎ. ಕೆ. ಸೇವಕ, ಡಬ್ಲ್ಯು. ಆರ್. ಸುನೀತ, ಎ ಫರ್ನಾಂಡೊ, ಜಿ. ಸಿ. ಸಲ್ಡಾನಾ, ರೂ 21 ಎಂ. ಶ್ರೀನಿವಾಸ ಕ್ಯಾನುಫೋರ್, ರೂ. 20 ಪಿ ವಿ. ಅಪ್ಪು, ಎಸ್ ಕೃಷ್ಣಸ್ವಾಮಿ ಅಯ್ಯರ್, ಎಸ್. ಪಿ ಲೋಬೊ, ಪಿ. ಸಂಕಪ್ಪ, ಪಿ. ಸದಾಶಿವ ಭಟ್, ಪಿ. ಎಫ್. ರೇಗೊ, ಬಿ. ವಿ. ರಾಮಯ್ಯ, ಎ ಟಿ. ಸೊಲೊಮನ್, ಸಿ. ಬಾಲಗುರುನಾಥನ್ ಪಿಳ್ಳೆ; ಎಚ್. ರಾಮಕೃಷ್ಣ, ಜೆ ಬಿ. ಸಿಲ್ವ, ಎಂ. ಶೀನ ಶೆಟ್ಟಿ, ಎ. ಎಸ್ ರಾಜೀವ, ಕೆ. ಅಣ್ಣಪ್ಪ ಪಿ. ಎಫ್ ಸಲ್ಡಾನಾ ರೂ 18 ಎನ್ ಎಸ್ ಉಪಾಧ್ಯಾಯ, ಕೆ. ದೇಜಪ್ಪ ಶೆಟ್ಟಿ, ಕೆ ಗೋವಿಂದನ್ ನಂಬಿಯಾರ್ ರೂ. 17 12-0 ಸಿ ಪಿ ಜೀವರತ್ನಮ್ಮಾಳ್ ರೂ 16 ಎಫ್. ಸೋನ್ಸ್ ರೂ. 14-7-0 ಜೆ. ಎಫ್ ರೇಗೊ ರೂ. 14 ಎಸ್ ಆರ್ ಶಂಕರ ರಾವ್ ರೂ. 13 12-0 ಬಿ ಗಣಪತಿ ರೂ 12 ಕೆ ಜಿ ಎಸ್. ಭಂಡಾರಿ, ಜಿ. ಸಖಾರಾಮ ರಾವ್, ಎಂ. ಜನಾರ್ಧನ ಶೇಟ್. ರೂ 10 10 0 ಎಚ್. ಮನೋಹರ ರಾವ್ ರೂ 10 ಜಿ ಶ್ರೀರಾಮ ಮೂರ್ತಿ, ಮಿಸೆಸ್ ಕೆ ಎನ್ ಲಕ್ಷ್ಮಿಕುಟ್ಟಿ, ಕೆ. ಕುಂಜಿಕೃಷ್ಣ ನಂಬಿಯಾರ್, ಸಿ ಕೃಷ್ಣ ಮೆನನ್, ಎ ಅಕ್ಬರ್ ಕುಂಜಿ ಬಿ ಸೂರ್ಯನಾರಾಯಣ ರಾವ್ ಮಿಸೆಸ್ ಎಸ್. ಅಂಚನ್ ರೂ 9 10 0 ಮಿಸೆಸ್ ಕೆ ಮೀನಾಕ್ಷಿಕುಟ್ಟಿ ಅಮ್ಮ ರೂ 9-5-0 ಮಿಸೆಸ್ ಎಸ್. ಪಿ ಸುಬ್ಬಯ್ಯ ರೂ 8 ಪಿ ಸದಾನಂದ ಪೈ, ಟಿ ವೆಂಕಟ್ರಾವ್ ರೂ 7 2-0 ಮಿಸೆಸ್ ಎ ಅರಾನಾ ರೂ. 7 ಎಂ ಅಪ್ಪು ರಾವ್, ಜೆ ಎಸ್ ಸುವರ್ಣ ಯು ಕುಮಾರಯ್ಯ ರೂ 6-10 0 ಪಿ ಅಣ್ಣಪ್ಪ ಪ್ರಭು ರೂ 6 8 0 ಪಿ. ಕ್ಯಾಸ್ಟಲೊ, ಎಂ ಕರುಣಾಕರ್, ಎಚ್ ಡಿ'ಸೋಜ, ಎ ಡಿ'ಸೋಜ, ಸಿ. ಕಾಂಟ್, ಸಿ. ಲೋಬೊ, ಎಲ್ ಜತ್ತನ್ನ, ಲೀಲಾ ಜಿ ಭಂಡಾರಿ, ರೂ 6 ಎಫ್ ಜೆ. ಮಸ್ಕರೇಂಜಸ್ ರೂ. 5 ಸಿ ಶಂಕರ ನಾಯರ್, ಎಂ ಫೆರ್ನಾಂಡಿಸ್, ಎಂ. ಆನಂದನ್, ಎಚ್ ನಾಗಪ್ಪ, ಕೆ. ದಾಮೋದರ ನಂಬಿಯಾರ್, ಕೆ ಎಂ ಹತ್ವಾರ,

5 ರೂಪಾಯಿಗಳಿಗಿಂತಲೂ ಕಡಿಮೆ ತೆತ್ತವರ ಜುಮ್ಲಾ ರೂ. 241-1-0

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲಕಾಜ ನಂಬ್ರ 320/40

ಬಳೂರ ಅಂಣಪ್ಪ ನಾಯ್ಕರ ಮಗ ಸಂಜ್ಞ 2ನೇ ಯಡ್ತರೆ ಗ್ರಾಮದ ವಾಸಸ್ಥ . ವಾದಿ

ಮತ್ತು

ರಾಮಯ್ಯ ಬಳೂರ ವೆಂಕಪ್ಪಯ್ಯರ ಮಗ 5ನೇ ತಗ್ಗರ್ಸೆ ಗ್ರಾಮದ ವಾಸಸ್ಥ. . ಪ್ರತಿವಾದಿ

ಇವರೊಳಗೆ

ಪ್ರತಿವಾದಿಯು ವಾದಿಗೆ ತಾ. 29-8-1937 ರಲ್ಲಿ ರೂ. 86-12-0ಕ್ಕೆ ಬರಕೊಟ್ಟ ದಿಮಾಂಡ ನೋಟಿನ ಅಸಲು ಬಡ್ಡಿ ರೂ. 102-5-6 ಬರಮಾಡಿಕೊಳ್ಳಲಿಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಮೇಲಣ ದಾವೆಯನ್ನು ಸದ್ರಿ ಕೋರ್ಟು, ಮುಂದೆ ತಾ. 7-11-40ನೇ ಗುರುವಾರ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ತನಿಖೆ ಇಟ್ಟಿದ್ದಾರೆ. ಆ ದಿವಸ ಪ್ರತಿವಾದಿಯು ಹಾಜರಾಗಿ ಯಾ ವಕಾಲತು ಕೊಟ್ಟು ವ್ಯವಹರಿಸದ್ದೆ ಹೋದರೆ ಎಕ್ಸ್‌ಪಾರ್ಟೆ ಮಾಡಿ ಡಿಕ್ರಿ ಮಾಡಲಾಗುತ್ತದೆಂತ ಈ ಮೂಲಕ ತಿಳಿಸಲಾಗುತ್ತದೆ.

ತಾ. 18-10-40 } ಟಿ. ಗಣೇಶರಾವ್
ಕುಂದಾಪುರ } ವಾದಿ ಕಡೆ ವಕೀಲ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲಸಂಬ್ರ. 543/1940

ಮಾಧವ ನಾಯ್ಕ, ಪದ್ಮನಾಭನಾಯ್ಕರ ಮಗ ಮಂಗಳೂರು ತಾಲ್ಲೂಕು ಪಡು ಕೋಡಿ ಗ್ರಾಮಸ್ಥ } ವಾದಿ

ಎದ್ರು

1. ರಾಮಯ್ಯ ಸೆಟ್ಟಿ. 2. ಗಣಪ ಮಾಣ್ಣ—
ಪ್ರತಿವಾದಿರು

1ನೇ ಪ್ರತಿವಾದಿ—ಮಂಗಳೂರು ತಾಲ್ಲೂಕು ತೆಂಕ ಯೆಕ್ಕಾರು ಗ್ರಾಮದ ಬೊಳ್ಳಿಮಾರು ಮನೆಯಲ್ಲಿರುವ ಗಟ್ಟಿಪಟೀಲು ಸುಬ್ಬಪ್ಪ ಸೆಟ್ಟಿ ಮಗ ರಾಮಯ್ಯ ಸೆಟ್ರಿಗೆ—

ನೀವು ವಾದಿಗೆ ತಾ. 15-7-1937ರಲ್ಲು ಬರಕೊಟ್ಟ ದಾವಾ ದಿ ಪ್ರೋ. ನೋಟಿನ ಅಸಲು ಬಡ್ಡಿ ರೂ. 103-2-0ನ್ನು ಮುಂದಿನ ಬಡ್ಡಿ ದ ಕೋರ್ಟ ಖರ್ಚು ಸಮೇತ ಬರಮಾಡಿಕೊಳ್ಳುವರೆ ಸದರಿ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಬರುವ ತಾ. 12-11-40ಕ್ಕೆ ಇಟ್ಟಿರುತ್ತದೆ ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದರಿ ತಾ 12 11-40 ಕ್ಕೆ ಪೂರ್ವಾಹ್ನ 10 ಗಂಟೆಗೆ ಸದರಿ ಕೋರ್ಟಿನ ಮುಂದೆ ಖುದ್ದಾಗಲೀ ಯಾ ಅಧಿಕಾರ ಹೊಂದಿದ ಪ್ಲೀಡರ ಮುಖಾಂತರವಾಗಲೀ ಹಾಜರಾಗಿ ಅದನ್ನು ಜಾಹೀರು ಮಾಡಿ ಕೊಳ್ಳತಕ್ಕದ್ದು ತಪ್ಪಿದ್ದಲ್ಲಿ ಸದರಿ ವ್ಯಾಜ್ಯವು ನಿಮ್ಮ ಗೈರು ಹಾಜರಿನಲ್ಲಿಯೇ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು

ಮಂಗಳೂರು } B Vasudeva Kamath
ತಾ 22-10 40 } ವಾದಿಕಡೆ ವಕೀಲ



ನಿಮ್ಮ ಮೈಚರ್ಮವನ್ನು ಆರೋಗ್ಯದಲ್ಲಿಯೂ ಕಲೆಯಿಲ್ಲದೆಯೂ ಕಾಪಾಡಿರಿ

ಜ್ಯಾಂಬಕನ್ನು ಪ್ರತಿರಾತ್ರಿಯೂ ಸವರಿಸಿರಿ.

ಜ್ಯಾಂಬಕನ್ನು ಗಾಯಗಳ ಮೇಲಾಗಲೀ, ಬಾತು ಹೋದ ಭಾಗದ ಮೇಲಾಗಲಿ, ವ್ರಣಗಳ ಮೇಲಾಗಲೀ, ಕಾಲುಕುಂಟೆನ ಮೇಲಾಗಲೀ ಸವರಿಸಿದೊಡನೆ ಗುಣವಾಗಲೂ ಪ್ರಾರಂಭಿಸುತ್ತದೆ ಇದು ಹೇಗೆಂದರೆ ಜ್ಯಾಂಬಕ್ ನಲ್ಲಿರುವ ವನೌಷಧಿಗಳ ಎಣ್ಣೆಯು ದೇಹದ ನರನಾಡಿಗಳಿಂದ ಹೀರಲ್ಪಟ್ಟು ನಿಮಗುಂಟಾದ ಬಾಧೆಯ ಬುಡವನ್ನೇ ಚಿಕಿತ್ಸೆಗೆಯುವುದು ಜ್ಯಾಂಬಕು ನೋವನ್ನು ನಿವಾರಿಸುತ್ತದೆ, ಬಾತುವಿಕೆಯನ್ನು ಕಡಿಮೆಮಾಡುತ್ತದೆ ಮತ್ತು ವ್ರಣಗಳಿಂದ ಬರುವ ರಸಿಗೆಯನ್ನು ಒಣಗಿಸುತ್ತದೆ ಇದನ್ನು ಎಲ್ಲಾ ಕಡೆಗಳಲ್ಲಿಯೂ ಡಾಕ್ಟರರೂ ನರ್ಸುಗಳೂ ಶಿಫಾರಸು ಮಾಡಿರುತ್ತಾರೆ ಜ್ಯಾಂಬಕು ಮುಲಾಮು ರೂ 1—0—0 ಅಥವಾ 2—4—0, ಜ್ಯಾಂಬಕ್ ಸೋಪು ರೂಪ್ಯ 1—0—0 ಜ್ಯಾಂಬಕು ಪೌಡರು ರೂಪ್ಯಾ 1—0—0

ಏಜಂಟ್ಸ್ — ಮೆಸರ್ಸ್ ದಾಧಾ ಮತ್ತು ಕಂಪೆನಿ, ಓ. ಟಿ. ಮದ್ರಾಸು.

ZAM-BUK

ಹಾನಿಕೊಬ್ಬುಗಳು ಇದರಲ್ಲಿ ಇರುವುದಿಲ್ಲ

ನೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಹಿಂದೂಸ್ಥಾನದ ವಿಮಾನ ಪಡೆಯನ್ನು ಕಟ್ಟಲು ನೆರವಾಗಿರಿ.

ಹಿಂದೂಸ್ಥಾನ ರಕ್ಷಣಾ ಬಾಂಡ್‌ಗಳನ್ನು ಕೊಳ್ಳಿರಿ.

ವಿಜ್ಞಾನಯುಗ

ರಣರಂಗದಲ್ಲಿ ಉರಿಕಾರುವ ಟ್ಯಾಂಕುಗಳು
ಅವುಗಳ ಇತಿಹಾಸ ಮತ್ತು ವಿನಾಶಕಾರ್ಯ!

ಕಳೆದ ಮಹಾಯುದ್ಧದ ಕೊನೆಯ ಕಾಲದಲ್ಲಿಯೇ ಟ್ಯಾಂಕುಗಳೆಂಬ ಸಿಡಿವ ವಾಹನಗಳು ರಣಾಂಗಣದಲ್ಲಿ ಕಾಲಿಟ್ಟವು. ಬ್ರಿಟಿಷರು ಅಭೇದ್ಯವಾದ ಈ ಸಂಚಾರಕ ಕೋಟೆಗಳನ್ನು ಬಹಳ ರಹಸ್ಯದಲ್ಲಿ ತಯಾರಿಸಿ ೧೯೧೬ನೆ ಇಸವಿಯ ಸಪ್ಟಂಬರ ಸುಮಾರಿಗೆ ಫ್ರಾನ್ಸಿನ ಸೊಮ್ಮೆ ರಣಕ್ಷೇತ್ರಕ್ಕೆ ಕಳುಹಿಸಿದ್ದರು. ಇವುಗಳ ಪ್ರಥಮ ದರ್ಶನವಾದಾಗ ಜರ್ಮನರು ಇವನ್ನು ನೋಡಿ ಬೆಚ್ಚಿ ಬೆದರಿ ಹೋಗಿದ್ದರು. ಅವುಗಳು ದಿಣ್ಣೆ-ಗುಳಿ, ಬೇಲಿ ಗೋಡೆಯನ್ನಾವುದನ್ನೂ ಲಕ್ಷಿಸದೆ ಉರಿ ಕಾರುತ್ತ ಮುಂದರಿಯುತ್ತಿರುವಿದನ್ನು ನೋಡಿ, ನಿಜಕ್ಕೂ ಇವುಗಳಲ್ಲಿ ತಮ್ಮ ಸೋಲಿಗೆ ಕಾರಣವಾಗುವ "ಏನೋ ಒಂದು ಅದೃಶ್ಯ ಶಕ್ತಿ ಇರಬೇಕೆಂದು ಜರ್ಮನರು ಎಣಿಸಿದ್ದರು. ಕೊನೆಗೆ ಅವರ ಎಣಿಕೆಯು ನಿಜವಾಯಿತು. ಆಗ ಅವುಗಳನ್ನು ಪೆಟ್ರೋಲಿನಿಂದ ನಡೆಸುತ್ತಿದ್ದರು.

ಸುಧಾರಣೆಯ ಪ್ರಯತ್ನಗಳು

೧೯೧೮ ರಲ್ಲಿ ಯುದ್ಧವು ಮುಗಿದ ಬಳಿಕ ವಿಜ್ಞಾನಿಗಳು ಈ ಟ್ಯಾಂಕುಗಳ ಸುಧಾರಣೆಯ ಕಾರ್ಯದಲ್ಲಿ ತೊಡಗಿದರು. ವಿಕ್ಕರ್ಸ ಮತ್ತು ಆರ್ಮಸ್ಟ್ರೋಗ ಎಂಬ ಯುದ್ಧೋಪಕರಣಗಳ ತಯಾರಿ ಕಂಪನಿಯವರು ೧೯೩೧ ರಲ್ಲಿ ತಯಾರಿಸಿದ ಟ್ಯಾಂಕು ಮೈದಾನ ಪ್ರದೇಶದಲ್ಲಿ ತಾಸಿಗೆ ೪೦ ಮೈಲುಗಳ ವೇಗದಿಂದ ಓಡಲಿಕ್ಕೆ ಸಮರ್ಥವಾಗಿತ್ತು. ಇದು ನೀರಿನಲ್ಲಿ ತಾಸಿಗೆ ೬ ಮೈಲಿಯಂತೆ ಹೋಗಬಲ್ಲುದಾಗಿತ್ತು ಮತ್ತು ಸತತವಾಗಿ ೩೦ ಡಿಗ್ರಿಗಳ ಏರನ್ನು ಹಾಗೂ ಆಗಾಗ ೪೫ ಡಿಗ್ರಿಗಳ ಏರನ್ನು ಏರಲಿಕ್ಕೆ ಬರುತಿತ್ತು. ಇದರ ಭಾರ ಸುಮರು ೩ ಟನ್ ಮತ್ತು ಉದ್ದ ಅಗಲ ಎತ್ತರಗಳು ಕ್ರಮವಾಗಿ ೧೩ ಅಡಿ, ೮ ಅಡಿ ೧೦ ಅಂಗುಲ ಮತ್ತು ೬ ಅಡಿ ಆಗಿದ್ದವು. ವರ್ಷಗಳು ಹೋಗುತ್ತ ಟ್ಯಾಂಕುಗಳ ರಚನಾಕ್ರಮಗಳಲ್ಲಿ ಹೆಚ್ಚೆಚ್ಚು ಸುಧಾರಣೆಗಳು ಆಗುತ್ತ ಬಂದುವು. ಈಗ ಈ ಟ್ಯಾಂಕುಗಳು ಎಂಥ ಒರಟು ನೆಲದ ಮೇಲಾದರೂ ಹರಿದಾಡಿ ಮುಂದಕ್ಕೆ ಹೋಗ ಬಲ್ಲುವು. ಅವುಗಳ ಧಾವ ಮತ್ತು ಸಾಂಚಾರಿಕ ಸೌಲಭ್ಯವು ಶತ್ರು ಪಕ್ಷದ ಮಣ್ಣು ದಿಣ್ಣೆಗಳ ರಚನೆಗಳನ್ನು ಧೂಳೀಪಟಮಾಡಿ ಯುದ್ಧಾಸಕ್ತ ಕಾಲ್ದಳಗಳ ಸಹಾಯಕ್ಕೆ ಬೆಂಬಲವಾಗಿ ಇರಬಲ್ಲವು.

ಮೂರು ಜಾತಿಯ ಟ್ಯಾಂಕುಗಳು

ಟ್ಯಾಂಕುಗಳು ಸಣ್ಣವು, ದೊಡ್ಡವು ಮತ್ತು ಮಧ್ಯಮ ಜಾತಿಯವುಗಳೆಂದು ಮೂರು ತರದವುಗಳಾಗಿ ಇರುತ್ತವೆ. ಸಣ್ಣ ಟ್ಯಾಂಕುಗಳು ೬೦ ಮೈಲುಗಳ ವೇಗದಿಂದ ಓಡುತ್ತವೆ. ಅವುಗಳಲ್ಲಿ ಮೂರು ಸಂಚಾಲಕರು ಇರುತ್ತಾರೆ. ಎರಡು ಮೆಶೀನು ಗನ್ನುಗಳು ಇರುತ್ತವೆ. ೪೫ ಡಿಗ್ರಿಗಳ ಏರನ್ನು ಹತ್ತಬಲ್ಲವು. ಎರಡಡಿ ಎತ್ತರದ ಗೋಡೆಗಳನ್ನು ಹಾರಬಲ್ಲವು ಮತ್ತು ೫ ಅಡಿ ಅಗಲದ ಖಣಿಯನ್ನು ನೆಗೆಯ ಬಲ್ಲುವು. ಅವು ೪೩/೪ ಟನ್ ಭಾರವಾಗಿ ಇರುತ್ತವೆ. ಮಧ್ಯಮ ಜಾತಿಯವುಗಳು ೧೩ ಟನ್ ಭಾರವಾಗಿವೆ. ಅವುಗಳಲ್ಲಿ ಐವರು ಸಂಚಾಲಕರು ಇರುತ್ತಾರೆ. ಮೂರು ಮೆಶಿನುಗನ್ನುಗಳು ಮೂರು ಹುಡಿಗುಟ್ಟುವ ಗನ್ನುಗಳೂ ಇರುತ್ತವೆ. ವೇಗವು ತಾಸಿಗೆ ೨೦ ಮೈಲಿಯಂತೆ ಇರುತ್ತದೆ. ೪೫ ಡಿಗ್ರಿಗಳ ಏರನ್ನು ಹತ್ತಬಲ್ಲವು. ಮೂರಡಿ ಎತ್ತರದ ದಿಣ್ಣೆಗಳನ್ನು ಹಾರಬಲ್ಲುವು ಮತ್ತು ೬ ಅಂಗುಲದ ಖಣಿಯನ್ನು ನೆಗೆದು ಹೋಗ ಬಲ್ಲುವು. ಭಾರವಾದ ದೊಡ್ಡಜಾತಿಯ ಟ್ಯಾಂಕುಗಳಿಗೆ ತಾಸಿಗೆ ೩೦ ಮೈಲುಗಳ ವೇಗ ಇರುತ್ತವೆ. ೧೫ ಟನ್ ಭಾರವಾಗಿ ಇರುತ್ತವೆ. ಆರು ಮಂದಿ ಸಂಚಾಲಕರಿರುತ್ತಾರೆ. ೪೦ ಡಿಗ್ರಿಗಳ ಏರನ್ನು ಹತ್ತುತ್ತದೆ. ೩ ಅಡಿ ಎತ್ತರದ ಗೋಡೆಗಳನ್ನು ಹಾರುತ್ತದೆ. ೯ ಅಡಿ ಅಂಗುಲದ ಖಣಿಯನ್ನು ನೆಗೆದು ಹೋಗುತ್ತವೆ ಮತ್ತು ಅದರಲ್ಲಿ ಮೂರು ಮೆಶಿನುಗನ್ನುಗಳೂ, ಮೂರು ಹುಡಿಗುಟ್ಟುವ ಗನ್ನುಗಳೂ ಇರುತ್ತವೆ. ಇವೆಲ್ಲ ಬ್ರಿಟಿಷರ ಕ್ರಮದವುಗಳಾದುವು. ಫ್ರೆಂಚರ ಮತ್ತು ಜರ್ಮನರ ಮೂರು ಜಾತಿಯ ಟ್ಯಾಂಕುಗಳ ಅಳತೆ ಪರಿಮಾಣ ಕಾರ್ಯಸಾಧಕ ಶಕ್ತಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇರುತ್ತದೆ. ಆದರೆ ಅವುಗಳ ರಚನಾಕ್ರಮ ಮತ್ತು ಕಾರ್ಯೋದ್ದೇಶಗಳು ಒಂದೇ ಆಗಿರುವವು.

ಟ್ಯಾಂಕುಗಳ ಯುದ್ಧಕ್ರಮ

ಟ್ಯಾಂಕುಗಳ ಒಂಟಿಯಾಗಿರುವದಕ್ಕಿಂತಲೂ ವ್ಯೂಹ ಕಟ್ಟಿಕೊಂಡು ಪರಿಣಾಮಕಾರಿಯಾಗಿ ಶತ್ರುಪಕ್ಷದೊಡನೆ ಹೋರಾಡಬಲ್ಲುವು. ವ್ಯೂಹ ಕಟ್ಟಿ ಹೋರಾಡಿಯೇ ಅವು ಶತ್ರುಗಳನ್ನು ನಿಗ್ರಹಿಸುತ್ತವೆ. ಟ್ಯಾಂಕುಗಳ ಸಂಚಾಲಕರು ಬಹಳ ಸಾಹಸಿಗರೂ ಧೈರ್ಯಶಾಲಿಗಳೂ ಮಾತ್ರವಲ್ಲ ತಮ್ಮ ಕೆಲಸಗಳಲ್ಲಿ ಒಳ್ಳೆಯ ಚತುರರೂ ಕುಶಲರೂ ಆಗಿರಬೇಕು. ಅವರು ಎಂಥ ಪ್ರಸಂಗಗಳಲ್ಲಾದರೂ ಬೆದರದ ಕಚ್ಚೆದೆಯ ದಂಡಾಳುಗಳಾಗಿರಬೇಕು ಮಾತ್ರವಲ್ಲ ಟ್ಯಾಂಕುಗಳ ಹಾಳಾದ ಭಾಗಗಳನ್ನು ಸರಿಪಡಿಸುವುದನ್ನೂ ಕಲಿತಿರಬೇಕು. ಎಲ್ಲಾ ಟ್ಯಾಂಕುಗಳಲ್ಲಿ ತಂತಿ ರಹಿತವಾದ ಟೆಲಿಫೋನ್ ಮತ್ತು ಟೆಲಿಗ್ರಾಫ್ ಉಪಕರಣಗಳು ಇರುತ್ತವೆ.

ಜರ್ಮನ ಟ್ಯಾಂಕುಗಳು ಯುದ್ಧಕ್ಷೇತ್ರಗಳಲ್ಲಿ ಹೋರಾಡುತ್ತಿರುವಾಗ ಯುದ್ಧ ವಿಮಾನಗಳೂ ಅವುಗಳೊಂದಿಗೆ ಬೆಂಬಲಕ್ಕೆ ಇರುತ್ತವೆ. ಜರ್ಮನರು ಉರಿಕಾರುವ ಒಂದು ವಿಜಾತೀಯ ಟ್ಯಾಂಕನ್ನೂ ಬಳಕೆಗೆ ತಂದಿರುತ್ತಾರೆ. ಈ ಜಾತಿಯ ಟ್ಯಾಂಕಿನಲ್ಲಿರುವ ಒಂದು ಕೊಳವೆಯ ಬಾಯಿಯಿಂದ ಕಾಡಪೆಟ್ರೋಲಿನ ಉರಿಯು ಪ್ರಚಂಡ ಜ್ವಾಲೆಗಳನ್ನು ಕೊಟ್ಟು ಶತ್ರುಪಕ್ಷವನ್ನು ಉರಿಸುತ್ತದೆ.

ಅಮೇರಿಕದ ಟ್ಯಾಂಕುಗಳು

ಅಮೇರಿಕದ ಸಂಯುಕ್ತ ಸಂಸ್ಥಾನಗಳು ತಯಾರಿಸಿರುವ ಟ್ಯಾಂಕುಗಳು ತಾಸಿಗೆ ೫೦ ಮೈಲುಗಳ ವೇಗದಿಂದ ಹೋಗುತ್ತವೆ. ಅವುಗಳಲ್ಲಿ ನಾಲ್ಕು ಮಂದಿ ಸಂಚಾರಿಗಳು ಇರುತ್ತಾರೆ. ಅವುಗಳಲ್ಲಿ ಮೆಶೀನು ಗನ್ನುಗಳೂ, ಎಂಟಿ ಟ್ಯಾಂಕ ಮೆಶೀನ ಗನ್ನುಗಳೂ, ಸಬ್ ಮೆರೀನು ಗನ್ನುಗಳೂ ಇರುತ್ತವೆ. ರೇಡಿಯೋದ ಮೂಲಕ ಅವುಗಳ ಸೂತ್ರಚಾಲನ ಮಾಡಲಿಕ್ಕಾಗುತ್ತದೆ. ಅಲ್ಲದೆ ಬಿರಂದಿ ಗುಂಡಿಗೂ ಒಡೆಯದ ಅಥವಾ ಕರಗದ ಉಕ್ಕಿನ ಕವಚದಿಂದ ಮುಚ್ಚಿದ ಅತಿ ಸಣ್ಣ ಜಾತಿಯ ಅನೇಕ ಟ್ಯಾಂಕುಗಳು ಅಮೇರಿಕನರ ಬಳಿ ಇವೆ. ಇವು ಒರೇ ೧೦೦೦೦ ರಾತಲು ಭಾರವಾಗಿರುವವು. ಇವುಗಳಲ್ಲಿ ಒಬ್ಬ ಸಂಚಾಲಕನೂ ಇಬ್ಬರು ಗುಂಡು ಹಾರಿಸುವವರೂ ಇರುತ್ತಾರೆ.

ಟ್ಯಾಂಕು ನಿರೋಧಕ ಸಾಧನಗಳು

ಯಾವುದಾದರೊಂದು ಹೊಸ ರೋಗವು ಕಾಣಿಸಿಕೊಂಡಾಗ ಅದಕ್ಕೆ ಹೊಸ ಔಷಧಿಯನ್ನು ಹುಡುಕುವ ಪ್ರಕಾರ ಯುದ್ಧ ಕ್ಷೇತ್ರದಲ್ಲಿ ನವೀನ ಯುದ್ಧೋಪಕರಣಗಳು ಕಾಣಿಸಿಕೊಂಡಾಗ, ಅವುಗಳನ್ನು ಮುರಿಯುವ ಸಾಧನಗಳನ್ನೂ ತಜ್ಞರು ಹುಡುಕಿಕೊಳ್ಳುತ್ತಾರೆ. ಟ್ಯಾಂಕುಗಳನ್ನು ಕೆಲಸಕ್ಕೆ ಬಾರದ ಹಾಗೆ ಮಾಡುವ ದಳೊತ್ಕ್ಷರ ಅವುಗಳ ಮಾರ್ಗದಲ್ಲಿ ಗೂಡುಗಳನ್ನು ಇಟ್ಟಿರುತ್ತಾರೆ. ದಣಿ ... ಕೊಳ್ಳಲಿಕ್ಕೆ ಬರುವ ಹುಲಿಯು ಗೂಡಿನಲ್ಲಿ ಬಿದ್ದು ಸಾಯುವ ಪ್ರಕಾರ ಈ ಟ್ಯಾಂಕುಗಳ ಸ್ಥಿತಿಯಾಗುತ್ತದೆ. ಮತ್ತೆ ಈ ಟ್ಯಾಂಕುಗಳನ್ನು ಹೊಡೆದು ಹಾಕಲಿಕ್ಕೆ ಎಂಟಿ ಟ್ಯಾಂಕು ಗನ್ನುಗಳು ಇರುತ್ತವೆ. ಇವುಗಳಿಂದ ಹಾರುವ ಗುಂಡುಗಳು ಟ್ಯಾಂಕುಗಳ ಎಷ್ಟು ಗಟ್ಟಿಯಾದ ಉಕ್ಕಿನ ಹಾಳೆಯನ್ನಾದರೂ ಭೇದಿಸಬಲ್ಲುವು. ಅಲ್ಲದೆ ಇವುಗಳನ್ನು ಎದುರಿಸಲಿಕ್ಕೆ ಎಂಟಿ ಟ್ಯಾಂಕ ತೋಪಿಗಳೂ ಇರುತ್ತವೆ. ಟ್ಯಾಂಕುಗಳನ್ನು ಎದುರಿಸುವ ಒಂದೇ ಒಂದು ಉದ್ದೇಶದಿಂದ ಈ ಎಲ್ಲಾ ಸನ್ನಾಹಗಳಿಂದ ಸಜ್ಜಿತವಾದ ಸಾಧನಗಳೂ ಆಗಿವೆ.

ಫಕ್ಕನೆ ಉಂಟಾದ ಶೀತವು ನಿಮೋನಿಯವಾಗಿ ಪರಿಣಮಿಸಬಹುದು

ಫಕ್ಕನೆ ಉಂಟಾಗುವ ಶೀತ ಅಥವಾ ಚಳಿಯು, ಬ್ರೊಂಕೈಟಿಸ್, ನಿಮೋನಿಯಾ ಅಥವಾ ಇನ್ನಾವುದಾದರೂ ಭಯಂಕರ ಬಾಧೆಗಳಾಗಿ ಪರಿಣಮಿಸಬಹುದು. ಆದ್ದರಿಂದ ನೀವು ಚಳಿಯಿಂದ ನಡುಗುತ್ತಿರುವಿರಾದರೆ, ಅಥವಾ ಸೀನುತ್ತಿರುವಿರಾದರೆ ಕೂಡಲೇ ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ.

ಪೆಪ್ಸ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧಿಯ ಎಸೆನ್ಸು ನೀವು ಉಚ್ಛ್ವಸಿಸಿದ ವಾಯುವಿನೊಂದಿಗೆ ಬೆರೆತು ಶ್ವಾಸಕೋಶಗಳನ್ನು ಸೇರುತ್ತದೆ. ಈ ಕಾರಣದಿಂದ ಪೆಪ್ಸ ಶ್ವಾಸಕೋಶಗಳನ್ನು ಬೆಚ್ಚಗಿರಿಸುತ್ತದೆ. ಪೆಪ್ಸ ವಿಷಕಾರ ಕ್ರಿಮಿಗಳನ್ನು ನಾಶಮಾಡುತ್ತದೆ. ಗಂಟಲು ಬೇನೆಯನ್ನು ನಿವಾರಿಸಿ, ಶೀತದಿಂದ ಉಬ್ಬಿದ ವಾಯುನಾಳಗಳನ್ನು ಗುಣಪಡಿಸಿ ಶ್ವಾಸಕೋಶಗಳನ್ನು ಬಲಪಡಿಸುತ್ತದೆ. ಎಲ್ಲಾ ಔಷಧ ವ್ಯಾಪಾರಿಗಳು ಪೆಪ್ಸನ್ನು ರೂಪ್ಯಾ 1ರಂತೆ ಮಾರುತ್ತಾರೆ.

ಏಜಂಟ್ಸ್:—
ಮೆಸರ್ಸ್ ದಾಥಾ ಮತ್ತು ಕಂಪೆನಿ ಪಾರ್ಕಟೌನ್ ಮದ್ರಾಸು.

ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಕವಾದ ಶ್ವಾಸನೀಯ ಗುಳಿಗೆಗಳು

ಕಂಬೈನ್ಡ್ ಬುಕ್ಕಿಂಗ್ ಏಜೆನ್ಸಿ ★ ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 15-11-1940ರಿಂದ ಕುಳುಗುಂದ ಜಾನುವಾರ ಸಂತೆ ತಾ. 29-11-1940ರ ವರೆಗೆ

ತಾ. 25-11-1940ರಿಂದ ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ ತಾ. 29-11-1940ರ ವರೆಗೆ

(ತಾರೀಕು 29—11—1940ರಲ್ಲು ಲಕ್ಷದೀಪೋತ್ಸವ)

ತಾ. 30-11-1940ರಿಂದ ಶ್ರೀ ಸುಬ್ರಹ್ಮಣ್ಯ ಷಷ್ಠೀ ಸಮಾರಂಭ 5-12-1940ರ ವರೆಗೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency, MANGALORE.

he Joint Booking Office, KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮಾನುಸಾರ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಕದಸಂದರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಂಡಾಹಿದು, ಆಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯರೂ. ೪-೦-೧

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವುಕಾರ ಶ್ರೀನಿವಾಸರಂಗಪ್ಪ

[ಸ್ಥಾಪನೆ: ಕ್ರಿ. ಶ. 1858]

ಉಣ್ಣೆ ಕಾರಿಕೆಯು

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವುಕಾರ ಬಜಾರ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	—	
„ ದುಯಂ „ „	1—15—0	—
„ ಅವ್ವಲ್ ಸುಗ್ಗಿ „		
„ ದುಯಂ „ „		
ಅಕ್ಕಿ ಅವ್ವಲ್ ಗುಡ್ಡು „	4—8—0	4—10—0
„ ದುಯಂ „ „	4—5—0	4—7—0
„ ಅವ್ವಲ್ ಸುಗ್ಗಿ „	4—9—0	4—10—0
„ ದುಯಂ „ „	4—4—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	40—0—0
ಸಿಪ್ಪೆ ಇದ್ದದ್ದು „	37—[illegible]—0	42—8—0
ಕೊಬ್ಬರಿ ಅಳಿಯ ಖಂಡಿಗೆ	56—0—0	
„ ಬಿಲ್‌ಕಸಂದಿ „	—	—
ತೆಂಗಿನ ಎಣ್ಣೆ ಮುಡಿಗೆ	4—0—0	4—1—0
[illegible] 1000ಕ್ಕೆ	[illegible]—8—0	4—8—0
ಗೇರುಬೀಜ ಮುಡಿಗೆ	3—12—0	4—0—0
[illegible] ಖಂಡಿಗೆ	35—0—0	40—0—0
[illegible]	12—8—0	14—0—0

ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 25—10—1940 [ಸಂಚಿಕೆ 48

(ESTABLISHED 1908)

The Bombay Life Assurance Company, Ltd

FIGURES FOR 1939

Completed business exceeds	....	Rs. 1 42 Crores
Total Funds exceed	....	Rs. 1·52 Crores
Premium income during the year exceeds	...	Rs. 37½ Lakhs
Claims paid during the year exceed	....	Rs. 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.

Car Street, Mangalore.

Central Station Road, Trivandrum.

Gantam Nivas, Charni Road, Girgaum, Bombay No. 4.

Post Box No. 337 Mount Road, Madras.

Visweswarapuram Circle, Bangalore City.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಗಜಕರ್ಣ, ಕರೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.



ಹಿಂದು ಮನೆಯವರೆಲ್ಲರೂ ಪ್ರತಿದಿನ ಉಪಯೋಗಿಸಲ್ಪಡುವ ವಸ್ತುವೆಂದರೆ

ವೆಂಕಟಗೊಡು ಟೂತ್ ಪೌಡರ್

ಸದ್ಗುರು ಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1–11–1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

...ಸಾಗಬಲ್ಲರು. ಆದರೆ, ...ತಲೂ ಹೆಚ್ಚಿನದು. ...ಚ್ಚಿನ ವಿಶ್ವಾಸವಿಲ್ಲದ ಇನ್ನೊಂದು ಸೂಚನೆ

...ವ ಪತ್ರಿಕೆಗಳಾಗಿರಿ

...ಲೂ ಸಂಚರಿಸುವ ವೃತ್ತಪತ್ರಿಕೆ ...ವಾದ ಸುದ್ದಿಯನ್ನು ಬಾಯಿಂದ ...ತನಗೆ ನಿಶ್ಚಿತವಾಗಿ ತಿಳಿದು ...ದೊರೆಯುವನಿಗೆ ತಿಳಿಸುವುದು. ಸರಕಾರವೂ ನಿರ್ಬಂಧಿಸಲಾ...ರಿಗೆ ಶೋಧಿಸಲ್ಪಡದಿರುವ ...ಶ್ರಯದ ಪತ್ರಿಕೆಯಿದಾಗಿದೆ. ಎಷ್ಟು ಜಾಗ್ರತೆ ಮಾಡಿದರೂ ...ಕೆಯಬಾರದು

ಹಾಳು ಹರಟೆ ಹೇಳ...ವೆಂದು ನಿಶ್ಚಯವಾದ...ಕ. ಈಗಿನ ಪತ್ರಿಕೆಗ... ಪಕ್ಷದ ಸುದ್ದಿ, ಬಣ್ಣ ಇರುವಂಥವರೆ ಹೀ... ಬರುವುದರಿಂದ ಅದು ರಾಯರಾಗಿ ಹೋ... ...ನ ಹೊರಡಿ... ಅಂಥ ಸಹಾನುಭೂ...ಕ ಪ್ರಕಟಣೆಗಳೂ ಭಾರತ ಸಚಿವರಾ... ...ಳಗಾಗಬಹುದು, ನಕ್ಕೆ ಕೂಡಲೇ ... ...ಕ ಸುಲಭವೆಂದು ... ...ದಡಿಯ ಲ್ಲಿ ಆದರೆ ತೋರುವ ... ...ರತೀಯ ಮಾಡುವಂಥವುಗ... ...ಸಾಗ... ಟಿಷರು ವಿಶಾಲ ...ದ ಕೆಲಸವಾ... ಯನ್ನು ತೃಪ್ತಿಕರವ... ...ಣವಾಗುವುದಿಲ್ಲ... ಅದರಲ್ಲಿ ಉಲ್ಲೇಖಿ...

ಭಾರತೀಯರನ್ನು ತೃಪ್ತಿಗೊಳಿಸಬೇಡ



ನೈಸರಾಯರು

ಜಗತ್ತಿನ ಹಿತಕ್ಕಾಗಿಯಾದರೂ ಹಿಂದೀ ಜನತೆಯನ್ನು ಒಡಂಬಡಿಸಿ ಹಿಂದುಸ್ಥಾನದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂದೂ, ಈ ಕಾರಣದಿಂದ ಬ್ರಿಟಿಷ ಸರಕಾರವು ಹಿಂದೀಯರನ್ನು ಸಂತುಷ್ಟರನ್ನಾಗಿ ಮಾಡುವ ಇನ್ನೊಂದು ಪ್ರಯತ್ನವನ್ನು ಕೂಡಲೇ ಮಾಡಬೇಕೆಂದೂ ಸುಪ್ರಸಿದ್ಧ ಪತ್ರಿಕಾಲೇಖಕರಾಗಿರುವ ಹೆನ್ಸ್ ಸ್ವಾಫರರವರು ಲಂಡನಿನ ಪೀಪಲ್ ಎಂಬ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿರುತ್ತಾರೆ. ಅಂತಹ ಹಲವು ಮುಖಂಡರ ಮತ್ತು ಪತ್ರಿಕೆಗಳ ಅಭಿಪ್ರಾಯಗಳು ಕೆಳಗೆ ಕೊಟ್ಟಿದೆ.

ಭಾರತದ ಸಹಾಯ ಅವಶ್ಯವಿದೆ

ಪೂರ್ವದ ಕಡೆಗೆ ದಂಡಯಾತ್ರೆಯನ್ನು ಆರಂಭಿಸಿರುವ ಹಿಟ್ಲರನನ್ನು ಆ ಕಡೆಯಿಂದ ಸಂಪೂರ್ಣ ನಿರೋಧಿಸುವದು ಶಕ್ಯವಾಗಬೇಕಾದರೆ ಹಿಂದುಸ್ಥಾನದ ಒಮ್ಮತದ ಸಹಾಯ ಸಹಕಾರಗಳು ಬ್ರಿಟಿಷರಿಗೆ ಸಿಗಲೇಬೇಕು. ಆದುದರಿಂದ ಭಾರತದ ಕಾಂಗ್ರೆಸ್ ಮುಖಂಡರನ್ನು ಕಂಡು ಅವರೊಡನೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವದು ವಿಹಿತವಾಗಿದೆ. ಎಮರಿಯವರು ಭಾರತಕ್ಕೆ ಹೋಗಬೇಕು. ಅವರ ಮತ್ತು ನಮ್ಮ ರಾಜಕೀಯ ವಿಚಾರಗಳು ಒಂದೇ ತರವಾಗಿಲ್ಲವಾದರೂ ನಮ್ಮೊಳಗೆ ರಾಜಿಯಾಗಬೇಕು. ಎಮರಿಯವರು ಪುರಾತನ ಸಂಪ್ರದಾಯ...

ಬ್ರಿಟಿಷ್ ಪತ್ರಿಕೆಗಳ ಪ್ರಬಲ ವಾದ!
ಮೆಂಚೆಸ್ಟರ್ ಗಾರ್ಡಿಯನ್ ಅಗ್ರಲೇಖ!

...ವಾದಿಗಳಾಗಿರುವರಲ್ಲಿ ಜಗತ್ತಿನ ಹಿತಕ್ಕಾಗಿ ಹಿಂದುಸ್ಥಾನದಲ್ಲಿ ಶಾಂತಿಯನ್ನು ಸ್ಥಾಪಿಸಲು ಬೇಕಾದ ಸಾಮರ್ಥ್ಯ ಯೋಗ್ಯತೆಗಳು ಅವರಲ್ಲಿ ಇವೆ

"ಬ್ರಿಟಿಷರು ಹಿಂದುಸ್ಥಾನದೊಡನೆ ಉದಾರ ಭಾವವನ್ನು ತೋರಿಸುವರಾದರೆ ಅಲ್ಲಿಂದ ಬ್ರಿಟಿಷರಿಗೆ ಅಲಭ್ಯಲಾಭವು ಉಂಟಾಗುವದು. ಹಿಂದುಸ್ಥಾನದ ಜನಬಲವು ಅಪರಿಮಿತವಾದದ್ದು. ಬ್ರಿಟಿಷ ಸೈನಿಕರು ಯಾವ ರಣಕ್ಷೇತ್ರಗಳಲ್ಲಿ ಶಕ್ತಿಯಿಂದ ಹೋರಾಡುವರೋ ಅಂಥ ಕಡೆಗಳಿಗೂ ಕೂಡ ಹಿಂದುಸ್ಥಾನದ ಜನರು ಹೋಗಿ ಬ್ರಿಟಿಷರ ಪರವಾಗಿ ಹೋರಾಡಬಲ್ಲರು. ಹಿಂದುಸ್ಥಾನದಿಂದ ಬ್ರಿಟಿಷರಿಗೆ ದೊರೆಯುವ ಜನಬಲವು ಅಮೂಲ್ಯವಾಗಿದೆ

ದೂರದೃಷ್ಟಿಯಿಡಬೇಕು

ರಿಚಾರ್ಡ್ ಅಕ್ಲೆಂಡರ ಹೇಳಿಕೆ

ಪಾರ್ಲಿಮೆಂಟಿನ ಒಬ್ಬ ಗಣ್ಯ ಸದಸ್ಯರಾಗಿರುವ ಸರ್ ರಿಚಾರ್ಡ್ ಅಕ್ಲೆಂಡ ಎಂಬುವರು 'ನಮ್ಮ ಹೋರಾಟ' ಎಂದು ಇಂಗ್ಲಿಷಿನಲ್ಲಿ ಒಂದು ಪುಸ್ತಕವನ್ನು ಬರೆದಿದ್ದಾರೆ. ಯುರೋಪಿನ ಜನರನ್ನು ಸ್ವತಂತ್ರರನ್ನಾಗಿ ಇಡುವದಕ್ಕೋಸ್ಕರ ಬ್ರಿಟಿಷರು ಯುದ್ಧಕಾರ್ಯದಲ್ಲಿ ಆಸಕ್ತರಾಗಿದ್ದಾರೆಂದು ಅವರು ಜರ್ಮನರೊಡನೆ ಹೇಳಿ ತಮ್ಮ ನ್ಯಾಯಬುದ್ಧಿಯನ್ನು ತೋರಿಸುತ್ತಾರೆ. ಆದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟ ಹೊರತು ಬ್ರಿಟಿಷರ ಈ ಮಾತಿನಲ್ಲಿ ಜರ್ಮನ್ ಜನತೆಗೆ ವಿಶ್ವಾಸ ಒದಗಲಾರದೆಂದು ಅಕ್ಲೆಂಡರು ತಮ್ಮ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ವಾರ್ಥಗಳನ್ನು ಕಾಪಾಡಿಕೊಳ್ಳಲಿಕ್ಕಾಗಿಯೇ ಯುದ್ಧ ಮಾಡುತ್ತಿರುವರೆಂಬುದು ಜನರ ಅಭಿಪ್ರಾಯವಾಗಿದೆ. ಅಧೀನ ರಾಜ್ಯಗಳಿಗೆ ಸ್ವರಾಜ್ಯ ಕೊಟ್ಟಲ್ಲದೆ ಈ ಅಭಿಪ್ರಾಯವನ್ನು ತಿದ್ದಲಿಕ್ಕಾಗುವುದಿಲ್ಲ. ಆದ್ದರಿಂದ ಹಿಂದುಸ್ಥಾನದ ಜನರ ಆಸೆಪ್ರತ್ಯಾಸೆಗಳೊಡನೆ ಸಹಜವಾದ ಸಹಾನುಭೂತಿ...

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S Kanara.

Our attractive Rates on Deposits.

FIXED DEPOSITS

3 to 6 months	2½% p. a
6 to 9 „	3% „
One year	3½% „
Two years	4% „
SHORT TERM Deposits	2½% p. a.
Current Account:	1% p. a.
Savings Bank:	3½% *

Particulars of other kinds of deposits on application.

ಮ್ಯಾಂಚೆಸ್ಟರ್ ...

ಅಗ್ರ...

'ಲಂಡನಿನ ಮ್ಯಾಂ... ಯನ್' ಪತ್ರಿಕೆಯು ... ವಾಗಿ ಒಂದು ಅಗ್ರಲೇ... ಯುತ್ತಾ ಅದರಲ್ಲಿ ಭಾರತದ... ಯು ನಿವಾರಣೆಯಾಗುವಂತೆ ...ಯವರು ಭಾರತಕ್ಕೆ ಬಂದು ...ಕಾಗಿದೆಯೆಂದು ಒತ್ತಿಬರುವುದು.

ಅದು ಮತ್ತೆ ಹೀಗೆಂದು ಬರೆದಿದೆ.

"ಭಾರತದ ಸಮಸ್ಯೆಯನ್ನು ಪರಿಹರಿಸುವುದು ಭಾರತೀಯರ ಕರ್ತವ್ಯ. ಹಾಗೆ ಮಾಡಲು ಸಮರ್ಥರಾದವರು ಅಲ್ಲಿರುವರು. ಆದರಲ್ಲಿಯೂ ಸಾಮಂತ ರಾಜ್ಯಗಳಿಂದ ಯಾರನ್ನಾದರೂ ಕರೆದುಕೊಂಡು ಹೋದರೆ ಒಳ್ಳೆಯದು. ಅವರಿಂದ ಸಾಮಂತ-ರಾಜ್ಯದ ವಿಚಾರದ ಅನುಭವ ತಿಳಿಯುವುದು. ಆದ್ದರಿಂದ ಅಮೆರಿಯವರು ಸಾಮಂತ ರಾಜ್ಯದ ಪ್ರತಿನಿಧಿಯೊಬ್ಬನನ್ನೂ, ಮತ್ತೆ ಯಾವ ಪಕ್ಷಕ್ಕೂ ಸೇರದ ಮತ್ತೊಬ್ಬ ಸಹೋದ್ಯೋಗಿಯನ್ನೂ ಕರೆದುಕೊಂಡು ಭಾರತಕ್ಕೆ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸಬಹುದು. ಈ ರೀತಿ ಮಾಡಿದರೆ ಬ್ರಿಟಿಷ್ ಸರಕಾರಕ್ಕೆ ಒಳ್ಳೆಯದಾಗಬಹುದು"

ಸ್ವದೇಶಾಭಿಮಾನಿ

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs 1 42 Crores
Total Funds exceed	Rs. 1 52 Crores
Premium income during the year exceeds ...	Rs. 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ಬೇನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದೊಡಮು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಎಲಾ ಅಂಗಡಿಯಲ್ಲಿ ದೊರೆಯುವುದು.



ಇಂದು ಮುಳಿಯಗಳಲ್ಲಿ ಜನರ ಪ್ರೀತಿಗೆ ಒಳಗಾಗಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited, Printed & Published by A. B. Kamath at the Sharada Press, Car Street, Mangalore.

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

1-11-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೮

ಭಾರತೀಯರನ್ನು ತೃಪ್ತಿಗೊಳಿಸಬೇಡ

ಬ್ರಿಟಿಷ್ ಪತ್ರಿಕೆಗಳ ಪ್ರಬಲ ವಾದ!

ಮೆಂಚೆಸ್ಟರ್ ಗಾರ್ಡಿಯನ್ ಅಗ್ರಲೇಖ!



ವೈಸರಾಯರು

ಜಗತ್ತಿನ ಹಿತಕ್ಕಾಗಿ ವಹಾದರೂ ಹಿಂದೀ ಜನತೆಯನ್ನು ಒಡಂಬಡಿಸಿ ಹಿಂದುಸ್ಥಾನದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಅಗತ್ಯವಾಗಿದೆ ಎಂದೂ, ಈ ಕಾರಣದಿಂದ ಬ್ರಿಟಿಷ ಸರಕಾರವು ಹಿಂದೀಯರನ್ನು ಸಂತುಷ್ಟರನ್ನಾಗಿ ಮಾಡುವ ಇನ್ನೊಂದು ಸತ್ಪ್ರಯತ್ನವನ್ನು ಕೂಡಲೇ ಮಾಡಬೇಕೆಂದೂ ಸುಪ್ರಸಿದ್ಧ ಪತ್ರಿಕಾಲೇಖಕರಾಗಿರುವ ಹೆನ್ನನ್ ಸ್ವಾಫರರವರು ಲಂಡನಿನ ಪೀಪಲ್ ಎಂಬ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿರುತ್ತಾರೆ. ಅಂತಹ ಹಲವು ಮುಖಂಡರ ಮತ್ತು ಪತ್ರಿಕೆಗಳ ಅಭಿಪ್ರಾಯಗಳು ಕೆಳಗೆ ಕೊಟ್ಟಿದೆ.

ಭಾರತದ ಸಹಾಯ ಅವಶ್ಯವಿದೆ.

ಪೂರ್ವದ ಕಡೆಗೆ ದಂಡಯಾತ್ರೆಯನ್ನು ಆರಂಭಿಸಿರುವ ಹಿಟ್ಲರನನ್ನು ಆ ಕಡೆಯಿಂದ ಸಂಪೂರ್ಣ ನಿರೋಧಿಸುವದು ಶಕ್ಯವಾಗಬೇಕಾದರೆ ಹಿಂದುಸ್ಥಾನದ ಒಮ್ಮತದ ಸಹಾಯ ಸಹಕಾರಗಳು ಬ್ರಿಟಿಷರಿಗೆ ಸಿಗಲೇಬೇಕು. ಆದುದರಿಂದ ಭಾರತದ ಕಾಂಗ್ರೆಸ ಮುಖಂಡರನ್ನು ಕಂಡು ಅವರೊಡನೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವದು ವಿಹಿತವಾಗಿದೆ. ಎಮೆರಿಯವರು ಭಾರತಕ್ಕೆ ಹೋಗಬೇಕು. ಅವರ ಮತ್ತು ನಮ್ಮ ರಾಜಕೀಯ ವಿಚಾರಗಳು ಒಂದೇ ತರವಾಗಿಲ್ಲವಾದರೂ ನಮ್ಮೊಳಗೆ ರಾಜಿಯಾಗಬೇಕು. ಎಮೆರಿಯವರು ಪುರಾತನ ಸಂಪ್ರದಾಯವಾದಿಗಳಾಗಿರುವದಿಲ್ಲ. ಜಗತ್ತಿನ ಹಿತಕ್ಕಾಗಿ ಹಿಂದುಸ್ಥಾನದಲ್ಲಿ ಶಾಂತಿಯನ್ನು ಸ್ಥಾಪಿಸಲು ಬೇಕಾದ ಸಾಮರ್ಥ್ಯ ಯೋಗ್ಯತೆಗಳು ಅವರಲ್ಲಿ ಇವೆ.

"ಬ್ರಿಟಿಷರು ಹಿಂದುಸ್ಥಾನದೊಡನೆ ಉದಾರ ಭಾವವನ್ನು ತೋರಿಸುವರಾದರೆ ಅಲ್ಲಿಂದ ಬ್ರಿಟಿಷರಿಗೆ ಅಲಭ್ಯ ಲಾಭವು ಉಂಟಾಗುವದು. ಹಿಂದುಸ್ಥಾನದ ಜನಬಲವು ಅಪರಿಮಿತವಾದ್ದು. ಬ್ರಿಟಿಷ ಸೈನಿಕರು ಯಾವ ರಣಕ್ಷೇತ್ರಗಳಲ್ಲಿ ಶಕ್ತಿಯಿಂದ ದುಡಿಯಲಾರರೋ ಅಂಥ ಕಡೆಗಳಿಗೂ ಕೂಡ ಹಿಂದುಸ್ಥಾನದ ಜನರು ಹೋಗಿ ಬ್ರಿಟಿಷರ ಪರವಾಗಿ ಹೋರಾಡಬಲ್ಲರು. ಹಿಂದುಸ್ಥಾನದಿಂದ ಬ್ರಿಟಿಷರಿಗೆ ದೊರೆಯುವ ಜನಬಲವು ಅಮೂಲ್ಯವಾಗಿದೆ.

ದೂರದೃಷ್ಟಿಯಿಡಬೇಕು

ರಿಚಾರ್ಡ್ ಅಕ್ಲೆಂಡರ ಹೇಳಿಕೆ:

ಪಾರ್ಲಿಮೆಂಟಿನ ಒಬ್ಬ ಗಣ್ಯ ಸದಸ್ಯರಾಗಿರುವ ಸರ್. ರಿಚಾರ್ಡ್ ಅಕ್ಲೆಂಡರವರು 'ನಮ್ಮ ಹೋರಾಟ' ಎಂಬ ಇಂಗ್ಲಿಷಿನಲ್ಲಿ ಒಂದು ಪುಸ್ತಕವನ್ನು ಬರೆದಿದ್ದಾರೆ. ಯೂರೋಪಿನ ಜನರನ್ನು ಸ್ವತಂತ್ರರನ್ನಾಗಿ ಇಡುವದಕ್ಕೋಸ್ಕರ ಬ್ರಿಟಿಷರು ಯುದ್ಧಕಾರ್ಯದಲ್ಲಿ ಆಸಕ್ತರಾಗಿದ್ದಾರೆಂದು ಅವರು ಜರ್ಮನರೊಡನೆ ಹೇಳಿ ತಮ್ಮ ನ್ಯಾಯಬುದ್ಧಿಯನ್ನು ತೋರಿಸುತ್ತಾರೆ. ಆದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟ ಹೊರತು ಬ್ರಿಟಿಷರ ಈ ಮಾತಿನಲ್ಲಿ ಜರ್ಮನ್ ಜನತೆಗೆ ವಿಶ್ವಾಸ ಬರಲಾರದೆಂದು ಅಕ್ಲೆಂಡರು ತಮ್ಮ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ವಾರ್ಥಗಳನ್ನು ಕಾಪಾಡಿಕೊಳ್ಳಲಿಕ್ಕಾಗಿಯೇ ಯುದ್ಧ ಮಾಡುತ್ತಿರುವರೆಂಬುದು ಜನರ ಅಭಿಪ್ರಾಯವಾಗಿದೆ. ಅಧೀನ ರಾಜ್ಯಗಳಿಗೆ ಸ್ವರಾಜ್ಯ ಕೊಟ್ಟಲ್ಲದೆ ಈ ಅಭಿಪ್ರಾಯವನ್ನು ತಿದ್ದಲಿಕ್ಕಾಗುವುದಿಲ್ಲ. ಅದ್ದರಿಂದ ಹಿಂದುಸ್ಥಾನದ ಜನರ ಆಸೆಪ್ರತ್ಯಾಸೆಗಳೊಡನೆ ಸಹಜವಾದ ಸಹಾನುಭೂತಿ ಇರುವಂಥವರೆ ಹಿ... ರಾಯರಾಗಿ ಹೋ... ಅಂಥ ಸಹಾನುಭೂ... ಭಾರತ ಸಚಿವರಾ... ನಕ್ಕೆ ಕೂಡಲೇ ಸುಲಭವೆಂದು ಯ... ಆದರೆ ಕೋರುವ ಮಾಡುವಂಥವುಗಳ... ಟಿಷರು ವಿಶಾಲ ...ಯಿಂದ ಕೆಲಸಮಾಡ... ಯನ್ನು ತೃಪ್ತಿಕರವ... ಕಾರಣವಾಗುವುದಿಲ್ಲ... ಅದರಲ್ಲಿ ಉಲ್ಲೇಖ...

ಮೆಂಚೆಸ್ಟರ್ ... ಅಗ್ರ...

'ಲಂಡನಿನ ಮೆಂಚೆಸ್ಟರ ಗಾರ್ಡಿಯನ್' ಪತ್ರಿಕೆಯು ಭ...ವಾಗಿ ಒಂದು ಅಗ್ರಲೇಖ...ಯುತ್ತಾ ಅದರಲ್ಲಿ ಭಾ...ಯ ನಿವಾರಣೆಯಾಗುವ...ಯವರು ಭಾರತಕ್ಕೆ ಬಂದು ...ಕಾಗಿದೆಯೆಂದು ಬರೆದಿರುವುದು.

ಅದು ಮತ್ತೆ ಹೀಗೆಂದು ಬರೆದಿ...

"ಭಾರತದ ಸಮಸ್ಯೆಯನ್ನು ಪ...ಸುವುದು ಭಾರತೀಯರ ಕರ್ತ...ಹಾಗೆ ಮಾಡಲು ಸಮರ್ಥರಾದವರು ಅಲ್ಲಿರುವರು. ಅದರಲ್ಲಿಯೂ ಸಾಮಂತ ರಾಜ್ಯಗಳಿಂದ ಯಾರನ್ನಾದರೂ ಕರೆದುಕೊಂಡು ಹೋದರೆ ಒಳ್ಳೆಯದು. ಅವರಿಂದ ಸಾಮಂತ ರಾಜ್ಯದ ವಿಚಾರದ ಅನುಭವ ತಿಳಿಯುವುದು. ಅದ್ದರಿಂದ ಎಮೆರಿಯವರು ಸಾಮಂತ ರಾಜ್ಯದ ಪ್ರತಿನಿಧಿಯೊಬ್ಬನನ್ನೂ, ಮತ್ತೆ ಯಾವ ಪಕ್ಷಕ್ಕೂ ಸೇರದ ಮತ್ತೊಬ್ಬ ಸಹೋದ್ಯೋಗಿಯನ್ನೂ ಕರೆದುಕೊಂಡು ಭಾರತಕ್ಕೆ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸಬಹುದು. ಈ ರೀತಿ ಮಾಡಿದರೆ ಬ್ರಿಟಿಷ ಸರಕಾರಕ್ಕೆ ಒಳ್ಳೆಯದಾಗಬಹುದು"

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 "	3% "
One year	3½% "
Two years	4% "
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

...ನಿಷೇಧ

—1940

...ಬಂಧ!

ಇಂಡಿಯಾ ಆಕ್ಟು
...ತೆ, ಪರಿಣಾಮವು
ಹೇಗೆ ಆಗುತ್ತಿದೆ
...ಗೆ ತಿಳಿದ ವಿಚಾ
ಗಾಂಧಿಜಿಯವರು
...ದ, ವೈಯುಕ್ತಿಕ
ಆರಂಭಿಸಿರುವರು.
...ಮೇ ಆ ಹಿಂದಿನ
...ಸಮಯದಲ್ಲಿ ವಿಶೇಷ
...ದಿಂದ ಪತ್ರಿಕೆಗಳ
...ಬಂಧವು ಆಗಿದೆ.
ಹೋರಾಡುತ್ತಿರುವ
...ಗೆ ಹೀಗೆ ಬೀಗ
...ಗದಾ ಪ್ರಹಾರವು
...ಲ್ಪ ಸ್ವಲ್ಪ ಸ್ವಾತಂ
...ಸಿದೆ.

...ಗೆಯ ಸ್ವಾತಂತ್ರ್ಯದ
...ರೂ ವಿವಾದಗಳಿಗೆ
ಆದರೆ ಪತ್ರಿಕಾ
... ಇಂದಿನ ಕಾಲ
...ರಾಂಗಕ್ಕೆ, ರಾಷ್ಟ್ರಕ್ಕೆ
... ಜಗತ್ತಿಗೆ ಅವಶ್ಯವಿ
...ನಷ್ಟವಾಗಲಿ, ಲೋಕ
...ವಸ್ಥೆಯಿಂದ, ನ್ಯಾಯ
ನಡೆಯಬೇಕೆಂಬ ಬಗೆ
...ಹೋರಾಡುವವುಗಳು. ಜನ
...ದ ಸುದ್ದಿಗಳನ್ನು ಕೊಟ್ಟು
...ತರುವಂತಹವುಗಳು. ಅದ
ಇಂದು ರಾಷ್ಟ್ರೀಯ, ಅಂತ
...ಶಾಂತಿಯು ಕದಡಿರುವ
...ಲ್ಲಿ ಜನರನ್ನು ಊಹಾಪೋಹ
ಬೀಳುಕೊಡದೆ ಸತ್ಯದ ದಾರಿಯ
ನಡೆಸುವ ಜವಾಬ್ದಾರಿಯು ಪತ್ರಿಕೆ
...ಳದಾಗಿರುತ್ತದೆ. ಇಂತಹ ಸಂದರ್ಭ
ದಲ್ಲಿ ಅವುಗಳ ಸ್ವಾತಂತ್ರ್ಯಕ್ಕೆ ಅಡ್ಡಿ ಬರು
ವುದರಿಂದ ಪತ್ರಿಕೆಗಳಿಗೆ ಮಾತ್ರವಲ್ಲ
ಪ್ರಪಂಚದ ಶಾಂತಿಗೇ ಕೆಡುಕಾಗಲಿದೆ.

ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳಿಗಾಗಿ ಕಾದಾಡುತ್ತಿರುವೆವೆಂದು ಸಾರುವ ಬ್ರಿಟನಿನ ಉದ್ದೇಶಕ್ಕೆ ಇಂತಹ ಕೃತ್ಯಗಳು ಗೌರವ ಕೊಡತಕ್ಕವುಗಳಲ್ಲ. ಮಹಾತ್ಮಾಜಿಯವರು ತಮ್ಮೊಂದು ಪ್ರಕಟನೆಯಲ್ಲಿ ಜನರು ಮುಂದೆ ಸಂಚಾರಕ ವೃತ್ತಪತ್ರಿಕೆಗಳಾಗಬೇಕು ಎಂದು ಸಾರಿದ್ದಾರೆ. ರಾಷ್ಟ್ರದ ಮುಖಂಡರು ತಮ್ಮ ತಲೆಗಿಸಿದ ಹಿಂಬಾಲಕರಿಂದ ಒಂದು ರೀತಿಯಿಂದ ಯಾವುದಾದರೂ, ಕಾರ್ಯವನ್ನು ಮುಂದೆ ಸಾಗಿಸಬಲ್ಲರು. ಜನರು ಬಾಯಿಯಿಂದ ಬಾಯಿಗೆ ಸುದ್ದಿ ಹರ ...ಡುವುದು, ಜನತೆಗೂ, ಸರಕಾರಕ್ಕೂ ಕ್ಷೋಭಕರವೆನಿಸಲಾಗುವುದಿಲ್ಲ. ಕೆಟ್ಟದಾದ ಸುದ್ದಿಯನ್ನೇ ಜನರು ಹರಡುವರೆಂಬುದಕ್ಕೆ ಯಾವ ಆಧಾರವೂ ಇಲ್ಲ. ಸರಕಾರದವರು ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಅಡ್ಡಿ ಬಂದ ವಿಚಾರದಲ್ಲಿ ಬೇರೆ ಉಪಾಯವಿಲ್ಲದೆ ಗಾಂಧಿಜಿಯವರು ಹೀಗೆ ಹೇಳಿದ್ದರೂ, ಸರಕಾರವು ಈ ಎಚ್ಚರಿಕೆಯ ಮಾತಿನ ಕಡೆಗೆ ಗಮನ ಕೊಡಬೇಕು. ಪ್ರಜಾಪ್ರಭುತ್ವದ ಈ ಕಾಲದಲ್ಲಿ, ಪ್ರಬಲವಾದ ರಾಜಕೀಯ ಪಕ್ಷವು ತನ್ನ ಕಾರ್ಯವನ್ನು ಮುಂದೊತ್ತದೆ ಇರದು. ರಾಷ್ಟ್ರ ರಕ್ಷಣೆ ಹಾಗೂ ಲೋಕಶಾಂತಿಗಳಿಗಾಗಿ, ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಸಲುವಾಗಿ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಬಾರದು! ಪತ್ರಿಕಾಕರ್ತರು ಜವಾಬ್ದಾರಿಯರಿತವರೆಂದು ಸರಕಾರವು ನಂಬಬೇಕು. ಇಂತಹ ಒತ್ತಾಯದ ಕಾರ್ಯಗಳಿಂದ ಸರಕಾರಕ್ಕಾದರೂ ಉಪಕಾರವಾಗುವುದೆಂದು ನಾವು ನಂಬುವುದಿಲ್ಲ. ಪತ್ರಿಕಾಕರ್ತರ ಮೇಲೆ, ಜನತೆಯ ಇಂತಹ ಅಮೂಲ್ಯ ಹಕ್ಕಿನ ಮೇಲೆ, ಹಾಕಿದ ಇಂತಹ ನಿರ್ಬಂಧವನ್ನು ಇನ್ನಾದರೂ ತೆಗೆದುಹಾಕುವುದು ಸಮಂಜಸವಾಗಿದೆ.

ರಾಜಾಜಿಯವರ ಪಂಥ

ರಾಜಾಜಿಯವರು ಮದ್ರಾಸಿನಲ್ಲಿ ಸಾರ್ವಜನಿಕಭಾಷಣವೊಂದನ್ನು ಕೊಡುತ್ತಾ ಸರಕಾರವನ್ನು ಚುನಾವಣೆಯ ಪಂಥಕ್ಕೆ ಆಹ್ವಾನಿಸಿದ್ದಾರೆ. ಅವರು ಜನತೆಯ ಪ್ರತಿನಿಧಿ ಸಂಸ್ಥೆ ಕಾಂಗ್ರೆಸು ಎಂದು ವಾದಿಸುತ್ತಾರೆ. ಜನತೆಗೆ ಹಿತಕಾಗಿ ನಡೆವುದೆಂದರೆ ಕಾಂಗ್ರೆಸಿನ ಕೇಂದ್ರಕ್ಕೆ ಸರಕಾರವು ಮನ್ನಣೆ ಕೊಡುವುದೇ ಎಂದು ಅವರ ವಾದ. ಅವರು ಹೀಗೆ ಹೇಳುವಲ್ಲಿ ತನಗೆ ಕಾಂಗ್ರೆಸಿನ ಮೇಲಿರುವ ಅಭಿಮಾನವನ್ನು ಪ್ರಕಟಿಸಿದು ಮಾತ್ರವಲ್ಲದೆ, ಸರಕಾರವು, ಕಾಂಗ್ರೆಸು ಜನತೆಯ ಪ್ರತಿನಿಧಿ ಸಂಸ್ಥೆಯಹುದೋ ಅಲ್ಲವೋ ಎಂಬ ಕುರಿತು ಪರೀಕ್ಷಿಸಿ ನೋಡಬಹುದೆಂಬುದಕ್ಕಾಗಿ ಚುನಾವಣೆಯ ಪಂಥವನ್ನು ಹಾಕಿದ್ದಾರೆ.

ಸರಕಾರವು ಪ್ರಜಾಪ್ರಭುತ್ವದ ತತ್ವವನ್ನು ಮಾನ್ಯಮಾಡುವುದಿದ್ದರೆ, ಜನತೆಯ ಪ್ರಾತಿನಿಧ್ಯದ ಕುರಿತು ಅವಶ್ಯ ಗಮನ ಕೊಡಲೇ ಬೇಕು. ಜನತೆಯ ಪ್ರತಿನಿಧಿಗಳು ಏನೇ ಹೇಳಲಿ, ನಾವು ಮನಬಂದಂತೆ ಮಾಡುವೆವು ಎಂಬ ವಿಚಾರವು ಸರ್ವಾಧಿಕಾರಿಗಳ ನಿರಂಕುಶವರ್ತನೆಯ ವರದಾಯಿತು. ನಿರಂಕುಶ ವರ್ತನೆಯನ್ನು ಸರ್ವಾಧಿಕಾರವನ್ನೂ ಖಂಡಿಸಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳಿಗಾಗಿ ಹೋರಾಡುವುದೆಂದು ಹೇಳುವ ಬ್ರಿಟನು, ರಾಜಾಜಿಯವರ ಈ ಪಂಥದ ಕಡೆಗೆ ಗಮನ ಕೊಡಬೇಕು. ಜನತೆ ಕಾಂಗ್ರೆಸನ್ನು ಅಲ್ಲಗಳೆದ ಪಕ್ಷದಲ್ಲಿ ಸರಕಾರಕ್ಕೆ ಕೆಲಸ ಸುಲಭವೇ ಆಯಿತು. ಜನತೆಗೆ ಕಾಂಗ್ರೆಸು ಬೇಕೆಂದಾದ ಪಕ್ಷದಲ್ಲಿ ಪ್ರಜಾಪ್ರಭುತ್ವವನ್ನು ಪಾಲಿಸಲು ಅವಕಾಶವೇ ಆಯಿತು. ಭಾರತದ ಸಮಸ್ಯೆಯೂ ಇದರಿಂದ ಪರಿಹಾರವಾಗಬಹುದು. ಭಾರತದ ಮೇಲೆ ಸರ್ವಾಂಗಗಳಲ್ಲಿಯೂ ಪರಿಪೂರ್ಣವಾದ ಹಿಡಿತವುಳ್ಳ ಸರಕಾರಕ್ಕೆ ಹೊಸ ಚುನಾವಣೆಯೊಂದನ್ನು ಕರೆಯುವುದು ಬಹಳ ವಿಶೇಷದ, ಗಲಭೆಯ ಕಾರ್ಯವೇನೂ ಆಗಲಾರದು. ಕಾಂಗ್ರೆಸು ಜನತೆಯ ಪ್ರತಿನಿಧಿಯಲ್ಲವೆಂಬುದನ್ನು ಕಾರ್ಯರೂಪದಲ್ಲಿ ಸ್ಥಾಪಿಸದೆ ಇದ್ದು, ಕಾಂಗ್ರೆಸಿನ ಮುಖಂಡರನ್ನು ಬಾಯಿ ಮುಚ್ಚಲು ಹೇಳುವುದರಲ್ಲಿ ಸ್ವಾರಸ್ಯವಿಲ್ಲ. ಜನತೆಗೆ ಬೇಕಾದಂತೆ ವರ್ತಿಸುವುದು ಇಂದಿನ ಪ್ರಜಾಪ್ರಭುತ್ವದ ನೀತಿ.

ಫ್ರಾನ್ಸಿನ ಸಂಕಷ್ಟ

ಜರ್ಮನಿ ಇಟಲಿಗಳು ಫ್ರಾನ್ಸಿಗೆ ಕೆಲವು ಶರತ್ತುಗಳನ್ನು ಹಾಕಿದುವು. ಫ್ರಾನ್ಸು ಪತನಗೊಂಡು, ಸರ್ವಾಧಿಕಾರಿಗಳು ಅಲ್ಲಿ ನೆಲೆಯೂರಿದ ಮೇಲೆ, ನಿರಂತರ ಈ ವಿಧದ ಸಂಕಷ್ಟಗಳು ಒಂದರ ಮೇಲೊಂದಿಗೆ ಅದಕ್ಕೆ ಒದಗುತ್ತಾ ಇವೆ. ಫ್ರಾನ್ಸಿನ ಹಲವು ಪ್ರಾಂತಗಳನ್ನು ಇಟಲಿ ಜರ್ಮನಿಗಳಿಗೆ ಬಿಟ್ಟು ಕೊಡಬೇಕೆಂದೂ, ಭೂಮಧ್ಯ ಸಮುದ್ರದ ವಿಮಾನ ಮತ್ತು ನೌಕಾಬಲಗಳನ್ನು ಜರ್ಮನಿ ಇಟಲಿಗಳ ಸ್ವಾಧೀನಪಡಿಸಬೇಕೆಂದೂ, ಹೀಗೆ ಮಾಡಲು ಒಪ್ಪಿದರೆ ಫ್ರಾನ್ಸಿನ ಮಿಕ್ಕ ಸ್ಥಳಗಳಲ್ಲಿ ಅದಕ್ಕೆ ಸ್ವತಂತ್ರ ಆಡಳಿತೆ ಕೊಡಲಾಗುವುದೆಂದೂ ಅವುಗಳ ಶರತ್ತೆಂದು ತಿಳಿದಿದೆ. ಈ ಮಾತಿನಲ್ಲಿ ಒಂದಿಷ್ಟು ದಯೆಯಿಲ್ಲವೆಂದು ಯಾರಾದರೂ ಅರ್ಥಮಾಡಿಕೊಳ್ಳಬಹುದು. ಮಾತ್ರವಲ್ಲದೆ, ಫ್ರಾನ್ಸು ಈ ಸರ್ವಾಧಿಕಾರಿಗಳ ದವಡೆಯಲ್ಲಿ ಹೀಗೆ ಸಂಕಷ್ಟಗೊಳಗಾಗಿ ಕರಾರು ಮಾಡಿಕೊಂಡಿತೆಂದೂ ತಿಳಿಯಲು ಸಂಶಯವಿಲ್ಲ.

ಹೀಗೆ ಫ್ರಾನ್ಸನ್ನು ಒತ್ತಾಯಪಡಿಸಿ ಅದರ ಬಲವನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಹಿಟ್ಲರನ ಕುತಂತ್ರವು ಬಹಳವಿರಬಹುದೆಂದು ಊಹಿಸಲಾಗಿದೆ. ಭೂಮಧ್ಯ ಸಮುದ್ರದಲ್ಲಿ ಬ್ರಿಟನಿನ ಶಕ್ತಿಯನ್ನು ಕುಗ್ಗಿಸಲು ಹಿಟ್ಲರನು ಯತ್ನಿಸುತ್ತಿರುವನು. ಫ್ರೆಂಚ್ ನೌಕಾಬಲವನ್ನು ಸ್ವಾಧೀನಪಡಿಸಿ ಅಲ್ಲಿ ಬ್ರಿಟಿಷ್ ನೌಕಾಬಲದೊಡನೆ ಇದಿರೊಡ್ಡಲು ಆತನು ಹವಣಿಸುತ್ತಾನೆ. ಹೇಗಿದ್ದರೂ ಅವರಿಬ್ಬರ ಹೊಡೆದಾಟದಲ್ಲಿ ತಾನು ಯುರೋಪಿನ ಒಡೆಯತನವನ್ನು ಗಳಿಸುವೆನೆಂದು ಹಿಟ್ಲರನು ಕನವರಿಸುತ್ತಿರುವನೆಂದು ತಿಳಿಯಬಹುದಾಗಿದೆ.

ಫ್ರಾಂಕೋ ಹಿಟ್ಲರ್ ಭೇಟಿ

ಹಿಟ್ಲರನು ಈ ವಾರ ಫ್ರಾಂಕೋವಿನೊಡನೆಯೂ ಭೇಟಿಯಾದನು. ಹಿಟ್ಲರ ಸರಕಾರಸ್ಥಾನವು ಪ್ರಬಲವಾಗಿ ನಡೆಯುತ್ತಾ ಇದೆ. ಇದರ ಗುಟ್ಟು ಎಂದರೆ ಸ್ಪೈನನ್ನು ಯುದ್ಧದಲ್ಲಿ ಇಳಿಸುವಂತೆ ಫ್ರಾಂಕೋವನ್ನು ಪ್ರೇರೇಪಿಸುವುದೇ ಆಗಿದೆ.

ಜಿಬ್ರಾಲ್ಟರನ್ನು ಫ್ರಾಂಕೋ ಮುತ್ತಿದರೆ ಅಲ್ಲಿ ಸ್ಪೈನಿಗೂ ಬ್ರಿಟನಿಗೂ ಕಾಳಗ ನಡೆಯುವುದು. ಜಿಬ್ರಾಲ್ಟರು ಒಂದು ಮಹತ್ವದ ಸ್ಥಳವಾದುದರಿಂದ ಹೇಗಾದರೂ ಮಾಡಿ ಅದನ್ನು ಕಾಪಾಡಿಕೊಳ್ಳಲು ಬ್ರಿಟಿಷರು ಯತ್ನಿಸುವರು; ಆ ಸಮಯದಲ್ಲಿ ತನ್ನ ಯುದ್ಧ ಕಾರ್ಯವನ್ನು ಇತ್ತ ತೀವ್ರಗೊಳಿಸಿ ಬ್ರಿಟಿಷರನ್ನು ಹದಕ್ಕೆ ತರಬಹುದು; ಇಲ್ಲವೇ ಸ್ಪೈನಿನ ಹೋರಾಟದಿಂದ ಜಿಬ್ರಾಲ್ಟರನ್ನು ವಶಪಡಿಸಿದರೆ, ಬ್ರಿಟಿಷರ ಬಾಧೆಯೇ ಇರುವುದಿಲ್ಲ. ಹೀಗೆಲ್ಲಾ ಯೋಚಿಸಿರುವ ಹಿಟ್ಲರನು ಇಂದು ಫ್ರಾಂಕೋವನ್ನು ಭೇಟಿಯಾಗಿದ್ದಾನೆ. ಹಿಟ್ಲರನ ವಶೀಕರಣ ಸಾಮರ್ಥ್ಯ ಬಲುಹೆಚ್ಚಿನದು. ಇದುವರೆಗೂ ತಟಸ್ಥನಾಗಿದ್ದ ಫ್ರಾಂಕೋ ಹಿಟ್ಲರನ ಸವಿಮಾತಿಗೆ ಸೋತು, ಯುದ್ಧಕ್ಕಿಳಿದು ಆತ್ಮಘಾತ ಮಾಡಿಕೊಳ್ಳುವನೇ ನೋಡಬೇಕಾಗಿದೆ.

ಗ್ರೀಸಿನ ಆಕ್ರಮಣ

ಇಟಲಿಯ ದಂಡು ಇಂದು ಗ್ರೀಸನ್ನು ಆಕ್ರಮಿಸಿದೆ. ಕೇವಲ ಮೂರು ತಾಸುಗಳ ಅವಧಿಕೊಟ್ಟು ಮುಸಲಿನಿಯು ಗ್ರೀಸಿಗೆ ಕೆಲವು ಶರತ್ತುಗಳನ್ನು ಕಳುಹಿಸಿದನು. ಸ್ವಾತಂತ್ರ್ಯಪ್ರಿಯರಾದ ಗ್ರೀಕರು ಮುಸಲಿನಿಗಂಜದೆ, ಶರಣಾಗದೆ, ನಾಡಿನ ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಗ್ರೀಸರು ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದರು. ಗ್ರೀಸಿಗೆ ಬ್ರಿಟಿಷ್ ಸಹಾಯದ ಭರವಸೆಯು ಕೊಡಲ್ಪಟ್ಟಿದೆ. ಹೀಗೆ ಗ್ರೀಸಿನ ಆಕ್ರಮಣದ ಯುದ್ಧವು ಭಯಂಕರ ಯುದ್ಧವಾಗಿದೆ.

ಮುಸಲಿನಿಯು ಕೇವಲ ಮೂರು ತಾಸುಗಳ ಎಚ್ಚರಿಕೆಯ ಮಾತನ್ನು ಕೊಟ್ಟು ಗ್ರೀಸನ್ನು ಆಕ್ರಮಿಸಿದ ವಿಷಯವಾಗಿ, ಆತನ ಧೋರಣೆಯನ್ನು ಖಂಡಿಸದಿರಲಾಗುವುದಿಲ್ಲ. ಗ್ರೀಸು ಬಹಳ ಪುರಾತನ ಸ್ವಾತಂತ್ರ್ಯವುಳ್ಳ ಉದಾತ್ತ ಕಲೆಗಳ ಬೀಡು! ಗ್ರೀಕಿನ ವೀರರು ಇತಿಹಾಸದಲ್ಲಿಯೂ ಬಹಳ ಹೆಸರಾಂತವರು. ಇಂದು ಕೊನೆಯ ವರೆಗೆ ಹೋರಾಡುವ ದೃಢ ಸಂಕಲ್ಪವನ್ನು ಮಾಡಿರುತ್ತಾರೆ. ಬ್ರಿಟಿಷರ ಪ್ರಬಲವಾದ ಜಲಭೂಆಕಾಶ ಸೈನ್ಯಗಳ ಸಹಾಯ ದೊರೆತಲ್ಲಿ ಇಟಲಿಯ ದರ್ಪವು ಅವುಗಳ ಮುಂದೆ ನಡೆಯಲಾರದು.

ಅನ್ಯಾಯದಿಂದ ಹೀಗೆ ಆಕ್ರಮಿಸುತ್ತಾ ಬರುತ್ತಿರುವ ಸರ್ವಾಧಿಕಾರಿಗಳ ದುರ್ಬುದ್ಧಿಯನ್ನು ಇಂದು ಪ್ರಪಂಚವೇ ಖಂಡಿಸುತ್ತಿದೆ. ಗ್ರೀಸಿಗೆ ಹೀಗೆ ಸಹಾಯ ಕೊಡಲು ನಿಶ್ಚಯಿಸಿದ ವಿಷಯದಲ್ಲಿ ಬ್ರಿಟನಿನ ನಿರ್ಧಾರವು ಕೊಂಡಾಡತಕ್ಕದ್ದಿರುತ್ತದೆ.

ಬಾಯಿಂದ ಬಾಯಿಗೆ ಸುದ್ದಿ ಹರಡುವುದು!

ಪ್ರತಿಯೊಬ್ಬನೂ ನಡೆಯುವ ಪತ್ರಿಕೆಯಾಗಬೇಕು

ಹರಿಜನ ಪತ್ರಿಕೆ ನಿಲ್ಲಿಸಲಾಗುವುದು!

ಪತ್ರಿಕಾ ನಿರ್ಬಂಧದ ಕುರಿತು ಮಹಾತ್ಮರ ಪ್ರಕಟಣೆ!

ಸರಕಾರವು ಇಂದು ಪತ್ರಿಕೆಗಳಲ್ಲಿ ಸತ್ಯಾಗ್ರಹದ ಸುದ್ದಿಯನ್ನು ಪ್ರಕಟಪಡಿಸುವ ವಿಷಯದಲ್ಲಿ ಹಾಕಿದ ನಿರ್ಬಂಧದ ವಿಷಯವಾಗಿ ಗಾಂಧಿಜಿ ಒಂದು ಪ್ರಕಟಣೆ ಹೊರಡಿಸಿದ್ದಾರೆ; ಅದರಲ್ಲಿ ಅವರು ತಾನು 'ಹರಿಜನ'ವನ್ನು ಯಾಕೆ ನಿಲ್ಲಿಸಬೇಕಾಯಿತು ಎಂದು ತಿಳಿಸಿದ್ದಾರೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ತಡೆತರುವುದು ಸರಿಯಲ್ಲವೆಂದು ಸರಕಾರವನ್ನು ಎಚ್ಚರಿಸಿರುತ್ತಾರೆ; ಪತ್ರಿಕೆಗಳನ್ನು ಹೀಗೆ ನಿರ್ಬಂಧಿಸಿದರೆ, ಜನರು ಸುದ್ದಿಯನ್ನು ಬಾಯಿಂದ ಬಾಯಿಗೆ ಹೇಳುತ್ತಾ ಹೊರಡಬೇಕು; ಇದನ್ನು ಯಾವ ದಬ್ಬಾಳಿಕೆಯೂ ತಡೆಯಲಾರದು ಎಂದು ಕೊನೆಗೆ ತಿಳಿಸಿದ್ದಾರೆ. ಅದರ ವಿವರವಿಂತಿದೆ:—

ಹರಿಜನ ಪತ್ರಿಕೆಯ ಸಂಪಾದಕರಿಗೆ ಪೂನೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ, ವಿನೋಬಾಭಾವೆಯವರ ಸತ್ಯಾಗ್ರಹಕ್ಕೆ ಸಂಬಂಧಿಸಿದ ಯಾವುದೇ ಸುದ್ದಿಯನ್ನಾಗಲಿ, ಅವರ ಭಾಷಣಗಳ ವರದಿಗಳನ್ನಾಗಲಿ, ಮುಂಚಿತವಾಗಿ ದಿಲ್ಲಿಯ ಪತ್ರಿಕಾ ಸಲಹೆಗಾರರಿಗೆ ಕಳುಹಿಸದೆ ಪ್ರಕಟಿಸಬಾರದಾಗಿಯೂ, ಹಾಗೆ ಪ್ರಕಟಿಸಿದರೆ ಡಿಫೆನ್ಸ್ ಒಫ್ ಇಂಡಿಯಾ ಶಾಸನಕ್ಕೆ ಒಳಗಾಗುವುದಾಗಿಯೂ ಸೂಚಿಸುವ ಒಂದು ಪತ್ರವು ತಾ. ೧೮ರಂದು ಬಂತು.

ಈ ಕುರಿತು ನಾನು ವೈಸರಾಯರೊಡನೆ ಪತ್ರವ್ಯವಹಾರ ಪ್ರಾರಂಭಿಸಿದೆ; ಅದು ಇಂದೂ ನಡೆಯುತ್ತಿದೆ; ಆದರೆ ಇಂದೇ ನಾನು ನಿರ್ಧಾರಮಾಡಬೇಕಾಗಿದೆ; ಸಾರ್ವಜನಿಕ ಹಣವನ್ನು ವ್ಯರ್ಥ ಹಾಳುಮಾಡುವುದು ಸರಿಯಲ್ಲ.

ಹರಿಜನ ನಿಲ್ಲಿಸುವೆನು

ವೈಸರಾಯರಿಂದ ಸರಿಯಾದ ಉತ್ತರ ಬರದಿರುವುದರಿಂದ, 'ಹರಿಜನ'ವನ್ನು ತತ್ಕಾಲಕ್ಕೆ ನಿಲ್ಲಿಸದೆ ಬೇರೆ ದಾರಿಯಿಲ್ಲ. ಅದರಂತೆ 'ಹರಿಜನ ಬಂಧು' 'ಹರಿಜನ ಸೇವಕ' ಗಳನ್ನೂ ನಿಲ್ಲಿಸಲಾಗುತ್ತದೆ. ನಾನು ಬರೆವ ಪ್ರತಿಯೊಂದು ಪಂಕ್ತಿಯನ್ನೂ ದಿಲ್ಲಿಯ ಪತ್ರಿಕಾ ಸಲಹೆಗಾರರಿಗೆ ಕಳುಹಿಸುತ್ತಾ ಹೋಗುವುದಾದರೆ ಸ್ವತಂತ್ರವಾಗಿ ಬರೆಯುವುದೇ ಶಕ್ಯವಾಗಲಾರದು. ಸಂಪಾದಕರನ್ನು ಶಿಕ್ಷೆಗೆ ಗುರಿ ಮಾಡುವುದು ನನ್ನ ಉದ್ದೇಶವಲ್ಲ. ಈ ಮೂರು ವಾರಪತ್ರಿಕೆಗಳೂ ಸತ್ಯದ ಸಲುವಾಗಿ ಪ್ರಕಟವಾಗುವವುಗಳು. ಆದ್ದರಿಂದ ಅವು ಎಲ್ಲಾ ಪಕ್ಷಗಳಿಗೂ ಸಂಬಂಧಿಸಿರುವವುಗಳು. ನಾನು ಸಂಪಾದಕೀಯ ಕಾರ್ಯ ಮಾಡಿದರೆ, ಆ ಹಿತವನ್ನು ಸಾಧಿಸಲು ಈಗ ಸಾಧ್ಯವಿಲ್ಲ. ಶಾಸನ ಭಂಗದ ಔಚಿತ್ಯ, ಅನೌಚಿತ್ಯಗಳನ್ನು ಬಿಟ್ಟರೂ, ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವೆಂಬುದು ನಮ್ಮ ಅವಶ್ಯವಾದ ಹಕ್ಕು ಆಗಿದೆ. ಶ್ರೀ ವಿನೋಬಾಭಾವೆಯವರನ್ನು ಶಿಕ್ಷೆಗೊಳಪಡಿಸಿ ಸರಕಾರದವರು ತಮ್ಮ ಉದ್ದೇಶವನ್ನು ಪ್ರಕಟಪಡಿಸಿರುವರು.

ಈಗಿನ ಪ್ರಕಟಣೆಯು ಕೇವಲ ಸಲಹೆಯ ರೂಪದಲ್ಲಿದ್ದರೂ ಅದು ನಿಜವಾಗಿ ಹುಕುಮೇ ಆಗಿರುವುದು. ಅದನ್ನು ಮುರಿದರೆ ಅದರ ಪರಿಣಾಮಕ್ಕೆ ಒಳಗಾಗಲೇ ಬೇಕು. ಆ ಪ್ರಕಟಣೆಗೆ ಒಳಗಾಗಲು ನಾನು ತಯಾರಿಲ್ಲ. ಈ ಮೂರು ವಾರಪತ್ರಿಕೆಗಳ ಅಸಂಖ್ಯ ವಾಚಕರನ್ನು ನಿರಾಶೆಗೊಳಿಸುವ ಸಂದರ್ಭ ಬಂದುದಕ್ಕಾಗಿ ನನಗೆ ದುಃಖವಾಗುತ್ತದೆ. ಇವು ತತ್ಕಾಲಕ್ಕೆ ನಿಲ್ಲಿಸಲ್ಪಟ್ಟಿವೆಯೋ ಅಥವಾ ಅನಿಯಮಿತ ಅವಧಿಯವರೆಗೆ ನಿಲ್ಲಿಸಲ್ಪಟ್ಟಿರುವವೋ ಎಂಬುದನ್ನು ನಾನು ಮುಂದಿನ ವಾರ ತಿಳಿಸಬಲ್ಲೆ. ನನಗೆ ಇನ್ನೂ ಪರಿಸ್ಥಿತಿ ಅನುಕೂಲವಾಗುವುದೆಂಬ ಆಶೆಯಿದೆ; ಹಾಗಾಗದೆ ಹೋದರೆ ನಾನು ಸತ್ಯಾಗ್ರಹವು ಪತ್ರಿಕಾ ಪ್ರಕಟಣೆಯಿಂದ ಸ್ವತಂತ್ರವಾಗಿರುವುದೆಂದು ಹೇಳುವೆನು. ಅದು ನಿಜವಾದುದಾದರೆ ಅದರೊಂದಿಗೆ ಅದರ ಶಕ್ತಿಯೂ ಹೆಚ್ಚುವುದು; ಮತ್ತು ಈ ಸತ್ಯಾಗ್ರಹವು ನಿಜವಾದುದೇ ಎಂದು ನನ್ನ ವಿಶ್ವಾಸವಾಗಿದೆ. ನಾನು ನನ್ನ ದಾರಿ ಹಿಡಿದು ಮುಂದುವರಿಯುವೆನು. ಮುಂದಿನ ಹೆಜ್ಜೆಯೇನೆಂದು ನಾನಿಂದೂ ತಿಳಿದಿಲ್ಲ. ಆದರೆ, ನಾನು ಹಿಂದೆ ಹೇಳಿದಂತೆ, ಸವಿನಯ ಶಾಸನ ಭಂಗದಲ್ಲಿ ಪ್ರತಿಯೊಂದು ಹೆಜ್ಜೆಯೂ ಸ್ವತಃ ಪರಿಪೂರ್ಣವೇ ಆಗಿರುವುದು.

ದಬ್ಬಾಳಿಕೆಯ ಪ್ರತಿಫಲ

ದಬ್ಬಾಳಿಕೆಯ ಪ್ರತಿಯೊಂದು ಕೆಲಸದಿಂದಲೂ, ನಿಜಸ್ಥಿತಿಗೆ ಬಲವೇ ದೊರಕುತ್ತದೆ. ದಬ್ಬಾಳಿಕೆಯಿಂದ ಸತ್ಯಕ್ಕೆ ಪುಷ್ಟಿ ದೊರಕುತ್ತಾ ಹೋಗಿ, ಕಡೆಗೆ ದಬ್ಬಾಳಿಕೆಯ ಶಕ್ತಿಯು ಕುಂದುತ್ತಾ ಬಂದು ಸತ್ಯಾಗ್ರಹದ ಉದ್ದೇಶವೇ ಹೀಗೆ ಸಫಲವಾಗುತ್ತದೆ. ಆದ್ದರಿಂದ ನಾನು ಮುಂದಿನ ಹೆಜ್ಜೆ ತೆಗೆದುಕೊಳ್ಳಲಿ, ಬಿಡಲಿ, ಅಥವಾ ತೆಗೆದುಕೊಂಡರೂ ಅದು ಸಾರ್ವಜನಿಕರಿಗೆ ಮಹತ್ವದ್ದಾಗಿರುವುದಿಲ್ಲ. ಸತ್ಯಾಗ್ರಹದೊಂದಿಗೆ ಸಹಾನುಭೂತಿಯುಳ್ಳವರು ನಾನು ಕೊಟ್ಟ ಸಲಹೆಗಳನ್ನು ಶ್ರದ್ಧೆಯಿಂದ ಪಾಲಿಸಬೇಕು. ವಿಚಾರಪೂರ್ವಕವಾದ, ಮತ್ತು ಶ್ರದ್ಧೆ ನಿಯಮಗಳಿಂದ ಮಾಡಿದ ಪ್ರತಿಯೊಂದು ವಿಚಾರದಲ್ಲಿಯೂ, ಭಾಷಣ ಲೇಖನಗಳಿಗಿಂತ ಹೆಚ್ಚಿನ ಪ್ರಭಾವವಿದೆ. ಹೀಗೆ ಮಾಡುವವರು ಎಂತಹ ಗಂಡಾಂತರವನ್ನಾದರೂ ತಪ್ಪಿಸಿ ಮುಂದೆ ಸಾಗಬಲ್ಲರು. ಆದರೆ ವಿವೇಕವು ಇದಕ್ಕಿಂತಲೂ ಹೆಚ್ಚಿನದು. ಆದರೆ ಇದರಲ್ಲಿ ಹೆಚ್ಚಿನ ವಿಶ್ವಾಸವಿಲ್ಲದವರಿಗೆ ನಾನು ಇನ್ನೊಂದು ಸೂಚನೆ ಕೊಡುವೆನು.

ಸಂಚರಿಸುವ ಪತ್ರಿಕೆಗಳಾಗಿರಿ

ಪ್ರತಿಯೊಬ್ಬನೂ ಸಂಚರಿಸುವ ಪತ್ರಿಕೆಯಾಗಿ ಉತ್ತಮವಾದ ಸುದ್ದಿಯನ್ನು ಬಾಯಿಂದ ಬಾಯಿಗೆ ಹರಡಲಿ. ತನಗೆ ನಿಶ್ಚಿತವಾಗಿ ತಿಳಿದುದನ್ನು ತನ್ನ ನೆರೆಹೊರೆಯವರಿಗೆ ತಿಳಿಸುವುದು. ಇದನ್ನು ಯಾವ ಸರಕಾರವೂ ನಿರ್ಬಂಧಿಸಲಾರದು. ಇದುವರೆಗೆ ಶೋಧಿಸಲ್ಪಟ್ಟದರಲ್ಲಿ ಅತ್ಯಂತ ಕಡಿಮೆ ಖರ್ಚಿನ ಪತ್ರಿಕೆಯಿದಾಗಿದೆ. ಇದರ ಮುಂದೆ, ಎಷ್ಟು ಜಾಗ್ರತೆ ವಹಿಸಿದರೂ ಸರಕಾರದ ಆಟ ನಡೆಯಲಾರದು.

ಆದರೆ ವ್ಯರ್ಥ ಹಾಳು ಹರಟೆ ಹೇಳಬಾರದು. ನಿಜವೆಂದು ನಿಶ್ಚಯವಾದ ಮೇಲೆ ಹೇಳಬೇಕು. ಈಗಿನ ಪತ್ರಿಕೆಗಳಲ್ಲಿ ಒಂದೇ ಪಕ್ಷದ ಸುದ್ದಿ, ಬಣ್ಣ ಕೊಟ್ಟ ಸುದ್ದಿಗಳು ಬರುವುದರಿಂದ ಅವು ಓದತಕ್ಕವುಗಳಾಗಿಲ್ಲ. ನಾನು ಹೊರಡಿಸುವ ಸಾರ್ವಜನಿಕ ಪ್ರಕಟಣೆಗಳೂ ಮುಂದೆ ನಿರ್ಬಂಧಕ್ಕೊಳಗಾಗಬಹುದು; ಪ್ರಕಟವಾಗದಿರಬಹುದು. ನಿರಂಕುಶವಾದ ನಡತೆಯುಳ್ಳ ಸರಕಾರಪದ್ಧತಿಯಲ್ಲಿ ಅದು ಸ್ವಕೀಯವಾಗಿರಲಿ, ಪರಕೀಯವಾಗಿರಲಿ, ಜೀವನವು ಈ ರೀತಿ ಸಾಗತಕ್ಕದ್ದೇ ಆಗಿದೆ.''

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಯ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮತ್ತು ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎಸ್. ನಾರಾಯಣ್, ಆರ್ಗನೈಸರ್, [illegible]

ಕೆ. ಕೆ. ಶ್ರೀನಿವಾಸನ್, ಬ್ರಾಂಚ್ ಮ್ಯಾನೇಜರ್, 4/5 [illegible] ಮದ್ರಾಸು

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನುಕೊಡುವುದರಿಂದ ಅವರು ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸೇವಾಗ್ರಾಮದಲ್ಲಿ ರಾಷ್ಟ್ರದ ಧುರೀಣರು!

[illegible] ಕಲಿಸುವ ನೆಹರು! ಕತೆ ಹೇಳುವ ರಾಜಾಜಿ!

ಅಹಿಂಸಾಮೂರ್ತಿ ವಿನೋಬಾ! ಅತಿಥಿ ಗೃಹದ ಬಜಾಜ್!

ಇವರೊಡನೆ ದ್ವಾರಪಾಲಕ 'ದಾಂಡಿಗ'!

(ಲೇಖಕ: ಸಿ. ಪಿ. ಕಾಮತ್, ನಲ್ವಾಡಿ, ವರ್ಧಾ.)

[illegible] ಸೇವಾಗ್ರಾಮದಲ್ಲಿ [illegible] ವರ್ಕಿಂಗ್ ಕಮಿಟಿಯು ತನ್ನ [illegible] ಜಮ್ನಾಲಾಲರ ಅತಿಥಿಗೃಹದಲ್ಲಿ ಕಾಂಗ್ರೆಸ್ ಮಂತ್ರಾಲೋಚನೆಯ ನಿಶ್ಚಿತ ಸ್ಥಾನ. ಹಗಲು ರಾತ್ರಿಯೆನ್ನದೆ ಕಾಂಗ್ರೆಸಿನ ಕಾರ್ಯಭಾರಿಗಳು ದೇಶದ ಮಹತ್ವ ಪ್ರಶ್ನೆಗಳ ಕುರಿತು ಕೂಲಂಕಷ ಆಲೋಚನೆ ಮಾಡಿ ಹೊಸ ಹೊಸ ರೀತಿಯ ಮಾರ್ಗಗಳನ್ನು ಶೋಧಿಸುತ್ತಿದ್ದರು.

ಹಲವರಿಗೆ ಬಜಾಜರ ಅತಿಥಿಗೃಹವು ಸ್ವಂತ ಮನೆಯಂತೆ. ವಲ್ಲಭಭಾಯಿ, ಭೂಲಾಭಾಯಿ, ಕೃಪಲಾನಿ, ರಾಜಗೋಪಾಲಾಚಾರಿ, ಪಟ್ಟಾಭಿ ಇವರು ಈ ಗೃಹದಲ್ಲಿನ ಚೊಕ್ಕಟ ಕೊಟಡಿಗಳೊಂದೊಂದರಲ್ಲಿ ಆಫೀಸು ಮಾಡಿಕೊಂಡಿರುತ್ತಾರೆ. ಪಂಡಿತ್ ನೆಹರು ಮತ್ತು ಅಜಾದರು ಜಮನಾಲಾಲರ ಸ್ವಂತ ಬಂಗಲೆಯ ಉಪ್ಪರಿಗೆಯಲ್ಲಿರುತ್ತಾರೆ. ಸರೋಜಿನಿಯವರು ಸೇವಾಗ್ರಾಮದಲ್ಲಿ ತಂಗುತ್ತಾರೆ.

ನಿಯಮಿತ ಸಮಯಕ್ಕೆ ಎಲ್ಲಾ ಸದಸ್ಯರೂ ಅತಿಥಿಗೃಹದ ಮಹಡಿಯ ಮೇಲೆ ಬಂದು ಸೇರುತ್ತಾರೆ. ಹೆಚ್ಚಿನವರು ಅರ್ಧ ತಾಸಿಗೆ ಮುಂಚೆಯೇ ಹಾಜರಿರುತ್ತಾರೆ. ಆದರೆ ಪಂಡಿತ್ ನೆಹರುಗಳು ಮಾತ್ರ ನಿಯಮಿತ ವೇಳೆಯ ಒಂದೆರಡು ನಿಮಿಷಗಳಷ್ಟು ಮುಂಚಿತ ಬರುವರು. ತಮ್ಮ 'ಆಫೀಸಿ'ನಿಂದ ಕೈಯಲ್ಲಿ ಚರ್ಮದ ಬ್ಯಾಗ್ ಹಿಡಕೊಂಡು ಪ್ರೇಕ್ಷಕರ ಸನ್ಮಾನಪೂರ್ವಕವಂದನೆಗಳಿಗೆ ಪಾಶ್ಚಾತ್ಯ ರೀತಿಯಲ್ಲಿ ಮೇಲೆತ್ತಿದ ಕೈಯನ್ನು ಗಂಭೀರವಾಗಿ ಅಲ್ಲಾಡಿಸಿ ಪ್ರತಿವಂದನೆಯನ್ನು ಗೈಯುತ್ತಿರುವುದು, ಮತ್ತವರ ನಡೆಯುವ ಶೈಲಿ, ಎಲ್ಲವೂ ಓರ್ವ ಶಿಸ್ತಿನ ಸೈನಿಕನ ಕ್ರಮದಂತೆಯೇ ಇರುವುವು.

ನೆಹರುಗಳಿಗೆ ವಯಸ್ಸು ೫೦ ಮಿಕ್ಕಿದರೂ ನವತರುಣರಂತೆ ಕಾಣುತ್ತಾರೆ. ನಗುವಾಗಂತೂ ಅವರ ಚೈತನ್ಯಪೂರ್ಣ ಜೀವಭಾವವು ಪ್ರಸನ್ನಗೊಂಡಂತೆ ಭಾಸವಾಗುತ್ತದೆ. ಯಾರಾದರೂ ಒಂದು ವಿಷಯವನ್ನು ಹೇಳಿದರೆ ಸಣ್ಣ ಮಕ್ಕಳಂತೆ ಅಭಿರುಚಿಯಿಂದ ಆಲಿಸುತ್ತಾರೆ. ಸ್ನೇಹಿತರೊಂದಿಗೆ ಅವರು ಹಿಂದಿಯಲ್ಲಿ ಚಟುವಟಿಕೆಯಿಂದ ಮಾತನಾಡುವುದನ್ನು ಕೇಳುವಾಗ ಹರ್ಷವುಂಟಾಗುತ್ತದೆ. ಅವರ ಸ್ವಾಭಿಮಾನಯುಕ್ತ ಸಭ್ಯಗೌರವದ ಪ್ರಜ್ವಲಿತಗುಣವು ಅವರ ಸರ್ವಾಂಗದಲ್ಲಿಯೂ ತುಂಬಿ ತುಳುಕುತ್ತಿರುವುದು.

ನೆಹರುಗಳು ಅತಿಥಿಗೃಹಕ್ಕೆ ಬಂದರೆಂದರೆ ಅಲ್ಲಿದ್ದವರೆಲ್ಲರೂ ಶಿಸ್ತು ಸಜ್ಜಿತರಾಗಿ ವರ್ತಿಸಲು ಪ್ರಯತ್ನಿಸುತ್ತಾರೆ. ಅವರೊಂದಿಗೆ [illegible]

ರಾಜಗೋಪಾಲಾಚಾರ್ಯರೆಂದರೆ ನೆಹರುಗಳಿಗೆ ಬಹು ಅಭಿಮಾನ. ಬಹಳ ಹೊತ್ತು ಅವರೊಂದಿಗೆ ಸಂಭಾಷಿಸುತ್ತಿರುತ್ತಾರೆ. ಆಚಾರ್ಯರು ತಮ್ಮ ವಿವೇಕಯುಕ್ತ ಹಾಸ್ಯದಿಂದಲೇ ಸಂಭಾಷಣೆ ನಡೆಸುತ್ತಾರೆ. ಮಾತು ಮಾತಿಗೆ ಒಂದು ಸಾಮ್ಯ ಅಥವಾ ಪುರಾಣಕತೆಗಳಿಂದಾಗಲಿ ಚರಿತ್ರೆಯಿಂದಾಗಲೀ ಒಂದು ನಿದರ್ಶನ ಎತ್ತಿ ಹೇಳುವರು. ಆಚಾರ್ಯರ ಒಡನಾಟದಲ್ಲಿ ಎಲ್ಲರೂ ಸದಾ ಆನಂದಿತರಾಗಿಯೇ ಇರುವರು.

ಈ ಸಲದ ವರ್ಕಿಂಗ್ ಕಮಿಟಿ ಎಂದರೆ ಬಹಳ ಪ್ರಾಮುಖ್ಯದ್ದು. ಗಹನಾತ್ಮಕ ವಿಚಾರಗಳನ್ನು ಚರ್ಚಿಸಿ, ತರ್ಕಿಸಿ, ಕಾರ್ಯರೂಪಾತ್ಮಕ ಧೋರಣೆಯನ್ನು ಕಂಡುಹಿಡಿಯಲು ಪುಢಾರಿಗಳು ಸೇರಿದ್ದರು. ಬೊಂಬಾಯಿಯ ಎ. ಐ. ಸಿ. ಸಿ.ಯಲ್ಲಿ ಮಹಾತ್ಮರಿಗೆ ಸರ್ವ ಅಧಿಕಾರವನ್ನು ಕೊಟ್ಟು ಸೇನಾಪತಿಯಾಗಿ ಚುನಾಯಿಸಿದ್ದರು. ಅಂದ ಮೇಲೆ ಮತ್ತೊಮ್ಮೆ ವರ್ಕಿಂಗ್ ಕಮಿಟಿ ಸೇರುವ ಅವಶ್ಯಕತೆ ಏನಿತ್ತು? ಈ ಪ್ರಶ್ನೆ ಪತ್ರಿಕಾಕಾರರನ್ನು ಗೊಂದಲದಲ್ಲಿ ಹಾಕಿತ್ತು.

ಈ ಸಲದ ಕಮಿಟಿಯು ಗುಪ್ತದಲ್ಲಿ ಸೇರಿತು. ಅತಿಥಿ ಗೃಹದಲ್ಲಿ ಜಮುನಾಲಾಲರ 'ಬಾಡಿಗಾರ್ಡ್' ಒಬ್ಬ ಇದ್ದಾನೆ-ಆರು ಮೂರು ಅಡಿಗಳ ಉದ್ದಗಲದ ದಾಂಡಿಗನಾತ. ಒಂದು ನೆರಪಿಳ್ಳೆಯನ್ನೂ ಒಳಗೆ ಬಿಡಲಾರನಿವ. ಗೇಣುದ್ದದ ಇವನ ಮೀಸೆಗುಂಪನ್ನು ನೋಡಿದರೆ ಎಂಥವನಿಗೂ ಧೈರ್ಯ ಕುಂದುವುದು. ಒಮ್ಮೆ ಈತ ಪರಿಚಯವಿಲ್ಲದ ವರ್ಕಿಂಗ್ ಕಮಿಟಿಯ ಸದಸ್ಯರನ್ನೂ ಒಳಗೆ ಹೋಗಗೊಡಲಿಲ್ಲ. ಶ್ರೀಮತಿ ಕೃಪಲಾನಿಯವರು ಬಂದು ಮಧ್ಯಸ್ಥಿಗೆ ನಡೆಸಿದರು, ಪತ್ರಿಕಾ ಪ್ರತಿನಿಧಿಗಳು ಅವನನ್ನು ಕಂಡರೆ ಉಂಡು ಬೀಳುತ್ತಾರೆ. ಅಸೋಸಿಯೇಟೆಡ್ ಪ್ರತಿನಿಧಿಯು ಆತನ ಮೇಲೆ ಬಹಳ ರೇಗಿ ಕೃಪಲಾನಿಯವರಿಗೆ ದೂರು ಕೊಡಾ ಕೊಟ್ಟಿದ್ದನು!

ತಮ್ಮ ಕೆಲಸವಿದ್ದಾಗ ಮಾತ್ರ ಮಹಾತ್ಮರು ಬರುವರು. ಅವರಿಗೆ ಶ್ರಮವಾಗದ ರೀತಿಯಲ್ಲಿ ವರ್ಕಿಂಗ್ ಕಮಿಟಿಯು ಅವರೊಂದಿಗೆ ಸಹಕರಿಸುವುದು. ಮಹಾತ್ಮರ ನೆರಳು ಮಹಾದೇವಭಾಯಿ ಎಂದರೆ ಸ್ವಲ್ಪವೂ ತಪ್ಪಲ್ಲ. ಐರೋಪ್ಯರನ್ನು ನಾಚಿಸುವ ಅವರ ದೇಹವರ್ಣವು ದೂರದಿಂದಲೇ ಗಮನವನ್ನು ಸೆಳೆಯುತ್ತದೆ. ಈ ಪ್ರಖ್ಯಾತ ಕಾರ್ಯದರ್ಶಿಯು ವರ್ಕಿಂಗ್ ಕಮಿಟಿಯಲ್ಲಿ ಓರ್ವ ಪ್ರಭಾವಶಾಲಿ ವ್ಯಕ್ತಿ. ಇವರು ದೇಶದ ಪ್ರಾಮುಖ್ಯ ವೃತ್ತಪತ್ರಗಳ ಮತ್ತು ಕಾಂಗ್ರೆಸ್ ಪಂಗಡಿಗರ ಮತಾಭಿಪ್ರಾಯಗಳನ್ನು ಸಂಗ್ರಹಿಸಿ ಕಮಿಟಿಯಲ್ಲಿ ಸದಾ ಹಾಜರಿರುತ್ತಾರೆ.

ಮೂರು ದಿನಗಳ ನಂತರ ವರ್ಕಿಂಗ್ ಕಮಿಟಿಯು ಮುಕ್ತಾಯವಾಯಿತು. ಎಲ್ಲರೂ ಧುರೀಣರ ಬರುವಿಕೆ ಹೋಗುವಿಕೆಗಳನ್ನೆ ನೋಡಿದ್ದ[illegible] ಕಾರ್ಯಕಲಾಪಗಳ ಪತ್ತೆ ಸಿಗಲಿಲ್ಲ. ಪತ್ರಿಕಾಕಾರರಿಗೆ ಸಿಕ್ಕಿದುದು ಎಳೆಂಟು ವಾಕ್ಯಗಳ ಒಂದು ಪ್ರಕಟನೆ.

ಸಭೆ ಮುಕ್ತಾಯವಾದೊಡನೆ ಮಹಾತ್ಮರು ಬಜಾಜ್, ಮಹಾದೇವ್, ಪ್ಯಾರೇಲಾಲ್‌ರೊಡಗೂಡಿ ಪೌನಾರಿನ ವಿನೋಬಾಜಿಯವರ ಆಶ್ರಮಕ್ಕೆ ಬಂದರು. ಗುರುಗಳನ್ನು ಕಂಡೊಡನೆಯೇ ಶಿಷ್ಯರು ಉದ್ದಂಡ ನಮಸ್ಕಾರ ಮಾಡಿದರು. "ನಿನ್ನನ್ನು ಜೈಲಿಗೆ ಕಳುಹಿಸಲು ಬಂದೆ ವಿನೋಬಾ." ಎಂದರು ಮಹಾತ್ಮರು. "ಬಂಧನದಿಂದ ಬಿಡುಗಡೆ ಮಾಡುವವರೂ ತಾವೇ ಅಲ್ಲವೇ" ಎಂದು ವಿನೋಬಾಜಿಯವರು ತಕಲಿ ಹಿಡಿದು ನೂಲುತ್ತಾ ಹೇಳಿದರು. ಮಹಾತ್ಮರು ಶಿಷ್ಯರೊಂದಿಗೆ ಮತ್ತೆ ಗುಪ್ತಕೊಟಡಿಗೆ ಹೋದರು.

ಹದಿನೈದು ನಿಮಿಷಗಳ ನಂತರ ಮಹಾತ್ಮರು ತಮ್ಮ ಪರ್ಣಕುಟಿಗೆ ಹೊರಟರು.

ಈ ಸಲದ ಸತ್ಯಾಗ್ರಹದ ಮೊದಲ ಸತ್ಯಾಗ್ರಹಿ ವಿನೋಬಾಜಿ. ತಾ. ೧೭ರಲ್ಲಿ ಒಂದು ಬಹಿರಂಗ ಪ್ರಕಟಣೆ ಹೊರಡಿಸಿ ಮರುದಿನ ಅವರು ಪ್ರಾತಃ[illegible] ತಮ್ಮ ಯುದ್ಧ ವಿರೋಧ ಭಾಷಣ ಮಾಡಿದರು. ಸರಕಾರದ ಪ್ರತಿನಿಧಿಗಳೂ, ಪತ್ರಿಕಾಕಾರರೂ, ಭಾಷಣದ ವರದಿಯನ್ನು ತೆಗೆದುಕೊಂಡರು. ಮಹಾದೇವ ದೇಸಾಯಿಯವರೂ ಭಾಷಣವನ್ನು ಬರೆಗೊಂಡರು ಮಹಾತ್ಮರ ಅವಗಾಹನೆಗಾಗಿ.

೧೭ಕ್ಕೆ ಸುರಗಾಂವಲ್ಲಿ ಭಾಷಣ. ೧೮ಕ್ಕೆ ಅಂಜಿಯಲ್ಲಿ. ೧೯ಕ್ಕೆ ಸೆಲೂವಿನಲ್ಲಿ. ೨೦ಕ್ಕೆ ದೇವಲಿಯಲ್ಲಿ. ಎಲ್ಲಾ ಹಳ್ಳಿಗಳೇ. ಹಳ್ಳಿಗಳಲ್ಲಿ ಜಾಗೃತಿ ಹುಟ್ಟಿಸುವುದಕ್ಕಾಗಿ!

೨೧ಕ್ಕೆ ಪ್ರಾತಃಕಾಲ ೩|| ಗಂಟೆಗೆ ಸರಕಾರದ ವಾರಂಟು ಬಂತು ಜೇವಲ್ಲಿಯಲ್ಲಿ. ೪|| ತನಕ ವಿನೋಬಾಜಿಯವರ ಮೌನಕಾಲ. ಅನಂತರ ಅವರು ಪೋಲಿಸ್ ಅಧಿಕಾರಿಗಳಿಗೆ ಒಪ್ಪಿಸಿಕೊಂಡರು. ಜೊತೆಯಲ್ಲಿದ್ದ ಶಿಷ್ಯರೊಬ್ಬರು 'ಸ್ಟೇಟ್‌ಮೆಂಟ್' ಕೇಳಿದಾಗ 'ಸರಕಾರದ ತಾಬೆಯಲ್ಲಿದ್ದೇನೆ, ನನಗೆ ಅಧಿಕಾರವಿಲ್ಲ' ಎಂದು ಹೇಳಿದರು.

ತಮ್ಮ ಪ್ರತಿಯೊಂದು ಕಾರ್ಯದಲ್ಲಿ ಶ್ರೀ ವಿನೋಬಾಜಿಯವರು ಸಂಪೂರ್ಣ ಅಹಿಂಸಾಪಾಲನೆಯನ್ನು ಮಾಡಲು ಪ್ರಯತ್ನಪಟ್ಟಿದ್ದಾರೆ. ಒಂದು ಭಾಷಣದ ನಂತರ ಅದರಲ್ಲಿ ಹಿಂಸಾತ್ಮಕ ರೂಪದ ಶಬ್ದಗಳ ಉಪಯೋಗಿಸಲ್ಪಟ್ಟಿವೆಯೋ ಎಂದು ಕೂಡಾ ಅವರು ವರದಿಗಾರರನ್ನು ವಿಚಾರಿಸಿದ್ದಾರೆ. ಅವರು ಹೋದೆಡೆಗಳಲ್ಲೆಲ್ಲಾ ತಕಲಿ ಮತ್ತು ಚರಕದ ಪ್ರಚಾರದ ಕಡೆಗೂ ಹೆಚ್ಚಿನ ಗಮನ ಕೊಟ್ಟಿದ್ದಾರೆ. ಈ ಸತ್ಯಾಗ್ರಹಿಯು ಅಪ್ಪಟ ರಚನಾತ್ಮಕ ಕಾರ್ಯಕಾರಿ. ದೇವಲಿಯಲ್ಲಿ ಅವರಿಂದ ಹರಿಜನರಿಗೆ ಅಲ್ಲಿನ ದೇವಾಲಯವೊಂದರಲ್ಲಿ ಪ್ರವೇಶ ಸಿಗಲು ಕಾರಣವಾಯಿತು.

ವಿನೋಬಾಜಿಯವರ ವಿಚಾರಣೆ ನಡೆಯಿತು. ಮ್ಯಾಜಿಸ್ಟ್ರೇಟರು ವಿಚಾರಣೆ ನಡೆಸಿದರು. ಪೋಲಿಸ್ ಸುಪರಿಂಟೆಂಡೆಂಟರು ಸತ್ಯಾಗ್ರಹಿಯ ಮರಾಠಿ ಭಾಷಣದ ಇಂಗ್ಲಿಷ್ ಭಾಷಾಂತರವನ್ನು ಓದಿ ರಕ್ಷಣಾ ಕಾಯಿದೆಯ ಕೆಳಗೆ ಅವರ ತಪ್ಪುಗಾರಿಕೆಯನ್ನು ನಿವೇದಿಸಿದರು.

ಮೇಜಿಸ್ಟ್ರೇಟ್—ತಮ್ಮ ವಯಸ್ಸು.

ವಿನೋಬಾಜಿ—೪೬.

ಮೇ.—ತಮ್ಮ ವೃತ್ತಿ.

ವಿ.—ನೂಲುವುದು.

ಒಂದುವರೆ ತಾಸಿನ ನಂತರ ಮೂರು ತಿಂಗಳ ಸಜೆಯನ್ನು ವಿಧಿಸಿರುವುದಾಗಿ ತಿಳಿಸಲಾಯಿತು.

ಮಹಾತ್ಮರು ೨೮ ಸತ್ಯಾಗ್ರಹಿಗಳ ಪಟ್ಟಿಯನ್ನು ತಯಾರಿಸಿದುದರಲ್ಲಿ ಇರ್ವರು ಮಹಿಳೆಯರು. ಇಲ್ಲಿಯ ಮಹಿಳಾಶ್ರಮಕ್ಕೆ ಸಮ್ಮಂಧಪಟ್ಟವರು. ೧೭ ಮಂದಿಗಳು ನಲ್ವಾಡಿ ಆಶ್ರಮದವರು. ಕಿಶೋರಿಲಾಲ್ ಮಶ್ರುವಾಲರೂ ಆ ಪಟ್ಟಿಯ ಓರ್ವ ಸತ್ಯಾಗ್ರಹಿಗಳು ಎಂದು ತಿಳಿದಿದೆ. ವರ್ಕಿಂಗ್ ಕಮಿಟಿಯ ಮೆಂಬರರಾರೂ ಈಗ ಸದ್ಯಕ್ಕೆ ದುಮುಕುವುದಿಲ್ಲವಂತೆ.

THE
Jupiter General Insurance Co Ltd,
LIFE DEPARTMENT
AGENCY applications are invited from young energetic and influential men from South Kanara and Coorg.
Apply by post—
Chief Agent,
MANGALORE.

ಊರಿನಿಂದ ಹೊರಗೆ, ಆ ಅರಳಿ ಕಟ್ಟೆಯ ಬುಡದಲ್ಲಿ ಅವಳ ಗುಡಿಸಲು. ಮರದ ಮೇಲೆ ಮಧುರ ಮಧುರವಾಗಿ ಹಾಡುವ ವನಪಕ್ಷಿಗಳಲ್ಲದೆ ಅವಳಿಗೆ ಬೇರೆ ಯಾರೂ ಒಡನಾಡಿಗಳಿರಲಿಲ್ಲ. ಅವಳು ಕುರೂಪಿ. ಅವಳನ್ನು ನೋಡಿ ಊರಿನ ಎಲ್ಲಾ ಹುಡುಗ ಹುಡುಗಿಯರೂ ಮೋರೆ ತಿರುವುತ್ತಿದ್ದರು. ಅಂದಮೇಲೆ ಯಾರು ಅವಳ ಒಡನಾಡಿಗಳಾಗಬೇಕು? ದಪ್ಪವಾದ ತುಟಿಗಳು, ಚಪ್ಪಟೆ ಮೂಗು, ಕಾಡಿಗೆಯಂಥ ಮೈ ಬಣ್ಣ. ಎಲ್ಲಿಯಾದರೂ ಕತ್ತಲೆಯಲ್ಲಿ ಸಾಕ್ಷಾತ್ಕಾರವಾದರೆ ಜನರು ಭೂತವೆಂದು ತಿಳಿದು ಓಡಿಹೋಗಬಹುದು. ಅಂತಹದು ಅವಳ ಶರೀರ ವರ್ಣ. ರೈಲುದಾರಿಯ ಮೇಲೆ ಅಲ್ಲಲ್ಲಿ ಬಿದ್ದ ಇದ್ದಲಿಯನ್ನು ಒಟ್ಟುಮಾಡಿ ಮಾರಿ ಅವಳ ಜೀವನವಾಗುತಿತ್ತು.

ರಜೀನ ಕುರೂಪಿಯಾದರೂ ಅವಳು [illegible]ಳಾಗಿದ್ದಳು. ಮಾನವಕೋಟಿಯ ಹೃದಯಭಾವನೆಗಳು ಅವಳಲ್ಲೂ ಮೂಡಿ ಕಾಡುತ್ತಿದ್ದುವು. ಬಾಲ್ಯದಲ್ಲಿ ಅಜ್ಜಿಯೋ ಅಜ್ಜನೋ ಅವಳಿಗೆ ಕೊಟ್ಟ ಎರಡು ಗೊಂಬೆಗಳು ಅವಳ ಹತ್ತಿರ ಇದ್ದುವು. ಸಮಯವನ್ನು ಕಳೆಯಲಿಕ್ಕೆ ಅವೇ ಅವಳ ಸಾಧನಗಳು. ಸಾಯಂಕಾಲ ಇದ್ದಲಿಯನ್ನು ಮಾರಿ ಗುಡಿಸಲಿಗೆ ಮರಳಿದಾಗ ಅವಳು ಆ ಗೊಂಬೆಗಳನ್ನು ತೆಗೆದುಕೊಂಡು ಶೃಂಗಾರಮಾಡುತಿದ್ದಳು; ಮದುವೆ ಮಾಡುತಿದ್ದಳು; ಹೊಸ ಹೂ ಬಿಸಾಡುತಿದ್ದಳು, ಶೋಭನ ಹಾಡುಗಳನ್ನು ಹಾಡುತಿದ್ದಳು. ಆ ಮೇಲೆ ಆ ಎರಡೂ ಗೊಂಬೆಗಳನ್ನೂ ಹೃದಯಕ್ಕೆ ಒತ್ತಿಕೊಂಡು ಅವಳು ರಾತ್ರಿಯನ್ನು ಕಳೆಯುತಿದ್ದಳು. ಅವಳ ಆ ಪ್ರೇಮ ಜೀವನವು ಕಾಡು ಹೂವಿನ ಸುಗಂಧದಂತೆ ಯಾರೂ ಕೇಳದ ಅರಿಯದ ರೀತಿಯಲ್ಲಿ ಸಾಗುತಿತ್ತು.

೨

ಶ್ರಾವಣ ಮಾಸ. ಇಡೀ ಹಗಲು ಮೂಸಲಧಾರೆಯಾಗಿ ಮಳೆ ಬಂದಿತ್ತು. ಬಹಳ ಓಡಾಡಿದ ಮೇಲೆ ರಜೀನಳಿಗೆ ಎರಡು ಹಿಡಿ ಇದ್ದಲಿ ಸಿಕ್ಕಿತ್ತು. ಸೂರ್ಯನು ಅಸ್ತಮುಖನಾಗಿದ್ದ. ಕತ್ತಲೆ ಹರಡುತ್ತ ಇತ್ತು. ಅವಳು ಇದ್ದಲಿ ಮಾರು[illegible] ಸುಂದರನಾದರೂ ಅಂಧನಾದ ಒಬ್ಬ ಭಿಕ್ಷುಕ ಯುವಕನು ಕರ್ಣ ಮನೋಹರವಾಗಿ ಹಾಡುತ್ತ ಬರುವುದನ್ನು ಕಂಡಳು. ಅವನು ಎರಡೆರಡು ಹೆಜ್ಜೆ ಮುಂದೆ ಇಡುತ್ತಾನೆ, ಮತ್ತೆ ಕುರುಡು ಕಣ್ಣುಗಳನ್ನು ಅರಳಿಸಿಕೊಂಡು ಕೇಳುತ್ತಾನೆ—'ಅಣ್ಣಾ, ಏನಾದರೂ ಭಿಕ್ಷೆ ನೀಡಿ'.

ರಜೀನಾ ಬಹಳ ಸಮಯದ ತನಕ ಅವನನ್ನು ನೋಡುತ್ತ ನಿಂತಳು, ಅವನನ್ನು ಹಿಂಬಾಲಿಸಿ ನಡೆದಳು. ಅವಳು ಅವನ ರೂಪ ಲಾವಣ್ಯಗಳಿಗೆ ಮನಸೋತು ತನ್ನನ್ನು ಮರೆತಿದ್ದಳು. ಭಿಕ್ಷುಕ ಒಂದು ನಿಟ್ಟುಸಿರು ಬಿಟ್ಟು ಒಂದು ಕಡೆ ನಿಂತುಬಿಟ್ಟ—ಯಾರೂ ಅವನಿಗೆ ಏನೂ ಭಿಕ್ಷೆ ಹಾಕಿರಲಿಲ್ಲ. ಅವಳು ನಡುಗುವ ಸ್ವರದಿಂದ ಕೇಳಿದಳು—'ಇಲ್ಲಿ [illegible]

ಈ ವಾರದ ಕತೆ:

ಕುರುಡ ಮತ್ತು ಭಿಕ್ಷುಕಿ

[ಅನುವಾದಕರು: ಶ್ರೀ ಕೆ. ಎಸ್. ಶೆಟ್ಟಿ]

ನಿಂತಿದ್ದಿ?'

'ಮತ್ತೆ ಎಲ್ಲಿಗೆ ಹೋಗಲಿ?' ಅವನು ಮೋರೆಯನ್ನು ಎತ್ತಿ ಕೇಳಿದ.

'ನೀನು ಈ ಮೊದಲು ಈ ಊರಿಗೆ ಬಂದಿಲ್ಲವೆ?'

'ಇಲ್ಲ'

'ಹಾಗಾದರೆ ರಾತ್ರಿಯನ್ನು ಎಲ್ಲಿ ಕಳೆಯುವಿ?'

'ಅದನ್ನೇ ಆಲೋಚಿಸುತಿದ್ದೇನೆ.'

'ಒಳ್ಳೇದು, ನನ್ನ ಮನೆಗೆ ಬಾ!'

ಅವನು ಹೇಳಿದ—'ಅಪ್ಪಾ, ಸುಮ್ಮಗೆ ತಮಾಷೆ ಮಾಡಬೇಡ. ನಾನು ಕುರುಡ'

ಅವಳು ಹೇಳಿದಳು—'ನಾನು ತಮಾಷೆ ಮಾಡಲಿಲ್ಲ; ನಿಜ[illegible] ಬಾ.'

ರಜೀನಾ ಅವನ ಊರುಗೋಲನ್ನು ಹಿಡಿದು, ಸವಿಮಾತಿನಿಂದ ಮಾತನಾಡಿ ಭರವಸೆ ಹುಟ್ಟಿಸಿದಳು. ಇಬ್ಬರೂ ಅವಳ ಗುಡಿಸಲಿಗೆ ನಡೆದರು.

'ನಿನ್ನ ಹೆಸರೇನು?' ಗುಡಿಸಲನ್ನು ಪ್ರವೇಶಿಸುತ್ತ ಅವಳು ಕೇಳಿದಳು.

'ರೂಮಾನ!'

'ರೂಮಾನ! ಒಳ್ಳೇದು, ರೂಮಾನ, ನಿನ್ನವರು ಬೇರೆ ಯಾರೂ ಇಲ್ಲವೆ?'

'ಇಲ್ಲ ನಾನು ಒಬ್ಬನೆ; ನನ್ನವರು ಬೇರೆ ಯಾರೂ ಇಲ್ಲ.'

'ಮತ್ತೆ, ನಾನು ಕೂಡ ಒಬ್ಬಳೆ!' ರಜೀನಳ ಮುಖದಿಂದ ಈ ಮಾತುಗಳು ತಮ್ಮಷ್ಟಕ್ಕೆ ಹೊರಟು ವಾಯುಮಂಡಲದಲ್ಲಿ ವಿಲೀನವಾದುವು.

೩

ಬಡವರ ಆ ಗುಡಿಸಲಿನಲ್ಲಿ ರೂಮಾನ ಮತ್ತು ರಜೀನ, ಇಬ್ಬರು ಒಟ್ಟಾಗಿ ಇರತೊಡಗಿದರು. ಶತಮಾನಗಳಿಂದ ಸಂಗಡಿಗರೋ ಎಂಬ ಹಾಗೆ ಆ ಗುಡಿಸಲಿನಲ್ಲಿ ಅವರ ಜೀವನವು ಕಳೆಯಿತು. ಅವರಿಗೆ ತಮ್ಮ ಮೊದಲಿನ ಅಶಾಂತಜೀವನ ದೂರವಾಗಿ ಈಗ ಶಾಂತಿಯೂ ಸುಖವೂ ಪ್ರಾಪ್ತವಾಗಿತ್ತು. ರಜೀನ ಕುರೂಪಿ ಆಗಿದ್ದ ರೂಮಾನ ಕುರುಡನಾಗಿದ್ದ. ಅವನು ಅವಳ ರೂಪವನ್ನಲ್ಲ, ಪರಂತು ಅಂತರ್ಚಕ್ಷುಗಳಿಂದ ಅವಳ ಪ್ರೇಮವನ್ನು ನೋಡುತಿದ್ದ. ರಜೀನಳಿಗೆ ರೂಮಾನನು ಅಂಧ ಭಿಕ್ಷುಕನಲ್ಲ. ಪ್ರೇಮ ಹೃದಯದ ದೇವತೆಯಾಗಿದ್ದ. ಏಕಾಂತವಾದ ಆ ಗುಡಿಸಲಿನಲ್ಲಿ ಅಂಧ ರೂಮಾನ ಮತ್ತು ಕುರೂಪಿ ಭಿಕ್ಷುಕಿ ಜೀವನ ಪ್ರೇಮದ ಮುರಳಿಯನ್ನು ಬಾರಿಸುತಿದ್ದರು. ಅವರನ್ನು ಈರ್ಷೆಯಿಂದ ನೋಡುವವನು ಅಥವಾ ದ್ವೇಷದಿಂದ ಕಾಣುವವನು ಜಗತ್ತಿನಲ್ಲಿ ಯಾರೂ ಇರಲಿಲ್ಲ. ಪ್ರೇಮದ ರಾಜ್ಯದಲ್ಲಿ ಅವರು ಸ್ವಚ್ಛಂದರಾಗಿ ವಿಹರಿಸಿ ಜೀವನ ಸುಖವನ್ನು ಅನುಭವಿಸುತಿದ್ದರು.

ಒಂದು ದಿನ ಎಂದಿನಂತೆ ಭಿಕ್ಷೆಗೆ ಹೊರಟಿದ್ದಾಗ ರಜೀನಾ, ರೂಮಾನನ ವಿಚಾರಗಳ ಕೇಂದ್ರವಾಗ ಪರಿಣಮಿಸಿದ್ದಳು. ಅವನು ಎಷ್ಟೆಷ್ಟೊ ಸುಂದರ ವಸ್ತುಗಳನ್ನು ಮನಸ್ಸಿನಲ್ಲಿ ಕಲ್ಪಿಸಿದ್ದನು ಕಂಡಿದ್ದನು. ಸ್ವರ್ಗಲೋಕದ ಅಪ್ಸರೆಯನ್ನೂ ಅವನು ಮನಸ್ಸಿನಲ್ಲಿ ರೂಪಿಸಿದ್ದನು. ಇವರು ಯಾರಾದರೂ ಸೌಂದರ್ಯದಲ್ಲಿ ರಜೀನಳನ್ನು ಮೀರಿಸಬಹುದೆ? ಛೆ! ಸರ್ವಥಾ ಇಲ್ಲ. ರಜೀನಾ—ಅವಳು ಮೂರು ಲೋಕಗಳ ಅನುಪಮ ಸುಂದರಿ; ಅಪ್ರತಿಮ ಲಾವಣ್ಯವತಿ ಎಂದು ಅವನು ನಿಶ್ಚೈಸಿದ.

ರಸ್ತೆ ಒಂದು ಶಾಲೆಯ ಮಾರ್ಗವಾಗಿ ಹೋಗುತಿತ್ತು. ಅಲ್ಲಿ ಕೆಲವು ಹುಡುಗರು ಕುಣಿಕುಣಿದು ನಲಿನಲಿದು ಹೇಳುತಿದ್ದರು. ಕುರುಡನ ಹೆಂಡತಿ ಕಪ್ಪು, ಕುರುಡನ ಹೆಂಡತಿ ಕಪ್ಪು ಎಂದು. ರೂಮಾನನು ಮಕ್ಕಳ ಮಾತುಗಳನ್ನು ಕೇಳಿದ. ಅವನಿಗೆ ಕಣ್ಣುಗಳಿದ್ದರೆ ಆಗಲೇ ಅವರ ಮೇಲೆ ಸೇಡು ತೀರಿಸಿಕೊಳ್ಳುತಿದ್ದ. ತನ್ನ ರಜೀನ ಕಪ್ಪು ಕುರೂಪಿ ಅಲ್ಲವೆಂದೇ ಅವನ ಭಾವನೆ. ಕಪ್ಪು ಕುರೂಪಗಳೆಂದರೆ ಅವನಿಗೆ ಬಹಳ ತಿರಸ್ಕಾರ. ಅವನು ದಾರಿಹಿಡಿದು ಹಾಗೇ ಮುಂದಕ್ಕೆ ಹೋದ.

೪

ರೂಮಾನನು ಮನೆಗೆ ಮುಟ್ಟುವಾಗ ರಾತ್ರಿಯಾಗುತ್ತ ಬಂದಿತ್ತು. ರಜೀನ ಅವನನ್ನು ಕಾದಿದ್ದಳು. ಅವನು ಬರುತ್ತ ಕೇಳಿದ—'ಹೇಳುವಿಯಾ ನಾನು ಏನು ತಂದಿದ್ದೇನೆಂದು?'

'ನನಗೇನು ಗೊತ್ತು, ಏನು ತಂದಿದ್ದೀರೆಂದು?' ರಜೀನ ಉತ್ತರ ಕೊಟ್ಟಳು.

'ಆದಾಗದು, ನೀನು ಹೇಳಲೇಬೇಕು, ಏನು ತಂದಿದ್ದೇನೆಂದು'.

'ಹೇಳದೆ ಇದ್ದರೆ . . .?'

'ಸಿಟ್ಟಾಗುವೆನು . . .?'

'ಕೂಡದು, ನೀವು ಸಿಟ್ಟಾಗಬಾರದು.'

'ಹಾಗಾದರೆ ಹೇಳು ಏನು ತಂದಿದ್ದೇನೆಂದು.'

'ಅಗತ್ಯವಾಗಿ!'

'ಸರಿ!'

'ನೀವು ನನಗೋಸ್ಕರ ಒಸಗೆ ತಂದಿದ್ದೀರಿ.'

'ಏನು?'

ಏನೆಂದು ನೀವೇ ಹೇಳಿ!'

ರೂಮಾನನು ನಸುನಗುತ್ತ ಜೋಳಿಯ ಒಳಗೆ ಕೈಹಾಕಿದ. ಕೈಯಲ್ಲಿ ಗಾಜಿನ ಎರಡು ಬಳೆಗಳಿದ್ದುವು.

'ಬಳೆ, ಬಳೆ' ಎಂದು ರಜೀನ ಕೈಗಳನ್ನು ಮುಂದೆ ನೀಡಿದಳು.

ರೂಮಾನ ಅವಳ ಕೈಗಳನ್ನು ಹಿಡಕೊಂಡು—'ಬಾ, ತೋರಿಸುತ್ತೇನೆ' ಎಂದ.

'ಈಗ ಸಂಜೆಯಾಯಿತು. ನಾಳೆ ತೊಡಿಸಿರಿ' ಅವಳು ಹೇಳಿದಳು.

ಆದರೆ ರೂಮಾನನಿಗೆ ಸಂಜೆಯಾದರೇನು, ಬೆಳಗಾದರೇನು? ಸಂಜೆ ಬೆಳಗೂ, ಎರಡೂ ಅವನಿಗೆ ಸಮಾನವಾಗಿದ್ದುವು. ಆದುದರಿಂದ ಅವನು ಬೆಳಗಾಗಲಿಕ್ಕೆ ಯಾಕೆ ಕಾಯಲಿ? ಅವಳ ಕೈಗಳನ್ನು ಹಿಡಿದು ಬಳೆ ತೊಡಿಸಲಿಕ್ಕೆ ಆರಂಭಿಸಿದ. ಲಿಕ್ಕ ಮಾಡಿ ಎರಡೂ ಕೈಗಳನ್ನು ಮೆಲ್ಲಮೆಲ್ಲಗೆ ಆಡಿಸುತ್ತ, ಕಂಕಣಗಳ ಝುಣತ್ಕಾರದಿಂದ ಹೊರಡುವ ಮಧುರ ಧ್ವನಿಯನ್ನು ಆಲಿಸುತ್ತ ಕೂತ. ಎಷ್ಟೋ ಸಮಯವು ಕಳೆಯಿತು. 'ಆಹಾ! ಈ ಗೌರವರ್ಣದ ಕೈಗಳಲ್ಲಿ ಕೆಂಪು ಅರಗಿನ ಬಳೆಗಳು! ಎಷ್ಟು ಸುಂದರ! ಎಷ್ಟು ಮನೋಹರ!' ಈ ಉದ್ಗಾರಗಳು ಅವನ ಬಾಯಿಯಿಂದ ಹೊರಟವು.

ಅದೇ ಸಮಯ ಹುಣ್ಣಿಮೆಯ ಚಂದ್ರನು ವೃಕ್ಷಗಳ ಮರೆಯಿಂದ ಹೊರಟಿದ್ದನು. ಕಪ್ಪು ಕಪ್ಪು ಕೈಗಳಲ್ಲಿ ಕೆಂಪು ಅರಗಿನ ಬಳೆಗಳು. ಆದರೆ ಒಬ್ಬ ಅಂಧನ ಮನೋಹರ ಕಲ್ಪನೆಯು ಆ ಕಪ್ಪು ಕೈಗಳನ್ನು ಗೌರವರ್ಣದ್ದಾಗಿ ಮಾಡಿದೆ. ಅದನ್ನೇ ನೋಡಲಿಕ್ಕೆ ಚಂದ್ರನು ಮುಗ್ಧ ಆಕಾಶದಲ್ಲಿ ಮೇಲೆ ಬರುತ್ತಿದ್ದನು.

An Invitation

Deposits flowing in more quickly than we can invest them are steadily increasing our idle funds. Thus our deposits increased by over Rupees Five Lacs since the first of July, 1940.

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE. Estd: 1906 CANARA BANK, LIMITED.

ಯುದ್ಧ ಕಾಲದಲ್ಲಿ ಜಿಬ್ರಾಲ್ಟರ್!

ಇತಿಹಾಸ ಮತ್ತು ರಾಜಕೀಯ ಮಹತ್ವ!

ಭೂಮಧ್ಯ ಸಾಗರದಿಂದ ಅಟ್ಲಾಂಟಿಕ್ ಹೆಬ್ಬಾಗಿಲಿನಂತಿರುವ ಜಿಬ್ರಾಲ್ಟರದ ಇತಿಹಾಸವು ಬಹು ಪುರಾತನವಾಗಿರುವುದು. ಅದರ ಸ್ಥಾನಮಾನಗಳನ್ನು ಪ್ರಾಚೀನ ರೋಮ್ ಗ್ರೀಕ್ ಚರಿತ್ರಕಾರರೂ ತಿಳಿದಿದ್ದ ಹಾಗೆ ಕಾಣುತ್ತದೆ. ಬೇರೆ ಬೇರೆ ಕಾಲಗಳಲ್ಲಿ ಜಿಬ್ರಾಲ್ಟರಿನ ಬಂಡೆಯು ಕಾಲ್ಪೆ, ಅಲ್ಪೆ ಮೊದಲಾದ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧವಾಗಿತ್ತು. ಕ್ರಿ. ಶ. ೭೧೧ರಲ್ಲಿ ಅರಬ್ಬೀ ಮುಖಂಡನಾದ ಜಾಬ್-ಎಲ್-ಟರೆಕ್ ಎಂಬವನು ಯುರೋಪಿನ ಆಗಿನ ಶಾಸನಸೂತ್ರಗಳನ್ನು ಕಡಿದು ಹಾಕಿ, ಈ ಬಂಡೆಯನ್ನು ಸ್ವಾಧೀನ ಮಾಡಿಕೊಂಡ ತರುವಾಯ ಅದಕ್ಕೆ ಆತನ ಹೆಸರು ಬಂದಿತು. ಜಾಬ್-ಎಲ್-ಟರೆಕ್ ಎಂಬುದೇ ಕಾಲಕ್ರಮದಲ್ಲಿ ಜಿಬ್ರಾಲ್ಟರ ಎಂದಾಯಿತು.

ಸ್ಪೈನಿನ ಪುರಾತನ ಕೀರ್ತಿ ಸಂಪತ್ತುಗಳಿಗೆ ಜಿಬ್ರಾಲ್ಟರು ಸಾಕ್ಷಿಯಾಗಿದೆ. ಆಫ್ರಿಕದ ಮೂರರು ಅದನ್ನು ಸ್ಪೈನಿನಿಂದ ಕಿತ್ತುಕೊಂಡಿದ್ದರು ಮತ್ತು ಅವರೇ ಅದನ್ನು ಸ್ಪೈನಿಗೆ ಮರಳಿ ಕೊಟ್ಟಿದ್ದರು. ಅದರ ಶಿಖರದ ಮೇಲೆ ಮೂರರೂ ರೋಮನರೂ ತಮ್ಮ ತಮ್ಮ ಕಾಲಗಳಲ್ಲಿ ಭವ್ಯ ದುರ್ಗ ಮಂದಿರಗಳನ್ನೂ ಕೋಟೆ ಕೊತ್ತಳಗಳನ್ನೂ ಕಟ್ಟಿದ್ದರು. ಶತ್ರು ದಾಳಿಗಳಿಂದ ಅವು ಕಾಲಕ್ರಮದಲ್ಲಿ ಧೂಳೀಪಟವಾಗಿದ್ದುವು. ಇಂಗ್ಲಿಷರು ಈ ಬಂಡೆಯ ಮೇಲೆ ಆಕಸ್ಮಿಕ ಘಟನೆಯಿಂದ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ೧೭೦೪ರಲ್ಲಿ ಸ್ಪೈನ್ ಸಿಂಹಾಸನಕ್ಕಾಗಿ ಅಲ್ಲಿ ಅಂತಃಕಲಹವು ಉಂಟಾದಾಗ ಈ ಬಂಡೆಯು ಇಂಗ್ಲಿಷರ ಸ್ವಾಧೀನವಾಯಿತು.

ಸ್ಪೈನಿಗೆ ವಿದೇಶಿಯರ ದಂಡು

೧೭೦೪ರಲ್ಲಿ ಇಂಗ್ಲಿಷರು ಮತ್ತು ಡಚ್ಚರು ಕೂಡಿ ತಮ್ಮ ಅನೇಕ ಹಡಗುಗಳಲ್ಲಿ ಸೈನ್ಯವನ್ನು ತುಂಬಿಸಿಕೊಂಡು ಸ್ಪೈನಿಗೆ ಹೊರಟರು. ಬಾರ್ಸಿಲೋನವನ್ನು ಮುತ್ತುವುದು ಅವರ ಉದ್ದೇಶವಿತ್ತು. ಇದಕ್ಕೆ ಒಂದು ಕಾರಣವೂ ಇತ್ತು. ಸ್ಪೈನಿನ ಅರಸು ದಿವಂಗತನಾದಾಗ ಅವನ ಉತ್ತರಾಧಿಕಾರಿಗಳು ಯಾರೆಂದು ಗೊತ್ತಾಗಿರಲಿಲ್ಲ. ಅವನು ಮಕ್ಕಳಿಲ್ಲದೆ ಸತ್ತನು. ಫ್ರಾನ್ಸು ತನ್ನ ಪರವಾಗಿರುವ [illegible]ನನ್ನು ಸ್ಪೈನಿನ ಅರಸು ಎಂದು ಸಾರಿತು. ಹೀಗೆ ಸ್ಪೈನು ಫ್ರಾನ್ಸಿನ ಅಂಕಿತಕ್ಕೆ ಒಳಪಡುವುದಾದರೆ, ಯುರೋಪಿನಲ್ಲಿ [illegible] ಎರಡು ವರ್ಷಗಳೊಳಗೆ ಸ್ಪೈನಿನಲ್ಲಿ ಯುದ್ಧವಾರಂಭವಾಯಿತು. ಆದರೆ ಇಂಗ್ಲಿಷರ ಸೇನೆಗೆ ಬಾರ್ಸಿಲೋನವನ್ನಾಗಲೀ ಅಸ್ಯವನ್ನಾಗಲೀ ಮುತ್ತಿ ವಿಜಯಿಯಾಗುವುದು ಬಹಳ ಕಠಿಣವಾಗಿತ್ತು. ಅವರು ಆ ಮುತ್ತಿಗೆಗಳ ವಿಚಾರವನ್ನು ಬಿಟ್ಟು ಬಿಡಬೇಕಾಯಿತು. ಆದರೆ ಕೊಂಡು ಬಂದ ಸೇನೆಯನ್ನು ಸುಮ್ಮಗೆ ಹಿಂದಕ್ಕೆ ಕರೆಕೊಂಡು ಹೋಗುವುದು ಬ್ರಿಟಿಷರ ಮಾನ ಪ್ರತಿಷ್ಠೆಗೆ ತುಂಬ ಕುಂದನ್ನುಂಟು ಮಾಡುವುದಾಗಿತ್ತು. ಅದಕ್ಕೋಸ್ಕರ ಬ್ರಿಟಿಷ್ ಸೇನಾಪತಿಯು—'ಬೀಸಿದವಳಿಗೆ ಮುಕ್ಕಿದ್ದೇ ಲಾಭ'ವೆಂಬಂತೆ ಜಿಬ್ರಾಲ್ಟರನ್ನು ಮುತ್ತಿ ಸುಲಭವಾಗಿ ದಕ್ಕಿಸಿಕೊಂಡನು. ೧೭೧೩ರಲ್ಲಿ ಆದ ಒಡಂಬಡಿಕೆಯಲ್ಲಿ ಜಿಬ್ರಾಲ್ಟರು ಬ್ರಿಟಿಷರದ್ದು ಎಂದು ಸ್ಪೈನು ಒಪ್ಪಿಕೊಂಡಿತು.

ಆದರೆ ಈ ಘಟನೆಯಿಂದ ಸ್ಪೈನಿಗೆ ಸಂತೋಷವಿರಲಿಲ್ಲ. ಅದು ಚತುರೋಪಾಯಗಳಿಂದ ಜಿಬ್ರಾಲ್ಟರನ್ನು ಸ್ವಾಧೀನ ಮಾಡಿಕೊಳ್ಳುವ ಹಲವು ಪ್ರಯತ್ನಗಳನ್ನು ಮಾಡಿತು. ಒಂದು ಸಮಯ ಫ್ಲೋರಿಡವನ್ನು ತಕ್ಕೊಂಡು ಜಿಬ್ರಾಲ್ಟರನ್ನು ಸ್ಪೈನಿಗೆ ಬಿಟ್ಟುಕೊಡಲಿಕ್ಕೆ ಬ್ರಿಟನೂ ಒಪ್ಪಿತ್ತು. ಆದರೆ ಸ್ಪೈನು ಇದನ್ನು ನಷ್ಟದ ವ್ಯಾಪಾರವೆಂದು ಊಹಿಸಿ, ಬೇಡವೆಂದು ಬಿಟ್ಟಿತು. ಇನ್ನೊಂದು ಸಮಯ ಈ ಬಂಡೆಗಾಗಿ ಸ್ಪೈನು ೨ ಮಿಲಿಯ ಪವನುಗಳ ಕ್ರಯಕೊಟ್ಟು ಕೊಂಡುಕೊಳ್ಳಲಿಕ್ಕೆ ಸಿದ್ಧವಿತ್ತು. ಆದರೆ ಆ ವ್ಯಾಪಾರಕ್ಕೆ ಬ್ರಿಟನು ಒಪ್ಪಲಿಲ್ಲ.

ಅಜೇಯ ಜಿಬ್ರಾಲ್ಟರು

ಅಮೇರಿಕದಲ್ಲಿ ಕ್ರಾಂತಿ ಆದಾಗ ಸ್ಪೈನು ಫ್ರಾನ್ಸನ್ನು ಸೇರಿಕೊಂಡು ಬ್ರಿಟನಿನ ಮೇಲೆ ಯುದ್ಧ ಸಾರಿತು. ೧೭೭೯ರಿಂದ ನಾಲ್ಕು ವರ್ಷಗಳ ತನಕ ಸ್ಪೈನು ಈ ಬಂಡೆಗೆ ಮುತ್ತಿಗೆ ಹಾಕಿತ್ತು. ಇಕ್ಕಡೆಗಳಿಂದ ಭಯಂಕರ ಫಿರಂಗಿ ಯುದ್ಧಗಳು ನಡೆದದ್ದುವು. ಆದರೂ ಜಿಬ್ರಾಲ್ಟರಿನ ಮೇಲೆ ಹಾರಾಡುತಿದ್ದ ಬ್ರಿಟಿಷ್ ಧ್ವಜಕ್ಕೆ ಚ್ಯುತಿಬರಲಿಲ್ಲ. ಅಂದಿನಿಂದ ಇಂದಿನ ವರೆಗೂ ಬ್ರಿಟಿಷ್ ಧ್ವಜವೇ ಹಾರಾಡುತ್ತಿದೆ. ಕಳೆದ ಮಹಾಯುದ್ಧದಲ್ಲಿ ಅದು ಮಿತ್ರಪಕ್ಷದ ಯುದ್ಧನಾವೆಗಳಿಗೆ ಕಲ್ಲಿದ್ದಲನ್ನು ಕೊಡುವ ಪ್ರಮುಖ ನೌಕಾ ಠಾಣೆಯಾಗಿತ್ತು.

ಆದರೆ ಇಂದು ಅದು ಮೊದಲಿನಂತೆ ಇರುವುದಿಲ್ಲ. ಮೊದಲಿಗಿಂತ ಈಗಿನ ಯುದ್ಧಕ್ರಮಗಳು ಭಿನ್ನವಾಗಿರುವುದರಿಂದ ಅದನ್ನು ಅಜೇಯವೆಂದು ಹೇಳಲಿಕ್ಕೂ ಆಗುವುದಿಲ್ಲ. ಸ್ಪೈನಿನ ಅಂತಃಕಲಹದ ಕಾಲದಲ್ಲಿ ಸಂದರ್ಭ ಬಂದಾಗ ಉಪಯೋಗಿಸಲಿಕ್ಕೆ ಜರ್ಮನರು ಜಿಬ್ರಾಲ್ಟರಿನ ಎದುರಿಗಿರುವ ಮೊರೊಕ್ಕೊದ [illegible] ಪ್ರದೇಶದಲ್ಲಿ ದೊಡ್ಡ ಫಿರಂಗಿಗಳನ್ನು ಅಡಗಿಸಿಟ್ಟಿದ್ದರು. ಜಿಬ್ರಾಲ್ಟರಿಂದ ಜಲಸಂಧಿಯು ೧೪ ಮೈಲು ಮಾತ್ರ ಅಗಲವಾಗಿರುವುದರಿಂದ ಜಿಬ್ರಾಲ್ಟರನ್ನು ಮೊರೊಕ್ಕೊದಿಂದ ಸುಟ್ಟಿಡುವುದೇನೂ ಅಸಾಧ್ಯವಲ್ಲ. ಕಷ್ಟದಿಂದ ಅದರ ಮೇಲೆ ಬಾಂಬಿನ ಸುರಿಮಳೆಯನ್ನು ಸುರಿಸುವುದೂ ಸುಲಭ. ಮಾತ್ರವಲ್ಲ, ಸ್ಪೈನಿನಿಂದಲೂ ಅದನ್ನು ಆಕಾಶ ನಾವೆಗಳ ಮೂಲಕ ಮುತ್ತಬಹುದಾಗಿದೆ.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ

ವಿಪರೀತವಾದ ಸೆಕೆ, ಮತ್ತು ಸಂಪೂರ್ಣ ಪೋಷಣೆಯಿಲ್ಲದಿರುವಿಕೆ ಇವುಗಳೇ ನರಗಳ ದೌರ್ಬಲ್ಯಕ್ಕೆ ಮತ್ತು ಸಾವಧಾನ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬಲಪಡಿಸಿ ಜೀವಕಳೆಯಿಂದ ಸಂಜೀವಿಸಿ

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

KAE

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE

BANK OF MANGALORE LTD.

MANGALORE

ESTD 193

Branches -

Mudabidri & Padubidri.

Fixed Deposits will be received at following rates of interest.

For	3	months	3½%
„	6	„	4%
„	12	„	5%
„	24	„ & upwards	5½%

Interest Payable Quarterly

Savings Bank deposit** 3½% **on daily balances.

kinds of banking business transacted

ಜಿಲ್ಲಾ ಸಮಾಚಾರ

★

ಮಂಗಳೂರು

ಕ್ರಿಕೆಟ್ ಆಟ:—ಮದ್ರಾಸಿನ ಮಿನರ್ವಾ ಕ್ರಿಕೆಟ್ ಟೀಮಿನವರಿಗೂ ಮಂಗಳೂರು ಕ್ರಿಕೆಟ್ ಟೀಮಿನವರಿಗೂ ಕಳೆದ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಪಂದ್ಯಾಟ ನಡೆಯಿತು. ಸಾವಿರಾರು ಮಂದಿ ಪ್ರೇಕ್ಷಕರು ನೆರೆದಿದ್ದರು. ಆಟವು ಉತ್ಸಾಹದಿಂದ ಸಾಗಿತ್ತು. ಎರಡನೆಯ ದಿನ ಮಳೆ ಬಂದುದರಿಂದ, ಆಟವು 'ಡ್ರಾ' ಆಯಿತೆಂದು ತೀರ್ಮಾನಿಸಲ್ಪಟ್ಟಿತು.

ಮದ್ರಾಸಿಗೆ ಮೊದಲನೆಯ ಆಟಕ್ಕೆ ೧೦೭ ಮತ್ತು ಎರಡನೆಯದಕ್ಕೆ ೧೭೬ ರನ್ನುಗಳು ಮಂಗಳೂರಿಗೆ ಮೊದಲನೆಯ ಆಟಕ್ಕೆ ೬೮ ಮತ್ತು ಎರಡನೆಯ ಆಟಕ್ಕೆ ೫ ಆಟಗಾರರಿಗೆ ೧೧೭ ರನ್ನುಗಳು ಆಗಿದ್ದುವು

ನಿಧನಗಳು

ದಿ| ತೋನ್ಸೆ ಮಂಗೇಶರಾವ್:—ವಿದ್ಯಾ ಇಲಾಖೆಯಲ್ಲಿ ನಿವೃತ್ತರಾಗಿದ್ದ ಶ್ರೀ| ತೋನ್ಸೆ ಮಂಗೇಶರಾವ್ ಬಿ. ಎ., ಎಲ್. ಟಿ. ಇವರು ತಾ. ೩೧ರಲ್ಲಿ ತಮ್ಮ ೬೪ನೆಯ ವಯಸ್ಸಿನಲ್ಲಿ ಪೂನಾದಲ್ಲಿ ಹೃದ್ರೋಗದಿಂದ ಮೃತಿಹೊಂದಿದರೆಂದು ತಿಳಿಯಲು ವಿಷಾದಿಸುತ್ತೇವೆ

ದಿ| ಮೂಡಬಿದ್ರೆ ಶಂಕರ ನಾರಾಯಣ ರಾವ್:—ಜಿಲ್ಲಾ ವರ್ಗದಾರ ಸಂಘದ ವ್ಯವಸ್ಥಾಪಕರೂ, ಪ್ರಸಿದ್ಧ ವಕೀಲರೂ ಆದ ಶ್ರೀ| ಮೂಡಬಿದ್ರೆ ಶಂಕರ ನಾರಾಯಣ ರಾವ್ ಬಿ. ಎ. ಬಿ. ಎಲ್. ಇವರು ತಾ. ೨೪ರಂದು ತಮ್ಮ ೫೫ನೆಯ ವಯಸ್ಸಿನಲ್ಲಿ ಮೃತರಾದರೆಂದು ತಿಳಿಸಲು ವಿಷಾದವಾಗುತ್ತದೆ. ಈಶ್ವರನು ಅವರ ಆತ್ಮಕ್ಕೆ ಶಾಂತಿಯೀಯಲಿ

ಬಿಡುಗಡೆ:—ನೇಯಿಗೆ ಕೆಲಸಗಾರರ ಮುಷ್ಕರದ ನಿಮಿತ್ತ ಸೆರೆಮನೆಗೆ ಹೋದ ಶ್ರೀಗಳಾದ ಎಮ್. ಎನ್. ಹೊಳ್ಳ ಮತ್ತು ಕೇಶವ ಕಾಮತ್ ಇವರು ಸೆರೆಮನೆಯಿಂದ ಬಿಡುಗಡೆಯಾಗಿ ಬಂದಿರುವರು. ಮಜೂರರು ಇವರನ್ನು ಎದಿರುಗೊಂಡು ಮೆರವಣಿಗೆಯಲ್ಲಿ ಕರತಂದರು. ಮಜೂರರ ಸಾರ್ವಜನಿಕ ಸಭೆಯಲ್ಲಿ ಶ್ರೀ| ಹೊಳ್ಳರು ಭಾಷಣಮಾಡಿದ್ದರು.

ಜುಪಿಟರ್ ಜನರಲ್ ಇನ್ಶ್ಯುರೆನ್ಸ್ ಕಂಪೆನಿ—ಇದರ ಬ್ರಾಂಚ್ ಆಫೀಸೊಂದು ಮಂಗಳೂರಲ್ಲಿ ತಾ. 28ರಿಂದ ಕಾರ್ನಾಡ್ ಸದಾಶಿವ ರಾವ್ ರೋಡಿನಲ್ಲಿರುವ ಸಿ. ಪಿ. ಸಿ. ಬಿಲ್ಡಿಂಗಿನಲ್ಲಿ ತೆರೆಯಲಾಗಿದೆ. ಇದರ ಚೀಫ್ ಏಜೆಂಟರಾಗಿ, ಶ್ರೀ. ಕೆ. ಪಾಂಡುರಂಗ ನಾಯಕ್ ಇವರು ನೇಮಕ ಹೊಂದಿರುವರು.

ಹಂಚಿನ ಕಾರ್ಖಾನೆಯವರಿಗೆ ಹಿತೋಕ್ತಿ.

ಮಂಗಳೂರು ಹಂಚಿಗೆ ಪ್ರಸಿದ್ಧವಾದ ದೇಶ, ಕೆಲವು ವರ್ಷಗಳಿಂದ ಇಲ್ಲಿನ ಹಂಚು ವ್ಯಾಪಾರವು ಹೆಚ್ಚಿನ ಲಾಭದಾಯಕವಾಗಿರಲಿಲ್ಲ. ಹಂಚಿಗೆ ಗಿರಾಕಿಯೂ ಕಡಿಮೆ ಇತ್ತು, ಮಾತ್ರವಲ್ಲದೆ ವ್ಯಾಪಾರದಲ್ಲಿ ಅನಾವಶ್ಯಕವಾದ ಸ್ಪರ್ಧೆಯೂ ಇದ್ದು ವ್ಯಾಪಾರವು ಒಳ್ಳೇದಾಗಿ ನಡೆಯುತ್ತಿರಲಿಲ್ಲ. ಈ ವರ್ಷ ಹೆಚ್ಚಿನ ಗಿರಾಕಿಯು ಒದಗಿದೆ; ಹಂಚುಗಳು ಧಾರಾಳವಾಗಿ ಆಗಲು ಪ್ರಾರಂಭಿಸಿವೆ; ಮುಚ್ಚಿದ್ದ ಕೆಲವು ಕಾರ್ಖಾನೆಗಳೂ ತೆರೆದಿವೆ; ಲಕ್ಷಾಂತರ ಹಂಚುಗಳಿಗೆ ಮಿಲಿಟರಿ ಆರ್ಡರು ಬಂದಿರುವುದರಿಂದ ಹೀಗೆ ಗಿರಾಕಿ ಯುಂಟಾಗಿದೆ. ಇಂತಹ ಸಂದರ್ಭದಲ್ಲಿ ಹಂಚಿನ ಕಾರ್ಖಾನೆಯವರು ಅನಾವಶ್ಯಕವಾದ ಸ್ಪರ್ಧೆ ಮಾಡದೆ ಎಲ್ಲರೂ ಒಟ್ಟಾಗಿ ನ್ಯಾಯವಾದ ಒಂದೇ ದರದಲ್ಲಿ ವ್ಯಾಪಾರ ನಡೆಸಿದರೆ ಉತ್ತಮವಾಗುವುದು. ಇಂತಹ ಅಮೂಲ್ಯ ಸಂದರ್ಭವನ್ನು ದುರುಪಯೋಗಪಡಿಸದೆ, ಎಲ್ಲಾ ಹಂಚಿನ ಕಾರ್ಖಾನೆಯವರೂ ಏಕಮತದಿಂದ ಕೂಡಿ ನಡೆದು ನಮ್ಮ ವ್ಯಾಪಾರದ ಪ್ರಗತಿಗೆ ನೆರವಾಗುವರೆಂದು ಹಾರೈಸುತ್ತೇನೆ

—ಒಬ್ಬ ಹಿತೈಷಿ.

ಕಾಸರಗೋಡು

ಯಕ್ಷಗಾನ:—ಕಳೆದ ಶನಿವಾರ, ಕಾಸರಗೋಡಿನಲ್ಲಿ ಶ್ರೀ ಕೃಷ್ಣನ್ ಮತ್ತು ದೇವಣ್ಣ ಭಟ್ಟರಿಂದ ಒಂದು ಯಕ್ಷಗಾನ ಕೂಟವು ಜರಗಿಸಲ್ಪಟ್ಟಿತು 'ವಾಲಿ ಸಂಹಾರ' ಮತ್ತು 'ಅಂಗದ ಸಂಧಾನ ಪ್ರಸಂಗ. ಭಾಗವತರು ಶ್ರೀ ಬಲಿಪ ನಾರಾಯಣ ಭಾಗವತರು. ಮೃದಂಗವಾದನಕಾರರು ಶ್ರೀ ಪಿರಿಕ್ಕಳ ಈಶ್ವರಪ್ಪಯ್ಯ. ಅರ್ಥದಾರರು ಶ್ರೀಗಳಾದ ವೆಂಕಪ್ಪ ಶೆಟ್ಟರು, ಪೊಳಲಿ ಶಂಕರ ನಾರಾಯಣ ಶಾಸ್ತ್ರಿಗಳು, ನಾರಾಯಣ ಕಿಲ್ಲೆಯವರು, ಎಡ್ವೋಕೇಟ್ ಬಾಲಕೃಷ್ಣರಾಯರು, ಸುಬ್ರಾಯ ಉಪಾಧ್ಯಾಯರುಗಳು ಎಂ. ಆರ್. ಶಾಸ್ತ್ರಿಗಳು ಪಟ್ಟೋಲ ಶಾಸ್ತ್ರಿಗಳು, ಬಿ. ಜಗನ್ನಾಥ ರೈಗಳು ಕೀರಿಕ್ಕಾಡು ವಿಷ್ಣು ಭಟ್ಟರು, ನಾರಾಯಣ ಕೇಕುಣ್ಣಾಯರು.

ನೆರಡಾಲ

ಬೋ| ಹ| ಶಾಲೆ:—ಇಲ್ಲಿನ ಬೋರ್ಡ್ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚುತ್ತಾ ಇದ್ದು, ಇಂದು ವಿದ್ಯಾರ್ಥಿಗಳ ಸಂಖ್ಯೆ ೩೫೦ರ ವರೆಗೆ ಇರುವುದರಿಂದ ಈಗ ಇರುವ ಉಪಾಧ್ಯಾಯರು ಸಾಕಾಗದೆ ಹೆಚ್ಚಾಗಿ ಮೂರು ಮಂದಿ ಉಪಾಧ್ಯಾಯರನ್ನು ಕೊಡಬೇಕಾಗಿಯೂ ಕೊನೆಯ ಪಕ್ಷ ಎರಡು ಮಂದಿಯನ್ನಾದರೂ ಕೊಡದೆ ನಿರ್ವಾಹವಿಲ್ಲವೆಂದೂ ಶಾಲೆಯನ್ನು ಸಂದರ್ಶಿಸಿರುವ ಡಿ. ಬೋ| ಸದಸ್ಯರೇ ಮೊದಲಾದ ಮಹನೀಯರನೇಕರು ಅಭಿಪ್ರಾಯ ಪಟ್ಟಿರುವರಾಗಿ ತಿಳಿದುಬರುತ್ತದೆ. ಡಿ. ಬೋ| ಅಧಿಕಾರಿಗಳು ಈ ಕಡೆಗೆ ತೀವ್ರ ಗಮನಕೊಡಲಾರರೆ?

ಡಾ| ಶಾಸ್ತ್ರಿಗಳ ನೇಮಕ:—ಕಳೆದ ಆರೇಳು ವರ್ಷಗಳಿಂದ ಇಲ್ಲಿ ಬಂದು ವೈದ್ಯಕೀಯ ವೃತ್ತಿಯಲ್ಲಿರುತ್ತಾ ಸಾರ್ವಜನಿಕ ಕಾರ್ಯಗಳಲ್ಲಿ ಉತ್ಸಾಹಿತರಾಗಿ ದುಡಿಯುತ್ತಿದ್ದು ಜನಪ್ರಿಯರಾಗಿರುವ ಡಾ| ಓ. ಎಸ್. ಶಾಸ್ತ್ರಿಗಳನ್ನು ಡಿ. ಬೋ| ನವರು, ಅವರು ಒಂದೆ ಕಾಸರಗೋಡು ತಾಲೂಕು ಬೋರ್ಡಿಗೆ ಬರೆದುಕೊಟ್ಟ ಕರಾರಿನಂತೆ ಈಗ ಇಲ್ಲಿಂದ ಬೇರೆ ಕಡೆಗೆ ಹೋಗುವಹಾಗೆ ನೇಮಕಮಾಡುವ ಆಜ್ಞೆ ಕೊಟ್ಟಿರುವುದರಿಂದ, ಆ ಪ್ರಯುಕ್ತ, ಊರಿನವರು ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡು ಮಾತನಾಡಿ, ಅಂತಹ ಸಾರ್ವಜನಿಕ ಕೆಲಸಗಾರರೊಬ್ಬರನ್ನು ತಮ್ಮಲ್ಲಿಂದ ಅಗಲಿಸ ಬಾರದಾಗಿ ಕೇಳಿಕೊಂಡಿರುವರೆಂದು ತಿಳಿಯುತ್ತದೆ. ಆ ಸಂಬಂಧ ಜಿಲ್ಲಾ ಬೋರ್ಡಿನ ಅಧಿಕಾರಿಗಳು ಗ್ರಾಮಸ್ಥರ ಈ ನ್ಯಾಯವಾದ ವಿನಂತಿಯನ್ನು ಮನ್ನಿಸಿಮಾಡುವರೆಂದು ಹಾರೈಸಲಾಗಿದೆ.

ಶಾಲಾ ಕಟ್ಟೋಣ:—ಇಲ್ಲಿನ ಬೋರ್ಡ್ ಹಯ್ಯರ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟೋಣವನ್ನು ಗ್ರಾಮಸ್ಥರು ಬಹಳ ಭದ್ರವಾಗಿಯೂ, ದೊಡ್ಡದಾಗಿಯೂ ಕಟ್ಟಿಸಿ ಕೊಟ್ಟಿರುವ ವಿಷಯ ಸಂಬಂಧಪಟ್ಟ ಅಧಿಕಾರಿಗಳೇ ಬಹಳ ಸಂತುಷ್ಟರಾಗಿ ಪ್ರಶಂಸೆಯ ಮಾತುಗಳನ್ನು ಹೇಳಿದ್ದಾರೆ. ಈಗ ಶಾಲೆಯ ಸಾರಣೆ, ನೆಲ ಮೊದಲಾದ ಅಲ್ಪ ಸ್ವಲ್ಪ ಕೆಲಸಗಳು ಬಾಕಿಯುಳಿದ, ಗ್ರಾಮಸ್ಥರು. ಇಷ್ಟು ದೊಡ್ಡ ಕಟ್ಟೋಣವನ್ನು ಕಟ್ಟಿಸುವಲ್ಲಿ ಅಧಿಕ ಪರಿಶ್ರಮ ವಹಿಸಿರುತ್ತಾರೆ, ಗ್ರಾಮಸ್ಥರ ಹಣದಿಂದಲೇ ಶಾಲೆಯ ಸಾರಣೆ ಮೊದಲಾದ ಕೆಲಸಗಳೂ ಸಾಗಬೇಕಾದರೆ ಹೆಚ್ಚು ಕಾಲ ವಿಳಂಬವಾಗಲೂ ಬಹುದೆಂದೂ, ಆದರೆ ಇಂದು ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಹೋಗುವುದರಿಂದ ಈ ಕೆಲಸವನ್ನು ಡಿ. ಬೋ| ನವರೇ ವಹಿಸಿಕೊಂಡು ತೀವ್ರ ಮಾಡಿಸುವುದು ಉಚಿತವಾಗಿದೆಯೆಂದೂ ಶಾಲೆಯನ್ನು ಸಂದರ್ಶಿಸಿರುವ ಡಿ. ಬೋ| ಸದಸ್ಯರೊಬ್ಬರು ಅಭಿಪ್ರಾಯ ಪಟ್ಟಿರುತ್ತಾರೆ ಎಂದು ತಿಳಿದಿದೆ. ಡಿ. ಬೋ| ಅಧಿಕಾರಿಗಳು ಈ ಕುರಿತು ಗಮನಕೊಡುವರೆ?

ಬಾತ್ಮಿ

ಕಾರ್ಕಳ

ಧರ್ಮಪ್ರಚಾರ.—ಸ್ಥಳೀಯ ಆರ್ಯಸಮಾಜದ ನೇತೃತ್ವದಲ್ಲಿ ಶ್ರೀ. ಯು. ಡಿ. ಅಧಿಕಾರಿಯವರ ಅಧ್ಯಕ್ಷತೆಯಿಂದ ತೀರ್ಥಹಳ್ಳಿ ಶ್ರೀ ಜ್ಞಾನೇಂದ್ರ ಪ್ರಭುಗಳವರು 'ನಾನೇಕೆ ಹಿಂದುವಾದೆ?' ಎಂಬ ಕುರಿತು ಒಂದು ಭಾಷಣವನ್ನು ಕೊಟ್ಟರು. ಶ್ರೀ ಕೇಶವ ರಾಮಚಂದ್ರ ಶೆಣೈಯವರು ಧನ್ಯವಾದಗಳನ್ನಿತ್ತರು.

ಕಟಪಾಡಿ:—ಸ್ಥಳೀಯ 'ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್'ನವರು ಇದೇ ತಾ. ೨೮ರಂದು ಧನ್ವಂತರೀ ಜಯಂತೀ ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಕುಂದಾಪುರ

ಶ್ರೀ ಲಕ್ಷ್ಮೀವೆಂಕಟೇಶ ವಾಚನಾಲಯ:—ಈ ಸಂಸ್ಥೆಯು ಮೊನ್ನೆ ವಿಜಯದಶಮಿಯ ದಿವಸ ಸ್ಥಳೀಯ ಶ್ರೀ ವೆಂಕಟ್ರಮಣ ದೇವಳದ ಆಶ್ರಯದಲ್ಲಿ ಪ್ರಾರಂಭಿಸಿಯದೆ. ಈ ವಾಚನಾಲಯದಲ್ಲಿ ಎಲ್ಲಾ ವೃತ್ತ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಸರ್ವರಿಗೂ ಧರ್ಮಾರ್ಥ ಉಪಯೋಗಕ್ಕಾಗಿ ಕೊಡುವ ಏರ್ಪಾಡು ಮಾಡಿಯದೆಯೆಂದು ಸಂಬಂಧಿಸಿದವರು ಬರೆಯುತ್ತಾರೆ

ಪ್ರಾಂತಿಕ ಕಾಂಗ್ರೆಸ್ ಕಮಿಟಿ ಸದಸ್ಯತ್ವ ವೇಳಾಪತ್ರಿಕೆ

ಇದೇ ೩೧—೧೦—೧೯೪೦ಕ್ಕೆ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಮಾಡುವ ಅವಧಿಯು ಮುಗಿಯುವದಿದ್ದು ನಂತರ ಅಧೀನ ಕಾಂಗ್ರೆಸ್ ಸಮಿತಿಗಳು ಈ ಸಂಬಂಧ ಮಾಡಬೇಕಾದ ಕಾರ್ಯದ ಬಗ್ಗೆ ಕೆಳಗಿನ ವೇಳಾ ಪತ್ರಿಕೆಯನ್ನು ಪ್ರಸಿದ್ಧಿಸಲಾಗಿದೆ.

1 ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾರೀಕು 21-10-'40 2 ಅಧೀನ ಸಮಿತಿಗಳು ವ್ಯಕ್ತಿಗಳಿಂದ ಪೂರ್ಣ ಹಣ ಹಾಗು ಎಲ್ಲಾ ಪುಸ್ತಕಗಳನ್ನು ಕಲೆಹಾಕುವ ಕೊನೆಯ ತಾರೀಕು 1-11-'40 3 ಅಧೀನ ಸಮಿತಿಗಳು ತಮ್ಮಲ್ಲಾದ ಸದಸ್ಯತ್ವ ಸಂಖ್ಯೆಯನ್ನು ಟಪ್ಪಾಲು ಮೂಲಕ ಪ್ರಾಂತೀಯ ಹಾಗು ಜಿ. ಸಮಿತಿಗಳಿಗೆ ತಿಳಿಸುವುದು 2-11-'40. 4. ಅಧೀನ ಸಮಿತಿಗಳು ತಮ್ಮಲ್ಲಿದ್ದ ಹೊಸ ಸದಸ್ಯರ ಹಾಗು ಮುಂದರಿಸಿದ ಸದಸ್ಯರ ಯಾದಿಗಳನ್ನು ಮತದಾರ ಸಂಘಗಳ ಪ್ರಕಾರ ಸಿದ್ಧಮಾಡಿ ಪೂರ್ಣ ಕೋಟಾ ಹಣದೊಂದಿಗೆ ಜಿಲ್ಲಾ ಸಮಿತಿಗೆ ಮುಟ್ಟಿಸುವ ಕೊನೆಯ ತಾರೀಕು 7-11-'40 5. ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ತಮ್ಮ ಜಿಲ್ಲೆಯಲ್ಲಿಂದ ಸದಸ್ಯರ ಸಂಖ್ಯೆಯನ್ನು ತಿಳಿಸುವುದು 10-11-'40. 6 ಜಿ. ಕಾ. ಸಮಿತಿಗಳು ಕಾಯಂ ಸದಸ್ಯತ್ವ ದಾಖಲೇ ಪುಸ್ತಕಗಳನ್ನು ಸಿದ್ಧಪಡಿಸಿ ಸಾರ್ವಜನಿಕ ತಪಾಸಣೆಗೆ ತಯಾರು ಮಾಡುವದು. 6 ಈ ಸಂಬಂಧದ ಪಟ್ಟಿಗಳನ್ನು ಅಧೀನ ಸಮಿತಿಗಳಿಗೂ, ಪೂರ್ಣ ಕೋಟಾ ಹಣದೊಂದಿಗೆ ಪ್ರಾಂತೀಯ ಸಮಿತಿಗೂ ಕಳಿಸುವುದು 15-11-'40. 7. ಸಾರ್ವಜನಿಕ ತಪಾಸಣೆ 16-11-'40ರಿಂದ 23-11-'40ವರೆಗೆ, 8 ಸದಸ್ಯತ್ವ ದಾಖಲೇ ಪುಸ್ತಕದ ಸಂಬಂಧ ತಕರಾರುಗಳನ್ನು ಪಂಚ ಮಂಡಲಗಳ ಕಡೆ ಕೊಡುವ ಕೊನೆಯ ತಾರೀಕು 30-11-'40 9 ತಕರಾರುಗಳ ನಿರ್ಣಯದ ಕೊನೆಯ ತಾರೀಕು 10-12-'40

ಅಧೀನ ಸಮಿತಿಗಳು ಈಗಿನಿಂದಲೇ ಉಪಯೋಗಿಸಲ್ಪಟ್ಟ ಸದಸ್ಯತ್ವ ಪುಸ್ತಕಗಳನ್ನೂ ಪೂರ್ಣ ಹಣವನ್ನೂ ಆಯಾ ವ್ಯಕ್ತಿಗಳಿಂದ ಕಲೆಹಾಕಲು ಪ್ರಯತ್ನಿಸಬೇಕು 1-11-'40ನೇ ದಿನ ಎಲ್ಲಾ ವ್ಯಕ್ತಿಗಳಿಂದ ಪೂರ್ಣ ಹಣ, ಎಲ್ಲ ಪುಸ್ತಕಗಳು ಬರಲೇಬೇಕೆಂಬ ಬಗ್ಗೆ ಈಗಿನಿಂದಲೇ ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳಬೇಕು. ಅಂದರೆ ಮೂರನೆ ದಿನ ಮೇಲಿನ ಸಮಿತಿಗಳಿಗೆ ಆದ ಸಂಖ್ಯೆ ಕೊಡಲು ಬರುತ್ತೆ. ಅಧೀನ ಸಮಿತಿಗಳು ವೇಳಾ ಪತ್ರಿಕೆಯನ್ನು ಸ್ವಲ್ಪವೂ ತಪ್ಪದೆ ಅನುಸರಿಸಬೇಕು. ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಧಾರವಾಡ

ಕನ್ನಡ ಸಾಹಿತ್ಯ ಪರಿಷತ್ತು:—ಬರುವ ಡಿಸೆಂಬರ ತಿಂಗಳ ತಾ. ೨೭, ೨೮, ೨೯ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧಿವೇಶನವು ಧಾರವಾಡದಲ್ಲಿ ಜರಗಲಿರುವುದಾಗಿ ನಿರ್ಣಯವಾಗಿದೆಯೆಂದು ತಿಳಿದಿದೆ. ಇದರೊಡನೆ ಮಹಿಳಾಗೋಷ್ಠಿಯೂ ಜರಗುವುದು. ಸಾಹಿತ್ಯ ಪರಿಷತ್ತಿನ ಸಂಬಂಧ ಬೇರೆ ಬೇರೆ ಸಮಿತಿಗಳು ಏರ್ಪಟ್ಟು ಸಿದ್ಧತೆಗಳನ್ನು ಭರದಿಂದ ಸಾಗಿಸುತ್ತಿರುವರಾಗಿ ಕೇಳುತ್ತೇವೆ

ಕೊಡಗು

ದನಗಳ ಪ್ರದರ್ಶನ:—"ಕೊಡಗು ಡಿಸ್ಟ್ರಿಕ್ಟ್ ಪ್ರೆಜಾ ಪೇಟೆಯಲ್ಲಿ ನವಂಬರ್ ತಾರೀಕು 18ರಲ್ಲಿ ನಡೆಯುವ ಗಣಪತಿ ರಥೋತ್ಸವದ ಸಂದರ್ಭದಲ್ಲಿ ತಾರೀಕು 22-11-'40ರ ವರೆಗೆ 4 ದಿವಸಗಳು ದನಗಳ ಪ್ರದರ್ಶನವನ್ನು ನಡಿಸುವಂತೆಯೂ, ಉತ್ತಮ ಹಸುಗಳಿಗೆ ಬಹುಮಾನಗಳನ್ನು ಕೊಡುವಂತೆಯೂ ಏರ್ಪಡಿಸಲಾಗಿದೆ. ದನಗಳಿಗೆ ಮೇವು ಮತ್ತು ನೀರಿನ ಅನುಕೂಲ ಸಹ ಚೆನ್ನಾಗಿದೆ." ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ

NOTICE

The Annual General Meeting of the members of the Ammembal Subba Rao Pai Memorial Fund will be held in the A. Subba Rao Pai Memorial Hall, Canara High School Mangalore, on Sunday the 17th November 1940 at 3 p. m. All members are requested to be present.

M. Venkatesh Pai,
Secretary.

...ಟಲಿಯು ಗ್ರೀಸಿಗೆ ಮುತ್ತಿಗೆ ಹಾಕಿತು!

★ ಯುದ್ಧ ವಾರ್ತೆ



ಗ್ರೀಕರು ಕೊನೆವರೆಗೆ ಹೋರಾಡುವರಂತೆ!

ಬ್ರಿಟಿಷರು ಸಹಾಯಕೊಡುವರು. ಪುನಃ ಹಿಟ್ಲರ್ ಮುಸಲನಿ ಭೇಟಿ

ಹಿಟ್ಲರ್-ಫ್ರಾಂಕೋ ಮಾತುಕತೆ! ಜರ್ಮನ್-ಫ್ರಾನ್ಸು ಕರಾರು!

ಡಿಸೆಂಬರಿನೊಳಗೆ ಯುದ್ಧ ನಿಲ್ಲಿಸುವೆವು!

ಗೋಬೆಲ್ಸನ ಭರವಸೆ

ಇಂದಿನ ನಿರಂತರ ಯುದ್ಧದಿಂದ ಬಳಲಿದ ಜರ್ಮನ್ ಸೈನಿಕರನ್ನು ಗೋಬೆಲ್ಸ್ ತಿರುಗಿ ಡಿಸೆಂಬರನೊಳಗೆ ಯುದ್ಧ ನಿಲ್ಲಿಸುವೆವು, ಅಷ್ಟರಲ್ಲಿ ಗೆದ್ದು ವಿಜಯಿಗಳಾಗುವೆವು ಎಂದು ಹುರಿದುಂಬಿಸುತ್ತಿರುವವನಂತೆ.

ಗ್ರೀಸಿನ ಮೇಲೆ ಇಟೆಲಿಯನ್ ಧಾಳಿ!

ಹೋರಾಡಲು ಗ್ರೀಸರ ನಿರ್ಧಾರ!

ಬ್ರಿಟಿಷರು ಸಹಾಯ ಕೊಡುವರು!

ಇಟಲಿಯನ್ ಸೈನ್ಯ ತಾ. ೨೮ರಂದು ಗ್ರೀಸಿನ ಗಡಿನಾಡನ್ನು ದಾಟಿ ಮುಂದೆ ನುಗ್ಗಿರುವರು. ಇತ್ತ ಕೆಲ ದಿನಗಳಿಂದ ಅಲ್ಲಿನ ಗಡಿನಾಡಿನಲ್ಲಿ ಉಭಯ ರಾಷ್ಟ್ರದ ಸೈನಿಕರಿಗೆ ತಿಕ್ಕಾಟಗಳು ನಡೆಯುತ್ತಾ ಇದ್ದುವು.

ಗ್ರೀಸಿಗೆ ಇಟಲಿಯು ಮೊದಲು ಕಡೆಯ ನುಡಿ (ಅಲ್ಟಿಮೇಟಂ) ಕೊಟ್ಟಿತು. ಗ್ರೀಸು ಇಟಲಿಯ ಮಾತಿನಂತೆ ನಡೆಯಲು ನಿರಾಕರಿಸಲು ಈ ಆಕ್ರಮಣವಾರಂಭವಾಯಿತು!

ಗ್ರೀಸ್ ಕೊನೆಯ ವರೆಗೆ ಕಾದಾಡುವುದು

"ಗ್ರೀಸು ಕೊನೆಯ ವರೆಗೂ ಹೋರಾಡುವುದು" ಎಂದು ಅದರ ಮುಖ್ಯ ಮಂತ್ರಿ ಮಂತ್ರಿಗಳಾದ ಜನರಲ್ ಮೆಟಾಗ್ಸಾಸರು ಸಾರಿರುವರು.

ತಮಗೆ ಈ ಸಂದರ್ಭದಲ್ಲಿ ಬ್ರಿಟಿಷರು ಸಹಾಯ ಕೊಡಬೇಕಾಗಿಯೂ ಅವರು ಕೇಳಿರುವರು. ಅವರು ಸೇನಾಪತಿಯನ್ನು ಕರೆದು ಮುಂದಿನ ಯುದ್ಧದ ಕುರಿತು ಚರ್ಚೆ ನಡೆಸಿದರು.

ಇಟಲಿಯು ಮೂರೇ ತಾಸುಗಳಲ್ಲಿ ತನಗೆ ಉತ್ತರ ಕೊಡಬೇಕೆಂದು ಒಂದು ಎಚ್ಚರಿಕೆ ಕೊಟ್ಟಿತು. ಅದರ ಬೇಡಿಕೆಯು ಯಾವ ಶರತಗಳಿದ್ದುವೆಂದು ತಿಳಿದು ಬಂದಿಲ್ಲ.

ಮುಸಲನಿಯು ಕಳೆದ ಏಪ್ರಿಲ್ ... ದಿನ ಗ್ರೀಸಿಗೆ ಪತ್ರ ಬರೆದಿದ್ದ. ಅದರಲ್ಲಿ ಗ್ರೀಸಿನ ಭೂಜಲ ಗಡಿಗಳನ್ನು ಇಟಲಿಯು ಮನ್ನಿಸುವುದಾಗಿ ಆಶ್ವಾಸನ ಕೊಟ್ಟಿದ್ದನು.

ಯುದ್ಧ ಆರಂಭಿಸಿತು

ಅಲ್ಬೇನಿಯಾ-ಗ್ರೀಸ್ ಗಡಿಯಲ್ಲಿ ಯುದ್ಧವಾರಂಭವಾಗಿದೆ. ಜಲದಲ್ಲಿಯೂ ನೆಲದಲ್ಲಿಯೂ ಈ ಉಭಯ ರಾಷ್ಟ್ರಗಳೊಳಗೆ ಈಗ ಹೋರಾಟ ಸಾಗುತ್ತದೆ.

ತಿರುಗಿ ಹಿಟ್ಲರ್-ಮುಸಲನಿ ಭೇಟಿ

ಫ್ರಾಂಕೋ-ಪಿಟೇನರೂ ಇದ್ದರೆ?

ಹಿಟ್ಲರು ಮತ್ತು ಮುಸಲನಿಯೂ ಪರಸ್ಪರ ತಿರುಗಿ ಒಟ್ಟುಗೂಡಿ ಗುಪ್ತವಾಗಿ ವಿಚಾರ ವಿನಿಮಯ ಮಾಡಿಕೊಂಡಿರುವರೆಂದು ತಿಳಿದಿದೆ. ಮುಸಲನಿ ರೋಮಿನಿಂದ ತೆರಳಿಹೋದವನು ಯಾರಿಗೂ ತಿಳಿಯದೆ ಹೋಗಿದ್ದನಂತೆ. ಮುಸಲನಿ ಹೋದಲ್ಲಿ ಹಿಟ್ಲರನೂ ಇರಬಹುದೆಂದು ಊಹೆ. ಇವರೊಡನೆ ಫ್ರಾಂಕೋ ಪಿಟೇನರೂ ಇದ್ದರೆಂದು ತಿಳಿಯಲಾಗಿದೆ.

ಮುಸಲನಿ ಸಿಯಾನೋವಿನೊಡನೆ ಫ್ಲಾರೆನ್ಸಿಗೆ ಹೋಗಿ, ಅಲ್ಲಿ ಹಿಟ್ಲರನನ್ನು ಕಾಣುವನಾಗಿ ಸ್ಟೆಫಾನ್ಸಿಯ ಸುದ್ದಿಗಾರನ ಹೇಳಿಕೆ.



ಜನರಲ್ ಫ್ರಾಂಕೋ

ಸಾಮ್ರಾಜ್ಯ ಯುದ್ಧ ಪ್ರಾರಂಭವಾಗುವುದು

ಹಿಟ್ಲರನು ಭಾರತಕ್ಕೆ ಬರಬಹುದೆ?

ಅಮೇರಿಯವರ ಭಾಷಣ

ಭಾರತ ಮಂತ್ರಿಗಳಾದ ಅಮೇರಿಯವರು ಒಂದು ಭಾಷಣ ಮಾಡುತ್ತಾ ಜಗತ್ತಿನ ಇತಿಹಾಸದಲ್ಲಿಯೇ ಸುಪ್ರಸಿದ್ಧವಾಗಬಹುದಾದ ಒಂದು ಕಾಳಗದಲ್ಲಿ ಬ್ರಿಟಿಷರು ಗೆದ್ದಿರುವರೆಂದೂ, ಹಿಟ್ಲರನು ಭಾರತದ ವರೆಗೂ ಹೋಗಬಹುದೆಂದೂ, ಬ್ರಿಟಿಷರು ಮುಂದೆ ಮಧ್ಯ ಏಶಿಯದಲ್ಲಿ ಯುದ್ಧ ಮಾಡಬೇಕಾಗಬಹುದೆಂದೂ ಹೇಳಿದರು. ನಾವಿನ್ನು ಸಾಮ್ರಾಜ್ಯ ಯುದ್ಧಕ್ಕೆ ಸಿದ್ಧರಾಗಬೇಕೆಂದರು ಅವರು. ಕೊನೆಗೆ ಅವರು ಪೂರ್ವ ರಾಷ್ಟ್ರಗಳ ಸಂಪತ್ತಿನಿಂದ ಭಾರತಕ್ಕೆ ಬಹಳ ಉಪಕಾರವಿದೆಯೆಂದರು.

ಫ್ರೆಂಚ್ ಮಂತ್ರಿಮಂಡಳದಲ್ಲಿ ರಾಜಿನಾಮೆ

ಬುದೊನರ ಸ್ಥಾನದಲ್ಲಿ ಲಾವಾಲರೇ ಅಧಿಕಾರ ವಹಿಸುವರು

ಪಿಟೇನ್ ಸರಕಾರದ ವಿದೇಶ ಮಂತ್ರಿಗಳಾದ ಬುದೊನರು ತನ್ನ ಪದವಿಗೆ ರಾಜಿನಾಮೆಯಿತ್ತಿರುವರು. ಅವರ ಸ್ಥಾನದಲ್ಲಿ ಲಾವಾಲರೇ ಅಧಿಕಾರ ವಹಿಸುವರು.

ಯುದ್ಧಕ್ರಮವು ಬೇರೆಯಾಗುವುದು

ಬೆನಿಷರ ನಂಬಿಕೆ

ಝುಗೋಸ್ಲವೇಕಿಯದ ಹಿಂದಿನ ಅಧ್ಯಕ್ಷರಾದ ಡಾ। ಬೆನಿಷರು ತಮ್ಮ ಸಪ್ತತಿ ಜನ್ಮದಿನದಂದು ಒಂದು ಆಕಾಶ ಭಾಷಣ ಮಾಡುತ್ತಾ ಅದರಲ್ಲಿ ಮುಂದೆ ಯುದ್ಧಕ್ರಮವೇ ಬದಲಾಗುವುದೆಂದೂ, ಈ ಯುದ್ಧದಲ್ಲಿ ಕೊನೆಗೆ ಬ್ರಿಟಿಷರೇ ಜಯಿಸುವರೆಂದೂ ಹೇಳಿದರು.

ಫ್ರೆಂಚ್ ಸರಕಾರಕ್ಕೆ ರೂಸ್‌ವೆಲ್ಟರ ಉತ್ತರ

ಫ್ರಾನ್ಸ್ ಹಾಗೂ ಜರ್ಮನಿಗಳ ನಡುವೆ ನಡೆದ ಒಪ್ಪಂದ ಕುರಿತು ರೂಸ್‌ವೆಲ್ಟರು ಅನೇಕ ದಿನಗಳ ಹಿಂದೆಯೇ ಫ್ರೆಂಚ್ ಸರಕಾರಕ್ಕೆ ಪತ್ರ ಕಳುಹಿಸಿ ಅದರಿಂದಾಗುವ ಪರಿಣಾಮವನ್ನು ಅವರ ಲಕ್ಷ್ಯಕ್ಕೆ ತಂದಿರುವರೆಂದು ತಿಳಿದು ಬಂದಿದೆ.

ಅಮೇರಿಕದಲ್ಲಿ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ರೂಸ್‌ವೆಲ್ಟ್ ಮತ್ತು ವಿಂಡೆಲ್ ವಿಲ್ಕಿಯವರೊಳಗೆ ಚುನಾವಣೆಯಾಗಲಿದೆ. ಚುನಾವಣೆಯ ಸಾಧನೆಗಳು ಎರಡು ಕಡೆಗಳಲ್ಲಿ ತೀವ್ರವಾಗಿ ನಡೆಯುತ್ತಿದೆ.

ಪಿಟೇನ್ ಸರಕಾರಕ್ಕೆ ಹಿಟ್ಲರನ ಶರತಗಳು

ಇಟಲಿಗೆ ನೀಸ್, ಸ್ಪೈನಿಗೆ ಮೊರೊಕೊ ಮತ್ತು ಜಪಾನಿಗೆ ಇಂಡೋಚೈನ ಕೊಡಬೇಕು; ವಿಮಾನ ನೌಕಾಬಲಗಳನ್ನು ಒಪ್ಪಿಸಬೇಕು.

ಇಟಲಿ ಜರ್ಮನ್ ಸರಕಾರಗಳು ಫ್ರಾನ್ಸಿಗೆ ಈ ಶರತುಗಳನ್ನು ಕಳುಹಿಸಿದವು.

ಮುಸಲೋನಿ

(೧) ಅಲ್ಸೇಸ್ ಲೊರೆನ್ ಪ್ರಾಂತವನ್ನು ಜರ್ಮನಿಗೂ, ನೀಸನ್ನು ಇಟಲಿಗೂ ಕೊಡಬೇಕು. (೨) ಟ್ಯೂನಿಸನ್ನು ಇಟಲಿ ಫ್ರಾನ್ಸುಗಳು ಹಂಚಿಕೊಳ್ಳಬೇಕು. ಅಲ್ಜೀರಿಯವು ಫ್ರೆಂಚರ ಸ್ವಾಧೀನವಿರಬಹುದು. (೩) ಮೊರೊಕ್ಕೊದ ಉತ್ತರಾರ್ಧವನ್ನು ಫ್ರಾನ್ಸು ಸ್ಪೈನಿಗೆ ಕೊಡಬೇಕು. (೪) ಆಫ್ರಿಕಾ ಖಂಡದಲ್ಲಿ ಉಳಿದ ಫ್ರೆಂಚ್ ವಸಾಹತ್ತುಗಳ ರಾಜ್ಯಭಾರ ಇಟಲಿ ಜರ್ಮನಿ ಮತ್ತು ಫ್ರಾನ್ಸುಗಳು ಒಟ್ಟಿಗೆ ನಡೆಸಬೇಕು. ಆ ವಸಾಹತ್ತುಗಳ ಆರ್ಥಿಕ ಸಂಪತ್ತು ಇಟಲಿ ಜರ್ಮನಿಗಳಿಗೆ ದೊರಕಬೇಕು. (೫) ಫ್ರಾನ್ಸು ಇಂಡೋಚೈನವನ್ನು ಜಪಾನಿಗೊಪ್ಪಿಸಬೇಕು. (೬) ಬ್ರಿಟನಿನ ವಿರುದ್ಧ ಯುದ್ಧ ಮಾಡಲು ಫ್ರಾನ್ಸು ಭೂಮಧ್ಯಸಾಗರದ ತನ್ನ ವಿಮಾನ ಮತ್ತು ನೌಕಾಬಲಗಳನ್ನು ಇಟಲಿ ಜರ್ಮನಿಗಳಿಗೊಪ್ಪಿಸಬೇಕು. (೭) ಶರತಗಳಿಗೊಪ್ಪಿದರೆ, ಜರ್ಮನರು ಫ್ರಾನ್ಸಿನ ಬಹುಭಾಗವನ್ನು ಪಿಟೇನ್ ಸರಕಾರಕ್ಕೆ ಬಿಟ್ಟು ಕೊಡುವರು. ಫ್ರೆಂಚ್ ತೀರದ ಬಂದರಗಳನ್ನು ಮತ್ತು ಸ್ವಿಸ್ ಗಡಿನಾಡಿನಿಂದ ಬೆಲ್ಜಿಯನ್ ಗಡಿನಾಡಿನ ವರೆಗೂ ಪ್ರದೇಶಗಳನು ಮಾತ್ರ ಜರ್ಮನರು ತಮ್ಮ ವಶವಿರಿಸಿಕೊಳ್ಳುವರು.

ಈ ಶರತಗಳನ್ನು ಪಿಟೇನ್ ಸರಕಾರವು ಆಲೋಚಿಸಿತು.

ಕೆರೋಲರು ಸಿಕ್ಕಿಬಿದ್ದರು

ಸ್ಪೈನಿನಲ್ಲಿ ಬಂಧನ

ರುಮೇನಿಯ ಹಿಂದಿನ ಅರಸರಾದ ಕೆರೊಲರು ತಮ್ಮ ಪ್ರೇಯಸಿ ಲುಪೆಸ್ಕ್ಯೂರೊಡನೆ ಸ್ಪೈನಿನ ಪೋಲೀಸರ ಕೈಯಲ್ಲಿ ಸಿಕ್ಕಿಬಿದ್ದಿರುವರು. ಅವರನ್ನು ಬಂಧಿಸಿಲ್ಲ. ಒಂದು ಹೋಟೆಲಿನೊಳಗೆ ಕಾವಲಿಟ್ಟು ಇರಿಸಿದ್ದಾರೆ. ಹೊರಹೋಗಲು ಅವರಿಗೆ ಸ್ವಾತಂತ್ರ್ಯವಿಲ್ಲವಂತೆ.

ಹಿಟ್ಲರ್-ಫ್ರಾಂಕೋ ಭೇಟಿ

ಹಿಟ್ಲರ್ ಮತ್ತು ಜನರಲ್ ಫ್ರಾಂಕೋ ತಾ. ೨೩ರಂದು ಸ್ಪೈನಿನ ಗಡಿಯಲ್ಲಿ ಮಾತುಕತೆ ನಡೆಸಿದರೆಂದು ತಿಳಿದಿದೆ. ರಾಬಿನ್ ಟ್ರಾಪ್ ಮತ್ತು ಸಿನಾರೆಸುನೇರರೂ ಹಾಜರಿದ್ದರಂತೆ. ಉಭಯದೇಶಗಳ ಕುರಿತು ಅವರು ವಿಚಾರ ವಿನಿಮಯ ಮಾಡಿದರಂತೆ.

ಅಮೇರಿಕ ಗುಪ್ತ ಒಪ್ಪಂದ ಮಾಡಿಕೊಂಡಿಲ್ಲ!

ಪರಕೀಯರ ಯುದ್ಧದಲ್ಲಿ ಭಾಗ್ಯವಹಿಸುವುದಿಲ್ಲ

ರೂಸ್‌ವೆಲ್ಟರ ಹೇಳಿಕೆ

ಪ್ರೆಸಿಡೆಂಟ್ ರೂಸ್‌ವೆಲ್ಟರು ಒಂದು ಭಾಷಣ ಮಾಡುತ್ತಾ ಅದರಲ್ಲಿ ತಾವು ಎರಡನೆಯ ದೇಶವನ್ನು ಜಯಿಸಿ ಸ್ವಾಧೀನ ಪಡಿಸುವುದಕ್ಕಾಗಿ ಸೈನ್ಯವನ್ನು ಸಜ್ಜುಗೊಳಿಸುವುದಿಲ್ಲವೆಂದೂ ಎರಡನೆಯವರ ಯುದ್ಧದಲ್ಲಿ ಭಾಗವಹಿಸದಿರುವುದೇ ತಮ್ಮ ಧ್ಯೇಯವೆಂದೂ, ಅಮೇರಿಕದ ಮೇಲೆ ಧಾಳಿಯಾದ ಕೊಂತು ನಾವು ಶಸ್ತ್ರವನ್ನು ಎತ್ತಿ ಹಿಡಿಯುವುದಿಲ್ಲವೆಂದೂ ಹೇಳಿದರು.

ಭೂಮಧ್ಯ ಸಾಗರದಲ್ಲಿ ಯುದ್ಧವಾಗುವುದೆ?

ಸೈನಿಕ ವ್ಯಕ್ತಿಕುಶಲರಾದ ಮೇಜರ್ ಪಿಲ್ಡಿಂಗ್ ಇಲಿಯೆಟ್ ಇವರು ನ್ಯೂಯಾರ್ಕಿನ ಹೆರಾಲ್ಡ್ ಟ್ರಿಬ್ಯೂನಿನಲ್ಲಿ ಒಂದು ಲೇಖನವನ್ನು ಬರೆಯುತ್ತಾ ಭೂಮಧ್ಯ ಸಾಗರದಲ್ಲಿ ಕೊನೆಯ ಹೋರಾಟ ಮಾಡಲು ಇಟಲಿ ಜರ್ಮನಿಗಳು ಕೂಡಿ ಒಳಸಂಚು ನಡೆಸುತ್ತಲಿವೆಯೆಂದು ಬರೆದಿರುವರು. ಅವರು ಈ ಯುದ್ಧದಲ್ಲಿ ಜರ್ಮನರು ಫ್ರೆಂಚ ಸ್ಪಾನಿಶ್ ಹಡಗುಪಡೆಗಳ ಸಹಾಯ ಪಡೆಯುವುದು ಸಾಧ್ಯವಿದೆಯೆಂದು ಬರೆದಿರುವರು.

ಮಾರ್ಶಲ್ ಸ್ಮಿಗ್ಲೆರಿಜರ ಬಂಧನ

ಪೋಲೆಂಡಿನ ಮುಖ್ಯ ಸೇನಾಪತಿಗಳಾಗಿದ್ದ ಮಾರ್ಶಲ್ ಸ್ಮಿಗ್ಲೆರಿಜರನ್ನು ರುಮೇನಿಯದಲ್ಲಿ ಸೆರೆಹಿಡಿದಿರುವರೆಂದು ತಿಳಿದದೆ. ಪೋಲೆಂಡಿನ ಯುದ್ಧದ ಮೇಲೆ ಅವರು ರುಮೇನಿಯಕ್ಕೆ ತೆರಳಿ ...



ಸರಕಾರವು ಚುನಾವಣೆಗೆ ಸಿದ್ಧವಿದೆಯೆ?

ರಾಜಾಜಿಯುವರ ಪಂಥ!

ವರ್ಧಾದಲ್ಲಿ ನೆಹರುಗಳು!

ಪೂರ್ವ ರಾಷ್ಟ್ರಗಳ ಪರಿಷತ್ತು!

ಪತ್ರಿಕೆಗಳ ಮೇಲೆ ಗದಾಪ್ರಹಾರ!

ದ್ದರು ಅಲ್ಲಿನ ಅಧಿಕಾರಿಗಳು ಅವರನ್ನು ಅಲ್ಲಿ ನಿರ್ಬಂಧಿಸಿದರು

ಇಂಡೋ-ಚೈನದ ಗವರ್ನರ ಜನರಲರನ್ನು ಕೊಲ್ಲುವ ಯತ್ನ

ಇಂಡೋ ಚೈನದ ಗವರ್ನರಾದ ಅಡ್ಮಿರಲ್ ಜೀನಾಡೀಂರವರನ್ನು ಒಬ್ಬ ಫ್ರೆಂಚ್ ಅಧಿಕಾರಿ ಕೊಲ್ಲುವ ಯತ್ನ ಮಾಡಿದನೆಂದ ತಿಳಿದಿದೆ

ಹಿಟ್ಲರನು ಭಾಷಣ ಕೊಡಲಿರುವನು!

ಪ್ರಾನ್ಸದ ತು. ಸ್ಪೈನ್ ಸರಕಾರದೊಂದಿಗೆ ಮುಂತುಕತೆಯಾದ ವಿಷಯದಲ್ಲಿ ಹಿಟ್ಲರನು ಬೇಗನೇ ಕೂಡಲಿರುವ ರಿಶ್‌ಸ್ಟಾಗಿನ ಸಭೆಯಲ್ಲಿ ಒಂದು ... ಭಾಷಣ ಮಾಡಲಿರುವನೆಂದು ... ಬಂದಿದೆ

ಯೂರೋಪಿನಲ್ಲಿ ಶಾಂತಿ ಸ್ಥಾಪನೆಗಾಗಿಯೋ?

ಫ್ರಾನ್ಸ್ ಜರ್ಮನಿಗಳ ಒಪ್ಪಂದ

ಫ್ರಾನ್ಸ್ ಮತ್ತು ... ಸರಕಾರ ಸ್ನೇಹಸಹಕಾರಗಳಿಂದ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ಹಿಟ್ಲರ ... ರು ಒಪ್ಪಿಕೊಂಡರೆಂದು ... ಸರಕಾರದವರು ಒಂದು ಪ್ರಕಟಣೆ ಕೊಟ್ಟಿರುವರು ಇವರಿಬ್ಬರ ಯೂರೋಪಿನಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ಪ್ರಯತ್ನಿಸಲಿ ಒಟ್ಟಾಗಿ ಕಾರ್ಯ ಮಾಡುವರೆಂದ ವಿ...

ಡಿಗೋಲೆಯುವರು ಹೇಳುತ್ತಾರೆ

ಹಿಟ್ಲರನೊಡನೆ ಪಿಟೇನರು ಮಾಡಿಕೊಂಡ ಒಪ್ಪಂದವನ್ನು ಫ್ರೆಂಚರು ಮಾನ್ಯ ಮಾಡುವುದಿಲ್ಲ ಪಿಟೇನರು ಇದರಿಂದ ಫ್ರಾನ್ಸಿನ ಅಭಿಮಾನ ಆತ್ಮನಾಶ ಮಾಡಿರುವರೆಂದು ಡಿಗೋಲೆಯವರ ಹೇಳಿಕೆ

ಪಾರ್ಲಿಮೆಂಟ್ ಕರೆಯಬೇಕು

ಹೋರ್ ಬೆಲಿಶರ ಹೇಳಿಕೆ

ಹಿಟ್ಲರ್ ಪಿಟೇನರು ಒಪ್ಪಂದ ಮಾಡಿಕೊಂಡ ವಿಚಾರದಲ್ಲಿ ಬ್ರಿಟಿಷರು ತೀವ್ರವಾಗಿ ಆಲೋಚನೆ ಮಾಡತಕ್ಕದ್ದಿರುವುದರಿಂದ ಕೂಡಲೇ ಪಾರ್ಲಿಮೆಂಟ್ ಸಭೆಯನ್ನು ಕರೆಯಬೇಕೆಂದು ಹಿಂದಿನ ಯುದ್ಧ ಮಂತ್ರಿಗಳಾದ ಹೋರ್ ಬೆಲಿಶರು ಒಂದು ಪ್ರಕಟಣೆ ಕೊಟ್ಟಿರುವರು



ಅಖಿಲಭಾರತ ವಿದ್ಯಾರ್ಥಿ ... ಪರಿಷತ್ತು

ಈ ... ಗಳಲ್ಲಿ ... ಪುರದಲ್ಲಿ ಸೇರುವುದಾಗಿ ತಿಳಿದಿದೆ

ವರ್ಧಾದಲ್ಲಿ ನೆಹರುಗಳು

... ಹರುಗಳ ... ...

ಕಾಂಗ್ರೆಸ್ ಸದಸ್ಯತ್ವದ ಅವಧಿ

ನವೆಂಬರ ೨೦ರ ವರೆಗೆ

ಕಾಂಗ್ರೆಸ್ ಅಧ್ಯಕ್ಷರಿಂದ ಮೌಲಾನಾ ಅಜಾದರ ಅಲ್ಲಾಹಬಾದಿನ ಕಾಂಗ್ರೆಸ ಮುಖ್ಯ ಕಚೇರಿಗೆ ಕಲ್ಕತ್ತದಿಂದ ಒಂದು ಪತ್ರ ಬರೆದ ಅದರಲ್ಲಿ ಕಾಂಗ್ರೆಸ ಸದಸ್ಯತ್ವದ ಅವಧಿಯನ್ನು ನವಂಬರ ೨೦ರ ವರೆಗೆ ಬೆಳೆಸಲು ಸೂಚಿಸಿದರೆಂದು ತಿಳಿದಿದೆ

ಪತ್ರಿಕೆಗಳ ಮೇಲೆ ಸರಕಾರದ ಗದೆ!

ಯುದ್ಧ ಕಾರ್ಯ ವಿರೋಧಕ ಸುದ್ದಿಗಳಿಗೆ ಪ್ರತಿಬಂಧ

ಹಿಂದುಸ್ಥಾನ ಸರಕಾರದವರು ಕೆಳಗಿನ ಹುಕುಮು ಹೊರಡಿಸಿರುವರು —

“ಹಿಂದುಸ್ಥಾನ ಸಂರಕ್ಷಣ ಕಾಯದೆಯ ...ನೇ ನಿಯಮದ ...ನೇ ಉಪನಿಯಮದ ‘ಬ’ ಕಲಮಿನ ಮೇರೆಗೆ ದೊರೆತ ಅಧಿಕಾರದ ಮಧ್ಯವರ್ತಿ ಸರಕಾರದವರು, ಬ್ರಿಟಿಷ್ ಹಿಂದುಸ್ಥಾನದಲ್ಲಿಯ ಯಾವನೇ ಮುದ್ರಕನು, ಪ್ರಕಾಶಕನು ಅಥವಾ ಸಂಪಾದಕನು ಯುದ್ಧವನ್ನು ಯಶಸ್ವೀರೀತಿ ಸಾಗಿಸಿ ಕೊಂಡುಹೋಗುವ ಕಾರ್ಯದಲ್ಲಿ ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ವಿಘ್ನವನ್ನುಂಟುಮಾಡುವ ಯಾವದೇ ವಿಷಯವನ್ನು ಮುದ್ರಿಸತಕ್ಕದ್ದಲ್ಲ ಮತ್ತು ಪ್ರಕಟಿಸತಕ್ಕದ್ದಲ್ಲವೆಂದು ಈ ಮೂಲಕ ಅಪ್ಪಣೆ ವಿಧಿಸುತ್ತಾರೆ ಇದರಂತೆ ಮೇಲಿನಂಥ ವಿರೋಧವುಂಟುಮಾಡುವ ಸಭೆ ಮತ್ತು ಭಾಷಣಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಪ್ರಕಟಿಸತಕ್ಕದಲ್ಲ ಆದರೆ ಮಧ್ಯವರ್ತಿ ಸರಕಾರದವರಾಗಲಿ ಪ್ರಾಂತಿಕ ಸರಕಾರದವರಾಗಲಿ ಪತ್ರಿಕೆಗಳಿಗೆ ಪ್ರಕಟಿಸಲಿಕ್ಕೆ ಕೊಟ್ಟ ಯಾವದೇ ವಿಷಯಕ್ಕೂ ಈ ಅಪ್ಪಣೆಯು ಅನ್ವಯಿಸುವದಿಲ್ಲ

ಪೂರ್ವ ರಾಷ್ಟ್ರಗಳ ಪರಿಷತ್ತು

ಭಾರತದ ... ... ದಿಲ್ಲಿಯಲ್ಲಿ ... ಪೂರ್ವರಾಷ್ಟ್ರಗಳ ಪರಿಷತ್ತೊಂದ ... ವೈಸರಾಯರು ಇಂದು ... ಭಾಷಣ ಮಾಡಿದರು ... ... ಹಿಂದುಸ್ಥಾನದ ರಕ್ಷಣೆ ಮತ್ತು ... ... ಇವರಿಂದಾಗಿದೆ ... ದುದರಿಂದ ಈ ... ... ವ ಹತ್ತರದ್ದಾಗಿದೆ

ರವೀಂದ್ರರ ಆರೋಗ್ಯ

ಅಸ್ವಸ್ಥರಿದ್ದ ರವೀಂದ್ರರ ... ಕೆಲದಿನಗಳಿಂದ ಸ್ವಲ್ಪ ಆರೋಗ್ಯ ಹೊಂದುತ್ತಿರುವರೆಂದ ತಿಳಿದಿದೆ

ರಾಜಾಜಿಯುವರ ಪಂಥ

ರಾಜಾಜಿಯವರು ಮದ್ರಾಸಿನಲ್ಲಿ ಒಂದು ವಿಶೇಷ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸು ಜನತೆಯ ಪ್ರತಿನಿಧಿ ಸಂಸ್ಥೆಯೋ ಅಲ್ಲವೋ ಎಂಬುದನ್ನು ಪರೀಕ್ಷಿಸಬೇಕಾದರೆ, ಸರಕಾರವು ಈ ವಿಷಯವಾಗಿಯೇ ಒಂದು ಚುನಾವಣೆಯನ್ನು ಮಾಡಿ ನೋಡಲಿ ಎಂದಿರುವರು

ರಮುಜಾನ್ ಸಂದೇಶ ಬೇಡ

ಯುದ್ಧ ನಿಧಿಗೆ ಕೊಡಿ

ಸಿಕಂದರರ ಉಪದೇಶ

ರಮುಜಾನ್ ಹಬ್ಬದ ನಿಮಿತ್ತ ಮುಸಲ್ಮಾನರು ಕಳುಹಿಸುವ ಸಂದೇಶವನ್ನು ಈ ಸಲ ನಿಲ್ಲಿಸಿ, ಅದಕ್ಕೆ ತಗಲುವ ವೆಚ್ಚವನ್ನು ಯುದ್ಧನಿಧಿಗೆ ಕೊಡಿರೆಂದು ಪಂಜಾಬಿನ ಗವರ್ನರರಾದ ಸಿಕಂದರಖಾನರು ಹೇಳಿದರು.

ನೆಹರುಗಳ ಲೇಖನವು ಪ್ರಕಟಿಸಿದ್ದಕ್ಕೆ ಪತ್ರಿಕೆಯ ಮೇಲೆ ಗದೆ!

ಪಂಡಿತ ನೆಹರುಗಳು ಬರೆದ ‘ಅನ್‌ದಿವಜ್’ ಎಂಬ ಲೇಖನವನ್ನು ಪ್ರಕಟಿಸಿದ ಬಗ್ಗೆ ಡಾರ್ಜಿಂಗಿನ ರಾಷ್ಟ್ರೀಯ ಪತ್ರಿಕೆ ‘ಎಡ್ವಾನ್ಸ್’ ಎಂಬದರ ಸಂಪಾದಕರಿಂದ ೧೦೦೦ ರೂಪಾಯು ಠೇವಣಾತಿಯನ್ನು ಪ್ರಕಟಣಗಾರರಿಂದ ೨೦೦೦ ರೂಪಾಯಿ ಠೇವಣಾತಿಯನ್ನು ಬಂಗಾಳ ಸರಕಾರವು ಕೇಳಿದೆ

ವಿನೋಬಾ ಬಾವೆ—

ನಾಗಪುರ ಸೆರೆಮನೆಯಲ್ಲಿ—

ಶ್ರೀ ವಿನೋಬಾಬಾವೆಯವರನ್ನು ನಾಗಪುರ ಸೆರೆಮನೆಯಲ್ಲಿ ಇಡಲಾಗಿದೆಯೆಂದು ತಿಳಿದು ಬಂದಿದೆ

ನೋಟೀಸು

ದ. ಕ. ಮಂಗಳೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ 29 1939

R I \ N 714 1940

ಗ ಗ ವ ... ಅರ್ಜಿದಾರರು ವಾದಿಳು,

ಮತ್ತು

... ...) ರೈಸ್ಪೋಂಡೆಂಟರು ... ಪ್ರತಿವಾದಿಳು

... ... ಮಂಗಳೂರು ತಾಲೂಕು ಕೊಂಪದವು ಗ್ರಾಮದ ನೆಲತೀರ್ಥ ಎಂಬಲ್ಲಿರುವವರು ...

ಮೇಲಿನ ವ್ಯಾಜ್ಯದಲ್ಲಿ ತಾ 21-10-39 ರಲ್ಲು ಆದ ಸಲಿಮಿನ ಡಿಕ್ರಿ ವಿಧಿ ಪ್ರಕಾರ ವ್ಯಾದಿಗೆ ಯಾ ನಂತರ ಕೂಡಾ ಡಿಕ್ರಿ ಹಣ ಸಲ್ಲಿಸಲಿಕ್ಕೆ ರೆಸ್ಪೊಡೆಂಟರು ತಪ್ಪಿದ್ದರಿಂದ ಡಿಕ್ರಿಯಲ್ಲಿ ಜವಾಬ್ದಾರಿ ಇವರ ಆಸ್ತಿ ಮಾರಾಟದ ಬಗ್ಗೆ ತಂನ ಗುಣಕ್ಕೆ ಫ್ಯಾನಲ್ ಡಿಕ್ರಿಗೆ ಅಪ್ಪಣೆ ಆಗಬೇಕೆಂತ ಅರ್ಜಿದಾರರು ದಾಖ್ಲು ಮಾಡಿದ ನೋಟಿಸ ಅರ್ಜಿಯು ತಾ. 14—11—40ಕ್ಕೆ ಅಮ್ಯರು ತಸ್ತಿ ಬಗ್ಗೆ ಇಟ್ಟಿರುತ್ತದೆ ಆ ಕುರಿತು ರೈಸ್ಪೊಂಡೆಂಟರಿಗೆ ಆಕ್ಷೇಪವಿದ್ದರೆ ಸದಿ ತಾರೀಕಿನ ಬೆಳಿಗ್ಗೆ 11 ಗಂಟೆಗೆಸದ್ರಿ ಕೋರ್ಟು ಮುಂದೆ ಹಾಜರಾಗಿ ಕಾಹೀರುಪಡಿಸಿಕೊಳ್ಳಬಹುದು, ಹಾಗೆ ವರ್ತಿಸಲಿಕ್ಕೆ ತಪ್ಪಿದರೆ ಸದ್ರಿ ಅರ್ಜಿಯು ರೈಪೊಂಡೆಂಟರ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುವದು.

ಮಂಗಳೂರು, 21-10-40 | B. R. Vyasaraya Achar, ಅರ್ಜಿದಾರರ ಕಡೆ ಎಡ್ವಕೇಟು

ಪುಸ್ತಕ ವಿಮರ್ಶೆ

ತೆಲುಗಿನ ಕತೆಗಳು. ಬರೆದವರು:— ತೆಲುಗಿನ ವಿವಿಧ ಬರೆಹಗಾರರು, ಪುಟ ೧೫೯, ... ಬೆಲೆ ... ಕನ್ನಡದ ... ತೆಲುಗು, ರಾಶೀಯ.ದಂತೆ ಇತರ ಕೆಲವು ನಿಬಂಧಗಳಲ್ಲಿಯೂ ಭರದಿಂದ ಮುಂದಡಿ ಯಿಡುತ್ತಿರುವ ನಾಡು, ಅಲ್ಲಿನ ಜನಜೀವನವನ್ನು ಕತೆಗಾರಿಕೆಯ ಕುಶಲತೆಯನ್ನು ತಿಳಿಯಲು ಈ ಪುಸ್ತಕ ನೆರವಾಗಬಹುದು. ಭಾರತದ ಭಿನ್ನ ಭಿನ್ನ ಪ್ರಾಂತಗಳ ಜೀವನವನ್ನು ಕಥಾ ಸಾಹಿತ್ಯದ ಮೂಲಕ ಕನ್ನಡಿಗರಿಗೆ ಮಾಡಿಕೊಡುವ ಸು ಪ್ರಯತ್ನಕ್ಕೆ ಕೈಹಾಕಿದ ಸಾಧನಾ ಪ್ರಕಟನಾಲ ಯದವರ ಮೊದಲ ಕಥಾ ಸಂಗ್ರಹವಿದು.

ಮೊದಲನೆಯ ಕತೆ 'ಹಸಿವಿನ ಕೀಚ್ಚು' ಎಂಬು ದು. ಬಡತನದ ಬೆಂಕಿ ಹೊತ್ತುತ್ತಿರುವಾಗ ಸ್ತ್ರೀ ಯು ತನ್ನ ಪವಿತ್ರ ಧರ್ಮವನ್ನು ಮಾನವನ್ನೂ ಮರೆತುಬಿಟ್ಟಳು. ಹಸಿದೊಬ್ಬ ಹಿಂದೂ ನಿರ್ಗತಿ ಕಳು ಕೊನೆಗೆ ಮುಸಲ್ಮಾನ ಇಜೀಕನ ಗುಡಿಸ ಲು ರೊಟ್ಟಿಯಿಂದ ಹೊಟ್ಟೆ ತುಂಬಿಸಿಕೊಂಡಳು 'ವೇಶರೂಪಕ'ವು ಓಲೆ ಮಾರೋಲೆಗಳ ರೂಪ ದಿಂದ ಚಿತ್ರಿಸಿದ ಕತೆ. ಚನ್ನಾದ ಒಂದು ವಿಡಂ ಬನೆ. ಪಾಪಿ, ಕಾಮಲೋಲುಪನೊಬ್ಬನು ತನ್ನ ಪಾಪ ಕೃತ್ಯಕ್ಕೆ ಕರಗಿ ಆತ್ಮಹತ್ಯೆಗೆಳಸುತ್ತಾನೆ; ಇದು 'ಕೊನೆಯ ಜೀವನ' ಎಂಬ ಕತೆಯಲ್ಲಿದೆ. ಕತೆಗಾರಿಕೆ ಕೊಂಚ ಕೃತ್ರಿಮವೆನಿಸುವುದಾದರೂ ಒಟ್ಟಿನಲ್ಲಿ ಚನ್ನಾಗಿದೆ. ಸಂಸ್ಕೃತ ಜೀವನದ ಗೃಹಸ್ಥ ಗೃಹಿಣಿಯರ ಬದುಕಿನ ಚಿತ್ರ 'ವೃಥ ನಿಶ್ಚಯ'ದ ಲ್ಲಿದೆ. 'ರೂಮ್ ಟು ಲೆಟ್' ಒಂದು ವಿನಂಬ ದ ಕಥೆ. 'ರಾಜ' ಬಹಳ ತಾತ್ವಿಕವಾಗಿದೆ, ಕತೆ ಗಾರಿಕೆಯಲ್ಲಿ ಅಷ್ಟೊಂದು ಮಾಧುರ್ಯ ಕಾಣು ವುದಿಲ್ಲ. 'ಕುರುಡು ಹುಡುಗಿ'ಯಲ್ಲಿ ಭಿಕ್ಷುಕ ಜೀವನದ ನೈಸರ್ಗಿಕ ಚಿತ್ರಣವಿದೆ. 'ಬೆಂಚು ದಂಪತಿಗಳ'ಲ್ಲಿ ಹಳ್ಳಿಯ ಪ್ರೇಮ ಜೀವನವನ್ನು ಸುಂದರವಾಗಿ ಚಿತ್ರಿಸಿದೆ. ಇದು ಉತ್ತಮವಾಗಿದೆ ಕೋಟೀ' ಇದನ್ನು ಭಾಷಾಂತರವೆಂದು ತಿಳಿಸಿಲ್ಲ ವಾದರೂ, Anthony Trollopeಯವರ Malachi's cove ಎಂಬ ಆಂಗ್ಲ ಕತೆಯ ಭಾಷಾನುವಾದವೇ ಆಗಿದೆ.

ಈ ಕಥಾಸಂಗ್ರಹಗಳಿಂದ, ಕನ್ನಡಿಗರಿಗೆ ಬೇರೆ ಬೇರೆ ಪ್ರಾಂತಗಳ ಲೇಖಕರ ಪರಿಚಯ, ಸಾಹಿತ್ಯ ಪರಿಚಯ, ಜೀವನ ಪರಿಚಯವಾಗುವು ದೊಂದು ವೈಶಿಷ್ಟ್ಯ. ಹೀಗೆ ಭಾರತದ ಭಿನ್ನಭಿನ್ನ ಪ್ರಾಂತಗಳ ಒಂದೊಂದು ಕಥಾಸಂಗ್ರಹವನ್ನು ಪರಿ ಶ್ರಮ ಮೂಲಕ ಸಂಗ್ರಹಿಸಿ ದೇಶಸೇವೆ ಭಾಷಾ ಸೇವೆಗಳನ್ನು ಕೈಗೂಡಿಸುತ್ತಿರುವ ಪ್ರಕಾಶಕರನ್ನು ನಾವು ಅಭಿನಂದಿಸದಿರಲಾರೆವು. ಇವರ ಮುಂದಿನ ಸಂಗ್ರಹಗಳು ಇನ್ನೂ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಅಸಾಮೀಕತೆಗಳು: — ಪುಟ ೧/೮. ... ಬೆಲೆ ಎಂಟಾಣೆ.

ಬಂಗಾಳಕ್ಕೆ ನೆರೆಯದಾದ ಪ್ರಾಂತ ಅಸಾಮು ತನ್ನ ಸಾಹಿತ್ಯವನ್ನೂ ವಿಪುಲವಾಗಿ ಬೆಳಸಿದೆ. ಅಸಾಮಿ ಭಾಷೆಯ ಹನ್ನೊಂದು ಆಯ್ದ ಕತೆ ಗಳು ಇಲ್ಲಿ ಕೊಡಲಾಗಿವೆ. ಮೊದಲನೆಯದು 'ದೇವರ ಗೋಲ' ಎಂಬುದು, ಒಂದು ಪ್ರೇಮ ಜೀವನದ ಕತೆ. ಭಾವನಾಮಯವಾಗಿದೆ. 'ಪಟನ್ನು' ಅಂತಹುದೇ. ಬಂಧನದ ಬಾಳು ವಿಯ ಮುರುಕವಿದೆ ಇವರಲ್ಲಿ, 'ಭ್ರಷ್ಟೆ' ಸಮಾ ಜವು ಹೆಣ್ಣು ಬಾಳಿನ ಕುರಿತು ತೋರಿಸುವ ... ಆದರಿಂದಾಗಿ ಸೊಟಗು ಕೆಡುವ ಜೀವನ ಇವುಗಳನ್ನು ಚಿತ್ರಿಸುತ್ತದೆ. 'ದಿಗ್ಭೋಯಿ ಯ ಹರತಾಳ' ಒಂದು ಚೆನ್ನಾದ ಹಾಸ್ಯ ಕಥೆ. 'ವ್ಯರ್ಥ ಜೀವನ'ದಲ್ಲಿ ಜೀವನೋತ್ಸಾಹವು ಬರಿಯ ... ಯೆಂಬ ... ತೋರಿಸಿದೆ. 'ಅದೃಷ್ಟ' ಒಂದು ಪ್ರೇಮ ಜೀವನದ ಚೆಲು ವಾದ ಚಿತ್ರ. ಕೊನೆಗೆ ವಿಷಾದಾಂತವಾಗಿದೆ. '...'ಯೂ ಪ್ರಣಯ ಚಿತ್ರಯಾಗಿದೆ. ಹೆಣ್ಣು ಪ್ರಣಯಕ್ಕಾಗಿ ಮಾಡುವ ಅಪೂರ್ವತ್ಯಾಗದ ... ಇದರಲ್ಲಿ. ದರಿದ್ರ ದಂಪತಿಗಳಿಬ್ಬರು ಜೀವನದ ಯಾತನೆ ಸಹಿಸದೆ ವಿಷವನ್ನು ಸೇವಿಸಿದರು; ಹೆಂಗುಸು ಅಳಿದು ಗಂಡುಸು ಉಳಿದ; ಆತನಿಗೆ ಸರಕಾರ ಮರಣ ದಂಡನೆ ವಿಧಿಸಿತು. ಹೀಗೆ, 'ದರಿದ್ರ ದಂಪತಿ'ಯಲ್ಲಿ, ನಾದಿನ ಭೀಕರ ದಾರಿದ್ರ್ಯದ ಚಿತ್ರವಿದೆ. 'ಚಂಪಾ' ಹೆಂಗರುಳಿನದಯೆ ಸ್ನೇಹಗಳನ್ನು ಎತ್ತಿ ತೋರಿಸುತ್ತದೆ. 'ರುದ್ಧಯೌವನ'ದಲ್ಲಿ ಪ್ರೇಯಸಿಯೊಬ್ಬಳು ಪ್ರಿಯಕರನಿಗೆ ಪ್ರಣಯದ ಪತ್ರಗಳನ್ನು ಬರೆವ ಮೂಲಕ ಯೌವನದ ತಡೆದ ಪ್ರಣಯ ಭಾವನೆಗಳು ತಿಳಿಯು ತ್ತದೆ. ಇಲ್ಲಿ ಹೆಂಗುಸಿನ ಪ್ರೇಮ ನಿರ್ಮಲವು, ಪ್ರಿಯನದು ಅಶುದ್ಧವಾದುದು ಎಂದು ತೋ ರಿಸಿ ಅದರೊಡನೆ ಸ್ತ್ರೀ ಹೃದಯದ ನೈರ್ಮಲ್ಯಕ್ಕೆ ಮೆರುಗು ಕೊಟ್ಟಿದೆ. ಮೊದಲ ಹೆಂಡತಿ ಹುಚ್ಚಿಯಾದಳು, ಆಕೆಯನ್ನು ಆಸ್ಪ ತ್ರೆಗೆ ಕಳುಹಿಸಿ, ಕೆಲವೇ ದಿನಗಳಲ್ಲಿ ಎರಡನೆ ಯ ಮದುವೆಯಾಗಿ ಗಂಡುಸು ಸುಖಿಸಿಕೊಳ್ಳಿಸಿದ. ಮೊದಲಿನಾಕೆಗೆ ಕೆಲ ದಿನಗಳಲ್ಲಿ ಹುಚ್ಚು ಬಿಟ್ಟಿತು; ಆದರೆ ಗಂಡುಸು ತೀರಾ ಬೇರಾಗಿ ದ್ದಾನೆ. ಹೆಂಗುಸು ದುಃಖವನ್ನು ಸಹಿಸುವವಳು, ಸಹಿಸುತ್ತಾಳೆ; ಗಂಡುಸು ಭೋಗಾಭಿಲಾಷಿ, ಸುಖಿಸುತ್ತಾನೆ. ಹಾಗಾಗಿ ಜೀವನದಲ್ಲಿ ಗಂಡು ಸಿಗೆ 'ಜಯವೇ ಪರಾಜಯವೇ' ಎಂಬ ಪ್ರಶ್ನೆ, ಕತೆಗಾರರು ಹಾಕಿದ್ದಾರೆ. 'ಜಯವೇ ಪರಾಜ ಯವೇ?' ಎಂಬ ಕೊನೆಯ ಕತೆ ಈ ಸಮಸ್ಯಾತ್ಮ ಕವಾದುದು.

ಇಲ್ಲಿನ ಎಲ್ಲಾ ಕತೆಗಳೂ ಭಾವನಾ ಪ್ರಧಾನ ವಾದುವು. ಬಂಗಾಳದ ಕತೆಗಳನ್ನು ಓದಿದವರಿಗೆ ಅದರ ನೆರೆ ಪ್ರಾಂತವಾದ ಅಸಾಮಿನಲ್ಲಿಯೂ ಅದೇ ಜೀವನ ಭಾವನೆಗಳಿವೆಯೆಂಬುದು ಈ ಕತೆಗಳಿಂದ ವ್ಯಕ್ತವಾಗುತ್ತದೆ. ಅಂತೂ ಈ ಸಂಗ್ರಹವು ಅಸಾಮಿನ ಜೀವನ ಚಿತ್ರವನ್ನು ತೋರಿಸುತ್ತದೆ; ಅಲ್ಲಿನ ಕತೆಗಾರಿಕೆಯ ಕೌಶಲ್ಯ ವನ್ನು ಪ್ರತಿಬಿಂಬಿಸುತ್ತಿದೆಯೆಂದೂ ಹೇಳಬಹು ದಾದಷ್ಟು ಚನ್ನಾಗಿದೆ.

— ಕಯ್ಯಾರ

"ಶ್ರೀಮಂತರು ಮಾತ್ರ ಹಣ ಉಳಿಸುವರೆಂದು ನಾನು ಯಾವಾಗಲೂ ತಿಳಿದಿದ್ದೆ. ನೀವು ಮಾಡಬೇಕಾದುದೆಲ್ಲ ಏನೆಂದರೆ, ಪೋಸ್ಟು ಆಫೀಸಿಗೆ ಹೋಗಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಕಾರ್ಡ ಕೇಳಬೇಕು—ಇದು ನಿಮಗೆ ಉಚಿತವಾಗಿ ದೊರೆಯುವುದು. ನಿಮಗೆ ಸಾಧ್ಯವಿದ್ದಷ್ಟು ಮತ್ತು ಅನುಕೂಲ ದೊರೆತಂತೆಲ್ಲ ೪ ಆಣೆ ಡಿಫೆನ್ಸ್ ಸೇವಿಂಗ್ ಸ್ಟಾಂಪ್‌ಗಳನ್ನು ಕೊಂಡುಕೊಳ್ಳಿರಿ. ಇಂತಹ ೪೦ ಸ್ಟಾಂಪ್‌ಗಳಾದರೆ ನಿಮ್ಮ ಕಾರ್ಡ ತುಂಬುತ್ತದೆ. ಇದನ್ನು ನೀವು ಯಾವ ಬ್ಯಾಂಕಿನಲ್ಲಿ ಕೊಟ್ಟರೂ ನಿಮಗೆ ೧೦ ರೂ.ನ ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್ ಕೊಡುತ್ತಾರೆ. ಈ ಸರ್ಟಿಫಿಕೇಟ್ ನಿಮಗೆ ಹಣ ಗಳಿಸಿಕೊಡುತ್ತದೆ, ಮತ್ತು ಹತ್ತು ವರ್ಷಗಳಲ್ಲಿ ಅದರ ಮೌಲ್ಯವು ರೂ. ೧೪—೮—೦, ಆಗುತ್ತೆ. ಇದಕ್ಕೆ ಆದಾಯ ತೆರಿಗೆ ಇಲ್ಲ."



"ನಿಶ್ಚಯವಾಗಿಯೂ ಇದು ಒಳ್ಳೆಯ ಆಲೋಚನೆ. ಆ ರೀತಿ ನಾನು ಖಂಡಿತವಾಗಿ ಹಣ ಉಳಿಸಬಲ್ಲೆ. ವಾಸ್ತವವಾಗಿ ಹಣ ಉಳಿಸುವದಕ್ಕೆ ಯಾವ ಮನುಷ್ಯರಿಗೇ ಆಗಲಿ ಇದು ಅತಿ ಸುಲಭವಾದ ಮತ್ತು ಕ್ಷೇಮ ಕರವಾದ ಮಾರ್ಗವಾಗಿದೆ."

ಡಿಫೆನ್ಸ್ ಸೇವಿಂಗ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ
ಭಾರತದ ಸುರಕ್ಷಿತವಾದ ಧನಸಂಚಯ
GT-Kn-11

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ವಿಚಿತ್ರ ಪ್ರಪಂಚ

೬ ವರ್ಷ ಪ್ರಾಯದ ತಾಯಿ

ಪೇರೂದೇಶದ ಲೀನಾ ಮೆದೀನ ಎಂಬ ಕೇವಲ ಆರು ವರ್ಷದ ಹುಡುಗಿ ಗರ್ಭವತಿಯಾಗಿ ಒಂದು ಗಂಡು ಮಗುವನ್ನು ಹೆತ್ತಿರುವಳು. ಅದಕ್ಕೀಗ ೧೮ ತಿಂಗಳು ತುಂಬಿದೆ. ವೈದ್ಯಕೀಯ ಪರೀಕ್ಷೆಗಾಗಿ ಈ ತಾಯಿ ಮತ್ತು ಮಗು—ಇಬ್ಬರೂ ಸದ್ಯದಲ್ಲಿ ಚಿಕಾಗೋ ನಗರಕ್ಕೆ ಬರಲಿದ್ದಾರೆ. ಆರು ವರ್ಷದ ಹುಡುಗಿ, ಗರ್ಭವತಿ ಆಗುವಳೆಂಬುದನ್ನು ಯಾವ ವೈದ್ಯನೂ ನಂಬುವುದಿಲ್ಲ. ಅದರಲ್ಲೂ ಚಿಕಾಗೋದ ಮೊರೀಸ್ ಫಿಶಬೀನ್ ಎಂಬ ಸುಪ್ರಸಿದ್ಧ ವೈದ್ಯರು ಅವಳು ತಾಯಿ ಎಂಬುದನ್ನು ಅಲ್ಲಗಳೆದಿರುವರು. ಅಂಥ ವೈದ್ಯರಿಗೆ ಅವಳು ತಾಯಿಯಾಗಿದ್ದಾಳೆ ಎಂಬ ಮಾತಿನಲ್ಲಿ ವಿಶ್ವಾಸವನ್ನು ಬರಮಾಡಿಸುವುದಕ್ಕಾಗಿಯೇ ಅವಳು ತನ್ನ ಶಿಶುವಿನೊಂದಿಗೆ ಚಿಕಾಗೋವಿಗೆ ಬರುವಳು. ಅಲ್ಲಿ ವೈದ್ಯರ ಪರೀಕ್ಷೆಗಳು ಮುಗಿದ ಬಳಿಕ ಅವಳು ಯಾವುದಾದರೊಂದು ಪ್ರದರ್ಶನ ಕಂಪೆನಿಯನ್ನು ಸೇರಲಿದ್ದಾಳೆ. ಅಷ್ಟು ಸಣ್ಣ ಪ್ರಾಯದ ತಾಯಿ ಜಗತ್ತಿನಲ್ಲೇ ಬೇರೆ ಯಾರೂ ಇಲ್ಲ.

ಮಾಟಮಾಡಿದ್ದರಿಂದ ಸೂಳೆಯಾದೆ!

ನ್ಯೂಯೋರ್ಕಿನ ಒಂದು ವಿಚಿತ್ರ ದಾವೆ. ವಿಲಿಯಮ್ ಕ್ರಾಫ್ಟ ಎಂಬ ಅಲ್ಲಿಯ ಒಬ್ಬ ಮಿಲಿಯಾಧಿಪತಿಯು ತನ್ನ ಹೆಂಡತಿ ವ್ಯಭಿಚಾರ ಮಾಡಿರುವಳಾದ್ದರಿಂದ ದಾಂಪತ್ಯ ವಿಚ್ಛೇದವಾಗಬೇಕೆಂದು ವ್ಯಾಜ್ಯಮಾಡಿದ್ದಾನೆ. ಅವನ ಆ ತರುಣ ಹೆಂಡತಿ ತಾನು ವ್ಯಭಿಚಾರ ಮಾಡಿರುವುದನ್ನು ಬಹಿರಂಗ ಕೋರ್ಟಿನಲ್ಲಿ ಒಪ್ಪಿದ್ದಾಳೆ. ಆದರೆ ಅದಕ್ಕೆ ಅವಳು ಕೊಡುವ ಕಾರಣಗಳು ವಿಚಿತ್ರವಾಗಿವೆ. ಅವಳನ್ನು ಮೋಹಿಸಿ ಬಂದ ವಿಲಿಯಮ್ ಸ್ಟಿವಾರ್ಟ ಎಂಬವನು ಸ್ನೇಹಿತನಂತೆ ತನ್ನೊಡನೆ ಮಾತನಾಡುತ್ತ ಬಿಳಿದಾದ ಏನೋ ಒಂದು ಹುಡಿಯನ್ನು ತಿನ್ನಿಸಿದ; ಆದರಿಂದ ತಾನು ಸಾರಾಸಾರ ವಿಚಾರ ಶಕ್ತಿಯನ್ನು ಕಳಕೊಂಡೆ. ಅವನನ್ನು ಮೋಹಿಸಿ ಅವನು ಹೋದಲ್ಲಿಗೆ ಹೋದೆ. ಅನೇಕ ಹೊಟೇಲುಗಳಲ್ಲಿ ಉಳಕೊಂಡೆವು. ಅಲ್ಲಿ ಏನೇನು ಮಾಡುತ್ತಿದ್ದೆವು ಎಂಬುದರ ನೆನಪೇ ತನಗಿಲ್ಲ; ಏನಾದರೂ ಅಕೃತ್ಯಮಾಡಿದ್ದು ಇದ್ದಲ್ಲಿ, ಅದು ಅವನು ಮಾಟಮಾಡಿದ ಕಾರಣದಿಂದ; ಆದುದರಿಂದ ದಾಂಪತ್ಯ ವಿಚ್ಛೇದ ಆಗಕೂಡದೆಂದು ಅವಳು ಸಾಧಿಸುತ್ತಾಳೆ.

ಮಗನ ವಿವಾಹಕ್ಕಾಗಿ— ತಂದೆಯ ಉಪವಾಸ

ಬೌದ್ಧಮತೀಯನಾದ ತನ್ನ ಮಗನು ಒಬ್ಬ ಕೆಥೋಲಿಕ ಕ್ರೈಸ್ತ ಹುಡುಗಿಯನ್ನು ಮದುವೆಯಾಗುವುದನ್ನು ನೋಡಿ ಇರುವದಕ್ಕಿಂತ ಸಾಯುವುದೇ ಲೇಸೆಂದು ತಿಳಿದು ಆತನ ತಂದೆ ಮರಣಾಂತ ಉಪವಾಸಮಾಡಿ ಪ್ರಾಣ ಕಳಕೊಂಡಿದ್ದಾನೆ. ವಿಡಮುನಿ ಬಹಳ ಶ್ರದ್ಧಾವಂತ; ತಾನು ನಂಬಿದ ಧರ್ಮಕ್ಕೆ ಸ್ವಲ್ಪವೂ ಚ್ಯುತಿ ಬರಲಾರದೆಂದು ಪ್ರಯತ್ನಿಸುವ ಜೀವಿ. ಮಗನು ವಿಧರ್ಮೀಯ ಒಬ್ಬ ಹುಡುಗಿಯನ್ನು ಆಶಿಸಿ ಅವಳನ್ನು ವಿವಾಹವಾಗಲಿದ್ದಾನೆ ಎಂದು ತಿಳಿದಾಕ್ಷಣವೇ ಆ ಮದುವೆಯನ್ನು ನೋಡಲಿಕ್ಕೆ ತಾನು ಬದುಕಿ ಉಳಿಯುವುದಿಲ್ಲವೆಂದು ಹೇಳಿದ್ದ. ಪರಂತು ಆತನ ಹೆಂಡತಿ ಮತ್ತು ಮಗನು ಅದು ಬರಿಯ ಬೆದರಿಕೆ ಮಾತ್ರ ಆಗಿರಬಹುದೆಂದು ಊಹಿಸಿದ್ದರು. ಕೆಥೊಲಿಕ ಹುಡುಗಿಯೊಡನೆ ಮದುವೆಯಾಗಲಿಕ್ಕೆ ಎಳೆಂಟು ದಿನಗಳು ಇರುವ ಮೊದಲು ತಂದೆ ಮನೆ ಬಿಟ್ಟು ಎಲ್ಲಿಗೋ ಹೋಗಿ ಬಿಟ್ಟ. ಎಷ್ಟು ಹುಡುಕಿದರೂ ಕಾಣಸಿಗಲಿಲ್ಲ. ಕೊನೆಗೆ ಸಮುದ್ರ ದಂಡೆಯ ಮೇಲೆ ಉಪವಾಸಮಾಡಿ ಸತ್ತು ಹೋದ ಅವನ ಶರೀರವು ದೊರೆಯಿತು.

ವಿದ್ಯಾರ್ಥಿಯ ಮರ್ಕಟ ಚೇಷ್ಟೆ!

ಕಾನಪುರದಲ್ಲಿ ಒಂದು ಸನಾತನ ಧರ್ಮಕಾಲೇಜು ಇದೆ. ಅದರಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿ ತಮಾಷೆಗಾಗಿ ಮಾಡಿದ ಒಂದು ಕೆಲಸ ಅವನು ಹುಚ್ಚನಂತಾಗಲಿಕ್ಕೆ ಕಾರಣವಾಗಿದೆ. ವಿದ್ಯಾರ್ಥಿನಿಲಯದ ಒಬ್ಬ ಅಡಿಗೆ ಭಟ್ಟನು ವಾಂತಿಭೇದಿಯಿಂದ ಬಳಲುತ್ತಿರಲು ತನಗೇ ಆ ರೋಗವು ಬಂದಿದೆ ಎಂದು ವಿದ್ಯಾರ್ಥಿ ತಂದೆತಾಯಿಗಳಿಗೆ ತಂತಿ ಹೊಡೆದ ಬರಿಯ ತಮಾಶೆಗಾಗಿ! ತಂದೆ ತಾಯಿಗಳು ಗಾಬರಿಯಿಂದ ಓಡಿ ಬಂದರು. ವಿದ್ಯಾರ್ಥಿಯ ಹೆಂಡತಿ ಮಾವ, ಬಂಧುಬಾಂಧವರೂ ಕಾನಪುರಕ್ಕೆ ಬಂದರು. ಬಂದವರೇ ನೆಟ್ಟಗೆ ಆಸ್ಪತ್ರೆಗೆ ಹೋದರು. ಅಲ್ಲಿ ವಿಚಾರಿಸಿದಾಗ, ಆ ಕಾಲೇಜಿನ ಒಬ್ಬ ವಿದ್ಯಾರ್ಥಿ ಅದಾಗಲೇ ಕಾಲರಾದಿಂದ ಸತ್ತುಹೋಗಿರುವನೆಂದು ಹೇಳಲಾಯಿತು. ಸತ್ತು ಹೋದವನು ತಂತಿ ಹೊಡೆದ ಈ ವಿದ್ಯಾರ್ಥಿ ಎಂದೇ ತಿಳಕೊಂಡು, ಅವನ ತಾಯಿ ತಂದೆ, ಹೆಂಡತಿ, ಮಾವ, ಬಂಧುಬಳಗದವರು ಗೋಳೋ ಎಂದು ಅಳುತ್ತ ಕಾಲೇಜಿಗೆ ಬಂದರು. ಅಳುವ ಶಬ್ದ ಕೇಳಿ ಇತರ ವಿದ್ಯಾರ್ಥಿಗಳೊಂದಿಗೆ ಆ ವಿದ್ಯಾರ್ಥಿಯೂ ವಿದ್ಯಾರ್ಥಿಭವನದಿಂದ ಹೊರಗೆ ಬಂದ. ಅವರೆಲ್ಲ ಅಳುವುದನ್ನು ನೋಡಿ ಅವನಿಗೆ ಹುಚ್ಚು ಹಿಡಿದಂತಾಯಿತು. ಅವರು ಇವನ ಮೂರ್ಖತನಕ್ಕೆ ರೇಗಿ ಅವನನ್ನು ಹಳಿಯುತ್ತ ಹಿಂದಿರುಗಿದರು.

THE PIE-MONEY BANK LTD.,
Maidan Road,, MANGALORE.
Undertakes all kinds of Banking Business. Current account at 2½% per annum, Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars—
K. R. GURU, Managing Director.

PHYSICAL FITNESS
is the first essential in games and in every social activity.
You need not worry hereafter for your impaired vitality premature old age and nervous break-down if you try
"BHUVANENDRA AMRITHPRASH"
which will tone the nervous system, build healthy tissues and enrich the blood.
Thus keeps you fresh and sprightly.
Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.
ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿಸ್ತ್ರಾಣವೆ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಆಗತ್ಯವಿಲ
ಭುವನೇಂದ್ರ 'ಅಮೃತಪ್ರಾಶ'ವು
ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುತ್ತದೆ.
ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.
ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

ನೆಹರುಗಳು ಜರ್ಮನಿಯು ಪ್ರವಾಸ ಮಾಡಿದಾಗ -

ಹಿಟ್ಲರನು ಭೇಟಿಗಾಗಿ ಆತುರಗೊಂಡ!

ಡಾ| ಗೊಬೆಲ್ಸನೊಡನೆ ಮಾತುಕತೆ!

[ಬರೆದವರು: ಡಾ| ನಾರಾಯಣದತ್ತ ವಿದ್ಯಾಲಂಕಾರ ಎಂ. ಡಿ.]

ನೆಹರು

೧೯೩೩ನೇ ಇಸ್ವಿಯ ಆಗಸ್ಟ ತಿಂಗಳಲ್ಲಿ ಒಂದು ದಿನ ನಾನು ಮ್ಯುನಿಕ್ ಯುನಿವರ್ಸಿಟಿಯ ಮೆಡಿಕಲ್ ಫ್ಯಾಕಲ್ಟಿಯ ಪ್ರಾಕ್ಟಿಕಲ್ ಸರ್ಜರಿ ಭಾಷಣ ಕೇಳುತ್ತಿರುವಾಗ ಅಂಚೆಜವಾನನು ತಂತಿಯೊಂದನ್ನು ನನ್ನ ಕೈಯಲ್ಲಿ ಕೊಟ್ಟನು. ವಿದ್ಯಾರ್ಥಿಗಳಿಗೆಲ್ಲ ಆಶ್ಚರ್ಯವೆನಿಸಿತು! ವರ್ಗದಲ್ಲಿಯೇ ತಂತಿ ತಂದು ಕೊಡುವಂಥ ಅವಶ್ಯಕತೆಯೇನಿತ್ತು; ತಂತಿಯಲ್ಲಿ ಅಂಥ ಮಹತ್ವದ ವಿಷಯವೇನಿರುವದು ಎಂದು ಎಲ್ಲರೂ ಬೆರಗಾದರು. ಪಂಡಿತ ಜವಾಹರಲಾಲರು ಪ್ಯಾರಿಸಿನಿಂದ ಮ್ಯೂನಿಕಿಗೆ ಬರುವ ಸುದ್ದಿಯನ್ನು ನನ್ನ ತಮ್ಮನು ನನಗೆ ತಂತಿಯಿಂದ ತಿಳಿಸಿದ್ದನು. ಪ್ರೊಫೆಸರರು ತಂತಿಯ ಆಶಯವನ್ನು ಕೇಳಿದರು. ಅದರ ಮಥಿತಾರ್ಥವನ್ನು ಪ್ರೊಫೆಸರರಿಗೆ ತಿಳಿಸಿದೆನು. ಈ ತಂತಿಯ ವಿಷಯವನ್ನು ಎಲ್ಲ ವಿದ್ಯಾರ್ಥಿಗಳಿಗೂ ಓದಿ ಹೇಳಿರೆಂದು ಪ್ರೊಫೆಸರರು ಹೇಳಿದರು. ನಿಮ್ಮ ದೇಶದ ಇಷ್ಟೊಂದು ಪ್ರಸಿದ್ಧ ಮುಂದಾಳನ್ನು ಸ್ವಾಗತಮಾಡಲು ಜರ್ಮನ್ ವಿದ್ಯಾರ್ಥಿಗಳಿಗೆ ಬಹಳ ಆನಂದವೆನಿಸಬಹುದೆಂದೂ ಅವರು ಹೇಳಿದರು. ಅದರಂತೆ ನಾನು ಜರ್ಮನ್ ಭಾಷೆಯಲ್ಲಿ ವಿದ್ಯಾರ್ಥಿಗಳಿಗೆಲ್ಲ ಇದನ್ನು ತಿಳಿಸಿದೆನು.

ಹಿಂದೀ ವಿದ್ಯಾರ್ಥಿ ಸಂಘದ ಅಧ್ಯಕ್ಷನಾದ ನಾನು ವಿದ್ಯಾರ್ಥಿ ಸಂಘದ ಸಭೆಯೊಂದನ್ನು ಕರೆದೆನು. ಪಂಡಿತರ ಸ್ವಾಗತ ಹಾಗು ಮ್ಯುನಿಕ್‌ನಲ್ಲಿಯ ಅವರ ಕಾರ್ಯಕ್ರಮವನ್ನು ನಿಶ್ಚಿತ ಮಾಡಲಾಯಿತು.

ಆಗಸ್ಟ ೬ನೇ ತಾರೀಕಿಗೆ ಜವಾಹರಲಾಲರು ಬೆಳಿಗ್ಗೆ ಪ್ಯಾರಿಸಿನಿಂದ ಮ್ಯುನಿಕಿಗೆ ಬಂದರು. ಬಹಳ ಚಳಿಬಿದ್ದಿತ್ತು. ಆದರೂ ಹಿಂದೀ ವಿದ್ಯಾರ್ಥಿಗಳಲ್ಲದೆ ೬೦೦ ಜರ್ಮನ್ ವಿದ್ಯಾರ್ಥಿಗಳು ಪಂಡಿತರನ್ನು ಸ್ವಾಗತಿಸಲು ಸ್ಟೇಶನಿನಲ್ಲಿ ನೆರೆದಿದ್ದರು. ಸ್ಟೇಶನ ಪ್ಲ್ಯಾಟಫಾರ್ಮಿನಲ್ಲಿ ಗಾಡಿನಿಂತ ಕೂಡಲೆ ಪಂಡಿತರು ತಮ್ಮ ಮಗಳಾದ ಇಂದಿರೆಯೊಡನೆ ಕೆಳಗಿಳಿದರು.

ಆಗ ಅವರು ಯೂರೋಪಿಯನ್ ಪದ್ಧತಿಯ ಸಾದಾ ಉಡುವನ್ನು ಹಾಕಿಕೊಂಡಿದ್ದರು. ಇಂದಿರಾ ಬಾಲೆಯಾದರೂ ಯುರೋಪಿಯನ್ ಸ್ತ್ರೀಯ ಉಡುವನ್ನು ಧರಿಸಿದ್ದಳು. ಕೆಳಗಿಳಿದ ಕೂಡಲೆ ಪಂಡಿತರ ಕೊರಳಿನಲ್ಲಿ ನಾನು ಮೊದಲು ಹೂಮಾಲೆಯನ್ನು ಹಾಕಿದೆನು. ಕೊರಳಲಿ ಹಾರಹಾಕಿದ ಕೂಡಲೆ ಪಂಡಿತಜಿಯವರ ಜಯಜಯಕಾರದಿಂದ ಇಡೀ ಪ್ಲ್ಯಾಟಫಾರ್ಮು ನಿನಾದಗೊಂಡಿತು. ಜರ್ಮನ್ ವಿದ್ಯಾರ್ಥಿಗಳು ಮತ್ತು ಜನತೆಯು ಈ ಜಯಘೋಷದಲ್ಲಿ ಧ್ವನಿಗೂಡಿಸಿದರು. ಕೆಲವರು ಪಂಡಿತಜಿಯವರ ಹಸ್ತಾಕ್ಷರ ತೆಗೆದುಕೊಳ್ಳಬೇಕೆಂದು ಉದ್ಯುಕ್ತಗಿಸಿದರು. ಕೆಲವರು ಭಾವಚಿತ್ರ ತೆಗೆದುಕೊಳ್ಳಲು ಕ್ಯಾಮೆರಾಗಳನ್ನು ಮುಂದೆಮಾಡಿದರು. ಆ ಪ್ರಚಂಡ ಜನಸಮ್ಮರ್ದದಲ್ಲಿ ಮುಂದೆ ಹೋಗಲು ಪಂಡಿತರಿಗೆ ಬಹಳ ತೊಂದರೆಯಾಯಿತು. ಪಂಡಿತಜಿಯವರನ್ನು ನಾನು ಇಲ್ಲಿಯ ಪ್ರಸಿದ್ಧ ಅಲಿಜಾನ ಹಾಟಲಿಗೆ ಕರೆದುಕೊಂಡು ಹೋದೆನು.

ನಾವು ಹೊಟೆಲಿನ ಆರನೆ ಅಂತಸ್ತಿಗೆ ಬಂದೆವು. ಆ ಕೋಣೆಯಲ್ಲಿಯ ಬೆಡಗನ್ನು ನೋಡಿ ಪಂಡಿತರು ಹೀಗೆ ನುಡಿದರು—

'ನೀವೊಳ್ಳೆ ವಿಚಿತ್ರ ಮನುಷ್ಯರಿರುವಿರೆಂದು ತೋರುತ್ತದೆ. ನಾನೊಬ್ಬ ರಾಜಮಹಾರಾಜನೆಂದು ನೀವು ತಿಳಿದಿರುವಿರೇನು? ನಾನು ಒಬ್ಬ ದರಿದ್ರ ಮನುಷ್ಯ; ನನಗೆ ಈ ರಾಜಠೀವಿಯೇಕೆ?'

ನಾನು ವಿಚಾರಮಗ್ನನಾದೆನು. ನಾನು ಚಿಂತೆಯಲ್ಲಿ ಬಿದ್ದುದನ್ನು ನೋಡಿ ಅವರು ನಗಹತ್ತಿದರು. ಮತ್ತು 'ನಡೆಯುರಿ, ಇಲ್ಲಿಯೇ ಇರುವಾ. ಬಾಡಿಗೆಯನ್ನಂತೂ ಕೊಡಬೇಕಲ್ಲವೇ? ಕೊಡುವಾ' ಎಂದು ಅವರೆಂದರು.

ಬಳಿಕ ಮ್ಯೂನಿಕ್‌ನಲ್ಲಿನ ಕಾರ್ಯಕ್ರಮವನ್ನು ನಾನವರಿಗೆ ತಿಳಿಸಿದೆನು. ಅದರಲ್ಲಿ ಭೋಜನದ ಒಂದು ಕಾರ್ಯಕ್ರಮವೂ ಇದ್ದಿತು. ಆ ಕಾಲಕ್ಕೆ ಜರ್ಮನಿಯ ಕೆಲವು ವ್ಯಕ್ತಿಗಳಿಗೆ ಪಂಡಿತಜಿಯವರೊಡನೆ ಮಾತಾಡಲು ಅಸ್ಪದ ಕೊಡಲಾಗಿತ್ತು. ನೆಹರುಗಳಿಗೆ ಇದು ಮೊದಲು ಸರಿಬೀಳಲಿಲ್ಲ. 'ನಾನು ಇಲ್ಲಿ ಸಹಜವಾಗಿ ಎಲ್ಲವನ್ನು ನೋಡಿಕೊಂಡು ಹೋಗಲು ಬಂದಿರುವೆನು. ಜರ್ಮನಿಯಲ್ಲಿ ಸಂಚಾರಮಾಡಿ ಬರಬೇಕೆಂದು ನಾನು ಬಂದಿರುವೆನು. ಯಾವ ಜರ್ಮನನೊಡನೆಯೂ ಯಾವ ವಿಷಯವಾಗಿಯೂ ಮಾತಾಡುವ ಇಚ್ಛೆ ನನಗಿಲ್ಲ. ಭಾರತೀಯರನ್ನು ಭೆಟ್ಟಿಯಾಗಿ ಅವರ ಪರಿಚಯ ಮಾಡಿಕೊಳ್ಳಬೇಕೆಂದು ನನ್ನ ಇಷ್ಟ. ಈ ಭೋಜನ ಸಮಾರಂಭ, ಜರ್ಮನ್‌ರೊಡನೆ ಮಾತುಕತೆಯ ಕಾರ್ಯಕ್ರಮವನ್ನು ತೆಗೆದುಹಾಕಿಬಿಡಿ ಎಂದು' ಅವರು ಸ್ಪಷ್ಟವಾಗಿ ಹೇಳಿದರು.

ಮಾತಾಡುತ್ತಿರುವಾಗಲೆ ಅವರಿಗೆ ತಮ್ಮ ಸಾಮಾನಗಳ ನೆನಪಾಯಿತು. ಅವರ ಪ್ರವಾಸದ ಸಾಮಾನುಗಳು ಇನ್ನೂ ಬಂದಿರಲಿಲ್ಲ. ಗಾಡಿಯಿಂದ ಇಳಿದ ಕೂಡಲೆ ಅವರು ಸಾಮಾನಿನ ರಶೀದಿಯನ್ನು ನನ್ನ ಕೈಯಲ್ಲಿ ಕೊಟ್ಟು ಹಾಟೆಲಿಗೆ ಬಂದಿದ್ದರು. ಸಾಮಾನು ಎಲ್ಲಿಯಾದರೂ ಹಿಂದೆ ಉಳಿದಿರುವದೆಂದು ಸ್ಟೇಶನಿನಲ್ಲಿ ಗೊತ್ತಾಯಿತು. ನಾನು ಸ್ಟೇಶನ್ ಮಾಸ್ತರನಿಗೆ ಟೆಲಿಫೋನ್ ಮಾಡಿದೆನು. ಅವನು ಹಿಂದಿನ ಸ್ಟೇಶನ ಮಾಸ್ತರನೊಡನೆ ವಿಚಾರ ವಿನಿಮಯ ಮಾಡಿದನು. ಪಂಡಿತಜಿಯವರ ಸಾಮಾನು ಫ್ರಾನ್ಸ ಮತ್ತು ಜರ್ಮನಿಗಳ ಗಡಿಯಲ್ಲಿ ಶೋಧನೆಗಾಗಿ ತಡೆಹಿಡಿಯಲ್ಪಟ್ಟಿದೆಂದು ಗೊತ್ತಾಯಿತು. ಆದಷ್ಟು ಬೇಗ ಸಾಮಾನುಗಳನ್ನು ತರಿಸಿಕೊಡುವದಾಗಿ ಸ್ಟೇಶನ್ ಮಾಸ್ತರರು ಹೇಳಿದರು. ಸುಮಾರು ೨-೨॥ ಗಂಟೆಗಳೊಳಗಾಗಿ ಪಂಡಿತಜಿಯವರ ಸಾಮಾನುಗಳು ನಾವು ಉಳಿದ ಹಾಟೆಲಿಗೆ ಬಂದವು. ಇಲ್ಲದಿದ್ದರೆ ಪಂಡಿತಜಿಯವರು ಜರ್ಮನ್ ರೇಲ್ವೆ ಕಂಪನಿಯ ಮೇಲೆ ವ್ಯಾಜ್ಯ ಮಾಡುವ ವಿಚಾರ ಮಾಡಿದ್ದರು.

ಜರ್ಮನಿಯ ಪ್ರಚಾರ ಮಂತ್ರಿ ಗೊಬೆಲ್ಸ್

ಆ ದಿನವೆಲ್ಲ ಪಂಡಿತಜಿಯವರು ಮ್ಯುನಿಕ್‌ನ ಪ್ರೇಕ್ಷಣೀಯ ಸ್ಥಳ ನೋಡುವದರಲ್ಲಿ ಕಳೆದರು. ರಾಜನೀತಿಯ ಜ್ವಾಲಾಮುಖಿಯಲ್ಲಿ ಕುಳಿತ ಸೇನಾಪತಿಯೊಬ್ಬನು ಪ್ರಾಕೃತಿಕ ಸೌಂದರ್ಯವನ್ನು ನೋಡಿ ಸ್ಫೂರ್ತಿವಂತ ಕವಿಯಂತೆ ಮಂತ್ರಮುಗ್ಧನಾಗಬಲ್ಲನು ಎಂದು ನನಗೆ ಆಗ ತಿಳಿಯಿತು.

ಎರಡನೆಯ ದಿವಸ ಮುಂಜಾನೆ ಪಂಡಿತಜಿಯವರು ಜರ್ಮನಿಯಲ್ಲಿಯ ಹಿಂದಿ ವಿದ್ಯಾರ್ಥಿಗಳ ಆಚಾರ ವಿಚಾರ ವಿಚಾರಾದಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಅಷ್ಟರಲ್ಲಿಯೆ ಟೆಲಿಫೋನಿನ ಗಂಟೆಯಾಯಿತು. ಇಷ್ಟು ನಸುಕಿನಲ್ಲಿ ನನಗೆ ಫೋನ್ ಮಾಡುವವರು ಯಾರು ಎಂದು ನೆಹರುಗಳಿಗೆ ಆಶ್ಚರ್ಯವೆನಿಸಿತು. 'ಟೇಲಿಫೋನು ಇಲ್ಲಿಯಾದರೂ ನನ್ನ ಬೆನ್ನು ಬಿಡುವದಿಲ್ಲ' ಎಂದು ಹೇಳಿ ಅವರು ಫೋನಿನ ಹತ್ತರ ಬಂದರು. ಹಾಟೆಲ ಮ್ಯಾನೇಜರನ ಫೋನೇ ಆದಾಗಿತ್ತು. 'ನೆಹರುಗಳ ಸಂದರ್ಶನ ತೆಗೆದುಕೊಳ್ಳಲು ಜರ್ಮನಿಯ ಪ್ರಚಾರ ಮಂತ್ರಿಗಳಾದ ಡಾ. ಗೊಬೆಲ್ಸರು ಬಂದಿರುವರು. ಪಂಡಿತಜಿಯವರು ದಯವಿಟ್ಟು ಅವರಿಗೆ ಭೇಟಿಯಾಗುವರೋ?' ಎಂದು ಮ್ಯಾನೇಜರ

(೧೬ನೆಯ ಪುಟವನ್ನು ನೋಡಿರಿ)

ಅಮೃತ
ರಕ್ತ ಶುದ್ಧಿಯನ್ನು ಮಾಡುವ ನರಗಳ
ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!
ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.
ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.
"ಕೇಸರೀ ಕುಟೀರಂ"
ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ
ರಾಯಪೇಟೆ, ಮದ್ರಾಸು.

★ ಸಿನೆಮಾ ಪುಟ ★

ಕಾನನ್‌ಬಾಲಾ—ಅಶೋಕ ಮೋಹಿತ್ರಾ ವಿವಾಹ

ಕಳೆದ ವಾರ ನಾವು ಬರೆದ ಸುದ್ದಿ ತು ಈಗ ಸತ್ಯವಾಗಿದೆ. ಪ್ರಸಿದ್ಧ ನಟಿ ಕಾನನ್‌ಬಾಲಾ ಶ್ರೀ ಅಶೋಕ ಮೋಹಿತ್ರಾ ಎಂಬವನೊಡನೆ ವಿವಾಹವಾಗಿರು ಳು. ಕಾನನ್ ಸಿನೆಮಾರಂಗಕ್ಕೆ ಬರುವ ಹೊದಲೇ ಇವರಲ್ಲಿ ಪ್ರಣಯ ಬೆಳೆದಿ ತಂತೆ.

ಉಮಾಶಶಿ ಗೃಹಿಣಿಯಾಗಿ ಮಕ್ಕಳೊಂದಿಗೆ ಸುಖವಾಗಿರುವಳು

ನ್ಯೂಥಿಯೇಟರಿನಿಂದ ಅಗಲಿ ಸಿನೆಮಾ ಜೀವನವನ್ನೇ ಬಿಟ್ಟುಹೋದ ಪ್ರಸಿದ್ಧ ಸಿನೆಮಾ ನಟಿ ಉಮಾಶಶಿಯು ಇಂದು ಗೃಹಿಣಿಯಾಗಿ ಸುಖ ಜೀವನ ನಡೆಸುತ್ತಿದ್ದಾಳೆ. ಕಲ್ಕತ್ತದಲ್ಲಿ ಒಬ್ಬ ಪತ್ರಿಕೋದ್ಯೋಗಿಯು ಆಕೆ ಮೋಟರ್ ಕಾರೊಂದರಲ್ಲಿ ತನ್ನ ಮೂವರು ಮಕ್ಕಳೊಂದಿಗೆ ಕುಳಿತಿರುವುದನ್ನು ಕಂಡನು, ಸಹಜ ಕುತೂಹಲದಿಂದ ವಂದನೆಮಾಡಿ ಮಾತ ನಾಡಿಸಿದ. ಸಿನೆಮಾ ಜೀವನ ಮತ್ತು ಗೃಹಿಣೀ ಜೀವನ ಇವುಗಳಲ್ಲಿ ಯಾವುದು ಶ್ರೇಷ್ಠವೆನಿಸುತ್ತದೆ ಎಂದು ಕುತೂಹಲದಿಂದ ಆತ ಕೇಳಿದ, 'ಅದಕ್ಕೂ ಇದಕ್ಕೂ ಹೋಲಿಸಬಾರದು, ಉರಿವ ಬಿದ್ದ ಲಿನ ತುಂದಿಗೂ ಪ್ರಕಾಶಿಸುವ ಸೂರ್ಯನಿಗೂ ಹೋಲಿಕೆಯೇ?' ಎಂದಳು ಗಂಭೀರದ ನಗೆಯಿಂದ ಉಮಾಶಶಿ

ಕಜ್ಜನ್ ಮಿನೆರ್ವಾಕ್ಕೆ

ಮಿನೆರ್ವಾದ ಮುಂದಿನ ಚಿತ್ರ ಮಹಾತ್ಮಾ ಸಿಕಂದರದಲ್ಲಿ ಪಾತ್ರವಹಿಸಲು, ಕಜ್ಜನ್ ಅದರ ವ್ಯವಸ್ಥಾಪಕರೊಡನೆ ಕರಾರು ಮಾಡಿಕೊಂಡಿರುವಳೆಂದು ತಿಳಿದಿದೆ.

ಭಾರತ ಮಿಲಾಪ್

ಪ್ರಕಾಶ ಚಿತ್ರದವರು ನರ್ಸೀಬಾಗತ್ ಚಿತ್ರದ ಯಶಸ್ವಿತೆಯಿಂದ ಹುರುಪುಗೊಂಡ ಅದರ ಸಂಚಾಲಕರು ಭಾರತ್ ಮಿಲಾಪ್ ಎಂಬ ಪೌರಾಣಿಕ ಚಿತ್ರವನ್ನು ತಯಾರಿಸುತ್ತಿದ್ದಾರೆ.

'ಗೀತಾ'' ''ಕರ್ಮಯೋಗ''ವಾಯಿತು

ಸಿರ್ಕೋ ಕಂಪೆನಿಯವರ 'ಗೀತಾ', ಚಿತ್ರದ ಆ ಹೆಸರಿಗೆ ಬೊಂಬಾಯಿ ಸೆನ್ಸಾರಿನವರು ಆಕ್ಷೇಪವೆತ್ತಿದುದರಿಂದ ಈಗ ಅದರ ಹೆಸರನ್ನು 'ಗೀತಾ' ತೆಗೆದು 'ಕರ್ಮಯೋಗ' ಎಂದು ಮಾಡಲಾಗಿದೆ. ಅಕ್ಟೋಬರ ತಿಕ್ಕೆ ಇದು ಪ್ರದರ್ಶಿತವಾಯಿತು. ಚಂದ್ರಮೋಹನ್ ಮತ್ತು ದುರ್ಗಾಖೋಟೆ ಇದರಲ್ಲಿ ಅಭಿನಯಿಸುವರು.

ಪಂಜಾಬ್-ಕಾ-ಬೇಟಾ

ಭಾರತದ ಪ್ರಸಿದ್ಧ ಮೃಗಕಾರಿ, ಪಂಜಾಬ್‌ಕಾ ಬೇಟಾ ಆಕ್ಟೋಬರ ಒರಂದು ಪ್ಯತಿಹೊಂದಿತು ವಾಡಿಯಾದವರ ಎಲ್ಲಾ ಮೃಗ ಚಿತ್ರಗಳಲ್ಲಿ ಯಶಸ್ವಿಯಾಗಿ ಅದು ಅಭಿನಯಮಾಡಿತ್ತು

ಮೇನಕಾ ದೇಸಾಯಿ ಮತ್ತು ರೋಸ್

ಇವರು ಎರಡು ವರ್ಷಗಳ ಕರಾರಿನ ಮೇಲೆ ನೇಶನಲ್ ಸ್ಟುಡಿಯೋವನ್ನು ಸೇರಿರುವರು.

ಪ್ರೇಮ ಅದಿಬ್ ಮತ್ತು ಜ್ಯೋತಿ

ಈ ಸುಂದರ ನಟನಟಿಯವರು ಪ್ರಕಾಶ ಚಿತ್ರ ಕಂಪೆನಿಯ ಮುಂದಿನ ಚಿತ್ರದಲ್ಲಿ ಪ್ರಾಮುಖ್ಯ ಪ್ರಾತವಹಿಸುವರು.

'ಸ್ತ್ರೀ-ಪುರುಷ'

ನೇಶನಲ್ ಸ್ಟುಡಿಯೋದವರು 'ಸ್ತ್ರೀ' ಚಿತ್ರವು ಬಹಳ ಜನಪ್ರಿಯವಾಗಿದೆ ಸ್ತ್ರೀಯರ ವಿಷಯದಲ್ಲಿ ಇದು ಅತ್ಯಂತ ಶುಭಸಂದೇಶವನ್ನೇ ಸಾರುತ್ತಿದೆ ಮುಂದೆ ನೇಶನಲ್ ಸ್ಟುಡಿಯೋದವರು 'ಪುರುಷ' ಎಂಬ ಚಿತ್ರವನ್ನು ತಯಾರಿಸುವುದರಲ್ಲಿದ್ದಾರೆ ಅದರಲ್ಲಿ ಗಂಡಸಿನ ಜೀವನದ ಚಿತ್ರವನ್ನು ತೋರಿಸುವರು.

ಜೋಟಿ ಬಹು ಅಥವಾ ಸಂಸ್ಕಾರ್

'ಸಂಸ್ಕಾರ್' ಅಥವಾ 'ಜೋಟಿ ಬಹು' ಎಂಬೀ ನೇಶನಲ್ ಸ್ಟುಡಿಯೋದವರ ಚಿತ್ರವು ಬೊಂಬಾಯಲ್ಲಿ ಬೇಗನೇ ಪ್ರದರ್ಶಿತವಾಗುವುದು ಇದರಲ್ಲಿ ಸಂಗೀತ ಹಾಸ್ಯಗಳು ಪ್ರಾಮುಖ್ಯವಾಗಿರುತ್ತವೆ

'ಸಂಸ್ಕಾರ್' ಚಿತ್ರದ ಕಥೆ

ರಜನಿ, ಒಂದು ಹಳ್ಳಿಯ ಸುಂದರ ತರುಣಿ. ಆಕೆಯ ಗಂಡ ಪ್ರಕಾಶನು ವಿದ್ಯಾರ್ಜನೆಗಾಗಿ ನಗರಕ್ಕೆ ಹೋಗಿದ್ದ ಗಂಡನ ಬರುವಿಕೆಯನ್ನು ಆಕೆ ಇದಿರು ನೋಡುತ್ತಿರುವಳು ಕಡೆಗೆ, ವಿದ್ಯಾಭ್ಯಾಸ ಮುಗಿಸಿ ಒಂದು ದಿನ ಪ್ರಕಾಶ ತುಂಬಿದ ಪ್ರೇಮದ ನವಯುವಕ ಮನೆಗೆ ಮರಳಿ ಬಂದ ಆತನ ಮಡದಿ ಸಂತೋಷಗೊಂಡಳು

ಪ್ರಕಾಶನ ಅಣ್ಣನ ಹೆಂಡತಿ ಬಿಜಲಿ, ತನ್ನ ಧೂರ್ತತೆಗೆ ಸಹಜವಾದ ರೀತಿಯಿಂದ, ಪ್ರಕಾಶನೊಡನೆ ರಜನಿಯ ಕುರಿತು ವ್ಯರ್ಥ ಅಪವಾದದ ಮಾತುಗಳನ್ನು ಹೇಳುವಳು ಪ್ರಕಾಶನ ನಿರ್ಮಲ ಪ್ರೇಮ ಹೃದಯವನ್ನು ಅವಳು ಕಲುಷಗೊಳಿಸುವಳು

ಅಂದಿನಿಂದ ಪ್ರಕಾಶನು ರಜನಿಯನ್ನು ದೋಷದೃಷ್ಟಿಯಿಂದ ನೋಡುವನು. ಗಂಡನ ಮೇಲೆ ಗೌರವವಿಲ್ಲದವಳೆಂದು ಆಕೆಯು ತಿರಸ್ಕೃತಳಾದಳು. ಹೀಗೆ ತನ್ನ ಕೈಹಿಡಿದ ಪತ್ನಿಯನ್ನು ತಿರಸ್ಕರಿಸಿದ ಪ್ರಕಾಶನು ತನ್ನ ಕಾಲೇಜ್ ಸಹಪಾಠಿನಿಯಾದ ಸುಧಾ ಎಂಬವಳೊಡನೆ ಪ್ರಣಯಕ್ಕಾರಂಭಿಸುವನು.

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯೂ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ಹಾಗಿಸದಿದ್ದರೆ ಭಯಂಕರವಾದ ಹಾನಿಯು ದೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ಹಾಗಿಸಿದಭಾಗದಲ್ಲಿ ಕ್ರಿಮಿಗಳು ವಾಸಿಸುವುದಿಲ್ಲ ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ ಕುರು, ಹುಣ್ಣು, ಚರ್ಮರೋಗ ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಆದರೆ ಸುಧಳು ಪ್ರಕಾಶನೊಡನೆ ಆತನ ಹಳ್ಳಿಗೆ ಬಂದವಳು, ಆ ದಂಪತಿಗಳ ಜೀವನದ ಅತೃಪ್ತಿಯ ಕಾರಣವನ್ನು ಅರಿತವಳಾಗಿ ತಿರಿಗಿ ಆ ಗಂಡಹೆಂಡರ ಸಂಶಯ [illegible] ಮಾನವ ಜೀವನದ ಒಂದ ವಿಷಾದ ಚಿತ್ರವನ್ನು ಇದು ಹೀಗ ತೋರಿಸತ್ತದೆ ರೋಸ್, ಜ್ಯೋತಿ, ಹರೀಶ್, ಬದ್ರೀ ಅದ್ವಾನಿ ಮತ್ತು ಸುನಲಿನೀದೇವಿ ಇವರು ಇದರಲ್ಲಿ ಅಭಿನಯಿಸುವರು

ದೀಪಾವಳಿಯಲ್ಲಿ 'ದೀಪಾವಳಿ'

ದೀಪಾವಳಿ ಸಮಯದಲ್ಲಿಯೇ ಪ್ರಕಾಶಿತವಾಗುವ ರಣಜಿತ್ ಮುವಿಟೋನಿನವರ 'ದೀಪಾವಳಿ' ಎಂಬೀ ಚಿತ್ರವು ಸಿದ್ಧವಾಗಿದೆ ಮಾಧುರಿ, ಮೋತಿಲಾಲ, ವಸಂತಿ, ಈಶ್ವರಲಾಲ್, ದಾಟೆ ಇವರು ಇದರಲ್ಲಿ ಅಭಿನಯಿಸುವರು

ರೋಸ್ ಮತ್ತು ಜಯಂತ್

ಪ್ರಕಾಶ ಚಿತ್ರದವರ ಮುಂದಿನ ಚಿತ್ರ 'ಮಾಲಾ'ದಲ್ಲಿ ಕುಮಾರಿ ರೋಸ್ ಮತ್ತು ಜಯಂತ್ ಇವರು ಅಭಿನಯಿಸುವರು.

ಪಡೋಶಿಯಲ್ಲಿ ನರ್ತನ

ನಿರ್ದೇಶಕ ಶಾಂತಾರಾಮರು ಪ್ರಭಾತದ ಪಡೋಶಿಯಲ್ಲಿ ಜಾನಪದ ನೃತ್ಯ [illegible] ದ್ದಾರೆ, ಇದ ಬರಿಯ [illegible] ಸೇರಿಸಿದಂತಿರದೆ, ಕಥೆಯ [illegible] ನರ್ತನ ಕಲೆಯಲ್ಲಿ ಕುಶಲರಾದ [illegible] ರಾವ ರು ಇದಕ್ಕೆ ಹೆಚ್ಚು ಸೌಂದರ್ಯವನ್ನು ಕೊಟ್ಟಿರುವರು. ಶ್ರೀ ಕಾಳೀ ಬೋಸರ ಇದರಲ್ಲಿ ಸಹಾಯಮಾಡಿರುವರು ಮಾಸ್ಟರ್ ಕೃಷ್ಣರಾಯರಿಂದ ಇದಕ್ಕಾಗಿಯೇ ಸಂಗೀತಾನುಕೂಲ ಹಾಡುಗಳು ಕಟ್ಟಲ್ಪಟ್ಟಿವೆ

ದಾಮ್ಲೆ ಮತ್ತು ಫತೇ ಲಾಲರ ಹೊಸ ಪ್ರಯೋಗ

'ಸಂತುಸಖು' ಎಂಬ ಚಿತ್ರವನ್ನು ಇವರು ನಿರ್ದೇಶಿಸುವರು, ಇದರಲ್ಲಿ ಸ್ತ್ರೀಯ ಆದರ್ಶಭಕ್ತಿ ಜೀವನದ ಚಿತ್ರಣ ವಿದೆ. ಕರುಣಾಮಯ ಸನ್ನಿವೇಶಗಳಿವೆ.

ಕ್ವೆದೀ—ಹೊಸ ಚಿತ್ರ

ಫಿಲ್ಮ್ ಕೋರ್ಪರೇಶನಿನವರು 'ಕ್ವೆದೀ' ಎಂಬ ಹೊಸ ಚಿತ್ರವೊಂದನ್ನು ಬೇಗನೇ ಪ್ರಕಟಿಸುತ್ತಾರೆ. ಸಂದ್ರೇಕಾರ್, ರಾಮೊಲಾ, ಮೆಹತಾಬ್, ಮಾನಿಕಾ ದೇಸಾಯಿ ಇವರೇ ಮೊದಲಾದವರು ಪಾತ್ರವರ್ಗದವರು. ಆಧುನಿಕ ಕಾಲದ ಒಬ್ಬ ಗ್ರ್ಯಾಜುವೇಟ್ ಜೀವನದಲ್ಲಿ ಸರಸ ವಿನೋದ ಮಾತ್ರವಲ್ಲ ಕರುಣೆಯು ಕಂಬನಿಯೂ ಇದೆ ಎಂಬ ಜೀವನಾನುಭವವನ್ನು ಪಡೆದ ಕಥೆಯಾದರದು. ಇದು ಒಂದು ಉತ್ತಮ ಸಾಮಾಜಿಕ ಚಿತ್ರ.

…ಹರುಗಳು ಜರ್ಮನಿಯ ಪ್ರವಾಸ ಮಾಡಿದಾಗ

(…ಳನೆಯ ಪುಟದಿಂದ ಮುಂದುವರಿದುದು)

…ಳಿದನು. ಈ ಸಂದರ್ಶನದ ಅವಶ್ಯಕತೆ …ಸದಿದ್ದರೂ 'ಒಳ್ಳೇದು ಅವರನ್ನು ಕರೆ …ರಿ' ಎಂದು ಪಂಡಿತರು ಹೇಳಿದರು. …ಯಿಂದೆ ಎರಡು ನಿಮಿಷಗಳಲ್ಲಿಯೇ ಡಾ. …ಗೋಬೆಲ್ಸರು ಮೇಲೆ ಬಂದರು. ಹೊಟೆ…ನ ನೌಕರರು ಡಾ. ಗೋಬೆಲ್ಸರ …ರ್ಡನ್ನು ಪಂಡಿತರ ಕೈಯಲ್ಲಿ ಕೊಟ್ಟರು. …ಂಡಿತರ ಅಪ್ಪಣೆಯಂತೆ ನಾನು ಅವರ… ಒಳಗೆ ಕರೆದುಕೊಂಡು ಬಂದೆನು. …ಳಗೆ ಬಂದ ಕೂಡಲೆ ಅವರು ಪ್ರತಿಯೊ… ಜರ್ಮನರಂತೆ 'ಹೈಲ್ ಹಿಟ್ಲರ್' …ಂದು ಕೈ ಮೇಲಕ್ಕೆತ್ತಿದರು. ಪಂಡಿತಜಿ…ಯವರು ಕುರ್ಚಿಯಿಂದೆದ್ದು ಡಾ. ಗೋ…ಲ್ಸರಿಗೆ ಹಿಂದುಸ್ಥಾನದ ಪದ್ಧತಿಯಿಂದ ನಮಸ್ಕಾರ ಮಾಡಿದರು. ಪಂಡಿತಜಿಯ…ರ ಮಗಳು ಬಾಲೆ ಇಂದಿರೆಯೂ ಅಲ್ಲಿ …ಳು. ನಾನು ಡಾ. ಗೋಬೆಲ್ಸರಿಗೆ ಅವೆ… ಪರಿಚಯ ಮಾಡಿಕೊಟ್ಟೆನು ಮತ್ತು …ಠೀಘಾದ ಮೇಲೆ ಕೂತುಕೊಳ್ಳಲು ಅವ…ಗೆ ಹೇಳಿದೆನು. ಡಾ. ಗೋಬೆಲ್ಸರು …ಮಿಖಾಂತ ಸೈನಿಕರ ಉಡುಪಿನಲ್ಲಿದ್ದ…ರು. ಆ ಉಡುಪಿನ ಮೇಲೆ ಅನೇಕ ಪದ…ಗಳೂ ಹೊಳೆಯುತ್ತಿದ್ದವು.

'ನಿಂತುಕೊಂಡರೇ ನನಗೆ ಆರಾಮ…ನಿಸುವದು' ಎಂದು ಅವರು ಅಂದರು. …ದರೆ ಪಂಡಿತಜಿಯವರು ವಿಶೇಷ ಆಗ್ರಹ …ಮಾಡಿದ ಬಳಿಕ ಅವರು ಕುಳಿತುಕೊಂಡ…ರು. ಕುಶಲ ಪ್ರಶ್ನೋತ್ತರಗಳಾದ ಮೇಲೆ …ಡಾ. ಗೋಬೆಲ್ಸರು ಮುದ್ರೆಯೊತ್ತಿದ ಒಂ…ದು ಲಕೋಟೆಯನ್ನು ಪಂಡಿತರ ಕೈಯಲ್ಲಿ …ಕೊಟ್ಟರು. ಪಂಡಿತರು ಅದನ್ನು ಒಡೆದು …ಓದಿದರು. ಸ್ವಲ್ಪ ಹೊತ್ತು ವಿಚಾರ ಮಾ…ಡಿದ ಬಳಿಕ ಅವರು ಆ ಪತ್ರವನ್ನು ನನ್ನ …ಕೈಯಲ್ಲಿ ಕೊಟ್ಟರು.

ಅದರಲ್ಲಿ ಹಿಟ್ಲರ್ ಪಂಡಿತಜಿಯವರ …ಭೆಟ್ಟಿ ತೆಗೆದುಕೊಳ್ಳುವ ಇಚ್ಛೆಯನ್ನು ಪ್ರದ…ರ್ಶಿಸಿದ್ದರು. 'ನಿಮ್ಮ ಭೆಟ್ಟಿಯಾಗುವುದ…ರಿಂದ ನನಗೆ ಬಹಳ ಆನಂದವೆನಿಸುವ…ದೆಂದು ಅವರು ಅದರಲ್ಲಿ ಬರೆದಿದ್ದರು. …ಈ ಸಂದರ್ಶನದ ಆವಶ್ಯಕತೆ, ಈಗ ನನ…ಗೆನಿಸುವದಿಲ್ಲ. ಜರ್ಮನಿಯನ್ನು ನೋಡಿ…ಕೊಂಡು ಹೋಗಬೇಕೆಂದು ನಾನಿಲ್ಲಿಗೆ …ಬಂದಿರುವೆನು. ಯಾರೊಡನೆಯೂ ರಾಜ…ಕೀಯ ಚರ್ಚೆ ಮಾಡಬೇಕೆಂದು ನನ್ನ …ಇಚ್ಛೆ ಇರುವದಿಲ್ಲ. ಅದುದರಿಂದ ಮ…ನೋರಂಜಕವಾದ ಈ ಪ್ರವಾಸ ಮುಗಿಸಿ…ಕೊಂಡು ನಾನು ಬೇಗನೇ ತಿರುಗಿ ಹೋ…ಗಲಿರುವೆನು. ಆದುದರಿಂದ ಹಿಟ್ಲರರ …ಸಂದರ್ಶನ ತೆಗೆದುಕೊಳ್ಳುವದಾಗದ್ದಕ್ಕಾ…ಗಿ ವಿಷಾದವೆನಿಸುತ್ತದೆ' ಎಂದು ಡಾ. …ಗೋಬೆಲ್ಸರಿಗೆ ಜವಾಹರಲಾಲರು ಹೇ…ಳಿದರು.

…ಅದನ್ನು ಕೇಳಿ ಡಾ. ಗೋಬೆಲ್ಸರು …ಸ್ವಲ್ಪಹೊತ್ತು ವಿಚಾರಮಗ್ನರಾದರು. ಈ… …ತ್ತರ ಬರಬಹುದೆಂದು ಅವರು ಎಣಿಸಿರಲಿಲ್ಲ. ಸ್ವಲ್ಪ ಹೊತ್ತು ವಿಚಾರ ಮಾಡಿ ಅವರು ಮತ್ತೆ ಹೀಗೆ ಹೇಳಿದರು. 'ನೀವು ಸರಕಾರದ ಅತಿಥಿಗಳಾಗಿ ಇರಲು ಒಪ್ಪಿದರೆ ನಿಮ್ಮನ್ನು ಅತ್ಯಾದರದಿಂದ ಬರಮಾಡಿಕೊಳ್ಳಲು ಮತ್ತು ನಿಮ್ಮ ಬಗ್ಗೆ ಯೋಗ್ಯ ವ್ಯವಸ್ಥೆಯನ್ನಿಡಲು ನಾವು ತತ್ಪರರಿರುವೆವು. ಮತ್ತು ಸರಕಾರದಿಂದ ಎಲ್ಲ ಬಗೆಯ ರಿಯಾಯಿತಿ ನಿಮಗೆ ಸಿಕ್ಕುವವು.' ಗೋಬೆಲ್ಸರು ಹಾಗೆ ಹೇಳಿದ್ದನ್ನು ಕೇಳಿ ಪಂಡಿತರು ಮಂದಸ್ಮಿತರಾಗಿ ಹೀಗೆ ಹೇಳಿದರು. ನಾನಿಲ್ಲಿ ಆರಾಮ ಇರುವೆನು. ನನ್ನ ಹಿಂದೀ ಬಾಂಧವರು ಮಾಡುವ ಉಪಚಾರದಿಂದ ನಾನು ಸಂತುಷ್ಟನಿರುವೆನು. ಆದುದರಿಂದ ನಾನು ನಿಮಗೆ ಹೆಚ್ಚು ತೊಂದರೆ ಕೊಡಲಿಚ್ಛಿಸುವದಿಲ್ಲ.

ಡಾ. ಗೋಬೆಲ್ಸರು ಇಲ್ಲಿಯ ವರೆಗೆ ಬರುವ ತೊಂದರೆಯನ್ನು ತೆಗೆದುಕೊಂಡದ್ದಕ್ಕಾಗಿ ಅವರ ಅಭಾರ ಮನ್ನಿಸಿ ಪಂಡಿತರು ಅವರನ್ನು ಬೀಳ್ಕೊಟ್ಟರು.

ಡಾ. ಗೋಬೆಲ್ಸರು ಹೊರಟುಹೋದ ಬಳಿಕ ನಾವು ವಿನೋದದ ಹರಟೆ ಕೊಚ್ಚುತ್ತ ಕುಳಿತೆವು. ಮಧ್ಯಾಹ್ನ ಜರ್ಮನಿಯಲ್ಲಿಯ ಕೆಲವು ಹೆಣ್ಣು ಹುಡಿಗಿಯರು ಪಂಡಿತ ಜವಾಹರಲಾಲರನ್ನು ಭೆಟ್ಟಿಯಾಗಲು ಬಂದರು. ಹಿಂದುಸ್ಥಾನಕ್ಕೆ ಬಂದು ಹಿಂದುಸ್ಥಾನವನ್ನು ಸಂದರ್ಶಿಸಿ, ಹಿಂದೀ ರೀತಿ ನಡಾವಳಿಗಳನ್ನು ತಿಳಿದುಕೊಂಡು ಹಿಂದೀ ಜೀವನದ ಅಭ್ಯಾಸಮಾಡಲು ಅವರೊಳ್ಳೇ ಉತ್ಸುಕರಾಗಿದ್ದರು. ನೆಹರುಗಳು ಅವರೆಲ್ಲರಿಗೆ ಯೋಗ್ಯ ಉತ್ತರ ಕೊಟ್ಟು ಕಳಿಸಿದರು.

ಮಧ್ಯಾಹ್ನ ೩ ಗಂಟೆಗೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಂದ ಕರಾಚಿಯಿಂದ ಒಂದು ತಂತಿ ಬಂದಿತು. ಪ್ರಾಗಿಗೆ ಹೋಗಬೇಕೆಂದು ಅವರು ಅದರಲ್ಲಿ ಸೂಚಿಸಿದ್ದರು. ಪಂಡಿತಜಿಯವರು ತಮ್ಮ ಕಾರ್ಯಕ್ರಮವನ್ನು ಗೊತ್ತುಪಡಿಸಿದರು. ವಿಯೆನ್ನಾಕ್ಕೆ ಹೋಗುವ ವಿಚಾರ ಬಿಟ್ಟುಕೊಟ್ಟರು.

ರಾತ್ರಿ ೮ ಗಂಟೆಗೆ ಹಿಂದೀ ವಿದ್ಯಾರ್ಥಿಗಳ ಕಡೆಯಿಂದ ಪಂಡಿತರಿಗೆ ಸಂತೋಷ ಕೂಟ ಕೊಡಲಾಗಿತ್ತು. ಅಂದು ಸಮಯಕ್ಕೆ ಸರಿಯಾಗಿ ಬರಲು ಪಂಡಿತರಿಗೆ ಆಗಲಿಲ್ಲ. ಹೀಗೆ ಆದುದು ಇದೇ ಮೊದಲನೆಯ ಸಲವೆಂದು ಹೇಳಬಹುದು. ೮॥ ಗಂಟೆಗೆ ಭೋಜನ ಸುರುವಾಯಿತು. ಪಂಡಿತರು ಒಳ್ಳೇ ಪ್ರೇಮದಿಂದ ಭೋಜನ ಮಾಡಿದರು. ಮತ್ತು ತಮ್ಮ ಕೈಯಿಂದ ಎಲ್ಲರಿಗೂ ಬಡಿಸಿದರು. ನಾವು ಹಿಂದೀ ಪಕ್ವಾನ್ನಗಳನ್ನು ಮಾಡಿದ್ದನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಯಿತು.

ಭೋಜನಾನಂತರ ಪಂಡಿತಜಿಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಒಂದು ಮಹತ್ವದ ಮಾತನ್ನು ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿ ಮುಂದೆ ಸ್ವತಂತ್ರಭಾರತದಲ್ಲಿ ಸರ್ವಬಗೆಯ ಹೊಣೆಗಾರಿಕೆಯನ್ನು ಹೊರಲು ಸಮರ್ಥನಾಗುವಂತೆ ತನ್ನ ತನ್ನ ವಿದ್ಯೆಯಲ್ಲಿ ಅತ್ಯಂತ ಪ್ರಾವೀಣ್ಯವನ್ನು ಪಡೆಯಬೇಕೆಂದು ಪಂಡಿತರು ಎಲ್ಲ ವಿದ್ಯಾರ್ಥಿಗಳಿಗೆ ಉಪದೇಶಿಸಿದರು. ಮರುದಿನಮುಂಜಾನೆ ಪಂಡಿತಜಿಯವರು ಪ್ರಾಗಿನ ಕಡೆಗೆ ಹೊರಟರು.

(ಕರ್ಮವೀರ)

ಜೀವವಿಮೆಯೇ ಸುಲಭವಾದ ಕಂತುಗಳಲ್ಲಿ ಹಣ ಪಾವತಿ ಮಾಡಿ ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಲು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಆರ್ಥಿಕ ಸ್ವಾತಂತ್ರ್ಯದ ಆದಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗೌ॥ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 874 ಮುಖ್ಯ ಕಛೇರಿ: ಬೊಂಬಾಯಿ.

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,

ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್

ಸೌತ್ ಪೆರೇಡ್, ಬೆಂಗಳೂರು.

ಭಾರತದಲ್ಲೆಲ್ಲೂ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ

ಕನ್ನಡ ಸಾಹಿತ್ಯದಲ್ಲಿ ಅಪೂರ್ವ ಗ್ರಂಥಗಳು!

ವರ್ಧಾಯಾತ್ರೆ:—ಬರೆದವರು ಎಸ್. ಕೃಷ್ಣ ಶರ್ಮರು.

ಇಂದಿನ ಯುಗದೇವನಾದ ಗಾಂಧಿಜಿಯ ಕಾರ್ಯರಂಗ ವರ್ಧಾ. ಅಲ್ಲಿನ ಜೀವನ, ಪ್ರಯೋಗ, ವ್ಯಕ್ತಿಗಳು, ಅನುಭವ ದೃಶ್ಯಗಳು. ಇವುಗಳನ್ನು ತಮ್ಮ ಸರಸವಾದ ಶೈಲಿಯಿಂದಲೇಖಕರು ತಿಳಿಸಿದ್ದಾರೆ.

'ಪುಸ್ತಕವು ಕನ್ನಡಿಗರಿಗೆ ದೊರೆತ ಅಪೂರ್ವ ಗ್ರಂಥ. ಗಾಂಧಿಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸಿನ ಇತಿಹಾಸ ಈ ಗ್ರಂಥಗಳ ಜತೆಯಲ್ಲಿ ಈ ಪುಟ್ಟ ಪುಸ್ತಕವನ್ನು ಓದಬೇಕು.''

ವಿಶ್ವಕರ್ನಾಟಕ

'Wardha Yatre is a new departure in Kannada literature'

ಭಾರತೀಯ ಕಥಾವಳಿ:—ಹಿಂದುಸ್ಥಾನದಲ್ಲಿರುವ ಈಗಿನ ಪ್ರಾಂತಗಳ ಒಂದೊಂದು ಭಾಷೆಯ ಪ್ರಸಿದ್ಧ ಕತೆಗಳನ್ನು ಆಯ್ದು ಸಂಗ್ರಹಿಸಿಕೊಡುವ ಸಾಹಸವನ್ನು ಕೈಗೊಂಡಿದೆ. ಇದರಿಂದ ಭಾರತೀಯರೆಲ್ಲರ ಜೀವನದ ಅರಿವು ಆಗುವುದು. ಪ್ರತಿಯೊಂದು ಮನೆಗೂ ತೀರಾ ಅವಶ್ಯ ಇರಬೇಕಾದ ಕಥಾ ಸಂಗ್ರಹ.

ಈಗ ಆದ ಕಥಾ ಸಂಗ್ರಹಗಳು

೧. **ತೆಲುಗಿನ ಕಥೆಗಳು:**—ಕ್ರೌನ್ ೧/೮ ಆಕಾರದ ೧೨೦ ಪುಟಗಳು. ಬೆಲೆ ಕೇವಲ ೮ ಆಣೆ.

೨. **ಆಸಾಮಿಯಾ ಕಥೆಗಳು:**—ಕ್ರೌನ್ ೧/೮ ಆಕಾರದ ೧೨೦ ಪುಟಗಳು. ಬೆಲೆ ಕೇವಲ ೮ ಆಣೆ.

ಮುಂದಿನ ಪ್ರಕಟಣೆಗಳು

೧. **ಪರ್ಣಕುಟಿ:**—ಲೇಖಕರು: ಎಸ್. ಕೃಷ್ಣಶರ್ಮ (ಅಚ್ಚಿನಲ್ಲಿದೆ).

೨. **ತಮಿಳು ಕತೆಗಳು:**—(ಅಚ್ಚಿನಲ್ಲಿದೆ).

ಮಹಾಪೂರ:— (ಸಾಮಾಜಿಕ ಕಾದಂಬರಿ) ಬರೆದವರು: ಶೇಷಗಿರಿರಾವ್ ಕುಲಕರ್ಣಿ. ಕ್ರೌನ್ ೧/೮ ಆಕಾರದ ೧೪೦ ಪುಟಗಳು. ಬೆಲೆ ೧೨ ಆಣೆ.

ಸಾಧನ ಮುದ್ರಣಾಲಯ, ಧಾರವಾಡ.

ಮದ್ರಾಸ್ ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

ರೂಪಾಯಿ ೧೬೪೩-೪-೦ ಉಡುಪಿಯಲ್ಲಿನ ಪ್ರಾಫಲಿನ ಉತ್ಪತ್ತಿ. ರೂ. ೧೦೦೦-೦-೦ ಸೈಂಟ್ ಅಗ್ನೇಸ್ ಕಾಲೇಜಿನಲ್ಲಿಯ ನಾಟಕದ ಉತ್ಪತ್ತಿ ಮತ್ತು ಮ್ಯಾನೇಜ್ಮೆಂಟಿನ ವಂತಿಗೆ. ರೂಪಾಯಿ ೭೦೦-೦-೦ ಗವರ್ನಮೆಂಟ್ ಹೆಮ್ಮಕ್ಕಳ ಸೆಕೆಂಡರಿ ಮತ್ತು ಟ್ರೈನಿಂಗ್ ಶಾಲೆ (ವಿವಿಧ ವಿನೋದಾವಳಿಯ ಉತ್ಪತ್ತಿ). ರೂ. ೧೬೭-೦-೦ ಕುಂದಾಪುರದ ಬೆನಿಫಿಟ್ ಶೋ ಉತ್ಪತ್ತಿ. ರೂ. ೧೦೦-೦-೦ ಕುದ್ಮುಲ್ ಗೋಪಾಳ ಬ್ಯಾನುಭಾಗ್, ಮಿಸೆಸ್ ಎಲ್. ಎಂಡ್ ಮಿ. ಎಂಡ್ ಮಿಸೆಸ್ ಎಚ್. ರೊಡ್ರಿಗಸ್. ರೂ. ೧೦೦-೦-೦ ಮಂಗಳೂರು ಕ್ಲಬ್. ರೂ. ೭೫-೦-೦ ಎಸ್. ಎಂ. ಎಸ್. ಕಂಪೆನಿ; ಮುಲ್ಕಿ ವೆಂಕಟ್ರಮಣ ಸ್ವಾಮಿ ದೇವಸ್ಥಾನ. ರೂ. ೫೦-೦-೦ ಟಿ. ಎಲ್. ಎಚ್. ಜೀನ್; ಬಿ. ಕೋಟಿಯಣ್ಣ ಪೂಂಜ; ಮಣೇಲ ಕೃಷ್ಣ ಆರ್. ನಾಯಕ್ ಎಂಡ್ ಸನ್ಸ್; ದೇರಾಜೆ ರಾಮಣ್ಣ ರೈ; ದಬ್ಲ್ಯು. ಟಿ. ಜಾನ್ಸನ್, ದಬ್ಲ್ಯು. ಬಿ. ಜಾಕ್ಸನ್. ರೂ. ೩೧-೮-೦ ಎಂ. ಕೆ. ನಂಬಿಯಾರ್. ರೂ. ೩೦-೦-೦ ಸೈಂಟ್ ಸಿಸಿಲೀಸ್ ಕೊನ್ವೆಂಟ್ ಮತ್ತು ಶಾಲೆ. ರೂ. ೨೬-೦-೦ ಟಿ. ಎಸ್. ಅಬ್ದುಲ್ ರಹಿಮಾನ್ ಸಾಹೇಬ್. ರೂ. ೨೫-೦-೦ ಅಬ್ದುಲ್ ರಹಿಮಾನ್; ರಾವ್ ಬಹದ್ದೂರ್ ಯು. ವಾಮನ ನಾಯಕ್; ಯು. ಮಮ್ಮದ್ ಕುಂಞ; ಡಿಸ್ಟ್ರಿಕ್ಟ್ ಪೋಲೀಸ್ ಆಫೀಸರ್ಸ್, ಕೋಓಪರೇಟಿವ್ ಸೊಸೈಟಿ; ಸಿ. ಮಹಮೂದ್; ಹುಸೇನ್ ಪುತ್ತೂರು ಸಾಹೇಬ್; ಕ್ಯಾನನ್ ಡಂಕರ್ಲೆ ಎಂಡ್ ಕೋ; ವಿ. ತಿಮ್ಮಪ್ಪ ಪೂಂಜ; ಕುಂಬಳೆ ಅನಂತ ನಾರಾಯಣ ಪ್ರಭು; ರಾವ್ ಸಾಹೇಬ್ ಬಿ. ಕುಲಾಸೊ; ರಾವ್ ಸಾಹೇಬ್ ಪೀಟರ್ಸ್ ಕುಲಾಸೊ; ಆಯುರ್ವೇದಭೂಷಣ ಎಂ. ವಿ. ಶಾಸ್ತ್ರಿ; ರಾವ್ ಸಾಹೇಬ್ ಸಿ. ರಂಗನಾಥ ಪೂಂಜ; ಎಲ್. ಮಂಜಯ್ಯ ಹೆಗಡೆ; ಹಸನ್ ಬಾಪು ಸಾಹೇಬ್; ಎಚ್. ಲಕ್ಷ್ಮೀನಾರಾಯಣ ಕಾಮತ್; ಜೆ. ಎನ್. ಶೌರಿ; ಬೆಲೆನ್ ಜರಾನಾ ಬ್ಯಾ. ರೂ. ೨೦-೦-೦ ಪಚ್ಚೆ ಮಹಮದ್ ಕುಂಞ; ಉಳ್ಳಾಲ ರಾಮ ರಾವ್; ರೆ. ಫಾದರ್. ಟಿ. ಅರಾನ್; ಶ್ರೀ. ದುರ್ಗಾಪರಮೇಶ್ವರಿ ದೇವಸ್ಥಾನ; ಎಂ. ದೂಮಪ್ಪ; ಹಾಡಿಮನೆ ಮಹಾಬಲ ಶೆಟ್ಟಿ; ಪುತ್ತು ವೈಕುಂಠ ಶೇಟ್; ಎ. ಧರ್ಮಪಾಲ ಶೆಟ್ಟಿ; ಕಾಂತಾಳ್ವ; ಚಂದ್ರಶೇಖರ ಅಡಿಗ. ರೂಪಾಯಿ ೧೫-೦-೦ ಸುಬ್ಬಣ್ಣ ಭಟ್ಟ; ಕೆ. ವೆಂಕಪ್ಪ ನಾಯ್ಕ; ಎರಿಯ ನಾಂಜು ಪೂಂಜ; ವಿಷ್ಣು ಉಂಡಾಳ್ಯ; ಹೆಚ್. ಕೊರಗಪ್ಪ; ದಾಂಧಾ ಫಕೀರ್ ಮಹಮದ್ ಮಿರಾನ್ ಸಾಹೇಬ್; ಅತಿಕಾರಿಬೆಟ್ಟು ಸಹಕಾರಿ ಸಂಘ; ಸಾದಾ ಮಹಮದ್ ಮಿರಾನ್ ಸಾಹೇಬ್; ರಾವ್ ಬಹದೂರ್ ಯು. ಆನಂದ ರಾವ್; ಕೆ. ಮತ್ತಪ್ಪ ರೈ. ರೂ ೧೪-೦-೦ ಮೈದಿನ್ ಕುಂಞ ಬ್ಯಾರಿ. ರೂ. ೧೧-೦-೦ ಬಿರೋಡಿ ಸೈಂಟ್ ಅಂತೋನಿ ಚರ್ಚ್. ರೂ. ೧೦-೦-೦ ಕೇಶವ ಎಂಬ್ರಾಂಧ್ರಿ; ಸೆಮಿನರಿ ಫಾದರ್ಸ್; ಎನ್. ನಾರಾಯಣಪ್ರಭು; ಗೋವಿಂದಭಟ್ಟ; ರೆ. ಫಾದರ್ ವಿಲಿಯಂ ಡಿಸೋಜ; ಬಿ. ಪುಂಡರೀಕ ಬಾಳಿಗ; ಶರ್ಬೆಟ್ ವೆಂಕಟ್ರಮಣಯ್ಯ; ಅಂಬಾ ಯಾನೆ ಲಕ್ಷ್ಮೀ ದೇವಿ; ಉರ್ಮುಜಲು ಕೃಷ್ಣ ಭಟ್ಟ; ಉಕ್ಕುಡ ಅಂತಪ್ಪ; ಭಂಡಾರಿಕೇರಿ ವಿದ್ಯಮಾನ್ಯ ತೀರ್ಥ ಸ್ವಾಮಿಗಳು; ನಾಗಮ್ಮ; ಎ. ಅಂತರಾಜ ಅರಿಗ; ಕಾಶಿ ಮಠದ ಶ್ರೀ. ಸುಕೃತೀಂದ್ರ ತೀರ್ಥ ಸ್ವಾಮಿಗಳು; ವೈ. ಕಷ್ಟಪ್ಪ ಶೆಟ್ಟಿ ಎಂಡ್ ಬ್ರದರ್ಸ್; ಚಂದಯ್ಯ ಕಂಬಳ; ಇಟಾಲಿಯನ್ ಸಿಸ್ಟರ್ಸ್ ಒಫ್ ಚಾರಿಟಿ; ಎ. ಕೆ. ಅಬ್ದುಲ್ಲಾ; ಎಂ. ಸುಬ್ಬರಾವ್; ಪಡುಂಬೂರು ಸಹಕಾರಿ ಸಂಘ; ಎ. ಶಂಕರನಾರಾಯಣ ಹೆಬ್ಬಾರ;

ಸಿನೆಮಾ ಸುದ್ದಿ

ಅಸ್ರಾ—ನೇಶನಲ್ ಹೊಸ ಚಿತ್ರ

ನೇಶನಲ್ ಸ್ಟುಡಿಯೋದವರು ಅಸ್ರಾ ಎಂಬ ಹೊಸ ಚಿತ್ರವನ್ನು ಸಿದ್ಧಮಾಡುತ್ತಿರುವರು. 'ವಚನ್' 'ಭರೋಸಾ' ಲೇಖಕರಾದ ಶ್ರೀ. ಆಘೋಜನಿ ಕಾಶ್ಮೀರಿ ಇವರ ಕಥೆಯಿದು. ಸರ್ದಾರ್ ಅಖ್ತಾರಿಗೆ ಮುಖ್ಯ ಪಾತ್ರ.

ಗರ್-ಕೀ-ರಾಣಿ

ಹಂಸ ಚಿತ್ರದವರ ಸಾಮಾಜಿಕ ಸರಸ ಹಾಸ್ಯ ಚಿತ್ರವಿದು. ಲೀಲಾ ಚಿಟ್ನಿಸ್ ವಿನಾಯಕ್, ಮೀನಾಕ್ಷಿ ಇವರ ಸುಂದರ ಸಮ್ಮೇಳನ. ಈ ವರ್ಷದ ಸರಸ ಚಿತ್ರಗಳಲ್ಲಿ ಇದು ಉತ್ಕೃಷ್ಟವೆನಿಸಿದೆ.

ಲಕ್ಷ್ಮೀ

ಸಿರ್ಕೋ ಕಂಪೆನಿಯವರ 'ಲಕ್ಷ್ಮೀ' ಚಿತ್ರವು ಲಾಹೋರಿನಲ್ಲಿ ೧೬ ವಾರಗಳನ್ನು ಮೀರಿ ಪ್ರದರ್ಶಿತವಾಯಿತು. ಮಾಯಾ ಮತ್ತು ಕುಮಾರ್ ಇದರಲ್ಲಿ ಅಭಿನಯಿಸುವರು.

ಅನುರಾಧಾ

ಸಿರ್ಕೋ ಕಂಪೆನಿಯವರ ಅನುರಾಧಾ ಚಿತ್ರವು ಪ್ರಕಟಣೆಗೊಂಡಿದೆ. ಮಾಯಾ ಬೆನರ್ಜಿ ತ್ರಿಲೋಕ ಕಾಪೂರ, ಜೀವನ್ ಮತ್ತು ಮತ್ತು ವತ್ಸಲಾ ಕುಮ್ಠೇಕರ್ ಇವರು ಇದರಲ್ಲಿ ಅಭಿನಯಮಾಡುವರು.

ಬಂಧನ್

ಬೊಂಬಾಯಿ ಟಾಕಿಸಿನವರ ಬಂಧನ ಚಿತ್ರವು ಹಲವು ಕಡೆಗಳಲ್ಲಿ ೮, ೯ ವಾರಗಳ ವರೆಗೆ ಪ್ರದರ್ಶಿತವಾಯಿತು. ಇದರ ಸರ್ವಾಂಗ ಕುಶಲತೆಯು ದಿನಜೀವನದಲ್ಲಿ ಎಲ್ಲಾ ಜನರಿಗೂ ತೃಪ್ತಿ ಕೊಡುತ್ತಿದೆ. ಲೀಲಾ ಚಿಟ್ನಿಸ್ ಮತ್ತು ಅಶೋಕ್ ಕುಮಾರ್ ಇವರು ಇದರಲ್ಲಿ ಮುಖ್ಯ ಪಾತ್ರವಹಿಸುತ್ತಾರೆ.

ಸಂತ್ ಧ್ಯಾನೇಶ್ವರ

ಲಾಹೋರಿನಲ್ಲಿ ೫ ವಾರಗಳ ವರೆಗೆ ಸಾಗಿದೆ. ಶಾಹು ಮೋಡಕ್, ಸುಮತಿ ಗುಪ್ತ, ಯಶವಂತ ಇವರು ಪ್ರಮುಖ ಪಾತ್ರಧಾರಿಗಳು.

ಇಲಿಯ ಕಾಟ ತಪ್ಪಿಸಲು ಮುತ್ತಿನ ಹುಳುಗಳು

ಮುತ್ತು ಬೆಳೆಯುವಲ್ಲಿ ವಾಸವಾಗಿರುವ ಆಸ್ಟ್ರೇಲಿಯಾಂಡಿನ ಜನರು ಇಲಿಗಳ ಕಾಟವು ಅಧಿಕವಾದಾಗ ಅವುಗಳನ್ನು ಹಿಡಿಯಲಿಕ್ಕೆ ಮುತ್ತಿನ ಹುಳುಗಳನ್ನು ಉಪಯೋಗಿಸುತ್ತಾರೆ. ಆ ಕಾರ್ಯಕ್ಕೆ ಇಲಿ ಗೂಡುಗಳನ್ನು ಇಡುವುದೆಂದರೆ ಅವರಿಗೆ ಬಹಳ ಶ್ರಮಸಾಧ್ಯವಾದ ಕೆಲಸವೆಂದು ಕಂಡುಬರುತ್ತದೆ. ಇಲಿಗಳ ಉಪದ್ರವ ಹೆಚ್ಚಿದಾಗ ಅವರು ಜೀವಂತ ಮುತ್ತಿನ ಚಿಪ್ಪುಗಳನ್ನು ಹಿಡಿದು ತಂದು ಅಲ್ಲಲ್ಲಿ ಬದರಿ ಇಡುವರು. ಇಲಿಗಳು ಆಹಾರ ಸಂಪಾದನೆಗಾಗಿ ಅಲ್ಲಲ್ಲಿ ಸಂಚರಿಸುತ್ತಾ ಅರ್ಧ ತೆರೆದಿರುವ ಈ ಚಿಪ್ಪುಗಳೊಳಗೆ ತಮ್ಮ ಮೂತಿ ಅಥವಾ ಕಾಲು ಹಾಕುವವು. ಕೂಡಲೇ ಆ ಚಿಪ್ಪುಗಳು ಪೂರ್ಣ ಮುಚ್ಚಿಕೊಂಡು, ಅವುಗಳೊಳಗೆ ಬಿದ್ದ ಇಲಿಗಳು ಸಾಯುವವು.



ಕಲೆಯು ಉಳಿಯದಂತೆ ಇದು ಗುಣಪಡಿಸುತ್ತದೆ!

ಗಾಯ ಮತ್ತು ವ್ರಣಗಳಿಗೆ ಜಾಂಬಕಿನಂತಹ ದಿವ್ಯೌಷಧಿ ಬೇರಿಲ್ಲ!

ಪ್ರತಿರಾತ್ರಿಯೂ ಮಲಗುವಾಗ ಜಾಂಬಕ್ ಲೇಪವು ತಾಗಿಸುವುದರಿಂದ ನೀವು ತುರಿಕಜ್ಜಿ, ಗಾಯ, ಬೊಕ್ಕೆ ಮತ್ತು ಎಲ್ಲಾ ತರದ ಇತರ ಚರ್ಮರೋಗಗಳ ಬಾಧೆಯಿಂದ ನಿವೃತ್ತರಾಗುವಿರಿ. ಅತ್ಯಂತ ಮಹತ್ವದ ಔಷಧಿ ಎಣ್ಣೆಯು ಜಾಂಬಕಿನಲ್ಲಿರುವುದರಿಂದ, ತಾಗಿಸಿದ ಕೂಡಲೇ ರೋಮಕೂಪಗಳಲ್ಲಿ ಹೀರಿಕೊಂಡು, ಬ್ರಾವು ಕೂಡಲೇ ಗುಣಹೊಂದುವುದು. ವಿಷ ಕ್ರಿಮಿಗಳನ್ನು ಜಾಂಬಕ್ ಕೊಲ್ಲುತ್ತದೆ. ಚರ್ಮವನ್ನು ಅಂದಗೊಳಿಸಿ ಕಲೆಯೂ ಉಳಿಯದಂತೆ ಮಾಡುತ್ತದೆ. ಜಾಂಬಕ್ ಲೇಹಕ್ಕೆ ಒಂದು ರೂಪಾಯಿ ಅಥವಾ 2—4—0 ಕ್ರಯ. ಜಾಂಬಕ್ ಸೋಪಿಗೆ ಒಂದು ರೂಪಾಯಿ ಜಾಂಬಕ್ ಪೌಡರಿಗೆ ಒಂದು ರೂಪಾಯಿ.

ಏಜೆಂಟ್ :—

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ

ZAM-BUK

ಚರ್ಬಿಯಿಂದ ವಿರಹಿತವಾದುದು

A well-rounded programme SAVING

DO YOU WANT YOUR MONEY TO GROW?

If so, this should interest you:

On the top of all possible ideas of lifting yourselves financially, stand the Syndicate's time-tested thrift schemes for guaranteed security.

We have a few select plans which enable any man to fully enjoy the fruit of his labours. Study them; join any that suits you and see what great benefit you derive.

Syndicate keeps pace with the times by providing a service that fully meets any sort of need of the society. This Bank gives you that security, that peace of mind, that income for a rainy day and that happiness in your after years, only known to those who have saved through a Bank account, the safe and sure way. Fourteen years of dependable performance indicates the strength, security and progress of this time-tried, purely cosmopolitan Institution.

The Canara Industrial & Banking Syndicate, Limited.

Head Office:—UDIPI, S. India.

ವಿಜ್ಞಾನಯುಗ

ಗರ್ಭದಲ್ಲಿಯೂ ಮಕ್ಕಳು ಕೇಳುತ್ತವೆ!

ತಾಯಂದಿರ ಗರ್ಭದಲ್ಲಿರುವ ಮಕ್ಕಳು ಹೊರಗಿನ ಪ್ರಪಂಚದ ಬೆಳಕನ್ನು ಕಾಣುವ ಮೊದಲು [illegible] ಕೇಳಬಲ್ಲವೇ? ಹಿಂದಿನವರು ಆಡುತ್ತಿದ್ದ [illegible] ಎಂದು ಕಥೆ ಕೂಡ ಆಡುತ್ತಿದ್ದರು. ಆದರೆ ಈಚೆಗೆ ನಡೆದಿರುವ ಕೆಲವು ಸಂಶೋಧನೆಗಳ ಫಲಿತಾಂಶವನ್ನು ಹೇಳುವುದಾದರೆ, ಶಿಶುವನ್ನು ಹೆರುವ ಮೊದಲು ಸುಮಾರು ಎರಡು ವಾರಗಳಿಂದ ಅದು ಕೇಳತೊಡಗುವದೆ ಎಂದು ಗೊತ್ತಾಗಿದೆ. ಗರ್ಭಿಣಿಯಾದ ಕೆಲವು ಗಿಣಿಯಾ ಹಂದಿಗಳ ಮೇಲೆ ಪರೀಕ್ಷಾರ್ಥ ಯಂತ್ರಸಲಕರಣೆಗಳ ಮೂಲಕ ನಡೆಸಿದ ಪರೀಕ್ಷೆಗಳಿಂದಾಗಿ, ಗರ್ಭಾವಸ್ಥೆಯಲ್ಲಿರುವ ಒಟ್ಟು ಅವಧಿಯ ಮುಕ್ಕಾಲು ಪಾಲಷ್ಟು ಕಳೆದ ಬಳಿಕ, ಹೊಟ್ಟೆಯಲ್ಲಿರುವ ಹಂದಿ ಮರಿಗಳು ಹೊರಗಿನ ಶಬ್ದಗಳನ್ನು ಕೇಳಿದ್ದು ಮಾತ್ರವಲ್ಲ, ಆ ಮರಿಗಳು ಗಲಬೆ ಗಲಾಟೆ-ಗರ್ಜನೆ ಆರ್ಭಟೆಗಳಿಂದಾಗಿ ಬೆಚ್ಚಿಬೆದರಿ ಹೋದ ಸಂಗತಿಗಳೂ ಗೊತ್ತಾಗಿವೆ. ಆದ್ದರಿಂದ ತಿಂಗಳು ತುಂಬಿದ ಗರ್ಭಿಣಿಯರ ಹೊಟ್ಟೆಯಲ್ಲಿರುವ ಮಗುವಿನ ಮೇಲೆ ಹೊರಗಿನ ಶಬ್ದಗಳ ಪರಿಣಾಮವು ಆಗಿಯೇ ಆಗುತ್ತದೆ.

ಡ್ರೈವರನಿಲ್ಲದ ರೈಲು!

ಟಪ್ಪಾಲು ಕಟ್ಟೆಯ ಬೇರೆಬೇರೆ ಶಾಖೆ ಉಪಶಾಖೆಗಳಿಂದ ಟಪ್ಪಾಲು ಕಾಗದ ಪತ್ರ ಮೊದಲಾದವನ್ನು ಮುಖ್ಯ ಕಾರ್ಯಾಲಯಕ್ಕೆ ತಲುಪಿಸುವದಕ್ಕೋಸ್ಕರ ಸ್ವಿಜರ್ಲೆಂಡಿನ ಜೂರಿಚ್ ನಗರದಲ್ಲಿ ಡ್ರೈವರನಿಲ್ಲದ ರೈಲುಗಾಡಿಗಳನ್ನು ಉಪಯೋಗಿಸುತ್ತಾರೆ. ಈ ಗಾಡಿಗಳು ನೆಲವಡಿಯಲ್ಲಿ ಹಾಕಿದ ಕಂಬಿಗಳ ಮೇಲೆ ಓಡಾಡುವವು. ಒಂದು ಸ್ಥಾನದಲ್ಲಿ ನಿಂತ ಬಂಡಿಯಲ್ಲಿರುವ ಒಂದು ವಿದ್ಯುಚ್ಛಕ್ತಿಯ ಗುಂಡಿಯನ್ನು ಒತ್ತಿದೊಡನೆ ಓಡಲಾರಂಭಿಸಿ, ನಿಲ್ಲಬೇಕಾದಲ್ಲಿ ಕಂಬಿಗೆ ಜೋಡಿಸಿ ಇಟ್ಟಿರುವ ಒಂದು ಸಾಧನವು ಅದಕ್ಕೆ ತಗಲಿದೊಡನೆ ನಿಂತು ಬಿಡುವದು. ಈ ಬಂಡಿಗಳ ದೆಸೆಯಿಂದಾಗಿ ಸ್ವಲ್ಪ ಸಮಯದಲ್ಲಿ ಹೆಚ್ಚು ಮಂದಿ ಜನರ ಕೆಲಸಗಳನ್ನು ಸಾಧಿಸುವದು ಸಾಧ್ಯವಾಗಿದೆ. ಈಗ ಯೂರೋಪಿನ ಇತರ ದೊಡ್ಡ ನಗರಗಳಲ್ಲಿಯೂ ಡ್ರೈವರನಿಲ್ಲದ ಈ ರೈಲುಗಾಡಿಗಳನ್ನು ಉಪಯೋಗಕ್ಕೆ ತರುವ ಆಲೋಚನೆಯಾಗಿದೆ.

ಸಿಹಿಮೂತ್ರಕ್ಕೆ ಜಂಬು ನೇರಳೆ!

ಯುರೋಪ ಅಮೇರಿಕಗಳ ಅತ್ಯಾಧುನಿಕ ಚಿಕಿತ್ಸಾ ಕ್ರಮಗಳನ್ನು ಅನುಸರಿಸಿಯೂ ಸಿಹಿಮೂತ್ರದ ರೋಗವನ್ನು ಗುಣಪಡಿಸಲಾಗದೆ ಸಂಕಟಪಡುವರಿಗೆ ಇಲ್ಲೊಂದು ಸಂತೋಷ ಸುದ್ದಿ ಇದೆ. ಮೆಡಿಕಲ್ ಟೈಮ್ಸ್ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆಯುತ್ತಾ ಡಾಕ್ಟರ ಲಜಪತರಾಯಿಯವರು—ಬೆಳಗ್ಗೆ ಮತ್ತು ಸಾಯಂಕಾಲ ಮೂರು ನಾಲ್ಕು ಜಂಬು ನೇರಳೆಯ ಎಲೆಗಳನ್ನು ತಿಂದುದರಿಂದ ಎರಡು ಮೂರು ದಿವಸಗಳೊಳಗಾಗಿಯೇ ಮೂತ್ರದಲ್ಲಿ ಸಕ್ಕರೆಯ ಅಂಶವು ಬಹಳ ಕಡಿಮೆಯಾಗಿ ರೋಗಿಯು ಗುಣಮುಖನಾದ ಅಂಶವು ಖಚಿತವಾಗಿದೆ ಎಂದಿದ್ದಾರೆ. ಸಿಹಿ ಮೂತ್ರವನ್ನು ಗುಣಮಾಡುವ ಶಕ್ತಿಯು ಜಂಬು ನೇರಳೆಯಲ್ಲಿ ಯಾತಕ್ಕೆ ಇದೆ? ಹೇಗೆ ಇದೆ? ಎಂಬುದು ತಿಳಿದಿರುವದಿಲ್ಲ. ಇದನ್ನು ರಸಾಯನ ಶಾಸ್ತ್ರಜ್ಞರು ಕಂಡುಹಿಡಿಯಬೇಕಾಗಿದೆ ಎಂದು ಅವರು ಅಂದಿರುವರು.

ಪ್ರಾಣಿಗಳ ಪ್ರಾಯವನ್ನು ಕಂಡುಹಿಡುಕುವುದು

ಬೇರೆ ಬೇರೆ ಜಾತಿಗಳ ಪ್ರಾಣಿಗಳ ಪ್ರಾಯವನ್ನು ಕಂಡುಹಿಡಿಯುವದು ಕಷ್ಟವೇ. ಆದರೆ ವಿಜ್ಞಾನಿಗಳು ಅದನ್ನೂ ತಿಳಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆಮೆಗಳು ೨೦೦ ವರ್ಷಗಳ ತನಕ ಬದುಕುತ್ತವೆ. ಪರಂತು ಕುದುರೆ, ದನ, ಹುಲಿ, ಚಿರತೆ ಮೊದಲಾದವು ೨೫ ವರ್ಷಗಳಿಗಿಂತ ಹೆಚ್ಚು ಕಾಲ ಬದುಕವದಿಲ್ಲ. ಬೆಕ್ಕು ೧೫ ವರ್ಷ ಆಗುವದರೊಳಗೆ ಮುದಿಯಾಗುತ್ತದೆ. ಇಲಿಗಳು ೭-೮ ಮತ್ತು ಅಳಿಲುಗಳು ೮-೯ ವರ್ಷಗಳ ಗುನದರೊಳಗೆ ಸಾಯುವವು. ಪರಂತು ನೀರ್ನಾಯಿಗಳು ೩೦ ವರ್ಷ, ಆನೆಗಳು ೭೫ ವರ್ಷಗಳ ತನಕ ಜೀವಿಸುತ್ತವೆ. ಆನೆಗಳು ೧೦೦-೨೦೦ ವರ್ಷಗಳ ತನಕ ಬದುಕುತ್ತವೆಯೆಂಬುದಕ್ಕೆ ಆಧಾರಗಳಿರುವದಿಲ್ಲ. ಕೆಲವು ಜಾತಿಯ ಮೀನುಗಳು ೧೦೦-೧೫೦ ವರ್ಷಗಳ ತನಕ ಬದುಕಿರುವದುಂಟು. ಪರಂತು ಸಾಲ್ಮನ್ ಎಂಬ ಮೀನು ೪ ವರ್ಷದೊಳಗೆ ಸಾಯುತ್ತದೆ. ಕ್ರಿಮಿಕೀಟಗಳಲ್ಲಿ ಹೆಚ್ಚಿನವುಗಳು ಹುಟ್ಟಿದ ಸ್ವಲ್ಪ ಸಮಯದೊಳಗೇ ಸಾಯುವವು. ಕೆಲವಕ್ಕೆ ಸಾಯಲಿಕ್ಕೆ ೫-೬ ತಾಸುಗಳು ಕೂಡ ಬೇಕಾಗುವದಿಲ್ಲ. ಆದರೆ ಇರುವೆ ಜಾತಿಯವುಗಳು ಹಲವು ವರ್ಷಗಳ ತನಕ ಬದುಕುತ್ತವೆ. ಕೋತಿಗಳು ಕಾಡುಗಳಲ್ಲಿ ಸ್ವತಂತ್ರವಾಗಿದ್ದಾಗ ೧೫–೨೦ ವರ್ಷ ಜೀವಿಸುವವು. ಆದರೆ ಕಟ್ಟಿ ಹಾಕಿದಾಗ ಅವು ಬೇಗ ಸಾಯುತ್ತವೆ.

ಗಂಡಸರಿಗಿಂತ ಹೆಂಗಸರು ದೀರ್ಘಾಯುಗಳು!

ಜನಾಂಗ ಸಂಘದ ಇತ್ತೀಚೆಗಿನ ಒಂದು ಪ್ರಕಟನೆಯ ಪ್ರಕಾರ ಜಗತ್ತಿನ ಎಲ್ಲಾ ಭಾಗಗಳಲ್ಲಿ ಗಂಡಸರಿಗಿಂತ ಹೆಂಗಸರು ದೀರ್ಘಾಯುಗಳಾಗಿರುತ್ತಾರೆ. ಈಚೆಗೆ ಕೆಲವು ವರ್ಷಗಳಿಂದ ಪ್ರತಿಯೊಂದು ದೇಶದಲ್ಲಿ ಜನನ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಇನ್ನು ೩೦ ವರ್ಷಗಳಲ್ಲಿ ಈಗಿದ್ದಂತೆ ಇದ್ದರೆ, ಬ್ರಿಟನಿನಲ್ಲಿ ಸೇಕಡಾ ೨೦ರಷ್ಟು ಮತ್ತು ಅಮೇರಿಕದಲ್ಲಿ ಸೇಕಡಾ ೫ರಷ್ಟು ಜನಸಂಖ್ಯೆ ಕಡಿಮೆಯಾಗಬಹುದು. ಈ ಕಾಲಾವಧಿಯೊಳಗೆ ಗೊರ್ಲೆಸ್ಕ್ಯಾಡನ ಪ್ರಾಂತ್ಯಗಳಲ್ಲಿಯೂ ಜನಸಂಖ್ಯೆ ಕಡಿಮೆಯಾಗುವ ಸಂಭವವಿದೆ. ಜನರ ಆಯುಃಪ್ರಮಾಣವು ನ್ಯೂಝೀಲ್ಯಾಂಡದಲ್ಲಿ ಅತ್ಯಧಿಕ; ಅಂದರೆ ೬೫ ವರ್ಷ ಮತ್ತು ಹಿಂದುಸ್ಥಾನದಲ್ಲಿ ಅತಿಕಡಿಮೆ; ಎಂದರೆ ೨೭ ವರ್ಷ ಇರುತ್ತದೆ. ಮಕ್ಕಳ ಮರಣ ಸಂಖ್ಯೆ ಚಿಲಿದೇಶದಲ್ಲಿ ಅತ್ಯಧಿಕ; ಅಂದರೆ ೧೦೦೦ಕ್ಕೆ ೨೪೦ರಂತೆ ಮತ್ತು ನ್ಯೂಝೀಲ್ಯಾಂಡದಲ್ಲಿ ಅತಿಕಡಿಮೆ, ಎಂದರೆ ೨೩ರಂತೆ ಇರುತ್ತದೆ. ಮರಣ ಸಂಖ್ಯೆ ಅತ್ಯಧಿಕ ಅಂದರೆ ದಕ್ಷಿಣ ಅಮೇರಿಕದಲ್ಲಿ ೧೦೦೦ಕ್ಕೆ ೨೦ರಂತೆ ಮತ್ತು ಕಡಿಮೆ, ಎಂದರೆ ಹವಾಯಿಯಲ್ಲಿ ಕೇವಲ ೮ರಂತೆ ಇರುವದು.

ಸ್ವರ್ಗಸುಖವನ್ನು ಕೊಡುವ ಕಾರುಗಳು!

ಕೊಟ್ಟುಕೊಂಡರೆ ಸ್ವರ್ಗಸುಖವನ್ನೇ ಕೊಡುವಂಥ ಹೊಸ ಜಾತಿಯ ಮೋಟರ ಕಾರುಗಳು ಮಾರ್ಕೆಟ್ಟಿಗೆ ತಯಾರಾಗಿವೆ. ಸಾಮಾನ್ಯ ಕಾರುಗಳಿಗಿಂತ ಇವುಗಳ ಬೆಲೆ ಅತ್ಯಧಿಕವಾದುದರಿಂದ ಧನ ಕುಬೇರರು ಮಾತ್ರ ಅವುಗಳನ್ನು ಕೊಂಡುಕೊಂಡು ಸುಖಿಸಬಹುದಾಗಿದೆ. ಆದರೂ ಅವುಗಳು ಕೊಡುವ ಸುಖವು ಮಾತ್ರ ಅವರ್ಣನೀಯವಾದ್ದು. ಇವು ಯಾವ ಋತುವಿನಲ್ಲಾದರೂ ಮನುಷ್ಯನಿಗೆ ಹಿತಮಿತವಾದಷ್ಟೇ ಉಷ್ಣ ಹವೆಯನ್ನು ಕೊಡುವವು. ಕೂತುಕೊಳ್ಳುವವರಿಗೆಲ್ಲ ಅದರಲ್ಲಿ ಸುಖಾಸನಗಳಿವೆ. ಹಿಮಮಂಜುಗಳ ಬಾಧೆ ಉಂಟಾಗದಂತೆ ಇದರಲ್ಲಿ ಉಪಾಯಗಳಿವೆ. ರೇಡಿಯೋ ಮೊದಲಾದ ಆಧುನಿಕ ಸುಖಾನುಭವದ ಎಲ್ಲಾ ಸಲಕರಣೆಗಳೂ ಇದರಲ್ಲಿರುವವು.

ದಂತವೈದ್ಯರು ಬೇಡ! ಬಾಚಣಿಗೆ ಸಾಕು!

ಅಮೇರಿಕದ ಒಬ್ಬ ವಿಜ್ಞಾನಿಯು ನಿತ್ಯ ಜೀವನಕ್ಕೆ ಬೇಕಾದ ಕೆಲವು ಉಪಯುಕ್ತ ಸಾಮಗ್ರಿಗಳನ್ನು ತಯಾರಿಸಿದ್ದಾನೆ. ಇವನು ತಯಾರಿಸಿದ ಹೊಸ ಜಾತಿಯ ಬಾಚಣಿಗೆಯಲ್ಲಿ ಹಲ್ಲುಗಳು ಮುರಿದು ಹೋದರೆ, ಹೊಸತಾದುವುಗಳನ್ನು ಇಡಲಿಕ್ಕೆ ಆಗುತ್ತದೆ. ಬೂಟ್ಸುಗಳ ಹಿಮ್ಮಡಿಯನ್ನು ಜನರ ಅಭಿರುಚಿಗೆ ಅನುಸಾರವಾಗಿ ಏರಿಸಲಿಕ್ಕೂ ಇಳಿಸಲಿಕ್ಕೂ ಆಗುತ್ತದೆ. ಮುಖವಾಡದಲ್ಲಿ ಒಂದು ನಳಿಗೆಯ ಮೂಲಕ ಹೆಚ್ಚು ಕಡಿಮೆಯಾಗಿ ಗಾಳಿಹಾಕಿದ ಹಾಗೆ, ಅದನ್ನು ಭಿನ್ನಭಿನ್ನವಾದ ಸಾವಿರಾರು ಆಕಾರಗಳಿಗೆ ಬದಲಾಯಿಸಲಿಕ್ಕೆ ಆಗುತ್ತದೆ.

NOTICE BY SUBSTITUTED SERVICE

In the Court of the District Munsif of Mangalore

Between —

P. Vittal Narasimha Pai
Harekal Vaman Pai . . *Plaintiffs*

ಮತ್ತು

Panchmal Vasudeva Hari Prabhu and another . *Defendants*

To

2nd defendant, Sundara Krishna Kamthi, son of Krishna Kamthi, Merchant Panchmal Moolky, Mangalore Taluk

Please take notice that the plaintiff has filed said suit against you and the 1st defendant for recovery of Rs 44-15-11 in respect of dealings which the defendants had with the plaintiffs inclusive of interest up to 10-7-1940 together with future interest and costs of suit with interest and that the suit is posted for hearing at 10 30 A. M. on ~~4-11-1940 in the above~~ court. You may appear either in person or by pleader on the said date and contest the suit, failing which the same will be heard decided exparte.

Mangalore, 22-10-'40 — B. VAIKUNTA BALIGA, Pleader for Plaintiff

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ವಿಜ್ಞಾನಯುಗ

ಗರ್ಭದಲ್ಲಿಯೂ ಮಕ್ಕಳು ಕೇಳುತ್ತವೆ!

ತಾಯಂದಿರ ಗರ್ಭದಲ್ಲಿರುವ ಮಕ್ಕಳು ಹೊರಗಿನ ಪ್ರಪಂಚದ ಬೆಳಕನ್ನು ಕಾಣುವ ಮೊದಲು ... ಕೇಳಲಾರವೆಂದು ಹಿಂದಿನವರು 'ಅದ್ಭುತದ್ದ ರಹಿತಗಳನ್ನು ಅಚ್ಚಕಡೆ' ಎಂದು ತಿಳಿದು ಕೊಂಡು ಅನುಕರಿಸುತ್ತಿದ್ದರು. ಆದರೆ ಈಚೆಗೆ ನಡೆದಿರುವ ಕೆಲವು ಸಂಶೋಧನೆಗಳ ಫಲಿತಾಂಶವನ್ನು ಹೇಳುವುದಾದರೆ, ಮಕ್ಕಳನ್ನು ಹೆರುವ ಮೊದಲು ಸುಮಾರು ... ವಾರಗಳಿಂದ ಅದು ಕೇಳತೊಡಗುತ್ತದೆ ಎಂದು ಗೊತ್ತಾಗಿದೆ. ಗರ್ಭತಾಳಿದ ಕೆಲವು ಗಣಿಯಾ ಹೆಂಗಸರ ಮೇಲೆ ನಾಜೂಕಾದ ಯಂತ್ರಸಲಕರಣೆಗಳ ಮೂಲಕ ಮಾಡಿದ ಪರಿಶೋಧನೆಗಳಿಂದಾಗಿ, ಗರ್ಭಾವಸ್ಥೆಯಲ್ಲಿರುವ ಒಟ್ಟು ಅವಧಿಯ ಮುಕ್ಕಾಲು ಪಾಲನ್ನು ಕಳೆದ ಬಳಿಕ, ಹೊಟ್ಟೆಯಲ್ಲಿರುವ ಕಂದಮ್ಮಗಳು ಹೊರಗಿನ ಶಬ್ದಗಳನ್ನು ಕೇಳಿದ್ದು ಮಾತ್ರವಲ್ಲ, ಆ ಮರಿಗಳು ಗಲಬೆ ಗಲಾಟೆ-ಗರ್ಜನೆ ಆರ್ಭಟೆಗಳಿಂದಾಗಿ ಬೆಚ್ಚಿಬಿದ್ದು ಹೋದ ಸ್ಫೂರ್ತಿಗಳೂ ಗೊತ್ತಾಗಿವೆ. ಅದ್ದರಿಂದ ತಿಂಗಳು ತುಂಬಿದ ಗರ್ಭಿಣಿಯರ ಹೊಟ್ಟೆಯಲ್ಲಿರುವ ಮಗುವಿನ ಮೇಲೆ ಹೊರಗಿನ ಶಬ್ದಗಳ ಪರಿಣಾಮವು ಆಗಿಯೇ ಆಗುತ್ತದೆ.

ಡ್ರೈವರನಿಲ್ಲದ ರೈಲು!

ಟಪ್ಪಾಲು ಕಟ್ಟೆಯ ಬೇರೆಬೇರೆ ಶಾಖೆ ಉಪಶಾಖೆಗಳಿಂದ ಟಪ್ಪಾಲು ಕಾಗದ ಪತ್ರ ಮೊದಲಾದವನ್ನು ಮುಖ್ಯ ಕಾರ್ಯಾಲಯಕ್ಕೆ ತರಿಸುವದಕ್ಕೋಸ್ಕರ ಸ್ವಿಜರ್ಲೆಂಡಿನ ಜೂರಿಚ್ ನಗರದಲ್ಲಿ ಡ್ರೈವರನಿಲ್ಲದ ರೈಲುಗಾಡಿಗಳನ್ನು ಉಪಯೋಗಿಸುತ್ತಿದ್ದಾರೆ. ಈ ಗಾಡಿಗಳು ನೆಲದಡಿಯಲ್ಲಿ ಹಾಕಿದ ಕಂಬಿಗಳ ಮೇಲೆ ಓಡಾಡುವವು. ಒಂದು ಸ್ಥಾನದಲ್ಲಿ ನಿಂತ ಬಂಡಿಯಲ್ಲಿರುವ ಒಂದು ವಿದ್ಯುಚ್ಛಕ್ತಿಯ ಗುಂಡಿಯನ್ನು ಒತ್ತಿದೊಡನೆ ಓಡಲಾರಂಭಿಸಿ, ನಿಲ್ಲಬೇಕಾದಲ್ಲಿ ಕಂಬಿಗೆ ಜೋಡಿಸಿ ಇಟ್ಟಿರುವ ಒಂದು ಸಾಧನವು ಅದಕ್ಕೆ ತಗಲಿದೊಡನೆ ನಿಂತು ಬಿಡುವದು. ಈ ಬಂಡಿಗಳ ದೆಸೆಯಿಂದಾಗಿ ಸ್ವಲ್ಪ ಸಮಯದಲ್ಲಿ ಹೆಚ್ಚು ಮಂದಿ ಜನರ ಕೆಲಸಗಳನ್ನು ಸಾಧಿಸುವದು ಸಾಧ್ಯವಾಗಿದೆ. ಈಗ ಯೂರೋಪಿನ ಇತರ ದೊಡ್ಡ ನಗರಗಳಲ್ಲಿಯೂ ಡ್ರೈವರನಿಲ್ಲದ ಈ ರೈಲು ಗಾಡಿಗಳನ್ನು ಉಪಯೋಗಕ್ಕೆ ತರುವ ಆಲೋಚನೆಯಾಗಿದೆ.

ಸಿಹಿಮೂತ್ರಕ್ಕೆ ಜಂಬು ನೇರಳೆ!

ಯೂರೋಪ-ಅಮೇರಿಕಗಳ ಆಧುನಿಕ ಚಿಕಿತ್ಸಾ ಕ್ರಮಗಳನ್ನು ಅನುಸರಿಸಿಯೂ ಸಿಹಿಮೂತ್ರದ ರೋಗವನ್ನು ಗುಣಪಡಿಸಲಾಗದೆ ನಿರಾಶರಾದವರಿಗೆ ಇಲ್ಲೊಂದು ಸಂತೋಷ ಸುದ್ದಿ ಇದೆ. ಮೆಡಿಕಲ್ ಟೈಮ್ಸ್ ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆಯುತ್ತಾ ಡಾಕ್ಟರ ಲಜಪತರಾಯರು—ಬೆಳಗ್ಗೆ ಮತ್ತು ಸಾಯಂಕಾಲ ಮೂರು ನಾಲ್ಕು ಜಂಬು ನೇರಳೆಯ ಎಲೆಗಳನ್ನು ತಿಂದುದರಿಂದ ಎರಡು ಮೂರು ದಿನಗಳೊಳಗಾಗಿಯೇ ಮೂತ್ರದಲ್ಲಿ ಸಕ್ಕರೆಯ ಅಂಶವು ಬಹಳ ಕಡಿಮೆಯಾಗಿ ರೋಗಿಯು ಗುಣಮುಖನಾದ ಅಂಶವು ಖಚಿತವಾಗಿದೆ ಎಂದಿದ್ದಾರೆ. ಸಿಹಿ ಮೂತ್ರವನ್ನು ಗುಣಮಾಡುವ ಶಕ್ತಿಯು ಜಂಬು ನೇರಳೆಯಲ್ಲಿ ಯಾತಕ್ಕೆ ಇದೆ? ಹೇಗೆ ಇದೆ? ಎಂಬುದು ತಿಳಿದಿರುವದಿಲ್ಲ. ಇದನ್ನು ರಸಾಯನ ಶಾಸ್ತ್ರಜ್ಞರು ಕಂಡುಹಿಡಿಯಬೇಕಾಗಿದೆ ಎಂದು ಅವರ ಅಂದಿರುವರು.

ಪ್ರಾಣಿಗಳ ಪ್ರಾಯವನ್ನು ಕಂಡುಹುಡುಕುವುದು

ಬೇರೆ ಬೇರೆ ಜಾತಿಗಳ ಪ್ರಾಣಿಗಳ ಪ್ರಾಯವನ್ನು ಕಂಡುಹಿಡಿಯುವದು ಕಷ್ಟವೇ. ಆದರೆ ವಿಜ್ಞಾನಿಗಳು ಅದನ್ನೂ ತಿಳಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಆಮೆಗಳು ೨೦೦ ವರ್ಷಗಳ ತನಕ ಬದುಕುತ್ತವೆ. ಪರಂತು ಕುದುರೆ, ದನ, ಹುಲಿ, ಚಿರತೆ ಮೊದಲಾದವು ೨೫ ವರ್ಷಗಳಿಗಿಂತ ಹೆಚ್ಚು ಕಾಲ ಬದುಕುವದಿಲ್ಲ. ಬೆಕ್ಕು ೧೫ ವರ್ಷ ಆಗುವದರೊಳಗೆ ಮುದಿಯಾಗುತ್ತದೆ. ಇಲಿಗಳು ೭ ೮ ಮತ್ತು ಅಳಿಲುಗಳು ೮ ೯ ವರ್ಷಗಳಾಗುವದರೊಳಗೆ ಸಾಯುವವು. ಪರಂತು ನೀರ್ನಾಯಿಗಳು ೫೦ ವರ್ಷ, ಆನೆಗಳು ೭೫ ವರ್ಷಗಳ ತನಕ ಜೀವಿಸುತ್ತವೆ. ಆನೆಗಳು ೧೦೦ ೨೦೦ ವರ್ಷಗಳ ತನಕ ಬದುಕುತ್ತವೆಯೆಂಬುದಕ್ಕೆ ಆಧಾರಗಳಿರುವದಿಲ್ಲ. ಕೆಲವು ಜಾತಿಯ ಮೀನುಗಳು ೧೨೦-೧೫೦ ವರ್ಷಗಳ ತನಕ ಬದುಕಿರುವದುಂಟು. ಪರಂತು ಸಾಲ್ಮನ್ ಎಂಬ ಮೀನು ೪ ವರ್ಷದೊಳಗೆ ಸಾಯುತ್ತದೆ. ಕ್ರಿಮಿಕೀಟಗಳಲ್ಲಿ ಹೆಚ್ಚಿನವುಗಳು ಹುಟ್ಟಿದ ಸ್ವಲ್ಪ ಸಮಯದೊಳಗೇ ಸಾಯುವವು. ಕೆಲವಕ್ಕೆ ಸಾಯಲಿಕ್ಕೆ ೫-೬ ತಾಸುಗಳು ಕೂಡ ಬೇಕಾಗಿರುವದಿಲ್ಲ. ಆದರೆ ಇರುವೆ ಜಾತಿಯವುಗಳು ಹಲವು ವರ್ಷಗಳ ತನಕ ಬದುಕುತ್ತವೆ. ಕೋತಿಗಳು ಕಾಡುಗಳಲ್ಲಿ ಸ್ವತಂತ್ರವಾಗಿದ್ದಾಗ ೧೫-೨೦ ವರ್ಷ ಜೀವಿಸುವವು. ಆದರೆ ಕಟ್ಟಿ ಹಾಕಿದಾಗ ಅವು ಬೇಗ ಸಾಯುತ್ತವೆ.

ಗಂಡಸರಿಗಿಂತ ಹೆಂಗಸರು ದೀರ್ಘಾಯುಗಳು!

ಜನಾಂಗ ಸಂಘದ ಇತ್ತೀಚಿನ ಒಂದು ಪ್ರಕಟನೆಯ ಪ್ರಕಾರ ಜಗತ್ತಿನ ಎಲ್ಲಾ ಭಾಗಗಳಲ್ಲಿ ಗಂಡಸರಿಗಿಂತ ಹೆಂಗಸರು ದೀರ್ಘಾಯುಗಳಾಗಿರುತ್ತಾರೆ. ಈಚೆಗೆ ಕೆಲವು ವರ್ಷಗಳಿಂದ ಪ್ರತಿಯೊಂದು ದೇಶದಲ್ಲಿ ಜನನ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆ. ಇನ್ನು ೩೦ ವರ್ಷಗಳಲ್ಲಿ ಈಗಿದ್ದಂತೆ ಇದರೆ, ಬ್ರಿಟನ್ನಲ್ಲಿ ಸೇಕಡಾ ೨೫ರಷ್ಟು ಮತ್ತು ಅಮೇರಿಕದಲ್ಲಿ ಸೇಕಡಾ ೫ರಷ್ಟು ಜನಸಂಖ್ಯೆ ಕಡಿಮೆಯಾಗಬಹುದು. ಈ ಕಾಲಾವಧಿಯೊಳಗ ಗ್ರೇಟ್ ಬ್ರಿಟನ ಫ್ರಾನ್ಸ್‌ಗಳಲ್ಲಿಯೂ ಜನಸಂಖ್ಯೆ ಕಡಿಮೆಯಾಗುವ ಸಂಭವವಿದೆ. ಜನರ ಆಯುಃಪ್ರಮಾಣವು ನ್ಯೂಝೀಲಂಡದಲ್ಲಿ ಅತ್ಯಧಿಕ ಅಂದರೆ ೬೫ ವರ್ಷ ಮತ್ತು ಹಿಂದ ಸ್ಥಾನದಲ್ಲಿ ಅತಿ ಕಡಿಮೆ, ಎಂದರೆ ೨೭ ವರ್ಷ ಇರುತ್ತದೆ. ಶಿಶುಗಳ ಮರಣ ಸಂಖ್ಯೆ ಚಿಲಿ ದೇಶದಲ್ಲಿ ಅತ್ಯಧಿಕ ಅಂದರೆ ೧೦೦೦ಕ್ಕೆ ೨೫೦ರಂತೆ, ಮತ್ತು ನ್ಯೂಝೀಲಾಂಡದಲ್ಲಿ ಅತಿ ಕಡಿಮೆ, ಎಂದರೆ ೩೩ರಂತೆ ಇರುತ್ತದೆ. ಮರಣ ಸಂಖ್ಯೆ ಅತ್ಯಧಿಕ ಅಂದರೆ ದಕ್ಷಿಣ ಅಮೇರಿಕದಲ್ಲಿ ೧೦೦೦ಕ್ಕೆ ೩೦ರಂತೆ ಮತ್ತು ಕಡಿಮೆ, ಎಂದರೆ ಹವಾಯಿಯಲ್ಲಿ ಕೇವಲ ೮ರಂತೆ ಇರುವದು.

ಸ್ವರ್ಗಸುಖವನ್ನು ಕೊಡುವ ಕಾರುಗಳು!

ಕೂತ ಕೊಂಡರೆ ಸ್ವರ್ಗಸುಖವನ್ನೇ ಕೊಡುವಂಥ ಹೊಸ ಜಾತಿಯ ಮೋಟರ ಕಾರುಗಳು ಮಾರಾಟಕ್ಕೆ ತಯಾರಾಗಿವೆ. ಸಾಮಾನ್ಯ ಕಾರುಗಳಿಗಿಂತ ಇವುಗಳ ಬೆಲೆ ಅತ್ಯಧಿಕವಾದುದರಿಂದ ಧನ ಕುಬೇರರು ಮಾತ್ರ ಅವುಗಳನ್ನು ಕೊಂಡು ಕೊಂಡು ಸುಖಿಸಬಹುದಾಗಿದೆ. ಆದರೂ ಅವುಗಳು ಕೊಡುವ ಸುಖವು ಮಾತ್ರ ಅವರ್ಣನೀಯವಾದ್ದು. ಇವು ಯಾವ ಋತುವಿನಲ್ಲಾದರೂ ಮನುಷ್ಯನಿಗೆ ಹಿತಮಿತವಾದಷ್ಟೇ ಉಷ್ಣ ಹವೆಯನ್ನು ಕೊಡುವವು. ಕೂತುಕೊಳ್ಳುವವರಿಗೆಲ್ಲ ಅದರಲ್ಲಿ ಸುಖಾಸನಗಳಿವೆ. ಹಿಮಮಂಜುಗಳ ಬಾಧೆ ಉಂಟಾಗದಂತೆ ಇದರಲ್ಲಿ ಉಪಾಯಗಳಿವೆ. ರೇಡಿಯೋ ಮೊದಲಾದ ಆಧುನಿಕ ಸುಖಾನುಭವದ ಎಲ್ಲಾ ಸಲಕರಣೆಗಳೂ ಇದರಲ್ಲಿರುವವು.

ದಂತವೈದ್ಯರು ಬೇಡ; ಬಾಚಣಿಗೆ ಸಾಕು!

ಅಮೇರಿಕದ ಒಬ್ಬ ವಿಜ್ಞಾನಿಯು ನಿತ್ಯಜೀವನಕ್ಕೆ ಬೇಕಾದ ಕೆಲವು ಉಪಯುಕ್ತ ಸಾಮಗ್ರಿಗಳನ್ನು ತಯಾರಿಸಿದ್ದಾನೆ. ಇವನು ತಯಾರಿಸಿದ ಹೊಸ ಜಾತಿಯ ಬಾಚಣಿಗೆಯಲ್ಲಿ ಹಲ್ಲುಗಳು ಮುರಿದು ಹೋದರೆ, ಹೊಸತಾದುವುಗಳನ್ನು ಇಡಲಿಕ್ಕೆ ಆಗುತ್ತದೆ. ಬೂಟ್ಸುಗಳ ಹಿಮ್ಮಡಿಯನ್ನು ಜನರ ಅಭಿರುಚಿಗೆ ಅನುಸಾರವಾಗಿ ಏರಿಸಲಿಕ್ಕೂ ಇಳಿಸಲಿಕ್ಕೂ ಆಗುತ್ತದೆ. ಮಂಚವಾದರೆ ಒಂದು ನಳಿಗೆಯ ಮೂಲಕ ಹೆಚ್ಚು ಕಡಿಮೆಯಾಗಿ ಗಾಳಿ ಹಾಕಿದ ಹಾಗೆ, ಅದನ್ನು ಭಿನ್ನ ಭಿನ್ನವಾದ ಸಾಪೇಕ್ಷ ಆಕಾರಗಳಿಗೆ ಬದಲಾಯಿಸಲಿಕ್ಕೆ ಆಗುತ್ತದೆ.

NOTICE BY SUBSTITUTED SERVICE

In the Court of the District Munsif of Mangalore

Between —

P Vittal Narasimha Pai } *Plaintiffs*
Harelal Vaman Pai }

and

Panchmal Vasudeva Hari Prabhu and another *Defendants*

To

2nd Defendant Sundara Krishna Kamath son of Krishna Kamath Merchant, Panchmal Mulki v Mangalore Taluk

Please take notice that the plaintiff has filed said suit against you and the 1st defendant for recovery of Rs. 44 15 11 in respect of dealings which the defendants had with the plaintiffs inclusive of interest up to 10-7 1940, together with future interest and costs of suit with interest and that the suit is posted for hearing at 10 30 A M on 4-11-1940 in the above court. You may appear either in person or by pleader on the said date and contest the suit, failing which the same will be heard decided exparte.

Mangalore } B VAIKUNTA BALIGA,
22-10-'40 } Pleader for Plaintiff

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಮಹಾತ್ಮಾ ಗಾಂಧಿ ಪವಾಡ ಪುರುಷರು!

ಭಾರತದ ನಾಡಿಯನ್ನು ಹಿಡಿಯುತ್ತಾರೆ!

ಅವರನ್ನು ಯಾಕೆ ಹಿಂಬಾಲಿಸಬೇಕು

ಅವರ ತರ್ಕಮಾರ್ಗಗಳು

ಮೂರು ತತ್ವಗಳು

ಶ್ರೀ ಕನ್ನಯಲಾಲ ಶರ್ಮಾರೆಂಬವರು ಗಾಂಧಿಜಿಯವರ ಪ್ರಭಾವ ಶಕ್ತಿಗಳ ಕುರಿತು ಹೀಗೆನ್ನುತ್ತಾರೆ:—ಗಾಂಧಿ ಧರ್ಮದ ಮೂರು ಮುಖ್ಯ ತತ್ವಗಳು ಸತ್ಯ, ಅಹಿಂಸೆ, ಮತ್ತು ಪ್ರೇಮ ಇವು. ಈ ಮೂರು ಪ್ರಕೃತದ ಪರಿಸ್ಥಿತಿಯಲ್ಲಿ ಈ ಧರ್ಮದ ಪ್ರಚಾರ ಪ್ರಸಾರಗಳಿಂದಲ್ಲದೆ, ಬೇರೆ ಯಾವ ರೀತಿಯಿಂದಲೂ ದೇಶದ ಉದ್ಧಾರವು ಸಾಧ್ಯವಾಗಲಾರದು. ಸತ್ಯ ಅಹಿಂಸೆ ಮತ್ತು ಪ್ರೇಮಗಳ ಆಧಾರದ ಮೇಲೆ ರಚಿಸಲ್ಪಡದಂಥ ಉತ್ತಮವಾದ ರಾಜಕಾರಣ ಶಾಸ್ತ್ರವು ಬೇರೊಂದಿರಲಾರದು.

ಮಹಾತ್ಮಾಗಾಂಧಿಯವರು ಪ್ರಪಂಚದ ಭಾಗ್ಯವಿಧಾತರಾಗಿ ಇರುತ್ತಾರೆ. ಅಹಿಂಸಾ ಉಪಾಯಗಳಿಂದ ಅವರು ಬ್ರಿಟಿಷ ಸಾಮ್ರಾಜ್ಯ ಶಕ್ತಿಯನ್ನು ನಡುಗಿಸುತ್ತಿರುವರು. ಸೇವಾಗ್ರಾಮದಲ್ಲಿ ಕೂತು ಗಾಂಧಿಜಿ ಭಾರತದ ನಾಡಿನಾಡಿಗಳನ್ನು ಚಲಿಸಬಲ್ಲಷ್ಟು ಪ್ರಭಾವಶಾಲಿಯಾಗಿದ್ದಾರೆ. ಭಾರತದ ಸಮಸ್ಯೆಯನ್ನು ಎಲ್ಲರಿಗೂ ತೃಪ್ತಿಕರವಾಗಿ ಬಿಡಿಸಬಲ್ಲಂಥವರು ಇಂದು ಅವರೊಬ್ಬರೇ ಆಗಿರುವರು.

ಗಾಂಧಿಜಿ ಪವಾಡ ಪುರುಷರು

ನಾವು ಅವರ ಪ್ರೀತಿಯ ಖಾದಿಯಿಂದ ಭೂಷಿತರಾಗಬೇಕು; ಅವರು ತೋರಿಸಿಕೊಟ್ಟಂಥ ಸ್ವಾತಂತ್ರ್ಯದ ಹಾದಿಯಲ್ಲಿ ಮುಂದು ಮುಂದಕ್ಕೆ ಹೆಜ್ಜೆ ಇಡಬೇಕು; ಗಾಂಧಿಜಿಯವರು ಲೋಕದ ಪವಾಡ ಪುರುಷರಾಗಿದ್ದಾರೆ. ಅವರು ಆಧುನಿಕ ಪ್ರಪಂಚದ ಅತ್ಯಂತ ರಹಸ್ಯಮಯ ಪುಣ್ಯ ಪುರುಷರೂ ಕೌತುಕವನ್ನುಂಟು ಮಾಡುವ ಅದ್ಭುತವ್ಯಕ್ತಿಗಳೂ ಆಗಿದ್ದಾರೆ. ಅವರ ಅನುಕರಣ ಮತ್ತು ಅನುಸರಣೆಯಿಂದ ಭಾರತದ ಮಾತ್ರವಲ್ಲ, ಇಡೀ ಪ್ರಪಂಚದ ಉದ್ಧಾರವಾಗುವುದು.

ಮಹಾತ್ಮರನ್ನು ಯಾಕೆ ಅನುಸರಿಸಬೇಕು?

ಶ್ರೀಮತಿ ಸೋಫಿಯಾ ವಾಡಿಯಾರವರು ಹಿಂದುಸ್ಥಾನ ರಿವ್ಯೂನಲ್ಲಿ ಒಂದು ಲೇಖನವನ್ನು ಬರೆದು ಪ್ರಪಂಚವು ಮಹಾತ್ಮರನ್ನು ಯಾಕೆ ಅನುಸರಿಸಬೇಕೆಂಬುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ.

ಪ್ರಪಂಚವು ರಕ್ತರಂಜಿತವಾಗಿದೆ. ಹಿಂಸಾಮಯ ಯುದ್ಧ ಹೋರಾಟಗಳನ್ನು ನಿಲ್ಲಿಸಲಿಕ್ಕೆ ಮಹಾತ್ಮರ ಅಸಹಕಾರ, ಸತ್ಯಾಗ್ರಹ ಮತ್ತು ಅಹಿಂಸಾಮಯ ಉಪಾಯಗಳೇ ಸರ್ವೋತ್ಕೃಷ್ಟವಾಗಿರುವವು. ಅಹಿಂಸೆ ಸತ್ಯ ಮತ್ತು ಪ್ರೇಮಗಳಿಂದ ಯುದ್ಧ ಕಾಲದಲ್ಲಿ ಶಾಂತಿಯನ್ನು ಸ್ಥಾಪಿಸಬಹುದು. ಶಾಂತಿಯ ಕಾಲದಲ್ಲಿ ಅದನ್ನು ಚಿರಸ್ಥಾಯಿಯಾಗುವಂತೆ ಮಾಡಬಹುದು. ಸ್ವಾತಂತ್ರ್ಯವು ಪ್ರತಿಯೊಂದು ಜನಾಂಗದ ಜನ್ಮಸಿದ್ಧ ಅಧಿಕಾರವಾಗಿದೆ. ಪ್ರತಿಯೊಬ್ಬನು ಸ್ವಾತಂತ್ರ್ಯವನ್ನು ಇಚ್ಛಿಸುತ್ತಾನೆ. ಅಂಥ ಸ್ವಾತಂತ್ರ್ಯವು ಸತ್ಯಾಗ್ರಹದ ಮೂಲಸಿದ್ಧಾಂತವಾಗಿದೆ. ಅದರಿಂದ ಜಗತ್ತಿನಲ್ಲಿ ಒಂದು ಹೊಸ ವ್ಯವಸ್ಥೆಯುಂಟಾಗಿ ಎಲ್ಲರೂ ಸ್ವತಂತ್ರವಾಗಿರಲಿಕ್ಕೆ ಇತರರೊಂದಿಗೆ ಭಾರತೀಯರೂ ದುಡಿಯುವರಾದರೆ, ಅವರು ಈಗಿನಿಂದಲೇ ಸತ್ಯಾಗ್ರಹದ ಎಲ್ಲ ಮಾರ್ಗಗಳನ್ನು ತಿಳಿದುಕೊಳ್ಳಬೇಕು ಮತ್ತು ಸತ್ಯಾಗ್ರಹದ ಕಾರಣ ಪುರುಷರಾದ ಮಹಾತ್ಮರನ್ನು ಮಾತಿನಿಂದ ಮಾತ್ರವಲ್ಲ, ಕೃತಿಯಿಂದಲೂ ಅನುಸರಿಸಬೇಕು.

ಸಿನಾರ್ ಸುನರ್‌ರು ಸ್ಪೈಯಿನಿನ ವಿದೇಶಾಂಗ ಮಂತ್ರಿ

ಜರ್ಮನ್ ಪತ್ರಿಕೆಗಳ ಟೀಕೆ

"ಲೋಕಲ್ ಅಂಜೀಗರ್" ಎಂಬ ಪತ್ರಿಕೆಯು ಬರೆಯುತ್ತಾ, ಪುನರ್ಜನ್ಮ ತಾಳಿದ ಮತ್ತು ಅಭಿವೃದ್ಧಿಕಾರಕವಾದ ಕ್ರಾಂತಿಕಾರ ಪ್ರಜಾಸಮುದಾಯದ ವಿದೇಶಾಂಗ ಮಂತ್ರಿಯಾಗಿ ನೇಮಿತರಾಗಿದ್ದಾರೆಂದು ತಿಳಿಸಿ, ಸುನರ್‌ರವರು ಜರ್ಮನ್ ಮತ್ತು ಇಟಾಲಿಯನ್ ರಾಷ್ಟ್ರಗಳ ಸ್ನೇಹಿತರೆಂದೂ ಈ ಅಂಶವು ಸರ್ವವಿದಿತವಾಗಿದೆಯೆಂದೂ ತಿಳಿಸಿದೆ.

ಬೋರ್ಸನ್ ಚೀಟಂಗ್ ಪತ್ರಿಕೆಯು, ವಿದೇಶಾಂಗ ಮಂತ್ರಿಪದಕ್ಕೆ ಈ ನಂಬಿಗಸ್ಥರಾದ ಮಹನೀಯರನ್ನು ನೇಮಿಸಿದ್ದುದರಿಂದ ಸ್ಪೈಯಿನು ಪುನರ್ರಚಿತವಾಗುವ ಯುರೋಪಿನಲ್ಲಿ ಸಜೀವ ಶಕ್ತಿಯಾಗಿ ಉಳಿಯಲು ದೃಢನಿಶ್ಚಯಹೊಂದಿದೆ ಎಂಬುದು ಸ್ಪಷ್ಟಪಡುವುದು. ಈ ನೇಮಕದ ಕಾಲವನ್ನು ನೋಡಿದರೆ ಜನರಲ್ ಫ್ರಾಂಕೋರವರ ಕಾರ್ಯಕ್ರಮದಲ್ಲಿ ಒಂದು ವಿಶೇಷವಿದೆಯೆಂಬುದು ಚೆನ್ನಾಗಿ ಗೊತ್ತಾಗುವದು. ಸರ್ ಸಾಮ್ಯುಯಲ್ ಹೋರ್‌ರವರನ್ನು ಇಂಗ್ಲೆಂಡನ್ನು ಬಚಾಯಿಸಲು ಮ್ಯಾಡ್ರಿಡ್‌ಗೆ ಕಳುಹಿಸುವುದಾದರೆ ಬಚಾವಾಗುವುದಕ್ಕೆ ಅವಕಾಶವಿದ್ದರೂ ಅವರೇನೂ ಸಾಕಷ್ಟು ಬಚಾವು ಮಾಡಿಯೇ ಇಲ್ಲ" ಎಂದು ತಿಳಿಸಿದೆ.

ಡಚ್ಯೂಶ್ಚೆ ಅಲ್‌ಗೆಮೀನ್ ಚೀಟುಂಗ್ ಪತ್ರಿಕೆಯು ಸಿನಾರ್ ಸುನರ್‌ರವರ ನೇಮಕವು ಬಹಳ ಮಹತ್ವದ್ದಾದುದೆಂದೂ ಅಂತರ್ರಾಷ್ಟ್ರೀಯ ದೃಷ್ಟಿಯಿಂದ ಇದಕ್ಕೆ ಮಹತ್ವವಿನ್ನೂ ಹೆಚ್ಚೆಂದೂ ತಿಳಿಸಿದೆ. ಸ್ಪೈಯಿನಿನ ವಿದೇಶಾಂಗ ನೀತಿಯು ಒಳದೇಶದ ನೀತಿಗಿಂತ ಬಹು ಮುಖ್ಯವಾಗಿರುವಂತಹ ಈ ಸಮಯದಲ್ಲಿ ಜ॥ ಫ್ರಾಂಕೋರವರು ಈ ವಿದೇಶಾಂಗ ವಿಷಯವಾಗಿ ಸಲಹೆಗಾರರನ್ನು ನೇಮಿಸಿರುವುದು ಐತಿಹಾಸಿಕ ಪ್ರಸಂಗ ಎಂದು ಅದು ಟೀಕಿಸಿದೆ.

"ಓವಲ್ಟಿನ್"
ನಿಮ್ಮ ತ್ರಾಣವನ್ನೂ ಕಸುವನ್ನೂ ರಚಿಸಲಿ!

ಉತ್ತಮ ಕಸುವುಳ್ಳ ಆರೋಗ್ಯವನ್ನು ಹೊಂದಬೇಕಾದರೆ ಸಾಕಷ್ಟು ಯೋಗ್ಯವಾದ ಪೋಷಣೆಯನ್ನು ಪಡೆಯಬೇಕು. ಅಂಥಾ ಪೋಷಣೆಯನ್ನು ಟೋನಿಕ್ ಆಹಾರ ಪಾನಕವಾದ "ಓವಲ್ಟಿನ್" ಉಂಟುಮಾಡುವುದು.

ಬಹಳ ರುಚಿಕರವಾದುದಲ್ಲದೆ, 'ಓವಲ್ಟಿನ್'ನಲ್ಲಿ ದೇಹದ ಆರೋಗ್ಯವನ್ನು ಕಾಪಾಡಿ ಕಸುವನ್ನು ವರ್ಧಿಸಲು ಬೇಕಾದ ಧಾತುಗಳೆಲ್ಲವೂ ಇರುವುವು. ಯಾವಾಗಲೂ ಒಂದು ಕಪ್ 'ಓವಲ್ಟಿನ್' ಕುಡಿಯಿರಿ. ಇದು ಸಂತುಷ್ಟವಾದ ಮತ್ತು ಸಂಪೂರ್ಣವಾದ ಆಹಾರವಾಗಿರುತ್ತದೆ. ಇದು ಪ್ರಕೃತಿಯ ಉತ್ತಮವಾದ ಟೋನಿಕ್ ಆಹಾರಗಳಿಂದ ಮಾಡಲ್ಪಟ್ಟಿದೆ—ಮಾಗಿ ನೆನೆಹಾಕಿದ ಬಾರ್ಲಿ, ದನದ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ವಿಟಾಮಿನ್ ಮತ್ತು ಫೊಸ್ಫೈಟೈಡ್. ಸಕ್ಕರೆ ಬದಲು ಪಾನೀಯಗಳನ್ನು ದೂರಮಾಡಿರಿ.

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರ...

ಎಲ್ಲಾ ಕೆಮಿಸ್ಟರಿಂದಲೂ ಸ್ಟೋರುಗಳಲ್ಲಿಯೂ ಮಾರುತ್ತಾರೆ.
ವಿತರಣಕಾರರು: ಮೆಸರ್ಸ್.
ಗ್ರೇಹೆಮ್ಸ್ ಟ್ರೇಡಿಂಗ್ ಕೊ.,(ಇಂಡಿಯಾ) ಲಿಮಿಟೆಡ್
ಬ್ಯುಸಿನೆಸ್ ಹೋಲ್ ಥರ್ಡ್‌ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು, ಕಲ್ಕತ್ತಾ, ಕರಾಚಿ ಮತ್ತು ಬೊಂಬೈ.

'ಓವಲ್ಟಿನ್' ಬಿಸ್ಕುಟು ಗಳು:
ರುಚಿಕರ, ಜೀರ್ಣಕರ ಹಾಗು ಪೋಷಣಯುಕ್ತ. ಎಲ್ಲಾ ಕಾಲಕ್ಕೂ ಉತ್ತಮವಾದ ಬಿಸ್ಕಿಟುಗಳು. ಇವುಗಳಲ್ಲಿ ಅಮೂಲ್ಯ ಗುಣದ 'ಓವಲ್ಟಿನ್' ಸೇರಿರುವುದು. 4 ಔನ್ಸು, 8 ಔನ್ಸುಗಳ ಪೆಕೆಟುಗಳಲ್ಲಿಯೂ 1 ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OV170/39

‘ ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

8–11–1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೮—೧೧—೧೯೪೦

ಗಾಂಧಿಜಿಯವರನ್ನು ವೈಸರಾಯರಾಗಿ ಮಾಡುವುದು!

ಸಮಸ್ಯೆಯನ್ನು ಬಗೆಹರಿಸಲು ಬ್ರಿಟಿಷ್ ಲೇಖಕರ ಸೂಚನೆ!
ಗಾಂಧಿಜಿಯಂತಹ ಯೋಗ್ಯ ಬೇರೊಬ್ಬನಿಲ್ಲ'

ಮಹಾತ್ಮಾಜಿಯವರು.

“ನ್ಯೂಸ್ಟೇಟ್ಸ್‌ಮನ್ ಎಂಡ್‌ನೇಶನ್” ಪತ್ರಿಕೆಯಲ್ಲಿ ಪ್ರಸಿದ್ಧ ಲೇಖಕರಾದ ಲೀಯುನರ್ಡ್ ವೂಲ್ಫ್ ಇವರು ಬರೆದ ಒಂದು ಲೇಖನವು ಪ್ರಸಿದ್ಧವಾಗಿದೆ. ಆ ಲೇಖನದಲ್ಲಿ ಹಿಂದುಸ್ಥಾನದ ಬಿಕ್ಕಟ್ಟನ್ನು ಪರಿಹರಿಸಬೇಕೆಂದಿದ್ದರೆ ಗಾಂಧೀಜಿಯವರನ್ನು ಹಿಂದುಸ್ಥಾನದ ವೈಸರಾಯರನ್ನಾಗಿ ಮಾಡಿರಿ. ಇಲ್ಲದಿದ್ದರೆ ಬೇರೆ ಉತ್ತಮ ಮಾರ್ಗವಿಲ್ಲವೆಂದು ಲೀಯುನರ್ಡ್ ವೂಲ್ಫರು ಸೂಚಿಸಿದ್ದಾರೆ. ಅವರು ಮತ್ತೆ ಹೀಗೆಂದು ಬರೆದಿರುವರು:—

ಲಕ್ಷಕೊಡಲಿಲ್ಲ

‘ಬ್ರಿಟಿಶರಲ್ಲಿ ಬಹುಸಂಖ್ಯಾಕರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಬಹಳ ಆತುರದಲ್ಲಿದ್ದಾರೆ. ಅಲ್ಲದೆ ಪೇಸ್ಟಿಸಮ್ಮಿನ ವಿರುದ್ಧ ಹೋರಾಡುವ ಬ್ರಿಟನಿಗೆ ಯಶವಾಗಲೆಂದು ಭಾರತೀಯರಲ್ಲಿ ಪ್ರಚಂಡ ಬಹುಮತದ ಅಭಿಪ್ರಾಯವಿದೆ. ಆದರೂ ಹಿಂದುಸ್ಥಾನದ ಬೇಡಿಕೆಯ ಕಡೆಗೆ ಯಾರೂ ಲಕ್ಷ್ಯಕೊಡಲಿಲ್ಲ. ಕೊನೆಗೆ ಬಿಕ್ಕಟ್ಟು ಸಂಭವಿಸಿತು.

ಗಾಂಧಿಜೀಯವರ ಯೋಗ್ಯತೆ

“ಗಾಂಧಿಜಿಯವರನ್ನೆ ವೈಸ್ರಾಯರನ್ನಾಗಿ ಮಾಡಬೇಕೆಂದು ನನ್ನ ಸೂಚನೆ. ಆದರೆ ಅವರು ಅಧಿಕಾರ ಸ್ವೀಕಾರ ಮಾಡುವ ಮೊದಲು ಅವರನ್ನು ಲಂಡನಿಗೆ ಕರೆಸಿಕೊಂಡು ತನ್ನ ವಿಚಾರವನ್ನು ಅವರಿಗೆ ತಿಳಿಸಿ ಮುಂದಿನ ಕಾರಭಾರ ಮಾಡುವಂತೆ ಹೇಳಬೇಕು. ನಮ್ಮ ಕರಾರುಗಳನ್ನು ಜಾರಿಯಲ್ಲಿ ತಂದು ಯುದ್ಧವನ್ನು ಸಾಗಿಸುವಂತೆ ಹೇಳಬೇಕು.

“ಈ ಸೂಚನೆಯನ್ನು ಕೇಳಿದ ಕೂಡಲೇ ಅನೇಕರು ಇದನ್ನೊಂದು ಹುಚ್ಚಾಟವೆನ್ನಬಹುದು ಎಲ್ಲ ಕ್ರಾಂತಿಕಾರಕ ಹಾಗು ಮಹತ್ವಪೂರ್ಣವಾದ ಚಾರಿತ್ರಿಕ ಮಹತ್ವದ ಘಟನೆಗಳು ಮೊದಲಿಗೆ ಹುಚ್ಚಾಟದಂತೆ ತೋರುವವು. ಆದರೆ ಭವಿಷ್ಯತ್ಕಾಲವು ಮಾತ್ರ ಇದರ ಉತ್ತರವನ್ನು ಮತ್ತು ಸತ್ಯವನ್ನು ನಿರ್ಧರಿಸಬಲ್ಲದು.

ಇದೇ ಮೊದಲನೆಯ ಹೆಜ್ಜೆ

“ಸ್ವತಂತ್ರ ಸರಕಾರವನ್ನು ಸ್ಥಾಪಿಸುವ ಮೊದಲು ಅನೇಕ ಬದಲಾವಣೆಗಳಾಗುವದು ಅವಶ್ಯ. ಆ ಬದಲಾವಣೆಗಳಿಗೆ ಅವಿರತವಾದ ತೊಡಕುಗಳಿವೆ. ಆ ತೊಡಕುಗಳಿಂದ ಪಾರುಮಾಡಬೇಕಾದರೆ ಗಾಂಧಿಜಿಯವರಿಗೆ ಒಬ್ಬರಿಗೆ ಮಾತ್ರ ಶಕ್ಯವಿದೆ. ಅವರಷ್ಟು ಕರ್ತೃತ್ವಶಕ್ತಿಯುಳ್ಳ ಇನ್ನೊಬ್ಬ ವ್ಯಕ್ತಿಯಿಲ್ಲ. ಕಾಂಗ್ರೆಸ್ ಮತ್ತು ಕಾಂಗ್ರೆಸ್ ಪಕ್ಷವನ್ನು ಕರೆತಂದು ಅಂಜಿಕೆಯುಳ್ಳ ಇನ್ನಿತರ ಪಕ್ಷಗಳಿಗೆ ಯಾವ ರೀತಿಯ ಅನ್ಯಾಯವೂ ಆಗದಂತೆ ನಿಷ್ಪಕ್ಷಪಾತಿಯಾಗಿ ಆಳುವದು ಅವರಿಗೊಬ್ಬರಿಗೆ ಮಾತ್ರ ಶಕ್ಯವಿದೆ. ಬೇಕಾದ ಹೊಣೆ ಹೊತ್ತು ಕಾರ್ಯಭಾರವನ್ನು ಸಾಗಿಸುವದಕ್ಕೆ ಅವರಷ್ಟು ಅರ್ಹರಾದ ಇನ್ನೊಬ್ಬ ವ್ಯಕ್ತಿಯಿಲ್ಲ. ಅವರ ರಾಜಕೀಯ ಘಟನೆಗಳು ಕ್ರಾಂತಿಕಾರಕವಿರುವದರಿಂದ ಅನೇಕಸಾರಿ ಅವು ಕೇವಲ ಹುಚ್ಚಾಟದಂತೆ ತೋರುತ್ತವೆ. ಈ ಸೂಚನೆಯು ಗಾಂಧಿಜೀಯವರ ಕರ್ತೃತ್ವಶಕ್ತಿಗೆ ತಕ್ಕಂತಿದೆ. ಅವರ ನಿಶ್ಚಿತವಾದ ಗುರಿ ಹಾಗೂ ರಾಜಕೀಯ ವಿಚಾರಕ್ಕೆ ತಕ್ಕಂತಿದೆ ಎಂದು ನಾನು ಭಾವಿಸುತ್ತೇನೆ. ಸರಕಾರವು ಈ ಸೂಚನೆಯನ್ನು ಮಾಡಿ, ಗಾಂಧಿಜೀಯವರು ಅದಕ್ಕೆ ಒಪ್ಪಿದರೆ, ಅಗ್ನಿ ಪ್ರತ್ಯೇಕವಾದ ಹಾಗೂ ಉತ್ತಮವಾದುದೊಂದು ಜಗತ್ತನ್ನು ನಿರ್ಮಿಸಲು ಇದೇ ಮೊದಲನೆ ಹೆಜ್ಜೆಯೆಂದು ಭಾವಿಸಬಹುದು.”

ಕನ್ನಡ ಸಾಹಿತ್ಯದಲ್ಲಿ ಅಪೂರ್ವ ಗ್ರಂಥಗಳು!

ವರ್ಧಾಯಾತ್ರೆ:—ಬರೆದವರು ಎಸ್. ಕೃಷ್ಣ ಶರ್ಮರು

ಇಂದಿನ ಯುಗದೇವನಾದ ಗಾಂಧಿಜಿಯ ಕಾರ್ಯರಂಗ ವರ್ಧಾ ಅಲ್ಲಿನ ಜೀವನ, ಪ್ರಯೋಗ, ವ್ಯಕ್ತಿಗಳು, ಅನುಭವ ದೃಶ್ಯಗಳು ಇವುಗಳನ್ನು ಕವ್ಯ ಸರಸವಾದ ಶೈಲಿಯಿಂದ ಲೇಖಕರು ತಿಳಿಸಿದ್ದಾರೆ

‘ಪುಸ್ತಕವು ಕನ್ನಡಿಗರಿಗೆ ದೊರೆತ ಅಪೂರ್ವ ಲಾಭ. ಗಾಂಧಿಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸಿನ ಇತಿಹಾಸ ಈ ಗ್ರಂಥಗಳ ಜತೆಯಲ್ಲಿ ಈ ಪುಟ್ಟ ಪುಸ್ತಕವನ್ನು ಓದಬೇಕು”

ವಿಶ್ವಕರ್ನಾಟಕ

‘Wardha Yatre is a new departure in Kannada literature’

ಭಾರತೀಯ ಕಥಾವಳಿ:— ಹಿಂದುಸ್ಥಾನದಲ್ಲಿರುವ ಈಗಿನ ಪ್ರಾಮುಖ್ಯ ಒಂದೊಂದು ಭಾಷೆಯ ಪ್ರಸಿದ್ಧ ಕತೆಗಳನ್ನು ಆಯ್ದು ಸಂಗ್ರಹಿಸಿಕೊಡುವ ಸಾಹಸವನ್ನು ಕೈಗೊಂಡಿದೆ. ಇದರಿಂದ ಭಾರತೀಯರೆಲ್ಲರ ಜೀವನದ ಅರಿವು ಆಗುವುದು. ಪ್ರತಿಯೊಂದು ಮನೆಗೂ ಶೀರಾ ಅವಶ್ಯ ಇರಬೇಕಾದ ಕಥಾಗ್ರಂಥ

ಈಗ ಆದ ಕಥಾ ಸಂಗ್ರಹಗಳು

೧. **ತೆಲುಗಿನ ಕಥೆಗಳು.**—ಕ್ರೌನ್ ೧/೮ ಆಕಾರದ ೧೨೦ ಪುಟಗಳು. ಬೆಲೆ ಕೇವಲ ೮ ಆಣೆ.

೨. **ಅಸಾಮಿಯಾ ಕಥೆಗಳು:**—ಕ್ರೌನ್ ೧/೮ ಆಕಾರದ ೧೨೦ ಪುಟಗಳು ಬೆಲೆ ಕೇವಲ ೮ ಆಣೆ

ಮುಂಧಿನ ಪ್ರಕಟಣೆಗಳು

೧. **ಪರ್ಣಕುಟಿ**—ಲೇಖಕರು: ಎಸ್. ಕೃಷ್ಣಶರ್ಮ (ಅಚ್ಚಿನಲ್ಲಿದೆ).

೨. **ತಮಿಳು ಕತೆಗಳು:**—(ಅಚ್ಚಿನಲ್ಲಿದೆ).

ಮಹಾಪೂರ.— (ಸಾಮಾಜಿಕ ಕಾದಂಬರಿ) ಬರೆದವರು: ಶೇಷಗಿರಿರಾವ್ ಕುಲಕರ್ಣಿ. ಕ್ರೌನ್ ೧/೮ ಆಕಾರದ ೧೮೦ ಪುಟಗಳು. ಬೆಲೆ ೧೨ ಆಣೆ.

ಸಾಧನ ಮುದ್ರಣಾಲಯ, ಧಾರವಾಡ.

ಸ್ವದೇಶಾಭಿಮಾನಿ

ತಾರೀಕು 8—11—1940

ಅಮೇರಿಕದ ಅಧ್ಯಕ್ಷ ಪದವಿ

ನವಂಬರ ಐದರಂದು, ಅಮೇರಿಕದಲ್ಲಿ ಅಧ್ಯಕ್ಷ ಪದವಿಗಾಗಿ ಚುನಾವಣೆ ನಡೆಯಿತು. ಕಳೆದ ಎರಡು ಬಾರಿಯೂ ಅಧ್ಯಕ್ಷರಾಗಿ ಚುನಾಯಿತರಾದ ಫ್ರಾಂಕ್ಲಿನ್ ಡೆಲಾನೋ ರೂಸ್‌ವೆಲ್ಟರು ಮೂರನೆಯ ಈ ಸಲವೂ ಅದಕ್ಕೆ ಉಮೇದ್ವಾರರಾಗಿ ನಿಂತಿದ್ದಾರೆ. ಅವರ ಪ್ರತಿಸ್ಪರ್ಧಿಯಾಗಿ ವೆಂಡಲ್ ವಿಲ್ಕಿ ಎಂಬ ಅಮೇರಿಕದ ಪ್ರಸಿದ್ಧ ವ್ಯಾಪಾರಿಗಳು ಹಾಗೂ ಕೋಟ್ಯಾಧೀಶರೊಬ್ಬರು ನಿಂತಿದ್ದಾರೆ. ಅಮೇರಿಕದ ೧೩೦ ಮಿಲಿಯ ಜನರ ಮತವು ಯಾವ ತೆರನಾಗಿದೆ, ರಾಷ್ಟ್ರಕ್ಕೆ ಯಾರ ಮೇಲೆ ವಿಶ್ವಾಸ ಹೆಚ್ಚಾಗಿದೆ ಎನ್ನುವ ವಿಚಾರವು ತಾರೀಕು ಐದರ ದಿನ ಆದ ಚುನಾವಣೆಯಿಂದ ತಿಳಿಯಬಹುದಾಗಿದೆ.

ವಿದೇಶ ರಾಜನೀತಿಯ ವಿಚಾರವಾಗಿ ಎರಡು ಜನ ಉಮೇದ್ವಾರರೂ ಏಕಮತವುಳ್ಳವರಾಗಿರುವರೆಂತೆ ಅವರ ಚುನಾವಣೆಯ ಪ್ರಚಾರಭಾಷಣಗಳಿಂದ ತಿಳಿದುಬರುತ್ತದೆ. ಬ್ರಿಟನಿಗೆ ಸಹಾಯ ಸಹಾನುಭೂತಿ ತೋರಿಸಬೇಕೆಂದು ಇಬ್ಬರೂ ಹೇಳುತ್ತಾರೆ; ಸರ್ವಾಧಿಕಾರಿಗಳ ಅಧಿಕಾರ ನೀತಿಯನ್ನು ಖಂಡಿಸುತ್ತಾರೆ; ಆದರೆ ವೆಂಡಲ್ ವಿಲ್ಕಿಯವರು ರೂಸ್‌ವೆಲ್ಟರ ಮೇಲೆ ಹೊರಿಸಿದ ಒಂದು ದೊಡ್ಡ ದೋಷವೆಂದರೆ, ಅಮೇರಿಕದಲ್ಲಿ ಇದುವರೆಗೆ ಮೂರನೆಯ ಬಾರಿಯೂ ಒಬ್ಬನೇ ಅಧ್ಯಕ್ಷನಾಗಿ ಬಂದುದಿಲ್ಲವೆಂಬುದು; ಅಮೇರಿಕದ ಆ ಅಲಿಖಿತ ಶಾಸನವನ್ನು ರೂಸ್‌ವೆಲ್ಟರು ಈಗ ಮೂರನೆಯ ಸಲವೂ ಮುರಿಯುತ್ತಿದ್ದಾರೆ ಎಂಬುದು ವಿಲ್ಕಿಯವರ ದೊಡ್ಡದೊಂದು ದೂಷಣೆಯಾಗಿದೆ. ಜೆಫರ್‌ಸನ್, ಜೇಕ್ಸನ್‌ರಂತಹ ಪ್ರಸಿದ್ಧ ಅಮೇರಿಕನ್ ರಾಜನೀತಿಜ್ಞರೂ ಈ ಮೂರನೆಯ ಸಲದ ಉಮೇದ್ವಾರಿಕೆಯ ಬಗೆಗಾಗಿ ಬಹಳ ಟೀಕಾತ್ಮಕವಾದ ಮಾತುಗಳನ್ನು ಭಾಷಣಗಳಲ್ಲಿ ಹೇಳಿರುತ್ತಾರೆ.

ಆದರೆ, ನಿಜವಾಗಿ ನೋಡಿದರೆ, ರೂಸ್‌ವೆಲ್ಟ ಮತ್ತು ವೆಂಡಲ್ ವಿಲ್ಕಿಯವರಿಗಿರುವ ವ್ಯತ್ಯಾಸವು ರಾಷ್ಟ್ರದ ಆರ್ಥಿಕಸ್ಥಿತಿಯ ವಿಚಾರದಲ್ಲಿ ಎಂಬುದು ಕಂಡುಬರುತ್ತದೆ; ರೂಸ್‌ವೆಲ್ಟರು ಭಂಡವಾಳಗಾರರ ಹಿತೈಷಿಗಳು ಅಲ್ಲ. ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ವಿಚಾರದಲ್ಲಿ ಅವರದು ಭಾಂಡವಾಳಿಗರಿಗೆ ಸರಿತೋರುವ ದಾರಿಯಲ್ಲ. ವಿಲ್ಕಿಸ್ವತಃ ಭಂಡವಾಳಗಾರರು, ದೊಡ್ಡ ವ್ಯಾಪಾರಿಗಳು; ಕೆಲವೇ ಮಂದಿ ಶ್ರೀಮಂತರ ಕೈಗಳಿಗೆ ತಮ್ಮ ತಂಗಡಿಗರ ಕೈಗಳಿಗೆ ರಾಷ್ಟ್ರದ ಸೂತ್ರಚಾಲನೆ ನಡೆಯಬೇಕೆಂದು ಅವರೀಗ ಮುಂದೆ ಬಂದಿರುತ್ತಾರೆ; ಅದರ ಸಲುವಾಗಿ, ಭಂಡವಾಳಿಗರ ನೆರವಿನಿಂದ, ಈ ಚುನಾವಣೆಯಲ್ಲಿ ಅಪರಿಮಿತ ದ್ರವ್ಯವನ್ನು ವ್ಯಯಿಸಿದ್ದಾರೆ.

ಅಮೇರಿಕದಲ್ಲಿ ಒಮ್ಮೆ ಅಧ್ಯಕ್ಷರನ್ನು ಚುನಾಯಿಸಿದ ಮುಂದಿನ ನಾಲ್ಕು ವರ್ಷಗಳ ವರೆಗೆ ಅವರು ಬಹಳ ಅಧಿಕಾರವನ್ನು ನಡೆಸಲು ಆಸ್ಪದವಿದೆ; ಆದಕಾರಣ ಈ ಚುನಾವಣೆಯಲ್ಲಿ ಬಹಳವಾಗಿ ಇಬ್ಬರೂ ಪ್ರತಿಸ್ಪರ್ಧಿಗಳೂ ಹೋರಾಡುತ್ತಿದ್ದಾರೆ.

ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ಕೆಟ್ಟಿರುವ ಈ ಕಾಲದಲ್ಲಿ ಅಮೇರಿಕದ ಚುನಾವಣೆ ಲೋಕ ಘೋರಣೆಯನ್ನು ರೂಪಿಸುವಂತಹುದು. ಆದಕಾರಣ ಯಾವಾತನೇ ಬರಲಿ, ಆತನಿಂದಲಾಗಿ ಅಂತರ್‌ರಾಷ್ಟ್ರೀಯ ಸ್ಥಿತಿಯಲ್ಲಿ ಪರಿಣಾಮವುಂಟಾಗಲಿದೆ. ಹೀಗಾಗಿ ಲೋಕದ ಜನರೆಲ್ಲರೂ ಈ ಚುನಾವಣೆಯ ಕಡೆಗೆ ಕುತೂಹಲ ದೃಷ್ಟಿಯಿಟ್ಟಿದ್ದಾರೆ.

ಭಾರತದ ರಕ್ಷಣೆ

ಭಾರತವನ್ನು ರಕ್ಷಿಸಿರಿ ಎಂಬ ಕೂಗು, ಇಂದು ಕೇಳಹತ್ತಿದೆ. ಕಳೆದ ನೂರೈವತ್ತು ವರ್ಷಗಳ ಅವಧಿಯಲ್ಲಿ ಬ್ರಿಟಿಷ್ ಸರಕಾರವು, ಭಾರತೀಯರೇ ಭಾರತವನ್ನು ರಕ್ಷಿಸಲು ಅನುಕೂಲವಾಗುವಂತೆ ಮಾಡದೆ ಇದ್ದುದರಿಂದ ಇಂದು ಈ ಕೂಗು ತೀವ್ರವಾಗಬೇಕಾದ ಪರಿಸ್ಥಿತಿಯು ಬಂದೊದಗಿದೆ. ಯುದ್ಧವು ಭಾರತವನ್ನು ಈಗ ಸಮೀಪಿಸಿದೆ ಮನೆಗೆ ಬೆಂಕಿಬೀಳುವ ಸಮಯ ಬಂದಿದೆಯೆಂಬುದರಿಂದ, ಈಗ ಬಾವಿ ತೋಡುವ ಸಾಹಸಮಾಡುವಂತೆ, ಭಾರತದ ರಕ್ಷಣೆಗಾಗಿ ಭಾರತೀಯರನ್ನು ತರಬೇತಿಗೊಳಿಸುವ ಕಾರ್ಯ ಚಟುವಟಿಕೆಗಳನ್ನು ನಾವು ನೋಡುತ್ತೇವೆ. ವಿಮಾನಬಲ ನೌಕಾಬಲ, ಪದಾತಿ ಬಲಗಳನ್ನು ಇಂದು ಹೆಚ್ಚಿಸಬೇಕಾಗಿದೆಯೆಂದು ಭಾರತ ಮಂತ್ರಿಗಳಿಂದ ಮೊದಲ್ಗೊಂಡು ಸರಕಾರಿ ಅಧಿಕಾರಿಗಳೆಲ್ಲರೂ ಮಾತನಾಡುತ್ತಾರೆ; ಚಟುವಟಿಕೆ ತೋರಿಸುತ್ತಾರೆ.

ಭಾರತವು ಇಂದೂ ಆತ್ಮರಕ್ಷಣೆಗೆ ಸಾಕಷ್ಟು ಶಸ್ತ್ರಸನ್ನದ್ಧವಾಗಿಲ್ಲವೆಂಬ ವಿಷಯವು ಬಹಳ ವಿಷಾದಾಸ್ಪದವಾದುದು. ಭಾರತದಂತಹ ವಿಶಾಲ ರಾಷ್ಟ್ರದ ಅಮಿತ ಜನಸಂಖ್ಯೆಯ ವಿಚಾರವನ್ನು ಮಾಡಿದರೆ ಇಲ್ಲಿ ಸೈನಿಕರಿರುವ ಸಂಖ್ಯೆ ಬಹಳ ಕಡಿಮೆಯೆನಬೇಕು. ಭಾರತದಲ್ಲಿ ಕೇವಲ ನಾಲ್ಕು ಬಾಂಬರ್ ಸ್ಕ್ವಾಡ್ರನ್ ಗಳಿದ್ದು, ಸೈನ್ಯದೊಡನೆ ಸಹಕರಿಸುವ ನಾಲ್ಕು ಸ್ಕ್ವಾಡ್ರನ್ ಬೇರೆ ಬೇರೆ ವಿಮಾನಗಳಿರುತ್ತವೆ. ಯುದ್ಧವಾರಂಭವಾದ ಮೇಲೆ ಇಲ್ಲಿನ ಜನರಿಂದ ಹಣವನ್ನು ವಸೂಲುಮಾಡಿ ಕೆಲವು ವಿಮಾನಗಳನ್ನು ಕಟ್ಟಿಸುತ್ತಿರುವರು. ಇವಿಷ್ಟು ಭಾರತದಂತಹ ಒಂದು ವಿಶಾಲ ರಾಷ್ಟ್ರದ ರಕ್ಷಣೆಯ ವಿಷಯದಲ್ಲಿ ತೀರಾ ದುರ್ಲಕ್ಷ್ಯ ಸಂಗತಿಗಾಗಿರುವವು; ಈ ವಿಷಯದ ಪ್ರಯತ್ನವು ಬಹಳ ನ್ಯೂನವಾಗಿದೆಯೆನ್ನಲು ಅಡ್ಡಿಯಿಲ್ಲ.

ಪ್ರಾಚೀನ ಕಾಲದಿಂದಲೇ ಭಾರತವು ನೌಕಾಬಲದಲ್ಲಿ ಪ್ರಖ್ಯಾತಿ ಪಡೆದ ದೇಶ. ಆದರೆ ಬ್ರಿಟಿಷರು ತಮ್ಮ ನೂರೈವತ್ತು ವರ್ಷಗಳ ಈ ದೀರ್ಘ ಅಧಿಕಾರಾವಧಿಯಲ್ಲಿಯೂ ಆ ವಿಷಯದಲ್ಲಿ ಸಾಕಷ್ಟು ಪ್ರಗತಿ ಚಟುವಟಿಕೆಗಳನ್ನು ತೋರಿಸಿಲ್ಲವೆಂಬುದು ಇನ್ನೊಂದು ವಿಷಾದದ ಸಂಗತಿಯಾಗಿದೆ. ಭಾರತವನ್ನು ಜಲದಾಳಿಯಿಂದ ಕಾಪಾಡುವ ಭಾರತೀಯ ನೌಕಾಪಡೆ, ಆಧುನಿಕ ನವೀನ ಶಾಸ್ತ್ರೋಪಕರಣಗಳೊಡನೆ ತಯಾರಿಸಲ್ಪಡದಿರುವುದು ಅತ್ಯಂತ ಶೋಚನೀಯವೇ ಸರಿ. ಕೆಲಕಾಲದಿಂದ ಭಾರತದಲ್ಲಿದ್ದ ನೌಕಾಸೈನ್ಯವೆಂದರೆ ಐದು ಹಡಗಗಳು, ಒಂದು ಕಾವಲು ಹಡಗ, ಒಂದು ಪೆಟ್ರೋಲ್ ಹಡಗ, ಒಂದು ಸರ್ವೆ ಶಿಪ್ ಇವು ಇಷ್ಟು ಮಾತ್ರ. ಅದರಲ್ಲಿ ಆ ಪೆಟ್ರೋಲ್ ಶಿಪ್ ಶತ್ರುಗಳ ತೋಟೆಗೆ ಬಲಿಯಾಗಿದೆ. ಆ ಮೇಲೆ, ಯುದ್ಧ ಪ್ರಾರಂಭವಾದ ಮೇಲೆ ನೌಕಾಬಲವನ್ನು ಬೆಳಸಿದ್ದರು. ಹೆಸರಿಗೆ ಅದು ಭಾರತನೌಕಾಬಲವಾಗಿದ್ದರೂ ಅದು ಭಾರತೀಯರಿಂದ ಕೂಡಿಲ್ಲ. ಎಲ್ಲ ಅಧಿಕಾರಗಳಲ್ಲಿಯೂ ಈಗ ಭಾರತೀಯರನ್ನೇ ಹೆಚ್ಚುಹೆಚ್ಚಾಗಿ ಸೇರಿಸುತ್ತಿರುವಾಗ ಬಲದಲ್ಲಿ ಹಾಗೆ ಮಾಡದಿರುವ ಕಾರಣವೇನೋ ಗೊತ್ತಾಗಲಾರದು. ನೌಕಾವಿದ್ಯೆಯಲ್ಲಿ ಭಾರತೀಯರು ಆಂಗ್ಲ ನಾವಿಕರಿಂದ ಕೆಳಗಿಲ್ಲ. ಹೇಗಿದ್ದರೂ ಇಂದಿನ ನೌಕಾಬಲವು ಭಾರತದ ರಕ್ಷಣೆಗೆ ಸಾಲದು. ಈ ವಿಷಯದಲ್ಲಿಯೂ ಭರದಿಂದ ಸರಕಾರವು ಗಮನಿಸಬೇಕಾಗಿದೆ.

ಇಂದು ಭಾರತದ ರಕ್ಷಣೆ ಯಾವ ಮಟ್ಟಿಗೆ ಇದೆ ಆಗುತ್ತಿದೆ ಎಂಬುದರ ಕುರಿತು ಅಂಕಸಂಖ್ಯೆಗಳನ್ನು ನೋಡಿದರೆ ಭಾರತೀಯರು ತೀರಾ ವಿಷಾದಿಸುವಂತಾಗಿದೆ.

ಮೈಸೂರಿನಲ್ಲಿ ನಿರ್ಬಂಧ

“ಮೈಸೂರಿಗೆ ಜವಾಬ್ದಾರಿ ಸರಕಾರವು ಮುಂದೆ ಹತ್ತು ವರ್ಷದಾಟಿ ಸಿಕ್ಕಿದರೂ ನಾನು ಅದನ್ನು ವಿಶೇಷವಾಗಿ ಎಣಿಸುವುದಿಲ್ಲ, ಆದರೆ ಚುನಾವಣೆಯಲ್ಲಿ ಸ್ವಾತಂತ್ರ್ಯವಿರಬೇಕೆಂದು ನಾನು ಬಯಸುತ್ತೇನೆ; ಕಾಂಗ್ರೆಸು ಉಮೇದ್ವಾರರು ತಮ್ಮ ಚುನಾವಣೆಯ ಪ್ರಚಾರಗಳನ್ನು ಶುದ್ಧ ಗೌರವಕರ ರೀತಿಯಲ್ಲಿ ಮಾಡಬೇಕಾಗಿ ನಾನು ಅಪೇಕ್ಷಿಸುತ್ತೇನೆ;”

ಹೀಗೆಂದು ಮೈಸೂರು ಸಂಸ್ಥಾನದ ಮುಂಬರುವ ಚುನಾವಣೆಗಾಗಿ ಕಾಂಗ್ರೆಸು ಚುನಾವಣಾ ಪ್ರಚಾರ ಕಾರ್ಯವನ್ನು ಪ್ರಾರಂಭಿಸುತ್ತಾ, ಬೆಂಗಳೂರಲ್ಲಿ ಮದ್ರಾಸಿನ ಮಾಜಿ ಮಂತ್ರಿಗಳಾದ ಶ್ರೀ. ಗೋಪಾಲ ರೆಡ್ಡಿಯವರು ಹೇಳಿದರು. ಶ್ರೀ ಕಾಳೇಶ್ವರ ರಾಯರಿಗೂ ಅವರಿಗೂ ಮುಂದೆ ಮೈಸೂರಲ್ಲಿ ಯಾವುದೇ ಸಾರ್ವಜನಿಕ ಭಾಷಣಮಾಡಬಾರದಾಗಿ ಸರಕಾರದ ನಿಷೇಧ ಪತ್ರಿಕೆಯೂ ಕೊಡಲಾಯಿತು!

ಪಟ್ಟಾಭಿಷೇಕ ಕಾಲದಲ್ಲಿ ರಾಜಕೀಯ ಕೈದಿಗಳನ್ನೆಲ್ಲಾ ಸೆರೆಮನೆಯಿಂದ ಬಿಟ್ಟುಬಿಟ್ಟರು! ಜನರೆಲ್ಲಾ ಹೊಸತೊಂದು ಆಶೆ ಆಕಾಂಕ್ಷೆಗೊಂಡರು; ಹಳೆ ರೀತಿಯು ಹೋಗಿ, ಹೊಸಕಾಲದ ಬೆಳಕು ಬರುವುದೆಂದು ಜನರು ಹಾರೈಸಿದ್ದರು. ಜನತೆಯ ಈ ಪ್ರತೀಕ್ಷೆಯು ನಿರಾಶೆಗೊಳಗಾಗಿದೆ.

ಶ್ರೀ ಗೋಪಾಲರೆಡ್ಡಿ, ಶ್ರೀ ಕಾಳೇಶ್ವರರಾಯರಂಥವರು, ಮರ್ಯಾದಿತ ಗೃಹಸ್ಥರು; ನೆರೆಯ ಪ್ರಾಂತದಲ್ಲಿ ಒಬ್ಬರು ಮಂತ್ರಿಗಳಾಗಿ ಗೌರವ ಪಡೆದವರು. ಇನ್ನೊಬ್ಬರು ಮುಖ್ಯ ಪಾರ್ಲಿಮೆಂಟರಿ ಸೆಕ್ರಟರಿಗಳಾಗಿ ಮೆಚ್ಚುಗೆ ಹೊಂದಿದವರು. ಇಂಥವರನ್ನು—ಮಾನ್ಯ ಗೃಹಸ್ಥರನ್ನು ಮಾತನಾಡದಂತೆ ನಿರ್ಬಂಧಿಸುವ ಕಾರ್ಯವು ಮೈಸೂರಿನ ಕೀರ್ತಿಗೆ ಭೂಷಣವಾಗಲಾರದು.

ಟೆಕ್ಸ್ಟ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ವಿದ್ವಾನ್ ಶ್ರೀ। ಕೆ. ಕೆ. ರೈ, ವಿರಚಿತ

ವ್ಯಾಕರಣ ಮತ್ತು ಪ್ರಬಂಧ

೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ

೦—೩—೦ ೦—೩—೬ ೦—೪—೦

ಶ್ರೀ। ಎಸ್. ರಾಮಕೃಷ್ಣಾಚಾರ್, ಬಿ. ಎ; ಎಲ್. ಟಿ. ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬ನೆಯ ತರಗತಿಗೆ, ೦—೬—೦ ೭ನೆಯ ತರಗತಿಗೆ, ೦—೬—೦

ಹೊಸ ಪುಸ್ತಕಗಳು

ಪ್ರಾಥಮಿಕ ಲಘುವಿಜ್ಞಾನ (ಶ್ರೀ। ಎಸ್. ರಾಮಕೃಷ್ಣಚಾರ್)

೮ನೆಯ ತರಗತಿಗೆ ೦—೬—೦

ವ್ಯಾಕರಣ ಮತ್ತು ಪ್ರಬಂಧ (ಶ್ರೀ। ಕೆ.ಕೆ. ರೈ) ೪ ಮತ್ತು ೫ನೆಯ ತರಗತಿಗಳಿಗಾಗಿ ೦—೩—೦

ಈ ವಾರದಲ್ಲಿ ಪ್ರಕಟವಾಗಲಿದೆ—

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಹುಟ್ಟು!

ಶ್ರೀ। ಕಯ್ಯಾರ ಕಿಞ್ಞಣ್ಣರೈ, ವಿದ್ವಾನ್, ಇವರಿಂದ ರಚಿತವಾದ,

‘ಮಕ್ಕಳ ಪದ್ಯಮಂಜರಿ’.

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ

೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ

ಎರಡನೆಯ ಪುಸ್ತಕ

೪ನೆಯ ಐದನೆಯ ತರಗತಿಗಳ ಬಾಲಕರಿಗಾಗಿ

ದೊರೆಯುವ ಸ್ಥಳ:— ಶಾರದಾ ಛಾಪಖಾನೆ ಮಂಗಳೂರು.

ಸರ್ವಾಧಿಕಾರಿಗಳೊಡನೆ ಗ್ರೀಸು ಕಾದಾಡುತ್ತಿದೆ!

"ಗ್ರೀಸಿನ ಜನರು, ಪ್ರಬಲ ಇಚ್ಛಾಶಕ್ತಿಯಿಂದ, ತಮ್ಮ ರಾಜ ಮತ್ತು ಸೇನಾಪತಿ ಮೆಟಾಕ್ಸಸ್ ಇವರ ಆಶ್ರಯದಲ್ಲಿ ತಮ್ಮ ದೇಶಕ್ಕಾಗಿ, ಭದ್ರತೆಗಾಗಿ, ಸ್ವಾತಂತ್ರ್ಯ ಗೌರವಗಳಿಗಾಗಿ ಕಾದಾಡುವರು; ಗ್ರೀಕರು ಅಗತ್ಯಬಿದ್ದರೆ, ಸಾಯಲೂ ನಿಶ್ಚಯ ಮಾಡಿರುವರು"

ಗ್ರೀಸು ರಾಜ್ಯದ ಸೂಕ್ಷ್ಮ ಪರಿಚಯ

—ಹೀಗೆಂದು ಇಟಲಿಯು ಆಕ್ರಮಣ ಮಾಡಿದಾಗ ಯುದ್ಧವು ಆರಂಭವಾಗಲು ಗ್ರೀಸು ದೇಶವು ತನ್ನ ಧೀರ ನಿರ್ಧಾರವನ್ನು ಸಾರಿತು!

ಗ್ರೀಸು ಬಾಲ್ಕನ್‌ನಲ್ಲಿ ಬಹಳ ಮಹತ್ವದ ಆಯ ಸ್ಥಳದಲ್ಲಿದೆ; ಪೂರ್ವ ಭೂಮಧ್ಯ ಸಾಗರದ ಪ್ರವೇಶ ಘಟ್ಟದಲ್ಲಿಯೂ, ಡಾರ್ಡನೆಲ್ಸ್‌ನ ಪ್ರವೇಶ ಮಾರ್ಗದಲ್ಲಿಯೂ ಇದು ಇರುತ್ತ, ಯೂರೋಪಿನ ರಾಜಕಾರಣ ಪಟುಗಳಿಗೆ ಇದರ ಮೇಲೆ ಹಲಕಾಲದಿಂದ ಕಣ್ಣು ಬಿದ್ದಿತ್ತು.

ಂ ಂ ಂ ಂ

ಕಳೆದ ವರ್ಷ ಏಪ್ರಿಲಿನಲ್ಲಿ ಮುಸಲೋನಿಯು ಅಲ್ಬೇನಿಯವನ್ನು ಆಕ್ರಮಿಸಿದ ನಂತರ ಆದ, ತನ್ನ ಫ್ಯಾಸಿಸ್ಟ್ ಸರಕಾರ ಗ್ರೀಸಿಗೆ, ಅದರ ಭೂಮಿ ಮತ್ತು ಗಡಿನಾಡುಗಳಲ್ಲಿ ತೊಂದರೆ ಕೊಡುವುದಿಲ್ಲವಾಗಿ ಭರವಸೆಯ ಮಾತನ್ನು ಕೊಟ್ಟಿದ್ದನು.

ಮತ್ತೆ ಜೂನಿನಲ್ಲಿ, ಇಟಲಿಯು ಹೇಡಿಯಂತೆ ಹಿಂದಿನಿಂದ ಬಂದು, ಫ್ರಾನ್ಸಿನ ಬೆನ್ನಿಗೆ ಇರಿದಾಗಲೂ, ತನ್ನ ನೆರೆಕರೆಯ ರಾಜ್ಯಗಳ ಮೇಲೆ ಇಟಲಿಯು ಯುದ್ಧ ಮಾಡಲು ಹೋಗುವುದಿಲ್ಲವೆಂದ ಸ್ಪಷ್ಟ ಪಡಿಸಿದ್ದನು.

ಂ ಂ ಂ ಂ

ಹೀಗೆ ಮುಸಲೋನಿ ಮಾತುಕೊಟ್ಟಿದ್ದರೂ ಇಟಲಿಯ ಪತ್ರಿಕೆಗಳು ಗ್ರೀಸಿನ ವಿರೋಧ ತೀವ್ರ ಪ್ರಚಾರವನ್ನು ಸಾಗಿಸುತ್ತಿದ್ದುವು. ಮತ್ತೆ ಕಳೆದ ಅಗಸ್ಟಿನಲ್ಲಿ ಅಲ್ಬೇನಿಯದ ಒಬ್ಬ ದೇಶಾಭಿಮಾನಿಯ ಕೊಲೆಯ ಕಾರಣವಾಗಿ ಈ ಎರಡು ದೇಶಗಳೊಳಗೆ ವಿಷಮತೆಯು ಎದ್ದಿತ್ತು. ಮಾತ್ರವಲ್ಲದೆ ಗ್ರೀಸಿನ ಹಡಗವೊಂದು ಇಟಲಿಯ ಟಾರ್ಪೆಡೋ ಬಡಿದು, ಗ್ರೀಸ್ ಹಡಗವನ್ನು ಮುಳುಗಿಸಿತ್ತು. ಇದಕ್ಕಾದರೂ ಗ್ರೀಸು ಕೆರಳದೆ, ಶಾಂತವಾಗಿಯೇ ಇತ್ತು.

ಆದರೆ, ಇಂದು ಯಾವುದೇ ಕಾರಣವಿಲ್ಲದೆ ಹೆಚ್ಚಿನ ಯಾವುದೇ ಅಪರಾಧವಿಲ್ಲದೆ, ಕೇವಲ ದುಸ್ವಾರ್ಥದಿಂದ ಇಟಲಿಯು ಗ್ರೀಸನ್ನು ಮುತ್ತಿ ಬಂದಿದೆ! "ಗ್ರೀಸು ಸಾಯುವ ತನಕ ಹೋರಾಡುವುದೆ"ಂದು ಅದರ ಪ್ರಧಾನಿ ಮೆಟಾಕ್ಸಸರು ಸಾರಿದ್ದಾರೆ.

ಇಂದು ಇಟಲಿ ಗ್ರೀಸುಗಳೊಳಗೆ ಹೀಗೆ ಭಯಂಕರ ಕಾದಾಟ ನಡೆಯುತ್ತಿದೆ.

ಂ ಂ ಂ ಂ

"ಒಬ್ಬನು ಹೆದರಿಕೊಂಡೇ ಬದುಕಿರಬೇಕಾಗಿದ್ದರೆ, ಸಾಯುವುದೇ ಒಳ್ಳೆಯದು" ಹೀಗೆಂದು ಅವರು ಇತ್ತೀಚೆಯ ಒಂದು ಭಾಷಣದಲ್ಲಿ ಸಾರಿದ್ದರು. ಆ ಮಾತು ಇಂದು ಪ್ರಮಾಣ ಸಿದ್ಧವಾಗಿದೆ. ಪೂರ್ವ ಪುರಾತನ ಸಂಸ್ಕೃತಿಯ ನೆಲೆವೀಡಾದ ಗ್ರೀಸು ತನ್ನ ಗೌರವ ಸ್ವಾತಂತ್ರ್ಯ ರಕ್ಷಣೆಗಳ ಸಲುವಾಗಿ ಸಾಯುವ ತನಕವೂ ಹೋರಾಡಲು ಸಿದ್ಧವಾಗಿ ನಿಂತಿದೆ.

ಂ ಂ ಂ ಂ

ಗ್ರೀಸು, ಇಂದು ೭೦೦ ಮೈಲು ವಿಸ್ತೀರ್ಣದ ನೆಲಜಲ ಗಡಿಯನ್ನೂ ೮೦೦೦ ಮೈಲ ವಿಸ್ತೀರ್ಣದ ದ್ವೀಪಗಳ ಗಡಿಯನ್ನೂ ರಕ್ಷಿಸಬೇಕಾಗಿದೆ.

ಇದರ ರಕ್ಷಣೆಗೆ ಇಂದು ಗ್ರೀಸಿನಲ್ಲಿ ಎಂಟು ಡಿವಿಜನುಗಳ ಸೈನ್ಯ ಸಂಗ್ರಹವುಂಟು. ಆ ಮೇಲೆ ತರಬೇತಿ ಹೊಂದಿ ಸಿದ್ಧರಾದ ಅರ್ಧಮಿಲಿಯ ಸೈನಿಕರು ಬೇಕಾದಾಗ ಇವರಿಗೆ ನೆರವಾಗಲು ತಯಾರಾಗಿದ್ದಾರೆ. ಇಷ್ಟು ಅಲ್ಲಿನ ಪ್ರಧಾನ ಮೆಟಕ್ಸಾಸರ ಅವಿರತ ಪರಿಶ್ರಮದ ಫಲ. ತನ್ನ ನಾಲ್ಕು ವರ್ಷಗಳ ಅಧಿಕಾರಾವಧಿಯಲ್ಲಿ ಒಳ್ಳೆಯ ನಿಪುಣ ರಾಜನೀತಿಜ್ಞರಾದ ಅವರು ಸೈನ್ಯಕ್ಕಾಗಿಯೇ ೧೫೦೦೦೦೦೦ ಪವನ ಗಳನ್ನು ಮೀಸಲಿಟ್ಟು ವ್ಯಯಿಸಿದ್ದಾರೆ.

ಸಮುದ್ರಶಕ್ತಿಯಲ್ಲಿಯೂ ಗ್ರೀಸು ಹಿಂದುಳಿದಿಲ್ಲ. ಎರಡು ಕ್ರೂಯಿಸರುಗಳು, ಹನ್ನೆರಡು ಡಿಸ್ಟ್ರಾಯರುಗಳು, ಆರು ದೊಡ್ಡ ಜಲಾಂತರ್ಗಾಮಿ ನೌಕೆಗಳು, ಹಲವು ಟಾರ್ಪೆಡೋಗಳೂ ಇವೆ. ಇವೆಲ್ಲದಕ್ಕೂ ಬ್ರಿಟಿಷ್ ನಾವಿಕರ ಶಿಸ್ತಿನಲ್ಲಿ ತರಬೇತಿ ಹೊಂದಿದ ನಾವಿಕರೇ ಸಿದ್ಧರಾಗಿರುವರು.

ಂ ಂ ಂ ಂ

ಗ್ರೀಸು ದುರ್ಬಲವಾಗಿದ್ದರೆ, ವಿಮಾನಪಡೆಯಲ್ಲಿ. ೧೫೦ಕ್ಕಿಂತ ಮಿಕ್ಕ ಉತ್ತಮ ಮೆಶಿನುಗಳು ಅವರಲ್ಲಿ ಇರುವುದಿಲ್ಲ, ಆದರೆ ಬ್ರಿಟನಿಂದ ಒದಗುವ ಸಹಾಯದ ಮೂಲಕ ಈ ನ್ಯೂನತೆಯು ಪೂರೈಸುವುದೆಂದ ನಂಬಬಹುದಾಗಿದೆ.

ಂ ಂ ಂ

ಗ್ರೀಸು ಹಲವು ಶತಮಾನಗಳ ವರೆಗೆ ಟರ್ಕಿ ಸಾಮ್ರಾಜ್ಯದ ಒಂದು ಭಾಗವಾಗಿಯೇ ಇತ್ತು. ಕಳೆದ ೧೮೨೧ರಿಂದ ೧೮೩೨ರ ಅವಧಿಯಲ್ಲಿ ಅದು ತನ್ನ ಸ್ವಾತಂತ್ರ್ಯವನ್ನು ಗಳಿಸಿಕೊಂಡಿತು.

೧೮೩೦ರಲ್ಲಿ ಅದು ತನ್ನ ಸಾಮ್ರಾಜ್ಯವನ್ನು ಪ್ರಕಟಮಾಡಿತು. ಅಂದಿನಿಂದ ಅದು ಬ್ರಿಟನು, ರಶ್ಯ, ಫ್ರಾನ್ಸುಗಳ ರಕ್ಷಣೆಯು, ಸಹಕಾರದ, ಭದ್ರತೆಗಳನ್ನೂ ಪಡೆಯಿತು.

ಂ ಂ ಂ ಂ

ಬಹಳ ಕಾಲದ ಮೇಲೆ ರಾಜಾ ಕಾನ್ಸ್ಟಂಟೈನ್ ಮತ್ತು ಪ್ರಧಾನಿ ವೆನಿಜೆಲೋಸರೊಳಗೆ ಆದ ವಿವಾದದಲ್ಲಿ ರಾಜನು ಸಿಂಹಾಸನ ತ್ಯಾಗಮಾಡಬೇಕಾಗಿ ಬಂದು, ಗ್ರೀಸು ಮಿತ್ರರಾಷ್ಟ್ರಗಳ ಪಕ್ಷವನ್ನು ೧೯೧೭ರಂದು ಸೇರಿತು.

ಶಾಂತಿ ಪರಿಷತ್ತಿನಲ್ಲಿ ಅದು ತನ್ನ ಗಡಿಯನ್ನು ಬಲ್ಗೇರಿಯದ ಕಡೆಗೆ ವಿಸ್ತರಿಸುವ ಹಕ್ಕನ್ನೂ ಪಡೆಯಿತು.

ಇಂದಿನ ರಾಜ ಜಾರ್ಜ್ IIನೆಯು ೧೯೩೫ರಂದು ಸಿಂಹಾಸನವೇರಿದನು. ಹನ್ನೊಂದು ವರ್ಷಗಳ ಪ್ರಜಾಸತ್ತಾತ್ಮಕ ಸರಕಾರದ ಮೇಲೆ ಗ್ರೀಸು ರಾಜಾಧಿಕಾರವನ್ನು ಒಪ್ಪಿಕೊಂಡಿತು.

ಂ ಂ ಂ ಂ

ಗ್ರೀಸಿನಲ್ಲಿ ೨೧ರಿಂದ ೫೦ ವರ್ಷ ಪ್ರಾಯದೊಳಗಿನವರಿಗೆ ಸೈನಿಕ ಶಿಕ್ಷಣವು ಕಡ್ಡಾಯ. ಈ ಒತ್ತಾಯದ ಶಿಕ್ಷಣವು ಎರಡು ವರ್ಷಗಳ ವರೆಗೆ ಇದೆ.

ಇಂದು ಗ್ರೀಸಿನ ಪ್ರಧಾನ ಮಂತ್ರಿ ಮಾತ್ರವಲ್ಲ ಸರ್ವಾಧಿಕಾರಿಯೇ ಜನರಲ್ ಮೆಟಕ್ಸಾಸರು ೧೯೩೬ರಿಂದ ಅವರ ಈ ಅಧಿಕಾರದಲ್ಲಿರುವರು.

ಂ ಂ ಂ ಂ

ಏಳ ಮಿಲಿಯ ಜನಸಂಖ್ಯೆಯುಳ್ಳ ಗ್ರೀಸಿನಲ್ಲಿ ಸುಮಾರು ಆರು ಮಿಲಿಯ ಜನರು ಪ್ರಾಚೀನ ಧರ್ಮದೇವಾಲಯಗಳಿಗೇ ಸೇರಿದವರು. ಇತರರಿಗೂ ಅಲ್ಲಿ ಸ್ವಧರ್ಮ ಸ್ವಾತಂತ್ರ್ಯವಿದೆ.

ಗ್ರೀಸ ಬಹಳ ಕಲಾಕೌಶಲದ ನಾಡು. ಜಿಮ್ಮೆ ಸಂಸ್ಕೃತಿಯ ಉಚ್ಚ ಪದವಿಯನ್ನೇರಿದ ರಾಷ್ಟ್ರ.

ಪುರಾಣಗಳಲ್ಲಿ ಗ್ರೀಕರೂ ಬಹಳ ಪ್ರಶಂಸಿತರಾದ ಜನರು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಕ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಶರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಹೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ–ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಖದಾಯಕದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ ಛಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ, ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ4

Sole Manufacturer: Dr. D.N. JASANI, (S.B M.) Vithalbhai Patel Road, BOMABY 4

Madras Agent: Appah & Co, China Bazar Madras.

ರಚನಾತ್ಮಕ ಕಾರ್ಯಕ್ರಮ

ಗ್ರಾಮೋದ್ಧಾರ ಮತ್ತು ವಿನೋಬಾಜಿ

(ಲೇಖಾಂಕ ೩)

[ಬರೆದವರು: ಸಿ. ಪಿ. ಕಾಮತ್ ನಲ್ವಾಡಿ ವರ್ಧಾ.]

ಗ್ರಾಮೋದ್ಧಾರದ ವಿಶಾಲ ಕಾರ್ಯಕ್ಷೇತ್ರವನ್ನು ಕಲ್ಪಿಸಲ್ಲು ... ದಂತೆ ಮಹಾತ್ಮರು ಇಂತಹ ಕ್ಷೇತ್ರ ವಿಸ್ತಾರವನ್ನು ಸಂಪಾದಿಸಲು ಯೋಗ್ಯರಾದವರನ್ನೇ ತರಬೇತಿ ಮಾಡುವ ಕಾರ್ಯದಲ್ಲಿಯೂ ಬಹಳ ಕಷ್ಟಪಟ್ಟಿರುವರು. ಇವರು ದೇಶದ ಪ್ರಭಾವಶಾಲಿ ರಾಜಕೀಯ ದುರೀಣರನ್ನು ತಮ್ಮ ಸ್ಥೀಯತ್ವ ಒಲಿಸಿಕೊಂಡುದು ಆ ಪ್ರತ್ಯೇಕ ಕಾರ್ಯದ ನಿರ್ವಹಣೆಯಲ್ಲಿ ದೇಶಭಕ್ತರು ಅತಿರೇಕ ಉತ್ಸಾಹಿತರಾಗಲೆಂದು; ವಿನಾ ರಾಜಕೀಯ ದುರೀಣರನ್ನು ರಚನಾತ್ಮಕ ನವಾಬ್ದಾರಿಗೆ ಸೆಳೆಯುವುದು ಮಹಾತ್ಮರ ಉದ್ದೇಶವಲ್ಲ. ರಾಜಕೀಯವು ಅನಿಶ್ಚಿತತೆಯ ಭವಿಷ್ಯವುಳ್ಳದ್ದು. ರಚನಾತ್ಮಕ ಕಾರ್ಯಕ್ರಮವು ನಿಯಮಿತ ಶಿಸ್ತಿನಿಂದ ಪ್ರಗತಿ ಹೊಂದಿ ದೇಶ ಕಲ್ಯಾಣದ ನಿಶ್ಚಿತ ಗುರಿಯನ್ನು ತಲಪುವಂತಹುದು.

ಆದುದರಿಂದ ರಾಜಕೀಯ ರಂಗವೇ ಬೇರೆ. ರಚನಾತ್ಮಕ ಕಾರ್ಯ ವಿಭಾಗವೇ ಪ್ರತ್ಯೇಕ. ರಚನಾತ್ಮಕ ಕಾರ್ಯಕರ್ತರುಗಳು ರಾಜಕೀಯದಲ್ಲಿ ಯಾವ ಭಾಗವನ್ನೂ ವಹಿಸಬಾರದೆಂಬ ನಿರ್ದಿಷ್ಟ ನಿಯಮವಿದೆ. ಈ ಎರಡು ಕ್ಷೇತ್ರಗಳನ್ನು ವಿಂಗಡಿಸಿದುದರಿಂದ ಗ್ರಾಮೋದ್ಧಾರದ ಕಾರ್ಯಕ್ರಮವು ಕ್ರಮವಾಗಿ ಪ್ರಗತಿ ವಿಕಾಸಗಳನ್ನು ಹೊಂದಲು ಅವಕಾಶವಾಯಿತು.

ಮಹಾತ್ಮರ ಗ್ರಾಮೋದ್ಧಾರ ದೃಷ್ಟಿ

ಒಂದು ಸಂಸ್ಥೆಗಾಗಿ ಧನ ಸಂಗ್ರಹಿಸುವ ಕೆಲಸವನ್ನು ಮಹಾತ್ಮರು ಕ್ಷಣದಲ್ಲಿ ಮಾಡಬಲ್ಲರು. ತಿಲಕರ ಮರಣಾನಂತರ ಒಂದು ತಿಂಗಳಲ್ಲಿ ಅವರ ಸ್ಮಾರಕ ನಿಧಿಗಾಗಿ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದವರವರು, ಹಣ ಸಂಗ್ರಹಿಸುತ್ತಿರುವಾಗ ಪ್ರಚಾರ ಕೂಡಾ ಮಾಡುತ್ತಾರೆ. ಕೆಲವು ವರ್ಷಗಳ ಹಿಂದೆ ದರಿದ್ರ ನಾರಾಯಣ ಸೇವೆಗೆಂದು ಅನೇಕ ಹಿಮಾಚಲ ಸಂಚರಿಸಿ ವಿಪುಲ ಧನವನ್ನು ಕೂಡಿಸಿದುದು ಈ ಗ್ರಾಮೋದ್ಧಾರದ ಕಾರ್ಯಕ್ಕಾಗಿಯೆ. ಅನಂತರದ “ದಿಗ್ವಿಜಯ” ಅವರದು ಹರಿಜನ ನಿಧಿಗಾಗಿ.

ಧನದ ವಿಚಾರ ... ಯಿತು. ಇನ್ನು ಆ ಕೆಲಸ ಮಾಡುವ ಜನರ ವಿಚಾರ. ಇದು ಅತ್ಯಂತ ಕಠಿಣದ ಕೆಲಸ. ಉತ್ತಮ ನೈತಿಕ ವಿಶಿಷ್ಟತೆಯುಳ್ಳ ಮನುಷ್ಯರಾಗಬೇಕು. ಆದರ್ಶ ಜೀವಿಗಳಾಗಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ಅತ್ಯಂತ ತ್ಯಾಗಪೂರ್ಣಿಗಳೇ ಬೇಕು. ಮಹಾತ್ಮರಿಗಿಂತಲೂ ಹೆಚ್ಚಿನ ನಿಷ್ಠೆಯುಳ್ಳ ವ್ಯಕ್ತಿಗಳು ಇದ್ದರೆನೇ ಈ ಗ್ರಾಮೋದ್ಧಾರದ ಕಾರ್ಯವು ಯಶಸ್ವಿಯಾಗಿ ನಡೆದೀತು.

ವಿನೋಬರ ವ್ಯಕ್ತಿತ್ವ

ವಿನೋಬಾಜಿಯೆಂದರೆ ಮಹಾತ್ಮರ ... ಬಹಳ ... ವ್ಯಕ್ತಿ

ಈ ಮಹಾನುಭಾವರು ಮಹಾತ್ಮಾಜಿಯವರ ಪಟ್ಟಶಿಷ್ಯನೆಂದೆಣಿಸಿಕೊಂಡಿದ್ದಾರೆ. ಅಖಂಡ ಬ್ರಹ್ಮಚಾರಿ. ವಯಸ್ಸು ನಾಲ್ವತ್ತೈದು; ಆದರೂ ಇಪ್ಪತ್ತು ವಯಸ್ಸಿನ ತರುಣರಂತೆ ಕಾಣುವರು. ಸುವರ್ಣದಂತೆ ಮೈಬಣ್ಣವಿದ್ದು, ಚಿತ್ತಾಕರ್ಷಕ ಶರೀರ ಗಾಂಭೀರ್ಯದಿಂದ ಕೂಡಿದ್ದ ದೇಹ ಪ್ರಕೃತಿ. ಯಾವ ಮನುಷ್ಯನನ್ನಾದರೂ ಒಂದು ಕ್ಷಣಕ್ಕೆ ಮುಗ್ಧಗೊಳಿಸದಿರದು. ಅಂತಹ ಸುಂದರ ವ್ಯಕ್ತಿತ್ವ. ಮಾತ್ರವಲ್ಲ ಮುಖದಲ್ಲಿ ಅಸಾಮಾನ್ಯ ಪ್ರಸನ್ನತೆ.

ಗಾಂಧೀ ಶಿಷ್ಯತ್ವ ಸ್ವೀಕಾರ

ಮಹಾತ್ಮರನ್ನು ಬೆರಗುಗೊಳಿಸಿದ ಕರ್ಮಯೋಗಿ ಈ ವಿನೋಬಾಜಿ. ೧೯೧೭ರಲ್ಲಿ ಇನ್ನೂ ಕಾಲೇಜ್ ವಿದ್ಯಾರ್ಥಿ: ಕಲಿಯುತ್ತಿರುವಾಗಲೇ ಇವರಿಗೆ ವೈರಾಗ್ಯದ ಸೋಂಕು ಹತ್ತಿತ್ತು. ೧೯೧೮ರಲ್ಲಿ ಮನೆಮಾರು ಬಿಟ್ಟು ಹಿಮಾಲಯಕ್ಕೆ ತಪಶ್ಚರ್ಯಕ್ಕೆಂದು ಹೊರಟವರು. ಅಕಸ್ಮಾತ್ ಗಾಂಧಿಜಿಯವರ ಸಬರಮತಿಯ ಆಶ್ರಮಕ್ಕೆ ಬಂದರು. ಮಹಾತ್ಮರ ಭೇಟಿಯಾಯಿತು. ಈ ನವತರುಣನಲ್ಲಿ ಮಹಾತ್ಮರು ಉಚ್ಚ ವ್ಯಕ್ತಿತ್ವದ ಕುರುಹುಗಳನ್ನು ಕಂಡಿರಬಹುದು. “ನಿನಗೆ ತಪಸ್ಸು ನಾನು ಕಲಿಸುವೆ. ಜನಸೇವೆ ಮಾಡು; ಜನಾರ್ದನನ ದರ್ಶನವಾಗುವುದು” ಹೀಗೆಂದು ಬೋಧಿಸಿದ ಕೂಡಲೇ ಹೃದಯ ಪರಿವರ್ತನಗೊಂಡ ತರುಣ ವಿನೋಬಾ, ಗಾಂಧಿ ಶಿಷ್ಯತ್ವವನ್ನು ವಹಿಸಿಕೊಂಡರು.

ರಾಜಕೀಯ ಕರ್ಮಯೋಗಿ

ಸಬರಮತಿಯಲ್ಲಿ ಗಾಂಧಿಜಿಯವರೊಂದಿಗೆ ಅವಿಶ್ರಾಂತ ಕರ್ಮಯೋಗಕ್ಕೆ ಆರಂಭಿಸಿದರು. ದಿನಕ್ಕೆ ಇಪ್ಪತ್ತು ತಾಸು ಒಂದೇ ಸಮನೇ ಕೆಲಸ. ಗೋಧಿ ಬೀಸುವುದು, ಕಸಗುಡಿಸುವುದು, ಶೌಚಗೃಹ ತೊಳೆಯುವುದು, ನೂಲುವುದು, ಅಡಿಗೆ ಮಾಡುವುದು, ರೋಗಿಗಳ ಆರೈಕೆ. ಮೂರು ಅಥವಾ ನಾಲ್ಕು ತಾಸುಗಳ ನಿದ್ರೆ; ಮತ್ತೆ ಪುನಃ ಕೆಲಸಕ್ಕೆ ಪ್ರಾರಂಭ. ಜೊತೆಗೆ ಗಾಂಧಿಜಿಯವರ ಕೆಲಸಗಳಲ್ಲಿ ಸಹಕಾರ.

ಪಾಂಡಿತ್ಯದ ಆಳ

ವಿನೋಭಾಜಿಯವರು ಶ್ರೇಷ್ಠ ತರಗತಿಯ ಸಂಸ್ಕೃತ ಪಂಡಿತರು. ಇಂಗ್ಲಿಷ್ ಫ್ರೆಂಚ್ ಭಾಷೆಗಳಲ್ಲಿಯೂ ಅಪಾರ ಪಾಂಡಿತ್ಯವಿದೆ. ಈಚೀಗೆ ಅರಬಿ ಭಾಷೆ ಕಲಿತು ಕುರಾನನ್ನು ಅಭ್ಯಾಸಿಸುತ್ತಿದ್ದಾರೆ. ತಮ್ಮ ಮಾತೃ ಭಾಷೆಯಾದ ಮರಾಠಿಯಲ್ಲಿ ಅದ್ವಿತೀಯರೆಂದೇ ಹೇಳಬಹುದು.

ಗೀತೆಯನ್ನು ಮರಾಠಿಯಲ್ಲಿ ಅತೀ ಸುಂದರವಾಗಿ ಭಾಷಾಂತರಿಸಿದ ಕೀರ್ತಿಯು ... ಗೊಳಿಸಿದ ಕೀರ್ತಿಯು ವಿನೋಬಾಜಿಯವರಿಗೆ ಸಲ್ಲುವುದು.

ವಿನೋಬರ ಅಹಿಂಸಾದೃಷ್ಟಿ

ಒಂದು ವಿಧದಲ್ಲಿ ಹೇಳುವುದಾದರೆ ಅಹಿಂಸಾ ತತ್ವ ನಿರೂಪಣೆಯಲ್ಲಿ ವಿನೋಭಾಜಿಯವರು ಮಹಾತ್ಮರನ್ನೂ ಮಿಗಿಸುವರು. ಇವರ ಸರ್ವ ಆಚಾರ ವಿಚಾರಗಳು ಅಹಿಂಸಾ ತತ್ವದ ಮೇಲೆಯೇ ಹೊಂದಿಕೊಂಡಿರುತ್ತವೆ. ಒಂದಂಗುಲ ನೂಲನ್ನು ಹಾಳು ಮಾಡುವುದೂ ಇವರಿಗೆ ಹಿಂಸೆಯಾಗಿ ತೋರುತ್ತದೆ. ಮಹಾತ್ಮಾಜಿಯವರಿಗೆ ಇವರ ಮೇಲೆ ಅತ್ಯಂತ ಆದರ. ಗಾಂಧಿಜಿಯವರನ್ನು ಕಂಡರೆಂದರೆ ಉದ್ದಂಡ ನಮಸ್ಕಾರ ಮಾಡಿದ ಮೇಲೆ ಮಾತುಕತೆ—ಇದು ವಿನೋಬಾಜಿಯವರ ಕ್ರಮ.

ಒಪ್ಪಿಸಿದ ಕಾರ್ಯ

ದೇಶೋದ್ಧಾರಕ್ಕೆ ಇಂತಹ ಕೆಲವೇ ವ್ಯಕ್ತಿಗಳಿದ್ದರೆ ಸಾಕು. ಅಂತೆಯೇ ಮಹಾತ್ಮರು ಗ್ರಾಮೋದ್ಧಾರದ ಪ್ರಾಮುಖ್ಯ ಖಾತೆಯಾದ ಖಾದಿಯವಿಭಾಗವನ್ನು ಒಪ್ಪಿಸಿದ್ದಾರೆ. ವಿನೋಬಾಜಿಯವರಿಗೆ ಅದು ಬಹಳ ಸರಳ. ಅವರು ತಮ್ಮದೇ ಒಂದು ಶಿಷ್ಯಮಂಡಳಿಯನ್ನು ಕಲ್ಪಿಸಿದ್ದಾರೆ. ಸೇವೆಗಾಗಿಯೇ ಪಣತೊಟ್ಟ ಬ್ರಹ್ಮಚಾರಿಗಳ ಚಿಕ್ಕ ಸೈನ್ಯವೇ ವಿನೋಬಾಜಿಯವರಲ್ಲಿದೆ. ಕಾರಣ ಎಂತಹನಾದರೂ ಅವರ ವ್ಯಕ್ತಿತ್ವಕ್ಕೆ ಮರುಳಾಗಿಯೇ ಆಗುವನು. ಅವರ ಅನಾಸಕ್ತ ಕರ್ಮಯೋಗದ ಪ್ರಭಾವವಿದೆಂದರೂ ಹೆಚ್ಚಲ್ಲ.

ತಕಲೀ ವಿಜ್ಞಾನಿ

ಗಾಂಧಿಜಿಯವರು ಚರಕಾ ಯಂತ್ರ ಶೋಧಕರಾದರೆ ವಿನೋಭಾಜಿ ತಕಲೀ ವಿಜ್ಞಾನಿಗಳು. ತಕಲಿಯಲ್ಲಿ ಅತ್ಯುತ್ತಮ ರೀತಿಯಲ್ಲಿ ನೂಲುವ ಕ್ರಮವನ್ನು ಕಂಡುಹಿಡಿದು ತಮ್ಮ ಶಿಷ್ಯಮಂಡಳಿಯಿಂದ ಅದರ ಪ್ರಚಾರವನ್ನು ಸೊಗಸಾಗಿ ಮಾಡುತ್ತಿದ್ದಾರೆ. ತಕಲಿಯಲ್ಲಿ ಸ್ವತಃ ಪ್ರಾವಿಣ್ಯತೆಯನ್ನು ಪಡೆದಿದ್ದಾರೆ. ಇವರ ತಕಲಿಯ ಒಂದು ವೈಶಿಷ್ಟ್ಯವೆಂದರೆ ಒಳ್ಳೆ ಕೆಲಸಗಾರನೊಬ್ಬನು ಈ ಚಿಕ್ಕ ತಕಲಿ ಉಪಕರಣದಿಂದ ಚರಕಾಯಂತ್ರದಷ್ಟೆ ನೂಲನ್ನು ತೆಗೆಯಬಹುದೆಂದು ಸಿದ್ಧಾಂತಗೊಳಿಸಿದ ಸಾಧನೆ.

ನಲ್ವಾಡಿಯ ಆಶ್ರಮ

ಸಬರಮತಿಯ ಆಶ್ರಮವನ್ನು ಮಹಾತ್ಮರು ಮುಚ್ಚಿದ ನಂತರ ಜಮುನಲಾಲ್ ಬಜಾಜರು ತಮ್ಮ ಸ್ವಂತ ಊರಾದ ವರ್ಧಾದಲ್ಲಿ ಒಂದು ಆಶ್ರಮವನ್ನು ಸ್ಥಾಪಿಸುವುದಾದರೆ ಮಹಾತ್ಮಾಜಿಯವರಿಗೆ ಆರ್ಥಿಕ ಸಹಾಯದ ಜವಾಬ್ದಾರಿಯನ್ನು ತಾವು (ಅಂದರೆ ಬಜಾಜರು) ವಹಿಸುವುದಾಗಿ ತಿಳಿಸಿದರು. ಕೂಡಲೇ ಮಹಾತ್ಮರು ತಮ್ಮ ಪಟ್ಟಶಿಷ್ಯನನ್ನು ಆ ಕೆಲಸಕ್ಕೆ ಬಿಟ್ಟರು. ಅಂತೆಯೇ ವರ್ಧೆಯಿಂದ ಸ್ವಲ್ಪ ದೂರದ ನಲ್ವಾಡಿ ಹಳ್ಳಿಯಲ್ಲಿ ಒಂದು ಆಶ್ರಮವು ಸ್ಥಾಪಿಸಲ್ಪಟ್ಟಿತು.

ವಿನೋಬಾಜಿಯವರು ನಲ್ವಾಡಿಯ ಆಶ್ರಮದಲ್ಲಿ ಬಹಳ ಸುಧಾರಣೆಗಳನ್ನು ಅನೇಕ ವರ್ಷಗಳ ಶ್ರಮದಿಂದ ಮಾಡಿದ್ದಾರೆ. ಕ್ರಮೇಣ ಗ್ರಾಮ ಸೇವಾ ಮಂಡಳ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಒಂದು ಗೋಶಾಲೆಯನ್ನೂ ಚರಕಾಲಯವನ್ನೂ ತೆರೆದಿರುವರು.

ಆಶ್ರಮದ ಉದ್ದೇಶ

ನಲ್ವಾಡಿಯ ಆಶ್ರಮದ ಉದ್ದೇಶವೆಂದರೆ ಗ್ರಾಮೋದ್ಯೋಗಿಗಳಿಗೆ ನೈತಿಕ, ಧಾರ್ಮಿಕ ಮತ್ತು ಸಾಮಾಜಿಕ ಚಿತ್ರವಿಧ ತರಬೇತಿ ಕೊಡುವುದು. ಅತ್ಯುಚ್ಚ ತರಗತಿಯ ನೂಲುವ ವಿಧಾನವನ್ನೂ ಈ ಆಶ್ರಮದಲ್ಲಿ ಶಾಸ್ತ್ರೀಯ ರೀತಿಯಲ್ಲಿ ಕಲಿಸುತ್ತಾರೆ. ಅಲ್ಲದೆ ಗ್ರಾಮ ಶುದ್ಧೀಕರಣ, ಕೇಂದ್ರ ಸ್ಥಾಪನೆ, ಸಂಚಾಲಕತನ ಇವೇ ಮೊದಲಾದ ರಚನಾತ್ಮಕ ಕಾರ್ಯಕ್ರಮದಲ್ಲಿ ವಿದ್ಯಾಭ್ಯಾಸವು ಕೊಡಲ್ಪಡುವುದು.

(ಮುಂದುವರಿವುದು)

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನುಕೊಡುವುದರಿಂದ ಅವರು ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಈ ವಾರದ ಕತೆ:

ಪ್ರೇಮ ಪರ್ಯಾಯ.

ವಸಂತ ಮತ್ತು ಸುಶಿ, ಅಣ್ಣ ತಂಗಿಯರ ಮಕ್ಕಳು, ಒಂದೆಡೆ ಹುಟ್ಟಿ, ಒಂದೆಡೆಯಲ್ಲಿಯೇ ಬೆಳೆದವರು. ಇಬ್ಬರೂ ಒಂದೇ ಕಾಲೇಜಿನ ವಿದ್ಯಾರ್ಥಿಗಳು. ಸುಶಿ ಇಂಟರ್‌ನಲ್ಲಿ ಓದುತ್ತಿದ್ದಳು, ವಸಂತ ಬಿ. ಎ.ಗೆ ಕುಳ್ಳಿರಬೇಕಾಗಿತ್ತು.

ವಸಂತ ಬರೆಹಗಾರ; ಆಗಲೇ ಹೆಸರಾಂತ ಕವಿ. ಹಾಡುಗಳನ್ನು ನಯ ಮಾಧುರ್ಯಗಳಿಂದ ಹೃದಯಂಗಮವಾಗಿ ಹೆಣೆಯುವ ಶಕ್ತಿ ಅವನಲ್ಲಿ ಇತ್ತು. ಪತ್ರಿಕೆಗಳಲ್ಲಿಯೂ ವಸಂತನ ಕವಿತೆ ಎಂದರೆ ಸಕ್ಕರೆಯ ಪಾನಕದಂತೆ — ಮಕ್ಕಳು ಮರಿಯನ್ನಡೆ ಮುದುಕರ ತನಕವೂ. ಬಾಯಿ ಮಾತು ರಸವೆಂದರೆ ಕಬ್ಬಿನ ಹಾಲೇ ಹರಿವಂತಿತ್ತು, ಅವನ ಲೇಖನಿಯಲ್ಲಿ; ನುಡಿದನೆಂದರೆ ಒರಟು! 'ಕಪಿ'ಯೆಂದು ಸುಶಿ ಇಟ್ಟ ಹೆಸರು ಅವನ ಸ್ನೇಹಿತರ ಮಾತುಕತೆಗಳಲ್ಲಿ ಮುದ್ದು ನಕಲಿಯಾಗಿ ಬಿಟ್ಟಿತ್ತು!

ಸುಶಿ ಹಾಡುವುದರಲ್ಲಿ ಗಟ್ಟಿಗಳು! ಹಾಡು ಕೇಳುವುದರಲ್ಲಿಯೂ ಸೊಬಗುಗಾರ್ತಿ! ಸುಶಿ ಹಾಡಿದರೆ ಸುಖವಾಗಿ ಕೇಳುತ್ತಿತ್ತ ವಸಂತ, ಚಿಕ್ಕ ಚಿಕ್ಕ ಭಾವಗೀತೆಗಳನ್ನು ಕಟ್ಟುತ್ತ ಭಾವನಾ ಲೋಕದಲ್ಲಿ ಹಕ್ಕಿಯಂತೆ ಸ್ವಚ್ಛಂದವಾಗಿ ವಿಹರಿಸುವವನು, ತಾನಾಗಿಯೇ ಒಂದೊಂದು ಸಲ ಮೆಲ್ಲನೆ ತನ್ನೆದೆಯ ಧ್ವನಿಯನ್ನೂ ಕೂಡಿಸುವನು. ಆದರೂ ವಸಂತನೇನೂ ರಸಿಕನಲ್ಲವೆಂಬ ಮಾತ ನಿಶ್ಚಯವಾಗಿತ್ತು ಸುಶಿಗೆ.

ಸುಧಾಕರ ಸುಶಿಯ ದರ್ಜೆಯಲ್ಲಿಯೇ ೨ನೇ ವರ್ಷದ ಅಭ್ಯಾಸಿ. ಪಾಠದಲ್ಲಿ ಹಿಂದೆ ಇದ್ದರೂ ಆಟದಲ್ಲಿ ಮುಂದು, ಚಟುವಟಿಕೆಗಾರ ಸುಧಾಕರ ಎಲ್ಲರಿಗೂ ಬೇಕಾದವನು. ಹುಡುಗಿಯರಿಗಂತೂ ಮೆಚ್ಚಿನ ಗೊಂಬೆ. ಕಾರಣ, ಸೌಂದರ್ಯ ಕಲೋಪಾಸನೆಗಳಲ್ಲಿ ಅವನೊಂದು ಹೊಸ ಮಾದರಿ! ಅಂದು ಕಾಲೇಜ್ ಡೇ ಸಂಬಂಧದ ಎಲ್ಲಾ ಚಟುವಟಿಕೆಗಳಲ್ಲಿಯೂ ಸುಧಾಕರ ತುಂಬಾ ಹೆಸರು ತಂದುಕೊಂಡಿದ್ದ. ವಸಂತ ಬರೆದ ನಾಟಕವೊಂದನ್ನು ಅಭಿನಯಿಸಿಕೊಟ್ಟಾಗ ನಾಯಕನಾಗಿ ಜನರನ್ನು ಬೆರಗುಗೊಳಿಸಿದ. "ರಂಗಕ್ಕೆ ಬಂದರೆ ಸುಧಾಕರ ಸೊಬಗಾಗಿ ಕಾಣುತ್ತಾನೆ!" ಎಂದು ಹೆಣ್ಣು ಮಕ್ಕಳ ಬಾಯಿಯಿಂದ ಬಂದ ಮಾತು.

ಸುಧಾಕರನೂ ಒಬ್ಬ ಹಾಡುಗಾರನೆಂದು ಪ್ರೇ ಅವಳ ಹೆಮ್ಮೆ. ಅವನೊಡನೆ ತನ್ನ ಜೀವನವನ್ನು ಹೆಣೆಯಬೇಕೆಂದವಳ ಹಿರಿದಾದ ಆಸೆ. ಆಗ ತನಗೊಂದು ರೂಪು ಬರುತ್ತದೆಂದು ಅವಳ ಭಾವನೆ.

ಆಗಾಗ, ವಸಂತನ ಕೊರಳಿಗೆ ತನ್ನನ್ನು ಕಟ್ಟುವರೆಂದು ಅವಳ ಹತ್ತಿರದ ಮಾತು ಬಂದಾಗೆಲ್ಲಾ ಅವಳಿಗೆ ಕಿರಿಕಿರಿಯಾಗುತ್ತಿತ್ತು. ವಸಂತ ಸುಂದರನೇ ಇದ್ದಾನೆ; ಆದರೆ ಅವನ ಸೌಂದರ್ಯಕ್ಕೊಪ್ಪುವ ಬೆಡಗಿಲ್ಲ. ಅವನು ಹೆಸರಾಂತ ಬರೆಹಗಾರನಿರಬಹುದು, ಆದರೆ ಜೀವನದಲ್ಲಿ ಅರಸಿಕತನದ ಮೂರ್ತಿ! ಸುಧಾಕರನು ರೂಪವಂತ, ನಟನೆಯುಂಟು, ಬಹಳ ಸಿರಿವಂತನಾಗಿಯೂ ತೋರುತ್ತಾನೆ. ಹಾಗಾಗಿ ಸುಶಿಗೆ ಸುಧಾಕರನು ವಸಂತಗಿಂತ ಹೆಚ್ಚಿನವನೇ!

ಈಗ ಸುಧಾಕರನನ್ನು ಪೂಜಿಸುವವಳು ಸುಶಿ, ಸುಧಾಕರನ ಮೇಲಿನ ಪ್ರೇಮ ಲಹರಿಯಾಗಿ ಉಕ್ಕಿ ಬರುತ್ತಿತ್ತು. ತನ್ನೆದುರಿಗೆ ಸುಧಾಕರ ಬಂದರೆ ಹಬ್ಬ, ಮರೆಯಾದರೆ ಬೇಸರ!

ಸುಧಾಕರನಿಗೂ ಬೇಕು ಅಷ್ಟೇ! ಜೀವನದ ರಂಗದಲ್ಲೊಂದು ಪಾತ್ರ ಅವನೂ ತೋರುತ್ತಾನೆ. ತನ್ನ ನಟನೆಯಿಂದ ಸುಶಿಯಲ್ಲಿ ತನ್ನ ಪ್ರೀತಿಯನ್ನು ಹಚ್ಚಿ, ಅವಳ ಮನಸ್ಸನ್ನು ಸೆಳೆದು ತನ್ನೊಂದ ಬಯಕೆಯನ್ನು ಹಿಂಗಿಸುವಲ್ಲಿ ಮುಂದಾಗಿದ್ದನು.

ಸ್ನೇಹದ ಚಿಗುರಿನಲ್ಲಿಯೇ ಪ್ರಣಯದ ತೆನೆಯೊಡೆದ ಒಂತೆ! ಸುಶಿ ಪ್ರಾಯಕ್ಕೆ ಬಂದವಳು. ಸುಧಾಕರ ಎಂದರೆ ಅವಳ ಮನಸ್ಸಿನಲ್ಲಿ ಏನು ಏನೋ ಆಗುವುದು, ಹೇಗೆಹೇಗೋ ಎನಿಸುವುದು. ಅವನು ಹತ್ತಿರ ಇದ್ದರೆ ನಲಿಯುವ ಹೂವಿನ ಹೂವಸೆಯಂತೆ ಚಂದದ ನಗು ಮಾಡಿ ನಿಸೋದವಾಗಿ ಮಾತನಾಡುವಳು. ಕನಸಿನ ಸಾಮ್ರಾಜ್ಯವೇ ಆಗುತ್ತಿತ್ತು ಸುಶಿಗೆ.

ಕೈಕೈ ಹಿಡಿದ ಗಡ್ಡೆಯನ್ನು ಏರಿ, ಮರದ ಗುಂಪಿನ ನಡುವೆ ಮರೆಯಾಗಿ ಕುಳಿತು ಎದುರಿಗೆ ಹರಿಯುವ ನದಿಯ ಆಚೆ ಈಚೆ ನೆರೆದ ಪೈರ ಪಚ್ಚೆಯನ್ನು ಕಂಡ ಹಿಗ್ಗಿ, ಅವುಗಳ ಮೇಲೆಂಗುವ ಪಕ್ಷಿ ದಂಪತಿಗಳ ಹಿಂದೆಯೇ ಮನವು ಓಡಿದಾಗ ಒಬ್ಬರ ಮೈಗೊಬ್ಬರು ತಾಗಿ ಪ್ರೇಮಾನಂದದ ಸುಖವನ್ನು ಅನುಭವಿಸುತ್ತ ಹಕ್ಕಿಗಳು ಮರೆಯಾದೊಡನೆ 'ನಾವೂ ಅವುಗಳಂತೆಯೇ ಏಕೆ ಇರಬಾರದು?' ಎಂದು ಆಡಿಕೊಂಡ ದಿನಗಳು ಎಷ್ಟೋ ಕಳೆದುಹೋದುವು!

ಒಂದು ದಿನ ಪ್ರಶಾಂತ ಸಂಧ್ಯಾ ಸಮಯ. ಅದೇ ಗುಡ್ಡ, ಅದೇ ನದಿ, ಆಚೆಗೆ ಹರಿಯುತ್ತಿತ್ತು. ಹಿಂದೆ ಯಾವಾಗಲೂ ಎಲ್ಲಿ ಕುಳಿತುಕೊಂಡ ಸುಧಾಕರನೂ ಅವಳೂ ಪ್ರೇಮ ಸಲ್ಲಾಪ ಮಾಡುತ್ತಿದ್ದರೋ, ಅಲ್ಲಿಯೇ ಕುಳಿತು ಕೆಳಗಿನ ಪತ್ರವನ್ನು ಓದುತ್ತಿದ್ದಳು ಸುಶಿ:

'ಸುಶೀ,

ನಿನ್ನನ್ನು ಮನಸಾರೆ ಪ್ರೀತಿಸುತ್ತಿದ್ದೇನು. ನನಗೆ ತೋರಿದ ಪ್ರೇಮಾದರಗಳಿಗ ನಾನು ಯಾವ ತರದ ಪ್ರತಿಫಲವನೀಯಬೇಕೆಂದು ತಿಳಿಯದ ಮಾತ್ರ ನಾನೀಗ ಈ ಪತ್ರವನ್ನು ಬರೆಯುವುದೇಕೆಂದು ನನಗೇ ತೋರುವುದಿಲ್ಲ. ನಿನ್ನಂತೆ ನನ್ನನ್ನು ಪ್ರೀತಿಸುವವಳು ಬೇರೊಬ್ಬಳೂ ಇದ್ದಾಳೆ. ನಿನ್ನ ಸಂಗದ ನಾನ ತಿರುಗಾಡುವುದನ್ನವಳು ಹೇಗೆ ನೋಡುವಳೋ ಕಾಣೆ. ಅಂತೂ ಅವಳ ಜೀವನ ಉಳಿಯಬೇಕಾದರೆ ನಾನ ನಿನ್ನನ್ನು ಬಿಡಬೇಕಾಗಿದೆ. ಕ್ಷಮಿಸು.

ಪ್ರೀತಿಯ ಸುಧಾಕರ'

ಸುಶಿಗೆ ನಾನೆಂಥ ಮೂರ್ಖಳೆಂದು ತೋರಿತು. ತನ್ನನ್ನು ಯಾವುದಕ್ಕೂ ಬಾರದ ವಸ್ತುವೆಂದು ಗಣಿಸಿದನಲ್ಲಾ ಎಂದು ನೊಂದುಕೊಂಡಳು. ಒಂದು ಸ್ತ್ರೀ ಎಂದರೆ — ಗಂಡಸಿಗಿಷ್ಟು ಹೀನ ಭಾವನೆ! ಅಯ್ಯೋ ಎಂದು ಅವಳ ಮನಸ್ಸು ಸುಡ ಹತ್ತಿತು. ನಚ್ಚಿನ ಮುಡಿಪನ್ನು ಬಿಟ್ಟು, ಹೊಳೆಯುವ ಕಂಡಕ್ಕೆ ಹುಚ್ಚಾದೆನೆಂದು ದುಃಖಿಸಿದಳು. ಪತ್ರವನ್ನು ಹರಿದೊಗೆದು ಅಲ್ಲಿಂದಿಳಿದು ಮನೆಯ ದಾರಿ ಹಿಡಿದಳು.

ವಸಂತ ನದಿಯ ಕಿನಾರೆಯಲ್ಲಿ ಕುಳಿತು ಹಾಡುತ್ತಿದ್ದ. ನಿಮಿರಿದ ಕಿವಿಗಳಿಂದ ಸುಶಿ ಒಂದು ಕಡವೆ ಕೇಳಿದಳು. ಎಂದೂ ಕೇಳದ ಹಾಡು, ಎಂದೂ ಕೇಳದ ಧ್ವನಿ! ಈ ವರೆಗೆ ಹಾಡು ಬಾರದವನು, ಪ್ರಕೃತಿಯೊಂದಿಗೆ ಲಲ್ಲೆಯಾಡುವಂತೆ, ಸುಂದರ ಭಾವನೆಗಳನ್ನು ಸರಸವಾಗಿ ಹೊರಡಿಸುತ್ತಿದ್ದಾನೆ. ಪ್ರಕೃತಿಯ ಸೌಂದರ್ಯಾದರ್ಶವನ್ನು ಕಂಡು, ಸುಶಿ ತಲೆದೂಗಿದಳು, ಮನವು ತುಂಬಿ ಬಂದು ಹಿಗ್ಗಿ ಮನಸ್ಸಿನಲ್ಲಿಯೇ ನಲಿದಾಡಿದಳು. ಕವಿಯಲ್ಲಿ ಎಲ್ಲಿಲ್ಲದ ಸೊಬಗೂ ಉಂಟು. ಕನಸಿನಲ್ಲಿ ಬಾರದ ಸ್ವರ್ಗವೂ ಉಂಟು ಎಂದುಕೊಂಡಳು. ಆಸೆ, ಹುರುಪುಗಳು ಹುಟ್ಟಿ ಅವಳನ್ನು ತಣಿಸಿಬಿಟ್ಟವು! ಅಂತಲ್ಲಿ ಸದ್ದಿಲ್ಲದೆ ಬಂದು ವಸಂತನ ಮೈಗೆ ಒಂದಿ ಕುಳಿತುಕೊಂಡಳು. ವಸಂತನಿಗೆ ಅರ್ಥವಾಯಿತೋ ಇಲ್ಲವೋ? ಅತ ಭಾವನಾಲೋಕದಲ್ಲಿ ವಿಹರಿಸುವ ಗಾನಪಕ್ಷಿಯಾಗಿದ್ದ.

ಪ್ರೇಷಕರು: ಪ್ರಮೋದ ಕುಮಾರಿ

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

HALFTONE & LINE
BLOCK MAKING
UNDERTAKEN
Sharada Press,
MANGALORE

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮತ್ತಿತರ ಅಪಘಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್
ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ
ನಿಶ್ಚಿತ ಬೋನಸ್
ರೂ 10/-
+
ಸರ್ವಸಾಧಾರಣ
ಬೋನಸ್ ರೂ 11/
ಹೀಗೆ ಜುಮ್ಲಾ
ರೂ. 21/-ರ
ಬೋನಸ್ ಇದೆ!

ದಿ ನ್ಯೂ ಇಂಡಿಯಾ
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ
ಅಥವಾ

ಕೆ. ಎನ್. ನಾಯಕ್
ಆರ್ಗನೈಸರ್
ಪೆಂಟ್ಲೆಂಡ್ ಪೇಟೆ, ಮಂಗಳೂರು

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್
4/5 ಫರ್ಸ್ಟ್ ಲ್ಯಾನ್ ಬೀಚ್ ಮದ್ರಾಸು

ಹಿಟ್ಲರ್

ಹಿಟ್ಲರನ ಪರಿವಾರದೊಳಗೆ ಬಡಿದಾಟವೇ?

ಗೋರಿಂಗನ ದಾರಿ ಬೇರೆ!

ಹಿಮ್ಲರ್ ಗೋಬೆಲ್ಸರು ದ್ವೇಷಿಗಳು!!

ರಿಬನ್ ಟ್ರಾಫನ ವಿಚಾರ ಸರಣಿ!

ಹಿಟ್ಲರನಲ್ಲಿ ಮಾನವ ಭಾವನೆಯಿಲ್ಲವೆ?

ಜರ್ಮನ್ ರಾಜಕೀಯ ಕ್ಷೇತ್ರವು ದ್ವೇಷಾಸೂಯೆಗಳ ರಂಗಭೂಮಿಯಾಗಿದೆ. ಇದರ ಅನೇಕ ದೃಷ್ಟಾಂತಗಳನ್ನು ನಾವು ಕೊಡಬಹುದು. ಜರ್ಮನ್ ರಾಜಕಾರಣಿಗಳ ಅಂತರಂಗ ಜೀವನದ ಚಿತ್ರಗಳನ್ನು ಬರೆಯುವುದು, ಶಾಂತಿಯ ಕಾಲದಲ್ಲಿ ಸಭ್ಯತೆ ಅಥವಾ ನೀತಿಗೆ ಅನುಕೂಲವಾಗಿರುವುದಿಲ್ಲ. ಯುದ್ಧಕಾಲದಲ್ಲಿ ಇದನ್ನೇ ಗಣನೆಗೆ ತಂದುಕೊಳ್ಳಬೇಕಾಗುವುದು. ಹಿಟ್ಲರನೊಬ್ಬನನ್ನು ಪ್ರಕೃತ ಬಿಟ್ಟುಬಿಟ್ಟರೆ ಗೋರಿಂಗನಂಥ ಶಕ್ತಿ ಸಂಪನ್ನ ವ್ಯಕ್ತಿ, ಜರ್ಮನಿಯಲ್ಲಿ ಇನ್ನೊಬ್ಬನಿಲ್ಲ. ಅವನಿಗೆ ಉಚ್ಚ ಕುಲದಲ್ಲಿ ಹುಟ್ಟಿದವನೆಂಬ ಅಭಿಮಾನವಿದೆ. ಅವನ ಪೂರ್ವಜರೆಲ್ಲ, ಜರ್ಮನಿಯಲ್ಲಿ ದೊಡ್ಡ ದೊಡ್ಡ ಪದವಿಗಳಲ್ಲಿ ಶೋಭಿಸಿದ್ದಾರೆ. ಗೋರಿಂಗನ ತಂದೆ ದಕ್ಷಿಣ ಆಫ್ರಿಕದಲ್ಲಿ ಜರ್ಮನಿಯ ಪ್ರಥಮ ಗವರ್ನರನಾಗಿದ್ದ. ಅವನ ವಿದ್ಯಾಭ್ಯಾಸವು ಕುಲೀನ ಮನೆತನಕ್ಕೆ ಸೇರಿದ ಮಕ್ಕಳಿಗೆ ದೊರೆಯುವ ತರದಲ್ಲಿ ನಡೆಯಿತು. ಸೋಲುವುದಕ್ಕಿಂತ ಹೋರಾಡಿ ಸಾಯುವುದು ಲೇಸು ಎಂಬುದು ಅವನ ಜೀವನದ ಧ್ಯೇಯವಾಗಿದೆ. ಆದ್ದರಿಂದಲೇ ಅವನಿಗೂ ಇತರ ನಾಜಿ ಪ್ರಮುಖರಿಗೂ ಆಗುವುದಿಲ್ಲ.

ಹಿಮ್ಲರ್ ಗೋರಿಂಗ ಹೋರಾಟ

ಯಹೂದಿಯರ ಮೇಲಿನ ಅತ್ಯಾಚಾರಗಳಿಗೆ ಗೋರಿಂಗನ ಸಮ್ಮತಿಯಿಲ್ಲ. ಅವನ ವಿಮಾನ ಪಡೆಯಲ್ಲಿ ಯಹೂದಿ ವಂಶದವನೊಬ್ಬನು ಅಧಿಕಾರಿಯಾಗಿರುವನೆಂದು ತೋರಿಸಿದಾಗ—'ಯಾರು ಯಹೂದಿ, ಯಾರು ಅಲ್ಲ ಎಂಬುದನ್ನು ನಿರ್ಣಯಿಸುವ ಅಧಿಕಾರ ನನ್ನದು' ಎಂದು ಹೇಳಿ ಅವನು ಆ ಮಾತನ್ನು ತಿರಸ್ಕರಿಸಿ ಬಿಟ್ಟಿದ್ದಾನೆ.

ಹಿಮ್ಲರ್ ಮತ್ತು ಗೋಬೆಲ್ಸ ಇವರಿಬ್ಬರೂ ಗೋರಿಂಗನ ದ್ವೇಷಿಗಳಾಗಿದ್ದಾರೆ. ಪ್ರಚಾರ ಮಂತ್ರಿ ಪದವಿಯ ದುರುಪಯೋಗ ಮಾಡಿಕೊಂಡು ಗೋರಿಂಗನ ಮುಖದ ಮೇಲೆ ಕೆಸರು ಮಣ್ಣು ಎರಚಲಿಕ್ಕೆ ಗೋಬೆಲ್ಸನು ಭಗೀರಥ ಪ್ರಯತ್ನ ಮಾಡಿರುವನು. ಗೋಬೆಲ್ಸನು ಸೆರೆಹಾಕಿರುವವರನ್ನು ಗೋರಿಂಗನು ಬಿಡುಗಡೆ ಮಾಡಿದ್ದಾನೆ. ಮಾತ್ರವಲ್ಲ ಅಂಥವರು ನಿರಪರಾಧಿಗಳೆಂದೂ, ಕೇವಲ ಗೋಬೆಲ್ಸ ಹಿಮ್ಲರರ ವಕ್ರದೃಷ್ಟಿ ಬಿದ್ದುದರಿಂದ ಅವರು ಸೆರೆಯಾದರೆಂದೂ ಸಾರಿದ್ದಾನೆ. ಹೀಗಾಗಿ ಇವರು ಮೂವರೊಳಗೆ ಪರಸ್ಪರ ಮನಸ್ಸು ಕುದಿಯುತ್ತಾ ಇದೆ.

ರಿಬ್ಬನ್‌ಟ್ರಾಫನ ಸ್ಥಾನ

ನಾಜಿ ಮುಖಂಡರೊಳಗೆ ಬ್ರಿಟಿಷರ ಚೆನ್ನಾಗಿ ಪರಿಚಯ ಇದ್ದವ ಮತ್ತು ಇಂಗ್ಲಿಷ್ ಭಾಷೆಯನ್ನು ಸರಿಯಾಗಿ ಆಡಬಲ್ಲವನೆಂದರೆ ರಿಬ್ಬನ್ ಟ್ರಾಫನೊಬ್ಬನೆ! ಬ್ರಿಟಿಷರ ಸ್ವಾರ್ಥಕ್ಕೆ ಲೋಪ ಬಂದ ಹೊರತು ಅವರು ಯುದ್ಧವನ್ನು ಆರಂಭಿಸುವುದಿಲ್ಲವೆಂಬುದು ಅವನ ಖಚಿತ ಅಭಿಪ್ರಾಯ ಇದೆ. ಯುದ್ಧವೆಂದರೆ ಅವನಿಗೆ ಆಗುವುದಿಲ್ಲ. ಮ್ಯುಡೆಟಾನ್‌ಲೆಂಡದ ಬಿಕ್ಕಟ್ಟಿನ ಕಾಲದಲ್ಲಿ ಯುದ್ಧವಾರಂಭವಾದೀತೋ ಎಂದು ಅವನಿಗೆ ಬಹಳ ಭಯವಾಗಿತ್ತು. ಚೆಂಬರ್ಲೇನನು ಹೋಗಿ ಒಂದು ಒಡಂಬಡಿಕೆ ಮಾಡಿ ಬಂದ ಮೇಲೆ ಅವನು ಬಹಳ ಸಂತೋಷವನ್ನು ಪ್ರಕಟ ಮಾಡಿದ್ದ. ಆದ್ದರಿಂದ ಈಗ—ಯುದ್ಧ ನಡೆಯುತ್ತಿರುವುದು ಅವನ ಧೈರ್ಯ ಕುಂದಿಸಿರಬೇಕು. ಅವನು ರಶ್ಯದ ಕಮ್ಯೂನಿಷ್ಟ ಸರಕಾರದೊಂದಿಗೆ ಒಡಂಬಡಿಕೆ ಮಾಡಿರುವುದು ಬಹಳ ಮಂದಿ ನಾಜಿಗಳಿಗೆ ಒಪ್ಪಿಗೆಯಾಗಿಲ್ಲ. ಯಾಕೆಂದರೆ ಒಂದಲ್ಲ ಒಂದು ದಿನ ಆ ಎರಡು ಜನಾಂಗಗಳೊಳಗೆ ಹಿತಾಸಕ್ತಿಗಳ ಘರ್ಷಣವಾಗಲೇಬೇಕು. ತನ್ಮಧ್ಯೆ ಈ ಒಡಂಬಡಿಕೆಯು ರಶ್ಯದ ಲಾಭಕ್ಕೆ ಮಾತ್ರ ಕಾರಣವಾಗುವುದು.

ಜರ್ಮನಿಯಲ್ಲಿ ಯುದ್ಧ ವಿರೋಧ

ಹೀಗೆ ನಾಜಿ ಮುಖಂಡರೊಳಗೆ ಯುದ್ಧ ವಿಷಯ ಮತ್ತು ಪರರಾಷ್ಟ್ರ ಧೋರಣೆಯ ಕುರಿತು ಭಿನ್ನಾಭಿಪ್ರಾಯಗಳಿರುವುದಷ್ಟೇ ಅಲ್ಲ. ಜರ್ಮನಿಯೊಳಗೇ ಅನೇಕ ಕೇಂದ್ರಗಳು ಯುದ್ಧಕ್ಕೆ ವಿರೋಧವಾಗಿರುವವು. ಅವುಗಳಲ್ಲಿ ವೆಸ್ಟಫಾಲಿಯಾ, ರೂರ್, ಹೆಂಬರ್ಗ್, ಕೀಲ್, ಬವೆರಿಯಾ, ಉತ್ತರ ಮತ್ತು ಪೂರ್ವ ಬರ್ಲಿನ್, ಆಸ್ಟ್ರಿಯಾ ಮತ್ತು ಈಚೆಗೆ ನಾಜಿಗಳ ಅಧೀನವಾಗಿರುವ ಜೆಕೊಸ್ಲೊವೇಕಿಯ, ಪೋಲಾಂಡ್ ಮತ್ತು ಫ್ರಾನ್ಸಿನ ಉತ್ತರ ಪ್ರದೇಶಗಳು ಮುಖ್ಯವಾಗಿವೆ.

ಗೋರಿಂಗ

ಹತ್ಯಾಕಾಂಡದ ಪರಿಣಾಮ

ಜರ್ಮನಿಯಲ್ಲಿ ದೊಡ್ಡ ಹತ್ಯಾಕಾಂಡಕ್ಕೆ ಮುಖ್ಯ ಕಾರಣ ಪುರುಷನಾಗಿರುವ ಹಿಟ್ಲರನು ರಾಕ್ಷಸನಲ್ಲ; ಅವನೂ ಮನುಷ್ಯನಾಗಿರುವನು. ಅವನ ಹೃದಯದ ಒಂದು ಮೂಲೆಯಲ್ಲಿ ಮಾನವೋಚಿತ ಗುಣಗಳು ಇವೆ. 'ಯುದ್ಧ ಕಾರ್ಯಕ್ಕೆ ಬಳಸುವ ಒಂದೊಂದು ಫಿರಂಗಿಯನ್ನು ರಚಿಸಲಿಕ್ಕೆ ಆಗುವ ಖರ್ಚಿನಿಂದ ನೂರಾರು ಮಂದಿ ಕೆಲಸಗಾರರಿಗೆ ಮನೆ ಕಟ್ಟಿಸಿ ಕೊಡಬಹುದು'! ಎಂದು ಹೇಳಿ ಅವನೇ ಆಗಾಗ ತನ್ನ ಯುದ್ಧ ವಿರೋಧವನ್ನು ತೋರಿಸಿದ್ದುಂಟು. ಈ ಮಾತುಗಳನ್ನು ಹೇಳುವಾಗ ಅವನು ಅಪ್ರಮಾಣಿಕನಾಗಿದ್ದನೆನ್ನಲಿಕ್ಕೆ ಯಾವ ಆಧಾರವೂ ಇಲ್ಲ. ಅವನ ಶಕ್ತಿ ಅಧಿಕಾರ ಮತ್ತು ಅಹಂಕಾರಗಳೇ ಜರ್ಮನಿಯನ್ನು ಈ ಹೊತ್ತಿನ ಸ್ಥಿತಿಗೆ ತಂದಿರುವುದು. ಆದರೆ ಅವನ ಈ ಮೂರು ಭಯಂಕರ ಗುಣಗಳಿಂದಾಗಿ ಯೂರೋಪಿನಲ್ಲಿ ಹರಿಯುತ್ತಿರುವ ರಕ್ತಪ್ರವಾಹದ ಕಡೆಗೆ ಅವನ ಅಂತರ್ಚಕ್ಷುಗಳು ತೆರೆದಾಗ ಈ ಅನ್ಯಾಯದ ಯುದ್ಧವನ್ನು ಅವನು ನಿಲ್ಲಿಸಲೇ ಬೇಕಾಗುವುದು. ಅಲ್ಲವಾದರೆ ಜರ್ಮನ ಜನಾಂಗವು ಅವನ ಮೂರ್ಖತನದ ಫಲವನ್ನು ಉಣ್ಣಬೇಕಾಗುವುದು.

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 „	3% „
One year	3½% „
Two years	4% „
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

ಪರಮ ರಹಸ್ಯ

ನಯನಾನಂದಕರವಾದ ಸೌಂದರ್ಯಕ್ಕೆ
ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದೆ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾನ್ವಿತ ರಸಾಯನವೇ ಲೋಧ್ರ. ಸ್ತ್ರೀಯರಿಗೆ ಆರೋಗ್ಯವು ಮುಖ್ಯ. ಆದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ :: ರಾಯಪೇಟೆ:: ಮದರಾಸು

ಜಿಲ್ಲಾ ಸಮಾಚಾರ

ಮಂಗಳೂರು

ಹಿಂದೀ ಪರೀಕ್ಷೆ:—ತಾ. ೩, ೪ರಂದು ಹಿಂದೀ ಪರೀಕ್ಷೆಗಳು ನಡೆದುವು. ಈ ಬಾರಿಯ ಪರೀಕ್ಷೆಗೆ ೨೭ ಮಂದಿ ಉಮೇದ್ವಾರರು ಮಾತ್ರ ಇದ್ದರು.

ಅಭಿನಂದನೆ:—ಶ್ರೀಮತಿ ಗಿರಿಜಾ ಕಾಮತರವರು ಎಂ. ಎ; ಇವರು ಎಲ್. ಟಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ದಕ್ಷಿಣ ಕನ್ನಡದ ಮಹಿಳೆಯರಲ್ಲಿ ಈ ಡಿಗ್ರಿಯನ್ನು ಪಡೆದವರು. ಇವರಿಗೆ ನಮ್ಮ ಅಭಿನಂದನೆಗಳು.

ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನಿನ ತೃತೀಯ ವಾರ್ಷಿಕ ಉತ್ಸವವು ಇದೇ ತಾ. ೧೦–೧೧–೪೦ನೇ ಆದಿತ್ಯವಾರ ಸಂಜೆ ಘಂಟೆ ೬–೩೦ಕ್ಕೆ ಸರಿಯಾಗಿ ಫೆಲಿಕ್ಸ್ ಪೈ ಬಜಾರಿನಲ್ಲಿರುವ ಸದ್ರಿ ಯೂನಿಯನಿನ ಆಫೀಸಿನಲ್ಲಿ, ಶ್ರೀಯುತ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಲಿರುವುದು. ಸದಸ್ಯರೂ ಪ್ರೆಸ್ ಕೆಲಸಗಾರರೂ ಈ ಸಭೆಗೆ ಬಿತ್ತೈಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಓರಿಯೆಂಟಲ್ ಲೈಫ್ ಎಶ್ಯೂರೆನ್ಸ್ ಕಂಪೆನಿ

ಈ ಕಂಪೆನಿಯವರ ೧೯೩೯ ದಶಂಬರ ೩೧ರ ಅವಧಿಯ ವಾರ್ಷಿಕ ಇಪ್ಪತ್ತೆರಡನೆಯ ವಾರ್ಷಿಕ ವರದಿಯು ನಮ್ಮ ಹಸ್ತವಾಗಿದೆ. ಬಹಳ ಆದರದಿಂದ ಸ್ವೀಕರಿಸಿದ್ದೇವೆ.

ಇದು ಭಾರತದಲ್ಲಿ ಅಭಿವೃದ್ಧಿಕರವಾಗಿ ನಡೆಯುತ್ತಿರುವ ಪ್ರಾಮುಖ್ಯ ಜೀವವಿಮಾ ಸಂಸ್ಥೆಗಳಲ್ಲಿ ಒಂದಾಗಿದೆ. ಈ ಕಂಪೆನಿಯು ದೇಶದ ಮೂಲೆ ಮೂಲೆಗಳಲ್ಲಿಯೂ, ತನ್ನ ದಕ್ಷರಾದ ಕಾರ್ಯಕರ್ತರಿಂದ ಬಹಳ ಪ್ರಶಂಸನೀಯವಾಗಿ, ಕಾರ್ಯಕಲಾಪಗಳನ್ನು ನಡೆಸಿ ಬರುತ್ತದೆ. ಜೀವವಿಮಾ ಸಂಸ್ಥೆಗಳಲ್ಲಿ ಇದು ಸುವ್ಯವಸ್ಥಿತವಾಗಿರುವುದೆಂದು ಕೀರ್ತಿ ಪಡೆದಿದೆ.

೧೯೩೯ನೆಯ ದಶಂಬರಕ್ಕೆ ಅಂತ್ಯವಾಗುವ ವರ್ಷಕ್ಕೆ ಇದರ ಒಟ್ಟು ಆದಾಯವು ರೂ. ೪,೭೧,೭೮,೫೪೩ ಆಗಿದೆ. ಹಿಂದಿನ ವರ್ಷದ ಒಟ್ಟು ಆದಾಯ ರೂ. ೪,೪೭,೩೦,೫೬೧ ಎಂದರೆ ರೂ. ೨೪,೪೭,೯೮೨ ಹಿಂದಿನ ವರ್ಷಕ್ಕಿಂತ ಹೆಚ್ಚಿಗೆ ಪಡೆದಂತಾಯಿತು. ಇದು ಒಳ್ಳೆಯ ಅಭಿವೃದ್ಧಿಯಾಗಿದೆ. ಕಂಪೆನಿಯು ಈ ಮೂರು ವರ್ಷಗಳಲ್ಲಿ ರೂ. ೨೭,೪೭,೮೮,೯೩೦ರ ೧,೪೮,೫೮೧ ಹೊಸ ಪಾಲಿಸಿಗಳನ್ನು ಎತ್ತಿದೆ. ಇದೂ ಕಳೆದ ತ್ರೈವಾರ್ಷಿಕ ವರದಿಗಿಂತ ಪ್ರಗತಿಯೇ ಆಗಿರುತ್ತದೆ. ಕಂಪೆನಿಯು ಭದ್ರ ಮೂಲಧನದಿಂದ, ಯೋಗ್ಯಕಾರ್ಯಕರ್ತರಿಂದ, ಸುವ್ಯವಸ್ಥಿತವಾಗಿ ನಡೆಯುತಿದ್ದು ಸಾರ್ವಜನಿಕರ ಇನ್ನೂ ಹೆಚ್ಚಿನ ಸಹಕಾರ ಪ್ರೋತ್ಸಾಹಗಳನ್ನು ಪಡೆಯಲಿ ಎಂದು ನಮ್ಮ ಹಾರೈಕೆ.

ಕಾರ್ಕಳ

ರೋವರ್ ಸ್ಕೌಟ್ಸ್:—ತಾ. ೨೭-೧೦-೪೦ರ ದಿನ ಶ್ರೀ. ವೆಂಕಟ್ರಮಣಹಾಯರ ಎಲಿಮೆಂಟರಿ ಶಾಲೆಯಲ್ಲಿ ಸ್ಕೌಟ್ ಚಳವಳಿಯಲ್ಲಿ ಪ್ರೇಮವಿರುವವರ ಒಂದು ಸಾರ್ವಜನಿಕ ಸಭೆಯು ಶ್ರೀ ಕೆ. ಲಕ್ಷ್ಮಣ ಶೆಟ್ರು ಅಧ್ಯಕ್ಷರಾಗಿ ಹಿಂದುಸ್ತಾನ್ ಸ್ಕೌಟ್ ಎಸ್ಸೋಸಿಯೇಶನಿಗೆ ಸಂಯೋಜಿತವಾಗುವ ಒಂದು ರೋವರ್ ಸ್ಕೌಟು ಟ್ರೂಪು ಸ್ಥಾಪಿತವಾಗಿದೆ. ಶ್ರೀ. ಕೆ. ಶ್ರೀನಿವಾಸ ಹೆಗ್ಗಡೆ ಇದರ ಸಂಚಾಲಕರಾಗಿರುವರು.

ಸ್ಪರ್ಧೆಯ ದಿನ ಬದಲಾವಣೆ:—ಶ್ರೀ. ಬಳ್ಳುಂಜೆ ಸುಬ್ಬರಾಯರು ಕರ್ನಾಟಕದ ಹಲವು ಕೇಂದ್ರಗಳಲ್ಲಿ ಏರ್ಪಡಿಸಿದಂಥ ಗೀತಾ ಸ್ಪರ್ಧೆಯು ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾದ ಪ್ರಕಾರ ೧೦–೧೧–೪೦ರ ದಿನ ನಡೆಯತಕ್ಕದಲ್ಲವಾಗಿಯೂ ೧೦–೧೨–೪೦ರ ದಿನ ನಡೆಯುವಂತಹದಾಗಿದೆ ಎಂದೂ ಅವರಿಂದ ತಿಳಿದು ಬರುತ್ತದೆ.

ಹೆಲ್ತ್ ಕಮಿಟಿಯ ಸಭೆ:—ಕಾರ್ಕಳ ಪಬ್ಲಿಕ್ ಹೆಲ್ತ್ ಕಮಿಟಿಯ ಸಭೆಯು ತಾ. ೩–೧೧–೪೦ರ ದಿನ ಸಾಯಂಕಾಲ ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ಇಲ್ಲಿಯ ತಹಸಿಲ್ದಾರ ಶ್ರೀ. ಯಂ. ಅಪ್ಪುರಾಯರ ಅಧ್ಯಕ್ಷತೆಯಲ್ಲಿ ಜರುಗಿ ಇಲ್ಲಿಗೆ ಪಂಚಾಯತ ಬೋರ್ಡು ಇನ್ನು ಸೆನಿಟರಿ ಇನ್ಸಪೆಕ್ಟರರೊಬ್ಬರನ್ನು ನೇಮಿಸಿ ಊರಿನ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವರೆ ಅವಶ್ಯಕ ಕಾರ್ಯಕ್ರಮಗಳನ್ನು ಕೈಕೊಳ್ಳದಿರುವ ಕುರಿತು ಅದಕ್ಕೆ ಪುನಃ ಪತ್ರ ಬರೆಯಬೇಕಾಗಿ ಠರಾವಾಯಿತು.

ಕುಂದಾಪುರ

ಜಾನುವಾರು ಜಾತ್ರೆ!

ದಕ್ಷಿಣ ಕನ್ನಡ ಜಿಲ್ಲಾ ಕಾರ್ಕಳ ನದಿ ಎಂಬಲ್ಲಿ:—ಕುಂದಾಪುರ ರೆವಿನ್ಯೂ ಡಿವಿಜನಿನ ರೈತರ ಅಪೇಕ್ಷೆಯ ಮೇರೆಗೆ ಮುಖ್ಯವಾಗಿ ಉಡುಪಿ ಕುಂದಾಪುರ ಮತ್ತು ಕಾರ್ಕಳ ತಾಲೂಕಿನವರಿಗೆ ಅನುಕೂಲವಾಗುವಂತೆ ಹೆಬ್ರಿ ಶೀತಾನದಿ ರಸ್ತೆಯು ಮಂಗಳೂರು ಆಗುಂಬೆ ರಸ್ತೆಗೆ ಕೂಡುವಲ್ಲಿ ಸೋಮೇಶ್ವರ ಘಾಟಿಯ ಬುಡದಿಂದ ಮೂರು ಮೈಲು ಕೆಳಗೆ ಶೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ಈ ಹಿಂದೆ ಆದ ನಿರ್ಣಯದ ಮೇರೆಗೆ ವರ್ಷಂಪ್ರತಿ ವೈಕುಂಠ ಏಕಾದಶಿ ದಿನ ಪ್ರಾರಂಭವಾಗಿ ೧೫ದಿನಗಳ ತನಕ ಜರಗುವುದು. ಈ ವರ್ಷ ಇದು ಇದೇ ೧೯೪೦ನೇ ದಶಂಬರ ೧೦ನೇ ಶುಕ್ರವಾರ ಬೆಳಿಗ್ಗೆ ೮ ಗಂಟೆಗೆ ಪ್ರಾರಂಭವಾಗುವುದು. ಕುಲ್ಲಂದಕ್ಕೆ ಬಂದ ಜಾನುವಾರು ವ್ಯಾಪಾರಿಗಳು ಅಲ್ಲಿಯ ಜಾತ್ರೆಯು ಮುಗಿದ ಬಳಿಕ ಸಾವಕಾಶವಾಗಿ ಈ ಜಾತ್ರೆಗೆ ಮುಟ್ಟಲಾಗುವಂತೆ ಕುಲ್ಲುಂದ ಜಾತ್ರೆಯು ಮುಗಿದ ಬಳಿಕ ೧೦ದಿನ ದಾಟಿ ಈ ಜಾತ್ರೆಯು ಪ್ರಾರಂಭವಾಗುವುದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನು ಮಾಡಲಾಗುವುದು. ಜಾತ್ರೆಯ ಸ್ಥಳವು ಶೀತಾನದಿಯೆಂಬ ಪುಣ್ಯನದಿಯಿಂದ ೨ ಫರ್ಲಾಂಗಿನೊಳಗಿದ್ದು ಹತ್ತಿರವಿರುವ ರಿಜರ್ವ ಕಾಡಿನಲ್ಲಿ ತುಂಬಾ ಹುಲ್ಲುಗಾವಲು ದೊರಕುತ್ತದೆ. ಜಾತ್ರೆಗೆ ಬರುವ ಜಾನುವಾರುಗಳ ಮೇಲೆ ಈ ವರ್ಷ ಜಾನುವಾರು ಒಂದರ ಒಂದಾಣೆಯಂತೆ ಫೀಸು ವಸೂಲು ಮಾಡಲಾಗುವುದು. ಜಾತ್ರೆಗೆ ಬರತಕ್ಕ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿಶ್ಚಯಿಸಲಾಗುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಯೋಚನೆ ಇರುತ್ತದೆ ಎಂದು ಕುಂದಾಪುರ ಸಬ್ ಕಲೆಕ್ಟರರು ತಿಳಿಸುತ್ತಾರೆ.

ಭಾಷೋದ್ಧಾರಕ ಸಂಘ:—

ಇಲ್ಲಿಯ ಕೊಂಕಣೀ ಭಾಷೋದ್ಧಾರಕ ಸಂಘದ ಮಾಸಿಕ ಮಹಾ ಸಭೆಯು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕೂಡಿತು. ವಕೀಲ ಶ್ರೀ ತಗ್ಗರ್ಸೆ ಗಣೇಶರಾಯರು ಅಧ್ಯಕ್ಷತೆವಹಿಸಿ 'ಗುರುಭಕ್ತಿ' ಎಂಬ ವಿಷಯ ಶ್ರೀ ಬಿ. ಜೂರು ಲಕ್ಷ್ಮಣರಾಯರ ಭಾಷಣ ನಡೆಯಿತು.

ಕಾಸರಗೋಡು

ಯುವಜನ ಸಂಘ:—ಈ ಸಂಘದ ಆಶ್ರಯದಲ್ಲಿ ತಾ. ೨೭ನೇ ಆದಿತ್ಯವಾರ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸ ಪೈಗಳು "ಕೌಟಿಲ್ಯನ ಅರ್ಥಶಾಸ್ತ್ರ"ವನ್ನು ಸಂಕ್ಷೇಪವಾಗಿ ವಿವರಿಸಿ ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮಾನ್ ಉದ್ಯಾವರ ಭವಾನಿಶಂಕರ ರಾವ್ ಬಿ. ಎ; ಎಲ್. ಟಿ; ಅವರು ಪ್ರಾಚೀನ ಹಿಂದೂದೇಶದ ಸ್ಥಿತಿ, ಜನರ ಜೀವನ ಸಂಸ್ಕೃತಿಗಳ ಕುರಿತಾಗಿ ವಿವರಿಸಿ ಚಾರಿತ್ರಿಕ ದೃಷ್ಟಿಯಿಂದ ಈ ಗ್ರಂಥವು ಹಲವು ಪಾಶ್ಚಿಮಾತ್ಯ ವಿದ್ವಾಂಸರ ಪ್ರಶಂಸೆಯ ಪಾತ್ರವಾಗಿದೆಯೆಂದು ಹೇಳಿದರು.

ದೀಪಾವಳಿ ಆಚರಣೆ;—ಯುವಜನ ಸಂಘದ ಆಶ್ರಯದಲ್ಲಿ ದೀಪಾವಳಿಯ ಆಚರಣೆಯು ನಡೆಯಿತು. ಶ್ರೀಯುತ ಉದ್ಯಾವರ ಭವಾನಿಶಂಕರರಾಯರು 'ದೀಪಾವಳಿ ಮತ್ತು ವೇದಗಳ ಕಾಲ' ಎಂದು ಒಂದು ಸುರಸವಾದ ಭಾಷಣ ಮಾಡಿದರು. ಸಭಿಕರಲ್ಲಿ ಪಂಡಿತ ವಿದ್ವಾನ್ ಸುಬ್ಬರಾಯರು ದೀಪಾವಳಿಯ ಕುರಿತು ಒಂದೆರಡು ವಿಷಯಗಳನ್ನು ಹೇಳಿದ ಮೇಲೆ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸಪೈಗಳು ವೇದಾಭ್ಯಾಸದ ಕುರಿತು ಕೆಲವಮಾತು ಹೇಳಿದರು. ಕಡೆಗೆ ಅಧ್ಯಕ್ಷರಾದ ಶ್ರೀ ಸುರೇಂದ್ರ ರಾಯರು ಸರಸವಾಗಿ ಮಾತನಾಡಿದರು.

ಪುತ್ತೂರು

ಸುಬ್ರಹ್ಮಣ್ಯ:—ದ. ಕ. ಜಿಲ್ಲಾ ಪುತ್ತೂರು ತಾಲೂಕು ಮಹತೋಭಾರಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವ ಸಾಂಪ್ರದಾಯ ಪ್ರಕಾರ ಇದೇ ಬರುವ ವಿಕ್ರಮ ಸಂವತ್ಸರದ ಕಾರ್ತಿಕ ಬ. ೧೪ ಯು ಗುರುವಾರ ತಾ. ೨೮–೧೧–೪೦ರಲ್ಲು ದೀಪೋತ್ಸವ ಮಾರ್ಗಶಿರ ಶು. ೪ಯು ಮಂಗಳವಾರ ತಾ. ೩–೧೨–೪೦ಕ್ಕೆ ಹೂವಿನತೇರು, ಮಾರ್ಗಶಿರ ಶು. ೫ ಯು ಬುಧವಾರ ತಾ. ೪–೧೨–೪೦ರಲ್ಲು ಪಂಚಮಿ ತೇರು. ಅದೇ ಶು. ೬ ಯು ಗುರುವಾರ ತಾ. ೫–೧೨–೪೦ರಲ್ಲು ಚಂಪಾಷಷ್ಠಿ ಮಹಾರಥೋತ್ಸವ. ಅದೇ ಸಪ್ತಮಿ ಶುಕ್ರವಾರ ತಾ. ೬–೧೨–೪೦ಕ್ಕೆ ಅವಭೃತೋತ್ಸವವೇ ಮೊದಲಾದ ವಿಶೇಷ ಉತ್ಸವಗಳು ಈ ಮಹೋತ್ಸವ ಕಾಲದಲ್ಲಿ ನಡೆಯುವುವು.

ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು:—ಶ್ರೀಮಾನ್ ಬೆಳ್ಳಾವೆ ವೆಂಕಟನಾರಾಯಣಪ್ಪ, ಎಂ. ಎ. ಅವರಿಗೆ ಮೈಸೂರಿನ ಮಹಾರಾಜರು ರಾಜಸೇವಾಸಕ್ತ ಎಂಬ ಬಿರುದನ್ನು ದಯಪಾಲಿಸಿದುದಕ್ಕಾಗಿ ಅವರನ್ನು ಗೌರವಿಸಲು ತಾ. ೧ರಂದು ಪರಿಷನ್ಮಂದಿರದಲ್ಲಿ ಅಭಿನಂದನ ಸಭೆಯು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು.

ಸುಂದರ ಯುವತಿಯರು ನರಳಲಾಗದು

ಆದರೆ, ಹೆಂಗಸರು ಅವರಿಗೆ ವಿಚಿತ್ರವೆನಿಸಿದ ವ್ಯಾಧಿಗಳಿಂದ ನರಳುತ್ತಿದ್ದರೆ ಸ್ವಾಭಾವಿಕ ಸೌಂದರ್ಯವನ್ನು ಗಳಿಸಲಾರರು ಅಥವಾ ಉಳಿಸಿಕೊಳ್ಳಲಾರರು. ಸ್ವಾಭಾವಿಕವಾದ ಚೆಲುವು ಮತ್ತು ಆರೋಗ್ಯಯುತವಾದ ಕಾಯ, ಸತ್ವ ಆರೆಯ ಅಜಸ್ಸಿದ್ಧ ಫಲ.



ಅರುಣ

ಗರ್ಭಾಶಯಕ್ಕೆ ಅತ್ಯುತ್ತಮ ಟಾನಿಕ್

ಮುಟ್ಟುದೋಷಗಳನ್ನೆಲ್ಲಾ ಸರಿಪಡಿಸುತ್ತದೆ

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

KA 3

ಅಮೇರಿಕದ ಅಧ್ಯಕ್ಷಸ್ಥಾನಕ್ಕೆ ಚುನಾವಣೆ!

ರೂಸ್‌ವೆಲ್ಟರೇ ವಿಜಯಿಗಳಾಗುವರೆ?

★ ಯುದ್ಧ ವಾರ್ತೆ

ಗ್ರೀಕರು ವೀರಾವೇಶದಿಂದ ಹೋರಾಡುವರು!

ಇಟೆಲಿಯಾನರ ನಿರ್ದಯ ದಾಳಿ!

ಹಿಟ್ಲರನ ಶಾಂತಿಸೂಚನೆಯೆ?

ಗ್ರೀಕರ ಸಾಹಸಪೂರ್ಣ ಯುದ್ಧ!

ಗ್ರೀಕರಿಗೆ ಬ್ರಿಟಿಷರ ಬೆಂಬಲ [illegible] ದಾಳಿಯಿಟ್ಟ ಇಟೆಲಿಯನರನ್ನು ತಡೆಯುವರೆ ಗ್ರೀಕ ಸೈನಿಕರು ಬಹಳ ಉತ್ಸಾಹ ಪರಾಕ್ರಮಗಳಿಂದ ಕಾದಾಡುತ್ತಿದ್ದಾರೆ. ಬ್ರಿಟಿಷರು ಇವರಿಗೆ ವೈಮಾನಿಕ ಸಹಾಯವೇ ಮೊದಲಾದುವನ್ನು ಕೊಡುತ್ತಿದ್ದಾರೆ.

ಗ್ರೀಕ್ ಆಲ್ಬೇನಿಯ ಗಡಿನಾಡಿನಲ್ಲಿ [illegible] ಬಂದಿಂದ ಭಯಂಕರ ಕಾಳಗ ನಡೆಯಿತು. ಗ್ರೀಕರು ಮುನ್ನುಗ್ಗುತ್ತಿರುವ ವೈರಿಗಳನ್ನು ಹಲವು ಕಡೆ ಹಿಮ್ಮೆಟ್ಟಿಸಿದರು.

ಗ್ರೀಸಿನ ಮೇಲೆ ವಿಮಾನ ದಾಳಿ

ತಾ. ೧ರಂದು ಗ್ರೀಸಿನ ಮೇಲೆ ಇಟೆಲಿಯನರ ವಿಮಾನ ದಾಳಿ ಬಹಳ ಜೋರಾಗಿತ್ತು! ಅಥೆನ್ಸ್, ಸಾಲೋನಿಕ್, ಕೊರಿನ್ಥ್‌ಗಳ ಮೇಲೆ ದಾಳಿ ನಡೆಯಿತು.

ಗ್ರೀಕರು ಸುಪ್ರಸಿದ್ಧ ಗುಡ್ಡವನ್ನು ಪಡೆದರು

ಗ್ರೀಕರು ಅಪೂರ್ವಸಾಹಸದಿಂದ [illegible] ಅಡಿ ಎತ್ತರ ಪ್ರಸಿದ್ಧ ಐತಿಹಾಸಿಕ ಪರ್ವತವೊಂದನ್ನು ಸ್ವಾಧೀನಪಡಿಸಿದರೆಂದು ತಿಳಿದು ಬಂದಿದೆ. ಈ ಪರ್ವತದ ಮೇಲಿಂದ ಆಲ್ಬೇನಿಯದಲ್ಲಿ [illegible] ವರೆಗೆ ಗುಂಡಿನ ಮಳೆ ಕರೆಯಬಹುದಂತೆ.

ಯುದ್ಧ ಭೂಮಿಗೆ ಮುಸಲನಿ

ಇಟೆಲಿಯನ್ ಸೈನ್ಯವನ್ನು ಹುರಿದುಂಬಿಸಲು ಗ್ರೀಕ ರಣರಂಗಕ್ಕೆ ಮುಸಲನಿಯೇ ಬರುವನಾಗಿ ಸುದ್ದಿ ತಿಳಿದಿದೆ. ಕೌಂಟ್ ಚಿಯಾನೋ ಬಂದಿರುತ್ತಾನೆ.

ಇಟೆಲಿಯನರು ೯೦ ಮೈಲು ನುಗ್ಗಿದರು

ಕಾಳಗದಲ್ಲಿ ಇಟೆಲಿಯನರು ಗ್ರೀಸಿನಲ್ಲಿ ೯೦ ಮೈಲುಗಳನ್ನು ಮುನ್ನುಗ್ಗಿದರೆಂದು ತಿಳಿದುಬಂದಿದೆ.

ತುರ್ಕಿಸ್ಥಾನದ ಧೋರಣೆ! ಬ್ರಿಟನ್-ರಶ್ಯಗಳೊಡನೆ ಸ್ನೇಹ

ಗ್ರೀಸಿನ ಕುರಿತು ಆಲೋಚನೆ

ತುರ್ಕಿಸ್ಥಾನದ ಅಧ್ಯಕ್ಷ ಇನೊನೋರವರು ಭಾಷಣಮಾಡುತ್ತಾ ಗ್ರೀಸಿಗೆ ಆದ ದಾಳಿಯ ಕುರಿತು ವಿಷಾದ ಸೂಚಿಸಿ, ಈ ಬಗ್ಗೆ ತಮ್ಮ ನಿರ್ಧಾರವನ್ನು ಮಿತ್ರರಾದ ಬ್ರಿಟಿಷರೊಡನೆ ಯೋಚಿಸಿ ಮುಂದೆ ತಿಳಿಸಲಾಗುವುದೆಂದರು. ಅವರು ತಮ್ಮ ಭಾಷಣದಲ್ಲಿ ತುರ್ಕಿಯು ರಶ್ಯ ಬ್ರಿಟನುಗಳೊಡನೆ ಸದಾ ಸ್ನೇಹಭಾವದಲ್ಲಿ ಇರುವುದೆಂದು ಒತ್ತಿ ಹೇಳಿದರು.

ಆಲ್ಬೇನಿಯಕ್ಕೆ ಗ್ರೀಕರ ದಾಳಿ

ಪ್ಲಾರಿನಾ ಕಾಳಗದಲ್ಲಿ ಇಟಾಲಿಯನರನ್ನು ಸೋಲಿಸಿದ ಮೇಲೆ ಗ್ರೀಕರು ಆಲ್ಬೇನಿಯಕ್ಕೆ ನುಗ್ಗಿ ಅಲ್ಲಿ ಇಟಲಿಯನರ ಹಲವು ಆಯಕಟ್ಟಿನ ಸ್ಥಳಗಳನ್ನು ವಶಪಡಿಸಿಕೊಂಡಿರುವರು. ಇಟಲಿಯನರು ಬಾಂಬುಗಳ ಮಳೆ ಸುರಿಸುತ್ತಿದ್ದರೂ ಗ್ರೀಕರು ಹಿಂದೆ ಸರಿಯಲಿಲ್ಲ.

ಪಶ್ಚಿಮ ಮ್ಯಾಸಿಡೋನಿಯದಲ್ಲಿ ಭಯಂಕರ ಕಾಳಗ ನಡೆಯಿತು. ಗ್ರೀಕ್ ವಿಮಾನಗಳು ಆಲ್ಬೇನಿಯದೊಳಗೆ ನುಗ್ಗಿ ಅನೇಕ ವಿಮಾನ ಗೃಹಗಳನ್ನು ಸ್ವಾಧೀನ ಮಾಡಿರುವುದಾಗಿ ತಿಳಿದುಬಂದಿದೆ.

ಗ್ರೀಸಿಗೆ ಬ್ರಿಟಿಷ್ ಯುದ್ಧಹಡಗಗಳು

ಬ್ರಿಟಿಷ್ ಯುದ್ಧ ಹಡಗುಗಳು ಗ್ರೀಸಿಗೆ ನೆರವಾಗುವ ಸಲುವಾಗಿ ಕೊರಮವಿಗೆ ೩೬ ಮೈಲುಗಳ ದೂರದ ವರೆಗೆ ಬಂದವೆಂದು ತಾ. ೧ರಂದು ತಿಳಿದಿದೆ.

ಬ್ರಿಟಿಷ್ ಹಡಗುಗಳ ಮೇಲೆ ವಿಮಾನ ದಾಳಿ

ಫ್ರೆಂಚ ಕರಾವಳಿಯಿಂದ ಜರ್ಮನರು ಡೋವರಿನ ಮೇಲೆ ಗುಂಡಿನ ಮಳೆ ಕರೆದರು. ಬೇರೊಂದೆಡೆ ಕೆಲವು ಜರ್ಮನ್ ಹಡಗುಗಳು ಬ್ರಿಟಿಷ್ ಹಡಗುಗಳನ್ನು ದಾಳಿಮಾಡಿದವು. ಹಗಲೂ ರಾತ್ರಿ ಫ್ರೆಂಚ ಕರಾವಳಿಯಿಂದ ಗುಂಡು ಬೀಳುತ್ತಿತ್ತು.

'ಜಯ ಲಭಿಸುತ್ತಿದೆ'- ಚೀಣರ ಹೇಳಿಕೆ

ಜಪಾನಿಗೆ ವಿರುದ್ಧವಾಗಿ, ತಾವು ಅನೇಕಾನೇಕ ಜಯಗಳನ್ನು ಹೊಂದಿರುವುದಾಗಿ ಚೀಣೀಯರು ಹೇಳುತ್ತಾರೆ.

ಇನ್ನೆರಡು ಆಯಕಟ್ಟಿನ ಪ್ರದೇಶಗಳ ಜತೆಗೆ ಇಂಡೊ-ಚೀಣಾ ಗಡಿಯಲ್ಲಿನ ಲುಂಚೌ ಪಟ್ಟಣವನ್ನು ಚೀಣೀಯರು ಮತ್ತೆ ಹಿಡಿದಿದ್ದಾರೆ.

ಪೆಟೈನರಿಗೆ ಅಧ್ಯಕ್ಷ ರೂಸ್‌ವೆಲ್ಟರ ಸಂದೇಶ

ಪಶ್ಚಿಮಾರ್ಧಗೋಳದಲ್ಲಿ ಫ್ರೆಂಚ್ ಸ್ವಾಧೀನದಲ್ಲಿರುವ ಪ್ರದೇಶಗಳ ಪ್ರಭುತ್ವಾಧಿಕಾರವನ್ನು ಬದಲಾಯಿಸುವ ಪ್ರಯತ್ನವೇನಾದರೂ ನಡೆದರೆ ಅದಕ್ಕೆ ಸೂಕ್ತವಾದಂತಹ ಪ್ರತಿಕ್ರಮವನ್ನು ತಾವು ಕೈಕೊಳ್ಳಬೇಕಾಗುವುದೆಂದು ಅಧ್ಯಕ್ಷ ರೂಸ್‌ವೆಲ್ಟರು ತಿಳಿಸಿದ್ದಾರೆ. ೧೫೦ ವರ್ಷಗಳ ತರುವಾಯ ಈಗ ಫ್ರಾನ್ಸ್ ಅಮೇರಿಕಾಗಳ ಸ್ನೇಹವು ಕೆಡುವುದಾದರೆ ಅದು ಬಹಳ ವಿಷಾದಕರವೆಂದು ರೂಸ್‌ವೆಲ್ಟರು ಸೂಚಿಸಿದ್ದಾರೆ.

ಅಮೇರಿಕಕ್ಕೆ ಹಿಟ್ಲರನ ಗುಪ್ತಚಾರ

ಶಾಂತಿಗಾಗಿ ಹಿಟ್ಲರ್ ಯತ್ನಿಸುವನೆ?

ಅಮೇರಿಕನರ ಮನವೊಲಿಸುವ ಸಲುವಾಗಿ ಹಿಟ್ಲರನು ಒಬ್ಬ ಗುಪ್ತಚಾರನನ್ನು ಅಲ್ಲಿಗೆ ಕಳುಹಿಸಿರುವನೆಂದು ಜೋರ್ಜ್ ಸ್ಲೊಕಾಂಬಿಯವರು ಲಂಡನಿನ ಸಂಡೇ ಎಕ್ಸ್‌ಪ್ರೆಸ್ ಎಂಬ ಪತ್ರಿಕೆಯಲ್ಲಿ ಬರೆದಿರುವರು.

ಶಾಂತಿಗಾಗಿ ಆತನು ಯತ್ನಿಸುವನೆಂದೂ ಸುದ್ದಿ.

ವಸಂತಮಾಸದೊಳಗೆ ಯುದ್ಧ ಮುಗಿಸುವ ಯತ್ನ

ಮುಂದಿನ ವಸಂತಮಾಸದೊಳಗೆ ಅಮೇರಿಕವು ಯುದ್ಧದಲ್ಲಿ ಖಂಡಿತ ಪ್ರವೇಶಿಸುವುದೆಂದು ಹಿಟ್ಲರನು ತಿಳಿದಿರುವುದರಿಂದ, ಅದರ ಮೊದಲೇ ತನ್ನ ಆಕಾಂಕ್ಷೆಯನ್ನು ಪೂರೈಸಿ ಹಿಟ್ಲರನು ಯುದ್ಧವನ್ನು ನಿಲ್ಲಿಸಲು ಮನಸ್ಸು ಮಾಡಿರುವನೆಂದು ನ್ಯೂಯಾರ್ಕ್ ಪತ್ರಿಕಾ ಸಂಪಾದಕರೊಬ್ಬರ ಹೇಳಿಕೆ.

ಅಬಿಸೀನಿಯಾ ಚಕ್ರವರ್ತಿಯವರ ಚಟುವಟಿಕೆ

ಅಬಿಸೀನಿಯಾದ ಚಕ್ರವರ್ತಿ ಹೈಲಿಸೆಲಾಸಿಯವರು ಈಗ ಸುಡಾನಿನಲ್ಲಿದ್ದಾರೆ. ಅಬಿಸೀನಿಯಾದ ಸರಹದ್ದಿನಿಂದ ಬಂದ ಅನೇಕ ಅಬಿಸೀನಿಯಾದ ನಾಯಕರುಗಳನ್ನು ಹೈಲಿಸೆಲಾಸಿಯವರು ಭೇಟಿಮಾಡಿ ಮಾತನಾಡಿದರು. ಅವರೆಲ್ಲರೂ ಚಕ್ರವರ್ತಿಯವರಲ್ಲಿ ತಮಗಿರುವ ರಾಜ್ಯಭಕ್ತಿಯನ್ನು ವ್ಯಕ್ತಪಡಿಸಿದರು.

ಬ್ರಿಟನಿಗೆ ತಾವು ಪೂರ್ಣ ಬೆಂಬಲವನ್ನೀಯುವುದಾಗಿ ಹೈಲಿಸೆಲಾಸಿಯವರು ಒಂದು ಸಂದರ್ಶನದಲ್ಲಿ ತಿಳಿಸಿದರು. ಅಬಿಸೀನಿಯಾವನ್ನು ಇಟೆಲಿಯ ಬಂಧನದಿಂದ ಬಿಡಿಸಲು ಸರ್ವಪ್ರಯತ್ನವನ್ನೂ ಮಾಡುವುದಾಗಿ ಅವರು ತಿಳಿಸಿದರು.

ಅಮೇರಿಕದಲ್ಲಿ ಚುನಾವಣೆ

ಅಮೇರಿಕದಲ್ಲಿ ಅಧ್ಯಕ್ಷ ಸ್ಥಾನದ ಚುನಾವಣೆಯು ತಾ. ೫ರಲ್ಲಿ ನಡೆಯಿತು. ಪ್ರತಿಸ್ಪರ್ಧಿಗಳು ರೂಸ್‌ವೆಲ್ಟ್ ಮತ್ತು ವಿಂಡಲ್‌ವಿಲ್ಕಿ ಇವರು.

ನೆಹರುಗಳಿಗೆ ನಾಲ್ಕು ವರ್ಷಗಳ ಕಠಿಣ ಶಿಕ್ಷೆ!

ಗೋರಖಪುರದ ಜಿಲ್ಲಾ ಮೆಜಿಸ್ಟ್ರೇಟರು ನೆಹರುಗಳ ಮೇಲೆ ಹೊರಿಸಿದ ಮೂರು ಅಪಾದನೆಗಳಿಗೆ, ಪ್ರತಿಯೊಂದಕ್ಕೂ ಒಂದು ವರ್ಷ ನಾಲ್ಕು ತಿಂಗಳ ಲೆಕ್ಕದಲ್ಲಿ ಒಟ್ಟು ನಾಲ್ಕು ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುವರು!

ಪಂಡಿತ ನೆಹರುಗಳಿಗೆ "ಸ್ಪೆಶಲ್ ಕ್ಲಾಸ್" ಕೊಡಬೇಕಾಗಿ ಜಿಲ್ಲಾ ಮೆಜಿಸ್ಟ್ರೇಟರು ಸೂಚಿಸಿರುವರಂತೆ.

ಪಂಡಿತ ನೆಹರುಗಳು ಜನರಿಗೆ ಯುದ್ಧವಿರುದ್ಧವಾಗಿ ಬೋಧಿಸುತ್ತಿರುರೆಂದೂ, ಅವರು ಜನತಾ ಸತ್ಯಾಗ್ರಹಕ್ಕೆ ಜನರನ್ನು ತಯಾರಿಸುತ್ತಿರುವರಾಗಿಯೂ ಅದು ಕಾನೂನಿಗೆ ವಿರೋಧವೆಂದೂ ಅವರ ಮೇಲೆ ಆರೋಪವನ್ನು ಅಪಾದಿಸಿ ಸರಕಾರೀ ವಕೀಲರು ವಾದಿಸಿದರು.

ನೆಹರುಗಳು ಮೆಜಿಸ್ಟ್ರೇಟರ ಪ್ರಶ್ನೆಗೆ ಉತ್ತರ ಕೊಡುತ್ತಾ, ಭಾರತ ಸರಕಾರದ ಕಾನೂನುಗಳೇ ಬಹಳ ಅಗೌರವ ಮತ್ತು ಅತ್ಯಾಚಾರಕವಾಗಿರುವುದರಿಂದ ಅವುಗಳನ್ನು ನಾನು ಮುರಿಯತಕ್ಕವನೇ ಇದ್ದೇನೆ ಎಂದು ಹೇಳಿದರು.

ಪಂಡಿತ ನೆಹರುಗಳ ಅಕಸ್ಮಾತ್ ಬಂಧನ!

ಪಂಡಿತ ನೆಹರುಗಳು ಗಾಂಧಿಜಿಯವರ ಆಮಂತ್ರಣದಂತೆ ವರ್ಧಾಕ್ಕೆ ತೆರಳಿ ಅಲ್ಲಿ ದೀರ್ಘಕಾಲ ಅವರೊಡನೆ ಸಂಭಾಷಣೆ ನಡೆಸಿ, ತಿರುಗಿ ಅಲ್ಲಾಬಾದಿಗೆ ಮರಳಿ ಬರುತ್ತಿದ್ದರು. ನೆಹರುಗಳು ಬರುವ ವಿಷಯ ತಿಳಿದು ಪೋಲೀಸರು ಸ್ಟೇಶನಿನಲ್ಲಿ ಸಿದ್ಧರಾಗಿದ್ದು, ಅವರು ಇಳಿದೊಡನೆಯೇ, ಎಲ್ಲರಿಗೂ ಆಶ್ಚರ್ಯಕರವೆನಿಸುವಂತೆ, ಬಂಧಿಸಿಕೊಂಡೊಯ್ದರು. ಆ ಮೇಲೆ ಇವರನ್ನು ಬಂಧಿಸಿದ್ದು, ಗೋರಖಪುರದಲ್ಲಿ ಒಂದು ಆಕ್ಷೇಪಾರ್ಹ ಭಾಷಣವಿತ್ತದ್ದಕ್ಕೆ ಎಂದು ತಿಳಿದುಬಂತು. ಪಂಡಿತ ನೆಹರುಗಳನ್ನು ಸೆರೆ ಹಿಡಿದಾಗ ಅವರ ಸೋದರಿಯರು ಇನ್ನೂ ಹಲವು ಪ್ರಮುಖರೂ ಇದ್ದರು. ಅವರು ನೆಹರುಗಳಿಗೆ ಹೂಮಾಲೆ ಹಾಕಿ ಸೆರೆಮನೆಗೆ ಕಳುಹಿಕೊಟ್ಟರು. ಗೋರಖಪುರದಲ್ಲಿ ನೆಹರುಗಳ ವಿಚಾರಣೆ ನಡೆಯಿತು.

ಜವಾಹಿರಲಾಲರ ವಿಚಾರಣೆ

ಆರೋಪಗಳು ಮೂರು

ಗೋರಖಪುರದ ಜಿಲ್ಲಾ ಮ್ಯಾಜಿಸ್ಟ್ರೇಟರು ಪಂಡಿತ ಜವಾಹಿರಲಾಲರನ್ನು ಜೈಲಿನಲ್ಲಿ ವಿಚಾರಣೆಮಾಡಿದರು. ಜವಾಹಿರಲಾಲರ ಮೇಲೆ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಪ್ರಕಾರ ಮೂರು ಆರೋಪಗಳಿದ್ದುವು.

ನೆಹರುಗಳು ೨೦ ಸಾವಿರಕ್ಕಿಂತ ಮಿಕ್ಕಿರುವ ಗೋರಖಪುರದ ಮತ್ತು ದೇವ[illegible] ಸಾರ್ವಜನಿಕ ಸಭೆಗಳಲ್ಲಿ ಅಕ್ಟೋಬರ ೬ ಮತ್ತು ೭ರಂದು ಅಶಿಕ್ಷಿತ ಜನರನ್ನು ಶಾಸನಭಂಗಮಾಡಲು ಪ್ರೇರಿಪಿಸುವಂತೆ ಮಾತನಾಡಿದರೆಂದೂ, ಈ ಯುದ್ಧವು ನಮಗೆ ಸಂಬಂಧಿಸಿದ ಯುದ್ಧವಲ್ಲವೆಂಬ ವಿಷಯ ಖಚಿತಪಡಿಸಿ ಮಾತನಾಡಿದರೆಂದೂ, ಈ ರೀತಿಯ ಸರಕಾರವು ಇರಲಿಕ್ಕೇ ಯೋಗ್ಯವಲ್ಲವೆಂದೇ ರೀತಿ ಮಾತನಾಡಿದರೆಂದೂ ಅವರ ಮೇಲೆ ಅಪಾದನೆಯಾಗಿತ್ತು.

ವಿಚಾರಣೆಯ ಕಾಲದಲ್ಲಿ ಅವರ ಸೋದರಿಯರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಶ್ರೀಮತಿ ಕೃಷ್ಣಾ ಹಾತಿಸಿಂಗ್ ಮತ್ತು [illegible] ಹಾಜರಿದ್ದರು.

ನೆಹರುಗಳ ಹೇಳಿಕೆ

ನೆಹರುಗಳು ತಮ್ಮ [illegible] ಆರೋ[illegible]

ಮಾರಾಟಕ್ಕೆ ಸಿದ್ಧವಾಗಿದೆ

1941ನೆ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್	... ...	೦—೫—೦
(ಪೋಕೆಟ್ ಇದ್ದದಕ್ಕೆ)	... ...	೦—೬—೦
ದೊಡ್ಡ ಸೈಜ್	... ...	೦—೯—೦
(ಪೋಕೆಟ್ ಇದ್ದದಕ್ಕೆ)	... ...	೦—೧೧—೦

ಶಾರದಾ ಛಾಪಖಾನೆ, ಮಂಗಳೂರು.



ಜವಾಹಿರಲಾಲ ನೆಹರುಗಳಿಗೆ 4 ವರ್ಷಗಳ ಕಠಿಣ ಸಜೆ ವಿಧಿಸಿದರು!

ಗಾಂಧಿಜಿಯವರು ಉಪವಾಸ ಆಚರಿಸಲಿರುವರೆ?

ವರ್ಧಾದಲ್ಲಿ ವರ್ಕಿಂಗ್ ಕಮಿಟಿ ಅಧಿವೇಶನ

ಕೇಂದ್ರ ಎಸೆಂಬ್ಲಿ ಸಭೆಗೆ ಕಾಂಗ್ರೆಸ ಸದಸ್ಯರು ಹಾಜರಾಗುವುದಿಲ್ಲ.

ದ ವಿಚಾರದಲ್ಲಿ ಒಂದು ಚೀಟಿ ಬರೆದು ಕಳುಹಿಸುತ್ತಾ ಅದರಲ್ಲಿ ತಾನು ದೋಷಿ ಅಥವಾ ನಿರ್ದೋಷಿ ಎಂಬ ವಿಚಾರದಲ್ಲಿ ವಾದಿಸಲಿಚ್ಛೆಪಡುವುದಿಲ್ಲವೆಂದು ತಿಳಿಸಿರು.

ಮಹಾತ್ಮರು ಉಪವಾಸ ಮಾಡುವರೆ?

ಮಹಾತ್ಮರು ಬೇಗನೇ ಒಂದು ಉಪವಾಸ ವ್ರತವನ್ನು ಪ್ರಾರಂಭ ಮಾಡುವರೆಂದೂ, ತನ್ನಿಷ್ಟ ನಿರ್ಧಾರವನ್ನು ವೈಸರಾಯರಿಗೆ ತಿಳಿಸಿರುವರೆಂದೂ ನಂಬಬಹುದಾದ ಸುದ್ದಿಯಿಂದ ತಿಳಿದುಬರುತ್ತದೆ. ಈ ಸಂಬಂಧದಲ್ಲಿ ಗಾಂಧಿಜಿ–ವೈಸರಾಯರುಗಳಿಗೆ ಆದ ಪತ್ರವ್ಯವಹಾರವೂ ಬೇಗನೇ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದೆಂದೂ ಗೊತ್ತಾಗಿದೆ. ವರ್ಧಾದಲ್ಲಿ ಸೇರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಅವರು ಈ ವಿಷಯ ತಿಳಿಸುವರೆಂದೂ ತಿಳಿದಿದೆ. ವರ್ಕಿಂಗ್ ಕಮಿಟಿ ಸದಸ್ಯರು, ಗಾಂಧಿಜಿಯವರು ಯಾವುದೇ ಉಪವಾಸ ವ್ರತವನ್ನು ಅವರ ಇಂದಿನ ದೇಹಪರಿಸ್ಥಿತಿಯನ್ನು ಯೋಚಿಸಿ ಕೈಕೊಳ್ಳಬಾರದಾಗಿ ಆಗ್ರಹಪೂರ್ವಕ ಕೇಳಿಕೊಳ್ಳುವರೆಂದೂ ತಿಳಿದುಬಂದಿದೆ.

ವರ್ಧಾದಲ್ಲಿ ತಾ. ೫ಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ವಿಶೇಷ ಸಭೆಯು ಸೇರಿತು.

ಸರ್ದಾರ್ ಪಟೇಲ್, ರಾಜಾಜಿ, ಅಬ್ದುಲ್ ಕಲಾಂ ಆಜಾದ್, ಶಂಕರರಾವ್ ದೇವ್, ಭೂಲಾಭಾಯಿ ಪ್ರಮುಖರುಗಳು ವರ್ಕಿಂಗ್ ಕಮಿಟಿಯ ಸಭೆಗಿಂತ ಒಂದು ದಿನ ಮುಂಚಿತವಾಗಿಯೇ ವರ್ಧಾಕ್ಕೆ ತೆರಳಿರುವರು.

ವಾರ್ಧಾದಲ್ಲಿ ವರ್ಕಿಂಗ್ ಕಮಿಟಿ ಸಭೆ

ಉಪವಾಸ ಖಂಡಿತವಾಗಿಲ್ಲ.

ವರ್ಕಿಂಗ್ ಕಮಿಟಿಯ ಸದಸ್ಯರು ವಾರ್ಧಾವನ್ನು ಸೇರಿರುವರು.

ಉಪವಾಸದ ಕಾರಣ?

ಗಾಂಧಿಜಿಯವರ ಉಪವಾಸದ ಕುರಿತು ಅವರೆಲ್ಲರೂ ಅದನ್ನು ತೊಡಗಬಾರದಾಗಿ ಒತ್ತಾಯಪಡಿಸುವರೆಂದು ತಿಳಿದಿದೆ. "ಹರಿಜನ"ವನ್ನು ನಿಲ್ಲಿಸಿದ ಘಟನೆಯು ಗಾಂಧಿಜಿಯವರ ಮನಸ್ಸನ್ನು ಬಹಳ ನೋಯಿಸಿದೆಯೆಂಬುದಾಗಿಯೂ ಲೋಕಕ್ಕೆ ಹಾಗೂ ತನ್ನ ರಾಷ್ಟ್ರದ ಜನತೆಗೆ ತನ್ನ ಹೃದಯದಲ್ಲಿರುವುದನ್ನು ಹೇಳಲು ತನಗೆ ಅಸ್ಪದವಿಲ್ಲವಾದರೆ ಜೀವಿಸಿಯೇನು ಫಲವಿಲ್ಲವೆಂಬುದಾಗಿಯೂ ಗಾಂಧಿಜಿ ಈ ಉಪವಾಸ ಮಾಡುವರಾಗಿ, ಪತ್ರಿಕಾ ಪ್ರತಿನಿಧಿಗಳ ಅಭಿಪ್ರಾಯ.

ಶ್ರೀ ಸುಭಾಸಬೋಸರು

ದೇಹಾಲಸ್ಯ–ರುಗ್ಣಮಾತೆಯನ್ನು ನೋಡಲು ಅವಕಾಶ

ಸೆರೆಮನೆಯಲ್ಲಿರುವ ಸುಭಾಸಬೋಸರಿಗೆ ಕೆಲಸಮಯ ದೇಹಾಲಸ್ಯವಿತ್ತೆಂದು ತಿಳಿದಿದೆ. ಅವರ ತಾಯಿ ಬೇನೆ ಬಿದ್ದಿರುವುದರಿಂದ ಅವರನ್ನು ನೋಡಲು ಬೋಸರಿಗೆ ಅವಕಾಶ ಕಲ್ಪಿಸಿಕೊಡಲಾಯಿತೆಂದು ತಿಳಿದಿದೆ.

ಶರತ್ ಬೋಸರ ಮೇಲೆ ಶಿಸ್ತು ಜಾರಿ ಅನಿವಾರ್ಯವಾಯಿತು

ರಾಷ್ಟ್ರಪತಿಗಳ ಹೇಳಿಕೆ

ಬಂಗಾಳ ಪಾರ್ಲಿಮೆಂಟರಿ ಬೋರ್ಡಿನವರು ಒಂದು ನಿರ್ಣಯಮಾಡಿ, ಅದರಲ್ಲಿ ಶರತಬೋಸರನ್ನು ಪಕ್ಷದಿಂದ ತೆಗೆದು ಹಾಕಿದರೆ ಕಾಂಗ್ರೆಸ್ ಪಕ್ಷಕ್ಕೇ ಹೆಚ್ಚಿನ ಹಾನಿಯುಂಟೆಂದು ರಾಷ್ಟ್ರಪತಿಗಳಿಗೆ ಬರೆದಿರುವರು. ಅದಕ್ಕೆ ಉತ್ತರ ಕೊಡುತ್ತಾ ಅಜಾದರು, ಇದು ಬಂಗಾಳಕ್ಕಾಗಲೀ, ವ್ಯಕ್ತಿಗಾಗಲೀ ಮಾಡಿದ ಅಪಮಾನವಲ್ಲವೆಂದೂ, ಶರತ್‌ಬೋಸರ ಆಚರಣೆಯನ್ನು ಪರಿಶೀಲಿಸಿ ಶಿಸ್ತಿನ ಕ್ರಮವನ್ನು ಮಾಡುವುದು ಕಾಂಗ್ರೆಸಿಗೆ ಅನಿವಾರ್ಯವಾಯಿತೆಂದು ತಿಳಿಸಿರುವರು.

ಅಚ್ಯುತ ಪಟವರ್ಧನರ ಬಂಧನ

ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಪ್ರಮುಖ ಕೆಲಸಗಾರರಲ್ಲೊಬ್ಬರಾದ ಶ್ರೀ ಅಚ್ಯುತರಾವ್ ಪಟವರ್ಧನ ಇವರನ್ನು ತಾ. ೨ರಂದು ಸೆರೆಹಿಡಿದಿರುವರು; ಅವರು ಮಾಡಿರುವ ಭಾಷಣವೊಂದರ ತಪ್ಪಿನ ಮೇರೆಗೆ.

ರ್‍ಯಾಡಿಕಲ್ ಕಾಂಗ್ರೆಸ್ ಲೀಗ್ ಪ್ರತ್ಯೇಕ ಸಂಸ್ಥೆಯಾಯಿತು

ಶ್ರೀ ಎಂ. ಎನ್. ರಾಯಿಯವರ ರ್‍ಯಾಡಿಕಲ್ ಕಾಂಗ್ರೆಸ್ ಲೀಗು, ಅವರ ಮೇಲೆ ಶಿಸ್ತು ಜಾರಿಯಾದನಂತರ ಕಾಂಗ್ರೆಸಿನ ಸಂಬಂಧವನ್ನು ತ್ಯಜಿಸುವ ನಿರ್ಣಯ ಮಾಡಿದೆ. ರ್‍ಯಾಡಿಕಲ್ ಡೆಮೊಕ್ರೆಟಿಕ್ ಪೀಪಲ್ಸ್ ಪಾರ್ಟಿ ಎಂಬೊಂದು ಪ್ರತ್ಯೇಕ ಸಂಸ್ಥೆಯನ್ನು ಏರ್ಪಡಿಸುವ ನಿರ್ಣಯವನ್ನು ಮಾಡಿದೆ. ರ್‍ಯಾಡಿಕಲ್ ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ ಸದಸ್ಯತ್ವಗಳಿಗೆ ರಾಜಿನಾಮೆ ಕೊಡಬೇಕಾಗಿದೆ.

ಭಾರತಕ್ಕೆ ಸಾಮಂತ ಸ್ವರಾಜ್ಯ

ಕೇಂದ್ರ ಅಸೆಂಬ್ಲಿಗೆ ನಿರ್ಣಯ

ಕೇಂದ್ರ ಅಸೆಂಬ್ಲಿ ಸದಸ್ಯರಾದ ಶ್ರೀ ಅಬ್ದುಲ್ ರಾಷಿದ್ ಚೌದುರಿಯವರು ಕೇಂದ್ರ ಅಸೆಂಬ್ಲಿಯ ಬರುವ ಅಧಿವೇಶನಕ್ಕೆ ಈ ನಿರ್ಣಯ ಕಳುಹಿಸಿರುವರು:—

"ವೆಸ್ಟ್‌ಮಿನಿಸ್ಟರ್ ರೀತಿಯ ಡೊಮಿನಿಯನ್ ಸ್ಟೇಟಸ್ಸನ್ನು ಭಾರತದಲ್ಲಿ ಸ್ಥಾಪಿಸುವಂತೆ ಗವರ್ನರ್ ಜನರಲ್‌ರು ಏರ್ಪಡಿಸಬೇಕು. ಮತಧರ್ಮ ಸಂಬಂಧವಾದ ಕೋಮುವಾರು ಹಕ್ಕುಬಾಧ್ಯತೆಗಳ ರಕ್ಷಣೆಗೆ ತಕ್ಕ ಶರ್ತಗಳನ್ನು ಏರ್ಪಡಿಸಬೇಕು. ಹಿಂದೂ–ಮುಸ್ಲಿಂ ಭಿನ್ನಾಭಿಪ್ರಾಯಗಳನ್ನು ಪಂಚಾಯಿತಿ ಒಪ್ಪಂದದಿಂದ ತೀರ್ಮಾನಮಾಡಿಕೊಳ್ಳಬೇಕು. ಭಾರತದಲ್ಲಿ ಡೊಮಿನಿಯನ್ ಸ್ಟೇಟಸ್ ರಾಜ್ಯಾಂಗ ಪದ್ಧತಿ ಏರ್ಪಡಿಸಲು ಈ ಕೂಡಲೇ ತಕ್ಕ ಕಾರ್ಯಕ್ರಮಗಳನ್ನು ರಚಿಸಬೇಕು."

ವೈಸರಾಯರ ಅವಧಿ

ಒಂದು ವರ್ಷ ಹೆಚ್ಚಿಸಿದೆ!

ಭಾರತದ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗ್ಲೋರವರಿಗೆ ೧೯೪೧ನೇ ಏಪ್ರಿಲಿನಿಂದ ಒಂದು ವರ್ಷದ ಅಧಿಕಾರಾವಧಿ ಹೆಚ್ಚಿಸಲಾಗಿದೆ

ಲಾರ್ಡ್ ಗಾರ್ಟರು ಭಾರತ ಸೇನಾಪತಿಗಳೆ?

ಭಾರತದ ಸರ್ವ ಸೇನಾಪತಿಗಳಾದ ಸರ್ ರಾಬರ್ಟ್ ಕ್ಯಾಸೆಲ್ಸರ ಅನಂತರ ಲಾರ್ಡ್ ಗಾರ್ಟರು ಸೇನಾಪತಿಗಳಾಗುವರೆಂದು ಡೈಲಿ ಟೆಲಿಗ್ರಾಫ್ ಪತ್ರಿಕೆಯ ಅಭಿಪ್ರಾಯ ಪಡುತ್ತದೆ.

ದೀಪಾವಳಿ ಆಚರಿಸಲಿಲ್ಲ.

ಸಿಂಧದ ಹಿಂದುಗಳ ವಿಷಾದ

ಸಿಂಧ ಪ್ರಾಂತದಲ್ಲಿ ಆಗುತ್ತಿರುವ ಜಾತೀಯ ವೈಷಮ್ಯದ ಸಲುವಾಗಿ ವಿಷಾದ ಸೂಚಿಸಿ ಸಿಂಧದ ಹಿಂದುಗಳು ಈ ವರ್ಷ ದೀಪಾವಳಿಯನ್ನು ಆಚರಿಸಲಿಲ್ಲವಾಗಿ ತಿಳಿದುಬರುತ್ತದೆ.

ಕೇಂದ್ರ ಶಾಸನ ಸಭೆಯ ಅಧಿವೇಶನ

ಕಾಂಗ್ರೆಸ್ ಸದಸ್ಯರು ಹೋಗುವುದಿಲ್ಲ.

ಬರುವ ಕೇಂದ್ರ ಶಾಸನ ಸಭೆಯ ಅಧಿವೇಶನಕ್ಕೆ ಕಾಂಗ್ರೆಸ್ ಸದಸ್ಯರು ಹೋಗುವುದಿಲ್ಲವಾಗಿ ತಿಳಿದುಬಂದಿದೆ.

ಭಾರತಕ್ಕೆ ಹೊಸತೇ ಜನ ಆಗಬೇಕು

ಗಾರ್ಡಿಯನ್ ಪತ್ರಿಕೆಯ ಹೇಳಿಕೆ

ಲಂಡನಿನಲ್ಲಿ ಪಂಡಿತ ನೆಹರುಗಳ ಬಂಧನ ವಿಚಾರವಾಗಿ ಏನೂ ಹೆಚ್ಚಿನ ಸುದ್ದಿ ಹರಡಿಲ್ಲವಂತೆ. ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಮಾತ್ರ ಜನತಾ ಮುಖಂಡರನ್ನು ಬಂಧಿಸಿದ ವಿಷಯ ಹೀಗೆ ಬರೆದಿದೆಯಾಗಿ ತಿಳಿದಿದೆ.

"ಯಾವುದೇ ರಾಷ್ಟ್ರದಲ್ಲಾಗಲಿ ಜನತಾ ಮುಖಂಡರನ್ನು ಬಂಧಿಸುವುದರಿಂದ ಅವರು ತೊಡಗಿದ ಕಾರ್ಯಕ್ಕೆ ಬಲ ಹೆಚ್ಚಾಗುತ್ತದೆ; ಈಗಿನ ವೈಸರಾಯರು ಪರಿಸ್ಥಿತಿಯನ್ನು ತಿಳಿದವರೆಂದು ಅವರ ಅಧಿಕಾರಾವಧಿ ಹೆಚ್ಚಿಸಿದ್ದು; ಆದರೆ ಅವರ ದೂರದರ್ಶಿತ್ವ ಸಾಲದು; ಭಾರತದ ಇಂದಿನ ಸಮಸ್ಯೆಯನ್ನು ಹೊಸ ಜನ ಹೊಸ ದೃಷ್ಟಿಯುಳ್ಳವ, ಹೊಸ ರೀತಿಯಿಂದ ಪರಿಹರಿಸಬೇಕು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. E. P. No. 655/1940.
ಕ್ಲೈಮ್ ನಂಬ್ರ 1368/1938-39.

ಪಣಂಬೂರು ಕೋ-ಒಪರೇಟಿವ್ ಸೊಸೈಟಿ ಒಗ್ಗೆ ಇದರ ಪ್ರೆಸಿಡೆಂಟ ಪಿ. ಶ್ಯಾಮರಾವ್ } ಡಿಕ್ರಿದಾರರು

ಮತ್ತು

1. ಸಂಕಪ್ಪ ರೈ / 2. ಪದ್ಮ ರೈ — ಕುಕ್ರ ರೈ ಮಕ್ಕಳು, ಮಂಗಳೂರು ತಾಲೂಕು, ಪಡಪ ನಡುಗ್ರಾಮದ ಮೊದಂತಾದಿಗುತ್ತು ಎಂಬಲ್ಲಿ ಇರುವವರು } ಜಡ್ಜ್‌ಮೆಂಟ್ ಡೆಟರುಗಳು

ಸದ್ರಿ ಜಡ್ಜ್‌ಮೆಂಟ್ ಡೆಟರುಗಳಿಗೆ—

ನೀವು ಮತ್ತು ಮೃತಪಟ್ಟ ಕುಕ್ರ ರೈ ಕೂಡಾ 3 ಜನರ ಮೇಲೆ ಮೇಲ್ಕಾಣಿಸಿದ ಸೊಸೈಟಿಯು ಪಡೆದ ಕ್ಲೈಮ್ ನಂಬ್ರ 1368/1938-39ನೇ ಡಿಕ್ರಿಯನ್ನು ಸಮಾಧಾನಪಡಿಸದ್ದರಿಂದ ಸದ್ರಿ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ಅಮಲ್‌ಜ್ಯಾರಿಯು ತಾರೀಕು 26-11-'40 ನೇ ದಿನ ಮೇಲ್ಕಾಣಿಸಿದ ಕೋರ್ಟಿನಲ್ಲಿ ಚಿಕ್ಕಿಗೆ ಇಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ತಾರೀಕಿನಲ್ಲು ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮನ್ನು ಸಿವಿಲ್ ಕೈದು ಮೂಲಕ ಯಾಕೆ ಜೈಲಿಗೆ ರವಾನಿಸಕೂಡದು ಎಂಬದಕ್ಕೆ ತಕ್ಕ ಉದಾಹರಣೆಯನ್ನು ದಾಖಲು ಮಾಡದಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯಲ್ಲಿ ಅಪೇಕ್ಷಿಸಿದ ನಿವೃತ್ತಿಗಳಿಗೆ ಹುಕುಂ ಮಾಡಲಾದೀತೆಂತ ಈ ಮೂಲಕ ನಿಮಗೆ ತಿಳಿಸೋಣಾಗಿಯದೆ.

By order of the Court.

Mangalore, 4-11-1940. } P. Shrinivasa Rao, Advocate for Petitioner

ಕ್ರಾಂತಿಕಾರ

ಟ್ರಾಟ್‌ಸ್ಕಿಯ ಕೊನೆಯ ದಿನಗಳು

ವಿಶ್ವಾಸಘಾತುಕನ ದುಷ್ಕೃತ್ಯ!

ಟ್ರಾಟ್‌ಸ್ಕಿಯ ಕೊನೆಯ ಸಂದೇಶ! ಸ್ಮಶಾನದ ಅಂತ್ಯ ದರ್ಶನ!

ಕ್ರಾಂತಿಯಜ್ಞದಲ್ಲಿ ಆಹುತಿಯಾದ ಜೀವ, ಟ್ರಾಟ್ಸ್ಕಿಯದು! ಸಮತಾವಾದವು ರಶ್ಯಕ್ಕೆ ಮಾತ್ರ ಅನ್ವಯಿಸಿದ್ದರೆ ಸಾಲದು, ಅಖಿಲ ಬ್ರಹ್ಮಾಂಡವನ್ನೇ ಆವರಿಸಬೇಕೆಂಬ ಕನಸುಗಾರನಾಗಿದ್ದ ಟ್ರಾಟ್‌ಸ್ಕಿ! ಪ್ರಪಂಚದ ಕ್ರಾಂತಿ ಪುರುಷರಲ್ಲಿ ಅಗ್ರಗಣ್ಯ! ವಿಶ್ರಾಂತಿಯಿಲ್ಲದೆ, ಹಿಡಿದ ತತ್ವಕ್ಕಾಗಿ ದೇಶ-ವಿದೇಶಗಳಲ್ಲಿ ತಲೆ ಮರಸಿಕೊಂಡು ಅಲೆದಾಡಿದರೂ, ವಿಶ್ವಸಮತಾವಾದದ ವಿಶ್ವಾಸವನ್ನು ಆತ ಬಿಟ್ಟಿರಲಿಲ್ಲ. ಸಮಾಜದ ಕ್ರಾಂತಿಗಾಗಿ ಹೀಗೆ ಹಟ ತೊಟ್ಟು, ಸ್ವಾರ್ಥ ಬಿಟ್ಟು, ಕಷ್ಟಪಟ್ಟು ಸಾಧಿಸುವ ಜನರು ಬಹಳ ಕಡಿಮೆ! ಟ್ರಾಟ್‌ಸ್ಕಿಯ ಜೀವನಾದ್ಯಂತವೂ ದುರಂತ ರೋಮಾಂಚಕಾರಿಯಾಗಿದೆ!

ಫ್ರಾಂಕ್ ಜಾಕ್ಸನ್ ಎಂಬವನು ಟ್ರಾಟ್‌ಸ್ಕಿಯನ್ನು ವಂಚಿಸಿ ಕೊಲೆಮಾಡಿದ ದುರಾತ್ಮನು! ಈತ ಈ ಕಾರ್ಯವನ್ನು ಸಾಧಿಸಬೇಕಾದರೆ ಬಹಳ ಕಾಲದಿಂದ ಯತ್ನಿಸಿದ್ದ. ಟ್ರಾಟ್‌ಸ್ಕಿಗೆ ದೂರದ ಮೆಕ್ಸಿಕೋದಲ್ಲಿದ್ದರೂ ಅಪಾಯಶಂಕೆ ಹಗಲಿರುಳೆನ್ನದೆ ಇದ್ದೇ ಇತ್ತು. ಸ್ಟಾಲಿನ್ ಟ್ರಾಟ್‌ಸ್ಕಿಯ ವಧೆಗಾಗಿ ಹೊಂಚುಹಾಕುತ್ತಿದ್ದ. ಟ್ರಾಟ್‌ಸ್ಕಿ ಮನೆ ಸುತ್ತ ಕಾವಲಿರಿಸಿ ಜೀವನ ಸಾಗಿಸಬೇಕಾಗಿತ್ತು. ದೂರ ಮೆಕ್ಸಿಕೋದಿಂದಲೇ ಆತನು, ತನ್ನ ಲೇಖನಿಯ ಮೊನೆಯಿಂದ ಸ್ಟಾಲಿನನ ಸಾಮ್ರಾಜ್ಯವನ್ನು ನಡನಡುಗಿಸುತ್ತಿದ್ದ.

ಕೊಲೆಮಾಡಿದ ದುರಾತ್ಮನು, ಟ್ರಾಟ್‌ಸ್ಕಿಯನ್ನು ಕೆಲಕಾಲದ ಹಿಂದೆಯೇ ಪರಿಚಯಮಾಡಿದ್ದನು. ರಾಜಕೀಯ ವಿಷಯಗಳಲ್ಲಿ ಹಲವು ಗುಪ್ತ ಸಂಗತಿಗಳನ್ನು ತಿಳಿಸುತ್ತಿದ್ದನು. ಆರು ತಿಂಗಳ ಹಿಂದೆ ಅವರಿಬ್ಬರಿಗೆ ಪರಿಚಯವಾಗಿತ್ತು. ಆತನ ಒಬ್ಬ ಆಪ್ತಳ ಮೂಲಕ ಜಾಕ್ಸನ್ ಟ್ರಾಟ್‌ಸ್ಕಿಯ ಬಳಿಯನ್ನು ಆಪ್ತನಾಗಿಯೇ ಸೇರಿದ.

ಒಂದು ಹಸ್ತಲೇಖನವನ್ನು ಟ್ರಾಟ್‌ಸ್ಕಿಗೆ ತೋರಿಸಲು ಜಾಕ್ಸನ್ ತಂದಿದ್ದ! ಅದರ ಕುರಿತು ಟ್ರಾಟ್‌ಸ್ಕಿಯ ಅಭಿಪ್ರಾಯವೇನೆಂದು ಜಾಕ್ಸನ್ ತಿಳಿವ ಕುತೂಹಲ ತೋರಿಸಿದ. ಅವರಿಬ್ಬರೂ ಗುಪ್ತ ಕೊಟಡಿಗೆ ಹೋದರು. ದಾರಿಯಲ್ಲಿ ಊಟದ ಕೋಣೆ ದಾಟಬೇಕಾಗಿತ್ತು. ಟ್ರಾಟ್‌ಸ್ಕಿಯ ಮಡದಿ ಅಲ್ಲಿದ್ದಳು. ಆಕೆ ರಶ್ಯನ್ ಪದ್ಧತಿಯಂತೆ ಆಗಂತುಕನಿಗೆ ಒಂದು ಕಪ್ ಟೀ ಕೊಟ್ಟಳು. ಆತನು ತನಗೆ ನೀರು ಸಾಕೆಂದು ಕೇಳಿದ. ಮೈಗೆ ಹಾಕಿದ ಉದ್ದ ಕೋಟು ಒಂದಿಷ್ಟು ಅಲುಗಾಡದೆ ಕೊಟ್ಟ ನೀರು ಕುಡಿದು, ಇಬ್ಬರೂ ಒಳಹೋದರು.

ಟ್ರಾಟ್‌ಸ್ಕಿ ಕುಳಿತುಕೊಂಡು, ಜಾಕ್ಸನ್ ತಂದಿದ್ದ ಹಸ್ತಲೇಖನವನ್ನು ಓದುವುದರಲ್ಲಿಯೇ ಮಗ್ನನಾದ. ಜಾಕ್ಸನ್ ಮೆಲ್ಲನೆ ತನ್ನ ಉದ್ದ ಕೋಟಿನ ಒಳಭಾಗದಲ್ಲಿ ಪಿಸ್ತೂಲು, ಕಠಾರಿಗಳೊಡನೆ ಇಟ್ಟಿದ್ದ ಒಂದು ಭಾರವಾದ ಚಮ್ಮಟಿಗೆಯನ್ನು ಮೆಲ್ಲನೆ ತೆಗೆದು, ಬಗ್ಗಿ ಓದುತ್ತಿದ್ದ ಟ್ರಾಟ್‌ಸ್ಕಿಯ ತಲೆಗೆ ಒಂದೇಟು ಬಲವಾಗಿ ಬಡಿದುಬಿಟ್ಟ!

ಪೆಟ್ಟು ಜೋರಾಗಿತ್ತು! ಟ್ರಾಟ್‌ಸ್ಕಿಯ ತಲೆಯಿಂದ ನೆತ್ತರು ಚಿಮ್ಮುತ್ತಿತ್ತು!! ಆದರೂ ಆತನು ಜಾಕ್ಸನನ್ನು ಬಿಡಲಿಲ್ಲ. ಹಿಡಿದು ಆತನ ಕೈಗೆ ಚನ್ನಾಗಿ ಕಚ್ಚಿದ; ಅರಚಿದ; ಶಬ್ದ ಕೇಳಿ ಹೊರಗಿನ ಆತನ ಬಾಡಿಗಾರ್ಡುಗಳು ಓಡಿಬಂದರು; ಜಾಕ್ಸನನನ್ನು ಹಿಡಕೊಂಡರು.

ತಲೆಬುರುಡೆ ಒಡೆದುಹೋಗಿ, ಟ್ರಾಟ್‌ಸ್ಕಿಯ ಒಂದು ಭಾಗವೇ ಶಕ್ತಿಹೀನವಾಗಿತ್ತು; ಆದರೂ ಆತನ ಅದ್ಭುತ ಮೇಧಾಶಕ್ತಿ, ದೃಢಸಂಕಲ್ಪಗಳು ಒಂದಿನಿತೂ ಕಡಿಮೆಯಾಗಿರಲಿಲ್ಲ.

'ನಾನು ಒಬ್ಬ ರಾಜಕೀಯ ದುರಾತ್ಮನ ಕೈಯಿಂದ ಸಾಯುತ್ತೇನೆ. ನಾನವನೊಡನೆ ಹೋರಾಡಿದೆ; ಫ್ರೆಂಚ್ ಖಾನೇಸುಮಾರಿಯ ವಿಷಯ ಮಾತನಾಡಲು ಆತ ಒಳಗೆ ಬಂದಿದ್ದ; ಆತನು ತಿಳಿಯದೆ ನನ್ನ ತಲೆಗೆ ಬಡಿದ; ನಮ್ಮ ಮಿತ್ರರಿಗೆ ದಯಮಾಡಿ ತಿಳಿಸಿರಿ- ನಾಲ್ಕನೆಯ ಅಂತರ್‌ರಾಷ್ಟ್ರೀಯದಲ್ಲಿ ಜಯವಾಗುವುದು ಖಂಡಿತ; ಮುಂದೊತ್ತಿರಿ;

—ಹೀಗೆಂದು ಕೊನೆಯ ಕಾಲದಲ್ಲಿ ತನ್ನ ಅನುಯಾಯಿಗಳಿಗೆ ಸಂದೇಶವಿತ್ತು ಟ್ರಾಟ್‌ಸ್ಕಿ ಉಸಿರೆಳೆದ. ಆಗಲೂ ಅಂತಹ ನಿರ್ಧಾರವಿತ್ತು ಆತನಲ್ಲಿ!

ಟ್ರಾಟ್‌ಸ್ಕಿಯ ಶವದಿಂದ, ಆತನ ಶೀತವಾಗಿದ್ದ ಹೃದಯಕೋಶವನ್ನು ಹೊರತೆಗೆದರು! ತೂಗಿ ಅದನ್ನು ಸಾರಾಯಿಯಲ್ಲಿಟ್ಟಿರುವರು! ಅದು ಭಾರದಲ್ಲಿ ೧೦.೧೩ ತೊಲೆ ಇತ್ತು. ಒಬ್ಬ ಸರ್ಜನನು ಆತನ ತಲೆಬುರುಡೆಯನ್ನು ಸೀಳಿ ಒಳಗಿನ ಮೆದುಳನ್ನು ಹೊರತೆಗೆದು ತುಂಡರಿಸಿ ಪರೀಕ್ಷಿಸಿದ. ಸಾಮಾನ್ಯಜನರ ಮೆದುಳು ಅಷ್ಟು ಭಾರವಾಗಿರುವುದಿಲ್ಲ. ಆತನದು ೩.೪೪ ತೊಲೆ ಭಾರವಾಗಿತ್ತು!

(ಟರ್ಜನಿಯ ಮಿದುಳು ೪.೪೫ ತೊಲೆ, ದ್ವೈರನ್ನನ ಮಿದುಳು ೩.೯೮ ತೊಲೆ, ಕ್ರೋಂಟನ ಮಿದುಳು ೩.೫ ತೊಲೆ, ಶಿಲ್ಲರನ ಮಿದುಳು ೩.೪೮ ತೊಲೆ, ಸರಾಸರಿ ಭಾರ ೩.೧ ತೊಲೆ ಮಾತ್ರ)

ಮೆಕ್ಸಿಕೋ ನಗರದ ಪೆಂಡಲ್ ಡಿಸ್ಟ್ರಿಕ್ಟಿನ ಸಾರ್ವಜನಿಕ ಸ್ಮಶಾನದ ಕಡೆಗೆ ಟ್ರಾಟ್‌ಸ್ಕಿಯ ಶವವಿದ್ದ ಉಕ್ಕಿನ ಪೆಟ್ಟಿಗೆಯು ಸಾಗುತ್ತಿತ್ತು. ಆ ಪೆಟ್ಟಿಗೆಯಿಂದ ಹೊರತೆಗೆದು ಇನ್ನೊಂದು ಉಕ್ಕಿನ ಬಂಡಿಯಲ್ಲಿ ಅದನ್ನು ಇರಿಸಿದರು. ಆ ದೊಡ್ಡ ಸ್ಮಶಾನದ ಬಾಗಿಲು ತೆರೆಯಿತು; ಬಂಡಿಯು ಅದರ ಒಳಸಾಗಿತು. ಒಳಗಿನ ಉರಿವ ಬೆಂಕಿಯ ಜ್ವಾಲೆ ಕೊನೆಯ ತನಕ ಆತನನ್ನು ಹಿಂಬಾಲಿಸಿದ ಆ ಮೂವರು 'ಬಾಡಿಗಾರ್ಡ'ರ ಮುಖವನ್ನು ಚುಕ್ಕಿತು! ಕಳೆದ ಮೂವತ್ತೆಂಟು ವರ್ಷಗಳ ತನಕ ಆತನೊಡನೆ ಜೀವನದ ಯಮಯಾತನೆಯಲ್ಲಿಯೂ ಹಿಂಬಾಲಕಳಾಗಿದ್ದ ಪತಿಭಕ್ತಿಪರಾಯಣಳಾದ ಆತನ ಪತ್ನಿ, ಬಹಳ ನಿಶ್ಶಕ್ತಳಾಗಿದ್ದರೂ ಬೆಂಬಿಡದೆ ಬರುತ್ತಿದ್ದಳು! ಒಲೆಯ ಮೇಲೆ ಶವವನ್ನಿರಿಸಿದರು. ಟ್ರಾಟ್‌ಸ್ಕಿಯ ಕಪ್ಪು ಅಂಗಿ, ದಪ್ಪ ಗಡ್ಡ ಮೀಸೆಗಳ ಮೇಲೆ ಬೆಂಕಿಯ ಜ್ವಾಲೆ ನಾಲಗೆ ನೀಡುತ್ತಿತ್ತು! ಮೇಲೆ ಸುಡುವ ಸೂರ್ಯ, ಸುತ್ತಲಿನ ಹೊಗೆ, ಉರಿವ ಬೆಂಕಿಯ ಚಿಳಿ ಚಿಟಿಲು, ಇವುಗಳ ಮಧ್ಯೆ ಕಠೋರವಾಗಿ ದಗಿಸುತ್ತಿದ್ದ ಕ್ರಾಂತಿಕಾರೀ ಟ್ರಾಟ್‌ಸ್ಕಿಯನ್ನು, ಆ ಮೂವರೂ ಕೊನೆಗೊಮ್ಮೆ ನೋಡಿ ಹಿಂತೆರಳಿದರು. ಶ್ರೀಮತಿ ಟ್ರಾಟ್‌ಸ್ಕಿಯು ಮೂರ್ಛೆಗೊಂಡ ದೇಹವನ್ನು ಉಳಿದವರು ಹೊತ್ತು ತಂದು ಬಂಡಿಯಲ್ಲಿ ಮಲಗಿಸಿದರು.

ನಿಮ್ಮ ಕಫದ ಬಾಧೆಯನ್ನು ನಿಲ್ಲಿಸಿರಿ!

ಕಫದ ಬಾಧೆಯಿಂದ ನೀವು ಕೆಮ್ಮುತ್ತಿರುವಾಗ, ಅದು ನಿಮ್ಮ ಹೃದಯಕೋಶದ ಸೂಕ್ಷ್ಮನಾಡಿಗಳಿಗೆ ಬಹಳ ಘಾತವನ್ನುಂಟುಮಾಡುವುದು. ಆದ್ದರಿಂದ ಕೂಡಲೇ, ಕಫದ ಬಾಧೆಯನ್ನು ನಿಲ್ಲಿಸಲು, ವಿಷಹಾರಿಯಾದ ಶ್ವಾಸ ಯೋಗ್ಯವಾದ ಪೆಪ್ಸ್ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ನಿಮ್ಮ ಬಾಯಲ್ಲಿ ಹಾಕಿದ ಪೆಪ್ಸ್ ಮಾತ್ರೆ ಅಲ್ಲಿ ಕರಗಿ, ಔಷಧಿ ಸತ್ವದ ರಸವನ್ನು ಹೊರಡಿಸುತ್ತದೆ. ಆ ರಸವು ಶ್ವಾಸದೊಡನೆ ಸೇರಿ ಹೃದಯಕೋಶವನ್ನು ಸೇರುತ್ತವೆ. ಹೀಗೆ ಪೆಪ್ಸ್ ಕಫದೋಷವನ್ನು ನಿರ್ಮೂಲಗೊಳಿಸಿ, ಕಫದ ಬಾಧೆಯಿಂದ ಕಂಗೆಟ್ಟ ನರನಾಡಿಗಳನ್ನು ಶಕ್ತಿಗೊಳಿಸುತ್ತದೆ. ಮಾತ್ರವಲ್ಲದೆ ನಿಮ್ಮ ಎದೆ ಶ್ವಾಸಕೋಶಗಳನ್ನು ಬಲಗೊಳಿಸುತ್ತದೆ.



ಕಫ, ಶೀತ, ಹಿಮಬಾಧೆಗಳಿಗೆ ಪೆಪ್ಸ್ ಅಪರಿಮಿತ ಗುಣಕಾರಿಯಾದುದು. ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲಿ ಪೆಪ್ಸ್ 1 ರೂ. ಬೆಲೆಗೆ ದೊರಕುತ್ತದೆ.

ಏಜಂಟ್ಸ್: ಮೆಸರ್ಸ್ ರಾಧಾ ಮತ್ತು ಕಂಪೆನಿ ಪಾರ್ಕ್‌ಟೌನ್ ಮದ್ರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಕವಾದ ಶ್ವಾಸನೀಯ ಗುಳಿಗೆಗಳು

ಎಂಡ್ರ್ಯೂಸ್ ಲಿವರ್ ಸೋಲ್ಟ್



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ

25

ವಿಚಿತ್ರ ಪ್ರಪಂಚ

ಜಗತ್ತಿನ ಅದ್ಭುತ ಸ್ಥೂಲಕಾಯರು

ಜಗತ್ತಿನಲ್ಲೇ ಹೆಚ್ಚು ಭಾರವಾದ ಮಕ್ಕಳನ್ನು ಪಡೆದ ಕೀರ್ತಿ ಅಸ್ಸಿಯಾದ ಒಂದು ಕುಟುಂಬಕ್ಕೆ ದೊರೆತಿದೆ. ಈ ಕುಟುಂಬದ ಮಿಕ್ಕ ಎಲ್ಲಾ ಮಕ್ಕಳು ಸಾಮಾನ್ಯವಾದ ಭಾರವನ್ನೇ ತೋರಿಸಿದ್ದಾರೆ. ಒಂದು ಗಂಡು ಮತ್ತು ಒಂದು ಹೆಣ್ಣು—ಸ್ಥೂಲಕಾಯರಾಗಿ ಬೆಳೆದು ಅದ್ಭುತ ಭಾರವನ್ನು ತೋರಿಸಿರುವರು. ಅಣ್ಣತಂಗಿಯರಾಗಿರುವ ಇವರ ಪೈಕಿ ಬರೇ ೧೬ ವರ್ಷ ಪ್ರಾಯದವನಾಗಿರುವ ಟೋನಿಯು ಮತ್ತು ಅವನ ತಂಗಿ ಬರೇ ೧೪ ವರ್ಷ ಪ್ರಾಯದವಳಾಗಿರುವ ಬೆಟ್ಟಿ—ಇಬ್ಬರೂ ೨ ಸ್ಟೋನುಗಳು ಅಂದರೆ ೧೧ ಮಣ ಭಾರವಾಗಿರುವರು. ಅಂದರೆ ಅಷ್ಟು ಸಣ್ಣ ಪ್ರಾಯದಲ್ಲಿ ಅವರ ಮೈಭಾರವು ಪ್ರಾಯಸ್ಥರ ಮೈಭಾರಕ್ಕಿಂತ ಮೂರು ಪಾಲಷ್ಟು ಹೆಚ್ಚಿಗೆಯಾಗಿ ಇದೆ. ಇವರೂ ಮತ್ತೆ ಪ್ರಾಯಕ್ಕೆ ಬಂದಾಗ ಮತ್ತೆಷ್ಟು ಹೆಚ್ಚಿಗೆ ಭಾರವನ್ನು ತೋರಿಸುವರೋ, ಪರಮಾತ್ಮನೇ ಬಲ್ಲ.

ಪತ್ತಿಲ್ಲದೆ ಸರ್ಪ ಚಿಕಿತ್ಸೆ

ಪ್ರೋಲಿರೆಡ್ಡಿಪಾಕಮ್ ಎಂಬ ಹೆಸರಿನಿಂದಿರುವ ಆಂಧ್ರದ ಒಂದು ಹಳ್ಳಿಯಲ್ಲಿ ವೆಮಾರಿ ಪಾಮುಲ ನರಸಯ್ಯ ಎಂಬ ಒಬ್ಬ ಮಹನೀಯರಿದ್ದಾರೆ. ಇವರು ಸರ್ಪಚಿಕಿತ್ಸೆಯಲ್ಲಿ ನಿಷ್ಣಾತರಾಗಿದ್ದಾರೆ. ಮಾತ್ರವಲ್ಲ, ದೂರದಲ್ಲಿ ಸರ್ಪ ಕಡಿದು ಸಾವಿಗೆ ಬಲಿಯಾಗುವವರನ್ನು ಕೇವಲ ತಮ್ಮ ಮನೋಬಲದಿಂದ ವಾಸಿ ಮಾಡಿ ಅಕಾಲ ಮೃತ್ಯುವಿನಿಂದ ಬದುಕಿಸುವರಂತೆ. ಸರ್ಪ ಕಡಿದಾಕ್ಷಣ, ಕಡಿದವನ ಹೆಸರು ಮತ್ತು ಅವನು ಇರುವ ಊರನ್ನು ಹೇಳಿ ನರಸಯ್ಯನವರಿಗೆ ತಂತಿ ಕೊಡಬೇಕು. ಆಗ ಅವರು ತಾವಿದ್ದಲ್ಲಿಂದಲೇ ಅವನನ್ನು ಔಷಧ ವಗೈರೆ ಇಲ್ಲದೆ ಗುಣಮುಖರನ್ನಾಗಿ ಮಾಡುವರಂತೆ!

ಜರ್ಮನಿಯ ಕಾಯಿದೆಗಳು!

ಯುದ್ಧಾಸಕ್ತನಾದ ಹಿಟ್ಲರನು ತನ್ನ ಸಫಲತೆಗೋಸ್ಕರ ಜರ್ಮನಿಯಲ್ಲಿ ವಿಚಿತ್ರವಾದ ಕಾನೂನುಗಳನ್ನು ಮಾಡುತಿದ್ದಾನೆ. ಇತ್ತೀಚೆಗೆ ಅವನು ಮಾಡಿದ ಒಂದು ಕಾಯಿದೆಯ ಪ್ರಕಾರ ಹತ್ತು ವರ್ಷವಾದ ಮಕ್ಕಳು ರಜಾ ದಿನಗಳಲ್ಲಿ ಕೂಡಾ ದಿನ ಒಂದರ ಕನಿಷ್ಠಪಕ್ಷ ಆರು ತಾಸು ದುಡಿಯಲೇ ಬೇಕು! ಮಕ್ಕಳಿಂದಲೂ ಕೆಲಸ ಮಾಡಿಸಿಕೊಳ್ಳಬೇಕಾದ ದುರ್ಗತಿಯು ಇಂದು ಜರ್ಮನಿಗೆ ಪ್ರಾಪ್ತವಾಗಿದೆ.

ಬಾಲಗಳಲ್ಲಿ ಕೊಬ್ಬಿನ ಸಂಗ್ರಹ

ಲೆಬಿನೋನ ಎಂಬುದು ಒಂದು ಪ್ರಜಾಸತ್ತಾತ್ಮಕ ರಾಜ್ಯವಾಗಿದೆ. ಅದರಲ್ಲಿ ವಿಚಿತ್ರ ಬಗೆಯ ಕೆಲವು ಕುರಿಗಳು ಬೆಳೆಯುತ್ತವೆ. ತಾವು ತಿಂದು ಜೀರ್ಣಿಸಿಕೊಂಡು ಬೆಳೆಯಿಸಿದ ಕೊಬ್ಬನ್ನು ಈ ಕುರಿಗಳು ತಮ್ಮ ಬಾಲಗಳಲ್ಲಿ ಸಂಗ್ರಹಿಸಿ ಇಡುತ್ತವೆ. ಕೊಬ್ಬು ಬೆಳೆದು ಬಾಲಗಳು ಎಷ್ಟು ಸ್ಥೂಲ ಮತ್ತು ಭಾರವಾಗುತ್ತವೆಂದರೆ ಸಾಕುವವರಿಗೆ ಆ ಬಾಲಗಳು ಬಿದ್ದುಹೋಗದ ಹಾಗೆ ಅವುಗಳಿಗೆ ಆಧಾರವಾಗಿ ಡಬ್ಬಿಗಳನ್ನು ಕಟ್ಟುವರು. ಬೇಸಿಗೆಯಲ್ಲಿ ಅಥವಾ ಅಕಾಲ ಬಿದ್ದು ಸಾಕಷ್ಟು ಆಹಾರ ದೊರೆಯದಿದ್ದಾಗ ಈ ಕುರಿಗಳು ಬಾಲಗಳಲ್ಲಿ ಸಂಗ್ರಹವಾದ ಈ ಕೊಬ್ಬನ್ನೇ ಉಪಯೋಗಿಸಿಕೊಂಡು ಬದುಕುವುವು.

ಕಿವುಡ ಕವಿಗೆ ವಿಚಿತ್ರ ಕಾಣಿಕೆ

ಇದು ಕ್ರಿ. ಶ. ೧೮೦೯ರಲ್ಲಿ ನಡೆದ ಒಂದು ಘಟನೆಯಾಗಿದೆ. ಆ ಸಮಯ ಬಿಥೋವೆನ್ ಎಂಬ ಲೋಕವಿಖ್ಯಾತನಾದ ವರಕವಿ ಒಬ್ಬನಿದ್ದ. ಆದರೆ ಹುಟ್ಟುಕಿವುಡನಾಗಿದ್ದ. ಆಸ್ಟ್ರಿಯಾದ ಮೂವರು ಶ್ರೀಮಂತರು ಒಂದು ಶರ್ತದ ಮೇಲೆ ಅವನಿಗೆ ವರ್ಷ ಒಂದರ ೪೦೦೦ ಚಿನ್ನದ ನಾಣ್ಯಗಳನ್ನು ಕಾಣಿಕೆ ಕೊಡುವುದಾಗಿ ಒಪ್ಪಿದ್ದರು. ಆ ಶರ್ತವು ಮಾತ್ರ ಸಾಮಾನ್ಯರಾರೂ ಇಡದಂಥಾದ್ದು. ಬಿಥೋವೆನನು ದಿನಾಲೂ ಬೆಳಗ್ಗೆ ನಾಲ್ಕು ಮೈಲು ದೂರ ನಡೆದುಬರಬೇಕೆಂಬುದೇ ಅವರ ಶರತ್ತು. ಇಂಥ ಶರತವನ್ನು ಇಡಲಿಕ್ಕೆ ಒಂದು ಕಾರಣವಿತ್ತೆಂದು ಹೇಳುತ್ತಾರೆ. ಆಸ್ಟ್ರಿಯಾದ ಜನರು ತುಂಬ ರಸಿಕರು. ಅದರಲ್ಲೂ ಈ ಮೂವರು ಶ್ರೀಮಂತರು ಕಾವ್ಯರಸವನ್ನು ಪಾನ ಮಾಡಿ ಮತ್ತರಾಗುವಂಥವರು. ಬಿಥೋವೆನನು ಕಿವುಡನಾಗಿದ್ದುದರಿಂದ ಅವನು ತಿರುಗಾಡುತ್ತ ಇದ್ದಾಗ ಅವನು ಕಾವ್ಯಗಳನ್ನು ಕಟ್ಟಬಲ್ಲನೆಂದು ಅವರ ಭಾವನೆ ಇದ್ದಿತು.

ಪೋಲಾಂಡಿನಲ್ಲಿ ಭಿಕ್ಷುಕರ ಮಹಾಸಭೆ.

ಎಲ್ಲರೂ ಸಭೆಗಳನ್ನು ಕೂಡಿಸಿ, ಸಂಘಗಳನ್ನು ಮಾಡಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಾರೆ. ಅಂತಾದ ಮೇಲೆ ಭಿಕ್ಷುಕರು ಯಾಕೆ ಕೂಡದು? ಪೋಲಾಂಡಿನ ಭಿಕ್ಷುಕರು ವಾರ್ಸೊ ನಗರದಲ್ಲಿ ಒಂದು ದೊಡ್ಡ ಪರಿಷತ್ತನ್ನು ಕರೆದಿರುತ್ತಾರೆ. ಅದರಲ್ಲಿ ಅನೇಕ ಮಂದಿ ಭಿಕ್ಷುಕ ಪ್ರತಿನಿಧಿಗಳು ಬಂದಿರುತ್ತಾರೆ. ಅದರಲ್ಲಿ ಅನೇಕ ಮಂದಿ ಭಿಕ್ಷುಕರು, ಪೇಟೆಯ ಭಿಕ್ಷುಕರು, ಮಂದಿರದ ಭಿಕ್ಷುಕರು ಎಂದಿರುವ ಬೇರೆ ಬೇರೆ ಭಿಕ್ಷುಕವರ್ಗದ ಮೂಲಭೂತ ಹಕ್ಕುಗಳನ್ನು ಮಾಡಿಕೊಂಡಿದ್ದಾರೆ. ಇದಾದ ಮೇಲೆ ಈಗ ಇವರ ಉಪಟಳವು ಅಸಹನೀಯವಾಗಿರುವುದು. ಹೋಟೇಲಿಗೆ ಬರುವ ಜನರಿಂದ ಜಾಸ್ತಿ ಹಣ ವಸೂಲು ಮಾಡಿ ಅದನ್ನು ಭಿಕ್ಷುಕರಿಗೆ ಕೊಡುತ್ತೇವೆಂದು ಹೋಟೇಲು ಮಾಲಿಕರು ಭರವಸೆ ಕೊಟ್ಟರೂ ಅವರು ಅಲ್ಲಿ ಬಂದು ಭಿಕ್ಷೆ ಬೇಡಿ ಉಪದ್ರವ ಕೊಡುವುದನ್ನು ಬಿಡಲಿಕ್ಕೆ ಕೇಳುವುದಿಲ್ಲ. ಯಾಕೆಂದರೆ ಅದು ಅವರ ಭಿಕ್ಷಾಧರ್ಮಕ್ಕೆ ವಿರೋಧವಾಗುತ್ತದಂತೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ.

PHYSICAL FITNESS
is the first essential in games and in every social activity.
You need not worry hereafter for your impaired vitality premature old age and nervous break-down if you try
BHUVANENDRA "AMRITHPRASH"
which will tone the nervous system, build healthy tissues and enrich the blood.
Thus keeps you fresh and sprightly.
Bhuvanendra Products, Ltd.,
Katapady, S. Kanara.
(BRANCH—KUMTA, N. KANARA.)
Stockist: U. Panduranga Nayk, Car-Street Mangalore.

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.
ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿತ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ್ಲ
ಭುವನೇಂದ್ರ 'ಅಮೃತಪ್ರಾಶ'ವು
ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ತರುವುದು. ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.
ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)
ಯು. ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

★ ಸಿನೆಮಾ ಪ್ರಪಂಚ ★

ನ್ಯೂ ಥಿಯೇಟರ್ಸ್ ಸ್ಟುಡಿಯೋ

ಡಾಕ್ಟರ್

ನ್ಯೂ ಥಿಯೇಟರ್ಸ್‌ನವರ ಡಾಕ್ಟರ್ ಚಿತ್ರ ಹೊಸ ಚಿತ್ರ ಭಾರತದ ಹಲವು ಪ್ರಸಿದ್ಧ ನಗರಗಳಲ್ಲಿ ಕಳೆದ ವಾರ ಪ್ರದರ್ಶಿತವಾಯಿತು. ಅದರ ಬಂಗಾಳೀ ಭಾಷಾಂತರವು ಈ ವಾರ ಪ್ರಕಟವಾಗಲಿದೆ.

ಕಾನನ್ ಮತ್ತು ಪಹರೀ ಇವರು ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತಾರೆ.

ನರ್ತಕಿ

"ನರ್ತಕಿ"ಯ ಕೆಲವು ಭಾಗಗಳು ನ್ಯೂ ಥಿಯೇಟರ್ಸ್ ಸ್ಟುಡಿಯೋದಲ್ಲಿ ರಚಿತವಾಗುತ್ತಿದೆ. ಪಂಕಜಮಲ್ಲಿಕ್ ಇದರಲ್ಲಿ ನರ್ತಕಿಯ ನಾಯಕನಾಗಿ ಅಭಿನಯಿಸುತ್ತಿದ್ದಾನೆ.

ಚಿತ್ರೀಕರಣ ಉತ್ಕೃಷ್ಟವಾಗಿದೆ.

ಜಿಂದಗಿ ನಾರ್

"ಜೀವನ"ದಲ್ಲಿ ಕುಶಲತೆಯಿಂದ ಅಭಿನಯಿಸಿದ ಚಂದ್ರಮೋಹನ್ ಇದರಲ್ಲಿಯೂ ಪಾತ್ರವಹಿಸುವನು.

ಫೈನ್ ಆರ್ಟ್ ಪ್ರೊಡಕ್ಷನ್

"ಕಂಬನಿ" (tears)

ಇವರು "ಕಂಬನಿ" ಎಂಬೀ ಚಿತ್ರವನ್ನು ತಯಾರಿಸಲು ಅಣಿಮಾಡಿದ್ದಾರೆ. ಏನ್. ಆರ್. ಹಂಗಲ ಇವರು ನಿರ್ದೇಶಕರು ಮತ್ತು ಕಥಾಲೇಖಕರು. ಪಾತ್ರ ವಿವರಣೆ ಆಗಿಲ್ಲ.

"ಅಂಶು"

ಇವರ ಈ ಚಿತ್ರವು ಇಂದು ಮುಕ್ಕಾಲು ಪಾಲು ಪೂರ್ಣವಾಗಿದೆ. ಬೇಗನೇ ಪ್ರದರ್ಶನಕ್ಕೆ ತಯಾರಾಗಲಿದೆ.

"ಗಂಡುಬೀರಿ"

ಇವರ 'ಗಂಡುಬೀರಿ ಹುಡುಗಿ' (Rebel Girl). ಎಂಬೀ ಚಿತ್ರವು ಸಿದ್ಧತೆಯಲ್ಲಿದೆ. ಇನಾಮ್‌ದಾರರು ನಿರ್ದೇಶಕರು.

ಕನ್ನನ್ ಮತ್ತು ಪಹರಿ ಸನ್ಯಾಲ್

ಲಂಗನ್

ನಿರ್ದೇಶಕ ನಿತಿನ್ ಬೋಸರು ಲಂಗನ್ ಚಿತ್ರದ ಬಂಗಾಳೀ ಹಿಂದೂಸ್ಥಾನೀ ಪ್ರತಿಗಳನ್ನು ಸಿದ್ಧಗೊಳಿಸುತ್ತಿದ್ದಾರೆ. ಇದರ ಬಂಗಾಳೀ ಕಥೆಯು "ಪರಿಚಯ"ವೆಂಬ ಹೆಸರಿನಿಂದ ಪ್ರಸಿದ್ಧವಾಗಲಿದೆ.

ಗ್ರೇಟ್ ಇಂಡಿಯನ್ ಪಿಕ್ಚರ್ಸ್

ಸ್ನೇಹಬಂಧನ್

ತನ್ನ ಮಗನ ಸುಖಕ್ಕಾಗಿ ಮಾತೆಯು ಬಲಿದಾನದ ಕಥೆಯಿದು. ಬಿಬ್ಬು ನವೀನ ಯಾಗ್ನಿಕರು ಮುಖ್ಯಪಾತ್ರವಹಿಸುವರು. ಬಿಲ್ಲಿಮೋರಿಯ, ಮಂಜಮಿಲ್, ಪ್ರತಿಮಾದೇವಿ, ಕಮಲಾ ಇವರ ನಟನೆಯಿದೆ.

ಸಿಕೋರ್ ಪ್ರೊಡಕ್ಷನ್

"ಶಕುಂತಲಾ"

ಶಾಂತಾ ಆಪ್ಟೆಯ ದೇವಕಿ ಬೋಸರು ನಿರ್ದೇಶಿಸುವ "ಶಕುಂತಲಾ" ದೃಶ್ಯದ ಸಿದ್ಧತೆಗಳೂ ಭರದಿಂದ ಸಾಗುತ್ತಿವೆ.

ದೀಪಕ್

ಇವರ 'ದೀಪಕ್' ಚಿತ್ರವು ಈಗ ಸಿದ್ಧವಾಗಿದೆ. ನಿರ್ದೇಶಕ ಕೋಶಲರು ಇದನ್ನು ಬಹಳ ಚಮತ್ಕಾರವಾಗಿ ನಿರ್ದೇಶಿಸಿರುವರು.

ಜನಮಾಲಾ

ಇದು ಅವರ ಪಾತ್ರ ...

ನ್ಯಾಶನಲ್ ಸ್ಟುಡಿಯೋ

ಇವರು ಶೈಕ್ಷಣಿಕ ಚಿತ್ರಗಳನ್ನು ತಯಾರಿಸಲು ಆರಂಭಿಸುತ್ತಾರೆ. ಈಗಾಗಲೇ ಮಣಿಪುರ ನರ್ತಕರಿಂದ ಶ್ರೀ 'ನಾಗನೃತ್ಯ'ದ ದೃಶ್ಯ ತಯಾರಾಗುತ್ತಿದೆ. ಇದು ಅವರ ಬರುವ ಚಿತ್ರ 'ಸಂಸ್ಕಾರ' ದೊಡನೆ ಪ್ರದರ್ಶಿತವಾಗುವುದಾಗಿ ತಿಳಿದಿದೆ. ಇದರಲ್ಲಿ ಒಂದು ವಿಶೇಷವಾದ ಪ್ರೇಕ್ಷಣೀಯ ನರ್ತನದ ಘಟನೆಯು ಬರುವುದು 'ಬೇಡ ಮತ್ತು ಬ್ರಾಹ್ಮಣನ ಮಗಳು' ಎಂಬೀ ಭಾಗದಲ್ಲಿ. ತರುಣ ಕುಮಾರ ಮತ್ತು ಯಾಂಬಿ ಇವರು ನಟಿಸುವರು. ಕರ್ದಾರರು ನಿರ್ದೇಶಿಸಿರುವರು.

ರಾ ಧಿ ಕಾ ಚಿತ್ರವು ವೀರೇಂದ್ರ ದೇಸಾಯಿ ಇವರ ನಿರ್ದೇಶಕತ್ವದಿಂದ ಸಿದ್ಧವಾಗುತ್ತಿದೆ. ಪುರಾತನ ದೇಗುಲ ಮತ್ತು ಅರಮನೆಗಳ ಚಿತ್ರವು ಇದರಲ್ಲಿದೆ.

ವಾಡಿಯಾ ಮೂವಿಟೋನ್

"ರಾಜನರ್ತಕಿ"

ವಾಡಿಯಾರವರ ರಾಜನರ್ತಕಿಯು ಭರದಿಂದ ಸಾಗುತ್ತಿದೆ. ಸಾಧನಾಬೋಸಳು ಮುಖ್ಯ ನಟಿ–ನರ್ತಕಿ. ಅಹಿನ್ ಚೌಧರಿ, ಪ್ರತಿಮಾ, ಬೆಸಿತಾ ಇವರೂ ಅಭಿನಯಿಸುವರು. ಡಿಸೆಂಬರಿನ ಕೊನೆಯ ವಾರದಲ್ಲಿ ಇದು ಪೂರ್ತಿಗೊಳ್ಳುವುದಾಗಿ ತಿಳಿದಿದೆ.

ನಾಡಿಯಾ

ನಾಡಿಯಾಳ ನಟನೆಯ ಹೊಸ ಚಿತ್ರವೊಂದನ್ನು ನಿರ್ದೇಶಕ ಹೋಮಿ ವಾಡಿಯಾರ್ವರು ಆರಂಭಿಸಿರುವುದಾಗಿ ತಿಳಿದಿದೆ. ಪಾತ್ರಗಳ ವಿವರ ಮುಂದೆ ಬೇಗನೇ ಪ್ರಸಿದ್ಧಿಸಲಾಗುವುದು.

ಮಂಥನ್

ಇವರ ಈ ಚಿತ್ರದ ಕೆಲಭಾಗವನ್ನು ವರ್ಣಮಯವಾಗಿ ಮಾಡಲು ನಿರ್ದೇಶಕ ರಾಮ್ಚಿಮುಮವರು ಆಲೋಚಿಸಿದ್ದಾರೆ.

ಮಿನರ್ವಾ ಮೂವಿಟೋನ್

ಉಲ್ಟಿಗಂಗಾ

ಈ ಹೊಸ ಚಿತ್ರವನ್ನು ಇವರು ತಯಾರಿಸುತ್ತಿದ್ದಾರೆ. ಇದರ ಕಾರ್ಯವು ಭರದಿಂದ ಸಾಗುತ್ತಿದೆ. ಇದು ಒಂದು ಅತ್ಯುತ್ತಮ ಹಾಸ್ಯ ಚಿತ್ರ.

ಶಾಹ್‌ದುಮಾನ್

ಇವರ ಈ ಚಿತ್ರವು ಬರುವ ತಿಂಗಳಲ್ಲಿ ಪ್ರದರ್ಶನಕ್ಕೆ ಸಿದ್ಧವಾಗುವುದು.

ನವಯುಗ ಚಿತ್ರಪಟ್

ಅಮೃತ

ನಿರ್ದೇಶಕ ವಿನಾಯಕ ಇವರು ಖಾಂಡೇಕರರ ಕಥೆಯನ್ನಾಧರಿಸಿ 'ಅಮೃತ'ವೆಂಬ ಚಿತ್ರವನ್ನು ಸಿದ್ಧಗೊಳಿಸುತ್ತಾರೆ. 'ಛಾಯಾ'ದಂತೆ ಇದೂ ಅತ್ಯುತ್ತಮ ಚಿತ್ರವಾಗುವುದಾಗಿ ಊಹಿಸಲಾಗಿದೆ. ವಿನಾಯಕ್ ಪೆಂಡಸಾರ್ಕರ್ ಮತ್ತು ಖಾಂಡೇಕರರೇ ಇದರಲ್ಲಿಯೂ ನಟಿಸುವರು. ಮೀನಾಕ್ಷಿ, ಲಲಿತಾ ಪವಾರ್ ಇವರೂ ಸೇರಿರುವರು. ಪಾಂಡುರಂಗ ನಾಯಕ್ ಇವರ ಸಮರ್ಥ ಫೋಟೋಗ್ರಫಿ. ಗೋವಾದ ಹಿನ್ನೆಲೆಯಿದೆ ಇದರಲ್ಲಿ. ಇದು ಬೇಗನೇ ಪೂರ್ಣವಾಗಲಿದೆ.

ಪ್ರಕಾಶ್ ಪಿಕ್ಚರ್ಸ್

"ನರ್ಸಿ ಭಾಗತ್"

ಇವರ ಈ ಚಿತ್ರ ಬೊಂಬಾಯಿಯಲ್ಲಿ ಹಲವು ವಾರಗಳಿಂದ ಪ್ರದರ್ಶಿತವಾಗುತ್ತಿದೆ. ಅತ್ಯಂತ ಜನಪ್ರಿಯವಾಗಿದೆ.

ಮಾಲಾ

ರೋಸ್ ಮತ್ತು ಜಯಂತ್ ಇವರ ನಟನೆಯುಳ್ಳ 'ಮಾಲಾ' ಚಿತ್ರವು ತಯಾರಾಗುತ್ತಿದೆ.

ಇವರ ಮುಂದಿನ ಚಿತ್ರ ಭಾರತ್ ಮಿಲಾಪ್.

ಲಂಗನ್ ಬಂಧನ್‌ಗಳೊಡನೆ ಕಾಂಚನ್

'ಲಂಗನ್' ಮತ್ತು 'ಬಂಧನ್' ಚಿತ್ರಗಳಲ್ಲಿ ಪ್ರಸಿದ್ಧಿಹೊಂದಿದ ಶ್ರೀಮತಿ ಲೀಲಾ ಚಿಟ್ನಿಸರು ಈಗ ತನ್ನ ಹೊಸ ಕಂಪೆನಿಯಲ್ಲಿ ಹೊಸತಾಗಿ ತಯಾರಿಸುವ ಚಿತ್ರಕ್ಕೆ 'ಕಾಂಚನ್' ಎಂದು ಹೆಸರಿಟ್ಟಿರುವುದಾಗಿ ತಿಳಿದಿದೆ.

ಅತ್ರೆ ಪಿಕ್ಚರ್ಸ್

"ಚರಣೋಕಿದಾಸಿ"

ದುರ್ಗಾಖೋಟೆಯು ಅತ್ರೆ ಪಿಕ್ಚರ್ಸ್‌ನವರ 'ಚರಣೋಕಿ ದಾಸಿ' ಚಿತ್ರದಲ್ಲಿ ಅಭಿನಯಿಸುವಳು. ಇದು ಈಗ ಸಿದ್ಧವಾಗುತ್ತಲಿದೆ. ದುರ್ಗಾಖೋಟೆ ಈ ಕಂಪೆನಿಯನ್ನು ಸೇರಿರುವಳು.

ಬೊಂಬೇ ಟಾಕೀಸ್

"ಪೂರ್ಣಮಿಲನ್"

ಈ ಕಂಪೆನಿಯವರ "ಮಿಲನ್" ಚಿತ್ರವು ಈಗ "ಪೂರ್ಣಮಿಲನ್" ಎಂದು ಹೆಸರು ಹೊಂದಿರುವುದಾಗಿ ತಿಳಿದಿದೆ. ಇದರಲ್ಲಿ ಸ್ನೇಹಪ್ರಭಾ ಮತ್ತು ಕಿಶೋರಶಾಹು ಅಭಿನಯಿಸುವರು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 384/1940

ರಾಜು ಶೆಟ್ಟಿ . . . . ವಾದಿಳು

ಮತ್ತು

ಮುದ್ದು ಶೆಟ್ಟಿ ಸಹಾ . . ಪ್ರತಿವಾದಿರು

ಸಿದ್ದು ಶೆಟ್ಟಿ—ಚಿನ್ನಯ್ಯ ಶೆಟ್ಟಿ ಅಳಿಯ, ದೊಡ್ಡು ಶೆಟ್ಟಿ, ಸೂರಪ್ಪ ಶೆಟ್ಟಿ, ಮುತ್ತು ಶೆಟ್ಟಿ, ನಾಗಪ್ಪ ಶೆಟ್ಟಿ, ರಾಮು (ಮ್ಯಾನೆರ) ಇವನ ಗಾರ್ಡಿಯಾನಳು ತಾಯಿ 3 ನೇ ಯವಳು, ಕುಸುಮ (ಮ್ಯಾನರಳು) ಇವಳ ಗಾರ್ಡಿಯಾನಳು ತಾಯಿ 3 ನೇಯವಳು — 1, 3, 4, 7, ವ 8 ನೇ ಪ್ರತಿವಾದಿರು ಉಡ್ಪಿ ತಾಲೂಕು ಎಲ್ಲೂರು ಕಸಬಾ ಗ್ರಾಮದ ಕುಂಜೂರಲ್ಲಿಯೂ, 5, 9 ನೇ ಪ್ರತಿವಾದಿರು ಉಡ್ಪಿ ತಾಲೂಕು ಬೆಳ್ಳಿಗ್ರಾಮದ ಹೊಸಮನೆ ಎಂಬಲ್ಲಿಯೂ ಇರುತ್ತಾರೆ

ಈ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ನಿಮ್ಮ ಕುಟುಂಬದ ಇತರ ಮೆಂಬರರ ಕೂಡುವಿಕೆಯಿಂದ ವಾದಿಳಿಗೆ ನಿಮ್ಮ ಕುಟುಂಬದ ಸ್ಥಿರಾಸ್ತಿಯನ್ನು ಅಡವು ಮಾಡಿ ತಾ ೬ ೬ ೧೯೩೬ರಲ್ಲಿ ರೂ ೧೫೦೦ಕ್ಕೆ ಬರಕೊಟ್ಟ ಅಡವು ದಸ್ತವೇಜಿನ ಬಾಬ್ತು ವಾದಿಳಿಗೆ ತಾ ೭ ೬ ೪೯ ರ ವಾಯಿದೆಗೆ ಬರತಕ್ಕ ಬಾಕಿ ಬಡ್ಡಿ ಬಗ್ಗೆ ಅವಳು ಈ ಕೋರ್ಟಿನಲ್ಲಿ ದಾಖಲು ಮಾಡಿದ ಈ ದಾವೆಯು ನಿಮ್ಮ ಹಾಜರಿಯ ಬಗ್ಗೆ ತಾ ೪ ೧೨ ೧೯೪೦ಕ್ಕೆ ಇಟ್ಟಿರುತ್ತದೆ ಇದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಸದ್ರಿ ಕೋರ್ಟಿನ ಮುಂದೆ ಆದಿನ ಬೆಳಿಗ್ಗೆ ೧೦ಘಂಟೆಗೆ ಹಾಜರಾಗಿ ತಿಳುಹಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದರಿ ದಾವೆಯು ತೀರ್ಮಾನಿಸೋಣಾಗುವುದು

(By court order)

Karkal 3-11-40 | P. V. Upadhyaya B A LL B Vakil for Plaintiff

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ

R. E. S. 543/40

In O S 682/35

Kasargod Dt. Munsiff Court

ಅರ್ಜಿದಾರ— ಕೆ ರಾಮನ್ನಾಕ

ಎದ್ರಿ— ಕೆ. ನರಸಿಂಗ ರೈ ಮಾಗಣೆ ಶ್ಯಾನುಭಾಗ—ಅರಂತೋಡು ಗ್ರಾಮ

ಸದ್ರಿ ಎದ್ರಿಗೆ ಈ ನೋಟೀಸು ಈ ಮೂಲಕ ತಿಳಿಯಪಡಿಸುವದೇನೆಂದರೆ —

ಎದ್ರಿಯಾದ ನಿಮ್ಮನ್ನು ಕೈಹಿಡಿ ವಾರಂಟಿನಲ್ಲಿ ಹಿಡ್ದು ಯಾಕೆ ಕೈದುಮಾಡ ಕೂಡದೆಂಬದಕ್ಕೂ ಕಿಮ್ಮಜ್ಯಾರಿ ಯಾಕೆ ನಡಸ ಕೂಡದು ಎಂಬದಕ್ಕೂ ಸಬಬು ತೋರಿಸಲಿಕ್ಕೆ ತಾ 15-11-40ನೇ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜ್ರಾಗಬೇಕೆಂತ ಈ ನೋಟೀಸು ಮೂಲಕ ತಿಳಿಸೋಣಾಗುತ್ತದೆ.

(By order of the court).

Puttur-S. K. 29-10-40 | B. Achutha Baliga Vakil for Petitioner

ನಿಮ್ಮಲ್ಲಿ ನಾಲ್ಕಾಣೆಯಿದೆಯೋ?



ಅದನ್ನು ಇಂದೇ ಈ ಸುಲಭವಾದ — ಮತ್ತು — ಸುರಕ್ಷಿತ ಮಾರ್ಗದಲ್ಲಿ ವಿನಿಯೋಗಿಸಿ

ಸಮೀಪದಲ್ಲಿರುವ ಪೋಸ್ಟಾಫೀಸಿಗೆ ಹೋಗಿ ರಕ್ಷಣಾ ಸೇವಿಂಗ್ಸ್ ಸರ್ಟಿಫಿಕೇಟ್ ಕಾರ್ಡ ಬೇಕೆಂದು ಕೇಳಿ. ಅದನ್ನವರು ನಿಮಗೆ ಉಚಿತವಾಗಿ ಕೊಡುವರು ಎಷ್ಟು ನಾಲ್ಕಾಣೆ ಸ್ಟಾಂಪುಗಳನ್ನು ಕೊಂಡುಕೊಳ್ಳಬಲ್ಲಿರೋ ಅಷ್ಟು ಡಿಫೆನ್ಸ್ ಸ್ಟಾಂಪುಗಳನ್ನು ಕೊಂಡುಕೊಂಡು ಆ ಕಾರ್ಡಿಗೆ ಅಂಟಿಸಿರಿ ಹೀಗೆ ನಲವತ್ತು ಸ್ಟಾಂಪುಗಳು ಅಂಟಿಸಿ ಮುಗಿದೊಡನೆಯೇ, ಆ ಕಾರ್ಡನ್ನು ಯಾವ ಬ್ಯಾಂಕಿನಲ್ಲಿ ಕೊಟ್ಟರೂ ಅದಕ್ಕೆ ಬದಲಾಗಿ ನಿಮಗೆ ಹತ್ತು ರೂಪಾಯಿ ಬೆಲೆಬಾಳುವ ರಕ್ಷಣಾ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುವರು ಈ ಸರ್ಟಿಫಿಕೇಟ್ ಕೆಲವು ವರ್ಷಗಳಲ್ಲಿ ೧೩—೯—೬ ಬೆಲೆ ಬಾಳುವುದು ಮತ್ತು ನಿಮಗೆ



ಇದರಿಂದ ದೊರೆಯುವ ಲಾಭದ ಮೇಲೆ ವರಮಾನ ತೆರಿಗೆ ಕೊಡಬೇಕಾಗಿಲ್ಲ ಯಾವಾಗ ನಿಮ್ಮ ಹಣವು ನಿಮಗೆ ವಾಪಸು ಬೇಕೋ ಆಗ ಬಡ್ಡಿಯೊಡನೆ ಒಂದಕ್ಕೆ ಸಂದಾಯವಾಗುವುದು

ಇದಕ್ಕಿಂತ ಸುಲಭವಾದ ಅಥವಾ ಸುರಕ್ಷಿತವಾದ ಉಪಾಯವುಂಟೋ?

ಎಷ್ಟೊಂದು ಸ್ಟಾಂಪುಗಳು ಕೊಳ್ಳುತ್ತೀರೋ ಅಷ್ಟೊಂದು ಬಡ್ಡಿ ನಿಮಗೆ ಸಿಕ್ಕುವುದು

ರಕ್ಷಣಾ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು ಕೊಳ್ಳಿರಿ

ಭಾರತದ ಸುರಕ್ಷಿತವಾದ ಧನಸಂಚಯ

GI-Kn-12

ಮದ್ರಾಸ್ ಗವರ್ನರರ ಯುದ್ಧ ಫಂಡು

ದ. ಕ. ಜಿಲ್ಲೆಯಲ್ಲಿ ಧನ ಸಹಾಯ ಮಾಡಿದವರ ಹೆಸರಿನ ಪಟ್ಟಿ

ರೂಪಾಯಿ ೧೦

ಪಿ. ಸುಕುಮಾರನ್, ದಿವಾನ್ ಬಹದೂರ್ ಕೆ. ಮಹಾಬಲ ಹೆಗಡೆ, ಹಾಜಿ ಅಬ್ದುಲ್ ಖಾದರ್ ಬಾಸ್ಸಾ, ಅಹಮದ್ ಬಾಯಬ್ಬ, ಹಾಜಿ ಗುಲ್ ಮುಹಮದ್, ಕೆ. ಹಸನಬ್ಬ, ಗೋವಿಂದ ನಾಯ್ಕ, ಜಿ. ಶಂಸುದ್ದೀನ್, ಎಸ್. ಕೃಷ್ಣ ನಾಯಕ್, ಬಿ. ಅಹಮದ್ ಸಾಹೇಬ್, ಭುಜಂಗಪ್ಪ ಶೆಟ್ಟಿ, ಕೈಕಾಡಿ ಪಂಚಾಯತ ಬೋರ್ಡು, ಉಮಾ... ಯಸ್ ಶಿವರಾಮ ಶೆಟ್ಟಿ, ಕೆ ಸದಾನಂದ ಹೆಗ್ಡೆ, ಡಾ ಎಂ. ಶಿವರಾವ್, ಎಂ ಅಣ್ಣಪ್ಪ ನಾಯ್ಕ, ಬಿ. ರಾಮಣ್ಣ ಹೆಗ್ಡೆ ಚಂದಯ್ಯ ಭಟ್ಟ, ಬಿ. ಶಂಕರಪ್ಪ ರೈ ಕುಂಜ ಮೈದಿನ್‌ಕುಟ್ಟಿ, ವೈ. ಚಿಕ್ಕಪ್ಪ ರೈ, ಕೆ ಸುಂದರ ರಾವ್., ರೂ ೮—೦—೦ ಗಂಗೊಳ್ಳಿ ಪಂಚಾಯತ ಬೋರ್ಡು, ಖಾನ್ ಸಾಹೇಬ್ ಯು. ಮಂಜಪ್ಪ, ಶಂಕರನಾರಾಯಣ ನೊಸ್ಕೆಟ್ಟ, ಶಿರ್ವ ಪಂಚಾಯತಬೋರ್ಡ್, ನಾರಾಯಣ ಮೇಸ್ತ್ರ. ರೂ ೭—೧೨—೦ ನಾರಾಯಣ ಶೆಟ್ಟಿ ರೂ ೬—೦—೦ ದುಗ್ಗಪ್ಪ ಶೆಟ್ಟಿ, ಕಿನ್ನಿಯನ್ನ ಶೆಟ್ಟಿ, ಬಿ. ಕಾಂತು ಭಂಡಾರಿ ರೂ. ೬—೦—೦ ಎಚ್. ರಾಮಣ್ಣ ಶೆಟ್ಟಿ, ಹಾಸ್ಲಾಡಿ ಪಂಚಾಯತ ಬೋರ್ಡು, ವಾರಂಬಳ್ಳಿ ಪಂಚಾಯತ ಬೋರ್ಡು, ಹಿರಿಯಡ್ಕ ಪಂಚಾಯತ ಬೋರ್ಡು, ವೆಂಕಟ್ರಮಣ ರಾಮಕೃಷ್ಣಯ್ಯ, ಕುಂಜ ಅಬ್ಬುಲ್ಲ ರೂ ೫—೦—೦ರಂತೆ ಕೊಟ್ಟವರು ೧೮೩ ಜನರು. ೫ ರೂಪಾಯಿಗಿಂತಲೂ ಕಡಿಮೆ ಕೊಟ್ಟವರ ಜುಮ್ಲಾ ರೂಪಾಯಿ ೬,೦೫೯—೧೩—೧

೨೦ ವೈರಿ ವಿಮಾನಗಳು ಲಂಡನಿನಲ್ಲಿ

ಲಂಡನಿನಲ್ಲಿ ೨೦ ವೈರಿ ವಿಮಾನಗಳು ನುಗ್ಗಿ ಬಂದಿದ್ದವು. ಅಲ್ಲಲ್ಲಿ ಬಾಂಬು ಕೆಳಹಾಕಿದವು. ಇಟೆಲಿಯನ್ ವಿಮಾನಗಳು ಇಂಗ್ಲೆಂಡಿನ ಮೇಲೆ ಹಾರಿಬರಲಿದ್ದವು

ವಿಜ್ಞಾನಯುಗ

ಕ್ಷೌರಿಕನಿಲ್ಲದೆ ತಲೆ ಕ್ಷೌರ

ಈಗ ಸಾಮಾನ್ಯವಾಗಿ ಎಲ್ಲರು ತಾವಾಗಿ ಮುಖ ಕ್ಷೌರ ಮಾಡಿಕೊಳ್ಳುತ್ತಾರೆ. ಒಂದು ಬಾಳು ಅಥವಾ ಒಂದು ಸೇಫ್ಟಿ ರೇಜರು ಪ್ರತಿಯೊಬ್ಬನ ಹತ್ತಿರ ಇದ್ದೇ ಇದೆ. ಆದರೆ, ತಲೆ ಕ್ಷೌರ ಮಾಡಿಕೊಳ್ಳಲಿಕ್ಕೆ ಇವರೆಲ್ಲರಿಗೆ ಒಬ್ಬ ಕ್ಷೌರಿಕನ ಅಥವಾ ಎರಡನೆಯವನೊಬ್ಬನ ಅಗತ್ಯ ಇದ್ದೇ ಇದೆ. ಇನ್ನು ವಿದ್ಯುಚ್ಛಕ್ತಿ ಇರುವಲ್ಲಿ ಇಂಥ ಯಾರೊಬ್ಬನ ಅಗತ್ಯವೂ ಇರುವುದಿಲ್ಲ. ಮುಖಕ್ಷೌರಕ್ಕೆ ಮಾತ್ರವಲ್ಲ, ತಲೆಕ್ಷೌರಕ್ಕೂ ಎರಡನೆಯವನ ಸಹಾಯವನ್ನು ಕೇಳಬೇಕಾಗಿಲ್ಲ. ಒಂದು ಯಂತ್ರ ಸಾಧನವಿದೆ. ಅದಕ್ಕೆ ಒಂದು ಬಿರುಕು ಇದೆ. ಅದರೊಳಗೆ ಒಂದಾಣೆ ಅಥವಾ ಎರಡಾಣೆ ನಿರ್ದಿಷ್ಟ ದರದ ಒಂದು ಅಥವಾ ಎರಡು ನಾವಲಿಗಳನ್ನು ಹಾಕಿ ಮಣೆಯ ಮೇಲೆ ತಲೆ ಕೊಟ್ಟು ನಿಂತರಾಯಿತು. ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಕತ್ತರಿ, ಬಾಳು, ಮೊದಲಾದವು ಕ್ರಮವಾಗಿ ಬಂದು ನಿಮಗೆ ಸೊಗಸಾದ ಕ್ಷೌರ ಮಾಡುವವು. ಮತ್ತೆ ಕ್ರಿಮಿನಾಶಕ ದ್ರಾವಕದಿಂದ ನಿಮ್ಮ ತಲೆ ಮುಖ ಮೊದಲಾದವನ್ನು ಸ್ನಾನ ಮಾಡಿಸಿ ನಿಮ್ಮ ಆರೋಗ್ಯವನ್ನು ಆ ಯಂತ್ರವು ಕಾಪಾಡುವುದು. ಆದ್ದರಿಂದ ಈ ವೃತ್ತಿಗೆ ಇನ್ನು ಜಾತಿಯಿಂದ ಕ್ಷೌರಿಕರಾದವರೇ ಮುಂದೆ ಬರಬೇಕಾಗಿಲ್ಲ. ನಿರುದ್ಯೋಗಿಗಳಾದವರೂ, ಇತರರೂ, ಯಾವ ಜಾತಿಯವರಿದ್ದರೂ ಇಂಥ ಒಂದೊಂದು ಯಂತ್ರವನ್ನು ತರಿಸಿಕೊಂಡು, ಯಾರ ತಲೆ ಮೈಮುಟ್ಟದೆ ಅವರ ಕ್ಷೌರ ಮಾಡಬಹುದು ಮತ್ತು ಹಣ ಸಂಪಾದಿಸಬಹುದು.

ಎದೆ ಬಡಿದಾಟದಲ್ಲಿ ಜೀವಮಾನ

ಒಬ್ಬನ ಎದೆಯ ಬಡಿದಾಟದಿಂದ ಅವನ ಜೀವಮಾನವನ್ನು ತಿಳಕೊಳ್ಳಬಹುದು. ದೃಢಕಾಯನೂ ಆರೋಗ್ಯವಂತನೂ ಆದ ನಡುಪ್ರಾಯದ ಒಬ್ಬ ಮನುಷ್ಯನ ಎದೆ ಬಡಿದಾಟವು ಮಿನುಟಿಗೆ ೭೨ ಬಾರಿ ಇರುತ್ತದೆ. ಈ ಪ್ರಾಯದಲ್ಲಿ ಒಬ್ಬನಿಗೆ ಇದಕ್ಕಿಂತಲೂ ಜಾಸ್ತಿ ಬಾರಿ ಎದೆ ಬಡಿದಾಟವು ಇರುವುದಾದರೆ ಅವನ ಆಯುಃಪ್ರಮಾಣವು ಮೊದಲನೆಯವನಿಗಿಂತ ಕಡಿಮೆ ಇರುತ್ತದೆಂದು ಎಣಿಸಬಹುದು. ಬೇಗ ಸಾಯುವವರ ಎದೆ ಬಡಿದಾಟವು ಹೆಚ್ಚಾಗಿಯೂ ಅದಕ್ಕಿಂತ ಹೆಚ್ಚು ಕಾಲ ಬದುಕುವವರ ಎದೆಬಡಿದಾಟವು ಅವರಿಗಿಂತ ಕಡಿಮೆಯಾಗಿಯೂ ಇರುತ್ತದೆಂದು ೨೩, ೩೨ ಪ್ರಾಯಸ್ಥ ಪುರುಷರನ್ನು ಪರೀಕ್ಷಿಸಿ ಅಮೇರಿಕದ ವಿಮಾ ಕಂಪೆನಿಗಳ ವೈದ್ಯರು ಒಂದು ನಿರ್ಧಾರಕ್ಕೆ ಬಂದಿರುತ್ತಾರೆ.

ಹಿಂದಿನದನ್ನು ತೋರಿಸುವ ಕನ್ನಡಕ

ದೃಷ್ಟಿ ಮಂದವಾದಾಗ ಅಥವಾ ಅದರಲ್ಲಿ ಬೇರೆ ದೋಷಗಳು ಕಾಣಿಸಿಕೊಂಡಾಗ ಜನರು ಕನ್ನಡಕಗಳನ್ನು ಇಟ್ಟುಕೊಳ್ಳುತ್ತಾರೆ. ಈ ಕನ್ನಡಕಗಳು ಕಣ್ಣುಗಳ ಮುಂದಿರುವ ವಸ್ತುಗಳನ್ನು ಸರಿಯಾಗಿ ಕಾಣಿಸುವವಲ್ಲದೆ ಹಿಂದಿರುವ ವಸ್ತುಗಳನ್ನು ತೋರಿಸುವುದಿಲ್ಲ. ಅವನ್ನು ನೋಡಬೇಕಾದರೆ ತಲೆಯನ್ನು ತಿರುಗಿಸಿ ಹಿಂದಕ್ಕೆ ದೃಷ್ಟಿ ಮಾಡಬೇಕು. ಆದರೆ ಒಬ್ಬ ಸಂಶೋಧಕನ ಕನ್ನಡಕ ಇರುವ ಎರಡು ಕನ್ನಡಿ ಹರಳುಗಳೊಂದಿಗೆ ಮೂರನೆಯ ಇನ್ನೊಂದು ಹರಳನ್ನು ಜೋಡಿಸಿ ತಲೆಯನ್ನು ತಿರುಗಿಸದೆ ಹಿಂದಿನದನ್ನು ನೋಡಲಿಕ್ಕಾಗುವ ಉಪಾಯ ಮಾಡಿದ್ದಾನೆ. ವಿದ್ಯಕ್ಕೆ ಮುಖ ಮಾಡಿಕೊಂಡ ಹಿಂದಿನವರ ಕೃತಿಗಳನ್ನು ತಿಳಕೊಳ್ಳಲಿಕ್ಕೆ ಇದು ಒಂದು ಉತ್ತಮ ಸಾಧನವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಪೌಡರು ಹಾಕಲಿಕ್ಕೆ ಪಿಚಕಾರಿ

ಪಿಚಕಾರಿಯ ಉಪಯೋಗವನ್ನು ಎಲ್ಲರೂ ತಿಳಿದಿದ್ದಾರೆ. ಆದರೆ ಮೋರೆಗೆ ಪೌಡರು ಹಾಕಲಿಕ್ಕೂ ಅದು ಬರುತ್ತದೆ ಎಂದು ತಿಳಿದವರು ಬಹಳ ಕಡಿಮೆ ಮಂದಿ ಇರಬಹುದು. ಒಬ್ಬ ವಿಜ್ಞಾನಿಯು ಪಿಚಕಾರಿಯನ್ನು ಈ ಕಾರ್ಯಕ್ಕೂ ಉಪಯೋಗಿಸಲಾಗುವಂತೆ ಅವರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದಾನೆ. ಒಂದು ರಬ್ಬರಿನ ನಳಿಗೆ—ಅದರ ಒಂದು ತುದಿಯಲ್ಲಿ ಗಾಳಿ ತುಂಬಿದ ರಬ್ಬರಿನ ಚೆಂಡು ಇದೆ. ಇನ್ನೊಂದು ತುದಿಯಲ್ಲಿ ಪೌಡರನ್ನು ಹಾರಿಸಲಿಕ್ಕೆ ಸಣ್ಣ ಬಾಯಿಯಿದೆ. ಪೌಡರನ್ನು ಹಾಕಿ ಚೆಂಡನ್ನು ಒತ್ತಿದರೆ ಪೌಡರು ಹಾರಿ ಮೋರೆಯ ಮೇಲೆ ಹದವಾಗಿ ಕೂತುಕೊಳ್ಳುವುದು. ಆದ್ದರಿಂದ ಕೆಲವು ಕಡೆ ದಟ್ಟವಾಗಿ ಪೌಡರು ಕೂತು ಮತ್ತೆ ಅದನ್ನು ವಸ್ತ್ರದಿಂದ ತೆಗೆಯಬೇಕಾದ ಅಗತ್ಯವಿಲ್ಲ. ಸೌಂದರ್ಯೋಪಾಸಕರು ಈ ಸಾಧನದಿಂದ ಒಳ್ಳೆಯ ಪ್ರಯೋಜನವನ್ನು ಪಡೆಯಬಹುದು.

ಜೀವನೋಪಾಯಕ್ಕೆ ಕಾರಣವಾದ ರೇಶ್ಮೆಹುಳು

ರೇಶ್ಮೆಯ ಬಟ್ಟೆಗಳನ್ನು ನೋಡದವರು ಯಾರು? ಈ ಬಗೆಗೆ ಬೇಕಾದ ರೇಶ್ಮೆಯನ್ನು ಕೊಡುವ ಕ್ರಿಮಿಯ ಜೀವನ ಇತಿಹಾಸವು ತುಂಬ ಬೋಧಪ್ರದವಾಗಿದೆ. ಚೀನ ಜಪಾನುಗಳಂಥ ದೇಶಗಳಲ್ಲಿ ಈ ಹುಳುವು ಕೋಟ್ಯಂತರ ಜನರ ಜೀವನಕ್ಕೆ ದಾರಿ ಮಾಡಿಕೊಟ್ಟಿದೆ. ಜಪಾನು ಒಂದರಲ್ಲಿ ೧೪,೦೦೦,೦೦೦ ಜನರು ರೇಶ್ಮೆ ಕೈಗಾರಿಕೆಯಿಂದ ತಮ್ಮ ಹೊಟ್ಟೆ ತುಂಬಿಸಿಕೊಂಡು ಇದ್ದಾರೆ.

ಬೆಂಕಿ ನಂದಿಸಲಿಕ್ಕೆ ಸ್ವಯಂಚಾಲಕ ಯಂತ್ರ

ಊರು ಅಥವಾ ಮನೆಗಳಲ್ಲಿ ಬೆಂಕಿ ಹತ್ತಿಕೊಂಡಾಗ ಅದನ್ನು ನಂದಿಸಲಿಕ್ಕೆ ಅನೇಕ ಬಗೆಯ ಉಪಕರಣಗಳನ್ನು ಇಟ್ಟಿರುತ್ತಾರೆ. ಆದರೆ ಈಚೆಗೆ ಒಬ್ಬ ವಿಜ್ಞಾನಿಯು ಕಂಡುಹಿಡಿದ ಇಂಥ ಒಂದು ಸಾಧನವು ಹಿಂದಿನ ಎಲ್ಲಾ ಯಂತ್ರಗಳನ್ನು ಮೂಲೆಪಾಲು ಮಾಡಲು ಸಮರ್ಥವಾಗಿದೆ. ಇದು ಬೆಂಕಿಯನ್ನು ನಂದಿಸುವ ಪ್ರಯತ್ನ ಮಾಡುವುದಲ್ಲದೆ ಬೆಂಕಿ ಹಿಡಿದಿರುವ ಕುರಿತು ಮನೆ ಅಥವಾ ಊರವರಿಗೆ ಎಚ್ಚರಿಕೆಯನ್ನು ಕೊಡುತ್ತದೆ. ಬೆಂಕಿ ಹಿಡಿದ ಕಾರಣದಿಂದ ಕಾವು ಏರುವುದಷ್ಟೆ? ಈ ಕಾವು ೧೬೦ ಡಿಗ್ರಿಗಳಷ್ಟು ಏರಿದೊಡನೆ ಯಂತ್ರದೊಳಗಿರುವ ಒಂದು ಸಾಧನವು ಆ ಕಾವಿನಿಂದ ಕರಗಿ, ಒಂದು ಸೂಜಿಯು ಜಾರಿ ಇಲ್ಲದ ಒಂದು ಕೋಟೆಯ ಬೊಬ್ಬೆಯನ್ನು ಸ್ಫೋಟಿಸುವುದು. ಆಗ ಕೋಟೆಯು ಒಡೆದು ಹೊಡೆದು ಅನ್ಯಮನಸ್ಕರಾದವರ ಮನಸ್ಸನ್ನು ಬೆಂಕಿ ಹಿಡಿದಲ್ಲಿಗೆ ಆಕರ್ಷಿಸುತ್ತದೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 268/1940

ಇಸೂಬು ಬ್ಯಾರಿ—ವಾದಿ

ತಿಮ್ಮಪ್ಪ ಕೂಡಾ ೮ ಜನರು—ಪ್ರತಿವಾದಿಗಳು

1ನೆ ಪ್ರತಿವಾದಿ ತಿಮ್ಮಪ್ಪ ಮಂಜುನಾಥಪ್ಪ ಶ್ಯಾನುಭಾಗ

ಬಾಣಾಜೆ ಗ್ರಾಮ—

ವಾದಿಯು ಪ್ರತಿವಾದಿರಿಂದ ತನಗೆ ಬರುವಾ ಆದಾಯದ ಅಸಲು ವ ಬಡ್ಡಿ ವ್ಯಯಗಳು ಕೂಡಿ ರೂ 288-1-4-0ಕ್ಕೆ ದಾವಾ ಮಾಡಿ ಅದರ ನೋಟೀಸಿನ ತಕ್ಕ ವ್ಯಾದೆ ತಾ 15–11–40ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಈ ಕುರಿತು 1ನೇ ಪ್ರತಿವಾದಿಯು ಯೇನಾದರೂ ತನ್ನ ಆಕ್ಷೇಪಗಳನ್ನು ಹೇಳಿಕೊಳ್ಳುವದಿದ್ದ್ರೆ ಸ್ವತಹ ಯಾ ವಕೀಲರ ಮುಖಾಂತ್ರ ಆ ವ್ಯಾದೆಗೆ 11ಘಂಟೆಗೆ ಕೋರ್ಟಿಗೆ ತಪ್ಪದೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಅತನನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ತಕ್ಕಯಿಂದ ತೀರ್ಮಾನಿಸಲಾಗುವದು. ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

21-10-1940 } B Ramachandra Rau-
Puttur S. K } Pleader for Plaintiff.

THE

BANK OF MANGALORE LTD.,

MANGALORE

ESTD 1931

Branches

Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly.

Savings Bank deposit 3½% on daily balances.

kinds of banking business transacted

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 15-11-1940ರಿಂದ ಕುಳುಗುಂದ ಜಾನುವಾರ ಸಂತೆ ತಾ. 29-11-1940ರ ವರೆಗೆ

ತಾ. 25-11-1940ರಿಂದ ಶ್ರೀ ಧರ್ಮಸ್ಥಳ ಲಕ್ಷ ದೀಪೋತ್ಸವ ತಾ. 29-11-1940ರ ವರೆಗೆ

(ತಾರೀಕು 29—11—1940ರಲ್ಲು ಲಕ್ಷದೀಪೋತ್ಸವ)

ತಾ. 30-11-1940ರಿಂದ ಶ್ರೀ ಸುಬ್ರಹ್ಮಣ್ಯ ಷಷ್ಟೀ ಸಮಾರಂಭ 5-12-1940ರ ವರೆಗೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಜಿ. ರಾಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರು ಇರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ದೊಡ್ಡ ಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದಯವಿಟ್ಟು ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳವಾಣಿ ಹುಡುಕಿ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವಾ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪-೦-೦ ಪಿ. ಪಿ. ಅ.

ವಿಳಾಸ— ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾಹುಕಾರ ಶ್ರೀನಿವಾಸ ರಂಗಪ್ಪೆ

[ಸ್ಥಾಪನೆ ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು				ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—	ಅವ್ವಲ್	ಕರದ ಗುಡ್ಡ	ಮುಡಿಗೆ	—	
,,	ದುಯಂ	,,	,,	1—15—0	
,,	ಅವ್ವಲ್	ಸುಗ್ಗಿ	,,		
,,	ದುಯಂ	,,	,,		
ಅಕ್ಕಿ	ಅವ್ವಲ್	ಗುಡ್ಡ	,,	4—8—0	4—10—0
,,	ದುಯಂ	,,	,,	4—5—0	4—7—0
,,	ಅವ್ವಲ್	ಸುಗ್ಗಿ	,,	4—9—0	4—10—0
,,	ದುಯಂ	,,	,,	4—4—0	4—6—0
ತೆಂಗಿನ ಕಾಯಿ	ಸುಲಿದದ್ದು	1000ಕ್ಕೆ		35—0—0	40—0—0
,,	ಸಿಪ್ಪೆ ಇದ್ದದು	,,		37—8—0	42—8—0
ಕೊಬ್ಬರಿ	ಆಫೀಸು	ಖಂಡಿಗೆ		56—0—0	
,,	ದಿಲ್‌ಪಸಂದ	,,		—	—
ತೆಂಗಿನ ಎಣ್ಣೆ ಮಣಕ್ಕೆ				4—0—0	4—1—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ				8—8—0	4—8—0
ಗೇರುಬೀಜ ಮುಡಿಗೆ				8—12—0	4—0—0
ಕಬ್ಬಿನ ಬೆಲ್ಲ ಖಂಡಿಗೆ				35—0—0	40—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ				18—8—0	14—0—0

ಸ್ವದೇಶಾಭಿಮಾನಿ

ಸಂಪುಟ ೩೪] [illegible] ಅಕ್ಟೋಬರ ೩—೧೦—೧೯೪೦ [illegible] [ಸಂಚಿಕೆ ೪೫

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 1 42 Crores
Total Funds exceed	Rs. 1·52 Crores
Premium income during the year exceeds	Rs. 37⅓ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. This is the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ವಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೂಢಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ಕುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI



ಗುರುದೇವ

KANNADA ILLUSTRATED WEEKLY

[illegible]

ದನಗಳ ಪ್ರದರ್ಶನ

[illegible] ಹಾಸನ ಟೌನ್ ಮುನಿಸಿಪಾಲಿಟಿ ಪ್ರದರ್ಶನ ಕ್ಷೇತ್ರದಲ್ಲಿ [illegible] ಪ್ರದರ್ಶನವು [illegible] ನೇ ಫೆಬ್ರವರಿ ತಾ. ೨೦ನೇ ಗುರುವಾರ ಪ್ರಾರಂಭವಾಗಿ [illegible] ಭಾಗವನ್ನು ೬ನೇ ತಾರೀಖು [illegible] ವರೆಗೂ ನಡೆಯುತ್ತದೆ.

೨. ಪ್ರದರ್ಶನಕ್ಕೆ ಬರತಕ್ಕ ಪ್ರತಿ ರಾಸು ಒಂದಕ್ಕೆ ಎರಡು ಆಣೆಯಂತೆ ಫೀಜು ವಸೂಲುಮಾಡಲಾಗುತ್ತದೆ. ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಬಾಬನ್ನು ಮತ್ತು (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹ ತಾರೀಖು ೧೦-೧೨-೪೦ನೇ ಮಂಗಳವಾರ ಮಧ್ಯಾಹ್ನ ೨ ಘಂಟೆ ಲಾಗಾಯ್ತು ಹಾಸನದ ಸಂತೆಬಳಿಯಿರುವ ಆತ್ಮಾಯಿ ಕಟ್ಟೆ ಬಳಿ ಬಹಿರಂಗವಾಗಿ ಕ್ಯಾಪಲ್ ಶಿವೋ ಕಮಿಟಿ ಪ್ರೆಸಿಡೆಂಟರು. ಯಾ ಮುನಿಸಿಪಲ್ ವೈಸ್ ಪ್ರೆಸಿಡೆಂಟ ರವರಿಂದ ಹರಾಜು ಮಾಡಿಸಲ್ಪಡುತ್ತದೆ. ಅಂಗಡಿ-ನಾಟಕ-ಸಿನೀಮಾ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನು ತಾರೀಖು ೧೫-೧೨-೪೦ರ ಲಾಗಾಯ್ತು ಹಾಸನ ಟೌನ್ ಮುನಿಸಿಪಲ್ ಆಫೀಸಿನಲ್ಲಿ ವಿಲೇವಾರಿ ಮಾಡಲು ಉಪಕ್ರಮಿಸುತ್ತೆ.

೩. ಪ್ರದರ್ಶನದ ಮೈದಾನದಲ್ಲಿ ಜನ ಜಾನುವಾರುಗಳಿಗೆ ಸಮೃದ್ಧಿಯಾಗಿ ನೀರು, ಮತ್ತು ಜಾನುವಾರುಗಳಿಗೆ ಮೇವಿಗಾಗಿ ಹುಲ್ಲು ಸಹ ದೊರೆಯುತ್ತದೆ. ಅಲ್ಲದೆ ಸ್ಥಳ ನೈರ್ಮಲ್ಯ ವಿಚಾರದಲ್ಲಿಯೂ ಜನ ಜಾನುವಾರುಗಳ ಆರೋಗ್ಯಭಾಗ್ಯ ವಿಷಯದಲ್ಲಿಯೂ ಹೆಚ್ಚು ಗಮನ ವಹಿಸಿ ನೋಡಿಕೊಳ್ಳಲು ವೈದ್ಯಶಾಲೆಗಳೂ ಪ್ರದರ್ಶನ ಕಾಲದಲ್ಲಿ ಜನಗಳ ಸೌಕರ್ಯಕ್ಕಾಗಿ ಅಲ್ಲಿಯೇ ಹಂಗಾಮಿಯಾಗಿ ಪೋಸ್ಟು ಆಫೀಸು ಮತ್ತು ಜನರಕ್ಷಣೆ, ಧನರಕ್ಷಣೆಗಾಗಿ ಪೋಲೀಸಿನವರ ಸಹಾಯವನ್ನೂ ಕಲ್ಪಿಸಲಾಗುತ್ತದೆ.

೪. ಪ್ರದರ್ಶನ ಕಾಲದಲ್ಲಿ ಉತ್ತಮವಾದ ರಾಸುಗಳಿಗೆ ದೊರೆಯತಕ್ಕ ಬಹುಮಾನವನ್ನೂ ವ್ಯವಸಾಯ ಪ್ರದರ್ಶನ ಅನುಭವವನ್ನೂ ಲಾಭಕರವಾದ ದನಗಳ ಮತ್ತು ಎಲ್ಲಾ ವಿಧವಾದ ವ್ಯಾಪಾರ ಸೌಕರ್ಯಗಳನ್ನೂ ನಾಟಕ ಸಿನೆಮಾ ವಗೈರೆ ಆಟಪಾಟಗಳ ದೃಶ್ಯವನ್ನು ಉಪಯೋಗಿಸಿಕೊಂಡು ಲಾಭ ಪಡೆಯಬೇಕೆಂದು ಕೋರಿದೆ.

೫. ಅಲ್ಲದೆ ಬಹುದೂರದಿಂದ ಈ ಸಂದರ್ಭದಲ್ಲಿ ವಿಶೇಷವಾಗಿ ಬರತಕ್ಕವನ್ನು [illegible] ಬಾಂಧವರ ಸೌಕರ್ಯಾರ್ಥವಾಗಿ [illegible] [illegible]

ಕಾಯಿಲೆಯಿಂದೆದ್ದೊಡನೆ ಪ್ರಾಣವನ್ನೂ ಆರೋಗ್ಯವನ್ನೂ ಕೂಡಲೇ ಕೊಡುತ್ತದೆ!

ಬೇನೆಯಿಂದೆದ್ದೊಡನೆ ರುಚಿಕರವಾದ "ಓವಲ್ಟಿನ್" ಸೇವಿಸಿದಲ್ಲಿ ದೇಹದ ನಷ್ಟವಾದ ಬಲವನ್ನೂ ವೃದ್ಧಿಸಿ ಮೆದುಳಿಗೂ ನರನಾಡಿಗಳಿಗೂ ನವಚೈತನ್ಯವನ್ನುಂಟುಮಾಡುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳಿಂದಲೂ ನರ್ಸುಗಳಿಂದಲೂ ಶಿಫಾರಸು ಮಾಡಲ್ಪಟ್ಟಿದೆ. "ಓವಲ್ಟಿನ್"ನಲ್ಲಿ ದೇಹದ ಕಸುವನ್ನು ವೃದ್ಧಿಸುವ, ನರನಾಡಿಗಳಿಗೆ ಚೈತನ್ಯವನ್ನೀಯುವ ಎಲ್ಲಾ ಪದಾರ್ಥಗಳು—ನೆನೆಹಾಕಿ ಮಾಗಿದ ಬಾರ್ಲಿ, ಹಸುವಿನ ಹಸಿ ಹಾಲು ಮತ್ತು ಅಮೂಲ್ಯವಾದ ನೈಸರ್ಗಿಕ ಜೀವಾತುಗಳು ಮತ್ತು ಪೋಷ್ಟಿಕಾಂಶಗಳು—ಸೇರಿವೆ.

"ಓವಲ್ಟಿನ್" ನಿಮ್ಮ ದೇಹದ ಕಸುವನ್ನು ವೃದ್ಧಿಸಿದ ನಂತರ ಅದನ್ನು ಕಾಪಾಡಿಕೊಳ್ಳಲು ಯಾವಾಗಲೂ ಒಂದು ಕಪ್ಪು "ಓವಲ್ಟಿನ್" ಪಾನೀಯವನ್ನು ಕುಡಿಯಿರಿ. ಇತರ ಬದಲಿ ಪಾನೀಯಗಳನ್ನು ದೂರಮಾಡಿರಿ.

"ಓವಲ್ಟಿನ್" ಬಿಸ್ಕತ್ತುಗಳು:

ರುಚಿಕರ, ಜೀರ್ಣಕರ ಮತ್ತು ಚೈತನ್ಯಯುಕ್ತವಾದುವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕತ್ತುಗಳು. ಇದರಲ್ಲಿ ಅಮೂಲ್ಯವಾದ "ಓವಲ್ಟಿನ್" ಇರುವುದು. 4 ಔನ್ಸು ಮತ್ತು 8 ಔನ್ಸುಗಳ ಪೆಕೆಟುಗಳಲ್ಲಿಯೂ ಒಂದು ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರ [illegible]

ವಿತರಣಕಾರರು: ಮೆಸರ್ಸ್

ಗ್ರೆಹೆಮ್ಸ್ ಟ್ರೇಡಿಂಗ್ ಕೊ, (ಇಂಡಿಯಾ) ಲಿಮಿಟೆಡ್

ಕೈಕನೆಸ್ ಹೌಸ್, ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿಸ್ಟ್ರೀಟ್ ಮದ್ರಾಸು

ಕಲಕತ್ತಾ, ಕರಾಚಿ ಮತ್ತು ಬೊಂಬಾಯಿ.

OV[illegible]

ಸ್ವದೇಶಾಭಿಮಾನಿಗೆ ಬೆಂಬಲದಾತರಾಗಿರಿ!

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

15—11—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೫—೧೧—೧೯೪೦

ನೆಹರುಗಳಿಗೆ ವಿಧಿಸಿದ ಶಿಕ್ಷೆಯು ಬಹಳ ಕಠೋರವಾಯಿತು!

ಪಂಡಿತರನ್ನು ಬಿಡುಗಡೆಮಾಡಬೇಕು

ಪಾರ್ಲಿಮೆಂಟಿನಲ್ಲಿ ಪ್ರಬಲ ವಿವಾದ

ಬ್ರಿಟಿಷ್ ಪತ್ರಿಕೆಗಳಲ್ಲಿ ಅಗ್ರಲೇಖ

ಪಂಡಿತ ಜವಾಹಿರಲಾಲರ ಬಂಧನದ ವಿಚಾರವಾಗಿಯೂ ಅವರಿಗೆ ವಿಧಿಸಲ್ಪಟ್ಟ ಶಿಕ್ಷೆಯ ವಿಚಾರವಾಗಿಯೂ ಪಾರ್ಲಿಮೆಂಟಿನ ಸಭೆಯಲ್ಲಿ ಅನೇಕ ಪ್ರಶ್ನೋತ್ತರಗಳಾದುವು ಮಾತ್ರವಲ್ಲದೆ, ಅನೇಕ ಬ್ರಿಟಿಷ್ ಪ್ರಮುಖ ಪತ್ರಿಕೆಗಳು ಖಂಡಿಸಿ ಅಗ್ರಲೇಖನವನ್ನು ಬರೆದಿರುವರು.

ಭಾರತ ಸಚಿವರಾದ ಎಲ್. ಎಮೆರಿಯವರು ಪಾರ್ಲಿಮೆಂಟಿನಲ್ಲಿ ಹೇಳುತ್ತಾ 'ಜವಾಹಿರ್ಲಾಲ್ ನೆಹರುಗಳನ್ನು ಡಿಫೆನ್ಸ್ ಆಫ್ ಇಂಡಿಯಾ' ಕಾನೂನು ಪ್ರಕಾರ ಶಿಕ್ಷಿಸಲಾಯಿತೆಂದೂ, ಪಂಡಿತ ಜವಾಹಿರಲಾಲ್ ನೆಹರುಗಳು ಸೈನಿಕ ಸೇವೆಕಕ್ಕೆ ವಿರೋಧವಾಗಿಯೂ, ಸರಕಾರದ ವಿಷಯದಲ್ಲಿ ವಿರೋಧ ಭಾವನೆಯುಂಟಾಗುವಂತೆಯೂ ಮತ್ತು ಪ್ರಜಾವರ್ಗದಲ್ಲಿ ದ್ವೇಷಭಾವನೆಯುಂಟಾಗುವಂತೆಯೂ ಭಾಷಣ ಮಾಡಿದ್ದಕ್ಕೋಸ್ಕರ ಅವರ ಮೇಲೆ ಅಪಾದನೆ ಹೊರಿಸಲಾಯಿತೆಂದೂ ಪೂರ್ಣ ವರದಿಯು ತನ್ನ ಹಸ್ತಗತವಾಗಿಲ್ಲವೆಂದೂ ಅವರಿಗೆ ನಾಲ್ಕು ವರ್ಷಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆಯೆಂಬ ತಂತಿ ನೋಡಿದ್ದೇನೆ' ಎಂದೂ ಹೇಳಿದರು.

ಪ್ರಶ್ನೋತ್ತರಗಳು

ರೆಜಿನಾಲ್ಡ್ ಸೊರೆನ್ ಸನ್:— ಪಂಡಿತ ಜವಾಹಿರಲಾಲರಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯು ಬಹು ಕ್ರೂರವಾದುದೆಂದು ಎಮೆರಿಯವರು ಭಾವಿಸುವುದಿಲ್ಲವೇ? ಅಲ್ಲದೆ ಆ ಶಿಕ್ಷೆಯಿಂದ ಭರತಖಂಡದ ಸಾಮಾಜಿಕ ಮತ್ತು ರಾಜಕೀಯ ಜೀವನದ ಮೇಲೆ ಕೆಟ್ಟ ಪರಿಣಾಮಗಳುಂಟಾಗುವುದಿಲ್ಲವೇ? ಅಲ್ಲದೆ ಇಂಗ್ಲೆಂಡಿನಲ್ಲಿಯೂ, ಅಮೇರಿಕಾದಲ್ಲಿಯೂ ಶಿಕ್ಷೆಯ ವಿಷಯದಲ್ಲಿ ಪ್ರತಿಕ್ರಿಯೆಯುಂಟಾಗುವದಿಲ್ಲವೇ? ಈ ಕಾರಣಗಳಿಂದ ಆದಷ್ಟು ಶೀಘ್ರದಲ್ಲಿ ಒಂದು ಚರ್ಚೆ ಏರ್ಪಡಿಸುವಿರೇ?

ಎಮೆರಿ:— ನಾನು ಇದಕ್ಕೆ ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ.

ಪಿನ್‌ವೆಲ್.— ಪಂ. ಜವಾಹಿರಲಾಲರ ಮೇಲಿನ ಶಿಕ್ಷೆಯ ಪರಿಣಾಮಗಳನ್ನು ಎಮೆರಿಯವರು ತಿಳಿದು ಆ ವಿಷಯವನ್ನು ಪುನರಾಲೋಚಿಸುವರೇ? ಅದರ ಪರಿಣಾಮಗಳಿಂದ ಸಮರ ಪ್ರಯತ್ನಗಳಿಗೆ ಧಕ್ಕೆ ತಗಲುವ ಪ್ರಸಂಗವೇರ್ಪಡುವುದಿಲ್ಲವೇ?

ಎಮೆರಿ:- ಈ ಪ್ರಕರಣದ ವಿಷಯದಲ್ಲಿ ಪೂರ್ಣ ವಿವರಗಳನ್ನು ದಯವಿಟ್ಟು ಕಳುಹಿಸಿಕೊಡಬೇಕೆಂದು ವೈಸರಾಯರಿಗೆ ತಂತಿ ಕಳುಹಿಸಿದ್ದೇನೆ. ಒಬ್ಬ ವ್ಯಕ್ತಿಗೆ ನ್ಯಾಯಾಲಯದಲ್ಲಿ ವಿಚಾರಣೆಯಾಯಿತೆಂದು ರಾಜ್ಯಾಂಗ ಸ್ಥಿತಿಯೊಳ್ಳೆವನ್ನು ಬದಲಾಯಿಸಬೇಕೆಂಬ ಪ್ರಶ್ನೆ ಉದಯಿಸುವುದಿಲ್ಲ. ಇದು ಅಂತಹ ವಿಧ್ಯಮಾನವಲ್ಲ.

ಟಿವಿನ್: –ಸಮರ ಪ್ರಾರಂಭದಲ್ಲಿ ಪಂಡಿತ ಜವಾಹಿರಲಾಲರು ಇಂಗ್ಲೆಂಡಿಗೆ ಅನುಕೂಲವಾದ ಅಭಿಪ್ರಾಯ ಕೊಟ್ಟಿರಲಿಲ್ಲವೇ? ನೆಹ್ರೂ ಸಮರದ ಉದ್ದೇಶವನ್ನು ಕೇಳಿಕೊಂಡಿರಲಿಲ್ಲವೇ? ಅವರನ್ನು ಈ ಸ್ಥಿತಿಗೊಳಪಡಿಸಿರುವುದು ಸರಕಾರದ ವರ್ತನೆಯ ಮೇಲೆ ಆರೋಪಣೆಯಾದಂತಾಗವುದಿಲ್ಲವೇ?

ಕಾಮನ್ಸ್ ಸಭಾಧ್ಯಕ್ಷರು ಮಧ್ಯೆ ಬಂದು ಪ್ರಶ್ನೆಯನ್ನು ತಡೆಗಟ್ಟಿದರು.

ರೆಜಿನಾಲ್ಡ್ ಸೊರೆನ್ ಸನ್: "ಇದು ಬಹಳ ಮುಖ್ಯವಾದ ಪ್ರಶ್ನೆ. ಭಾರತದ ಗಣ್ಯ ವ್ಯಕ್ತಿಗಳ ವಿಷಯವು ಅಡಕವಾಗಿದೆ. ಆದಕಾರಣ ಉತ್ತರ ಹೇಳುವ ತನಕ ನಾವು ಒತ್ತಾಯಪಡಿಸಲೇ ಬೇಕು.

ಕಾಮನ್ಸ್ ಸಭಾಧ್ಯಕ್ಷರು ಪುನಃ ಮಧ್ಯೆ ಬಂದು ಈ ಪ್ರಶ್ನೆಯನ್ನು ನಿಲ್ಲಿಸಿದರು.

ಗ್ಯಾಲಕರ್ —ಅವರ ಶಿಕ್ಷೆಯ ಪರಿಣಾಮದಿಂದ ಈ ವಿಷಯವನ್ನು ಪೂರ್ಣವಾಗಿ ಚರ್ಚಿಸಲು ನಾವು ಒತ್ತಾಯಪಡಿಸಬೇಕಾಗಿದೆ. ಇದು ಬಹಳ ಮುಖ್ಯವಾದ ಅಂಶ.

ಸಭಾಧ್ಯಕ್ಷರು ಮಿಕ್ಕ ಪ್ರಶ್ನೆಗಳನ್ನು ಅಷ್ಟಕ್ಕೇನೇ ನಿಲ್ಲಿಸಿಬಿಟ್ಟರು.

ಬ್ರಿಟಿಷ್ ಪತ್ರಿಕೆಗಳ ಖಂಡನೆ

ಪಂಡಿತ ಜವಾಹಿರಲಾಲ್ ನೆಹರುಗಳಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನು ಕುರಿತು ಲಂಡನ್ನಿನ ಎಂಟು ಪ್ರಧಾನ ವೃತ್ತಪತ್ರಿಕೆಗಳು ಅಗ್ರಲೇಖನಗಳನ್ನು ಬರೆದಿವೆ.

"ಡೈಲಿ ಹೆರಾಲ್ಡ್" 'ಸಮರ ಪ್ರಯತ್ನಗಳಿಗಾಗಿ ಭರತಖಂಡವು ಬಹಳ ದೊಡ್ಡ ಇಂಗ್ಲೆಂಡಿಗೆ ಯಾವ ರೀತಿ ಸಹಾಯ ಮಾಡುತ್ತಿದೆ ಎಂಬುದು ಶೀಘ್ರದಲ್ಲಿಯೇ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬರುವುದು. ಆಗ ಸದಸ್ಯರು ಪಂ। ಜವಾಹಿರಲಾಲರಿಗೆ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನು ಪ್ರಸ್ತಾಪಿಸದೆ ಬಿಡುವುದಿಲ್ಲ. ಆ ಚರ್ಚೆಯಲ್ಲಿ ಭಾರತದ ರಾಜಕಾರಣದ ಇತರ ವಿಷಯಗಳೂ ಚರ್ಚೆಗೆ ಬರುವುವು. ಕಾಂಗ್ರೆಸ್ಸಿಗೂ ವೈಸರಾಯರಿಗೂ ನಡೆಯುತ್ತಿದ್ದ ಸಂಧಾನವು ಮುರಿದುಬಿದ್ದುದರಿಂದ, ಸಮರ ಪ್ರಯತ್ನಗಳಿಗೆ ಭರತಖಂಡವು ನೀಡುವ ಸಹಾಯವು ಈ ಸನ್ನಿವೇಶದಿಂದ ಕುಂದಿ ಬಿದ್ದಂತಾಗಿದೆ. ಒಪ್ಪಂದ ಮಾರ್ಗವನ್ನು ಮುಟ್ಟಲು ಹೊಸ ಪದ್ಧತಿಗಳೂ, ಹೊಸ ಮಾರ್ಗಾನುಸರಣೆಯೂ ಅತ್ಯಾವಶ್ಯಕವೆಂಬುದನ್ನು ಪ್ರಜೆಗಳೂ, ಪಾರ್ಲಿಮೆಂಟಿನ ಸದಸ್ಯರೂ ಅರಿತಿದ್ದಾರೆ".

"ನ್ಯೂಸ್ ಕ್ರಾನಿಕಲ್" "ಕಾಮನ್ಸಿನಲ್ಲಿ ಪಂಡಿತ ನೆಹರುಗಳ ಶಿಕ್ಷೆಯ ವಿಷಯದಲ್ಲಿ ಚರ್ಚೆಯಾದುದು ಎಲ್ಲರಿಗೂ ಗೊತ್ತೇ ಇದೆ. ಎಮೆರಿಯವರು ವೈಸರಾಯರಿಗೆ ತಂತಿ ಕಳುಹಿಸಿರುವರೆಂಬುದನ್ನು ಅವರು ತಿಳಿಸಿದರು. ಆ ತಂತಿಯ ವಿವರಗಳೇನೆಂಬುದು ತಿಳಿದು ಬಂದಿಲ್ಲ. ಪಂಡಿತ ನೆಹರುಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂಬ ಆಜ್ಞಾವಚನವು ಆ ತಂತಿಯಲ್ಲಿ ಅಡಕವಾಗಿತ್ತೆಂದು ನಾವು ಯೋಚಿಸುತ್ತೇವೆ. ಸಮರ ಪ್ರಾರಂಭದಲ್ಲಿ ಭಾರತದ ಆಕಾಂಕ್ಷೆ(?)ತ್ತರಗಳನ್ನು ಇನ್ನೂ ಹೆಚ್ಚಿನ ವಿಚಕ್ಷಣತೆಯಿಂದ ನೋಡಿದ್ದರೆ ಸದ್ಯದ ಬಿಕ್ಕಟ್ಟೇ ಉಂಟಾಗುತ್ತಿರಲಿಲ್ಲ. ಈ ಮುಹತ್ತಕ್ಕೆಯನ್ನು ಯಾರು ನಿರ್ಲಕ್ಷಿಸಿದರು? ಏತಕ್ಕೆ?"

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office UDIPI, S Kanara.

Our attractive Rates on Deposits.

FIXED DEPOSITS

3 to 6 months	2½% p a
6 to 9 ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

ಸ್ವದೇಶಾಭಿಮಾನಿ

ತಾರೀಕು 15—11—1940

ಉಪವಾಸ ಈಗಿಲ್ಲ

ಮಹಾತ್ಮಾಜಿ-ಭಾರತದ ಸರ್ವಮಾನ್ಯ ವ್ಯಕ್ತಿ-ನಿರಶನ ವ್ರತದ ದೀಕ್ಷೆ ವಹಿಸಲಿರುವರೆಂಬ ವಾರ್ತೆ ಪ್ರತಿಯೊಬ್ಬನನ್ನೂ ಅತ್ಯಂತ ಉದ್ವಿಗ್ನನನ್ನಾಗಿ ಮಾಡಿತ್ತು; ಅವರ ಆಪ್ತರು, ಸ್ನೇಹಿತವರ್ಗದವರು, ಹಿತಕಾಂಕ್ಷಿಸುವವರು ಈ ಸಂದರ್ಭದಲ್ಲಿ, ಅವರ ಆರೋಗ್ಯದ ಕಡೆಗೆ ದೃಷ್ಟಿಯಿಟ್ಟು, ಗಾಂಧಿಜಿ ಅಂತಹ ಕಠಿನ ನಿರ್ಧಾರವನ್ನು ಮಾಡಬಾರದಾಗಿ ಒಂದೇ ಸವನೆ ಆಗ್ರಹಪೂರ್ವಕ ವಿನಂತಿ ಮಾಡಿಕೊಂಡರು. ದೇಶದ ಮೂಲೆ ಮೂಲೆಗಳಿಂದ ಗಾಂಧಿಜಿಯವರು ಉಪವಾಸಮಾಡಬಾರದಾಗಿ ಬೇಡಿಕೆಗಳು ಬರತೊಡಗಿದ್ದವು.

ಅವಸರವಸರವಾಗಿ ವರ್ಧಾದಲ್ಲಿ ವರ್ಕಿಂಗ್ ಕಮಿಟಿಯ ಸಭೆಯೂ ಸೇರಿತು; ಭಾರತದಲ್ಲಿ ಇತ್ತೀಚೆಗೆ ನಡೆದ ಹಲವು ಮಹತ್ವದ ಘಟನೆಗಳನ್ನು ಪರ್ಯಾಲೋಚಿಸುವುದು, ಎಲ್ಲದಕ್ಕಿಂತಲೂ ಮಿಗಿಲಾಗಿ ಗಾಂಧಿಜಿಯವರು ಉಪವಾಸ ನಿರ್ಧಾರವನ್ನು ಮುಂದುವರಿಸಲು ಬಿನ್ನವಿಸಿಕೊಳ್ಳುವುದು ಅವರೆಲ್ಲರ ಕರ್ತವ್ಯಭಾರವಾಗಿತ್ತು. ಗಾಂಧಿಜಿ ವರ್ಕಿಂಗ್ ಕಮಿಟಿಯ ಸಭೆಗೆ ಬಂದಿದ್ದರು. ತಮ್ಮ ಮತ್ತು ವೈಸರಾಯರೊಳಗೆ ನಡೆದ ಪತ್ರವ್ಯವಹಾರ, ಹಾಗೂ ತನ್ನ ಉಪವಾಸದ ವಿಷಯಗಳನ್ನು ಸಭೆಯ ಸದಸ್ಯರ ಮುಂದಿಟ್ಟರು.

ವರ್ಕಿಂಗ್ ಕಮಿಟಿಯ ಸದಸ್ಯರು ಕೊನೆಗೆ, ಹೇಗಾದರೂ ಮಹಾತ್ಮರನ್ನು ಸಮಾಧಾನಪಡಿಸಲು ಶಕ್ತರಾದರು; ಎಲ್ಲಾ ಅಸ್ತ್ರಗಳೂ ಮುಗಿದ ಮೇಲೆ ಇದನ್ನು ಕೊನೆಯ ಅಸ್ತ್ರವಾಗಿ ಉಪಯೋಗಿಸಬಹುದೆಂದೇ ಅವರು ಎಲ್ಲರೂ ಒಟ್ಟುಗೂಡಿ ಮಹಾತ್ಮರನ್ನು ಸಮಾಧಾನಪಡಿಸಿದರು; ಆ ಪ್ರಯುಕ್ತ, ಗಾಂಧಿಜಿಯವರು ನಿರ್ಧರಿಸಿರುವ ಈ ಉಪವಾಸವು, ತತ್ಕಾಲಕ್ಕೆ ಇಲ್ಲ; ಮುಂದುವರಿದಿದೆಯೆಂಬುದಿಷ್ಟು ಸರ್ವರಿಗೂ ಅತ್ಯಂತ ಸಂತೋಷದ ವಿಷಯವಾಗಿದೆ. ಭಾರತಕ್ಕೆ ಗಾಂಧಿಜಿಯವರ ಸೇವೆ ಇನ್ನೂ ಬಹಳವಾಗಿ ಸಲ್ಲಲಿದೆಯೆಂಬುದರಿಂದಲೇ ಈ ಸಂದರ್ಭದಲ್ಲಿ ಅವರು ಅಂತಹ ಕಠಿಣ ನಿರ್ಧಾರ ಮಾಡಬಾರದಾಗಿ ಸರ್ವರೂ ಹಾರೈಸಿದರು; ಬೇಡಿಕೊಂಡು ನಿರ್ಧಾರ ನಿಲ್ಲಿಸಿದರು.

ನೆಹರುಗಳ ಶಿಕ್ಷೆ

ಗಾಂಧಿಜಿಯವರ ಅನಂತರ ಭಾರತದ ಸರ್ವಮಾನ್ಯ ಪ್ರಜಾ ಧುರೀಣರೆಂದರೆ ಇಂದು ನೆಹರು. ಅವರನ್ನು ಭಾಷಣವಿತ್ತ ಸಲುವಾಗಿ, ಬಂಧಿಸಿ, ಸರಕಾರವು ನಾಲ್ಕು ವರ್ಷಗಳ ಕಠಿನ ಶಿಕ್ಷೆ ವಿಧಿಸಿದೆಯೆಂಬ ವಿಷಯವು ಸ್ವದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲಿಯೂ ತೀವ್ರ ವಿಚಾರ ಕ್ರಾಂತಿಯನ್ನು ಹುಟ್ಟಿಸಿದೆ. ಸ್ವತಃ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿಯೇ ಅನೇಕ ಸದಸ್ಯರು, ಈ ಕಾರ್ಯವು ಯುಕ್ತವಾಗಲಿಲ್ಲವೆಂದೂ, ಅವರಿಗೆ ವಿಧಿಸಿದ ಶಿಕ್ಷೆಯು ಬಹಳ ಕಠೋರವಾಯಿತೆಂದೂ ಭಾರತ ಸಚಿವರೊಡನೆ ವಾದಿಸಿದರು, ಮಾತ್ರವಲ್ಲದೆ, ಬ್ರಿಟನಿನ ಹಲವು ಪ್ರಸಿದ್ಧ ಪತ್ರಿಕೆಗಳು ಅಗ್ರಲೇಖನಗಳನ್ನು ಬರೆದು ನೆಹರುಗಳಂತಹ ಸರ್ವಮಾನ್ಯ ಮುಖಂಡರನ್ನು ಈ ವಿಷಮಕಾಲದಲ್ಲಿ ನಿರ್ಬಂಧಿಸಿ, ಬ್ರಿಟಿಷ್ ಸರಕಾರವು ಭಾರತದ ಸಹಾಯ ಸಹಕಾರವನ್ನು ಇಲ್ಲದೆ ಮಾಡಿಕೊಂಡಂತಾಗುವುದೆಂದೂ, ಆದಕಾರಣ ಅವರನ್ನು ತೀವ್ರವೇ ಬಿಡುಗಡೆಮಾಡಬೇಕೆಂದೂ ವಾದಿಸಿವೆ.

ಪಂಡಿತ ನೆಹರುಗಳು ಅಹಿಂಸಾ ರೀತಿಯಲ್ಲಿ ಭಾಷಣಮಾಡಿ ಬ್ರಿಟಿಷರ ಧೋರಣವನ್ನು ಖಂಡಿಸಿರಬಹುದು; ಆದರೆ, ಅವರು ಸರ್ವಾಧಿಕಾರಿಗಳ ದರ್ಪದ ಆಕ್ರಮಣ ನೀತಿಯನ್ನು ಅಂದಿನಿಂದ ಇಂದಿನ ವರೆಗೆ ಖಂಡಿಸುತ್ತಾ ಬಂದಿರುವರು. ಸರ್ವಾಧಿಕಾರಿಗಳೆದುರು ಬ್ರಿಟನು ಕಾದಾಡುವಲ್ಲಿ ತನ್ನ ನೈತಿಕ ಸಹಾನುಭೂತಿಯನ್ನು ಕೊಡುವುದಾಗಿ ಸಾರಿದ್ದವರು, ಆದರೆ ಬ್ರಿಟನು ಕಾಂಗ್ರೆಸಿನ ಆ ಸಹಕಾರವನ್ನು ಅಪೇಕ್ಷಿಸದೆ ತನಗೆ ಯುಕ್ತ ಕಂಡಂತೆ ಮಾಡಿದರೂ, ನೆಹರುಗಳು ತತ್ವತಃ ಸರ್ವಾಧಿಕಾರಿಗಳೆದುರು ಬ್ರಿಟನು ಮಾಡುವ ಯುದ್ಧಕ್ಕೆ ವಿರೋಧಿಗಳಲ್ಲ. ಹೀಗಿರುವಾಗ, ಅವರನ್ನು ಇಂತಹ ವಿಷಮಕಾಲದಲ್ಲಿ ಬಂಧಿಸಿ, ಕಠಿಣವಾಗಿ, ಕಟ್ಟುಗ್ರವಾಗಿ, ನಾಲ್ಕು ವರ್ಷಗಳ ಕರಾಳ ಶಿಕ್ಷೆ ವಿಧಿಸಿದುದು ಬಹಳ ಅಸಮಂಜಸವಾಗದಿರದು; ಇದರಿಂದ ರಾಷ್ಟ್ರೀಯ ಮಾತ್ರವಲ್ಲ ಅಂತರರಾಷ್ಟ್ರೀಯ ರಾಜಕೀಯ ಕೇಂದ್ರಗಳಲ್ಲಿಯೂ ವಿಚಾರಕ್ರಾಂತಿಯುಂಟಾಗಿದೆ; ಬ್ರಿಟಿಷ್ ಸರಕಾರವು ಈ ಕಡೆಗೆ ಗಮನಕೊಡದಿರುವುದು ನ್ಯಾಯವೂ ಹಿತವೂ ಆಗಲಾರದು.

ಪತ್ರಿಕಾ ನಿರ್ಬಂಧ—

ಯುದ್ಧವು ಆರಂಭವಾದ ಬಳಿಕ ಮತ್ತು ಸರಕಾರದವರು 'ಡಿಫೆನ್ಸ್ ಓಫ್ ಇಂಡಿಯಾ' ಕಾನೂನನ್ನು ಜ್ಯಾರಿಗೆ ತಂದ ಬಳಿಕ, ಅನೇಕ ಉದ್ರೇಕಾತ್ಮಕವಾದ ವಿಚಾರಗಳು ಒದಗಿದ್ದರೂ ಪತ್ರಿಕಾ ಕರ್ತರು ಅವುಗಳನ್ನು ವಿಶೇಷ ತಾಳ್ಮೆ ಸಹನೆಗಳಿಂದ ಸಹಿಸಿಕೊಂಡಿದ್ದಾರೆ. ಆದರೆ ಮೊನ್ನೆ ಗಾಂಧಿಜಿ ವೈಯಕ್ತಿಕ ಸತ್ಯಾಗ್ರಹವನ್ನು ಆರಂಭಿಸಿದ ಮೇಲೆ, ಅಕ್ಟೋಬರ್ ತಿಂಗಳಿಂದೀಚೆಗೆ, ಪತ್ರಿಕೆಗಳ ಕುರಿತು ಕಠಿಣ ನಿರ್ಬಂಧದ ಶಾಸನವನ್ನಿತ್ತು ಬಾಯ್ಮುಚ್ಚಿಸಲು ಮಾಡಿದ ವಿಷಯವು ಎಲ್ಲಾ ಪತ್ರಿಕಾಕರ್ತರನ್ನೂ ಅತ್ಯಂತ ಉದ್ವಿಗ್ನರನ್ನಾಗಿ ಮಾಡಿತು. ಈ ಕುರಿತು ಭಾರತದ ಪ್ರಸಿದ್ಧ ಪತ್ರಿಕಾಕರ್ತರೆಲ್ಲರೂ, ಡಿಲ್ಲಿಯಲ್ಲಿ ಸಭೆ ಸೇರಿ ವಿಚಾರ ವಿನಿಮಯ ಮಾಡಿಕೊಂಡರು. ಆ ಸಂದರ್ಭದಲ್ಲಿಯೇ, ಸರಕಾರದವರು ಇತ್ತೀಚೆಗೆ ಹೊರಡಿಸಿದ ಆರ್ಡಿನೆನ್ಸುಗಳನ್ನೂ ಹಿಂತೆಗೆದುಕೊಂಡಿರುವುದಾಗಿ ತಿಳಿಸಿದ್ದು, ಸಂತೋಷದ ಸುದ್ದಿಯಾಗಿದೆ. ಈ ಸಂದರ್ಭದಲ್ಲಿ ಪತ್ರಿಕಾ ಕರ್ತರಲ್ಲಿ ವಿಶ್ವಾಸವಿಟ್ಟು ಅವರ ಹೊಣೆಗಾರಿಕೆಯನ್ನು ತಿಳಿದು, ವರ್ತಿಸಲು ಮನಮಾಡಿದ ಬಗ್ಗೆ ಸರಕಾರದ ಧೋರಣವನ್ನು ನಾವು ಹೃತ್ಪೂರ್ವಕ ಸ್ವಾಗತಿಸದಿರಲಾರೆವು.

"ವಿವಿಧಾಭಿಪ್ರಾಯಗಳುಳ್ಳ ಭಾರತದ ಪತ್ರಿಕೆಗಳೆಲ್ಲವೂ, ಪ್ರಕೃತ ಯುದ್ಧದ ಕುರಿತು ಸಿಟ್ಟಿನ್ನದೆ ಸರಕಾರಕ್ಕೆ ಸಂಪೂರ್ಣ ಸಹಕಾರವನ್ನು ಕೋರುತ್ತವೆ. ಸರಕಾರದ ಪ್ರಕಟಣೆ, ವರದಿ, ಸರಕಾರ ಮತ್ತು ಸರಕಾರೇತರ ಹೇಳಿಕೆ ಇವೆಲ್ಲವುಗಳನ್ನೂ ಕಾಲಮುಗಟ್ಟಳೆಯಿಂದ ದಿನ ದಿನ ಪ್ರಕಟಿಸಿವೆ. ಹೀಗಿರುತ್ತಾ, ಪತ್ರಿಕೆಗಳ ಕುರಿತು ಅವಿಶ್ವಾಸತೇ ತೋರುವಂತೆ, ಯುದ್ಧ ವಿರುದ್ಧ ಪ್ರಚಾರದ ಪ್ರತ್ಯಕ್ಷ ಅಪ್ರತ್ಯಕ್ಷ ಸುದ್ದಿ ಕೊಡಬಾರದೆಂಬ ಕಠಿಣಾಜ್ಞೆ ಹೊರಡಿಸಿದ್ದು ತುಂಬಾ ಶೋಚನೀಯವಾಗಿತ್ತು. ಇದಕ್ಕೂ ಕಲಿಬಾಗಿದ್ದರೆ, ಸಂಪಾದಕರು ನಿರ್ಜೀವ ಮೂರ್ತಿಗಳಾಗುತ್ತಿದ್ದರು.' ಹೀಗೆಂದು ಡಿಲ್ಲಿ ಪರಿಷತ್ತಿನ ಅಧ್ಯಕ್ಷಪೀಠದಿಂದ 'ಹಿಂದೂ' ಪತ್ರಿಕೆಯ ಸುಪ್ರಸಿದ್ಧ ಸಂಪಾದಕರಾದ ಶ್ರೀ ಕೆ. ಶ್ರೀನಿವಾಸನ್ ಇವರು ಹೇಳಿದರು.

ಯುದ್ಧದ ಕುರಿತು ಸರಕಾರಕ್ಕೆ ಭಾರತೀಯ ಪತ್ರಿಕೆಗಳು ಸಂಪೂರ್ಣ ಸಹಕಾರ ಕೊಟ್ಟಿವೆಯೆಂದು ಸರಕಾರವೇ ಒಪ್ಪಿದೆ. ಆದರೆ ಕೆಲವೊಂದು ಮೂಲಭೂತ ಸ್ವಾತಂತ್ರ್ಯವು ಪತ್ರಿಕೆಗಳಿಗೆ ಇರಬೇಕು. ಆದ ಸಂಗತಿಗಳನ್ನು ಪ್ರಕಟಿಸಲು ಪತ್ರಿಕೆಗಳಿಗೆ ಸ್ವಾತಂತ್ರ್ಯವಿರಲೇಬೇಕು. ಆ ವಿಷಯದಲ್ಲಿ ಸರಕಾರವು ಸಂಪಾದಕರ ಹೊಣೆಗಾರಿಕೆಯಲ್ಲಿ ವಿಶ್ವಾಸವಿಡಬೇಕು. ಇಂತಹ ವಿಷಯಗಳಿಗೂ ನಿರ್ಬಂಧ ಬರುವುದು ಕ್ರೂರ ಅನ್ಯಾಯ. ಈ ವಿಷಯದಲ್ಲಿ ಮನನೊಂದ ಉದ್ವಿಗ್ನರಾದ ಭಾರತದ ಪತ್ರಿಕಾ ಸಂಪಾದಕರನ್ನು ಹೊಸ ನಿರ್ಬಂಧಾಜ್ಞೆಗಳನ್ನು ತೆಗೆದುಹಾಕಿರುವುದಾಗಿ ತಿಳಿಸಿದ ಸರಕಾರವು, ತಿರುಗಿ ತನ್ನ ವಿಶ್ವಾಸಕ್ಕೆ ತೆಗೆದುಕೊಂಡಿದೆ. ಈಗಾದರೂ ಸರಕಾರಕ್ಕೆ ಈ ಬುದ್ಧಿ ಬಂದದ್ದಕ್ಕಾಗಿ ಅಭಿನಂದಿಸದಿರಲಾರೆವು.

ರೂಸ್‌ವೆಲ್ಟರ ಆಯ್ಕೆ

ಕಳೆದ ವಾರ ಅಮೇರಿಕದ ಅಧ್ಯಕ್ಷಪದವಿಗೆ ಪ್ರತಿಸ್ಪರ್ಧಿಗಳಾಗಿ ನಿಂತ ಉಮೇದ್ವಾರರ ವಿಷಯವಾಗಿ ಬರೆಯುತ್ತಾ ನಾವು, ಆಗ, ಫಲಿತಾಂಶ ಪ್ರಕಟವಾಗುವುದಕ್ಕೆ ಮುಂಚಿತವಾಗಿಯೇ ರೂಸ್‌ವೆಲ್ಟರ ಯೋಗ್ಯತೆಯನ್ನು ಎತ್ತಿ ಹೇಳಿದ್ದೆವು. ನಮ್ಮ ಭವಿಷ್ಯದಂತೆ, ರೂಸ್‌ವೆಲ್ಟರೇ ಅಭೂತಪೂರ್ವ ಯಶಸ್ಸಿನಿಂದ, ಅಮೇರಿಕದ ಅಧ್ಯಕ್ಷರಾಗಿ ಮೂರನೆಯ ಸಲವೂ ಆರಿಸಿಬಂದರೆಂಬ ವಿಷಯವು ಈಗ ಸರ್ವವಿದಿತವಾಗಿದೆ.

ಅಮೇರಿಕದ ಅಧ್ಯಕ್ಷಪದವಿಯ ಚುನಾವಣೆಯ ಕಡೆಗೆ ಇಡೀ ಪ್ರಪಂಚದ ದೃಷ್ಟಿಯೇ ಪಸರಿಸಿತ್ತು. ಕಾರಣವೆಂದರೆ ಇಂದಿನ ಅಂತರ್‌ರಾಷ್ಟ್ರೀಯ ಗೊಂದಲದ ಕಾಲದಲ್ಲಿ, ಅಮೇರಿಕದ ನಿರ್ಧಾರವು ಒಂದು ರೀತಿಯಿಂದ ಮಹತ್ವದ್ದೇ ಆಗಿದೆ. ಅಮೇರಿಕವು ಬ್ರಿಟನಿಗೆ ಸಹಾನುಭೂತಿಪರವಾಗಿದ್ದರೂ ಪ್ರತ್ಯಕ್ಷ ಸಹಾಯಕ್ಕೆ ಬಂದಿಲ್ಲ. ಬರಬಹುದೆಂಬ ಆಸೆಗಳು ಮೂಡಿವೆ. ರೂಸವೆಲ್ಟರು ಆರಿಸಿಬಂದರೆ, ಮುಂದೆ ಖಂಡಿತ ಯುದ್ಧಕ್ಕೆ ದುಮುಕುವರೆಂದೂ ನಂಬಲಾಗಿತ್ತು; ಅಮೇರಿಕದಂತಹ ಪ್ರಬಲ ರಾಷ್ಟ್ರವು ಬ್ರಿಟನಿನ ಬೆಂಬಲಕ್ಕೆ ನಿಂತು ಕಾದಾಡುವುದೆಂದರೆ ಸಾಮಾನ್ಯವಾದ ವಿಚಾರವಲ್ಲ.

ಬ್ರಿಟನ್ ಪ್ರೇಮಪಾತ್ರರಾದ ರೂಸ್‌ವೆಲ್ಟರೇ ಇಂದೀಗ ಅಧ್ಯಕ್ಷರಾಗಿ ಆರಿಸಿಬಂದಿರುತ್ತಾರೆ. ಯುದ್ಧವು ಇನ್ನಷ್ಟು ಭೀಷಣವೇ ಆಗುತ್ತಿದೆ. ಬ್ರಿಟನು ವಿಪತ್ತಿನಿಂದ ಪಾರಾಗಿಲ್ಲ. ಇಂತಹ ಸಮಯದಲ್ಲಿ ತಿರುಗಿ ಅಧಿಕಾರಾರೂಢರಾಗಿರುವ ಅಧ್ಯಕ್ಷ ರೂಸ್‌ವೆಲ್ಟರು ಯಾವ ಗಂಭೀರ ನಿರ್ಧಾರ ಮಾಡಲಿರುವರೋ ನೋಡತಕ್ಕದ್ದಿದೆ.

ಹಣಕಾಸಿನ ಮಸೂದೆ

ಕೇಂದ್ರ ಶಾಸನಸಭೆಯಲ್ಲಿ ಭಾರತ ಸರಕಾರದ ಆರ್ಥಿಕ ಸಚಿವರಾದ ಸರ್ ರೇಜಮಾನ್ಸರು ಒಂದು ಹಣಕಾಸಿನ ಮಸೂದೆಯನ್ನು ತರುವರು. ಈ ಮಸೂದೆಯಿಂದ ಆದಾಯತೆರಿಗೆಯ ಮೇಲೆ ಶೇಕಡಾ ೨೫ರಂತೆ ಹೆಚ್ಚಿಸಲಾಗುವುದು. ಪೋಸ್ಟಲ್ ದರವು ಏರುವುದು; ತಂತಿ ಟೆಲಿಫೋನುಗಳಲ್ಲಿಯೂ ದರ ಹೆಚ್ಚುವಂತಾಗುವುದು. ಯುದ್ಧಕ್ಕಾಗಿ ಭಾರತ ಸರಕಾರಕ್ಕೆ ೨೦ ಲಕ್ಷ ರೂಪಾಯಿಗಳು ಬೇಕಾಗಿರುವುದರಿಂದ ಈ ರೀತಿಯಲ್ಲಿ ಹಣ ವಸೂಲು ಮಾಡುವ ಹಾದಿಯನ್ನು ಸರಕಾರದ ಆರ್ಥಿಕ ಸಚಿವರು ನಿರ್ಧರಿಸಿ ಮಸೂದೆಯೊಂದನ್ನು ಮುಂದೆ ತಂದಿರುವರು.

ಭಾರತದಂಥಾ ಬಡವಾದ ದೇಶದಲ್ಲಿ ಈಗ ಇರುವ ಕರವೇ ಜನರಿಗೆ ಹೊರಲಾರದಾಗಿರುವುದು, ಆದಕಾರಣ ಹೆಚ್ಚಿನ ಕರಗಳನ್ನು ರಾಷ್ಟ್ರವು ಕೊಡಲು ಸಿದ್ಧವಾಗಿಲ್ಲವೆಂದು ಖಂಡಿತವಾಗಿದೆ. ಆದರೆ ಈ ಶಾಸನದ ರೀತಿಯಿಂದ ಒತ್ತಾಯದಂತೆಯೇ ಕರವು ವಸೂಲಾಗುವುದರಿಂದ ಇದನ್ನು ವಿರೋಧಿಸಬೇಕೆಂದು— ಮೊದಲು, ಈ ಸಲದ ಅಧಿವೇಶನಕ್ಕೆ ಹೋಗುವುದಿಲ್ಲವೆಂದು ನಿರ್ಧರಿಸಿರುವ ಕಾಂಗ್ರೆಸ್ ಪಕ್ಷದ ಸದಸ್ಯರೂ ವರ್ಕಿಂಗ್ ಕಮಿಟಿಯಲ್ಲಿ ನಿರ್ಣಯವಾದಂತೆ ಸಭೆಗೆ ಹಾಜರಾಗಿರುವರು. ಮಸೂದೆಯು ವಿರೋಧದಿಂದ ಬಿದ್ದುಹೋಗಲೂ ಬಹುದು; ಆದರೂ ಇಂತಹ ಸಮಯದಲ್ಲಿ ತನಗಿಷ್ಟ ಬಂದಂತೆ ಮಾಡಲು ವೈಸರಾಯರು ವಿಶೇಷಾಧಿಕಾರ ಹೊಂದಿದವರಾಗಿರುತ್ತಾರೆ.

ಮಹಾತ್ಮಾಜಿಯವರು ಪತ್ರಿಕೆಯನ್ನು ಯಾಕೆ ನಿಲ್ಲಿಸುವರು?

'ಬೆರಳು ಕೇಳಿದವನಿಗೆ ಕೈಯನ್ನೇ ಕೊಡುವುದು'

ಗಾಂಧಿಜಿಯವರ ಹೃದಯಸ್ಪರ್ಶಿಯಾದ ಹೇಳಿಕೆ!

'ಹರಿಜನ ಸೇವಕ' ಪತ್ರಿಕೆಯನ್ನು ನಿಲ್ಲಿಸುವ ನಿರ್ಣಯ ಮಾಡುವಾಗ ಒಂದೇ ವಾರದ ವರೆಗೆ ಮಾತ್ರ ನಿಲ್ಲಿಸಬೇಕಾಗಬಹುದೆಂದು ನನಗೆ ಆಸೆಯಿತ್ತು. ವೈಸರಾಯರೊಡನೆ ನಡೆದ ಪತ್ರ ವ್ಯವಹಾರವೇ ಈ ಆಸೆಗೆ ಆಧಾರವಾಗಿತ್ತು. ಆ ಆಧಾರವೀಗ ನಿಷ್ಫಲವೆಂದು ಬದ್ಧವಾಗಿದೆ. ಆದುದರಿಂದ ಹರಿಜನ ಸೇವಕವನ್ನು ಈಗಲಂತೂ ನಿಲ್ಲಿಸಲಾಗುವುದು.

ಇದೊಂದು ಕೆಡಕಾಯಿತೆಂದು ತಿಳಿಯಲು ಕಾರಣವಿಲ್ಲ. ನಾವು ಕೆಡುಕೆಂದು ಭಾವಿಸಿದ್ದು ಕೆಡಕೇ ಇರುವುದೆಂದು ಹೇಳಲಿಕ್ಕೆ ಬರುವದಿಲ್ಲ. ಕೆಡುಕು ಒಳಿತು ನಮ್ಮ ಭಾವನೆಯನ್ನು ಅವಲಂಬಿಸುವವು. ನಿಜವಾಗಿ ಯಾವುದು ಹೇಗೆ ಇರುವುದೆಂಬುದು ಪರಮಾತ್ಮನಿಗೊಬ್ಬನಿಗೇ ಗೊತ್ತಿದೆ.

ಸತ್ಯಾಗ್ರಹವು ಸತ್ಯಾಗ್ರಹಿಗಳ ಮತ್ತು ವಿರೋಧಿಗಳ ಸತ್ವಪರೀಕ್ಷೆಯ ವಿಷಯವು. ಇವರಿಬ್ಬರಲ್ಲಿ ಭೇದವಂತೂ ಇದ್ದೇ ಇರುವುದು. ಸತ್ಯಾಗ್ರಹಿಯು ಪರೀಕ್ಷೆಯ ನಂತರ ಉತ್ತರೋತ್ತರ ಆತ್ಮಶುದ್ಧಿ ಮತ್ತು ಶಕ್ತಿಗಳನ್ನು ಬೆಳಸಿಕೊಳ್ಳುವನು. ಸತ್ಯಾಗ್ರಹದ ಜೋರು ಹೆಚ್ಚಾದಂತೆ ವಿರೋಧಿಗಳ ದ್ವೇಷ ಹೆಚ್ಚೆಚ್ಚು ಪ್ರಕಟವಾಗಹತ್ತುತ್ತದೆ. ಇದರ ಪ್ರತ್ಯಕ್ಷ ಉದಾಹರಣೆಯೀಗ ನಮ್ಮ ಕಣ್ಣೆದುರಿನಲ್ಲಿಯೇ ಇದೆ. ವೈಸರಾಯರ ನಿರ್ಣಯದಿಂದ ಸತ್ಯಾಗ್ರಹಿಯ ಶುದ್ಧಿ ಮತ್ತು ಶಕ್ತಿ ಬೆಳೆ ಬೆಳೆ ಬೆಳೆಯಲಿಕ್ಕೇ ಬೇಕು. ನಾನು ಮಾಡಿದ ಈ ಪೃಥಕ್ಕರಣವು ಸರಿಯಿದ್ದರೆ ಇದು ಅಶುಭ ಪರಿಣಾಮವೆಂದು ತಿಳಿಯುವ ಕಾರಣವಿಲ್ಲ.

ಆದರೆ ಇಂಗ್ಲಿಷರ ಗುಣದೋಷಗಳನ್ನು ವಿಮರ್ಶಿಸುವ ಇಲ್ಲವೆ ಪ್ರದರ್ಶಿಸುವ ಸಮಯವಿದಲ್ಲ. ಅದರಂತೆ ಶುಭ ಪರಿಣಾಮವಾಗುವುದೋ ಇದರ ತುಲನೆಯನ್ನು ಮಾಡಬೇಕಾಗಿಲ್ಲ. ಪತ್ರಿಕೆಯನ್ನು ಏಕೆ ನಿಲ್ಲಿಸಬೇಕಾಯಿತೆಂಬ ಕಾರಣವನ್ನು ಮಾತ್ರ ವಾಚಕರಿಗೆ ತಿಳಿಸುವೆನು. ಸರಕಾರದವರ ಬಂಧನ ಸ್ವೀಕರಿಸಿ ಕುಂಠಿತ ಸ್ಥಿತಿಯಲ್ಲಿ ಹರಿಜನ ಸೇವಕವನ್ನು ನಡೆಯಿಸುವದು, ಇಲ್ಲವೆ ಬಂಧನಗಳನ್ನು ಸ್ವೀಕರಿಸದೆ ಪತ್ರಿಕೆಯನ್ನು ನಿಲ್ಲಿಸಿಬಿಡುವುದು, ಇವೆರಡೇ ಮಾರ್ಗಗಳು ನನ್ನ ಮುಂದೆ ಇದ್ದವು.

ಯಾರಾದರೂ ಕಠೋರವಾಗಿ ಬೆರಳನ್ನು ಬೇಡಿದರೆ ಅವನನ್ನು ಒದ್ದು ಕಳಿಸುವುದು ಸಾಮಾನ್ಯ ನೀತಿಯು. ಆದರೆ ಇದು ಹಿಂಸಾತ್ಮಕ ನೀತಿಯು. ಬೆರಳು ಬೇಡುವವನಿಗೆ ಇಡೀ ಕೈಯನ್ನು ಕೊಡುವುದು ಎರಡನೇ ಮಾರ್ಗವು. ಇದು ಅಹಿಂಸೆಯ ಆಧಾರದ ಮೇಲೆ ನಿಂತಿದೆ.

ಅನಿತ್ಯ ವಸ್ತುಗಳ ಸಂಗ್ರಹ ಮತ್ತು ರಕ್ಷಣೆಯಲ್ಲಿ ಹಿಂಸೆಯು ತನ್ನ ಶಕ್ತಿಯನ್ನು ವ್ಯಯ ಮಾಡುತ್ತದೆ ಮತ್ತು ನಿತ್ಯ ವಸ್ತುವನ್ನು ಮರೆತುಬಿಡುವುದು ಇಲ್ಲವೆ ಅದು ಗೌಣವೆಂದು ತಿಳಿಯುವುದು. ಅಹಿಂಸಕವು ಅನಿತ್ಯವನ್ನು ಬಿಟ್ಟುಕೊಟ್ಟು ತ್ಯಾಗಕ್ಕಾಗಿ ಸಿದ್ಧವಾಗುವುದಲ್ಲದೆ ನಿತ್ಯ ವಸ್ತುವಿನ ಸಲುವಾಗಿ ಪ್ರಯತ್ನಿಸುತ್ತದೆ. ಇದರ ಹೆಸರೇ ಸತ್ಯಾಗ್ರಹವು. ಈ ಸಂದರ್ಭದಲ್ಲಿ ಹರಿಜನ ಸೇವಕವು ಅನಿತ್ಯ ವಸ್ತುವಿದೆ. ಕ್ಷಣಿಕ ಸಾಧನ ಮಾತ್ರ. ಆದುದರಿಂದ ಅಂಗುಲಿ—ಹಸ್ತ ನ್ಯಾಯವು ಇಲ್ಲಿ ಸರಿಹೋಗುವುದು.

ನಿರ್ಬಂಧಕ್ಕೆ ಒಪ್ಪಿಯೂ ನಾವು ಪತ್ರಿಕೆಯನ್ನು ನಡೆಸಬಲ್ಲೆವೆಂದು ಸರಕಾರದ ಅಭಿಪ್ರಾಯ. ಆದರೆ ನಿರ್ಬಂಧಗಳಿಗೆ ಒಪ್ಪುವದಕ್ಕಿಂತ ಪತ್ರಿಕೆಯನ್ನು ನಿಲ್ಲಿಸಿಬಿಡುವುದೇ ಒಳ್ಳೆಂದು ಸತ್ಯಾಗ್ರಹಿಯು ಹೇಳುತ್ತಿರುವನು. ಹೀಗೆ ಮಾಡಿ ಅವನು ವಾಕ್ ಸ್ವಾತಂತ್ರ್ಯ ಮತ್ತು ಸ್ವರಾಜ್ಯರೂಪೀ ನಿತ್ಯ ವಸ್ತುವಿನ ರಕ್ಷಣೆಗಾಗಿ ಹೆಚ್ಚಿನ ಶಕ್ತಿಯನ್ನು ಸಂಪಾದಿಸುವನು.

ನನಗೆ ಎರಡನೆಯ ಮಾರ್ಗವಿರಲಿಲ್ಲ. ರಚನಾತ್ಮಕ ಕಾರ್ಯದ ಪ್ರತೀಕವನ್ನು ಬಿಟ್ಟುಕೊಟ್ಟು ರಚನಾತ್ಮಕ ಕಾರ್ಯವನ್ನು ಮಾಡಲು ನನಗೆ ಶಕ್ಯವಿರಲಿಲ್ಲ. ಅಹಿಂಸೆಯು ಪ್ರತೀಕ ಆಗುವುದರಲ್ಲಿಯೇ ಅದರ ಬೆಲೆಯಿದೆ. ಈ ಸಮಯದಲ್ಲಿ ಅಹಿಂಸೆಯ ಪ್ರಚಾರ ಮಾಡಲಿಕ್ಕೆ ನಾನು ಸಮರ್ಥನಾಗಿದ್ದರೆ ಉಳಿದೆಲ್ಲ ವಸ್ತುಗಳು ನನಗೆ ಅಪ್ರಧಾನವೆನಿಸುವವು.

ಅಂಗುಲಿ ಹಸ್ತನ್ಯಾಯವು ಹೇಗೆ ಕಾರ್ಯಕಾರಿಯಾಗುವದೆಂಬದನ್ನು ನೋಡುವ. ಅಂಗುಲಿ ಬೇಡುವವನು ಅದಕ್ಕಾಗಿ ಹೋರಾಡಬೇಕಾಗುವುದೆಂದು ತಿಳಿಯುವನು. ಆದರೆ ಸತ್ಯಾಗ್ರಹಿಯು ಅಂಗುಲಿಯ ಬದಲು ತನ್ನ ಕೈಕೂಡ ಕೊಡಬಲ್ಲನು. ಕಲ್ಪನಾ ಸಾಮ್ರಾಜ್ಯದಲ್ಲಿ ಬಾಹ್ಯವಸ್ತುಗಳನ್ನು ನೋಡಿ ಬೇಡುವವನು ಆಶ್ಚರ್ಯಚಕಿತನಾಗುವನು; ಮತ್ತು ಕೆಲಹೊತ್ತು ಗಾಬರಿಯಾಗುವನು. ಹಲವು ಸಲ ಅವನ ಮನಸ್ಸು ಕರಗಿದ ಉದಾಹರಣೆಗಳೂ ಅನುಭವಕ್ಕೆ ಬಂದಿವೆ. ಆದರೆ ಬೇಡುವವನ ಮನಸ್ಸು ಕರಗಲಿ, ಕರಗದಿರಲಿ, ಸತ್ಯಾಗ್ರಹಿಯು ಅನಿತ್ಯ ವಸ್ತುತ್ಯಾಗ ಮಾಡಿ ನಿತ್ಯ ವಸ್ತುವಿನ ರಕ್ಷಣೆಗಾಗಿ ಸಶಕ್ತನಾಗುವನು. ಮತ್ತು ಶುದ್ಧನಾಗುವನು. ಅನಿತ್ಯ ಪದಾರ್ಥಗಳನ್ನು ಪೂರ್ಣ ಬಿಟ್ಟುಕೊಡುವ ಸಿದ್ಧತೆಯನ್ನು ತೋರಿಸುವನು. ಹರಿಜನ ಸೇವಕವನ್ನು ನಿಲ್ಲಿಸುವುದು, ಈ ದೃಷ್ಟಿಯಿಂದ ಸಮರ್ಥ ಉಚಿತ ಪ್ರತೀಕವೆಂದು ಕಂಡುಬರದಿರಲಾರದು.

ನಿಜವಾಗಿಯೂ ವಾಚಕರು ಈ ತ್ಯಾಗದ ರಹಸ್ಯ ತಿಳಿದುಕೊಂಡರೆ ಪತ್ರಿಕೆ ನಿಲ್ಲುವುದರಿಂದ ಅವರಿಗೆ ಯಾವ ಸಂಕಷ್ಟವೂ ಬರಬಾರದು.

ಇನ್ನು ಮುಂದೆ ಪ್ರತಿವಾರ ನನ್ನ ಅಭಿಪ್ರಾಯ ತಿಳಿಸುವುದು ಸಿಂತು ಹೋದುದಕ್ಕಾಗಿ ನನಗೆ ದುಃಖವೆನಿಸುತ್ತದೆ. ವಾಚಕರಿಗೂ ಹಾಗೆ ಆಗುವುದೆಂದು ನಾನು ತಿಳಿಯುತ್ತೇನೆ. ಆದರೆ ತ್ಯಾಗವು ಧರ್ಮವಾಗಿದ್ದರೆ ಅದು ಧರ್ಮವೇ ಆಗುವುದು. ಈ ಧರ್ಮ ಪಾಲಿಸುವಲ್ಲಿ ಸುಖ ಮತ್ತು ಸಂತೋಷದ ಅನುಭವವಾಗಲಿಕ್ಕೆ ಬೇಕು.

ವಿಧಾಯಕ ಕಾರ್ಯಕ್ರಮದ ಅಂಶಗಳನ್ನು ಈಗಾಗಲೇ ನಾನು ಹೇಳಿರುವೆನು. ಹೆಚ್ಚಿಗೇನೂ ಹೇಳಲಾರೆ. ಪ್ರತಿಯೊಬ್ಬರ ಅಂತರಾತ್ಮವು ಹೇಳಿದಂತೆ ಅವುಗಳ ಪಾಲನೆಮಾಡಬೇಕು. ಸರ್ವಸ್ವ ನಾಶವಾದರೂ, ಮರಣ ಬಂದರೂ ಅಂತರಾತ್ಮನ ಸಂದೇಶದ ವಿರುದ್ಧ ಅವನು ನಡೆಯಬಾರದು. ವಾಣಿ ಮತ್ತು ಲೆಕ್ಕಣಿಕೆಯಲ್ಲಿದ್ದ ಶಕ್ತಿಗಿಂತ ಆಚರಣೆಯಲ್ಲಿ ಹೆಚ್ಚು ಶಕ್ತಿಯಿದೆ. ತನ್ನ ಆಚರಣೆಯಿಂದ ಉಂಟಾಗಬಹುದಾದ ಜ್ಞಾನವನ್ನು ಅವನು ಪಡೆಯಬೇಕು.

ಇನ್ನು ವ್ಯಾವಹಾರಿಕ ಮಾತು. ಆರು ತಿಂಗಳೊಳಗಾಗಿ ಮತ್ತೆ ಪತ್ರಿಕೆ ಹೊರಡಿಸುವ ಅವಕಾಶ ದೊರೆತರೆ ಸರಿ ಇಲ್ಲದಿದ್ದರೆ ಪತ್ರಿಕೆ ಎಂದೆಂದಿಗೂ ನಿಲ್ಲಿಸಲಾಗುವುದು. ಆದುದರಿಂದ ಚಂದಾದಾರರು ತಮಗೆ ಸಲ್ಲತಕ್ಕ ಹಣವನ್ನು ತರಿಸಿಕೊಳ್ಳಬಹುದು. ಇಲ್ಲದಿದ್ದರೆ ಹರಿಜನ ಕಾರ್ಯದಲ್ಲಿ ಅದರ ವ್ಯಯ ಮಾಡಲಾಗುವುದು.

ಅಲ್ಲಿಯ ವರೆಗೆ ವಂದನೆಗಳು.

ಸೇವಾಗ್ರಾಮ,
[illegible]

—ಮೋ. ಕ. ಗಾಂಧಿ.

ಟೆಕ್ಸ್ಟ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆಧಿದೆ.

ವಿದ್ವಾನ್ ಶ್ರೀ ಕೆ. ಕೆ. ರೈ, ವಿರಚಿತ
ವ್ಯಾಕರಣ ಮತ್ತು ಪ್ರಬಂಧ
೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ
೦—೨—೦ ೦—೨—೬ ೦ ೩ ೦

ಶ್ರೀ ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ. ವಿರಚಿತ
ಪ್ರಾಥಮಿಕ ಲಘುವಿಜ್ಞಾನ
೬ನೆಯ ತರಗತಿಗೆ, ೦—೬—೦ ೭ನೆಯ ತರಗತಿಗೆ, ೦—೬—೦

ಹೊಸ ಪುಸ್ತಕಗಳು
ಪ್ರಾಥಮಿಕ ಲಘುವಿಜ್ಞಾನ (ಶ್ರೀ ಎಸ್. ರಾಮಕೃಷ್ಣಚಾರ್,
೮ನೆಯ ತರಗತಿಗೆ ೦—೬—೦
ವ್ಯಾಕರಣ ಮತ್ತು ಪ್ರಬಂಧ (ಶ್ರೀ ಕೆ. ಕೆ. ರೈ) ೫ ಮತ್ತು ೫ನೆಯ ತರಗತಿಗಳಿಗಾಗಿ

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಹಬ್ಬ!
ಶ್ರೀ. ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್, ಇವರಿಂದ ರಚಿತವಾದ,

ಮಕ್ಕಳ ಪದ್ಯಮಂಜರಿ

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ
೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ
ಎರಡನೆಯ ಪುಸ್ತಕ
೪ನೆಯ ಐದನೆಯ ತರಗತಿಗಳ ಬಾಲಕರಿಗಾಗಿ

ದೊರೆಯುವ ಸ್ಥಳ: ಶಾರದಾ ಛಾಪಖಾನೆ ಮಂಗಳೂರು.

ಸೊರಗಿ ಕೆಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನುಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ನಾವು ಜಯಿಸುವ ವರೆಗೆ ಯುದ್ಧ ನಡೆಯುವುದು

ಮ್ಯುನಿಕಿನಲ್ಲಿ ಹಿಟ್ಲರನ ಭಾಷಣ

ಹಿಟ್ಲರನು ಮೊನ್ನೆ ಭಾಷಣವೊಂದನ್ನು ಮಾಡಿ, ನಾಜಿ ಪಕ್ಷವು ಜರ್ಮನಿಯಲ್ಲಿ ಇದುವರೆಗೆ ಮಾಡಿದ ಕಾರ್ಯಗಳನ್ನು ವಿವರಿಸಿದನಲ್ಲದೆ, ತನ್ನ ಅಸ್ತಿತ್ವಕ್ಕಾಗಿ ಈಗ ಹೋರಾಡುತ್ತಿರುವ ಜರ್ಮನಿಯು ಇನ್ನೂ ಅನೇಕ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿದೆಯೆಂದೂ ಬ್ರಿಟನ್ ಮತ್ತು ಬ್ರಿಟಿಷರನ್ನು ಟೀಕಿಸಿ, ಬ್ರಿಟಿಷರ ಊಹನೆಗಳೆಲ್ಲವೂ ಅತಂತ್ರವಾಗುತ್ತಿವೆಯೆಂದೂ ಚರ್ಚಿಲ್ ಕಂಪೆನಿಯವರಿಗೆ ಪ್ರಜಾಸತ್ತೆಯೂ ಅಷ್ಟೇ, ಸರ್ವಾಧಿಕಾರವೂ ಅಷ್ಟೆ, ಅವುಗಳ ಬಗ್ಗೆ ಅವರಿಗೆ ಆಸಕ್ತಿಯಿಲ್ಲ, ಅವರ ಆಸಕ್ತಿ ಬೇರೆಯಿದೆ, ಸುಲಿಗೆಮಾಡಲು ಏನಾದರೂ ಸಿಗುವುದೆಯೋ ಎಂಬದನಷ್ಟೇ ಅವರು ನೋಡುತ್ತಾರೆ, ಇಂಥ ಪರಿಸ್ಥಿತಿಗೆ ಪ್ರಜಾಸತ್ತೆಯು ಒಪ್ಪುವದಾದರೆ ನಾನೇನು ಹೇಳಲಿ ಎಂದು ನುಡಿದನು.

ತನ್ನ ಭಾಷಣವನ್ನು ಮುಗಿಸುತ್ತ ಅವನು ಜರ್ಮನರಿಗೆ ಜಯ ಸಿಗುವ ವರೆಗೆ ಈ ಯುದ್ಧವು ನಡೆಯುವುದು ಎಂದನು.

೧೯೨೩ರಲ್ಲಿ ಜರ್ಮನ ಸರಕಾರವನ್ನು ಕೆಡವಿ, ಅಧಿಕಾರ ಪಡೆಯಲು ಕ್ರಾಂತಿ ಮಾಡಿ ನಿರಾಶರಾದ 'ನಾಜಿ ಗುಂಪಿನ ಮುಖಂಡರು' ಮ್ಯುನಿಕಿನಲ್ಲಿ ಒಂದು ಸಮಾರಂಭವನ್ನೇರ್ಪಡಿಸಿದ್ದರು. ಈ ಸಮಾರಂಭಕ್ಕೆ ಹಿಟ್ಲರನೂ ಬಂದಿದ್ದನು. ಸಮಾರಂಭದ ವಿಧಿಗಳೆಲ್ಲ ಮುಗಿದ ಮೇಲೆ ಹಿಟ್ಲರನು ವೇದಿಕೆಯ ಹತ್ತಿರ ಹೋಗಿ ನಿಂತು ಭಾಷಣಮಾಡಿದನು. ಸ್ವಸ್ತಿಕ ಧ್ವಜಗಳಿಂದ ಅಲಂಕರಿಸಲ್ಪಟ್ಟ ವಿಶಾಲವಾದ ಆ ಸಭಾಮಂದಿರ ಮಧ್ಯದಲ್ಲಿ ನಿಂತು ಹಿಟ್ಲರನು ಭಾಷಣ ಮಾಡುವುದಕ್ಕೆ ಪ್ರಾರಂಭಿಸಿದ ಕೂಡಲೇ ಇಡೀ ಸಭಾಮಂದಿರವೇ ನಿಶ್ಶಬ್ದವಾಯಿತು.

ವೇದಿಕೆಯ ಮೇಲೆ ಹಿಟ್ಲರನ ಬಲಭಾಗದಲ್ಲಿ ರೋಸೆನ್‌ಬರ್ಗ್, ಸ್ಕೈವರಜ, ಹಿಮ್ಲಿಯನ ಮತ್ತು ಹಿಮ್ಲರರು ಕುಳಿತಿದ್ದರು. ಎಡಭಾಗದಲ್ಲಿ ಹಿಟ್ಲರನ ಪಕ್ಷದ ಸೈನಿಕರಾದ "ಬಿರುಗಾಳಿ ಬಲ"ದವರು ನಿಂತಿದ್ದರು.

ಆರು ಗಂಟೆ ಹೊಡೆದ ಕೂಡಲೇ ನಾಜಿ ಪಕ್ಷದ 'ಬಟ್ಟ' ಮುಖಂಡನು ಒಂದು ರಕ್ತ ಧ್ವಜವನ್ನು ಹಿಡಿದುಕೊಂಡು ಬಂದನು. ಮತ್ತು ಸಭಾಮಂದಿರದ ಮಧ್ಯದಲ್ಲಿ ಅದನ್ನಿಟ್ಟನು. ಬಳಿಕ ಹಿಟ್ಲರನು ಪ್ರವೇಶಿಸಿದನು. ಅವನ ಹಿಂದೆ ಹೆರ್ ಹೆಸ್, ವ್ಯಾಗ್ನರ್ ಮತ್ತು ಡಾ. ಡಿಟ್ರಿಚ ಮೊದಲಾದ ನಾಜಿ ಮುಖಂಡರು ಬಂದರು.

ಹಿಟ್ಲರನ ಭಾಷಣ

ಹಿಟ್ಲರನು ತನ್ನ ಭಾಷಣದಲ್ಲಿ ಜರ್ಮನಿಯಲ್ಲಿ ಅಧಿಕಾರವನ್ನು ಪಡೆಯಲು ನಾಜಿ ಪಕ್ಷವು ಅನುಭವಿಸಿದ ಕಷ್ಟನಷ್ಟಗಳನ್ನು ಮತ್ತು ಈಗ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಿರುವ ಜರ್ಮನಿಯು ಇನ್ನೂ ಅನುಭವಿಸಬೇಕಾಗಿರುವ ಕಷ್ಟನಷ್ಟಗಳನ್ನು ವಿವರಿಸಿದನು. ಅನಂತರ ಅವನು ಯಹೂದಿಗಳ ವಿರುದ್ಧ ತಾನು ನಡೆಸಿದ ಹೋರಾಟವನ್ನು ವರ್ಣಿಸಿ 'ಅಂತೂ ಕಡೆಗೊಮ್ಮೆ ಈ ಜನರು ಜರ್ಮನಿಯಿಂದ ಸಂಪೂರ್ಣವಾಗಿ ಹೊರಗೆ ಹೋಗುವಂತಾಯಿತು' ಎಂದು ನುಡಿದನು.

ಬಳಿಕ ಅವನು ಇಂದಿನ ಯುದ್ಧದ ಬಗ್ಗೆ ಮಾತನಾಡಿ, ನಮ್ಮ ವೈರಿಗಳ ಎಣಿಕೆಗಳೆಲ್ಲ ಗುರಿತಪ್ಪಿದವು. ಅತಂತ್ರವಾದವು ಇನ್ನೂ ಕೆಲವು ಆಗಲಿವೆ ಎಂದು ಮೊದಲಿಸಿದನು.

ಕಳೆದ ಹನ್ನೆರಡು ತಿಂಗಳಲ್ಲಿ ಜರ್ಮನ ಸೈನ್ಯವು ಸಂಪಾದಿಸಿದ ಪ್ರಚಂಡ ವಿಜಯವನ್ನು ವಿವರಿಸಿದ ನಂತರ ಹಿಟ್ಲರನು ಜರ್ಮನಿಯಲ್ಲಿ ಜನರ ... ಶಿಸ್ತಿನಿಂದ ನಡೆದ ಕೊಂಡದಕ್ಕಾಗಿ ಅವರನ್ನು ಅಭಿನಂದಿಸಿದನು. ಆ ಮೇಲೆ ಅವನು ಬ್ರಿಟನ ಕೇವಲ ಧನವೈಭವದಿಂದ ಹೇಗೆ ವರ್ತಿಸುತ್ತಿದೆಯೆಂಬುದನ್ನು ಮತ್ತು ವಸ್ತುಸ್ಥಿತಿಯನ್ನರಿಯದೆ ಬ್ರಿಟಿಷರು ಹೇಗೆ ತಪ್ಪು ತಪ್ಪು ಅಂದಾಜು ಮಾಡುತ್ತಿರುವರೆಂಬುದನ್ನೂ ವರ್ಣಿಸಿದನು.

ಹಿಟ್ಲರನು ಮತ್ತೆ ಹೇಳಿದ್ದೇನೆಂದರೆ 'ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮುಖ್ಯ ವರ್ಷವೆಂದರೆ ೧೯೩೩ನೇ ಇಸವಿ. ಅಂದು ನಾವು ಜರ್ಮನಿಯಲ್ಲಿ ಅಧಿಕಾರವನ್ನು ಪಡೆದ್ದಲ್ಲದೆ ಸಮಾಜ ಸುಧಾರಣೆಯನ್ನೂ ಪ್ರಾರಂಭಿಸಿದೆವು. ಇಂಥ ಸುಧಾರಣೆಯನ್ನು ಪ್ರಜಾಸತ್ತಾತ್ಮಕ ರಾಷ್ಟ್ರಗಳು ಸಂಪೂರ್ಣವಾಗಿ ಅಲಕ್ಷ್ಯ ಮಾಡಿವೆ. ಇಂದಿಗೂ ಆ ರಾಷ್ಟ್ರಗಳಲ್ಲಿ ಈ ಸುಧಾರಣೆಯಿಲ್ಲ. ಆಗಲೂ ಸಹ ಇಂಗ್ಲಂಡವು ನಮ್ಮ ವೈರಿಯಾಗಿತ್ತು. ಇಂಗ್ಲಂಡವೆಂದು ನಾನು ಹೇಳಿದಮಾತ್ರಕ್ಕೆ ಅಲ್ಲಿಯ ಜನ ... ರು ಒಂದೇ ... ನೀವು ತಿಳಿಯ ... ದು. ಕೇವಲ ಕೆಲವು ... ಗಳು ಭಂಡವಲುಗಾರರು ... ಪ್ರಜಾಸತ್ತಾತ್ಮಕ ನಾಡಿಗಳ ಆ ದೇಶವನ್ನು ... ರವರ ... ಈ ಜನರೇ ಕಾರಣರು. ಅವರೇ ... ವನ್ನು ... ಭಿಸಿದ ... ಈಗಲೂ ... ಇದು ಕಳೆದ ಮಹಾಯುದ್ಧದಲ್ಲಿ ವಿಜಯವನ್ನು ಸಂಪಾದಿಸಿದ ಮುತ್ಸದ್ದಿಗಳು ತಮ್ಮ ವಚನಗಳಲ್ಲಿ ಒಂದನ್ನಾದರೂ ಪಾಲಿಸಿಲ್ಲ. ಇಂಥ ವಿಶ್ವಾಸಘಾತವು ಜಗತ್ತಿನಲ್ಲಿ ಹಿಂದೆಂದೂ ಆಗಿರಲಿಲ್ಲ.

ಬಳಿಕ ಹಿಟ್ಲರನು ೧೯೩೩ರಲ್ಲಿ ಅಧಿಕಾರ ಪಡೆಯಲು ತಾನು ಪಟ್ಟ ಪರಿಶ್ರಮವನ್ನು ಮತ್ತು ಆದ ಅಯಶಸ್ವಿಯುದ್ಧವನ್ನು ವಿವರಿಸಿದನು.

'ನಾನು ಕೇವಲ ಒಡಲಾಡಿ ಮೋಸ ಮಾಡುವವನಲ್ಲ. ಜರ್ಮನ ಜನರಿಗೆ ನಿಜಸ್ಥಿತಿಯನ್ನು ತಿಳಿಹೇಳಿ, ಅವರ ಮನಸನ್ನೊಲಿಸುವುದೇ ನನ್ನ ಉದ್ದೇಶವಾಗಿದೆ. ನನ್ನನ್ನು ಉಳಿಸಿಕೊಳ್ಳುವುದಕ್ಕೆ ನಾನೆಂದೂ ಪ್ರಯತ್ನಿಸಿಲ್ಲ ಆದರೆ ಬೇರೆಯವನು ಬಂದು ನನ್ನ ಕಪಾಳಕ್ಕೆ ಹೊಡೆದಾಗ ಮಾತ್ರ ನಾನು ಕೈಯೆತ್ತಬೇಕಾಯಿತು.

"ನಮ್ಮ ರಾಜ್ಯವು ಪ್ರಾರಂಭವಾದ ಮೇಲೆ ಜರ್ಮನಿಯು ಸಂಪದಭಿವೃದ್ಧಿ ಪಡೆಯಿತು. ಇದನ್ನು ಕಂಡು ಹಿಂದೆ ನಮ್ಮನ್ನು ಯುದ್ಧದಲ್ಲಿ ಕೆಡವಿದ್ದ ಮುತ್ಸದ್ದಿಗಳಿಗೆ ಹೊಟ್ಟೆಯಲ್ಲಿ ಉರಿ ಬಿದ್ದಿತು." ಕೂಡಲೇ ಚರ್ಚಿಲ್ಲ ಕಂಪೆನಿಯವರು ನಮ್ಮ ವಿರುದ್ಧ ಜನತೆಯನ್ನು ಉದ್ರೇಕಿಸಲು ಪ್ರಾರಂಭಿಸಿದರು. ಈ "ಅಂತರ ರಾಷ್ಟ್ರೀಯ ಕತ್ತೆಕಳ್ಳರು"ಗಳಿಗೆ ಪ್ರಜಾಸತ್ತೆಯೂ ಅಷ್ಟೇ, ಸರ್ವಾಧಿಕಾರಿತ್ವವೂ ಅಷ್ಟೇ. ಅವುಗಳ ಬಗ್ಗೆ ಅವರಿಗೆ ಸ್ವಲ್ಪವೂ ಆಸಕ್ತಿಯಿಲ್ಲ. ಅವರ ಆಸಕ್ತಿ ಬೇರೆ ಕಡೆಯಿದೆ. ಸುಲಿಗೆ ಮಾಡಲು ಏನಾದರೂ ಸಿಗುವದೆಯೋ ಎಂಬುದಷ್ಟೇ ಅವರು ನೋಡುತ್ತಾರೆ. ಅದು ಸಿಕ್ಕಿದರೆ ಸಾಕು ... ಬೇಡ ಪ್ರಜಾಸತ್ತೆಯು ಇಂಥ ಪರಿಸ್ಥಿತಿಗೆ ಒಪ್ಪುವಷ್ಟು ... ನಾನೇನ ಹೇಳಲಿ? ಆದರೆ ... ಗತ್ತದೆ."

ಕೊನೆಗೆ ಹಿಟ್ಲರನು ಜರ್ಮನಿಯು ಕೊನೆಯ ವರೆಗೂ ಯುದ್ಧಮಾಡುವುದೆಂದು ಹೇಳಿದನು.

NOTICE

In the Court of the District Munsif of Mangalore

O S No 60/1940

Between

Frank Martis and another— *Plaintiffs*

and

Nicolas Roche and others— *Defendants*

To 4th Defendant—Dulcine Roche daughter of Nicolas Roche, Mannagudde of Codialbail Village, Mangalore Town

Please take notice that the Plaintiffs abovenamed have filed the above suit for recovery of arrears of mulgeni rent amounting to Rs 76-9-2 due as per terms of the registered counterpart of mulgeni lease dated 28-10-1919 executed by one Thukra Maistry and another in favour of Plaintiffs, with future interest and costs of suit, by sale of the plaint A Schedule property and that the said suit stands posted to 30—11—1940 for hearing.

(By order of Court)

Mangalore,
12 11-1940

P D Souza, B A., B L
and
L C Pais, B A B L
Vakils for Plaintiffs

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri.

Fixed Deposits will be received at following rates of interest

For 3 months		3½%
" 6 "		4%
" 12 "		5%
" 24 "	& upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted

ಆ ದಿನವನ್ನು ನಾನೆಂದಿಗೂ ಮರೆಯ ಲಿಕ್ಕಿಲ್ಲ. ನಾನು ಝಾಂಸಿಯಿಂದ ಬರಿಲಿಗೆ ಹೋಗುತಿದ್ದೆ. ಆಗ ಖಾಕ್ಸಾರ ಚಳವಳವು ಪ್ರಾರಂಭವಾಗಿತ್ತು. ಒಂದೂರಿನಿಂದ ಇನ್ನೊಂದು ಊರಿಗೆ ಹೋಗುವ ಗಲಾಟೆ ಹೆಚ್ಚಾಗಿತ್ತು. ಖಾನಪುರ ಸ್ಟೇಶನಿನಲ್ಲಿ ಕೆಲವು ಖಾಕ್ಸಾರರು ಕೈಯಲ್ಲಿ ಆಯುಧವನ್ನು ಹಿಡಿದುಕೊಂಡು ರೈಲು ಹತ್ತಿದರು. ರೈಲಿನಲ್ಲಿ ಬಿಟ್ಟು ಕೂತುಕೊಂಡವರು ಅತ್ತ ಇತ್ತ ಸರಿದು ಅವರಿಗೆ ಸ್ಥಳ ಮಾಡಿಕೊಟ್ಟರು. ಲಕ್ನೋ ಸ್ಟೇಶನಿನಲ್ಲಿ ಕೆಂಪು ಟೊಪ್ಪಿಗಳ ಗುಂಪೇ ಗುಂಪು. ಬರಿಲಿಗೆ ಹೋಗುವವರು ಇಲ್ಲಿ ಇಳಿದು ಬೇರೆ ಗಾಡಿ ಹತ್ತಬೇಕಿತ್ತು. ನಾನು ಕೆಳಗಿಳಿದೆ. ಖಾಕ್ಸಾರರ ಗುಂಪು ಕೆಳಗಿಳಿದುದನ್ನು ನೋಡಿ ಪೋಲೀಸರು ತಡೆಯಲಿಕ್ಕೆ ಬಂದರು. ಖಾಕ್ಸಾರರು ಅದನ್ನು ಲಕ್ಷಿಸದೆ ಟಿಕೇಟು ಚೆಕ್ ಮಾಡುವವನನ್ನು ದೂಡಿ ಹೊರ ಹೊರಟರು. ನಾನು ಇವರ ಗಲಾಟೆಯನ್ನು ನೋಡಿ ರೈಲು ಬದಲಾಯಿಸುವುದನ್ನು ಮರೆತು ನನ್ನ ಬೇಗನ್ನು ಕೈಯಲ್ಲಿ ಹಿಡಿದುಕೊಂಡು ಅವರ ಹಿಂದೆ ಹೊರಟೆ. ಪೋಲೀಸರು ಖಾಕ್ಸಾರರನ್ನು ಸುತ್ತುಮುತ್ತಿದರೂ ಅವರ ಮೈಯನ್ನು ಮುಟ್ಟುವ ಧೈರ್ಯವಿಲ್ಲದವರಾಗಿದ್ದರು.

ಅವರೊಟ್ಟಿಗೆ ಮುಂದೆ ನಡೆಯುತ್ತಾ ಬರಿಲಿಗೆ ಹೋಗುವ ಪ್ಲೇಟ್‌ಫಾರ್ಮ್ ದಾಟುವಾಗ ಫಕ್ಕನೆ ನಾನೂ ಕೂಡ ಬರಿಲಿಗೆ ಹೋಗತಕ್ಕವನೆಂದು ನೆನಪಾಯಿತು. ಆ ದಿನ ರೈಲು ಎರಡು ಗಂಟೆ ತಡವಾಗಿದ್ದುದರಿಂದ ನಾನು ಬಚಾವಾದೆ. ಇಲ್ಲದಿದ್ದಲ್ಲಿ ಆ ಇಡೀ ದಿನ ನಾನು ಅವರ ಗುಂಪಿನ ಒಟ್ಟಿಗೆ ತಿರುಗಾಡಬೇಕಿತ್ತು.

ಮಧ್ಯಾಹ್ನದ ಸಮಯ. ಹಸಿವು ಬಾಯಾರಿಕೆಯಿಂದ ಬಳಲಿದ್ದೆ. ಕೆಲವು ಹಣ್ಣುಹಂಪಲುಗಳನ್ನು ಕೊಂಡುಕೊಂಡು ಒಂದು ಸಣ್ಣ ಕಂಪಾರ್ಟಮೆಂಟಿನಲ್ಲಿ ಕುಳಿತುಕೊಳ್ಳುವಷ್ಟರಲ್ಲೇ 'ಇದೇ ಗಾಡಿ' ಎಂದು ಹೇಳುತ್ತ ಇಬ್ಬರು ಬಂದು ಸಾಮಾನು ತಂದು ಇದೇ ಕಂಪಾರ್ಟಮೆಂಟಿನಲ್ಲಿ ತುಂಬಿಸಿದರು. ನಾನು ನನ್ನ ಬೇಗ್ ತೆಗೆದುಕೊಂಡು ಮೂಲೆಗೆ ಹೋಗಿ ಕುಳಿತು ಇಣಿಕಿ ನೋಡಿದೆ—'ಯಾರಿರಬಹುದು ಇಷ್ಟು ಸಾಮಾನಿನ ಯಜಮಾನ' ಎಂದು. ಆದರೆ ಯಾರೂ ಕಾಣಬರಲಿಲ್ಲ.

ರೈಲು ಬಿಡುವ ಹೊತ್ತಿಗೆ ಬೋಖಾ ಧರಿಸಿದ್ದ ಸ್ತ್ರೀ ಅವಳ ಪತಿ, ಇಬ್ಬರು ಮಕ್ಕಳು, ಒಬ್ಬ ನೌಕರನು ಬಂದು ಗಾಡಿಯಲ್ಲಿ ಕುಳಿತರು. ಅವರು ಸಾಮಾನಿನ ಪಟ್ಟಿ ತೆಗೆದರು.

ಗಾಡಿಯು ತುಂಬಾ ವೇಗದಿಂದ ಓಡುತಿತ್ತು. ನನಗೂ ಅಲ್ಲೇ ಕಣ್ಣು ಕೂರಿದ ಹಾಗೆ ಆಯ್ತು. ಫಕ್ಕನೆ ಸ್ತ್ರೀ ಕಂಠದಿಂದ ಇಂಗ್ಲಿಷ್ ಶಬ್ದಗಳು ಕೇಳಿ ಬಂದ ಹಾಗೆ ಆಯ್ತು. ತಿರಿಗಿ ನೋಡುವುದೇನು? ಸ್ತ್ರೀಯು ಬೋಖಾ ತೆಗೆದಿಟ್ಟು ಇಂಗ್ಲಿಷ್ ವರ್ತಮಾನ ಪತ್ರ ಓದುತಿದ್ದಳು. ನಾನೂ ಅದೇ ಗಾಡಿಯಲ್ಲಿದ್ದ ಇನ್ನಿಬ್ಬರು

ಈ ವಾರದ ಕತೆ:

ಬುರ್ಖಾವಾಲಿ

ಪ್ರಯಾಣಿಕರೂ ಆಶ್ಚರ್ಯದಿಂದ ಒಬ್ಬರನ್ನೊಬ್ಬರು ನೋಡತೊಡಗಿದೆವು.

ಯುವತಿಯು ಕಿಳ್ಳಗಿದ್ದು ಸುಂದರಿಯಾಗಿದ್ದಳು. ವರ್ತಮಾನ ಪತ್ರ ಓದುತ್ತಾ ಪತಿಯೊಡನೆ ಮಾತಾಡುತ್ತ ಇದ್ದಳು. ಅವಳ ಇಂಗ್ಲಿಷ್ ಉಚ್ಚಾರವು ಸ್ಪಷ್ಟವಾಗಿದ್ದು ಶೈಲಿಯು ಸುಂದರವಾಗಿತ್ತು. ಅವಳ ಆರೋಗ್ಯವು ನೆಟ್ಟಗಿದ್ದಂತೆ ಕಾಣಲಿಲ್ಲ. ಸ್ವಚ್ಛವಾದ ಗಾಳಿ ಬೆಳಕಿನ ಅಭಾವದಿಂದ ಹಾಯು ಇಷ್ಟರಲ್ಲಿಯೇ ವಿಚಾರದಲ್ಲಿದ್ದರೂ ಪ್ರಾಯ ಹೋದವಳ ಹಾಗೆ ಕಾಣುತಿದ್ದಳು.

ಸಿನೆಮಾ ನಟಿ ಜ್ಯೋತಿ

ಯುವತಿಯ ಓದುವುದನ್ನು ಮುಗಿಸಿ ಪತಿಯೊಡನೆ ರಾಜಕೀಯ ವಿಷಯ ಚರ್ಚೆ ಮಾಡಲಿಕ್ಕೆ ಪ್ರಾರಂಭಿಸಿದಳು. ಅವಳ ಪ್ರತಿಯೊಂದು ಪ್ರಶ್ನೆಗೂ ಪತಿಯು ಸರಿ ಸರಿ ಜವಾಬು ಕೊಡುತ್ತಾ ಇದ್ದನು. 'ನಾನು ಕೂಡ ಇದರಲ್ಲಿ ಭಾಗವಹಿಸಲೇ?' ಎಂದು ನನಗೆ ತೋರಿತು. ಆದರೆ ಅವಳು ಬೋಖಾ ಪದ್ಧತಿಯವಳಾದುದರಿಂದ ಪರಪುರುಷನಾದ ನಾನು ಅವರ ಸಂಭಾಷಣೆಯಲ್ಲಿ ಸೇರಿದರೆ ಏನೆಂದು ಎಣಿಸುವರೊ ಎಂದು ಸುಮ್ಮನಿದ್ದೆ.

ಲಕ್ನೋ ಸ್ಟೇಶನಿಂದ ಹೊರಟ ಬುರ್ಖಾವಾಲಿ ಸ್ತ್ರೀಗೂ ಈಗ ತನ್ನ ಪತಿಯೊಡನೆ ರಾಜಕೀಯ ವಿಷಯದಲ್ಲಿ ಚರ್ಚೆಮಾಡುವ ಸ್ತ್ರೀಗೂ ತುಲನೆ ಮಾಡಿದಲ್ಲಿ ಅಜಗಜಾಂತರವಿತ್ತು.

ತನ್ನ ಸಂಬಂಧಿಕರು ಹತ್ತಿರವಿದ್ದರೆಂದು ಅವಳು ಲಕ್ನೋ ಸ್ಟೇಶನಿನಲ್ಲಿ ಬೋಖಾ ಧರಿಸಿದ್ದಳು. ಗಾಡಿಯಲ್ಲಿದ್ದ ನಾವೆಲ್ಲರೂ ಗುರುತಿಲ್ಲದವರಾದ್ದರಿಂದ ಪರ್ದೆಯ ಅಗತ್ಯವಿರಲಿಲ್ಲ. ಮನೆಯಲ್ಲಿ ಇದ್ದವರು ಅವಳ ಸ್ವರ ಸರಿ ಕೇಳದ್ದಾರೋ ಇಲ್ಲವೊ? ಆದರೆ ಈಗ ಅವಳು ಚರ್ಚೆ ಮಾಡುವುದನ್ನು ನಾವೇ ಏನು ಇನ್ನೊಂದ ಗಾಡಿಯಲ್ಲಿದ್ದವರು ಕೂಡ ಕಿವಿಕೊಟ್ಟರೆ ಕೇಳಬಹುದಾಗಿತ್ತು. ಅಷ್ಟು ಗಟ್ಟಿಯಾಗಿ ಅವಳು ಮಾತಾಡುತಿದ್ದಳು.

ಸಮಾಜ ಸುಧಾರಕರ ವಾದಸ ವುದರಲ್ಲಿ ಅನ್ಯಾಯವಿಲ್ಲವೆಂದೆಣಿಸಿದೆ. ನಮ್ಮ ನೆರೆ ಹೆಂಗಸರೂ ಮಾರಲಿಕ್ಕೆ ಬಂದವರ ಕೂಡೆ ಬಳೆಯವನೊಡನೆ, ಬೀದಿ ತರಕಾರಿಯವನೊಡನೆ ಬೇಕಾದಷ್ಟು ಚರ್ಚೆಮಾಡುತ್ತಾರೆ. ಅದೇ ಸಮಯದಲ್ಲಿ ಮಾವ ಭಾವ ಅಥವಾ ಯಾರಾದರೂ ಸಂಬಂಧಿಕರು ಬಂದಲ್ಲಿ ಗೇಣುದ್ದ ಪರ್ದೆಯನ್ನು ಎಳೆದು ಬಿಡುತ್ತಾರೆ. ಪಕ್ಕನೆ ಬಂದವರು ಪಕ್ಕಿ ಕೇಳಿದಲ್ಲಿ ಮಾರಲಿಕ್ಕೆ ಬಂದವನನ್ನು ಖಾತರ ಜನರಿಂದ ಕೂಡುತ್ತಾರೆ. ಮನೆಯ ಈ ಶಾಂತಮೂರ್ತಿಗಳು ಅರ್ಧ ಹೊಟ್ಟೆ ಬಿಟ್ಟು ಸಾಯಂಕಾಲದ ಸಮಯದಲ್ಲಿ ಮೈದಾನಿನಲ್ಲಿ ಕಡಲೆ ಬಟಾಣಿ ಮಾರುವವನ ಸುತ್ತಲೂ ಗುಂಪು ಕೂಡುವುದನ್ನು ನೋಡಿದರೆ ಆಶ್ಚರ್ಯ ಗ್ಲಾನಿ ಮತ್ತು ದುಃಖವಾಗುತ್ತದೆ.

ಪುರುಷರು ಸ್ವಚ್ಛ ಹವೆಯಲ್ಲಿ ತಿರುಗಾಡುತ್ತಾ ಇದ್ದಾರೆ. ಸ್ತ್ರೀಯರಿಗೆ ಹಾಗಲ್ಲ. ಪರ್ದೆಕ್ಕೊಂದು ಸರಿಯಾದರೂ ಅವರು ಪ್ರಕೃತಿ ಸೌಂದರ್ಯ ನೋಡುತ್ತಾರೊ ಇಲ್ಲವೊ?

ಇಂದಿನ ನವಯುವಕ, ಯುವತಿಯರು ಮುಂದುವರಿಯದೆ ಇದ್ದಲ್ಲಿ ಸಮಾಜದವರು ಈ ಕೆಟ್ಟ ಪದ್ಧತಿಯನ್ನು ಬಿಡುವ ಹಾಗಿಲ್ಲ.

ಸ್ತ್ರೀಯರ ಸೌಂದರ್ಯವು ಪರ್ದೆಯಲ್ಲಿ ಇದ್ದರೆ ಮಾತ್ರ ಸ್ಥಾಯಿಯಾಗಿ ನಿಲ್ಲುತ್ತದೆಂದು ಕೆಲವರ ಮತ. ಉಚ್ಛ ಸೌಂದರ್ಯವು ಸ್ವಚ್ಛ ಗಾಳಿ ಬೆಳಕಿಲ್ಲದೆ ಅಲ್ಲಿಯೇ ಬಾಡಿ ಹೋಗುತ್ತದೆ. ಮುಖದ ಲವಲವಿಕೆ ಮತ್ತು ಮೈಯ ಕಾಂತಿ ಬತ್ತಿ ಹೋಗುತ್ತವೆ. * * *

ಶಾಹಜಹಾನಪುರ ಸ್ಟೇಶನ ಹತ್ತಿರ ಬರುತ್ತಲೇ ಆ ಯುವತಿಯು ಪುನಃ ಪರ್ದಾ ಧರಿಸಿದಳು. ಇಪ್ಪತ್ತನೆ ಶತಮಾನ ಯುವತಿ ತಿರುಗಿ ಒಂದು ಮೂಲೆಯಾದಳು.

ಈ ರೀತಿಯ ಸ್ವರ್ಗೀಯ ಆನಂದವೂ ಸ್ವಚ್ಛವಾದ ಗಾಳಿಯೂ ಅವಳಿಗೆ ಇನ್ನು ಯಾವಾಗ ಪ್ರಾಪ್ತವಾಗುವುದೊ? ಈಗ ಅವಳು ನಾಲ್ಕು ಗೋಡೆಗಳ ಮಧ್ಯದಲ್ಲಿ ಹೋಗಿ ಸೇರಿಕೊಳ್ಳಬೇಕು.

ನನ್ನ ಮನಸ್ಸು ಖಿನ್ನವಾಯಿತು. ರೈಲು ಹತ್ತಿದ ನಂತರದ ಘಟನೆಗಳು ಒಂದೊಂದಾಗಿ ನೆನಪಿಗೆ ಬಂದವು. ಖಾಕ್ಸಾರರ ರಾಜ್ಯ, ಸ್ತ್ರೀಯರ ಪರ್ದಾ ಪದ್ಧತಿ. ವಿದೇಶದ ಸ್ತ್ರೀಯರು ಯುದ್ಧಕ್ಷೇತ್ರದಲ್ಲಿ ಭಾಗವಹಿಸುತ್ತಾರಾದರೆ ಸ್ವಾತಂತ್ರ್ಯ ಕೇಳುವ ಭಾರತೀಯ ಸ್ತ್ರೀಯರು ಇನ್ನೂ ಪರ್ದೆಯಲ್ಲೇ ಇದ್ದಾರೆ. ಪರದೇಶಗಳಲ್ಲಿಯ ಭಗಿನಿಯರು ರಣಾಂಗಣದಲ್ಲಿ ಗಾಯಗೊಂಡವರ ಸೇವೆ ಮಾಡುತ್ತಾರಾದರೆ, ಇಲ್ಲಿಯ ನಮ್ಮ ಭಗಿನಿಯರಿಗೆ ಪರ್ದೆಯ ದೆಸೆಯಿಂದ ಪತಿಸೇವೆ ಕೂಡ ಮಾಡಲಿಕ್ಕೆ ಸಮಯ ಸಿಕ್ಕುವುದಿಲ್ಲ. ಇದು ಯಾವ ಶಾಸ್ತ್ರವೊ? ಇದರಿಂದ ನಾವು ಯಾವಾಗ ಪಾರಾಗಬಲ್ಲೆವೊ? (ಹಿಂದಿಯಿಂದ)

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ O. S 320/1940

ಇಸಾಕ್ ಸೋಜ ಬಿಯೋಗ್ ಸೋಜರ ಮಗ ಮಂಗಳೂರು ತಾಲೂಕು ಬಳ್ಕುಂಜೆ ಗ್ರಾಮದಲ್ಲಿ ಬದುಕುವ—ಬಳ್ಕುಂಜೆ ಪೋಸ್ಟು } ವಾದಿ

ಮತ್ತು

ರಾಮಯ್ಯ ಶೆಟ್ಟಿ ಮಿತ್ತ ಗುತ್ತು ವೀರು ಶೆಟ್ಟಿರ ಮಗ ರೈತ ಮಂಗಳೂರು ತಾಲ್ಲೂಕು ಬಳ್ಕುಂಜೆ ಗ್ರಾಮದ ಮಿತ್ತಗುತ್ತಿನಲ್ಲಿದ್ದು ಈಗ ಹಾಲಿ Chandra Vilas Hindu Restaurant Bombay Central Post No 8 Bombay ಎಂಬಲ್ಲಿರುವವ— } ಪ್ರತಿವಾದಿ

ಇವರೊಳಗೆ

ಪ್ರತಿವಾದಿಯು ವಾದಿಗೆ 1-6-'38ರಲ್ಲು ಬರೆದುಕೊಟ್ಟ ಹೋರಡಿಪದ ಬಾಬ್ತು ಬಡ್ಡಿ ಸಹ ರೂ. 227-7-5ಕ್ಕೆ ಧಾವಾ ಹೂಡಿ ಸದ್ರಿ ದಾವೆಯ ಪ್ರತಿವಾದಿಗೆ ನೋಟೀಸು ಬಗ್ಗೆ ತಾ. 27-11-40ಕ್ಕೆ ಇಟ್ಟಿರುತ್ತದೆ. ಪ್ರತಿವಾದಿಯು ಆ ದಿವಸ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಲಿಕ್ಕೆ ತಪ್ಪಿದರೆ ಪ್ರತಿವಾದಿಯನ್ನು ಗೈರ್ಹಾಜರಿ ಇಟ್ಟು ತೀರ್ಮಾನಿಸಲಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

ಕಾರ್ಕಳ, 9—11—'40 } I. S Rao, Advocate for Petitioner.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

ಅಭಿನ್ನವಾದ ಏಕ ರಾಷ್ಟ್ರವಿದು!

ರಾಜೇಂದ್ರ ಬಾಬುಗಳ ಸಂದೇಶ!



ಬಾಬು ರಾಜೇಂದ್ರ ಪ್ರಸಾದರು

ಹಿಂದುಸ್ಥಾನವು ತನ್ನ ಇತಿಹಾಸದಲ್ಲಿ ಈ ವರೆಗೆ ಎದೆಕೊಟ್ಟಿರಲಾರದಂತಹ ಒಂದು ಮಹಾ ವಿಪತ್ತನ್ನು ಎದುರಿಸುವ ಕಠಿನ ಕಾಲವು ಈಗ ಬಂದಿದೆ. ಹಿಂದು ಮುಸಲ್ಮಾನರೊಳಗೆ ಬ್ರಿಟಿಷ್ ಇಂಡಿಯಾ ಸಂಸ್ಥಾನಗಳೊಳಗೆ ಒಡಕನ್ನು ಉಂಟುಮಾಡಲು ಹವಣಿಕೆಯೂ ಈಗ ನಡೆದಿದೆ. ಈ ಪ್ರಯತ್ನವನ್ನು ವಿರೋಧಿಸುವದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿರುತ್ತದೆಎಂದು ಬಾಬು ರಾಜೇಂದ್ರಪ್ರಸಾದರು ಜಯಪುರದಲ್ಲಿ ಕೂಡಿದ ಒಂದು ಬೃಹತ್ಸಭೆಯಲ್ಲಿ ಆಡಿರುವರು.

ಕೇವಲ ಬೆರಳಿನಿಂದ ಎಣಿಸಲಿಕ್ಕೆ ಬರುವಷ್ಟು ಸ್ವಲ್ಪ ಮಂದಿ ಕೂಡಿಕೊಂಡು ೩೫ ಅಥವಾ ೪೦ ಕೋಟಿಯಷ್ಟು ಇರುವ ಒಂದು ಜನಾಂಗವನ್ನು ಹೇಗೆ ದಬ್ಬಾಳಿಸಿ ಗುಲಾಮರಂತೆ ಇಡಬಲ್ಲರು ಎಂಬುದು ತಿಳಿದುಕೊಳ್ಳಲಿಕ್ಕೆ ಆಗದ ವಿಷಯವಾಗಿದೆ.

ನಮ್ಮ ಈ ದೇಶವು ಎಲ್ಲಾ ಕಡೆಗಳಿಂದ ಪ್ರಾಕೃತಿಕ ರಕ್ಷಣೋಪಾಯಗಳಿಂದ ರಕ್ಷಿತವಾಗಿದೆ. ಇದರ ಉತ್ತರದಲ್ಲಿ ಪ್ರಪಂಚದಲ್ಲೇ ಅತ್ಯುನ್ನತವಾದ ಹಿಮಾಲಯ ಪರ್ವತಗಳೂ ಉಳಿದ ಮೂರು ಕಡೆಗಳಲ್ಲಿ ಮಹಾ ಸಾಗರಗಳೂ ಇರುತ್ತವೆ. ಅನೇಕ ಪ್ರತಿಭಾಶಾಲಿಗಳಾದ ಮಹಾತ್ಮರುಮವರು ಈ ದೇಶದಲ್ಲಿ ಎಲ್ಲಾ ಕಾಲಗಳಲ್ಲಿ ಜನ್ಮ ತಾಳಿರುತ್ತಾರೆ. ಆದರೂ ಕೂಡ ಈಗ ಈ ದೇಶವು ಗುಲಾಮವಾಗಿದೆ. ಯಾಕೆಂದರೆ ನಾವು ಒಟ್ಟಾಗಿ ಒಂದಾಗಿ ಕೆಲಸಮಾಡಲು ಇನ್ನೂ ಕಲಿತಿರುವುದಿಲ್ಲ. ಎಲ್ಲರೂ ಒಂದೊಂದು ದಾರಿಯನ್ನು ಹಿಡಿದು ಕೆಲಸ ಮಾಡುವರು.

ಏಕ ರಾಷ್ಟ್ರೀಯ ದೃಷ್ಟಿ

ಒಟ್ಟು ಹಿಂದುಸ್ಥಾನದ ಹಿತಾರ್ಥಗಳನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳುವುದಿಲ್ಲ. ಯಾವಾಗಲೂ ನಾವು ಒಂದು ಜಾತಿ ಅಥವಾ ಪ್ರಾಂತ್ಯದ ಅಭಿಮಾನವನ್ನು ಕಟ್ಟಿಕೊಂಡು ಇರುತ್ತೇವೆ. ರಾಜಪುತಾನದ ಇತಿಹಾಸವು ಇದಕ್ಕೆ ಸಾಕ್ಷಿಯಾಗಿದೆ. ತಮ್ಮ ತಮ್ಮ ಮನೆತನದ ಮರ್ಯಾದೆಯನ್ನು ಕಾಪಾಡಲಿಕ್ಕೆ ಪ್ರತಿಯೊಬ್ಬರು ಅನುಪಮ ಸಾಹಸವನ್ನು ತೋರಿಸಿದ್ದಾರೆ. ಆದರೆ ರಾಜಪುತಾನದ ಅರಸರು ಪರಸ್ಪರ ಸಹಾಯಕ್ಕೆ ಒಬ್ಬರೂ ಹೋಗಲಿಲ್ಲ. ಆದ್ದರಿಂದ ಒಬ್ಬೊಬ್ಬರಾಗಿ ಎಲ್ಲ ರಾಜಪುತ್ರರು ವಿದೇಶಿಯರ ಆಕ್ರಮಣಗಳಿಗೆ ಬಲಿಯಾಗಬೇಕಾಯಿತು. ಮತ್ತೆ ಇಡೀ ಹಿಂದುಸ್ಥಾನವು ಪರತಂತ್ರವಾಯಿತು.

ಬ್ರಿಟಿಷರು ಹಿಂದುಸ್ಥಾನಕ್ಕೆ ಬಂದ ಮೇಲೆ ಬ್ರಿಟಿಷ ಇಂಡಿಯದ ಜನರಲ್ಲಿ ಒಂದು ಬಗೆಯ ಐಕ್ಯವು ಕಂಡುಬಂದಿದೆ. ಆದರೆ ಹಿಂದುಸ್ಥಾನವೆಂದರೆ ಬ್ರಿಟಿಷ ಇಂಡಿಯ ಮಾತ್ರ ಆಗಿರುವುದಿಲ್ಲ. ಅದರಲ್ಲಿ ದೇಶೀ ಸಂಸ್ಥಾನಗಳೂ ಸೇರಿವೆ. ಇವೆರಡೂ ಒಂದಾಗಿ ಹಿಂದೂದೇಶವಾಗಿದೆ. ಹಿಂದುಸ್ಥಾನವನ್ನು ಯಾವ ರೀತಿಯಿಂದಲೂ ವಿಭಾಗಿಸಲು ಸಾಧ್ಯವಿಲ್ಲ." ಹೀಗೆಂದರು ರಾಜೇಂದ್ರರು.

ಭಾರತಕ್ಕೆ

ನ್ಯಾಯವನ್ನು ಕೊಡಬೇಕು

ಚರ್ಚಿಲರಿಗೆ ಬ್ರಿಟಿಷ್ ಲೇಖಕರ ಸೂಚನೆ

ಹಗೆತನ ಸಲ್ಲದು; ಗೆಳೆತನ ಬೇಕು.

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಅದರ ಶಾಶ್ವತವಾದ ಸ್ನೇಹವನ್ನು ಸಂಪಾದಿಸಲಿಕ್ಕೆ ಬ್ರಿಟನಿಗೆ ಇದಕ್ಕಿಂತ ಅನುಕೂಲವಾದ ಬೇರೆ ಸಮಯವಿರುವುದಿಲ್ಲ. ಸ್ನೇಹಪೂರ್ಣವಾದ ಅಂತಹ ಒಂದು ಒಡಂಬಡಿಕೆಯು ಈಗ ಆಗದಿದ್ದರೆ, ಇದೇ ಸಮಯದಿಂದ ಬ್ರಿಟನಿನೊಡನೆ ಹಿಂದುಸ್ಥಾನದ ಶಾಶ್ವತ ಹಗೆತನವೂ ಪ್ರಾರಂಭವಾಗಬಹುದು. ನೈತಿಕ ವಿಜಯ ಮೂಲಕವಾಗಿ ಅಲ್ಲದೆ ಬೇರೆ ಉಪಾಯಗಳಿಂದ ನಾವು ಈ ಯುದ್ಧದಲ್ಲಿ ಕೀರ್ತಿಪಾತ್ರರಾಗಲಾರೆವು. ಹಿಂದುಸ್ಥಾನದ ಜನರು ನಮ್ಮೊಡನೆ ಯುದ್ಧರಂಗದಲ್ಲಿ ಹೋರಾಡಲು ಯೋಗ್ಯರೆಂದಾದರೆ, ಅವರು ನಮ್ಮ ವಿಶ್ವಾಸಕ್ಕೂ ಪಾತ್ರರಾಗಿರುವರು ಎಂದು ಬ್ರಿಟನಿನ ಸುಪ್ರಸಿದ್ಧ ಗ್ರಂಥಕಾರರಾದ ಮಿ. ಎಡ್ವರ್ಡ್ ಥೊಮ್ಸನ್ನರವರು ತಾವು ಈಚೆಗೆ ಬರೆದ ಒಂದು ಗ್ರಂಥದಲ್ಲಿ ಹೇಳಿರುವರು.

ಸರಕಾರಕ್ಕೆ ಪ್ರಯೋಜನವಿಲ್ಲ

ಈಗ ಹಿಂದುಸ್ಥಾನದಲ್ಲಿ ವೈಸರಾಗಿರುವ ಲೋರ್ಡ್ ಲಿನ್‌ಲಿತ್‌ಗೋರವರೂ, ಕಾರ್ಯಸಚಿವರಾದ ಎಮೆರಿಯವರೂ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡುವ ಹಾದಿಯಲ್ಲಿ ಬಹಳ ಮುಂದರಿಯಲು ಆತುರರಾಗಿದ್ದರೆಂದು ಬಹಳ ಜನರು ನಂಬಿದ್ದಾರೆ. ಯುದ್ಧಾನಂತರ ಹಿಂದುಸ್ಥಾನದ ಭವಿಷ್ಯವೇನು ಎಂಬುದನ್ನು ಸ್ಪಷ್ಟವಾಗಿ ಹೇಳದೆ, ದೇಶಭಕ್ತಿ ಮತ್ತು ತ್ಯಾಗ ಬುದ್ಧಿಗಾಗಿ ಹೆಸರುಪಡೆದ ಹಿಂದುಸ್ಥಾನದ ಮುಖಂಡರು ವಿಸ್ತಾರಗೊಳಿಸಿದ ವೈಸರಾಯರ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಸೇರಬೇಕೆಂದು ಹೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಅವರು ಆ ಮಂಡಳಿಯನ್ನು ಸೇರುವದಾದರೂ ಹೇಗೆ? ಜಾತಿವಾದಿಗಳು ಸ್ವಾರ್ಥಸಾಧನೆಗಾಗಿ ಈ ಮಂಡಳಿಯನ್ನು ಸೇರಲು ಒಪ್ಪಿಕೊಂಡಿದ್ದರೆ ಪ್ರಯೋಜನವಿಲ್ಲ. ಪದವಿಗಳ ಆಸೆಯಿಂದ ಇರುವವರು ಹಿಂದುಸ್ಥಾನದಲ್ಲಿ ಅನೇಕ ಮಂದಿ ದೊರೆಯಬಹುದು. ಯಾವಾಗ ಏನು ಮಾಡಲಿಕ್ಕಾದರೂ ಸಿದ್ಧರಿರುವವರನ್ನು ಕಟ್ಟಿಕೊಂಡು ಬ್ರಿಟಿಷ್ ಸರಕಾರಕ್ಕೆ ಯಾವ ಲಾಭವೂ ಆಗದು.

ಸಾಮ್ರಾಜ್ಯಾಂತರ್ಗತ ಸ್ವರಾಜ್ಯ

ಹಿಂದುಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸನ್ನು ಕೊಡುವುದೇ ತಮ್ಮ ಗುರಿಯಾಗಿದೆ ಎಂದು ಸರಕಾರವು ಹೇಳುತ್ತದೆ. ಯುದ್ಧ ಮುಗಿದ ನಂತರ ಸ್ವತಂತ್ರವಾಗಲೇ ಬೇಕು. ಹಿಂದುಸ್ಥಾನದ ಜನರ ಸ್ವಾತಂತ್ರ್ಯವನ್ನು ನಮ್ಮಿಂದ ಪಡೆದರೆಂದಾಗುವುದು ಒಳ್ಳೆಯದಾಗಿದೆ. ಅದು 'ನಾವು ಕೊಟ್ಟೆವೆಂದು' ಈಗಲೇ ಹೇಳಿಬಿಡುವುದರಿಂದ ಬಹಳ ಲಾಭವಿದೆ. ಹಿಂದುಸ್ಥಾನಕ್ಕೆ ಡೊಮಿನಿಯನ್ ಸ್ಟೇಟಸನ್ನು ಕೊಡುವುದರಿಂದ ಬಹಳ ಕಷ್ಟನಷ್ಟಗಳು ಬರುವ ಭಯವಿರಬಹುದು ಆದರೆ ಇದಕ್ಕೂ ಹೆಚ್ಚಿಗೆ ಕಷ್ಟನಷ್ಟಗಳನ್ನು ಉಂಟುಮಾಡದ ಬೇರೆ ಯಾವ ಉಪಾಯವು ನಮಗಿದೆ

ಪ್ರಧಾನ ಮಂತ್ರಿಯಾದ ಮಿ. ಚರ್ಚಿಲರು ಬ್ರಿಟಿಷ ಸಾಮ್ರಾಜ್ಯದ ಪುನನಿರ್ಮಾಣಕರು ಎಂದು ನನ್ನ ಅಭಿಪ್ರಾಯವಿದೆ. ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟೆವೆಂದು ಹೇಳುವುದರ ಮೂಲಕ ಯುದ್ಧದಲ್ಲಿ ಹಿಂದೀಯರ ಹಾರ್ದಿಕ ಸಹಾಯ ಸಹಕಾರಗಳನ್ನು ಪಡೆಯುವುದರಿಂದ ನಾವು ನೈತಿಕ ವಿಜಯವನ್ನು ಸಂಪಾದಿಸುವೆವು. ಅಂತಹ ವಿಜಯವೇ ನಮಗೆ ಅಪೇಕ್ಷಣೀಯವಾಗಿದೆ. ಮತ್ತು ಅಂತಹ ವಿಜಯ ಸಂಪಾದನೆಗಾಗಿಯೇ ಚರ್ಚಿಲ ಸರಕಾರವು ಪ್ರಯತ್ನಿಸಬೇಕು. ಎಂದು ಹೇಳಿ ಮಿ. ಥೊಮ್ಸನ್ನರು ಹಿಂದುಸ್ಥಾನಕ್ಕೆ ನ್ಯಾಯ ಮಾಡಬೇಕೆಂದು ಮಿ. ಚರ್ಚಿಲ್ಲರಿಗೆ ವಿನಂತಿ ಮಾಡಿಕೊಂಡಿದ್ದಾರೆ.

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ ಎಂಡ್ ಡ್ರಗ್ಗಿಸ್ಟ್

ರಾಯಪೇಟೆ, ಮದ್ರಾಸು.

THE

Jupiter General Insurance Co Ltd.,

LIFE DEPARTMENT

AGENCY applications are invited from young energetic and influential men from South Kanara and Coorg.

Apply by post:—

Chief Agent,

MANGALORE.



ಜಿಲ್ಲಾ ಸಮಾಚಾರ



ಮಂಗಳೂರು

ಜಿಲ್ಲಾ ಬೋರ್ಡು ಸಭೆ:— ಕಳೆದ ಸೋಮವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಪ್ರೆಸಿಡೆಂಟ್ ಶ್ರೀ ಕೆ. ವಿಟ್ಠಲಶೆಟ್ರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಬಿ. ವೈಕುಂಠ ಬಾಳಿಗರ ಸೂಚನೆಯಂತೆ ಸರ್ವಾನುಮತದಿಂದ ೧೫ ನಿಮಿಷಗಳ ವರೆಗೆ ಸಭೆ ಮುಂದುವರಿಯಲ್ಪಟ್ಟು ಆ ಮೇಲೆ ಕಾರ್ಯಕ್ರಮವು ಸಾಗಿತು.

ವರ್ಕ್ಸ್ ಎಂಡ್ ಕಮ್ಯುನಿಕೇಶನ್ ಕಮಿಟಿ ಮೆಂಬರರಲ್ಲದವರಿಂದ ಸದಸ್ಯರಾಗಿ ಶ್ರೀಗಳಾದ ಡಾ। ಯು. ಪಿ. ಮಲ್ಯ ಮತ್ತು ಕೆ. ಆರ್. ಕಾರಂತರು ಆರಿಸಲ್ಪಟ್ಟರು. ಜಿಲ್ಲೆಯಲ್ಲಿ ೧೮ ಸ್ಥಳಗಳ ಪೈಕಿ ರೂರಲ್ ಡಿಸ್ಪೆನ್ಸರಿಗಳನ್ನು ಆಗತ್ಯವೆಂದು ಕಂಡುಬಂದಲ್ಲಿ ತೆರೆಯಲು ಮುಂದಿನ ವರ್ಷದ ಬಜೆಟಿನಲ್ಲಿ ಏಡೆಮಾಡುವಂತೆ ನಿರ್ಣಯಿಸಲಾಯಿತು. ಮೂಡಬಿದ್ರಿ ಬೋ. ಎ. ಶಾಲೆಗೆ ಸಾರ್ವಜನಿಕರು ಕಟ್ಟಿಸಿಕೊಟ್ಟ ಕಟ್ಟಡ, ಮೂಲ್ಕಿ ಆಸ್ಪತ್ರೆಗೆ ದಾನವಾಗಿ ಬಂದ ಔಷಧಿ, ಶಿರ್ವ ಆಸ್ಪತ್ರೆಗೆ ಇಬ್ಬರು ಮಹನೀಯರಿಂದ ಉಚಿತವಾಗಿ ಬಂದ ಓಪರೇಶನ್ ಟೇಬಲ್ ಮತ್ತು ಬೆಂಚುಗಳನ್ನು ವಂದನಾರ್ಪಣಪೂರ್ವಕ ಸ್ವೀಕರಿಸಲಾಯಿತು. ಸೂಲಗಿತ್ತಿಯನ್ನು ಒಂದು ಕಡೆಯಲ್ಲಿ ಕೆಲಸವಿಲ್ಲವೆಂಬ ಕಾರಣ ಬೇರೊಂದು ಕಡೆಗೆ ವರ್ಗಾಯಿಸುವ ಸೂಚನೆಗೆ ಡಾ। ಪಿ. ಪ. ಆಚಾರ್ಯರು ಆಕ್ಷೇಪವೆತ್ತಿ ಚರ್ಚಿಸಿದುದರಿಂದ ಅದನ್ನು ಮುಂದಕ್ಕೆ ಹಾಕಿಸಲು ಇಟ್ಟಿತು. ಹಲವು ವರ್ಗಮೆಂಟ್ ಅರ್ಜಿಗಳು ರಿಕಾರ್ಡು ಮಾಡಲ್ಪಟ್ಟವು.

ನಗರಸಭೆ:— ನಗರಸಭೆಯು ತಾ. ೧೩ ರಂದು ಸಂಜೆಗೆ [illegible] ಶ್ರೀ ವೆಂಕಟರಾಯ ನಾಳಗರ ಅಧ್ಯಕ್ಷತೆಯಲ್ಲಿ ಸೇರಿತು. [illegible] ಸಭೆಯನ್ನು ಮುಂದುವರಿಸಬೇಕಾಗಿ ಸೂಚಿಸಿದರು. ಡಾ। ಅಚಪ್ಪ [illegible] ಕಾರಣವಾಗಿ ಯಾಕೆ ಮುಂದುವರಿಸಬೇಕೆಂಬುದನ್ನು ಕೇಳಿ ಠರಾವನ್ನು ಅನುಮೋದಿಸಿದರು. ಶ್ರೀ [illegible] ಮತ್ತು ಶ್ರೀ ಸಿ. ಎಲ್. ಲೋಬೋ ಅವರು ಅದನ್ನು ಖಂಡಿಸಿದರು. ಡಾ। ಯು. ಪಿ. ಮಲ್ಯರು ಶ್ರೀ ಶ್ರೀಷ್ಣರಿಗೆ ಉತ್ತರವಿತ್ತರು. ಶ್ರೀ ಲಚೇರಿಕರರು ಠರಾವನ್ನು ಸಮರ್ಥಿಸಿದರು. ಕೊನೆಗೆ ಠರಾವು ಮಂಜೂರಾಯಿತು. ಕಳೆದ ಬಾರಿಯ ಸಭೆಯೂ ಹೀಗೆ ಮುಂದುವರಿಸಲಾಗಿತ್ತು.

ದೇವಾಲಯ ಪ್ರವೇಶ:— ಶ್ರೀ ಕಿಲ್ಲೆಯವರ ಭಾಷಣ—ಸ್ಥಳೀಯ ವೈ. ಯಂ. ಸಿ. ಯುವರ ನೇತೃತ್ವದಲ್ಲಿ ಕಳೆದ ಆದಿತ್ಯವಾರ ಶ್ರೀ ಎ. ಸದಾನಂದಪ್ಪ, ಜಿಲ್ಲಾ ಲೇಬರ್ ಆಫೀಸರ್ ಇವರ ಅಧ್ಯಕ್ಷತೆಯಿಂದ 'ಬುಧನಿವಾಸ'ದಲ್ಲಿ ಸಭೆಯೊಂದು ಜರಗಿ, ಅಲ್ಲಿ ಶ್ರೀ ನಾರಾಯಣ ಕಿಲ್ಲೆಯವರು 'ದೇವಾಲಯ ಪ್ರವೇಶ'ದ ಕುರಿತು ಒಂದು ವಿಚಾರಾತ್ಮಕ ಭಾಷಣವನ್ನಿತ್ತರು.

ಹರಿಜನ ಸೇವಕಸಂಘ:— ದ. ಕ. ಜಿಲ್ಲಾ ಹರಿಜನ ಸೇವಕಸಂಘದ ಮಹಾಸಭೆಯು ತಾ. ೧೭—೧೧—೪೦ನೇ ಆದಿತ್ಯವಾರ ಸಾಯಂಕಾಲ ಘಂಟೆ ೪ಕ್ಕೆ ಅತ್ತಾವರದಲ್ಲಿ ಜರಗಲಿದೆ. ಎಲ್ಲರೂ ಬಂದು ಸಹಕರಿಸಬೇಕಾಗಿ ವಿನಂತಿಯೆಂದು ಅಧ್ಯಕ್ಷರಾದ ಡಾ। ಎಚ್. ವಿ. ಆಡಪ್ಪರು ತಿಳಿಸುತ್ತಾರೆ.

ಪ್ರೆಸ್ ಕೆಲಸಗಾರರ ಸಂಘ:— ದ. ಕ. ಜಿಲ್ಲಾ ಪ್ರೆಸ್‌ಕೆಲಸಗಾರರ ತೃತೀಯ ವಾರ್ಷಿಕೋತ್ಸವವು ಸಂಘದ ಅಧ್ಯಕ್ಷರಾದ ಶ್ರೀ. ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ, ತಾ. ೧೦ನೇ ಆದಿತ್ಯವಾರ ಜರಗಿತು. ಫೋಟೋ, ಲಘು ಉಪಹಾರಾ ನಂತರ ಸಭಾರಂಭವಾಗಿ ಶ್ರೀಗಳಾದ ಯಂ. ಆರ್. ಶಾಸ್ತ್ರಿ, ಎಸ್. ಎನ್. ಹೊಳ್ಳ ಇವರು ಭಾಷಣವಿತ್ತ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ಪ್ರೆಸ್ ಕೆಲಸಗಾರರಿಗೆ ಖಾಯಮಾಗಿ ಕೆಲಸವು ದೊರಕುವಂತೆ (ಎಂದರೆ ಪರ್ಮನೆನ್ಸಿ ಆಫ್ ಸರ್ವಿಸ್) ಮಾಡುವುದು ಕೆಲಸಗಾರರಿಗೆ ಪ್ರಾವಿಡೆಂಟ್ ಫಂಡಿನ ಅನುಕೂಲತೆಯನ್ನು ಸಂಪಾದಿಸಲು ಪ್ರಯತ್ನಿಸುವುದು ಮತ್ತು ಕೆಲಸಗಾರರೇ ತಮ್ಮ ಬಂಧುಗಳಿಗೆ ಸಹಾಯಕೊಡಲು ಅನುಕೂಲವಾಗುವಂತೆ ಪ್ರತ್ಯೇಕ ನಿಧಿಯನ್ನು ಏರ್ಪಡಿಸಲು ಯತ್ನಿಸುವುದು ಈ ಮೂರು ಕಾರ್ಯಕ್ರಮಗಳನ್ನು ಈ ವರ್ಷದ ತಮ್ಮ ಅಧ್ಯಕ್ಷತೆಯ ಕಾಲದಲ್ಲಿ ಸಾಧಿಸಲೆತ್ನಿಸುವುದಾಗಿ ಸೂಚಿಸಿದರು.

ವಿದ್ಯಾರ್ಥಿಗಳ ಸಂಘ. ಮಂಗಳೂರು ವಿದ್ಯಾರ್ಥಿಗಳ ಸಂಘದ ಮಹಾಸಭೆಯು ಪ್ರೊ. ವಿ. ಜೆ. ಜೋಸೇಫರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆದು ಶ್ರೀ ಕೆ. ಆರ್. ಕಾರಂತ್ ಎಂ. ಎಲ್. ಎ. ಅವರು ಅಧ್ಯಕ್ಷರಾಗಿಯೂ ಶ್ರೀಗಳಾದ ಬಿ. ಎಸ್. ಭಾಸ್ಕರ ರೈ ಮತ್ತು ಬಿ. ಜೆ. ಸುವರ್ಣ ಇವರುಗಳು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಎ. ಸಾಧವ ನಾರಾಯಣ ನೆಟ್ಕರ್, ಶ್ರೀಮತಿ ಕಸ್ತೂರಿದೇವಿ ಇವರುಗಳು ಕಾರ್ಯದರ್ಶಿಗಳಾಗಿಯೂ ಪ್ರೊ. ವಿ. ಜೆ. ಜೋಸೇಫರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು.

ಮಂಗಳೂರು ವಿದ್ಯಾರ್ಥಿ ಸಂಘದ ಕಾರ್ಯಕಾರಿ ಮಂಡಳಿಯು ಅಧ್ಯಕ್ಷರಾದ ಶ್ರೀ ಕೆ. ಆರ್. ಕಾರಂತ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಕಾಂಗ್ರೆಸ್ ಆಫೀಸಿನಲ್ಲಿ ಜರುಗಿ ಹಲವಾರು ಕಾರ್ಯಕ್ರಮಗಳನ್ನೂ ರಚನಾತ್ಮಕ ಕಾರ್ಯಗಳನ್ನೂ ಸಾಧಿಸಲು ಯೋಚಿಸಿತು.

ಸುಬ್ರಹ್ಮಣ್ಯ

ಪಂಚಾಯತ ಬೋರ್ಡು ಶಾಲೆ:— ಇಲ್ಲಿಯ ಪಂಚಾಯತ ಬೋರ್ಡು ಶಾಲೆಯಲ್ಲಿ ಪ್ರಕೃತ ೧೫೦ಕ್ಕಿಂತ ಮೇಲ್ಪಟ್ಟು ಮಕ್ಕಳು ವಿದ್ಯಾಭ್ಯಾಸವನ್ನು ಹೊಂದುತಿದ್ದು, ಮೂರು ಮಂದಿ ಉಪಾಧ್ಯಾಯರು ಶಿಕ್ಷಣವನ್ನೀಯುತ್ತಿರುವರು. ಆದರೆ ಇಲ್ಲಿಗೆ ಸುಮಾರು ೧೦ ಮೈಲುಗಳ ಅಂತರದಲ್ಲೆಲ್ಲಿಯೂ "ಹಯರ್ ಎಲಿಮೆಂಟರಿ ಶಾಲೆ"ಗಳಿಲ್ಲದಿರುವುದರಿಂದ, ಈ ಶಾಲೆಯಲ್ಲಿ ಶಿಕ್ಷಣಹೊಂದಿದ ಮಕ್ಕಳೆಲ್ಲಾ ಮುಂದರಿಸಿ ಕಲಿಯುವರೆ ಅನುಕೂಲವಿಲ್ಲದೆ, ತಮ್ಮ ವಿದ್ಯಾಭ್ಯಾಸವನ್ನು ಇಷ್ಟರಲ್ಲೇ ಅಂತ್ಯಗೊಳಿಸಬೇಕಾಗಿರುವುದು ಅತಿ ದುಃಖಾಸ್ಪದ ಸಂಗತಿಯಾಗಿದೆ. ಈ ವಿಷಯವು ಶಾಲೆಯನ್ನು ಆಗಾಗ್ಗೆ ಸಂದರ್ಶಿಸಿ ಬರೆದ ಅನೇಕ ಮಹನೀಯರ ರಿಮಾರ್ಕುಗಳಿಂದ ಮಂದಟ್ಟಾಗುವುದು. ಆದ ಪ್ರಯುಕ್ತ ಈ ಕೊರತೆಯನ್ನು ಹೋಗಲಾಡಿಸುವರೆ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಶಾಲೆಯನ್ನು ಪಂಚಾಯತ ಬೋರ್ಡಿನಿಂದ ತಮ್ಮ ಅಧೀನತೆಗೆ ತೆಗೆದುಕೊಂಡು ಶಾಲೆಯನ್ನು ಹಯರ್ ಎಲಿಮೆಂಟರಿಯಾಗಿ ಮಾಡಿ, ವಿದ್ಯೆಯಲ್ಲಿ ಬಹಳ ಹಿಂದುಳಿದ ಈ ಮಲೆನಾಡ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನೀಯಬೇಕೆಂದು ನಂಬುವ

ಓರ್ವ ಗ್ರಾಮಸ್ಥ

ಕಾರ್ಕಳ

ಹಿಂದೀ ಪರೀಕ್ಷೆಗಳು: ದಕ್ಷಿಣ ಭಾರತ ಹಿಂದೀ ಪ್ರಚಾರಸಭೆಯ ಇದೇ ನವಂಬರ ತಿಂಗಳ ಪರೀಕ್ಷೆಗಳಲ್ಲಿ ಪ್ರಾಥಮಿಕ ೭ ಮಧ್ಯಮ ೨ ರಾಷ್ಟ್ರಭಾಷಾ ೩ ಮಾತ್ರ ಅಲ್ಲದೆ ಪ್ರವೇಶಿಕ ೧೩ ಮತ್ತು ವಿಶಾರದಕ್ಕೆ ೧ ಒಟ್ಟಿಗೆ ಈ ಕೇಂದ್ರದಲ್ಲಿ ೨೬ ಪರೀಕ್ಷಾರ್ಥಿಗಳಿದ್ದರು. ಶ್ರೀ [illegible] ಪರೀಕ್ಷೆಗಳ ಬಗ್ಗೆ ಹೊಸ ಕ್ಲಾಸುಗಳು ಆರಂಭವಾಗಿವೆ ಎಂದು ಹಿಂದೀ ಪಾಠಕರಿಗೆ ಈ ತಿಂಗಳ ಆರಂಭದ ತನಕ ಸೇರ ಬಹುದೆಂದು ಸ್ಥಳೀಯ ಹಿಂದೀ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸಶೆಣೈಯವರು ತಿಳಿಸುತ್ತಾರೆ.

ಜಲಮುಹೂರ್ತ ಧನಸಹಾಯ: ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಗೆ ಒಂದು ಹೊಸ ಕಟ್ಟಡವನ್ನು ಕಟ್ಟಿಸುವದಕ್ಕೋಸ್ಕರ ಜಲಮುಹೂರ್ತ ಸಮಾರಂಭವು ತಾ. ೭—೧೧—೪೦ರ ದಿನ ಬೆಳಗ್ಗೆ ಪಾಪ್ತೋಕ್ತ ನಡೆಯಿತು. ಈ ಕಟ್ಟಡಕ್ಕೆ ಇಲ್ಲಿಯ ಪ್ರಮುಖ ಸಾಹುಕಾರ ಶ್ರೀ ಬಿಜಾಳ ಗೋವರ್ಧನ ಪೈ ವೆಂಕಟೆಶೆಣೈಯವರು ಎರಡು ಸಾವಿರ ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು. ಕಟ್ಟಡಕ್ಕೆ ಸುಮಾರು ಎಂಟುಸಾವಿರ ರೂಪಾಯಿಗಳು ಬೇಕಾಗಬಹುದೆಂದು ಅಂದಾಜಾಗಿದೆ. ಶ್ರೀ ಶೆಣೈಯವರನ್ನು ಅನುಕರಿಸಿ ಇತರ ಉದಾರ ಶ್ರೀಮಂತರೂ ಧನಸಹಾಯಮಾಡಿ ಈ ಕಾರ್ಯವನ್ನು ಸಫಲಮಾಡಬೇಕಾಗಿ ಕೋರಲಾಗಿದೆ.

ಸಭೆ ಭಾಷಣಗಳು: ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ. ೭—೧೧—೪೦ರ ದಿನ ಶ್ರೀ ಯಂ. ಸರ್ವೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಮತಿ ಸಿಸಿಲಾ ಮಿನೆಜಸ್ ಅವರು ಮೂರನೆ ದರ್ಜೆಗೆ ಉಕ್ತಲೇಖನದ ಮಾದರಿ ಪಾಠವನ್ನೂ ಶ್ರೀ ಯು. ರಾಮಚಂದ್ರ ಭಟ್ಟರು ಉಕ್ತಲೇಖನ ಮತ್ತು ಬರಹದ ಕುರಿತು ಭಾಷಣವನ್ನೂ ಕೊಟ್ಟರು. ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ ಒ. ವಿ. ರಮಣರವರು ರಿಜಿಸ್ಟರುಗಳನ್ನು ಇಡುವ ಕುರಿತು ಮಾತನಾಡಿದರು.

ಉಡುಪಿ

ಜಿಲ್ಲಾ ಮಹಿಳೆಯರ ಮಹಾ ಅಧಿವೇಶನ ಭಗಿನೀ ಸಮಾಜದ ಸ್ಥಾಪನೆ

ಮಂಗಳೂರಿನ ಭಗಿನೀ ಸಮಾಜದ ಮುಂದಾಳುಗಳು ಕೆಲವ ಸಾಹಸದಿಂದ ಉಡುಪಿಯಲ್ಲಿ ಇದೇ ತಾ. ೪ರಲ್ಲಿ ಭಗಿನೀ ಸಮಾಜವೊಂದು ಸ್ಥಾಪಿಸಲ್ಪಟ್ಟಿತು. ಮಂಗಳೂರಿನ ಭಗಿನೀ ಸಮಾಜವು ಬಡ ಮಕ್ಕಳಿಗೆ ಮಾಡುವ ಸಹಾಯದ ಕುರಿತು ಪಂಡಿತ ರಮಾಬಾಯಿಯವರು ತಿಳಿಸಿದರು. ಜಿಲ್ಲಾ ಮಹಿಳೆಯರ ಮಹಾ ಅಧಿವೇಶನವನ್ನು ಇದೇ ತಾ. ೩೦ಕ್ಕೆ ಉಡುಪಿಯಲ್ಲಿ ನಡೆಸಬೇಕಾಗಿ ನಿರ್ಣಯವಾದ ಬಳಿಕ ಸ್ಥಳೀಯ ಭಗಿನೀ ಸಮಾಜದ ಕಾರ್ಯಕಾರೀ ಮಂಡಳಿಯ ಚುನಾವಣೆಯು ನಡೆದು ಮಿಸೆಸ್ ರೋಸಿ ರೇಗೆ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕಾರೀ ಮಂಡಳಿಯು ಏರ್ಪಟ್ಟಿತು.

ಭಂಡಸಾಲೆ. ಉಡುಪಿ ಕೃಷಿಕರ ಸಹಕಾರಿ ಸಂಘದ ಉಡುಪಿ ಶಾಖೆಯವರು, [illegible] ಸಬ್ ರಿಜಿಸ್ಟ್ರಾರ್ ಕೋರ್ಟಿನ ಎದುರು ಭಂಡಸಾಲೆಯನ್ನು ತೆರೆದಿದ್ದಾರೆ. ರೈತರ ಯಾವತ್ತು ಉತ್ಪತ್ತಿಗಳನ್ನು ಉತ್ತಮ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಿದ್ದಾರೆ.

7 o'clock

7 ಓ'ಕ್ಲೋಕ್
ಮನ್ನಣೆ ಪಡೆದ ರೇಜರ್ ಸೆಟ್

7 ಓ ಕ್ಲೋಕ್ ಸೆಟ್ಟಿನ ಕ್ರಯವು ಹೇಗೆ ಕಡಿಮೆಯೋ ಅದರಿಂದ ಮಾಡಿದ ಕ್ಷೌರವು ಅದಕ್ಕಿಂತಲೂ ಉತ್ತಮ. ಈ 7 ಓ ಕ್ಲೋಕ್ ಸೆಟ್ಟಿನಲ್ಲಿ ಒಂದು ಅಚ್ಚುಕಟ್ಟಾದ ರೇಜರು ಒಂದು ಪೆಟ್ಟಿಗೆಯ ಟ್ಯೂಬಿನ್ನು ಎರಡು ಹೆಸರಿಂತ ನಡುವೆ, ಸಿಗಿಯಲ್ಪಟ್ಟ ಇಕ್ಕಡೆಗಳಲ್ಲಿಯೂ ಹರಿತವಿರುವ ಎರಡು 7 ಓ'ಕ್ಲೋಕ್ ಬ್ಲೇಡುಗಳು. ರೇಜರಿಗೆ ಹೊಸ ಮಾದರಿಯ ರಕ್ಷಾ ಕವಚವಿದ್ದು ಇದರ ಹಿಡಿಯು ಜಾರದಂತೆ ಮಾಡಲ್ಪಟ್ಟಿದೆ. ಸಿಗಿಯಲ್ಪಟ್ಟ ಬ್ಲೇಡುಗಳು ಅತೀ ತ್ವರೆಯಲ್ಲಿ ಅನೇಕ ನುಣುಪಾದನುಣುಕ್ಷೌರವನ್ನುಂಟುಮಾಡುವುದು.

14 ಅಣೆ.



ಜರ್ಮನಿ ರಶ್ಯಗಳೊಳಗೆ ಚಟುವಟಿಕೆಗಳು

★ ಯುದ್ಧ ವಾರ್ತೆ



ರುಮೇನಿಯದಲ್ಲಿ ಭಯಂಕರ ಭೂಕಂಪ!

ಇಟಾಲಿಯನ್ ಬಂದರದ ಮೇಲೆ ದಾಳಿ!

ಮೇಕ್ಸಿಕೋದಲ್ಲಿ ಕ್ರಾಂತಿಯೆ?

ಚೀನೀ ಸೈನ್ಯಗಳ ಮುನ್ನಡೆ ಬಂದರುಗಳನ್ನು ಕೊಡುವುದಿಲ್ಲ

ರಶ್ಯಾ-ಜರ್ಮನ್ ಚಟುವಟಿಕೆಗಳು

ಈ ವಾರದ ಯೂರೋಪಿನ ವಿಶೇಷದ ಒಂದು ಸುದ್ದಿಯೆಂದರೆ, ರಶ್ಯದ ವಿದೇಶಾಂಗ ಮಂತ್ರಿ ಮೊಲೊಟೋವನು, ಜರ್ಮನಿಯ ಮುಖ್ಯ ಪಟ್ಟಣವಾದ ಬರ್ಲಿನಿಗೆ ಧಾವಿಸಿ ಹೋಗಿರುವುದು. ಹೋದ ಉದ್ದೇಶಗಳ ಕುರಿತು ಸ್ಪಷ್ಟವಾದ ಸುದ್ದಿಗಳು ತಿಳಿದು ಬಂದಿಲ್ಲವಾದರೂ ತ್ರಿರಾಷ್ಟ್ರಗಳ ಒಪ್ಪಂದದ ಸೂಚನೆಯು ಊಹಿಸಲಾಗಿದೆ.

ಅಮೇರಿಕದ ಧ್ವನಿ

ಅಮೇರಿಕದ ಅಧ್ಯಕ್ಷ ಪೀಠಕ್ಕೆ ಮೂರನೆಯ ಬಾರಿಯಾಗಿ ಚುನಾಯಿತರಾದ ಅಧ್ಯಕ್ಷ ರೂಸ್‌ವೆಲ್ಟರು

ತಮ್ಮ ಈ ಸಲದ ಅಧ್ಯಕ್ಷತೆಯ ಮೊದಲನೆಯ ಭಾಷಣದಲ್ಲಿ ಸರ್ವಾಧಿಕಾರಿಗಳೆದುರು ಹೋರಾಡಿ, ಪ್ರಜಾಪ್ರಭುತ್ವವನ್ನು ಉಳಿಸಲೇಬೇಕೆಂಬ ನಿರ್ಧಾರವನ್ನು ಸಾರಿರುವರು.

ಇಟಲಿ ಸೋಲುತ್ತಿದೆ

ಗ್ರೀಸಿನ ಕಾದಾಟದಲ್ಲಿ ಎಪಿರಿಸ್ ಕರಾವಳಿಯಲ್ಲಿ ಇಟಲಿಯು ಸೋತು ಹಿಂದಕ್ಕೆ ಹೋಗಿರುವುದಾಗಿ ತಿಳಿದುಬಂದಿದೆ. ಆರ್. ಎ. ಎಫ್. ವಿಮಾನದಳವು ಇಟಲಿಯನ್ ವಿಮಾನಗಳನ್ನು ನಾಶಗೊಳಿಸಿರುವುದಾಗಿಯೂ ಸುದ್ದಿ.

ರುಮೇನಿಯದ ಭೂಕಂಪ

ರುಮೇನಿಯದಲ್ಲಿ ಒಂದು ಭಯಂಕರ ಭೂಕಂಪ ಉಂಟಾಗಿ ಹತ್ತು ಸಾವಿರ ಜನರು ಅದಕ್ಕೆ ಬಲಿಯಾದರೆಂದು ತಿಳಿದಿದೆ. ಅನೇಕ ಕಟ್ಟಡಗಳು ಭಗ್ನವಾಗಿವೆ. ಜನರು ವಿಪದ್ಗ್ರಸ್ತರಾಗಿದ್ದಾರೆ.

ಚೆಂಬರ್ಲಿನರ ಮರಣ

ಬ್ರಿಟನಿನ ಹಿಂದಿನ ಮುಖ್ಯ ಮಂತ್ರಿಗಳಾದ ನೆವಿಲ್ ಚೆಂಬರ್ಲಿನರು ಕೆಲಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ಶನಿವಾರ ಅವರ ಮನೆಯಲ್ಲಿ ತೀರಿಹೋದರು.

ಪಿಟ್‌ಮೆನ್ನರ ನಿಧನ

ಅಮೇರಿಕದ ಸೆನಾದಾ ಸಂಸ್ಥಾನದ ಪ್ರಸಿದ್ಧ ಸಿನೇಟರ ಪಿಟ್‌ಮೆನ್ನರು ತಾ. ೧೦ರಂದು ನಿಧನ ಹೊಂದಿರುವರು.

ರೂಸ್‌ವೆಲ್ಟರ ವಿಜಯ

ಅಮೇರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯಾಗಿ, ಫ್ರಾಂಕ್ಲಿನ್ ಡಿಲಾನೋ ರೂಸ್‌ವೆಲ್ಟರು ಮೂರನೆಯ ಸಲವೂ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇವರ

ಮೂರು ಬಾರಿಯೂ ವಿಜಯಿಗಳಾದ ರೂಸ್‌ವೆಲ್ಟ್

ಪ್ರತಿಸ್ಪರ್ಧಿ ವೆಂಡಲ್ ವಿಲ್ಕಿಯವರು. ಇವರಿಗೂ ಜನ ಬೆಂಬಲ ಚೆನ್ನಾಗಿತ್ತು. ಅಮೇರಿಕದಲ್ಲಿ ೩೨ ಜನ ಅಧ್ಯಕ್ಷರಾಗಿದ್ದರೂ ಯಾರೂ ಮೂರನೆಯ ಸಲವೂ ಅಧ್ಯಕ್ಷರಾಗಿರಲಿಲ್ಲ.

ಸ್ಪೈನು ಜಿಬ್ರಾಲ್ಟರುಗಳ ನಡುವೆ ಕಾಲುವೆ

ಜಿಬ್ರಾಲ್ಟರು ಮತ್ತು ಸ್ಪೈನುಗಳ ನಡುವಿನ ಸಂಯೋಗ ಭೂಮಿಯನ್ನು ಅಡ್ಡವಾಗಿ ಒಂದು ಕಾಲುವೆ ಆಗಿದ್ದು ಜಿಬ್ರಾಲ್ಟರನ್ನು ಒಂದು ನಡುಗುಡ್ಡೆಯಾಗಿ ಮಾಡಲಾಗಿದೆಯೆಂದು ಸುದ್ದಿ.

ಜರ್ಮನ್ ಯಾಂತ್ರಿಕ ಸೈನ್ಯಗಳು ನೆಲದ ಮೇಲೆ ಜೋರಿನಿಂದ ಮುಂದುವರಿಯುವುದು, ಅವುಗಳು ನಡು ಗುಡ್ಡೆಯ ಮೇಲೆ ಹೋಗುವುದು ಸಾಧ್ಯವಿಲ್ಲ.

ಜರ್ಮನ್ ಟ್ಯಾಂಕ್ ದಾಳಿಯನ್ನು ತಡೆಯಲು ಬ್ರಿಟಿಷರು ಈ ಉಪಾಯ ಮಾಡಿರುವರಾಗಿ ತಿಳಿದಿದೆ.

ಬಂದರಗಳನ್ನು ಕೊಡುವುದಿಲ್ಲ!

ಒತ್ತಾಯ ಮಾಡಿದರೆ ರಕ್ತ ಹರಿಯುವುದು!

ಬ್ರಿಟನಿಗೆ ಡಿವೇಲರ ಎಚ್ಚರಿಕೆ

ಆಯರ್ಲಂಡು ತಟಸ್ಥರಾದ ನಮ್ಮ ಬಂದರಗಳನ್ನು ಯಾರಿಗೂ ಬಿಟ್ಟುಕೊಡುವುದು ಸಾಧ್ಯವಿಲ್ಲ. ಬ್ರಿಟನು ಈ ಬಗ್ಗೆ ಒತ್ತಾಯ ಮಾಡಿದರೆ ರಕ್ತ ಹರಿಯುವುದು. ನಾವಿರುವ ವರೆಗೆ ನಮ್ಮ ಹಕ್ಕಿನ ಕೊಂದರೆ ಬರಗೊಡೆವು ಎಂದರು. ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದ ವಿಷಯವಾಗಿ ಈ ಉತ್ತರ ಕೊಡಲಾಗಿದೆಯೆಂದು ಊಹೆ.

ಚೀನೀ ಸೈನ್ಯಗಳ ಮುನ್ನಡೆ

ಮಾತಾಂಗವನ್ನು ವಶಪಡಿಸಿದರು

ಚೈನದ ಸೈನಿಕರು ಕಠೋರವಾಗಿ ಕಾದಾಡಿ ಜಪಾನಿ ಸೈನಿಕರನ್ನು ಹಿಂದಕ್ಕಟ್ಟುವ ಸುದ್ದಿಯು ಕೇಳಿಬರುತ್ತದೆ. ಚೀನೀಯರು ಮಾತಾಂಗವೆಂಬುದನ್ನು ವಶಪಡಿಸಿಕೊಂಡರೆಂದು ತಿಳಿದಿದೆ.

ತುರ್ಕಿಸ್ಥಾನದಲ್ಲಿ ಸೈನ್ಯ ಸಂಗ್ರಹ

ಇದು ವರೆಗೆ ಸೈನ್ಯಕ್ಕೆ ಸೇರದಿರುವ ಜನರು ಬೇಗನೇ ಸೈನ್ಯಕ್ಕೆ ಸೇರಬೇಕೆಂದು ಸರಕಾರದ ಆಜ್ಞೆಯಾಗಿದೆ. ಸುಮಾರು ಇಪ್ಪತ್ತು ತರಗತಿಯ ಜನರಿಗೆ ಈ ಆಜ್ಞೆಯು ಅನ್ವಯಿಸುತ್ತದೆ.

ಅಲ್ಲಿದ್ದ ಜರ್ಮನರು ಒಮ್ಮಿಂದೊಮ್ಮೆಗೇ ಆದೇಶವನ್ನು ಬಿಟ್ಟು ಹೋಗುತ್ತಿರುವರು. ಸರಕಾರವು ಕೆಲವರನ್ನು ಒಳಸಂಚು ಮಾಡಿದರೆಂಬ ಆರೋಪದ ಮೇಲೆ ಸೆರೆ ಹಿಡಿದಿರುವುದು.

ಅಮೇರಿಕವನ್ನು ಜರ್ಮನಿಯು ಬೆದರಿಸುತ್ತದೆ

ಐಯರ್ಲೆಂಡಿನಿಂದ ಅಮೇರಿಕನ್ ಪ್ರಜೆಗಳನ್ನು ಕರೆದುಕೊಂಡು ಹೋಗುವುದಕ್ಕಾಗಿ ಬರುವ ಅಮೇರಿಕನ್ ಹಡಗಗಳ ಸುರಕ್ಷಿತ ಪ್ರಯಾಣದ ಬಗ್ಗೆ ಆಶ್ವಾಸನಕೊಡುವುದು ಸಾಧ್ಯವಿಲ್ಲವೆಂದು ಜರ್ಮನಿಯು ಅಮೇರಿಕಕ್ಕೆ ತಿಳಿಸಿದೆ.

ಮೆಕ್ಸಿಕೋದಲ್ಲಿ ಕ್ರಾಂತಿಯೆ?

ಜನರಲ್ ಅಲ್ಮಗಾನ್

ಮೆಕ್ಸಿಕೋ ದೇಶದ ಅಧ್ಯಕ್ಷ ಪದವಿಗೆ ಉಮೇದ್ವಾರನಾಗಿ ನಿಂತು ಸೋತು ಹೋದ ಜನರಲ್ ಅಲ್ಮಗಾನನು ಈಗ ಒಂದು ರಾಷ್ಟ್ರೀಯ ಕ್ರಾಂತಿಯನ್ನೆಬ್ಬಿಸುವ ಹಂಚಿಕೆಯಲ್ಲಿರುವನೆಂದು ತಿಳಿದಿದೆ.

ಈ ಕ್ರಾಂತಿಕಾರರು, ಸೈನಿಕ ಆಕಾಶ ವಿಮಾನ ಕೇಂದ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ಮೊದಲು ಯತ್ನಮಾಡಿದರಂತೆ. ಇವರಿಗೆ ಜರ್ಮನರ ನೆರವೂ ಇತ್ತಂತೆ. ಜರ್ಮನ್ ಹಡಗು ಮದ್ದುಗುಂಡುಗಳನ್ನು ತುಂಬಿಸಿ ಬರುತ್ತಿರಲು ಒಂದು ಕೆನಡಾ ಹಡಗು ಅದನ್ನು ಹಿಡಿಯಿತೆಂದೂ ತಿಳಿದಿದೆ.

ರುಮೇನಿಯದಲ್ಲಿ ಭಯಂಕರ ಭೂಕಂಪ

ರುಮೇನಿಯದ ರಾಜಧಾನಿಯಲ್ಲಿ

ಭಯಂಕರ ಭೂಕಂಪವಾಗಿ ನೂರಾರು ಜನರು ಮರಣಹೊಂದಿರುವರು. ಸಾವಿರಾರು ಮಂದಿಗೆ ಗಾಯಗಳಾಗಿವೆ. ಅನೇಕ ಕಟ್ಟಡಗಳು ನಾಶಹೊಂದಿವೆ. ಬಿರುಕು ಬಿಡದ ಯಾವ ಮನೆಯೂ ಇಲ್ಲವಾಗಿ ತಿಳಿದಿದೆ.

ಕಾಂಗ್ರೆಸಿನ ಚಟುವಟಿಕೆಗಳು

ಜವಾಹಿರಲಾಲರ ಬಂಧನದ ಮೇಲೆಯೂ ಅನೇಕ. ಕಡೆ ಪ್ರಾಂತಿಕ ಧುರೀಣರನ್ನು ಬಂಧಿಸುವ ಕೆಲಸವು ಆಗುತ್ತಾ ಇದೆ. ಗಾಂಧೀಜಿಯವರು ವೈಯುಕ್ತಿಕ ಸತ್ಯಾಗ್ರಹವನ್ನು ಬಲಪಡಿಸುವ ಸಲುವಾಗಿ ಉಪವಾಸ ನಿಲ್ಲಿಸಿರುವೆನೆಂದು ಹೇಳಿಕೆಯಿತ್ತಿರುವರು. ಇಷ್ಟರಲ್ಲಿಯೇ ವೈಸರಾಯರಲ್ಲಿಗೆ ಒಬ್ಬ ದೂತನನ್ನೂ ಕಳುಹಿಸಿರುವರೆಂದೂ ತಿಳಿದಿದೆ. ನೆಹರುಗಳ ಬಂಧನ ಶಿಕ್ಷೆಗಳ ವಿಷಯ್ಕ ವಿದೇಶಗಳಲ್ಲಿಯೂ ಗಲಭೆಯೆದ್ದಿದೆ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿಯೂ ... ದಸ್ಯರನೇಕರು, ಅವರನ್ನು ಬಂಧಿಸಿದ್ದು ಅಯುಕ್ತವಾಯಿತೆಂದು ಹೇಳಿದ್ದು ಮಾತ್ರವಲ್ಲದೆ ಬಿಡುಗಡೆ ಮಾಡಬೇಕೆಂದರು. ಪ್ರಸಿದ್ಧ ಬ್ರಿಟಿಷ್ ಪತ್ರಿಕೆಗಳು ಅವರ ಬಂಧನ ಶಿಕ್ಷೆಗಳ ಕುರಿತು ಕಟುವಾಗಿ ಟೀಕಿಸಿ ಅಗ್ರಲೇಖಗಳನ್ನು ಬರೆದಿರುವವು.

ಕೇಂದ್ರ ಅಸೆಂಬ್ಲಿಯಲ್ಲಿ

ಕೇಂದ್ರ ಅಸೆಂಬ್ಲಿಯಲ್ಲಿ ಹಣಕಾಸಿನ ಮಸೂದೆಯ ವಿಚಾರವಾಗಿ ಕಾಂಗ್ರೆಸಿನವರ ಪ್ರಚಂಡ ವಿರೋಧವನ್ನು ತೋರಿಸಿದರು. ಮುಸ್ಲಿಂ ಲೀಗಿನವರು ತಟಸ್ಥವಾಗಿರುವರೆಂದು ತಿಳಿದಿದೆ. ಕಾಂಗ್ರೆಸು ಧುರೀಣರು ಸರಕಾರದ ವರ್ತನೆಯನ್ನು ಉಗ್ರವಾಗಿ ಟೀಕಿಸಿ ಇಂತಹ ಮಸೂದೆಯನ್ನು ತರುವುದು ನ್ಯಾಯವಲ್ಲವೆಂದು ಹೇಳಿ ವಾದಿಸಿದರು.

ಕೇಂದ್ರ ಅಸೆಂಬ್ಲಿ

ಕೇಂದ್ರ ಅಸೆಂಬ್ಲಿಯ ಅಧಿವೇಶನವು ತಾ. ೫ಕ್ಕೆ ಸುರುವಾಗಿದೆ. ಹಣಕಾಸಿನ ವಿಚಾರದ ಮಸೂದೆಯೊಂದು ಒಗಲಿದೆ; ಅದನ್ನು ವಿರೋಧಿಸುವ ಸಲುವಾಗಿ ಮೊದಲು ಹಾಜರಾಗುವುದಿಲ್ಲವೆಂದು ನಿಶ್ಚಯಿಸಿದ ಕಾಂಗ್ರೆಸ್ ಸದಸ್ಯರು ... ಗ ಅ ಕಡೆ ತೆರಳಿ...

ಅಸಾ...

ಅ... ವಾಗ... ಮಂತ್ರಿ... ಬಂಗಾ...

ರಾಷ್ಟ...

ಹಿಂ... ಕನ್ನೆಯ... ಸಲು... ವಿಮಾ...

ಸೇವ...

ತಾ... ಶ್ರೀ... ಮಧು... ರೊಡನೆ... ಯಲ್ಲಿ...

ಜಪ...

ಪ್ರ... ಕವಿ... ವನ್ನು... ರ್ಗಸ... ನೆಹ... ಲಾಯ... ಅಸ್ತಿ... ಬಂಧಿ... ಗಳಿಗೆ... ಸ್ವತಂ... ಯಾಕೆ...

ಅಬ್ದು...

ಅನ... ಮಾತಾ... ತದ ಹ...

ಮಾರಾಟಕ್ಕೆ ಸಿದ್ಧ...

1941ನೆ ಇಸವಿ...

ಶಾರದಾ ಪೋಕೆಟ್...

ಸಣ್ಣ ಸೈಜ್ ... ...
(ಪೋಕೆಟ್ ಇದ್ದದಕ್ಕೆ) ... ...
ದೊಡ್ಡ ಸೈಜ್ ... ...
(ಪೋಕೆಟ್ ಇದ್ದದಕ್ಕೆ) ... ...

ಶಾರದಾ ಛಾಪಖಾನೆ, ವ...



ಹಣಕಾಸಿನ ಮಸೂದೆಗೆ ತೀವ್ರ ವಿರೋಧ

ಕೇಂದ್ರ ಅಸೆಂಬ್ಲಿಯಲ್ಲಿ ಧುರೀಣರ ಉಗ್ರ ಟೀಕೆ!

ಮುಸ್ಲಿಂ ಲೀಗು ತಟಸ್ಥವಾಗಿರುವುದು

ವೈಸರಾಯರಲ್ಲಿಗೆ ಮಹಾತ್ಮರ ದೂತ

ಪತ್ರಿಕಾ ನಿರ್ಬಂಧ ಸಡಿಲಾಯಿತೆ?

ಅಸಾಮಿಗೆ ವಿಶ್ವವಿದ್ಯಾಲಯ

ಅಸಾಮಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ವಾಗಬೇಕೆಂಬ ಠರಾವನ್ನು ಶಿಕ್ಷಣ ಮಂತ್ರಿ ರೋಹಿಣೀ ಕುಮಾರರು ಬರುವ ಬಂಗಾಳ ಅಧಿವೇಶದಲ್ಲಿ ತರಲಿರುವರು.

ರಾಷ್ಟ್ರಪತಿ-ಸಿಂಧಕ್ಕೆ

ಸಿಂಧದಲ್ಲಿ ಉಂಟಾಗಿರುವ ಅರಾಜಕತೆಯ ಕುರಿತು ವಿಚಾರಿಸಿ ತೀರ್ಮಾನಿಸಲು ರಾಷ್ಟ್ರಪತಿ ಅಜಾದರು ಆ ಕಡೆಗೆ ವಿಮಾನದಲ್ಲಿ ತೆರಳಿರುವರು.

ಸೇವಾಗ್ರಾಮದಲ್ಲಿ ವಿವಾಹ

ತಿರ್ವಾಂಕೂರ್ ಹರಿಜನ ಸಂಘದ ಶ್ರೀ ರಾಮಚಂದ್ರನರ ವಿವಾಹವು ಮಧುರೆಯ ಡಾ। ಸೌಂದರಂ ಎಂಬವರೊಡನೆ ತಾ. ೭ರಂದು ಮಹಾತ್ಮರ ಸನ್ನಿಧಿಯಲ್ಲಿ ಸೇವಾಗ್ರಾಮದಲ್ಲಿ ನಡೆಯಿತು.

ಜಫರಲ್ಲಿ ಖಾನರ ಉಗ್ರ ಟೀಕೆ

ಬ್ರಿಟನು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಢಿಲ್ಲಿಯಲ್ಲಿ ಮಾಡಿದ ಠರಾವನ್ನು ಅಂಗೀಕರಿಸದೆ ಸಹಾಯದ ಸುವರ್ಣಸಂಧಿಯನ್ನು ನೀಗಿಕೊಂಡಿತೆಂದರು. ನೆಹರುಗಳನ್ನು ಸೆರೆಹಿಡಿದ ಸರಕಾರ, ಐಯರ್ಲೆಂಡಿನ ಡಿವೇಲರನ್ನು, ದಕ್ಷಿಣ ಆಫ್ರಿಕದ ಹಾರ್ಟಜಾಗರನ್ನು ಯಾಕೆ ಬಂಧಿಸಿಲ್ಲವೆಂದು ಪ್ರಶ್ನಿಸಿದರು. ಅವುಗಳಿಗೆ ತಮ್ಮ ಧೋರಣೆಯನ್ನು ತಿಳಿಸಲು ಸ್ವಾತಂತ್ರ್ಯ ಕೊಟ್ಟಿರುವಾಗ ಭಾರತಕ್ಕೆ ಯಾಕೆ ಕೊಟ್ಟಿಲ್ಲವೆಂದು ಕೇಳಿದರು.

ಅಬ್ದುಲ್ ಕಯೂಮರ ವಿರೋಧ

ಅನಂತರ ಅಬ್ದುಲ್ ಕಯೂಮರು ಮಾತಾನಾಡುತ್ತ ಸದ್ಯದ ಯುದ್ಧ, ಭಾರತದ ಹಿತಕ್ಕಾಗಿದೆಯೋ, ಬ್ರಿಟಿಷರ ಸ್ವಾರ್ಥಕ್ಕಾಗಿದೆಯೋ ಎಂದು ಪ್ರಶ್ನಿಸಿದರು. ಆ ಮೇಲೆ ಅವರು ಭೂಲಾಬಾಯಿಯವರಿಗೆ ಗುಡ್ಡಗಾಡು ಪ್ರದೇಶದಲ್ಲಿ ಹೋಗಲು ತಡೆಮಾಡಿದ್ದನ್ನೂ, ದೇಶದ ಮುಖಂಡರನ್ನು ಬಂಧಿಸಿದ ಕುರಿತು ವಿಷಾದವನ್ನೂ ಸೂಚಿಸಿ ಇಂತಹ ಉದ್ದೇಶವಿರುವಾಗ ನಾವು ಸಹಕರಿಸಲಾರೆವೆಂದರು.

ಆರ್ಥಿಕ ಮಸೂದೆಗೆ ಸತ್ಯಮೂರ್ತಿಗಳ ಖಂಡನೆ

ಆರ್ಥಿಕ ಮಂತ್ರಿಗಳು ಕೇಂದ್ರ ಅಸೆಂಬ್ಲಿಯಲ್ಲಿ ತಾ. ೧೧ರಂದು ಇಟ್ಟ ಆರ್ಥಿಕ ಮಸೂದೆಯ ಕುರಿತು ಚರ್ಚೆಗೆ ಪ್ರಾರಂಭವಾದ ಕೂಡಲೇ ಶ್ರೀ ಸತ್ಯಮೂರ್ತಿಗಳು ಮೊದಲು ಮಾತನಾಡಿ, ಸರಕಾರದ ಈ ಮಸೂದೆಗೆ ತಾವು ಯಾಕೆ ಬೆಂಬಲ ಕೊಡುವುದಿಲ್ಲವೆಂಬುದನ್ನು ಹೇಳಿದರು.

ಭಾರತವು ಬ್ರಿಟಿಷರಿಗೆ ಸ್ವಸಂತೋಷದಿಂದ ಸಹಾಯ ಮಾಡುತ್ತದೆಯೆಂದು ತೋರಿಸಲು ಬ್ರಿಟನು ಈ ಆಟ ಹೂಡಿದೆಯೆಂದರು. ಭಾರತವನ್ನು ಯುದ್ಧಕ್ಕೆ ದೂಡಿದ್ದು ಸರಿಯಲ್ಲವೆಂದೂ, ಈಜಿಪ್ಟ್ ಐಯರ್ಲೆಂಡುಗಳಂತೆ ಇದನ್ನೂ ನಡೆಸಬೇಕೆಂದೂ ಹೇಳಿದರು. ಭಾರತದ ರಕ್ಷಣೆಗಾಗಿ ಸರಕಾರವು ಏನು ಮಾಡಿದೆಯೆಂದು ಪ್ರಶ್ನಿಸಿದರು. ಯುದ್ಧ ಮುಗಿದ ಮೇಲೆ ಸಹ ಸ್ವಾತಂತ್ರ್ಯ ಕೊಡಲು ಬ್ರಿಟಿಷರಿಗೆ ಮನಸ್ಸಿಲ್ಲವೆಂದರು. ಬ್ರಿಟಿಷರು ಡೆಮಾಕ್ರಸಿ ಗೋಸ್ಕರವಾಗಿ ಹೋರಾಡುತ್ತಿರುವರೆಂಬ ಕುರಿತು ಸಂಶಯ ಸೂಚಿಸಿದರು.

ಶ್ರೀ ಪ್ರಕಾಶರ ಖಂಡನೆ

ಅನಂತರ ಶ್ರೀ ಪ್ರಕಾಶರವರು ಮಾತನಾಡುತ್ತಾ ಭಾರತದ ಸಂಬಂಧದಲ್ಲಿರುವ ಸರಕಾರ ಧೋರಣೆಯನ್ನು ಖಂಡಿಸಿದರು. ನೆಹರು ಮೊದಲಾದ ಮುಖಂಡರನ್ನು ಬಂಧಿಸಿ ಶಿಕ್ಷಿಸಿದ ವಿಷಯವಾಗಿ ವಿರೋಧಿಸಿದರು. ಭಾಷಣ ಸ್ವಾತಂತ್ರ್ಯ, ಮುದ್ರಣ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳ ಮೇಲೆ ಹಾಕಿದ ನಿರ್ಬಂಧವನ್ನು ತೆಗಳಿದರು. ಹೀಗೆಲ್ಲಾ ಇರುತ್ತ ನಾವು ಸ್ವತಂತ್ರರಾಗಿರುವ ಉಪಾಯಗಳು ಕಾಣದೆ ಇದ್ದು, ಅವು ಇವೆಯೆಂದು ತಿಳಿಸುವ ವರೆಗೆ ಸಹಾಯ ಕೊಡಲಾರೆವೆಂದರು.

ಪ್ರೆಸ್, ಪತ್ರಿಕೆಗಳಿಂದ ದಂಡ

ಪೂನದ ಲೋಕಶಕ್ತಿ ಮುದ್ರಣಾಲಯ ಮತ್ತು ಪತ್ರಿಕೆಗಳಿಂದ ೬೦೦೦ ರೂಪಾಯಿಗಳ ದಂಡವನ್ನು ಸರಕಾರದವರು ಕೇಳಿರುವರು. ಮುಂಬಯಿಯ ಸತ್ಯಾಗ್ರಹಿ ಮುದ್ರಣಾಲಯದಿಂದ ೫೦೦೦ ರೂಪಾಯಿ ದಂಡ ಕೇಳಿರುವರು. ಸರಕಾರಕ್ಕೆ ಅಸಂತೋಷದ ವಿಷಯ ಮುದ್ರಿಸಿ ಪ್ರಕಟಿಸಿದ ಅಪರಾಧಗಳಿಗಾಗಿ.

ಬ್ರಹ್ಮದತ್ತರಿಗೆ ೬ ತಿಂಗಳ ಕಠಿಣ ಶಿಕ್ಷೆ

ಮಹಾತ್ಮರ ಅಪ್ಪಣೆ ಪಡೆದು ಪಾದಚಾರಿಯಾಗಿ ಹೊಸ ತರದ ಸತ್ಯಾಗ್ರಹವನ್ನು ಮಾಡುತ್ತಿದ್ದ ಹೊರಟವನ್ನು ಬಂಧಿಸಿ ಅವರಿಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿದ ವರ್ತಮಾನ ತಿಳಿದಿದೆ.

ವೈಸರಾಯರಲ್ಲಿಗೆ ಮಹಾತ್ಮರ ದೂತ

ಮಹಾತ್ಮಾ ಗಾಂಧಿಜಿಯವರು ತಮ್ಮ ಮುಂದಿನ ಯೋಜನೆಯ ಬಗ್ಗೆ ಒಂದು ಪತ್ರ ಬರೆದು ಅದನ್ನು ವೈಸರಾಯರಿಗೆ ಮುಟ್ಟಿಸುವುದಕ್ಕೆ ಒಬ್ಬ ವಿಶೇಷ ದೂತನನ್ನು ದಿಲ್ಲಿಗೆ ಕಳುಹಿಸಿರುವರೆಂದು ತಿಳಿದಿದೆ.

ಕೇಂದ್ರ ಅಸೆಂಬ್ಲಿ ಚರ್ಚೆ

ರೂಪಾಯಿಯ ಹೊಸ ನೋಟುಗಳು

ದೇಶದ ರಕ್ಷಣೆಯ ವಿಚಾರ

ಶ್ರೀಮಾನ್ ಸುಬೆದಾರರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಆರ್ಥಿಕ ಮಂತ್ರಿಯಾದ ಸರ್ ರೇಜಮನರು ಒಂದು ರೂಪಾಯಿಯ ದೊಡ್ಡ ಸೈಜಿನ ನೋಟನ್ನು ಬೇಗನೆ ಜಾರಿಗೆ ತರಲಾಗುವುದೆಂದು ಹೇಳಿದರು.

ಶ್ರೀ ಸಂತಾನಂರವರ ಪ್ರಶ್ನೆಗೆ ಉತ್ತರ ಹೇಳುತ್ತಾ ಭಾರತದ ರಕ್ಷಣೆಯ ವಿಚಾರವಾಗಿ ಸರಕಾರದವರು ಯೋಚಿಸಿದ ಹಂಚಿಕೆಗಳನ್ನು ತಿಳಿಸಲು ಒಂದು ಹೇಳಿಕೆಯನ್ನು ಬೇಗನೇ ಕೊಡಲಿರುವೆವು ಎಂದರು.

ವಿದ್ಯಾರ್ಥಿಗಳ ಮೇಲೆ ಕಠಿನ ನಿರ್ಬಂಧ!

ಮದ್ರಾಸು ಸರಕಾರದ ಪ್ರಕಟಣೆ

ಕಾಲೇಜ್ ವಿದ್ಯಾರ್ಥಿಗಳು ವಿರೋಧ ಪ್ರದರ್ಶನ ಮಾಡಬಾರದೆಂದೂ ಹಾಗೆ ಮಾಡಿದವರಿಗೆ ಮುಂದೆ ಸರಕಾರೀ ಕೆಲಸ ಸಿಗಲಾರದೆಂದೂ, ಅವರು ಗವರ್ನ್‌ಮೆಂಟ್ ಕಾಲೇಜ್ ವಿದ್ಯಾರ್ಥಿಗಳಾಗಿದ್ದರೆ ಅವರನ್ನು ಕಾಲೇಜಿನಿಂದ ಹೊರ ಹಾಕಲಾಗುವುದೆಂದೂ ಮದ್ರಾಸು ಸರಕಾರದ ಆಜ್ಞೆ. ವಿದ್ಯಾರ್ಥಿಗಳು ಮುಷ್ಕರವೇ ಮೊದಲಾದವು ಮಾಡುವುದರಲ್ಲಿ ಇದರಿಂದ ನಿರ್ಬಂಧಿಸಲಾಗಿದೆ.

ಪತ್ರಿಕೆಗಳ ಮೇಲೆ ಎತ್ತಿದ ಗದೆ ಕೆಳಗಿಡಲಾಯಿತೆ?

ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೀತಿಯಿಂದ ಯುದ್ಧ ವಿರೋಧ ಪ್ರಚಾರ ಮಾಡಬಾರದಾಗಿ ಸರಕಾರವು ಪತ್ರಿಕೆಗಳ ಮೇಲೆ ಎತ್ತಿದ ಗದೆ ನಿರ್ಬಂಧವನ್ನು ಹಿಂತೆಗೆಯಲಾಗಿದೆಯೆಂದು ತಿಳಿದು ಬಂದಿದೆ.

NOTICE

Wanted a Harijan Clerk for the Attur and Jawahar Bank, Ltd., Mangalore. Candidates must be S. S. L. C. who have passed Banking. Salary Rs. 15—30. Apply to the undersigned.

Office of the Bank, Canara High School Road, 14—11—1940

A. Vaikunta Prabhu, Managing Director. Attur & Jawahar Bank. Ltd., Mangalore.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈಸ್ಕೂಲ್ ರಸ್ತೆ, ಮಂಗಳೂರು

ಈ ಬ್ಯಾಂಕಿಗೆ 15-20 ವರ್ಷ ಪ್ರಾಯದೊಳಗಿನ I ಫೋರ್ಮ್ ವರೆಗೆ ಕಲಿತ ಒಬ್ಬ ಎಟೆಂಡರ್ ಬೇಕಾಗಿದೆ. ಸಂಬಳ ರೂ. ೩ರಿಂದ 12ರ ವರೆಗೆ ಕೊಡಲಾದೀತು. ಅರ್ಜಿದಾರರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಹರಿಜನ ಜಾತಿಯವರ ಅರ್ಜಿಗೆ ಹೆಚ್ಚಿನ ಗಮನ ಕೊಡಲಾದೀತು.

ಮಂಗಳೂರು 14-11-'40

ಅತ್ತೂರು ವೈಕುಂಠ ಪ್ರಭು, ಮೆನೇಜಿಂಗ್ ಡೈರೆಕ್ಟರ್, ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಮಂಗಳೂರು.

ಸಿದ್ಧವಾಗಿದೆ

ಇಸವಿಯ

ಪಾಕೆಟ್ ಡೈರಿಗಳು

... ೦—೫—೦
... ೦—೬—೦
... ೦—೯—೦
... ೦—೧೧—೦

...ಸೆ, ಮಂಗಳೂರು.

ವರ್ಧಾದ ವಾರ್ತಾತರಂಗಗಳು!

ಯುಗಪುರುಷ ಗಾಂಧಿಯ ಉಪವಾಸ ನಿರ್ಧಾರ!
ಉದ್ವಿಗ್ನರಾಗಿ ಧಾವಿಸಿ ಬಂದ ನೆಹರುಗಳು!
ಕೊನೆಯ ಅಸ್ತ್ರವಾಗಿರಲಿ ಎಂದು ಸರ್ವರ ಬಿನ್ನಹ!
ರಾಜಕೀಯ ಆಸ್ಪತ್ರೆಯ ನರ್ಸ್ ಮಣಿಬೆನ್!
ಸಂಸಾರದ ಸಾಮಾನಿನೊಂದಿಗೆ ಭೂಲಾಭಾಯಿ!
ಕರ್ನಾಟಕವನ್ನು ಮೈಸೂರಿಗೆ ಸೇರಿಸಬೇಡಿ-ಗಾಂಧಿಜಿ
ಮಹಾತ್ಮರೊಡನೆ ಪ್ರಶ್ನೆ ಕೇಳಿದ ಬಾಲ ಇಕ್ಬಾಲ್!

[ಶ್ರೀ ಸಿ. ಪಿ. ಕಾಮತ್, ನಲ್ವಾಡಿ, ವರ್ಧಾ]

ಜವಾಹರಲಾಲರು ಮಹಾತ್ಮರನ್ನು ಕಣ್ಣಾರೆ ಬಂದಾಗಿನಿಂದ ಕಾಂಗ್ರೆಸ್ ಮತ್ತು ಸರಕಾರ ಕೇಂದ್ರಗಳಲ್ಲಿ ಎಂದಿಗಿಂತಲೂ ಹೆಚ್ಚಿನ ಚಟುವಟಿಕೆ ಉಂಟಾಗಿದೆ. ನೆಹರುಗಳು ಸೇವಾಗ್ರಾಮದಲ್ಲಿ ಒಂದು ದಿವಸವಿದ್ದರು. ಗಹನಾತ್ಮಕ ವಿಚಾರಗಳನ್ನು ಆರೇಳು ಗಂಟೆಗಳ ಕಾಲ ಮಹಾತ್ಮರೊಂದಿಗೆ ಚರ್ಚಿಸಿದರು. ಸರ್ವರ ಮನಸ್ಸಿನಲ್ಲಿ ಜವಾಹರರು ಎರಡನೆಯ ಸತ್ಯಾಗ್ರಹಿಯಾಗುವರೆಂದಿತ್ತು.

ಅರಿವುಳ್ಳವರಿಂದ ತಿಳಕೊಂಡ ಮಟ್ಟಿಗೆ ನೆಹರುಗಳ ಅಕಸ್ಮಾತ್ ವರ್ಧಾಪ್ರಯಾಣದ ಉದ್ದೇಶವೇ ಬೇರೆ ಎಂದು ಈಗ ತಿಳಿದುಬರುತ್ತದೆ. ಉಪವಾಸದ ವಿಚಾರದಲ್ಲಿ ಮಹಾತ್ಮರು ಬಹಳ ಯೋಚನೆಯುಳ್ಳವರು; ದಿನೇ ದಿನೇ ಈ ವಿಚಾರವು ಹೆಚ್ಚೆಚ್ಚಿನ ಗಂಭೀರತೆಯನ್ನು ತಾಳತೊಡಗಿದಂತೆ ಆಪ್ತರಂತಿದ್ದ ನೆಹರುಗಳಿಗೆ ಪರಿಸ್ಥಿತಿಯು ಭವಿಷ್ಯವು ಸಹನಾತೀತವಾಗಿರಬೇಕು. ಅಂತೆಯೇ ಅವರು ವರ್ಧಾಕ್ಕೆ ಧಾವಿಸಿದರು. ಸರ್ವ ಪ್ರಯತ್ನಗಳ ಸಾಧನೆಗಳು ಅಸಮರ್ಥವಾದನಂತರ ಬೇಕಾದರೆ ಉಪವಾಸದ ಪ್ರಶ್ನೆ ಎತ್ತಬಹುದು ಎಂಬುದೇ ನೆಹರುಗಳ ಮತವಾಗಿತ್ತಂತೆ.

ಇಷ್ಟನ್ನು ಹೇಳಲು ಅವರು ಇಲ್ಲಿಗೆ ಬಂದಿದ್ದರಂತೆ. ಅವರನ್ನು ನೋಡಿದಾಗಲೂ ಕೂಡಾ ಅವರ ಮುಖಭಾವದಲ್ಲಿ ಅದೊಂದು ತರದ ಕಠಿಣ ಪ್ರಸಂಗ ಸೂಚಕ ಗಂಭೀರತೆಯೂ ಆವರಿಸಿತ್ತು. ಹೆಚ್ಚಿನ ಹೊತ್ತು ಮಹಾತ್ಮರ ಸನ್ನಿಧಿಯಲ್ಲೇ ಕಳೆದರು.

ನೆಹರುಗಳನ್ನು ಎಷ್ಟು ತೀವ್ರತೆಯಲ್ಲಿ ಬಂಧಿಸಿದರೋ ಅಷ್ಟು ವೇಗದಿಂದ ವರ್ಕಿಂಗ್ ಕಮಿಟಿಯನ್ನೂ ಕರೆಯಲಾಯಿತು. ಒಂದು ವಿಚಿತ್ರ ದೇಶದ ಯಾವ ಮೂಲೆಯಲ್ಲೇ ಇರಲಿ, ಈ ವರ್ಕಿಂಗ್ ಕಮಿಟಿಯ ಸದಸ್ಯರು ತಮ್ಮ ಕರೆ ಬಂತೆಂದರೆ ಸರಿ, ಕಾರ್ಯಕಲಾಪಗಳೆಲ್ಲವನ್ನು ಎಲ್ಲಾ ಬದಿಗಿಟ್ಟು ನಿಶ್ಚಿತ ಠಾಣೆಯ ಕಡೆಗೆ ಟಿಕೇಟು ತೆಗೆದು ಹೊರಟೇ ಬಿಡುತ್ತಾರೆ!

ಭೂಲಾಭಾಯಿಯಂತವರು ಒಂದು ಸಂಸಾರದ ಸಾಮಾನು ತಮ್ಮೊಂದಿಗೆ ತರುತ್ತಾರೆ; ಒಬ್ಬ ವೇದ್ಯ-ಒಬ್ಬ ಸೆಕ್ರೆಟರಿ. ಅತ್ಯಂತ ಸರಳರೆಂದರೆ ನಮ್ಮ ರಾಜಾಜಿಯವರು, ಅವರೊಡನೆ ಒಂದು ಹಾಸಿಗೆ ಒಂದು ಚರ್ಮದ ಚಿಕ್ಕ ಬ್ಯಾಗ್.

ಈ ಸಲವೂ ಅದೇ ಅತಿಥಿಗೃಹ. ಪುನಃ ಅದೇ ದಾಂಡಿಗ ಪಹರೆಯವ. ಈ ಸಲದ ಮೇಲ್ವಿಚಾರಣೆಯಲ್ಲಿ ಮಣಿಬೆನ್ ಪಟೇಲ್ ಇದ್ದುದರಿಂದ ಯಾರ ಯಾವ ಗಲಾಟೆಗೂ ಎಡೆ ಇರಲಿಲ್ಲ.

ವರ್ಕಿಂಗ್ ಕಮಿಟಿಯು ರಾಜಕೀಯ ವ್ಯಾಧಿ ನಿವಾರಣೋಪಾಯದ ಆಸ್ಪತ್ರೆಯಂತಿದ್ದರೆ, ಅಲ್ಲಿಯ 'ನರ್ಸ್' ಈಕೆ. ಮಾತನಾಡಲು ಸುರುಮಾಡಿದರೆ ಬಹಳ ಹೊತ್ತಿನ ತನಕ ಸ್ವಚ್ಛ ಇಂಗ್ಲಿಷಿನಲ್ಲಿ ತಡೆಯಿಲ್ಲದೆ ವ್ಯಾಖ್ಯಾನ ಕೊಡುವವಳು; ತರ್ಕ ಮಾಡುವವಳು; ಸ್ವತಂತ್ರಾಭಿಪ್ರಾಯವುಳ್ಳವಳು; ಪತ್ರಿಕಾ ಪ್ರತಿನಿಧಿಗಳ ಮೇಲೆ ಈ ಸಲ ಹೆಚ್ಚಿನ ನಿರ್ಬಂಧ ಹಾಕಲಾಗಿತ್ತು. ಕಾರಣ ಟ್ರಿಬ್ಯೂನ್ ಪತ್ರಿಕೆಯವನೊಬ್ಬ ಸುಳ್ಳುಬಾತ್ಮಿಯೊಂದನ್ನು ಕಳುಹಿಸಿದ್ದ. ಬಾತ್ಮಿಯು ಸಾಮುದಾಯಿಕ ಸತ್ಯಾಗ್ರಹಕ್ಕೆ ಅಜ್ಞೆಯಾಗಲಿದೆ ಎಂಬರ್ಥದ್ದಾಗಿತ್ತು.

"ಎಂತಹ ಮನುಷ್ಯರಪ್ಪಾ ನೀವು? ಇಲ್ಲೇಕೆ ರಣಹದ್ದುಗಳಂತೆ ಹೊಂಚುತ್ತೀರಿ?" "ಈ ಕಮಿಟಿಯು ವಿಚಾರದ ಸುದ್ದಿಗಾಗಿ" ಈ ರೀತಿಯಲ್ಲಿ ನೀವು ವ್ಯಾಸರಾಯರನ್ನೇಕೆ ಪೀಡಿಸುವುದಿಲ್ಲ. ಬಹುಶಃ ಅಲ್ಲಿ ನಿಮಗೆ ಹೆದರಿಕೆ. ಇಲ್ಲಿ ಹದವಿಾರಿದ ಧೈರ್ಯ. ದಯವಿಟ್ಟು ಹೊರಗೆ ಹೋಗಬೇಕಾಗಿ ವಿನಂತಿ"

ಇಷ್ಟು ಹೊತ್ತಿಗೆ ಪಟ್ಟಾಭಿಯವರು ಊಟ ತೀರಿಸಿ ಬಂದರು. "ಏನು ಗಲಾಟೆ ಮಣಿಬೆನ್? ಇವರಿಗೆ ಸುದ್ದಿ ಬೇಕಂತೆ. ನಿಮ್ಮ ಹತ್ತಿರ ಏನಾದರೂ ಇದೆಯೇನು? ರೇಡಿಯೋ ಕೋಣೆಯಿಂದಲೇ ಬಂದೆ. ಲಂಡನಿನ ಮೇಲೆ ಸಾವಿರ ಸಾವಿರ ಬಾಂಬಿನ ಸುರಿಮಳೆಯಂತೆ. ರೂಸ್‌ವೆಲ್ಟರು ಮೂರನೆಯ ಬಾರಿ ಅಧ್ಯಕ್ಷರಾದರು. ನಮಗೆ ವರ್ಕಿಂಗ್ ಕಮಿಟಿಯ ಬಾತ್ಮಿಬೇಕು. ನಮ್ಮಲ್ಲೇನು ಬಾಂಬಿನ ಗಿಂಬಿನ ಸುದ್ದಿ ಇಲ್ಲ. ಪತ್ರಗಳಿಗೆ ಬೇಕಾದುದು ಅವಲ್ಲವೇ?" ಎಲ್ಲರೂ ನಕ್ಕರು.

ಈ ಸಲದ ವರ್ಕಿಂಗ್ ಕಮಿಟಿಯು ದಿನೇ ದಿನೇ ಸಂಭವಿಸಿದ ಒಂದೊಂದು ತರದ ಅನಿರೀಕ್ಷಿತ ಘಟನೆಗನುಸಾರವಾಗಿ ಆ ಘಟನೆಗಳ ಆಳವಾದ ಪರಿಣಾಮಗಳನ್ನು ಕುರಿತು ಚರ್ಚಿಸಿಕೆನ್ನಬಹುದು. ಕಾರಣ, ಮೊದಲನೆಯ ದಿವಸ ೩ ಗಂಟೆಗೆ ನೆಹರುಗಳ ಕಠಿಣ ಶಿಕ್ಷೆಯ ಸುದ್ದಿ ಟೆಲಿಫೋನ್ ಮೂಲಕ ತಿಳಿಯಿತು. ಸ್ವಲ್ಪ ಸಮಯದ ಮೊದಲು ಹರುಷಯುಕ್ತವಾಗಿದ್ದ ಅತಿಥಿಗೃಹವು ಒಂದೇ ಸವನೆ ಶೀತಳ ಮೌನದಲ್ಲಿ ಮುಳುಗಿತು!

ಇಲ್ಲಿ ಬಾಧಚಾರಿ ಪತ್ರಿಕೆಗಳು ತುಂಬಾ ಹರಡಿವೆ. ನೆಹರುಗಳ ದಸ್ತಗಿರಿ ಸಮಯದಲ್ಲಿ ಅಲಹಾಬಾದಿನಲ್ಲಿಯೂ ಈ ನವೀನ ಪತ್ರಪ್ರಯೋಗವು ಬಹು ತ್ವರಿಯಾಗಿ ಹರಡಿತೆಂದು ಗೋವಿಂದ ವಲ್ಲಭ್ ಪಂತರು ರಾಜಾಜಿಯವರೊಂದಿಗೆ ಹೇಳುತಿದ್ದರು.

ಮಹಾತ್ಮರು ಈ ಸೂಚನೆ ಕೊಡುವ ಮೊದಲೇ ಓರ್ವ ಸ್ವಯಂಸೇವಕನು ಇಲ್ಲಿ ಅದೇ ತರದ ಕೆಲಸಮಾಡಿಕೊಂಡಿದ್ದನು.

ಈಗ ನವೀನವಾಗಿ ಶೋಧೆ ಮಾಡಲ್ಪಟ್ಟ ಹೊಸತೊಂದು ಸತ್ಯಾಗ್ರಹದ ರೀತಿಯೂ ಹೆಚ್ಚುಕಮ್ಮಿ ಇದರ ಹಾಗೆಯೇ. ಬ್ರಹ್ಮದತ್ತ ಎಂಬ ಪಂಜಾಬ್ ನವತರುಣನೊಬ್ಬನು ಅಕಸ್ಮಾತ್ ಮಹಾತ್ಮರಲ್ಲಿಗೆ ಬಂದು ಈ ಹೊಸ ಸತ್ಯಾಗ್ರಹವನ್ನು ಮಾಡಬೇಕೆಂದಿದ್ದೇನೆ ಅಪ್ಪಣೆ ಎಂದ. 'ಸೈ' ಅಂದರು ಮಹಾತ್ಮರು. ತಾ. ೮ರಂದು ಅದು ಆರಂಭವಾಯಿತ. ಪ್ರತಿ ಅರ್ಧ ಫರ್ಲಾಂಗಿಗೆ ನಿಲ್ಲುವುದು. ಗಂಟೆ ಬಾರಿಸುವುದು. ಜನರನ್ನು ಕೂಡಿಸುವುದು ಏನು ಹೇಳಬೇಕೊ ಹೇಳುವುದು. ಬ್ರಹ್ಮದತ್ತನು ವರ್ಧಾದಿಂದ ಸುಮಾರು ೯ ಮೈಲು ಹೋಗುವುದರೊಳಗೆ ಅವನ ಸೆರೆಯಾಯಿತು. ಸಿ. ಐ. ಡಿ. ರಿಪೋರ್ಟರುಗಳು ಅವನ ಹಿಂದೆ ನಡೆಯುತ್ತಾ ಬರಕೊಳ್ಳಬೇಕಾಗಿತ್ತು.

ಮೊದಲನೆಯ ದಿವಸ ಮಹಾತ್ಮರು ತಮ್ಮ ಮತ್ತು ವೈಸರಾಯರ ಪತ್ರವ್ಯವಹಾರ ಹಾಗೂ ಉಪವಾಸದ ಕುರಿತು ಅಭಿಪ್ರಾಯ ಕೊಟ್ಟರು.

ಎರಡನೆಯ ದಿವಸದಲ್ಲಿ ಕಮಿಟಿಯ ಎಲ್ಲರೂ ಒಮ್ಮತದಿಂದ ಉಪವಾಸ ವಿರೋಧವಾಗಿ ಮತ ಸೂಚಿಸಿದರಂತೆ "ಹಲವು ದಾರಿಗಳಿವೆ. ಎಲ್ಲವನ್ನು ಸಾಧಿಸಿದ ನಂತರ ಬೇಕಾದ್ದಾಗಲಿ" ಎಂಬುದೇ ಎಲ್ಲರ ಸೂಚನೆ. ಅಂತೂ ಮಹಾತ್ಮರೂ ಒಪ್ಪಿಕೊಂಡಂತೆ ಕಾಣುತ್ತದೆ. ಈ ವಿಚಾರದಲ್ಲಿ ಅವರು ಒಂದು ಉದ್ದದ ಪ್ರಕಟನೆಯನ್ನೂ ಕೊಟ್ಟಿದ್ದಾರೆ.

ಅಂದು ಎಸೆಂಬ್ಲಿಗೆ ಹಾಜರಾಗುವ ಅಪ್ಪಣೆಯ ಠರಾವೂ ಕೂಡಾ ಅನುಮೋದಿಸಲಾಯಿತು.

ಮೂರು ದಿವಸಗಳ ತನಕವೂ ಮಹಾತ್ಮರು ನಾಲ್ಕೈದು ತಾಸುಗಳಿಗೆ ಮಿಕ್ಕಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ನಡುವೆ ಚರಕಾ ಸಂಘದ ಸಭೆಗೂ ಹಾಜರಿದ್ದರು. ಅವರೆಲ್ಲಿನ ತಮ್ಮ ಸಮ್ಬಂಧವನ್ನೂ ತೆಗೆದು ಹಾಕುವರೆಂದು ತಿಳಿದಿದೆ. ರಚನಾತ್ಮಕದಿಂದ ರಾಜಕೀಯವನ್ನು ದೂರವಿರಿಸಲು ಪ್ರಯತ್ನಗಳು ನಡೆದಿವೆ.

ನಾಲ್ಕೈದು ದಿನ ಉಳಕೊಳ್ಳುವರೆಂದು ತಿಳಿಯಲಾದ ಸದಸ್ಯರೆಲ್ಲರೂ ಒಂದೇ ಸವನೇ ತಮ್ಮ ತಮ್ಮ ಪ್ರಾಂತಗಳಿಗೆ ಹೊರಡಲು ಸಿದ್ಧರಾದರು. ಪಟೇಲ್, ಭೂಲಾಭಾಯಿ, ಖೇರ್, ಶಂಕರರಾವ್ ದೇವ್ ಇವರೇ ಕೆಲವರು ಕಾರಿನಲ್ಲಿ ಬಂಡಿ ಹತ್ತಿದರು. ರಾಜಾಜಿಯವರೂ ಹೋಗುವವರಿದ್ದರು. ಮಹಾತ್ಮರು ಅವರನ್ನು ಒಂದು ದಿವಸ ಮಟ್ಟಿಗೆ ತಡೆಯಲು ಆಜ್ಞೆಕೊಟ್ಟರು. ರೈಲ್ವೆ ಸ್ಟೇಶನಿಗೆ ಹೋದ ಅವರ ಸಾಮಾನನ್ನು, ಮಾಜೀ ಮಂತ್ರಿ ರಾಮನಾಥನರು ಹಿಂತಿರುಗಿ ತಂದರು. ಪಟ್ಟಾಭಿಯವರೊಡನೆಯೂ ಮಹಾತ್ಮರು ನಿಲ್ಲಲು ಹೇಳಿದ್ದಾರೆ.

ಮಹಾತ್ಮಾಜಿಯವರು

ರೈಲು ಹತ್ತಿದ ಮೊದಲ ಪಂಗಡವು ಯಾವುದೋ ಮಹತ್ವದ ಪ್ರಚಾರಕ್ಕೆ ಹೋಗಿರಬೇಕೆಂದೂ ಅವರ ಪರಿಸ್ಥಿತಿ ಹೇಗಾಗುವುದೆಂಬುದನ್ನು ನೋಡಿ ಮತ್ತೆ ಎರಡನೆ ಪಂಗಡವನ್ನು ಕಳುಹಿಸಿಕೊಡಬೇಕೆಂಬುದೂ ಮಹಾತ್ಮರ ಉದ್ದೇಶವಿರಬೇಕೆಂದು ಅನೇಕರ ತರ್ಕ.

"ಹರಿಜನ"ದ ಕೊನೆಯ ಸಂಚಿಕೆಯೊಂದು ಬರಲಿದೆ. ಅದರಲ್ಲಿ ಮಹಾತ್ಮರ ಸಂದೇಶವಿದೆ. ತಾನು ಬರೆದುದನ್ನು ಪ್ರೆಸ್ ಎಡ್ವೈಸರರಿಗೆ ಕಳುಹಿಸುವುದು ಅವಶ್ಯವಿಲ್ಲವೆಂದೇ ಈ ಏರ್ಪಾಡು ಮಾಡಲಾಗಿದೆ.

ಮಹಾತ್ಮರು ನಿಜವಾಗಿಯೂ ಅವರು ಮಹಾತ್ಮರೇ ಇರುವರೆಂಬುದಕ್ಕೆ ವೃದ್ಧಾಪ್ಯದ ಈ ವಯಸ್ಸಿನಲ್ಲಿಯೂ ಅತ್ಯಮೋಘ ರೀತಿಯಲ್ಲಿ ಕೆಲಸ ಮಾಡುತ್ತಿರುವ ಅವರ ಮಿದುಳೇ ಸಾಕ್ಷ್ಯವಾಗಿದೆ. ಘೋರ ಸಂಗ್ರಾಮದ ಜಗತ್ತಿನಲ್ಲಿ ಕಾಡುವೃತ್ತಿಯು ಮನುಷತ್ವವನ್ನು ಅಧಃಪತನಗೊಳಿಸುತ್ತಿರುವ ಪರಿಣಾಮವಾಗಿ ಭಾರತವರ್ಷವೂ ಆ ಕ್ರೂರ ಕ್ರಿಯೆಯಲ್ಲಿ ಕೈಯಾಡಿಸುವುದನ್ನು ತಡೆಯುವಂತಹ ಅತ್ಯಂತ ಮಹತ್ವದ ತೊಡಕಿನ ಪ್ರಸಂಗದ ವಿಚಾರಗಳು ಸೇವಾಗ್ರಾಮದ ಆ ಸಾಧುವಿನ ತಲೆಯಲ್ಲಿ ಹಗಲಿರುಳು ಕಾಡುತ್ತಿವೆ.

ಇವೆಲ್ಲವುಗಳ ನಡುವಿನಲ್ಲಿ ಗಾಂಧಿಜಿಯವರು ಅನೇಕ ಇತರ ಚಿಕ್ಕ ಚಿಕ್ಕ ವಿಷಯಗಳ ಕಡೆಗೂ ಗಮನಕೊಡಲು ಶಕ್ಯರಿದ್ದಾರೆ ಎಂಬ ಸಂಗತಿಯು ಯಾರನ್ನೂ ಚಕಿತಗೊಳಿಸದಿರದು.

ಸರ್ವತೋಮುಖ ಬಂಧನದಿಂದ ಪಾರುಗೊಳ್ಳುವ ಒಂದು ಮಾರ್ಗವೆಂದರೆ ಉಪವಾಸ ವ್ರತ. ವೈರಿಯನ್ನು ಮಿತ್ರನನ್ನಾಗಿ ಪರಿವರ್ತಿಸಲಿಕ್ಕೆ, ಮಾನವ ಜನಾಂಗದ ದುರ್ವರ್ತನಕ್ಕೆ ನಿಷೇಧ ಸೂಚಿಸಲಿಕ್ಕೆ; ಆತ್ಮಬಲದ ಬಲಿದಾನ ಶಕ್ತಿಯನ್ನು ಜಗತ್ತಿಗೆ ಸಾರಲಿಕ್ಕೆ ಎರಡು ಸಾವಿರ ವರ್ಷಗಳ ಹಿಂದೆ ಕ್ರಿಸ್ತನಾಥ ಏಸುವು ಶಿಲುಬೆಯಲ್ಲಿ ತನ್ನ ರಕ್ತವನ್ನೂ ಚೆಲ್ಲಿದನು. ಧ್ಯೇಯ ಒಂದೇ-ಸಾಧನ ಬೇರೆ. ಸಂತೋಷದ ವಿಷಯವೆಂದರೆ ಮಹಾತ್ಮರು ಈ ನಿರ್ಧಾರದ ಅವಧಿಯನ್ನು ಮುಂದುವರಿಸಿರುವುದು.

[೧೩ನೆಯ ಪುಟವನ್ನು ನೋಡಿರಿ]



ವಿಚಿತ್ರ ಪ್ರಪಂಚ

ಚುಂಬನ ಯುದ್ಧ!

ಇಂಗ್ಲಾಂಡಿನ ಯಾವುದೋ ಒಂದು ಊರಿನ ಯಾವುದೋ ಒಂದು ಪ್ರದೇಶದ ಮೇಲೆ ಆಕಾಶದಲ್ಲಿ ಹಾರಾಡುತ್ತಿದ್ದ ಬ್ಬ ನೈವಾನಿಕನು ಏನೋ ಒಂದು ಕಾರಣದಿಂದ, ಕೆಳಗಿಳಿಯಬೇಕಾಯಿತು ಯುದ್ಧಕಾಲ. ಇಂಗ್ಲಾಂಡಿನಲ್ಲಿ ಪುರು ರಂತೆ ಸ್ತ್ರೀಯರೂ ಯುದ್ಧಾತುರರು ಭು ಯುದ್ಧ ವಿಮಾನವು ಕೆಳಗಿಳಿದಿದೆ ಂಬ ವರ್ತಮಾನವು ದೊರೆತೊಡನೆಯೇ ಲ್ಲಿಯ ಒಂದು ಮನೆಯೊಳಗಿದ್ದ ಆ ಂದಿ ಹೆಂಗಸರೂ ಹೊರಗೆ ಬಂದರು ದು ಮಡಿವಾಳರ ಮನೆ ಅಷ್ಟುಮಂದಿ ಂಗಸರೂ ಅಲ್ಲಿ ಕೆಲಸಕ್ಕಿದ್ದರು ಅವ ು ಹೊರಗೆ ಬಂದು ಒಂದು ಸಣ್ಣ ಯು ್ವವನ್ನೇ ವ್ಮಾಡಿದರು! ಆ ಇಂಗ್ಲಿಷ್ ಮಾನಗಾರನನ್ನು ಮುತ್ತಿದರು, ಮತ್ತ ಂಥಹಾಕಿ ಅವನ ಮುಖದ ಮೇಲೆ ಮುತ್ತಿನ ಸುರಿಮಳೆಯನ್ನೇ ಸುರಿಸಿ ಟ್ಟರು! ಆ ಸಮಯದಲ್ಲಿ ಪಾಪದ ಆ ಮಾನಗಾರನ ಸ್ಥಿತಿ ಹೇಗಾಗಿರ ೇಕೋ, ಅದರ ಅನುಭವವನ್ನು ವಾಚ ರು ಊಹಿಸಿಕೊಳ್ಳಬೇಕು.

◈

'ನೀನು ನನ್ನ ಗಂಡ'

ಅಮೇರಿಕದ ಒಂದು ನ್ಯಾಯಸ್ಥಾನ ಲ್ಲಿ ಯಾರನ್ನೋ ತನ್ನ ಗಂಡ ಎಂ ರ ೀಳ ಒಬ್ಬಾಕೆ ಒಂದ ದಾವೆ ತಂದ ಂಬಾ ಖ್ಯಾತಿವಡೆದಿರುವಳು. ಅವಳು ವಾಹಿಕ ಗಂಡನಿಂದ ತ್ಯಜಿಸಲ್ಪಟ್ಟವಳು ಲವು ಮಕ್ಕಳೂ ಇದ್ದರು ಒಂದು ದಿನ ರೈಲು ಗಾಡಿಯಲ್ಲಿ ಪ್ರಯಾಣ ಮಾಡು ತಿದ್ದಾಗ ಯಾರೋ ಒಬ್ಬ ಪುರುಷನನ್ನು ನೋಡಿ, ಅವನನ್ನು ತನ್ನ ಬಿಟ್ಟುಹೋದ ಗಂಡನೆಂದು ಭ್ರಮಿಸಿದಳು. ಮತ್ತೆ ಆತ ನು ತನ್ನ ಮಕ್ಕಳನ್ನು ಅನಾಥರನ್ನಾಗಿ ಮಾಡಿಬಿಟ್ಟು ಹೋದನೆಂದು ಅವನನ್ನು ದೂರಿದಳು ಅವನು ಆಕೆಯ ಗಂಡನ ಲ್ಲವೆಂದು ಎಷ್ಟು ಸಮಜಾಯಿಸಿದರೂ ಒಪ್ಪದೆ ಅನೇಕ ಸಾಕ್ಷಿಗಳನ್ನು ಕೊಟ್ಟು ಕೋರ್ಟಿನಲ್ಲಿ ಫಿರ್ಯಾದಿ ಮಾಡಿದಳು ಆಗ ಅವನಿಗೂ ಈ ಪಿಕಲಾಟದಿಂದ ತಪ್ಪಿಸಿಕೊಳ್ಳುವ ಬೇರೆ ಉಪಾಯ ಕಾಣ ದಾಯಿತು. ತಾನು ಪೋಲಾಂಡಿನವನೆಂ ದೂ, ಜೀವನೋಪಾಯವನ್ನು ಹುಡುಕಿ ಅಲ್ಲಿಗೆ ಬಂದವನೆಂದೂ, ತನಗೆ ಬೇರೆ ಹೆಂಡತಿಯೂ ಮಕ್ಕಳೂ ಇರುವರೆಂದೂ ಆಕೆಯನ್ನು ತಾನು ಕಣ್ಣಿಂದ ನೋಡಿದವ ನು ಸಹ ಅಲ್ಲವೆಂದೂ ಆ ಸಾಕ್ಷಿಗಳ ನ್ನು ಕೊಟ್ಟು ಬಹಳ ಹಣ ಖರ್ಚುಮಾಡಿ ವಾದಿಸಿದ ಕೊನೆಗೆ ಕೋರ್ಟಿನವರು ಅವನ ವಾದವನ್ನು ನಂಬಿ ಫಿರ್ಯಾದಿ ಯನ್ನು ತೆಗೆದುಹಾಕಿದರ ಆಕೆಗೆ ಇದ ರಿಂದ ಖ್ಯಾತಿಯೇನೋ ದೊರೆಯಿತು ಆದರೆ ತನಗೆ ಮತ್ತು ತನ್ನ ಮಕ್ಕಳಿಗೆ ಅನ್ನ ಹಾಕುವ ಗಂಡ ಮಾತ್ರ ದೊರೆಯಲಿಲ್ಲ

◈

ಐನೂರು ವರ್ಷ ಬಾಳಿದ ಮಹಾಯೋಗಿ!

ಸಂಯುಕ್ತ ಪ್ರಾಂತದ ಕಲಾಪಿ ಎಂಬ ಲ್ಲಿ ಸ್ವಾಮಿ ರಾಮ ಲಕ್ಷ್ಮಣ ದಾಸ ಎಂಬ ಸಾಧುವು ಪ್ರಾಣ್ಯಾಯಾಮ ಚಿತ್ಸದ ಮತ್ತು ಯಾವ ವಿಧದಿಂದಲೂ ವಾಯುಸಂಚಾರ ಆಗ ದಂಥ ಗವಿಯಲ್ಲಿ ೪೮ ತಾಸುಗಳ ತನಕ ಕುಳಿತು ಸಜೀವ ಹೊರಗೆ ಬರುವಂಥ ಯೋಗ ಚಮತ್ಕಾರಗಳನ್ನು ತೋರಿಸಿ ದ್ದಾನೆ ಈಗ ಈ ಸಾಧುವಿಗೆ ಸುಮಾ ರು ೪೮-೫೦ ವರ್ಷ ಪ್ರಾಯ ಆಗಿರಬ ಹುದು ಅವನು ಹಿಮಾಲಯದ ತಪ್ಪ ಲುಗಳಲ್ಲಿ ವಾಸವಾಗಿರುವನಂತೆ ಇಷ್ಟು ಪ್ರಾಯವಾಗಿರುವುದಾದರೂ ೨೫-೩೦ ವರ್ಷಗಳ ತರುಣನಂತೆ ತೋರುತ್ತಾನೆ ಅವನ ಗುರುವಿಗೆ ೨೦೦ ವರ್ಷ ಮತ್ತು ಗುರುವಿನ ಗುರುವಿಗೆ ೫೦೦ ವರ್ಷ ಪ್ರಾ ಯವಾಗಿರುವುದೆಂದೂ, ಅವರಿಬ್ಬರು ಈಗಲೂ ಹಿಮಾಲಯದಲ್ಲಿ ಜೀವದಿಂದಿ ರುವರೆಂದೂ ಆ ಸಾಧುವು ಹೇಳುತ್ತಿರು ವನು

◈

ಮೂವತ್ತು ಸಾವಿರ ವರ್ಷಗಳ ಪುರಾತನ ಆಮೆ

ಸ್ವೀಡಿನ ಸೇಬರಿಗ್ ಎಂಬಲ್ಲಿ ಬಹು ಪುರಾತನ ಕಾಲದ ಒಂದು ಆಮೆ ಯ ಚಿಪ್ಪು ದೊರೆತಿದೆ ಅದು ನಾಲ್ಕು ಅಡಿ ಎತ್ತರವಾಗಿಯೂ ಐದು ಅಡಿ ಉದ ್ದವಾಗಿಯೂ ಇರುವುದು ಜೀವದಿಂದಿ ದ್ದಾಗ ಈ ಆಮೆಯ ಅರ್ಧ ಟನ್ ಎಂ ದರೆ ೧೫ ಮಣಗಳಷ್ಟಾದರೂ ಭಾರವಾಗಿ ದ್ದಿರಬೇಕೆಂದು ಊಹಿಸಲಾಗಿದೆ ವೈಜ್ಞಾ ನಿಕರು ಈ ಆಮೆಯು ೩೦೦೦೦ ವರ್ಷ ಗಳ ಹಿಂದೆ ಜೀವಿಸಿದ್ದಿರಬೇಕೆಂದು ಎಣಿ ಕೆ ಹಾಕಿರುವರು

◈

ಎಲ್ಲದರಲ್ಲಿಯೂ ಮೊದಲಿಗ

ನ್ಯೂಯೋರ್ಕಿನಲ್ಲಿ ಒಮರ್ ಕೆಟಿನ ಎಂಬ ಒಬ್ಬ ಮನುಷ್ಯನಿದ್ದಾನೆ ಅವನಿಗೆ ಒಂದು ವಿಚಿತ್ರ ಹುಚ್ಚು ಇದೆ ಎಲ್ಲದರ ಲ್ಲಿಯೂ ಮೊದಲಿಗನಾಗಬೇಕೆಂಬುದು ಅವನ ಆಸೆ ಅದಕ್ಕೋಸ್ಕರ ಅವನು ಎಷ್ಟು ದೂರ ಬೇಕಾದರೂ ಪ್ರಯಾಣ ಹೋಗುವನು, ಎಷ್ಟು ಖರ್ಚು ಬೇಕಾ ದರೂ ಮಾಡುವನು ಎಷ್ಟು ಕಷ್ಟನಷ್ಟ ಗಳನ್ನು ಬೇಕಾದರೂ ಅನುಭವಿಸುವನು ಎಲ್ಲಿಯಾದರೂ ಒಂದು ಸೇತುವೆಯನ್ನು ಕಟ್ಟಿದರೆ, ಅವನೇ ಅದರ ಮೇಲೆ ಮೊದ ಲು ಹೋಗಬೇಕು, ಒಂದು ಮನೆಯನ್ನು ಕಟ್ಟಿದರೆ, ಅವನೇ ಅದರೊಳಗೆ ಮೊದಲು ಪ್ರವೇಶ ಮಾಡಬೇಕು ಇಂದ ಮ ಜೂ ರ್ತವು ಒದಗಿ [illegible] ಅದಕ್ಕೋಸ್ಕರ ಅವನು ಎಷ್ಟು ಸ [illegible] ಬೇಕಾದರೂ ಕಾಯು ವನು ಹೀಗಾಗಿ ಅಮೇರಿಕದಲ್ಲಿ ನಡೆದ ಅನೇಕ ಮಹತ್ವಪೂರ್ಣ [illegible] ಘಟನೆಗಳಲ್ಲಿ ಈ ಮಹಾಶಯನು ಮೊದಲಿಗನಾಗಿದ್ದಾ ನೆ ಅನೇಕ [illegible] ಲ್ಲಿ ಅವನನ್ನು ವಿ [illegible] ಸಿದವರು ಒಬ್ಬರೂ ಇಲ್ಲ! ಆದ್ದರಿಂದ ದೊಡ್ಡ [illegible] ಗಳ [illegible] ಡೆಯು ವಾಗ ಈಗ ಅವ [illegible] ಆಗತ್ಯ ಆಮಂತ್ರಿ ಸುತ್ತಾರೆ ಅವನ ಅಲ್ಲಿ ಇರುವುದು ಲಕ್ಷ ಣವಾಗಿರುವುದೆಂದು ಜನರ ಭಾವನೆ

◈

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

PHYSICAL FITNESS

is the first essential in games and in every social activity.

You need not worry hereafter for your impaired vitality premature old age and nervous break-down if you try

BHUVANENDRA

"AMRITHPRASH"

which will tone the nervous system, build healthy tissues and enrich the blood.

Thus keeps you fresh and sprightly.

Bhuvanendra Products, Ltd.,

Katapady, S. Kanara.

(BRANCH—KUMTA, N KANARA)

Stockist. U. Panduranga Nayk, Car-Street Mangalore

ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಚಟುವಟಿಕೆ ಯಿಂದ ಇರಬೇಕಾದರೆ ಸಾಕಷ್ಟು ದೇಹದಾರ್ಢ್ಯತೆಯಿರಬೇಕು.

ನಿಮ್ಮನ್ನು ಪೀಡಿಸುತ್ತಿರುವ ಧಾತು ಕ್ಷೀಣತೆ, ನರಗಳ ನಿಷ್ಪ್ರಾಣ ವ ಇವುಗಳಿಂದ ನಿಮ್ಮಲ್ಲಿ ತಲೆದೋರಬಹುದಾದ ವೃದ್ಧಾಪ್ಯದ ಲಕ್ಷಣಗಳಿಗಾಗಿ ನೀವು ಹತಾಶರಾಗುವುದು ಅಗತ್ಯವಿಲ

ಭುವನೇಂದ್ರ 'ಅಮೃತಪ್ರಾಶ'ವು

ಧಾತು ವೃದ್ಧಿ ಮಾಡುವುದು, ನರಗಳಿಗೆ ನವಶಕ್ತಿಯನ್ನು ಕರುವುದು ಯಾವಾಗಲೂ ನಿಮ್ಮನ್ನು ಉಲ್ಲಾಸಗೊಳಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, - ದ. ಕನ್ನಡ

ಸ್ಥಳೀಯ ಸ್ಟೋಕಿಸ್ಟರು: (ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಯು ಪಾಂಡುರಂಗ ನ್ಯಾಕ್, ರಥಬೀದಿ, ಮಂಗಳೂರು.

★ ಚೆಂಬರ್ಲೆನ್ ★

ಗತಿಸಿದ ಚೆಂಬರ್ಲೆನ್

ಚೇಂಬರ್ಲೆನ್ ರಾಜಕೀಯ ರಂಗದಲ್ಲಿ ಬಹಳ ವಿಷಾದಮಯವಾಗಿ ನಟಿಸಿದ ವ್ಯಕ್ತಿ! ಇತ್ತೀಚೆಯ ಕೆಲವು ಘಟನೆಗಳಿಂದ ಅವರು ತಮ್ಮ ಶಕ್ತಿ ಸತ್ವಗಳನ್ನು ಕಳಕೊಂಡು, ತಮ್ಮ ಅಧಿಕಾರದಿಂದ ನಿವೃತ್ತಿ ಹೊಂದಲೇ ಬೇಕಾಗಿ ಸರ್ವರಿಗೂ ದೂರವಾಗಿದ್ದರು. ಆದರೂ ಚೆಂಬರ್ಲೆನ್ ಬಹಳ ಪ್ರಸಿದ್ಧಿಗೆ ಬಂದ ವ್ಯಕ್ತಿ! ಈ ಸಲದ ಯುದ್ಧದ ಸಂಭವದ ಕಾಲದಲ್ಲಿ ಚೆಂಬರ್ಲೆನರು ಬ್ರಿಟನಿನ ಮಹಾ ಮಂತ್ರಿಯಾಗಿ ಸೂತ್ರಚಾಲನೆ ಮಾಡಿದ ಕಾರಣದಿಂದ ಅವರ ಹೆಸರು ರಾಜಕೀಯದಲ್ಲಿ ಬಹಳವಾಗಿ ಪ್ರಸಿದ್ಧಿಗೆ ಬಂದಿತು. ಚೆಂಬರ್ಲೆನರು, ತಮ್ಮದೊಂದು ಧೋರಣೆಯಿಂದ—ಆ ಧೋರಣೆಯನ್ನು ಕೊನೆಗೆ ಬ್ರಿಟಿಷ್ ಜನರೇ ಮೆಚ್ಚಲಿಲ್ಲ — ರಾಜಕೀಯದಲ್ಲಿ ಒಂದು ಪ್ರತ್ಯೇಕ ಪಂಕ್ತಿಯನ್ನು ಪಡೆದಿರುತ್ತಾರೆ.

ಇವರ ಪೂರ್ಣ ಹೆಸರು ನೆವಿಲ್ ಚೆಂಬರ್ಲೆನರೆಂದು. ಬರ್ಮಿಂಗ್‌ಹ್ಯಾಮಿನಲ್ಲಿ ಇವರು ೧೮೬೯ರಲ್ಲಿ ಹುಟ್ಟಿದರು. ಇಂಗ್ಲೆಂಡಿನ ಪ್ರಸಿದ್ಧ ಧುರೀಣರಲ್ಲೊಬ್ಬರಾದ ಜೋಸೆಫ್ ಚೆಂಬರ್ಲೆನರೇ ಇವರ ತಂದೆ. ಇವರ ಸೋದರರಾದ ಆಸ್ಟಿನ್ ಚೆಂಬರ್ಲೆನರೂ ಕೆಲವು ವರ್ಷಗಳ ವರೆಗೆ ಇಂಗ್ಲೆಂಡಿನ ವಿದೇಶ ಮಂತ್ರಿಗಳಾಗಿದ್ದರು.

ಮೇಯರರಾಗಿ

ನೆವಿಲಿಯವರು ೧೯೧೫ರಲ್ಲಿ ಬರ್ಮಿಂಗಾಮಿನ ಮೇಯರರಾದರು. ತನ್ನ ಮೇಯರ್ ಪದವಿಯ ಕಾಲದಲ್ಲಿ ಇವರು ಮಾಡಿದ ಕಾರ್ಯಗಳು ಬಹಳ ಪ್ರಶಂಸನೀಯವಾಗಿದ್ದುವು. ಇದನ್ನು ಅವರ ವಿರೋಧಿಗಳೂ ಒಪ್ಪುತ್ತಾರೆ. ಬರ್ಮಿಂಗಾಮ್ ಜಗತ್ತಿನ ಅತ್ಯಂತ ಸುಂದರ ಪಟ್ಟಣವೊಂದಾಗುವುದಕ್ಕೆ ನೆವಿಲಿಯವರೇ ಹೆಚ್ಚಿನ ಕಾರಣರೆಂದರೂ ಸಲ್ಲುವುದು.

೧೯೧೮ರಲ್ಲಿ ಇವರು ಪಾರ್ಲಿಮೆಂಟಿಗೆ ಸದಸ್ಯರಾಗಿ ಚುನಾಯಿತರಾದರು. ೧೯೨೨ರಿಂದ ಇವರು ಮಂತ್ರಿಮಂಡಲದಲ್ಲಿ ಬೇರೆ ಬೇರೆ ಅಧಿಕಾರಗಳನ್ನು ವಹಿಸಿ ಕಾರ್ಯಗಳನ್ನು ಮಾಡಿದರು. ೧೯೩೧ರಿಂದ ೧೯೩೭ರ ವರೆಗೆ ಇವರು ಆರ್ಥಿಕ ಸಚಿವರಾದರು. ಆದರೆ ಈ ಸಮಯಗಳಲ್ಲಿ ಅವರು ಹೆಚ್ಚಿನ ಪ್ರಶಂಸನೀಯವಾದ ಕಾರ್ಯಗಳನ್ನು ಮಾಡಿರಲಿಲ್ಲ. ಮುಂದೆ ಯುದ್ಧವಾಗುವುದು ನಿಶ್ಚಯವೆಂದು ತಿಳಿದೂ ಏನೋ ಶಸ್ತ್ರಾಸ್ತ್ರ ಸಂಗ್ರಹಗಳ ಮಟ್ಟಿಗೆ ಇವರು ಅಂದಾಜು ಪತ್ರಿಕೆಯಲ್ಲಿ ಹೆಚ್ಚಿನ ಹಣವನ್ನು ಇಡುತ್ತಿದ್ದರು. ಇದರಿಂದ ಯುದ್ಧ ಬೇಡವೆನ್ನುವ ಬ್ರಿಟಿಷರು ಅವರನ್ನು ಟೀಕಿಸುತ್ತಿದ್ದರು.

ಯುದ್ಧ ತಪ್ಪಿಸಲು ವ್ಯರ್ಥ ಯತ್ನ

ಮೊದಲನೆಯ ಮಹಾಯುದ್ಧದಿಂದಾದ ಕೆಲವು ಫಲಿತಾಂಶಗಳು ಯೂರೋಪಿನಲ್ಲಿ ಬಹಳ ವಿಷಮತೆಯನ್ನು ಹುಟ್ಟಿಸುತ್ತಾ ಬರುತಿದ್ದವು. ಆಗ ಪ್ರಧಾನ ಮಂತ್ರಿಗಳಾದ ಚೆಂಬರ್ಲೆನರು ಇದನ್ನು ಅಡಗಿಸಲು ಯತ್ನಿಸಿದರು. ಹಿಟ್ಲರ್—ಮುಸಲಿನಿ ದ್ವಂದಗಳು ಯೂರೋಪಿನಲ್ಲಿ ವಿಜೃಂಭಿಸಿ ಬರುತ್ತಿದ್ದರೂ ಚೆಂಬರ್ಲೆನರು ಅವರನ್ನು ಶಾಂತಗೊಳಿಸಲು ನೋಡಿದರು. ಹೀಗೆ ಮಾಡುವುದರಿಂದ ಬ್ರಿಟನಿಗೆ ತೊಂದರೆಯಾಗಲಿಕ್ಕಿಲ್ಲವೆಂಬ ಭ್ರಮೆ ಅವರದ್ದಾಗಿತ್ತು. ಮುಸಲನಿಯೊಡನೆ ರಾಜಿಯಿಂದಿರುವುದಕ್ಕಾಗಿ ವಿದೇಶ ಮಂತ್ರಿ ಏಡನ್ನರನ್ನು ಅಧಿಕಾರದಿಂದ ತೆಗೆದು ಹಾಕಿದರು. ಇಟಲಿಯೊಡನೆ ಒಂದು ಒಪ್ಪಂದ ಮಾಡಿಕೊಂಡರು. ಸ್ಪೈನಿನ ಕ್ರಾಂತಿಯ ಕಾಲದಲ್ಲಿ ಕ್ರಾಂತಿಕಾರರಿಗೇ ನೆರವಾಗುವಂತೆ ತಾಟಸ್ಥ್ಯ ವಹಿಸಿದರು. ಹಿಟ್ಲರನು ಆಸ್ಟ್ರಿಯಾ ದೇಶವನ್ನು ಆಕ್ರಮಿಸಲು ಒಪ್ಪಿಗೆ ಕೊಟ್ಟರು. ಜಕೋಸ್ಲವೇಕಿಯದ ಸುಡೆಟನ್ ಜರ್ಮನ್ ಪ್ರದೇಶಗಳನ್ನು ಆಕ್ರಮಿಸಲು ಸಮ್ಮತಿಯಿತ್ತರು. ಚೆಂಬರ್ಲೆನರು ಇಷ್ಟೆಲ್ಲಾ ಮಾಡಿದುದು ಯುದ್ಧವಾಗಬಾರದೆಂಬ ಉದ್ದೇಶದಿಂದಲೇ. ಆದರೆ ಅವರ ಈ ಸಮಾಧಾನದ ಧೋರಣೆಯು ಮುಂದೆ ಮಹಾ ಪ್ರಮಾದಕರವಾಗಿ ಪರಿಣಮಿಸಿತು.

ಮಹಾಪ್ರಮಾದಗಳು

ಚೆಂಬರ್ಲೆನರು ತಮ್ಮ ಮುಖ್ಯಮಂತ್ರಿ ಪದವಿಯಲ್ಲಿ ಎರಡು ಮಹಾ ಪ್ರಮಾದಗಳನ್ನು ಮಾಡಿದರು. ಅವು ಅವರು ರಶಿಯಾ ಮತ್ತು ಭಾರತದ ಬಗ್ಗೆ ವಹಿಸಿದ್ದ ಧೋರಣ. ಚೆಂಬರ್ಲೆನರು ಬಂಡವಾಳಗಾರರು. ರಶ್ಯದೊಡನೆ ರಾಜಿಯಿಂದಿದ್ದರೆ ತಮ್ಮ ಹಿತಕ್ಕೆ ಧಕ್ಕೆ ಬರುವುದೆಂದು ಅವರು ಅಂಜಿದರು. ಹೀಗೆ ರಶ್ಯದೊಡನೆ ರಾಜಿಮಾಡಿಕೊಳ್ಳದಿದ್ದು ಅದು ಸಿಟ್ಟಿಗೆದ್ದು ಜರ್ಮನಿಯ ಪಕ್ಷಕ್ಕೆ ಒಲಿವಂತಾಯಿತು. ಭಾರತದ ವಿಚಾರವಾಗಿಯೂ ಅವರು ಹೀಗೆಯೇ ಅದೂರದರ್ಶಿಗಳಾದರು. ಇದರಿಂದ ಆಗುವ ಪರಿಣಾಮಗಳು ಇಂದೂ ನಮ್ಮ ಕಣ್ಮುಂದೆ ನಡೆಯುತ್ತಾ ಇವೆ.

ಶಾಂತಿ ಶಾಂತಿಯೆಂದು ಚೆಂಬರ್ಲೆನರು ಚಡಪಡಿಸಿದರು. ಮ್ಯುನಿಕಿಗೆ ಧಾವಿಸಿ ಹಿಟ್ಲರನನ್ನು ಸಮಜಾಯಿಸ ನೋಡಿದರು. ಆದರೆ ಅವರ ಉದ್ದೇಶವು ಒಳ್ಳೆಯದಿದ್ದರೂ, ಸಮಯೋಚಿತವಾಗಲಿಲ್ಲ. ಕೊನೆಗೆ ಅಧಿಕಾರವನ್ನೆಲ್ಲಾ ಬಿಟ್ಟುಕೊಡಬೇಕಾಯಿತು. ದೇಹದಲ್ಲಿಯೂ, ಆತ್ಮದಲ್ಲಿಯೂ ನಿರ್ಬಲರಾಗಿ ಚೆಂಬರ್ಲೆನ ಹಾಸಿಗೆ ಹಿಡಿದರು. ಈಗ ಅವರು ನಿಧನ ಹೊಂದಿದರೆಂಬ ವಿಷಾದಕರ ವಾರ್ತೆ ಬಂದಿದೆ. ಹೀಗೆ ರಾಜಕೀಯ ರಂಗದಲ್ಲಿ ವಿಷಾದಮಯವಾದ ವ್ಯಕ್ತಿಯು ನೆವಿಲ್ ಚೆಂಬರ್ಲೆನರು ಮರೆಯಾದರು.

An Invitation

Deposits flowing in more quickly than we can invest them are steadily increasing our idle funds. Thus our deposits increased by over Rupees Five Lacs since the first of July, 1940.

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE. Estd: 1906 CANARA BANK, LIMITED.

ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

"ಮಗುವು ಮನುಷ್ಯನ ತಂದೆ." ಒಂದು ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯದನ್ನವಲಂಬಿಸಿದೆ. ನಿರುತ್ಸಾಹಿಗಳಾದ ಮತ್ತು ದುರ್ಬಲರಾದ ಮಕ್ಕಳು ಬಾಲಪ್ರಾಶದಿಂದ ಉತ್ತಮಗೊಂಡು ಬೆಳೆಯುವರು. ಅದರ ರುಚಿಕರ ವಾಸನೆ ಎಂದರೆ ಮಕ್ಕಳಿಗೆ ಪ್ರೀತಿ.

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ

ಬಾಲಪ್ರಾಶ

ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

K.A.4

★ ಸಿನೇಮಾ ಪುಟ ★

ಕುಮಾರಿ ವಾಸಂತಿ

ಭಾರತದ ಚಲನಚಿತ್ರರಂಗದಲ್ಲಿ ಈಗಾಗಲೇ ಅಪಾರ ಖ್ಯಾತಿ ಗಳಿಸಿ ಸರ್ವರ ಮನವನ್ನು ಒಲಿಸಿಕೊಂಡಿರುವ ಕುಮಾರಿ ವಾಸಂತಿಯು ಚಲನಚಿತ್ರರಂಗಕ್ಕೆ ಯಾವ ರೀತಿ ಕಾಲಿಟ್ಟಳೆಂಬುದನ್ನು ಶ್ರೀ ವಿ. ಎಂ ಸುಕುಮಾರರು ಹೊರಗೆಡಹಿರುವರು.

ಕೆಲವು ವರ್ಷಗಳ ಕೆಳಗೆ ಚಿಕ್ಕ ಹುಡುಗಿಯೊಬ್ಬಳು ಕೊಲ್ಹಾಪುರದಲ್ಲಿದ್ದ ಪ್ರಭಾತ್ ಫಿಲ್ಮ್ ಕಂಪೆನಿಯ ಸ್ಟುಡಿಯೋಗಳಲ್ಲಿ ಓಡಾಡುತ್ತಿದ್ದಳು. ಪ್ರಭಾತ್ ಕಂಪೆನಿಯದ್ದ ಸ್ಟುಡಿಯೋವಿನ ಜಮೀನಿನ ಮ್ಯಾನೇಜರು ಅವಳ ತಂದೆ. ಕಂಪೆನಿಯವರು ತಮ್ಮ ಚಲನಚಿತ್ರಗಳನ್ನು ತಯಾರಿಸುತ್ತಿರುವಾಗ ಈ ಪುಟ್ಟ ಹುಡುಗಿಯು ನಡೆಯುವ ಕಾರ್ಯಕಲಾಪಗಳು ಚೆನ್ನಾಗಿ ಕಾಣುವ ಸ್ಥಳದಲ್ಲಿ ಮೌನವಾಗಿ ಕುಳಿತು ಎಲ್ಲವನ್ನೂ ಕುತೂಹಲದಿಂದ ನೋಡುತ್ತಿದ್ದಳು



ಒಂದು ದಿನ ಶ್ರೀಮತಿ ಶಾಂತಾ ಆಪ್ಟೆಯು ಹಾಡುತ್ತಿರುವಾಗ ಬಹು ಎಚ್ಚರಿಕೆಯಿಂದ ಅವಳ ಹಾಡನ್ನು ಆಲಿಸಿದಳು. ಈ ಹುಡುಗಿ ಹಿಂದಿನ ದಿನ ಪ್ರಭಾತ್ ಕಂಪೆನಿಯವರು 'ಷೂಟ್' ಮಾಡಿದಾಗ ಕೇಳಿದ ಹಾಡು ಮಾರನೆದಿನ ಸ್ಟುಡಿಯೋದಲ್ಲಿ ಮತ್ತೆ ಕೇಳಿಸಿತು ಸ್ಟುಡಿಯೋದವರಿಗೆ ಆಶ್ಚರ್ಯವಾಯಿತು. ಚಲನಚಿತ್ರದಲ್ಲಿ ಅರ್ಧಭಾಗವೂ ಮುಗಿಯದಿರುವಾಗ ಆ ಹಾಡು ಹೇಗೆ ಹೊರಗೆಡಹಲ್ಪಟ್ಟಿತೆಂದು ಕಂಪೆನಿಯವರು ಚಕಿತರಾದರು ಹಾಡಿನ ಶಬ್ದವು-ಎಲ್ಲಿಂದ ಬರುತ್ತಿದೆಯೆಂಬುದನ್ನು ತಿಳಿದು ಸ್ಟುಡಿಯೋದವರು ಪಕ್ಕದ ಕೊಠಡಿಗೆ ತೆರಳಿದರು ಅಲ್ಲಿ ಆ ಪುಟ್ಟ ಹುಡುಗಿಯು ಶ್ರೀಮತಿ ಶಾಂತಾಆಪ್ಟೆಯ ಹಾಡನ್ನು ಸುಲಭವಾಗಿ ಅನುಕರಿಸಿ ಹಾಡುತ್ತಿದ್ದಳು.

ಈ ವಿಷಯವು ಪ್ರಭಾತದ ಪ್ರಮುಖ ಡೈರೆಕ್ಟರರಾದ ಶ್ರೀ ವಿ. ಶಾಂತಾರಾಂರವರ ಕಿವಿಗೆ ಬಿತ್ತು. ಕೂಡಲೇ ಅವರು ಆ ಹುಡುಗಿಯ ಬಳಿಗೆ ಬಂದು 'ಹಾಡು, ನಿನಗೆ ಹಾಡಲು ಬರುವುದು' ಎಂದು ನುಡಿದರು. ಆ ಹುಡುಗಿಯು ವಂದಿಸಿ ನಕ್ಕಳು. ಶ್ರೀ ಶಾಂತಾರಾಂರವರು 'ನೀನು ಹಸನ್ಮುಖಿಯಾಗಿ ಕಾಣುವಿ. ನಿನಗೆ ಅನುಕೂಲವಾದ ಪಾತ್ರವೊಂದು ದೊರೆತ ಕೂಡಲೆ ನಾನು ನಿನ್ನನ್ನು ಪ್ರಯೋಗವಾಗಿ ಉಪಯೋಗಿಸಿ ನೋಡುವೆನು', ಎಂಬದಾಗಿ ಹೇಳುವುದನ್ನು ಆ ಹುಡುಗಿಯು ಕೇಳಿ ಸಂತೋಷವನ್ನು ವ್ಯಕ್ತಪಡಿಸಿದಳು.

ಈ ರೀತಿಯಾಗಿ ಕುಮಾರಿ ವಾಸಂತಿಯು ಪ್ರಭಾತ್ ಚಲನಚಿತ್ರಗಳಲ್ಲಿ ಪಾತ್ರವಹಿಸಿ ಈಗ ಖ್ಯಾತಿಗಳಿಸಿರುವುದು. ಈಗ ಅವಳು ತಾರುಣ್ಯಾವಸ್ಥೆಯಲ್ಲಿರುವಳು ಅವಳ ಇತ್ತೀಚೆಗಿನ ಚಿತ್ರ ದಿವಾಳಿ ಅಥವಾ ದೀಪಾವಳಿ ಅದನ್ನು ಮುಂಬೈಯ ರಣಜಿತ್ ಫಿಲ್ಮ್ ಕಂಪೆನಿಯವರು ತಯಾರಿಸಿರುವರು

(ವಿ. ಕ.)

ವಾಡಿಯಾ ಮುವಿಟೋನ್

ರಾಜನರ್ತಕಿ

ಈ ಚಿತ್ರವು ಭರದಿಂದ ತಯಾರಾಗುತ್ತಿದೆ. ವಾಡಿಯಾ ಮುವಿಟೋನಿನವರು ಇದರ ಕುರಿತು ಬಹಳ ಸಾಹಸದಿಂದ ದುಡಿಯುತ್ತಿರುವರು ಮಾದು ಬೋಸರು ಈ ಚಿತ್ರದ ಯಶಸ್ವಿತೆಗೆ ಕಾರಣರಾಗುತ್ತಾರೆ ಮುವಿಟೋನಿನವರು ಅವರ ಮೇಲೆ ವಿಶ್ವಾಸವಿಟ್ಟು ಕರ್ತವ್ಯಭಾರವನ್ನು ಹೊರಿಸಿರುವರು ಅಂತರ್‌ರಾಷ್ಟ್ರೀಯ ಪ್ರದರ್ಶನಕ್ಕನುಗುಣವಾಗಿ ಇದರ ಒಂದು ಭಾಷಾಂತರವೂ ತಯಾರಾಗಲಿರುವುದು

ಪ್ರಕಾಶ ಪಿಕ್ಚರ್ಸ್

ಮಾಲಾ

ಮಹೇಂದ್ರ ಠಾಕೂರ್ ಮತ್ತು ಪಿ ಜಯರಾಜ್ ಇವರು ಬಹಳ ಆನಂದಮಯವಾದ ಕಥೆಯನ್ನು ಮನೋಹರ ಚಿತ್ರವಾಗಿ ಪರಿವರ್ತಿಸಿರುವರು ರೋಸ್ ಇದರಲ್ಲಿ ಪ್ರಧಾನ ಪಾತ್ರ ವಹಿಸುತ್ತಾಳೆ ಜಯಂತ್ ಮುಖ್ಯ ಪುರುಷ ಪಾತ್ರ ವಹಿಸುವನು

ಹೊಸ ಚಿತ್ರ

ಸಿ ಎಂ ಲುಹಾರ್ ಈಗ ಮೋಹನ್ ಲಾಲ ದಾವೆಯವರ ಕಥೆಯೊಂದನ್ನು ಚಿತ್ರೀಕರಿಸಲು ಹಂಚಿಕೆಗಳನ್ನು ಅಣಿಗೊಳಿಸುತ್ತಿದ್ದಾರೆ. ಹಿಂದೂ ಜನಾಂಗದ ಕೆಲವು ಅಂಧಾಚಾರಗಳನ್ನು ಈ ಚಿತ್ರವು ಎತ್ತಿತೋರಿಸುತ್ತಿದೆ. ಪ್ರೇಮ ಅದಿಬ್ ಮತ್ತು ಜ್ಯೋತಿ ಜತೆಯಿಂದ ನಟಿಸುವರು

ವಿಜಯಭಟ್

ನಿರ್ದೇಶಕ ವಿಜಯಭಟ್ ಇವರು 'ಭಾರತ್ ಮಿಲಾಪ್' ಎಂಬೀ ಹೊಸ ಚಿತ್ರದ ತಯಾರಿಕೆಯಲ್ಲಿ ಮಗ್ನರಾಗಿರುವರು ಇದು ಮುಗಿದ ಕೂಡಲೇ ಅವರು ಇನ್ನೊಂದು ಪೌರಾಣಿಕ ಚಿತ್ರದ ರಚನೆಗೆ ಕೈಹಾಕುವರೆಂದು ತಿಳಿದಿದೆ

ಸಿಕೋರ್ ಪ್ರೊಡಕ್ಷನ್

ದೀಪಕ್

ಪೃಥ್ವೀರಾಜ್ ನಟಿಸುವ ದೀಪಕ್ ಎಂಬೀ ಚಿತ್ರವು ಬೇಗನೇ ಪ್ರಕಟವಾಗಲಿರುವುದು. ಆಶಾಲತಾ, ಅನಂತಮರಾಠೆ, ನಜೀರ್, ಪಾಂಡ ಇವರೇ, ಮೊದಲಾದವರೂ ಇದರಲ್ಲಿ ನಟಿಸುತ್ತಾರೆ ಇದನ್ನು ಕೇಸರ್ ನಿರ್ದೇಶಿಸುವರು

ವನಮಾಲಾ

ನಿರ್ದೇಶಕ ಮೋಹನಸಿಂಹರಿಂದ ನಿರ್ದೇಶಿಸಲ್ಪಡುವ ವನಮಾಲಾ ಎಂಬೀ ಚಿತ್ರವು ಬೇಗನೇ ಪ್ರದರ್ಶನಕ್ಕೆ ಸಿದ್ಧವಾಗಲಿದೆ ಇದರಲ್ಲಿ ಮಾಯಾ ಬನರ್ಜಿಯು ಮುಖ್ಯ ನಟಿಯಾಗಿ ಅಭಿನಯಿಸುವಳ

ಶಕುಂತಲಾ

ದೇವಕೀ ಬೋಸರ ನಿರ್ದೇಶಕತ್ವದಿಂದ ಶಾಂತಾ ಆಪ್ಟೆ ನಟಿಸುವ ಶಕುಂತಲಾ ಚಿತ್ರದ ತಯಾರಿಯು ಭರದಿಂದ ಸಾಗುತ್ತದೆ

ನೇಶನಲ್ ಸ್ಟುಡಿಯೋಸ್

"ಸಂಸ್ಕಾರ್" ಪ್ರಕಟಿತವಾಗಿದೆ

ನೇಶನಲ್ ಸ್ಟುಡಿಯೋದವರ ಹೊಸ ಚಿತ್ರ 'ಸಂಸ್ಕಾರ್' ಈಗ ಪ್ರಕಟಿತವಾಗಿದೆ ಮಾನವಜೀವನದ ದುಃಖಮಯ ಘಟನೆಗಳನ್ನು ಇದು ಪ್ರದರ್ಶಿಸುತ್ತದೆ ರೋಸ್, ಜ್ಯೋತಿ, ಸುನಲಿನೀದೇವಿ, ಹರೀಶ್ ಇವರೇ ಮೊದಲಾದವರು ನಟಿಸುವರು

ಪೂಜಾ

ನೇಶನಲ್ ಪಿಕ್ಚರ್ಸಿನವರ 'ಪೂಜಾ' ಎಂಬೀ ಚಿತ್ರದ ಪೂರ್ಣತೆಯು ಆಗುತ್ತಾ ಬರುತ್ತದೆ ಇದರ ನಿರ್ದೇಶಕರು ಕರ್ದಾರರು.

ಬಿಜಯಿನಿ

ಎಸೋಸಿಯೇಟೆಡ್ ಡಿಸ್ಟ್ರಿಬ್ಯೂಟರ್ಸ್ ಇವರ ಬಿಜಯಿನಿ ಎಂಬ ಬಂಗಾಳೀ ಚಿತ್ರವು ನಿರ್ದೇಶಕ ತುಲಸಿಯವರಿಂದ ರಚಿತವಾಗುತ್ತಿದೆ

ಸಂತತುಲಸೀದಾಸ—ತೆಲುಗಿನಲ್ಲಿ

ಬೆಜವಾಡದ ಶ್ರೀರಾಮಚಂದ್ರ ಫಿಲ್ಮ್ಸಿನವರು ಸಂತತುಲಸೀದಾಸ ಚಿತ್ರವನ್ನು ತೆಲುಗು ಭಾಷೆಯಲ್ಲಿ ಸಿದ್ಧಗೊಳಿಸುತ್ತಿದ್ದಾರೆ ಇದರ ನಿರ್ದೇಶಕರು ಶ್ರೀ ವಿ. ವಿ ರಾಮಸ್ವಾಮಿ ಇವರು ಆಂಧ್ರದ ಹಲವು ಮುಖ್ಯ ನಟನಟಿಯರು ಇದರಲ್ಲಿ ಅಭಿನಯಿಸುವರು

ಬಾಲಸನ್ಯಾಸಿನಿ

'ಮನಮೋಹಕ ಬಾಲು' ಎಂದು ಮೊದಲು ಹೆಸರಿಡಲಾದ ಈ ಚಿತ್ರವನ್ನು ಈಗ ಕೆಲವಂಶಗಳ ಸುಧಾರಣೆಯೊಂದಿಗೆ ಬಾಲ ಸನ್ಯಾಸಿನಿ ಎಂಬ ಹೆಸರಿನಿಂದ ತೆಗೆಯುತ್ತಿರುವರು ಕೆ ಬಿ ಸುಂದರಾಂಬಾಳ್ ಇದರಲ್ಲಿ ಅಭಿನಯಿಸುವಳ

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

ಕ್ರಮ ಸಂಖ್ಯೆ 277/1937.

R L P No 929/1940

ವಾದಿ — ಮೂಳೆಡ್ಕ ನಾರಾಯಣ ಬಲ್ಲಾಳ

ಅರ್ಜಿದಾರ.

ಮತ್ತು

ಶ್ರೀನಿವಾಸ ರಾವ್ ಸಹಾ— ಪ್ರತಿವಾದಿಗಳು

ಎದ್ರಿರು.

ಇವರೊಳಗೆ

1ನೇ ಪ್ರತಿವಾದಿ ಕೋಣೆ ಎದ್ರು ಶ್ರೀನಿವಾಸ ರಾವ್ ಜೊತೆ ದಾಸಪ್ಪ ಭಟ್ಟನವರ ಮಗ ಉಡುಪಿ ತಾಲೂಕು ಬೆಳಪು ಗ್ರಾಮದ ಮುಲಯಂಗುಳಿ ಎಂಬಲ್ಲಿರುವವರಿಗೆ—

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ ಡಿಕ್ರಿಯ ಹಣಕ್ಕೆ ಡಿಕ್ರಿಯಲ್ಲಿ ಮಾರಾಟಕ್ಕೆ ವಿಧಿಯಿರುವ ನಿಮ್ಮ ಹಕ್ಕಿನ ಸ್ಥಿರಾಸ್ತಿಯನ್ನು ಏಲಂ ಮಾಡುವ ಕುರಿತು ಅರ್ಜಿದಾರನು ಹಾಜ್ರುಪಡಿಸಿದ ಏಲಂ ನಿಸ್ತಿಸಾರು ಮಂಜೂರು ಮಾಡುವ ಕುರಿತು ಸದರಿ ಅಮ್ಲುಜ್ಯಾರಿಯ ತಾರೀಕು 6 12 '40 ಕ್ಕೂ ಮತ್ತು ಸದರಿ ಆಸ್ತಿಯ ಏಲಂ ಸಮಯ ವರಕಾಸ್ತಿಗೆ ನಿಲ್ಲುವರೆ ಅನುಮತಿ ಪತ್ರಿಕೆಯನ್ನು ಕೊಡಬೇಕಾಗಿ ಅರ್ಜಿದಾರನು ಕೊಟ್ಟಿರುವ R E A. No. 1068/1940ನೇ ಅರ್ಜಿಯು ಕೂಡಾ ತಾ. 6 12-'40ಕ್ಕೂ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಣೆಯಿರುವದಾದರೆ ಅದನ್ನು ನೀವು ಸದರಿ ತಾರೀಕಿನಲ್ಲಿ ಬೆಳಿಗ್ಗೆ 10 ಗಂಟೆ ಸಮಯಕ್ಕೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಪಡಿಸಿಕೊಳ್ಳಬಹುದು. ತಪ್ಪಿದಲ್ಲಿ ಸದರಿ ಅಮ್ಲುಜ್ಯಾರಿಯ ಅರ್ಜಿಯೂ ಪರ್ಮಿಶನ್ ಅರ್ಜಿಯೂ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

ಕಾರ್ಕಳ, 7-11-1940 } A. M. S. Achar, Pleader for Petitioner.

Ready for Sale!

1941

SHARADA POCKET DIARIES

Small Size	0—5—0
„ „ (with pocket)	0—6—0
Big Size	0—9—0
„ „ (with pocket)	0—11—0

SHARADA PRESS, MANGALORE.

ವಾರ್ಧಾದ ವಾರ್ತಾ ತರಂಗಗಳು!

(ಗತಸಂಚಿಕೆಯ ಪುಟದಿಂದ)

ವರ್ಕಿಂಗ್ ಕಮಿಟಿಯಿಂದ ಹೊರಗೆ ಬರುವಾಗ ಈ ವಿಷಯಗಳನ್ನು ಸಂಗಾತಿಗಳೊಂದಿಗೆ ಚರ್ಚಿಸಿಯೇ ಇದ್ದರು. ಮೋಟರಿನಲ್ಲಿ ಕೂತರು. 'ನರ್ಸ್' ಮಣಿಬೆನ್ ಅವರ ಚರಕಾ, ಶಾಲು ಕೋಲುಗಳನ್ನು ಸಂಗಡ ಇರಿಸಿದರು. ಮಹದೇವರು ಬರಲು ಯಾಕೋ ವಿಳಂಬವಾಯಿತು. ದಿಗಂತದಲ್ಲಿ ಚಂದ್ರದೇವನು ಪ್ರಶಾಂತವಾಗಿ ಮೆರೆಯುತಿದ್ದನು ಹಿಂದಿನಿಂದ ಡಾ। ಖಾನ್ ಸಾಹೇಬರ ಮೊಮ್ಮಗ 'ಗಾಂಡಿಜಿ, ಗಾಂಡಿಜಿ' ಎಂದಿತು. "ಓ, ಓ, ಯಾರದು? ಹಾ ಇಶ್ಕಾಲನೇ ಏನು ಮಗು? ನಮ್ಮಲ್ಲಿಗೆ ಬರುತ್ತೀಯಾ? 'ಇಲ್ಲಾ' 'ಯಾಕೆ ಇಲ್ಲ ಕೋಪವೇ ನನ್ನ ಮೇಲೆ?' ನನಗ ಹಣ್ಣು ಬೇಕು' 'ಹಾ ಹಣ್ಣು ಕೊಟ್ಟರೆ ರಾಜಿ ಮಾಡುತ್ತೀಯಾ' 'ಇಲ್ಲ' 'ಇಲ್ಲವೇ? ಇನ್ನೇನು ಕೊಡಲಿ?' 'ಮೀನು ಬೇಕು' "ಹಾಹಾ ಮೀನು ಬೇಕೆ? ನಾನೇನು ಬೋಗೀರನೇ, ನನ್ನಲ್ಲಿಲ್ಲ ಇದ್ದರೆ ಅದನ್ನು ಕೊಡುತಿದ್ದೆ ನಿನ್ನ ರಾಜಿಗೆ ಏನೂ ಕೊಡಬಲ್ಲೆ."

ಮರುದಿನ ಬೆಳಿಗ್ಗೆ ಸೇವಾಗ್ರಾಮದಲ್ಲಿ ಮದ್ರಾಸಿನ ಇಬ್ಬರು ಪ್ರೇಮಿಗಳ ಅಂತರ್ಜಾತಿ ವಿವಾಹ ನಡೆಯಿತು. ವರ ಒಬ್ಬ ಸಾರ್ವಜನಿಕ ಕೆಲಸಗಾರ, ಬ್ರಾಹ್ಮಣ ವಧೂ ಡಾಕ್ಟರ್ ಅಬ್ರಾಹ್ಮಣ ಗೋಶಾಲೆಯಿಂದ ಹೊಸದಾಗಿ ಕರುಹಾಕಿದ ದನವನ್ನು ಮಹಾತ್ಮರಲ್ಲಿಗೆ ತಂದರು ಕರುವಿನ ಆಟನೋಡಿ ಮಹಾತ್ಮರು ಐದು ಮಿನಿಟು ಅತ್ಯಾನಂದದಲ್ಲಿ ಕಳೆದರು

ಅದೇ ಮಧ್ಯಾಹ್ನ ೨ ಗಂಟೆಗೆ ವರ್ಕಿಂಗ್ ಕಮಿಟಿಗೆ ಹಾಜರ್ ೫ ಗಂಟೆಗೆ ಅ ಭಾ ಚರಕಾ ಸಂಘದ ಸಭೆಗೆ ಬಂದರು ಪಟ್ಟಾಭಿ ರಾಜಾಜಿ ಜೊತೆಯಲ್ಲಿ ಇದ್ದರು. ಎದುರಿನಲ್ಲಿ ಕೌಜಲಗಿ ಹನುಮಂತರಾಯರು ಸಿಕ್ಕಿದರು. ವಂದನೆಗಳಾದುವು. ಪಟ್ಟಾಬಿ:—ಹ್ಯಾಗಿದೆರಿ ಕರ್ನಾಟಕ ನಿಮ್ಮದು? 'ನಿಮ್ಮ ಆಂಧ್ರದಂತೆ' "ನಮ್ಮದು ಹೈದರಾಬಾದಿಗೆ ಸೇರಿಸುವಂತೆ ನಿಮ್ಮದು ಮೈಸೂರಿಗೆ ಸೇರಿಸುತ್ತೀರೋ?

"ನಮ್ಮೆರಡಕ್ಕೆ ದಾರಿಯಾಯಿತು. ತಮಿಳ್ ನಾಡನ್ನು ಯಾರಿಗೆ ಕೊಡುವುದು?" ರಾಜಾಜಿ:—ಅದನ್ನು ನನಗೆ ಬಿಡಿರಿ ನನ್ನ ಹೆಸರು ರಾಜಾ(ಜಿ) ಗೊತ್ತಿಲ್ಲವೆ? ಗಾಂಧಿಜಿ.-ಯಾರದನ್ನು ಯಾರಿಗೆ ಕೊಡುವ ಹಂಚಿಕೆ ನಿಮ್ಮದು? ಮೈಸೂರಿಗೆ, ಹೈದರಾಬಾದಿಗೆ ಬೇಕಾದಷ್ಟು ಇದೆ. ಪಟ್ಟಾಭಿ ನೀವೆಲ್ಲಾ ಕೂಡಿ ಸಿ. ಆರ್.ರಿಗೆ ಕೊಟ್ಟು ಬಿಡಿರಿ ಮತ್ತವರಿಗೆ ಮಹಾರಾಜಾಜಿ ಅನಿರಿ"

ಸ್ವಲ್ಪ ವೇಳೆಯ ನಂತರ ಚರಕಾ ಸಂಘದ ಚರ್ಚೆಯಲ್ಲಿ ತಲ್ಲೀನರಾದರು. ಮಹಾತ್ಮರು ರಚನಾತ್ಮಕ ಕಾರ್ಯಕರ್ತರೆಲ್ಲರ ಕ್ಷೇಮಸಮಾಚಾರ ವಿಚಾರಿಸಿದರು. ರಾಷ್ಟ್ರೀಯದ ಶುದ್ಧಿ ಇಲ್ಲ ರಾಜಾಜಿಯವರದ್ದಾಗಿಯೇ. ಊಟಕ್ಕೆ ಹೋಗುವ ಸಮಯದಲ್ಲಿ ಪಿ. ಸಿ. ಘೋಷರಿಗೆ ಉಪ್ಪಿನೀರಿಗೆ ಸಂಬಂಧಿಸಿದ ಯಾವುದೊ ವೈಜ್ಞಾನಿಕ ತತ್ವವನ್ನು ವಿವರಿಸುತಿದ್ದರು' ಒಂದು ಸಲ. ಮತ್ತೊಂದು ಸಲ ರೇಡಿಯೋದ ವಿಚಾರ ರಾಜನ್ ಬಾಬುಗಳಿಗೆ ಏನೊ ತಿಳಿಸುತ್ತಿದ್ದರು.

ಪಟ್ಟಾಭಿಯವರ ಇಂಗ್ಲಿಷ್ ಎಲ್ಲರನ್ನೂ ಬೆರಗುಗೊಳಿಸುತ್ತದೆ. ಸರೋಜಿನಿ ಅವರಿಗೆ ಏನೂ ಕಮ್ಮಿ ಇಲ್ಲ, ಅಬ್ದುಲ್ ಕಲಾಂ ಆಜಾದರು ಸದಾ ಹಿಂದಿಯಲ್ಲೇ ಉತ್ತರ ಕೊಡುತ್ತಾರೆ.

ಅತಿಥಿ ಸತ್ಕಾರದ ಪಾಡು ಬಜಾಜರ ಪಾಲಿಗೆ. ಏನೂ ಬೇಕಾದರೂ ಕ್ಷಣದಲ್ಲಿ ಸಿದ್ಧವಾಯು. ಯಾರೊಬ್ಬರಿಗೂ ಒಂದಿಷ್ಟು ಶ್ರಮವಿಲ್ಲ; ತ್ರಾಸಿಲ್ಲ. ಊಟಕ್ಕೆ ಗಂಟೆ ಬಾರಿಸಿದೊಡನೆ ಸ್ವತಃ ಎಲ್ಲರನ್ನು ಜೊತೆಯಲ್ಲಿ ಕೊಂಡುಹೋಗುವರು. ಹಾಲು, ಬೆಣ್ಣೆ, ಕುಪ್ಪ, ಹಣ್ಣು ಇವು ಊಟದ ಮುಖ್ಯ ಸಾಮಾಗ್ರಿಗಳು. ಭೂಲಾಬಾಯ್‌ಯವರು ಸ್ವತಃ ಅಡಿಗೆಯವನನ್ನು ಕರುತ್ತಾರೆ. ವೈದ್ಯಕೀಯ ಸೂಚನೆ ಪ್ರಕಾರ ಅವರ ಆಹಾರ ಕ್ರಮವಿರುವಿದು.

ನಡುವಿನಲ್ಲಿ ಎಲ್ಲರಿಗೂ ಚಹಾ, ಹಾಲು, ಕಾಫಿ, ಸರಬರಾಯಿಯಾಗುತ್ತದೆ ಗಾಂಧಿಜಿಯವರಿಗೆ ಕಿತ್ತಳೇ ಹಣ್ಣಿನ ರಸ ಪ್ಯಾರೇಲಾಲರು ತಯಾರುಮಾಡಿ ಕೊಡಬೇಕು, ಹಣ್ಣುಗಳ ಮಾತ್ರದೇ ದೇಸಾಯಿಯವರು ಪರೀಕ್ಷಿಸಿ ಪಾಸ ಮಾಡಬೇಕು.

ಧುರೀಣರು ಪ್ರಯಾಣ ಹೊರಡುವಾಗ ಬೀಳ್ಕೊಡುವ ದೃಶ್ಯ ಅತ್ಯಂತ ಆದರ ಮಯವಾದುದು ಎಲ್ಲರೂ ಜವನಲಾಲರನ್ನು ಅಪ್ಪಿತಪ್ಪಿಕೊಳ್ಳುವಾಗ ಮನಸು ಉಲ್ಲಸವಾಗುತ್ತದೆ ರಾಜಾಜಿಯವರು ಕೈ ಒತ್ತಿಕೊಳ್ಳುವುದರಲ್ಲಿ ತಮ್ಮ ಪ್ರೀತಿಯ ವಂದನೆಗಳನ್ನು ಸಲ್ಲಿಸುತ್ತಾರೆ ವಲ್ಲಭ್ ಪಂತರನ್ನು ಕುರಿತು ಅವರ 'ನೀವೂ ಬಜಾಜರೂ ಸರಿ ತಪ್ಪಿಕೊಳ್ಳಲು ನನ್ನನ್ನು ತಪ್ಪಿಕೊಂಡರೆ, ಹಾ ಯಾದೀತು ಅಶಕ್ತನಿದ್ದೇನೆ'. ಎಂದರು ಕನ್ನಾಷಿಗಾಗಿ



ಸದ್ಯಕ್ಕೆ ಉಪವಾಸ ವಿಚಾರವಿಲ್ಲ

ವೈಯುಕ್ತಿಕ ಸತ್ಯಾಗ್ರಹ ವಿಸ್ತರಿಸಬೇಕು

ಗಾಂಧಿಜಿಯವರ ನಿರ್ಧಾರ

"ವೈಯುಕ್ತಿಕ ಶಾಸನಭಂಗ ಸತ್ಯಾಗ್ರಹವನ್ನು ವಿಸ್ತಾರಗೊಳಿಸುವ ಉದ್ದೇಶವಿರುವುದರಿಂದ ಉಪವಾಸದ ವಿಚಾರವನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ" ಎಂಬುದಾಗಿ ಮಹಾತ್ಮ ಗಾಂಧಿಯವರು ತಿಳಿಸಿರುವರು.

ಉಪವಾಸದ ವಿಚಾರವಾಗಿ ಗಾಂಧಿಯವರು ಈರೀತಿ ವಿವರಿಸಿ ಹೇಳಿರುವರು:—

"ಉಪವಾಸದಿಂದ ಮಹತ್ವವಾದ ಪರಿಣಾಮವಾಗುತ್ತದೆಂದು ನನಗೆ ನಂಬಿಕೆಯುಂಟು. ನಮ್ಮ ಜೀವನ ಸಮಸ್ಯೆಗಳೆಲ್ಲವನ್ನು ಉಪವಾಸ ಸಾಧನದಿಂದ ಪರಿಹರಿಸಿಕೊಳ್ಳಬಹುದು. ರಾಜಕೀಯ ಸಮಸ್ಯೆಯ ಪರಿಹಾರಕ್ಕೂ ಉಪವಾಸವನ್ನು ಪ್ರಯೋಗಿಸಬಹುದು. ಆದರೆ ಉಪವಾಸ ವ್ರತವನ್ನು ಆಚರಿಸುವ ಸಾಧಕನು ವಿಶೇಷ ಸಿದ್ಧತೆ ಮತ್ತು ಅರ್ಹತೆಗಳನ್ನು ಪಡೆದಿರಬೇಕು. ಎಲ್ಲರಿಗೂ ಇದು ಸಾಧ್ಯವಲ್ಲ. ಶಾಸನ ಭಂಗವನ್ನು ಆಚರಿಸುವದು ಸಹಾ ಎಲ್ಲರಿಗೂ ಸಾಧ್ಯವಲ್ಲ.

"ಕಳೆದ ೩೦ ವರ್ಷಗಳಿಂದಲೂ ನಾನು ಈ ಬಗ್ಗೆ ಆತ್ಮಸಿದ್ಧತೆಯ ಪ್ರಯೋಗಗಳನ್ನು ನಡೆಸಿ ಅನುಭವ ಹೊಂದಿರುತ್ತೇನೆ. ಆದರೆ ಉಪವಾಸವನ್ನಾಗಲೀ ಸತ್ಯಾಗ್ರಹವನ್ನಾಗಲೀ ಯಾಂತ್ರಿಕವಾಗಿ ನಡೆಸಲು ಸಾಧ್ಯವಿಲ್ಲ. ಇದಕ್ಕೆ ಭಗವದನುಗ್ರಹ ಬೇಕು.

ನನಗೆ ಬಂದು ರೀತಿಯಲ್ಲಿ ಅಂತರಾತ್ಮನ ಪ್ರೇರೇಪಣೆಯಾಯಿತು. ಈ ವಿಚಾರದಲ್ಲಿ ನಾನೂ ಸಹ ಸಾಹಸ ಪಡುತ್ತಿದ್ದೇನೆ. ನನ್ನ ಆತ್ಮಶಕ್ತಿಯು ಸಿದ್ಧವಿದ್ದರೂ ದೇಹಶಕ್ತಿಯು ಅಬಲವಾಗಿದೆ. ಉಪವಾಸ ಕಾಲದಲ್ಲಿ ಸಾಕಾದಷ್ಟು ನೀರು ಕುಡಿಯುವುದಕ್ಕೆ ನನಗೆ ಇರುವ ಅಶಕ್ತತೆಯು ನನಗೆ ಗೊತ್ತಿದೆ. ಉಪವಾಸದ ಆರಂಭ ದಿವಸಗಳಲ್ಲಿ ಉಂಟಾಗುವ ದೇಹಯಾತನೆಯು ನನಗೆ ಅನುಭವವಿರುತ್ತದೆ. ದೇಹಶಕ್ತಿಯು ಎಷ್ಟು ಅಬಲವಾಗಿದ್ದರೂ, ಆತ್ಮಶಕ್ತಿ ಮತ್ತು ಭಗವದನುಗ್ರಹವಿದ್ದರೆ ಉಪವಾಸವನ್ನು ವಿಜಯಿಯಾಗಿ ನಡೆಸಬಹುದು. ಆದರೆ ಈಗ ನನಗೆ ಈ ಧೈರ್ಯವು ಇನ್ನೂ ಬಂದಿರುವುದಿಲ್ಲ. ನನಗೆ ಆ ಧೈರ್ಯವುಂಟಾಗುವ ವರೆಗೆ ಉಪವಾಸ ಮಾಡುವುದಿಲ್ಲ.

ಉಪವಾಸ ಮಾಡಬಾರದೆಂದು ನನ್ನನ್ನು ಪ್ರಾರ್ಥಿಸಿದವರೆಲ್ಲರಿಗೂ ನಾನು ಹೇಳುವುದಿಷ್ಟೆ. ತಾಳ್ಮೆಯುಂದಿರಿ. ಆತುರಪಡಬೇಡಿ. ಮುಂದೇನು ಆಗುವುದೋ ನೋಡಿರಿ. ರಾಷ್ಟ್ರಕ್ಕೆ ಈಗೊಂದು ದೊಡ್ಡ ವಿಪತ್ತು ಬಂದಿರುತ್ತದೆ. ಇದರ ಪರಿಹಾರದಲ್ಲಿ ನೀವು ನನಗೆ ಸಹಾಯ ಮಾಡುವುದು ಬಿಡುವುದು ನಿಮ್ಮ ಕೈಲಿದೆ. ನೀವು ನನಗೆ ಸಹಾಯ ಮಾಡಬಹುದಾದ ಅನೇಕ ಮಾರ್ಗಗಳನ್ನು ನಾನು ತೋರಿಸಿಕೊಟ್ಟಿದ್ದೇನೆ.

ಉಪವಾಸ ಕೈಗೊಳ್ಳಬೇಡರೆಂದು ನನ್ನ ಅನೇಕ ಮಿತ್ರರೂ ಹಿತಚಿಂತಕರೂ ನನಗೆ ತಂತೀ ಮೂಲಕ ಪ್ರಾರ್ಥಿಸಿಕೊಂಡಿದ್ದರು. ಅವರೆಲ್ಲರೂ ವಿಚಾರ ಮಾಡಿದ್ದು ನನ್ನ ದೇಹಾರೋಗ್ಯದ ವಿಚಾರವಾಗಿ. ನಾನಿನ್ನೂ ಜೀವದಿಂದ ಇದ್ದರೆ ನನ್ನ ಮೂಲಕ ದೇಶಕ್ಕೆ ಅಧಿಕ ಸೇವೆಯಾಗುವುದೆಂದು ಅವರು ಭಾವಿಸಿದ್ದಾರೆ.

ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ಉಪವಾಸ ವ್ರತವನ್ನು ಪ್ರಯೋಗಿಸುವುದು ವ್ಯರ್ಥವಾದುದೆಂದು ಒಬ್ಬಿಬ್ಬರು ನನ್ನನ್ನು ತೀವ್ರವಾಗಿ ಖಂಡಿಸಿದ್ದಾರೆ. ಉಪವಾಸ ಮಾಡುವುದರಿಂದ ದೇಶದ ರಾಜಕೀಯ ಪರಿಸ್ಥಿತಿಯು ಉತ್ತಮಗೊಳ್ಳುವುದಿಲ್ಲ. ಅಲ್ಲೋಲಕಲ್ಲೋಲವಾಗುತ್ತದೆ. ಸ್ವಾತಂತ್ರ್ಯ ಸಾಧನೆಯಲ್ಲಿ ಸರಕಾರದವರನ್ನು ಎದುರಿಸುವ ಶಕ್ತಿಸಾಮರ್ಥ್ಯಗಳು ಕಡಿಮೆಯಾಗುತ್ತವೆ ಎಂದು ನನ್ನನ್ನು ಆಕ್ಷೇಪಿಸಿದ್ದಾರೆ.

ನನ್ನ ಮಿತ್ರರಿಗೂ, ಆಕ್ಷೇಪಕರಿಗೂ ನಾನು ವಂದಿಸುತ್ತೇನೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ ನಾನೂ ಉಪವಾಸ ವಿಚಾರದಲ್ಲಿ ದೀರ್ಘಚರ್ಚೆ ಮತ್ತು ಪರಿಶೀಲನೆ ನಡೆಸಿದೆವು.

ವೈಯುಕ್ತಿಕ ಸತ್ಯಾಗ್ರಹದ ಕ್ಷೇತ್ರವನ್ನು ವಿಸ್ತರಿಸುವ ಯೋಜನೆಯಿರುವುದರಿಂದ ಉಪವಾಸ ವ್ರತವನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ. ಆದರೆ ಯಾರೇನು ಹೇಳಿದರೂ ನಾನು ಮಾಡಿದ ನಿರ್ಧಾರವು ಸರಿಯಾದುದೆಂದೇ ನನ್ನ ನಂಬಿಕೆಯಾಗಿದೆ. ನಮ್ಮ ವ್ಯವಹಾರ ಜೀವನದಲ್ಲಿ ರಾಜಕೀಯ ಕ್ಷೇತ್ರವನ್ನು ಪ್ರತ್ಯೇಕವಾಗಿ ಇಡಲು ಸಾಧ್ಯವಿಲ್ಲ.

ಉಪವಾಸ ವ್ರತವನ್ನು ಎಲ್ಲರೂ ಆಚರಿಸಲು ಸಾಧ್ಯವಿಲ್ಲ. ಕಾನೂನು ಭಂಗದ ವಿಚಾರವೂ ಹಾಗೆಯೇ. ಕಾನೂನು ಭಂಗವನ್ನು ಆಚರಿಸಲು ತಕ್ಕ ಅರ್ಹತೆಗಳೂ, ಶಿಸ್ತೂ ಶಿಕ್ಷಣ ತರಬೇತೂ ಆವಶ್ಯಕವಾಗಿದೆಯಷ್ಟೆ. ಉಪವಾಸವನ್ನು ಆಚರಿಸಲು ಇದಕ್ಕಿಂತಲೂ ಅಧಿಕವಾದ ಶ್ರಮಸಾಧನೆಗಳೂ, ಸಿದ್ಧತೆಗಳೂ, ಆವಶ್ಯಕವಾಗಿರುತ್ತವೆ.

ಇವೆಲ್ಲ ಅರ್ಹತೆಗಳನ್ನು ನಾನು ಅನುಭವದಿಂದಲೂ ಸಾಧನೆಗಳಿಂದಲೂ ಪಡೆದಿರುತ್ತೇನೆ. ದೇವರು ನನಗೆ ಇಂತಹ ಅವಕಾಶಗಳನ್ನು ದಯಪಾಲಿಸಿರುತ್ತಾನೆ. ೧೯೦೭–೧೯೦೮ನೆ ಇಸವಿಯಿಂದ ಅಂದರೆ ಕಳೆದ ೩೦ ವರ್ಷಗಳಿಂದಲೂ ನನಗೆ ಈ ವಿಚಾರಗಳಲ್ಲಿ ಸತತ ಅನುಭವವುಂಟಾಗಿರುತ್ತದೆ.

ಈಗ ಪ್ರಕೃತ ಸನ್ನಿವೇಶದಲ್ಲಿ ಉಪವಾಸ ಮಾಡುವ ಆವಶ್ಯಕತೆ ಬಗ್ಗೆ ನನಗೆ ಅತ್ಮಪ್ರೇರೇಪಣೆಯಾಗಿದ್ದರೂ, ನನಗಿನ್ನೂ ಸಾಕಷ್ಟು ಧೈರ್ಯವೂ ಶಕ್ತಿಯೂ ಉಂಟಾಗಿಲ್ಲ. ಭಗವದನುಗ್ರಹದಿಂದ ಅದೂ ಪಡೆಯಬೇಕು. ಆದ್ದರಿಂದ ನನ್ನ ಮಿತ್ರರೂ ಆಕ್ಷೇಪಕರೂ ಎಲ್ಲರೂ ಸಮಾಧಾನದಿಂದಿರಬೇಕು. ಅವರು ನನಗೆ ಸಾಧ್ಯವಾದ ಸಹಾಯಗಳೆಲ್ಲವನ್ನು ಮಾಡುವವರಾಗಲಿ.

ಹರಿಜನ ಪತ್ರಿಕೆಯು ನಿಂತು ಹೋಗಿರುವುದರಿಂದ ಸಾರ್ವಜನಿಕ ಹೇಳಿಕೆಗಳನ್ನು ಕೊಡುವ ಅಭಿಲಾಷೆಯು ನನಗೆ ಈಗ ಇಲ್ಲದಂತಾಗಿದೆ. ನನ್ನ ಮಿತ್ರರೆಲ್ಲರಿಗೂ ಹಿತಚಿಂತಕರೆಲ್ಲರಿಗೂ ಅವರ ಪ್ರಾರ್ಥನೆ ಬಗ್ಗೆ ವಂದಿಸಬೇಕಾದ ಆವಶ್ಯಕತೆ ಉಂಟಾಗಿರುವುದರಿಂದ ಈ ಹೇಳಿಕೆಯನ್ನು ಕೊಟ್ಟು ಎಲ್ಲರನ್ನೂ ವಂದಿಸುತ್ತೇನೆ. ಯಾರೂ ಕಳವಳಗೊಳ್ಳದಿರಲಿ. ಎಲ್ಲರೂ ಸಮಾಧಾನ ಶಾಂತಿಯಿಂದಿರಲಿ.

ಹರಿಜನ ಪತ್ರಿಕೆಗಳನ್ನು ಇನ್ನುಮುಂದೆ ಹೊರಡಿಸುವುದಿಲ್ಲ. ಹರಿಜನ ವಾರಪತ್ರಿಕೆಯನ್ನೂ ಅದಕ್ಕೆ ಸಂಬಂಧಪಟ್ಟ ಇತರ ಎರಡು ವಾರ ಪತ್ರಿಕೆಗಳನ್ನೂ ನಿಲ್ಲಿಸಿಬಿಡುತ್ತೇನೆ. ಹರಿಜನ ವಾರ್ತಾಪತ್ರಿಕೆಯ ಉಪಸಂಹಾರ ಸಂಚಿಕೆಯಲ್ಲಿ ಈ ವಿಚಾರವೆಲ್ಲವನ್ನೂ ತಿಳಿಸುವೆನು."

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಮೈಯ ಚರ್ಮವನ್ನು ಸೌಂದರ್ಯಮಯವಾಗಿಯೂ ಆರೋಗ್ಯ ಸ್ಥಿತಿಯಲ್ಲಿರಿಸುವಂತೆಯೂ ಔಷಧಿಕರಿಸಿರುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ವಾದ ನೊರೆಯು ಚರ್ಮರಂಧ್ರಗಳಿಂದ ಕಲ್ಮಶಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಬೆಣ್ಣೆಯಂತೆ ಗುಣವುಳ್ಳದ್ದಾಗಿದೆ. ಒರಟಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಸಾಬೂನು
CUTICURA SOAP

HALFTONE & LINE
BLOCK MAKING
UNDERTAKEN
Sharada Press,
MANGALORE

NOTICE

G. H. S. Old Boys' Association.

Will celebrate the Founder's Day on Tuesday the 19th November 1940 in the Canara High School Premises. A public meeting will be held at 5-15 p. m. on that date at which M. K. Nambyar Esq., LL. M. (Lond.) Bar-at-Law Government Pleader and Public Procecutor has kindly consented to preside. G. Somashekhara Rao Esq., B.A ,B.L will deliver the Commemoration Address.

In connection with the celebration of the Founder's Day an exhibition of handwork and needle-work by the pupils of the Canara Girls' School, a sale of ready-made garments suitable for children's wear and a lucky dip will be arranged which will be open from 9 a. m. to 12 noon and from 2 p. m. to 4-30 p. m.

All Old Students of the Canara High School and Canara Girls' School, sympatisers and parents of pupils are cordially invited to attend the Founder's Day Celebration.

Canara High School, Mangalore. 11-11-1940.

G. U. Prabhu,
G. S. Nagarkar
Hon. Secretaries.

ವಿಜ್ಞಾನಯುಗ

ಯುದ್ಧವು ಅನೇಕ ರೋಗಗಳ ಔಷಧಿ

ಜನಾಂಗಗಳೊಳಗಿನ ಹೋರಾಟಗಳಿಂದ ಜಗತ್ತು ಆರ್ಥಿಕ ರಾಜಕೀಯ ಇತ್ಯಾದಿ ಅನೇಕ ಬಗೆಯ ವಿಪತ್ತುಗಳಿಗೆ ಬಲಿಯಾಗುವದನ್ನು ಕಣ್ಣಾರೆ ಕಾಣುತ್ತೇವೆ. ಯುದ್ಧಾನಂತರ, ಯುದ್ಧದ ಪರಿಣಾಮವಾಗಿ ಜಗತ್ತಿನಲ್ಲೆಲ್ಲ ಅನೇಕ ರೋಗಗಳು ಕಾಣಿಸಿಕೊಂಡು ಅವುಗಳ ಬೇನೆಯಿಂದ ಮಿಲಿಯಾಂತರ ಜನರು ಅಕಾಲದಲ್ಲಿ ಸಾಯುವದು ನಮ್ಮ ಅನುಭವಕ್ಕೆ ಬಂದ ವಿಷಯವಾಗಿದೆ. ಆದರೆ ಈ ಯುದ್ಧಗಳು ಅನೇಕ ರೋಗಗಳಿಗೆ ಔಷಧಿ ಆಗಿರುವದೆಂದೂ ಲಂಡನಿನ ಒಬ್ಬ ಡಾಕ್ಟರರು ಹೇಳಿರುವರು! ಯುದ್ಧಗಳಿಂದ ನರಗಳ ದುರ್ಬಲತೆಗೆ ಸಂಬಂಧಪಟ್ಟ ರೋಗಗಳು ಹೆಚ್ಚಾಗುತ್ತವೆಯೆಂದು ಎಲ್ಲ ಕಡೆಗಳಲ್ಲಿ ಹರಡಿರುವ ಅಭಿಪ್ರಾಯಕ್ಕೆ ಆಧಾರವಿರುವದಿಲ್ಲವೆಂದು ಅವರು ತಿಳಿಸಿದ್ದಾರೆ. ಅದರ ಬದಲಿಗೆ ಯುದ್ಧ ಸಮಯಗಳಲ್ಲಿ ಇಂಥ ರೋಗಗಳು ಕಡಿಮೆಯಾಗಿ ಇರುತ್ತವೆಂದೇ ಅವರು ವಾದಿಸಿದ್ದಾರೆ. ಬೇರೆ ಬೇರೆ ವಿಷಯಗಳ ಕುರಿತು ಯೋಚಿಸಲಿಕ್ಕೆ ಅವಕಾಶವಿಲ್ಲದಿರುವದರಿಂದ ಮನಸ್ಸು ಅಸ್ವಸ್ಥವಾಗಿ ರೋಗಗಳು ಬರುತ್ತವೆ. ಆದರೆ ಯುದ್ಧ ಸಮಯದಲ್ಲಿ ಯೋಚಿಸಲಿಕ್ಕೆ ಬಹಳ ವಿಷಯಗಳು ಇರುವದರಿಂದ ಹಿಸ್ಟೀರಿಯದಂಥ ರೋಗಗಳು ಅಪರೂಪವಾಗುತ್ತವೆ.

ಬಾಣಂತಿಯರಿಗೆ ವೀಳ್ಯದೆಲೆ

ಹಿಂದೂದೇಶದಲ್ಲಿ, ಅದರಲ್ಲೂ ಮುಖ್ಯವಾಗಿ ಹಿಂದೂ ಮನೆತನಗಳಲ್ಲಿ ಸ್ತ್ರೀಯರು ಬಾಣಂತಿಯರಾದಾಗ ಅವರಿಗೆ ಜಗಿಯಲಿಕ್ಕೆ ವೀಳೆಯದೆಲೆಯನ್ನು ಧಾರಾಳವಾಗಿ ಕೊಡುತ್ತಿರುವದು ಒಂದು ಪದ್ಧತಿಯಾಗಿದೆ. ಆದರೆ ಇದು ಬರಿಯ ಪದ್ಧತಿಯಾಗಿರುವಷ್ಟೇ ಅಲ್ಲ, ಅದರಲ್ಲಿ ಒಂದು ವೈಜ್ಞಾನಿಕ ತತ್ವವೂ ಅಡಗಿರುತ್ತದೆ. ಸ್ತ್ರೀಯು ಮಗುವನ್ನು ಹೆತ್ತಾಗ ಕೆಲ್ಶಿಯಂ ಎಂಬ ಒಂದು ವಸ್ತುವನ್ನು ಬಹಳ ಕಳೆದುಕೊಳ್ಳುತ್ತಾಳೆ. ಈ ವೀಳ್ಯದೆಲೆಯಲ್ಲಿ ಈ ಲವಣವು ತುಂಬಾ ಇದೆ. ಬಾಣಂತಿಯು ಈ ಎಲೆಗಳನ್ನು ಜಗಿದು ಜೀರ್ಣಿಸಿಕೊಳ್ಳುವದರಿಂದ ಅವಳು ಕಳಕೊಂಡ ಕೆಲ್ಶಿಯಂ ಲವಣವು ಬಹಳ ಮಟ್ಟಿಗೆ ಶರೀರದಲ್ಲಿ ಕೂಡಿಬಂದು ಮೊದಲಿನ ಆರೋಗ್ಯವನ್ನು ಪುನಃ ಪಡೆಯಲಿಕ್ಕೆ ಅನುಕೂಲವಾಗುತ್ತದೆ. ಇದನ್ನು ತಿಳಕೊಂಡೇ ನಮ್ಮ ಪೂರ್ವಜರು ಈ ವಿಧಿಯನ್ನು ನಿರ್ಮಿಸಿರಬೇಕು.

ಕೆಲವು ವಿಚಿತ್ರ ವೈಜ್ಞಾನಿಕ ಸಂಶೋಧನೆಗಳು

ವಿಜ್ಞಾನಿಗಳ ದೃಷ್ಟಿ ಯಾವದಾದರೂ ಒಂದೆರಡು ವಿಷಯಗಳ ಕಡೆಗೆ ಮಾತ್ರ ಹೋಗಿರುವದಿಲ್ಲ. ಪ್ರಪಂಚದ ಎಲ್ಲ ವಿಷಯ ವಿಭಾಗಗಳ ಮೇಲೆ ಅವರ ದೃಷ್ಟಿ ಬಿದ್ದಿದೆ. ಅವರು ಈಚೆಗೆ ಮಾಡಿದ ಕೆಲವು ಶೋಧನೆಗಳು ತುಂಬಾ ಅದ್ಭುತವಾಗಿರುವವು. ಒಬ್ಬ ವಿಜ್ಞಾನಿಯು ಕಚ್ಚದ ಜೇನುಹುಳಗಳ ಜಾತಿಯನ್ನು ತಯಾರಿಸಿದ್ದಾನೆ. ಇನ್ನೊಬ್ಬನು ರಬ್ಬರಿನಂತೆ ಕೋಮಲವಾದ, ಪರಂತು ಗಾಜಿನಂತೆ ಪಾರದರ್ಶಕವಾಗಿರುವ ಒಂದು ಸಾಮಗ್ರಿಯನ್ನು ಕಂಡು ಹಿಡಿದಿದ್ದಾನೆ. ಇನ್ನು ಕೆಲವರು ವಿಜ್ಞಾನಿಗಳು ಜಡದಿಂದ ಚೇತನವು ಬರುವ ರಹಸ್ಯವನ್ನು ಕಂಡುಹಿಡಿಯುವ ಮಹತ್ಕಾರ್ಯದಲ್ಲಿ ತೊಡಗಿರುವರು. ಅವರಿಗೆ ಈ ರಹಸ್ಯವು ತಿಳಿದರೆ ಮತ್ತೆ ಪ್ರಪಂಚದಲ್ಲಿ ಜಡವೆಂಬುದು ಇರಲಿಕ್ಕೇ ಇಲ್ಲ. ಜಗತ್ತೆಲ್ಲ ಚೇತನಮಯವಾಗುವದು. ಬೇರೆ ಕೆಲವರು ವಿಜ್ಞಾನಿಗಳು ಮಾಡುತ್ತಿರುವ ಪ್ರಯತ್ನಗಳು ಸಫಲವಾದರೆ ಹೇಂಟೆಗಳು ಕೊಡ್‌ಲಿವರ್ ಎಣ್ಣೆಯ ತತ್ತಿಗಳನ್ನು ಇಡಬಹುದು. ಪಕ್ಷಿಗಳ ಮೊಟ್ಟೆಗಳಲ್ಲಿ ನಮ್ಮ ಇಚ್ಛಾನುಸಾರವಾದ ಆಕಾರಗಳಲ್ಲಿರಬಹುದು. ಮಸಿ, ನವಸಾಗರ ಅಥವಾ ಉಪ್ಪಿನ ಹರಳುಗಳಿಂದ ಸುಂದರವಾದ ಸುಗಂಧಿತ ಹೂಗಳನ್ನು ಬೆಳೆಸಬಹುದು! ಮತ್ತೆ ಮರಗಿಡಗಳಲ್ಲಿ ಬೆಳೆಯುವ ಹಣ್ಣು ಹಂಪಲುಗಳು ನಮ್ಮಗೆ ಬೇಕುಬೇಕಾದ ಆಕಾರಗಳಲ್ಲಿ ಇರಬಹುದು. ಹೀಗೆಲ್ಲಾ ಮಾಡಲು ವೈಜ್ಞಾನಿಕರು ಯತ್ನಿಸುತ್ತಿದ್ದಾರೆ.

'ಶೇಕ್‌ಹೇಂಡ್' ಪದ್ಧತಿ ತ್ಯಾಜ್ಯವಾಗಿದೆ

ಪಾಶ್ಚಾತ್ಯ ಸಭ್ಯತೆ ಸಂಸ್ಕೃತಿ ಅಥವಾ ಶಿಷ್ಟಾಚಾರಗಳಿಗೆ ಹುಚ್ಚಾದ ನಮ್ಮ ಕೆಲವರು ಅವರನ್ನು ಅನುಕರಿಸಿ ತಮ್ಮ ಇಷ್ಟಮಿತ್ರರು ಅಥವಾ ಬಂಧುಬಾಂಧವರು ಎದುರುಗೊಂಡಾಗ ಅವರಿಗೆ ಹಸ್ತಲಾಘವ ಅಥವಾ ಶೇಕ್ ಹೇಂಡ್ ಕೊಟ್ಟು ತಮ್ಮ ಸಂತೋಷವನ್ನು ವ್ಯಕ್ತಮಾಡುತ್ತಾರೆ. ಆದರೆ ಈ ಪದ್ಧತಿಯು ತ್ಯಾಜ್ಯವಾಗಿರುವದೆಂದು ಪಾಶ್ಚಾತ್ಯ ವಿಜ್ಞಾನಿಗಳೇ ಹೇಳಿರುವರು. ಯಾಕೆಂದರೆ ಪರಸ್ಪರ ಕೈಗಳನ್ನು ಹಿಡಿದು ಕುಲುಕಿದಾಗ ಒಬ್ಬರ ರೋಗಗಳು ಇನ್ನೊಬ್ಬರಿಗೆ ಹರಡಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ. ಇದಕ್ಕಿಂತ ಎರಡೂ ಕೈಗಳನ್ನು ಜೋಡಿಸಿ ನಮಸ್ಕಾರಕೊಡುವ ಹಿಂದುಗಳ ಪ್ರಾಚೀನ ಕ್ರಮವು ಸಂತೋಷ ಮತ್ತು ಶ್ರದ್ಧೆಯನ್ನು ವ್ಯಕ್ತಮಾಡಲಿಕ್ಕೆ ಉತ್ತಮವಾಗಿದೆ.

ಸತ್ತವರನ್ನು ಬದುಕಿಸುವ ವಿಚಾರ

ಬದುಕಿರುವವರನ್ನು ಸಾಯಗೊಳಿಸಲಿಕ್ಕೆ ಅಮೇರಿಕದಲ್ಲಿ ವಿದ್ಯುಚ್ಛಕ್ತಿಯ ಕುರ್ಚಿಗಳನ್ನು ಉಪಯೋಗಿಸುತ್ತಾರೆ. ಅಲ್ಲಿ ಆ ಮರಣಾಂತರ ಶಿಕ್ಷೆಯಾದವರನ್ನು ಈ ಕುರ್ಚಿಯ ಮೇಲೆ ಕೂತುಕೊಳ್ಳಿಸಿ ವಿದ್ಯುತ್ತನ್ನು ಹರಿಯಬಿಡುವರು. ಅದು ಕೂತುಕೊಂಡವನ ಶರೀರದಲ್ಲಿ ಸಂಚರಿಸಿ ಕ್ಷಣಮಾತ್ರದೊಳಗೆ ಅವನು ಸತ್ತುಹೋಗುವನು. ಈಗ ಕೆಲವು ವಿಜ್ಞಾನಿಗಳು ಇಂತಹುದೇ ಒಂದು ಕುರ್ಚಿಯ ಮೇಲೆ ಕೂತುಕೊಳ್ಳಿಸಿ ವಿದ್ಯುತ್ತನ್ನು ಹರಿಯಬಿಟ್ಟು ಸತ್ತವನನ್ನು ಬದುಕಿಸಲಿಕ್ಕೆ ಪ್ರಯತ್ನಿಸಿದ್ದಾರೆ. ಜೀವಕ್ಕೆ ಶಕ್ತಿಯು ಮೂಲವಾಗಿದೆ. ನಾಶಕ್ಕೂ ಅದೇ ಕಾರಣವಾಗಿದೆ. ನಾಶಕ್ಕೆ ಕಾರಣವಾದ ಶಕ್ತಿಯು ಜೀವನಕ್ಕೆ ಹೇಗೆ ಮೂಲವಾಗುವದು ಎಂಬುದನ್ನು ತಿಳಿದ ಮೇಲೆ ಇಂಥ ಒಂದು ಕುರ್ಚಿಯನ್ನು ಕಂಡುಹಿಡಿಯುವುದು ಕಷ್ಟವಲ್ಲ.

TENDER NOTICE

Sealed tenders from registered contractors will be received up to 2 P. M. on the 25th day of November 1940 for reconstruction of the culvert in mile 38/4 of Mangalore Mysore Trunk road No. A 22 Estimate for Rs 2420/ Tender documents plans etc., can be seen in the District Board Engineer's office, Mangalore during office hours and can be obtained on payment of Rs 5/- per set, which amount will on no account be refunded.

Mangalore 5 11-1940 — District Board Engineer, South Kanara

ನಮ್ಮ ಕಂಪೆನಿಯಲಿ

★

ಬೆಂಕಿಯ ಅನಾಹುತ

★

ಕಡಲಿನ ಅಪಾಯ

★

ವ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!

★

ಹೆಚ್ಚಿನ ಮಾಹಿತಗಳನ್ನು ನಮ್ಮ ಸ್ಥಳೀಯ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-

+

ಸರ್ವಸಾಧಾರಣ ಬೋನಸ್ ರೂ. 11/

ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಮುಂಬಾಯಿ

ಕೆ. ಎನ್. ನಾಯಕ್, ಆರ್ಗನೈಸರ್, ...ಂಡ್ ಪೇಟೆ, ಮಂಗಳೂರು.

ಅಥವಾ

ಕೆ. ಕೆ. ಶ್ರೀನಿವಾಸನ್, ಬ್ರಾಂಚ್ ಮ್ಯಾನೇಜರ್, 4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ದಿ ಕಂಬೈನ್ಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 15-11-1940ರಿಂದ ಕುಳುಗುಂದ ಜಾನುವಾರ ಸಂತೆ ತಾ. 29-11-1940ರ ವರೆಗೆ

ತಾ. 25-11-1940ರಿಂದ ಶ್ರೀ ಧರ್ಮಸ್ಥಳ ಲಕ್ಷ ದೀಪೋತ್ಸವ ತಾ. 29-11-1940ರ ವರೆಗೆ

(ತಾರೀಕು 29—11—1940ರಲ್ಲು ಲಕ್ಷದೀಪೋತ್ಸವ)

ತಾ. 30-11-1940ರಿಂದ ಶ್ರೀ ಸುಬ್ರಹ್ಮಣ್ಯ ಷಷ್ಟೀ ಸಮಾರಂಭ 5-12-1940ರ ವರೆಗೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು

JOINT MANAGERS.

The Combined Booking Agency, MANGALORE. **The Joint Booking Office,** KODIALBAIL.

ಗುಣಬಾರದಿದ್ದರೆ , ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರು ವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು, ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ನಮ್ಮ ಸರ್ಟಿಫಿಕೇಟು-ಇಾ ವೈದ್ಯ ಎಲ್ ಸಿ ಪಿ ಎಸ್, ಕೆಳಹಾಕಿರುವರು, ಇಡೀ ಈ ಚೂರ್ಣದಿಂದ ಯಾವ ತರದ ಅಪಾಯವೂ ಅ ದ್ಯ ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ ೪-೦-೦ ವಿ. ಪಿ. ೭ ಆ

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೊ. ಮಿರಜಿ, S M C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸಾಹುಕಾರ ಶ್ರೀನಿವಾಸ ರಂಗಪ್ಪೈ

[ಸ್ಥಾಪನೆ ಕ್ರಿ ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತ್ರಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

ಮಂಗಳೂರು ಪೇಟೆಯ ಧವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆ[ಗೆ]
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	—	
,, ದುಯಂ ,, ,,	1—15—0	
,, ಅವ್ವಲ್ ಸುಗ್ಗಿ ,,	4 6—0	4—9—[illegible]
,, ದುಯಂ ,, ,,	4—4—0	
ಅಕ್ಕಿ ಅವ್ವಲ್ ಗುಡ್ಡು ,,	4—12—0	4—12—
,, ದುಯಂ ,, ,,	4—2—0	4—10—
,, ಅವ್ವಲ್ ಸುಗ್ಗಿ ,,	4— 9—0	4—10—
,, ದುಯಂ ,, ,,	4— 4—0	4— 6—
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	40— 0—0	45 — 0—
,, ಸಿಪ್ಪೆ ಇದ್ದದ್ದು ,,	42—8—0	47 — 8—
ಕೊಬ್ಬರಿ [illegible] ಖಂಡಿಗೆ	55— 0—0	
[illegible] ,,	70—0—0	—
[illegible]	4—0—0	4—1—
[illegible] 1000ಕ್ಕೆ	8— 0—0	8— 8—
[illegible]	3—12—0	4— 0—
[illegible]	35— 0—0	40— 0—
[illegible]	[illegible] 8—0	14— 0—

Regd. No. M 340

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 15—11—1940 [ಸಂಚಿಕೆ 46

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 142 Crores
Total Funds exceed	Rs 152 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time This is the unique opportunity to Agents to put through larger business To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs

The Bombay Life Building,

Sir Lalubhai Samaldas Road

Gandhi Nagar, UDIPI.

OR ANY OF OUR FOLLOWING OFFICES AT

Puthiyara	Car Street	Central Station Road
Calicut	Mangalore	Trivandrum
Gautam Nivas, Girgaum Road	Post Box No 37	Visweswarapuram Circle,
Girgaum Bombay No 4	Mount Road Madras	Bangalore City

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಪ್ರಮುಖ ಊರುಗಳಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

ಇಂದು ವಿಲಾಯತಿಗಳಿಗೆ ಜನರ ಪ್ರೀತಿಯಿಂದ ಉಪಯೋಗದಲ್ಲಿರುವ ವಸ್ತುವೆಂದರೆ.

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Estd. 1906

ಸ್ವದೇಶಾಭಿಮಾನಿ

SWADESHABHIMANI

ಶ್ರೀ ಬಿ. ಜಿ. ಖೇರ್

ಡಾ ರಾಜನ್

KANNADA ILLUSTRATED WEEKLY

[illegible]

ಹಾಸನ ಜಿಲ್ಲಾ [illegible]

ದನಗಳ ಪ್ರದರ್ಶನ

೧೯೪೦-೪೧ನೇ ಸಾಲಿನ ಹಾಸನ [illegible] ಪ್ರದರ್ಶನ ಕ್ಷೇತ್ರದಲ್ಲಿ [illegible] ದನಗಳ ಪ್ರದರ್ಶನವು ೧೯೪೧ನೇ ಜನವರಿ ತಾ. ೨ನೇ ಗುರುವಾರ ಪ್ರಾರಂಭವಾಗಾಯ್ತು ೬ನೇ ತಾರೀಖು ಸೋಮವಾರದ ಪರಿಯಂತರ ನಡೆಯುತ್ತದೆ.

೨. ಪ್ರದರ್ಶನಕ್ಕೆ ಬರತಕ್ಕ ಪ್ರತಿ ರಾಸು ಒಂದಕ್ಕೆ ಎರಡು ಆಣೆಯಂತೆ ಫೀಜು ವಸೂಲು ಮಾಡಲಾಗುತ್ತದೆ. ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲು ಮಾಡುವ ಫೀ ಬಾಬನ್ನು ಮತ್ತು (ಮುನಿಸಿಪಲ್) ಜಾಗದಲ್ಲಿ ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನು ಸಹ ತಾರೀಖು ೧೦-೧೨-'೪೦ನೇ ಮಂಗಳವಾರ ಮಧ್ಯಾಹ್ನ ೨ ಗಂಟೆಗಾಗಾಯ್ತು ಹಾಸನದ ಸಂತೆ ಬಳಿಯಿರುವ ಆಕ್ಟ್ರಾಯಿ ಕಟ್ಟೆ ಬಳಿ ಬಹಿರಂಗ ಕ್ಯಾಟಲ್ ಶೋ ಕಮಿಟಿ ಪ್ರೆಸಿಡೆಂಟರು, ಯಾ ಮುನಿಸಿಪಲ್ ವೈಸ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತದೆ. ಅಂಗಡಿ-ನಾಟಕ-ಸಿನೇಮಾ ವಗೈರೆಗಳಿಗಾಗಿ—ವಿಂಗಡಿಸಿರುವ ಜಾಗಗಳನ್ನು ತಾರೀಖು ೧೫-೧೨-'೪೦ರ ಒಳಗಾಗಾಯ್ತು ಹಾಸನ ಟೌನ್ ಮುನಿಸಿಪಲ್ ಆಫೀಸಿನಲ್ಲಿ ವಿಲೇವಾರಿ ಮಾಡಲು ಉಪಕ್ರಮಿಸಿತ್ತು.

೩. ಪ್ರದರ್ಶನದ ಮೈದಾನದಲ್ಲಿ ಜನ ಜಾನುವಾರುಗಳಿಗೆ ಸಮೃದ್ಧಿಯಾಗಿ ನೀರು, ಮತ್ತು ಜಾನುವಾರುಗಳಿಗೆ ಮೇವಿಗಾಗಿ ಹುಲ್ಲು ಸಹ ದೊರೆಯುತ್ತದೆ. ಅಲ್ಲದೆ ಸ್ಥಳ ನೈರ್ಮಲ್ಯ ವಿಚಾರದಲ್ಲಿಯೂ ಜನ ಜಾನುವಾರುಗಳ ಆರೋಗ್ಯಭಾಗ್ಯ ವಿಷಯದಲ್ಲಿಯೂ ಹೆಚ್ಚು ಗಮನ ವಹಿಸಿ ನೋಡಿಕೊಳ್ಳಲು ವೈದ್ಯಶಾಲೆಗಳೂ ಪ್ರದರ್ಶನ ಕಾಲದಲ್ಲಿ ಜನಗಳ ಸೌಕರ್ಯಕ್ಕಾಗಿ ಅಲ್ಲಿಯೇ ಹಂಗಾಮಿಯಾಗಿ ಪೋಸ್ಟು ಆಫೀಸು ಮತ್ತು ಜನರಕ್ಷಣೆ, ಧನರಕ್ಷಣೆಗಾಗಿ ಪೋಲೀಸಿನವರ ಸಹಾಯವನ್ನೂ ಕಲ್ಪಿಸಲಾಗುತ್ತದೆ.

೪. ಪ್ರದರ್ಶನ ಕಾಲದಲ್ಲಿ ಉತ್ತಮವಾದ ರಾಸುಗಳಿಗೆ ದೊರೆಯತಕ್ಕ ಬಹುಮಾನವನ್ನೂ ವ್ಯವಸಾಯ ಪ್ರದರ್ಶನ ಲಾಭವನ್ನೂ ಲಾಭಕರವಾದ ಧನಗಳ ಮತ್ತು ಎಲ್ಲಾ ವಿಧವಾದ ವ್ಯಾಪಾರ ಸೌಕರ್ಯಗಳನ್ನೂ ನಾಟಕ ಸಿನೆಮಾ ವಗೈರೆ ಆಟಪಾಟಗಳ ದೃಶ್ಯವನ್ನು ಉಪಯೋಗಿಸಿಕೊಂಡು ಲಾಭ ಪಡೆಯಲೆಂದು ಕೋರಿದೆ.

೫. ಅಲ್ಲದೆ ಬಹುದೂರದಿಂದ ಈ ಸಂದರ್ಭದಲ್ಲಿ ವಿಶೇಷವಾಗಿ ಬರತಕ್ಕ ನಮ್ಮ ರೈತ ಬಾಂಧವರ ಸಂತೋಷಾರ್ಥವಾಗಿ ವಿಧವಿಧವಾದ ಆಟಪಾಟಗಳನ್ನು [illegible] ಅದರಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಕೊಡಲು ನಿರ್ಧರಿಸಿರುತ್ತೆ.

6-11-'40 ಹಾಸನ | [illegible]

NOTICE

Wanted a Harijan Clerk for the Attur and Jawahar Bank, Ltd., Mangalore. Candidates must be S. S. L. C. who have passed Banking. Salary Rs. 15—30. Apply to the undersigned.

Office of the Bank, Canara High School Road, 14—11—1940 | A. Vaikunta Prabhu, Managing Director. Attur & Jawahar Bank, Ltd., Mangalore.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈಸ್ಕೂಲ್ ರಸ್ತೆ, ಮಂಗಳೂರು

ಈ ಬ್ಯಾಂಕಿಗೆ 15-20 ವರ್ಷ ಪ್ರಾಯದೊಳಗಿನ I ಫೋರ್ಮು ವರೆಗೆ ಕಲಿತ ಒಬ್ಬ ಎಟೆಂಡರ್ ಬೇಕಾಗಿದೆ. ಸಂಬಳ ರೂ. ೮ರಿಂದ 12ರ ವರೆಗೆ ಕೊಡಲಾದೀತು. ಅರ್ಜಿದಾರರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು, ಹರಿಜನ ಜಾತಿಯವರ ಅರ್ಜಿಗೆ ಹೆಚ್ಚಿನ ಗಮನ ಕೊಡಲಾದೀತು.

ಮಂಗಳೂರು 14-11-'40 | ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್, ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಮಂಗಳೂರು.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸ್ವದೇಶಾಭಿಮಾನಿಗೆ [illegible]

'ಓವಲ್ಟಿನ್' ಮಿದುಳನ್ನೂ ನರವನ್ನೂ ಪೋಷಿಸುವುದು

ಆರೋಗ್ಯವನ್ನೂ ಬಲವನ್ನೂ ವೃದ್ಧಿಸುವುದು!

ನೀವು ಆಯಾಸಪಟ್ಟಾಗ, ಉದಾಸೀನಪಟ್ಟಾಗ ನಿಮ್ಮ ನರನಾಡಿಗಳು ಸೊರಗಿದ್ದಾಗ ಒಂದು ಕಪ್ 'ಓವಲ್ಟಿನ್' ಪಾನೀಯವು ದಣುವನ್ನು ನಿವಾರಿಸಿ ನರನಾಡಿಗಳನ್ನು ಉತ್ತೇಜಿಸುವಂತೆ ಇನ್ನಾವ ಪಾನೀಯಗಳೂ ಮಾಡವು.

'ಓವಲ್ಟಿನ್' ದೇಹಕ್ಕೆ, ಮಿದುಳಿಗೆ, ನರನಾಡಿಗಳಿಗೆ ಶೀಘ್ರದಲ್ಲಿಯೇ ಶಕ್ತಿಯನ್ನು ಉಂಟುಮಾಡುವುದು. ಪ್ರಕೃತಿಯ ಅತ್ಯುತ್ಕೃಷ್ಟ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟದ್ದು - ನೆನೆಹಾಕಿ ಹುರಿದ ಮಾಗಿದ ಬಾರ್ಲಿ, ದನದ ಹಸಿ ಹಾಲು [illegible] ಅಮೂಲ್ಯವಾದ ನೈಸರ್ಗಿಕ ಶಕ್ತಿವರ್ಧಕ ಜೀವಾತು [illegible] ಪುಷ್ಟಿವೃದ್ಧಿಸುವ ತಯಾರಿಸಿಟ್ಟ 'ಓವಲ್ಟಿನ್' ಸುದೃಢವಾದ ದೇಹವನ್ನು ಚುರುಕಾದ ಬುದ್ಧಿಯನ್ನುಂಟುಮಾಡುವಂತೆ ನಿಮ್ಮನ್ನು ಪೋಷಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಕಾರರು:

ಮೆಸರ್ಸ್ ಗ್ರೆಹೆಮ್ಸ್ ಟ್ರೇಡಿಂಗ್ ಕೊ., (ಇಂಡಿಯಾ) ಲಿಮಿಟೆಡ್

ಕೈತನಸ್ ಹೋಲ್ ಥರ್ಡ್ ಫ್ಲೋರ್ 310-311 ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು.

ಕಲ್ಕತ್ತಾ, ಕರಾಚಿ ಮತ್ತು ಬೊಂಬಾಯಿ.

'ಓವಲ್ಟಿನ್'

OVALTINE [illegible]

'ಓವಲ್ಟಿನ್' ಬಿಸ್ಕುಟುಗಳು:

ರುಚಿಕರ, ಜೀರ್ಣಕರ ಮತ್ತು ಪೋಷಣಯುಕ್ತವಾದುವು. ಎಲ್ಲ ಸಮಯಗಳಿಗೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ [illegible] ಬೆಲೆಯ 'ಓವಲ್ಟಿನ್' ಸೇರಿರುವುದು. 4 ಮತ್ತು 8 ಔನ್ಸುಗಳ ಪೆಟ್ಟಿಗೆಗಳಲ್ಲಿ ಮತ್ತು ಒಂದು ರಾತ್ತಲಿನ ಟಿನ್ನುಗಳಲ್ಲಿ ಮಾರಲ್ಪಡುತ್ತದೆ.

ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

22-11-1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೨—೧೧—೧೯೪೦

ಸತ್ಯಾಗ್ರಹ ಸಮರವು ಸರ್ವತ್ರ ಹರಡಿದೆ!

ಸರ್ದಾರ ಪಟೇಲರು ಬಂಧಿತರಾದರು!
ಬ್ರಿಜಲಾಲ್ ಬಿಯಾನಿಯರನ್ನು ಕೈದುಮಾಡಿದೆ!
ಗೋವಿಂದ ವಲ್ಲಭ ಪಂತರು ಹೊರಡುವರು!
ಮುಂಬಯಿಯಲ್ಲಿ ಖೇರರ ಭಾಷಣ!

ಮಹಾರಾಷ್ಟ್ರ, ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿಯೂ ಸಿದ್ಧತೆ!

ಗಾಂಧಿಜಿ ಮತ್ತು ಕಾಂಗ್ರೆಸು ಧುರೀಣರು ವರ್ಧಾದ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ನಿರ್ಣಯ ಮಾಡಿದಂತೆ, ವಿನೋಬಾಭಾವೆಯವರಿಂದ ಮೊದಲಾಗಿ ಆರಂಭಿಸಲ್ಪಟ್ಟ ವೈಯಕ್ತಿಕ ಸತ್ಯಾಗ್ರಹವನ್ನು ಈಗ ವಿಸ್ತರಿಸಿರುವರೆಂದು ತಿಳಿಯುತ್ತದೆ. ದೇಶದ ಎಲ್ಲಾ ಕಡೆಗಳಲ್ಲಿ ಪ್ರಾಂತ ಪ್ರಾಂತಗಳಲ್ಲಿ, ನಗರ ಗ್ರಾಮಗಳಲ್ಲಿ, ಅನೇಕ ಮುಖಂಡರು ವೈಯಕ್ತಿಕ ಶಾಸನಭಂಗ ಚಳವಳಿಕ್ಕೆ ದುಮುಕಿರುವರು. ಸರ್ದಾರ್ ಪಟೇಲ್, ಬಿಯಾನಿ, ಮೊದಲಾದ ಪ್ರಮುಖರನ್ನು ಬಂಧಿಸಿದ ವಾರ್ತೆಯು ಈಗಾಗಲೇ ಬಂದಿದೆ. ಇನ್ನು ಬರುವ ಕೆಲವೇ ವಾರಗಳಲ್ಲಿ ಶಾಸನಭಂಗ ಚಳವಳಿಯು ಭಾರತದಲ್ಲಿ ಸರ್ವವ್ಯಾಪಿಯಾಗುವ ಸಂಪೂರ್ಣ ಸೂಚನೆಗಳು ಈಗ ಕಂಡು ಬರುತ್ತಿವೆ.

ಮೂರನೆಯ ಸತ್ಯಾಗ್ರಹಿ ಬಿಯಾನಿಯವರ ಬಂಧನ

ಕೌನ್ಸಿಲ್ ಓಫ್ ಸ್ಟೇಟಿನ ಸದಸ್ಯರೂ, ವಿದರ್ಭ ಪ್ರಾಂತಿಕ ಕಾಂಗ್ರೆಸು ಕಮಿಟಿಯ ಅಧ್ಯಕ್ಷರೂ ಆದ ಶ್ರೀ. ಬ್ರಿಜಲಾಲ ಬಿಯಾನಿಯವರು ಕಳೆದ ಆದಿತ್ಯವಾರ ತಾವು ಇಂತಹ ಕಡೆಯಲ್ಲಿ ಸತ್ಯಾಗ್ರಹವನ್ನು ಆರಂಭಿಸುವುದಾಗಿ ಅಕೋಲಾ ಜಿಲ್ಲಾ ಮೆಜಿಸ್ಟ್ರೇಟರಿಗೆ ಬರೆದು ತಿಳಿಸಿದರು. (ವೈಯಕ್ತಿಕ ಸತ್ಯಾಗ್ರಹಿಗಳಿಗೆ ಗಾಂಧಿಜಿಯವರು ಕೊಟ್ಟ ಸೂಚನೆಯಿದು.) ಅವರು ತಿಳಿಸಿದ ಸ್ಥಳದಲ್ಲಿ ಅವರು ಸತ್ಯಾಗ್ರಹ ಆರಂಭಿಸಿದರು. ತಮ್ಮ ಮನೆಯಿಂದ ಸತ್ಯಾಗ್ರಹ ಘೋಷಣೆ ಮಾಡುತ್ತ ಹೊರಟರು (ಅವರು ಸತ್ಯಾಗ್ರಹಕ್ಕೆ ಹೊರಡುವುದಕ್ಕಿಂತ ಮೊದಲು ಅಲ್ಲಿನ ಪ್ರಸಿದ್ಧ ಬೇಂಕರರಾದ ಶ್ರೀ. ರಾಮಪ್ರಸಾದ ಭಾರತೀಯರು ವಿದರ್ಭ ಪ್ರಾಂತಿಕ ಕಾಂಗ್ರೆಸ್ ಭವನ ನಿರ್ಮಾಣದ ಬಗ್ಗೆ ೨೦ ಸಾವಿರ ರೂಪಾಯಿಗಳ ದಾನವಾಗಿ ಒಂದು ಚೆಕ್ಕನ್ನು ಅವರ ಹಸ್ತ ಕೊಟ್ಟಿದ್ದರು.) ಅನೇಕ ಸಭೆ ಸಂಸ್ಥೆಗಳ ಪ್ರತಿನಿಧಿಗಳು, ಅವರಿಗೆ ಹೂಮಾಲೆಗಳನ್ನು ಹಾಕಿ ಬೀಳ್ಕೊಟ್ಟರು. ಸಾವಿರಾರು ಮಂದಿ ಅವರನ್ನು ನೋಡಲು ನೆರೆದಿದ್ದರು. ಇದು ಅಕೋಲದಿಂದ ಎರಡು ಮೈಲು ದೂರದ ಹಳ್ಳಿಯಲ್ಲಿ ಆರಂಭಿಸಲ್ಪಟ್ಟಿತು. ಅವರನ್ನು ಪೋಲೀಸಿನವರು ಕೂಡಲೇ ಬಂಧಿಸಿದರು. ವಿಚಾರಣೆ ನಡೆಯುತ್ತಿದೆ.

ಪಟೇಲರ ಬಂಧನ

ಸೋಮವಾರ, ತಾವು ಅಹಮ್ಮದಾಬಾದಿನಲ್ಲಿ ಸತ್ಯಾಗ್ರಹ ಆರಂಭಿಸುವೆವಾಗಿ ಶ್ರೀ. ಸರ್ದಾರ ಪಟೇಲರು ಅಲ್ಲಿನ ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿಸಿದರು. ಸರ್ದಾರರು ಅಲ್ಲಿನ ಜಿಲ್ಲಾ ಬೋರ್ಡ ಪಟಾಂಗದಲ್ಲಿ ಸಾರ್ವಜನಿಕ ಭಾಷಣ ಕೊಡುವುದಾಗಿ ಏರ್ಪಾಡಾಗಿತ್ತು.

ಸರ್ದಾರ ಪಟೇಲರು ಭಾಷಣವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಅವರ ಬಂಧನವಾಯಿತು. ಶ್ರೀ. ಮಹಾದೇವದೇಸಾಯಿಯವರೂ ಆಗ ಅವರೊಡನೆ ಮಾತನಾಡುತ್ತಿದ್ದರು. ಅನೇಕರು ಅವರನ್ನು ಹೂಮಾಲೆಹಾಕಿ ಸೆರೆಮನೆಗೆ ಬೀಳ್ಕೊಟ್ಟರು, ಸರ್ದಾರರು ಎಲ್ಲರೂ ಗಾಂಧಿಜಿಯವರನ್ನು ಹಿಂಬಾಲಿಸುವಂತೆಯೂ, ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವಂತೆಯೂ ಸಂದೇಶವಿತ್ತಿರುವರು. ಮಹಿಳೆಯರಿಗೆ ಈ ರೀತಿಯಾಗಿ ಸರ್ದಾರರು ಸಂದೇಶವಿತ್ತಿದ್ದಾರೆ.

"ಗಂಡುಸರಿಗಿಂತಲೂ ಹೆಂಗುಸರಿಂದ ಹೆಚ್ಚು ಕೆಲಸವಾಗಲಿರುವುದೆಂದು ಗಾಂಧಿಜಿಯವರು ಆಶಿಸಿದ್ದಾರೆ. ಆದ್ದರಿಂದ ಅವರನ್ನು ನಿರಾಶೆಗೊಳಿಸಬೇಡಿರಿ."

ಅವರ ಸ್ಥಳದಲ್ಲಿ ಬೊಂಬಯಿಯ ಮಾಜಿ ಮಂತ್ರಿಗಳಾದ ಶ್ರೀ. ಮುರಾರ್ಜಿ ದೇಸಾಯಿಯವರು ಭಾಷಣ ಕೊಡುವುದಾಗಿ ಏರ್ಪಾಡಾಗಿದೆ.

ಅವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿರಿಸಲಾಗಿದೆ.

ಮುಂಬಯಿಯಲ್ಲಿ ಖೇರರು

ಮುಂಬಯಿಯಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ. ಬಿ. ಜಿ. ಖೇರರು ಸತ್ಯಾಗ್ರಹ ಆರಂಭ ಮಾಡುವುದಾಗಿ ನಿಶ್ಚಯಿಸಲಾಗಿದೆ.

ಡಾ. ರಾಜನ್ ಸತ್ಯಾಗ್ರಹ ಮಾಡುವರು

ಮದ್ರಾಸಿನ ಮಾಜಿಮಂತ್ರಿಗಳಾದ ಡಾ. ರಾಜನರು ತಿರುಚಿನಾಪಳ್ಳಿಯಲ್ಲಿ ಸತ್ಯಾಗ್ರಹ ಮಾಡುವರು. ಇವರ ಸತ್ಯಾಗ್ರಹದ ರೀತಿಯೆಂದರೆ, ಯುದ್ಧ ನಿಧಿಯನ್ನು ಸಂಗ್ರಹಿಸುವ ಕಮಿಟಿ ಸದಸ್ಯರಿಗೆ ಪತ್ರ ಬರೆವ ಮೂಲಕವಾಗಿ. ಯುದ್ಧ ನಿಧಿಗೆ ಅವರು ದುಡಿಯುವುದು ಅಗೌರವವೆಂದು ಅದರಲ್ಲಿ ಬರೆವರು. ಆ ಪತ್ರಗಳನ್ನು ಅವರೇ ಕೊಡುವರು.

ಕಲ್ಲಿಕೋಟೆಯಲ್ಲಿ ಶ್ರೀ ಕೇಳಪ್ಪನ್

ಕಲ್ಲಿಕೋಟೆಯ ಸಮೀಪದ ಹಳ್ಳಿಯೊಂದರಲ್ಲಿ ಶ್ರೀ ಕೇಳಪ್ಪನ್ ಸತ್ಯಾಗ್ರಹ ಪ್ರಾರಂಭ ಮಾಡಲಿರುವರೆಂದು ತಿಳಿದಿದೆ.

ವಿಶ್ವನಾಥ ದಾಸರಿಗೆ ಗಾಂಧಿಜಿ ಕರೆ

ಒರಿಸ್ಸಾ ಪ್ರಾಂತದ ಪ್ರಧಾನರಾದ ಶ್ರೀ ವಿಶ್ವನಾಥ ದಾಸರನ್ನು ಮಹಾತ್ಮರು ಅವರ ಇಬ್ಬರು ಸಹೋದ್ಯೋಗಿಗಳೊಡನೆ ಕೂಡಲೆ ವರ್ಧಾಕ್ಕೆ ಬರಬೇಕಾಗಿ ಕರೆದಿರುವರು. ಆ ಪ್ರಾಂತದ ಸತ್ಯಾಗ್ರಹ ಆರಂಭದ ವಿಚಾರ ಮಾತನಾಡಲೆಂದು ತಿಳಿಯಲಾಗಿದೆ.

ಗೋವಿಂದ ವಲ್ಲಭ ಪಂತ್

ಸಂಯುಕ್ತ ಪ್ರಾಂತದಲ್ಲಿ ಹಿಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಗೋವಿಂದ ವಲ್ಲಭ ಪಂತರು ಸತ್ಯಾಗ್ರಹವನ್ನು ತಾ. ೨೦ರಂದು ಆರಂಭ ಮಾಡುವರೆಂದು ತಿಳಿದಿದೆ.

ಪಂಜಾಬಿನಲ್ಲಿ

ಪಂಜಾಬ್ ಪ್ರಾಂತಾಧ್ಯಕ್ಷರಾದ ಮಿಯಾನ್ ಇಫ್ತಿಕರುದ್ದೀನ್ ಇವರು ಇಷ್ಟರಲ್ಲಿಯೇ ಸತ್ಯಾಗ್ರಹ ಹೂಡಲಿರುವರೆಂದೂ ಅಲ್ಲಿಂದ ೪೦ ಜನ ಸತ್ಯಾಗ್ರಹಿಗಳ ಪಟ್ಟಿ ತಯಾರಾಗಿದೆಯೆಂದೂ ತಿಳಿದಿದೆ.



ಸರ್ದಾರ್ ಪಟೇಲ್

ಕರ್ನಾಟಕ, ಮಹಾರಾಷ್ಟ್ರ, ಬಿಹಾರ, ಬಂಗಾಲ ಮೊದಲಾದ ಪ್ರಾಂತಗಳಲ್ಲಿ ಸತ್ಯಾಗ್ರಹಿಗಳ ಪಟ್ಟಿಯು ಸಿದ್ಧವಾಗಿದೆಯೆಂದೂ ಬೇಗನೇ ಸತ್ಯಾಗ್ರಹ ಆರಂಭವಾಗುವುದೆಂದೂ ತಿಳಿದಿದೆ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮನಂಬ್ರ 88/1938
R. E. P. 1014/1940
R. E. A. 1178/40

1. ಬಾಬು ಹೆಗ್ಡೆ— ವಾದಿ-ಅರ್ಜಿದಾರ

ಮತ್ತು

ಸೀತಾರಾಮ ಮೊಗೆರಾಯ ಕಮ್ತಿ—

ಪ್ರತಿವಾದಿರು. ಎದ್ರಿರು ಇವರೊಳಗೆ—

ಯದ್ರಿರು

1. ಸೀತಾರಾಮ ಮೊಗೆರಾಯ } ನಾರಾಯಣ
2. ರಾಘವ ಮೊಗೆರಾಯ } ಮೊಗೆರಾಯರ ಮಕ್ಕಳು

3. ನಾರಾಯಣ ಮೊಗೆರಾಯ, ಸುಬ್ರಾಯ ಮೊಗೆರಾಯರ ಮಗ, ಸ್ವಿಕಾರು ಸಿಟಿ, ಕಾಶಿರಾಯರ ಪಟಾರ ಬೀದಿ Door No 131 ದೇವರಾಜ ಮೊಹಲ್ಲಪೋಸ್ಟ, ಎಂಬಲ್ಲಿರುವವರು ೪. ಮನ್ನಾರ ಕೃಷ್ಣಮೂರ್ತಿ ವೆಂಕಟ ಕೃಷ್ಣ ಮೊಗೆರಾಯರ ಮಗ, ಗಾಡಿವಾನ ತಾಯಿ ಪದ್ಮಕ್ಕ, ಕಾರ್ಕಳ ತಾಲ್ಲೂಕು ಇರುವೈಲು ಗ್ರಾಮದ ದಂಬೆತಾಡಿ ಎಂಬಲ್ಲಿರುವವರು— ಇವರಿಗೆ

ಮೇಲ್ಕಂಡ ಅಮ್ಲಜ್ಯಾರಿಯಲ್ಲಿ ಅರ್ಜಿದಾರನು ಹಾಜರು ಪಡಿಸಿದ ಯೇಲಂ ದುಸ್ತಾವೇಜು ಮತ್ತು ಬಿಡ್ ಮತ್ತು ಸೇಲ್ ಓಫ್ ಸರ್ಟಿಫಿಕೆಟ್ ಕೇಳಿ ಬರಕೊಂಡ ಅರ್ಜಿ, ಇವುಗಳ ಕುರಿತು ನಿಮಗೇನಾದರೂ ಆಕ್ಷೇಪ ಇದ್ದರೆ ಸದ್ರಿ ಕೋರ್ಟು ಮುಂದೆ ನೀವು ತಾರೀಕು 29-11-40 ನೆ ದಿನ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಸಿವಾಯಿ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಸಂಗ್ತಿಗಳು ತೀರ್ಮಾನಿಸಲಾಗುವದು, ಯೆಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ.

ಕಾರ್ಕಳ } P. Ramachandra Rao
18-11-40 } Pleader for petitioner

ಸ್ವದೇಶಾಭಿಮಾನಿ

ತಾರೀಖು 22—11—1940

ಸತ್ಯಾಗ್ರಹ ಹಬ್ಬಿತು!

ವರ್ಧಾದ ಒಂದು ಹಳ್ಳಿಯಲ್ಲಿ ವಿನೋಬಾಜಿಯಂತಹ, ಜನತೆಯ ದೃಷ್ಟಿಯ ಮರೆಯಲ್ಲಿದ್ದ ಸತ್ಯಾಗ್ರಹಿಯೊಬ್ಬನಿಂದ, ಗಾಂಧಿಜಿ ಈ ಸಲ ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸಿದ ಕಾಲದಲ್ಲಿ ಜನರಿಗೆ ಅದರ ಮಹತ್ವವು ಸ್ವಲ್ಪವೂ ತಿಳಿದುಬರಲು ಅವಕಾಶವಾಗಲಿಲ್ಲ. ಹೆಚ್ಚಿನ ಪ್ರದರ್ಶನಗಳಿಲ್ಲದೆ ಬಹಳ ಸೂಕ್ಷ್ಮ ಸರಳತೆಯಿಂದ ಆರಂಭವಾದ ಆ ಸತ್ಯಾಗ್ರಹವು ಯಾವ ರೀತಿಯಲ್ಲಿ ಮುಂದುವರಿಯುವುದು ಎಂಬ ಕುರಿತು ಸರ್ವರೂ ಕುತೂಹಲರಾಗಿದ್ದಂತೆ, ಮಹಾತ್ಮರಾದರೂ ತಮ್ಮ ಮುಂದಿನ ಹಜ್ಜೆಯ ಕುರಿತು ಸ್ಪಷ್ಟವಾದ ಉತ್ತರವನ್ನು ಕೊಟ್ಟಿರಲಿಲ್ಲ. ಸತ್ಯಾಗ್ರಹವು ಇಷ್ಟು ತೀವ್ರವಾಗಿ ದೇಶಸಾರ್ವತ್ರಿಕವಾಗಿ ಹಬ್ಬಿಬಿಡಬಹುದೆಂಬ ಪ್ರತೀಕ್ಷೆಯು ಯಾರಿಗೂ ಬಂದಿರಲಿಲ್ಲ.

ನೆಹರುಗಳನ್ನು ಬಂಧಿಸಿದ ಮೇಲೆ

ಅಕಸ್ಮಾತ್ತಾಗಿ, ವರ್ಧಾದಿಂದ ಮರಳಿ ಬರುತ್ತಿರುವ ಕಾಲ, ನೆಹರುಗಳನ್ನು ಸರಕಾರದವರು ಬಂಧಿಸಿದರು. ಈ ವಾರ್ತೆಯು ಸರ್ವತ್ರವಾಗಿ ಹರಡಿತು. ನೆಹರುಗಳು ಎರಡನೆಯ ಸತ್ಯಾಗ್ರಹಿಯಾಗಿ ಆಗುವರೇ ಎಂದು ನಿರೀಕ್ಷೆಯಿತ್ತಾದರೂ ಗಾಂಧಿಜಿ ಹಾಗೆಂದು ಪ್ರಕಟ ಮಾಡಿರಲಿಲ್ಲ. ಸರಕಾರವೇ ಅವರ ಮೇಲೆ ಹಿಂದೆ ಮಾಡಿದ ಭಾಷಣಗಳ ಆರೋಪಹಾಕಿ ಬಂಧನದಲ್ಲಿರಿಸಿತು. ದೇಶದ ಮೂಲೆ ಮೂಲೆಗಳಲ್ಲಿ, ವಿದೇಶ ದೂರದೇಶಗಳಲ್ಲಿಯೂ ಈ ಬಂಧನದ ಪ್ರತಿಕ್ರಿಯೆಯು ಬಹಳ ತೀಕ್ಷ್ಣಪರಿಣಾಮವನ್ನು ಹುಟ್ಟಿಸಿತು. ಒಂದು ರೀತಿಯಿಂದ, ಪಾಶ್ಚಾತ್ಯ ಧುರೀಣರೇ ಕೆಲವರು ಅಭಿಪ್ರಾಯಪಟ್ಟಂತೆ, ನೆಹರುಗಳ ಬಂಧನ ಆ ಮೇಲೆ ಅವರಿಗೆ ನಿರ್ದಯವಾಗಿ ವಿಧಿಸಿದ ನಾಲ್ಕು ವರ್ಷಗಳ ಸೆರೆಮನೆಯ ವಾಸ ಇವುಗಳೇ ಸತ್ಯಾಗ್ರಹವನ್ನು ಇಷ್ಟು ತೀವ್ರವಾಗಿ ಹಬ್ಬುವಂತೆ ಉತ್ತೇಜಿಸಿದ್ದವೆಂದರೂ ಸಲ್ಲತಕ್ಕುದಾಗಿದೆ.

ವರ್ಕಿಂಗ್ ಕಮಿಟಿಯಲ್ಲಿ

ನೆಹರುಗಳು ಬಂಧಿತರಾದ ಕೂಡಲೇ ರಾಷ್ಟ್ರಪತಿಗಳು ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸಭೆಯನ್ನು ಕರೆದರು; ಅಷ್ಟರಲ್ಲಿ ಮಹಾತ್ಮರು ಉಪವಾಸವೊಂದನ್ನು ಪ್ರಾರಂಭಿಸಲಿರುವರೆಂಬ ವಿಷಾದಮಯವಾದ ವಾರ್ತೆಯು ದಟ್ಟವಾಗಿ ಹರಡಿ ಸರ್ವರನ್ನೂ ತಳಮಳಗೊಳಿಸಿತ್ತು. ವರ್ಕಿಂಗ್ ಕಮಿಟಿಯ ಸದಸ್ಯರು ರಾಷ್ಟ್ರಪತಿಗಳು ನ್ನ್ತು [illegible] ಮಹಾತ್ಮರೇ ಹೇಳಿದಂತೆ, ಗಾಂಧಿಜಿ ... [illegible] ವೈಯುಕ್ತಿಕ ಸತ್ಯಾಗ್ರಹವನ್ನು ವಿಸ್ತರಿಸುವ ಕಾರ್ಯಕ್ಕೆ ಪ್ರವೃತ್ತರಾದರು.

ಸತ್ಯಾಗ್ರಹಿಗಳ ಪಟ್ಟಿ

ಗಾಂಧಿಜಿ, ನೊತ್ತನೊದಲಾಗಿ ಇಪ್ಪತ್ತನಾಲ್ಕು ಮಂದಿ ಸತ್ಯಾಗ್ರಹಿಗಳ ಒಂದು ಪಟ್ಟಿಯನ್ನು ತಯಾರಿಸಿದರೆಂದು ತಿಳಿದು ಬಂತು; ಆದರೆ ವರ್ಕಿಂಗ್ ಕಮಿಟಿಯ ಅಧಿವೇಶನದ ಮೇಲೆ, ಅವರು ಹೇಳಿದಂತೆ ವೈಯುಕ್ತಿಕ ಸತ್ಯಾಗ್ರಹವನ್ನು ವಿಸ್ತರಿಸುವ ಯೋಜನೆಯಿಂದ, ಅವರು ಸಾವಿರದ ಐನೂರು ಮಂದಿಯ ಇನ್ನೊಂದು ಸತ್ಯಾಗ್ರಹಿಗಳ ಪಟ್ಟಿಯನ್ನು ತಯಾರಿಸಿದರು. ಇದರಲ್ಲಿ ಸರ್ದಾರ್, ರಾಜಾಜಿಯಂತಹ ಮುಖ್ಯ ಮುಖ್ಯ ಕಾಂಗ್ರೆಸು ಮುಖಂಡರೂ, ಹಿಂದಿನ ಪ್ರಾಂತಿಕ ಮಂತ್ರಿಗಳು ಪಾರ್ಲಿಮೆಂಟರಿ ಸೆಕ್ರೆಟರಿಗಳೂ, ಎಂ. ಎಲ್. ಎ.ಗಳೂ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸದಸ್ಯರೂ, ಪ್ರಾಂತಿಕ ಮುಖಂಡರೂ ಸೇರಿರುವುದಾಗಿ ಗೊತ್ತಾಯಿತು. ಮತ್ತೆ ಒಂದೆರಡೇ ದಿನಗಳಲ್ಲಿ ಶ್ರೀ ಭುಲಾಭಾಯಿ ದೇಸಾಯಿ, ಸರ್ದಾರ್ ಪಟೇಲ ಪ್ರಭೃತಿಗಳ ಬಂಧನ, ಖೇರ್, ಡಾ ರಾಜನ್, ಪಂತ್, ಕೇಳಪ್ಪನ್ ಮೊದಲಾದವರ ಸತ್ಯಾಗ್ರಹ ಸಮಾಚಾರವು ಕೇಳಿಬಂದಿದೆ.

ಸತ್ಯಾಗ್ರಹ ಸ್ವರೂಪ

ಈ ಸಲದ ಸತ್ಯಾಗ್ರಹದ ಸ್ವರೂಪವು ಬಹಳ ವಿಶೇಷವಾಗಿದೆ. ಜನತಾ ಸತ್ಯಾಗ್ರಹವೆಂಬುದಿಲ್ಲ. ಸತ್ಯಾಗ್ರಹಿಯು ಮೊದಲು ತಾನು ಮಾಡುವ ಸತ್ಯಾಗ್ರಹದ ವಿಷಯ ಅಧಿಕಾರಿಗಳಿಗೆ ತಿಳಿಸುವನು. ಯಾವುದಾದರೂ ಹಳ್ಳಿಗೆ ಹೋಗಿ ಸತ್ಯಾಗ್ರಹವನ್ನು ಆರಂಭಿಸುವನು. ಆದಷ್ಟು ಮಟ್ಟಿಗೆ ಗಲಭೆಯು ಆಗದಂತೆ, ಜನತಾಕ್ರಾಂತಿಯು ಉಂಟಾಗದಂತೆ, ಗಾಂಧಿಜಿಯವರು ಜಾಗರೂಕರಾಗಿದ್ದಾರೆ. ಹೀಗಿರುವಾಗ ಇದರಿಂದ ದೇಶಕ್ಕೆ ಏನೂ ಪ್ರಯೋಜನವಿಲ್ಲ ಎಂದು ಹೇಳುವವರು ಹಲವರಿದ್ದಾರೆ. ಪರಿಣಾಮಕ್ಕೆ ಸ್ವಲ್ಪ ಅವಕಾಶ ನೀಡಬೇಕು. ಈ ಪರೀಕ್ಷೆಯು ಅಷ್ಟು ಅವಸರದಿಂದ ಹೇಳಲಿಕ್ಕಾಗುವುದಿಲ್ಲ. [Top lines of this column partly illegible: ...ಹೊರಡುವವರು ಇದನ್ನು ಕಂಡು ಹಿಂದ್ಮುಖಿಸಿ] ಪರಿಣಮಿಸುವುದಕ್ಕೆ ಸಂಶಯವಿಲ್ಲ. ಆದ್ದರಿಂದ ಇನ್ನೊಂದು ವಿಷಯವು ವಿಶದವಾಗಿದೆ. ಕೆಲಸಮಯಗಳಿಂದ ಕಾಂಗ್ರೆಸು ಅಧಿವೇಶನವೇ ಮೊದಲಾದುವು ಹಳ್ಳಿಗಳಲ್ಲಿ ನಡೆವ ಏರ್ಪಾಡುಗಳಾದಂತೆ, ಈ ಸತ್ಯಾಗ್ರಹವೂ ಹಳ್ಳಿಹಳ್ಳಿಗಳಲ್ಲಿ ಆರಂಭವಾಗುವುದರಿಂದ ಗ್ರಾಮಗಳಲ್ಲಿ ಕಾಂಗ್ರೆಸಿನ ಪ್ರಚಾರವು ಇದರಿಂದ ಭರದಿಂದ ಆಗತಕ್ಕದ್ದು. ಕಳೆದ ಸತ್ಯಾಗ್ರಹಗಳ ಕಾಲದಲ್ಲಿ ಪಟ್ಟಣಗಳಲ್ಲಿಯೇ ವಿಶೇಷ. ಜಾಗ್ರತೆ ಹುಟ್ಟಿತ್ತು. ಈ ಸಲ ಪ್ರತಿ ಹಳ್ಳಿಹಳ್ಳಿಗಳಲ್ಲಿ ವೈಯುಕ್ತಿಕ ಸತ್ಯಾಗ್ರಹವಾಗಲಿದೆಯೆಂದು ತಿಳಿದು ಬರುವುದರಿಂದ ಇದರ ಪರಿಣಾಮವು ಅವಶ್ಯವಾಗಿ ಹಳ್ಳಿ ಹಳ್ಳಿಗಳಲಿಯೂ ಹಬ್ಬಿ ಈ ಸಲದ ಸತ್ಯಾಗ್ರಹಕ್ಕೆ ಬಲವನ್ನೂ ಪುಷ್ಟಿಯನ್ನೂ ಕೊಡದಿರದು.

ಸತ್ಯಾಗ್ರಹ ನ್ಯಾಯವೇ?

ಬ್ರಿಟನು ಈಗ ಜೀವನ ಮರಣಗಳ ಹೋರಾಟದಲ್ಲಿ ಸಿಲುಕಿರುವಾಗ ಗಾಂಧಿಜಿ 'ಸತ್ಯಾಗ್ರಹವನ್ನು ಆರಂಭಿಸುವುದು ನ್ಯಾಯವೇ' ಎಂದು ಕೆಲವರು ಪ್ರಶ್ನಿಸುತ್ತಾರೆ. ಅಂತಹವರಿಗೆ ಮದ್ರಾಸಿನಲ್ಲಿ ಮೊನ್ನೆ ನೆರೆದ ಸಭೆಯೊಂದರಲ್ಲಿ ರಾಜಾಜಿಯವರು ಬಹಳ ವಿಚಾರಪೂರ್ಣವಾದ ಉತ್ತರವನ್ನಿತ್ತಿದ್ದಾರೆ. ಯಾವ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರು ಇಂದು ನಾಜಿಸಮಿಗೆ ತಲೆಬಾಗಿಸುವುದಕ್ಕಿಂತ ಸಾಯಲಾದರೂ ಸಿದ್ಧರಿರುವರೋ, ಅದೇ ಸ್ವಾತಂತ್ರ್ಯ ತತ್ವಕ್ಕಾಗಿ ಭಾರತೀಯರೂ ಹೋರಾಡುವಲ್ಲಿ ತಪ್ಪೆಣಿಸುವುದು ಏನೂ ಅರ್ಥವಿಲ್ಲದ ಮಾತೆಂದು ಸ್ಪಷ್ಟಪಡಿಸಿದ್ದಾರೆ.

ವಾಗ್ದಾನವೂ ಇಲ್ಲ

ರಾಜಾಜಿಯವರು ಆ ಭಾಷಣದಲ್ಲಿ ಬ್ರಿಟನಿನೊಡನೆ ಭಾರತೀಯರು ಕೊಡಲಿ ಸ್ವಾತಂತ್ರ್ಯ ಕೂಡಿರೆಂದು ಒಪ್ಪಲಾಯವರಿಗೆ ಇಲ್ಲವೆಂದು, ಹೇಳಿ, ಸ್ವಾತಂತ್ರ್ಯ ಕೊಡುವ ನಿಶ್ಚಿತ ವಾಗ್ದಾನ ಮಾತ್ರ ಮಾಡಿದ್ದರೂ, ಹಾಗೆ ಕೇಳಿದರೂ ಅದನ್ನು ನಿರಾಕರಿಸಿದ ಕಾರಣ, ಸ್ವಾತಂತ್ರ್ಯದ ತತ್ವಕ್ಕಾಗಿ ಕಾರ್ಯರಂಗಕ್ಕಿಳಿದು ದುಡಿದ ಸಂಸ್ಥೆಗೆ, ಕಾಂಗ್ರೆಸಿಗೆ, ಅದರ ಅನುಯಾಯಿಗಳಿಗೆ, ಈ ರೀತಿಯ ಅಹಿಂಸಾಮೂಲವಾದ ಶಾಂತಸತ್ಯಾಗ್ರಹವಲ್ಲದೆ ಬೇರೆ ದಾರಿಯಿರಲಿಲ್ಲವೆಂದೂ ಹೇಳಿದರು.

ಬಿಕ್ಕಟ್ಟಿನ ಪರಿಹಾರವಾಗಲಿ

ಹೇಗಿದ್ದರೂ, ಇಂದು ಭಾರತದ ರಾಜಕೀಯ ಸಮಸ್ಯೆಯು ವಿಷಮತೆಗಿಳಿದಿದೆ, ಗಾಂಧಿಜಿಯವರ ಮುಂದಾಳುತನದ ಕಾಂಗ್ರೆಸು ಸಾರ್ವತ್ರಿಕವಾಗಿ ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸಿದೆ, ಆದರೆ ಬ್ರಿಟನಿಗೆ ಈ ಬಿಕ್ಕಟ್ಟನ್ನೀಗಲೇ ಪರಿಹರಿಸಿ ಶಾಂತಿ ತೃಪ್ತಿಗಳನ್ನು ನೆಲೆಗೊಳಿಸುವುದು ಸಾಧ್ಯವಿದೆ; ಯಾವ ತತ್ವಕ್ಕಾಗಿ ಬ್ರಿಟಿಷರು ಜರ್ಮನಿಯೊದುರು ಹೋರಾಡುವರೋ ಅದೇ ತತ್ವವನ್ನು ಭಾರತದ ವಿಷಯದಲ್ಲಿಯೂ ಅನ್ವಯಿಸುವುದರಿಂದ ತತ್ವಕ್ಕಾಗಿ ಸ್ವಾರ್ಥತ್ಯಾಗ ಆ ತತ್ವಕ್ಕೇ ಜಯವಿದೆ.

ಈ ತತ್ವಕ್ಕಾಗಿ ಬ್ರಿಟನು ಈಗ ಸ್ವಲ್ಪ ಸ್ವಾರ್ಥತ್ಯಾಗ ಮಾಡಬೇಕಾಗಿದೆ, ತತ್ವಕ್ಕಾಗಿ ಸ್ವಾರ್ಥತ್ಯಾಗ ಮಾತ್ರವಲ್ಲ ಅತಿ ಬಲಿದಾನವನ್ನೇ ಮಾಡಿದ ಉದಾಹರಣೆಗಳು ಹಲವಿವೆ, ಅದು ಬಹಳ ಉದಾತ್ತವೂ ಗಂಭೀರವೂ ಪ್ರಶಂಸನೀಯವೂ ಆದ ಕಾರ್ಯ. ಭಾರತದ ಜನತೆಯನ್ನು ಸಮಾಧಾನಪಡಿಸಬೇಕು, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ, ಅಧಿಕಾರವನ್ನು ಜನತೆಯ ಕೈಗೆ ಕೊಡಬೇಕು, ಈ ರೀತಿ ಪ್ರಜಾಪ್ರಭುತ್ವದ ಮಾರ್ಗದಲ್ಲಿಯೆ ಭಾರತವನ್ನು ಬೆಳೆಯಬಿಟ್ಟು, ಅದರ ಸಂಪೂರ್ಣ ಸಹಾಯ ಸಹಕಾರಗಳನ್ನು ಪಡೆಯಬೇಕು. ಇಂದು ತಾನಿಳಿದಿರುವ ಹೋರಾಟದಲ್ಲಿ ಭಾರತದ ಬೆಂಬಲವನ್ನು ಈ ರೀತಿ ಪಡೆದು ವಿಜಯವನ್ನು ಸಂಪಾದಿಸುವಂತಾಗಬೇಕು. ಇಂದಿನ ಸಮಸ್ಯೆಯನ್ನು ಹೇಗೆ ಪರಿಹರಿಸಿ ಉಭಯ ಪಕ್ಷಕ್ಕೂ ಕ್ಷೇಮವನ್ನು ಕಲ್ಪಿಸುವುದು ಈಗ ಸರಕಾರದ ಕೈಯಲ್ಲಿಯೇ ಇದೆಯೆಂಬುದನ್ನು ನಾವು ಒತ್ತಿ ಹೇಳಲಿಲ್ಲವೆ? ಲಾರ್ಡ ವೈಸರಾಯರು ಕೇಂದ್ರ ಎಸೆಂಬ್ಲಿಯಲ್ಲಿ ಭಾರತದ ಪರಿಸ್ಥಿತಿಯ ವಿಷಯವಾಗಿ ಇನ್ನೊಂದು ಘೋಷಣೆ ಮಾಡಲಿರುವರೆಂದು ಕೇಳುತ್ತೇವೆ; ಇದರಲ್ಲಿಯಾದರೂ ಇಂತಹ ಬಿಕ್ಕಟನ್ನು ಪರಿಹರಿಸುವ ಸೂಚನೆಗಳಿರಬಹುದೆಂದು ನಾವು ಆಶಾವಾದಿಗಳಾಗಿರುವೆವು. ಹಾಗೆ ಮಾಡದಿರುವುದು ಈ ಬಿಕ್ಕಟನ್ನು ನ್ಯಾಯ ಮಾರ್ಗದಿಂದ ಪರಿಹರಿಸದೆ ಇರುವುದು ಭಾರತದ ಬಹುಸಂಖ್ಯಾಕ ಜನತೆಯನ್ನು ತೃಪ್ತಿಪಡಿಸದಿರುವುದು, ಬ್ರಿಟಿಷ್ ರಾಜನೀತಿಗೆ ಗೌರವವನ್ನು ತರತಕ್ಕುದಲ್ಲ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ವಿದ್ವಾನ್ ಶ್ರೀ ಕೆ ಕೆ ರೈ, ವಿರಚಿತ

ವ್ಯಾಕರಣ ಮತ್ತು ಪ್ರಬಂಧ

೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ

೦-೨-೦ ೦-೨-೬ ೦-೪-೦

ಶ್ರೀ ಎಸ್ ರಾಮಕೃಷ್ಣಾಚಾರ್, ಬಿ ಎ, ಎಲ್. ಟಿ ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬ನೆಯ ತರಗತಿಗೆ ೦-೬-೦ ೭ನೆಯ ತರಗತಿಗೆ ೦-೬-೦

ಹೊಸ ಪುಸ್ತಕಗಳು

ಪ್ರಾಥಮಿಕ ಲಘುವಿಜ್ಞಾನ (ಶ್ರೀ ಎಸ್ ರಾಮಕೃಷ್ಣಚಾರ್)

೮ನೆಯ ತರಗತಿಗೆ ೦-೬-೦

ವ್ಯಾಕರಣ ಮತ್ತು ಪ್ರಬಂಧ (ಶ್ರೀ ಕೆ.ಕೆ ರೈ) ೪ ಮತ್ತು ೫ನೆಯ ತರಗತಿಗಳಿಗಾಗಿ

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಹಬ್ಬ!

ಶ್ರೀ ಕಯ್ಯಾರ ಕಿಞ್ಞಣ್ಣರೈ, ವಿದ್ವಾನ್, ಇವರಿಂದ ರಚಿತವಾದ,

ಮಕ್ಕಳ ಪದ್ಯಮಂಜರಿ

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ

೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ

ಎರಡನೆಯ ಪುಸ್ತಕ

೪ನೆಯ ಐದನೆಯ ತರಗತಿಗಳ ಬಾಲಕರಿಗಾಗಿ

ದೊರಕುವ ಸ್ಥಳ: ಶಾರದಾ ಛಾಪಖಾನೆ ಮಂಗಳೂರು.

ರಾಜಾಜಿ ಕಾಂಗ್ರೆಸಿನ ಧೋರಣೆಯನ್ನು ಸಮರ್ಥಿಸುತ್ತಾರೆ

ಗೆಸನ್ನವರಲ್ಲಿ ಹಲವು ಜನರು, ಹೀಗೆ ವಾಕನಾಡಲು, ಕಾಂಗ್ರೆಸು ಗೆದುಕೊಂಡ ಹೆಜ್ಜೆ ನ್ಯಾಯವಾದು ದೆಂದು ತಿಳಿಸಲು, ಇನ್ನು ಕೆಲವೇ ದಿನಗಳಲ್ಲಿ ಹೊರಗೆ ಇರಲಾರೆವು. ದ್ದರಿಂದ ನಾನು ಈ ದಿನವೇ ಆ ವಿಷಯ ವಿವರಿಸಬೇಕೆಂದಿದ್ದೇನೆ."

—ಹೀಗೆಂದು ರಾಜಾಜಿಯವರು ಟ್ರಿಪ್ಲಿಕೇನ್ ಬೀಚಿನ ಹಾಲಿನಲ್ಲಿ ನೆರೆದ ಮಹಾಸಭೆಯೊಂದರಲ್ಲಿ ಕಾಂಗ್ರೆಸಿನ ಕ್ಷಯವನ್ನು ಸಮರ್ಥಿಸಿ, ಸತ್ಯಾಗ್ರಹ ವನ್ನು ಆರಂಭಿಸಿದ ವಿಷಯವನ್ನು ಪುಷ್ಟೀಕರಿಸಿ, ಕಾಂಗ್ರೆಸು ಯುದ್ಧದ ಕುರಿತು ಲೆದ ಧೋರಣೆಯನ್ನು ವಿವರಿಸಿ ಒಂದು ಉದಾತ್ತ ಭಾಷಣವಿತ್ತರು.

"ಇದೇ ಸಂದರ್ಭದಲ್ಲಿ, ಇಂಗ್ಲಂಡು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆಯೆಂ ದು ಸಾರಿದ ಉದ್ದೇಶವನ್ನೂ, ಹಾಗಿರುವ ಉದ್ದೇಶದಿಂದ ಹೋರಾಡುವ ಆದ್ದ, ಭಾರತವು ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆ-ಅದನ್ನು ಸಹಿಸದಿರುವುದು ನ್ಯಾಯವೇ ಎಂಬುದನ್ನೂ ತಿಳಿಸಿದರು. ಮತ್ತೆ ಕಾಂಗ್ರೆಸು ದಿಲ್ಲಿ ನಿರ್ಣಯದಂತೆ, ಯುದ್ಧ ದ ವಿಷಯದಲ್ಲಿಯೂ ಕೊಟ್ಟ ಸಹಕಾರ ಹಸ್ತವನ್ನು ಬ್ರಿಟನು ಅಂಗೀಕರಿಸದಿರುವ ವಿಷಯವನ್ನೆತ್ತಿ ಮಾತಾಡಿದರು. ಹೀಗಾದ ಮೇಲೆ ಸತ್ಯಾಗ್ರಹವನ್ನು ಆರಂಭಿಸದೆ ಕಾಂಗ್ರೆಸಿಗೆ ಬೇರೆ ದಾರಿಯಿರಲಿಲ್ಲವೆಂ ದೂ ತಿಳಿಸಿದರು. ಕಾಂಗ್ರೆಸು ಈಗ ಕೈ ಕೊಂಡ ದಾರಿಯು 'ವಕ್ರ ಬುದ್ಧಿಯದ್ದು' ಎಂದು ಟೀಕಿಸುವವರಿಗೆ ಅವರ ಸಮಾಧಾನಕರವಾದ ಉತ್ತರಗಳನ್ನಿತ್ತರು.

ಜರ್ಮನಿ ಬ್ರಿಟನನ್ನು ಒತ್ತಾಯ ಪಡಿಸಿದರೆ?

ಮೊದಲನೆಯದಾಗಿ ಬ್ರಿಟನು ನ್ಯಾಯ ಕ್ಕಾಗಿ ಹೋರಾಡುತ್ತಿದೆ, ನಾವು ಯಾಕೆ ಅದಕ್ಕೆ ಬೆಂಬಲ ಕೊಡಬಾರದು" ಎಂದು ಕೆಲವು ಟೀಕಾಕಾರರು ಕಾಂಗ್ರೆಸನ್ನು ಕೇಳುವರು. ಹೀಗೆ ನನ್ನ ಆಂಗ್ಲೇಯ ಗೆಳೆಯರೊಬ್ಬರೂ ಕೇಳಿದ್ದರು. ಒಬ್ಬ ಆಂಗ್ಲೇಯನು, ಈ ವಿಷಯದಲ್ಲಿ ಭಾರತೀಯರ ಧೋರಣೆಯನ್ನು ತಿಳಿದುಕೊಳ್ಳ ವಿಚಾರವನ್ನೂ ನಾನು ಅರ್ಥಮಾಡಿಕೊಳ್ಳಬಲ್ಲೆ. ಭಾರತವು ಎಷ್ಟರ ಮಟ್ಟಿಗೆ ಕಷ್ಟ ಪರಿಸ್ಥಿತಿಯಲ್ಲಿ ಸಂಕಷ್ಟಕ್ಕೀಡಾಗಿದೆ ಯೆಂಬುದನ್ನು ಒಬ್ಬ ಆಂಗ್ಲೇಯನಿಗೆ ಹೇಗೆ ತಿಳಿಸಬಹುದು? ಬ್ರಿಟನನ್ನು ಜರ್ಮನಿಯು ಗೆದ್ದು, ಬ್ರಿಟನಿನ ಮೇಲೆ ಜರ್ಮನಿಯು ಒತ್ತಾಯಪಡಿಸಿ ಕೆಲಸ ಮಾಡಿಸಿದರೆ ಆಗ ಆಂಗ್ಲೇಯ ಸ್ವಭಾವನಿಗೆ ಹೇಗೆ ತೋರಬಹುದು? ಇದು ಆತನಿಗೆ ಬಹಳ ನೋವಿನ ವಿಚಾರವಾಗಬಹುದಲ್ಲ? ಇದೇ ರೀತಿ ಬ್ರಿಟನಿನ ಈ "ನ್ಯಾಯದ ಯುದ್ಧ"ದಲ್ಲಿ ಭಾರತವೂ ಧೋರಣೆ ಹಿಡಿದಿದೆಯೆಂಬುದನ್ನು ಭಾರತೀಯನೊ ಬ್ಬನು ಈಗ ಅವನಿಗೆ ತಿಳಿಸಬೇಕಾಗಿದೆ.

"ಬ್ರಿಟನು ಪ್ರಜಾಪ್ರಭುತ್ವದ ಸಲುವಾಗಿ ಹೋರಾಡುವುದರಿಂದ ಅದಕ್ಕೆ

ಜೀವನ ಮರಣಗಳ ಹೋರಾಟ ನಮ್ಮದೂ ಆಗಿದೆ!

ಸತ್ಯಾಗ್ರಹವಲ್ಲದೆ ಬೇರೆ ದಾರಿಯಿರಲಿಲ್ಲ!

ಬೆಂಬಲ ಕೊಡಬೇಕೆಂದು ಇನ್ನೊಂದನ್ನು ಪ್ರಬಲವಾದ ತರ್ಕವಾಗಿದೆ ಆದರೆ ಇದು ಆದರ್ಶ ಪ್ರಜಾಪ್ರಭುತ್ವಕ್ಕಾಗಿಯಲ್ಲ, ಕೆಲವು ದೇಶಗಳಲ್ಲಿ ಇರುವ ಕೆಲ ರೀತಿಯ ಸಾಮ್ರಾಜ್ಯಭರಣದ ಸ್ಥಾಪನೆಗಾಗಿ ಈ ಯುದ್ಧವಾಗಿದೆಯೆಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ಇಂತಹ ತತ್ವ ಕೆಲವು ವ್ಯಕ್ತಿಗಳನ್ನು ಹೊಂದಿಕೊಂಡಿಲ್ಲ. ಇಂದು ವಿಚಾರಿಸಿದರೆ, ಬ್ರಿಟನೂ ಕೆಲವು ಸರ್ವಾಧಿಕಾರೀ ತತ್ವಗಳನ್ನು ಅಂಗೀಕರಿಸಿದೆ ಯೆನ್ನಬೇಕು. ಹಲವು ಸಮಯದಿಂದ ದೂರವಾಗಿಯೇ ಇದ್ದ ಇಂದಿನ ಬ್ರಿಟನಿನ ಪ್ರಧಾನಮಂತ್ರಿ ಚರ್ಚಿಲ್ಲರು ಇಂದು ಅವರು ಹೇಳಿದಂತೆ ಬ್ರಿಟನು ನಡೆಯುತ್ತಿದೆ, ಜರ್ಮನಿಯ ಹಿಟ್ಲರ್ ಹೇಳಿದಂತೆ ನಡೆಯುವ ಹಾಗೆ ಕಡೆಗಂಡರೆ, ಯುದ್ಧವ ಗಿವ ತನಕವಾದರೂ, ಹೀಗೆಯೇ ನಡೆಯಬೇಕೆಂದು ಬ್ರಿಟಿಷರು ಇಂದು ನಿರ್ಧರಿಸಿದಂತೆ ತೋರುತ್ತದೆ.

ಒಂದು ವಾಗ್ದಾನ ಸಾಕಿತ್ತು

"ಇನ್ನೊಂದು ತರ್ಕವೆಂದರೆ, ಬ್ರಿಟನ ಇಂದಿನ ಜೀವನ ಮರಣಗಳ ಹೋರಾಟದಲ್ಲಿ ಸಿಲುಕಿದೆ, ಆದ್ದರಿಂದ ಅದಕ್ಕೆ ಸಹಾಯ ಕೊಡಲು ಭಾರತವು ಸಿದ್ಧವಾಗಿರಬೇಕು. ಇದರಿಂದ ಬ್ರಿಟಿಷರ ನ್ಯಾಯ ಸಾಧಿಸುವಿಕೆಗೆ ಕಲಿ ಒಗ್ಗಿಸಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಕ್ಕಿಂತ ಸಾಯಲೂ ತಯಾರಿದ್ದಾರೆಂಬುದಿಷ್ಟು ಸ್ಪಷ್ಟವಾಗಿದೆ. ಭಾರತವೂ, ಅದರ ಸ್ವಾತಂತ್ರ್ಯದ ವಿಚಾರದಲ್ಲಿ ಇಂತಹುದೇ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬ್ರಿಟಿಷರು ಯಾವ ಸ್ವಾತಂತ್ರ್ಯದ ಸಲುವಾಗಿ ಜೀವದಾನವೀಯಲು ಇಂದು ಸಿದ್ಧರಾಗಿರುವರೋ ಅದೇ ಸ್ವಾತಂತ್ರ್ಯವನ್ನು ಭಾರತವೂ ಅಪೇಕ್ಷಿಸುತ್ತದೆ. ಭಾರತವು ಇದನ್ನೂ ಕೂಡಲೇ ಕೊಡಬೇಕೆನ್ನಲಿಲ್ಲ. ಮುಂದೆ ಕೊಡುವುದಾಗಿ ಖಂಡಿತವಾದ ವಾಗ್ದಾನ ಮಾಡಿರೆಂದಿತು. ಆದರೆ ಅದೂ ತಿರಸ್ಕೃತವಾಯಿತು. "ಬನ್ನಿ ನಮ್ಮೊಡನೆ ಸೇರಿರಿ, ನಮ್ಮ ಜೀವ ಬದುಕಿಸಿರಿ, ಮತ್ತೆ ಯಾವಾಗಲಾದರೂ ನಿಮ್ಮ ವಿಚಾರ ಮಾಡುವ" ಎಂಬುದು ಭಾರತದ 'ಜೀವನಮರಣ' ಹೋರಾಟದ ಪ್ರಶ್ನೆಗೆ ಬ್ರಿಟನಿನ ಉತ್ತರವಾಯಿತು. ಕಾಂಗ್ರೆಸಿನವರಿಗೆ ಈ ಉತ್ತರವೂ ತೀರಾ ಅತೃಪ್ತಿಕರವಾಗಿದೆ. ಇದಕ್ಕಾಗಿ ಅವರನ್ನು 'ವಕ್ರ ಬುದ್ಧಿ'ಯವರೆಂದು ನಿಂದಿಸುವುದು ನನಗೆ ಆಶ್ಚರ್ಯವೆನಿಸುತ್ತದೆ.

"ಹಲವರು ಹೇಳುತ್ತಾರೆ. ಭಾರತಕ್ಕೆ ಬ್ರಿಟನು ಯುದ್ಧ ಮುಗಿದ ಮೇಲೆ ಸ್ವಾತಂತ್ರ್ಯ ಕೊಡುವುದೆಂದು ಸರ್ ಸಿಕಂದರರೂ ಹಾಗೆ ಹೇಳುತ್ತಾರೆ. ಆದರೆ, ಇಷ್ಟನ್ನಾದರೂ ಚರ್ಚಿಲ್ಲರಾಗಲಿ, ಎಮರಿಯವರಾಗಲಿ ಹೇಳುವುದಿಲ್ಲವೇಕೆ? ಹೀಗೆಂದಾದರೂ ಹೇಳಬೇಕಾದವರು ಅವರೇ ಅಲ್ಲದೆ ಸಿಕಂದರರಲ್ಲ. ಒದಲಾಗಿ, ಕಾಮನ್ಸಿನಲ್ಲಿ ಭಾರತದ ಚರ್ಚೆಯೇ ನಡೆಯುವಂತೆ ಮಾಡಿದರು. 'ಜೀವನ ಮರಣದ ಹೋರಾಟಕ್ಕೆ ನಾವು ಸಹಾಯ ಕೊಡಬೇಕಾಗಿದೆಯೇ? ಅಂತಹ ನಮ್ಮ ಜೀವನ ಮರಣ'ದ ಹೋರಾಟದ ವಿಚಾರವೇನು? ಇಂತಹ ಸಂದರ್ಭದಲ್ಲಿ, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿಶ್ಚಯಿಸಿದ ಕಾಂಗ್ರೆಸಿನವರನ್ನು ವಕ್ರ ಬುದ್ಧಿಯವರೆಂದು ಹೇಳುವುದು ನನಗೆ ಅರ್ಥವಾಗುವುದಿಲ್ಲ.'

ಆಮೇಲೆ ಅವರು ಸತ್ಯಾಗ್ರಹಕ್ಕಿಂತ ಉತ್ತಮವಾದ ಎದುರಾಳಿಗೂ ಹಿಂಸೆಯಾಗದಂತಹ ಬೇರೆ ಮಾರ್ಗವಿನ್ನೊಂದಿಲ್ಲವೆಂದು ಹೇಳಿದರು. ಗಾಂಧಿಜಿಯವರ ಅಹಿಂಸಾ ತತ್ವದಿಂದಾದ ಲೋಕೋಪಕಾರವಾಗಿದೆಯೆಂದು ತಿಳಿಸಿದರು. ಕೊನೆಗೆ ಉಪಸಂಹಾರದಲ್ಲಿ ಇಂದು ಭಾರತೀಯರ ಗುಲಾಮತನವನ್ನು ವಿವರಿಸಿ, ನಾವು ಕೇಳಿದ ವಿಷಯಗಳಲ್ಲಿ ಬ್ರಿಟನು ಅಧಿಕಾರವನ್ನು ಮಾರ್ಪಡಿಸಿ ತನ್ನ ಕೈಯಿಂದ ಪರರಿಗೆ ಬಿಟ್ಟುಕೊಡಲು ಮನಸ್ಸು ಮಾಡಿಲ್ಲವೆಂದೂ ತಿಳಿಸಿದರು.

ಕೊನೆಯ ಮಾತಾಗಿ ಕಾಂಗ್ರೆಸಿಗೆ ಅದರ ಈ 'ಜೀವನಮರಣ'ದ ಹೋರಾಟದಲ್ಲಿ ಸರ್ವರೂ ಸಹಾಯ ಮಾಡಬೇಕೆಂದು ವಿನ್ನವಿಸಿಕೊಂಡರು.

ವಿದ್ಯಾರ್ಥಿಗಳಿಗೆ ಗಾಂಧೀಯವರ ಸಂದೇಶ

ಮುಷ್ಕರದ ಬಗ್ಗೆ ಸಲಹೆ

ವಿದ್ಯಾರ್ಥಿಗಳಿಗೆ ಮಹಾತ್ಮಾ ಗಾಂಧಿಯವರು ಕೆಳಗಿನ ಸಂದೇಶ ಕೊಟ್ಟಿದ್ದಾರೆ.

ಪಂಡಿತ ಜವಾಹರಲಾಲರಿಗೆ ಶಿಕ್ಷೆ ವಿಧಿಸಲ್ಪಟ್ಟ ಸಂಬಂಧವಾಗಿ ಮದ್ರಾಸು ಮತ್ತು ಸಂಯುಕ್ತಪ್ರಾಂತಗಳಲ್ಲಿ ವಿದ್ಯಾರ್ಥಿಗಳು ಬಗೆ ಬಗೆಯಿಂದ ಪ್ರತಿಭಟನ ಪ್ರದರ್ಶನ ಮಾಡಿದರೆಂದು ನನಗೆ ತಿಳಿದು ಬಂದಿದೆ. ಈ ಸಂಬಂಧವಾಗಿ ಅನೇಕ ವಿದ್ಯಾರ್ಥಿಗಳು ನನಗೆ ಪತ್ರ ಬರೆದಿದ್ದಾರೆ. ಇದೇ ವಿಷಯದಲ್ಲಿ ಆಯಾ ಸರಕಾರದವರೂ ವಿದ್ಯಾರ್ಥಿಗಳಿಗೆ ಎಚ್ಚರಿಕೆ ಕೊಟ್ಟ ಸಂಗತಿಯೂ ನನಗೆ ತಿಳಿದು ಬಂದಿದೆ. ಈಗ ವಿದ್ಯಾರ್ಥಿಗಳು ಸರಕಾರದ ಈ ಧೋರಣವನ್ನು ಪ್ರತಿಭಟಿಸಲು ಮುಷ್ಕರ ಹೂಡಬೇಕೆಂದು ನಿಶ್ಚಯಿಸಿದ ಬಗ್ಗೆ ನನ್ನ ಸಲಹೆಯನ್ನು ಕೇಳಿದ್ದಾರೆ.

"ಭಾರತವನಾಕೆ... ಹಿರಿಪ್ರತ್ಯಕ್ಷ ನಾಯಕರು ಬಂಧಿಸಲ್ಪಟ್ಟಿದ್ದಾರೆ. ದ ಇಡೀ ಜಗತ್ತೇ ನಾಚಿಕೆಯಿಂದ ತಲೆ ತಗ್ಗಿಸಬೇಕಾದ ಪ್ರಸಂಗ ಬಂದು ಒದಗಿರುವಾಗ ಭಾರತ ವಿದ್ಯಾರ್ಥಿಗಳೂ ಮನನೊಂದು ಆ ರೀತಿ ನಿರ್ಧಾರ ಮಾಡಿದ್ದು ಆಶ್ಚರ್ಯವೇನೂ ಅಲ್ಲ. ಅವರ ಬಗ್ಗೆ ನನಗೆ ಸಂಪೂರ್ಣ ಸಮಾನ ಭಾವನೆಯಿದೆ. ಆದರೆ ಪಂಡಿತ ಜವಾಹರಲಾಲರ ಶಿಕ್ಷೆಯ ಬಗ್ಗೆ ಸಂತಾಪ ವ್ಯಕ್ತಮಾಡಿ ಅವರು ಮುಷ್ಕರ ಹೂಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಇದೇ ರೀತಿ ಎರಡು ಪ್ರಾಂತಗಳ ಸರಕಾರದವರೂ ವಿದ್ಯಾರ್ಥಿಗಳನ್ನು ಒದರಿಸಿದ್ದೂ ಸರಿಯಲ್ಲ. ಆದರೂ ವಿದ್ಯಾರ್ಥಿಗಳು ಮುಷ್ಕರ ಹೂಡದೇ ಇದ್ದರೆ ಒಳ್ಳೆಯದಾಗುವುದು. ಅವರಿಗೆ ನನ್ನ ಸಲಹೆ ಬೇಕಾದರೆ, ಅವರು ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲ ಒಬ್ಬ ಪ್ರಸಿದ್ಧಿಯನ್ನು ಕಳುಹಿಸಿಕೊಡಬೇಕು. ಅವರ ಬಂದರೆ, ನಾನು ನನಗೆ ಇಷ್ಟವಿದ್ದ ಸಲಹೆ ಕೊಡುವೆನು. ಈಗ ನಾನು ಪ್ರಾರಂಭಿಸಿರುವ ಹೋರಾಟದಲ್ಲಿ ವಿದ್ಯಾರ್ಥಿಗಳ ಹೃತ್ಪೂರ್ವಕ ಸಹಕಾರವು ನನಗೆ ಬೇಕು. ಆದರೆ ಪೂರ್ಣ ವಿಚಾರ ಮಾಡದೆ ಅವಸರದಿಂದ ಏನಾದರೂ ಮಾಡಿದರೆ ವಿದ್ಯಾರ್ಥಿಗಳಿಗೆ ಹಾನಿಯಾಗುವದಲ್ಲದೆ, ರಾಷ್ಟ್ರದ ಹಿತಕ್ಕೂ ಧಕ್ಕೆ ತಗಲುವುದು."

ಪರಮ ರಹಸ್ಯ

ನಯನಾನಂದಕರ ಮನೋಹರ ಸೌಂದರ್ಯಕ್ಕೆ ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾತ್ಮಕ ರಸಾಯನವೇ ಲೋಧ್ರ. ಸ್ತ್ರೀಯರಿಗೆ ಆರೋಗ್ಯವು ಮುಖ್ಯ, ಆದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ ಲಿ., ರಾಯಪೇಟೆ, ಮದರಾಸು

ಹಿಟ್ಲರನ ಜೀವನವನ್ನು ಚರ್ಚಿಲ್ಲರು ಬರೆದರು!

ಅವರ ಕೆಲವು ಭವಿಷ್ಯವಾಣಿಗಳು!

ಯುದ್ಧಕ್ಕಿಂತ ಹಿಂದಿನ ಜರ್ಮನಿ (ಲೇಖಾಂಕ ೧)

ಹಿಟ್ಲರನ ವಿಷಯ ಈಗಿನ ಬ್ರಿಟಿಷ ಮುಖ್ಯ ಮಂತ್ರಿಗಳಾದ ಚರ್ಚಿಲ್ಲರು ತಮ್ಮ 'ಗ್ರೇಟ್ ಕಂಟೆಂಪರರೀಸ್' ಎಂಬ ಪುಸ್ತಕದಲ್ಲಿ ಒಂದು ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಬರೆದಿರುವರು. ವಾಚಕರು ಇದನ್ನು ಓದಿನೋಡಿದರೆ ಚರ್ಚಿಲ್ಲರಿಗಿರುವ ಅದ್ಭುತವಾದ ಭವಿಷ್ಯತ್ಕಾಲದ ವಿಚಾರ ಜ್ಞಾನವು ತಿಳಿಯುತ್ತದೆ. ಈ ಚರಿತ್ರೆಯನ್ನು ೧೯೩೫ರಲ್ಲಿ ಅವರು ಬರೆದರು.

ಹಿಟ್ಲರನ ಇಡೀ ಜೀವಮಾನ ಕಾಲದಲ್ಲಿ ಮಾಡಿದ ಯಾವತ್ತು ಕೆಲಸಗಳನ್ನು ತಿಳಿಯದೆ, ಈಗ ಪ್ರಖ್ಯಾತಿಗೆ ಬಂದಿರುವ ಮಹಾಪುರುಷನ ವಿಷಯ ನ್ಯಾಯವಾದ ಒಂದು ಅಭಿಪ್ರಾಯವನ್ನು ಕೊಡುವದು ಯಾರಿಗೂ ಸಾಧ್ಯವಿಲ್ಲ. ಪ್ರಥಮತಃ ಅನ್ಯಾಯದ ಕೃತ್ಯಗಳನ್ನು ಮಾಡಿ, ಅನಂತರ ತನ್ನ ರಾಜಕೀಯ ಕೆಲಸಗಳಿಂದ ಈ ದುಷ್ಕೃತ್ಯಗಳನ್ನು ಜನತೆಯ ಮನಸ್ಸಿನಿಂದ ಅಳಿಸಿ ತೆಗೆಯುವದು ಸಾಧ್ಯವಿಲ್ಲವೆಂಬುದು ಸರಿಯಾದರೂ, ಚರಿತ್ರೆಯನ್ನು ಓದಿದರೆ ಕಠಿಣ ಕ್ರೂರ ಮತ್ತು ಭಯಂಕರವಾದ ಪ್ರಯತ್ನಗಳಿಂದ ಅಧಿಕಾರವನ್ನು ಪಡೆದು ನಂತರ ಈ ಮಾರ್ಗವನ್ನು ತೊರೆದು ಜನತೆಯ ಚರಿತ್ರೆಯಲ್ಲಿ ಕೀರ್ತಿ ಹೊಂದಿ ಮನುಷ್ಯ ಜೀವನವನ್ನು ಸಂಪತ್ತಿಯಿಂದ ಗೌರವ ಯುಕ್ತವಾಗಿ ಮಾಡಿದ ಧುರೀಣರು ಅನೇಕರಿರುವರು. ಈ ತರದ ಶ್ರೇಷ್ಠರಲ್ಲಿ ಹಿಟ್ಲರನು ಸಹಾ ಒಬ್ಬನು. ಚರಿತ್ರೆಯನ್ನು ಬರೆಯುವಾಗ ಈಗ(೧೯೩೫ ಕೊನೆಗಾಲದಲ್ಲಿ ಹೇಗೆ ಮಹಾಪುರುಷನು ನಡೆದಾನು ಎಂಬದನ್ನು ಹೇಳುವದು ಸಾಧ್ಯವಿಲ್ಲ. ನಾಗರಿಕತನವನ್ನು ಕೊನೆಗಾಣಿಸುವ ಮಹಾಯುದ್ಧಕ್ಕೆ ಇವನು ಕಾರಣಭೂತನಾಗುವನೋ ಅಥವಾ ಜರ್ಮನಿಯ ಮಹಾ ಜನಾಂಗವನ್ನು ಯುರೋಪದ ಜನಾಂಗಗಳಲ್ಲಿ ಅಗ್ರಗಣ್ಯನೆಂದೆನಿಸುವಂತೆ ಈ ಜನಾಂಗಕ್ಕೆ ಸಂಪತ್ತು ಶಾಂತಿಯನ್ನು ಉಂಟುಮಾಡಿ ಆ ಜನಾಂಗಕ್ಕೆ ಈ ಲೋಕದಲ್ಲಿ ಮರ್ಯಾದೆಯು ಸಿಕ್ಕುವಂತೆ ಮಾಡುವನೋ ಎಂಬದನ್ನು ಹೇಳುವದು ಈಗ ಸಾಧ್ಯವಿಲ್ಲ. ಚರಿತ್ರೆಯಲ್ಲಿ ಈ ಮುಖ್ಯ ಜನಾಂಗಗಳ ಮುಂದಿನ ಸ್ಥಿತಿಗತಿಗಳನ್ನು ನಿಶ್ಚಯ ಮಾಡುವ ಅನೇಕ ಅಧ್ಯಾಯಗಳು ಇನ್ನೂ ಬರೆಯಲಿಕ್ಕಿವೆ. ಈ ಕಾರಣದಿಂದಲೇ ನಾವು ಈಗ ಅವನ ಕಾರ್ಯದ ಮತ್ತು ಅವನ ಮನಸ್ಸಿನ ಕೇವಲ ದುಷ್ಕೃತ್ಯಗಳ ವಿಷಯ ಈಗ ಬರೆಯುವದು ಅಗತ್ಯ ಪಟ್ಟಿರುವೆವು. ಅವನ ಒಳ್ಳೆಯ ಕೆಲಸಗಳನ್ನು ಇನ್ನೂ ಮಾಡಬಹುದು. ಆ ಸಂಭವವಿಲ್ಲವೆಂತ ನಾವು ಈ ಲೇಖನದಲ್ಲಿ ಸೂಚಿಸುವದಿಲ್ಲ.

೧೯೧೪–೧೯೧೮ನೇ ಯುದ್ಧ ಥಳಿ ಪೂರಾ ಪರಾಜಿತವಾದ ಜರ್ಮನಿಯು ಸಾಮ್ರಾಜ್ಯದ ಜನತೆಯು ಶೋಚನೀಯ ಮತ್ತು ಮನೋವ್ಯಥೆಯಲ್ಲಿ ಹಿಟ್ಲರನು ಜನ್ಮವೆತ್ತಿದನು. ಈ ಜನತೆಯಲ್ಲಿ ಉಂಟಾದ ನಿರಾಶೆಯನ್ನು ಹೋಗಲಾಡಿಸಿ, ಈ ಜನತೆಯಲ್ಲಿ ಇನ್ನಷ್ಟು ನಾಶಕರವಾದ ಬೇರೆ ಜನಾಂಗಗಳ ಮೇಲಿನ ದ್ವೇಷವನ್ನು ಹುಟ್ಟಿಸಲು ಅವನು ಕಾರಣಭೂತನು. ತಮಗಾದ ಅಪಮಾನವನ್ನು ಹೋಗಲಾಡಿಸಿ ಮುಯ್ಯಿಗೆ ಮುಯ್ಯಿ ತೀರಿಸುವುದೇ ಅವನ ಮುಖ್ಯ ಧ್ಯೇಯ. ಯುರೋಪಿನ ಅರ್ಧಾಂಶವನ್ನು ತಮ್ಮ ಮುಷ್ಟಿಯೊಳಗೆ ಹಿಡಿದ ಜರ್ಮನ ಸೈನ್ಯವು ಪ್ರತಿ ರಣರಂಗದಲ್ಲಿ ಹಿಮ್ಮೆಟ್ಟಿ ತಮ್ಮ ಶತ್ರುಗಳ ಕೂಡೆ ರಾಜಿಮಾಡುವದೆ ಅಪೇಕ್ಷಿಸುವ ಸಮಯದಲ್ಲಿ ರಣರಂಗದ ಹಿಂಬದಿಯಲ್ಲಿ ಪ್ರಶ್ಯದ ಜನರ ಗರ್ವವು ಮುರಿದು ಹೋಗಿ, ಉತ್ಕ್ರಾಂತಿ ಉಂಟಾದ ಸಮಯ ಪ್ರಶ್ಯದ ಕೇಂದ್ರ ಸರಕಾರವು ೫೧ ತಿಂಗಳು ಯುದ್ಧ ಮಾಡಿ, ಬೇರೆ ಜನಾಂಗಗಳಿಗೆ ಹೆಚ್ಚಿನ ಭಯವನ್ನುಂಟುಮಾಡಿ, ತನ್ನ ಪ್ರಜೆಗಳನ್ನು ಜನಸಹಾಯ ಯುದ್ಧದ ಸಲಕರಣೆಯ ಅಭಾವ ಇವುಗಳಿಂದ, ಜಯಶೀಲರಾದ ಮಿತ್ರ ಸರಕಾರದವರ ಸ್ವಾಧೀನ ಬಿಟ್ಟ ಸಮಯ, ಆ ವರೆಗೆ ಕೊರ್ಪೊರಲ್ ಕೆಲಸದಲ್ಲಿ ಇದ್ದು ಮೊದಲು ಮನೆಯನ್ನು ಅಲಂಕರಿಸಿ ಅದನ್ನು ಅಂದಗೊಳಿಸುವ ಕೆಲಸದಿಂದ ಜೀವನ ನಡಿಸುವ ಈ ಪುರುಷನು ತನ್ನ ಜನತೆಯ ನಷ್ಟವನ್ನು ಅವಮರ್ಯಾದೆಯನ್ನು ಹೋಗಲಾಡಿಸಿ ದೇಶವನ್ನು ಸರಿಗೊಳಿಸಲು ದೀಕ್ಷೆಯನ್ನು ಕೈಕೊಂಡನು.

೧೯೧೮ರ ನಂತರದ ೧೫ ವರ್ಷಗಳಲ್ಲಿ ಈ ಅವನ ದೀಕ್ಷೆಯು ಸಂಪೂರ್ಣವಾಯಿತು. ಯುರೋಪಿನಲ್ಲಿ ಅತೀ ಪ್ರಾಬಲ್ಯದ ಸ್ಥಾನವನ್ನು ತನ್ನ ರಾಜ್ಯಕ್ಕೆ ಹಿಟ್ಲರನು ಪಡೆದನು. ಇದಲ್ಲದೆ ತನ್ನ ದೇಶಕ್ಕೆ ೧೯೧೪–೧೯೧೮ನೇ ಯುದ್ಧದಲ್ಲಿ ಉಂಟಾದ ನಷ್ಟವನ್ನು ತನ್ನ ಜನಾಂಗಕ್ಕೆ ಆದ ಬೇರೆ ಯುದ್ಧದ ಫಲಿತಾಂಶಗಳನ್ನು ಅವನು ಸರಿಗೊಳಿಸಿದನು. ಪರದೇಶದ ಇಲಾಖೆಯ ಬ್ರಿಟಿಷ ಮಂತ್ರಿ ಸರ್ ಜಾನ್ ಸ್ಯಾಮನನು ಯುದ್ಧದಲ್ಲಿ ಜಯಶೀಲರಾದವರಿಗೂ ಪರಾಜಿತರಾದವರಿಗೂ ನಾವು ಭೇದವನ್ನು ಮಾಡಲಾರೆವು ಎಂತ ತಿಳಿಸಿರುವನು. ಈ ರೀತಿ ಭೇದಗಳನ್ನು ಮಾಡಲು ಸಾಧ್ಯವಿಲ್ಲವಾಗಿ ಸ್ಯಾಮನರು ಅಭಿಪ್ರಾಯಪಟ್ಟರೂ ಈ ಭೇದಗಳು ಇದ್ದೇ ಇದ್ದುವು. ಆದರೆ ಪರಾಜಿತರು ಜಯಶೀಲರಾಗುವ, ಅಥವಾ ಜಯಶೀಲರು ಪರಾಜಿತರಾಗುವ ಸ್ಥಿತಿಯೂ ಸಂದರ್ಭವು ಒದಗಿತು. ಹಿಟ್ಲರನು ತನ್ನ ಕೆಲಸವನ್ನು ಪ್ರಾರಂಭಿಸುವಾಗ ಜರ್ಮನಿಯು ಮಿತ್ರಮಂಡಲದವರ ಕಾಲಡಿಯಲ್ಲಿತ್ತು. ಈಗ (೧೯೩೫)ರಲ್ಲಿ ನೋಡಿದರೆ ಯುರೋಪವು ಜರ್ಮನಿಯ ಕಾಲಡಿಯಲ್ಲಿ ಬೀಳುವ ಸಂದರ್ಭ ಬರಬಹುದು. ಆ ದಿವಸವನ್ನು ನಾವು ನೋಡಲಿಕ್ಕಿಲ್ಲ ಸಾಕು. ಹಿಟ್ಲರನ ಕಾರ್ಯಗಳ ವಿಷಯ ನಾವು ಏನೂ ಆಲೋಚಿಸಿದರೂ ಭೂಲೋಕದ ಚರಿತ್ರೆಯಲ್ಲಿ ಅವನ ಕೃತ್ಯಗಳು ಅತೀ ಆಶ್ಚರ್ಯಕರವಾದವುಗಳಾಗಿರುತ್ತವೆ.

ರಾಜಕೀಯ ದೃಷ್ಟಿಯಲ್ಲಿ ನೋಡಿದರೆ ಇಂಗ್ಲಿಷ್ ಮತ್ತು ಫ್ರೆಂಚ್ ಗವರ್ನಮೆಂಟಿನವರು ೧೯೩೨–೧೯೩೫ನೇ ಇಸವಿಯಲ್ಲಿ ತೋರಿಸಿದ ಅಜಾಗ್ರತೆಯೂ ಹುಚ್ಚು (folly)ತನವೇ ಹಿಟ್ಲರನ ಜಯಕ್ಕೆ ಕಾರಣ. ಪಾರ್ಲಿಮೆಂಟುಗಳ ಸಿಟ್ಟು ರಾಜ್ಯಭಾರ ಕ್ರಮವನ್ನು ನಡಿಸುವ ಜರ್ಮನ್ ಸರಕಾರದವರ ಕೂಡೆ ಮಿತ್ರಮಂಡಳದವರು ಸ್ನೇಹವನ್ನು ಬೆಳೆಸಲಿಲ್ಲ. ಯುದ್ಧದಲ್ಲಿ ಆದ ತಮ್ಮ ನಷ್ಟವನ್ನು ಪೂರೈಸುವದು ಜರ್ಮನ್ ಜನಾಂಗದಿಂದ ಅತಿರೇಕ ನಷ್ಟಭರ್ತಿಯ ದ್ರವ್ಯವನ್ನು ಬಲತ್ಕಾರದಿಂದ ಪಡೆಯಬಹುದೆಂಬ ಭ್ರಮೆಯು ಫ್ರೆಂಚರಿಗೆಯಿತ್ತು; ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ಸಂಪತ್ತನ್ನು ಒಯ್ಯುವ ಕ್ರಮಗಳು ಮಿತ್ರಮಂಡಲದವರಿಗೆ ಗೊತ್ತಿತ್ತು. ಈ ಕ್ರಮಕ್ಕೂ ಜರ್ಮನಿಯವರಿಂದ ನಷ್ಟ ಹಣವನ್ನು ಪಡೆಯುವ ಬ್ರಿಟಿಷರ ಮತ್ತು ಫ್ರೆಂಚರ ಕ್ರಮಗಳಿಗೂ ಏನೂ ಸಂಬಂಧವಿರಲಿಲ್ಲ. ಅರ್ಥವಿಲ್ಲದ ಅಸಾಧ್ಯವಾದ ಕರಾರುಗಳನ್ನು ಜಾರಿಗೆ ತರುವದೆ ಫ್ರೆಂಚ್ ಸೈನ್ಯವು ಜರ್ಮನಿಯ ರುಹರ್ ಪ್ರದೇಶವನ್ನು ೧೯೨೩ರಲ್ಲಿ ನುಗ್ಗಿ ಸ್ವಾಧೀನ ಮಾಡಿಕೊಂಡಿತು.

ಪ್ರಥಮತಃ ಕೇಳಿದ ನಷ್ಟದ 1/10ನೇ ಅಂಶವನ್ನು ವಸೂಲು ಮಾಡಲು ಮಿತ್ರಮಂಡಳದ ಒಂದು ಸಭೆಯು ಸೇರಿತು. ಅದಕ್ಕೆ ಅಮೇರಿಕದವರೊಬ್ಬರು ಅಧ್ಯಕ್ಷ. ಅದು ಜರ್ಮನಿಯ ಆಯವ್ಯಯದ ವಿಷಯ ಹೆಚ್ಚಿನ ತನಿಕೆ ಮಾಡಿತು. ಈ ಬೋರ್ಡು ಹಲವು ವರ್ಷಗಳಿಂದ ಕೆಲಸಮಾಡಿದರೂ ಜನಾಂಗದೊಳಗಣ ದ್ವೇಷವನ್ನು ಹೆಚ್ಚಿಸಿತಲ್ಲದೆ ನಷ್ಟವನ್ನು ಜರ್ಮನಿಯವರಿಂದ ಪಡೆಯಲು ಅವರಿಗೆ (ಬೋರ್ಡಿಗೆ) ಸಾಧ್ಯವಾಗಲಿಲ್ಲ. ಜರ್ಮನಿಯವರಿಂದ ಒಟ್ಟಾರೆ ೧೦೦೦ ಮಿಲಿಯ ಪವನು ನಷ್ಟ ಮಿತ್ರಮಂಡಳದವರಿಗೆ ಸಿಕ್ಕಿತು. ಆದರೆ ಅಮೇರಿಕದವರೂ ಕೆಲವು ಮಟ್ಟಿಗೆ ಬ್ರಿಟಿಷರು ಸಹಾ ಜರ್ಮನಿಯವರಿಗೆ ೩೦೦೦ ಮಿಲಿಯ ಪವನನ್ನು ಸಾಲವಾಗಿ ಕೊಡಬೇಕಾದ ಸಂದರ್ಭವು ಬಂತು. ಈ ಸಾಲವನ್ನು ಅವರು ಕೊಟ್ಟರು. ಮಿತ್ರಮಂಡಳದವರು ಕೊಟ್ಟ ಹಣದಿಂದ ಜರ್ಮನಿಯ ಜನರ ಜೀವನ ಕ್ರಮವು ಒಳ್ಳೆಯದಾಯಿತು. ಉದ್ಯಮಗಳು ಚೇತನಗೊಂಡವು. ದಿನೇ ದಿನೇ ಜರ್ಮನಿಯವರು ಈ ಸಾಲದಿಂದ ಹೆಚ್ಚಿನ ಪ್ರಯೋಜನವನ್ನು ಪಡೆದರೂ ಮಿತ್ರಮಂಡಳದವರು ಜರ್ಮನಿಯಲ್ಲಿ ಹೆಚ್ಚಿನ ಸಂಗತಿಗಳಲ್ಲಿ ಪ್ರವೇಶವಾದುದರಿಂದ ಜರ್ಮನ ಜನತೆಯ ಕೋಪವು ಇನ್ನಷ್ಟು ಹೆಚ್ಚಾಯಿತು.

K. L. Kudva



ವಾರದ ಕತೆ

ಚಂಪಾ

ಕತೆಗಾರರು:
ಪ್ರಮೋದ ಕುಮಾರ

ಚಂಪೆ, ಆಗ ಚಿಕ್ಕವಳು. ಎಂದರೆ ನಾನು ಶಾಲೆಗೆ ಹೋಗಿ ಬರುವಾಗ, ಮನೆ ಬಾಗಿಲಿಯಲ್ಲಿ ನಿಂತುಕೊಂಡು ಹಪ್ಪಳ ತಿನ್ನುವ ಚಿಕ್ಕ ಹುಡುಗಿ. ಆಗ ಅವಳಿಗೆ ಆರೋ ಏಳೋ ತುಂಬಿರಬೇಕು; ನನಗೆ ೧೨. ಸಣ್ಣಂದಿನ ಆಟ ನಿಮಗೆಲ್ಲರಿಗೂ ಗೊತ್ತಿದ್ದದ್ದೇ. ಗಂಡ-ಹೆಂಡ್ತಿ; ಇಲ್ಲವೆ, ಅಣ್ಣ ತಂಗಿ. ತಾಯಿ ಮಗ, ಹೀಗೆ ನಮ್ಮ ಆಟ. ನಮ್ಮ ಆಗಿನ ಆಟದಲ್ಲಿ ಅವಳು ನಾನೆಂದರೆ ಯಾರೋ ಯಾರೋ ಅನ್ನುವ ಹಾಗೆ. ನಮ್ಮ ಸಂಬಂಧ ನಾಟಕದ ಪಾತ್ರದಂತೆ. ಆಗ ಕೆಟ್ಟ ಹುಡುಗಿ! ಒಂದೆರಡು ಬಾರಿ ಏನೋ ನಾಟಕಕಂಪನಿ ನೋಡಿದ್ದು 'ಎಲ್ಲಿ ಒಂದು ಮುತ್ತು ಕೊಡಿ!' ಎಂದು ಮೈಗೆ ಜೋಲು ಬೀಳುವಳು. ಕೆನ್ನೆಗೊಂದು ಪೆಟ್ಟು ಕೊಟ್ಟರೆ ತಾಯಿಯೊಡನೆ ದೂರಿಡುವಳು. ಅದು ಆಗಿನ ಆಟದ ನೆನಪು. ಈಗ ಅದು ವಿಚಿತ್ರ; ಏನು ಕಥೆ! ಎನ್ನಿಸುತ್ತದೆ.

★

ಚಂಪೆಯ ತಂದೆ ಮತ್ತೆ ಕೆಲವು ವರ್ಷಗಳಲ್ಲಿ ತೀರಿಕೊಂಡು ಬಿಟ್ಟ. ತಾಯಿ ಒಬ್ಬಳೆ ಅವಳನ್ನು ಸಾಕುವ ಹೊಣೆಗಾತಿ. ತಂದೆಯು ಉಪಾಧ್ಯಾಯ ವೃತ್ತಿಯ ಅಲ್ಪ ವೇತನದಿಂದ ಮುಂದಿನ ಜೀವನಕ್ಕೆ ದಾರಿಯಾಗಲಿಲ್ಲ. ಕೂಸಿಗೆ ಹಾಗೂ ಮಾಡಬೇಕಾಯಿತು; ಚಂಪೆ ಮನೆಯಲ್ಲಿಯೆ ಉಳಿದುಕೊಂಡು ಅಡುಗೆ ಮಾಡಿದಳು. ತಾಯಿ ಬೇರೆಯವರ ಮನೆಯಲ್ಲಿ ದುಡಿಯಲು ಹೋದಳು; ಆಕೆ ಬರುವಾಗ, ಬಡಿಸುವ ಕಾರ್ಯ ಚಂಪೆಯದು. ತಾಯಿ ನೀಲಮ್ಮ, ರಂಗರಾಯರ ಮನೆಯೂಳಿಗಕ್ಕೆ ನಿಂತಳು.

ಒಂದು ಮನೆಯ ಊಳಿಗ ಎಂದರೆ ಗುಲಾಮನ ಜಹಗೀರು ಇದ್ದಂತೆ. ವರ್ಷ ಮೂರು ನಾಲ್ಕು ಕಳೆಯಿತು. ನೀಲಮ್ಮ ಮತ್ತು ಚಂಪೆಗೆ ಸಾಕಾಗುವಷ್ಟು ಊಟಕ್ಕೆ ಬರುತಿತ್ತು. ಒಂದೊಂದು ವೇಳೆ, ಆ ಮಧ್ಯೆ, ಚಂಪೆಗೂ ಅಲ್ಲಿ ಹೋಗಿ ಬರುತ್ತ ಇದ್ದಂತೆ ದುಡಿಯಬೇಕಾಗಿ ಬಂತು. ಅವಳೂ ಅಲ್ಲಿಯೇ ಕೆಲಸ ಮಾಡಲು ತೊಡಗಿದಳು. ತಾಯಿಗೂ ಮತ್ತೆ ಕೆಲವು ವೇಳೆ ಹೋಗಲು ಬಾರದೆ ಚಂಪೆಯೊಬ್ಬಳೇ ರಂಗರಾಯರ ಮನೆ ಚಾಕರಿ ಮಾಡತೊಡಗಿದಳು.

★

ಚಂಪೆ ಎಂದರೆ ನಮ್ಮ ಮನೆ ಹೆಂಗಸರಿಗೆ ಬಹಳ ಪ್ರೀತಿ: 'ಏನು ಚಂಪಾ, ಊಟ ಮುಗೀತೇನೆ?' ಎಂದಕ್ಕನು ಕೇಳಿದರೆ ಧನೀ ಮನೆಯ ಚರಿತ್ರೆಯೆಲ್ಲಾ ಓದಲು ತೊಡಗುವಳು. ಆಚೆ ಕೋಣೆಯಲ್ಲಿ ಕುಳಿತಿರುವ ನನಗೆ ಅದನ್ನು ಕೇಳುತಿದ್ದರೆ ಏನೋ ಒಂದು ನೋವೆಲು ಓದಿದುದಕ್ಕಿಂತಲೂ ಹೆಚ್ಚು ಆನಂದವಾಗುತಿತ್ತು. 'ಬಡವರು ಎಂದರೆ, ಏಕೆ-ಬಡವರಂತೆ ಏನು? ಯಾರೇ ಇರಲಿ, ದೊಡ್ಡವರು ವಿಚಾರಿಸುವುದು ತಾವು ತಿನ್ನುವ ವಸ್ತು ಅವರು ತಿಂದರಲಿಕ್ಕಿಲ್ಲ ಎಂತ ಅಲ್ಲವೇ ಅಕ್ಕ? ನೋಡಿರಿ, ಏನು ದೊಡ್ಡಸ್ತನವೋ ನಮ್ಮ ತಂದೆಯವರು ಇದ್ದಾಗ ತಿಂದ ಬಾಯಿರುಚಿ ಎಂದರೆ ಈಗ ಕನಸಿನ ಮಾತಾಗಿದೆ. ನಮ್ಮ ಧನೀರ ಹೆಂಡತಿ ನೆನೆಸ್ತಾರೆ ನಾವು ಕಾಫಿ ಕುಡಿದವರೇ ಅಲ್ಲಾಂತ! ಏನೋ ಅವರು ಮಾತ್ರ ಕುಡಿಯೋರಂತಲೋ ಏನೋ? ನಮಗೆ ಕೆಲಸ ಮಾಡಿದವರಿಗೆ ಕೊಡುವುದು ಏನೆಂದು ಗೊತ್ತೊ? ಕಾಫಿ ಹುಡಿಯನ್ನು ಒಮ್ಮೆ ಹಾಕಿ ಗಾಳಿಸಿ ಉಳಿದ ಪುಡಿ ಉಂಟು ತಾನೆ? ಅದನ್ನು ನೀರಿನಲ್ಲಿ ಕಲಸಿ; ಮತ್ತೆ ಬಿಸಿ ಮಾಡಿ ಅದಕ್ಕೆ ಗಂಜಿ ನೀರನ್ನು ಬೆರಸಿ ಕೊಡುತ್ತಾರೆ. ಮೊನ್ನೆ ನನಗೆ ಮೊದಲಿಗೇ ಅದನ್ನು ಕೊಟ್ಟರು. ನಾನು ಚೆಲ್ಲಿ ಬಿಟ್ಟೆ. ನಿನ್ನ ತಾಯಿ ಕುಡೀತಾಳೆ. ನಿನಗೇನೇ ಗಂಟಳಲ್ಲಿ ಇಳಿಯೋದಿಲ್ಲಾಂತ ಕಾಣುತ್ತದೆ. ಇಲ್ಲೇನೂ ಹೆಚ್ಚಾಗಲಿಲ್ಲ. ನಿನಗೆ ಬೇಡಾದರೆ ನಾಲಿಗೆ ಎಳೆ ಹಾಗಿಂತ, ನಿನ್ನ ಹಿರಿಯರು ನೋಡಿಡರೋ ಕಾಫಿ ಅಂತ ಬೊಗಳಿದರು. ಮತ್ತು ನಾನೇಕೆಂತ ಮಾತನಾಡಲಿಲ್ಲ. ನಾಲ್ಕು ವರ್ಷಗಳಿಂದಲೂ ತಾಯಿ ಅಲ್ಲಿ ಇದ್ದರು. ಈ ವರೆಗೆ ಈ ಕಾಫಿ ಕುಡಿದೇ ರೋಗಬಂತೋ ಅನ್ನುವ ಹಾಗಿದೆ. ಅದು ಹಾಗಾಯ್ತು; ಇನ್ನ ಅನ್ನ ಹೇಗೆ ಕೊಡುತ್ತಾರೆ? ಅದು ಬೇರೇ ಉಂಟು! ಕೆಲಸದ ವಿಷಯ ಕೇಳುತ್ತೀರಾ? ಮೊನ್ನೆ ತಾಯಿಗೆ ಜೋರು ಜ್ವರ ಬಂತು. ನಾನು ಮಧ್ಯಾಹ್ನ ಹೋದೆ. ರಾಯರ ಹೆಂಡತಿ ವಸ್ತ್ರ ಒಗೆಯಲು ತೊಡಗಿದ್ದರು. ನಾನು ದೂರದಿಂದ ನಿಂತು ನೋಡಿದೆ. ಒಂದೇ ಕೊಡ ನೀರಿನಲ್ಲಿ ಸುಮಾರು ಹತ್ತೆಂಟು ವಸ್ತ್ರವನ್ನು ಕುಲುಕಿ, ಹಿಂಡಿ ಒಣಗಲು ಹಾಕಿಬಿಟ್ಟು ನಡೆದರು. ಅದೇ ಹತ್ತೆಂಟು ವಸ್ತ್ರಗಳನ್ನು ನಾನು ಒಗೆಯುವುದಿದ್ದರೆ ಹತ್ತಾರು ಕೊಡ ನೀರಾದರೂ ಬೇಕು. ಇಲ್ಲದಿದ್ದರೆ ಏಕೆ ಅದು ಹಾಗೆ, ಏಕೆ ಇದು ಹೀಗೆ ಅನ್ನುತ್ತಾರೆ, ಅದು ಹಾಗಾಯಿತು. ಇನ್ನು ಅಲ್ಲಿಯ ಜೀವನ; ನಿನ್ನೆ ಮಧ್ಯಾಹ್ನಕ್ಕೆ ಬೇಗ ಬೇಗನೆ ಕೆಲಸ ತೀರಿಸಿಬಿಟ್ಟು ಮನೆಗೆ ಹೊರಡುವಾಗ ಸ್ವಲ್ಪ ಬಿಸಿನೀರು ಮಾಡಿ ಅಲ್ಲಿಯೇ ಸ್ನಾನ ಮಾಡಿ ಬರುವವಳಿದ್ದೆ. ಬಾಗಿಲು ಹಾಕಿ ಕೀಲು ಮಾತ್ರ ಹಾಕಲಿಲ್ಲ. ಮೀಯಲು ಇಳಿದು ಉಟ್ಟ ವಸ್ತ್ರ ಬಿಚ್ಚಿ ಬೇರೆ ಬದಲಾಯಿಸಲು ಬಗ್ಗಿದ್ದೇನಷ್ಟೆ, ಅಕ್ಕ, ನಾಚಿಕೆಯಾಗುತ್ತದೆ. ಅಷ್ಟರಲ್ಲಿ ಎಲ್ಲಿಂದ ಬಂದನೊ ಏನೋ ರಾಯರ ಮುದ್ದಿನ ಗಿಣಿ, ಶ್ರೀನಿವಾಸ; ಬಾಗಿಲು ನೂಕಿ ಒಳಗೆ ಬಂದು 'ಓ! ನೀನು ಇದ್ದಿಯಾ ಇಲ್ಲಿ?' ಎಂದು ನಿಂತುಕೊಂಡು ಚನ್ನಾಗಿ ನಗಾಡಿಕೊಂಡು ಹೋದ. ನೋಡಿರಿ ನಾನು ಸತ್ತ ಹಾಗಾದೆ. ಏನು ಮಾಡಬೇಕೆಂಬುದು ತಿಳಿಯಲಿಲ್ಲ. ಅಲ್ಲಿಯೇ ಕುಳಿತುಕೊಂಡೆ. ಅವ ಹೋದ ಮೇಲೆ ಎದ್ದು ಬೇರೆ ವಸ್ತ್ರ ತೊಟ್ಟು ಮಿಂದು ಹೊರಟೆ. ಆ ಮೇಲೆ ಎದ್ದು ಅಲ್ಲಿಂದ ಹೊರಗೆ ಬರುವಷ್ಟರಲ್ಲಿ ಶ್ರೀನಿವಾಸ ಎಲ್ಲಿಂದಲೋ ಬಂದು ನನಗೆ ಡಿಕ್ಕಿ ಬಡೆದ. ನೋಡಿ, ಹೀಗೆ ನಮ್ಮ ಜೀವನ ಎಂದು ಅಳುವಳು. ಇವತ್ತು ಶ್ರೀನಿವಾಸನ ಕತೆಯಾದರೆ ನಾಳೆ ರಂಗರಾಯರ ಕತೆ, ಹೀಗೆ ಅವಳು ಅಳುತ್ತ ನಗುತ್ತ, ತನ್ನ ಅನುಭವ ಹೇಳುವಾಗ ಅಕ್ಕನಿಗೆ ದುಃಖ ಸಹಿಸುವುದಿಲ್ಲ. 'ಇನ್ನು ಅವೆಲ್ಲ ಹೇಳಬೇಡ' ಎನ್ನುತ್ತಿದ್ದ ಅಕ್ಕ.

★

ಅಕ್ಕನಿಗೆ ಮದುವೆ ಆಗಿ ಸುಮಾರು ೧೨ ವರ್ಷ ಆದ ನಂತರ ಚಂಪೆಗೆ ಲಗ್ನ ಆಯಿತು. ಅಕ್ಕನಿಗೂ ಚಂಪೆಗೂ ಒಂದೆರಡು ವರ್ಷ ಪ್ರಾಯ ವ್ಯತ್ಯಾಸ ಇರಬಹುದು. ಇಷ್ಟೊಂದು ಪ್ರಾಯದ ವರೆಗೆ ಚಂಪೆ ಲಗ್ನ ಇಲ್ಲದೆ ಇರುವುದಕ್ಕೆ ಕಾರಣ ಬಡತನ. ಅದುದರಿಂದಲೇ ಚಂಪೆಯ ಮೇಲೆ ಸಹಸ್ರಾರು ನಾಮ ಗೀತಾವಳಿಯು ಊರಲ್ಲಿ ಬೇರೆ ಹರಡಿತ್ತು. ಕಾರಂತರ ಕನ್ಯಾಬಲಿಯ ನಾಯಕಿಯೇ ಆಗಿದ್ದಳು ಅವರ ಮಾತಿನಲ್ಲಿ. ಅವಳನ್ನು ಚಿಕ್ಕಂದಿನಲ್ಲಿಯೇ ಬಲ್ಲವರಲ್ಲಿ ನಾರಣಪ್ಪ ಒಬ್ಬ. ನಾವು ಮೂವರೂ ಚಿಕ್ಕಂದಿನಲ್ಲಿ ಆಟವಾಡಿದ್ದ ನೆನಪು ಉಂಟು. ಅನೇಕ ಸಲ ನಾರಣಪ್ಪನಿಗೆ ಹೊಡೆದೂ ಕಳಿಸಿದ್ದಳು ಚಂಪೆ. ನಾರಣಪ್ಪ, ಮೊದಲು ಚಂಪೆಯನ್ನು ಮದುವೆಯಾಗುತ್ತೇನೆಂದಾಗ ಆತನ ತಾಯಿ ಅಡ್ಡ ಬಂದಳು. ಹಾಗಾಗಿ ಆಗ, ಬೇರೊಬ್ಬಳ ಕೈ ಹಿಡಿದ. ಅವನ ತಾಯಿ ತೀರುವಾಗಲೇ ಆಕೆಯೂ ತೀರಿಕೊಂಡಳು. ತಾಯಿ ಸತ್ತ ಮೇಲೆ ಚಂಪೆಯನ್ನು ಉದ್ಧರಿಸಿದ. ಚಂಪೆಗೆ ಈಗ ಹಿಂದಿನ ನೆನಪಾದರೆ ಅಳು ಬರಬೇಕೋ ನಗು ಬರಬೇಕೋ ಎಂದು ನಾನು ಹೇಳಲಾರೆ. ನನಗೆ ಮಾತ್ರ ಚಂಪೆಯ ನೆನಪಾದರೆ ಒಂದು ನಿರ್ಮಲ ಸಂಪಿಗೆಯ ಹೂವಿನ ನೆನಪಾಗುತ್ತದೆ. ಚಂಪಕಕಿಂತಲೂ ಚೆಲುವೆ, ಪರಿಮಳ. ಬಡವಳಾಗಿದ್ದರೂ ಅವಳ ದೃಢ ನಿಷ್ಠೆಯನ್ನು ನೆನೆದು ನಾನು ಬೆರಗಾಗುತ್ತೇನೆ.

ಶ್ರೀನಿವಾಸ ಇದ್ದುದನ್ನೆಲ್ಲಾ ಕಳಕೊಂಡು ಮತ್ತೆ ನಿರುದ್ಯೋಗಿಯಾದ. ಕಡೆಗೊಂದು ಕೆಲಸಕ್ಕಾಗಿ ಚಂಪೆಯ ಕಾಲು ಹಿಡಿದು ನಾರಣಪ್ಪನ ಮೂಲಕ ಕೆಲಸ ದೊರಕಿಸಿಕೊಂಡ. ಚಂಪೆಗೆ ಆತನ ಮುಖ ನೋಡಿದ ಕೂಡಲೇ ಹಿಂದಿನ ನೆನಪು ಆತನ ಜೀವನದ ದುಷ್ಟ ಚಿತ್ರಗಳೆಲ್ಲಾ ಕಣ್ಣೆದುರು ನಿಂತಂತೆ ಆಗಿರಬೇಕು. ಆವನ ಮುಖ ನೋಡಲೂ ನಾಚುಗೆಯಾಗಿತ್ತಂತೆ. 'ನೀನು ಹೋಗು' ಎಂದವಳೇ ಒಳಗೆ ನಡೆದು ಗಂಡನೊಡನೆ ಅಂದ ಚಂದವಾಗಿ ಹೇಳಿ ಒಂದು ಕೆಲಸ ಮಾಡಿಸಿ ಕೊಟ್ಟಳು.

★

ಗಂಡನೊಡನೆ ಹೇಳಿ ನನ್ನನ್ನು ಒಂದು ದಿನ ಊಟಕ್ಕೆ ಕರೆಸಿಕೊಂಡಳು. 'ಅಕ್ಕ ಎಲ್ಲಿ?' ಎಂದು ಕೇಳಿದ ಮಾತಿಗೆ ಮೊದಲು ಮಾಡಿ, 'ಅಕ್ಕ, ಗಂಡನ ಮನೆಯಲ್ಲಿದ್ದಾಳೆ' ಅನ್ನುವಾಗ ನಗೆ ಮಾಡಿದಳು. ಆ ನಗೆಯಲ್ಲಿ ನನ್ನ ಹಿಂದಿನ ಆಟಗಳ ಸೊಗಸೂ, ಸ್ನೇಹವೂ ಒಂದಾಗಿದ್ದಂತೆ ತೋರಿತು. ಮತ್ತೆ ಮಾತಿಗೆ ಮಾತು ಸೇರಿ ಶ್ರೀನಿವಾಸನ ಸುದ್ದಿ ಬಂತು. ತನಗಾದ ಕಷ್ಟವನ್ನೆಲ್ಲ ಗಂಡನೆದುರು ತೋಡಿಕೊಳ್ಳುವಾಗ ಅವಳ ಜೀವನದ ಜತೆಗಾರ ನಾರಣಪ್ಪ ಕಿವಿಗೊಟ್ಟು ಕೇಳಿ, ತಾನೂ ಒಮ್ಮೆ ನಿಟ್ಟುಸಿರುಗರೆದ. ಹೆಂಡತಿಯ ಸಹನೆಯ ಮಾತಿನಲ್ಲಿ ಸಿಟ್ಟನ್ನು ನುಂಗಿಕೊಂಡ. ಅವಳ ಕಣ್ಣೀರು ಆತನೇ ಒರಸಿದ. ನನಗೇನೋ ಇಂತಹ ಒಂದು ಹೊಸ ಲೋಕ ನಿರ್ಮಲವಾದ ಪ್ರೇಮ ಸಂಸಾರ, ನೋಡಿ ಆನಂದವೇ ಆಯಿತು.

ಮತ್ತೆ ನಾವು ಹೊರಟಾಗ 'ಇನ್ನು ಯಾವಾಗ ಬರುತ್ತೀರಿ' ಎಂದು ಕೇಳಿದಳು. 'ಬರುತ್ತಾರೇಕೆ? ನಾವೇ ಹೋಗಿ ನೋಡಿ ಬರೋಣ' ಎಂದ ನಾರಣಪ್ಪ. 'ಅದೇನು?' ಎಂದಳವಳು. 'ಅದು ಬೇರೇ ಉಂಟು ಚಂಪಾ' ಎಂದನು ನಾರಣಪ್ಪ, 'ರಾಯರಿಗೆ ಬರುವ ತಿಂಗಳು ಲಗ್ನ' ಎಂದು ನನ್ನ ಮುಖ ನೋಡಿದ ನಾರಣಪ್ಪ.

'ನಿಮ್ಮಂತೆಯೇ ಚಂದ ಇದ್ದಾಳೇ?' ಚಂಪಾ ಗೆಲುವಿನಿಂದ ಕೇಳಿದಳು.

'ತೊಳೆದ ಕೆಂಡ' ಎಂದೆ. 'ಕಪ್ಪಾದರೇನಂತೆ, ಗುಣಬೇಕು; ಹೆಸರೇನಣ್ಣಾ?' ಎಂದಳು.

'ಗುಲಾಬಿ'

'ಎಷ್ಟು ಮುದ್ದು ಹೆಸರು' ಎಂದು ಹಿಗ್ಗಿಕೊಂಡಳು.

ಚಂಪಳ ಮನಸ್ಸು ಇನ್ನೂ ಎಳೆ ಮಗುವಿನ ಮನಸ್ಸು! ಇಬ್ಬರನ್ನೂ ಮದುವೆಗೆ ಆಮಂತ್ರಿಸಿ ಹೊರಟೆ. ಚಂಪಳಂತಹ ಗುಣವತಿಯ ಕೈ ಹಿಡಿದವ ನಿಜವಾಗಿಯೂ ಪುಣ್ಯಾತ್ಮ ಎನ್ನುತ್ತೇನೆ.

ಹಿಂದೂ-ಮುಸ್ಲಿಮರೊಳಗೆ

ನಿತ್ಯಜೀವನದಲ್ಲಿಯೂ ಭೇದವಿಲ್ಲ

ಒಂದೇ ತಾಯಿಯ ಮಕ್ಕಳು!

ಶ್ರೀ ಮುನ್ಶಿಯವರ ವಿಚಾರಪೂರ್ಣ ಲೇಖನ

"ಹಿಂದೂಸ್ಥಾನವನ್ನು ಎರಡು ಹೋಳು ಮಾಡಿದರೂ, ಹಿಂದೂ ಮುಸಲ್ಮಾನರು ಹಂಚಿಕೊಳ್ಳಬೇಕು ಎನ್ನುವ ಮುಸಲ್ಮಾನರ ಸಂಖ್ಯೆಯು ಈ ದೇಶದಲ್ಲಿ ಬೆರಳೆಣಿಸಿ ಎಣಿಸುವಷ್ಟು ಕೂಡ ಇರುವುದಿಲ್ಲ. ಸರ್ ಸಿಕಂದರ ಹಯ್ಯಾತ ಖಾನರಂಥ ಮುಸ್ಲಿಮ್ ಲೀಗಿನ ಅಖಂಡ ಮುಖಂಡರೂ ಜಿನ್ನಾ ಸಾಹೇಬರ ಪಾಕಿಸ್ಥಾನ ಯೋಜನೆಯನ್ನು ತೀವ್ರವಾಗಿ ಖಂಡಿಸಿರುತ್ತಾರೆ. ಹಿಂದೂ ಮುಸಲ್ಮಾನ ಈ ಎರಡು ದೊಡ್ಡ ಜಾತಿಗಳು ಮೊದಲಿನಿಂದಲೂ ಪರಸ್ಪರ ಸ್ನೇಹ ಮತ್ತು ಪ್ರೇಮದಿಂದ ಒಂದಾಗಿ ಜೀವಿಸುತ್ತಾರೆ. ಅದರ ಪರಿಣಾಮವಾಗಿ ನೂರಾರು ವರ್ಷಗಳ ಹಿಂದೂ ಮುಸಲ್ಮಾನರ ಸಮ್ಮಿಶ್ರಿತ ಸಂಸ್ಕೃತಿ ಮತ್ತು ಸಭ್ಯತೆಯ ಪ್ರಾಮಾಣಿಕ ಇತಿಹಾಸವು ನಮ್ಮ ಮುಂದೆ ಇದೆ."

ಹೀಗೆಂದು ಶ್ರೀ ಮುನ್ಶಿಯವರು ಒಂದು ಲೇಖನವನ್ನು ಬರೆದು ಅದರಲ್ಲಿ ಹೇಳಿರುವರು. ಅವರು ಮತ್ತೆ ಹೀಗೆಂದಿರುವರು:—

"ಹಿಂದು ಮುಸಲ್ಮಾನರ ರಕ್ತನಾಡಿಗಳಲ್ಲಿ ಒಂದೇ ವಂಶದ ರಕ್ತವು ಹರಿಯುತ್ತದೆ. ಈಗ ಈ ದೇಶದಲ್ಲಿ ವಾಸವಾಗಿರುವ ಹಿಂದು ಮುಸಲ್ಮಾನರು ಆರ್ಯ ದ್ರಾವಿಡ ಮತ್ತು ಸಿಥಿಯನ್ ವಂಶಕ್ಕೆ ಸೇರಿದ ಜಾತಿಯವರೇ ಆಗಿದ್ದಾರೆ. ಹಿಂದು ಮುಸುಲ್ಮಾನರು ಸೇರಿ ತಮ್ಮದಾದ ಒಂದು ಭಾಷೆಯನ್ನು ಮಾಡಿಕೊಂಡಿದ್ದಾರೆ. ಅಕ್ಬರ, ಕಬೀರ ಮೊದಲಾದವರು ಇದಕ್ಕೆ ಉಜ್ವಲ ನಿದರ್ಶನವಾಗಿದ್ದಾರೆ. ಹಿಂದು ಮುಸಲ್ಮಾನ ಮಹಾಪುರುಷರ ಭಾವ ವಿಚಾರಗಳು ಈ ಎರಡು ಜಾತಿಗಳನ್ನು ಪರಸ್ಪರ ಪ್ರಭಾವಿತರನ್ನಾಗಿ ಅನ್ಯೋನ್ಯವಾಗಿ ಮಾಡಿವೆ.

"ಮತಾಂತರ ಹೊಂದಿದ ಹಿಂದುಗಳು ಮುಸಲ್ಮಾನ ವಿಭೂತಿ ಪುರುಷರಾಗಿದ್ದಾರೆ. ಮುಸಲ್ಮಾನ ಭಕ್ತರನೇಕರು ಚೈತನ್ಯ ಸಂಪ್ರದಾಯದ ಸನಾತನಿ ಗೋಸ್ವಾಮಿಗಳಾಗಿರುವರು. ಗುರು ನಾನಕ ಮತ್ತು ಕಬೀರಪಂಥ, ದಶಾವತಾರಗಳನ್ನು ಒಪ್ಪುವ ಖೋಜಾ ಜನರ ಸಂಪ್ರದಾಯ—ಇವುಗಳೆಲ್ಲ ಆ ಹಿಂದಿನ ಹಿಂದು ಮುಸಲ್ಮಾನ ಸಂಸ್ಕೃತಿಯ ಉತ್ತಮ ಫಲಗಳಾಗಿರುವವು.

ನಿತ್ಯಜೀವನದಲ್ಲಿ ಸಂಪರ್ಕ

"ನಮ್ಮ ವ್ಯಾಪಾರ ವಹಿವಾಟುಗಳು ನಮ್ಮ ಸುಖಸಂತೋಷಗಳು ನಮ್ಮ ಕಲಾಕೌಶಲ್ಯಗಳು, ನಮ್ಮ ಸಾಹಿತ್ಯ ಸಂಗೀತಗಳು—ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ನಿತ್ಯಜೀವನವೆಲ್ಲ ಹಿಂದು ಮುಸಲ್ಮಾನರೊಳಗೆ ಪ್ರೇಮ ಸಂಪರ್ಕದಿಂದ ರೂಪಿತವಾಗಿದೆ. ಆ ಪ್ರಾಚೀನ ಬಾಂಧವ್ಯವು ನಾಶವಾಗಿರದ ನಮ್ಮ ದೇಶದ ಹಳ್ಳಿಪಳ್ಳಿಗಳಲ್ಲಿ ಇದು ಈಗಲೂ ನಮಗೆ ಸ್ಪಷ್ಟವಾಗಿ ಕಂಡುಬರುವುದು. ಹಿಂದು ಮುಸಲ್ಮಾನರ ಆಚಾರವಿಚಾರ ನಡೆನುಡಿ. ರೀತಿ ನೀತಿ, ಸಭ್ಯತೆ ಸಂಸ್ಕೃತಿ ಎಲ್ಲವೂ ಒಂದಾಗಿದೆ.

ಹಿಂದೂ ಮುಸಲ್ಮಾನರ ಪ್ರೇಮಮಯ ಜೀವನ ಕ್ಷೇತ್ರದಲ್ಲಿ ಪ್ರತ್ಯೇಕ ಮತಧಾನ ಪದ್ಧತಿಯಂಥ ವಿಷ ಬೀಜವು ಬಿದ್ದು ಮೊಳೆತು ಸಸಿಯಾಗುವ ತನಕ ಹಿಂದು ಮುಸಲ್ಮಾನರೊಳಗೆ ಭಿನ್ನತೆಯ ಭಾವನೆಯು ಇರಲೇ ಇಲ್ಲ. ಅವರು ಈ ದೇಶದಲ್ಲಿ ಒಡಹುಟ್ಟಿದ ಅಣ್ಣತಮ್ಮಂದಿರ ಹಾಗೆ ಸುಖ ಜೀವನ ಮಾಡಿಕೊಂಡಿದ್ದರು. ಪರಸ್ಪರ ಧಾರ್ಮಿಕ ಭಾವನೆಗಳನ್ನು ಶ್ರದ್ಧೆ ಮತ್ತು ಭಕ್ತಿಯಿಂದ ನೋಡುತ್ತಿದ್ದರು. ಹಿಂದೂ ಮನೆತನಗಳಲ್ಲಿ ಮುಸಲ್ಮಾನರು, ಮುಸಲ್ಮಾನ ಮನೆತನಗಳಲ್ಲಿ ಹಿಂದುಗಳು, ತಮ್ಮ ಧರ್ಮಾಚರಣೆಗೆ ಎಳ್ಳಷ್ಟಾದರೂ ಲೋಪ ಬಾರದ ಹಾಗೆ ಜೀವಿಸಿದ್ದ ನಿದರ್ಶನಗಳು ಧಾರಾಳವಾಗಿದ್ದುವು. ಯಾಕೆ? ಮುಸಲ್ಮಾನ ಮೌಲ್ವಿಗಳ ಕೆಳಗೆ ಹಿಂದು ಮಕ್ಕಳು, ಹಿಂದೂ ಪಂಡಿತರ ಕೆಳಗೆ ಮುಸಲ್ಮಾನ ಮಕ್ಕಳು ಎಲ್ಲ ಬಗೆಯ ಶಿಕ್ಷಣವನ್ನು ಪಡೆಯುವುದು ಸಾಮಾನ್ಯವಾಗಿತ್ತು.

ಕಲಹದ ಕಾರಣ

"ಆದರೆ ಈಗ ಹಿಂದೂ ಮುಸಲ್ಮಾನರೊಳಗಿನ ಈ ಪ್ರೇಮ ಸಂಬಂಧವು ಕಡಿದುಹೋಗುತ್ತಿರುವಂತೆ ನಮಗೆ ಭಾಸವಾಗುತ್ತದೆ. ಈ ಎರಡು ಜಾತಿಗಳು ಒಂದರಿಂದ ಒಂದು ಪರಸ್ಪರ ಅನ್ಯಾಯ ಹೊಂದಿರುವುದೆಂದಾಗಲೀ, ಒಂದರ ಹಕ್ಕು ಅಧಿಕಾರಗಳನ್ನು ಇನ್ನೊಂದು ಕಿತ್ತುಕೊಂಡಿರುವುದೆಂದಾಗಲೀ ಹಿಂದೂ ಮುಸಲ್ಮಾನರೊಳಗೆ ಒಡಕು ಉಂಟಾಗುವುದಲ್ಲ; ಹಿಂದು ಮುಸಲ್ಮಾನ ಮುಖಂಡರ ಈ ಎರಡು ಜಾತಿಗಳೊಳಗಿನ ಪ್ರೇಮ ಸಂಬಂಧದ ಆ ಪೂರ್ವೇತಿಹಾಸವನ್ನು ಅವರು ಮರೆಯುತ್ತಿದ್ದಾರೆ; ಆದ್ದರಿಂದ ಈ ಎರಡು ಜಾತಿಗಳು ಪರಸ್ಪರ ಹೋರಾಟ ಮತ್ತು ಅವನತಿಯ ಕಡೆಗೆ ಪ್ರೇರೇಪಿಸಲ್ಪಡುತ್ತಿವೆ.

ನಿರಾಶೆಗೆ ಎಡೆಯಿಲ್ಲ

"ಹಿಂದು ಮುಸಲ್ಮಾನರು ಒಂದಾಗಿ ದೇಶವನ್ನು ಆಳಬಲ್ಲರು ಎಂಬುದನ್ನು ಪಂಜಾಬದಲ್ಲಿ ಹಿಂದು ಮುಸಲ್ಮಾನರ ಸಂಯುಕ್ತ ಪಕ್ಷದಿಂದ ಸಿದ್ಧವಾಗುತ್ತದೆ. ಸಂಘಟಿತರಾಗಿರುವ ರಾಷ್ಟ್ರೀಯ ಮುಸಲ್ಮಾನರೂ ಪಾಕಿಸ್ಥಾನ ಯೋಜನೆಗೆ ವಿರೋಧವಾಗಿದ್ದಾರೆ. ಮತ್ತೆ ಸ್ವಭಾವದಿಂದ ಹಿಂದು ಮುಸಲ್ಮಾನ ಐಕ್ಯತೆಯಲ್ಲಿ ಶ್ರದ್ಧೆ ವಿಶ್ವಾಸಗಳಿರುವ ಮಿಲಿಯಾಂತರ ಹಿಂದು ಮುಸಲ್ಮಾನರು ದೇಶದ ಎಲ್ಲೆಡೆಗಳಲ್ಲಿ ವಾಸವಾಗಿದ್ದಾರೆ. ಆದ್ದರಿಂದ ಪಾಕಿಸ್ಥಾನ ಯೋಜನೆಯು ಎಂದಾದರೂ ಕಾರ್ಯರೂಪಕ್ಕೆ ಬಂದೀತೆಂಬ ಭಯವು ಯಾರಿಗೂ ಬೇಡ. ಸಾವಿರಾರು ವರ್ಷಗಳ ಹಿಂದೂ ಮುಸಲ್ಮಾನ ಪ್ರೇಮ ಸಂಬಂಧವು ಕಡಿದುಹೋಗುತ್ತಿರುವಂತೆ ನಮಗೆ ಈಗ ಭಾಸವಾದರೂ, ಅದು ಇಷ್ಟು ವರ್ಷ ತಾಳಿಕೊಂಡು ಇದ್ದುದು, ಭವಿಷ್ಯದಲ್ಲಿ ಎಂದೂ ಕಡಿದುಹೋಗುವುದು ಸಾಧ್ಯವಿಲ್ಲ".

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. 648/1940

ಕಮಲಮ್ಮ ಕೂಡಾ . . ವಾದಿರು.

ಮತ್ತು

ಸೀತಾರಾಮ ಭಟ್ಟ ಕೂಡಾ

ಪ್ರತಿವಾದಿರು

1. ಸೀತಾರಾಮ ಭಟ್ಟ . . } ಲಕ್ಷ್ಮೀನಾರಾಯಣ ಭಟ್ಟರ
2. ವಿಟ್ಟಲ ಭಟ್ಟ . } ಮಕ್ಕಳು, ಮಂಗಳೂರು ತಾಲೂಕು ಮಳವೂರು ಗ್ರಾಮ
3. ಮಾಧವ . } ದ ಮೂಡುಮನೆಯಲ್ಲಿರುವ
4. ರಾಮಕೃಷ್ಣ } ವರು—ಇವರಿಗೆ,

ಮೇಲ್ಕಂಡ ವಾದೀರು, ಮೇಲ್ಕಾಣಿಸಿದ ಪ್ರತಿವಾದೀರ ತಂದೆ ಮೃತ ಲಕ್ಷ್ಮೀನಾರಾಯಣ ಭಟ್ಟರು ಬರಕೊಟ್ಟ ಡಿ. ಪ್ರೊ. ನೋಟಿನ ಬಾಬ್ತು ಬರತಕ್ಕ ಐವೇಜು ವಸೂಲಿ ಕುರಿತು ದಾಖಲು ಮಾಡಿದ ಮೇಲಿನ ವ್ಯಾಜ್ಯವು ಅಖೈರು ತನಿಖೆ ಬಗ್ಗೆ ತಾರೀಕು 2-12-1940ಕ್ಕೆ ಇಟ್ಟಿದೆ. ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಹಗಲು 10½ ಘಂಟೆಗೆ ಖುದ್ದು ಯಾ ವಕೀಲ ದ್ವಾರ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗುವರೆ ತಪ್ಪಿದರೆ, ಸಂಬ್ರುವ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು. ಎಂದು ಈ ಮೂಲಕ ತಿಳಿಸೋಣಾಗಿದೆ.

(By order of Court)

Mangalore } S. Narsappaya
17–11–1940 } Vakil for Plaintiff.

HALFTONE & LINE
BLOCK MAKING
UNDERTAKEN
Sharada Press,
MANGALORE

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮತ್ತು ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರಹ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ, ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
—
ಹೀಗೆ ಜುಮ್ಲಾ ರೂ. 21/-ರ. ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.
ಹೆಡ್ ಆಫೀಸ್—ಬೊಂಬಾಯಿ

[illegible] ನಾಯಕ್
[illegible] ಸೆಕ್ರೆಟರಿ
[illegible] ಮಂಗಳೂರು [illegible]

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್
4/5 [illegible]



ಜಿಲ್ಲಾ ಸಮಾಚಾರ

ಮಂಗಳೂರು

ಜಿಲ್ಲಾ ಹರಿಜನ ಸೇವಕಸಂಘದ ಮಹಾಸಭೆ:—ತಾ. ೧೭-೧೧-೪೦ನೇ ಆದಿತ್ಯವಾರ ಶ್ಯಾಮ ಘಂಟೆ ೪ಕ್ಕೆ ಜಿಲ್ಲಾ ಹರಿಜನ ಸೇವಕ ಸಂಘದ ಮಹಾಸಭೆಯು ಅತ್ತಾವರದಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಡಾ। ಯಚ್. ವಿ. ಆಡಪರು ಅಗ್ರಾಸನವನ್ನಲಂಕರಿಸಿದ್ದರು.

ಮೊದಲಾಗಿ ಗತವರ್ಷದ ವರದಿಯನ್ನು ಲೆಕ್ಕವನ್ನೂ ಓದಿ ನೋಡಲಾಯಿತು. ಆ ಮೇಲೆ ಜಿಲ್ಲಾಸಂಘಕ್ಕೆ ಬೇಕಾದ ಘಟನಾವಳಿಯನ್ನು ತಯಾರಿಸಿದ್ದು, ಅದನ್ನೂ ಓದಿ ಮಂಜೂರು ಮಾಡಲಾಯಿತು. ಮೂರನೆಯದಾಗಿ ಜಿಲ್ಲಾ ಸ್ತ್ರೀಘಟಕ್ಕೂ ತಾಲೂಕು ಸಂಘಗಳಿಗೂ ಹಣದ ಸಂಬಂಧವಾಗಿ ಇರಬೇಕಾದ ವ್ಯವಸ್ಥೆಯು ಒಂದು ಠರಾವನ್ನು ಮಂಜೂರು ಮಾಡಲಾಯಿತು. ಕೊನೆಗೆ ಅಧಿಕಾರಿ ವರ್ಗದ ಚುನಾವಣೆಯೂ ನಡೆದು ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಅಧ್ಯಕ್ಷರು—ಡಾ। ಯಚ್ ವಿ ಆಡಪರು, ಉಪಾಧ್ಯಕ್ಷರು—ಡಾ ಯು ಪಿ ಮಲ್ಯರು, ಕಾರ್ಯದರ್ಶಿಯರು—ಶ್ರೀ ಯಂ. ಸುಂದರರಾಯರು ಮತ್ತು ಸದಸ್ಯರು—ಶ್ರೀಗಳಾದ ಕೆ ಆರ್ ಕಾರಂತರು ಎಂ. ಎಲ್. ಎ, ಕೆ ಬಿ ಜಿನರಾಜ ಹೆಗ್ಡೆಯವರು ಯಂ ಯಲ್ ಎ, (ಸೆಂಟ್ರಲ್) ಯಚ್ ಯಸ್ ಪಿತಾಂಬರರಾಯರು, ಯಸ್ ಮುಕುಂದರಾಯರು, ಕೆ ಈಶ್ವರ ಯಂ ಯಲ್ ಎ ಬಿ, ಅನಂತರಾಯರು, ಯು ಗೋವಿಂದರಾಯರು.

ವರ್ಗಾವರ್ಗಿ:—ಮಂಗಳೂರಿನಲ್ಲಿ ಸಬ್ ಮೆಜಿಸ್ಟ್ರೇಟರಾಗಿದ್ದು ರಜೆಯಲ್ಲಿದ್ದ ಶ್ರೀ ಓ. ಕೇಶವರಾಯರು ಕಾಸರಗೋಡಿಗೆ ಸಬ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಶ್ರೀ ಕೆ ರಾಮವರ್ಮ ರಜಾ, ಬಿ ಎ ಯವರು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರಾಗಿ ಚಾರ್ಜು ವಹಿಸಿಕೊಂಡಿರುವರು. ಪುತ್ತೂರಿನ ಈ ಹುದ್ದೆಯಲ್ಲಿದ್ದ ಮಿ. ಕೆ. ಅಬ್ದುಲ್‌ಗಫೂರ್ ಸಾಹೇಬರವರು ಪುತ್ತೂರು ತಾಲೂಕು ತಹಸೀಲ್ದಾರರಾಗಿ ನೇಮಕಹೊಂದಿದರಿಂದಾಗಿ ಶ್ರೀ. ಯು ಜನಾರ್ಧನನವರು ಮಂಗಳೂರು ಸಬ್ ಮೆಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದು ಚಾರ್ಜು ವಹಿಸಿಕೊಂಡಿರುವರು.

ತಾ. ೧೮-೧೧-೪೦ನೇ ಸೋಮವಾರ ದಿನ ಕೆಲವರು ರಾಷ್ಟ್ರಧ್ವಜವನ್ನು ಮಂಗಳೂರಿನ ರಸ್ತೆಗಳಲ್ಲಿ ಮಾರಾಟ ಮಾಡಿರುವರೆಂದು ತಿಳಿದು ಬರುತ್ತದೆ. ಇದು ಕೊಂಗ್ರೆಸ್ ಕಮಿಟಿಯ ಹೆಸರಲ್ಲಿ ಆದ ಮಾರಾಟವೇ ಎಂದು ಕೆಲವರು ಪ್ರಶ್ನಿಸಿರುವರು. ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯು ರಾಷ್ಟ್ರಧ್ವಜ ಮಾರಾಟಕ್ಕೆ ಯಾರನ್ನು ಅಧಿಕೃತಪಡಿಸಿದುದಿಲ್ಲ ಎಂದು ಸಾರ್ವಜನಿಕರಿಗೆ ತಿಳಿಸಲಿಚ್ಛಿಸುತ್ತೇನೆ. ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯ 'ರಾಷ್ಟ್ರಧ್ವಜದಿನ'ವನ್ನು ನಿಶ್ಚಯಿಸಿದ್ದಲ್ಲಿ, ಮಾರಾಟಕ್ಕೆ ಕಳಿಸಲಾಗುವ ಧ್ವಜಗಳ ಮೇಲೆ ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿಯು ಮೊಹರನ್ನು ಹಾಕಲಾಗುವುದು. ಜನರಾರಾದರೂ ತಪ್ಪು ಅಭಿಪ್ರಾಯ ಪಡದಂತೆ ಈ ಪ್ರಕಟಣೆ ಕೊಡಲಾಗಿದೆ ಎಂದು ಅಧ್ಯಕ್ಷ, ಮಂಗಳೂರು ಸರ್ಕಲ್ ಕೊಂಗ್ರೆಸ್ ಕಮಿಟಿ ಇವರು ಬರೆಯುತ್ತಾರೆ.

ಪೆರಡಾಲ

ಸಾಹಿತ್ಯ ಸಮಿತಿ—ಮಹಾಜನ ಸಂಸ್ಕೃತ ಕೋಲೇಜ್:—ಇಲ್ಲಿನ ಸಾಹಿತ್ಯಸಮಿತಿಯ ಆಶ್ರಯದಲ್ಲಿ ನಾರಾಯಣಮಂಗಲ ಶಾಲೆಯ ಶ್ರೀ ಕೆ ಶಂಕರಭಟ್ಟ ಇವರ ಅಧ್ಯಕ್ಷತೆಯಲ್ಲಿ ಮಹಾಕವಿ ಕಾಳಿದಾಸ [illegible] ವಿಷಯ ಉಪನ್ಯಾಸಗಳ ತಾ ೧೩ರಲ್ಲು ನಡೆದುವು. ಶ್ರೀ [illegible] ಪಿ ಯಚ್ ಸುಬ್ರಾಯಭಟ್ಟ ಶ್ರೀ ಪಿ ಕೃಷ್ಣಯ್ಯ ನ. ಯಂ ಮುತ್ತಣ್ಣ, ಶ್ರೀ ಕೆ ನರಸಿಂಹಭಟ್ಟ, ಕೆ ವೆಂಕಟ್ರಭಟ್ಟ, ಪಿ. ಬಾಲಗೋಪಾಲನ್ ನಾಯರ್ ಮೊದಲಾದವರು ಕಾಳಿದಾಸನ ವಿಷಯಗಳಲ್ಲಿ ಉಪನ್ಯಾಸಗಳನ್ನಿತ್ತರು. ಅನಂತರ ಶ್ರೀ ಡಾ ಪಿ ಯಸ್ ಶಾಸ್ತ್ರಿಗಳು ವಿಚಾರಪೂರ್ಣವಾದೊಂದು ಭಾಷಣವನ್ನು ಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭೆಯು ಕೊನೆಗೊಂಡಿತು. ರಾತ್ರಿ ಕೃಷ್ಣಸಂಧಾನವೆಂಬ ಯಕ್ಷಗಾನವು ಬಹಳ ಯಶಸ್ವಿಯಾಗಿ ಜರಗಿತು.

ಕಾರ್ಕಳ

ಶಿಕ್ಷಣ ಪ್ರದರ್ಶನ—ಇಲ್ಲಿ ಇದೇ ಬರುವ ಜನವರಿ ೨೯ರಿಂದ ನಾಲ್ಕು ದಿನಗಳ ತನಕ ಜಿಲ್ಲಾ ಶಿಕ್ಷಣ ಪ್ರದರ್ಶನವನ್ನು ಜರಗಿಸುವರೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವದಕ್ಕೋಸ್ಕರ ತಾ ೧೭ ೧೧ ೪೦ರ ದಿನ ಬೋರ್ಡ ಹ್ಯಾಸ್ಕೂಲಿನಲ್ಲಿ ಡಿ ಇ ಓ ರಾದ ಶ್ರೀ ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಪ್ರೇಮಿಗಳ ಒಂದು ಸಭೆಯು ಜರುಗಿ ಒಂದು ಕಮಿಟಿಯು ರಚನೆಯಾಯಿತು.

ಮೈಸೂರು

ವಕೀಲರಪಟ್ಟಿಯಿಂದ ತೆಗೆದುಹಾಕಲಾಯಿತು ಶ್ರೀ। ನಿಜಲಿಂಗಪ್ಪನವರನ್ನು ಚಿತ್ರದುರ್ಗದ ಜಿಲ್ಲಾ ಮ್ಯಾಜಿಸ್ಟ್ರೇಟರ ಸೂಚನೆಯ ಪ್ರಕಾರ ಶ್ರೀಷ್ಮನ್ಯಾಯಾಧೀಶರು ಮತ್ತು ನ್ಯಾಯಮೂರ್ತಿ ಆದಲ್ ಉಲ್ ಮುಲ್ಕ್ ಅಬ್ದುಲ್ ಘನಿಯವರು ಶ್ರೀ ಎಸ್ ನಿಜಲಿಂಗಪ್ಪನವರ ಮೇಲೆ ವಕೀಲರ [illegible] ದಂತೆ ಹೂಡಿದ್ದ ವ್ಯವಹಾರವನ್ನು ಪರಿಶೀಲಿಸಿ ಶ್ರೀ ನಿಜಲಿಂಗಪ್ಪನವರು ಈ ಕೋರ್ಟಿನ ವಕೀಲರಾಗಿರಲು ಅನರ್ಹರಾಗಿರುವರೆಂಬುದನ್ನು ವ್ಯಕ್ತಪಡಿಸಿದ್ದಾರೆ. ಆದದರಿಂದ ಅವರ ಹೆಸರನ್ನು ವಕೀಲರ ಪಟ್ಟಿಯಿಂದ ತೆಗೆದುಹಾಕಿ ಸಂಸ್ಥಾನದ [illegible] ಕೋರ್ಟಿನಲ್ಲಿಯೂ ವಕೀಲವೃತ್ತಿಯನ್ನು ಅವಲಂಬಿಸಕೂಡದು [illegible] ತೀರ್ಮಾನಿಸಿದೆ. ಶ್ರೀ ಎಸ್ ನಿಜಲಿಂಗಪ್ಪನವರಿಗೆ [illegible] ಅರಣ್ಯ ಸತ್ಯಾಗ್ರಹದ ಸಂಬಂಧದಲ್ಲಿ ೧ ವರ್ಷ ಕಠಿಣ ಶಿಕ್ಷೆ ಮತ್ತು ೫೦೦ ರೂ ದಂಡ ಜಿತ್ತು.

"ಮಾತೃಭೂಮಿಯ ಸೇವೆಗಾಗಿ ಇದು ದೇವರಿಂದ ಬಂದ ವರ"

ಶ್ರೀ ನಿಜಲಿಂಗಪ್ಪನವರ ಹೇಳಿಕೆ

ಶ್ರೀ ಎಸ್ ನಿಜಲಿಂಗಪ್ಪನವರು ಈ ರೀತಿ ಒಂದು ಹೇಳಿಕೆಯಿತ್ತಿದ್ದಾರೆ "ಹೈಕೋರ್ಟಿನಿಂದ ನನ್ನನ್ನು 'ಡಿಸ್‌ಎನ್‌ರೋಲ್' ಮಾಡಿ ಹೊರಡಿಸಿರುವ ಆಜ್ಞೆಯು ನನಗೇನೂ ಆಶ್ಚರ್ಯವಾಗಿ ಕಂಡುಬಂದಿಲ್ಲ ಮತ್ತು ಮಾತೃಭೂಮಿಯ ಜನತೆಗಾಗಿ ನನ್ನ ಪೂರ್ಣ ಸೇವೆಯನ್ನು ಸಲ್ಲಿಸಬೇಕೆಂದು ಭಗವಂತನು ನನಗೆ ಕಳುಹಿಸಿದ ಒಂದು ವರವೇ ಆಗಿದೆಯೆಂದು ನಾನು ಅದನ್ನು ತಿಳಿಯುತ್ತೇನೆ."

ಧಾರವಾಡ

ವ್ಯಾಕರಣ ತೀರ್ಥ ಶ್ರೀ ಚಂದ್ರಶೇಖರ ಶಾಸ್ತ್ರಿಗಳು

೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಧಾರವಾಡದಲ್ಲಿ ಡಿಸೆಂಬರ್ ತಿಂಗಳ ಕೊನೆಯಲ್ಲಿ ನಡೆಯುವ ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವ್ಯಾಕರಣ ತೀರ್ಥ ಶ್ರೀಮಾನ್ ಚಂದ್ರಶೇಖರ ಶಾಸ್ತ್ರಿಗಳು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಬೊಂಬಾಯಿ

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರ್‌ಶಿಪ್ ಲೀಗ್. ಬೊಂಬಯಿ:—ಈ ಲೀಗಿನ ಮೇನೇಜಿಂಗ್ ಕಮಿಟಿಯು ೧೯೪೦-೪೧ನೆಯ ವರ್ಷಗಳ ಸಲುವಾಗಿ ರೂ [illegible] ನ್ನು ಕೆಳಗಿನ ಸ್ಥಳಗಳಲ್ಲಿ ಸೆಕೆಂಡರಿ ಶಾಲೆಗಳಲ್ಲಿ ಕಲಿಯುವ ೧೮೬ ವಿದ್ಯಾರ್ಥಿಗಳಿಗೆ ಕೊಡಲು ನಿಶ್ಚಯಿಸಿದೆ.

ಬೊಂಬಯಿ ರೂ ೬೦೫, ಕಾರವಾರ ೫೧೩, ಅಂಕೋಲಾ ೪೦೨, ಕುಮಟಾ ೬೧೮, ಸಿರ್ಸಿ [illegible] ಭಟ್ಕಳ [illegible] ಹೊನ್ನಾವರ ೫೦೪ ಪೂನಾ ೭೨ ಬೆಳಗಾಂ ೩೬, ಹುಬ್ಬಳ್ಳಿ [illegible] ಉಡುಪಿ ೨೪೦ ಬಂಟ್ವಾಳ ೧೫೦, ಕಾರ್ಕಳ [illegible] ಮೂಲ್ಕಿ ೨೪೪ ಕಾಪು ೧೫, ಕಲ್ಯಾಣಪುರ [illegible] ಕುಂದಾಪುರ ೧೮೩, ಪುತ್ತೂರು [illegible] ಮಂಗಳೂರು [illegible], ಕಾಸರಗೋಡು [illegible]

ಈ ವರ್ಷದಲ್ಲಿ ಜೆ. ಜೆ ಸ್ಕೂಲ್ ಓಫ್ ಆರ್ಟ್ಸಿನಲ್ಲಿ ಕಲಿಯುತ್ತಿರುವ ಮಾಸ್ಟರ್ ಪಿ ಜಿ ಶೆಣೈ ಇವರಿಗೆ ತಿಂಗಳ ೫ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದೆ ಎಂದೂ ಸಂಘದ ಕಾರ್ಯದರ್ಶಿ ತಿಳಿಸುತ್ತಾರೆ.

THE

BANK OF MANGALORE LTD.,

MANGALORE

ESTD 1931

Branches-

Mudabidri & Padubidri

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

An Invitation

Deposits flowing in more quickly than we can invest them are steadily increasing our idle funds. Thus our deposits increased by over Rupees Five Lacs since the first of July, 1940

In order to invest this surplus, loans will be granted at special rates against gold, produce and other valuable security.

You are invited to take advantage of these special terms

RESOURCES OF A CRORE.

Estd: 1906

CANARA BANK, LIMITED.

ಗ್ರೀಸಿನ ಮೇಲೆ ಜರ್ಮನಿಯ ಧಾಳಿ?



ಬಲ್ಗೇರಿಯ ದಾರಿ ಕೊಡುವುದೆ?

ಗ್ರೀಕರ ಅಪೂರ್ವ ವಿಜಯ!

ಜರ್ಮನಿ - ಇಟಲಿ - ಸ್ಪೈನು ಕೇಂದ್ರಗಳಲ್ಲಿ ಚಟುವಟಿಕೆ!

ಲಂಡನಿನಲ್ಲಿ ಅತ್ಯುಗ್ರ ಧಾಳಿ — ಆದರೆ ಹೆಚ್ಚಿನ ಅಪಾಯವಿಲ್ಲ.

'ಯೂರೋಪಿನ ರಾಜಕೀಯ ಕ್ಷೇತ್ರದಲ್ಲಿ ಬಹಳ ಮಹತ್ವದ ಚಟುವಟಿಕೆಗಳು ಆಗುತ್ತ ಇವೆ. ಗ್ರೀಕರು ಬಹಳ ಸಾಹಸದಿಂದ ಕಾದಾಡುತ್ತಿರುವರೆಂದೂ ಹಲವು ಕಡೆ ವೈರಿಗಳನ್ನು ಬೆನ್ನಟ್ಟಿದರೆಂದೂ ತಿಳಿದಿದೆ. ಕೊರಿಟ್ಜವನ್ನು ಗ್ರೀಕರು ಸ್ವಾಧೀನಪಡಿಸಿಕೊಂಡರೆಂದೂ ಗೊತ್ತಾಗಿದೆ. ಬಲ್ಗೇರಿಯದ ಅರಸರಾದ ಬೋರಿಸರು ಗುಪ್ತವಾಗಿ ಬರ್ಲಿನಿಗೆ ಹೋಗಿದ್ದರೆಂದೂ ಹಿಟ್ಲರನ ಭೇಟಿಮಾಡುವರೆಂದೂ ಸುದ್ದಿ. ಜರ್ಮನಿ, ಇಟಲಿ, ಸ್ಪೈನುಗಳಲ್ಲಿ ಬಹಳ ಚಟುವಟಿಕೆಯಿದೆ. ಆ ಮೂರು ರಾಷ್ಟ್ರಗಳ ವಿದೇಶ-ಮಂತ್ರಿಗಳು ಕೂಡಿ ಮಾತನಾಡುವರೆಂದು ವಾರ್ತೆ. ಬಲ್ಗೇರಿಯದ ಅರಸರು ಜರ್ಮನಿ ಸೈನ್ಯವು ಗ್ರೀಸಿಗೆ ನುಗ್ಗಲು ಹಾದಿಕೊಡುವರೆಂದೂ, ಹಿಟ್ಲರನು ಗ್ರೀಸಿಗೂ ದಾಳಿಯಿಡುವನೆಂದೂ ತಿಳಿದು ಬರುತ್ತದೆ ಲಂಡನಿನ ಮೇಲೆ ಈ ವಾರ ಅತ್ಯಂತ ಭೀಷಣ ವಿಮಾನದಾಳಿ ನಡೆಯಿತೆಂದೂ ತಿಳಿದಿದೆ

ಲಂಡನಿನ ಮೇಲೆ ಅತ್ಯುಗ್ರ ದಾಳಿ

ಯುದ್ಧ ಸುರುವಾದ ಮೇಲೆ ಹೀಗಾಗಿರಲಿಲ್ಲ!

ತಾ ೧೫ರಂದು ಲಂಡನಿನ ಮೇಲೆ ಬಹಳ ಭಯಂಕರವಾದ ವಿಮಾನದಾಳಿಯಾಗಿದೆಯೆಂದೂ, ಸಾವಿರಾರು ಜನರ ಪ್ರಾಣಹಾನಿಯಾಗಿದೆಯೆಂದೂ, ಅನೇಕ ಕಟ್ಟಡಗಳು ಭಗ್ನವಾಗಿವೆಯೆಂದೂ, ದಾಳಿಯ ಅನಾಹುತದ ದೃಶ್ಯವು ಘೋರವಾಗಿತ್ತೆಂದೂ ತಿಳಿದುಬಂದಿದೆ. ಬಕಿಂಗಾಮ್ ಅರಮನೆಯ ಮೇಲೆ ಮತ್ತೆ ಬಾಂಬುಗಳು ಬಿದ್ದಿರುವವೆಂದೂ ತಿಳಿದಿದೆ

೪೪,೦೦೦ ಮಂದಿ ಬ್ರಿಟಿಷ್ ಕೈದಿಗಳು!

ಈಡನ್ನರ ಹೇಳಿಕೆ

ತಾ. ೧೫ರಂದು ಮಾತನಾಡುತ್ತಾ ಇಷ್ಟರ ವರೆಗೆ ೪೪,೦೦೦ ಮಂದಿ ಬ್ರಿಟಿಷ್ ಕೈದಿಗಳು ಸೆರೆಹಿಡಿಯಲ್ಪಟ್ಟಿರುವರೆಂದು ಹೇಳಿದರು.

ರಷ್ಯ-ಜರ್ಮನಿ ಮಾತುಕತೆ

ಎಲ್ಲ ವಿಷಯಗಳ ಬಗ್ಗೆ ಒಪ್ಪಂದ

ಬರ್ಲಿನಿನ ವಯರ್ಲೆಸ್ಸು, ರಷ್ಯ-ಜರ್ಮನ್ ಮಾತುಕತೆಗಳ ವಿಚಾರವಾಗಿ ಹೀಗೆ ತಿಳಿಸುತ್ತದೆ—"ಈ ಉಭಯ ದೇಶಗಳ ಪ್ರತಿನಿಧಿಗಳು ಪರಸ್ಪರ ವಿಶ್ವಾಸಗಳಿಂದ ಕೂಡಿ ಮಾತನಾಡಿದರು, ಈ ಉಭಯ ರಾಷ್ಟ್ರಗಳೊಳಗೆ ಪರಸ್ಪರ ಎಲ್ಲಾ ವಿಷಯಗಳ ಬಗೆಗೂ ಒಪ್ಪಂದವಾಗಿದೆ'

ಸುರಂಗ ಯುದ್ಧವೂ ಜೋರಾಯಿತು

ಐದು ಟ್ರಾಲರ ಹಡಗುಗಳ ಜಲಸಮಾಧಿ

ಜಲಸುರಂಗಗಳನ್ನು ನಾಶಮಾಡುವ ಐದು ಬ್ರಿಟಿಷ್ ಟ್ರಾಲರ ಹಡಗಗಳು ನಾಶವಾದವೆಂದು ನೌಕಾ ಖಾತೆಯವರು ಒಂದು ಪ್ರಕಟನೆಯ ಮೂಲಕ ತಿಳಿಸುತ್ತಾರೆ ಜರ್ಮನರ ಸುರಂಗ ಯುದ್ಧವು ಜೋರಾಗಿದೆಯೆಂದು ಆ ಪ್ರಕಟನೆಯಲ್ಲಿ ಹೇಳಲಾಗಿದೆ

'ವೈರಿಗಳ ಸುರಂಗ ಯುದ್ಧ ಜೋರಾಗಿದ್ದರೂ, ಅದನ್ನೆದುರಿಸಲು ಬ್ರಿಟಿಷರು ಅನೇಕ ಉಪಾಯಗಳನ್ನು ಯೋಚಿಸಿದ್ದು ಅವು ಯಶಸ್ವಿಯಾಗುತ್ತಿವೆ '

'ಈಗ ನಾಶವಾದ ಟ್ರಾಲರ ಹಡಗಗಳ ಹೆಸರು ರಿನೋವಾ, ಸೆವರಾ, ಎಲಿಯಂವೆಸ್ಟೆ ಸೈಲಾರಿಯನ ಮತ್ತು ಡ್ರಿಫ್ಟ ಎಂದು ಸೆವ್ರಾ ಅಥವಾ ಸೈಲಾರಿಯನಗಳಲ್ಲಿ ಪ್ರಾಣಹಾನಿಯಾಗಿಲ್ಲ '

ಕಡಲ್ಗಾಲುವೆಯಲ್ಲಿ ಎರಡು ತಾಸು ತೋಫಿನ ಕಾಳಗ

ಬ್ರಿಟಿಷ್ ಕಡಲ್ಗಾಲುವೆಯ ಎರಡೂ ಬದಿಯಲ್ಲಿರುವ ಬ್ರಿಟಿಷ್ ಮತ ಜರ್ಮನ್ ತೋಫುಗಳು ಹಾರಿಸಲ್ಪಟ್ಟವು ಬೆಳಗಾಗುವ ಮೊದಲೇ ಜರ್ಮನರು ತೋಫುಗಳನ್ನು ಹಾರಿಸಲು ಪ್ರಾರಂಭಿಸಿದರು ಆದರೆ ಇದರಿಂದ ವಿಶೇಷ ಹಾನಿಯಾಗಿಲ್ಲ

ಸ್ವಲ್ಪ ಹೊತ್ತಿನ ಮೇಲೆ ಬ್ರಿಟಿಷರೂ ತೋಫು ಹಾರಿಸಿದರು. ಇದರಿಂದ ಮತ್ತೆ ಕಾಳಗ ಪ್ರಾರಂಭವಾಯಿತು ಕಡಲ್ಗಾಲುವೆಯಲ್ಲಿ ಸಂಚರಿಸುತ್ತಿದ್ದ ಎಳ್ಡು ಬ್ರಿಟಿಷ್ ಹಡಗುಗಳ ಗುಂಪು ಸಂಪೂರ್ಣ ನಾಶವಾಯಿತೆಂದು ಜರ್ಮನರು ಹೇಳುತ್ತಾರೆ, ಆದರೆ ಇದು ನಿಜವಿರುವುದಿಲ್ಲ ಎರಡು ತಾಸುಗಳ ನಂತರ ಈ ಕಾಳಗ ನಿಂತಿತು.

ಸುನ್ನೇರರ ಬರ್ಲಿನಪ್ರಯಾಣ

ಸ್ಪೈನ್ ಪರರಾಷ್ಟ್ರ ಖಾತೆಯ ಮಂತ್ರಿಗಳಾದ ಸಿನ್ನೇರ ಸುನ್ನೇರರು ರಿಬನ್ ಟ್ರಾಪರ ಆಮಂತ್ರಣದ ಮೇರೆಗೆ ಅವರೊಡನೆ ಮಾತುಕತೆಯಾಡಲು ಬರ್ಲಿನಿಗೆ ಹೊರಟಿರುವರು.

ಅಮೇರಿಕ-ಜರ್ಮನ್ ರಾಜಕೀಯ ಸಂಬಂಧವು ಮೆಲ್ಲಮೆಲ್ಲನೆ ಕಡಿಮೆಯಾಗುತ್ತಲಿದೆ

ಅಮೇರಿಕವು ಜರ್ಮನಿಯ ರಾಜಕೀಯ ಸಂಬಂಧವನ್ನು ಮೆಲ್ಲಮೆಲ್ಲನೆ ಕಡಿದುಕೊಳ್ಳುತ್ತಿರುವದೆಂದು ರಾಜಕೀಯ ಪರಿಸ್ಥಿತಿಯ ಭವಿಷ್ಯ ನುಡಿಯುವವರು ಅಭಿಪ್ರಾಯಪಡುತ್ತಿದ್ದಾರೆ

ಇಟಲಿ-ಗ್ರೀಕ್ ಯುದ್ಧದಲ್ಲಿಯೂ ಅಮೇರಿಕವು ತಟಸ್ಥ ಉಳಿಯುವದೆಂದು ರೂಸ್‌ವೆಲ್ಟರು ಸಾರಿದ್ದಾರೆ

ಇಜಿಪ್ತಿನ ಮುಖ್ಯ ಮಂತ್ರಿ ನಿಧನ

ಇಜಿಪ್ತಿನ ಮುಖ್ಯ ಮಂತ್ರಿ ಹಸನ್ ಸಾಬ್ರಿಪಾಶರವರು ತಾ ೧೪ರಂದು ನಿಧನ ಹೊಂದಿದರು

ಎಲ್ಲರೊಡನೆಯೂ ಸ್ನೇಹ

ಇಜಿಪ್ತಿನ ಧೋರಣೆ

ಇಜಿಪ್ತಿನ ಅರಸರಾದ ಪೆರೂಕರು ಒಂದು ಭಾಷಣ ಮಾಡುತ್ತಾ ನಾವು ಯಾರೊಡನೆಯೂ ಕಲಹ ಮಾಡಲು ಇಷ್ಟಪಡುವುದಿಲ್ಲವೆಂತಲೂ ಎಲ್ಲರೊಡನೆಯೂ ಸ್ನೇಹದಿಂದಿರುವೆವೆಂದೂ ತಮ್ಮ ರಾಷ್ಟ್ರದ ಧೋರಣೆಯನ್ನು ವಿವರಿಸಿ ಪಾರ್ಲಿಮೆಂಟಿನಲ್ಲಿ ಮಾತನಾಡಿದರು

ಹುಸೇನ ಹಿರಿಪಾಶಾ

ಇಜಿಪ್ತಿನ ಪ್ರಧಾನರು

ಹಿಂದಿನ ಲೋಕೋಪಯೋಗಿ ಖಾತೆಯ ಮಂತ್ರಿಗಳಾದ ಹುಸೇನ ಹಿರಿಪಾಶಾರವರಿಗೆ ಮಂತ್ರಿಮಂಡಳ ರಚಿಸಲು ಫರೂಕ ಅರಸರು ಕೇಳಿಕೊಂಡಿರುವರು

ಗ್ರೀಕರ ಮುನ್ನಡೆ

ಗ್ರೀಕರು ಕೊರಿಟ್ಜದ ಕಡೆ ಮುನ್ನಡೆದು ೭೦೦ ಮಂದಿ ಇಟಲಿಯನರನ್ನು ಸೆರೆಹಿಡಿದಿರುವರು

ಇಟಲಿ-ಗ್ರೀಕ್ ರಣಭೂಮಿ

ಸೈನಿಕರ ವಿಶೇಷ ಚಟುವಟಿಕೆ

ಇಟಲಿ-ಗ್ರೀಕ್ ರಣಭೂಮಿಯಲ್ಲಿ ಎಲ್ಲೆಡೆಯಲ್ಲಿಯೂ ವಿಶೇಷ ಚಟುವಟಿಕೆ ನಡೆದಿರುವದು. ಕಾಲ್ಬಲದವರೂ ತೋಫುಖಾನೆಯವರೂ ವಿಮಾನದಲದವರೂ ಸಜ್ಜಾಗಿ ನಿಂತಿರುವರು.

ಗ್ರೀಕರು ಈ ವರೆಗೆ ಸುಮಾರು ೭೦೦ ಜನ ಶತ್ರುಗಳನ್ನು ಸೆರೆಹಿಡಿದಿದ್ದಲ್ಲದೆ ೧೦ ತೋಫುಗಳನ್ನೂ ವಶಪಡಿಸಿಕೊಂಡಿರುವರು.

ಲಂಡನ್ ಮೇಲೆ ನೂರು ವಿಮಾನಗಳು

ತಾ ೧೮ರಂದು ಲಂಡನ್ ಮೇಲೆ ೧೦೦ ಜರ್ಮನ್ ವಿಮಾನಗಳು ಹಾರಾಡಿ ಬಾಂಬೆಸೆದಿರುವವೆಂದು ತಿಳಿದಿದೆ ಇಂಗ್ಲೆಂಡಿನ ಬೇರೆ ಬೇರೆ ಭಾಗಗಳ ಮೇಲೂ ಬಾಂಬು ಬಿದ್ದವೆ

ಕೌಂಟ್ ಸಿಯಾನೋ ಬರ್ಲಿನಿಗೆ

ಇಟಲಿಯ ವಿದೇಶ ಮಂತ್ರಿಯಾದ ಕೌಂಟ್ ಸಿಯಾನೋ ಬರ್ಲಿನಿಗೆ ಹೊರಟಿರುವುದಾಗಿ ತಿಳಿದುಬರುತ್ತದೆ

ಭಾರತದ ರಾಜಕೀಯವು ಪ್ರಕ್ಷುಬ್ಧ ಪರಿಸ್ಥಿತಿಗೆ ಬಂದಿದೆ ಗಾಂಧಿಜಿಯವರು ವೈಯುಕ್ತಿಕ ಸತ್ಯಾಗ್ರಹವನ್ನು ವಿಸ್ತರಿಸಿದ್ದಾರೆ. ನೆಹರುಗಳ ಬಂಧನದ ನಂತರ ಸತ್ಯಾಗ್ರಹವು ಹೆಚ್ಚು ಉಗ್ರವಾಗಿದೆ ಸರದಾರ ಪಟೇಲರು ಬ್ರಿಜಲಾಲ ಬಿಯಾನಿ ಮೊದಲಾದ ಪ್ರಮುಖರೂ ಬಂಧಿತರಾಗಿದ್ದಾರೆ. ಹಲವು ಮಂದಿ ಮಾಜಿ ಕಾಂಗ್ರೆಸು ಮಂತ್ರಿಗಳೇ ಸತ್ಯಾಗ್ರಹವನ್ನು ಆಯಾಯ ಪ್ರಾಂತಗಳಲ್ಲಿ ಆರಂಭಿಸುವರು ಎಲ್ಲಾ ಪ್ರಾಂತಗಳಲ್ಲಿಯೂ ಧುರೀಣರೇ ಸತ್ಯಾಗ್ರಹ ಪ್ರಾರಂಭಿಸುವರು ಸ್ತ್ರೀಯರೂ ಹಲವು ಕಡೆ ಸತ್ಯಾಗ್ರಹಿಗಳಾಗಿ ಮುಂದೆ ಬಂದಿರುವರು. ಪ್ರಾಂತ್ ಪ್ರಾಂತಗಳಲ್ಲಿ ಸತ್ಯಾಗ್ರಹವನ್ನು ಆರಂಭಿಸುವ ಸತ್ಯಾಗ್ರಹಿಗಳ ಪಟ್ಟಿಯು ತಯಾರಾಗಿದೆ ಒಂದೆರಡು ವಾರಗಳಲ್ಲಿ ಪ್ರಮುಖ ಮುಂದಾಳುಗಳು ಸೆರೆಮನೆಯನ್ನು ಸೇರುವರೆಂದೇ ತಿಳಿಯ ಬಹುದಾಗಿದೆ.

೧೫೦೦ ಮಂದಿ ಸತ್ಯಾಗ್ರಹಿಗಳ ಪಟ್ಟಿ

ಗಾಂಧಿಜಿಯವರು ಸಿದ್ಧಗೊಳಿಸಿದ್ದಾರೆ!

ವೈಯಕ್ತಿಕ ಶಾಸನಭಂಗ ಚಳವಳವನ್ನು ಕಾಂಗ್ರೆಸು ವಿಸ್ತರಿಸುವುದಾಗಿ ವರ್ಕಿಂಗ್ ಕಮಿಟಿಯವರು ವರ್ಧಾದಲ್ಲಿ ನಿರ್ಧಾರಮಾಡಿದ ಪ್ರಕಾರ ಈಗ ಏರ್ಪಾಡು ಮಾಡಲಾಗಿದೆಯೆಂದು ತಿಳಿದುಬಂದಿದೆ. ೧೫೦೦ ಮಂದಿ ಕಾಂಗ್ರೆಸ್ ಪ್ರಮುಖರು ವೈಯಕ್ತಿಕ ಶಾಸನ ಭಂಗವನ್ನು ಆಚರಿಸುವರು. ಹೀಗೆ ಸತ್ಯಾಗ್ರಹ ಆಚರಿಸುವವರ ಹೆಸರುಗಳ ಪಟ್ಟಿಯೊಂದನ್ನು ಮಹಾತ್ಮಾ ಗಾಂಧಿಯವರು ಸಿದ್ಧಗೊಳಿಸಿದ್ದಾರೆ. ಈ ಪಟ್ಟಿಯಲ್ಲಿ ಸರ್ದಾರ್ ವಲ್ಲಭಾಯಿ ಪಟೇಲ್, ಶ್ರೀ. ಸಿ. ರಾಜಗೋಪಾಲಾಚಾರಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರುಗಳು, ಕಾಂಗ್ರೆಸ್ ಪ್ರಾಂತಗಳ ಮಾಜಿ ಮುಖ್ಯಮಂತ್ರಿಗಳು, ಮತ್ತು ಇತರ ಮಂತ್ರಿಗಳು ಕೇಂದ್ರ ಮತ್ತು ಪ್ರಾಂತ ಶಾಸನ ಸಭೆಗಳ ಸದಸ್ಯರುಗಳು, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೆಂಬರುಗಳು — ಇವರೆಲ್ಲರೂ ಸೇರಿರುತ್ತಾರೆ

ಮುಂದಿನ ಸತ್ಯಾಗ್ರಹಿ

ಶ್ರೀಮತಿ ಪ್ರಮೀಳಾ ಓಕ್

ಶ್ರೀ ಬ್ರಿಜಲಾಲ ಬಿಯಾನಿಯವರ ಅನಂತರ ಅಕೋಲಾದಲ್ಲಿ ಶ್ರೀಮತಿ ಪ್ರಮೀಳಾ ಓಕರು ಸತ್ಯಾಗ್ರಹ ಹೂಡುವರೆಂದು ತಿಳಿದಿದೆ

ಸರ್ದಾರ್ ಪಟೇಲ್

ಸಬರ್ಮತಿ ಸೆರೆಮನೆಯಲ್ಲಿ—

ಇವರು ಅಹಮ್ಮದಾಬಾದಿನಲ್ಲಿ ಭಾಷಣ ಕೊಡುವುದಕ್ಕಿಂತ ಮೊದಲು ಬಂಧಿತರಾದರು ಇವರನ್ನು ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿ ಹಾಕಿದೆ ಬಂಧಿತರಾದ ಸರ್ದಾರ್ ಪಟೇಲರನು ಸಬರ್ಮತಿ ಸೆರೆಮನೆಯಲ್ಲಿ ಸ್ಥಾನಬದ್ಧರಾಗಿ ಇರಿಸಲಾಗಿದೆಯೆಂದು ತಿಳಿದುಬರುತ್ತದೆ

ಹಿಂದಿನ ಮಂತ್ರಿಗಳ ಬಂಧನ

ಮಧ್ಯಪ್ರಾಂತ್ಯದ ಹಿಂದಿನ ಮಂತ್ರಿಗಳೂ, ಹರಿಜನ ಮುಖಂಡರೂ, ಪ್ರಾಂತಿಕ ಎಸೆಂಬ್ಲಿ ಸದಸ್ಯರೂ ಆದ ಶ್ರೀ ರಾಮೇಶ್ವರ ಅಗ್ನಿ ಬೋಸರನ್ನು ಸತ್ಯಾಗ್ರಹ ಮಾಡುವಾಗ ಬಂಧಿಸಲಾಗಿದೆ, ವಿಚಾರಣೆಯಾಗುತ್ತದೆ.

ಸರದಾರ್ ಅಮರಸಿಂಗ್ ಸೈಗಾಲ್

೧೮ ತಿಂಗಳು ಕಠಿಣ ಶಿಕ್ಷೆ

ಬಿಲಾಸಪುರದಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಸರ್ದಾರ್ ಅಮರಸಿಂಗ್ ಸೈಗಾಲರನ್ನು ದಸ್ತಗಿರಿ ಮಾಡಲಾಗಿತ್ತಷ್ಟೆ. ಇವರಿಗೆ ನ್ಯಾಯಾಧೀಶರು ೧೮ ತಿಂಗಳು ಕಠಿಣ ಶಿಕ್ಷೆ ಮತ್ತು ೩೦೦ ರೂ. ಜುಲ್ಮಾನೆ ವಿಧಿಸಿದರು.

ಶ್ರೀ। ದಾನಿಯಲ್ ಲತೀಫ್—

ಕಠಿಣ ಸಜೆ

ಲಾಹೋರಿನಲ್ಲಿ ಪಬ್ಲಿಕ್ ನೋಟೀಸ್ ಬೋರ್ಡಿನಲ್ಲಿ, ಅರ್ಧ ರಾತ್ರಿಯಲ್ಲಿ ಕಮ್ಯುನಿಸ್ಟ್ ಪೋಸ್ಟರುಗಳನ್ನು ಹಚ್ಚಿ

ತ್ತಿದ್ದರೆಂ
ದಾನಿಯ
ಇವರಿಗೆ
ಗಿದೆ

ಮಹಿ
ಗುಜ
ಮಹಿಳ
ಲಿದೆಯೆ

ಸಂ
ಸತ್ಯಾ
ಕೆಲಸ
ಅಕ್ಟೋ
ಬಂಧಿತರ
ಜಾಮೀ

ಮನೆ
ಡಾಕ್ಟ
ಮೇಲೆ
ಬೇಕಾಗಿ

ಕಾಂ
ಕಟಕ್
ಯನ್ನು
ದರ್ಶಿಗಳ
ಗೋವಿಂದ
ರನ್ನು ಸೆರೆ
ಜವಾ
ಕೊಟ್ಟ ಹ
ಯು ಇ
ಜಡ್ಜಿ ಮಾ

ನೆಹರು

ಲಂಡನ
ಲಂಡನಿ
ಸಂಘದವರ
ಅದರಲ್ಲಿ ವ
ಸಿದ್ಧ ಕಪ
ಡಲೇ ಬಿಡ
ಕಾರವನ್ನು
ವೊಂದನ್ನು
ಹಿಸಿರುವರು

ನೆಹರ
&
ಸದ
ಅಹಮ
ಯನ್ನು ಉ
ಕಾರ್ಯಕ್ಕೆ
ಆಮಂತ್ರಿಸಿದ
ಕ್ಕದ ಸೇತು



ಕಾಂಗ್ರೆಸು ಮುಖಂಡರ ಬಂಧನಗಳು!

ಪ್ರಾಂತ ಪ್ರಾಂತಗಳಲ್ಲಿ ಸತ್ಯಾಗ್ರಹ!

ಮಹಿಳೆಯರೂ ಸತ್ಯಾಗ್ರಹಕ್ಕೆ ಸಿದ್ಧರಾಗಿದ್ದಾರೆ!

ಕೇಂದ್ರ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದ ವಿಜಯ!

ಸರಕಾರದ ಬಿಲ್ಲು ಬಿದ್ದು ಹೋಯಿತು!

ತ್ತಿದ್ದರೆಂಬ ಆರೋಪದ ಮೇಲೆ ಶ್ರೀ. ದಾನಿಯಲ್ ಲತೀಫ ಬಾರ್-ಎಟ್-ಲಾ ಇವರಿಗೆ ೨ ವರ್ಷಗಳ ಕಠಿಣ ಸಜೆಯೂ ಗಿದೆ.

ಮಹಿಳಾ ಸತ್ಯಾಗ್ರಹಿಗಳು

ಗುಜರಾಥಿನಿಂದ ಸತ್ಯಾಗ್ರಹಕ್ಕೆ ಒಂದು ಮಹಿಳಾ ಸತ್ಯಾಗ್ರಹಿಗಳ ಗುಂಪು ತೆರಳಲಿದೆಯೆಂದೂ ತಿಳಿದುಬರುತ್ತದೆ.

ಸಂಯುಕ್ತ ಪ್ರಾಂತದಲ್ಲಿ

ಸತ್ಯಾಗ್ರಹಿಗಳಾಗಿ ಬಹಳ ಭರದಿಂದ ಕೆಲಸ ಆಗುತ್ತಿದೆ. ಡಿಫೆನ್ಸ್ ಆಕ್ಟಿನಂತೆ ಅಕ್ಟೋಬರ ೧೮ರ ವರೆಗೆ ೬೪೪ ಜನರು ಬಂಧಿತರಾಗಿ, ೧೫ ಪತ್ರಿಕೆ ಪ್ರೆಸ್ಸುಗಳಿಂದ ಜಾಮೀನು ಕೇಳಲಾಗಿದೆ.

ಮನೆಯಲ್ಲೇ ಇರಬೇಕು

ಢಾಕಾದಲ್ಲಿ ತಾ ೧೮ರಂದು ೧೧೦ ಜನರ ಮೇಲೆ ಅವರು ಮನೆಯಲ್ಲಿಯೇ ಇರಬೇಕಾಗಿ ಆಜ್ಞೆ ಹೊರಟಿದೆ.

ಕಾಂಗ್ರೆಸ್ ಕಮಿಟಿ ಜಪ್ತಿ

ಕಟಕ್ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಜಪ್ತಿ ಮಾಡಿ ಅದರ ಕಾರ್ಯದರ್ಶಿಗಳಾದ ಸುರೇಂದ್ರನಾಥ ಮತ್ತು ಗೋವಿಂದ ಚಂದ್ರ ಮಹಂತ ಎಂಬಿಬ್ಬರನ್ನು ಸೆರೆಹಿಡಿದಿರುವರು.

ಜವಾಹಿರಲಾಲರು ಕೋರ್ಟಿನಲ್ಲಿ ಕೊಟ್ಟ ಹೇಳಿಕೆಯು ವಿಸ್ತಾರವಾದ ಪ್ರತಿಯು ಇವರಲ್ಲಿತ್ತು ಎಂಬುದಕ್ಕೆ ಈ ಜಪ್ತಿ ಮಾಡಲಾಗಿತ್ತು.

ನೆಹರುಗಳನ್ನು ಬಿಡುಗಡೆ ಮಾಡಬೇಕು

ಲಂಡನ್ ಸಭೆಯ ಠೀರ್ಮಾನ

ಲಂಡನಿನ ನಾಗರಿಕ ಸ್ವಾತಂತ್ರ ಸಂಘದವರು ಒಂದು ಸಭೆ ಸೇರಿಸಿ, ಅದರಲ್ಲಿ ಪಂಡಿತ ನೆಹರುಗಳನ್ನು ಬಂಧಿಸಿದ್ದು ತಪ್ಪಾಯಿತೆಂದೂ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವೊಂದನ್ನು ಮಾಡಿ, ಸರಕಾರಕ್ಕೆ ಕಳುಹಿಸಿರುವರು.

ನೆಹರುಗಳನ್ನು ನಾನೂ ಹಿಂಬಾಲಿಸುವೆ

ಸರ್ದಾರರ ಘೋಷಣೆ

ಅಹಮದಾಬಾದಿನ ಗಾಂಧೀಸೇತುವೆಯನ್ನು ಉದ್ಘಾಟನೆ ಮಾಡುತ್ತಾ, ಈ ಕಾರ್ಯಕ್ಕೆ ನಾನು ನೆಹರುಗಳನ್ನು ಆಮಂತ್ರಿಸಿದ್ದೆ; ಅವರು ಭಾರತದ ಸ್ವಾತಂತ್ರ್ಯದ ಸೇತುವೆಯ ಉದ್ಘಾಟನೆಗೆ ತೆರಳಿದರು. ನಾನೂ ಅವರನ್ನು ಹಿಂಬಾಲಿಸುವೆ ಎಂದರು.

ಭಾರತದ ಪರಿಸ್ಥಿತಿಯನ್ನು ಸುಧಾರಿಸಬೇಕು

ಗಾರ್ಡಿಯನ್ ಪತ್ರಿಕೆಯ ಅಗ್ರಲೇಖ

"ನಮ್ಮ ಹಿತದ ಸಲುವಾಗಿಯೇ ಭಾರತವು ನಮ್ಮ ಜತೆಯಲ್ಲಿ ನಿಂತು ಹೋರಾಡುವಂತೆ ವ್ಯವಸ್ಥೆ ಮಾಡಬೇಕು. ಅದಕ್ಕಾಗಿಯಾದರೂ ನಾವು ಭಾರತೀಯರೊಡನೆ ನ್ಯಾಯದಿಂದ ವರ್ತಿಸಬೇಕು. ಕೆಲಸ ಮಾಡುವುದನ್ನು ಕಾಂಗ್ರೆಸಿಗೆ ಬಿಟ್ಟುಕೊಟ್ಟು ನಾವು ಬರಿಯ ದಬ್ಬಾಳಿಕೆ ಬಲಪ್ರಯೋಗಗಳನ್ನು ಮಾತ್ರ ಮಾಡುತ್ತಾ ಕುಳಿತಿದ್ದರೆ ಅದು ನ್ಯಾಯವೆನಿಸಲಾರದು. ಕಾಂಗ್ರೆಸ್ ಧುರೀಣರು ಹೆದರಿಕೆಗೆ ಬಗ್ಗದವರು. ವಿಚಾರವಿನಿಮಯದ ಮೂಲಕ ಒಂದು ಒಪ್ಪಂದ ಮಾಡುವುದವಶ್ಯ. ಮತಭೇದಗಳನ್ನು ವಿಚಾರಿಸಿ ಸುಮ್ಮನಿರುವುದು ಮುಂದಾಳುತನದ ಲಕ್ಷಣವಲ್ಲ!" ಹೀಗೆಂದು ಲಂಡನಿನ ಪ್ರಮುಖ ಪತ್ರಿಕೆ ಮೆಂಚೆಸ್ಟರ್ ಗಾರ್ಡಿಯನ್ ಅಗ್ರಲೇಖ ಬರೆದಿದೆ.

ಭಾರತದ ಪರಿಸ್ಥಿತಿ ಕುರಿತು

ಅಮೇರಿಕದಲ್ಲಿ ತಳಮಳ

ಬ್ರಿಟಿಷರು ಈಗ ಭಾರತದಲ್ಲಿ ಮಾಡುತ್ತಿರುವ ದಬ್ಬಾಳಿಕೆ ಬಂಧನ ಶಿಕ್ಷೆಗಳ ಕುರಿತು, ಅಮೇರಿಕದಲ್ಲಿ ಬಹಳ ತಳಮಳವುಂಟಾಗಿದೆಯೆಂದೂ ಆದುದರಿಂದ ಭಾರತವನ್ನು ಬ್ರಿಟಿಷರು ಸಮಾಧಾನಪಡಿಸಬೇಕೆಂದೂ 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಅಲ್ಲಿನ ಬಾತ್ಮಿದಾರರು ಬರೆಯುತ್ತಾರೆ.

ಸುಭಾಷರನ್ನು ಜಾಮೀನಿನಿಂದ ಬಿಡುಗಡೆ ಮಾಡುವರೆ?

ಸುಭಾಷರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂಬ ಪತ್ರಕ್ಕೆ ಉತ್ತರಕೊಡುತ್ತಾ ನ್ಯಾಯಾಧೀಶರು, ೧೦೦೦ ರೂಪಾಯಿ ಕೊಟ್ಟರೆ ಅವರನ್ನು ನಾನು ಬಿಡುಗಡೆ ಮಾಡಲು ಸಿದ್ಧನಿರುವೆನು ಎಂದರು.

ರಾಜಿನಾಮೆ ಕೊಟ್ಟಿರುವರು

ದೇ| ಭ| ಗಂಗಾಧರರಾವ್ ದೇಶಪಾಂಡೆ ಮತ್ತು ಬಜಾಜ್ ಇವರು ಬೇರೆ ಕಾರ್ಯಗಳಲ್ಲಿ ತೊಡಗಿದ್ದರಿಂದ ಚರಕಾ ಸಂಘದ ಸದಸ್ಯತ್ವಕ್ಕೆ ರಾಜಿನಾಮೆಯಿತ್ತರು.

ಮೂರನೆಯ ಸತ್ಯಾಗ್ರಹಿ

ಕೌನ್ಸಿಲ್ ಒಫ್ ಸ್ಟೇಟಿನ ಸದಸ್ಯರಾದ ಶ್ರೀ. ಬ್ರಿಜಲಾಲ ಬಿಯಾನಿಯವರು ಗಾಂಧಿಜಿಯವರಿಂದ ಮೂರನೆಯ ಸತ್ಯಾಗ್ರಹಿಯಾಗಿ ಆರಿಸಲ್ಪಟ್ಟರು. ಅವರನ್ನು ಬಂಧಿಸಿ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಲಾಯಿತು.

ಶ್ರೀ| ಎಸ್. ವಿ. ರಾಮಮೂರ್ತಿ

ಮದ್ರಾಸು ಸರಕಾರದ ಚೀಫ್ ಸೆಕ್ರೆಟರಿ

ಮಿ. ಟಿ. ಆಸ್ಟಿನ್ ಇವರ ಬದಲು ಶ್ರೀ. ಎಸ್ ವಿ. ರಾಮಮೂರ್ತಿ ಐ ಸಿ. ಎಸ್. ಇವರು ಮದ್ರಾಸು ಸರಕಾರದ ಚೀಫ್ ಸೆಕ್ರೆಟರಿಯಾಗಿ ನಿಯುಕ್ತರಾದರು. ಹಿಂದೀಯರು ಈ ಹುದ್ದೆ ಪಡೆದದ್ದು ಇದೇ ಪ್ರಥಮತಃ ಆಗಿದೆ.

ಚೀನಾ—ಭಾರತದ ಪರಸ್ಪರ ಮೈತ್ರಿ

ಎರಡು ಸಾವಿರ ವರ್ಷಗಳಿಂದ ಬಂದುದು

ಚೀನಾ ಸರಕಾರದ ಯುನಾನ್ ಪ್ರಾಂತದ ಮಾಜೀ ಅಧ್ಯಕ್ಷರೂ ಆಡಳಿತಗಾರರೂ ಆಗಿದ್ದ ಥಾವಿ-ಚಿ-ಟೋವಾರವರು ಕಲ್ಕತ್ತೆಗೆ ತಾ. ೧೧ರ ದಿವಸ ಬಂದರು. ಇವರು ಪತ್ರಿಕಾ ಪ್ರತಿನಿಧಿಗೆ ಕೊಟ್ಟ ಭೇಟಿಯೊಂದರಲ್ಲಿ ತಿಳಿಸಿರುವುದೇನೆಂದರೆ:—

"ಚೀನಾದೇಶಕ್ಕೂ ಭಾರತ ದೇಶಕ್ಕೂ ಕಳೆದ ಎರಡು ಸಾವಿರ ವರ್ಷಗಳಿಂದ ಪರಸ್ಪರ ಸಂಬಂಧ, ಮಧುರ ಬಾಂಧವ್ಯವು ಇರುತ್ತದೆ. ಚೀನೀಯರೂ ಭಾರತೀಯರೂ ಪ್ರಾಚೀನ ಕಾಲದಿಂದ ಮಿತ್ರ ಜನಾಂಗಗಳು. ಕಳೆದ ೧೨ ತಿಂಗಳುಗಳಿಂದ ಭಾರತವು ಚೀನಕ್ಕೆ ಸಹಾಯ ಮಾಡುತ್ತಲಿದೆ. ಭಾರತೀಯ ಮುಖಂಡರು ಚೀನಕ್ಕೆ ಶಾಂತಿ ಮತ್ತು ಮೈತ್ರಿ ಸಂದೇಶ ಸಹಾಯಗಳನ್ನು ಕೊಟ್ಟಿರುತ್ತಾರೆ."

ಸರಕಾರದ ಹಣಕಾಸಿನ ಮಸೂದೆ ಬಿದ್ದುಹೋಯಿತು

ಕಾಂಗ್ರೆಸು ಪಕ್ಷದ ಯಶಸ್ವಿ ಜಯ

ಭೂಲಾಭಾಯಿಯವರ ಪ್ರಚಂಡ ಭಾಷಣ

ಕೇಂದ್ರ ಅಸೆಂಬ್ಲಿಯಲ್ಲಿ ಸರಕಾರದ ಹಣಕಾಸಿನ ಮಂತ್ರಿಗಳು ತಂದಿದ್ದ ಹಣಕಾಸಿನ ಮಸೂದೆಯು ದೀರ್ಘ ಚರ್ಚೆಯಾಗಿ ಕಾಂಗ್ರೆಸು ಪಕ್ಷದ ತೀವ್ರ ವಿರೋಧದಿಂದ ೫೪ ಮತ್ತು ೫೫ ಮತಗಳಿಂದ ಕಾಂಗ್ರೆಸಿಗೆ ಜಯವಾಗಿ ಬಿದ್ದು ಹೋಯಿತು. ಕೊನೆಯ ಭಾಷಣವಾಗಿ ಭೂಲಾಭಾಯಿಯವರು ಮಾತನಾಡಿ ಭಾರತವನ್ನು ಗುಲಾಮಗಿರಿಯಿಂದ ಆಳಲು ಸಾಧ್ಯವಿಲ್ಲವೆಂದೂ ಭಾರತದ ಯುದ್ಧವಾಗಿ ಈ ಯುದ್ಧವನ್ನು ಮಾರ್ಪಡಿಸದೆ ನಾವು ಸಹಕರಿಸಲಾರೆವೆಂದೂ ಅಮೇರಿಕೆಯವರು ಕೇವಲ ಬಾಯಿಬಡಾಯಿ ಕೊಚ್ಚಿದರೆಂದೂ ಒಂದು ತಾಸಿನ ತನಕ ಅರ್ಥಗರ್ಭಿತ ಭಾಷಣವಿತ್ತರು.

ಆಂಧ್ರದ ಮೊದಲನೆಯ ಸತ್ಯಾಗ್ರಹಿ

ದೇ| ಭ| ಕೊಂಡ ವೆಂಕಟಪ್ಪಯ್ಯ

ಗುಂಟೂರಿನ ದೇ. ಭ. ಕೊಂಡ ವೆಂಕಟಪ್ಪಯ್ಯನವರು ಆಂಧ್ರದ ಮೊದಲನೆಯ ಸತ್ಯಾಗ್ರಹಿಯಾಗಿ ತಾ. ೨೦ರಂದು ಸತ್ಯಾಗ್ರಹ ಮಾಡುವರು.

ಶ್ರೀ. ಪಾಟೀಲರ ಸತ್ಯಾಗ್ರಹ

ಪೂಣೆಯಲ್ಲಿ

ತಾ. ೨೨ರಂದು ಮುಂಬಯಿಯ ಮಾಜಿ ಮಂತ್ರಿ ಶ್ರೀ. ಎಂ. ವಿ. ಪಾಟೀಲರು ಸತ್ಯಾಗ್ರಹ ಮಾಡುವರು.

ಡಾ| ರಾಜನರ ಸತ್ಯಾಗ್ರಹ

ತಾ. ೧೯ರಂದು ಮದ್ರಾಸಿನ ಮಾಜಿ ಮಂತ್ರಿ ಡಾ| ರಾಜನರು ತಿರುಚಿನಾಪಳ್ಳಿಯಲ್ಲಿ ಸತ್ಯಾಗ್ರಹ ಮಾಡಿದರು.

ಶ್ರೀ. ಮುರಾರಜಿಯವರ ಸತ್ಯಾಗ್ರಹ

ಮುಂಬಯಿಯ ಮಾಜಿ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ತಾ. ೧೯ರಂದು ಮುಂಬಯಿಯಲ್ಲಿ ಸತ್ಯಾಗ್ರಹ ಮಾಡಿದರು.

ಮುನ್ಶಿಯವರ ಸತ್ಯಾಗ್ರಹ

ಮುಂಬಯಿಯ ಮಾಜಿ ಮಂತ್ರಿಗಳಾದ ಮುನ್ಶಿ ಮತ್ತು ಇತರರು ಸತ್ಯಾಗ್ರಹ ಸಿದ್ಧತೆ ಮಾಡುತ್ತಿರುವರು.

ಅಸಫ್ ಅಲ್ಲಿಯವರ ಸತ್ಯಾಗ್ರಹ

ಹೊಸ ದಿಲ್ಲಿಯಲ್ಲಿ ಕಾಂಗ್ರೆಸ್ ಪಕ್ಷ ಸದಸ್ಯರೂ ಕೇಂದ್ರ ಅಸೆಂಬ್ಲಿ ಸದಸ್ಯರೂ ಆದ ಶ್ರೀ. ಅಸಫ್ ಅಲ್ಲಿಯವರು ತಾ. ೨೧ಕ್ಕೆ ಸತ್ಯಾಗ್ರಹ ಮಾಡುವರು.

ಪ್ರಥಮ ಸ್ತ್ರೀ ಸತ್ಯಾಗ್ರಹಿ

ಕುಮಾರಿ ಪ್ರೇಮ ಕಂಟಕ್

ತಾ. ೨೦ರಂದು ಪುಣೆಯ ಕುಮಾರಿ ಪ್ರೇಮ ಕಂಟಕ್ ಇವರು ಸತ್ಯಾಗ್ರಹ ಹೂಡಿದರು.

NOTICE.
In the Court of the Subordinate Judge of South Kanara.

BETWEEN—
Venkamma and others— *Plaintiffs*,
AND
Anthamma Hengsu and others—*Defendants*.

To 4th defendant, Shivarama Shastry, son of Chakrakodi Shambu Shastry, Moodabail of Punicha village, Puttur Taluk.

Please take notice that the above named plaintiffs filed the above suit for reliefs claimed in the plaint, copy of which can be had from Court on application, and the said suit stands posted to 7-12-1940 for disposal. You are hereby requested to appear on that day either in person or by a pleader to contest the above matter failing which the same shall be heard and determined exparte.

Mangalore, 8-12-1940. G. Somashekar Rao, Vakil for Plaintiffs.

ನೋಟೀಸು
ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 947/1931
ಏಸ್. ಇ. ಪಿ. ನಂಬ್ರ 442/1940

ಬಿ. ಮುಂಡಪ್ಪ ನಾಯ್ಕ ... ಅರ್ಜಿದಾರ
ನಂದ್ಯಪ್ಪ ಶೆಟ್ಟಿ ..... ರೆಸ್ಪೊಂಡೆಂಟ.

ಸದರಿ ರೆಸ್ಪೊಂಡೆಂಟ—ಕಾಸರಗೋಡು ತಾಲೂಕು ಪಾತೂರು ಗ್ರಾಮದಲ್ಲಿರುವ ವಸಾರ ಅದ್ಯಂತ್ತಾಯರ ಅಳಿಯ ನಂದ್ಯಪ್ಪ ಶೆಟ್ರಿಗೆ.

ಮೇಲ್ಕಂಡ ಅಮಲ್ದಾರಿಯಲ್ಲಿ ನಿಮ್ಮ ಬಾಬ್ತು ಜಪ್ತಾದ ನಗಗಳ ವಿಕ್ರಯದ ಬಗ್ಗೆ ಸದರಿ ಅರ್ಜದಾರನು ಹಾಜರು ಪಡಿಸಿದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1940ನೇ ಇಸವಿ ದಶಂಬರ ತಿಂಗಳ 5ನೇ ತಾರೀಕು ನಿಶ್ಚಯಿಸೋಣಾಗಿಯದೆ. ಆದುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದರಿ ತಾ. 5-12-40ಕ್ಕೆ ಪೂರ್ವಾಹ್ನ 10ಘಂಟೆಗೆ ಸದರಿ ಕೋರ್ಟಿನ ಮುಂದೆ ಖುದ್ದಾಗಲೀ ಯಾ ಅಧಿಕಾರ ಹೊಂದಿದ ಪ್ಲೀಡರ ಮೂಲಕವಾಗಲೀ ಹಾಜರಾಗಿ ಅದನ್ನು ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಸದರಿ ಅರ್ಜಿಯು ನಿಮ್ಮ ಗೈರು ಹಾಜರಿನಲ್ಲಿಯೇ ಏಕಪಕ್ಷವಾಗಿ ತೀರ್ಮಾನವಾಗಲಾರದು.

ಮಂಗಳೂರು 19-11-40 H. Vasudeva Kamath. ಅರ್ಜದಾರನ ಕಡೆ ವಕೀಲ

ನಿಮ್ಮ ಮನೆಯಲ್ಲಿ ಜ್ಯಾಂಬಕು ನಿಮಗೆ ಅಗತ್ಯವಿದೆ.

ಉತ್ಕೃಷ್ಟವಾದ ವಿಷಹಾರಿ, ಗುಣಕಾರಿ ಮುಲಾಮು

ರಕ್ತದಲ್ಲಿ ವಿಷಾಣುಗಳ ಸೇರುವಿಕೆಯಿಂದ ಭಯಂಕರ ಗಂಡಾಂತರವು ಬಂದೊದಗುವುದು, ಇದೆಲ್ಲವೂ ಸಣ್ಣ ಗಾಯ, ಕಡಿತಗಳನ್ನು ಅಲಕ್ಷಿಸಿದ ಕಾರಣದಿಂದ. ಆದುದರಿಂದ ನಿಮ್ಮ ಎಲ್ಲಾ ಗಾಯ ಮತ್ತು ಕಡಿತಗಳನ್ನು ವಿಷಹಾರಿ ಜ್ಯಾಂಬಕಿನಿಂದ ಗುಣಪಡಿಸಿರಿ. ಜ್ಯಾಂಬಕಿನಲ್ಲಿರುವ ಅಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯು ಸಣ್ಣ ನಾಡಿಗಳೊಳಗೆ ಎಳೆಯಲ್ಪಡುತ್ತದೆ. ಈ ರೀತಿಯಲ್ಲಿ ಜ್ಯಾಂಬಕು ನೋವನ್ನು, ಬಾತುವಿಕೆಯನ್ನು ಕಡಿಮೆಮಾಡಿ ವಿಷಜಂತುಗಳನ್ನು ನಾಶಮಾಡಿ ಒಂದೂ ಕಲೆಯುಳ್ಳದೆ ಗುಣವನ್ನುಂಟುಮಾಡುವುದು. ಜ್ಯಾಂಬಕು ಮುಲಾಮು ರೂ. 1 ಅಥವಾ ರೂ. 2-4-0, ಜ್ಯಾಂಬಕು ಸೋಪು ರೂ. 1, ಜ್ಯಾಂಬಕು ಪೌಡರು ರೂ. 1.

ಏಜಂಟ್ಸ್:—ಮೆಸರ್ಸ್ ದಾಥಾ ಮತ್ತು ಕಂಪೆನಿ, ಪಿ. ಟಿ. ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದುದು.

ಅರುಣ
ಸ್ತ್ರೀಯರಿಗೆ
★
ಬಾಲಪ್ರಾಶ
ಮಕ್ಕಳಿಗೆ
★
ಜೀವಾಮೃತಂ
ಪುರುಷರಿಗೆ
★



3 ಟಾನಿಕ್ ರತ್ನಗಳು
ಆಯುರ್ವೇದಾಶ್ರಮಂ
1898ರಲ್ಲಿ ಸ್ಥಾಪಿತವಾದುದು ಮದರಾಸು.

K.A.I.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ [illegible] ನಿಯಮಗಳನ್ನನುಸರಿಸಿ ನಡೆಯುವ ದೇಶವಾಗಿಲ್ಲ. [illegible] ಭಾರತೀಯರ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು [illegible] ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು [illegible] ಪ್ರಾಚೀನ ಸಂಸ್ಕೃತಿಯ [illegible] ತಮ್ಮ [illegible] ಆತ್ಮಸಂಯಮ [illegible]

[illegible] "ಸುಕ್ರ ಸಂಜೀವನ" [illegible] ಆಯುರ್ವೇದದ [illegible] ಈ ಔಷಧಿಯು [illegible] ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ॥ ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ. ಎಸ್ (ಅಮೇರಿ...) ಆಯುರ್ವೇದ ಶಾಸ್ತ್ರಿ, ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದಿಯ ಸಂಸ್ಥೆ
ಸಾಧನಾ ಔಷಧಾಲಯ
— ಡಾಕ್ಕಾ, ಬಂಗಾಲ —
ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್: ... ಹಂಪನಕಟ್ಟಾ ಮಂಗಳೂರು.



ವಿಚಿತ್ರ ಪ್ರಪಂಚ

ಆಕಾಶದಲ್ಲಿ ಮದುವೆ!

"ಲೋಕೋಭಿನ್ನರುಚಿಃ" ಅಲ್ಲವೇ? ಭಿನ್ನತೆ ಇದ್ದರೇನೆ ಪ್ರಪಂಚದ ವ್ಯವಹಾರಗಳಲ್ಲಿ ರುಚಿ ಬರುತ್ತದೆಯಂತೆ. ಪಾಶ್ಚಾತ್ಯರ ವೈವಾಹಿಕ ವ್ಯವಹಾರಗಳಲ್ಲಿ ಕೂಡ ಈ ಮಾತು ಸರಿಯಾಗುತ್ತದೆ. ಅಮೇರಿಕದಲ್ಲಿ ವಿಚಿತ್ರ ವಿವಾಹ ಪದ್ಧತಿಗಳು ಬಳಕೆಗೆ ಬರುತ್ತಿರುವವು ಇಂಥವುಗಳಲ್ಲಿ ಗಾಳಿಕೊಡೆ (ಪೆರೆಚೂಟ್) ವಿವಾಹವು ಒಂದಾಗಿದೆ. ಕೆಲವು ದಿನಗಳ ಹಿಂದೆ ಇಂಥ ಒಂದು ವಿವಾಹವು ನ್ಯೂಯಾರ್ಕದಲ್ಲಿ ನಡೆದುಹೋಗಿದೆ. ವಧುವೂ ವರನೂ ಅವರ ಸಂಬಂಧಿಕರೂ ಎತ್ತರ ಗೋಪುರಗಳಿಂದ ಗಾಳಿಕೊಡೆ (ಪೆರೆಚೂಟ್ಸು)ಗಳಲ್ಲಿ ಹಾರಾಡಿಕೊಂಡು ಆಕಾಶದಲ್ಲಿಯೇ ವಿವಾಹ ಮಾಡಿಕೊಂಡರು. ಪಾದರಿಗಳೂ ಭಿಕಪರೂ ಈ ವಿವಾಹ ಪದ್ಧತಿಗೆ ವಿರೋಧವಾಗಿದ್ದರು. ಆದರೂ ಕೂಡ ವಿವಾಹ ನಡೆದೇ ಹೋಯಿತು ಉಪಾಯವಿಲ್ಲದೆ ಒಬ್ಬ ಪಾದರಿ ಪೌರೋಹಿತ್ಯ ಮಾಡಿಯೇ ಬಿಟ್ಟ.

ವಿರೋಧಿಗಳ ಮೇಲೆ ಚೇಳು!

ರಾಜಪುತಾನದ ಜಂವರಪುರದಲ್ಲಿ ಸಮಾಜಸುಧಾರಣಾವಾದಿಗಳ ಒಂದು ಸಭೆ ಕೂಡಿತ್ತು. ಅರ್ಚಕರ ಮತ್ತು ಪೂಜಾರರ ಉದರನಿಮಿತ್ತದ ಬಹುಕೃತ ವೇಷಗಳ ಕುರಿತು ಭಾಷಣಗಳು ನಡೆಯುತ್ತಾ ಇದ್ದವು ಇವರ ಮೋಸ ದಾಂಭಿಕತನ ದುರಾಚಾರ ದುರ್ವರ್ತನಾದಿಗಳನ್ನು ಬಯಲಿಗೆಳೆಯುತ್ತಿದ್ದುದರಿಂದ ಜನರನ್ನು ಪೌರೋಹಿತ್ಯಕ್ಕೆ ಕರೆಯುವುದು ಕಡಿಮೆಯಾಗುತ್ತ ಬಂದಿತ್ತು ಆದ್ದರಿಂದ ಅವರು ಸುಧಾರಕರ ಮೇಲೆ ಮೊದಲಿಂದಲೂ ರೇಗಿದ್ದರು. ಸಭೆ ನಡೆದ ಕಾಲಕ್ಕೆ ಕೆಲವು ಸನಾತನಿ ಪುಂಡರು ಬಂದು ಕಾದಿದರು - ಸಭೆ ನಡೆಯುವಾಗ ಇವರು ಭಾಷಣಕರ್ತರ ಮೇಲೂ ಸಭಿಕರ ಮೇಲೂ ವಿಷಭರಿತ ದೊಡ್ಡ ಕೊಂಡಿ ಚೇಳುಗಳನು ಬಿಸಾಡಿದರು ಸಭೆಯಲ್ಲಿ ಗೊಂದಲವೆದ್ದು ಸಭೆಗೊಂದಲದಲ್ಲಿಯೇ ಮುಗಿಯಿತು. ಇಬ್ಬರು ಭಾಷಣಕರ್ತರು ಚೇಳು ಕಚ್ಚಿ ವ್ಯತ್ಯಮುಖರಾಗಿರ ವರು. ಪೋಲೀಸರು ಹುಡುಕುತಿದ್ದಾರೆ ಆದರ ಅಪರಾಧಿ ಸನಾತನಿಗಳು ತಲೆಮರೆಸಿಕೊಂಡಿರುವರು

ಪ್ರೇಮದಿಂದ ಮರಣ!

ಹುಡುಗ ಹುಡುಗಿಯರಿಬ್ಬರು ಪ್ರೇಮಪಾಶದಲ್ಲಿ ಸಿಲುಕಿ ಪ್ರಾಣಗಳನ್ನೇ ಕಳಕೊಂಡ ಒಂದು ರೋಮಾಂಚಕಾರಿ ವಾರ್ತೆಯು ಈಗ ತಾನೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕಲ್ಕತ್ತೆಯ ಈ ಹುಡುಗ ಮತ್ತು ಹುಡುಗಿಯರು ಪರಸ್ಪರ ಆಕರ್ಷಿತರಾಗಿದ್ದರು- ಅವರು ಒಬ್ಬರನ್ನೊಬ್ಬರು, ಪ್ರೇಮಿಸತೊಡಗಿದ್ದರು ವಿವಾಹವಾಗಬೇಕೆಂದು ನಿರ್ಧರಿಸಿಯೂ ಇದ್ದರು ಆದರೆ, ಹೆತ್ತವರು ಅವರ ವಿವಾಹಕ್ಕೆ ವಿರೋಧವಾಗಿದ್ದರು. ಆದ್ದರಿಂದ ಜೀವನದಲ್ಲಿ ಜುಗುಪ್ಸೆಗೊಂಡು ಇಬ್ಬರೂ ಗಂಗೆಯಲ್ಲಿ ಬಿದ್ದು ಪ್ರಾಣಗಳನ್ನು ಕಳಕೊಳ್ಳುವ ನಿರ್ಧಾರ ಮಾಡಿಕೊಂಡರು ಬಂಧುಬಳಗಗಳು ಇದ್ದ ಹಾಗೆಯೇ ಒಂದು ದಿನ ರಾತ್ರಿ ಹುಡುಗನು ತನ್ನ ಬಲಗೈಯನ್ನು ಹುಡುಗಿಯ ಎಡಕೈಗೆ ಕಟ್ಟಿಕೊಂಡು ಇಬ್ಬರೂ ಗಂಗೆಯಲ್ಲಿ ಬಿದ್ದರು ಪ್ರಾತಃಕಾಲ ಅವರ ಶವಗಳು ಗಂಗೆಯ ಮಡಿಲಲ್ಲಿ ತೇಲುತಿದ್ದುದನ್ನು ಸ್ನಾನಕ್ಕೆ ಬಂದವರು ನೋಡಿ ಮೇಲಕ್ಕೆ ಎತ್ತಿಹಾಕಿದರು

ಅಭಿಮಾನದಿಂದ ಪ್ರೇಮ ವಿವಾಹ

ಇಂಗ್ಲೆಂಡಿನಲ್ಲಿ ವಿಲಾಯತಿಯ ಆದರ್ಶ ಪುರುಷರು ಯಾರು ಎಂಬ ಕುರಿತು ಅಲ್ಲಿಯ ಒಂದು ಪತ್ರಿಕೆಯಲ್ಲಿ ಒಂದು ಸ್ಪರ್ಧೆ ನಡೆದಿತ್ತು. ಲಂಡನಿನ ಪಾಯೊಲೆಟ ಎಂಬ ಹುಡುಗಿ ಯುದ್ಧ ಮಂತ್ರಿ ಏಡನ್ನರೇ ಅಂಥ ಆದರ್ಶ ಪುರುಷರೆಂದು ಪ್ರಕಟಿಸಿದ್ದಳು ಆದರೆ ಒಂ೦೦ ಮೈಲು ದೂರದ ದಕ್ಷಿಣ ಆಫ್ರಿಕದಲ್ಲಿದ್ದ ಏಡನ್ನ ಎಂಬ ಹೆಸರಿನ ಮತ್ತೊಬ್ಬನು ತನ್ನ ಹೆಸರನ್ನು ಅವಳು ಸೂಚಿಸಿರುವಳೆಂದು ಸಂತೋಷಗೊಂಡು ಅವಳಿಗೆ ಅಭಿನಂದನೆಯ ತಂತಿಯನ್ನು ಕಳಹಿಸಿದ. ಅಂದು ಮೊದಲುಗೊಂಡು ಅವರಿಬ್ಬರೊಳಗೆ ಪ್ರೇಮ ಪತ್ರವ್ಯವಹಾರವು ಆರಂಭವಾಗಿ ಮೂರು ವರ್ಷಗಳ ಅನಂತರ ಅವರಿಬ್ಬರು ಪರಸ್ಪರ ವಿವಾಹ ಮಾಡಿಕೊಂಡಿರುವರು. ವಿವಾಹವಾಗುವ ಕಡೆಕವೂ ಈ ವಿಚಾರವು ಯುದ್ಧಮಂತ್ರಿ ಏಡನ್ನರಿಗೆ ತಿಳಿದೇ ಇರಲಿಲ್ಲವಂತೆ!

ಕೋರ್ಟಿನಲ್ಲಿ ವಿಜ್ಞಾನದ ಪಾಠ

[illegible] ಪೋಲಿಸ ಕೋರ್ಟಿನಲ್ಲಿ [illegible] ಒಬ್ಬ ಅಧಿಕಾರಿಯು ಕಳ್ಳತನದಿಂದ ಕಳ್ಳ ತಯಾರಿಸಿದನೆಂದ, ಆ ಕೋರ್ಟಿನಲ್ಲಿ ಒಬ್ಬನ ಮೇಲೆ ಫಿರ್ಯಾದಿ [illegible] ಆತನ ಮನೆಯಲ್ಲಿ [illegible] ದೊರೆತ ಕಳ್ಳತನದ ಕಳ್ಳನ್ನು ಕೋರ್ಟಿನಲ್ಲಿ ಹಾಜರು ಮಾಡಿದ [illegible] ಆದು ಕಳ್ಳತನದ ಕಳ್ಳು ಅಲ್ಲವೆಂದೂ [illegible] ಪಡಕೊಂಡದೆಂದೂ ಫಿರ್ಯಾದಿಯು ವಾದಿಸಿದ. [illegible] ಅಧಿಕಾರಿಯು [illegible] ಸರಕಾರದ ಕಾರ್ಖಾನೆಗಳಲ್ಲಿ ತಯಾರಾದ ಕಳ್ಳಿನಲ್ಲಿ ಎಸಿಡಗಳ ಅಂಶ [illegible] ವುದಿಲ್ಲವೆಂದೂ, ದೊರೆತ ಕಳ್ಳಿನಲ್ಲಿ ಎಸಿಡಿನ ಅಂಶವಿದೆ ಎಂದೂ ಹೇಳಿದ ಈ ಮಾತನ್ನು ಸಿದ್ಧ ಮಾಡಿ ಆ ಮನುಷ್ಯನು ಅಪರಾಧಿ ಎಂದು ಖಚಿತ ಮಾಡುವುದಕ್ಕೋಸ್ಕರ ಕೋರ್ಟಿನ ಅಪ್ಪಣೆಯಂತೆ ಅಧಿಕಾರಿಯು ಅಲ್ಲಿಯೇ ಒಂದು ವಿಜ್ಞಾನ ಪಾಠವನ್ನೇ ನಡೆಸಬೇಕಾಯಿತು. ಆ ಪಾಠದಲ್ಲಿ ಅಧಿಕಾರಿ ಹೇಳಿದ ಮಾತು ಸತ್ಯವೆಂದು ತೋರಿದ್ದರಿಂದ ಅಪರಾಧಿಗೆ ಶಿಕ್ಷೆಕೊಟ್ಟರು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ- ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು

ಬೆಲೆ: 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3—0—0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: Dr. D. N. JASANI, (S.B.M.) Vithalbhai Patel Road, BOMABY 4

Madras Agent Appah & Co, China Bazar, Madras.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಸ್ವಾತಂತ್ರ್ಯದ ಬೆಳಕು ತೋರಿಸಿದ ಗೋಖಲೆಯವರು

ಅವರ ಪುಣ್ಯ ಜೀವನದ ಪರಿಚಯ!

"Love of country must so fill the heart that all else shall appear as of little moment by its side. A fervent patriotism which rejoices at every opportunity of sacrifice for the land, a dauntless heart which refuses to be turned back from its object by difficulty or danger, a deep faith in the purpose of Providence which nothing can shake—equipped with these, the worker must start on his mission and reverently seek the joy which comes of spending one's self in the service of one's country."

ಹಿಂದೂದೇಶದ ಉನ್ನತಿಯ ಮಾರ್ಗವನ್ನು ಹಲವು ಬಗೆಯಿಂದ ಆಲೋಚಿಸಿ, ಹಲವು ಸಲ ಪರೀಕ್ಷಿಸಿ; ಕಡೆಗೊಮ್ಮೆ ದಿವಂಗತ ಗೋಖಲೆಯವರು ಹೀಗೆಂದು ಭಾರತೀಯರಿಗೆ ಅಮೃತಮಯ ಸಂದೇಶವನ್ನು ಸಾರಿದ್ದರು. ಇಂತಹ ಆಸೆ, ಹುರುಪುಗಳನ್ನು ತುಂಬಿ ನಮ್ಮನ್ನು ಎಚ್ಚರಿಸುತ್ತಾ ನಮ್ಮವರ ಕರ್ತವ್ಯವನ್ನು ಆಗಾಗ ಎತ್ತಿ ತೋರಿಸುವ ಜನರು ಒಂದೊಂದು ವೇಳೆ ಬಂದು, ಹಲವು ಪವಾಡಗಳನ್ನು ಮೆರೆದು, ಸಂದರ್ಭಾನುಸಾರವಾಗಿ ಜನತೆಯನ್ನು ಉದ್ಧರಿಸುತ್ತಾರೆ. ಇಂಥ ಪುಣ್ಯಪುರುಷರ ಚರಣತಲದಲ್ಲಿ ಕುಳಿತು ಅವರಲ್ಲಿ ನಮಗಿರುವ ಭಕ್ತಿವಿಶ್ವಾಸಗಳನ್ನು ಹೇಗೆ ಸಲ್ಲಿಸಬಹುದೆಂಬುದು ತಿಳಿಯದ ಮಾತಾಗಿದೆ.

ನಮ್ಮ ದೇಶದಲ್ಲಿ ನೀತಿಕಲೆಗಳು; ವಿದ್ಯೆ, ಗುಣ, ನಿಯಮಗಳು; ಭಕ್ತಿಗೌರವಗಳು—ಇವೆಲ್ಲ ಪರಕೀಯ ಸಂಸ್ಕೃತಿಯ ಸಂಪರ್ಕದಿಂದ ಸ್ವಲ್ಪ ಸ್ವಲ್ಪ ಕೈಬಿಡುತ್ತಾ ಬಂದು ಜನರಲ್ಲಿ ಪ್ರಜಾಧರ್ಮದ ಮಾತು ಹಿಂದುಳಿಯುತ್ತಿದ್ದಂತೆ ಮತ್ತೆ ಸಹಜವಾಗಿ, ಅವನ್ನೆಲ್ಲ ಪೋಷಿಸಲು ಬರಬೇಕಾಗಿದ್ದ ರಾಜಯಂತ್ರವು ಸಡಿಲು ಹೊಂದಿದಂತೆ, ಅನಾಚಾರ ದುಷ್ಪ್ರವೃತ್ತಿಗಳು ಹೆಚ್ಚಿ, ಜನರಲ್ಲಿ ಅಶಾಂತಿ ಅಸಮಾಧಾನಗಳು ತೋರಿಬಂದುವು. ಆಗಲೇ ಗೋಖಲೆಯವರೂ ಹುಟ್ಟಿದರು. ಇಂದು ಲೋಕನಾಯಕರಾದ ಮಹಾತ್ಮಾ ಗಾಂಧಿಜಿಯವರೂ ರಾಜಕೀಯ ಗುರುಗಳಾಗಿ ಗೋಖಲೆಯವರನ್ನೇ ಕೊಂಡಾಡಿರುವರು.

ಗೋಪಾಲಕೃಷ್ಣ ಗೋಖಲೆಯವರು ರತ್ನಗಿರಿ ಜಿಲ್ಲೆಯ ಕಟ್ಲುಕ್ ಎಂಬೊಂದು ಚಿಕ್ಕ ಹಳ್ಳಿಯಲ್ಲಿ ಹುಟ್ಟಿದರು. ಪ್ರಾಥಮಿಕ ವಿದ್ಯಾಭ್ಯಾಸವು ಕಾಗಲಿನಲ್ಲಿ ಮುಗಿಯಿತು; ಕೊಲ್ಹಾಪುರದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತರು; ಬೊಂಬಾಯಿಯಲ್ಲಿ ಬಿ. ಎ. ಪಾಸ್ ಮಾಡಿಸಿದರು.

ಬಡಕುಟುಂಬದಲ್ಲಿ ಹುಟ್ಟಿದರಾದರೂ ಎಳೆವಯಸ್ಸಿನಲ್ಲಿ ಆ ಕಷ್ಟವೊಂದೂ ಅವರಿಗೆ ಗೊತ್ತಾಗಲಿಲ್ಲ. ಅವರ [illegible]ನೇ ವಯಸ್ಸಿನಲ್ಲಿ ಅವರ ತಂದೆ ತೀರಿಕೊಂಡಾಗ ಬಡತನದ ಪೆಟ್ಟು ಚೆನ್ನಾಗಿ ಬಿಡಿದು, ವಿದ್ಯಾಭ್ಯಾಸದ ಕಷ್ಟವೂ ಸ್ವಲ್ಪ ಸ್ವಲ್ಪ ತಿಳಿಯುತ್ತಾ ಬಂದಿತು. ಆದರೆ ಅವರ ಹಿರಿಯಣ್ಣನು ಈ ವಿಷಯದಲ್ಲಿ ಅವರನ್ನು ಬಿಟ್ಟುಹಾಕಲಿಲ್ಲ.

ವಿದ್ಯಾರ್ಥಿಯಾಗಿದ್ದಾಗ ಅವರ ಬುದ್ಧಿಸಾಮರ್ಥ್ಯವನ್ನು ಹಲವರು ಕೊಂಡಾಡಿದ್ದಾರೆ. ಸಣ್ಣಂದಿನಲ್ಲಿಯೇ ಯಾವುದಾದರೂ ಒಂದು ಕೆಲಸವನ್ನು ಮಾಡುವುದರಲ್ಲಿ ಕೊನೆತನಕ ತುಂಬಾ ಉತ್ಸಾಹ. ಮುಂದೆ ಲೋಕವನ್ನೇ ಬೆರಗುಮಾಡಿದಂತಹ ವಾಗ್ಶಕ್ತಿಯು ಕುಡಿಯಾಗಿ ಆಗಲೇ ಅವರಲ್ಲಿ ಒಡಮೂಡಿತ್ತು. ಬಿ. ಎ. ಆದ ಮೇಲೆ ಸ್ವಲ್ಪ ಕಾಲ 'ಲಾ' ಅಭ್ಯಾಸ ಮಾಡಿದರು. ಅದರಿಂದೇನೂ ಅವರ ನೈಜಗುಣದ ಯೋಗ್ಯತೆಯನ್ನು ಕಂಡಂತೆ ಆಗಲಿಲ್ಲ. ಅದನ್ನು ಅಷ್ಟರಲ್ಲಿಯೇ ಮುಗಿಸಿ, 'ಡೆಕ್ಕನ್ ಎಡ್ಯುಕೇಶನ್ ಸೊಸೈಟಿ'ಯ ಆಜೀವ ಸದಸ್ಯರಾಗಿ ಕೂಡಿಕೊಂಡರು. ಅದರ ಆಶ್ರಯದಲ್ಲಿ ನಡೆಯುತ್ತಿದ್ದ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡು, ಇಪ್ಪತ್ತು ವರ್ಷ ಕಾಲ ಬಹಳ ಅಲ್ಪ ವೇತನದಿಂದಲೇ ದಿನ ಕಳೆದರು. ಅವರ ಈ ಸಮಯದಲ್ಲಿ ತನ್ನ ನಾಡಿನ ಮಕ್ಕಳಿಗಾಗಿ ತುಂಬಾ ದುಡಿದು ಒಳ್ಳೆಯ ಕೆಲಸವನ್ನೇ ಸಾಧಿಸಿದರು. ಮಕ್ಕಳನ್ನು ಆಗಾಗ ಹುರಿದುಂಬಿಸಿ ರಾಷ್ಟ್ರಪ್ರೇಮ, ಸ್ವಾರ್ಥತ್ಯಾಗ ಮೊದಲಾದುವುಗಳ ಕುರಿತು ಹೇಳುತ್ತ, ಅವರನ್ನು ಉತ್ತಮ ಜನಾಂಗದ ವೀರಪಟುಗಳನ್ನಾಗಿ ಮಾಡಿದರು.

ಇದೇ ಸಮಯಕ್ಕೆ ಅವರ ಪೂಜ್ಯ ಗುರುಗಳಾದ ರಾನಡೆಯವರ ಸ್ಫೂರ್ತಿದಾಯಕವಾದ ಜತೆಯೂ ಕೂಡಿತು. ಅವರ ಉತ್ಸಾಹೀ ಮುಂದಾಳುತನದಿಂದ ಆ ಸಂಘವು ಅಭಿವೃದ್ಧಿಹೊಂದುತ್ತ ಬರುತ್ತಿತ್ತು. ಅವರೊಂದಿಗೆ ಕೂಡಿಕೊಂಡು ದೇಶಕಾರ್ಯದ ಹೆಚ್ಚಿನ ಸಂಗತಿಗಳನ್ನು ಕಲಿತುಕೊಂಡರು. ಆಗಲೇ ತಿಲಕರು, ಅಗರ್‌ಕರರು ಮೊದಲಾದವರ ವಿಶೇಷ ಪರಿಚಯವೂ ಉಂಟಾಯಿತು.

ಗೋಖಲೆಯವರಿಗೆ ಉಪಾಧ್ಯಾಯ ವೃತ್ತಿಯೇ ಮುಖ್ಯವಾಗಿರಲಿಲ್ಲ. ಅಲ್ಲಲ್ಲಿ ಭಾಷಣ ಮಾಡುತ್ತ ತುಂಬಾ ಹಣ ಸಂಗ್ರಹ ಮಾಡಿ ಸಂಘವನ್ನು ಉತ್ತಮ ಸ್ಥಿತಿಗೆಳೆದರು. ಬೊಂಬಾಯಿಯ ವಿಶ್ವವಿದ್ಯಾಲಯದ ಸದಸ್ಯರಾಗಿದ್ದು ವಿದ್ಯಾಭ್ಯಾಸದ ಕ್ರಮದಲ್ಲಿ ಹೆಚ್ಚು ಕಡಿಮೆ ತುಂಬಾ ಸುಧಾರಣೆಯನ್ನು ತಂದರು. "ಸಾರ್ವಜನಿಕ ಸಭೆ"ಯೆಂಬ ತ್ರೈಮಾಸಿಕ ಪತ್ರಿಕೆಯೊಂದನ್ನು ಸಂಪಾದಿಸುತ್ತ ಜನರ ಕಾರ್ಯಕಲಾಪಗಳನ್ನು ತಿದ್ದುವುದು ಅವರ ದಿನದಿನದ ಕೆಲಸವಾಗಿತ್ತು. ಬೇಕುಬೇಕಾದ ವಿಷಯಗಳ ನಿರೂಪಣೆ, ಜನತೆಯ ಜೀವನಕ್ಕೆ ಸಂಬಂಧಪಟ್ಟ ಬೇರೆ ಅನೇಕ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳು ಮೊದಲಾದುವುಗಳಿಂದ ಜನರ ಪ್ರೀತಿ ಗೌರವಗಳನ್ನು ಸಂಪಾದಿಸುತ್ತಾ, ತನ್ನ ಕಾರ್ಯಗಳಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದರು. ಆ ಮೇಲೆ "ಸುಧಾರಕ" ಎಂಬ ಇನ್ನೊಂದು ಪತ್ರಿಕೆಯನ್ನೂ ಸಂಪಾದಿಸಿದರು.

ಅವರ ಮೂವತ್ತೊಂದನೇ ವಯಸ್ಸಿನಲ್ಲಿ ಹಿಂದೂದೇಶದ ಆರ್ಥಿಕ ಸ್ಥಿತಿಗತಿಗಳನ್ನೂ ಜನರ ಸಂಕಷ್ಟಗಳನ್ನೂ ಸಾರ್ವಭೌಮ ಸರಕಾರದ ಅವಗಾಹನೆಗೆ ತರುವ ಬಗ್ಗೆ ಇಂಗ್ಲಾಂಡಿಗೆ ಪಯಣ ಬೆಳೆಸಿದರು. ಮೂವತ್ತನಾಲ್ಕನೆಯ ವಯಸ್ಸಿನಲ್ಲಿ ಬೊಂಬಾಯಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರಾದರು. ಇನ್ನೆರಡು ವರುಷದ ಅನಂತರ ವರಿಷ್ಠ ಸಭಾಸದಸ್ಯರಾದರು. ತನ್ನ ಅಸಾಧಾರಣ ಬುದ್ಧಿಕೌಶಲದಿಂದ ಎಲ್ಲೆಡೆಗಳಲ್ಲಿಯೂ ಅವರು ಹಿಡಿದ ಕೆಲಸ ಕೈಗೂಡುವಂತಾಯಿತು. ಹೀಗೆ ಅವರ ಜೀವನದಲ್ಲಿ ಜಸೆಯ ತುಣುಕೆಲ್ಲ ಬಹುದೂರದ ತಾರಕೆಯಾಗಿರದೆ ಅತಿ ಸುಲಭದ ಪ್ರದೀಪದಂತಿತ್ತು.

ಅಷ್ಟರಲ್ಲಿಯೇ ತಿಲಕರು, ಅಗರ್‌ಕರ್‌ರವರ ವಿಶೇಷ ಪ್ರೋತ್ಸಾಹದಿಂದ ದೇಶಸೇವೆಯ ಉದಾತ್ತಭಾವನೆಯು ಹುಟ್ಟಿತು. ತನ್ನ ಹುಟ್ಟುನಾಡಿನ ಪ್ರೀತಿಗೌರವಗಳು, ಮಹಾರಾಷ್ಟ್ರ ಬಲವು, ಅಂದು ಪೇಶ್ವೆಯರೊಂದಿಗೆ ಕೊನೆಗಂಡಿತಾದರೂ, ಆ ವೀರ, ಉದಾತ್ತ ಸ್ವದೇಶಪ್ರೇಮ ಮತ್ತೆ ಅವರಲ್ಲಿ ತುಂಬಾ ಪರಿಣಾಮವನ್ನುಂಟುಮಾಡಿದವು. ಕಡೆಗೆ, ಅದೊಂದು ದಿನ, ಶಾಲೆಯ ಉಪಾಧ್ಯಾಯ ವೃತ್ತಿಯನ್ನು ಬಿಟ್ಟು ಸಾರ್ವಜನಿಕರೊಡನೆ ಕೂಡುವಾಗ, ಅದೊಂದು ಸೌಜನ್ಯ, ಸದ್ವಿನಯಗಳಿಂದ ತನ್ನ ಸಂಗಡ ಆ ವೃತ್ತಿಯನ್ನು ಸಾಗಿಸಿದವರೊಡನೆ ಬಹಳ ನಮ್ರತೆಯನ್ನು ತೋರಿ ಹೊರಬರುವಾಗ ಅವರ ಎದೆಯು ಭಾರವಾಗಿ ತೋರಿತು. "ಸಾರ್ವಜನಿಕ ಜೀವನವು ಸುಲಭಸಾಧ್ಯವೆಂದರಿತರೂ ಕೂಡ ಅಲ್ಲಲ್ಲಿ ಎಷ್ಟೋ ಎಡರುತೊಡರುಗಳಿಂದ ಪಾರಾಗಿ ಅದರಿಂದ ಸಫಲತೆಯನ್ನು ಹೊಂದಬೇಕು. ಕೆಲಸ ಮಾಡುವುದಿದ್ದರೆ ತುಂಬಾ ಉಂಟು; ಆದರೆ ಅದನ್ನೆಲ್ಲ ಹೇಗೆ ಮಾಡಬಹುದೆಂದು ತಿಳಿಯದ ಮಾತು. ಅಂಥ ಶ್ರದ್ಧೆಯುಳ್ಳವರು ಕೆಡದ ಮನಸ್ಸಿನಲ್ಲಿ, ಕುಸುರದ ಬುದ್ಧಿಯಲ್ಲಿ, ಮುಂದಿರಬೇಕು. ಒಂದೆರಡು ತೊಂದರೆಗಳಿಗೆ ಹಿಂಗಬಾರದು—ಮತ್ತೂ ವಿಶ್ವಾಸವೆಂಬುದೊಂದನ್ನು ಕಾಯ್ದುಕೊಂಡಿರಬೇಕು. ಅದರಲ್ಲಿ ತೃಪ್ತಿಯುಂಟಾದರೆ ಅವನು ಖಂಡಿತವಾಗಿಯೂ ಕೃತಕೃತ್ಯನಾಗುವನು! ಎಂದವರು ಹೇಳುತ್ತಿದ್ದರು. ಅವರು ಸಾರ್ವಜನಿಕ ಜೀವನದಲ್ಲಿ ತುಂಬಾ ಮಾತುಗಳನ್ನು ಕೇಳಬೇಕಾಗಿ ಬಂತು. ಆದರೆ ಅದೊಂದು ನಿಶ್ಚಲ ಶಕ್ತಿಯಿಂದ ಅವೆಲ್ಲವುಗಳನ್ನು ಎದುರಿಸುತ್ತಾ, ಮಾಡಬೇಕಾದುದನ್ನು ನಿರ್ವಹಿಸುತ್ತ ಬಂದರು.

ಅವರು ನಮ್ಮ ನಾಡಿಗಾಗಿ ಮಾಡಿದ ಹೆಚ್ಚಿನ ಕೆಲಸಗಳಲ್ಲಿ ಧರ್ಮಾರ್ಥ ಕಡ್ಡಾಯದ ಪ್ರಾಥಮಿಕ ವಿದ್ಯಾಭ್ಯಾಸ; ಪಾಶ್ಚಿಮಾತ್ಯ ಪದ್ಧತಿಗನುಸಾರವಾಗಿ ವಿಶ್ವವಿದ್ಯಾಲಯಗಳ ನಿರ್ಮಾಣ; ಆರ್ಥಿಕ ಸ್ಥಿತಿಗತಿಗಳ ಲೆಕ್ಕಾಚಾರ (budget)ಗಳಲ್ಲಿ ಜನರ ಆರ್ಥಿಕ ದುಃಸ್ಥಿತಿಗಳನ್ನು ಕಡಮೆಮಾಡುವುದು. ಕ್ರಮವಾಗಿ ಸ್ವರಾಜ್ಯ ಸಂಸ್ಥಾಪನೆ, ಪ್ರಾಂತಿಕ ಸರಕಾರಗಳಲ್ಲಿ ಸರ್ವಜನಸಮುದಾಯದಿಂದ ಆರಿಸಲ್ಪಟ್ಟ ಸದಸ್ಯರಿಗೆ ಸ್ಥಾನಮಾನಗಳು, ಆಫ್ರಿಕದ ಹಿಂದೀಯರ ಸ್ಥಿತಿಗಳ ಪರ್ಯಾಲೋಚನೆ—ಇವುಗಳಿಗಾಗಿ ತುಂಬಾ ಸಾಹಸ ಮಾಡಿದ್ದಾರೆ. ಅಲ್ಲಲ್ಲಿ ಭಾಷಣಗಳಿಂದ ಜನತೆಯಲ್ಲೊಂದು ಹೊಸ ಹುರುಪು ಹುಟ್ಟಿಸಿ ತಮ್ಮವರ ಹಿತಕ್ಕೆ ದುಡಿದಿದ್ದಾರೆ. ಅವರ ಮಾತಿನ ಪ್ರತಿಯೊಂದು ಶಬ್ದವೂ ಎಲ್ಲರಲ್ಲಿಯೂ ಒಂದು ಹೊಸ ಚೈತನ್ಯವನ್ನು ತುಂಬುತಿತ್ತು. ಅದೊಂದು ಸೊಬಗು ವಿನಯ, ಬುದ್ಧಿಚಾತುರ್ಯ ಇನ್ನೂ ಯಾರೂ ಈ ವರೆಗೆ ಸಂಪಾದಿಸದಂತಹ ವಾಗ್ಶಕ್ತಿ, ಅವುಗಳಲ್ಲೊಂದು ಸಾಹಸದ ಮೆರುಗಿತ್ತು. ಅವರು ಮಾಡಿದ ಇನ್ನೊಂದು ಕೆಲಸವೆಂದರೆ 'ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿ'ಯನ್ನು ಸಂಘಟಿಸಿದರು. ಇದರಲ್ಲಿ ಬಡವ—ಬಲ್ಲಿದರೆಂದೆಲ್ಲರೂ ಕೂಡಿ ವಿದ್ಯಾವಂತರಾದ ಗಂಡಸುಹೆಂಗಸರೆನ್ನದೆ ಮುಂಬರುತ್ತ ಜನತೆಯ ಸೇವೆಮಾಡಲು ದಾರಿ ಹಾಕಿಕೊಟ್ಟರು.

ಅವರ ದೇಶ, ದೇಶದ ಜನರು; ಜನರ ಸುಖದುಃಖಗಳಿಗಾಗಿ ಅವರೆದೆಯು ತುಂಬಾ ಹಿಗ್ಗಿ ಕುಗ್ಗುತಿತ್ತು. ಈ ನಾಡಿನ ಮುಂದಿನ ಜೀವನವನ್ನು ಕನಸು ಕಾಣುತ್ತ ತನ್ನ ಕಡೆಯ ದಿನದ ವರೆಗೂ ದೇಶಸೇವೆಯಲ್ಲಿಯೇ ನಿರತರಾಗಿ ಎಷ್ಟೋ ಕಷ್ಟದ ದಿನಗಳನ್ನು ಕಂಡು, ಕಳೆದು, ತನ್ನ ಕರ್ತವ್ಯದ ಮಾತು ಮುಗಿದರೂ ಮುಗಿಯದೆ, ನೆನೆದ ಕನಸು ನನಸಾಗದೆ ತನ್ನ [illegible]ನೇ ವಯಸ್ಸಿನಲ್ಲಿ ನಮ್ಮ ನಾಡಿಗೆ ಈ ದೇಶದ ಭವಿಷ್ಯತ್ತನ್ನು ಬಿಟ್ಟು ತಾನು ಎಲ್ಲಿಯೋ ಅದೃಶ್ಯರಾಗಿ ಮತ್ತೊಂದು ಜ್ಯೋತಿಯೊಡನೆ ಲೀನವಾದರು. ಅವರ ಆ ಬೆಳಕು ಈಗಲೂ ಹರಿಯುತ್ತಲಿದೆ; ಅವರ ನೆನಪು ಒಂದೇ ಸಾಕು, ನಮಗೆ ದಾರಿತೋರಲಿಕ್ಕೆ? ನಾವು ಮುಂದುವರಿಯಲಿಕ್ಕೆ.

—ನೀಲರಕ್ಷ

★ ಸಿನೆಮಾ ಪುಟ ★

ದೇವಿಕಾರಾಣಿ ತಿರಿಗಿ ಸಿನೆಮಾ ಪಾತ್ರದಲ್ಲಿ?

ಶ್ರೀ ಅಬ್ಬಾಸ್ ಬರೆದ "ನಯಾ ಸಂಸಾರ್" ಎಂಬ ಕಥೆಯ ಚಿತ್ರವನ್ನು ಬೊಂಬಾಯಿ ಟಾಕೀಸಿನವರು ಬೇಗನೇ ರಚಿಸಲಿರುವರೆಂದು ತಿಳಿದಿದೆ. ಈ ಚಿತ್ರದ ಕಥಾ ವಿವರವು ಅದರ ಮಾಲಿಕಳಾದ ಶ್ರೀ ದೇವಿಕಾರಾಣಿಗೆ ಹುರುಪು ಹುಟ್ಟಿಸಿದೆಯಂತೆ. ಆಕೆ ಆ ಸಿನೆಮಾದಲ್ಲಿ ನಟಿಸಲು ಮನಸ್ಸು ಮಾಡುತ್ತಿರುವಳೆಂದು ಮುಂಬಯಿಯಲ್ಲಿ ದಟ್ಟ ಸುದ್ದಿ ಹರಡಿದೆ.

ರೂಪರಾಣಿ ನಾಸೀಮ್

ಸಿನೆಮಾ ಲೋಕದಲ್ಲಿ ರೂಪರಾಣಿಯೆನಿಸಿದ ನಾಸೀಮ್ ಬಾನಳು ಇದುವರೆಗೆ ಮಿನೆರ್ವಾ ಮುವಿಟೋನಿನಲ್ಲಿ ಇದ್ದಳಷ್ಟೆ? ಈಗ ಆಕೆ ಸಿರ್ಕೋ ಪ್ರೊಡಕ್ಷನಿಗೆ ಸೇರಿರುವಳು. ಎರಡು ವರ್ಷಗಳ ಕರಾರು ಆಗಿದೆಯಂತೆ.

ಶಾಂತಾ ಹುಬ್ಳೀಕರ್— ಪ್ರಭಾತ ಬಿಟ್ಟಳು

ಪ್ರಭಾತದ ನಿರ್ದೇಶಕ ಶಾಂತಾರಾಮರು ಹಲವು ಪ್ರಸಿದ್ಧ ನಟನಟಿಯರನ್ನು ಸಿನೆಮಾ ಲೋಕಕ್ಕೆ ಒದಗಿಸಿ ಕೊಟ್ಟವರು. ಅವರಲ್ಲಿ ತಯಾರಾದ ನಟನಟಿಯರು ಉತ್ತಮ ತರಗತಿಯವರೆಂದೇ ಹೆಸರು ಪಡೆಯುತ್ತಾರೆ. ಆದರೆ, ಏನು ಅದೃಷ್ಟವೋ ಗೊತ್ತಿಲ್ಲ; ಅವರೊಡನೆ ಕಲಹ ಮಾಡಿ ಎಲ್ಲರೂ ಪ್ರಭಾತದಲ್ಲಿಂದ ಬಿಟ್ಟುಹೋಗುವುದೇ. ಶಾಂತಾ ಆಪ್ಟೆ, ಕುಮಾರಿ ವಾಸಂತಿ ಮೊದಲೇ ಹೊರಟಿದ್ದಾಳೆ. ಈಗ ಶಾಂತಾ ಹುಬ್ಳೀಕರಳೂ ಅವರನ್ನು ಬಿಟ್ಟು ಹೋದಿರುವಳೆಂದು ತಿಳಿದುಬಂದಿದೆ. ಆಕೆ ಬೊಂಬಾಯಿಯ "ತರುಣ ಪಿಕ್ಚರ್ಸ್"ನ್ನು ಸೇರಿರುವಳೆಂದೂ ತಿಳಿದಿದೆ; ಮಾತ್ರವಲ್ಲದೆ ಅವರ ಮುಂದಿನ 'ಪ್ರಭಾತ'ವೆಂಬ ಚಿತ್ರದಲ್ಲಿ ಅಭಿನಯಿಸುವಳಂತೆ. ಶಾಂತಾ ಹುಬ್ಳೀಕರ್ 'ಆದ್ಮಿ' ಚಿತ್ರದಲ್ಲಿ ಅತ್ಯುಜ್ವಲವಾಗಿ ನಟಿಸಿ ಪ್ರಸಿದ್ಧಿಗೆ ಬಂದವಳು; ಈಕೆ ಕನ್ನಡಿತಿ.

'ಸಂತ ವಿಧುರ'ದಲ್ಲಿ— ಪಗ್ನೀಸರು

ಸಂತರ, ಭಕ್ತರ ಪಾತ್ರಗಳನ್ನು ನಟಿಸಿ ಭಕ್ತಿಯನ್ನು ಉದ್ರೇಕಿಸುವುದರಲ್ಲಿ ಅತ್ಯಂತ ಪ್ರಸಿದ್ಧಿಗೆ ಬಂದ ಶ್ರೀ ವಿಷ್ಣುಪಂತ ಪಗ್ನೀಸರು ಈಗ ತಿರಿಗಿ, ಸಿರ್ಕೋ ಪ್ರೊಡಕ್ಷನಿನವರು ತಯಾರಿಸುವ 'ಸಂತ ವಿಧುರ' ಚಿತ್ರದಲ್ಲಿ ಅಭಿನಯಿಸುವರೆಂದು ತಿಳಿದಿದೆ;

ಸರ್ವೋತ್ತಮ ಬಾದಾಮಿ

ಪ್ರಸಿದ್ಧ ನಿರ್ದೇಶಕರಾದ ಕನ್ನಡಿಗ ಸರ್ವೋತ್ತಮ ಬಾದಾಮಿಯವರು ರಜಾ ಕಾಲವನ್ನು ತೀರಿಸಿಕೊಂಡು ತಿರಿಗಿ ರಣಜಿತ್ ಚಿತ್ರ ಕಂಪೆನಿಗೆ ಬಂದಿರುವರು. 'ಬೊಂಬಯಿಯಲ್ಲಿ ರಜಾ ದಿನಗಳು' ಎಂಬ ಚಿತ್ರವನ್ನು ಮುಂದೆ ತಯಾರಿಸುವರಂತೆ. ಇದರಲ್ಲಿ ಸಬಿತಾದೇವಿ ನಟಿಸುವಳೆಂದೂ ತಿಳಿದಿದೆ.

ಜಗತ್ತಿನಲ್ಲಿಯೇ ಮೊದಲನೆಯ ನಿರ್ದೇಶಕಳು

ಲೀಲಾ ಚಿಟ್ನಿಸಳ ಸಾಹಸ

ಲೀಲಾ ಚಿಟ್ನಿಸಳು ಸ್ಥಾಪಿಸಿದ ಚಿತ್ರ ಪಿಕ್ಚರ್ಸಿನಿಂದ ನಿರ್ದೇಶಕ ಮೋಹನ ಭವ್ನಾನಿಯು ರಾಜಿನಾಮೆ ಕೊಟ್ಟಕಾರಣ ಈಗ, ಶ್ರೀಮತಿ ಲೀಲಾ ಚಿಟ್ನಿಸಳೇ ನಿರ್ದೇಶಕಳಾಗಿ ಕೆಲಸಮಾಡಲು ಮುಂದೆ ಬಂದಿರುವಳೆಂದು ಸುದ್ದಿ. ಜಗತ್ತಿನಲ್ಲಿಯೇ ಈಕೆ ಮೊದಲನೆಯ ಸಿನೆಮಾ ನಿರ್ದೇಶಕಳು. ಬೊಂಬಾಯಿ ಟಾಕೀಸಿನ ದೇವಿಕಾರಾಣಿಯು ಮೊದಲನೆಯ ಚಿತ್ರ ನಿರ್ಮಾಪಕಳಾಗಿರುವಳು. ಭಾರತದಸ್ತ್ರೀಯರು ಪಾಶ್ಚಾತ್ಯ ಸ್ತ್ರೀಯರನ್ನು ಹಲವು ಕಾರ್ಯಗಳಲ್ಲಿ ಮೆಟ್ಟಿ ಮುಂದೆ ನಿಲ್ಲುವಂತಹ ಸಾಹಸಕೃತಗಳಿಗೆ ಇದು ಸಾಕ್ಷಿಯಾಗಿದೆ

ವಾಡಿಯಾ ಮುವಿಟೋನ್

ರಾಜನರ್ತಕಿ—ತ್ರಿಭಾಷಾ ಚಿತ್ರ.

ಭಾರತದ ಮೊದಲನೆಯ ತ್ರಿಭಾಷಾ ಚಿತ್ರ 'ರಾಜನರ್ತಕಿ'ಯು ವಾಡಿಯಾ ಮುವಿಟೋನಿನಲ್ಲಿ ರಚಿತವಾಗುತ್ತಿದೆ. ಬಂಗಾಳಿ, ಹಿಂದಿ, ಇಂಗ್ಲಿಷ್ ಈ ಮೂರು ಭಾಷೆಗಳಲ್ಲಿ ಚಿತ್ರ ಪ್ರಸಿದ್ಧವಾಗುವುದು. ಬೊಂಬಾಯಿಯ ಜನತೆಯು ಬಹಳ ಆಸಕ್ತಿಯಿಂದ ಇದರ ರಚನೆಯನ್ನು ನಿರೀಕ್ಷಿಸುತ್ತಿದೆ. 'ರಾಜನರ್ತಕಿ'ಯ ಶೂಟಿಂಗ್ ನೋಡಲು ಇನ್ನೂರು ಸಕುಟುಂಬಿಕರು ಸ್ಟುಡಿಯೋಕ್ಕೆ ದರ್ಶನ ಕೊಟ್ಟಿದ್ದರು. ಸಾಧನಾ ಬೋಸಳ ರಾಧಾಕೃಷ್ಣ ನರ್ತನವು ಚೆನ್ನಾಗಿ ಕಲಾವಂತರನ್ನು ಆಕರ್ಷಿಸುವಂತಿದೆ.

ನ್ಯೂ ಥಿಯೇಟರ್ಸ್

ನರ್ತಕಿ

ಈ ಚಿತ್ರವು ದೇವಕಿ ಬೋಸರ ನಿರ್ದೇಶಕತ್ವದಿಂದ ಈಗ ಪೂರ್ಣ ಸಿದ್ಧತೆಯನ್ನು ಹೊಂದಿದೆ. ಬೇಗನೇ ಪ್ರದರ್ಶಿತವಾಗಲು ಏರ್ಪಾಡಾಗುವುದೆಂದು ತಿಳಿದಿದೆ

ಲಂಗನ್ ಮತ್ತು ಪರಿಚಯ

ಲಂಗನ್ (ಹಿಂದುಸ್ಥಾನಿ) ಮತ್ತು ಪರಿಚಯ (ಬಂಗಾಳಿ) ಈ ಚಿತ್ರವು ನಿತಿನ್ ಬೋಸರ ನಿರ್ದೇಶಕತ್ವದಿಂದ ಬೇಗನೇ ಪೂರ್ಣತೆಹೊಂದುವುದು. ಸೈಗಲ್ ಮತ್ತು ಕಾನನ್ ಇವರು ಇದರಲ್ಲಿ ಮುಖ್ಯ ಪಾತ್ರಗಳನ್ನು ಅಭಿನಯಿಸುವರು. ಬಂಗಾಳಿ ಭಾಷಾಂತರಕ್ಕೆ ಡಾ. ರವೀಂದ್ರನಾಥ ಠಾಗೂರರ ಕೆಲವು ಬಂಗಾಳೀ ಪದ್ಯಗಳನ್ನು ಅವರು ಆಯ್ದು ಕೊಟ್ಟಿರುವರೆಂದು ತಿಳಿದಿದೆ. ನವಾಬ್, ನೇಮು, ರತಿನ್ ಮತ್ತು ಹಲವು ಪ್ರಸಿದ್ಧ ನಟನಟಿಯರು ಇದರಲ್ಲಿ ನಟಿಸುವರು.

ನೇಶನಲ್ ಸ್ಟುಡಿಯೋಸ್

ಪುರುಷ

'ಸ್ತ್ರೀ' ಚಿತ್ರವಾದ ಮೇಲೆ, ನೇಶನಲ್ ಸ್ಟುಡಿಯೋದವರು 'ಪುರುಷ' ಚಿತ್ರವನ್ನು ತಯಾರಿಸುತ್ತಿದ್ದಾರೆ. ಶೇಖ್ ಮುಖ್ತಾರ್ ಇದರಲ್ಲಿ ಮುಖ್ಯ ಪಾತ್ರವಹಿಸುವನು.

ಹುಣ್ಣುಗಳನ್ನು ತೀವ್ರವಾಗಿ ನಾಶಪಡಿಸಿರಿ

ಅತ್ಯಂತ ಬೇನೆಯ ಹುಣ್ಣು ಮತ್ತು ಚರ್ಮದ ನ್ಯೂನತೆಗಳನ್ನು ತಕ್ಕುದಾದ ಸುಲಭ ರೀತಿಯಲ್ಲಿ ನಾಶಮಾಡಿರಿ. ಕುರು ಯಾ ಹುಣ್ಣನ್ನು ಬಿಸಿನೀರು ಮತ್ತು ಕುಟಿಕೂರಾ ಸಾಬೂನಿನಿಂದ (cuticura soap) ಚೆನ್ನಾಗಿ ತೊಳೆಯಿರಿ. ನಂತರ ಕುಟಿಕೂರಾ ಮುಲಾಮನ್ನು (cuticura ointment) ಚೆನ್ನಾಗಿ ಅದರ ಮೇಲೆ ಸವರಿ ಬಿಡಿರಿ. ಇದು ಕುರುಹುಣ್ಣು, ಮುದ್ದಣ, ಕಾಲು ಕುಂಟು ಮುಂತಾದ ಭಯಂಕರ ವ್ರಣಗಳಿಗೂ ಗುಣಕಾರಿಯಾದ ಚಿಕಿತ್ಸೆಯಾಗಿದೆ. ಕುಟಿಕೂರಾ ಮುಲಾಮು (cuticura ointment) ಚರ್ಮವ್ಯಾಧಿಯ ಮೂಲವನ್ನೇ ಹೊಕ್ಕು ತೀವ್ರವಾಗಿ ನೋವನ್ನೂ ಬಾತುವಿಕೆಯನ್ನೂ ಗುಣಮಾಡುತ್ತದೆ.

ಕುಟಿಕೂರಾ ಮುಲಾಮು (cuticura ointment) ನೆರುವು ಯಾವ ಕ್ರಿಮಿಗಳು ತಡೆಯವು. ಅದುದರಿಂದ ಕೊಳೆತು ವಿಷಕಾರಿಯಾಗಿ ಪರಿಣಮಿಸದಂತೆ ಇದು ಖಂಡಿತ ರಕ್ಷಿಸುವುದು. ರಕ್ಷಣೆಯ ಸಲುವಾಗಿ ಒಂದು ಟಿನ್ನು (cuticura) ಮುಲಾಮನ್ನು ಇಟ್ಟುಕೊಳ್ಳಿರಿ. ಕುಟಿಕೂರಾವು (cuticura) ಇತರ ಔಷಧಗಳಿಂದ ಗುಣಪಡಿಸಲಾಗದಂಥ ಚರ್ಮವ್ಯಾಧಿಗಳನ್ನು ನಾಶಪಡಿಸುವುದು ಒಂದು ವರ್ಷಕಾಲದಿಂದಿರುವ ಚರ್ಮವ್ಯಾಧಿಯನ್ನು ಒಂದೇ ಟಿನ್ನು ಮುಲಾಮು ಗುಣಪಡಿಸುವುದು.

~~ಕುಟಿಕೂರಾ ಮುಲಾಮನ್ನು (cuticura ointment)~~ ಗಜ್ಜಿ, ಕುರು, ವ್ರಣ, ಹುಣ್ಣು, ಮುದ್ದಣ, ವಿಷಕಾರಿಗಾಯ, ಉರಿ ಮುಂತಾದ ಎಲ್ಲಾ ಚರ್ಮಛಿದ್ರಗಳನ್ನೂ ಗುಣಪಡಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮ್
Cuticura Ointment

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
[illegible] to [illegible] ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

THE PIE-MONEY BANK LTD.,
Maidan Road, MANGALORE.
Undertakes all kinds of Banking Business, Current account at 2½% per annum, Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.
Apply for particulars—
K. R. GURU, *Managing Director.*

ಕರ್ನಾಟಕ
ಕನ್ನಡ ಬಾಂಧವರಲ್ಲಿ ಬಿನ್ನಹ

... ವಿಸಂಬರ ... ನೆಯ ... ಗಳಲ್ಲಿ ಧಾರವಾಡದಲ್ಲಿ ನಡೆಯಲಿದೆಯಷ್ಟೆ! ಅದಕ್ಕಾಗಿ ಈವೆಲ್ಲರೂ ಆಗಮಿಸಿ ಸಾಹಿತ್ಯದ ಈ ಮಹೋತ್ಸವವನ್ನು ಅತ್ಯಂತ ಯಶಸ್ವಿಯನ್ನಾಗಿ ಮಾಡಬೇಕೆಂದು ಬಿನ್ನಹ. ಇದೇ ಕಾಲಕ್ಕೆ ಹಂಪೆಯಷ್ಟು ತುಂಬಿದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣಮಹೋತ್ಸವವೂ ಅತ್ಯಂತ ವಿಜೃಂಭಣೆಯಿಂದ ನೆರವೇರಲಿಕ್ಕಿದ್ದಿದೆ. ಈ ಉತ್ಸವಗಳ ಉದ್ಘಾಟನೆಗಾಗಿ ಕನ್ನಡ ನಾಡಿನಲ್ಲಿ ಹೆಸರುವೆತ್ತ ಮಹದ್ವ್ಯಕ್ತಿಗಳನ್ನು ಬಿನ್ನವಿಸಿಕೊಳ್ಳಲಾಗಿದೆ. ಕಾರಣ ಈ ಸುವರ್ಣ ಸಂಧಿಯ ಸಂಗಮದಲ್ಲಿ ತಾವೆಲ್ಲರೂ ಬಂದು, ಆನಂದಿಸಿ ತಾಯ್ನಾಡಿನ ಸೇವೆಯನ್ನು ಸಲ್ಲಿಸದಿರಲಾರಿರೆಂದು ನಾವು ನಂಬಿರುವೆವು.

ಸಾಹಿತ್ಯ ಸಮ್ಮೇಳನದ ಕಾರ್ಯವು ಭರದಿಂದ ಸಾಗಿದೆ. ಈಗಾಗಲೇ ಧಾರವಾಡ ಜಿಲ್ಲೆಯ ಎಲ್ಲ ತಾಲೂಕು ಸ್ಥಳಗಳಿಂದಲೂ ೧೫೦ ಜನರು ಸ್ವಾಗತ ಸಮಿತಿಯ ಸದಸ್ಯರಾಗಿದ್ದಾರಲ್ಲದೆ ಇನ್ನೂ ಅನೇಕಾನೇಕರು ಸದಸ್ಯರಾಗಲೊಪ್ಪಿದ್ದಾರೆ. ಹೀಗಾಗಿ ಕಾರ್ಯಕರ್ತರು ಹುರಿದುಂಬಿ ಕಾರ್ಯಾಸಕ್ತರಾಗಿದ್ದಾರೆ.

ಸಮ್ಮೇಲನಕ್ಕಾಗಿ ಬರುವಂಥ ಅತಿಥಿಗಳ ವಸತಿಗಾಗಿ ಇಲ್ಲಿಯ ಕರ್ನಾಟಕ ಹೈಸ್ಕೂಲ್, ಆರ್. ಎಲ್. ಎಸ್. ಹೈಸ್ಕೂಲ ಮತ್ತು ನೆರಸಂಗಿ ಹಾಸ್ಟೆಲ್ ಬಾಸೆಲ್ ಮಿಶನ್ ಹಾಯ್‌ಸ್ಕೂಲ್ ಮೊದಲಾದ ಸ್ಥಳಗಳನ್ನು ಗೊತ್ತುಮಾಡಲಾಗಿದೆ.

ಸಮ್ಮೇಲನದ ಮಂಡಪವನ್ನು ನಿಲ್ಲಿಸಲು 'ಕಡಪಾಬೈಲ' ಎಂದು ಕರೆಯಲಾದ ಊರ ಮಧ್ಯದಲ್ಲಿರುವ ಬೈಲನ್ನು ದೊರಕಿಸಿಕೊಂಡು ಈಗಾಗಲೇ ಮಂಡಪವನ್ನು ಹಾಕುವ ಕೆಲಸ ಪ್ರಾರಂಭವಾಗಿರುತ್ತದೆ. ಸುಮಾರು ೩೦೦೦ ಸಭಾಸದರು ಆರಾಮಾಗಿ ಕುಳಿತುಕೊಳ್ಳುವಷ್ಟು ಸ್ಥಳವು ವಿಸ್ತಾರವಾಗಿದೆ.

ಮನರಂಜನೆಯ ಕಾರ್ಯಕ್ರಮಗಳನ್ನು ಜರುಗಿಸಲು ನಗರಭವನದ ಆಟ್ಟ, ದರ್ಬಾರ್ ಹಾಲ್, ಟೌನ್‌ಹಾಲ್, ಅಂಜುಮಾನ್ ಹಾಲ್ ಮೊದಲಾದುವುಗಳನ್ನು ಕೇಳಿಕೊಳ್ಳಲಾಗಿದೆ. ನಾಟಕಗಳನ್ನಾಡಲು ನಾಸೇಟೆಸ್ನೂರ ಜಮಖಂಡಿ ಬಾಗಲಕೋಟೆ ಮೊದಲಾದ ಸ್ಥಳಗಳಿಂದ ಒತ್ತಾಯದ ಬೇಡಿಕೆಗಳು ಬಂದಿವೆ, ಗೊಂಬೆಯಾಟ ಯಕ್ಷಗಾನ, ಸಂಗೀತ, ಏಕಾಂಕನಾಟಕ, ಏಕಪಾತ್ರಾಭಿನಯ ನರ್ತನ ಮೊದಲಾದವುಗಳನ್ನು ಸ್ವಾಗತಸಮಿತಿಯ ನೇತೃತ್ವದಲ್ಲಿಯೇ ಏರ್ಪಡಿಸುವ ವಿಚಾರವಿದೆ, ಇಲ್ಲಿಯ ಆರ್ಟ ಸೋಸಾಯಿಟಿಯವರು ತಮ್ಮದೊಂದು ಕಲಾಪ್ರದರ್ಶನವನ್ನು ಮಾಡುತ್ತೇವೆಂದು ಕೇಳಿಕೊಂಡಿದ್ದಾರೆ. ಇದೂ ಒಂದು ಇಲ್ಲಿಗೆ ಬರುವವರಿಗೆ ಕಣ್ಣು ಹಬ್ಬವಾಗಿ ಪರಿಣಮಿಸುವದು.

ಸಾಹಿತ್ಯಗೋಷ್ಠಿಯ ಕಾರ್ಯಕ್ರಮಗಳು ಎಂದಿನಂತೆ ಸಾಗುವವಲ್ಲದೆ ಕನ್ನಡ ಸಾಹಿತ್ಯವು ಇನ್ನು ಮುಂದೆ ಯಾವ ಮಾರ್ಗದಿಂದ ನಡೆದರೆ ಸರ್ವಾಂಗಸುಂದರವಾದೀತೆಂಬ ಚರ್ಚೆಯ ವಿಷಯವನ್ನು ಹೆಚ್ಚಾಗಿ ಇಡಲಾಗಿದೆ.

ಮಹಿಳೆಯರ ಗೋಷ್ಠಿಯೂ ನೆರವೇರಲಿದೆ. ನವೆಂಬರ ೬ನೆಯ ತಾರೀಕಿಗೆ ಸಭೆಸೇರಿ ಸ್ವಾಗತ ಸಮಿತಿಯೊಂದನ್ನು ಗೊತ್ತುಪಡಿಸಲು ೨೪ನೆಯ ತಾರೀಕಿಗೆ ಸಭೆಯನ್ನಿಡಲಾಗಿದೆ. ಈ ಮಹಿಳೆಯರ ಗೋಷ್ಠಿಗೆ ಸದಸ್ಯೆಯರನ್ನು ಮಾಡಿಕೊಳ್ಳಲು ಶ್ರೀಮತಿ ಬೆಳಗಾವಕರ ಇವರು ಕಾರ್ಯಾಸಕ್ತರಾಗಿದ್ದಾರೆ.

ಸಾಹಿತ್ಯ ಸಮ್ಮೇಳನದ ಎಲ್ಲ ಕಾರ್ಯಕ್ರಮಗಳು ಯಥಾಸಾಂಗವಾಗಿ ನೆರವೇರಲು ಸುಮಾರಾಗಿ ೩೫೦೦೦ ರೂಪಾಯಿಗಳವಷ್ಟು ತಗಲುವವೆಂದು ನಿರೀಕ್ಷಿಸಲಾಗಿದೆ. ಕಾರಣ ಕನ್ನಡ ಸಾಹಿತ್ಯ ... ಹೃದಯದಿಂದ ... ಮಾಡಬೇಕೆಂದು ಬಿನ್ನಹ. ಅನೇಕ ಸಾರ್ವಜನಿಕ ಸಂಸ್ಥೆಗಳು ... ಮೊದಲಾದುವುಗಳು ... ಕೊಂಡಿವೆ. ಈಗಾಗಲೇ ಗದಗ ಮುನ್ಸಿಪಾಲಿಟಿಯವರು ೫೦೦ ರೂಪಾಯಿಗಳನ್ನು ಕೊಟ್ಟು ತಮ್ಮ ಸಹಾಯವನ್ನು ನೀಡಿದ್ದಾರೆ. ಇದರಂತೆ ಕರ್ನಾಟಕದಲ್ಲಿಯ ಸ್ಥಳೀಯ ಯಾವತ್ತೂ ಸಂಘ ಸಂಸ್ಥೆಗಳವರು ಮುಂದೆ ಬಂದು ತಮ್ಮ ತಮ್ಮ ಶಕ್ತ್ಯನುಸಾರ ಸಹಾಯಮಾಡಿ ಈ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಯನ್ನಾಗಿ ಮಾಡುವದರಲ್ಲಿ ತಾವೂ ಯಶೋಭಾಗಿಗಳಾಗುವರೆಂದು ದೃಢವಾಗಿ ನಂಬಿದ್ದೇವೆ.

ಹೊನ್ನಾಪುರಮಠ ಚಂದ್ರಶೇಖರಯ್ಯಾ
ಚಿಟಗೀರ ಕೃಷ್ಣಕರ್ಮಾರ
ಗೋವಿಂದ ಭಟ್ಕಳ

ಕನ್ನಡ ಮಹಿಳೆಯರಲ್ಲಿ ಬಿನ್ನಹ

೨೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಮಹಿಳಾಗೋಷ್ಠಿಯನ್ನು ನೆರವೇರಿಸತಕ್ಕದ್ದೆಂದು ಇಲ್ಲಿಯ ಪ್ರಮುಖ ಸ್ತ್ರೀಯರ ಸಭೆಯು ೬ನೆಯ ತಾರೀಕಿನ ದಿವಸ ಕೂಡಿತ್ತು. ಶ್ರೀಮತಿ ಮಣಿಮಠ ಇವರು ತಾತ್ಪೂರ್ತಿಕ ಕಾರ್ಯಾಧ್ಯಕ್ಷೆಯರಾಗಿಯೂ ಮತ್ತು ಶ್ರೀಮತಿ ಬೆಳಗಾಂವಕರ ಇವರು ತಾತ್ಪೂರ್ತಿಕ ಕಾರ್ಯದರ್ಶಿನಿಯರಾಗಿಯೂ ಕೆಲಸಮಾರಂಭಿಸಬೇಕೆಂದು ನಿರ್ಣಯವಾಗಿ ಇದೇ ೨೪ನೆಯ ತಾರೀಕಿಗೆ ಸ್ವಾಗತ ಸಮಿತಿಯ ಕೂಡಬೇಕೆನ್ನುವ ನಿರ್ಣಯವಾಯ್ತು.

ಸ್ವಾಗತ ಸಮಿತಿಯ ಸದಸ್ಯರಾಗಲು ಒಂದು ರೂಪಾಯಿಯನ್ನು ಇಡಲಾಗಿದೆ. ಕಾರಣ ಕನ್ನಡ ಮಹಿಳೆಯರೆಲ್ಲರೂ ಸ್ವಾಗತ ಸಮಿತಿಯ ಸದಸ್ಯರಾಗಿ ಈ ನಮ್ಮ ಮಹಿಳಾಗೋಷ್ಠಿಯನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ಬಿನ್ನಹ. ಸ್ವಾಗತ ಸಮಿತಿಯ ಸಭೆಯ ಅವಧಿಯು ತೀರ ಹತ್ತಿರ ಬರುವುದರಿಂದ ದಯವಿಟ್ಟು ಬೇಗನೇ ಸದಸ್ಯರಾಗಬೇಕೆಂದು ಬಿನ್ನಹ.

ಸೌ ಶ್ಯಾಮಲಾದೇವಿ,
ಕಾರ್ಯದರ್ಶಿನಿ
ಮ. ಗೋಷ್ಠಿ

ಆರೋಗ್ಯ ಸುಖವೇ

ವ್ಯಾಧಿಗಳಿಂದ ಬಿಡುಗಡೆಹೊಂದುವುದು!

ಅವರಿಗೆ ಮಾತ್ರ ಆರೋಗ್ಯದ ಪ್ರಥಮ ಸೂತ್ರದ ಪರಿಚಯವಿದೆ



ಅನುನಿತ್ಯ ಆಗಾಗ ಬರುವ ರೋಗಗಳು, ಮಲಿನವಾದ ಹೊಟ್ಟೆಯಿಂದಾಗಿರುತ್ತದೆ. ಹೊಟ್ಟೆಯನ್ನು ನಿರ್ಮಲವಾಗಿರಿಸಿರಿ; ಆಗ ಮಾತ್ರ ನೀವು ಎಲ್ಲಾ ರೋಗಗಳಿಂದ ಪಾರಾಗಿ ಉತ್ತಮವಾದ ಆರೋಗ್ಯದಿಂದ ಸುಖಹೊಂದಬಹುದು. ನಿಮ್ಮ ಕುಟುಂಬಕ್ಕೆ ಆರೋಗ್ಯದ ಈ ಪ್ರಥಮ ಸೂತ್ರವನ್ನು ಕಲಿಸಿರಿ—ಹೊಟ್ಟೆಯನ್ನು ನಿರ್ಮಲವಾಗಿರಿಸಲು ಪ್ರತಿಯೊಬ್ಬರೂ ಯಾವಾಗಲೂ ಒಂದು ಗ್ಲಾಸು ಉಕ್ಕಿ ಬರುವ ಎಂಡ್ರೂಸ್ ಲವಣವನ್ನು ಸೇವಿಸುತ್ತಿರುವರೋ ಎಂದು ನೋಡಿರಿ.

ಹೊಟ್ಟೆಯನ್ನು ನಿರ್ಮಲಗೊಳಿಸಲು ಎಂಡ್ರೂಸ್ ಲವಣದಷ್ಟು ಉತ್ಕೃಷ್ಟವಾದುದು ಬೇರಾವುದೂ ಇಲ್ಲ. ರೋಗವನ್ನು ತರಬಹುದಾದಂತ ಮಲಿನ ಪದಾರ್ಥಗಳೆಲ್ಲವನ್ನು ಇದು ಹೊರದೂಡುವುದು, ರಕ್ತವನ್ನು ಶಾಂತಗೊಳಿಸಿ ನಿರ್ಮಲವಾಗಿರಿಸುವುದು. ಚರ್ಮವನ್ನು ನಿಚ್ಚಳವಾಗಿರಿಸುವುದಲ್ಲದೆ ಇಡೀ ದೇಹಕ್ಕೆ ಇದು ಟಾನಿಕ್ ಎನಿಸಿದೆ.

ಉತ್ತಮ ಆರೋಗ್ಯ ಮತ್ತು ರೋಗಗಳಿಂದ ವಿಮುಕ್ತರಾಗಲು ದೇಹದ ಒಳಭಾಗವನ್ನೂ ಹೊರಭಾಗವನ್ನೂ ನಿರ್ಮಲವಿರಿಸಬೇಕು. ಎಂಡ್ರೂಸ್ ಲವಣವು ಶಾಸ್ತ್ರೀಯ ರೀತಿಯಲ್ಲಿ ದೇಹದ ಒಳಭಾಗವನ್ನು ಶುದ್ಧಗೊಳಿಸುವುದು.

ಎಂಡ್ರೂಸ್ ಲವಣವು ನಿಮ್ಮ ದೇಹದ ಒಳಭಾಗವನ್ನು ಶುದ್ಧಗೊಳಿಸುವುದು ★ ರಕ್ತವನ್ನು ಶಾಂತರೀತಿಯಿಂದ ಶುದ್ಧಗೊಳಿಸುವುದು ★ ಚರ್ಮವನ್ನು ನಿಚ್ಚಳವಾಗಿರಿಸುವುದು ★ ಯಕೃತ್ತು, ಅಜೀರ್ಣ, ಮಲಬದ್ಧತೆ ಮೊದಲಾದ ಬಾಧೆಗಳನ್ನು ಗುಣಪಡಿಸುವುದು ★ ಇದರಿಂದ ಅಭ್ಯಾಸವಾಗುವಂತಿಲ್ಲ, ಮಕ್ಕಳಿಂದ ಹಿಡಿದು ಇಡೀ ಕುಟುಂಬಕ್ಕೆ ಯೋಗ್ಯವಾದುದಾಗಿದೆ.

ಈ ಪ್ರಮಾಣ ಪತ್ರವನ್ನೋದಿರಿ:—'ನಾನು ಅಜೀರ್ಣ, ವಾತ ಮೊದಲಾದ ರೋಗಗಳಿಂದ ನರಳುತಿದ್ದೆ. ಎರಡು ತಿಂಗಳಿಂದ ನಾನು ಎಂಡ್ರೂಸ್ ಲವಣವನ್ನು ಸೇವಿಸಲು ಪ್ರಾರಂಭಿಸಿದ್ದೆ. ಈಗ ನನ್ನ ಯಾವತ್ತು ವೇದನೆಗಳು ಮಾಯವಾದವು. ನಾನು ಇಚ್ಛೆ ಇದ್ದ ಯಾವತ್ತು ಪದಾರ್ಥವನ್ನು ಸೇವಿಸುತ್ತಿರುವೆನು. ಇದರಿಂದ ನನಗೆ ಮೊದಲಿನ ಯಾವ ವೇದನೆಗಳೂ ಕಂಡುಬರುವುದಿಲ್ಲ.



ಎಂಡ್ರೂಸ್ ಲಿವರ್ ಸೋಲ್ಟ

ANDREWS LIVER SALT

ದೇಹದ ಒಳಭಾಗವನ್ನು ನಿರ್ಮಲವಾಗಿರಿಸುವುದು

19

ನೋಟಗಳು....!

ಈ ವಾರದ ಹಲವು ಸುದ್ದಿಗಳು ವಿಶೇಷ ಕಳವಳವನ್ನು ಹುಟ್ಟಿಸಿವೆ!

ಮೊಲೊಟೊವ್ ಬರ್ಲಿನಿಗೆ ತೆರಳಿದ ವಿಷಯ ಇದುವರೆಗೆ ಸ್ಪಷ್ಟವಾಗಿ ತಿಳಿಯದಿದ್ದರೂ ಅಲ್ಲಿ ನಡೆದ ಮಾತುಗಳು ಬಹಳ ಪ್ರಾಮುಖ್ಯವಾದುವುಗಳೆಂದೇ ಸಕಲರ ಅಭಿಪ್ರಾಯವಾಗಿದೆ.

ಸಾಮ್ರಾಜ್ಯಲಾಲಸೆಯಲ್ಲಿ, ರಶ್ಯವು ಜರ್ಮನಿಗಿಂತ ಕಡಿಮೆ ತರದ್ದಲ್ಲ.

ಯುರೋಪಿನಲ್ಲಿ ಒಂದು ಹೊಸ ವ್ಯವಸ್ಥೆ ಮಾಡಲು ರಶ್ಯಾ ಜರ್ಮನಿಗಳು ಸಂಧಿಸಿವೆಯೆಂದು ಸುದ್ದಿಗಾರರ ಸುದ್ದಿ.

ಹೊಸ ವ್ಯವಸ್ಥೆಯೆಂದರೆ 'ನನಗರ್ಧ, ನಿನಗರ್ಧ' ಎಂಬಂತೆ!

ದುರ್ಬಲ ರಾಷ್ಟ್ರಗಳ ಮಟ್ಟಿಗೆ ಈ 'ವ್ಯವಸ್ಥೆ' ನಡೆದೀತು, ಮಾತ್ರ ನಡೆದೀತು.

ಆದರೆ, ಬ್ರಿಟನ್ನಿನ ವಿಚಾರದಲ್ಲಿ, ಇದು ಅಸಾಧ್ಯ ಸಾಹಸವಾಗಿದೆ!

ಹೇಗಿದ್ದರೂ, ಮುಂದಿನ ಪರಿಣಾಮ ಭಯಂಕರವಾಗಿದೆ.

ಗಾಂಧಿಜಿ, ವೈಯಕ್ತಿಕ ಸತ್ಯಾಗ್ರಹವನ್ನು ವಿಸ್ತರಿಸುವ ಸಲವಾಗಿ, ಉಪವಾಸವನ್ನು ತತ್ಕಾಲಕ್ಕೆ ಮುಂದೂಡಿದರು!

ಮೊದಲಿನ ಇಪ್ಪತ್ತನಾಲ್ಕು ಸತ್ಯಾಗ್ರಹಿಗಳ ಸಾಲಿಗೆ ಸಾವಿರದ ಏನೂರು ಮಂದಿಯ ಇನ್ನೊಂದು ಪಟ್ಟಿಯನ್ನೂ ಈಗ ಸೇರಿಸಿದ್ದಾರೆ.

ಪ್ರಾಂತಪ್ರಾಂತಗಳಲ್ಲಿ ಸತ್ಯಾಗ್ರಹ ಶಾಸನಭಂಗ ಕಾರ್ಯವು ದಿನದಿಂದ ದಿನಕ್ಕೆ ಹರಡುತ್ತಾ ಹೋಗುತ್ತಿದೆ.

ಕಾಂಗ್ರೆಸಿನ ಪ್ರಮುಖ ಧುರೀಣರು ಸತ್ಯಾಗ್ರಹರಂಗಕ್ಕೆ ದುಮುಕಿದ್ದಾರೆ.

ಬಂಧನ ಶಿಕ್ಷೆಗಳು ಭರದಿಂದ ಸಾಗುತ್ತಿವೆ.

ಭಾರತದ ರಾಜಕೀಯ ರಂಗವು ಹೀಗೆ ಪ್ರಕ್ಷುಬ್ಧವಾಗಿದೆ.

ಭಾರತದ ಪರಿಸ್ಥಿತಿಯ ಕುರಿತು, ಅಮೇರಿಕದಲ್ಲಿಯೂ ತಳಮಳವುಂಟಾಗಿದೆಯೆಂದು 'ಗಾರ್ಡಿಯನ್' ಸುದ್ದಿಗಾರನು ಬರೆಯುತ್ತಾನೆ.

ಪಾರ್ಲಿಮೆಂಟಿನಲ್ಲಿ ಆದ ಪ್ರಶ್ನೋತ್ತರಗಳು ಮತ್ತು ಬ್ರಿಟಿಷಪತ್ರಿಕೆಗಳ ಅಗ್ರಲೇಖಗಳು, ವಿಚಾರವಂತರಾದ ಕೆಲವು ಬ್ರಿಟಿಷರ ಹೃದಯ ಪರಿವರ್ತನೆಯನ್ನು ತಿಳಿಸಲು ಸಾಕಷ್ಟು ಸಾಕ್ಷಿಗಳಾಗಿವೆ.

'ಕೆಲಸ ಮಾಡುವುದನ್ನು ಕಾಂಗ್ರೆಸಿನವರಿಗೆ ಬಿಟ್ಟುಕೊಟ್ಟು ದಬ್ಬಾಳಿಕೆಯನ್ನು ನಾವು ಸ್ವೀಕರಿಸಿಕೊಂಡಿರುವುದು ವಿಚಾರಪೂರ್ಣವಾದ ಮುಂದಾಲೋಚನೆಯಲ್ಲ' ಎಂದು 'ಗಾರ್ಡಿಯನ್' ಪತ್ರಿಕೆ ಬ್ರಿಟಿಷ್ ರಾಜನೀತಿಜ್ಞರಿಗೆ ಎಚ್ಚರಿಕೆ ಕೊಟ್ಟಿದೆ.

ಗಾಂಧಿಜಿ, ಸತ್ಯಾಗ್ರಹಿಗಳ ಮುಂದಿನ ಪಟ್ಟಿಯನ್ನು ತಯಾರಿಸುತ್ತಿದ್ದಾರೆಯೆಂಬುದು ಸಾಧಾರಣವಾದ ವಾರ್ತೆ.

ಯುದ್ಧ ಆರಂಭವಾದಂದಿನಿಂದ, ಇದುವರೆಗೂ ಆಗದಷ್ಟು ದೊಡ್ಡ ವಿಮಾನ ದಾಳಿಯೊಂದು ಈವಾರ ಲಂಡನಿನ ಮೇಲೆ ಆಯಿತು ಎಂಬುದು ಬಹಳ ದುಃಖಕರವಾದ ಸುದ್ದಿಯಾಗಿದೆ.

ಹಿಟ್ಲರನ ದೃಷ್ಟಿ, ಕೆಲವಾರಗಳಿಂದ ನಿರೀಕ್ಷಿಸಿದಲ್ಲಿ, ಲಂಡನಿನ ಕಡೆಯಿಂದ ಬೇರೆ ಕಡೆಗೆ ಹರಿದಿತ್ತೆಂದೇ ಎಲ್ಲರೂ ನಂಬಿದ್ದರು!

ಅತ್ತ ರಶ್ಯದೊಡನೆ ಮಾತುಕತೆ ನಡೆಸುವುದು, ಇತ್ತ ಲಂಡನಿನ ಮೇಲೆ ಭಾರಿ ದಾಳಿಮಾಡುವುದು ಇವೆರಡೂ 'ಕಂಟಕ'ನಾದ ಹಿಟ್ಲರನ ತಂಟೆಕೋರತನವೇ ಸರಿ.

ಆರ್. ಎ. ಎಫ್.ಗಳು ಬರ್ಲಿನ್ ಮೇಲೆಯೂ ಗುಂಡು ಹಾರಿಸಿದವೆಂಬುದು ಇಷ್ಟರಲ್ಲಿ, ಸ್ವಲ್ಪ ಸಂತೋಷ ಕೊಡತಕ್ಕ ಸಮಾಚಾರವಾಗಿದೆ.

ಹೀಗೆ, ರಾಷ್ಟ್ರೀಯ ಅಂತರ್ ರಾಷ್ಟ್ರೀಯ ಕೇಂದ್ರಗಳಲ್ಲಿ, ಈ ವಾರ ಬಹಳ ವಿಚಾರಕ್ರಾಂತಿಯು ಉಂಟಾಗಿದೆ.

ಇಂದೇ ನಿಮ್ಮ ಸೇವಿಂಗ್ಸ್ ಕಾರ್ಡ್

ತೆಗೆದುಕೊಳ್ಳಿ



ನಿಮ್ಮ ಹತ್ತಿರದ ಪೋಸ್ಟ್ ಆಫೀಸಿನಲ್ಲಿ ನಿಮ್ಮ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಕಾರ್ಡ್ ತೆಗೆದುಕೊಳ್ಳಿ—ಇದು ಉಚಿತ. ಆ ನಂತರ ನಿಮಗೆ ೪ ಆಣೆ ಉಳಿಸಬಹುದಾದಾಗಲೆಲ್ಲ ಒಂದು ಡಿಫೆನ್ಸ್ ಸೇವಿಂಗ್ಸ್ ಸ್ಟಾಂಪ್ ಕೊಂಡುಕೊಂಡು ನಿಮ್ಮ ಕಾರ್ಡಿಗೆ ಅಂಟಿಸಿ. ನಿಮ್ಮ ಕಾರ್ಡ್ ೪೦ ಸ್ಟಾಂಪ್‌ಗಳಿಂದ ತುಂಬಿದ ಕೂಡಲೇ ಯಾವ ಪೋಸ್ಟ್ ಆಫೀಸಿನವರಾಗಲೀ ನಿಮಗೆ ಇದಕ್ಕೆ ಬದಲಿಯಾಗಿ ರೂ. ೧೦ರ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತಾರೆ.

ನಿಮ್ಮ ಉಳಿತಾಯ ಬೆಳೆವುದನ್ನು ನೋಡಿರಿ!

ನಿಮ್ಮ ರೂ ೧೦ರ ಸರ್ಟಿಫಿಕೇಟ್ ಆಗಿಂದಾಗಲೆ ಆದಾಯ ತೆರಿಗೆಯಿಲ್ಲದೆ ಮೌಲ್ಯದಲ್ಲಿ ವೃದ್ಧಿಯಾಗುತ್ತ ಹೋಗುವುದು. ಕೊಂಡುಕೊಂಡ ನಂತರ ೨ ವರ್ಷದಲ್ಲಿ

ಅದರ ಬೆಲೆ.	ರೂ. ೧೦ ೦
೩ ನೆಯ ವರ್ಷದಲ್ಲಿ	ರೂ. ೧೦ ೫
೪ ನೆಯ ವರ್ಷದಲ್ಲಿ	ರೂ. ೧೦ ೧೦
೫ ನೆಯ ವರ್ಷದಲ್ಲಿ	ರೂ. ೧೦ ೧೫
೬ ನೆಯ ವರ್ಷದಲ್ಲಿ	ರೂ. ೧೧ ೮
೭ ನೆಯ ವರ್ಷದಲ್ಲಿ	ರೂ. ೧೧ ೧೩
೮ ನೆಯ ವರ್ಷದಲ್ಲಿ	ರೂ. ೧೨ ೨
೯ ನೆಯ ವರ್ಷದಲ್ಲಿ	ರೂ. ೧೨ ೬
೧೦ ನೆಯ ವರ್ಷದಲ್ಲಿ	ರೂ. ೧೨ ೧೨
೧೧ ನೆಯ ವರ್ಷದಲ್ಲಿ	ರೂ. ೧೩ ೯

ಈ ರೀತಿ ವೃದ್ಧಿಹೊಂದಿದ ನಿಮ್ಮ ಹಣವನ್ನು ಪೋಸ್ಟ್ ಆಫೀಸಿನಲ್ಲಿ ಕೇಳಬಹುದು.

ಯಾವಾಗಬೇಕಾದರೂ ನಗದು ಕೊಡಲಾಗುವುದು.

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಭಾರತದ ಸುರಕ್ಷಿತ ಧನಸಂಚಯ

GI-Kn14

ವಿಜ್ಞಾನಯುಗ

ಮೂಕರೂ ಮಾತಾಡಬಲ್ಲರು

ಹೋಲಿವುಡ್ಡಿನ ಸಿನೇಮಾ ಕ್ಷೇತ್ರದ ಒಬ್ಬ ಕೆಲಸಗಾರರಾದ ಗಿಲ್ಬರ್ಟ್ ರೈಟ್ ಎಂಬವರು ಮುಖಕ್ಷೌರ ಮಾಡಿಕೊಳ್ಳುವಾಗ ಮೀಸೆ ಕತ್ತರಿಸುತ್ತಿರಲು ಬಾಯಿಯಿಂದ ಶಬ್ದವು ಕೇಳಬರುವುದನ್ನು ಬಹಳ ಆಶ್ಚರ್ಯಪಟ್ಟರು. ಈ ಸ್ವರವು ಬಾಯಿಯಿಂದ ಹೇಗೆ ಹೊರಡುತ್ತದೆ ಎಂಬ ಕುತೂಹಲವೇ ಮೂಕರೂ ಮಾತನಾಡಬಲ್ಲಂಥ ಒಂದು ಉಪಕರಣವನ್ನು ಕಂಡುಹಿಡಿಯಲಿಕ್ಕೆ ಮೂಲವಾಗಿದೆ. ನೋಡಲಿಕ್ಕೆ ಈ ಉಪಕರಣವು ಗ್ರಾಮೋಫೋನಿನ ಧ್ವನಿಪೆಟ್ಟಿಗೆಯಂತೆ ಇರುವುದು. ಇದಕ್ಕೆ ಎರಡು ಸರಿಗೆಗಳು ಜೋಡಿಸಲ್ಪಟ್ಟಿವೆ. ದೂರದಲ್ಲಿ ಒಂದು ರೆಕಾರ್ಡಿಗೆ ಈ ಉಪಕರಣವನ್ನು ಜೋಡಿಸಿ ಸರಿಗೆಯ ಎರಡು ತುದಿಗಳನ್ನು ಒಬ್ಬನ ಕುತ್ತಿಗೆಯ ಎರಡು ಬದಿಗಳಿಗೆ ಹೊಂದಿಸಿದುದಾದರೆ, ರೆಕಾರ್ಡಿನಲ್ಲಿ ಯಾರ ಸಂಗೀತ ಅಥವಾ ಮಾತು ಇದೆಯೋ, ಅವನ ಸ್ವರದಲ್ಲಿಯೇ ಆ ಸಂಗೀತ ಅಥವಾ ಮಾತುಗಳನ್ನು ಒಬ್ಬನು ಆಡಬಹುದು. ಮೂಕರಾಗಿದ್ದವರು ಇದೇ ರೀತಿ ಮಾತಾಡಬಹುದು. ಸಿನೇಮಾ ಕೈಗಾರಿಕೆಯಲ್ಲಿ ಈ ಉಪಕರಣವು ಬಹಳ ಉಪಯೋಗಕ್ಕೆ ಬರಲಿಕ್ಕಿದೆ.

ಸಂಧ್ಯಾವಂದನೆಯಿಂದ ಆರೋಗ್ಯ

ಹಿಂದುಗಳು ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಕೆರೆ ಬಾವಿ ಅಥವಾ ಉತ್ತಮ ಪಕ್ಷದ ನದೀ ತೀರದಲ್ಲಿ ಸೂರ್ಯಾಭಿಮುಖರಾಗಿ ಸಂಧ್ಯಾವಂದನೆ ಮಾಡುವ ಕ್ರಮವಿದೆಯಷ್ಟೆ? ಇದು ಬರಿಯ ಪ್ರೋಕ್ಷ್ಯ ಆಚಾರ ಮಾತ್ರ ಆಗಿರುವುದಿಲ್ಲ. ಆಚರಣೆಯಲ್ಲಿ ಒಂದು ವೈಜ್ಞಾನಿಕ ತತ್ವವು ಅಡಗಿರುತ್ತದೆ. ಸೂರ್ಯರಶ್ಮಿಯಲ್ಲಿ ಆರೋಗ್ಯದಾಯಕ ಕೆಲವು ಜೀವಾಣುಗಳು ರೋಗಾಣು ವಿನಾಶಕ ಗುಣಗಳೂ ಧಾರಾಳವಾಗಿ ಇರುತ್ತವೆ. ತ್ರಿಕಾಲಗಳಲ್ಲಿ ಸೂರ್ಯಾಭಿಮುಖರಾಗಿ ಪ್ರಾರ್ಥನಾದಿಗಳನ್ನು ನಡೆಸುವದರಿಂದ ಪರಮಾತ್ಮನು ಒಲಿಯುತ್ತಾನೆ ಎಂಬ ಮಾತನ್ನು ನಂಬುವವರು ನಂಬಲಿ, ಇಲ್ಲವೇ ನಂಬದಿರಲಿ ಆ ಕ್ರಿಯೆಯಿಂದ ಆರೋಗ್ಯ ರಕ್ಷಣೆಯಾಗುತ್ತದೆಂಬುದು ನಿರ್ವಿವಾದವಾಗಿದೆ.

ಹಣ್ಣಿನ ರಸವನ್ನು ಕಾದಿಡಲು ಹೊಸ ಉಪಾಯ

ವಿಲಾಯತಿಯಿಂದ ಅನೇಕ ಹಣ್ಣುಗಳ ರಸಗಳು ಬಾಟಲಿಗಳಲ್ಲಿ ತುಂಬಿ ನಮ್ಮ ದೇಶಕ್ಕೆ ಆಮದಾಗುತ್ತವೆ. ಈ ರಸಗಳು ರುಚಿಕರವಾಗಿರುವುವಲ್ಲದೆ ಆರೋಗ್ಯಕರವಾಗಿಯೂ ಇರುವವೆಂದು ಹೇಳುವರು. ಆದರೆ ಅವುಗಳ ಬೆಲೆಯು ವಿಪರೀತ ಇರುವುದರಿಂದ ಎಲ್ಲರೂ ಅವುಗಳ ಉಪಯೋಗ ಮಾಡಿಕೊಳ್ಳುವದು ಕಷ್ಟಸಾಧ್ಯವಾಗಿದೆ. ಆದ್ದರಿಂದ ಪಂಜಾಬ ಸರಕಾರದ ಒಬ್ಬ ತಜ್ಞರು ಈ ಹಣ್ಣುರಸಗಳನ್ನು ಇಲ್ಲಿಯೇ ತೆಗೆದು ಬಾಟಲಿಗಳಲ್ಲಿ ತುಂಬಿಸಿರುವ ಒಂದು ಹೊಸ ಕ್ರಮವನ್ನು ಕಂಡುಹಿಡಿದಿದ್ದಾರೆ. ಈ ಕ್ರಮದಿಂದ ತೆಗೆದ ರಸಗಳು ವಿಲಾಯತಿಯಿಂದ ಬರುವ ರಸಗಳಿಂದ ಯಾವ ದೃಷ್ಟಿಯಲ್ಲೂ ಹಾಳಿಲ್ಲ. ಉತ್ತರಭಾರತದಲ್ಲಿ ಬೇಸಿಗೆಯ ಕಾಲದಲ್ಲಿ ಎಷ್ಟೋ ಹಣ್ಣುಹಂಪಲುಗಳು ಬೇರೆ ಉಪಯೋಗವಿಲ್ಲದೆ ಹಾಳಾಗುತ್ತವೆ. ಈಗ ಅವುಗಳ ರಸ ಹಿಂದೆ ಬಾಟಲಿಗಳಲ್ಲಿ ಸಂಗ್ರಹಿಸಿಟ್ಟರೆ ಬೇಕಾದ ಕಾಲಕ್ಕೆ ಉಪಯೋಗಿಸಬಹುದು. ಇಲ್ಲಿ ಬಿನ್ನಿನ ಒಂದೊಂದು ಬಾಟಲಿಯ ಕ್ರಯ ೭ ಆಣೆಗಿಂತ ಹೆಚ್ಚಾಗುವುದಿಲ್ಲ.

ರಕ್ತಕ್ಕೆ ಲೋಹ ಚುಂಬಕ ಗುಣವಿದೆ

ಕೆಲಿಫೋರ್ನಿಯ ವಿಶ್ವವಿದ್ಯಾಲಯದ ಡಾಕ್ಟರ್ ಕೊಲ್ ಎಂಬ ವಿಜ್ಞಾನಿಗಳು ಮಾಡಿದ ಶೋಧನೆಗಳ ಪರಿಣಾಮದಿಂದ ರಕ್ತಕ್ಕೆ ಲೋಹಚುಂಬಕ ಗುಣವಿದೆ ಎಂದು ಹೇಳಲಿಕ್ಕೆ ಬರುತ್ತದೆ. ಶುದ್ಧ ಮತ್ತು ಅಶುದ್ಧ ರಕ್ತಗಳನ್ನು ಲೋಹಚುಂಬಕಗಳ ಮುಂದಿಟ್ಟಾಗ ಅವು ಪರಸ್ಪರ ವಿರೋಧವಾದ ಗುಣಗಳನ್ನು ತೋರಿಸುತ್ತಿರುವುವು. ಮಾತ್ರವಲ್ಲ, ಹೊರಗಿನಿಂದ ವಿಷ ಮೊದಲಾದ ಅನ್ಯ ಪದಾರ್ಥಗಳು ಈ ರಕ್ತಗಳಲ್ಲಿ ಕೂಡಿಕೊಂಡಿದ್ದಾಗ ಅವು ತೋರಿಸುವ ಚುಂಬಕಗಳಲ್ಲಿ ಒಂದೊಂದು ತರದ ಅಂತರವು ಕಂಡುಬರುತ್ತದೆ. ಆದ್ದರಿಂದ ಡಾಕ್ಟರ ಕೊಲ್ಲರ ಈ ಶೋಧನೆಯು ಜೀವನದ ರಹಸ್ಯವನ್ನು ತಿಳಿಯಲಿಕ್ಕೆ ಉಪಕಾರಿಯಾಗಿರುವದು ಮಾತ್ರವಲ್ಲದೆ ವಿಷಪ್ರಯೋಗವಾದಾಗ ಅದರ ನಿವಾರಣೆಯನ್ನು ಮಾಡಲಿಕ್ಕೆ ಹೊಸತೊಂದು ವಿಧಾನವನ್ನು ಕಂಡುಹಿಡಿಯಲಿಕ್ಕೂ ಸಹಾಯವಾಗಿದೆ.

ಸ್ವದೇಶಾಭಿಮಾನಿಗೆ
ಜಾಹಿರಾತುಗಳನ್ನು ಕೊಡಿರಿ!

ಮಾರಾಟಕ್ಕೆ ಸಿದ್ಧವಾಗಿದೆ
1941ನೆ ಇಸವಿಯ
ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್	೦—೫—೦
(ಪೋಕೆಟ್ ಇದ್ದದಕ್ಕೆ)	೦—೬—೦
ದೊಡ್ಡ ಸೈಜ್	೦—೮—೦
(ಪೋಕೆಟ್ ಇದ್ದದಕ್ಕೆ)	೦—೧೧—೦

ಶಾರದಾ ಛಾಪಖಾನೆ, ಮಂಗಳೂರು.

BHUVANENDRA PRODUCTS LTD.,
KATAPADI, S. K.

Why Doctors prescribe
"BHUVANENDRA"
NARAYANA TAILA
Because it sets right
the nervous system and gives good relief
from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.
ಸ್ಥಳೀಯ ಸ್ಟೋಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ. ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಧಿ ಕಂಬೈನ್ಡ್ ಬುಕ್ಕಿಂಗ್ ಏಜೆನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 15-11-1940ರಿಂದ ಕುಳುಗುಂದ ಜಾನುವಾರ ಸಂತೆ ತಾ. 29-11-1940ರ ವರೆಗೆ

ತಾ. 25-11-1940ರಿಂದ ಶ್ರೀ ಧರ್ಮಸ್ಥಳ ಲಕ್ಷ ದೀಪೋತ್ಸವ ತಾ. 29-11-1940ರ ವರೆಗೆ

(ತಾರೀಕು 29—11—1940ರಲ್ಲಿ ಲಕ್ಷದೀಪೋತ್ಸವ)

ತಾ. 30-11-1940ರಿಂದ ಶ್ರೀ ಸುಬ್ರಹ್ಮಣ್ಯ ಷಷ್ಠೀ ಸಮಾರಂಭ 5-12-1940ರ ವರೆಗೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಒಂದೇ ಬಗೆಯ [illegible] ವಿಶೇಷ ಹುಳ್ಳಗಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ಕದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ ಅಥವಾ ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯವು. ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜಿ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲು, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಶೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಸಾವಕಾರ ಶ್ರೀನಿವಾಸರಂಗಪ್ಪ
[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

Ready for Sale!

1941

SHARADA POCKET DIARIES

Small Size	0—5—0
„ „ (with pocket)	0—6—0
Big Size	0—9—0
„ „ (with pocket)	0—11—0

SHARADA PRESS, MANGALORE.

... 2—13—0 Regd. No. M 340

ಸ್ವದೇಶಾಭಿಮಾನಿ

ಸಂಪುಟ 84] ಶನಿವಾರ 23—11—1940 [ಸಂಚಿಕೆ 47

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs. 1.42 Crores
Total Funds exceed	Rs. 1.52 Crores
Premium income during the year exceeds	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. Thisis the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ವಿಲಿಯುಗಳಲ್ಲಿ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಬಾಬೂ ರಾಜೇಂದ್ರ ಪ್ರಸಾದರು

ಇವರ ಶರೀರ ನಿಶ್ಶಕ್ತತೆಯ ನಿಮಿತ್ತ ಗಾಂಧಿಜಿ ಸತ್ಯಾಗ್ರಹ ಹೂಡುವುದು ಬೇಡವಾಗಿ [illegible]ವರಂತೆ

KANNADA ILLUSTRATED WEEKLY

NOTICE

In the Court of the District Munsif of Mangalore.
S. O. S. No. 416/1940

S. C. No. 527/1940

Between

A. Srinivasa Nagappa Chittya — *Plaintiff*

and

Balakrishna Sadashiva Marathe — *Defendant.*

To

The defendant Balakrishna Sadashiva Marathe son of Sadashiva Marathe residing in Kharepatan of Ratnagiri District.

Take notice that the above suit filed by the plaintiff against you for recovery of Rs. 219–14–0 due on account of dealings carried on by you with him stands posted to 11 A. M. on 16th December 1940 for hearing. If you fail to appear before the court in person or by pleader on the said date the suit will be proceeded with exparte

(By order of the Court)

B. Srinivasa Pai,
Pleader for Plaintiff.

Mangalore, 23-11-1940.

ನೋಟೀಸು

ಪ್ರತಿವಾದಿಯು

(೨) ಹರಿ ಭಟ್ಟ ಕೃಷ್ಣ ಭಟ್ಟ ಮಂಗಳೂರು ತಾಲೂಕು ... ಗ್ರಾಮ ...

ಈ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ — ನಿಮ್ಮ ತಂದೆ ... ಕೃಷ್ಣ ಭಟ್ಟರು ವಾದಿಗೆ ತಾ. 30–10–1937ರಲ್ಲಿ ರೂ. 200–0–0ಕ್ಕೆ ರಜಿಸ್ಟ್ರಿ ಬರಕೊಟ್ಟ ... ಅಸ್ಲು ಬಡ್ಡಿಯು ... ವಸೂಲಿಯ ಬಗ್ಗೆ ದಾಖಲು ಮಾಡಿದ ಈ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾ. 18–12–1940ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ದಾವೆಯ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಅವುಗಳನ್ನು ಆ ದಿನ ಬೆಳಗ್ಗೆ 10 ಗಂಟೆಗೆ ... ಕೋರ್ಟು ಮುಂದೆ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವಾ ತೀರ್ಪು ... ಮಾಡಲಾಗುವುದು.

(By order of the Court)

Karkal 25-11-40 — P. V. Upadhyaya, B. A., LL. B., Vakil for plaintiff.



ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ

ನರಗಳಿಗೆ ಅತ್ಯುತ್ತಮ ಟಾನಿಕ್.

K. A.

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

An Invitation

Deposits flowing in more quickly than we can invest them are steadily increasing our idle funds. Thus our deposits increased by over Rupees Five Lacs since the first of July, 1940.

In order to invest this surplus, loans will be granted at special rates against gold, produce and other valuable security.

You are invited to take advantage of these special terms.

RESOURCES OF A CRORE. — Estd: 1906 — **CANARA BANK, LIMITED.**

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% *

Particulars of other kinds of deposits on application.

ಮಾರಾಟಕ್ಕೆ ಸಿದ್ಧವಾಗಿದೆ

1941ನೆ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್	೦—೫—೦
(ಪ್ರೋಕೆಟ್ ಇದ್ದ ಹೆಚ್ಚು)	೦—೬—೦
ದೊಡ್ಡ ಸೈಜ್	೦—೯—೦
(ಪೋಕೆಟ್ ಇದ್ದದಕ್ಕೆ)	೦—೧೧—೦

ಶಾರದಾ ಛಾಪಖಾನೆ, ಮಂಗಳೂರು.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

29—11—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೯—೧೧—೧೯೪೦

ಸೇವಾ ಗ್ರಾಮದಲ್ಲಿ ಇಬ್ಬರು ಮಹಾಪುರುಷರ ಭೇಟಿ!

ಭಾರತ-ಚೈನಗಳ ಸ್ನೇಹಸಂದರ್ಶನ!
ಗಾಂಧಿಜಿ - ತಾಯಿಚಿತಾವ್ರೋ ಮಾತುಕತೆ!
ಚೀನಕ್ಕೆ ಮಹಾತ್ಮರ ಅಹಿಂಸಾ ಸಂದೇಶ!

ಪಂಡಿತ ನೆಹರುಗಳು ಕಳೆದ ವರ್ಷ ಚೀನಕ್ಕೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದರಷ್ಟೆ? ಈ ವರ್ಷ ಅದರ ಪ್ರತಿಭೇಟಿಗಾಗಿ ಚೀನದಿಂದ ತಾಯಿಚಿತಾವ್ರೋ ಇವರು ಭಾರತಕ್ಕೆ ಬಂದಿದ್ದಾರೆ. ಚೀನ-ಭಾರತಗಳೊಳಗಿನ ಮಧುರ ಸಂಬಂಧ ಬೆಳೆಸುವ ಯೋಜನೆಗಾಗಿ. 'ನೆಹರುಗಳು ಬಂಧನದ ಮರೆಯಲ್ಲಿ ಸಿಲುಕಿರುವುದನ್ನು ಕೇಳಿ ಅವರು ಬಹಳ ಕೊರಗಿದರು. ಪಂಡಿತರನ್ನು, ಅವರ ಮನೆಯನ್ನು, ಬಳಗದವರನ್ನು ಕಾಣಲು ಅವರು ಹಾತೊರೆದರು. ಈ ಮಹನೀಯರು ವರ್ಧಾಕ್ಕೆ ಬಂದು ಮಹಾತ್ಮಾಜಿಯವರ ಭೇಟಿಯಾದರು. ಅವರು ಗಾಂಧಿಜಿಯವರಿಗೆ ಚೀನದ ರಾಷ್ಟ್ರವೀರರು ಕಳುಹಿಸಿದ ವಿಶೇಷ ಸಂದೇಶಗಳನ್ನು ಕೊಟ್ಟರು. ಅವರನ್ನು ಪತ್ನೀಸಮೇತ ಗಾಂಧಿಜಿ ಸ್ವಾಗತಿಸಿದರು. ಆಸನ್ನರಾದ ಅವರು 'ನಮಗೆ ಗಂಡಾಂತರವೊದಗಿದೆ. ಇದರಿಂದ ಪಾರಾಗುವ ಬಗೆ ಹೇಗೆ, ನಮಗೆ ಇಡೀ ಪ್ರಪಂಚವೇ ಶಾಂತಿಸುಖವನ್ನು ಹೊಂದಬೇಕೆಂಬ ಬಯಕೆಯಿದೆ ಎಂದು ಬಹಳ ಆಸಕ್ತಿಯಿಂದ ಗಾಂಧಿಜಿಯವರೊಡನೆ ಕೇಳಿಕೊಂಡರು. ಅವರಿಗೆ ಗಾಂಧಿಜಿ ಕೆಳಗಿನ ಸಾರಾಂಶದ ಮಾತುಗಳನ್ನು ಹೇಳುತ್ತಾ ನೂಲನ್ನು ನೂತರು.

ಅಹಿಂಸಾಕ್ರಾಂತಿ

"ನಿಮ್ಮಂತೆ ನಾವೂ ಈಗ ಜೀವನಮರಣಗಳ ಹೋರಾಟದಲ್ಲಿ ತಲ್ಲೀನರಾಗಿರುವೆವು. ನಿಮ್ಮ ರಾಷ್ಟ್ರದಂತೆ ನಮ್ಮದೂ ಪ್ರಾಚೀನವೂ ವಿಸ್ತಾರವೂ ಆಗಿದೆ. ಹೀಗೆ ನಮ್ಮಲ್ಲಿ ವಿಶೇಷ ಅನ್ಯೋನ್ಯತೆಯಿದೆ. ಆಫ್ರಿಕದಲ್ಲಿ ನಾನು ಚೀನೀ ಜನರ ಸಲುವಾಗಿ ವಿಶೇಷ ಆಸಕ್ತಿ ತೆಗೆದುಕೊಳ್ಳುತ್ತಿದೆ. ನಮ್ಮಲ್ಲಿ ಸಾಮ್ಯವು ಹೀಗಿದ್ದರೂ ನಾವು ನೀವು ಸ್ವಾತಂತ್ರ್ಯಕ್ಕಾಗಿ ಹೂಡಿದ ಹೋರಾಟದ ರೀತಿ ಭಿನ್ನವಾಗಿದೆ. ನಾನಿದರಿಂದ ನಿಮ್ಮನ್ನು ಟೀಕಿಸುವುದಲ್ಲ. ನಿಮ್ಮ ರಕ್ಷಣೆಗಾಗಿ ನೀವು ಹಳೆಯ ರೀತಿಯನ್ನೇ ಅನುಸರಿಸಿರುವಿರಿ. ನನ್ನ ಪದ್ಧತಿಯು ರಾಜಕೀಯ ಕ್ಷೇತ್ರದಲ್ಲಿ ಪ್ರಯೋಗಕ್ಕೆ ತೀರಾ ಹೊಸತು. ನೀವು ನೆಹರುಗಳ ಸದುದ್ದೇಶವನ್ನು ಸ್ಪಷ್ಟಪಡಿಸುವುದಕ್ಕಾಗಿ ಇಲ್ಲಿವರೆಗೆ ಬಂದಿರುವಿರಿ. ನನ್ನ ಹೊಸ ದೃಷ್ಟಿಗೆ ಅನುಸಾರವಾಗಿ ನಾನು ಅನುಸರಿಸಿದ ರೀತಿಯನ್ನು ಸೇವಾಪತ್ರಿಕೆಯಿಂದ ನಿಮ್ಮ ಮುಂದಿಡುತ್ತೇನೆ. ನನ್ನ ರೀತಿಯನ್ನು ಗೆಲ್ಲುವಲ್ಲಿ ಅಭ್ಯಾಸದಲ್ಲಿ ಸಾಧಿಸಿದೆನು. ಇದರ ಸಾಹಸವನ್ನು ನಾವು ತಿಳಿಯದಿದ್ದರೆ ಹಿಂದೂಸ್ಥಾನದಲ್ಲಿ ಭಾರತೀಯರ ಹತ್ಯೆ ಆಗುತ್ತಿತ್ತು. ಆದರಿಂದ ಈ ರೀತಿಯು ಭಾರತದಲ್ಲಿ ಯಶಸ್ವಿಯಾದ ಪರಿಣಾಮಕಾರಿಯಾಗಿದೆ. ಒಟ್ಟಿನಿಂದ ನೋಡುವುದಿದ್ದರೆ ನಮಗಿದರಿಂದ ವಿಶೇಷ ಜಯವಾಯಿತು. ಈ ರೀತಿಯಿಂದಲೇ ಕಾಂಗ್ರೆಸ್ ಪ್ರಬಲವಾದ ಸಂಸ್ಥೆಯಾಯಿತು. ಪ್ರತಿಯೊಬ್ಬ ಚೈನದ ವೀರನಂತೆ ನಾವೂ ವೀರರಾಗಿ ಮಡಿಯಲು ಸಿದ್ಧರಿರುವೆವು. ಆದರೆ ನಮ್ಮೆದುರಾಳಿಯನ್ನು ನಾವು ಕೊಲ್ಲಲಾರೆವು. ಅವಶ್ಯವಿದ್ದರೂ ತೊಂದರೆ ಕೊಡಲಾರೆವು. ಸಂರಕ್ಷಣೆಯ ದೃಷ್ಟಿಯಿಂದಲೂ ಹಾಗೆ ಮಾಡಲಾರೆವು. ಈ ರೀತಿ ಸಾಮಾನ್ಯ ಜನರೂ ಕೂಡಾ ಮಾಡಲಾಗುವಂತಹ ಸಿದ್ಧತೆ ನಮ್ಮಲ್ಲಿ ಸಾಗಿದೆ. ಇದರಿಂದ ನಾವು ಬರಿಯ ಸ್ವಾತಂತ್ರ್ಯವನ್ನೇ ಗಳಿಸುವುದಲ್ಲ; ಜಗತ್ತಿನಲ್ಲಿರುವ ಭೀಕರವಾದ ಯುದ್ಧವನ್ನು ಕೊನೆಗೊಳಿಸಲು ಶಕ್ಯವಾಗುವುದು. ನೀವೂ ಹಾಗೆ ಮಾಡಬೇಕೆಂದು ನನ್ನ ಉದ್ದೇಶ. ಇದು ಯೋಗ್ಯವೆಂದೆನಿಸಿದರೆ, ಇದನ್ನು ಚನ್ನಾಗಿ ಪರೀಕ್ಷಿಸಿ ಚೀನದಲ್ಲಿಯೂ ಹರಡಿರಿ. ಇದಕ್ಕಿಂತ ಹೆಚ್ಚು ನಾನೀಗ ಹೇಳಲಾರೆ. ಸಂಪೂರ್ಣ ಅಹಿಂಸೆಯಿಂದಲೇ ನಾವು ಸಾಧಿಸಬೇಕಾದುದನ್ನು ಸಾಧಿಸಿದ ಬಳಿಕ ನಾನೆಲ್ಲವನ್ನೂ ಹೇಳುವೆನು. ನಾನು ಈ ನೂಲುವ ಕೆಲಸವನ್ನು ಉದ್ದೇಶಪೂರ್ವಕ ಕೈಗೊಂಡಿದ್ದೇನೆ. ನೂಲುವ ರೀತಿಯನ್ನು ಕೈಕೊಳ್ಳುವುದಕ್ಕೆ ಬಾಹ್ಯ ಕೆಲಸಗಳು ಡಿಕ್ಕಿಹೊಡೆಯುವಾಗಲೂ ಈ ಕೆಲಸ ಆಗುವುದೆಂದು ತಿಳಿಸಲಿಕ್ಕೆ ನಾನು ಹೀಗೆ ನೂಲುತ್ತಿದ್ದೇನೆ. ಈ ಕ್ರಿಯೆಯಿಂದ ನನ್ನ ಮನಸ್ಸಿಗೆ ತುಂಬಾ ಶಾಂತಿಯಿದೆ. ನಮ್ಮ ಧ್ವಜದಲ್ಲಿಯೂ ಚರಕದ ಚಿಹ್ನೆಯಿದೆ. ಇದು ಅಸಂಖ್ಯ ಭಾರತೀಯರೊಡನೆ ಇರುವ ನನ್ನ ಬಳಕೆಯ ಚಿಹ್ನೆಯಾಗಿದೆ.

ಆಗ ತಾಯಿಚಿತಾವ್ರೋ ಆನಂದಪರವಶರಾಗಿ ಹೇಳಿದರು:—

ಆನಂದೋದ್ಗಾರ

"ಈ ಸಂದೇಶದಿಂದ ನನ್ನಲ್ಲಿ ನವಸ್ಫೂರ್ತಿ ಹುಟ್ಟಿದೆ. ನಾನು ಗಾಂಧಿಜಿಯವರ ಪದ್ಧತಿಯನ್ನು ಪತ್ರಗಳಲ್ಲಿ ಓದಿದ್ದೆ. ಈಗ ಸ್ವತಃ ನೋಡಿ ಬಹಳ ವಿಶೇಷ ಆನಂದಿತನಾದೆನು. ಬಹಳ ದಿವಸಗಳ ತಾಳ್ಮೆಯಿಂದ ಎಲ್ಲವನ್ನೂ ಸಹಿಸಿ ಕೊನೆಗೆ ಕ್ರೂರವಾದ ಆಕ್ರಮಣವನ್ನೆದುರಿಸಲು ನಾವು ಹಿಂಸೆಯನ್ನೇ ಹಿಡಿಯಬೇಕಾಯಿತು. ಈಗ ನಮ್ಮ ಹಳ್ಳಿಗಳಲ್ಲಿಯೂ ಸ್ವಾವಲಂಬೀ ಜೀವನದ ಚಳವಳ ಆಗಬೇಕಾಗಿದೆ. ನಮ್ಮಲ್ಲಿಯೂ ಚರಕಕ್ಕೆ ಈಗ ಸ್ಥಾನ ದೊರೆತಿದೆ. ನಮ್ಮಲ್ಲಿ ೧೦ಂಕ್ಕೆ ೯೦ ಮನೆಗಳಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಚರಕವಿದೆ. ನಾವೂ ಅವಶ್ಯಕತೆಯಿಂದಾಗಿ ನೂಲುವುದನ್ನು ಕೈಕೊಂಡು ರಾಷ್ಟ್ರೀಯ ಕೈಗಾರಿಕೆಯನ್ನು ಉದ್ಧರಿಸಲು ಮನಸ್ಸು ಮಾಡಿದೆವು. ನಮ್ಮಲ್ಲಿರುವ ಕಾರಖಾನೆಗಳು ಬಾಂಬಿಗೆ ಆಹುತಿಯಾಗಿವೆ. ಜನರು ಹಳ್ಳಿಗಳಿಗೆ ಹೋಗಿರುವರು. ಚರಕಗಳನ್ನು ಅವಲಂಬಿಸಿದರೆ ಅವು ಬಾಂಬಿಗೆ ಆಹುತಿಯಾಗುವುದಿಲ್ಲ. ಮನುಷ್ಯ ಹೋದಲ್ಲಿ ಅವೂ ಹೋಗುತ್ತವೆ. ನಿಮ್ಮ ಚರಕದಿಂದ ನನ್ನಲ್ಲಿ ಹೊಸ ಸ್ಫೂರ್ತಿಬಂದಿದೆ."

ಅವರ ಬಯಕೆ

ಗಾಂಧಿಜಿ ಧನುಷ್ ತಕಲಿಯನ್ನು ಕಾಣಿಕೆಯಾಗಿ ತಾಯಿಚಿತಾವ್ರೋರವರಿಗೆ ಕೊಟ್ಟರು. ಬೀಳ್ಕೊಡುವಾಗ ಗಾಂಧಿಯವರೊಡನೆ ತಾಯಿಚಿತಾವ್ರೋ ಹೀಗೆಂದರು.

"ನಾನು ಭಾರತ ಚೀನಗಳ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಹಾರೈಸುತ್ತೇನೆ. ಎಲ್ಲಾ ಮಾನವ ಜನಾಂಗದ ಸಲುವಾಗಿ ದೀರ್ಘ ನಿಮಗೆ ದೀರ್ಘಾಯುಷ್ಯ ಕೊಡಲಿ. ನಿಮಗೆ ಹಾಗೂ ನಿಮ್ಮ ಕುಟುಂಬಕ್ಕೆ ದೇವರು ಒಳ್ಳೆಯದು ಮಾಡಲಿ."

ಅದಕ್ಕೆ ಗಾಂಧಿಜಿ ಹಸನ್ಮುಖರಾಗಿ "ನನ್ನ ಕುಟುಂಬದಲ್ಲಿ ೩೫ ಕೋಟಿ ಜನರಿರುವರು" ಎಂದರು. "ಜಗತ್ತಿನ ಮಾನವ ಕುಲವೇ ನಿಮ್ಮ ಕುಟುಂಬವಾಗಿರಲಿ" ಎಂದರು ತಾಯಿಚಿತಾವ್ರೋ. ಗಾಂಧಿಜಿ ಅಹುದು ಎಂದು ನಸುನಗುತ್ತ ಹೇಳಿದರು.

ಗಾಂಧಿಜಿಯವರ ಸಂದೇಶ

"ಜನರಲ್ ಶೈಕೇಶರಿಗೆ ಹಾಗೂ ಅವರ ಧರ್ಮಪತ್ನಿಯವರಿಗೆ ನನ್ನ ಸಂದೇಶವನ್ನು ತಿಳಿಸಿರಿ. ವೀರ ಅಧಿಕಾರಿಗಳಿಗೆ ಹಾಗೂ ಯೋಧರಿಗೆ ತಿಳಿಸಿರಿ. ಅವರೆಲ್ಲ ವೀರರಾಗಿ ಸಂರಕ್ಷಣೆಯ ಸಲುವಾಗಿ ಕಾದಾಡುತ್ತಿರುವರು. ನಿಮ್ಮಲ್ಲಿ ಆದಷ್ಟು ಬೇಗ ಶಾಂತಿಯುಂಟಾಗಲೆಂದು ನಾನು ಬಯಸುವೆನು."

ಹೀಗೆಂದು ಹೇಳಿ ಗಾಂಧಿಜಿ ಅವರನ್ನು ಬೀಳ್ಕೊಡಲು ಗುಡಿಸಲಿನಿಂದ ಹೊರಬಿದ್ದರು. ತಾಯಿಚಿತಾವ್ರೋ ಗಾಂಧಿಜಿಯವರನ್ನು ಆಪಾದಮಸ್ತಕ ನೋಡಿ ನೀವು ಆರೋಗ್ಯವಂತರಾಗಿರುವಿರಿ ಎಂದರು. ನಾನಾವ ಭಾರವನ್ನೂ ವಹಿಸಿಕೊಳ್ಳುವುದಿಲ್ಲ. ಎಲ್ಲವನ್ನೂ ದೇವರ ಮೇಲೆ ಹೊರಿಸುತ್ತೇನೆಯೆಂದರು ಗಾಂಧಿಜಿಯವರು.

ಸ್ವದೇಶಾಭಿಮಾನಿ

ತಾರೀಖು 29—11—1940

ಇಬ್ಬರ ಹೇಳಿಕೆಗಳು

ಕಳೆದವಾರ, ಭಾರತದ ರಾಜಕೀಯ ಪರಿಸ್ಥಿತಿಯಲ್ಲಿ ಉಂಟಾದ ತೀವ್ರತೆಯನ್ನು ಪರಿಶೀಲಿಸುತ್ತಾ, ಇಂದು ಈ ತರದಲ್ಲಿ ಬಂದೊದಗಿದ ಗೊಂದಲವನ್ನು ಪರಿಹರಿಸುವ ಕಾರ್ಯಭಾರವು ಕೇವಲ ಬ್ರಿಟಿಷ್ ಅಧಿಕಾರಿಗಳನ್ನು ಹೊಂದಿಕೊಂಡಿದೆಯೆಂದೂ, ಆ ವಿಷಯ, ಕೇಂದ್ರ ಅಸೆಂಬ್ಲಿಯಲ್ಲಿ ವೈಸರಾಯರು ಕೊಡಲ್ಲಾಗುವ ಭಾಷಣದಲ್ಲಿ ಪರಿಸ್ಥಿತಿಯ ಸುಧಾರಣೆಯ ಸೂಚನೆಗಳಿರಬಹುದೆಂದೂ ನಾವು ಸ್ವಲ್ಪ ಆಶಾವಾದಿಗಳಾಗಿದ್ದೆವು. ನಮ್ಮಂತೆ ಆಶಾವಾದಿಗಳಾಗಿದ್ದ ಹಲವು ಮಂದಿ, ವೈಸರಾಯರ ಈ ಸಲದ ಘೋಷಣೆಯಿಂದಲೂ ತೀವ್ರ ನಿರಾಶರೇ ಆಗಬೇಕಾಯಿತು ಎಂಬುದನ್ನು ಈಗಾಗಲೇ ಪ್ರಕಟವಾದ ಹಲವು ಪತ್ರಿಕೆಗಳ ಅಗ್ರಲೇಖ, ಮುಖಂಡರ ಹೇಳಿಕೆಗಳಿಂದ ತಿಳಿದುಕೊಳ್ಳಬಹುದಾಗಿದೆ. ಇಷ್ಟು ಸಾಕಾಗದಿದ್ದುದಕ್ಕೆ, ಪಾರ್ಲಿಮೆಂಟಿನಲ್ಲಿ, ಭಾರತದ ವಿಷಯ ಚರ್ಚೆಯಾಗಿ, ಭಾರತ ಸಚಿವ ಅಮೇರಿಯವರು ಕೊಟ್ಟ ಹೇಳಿಕೆಯು ನಿರಾಶೆಯ ಮೇಲೆ ನಿರಾಶೆಯನ್ನು ಹೊರಿಸುವಂತಹುದಾಗಿದೆ. ಕಾಂಗ್ರೆಸಿನ ವಿಷಯದಲ್ಲಿ, ಭಾರತದ ಜನಪ್ರಿಯ ಮುಂದಾಳುಗಳ ಕುರಿತು ಅವರು ಹೇಳಿದ ಮಾತುಗಳು, 'ಹಿಂದು' ಪತ್ರಿಕೆಯಂತಹ ಸೌಮ್ಯ ಧೋರಣೆಯ ಪತ್ರಿಕೆಗಳನ್ನೂ ಕೆರಳಿಸಿವೆ.

ವೈಸರಾಯರು ಯಾವುದೇ ರೀತಿಯ ಸುಧಾರಣೆಯ ಸೂಚನೆಯನ್ನೂ ತರಲಿಲ್ಲವೆಂಬುದು ಪ್ರಸ್ತುತ ಸಮಯದಲ್ಲಿ ವಿಚಾರಿಸದರತಕ್ಕ ವಿಷಯವಲ್ಲ; ಇದರಿಂದ, ಭಾರತದ ಪರಿಸ್ಥಿತಿಯನ್ನು ಸುಧಾರಿಸಲು ಬ್ರಿಟನು ಯೋಚಿಸುತ್ತಿದೆಯೆಂದು ಬ್ರಿಟಿಷ್ ರಾಜಕಾರಣಿಗಳು ಹೇಳುವ ಮಾತುಗಳಲ್ಲಿ ಯಥಾರ್ಥತೆಯೇನೆಂದು ತೋರಿ ಬರುವುದಿಲ್ಲ. ಮಾತ್ರವಲ್ಲದೆ, ವೈಸರಾಯರು, ಸಾರ್ವಭೌಮ ಸರಕಾರದ ಇಚ್ಛೆಯಂತೆ, ತನ್ನ ಕಾರ್ಯಕಾರೀ ಮಂಡಳಿಯ ವಿಸ್ತರಣಾ ಯೋಜನೆಯನ್ನು ಪ್ರಸ್ತುತಕ್ಕೆ ಬಿಟ್ಟು ಬಿಟ್ಟಿರುವರೆಂದು ಅವರೇ ಸಾರಿದರು. [illegible]ದರಿಂದ ಭಾರತದ ಯಾವ ಪಕ್ಷದವರೂ ಹೆಚ್ಚಿನ ಬೇಸರಪಡುವುದೇನೂ ಇಲ್ಲ. [illegible] ವೈಸರಾಯರ ಕಾರ್ಯಕಾರೀ ಮಂಡಳಿಯ[illegible] [illegible]

[illegible] ಭಾರತದಲ್ಲಿ [illegible] ಬ್ರಿಟಿ[illegible] [illegible] ಯಾವ [illegible]ಯನ್ನು ಸ್ವಾತ್ಯದ ಮುಂದಿಟ್ಟಿದೆಯೆಂಬುದು ಗೊತ್ತಾಗುವುದಿಲ್ಲ.

"ತಮ್ಮ ನಿಜವಾದ ಆಂತರಿಕಶಕ್ತಿ, ಹಕ್ಕುಗಳ ಬಗೆಗೆ, ಲೋಕದ ಜಾಮಾನ್ಯ ಪ್ರಜಾವರ್ಗವು ತನ್ನ ನ್ಯಾಯದ ಬಗೆಗೆ ಮುಂದುವರಿಯುತ್ತಿರುವಾಗ, ಅವರ ನ್ಯಾಯವಾದ ಆ ಮುನ್ನುಗ್ಗುವಿಕೆಯು ಬಹುಕಾಲ ಬಾಳಲಿ, ಸುಮುಹೂರ್ತವು ಬರಲಿ" ಹೀಗೆಂದು ಚರ್ಚಿಲ್ಲರು ಹೇಳಿದ ವೀರ ಸ್ವಾತಂತ್ರ್ಯವಾಣಿಯನ್ನು ಬಹಳ ಗಂಭೀರ ಸಾರವತ್ತಾಗಿ ಎಸೆಂಬ್ಲಿ ಭಾಷಣದಲ್ಲಿ ಜಫ್ರುಲ್ಲಾ ಖಾನರೂ ಎತ್ತಿ ಹೇಳಿದರು. ಆದರೆ ಭಾರತದ ಪರಿಸ್ಥಿತಿಯ ಕುರಿತು ಬ್ರಿಟಿಷ್ ಸರಕಾರದ, ಚರ್ಚಿಲ್ಲರ, ಅಮೇರಿಯವರ, ವೈಸರಾಯರ ಧೋರಣೆಗಳು ಇದೇ ರೀತಿಯಾಗಿದ್ದರೆ ಆ ಮಾತುಗಳಲ್ಲಿರುವ ಶಬ್ದಜಾಲಗಳಿಗೆ ಏನು ಬೆಲೆ ಬಂದಂತಾಯಿತು?

ಅಮೇರಿಯವರು ಪಾರ್ಲಿಮೆಂಟಿನಲ್ಲಿ ಮಾಡಿದ ಹಲವು ವಿಚಾರಗಳು ಬಹಳ ಅಸಂತೋಷಕರವಾಗಿವೆ. ಭಾರತದ ಭಿನ್ನ ಭಿನ್ನ ಪಕ್ಷಗಳ ಮುಖಂಡರಲ್ಲಿ ಐಕ್ಯ ಒಪ್ಪಂದವಿಲ್ಲವೆಂದು ಹೇಳುವುದು ಅದು ಅಮೇರಿಯವರ ಹೇಳಿಕೆ. ಮಾತ್ರವಲ್ಲ ಅದು ಅಂದಿನಿಂದ ಇಂದಿನ ವರೆಗೂ ಬ್ರಿಟಿಷರು ಆಡಿದ ಮಾಡಿದ ಕಾರ್ಯಸಾಧನೆಯ ಸೂತ್ರವೇ ಎಂದೆನ್ನಬೇಕು. ಅದು ಹೇಗಿದ್ದರೂ, ಗಾಂಧಿಜಿ ಇಂದು ಆರಂಭಿಸಿದ ಚಳವಳಿ ಶಾಂತಿಪೂರ್ವದದ್ದಲ್ಲವೆಂದೂ ಅದಕ್ಕೆ ಪುರಸ್ಕಾರ ಕೊಡುವುದು ನ್ಯಾಯವಲ್ಲವೆಂದೂ ಅವರು ಹೇಳಿದ ಮಾತಿಗೆ ಸಮ್ಮತಿ ಸಿಗಲಾರದು.

ಗಾಂಧಿ ಶಾಂತಿವಾದಿಯೆಂಬುದು ಜಗಜ್ಜನಿತ. ಬ್ರಿಟಿಷ ಸರಕಾರಕ್ಕೆ ತೊಂದರೆ ಕೊಡಬಾರದೆಂಬುದು ತನ್ನ ಅಭಿಪ್ರಾಯವೆಂದು ಅಂದಿನಿಂದ ಇದುವರೆಗೆ ಅವರು ಹೇಳುತ್ತಾರೆ. ಅದೇ ದೃಷ್ಟಿಯಿಂದಲೇ ಇಂದು ವೈಯುಕ್ತಿಕ ಸತ್ಯಾಗ್ರಹವನ್ನೂ ಆರಂಭಿಸಿದ್ದಾರೆ, ಪ್ರಜಾಪ್ರಭುತ್ವ ರಾಜ್ಯದಲ್ಲಿ ವಿರುದ್ಧ ಪಕ್ಷವೊಂದಿದ್ದರೆ ಅದು ಬದುಕಲು ಯೋಗ್ಯವೆನಿಸಿದ ಪಕ್ಷವಲ್ಲವೆಂಬ ಸಿದ್ಧಾಂತವಿಲ್ಲ; ಭಾರತವು ಯುದ್ಧಕ್ಕೆ ಸೇರಿಲ್ಲ; ಆದುದರಿಂದ ನಾವು ಯುದ್ಧಕ್ಕೆ ಜನಧನ ಸಹಾಯ ಕೊಡಬಾರದು ಎಂದು ಒಂದು ಪಕ್ಷದ ಜನರು ಅಭಿಪ್ರಾಯಪಟ್ಟರೆ ಅದು ಶಾಂತಿಪ್ರಿಯವಾದ ಪಕ್ಷದ ಜನರ ಅಭಿಪ್ರಾಯವಲ್ಲವೆಂಬುದಕ್ಕೆ ಏನು ಆಧಾರವಾಯಿತು? ಆಯರ್ಲೆಂಡು, ದಕ್ಷಿಣ ಆಫ್ರಿಕಾ ಪಕೆ ಸ್ವತಃ ಬ್ರಿಟನಿನ ಅತ್ಯಂತ ಆಪ್ತವಾದ ಅಮೇರಿಕವೇ ಇಂದು ಯುದ್ಧಕ್ಕೆ ಇಳಿಯದೆ ತಟಸ್ಥವಾಗಿರಲು ಭಾರತವು ಮಾತ್ರ [illegible] ಯುದ್ಧಕ್ಕೆ [illegible] [illegible]

[illegible] ಭಾರತವು ಯುದ್ಧಕ್ಕೆ ಇಳಿದದೆಯೆಂದು [illegible] ಭಾರತದಲ್ಲಿ [illegible] [illegible] ಅಡಪಕ್ಷವೊಂದು ಯುದ್ಧಕ್ಕೆ ಭಾರತವು ಸೇರಿಲ್ಲವೆಂದು ಪ್ರಚಾರ ಮಾಡಿದರೆ ಅದರ ಮೇಲೆ ಅರಾಜಕತೆಯ ಆರೋಪವನ್ನು ಹೇಗೆ ಹೊರಿಸುವುದು? ಅಮೇರಿಯವರು ಗಾಂಧಿಜಿಯವರ ಸತ್ಯಾಗ್ರಹ ಮತ್ತು ಅವರ ಅನುಯಾಯಿಗಳ ಕಾರ್ಯಧೋರಣೆಗಳನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರಿಸಲಿಲ್ಲವೆಂದು ಹೇಳಬೇಕಾಗುತ್ತದೆ.

ನೆಹರುಗಳ ಬಂಧನದ ವಿಷಯದಲ್ಲಿ ಯೂ ಅಮೇರಿಯವರು ಹೇಳಿದ ಮಾತುಗಳು ತೀರಾ ಬೇಸರವನ್ನುಂಟುಮಾಡುವುವಾಗಿವೆ. ನೆಹರುಗಳು ಸಂಯುಕ್ತ ಪ್ರಾಂತದ ಸರಕಾರಕ್ಕೆ ಕೋಪವುಂಟಾಗುವಂತೆ ನಡೆದರೆಂಬುದು ಆರೋಪ. ನೆಹರು ಪ್ರಾಂತಿಕ ಮುಖಂಡರು ಮಾತ್ರವಲ್ಲ ಅವರು ಭಾರತದ ವಿಚಾರವನ್ನೂ ಅಂತರ್‌ರಾಷ್ಟ್ರೀಯ ದೃಷ್ಟಿಕೋನದಿಂದ ಯೋಚಿಸುವವರು. ರಾಜಕೀಯ ದೃಷ್ಟಿಯಿಂದ ಕಾಂಗ್ರೆಸಿನ ಯುದ್ಧ ಧೋರಣೆಯನ್ನು ವಿವರಿಸಲು ನೆಹರುಗಳಂತಹ ಯೋಗ್ಯ ಪ್ರತಿನಿಧಿ ಬೇರೆ ದೊರಕುವುದು ಸಾಧ್ಯವಿಲ್ಲ. ಕಾಂಗ್ರೆಸಿನಂತಹ ಪ್ರಬಲ ರಾಜಕೀಯ ಪಕ್ಷವು ತನ್ನ ಧೋರಣೆಯನ್ನು ಜನರ ಮುಂದಿಟ್ಟು ವಾದಿಸಿದರೆ ಅದು ಯಾವ ಪ್ರಜಾಪ್ರಭುತ್ವ ಸರಕಾರಕ್ಕೂ ಕೋಪವನ್ನು ಹುಟ್ಟಿಸುವುದು ಸಾಧ್ಯವಿಲ್ಲ. ಹೇಗಿದ್ದರೂ ಅವರಿಗಿತ್ತ ನಾಲ್ಕು ವರ್ಷಗಳ ಸಿದ್ಧ ಶಿಕ್ಷೆಯ ವಿಚಾರ ಬ್ರಿಟಿಷ್ ಪ್ರಮುಖರೇ ಬ್ರಿಟಿಷ್ ಪತ್ರಿಕೆಗಳೇ ಅತ್ಯಗತ್ಯವಾಯಿತೆಂದು ವಾದಿಸುತ್ತಿರಲು, ಯಾಕಾದರೆ ಅದಕ್ಕೆ ಅಪೀಲು ಮಾಡಬಹುದೆಂದು ಹೇಳಿದ ಉತ್ತರವು ಬಹಳ ನಿರ್ಲಕ್ಷ್ಯಭಾವದ್ದಾಗಿದೆ.

ಇಂಗ್ಲೆಂಡ. ಸರ್ವಾಧಿಕಾರದೆದುರು ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಡುವ ಬ್ರಿಟನು ಭಾರತೀಯರ ಸ್ವಾತಂತ್ರ್ಯ ಪ್ರೇಮವನ್ನೂ ಸಹನಾಬುದ್ಧಿಯಿಂದ, ಸಹಾನುಭೂತಿಯ ದೃಷ್ಟಿಯಿಂದ, ಆದರ ಭಾವದಿಂದ, ಅಭಿಮಾನದಿಂದ ನೋಡಬೇಕು. ಹಾಗೆ ಮಾಡುವುದು ಅದಕ್ಕೇ ಗೌರವವನ್ನು ತರುವಂತಹುದು; ನಿರ್ಲಕ್ಷಿಸುವಂತೆ ನಡೆಯುವುದರಿಂದ ವೈಷಮ್ಯವೇ ಹೆಚ್ಚಬಹುದು; ಇದರಿಂದ ಯಾರಿಗೂ ಸುಖ ದೊರಕುವಂತಿಲ್ಲ.

ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕು

ಹಿಂದೆ ನಮ್ಮ ಶಾಲೆಗಳಲ್ಲಿ ದೇಶಭಾಷಾ ಪಾಠವೊಂದನ್ನುಳಿದು ಮಿಕ್ಕ ಎಲ್ಲಾ ವಿಷಯಗಳನ್ನೂ ಆಂಗ್ಲಭಾಷೆಯಲ್ಲಿಯೇ ಕಲಿಸುವುದಾಗಿತ್ತು. ಆದರೆ ಪ್ರಾಂತಿಕ ಸರಕಾರದವರೂ, ವಿದ್ಯಾವಿಚಕ್ಷಣರೂ ಈ ಪರಿಸ್ಥಿತಿಯು ನಮ್ಮ ದೇಶದ ಜನತೆಗೆ ಹೆಚ್ಚಿನ ಸಾಧಕವಾಗಲಾರದೆಂದು [illegible] ಈಗ ಒಂದೆರಡು ವರ್ಷಗಳಿಂದ ಆಯಾಯ ಪ್ರಾಂತಿಕ ಭಾಷೆಗಳೇ ಶಿಕ್ಷಣ ಮಾಧ್ಯಮವಾಗಿರಬೇಕೆಂ[illegible] [illegible]ಯೋಜನೆಯನ್ನು ತಂದಿರುವುದು ನಿಜವಾಗಿಯೂ ಅಭಿನಂದನೀಯ ವಿಚಾರವಾಗಿದೆ.

ಪರಕೀಯ ಭಾಷೆಯನ್ನು ಕಲಿತು ಆ ಭಾಷಾಜ್ಞಾನವನ್ನು ಚೆನ್ನಾಗಿ ಮಾಡಿಕೊಳ್ಳದ ವಿನಾ ವಿದ್ಯಾರ್ಥಿಗಳು ಯಾವುದೇ ವಿಷಯ ಜ್ಞಾನವನ್ನು ಪಡೆಯುವುದು ದುಸ್ತರವಾಗುತ್ತಿತ್ತು. ಇದನ್ನು ಬಿಟ್ಟು ಪರಭಾಷಾಜ್ಞಾನಕ್ಕಾಗಿ ವ್ಯರ್ಥ ಆಗುವ ಶ್ರಮವನ್ನು ಪರಿಹರಿಸಿ, ದೇಶಭಾಷೆಗಳಲ್ಲಿಯೇ ವಿಷಯಗಳನ್ನು ಬೋಧಿಸುವುದರಿಂದ ವಿಷಯಜ್ಞಾನವು ಬಹಳ ಬೇಗನೇ ಒದಗುವುದೆಂದು ವಿದ್ಯಾವಿಚಕ್ಷಣರಾದವರೆಲ್ಲರೂ ಮನಗಂಡಿರುತ್ತಾರೆ.

ಹೀಗಿದ್ದರೂ, ಹಲಕೆಲವರ ಆಕ್ಷೇಪದ ಕಾರಣದಿಂದ ಕೆಲವು ಶಾಲೆಗಳ ಮಟ್ಟಿಗೆ, ಕೆಲಸಮಯಕ್ಕೆ ಇದನ್ನು ಕಡ್ಡಾಯ ಮಾಡದೆ ಐಚ್ಛಿಕವೆಂದು ಸರಕಾರದವರು ನಿಯಮಮಾಡಿದ್ದರು. ಆದರೆ ಆ ಸಮಯದೊಳಗೆ ಅವರು ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ತಮ್ಮ ಶಾಲೆಗಳಲ್ಲಿ ಪ್ರಯೋಗಕ್ಕೆ ತರಲು ಸಿದ್ಧರಾಗಬೇಕೆಂದು ಸರಕಾರದ ಅಭಿಪ್ರಾಯವಾಗಿದೆ. ಕ್ರೈಸ್ತ ಶಾಲೆಗಳಲ್ಲಿ ಹೆಚ್ಚಾಗಿ ಆಂಗ್ಲಭಾಷೆಗೇ ಅವರು ಪ್ರಾಧ್ಯಾನ್ಯ ಕೊಡುತ್ತಾ ಬಂದ ಕಾರಣದಿಂದ, ಅಲ್ಲಿನ ಉಪಾಧ್ಯಾಯರಾದವರು ಕನ್ನಡದಲ್ಲಿ ಏಕಾಏಕಿ ಕಲಿಸಲು ಸಿದ್ಧರಿಲ್ಲದ ಕಾರಣ ಹೀಗೆ ಅವರು ಕೆಲಕಾಲ ಐಚ್ಛಿಕವಾಗಿ ಅದನ್ನು ಉಪಯೋಗಿಸಬಹುದಾಗಿ ವಿಧಿಸಲಾಗಿತ್ತು.

ಮಂಗಳೂರಿನ ಕೆಲ ಕ್ರೈಸ್ತರು ತಮಗೆ ಕನ್ನಡವು ಶಿಕ್ಷಣ ಮಾಧ್ಯಮವಾಗಿರುವುದು ಬೇಡವೆಂದೂ ಆಂಗ್ಲಭಾಷೆಯೇ ಆಗಬಹುದೆಂದೂ ಅಲ್ಲಲ್ಲಿ ಸಭೆಗೂಡಿ ನಿರ್ಣಯ ಮಾಡುವುದು, ಆ ವಿಷಯ ಸಹಿಗಳನ್ನು ಒಟ್ಟುಗೂಡಿಸುವುದು ಈ ಕೆಲಸವು ಭರದಿಂದ ನಡೆಸಿದರು ಎಂಬ ವಿಷಯ ತಿಳಿದುಬರುತ್ತಿದೆ. ಹೀಗೆ ಮಂಗಳೂರಲ್ಲಿರುವ ಕ್ರೈಸ್ತ ಶಾಲೆಗಳಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗುವುದು ಬೇಡವೆಂದು ಆಗುತ್ತಿರುವ ಪ್ರಚಾರವು ಸರಿಯಲ್ಲವೆಂದೂ, ಮೊನ್ನೆ ಪಂಡಿತಸಂಘ ಮಿತ್ರಮಂಡಳಿ, ಕಲ್ಚರಲ್ ಎಸೋಸಿಯೇಶನ್‌ಗಳ ಆಶ್ರಯದಲ್ಲಿ ಪ್ರಚಂಡ ಸಭೆಯೊಂದು ಸೇರಿತ್ತು. ಆ ಸಭೆಯಲ್ಲಿ ಹಲವರು, ಕ್ರೈಸ್ತ ಮಹಿಳೆಯರು ಕನ್ನಡವು ಶಿಕ್ಷಣ ಮಾಧ್ಯಮವಾಗಿರಬೇಕೆಂದು ವಾದಿಸಿದರು. ಆ ಸಭಾ ಸಮಯದಲ್ಲಿ ಕೆಲಜನರು ಮಾಡಿದ ಗಲಭೆಯು ತೀರಾ ಅಸಭ್ಯವಾಗಿತ್ತೆನ್ನಬೇಕು.

ಕೆಥೋಲಿಕ್ ಕ್ರೈಸ್ತರಿಗೆ ಕನ್ನಡಕ್ಕಿಂತ ಕೊಂಕಣಿ ಭಾಷೆಯನ್ನು ಸುಲಭವಾಗುವುದಿಲ್ಲವೆಂಬುದು ನಿಜ. ಇಂತಹ ಅಪವಾದ ಸಾರಸ್ವತ ಗೌಡ ಸಾರಸ್ವತರಿಗೂ ಇರಬಹುದು; ಕನ್ನಡ ಮಾತೃಭಾಷೆಯಲ್ಲದ ಇತರ ಜನರಿಗೂ ಇರಬಹುದು. ಆದರೆ ಪರಕೀಯವಾದ ಆಂಗ್ಲಭಾಷೆಗಿಂತ ಈ ಎಲ್ಲಾ ಜನರಿಗೂ ಕನ್ನಡವು ಖಂಡಿತವಾಗಿ ಸುಲಭವಾಗಲೇ ಬೇಕು. ಹೀಗಿರುವಾಗ ಕೇವಲ ಆಂಗ್ಲ ಭಾಷೆಯ ವ್ಯಾಮೋಹವನ್ನು ಹಿಡಿದು ಹೀಗೆ ಗುಲ್ಲೆಬ್ಬಿಸುವುದು ಇಂದು ರಾಷ್ಟ್ರೀಯತೆಗೆ ಕಡೆಗೆ ಜಗತ್ತೆ ಧಾವಿಸುತ್ತಿರುವಾಗ ಅವರಿಗೆ ಭೂಷಣವಾಗದಯುಕ್ತದ ನಿವಾರಣವಿಲ್ಲ.

ರಾಷ್ಟ್ರೋದ್ಧಾರದ ಹದಿಮೂರು ಸೂತ್ರಗಳು

ಸತ್ಯಾಗ್ರಹದೊಡನೆ ರಚನಾತ್ಮಕ ಕಾರ್ಯಗಳು!

ಗಾಂಧಿಜಿಯವರ ರಾಜಕೀಯ ತತ್ವ!

ಅಹಿಂಸಾತ್ಮಕ ಉಪಾಯಗಳಿಂದ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾದರೆ ಆ ಹೋರಾಟದಲ್ಲಿ ಭಾಗವಹಿಸುವ ಜನತೆಯೂ ಕೆಲವು ವಿಶಿಷ್ಟ ಮಾನಸಿಕ ಮತ್ತು ನೈತಿಕ ಗುಣಗಳನ್ನು ಹೊಂದಿರಬೇಕಾಗುತ್ತದೆ. ಈ ಗುಣಗಳು ಒಂದೆರಡು ದಿನಗಳ ಅಭ್ಯಾಸದಿಂದ ಬರುವಂಥವುಗಳಾಗಿರುವುದಿಲ್ಲ. ಅದಕ್ಕೆ ಬಹಳ ಇಂದ್ರಿಯನಿಗ್ರಹವೂ, ಶಿಸ್ತೂ, ಧೈರ್ಯ ಸ್ಥೈರ್ಯಗಳೂ, ತ್ಯಾಗ ಐಕ್ಯತೆಗಳೂ, ಸತ್ಯಪ್ರೇಮನಿಷ್ಠೆಯೂ ಬೇಕಾಗುತ್ತವೆ. ಆದ್ದರಿಂದ ಅಹಿಂಸಾತ್ಮಕ ಯುದ್ಧದಲ್ಲಿ ರಾಜಕೀಯ ಹೋರಾಟವು ಅದರ ಒಂದು ಸಣ್ಣ ಅಂಶ ಮಾತ್ರ ಆಗಿದೆ ಮತ್ತು ಈ ಹೋರಾಟದ ಸಫಲತೆಗೆ ಹಲವು ವರ್ಷಗಳ ಸತತ ಪರಿಶ್ರಮವೂ ಅಭ್ಯಾಸವೂ ಅಗತ್ಯವಾಗಿವೆ ಎಂದು ಗ್ರಾಮೋದ್ಯೋಗ ಪತ್ರಿಕೆಯಲ್ಲಿ ಒಂದು ವಿಚಾರಪೂರ್ಣವಾದ ಲೇಖನವು ಬಂದಿದೆ.

ಈ ರಾಜಕೀಯ [illegible] ನೀರ ಮೇಲೆ [illegible] ಗಡ್ಡೆಗೆ ಹೋಲಿಸಬಹುದು [illegible] ಮೇಲೆ ಕಾಣುವ [illegible] ಗಡ್ಡೆಯ [illegible] ಬಹಳ ಸಣ್ಣದಿರುತ್ತದೆ [illegible] ಆಧಾರಭೂತವಾಗಿ [illegible] ನಮಗೆ ಕಾಣ[illegible] ಅದಕ್ಕಿಂತ ಏಳೆಂಟು ಪಾಲು ದೊಡ್ಡದಿದೆ. ಈ ದೊಡ್ಡ ಅಂಶದ [illegible] ಮೇಲಿನದಕ್ಕೆ ಅಸ್ತಿತ್ವವು ಇರುವುದಿಲ್ಲ. ಆದರೂ ಕಾಣದಿರುವ ಮತ್ತು ಕಾಣುವ ಮಂಜುಗಡ್ಡೆಯ ಈ ಅಂಶಗಳ [illegible] ಆಗಿರುವುದು. ಅದರಂತೆ ರಾಜಕೀಯ ಹೋರಾಟದಲ್ಲಿ ಒಬ್ಬನು ಭಾಗವನ್ನು ತೆಗೆದುಕೊಂಡರೂ ಅಥವಾ ರಚನಾತ್ಮಕ ಕಾರ್ಯಕ್ರಮದಲ್ಲಿ ಅವನು ಸೇರಿದರೂ, ಅವನು ಮಾಡುವ ಕೆಲಸವು ಅಹಿಂಸಾತ್ಮಕ ಉಪಾಯಗಳಿಂದ ದೇಶವನ್ನು ಸ್ವತಂತ್ರ ಮಾಡುವ ಪ್ರಚಂಡ ಆಂದೋಲನಕ್ಕೆ ಸಂಬಂಧಪಟ್ಟೇ ಇರುತ್ತದೆ. ಗಂಭೀರವಾಗಿ ಆಲೋಚಿಸಿದರೆ ನೀರಿನಡಿಯ ಮಂಜುಗಡ್ಡೆಯ ದೊಡ್ಡ ಅಂಶದಂತಿರುವ ರಚನಾತ್ಮಕ ಕಾರ್ಯಕ್ರಮದಲ್ಲಿ ಸೇರಿಕೊಂಡ ಯೋದ್ಧರು ಈ ಆಂದೋಲನದ ಮುಖ್ಯ ಭಾಗವಾಗಿಯೇ ಇರುತ್ತಾರೆ.

ಸರ್ವಸೇನಾಧಿಪತಿಗಳ ಕರೆ—

ಆದ್ದರಿಂದಲೇ ನಮ್ಮ ಸ್ವಾತಂತ್ರ್ಯ ಯುದ್ಧದ ಸರ್ವಸೇನಾಧಿಪತಿಗಳು ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮದ ಕಡೆಗೆ ಹೆಚ್ಚಿನ ಲಕ್ಷ್ಯವನ್ನು [illegible] ದ್ದಾರೆ. ಮತ್ತು ಅದರ ಸಫಲತೆಗಾಗಿಯೇ ಜನರು ಹೆಚ್ಚಿನ [illegible] ಬೇಕೆಂದು ಹೇಳಿದ್ದಾರೆ. ಈ ಕಾರ್ಯಕ್ರಮದ ಸಫಲತೆಗೆ ಜನರ ಮೌಖಿಕ ಸಹಾನುಭೂತಿಯು ಬೇಕಾದುದಲ್ಲ. ಜನತೆಯಲ್ಲಿ ಹೊಸ ಹೊಸ ಸ್ಫೂರ್ತಿ ಉತ್ಸಾಹ, ಧೈರ್ಯಬಲಗಳನ್ನು ಕೊಟ್ಟು ಹೊಸ ಜೀವನವನ್ನು ತುಂಬಿಸುವುದಕ್ಕೋಸ್ಕರ ಅವರ ಹಾರ್ದಿಕ ಮತ್ತು ಕ್ರಿಯಾತ್ಮಕ ಸಹಾಯ ಸಹಕಾರಗಳು ಈ ಕಾರ್ಯಕ್ರಮದ ಸಫಲತೆಗೆ ಬೇಕು. ಈಗ ಆರಂಭವಾಗಿರುವ ಸತ್ಯಾಗ್ರಹದಲ್ಲಿ ಈ ಕಾರ್ಯಕ್ರಮವನ್ನು ವ್ಯಕ್ತಿಸಿದ್ದ ಎಲ್ಲರೂ ಮುಂದೊತ್ತಬಹುದು. ಪ್ರತಿಯೊಬ್ಬನೂ ಮಾಡಲಿಕ್ಕೆ ಬೇಕಾದ ಕೆಲಸಗಳು ಬಹಳ ಇವೆ ಮತ್ತು ರಾಷ್ಟ್ರನಿರ್ಮಾಣದ ಈ ಪವಿತ್ರ ಕಾರ್ಯದಲ್ಲಿ ಹೆಚ್ಚಿನ [illegible] ಸಾಹಸವನ್ನು ತೋರಿಸಿ [illegible] ಅವಕಾಶವಿದೆ. ಇದು ರಾಜಕೀಯ ಹೋರಾಟದ [illegible] ಕಾರಣವಾಗಿದೆ. ಅದರ ದೊಡ್ಡ ಅಂಶವಾಗಿ [illegible] ಇರತ್ತದೆ. ಆದ್ದರಿಂದ ಇದರ ಕಡೆಗೆ ಎಲ್ಲರ ಲಕ್ಷ್ಯವು ಹರಿದಲೇ ಹೋಗಬೇಕಾಗಿದೆ.

ಹದಿಮೂರು ಸೂತ್ರಗಳು

[illegible] ಈ [illegible] ತ್ಮಕ [illegible] ತ್ಮಾಜಿ[illegible] ಈ ಮೊದಲೇ ಹೇಳಿದ [illegible] (೧) [illegible] (೨) [illegible] ಸ್ಪೃಶ್ಯತಾ [illegible] (೩) ಮದ್ಯ [illegible] (೪) [illegible] ಪ್ರಚಾರ, (೫) ಗ್ರಾಮೋದ್ಯೋಗಗಳ ಅಭಿವೃದ್ಧಿ (೬) ಗ್ರಾಮ [illegible] ಮತ್ತು ಆರೋಗ್ಯ (೭) [illegible] ಶಿಕ್ಷಣ (೮) ಪ್ರಾಯಸ್ಥ ಶಿಕ್ಷಣ ( ) ಮಹಿಳೆಯರ ಉದ್ಧಾರಣೆ (೧೦) ಆರೋಗ್ಯ ಶಿಕ್ಷಣ (೧೧) ರಾಷ್ಟ್ರಭಾಷೆಯಾದ ಹಿಂದಿ, ಹಿಂದುಸ್ತಾನಿಯ ಪ್ರಚಾರ, (೧೨) ಮಾತೃಭಾಷೆಯ ಮೇಲೆ ಪ್ರೇಮ (೧೩) ಆರ್ಥಿಕ ಸಮತೆ. ಇವುಗಳಲ್ಲದೆ ರಾಷ್ಟ್ರನಿರ್ಮಾಣದ ಇನ್ನೂ ಅನೇಕ ವಿಷಯಗಳನ್ನು ಈ ಪಟ್ಟಿಗೆ ಸೇರಿಸಿಕೊಳ್ಳಬಹುದು. ಆದರೂ ಈ ಹದಿಮೂರು ವಿಷಯಗಳು ರಾಷ್ಟ್ರನಿರ್ಮಾಣಕ್ಕೆ ಸಂಬಂಧಪಟ್ಟು ಅತ್ಯಂತ ಮುಖ್ಯವಾಗಿ ಇರುತ್ತವೆ ಮತ್ತು ಅವುಗಳ ಸಾಧನೆಯಿಂದ ರಾಷ್ಟ್ರನಿರ್ಮಾಣವಾಗುವದರಲ್ಲಿ ಏನೇನೂ ಸಂದೇಹವಿರುವುದಿಲ್ಲ..

ಸತ್ಯಾಗ್ರಹದ ಸತ್ವಪರೀಕ್ಷೆಯಲ್ಲಿ ವಿಜಯಿಗಳಾಗಬೇಕಾದರೆ ಅವರು ಈ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿ ಸಫಲರಾಗಬೇಕು. ಒಬ್ಬೊಬ್ಬರು ಈ ಕಾರ್ಯಕ್ರಮವನ್ನು ಸ್ವಲ್ಪ ಸ್ವಲ್ಪ ಮುಂದೊತ್ತಿದರೂ ಕೂಡ ಅದಕ್ಕೆ ಸಂಬಂಧಪಟ್ಟು ಸಂಘಸಂಸ್ಥೆಗಳ ಉನ್ನತಿಯು ಧನವಾಳವಾಗಿ [illegible] ಸ್ವರಾಜ್ಯ ಸಂಪಾದನೆಗೆ ಅವರು [illegible] ಕೆಲಸಗಳನ್ನು [illegible]

ಭಾರತದ ಪರಿಸ್ಥಿತಿ ವಿಷಯ

ಎಮೆರಿಯರ ಅಭಿಮತ!

ಪಾರ್ಲಿಮೆಂಟಿನಲ್ಲಿ ಚರ್ಚೆ!

ಗಾಂಧೀ ಚಳವಳ ಶಾಂತಿವಾದದ್ದಲ್ಲವಂತೆ!

ಭಾರತದ ಮುಖಂಡರಲ್ಲಿ ಒಪ್ಪಂದವಿಲ್ಲವಂತೆ!

ಭಾರತದ ಮಂತ್ರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಹಿಂದುಸ್ಥಾನದ ವಿಷಯವಾಗಿ ಒಂದು ಭಾಷಣ ಮಾಡಿದರು. ಆ ಭಾಷಣದಲ್ಲಿ ಸತ್ಯಾಗ್ರಹದ ಕುರಿತೂ ಕೆಲವು ಮಾತುಗಳನ್ನು ಹೇಳಿದರು. ಗಾಂಧಿಜಿಯವರ ಈ ಚಳವಳವು ಕೇವಲ ಶಾಂತಿವಾದದ ಚಳವಳವಲ್ಲ, ಅದು ಹಾಗಿದ್ದರೆ, ಅವರಿಗೂ ಅವರ ಅನುಯಾಯಿಗಳಿಗೂ, ಇಂಗ್ಲೆಂಡಿನಲ್ಲಿರುವಷ್ಟು ಸ್ವಾತಂತ್ರ್ಯ ಕೊಡಲು ಬ್ರಿಟಿಷ ಸರಕಾರ ತಯಾರಿದೆ. ಆದರೆ ಗಾಂಧಿಜಿ ಮತ್ತು ಅವರ ಹಿಂಬಾಲಕರ ಅಭಿಪ್ರಾಯ ಬೇರೆ. ಯುದ್ಧಕಾಲದಲ್ಲಿ ಅವರ ಹಂಚಿಕೆ ನಡೆಯುವಂತೆ ಯಾವ ಸರಕಾರವೂ ಆಸ್ಪದ ಕೊಡಲಾರದು ಎಂದರು.

ನೆಹರು ಶಿಕ್ಷೆ ಕುರಿತು

[illegible] ನೆಹರು [illegible] ಶಿಕ್ಷೆ [illegible] ಭಾಷಣವು [illegible] ಮಾಡ [illegible] ಅವರಿಗೆ [illegible] ಶಿಕ್ಷೆ [illegible] ಅವರ [illegible] ಮಾನ [illegible] ನಾವು [illegible] ತಿಳಿಸಿದ್ದೇವೆ [illegible] ಈಗಿನ [illegible] ಪಯೋಗಪಡಿಸುವುದ [illegible] ಭಾರತೀಯರನ್ನೇ ಹೊಂದಿಕೊಂಡಿದೆಯೆಂದರು

ಭಾರತದ ವಿಷಯ ಚರ್ಚೆ

ಕಾಮನ್ಸ್ ಸಭೆಯಲ್ಲಿ ಭಾರತದ ಕುರಿತು ಚರ್ಚೆಯಾಯಿತು. ಮೊದಲಾಗಿ ವಿಂಟೆರಟನರು ಮಾತನಾಡಿದರು. ಬ್ರಿಟನು ಈ ಯುದ್ಧದಲ್ಲಿ ಸೋತರೆ ಭಾರತವು ಟವರ್ಮಾದೇಶಗಳು ಸರ್ವಾಧಿಕಾರಿಗಳ ವಶವಾಗುವುದೆಂದರು. ಆ ಮೇಲೆ ಐವಾನರು ಮಾತನಾಡಿ ನೆಹರುಗಳಿಗೆ ವಿಧಿಸಿದ ಶಿಕ್ಷೆ ಅಮಾನುಷವಾಯಿತೆಂದರು. ಭಾರತದ ವಿಷಯ ಸಹಾನುಭೂತಿ ತೋರಿಸಿ ಸಾಮಂತ ಸ್ವರಾಜ್ಯ ಕೊಟ್ಟರೆ ಅವರು ಖಂಡಿತ ಸಹಾಯ ಮಾಡುವರೆಂದು ಗಾರ್ಡನ್ ಮ್ಯಾಕಡೊನಾಲ್ಡರೆಂದರು. ಆ ಮೇಲೆ ಗ್ರಹಾಮ ಪೈಟರ್ಸರು ಮಾತನಾಡಿ ಯಾವ ಸರಕಾರಕ್ಕೂ [illegible] ಈಗ [illegible]

ಮಾತನಾಡುತ್ತಾ ಈ ಸಾರಾಂಶದ ಮಾತುಗಳನ್ನು ಹೇಳಿದರು.

"ಭಾರತದ ತೊಡಕ ಪರಿಹಾರವಾಗಬೇಕಾಗಿದೆ. ಆದರೆ ಭಾರತೀಯರಲ್ಲಿ ಒಪ್ಪಂದವಾಗಿಲ್ಲ. ಅವರು ಬಂದು ಅಭಿಪ್ರಾಯಕ್ಕೆ ಬಂದರೆ ನಾವು ಸಾಧ್ಯವಾದ ಸಹಾಯ ಮಾಡಬಹುದು. ವೈಸರಾಯರ ಮಂತ್ರಿಮಂಡಲವನ್ನು ಭಾರತೀಯರು ಸ್ವೀಕರಿಸಬೇಕು."

ಯುದ್ಧದಲ್ಲಿ ಭಾರತ

ಮತ್ತೆ ಭಾರತೀಯರು ಈ ಕಳೆದ ಯುದ್ಧದಲ್ಲಿ [illegible] ಹೋರಾಡಿರುವರೆಂದರು, ಈ ಸಲವೂ ತಾವಾಗಿಯೇ ಬಹಳ [illegible] ಒದಗುತ್ತಿರುವರೆಂದರು. [illegible] ಶಿಕ್ಷಣಕ್ಕೆ [illegible] ಹೆಚ್ಚಿಸಲಾಗಿದೆ. ಭಾರತೀಯರು ವಿಮಾನ [illegible] ದ್ದಾರೆ, ಬೇಕಾದ ಶಸ್ತ್ರಾಸ್ತ್ರಗಳು ತಯಾರಾಗಿವೆ, ಬ್ರಿಟಿಷ [illegible] ಸರ್ವಾಧಿಕಾರಿಗಳ [illegible] ತತ್ವಗಳ [illegible] ಅಲ್ಲಿನ [illegible] ಯುದ್ಧದ [illegible] ಸಹಕಾರ ದೊರೆತಿದೆ [illegible] ಹೇಳಿದರು.

ರಾಜಕೀಯ ಪರಿಸ್ಥಿತಿ

[illegible] ಭಾರತದ ರಾಜಕೀಯ ಪರಿಸ್ಥಿತಿ [illegible] ಮಾತನಾಡುತ್ತಾ, ಬ್ರಿಟಿಷರು [illegible] ಶ್ವೇತಪತ್ರ White paper ದಲ್ಲಿ ತೋರಿಸಿದ ರಿಯಾಯಿತಿ [illegible] ಅದನ್ನೆಲ್ಲಾ ಸಂಪೂರ್ಣ ಮಾಡಿದ್ದಾರೆ, ನಾಳೆಯೇ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟರೂ ಕೆಲಕಾಲಗಳ ತನಕ ತನ್ನ ರಕ್ಷಣೆಗೆ ಭಾರತವು ಬ್ರಿಟಿಷ ಬಲವನ್ನವಲಂಬಿಸಬೇಕಾಗಿದೆಯೆಂದರು.

ಈ ಸಂದರ್ಭದಲ್ಲಿ ಕಾಂಗ್ರೆಸಿನ ವಿಷಯ ಮಾತನಾಡುತ್ತಾ ಅದು ಸುವರ್ಣ ಸಂಧಿಯನ್ನು ಕಳೆಕೊಂಡು ನಿಜವಾದ ಶಕ್ತಿ ಹೊಣೆಗಾರಿಕೆಗಳನ್ನು ಉಪಯೋಗಿಸದೆ ಇರುವುದು ಬಹಳ ಶೋಚನೀಯವೆಂದರು. ಇನ್ನಾದರೂ ಭಾರತದ ಮುಖಂಡರು ತಮ್ಮೊಳಗಿನ ತೊಡಕುಗಳನ್ನು ಬಗೆಹರಿಸಿ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ, ಅದಕ್ಕೆ ನಾವು ಬೆಂಬಲ ಕೊಡುವೆವೆಂದರು.

ಶಸ್ತ್ರತ್ಯಾಗವೆಂದು ಯುದ್ಧಸನ್ನಾಹವಾಯಿತು!

ಚರ್ಚಿಲರು ಬರೆದ ಹಿಟ್ಲರ ಜೀವನಪರಿಚಯ

ಯುದ್ಧಕ್ಕೆ ಸಿದ್ಧಗೊಳಿಸುತ್ತಿದ್ದ ಹಿಟ್ಲರ್ (ಲೇಖಾಂಕ ೨)

[ಮೊದಲನೆಯ ಲೇಖಾಂಕದಲ್ಲಿ ಹಿಟ್ಲರನು ಜರ್ಮನಿಯಲ್ಲಿ ಅಧಿಕಾರಕ್ಕೆ ಬರುವಾಗಿನ್ನ ಪರಿಸ್ಥಿತಿ, ಒಂದನೆಯ ಮಹಾಯುದ್ಧದ ಬಳಿಕದ ಒಪ್ಪಂದದ ಕೊಟ್ಟಿಗೆದ್ದ ಜರ್ಮನರು ಈ ವಿಷಯಗಳನ್ನು ಚರ್ಚಿಲ್ಲರು ಬರೆದ ಹಿಟ್ಲರನ ಜೀವನಕಥೆಯಿಂದ ತೆಗೆದುಕೊಟ್ಟಿದೆ. ಇದರಲ್ಲಿ ಅದರ ಮುಂದಿನ ಭಾಗವನ್ನು ಕೊಡಲಾಗಿದೆ.]



ಚರ್ಚಿಲರು

ಜಯಶೀಲರಾದವರು ತಮ್ಮ ಆಯುಧಗಳನ್ನು ಕೆಳಗಿಟ್ಟು ತಮ್ಮ ಶಸ್ತ್ರಾಸ್ತ್ರ ಪ್ರಯೋಗಗಳನ್ನು ಕಡಿಮೆ ಮಾಡುವ ಮೊದಲು ಪರಾಜಿತರ ಕಾಂಕ್ಷೆಗಳನ್ನು, ಅವರ ನ್ಯಾಯವಾದ ಸಂಕಷ್ಟಗಳನ್ನು ನಿವಾರಣೆ ಮಾಡುವದು ಅಗತ್ಯವೆಂಬುದಾಗಿ ನಾನು (ಚರ್ಚಿಲ್) ಈ ಮೊದಲೇ ನಿರ್ಧಾರಮಾಡಿರುತ್ತೇನೆ. ಟ್ರಿಯಾನನ್ ಮತ್ತು ವಾರ್ಸೆಲಿಸ್ ಒಪ್ಪಂದಗಳಿಂದ ಜರ್ಮನಿಯವರಿಗೆ ಉಂಟಾದ ಸಂಕಷ್ಟಗಳನ್ನು ಮಿತ್ರಮಂಡಳದವರು ನಿವಾರಣೆ ಮಾಡಲೇ ಇಲ್ಲ. ಹಿಟ್ಲರನು ತನ್ನ ಭಾಷಣಗಳಲ್ಲಿ ಈ ಚಿಲ್ಲರೆ ಅನ್ಯಾಯಗಳ ವಿಷಯವೂ ಯುರೋಪಿನ ರಾಜ್ಯಗಳನ್ನು ಜನಾಂಗಗಳಿಗೆ ಹಂಚಿ ಹಾಕಿದ ವಿಷಯವೂ ಯಾವಾಗಲೂ ಮಾತನಾಡಿ ಮಿತ್ರಮಂಡಳದವರನ್ನು ದೂಷಿಸಲು ಅವನಿಗೆ ಈ ರೀತಿ ಸಹಾಯವಾದಂತಾಯಿತು. ಆಂಗ್ಲೇಯರಲ್ಲಿ, ಎಂದಿಗೂ ಈ ಭೂಮಿಯಲ್ಲಿ ಯುದ್ಧವಾಗಬಾರದಾಗಿ ಧ್ಯೇಯ ಮಾಡಿಕೊಂಡ ಶಾಂತಪಕ್ಷದವರೂ, ಅಮೇರಿಕದಲ್ಲಿ ಇರುವ ಇವರ ಈ ಧ್ಯೇಯವನ್ನು ಅಂಗೀಕರಿಸಿದ ಕೆಲವರೂ, ಎಲ್ಲಾ ಜನಾಂಗಗಳೂ ತಮ್ಮ ಆಯುಧಗಳನ್ನು ಕೆಳಗಿಟ್ಟು ಯುದ್ಧ ಸಂಬಂಧವಾದ ಯಾವತ್ತು ಶಸ್ತ್ರಾಸ್ತ್ರಗಳನ್ನು, ಜಲಹಡಗು, ವಾಯುವಿಮಾನಗಳನ್ನು ಕಡಿಮೆಮಾಡಬೇಕೆಂಬ ಸೂತ್ರವನ್ನು ಬಡಿಗಿಟ್ಟು, ಅದನ್ನು ಜಾರಿಗೆ ತರುವರೆ ಹೆಚ್ಚಿನ ಪ್ರಯತ್ನ ನಡೆಸಿದರು. ಇದಕ್ಕೋಸ್ಕರ ಸೇರಿದ ಸಭೆಯು ಈ ಭೂಲೋಕದ ಸ್ಥಿತಿಯ ವಿಷಯ ಆಲೋಚಿಸಲಿಲ್ಲ. ಯಾವ ರೀತಿಯಲ್ಲಿ ಮಿತ್ರಮಂಡಳದವರ ಯುದ್ಧಸನ್ನಾಹವನ್ನು ಕಡಿಮೆಮಾಡಬಹುದು, ಜನಾಂಗಗಳೆಲ್ಲ (disarmament) ಆಯುಧಗಳನ್ನು ಹೆಚ್ಚಿಸದಿರುವದನ್ನು ಹ್ಯಾಗೆ ಜಾರಿಗೆ ತರಬಹುದೆಂಬದನ್ನು ಈ ಸಭೆಯು ಆಲೋಚಿಸಿತು. ಅಮೇರಿಕದವರು ಈ ಕ್ರಮಗಳನ್ನು ಒಪ್ಪಿದರೂ ತಮ್ಮ ಸೈನ್ಯವನ್ನೂ, ವಾಯುಹಡಗಗಳನ್ನೂ, ನೌಕಾಸೈನ್ಯವನ್ನೂ ಹೆಚ್ಚಿಸಿದರು. ಅಂಗ್ಲಾಂಡವು ಮಾತ್ರ ಈ ರೀತಿ ಈ ಸೂತ್ರಕ್ಕನುಸಾರವಾಗಿ ಯುದ್ಧಸನ್ನಾಹವನ್ನು ಕಡಿಮೆಮಾಡಿತು. ಬೇರೆ ಯಾವ ಜನಾಂಗವೂ ಈ ಕ್ರಮವನ್ನು ಜಾರಿಗೆ ತರಲಿಲ್ಲ. ಅಮೇರಿಕವು ಫ್ರೆಂಚ ಕೊಡದಿಯುದ್ದರಿಂದಲೂ, ಯುದ್ಧದಲ್ಲಿ [illegible] ಜರ್ಮನಿಯು [illegible] ತಮ್ಮ ಸೈನ್ಯವನ್ನು ಯುದ್ಧ [illegible] ಹೆಚ್ಚಿಸಿದುದರಿಂದಲೂ,

ಫ್ರೆಂಚರು ತಮ್ಮ ಸೈನ್ಯವನ್ನು ಹೆಚ್ಚಾಗಿ ಕಡಿಮೆಮಾಡಲಿಲ್ಲ. ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದರು. ಕಾರಣಾಂತರಗಳಿಂದ ಇಟಲಿಯವರು ತಮ್ಮ ಸೈನ್ಯವನ್ನು ಹೆಚ್ಚಿಸಿದರು. ಆಂಗ್ಲೇಯರು ಮಾತ್ರ ತಮ್ಮ ಯುದ್ಧಸನ್ನಾಹವನ್ನು ಕಡಿಮೆಮಾಡಿ ತಮ್ಮ ದೇಶದ ಸಂರಕ್ಷಣೆಯ ಜಾಗ್ರತೆಯನ್ನು ಮಾಡಿಕೊಳ್ಳಲಿಲ್ಲ; ವಾಯುವಿಮಾನಗಳಿಂದ ಅಂಗ್ಲಾಂಡಕ್ಕೆ ಇರುವ ಗಂಡಾಂತರದ ವಿಷಯ ಅವರು ನಿಶ್ಚಿಂತರಾಗಿದ್ದರು. ಅದರ ವಿಷಯ ಏನೂ ಎಚ್ಚರಿಕೆಯನ್ನು ಅವರು ತಕ್ಕೊಳ್ಳಲಿಲ್ಲ.

ಈ ಸಮಯದಲ್ಲಿ ಬ್ರುನಿಂಗ ಗವರ್ನಮೆಂಟಿನವರು ಜರ್ಮನಿಯಲ್ಲಿ ತಮ್ಮ ಕಳೆದುಹೋದ ಸೈನ್ಯದ ಪ್ರಾಬಲ್ಯವನ್ನು ತಿರಿಗಿ ಪಡೆಯುವರೆ ಪ್ರಯತ್ನ ಮಾಡಿದರು. ಪ್ರತಿ ಒಂದು ಕಡೆಯಿಂದ ಜರ್ಮನ ಸರಕಾರಕ್ಕೆ ಯುದ್ಧಸನ್ನಾಹಕ್ಕೆ ಪ್ರೋತ್ಸಾಹ ಉಂಟಾಯಿತು. ವ್ಯಾಪಾರಕ್ಕೋಸ್ಕರ ತಾವು ವಾಯುವಿಮಾನಗಳನ್ನು ತಯಾರಿಸುತ್ತೇವೆಂಬ ನೆವನವನ್ನು ಹೇಳಿ ಬೇರೆ ಜನಾಂಗಗಳಿಗೆ ಈ ರೀತಿ ಮಂಕುಗೊಳಿಸಿ ಜರ್ಮನಿಯ ಪ್ರತಿ ಒಂದು ಕಡೆಯಲ್ಲಿ ವಾಯುವಿಮಾನಗಳ ತಯಾರಿಯ ಬಗ್ಗೆ ಜನರ ತರ್ಬೇತು ಸುರುವಾಯಿತು. ಉದ್ಯಮಗಳನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತೇವೆಂಬ ನೆವನದಿಂದ ಗಿಗಿಲ-ಗಿಗಿಲನೇ ಯುದ್ಧದ ಒಪ್ಪಂದದ ಶರ್ತಗಳಿಗೆ ವಿರೋಧವಾಗಿ, ಜರ್ಮನಿಯ (General staff) ಸೈನ್ಯದ ಮುಖಂಡ ಸಮೂಹವೂ ಹೆಚ್ಚಿತು;

ಜರ್ಮನಿಯಲ್ಲಿರುವ ಎಲ್ಲಾ ಫೆಕ್ಟರಿಗಳು ಯುದ್ಧಸಾಮಗ್ರಿಗಳ ತಯಾರಿಗೆ ಸನ್ನಾಹವಾದವು; ಈ ಸನ್ನಾಹಗಳು ಗುಟ್ಟಿನಿಂದ ನಡೆದವು; ಆದರೆ ಅಂಗ್ಲೇಯ ಮತ್ತು ಫ್ರೆಂಚ ಸರಕಾರಕ್ಕೆ ಇದು ಗೊತ್ತೇ ಇತ್ತು. ಆದರೆ ಈ ಜರ್ಮನಿಯ ಸನ್ನಾಹವನ್ನು ನಿಲ್ಲಿಸುವರೆ ಆಗಲೀ ಈ ಜರ್ಮನಿಯ ಕೂಡೆಯಿರುವ ಅನ್ಯಾಯದ ಒಪ್ಪಂದಗಳನ್ನು ದುರುಸ್ತಿಮಾಡುವರೆ ಆಗಲೀ ಅಧಿಕಾರವುಳ್ಳ ಒಂದು ವ್ಯಕ್ತಿಯ ಸಂಸ್ಥೆ ಮಿತ್ರ ಸರಕಾರದ ರಾಜ್ಯಗಳಲ್ಲಿ ಇರಲಿಲ್ಲ. ೧೯೩೧ರ ವರೆಗೆ ಈ ಯುದ್ಧಸನ್ನಾಹಗಳನ್ನು ಜರ್ಮನಿಯಲ್ಲಿ ನಿಲ್ಲಿಸುವರೆ ಸುಲಭವಿತ್ತು. ಆದರೆ ಜಿಗ್ಯೆ ಮೆಕ್ಡೊನಾಲ್ಡ ಮತ್ತು ಅವರ ಸಹೋದ್ಯೋಗಿಗಳು ಅಂಗ್ಲಾಂಡದಲ್ಲಿ ಶಾಂತಿಯ ವಿಷಯ ಭಾಷಣಗಳನ್ನು ಕೊಟ್ಟು, ನಮ್ಮ ಅಂಗ್ಲಾಂಡದಲ್ಲಿರುವ ರಾಜಕೀಯದ ವಿಷಯ ಏನೂ ತಿಳಿಯದ ಒಳ್ಳೇ ಮನಸ್ಸಿನ ಮತದಾರರ ಕೈಚಪ್ಪಾಳೆಯನ್ನು ಪಡೆಯುತ್ತಿದ್ದರು. ೧೯೩೨ರಲ್ಲಿ ಸಹಾ ಫ್ರೆಂಚರು ತಮ್ಮ ಸೈನ್ಯವನ್ನು ಹೆಚ್ಚಿಸಬಾರದಾಗಿ ಅಂಗ್ಲೇಯರು ಅವರಿಗೆ ಪ್ರೋತ್ಸಾಹ ಮಾಡುತ್ತಿದ್ದರು. ಈ ಎಲ್ಲಾ ಸಮಯದಲ್ಲಿ ಜರ್ಮನಿಯಲ್ಲಿ ಯುದ್ಧಸನ್ನಾಹವು ಅತೀ ಜೋರಾಗಿ ನಡೆಯುತ್ತಲಿತ್ತು; ನಾನು ಪಾರ್ಲಿಮೆಂಟಿನಲ್ಲಿ ಈ ಮರಳುತನವನ್ನು ನನ್ನ ಭಾಷಣದಲ್ಲಿ ಪ್ರಕಟಗೊಳಿಸುತ್ತಿದ್ದೆನು; ಈ (Disarmament) ಸಭೆಯ ಫಲಿತಾಂಶವೆಂದರೆ:— ಕೊನೆಗೆ ಜರ್ಮನಿಯು ತಿರಿಗಿ ಯುದ್ಧಸನ್ನಾಹ ಮಾಡಿದ್ದೇ ಆಗಿದೆ.

ಹೀಗೆ ಜರ್ಮನ ರಾಜ್ಯದಲ್ಲಿ ಯುದ್ಧಸನ್ನಾಹಗಳು ನಡೆಯುತ್ತಿರುವಾಗ ಜರ್ಮನಿಯಲ್ಲಿ ಹಿಟ್ಲರನು ಜರ್ಮನ ಜನತೆಯ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸುವ ಕೆಲಸವನ್ನೂ ಮಾಡಿಕೊಂಡಿದ್ದನು.

ಹಿಟ್ಲರನ ಈ ಸಮಯದ ಚರಿತ್ರೆಯನ್ನು ಪರಿಶೀಲಿಸಿದರೆ ಅವನ ಅತ್ಯದ್ಭುತವಾದ ಧೈರ್ಯ ಶೌರ್ಯಗಳನ್ನು ಯಾರೂ ಮೆಚ್ಚದೆಯಿರಲಾರರು; ತನ್ನ ಸಾಹಸದಿಂದಲೂ, ಸ್ಥಿರ ಪ್ರಯತ್ನದಿಂದಲೂ ಅತ್ಯಂತ ತಾಳ್ಮೆಯಿಂದಲೂ, ಅವನು ತನ್ನನ್ನು ಎದುರಾಡುವ ಜನರನ್ನು ಜಯಿಸಿದನು; ತನ್ನ ಹಾದಿಯನ್ನು ಪ್ರತಿಬಂಧಿಸುವ ಎಲ್ಲಾ ವಿಘ್ನಗಳನ್ನು ತೆಗೆದುಹಾಕಿದನು; ಅವನ ಚರಿತ್ರೆಯ ಮುಖ್ಯ ಸಂಗತಿಗಳು ಎಲ್ಲರಿಗೂ ಗೊತ್ತಿದೆ. ಗಡಿಬಿಡಿಯ ಸಭೆಗಳು, ಮುನಿಚನಲ್ಲಿ ಆದ ಸಣ್ಣ ಲಡಾಯಿ, ಹಿಟ್ಲರನ ಕಾರಾಗೃಹವಾಸ, ಅವನ ತಪ್ಪಿನ ವಿಷಯ ನಡೆದ ಅನೇಕ ತನಿಕೆಗಳು, ಹಿಂಡೆನಬರ್ಗನ ಕೂಡೆ ಅವನ ಲಡಾಯಿ; ಮಂತ್ರಿ ಪಾಪನನು ಮಾಡಿದ ತಪ್ಪು, ಅನಂತರ ಹಿಂಡೆನಬರ್ಗನನ್ನು ತನ್ನ ಕಡೆಗೆ ತಿರಿಗಿಸಿ ಬ್ರುನಿಂಗ ಎಂಬವನನ್ನು ಅವನು ಗವರ್ನಮೆಂಟಿಂದ ಬಿಡುವ ಹಾಗೆ ಮಾಡಿದ್ದು—ಇವೆಲ್ಲವೂ ಹಿಟ್ಲರನನ್ನು ಕೊರ್ಪೊರಲ್ ಕೆಲಸದಿಂದ, ಮಹಾಧೈರ್ಯಶಾಲಿಗಳೂ ಮಹಾ ಶೂರರೂ ಉದ್ಯಮಿಗಳೂ ಯುದ್ಧಪ್ರಿಯರೂ ಆಗಿರುವ ೭೦ ಮಿಲಿಯ ಜರ್ಮನರ ಡಿಕ್ಟೇಟರನಾಗಿ ಆದ ಹಿಟ್ಲರ ಹೆಜ್ಜೆಗಳಾಗಿರುತ್ತವೆ.

K. L. Kudva

Ready for Sale!

1941

SHARADA POCKET DIARIES

Small Size	0—5—0
„ „ (with pocket)	0—6—0
Big Size	0—9—0
„ „ (with pocket)	0—11—0

SHARADA PRESS, MANGALORE

NOTICE

In the Court of the District Munsiff of Mangalore.

S. C. No. 666/1940

P. Sanjiva Rao—*Plaintiff*

&

Venkappa Pujary—*Defendant*

To The defendant

Venkappa Pujary, nephew of Koraga Pujary, residing in Bangra Kuloor village Mangalore Taluq.

Please take notice that the abovenamed plaintiff has filed the above suit to recover Chalageni rental due from the defendant. That the said suit stands posted to 9-12-1940 at 10-30 A. M. You may appear either in person or by pleader on the said date. Otherwise the said suit will be decided in your absence.

P. Sridhara Rao,
Advocate for Plaintiff.
Mangalore, 25-11-1940.

ವಾರದ ಕತೆ

ವೀಣಾನಾದ

(ಬಂಗಾಲೀ ಕತೆ)

ಕನ್ನಡಿಸಿದವರು
ಕೆ. ಶ್ರೀನಿವಾಸ ಶೆಟ್ಟಿ

ಅವಳು ಕಿಶೋರಿ ಕುಲವಧು. ಮನೆಯ ಇತರ ಸ್ತ್ರೀಯರೊಡನೆ ಕೂಡಿಕೊಂಡು ಅವಳೂ ಕುಟುಂಬದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಳು. ಅದೇ ರೀತಿಯಿಂದ ಅವಳ ಜೀವನವು ಕಳೆಯುತ್ತಿತ್ತು. ಹಠಾತ್ತಾಗಿ ಒಂದು ದಿನ ಅವಳು ವೀಣಾನಾದವನ್ನು ಕೇಳಿದಳು ಆ ನಾದವು ಅವಳ ಕಿವಿಗಳನ್ನು ಪ್ರವೇಶಿಸಿ ಹೃದಯವನ್ನು ಮುಟ್ಟಿತು ಅವಳ ಮನಸ್ಸು ಅಶಾಂತವಾಯಿತು. ಹೃದಯದಲ್ಲಿ ತರಂಗಗಳೆದ್ದುವು ಎಲ್ಲರನ್ನೂ ಕರೆದು ಅವಳು ಹೇಳಿದಳು —'ನಾನು ಹೋಗುವೆನು'

ಜನರು ಕೇಳಿದರು—'ಎಲ್ಲಿಗೆ?'

ಅವಳು ಹೇಳಿದಳು—'ಅಂಧಕಾರದ ದೇಶಕ್ಕೆ'

ಜನರು ಹೇಳಿದರು—'ನೀನಾದರೋ ಪ್ರಕಾಶದ ರಾಣಿ ಆಗಿದ್ದೀಯೋ? ಅಂಧಕಾರದ ದೇಶಕ್ಕೆ ಯಾಕೆ ಹೋಗುವಿ?

ಅವಳು ಉತ್ತರ ಕೊಟ್ಟಳು— ನಾನು ಪ್ರಕಾಶದ ರಾಣಿ ಎಂದು ಜನರು ಹೇಳುತ್ತಾರೆ ಅದು ನನಗೇನೂ ತಿಳಿಯುವುದಿಲ್ಲ ಅಂಧಕಾರದ ದೇಶಕ್ಕೆ ಹೋಗದಿದ್ದರೆ ನಾನು ಪ್ರಕಾಶದ ರಾಣಿ ಎಂದು ಹೇಗೆ ಗೊತ್ತಾಗುತ್ತದೆ?'

ಆಗ ಜನರು ಹೇಳಿದರು — ಪ್ರಕಾಶದ ರಾಣಿ ಆಗಿದ್ದು ನೀನು ಅಂಧಕಾರದ ರಾಜ್ಯಕ್ಕೆ ಹೋಗುವಿಯಾದರೆ ಕುಲ ಮರ್ಯಾದೆಯು ಕೆಡುವುದು'

ಕಿಶೋರಿ ಉತ್ತರ ಕೊಟ್ಟಳು—'ನನ್ನ ಪೂರ್ಣತ್ವವನ್ನು ಹೊಂದಲಿಕ್ಕಾಗಿ ಕುಲ ಮರ್ಯಾದೆಯೂ ಹೋಗುವದಾದರೂ ಅದಕ್ಕೆ ನನಗೆ ಸಂಕೋಚವಾಗ ವುದಿಲ್ಲ'

ಅವರು ಪುನಃ ಹೇಳಿದರು—'ನೀನು ಅಂಧಕಾರವನ್ನು ಸೇರುವಿಯಾದರೆ ಅಲ್ಲಿ ನಿನ್ನ ಮೃತ್ಯುವಾಗುವುದು'

ಬಾಲಿಕೆ ಉತ್ತರ ಕೊಟ್ಟಳು—'ಜೀವನವನ್ನು ಪ್ರಾಪ್ತಮಾಡಿಕೊಳ್ಳಲಿಕ್ಕಾಗಿ ನಾನು ಮೃತ್ಯುವನ್ನು ಸಂತೋಷದಿಂದ ಆಲಿಂಗಿಸುವೆನು'

ಮನೆಯ ಜನರ ಅನೇಕ ವಿಘ್ನ ವಿಡಂಬರಗಳನ್ನು ಒಡ್ಡಿದರು ಆದರೆ ಅವಳು ಯಾವುದನ್ನೂ ಲಕ್ಷಿಸಲಿಲ್ಲ

ವೀಣಾನಾದವನ್ನು ಲಕ್ಷಿಸಿಕೊಂಡು ಅವಳು ಒಂದು ದಿನ ಹೊರಹೊರಟಳು ಒಬ್ಬಳೇ ಇದ್ದಳು ಯಾತ್ರೆಯ ಆರಂಭಕಾಲದಲ್ಲಿ ಅವಳ ಒಬ್ಬ ಉನ್ಮಾದಿನಿಯಂತೆ ತೋರುತ್ತಿದ್ದಳು ಮುಂದಿನ ಮಾರ್ಗವನ್ನು ಕಣ್ಣೆತ್ತಿ ಕೂಡ ನೋಡುತ್ತಿರಲಿಲ್ಲ ಕೇವಲ ವೀಣಾನಾದದ ದಿಕ್ಕನ್ನು ಅನುಸರಿಸಿ ಮುಂದ ಮುಂದಕ್ಕೆ ನಡೆದಳು

ಮಾರ್ಗದಲ್ಲಿ ಕಲ್ಲು ಮುಳ್ಳು ಹಳ್ಳಕೊಳ್ಳ ಎಷ್ಟೋ ಇದ್ದವು ಅವು ಯಾವುದರ ಕಡೆಗೂ ಅವಳ ಗೊಡವೆ ಇದ್ದಿಲ್ಲ ಒಂದೇ ಉಸಿರಿನಿಂದ ಅವಳು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಿದ್ದಳು ವೀಣಾನಾದವಲ್ಲದೆ ಬೇರೇನೂ ಅವಳ ಜೊತೆಗಿದ್ದಿರಲಿಲ್ಲ

ದೀರ್ಘಪ್ರಯಾಣವು ಮುಗಿದ ಬಳಿಕ ಒಂದು ಕಡೆ ಅವಳು ಪ್ರಕಾಶ ಮತ್ತು ಅಂಧಕಾರದ ಪರಸ್ಪರ ಮಿಲನವಾಗುವುದನ್ನು ಕಂಡಳು ಅದು ಅಪೂರ್ವ ದೃಶ್ಯವಾಗಿತ್ತು ಆ ಮನೋಹರ ದೃಶ್ಯವನ್ನು ನೋಡುತ್ತ ಅವಳು ಆನಂದಾತಿರೇಕದಿಂದ ಉನ್ಮತ್ತೆಯಾದಳು ಅವಳು ಹುಚ್ಚಿಯಂತೆ ಧಾವಿಸಿ ಬಂದು ಹಿಂದುಮುಂದ ನೋಡದೆ ಅಂಧಕಾರದ ರಾಜ್ಯಕ್ಕೆ ನೆಗೆದುಹೋದಳು ಆಗ ಇದೇ ಒಂದು ಮಾತು ಅಸ್ಪಷ್ಟವಾಗಿ ಕೇಳಿಸಿತು 'ನನಗ ದೊರೆಯಿತು'

ಕಿಶೋರಿಯ ಮನೆಯವರಿಗೆ ಅವಳ ಯಾವ ಸಮಾಚಾರವೂ ಹತ್ತಲಿಲ್ಲ ಆದರೆ ವೀಣಾನಾದವು ಮಾತ್ರ ಮೊದಲಿನಂತೆಯೇ ಆಗುತ್ತಿತ್ತು ಕೆಲಕೆಲವರು ಅದನ್ನು ಆಲಿಸುತ್ತಿದ್ದರು ಉಳಿದವರು ಅದನ್ನು ಕೇಳುತ್ತಿರಲಿಲ್ಲ

ಬಹಳ ದಿನಗಳು ಕಳೆದ ಮೇಲೆ ಕಿಶೋರಿಯ ಊರಿಗೆ ಒಬ್ಬ ವೃದ್ಧನು ಬಂದ. ಕುಟುಂಬದ ಜನರು ಅವನನ್ನು ಪ್ರಶ್ನಿಸಿದರು 'ನಿನ್ನ ವಾಸಸ್ಥಾನ ಎಲ್ಲಿ?' ಎಂದು

ಅವನು ಉತ್ತರ ಕೊಟ್ಟ 'ಪ್ರಕಾಶ ಮತ್ತು ಅಂಧಕಾರಗಳ ಮಿಲನದ ಸ್ಥಳದಲ್ಲಿ'

ಆಗ ಜನರಿಗೆ ಸ್ವಲ್ಪ ಆಶೆ ಹುಟ್ಟಿತು. ಅವರು ಕೇಳಿದರು —'ನಮ್ಮ ಒಬ್ಬ ಹುಡುಗಿ ಅದೇ ಅಂಧಕಾರದ ರಾಜ್ಯಕ್ಕೆ ಹೋಗಿದ್ದಾಳೆ ಅವಳ ಏನಾದರೂ ಸುದ್ದಿ ನಿನಗೆ ತಿಳಿದಿದೆಯೋ?'

ವೃದ್ಧನು ಹೇಳಿದ—'ಅಲ್ಲಿ ಯಾರೂ ಯಾರ ಸಮಾಚಾರವನ್ನೂ ಹೇಳುವುದಿಲ್ಲ'

ಜನರು ಪ್ರಶ್ನಿಸಿದರು—'ಯಾಕೆ?

ಮುದುಕನು ಉತ್ತರಕೊಟ್ಟ—'ಅಲ್ಲಿ ಎಲ್ಲವೂ ಶಾಂತವಾಗಿರುವುದು'

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಢಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ ಈ ಪಾಲಿಸಿಯು ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಯ-ಪ್ರತಿನಿಧಿಗಳಿಂದ ತಿಳಿಕೊಳ್ಳಿರಿ

ಕಾಯಂ ನಿಶ್ಚಿತ ಬೋನಸ್ ರೂ 10/-
+
ಸರ್ವಸಾಧಾರಣ ಬೋನಸ್ ರೂ 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಮುಂಬಯಿ
ಕೆ. ಎನ್. ನಾಯರ್
ಆರ್ಗನೈಸರ್
ಪಾಂಡೇಶ್ವರ, ಮಂಗಳೂರು.
ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ
ಡೋಂಗರೇ ಇವರ
ಬಾಲಾಮೃತ
ವನ್ನು ಕೊಡುವುದರಿಂದ ಅವರು
ಶಕ್ತರೂ ತೇಜಃಪುಂಜರೂ ಆಗುತ್ತಾರೆ.
ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

ಭಾರತ ಚೀನ ರಾಷ್ಟ್ರಗಳ ಮಧುರ ಬಾಂಧವ್ಯ!

ಚೀನದೇಶದ ಶಿಷ್ಟಮಂಡಳಿಗೆ ನೆಹರುಗಳ ಸ್ವಾಗತ.

ಚೀನದ ಬಹು ಸುಪ್ರಸಿದ್ಧ ರಾಜನೀತಿ ವಿಶಾರದರೂ, ವಿದ್ವನ್ಮಣಿಗಳೂ ದೇಶಭಕ್ತರೂ ಆದ ತ್ಯಾ ಚೀತಾವೋ ಎಂಬ ಮಹನೀಯರು ಹಿಂದುಸ್ಥಾನಕ್ಕೆ ಬಂದಿಳಿದಿರುವರು. ಭಾರತ ಚೀನಗಳೊಳಗಿನ ಪ್ರೇಮ ಮತ್ತು ಸ್ನೇಹಸಂಬಂಧವನ್ನು ಭದ್ರಗೊಳಿಸುವದು ಅವರ ಈ ಆಗಮನದ ಲಕ್ಷ್ಯವಾಗಿರುವುದು. ಶ್ರೀಯುತ ತಾವೋರವರಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಿ ಪಂಡಿತ ಜವಾಹಿರಲಾಲರವರುಗಳು ನೇಶನಲ್ ಹೆರಾಲ್ಡಿನಲ್ಲಿ ಹೀಗೆ ಬರೆದಿದ್ದಾರೆ:—

ಅಧ್ಯಕ್ಷ ತ್ಯಾ ಚೀತಾವೋರವರು ಚೀನೀ ಜನರ ಅಖಂಡ ಮುಖಂಡರೂ ಪ್ರತಿನಿಧಿಗಳೂ ಆಗಿ ನಮ್ಮಲ್ಲಿಗೆ ಬಂದಿಳಿದಿದ್ದಾರೆ. ಚೀನೀ ಜನಾಂಗವು ಮಹತ್ತರದ್ದು, ಅದು ಈಗ ವಿದೇಶಿ ಜನಾಂಗದಿಂದ ಆಕ್ರಾಂತವಾಗಿದೆ. ತನ್ನ ಸ್ವಾತಂತ್ರ್ಯಕ್ಕಾಗಿ ವೀರತ್ವದಿಂದ ಕಾದಾಡುತ್ತಿದೆ. ಚೀನಿಯರ ಈ ವೀರತ್ವವು ಪ್ರಪಂಚವನ್ನೇ ಆಶ್ಚರ್ಯಪಡಿಸಿದೆ. ಚೀನೀ ಜನರ ಈ ಅನುಪಮಯೋಗ್ಯತೆಯೇ ಶ್ರೀ ತಾವೋರವರಿಗೆ ಇಲ್ಲಿ ಸಂಭ್ರಮದ ಸ್ವಾಗತವನ್ನು ಕೊಡಲಿಕ್ಕೆ ಸಾಕಾಗಿದೆ.

ಸಾಂಸ್ಕೃತಿಕ ಸಂಬಂಧ

ಚೀನ ಭಾರತಗಳೊಳಗಿರುವ ಸಾವಿರಾರು ವರ್ಷಗಳ ಪುರಾತನ ಸಾಂಸ್ಕೃತಿಕ ಸಂಬಂಧವನ್ನು ಸ್ಥಿರಮಾಡುವ ಘನಉದ್ದೇಶವನ್ನು ಇಟ್ಟುಕೊಂಡು ಬಂದ ತಾವೋರವರು ಈ ವಿಷಯದಲ್ಲಿ ಗಂಭೀರ ಅಭ್ಯಯನವನ್ನು ಮಾಡಿ, ವಿಷಯವನ್ನು ಸಂಪೂರ್ಣ ತಿಳಕೊಂಡ ಘನ ವಿದ್ವಾಂಸರಾಗಿರುವರು. ಅವರು ಇಲ್ಲಿಯ ಸಾಂಸ್ಕೃತಿಕ ಕೇಂದ್ರಗಳನ್ನೆಲ್ಲಾ ನೋಡ ಬಯಸಬೇಕೆನ್ನುವ ಇಚ್ಛೆಯುಳ್ಳವರಾಗಿದ್ದಾರೆ. ಭಾರತ ಚೀನಗಳೊಳಗೆ ಬೆಳೆದು ಬರುತ್ತಿರುವ ಸ್ನೇಹವು ಭದ್ರವಾಗಬೇಕೆಂಬುದು ಅವರ ಈ ಪ್ರಯಾಣದ ಉದ್ದೇಶವಾಗಿದೆ. ಈ ಸ್ನೇಹವು ನಮಗೆ ಅಗತ್ಯವೂ ಮಹತ್ವದ್ದೂ ಆಗಿದೆ. ನಮ್ಮದು ಚೀನದೊಡನೆ ಬಹು ಪುರಾತನ ಕಾಲದಿಂದಲೂ ಇರುವ ಸುವರ್ಣಸಂಬಂಧವಾಗಿದೆ. ಅಷ್ಟಕ್ಕಾಗಿ ಮಾತ್ರವಲ್ಲ, ನಮ್ಮ ಈ ಎರಡು ದೇಶಗಳ ಭವಿಷ್ಯವು ಪರಮ ಉಜ್ವಲವಾಗಿ ಬೆಳೆಸಲಿಕ್ಕೆ ಈ ಸ್ನೇಹಸಂಬಂಧವು ಅಗತ್ಯವಾಗಿದೆ.



ಚೀನದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಚಿಯಾಂಗ್ ಕೈಶೇಕ್ ದಂಪತಿಗಳು

ಉಜ್ವಲ ಭವಿಷ್ಯ

ಈಗಿನ ಪರಿಸ್ಥಿತಿಯಲ್ಲಿ ನಮ್ಮೆರಡು ದೇಶಗಳ ಮಟ್ಟಿಗೂ ಗಾಢಾಂಧಕಾರವು ತುಂಬಿಕೊಂಡಿದೆ. ನಮ್ಮೆರಡು ಜನಾಂಗಗಳು ಮುಂದಿರುವ ವಿಶ್ವದಲ್ಲಿ ನಿರ್ಭಯದಿಂದ ಬದುಕಿ ಬಾಳಬೇಕಾದರೆ ಅನೇಕಾನೇಕ ಮಹತ್ತರದ ಕಷ್ಟಸಂಕಷ್ಟಗಳನ್ನು ಎದುರಿಸಬೇಕಾಗುವದು. ಆದರೂ ಪ್ರಪಂಚದ ಭವಿಷ್ಯದಲ್ಲಿ ನಮ್ಮೆರಡು ದೇಶಗಳು ಮುಂದೆ ಮಹತ್ವದ ಕಾರ್ಯಭಾಗವನ್ನು ತೆಗೆದುಕೊಳ್ಳಲಿವೆ. ಈ ಎರಡು ದೇಶಗಳಲ್ಲಿ ಬೇರೆ ಯಾವ ದೇಶದಲ್ಲಿಯೂ ಇಲ್ಲದಷ್ಟು ಅಸಂಖ್ಯಾತ ಜನರು ವಾಸವಾಗಿದ್ದಾರೆ ಎಂಬ ಕಾರಣದಿಂದ ಮಾತ್ರ ನಾನು ಹೀಗೆ ಹೇಳುವುದಲ್ಲ. ಈ ಎರಡು ದೇಶಗಳಲ್ಲಿ ಪ್ರಪಂಚದ ಜನಸಂಖ್ಯೆಯ ಎರಡರಲ್ಲಿ ಒಂದು ಭಾಗಕ್ಕಿಂತ ಹೆಚ್ಚು ಜನರು ವಾಸವಾಗಿರುವದು ನಿಜ. ಆದರೆ ನಾವು ಪೂರಾ ಉಪೇಕ್ಷಿಸಲಾಗದಂಥ ಇದಕ್ಕೂ ಪ್ರಾಮುಖ್ಯವಾದ ಇನ್ನೊಂದು ಸಂಗತಿಯೂ ನಮ್ಮ ಮುಂದಿದೆ.

ಅಭಿನ್ನ ಸಮಸ್ಯೆಗಳು

ಬಹು ಪುರಾತನ ಕಾಲದಿಂದಲೂ ಭಾರತ-ಚೀನಗಳ ಎರಡು ನಾಗರಿಕತೆಗಳ ಪ್ರತಿನಿಧಿಗಳಾಗಿ ಬಂದು ಈ ಎರಡು ಜನಾಂಗಗಳು ಇವೆ. ಹಾಗೆ ಈ ಎರಡು ಜನಾಂಗಗಳು ಭಾರತ-ಚೀನಗಳ ಅಪ್ರಾಚೀನ ಸಂಸ್ಕೃತಿಗಳ ಪ್ರತಿನಿಧಿಗಳಾಗಿಯೂ ಇವೆ. ಇವೆರಡು ನಾಗರಿಕತೆ ಸಭ್ಯತೆ ಮತ್ತು ಸಂಸ್ಕೃತಿಗಳು ತೋರಿಕೆಗೆ ಭಿನ್ನಭಿನ್ನವಾಗಿ ಕಂಡರೂ, ಅವುಗಳೊಳಗೆ ಬಹಳ ಸಾಮ್ಯತೆ ಇರುತ್ತದೆ. ಉಳಿದೆಲ್ಲ ಸಂಸ್ಕೃತಿಗಳ ಹಾಗೆ ಇವುಗಳ ಸುತ್ತಲೂ ಅನೇಕ ಅಂಧರೂಢಿ ವಿಶ್ವಾಸ ಆಚಾರ ಪರಂಪರೆಗಳು ಅಂಟಿಕೊಂಡಿವೆ. ಈ ಕಾರಣದಿಂದ ಈ ಎರಡು ಜನಾಂಗಗಳ ಉನ್ನತಿಯು ತಡೆಯಲ್ಪಟ್ಟಿದೆ. ಆದರೂ ಈ ರೂಢಿ ವಿಶ್ವಾಸಗಳ ಅಡಿಯಲ್ಲಿ ಈ ಎರಡು ದೇಶಗಳ ಪುರಾತನ ಸ್ನೇಹದ ಸಂಬಂಧ ಸೂತ್ರಕ್ಕೆ ಯಾವ ಆಘಾತವೂ ತಟ್ಟಿರುವುದಿಲ್ಲ. ಈ ಎರಡು ದೇಶಗಳು ಅನೇಕ ವಿಪತ್ತುಗಳಿಗೆ ಎದೆಕೊಟ್ಟಿವೆ. ಈ ಎರಡು ದೇಶಗಳು ಅನೇಕ ದುರ್ಭಾಗ್ಯದ ದಿನಗಳನ್ನು ಕಂಡಿವೆ. ಆದರೂ ಅವುಗಳೆಂದೆಲ್ಲ ಪಾರಾಗಿ ಈ ಎರಡು ದೇಶಗಳು ಇನ್ನೂ ಬದುಕಿಕೊಂಡಿವೆ—ತಾವು ಅಮರ ಎಂಬುದನ್ನು ಜಗತ್ತಿಗೆ ತೋರಿಸಿವೆ.

HALFTONE & LINE BLOCK MAKING UNDERTAKEN

Sharada Press, MANGALORE

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest,

For	3 months		3½%
„	6 „		4%
„	12 „		5%
„	24 „	& upwards	6½%

Interest Payable Quarterly.

Savings Bank deposit 3½% on daily balances.

All kinds of banking business transacted.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ವಿದ್ವಾನ್ ಶ್ರೀ ಕೆ. ಕೆ. ರೈ, ವಿರಚಿತ

ವ್ಯಾಕರಣ ಮತ್ತು ಪ್ರಬಂಧ

೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ

0—3—0 0—3—6 0—4—0

ಶ್ರೀ ಎಸ್. ರಾಮಕೃಷ್ಣಾಚಾರ್, ಬಿ. ಎ; ಎಲ್. ಟಿ. ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬ನೆಯ ತರಗತಿಗೆ, 0—6—0 ೭ನೆಯ ತರಗತಿಗೆ, 0—6—0

ಹೊಸ ಪುಸ್ತಕಗಳು

ಪ್ರಾಥಮಿಕ ಲಘುವಿಜ್ಞಾನ (ಶ್ರೀ ಎಸ್. ರಾಮಕೃಷ್ಣಚಾರ್)

೮ನೆಯ ತರಗತಿಗೆ 0—6—0

ವ್ಯಾಕರಣ ಮತ್ತು ಪ್ರಬಂಧ (ಶ್ರೀ ಕೆ.ಕೆ. ರೈ) ೪ ಮತ್ತು ೫ನೆಯ ತರಗತಿಗಳಿಗಾಗಿ

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಹಬ್ಬ!

ಶ್ರೀ, ಕಯ್ಯಾರ ಕಿಞ್ಞಣ್ಣರೈ, ವಿದ್ವಾನ್, ಇವರಿಂದ ರಚಿತವಾದ,

ಮಕ್ಕಳ ಪದ್ಯಮಂಜರಿ

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ

೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ

ಎರಡನೆಯ ಪುಸ್ತಕ

೪ನೆಯ ೫ನೆಯ ತರಗತಿಗಳ ಬಾಲಕರಿಗಾಗಿ

ದೊರಕುವ ಸ್ಥಳ: **ಶಾರದಾ ಛಾಪಖಾನೆ ಮಂಗಳೂರು.**



ಜಿಲ್ಲಾ ಸಮಾಚಾರ

ಮಂಗಳೂರು

ವಾರ್ಷಿಕೋತ್ಸವ:— ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕೋತ್ಸವವು ಎಸ್. ಕೆ. ಚೆಟ್ಟ್ಯಾರ್ ಐ. ಸಿ. ಎಸ್. ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಶ್ರೀನಿವಾಸ ಆಳ್ವರವರು ಸಂಘದ ಗತವರ್ಷದ ವರದಿಯನ್ನು ಓದಿದರು. ಶ್ರೀ ಬಾಲಕೃಷ್ಣ ರೈಯವರು ಸಂಘದ ಸ್ವಸ್ತಿವಾಚನ ಭಾಷಣ ಕೊಟ್ಟರು. ಶ್ರೀ ಎ. ಮಂಜಯ್ಯ ಶೆಟ್ಟಿಯವರು ಅದಕ್ಕೆ ಉತ್ತರ ರೂಪವಾಗಿ ಭಾಷಣವಿತ್ತರು. ವಿವಿಧ ವಿನೋದಾವಳಿಗಳಿದ್ದುವು.

ವಿದ್ಯಾರ್ಥಿ ಸಂಘ:— ಮಂಗಳೂರು ವಿದ್ಯಾರ್ಥಿಗಳ ಸಂಘದ ಸಭೆಯು ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಕೂಡಿ, ಸರಕಾರದವರು ಕೊಟ್ಟ ಪ್ರಕಟಣೆಯನ್ನು ನಿಷೇಧಿಸಿದ್ದಲ್ಲದೆ, ಸರಕಾರವು ಹಿಂತೆಗೆದುಕೊಳ್ಳಬೇಕೆಂದೂ ಠರಾವಾಯಿತು. ಶ್ರೀಗಳಾದ ಎನ್. ರಾಮಭಟ್, ಸಿ. ಪಿ. ದಾಮೋದರನ್ ನಾಯರ್, ವಿ. ರಾಘವನ್, ವೆಂಕಟರಾವ್, ವಿಜಯ ಸುವರ್ಣ, ಟಿ. ಬಿ. ಕುಂಞ, ಎ. ಕೇಶವದಾಸ್ ಮತ್ತು ಶಿವಶಂಕರರಾಯರು ಭಾಷಣ ಕೊಟ್ಟರು. ನಿಲೇಶ್ವರ ವಿದ್ಯಾರ್ಥಿ ಸಂಘವನ್ನು ದ. ಕ. ಜಿಲ್ಲಾ ವಿದ್ಯಾರ್ಥಿ ಸಂಘಕ್ಕೆ ಸೇರಿಸಲಾಗಿದೆಯೆಂದು ತಿಳಿದು ಬರುತ್ತದೆ.

ಭಾಷಣ:— ಸೈಂಟ್ ಎಗ್ನಿಸ್ ಕೋಲೇಜಿನ ಪ್ರೊಫೆಸರ್ ಶ್ರೀಮತಿ ಎಸ್. ವಿ. ಶಾರದಾಂಬಳ್‌ರು ಯೂನಿವರ್ಸಿಟಿ ಎಕ್ಸ್‌ಟೆನ್ಶನ್ ಬೋರ್ಡಿನ ಆಶ್ರಯದಲ್ಲಿ 'ಹಿಂದುಸ್ತಾನದ ಹೊಸ ಆರ್ಥಿಕ ಕ್ರಮ' ಎಂಬ ಕುರಿತು ಒಂದು ಭಾಷಣ ಕೊಟ್ಟರು.

ಕೊರೊನೇಷನ್ ಕ್ರಿಕೆಟ್ ಟೂರ್ನಮೆಂಟ್:— ದಕ್ಷಿಣ ಕನ್ನಡ ಜಿಲ್ಲಾ ಎತ್ಲೆಟಿಕ್ ಎಸೋಸಿಯೇಶನ್‌ನವರು ನಡೆಸಿದ ಕೊರೊನೇಶನ್ ಕ್ರಿಕೆಟ್ ಟೂರ್ನಮೆಂಟಿನ ಕಟ್ಟಕಡೆಯ ಪಂದ್ಯಾಟದಲ್ಲಿ ಪೆಂಟ್ಲೆಂಡ್ ಪೇಟೆ ಸ್ಪೋರ್ಟ್ಸ್ ಸಂಘದವರು ಮಂಗಳೂರು ಕ್ರಿಕೆಟ್ ಕ್ಲಬ್ಬಿನವರನ್ನು ಸೋಲಿಸಿದರೆಂದು ತಿಳಿಯುತ್ತದೆ.

ಸಾದರ-ಸ್ವೀಕಾರ

ಕೆನರಾ ಹೈಸ್ಕೂಲ್ ಗೋಲ್ಡನ್ ಜುಬಿಲಿ ಬುಲೆಟಿನ್

ಒಂದು ಸಂಸ್ಥೆಯು ಸುವರ್ಣೋತ್ಸವವನ್ನು ಹೊಂದುವುದೆಂದರೆ ಆ ಸಂಸ್ಥೆಯ ಪ್ರಯೋಜನ ಅಭಿಮಾನಗಳು ಅಗಣ್ಯನಿಶ್ಚವಾದಂತೆ. ಕೆನರಾ ಹೈಸ್ಕೂಲು ಈಗ ಸುವರ್ಣೋತ್ಸವವನ್ನು ಹೊಂದುವ ಕಾಲವನ್ನು ಸಮೀಪಿಸಿದೆ ಎಂಬುದು ಅತ್ಯಂತ ಸಂತೋಷಕರವಾದ ವಾರ್ತೆ. ಈ ಸಂಸ್ಥೆಯ ಚಾಲಕರು ಹಿತೈಷಿಗಳು ಈ ಉತ್ಸವವನ್ನು ಅತ್ಯಂತ ಉತ್ಕೃಷ್ಟವಾಗಿ ಜರಗಿಸುವ ನಿರ್ಣಯ ಮಾಡಿದ್ದಾರೆ. ಆ ಬಗ್ಗೆ ಆ ಸಂಸ್ಥೆಯ ಹಿತಚಿಂತಕರಿಗೆ ಹಳೆಯ ವಿದ್ಯಾರ್ಥಿಗಳಿಗೆ ಚಿಕ್ಕ ಹರೂಪವಾಗಿ, ಸಂಸ್ಥೆಯ ಪರಿಚಯ ಪ್ರಶಸ್ತಿಗಳಿಂದೊಡಗೂಡಿದ ಈ ಸಂಚಿಕೆಗಳನ್ನು ಹೊರಡಿಸಲು ನಿಶ್ಚಯಿಸಿರುವರು. ಇಂತಹ ಕಾರ್ಯವು ಸ್ತುತ್ಯ. ಸಂಸ್ಥೆಗೆ ಸರ್ವರೂ ನೆರವಾಗಿ ಉತ್ಸವವನ್ನು ಬಹು ಯಶಸ್ವಿಯಾಗಿ ನೆರವೇರಿಸಲೆಂದು ನಾವು ಹಾರ್ದಿಕವಾಗಿ ಹಾರೈಸುತ್ತೇವೆ.

ಶ್ರೀ ಶಿವಭಕ್ತಿಯೋಗ ಸಂಘದ ಸದಸ್ಯರು:— ಇದೇ ೧೯ನೇ ನವಂಬರ ತಿಂಗಳ ... ಅಧ್ಯಕ್ಷರಾದ ಮೊದಲ್ಗೊಂಡು ... ಅಧಿಕಾರಿಗಳ ... ಸಾಯಂಕಾಲ ಗಂಟೆ ೭ಕ್ಕೆ ಸರಿಯಾಗಿ ಸದ್ರಿ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಪುರಾಣ ಸಂಬಂಧವಾದ ದೇವಿಮಹಾತ್ಮೆಯನ್ನು ಶ್ರೀ ಯಮ್. ಅನಂತಯ್ಯನವರ ವಾಚನದಿಂದಲೂ ಶ್ರೀ ಅಕರ್ಲೆ ಸುಬ್ರಾಯ ಆಚಾರ್ಯರ ಅರ್ಥ ವಿವರಣೆಯಿಂದಲೂ ಪ್ರಾರಂಭಿಸಲಾಗಿರುವುದು. ಈ ಸಮಾರಂಭಗಳಿಗೆ ಎಲ್ಲಾ ಬಂಧುಭಗಿನಿಯರಿಗೆ ಸುಸ್ವಾಗತವಿದೆ.

ಡಿ. ಬೋರ್ಡ್ ಆಡಳಿತೆ ವರದಿಯ ಕುರಿತು ಕಲೆಕ್ಟರರ ಪ್ರಶಂಸೆ:

ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ವಿ. ಸುಬ್ರಹ್ಮಣ್ಯನ್ ಇವರು ದ. ಕ. ಜಿಲ್ಲಾ ಬೋರ್ಡಿನ 1939-40ನೆಯ ವರ್ಷಗಳ ಆಡಳಿತೆ ವರದಿಯ ಕುರಿತು ಪ್ರಶಂಸೆಯ ಮಾತುಗಳನ್ನು ಬರೆದದ್ದು, ಡಿ. ಬೋ. ಅಧ್ಯಕ್ಷರ ಹಾಗೂ ಸದಸ್ಯರ ಮತ್ತು ಸಂಬಂಧಿಸಿದ ಅಧಿಕಾರಿ ಕೆಲಸಗಾರರ ದಕ್ಷತೆಯನ್ನು ಎತ್ತಿ ತೋರಿಸುವಂತಿದೆ. ಅವರು ತನ್ನ ರಿಮಾರ್ಕಿನಲ್ಲಿ "ತನ್ನ ಹಿಂದಿನ ಅಧಿಕಾರಿಗಳೆಲ್ಲರೂ ಈ ಜಿಲ್ಲೆಯ ರಸ್ತೆಗಳನ್ನು ಸುಧಾರಿಸುವ ವಿಷಯದಲ್ಲಿಯೂ ಜಿ. ಬೋರ್ಡಿನ ಇತರ ವಿಷಯಗಳಲ್ಲಿಯೂ ಜಿ. ಬೋ. ಪ್ರೆಸಿಡೆಂಟರಾದ ಡಾ. ವಿಟ್ಟಲ ಶೆಟ್ಟಿಯವರು ತೆಗೆದುಕೊಳ್ಳುವ ಸ್ವಾರ್ಥ ಆಸಕ್ತಿಗಳನ್ನು ಕೊಂಡಾಡಿ ಬರೆದಿದ್ದಾರೆ. ತನ್ನ ಅನುಭವವೂ ಅದನ್ನೇ ಪುಷ್ಟೀಕರಿಸುತ್ತದೆ. ಡಿ. ಬೋ.ನಲ್ಲಿ ಯಾವ ಭಿನ್ನತೆಯುಳ್ಳದೆ ಎಲ್ಲಾ ಸದಸ್ಯರೂ ಐಕ್ಯಮತ್ಯದಿಂದ ಕೆಲಸ ಮಾಡುತ್ತಾರೆ, ಸಾರ್ವಜನಿಕರ ಮನ್ನಣೆಗೆ ಪಾತ್ರರಾಗಿದ್ದಾರೆ" ಎಂದು ಬರೆದಿರುವರು.

ಕಾರ್ಕಳ

ಶುದ್ಧಿ ಸಮಾಚಾರ: ಮಂಗಳೂರಿನ ಶ್ರೀ ದಿಯೋಗ ಸಿಕ್ವೇರ ಮಗ ಶ್ರೀ ಸಿಪ್ರಿಯನ್ ಸಿಕ್ವೇರ ಎಂಬವರು ತಮ್ಮನ್ನು ಹಿಂದೂ ಧರ್ಮಕ್ಕೆ ಸೇರಿಸಬೇಕೆಂದು ಸ್ವೇಚ್ಛೆಯಿಂದ ಅಪೇಕ್ಷಿಸಿದ ಪ್ರಕಾರ ಅವರ ಶುದ್ಧಿ ಸಂಸ್ಕಾರವು ಸ್ಥಳೀಯ ಆರ್ಯ ಸಮಾಜದಲ್ಲಿ ತಾ. ೧೮-೧೧ರ ಶುಭದಿನ ಆರ್ಯ ಧರ್ಮೋಪದೇಶಿ ಶ್ರೀ ಆರ್. ಮಂಜುನಾಥ ಶೆಣೈಯವರ ಪೌರೋಹಿತ್ಯದಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶ್ರೀಯವರಿಗೆ ಸತ್ಯದೇವ ಭಟ್ಟ ಎಂದು ನಾಮಕರಣ ಮಾಡಿದ ಬಳಿಕ ಅವರಿಗೆ ಹಿಂದು ಸಮಾಜದಲ್ಲಿ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಿ ಶ್ರೀಗಳಾದ ಕೆ. ವೆಂಕಟೇಶ ಪ್ರಭು, ಕೇಶವ ರಾಮಚಂದ್ರ ಶೆಣೈ ಮೊದಲಾದವರು ಭಾಷಣ ಮಾಡಿದರು.

ಕಾರ್ಯಾಲಯ ಬದಲಾವಣೆ:— ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಯ ಒಂದು ಸಭೆಯು ತಾ. ೧೭-೧೧-೪೦ರ ದಿನ ಶ್ರೀ ಯಂ. ದಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಕಮಿಟಿಯ ಕಾರ್ಯಾಲಯವನ್ನು ಅಧ್ಯಕ್ಷರ ನಿವಾಸ ಗ್ರಾಮವಾಗಿರುವ ಮುನಿಯಾಲಿಗೆ ವರ್ಗಾಯಿಸುವದೆಂದು ಠರಾವಾದ ಪ್ರಕಾರ ಅದನ್ನು ಅಲ್ಲಿಗೆ ಕೊಂಡೊಯ್ಯಲಾಗಿದೆ.

ಹಿಂದುಸ್ತಾನ ಸ್ಕೌಟ್:— ಇದರ ಕಾರ್ಕಳ ತಾಲೂಕು ಸಂಘದ ಒಂದು ಸಭೆಯು ಶ್ರೀ. ಕೆ. ಕೃಷ್ಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿ ತಾಲೂಕಿನ ವರ್ಷದ ಆಯವ್ಯಯ ಪಟ್ಟಿಯನ್ನು ಮಂಜೂರು ಮಾಡಲಾದುದಲ್ಲದೆ ಸಂಘಕ್ಕೆ ಕಮಿಷನರ ... ತಾಲೂಕಿನಿಂದ ... ಬೇಕೆಂದು ಠರಾವಾಗಿದೆ.

ಕರ್ಣಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಸದಸ್ಯತ್ವ ವೇಳಾಪತ್ರಿಕೆ

ಕಾಂಗ್ರೆಸ್ ಸದಸ್ಯರನ್ನು ಕೂಡುವ ಮುಂಚಿನ ಅವಧಿಯು ಇದೇ ೩೦-೧೧-೪೦ನೇ ದಿವಸ ಮುಗಿಯಿತು. ಪ್ರಾಂತದಲ್ಲಿಯ ಅಧೀನ ಸಮಿತಿಗಳು ಈ ಕೆಳಗೆ ಕೊಟ್ಟಿರುವ ವೇಳಾಪತ್ರಿಕೆಯನ್ನು ಕಾರ್ಯರೂಪದಲ್ಲಿ ತರಬೇಕು. ಸತ್ಯಾಗ್ರಹ ಚಳುವಳಿಯ ಭರದಲ್ಲಿ ಕಾಂಗ್ರೆಸಿನ ನಿತ್ಯನೈಮಿತ್ತಿಕ ಕೆಲಸಗಳು ಹಿಂದೆ ಬೀಳಕೂಡದು. ಈ ವಿಚಾರ ನಾವು ಹೊರಡಿಸುವ ಸೂಚನೆಗಳನ್ನು ಅಕ್ಷರಶಃ ಪಾಲಿಸಬೇಕು. (ವಿವರಗಳನ್ನು ಪ್ರಕಟಣೆಗಳಲ್ಲಿ ಈಗಾಗಲೇ ಕೊಟ್ಟೇ ಇರುವುದು.)

೧. ಸದಸ್ಯತ್ವದ ಕೊನೆಯ ತಾರೀಕು ೩೦-೧೧-೪೦. ೨. ಅಧೀನ ಸಮಿತಿಗಳು ವ್ಯಕ್ತಿಗಳಿಂದ ಹಣ ಹಾಗೂ ಪುಸ್ತಕ ಕಳಿಹಾಕುವ ಕೊನೆಯ ತಾರೀಕು ೩೧-೧೨-೪೦. ೩. ಆದ ಒಟ್ಟು ಸಂಖ್ಯೆಯನ್ನು ಮೇಲಿನ ಸಮಿತಿಗೆ ತಿಳಿಸುವದು ೩೧-೧-೪೦. ೪. ಜಿಲ್ಲಾ ಸಮಿತಿಗೆ ಯಾದಿ ಹಾಗೂ ಹಣ ಮುಟ್ಟಿಸುವ ಕೊನೆಯ ತಾರೀಕು ೪-೨-೪೧. ೫. ಜಿಲ್ಲಾ ಸಮಿತಿಗಳು ಕಾಯಂ ಸದಸ್ಯತ್ವ ರಜಿಸ್ಟರ ಪುಸ್ತಕಗಳನ್ನು ಸಿದ್ಧಪಡಿಸುವದು ಹಾಗೂ ಸಂಗ್ರಹಿಸಿದ ಯಾದಿಗಳನ್ನು ಅಧೀನ ಸಮಿತಿಗಳಿಗೂ ಪೂರ್ಣ ಲೋಖಾಪಣದೊಂದಿಗೆ ಪ್ರಾಂತೀಯ ಸಮಿತಿಗೂ ತಿಳಿಸುವದು ೧೦-೩-೪೧. ೬. ಸಾರ್ವಜನಿಕ ತಪಾಸಣೆ ೧೧-೩-೪೧ರಿಂದ ೨೦-೪-೪೧. ೭. ಪಂಚ ಮಂಡಳದ ಕಡೆ ತಕರಾರು ಕೊಡುವ ಕೊನೆಯ ತಾರೀಕು ೨೫-೧೨-೪೦.

ಅಣೇವಾರಿ

ಈ ವರ್ಷ ಕರ್ನಾಟಕದ ಬಹುಭಾಗದಲ್ಲಿ ಮಳೆಯು ವೇಳೆಯಲ್ಲಿ ಆಗದೆ ಭೂಮಿಯ ಬೆಳೆಯು ಸಮಾಧಾನಕಾರಕವಾಗಿ ಇರುವದಿಲ್ಲೆಂದು ತಿಳಿದುಬಂದಿದೆ. ಈಗ ಬೆಳೆಯ ಅಣೇವಾರಿಯು ಸಮೀಪಿಸುತ್ತಿರುವದರಿಂದ ಹಾಗೂ ಈಗ ಕಾಂಗ್ರೆಸ್ಸಿನ ... ಈ ಪರಿಸ್ಥಿತಿಯಲ್ಲಿ ಅತ್ತಕಡೆ ಪೂರ್ಣ ಲಕ್ಷ್ಯಗೊಡುವದು ಬಹಳ ಅವಶ್ಯವಾಗಿದೆ.

ಮುಖ್ಯವಾಗಿ ಮಲೆನಾಡ ಕಡೆಗೂ ಮತ್ತು ಇತರ ಕಡೆಗೂ ನೀರಸಾರಿಗೆಯ ಮಾತೊಂದು ಬಹಳ ಲಕ್ಷ್ಯಗೊಡುವಂತಹುದಾಗಿದೆ. ಭೂಮಿಗೆ ಕೆರೆಕಾಲುವೆಗಳ ನೀರು ಕೊಡುತ್ತಿದ್ದಲ್ಲಿ ನೀರ ಸಾರಿಗೆಯು ಹೆಚ್ಚಿರುವುದೆಂದು ಎಲ್ಲ ಕಡೆಗೂ ಅನ್ನುವದುಂಟು. ಇದಲ್ಲದೆ ಕೆರೆಕಾಲುವೆಗಳಿಂದ ನೀರು ಸಾಕಷ್ಟು ಪೂರೈಸಲಿ, ಪೂರೈಸದಿರಲಿ ಪೂರ್ಣ ನೀರಸಾರಿಗೆಯು ತಪ್ಪುವುದಿಲ್ಲವೆಂಬ ತಕರಾರು ಬಹಳ ಕಡೆಗಿದೆ. ಕೆರೆಗೆ ಕಾಲುವೆಗೆ ನೀರು ಇರದಿದ್ದರೂ ನೀರಾವರಿ ಭೂಮಿಯ ಪೂರ್ಣ ವಸೂಲಿಯನ್ನು ಮಾಡುವ ಪದ್ಧತಿಯು ಎಲ್ಲೆಲ್ಲಿ ಇರುವದೋ ಅಲ್ಲಲ್ಲಿಯ ಜನರು ಅವುಗಳ ಬಗ್ಗೆ ಅಧಿಕಾರಿಗಳೊಡನೆ ವಿಚಾರವಿನಿಮಯ ಮಾಡಿ ಅದರ ಪರಿಹಾರವಾಗುವಂತೆ ಮಾಡಿಕೊಳ್ಳಲು ಪ್ರಯತ್ನಿಸಬೇಕು.

ಇನ್ನು ಅಣೇವಾರಿಯ ಪದ್ಧತಿಯಾದರೂ ಕೆಲಮಟ್ಟಿಗೆ ದೋಷಕಾರಕವಾಗಿದೆಯೆಂದು ಅನೇಕರ ಅನ್ನಿಸಿಕೆಯಿದೆ. ೬-೮-೦ ಅಣೆ ಅಣೇವಾರಿ ಆದರೆ ಸಾಕು, ಪೂರ್ಣ ವಸೂಲಿ ಮಾಡುವರೆಂದು ಅನ್ನುವರು. ಈ ವಿಷಯದಲ್ಲಿಯೂ ಚರ್ಚಿಸುವುದು ಯುಕ್ತವಾಗಿದೆ. ಭೂಮಿಯ ಬೆಳೆ, ಮಾಲಿನ ಧಾರಣೆ, ರೈತರ ಪರಿಸ್ಥಿತಿ ಇತ್ಯಾದಿಯ ಕಡೆಗೆ ಸರಕಾರದವರು ಗಮನಕೊಡುವಂತೆ ಮಾಡಿಸುವ ಬಗ್ಗೆಯೂ ಪ್ರಯತ್ನಿಸಬೇಕು. ಒಟ್ಟಿನ ಮೇಲೆ ಈ ವರ್ಷ ವಿಶೇಷವಾಗಿ ಬಹುಭಾಗದಲ್ಲಿ ದುಷ್ಕಾಲದ ಲಕ್ಷಣವು ಬಹಳ ಕಾಣಹತ್ತಿದೆಯೆಂದು ಅನ್ನುವದಾಗಿದೆ.

ಚನ್ನಬಸಪ್ಪ ಅಂಬಲಿ,
ಪ್ರ. ಕಾರ್ಯದರ್ಶಿ

ಧಾರವಾಡ ೨೨-೧೧-೪೦

NOTICE

The undersigned will sell by public auction the tile factory belonging to Mr P F B Albuquerque and particularised herebelow on Sunday the 15th of December 1940 at 10 A M in the Catholic Bank premises Hampankatta, Mangalore. The upset price is fixed at Rs 20 000. The successful bidder will deposit immediately after the sale 25 of the purchase money and the balance within 15 days thereafter failing which he will not only forfeit his deposit but will also be liable for damages resulting from a resale. The undersigned will execute the sale deed at the cost of the Purchaser.

If however there is an offer for the property not less than Rs 30 000 before the date above the undersigned will sell the property by private sale.

Description of property

Property situated in Mangalore Attavar village, Hoige Bazaar Ward, in the town of Mangalore and comprised in S No 186/B—2 acres 20 cents in extent and S. F No. 187 —4 cents in extent and 47 cents of land reclaimed from the Netravati River. The property consists of a tile factory with machinery Presses, frames etc and also lime kilns office building, store rooms, sheds for storing tiles etc. The good will and trade marks of P. Albuquerque & Sons are also included.

Sd/- F. P. S. Albuquerque
„ M. S. Pais
„ L. C. Pais.
Trustees of the estate of P. F. B. Albuquerque & others
Mangalore, 21-11-1940

ಗ್ರೀಕರು ಜಯ ಹೊಂದುತ್ತಿರುವರು!

★ ಯುದ್ಧ ವಾರ್ತೆ

—ಸ್ವಾತಂತ್ರ್ಯಕ್ಕಾಗಿ ಗ್ರೀಕರ ಸ್ವಾರ್ಥತ್ಯಾಗ—



ತ್ರಿರಾಷ್ಟ್ರಗಳ ಹಂಚಿಕೆಯೇನು?

ಟರ್ಕಿಯ ಮೇಲೆ ಒತ್ತಾಯವೇಕೆ?



ಗೋವಿಂದ ವಲ್ಲಭಪಂತ್

ಇಟಲಿಯಾನರ ಅತ್ಯಾಚಾರ

ಕೊರಿಟ್ಜಾ ಎಂಬಲ್ಲಿ ಕಾಳಗ ನಡೆದು ಗ್ರೀಕರು ಇಟಲಿಯನರನ್ನು ಹಿಮ್ಮೆಟ್ಟಿಸಿದರಷ್ಟೆ. ಹಾಗೆ ಶತ್ರುಗಳನ್ನು ಎದುರಿಸಲಾರದ ಇಟಲಿಯನರು ತಾವು ಕಾಲುಕಿತ್ತು ಓಡುತ್ತಿರುವಾಗ ತಾವು ಖಾಲಿ ಮಾಡಿದ ಸ್ಥಳಗಳ ಮನೆಮಠಗಳಿಗೆ ಬೆಂಕಿಕೊಟ್ಟು ಓಡಿದರಂತೆ!

ಸ್ವಾತಂತ್ರ್ಯಕ್ಕಾಗಿ ಸ್ವಾರ್ಥತ್ಯಾಗ

ಗ್ರೀಕ್ ಮುಖ್ಯಮಂತ್ರಿಯ ಸಂದೇಶ

ಗ್ರೀಸಿನ ಮುಖ್ಯ ಮಂತ್ರಿಯಾದ ಜನರಲ್ ಮೆಟಕಾಕ್ಸರು ಒಂದು ಸಂದೇಶವನ್ನು ಕೊಡುತ್ತಾ ಅದರಲ್ಲಿ ಗ್ರೀಸಿನ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ ಗ್ರೀಕರು ಅತುಲ ಸ್ವಾರ್ಥತ್ಯಾಗ ಮಾಡಬೇಕೆಂದು ಬರೆದಿರುವರು.

ತುರ್ಕಿಸ್ಥಾನದಲ್ಲಿ ಗಂಡಾಂತರವೇ?

ತುರ್ಕಿಸ್ಥಾನದ ಆರು ಜಿಲ್ಲೆಗಳಲ್ಲಿ ತಾ. ೨೩ರಿಂದ ಒಂದು ತಿಂಗಳ ವರೆಗೆ ಗಂಡಾಂತರ ಪರಿಸ್ಥಿತಿಯಿದೆಯೆಂದು ಸರಕಾರವು ಹುಕುಮು ಹೊರಡಿಸಿದೆ. ಬಲ್ಗೇರಿಯಾ, ಗ್ರೀಸ್, ಡಾರ್ಡನೆಲ್ಸ್‌ಗಳ ಸಮೀಪವಿರುವವು ಈ ಆರು ಜಿಲ್ಲೆಗಳು.

ಹಿಟ್ಲರ್—ಆಂಟನೆಸ್ಕು ಭೇಟಿ

ರುಮೇನಿಯದ ಮುಖ್ಯ ಮಂತ್ರಿ ಆಂಟನೆಸ್ಕು ಬರ್ಲಿನಿನಲ್ಲಿ ಹಿಟ್ಲರನನ್ನು ಕಂಡು ಸಂಭಾಷಣೆ ನಡೆಸಿದನು.

ಗ್ರಾಂಡಿ—ಹಿಟ್ಲರ್ ಭೇಟಿ

ಇಟಲಿಯ ನ್ಯಾಯಖಾತೆಯ ಮಂತ್ರಿ ಗ್ರಾಂಡಿಯು ಬರ್ಲಿನಿನಲ್ಲಿ ಹಿಟ್ಲರನನ್ನು ಭೇಟಿಯಾದನು. ಗ್ರಾಂಡಿಗೆ ಒಂದು ಸತ್ಕಾರಕೂಟವೂ ಏರ್ಪಟ್ಟಿತ್ತು.

ಜರ್ಮನರ ವಿಮಾನದಾಳಿ

ನಿನ್ನೆ ಮೊನ್ನೆ ಹಿಂದಿನ ರಾತ್ರಿ ಜರ್ಮನರ ವಿಮಾನದಾಳಿ ನಡೆಯಿತು. ಈಸ್ಟ್ ಆಂಗ್ಲೀಯದ ಮೇಲೆ ಬಾಂಬು ಬಿದ್ದವು.

ಒಪ್ಪಂದಕ್ಕೆ ಆಂಟನೆಸ್ಕು ಸಹಿಹಾಕಿದರು

ರುಮೇನಿಯಾ ಮತ್ತು ಇಟಲಿ ಜರ್ಮನಿಗಳೊಳಗೆ ಒಂದು ಒಪ್ಪಂದವಾಗಿ ಅದಕ್ಕೆ ರುಮೇನಿಯಾ ಪರವಾಗಿ ಆಂಟನೆಸ್ಕೊ ಸಹಿಹಾಕಿರುವನೆಂದು ತಿಳಿದಿದೆ. ಜಪಾನಿಯ ರಾಯಭಾರಿಯೂ ಇದ್ದನು.

ಫ್ರೆಂಚ್ ಹಡಗ ಮುಳುಗಿತು

೧೮೦೦ ಜನ ಕಾಣೆ

ಹೈಫಾ ಬಂದರದ ಬಳಿ ಬ್ರಿಟಿಷರ ಸ್ವಾಧೀನವಿದ್ದ ಫ್ರೆಂಚ್ ಹಡಗವೊಂದು ಸ್ಫೋಟವಾಗಿ ಜಲಸಮಾಧಿ ಹೊಂದಿತು. ಈ ಹಡಗ ೧೨೦೦೦ ಟನ್ನು ಭಾರವಿದ್ದಿತು. ಇದರಲ್ಲಿ ೧೮೦೦ ಮಂದಿ ಕಾಣೆಯಾಗಿರುವಂತೆ.

ಗ್ರೀಕರಿಗೆ ಪ್ರಚಂಡ ವಿಜಯ

ಗ್ರೀಕರು ಬಹಳ ರಭಸದಿಂದ ಮುಂದರಿಯುತ್ತಿರುವರು. ಇಟಲಿಯ ಸೈನ್ಯ ಪಲಾಯನ ಮಾಡುತ್ತಿದೆ. ಇಟಲಿಯ ೧೮ ದಳಗಳು ಭೇದಿಸಲ್ಪಟ್ಟಿವೆ.

ನೆಹರುಗಳನ್ನು ಬಂಧಿಸಿದ ಮೇಲೆ ವೈಯುಕ್ತಿಕ ಸತ್ಯಾಗ್ರಹವನ್ನು ಗಾಂಧಿಜಿಯವರು ತೀವ್ರ ಗೊಳಿಸಿದರು. ಹಲವರು ಪ್ರಸಿದ್ಧ, ಲೋಕಪ್ರಿಯ ಕಾಂಗ್ರೆಸು ಮುಖಂಡರು, ಪ್ರಾಂತಗಳಲ್ಲಿ ಜನಪ್ರಿಯರಾಗಿ ಅಧಿಕಾರ ನಡೆಸಿದ ಹಿಂದಿನ ಮಂತ್ರಿಗಳು, ಎಸೆಂಬ್ಲಿ ಸದಸ್ಯರನೇಕರು ಬಂಧಿತರಾಗಿ ಕಠಿಣ ಶಿಕ್ಷೆಗಳಿಗೆ ಒಳಗಾಗಿದ್ದಾರೆ. ಸತ್ಯಾಗ್ರಹದ ಬಂಧನದ ಶಿಕ್ಷೆಯ ಈ ಸುದ್ದಿಯು ಈಗ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿದೆ.

ಪಂಡಿತ ಪಂತರ ಸತ್ಯಾಗ್ರಹ ಒಂದು ವರ್ಷದ ಶಿಕ್ಷೆ

ಸಂಯುಕ್ತ ಪ್ರಾಂತದ ಹಿಂದಿನ ಮುಖ್ಯ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರು ಸತ್ಯಾಗ್ರಹ ಹೂಡಿದರು. ಸುಮಾರು ಐದು ಸಾವಿರ ಜನರು ಕೂಡಿದ್ದ ಸಭೆಯಲ್ಲಿ ಅವರು ಯುದ್ಧವಿರೋಧ ಜಯಘೋಷ ಮಾಡುತ್ತಿದ್ದಾಗ ಪೋಲೀಸು ಅಧಿಕಾರಿಗಳು ಬಂದು ಸೆರೆಹಿಡಿದರು. ಸಾವಿರಾರು ಜನರು ಜಯಘೋಷದಿಂದ ಪಂತರನ್ನು ಬೀಳ್ಕೊಟ್ಟರು.

ಸೆರೆಮನೆಗೆ ಹೋಗುವಾಗ ಶ್ರೀ. ಪಂತರು 'ಶಾಂತಿಯಿಂದಿರಿ ಮಹಾತ್ಮರ ಸೂಚನೆಗಳನ್ನು ಅನುಸರಿಸಿರಿ' ಎಂದು ಸಂದೇಶವಿತ್ತರು. ಅವರಿಗೆ ಒಂದು ವರ್ಷದ ಸಾದಾ ಶಿಕ್ಷೆ ವಿಧಿಸಲಾಯಿತು.

ಮಣಿಬೆನ್ ಪಟೇಲರ ಬಂಧನ

ಸರದಾರ ಪಟೇಲರ ಮಗಳಾದ ಮಣಿಬೆನ್ ಪಟೇಲರು ಯುದ್ಧ ವಿರುದ್ಧ ಜಯಘೋಷ ಮಾಡುತ್ತಿದ್ದಾಗ ಅವರನ್ನು ಬಂಧಿಸಲಾಯಿತು.

ಡಾ. ರಾಜನರಿಗೆ ಒಂದು ವರ್ಷ ಶಿಕ್ಷೆ

ಮದ್ರಾಸಿನ ಹಿಂದಿನ ಮಂತ್ರಿಗಳಾದ ಡಾ. ರಾಜನರಿಗೆ ಅವರು ಯುದ್ಧ ಕಮಿಟಿ ಸದಸ್ಯರಿಗೆ ಯುದ್ಧ ಸಹಾಯ ಮಾಡಬಾರದಾಗಿ ಪತ್ರ ಬರೆದುದಕ್ಕೆ ಬಂಧನವಾಯಿತು. ಅವರಿಗೆ ೨ ಆಪಾದನೆಯ ಮೇರೆಗೆ ಒಂದೊಂದು ವರ್ಷ ಶಿಕ್ಷೆ ಮತ್ತು ೧೦೦೦ ರೂಪಾಯಿ ಜುಲುಮಾನೆ, ತಪ್ಪಿದರೆ ೬ ತಿಂಗಳ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆಯನ್ನು ಒಂದೇ ಕಾಲದಲ್ಲಿ ಭೋಗಿಸಬೇಕೆಂದು ವಿಧಿಸಲಾಗಿದೆ.

ಶ್ರೀಮತಿ ಕುಟ್ಟಿಮಾಲ್ ಅಮ್ಮಾಲರಿಗೆ ಶಿಕ್ಷೆ

ಯುದ್ಧ ವಿರೋಧ ಭಾಷಣ ಮಾಡಿದರೆಂದು ಅಸೆಂಬ್ಲಿ ಮೆಂಬರರಾದ ಶ್ರೀಮತಿ ಕುಟ್ಟಿಮಾಲು ಅಮ್ಮಾಳರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಡಾ। ಅಬ್ದುಲ್‌ಹಮೀದರ ಬಂಧನ

ಮಹಾತ್ಮಾಜಿಯವರ ಅಪ್ಪಣೆ ಮೇರೆಗೆ ಡಾ। ಅಬ್ದುಲ್‌ಹಮೀದರು ಸತ್ಯಾಗ್ರಹ ಹೂಡಿದ್ದರು. ಅವರನ್ನು ಬಂಧಿಸಲಾಗಿದೆ.

ಜಿ. ಜೆ. ಬರೂಕಾ ಮತ್ತು ದ್ವಾರಕಾ ಪ್ರಸಾದರಿಗೆ ಶಿಕ್ಷೆ

ಮಧ್ಯಪ್ರಾಂತದ ಹಿಂದಿನ ಮಂತ್ರಿಗಳಾದ ಪಿ. ಜೆ. ಬರೂಕಾ ಮತ್ತು ದ್ವಾರಕಾ ಪ್ರಸಾದರಿಗೆ ಒಂದೊಂದು ವರ್ಷಗಳ ಸಕ್ರಮ ಶಿಕ್ಷೆ ವಿಧಿಸಲಾಗಿದೆ.

ವಿ. ಎಸ್. ಗೋಖಲೆಯವರಿಗೆ ಶಿಕ್ಷೆ

ಮಧ್ಯಪ್ರಾಂತದ ಹಿಂದಿನ ಮಂತ್ರಿಯವರಾದ ಶ್ರೀ. ವಿ. ಎಸ್. ಗೋಖಲೆಯವರಿಗೆ ಒಂದು ವರ್ಷದ ಸಜೆ ವಿಧಿಸಲಾಗಿದೆ.

ಬಿ. ಜಿ. ಖೇರರಿಗೆ ಸ್ಥಾನಬದ್ಧತೆ

ಮುಂಬಯಿ ಮುಖ್ಯಮಂತ್ರಿ ಶ್ರೀ. ಬಿ. ಜಿ. ಖೇರರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿಡಲಾಗಿದೆ. ಇವರನ್ನು ಪ್ರತ್ಯೇಕ-ಗೌರವದಿಂದ ನೋಡಬೇಕೆಂದು ಗವರ್ನರರು ಸೆರೆಮನೆಯ ಅಧಿಕಾರಿಗಳಿಗೆ ಬರೆದಿರುವರಂತೆ.

ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯರ ಬಂಧನ

ಮದ್ರಾಸು ಅಸೆಂಬ್ಲಿಯ ಉಪಾಧ್ಯಕ್ಷರಾದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯರನ್ನು ಬಂಧಿಸಲಾಗಿದೆ.

೧೦೦೦ ಸತ್ಯಾಗ್ರಹಿಗಳ ಮೂರನೆಯ ಪಟ್ಟಿ

ಮೊದಲು ಪ್ರಸಿದ್ಧವಾದ ೧೫೦೦ ಸತ್ಯಾಗ್ರಹಿಗಳ ಪಟ್ಟಿಯಲ್ಲದೆ ಈಗ ತಿರಿಗಿ ೧೦೦೦ ಮಂದಿ ಸತ್ಯಾಗ್ರಹಿಗಳ ಪಟ್ಟಿಯೊಂದನ್ನು ಗಾಂಧಿಜಿ ತಯಾರಿಸಿರುವರು.

ಪಂಡಿತ ಶುಕ್ಲರ ಬಂಧನ

ಮಧ್ಯಪ್ರಾಂತದ ಹಿಂದಿನ ಮಂತ್ರಿಗಳಾದ ಪಂಡಿತ ರವಿಶಂಕರ ಶುಕ್ಲರನ್ನು ಬಂಧಿಸಲಾಗಿದೆ.

ಮುರಾರಜಿ ದೇಸಾಯಿಯರ ಬಂಧನ

ಮುಂಬಯಿ ಸರಕಾರದ ಹಿಂದಿನ ಮಂತ್ರಿ ಮುರಾರಜಿ ದೇಸಾಯರನ್ನು ಬಂಧಿಸಲಾಗಿದೆ.

ಗೋಪಾಲದಾಸರ ಬಂಧನ

ಹರಿಪುರ ಕಾಂಗ್ರೆಸು ಅಧಿವೇಶನದ ಸ್ವಾಗತಾಧ್ಯಕ್ಷರಾದ ಶ್ರೀ ದರ್ಬಾರ ಗೋಪಾಲದಾಸರು ಅವರ ಪತ್ನಿ ಶ್ರೀಮತಿ ಭಕ್ತಿ ಲಕ್ಷ್ಮಿಯರೊಡನೆ ರಾಸ ಎಂಬ ಹಳ್ಳಿಯಲ್ಲಿ ಬಂಧಿತರಾದರು. ಗೋಪಾಲದಾಸರಿಗೆ ೯ ತಿಂಗಳ ಕಠಿಣ ಶಿಕ್ಷೆ. ಅವರ ಪತ್ನಿ ೩೦೦ ರೂಪಾಯಿ ದಂಡ ತಪ್ಪಿದರೆ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಎಂ. ಗುಪ್ತೆಯವರ ಬಂಧನ

ಮುಂಬಯಿ ಸರಕಾರದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಎಂ. ಗುಪ್ತೆಯವರಿಗೆ ಒಂದು ವರ್ಷ ಶಿಕ್ಷೆಯಾಯಿತು.

ಲಕ್ಷ್ಮೀಬಾಯಿ ಥುಸೆಯವರ ಬಂಧನ

ಪುಣೆಯ ಶ್ರೀಮತಿ ಲಕ್ಷ್ಮೀಬಾಯಿ ಥುಸೆಯವರಿಗೆ ೨೦೦ ರೂಪಾಯಿ ದಂಡನೆ ಇಲ್ಲವೇ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಡಬ್ಲ್ಯೂ. ಎಸ್. ಮುಕಾದಮರಿಗೆ ಶಿಕ್ಷೆ

ಮುಂಬಯಿ ಎಸೆಂಬ್ಲಿಯ ಕಾಂಗ್ರೆಸ್ ಪಾರ್ಟಿ ಸದಸ್ಯರಾದ ಡಬ್ಲ್ಯೂ. ಎಸ್. ಮುಕಾದಮ ಇವರಿಗೆ ಒಂದು ವರ್ಷ ಶಿಕ್ಷೆಯಾಯಿತು.

ಡಾ. ಅಶ್ರಾಫರಿಗೆ ನೋಟೀಸು

ಪ್ರಸಿದ್ಧ ಮುಖಂಡರಾದ ಡಾ. ಅಶ್ರಾಫರಿಗೆ ವಿದ್ಯಾರ್ಥಿಸಂಘದ ಪರಿಷತ್ತಿನ ಅಧ್ಯಕ್ಷತೆಗೆ ಹೋದ್ದರಿಂದ ಅವರು ಹನ್ನೆರಡು ತಾಸಿನಲ್ಲಿ ಪಂಜಾಬು ಬಿಡಬೇಕಾಗಿ ನೋಟೀಸು ಕೊಡಲಾಗಿದೆ.

ರಾಮಸ್ವಾಮಿಯರ ಬಂಧನ

ಮದ್ರಾಸು ಎಸೆಂಬ್ಲಿಯ ಕೂಲಿಗಾರ ಸಂಘದ ಸದಸ್ಯರಾದ ಶ್ರೀ. ಎಸ್. ಜಿ. ರಾಮಸ್ವಾಮಿಯವರನ್ನು ಬಂಧಿಸಲಾಗಿದೆ.

ರತ್ನವೇಲುತೇವಾರರಿಗೆ ಶಿಕ್ಷೆ

ತ್ರಿಚಿನಾಪಳ್ಳಿ ನಗರ ಸಭೆಯ ಅಧ್ಯಕ್ಷರಾದ ಶ್ರೀ ರತ್ನವೇಲು ತೇವಾರರಿಗೆ ಒಂದು ವರ್ಷದ ಸಜೆ ವಿಧಿಸಲಾಗಿದೆ.

ವಾಂಡ್ರೇಕರರ ಬಂಧನ

ಮುಂಬಯಿ ಉಪನಗರದ ಪ್ರಸಿದ್ಧ ಮುಖಂಡರೂ ಎಸೆಂಬ್ಲಿ ಸದಸ್ಯರೂ ಆದ ಶ್ರೀ ವಾಂಡ್ರೇಕರರನ್ನು ಬಂಧಿಸಲಾಗಿದೆ.

ಶ್ರೀ ಮಾಕಂಟಕರ ಬಂಧನ

ಪುಣೆಯ ಕುಮಾರಿ ಪ್ರೇಮಕಂಟಕ



ಕಾಂಗ್ರೆಸು ಮಂತ್ರಿಗಳು ಸೆರೆಮನೆಗಳಲ್ಲಿ!

ಪ್ರಾಂತಪ್ರಾಂತಗಳಲ್ಲಿ ಸತ್ಯಾಗ್ರಹ!

೧೦೦೦ ಸತ್ಯಾಗ್ರಹಿಗಳ ಮೂರನೆಯ ಪಟ್ಟಿ!

ಕರ್ನಾಟಕದಲ್ಲಿ ಸತ್ಯಾಗ್ರಹಾರಂಭ!

ಗಾಂಧೀಜಿಯವರು ಅಸೌಖ್ಯದಿಂದಿರುವರು!

ರನ್ನು ಬಂಧಿಸಿದೆ

ಗುಜರಾಥಿನ ಮೊದಲ ಸ್ತ್ರೀ ಸತ್ಯಾಗ್ರಹಿ

ಮುಂಬಯಿ ಅಸೆಂಬ್ಲಿ ಸದಸ್ಯರಾದ ಶ್ರೀಮತಿ ವಿಜಯಗೌರಿ ಕಾನುಗಾ ಇವರು ಗುಜರಾಥಿನ ಮೊದಲನೆಯ ಮಹಿಳಾ ಸತ್ಯಾಗ್ರಹಿಗಳಾಗಿರುವರು.

ಅಲಿಬಹದೂರರಿಗೆ ಶಿಕ್ಷೆ

ಅಲಹಾಬಾದಿನ ಮುಖಂಡರಾದ ಅಲಿಬಹದೂರರಿಗೆ ೯ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ

ಕೇಳಪ್ಪನವರ ಕೈದು

ಮಲಬಾರು ಜಿಲ್ಲಾ ಬೋರ್ಡಿನ ಹಿಂದಿನ ಅಧ್ಯಕ್ಷ ಶ್ರೀ ಕೇಳಪ್ಪನವರನ್ನು ಕ್ಯಾಲಿಕಟಿನಲ್ಲಿ ಸೆರೆಹಿಡಿದರು

ರಾಜಿಯಾಗಬಹುದೆಂದು ಆಶೆ ಇರುವವರು ಸೆರೆಮನೆಗೆ ಹೋಗಬಾರದು

ಮಹಾತ್ಮರ ಪತ್ರ

ಮಹಾತ್ಮಾಗಾಂಧಿಯವರು ಸರದಾರ ಪಟೇಲರ ಪುತ್ರಿ ಮಣಿಬೆನ್ನಿಗೆ ಒಂದು ಪತ್ರ ಬರೆಯುತ್ತಾ ಅದರಲ್ಲಿ ಬೇಗನೇ ರಾಜಿಯಾಗಬಹುದೆಂದು ಆಶೆಯಿರುವವರು ಸತ್ಯಾಗ್ರಹ ಹೂಡಬಾರದಾಗಿ ಹೇಳಿರುವರೆಂದು ತಿಳಿದಿದೆ

ವಿ. ವಿ. ಕೀರ್ತನೆಯರಿಗೆ ಶಿಕ್ಷೆ

ರಾಣಾಜಿಲ್ಲೆಯ ಒಂದು ಹಳ್ಳಿಯಲ್ಲಿ ಸೆರೆಹಿಡಿದ ವಿ. ವಿ. ಕೀರ್ತನೆಯವರ ವಿಚಾರಣೆಯಾಗಿ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ ಇವರು ಎ. ಐ. ಸಿ. ಸಿ. ಸದಸ್ಯರು.

ಗೋಪಾಲ ರೆಡ್ಡಿಯವರ ಬಂಧನ

ಮದ್ರಾಸು ಪ್ರಾಂತದ ಹಿಂದಿನ ಮಂತ್ರಿಗಳಾದ ಶ್ರೀ. ಗೋಪಾಲ ರೆಡ್ಡಿಯವರು ತಮ್ಮ ಹುಟ್ಟೂರಾದ ನೆಲ್ಲೂರಿನಲ್ಲಿ ಸತ್ಯಾಗ್ರಹ ಹೂಡಿ ಬಂಧಿತರಾದರು.

ಡಾ| ಕಟ್ಜುಜಾರವರ ಸತ್ಯಾಗ್ರಹ

ಸಂಯುಕ್ತ ಪ್ರಾಂತದ ಹಿಂದಿನ ಮಂತ್ರಿಗಳಾದ ಡಾ|| ಕಟ್ಜುಜಾ ಅವರು ತಾ. ೨೭ರಂದು ಸತ್ಯಾಗ್ರಹ ಮಾಡಿದರು.

ಶ್ರೀಮತಿ ಓಕರಿಗೆ ಬಂಧನ

ಅಕೋಲಾದಲ್ಲಿ ಸತ್ಯಾಗ್ರಹ ಮಾಡಿದ ಶ್ರೀಮತಿ ಪ್ರೇಮಾಬಾಯಿ ಓಕರಿಗೆ ೩೦೦ ರೂಪಾಯಿ ದಂಡ, ತಪ್ಪಿದಲ್ಲಿ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಪೋಪಟಲಾಲಶಹರ ಬಂಧನ

ಪೂಣೆ ಮುನ್ಸಿಪಾಲಿಟಿಯ ಹಿಂದಿನ ಅಧ್ಯಕ್ಷ ಶ್ರೀ ಪೋಪಟಲಾಲ ಶಾರವರಿಗೆ ಒಂದು ವರ್ಷ ಶಿಕ್ಷೆಯಾಯಿತು

ಆಚಾರ್ಯ ಲಿಮೆಯವರ ಬಂಧನ

ಮುಂಬಯಿ ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿ ಆಚಾರ್ಯ ಲಿಮೆಯವರಿಗೆ ಒಂದು ವರ್ಷ ಶಿಕ್ಷೆಯಾಯಿತು.

ಸಮತಿಬಾಯಿಯವರಿಗೆ ಶಿಕ್ಷೆ

ಸತ್ಯಾಗ್ರಹಮಾಡಿದಕ್ಕೆ ಶ್ರೀಮತಿ ಸುಮತಿಬಾಯಿಯವರಿಗೆ ೨೦೦ ರೂಪಾಯಿ ದಂಡ ಇಲ್ಲವೇ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು

ಪ್ರಕಾಶಂರವರ ಸತ್ಯಾಗ್ರಹ

ಮದ್ರಾಸಿನ ಹಿಂದಿನ ಮಂತ್ರಿ ಹಾಗೂ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಟಿ ಪ್ರಕಾಶಂರವರು ಮದ್ರಾಸಿನಲ್ಲಿ ಸತ್ಯಾಗ್ರಹ ಹೂಡುವರಾಗಿ ತಿಳಿದಿದೆ

ಎಲ್. ಎಂ. ಪಾಟೀಲರಿಗೆ ಶಿಕ್ಷೆ

ಮುಂಬಯಿ ಪ್ರಾಂತದ ಹಿಂದಿನ ಮಂತ್ರಿಗಳಾದ ಶ್ರೀ ಎಲ್ ಎಂ ಪಾಟೀಲರು ಸತ್ಯಾಗ್ರಹ ಮಾಡಿ ಅವರನ್ನು ಬಂಧಿಸಲಾಯಿತು ಆ ಮೇಲೆ ಅವರನ್ನು ವಿಚಾರಿಸಿ ಒಂದು ವರ್ಷ ಶಿಕ್ಷೆ ವಿಧಿಸಲಾಯಿತು

ಕೇಳಪ್ಪನವರಿಗೆ ಶಿಕ್ಷೆ

ಯುದ್ಧದ ವಿರೋಧ ಭಾಷಣಮಾಡಿದರೆಂದು ಕೇರಳದ ಮುಂದಾಳ ಶ್ರೀ ಕೇಳಪ್ಪನವರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ



ಖಾನ್ ಸಾಹೇಬ್ ... ನವರು ಗಡಿನಾಡಿನಲ್ಲಿ ಸತ್ಯಾಗ್ರಹ ಮಾಡುವರೆಂದು ... [illegible]

ಶ್ರೀ ಕೃಷ್ಣಸಿಂಹರ ಸತ್ಯಾಗ್ರಹ

ಬೀಹಾರಿನ ಹಿಂದಿನ ಮಂತ್ರಿಗಳಾದ ಶ್ರೀ ಕೃಷ್ಣಸಿಂಹರೇ ಮೊದಲಾದ ೨೭ ಮಂದಿಯು ತಾ ೨೭ರ ಮೇಲೆ ಸತ್ಯಾಗ್ರಹ ಆರಂಭ ಮಾಡುವರು

ವಿ. ಭೂವರನರ ಬಂಧನ

ಮದ್ರಾಸ ಅಸೆಂಬ್ಲಿ ಮೆಂಬರರಾದ ಶ್ರೀ ಭೂವರನರು ಯುದ್ಧ ವಿರೋಧ ಪ್ರಚಾರ ಮಾಡಿದರೆಂದು ಬಂಧಿಸಿ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಲಾಯಿತು.

ಕರ್ನಾಟಕದಲ್ಲಿ ಸತ್ಯಾಗ್ರಹ

ಕರ್ನಾಟಕದಲ್ಲಿ ಸತ್ಯಾಗ್ರಹ ಹೂಡುವ ಕಾರ್ಯಕ್ರಮವು ತಯಾರಾಗಿದೆ ಧಾರವಾಡದಲ್ಲಿ ಶ್ರೀ ಚೆನ್ನಬಸಪ್ಪ ಅಂಬಲಿಯವರು ಮೊದಲು ಸತ್ಯಾಗ್ರಹ ಮಾಡುವರು

ಮಹಾತ್ಮರಿಗೆ ರಕ್ತದ ಒತ್ತಾಟ

ವಿಶ್ರಾಂತಿ ಪಡೆಯುವರು

ತಾ ೨೫ರಂದು ರಾತ್ರಿ ಗಾಂಧೀಜಿಯವರಿಗೆ ರಕ್ತದ ಒತ್ತಾಟ ಹೆಚ್ಚಾಯಿತೆಂದು ತಿಳಿದಿದೆ ಅವರ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಸಲಹೆಯಿತ್ತಿರುವರು

ಕಾಳೇಶ್ವರ ರಾಯರ ಬಂಧನ

ಮದ್ರಾಸು ಸರಕಾರದ ಹಿಂದಿನ ಮುಖ್ಯ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಕಾಳೇಶ್ವರ ರಾಯರು ಬಂಧಿತರಾಗಿರುವರು

ಹರಿಪ್ರಸಾದ ಮೆಹತರ ಬಂಧನ

ಅಹಮ್ಮದಾಬಾದಿನ ಅಸೆಂಬ್ಲಿ ಸದಸ್ಯರಾದ ಶ್ರೀ ಹರಿಪ್ರಸಾದ ಮೆಹತಾರವರು ಬಂಧಿತರಾಗಿರುವರು

ವಸುಮತಿ ಪಂಡಿತರ ಬಂಧನ

ರಾಮನಗರದಲ್ಲಿ ಸತ್ಯಾಗ್ರಹ ಹೂಡಿದ ಶ್ರೀ ವಸುಮತಿ ಪಂಡಿತರನ್ನು ಬಂಧಿಸಲಾಗಿದೆ.

ನೇಶನಲ್ ಹೆರಾಲ್ಡಿನಿಂದ ಜಾಮೀನು

ನೇಶನಲ್ ಹೆರಾಲ್ಡ್ ಎಂಬ ಲಕ್ನೋದ ಪ್ರಸಿದ್ಧ ರಾಷ್ಟ್ರೀಯ ಪತ್ರಿಕೆಯು ಬರೆದ ಒಂದು ಅಗ್ರಲೇಖನದ ಸಲುವಾಗಿ ಅದರಿಂದ ಸರಕಾರವು ೩೦೦೦ ರೂಪಾಯಿಗಳ ಜಾಮೀನು ಕೇಳಿದೆ.

ಮದ್ರಾಸು ಅಸೆಂಬ್ಲಿ ಸ್ಪೀಕರರಾದ ಶ್ರೀ ಸಾಂಬಮೂರ್ತಿಯವರು ಸತ್ಯಾಗ್ರಹ ಹೂಡಲು ನಿರ್ಧಾರ ಮಾಡುವರೆಂದು ತಿಳಿದಿದೆ

ಸಿಂಧದ ಮಂತ್ರಿಮಂಡಲ

ರಾಷ್ಟ್ರಪತಿಗಳ ಯಶಸ್ವೀ ಕಾರ್ಯ

ಸಿಂಧದ ಅರಾಜಕತೆಯನ್ನಳಿಸಿ ಮಂತ್ರಿಮಂಡಲ ವ್ಯವಸ್ಥೆ ಮಾಡಲು ಹೋದ ರಾಷ್ಟ್ರಪತಿ ಆಜಾದರು ಯಶಸ್ವಿಗಳಾಗಿರುವರು. ಅಲ್ಲಿ ಸಮ್ಮಿಶ್ರ ಮಂತ್ರಿಮಂಡಳವು ಏರ್ಪಡುವುದು

ಕರುಣಾಕರ ಮೇನನರ ಬಂಧನ

ಕಲ್ಲಿಕೋಟೆಯ ಅಸೆಂಬ್ಲಿ ಸದಸ್ಯರಾದ ಶ್ರೀ ಕರುಣಾಕರ ಮೇನನರು ಬಂಧಿತರಾಗಿರುವರು.

ರಾಘವ ಮೇನನರ ಬಂಧನ

ಇನ್ನೊಬ್ಬ ಎಂ ಎಲ್. ಎ ಗಳಾದ ಶ್ರೀ ರಾಘವನ್ ಮೇನನರನ್ನು ಸೆರೆಹಿಡಿದಿರುವರು

ನಾರಾಯಣ ತಿವಾರಿಯರ ಬಂಧನ

ಲಖನೋದಲ್ಲಿ ನಾರಾಯಣ ತಿವಾರಿಯೆಂಬ ಕಾಂಗ್ರೆಸು ಕೆಲಸಗಾರರನ್ನು ಬಂಧಿಸಿದರು.

ಜಗನ್ನಾಥರ ಬಂಧನ

ಅಲ್ಲಹಾಬಾದಿನ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಜಗನ್ನಾಥ ಎಂಬವರನ್ನು ಬಂಧಿಸಿರುವರು.

ರಚನಾತ್ಮಕ ಕಾರ್ಯಕ್ರಮ

ತಕಲಿಯ ಮಹಿಮೆ ಲೇಖಾಂಕ ೪

ಲೇಖಕರು: ಸ. ಪ. ಕಾಮತ್, ನಲ್ವಾಡಿ ವರ್ಧಾ.

ಯಾರಾದರೂ ವಿನೋಬಾಜಿಯವರ ಲ್ಲಿಗೆ ತಕಲಿ ಪಾಠಕ್ಕಾಗಿ ಹೋದರೆ ಮೇಲಿನ ಶ್ಲೋಕದ ಅರ್ಥವನ್ನು ಮನದಟ್ಟಾಗಿ ಹೇಳುವುದು ಅವರ ಉಪನ್ಯಾಸದ ಉಪಕ್ರಮ. ಮಾತ್ರವಲ್ಲ ತಕಲಿ ಶಿಕ್ಷಣವನ್ನು ಕೊಡುವಾಗ ವಿನೋಭಾಜಿಯವರು ಅದಕ್ಕೆ ಸಂಬಂಧಪಟ್ಟ ಎಲ್ಲಾ ಪಾಠಗಳನ್ನು ಈ ಚಿಕ್ಕ ತಕಲಿಯ ಮತ್ತದರ ಸರಳ ಉಪಭಾಗಗಳನ್ನೂ ದೃಷ್ಟಾಂತವಾಗಿ ತೋರಿಸಿ ವಿವರಿಸುತ್ತಾರೆ. ಉದಾ: 'ವಿಶ್ವವು ಹೇಗೆ ತಿರುಗುತ್ತದೆ? ಈ ತಕಲಿಯಂತೆ. ಸೂರ್ಯನೆಲ್ಲಿದ್ದಾನೆ? ಈ ತಕಲಿಯ ದಂಡಿಯ ತುದಿಯಲ್ಲಿದ್ದಾನೆಂದು ತಿಳಿಯಿರಿ. ಕ್ರಾಂತಿಯೆಂದರೇನು? ಹೇಗೆ ತಕಲಿಯನ್ನು ತಿರುಗಿಸಿ ಹತ್ತಿಯಿಂದ ನೂಲು ಉತ್ಪನ್ನ ಮಾಡಲಾಗುತ್ತದೊ ಹೆಚ್ಚು ಕಮ್ಮಿ ಹಾಗೆ ಒಂದು ಪರಿಸ್ಥಿತಿಯ ರೂಪವನ್ನು ಬದಲಾಯಿಸುವುದೇ ಕ್ರಾಂತಿ.' ಗಣಿತವಾದರೂ ಹೀಗೆ ಕಲಿಸಬಹುದು. ವರ್ಧಾ ಶಿಕ್ಷಣ ಪದ್ಧತಿಯಲ್ಲಿ The theory of correlation ಎಂಬ ತತ್ವಪ್ರಮಾಣವೂ ಸಾಧಾರಣ ವಿನೋಭಾಜಿಯವರು ಈ ಶಿಕ್ಷಣ ಕ್ರಮವನ್ನು ಅನುಸರಿಸಿಕೊಂಡಿದೆ. ವರ್ಧಾ ಶಿಕ್ಷಣ ಪದ್ಧತಿಯನ್ನು ರೂಪುಗೊಳಿಸಲು ಸಹಾಯ ಮಾಡಿದವರಲ್ಲಿ ವಿನೋಬಾಜಿಯವರೂ ಒಬ್ಬ ಪ್ರಾಮುಖ್ಯ ವ್ಯಕ್ತಿಯೆಂಬುದನ್ನು ಮರೆಯಬಾರದು.

ಕೀರ್ತಿ ದೊಡ್ಡದು

ತಕಲಿ! ಮೂರ್ತಿ ಚಿಕ್ಕದಾದರೂ ಭಾರಿ ಕೀರ್ತಿ ತರುವಂತಹ ಉಪಕರಣ. ಗ್ರೀಕ್ ರೋಮನ್ ನಾಗರಿಕತೆಗಳ ಕಾಲದಲ್ಲಿಯೂ ನೂಲುವ ಸಾಧನವಾಗಿದ್ದ ಈ ಚಿಕ್ಕ ತಕಲಿಯು ವಿನೋಭಾಜಿಯವರ ಕೈಯಲ್ಲಿ ಬಹಳ ಸುಧಾರಣೆ ಹೊಂದುವಂತಾಯಿತು. "ನನ್ನಂತ ಬಡವನು ಎರಡು ಮೂರು ರೂಪಾಯಿ ಬೆಲೆಯ ಚರಕವನ್ನು ಎಲ್ಲಿಂದ ತರಲು ಸಾಧ್ಯ? ಎರಡಾಣೆ ತಕಲಿಯಿಂದ ಜೀವನಕ್ರಮವನ್ನೂ ಸಾಗಿಸಬಲ್ಲೆ" ವಿನೋಭಾಜಿಯವರ ಈ ಅರ್ಥಗರ್ಭಿತ ಮಾತುಗಳಿಂದ ತಕಲಿಯ ಮಹತ್ವವನ್ನು ನಾವು ಊಹಿಸಿಕೊಳ್ಳಬಹುದು.

ಮಹಾತ್ಮಾಜಿಯವರು ದೊಡ್ಡ ದೊಡ್ಡ ಯಂತ್ರಗಳನ್ನು ಖಂಡಿಸುವವರಾದರೆ ವಿನೋಬಾಜಿಯವರು ಚರಕಾ ಯಂತ್ರವೂ ನೂಲುವ ಸಾಧನೆಗೆ ಅನಾವಶ್ಯಕವೆನ್ನುವಂತಹರು. ಒಂದು ಸಮಯ ಬರೀ ಬೆರಳುಗಳಿಂದ ತಿರುವಿ ಹತ್ತಿಯಿಂದ ನೂಲು ತೆಗೆಯುವ ಪ್ರಯೋಗವನ್ನು ಕೂಡಾ ಅವರು ನಡೆಸಿದರಂತೆ.

ಹಿಂದಿನ ಕಾಲದ ತಕಲಿಗಳು ಮಣ್ಣಿನ ಉರುಟಾದ ತೆಳ್ಳಗಿನ ಹಂಚಿಗೆ ನಡುವಿನಲ್ಲಿ ಬಿದಿರ ಅಥವಾ ಮರದ ಸಪೂರ ಕಡ್ಡಿಯನ್ನು ಜೋಡಿಸಿ ತಯಾರಿಸಲ್ಪಡು-



ತಕಲಿ ನೂಲು ಸುತ್ತುವ ವಿಧಾನ. ಹಲಿಗೆ ಆಕೃತಿ ಮತ್ತು ನೂಲುಸುತ್ತಿದ ರೀತಿಯನ್ನು ಸೂಕ್ಷ್ಮವಾಗಿ ತಿಳಕೊಳ್ಳಬೇಕು.

ತಿದ್ದುವು. ಉರುಟು ಹಂಚಿನ ತುಂಡಿನ ಬದಲು ಲೋಹದ ತುಂಡೂ ಉಪಯೋಗಿಸಲ್ಪಡುತಿತ್ತು. ದಿನವೆಲ್ಲ ನೂಲುವ ಕ್ರಮವಿದ್ದುದರಿಂದ ಆಗಿನ ತಕಲಿಗಳು ಒಂದು ಅಡಿಗೂ ಮಿಕ್ಕಿದ್ದುವು.

ಆಧುನಿಕ ವಿನೋಭಾಜಿ ಕೃತ ತಕಲಿಗಳು ಹೆಚ್ಚೆಂದರೆ ಒಂದುವರೆ ತೊಲೆ ಭಾರಕ್ಕೆ ಮಿಕ್ಕಿರುವುದಿಲ್ಲ. ಅವುಗಳ ರಚನೆ: ೭ ಇಂಚು ಉದ್ದದ ಕಬ್ಬಿಣಕಡ್ಡಿಗೆ ಬುಡದಿಂದ ½ ಇಂಚಿನ ಎತ್ತರದಲ್ಲಿ ⅛ ದಪ್ಪವೂ ೧ ಇಂಚು ವ್ಯಾಸವೂ ಇದ್ದ ಒಂದು ಹಿತ್ತಾಳಿ ವರ್ತುಲಾಕಾರದ ತುಂಡನ್ನು ಸಿಕ್ಕಿಸಿರುತ್ತದೆ. ಕೊಡೆ ಕಡ್ಡಿಯ ಮೇಲ್ತುದಿಯು ಚಪ್ಪಟೆಗೊಳಿಸಿ ಮೀನುಗಾಳದ ಅಥವಾ ಗಿಳಿಯ ಕೊಕ್ಕಿನ ತೆರದಲ್ಲಿ ಒಂದು ಕೊಕ್ಕೆಯನ್ನು ಮಾಡಲಾಗಿದೆ.

ಮೇಲಿನ ಕೊಕ್ಕೆಯನ್ನು ಹತ್ತಿಯ ತುದಿಗೆ ಸಿಕ್ಕಿಸಿ ಮೊದಲು ಮೆಲ್ಲಗೆ ತಿರುವಿಸಿದಲ್ಲಿ ನೂಲು ಹೊರಡುವುದು. ಈ ನೂಲನ್ನು ಕಡ್ಡಿಯ ದಂಡಿನ ಕೆಳಗೆ ಅಂಟಿಸಿದ ಹಿತ್ತಾಳೆಯ ತುಂಡಿನ ಹತ್ತಿರ ಸುತ್ತಿ ಮತ್ತೆ ಕ್ರಮವಾಗಿ ನೂಲುವುದು. ನೂಲನ್ನು ದಂಡಿಗೆ ಅಂದವಾಗಿ ಸುತ್ತಬೇಕು. ಅಂದವಾದ ೨೦೦ ಗಜ ನೂಲನ್ನು ಈ ದಂಡಿಗೆ ಸುತ್ತಬಹುದು. ಆ ಮೇಲೆ ನೂಲನ್ನು ಒಂದು ಅಡಿ ಉದ್ದದ ಹಲಿಗೆಯೊಂದಕ್ಕೆ ನಾಲ್ಕಡಿ ಅಳತೆಯ ಒಂದು ಸುತ್ತು ಬರುವಂತಹ ರೀತಿಯಲ್ಲಿ ಸುತ್ತುವುದು.

ತಕಲಿ ಕೋಷ್ಟಕ

ನೂಲಿನ ಒಂದು ಕೋಷ್ಟಕವಿದೆ. ಇದನ್ನ ವಿನೋಭಾಜಿಯವರೇ ರಚಿಸಿದರು- ನಾಲ್ಕು ಅಡಿ ಉದ್ದದ ನೂಲಿಗೆ ಒಂದು ಸರಿಗೆ ಎನ್ನುತ್ತಾರೆ. ೧೬೦ ಸರಿಗೆ ಅಂದರೆ ಒಂದು ಲಟ್ಟಿಯಾಗುತ್ತದೆ. ೪ ಲಟ್ಟಿ= ೧ ಗುಂಡಿ. ಅಂದರೆ ೧ ಗುಂಡಿಗೆ ೬೪೦ ಸರಿಗೆ ಅಥವಾ ಅಾಕ್ಷಿ ಕಾಲು ಗಜ ನೂಲಾಗುತ್ತದೆ.

ಇಂತಹ ಗುಂಡಿಗಳು ಒಂದು ರಾತಲಿನಲ್ಲಿ ಎಷ್ಟು ಹಿಡಿಯುತ್ತವೆಯೋ ಅಷ್ಟು

ಕಮ್ಮಿ ಶ್ರಮದಲ್ಲಿ ಮೊಣಕಾಲಿಗೆ ತಿಕ್ಕಿ ನೂಲುವ ವಿಧಾನ ಕ್ರಮ. ಈ ರೀತಿ ಕೂತುವಿಕೆಗೆ ಲೇಖಾಸನ ಪದ್ಧತಿ ಎನ್ನುತ್ತಾರೆ.

ಆ ನೂಲಿನ ನಂಬರ್ ಅಥವಾ ಅಂಕೆ. ಒಂದು ರಾತಲಿನಲ್ಲಿ ಲಕ್ಷ ಕಾಲು ಗಜ ಅಥವಾ ೬೪೦ ಸರಿಗೆಯ ೧೬ ಗುಂಡಿಗಳು ಹಿಡಿದರೆ ಆ ನೂಲಿನ ನಂಬರು ಅಥವಾ ಅಂಕ ಹದಿನಾರು ಎಂದು ತಿಳಿಯಲಾಗುವುದು.

ಅಂಕದ ವಿಷಯ ಇನ್ನೊಂದು ಸಾಧನವಿದೆ. ೪೦ ರೂಪಾಯಿ ಭಾರವೆಂದರೆ ಒಂದು ರಾತ್ತಲು. ಒಂದು ರೂಪಾಯಿ ಭಾರವನ್ನು ಹದಿನಾರು ಪಾಲುಮಾಡಿ ಪ್ರತಿಪಾಲಿಗೆ ಆಣೆ ಎನ್ನುತ್ತಾರೆ. (ಆಣೆ ತೂಕವೆಂದರೆ ನಾಣ್ಯದಷ್ಟಲ್ಲ.) ನೂಲಿನ ನಂಬರು ತೆಗೆಯಲು ಗುಂಡಿಗಳ ಮೂಟೆಯಿಂದ ದಪ್ಪವಾಗಿದ್ದ ಒಂದನ್ನು ತೆಗೆದು ಅದರೊಳಗಿನ ಒಂದು ಲಟ್ಟಿ (೧೬೦ ಸರಿಗೆ)ಯನ್ನು ಪ್ರತ್ಯೇಕ ತೂಗಬೇಕು. ಒಂದು ಲಟ್ಟಿಯ ಭಾರ ೧ ತೊಲೆ ಬಂತೆಂದು ತಿಳಿಯಿರಿ. ೧೬೦ ಸರಿಗೆಗಳಿಗೆ ಹದಿನಾರರಿಂದ ಭಾಗಿಸಿದರೆ ಎಷ್ಟು ಬರುವುದೊ ಅಷ್ಟು ಮೂಟೆಯೊಳಗಿನ ನೂಲಿನ ನಂಬರು. ಅಂದರೆ $\frac{1}{16}$ ತೊಲೆಯಲ್ಲಿ ಅಥವಾ 'ಒಂದಾಣೆ' ಭಾರದಲ್ಲಿ ಎಷ್ಟು ನಾಲ್ಕು ಅಡಿಯ ಸರಿಗೆಗಳಿರುತ್ತವೊ ಅಷ್ಟು ಆ ನೂಲಿನ ನಂಬರು.

೧೨ ನಂಬರಿನ ನೂಲಿಗೆ ರಾತಲಿಗೆ ಹತ್ತಾಣೆ ಮಜೂರಿ. ೧೬ ನಂಬರಿನದಕ್ಕೆ ೧ ರೂಪಾಯಿ ಮಜೂರಿಯ ಬೆಲೆಯು ವ್ಯಾಪಾರದ ಸೋಲು ಗೆಲುಗಳ ಮೇಲೆ ನಿರ್ಣಯಿಸಲಾಗುವುದು.

ತಕಲಿಯಲ್ಲಿ ೧೦ರಿಂದ ೩೫೦ ನಂಬರಿನ ತನಕ ನೂಲನ್ನು ತೆಗೆಯಬಹುದು. ಎಷ್ಟು ಜಾಸ್ತಿ ನಂಬರಿನ ನೂಲು ತೆಗೆಯಬೇಕೆಂದಿದೆಯೊ ಅಷ್ಟು ದಾವಾಶಯದಲ್ಲಿ ತಕಲಿಯ ಭಾರವನ್ನು ಕಮ್ಮಿ ಮಾಡಬೇಕು. ತೆಳ್ಳಗಿನ ಹಂಚಿನ ತುಂಡಿನ ನಡುವಿನಲ್ಲಿ ಸಪೂರವಾದ ಬಿದಿರ ಕಡ್ಡಿಯನ್ನು ಸೇರಿಸಿ ವಿನೋಬಾಜಿಯವರು ಬಹು ನಾಜೂಕಾದ ನೂಲನ್ನು ತೆಗೆಯುವುದನ್ನು ನೋಡುವಾಗ ಆನಂದವಾಗುತ್ತದೆ.

ತಕಲಿಯಂತಹ ಚಿಕ್ಕ ಉಪಕರಣದಲ್ಲಿ ಚರಕಾದಷ್ಟು ವೇಗದಲ್ಲಿ ಮತ್ತು ಗಜ ಪರಿಮಾಣದಲ್ಲಿಯೂ ಅಷ್ಟೇ ನೂಲನ್ನು ತೆಗೆಯಬಹುದೆಂದು ಸಿದ್ಧಾಂತ ಸಾಧಿಸಿದ ಮಹಾಪುರುಷರು—ವಿನೋಭಾಜಿ. ಅವರ ಶಿಷ್ಯರೊಬ್ಬರು ಅರ್ಧ ಗಂಟೆಯಲ್ಲಿ ೨೪೦ ಗಜದಷ್ಟು ನೂಲಿ ರೇಕಾರ್ಡ್ ಮಾಡಿಟ್ಟಿದ್ದಾರೆ.

ತಕಲಿಯು ಅತ್ಯಂತ ಸರಳವಾದ ನೂಲುವ ಸಾಧನ. ಇದರ ಬೆಲೆ ಬರೇ ೨-೩ ಆಣೆಗಳು. ಕೊಂಡರೆ ಇಲ್ಲದೆ ಎಲ್ಲಿ ಬೇಕಾದರೂ ಒಯ್ಯಬಹುದು ಎಲ್ಲಿ ಬೇಕಾದರೂ ನೂಲಬಹುದು. ನಿಂತಾಗ, ಕೂತಾಗ, ನಡೆಯುವಾಗ ಈ ಮೂರು ಸಂದರ್ಭಗಳಲ್ಲಿಯೂ ನೂಲುವ ಕೆಲ ವಿಧಾನಗಳನ್ನು ವಿನೋಬಾಜಿಯವರು ಕಂಡುಹಿಡಿದಿದ್ದಾರೆ. ಅಲ್ಲದೆ ಎಡಗೈಯಿಂದ ಬಲಕೈಯಿಂದ, ನಡುಬೆರಳ ಸಂದು ತರ್ಜನಿಯಿಂದ, ತೊಡೆಗೆ ತಿಕ್ಕಿ ಮೊಣಕಾಲಿಗೆ ತಿಕ್ಕಿ ನೂಲುವುದು ಹೀಗೆ ಅನೇಕ ಶೈಲಿಗಳನ್ನೂ ಪ್ರಚಾರಿಸಿರುವರು.

ಶಾಸ್ತ್ರೀಯ ರೀತಿಯ ತಕಲ ವಿಧಾನವನ್ನು ಬಲ್ಲವರಿಂದಲೇ ತಿಳಕೊಳ್ಳಬೇಕಲ್ಲದೆ ಪುಸ್ತಕ ವರ್ಣನೆಯಿಂದ ಬಹಳ ಕಠಿಣವಾಗಿದೆ. ಆದರೆ ಉತ್ಸಾಹಿಗಳು ತಮ್ಮಷ್ಟಕ್ಕೆ ಅಭ್ಯಾಸ ಮಾಡಿದಲ್ಲಿ ಬಹು ಮಟ್ಟಿಗೆ ತಕಲಿಯ ಜ್ಞಾನವನ್ನು ಸಂಪಾದಿಸಬಹುದು.

ಸರಳ ಸಾಧನ

ತಕಲಿಯಲ್ಲಿ ದಿನಕ್ಕೆ ಎರಡು ಮೂರಾಣೆ ಸಂಪಾದಿಸುವವರು ಇಲ್ಲಿ ಬಹುಮಂದಿ ಇದ್ದಾರೆ. ಉತ್ತೇಜನಕ್ಕಾಗಿ ವಿನೋಬಾಜಿಯವರು ಅವರಿಗೆ ಹೆಚ್ಚಿಗೆ ಸ್ವಲ್ಪ ಕೂಡಿಸಿ ಕೊಡುವ ಏರ್ಪಾಡು ಮಾಡಿದ್ದಾರೆ.

ತಕಲೀ ಸಂದೇಶ

ವಿನೋಬಾಜಿಯವರು ಪ್ರತಿಯೊಬ್ಬರಿಗೆ ಸಂದೇಶವೆಂಬಂತೆ ಉಪದೇಶಿಸುವ ಮಂತ್ರವಿದು. "ದಿನಕ್ಕೆ ಒಂದು ಲಟ್ಟಿಯಂತೆ ತಕಲಿಯಲ್ಲಿ ನೂಲಿರಿ. (ಅಂದರೆ ಸಾಧಾರಣ ೨೧೦ ಗಜ) ನೀವು ವ್ಯರ್ಥವಾಗಿ ಕಳೆಯುವ ವೇಳೆಯನ್ನು ನೂಲುವುದಕ್ಕೆ ಉಪಯೋಗಿಸಿದಲ್ಲಿ ಬಹಳ ಪ್ರಯೋಜನವಿದೆ. ಒಂದು ವರ್ಷದಲ್ಲಿ ೩೪ ಗಜ ಬಟ್ಟೆಯ ನೂಲಾಗುವುದು. ಹತ್ತಿ ಮತ್ತು ನೇಯಿಗೆಯ ಮಜೂರಿ ಕೂಡಿ ಖರ್ಚು ರೂಪಾಯಿ ೮ ಆಗುತ್ತದೆ. ಒಬ್ಬ ಮನುಷ್ಯನ ಮತ್ತು ಒಂದು ಮಗುವಿನ ಅಥವಾ ಚಿಕ್ಕ ಹುಡುಗನ ಒಂದು ವರ್ಷದ ಬಟ್ಟೆಯಾಯಿತು. ಇದೇ ವಸ್ತ್ರ ಸ್ವಾವಲಂಬನ. ಇದರಿಂದಲೇ ಆತ್ಮಶಾಂತಿ ಸಿಗುವುದು. ನೂಲುವುದರಿಂದ ಮನಸ್ಸಿನ ಕೇಂದ್ರೀಕರಣ ಶಕ್ತಿಯು ಹೆಚ್ಚುವುದು ಆರೋಗ್ಯವು ನೂಲುವುದರಿಂದ ಸುಧಾರಿಸುವುದು. ಒಂದೊಂದೆ ಕುಟುಂಬವು ಹೀಗೆ ಸ್ವಾವಲಂಬನೆ ಮಾಡಿದಲ್ಲಿ ಸ್ವಾತಂತ್ರ್ಯದ ಮೊದಲೂ ಅನಂತರವೂ

ವಿಚಿತ್ರ ಪ್ರಪಂಚ

ವರ್ಷಗಳಿಂದ ನಿದ್ದೆ ಇಲ್ಲ!

ರುಡೊಲ್ಫ್ ಎಂಡ್ಲಿಚರ್ ಎಂಬ ಅಮೇರಿಕಾ ನಿವಾಸಿಗೆ ಕಳೆದ ಏಳು ವರ್ಷಗಳಿಂದ ನಿದ್ದೆ ಇರುವುದಿಲ್ಲ. ೧೯೩೩ರಲ್ಲಿ ಅವನ ತಲೆ ಬುರುಡೆಯೊಳಗೆ ಒಂದು ಹುಣ್ಣಾಗಿತ್ತು. ಆ ದೆಸೆಯಿಂದ ಯಾವಾಗಲೂ ತಲೆ ಸಿಡಿತ ಇದ್ದು ಅವನಿಗೆ ನಿದ್ದೆ ಬರುತ್ತಿರಲಿಲ್ಲ. ಎಷ್ಟೋ ವೈದ್ಯರನ್ನು ನೋಡಿದರು. ನಿದ್ದೆ ಬಾರದಿರುವ ಕಾರಣಗಳನ್ನು ಗೊತ್ತು ಹಚ್ಚಲಿಕ್ಕೆ ಅವರು ಭಗೀರಥ ಪ್ರಯತ್ನ ಮಾಡಿದರು. ಎರಡು ಮೂರು ವರ್ಷಗಳಾಗುವ ತನಕ ಅವನ ತಲೆಯೊಳಗೆ ಹುಣ್ಣು ಆಗಿರುವುದು ದೊಡ್ಡ ದೊಡ್ಡ ಆಸ್ಪತ್ರೆಗಳ ವೈದ್ಯರಿಗೂ ತಿಳಿಯಲಿಲ್ಲ. ಹೀಗೆ ದಿನಗಳು, ತಿಂಗಳುಗಳು, ವರ್ಷಗಳು ನಿದ್ದೆ ಇಲ್ಲದೆ ಕಳೆದುವು. ತಲೆಯೊಳಗೆ ಹುಣ್ಣು ಆಗಿರುವುದು ತಿಳಿದೊಡನೆ, ಅವನು ಇನ್ನು ಒಂದೆರಡು ತಿಂಗಳು ಬದುಕುವುದೂ ಕಷ್ಟವೆಂದು ವೈದ್ಯರು ಅಭಿಪ್ರಾಯಪಟ್ಟರು. ರುಡೊಲ್ಫನು ಬಹಳ ಆಗ್ರಹ ಮಾಡಿದ ಮೇಲೆ ವೈದ್ಯರು ಅವನನ್ನು ಆಸ್ಪತ್ರೆಯಿಂದ ಮನೆಗೆ ಹೋಗಲು ಬಿಟ್ಟರು. ಆದರೆ ಮನೆಗೆ ಮರಳಿದಮೇಲೆ ರುಡೊಲ್ಫನು ತಿಂಗಳು ಕಾಲ ಅಲ್ಲ, ವರ್ಷಕಾಲ ಬದುಕಿದ್ದಾನೆ—ನಿದ್ದೆ ಮಾತ್ರ ಇಲ್ಲ! ನಿದ್ದೆ ಇಲ್ಲದ ರೋಗಿಗಳು ಪ್ರಪಂಚದಲ್ಲಿ ಇನ್ನೂ ಅನೇಕ ಮಂದಿ ಇದ್ದಾರೆ. ಸಹನೆಯಲ್ಲಿ ತಾಳ್ಮೆಯಲ್ಲಿ ಅವರೆಲ್ಲರನ್ನು ಮೀರಿಸಿ ಕೀರ್ತಿವಂತನಾಗಬೇಕೆಂಬುದು— ಅದೊಂದೇ ರುಡೊಲ್ಫನ ಜೀವನದ ಲಕ್ಷ್ಯವಾಗಿದೆ. ಆ ಲಕ್ಷ್ಯವನ್ನು ಸಾಧಿಸಲಿಕ್ಕಾಗಿಯೇ ಅವನು ನಿದ್ದೆ ಇಲ್ಲದ ಅಸಹನೀಯ ಯಾತನೆಗಳನ್ನು ಅನುಭವಿಸಿ ಬದುಕಿರುವನು. ರುಡೊಲ್ಫನಿಗೆ ಈಗ ನಿದ್ದೆ ಬರಬೇಕೆಂಬ ಆಸೆಯೇ ಇಲ್ಲವಂತೆ.

ಸಾವಿರ ವರ್ಷಗಳ ಹಿಂದಿನ ಗೋದಿ ಬೆಳೆ

ಇಟಲಿ ದೇಶದಲ್ಲಿ ಪರುಹಿಯಾ ಎಂಬ ಒಂದು ಸ್ಥಳ ಇದೆ. ಅಲ್ಲಿಯ ಜನರು ಇನ್ನು ಸದ್ಯದಲ್ಲಿಯೇ ಮೂರು ಸಾವಿರ ವರ್ಷಗಳ ಹಿಂದಿನ ಗೋದಿ ಬೆಳೆಯನ್ನು ಉಣ್ಣಬಹುದು, ಅದರಿಂದ ಹೆಚ್ಚು ಬ್ರೆಡ್ಡು ಮಾಡಿ ತಿನ್ನಬಹುದು. ಇತ್ತೀಚೆಗೆ ಹುಡುಕಿ ತೆಗೆದ ಒಂದು ಗೋರಿಯ ನೆಲಮಾಳಿಗೆಯೊಂದರಲ್ಲಿ ಈ ಗೋದಿಯ ಉಗ್ರಾಣವು ದೊರಕಿತು. ಗೋದಿ ಎಲ್ಲವು ದೊಡ್ಡ ಲೋಹದ ಒಂದು ಪೆಟ್ಟಿಗೆಯಲ್ಲಿ ಸಂಗ್ರಹವಾಗಿತ್ತು. ಹೊರಗೆ ತೆಗೆದಾಗ ಅದು ನಿನ್ನೆ ಮೊನ್ನೆಯ ಗೋದಿಯಂತೆಯೇ ಇತ್ತು. ಈಗ ಇದೇ ಗೋದಿಯನ್ನು ಅಲ್ಲಿಯ ಕೆಲವು ಹೊಲಗಳಲ್ಲಿ ಬಿತ್ತಿದ್ದಾರೆ. ಅದು ಸಸಿಯಾಗಿ ತೆನೆ ಬಿಟ್ಟಿದೆ. ಗೋರಿಯೂ ಗೋದಿ ತುಂಬಿದ ಆ ಲೋಹದ ಪೆಟ್ಟಿಗೆಯೂ ಮೂರು ಸಾವಿರ ವರ್ಷಗಳ ಹಿಂದಿನದೆಂದು ಶೋಧ ಮಾಡಲಾಗಿದೆ.

ಗಂಡ ಹೆಂಡಿರ ಜಗಳಗಳಿಗೆ ವಿಚಿತ್ರ ಶಿಕ್ಷೆಗಳು!

ಯುವಕ ಯುವತಿಯರು ಮದುವೆಯಾಗುವುದೂ ಮತ್ತೆ ಜಗಳಗಳಾಗಿ ಅವರು ದಾಂಪತ್ಯ ವಿಚ್ಛೇದಕ್ಕೆಂದು ಕೋರ್ಟುಗಳಲ್ಲಿ ದಾವೆ ಮಾಡುವುದೂ ಅಮೇರಿಕದಲ್ಲಿ ನಿತ್ಯದ ವ್ಯವಹಾರವಾಗಿದೆ. ಈ ದಂಪತಿಗಳು ಜಗಳಾಡಿಕೊಂಡು ತರುವ ದಾವೆಗಳು ವಿಚಿತ್ರವಾಗಿರುವಂತೆ ಅಲ್ಲಿ ನ್ಯಾಯಾಧೀಶರು ಕೊಡುವ 'ಶಿಕ್ಷೆ'ಗಳೂ ವಿಚಿತ್ರವಾಗಿ ಇರುತ್ತವೆ. ಒಂದು ವ್ಯಾಜ್ಯದಲ್ಲಿ ಗಂಡಹೆಂಡಿರು ವಾರಕ್ಕೊಮ್ಮೆ ಸಿನೇಮಕ್ಕೆ ಹೋಗಬೇಕೆಂದೂ, ಅಲ್ಲಿ ಅವರು ಕೈಕೈ ಹಿಡಕೊಂಡು ಚಿತ್ರ ಪ್ರದರ್ಶನವು ಮುಗಿಯುವ ತನಕ ಒಟ್ಟಾಗಿ ಕುಳಿತಿರಬೇಕೆಂದೂ ಒಬ್ಬ ನ್ಯಾಯಾಧೀಶರು ವಿಧಿಸಿರುತ್ತಾರೆ. ಇನ್ನೊಂದು ವ್ಯಾಜ್ಯದಲ್ಲಿ ಗಂಡನು ಹೆಂಡತಿಯನ್ನು ಕರಕೊಂಡು ಪ್ರಾಣಿ ಸಂಗ್ರಹಾಲಯಕ್ಕೆ ಹೋಗಬೇಕೆಂದೂ ಅಲ್ಲಿ ಹುಲಿ ಸಿಂಹಗಳ ಸಂಸಾರ ವ್ಯವಹಾರವನ್ನು ನೋಡುತ್ತಿರಬೇಕೆಂದು ಇನ್ನೊಬ್ಬ ನ್ಯಾಯಾಧೀಶನು ಹೇಳಿದಾನೆ. ಈ ಗಂಡ ಹೆಂಡಿರಿಬ್ಬರು ನಾಯಿ ಬೆಕ್ಕುಗಳಂತೆ ಪರಸ್ಪರ ಕಚ್ಚಾಡಿಕೊಳ್ಳುತ್ತಿದ್ದುದೇ ಈ ವ್ಯಾಜ್ಯಕ್ಕೆ ಕಾರಣವಾಗಿದೆಯಂತೆ.

ಹೆಂಗಸರ ತಲೆಕೂದಲಿನಿಂದ ಸೈನಿಕರಿಗೆ ಬಟ್ಟೆಬರೆಗಳು!

ಲಂಡನಿನ ಒಂದು ಪತ್ರಿಕೆಯಲ್ಲಿ ಒಂದು ವಿಚಿತ್ರ ವರ್ತಮಾನವು ಪ್ರಕಟವಾಗಿದೆ. ಜರ್ಮನಿಯ ಸೈನಿಕರಿಗೆ ಬೇಕಾದ ಉಣ್ಣೆಯ ಬಟ್ಟೆಗಳನ್ನು ತಯಾರಿಸಲಿಕ್ಕೆ ಅಲ್ಲಿ ಉಣ್ಣೆಯ ಕೊರತೆಯಾಗಿರುವುದರಿಂದ ಜರ್ಮನ್ ಹೆಂಗಸರು ತಮ್ಮ ತಲೆಕೂದಲುಗಳನ್ನು ಕತ್ತರಿಸಿ ಸೇನಾ ವಿಭಾಗಕ್ಕೆ ಕಳುಹಿಸಿಕೊಡುತ್ತಾರಂತೆ. ಇದೇ ತಲೆ ಕೂದಲಿನಿಂದ ಕಾರ್ಖಾನೆಗಳಲ್ಲಿ ಸೈನಿಕರಿಗೆ ಬೇಕಾದ ಕಾಲು ಚೀಲಗಳು, ತಲೆ ಟೋಪಿಗಳು ಇತ್ಯಾದಿ ತಯಾರಾಗುತ್ತವಂತೆ. ಕ್ಷೌರಿಕನ ಅಂಗಡಿಗಳಲ್ಲಿ ಬೀಳುವ ಕತ್ತರಿಸಿದ ಕೂದಲೂ ಇದೇ ಕಾರ್ಯಕ್ಕೆ ಉಪಯೋಗವಾಗುತ್ತದಂತೆ. ತುರಿಂಗಿಯಾ ಎಂಬ ಜರ್ಮನಿಯ ಒಂದು ಪ್ರದೇಶದಲ್ಲಿಯೇ ನಾನೂರು ಟನ್ ಭಾರದಷ್ಟು ತಲೆ ಕೂದಲು ಸಂಗ್ರಹವಾಗಿರುವುದೆಂದು ಆ ಪತ್ರಿಕೆ ಹೇಳಿದೆ!

ಮಿಡಿತೆಗಳ ಓಟದ ಸ್ಪರ್ಧೆ!

ಕುದುರೆ ಓಟ ಜಗತ್ಪ್ರಸಿದ್ಧವಾಗಿದೆ. ಈಗೀಗ ನಾಯಿ ಮೊದಲಾದ ಇನ್ನು ಕೆಲವು ಪಶುಗಳ ಓಟದ ಸ್ಪರ್ಧೆಗಳನ್ನು ನಡೆಸುವುದಿದೆ. ಆದರೆ ಮಿಡಿತೆ ಮೊದಲಾದವುಗಳನ್ನು ಓಟದ ಸ್ಪರ್ಧೆಗಾಗಿ ಸಾಕಿರುವ ವಿಷಯ ಯಾರೂ ಕೇಳಿರಲಾರರು. ಅಮೇರಿಕದ ಫ್ಲಾರಿಡದಲ್ಲಿನ ಮಿಯಾಮಿ ಎಂಬಲ್ಲಿ ವಾಸವಾಗಿರುವ ಕಿಂಗ್ ಫಿಶರ್ ಎಂಬ ಆರು ವರ್ಷ ಪ್ರಾಯದ ಒಬ್ಬ ಹುಡುಗನು ಸ್ಪರ್ಧೆಗಾಗಿ ಮಿಡಿತೆಗಳನ್ನು ಸಾಕಿದ್ದಾನೆ. ಕೆಲಕೆಲವರು ಈ ಮಿಡಿತೆಗಳೊಂದಿಗೆ ಪಂಥ ಹಾಕುವಂತೆ ಕುದುರೆ ಜೂಜಿನಂತೆ ಜೂಜಾಡುವರು. ಓಟದ ಈ ಮಿಡಿತೆಗಳು ಹಲವರ ಹಣ ಸಂಪಾದನೆಗೂ ಜೀವನೋಪಾಯಕ್ಕೂ ಕಾರಣವಾಗಿದೆ.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು ಕೊಡಿರಿ

BHUVANENDRA PRODUCTS LTD.,
KATAPADI, S. K.

Why Doctors prescribe
"BHUVANENDRA"
NARAYANA TAILA
:ause it sets right
the nervous system and gives good relief
from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.
ಸ್ಥಳೀಯ ಸ್ವೀಕರ್ತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಪೈ, ರಥಬೀದಿ.
ಡಾ| ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಶ್ರೀ ರಾಮಕೃಷ್ಣ ಮಠದ ಮಾತಾ ಶಾರದಾದೇವಿ

ಅಧ್ಯಾತ್ಮ ಸುಖಮಗ್ನರಾಗಿದ್ದ ಸನ್ಯಾಸೀ ದಂಪತಿಗಳು



ಶ್ರೀ ರಾಮಕೃಷ್ಣ ಪರಮಹಂಸರು

ಮನುಷ್ಯ ಜನ್ಮದ ನಿಜವಾದ ಉನ್ನತಿ ಆತ್ಮೋನ್ನತಿ; ರಾಜಕೀಯ ಸಾಮಾಜಿಕ ಗೌರವಗಳಿಂದ ಮನುಷ್ಯನ ಮೇಲ್ಮೆಯನ್ನು ಅಳೆಯುವುದು ತಪ್ಪು. ಶ್ರೀರಾಮಕೃಷ್ಣ ಪರಮಹಂಸರ ಧರ್ಮಪತ್ನಿ ಮಾತಾ ಶಾರದಾದೇವಿಯವರ ಜೀವನವು ಇಂತಹ ಉದಾತ್ತ ಆತ್ಮೋನ್ನತಿಯನ್ನು ಸಾಧಿಸಿದ ವ್ಯಕ್ತಿಗಳ ಸಾಲಿನಲ್ಲಿ ಅಗ್ರಗಣ್ಯವಾಗಿದೆ. ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಹೆಂಗಸು, ಪರಮ ವ್ರತನಿಷ್ಠ ಅಧ್ಯಾತ್ಮಸಾಧಕ ಮಹರ್ಷಿ ರಾಮಕೃಷ್ಣರಂತಹವರ ಕೈಹಿಡಿದು, ಅವರ ವ್ರತನಿಯಮಗಳಲ್ಲಿ, ಕಷ್ಟಸುಖಗಳಲ್ಲಿ ಚಾಚೂ ತಪ್ಪದೆ ನಿರ್ಮಲಭಾವದಿಂದ ಅನುಸರಿಸುವಂತಹ ಧೈರ್ಯೋತ್ಸಾಹ ತಳೆದಿದ್ದು, ಪ್ರಾಪಂಚಿಕ ಸುಖಭೋಗಗಳಿಗೆ ತಿಲಾಂಜಲಿಯೆರೆದಾ ಪುಣ್ಯಜೀವನದ ಸ್ಮರಣೆಯು ಯಾರ ಹೃದಯವನ್ನು ಸಚೇತನಗೊಳಿಸಲಾರದು?

ಎಳೆತನದಲ್ಲಿ

ಬಂಗಾಳದಲ್ಲಿ ಜಯರಾಂಬತಿ ಎಂಬ ಗ್ರಾಮದಲ್ಲಿ ಶ್ರೀ ಶಾರದಾ ದೇವಿ ಕೃಷಿಕರಾದ ತಂದೆತಾಯಿಗಳ ಬಸುರಲ್ಲಿ ಹುಟ್ಟಿ ಬಂದರು. ಮಾತಾಪಿತೃಗಳು ಅಷ್ಟೇನೂ ಉತ್ತಮ ಸ್ಥಿತಿಯಲ್ಲಿರಲಿಲ್ಲ. ಸಣ್ಣದಿರುವಾಗ ಆಕೆ ತಂದೆತಾಯಿಗಳಿಗೆ ಅವರ ದಿನನಿತ್ಯದ ಹೊಲದ ಕೆಲಸಗಳಲ್ಲಿ ಸಹಾಯಮಾಡುತ್ತಿದ್ದರು. ಸ್ವತಃ ಹೊಲಕ್ಕೆ ಅನ್ನ ನೀರು ಹೊತ್ತುಕೊಂಡು ಹೋಗುತ್ತಿದ್ದರು; ಅಲ್ಲಿ ತಾನೇ ಕಾಳುಕಡ್ಡಿ ಹೆಕ್ಕಿ ಕುಟುಂಬದ ಜೀವನದಲ್ಲಿ ಸಹಭಾಗಿಗಳಾಗಿ ದುಡಿಯುತ್ತಿದ್ದರು.

ಐದನೆಯ ವರ್ಷ ಪ್ರಾಯದಲ್ಲಿಯೇ ಶ್ರೀ ಶಾರದಾದೇವಿ ರಾಮಕೃಷ್ಣರೊಂದಿಗೆ ವಿವಾಹ ನಡೆಯಿತು. ಆಗ ರಾಮಕೃಷ್ಣರಿಗೆ ಇಪ್ಪತ್ತಮೂರು ವರ್ಷ ಪ್ರಾಯ. ಆದರೆ, ತರುಣಪತಿಯು ಇಷ್ಟರಲ್ಲಿಯೇ ಸನ್ಯಾಸವನ್ನು ವಹಿಸಿದ್ದರು. ಬಾಲಿಕೆಯಾದ ಆ ಸತಿಯು ಆತನ ಬಳಿಯಲ್ಲಿ ಶಿಷ್ಯಳಾಗಿ ಆಧ್ಯಾತ್ಮಸಾರವನ್ನು ಹೀರುತ್ತಿದ್ದಳು. ಇಬ್ಬರೂ ಹೀಗೆ ಅನ್ಯೋನ್ಯ ಅನುರೂಪರಾದ ಸತಿಪತಿಯರಾದರು.

ಪತಿಸೇವೆ

ವರ್ಷಗಳು ಉರುಳಿದವು. ಬಾಲಿಕೆಯಾದ ಶಾರದಾದೇವಿ ಪ್ರಾಯಕ್ಕೆ ಬಂದಳು. ಇದುವರೆಗೆ ಹೆತ್ತವರ ಮನೆಯಲ್ಲಿ ಇದ್ದ ... ಮುಂದೆ ... ಗಂಡನಲ್ಲಿಗೆ ಕಳುಹಿಸದೆ ಇರುವುದು ಹೆತ್ತವರಿಗೆ ಸರಿಯೆನಿಸಲಿಲ್ಲ. ದಕ್ಷಿಣೇಶ್ವರದಲ್ಲಿ ತೀವ್ರ ಸನ್ಯಾಸವನ್ನವಲಂಬಿಸಿ, ತಪಾಚರಣೆಯಲ್ಲಿ ಕುಳಿತಿದ್ದ ರಾಮಕೃಷ್ಣರ ಬಳಿಯಲ್ಲಿಗೆ ಆಕೆಯನ್ನು ತಂದುಬಿಟ್ಟರು. ಆಕೆ ಅಲ್ಲಿ ಆತನ ಪಾದಸೇವೆಯಲ್ಲಿ ನಿರತಳಾದಳು. ಅಲ್ಲಿ ನವತರುಣಿಯಾದ ತನ್ನ ಪತ್ನಿಗೆ ತೀವ್ರ ವಿರಕ್ತ ಸನ್ಯಾಸಿಯಾದ ಗಂಡನು ಜೀವನಸಾರವು ಅಧ್ಯಾತ್ಮವೆಂಬುದನ್ನು ತಿಳಿಸಿದನು.

ನಿಜವಾಗಿ ನೋಡಿದರೆ, ತಾರುಣ್ಯಜೀವನದಲ್ಲಿ ಇದಕ್ಕಿಂತ ಹೆಚ್ಚಿನ ಅಗ್ನಿಪರೀಕ್ಷೆಯು ಬೇರೆ ಇರಲಾರದು. ಈ ಅದ್ಭುತ ತ್ಯಾಗ, ಸುಖ ಭೋಗ ನಿರಸನ ವ್ರತವನ್ನು ಕುರಿತು ಅವರ ಶಿಷ್ಯೋತ್ತಮರಾದ ಶ್ರೀ ಶಾರದಾನಂದರೆಂಬವರು ಹೀಗೆ ವಿವರಿಸುತ್ತಾರೆ.

ದೇಹವೇ? ದೇವರೇ?

"ಒಂದು ದಿನ ಸ್ವಾಮಿ ತುಂಬುಹರೆಯದ ಕೋಮಲಾಂಗಿಯಾದ ತನ್ನ ಧರ್ಮಪತ್ನಿ ತನ್ನಪಾರ್ಶ್ವದಲ್ಲಿ ಮಲಗಿರುವುದನ್ನು ಕಂಡರು. ಆಗ ಅವರಿಗೆ ತನ್ನ ಆತ್ಮದೊಡನೆ ಅನೇಕ ಬಗೆಯ ವಾದವಿವಾದಗಳೆದ್ದುವು; ಮನವೇ, ಈ ದೇಹ, ಸ್ತ್ರೀ ದೇಹವು ನಿನಗೆ ಬೇಕೆ? ಆ ದೇವನ ಸಾಕ್ಷಾತ್ಕಾರ ಬೇಕೆ? ಒಂದು ಬೇಕಾದರೆ ಇನ್ನೊಂದನ್ನು ಬಿಟ್ಟುಬಿಡು; ಹಾಗಾದರೆ ನನಗೆ ದೇವಸಾಕ್ಷಾತ್ಕಾರವೇ ಬೇಕಾಗಿದೆ' ಇಂತಹ ವಾದದಲ್ಲಿ ಕೊನೆಗೆ ಆ ಆತ್ಮಶಾಂತಿಯು ಸ್ವಾಮಿಗೆ ಲಭಿಸಿತು."

ತಾಯ್ತನದ ಮೂರ್ತಿ

ಒಂದು ದಿನ ಅವರ ಪತ್ನಿ ಅವರ ಕಾಲೊತ್ತುತಿದ್ದರಂತೆ. "ನನ್ನನ್ನು ನೀವು ಹೇಗೆಂದು ನೋಡುತ್ತೀರಿ?" ಈ ಕುತೂಹಲದ ಪ್ರಶ್ನೆಯನ್ನು ಗಂಡನೊಡನೆ ಪತ್ನಿ ಕೇಳಿದರು. "ಈ ದೇಗುಲದ ಮೂರ್ತಿ, ಮಹಾಕಿ ದೇವತೆಯಂತೆ-ವಿಶ್ವದ ಮಾನವ ಸಂತತಿಯ ತಾಯಿಯಂತೆ—ತಾಯ್ತನದ ಮೂರ್ತಿಯಂತೆ—ನಾನು ನಿನ್ನನ್ನು ನೋಡುತ್ತೇನೆ" ಶ್ರೀ ರಾಮಕೃಷ್ಣರು ಅಷ್ಟು ಸರಳವಾಗಿ ಸಹಜವಾಗಿ ಉದಾತ್ತವಾಗಿ ತ್ಯಾಗಪೂರ್ಣವಾಗಿ ಉತ್ತರವಿತ್ತರು. ನಿಜವಾಗಿಯೂ, ಐಹಿಕ ಸುಖಭೋಗಗಳಲ್ಲಿ ಆಕೆ ಮಾತೃಪದವಿಯನ್ನು ಪಡೆಯದಿದ್ದರೂ, ಇಂದು ದೇಶ ಸರ್ವತ್ರ ಹರಡಿರುವ ರಾಮಕೃಷ್ಣಾಶ್ರಮದ ಸ್ವಾಮಿಗಳ ಮಠದ ಸಾವಿರಾರು ಮಕ್ಕಳನ್ನು ಪಡೆದ ತಾಯಿ ಶಾರದಾ ದೇವಿಯೆಂಬುದು ಸಂದೇಹವಿಲ್ಲದೆ ಮಾತಾಗಿದೆ.

ಗೃಹಿಣಿಯಾಗಿ, ಗಂಡನ ಸುಖವನ್ನು ತನ್ನ ಮಗಳು ಪಡೆಯಲಿಲ್ಲವಲ್ಲಾ ಎಂದು ಶಾರದಾ ದೇವಿಯ ತಾಯಿ ಕೊರಗುತ್ತಿದ್ದರು. ಒಮ್ಮೆ ಶ್ರೀ ರಾಮಕೃಷ್ಣರಂತಹ 'ಹುಚ್ಚ'ನಿಗೆ ಮಗಳನ್ನು ಕೊಟ್ಟು ಬಂಜೆ ಮಾಡಿದೆನಲ್ಲಾ ಎಂದೂ ಚಡಪಡಿಸಿಕೊಂಡರಂತೆ. ಇದಕ್ಕೆಲ್ಲಾ ಶ್ರೀ ರಾಮಕೃಷ್ಣರು ಒಳ್ಳೆಯ ಸಹನೆಯ ಆಳ ವಿಚಾರದ ಉತ್ತರವನ್ನಿತ್ತು ಸಮಾಧಾನಪಡಿಸಿದರು. ಇದರಿಂದ, ಇತರರಿಗೆ ಸಮಾಧಾನವಾಗಿರಲಿ, ಇಲ್ಲದಿರಲಿ ಶಾರದಾ ದೇವಿ ಸಂಪೂರ್ಣ ಸಮಾಧಾನಪಟ್ಟುಕೊಂಡು ಪತಿಸೇವಾಮಗ್ನರಾಗಿದ್ದರು!

ಕೊನೆಯ ಜೀವನ

ಗಲಗ್ರಂಥಿಯ ಬೇನೆಯಿಂದ ಶ್ರೀ ರಾಮಕೃಷ್ಣರು ಅಸ್ವಸ್ಥರಾದರು. ಅವರನ್ನು ಚಿಕಿತ್ಸೆಗೆಂದು ಕಲ್ಕತ್ತೆಗೆ ಕರೆದೊಯ್ದರು. ಅಲ್ಲಿ ಶಾರದಾದೇವಿ ಸ್ವಾಮಿಯ ಸೇವೆಯನ್ನು ಅತ್ಯಂತ ನಿಷ್ಠೆಯಿಂದ ಮಾಡಿದರು. ಒಮ್ಮೆ ಶಿವಮಂದಿರಕ್ಕೆ ಹೋಗಿ ಪತಿಯ ಆರೋಗ್ಯಕ್ಕಾಗಿ ಎರಡು ದಿನ ಅನ್ನಾಹಾರವಿಲ್ಲದೆ ಪ್ರಾರ್ಥನೆ ಮಾಡಿದ್ದರು. ಕೊನೆಗೆ ಅವರಿಗೇ ಪತಿಪತ್ನಿ, ಪಿತಾಪುತ್ರ, ಬಂಧುಗಳೆಂಬ ವ್ಯಾಮೋಹವಿರಬಾರದು ಎಂಬ ಆತ್ಮವಿಚಾರ ಹುಟ್ಟಿತಂತೆ.

ಸ್ವಾಮಿಯ ಮರಣಾನಂತರ ಹಿಂದೂ ವಿಧವೆಯರಂತೆ ಆಕೆಯೂ ಮೈಮೇಲಿನ ಚಿನ್ನಾಭರಣಗಳನ್ನು ತೆಗೆದುಬಿಟ್ಟಳು. ತನ್ನ ಕೈಯ ಬಳೆಗಳನ್ನೊಡೆವಾಗ, ಆಕೆಗೆ ಶ್ರೀ ರಾಮಕೃಷ್ಣರೇ ತನ್ನ ಕಣ್ಣೆದುರು ಬಂದಂತಾಗಿ 'ನೀನು ಏನು ಮಾಡುತ್ತೀ; ನಾನು ಹೋಗಲಿಲ್ಲ. ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಹೋಗಿ ಕುಳಿತುಕೊಂಡಿದ್ದೇನೆ ಇಷ್ಟೆ" ಎಂದ ಹಾಗೆ ಆಯಿತಂತೆ.

ಕೊನೆಯ ಕಾಲವನ್ನು ಅವರ ತವರು ಮನೆಯಲ್ಲಿ ಕಳೆದರು. ಬಹಳ ಶುದ್ಧ ಜೀವನದಿಂದ ಸರಳವಾದ ಹಿತೋಕ್ತಿಗಳಿಂದ ಶಿಷ್ಯರಿಗೆ ಅಧ್ಯಾತ್ಮವಿಚಾರಗಳನ್ನು ತಿಳಿಸುತ್ತಿದ್ದರು. ಕೊನೆಗೆ ಅರುವತ್ತನೆಯ ಇಸವಿಯಲ್ಲಿ ಅವರು ಪರಂಧಾಮವನ್ನೈದಿದರು.

ಹೀಗೆ ಶ್ರೀ ರಾಮಕೃಷ್ಣ ಮಠದ ಸೇವಾನಿರತಯೋಗಿಗಳ ಮಾತಾ ಶಾರದಾದೇವಿಯವರ ಜೀವನವು ಬಹಳ ರಮ್ಯವೂ, ಶುದ್ಧವೂ, ಆದರ್ಶವೂ ಆಗಿದೆ.



★ ಸಿನೆಮಾ ಪುಟ ★

'ಅಧ್ಮಿ' ವಾಟರ್ಲೂ ಬ್ರಿಜ್ ಚಿತ್ರದ ಅನುಕರಣವೇ?

ಬಾಬುರಾವ್ ಪಟೇಲರ ಲೇಖನ

ರಾಬರ್ಟ್ ಟೇಲರ್ ವಹಿಸಿದ 'ವಾಟರ್ಲೂ ಬ್ರಿಜ್' ಎಂಬ ಕಥೆಯ ಆಂಗ್ಲ ಚಿತ್ರವೊಂದು ಪ್ರಸಿದ್ಧವಿದೆ; ಕೆಲವರು ಪ್ರಭಾತ ಕಂಪೆನಿಯ 'ಆದ್ಮಿ' ಚಿತ್ರವನ್ನು ನೋಡಿ, ಇದು ಆ ಚಿತ್ರದ ಅನುಕರಣವೆಂದು ವಾದಿಸಿದರು. ಇದಕ್ಕೆ ಉತ್ತರ ಕೊಡುತ್ತಾ ಪ್ರಸಿದ್ಧ ಸಿನೆಮಾ ಪತ್ರಿಕೆ 'ಫಿಲ್ಮ್ ಇಂಡಿಯಾ'ದ ಸಂಪಾದಕರಾದ ಬಾಬುರಾವ್ ಪಟೇಲರು, 'ಆದ್ಮಿ' ವಾಟರ್ಲೂ ಬ್ರಿಜ್ಜಿನ ಅನುಕರಣವಲ್ಲವೆಂದು ಸಮರ್ಥಿಸಿರುವರು.

ಎರಡರಲ್ಲಿರುವ ಸಮಾನತೆ

೧. ವಾಟರ್ಲೂ ಬ್ರಿಜಿನ ನಾಯಕಿ ನರ್ತಕಿ. ಆದ್ಮಿಯ ನಾಯಕಿ ವ್ಯಭಿಚಾರಿಣಿ. (೨) ವಾಟರ್ಲೂ ಬ್ರಿಜಿನ ನಾಯಕ ಸೇನಾಧಿಕಾರಿ. ಆದ್ಮಿಯ ನಾಯಕ ಪೋಲೀಸಧಿಕಾರಿ. (೩) ವಾಟರ್ಲೂ ಬ್ರಿಜಿನಲ್ಲಿ ನಾಯಕ ನಾಯಕಿಯರು ವಿಮಾನದಾಳಿ ರಕ್ಷಣೆ ಸ್ಥಳದಲ್ಲಿ ಕೂಡುವರು; ಆದ್ಮಿಯಲ್ಲಿ ಪೋಲೀಸ ಕಟ್ಟೆಯಲ್ಲಿ ಕೂಡುವರು. (೪) ವಾಟರ್ಲೂ ಬ್ರಿಜಿನಲ್ಲಿ ವಿವಾಹಕ್ಕಿಂತ ಮೊದಲು ನಾಯಕನು ನಾಯಕಿಯನ್ನು ಅಗಲಿ ಯುದ್ಧಕ್ಕೆ ಹೋಗುವನು; ಆದ್ಮಿಯಲ್ಲಿ ಅನೇಕ ಕಾರಣದಿಂದ ನಾಯಕಿ ಅಗಲಿಕೆ ಹೊಂದುವಳು. (೫) ವಾಟರ್ಲೂ ಬ್ರಿಜಿನಲ್ಲಿ ಯುದ್ಧದಿಂದ ಮರಳಿಬಂದ ನಾಯಕನು ಮದುವೆಯಾಗಲು ನಾಯಕಿಯನ್ನು ಮನೆಗೆ ಕರೆದೊಯ್ಯುವನು. ಆದ್ಮಿಯಲ್ಲಿ ಪೋಲೀಸಅಧಿಕಾರಿ ಆಕೆಯನ್ನು ಮದುವೆಯಾಗುವುದಾಗಿ ಮನೆಗೆ ಕರಕೊಂಡು ಹೋಗಿ ತಾಯಿಗೆ ತಿಳಿಸುವನು. (೬) ವಾಟರ್ಲೂ ಬ್ರಿಜಿನಲ್ಲಿ ನಾಯಕಿಯು ತಾನು ನಡತೆಯಲ್ಲಿ ಶುದ್ಧಳಲ್ಲವೆಂದು ತಿಳಿದು ಆ ವಿಷಯ ಪ್ರೇಮಿಯ ತಾಯಿಗೆ ತಿಳಿಸಿ ತೆರಳುವಳು. ಆದ್ಮಿಯಲ್ಲಿಯೂ ನಾಯಕಿ ತನ್ನ ನೀಚ ನಡತೆಯನ್ನು ಅರಿತು ಅಲ್ಲಿಂದ ಹೊರಟು ಹೋಗುವಳು. (೭) ವಾಟರ್ಲೂ ಬ್ರಿಜಿನಲ್ಲಿ ನಾಯಕಿಯು ಗೆಳತಿಯೊಬ್ಬಳು ಪಾಪ ಮಾಡದಂತಿರೆಂದು ತನ್ನನ್ನು ತಾನು ಮಾರಿಕೊಳ್ಳುವಳು. ಆದ್ಮಿಯಲ್ಲಿ ಬಾಲಕನೊಬ್ಬನು ವ್ಯಭಿಚಾರಿಣಿಯ ಗೆಳೆಯನಾಗಿದ್ದು ತನ್ನ ಕೆಲಸವನ್ನು ಕಳೆದುಕೊಂಡು ನರ್ತಕಿಯ ಧ್ಯೇಯ ಸಾಧನೆಯಲ್ಲಿ ಸಹಾಯಮಾಡಲು ಯತ್ನಿಸುವನು. (೮) ವಾಟರ್ಲೂ ಬ್ರಿಜಿನಲ್ಲಿ ನಾಯಕಿ ಕೊನೆಗೆ ಆತ್ಮಹತ್ಯೆ ಮಾಡಿಕೊಂಡು ನಾಯಕನಿಂದ ದೂರವಾಗುವಳು. ಆದ್ಮಿಯಲ್ಲಿ ವ್ಯಭಿಚಾರಿಣಿ ಒಬ್ಬನನ್ನು ಕೊಲೆ ಮಾಡಿ ಸೆರೆಮನೆಗೆ ತೆರಳಿ ನಾಯಕನಿಂದ ದೂರವಾಗುವಳು.

ಹೀಗೆ ಈ ಎರಡು ಚಿತ್ರಗಳಿಗೆ ಸ್ವಾ... ದೃಶ್ಯವಿರುವಾಗ ಯಾರಾದರೂ ಆದ್ಮಿಯನ್ನು ವಾಟರ್ಲೂ ಬ್ರಿಜಿನ ಅನುಕರಣವೆಂದು ಭಾವಿಸುವುದು ಸಹಜವಿದೆ.

ಇವೆರಡಲ್ಲಿರುವ ವ್ಯತ್ಯಾಸಗಳು

ವಾಟರ್ಲೂ ಬ್ರಿಜಿನಕಥೆ ಬರಿಯ ಪ್ರೇಮಕಥೆ. ಅದರಲ್ಲಿ ಸಮಾಜ ಸುಧಾರಣೆಯ ದೃಷ್ಟಿಯಿಲ್ಲ. ನೀತಿಗೆಟ್ಟ ಹೆಂಗಸು ಅಭಿವೃದ್ಧಿ ಹೊಂದಿ ಬದುಕುವುದಕ್ಕಿಂತ ಸಾಯುವುದೇ ಲೇಸೆಂದು ಅದರಲ್ಲಿ ಸೂಚಿತವಾಗಿದೆ. ಆದ್ಮಿಯಲ್ಲಿ ಮಾನವನ ಸ್ಥಿತಿಗತಿಗಳನ್ನು ಚಿತ್ರಿಸಿದೆ. ಸಮಾಜ ಪರಿಷ್ಕಾರವನ್ನು ಎತ್ತಿ ಹಿಡಿವುದು ಕಥೆಯ ತಿರುಳು. ವ್ಯಭಿಚಾರಿಣಿ ತನ್ನ ಜೀವನವನ್ನು ಪ್ರೇಮದ ಫಲವಾಗಿ ಪರಿಶುದ್ಧ ಮಾಡಲು ಯತ್ನಿಸುವಳು; ಪ್ರೇಮಿಯು ನೆರವಾಗುವನು. ಆದರೆ ಆಕೆಯ ಯತ್ನವು ಮಾತ್ರ ಫಲಿಸಲಿಲ್ಲ.

ಹೀಗೆ ಧ್ಯೇಯದಲ್ಲಿಯೇ ಇವೆರಡು ಚಿತ್ರಗಳಿಗೆ ಭೇದವಿದೆ. ಆದ ಕಾರಣ ಧ್ಯೇಯದಲ್ಲಿಯೇ ಭಿನ್ನವಾದ ಚಿತ್ರ ಆದ್ಮಿ ವಾಟರ್ಲೂ ಬ್ರಿಜಿನ ಅನುಕರಣವಲ್ಲ; ಅದಕ್ಕಿಂತ ಉತ್ತಮವಾದುದು; ಉದಾತ್ತವಾದುದು.

ವಿಷ್ಣುಪಂತ ಪಗ್ನಿಸ್

ತುಕಾರಾಮನ ಪಾತ್ರಾಭಿನಯದಿಂದ ಪ್ರಸಿದ್ಧರಾದ ಶ್ರೀ ವಿಷ್ಣುಪಂತ ಪಗ್ನಿಸರು ಆಳಂದಿ ಮತ್ತು ಪಂಢರಾಪುರ ಈ ಎರಡು ಸ್ಥಳಗಳಲ್ಲಿ ಎರಡು ಮಹಾ ಘಂಟೆಗಳನ್ನು ಮಾಡಿಸಿಕೊಟ್ಟಿರುವುದಾಗಿ ತಿಳಿದಿದೆ. ಆಳಂದಿಯು ತುಕಾರಾಮನ ಸಮಾಧಿಸ್ಥಳವು.

ಸಂದೇಶ

ನಾಜೀರ್‌ರ ಸಂದೇಶವು ಬೊಂಬಾಯಿಯಲ್ಲಿ ಪ್ರಕಟವಾಗಿದೆ. ನಾಜೀರರು ಒಳ್ಳೆಯ ಅಭಿನಯಗಾರರು, ದಿಗ್ದರ್ಶಕರು ಮತ್ತು ಚಿತ್ರನಿರ್ಮಾಪಕರೆಂದು ಪ್ರಸಿದ್ಧಿಗೆ ಬಂದವರು. ಇತ್ತೀಚೆಗೆ ಅವರು ಹಿಂದ್ ಪಿಕ್ಚರ್ಸ್ ಎಂಬ ಹೊಸ ಚಿತ್ರ ಸಂಸ್ಥೆಯನ್ನು ಸ್ಥಾಪಿಸಿರುವರು.

ಬಾಬುರಾಯ ಪೈ

ಪ್ರಭಾತ ಕಂಪೆನಿಯ ಪಾಲುಗಾರರಾದ ಶ್ರೀ ಬಾಬುರಾಯ ಪೈಗಳು ಉತ್ತರ ಭಾರತದ ಯಾತ್ರೆಯನ್ನು ತೊಡಗಿದ್ದಾರೆ. ಪಡೋಸಿ ಚಿತ್ರವು ಸಂಪೂರ್ಣವಾಗಿದ್ದು, ಇನ್ನು ಮುಂದೆ ಅದನ್ನು ಆ ಕಡೆಗಳಲ್ಲಿ ಪ್ರದರ್ಶಿಸುವ ಏರ್ಪಾಡು ಮಾಡುವರೆ ಅವರು ಪ್ರಯಾಣಮಾಡಿರುವುದಾಗಿ ತಿಳಿದುಬಂದಿದೆ.

ಮಂದರಾವತಿ

ಅರ್ವಿಚಿತ್ರ ಕಂಪೆನಿಯವರ ಮಂದರಾವತಿಯು ಪೂರ್ಣವಾಗುತ್ತಿದೆ. ದಶಂಬರದ ಮಧ್ಯದಲ್ಲಿ ಅದು ಪ್ರದರ್ಶಿತವಾಗುವುದೆಂದು ತಿಳಿದಿದೆ.

ಮಾತೆಯೇ, ಮಕ್ಕಳು ರಾತ್ರಿಯಲ್ಲಿ ಎಚ್ಚತ್ತು ಅಳುತ್ತಿದೆಯೇ?

ಮಗುವನ್ನು ಮೀಯಿಸಿದ ನಂತರ ಇಡೀ ಮೈಗೆ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಸವರಿರಿ, ಆಗ ಮಗುವಿಗೆ ರಾತ್ರಿಎಚ್ಚರವಾಗದು— ಅಂದರೆ ನಿಮಗೆ ಕೂಡಾ ತೊಂದರೆಯಾಗದೆ ನಿದ್ರೆಬೀಳುವುದು. ಕುಟಿಕೂರಾ ಟಾಲ್ಕಮ್ಮಿನ ಗುಣವು ಎಷ್ಟು ವಿಶಿಷ್ಟ ಮತ್ತು ಕ್ರಿಮಿನಾಶಕವೆಂದರೆ, ತುರಿಸುವಿಕೆಯಾ ತುರಿಗಜ್ಜಿಗಳಿಂದ ಮಗುವಿನ ನಿದ್ರೆಯಾ ಹಾನಿಯಾಗದು. ಇದು ಬೆವರನ್ನು ಹೀರಿಕೊಂಡು ಚರ್ಮಕ್ಕೆ ಆಹ್ಲಾದಕರವಾದ ಪರಿಮಳವನ್ನು ಕೊಡುವುದು. ಎಲ್ಲಾ ಕಡೆಗಳಲ್ಲಿಯೂ ಡಾಕ್ಟರುಗಳು ಮಕ್ಕಳಿಗೆ ಕುಟಿಕೂರಾ ಟಾಲ್ಕಮನ್ನೇ (Cuticura Talcum) ಶಿಫಾರಸು ಮಾಡುತ್ತಾರೆ. ತುರಿಗಜ್ಜಿ ಮತ್ತು ತುರಿಸುವಿಕೆಯನ್ನು ತಡೆಗಟ್ಟಲು ಇದಕ್ಕೆ ಸಮಾನವಾದುದಿಲ್ಲ.

ಮಕ್ಕಳ ಸ್ನಾನಕ್ಕೆ ಕುಟಿಕೂರಾ ಸಾಬೂನನ್ನು (Cuticura Soap) ಉಪಯೋಗಿಸಿರಿ ಇದು ಚರ್ಮವನ್ನು ಸಂಪೂರ್ಣವಾಗಿ ಸ್ವಚ್ಛವಾಗಿರಿಸುವುದು. ಕುಟಿಕೂರಾ ಮುಲಾಮು Cuticura Ointment ಗಾಯಗಳನ್ನೂ ವ್ರಣಗಳನ್ನೂ ಕೂಡಲೇ ಗುಣಪಡಿಸುವುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಮಕ್ಕಳಿಗೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಅಶೋಕಕುಮಾರ್

ಮುರುಗಾನ್ ಟಾಕೀಸ್‌ನವರ ಚಾರಿತ್ರಿಕ ಚಿತ್ರ 'ಅಶೋಕಕುಮಾರ್' ಎಂಬುದು ನ್ಯೂಟೋನ್ ಸ್ಟುಡಿಯೋದಲ್ಲಿ ಪೂರ್ಣವಾಗುತ್ತಲಿದೆ. ಜನವರಿ ಮಧ್ಯದಲ್ಲಿ ಪ್ರದರ್ಶನಕ್ಕೆ ಸಿದ್ಧವಾಗುವುದೆಂದು ತಿಳಿದಿದೆ.

ಭೂಕೈಲಾಸ

ಪ್ರಗತಿಚಿತ್ರ ಕಂಪೆನಿಯವರ 'ಭೂಕೈಲಾಸ' ಎಂಬ ತೆಲುಗು ಚಿತ್ರವು ಬರುವ ತಿಂಗಳ ೧೫ಕ್ಕೆ ಪ್ರದರ್ಶನಕ್ಕೆ ಸಿದ್ಧವಾಗುವುದೆಂದು ತಿಳಿದಿದೆ.

ವಸಂತಸೇನೆ ಅಥವಾ ಮೃಚ್ಛಕಟಿಕ

ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ಅಭಿನಯಗಾರರು ವಸಂತಸೇನೆ ಅಥವಾ ಮೃಚ್ಛಕಟಿಕ ಎಂಬ ಕನ್ನಡ ಟಾಕ್ ಚಿತ್ರವನ್ನು ತಯಾರಿಸುವ ಯೋಜನೆಯಲ್ಲಿರುವರೆಂದು ತಿಳಿದುಬಂದಿದೆ.

ರಾಜನರ್ತಕಿ—ಆಂಗ್ಲ ಭಾಷಾಂತರ

ಸಾಧನಾ ಬೋಸರು ಅಭಿನಯಿಸುವ ರಾಜನರ್ತಕಿ ಚಿತ್ರದ ಆಂಗ್ಲ ಭಾಷಾಂತರದ ಡಿಸ್ಟ್ರಿಬ್ಯೂಟಿಂಗಿನ ಹಕ್ಕಿನ ಕುರಿತು ಅಮೇರಿಕನ್ ಸಂಸ್ಥೆಯು ವಾಡಿಯಾ ಮುವಿಟೋನಿನವರೊಡನೆ ಪತ್ರವ್ಯವಹಾರವನ್ನು ಆರಂಭಿಸಿರುವುದಾಗಿ ತಿಳಿದಿದೆ. ಈ ಕಾರ್ಯವು ಯಶಸ್ವಿಯಾದಲ್ಲಿ, ಆ ಸಂಸ್ಥೆಯವರು ಆಂಗ್ಲ ಭಾಷಾಂತರದ ನೆಗೆಟಿವ್‌ಗಳನ್ನು ಅಮೇರಿಕಕ್ಕೆ ಕೊಂಡೊಯ್ದು ಅಲ್ಲಿ ಬೇಕಾದ ಪರಿವರ್ತನೆಗಳನ್ನು ಮಾಡುವರೆಂದು ತಿಳಿದುಬರುತ್ತದೆ.

ಉಮಾರ್ ಖಯ್ಯಾಂ

ಪಡೋಸಿ ಚಿತ್ರವು (ಪ್ರಭಾತ ಕಂಪೆನಿಯ) ಈಗ ಮುಗಿಯುತ್ತಾ ಬಂದಿರುವುದರಿಂದ, ಅವರ ಮುಂದಿನ ಚಿತ್ರವಾದ ಉಮಾರ್ ಖಯ್ಯಾಮಿನ ರಚನೆಯ ವಿಷಯದಲ್ಲಿ ದಿಗ್ದರ್ಶಕ ಶಾಂತಾರಾಮರು ತಲ್ಲೀನರಾಗಿರುವರೆಂದು ಗೊತ್ತಾಗಿದೆ.

ಶೈಲಕ್

ಭಾರತ ಪಿಕ್ಚರ್ಸ್‌ನವರು ಶೇಕ್ಸ್‌ಪಿಯರ್ ಮಹಾಕವಿಯ— ಮರ್ಚೆಂಟ್ ಒಫ್ ವೆನಿಸನ್ನು 'ಶೈಲಕ್' ಎಂಬ ಚಿತ್ರರೂಪವಾಗಿ ತಯಾರಿಸಿರುವರು. ಹೀಗೆ ಶೇಕ್ಸ್‌ಪಿಯರನ ಆಂಗ್ಲ ನಾಟಕಗಳ ರಚನೆಯ ಮಾದರಿಯಲ್ಲಿ ಭಾರತದಲ್ಲಿ ತಯಾರಾದ ಆತನ ನಾಟಕ ಕಥೆಗಳಲ್ಲಿ ಇದು ಮೊದಲನೆಯದೆಂದು ತಿಳಿದುಬಂದಿದೆ. ಶ್ಯಾಮ ಮತ್ತು ರಾಮ ಇವರಿಬ್ಬರು ಇದರ ನಿರ್ದೇಶಕರಾಗಿರುವರು.

ಭಾರತದ ಕುರಿತು ಬ್ರಿಟಿಷ್ ಸರಕಾರದ ಅಲಕ್ಷ್ಯವೇಕೆ?

ರಾಯ್ಸ್ ವೀಕ್ಲಿಯ ಒಂದು ಲೇಖನ

ಬಿಲ್ಲಿಗೆ ಹೂಡಿದ ಬಾಣವು ಕೈ ಬಿಟ್ಟು ಹೋಗುತ್ತಾ ಇದೆ. ಅದು ಪೂರ್ಣಕ್ಕೆ ಬಿಟ್ಟಿತೆಂದರೆ ಮತ್ತೆ ಅದನ್ನು ಮರಳಿ ತೆಗೆದುಕೊಳ್ಳುವದು ಅಸಾಧ್ಯವಾಗಬಹುದು. ಅದ್ದರಿಂದ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಕೂಡಲೇ ಪ್ರಯತ್ನ ಮಾಡಬೇಕು. ಇಂಡೋ-ಚೀನವು ಈಗ ಜಪಾನಿಗಳ ಕೈಗೆ ಹೋದಂತೆಯೇ ಸರಿ. ಅಲ್ಲಿಂದ ರಂಗೂನಿನ ಮೇಲೆ ಒಂದೇ ತಾಸಿನಲ್ಲಿ ವಿಮಾನದಾಳಿಯಾಗಹುದು. ಆದ್ದರಿಂದ ಪೂರ್ವದಿಂದ ಆಪತ್ತು ಬಹಳ ಸಮೀಪವಾಗಿದೆ. ಹಾಗೆ ಪಶ್ಚಿಮಮಧ್ಯದಿಂದಲೂ ಆಪತ್ತು ದೂರವಿರುವುದಿಲ್ಲ. ಹಿಟ್ಲರನೊಡನೆ ಮೊಲೊಟೊವನ ಮಾತುಕತೆ ನಡೆದ ಬಳಿಕ ಇದು ಅನಶ್ಯಂಭಾವಿ ಎಂಬಂತಾಗಿದೆ ಎಂದು ರೋಯ್ಸ್ ವೀಕ್ಲಿ ಎಂಬ ಆಂಗ್ಲೇಯ ಪತ್ರಿಕೆಯಲ್ಲಿ ಆಂಗ್ಲೇಯ ಒಬ್ಬ ಲೇಖಕರು ಬರೆಯುತ್ತಾರೆ.

ಗಂಡಾಂತರ ತಿಳಿದಿದೆ

ಹಿಂದುಸ್ಥಾನವು ಈ ರೀತಿ ಗಂಡಾಂತರದಲ್ಲಿದೆ ಎಂಬುದನ್ನು ಅದು ತಿಳಿದಿದೆ. ಕೇಂದ್ರ ಎಸೆಂಬ್ಲಿಯಲ್ಲಿ ನಡೆದಿರುವ ಚರ್ಚೆಯನ್ನು ನೋಡಿದರೆ, ಹಿಂದುಸ್ಥಾನಕ್ಕೆ ಯಾವ ಸರಕಾರ ಬಂದರೇನು, ಯಾವ ಸರಕಾರ ಹೋದರೇನು, ಬೀಸುವವಳಿಗೆ ಭೀಸುವದು ತಪ್ಪೀತೆ ಎಂದು ಒಬ್ಬ ಪಠಾಣನೂ ಹೇಳುವಂತಾಗಿದೆ. ಆದರೆ ಇದು ನಿರಾಶಾಸೂಚಕ ಮಾತು ಎಂಬುದರಲ್ಲಿ ಸಂದೇಹವಿಲ್ಲ. ಹಿಂದುಸ್ಥಾನವು ಇಂದು ಕೈಲಾಗದ ತಬ್ಬಲಿಯಾಗಿರಲಿಕ್ಕೆ ಬ್ರಿಟಿಷರ ನೀತಿಯೇ ಕಾರಣವಿದೆ. ದೇಶೀಯರು ಅನೇಕ ಎಚ್ಚರಿಕೆಗಳನ್ನು ಕೊಟ್ಟಿದ್ದರೂ, ಹಿಂದುಸ್ಥಾನವನ್ನು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವನ್ನಾಗಿ ಮಾಡಲಿಕ್ಕೆ ಬ್ರಿಟಿಷ್ ಸರಕಾರವು ಪ್ರಯತ್ನ ಮಾಡಲೇ ಇಲ್ಲ. ಈಗ ಬ್ರಿಟನು ಮಾಡಿದ ಕರ್ಮದ ಫಲವನ್ನು ಅದು ಉಣ್ಣಬೇಕಾದ ಸಮಯ ಬಂದಿದೆ. ಪೂರ್ವ ಮತ್ತು ಮಧ್ಯ ದೇಶಗಳಿಗೆ ಯುದ್ಧದ ಜ್ವಾಲೆಯು ಹರಡಿದ ಹಾಗೆ ಇದರ ಅನುಭವವು ಬ್ರಿಟನಿಗೆ ಚೆನ್ನಾಗಿ ಆಗಲಿಕ್ಕಿದೆ.

ಆದರೂ ಬುದ್ಧಿ ಇಲ್ಲ

ಬ್ರಿಟನು ಪೂರ್ವ ಕರ್ಮದ ಫಲವನ್ನು ಅನುಭವಿಸುತ್ತಾ ಇದೆ ಎಂಬ ಹಾಗೆ ತೋರುವದಿದ್ದರೂ ಅದಕ್ಕೆ ಬುದ್ಧಿ ಬರುವುದಿಲ್ಲ ಎಂಬುದು ಆಶ್ಚರ್ಯಕರವಾಗಿದೆ. ಅದು ಕಷ್ಟದಲ್ಲಿ ಸಿಲುಕಿದ್ದರೂ ಹಿಂದುಸ್ಥಾನದೊಡನೆ ಗೌರವದ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ತಾನು ಸಿದ್ಧವಿಲ್ಲ! ಹಿಂದುಸ್ಥಾನದ ಮಿಲಿಯಾಂತರ ಜನರ ಮೇಲೆ ಪೂರ್ಣ ಪ್ರಭಾವವನ್ನು ಇಟ್ಟುಕೊಂಡಿರುವ ಬ್ರಿಟಿಷರ ಅತ್ಯಂತ ಸ್ನೇಹಿತರಾದ ಮಹಾತ್ಮಾ ಗಾಂಧಿಯವರೊಡನೆಯೇ ಬ್ರಿಟಿಷ್ ಸರಕಾರವು ಒಂದು ಒಡಂಬಡಿಕೆಗೆ ಬರಲಿಕ್ಕೆ ಅಸಮರ್ಥವಾಗಿದೆ ಎಂದ ಮೇಲೆ ಮತ್ತೇನು ಹೇಳಬಹುದು? ಅದ್ದರಿಂದ ಬ್ರಿಟನಿಗೆ ಶನಿದಸೆ ಬಂದಿದೆ ಎಂದೇ ಹೇಳಬೇಕಾಗುತ್ತದೆ. ಹಿಂದುಸ್ಥಾನದ ಜನರು ಹೀಗೆಂದೇ ಭಾವಿಸಿದ್ದಾರೆ. ಅದರೂ ಸರಕಾರವು ಜನಮತದ ಕಡೆಗೆ ಕಿವುಡಾಗಿದೆ. ಇಂಥ ಸರಕಾರದಲ್ಲಿ ಪರಿವರ್ತನೆಗಳಾಗಲೇ ಬೇಕು. ಹಿಂದುಸ್ಥಾನದ ಅಖಂಡ ಮುಖಂಡರು ಹೇಳುವುದು ಇದನ್ನೇ! ಆದರೆ ಚರ್ಚಿಲ್ಲರು ಮಾತೆತ್ತುವದಿಲ್ಲ. ಅವರು ಮೌನವ್ರತದ ದೀಕ್ಷೆಯನ್ನು ತೆಗೆದುಕೊಂಡಿರುವ ಹಾಗೆ ತೋರುತ್ತಾರೆ. ಎಮರಿಯವರು ಇದ್ದೂ ಇಲ್ಲದವರ ಹಾಗೆ ಕಾಣುತ್ತಾರೆ. ಹಾಗಿದ್ದ ಮೇಲೆ ಹಿಂದುಸ್ಥಾನದ ಸಮಸ್ಯೆಯನ್ನು ತೀರಿಸಲಿಕ್ಕೆ ಭಾರತ ವಾಯ್ಸರಾಯರಿಗೇ ಯಾಕೆ ಪೂರ್ಣ ಸ್ವಾತಂತ್ರ್ಯವನ್ನು ಕೊಡಬಾರದು?

NOTICE

Wanted a Harijan Clerk for the Attur and Jawahar Bank, Ltd., Mangalore. Candidates must be S. S. L. C. who have passed Banking. Salary Rs. 15—30. Apply to the undersigned

Office of the Bank, Canara High School Road, 14—11 1940	**A. Vaikunta Prabhu,** Managing Director. Attur & Jawahar Bank, Ltd., Mangalore.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈ ಸ್ಕೂಲ್ ರಸ್ತೆ, ಮಂಗಳೂರು

ಈ ಬ್ಯಾಂಕಿಗೆ 15-20 ವರ್ಷ ಪ್ರಾಯದೊಳಗಿನ I ಫೋರ್ಮ್ ವರೆಗೆ ಕಲಿತ ಒಬ್ಬ ಎಟೆಂಡರ್ ಬೇಕಾಗಿದೆ. ಸಂಬಳ ರೂ. 8ರಿಂದ 12ರ ವರೆಗೆ ಕೊಡಲಾದೀತು. ಅರ್ಜಿದಾರರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಹರಿಜನ ಜಾತಿಯವರ ಅರ್ಜಿಗೆ ಹೆಚ್ಚಿನ ಗಮನ ಕೊಡಲಾದೀತು.

ಮಂಗಳೂರು 14-11-'40	ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್, ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಮಂಗಳೂರು.

ಕೆಟ್ಟ ಶೀತ ಮತ್ತು ಚಳಿ.
ಯಿಂದ ವಿಮುಕ್ತರಾಗಿರಿ!

ನಿಮ್ಮ ಗಂಟಲು ಕರ್ಕಶವಾಗಿರುವಾಗ, ಕಣ್ಣಿನಿಂದ ಒಂದೇ ಸವನೆ ನೀರು ಸುರಿಯುತ್ತಿರುವಾಗ, ಶೀತ ಚಳಿಯಿಂದ ಮೈ ನಡುಗುತ್ತಿರುವಾಗ, ಶೀತದಿಂದ ನರಳುತ್ತಿರುತ್ತಿರುವುದು ಖಚಿತವಾದಾಗ ಪೆಪ್ಸ್ ನಿಮಗೆ ಗುಣವನ್ನುಂಟುಮಾಡುವುದು.

ಪೆಪ್ಸ್ ಬಾಯಲ್ಲಿ ಕರಗುತ್ತಿರುವಾಗ ಅದರಿಂದ ಹೊರಡುವ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಸೇರುತ್ತದೆ. ಪೆಪ್ಸ್ ಈ ಪ್ರಕಾರವಾಗಿ ಅಲ್ಲಿರುವ ಕಫದ ಮತ್ತು ಶೀತದ ಕ್ರಿಮಿಗಳನ್ನು ಹುಡುಕಿ ತೆಗೆದು ನಾಶಮಾಡುತ್ತದೆ. ಮತ್ತು ಶೀತದಿಂದ ಬಾಕುಹೋದ ಲೋಮನಾಳಿಗಳನ್ನು ಗುಣಪಡಿಸಿ ಪುನಃ ಶೀತವು ಬಾರದಂತೆ ಶಕ್ತಿಯನ್ನೀಯುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ. 1 0 0ರಂತೆ ಮಾರುತ್ತಾರೆ.

ಏಜಂಟ್ಸ್:
ಮೆಸರ್ಸ್ ದಫ್ತರಿ ಮತ್ತು ಕಂಪೆನಿ ಪಿ. ಟಿ. ಮದರಾಸು



ಪೆಪ್ಸನ್ನು ಕೊಂಡುಕೊಳ್ಳಿರಿ
PEPS
ವಿಷಹಾರಿ ಶ್ವಾಸನೀಯ ಮಾತ್ರೆಗಳು

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ನಿವ್ಯಾಖ್ಯಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪುರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.
ಪ್ರಮುಖ ಆಯುರ್ವೇದೀಯ ಸಂಸ್ಥೆ
ಸಾಧನಾ ಔಷಧಾಲಯ
— ಡಾಕ್ಕಾ, ಬಂಗಾಲ —
ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.
ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.
ಮಂಗಳೂರು ಏಜಂಟ್ಸ್: ಶಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ನೋಟಗಳು

ಟರ್ಕಿಯನ್ನು ಜರ್ಮನಿ, ಇಟಲಿ, ರಷ್ಯಾ ಸಂಯುಕ್ತ ರಾಷ್ಟ್ರಗಳು ಬೆದರಿಸಿವೆ.

ಬ್ರಿಟನಿನ ಸ್ನೇಹವನ್ನು ಬಿಡದಿದ್ದರೆ ತಾವು ಟರ್ಕಿಯ ಸ್ವಾತಂತ್ರ್ಯವನ್ನು ಮನ್ನಿಸಲಾರೆವು ಎಂದು ಅವುಗಳು ಸಾರಿ ಹೇಳಿವೆ.

ಟರ್ಕಿ ಹೀಗೆ ತ್ರಿಶಂಕುಸ್ವರ್ಗದಲ್ಲಿದೆ.

ಟರ್ಕಿಯ ಮೇಲೆ ತಮ್ಮ ಪ್ರಭಾವವನ್ನು ಹೆಚ್ಚಿಸಬೇಕೆಂದು ಆ ತ್ರಿರಾಷ್ಟ್ರಗಳ ಹಂಚಿಕೆಯಾಗಿದೆ.

ಟರ್ಕಿ ತಟಸ್ಥವಾಗಿದ್ದರೂ, ಅದರ ಮೇಲೆ ನೆವನಹೂಡಿಕೊಂಡು ಈಗ ಕದನ ಹೂಡಲು ಸಿದ್ಧಮಾಡಿದಂತಿದೆ.

ಇದು ತೋಳನ ಮತ್ತು ಕುರಿಮರಿಯ ಗಾದೆಯಾಗಿದೆ, "ನೀನು ಬೈಯ್ಯದಿದ್ದರೆ, ನಿನ್ನಪ್ಪ ಬೈದಿದ್ದ" ಎಂದು ಹೇಳಿ ಕ್ರೂರ ತೋಳ ಕುರಿಮರಿಯೊಡನೆ!

ಅಂತೂ ತೋಳನಿಗೆ ಕುರಿಮರಿಯನ್ನು ಕೊಂದು ತಿನ್ನುವುದು ಅವಶ್ಯವಾಗಿತ್ತು!

ಹಾಗೆ ಟರ್ಕಿಯನ್ನು ಬಗ್ಗಿಸುವುದು ಈ ರಾಷ್ಟ್ರಗಳಿಗೀಗ ಅಪೇಕ್ಷಿತವಿದ್ದಿತೆ.

ಹಿಂದಿನ ಇತಿಹಾಸದಲ್ಲಿಯೇ ಗ್ರೀಕರು ಮಹಾ ಸಾಹಸಿಗಳೆಂದು ಕೀರ್ತಿಪಡೆದವರು.

ಇಟಲಿಯಂತಹ ಪ್ರಬಲ ರಾಷ್ಟ್ರವು, ಗ್ರೀಸನ್ನು ಆಕ್ರಮಿಸಿತು ಎಂಬ ವಾರ್ತೆ ಕೇಳಿದಾಗ, ಅಬಿಸೀನಿಯಾ, ಪೋಲೆಂಡುಗಳಂತೆ ಗ್ರೀಸಿನ ಅವಸ್ಥೆಯೂ ತೀರಿತೇ ಎಂದು ಸ್ವಾತಂತ್ರ್ಯಪ್ರೇಮಿಗಳಾದವರೆಲ್ಲರೂ ಸಂತಾಪಗೊಂಡಿದ್ದರು.

ಗ್ರೀಕರು ಇಟಲಿಯ ಮಹಾ ಸೈನ್ಯವನ್ನು ಹಿಮ್ಮೆಟ್ಟಿಸುತ್ತಾ ಜಯಶಾಲಿಗಳಾಗಿ ಮುಂದೊತ್ತುತ್ತಿರುವರು ಎಂಬ ವಾರ್ತೆ ಆಶ್ಚರ್ಯಕರವೆನಿಸಿದರೂ, ಸತ್ಯವೆಂಬುದರಿಂದ ಆನಂದದಾಯಕವೇ ಆಗಿದೆ.

ಮುಸಲಿನಿಯೇ ಮೊನ್ನೆಯ ಒಂದು ಭಾಷಣದಲ್ಲಿ ತಮ್ಮ ಅಪಜಯವನ್ನು ಒಪ್ಪಿಕೊಂಡಿರುವನು.

"ಗ್ರೀಸು ಗುಡ್ಡಗಾಡಿನ ಪ್ರದೇಶ; ಮಾರ್ಗ ಸೌಕರ್ಯವಿಲ್ಲ; ಗಿರಿಕಂದರಗಳಿರುವುದರಿಂದ ಮುಂದುವರಿವುದು ಕಠಿಣವಾಗಿದೆ; ಆದಕಾರಣ ಸಾಕಷ್ಟು ಜಯವು ನಮಗೆ ದೊರಕಲಿಲ್ಲ" ಹೀಗೆಂದು ಇಟಲಿಯ ಸರ್ವಾಧಿಕಾರಿ ಸೋಲನ್ನು ಒಪ್ಪಿಕೊಂಡನು!

ಗ್ರೀಕರು ಹಿಂದಿನ ಇತಿಹಾಸದಲ್ಲಿಯೂ ಪರಾಕ್ರಮದಿಂದ ಹೋರಾಡಿ, ತಮ್ಮ ಸಾಹಸ ವರ್ಣನೆಯು ಉಲ್ಲೇಖಿತವಾಗುವಂತೆ ಮಾಡಿದ್ದರು.

ವೈಯುಕ್ತಿಕ ಸತ್ಯಾಗ್ರಹವನ್ನು ಭರದಿಂದ ಸಾಗುತ್ತಿದೆ.

ವೈಯುಕ್ತಿಕ ಸತ್ಯಾಗ್ರಹವು ಪ್ರಾತಿನಿಧಿಕ ಸತ್ಯಾಗ್ರಹವೆಂದು ಭೂಲಾಬಾಯಿಯವರು ವ್ಯಾಖ್ಯಾನಿಸಿದರು.

ಜನತೆಯ ಪ್ರತಿನಿಧಿಗಳಾಗಿ ಚುನಾಯಿತರಾದವರೇ ಸತ್ಯಾಗ್ರಹವನ್ನು ಪ್ರಾರಂಭ ಮಾಡುವರು ಎಂಬುದು ಇಂದಿನ ಸತ್ಯಾಗ್ರಹಿಗಳ ಪಟ್ಟಿಯಿಂದಲೂ ತಿಳಿದು ಬರುತ್ತದೆ.

ಜನತೆಯ ಅಭಿಪ್ರಾಯವನ್ನು ಸರಕಾರವು ಎಷ್ಟರಮಟ್ಟಿಗೆ ಮನ್ನಿಸುತ್ತದೆ ಎಂಬುದು ಮಾಜಿಮಂತ್ರಿಗಳ, ವರ್ಕಿಂಗ್ ಕಮಿಟಿ ಸದಸ್ಯರ, ಎಂ. ಎಲ್. ಎ.ಗಳ ಈ ಸರಕಾರವಾದ ಬಂಧನಗಳಿಂದಲೇ ಅರ್ಥ ಮಾಡಿಕೊಳ್ಳಬಹುದಾಗಿದೆ.

ಪ್ರತಿಯೊಂದು ಜಿಲ್ಲೆಯಲ್ಲಿಯೂ ಕಾಂಗ್ರೆಸು ಎಂ. ಎಲ್. ಎ.ಗಳು ಮತ್ತು ಎ. ಐ. ಸಿ. ಸಿ. ಸದಸ್ಯರು ಮಾತ್ರ ಮೊದಲು ಸತ್ಯಾಗ್ರಹ ಹೂಡತಕ್ಕದ್ದು ಎಂದು ಗಾಂಧಿಜಿಯವರ ಅಭಿಪ್ರಾಯವಂತೆ.

ಯಾವಾಗಲೂ ಅಧಿಕಾರದಲ್ಲಿಯೇ ಇರಬೇಕು. ಸದಾಸುಖಿಗಳಾಗಿಯೇ ಇರಬೇಕು ಎನ್ನುವರಿಗೆ, ನಿಜವಾಗಿಯೂ ಈ ಸತ್ಯಾಗ್ರಹವು ಬಹಳ ಗೊಂದಲವನ್ನೇ ಹುಟ್ಟಿಸಿದೆಯೆಂಬುದು ನಿಶ್ಚಯ.

ಮಂಗಳೂರು

ಮಂಗಳೂರು ಬೀಡಿ ಕೆಲಸಗಾರರ ಮೂರನೇ ಪರಿಷದ್— ಮಂಗಳೂರು ಬೀಡಿ ಕೆಲಸಗಾರರ ಮೂರನೇ ಪರಿಷದವನ್ನು ಇದೇ ಡಿಸೆಂಬರ ತಿಂಗಳ ಎರಡನೇ ವಾರದಲ್ಲಿ ಜರಗಿಸಬೇಕೆಂದು ಇದೇ ತಾ. 25-11-'40 ರಲ್ಲಿ ಜರುಗಿದ ಬೀಡಿ ಕೆಲಸಗಾರ ಸಂಘದ ಮಹಾಸಭೆಯಲ್ಲಿ ನಿರ್ಧರಿಸಲಾಯಿತು. ಪರಿಷದದ ಅಧ್ಯಕ್ಷರಾಗಿ ಜನಾಬ್ ಅಕ್ರಮ ಡಾ। ಎಫ್. ಎಚ್. ಒಡೆಯರನ್ನೂ, ಉದ್ಘಾಟನಾ ಸಮಾರಂಭವನ್ನು ಜರಗಿಸಲು ಶ್ರೀ ಕೆ. ಕೃಷ್ಣರಾವ್ ಬಿ. ಎ. ಅವರನ್ನೂ, ಧ್ವಜವಂದನೆ ಬಗ್ಗೆ ಶ್ರೀ ಕೆ. ಜನಾರ್ಧನ ಪೈಯವರನ್ನೂ ಕೇಳಿಕೊಳ್ಳಬೇಕೆಂದು ನಿರ್ಧರಿಸಲಾಯಿತು.

ಶ್ರೀ. ಎಸ್. ಎನ್. ಹೊಳ್ಳ ಅಧ್ಯಕ್ಷರಾಗಿಯೂ, ಶ್ರೀ. ಕೆ. ಕೇಶವ ಕಾಮತರು ಕಾರ್ಯದರ್ಶಿಯಾಗಿಯೂ, ಹಾಗೂ 9 ಮಂದಿ ಸದಸ್ಯರಾಗಿಯೂ ಇರುವ 11 ಮಂದಿಯ ಸ್ವಾಗತ ಸಮಿತಿಯನ್ನು ಆರಿಸಿ ಅವರಿಗೆ ಪರಿಷದವನ್ನು ವ್ಯವಸ್ಥೆಗೊಳಿಸುವ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 408 1940

ಸಾಂತಾಳ್ವ . . . . ವಾದಿ

ಮತ್ತು

ಅಂಗಾರೆ ಹೆಂಗಸು ಕೂಡಾ—

ಪ್ರತಿವಾದಿರು

ಇವರೊಳಗೆ

ಕಾಸರಗೋಡು ತಾಲೂಕು ಕಾಟುಕುಕ್ಕೆ ಗ್ರಾಮದ ಸೂಜಿಬೆಟ್ಟು ಅರೀಕ್ಕಡಿಯಿಂಬಲ್ಲಿರುವ 1ನೇ ಪ್ರತಿವಾದಿ ಅಂಗಾರೆ ಹೆಂಗಸಿನ ಮಗಳು 3ನೇ ಪ್ರತಿವಾದಿ ಅಬ್ಬು ಹೆಂಗಸಿಗೆ ತಿಳಿಸುವುದೇನೆಂದರೆ:—

ನಿಮ್ಮ ತಾಯಿ ಮತ್ತು ನಿಮ್ಮ ತಾಯಿ ಅಕ್ಕ ಮುಂಚಿನ ನಿಮ್ಮ ಕುಟುಂಬದ ಯಜಮಾನತ್ತಿ ವ ಅವಳ್ತಿದಾರ್ತಿಯಾಗಿದ್ದ ಮೃತಪಟ್ಟ ಚನಿಯಕ್ಕೆ ಹೆಂಗುಸು ಕೂಡಾ 2 ಜನರು ನಿಮ್ಮ ಕುಟುಂಬದ ಉತ್ತಮ ಪ್ರಯೋಜನಾರ್ಥಕ್ಕಾಗಿ ಕರಣೂರು ಗ್ರಾಮದಲ್ಲಿರುವ ಚೆನ್ನಂಗಳ ದೂಮಗ್ಯಾಕ್ಷರ ಮಗ ವಾದಿ ಸಾಂತಾಳ್ವ ಕೂಡಾ 6 ಜನರಿಗೆ ತಾರೀಕು 7-1-1930ರಲ್ಲಿ ರೂಪಾಯಿ 1600-0-0ಕ್ಕೆ ಬರೆಕೊಟ್ಟ ರಿಜಿಸ್ಟ್ರಿ ಆದವು ದಸ್ತಾವೇಜು ಪ್ರಕಾರ ಇದೇ ಕಳೆದ ಪಾಲ್ಗುಣ ಬ. 30ಕ್ಕೆ ಬರತಕ್ಕ ಬಡ್ಡಿ ವಗೈರೆಯನ್ನು ಬಸೂಲಾತಿ ಕೊಳ್ಳುವರೆ ಮಾಡಿದ ಮೋಕದ್ದಮೆ ವ್ಯಾಜ್ಯವು ತಾರೀಕು 6-12-40ಕ್ಕೆ ಅಪ್ಪೀಲ ತನಿಖೆ ಬಗ್ಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ನೀವು ಸದ್ರಿ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪವನ್ನು ಹೇಳಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಸದ್ರಿ ವ್ಯಾಜ್ಯದಲ್ಲಿ ಎಕ್ಸಪಾರ್ಟಿ ಮಾಡಲಾದೀತೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

Kasaragod 25-11-40 } (Sd) T. Lakshman Rao, Vakil for Plaintiff

ನೋಟೀಸು

S. C. No. 203/1934.
R. E. P. No. 640/1940.

ಅರ್ಜಿದಾರಳು— ಪಮ್ಮಚ್ಚು ಹೆಂಗ್ಸು.
ಎದ್ರಿರು ಕಲ್ಲಡ್ಕಾ ಐತಪ್ಪ ರೈ ಸಹಾ 7ನೇ ಎದ್ರಿ ಚಿಕ್ಕಣ ರೈ—ಅಪ್ಪುಚ್ಚಿ ಹೆಂಗ್ಸಿನ ಮಗ—ಪುತ್ತೂರು ತಾಲೂಕು ವಳಮೊಗ್ರು ಗ್ರಾಮದ ಕಲ್ಲಡ್ಕಾದಲ್ಲಿರುವವ, ಇವರೀಗೆ—

ಮೇಲ್ಕಂಡ ಡಿಕ್ರಿಯ ಅಮ್ಮಲ್ಜಾರಿ ಬಗ್ಗೆ ಅರ್ಜಿದಾರಳು ಈ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದಾಳಾದ್ದರಿಂದ ಅಮ್ಮಲ್ಜಾರಿಯು ಯಾಕೆ ನಡಿಸಕೂಡದು ಎಂಬದಕ್ಕೆ ಸಬಬು ತೋರಿಸಲಿಕ್ಕೆ 1940ನೇ ಇಸವಿ ದಶಂಬರ ತಾರೀಕು 4ರಲ್ಲು ಈ ಕೋರ್ಟಿನ ಮುಂದೆ ನೀವು ಹಾಜರಾಗಬೇಕೆಂತ ಇದರಿಂದ ನಿಮಗೆ ಕೋರ್ಟು ಹುಕುಂ ಮೇರೆಗೆ ನೋಟೀಸ್ ಕೊಡೋಣಾಗಿಯದೆ.

ಪುತ್ತೂರು 15-11-'40 } H. Ganapathi Rao, ಅರ್ಜಿದಾರಳ ಕಡೆ ವಕೀಲ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 308/34-35
R. E. P. 620/1940

ಅರ್ಜಿದಾರರು— ಮುದ್ದು ರಾಯ ಕೂಡಾ
ಎದ್ರಿಳು . . . ಲಕ್ಷ್ಮಿ ಅಂಮ, ಅಂಗಡಿ ಪರಮೇಶ್ವರಯ್ಯನ ವಿಧವೆ, ನಗರ ಹೋಬಳಿ ಮತ್ತಿಕೈಗ್ರಾಮದ ಸಂಪಿಗೆಕಳ್ಳೆಯಲ್ಲಿರುವವಳು.

ಎದ್ರೀಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—ಮೇಲ್ಕಾಣ್ಸಿದ ಡಿಕ್ರಿ ಸಮಾಧಾನದ ಬಗ್ಗೆ ನಡ್ಸಿದ ಮೇಲ್ಕಾಣುವ ಅಮಲ್ದಾರಿಯಲ್ಲಿ ಎದ್ರಿಳ ಬಾಬ್ತು ಸ್ಥಿರಾಸ್ತಿ ಜಪ್ತಿಮಾಡ್ಸಿದ ಬಾಬ್ತು ಸ್ಥಿರಾಸ್ತಿ ವಿಕ್ರಯದ ಕುರಿತು ಇಸ್ತಿಹಾರು ಶರ್ತ ನಿರ್ಣಯಿಸುವ ಬಗ್ಗೆ ತಾ. 29-11-40ಕ್ಕೆ ಇಡೋಣಾಗಿಯದೆಂತ ಈ ಮೂಲಕ ತಿಳಿಸೋಣಾಗುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ ಮೇಲ್ಕಾಣ್ಸಿದ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

25-11-40 Kundapoor } K. Soorappa Shetty, Advocate for Petrs.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. No. 211/1940

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್, ಪುತ್ತೂರು . . . . ವಾದಿರು.

ನೇರಂಕಿ ಮಹಾಲಿಂಗಯ್ಯ ಸಹಾ

ಪ್ರತಿವಾದಿರು

3ನೇ ಪ್ರತಿವಾದಿ, ನೇರಂಕಿ ವೆಂಕಟ್ರಾಮ—ಕೃಷ್ಣಯ್ಯನವರ ಮಗ. ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಕ್ಲಾರ್ಕ, ಮಂಗಳೂರು ಶ್ರೀಹರದಲ್ಲಿ ಇರುವವರು. ಇವರೀಗೆ—

ವಾದಿರು ನಿಮ್ಮ ಮೇಲೆ ಕೂಡಾ ದಿವಾಣದ ಪ್ರಾಮಿಸರಿ ನೋಟು ಪ್ರಕಾರ ಬರಾ ಐವಜು ಬರಮಾಡುವರೆ ದಾಖಲು ಮಾಡಿದ ಮೇಲಣ ವ್ಯಾಜ್ಯವು ತಾ. 12-12-'40ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದರಿ ದಿವಸ ನೀವು ನಿಮ್ಮ ಉದಾಹರಣೆಯನ್ನು ದಾಖಲು ಮಾಡುವರೆ ತಪ್ಪಿದಲ್ಲಿ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವುದು ಎಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

ಪುತ್ತೂರು 14-11-'40 } H. Ganapathi Rao, ವಾದಿರ ಕಡೆ ವಕೀಲ.

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

O. S. 323/1940.

ಶರಸಿಕೋಡಿ ಮಹಾಬಲೇಶ್ವರ ಭಟ್ಟ—

ವಾದಿ.

ಗಣಪತಿ ಭಟ್ಟ ಕೂಡಾ 3 ಜನರು—

ಪ್ರತಿವಾದಿರು.

3ನೇ ಪ್ರತಿವಾದಿ, ಕೃಷ್ಣ ಭಟ್ಟ—ಶಂಕರನರಸಿಂಹ ಭಟ್ಟರ ಮಗ—ಮದಕಿಣಿ ಕೇಪು ಗ್ರಾಮ ಪುತ್ತೂರು ತಾಲೂಕು, S. K. ಇವರೀಗೆ—

ವ್ಯಾದೆ ಗೇಣಿ ವಗೈರೆ ಬಾಬ್ತು ರೂಪಾಯಿ 375-5-2ಕ್ಕೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ. 20-12-'40ಕ್ಕೆ ಇಟ್ಟಿರುವದರಿಂದ ನಿಮ್ಮ ಆಕ್ಷೇಪಣೆಯಿದ್ದರೆ ನೀವು ಆ ದಿನ ಬೆಳಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉದಾಹರಿಸದಿದ್ದರೆ ನಿಮ್ಮನ್ನು ಗೈರು ಮಾಡಿ ಆ ದಿನ ನಂಬ್ರ ತೀರ್ಮಾನವಾದೀತೆಂತ ಈ ಮೂಲಕ ನಿಮಗೆ ತಿಳಿಸಿಯದೆ.

ಪುತ್ತೂರು, 25-11-'40 } Sd/- H. P. Bhat, Pleader for Plaintiff.

ವಿಜ್ಞಾನಯುಗ

ವಿಮಾನ ಧಾಳಿಯನ್ನು ತಡೆಗಟ್ಟಲಿಕ್ಕೆ ಗಾಳಿಪಟಗಳು

ಶತ್ರು ಪಕ್ಷದ ವಿಮಾನ ದಾಳಿಗಳನ್ನು ತಡೆಗಟ್ಟಲಿಕ್ಕೆ ಬೆಲೂನುಗಳಿಗೆ ಸರಿಗೆಗಳನ್ನು ಗಟ್ಟಿ ಅವುಗಳನ್ನು ಆಕಾಶದಲ್ಲಿ ಹಾರಿಸುವುದು, ಮತ್ತು ಬೆಲೂನು ಸರಿಗೆಗಳ ಒಂದು ತರದ ಬಲೆಯನ್ನೇ ಆಕಾಶದಲ್ಲಿ ಬಿಡಿಸಿ, ಅವುಗಳೊಳಗೆ ಶತ್ರು ವಿಮಾನಗಳು ಬಂದುಬಿದ್ದು ನಾಶವಾಗುವಂತೆ ಮಾಡುವುದು ಈ ಉಪಾಯಗಳು ಈಗ ಎಲ್ಲರಿಗೂ ತಿಳಿದುದಾಗಿದೆ ಈಗ ಜರ್ಮನರ ದಾಳಿಗಳನ್ನು ತಡೆಗಟ್ಟಲಿಕ್ಕೆ ಬ್ರಿಟಿಷ ವಾಯು ಸೇನೆಯವರು ಇದರಂಥ ಇನ್ನೊಂದು ಉಪಾಯವನ್ನು ಅನುಸರಿಸಿರುತ್ತಾರೆ. ಈ ಸೇನೆಯವರು ಬೆಲೂನುಗಳ ಬದಲಿಗೆ, ಸರಿಗೆ ಕಟ್ಟಿದ ದೊಡ್ಡ ಗಾಳಿಪಟಗಳನ್ನು ಆಕಾಶದಲ್ಲಿ ಹಾರಿಸುತ್ತಾರೆ ಈ ಗಾಳಿಪಟಗಳೇ ಅನೇಕ ಜರ್ಮನ ವಿಮಾನಗಳನ್ನು ನೆಲಕ್ಕೆ ಕೆಡವಿಹಾಕಿರುವವು ದೂರದಿಂದ ಹಾರಿ ಬರುವ ಶತ್ರು ಪಕ್ಷದ ವಿಮಾನಗಳಿಗೆ ಈ ಗಾಳಿಪಟಗಳ ಚಲನೆಯ ಗತಿಯನ್ನು ತಿಳಿಕೊಳ್ಳುವುದು ಅಸಾಧ್ಯವಾಗಿದೆ ಆದ್ದರಿಂದ ಗಾಳಿಪಟಗಳ ಲೋಹ ಸರಿಗೆಗಳಲ್ಲಿ ವಿಮಾನಗಳ ರೆಕ್ಕೆಗಳು ಸಿಲುಕಿ, ವಿಮಾನಗಳು ಮುಂದಕ್ಕೆ ಚಲಿಸಲಾರದೆ ನೆಲಕ್ಕೆ ಉರುಳುವವು ಆಕಾಶದಲ್ಲಿ ಸ್ಥಿರವಾಗಿ ಒಂದು ಕಡೆ ನಿಲ್ಲುವ ಬೆಲೂನುಗಳಿಗಿಂತ ಒಂದೆಡೆಯಿಂದ ಇನ್ನೊಂದು ಕಡೆಗೆ ಹಾರಾಡುತ್ತ ಇರುವ ಈ ಗಾಳಿಪಟಗಳ ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿವೆ

ಹೆಚ್ಚಿನ ರೋಗಗಳು ತಮ್ಮಷ್ಟಕ್ಕೆ ವಾಸಿಯಾಗುವವು

ರಿಚಾರ್ಡ್ ಸಿ. ಕ್ಯಾಬೋಟ್ ಎಂಬ ಘನವೈದ್ಯರು ತಮ್ಮದೊಂದು ಲೇಖನದಲ್ಲಿ ವ್ಯಕ್ತಮಾಡಿರುವ ಪ್ರಕಾರ ವೈದ್ಯರಿಗೆ ತಿಳಿದಿರುವ ಸುಮಾರು ೨೧೫ ಬೇರೆ ಬೇರೆ ರೋಗಗಳಿಗೆ ಜನರು ಬಲಿಯಾಗುವುದಿದೆ ಆದರೆ ಇವುಗಳಲ್ಲಿ ಎಂಟೊಂಭತ್ತು ರೋಗಗಳನ್ನು ಮಾತ್ರ ವೈದ್ಯರು ತಮ್ಮ ಚಿಕಿತ್ಸಾನುಭವ ಮತ್ತು ಔಷಧ ಪ್ರಯೋಗದಿಂದ ಗುಣಮಾಡುವರು ಉಳಿದ ಎಲ್ಲಾ ರೋಗಗಳು ಪ್ರಾಕೃತಿಕ ಚಿಕಿತ್ಸೆಯಿಂದ ತಮ್ಮಿಂದ ತಾವೇ ಗುಣವಾಗುವವು ಎಂದು ತಿಳಿಸಿರುತ್ತಾರೆ. ಈ ರೋಗ ಕಾರಣಗಳಾದ ಅಣುಜೀವಿಗಳನ್ನು ನಾಶಮಾಡುವ ಶಕ್ತಿ ಆರೋಗ್ಯದಲ್ಲಿರುವ ರಕ್ತದೊಳಗಿನ ಬಿಳಿ ಕಣಗಳಿಗೆ ಯಥಾವಾಗಲೂ ಇರುತ್ತದೆ. ಆದ್ದರಿಂದ ರಕ್ತವನ್ನು ಆರೋಗ್ಯದಲ್ಲಿಡುವುದೇ, ಹೆಚ್ಚಿನ ರೋಗಗಳು ಬಾರದಂತೆ ಮಾಡುವ ಉತ್ತಮ ಉಪಾಯವಾಗಿದೆ.

ಮರಗಿಡಗಳಿಗೂ ಡಾಕು!

ಮನುಷ್ಯ ಪ್ರಾಣಿಗಳಂತೆ ಮರಗಿಡಗಳಿಗೂ ಡಾಕುಹಾಕಿ ಅವುಗಳಿಗೆ ರೋಗ ಬಾರದಂತೆ ಮಾಡಬಹುದು ಮಾತ್ರವಲ್ಲ, ಇಂಜೆಕ್ಶನ್ ಕೊಟ್ಟು ಬಂದ ರೋಗಗಳನ್ನು ಗುಣಪಡಿಸಬಹುದೆಂದೂ ವಿಲಾಯತಿಯ ಸಸ್ಯಶಾಸ್ತ್ರಜ್ಞರು ಹೇಳಲಾರಂಭಿಸಿದ್ದಾರೆ ಒಂದು ತರದ ತೆತ್ತರಣೆಯ ಜೂಲಿಯನ್ನು ರೋಗಗ್ರಸ್ತ ಅಥವಾ ರೋಗ ಬಾರದಂಥ ಮರದ ಕಾಂಡಕ್ಕೆ ತೂತು ತೆಗೆದು ಹದವಾಗಿ ಹೊಗಿಸಿ ಅದರೊಳಗೆ ಬೇಕಾದ ಮದ್ದನ್ನು ಸರಿಯುವರು ಮದ್ದು ಕಾಂಡದೊಳಗಿನ ರಸವಾಹಿನಿಗಳೊಳಗೆ ಸರಿಯಾಗಿ ಸೇರಿಕೊಳ್ಳುವ ತನಕ ಅದು ಕೆಡದಂತೆ ಮಾಡುವುದಕ್ಕೋಸ್ಕರ ಜೂಲಿಗೆ ವಾಯು ಸಂಪರ್ಕವಾಗದ ಹಾಗೆ ಅದನ್ನು ಮುಚ್ಚುತ್ತಾರೆ ಈ ಉಪಾಯದಿಂದ ಮರಗಿಡಗಳಿಗೆ ಬಂದ ಅಥವಾ ಬರಬಹುದಾಂಥ ರೋಗಾಣುಗಳನ್ನು ಅವು ಪ್ರಬಲವಾಗುವ ಮೊದಲೇ ಸಂಪೂರ್ಣ ನಾಶಮಾಡಬಹುದು

ಹಸಿದಾಗ ಮೋಟರ್ ನಡೆಸಬಾರದು

ಹಸಿದಾಗ ಮೋಟರ್ ನಡೆಸಬಾರದೆಂದು ವಿಲಾಯತಿಯ ಒಂದು ಪತ್ರಿಕೆಯಲ್ಲಿ ಒಬ್ಬ ತಜ್ಞರು ಬರೆದಿದ್ದಾರೆ ಹಸಿದಿದ್ದಾಗ ಡ್ರೈವರರ ಮನಸ್ಸು ಅವರ ಹಿಡಿತದಲ್ಲಿರುವುದಿಲ್ಲ ಆದ್ದರಿಂದ ಅವರು ಮೋಟರುಗಳನ್ನು ಅಪಾಯಕರ ರೀತಿಯಲ್ಲಿ ನಡೆಸುವರು ಹೆಚ್ಚಿನ ಮೋಟರ ಅಪಘಡಗಳು ಸಂಭವಿಸಲಿಕ್ಕೆ ಡ್ರೈವರರು ಆ ಸಮಯ ಹಸಿದು ಇದ್ದುದೇ ಕಾರಣವಾಗಿತ್ತು ಎಂದ ಚಿಕಾಗೋ ನಗರದ ಒಬ್ಬ ಮಾನಸಶಾಸ್ತ್ರಜ್ಞರು ಹೇಳಿದ್ದಾರೆ

ವಾಹನ ಸಂಚಾರದ ಮೇಲೆ ರೇಡಿಯೋದ ನಿಯಂತ್ರಣ

ದೊಡ್ಡ ನಗರಗಳಲ್ಲಿ ಎರಡು ಅಥವಾ ಹೆಚ್ಚು ರಸ್ತೆಗಳು ಕೂಡುವ ಸಂದುಕಟ್ಟಿನ ಸ್ಥಾನಗಳಲ್ಲಿ, ವಾಹನಾದಿಗಳ ಸಂಚಾರವನ್ನು ನಿಯಂತ್ರಿಸುವುದಕ್ಕೋಸ್ಕರ ಪೋಲೀಸರು ನಿಲ್ಲುವುದನ್ನು ಎಲ್ಲರೂ ನೋಡಿರಬಹುದು. ಅಮೇರಿಕದಲ್ಲಿ ನ್ಯೂಯಾರ್ಕ್ ನಗರವನ್ನು ನ್ಯೂಜರ್ಸಿಯೊಂದಿಗೆ ಕೂಡಿಸುವ ಜಾರ್ಜ ವಾಷಿಂಗ್ಟನ್ ಸೇತುವೆಯ ಮೇಲೆ ಈಗ ಈ ಕಾರ್ಯಕ್ಕೆ ಪೋಲೀಸರು ನಿಲ್ಲುವುದಿಲ್ಲ ಬದಲಿಗೆ ರೇಡಿಯೋವೇ ಪೋಲೀಸರ ಈ ಕಾರ್ಯವನ್ನು ಮಾಡಿಬಿಡುತ್ತದೆ ಈ ಸೇತುವೆಯ ಮೇಲೆ ನಡೆಯುವ ಎಲ್ಲ ವಾಹನಗಳ ಮೇಲೆ ರೇಡಿಯೋ ಇರುತ್ತದೆ ಅಲ್ಲಿಯೇ ಸಮೀಪದಲ್ಲಿ ಇರುವ ಸ್ಟೇಶನಿನಿಂದ ವಾಹನಗಳಿಗೆ ಬೇಕಾದ ಸೂಚನೆಗಳು ರೇಡಿಯೋದ ಮೂಲಕ ಕೊಡಲ್ಪಡುತ್ತವೆ.

ಶತ್ರುನಿಗ್ರಹಕ್ಕೆ ಕೀಟಸೇನೆ

ಮಿಡಿತೆ ಮೊದಲಾದ ಕೆಲವು ಜಾತಿಯ ಕ್ರಿಮಿಕೀಟಗಳು ಹೊಲಗಳಲ್ಲಿ ಬಿತ್ತಿ ಬೆಳೆಸಿದ ಪೈರನ್ನು ತಿಂದು ಸಂಪೂರ್ಣ ನಾಶಮಾಡುವುದೂ ಬೇಸಾಯಗಾರರ ಅನುಭವಕ್ಕೆ ಬಂದ ವಿಷಯ ಈ ಕ್ರಿಮಿ ಕೀಟಗಳ ದೆಸೆಯಿಂದ ಸರ್ವನಾಶಮಾಡಿಕೊಂಡ ದೊಡ್ಡ ದೊಡ್ಡ ರೈತರಿದ್ದಾರೆ ಇಂಥ ಕ್ರಿಮಿಕೀಟಗಳನ್ನೇ ದೊಡ್ಡ ಪರಿಮಾಣದಲ್ಲಿ ಸಾಕಿ ಬೆಳೆಸಿ, ಅವನ್ನು ಜರ್ಮನಿಯ ಹೊಲಗಳ ಮೇಲೆ ಧಾರಾಳವಾಗಿ ಬಿಡಬೇಕೆಂದು ಒಬ್ಬ ಇಂಗ್ಲೀಷನ ಸೂಚನೆಯಾಗಿದೆ ಇದರಿಂದ ಜರ್ಮನಿಯಲ್ಲಿ ಅನ್ನಾಹಾರ ಸಾಮಗ್ರಿಯಾವುವೂ ಉತ್ಪತ್ತಿಯಾಗದೆ ಜರ್ಮನ ಜನತೆಯು ಉಪವಾಸ ಬೀಳುವುದೆಂದೂ, ಆಗ ಯುದ್ಧಾಸಕ್ತ ಜರ್ಮನಿಯು ತಾನಾಗಿ ಯುದ್ಧದಲ್ಲಿ ಸೋಲನ್ನು ಒಪ್ಪಬೇಕಾಗುವುದೆಂದೂ ಅವನ ಅಭಿಪ್ರಾಯವಾಗಿದೆ ವೈಜ್ಞಾನಿಕ ದೃಷ್ಟಿಯಿಂದ ಈ ಸೂಚನೆಯು ಕಾರ್ಯರೂಪಕ್ಕೆ ಬರಲಿಕ್ಕೆ ಅಸಾಧ್ಯವೇನೂ ಅಲ್ಲ ಪರಂತು ಹಿಟ್ಲರ ಕಂಪನಿಯು ಮಾಡುತ್ತಿರುವ ಅಪರಾಧಕ್ಕೆ ಜರ್ಮನ ಜನತೆಯು ಕಷ್ಟಪಡಬೇಕೇ ಎಂದು ಆಲೋಚಿಸಬೇಕಾದ ಸಂಗತಿಯಾಗಿದೆ.

ಬೆಂಕಿಹಾಕುವ ಕಾರ್ಡುಗಳು

ಹಿಟ್ಲರನಿಗೊಂದು ಕಾಣಿಕೆ

ಬ್ರಿಟನಿನ ಒಬ್ಬ ವಿಜ್ಞಾನಿ ಡಾಕ್ಟರ್ ಯುಫ್ ಎ. ಲಿಂಡ್‌ಮೆನ್ ಎಂಬವರು ಬ್ರಿಟಿಷ ಪ್ರಧಾನರಾದ ವಿನ್ಸಟಿನ್ ಚರ್ಚಿಲ್ಲರ ಜೀವದ ಗೆಳೆಯರು. ಒಂದು ಅಪೂರ್ವ ಶೋಧನೆಯನ್ನು ಮಾಡಿರುವರು. ಬ್ರಿಟಿಷರು ಈ ಶೋಧನೆಯನ್ನೇ ಹಿಟ್ಲರನಿಗೆ ಯುದ್ಧದ ಕಾಣಿಕೆಯನ್ನಾಗಿ ಅರ್ಪಿಸಿದ್ದಾರೆ, ಈ ಕಾಣಿಕೆಯನ್ನು ನೋಡಿ ಅದರ ಸಮಾಚಾರವನ್ನು ಕೇಳಿ ಜರ್ಮನರಿಗೆಲ್ಲಾ ತಲೆಸಿಡಿತವುಂಟಾಗಿದೆ ಎಂದು ಅಮೇರಿಕದ ಟ್ಯಾಮ್ ಪತ್ರಿಕೆಯು ಬರೆಯುತ್ತದೆ.

ಬೆಂಕಿ ತಗಲುವ ಕಾರ್ಡುಗಳು

ಈ ಶೋಧನೆ ಮತ್ತೇನೂ ಅಲ್ಲ ಬರಿಯ ಕಾಗದ ತುಂಡುಗಳು ಸಮಾರು ಮೂರು ಇಂಚು ಉದ್ದಗಲವಾಗಿ ರಟ್ಟಿನಂತೆ ಸ್ವಲ್ಪ ದಪ್ಪವಾಗಿವೆ. ಅವುಗಳ ಕೇಂದ್ರದಲ್ಲಿ ಗನ್‌ಕೊಟನ್ ಎನ್ನುವಂಥ ಕ್ಷಣ ಮಾತ್ರದಲ್ಲಿ ಬೆಂಕಿತಗಲುವ ಹತ್ತಿಯನ್ನೂ ರಂಜಕವನ್ನೂ ಹಚ್ಚಿ ಇಟ್ಟಿರುತ್ತಾರೆ ವಿಮಾನಗಳ ಮೇಲಿಂದ ಕೆಳಕ್ಕೆ ಹಾರಿಸುವಾಗ ಇವು ನೀರಿನ ಕ್ಲೇದದಿಂದ ಸ್ವಲ್ಪ ಒದ್ದೆಯಾಗಿವೆ ಒಣಗಿನ ಗಾಳಿಯೊಳಗಿನ ಆಮ್ಲಜನಕದ ಸಂಯೋಗವಾಗಿ ಇವುಗಳಿಗೆ ಬಹುಬೇಗ ಬೆಂಕಿ ತಗಲುವದು ಈ ಕಾಗದ ತುಂಡುಗಳನ್ನು ಬಾರೂದು ಕಾರ್ಖಾನೆ ಮೊದಲಾದವುಗಳ ಮೇಲೆ ಚೆಲ್ಲಿದಾಗ ಕಾಗದ ತುಂಡುಗಳಿಗೆ ತಗಲಿದ ಬೆಂಕಿಯಿಂದ ಆ ಕಾರ್ಖಾನೆ ಮೊದಲಾದವುಗಳಲ್ಲಿ ಬಹುಬೇಗ ಬೆಂಕಿಹಿಡಿದು ಸುಟ್ಟು ಭಸ್ಮವಾಗುವವು ಇವುಗಳಿಂದ ಜರ್ಮನಿಯ ಅನೇಕ ಠಾಣೆಗಳು ಸುಟ್ಟು ಹೋಗಿವೆ ಎಂದೂ ಸಮಾಚಾರವಿದೆ

ಎಲ್ಲೆಲ್ಲೂ ಬೆಂಕಿ

ಏನೆಂದು ತಿಳಿಯದ ಜರ್ಮನ ಮಕ್ಕಳು, ಸ್ತ್ರೀಯರು, ಪುರುಷರು, ಇತರರು ದಾರಿಗಳ ಮೇಲೆ ಬಿದ್ದಿರುವ ಈ ಕಾಗದ ತುಂಡುಗಳನ್ನು ಹೆಕ್ಕಿ ತೆಗೆದು ತಮ್ಮ ತಮ್ಮ ಉಡಿಗೆ ತೊಡಿಗೆ ಮೈಕೈಗಳನ್ನು ಸುಟ್ಟು ಕೊಂಡಿದ್ದಾರೆ. ಈಗ ಜರ್ಮನರಿಗೆ ಕಾಗದವನ್ನು ಕೈಯಲ್ಲಿ ಹಿಡಿಯುವದೆಂದರೆ ಭಯವಾಗುತ್ತದೆಯಂತೆ. ಇನ್ನು ಬ್ರಿಟಿಷರು ಹಿಟ್ಲರನಿಗೆ ಯಾವ ಯಾವ ವಿಚಿತ್ರ ತರದ ಘಾತುಕ ಉಡುಗೊರೆಗಳನ್ನು ಕೊಡಲಿಕ್ಕೆ ಸಂಗ್ರಹಿಸಿ ಇಟ್ಟಿದ್ದಾರೋ ಎಂಬುದು ಹಲವರಿಗೆ ಅಂಜಿಕೆ ಆಗಿದೆಯಂತೆ.

ಉಜ್ವಲ ವಾರ ಪತ್ರಿಕೆಯಾದ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ — ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 30-11-1940ರಿಂದ —————— ತಾ. 5-12-1940ರ ವರೆಗೆ

ಶ್ರೀ ಸುಬ್ರಹ್ಮಣ್ಯ ಷಷ್ಠೀ ಸಮಾರಂಭ

ತಾ. 12-12-1940ರಿಂದ —————— ತಾ. 24-12-1940ರ ವರೆಗೆ

ಸೀತಾನದಿ ಜಾನುವಾರು ಸಂತೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುತ್ತಿರುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಬೇಕಾದರೇ ಪೂರಾ ವಿಚಾರಿಸಿ ಔಷಧ ಬೇಡಿರಿ. ದೊಡ್ಡ ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪುರ, ಇವರೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆ ದು ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಗೆ ಕ್ರಯ ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲ್ಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಸಾವಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾವಕಾರ ಮಹಾಲ್, ಮಂಗಳೂರು.

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇವರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"
ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್
ರಾಯಪೇಟೆ, ಮದ್ರಾಸು.

Regd. No. M 340

ಸ್ವದೇಶಾಭಿಮಾನಿ

ಸಂಪುಟ 34] ತಾರೀಕು 29—11—1940 [ಸಂಚಿಕೆ 48

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs 1.42 Crores
Total Funds exceed	Rs 1 52 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time. Thisis the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, [illegible] ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯುಗಟ್ಟಲೆ ಜನರ ಪ್ರತಿದಿನದ
ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Estd. 1906

ಸ್ವದೇಶಾಭಿಮಾನಿ

SWADESHABHIMANI





KANNADA ILLUSTRATED WEEKLY

ನೋಟೀಸು

[illegible]

O. P. No. 245/1940

[illegible]

ಮತ್ತು

1. ಬಿ. ಆನಂದರಾವ್ 2. [illegible] ರಾಮಕೃಷ್ಣ 3. ಬಿ. ನರಸಿಂಗರಾವ್ — ಬಿ. ರಾಮಸ್ವಾಮಿ ರವರ ಮಕ್ಕಳು ಮೃತಪಟ್ಟ ಬಿ. ಶ್ರೀನಿವಾಸನ ಸಹೋದರರು

1 ಮತ್ತು 2 ನೆಯವರು ಜಮೀನುದಾರರು, ಮತ್ತು ಪಳ್ಳಿಕ್ಕರೆ ಗ್ರಾಮದ ಬೇಕಲದಲ್ಲಿರುವವರು. 3 ನೇಯವನು ಅನಂತಪುರ ಡಿಸ್ಟ್ರಿಕ್ಟ್ ಹಿಂದೂಪೂರ್ ಡಿ. ಪಿ. ಕನ್ಸ್‌ಟ್ರಕ್ಷನ್ ಬಂದಿಗೆ ಸೇರಿದ ಹಿಂದೂಪೂರ್ ಎಂಬಲ್ಲಿ P. W. D. ಸುಪರ್ವೈಜರ್‌ನಾಗಿರುತ್ತಾನೆ.

ಇವರೊಳಗೆ

ತಾ. 25-11-40 ಸದ್ರಿ ಅರ್ಜಿದಾರರ ಕಡೆಯಿಂದ ನೋಟೀಸು—

ಮೃತಪಟ್ಟ ಸದ್ರಿ ಬಿ. ಶ್ರೀನಿವಾಸ ಎಂಬವರೀಗೆ ದಿ. ಎಂಪಯರ್ ಒಫ್ ಇಂಡಿಯಾ ಲೈಫ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸ್ ಬೊಂಬಾಯಿ ಎಂಬ ಕಂಪೆನಿಯಿಂದ ಪೋಲಿಸಿ ನಂಬ್ರ 132893 ನ್ನೆಗೆ ಅರ್ಜಿ ಶೆಡ್ಯೂಲಿನಲ್ಲಿ ವಿವರಿಸಿದಂತೆ ಬರತಕ್ಕ ರೂಪಾಯಿ 530-7-0ನ್ನು ವಸೂಲು ಕುರಿತು ಸದ್ರಿ ಮೃತನ ನ್ಯಾಯವಾದ ವಾರಿಸ್ಸುದಾರರಾದ ಅರ್ಜಿದಾರರು ವಾರ್ಸು ಸರ್ಟಿಫಿಕೇಟು ಅಪೇಕ್ಷಿಸಿ ದಾಕಲು ಮಾಡಿದ ಅರ್ಜಿಯು ತಾರೀಕು 9-12-40ಕ್ಕೆ ತಪ್ಪಿಗಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

Kasaragod } K. P. Madhava Rao
25-11-40 } Advocate for Petitrs

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ. 315/34

Principal Subcourt

A. S. no 167/39

ಈ ಕೇಯಿಸ್ R. E. P. no. 972/40

R. E. A. no. 1134/40

ಮಾದಪ್ಪಯ್ಯ ಕೂಡಾ ಅರ್ಜಿದಾರರು

ಮತ್ತು

ಸಂಕಪ್ಪಯ್ಯ ಯಾನೆ ತಮ್ಮಯ್ಯ ಕೂಡಾ—

ಎದ್ರಿರು

ಇವರೊಳಗೆ

ಮಂಗಳೂರು ತಾಲ್ಲೂಕು ತಾಳಿಪಾಡಿ ಗ್ರಾಮದಲ್ಲಿರುವ ಶೀನಪ್ಪಯ್ಯ ಕೋಡಿ ಕೃಷ್ಣಯ್ಯನವರ ಮಗ 5 ನೇ ಎದ್ರಿ ಶ್ರೀನಿವಾಸ ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಸದ್ರಿ ಅಮ್ಮಣಾರಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ಇಡಿ ಇರುವ ಸ್ಥಿರಾಸ್ತಿಗಳು ಏಲಂನ ಬಗ್ಗೆ ಅರ್ಜಿದಾರ್ರು ಕಡೆಯಿಂದ ಏಲಂ ಯಜಮಾನನ ದ್ರವ್ಯ ಹಾಜರು ಮಾಡಿರುವದರಿಂದ ಸದ್ರಿ ಏಲಂ ಯಜಮಾನನ ದ್ರವ್ಯ ಹಿಂತೆಗೆದು ಮಾಡುವದರ ಕುರಿತು ಮತ್ತು ಸದ್ರಿ ಏಲಂ ಸಮಯ ಬಿಡ್ ಕೊಡುವರೇ ಮತ್ತು ಹಾಗೆ ಬಿಡ್ ಮಾಡುವ ಅಪೇಕ್ಷ ಪ್ರಸಲೆ ಅಪೇಕ್ಷೆ [illegible] ಮಾಡುವರೇ ಪರ್ಮಿಶನ ಕೊಡಬೇಕಾಗಿ ಕೂಡಾ ಅರ್ಜಿದಾರ್ರ ಕಡೆಯಿಂದ [illegible] ಕೊಟ್ಟಿರುವದರಿಂದ ಸಹಾ ಇವುಗಳ ಕುರಿತು ನಿಮ್ಮ ಆಕ್ಷೇಪಣೆಗಳು ಇದ್ದ ಪಕ್ಷದಲ್ಲಿ ತಾರೀಕು 16-1-1941 ನೇ ದಿನ ಬೆಳಗ್ಗೆ 10 ಗಂಟೆಗೆ [illegible] ವಕೀಲ್ ಮುಖಾಂತ್ರ [illegible] ಹಾಜರಾಗಿ [illegible] ಮಾಡಬೇಕು [illegible] ಸದ್ರಿ ವ್ಯವಹಾರಗಳು [illegible] ಶೀರ್ಮಾನಿಸಲ್ಪಡುವ [illegible] ಸಂಗ್ತಿಯನ್ನು ನೀವು ತಿಳಿದಿರತಕ್ಕದ್ದು.

[illegible] ಪ್ರಕಾರ

[illegible]

ಶಕ್ತ್ಯುದಾದ ಪೋಷಣೆಯು ಬೆಳೆಯುವ ಮಕ್ಕಳಿಗೆ ಅಗತ್ಯವಾದದ್ದು

ಬೆಳೆಯುವ ಮಕ್ಕಳು ತಮ್ಮ ಬಲ ಮತ್ತು ಚುರುಕುತನವನ್ನು ಕೂಡಲೇ ಉಪಯೋಗಿಸುತ್ತಾರೆ. ಹೊಸ ಜೀವನಶಕ್ತಿಯು ತಕ್ಕುದಾದ ಪೋಷಣೆಯನ್ನು ಹೊಂದಿಕೊಂಡಿರುತ್ತದೆ.

ನಿಮ್ಮ ಮಕ್ಕಳಿಗೆ ತಕ್ಕುದಾದ ಪೋಷಣೆಯು ದೊರಕುವುದೆಂಬ ಖಂಡಿತವಾಗಬೇಕಾದರೆ ಯಾವಾಗಲೂ ರುಚಿಕರವಾದ ಶ್ರೇಷ್ಠಶಕ್ತಿವರ್ಧಕ ಆಹಾರದಂತಿರುವ 'ಓವಲ್ಟಿನ್' ಪಾನೀಯವನ್ನು ಕೊಡಿರಿ. ಇದು ಅವರಿಗೆ ಶಕ್ತಿಯನ್ನೂ ಚುರುಕುತನವನ್ನೂ ಹೆಚ್ಚಿಸಿ ಅತಿ ಸುಖಿಯಾಗಿರುವಂತೆ ಮಾಡುತ್ತದೆ.

ಇದು ಪ್ರಕೃತಿಯ ಉತ್ತಮ ಶಕ್ತಿವರ್ಧಕ ಆಹಾರಗಳಿಂದ ತಯಾರಿಸಲ್ಪಟ್ಟಿದೆ. ಮಾಲ್ಟ್ ನೆನೆಹಾಕಿದ ಬಾರ್ಲಿ, ದನದ ಹಸಿಹಾಲು, ಮತ್ತು ಅಮೂಲ್ಯವಾದ ವಿಟಮಿನು ಮತ್ತು ಫೋಸ್ಫೆಟೈಡ್ಸುಗಳು—'ಓವಲ್ಟಿನು' ಮಕ್ಕಳಿಗೂ ಪ್ರಾಯಸ್ಥರಿಗೂ ಆರೋಗ್ಯವನ್ನೂ ಆನಂದವನ್ನೂ ಉಂಟುಮಾಡುವ ಆಹಾರಪಾನೀಯ. ಇತರ ನಕಲಿ ಪಾನೀಯಗಳನ್ನು ತೊರೆಯಿರಿ.

ಎಲ್ಲಾ ಕೆಮಿಸ್ಟರರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

'ಓವಲ್‌ಟಿನ್'

OVALTINE ಒಂದು ಪುಷ್ಟಿಕರವಾದ ಆಹಾರಪಾನೀಯವು

ಮೆಸರ್ಸ್. ಗ್ರಿಪೆಮ್ಸ್ ಟ್ರೇಡಿಂಗ್ ಕೊ (ಇಂಡಿಯಾ) ಲಿಮಿಟೆಡ್, ಕೆಥೆಡ್ರಲ್ ಹೋಲ್, ಥರ್ಡ್ ಫ್ಲೋರ್ 310-311 ಲಿಂಗಿ ಚೆಟ್ಟಿ ಸ್ಟ್ರೀಟ್ ಮದ್ರಾಸು.

"ಓವಲ್ಟಿನ್" ರುಚಿಕರ, ಜೀರ್ಣಕರ, ಹಾಗೂ ಪೋಷಣಯುಕ್ತವಾದುವು. ಎಲ್ಲಾ ಕಾಲಕ್ಕೂ ಉತ್ತಮವಾದುದು, ಇದರಲ್ಲಿ ಮಹತ್ವದ ಬೆಲೆಯು 'ಓವಲ್ಟಿನ್' ಸೇರಿರುವುದು. 4 ಔನ್ಸು 8 ಔನ್ಸುಗಳ ಪೆಕೇಟುಗಳಲ್ಲಿಯೂ ಒಂದು ರಾತ್ತಲ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OS/59/39

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

6—12—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೬—೧೨—೧೯೪೦

ಮುಸಲಿನಿಯ ಆಮಂತ್ರಣವನ್ನು ತಿರಸ್ಕರಿಸಿದ ಧೀರ ನೆಹರು!

ಶ್ರೀ. ಮಹಾದೇವ ದೇಸಾಯಿಗಳು ವಿವರಿಸಿದರು

ಪಾಶ್ಚಾತ್ಯ ಲೇಖಕರೊಬ್ಬರ ಪುಸ್ತಕದಿಂದ.

ನೆಹರುಗಳ ಕೀರ್ತಿ ಇಂದು ಅಖಿಲ ಪ್ರಪಂಚದ ಮೂಲೆ ಮೂಲೆಗಳಲ್ಲಿ ಹಬ್ಬಿದೆ; ದಿಗ್‌ದಿಗಂತಗಳನ್ನು ತುಂಬಿದೆ. ಅವರ ಗಾಂಭೀರ್ಯ, ಮಾನವಪ್ರೇಮ, ಘನತೆ ಮೊದಲಾದ ಗುಣಗಳು ಅವರಿಗೆ ಈ ಮನ್ನಣೆಯನ್ನು ತಂದೊದಗಿಸಿವೆ. ಇಂತಹ ವ್ಯಕ್ತಿ ಕೇವಲ ಭಾರತದ ರಾಷ್ಟ್ರೀಯ ವ್ಯಕ್ತಿ ಮಾತ್ರವಲ್ಲ, ಅಂತರ್ರಾಷ್ಟ್ರೀಯ ವ್ಯಕ್ತಿಯೂ ಆಗಿದ್ದಾರೆ; ಅವರು ಒಂದೆರಡು ಕಡೆ, ಭಾಷಣ ಮಾಡಿದರೆಂಬ ಆಪಾದನೆಗೊಳಗಾಗಿ, ದಾಸ್ಯದೇಶದಲ್ಲಿ ಹುಟ್ಟಿದ ತಪ್ಪಿಗಾಗಿ—ನಾಲ್ಕು ವರ್ಷಗಳ ಅಮಾನುಷ ಸೆರೆಮನೆಯ ವಾಸವನ್ನು ಅನುಭವಿಸುವಂತಾದುದ್ದು ನಮ್ಮನ್ನು, ಭಾರತೀಯರನ್ನು ಮಾತ್ರ ಸಂತಾಪಗೊಳಿಸಿದ್ದಲ್ಲ, ಪಾಶ್ಚಿಮಾತ್ಯರನ್ನು ಅಂಗ್ಲೇಯರನ್ನೂ ಬಹಳವಾಗಿ ಮರುಗುವಂತೆ ಮಾಡಿದೆ. ಇವರ ಕುರಿತು, ಮತ್ತು ಗಾಂಧಿಗಳ ಕುರಿತು ಬರೆಯುತ್ತಾ 'ಭಾರತವನ್ನು ಸ್ವತಂತ್ರ ಮಾಡಿರಿ' ಎಂಬ ಪುಸ್ತಕದಲ್ಲಿ ಪ್ರಸಿದ್ಧ ಆಂಗ್ಲೇಯ ಲೇಖಕರಾದ ಶ್ರೀ ಥಾಮುಸನ್ನರು ಈ ತೆರನಾಗಿ ಹೇಳಿರುತ್ತಾರೆ ಎಂದು ಶ್ರೀ ಮಹಾದೇವ ದೇಸಾಯಿಯವರು ಒಂದು ಲೇಖನ ಬರೆದಿರುವರು.

ಈ ಲೇಖನದಲ್ಲಿ ಪಂಡಿತ ನೆಹರುಗಳ ಇಟಲಿಯ ಪ್ರಯಾಣ ಸಮಯದಲ್ಲಿ ಇಟಲಿಯ ಸರ್ವಾಧಿಕಾರಿ ಮುಸಲಿನಿಯ ಆಹ್ವಾನವನ್ನು ನಿರಾಕರಿಸಿದ ವಿಷಯವು ಬಹಳ ಗಂಭೀರವಾಗಿ ಹೃದಯಂಗಮವಾಗಿ ಚಿತ್ರಿಸಲ್ಪಟ್ಟಿದೆ.

ರೋಂ ನಗರದಲ್ಲಿ

ತನ್ನ ಪ್ರಿಯ ಪತ್ನಿ ಕಮಲಾ ನೆಹರುವನ್ನು, ಪಂಡಿತರು ಚಿರಂತನವಾಗಿ ಅಗಲಿದರು. ಆ ಮೇಲೆ ಅವರು ಅವಸರವಸರವಾಗಿ, ಭಾರತದಲ್ಲಿ ತಮ್ಮ ಪಾಲಿಗಿರುವ ಕಾರ್ಯದ, ದೇಶಸೇವೆಯ ತಲವಾಗಿ ಕಾರ್ಯಕ್ಕಾಗಿ ಧಾವಿಸಿ ಬರುವ ಕಾಲ ದಾರಿಯಲ್ಲಿ ಇಟಲಿಯ ಮಾರ್ಗವಾಗಿ ಬಂದರು. ಅವರು ರೋಂ ನಗರದಲ್ಲಿ ಸ್ವಲ್ಪ ಹೊತ್ತು ಇರಬೇಕಾಗಿ ಬಂತು. ಅಷ್ಟರಲ್ಲಿ ಇಟಲಿಯಲ್ಲಿ ಈ ವಾರ್ತೆ ಹರಡಿತ್ತು. ಹಲವರು ಪಂಡಿತರನ್ನು ಕಂಡು ಮಾತನಾಡಿ ಸಂತಸಗೊಂಡರು. ಅಲ್ಲಿನ ಸರ್ವಾಧಿಕಾರಿ ಮುಸಲಿನಿಯೂ ಪಂಡಿತರನ್ನು ಆ ದಿನ ಸಂಜೆ 6 ಘಂಟೆಗೆ ಕಾಣಲು ಗೊತ್ತು ಮಾಡಿರುವುದಾಗಿ ತನ್ನ ವಿದೇಶಾಂಗ ಸಚಿವನೊಡನೆ ನೆಹರುಗಳಿಗೆ ಆಮಂತ್ರಣ ಕಳುಹಿಸಿದನು.

ಭೇಟಿ ಅಗತ್ಯವಿಲ್ಲ

ನೆಹರು ಮಾನಧನರು, ಆದರೂ, ನಮ್ರತೆಯಿಂದಲೇ ತಾನು ಅಂತಹ ಆಮಂತ್ರಣವನ್ನು ಸ್ವೀಕರಿಸಲು ಸಿದ್ಧನಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ಹೇಳಿಯೇಬಿಟ್ಟರು. ಇಟಲಿಯಲ್ಲಿ, ಅದರ ಸರ್ವಾಧಿಕಾರಿಯ ಆಜ್ಞೆಯಂತಿರುವ ಆಹ್ವಾನವನ್ನು ತಿರಸ್ಕರಿಸಲು ನೆಹರುಗಳಿಗೆ ಎಂತಹ ಗಂಡೆದೆ? ಆಹ್ವಾನ ತಂದವನು ಅದನ್ನು ಸ್ವೀಕರಿಸಬೇಕೆಂದು ನೆಹರುಗಳನ್ನು ಒತ್ತಾಯಪಡಿಸಿದನು. "ಅಮೇರಿಕಾ ಯುರೋಪುಗಳ ಮಹಾಪುರುಷರು ಮುಸಲಿನಿಯನ್ನು ಕೇವಲ ದೂರದ ನೋಟದಿಂದಲಾದರೂ ನೋಡಲು ಬಹಳ ಆಸಕ್ತರಾಗಿ ಹಂಬಲಿಸಿ ಬರುತ್ತಿರುವಾಗ ನೀವು ಆತನದೇ ಈ ಆಹ್ವಾನವನ್ನು ತಿರಸ್ಕರಿಸಬಾರದು" ಎಂದು ಬಹಳವಾಗಿ ಬೇಡಿಕೊಂಡನು. "ಮಂತ್ರಿಮಂಡಳದ ಸಭೆಗೆ ಹೋಗುವುದನ್ನೂ ಮುಂದೆ ಹಾಕಿ ತಮಗಾಗಿ ಕಾಯುತ್ತಿರುವರು" ಎಂದೂ ಹೇಳಿದನು. ನೆಹರು ವಿನಯದಿಂದಲೇ ಮತ್ತೂ ಆಮಂತ್ರಣವನ್ನು ಸ್ವೀಕರಿಸಲೊಲ್ಲೆ ಎಂದರು. ಕೊನೆಗೆ ಆ ಅಧಿಕಾರಿ ನೆಹರುಗಳ ಉತ್ತರವನ್ನು ಟೆಲಿಫೋನಿನ ಮೂಲಕ ಒದರಿದನು.

ಬೇರೆ ಯಾರಾದರೂ?

'ಬೇರೆ ಯಾರಾದರೂ ಈ ಸುಯೋಗವನ್ನು ಕಳಕೊಳ್ಳುತ್ತಿದ್ದರೆ?' ಶ್ರೀ ಥಾಮುಸನ್ನರು ಪ್ರಶ್ನಿಸುತ್ತಾರೆ. ಆದರೆ ನೆಹರುಗಳಿಗೆ, ಮುಸಲಿನಿ ಅಬಿಸೀನಿಯದ ಮಾನವ ಹೃದಯಗಳನ್ನು ಅಮಾನುಷವಾಗಿ ಪೀಡಿಸಿದ ಕೃತ್ಯದ ನೋವು ನಿಷ್ಕ ಬೇಸರವನ್ನೇ ಮನಸ್ಸಿನಲ್ಲಿ ಹುಟ್ಟಿಸುತ್ತು. ಅಂತಹ ಕ್ರೂರನನ್ನು ಕಾಣುವುದಾದರೂ ಯಾತಕ್ಕೆ, ಯಾವ ಪುಣ್ಯಕ್ಕೆ ಎಂದು ಅದನ್ನು ತಿರಸ್ಕರಿಸಿದ್ದರು.

ಫಾಸಿಸ್ಟ್ ತತ್ವಕ್ಕೆ ಪ್ರಬಲ ವಿರೋಧಿಯಾದ ನೆಹರು, ಇಂತಹ ಮಹಾನುಭಾವರೂ, ಇಂದು ಪ್ರಜಾಪ್ರಭುತ್ವರಕ್ಷಕರಾಗಿರುತ್ತಿರುವೆವೆನ್ನುವ ಬ್ರಿಟಿಷರ ಬಂಧನದಲ್ಲಿ ನರಳುತ್ತಿದ್ದಾರೆ.

[ಇನ್ನೊಮ್ಮೆ ನೆಹರು, ಜರ್ಮನಿಗೆ ಹೋಗಿದ್ದಾಗ ಹಿಟ್ಲರನು ಕಳುಹಿಸಿದ ಆಹ್ವಾನವನ್ನೂ ತಿರಸ್ಕರಿಸಿ, ಗೋಬೆಲ್ಸನನ್ನು ನಿರಾಶೆಗೊಳಿಸಿದ ವಿಷಯವನ್ನು ನಾವು ಕಳೆದ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನವೊಂದರಲ್ಲಿ ಕೊಟ್ಟಿರುವೆವು]

The Jupiter General Insurance Co. Ltd., Bombay

(Incorporated in India)

PROGRAMME FOR YOUTH

HEAD OFFICE—Ewart House, Fort, Bombay.

COURAGE must come from the soul within,
The man must furnish the will to win,
So figure it out for yourself, my lad,
You were born with all that the great have had,
With your equipment they all began,
Get hold of yourself, and say "I CAN"
And work for the Democratic Institution of your motherland.

K. P. NAYAK, *Chief Agent*,
THE JUPITER GENERAL INSURANCE CO. LTD., MANGALORE.

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ
ಬೇಕಾದರೆ ಇಂದೇ
ಸ್ವದೇಶಾಭಿಮಾನಿಯಲ್ಲಿ
ನಿಮ್ಮ ಜಾಹೀರಾತುಗಳನ್ನು
ಕೊಡಿರಿ.

ಸ್ವದೇಶಾಭಿಮಾನಿ

ತಾರೀಕು 6—12—1940

"ದೇವರು ಮಲಗಿದ್ದಾನೆ"

ಗಾಂಧಿಜಿಯವರ ಪಟ್ಟ ಶಿಷ್ಯ ಮಹಾದೇವ ದೇಸಾಯಿಯವರು ಪಂಡಿತ ನೆಹರುಗಳ ವಿಷಯವಾಗಿ ಒಂದು ಅಮೂಲ್ಯ ಲೇಖನವನ್ನು ಬರೆದು ಅದರಲ್ಲಿ ಕೆಲವು ಮನೋಹರ ಸಂಗತಿಗಳನ್ನು ತಿಳಿಸಿದ್ದಾರೆ. ಸೆರೆಹಿಡಿವ ಮುನ್ನ ನೆಹರುಗಳು ಮಹಾತ್ಮರ ಭೇಟಿಗಾಗಿ ವರ್ಧಾಕ್ಕೆ ತೆರಳಿದ್ದರು. ಮಹಾತ್ಮರ ಉಪವಾಸ ವ್ರತದ ವಿಷಯ ಕೇಳಿ ಉದ್ವಿಗ್ನರಾಗಿ ನೆಹರು ವರ್ಧಾಕ್ಕೆ ಧಾವಿಸಿದ್ದರು. ಹಿಂದೆ ಅನೇಕ ಸಲ ಮಹಾತ್ಮರೊಡನೆ, ನೆಹರುಗಳು ನಿಷ್ಠುರವಾಗಿ ವಾದಿಸುತ್ತಿದ್ದರು. ಆದರೆ ಈ ಸಲ ಶೀರಾ ಮೃದುವಾಗಿ, ಎಳೆ ಹುಸುಳೆಯಂತೆ ನೆಹರುಗಳು ಮಹಾತ್ಮರ ಬಳಿ ಹತ್ತಿ ಹಿಡಿದು ಕೂತಿದ್ದರು. "ಆಗದು ಬಾಪೂಜಿ, ತಾವು ನನ್ನನ್ನು ಹಿಂದಕ್ಕೆ ದೂಡಲಾಗದು" ನೆಹರುಗಳ ಈ ಮಾತು ಕೇಳಿ ಆಪರ್ಣಕುಟಿಯ ಜನರೆಲ್ಲರೂ, ಆ ಬಾಲಭಾಷಿತಕ್ಕೆ ಒಮ್ಮೆ ನಕ್ಕರು. ಮಹಾತ್ಮರು ದಿವ್ಯವಾಗಿ ನಕ್ಕರು. ನೆಹರುಗಳ ಮುಖದಲ್ಲಿಯೂ ನಗೆ ಅರಳಿತು!

ಇಷ್ಟಾದ ಬಳಿಕ, ನೆಹರು ತಮ್ಮೂರಿಗೆ ಅಲಹಾಬಾದಿಗೆ ಹೋಗಲು ಹೊರಟರು. "ಕ್ಷಣ ನಿಲ್ಲಿ; ಹಣೆಗೆ ಕುಂಕುಮ ಹಚ್ಚುತ್ತೇನೆ". ಕಸ್ತೂರಿಬಾಯಿಯವರು, ಸದ್ಯಕ್ಕೇ ಅವರಿಗೆ ಒದಗಬಹುದಾದ ಬಂಧೀವಾಸವನ್ನು ಬಗೆದು, ತಡೆದು ಹೇಳಿದರು. "ಬೇಡ; ಅದು ಅನವಶ್ಯಕ" ಹೀಗೆ ನೆಹರು ಸೌಮ್ಯವಾಗಿ ಮಾರ್ನುಡಿದರು. "ಪುನಃ ನಾವು ಕಾಣುವುದು ಯಾವಾಗ ಎಂದು ದೇವರೇ ಬಲ್ಲ" ಕಸ್ತೂರಿಬಾಯಿಯವರು ಅಂದರು. "ಹಾಗೇನಿಲ್ಲ ತಾಯಿ! ದೇವರು ಗಾಢವಾಗಿ ಮಲಗಿದ್ದಾನೆ!" ಹೀಗೆ ನೆಹರುಗಳು ನಿಟ್ಟುಸಿರು ಬಿಟ್ಟು ಹೇಳಿದರು!

ದೇವರು ಗಾಢವಾಗಿ ಮಲಗಿಕೊಂಡಿರಬಹುದೆ? ದೇವರ ರಾಜ್ಯ ಈಗ ನಮ್ಮಲ್ಲಿ ನಡೆಯುತ್ತಿದ್ದರೆ ಇಷ್ಟು ಅನ್ಯಾಯ, ಕ್ರೌರ್ಯ, ಪಶುತ್ವ, ಅಸಭ್ಯತೆ, ಅಜ್ಞಾನ, ದ್ವೇಷಗಳು ಬೇರೂರುತ್ತಿದ್ದುವೇ? ಹೀಗೆಂದು ಶ್ರೀ ಮಹಾದೇವದೇಸಾಯಿಯವರು ತಮ್ಮ ಲೇಖನದ ಕೊನೆಯಲ್ಲಿ ಪ್ರಶ್ನೆಯುತ್ತಿದ್ದಾರೆ.

ಮತ್ತೊ ಎಮೆರಿಯವರು—

ಭಾರತದ ವಿಷಯವಾಗಿ ಲಂಡನ್ನಿನಲ್ಲಿ ಮೊನ್ನೆ ಒಂದು ಭಾಷಣವಾದ ಮೇಲೆ ಮತ್ತೊ ಎಮೆರಿಯವರು ಗಂಟೆಗೊಂದೇ ಸರಣಿಯಂತೆ ... ಹಾಡು ... ಭಾರತೀಯರಿಗೆ ಸಂತೋಷ ... ಸ್ವರಾಜ್ಯವೆಂಬುದು ... ಆದರೆ ಯಾವ ರೀತಿಯ ಸ್ವರಾಜ್ಯವಾಗಬೇಕೆಂಬುದನ್ನು ಭಾರತೀಯರೇ ಒಪ್ಪಂದ ಮಾಡಿಕೊಂಡರೆ ಅದು ಸಿಗುತ್ತದೆ" ಎಂದಿರುವರು. ಮಾತ್ರವಲ್ಲದೆ ಇಂದಿನ ಸತ್ಯಾಗ್ರಹದ ಕುರಿತು ಹೇಳುತ್ತಾ "ಅದು ಕೃತ್ರಿಮ ಆಂದೋಲನ" ಎಂದೂ ಉದ್ಗರಿಸಿದ್ದಾರೆ.

ಈ ಮಾತುಗಳಲ್ಲಿ ಹೊಸತಾಗಲಿ, ವಿಶೇಷವಾಗಲಿ ಇಲ್ಲವೆಂಬುದೂ ಬ್ರಿಟಿಷ್ ರಾಜನೀತಿಯ ತಂತ್ರ ಬುದ್ಧಿಯ ಡಗಿದೆಯೆಂಬುದೂ ಈಗಾಗಲೇ ಭಾರತದ ಮುಖಂಡರು ಕೊಟ್ಟ ಹೇಳಿಕೆಗಳಿಂದ ಜನಜನಿತವಾಗಿದೆ. ಬೊಂಬಾಯಿಯ ಮಾಜಿ ಮಂತ್ರಿಗಳಾದ ಶ್ರೀ ಕೆ. ಎಂ. ಮುನ್ಶಿಯವರು ಎಮೆರಿಯವರ ಮಾತುಗಳನ್ನು ಟೀಕಿಸುತ್ತಾ ಭಾರತದ ಇಂದಿನ ಈ ಪರಿಸ್ಥಿತಿಗೆ ಬ್ರಿಟಿಷ್ ರಾಜನೀತಿಯ ತಂತ್ರವೇ ಕಾರಣವಾಗಿದೆಯೆಂಬುದನ್ನು ಅತ್ಯಂತ ಸ್ಪಷ್ಟವಾಗಿ ಧೀರವಾಗಿ ಸಾರಿದ್ದಾರೆ.

ಯುದ್ಧವು ಆರಂಭವಾದ ಕಾಲದಲ್ಲಿ, ಬ್ರಿಟನಿನ ಕಡೆ ನಿಂತು ಸಹಾಯ ಮಾಡಲು ಹೇಗೆ ತಾವು ಸಿದ್ಧರಿದ್ದೆವೆಂಬುದನ್ನೂ ನಾಜೀ ವಿರುದ್ಧವಾಗಿ ಭಾರತೀಯರೆಲ್ಲರೂ ಏಕಮತದಿಂದ ಹೇಗೆ ಅಭಿಪ್ರಾಯ ಪ್ರಕಟಿಸಿದರೆಂಬುದನ್ನೂ, ಹೀಗಿರಲು ನಮಗೆ ಕಾದಾಡಲು ಸಂದರ್ಭವನ್ನು ಒದಗಿಸಿಕೊಡುತ್ತಿದ್ದರೆ, ಖಂಡಿತವಾಗಿ ಪ್ರೀತಿಯಿಂದ ಹೋರಾಟ ಹೂಡುತ್ತಿದ್ದೆವೆಂಬುದನ್ನೂ ಶ್ರೀ ಮುನ್ಶಿಯವರು ತಿಳಿಸಿರುವರು. ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯ ಪಂಕ್ತಿಯಲ್ಲಿ ಯೋಗ್ಯಸ್ಥಾನವು ಸಿಗಬಹುದೆಂಬ ಆಶೆಯಿದ್ದುದು ಈಗ, ತತ್ಕಾಲದ ಮಟ್ಟಿಗಾದರೂ, ಮಾಯವಾಗಿ, ಇಂದು ಹೇಗೆ ನಮಗೆ ನಾಲಿಗೆಯೆತ್ತಲೂ ಸ್ವಾತಂತ್ರ್ಯವಿಲ್ಲದಾಗಿದೆಯೆಂಬುದನ್ನು ಅವರು ವಿವರಿಸಿ ಎಮೆರಿಯವರ ಹಾಗೂ ಬ್ರಿಟಿಷ್ ರಾಜನೀತಿಯ ತಂತ್ರವನ್ನು ಸ್ಪಷ್ಟವಾಗಿ ಬಯಲಿಗೆಳೆದಿರುವರು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 435/1940

ಪದ್ಮಾವತಿ ಅಂಮ —ವಾದಿಳು

ಮತ್ತು

ಪದ್ಮಾವತಿ ಅಂಮ ವಗೈರೇರು—ಪ್ರತಿವಾದಿರು

—ಇವರೊಳಗೆ—

2ನೇ ಪ್ರತಿವಾದಿಳು, ಸಟಿದೇವಿಯಾನೆ ತಂಗಮ್ಮ, 1ನೇ ಪ್ರತಿವಾದಿಳು ಪದ್ಮಾವತಿ ಅಂಮನ ಮಗಳು—9ನೇ ಪ್ರತಿವಾದಿ ಕೃಷ್ಣಯ್ಯ, ನಾರ್ಣಪ್ಪಯ್ಯನವರ ಮಗ, 11ನೇ ಪ್ರತಿವಾದಿ, ಧರ್ಮಪಾಲ ಸೆಟ್ಟಿ, ಆನಧ್ಯ ಪಾಚಪ್ಪ ಶೆಟ್ರ ಮಗ. 16ನೇ ಪ್ರತಿವಾದಿಳು; ಅಮ್ಮಿಯಾನೆ ನಾಗಂಮ ಶೆಟ್ಟಿ, ಬ್ರೋಳ ಜಿನರಾಜ ಶೆಟ್ರ ವಿಧವೆ.

20ನೇ ಪ್ರತಿವಾದಿ; ವಾಮನಪ್ಪೈ, ರಂಗಪ್ಪೈಗಳ ಮಗ, 25ನೇ ಪ್ರತಿವಾದಿ ವಾಸುದೇವಪೈ, ದಾಮೋದರ ಪೈಗಳ ಮಗ, 26ನೇ ಪ್ರತಿವಾದಿ ಪದ್ಮನಾಭಪೈ (ಮೈನರ) ವೆಂಕಟ್ರಾಯ ಪೈಗಳ ಮಗ, ಈತನ ಗಾರ್ಡಿಯಾನ ತಾಯಿ ಪದ್ಮಾವತಿ ಅಂಮ, ವೆಂಕಟ್ರಾಯ ಪೈಗಳ ವಿಧವೆ.

28ನೇ ಪ್ರತಿವಾದಿ: ಶ್ರೀನಿವಾಸನಾಕ, ಕೃಷ್ಣನ್ನಾಕರ ಅಳಿಯ. 2-9-16-20-25ನೇಯವರು ಕಾರ್ಕಳ ತಾಲ್ಲೂಕು ಪ್ರಾಂತ್ಯ ಗ್ರಾಮದಲ್ಲಿಯೂ, 11ನೇಯವರು ಕಾರ್ಕಳ ತಾಲ್ಲೂಕು ಪುತ್ತಿಗೆ ಗ್ರಾಮದಲ್ಲಿಯೂ, 26 28ನೇಯವರು ಕಾರ್ಕಳ ತಾಲ್ಲೂಕು ಮರಪಾಡಿ ಗ್ರಾಮದಲ್ಲಿಯೂ ಇರುತ್ತಾರೆ—

ಇವರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ:...

ವಾದಿಳು ಕೂಡಾ 20ಜನ ಮೆಂಬರರಾಗಿ ಏರ್ಪಡಿಸಿದ ಚಿಟ್ಟಿಫಂಡಿನ ಕುರಿತು ಸದ್ರಿ ಚಿಟ್ಟಿಯ ಅಧ್ಯಕ್ಷ ಪಟ್ಟಶೆಟ್ಟಿ ಪದ್ಮನಾಭ ಶೆಟ್ರು ಸದ್ರಿ ಚಿಟ್ಟಿಯ ಮೆಂಬರರೀಗೆ ತಾರೀಕು 2-7-1921 ರಲ್ಲಿ ಬರೆಕೊಟ್ಟ ಚಿಟ್ಟಿ ಕರಾರು ಶರ್ತ ಪ್ರಕಾರ ಸದ್ರಿ ಚಿಟ್ಟಿಯ ಮೆಂಬರಳಾದ ವಾದಿಳಿಗೆ ಅವಳು ತೆತ್ತಿರುವ ಕಂತುಗಳ ಅಕ್ಕಿಯ ಕ್ರಯ ವ ಬಡ್ಡಿ ಕೂಡಾ ಕೇಳ ರೂಪಾಯಿ 660-3-7ಕ್ಕೆ ಮೇಲ್ಕಂಡ ದಾವಾ ದಾಖಲು ಮಾಡಿ ಸದ್ರಿ ಚಿಟ್ಟಿಗೆ ಜವಾಬ್ದಾರಿ ಇರುವ ಆಸ್ತಿಗಳ ಮಾರಾಟದಿಂದ ಕೂಡಾ ನಿವೃತ್ತಿ ಕೇಳಿರುತ್ತಾಳೆ. ಸದ್ರಿ ದಾವೆಯು ನಂಮ ಹಾಜ್ರಿಗೆ ತಾರೀಕು 8-1-1941 ನೇಗೆ ಮೇಲ್ಕಂಡ ಕೋರ್ಟಿನ ಮುಂದೆ ತಕ್ಕಿಗೆ ಯಿಡೋಣಾಗಿರುವದರಿಂದ ಸದ್ರಿ ದಾವೆಯ ಕುರಿತು ನಿಮ್ಮ ಉದಾಹರಣೆಯು ಇರುವಲ್ಲಿ ಅದನ್ನು ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ 10ಗಂಟೆ ಸಮಯಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ದಲ್ಲಿ ಸದ್ರಿ ದಾವೆಯು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕಾರ್ಕಳ 28-11-40 | A. N. S. Achar. ವಾದಿಕಡೆ ವಕೀಲ್.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 96/1939

R. I. A. 1608/1940

ಲಕ್ಷ್ಮಿ ಶೆಟ್ರ—ಅರ್ಜಿದಾರಳು

1. ವೆಂಕಮ್ಮ ಶೆಟ್ರ, ಹೂವಕ್ಕೆಶೆಟ್ರ ಮಗಳು, ಮಂಗಳೂರು ತಾಲ್ಲೂಕು ಕೊಂಡೆಮೂಲಗ್ರಾಮದ ಕಠೀಲ ಅಜಾರ ಎಂಬಲ್ಲಿರುವವಳು.
2. ಅಂತಕ್ಕೆ ಶೆಟ್ರ 1ನೇ ಎದ್ರಿಳ ತಂಗಿ, ಸದ್ರಿ ತಾಲ್ಲೂಕು ಮೊನ್ನಬೆಟ್ಟು ಗ್ರಾಮದ ಕೂಡೆತ್ತೂರು ಗುತ್ತಿನಲ್ಲಿರುವವಳು.
3. ದೇವಕಿ ಶೆಟ್ರ, ಕೊರಪಳು ಶೆಟ್ರ ಮಗಳು, ಸದ್ರಿ ಕೊಂಡೆಮೂಲ ಗ್ರಾಮದ ಕಠೀಲ ಎರಬಲ್ಲಿರುವವಳು.

} ಎದ್ರಿ

ಸದ್ರಿಯವರಿಗೆ ಈ ಮೂಲಕ ತಿಳಿಸುವದೇನೆಂದ್ರೆ:

ಅರ್ಜಿದಾರಳ ಗಂಡ ಮಂಗಳೂರು ತಾಲ್ಲೂಕು ಕೊಂಡೆಮೂಲ ಗ್ರಾಮದಲ್ಲಿದ್ದ 1937ನೇ ಇಸ್ವಿ ಎಪ್ರಿಲ್ ತಿಂಗಳ ತಾರೀಕು 9ರಲ್ಲು ... ಪಟ್ಟ ಕೊಡೆತ್ತೂರು ಗುತ್ತು ಕೋಟಿ ಶೆಟ್ರಿಗೆ ಕುಸುಕೋಳಿ ಗೋವಿಂದ ಭಟ್ರು ತಾ. 10-12-1936ಲ್ಲು ಬರೆಕೊಟ್ಟ ಪರಭಾರೆ ಪ್ರಕಾರ ಸದ್ರಿಯವರಿಗೆ ಇಚಲಂಪಾಡಿ ಚಿಕ್ಕಪ್ಪ ಭಂಡಾರಿಗಳು ತಾ. 7-12-33ಲ್ಲು ರೂ. 540ಕ್ಕೆ ಬರೆಕೊಟ್ಟ ಡಿಮಾಂಡ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ವಗೈರೆ ವಸೂಲು ಮಾಡುವ ಸದ್ರಿ ಕೋಟ ಸೆಟ್ರಿಗಿರುತ್ತಿದ್ದ ಹಕ್ಕು ಸದ್ರಿ ಕೋಟಿ ಶೆಟ್ರು ತಾ. 19-5-1931ಲ್ಲು ರಿ. ನಿಶಿಬರದಟ್ಟೀಲ ಸಾಸ್ನೋಪ್ಪಕಾರ ಅರ್ಜಿದಾರಳಿಗೆ ಬಂದಿರುವದ್ರಿಂದ ಸದ್ರಿ ಅವೇಜುಗಳನ್ನು ವಸೂಲು ಪಡೆಯುವರೆ ತನಗೆ ಈ ಮುಂಚೆ ಈ ಕೋರ್ಟಿನ O. P. 96/39ನೇ ವ್ಯವಹರಣೆಯಲ್ಲಿ ಕೊಟ್ಟ ಸಕ್ಸೆಸನ್ ಸರ್ಟಿಫಿಕೇಟನ್ನು (extension) ಮಾಡಬೇಕಾಗಿ ವಗೈರೆ ಅರ್ಜಿದಾರಳು ಕೊಟ್ಟ ಸದ್ರಿ ಅರ್ಜಿಯು ತಾ. 17-12-40ಕ್ಕೆ ಇಟ್ಟಿರುವದ್ರಿಂದ ಆ ಕುರಿತು ನಿಮಗೆ ಆಕ್ಷೇಪಯಿದ್ರೆ ಸದ್ರಿ ತಾರೀಕು ದಿವಸ ಬೆಳಿಗೆ 10ಗಂಟೆಗೆ ಸದ್ರಿ ಕೋರ್ಟಿಗೆ ಹಾಜ್ರಾಗಿ ಆಕ್ಷೇಪಕೊಡಲಿಕ್ಕೆ ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತಕಂಡ ರೀತಿ ತೀರ್ಮಾನಿಸಲಾಗುತ್ತದ್ದೆ.

ಕಾರ್ಕಳ 5-12-'40 } P. Shamba. Shetty. Vakil for Petitioner.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಈ ಕೋರ್ಟಿನ R. E. P. 765/1940

ಉಡ್ಪಿ ಕೋರ್ಟಿನ S. C. 246/1939

ಶ್ರೀ ಶಿರೂರು ಮಠದ ವಿಟ್ಠಲ ದೇವರು; ಬಗ್ಗೆ ಶ್ರೀ ಲಕ್ಷ್ಮೀಂದ್ರ ತೀರ್ಥಸ್ವಾಮಿರು ಉಡುಪಿ ಕಸ್ಬ } ವಾದಿರು

ಅಬ್ದುಲ್ ಖಾದಿರ ಸಾಹೇಬ, ಮೈದಿನ ಸಾಹೇಬರ ಮಗ, ಉಡುಪಿ ತಾಲೂಕು ಕೋಡಿಗ್ರಾಮದ ಬೆಂಗರೆ ನಿವಾಸಿ } ಪ್ರತಿವಾದಿ

ಸದರೀ ಪ್ರತಿವಾದಿಗೆ ತಿಳುಹಿಸುವುದೇನೆಂದರೆ:—

ಮೇಲ್ಕಂಡ ಡಿಕ್ರಿ ಸಾಲದ ಬಗ್ಗೆ ನಿಮ್ಮ ಮೂಲಗೇಣಿ ವ ಕೃತ್ಯದ ಹಕ್ಕಿನ ಸ್ಥಿರಆಸ್ತಿಯನ್ನು ಸದರೀ ಅಮಲಜಾರಿಯಲ್ಲಿ ಜಪ್ತು ಮಾಡಿಸಿ ಅದರ ಏಲಮಿನ ಬಗ್ಗೆ ವಾದಿರ ಕಡೆಯಿಂದ ಹಾಜರು ಪಡಿಸಿದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 14-12-1940ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದರಿ ಕೋರ್ಟಿನಮುಂದೆ ತಕ್ಕ ಸಮಯದಲ್ಲಿ ಹಾಜೀರು ಮಾಡಬೇಕಾಗಿ ಈ ಮೂಲಕ ತಿಳಿಸೋಣಾಗಿಯದೆ. ಇಲ್ಲವಾದರೆ ನಿಮ್ಮ ಗೈರಹಾಜರಿಯಲ್ಲಿ ಶರ್ತಗಳು ನಿರ್ಣಯಿಸಲ್ಪಡುವವು.

ಕುಂದಾಪುರ 3-12-40 } M. M. Ural Advocate for D. H.



ಸತ್ಯಾಗ್ರಹ ಸಮಯದಲ್ಲಿ ವಿದ್ಯಾರ್ಥಿಗಳು-

ರಾಜಕೀಯ ಮುಷ್ಕರ ಹೂಡಬಾರದು-

ರಚನಾತ್ಮಕ ಕಾರ್ಯವು ಮೊದಲನೆಯದು —

ಗಾಂಧಿಜಿಯವರ ಉಪದೇಶ!

ವಿದ್ಯಾರ್ಥಿಗಳ ಮತ್ತು ಇಂದಿನ ಸತ್ಯಾಗ್ರಹ ಚಳವಳದ ಸಂಬಂಧವಾಗಿ ಮಹಾತ್ಮಾಜಿಯವರು ಒಂದು ಮಹತ್ವದ ಪ್ರಕಟಣೆಯನ್ನು ಕೊಟ್ಟಿರುವರು; ಅದರಲ್ಲಿ ಈ ವಿಷಯಗಳನ್ನು ವಿವರಿಸಿದ್ದಾರೆ

ವಿದ್ಯಾರ್ಥಿಗಳ ವಿಚಾರಗಳು

ವಿದ್ಯಾರ್ಥಿಗಳನ್ನು ತಳಮಳಗೊಳಿಸುವ ಹಲವು ವಿಚಾರಗಳು ನನ್ನ ಗಮನಕ್ಕೆ ಬಂದಿವೆ ನನ್ನ ಶಕ್ತಿಯನ್ನು ಬೇರೆ ಕಡೆಗೆ ನಾನು ಕೇಂದ್ರೀಕರಿಸಿರುವುದರ ನಿಮಿತ್ತ ಅವರ ಎಲ್ಲಾ ವಿಚಾರಗಳನ್ನು ಪರಾಮರ್ಶಿಸುವುದಾಗಲಿಲ್ಲ. ವಿದ್ಯಾರ್ಥಿಗಳ ಕುರಿತು ನನ್ನ ಅಭಿಪ್ರಾಯವು ಸ್ಪಷ್ಟವಿದೆ. ಶಾಲೆಗಳನ್ನು ಮುಂದೆ ಪ್ರವೇಶಿಸುವುದಿಲ್ಲವೆಂದು ಖಂಡಿತ ನಿರ್ಧಾರ ಮಾಡದ ವಿನಾ ವಿದ್ಯಾರ್ಥಿಗಳು ರಾಜಕೀಯ ದೃಷ್ಟಿಯಿಂದ ಮುಷ್ಕರ ಹೂಡಬಾರದು ನಮ್ಮ ದೇಶದಲ್ಲಿ ಎಲ್ಲಾ ಶಾಲೆಗಳೂ ಸರಕಾರದ ಹಿಡಿತದಲ್ಲಿವೆ ಸ್ವತಂತ್ರ ದೇಶಗಳಂತೆ ನಮ್ಮ ಪರಿಸ್ಥಿತಿಯಿಲ್ಲ. ಪರಕೀಯರಿಂದ ಬಿಡುಗಡೆ ಹೊಂದಿ ದೇಶವನ್ನು ಸ್ವತಂತ್ರ ಮಾಡಲು ಯತ್ನಗಳು ಆಗುತ್ತಿವೆ; ಈ ಸಮಯದ ವಿದ್ಯಾರ್ಥಿಗಳು ಒಳ್ಳೆಯ ಸಂಯಮನಶಾಲಿಗಳಾಗಬೇಕು. ವಿದ್ಯಾರ್ಜನೆ ಮಾಡುವುದೂ ಮುಷ್ಕರ ಹೂಡುವುದೂ ಜೊತೆಯಾಗಿ ನಡೆಯಲಾರವು. ಆದಕಾರಣ, ಶಾಲಾಧಿಕಾರಿಗಳ ಒಪ್ಪಿಗೆಯಿಲ್ಲದೆ ವಿದ್ಯಾರ್ಥಿಗಳು ರಾಜಕೀಯದ ನಿಮಿತ್ತ ಮುಷ್ಕರ ಹೂಡಬಾರದು,

ಸುಲಭ ಮಾರ್ಗ

"ವಿದ್ಯಾರ್ಥಿಗಳಿಗೆ ಸುಲಭವಾದ ಮಾರ್ಗ ಬೇರಿದೆ ಶಾಲೆಗಳ ಸಮಯವನ್ನು ಬಿಟ್ಟು ಅವರಿಗೆ ಧಾರಾಳ ಹೊತ್ತು ಸಿಗುತ್ತದೆ; ಆಗ ಅವರು ಸ್ವತಂತ್ರರು. ರಾಷ್ಟ್ರೀಯ ವಿಷಯಗಳಲ್ಲಿ ಒಳ್ಳೆಯ ತಿಳುವಳಿಕೆ... ಶಿಸ್ತಿನಿಂದ ಆಗ ಅವರು ಧಾರಾಳ ಸಹಕರಿಸಬಹುದ ಉಚಿತವೆನಿಸಿದಾಗ ಮೆರವಣಿಗೆಗಳನ್ನೂ ಮಾಡಬಹುದು

ಸತ್ಯಾಗ್ರಹದಲ್ಲಿ ಭಾಗವಹಿಸಲು ಆತುರಪಡುವವರು, ನನ್ನ ಮುಂದಾಳುತನವನ್ನೊಪ್ಪುವವರು, ನನ್ನ ನಿಯಮಗಳನ್ನು ಪಾಲಿಸಬೇಕು ಅಂಥವರು, ವಿದ್ಯಾಭ್ಯಾಸವನ್ನು ತತ್ಕಾಲಕ್ಕೆ ಬಿಟ್ಟು ನನ್ನ ಅನುಮತಿಯಿಂದ ನಿಯಮದಂತೆ ಸತ್ಯಾಗ್ರಹ ಹೂಡಬಹುದು

ಅಹಿಂಸೆಯಲ್ಲಿ ವಿಶ್ವಾಸವಿಲ್ಲ

"ಈಗಾಗಲೇ ಅನೇಕ ವಿದ್ಯಾರ್ಥಿಗಳಿಂದ ನನಗೆ ಪತ್ರ ಬಂದಿದೆ ಹಲವರು ನನ್ನ ಮುಂದಾಳುತನದಲ್ಲಿ ವಿಶ್ವಾಸವಿಲ್ಲವೆಂದು ತಿಳಿಸಿದ್ದಾರೆ ರಚನಾತ್ಮಕ ಕಾರ್ಯಗಳಲ್ಲಿ ಪ್ರಾಮುಖ್ಯವಾದ ಖಾದಿಯಲ್ಲಿ ಅವರ ವಿಶ್ವಾಸವಿಲ್ಲ ಅವರಿಗೆ ಅಹಿಂಸೆಯಲ್ಲಿ ವಿಶ್ವಾಸವಿದೆಯೆಂದು ನಂಬಲು ಬರುವುದಿಲ್ಲ ಶಿಸ್ತು ಪಾಲಿಸಿದರೆ ವಿದ್ಯಾರ್ಥಿಗಳೂ ರಾಜಕೀಯ ಹೋರಾಟದಲ್ಲಿ ಯಶಸ್ವಿಗಳಾಗಿ ಭಾಗವಹಿಸಬಹುದು ಆದರೆ ಅವರು ಮನಸ್ಸಿಗೆ ಬಂದಂತೆ ವರ್ತಿಸಿದರೆ, ತಮ್ಮ ಶಕ್ತಿಯನ್ನು ಬರಿದುಮಾಡಿಕೊಂಡಂತಾಗುವುದು. ರಾಷ್ಟ್ರಹಿತಘಾತಕ ಮಾಡಿದಂತಾಗುವುದು

ಸಂತೋಷದ ವಿಷಯ

"ಕಾಂಗ್ರೆಸಿನವರು ಬೇಕಾದಷ್ಟು ಶಿಸ್ತಿನಿಂದ ಕೆಲಸಮಾಡುತ್ತಾರೆಂದು ನಾನು ಸಂತೋಷದಿಂದ ಹೇಳಬಲ್ಲೆ ಹಾಗೆ ಮಾಡಿದ್ದರಿಂದ ನನಗೆ ಹಿತವಾಗಿದೆ, ಆನಂದವೂ ಆಶ್ಚರ್ಯವೂ ಆಗಿದೆ. ಇಷ್ಟು ಯಶಸ್ವಿಯಾಗುವುದೆಂದು ಮೊದಲು ನಾನು ಎಣಿಸಿರಲಿಲ್ಲ ಈ ಮಾತು ವಿದ್ಯಾರ್ಥಿ ವೃಂದಕ್ಕೆ ಅನ್ವಯಿಸುವುದಿಲ್ಲ

ರಚನಾತ್ಮಕ ಕಾರ್ಯ

"ಶಿಸ್ತಿಲ್ಲದ, ವಿಚಾರವಿಲ್ಲದ ಪ್ರದರ್ಶನಗಳಿಂದ ಹಿತವಿಲ್ಲ. ಅವರಿಂದ ಹೆಚ್ಚಿನ ಶಿಸ್ತು, ತ್ಯಾಗ ಧೈರ್ಯಗಳನ್ನು ನಾನು ಹಾರೈಸುತ್ತೇನೆ ನಮ್ಮ ದೇಶದ ಜನರಲ್ಲಿ ಕೆಲವೇ ಜನರು ಶಾಸನಭಂಗ ಮಾಡುವರೆಂಬುದನ್ನು ನೆನಪಿನಲ್ಲಿಡಬೇಕು; ಮಿಕ್ಕವರು ರಚನಾತ್ಮಕ ಕಾರ್ಯಗಳನ್ನು ಮಾಡಬೇಕು. ಇದರಿಂದ ನನ್ನ ಸತ್ಯಾಗ್ರಹವು ಯಶಸ್ವಿಯಾಗುವುದು. ರಚನಾತ್ಮಕ ಕಾರ್ಯನಡೆಯದಿದ್ದರೆ ಈ ಸತ್ಯಾಗ್ರಹ ಸವಿನಯ ಶಾಸನಭಂಗವೆನಿಸುವುದಿಲ್ಲ. ಅದು ವಿನಯರಹಿತವಾಗಿ ಸಂಪೂರ್ಣವಾಗಿ ... ವಾಗುವುದು"

ಶ್ವಾಸಕೋಶಗಳಿಗೆ ಸಂಬಂಧಪಟ್ಟ ಬಾಧೆಗಳನ್ನು ನಾಶಮಾಡಿರಿ

ಶ್ವಾಸಕೋಶಗಳಿಗೆ ಸೋಂಕನ್ನುಂಟುಮಾಡುವ ಕೆಮ್ಮು ನಿಮ್ಮನ್ನು ಆಗಾಗ ಪೀಡಿಸುವುದಾದರೆ ನಿಮ್ಮ ಶ್ವಾಸಕೋಶಗಳು ಖಂಡಿತವಾಗಿಯೂ ಸರ್ಬಲವಾಗುವುವು. ಆದಕಾರಣ ಯಾವತ್ತೂ ಕೆಮ್ಮು, ಶೀತ ಕಫ ಮೊದಲಾದ ಶ್ವಾಸಕೋಶಗಳ ಬಾಧೆಯನ್ನು, ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ಯಾವಾಗಲೂ ಸೇವಿಸಿ ನಾಶಮಾಡಿರಿ.

ಪೆಪ್ಸ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಸತ್ವವು ನಿಮ್ಮ ಶ್ವಾಸಕೋಶಗಳನ್ನು ಸೇರುತ್ತದೆ ಪೆಪ್ಸ ಈ ಪ್ರಕಾರವಾಗಿ ಕಫ ಮೊದಲಾದುವನ್ನು ತೆಗೆದು ಬಿಡುತ್ತದೆ ಮತ್ತು ಸರಿಯಾಗಿ ಉಸಿರಾಟಕ್ಕೆ ಸಹಾಯ ಮಾಡಿ ಎದೆಯನ್ನೂ ಶ್ವಾಸಕೋಶಗಳನ್ನು ಬಲಪಡಿಸುತ್ತದೆ

ಎಲ್ಲ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ ಟಿ. ಮದ್ರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

An Invitation

Deposits flowing in more quickly than we can invest them are steadily increasing our idle funds Thus our deposits increased by over Rupees Five Lacs since the first of July 1940

In order to invest this surplus loans will be granted at special rates against gold, produce and other valuable security

You are invited to take advantage of these special terms

RESOURCES OF A CRORE.

Estd: 1906

CANARA BANK, LIMITED.

The Canara Banking Corporation, Ltd.

(Incorporated in British India Liability of Members is limited)

ESTD 1906

NOTICE

(Under Section 37 of the Indian Companies Act).

THE REGISTER OF MEMBERS AND TRANSFER BOOKS OF THE CORPORATION SHALL REMAIN CLOSED FOR THE PERIOD FROM 24-12-1940 TO 7-1-1941 BOTH DAYS INCLUSIVE.

Office of the Corporation, Udipi, Dated 30-11-1940.

V. R. KAMATH, B.A., LL.B.,
MANAGER.

ಸೂಯೆಜ್ ಕಾಲುವೆಗಾಗಿ ಕಾದಾಟವಾಗುವುದೆ?

ಇಟಲಿಗೆ ಇದರಲ್ಲಿ ಅಧಿಕಾರ ಬೇಕಾಗಿದೆ



ಇಟಲಿಯ ಸರ್ವಾಧಿಕಾರಿ ಮುಸಲನಿ

ಜಿಬ್ರಾಲ್ಟರಿನಂತೆಯೇ ಸುವೇಜ್ ಕಾಲುವೆಯೂ ಒಂದು ಆಯಕಟ್ಟಿನ ಭಾಗದಲ್ಲಿದ್ದು, ಇಂದಿನ ಯುದ್ಧಕಾಲದಲ್ಲಿ ಅತ್ಯಂತ ಮಹತ್ವದ ಗಮನೀಯ ಸ್ಥಳವಾಗಿರುತ್ತದೆ. ಸುವೇಜ್ ಕಾಲುವೆಯು ಭೂಮಧ್ಯ ಸಮುದ್ರದ ಪೂರ್ವಭಾಗವನ್ನು ಭದ್ರತೆಯಿಂದ ಕಾಯುತ್ತದೆ. ೧೮೭೫ರಲ್ಲಿ ಡಿಸ್ರೇಲಿ ಎಂಬವನು ಈ ಕಾಲುವೆಯ ೪೪% ಪಾಲನ್ನು ಈಜಿಪ್ತಿನ ಕೆಡಿವೆಯರಿಂದ ಬ್ರಿಟಿಷ್ ಸಾರ್ವಭೌಮ ಸರಕಾರಕ್ಕೆ ತಂದೊದಗಿಸಿದನು. ಅವನು ಆ ಕೆಲಸವನ್ನು ಮಾಡದೆ ಬಿಡುತ್ತಿದ್ದರೆ, ಬ್ರಿಟಿಷ್ ಸರಕಾರದ ಇತಿಹಾಸವೇ ಇಂದು ಬೇರೆ ತೆರನಲ್ಲಿ ಉಲ್ಲಖಿತವಾಗುತಿತ್ತು! ಈ ಕಾಲುವೆಯ ಸ್ವಾಧೀನತೆಯಿಂದ ಬ್ರಿಟನಿಗೆ ಪೂರ್ವದಲ್ಲಿ ಅದರ ಶಕ್ತಿಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು ಆಸ್ಪದ ದೊರಕಿತು. ಭಾರತಕ್ಕೆ ಬರುವ ಮಾರ್ಗವು ಕೇಪ್ ಓಫ್ ಗುಡ್ ಹೋಪಿನ ಸುತ್ತಲಾಗಿ ಮಾತ್ರ ಆಗಿದ್ದರೆ, ಬ್ರಿಟಿಷ್ ಸರಕಾರಕ್ಕೆ ನಿಜವಾಗಿಯೂ ಇಂದಿನ ಇಂತಹ ಸ್ಥಾನಮಾನಗಳೂ ಪೂರ್ವದೇಶದಲ್ಲಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಯಾವುದೇ ಭೂಪಟವನ್ನು ನೋಡಿದರೂ ನಮಗೆ 'ಇಸ್ತ್‌ಮುಸ್' ಆಷ್ಟು ದೊಡನೆ ಆಫ್ರಿಕಾ ಖಂಡವನ್ನು ಸೇರಿಸುವ ಸಪೂರವಾದ ಈ ಭೂಭಾಗದ ಮಹತ್ವ ತಿಳಿಯದಿರದು. ಇದು ಪೂರ್ವ ಪಶ್ಚಿಮ ದೇಶವಾಸಿಗಳಾದ ನೌಕಾಯಾತ್ರಿಕರನ್ನು ಅನ್ಯೋನ್ಯ ಭೇಟಿಯಾಗದಂತೆ ಮೊದಲಿನಿಂದ ತಡೆಯುತ್ತಿತ್ತು. ಕೇಪ್ ಮಾರ್ಗವನ್ನು ಕಂಡುಹುಡುಕುವ ವರೆಗೆ ಈ ಉಭಯರಾಷ್ಟ್ರಗಳ ನೌಕಾಜನರು ಒಬ್ಬರನ್ನೊಬ್ಬರು ಸಂಧಿಸಿರಲಿಲ್ಲ!

ಮೊದಲ ಸಾಹಸ

ಫೆರ್ಡಿನಾಂಡ್ ಡಿ ಲೆಸೆಪ್ಸ್ ಎಂಬ ದೂರದರ್ಶಿಯೂ ಧೈರ್ಯಶಾಲಿಯೂ ಆದ ಫ್ರೆಂಚನು ಈ ಹೊಸ ಕಾಲುವೆಯ ನಿರ್ಮಾಣದ ಪ್ರಯತ್ನವನ್ನು ಮಾಡಿದನು. ೧೮೫೪ರಲ್ಲಿ ಆತನು ಈಜಿಪ್ತಿನ ರಾಜನಿಂದ ಇದಕ್ಕಾಗಿ ಅನುಮತಿ ಪಡೆಕೊಂಡನು. ಈಜಿಪ್ತು ಆಗ ಟರ್ಕಿಯ ಅಧೀನ ರಾಷ್ಟ್ರವಾಗಿದ್ದುದರಿಂದ ಟರ್ಕಿಯ ಒಪ್ಪಿಗೆಯೂ ಆತನಿಗೆ ಆವಶ್ಯವಾಗಿತ್ತು. ೧೮೫೯ರಲ್ಲಿ ಆತನು ಆ ಒಪ್ಪಿಗೆಯನ್ನು ಪಡೆದುಕೊಂಡು ಬೇಕಾದ ಹಣ ಸಂಗ್ರಹ ಮಾಡಿದವನಾಗಿ, ಕಾರ್ಯವನ್ನಾರಂಭಿಸಿದನು. ೧೮೬೯ರಂದು ಸರ್ವಸಾಧಾರಣವಾಗಿ ಈ ಕಾರ್ಯವನು ಆತನು ಕೊನೆಗಾಣಿಸಿದನೆನಬಹುದು. ಆದರೆ ಈ ಎಲ್ಲಾ ವರ್ಷಗಳಲ್ಲಿಯೂ ಆತನು ಬಹಳವಾಗಿ ಆರ್ಥಿಕ, ರಾಜನೀತಿ ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ಆಗ ಆತನನ್ನು ಬಹಳವಾಗಿ ಪೀಡಿಸಿದವರೆಂದರೆ ಬ್ರಿಟಿಷ್ ಸರಕಾರದವರೇ ಆಗಿದ್ದರು.

ಬ್ರಿಟಿಷರ ಆಶೆ

ಈ ಕಾಲುವೆಯು ತೆರೆಯಲ್ಪಟ್ಟದ್ದೇ ತಡ, ಬ್ರಿಟಿಷ್ ಸರಕಾರದ ರೀತಿನೀತಿಗಳೂ ಬದಲಾದವು. ಈ ಕಾಲುವೆಯು ಉಪಯೋಗವು ಬ್ರಿಟಿಷ್ ಸರಕಾರಕೂ ಹೊಳೆಯಿತು; ಆದಕಾರಣ ಅದು ಪ್ರತಿಸ್ಪರ್ಧಿ ವ್ಯಾಪಾರಿ ಜನಾಂಗದ ಕೈಸೊತ್ತಾಗಿ ಬಿಡಬಾರದೆಂದು ಬ್ರಿಟಿಷ್ ಸರಕಾರವು ತಳಮಳಗೊಂಡಿತು. ಹೀಗಾಗಿ ಬರಿಯ ಆರೇ ವರ್ಷಗಳ ಅನಂತರ ಡಿಸ್ರೇಲಿಯು ಈಜಿಪ್ತಿನ ಕೆಡಿವೆಯರಿಂದ ಬ್ರಿಟಿಷ್ ಸರಕಾರಕ್ಕೆ ಅನೇಕ ಪಾಲುಗಳನ್ನು ಒದಗಿಸಿಕೊಟ್ಟನು. ೧೮೮೨ರಿಂದ ಕಾಲುವೆ ಮತ್ತು ಈಜಿಪ್ತಗಳ ಮೇಲೆ ಬ್ರಿಟನಿನ ಲಕ್ಷ್ಯ ಹೆಚ್ಚಾಗಿ ಬೀಳತೊಡಗಿತ್ತು.

ಆಗ ಈಜಿಪ್ತು ಸ್ವತಂತ್ರವಾಗಲು ಹವಣಿಸುತಿತ್ತು. ರಾಜಾಡಳಿತವೂ ಸಡಿಲಾಗುತ್ತಾ ಬರುತಿತ್ತು. ಹಾಗಾಗಿ ೧೮೮೨ರಲ್ಲಿ ಆದ ಕ್ರಾಂತಿಯು ಅಲ್ಲಿ ಬ್ರಿಟನಿಗೆ ಕಾಲೂರಲು ಎಡೆಮಾಡಿತು. ಹೀಗೆ ಒಮ್ಮೆ ಕಾಲೂರಿದ ಮೇಲೆ ಮುಂದೆ ಪ್ರಥಮದ ಹಕ್ಕು ಫ್ರೆಂಚರದಾಗಿದ್ದರೂ ಕೊನೆಗೆ ಅದನ್ನು ಪೂರ್ಣ ಸ್ವಾಧೀನಪಡಿಸುವ ಸಾಹಸವನ್ನು ಬ್ರಿಟಿಷರು ಪ್ರಾರಂಭಿಸಿದರು.

ಹಿಂದಿನ ಒಪ್ಪಿಗೆಗಳು

೧೮೮೮ರಲ್ಲಿ ಒಂದು ವಿಚಾರವುಂಟಾಯಿತು. ಅದರಲ್ಲಿ ಒಂದು ಒಪ್ಪಿಗೆಯಾಗುವುದು ಸೂಚಿತವಾಗಿತ್ತು. ಆ ಒಪ್ಪಿಗೆಯಂತೆ ಈ ಕಾಲುವೆಯು ಯಾವುದೇ ಒಂದು ರಾಷ್ಟ್ರದ ಅಧೀನವಾಗಿರದೆ ಸಕಲ ರಾಷ್ಟ್ರಗಳ ವ್ಯಾಪಾರ ವಹಿವಾಟಿಗೆ ತೆರೆದಿರಬೇಕೆಂದು ಸೂಚಿತವಾಗಿತ್ತು.

೧೯೧೪-೧೮ರ ಯುದ್ಧದಲ್ಲಿ ಟರ್ಕಿಯು ಬ್ರಿಟಿಷ್ ವಿರುದ್ಧ ಯುದ್ಧ ಸಾರಿದಾಗ, ಬ್ರಿಟಿಷ್ ಸರಕಾರವು ಟರ್ಕಿಯನ್ನು ಈಜಿಪ್ತಿನಿಂದ ಭಿನ್ನವಾಡಿ ಈಜಿಪ್ತನ್ನು ಬ್ರಿಟಿಷ್ ಸಹಕಾರದ ರಾಷ್ಟ್ರವೆಂದು ತಿಳಿಸಿದರು. ಆದರೆ ಆ ಸಮಯ ಹೆಚ್ಚಿನ ಘಟನೆಗಳು ನಡೆಯದಿದ್ದರೂ ಒಮ್ಮೆ ಈಜಿಪ್ತನ್ನು ಮುತ್ತಲು ಬಂದಿದ್ದ ಟರ್ಕಿಯ ಬಲವನ್ನು ಹಿಂದಕ್ಕಟ್ಟಿ ಕಾಲುವೆಯನ್ನು ಮುಚ್ಚಲಾಗಿತ್ತು.

ಇಟಲಿಯ ಕಣ್ಣು!

ಯುದ್ಧ ಸುರುವಾದಂದಿನಿಂದ, ಈ ಕಾಲುವೆಯ ಶಾಂತಿಗೆ ತೊಂದರೆ ಬಂದಿದೆ. ಭೂಮಧ್ಯ ಸಮುದ್ರದಲ್ಲಿ ವಿಜೃಂಭಿಸುತ್ತಿರುವ ಇಟಲಿಯು ಕಾಲುವೆಯ ಅಧಿಕಾರದಲ್ಲಿ ತನಗೂ ಪಾಲಿರಬೇಕೆಂದು ಅಪೇಕ್ಷೆ ಪಡುತ್ತಿದ್ದೆ, ಇಟಲಿಯು ಬಹು ಹೆಚ್ಚಿನ ತೆರಿಗೆ ಈಗ ತೆರಬೇಕಾಗುತ್ತದೆ.

ಯುದ್ಧಕ್ಕಿಂತ ಮೊದಲು ಕಾಲುವೆ ಕಂಪೆನಿಯಲ್ಲಿ ಬ್ರಿಟಿಷ್ ಸರಕಾರಕ್ಕೆ ಶೇಕಡಾ ೫೦ಕ್ಕಿಂತ ಕಡಿಮೆ ಪಾಲುಗಳಿದ್ದುವು. ಕಾಲುವೆಯ ಅಧಿಕಾರ ಫ್ರೆಂಚರ ಸ್ವಾಧೀನದಲ್ಲಿಯೇ ಇತ್ತು. ಒಟ್ಟು ೩೨ ಡೈರೆಕ್ಟರರಲ್ಲಿ ಕೇವಲ ೧೦ ಮಂದಿ ಬ್ರಿಟಿಷ್ ೨೧ ಫ್ರೆಂಚ್ ೧ ಡಚ್ ಇದ್ದರು. ಆದರೆ ೧೯೩೭ರಲ್ಲಿ ಇಬ್ಬರು ಫ್ರೆಂಚ್ ಡೈರೆಕ್ಟರರ ಬದಲು ಇಬ್ಬರು ಈಜಿಪ್ತ್ ಡೈರೆಕ್ಟರರು ಹಾಕಲ್ಪಟ್ಟರು. ಆ ಮೇಲೆ ಈಜಿಪ್ತಿನ ಮಟ್ಟಿಗೆ ಹೆಚ್ಚಿನ ರಿಯಾಯಿತಿಯೂ ಒದಗಿತ್ತು.

ಮುಂದಿನ ಗತಿ?

ಆದರೆ ಇಂದು ಹಿಂದಿನ ಎಲ್ಲಾ ಒಪ್ಪಿಗೆ ಕರಾರುಗಳು ತಲೆಕೆಳಗಾಗಿವೆ. ಭವಿಷ್ಯದ ಗರ್ಭದಲ್ಲಿ ಏನು ಅಡಗಿದೆಯೆಂದು ಹೇಳಬರುವುದಿಲ್ಲ. ಹೇಗಿದ್ದರೂ ಮುಂದಿನ ವಿವಾದವು ಕಾಲುವೆಯ ಮರಳು ಸ್ಥಳದಲ್ಲಿ ಆಗುವ ಭಯಂಕರ ಕಾದಾಟದಿಂದಲೇ ನಿರ್ಣಯವಾಗಬೇಕಾಗಿದೆಯೆಂದು ವಿಚಾರಿಸಲು ಬೇಕಾದಷ್ಟು ಆಸ್ಪದಗಳಿವೆ.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ!

ಈ ವಾರದ ಕತೆ

ಪಾಪದ ಫಲ

ಲೇಖಕರು: ಕೆ. ವೆಂಕಟೇಶ ಪೈ, ಮಂಗಳೂರು.

'ಸುಶೀಲಾ'

'ಏನಮ್ಮಾ'

'ಇತ್ತ ಬಾ ಮಗಳೇ, ನಿನ್ನೊಡನೆ ಒಂದು ಮಾತು ಹೇಳಲಿಕ್ಕಿದೆ'.

ಆಡಿಗೆ ಕೋಣೆಯಿಂದ ಹದಿನೈದು ವರುಷ ಪ್ರಾಯದ ಹುಡುಗಿಯೊಬ್ಬಳು ಹೊರಗಿನ ಕೋಣೆಗೆ ಬಂದಳು. ಆಕೆಯ ಮುಖವು ಬಾಡಿದ್ದಿತು. ಯಾವುದೋ ಚಿಂತೆಯೊಂದು ಆಕೆಯನ್ನು ಪೀಡಿಸುತ್ತಿದ್ದಿತೆಂದು ಆಕೆಯ ಆ ನಿಸ್ತೇಜ ಮುಖಭಾವವು ಸೂಚಿಸುತ್ತಿತ್ತು.

ಕೋಣೆಯ ಮೂಲೆಯೊಂದರಲ್ಲಿ ಮುರುಕು ಮಂಚದ ಮೇಲೆ ಹಾಸಿದ ಹರಕು ಚಾಪೆಯ ಮೇಲೆ ವೃದ್ಧ ಸ್ತ್ರೀಯೊಬ್ಬಳು ಅತ್ತಿತ್ತ ಹೊರಳಾಡುತ್ತಿದ್ದಳು. 'ಕೃಷ್ಣಾ ಕೃಷ್ಣಾ-ಉಸ್' ಎಂದು ನಿಟ್ಟುಸಿರು ಬಿಡುತ್ತಿದ್ದಳು. ಆಕೆಯ ಮೈಯಿಡೀ ಸೊರಗಿ ಕಡ್ಡಿಯಂತಾಗಿತ್ತು.

ಹುಡುಗಿ ಹೊರಬಂದವಳು ನೇರವಾಗಿ ಮಂಚದ ಬಳಿ ಬಂದು ನಿಂತು, 'ಏತಕ್ಕಮ್ಮಾ ನನ್ನನ್ನು ಕರೆದದ್ದು? ಹೆಚ್ಚು ಮಾತನಾಡುತ್ತಿದ್ದರೆ ಆಯಾಸವಾಗುವದೆಂದು ವೈದ್ಯರು ಹೇಳಿದ್ದಾರೆ. ಸ್ವಲ್ಪ ನಿಶ್ಚಿಂತತೆಯಿಂದ ಮಲಗಿರಬಾರದೆ? ದೇವರು ನಮ್ಮ ಕೈ ಬಿಡಲಾರನು' ಎಂದಳು.

ರೋಗಿಯು ಒಮ್ಮೆ ನಿಟ್ಟುಸಿರುಬಿಟ್ಟಳು. ಮೇಲೆದ್ದು ಕಾಣುತ್ತಿರುವ ಎಲುಬಿನ ಗೂಡಿನೊಳಗಿಂದ ಹೊರಟ ಯಾತನಾಪೂರ್ಣ ನಿರಾಶಾಯುಕ್ತವಾದ ಧ್ವನಿ ಇದು! 'ಸುಶೀಲಾ, ನಾನಿನ್ನು ಬದುಕುವಂತಿಲ್ಲ ಮಗೂ, ಕಾರಣ ನನ್ನ ಕೊನೆಯ ಎರಡು ಮಾತುಗಳನ್ನು ಹೇಳಿ ಬಿಡುತ್ತೇನೆ. ಅಧೀರಳಾಗಬೇಡ. ಅನಂತರ ನಾನು ಸಂತೋಷದಿಂದ ಹೋಗುವೆನು'

'ಹಾಗೆನ್ನಬಾರದಮ್ಮ. ಗಾಬರಿಯಾಗಬೇಡ. ಏನಿರುವುದನ್ನೆಲ್ಲ ಮತ್ತೆ ಹೇಳುವಿಯಂತೆ. ಈಗ ಕೊಂಚ ವಿಶ್ರಾಂತಿ ಹೊಂದು. ಸುಮ್ಮನೆ ಏನೇನೋ ಆಲೋಚಿಸಿ ಮನಸ್ಸಿಗೆ ವ್ಯಥೆಹಚ್ಚಿಕೊಳ್ಳಬೇಡ'

ರೋಗಿಯ ಕಣ್ಣುಗಳಿಂದ ಅಶ್ರುಗಳುದುರಿದವು. ಆಕೆಗೆ ಅವುಗಳನ್ನು ತಡೆಯಲಾಗಲಿಲ್ಲ. ನೋಡಿ ಹುಡುಗಿಯೂ ಅಳಲಾರಂಭಿಸಿದಳು.

'ಇನ್ನು ನನಗೆ ದೀರ್ಘ ವಿಶ್ರಾಂತಿಯಲ್ಲದೆ ಬೇರೆಯಿಲ್ಲ ಮಗು. ಆದ್ದರಿಂದ ವಿಷಯವನ್ನು ಕಿವಿಗೊಟ್ಟು ಕೇಳು'. ರೋಗಿಯ ಉಸಿರು ನಿಧಾನವಾಗಲಾರಂಭಿಸಿತು. ಸುಶೀಲೆಯನ್ನೊಮ್ಮೆ ಹತ್ತಿರ ಕರೆದು ಆಕೆಯನ್ನು ಬಿಗಿದಪ್ಪಿ ಮುದ್ದಿಟ್ಟಳು. 'ಕೇಳು, ಸುಶೀ-ಮಗೂ, ನಾನು ನಿನ್ನ ತಾಯಿಯಲ್ಲ. ನೀ... ನು... ಕ್ಷಮಿಸು ಮಗೂ... ಹೇಳಲಾರೆನೆ... ಸುಶೀ...ಲಾ...'

ಗಾಳಿಯೊಂದು ಹೊರಟು ಸುತ್ತಲಿನ ಗಾಳಿಯಲ್ಲಿ ಲೀನವಾಯಿತು! . . .

ಸುಶೀಲೆಗೆ ಜಗತ್ತೇ ಶೂನ್ಯವಾಯಿತು. ಇಷ್ಟರ ತನಕ 'ಅಮ್ಮಾ' ಎಂದು ತಾನು ಕರೆಯುತ್ತಿದ್ದಾಕೆ ಇಂದು ತನ್ನನ್ನು ಅನಾಥೆಯಾಗಿ ಮಾಡಿ ಬಿಟ್ಟುಹೋದಳು. ಸುಶೀಲೆಗೆ ದುಃಖವು ತಡೆಯಲಾಗಲಿಲ್ಲ.

ಸುಶೀಲೆ ದಿನವಿಡೀ ಅಳುವಳು. ಅನಂತರ ಒಮ್ಮೆ ಸುಮ್ಮಗಾಗುವಳು. ಅನಾಥ ಬಾಲೆ! ನಿರ್ಭಾಗ್ಯೆ! ಹೇಳುವವರಾರು? ಕೇಳುವವರಾರು? ತನ್ನ 'ಅಮ್ಮ'ನು ಹೇಳಿದ 'ನಾನು ನಿನ್ನ ತಾಯಿಯಲ್ಲ' ಎಂಬ ಮಾತುಗಳು ಆಕೆಯನ್ನು ಆಲೋಚನಾಪರಳಾಗಿಯೂ, ಚಿರದುಃಖಿನಿಯಾಗಿಯೂ ಮಾಡಿದ್ದವು. ಆಕೆಯ ಕಿವಿಗೆ ಆಗಾಗ್ಗ ಆ ಮಾತುಗಳು ಕೇಳಿಸುವಂತಿದ್ದವು.

ಆಕೆಯೇ ನನ್ನ ತಾಯಿಯಲ್ಲವಾದರೆ ನನ್ನ ಜನ್ಮದಾತೆ ಯಾರಿದ್ದಿರಬಹುದು? ಇದರ ವಿಷಯವನ್ನೇಕೆ ಆಕೆ ಇಷ್ಟರ ತನಕ ಗುಪ್ತವಾಗಿಟ್ಟಳು? ಇದರ ಮರ್ಮವೇನು? ಇದನ್ನು ತನಗಾರು ತಿಳಿಸಬಲ್ಲರು? ಈ ಪ್ರಶ್ನೆಗಳಿಗೆಲ್ಲಾ ಆಕೆ ಉತ್ತರ ಹುಡುಕಲಾರಂಭಿಸಿದಳು. ಎಷ್ಟು ಆಲೋಚಿಸಿದರೂ ಬಗೆಹರಿಯಲಿಲ್ಲ.

★

— ಗಳೂರಿನ ಒಂದು ದೊಡ್ಡ ಮನೆಯ ಹಿಂದಿನ ಉಪವನದಲ್ಲಿ ಹದಿನೆಂಟು ವರ್ಷಪ್ರಾಯದ ತರುಣಿಯೊಬ್ಬಳು ಕೆಂಪು ಕೆಳಲ್ಲಿ ಮುಗವನ್ನಿಟ್ಟುಕೊಂಡು ಆದನ್ನು ಆಗಾಗ್ಗೆ ನಗಿಸುತ್ತ, ಆಡಿಸುತ್ತಲಿದ್ದಳು. ಗಿಡಗಳಿಂದ ಹೂವನ್ನು ಕೊಯ್ಯುತ್ತಿದ್ದಂತೆ ಆಕೆ ಒಂದು ಗುಲಾಬಿ ಹೂವನ್ನು ತನ್ನ ಜಡೆಯಲ್ಲಿ ಮುಡಿದುಕೊಂಡಳು.

ಇಷ್ಟರಲ್ಲಿ ಸಾಧಾರಣ ಮೂವತ್ತೆಂಟು ನಲ್ವತ್ತು ವರ್ಷಪ್ರಾಯದ ಯುವಕನೊಬ್ಬನು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಮೆಲ್ಲನೆ ಆಕೆಯ ಹಿಂದೆ ಬಂದು ನಿಂತುಕೊಂಡನು. ಆಕೆಯ ಆ ಗುಲಾಬಿ ಪತ್ತಲ, ಮೇಘವರ್ಣದ ಕುಪ್ಪಸ ಮತ್ತು ಆಕೆಯ ನೀಳವಾದ ಆ ಜಡೆ ಇವುಗಳನ್ನು ಕಂಡು ಯುವಕನ ಮನಸ್ಸು ಚಲಿಸಿತು. ಆತನು ಆಕೆಯನ್ನು ಮತ್ತೂ ಮತ್ತೂ ನೋಡಿದನು. ಆತನ ದೃಷ್ಟಿಯಲ್ಲಿ ಕೆಟ್ಟ ಭಾವನೆಯಿದ್ದಿತು.

ಅನಂತರ ಮನಸ್ಸು ತಡೆಯಲಾರದಾಗಲು ಮೆಲ್ಲನೆ ಒಮ್ಮೆಲೇ 'ಸುಶೀಲಾ' ಎಂದು ಕೂಗಿದನು.

ಆತನಾಗ ಬೆನ್ನುಹಾಕಿ ನಿಂತಿದ್ದ ಆ ತರುಣಿಯು, ಹೂವನ್ನು ಕೊಯ್ಯುತ್ತಿದ್ದವಳು ಬೆಚ್ಚಿಬಿದ್ದು ಹಿಂತಿರುಗಿ ನೋಡಿದಳು. ಯುವಕನ ತನ್ನನ್ನೇ ದಿಟ್ಟಿಸುತ್ತಿರುವುದನ್ನು ಕಂಡು ಆಕೆಗೆ ಹೆದರಿಕೆಯಾಯಿತು.

ಸುಶೀಲೆ ತನ್ನ 'ಅಮ್ಮ'ನ ಸತ್ತನಂತರ ಬೆಂಗಳೂರಿಗೆ ಬಂದಳು. ಕಾಮಾಕ್ಷಮ್ಮನ ಮನೆಯಲ್ಲಿ ಮಗುವನ್ನಾಡಿಸುವವಳಾಗಿ ದಾದಿಯಾಗಿ ಇದ್ದಳು. ಅನಾಥೆಯಾಗಿದ್ದ ಕಾರಣ ಆಕೆಗೆ ಬೇರೆ ಯಾರೂ ಸಂಬಂಧಿಕರೆನಿಸುವವರಿರಲಿಲ್ಲ. ಆದುದರಿಂದ ಯಾರದೋ ಸಹಾಯದಿಂದ ಇಲ್ಲಿ ದಾದಿಯಾಗಿ ಬಂದು ಸೇರಿದಳು.

ಕಾಮಾಕ್ಷಮ್ಮನ ತಮ್ಮನ ಹೆಸರು ಸುಂದರ. ಸುಶೀಲೆಯು ತನ್ನ ಅಕ್ಕನ ಮಗುವನ್ನು ಎತ್ತಿಕೊಳ್ಳುವ ಕೆಲಸಕ್ಕೆ ಸೇರಿದಂದಿನಿಂದ ಆಕೆಯನ್ನು ಹೇಗಾದರೂ ತನ್ನ ಬಲೆಗೆ ಕೆಡವಬೇಕೆಂಬ ದುರಾಲೋಚನೆಯು ಆತನಲ್ಲಿ ಅಂಕುರಿಸಿದ್ದಿತು.

ಇಂದಾತನಿಗೆ ತಕ್ಕ ಸಮಯ ಸಿಕ್ಕಿತ್ತು. 'ಸುಶೀಲಾ, ಹೆದರಬೇಡ, ನಾನು ನಿನ್ನನ್ನು ಪ್ರೀತಿಸುತ್ತೇನೆ. ನಿನ್ನ ಕಾಲಿಗ ಬೀಳುತ್ತೇನೆ. ಈ ನಿನ್ನ ಸೇವಕನಿಗೆ ಪ್ರೇಮ ಭಿಕ್ಷೆ ನೀಡು.' ಎಂದು ಸುಂದರನು ಆಕೆಯ ಕೈ ಹಿಡಿಯಲು ಮುಂದರಿದನು.

ಸುಶೀಲೆಯು ಕೂಗಲು ಬಾಯಿ ತೆರೆದಳು. ಆದರೆ ತನ್ನ ಕೂಗು ಇನ್ನಷ್ಟು ಅನರ್ಥಕ್ಕೆ ಕಾರಣವಾಗುವುದೆಂದು ತಿಳಿದ ಸುಮ್ಮನಿದ್ದಳು. ಆಕೆಯು ಅವನನ್ನು ವಿನಯಪೂರ್ವಕ ಬೇಡಿಕೊಂಡಳು. 'ನಾನು ನಿನ್ನ ವೃತ್ತಿ ಸಮಾನಳಿರುವೆನು. ನನ್ನ ಮಾನಹಾನಿ ಮಾಡಬೇಡ. ನಿನಗೆ ದೇವರ ಒಳ್ಳೆಯದು ಮಾಡುವನು',

(ಆಚೆಯ ಪುಟವನ್ನು ನೋಡಿರಿ)

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

GONO KILLER

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು ಗೊನೊಕಿಲರ್ ಎಂಬ ಸೀಲು ನೋಡಿರಿ

ಎಲ್ಲಾ ತರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕಾರಿಯಾದ ಗುಣದ ಚಮತ್ಕಾರವನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಆವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಪದೇಪದೇಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ-ಕೊಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರ ರೋಗ ಮತ್ತು ರಕ್ತಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 8-0-0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer Dr. D. N. JASANI, (S.B.M.) Vithalbhai Patel Road, BOMABY 4.

Madras Agent: Appah & Co; China Bazar Madras.

ಪಾಕಿಸ್ತಾನದ ಕಾರಣವೇನು?

ಮತ್ಸರ ಬುದ್ಧಿಗೆ ಪ್ರೋತ್ಸಾಹವೇಕೆ?

ಟ್ರಿಬ್ಯೂನಿನಲ್ಲಿ ರಜಾ ಉಲ್ ಕರೀಮರ ಲೇಖನ.

ಪಾಕಿಸ್ತಾನದ ಮುಖಂಡರಾದ ಜಿನ್ನಾ

ಪ್ರತ್ಯೇಕ ಮತದಾನ ಪದ್ಧತಿಯನ್ನು ತೆಗೆದು ಹಾಕಿರಿ, ಅಲ್ಪಸಂಖ್ಯಾಕರ ಯಾವದೇ ಆದರೂ ರಾಷ್ಟ್ರೀಯ ಯೋಜನೆಯನ್ನು ಪ್ರೋತ್ಸಾಹಿಸುವದಿಲ್ಲವೆಂದು ಸ್ಪಷ್ಟವಾಗಿ ಹೇಳಿರಿ. ಆಗ ಮಾತ್ರ ಹಿಂದುಸ್ಥಾನದಲ್ಲಿ ಜಾತಿಜಾತಿಗಳೊಳಗೆ ಸಹಜವಾದ ಐಕ್ಯವು ಸ್ಥಾಪಿತವಾಗುವದು. ಆದ್ದರಿಂದ ಜಾತಿಯ ಐಕ್ಯವನ್ನು ಸ್ಥಾಪಿಸುವ ಉತ್ತರದಾಯಿತ್ವವು ಬ್ರಿಟಿಷರ ಮೇಲಿರುತ್ತದೆಯೇ ಹೊರತು, ಉತ್ತರದಾಯಿತ್ವ ಈ ದೇಶದ ಮೇಲೆ ಇರುವುದಿಲ್ಲ. ಯಾಕೆಂದರೆ ಜಾತಿಯ ಐಕ್ಯಕ್ಕೆ ಪ್ರತಿಕೂಲವಾದ ಪರಿಸ್ಥಿತಿಯನ್ನು ಇಲ್ಲಿ ಉಂಟುಮಾಡಿರುವವರು, ಬ್ರಿಟಿಷರು; ಅದಕ್ಕೆ ಅನುಕೂಲವಾದ ಪರಿಸ್ಥಿತಿಯನ್ನು ಇಲ್ಲಿ ಉಂಟುಮಾಡಬೇಕಾದವರೂ ಕೂಡ ಅವರೇ ಆಗಿದ್ದಾರೆ.

ಹೀಗೆಂದು ಟ್ರಿಬ್ಯೂನ್ ಪತ್ರಿಕೆಯಲ್ಲಿ ಶ್ರೀ. ರಜಾವುಲ್ ಖರೀಮರು ಒಂದು ಲೇಖನದಲ್ಲಿ ತಿಳಿಸುತ್ತಾರೆ. ಅವರು ಮತ್ತೆ ಹೀಗೆಂದು ಬರೆದಿರುವರು.

ಸಂಪೂರ್ಣ ಐಕ್ಯವು ಯಾವ ಕ್ಷೇತ್ರದಲ್ಲಿಯೂ, ಯಾವಾಗಲೂ ಸಾಧ್ಯವಲ್ಲ. ಯಾಕೆ? ಇಂಗ್ಲಾಂಡಿನಲ್ಲಿಯೇ ಇಂಥ ಸಂಪೂರ್ಣ ಐಕ್ಯವಿರುವದೇ? ಇಲ್ಲ! ಅಲ್ಲಿ ಸಂಪೂರ್ಣ ಐಕ್ಯವಿಲ್ಲವೆಂಬ ಮಾತಿನಿಂದ ಇಂಗ್ಲಾಂಡು ಸ್ವಾತಂತ್ರ್ಯಕ್ಕೆ ಅಯೋಗ್ಯವೆನ್ನಲಾಗುವದೇ? ಅದೂ ಇಲ್ಲ! ಮತಭೇದವು ಹೆಚ್ಚು ಕಡಿಮೆಯಾಗಿ ಯಾವಾಗಲೂ ಇರುವಂಥಾದ್ದೆ!

ಅತಿಶಯ ವಾತ್ಸಲ್ಯ

ಬ್ರಿಟಿಷ್ ಸರಕಾರವು ಮುಸಲ್ಮಾನರ ಮೇಲೆ ಮಾತ್ರ ಯಾಕೆ ಅತಿಶಯ ವಾತ್ಸಲ್ಯವನ್ನು ತೋರಿಸಬೇಕು? ಅದು ಏಕೆ ... [illegible] ... ವಲ್ಲವೆ? ಹಾಗಾಗಿಯೇ ಇರಬೇಕು. ಮುಸ್ಲಿಂ ಲೀಗಿನ ಅರಾಷ್ಟ್ರೀಯ ಬೇಡಿಕೆಗಳಿಗೆಲ್ಲಾ, ಬ್ರಿಟಿಷರ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲವೇ ಕಾರಣವಾಯಿತು. ಅಂಥ ಬೆಂಬಲವು ಒದಗಿಬರುವ ಯಾವ ಭರವಸೆಯೂ ಇರುತಿದ್ದಿಲ್ಲವಾದರೆ ಪಾಕಿಸ್ತಾನದ ಯೋಜನೆಯೇ ಮುಂದೆ ಬರುತಿದ್ದಿಲ್ಲ.

ಆದರೆ ಒಂದು ಸಮಯ ಕಾಂಗ್ರೆಸಿನ ಆಧಾರಸ್ತಂಭದಂತಿದ್ದ ಜಿನ್ನಾಸಾಹೇಬರು ಈಗ ದೇಶವನ್ನು ಒಡೆಯುವ ಪಾಕಿಸ್ತಾನ ಯೋಜನೆಯನ್ನು ಮುಂದಿಡಲು ಕಾರಣವೇನಾಯಿತು? ಕಾಂಗ್ರೆಸು ಮಂತ್ರಿಪದವಿಗಳನ್ನು ಸ್ವೀಕರಿಸಿದ್ದು, ಕಾಂಗ್ರೆಸ್ ಮಂತ್ರಿಮಂಡಲಗಳಲ್ಲಿ ಮುಸ್ಲಿಂ ಲೀಗದವರಿಗೆ ಪ್ರಾತಿನಿಧ್ಯ ಕೊಡದಿದ್ದುದು, ಮತ್ತೆ ಈ ಕಾಂಗ್ರೆಸ್ ಮಂತ್ರಿಮಂಡಲಗಳ ವಿರೋಧವಾಗಿ, ಮುಸ್ಲಿಂ ಲೀಗು ಮಾಡಿದ ಪ್ರಚಾರ, ಕಾಂಗ್ರೆಸ್ ಮಂತ್ರಿಮಂಡಲಗಳ ಅನ್ಯಾಯದ ವಿಚಾರಣೆಗೆ ರೋಯಲ್ ಕಮಿಶನು ಬೇಕೆಂದುದು, ವಿಮೋಚನ ದಿನವನ್ನು ಆಚರಿಸಿದುದು, ಕಾಂಗ್ರೆಸ್ ಧುರೀಣರ ಕೀರ್ತಿಮುಖದ ಮೇಲೆ ಕೆಸರೆರಚುವ ಪ್ರಯತ್ನ ಮಾಡಿದುದು, ಇವೆಲ್ಲಾ ಸಂಗತಿಗಳನ್ನು ಆಲೋಚಿಸಿದರೆ ಜಿನ್ನರ ಧೋರಣೆಗೆ ಉತ್ತರವು ದೊರೆಯುತ್ತದೆ.

ಮತ್ಸರವು ಕಾರಣವಾಯಿತು

ಕಾಂಗ್ರೆಸ್ ಮಂತ್ರಿಮಂಡಲಗಳ ಸೃಷ್ಟನೆಯಲ್ಲಿ ಜಿನ್ನರಿಗೂ ಒಂದು ಕೈಕಾಲು ಬರುತಿದ್ದುದಾದರೆ ಅವರು ಪಾಕಿಸ್ತಾನದ ಕನಸನ್ನು ಕಾಣುತ್ತಲೇ ಇರಲಿಲ್ಲ. ಈ ಪಾಕಿಸ್ತಾನ ಯೋಜನೆಯು ಆದಿಯಿಂದ ಅಂತ್ಯದ ತನಕ ದೇಶವನ್ನು ಚಿರಕಾಲ ಗುಲಾಮತನದಲ್ಲಿ ಬಂಧಿಸಿ ಇಡುವಂಥಾದಾಗಿದೆ. ಆದ್ದರಿಂದ ಎಷ್ಟು ಬೇಗ ಅದನ್ನು ಮಣ್ಣುಗೂಡಿಸಲಾಗುತ್ತದೆಯೋ ಅಷ್ಟಕ್ಕೆ ಅದರಿಂದ ದೇಶಕ್ಕೆ ಹಿತವಾಗುವದು.

ಪ್ರತಿಕಾರ ಮತ್ತು ದ್ವೇಶಮತ್ಸರಗಳಿಂದ ಪ್ರೇರಿತರಾಗಿಯೇ ಜಿನ್ನರು ಈ ಪಾಕಿಸ್ತಾನಕ್ಕಾಗಿ ಹಠತೊಟ್ಟಿದ್ದಾರೆ. ರಾಷ್ಟ್ರಪ್ರೇಮದಿಂದ ಅವರು ಇದನ್ನು ಮುಂದೆ ತಂದಿರುವರಲ್ಲ. ಪಾಕಿಸ್ತಾನವು ಮಣ್ಣುಪಾಲಾಗಲಿ, ಮತ್ತು ಹಿಂದುಸ್ಥಾನವು ಒಂದಾಗಿ, ಐಕ್ಯವಾಗಿ, ಸಂಘಟಿತವಾಗಿ ಇರಲಿ. ಇದೇ ಹಿಂದು ಮುಸಲ್ಮಾನರ ಒಂದು ಜೀವನ ಧ್ಯೇಯವಾಗಿರಬೇಕು.

ಟೆಕ್ಸ್ಟ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ವಿದ್ವಾನ್ ಶ್ರೀ ಕೆ. ಕೆ. ರೈ, ವಿರಚಿತ

ವ್ಯಾಕರಣ ಮತ್ತು ಪ್ರಬಂಧ

೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ
೦-೩-೦ ೦-೩-೬ ೦-೪-೦

ಶ್ರೀ ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ. ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೭ನೆಯ ತರಗತಿಗೆ, ೦-೬-೦ ೭ನೆಯ ತರಗತಿಗೆ, ೦-೬-೦

ಹೊಸ ಪುಸ್ತಕಗಳು

ಪ್ರಾಥಮಿಕ ಲಘುವಿಜ್ಞಾನ (ಶ್ರೀ ಎಸ್. ರಾಮಕೃಷ್ಣಾಚಾರ್) ... ೮ನೆಯ ತರಗತಿಗೆ ೦-೬-೦

ವ್ಯಾಕರಣ ಮತ್ತು ಪ್ರಬಂಧ (ಶ್ರೀ ಕೆ.ಕೆ. ರೈ) ೪ ಮತ್ತು ೫ನೆಯ ತರಗತಿಗಳಿಗಾಗಿ

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಹಬ್ಬ!

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ವಿದ್ವಾನ್, ಇವರಿಂದ ರಚಿತವಾದ,

ಮಕ್ಕಳ ಪದ್ಯಮಂಜರಿ

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ
೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ

ಎರಡನೆಯ ಪುಸ್ತಕ
೪ನೆಯ ಐದನೆಯ ತರಗತಿಗಳ ಬಾಲಕರಿಗಾಗಿ

ದೊರಕುವ ಸ್ಥಳ **ಶಾರದಾ ಛಾಪಖಾನೆ ಮಂಗಳೂರು.**

THE

BANK OF MANGALORE LTD.,

MANGALORE.

ESTD. 1931

Branches:-

Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Savings Bank deposit* 3½% *on daily balances.

All kinds of banking business transacted

ಮಾರಾಟಕ್ಕೆ ಸಿದ್ಧವಾಗಿದೆ

1941ನೆ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್	೦-೫-೦
(ಪೋಕೆಟ್ ಇದ್ದದಕ್ಕೆ) ...	೦-೬-೦
ದೊಡ್ಡ ಸೈಜ್ ...	೦-೯-೦
(ಪೋಕೆಟ್ ಇದ್ದದಕ್ಕೆ) ...	೦-೧೧-೦

ಶಾರದಾ ಛಾಪಖಾನೆ, ಮಂಗಳೂರು.

ಜಿಲ್ಲಾ ಸಮಾಚಾರ

ಜಿಲ್ಲೆಯ ಮೊದಲನೆಯ ಸತ್ಯಾಗ್ರಹಿ

ಶ್ರೀ ಕೆ. ಈಶ್ವರ, ಎಂ. ಎಲ್. ಎ. ೬ ತಿಂಗಳ ಶಿಕ್ಷೆ

ಮದ್ರಾಸು ಶಾಸನ ಸಭೆಯ ಸದಸ್ಯರೂ, ಜಿಲ್ಲೆಯ ಹರಿಜನ ಮುಂದಾಳುಗಳೂ ಆದ ಶ್ರೀ ಈಶ್ವರ, ಎಂ.ಎಲ್.ಎ., ಇವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೊದಲನೆ ಸತ್ಯಾಗ್ರಹಿಯಾಗಿ, ಮತ್ತು ಪ್ರಾಂತ್ಯದಲ್ಲಿಯೇ ಮೊದಲನೆ ಹರಿಜನಸತ್ಯಾಗ್ರಹಿಯಾಗಿ ತಾ. ೨ರಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ತಿಳಿಸಿದಂತೆ, ತಾ. ೪ರಂದು ಸಂಜೆ ೪॥ ಘಂಟೆಗೆ ಮಂಗಳೂರು ತೇರುಬೀದಿಯ ವೆಂಕಟರಮಣ ದೇವಸ್ಥಾನದ ಎದುರುಗಡೆಯಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಶ್ರೀ ಈಶ್ವರನವರು ಬರುವುದಕ್ಕಿಂತ ಮೊದಲೇ ಒಬ್ಬನಾ ತಾಸಿಗೆ ಮುಂಚಿತವಾಗಿ ತೇರು ಬೀದಿಯಲ್ಲಿ ಸಾವಿರಾರು ಮಂದಿ ಕಾಂಗ್ರೆಸ್ ಕೆಲಸಗಾರರು ಪುರಪ್ರಮುಖರು ಕಾಂಗ್ರೆಸ್ ಧುರೀಣರು, ಪತ್ರಿಕಾ ಪ್ರತಿನಿಧಿಗಳು, ಕೂಲಿಕಾರರು, ಮತ್ತು ಅನೇಕ ಮಹಿಳೆಯರೂ, ಮಹನೀಯರೂ ಕಿಕ್ಕಿರಿದು ನೆರೆದಿದ್ದರು. ಜನರ ಗುಂಪು ಬಹಳ ಉತ್ಸುಕತೆಯಿಂದಲೂ ಶಿಸ್ತಿನಿಂದಲೂ ಸತ್ಯಾಗ್ರಹಾರಂಭವನ್ನು ನಿರೀಕ್ಷಿಸುತ್ತಿತ್ತು. ಮೂರು ವಾಹನಗಳಲ್ಲಿ ಪೋಲೀಸರೂ ಬಂದಿದ್ದರು. ೪॥ ಗಂಟೆಗೆ ಸರಿಯಾಗಿ ಶ್ರೀ ಕೆ. ಈಶ್ವರ, ಇನ್ನಿತರ ಕಾಂಗ್ರೆಸ್ ಮುಂದಾಳುಗಳೊಡನೆ ಕಾರಿನಲ್ಲಿ ನಿಶ್ಚಿತ ಸ್ಥಳಕ್ಕೆ ಬಂದು ತಲುಪಿದರು. ಸತ್ಯಾಗ್ರಹಿಯನ್ನು ನೋಡುವ ಉತ್ಸಾಹದಿಂದ ಒಮ್ಮೆ ಗಲಭೆಯುಂಟಾಗಿದ್ದರೂ, ಶ್ರೀ ಈಶ್ವರನವರ ಹೇಳಿಕೆಯಂತೆ ಸರ್ವರೂ ಶಾಂತರಾದರು. ಅವರಿಗೆ ಜಿಲ್ಲಾ ಕಾಂ॥ ಕಮಿಟಿ ಪ್ರೆಸಿಡೆಂಟರಾದ ಶ್ರೀ ಶ್ರೀನಿವಾಸ ಮಲ್ಯರು, ಮತ್ತು ಮುಜೂರ ಮುಖಂಡರಾದ ಶ್ರೀ ಎಸ್. ಎನ್. ಹೊಳ್ಳರೂ ಮತ್ತು ನಗರದ ಹಲವು ಸಂಸ್ಥೆಗಳ ಪರವಾಗಿ ಅವುಗಳ ಪ್ರತಿನಿಧಿಗಳು ಹೂವಮಾಲೆಗಳನ್ನರ್ಪಿಸಿದರು. ನಿರಂತರವಾಗಿ ಹೂಮಾಲೆಗಳನ್ನು ಹಾಕುವ ಜನರ ಉತ್ಸಾಹವು ಹೆಚ್ಚುತ್ತಿರಲು, ಶ್ರೀ ಈಶ್ವರನವರನ್ನು ಗುಂಪಿನಿಂದ ಮೇಲೆ ಎಲ್ಲರಿಗೂ ಕಾಣಿಸುವಂತೆ ಕೆಲವರು ಮೇಲೆ ಎತ್ತಿ ಅವರನ್ನು ಕಾರಿನ ಮೇಲೆ ನಿಲ್ಲಿಸಿದರು. ಅಲ್ಲಿಗೂ ಹೂಮಾಲೆಗಳು ಬೀಳುತ್ತಿದ್ದವು. ಮೇಲೆ ಎತ್ತರದಲ್ಲಿ ಮಾಳಿಗೆಗಳಿಂದಲೂ ಜನರು ಹೂವಿನಮಳೆ ಸುರಿಸುತ್ತಿದ್ದರು.

ಆ ಮೇಲೆ ಶ್ರೀ ಈಶ್ವರ, ಇವರು ಯುದ್ಧವಿರುದ್ಧ ಘೋಷಣೆಯನ್ನು ಕನ್ನಡದಲ್ಲಿ ಓದಿ ಹೇಳಿದರು. ಮೂರನೆಯ ಸಲ ಘೋಷಣೆ ಮಾಡುವಾಗ ಪೋಲೀಸ್ ಅಧಿಕಾರಿಗಳು ಬಂಧಿಸಿರುವುದಾಗಿ ಹೇಳಿದರು. ಶ್ರೀ ಈಶ್ವರ ಇವರು ನಮ್ರತೆಯಿಂದ ಪೋಲೀಸರಿಗೆ ತಮ್ಮನ್ನು ಒಪ್ಪಿಸಿಕೊಂಡರು. ಜನರು ಪ್ರಚಂಡ ಜಯಘೋಷದಿಂದ ಸತ್ಯಾಗ್ರಹದ ಪ್ರಥಮ ಸೇನಾನಿಯನ್ನು ಬೀಳ್ಕೊಟ್ಟರು. ಅಲ್ಲಿಂದ ಅವರನ್ನು ಪೋಲೀಸು ಅಧಿಕಾರಿಗಳು ಬಂಧ್ಧ ಕಾರಿನಲ್ಲಿ ಕುಳ್ಳಿರಿಸಿ ಮಂಗಳೂರು [illegible] ಒಯ್ದರು. ಅದೇ ದಿನ ಸಂಜೆಗೆ [illegible]ಲಿನಲ್ಲಿ ವಿಚಾರಣೆ ನಡೆದು ಶ್ರೀ ಈಶ್ವರ ಇವರಿಗೆ ಆರು ತಿಂಗಳ ಸಾದಾ [illegible] ಕೊಡಲಾಯಿತು. ಅವರನ್ನು [illegible] [illegible]ನಲ್ಲಿ ಇರಿಸಲಾಗಿದೆ [illegible]

ಶ್ರೀ. ಈಶ್ವರ ಎಂ. ಎಲ್. ಎ. ಯವರಿಗೆ ಸತ್ಕಾರ ಕೂಟ

ಸತ್ಯಾಗ್ರಹ ಹೂಡುವ ಶ್ರೀ. ಕೆ. ಈಶ್ವರ ಎಂ. ಎಲ್. ಎ. ಇವರಿಗೆ ಸತ್ಕಾರಕೂಟವೊಂದು ತಾ. ೩ರಂದು ಫೆಲಿಕ್ಸ್ ಬಜಾರಿನಲ್ಲಿ ವಿದ್ಯಾರ್ಥಿ ಸಂಘ, ಪತ್ರಿಕೋದ್ಯಮಿಗಳ ಸಂಘ, ಕೆಲಸಗಾರರ ಹಲವು ಸಂಘಗಳ ಆಶ್ರಯದಲ್ಲಿ ಬಹಳ ವಿಜೃಂಭಣೆಯಿಂದ ಏರ್ಪಟ್ಟಿತು. ಶ್ರೀ. ಕೆ. ಈಶ್ವರ ಇವರ ದೇಶಾಭಿಮಾನ ಸ್ವಾರ್ಥತ್ಯಾಗಗಳನ್ನು ಪ್ರಶಂಸಿಸಿ ಶ್ರೀಗಳಾದ ಎಸ್. ಎನ್. ಹೊಳ್ಳ, ಡಾ॥ ಎಫ್. ಎಚ್. ಒಡೆಯರ್ ಮತ್ತು ಇತರ ಹಲವು ಮಹನೀಯರು ಮಾತನಾಡಿದರು. ಶ್ರೀ. ಕೆ. ಈಶ್ವರ ಇವರು ತಾನು ತನ್ನ ಕರ್ತವ್ಯವನ್ನು ಮಹಾತ್ಮರ ಅಪ್ಪಣೆಯಾದಂತೆ ಪೂರೈಸುತ್ತೇನೆಂದೂ, ನೀವು ತೋರಿಸಿದ ಈ ಪ್ರೇಮ ಸತ್ಕಾರಕ್ಕೆ ಕೃತಜ್ಞನಾಗಿದ್ದೇನೆಂದೂ ಹೇಳಿದರು.

ಸತ್ಯಾಗ್ರಹಿಗಳ ಸಭೆ:– ಕಳೆದ ಆದಿತ್ಯವಾರ ಜಿಲ್ಲೆಯ ಸತ್ಯಾಗ್ರಹಿಗಳ ಸಭೆಯೊಂದು ಮಂಗಳೂರು ಕಾಂಗ್ರೆಸ ಕಚೇರಿಯಲ್ಲಿ ಶ್ರೀ. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿತು. ಪ್ರಾರಂಭದಲ್ಲಿ ಗಾಂಧಿಜಿಯವರಿಂದ ಹಾಗೂ ಪ್ರಾಂತಿಕ ಕಾಂಗ್ರೆಸ್ ಕಚೇರಿಗಳಿಂದ ಬಂದ ಸಲಹೆ ಸೂಚನೆಗಳನ್ನು ಓದಲಾಯಿತು. ಜಿಲ್ಲೆಯಿಂದ ಮೊದಲಾಗಿ ಶ್ರೀಗಳಾದ ಕೆ. ಈಶ್ವರ ಎಂ. ಎಲ್. ಎ., ಶ್ರೀನಿವಾಸ ಮಲ್ಯ ಎ. ಪಿ. ಸಿ. ಸಿ. ಸದಸ್ಯರು, ವೆಂಕಟ್ರಾಯ ಬಾಳಿಗ ಎಂ ಎಲ್ ಎ. ಇವರು ಸತ್ಯಾಗ್ರಹ ಪ್ರಾರಂಭಿಸುವುದಾಗಿ ಚುನಾಯಿತರಾಗಿರುವರೆಂದು ತಿಳಿಸಲಾಯಿತು. ಇನ್ನು ಮುಂದಿನ ಪಟ್ಟಿಯಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರಿಂದ ಹಿಡಿದು ಗ್ರಾಮ ಕಾಂಗ್ರೆಸ್ ಕಮಿಟಿಯ ಸದಸ್ಯರ ವರೆಗಿನ ಚುನಾಯಿತ ಕಾಂಗ್ರೆಸ್ ಸದಸ್ಯರು ಸತ್ಯಾಗ್ರಹಿಗಳಾಗಿ ಚುನಾಯಿತರಾಗಲಿರುವರೆಂದು ಗಾಂಧಿಜಿಯವರ ಸೂಚನೆಯನ್ನೂ ತಿಳಿಸಲಾಯಿತು. ಇನ್ನು ಮುಂದೆ ಸತ್ಯಾಗ್ರಹ ಪ್ರತಿಜ್ಞೆಯು ಬೇರೆಯ ಕ್ರಮದಲ್ಲಿ ಆಗಬೇಕಾಗಿದೆಯೆಂದೂ ಅದರಲ್ಲಿ ಆರೋಗ್ಯ ವ್ಯಾಪ್ತಿ, ಸ್ಥಿತಿಗತಿ, ಸ್ಥಾನ, ಪ್ರಾತಿನಿಧ್ಯಗಳ ವಿವರ ಕೊಡಲಿರುವುದರಿಂದ ಹಿಂದೆ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಿದವರೂ, ಇನ್ನು ಮುಂದೆ ಸಹಿಹಾಕುವವರೂ ಈ ಹೊಸ ಪ್ರತಿಜ್ಞಾ ಪತ್ರದಲ್ಲಿ ಸಹಿಹಾಕಬೇಕೆಂದೂ ವಿವರಿಸಲಾಯಿತು.

ದಿ. ಶಿವಾಜಿ ಗ್ರೇಂಡ್ ಸರ್ಕಸ್:– ಇದೇ ಆದಿತ್ಯವಾರ ತಾರೀಕು ೮-೧೨-೪೦ನೇ ಸಂಜೆ ೬ ಗಂಟೆಗೆ ಸರಿಯಾಗಿ ನಮ್ಮ ಜಿಲ್ಲೆಯವರಾದ ಪ್ರಕೃತ ಮುಂಬಯಿಯಲ್ಲಿರುವ ಸೇಂಡೋ ಎನ್. ಶೇಷಪ್ಪನವರ ಪಟ್ಟ ಶಿಷ್ಯರಾದ ಪ್ರೊ॥ ಎ. ಕೆ. ಸಾಲಿಯಾನ್ ಮತ್ತು ಇವರ ವಿದ್ಯಾರ್ಥಿಗಳು, ದಿ. ಶಿವಾಜಿ ಫಿಜಿಕಲ್ ಇನ್ಸ್ಟಿಟ್ಯೂಟಿನ ಪರವಾಗಿ ತಮ್ಮ ಆತ್ಮಯೋಘ[illegible] ಅಂಗಸಾಧನೆಯ ಆಟಗಳನ್ನು ಮಿ. ಡಿ. [illegible] ಅಧ್ಯಕ್ಷತೆಯಲ್ಲಿ ಜರಿ ತೋರಿಸುವರು.

ಸಂಗೀತ– [illegible] ಬಾಧ್ಯರ [illegible] ಅಧ್ಯಕ್ಷತೆಯಲ್ಲಿ [illegible]

ರಾತ್ರಿ ಗಂಟೆ ೯ಕ್ಕೆ ಬೆಂಗಳೂರು ರೇಡಿಯೋ ಗಾಯಕರಾದ ಶ್ರೀ. ಶಂಕರ ರಾವ್ ಸೋದೆಕರರ ಸುಶ್ರಾವ್ಯ ಸಂಗೀತ ಕಚೇರಿಯು ಶ್ರೀ. ಸಿ. ವಿ. ನಾಯಕರ 'ರಂಗಮಹಾಲ'ನಲ್ಲಿ ಜರಗಿತು. ಶ್ರೀ. ಎಮ್ ವಾಸುದೇವ ಪ್ರಭುಗಳು ಶ್ರೀ. ಸೋದೆಕರರಿಗೆ ಒಂದು ಕಪ್ಪನ್ನಿತ್ತು ಸತ್ಕರಿಸಿದರು.

ಶ್ರೀ॥ ಕೆ. ಆರ್. ಕಾರಂತರ 'ಸತ್ಯಾಗ್ರಹ

ಮದ್ರಾಸು ಎಸೆಂಬ್ಲಿ ಸದಸ್ಯರೂ, ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರೂ ಆದ ಶ್ರೀ ಕೆ. ಆರ್ ಕಾರಂತರು ತಾ. ೧೫ರೊಳಗೆ ಸತ್ಯಾಗ್ರಹ ಹೂಡಲಿರುವರಾಗಿ ತಿಳಿದಿದೆ.

ಶ್ರೀ॥ ಯು. ಶ್ರೀನಿವಾಸ ಮಲ್ಯ ಮತ್ತು ಶ್ರೀ॥ ಬಿ. ವೆಂಕಟ್ರಾವ್ ಬಾಳಿಗ, ಇವರ ಸತ್ಯಾಗ್ರಹ

ಶ್ರೀ ಯು. ಶ್ರೀನಿವಾಸ ಮಲ್ಯ, ಅಧ್ಯಕ್ಷ, ಜಿಲ್ಲಾ ಕಾಂಗ್ರೆಸ್ ಕಮಿಟಿ, ಉಪಾಧ್ಯಕ್ಷ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಮತ್ತು ಶ್ರೀ ಬಿ. ವೆಂಕಟ್ರಾವ್ ಬಾಳಿಗ, ಅಡ್ವೋಕೇಟ್, ಎಂ. ಎಲ್. ಎ., ಮಂಗಳೂರು ಮುನಿಸಿಪಲ್ ಚೆಯರ್ಮ್ಯಾನ್ ಇವರು ಇದೇ ತಾ. ೭ನೇ ಶನಿವಾರ ಸತ್ಯಾಗ್ರಹ ಹೂಡುವರಾಗಿ ತಿಳಿದುಬರುತ್ತದೆ.

ಶ್ರೀ ಯು. ಶ್ರೀನಿವಾಸ ಮಲ್ಯರು ಶನಿವಾರ ಬೆಳಿಗ್ಗೆ ಸುಮಾರು ೮—೩೦ಕ್ಕೆ ಬಂಟವಾಳದಲ್ಲಿಯೂ ಶ್ರೀ ಬಿ. ವೆಂಕಟ್ರಾವ್ ಬಾಳಿಗ, ಇವರು ಅದೇ ದಿನ ಪೂರ್ವಾಹ್ನ ೧೧ಕ್ಕೆ ಮಂಗಳೂರಲ್ಲಿ ಮುನಿಸಿಪಲ್ ಆಫೀಸಿನ ಬಳಿಯಲ್ಲಿಯೂ ಯುದ್ಧವಿರೋಧ ಘೋಷಗಳ ಮೂಲಕ ಸತ್ಯಾಗ್ರಹ ಹೂಡುವರೆಂದು ತಿಳಿದಿದೆ.

ದಿವಂಗತ ದಿ॥ ಬ॥ ಮಹಾಬಲ ಹೆಗ್ಗಡೆಯವರು: ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರು ಕಳೆದ ಸೋಮವಾರ ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ದಿವಂಗತರು ಮಂಗಳೂರು ಮುನಿಸಿಪಾಲಿಟಿ ಚ್ಯಾರ್ಮೇನರೂ, ಜಿಲ್ಲಾ ಬೋರ್ಡು ಪ್ರೆಸಿಡೆಂಟರೂ ಮದ್ರಾಸು ನ್ಯಾಯವಿಧಾಯಕ ಸಭಾ ಸದಸ್ಯರೂ, ಆಫೀಶಿಯಲ್ ರಿಸೀವರರೂ, ಪಬ್ಲಿಕ್ ಪ್ರೊಸಿಕ್ಯೂಟರರೂ ಆಗಿ ಬಹು ಮುಖದಿಂದ ಜನಸೇವೆ ಮಾಡಿ ಜನರ ಮೆಚ್ಚುಗೆ ಸರಕಾರದ ಗೌರವಗಳಿಗೆ ಪಾತ್ರರಾದವರು.

ಇವರು ಬಂಟ ಸಮಾಜದ ಒಬ್ಬ ಪ್ರತಿಷ್ಠಿತ ವ್ಯಕ್ತಿಗಳು. ಪರಮಾತ್ಮನು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

ಮೆಡಿಕಲ್ ಎಸೋಸಿಯೆಶನ್:– ಇದರ ಹತ್ತನೆಯ ವಾರ್ಷಿಕೋತ್ಸವವು ತಾ. ೩ರಲ್ಲಿ ಕೆಪ್ಟನ್ ದಬ್ಬು, ಇ. ಮಸ್ಕರೇಂಞಸರ ಅಧ್ಯಕ್ಷತೆಯಲ್ಲಿ ಜರಗಿತು.

ಪೆರಡಾಲ

ಹಳೆಯ ವಿದ್ಯಾರ್ಥಿ ಸಂಘ:— ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಕಮಿಟಿಯು [illegible] ಶ್ರೀ [illegible] ವಾರದಲ್ಲಿ ಜರಗಿಸಬೇಕಾಗಿಯೂ, ಆ ಸಮಯ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿದ್ದ ದಿವಂಗತ ಸ್ವ. ಶಂಕರ ಶಾಸ್ತ್ರಿಗಳ "ಶಿಲಾನಾವೇಲ್ಲೇಖನ"ವನ್ನು ಜರಗಿಸಬೇಕಾಗಿಯೂ, ಆ ದಿನದ ಅಧ್ಯಕ್ಷತೆ ಹಾಗೂ "ಶಿಲಾನಾವೇಲ್ಲೇಖನ"ದ ಅನಾವರಣೋತ್ಸವಗಳಿಗೆ ಪುತ್ತೂರು ಹೈಸ್ಕೂಲಿನ ಪಂಡಿತರಾದ ಮಹೋಪಾಧ್ಯಾಯ ಶ್ರೀ॥ ಕೆ. ಪರಮೇಶ್ವರ ಶಾಸ್ತ್ರಿಗಳನ್ನು ಕೇಳಿಕೊಳ್ಳಬೇಕಾಗಿಯೂ ನಿರ್ಣಯಿಸಲಾಗಿದೆ.

೨೪-೧೧-೪೦ರಲ್ಲಿ ಕಾಸರಗೋಡಿನಲ್ಲಿ ಯುದ್ಧ ಸಮಿತಿಯವರ ಸೋಡ್ತಿಯಲ್ಲಿ ಗೆದ್ದ ಟಿಕೆಟ್ ನಂಬ್ರ:— ೬೭೨೦, ೮೩೨೪, ೧೨೧೩೫, ೪೩೦೨, ೪೪೦೫, ೨೧೪೮, ೧೨೪೬, ೪೩೩೬, ೧೯೨೮ ೮೯೫, ೧೦೪೫೩, ೬೯೫೫, ೨೪೧೭, ೯೭೦ ೨, ೪೦೯೩, ೫೮೬೮, ೩೩೫, ೩೧೫೩, ೧೧, ೪೯೪, ೮೦೮೩, ೧೬೨೧, ೨೫೪೬, ೬೧೩೮, ೧೧೦೮೬, ೨೧೦೫, ೧೯೫೩, ೧೧೪೬೬, ೫೮೪, ೧೪೯೮೬, ೨೫೪, ೪೦೧, [illegible]

NOTICE

The undersigned will sell by public auction the tile factory belonging to Mr. P. F. B. Albuquerque and particularised herebelow on Sunday the 15th of December 1940 at 10 A. M. in the Catholic Bank premises, Hampankatta, Mangalore. The upset price is fixed at Rs. 20,000/-. The successful bidder will deposit immediately after the sale 25% of the purchase money and the balance within 15 days thereafter failing which he will not only forfeit his deposit but will also be liable for damages resulting from a resale. The under-signed will execute the sale deed at the cost of the Purchaser.

If however there is an offer for the property not less than Rs. 30,000/- before the date above, the undersigned will sell the property by private sale.

Description of property

Property situated in Manglore Thota village, Hoige Bazaar Ward, in the town of Mangalore and comprised in S. No. 186/B—2 acres 20 cents in extent and S. F. No. 187 —4 cents in extent and 47 cents of land reclaimed from the Netravati River. The property consists of a tile factory with machinery Presses, frames etc. and also lime kilns office building, store rooms, sheds for storing tiles etc. The good will and trade marks of P. Albuquerque & Sons are also included.

Sd/- F. P. S. Albuquerque
" M. S. Pais
" L. C. Pais.
Trustees of the estate of P. F. B. Albuquerque & others
Mangalore, 21-11-1940.

ಇಟಲಿಯನರು ಪಲಾಯನ ಮಾಡುತ್ತಾರೆ!



ಗ್ರೀಕರ ಪ್ರಚಂಡ ಸಾಹಸದ ಯುದ್ಧ!

ಜರ್ಮನ್ ವಿಮಾನಗಳಿಂದ ಹಾವಳಿ!

ಅಮೇರಿಕವು ಸಾಲ ಕೊಡುವುದಿಲ್ಲ

ಬ್ರಿಟಿಷರು ನಿರಾಶರಾಗಬೇಕಾಗಿಲ್ಲ

ಯುರೋಪಿನಲ್ಲಿ ಯುದ್ಧ ನಡೆಯುತ್ತಾ ಇದ್ದರೂ ಕಳೆದವಾರ ಅಷ್ಟೊಂದು ಪ್ರಚಂಡವಾಗಿಲ್ಲ. ಲಂಡನಿನ ಮೇಲೆ ಧಾಳಿಯಾಗಿದೆ. ಅಟ್ಲಾಂಟಿಕ್ ಸಾಗರದಲ್ಲಿಯೂ ಜರ್ಮನರು ಹಾವಳಿಮಾಡುತ್ತಿದ್ದಾರೆ. ಆದರೆ ಬ್ರಿಟಿಷರು ನಿರಾಶರಾಗಬೇಕಾಗಿಲ್ಲವೆಂದು ಕೆನಡಾದ ಮಂತ್ರಿಗಳು ಧೈರ್ಯ ಹೇಳುತ್ತಾ ಇದ್ದಾರೆ. ಗ್ರೀಕರಂತೂ ಅತುಲ ಸಾಹಸದಿಂದ ಕಾದಾಡಿ ಇಟಲಿಯನ್ ಸೈನಿಕರನ್ನು ಹಿಂದಟ್ಟುತ್ತಾ ಇದ್ದಾರೆ—

ಗ್ರೀಕರ ಮುನ್ನಡೆ—

ಇಟಲಿಯನರ ಕಾದಾಟ

ಗ್ರೀಕ್ ಸೇನೆಗಳು ರಣಭೂಮಿಯಲ್ಲಿ ಮುಂದುವರಿಯುತ್ತಲೇ ಇರುವವು. ಇಟಲಿಯನರ ಹೊಸ ಸೈನ್ಯವೊಂದು ಗ್ರೀಕರ ಮೇಲೆ ಬಂದು ಮುತ್ತಿದೆ.

ಲಂಡನಿಗೆ ವಿಮಾನದಾಳಿ

ಜರ್ಮನ್ ವಿಮಾನಗಳು ಲಂಡನಿನ ಮೇಲೆ ಈ ವಾರವೂ ವಿಮಾನದಾಳಿ ಮಾಡಿದವು.

ರುಮೇನಿಯದಲ್ಲಿ ಕೋಲಾಹಲ

ಮಹಾರಾಣಿಯ ಪಲಾಯನ

ರುಮೇನಿಯದ ಅಯರ್ನ್ ಗಾರ್ಡರು ರಾಜಕೀಯ ಹತ್ಯಾಕಾಂಡಕ್ಕೆ ಆರಂಭಿಸಿರುವರು. ಅಲ್ಲಿನ ಮಂತ್ರಿಗಳನೇಕರನ್ನೇ ಕೊಂದಿರುವರು. ಇದರಿಂದ ದೊಡ್ಡ ಕೋಲಾಹಲವುಂಟಾಗಿದೆ. ರುಮೇನಿಯದ ಈ ಅವಸ್ಥೆಯಿಂದಾಗಿ ಅಲ್ಲಿನ ಮಹಾರಾಣಿ ಹೆಲೆನಳು ಪಲಾಯನ ಮಾಡಿರುವಳು.

ಭೂಮಧ್ಯ ಸಮುದ್ರದಲ್ಲಿ ಯುದ್ಧ

ಬ್ರಿಟಿಷ್ ಮತ್ತು ಇಟಲಿ ನೌಕಾಪಡೆಗಳೊಳಗೆ ಭೂಮಧ್ಯ ಸಮುದ್ರದಲ್ಲಿ ಯುದ್ಧ ನಡೆಯಿತು. ಕೆಲವು ಹಡಗ ಡಿಸ್ಟ್ರಾಯರ್ ಕ್ರೂಯಿಜರುಗಳು ಮುಳುಗಿಸಲ್ಪಟ್ಟಿವೆ.

ಬಲ್ಗೇರಿಯದ ನಿರ್ಧಾರ

ಬಲ್ಗೇರಿಯ ಜರ್ಮನ್ ಇಟಲಿ ರಾಷ್ಟ್ರ ಸಂಗಡಗಳಿಂದ ಹೊರಗೆ ನಿಲ್ಲಲು ನಿಶ್ಚಯಿಸಿದೆ. ಇದರಿಂದ ಬ್ರಿಟನಿಗೆ ಸಂತೋಷವಾಗಿದೆ.

ಬ್ರಿಟನಿಗೆ ಧನಸಹಾಯವಿಲ್ಲ

ಅಮೇರಿಕದ ಹೇಳಿಕೆ

ಅಮೇರಿಕದ ಸೆನೆಟ್ ಕಮಿಟಿಯವರು ಬ್ರಿಟನಿಗೆ ಧನ ಸಹಾಯ ಸಾಲ ಕೊಡುವ ವಿಷಯ ಜನವರಿ ವರೆಗೆ ಏನೂ ತೀರ್ಮಾನವಾಗುವುದಿಲ್ಲವೆಂದರು.

ಸತ್ಯಾಗ್ರಹ ಆಂದೋಲನವು ಮತ್ತಷ್ಟು ತೀವ್ರವಾಗಿದೆ. ಸಾವಿರಾರು ಮಂದಿ ರಾಷ್ಟ್ರ ಧುರೀಣರು ಸೆರೆಮನೆಗಳಲ್ಲಿ ಬಂಧಿತರಾಗಿದ್ದಾರೆ. ಮದರಾಸು ಪ್ರಾಂತ್ಯದಲ್ಲಿ ಕರ್ನಾಟಕದಲ್ಲಿ, ದಕ್ಷಿಣಕನ್ನಡದಲ್ಲಿಯೂ ಸತ್ಯಾಗ್ರಹ ಆಂದೋಲನವು ಹಬ್ಬುತ್ತದೆ. ರಾಜಕೀಯ ವಾತಾವರಣವು ಹೀಗೆ ಕಲುಷಿತವಾಗಿದ್ದರೂ ಭಾರತ ಸಚಿವರು ಇದನ್ನು ಗಮನಿಸಿದಂತೆ ಅವರ ಮೊನ್ನಿನ ಭಾಷಣದಿಂದ ಕಂಡು ಬರುವುದಿಲ್ಲ.

ಶ್ರೀ। ಸಾಂಬಮೂರ್ತಿಗಳ ಸತ್ಯಾಗ್ರಹ

ಮದ್ರಾಸು ಎಸೆಂಬ್ಲಿ ಸ್ಪೀಕರರಾದ ಶ್ರೀ। ಸಾಂಬಮೂರ್ತಿಗಳು ತಾ. ೪ರಂದು ಸತ್ಯಾಗ್ರಹ ಮಾಡಿದರು. ಅವರು ಗವರ್ನರರಿಗೆ ಒಂದು ಪತ್ರ ಬರೆದು ಅದರಲ್ಲಿ ತಾವು ಸ್ಪೀಕರರಾಗಿಯೇ ಸತ್ಯಾಗ್ರಹ ಹೂಡುವುದಾಗಿ ತಿಳಿಸಿರುವರು.

ಸತ್ಯಾಗ್ರಹ ಪತ್ರಿಕೆಯನ್ನು ರಕ್ತದಿಂದ ಬರೆದುಕೊಟ್ಟರು

ಸ್ವಾತಂತ್ರ್ಯದ ಉತ್ಸಾಹ

ಮುಂಬಯಿಯಲ್ಲಿ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿಹಾಕಿದ ಒಬ್ಬ ಗೃಹಸ್ಥರು, ತನ್ನ ರಕ್ತದಿಂದ ಪ್ರತಿಜ್ಞೆಯನ್ನು ಬರೆದುಕೊಟ್ಟರು. ಇದರಿಂದ ತನ್ನ ಉತ್ಕಟ ಸ್ವಾತಂತ್ರ್ಯ ಪ್ರೇಮ ಬಲಿದಾನಗಳನ್ನು ಸೂಚಿಸಿರುವರು. ದೇಶಕ್ಕಾಗಿ ನೆತ್ತರನ್ನು ಚೆಲ್ಲಲು ತನ್ನ ಆತ್ಮಸಂತೋಷವನ್ನು ವ್ಯಕ್ತಪಡಿಸಿರುವರು.

ಶಂಕರರಾವ್ ದೇವರಿಗೆ ಶಿಕ್ಷೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ. ಶಂಕರರಾವ್ ದೇವರಿಗೆ ೧೮ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಡಾ। ತಾರಾ ಬಾಯಿಯರಿಗೆ ಶಿಕ್ಷೆ

ಪುಣೆಯ ಡಾಕ್ಟರ್ ಕುಮಾರಿ ತಾರಾ ಬಾಯಿಯವರಿಗೆ ೨೦೦ ರೂ. ದಂಡ ಇಲ್ಲವೇ ೩ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಎಚ್. ವಿ. ಕುಳಪುಳೆಯವರಿಗೆ ಶಿಕ್ಷೆ

ಮುಂಬಯಿ ಶಾಸನ ಸಭಾಸದಸ್ಯರಾದ ಶ್ರೀ। ಎಚ್. ವಿ. ಕುಳಪುಳೆಯವರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಶ್ರೀ। ರಾಘವೇಂದ್ರ ಸಿಂಗರ ಸೆರೆ

ಯುಕ್ತ ಪ್ರಾಂತದ ಶಾಸನ ಸಭಾಸದಸ್ಯರೂ, ವಿ. ಪಿ. ಸಿ. ಸಿ. ಸದಸ್ಯರೂ ಆದ ಶ್ರೀ। ಸುಸ್ತೀರ್ ಸಿಂಗರನ್ನು ಬಂಧಿಸಲಾಗಿದೆ.

ಮಂಡಲೀಕ ಪಾಟೀಲರ ಶಿಕ್ಷೆ

[illegible] ಅಧ್ಯಕ್ಷರಾದ ಶ್ರೀ ಮಂಡಲೀಕ ಪಾಟೀಲರಿಗೆ ಒಂದು ವರ್ಷದ ಶಿಕ್ಷೆ ವಿಧಿಸಲಾಗಿದೆ.

ಶ್ರೀ। ಹರಿಕೃಷ್ಣ ಮೆಹತಾಬರಿಗೆ ಶಿಕ್ಷೆ

ಹಿಂದಿನ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಶ್ರೀ ಹರಿಕೃಷ್ಣ ಮೆಹತಾಬರಿಗೆ ಒಂದು ವರ್ಷದ ಶಿಕ್ಷೆ ವಿಧಿಸಲಾಗಿದೆ.

ಡಾ। ಪಿ. ಸಿ. ಘೋಷರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಡಾ। ಪ್ರಫುಲ್ಲ ಚಂದ್ರಘೋಷರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಕುಮಾರಚಂದ್ರ ಜಾನರಿಗೆ ಶಿಕ್ಷೆ

ಮಿಡನಾಪುರ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಕುಮಾರ ಚಂದ್ರ ಜಾನಾರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ರಾಧಾಕೃಷ್ಣ ವಿಶ್ವಾಸರಾಯರಿಗೆ ಶಿಕ್ಷೆ

ಕಟಕಿನ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ರಾಧಾಕೃಷ್ಣ ವಿಶ್ವಾಸರಾಯರಿಗೆ ಒಂದು ವರ್ಷಶಿಕ್ಷೆ ೫೦೦ ರೂ. ದಂಡ ವಿಧಿಸಲಾಗಿದೆ.

ಶ್ರೀ ಕೆ. ವರದಾಚಾರ್ಯರಿಗೆ ಶಿಕ್ಷೆ

ಆಂಧ್ರ ಮಹಾಸಭಾ ಕಾರ್ಯದರ್ಶಿಯೂ, ಶಾಸನಸಭಾ ಸದಸ್ಯರೂ ಆದ ಶ್ರೀ ಕೆ. ವರದಾಚಾರ್ಯರಿಗೆ ಬಂಧನವಾಗಿ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಶ್ರೀ ಭೂಲಾಬಾಯಿಯವರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ, ಕೇಂದ್ರ ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಮುಖಂಡರೂ ಆದ ಶ್ರೀ ಭೂಲಾಭಾಯಿಯವರನ್ನು ಬಂಧಿಸಿ ಯುರವಾಡಾ ಸೆರೆಮನೆಯಲ್ಲಿ ದಿಗ್ಬಂಧನದಲ್ಲಿಟ್ಟಿರುವರು.

ಸರೋಜಿನಿ ದೇವಿಯವರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ, ಕಾಂಗ್ರೆಸಿನ ಹಿಂದಿನ ಅಧ್ಯಕ್ಷೆಯರೂ ಆದ ಶ್ರೀಮತಿ ಸರೋಜಿನಿ ನಾಯ್ಡು ಇವರನ್ನು ಬಂಧಿಸಿ ದಿಗ್ಬಂಧನದಲ್ಲಿಟ್ಟಿರುವರು. ಇವರನ್ನೂ ಯರವಾಡಾಕ್ಕೊಯ್ದಿರುವರು.

ಶ್ರೀ ಮಂಗಳದಾಸರ ಬಂಧನ

ಮುಂಬಯಿ ಶಾಸನಸಭಾ ಸದಸ್ಯರಾದ ಮತ್ತು ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾದ ಶ್ರೀ ಮಂಗಳದಾಸ ಪಕ್ವಸಾರರನ್ನು ಸೆರೆಹಿಡಿದಿರುವರು.

ಶ್ರೀ ಎಸ್. ಕೆ. ಪಾಟೀಲರ ಬಂಧನ

ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಕೆ. ಪಾಟೀಲರನ್ನು ಬಂಧಿಸಲಾಗಿದೆ.

ಶ್ರೀ ಅರ್ಜುನಶಿಮಜಿಯರ ಬಂಧನ

ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕೋಶಾಧ್ಯಕ್ಷರಾದ ಶ್ರೀ ಅರ್ಜುನಶಿಮಜಿಯವರನ್ನು ಬಂಧಿಸಲಾಗಿದೆ.

ಪಂಡಿತ ಶುಕ್ಲರಿಗೆ ಶಿಕ್ಷೆ

ಮಧ್ಯಪ್ರಾಂತದ ಹಿಂದಿನ ಮುಖ್ಯ ಮಂತ್ರಿ ಶ್ರೀ ರವಿಶಂಕರ ಶುಕ್ಲರಿಗೆ ಒಂದು ವರ್ಷದ ಶಿಕ್ಷೆ ವಿಧಿಸಲಾಗಿದೆ.

ಶ್ರೀ ಡಿ. ಗೋವಿಂದದಾಸರ ಬಂಧನ

ಮದ್ರಾಸು ಶಾಸನಸಭಾ ಸದಸ್ಯರಾದ ಶ್ರೀ ಡಿ. ಗೋವಿಂದದಾಸ (ಬಳ್ಳಾರಿ) ಇವರನ್ನು ಬಂಧಿಸಲಾಗಿದೆ.

ಶ್ರೀ ಕರಂದೀಕರರ ಬಂಧನ

ಪುಣೆಯ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಸ್. ಎಲ್. ಕರಂದೀಕರರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

ಶ್ರೀ ಕೇಶವೈನರ ಸತ್ಯಾಗ್ರಹ

ಮುಂಬಯಿ ಶಾಸನಸಭಾ ಸದಸ್ಯ



ಸತ್ಯಾಗ್ರಹಿಗಳಾದ ಶ್ರೀ। ಯು. ಎಸ್. ಮಲ್ಯ, ಶ್ರೀ। ಬಿ. ವಿ. ಬಾಳಿಗ ಇವರಿಗೆ ಮಂಗಳೂರು ಮರ್ಚೆಂಟ್ಸ್ ಎಸೋಸಿಯೇಶನಿನವರು ಸತ್ಕಾರಕೂಟವನ್ನೇರ್ಪಡಿಸಿದ್ದರು.

ರಾದ ಶಿರ್ಶಿ ಶ್ರೀ ಶೇಷಗಿರಿರಾವ್ ಕೇಶವೈನರು ಸತ್ಯಾಗ್ರಹ ಹೂಡಿದರು.

ಡಾ। ಅಸಫ್ಅಲ್ಲಿಯವರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದ ಡಾ। ಅಸಫ್ ಅಲ್ಲಿಯವರನ್ನು ಬಂಧಿಸಲಾಗಿದೆ.

ಶ್ರೀ ಶಾಂತಿಲಾಲಶಾರ ಬಂಧನ

ಮುಂಬಯಿ ಶಾಸನಸಭಾ ಸದಸ್ಯರಾದ ಶ್ರೀ ಶಾಂತಿಲಾಲಶಾರನ್ನು ಬಂಧಿಸಲಾಗಿದೆ.

ಗೋವಿಂದದಾಸರಿಗೆ ಶಿಕ್ಷೆ

ಸೇಠ್ ಗೋವಿಂದ ದಾಸರಿಗೆ ೬ ತಿಂಗಳ ಶಿಕ್ಷೆ ಮತ್ತು ೬೦೦ ರೂ. ದಂಡ ವಿಧಿಸಲಾಗಿದೆ.

ಶ್ರೀ ಸಂಪೂರ್ಣಸಿಂಗರ ಸತ್ಯಾಗ್ರಹ

ಪಂಜಾಬ್ ಎಸೆಂಬ್ಲಿ ಸದಸ್ಯರಾದ ಶ್ರೀ ಸರದಾರ್ ಸಂಪೂರ್ಣ ಸಿಂಗರು ತಾ. ೩ರಂದು ಸತ್ಯಾಗ್ರಹ ಹೂಡಿದರು.

ಮಹಾವೀರ ತ್ಯಾಗಿಯರಿಗೆ ಶಿಕ್ಷೆ

ಡೆಹರಾಡೂನ್‌-ಮಹಾವೀರ ತ್ಯಾಗಿಯ (ಎಂ. ಎಲ್. ಎ.) ಇವರನ್ನು ಬಂಧಿಸಿ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಕೂಲಿಗಾರ ಮುಖಂಡರ ಬಂಧನಗಳು

ರಾಜಶಾಹಿಯ ಕೂಲಿಗಾರ ಮುಖಂಡರಾದ ಶ್ರೀಗಳಾದ ನಿಮಲೇಂದ್ರ ಮೈತ್ರ, ಬಿ. ಎಂ. ಚೌಧುರಿ, ಸಚಿಸ ವಿಶ್ವಾಸ ಮೊದಲಾದವರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ

ಜತೇಂದ್ರನಾಥರಿಗೆ ಸ್ಥಾನಬದ್ಧತೆ

ಕೆಲದಿನಗಳ ಹಿಂದೆ ಬಿಡುಗಡೆ ಹೊಂದಿದ ಶ್ರೀ ಜತೇಂದ್ರನಾಥ ದಾಸರನ್ನು ತಿರುಗಿ ಸ್ಥಾನಬದ್ಧತೆಯಲ್ಲಿರಿಸಿರುವರು.

ಕೃಷ್ಣಸಿಂಧು ಭಕ್ತರ ಸೆರೆ

ಕಲ್ಕತ್ತೆಯ ಶ್ರೀ ಕೃಷ್ಣಸಿಂಧು ಭಕ್ತ, ಎಂ. ಎಲ್. ಎ., ಇವರನ್ನು ಸೆರೆಹಿಡಿಯಲಾಗಿದೆ.

ಉಷಾರಾಣಿಯವರಿಗೆ ಶಿಕ್ಷೆ

ಕಲ್ಕತ್ತೆಯ ಪುರೋಗಾಮಿ ಪಕ್ಷದವರಾದ ಶ್ರೀಮತಿ ಉಷಾರಾಣಿ ಮುಕರ್ಜಿಯವರಿಗೆ ಆರು ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಶ್ರೀ. ಜಾನಕೀಬಾಯಿಯರ ಸತ್ಯಾಗ್ರಹ

ರತ್ನಗಿರಿ ಜಿಲ್ಲೆಯ ಶ್ರೀಮತಿ ಜಾನಕೀಬಾಯಿ ತೆಂಡೂಲಕರರು ತಾ. ೩ರಂದು ಸತ್ಯಾಗ್ರಹ ಹೂಡಿದರು.

ಸರಳಾದೇವಿಯರಿಗೆ ಶಿಕ್ಷೆ

ಕಟಕಿನ ಮಹಿಳಾ ಎಂ. ಎಲ್. ಎ. ಶ್ರೀಮತಿ ಸರಳಾ ದೇವಿಯರಿಗೆ ಮೂರು ತಿಂಗಳ ಶಿಕ್ಷೆ ೫೦ ರೂ. ದಂಡ ವಿಧಿಸಲಾಗಿದೆ.



ರಾಜಗೋಪಾಲಾಚಾರಿಯವರ ಬಂಧನ!

ಮೆಜಿಸ್ಟ್ರೇಟರು ರಾಜಾಜಿಯರನ್ನು ಹೊಗಳಿದರು!

ಅಖಿಲ ಭಾರತದಲ್ಲಿ ದೇಶದ ಮುಖಂಡರ ಬಂಧನ!

— ಸಾಂಬಮೂರ್ತಿ ಸ್ಪೀಕರರಾಗಿಯೇ ಸತ್ಯಾಗ್ರಹ ಹೂಡಿದರು

ದಕ್ಷಿಣ ಕನ್ನಡದಲ್ಲಿಯೂ ಸತ್ಯಾಗ್ರಹ ಆರಂಭ

ಫಾಟೇಕರರಿಗೆ ಶಿಕ್ಷೆ

ಸಾತಾರೆಯ ಶ್ರೀ ಫಾಟೇಕರರಿಗೆ ೧೨ ತಿಂಗಳ ಶಿಕ್ಷೆ ಮತ್ತು ೨೦ ರೂ. ದಂಡ ವಿಧಿಸಲಾಗಿದೆ.

ಶಿವರಾಮ-ಪಂತರಿಗೆ ಶಿಕ್ಷೆ

ಸಾತಾರೆಯ ಸತ್ಯಾಗ್ರಹಿ ಶ್ರೀ. ಶಿವರಾಮ ಪಂತ ಬಾವೆಯರಿಗೆ ೧೨ ತಿಂಗಳ ಕಠಿಣ ಶಿಕ್ಷೆ ಹಾಗೂ ೨೫ ರೂ. ದಂಡ ವಿಧಿಸಲಾಗಿದೆ.

ಶ್ರೀ ಮುನ್ಶಿಯರ ಸತ್ಯಾಗ್ರಹ

ಮುಂಬಯಿಯ ಹಿಂದಿನ ಮಂತ್ರಿ ಶ್ರೀ ಕೆ. ಎಮ್. ಮುನ್ಶಿಯರು ತಾ. ೪ ರಂದು ಸತ್ಯಾಗ್ರಹ ಮಾಡಿದರು.

ಶ್ರೀ ವಿ. ವಿ. ಗಿರಿಯವರಿಗೆ ಶಿಕ್ಷೆ

ಮದ್ರಾಸಿನ ಮಾಜಿ ಮಂತ್ರಿಗಳೂ, ಅಖಿಲ ಭಾರತ ಕೂಲಿಗಾರರ ಮುಖಂಡರೂ ಆದ ಶ್ರೀ ವಿ. ವಿ. ಗಿರಿಯವರನ್ನು ಬಂಧಿಸಿ ೧೫ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಡಾ। ಯು. ರಾಮರಾಯರ ಸತ್ಯಾಗ್ರಹ

ಮದ್ರಾಸು ಕೌನ್ಸಿಲ್ ಅಧ್ಯಕ್ಷರಾದ ಡಾ। ಯು. ರಾಮರಾಯರು ಬೇಗನೇ ಸತ್ಯಾಗ್ರಹ ಹೂಡಲಿರುವರೆಂದು ತಿಳಿದಿದೆ.

ದೀನದಯಾಳ ಕನ್ನರ ಸೆರೆ

ಅಸೆಂಬ್ಲಿ ಕಾಂಗ್ರೆಸ್ ಸದಸ್ಯರಾದ ಡಿಲ್ಲಿಯ ಶ್ರೀ ದೀನದಯಾಳ ಕನ್ನರನ್ನು ಬಂಧಿಸಲಾಗಿದೆ.

ದಿಲೀಪ ಭಾಕಾರಿಗೆ ಶಿಕ್ಷೆ

ಪಂಜಾಬಿನ ಪ್ರಮುಖ ಕಾಂಗ್ರೆಸ್ ಕೆಲಸಗಾರರಾದ ಶ್ರೀ ದಲೀಪ ಬಾಕರಿಗೆ ೧೮ ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಗ್ರಂಟ್ಸ್

ಮೋಹನಲಾಲ ಸಕ್ಸೇನರ ಸತ್ಯಾಗ್ರಹ

ಲಖನೋದ ಎಂ. ಎಲ್. ಎ. ಶ್ರೀ. ಮೋಹನಲಾಲ ಸಕ್ಸೇನರು ತಾ. ೩ರಂದು ಸತ್ಯಾಗ್ರಹ ಮಾಡಿದರು.

ರಾಜಾಜಿಯವರಿಗೆ ಶಿಕ್ಷೆ

ಮದ್ರಾಸು ಸರಕಾರದ ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರಿಯವರನ್ನು ಬಂಧಿಸಿ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ. 'ನೀವು ಬೇಗನೇ ಬಿಡುಗಡೆ ಹೊಂದಿ ಮರಳಿ ಬಂದು ಹಿಂದಿನ ಪ್ರಧಾನಮಂತ್ರಿ ಪದವಿಯನ್ನೇ ಅಲಂಕರಿಸುವಂತೆ ನಾನು ಆಶಿಸುತ್ತೇನೆ' ಹೀಗೆಂದು ಮ್ಯಾಜಿಸ್ಟ್ರೇಟ್ ಶ್ರೀ ಅಬ್ಬಾಸ್ ಅಲಿಯವರು ರಾಜಾಜಿಯವರಿಗೆ ಶಿಕ್ಷೆ ವಿಧಿಸುತ್ತಾ ಹೇಳಿದರು. ಆ ಮೇಲೆ ಆ ಮೆಜಿಸ್ಟ್ರೇಟರು ಭಗವದ್ಗೀತೆಯಿಂದ ಒಂದು ಶ್ಲೋಕವನ್ನು ಹೇಳಿ ಎಷ್ಟೇ ಮನಸ್ಸಿಲ್ಲದಿದ್ದರೂ ತಾವು ತಮ್ಮ ಕರ್ತವ್ಯವನ್ನು ಮಾಡಬೇಕಾಗಿದೆಯೆಂದು ಹೇಳಿದರು.

ಶ್ರೀ. ಪುಂಡಲೀಕ ಪಾಟೀಲರ ಬಂಧನ

ಅಕೋಲಾ ತಾಲೂಕ್ ಲೋಕಲ್ ಬೋರ್ಡು ಅಧ್ಯಕ್ಷರಾದ ಶ್ರೀ. ಪುಂಡಲೀಕ ಪಾಟೀಲರು ಬಂಧಿತರಾಗಿರುವರು.

ಶ್ರೀ. ಮಾಯಾ ಪ್ರಸಾದರ ಬಂಧನ

ಅಖಿಲಭಾರತ ಕಾಂಗ್ರೆಸ್ ಕಮಿಟಿ ಸದಸ್ಯರಾದ ಶ್ರೀ. ಮಹಾ ಮಾಯಾ ಪ್ರಸಾದರನ್ನು ಬಂಧಿಸಲಾಗಿದೆ.

ಶ್ರೀ. ಚೌಧುರಿಯರ ಸತ್ಯಾಗ್ರಹ

ಪಾಟ್ನಾದ ಹಿಂದಿನ ಮಂತ್ರಿಗಳಾದ ಶ್ರೀ. ಜನಲ್ ಚೌಧರಿಯವರು ತಾ. ೪ರಂದು ಸತ್ಯಾಗ್ರಹ ಹೂಡಿದರು.

ಶ್ರೀ. ಸುರಖ ಪ್ರಸಾದರ ಬಂಧನ

ಕಾನಪುರದ ಶ್ರೀ. ಸುರಖ ಪ್ರಸಾದ ಎಂ. ಎಲ್. ಎ. ಇವರು ತಾ. ೧ರಂದು ಸತ್ಯಾಗ್ರಹ ಹೂಡುವರಿದ್ದು ತಾ. ೩೦ ರಂದೇ ಬಂಧಿತರಾದರು.

ಶ್ರೀ. ಜ್ವಾಲಾ ಪ್ರಸಾದರಿಗೆ ಶಿಕ್ಷೆ

ಲಖನೋದ ಶ್ರೀ. ಜ್ವಾಲಾ ಪ್ರಸಾದ ಎಂ. ಎಲ್. ಎ., ಇವರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಶ್ರೀ. ಜಿ. ಡಿ. ವರ್ತಕರಿಗೆ ಶಿಕ್ಷೆ

ಶಾಸನ ಸಭಾಸದಸ್ಯರಾದ ಶ್ರೀ. ಜಿ. ಡಿ. ವರ್ತಕರಿಗೆ ಒಂದು ವರ್ಷದ ಶಿಕ್ಷೆಯು ವಿಧಿಸಲಾಗಿದೆ.

ಶ್ರೀ. ತುಳಸೀಬಾಯಿಯವರ ಸತ್ಯಾಗ್ರಹ

ರತ್ನಗಿರಿ ಜಿಲ್ಲೆಯ ಶ್ರೀ. ತುಳಸೀಬಾಯಿ ವಹಿವಾಟೆಯವರು ತಾ. ೩ ರಂದು ಸತ್ಯಾಗ್ರಹ ಮಾಡಿದರು.

ಮೂರು ಸ್ತ್ರೀ ಸತ್ಯಾಗ್ರಹಿಗಳ ಕೈದು

ವಡಕಳದಲ್ಲಿ ಸತ್ಯಾಗ್ರಹ ಹೂಡುತ್ತಿದ್ದ ಮೂವರು ಸ್ತ್ರೀ ಸತ್ಯಾಗ್ರಹಿಗಳನ್ನು ಬಂಧಿಸಲಾಗಿದೆ.

ಶ್ರೀ. ಪುರಾಣಿಯವರ ಬಂಧನ

ಶ್ರೀ. ಛೋಟಾಲಾಲ ಪುರಾಣಿ ಎಂ. ಎಲ್. ಎ. ಇವರನ್ನು ೨೯ನೇ ತಾರೀಕಿಗೆ ಕೈದು ಮಾಡಲಾಗಿಯದೆ.

ಡಾ. ಭಾರ್ಗವರ ಬಂಧನ

ಪಂಜಾಬ್ ಶಾಸನ ಸಭಾಸದಸ್ಯರಾದ ಡಾ. ಭಾರ್ಗವರು ಬಂಧಿತರಾಗಿದ್ದಾರೆ.

ಶ್ರೀ. ಸಿಂಗರಿಗೆ ಶಿಕ್ಷೆ

ಬೀಹಾರದ ಶಾಸನ ಸಭಾಸದಸ್ಯರಾದ ಶ್ರೀ. ಮಹೇಶ ಸಿಂಗರಿಗೆ ಎರಡು ಅಪರಾಧಗಳ ಮೇಲೆ ಒಂದೊಂದು ವರ್ಷಗಳ ಶಿಕ್ಷೆ ವಿಧಿಸಲಾಗಿದೆ.

ಶ್ರೀ. ಎಸ್. ನಾಗಪ್ಪರಿಗೆ ಶಿಕ್ಷೆ

ಕರ್ನೂಲಿನ ಶಾಸನ ಸಭಾಸದಸ್ಯರಾದ ಶ್ರೀ. ಎಸ್. ನಾಗಪ್ಪನವರಿಗೆ ಒಂದು ವರ್ಷ ಶಿಕ್ಷೆ ೫೦೦ ರೂ. ದಂಡ ವಿಧಿಸಲಾಗಿದೆ.

ಡಾ. ಪಿ. ಎಸ್. ಶ್ರೀನಿವಾಸರಿಗೆ ಶಿಕ್ಷೆ

ಕಾಂಜೀವರದ ಡಾ. ಪಿ. ಎಸ್. ಶ್ರೀನಿವಾಸನ್ ಇವರಿಗೆ ಒಂದು ವರ್ಷ ಶಿಕ್ಷೆ ೫೦೦ ರೂ. ದಂಡ ವಿಧಿಸಲಾಗಿದೆ.

ಸರ್ದಾರ ಹರಿಸಿಂಗರ ಬಂಧನ

ಆಗ್ರಾದ ಸರ್ದಾರ ಹರಿಸಿಂಗ ಇವರನ್ನು ಬಂಧಿಸಲಾಗಿದೆ.

ಶ್ರೀ. ಸೂರಜನಾಥ ಬಂಧನ

ಯುಕ್ತ ಪ್ರಾಂತದ ಶ್ರೀ. ಸೂರಜನಾಥ ಚಾಬೆಯವರನ್ನು ಬಂಧಿಸಿರುವರು.

ಧನರಾಜ ಶರ್ಮರ ಸೆರೆ

ಪಾಟ್ನಾದ ಒಪ್ಪಂದ ವಿರೋಧ ಸಂಘದ ಕಾರ್ಯದರ್ಶಿ ಶ್ರೀ ಧನರಾಜ ಶರ್ಮರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

ಶ್ರೀ. ಎಂ. ಪಿ. ದಾಮೋದರರಿಗೆ ಶಿಕ್ಷೆ

ಕಲ್ಲಿಕೋಟೆಯ ಶಾಸನ ಸಭಾಸದಸ್ಯರಾದ ಶ್ರೀ. ಎಂ. ಪಿ. ದಾಮೋದರರಿಗೆ ಒಂದು ಕಠಿಣ ಶಿಕ್ಷೆ ೩೦೦ ರೂ. ದಂಡ ವಿಧಿಸಲಾಗಿದೆ.

ಎಸ್. ಎಸ್. ಮೋರೆಯರಿಗೆ ಶಿಕ್ಷೆ

ಪುಣೆಯ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎಸ್. ಎಸ್. ಮೋರೆಯರಿಗೆ ಒಂದು ವರ್ಷದ ಶಿಕ್ಷೆ ವಿಧಿಸಲಾಗಿದೆ.

ಶ್ರೀ ಎಸ್. ಬಿಹಾರಿಯರ ಸತ್ಯಾಗ್ರಹ

ಡಿಲ್ಲಿಯ ಶ್ರೀ ಎಸ್. ಬೀಹಾರಿಯವರು ತಾ. ೪ರಂದು ಸತ್ಯಾಗ್ರಹ ಮಾಡಿದರು.

ಶ್ರೀ ಅನ್ಸಾರಿಯವರ ಸತ್ಯಾಗ್ರಹ

ಡಿಲ್ಲಿಯ ಶ್ರೀ ಅನ್ಸಾರಿಯವರು ತಾ. ೪ಕ್ಕೆ ಸತ್ಯಾಗ್ರಹ ಮಾಡುವರು.

ಒರಿಸಾ ಮಂತ್ರಿಗಳ ಸತ್ಯಾಗ್ರಹ ಬೋಧರಾಮದುಬೆ

ಒರಿಸ್ಸಾದ ಹಿಂದಿನ ಮಂತ್ರಿಗಳಾದ ಶ್ರೀ ಬೋಧರಾಮದುಬೆಯವರು ತಾ. ೨ರಂದು ಸತ್ಯಾಗ್ರಹ ಹೂಡಿದರು.

ಜಯಪ್ರಕಾಶರ ಬಿಡುಗಡೆ

ಕಾಂಗ್ರೆಸ್ ಸಮತಾವಾದೀ ಪಕ್ಷದ ಮುಖಂಡರಾದ ಶ್ರೀ ಜಯಪ್ರಕಾಶ ನಾರಾಯಣರನ್ನು ಬಿಡುಗಡೆ ಮಾಡಿರುವರು.

ಶ್ರೀ ಶೃಕ್ಕೀಸಿಂಗರ ಬಂಧನ

ಯುಕ್ತಪ್ರಾಂತದ ಎಂ. ಎಲ್. ಎ. ಶ್ರೀ ಶೃಕ್ಕೀಸಿಂಗರು ಬಂಧಿತರಾದರು.

ಶ್ರೀ ರಘುತಿಲಕರ ಬಂಧನ

ಯುಕ್ತ ಪ್ರಾಂತದ ಎಂ. ಎಲ್. ಶ್ರೀ ರಘುತಿಲಕರು ಬಂಧಿತರಾದರು.

ಕರ್ನಾಟಕದಲ್ಲಿ ಸತ್ಯಾಗ್ರಹ.

ಶ್ರೀ. ದೊಡ್ಡ ಮೇಟಿಯರ ಸತ್ಯಾಗಹ

ಮುಂಬಯಿ ಶಾಸನ ಸಭಾಸದಸ್ಯರು (ಕರ್ನಾಟಕ) ಶ್ರೀ. ಅಂದಾನೆಪ್ಪ ದೊಡ್ಡ ಮೇಟಿಯವರು ತಾ. ೯ರಂದು ಸತ್ಯಾಗಹ ಮಾಡುವರು.

ಶ್ರೀ ಅಂಬ್ಲಿಯವರಿಗೆ ಶಿಕ್ಷೆ

ಕರ್ನಾಟಕ ಪ್ರಾಂತ ಕಾಂಗ್ರೆಸ್ ಕಮಿಟಿಯ ಕಛೇರಿಗೆ ಧಾರವಾಡದ ಪೋಲೀಸರು ಮುತ್ತಿಗೆ ಹಾಕಿ ಶೋಧನೆ ನಡೆಸಿ ಪಂಡಿತ ಜವಾಹಿರಲಾಲ ನೆಹರೂರವರು ಗೋರಕಪುರದಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಕೊಟ್ಟಿದ್ದ ಹೇಳಿಕೆಯ ಒಂದು ಸಾವಿರ ಪ್ರತಿಗಳನ್ನು ವಶಪಡಿಸಿಕೊಂಡರು.

ಕರ್ನಾಟಕ ಪ್ರಾಂತ ಕಾಂಗ್ರೆಸ್ ಕಮಿಟಿಯ ಸಕ್ರೆಟರಿ ಶ್ರೀ ಸಿ. ಜೆ. ಅಂಬ್ಲಿಯವರನ್ನು ಡಿಫೆನ್ಸ್ ಕಾನೂನು ಮೇರೆಗೆ ದಸ್ತಗಿರಿ ಮಾಡಲಾಯಿತು.

ಶ್ರೀ ಅಂಬ್ಲಿಯವರು ಪಂಡಿತ ಜವಾಹಿರಲಾಲರ ಹೇಳಿಕೆಯ ಪ್ರತಿಗಳನ್ನು ತಯಾರಿಸಿ ಅವುಗಳನ್ನು ಹಂಚುತ್ತಿರುವುದು ಡಿಫೆನ್ಸ್ ಕಾನೂನು ಮೇರೆಗೆ ಅಪರಾಧವೆಂದು ಅಪಾದನೆಯಾಗಿ ಶ್ರೀ ಅಂಬ್ಲಿಯವರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಶ್ರೀಮತಿ ನಾಗಮ್ಮ ಪಟೇಲರಿಗೆ ಶಿಕ್ಷೆ

ಕರ್ನಾಟಕದ ಮೊದಲನೆಯ ಸ್ತ್ರೀ ಸತ್ಯಾಗ್ರಹಿ

ಮುಂಬಯಿ ಶಾಸನ ಸಭಾಸದಸ್ಯೆಯರಾದ ಶ್ರೀಮತಿ ನಾಗಮ್ಮ ಪಟೇಲರು ಸತ್ಯಾಗ್ರಹ ಹೂಡಿ ಬಂಧಿತರಾದರು. ಅವರ ಅತ್ತೆ ೭೫ ವರ್ಷ ಪ್ರಾಯದ ಮುದುಕಿ ಶ್ರೀಮತಿಯವರನ್ನು ಸತ್ಯಾಗ್ರಹಕ್ಕೆ ಹೊರಡುವಾಗ, 'ಸ್ವರಾಜ್ಯ ಸಂಪಾದಿಸಿ ಬಾ ಅವ್ವಾ' ಎಂದು ಹರಸಿ ಸತ್ಯಾಗ್ರಹಕ್ಕೆ ಬೀಳ್ಕೊಟ್ಟರು. ಅವರಿಗೆ ಮೂರು ತಿಂಗಳ ಶಿಕ್ಷೆ ವಿಧಿಸಿದೆ.

ಶ್ರೀ ನೇಸ್ವಿಯವರಿಗೆ ಶಿಕ್ಷೆ

ಮುಂಬಯಿ ಸರಕಾರದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಟಿ. ಆರ್. ನೇಸ್ವಿಯವರಿಗೆ ಒಂದು ವರ್ಷ ಕಠಿಣ ಸಜೆ ವಿಧಿಸಲಾಗಿದೆ.

ಶ್ರೀ ಮುಂಡಗಿಯವರ ಸತ್ಯಾಗ್ರಹ

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರಾದ ಶ್ರೀ.ಎ. ಎ. ಮುಂಡಗಿಯವರು ತಾ. ೮ರಂದು ಸತ್ಯಾಗ್ರಹ ಹೂಡುವರು.

[೧೨ನೇ ಪುಟವನ್ನು ನೋಡಿರಿ.]

ಸತ್ಯಾಗ್ರಹ ಸಮಾಚಾರ

[illegible] ಪಟೇಲರಿಗೆ ಶಿಕ್ಷೆ

ಸರ್ದಾರ್ ಪಟೇಲರ [illegible] ಮಣಿಬೆನ್ ಪಟೇಲರಿಗೆ [illegible] ತಿಂಗಳು ಶಿಕ್ಷೆಯನ್ನು ವಿಧಿಸಲಾಯಿತು.

ಶ್ರೀ ಹರಿಪ್ರಸಾದ ಮೋಹನರಿಗೆ ಶಿಕ್ಷೆ

ಶಾಸನ ಸಭಾ ಸದಸ್ಯರೂ, ದಾನ ಕತ್ರೀಯು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀ ಹರಿಪ್ರಸಾದ ಮೋಹನರವರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಶ್ರೀ ವರ್ತಕರಿಗೆ ಶಿಕ್ಷೆ

ಥಾಣಾ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾದ ಮತ್ತು ಶಾಸನಾ ಸಭೆ ಸದಸ್ಯರಾದ ಶ್ರೀ ಜಿ. ಡಿ. ವರ್ತಕರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಯಿತು.

ಶ್ರೀ ತುಳಸೀದಾಸ ಜಾಧವರ ಬಂಧನ

ಶಾಸನ ಸಭಾ ಸದಸ್ಯರಾದ ಶ್ರೀ ತುಳಸೀದಾಸ ಜಾಧವರನ್ನು ಬಂಧಿಸಲಾಗಿದೆ.

ಪಂಡಿತ ಜೀವನಲಾಲರ ಸತ್ಯಾಗ್ರಹ

ಪಂಡಿತ ಜೀವನಲಾಲರು ಡಿಸೆಂಬರ್ ೨ರಲ್ಲಿ ಸತ್ಯಾಗ್ರಹ ನಡೆಸಿದರು. ಪಂಡಿತ ಜೀವನಲಾಲರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಮತ್ತು ಎ. ಐ. ಸಿ. ಸಿ.ಗೆ ಬಂಗಾಳದ ಸದಸ್ಯರು.

ಶ್ರೀಮತಿ ಪ್ರಮಿಳಾಬಾಯಿಯವರ ಬಂಧನ

ಶ್ರೀಮತಿ ಪ್ರಮಿಳಾಬಾಯಿಯವರು ಅಕೋಲದಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹವನ್ನು ಆಚರಿಸಿ ಬಂಧಿತರಾದರು.

ಶ್ರೀಮತಿ ಕಮ್ಮನ್ ರಾಜಾರಿಗೆ ಶಿಕ್ಷೆ

ಶಾಸನಸಭಾ ಸದಸ್ಯರಾದ ಶ್ರೀಮತಿ ಕಮ್ಮನ್ ರಾಜಾರವರು ಸತ್ಯಾಗ್ರಹ ನಡೆಸಿದರು. ಇವರನ್ನು ಬಂಧಿಸಲಾಯಿತು. ಇವರಿಗೆ ಒಂದು ವರ್ಷ ಸಜೆ ಮತ್ತು ೨೦೦ ರೂ. ಜುಲ್ಮಾನೆ, ತಪ್ಪಿದರೆ ೬ ತಿಂಗಳು ಸಜೆ ವಿಧಿಸಲಾಯಿತು.

ಶ್ರೀ ಕೃಷ್ಣಸಿಂಹರಿಗೆ ಶಿಕ್ಷೆ

ಬೀಹಾರ್ ಪ್ರಾಂತದ ಮಾಜಿ ಮಂತ್ರಿ ಶ್ರೀ ಕೃಷ್ಣಸಿಂಹರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಶ್ರೀ ಮಹೇಶಪ್ರಸಾದಗುಪ್ತರಿಗೆ ಶಿಕ್ಷೆ

ಬೀಹಾರ್ ಶಾಸನಸಭೆಯ ಸದಸ್ಯರಾದ ಶ್ರೀ ಮಹೇಶಪ್ರಸಾದ ಸಿಂಹರವರು ಸತ್ಯಾಗ್ರಹವನ್ನು ಆರಂಭಿಸಿದರು. ಇವರನ್ನು ದಸ್ತಗಿರಿ ಮಾಡಲಾಯಿತು. ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು.

ಶ್ರೀ ಆರ್. ಎಸ್. ಪಂಡಿತರನ್ನು ಆನಂದ ಭವನದಲ್ಲಿ ಬಂಧನ

ಆನಂದ ಭವನದಲ್ಲಿ ೨೮ರ ರಾತ್ರಿ ಡಿಫೆನ್ಸ್ ಕಾನೂನಿನ ಮೇರೆಗೆ ಶ್ರೀ ಆರ್. ಎಸ್. ಪಂಡಿತರನ್ನು ದಸ್ತಗಿರಿ ಮಾಡಲಾಯಿತು. ಪಂಡಿತರು ಅಲಹಾಬಾದಿನ [illegible] ದಿನಗಳ [illegible] [illegible] [illegible] ಎಂದು ಹೇಳಲಾಗಿದೆ. [illegible] ಸತ್ಯಾಗ್ರಹವನ್ನು [illegible]

ಅಲಹಾಬಾದ್ ಡಿ. ಮ್ಯಾಜಿಸ್ಟ್ರೇಟರಿಗೆ ನೋಟೀಸು ಕೊಟ್ಟಿದ್ದರು.

ಅಸ್ಸಾಮಿನಲ್ಲಿ ಸತ್ಯಾಗ್ರಹ. ಮಾಜೀ ಮಂತ್ರಿಗಳಿಂದ

ಅಸ್ಸಾಮಿನಲ್ಲಿ ಕಾಂಗ್ರೆಸ್ ಪಕ್ಷದವರು ಸತ್ಯಾಗ್ರಹ ನಡೆಸಲು ಸಿದ್ಧತೆಯಾಗಿರುತ್ತದೆ. ಮಾಜೀ ಮುಖ್ಯ ಮಂತ್ರಿಗಳಾದ ಶ್ರೀ ಬಾರ್ಡೋಲಿಯವರೂ, ಮಾಜೀ ಹಣಕಾಸಿನ ಮಂತ್ರಿ ಶ್ರೀ ಫಕ್ರುದ್ದೀನ್ ಅಲಿ ಅಹಮದ್ ರೂ ಸತ್ಯಾಗ್ರಹ ನಡೆಸುವರು.

ಶ್ರೀ ವಾಡೇಕರರಿಗೆ ಶಿಕ್ಷೆ

ಶಾಸನಸಭಾ ಸದಸ್ಯರಾದ ಶ್ರೀ ಆರ್. ಬಿ. ವಾಡೇಕರರೂ ಸತ್ಯಾಗ್ರಹ ನಡೆಸಿದರು. ಇವರನ್ನು ದಸ್ತಗಿರಿ ಮಾಡಿ ೬ ತಿಂಗಳು ಶಿಕ್ಷೆ ವಿಧಿಸಲಾಯಿತು.

ಒರಿಸ್ಸಾದಲ್ಲಿ ಸತ್ಯಾಗ್ರಹ ಮೊದಲು ಮಾಜಿ ಮಂತ್ರಿಗಳಿಂದ

ಸಂಬಲ್ಪುರದಲ್ಲಿ ಸತ್ಯಾಗ್ರಹ ಆಚರಿಸುವವರ ಪಟ್ಟಿಯು ಮಹಾತ್ಮಾ ಗಾಂಧಿಯವರಿಂದ ಒಪ್ಪಿಗೆ ಪಡೆದಿದೆ. ಒರಿಸ್ಸಾದ ಮಾಜೀ ಮಂತ್ರಿಗಳಾದ ಶ್ರೀ ಬೋಧರಾಮ ದೂಭೆಯವರು ಮೊದಲು ಸತ್ಯಾಗ್ರಹ ನಡೆಸುವರು.

ಪಾರ್ವತಿಬಾಯಿಯವರ ಶಿಕ್ಷೆ

ಶ್ರೀಮತಿ ಪಾರ್ವತಿಬಾಯಿ ಪಂಡೆಯವರು ರತ್ನಗಿರಿ ಜಿಲ್ಲೆಯಲ್ಲಿ ಸತ್ಯಾಗ್ರಹ ನಡೆಸಲು ಮೊದಲನೆಯ ಮಹಿಳೆ. ಇವರು ಸತ್ಯಾಗ್ರಹ ನಡೆಸಿದರು. ಇವರನ್ನು ದಸ್ತಗಿರಿ ಮಾಡಿ ಒಂದು ದಿನ ಶಿಕ್ಷೆ ಮತ್ತು ೨೦೦ ರೂಪಾಯಿ ಜುಲ್ಮಾನೆ ತಪ್ಪಿದರೆ ಮೂರು ತಿಂಗಳು ಶಿಕ್ಷೆ ವಿಧಿಸಿದರು.

ಶ್ರೀ ಧರ್ಮರಾಜ ಮೋದರರಿಗೆ ಶಿಕ್ಷೆ

ಶ್ರೀ ಧರ್ಮರಾಜ ಮೋದರರವರು ಸತ್ಯಾಗ್ರಹ ನಡೆಸಿದರು. ಇವರನ್ನು ದಸ್ತಗಿರಿ ಮಾಡಿ ಒಂದು ವರ್ಷ ಸಾದಾ ಶಿಕ್ಷೆ ವಿಧಿಸಲಾಯಿತು.

ಪ್ರೇಮಾಬಾಯಿಯರಿಗೆ ಶಿಕ್ಷೆ

ಶ್ರೀಮತಿ ಪ್ರೇಮಾಬಾಯಿ ಆನಿಸರು ಸತ್ಯಾಗ್ರಹ ಆಚರಿಸಿದರು. ಇವರಿಗೆ ಒಂದು ವರ್ಷ ಶಿಕ್ಷೆ ವಿಧಿಸಲಾಯಿತು.

ರಾಮಲಿಂಗಂರೆಡ್ಡಿಯರಿಗೆ ಶಿಕ್ಷೆ

ಶಾಸನಸಭಾ ಸದಸ್ಯರಾದ ಶ್ರೀ ಡಿ. ರಾಮಲಿಂಗ ರೆಡ್ಡಿಯವರು ಸತ್ಯಾಗ್ರಹ ನಡೆಸಿದರು. ಇವರನ್ನು ದಸ್ತಗಿರಿ ಮಾಡಿ ೯ ತಿಂಗಳು ಕಠಿಣ ಶಿಕ್ಷೆ ವಿಧಿಸಿದರು.

ಶ್ರೀ ಸೇಲಂ ಸುಬ್ರಹ್ಮಣ್ಯಂರಿಗೆ ಶಿಕ್ಷೆ

ಶಾಸನಸಭಾ ಸದಸ್ಯರಾದ ಶ್ರೀ ಸೇಲಂ ಸುಬ್ರಹ್ಮಣ್ಯರನ್ನು ದಸ್ತಗಿರಿ ಮಾಡಿ ಇವರಿಗೆ ಒಂದು ವರ್ಷ ಕಠಿಣಶಿಕ್ಷೆ ಮತ್ತು ೫೦೦ ರೂಪಾಯಿ ಜುಲ್ಮಾನೆ ತಪ್ಪಿದರೆ ಮತ್ತೆ ನಾಲ್ಕು ತಿಂಗಳು ಶಿಕ್ಷೆವಿಧಿಸಿದರು.

ಪಲ್ಲಮರಾಜಿಯರಿಗೆ ಶಿಕ್ಷೆ

ಶಾಸನ ಸಭಾಧ್ಯಕ್ಷರೂ ಈಸ್ಟ್ ಗೋದಾವರಿ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರೂ ಆದ ಶ್ರೀ ಮಲ್ಲಿಮಾಡಿ ಪಲ್ಲಮರಾಜಯವರನ್ನು ದಸ್ತಗಿರಿ ಮಾಡಲಾಯಿತು. ಇವರಿಗೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ಒಂದು ಸಾವಿರ ರೂ. ಜುಲ್ಮಾನೆ ತಪ್ಪಿದರೆ ಆರು ತಿಂಗಳು ಶಿಕ್ಷೆ ವಿಧಿಸಲಾಯಿತು.

ಶ್ರೀ ಕೆ. ಮಾಧವ ಮೇನನರ ಬಂಧನ

ಶಾಸನಸಭಾ ಸದಸ್ಯರೂ ಕಲ್ಲಿಕೋಟೆ ಮುನಿಸಿಪಾಲಿಟಿಯ ಅಧ್ಯಕ್ಷರೂ ಆದ ಶ್ರೀ ಕೆ. ಮಾಧವ ಮೇನನರನ್ನು ಡಿಫೆನ್ಸ್ ಕಾನೂನು ಮೇರೆಗೆ ದಸ್ತಗಿರಿ ಮಾಡಲಾಯಿತು.

ಐದು ಮಂದಿ ಅಹ್ರಾರ್ ಸ್ವಯಂ ಸೇವಕರ ಬಂಧನ

ಐದು ಮಂದಿ ಅಹ್ರಾರ್ ಸ್ವಯಂ ಸೇವಕರು ಶ್ರೀ [illegible] ಮುಲ್ತಾನಿನ ಚಾಂದನಿ ಚೌಕದಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ನಡೆಸಿದರು. ಇವರನ್ನು ಡಿಫೆನ್ಸ್ ಕಾನೂನು ಮೇರೆಗೆ ದಸ್ತಗಿರಿ ಮಾಡಲಾಯಿತು.

ಗೋಪಾಲರೆಡ್ಡಿಯರಿಗೆ ಶಿಕ್ಷೆ

ಮದ್ರಾಸಿನ ಮಾಜೀ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಯವರು ಸತ್ಯಾಗ್ರಹ ನಡೆಸಿದರು. ಇವರಿಗೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ಜುಲ್ಮಾನೆ ವಿಧಿಸಿದರು.

ಶ್ರೀ ಟಿ. ಪ್ರಕಾಶಂರಿಗೆ ಶಿಕ್ಷೆ

ಮದ್ರಾಸಿನ ಮಾಜೀ ಮಂತ್ರಿಗಳಾದ ಶ್ರೀ ಟಿ. ಪ್ರಕಾಶಂರಿಗೆ ಒಂದು ವರ್ಷ ಶಿಕ್ಷೆಯನ್ನು ವಿಧಿಸಿದರು.

ಶ್ರೀ ಟಿ. ವಿಶ್ವನಾಥನರಿಗೆ ಶಿಕ್ಷೆ

ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ ಟಿ. ವಿಶ್ವನಾಥನ್ ರಿಗೆ ೧೮ ತಿಂಗಳ ಕಠಿಣ ಶಿಕ್ಷೆ ಮತ್ತು ೨೦೦ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ಮುಸ್ಲಿಮರ ಬಂಧನ

ಕೊಚ್ಚಿಯ ಶ್ರೀಗಳಾದ ಎಂ. ಅಹಮ್ಮದ್ ಬಶೀರ್ ಮತ್ತು ವಿ. ಎಂ. ಅಬ್ದುಲ್ ರಹಿಮಾನರು ಡಿಫೆನ್ಸ್ ಕಾನೂನಿನ ಪ್ರಕಾರ ಬಂಧಿತರಾಗಿರುವರು.

ಶ್ರೀ ರಾಮಕೃಷ್ಣ ಜಾಜುರ ಬಂಧನ

ಕೋಲ್ಲಾಪುರದ ಶ್ರೀ ರಾಮಕೃಷ್ಣ ಜಾಜುರವರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

ಹಮೀದ್ ಖಾಜಿಯವರ ಬಂಧನ

ಜಲಗಾಂವಿನ ಡಾ॥ ಅಬ್ದುಲ್ ಹಮೀದ್ ಖಾಜಿಯವರನ್ನು ಡಿಫೆನ್ಸ್ ಕಾನೂನಿನಂತೆ ಬಂಧಿಸಲಾಗಿದೆ.

ಕೃಷ್ಣಸ್ವಾಮಿಯರಿಗೆ ಶಿಕ್ಷೆ

ಶಾಸನಸಭಾ ಸದಸ್ಯರಾದ ಶ್ರೀ ಕೃಷ್ಣಸ್ವಾಮಿ ಭಾರತಿಯವರಿಗೆ ಸತ್ಯಾಗ್ರಹ ಹೂಡಿದ್ದಕ್ಕೆ ಒಂದು ವರ್ಷ ಕಠಿಣ ಶಿಕ್ಷೆ ಮತ್ತು ೫೦೦ ರೂ. ಜುಲ್ಮಾನೆ ತಪ್ಪಿದರೆ ಆರು ತಿಂಗಳು ಶಿಕ್ಷೆ ವಿಧಿಸಲಾಗಿದೆ.

THREE "S"'s OF SOUND BANKING

Service! — Safety! — Security!

The Canara Industrial & Banking Syndicate, Limited.

Head Office:—UDIPI, (S. India.)

PROVIDES THEM ALL AND INVITES YOU TO ENJOY THEM BY BEING ONE OF ITS OWN CLIENTALE.

ವಿಚಿತ್ರ ಪ್ರಪಂಚ

ಎರಡು ವರ್ಷವಾಗುವಾಗ ಮೈನೆರೆದ ಹುಡುಗಿ

ಅಮೆರಿಕದ ಹೌಸ್ಟನ್ ಎಂಬಲ್ಲಿಯ ಒಬ್ಬ ಬೇಸಾಯಗಾರನ ಒಬ್ಬ ಹುಡುಗಿ ಎರಡು ವರ್ಷ ಪ್ರಾಯವಾಗಬೇಕಾದರೆಯೇ ಮೈನೆರೆದಿರುವಳು. ಈಗ ಅವಳಿಗೆ ಐದು ವರ್ಷ. ಅಷ್ಟರಲ್ಲೇ ಅವಳು ವೃದ್ಧಾಪ್ಯದ ಲಕ್ಷಣಗಳನ್ನು ತೋರಿಸುತ್ತಿದ್ದಾಳೆ. ಇದೇ ರೀತಿ ಅವಳ ಜೀವನ ನಡೆದರೆ ಅವಳು ೨೦ ವರ್ಷವಾದರೂ ಬದುಕುವುದು ಕಷ್ಟವೆಂದು ತಜ್ಞರು ಹೇಳುತಿದ್ದಾರೆ. ಈ ಗಂಡಾಂತರದಿಂದ ಬದುಕಿಸುವುದಕ್ಕೋಸ್ಕರ ಅಮೆರಿಕದ ಅನೇಕ ವಿಜ್ಞಾನಿಗಳೂ, ಶರೀರಶಾಸ್ತ್ರಜ್ಞರೂ, ಡಾಕ್ಟರರೂ ಅವರ ಸಹಾಯಕ್ಕೆ ಬಂದು ನೆರೆದಿರುತ್ತಾರೆ. ಆದರೆ ಅವಳನ್ನು ಬದುಕಿಸುವ ಯಾವ ಉಪಾಯವೂ ಈ ತನಕ ಅವರಿಗೆ ಹೊಳೆದಿರುವುದಿಲ್ಲ!

ವಿಚಿತ್ರ ರಿಕಾರ್ಡು

ಕಿಲ್ಬರ್ನಿನ ಗಂಡಹೆಂಡಿರಿಬ್ಬರು ತಮ್ಮ ವಿವಾಹದ ಐವತ್ತನೇ ವರ್ಷದಿನವನ್ನು ಸ್ಥಾಪಿಸಿದ್ದಾರೆ. ಇವರಿಬ್ಬರು ಮಾರ್ಲಿಬನದ ಒಂದೇ ಊರಿನ ಒಂದೇ ಗಲ್ಲಿಯಲ್ಲಿ ಒಂದೇ ದಿನ ಒಂದೇ ಸಮಯ ಹುಟ್ಟಿದರು. ಮತ್ತೆ ಅವರಿಬ್ಬರಿಗೆ ಶೀಹಾನ ಎಂದು ಒಂದೇ ಹೆಸರಿಟ್ಟು ವಿದ್ಯಾಭ್ಯಾಸಕ್ಕಾಗಿ ಒಂದೇ ಶಾಲೆಗೆ ಕಳುಹಿಸಿದರು. ನಂತರ ಒಂದೇ ಪ್ರಾಯದಲ್ಲಿ, ಅಂದರೆ ೧೭ ವರ್ಷವಾಗುವಾಗ ಅವರಿಬ್ಬರು ಒಂದೇ ಇಗರ್ಜಿಯಲ್ಲಿ ಮದುವೆಯಾಗಿ ಈಗ ಅವರ ೫೦ ವರ್ಷಗಳು ಸುಖವಾಗಿ ಕಳೆದಿವೆ. ಅವರ ಸಂತೋಷ ಸ್ಮಾರಕವಾಗಿ ಅವರು ಒಂದೇ ದಿನ ತಮ್ಮ ವಿವಾಹದ ಸ್ವರ್ಣಮಹೋತ್ಸವವನ್ನು ಉತ್ಸಾಹದಿಂದ ಆಚರಿಸಿರುವರು.

ಕಣ್ಣಿಲ್ಲದೆ ನೋಡುತ್ತಾನೆ

ಅಮೆರಿಕದ ಲೋಸ್ ಏಂಜಲಿಸಿನಲ್ಲಿ ೧೩ ವರ್ಷ ಪ್ರಾಯದ ಒಬ್ಬ ಕುರುಡ ಹುಡುಗನಿದ್ದಾನೆ. ಪೆಟ್ ಮಾರ್ಕಿಸ ಎಂಬುದು ಅವನ ಹೆಸರು. ಅವನ ಕಣ್ಣುಗಳೆರಡೂ ಮುಚ್ಚಿಕೊಂಡಿವೆ. ಆದರೂ ಅವನು ಕಣ್ಣಿದ್ದವರಂತೆ ವಸ್ತು ಒಡವೆಗಳನ್ನು ಕಾಣಬಲ್ಲನು. ಅಮೆರಿಕದ ಪ್ರಸಿದ್ಧ ಡಾಕ್ಟರರೆಲ್ಲರು ಅವನನ್ನು ಪರೀಕ್ಷಿಸಿ ಅವನು ಕುರುಡನೆಂದು ಹೇಳಿದ್ದಾರಾದರೂ, ನೋಡುವ ಈ ಅದ್ಭುತ ಶಕ್ತಿಯ ರಹಸ್ಯವೇನೆಂದು ಅವರು ಹೇಳಲು ಅಸಮರ್ಥರಾಗಿರುವರು. ಅವನಿಗೆ ಪ್ರಾಚೀನ ಋಷಿ ಮುನಿಗಳು ಹೇಳಿದಂಥ ಏನಾದರೂ ಅಂತರ್ಚಕ್ಷು ಇರಬಹುದೆಂದೂ ಅಥವಾ ಏನಾದರೂ ವಿಚಿತ್ರ ಜ್ಞಾನಶಕ್ತಿ ಇರಬಹುದೆಂದೂ ಆ ಡಾಕ್ಟರರೂ ಅಭಿಪ್ರಾಯ ಕೊಟ್ಟಿದ್ದಾರೆ.

ನೊಣಕಡಿತದಿಂದ ವಾತ ಗುಣವಾಯಿತು

ಮಿಸ್ಸೂರಿಯ ಕರ್ನಲ್ ಫ್ಲಿಶ್ಕರ ಎಂಬುವರು ಅನೇಕ ವರುಷಗಳಿಂದ ವಾತರೋಗ ಪೀಡಿತರಾಗಿದ್ದರು. ಒಂದು ದಿನ ಅವರು ಜೇನುನೊಣಗಳಿಂದ ಮುತ್ತಲ್ಪಟ್ಟರು. ಅವು ಅವರನ್ನು ಐನೂರು ಬಾರಿ ಕಡಿದುವು. ಅವುಗಳ ಕಡಿತ ಬಾಧೆಯಿಂದ ಅವರು ಗುಣಮುಖರಾದಾಗ, ಅವರ ವಾತ ರೋಗವು ಸಂಪೂರ್ಣ ಅದೃಶ್ಯವಾಗಿತ್ತು! ಮಾತ್ರವಲ್ಲ ಅವರ ಶರೀರ ತೂಕವು ೨೯ ರಾತಲುಗಳಷ್ಟು ಹೆಚ್ಚಾಗಿತ್ತು! ಜೇನುನೊಣಗಳ ಕೊಂಡಿಯ ವಿಷದಲ್ಲಿ ವಾತರೋಗವನ್ನು ಗುಣಮಾಡುವ ಶಕ್ತಿ ಇರುವುದೆ?

ಗುರುತೇ ಇರದಿದ್ದರೂ ಮದುವೆಯಾಯಿತು

ಬ್ರಿಟಿಷ್ ನೌಕಾಪಡೆಯಲ್ಲಿ ಕೆಲಸಕ್ಕಿದ್ದ ಲೆಫ್ಟಿನೆಂಟ ಬ್ರಿಯಾನ ಎಂಬುವನು ರಜೆ ತೆಗೆದುಕೊಂಡು ಮನೆಗೆ ಹೊರಟಿದ್ದನು. ದಾರಿಯಲ್ಲಿ ಒಂದು ರೈಲ್ವೆ ಸ್ಟೇಶನಿನಲ್ಲಿ ಇಳಿಕೊಂಡಾಗ ಸಂಧ್ಯಾಕಾಲ ಆಗಿಹೋಗಿತ್ತು. ಅದೇ ಸಮಯ ಒಬ್ಬ ತರುಣಿ ಅವನನ್ನು ಎದುರುಗೊಂಡು 'ಬಂದೆಯಾ ಜಾರ್ಜ?' ಎಂದು ಒಸಸಿಂದ ಕೇಳುತ್ತಾ ಅವನ ಗಲ್ಲವನ್ನು ಮೆತ್ತಗೆ ಚುಂಬಿಸಿದಳು. ಅವನಿಗೆ ಆಶ್ಚರ್ಯವೂ ಸಂಕೋಚವೂ ಆಯಿತು. 'ನಾನು ಜಾರ್ಜನಲ್ಲವಲ್ಲ!' ಎಂದವನು ನಾಚಿಕೆಯಿಂದ ಹೇಳಿದ. 'ಹಾಗೆಯೊ? ನೀನು ನನ್ನ ದಾಮದಿ ಎಂದೆಣಿಸಿದ್ದೆ. ಮಂದ ಪ್ರಕಾಶದಲ್ಲಿ ತೋರಲೇ ಇಲ್ಲ' ಎಂದಳವಳು. ಆತನಿಗೆ ಶಿಷ್ಟಾಚಾರಕ್ಕೆ 'ಏನಾಯಿತದರಿಂದ? ಹಿಂದೆ ನಿನ್ನನ್ನು ಎಲ್ಲಿಯೋ ಕಂಡಹಾಗೆ ಕಾಣುತ್ತದೆ' ಎಂದ. ಸರಿ, ಮತ್ತೆ ಅವರೊಳಗೆ ಅಮಂದ ಪ್ರಕಾಶದಲ್ಲಿ ಏನೇನೋ ಮಾತುಕತೆ ನಡೆಯಿತು. ಪರಸ್ಪರ ಪರಿಚಯವಾಯಿತು. ಮತ್ತೆ ಎರಡು ವಾರಗಳ ಅನಂತರ ಅವರಿಬ್ಬರ ಮದುವೆಯು ಗಮ್ಮತ್ತೂ ನಡೆಯಿತು!

ಜೀವವಿಮೆಯೇ ಸುಲಭವಾದ ಕಂತುಗಳಲ್ಲಿ ಹಣ ಪಾವತಿ ಮಾಡಿ ನಿಸ್ಸಂದೇಹವಾಗಿ ತನ್ನ ಮುಪ್ಪಿನ ಕಾಲದಲ್ಲಿ ತನಗಾಗಿಯೂ ಅಥವಾ ತನ್ನ ಆಶ್ರಿತರಿಗಾಗಿಯೂ ಆರ್ಥಿಕ ಸ್ವಾತಂತ್ರ್ಯವನ್ನು ಖಚಿತಮಾಡಿಕೊಳ್ಳಬಹುದು ಹಣ ಶೇಖರಿಸಲು ಸಾಧ್ಯವಾದ ಮಾರ್ಗವು.

ಪ್ರತಿ ವರ್ಷವೂ ವಿವೇಚನಾಶಕ್ತರಾದ ಸಾವಿರಾರು ಜನರು ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ ಅಥವಾ ತಮ್ಮ ನಂತರ ತಮ್ಮ ಆಶ್ರಿತರಿಗಾಗಿಯೂ, ಅರ್ಥಿಕ ಸ್ವಾತಂತ್ರ್ಯದ ಅಡಿಗಲ್ಲನ್ನು ಅತ್ಯಂತ ಭದ್ರವಾದ ಮತ್ತು ಭಾರತೀಯ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಜನಪ್ರಿಯವಾದ 'ಓರಿಯಂಟಲ್' ನಲ್ಲಿ ತಮ್ಮ ಜೀವವಿಮೆಯನ್ನು ಮಾಡುತ್ತಾರೆ.

★

'ತಡಮಾಡಬೇಡಿರಿ'

ಇಂದೇ ಒಂದು 'ಓರಿಯಂಟಲ್' ಪಾಲಿಸಿ ತೆಗೆದುಕೊಳ್ಳಿ

★

ಓರಿಯಂಟಲ್

ಗೌ॥ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂ., ಲಿ.

ಸ್ಥಾಪನೆ: 874 ಮುಖ್ಯ ಕಛೇರಿ: ಬೊಂಬಾಯಿ

ವಿಶೇಷ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪರೇಡ್, ಬೆಂಗಳೂರು.

ಭಾರತದಲ್ಲೆಲ್ಲಾ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ಎಂಡ್ರೂಸ್ ಲಿವರ್ ಸ್ಸೋಲ್ಟ

ANDREWS LIVER SALT



ಸ್ವಚ್ಛವಾದ ಉದರವೇ ಆರೋಗ್ಯದ ಪ್ರಥಮ ಸೂತ್ರ

ನಿವೃತ್ತಿ ಪ್ರವೃತ್ತಿ ಮಾರ್ಗಗಳಲ್ಲಿ ಗೀತೆಯ ಸಂದೇಶ

ಅಮೂಲ್ಯವಾದೊಂದು ಜ್ಞಾನಭಂಡಾರ

[ಈ ವಾರದಲ್ಲಿ ಗೀತಾ ಜಯಂತಿಯು ಭಾರತದ ಎಲ್ಲಾ ಕಡೆಗಳಲ್ಲಿಯೂ ಆಚರಿಸಲ್ಪಡುತ್ತದೆ. ಭಗವದ್ಗೀತೆಯು ಭಾರತದಲ್ಲಿ ಸನ್ಯಾಸಿಗಳಿಂದ ಲೌಕಿಕರೆಲ್ಲರವರೆಗೆ ಅತ್ಯಂತ ಆದರದಿಂದ ಓದಲ್ಪಡುವ ಗ್ರಂಥ. ಅದರ ತತ್ವ ಮಹತ್ವವಾದುದು. ಅದರ ನೆನಪು ಇಲ್ಲಿ ಕೊಡಲಾಗಿದೆ.]

ಗೀತಾ ರಹಸ್ಯವನ್ನು ಬರೆದು, ಭಾರತೀಯರನ್ನು ತಮ್ಮ ಜೀವನಾದರ್ಶದ ಕುರಿತು ಎಚ್ಚರಿಸಿದ ಲೋಕಮಾನ್ಯ ತಿಲಕರು

ಲಕ್ಷೋಪಲಕ್ಷ ಸೈನ್ಯಗಳು ನೆರೆದ ಮಹಾ ರಣಾಂಗಣ. ದಾಯಾದ ಮತ್ಸರದಿಂದುಂಟಾದ ಮತ್ಸರಾಗ್ನಿಯು ಭೀಕರ ಯುದ್ಧದಲ್ಲಿ ಪರಿಣಾಮವನ್ನೈದುತ್ತಿರುವ ಸಮರಭೂಮಿ. ಅದೇ ಅದು, ಪ್ರಸಿದ್ಧವಾದ, ಹಸ್ತಿನಾವತಿ ರಾಜರಾದ ಕೌರವರು ಮರಣ ಹೊಕ್ಕಿದ್ದ ಕುರುಕ್ಷೇತ್ರ.

೦ ೦ ೦ ೦

ಇಕ್ಕಡೆಗಳಲ್ಲಿಯೂ ಉಭಯ ಪಕ್ಷದ ವೀರರು ಸಜ್ಜಾಗಿ ನಿಂತಿದ್ದರು: ತಮ್ಮ ತಮ್ಮ ಪರಾಕ್ರಮವನ್ನು ಮೆರೆಸಲು ಬಯಸುತ್ತಿರುವ ಸೈನಿಕರ ಉತ್ಸಾಹಪೂರಿತ ಜಯನಿನಾದವು ತುಂಬಿ ತುಳುಕುತ್ತಿದೆ. ಕುರುಪಿತಾಮಹರೇ ಮೊದಲಾದ ವೀರ ಯೋಧರೂ ನೆರೆದಿದ್ದಾರೆ. ಆ ರಣಾಂಗಣದಲ್ಲಿ ಅರ್ಜುನನ ಶಕ್ತಿಯನ್ನು ತೋರಿಸುವ ಸಮಯವಾಗಿತ್ತು. ಆದರೂ ಅರ್ಜುನನು ಯುದ್ಧದಲ್ಲಿ ಉತ್ಸುಕನಾಗಲಿಲ್ಲ.

ಇಕ್ಕೆಲಗಳಲ್ಲಿಯೂ ನೆರೆದಿರುವ ಸೈನ್ಯವನ್ನು ಕಂಡು ಭ್ರಾಂತನಾಗಿ ನಿಂತನು ಅರ್ಜುನನು. ಒಂದೆಡೆ ಆತನ ಕಣ್ಣುಗಳಿಗೆ ಗುರುಗಳ ಸಾಲೂ, ಇನ್ನೊಂದೆಡೆ ತನ್ನ ಹೃದಯವನ್ನು ವೀರಾವೇಶದಿಂದ ಹುರಿದುಂಬಿಸುತ್ತಿರುವ ವೈರಿಗಳ ಸಾಲೂ ತೋರಿದವು. ಅರ್ಜುನನು ಹೀಗಿರುತ್ತಲೂ ಯುದ್ಧಕ್ಕೆ ಇಳಿಯಲಾರ. ರಥದಲ್ಲಿ ಕುಳಿತು ತಲೆಯನ್ನು ತಗ್ಗಿಸಿ ನಿಂತನು. ರಥದಲ್ಲಿ ಸಾರಥಿಯಾಗಿ ನಿಂತಿರುವವನು ಶ್ರೀಕೃಷ್ಣನು. ಆಲೋಕನಾಟಕ ಸೂತ್ರಧಾರಿ!

೦ ೦ ೦ ೦

ಅಣ್ಣನ ಮುಂದೆ, ಪ್ರತಿಜ್ಞೆ ಮಾಡಿದ ಈ ವೀರ ಯೋಧನಿಗೆ ತಾನು ಯಾರೊಡನೆ ಕಾದಬೇಕೆಂಬುದು ಅದೇನೂ ಆಗ ತಿಳಿಯುವುದಿಲ್ಲ. ತನ್ನ ಮುಂದೆ ಗುರುಗಳು ನಿಲ್ಲುವರೆಂದಾದರೂ ಆತನಿಗೆ ತಿಳಿಯದಿರಲಿಲ್ಲ. ಹೀಗಿದ್ದೂ ಅರ್ಜುನನು ಈ ಸಮಯದಲ್ಲಿ ಮೌನವಾಗಿರುವನೆಂಬುದು ಯೋಗ್ಯವೆ? ಅರ್ಜುನನ ಈ ಕಳವಳದ ಅವಸ್ಥೆಯಲ್ಲಾದರೂ ತಾನು ಸಿಲ್ಕಿಸ್ತನಂತೆ ಕೃಷ್ಣನು ಮುಗುಳುನಗುತ್ತಾನೆ. ಒಂದೇ ಮನೆಯಲ್ಲಿ, ಒಬ್ಬನ ದುಃಖದಲ್ಲಿ, ಇನ್ನೊಬ್ಬನ ಸಂತೋಷ!

೦ ೦ ೦ ೦

ಶ್ರೀ ಕೃಷ್ಣಪರಮಾತ್ಮನ ನಗು ಬರಿಯ ಹುಸಿನಗುವಲ್ಲ. ಇಡೀ ಭರತಖಂಡಕ್ಕೆ ಅನರ್ಘ್ಯ ಬೆಲೆಯುಳ್ಳ ಒಂದು ಜೀವನ ತತ್ವವನ್ನು ತೋರಿಸಲು ಬಾಯಿ ತೆರೆಯುತ್ತಿರುವ ಅದೊಂದು ಮಧುಮಧುರ ಹಾಸ. ಅರ್ಜುನನ ಮನಸ್ಸಿನ ಅಹಂಕಾರವನ್ನು ಹೋಗಲಾಡಿಸಿ ಆತನಲ್ಲಿ ಜೀವನತತ್ವವನ್ನು ಬೇರೂರಿಸಬೇಕೆಂದು ಒಗೆದ ಕೃಷ್ಣನ ಅದೊಂದು ದೈವಿಕ ಹಾಸ. ಜಗತ್ತಿಗೇ ಅದು ದೊರೆತ ಒಂದು ದಿವ ಸಂದೇಶದ ಹೊಂಬೆಳಗು.

೦ ೦ ೦ ೦

ಯುದ್ಧದಲ್ಲಿ ನಿಸ್ಪೃಹತೆಯನ್ನು ಹೊಂದಿ ನಿವೃತ್ತಿ ಮಾರ್ಗಾಭಿಮುಖನಾದ ಅರ್ಜುನನನ್ನು ಕಂಡು ಕೃಷ್ಣನು ರಥದಿಂದ ಮೆಲ್ಲಗಿಳಿದು ಸಮೀಪಿಸುವನು, ಎಚ್ಚರಿಸುವನು. ಕೃಷ್ಣನು ಅರ್ಜುನನನ್ನು ಪ್ರವೃತ್ತಿಮಾರ್ಗಾಭಿಮುಖನನ್ನಾಗಿ ಮಾಡಲು, ಕರ್ತವ್ಯಬುದ್ಧಿಯನ್ನು ಇಡೀ ಪ್ರಪಂಚಕ್ಕೆ ಅರುಹುವ, ದಿವ್ಯವಾದ ಗೀತೆಯನ್ನು ಹೊರಗೆಡಹುತ್ತಾನೆ. ಪವಿತ್ರವಾದ ಗೀತಾಮೃತವನ್ನು, ಸಾಂಖ್ಯ, ಸಂನ್ಯಾಸ ಮೊದಲಾದ ದಿವ್ಯ ಮಧ್ವಾಹ್ನದೊಂದಿಗೆ ಬೆರಸಿ ಉಣಿಸುವನು. ಅರ್ಜುನನು ಉಣ್ಣುತ್ತಾನೆ. ಕ್ರಮಕ್ರಮದಿಂದ ಅರ್ಜುನನಲ್ಲಿ ನೆಲೆಗೊಂಡಿದ್ದ ಗರ್ವವು ಮಾಯವಾಗಿ ಜ್ಞಾನೋದಯವಾಗುವುದು. ತನ್ನ ಕರ್ತವ್ಯದ ಅರಿವಾಗುವುದು. ಕರ್ತವ್ಯ ತತ್ಪರನಾಗುವನು. ಮತ್ತೆ ಆತನು ಹೇಡಿಯಾಗಲಿಲ್ಲ. ರಣಧೀರ. ರಣಕಾರ್ಯವನ್ನು ತಿಳಿದ ಅರ್ಜುನನು ಗೀತೆಯ ಶಕ್ತಿಯಿಂದ ಬಿಲ್ಲನೆತ್ತಿ ಯುದ್ಧೋತ್ಸುಕನಾದನು. ವೀರ ವಿಜಯಿಯಾದನು.

೦ ೦ ೦ ೦

ಯಾವ ಗೀತಾಮೃತವು ಕುರುಕ್ಷೇತ್ರದಲ್ಲಿ ನಿವೃತ್ತಿಮಾರ್ಗವನ್ನವಲಂಬಿಸಿದ ಅರ್ಜುನನಿಗೆ ಪ್ರವೃತ್ತಿಮಾರ್ಗದ ಕರ್ತವ್ಯಜ್ಞಾನವನ್ನು ಬೋಧಿಸಿತೋ ಅದು ಇಂದು ಭಾರತೀಯ ಜನಾಂಗಕ್ಕೆ ವಿವೇಕ ಮಾರ್ಗದರ್ಶಿನಿಯಾದ, ದಿವ್ಯಪ್ರಭೆಯನ್ನು ಬೀರುವ ಒಂದು ಜ್ಯೋತಿಯಾಗಿದೆ, ದಿವ್ಯಗಾನವಾಗಿದೆ. ಮನುಷ್ಯನು ನಿಜವಾದ ಮನುಷ್ಯನಾಗಬೇಕಾದರೆ ಗೀತೆಯ ಗುಟ್ಟು ತಿಳಿಯಬೇಕು. ಗೀತೆಯನ್ನೋದಬೇಕು. ಗೀತೆಯು ಮುಮುಕ್ಷುವಿಗೆ ಮುಕ್ತಿಪ್ರದಾಯಿನಿಯೂ ಸಂಸಾರಿಗೆ ಲೌಕಿಕ ಮಾರ್ಗದರ್ಶಿನಿಯೂ ಆಗಿದೆ. ಈ ತೆರನಾದ ಎರಡು ಗುಣಗಳು ಬೇರೆ ಯಾವ ಗ್ರಂಥದಿಂದ ದೊರಕಬಲ್ಲದು?

—ಕೆ. ಎಸ್. ಕಾಯತಾರ್ಯ.

ನಮ್ಮ ಕಂಪೆನಿಯಲ್ಲಿ ★ ಬೆಂಕಿಯ ಅನಾಹುತ ★ ಕಡಲಿನ ಅಪಾಯ ★ ಮ ಇತರ ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು.

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/- ನಿಶ್ಚಿತವಾಗಿ ಕೊಡಲ್ಪಡುತ್ತದೆ! ★

ಕಾಯಂ ನಿಶ್ಚಿತ ಬೋನಸ್ ರೂ. 10/- + ಸರ್ವಸಾಧಾರಣ ಬೋನಸ್ ರೂ. 11/ ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ದಿ ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾರಾಯಣ್ ಆರ್ಗನೈಸರ್, ವೆಂಕಟರಮಣ ಪೇಟೆ, ಮಂಗಳೂರು.

ಕೆ. ಕೆ. ಶ್ರೀನಿವಾಸನ್ ಬ್ರಾಂಚ್ ಮ್ಯಾನೇಜರ್ 4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

NOTICE

Wanted a Harijan Clerk for the Attur and Jawahar Bank, Ltd., Mangalore. Candidates must be S. S. L. C. who have passed Banking. Salary Rs. 15-30. Apply to the undersigned.

Office of the Bank, Canara High School Road. 14—11—1940 — A. Vaikunta Prabhu, Managing Director, Attur & Jawahar Bank, Ltd., Mangalore.

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಕೆನರಾ ಹೈಸ್ಕೂಲ್ ರಸ್ತೆ, ಮಂಗಳೂರು

ಈ ಬ್ಯಾಂಕಿಗೆ 15–20 ವರ್ಷ ಪ್ರಾಯದೊಳಗಿನ I ಫೋರ್ಮ್ ವರೆಗೆ ಕಲಿತ ಒಬ್ಬ ಎಟೆಂಡರ್ ಬೇಕಾಗಿದೆ. ಸಂಬಳ ರೂ. 8ರಿಂದ 12ರ ವರೆಗೆ ಕೊಡಲಾದೀತು. ಅರ್ಜಿದಾರರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು. ಹರಿಜನ ಜಾತಿಯವರ ಅರ್ಜಿಗೆ ಹೆಚ್ಚಿನ ಗಮನ ಕೊಡಲಾದೀತು.

ಮಂಗಳೂರು 14-11-'40 — ಅತ್ತೂರು ವೈಕುಂಠ ಪ್ರಭು, ಮೆನೆಜಿಂಗ್ ಡೈರೆಕ್ಟರ್, ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್, ಮಂಗಳೂರು.

ಹಿಟ್ಲರ್

ಹಿಟ್ಲರ್ ಹೇಳಿದಂತೆ ಜರ್ಮನರು ಕುಣಿದಾಡಿದರು!

ಚರ್ಚಿಲರು ಬರೆದ ಹಿಟ್ಲರನ ಜೀವನ ಪರಿಚಯ

ಪರರಾಜ್ಯಗಳ ಮೇಲೆ ಹಿಟ್ಲರನ ಪ್ರತೀಕಾರದ ಬಯಕೆ

[ಲೇಖಾಂಕ ೪]

[ಹಿಂದಿನ ಲೇಖಾಂಕಗಳಲ್ಲಿ ಹಿಟ್ಲರನು ಅಧಿಕಾರಕ್ಕೆ ಬಂದುದು, ವರ್ಸೈಲಿ ಒಪ್ಪಂದದ ಅನ್ಯಾಯದಿಂದ ಕೆರಳಿದ ಜರ್ಮನರ ಯುದ್ಧ ತಯಾರಿ, ಮುಂದೆ ಜರ್ಮನರನ್ನು ತನ್ನ ಹೇಳಿಕೆಗೆ ಅನುಗುಣವಾಗಿ ಪಳಗಿಸಿದ ಹಿಟ್ಲರನ ಮುಂದಾಳುತನ—ಇವುಗಳನ್ನು ಕೊಟ್ಟಿದೆ.]

ಜರ್ಮನಿಯಲ್ಲಿ ರಾಷ್ಟ್ರೀಯ ಸಮತಾವಾದದ ಪಕ್ಷದ ನಾಯಕನಾಗಿ ರಾಷ್ಟ್ರದ ಅತೀ ಉನ್ನತಸ್ಥಾನವನ್ನು ಹಿಟ್ಲರನು ಪಡೆದನು; ಈ ಸಮತಾವಾದದ ಆಂದೋಲನದಲ್ಲಿ ಜರ್ಮನ ಸಾಮ್ರಾಜ್ಯದ ಸಣ್ಣ ರಾಜ್ಯಗಳು ನಾಶವಾದವು; ಜರ್ಮನಿಯು ಏಕತ್ವವನ್ನು ಪಡೆಯಿತು. ಈ ಸಮಯದಲ್ಲಿ ಹಿಟ್ಲರನು ಜರ್ಮನಿಯಲ್ಲಿದ್ದ ಬೇರೆ ಪಕ್ಷದವರನ್ನು ನಾಶಮಾಡಿದನು ಅಥವಾ ಬಲಾತ್ಕಾರದಿಂದ ಅವುಗಳನ್ನು ಹಿಟ್ಲರನು ಹಿಮ್ಮೆಟ್ಟಿಸಿದನು; ಪ್ರಸಂಗ ಗವರ್ನಮೆಂಟಿನವರು ಗುಪ್ತವಾಗಿ ತಯಾರಿಸಿದ ಯುದ್ಧ ಸನ್ನಾಹವು ಸಂಪೂರ್ಣವಾಗಿ ಯುದ್ಧ ಸಾಮಗ್ರಿ ತಯಾರಿಸಲು ಸಿದ್ಧವಾಗಿತ್ತು; ಯಾರೂ ಈ ರೀತಿ ಈ ಹೆಜ್ಜೆ ಇಡಲು ಧೈರ್ಯ ಪಡಲಿಲ್ಲ. ಮಿತ್ರಮಂಡಳದವರು ಮಧ್ಯಕಾಲದಲ್ಲಿ ಪ್ರವೇಶ ಮಾಡಿ ತಮ್ಮ ಸನ್ನಾಹವನ್ನು ಕುರುವಿನಲ್ಲಿಯೇ ನಾಶಮಾಡುವರು ಎಂಬ ಭಯವು ಜರ್ಮನಿಯಲ್ಲಿ ಆ ವರೆಗೂ ಇತ್ತು. ಆದರೆ ಹಿಟ್ಲರನು ಹಿಂಸಾತ್ಮಕಗಳಿಂದಲೂ ಪರದೇಶದವರ ಮೇಲಿರುವ ದ್ವೇಷದಿಂದಲೂ ಅಧಿಕಾರವನ್ನು ಹೊಂದಿದುದರಿಂದ ಅವನು ಈ ವಿಷಯ ಹಿಂಜರಿಯಲಿಲ್ಲ; ತನಗೆ ಅಧಿಕಾರ ಬರುವ ಮೊದಲಿನ ಜರ್ಮನ ಸರಕಾರದ ಯುದ್ಧ ತಯಾರಿಯ ವಿಷಯವೂ ತನ್ನ ಭಯುಧ ಸಹಾಯದ ವಿಷಯವೂ ಹಿಟ್ಲರನು ಈ ವರೆಗೆ ಅವರನ್ನು ಹೊಗಳಲಿಲ್ಲ; ಅದನ್ನು ಈ ವರೆಗೆ ಒಪ್ಪಲೂ ಇಲ್ಲ. ಅವನೂ ಗೋರಿಂಗನೂ ಸಹ ಅತೀ ಗುಪ್ತವಾದ ಯುದ್ಧ ಸನ್ನಾಹವನ್ನು ಮಾಡಲು ಸಾಮಗ್ರಿ ತಯಾರು ಮಾಡಲು ಅನುಮತಿಯನ್ನು ಕೊಟ್ಟರು. ಈ ಭೂಲೋಕದಲ್ಲಿ ಇಂಥ ಗುಪ್ತ ಸನ್ನಾಹವನ್ನು ಈ ವರೆಗೆ ಯಾರೂ ಮಾಡಲಿಲ್ಲ. ತನಗೆ ಅಧಿಕಾರ ಸಿಕ್ಕಿದರೆ ತಾನು ಜರ್ಮನಿಯಲ್ಲಿ ಎಂದರೆ ಬದಲಾವಣೆಯನ್ನು ಮಾಡುವೆನು ಎಂತಲೂ ತಾನಲ್ಲದೆ ಬೇರೆ ಯಾರಿಂದಲೂ ಈ ಬದಲಾವಣೆಗಳನ್ನು ಮಾಡಲು ಸಾಧ್ಯವಿಲ್ಲವೆಂತಲೂ ಹಿಟ್ಲರನು ಎಲ್ಲೆಲ್ಲಿಯೂ ಪ್ರಕಟಿಸುತ್ತಿದ್ದನು. ಯುರೋಪಿನಲ್ಲಿ ಜರ್ಮನಿಯ ಪೂರ್ವಗೌರವವನ್ನು ತಾನು ಸಂಪಾದಿಸುತ್ತೇನೆ, ಯುರೋಪಿನಲ್ಲಿ ಪರದೇಶೀಗಳು ಇಲ್ಲದಂತೆ ನಾನು ಮಾಡುತ್ತೇನೆ—ಈ ತನ್ನ ದೀಕ್ಷೆಯನ್ನು ಕೈಗೂಡುವ ಕ್ರಮಗಳು ನಮಗೆ ಈಗಲೇ ತಿಳಿದಿವೆ. ಜರ್ಮನಿಯು ತನ್ನ ಪೂರ್ವಗೌರವನ್ನು ಯುದ್ಧ ಸನ್ನಾಹದಿಂದ ಪಡೆಯಬೇಕು. ಈ ಯುದ್ಧ ಸನ್ನಾಹದ ಕೆಲಸದಲ್ಲಿ ಜನರನ್ನು ಕೆಲಸಕೊಟ್ಟು ಅವರನ್ನು ಉದ್ಯೋಗಿಗಳಾಗಿ ಮಾಡಬೇಕು—ಈ ರೀತಿ ೧೯೩೩ರಿಂದ ಜರ್ಮನಿಯಲ್ಲಿ ಜನರ ಪೂರಾ ಚೈತನ್ಯವೂ ಈ ಯುದ್ಧ ಸನ್ನಾಹಕ್ಕೇನೆ ಕೊಡಲ್ಪಟ್ಟಿತು. ಯುದ್ಧ ಸನ್ನಾಹವು ಸೈನಿಕರ ಶಿಬಿರದಲ್ಲಿ ವಾಯುಹಡಗಗಳಿರುವ ಮೈದಾನಿನಲ್ಲಿ ಉದ್ಯಮಗಳಲ್ಲಿ ಮಾತ್ರವಲ್ಲ ಶಾಲೆಗಳಲ್ಲಿಯೂ ಕಾಲೇಜುಗಳಲ್ಲಿಯೂ ಸಣ್ಣ ಮಕ್ಕಳು ಕಲಿಯುವ ಶಾಲೆಯಲ್ಲಿಯೂ ಈ ಸನ್ನಾಹವು ತನ್ನ ತಲೆತೋರಿಸಿತು. ಜರ್ಮನ ಸರಕಾರದ ಪ್ರತಿ ಒಬ್ಬನೂ ಪ್ರತಿ ಸಂಸ್ಥೆಯೂ ಯುದ್ಧ ಕಾರ್ಯದಲ್ಲಿ ಮಗ್ನವಾಯಿತು. ಯುದ್ಧ ತಯಾರಿಯಲ್ಲಿ ಇಡೀ ಜರ್ಮನ ಜನಾಂಗವು ಆಸಕ್ತವಾಯಿತು.

ಈ ಗಂಡಾಂತರವು ಸಂಪೂರ್ಣವಾಗಿ ೧೯೩೬ರಲ್ಲಿ ಭೂಲೋಕಕ್ಕೆ ತಿಳಿಯಿತು. ಹಿಟ್ಲರನು ತನ್ನ ಗುಪ್ತ ಸನ್ನಾಹವನ್ನು ನಿದ್ರೆಯಲ್ಲಿಯೂ ಅಜಾಗ್ರತೆಯಲ್ಲಿಯೂ ಇದ್ದ ಭೂಲೋಕದ ಜನರ ಮುಂದೆ ತೋರಿಸಿದನು. ಜರ್ಮನಿಯು ಪೂರ್ಣ ಶಸ್ತ್ರಪಾಣಿಯಾಗಿತ್ತು. ಯುದ್ಧ ಸಾಮಾನುಗಳನ್ನು ತಯಾರು ಮಾಡುವ ಫೆಕ್ಟರಿಗಳು ರಾತ್ರಿ ಹಗಲೂ ಕೆಲಸವನ್ನು ಮಾಡಿಕೊಂಡಿದ್ದವು. ಬಾಲ್ಟಿಕಿನಲ್ಲಿ ಅವನ ಸಬ್‌ಮಾರೈನ ಸೈನ್ಯವೂ ಜರ್ಮನಿಯ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ ಅವನ ಅಂತ್ಯಪೀಡದ ವಾಯು ಸೈನ್ಯವೂ ಸಹಾ ಇಡೀ ಭೂಲೋಕವನ್ನು ತಲ್ಲಣಗೊಳಿಸಿತು. ಲೋಕವು ಈ ಗಂಡಾಂತರದಲ್ಲಿ ಈಗ (೧೯೩೯) ಇದೆ. ಒಬ್ಬ ವ್ಯಕ್ತಿಯು ೧೯೧೪-೧೯೧೮ರ ಮಹಾಯುದ್ಧದ ಫಲಿತಾಂಶವನ್ನು ನಾಶಮಾಡಿ ಜಯಶೀಲರಾದ ಮಿತ್ರಸರಕಾರದವರ ಅಜಾಗ್ರತೆಯಲ್ಲಿ ಆತ್ಮ ಸಂತುಷ್ಟಿಯನ್ನು ವ್ಯಕ್ತಗೊಳಿಸಿದನು. ಜಯಶೀಲರು ಹಿಂದುಳಿದವರಾದರು. ಪರಾಜಿತನು ಮುಂದುವರಿದು ಹೋಗಿರುವನು. ಇದಕ್ಕೆಲ್ಲ ಹಿಟ್ಲರನೊಬ್ಬನೇ ಕಾರಣಭೂತನು; ಅವನ ಸ್ಥಿರ ಪ್ರಯತ್ನದಿಂದ ಜರ್ಮನಿಯು ಈ ರೀತಿ ಸಿದ್ಧವಾಯಿತು.

ಈ ಕಾರಣಗಳಿಂದ ಹಿಟ್ಲರನ ವಿಷಯ ನ್ಯಾಯವಾದ ಮತ್ತು ಸತ್ಯ ಸಂಗತಿಗಳನ್ನು ತಿಳಕೊಳ್ಳುವರೆ ಜನರಿಗೆ ಕುತೂಹಲತೆಯಿರುವುದೇನೂ ಆಶ್ಚರ್ಯವಲ್ಲ; ಅವನ ಕೈಯಲ್ಲಿರುವ ಈ ಮಹಾ ಬಲತ್ಕಾರವನ್ನು ಅವನು ಹೇಗೆ ಉಪಯೋಗಿಸುವನು? ಹಿಂದಿನ ಅವನ ಚರಿತ್ರೆಯನ್ನು ನೋಡಿದರೆ ನಮಗೆ ಮನೋವ್ಯಾಕುಲತೆಯೂ ಕಾಂಕ್ಷೆಯೂ ಉಂಟಾಗದೆ ಇರಲಾರದು. ಜರ್ಮನಿಯ ಮೇಲಣ ದೇಶಾಭಿಮಾನದಿಂದ ಹಿಟ್ಲರನು ಮುಂದರಿಸುವುದಲ್ಲ; ಅವನ ಮುನ್ನಡೆಗೆ ಪರರಾಜ್ಯದ ಮೇಲಣ ದ್ವೇಷವು ಸಹಾ ಕಾರಣ. ಹಿಟ್ಲರನು ಬರೆದಿರುವ ಮೈನ್ ಕ್ಯಾಂಫ್ ಎಂಬ ಜೀವನ ಚರಿತ್ರೆಯನ್ನು ಓದಿದರೆ ಅವನು ಫ್ರೆಂಚರನ್ನು ಮಾತ್ರ ದ್ವೇಷಿಸುವುದಲ್ಲ ಬೇರೆ ರಾಜ್ಯಗಳನ್ನು ಸಹ ದ್ವೇಷಿಸುವನೆಂಬುದು ವ್ಯಕ್ತವಾಗುವುದು. ಈ ದ್ವೇಷವು ಅವನ ಹತ್ತಿರ ಇರುವ ಜನರ ಆತ್ಮವನ್ನೆ ಸುಟ್ಟಿರುವುದು.

K. L. Kudva.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು

ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಪರಮ ರಹಸ್ಯ

ನಯನಾನಂದಕರವಾದ ಸೌಂದರ್ಯಕ್ಕೆ
ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದೆ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾನ್ವಿತ ರಸಾಯನವೇ ಲೋಧ್ರ. ಸ್ತ್ರೀಯರಿಗೆ ಆರೋಗ್ಯವು ಮುಖ್ಯ. ಆದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು

ಪಾಪದ ಫಲ

[ನಿನ್ನೆ ಸಂಚಿಕೆಯಿಂದ ಮುಂದುವರಿದುದು]

...ಆಕೆಯ ವೃದ್ಧಸ್ತನಗಳನ್ನು ಕೇಳಿ ಆತನು ಮತ್ತಷ್ಟು ಧೈರ್ಯಗೊಂಡನು; ಒಂದು ಹೆಜ್ಜೆ ಮುಂದರಿದನು. ಸುಶೀಲೆಯೂ ಹಿಂದೆಹಿಂದೆ ಸರಿದಳು. ಆದರೆ ಸುಂದರನ ಸುದೃಢ ಹಸ್ತವು ಆಕೆಯ ಕೋಮಲ ಕರವನ್ನು ಹಿಡಿದುಬಿಟ್ಟಿತು.

ಸುಶೀಲೆ ವಿಚಾರಶೂನ್ಯಳಾದಳು. ಹೇಗೋ ಆತನ ಹಿಡಿತದಿಂದ ಕೈಬಿಡಿಸಿಕೊಂಡಳು. ಚಟಕ್ಕೆಂದು ಆತನ ಕೆನ್ನೆಗೊಂದು ಏಟನ್ನು ಏರಿಸಿಬಿಟ್ಟಳು. ಅದರೊಡನೆ "ಟನ್" ಎಂಬ ಶಬ್ದವಾಯಿತು. ಸುಶೀಲೆಯ ಉಂಗುರವು ಬೆರಳಿನಿಂದ ಜಾರಿ ಸುಂದರನ ಬಳಿ ಬಿದ್ದಿತ್ತು.

ಸುಂದರನು ಉಂಗುರವನ್ನು ದಿಟ್ಟಿಸಿ ನೋಡಿದನು! ಪುನಃ ನೋಡಿದನು!! ತಿರುಗೊಮ್ಮೆ ಕಣ್ಣು ಬಿಟ್ಟು ನೋಡಿದನು!!! ಭಯವಾಯಿತು. ನಾಚಿಕೆಯಾಯಿತು, ಆತನ ಮೈಯೆಲ್ಲ ಬೆವರಿಹೋಯಿತು. ಮರುಕ್ಷಣದಲ್ಲಿಯೇ ಆತನ ದೃಷ್ಟಿ ಕೆಳಗಾಯಿತು.

★

ಅದೊಂದು ಬಡ ಗುಡಿಸಲಿನಲ್ಲಿ ಆಗ ತಾನೇ ಹುಟ್ಟಿದ ಮಗುವಿನ ಆಕ್ರಂದನವು ಕೇಳಿಬರುತ್ತಿದ್ದಿತು. ಸಮಯ ಮಧ್ಯರಾತ್ರಿ. ಹಣತೆಯೊಂದು ಮೆಲ್ಲನೆ ಉರಿಯುತ್ತಿದ್ದು, ಗುಡಿಸಲಿನ ಭೀಕರ ದೃಶ್ಯವನ್ನು ತೋರಿಸುವಂತಿತ್ತು.

ಗುಡಿಸಲಿನಲ್ಲಿ ಹದಿನೇಳು ವರ್ಷದ ತರುಣಿಯೊರ್ವಳು ಅತ್ತಿತ್ತ ಹೊರಳಾಡುತ್ತಿದ್ದಳು. ಬಳಿಯಲ್ಲಿಯೇ ಆಕೆಯು ಆಗ ತಾನೇ ಹಡೆದ ಶಿಶುವು ಒಂದೇ ಸವನೆ ಚೀರಾಡುತ್ತಿದ್ದಿತು. ಹತ್ತಿರವೇ ದಾದಿಯೊಬ್ಬಳು ಕುಳಿತಿದ್ದಳು. ಮೂಲೆಯಲ್ಲಿ ಭಯಚಕಿತನಾದ ಯುವಕನು ಕುಳಿತು ಪಿಟ್ಟೆನ್ನದೆ ಇದೆಲ್ಲವನ್ನೂ ನೋಡುತ್ತಿದ್ದನು.

"ಮಗುವನ್ನೊಮ್ಮೆ ಇತ್ತ ಕೊಡು ದಾದಿ. ಒಮ್ಮೆಗೆ ಅದರ ಮುಖವನ್ನಿಷ್ಟು ನೋಡಿಯಾದರೂ ಪ್ರಾಣವನ್ನು ನೀಗುತ್ತೇನೆ;" ಎಂದಾಯುವತಿಯು—ಆ ಮಗುವಿನ ತಾಯಿ—ತನ್ನ ದಾದಿಯನ್ನು ಅಶ್ರುಪೂರ್ಣ ದೃಷ್ಟಿಯಿಂದ ನೋಡುತ್ತಾ ನುಡಿದಳು.

ದಾದಿಯು ಶಿಶುವನ್ನದರ ತಾಯಿಯ ಕೈಗಿತ್ತಳು. ಎಷ್ಟೆಂದರೂ ತಾಯ್ತನದ ಕರುಳಲ್ಲವೆ? ಶಿಶುವನ್ನೊಮ್ಮೆ ಕಣ್ತುಂಬ ನೋಡಿ ಮುದ್ದಾಡಿದಳು. ಆ ಮೇಲೆ ಮೆಲ್ಲನೆ ಅದನ್ನು ದಾದಿಯ ಕೈಯ್ಯಲ್ಲಿ ಕೊಟ್ಟಳು.

ಯುವತಿಯು ತನ್ನ ಕೈಬೆರಳಿನಿಂದೊಂದುಂಗುರವನ್ನು ತೆಗೆದು ದಾದಿಯ ಕೈಗಿತ್ತು, "ಇದನ್ನು ಈ ಮಗುವು ದೊಡ್ಡದಾದೊಡನೆ ಅದರ ಬೆರಳಿಗೆ ತೊಡಿಸು" ಎನ್ನುತ್ತಿದ್ದಂತೆಯೇ ಆಕೆಯ ವದನವು ನಿಸ್ತೇಜವಾಗುತ್ತ ಬಂದಿತು.

ದಾದಿಯು ಕಣ್ಣುಗಳಿಂದ ಆಕೆಗೋಸ್ಕರ ... ಎರಡು ಹನಿಗಳುದುರಿ ... [illegible]

ದೇಹದ ಮೇಲೆ ಬಿದ್ದವು. ಮಗುವೊಮ್ಮೆ ಚಿಟ್ಟನೆ ಚೀರಿದ ಶಬ್ದವು ಗುಡಿಸಲಿನ ವಾತಾವರಣದ ಭೀಕರ ಮೌನದಲ್ಲಿ ಲೀನವಾಯಿತು. ಮೂಲೆಯಲ್ಲಿ ಕುಳಿತಿದ್ದ ಯುವಕನಿದನ್ನು ನೋಡುತ್ತಲೇ ಇದ್ದನು.

★

"ಸುಶೀಲಾ" ಕಾಮಾಕ್ಷಿಯ ಭಯಕಂಪಿತಸ್ವರವು ಕೇಳಿಸಿತು. ಸುಶೀಲೆಯು ಬೇಗನೆ ಹೊರಬಂದಳು. ಕಾಮಾಕ್ಷಿಯು, "ನೋಡು ಸುಶೀಲಾ, ಸುಂದರನು ತನ್ನ ಕೋಣೆಯಿಂದನ್ನೂ ಹೊರಬಂದಿಲ್ಲ. ಕಾರಣವು ತಿಳಿಯುವುದಿಲ್ಲ. ಆತನ ಕೋಣೆಗೆ ಹೋಗಿ ನೋಡು." ಎಂದಾಜ್ಞಾಪಿಸಿದಳು.

ಸುಶೀಲೆಯು ಮೆಲ್ಲಮೆಲ್ಲನೆ, ಭಯದಿಂದ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಸುಂದರನ ಕೋಣೆಯ ಬಳಿ ಬಂದಳು. ಬಾಗಿಲು ಹಾಕಿದ್ದಿತು. ಮೆಲ್ಲನೆ ದೂಡಿದಳು. ಬಾಗಿಲು ತೆರೆಯಿತು. ಒಳಗೆ ಇಣುಕಿ ನೋಡುತ್ತಿದ್ದಂತೆ ಆಕೆಗೆ ಆಶ್ಚರ್ಯವೂ ಭಯವೂ ಉಂಟಾಯಿತು. ಸುಂದರನ ಹಾಸಿಗೆಯು ಬರಿದಾಗಿದ್ದಿತು.

ಒಳಗೆ ಹೋಗಿ ನೋಡಲು ಹಾಸಿಗೆಯ ಮೇಲೆ ಒಂದು ಪತ್ರವಿದ್ದಿತು. 'ಕುಮಾರಿ ಸುಶೀಲಾ ಬಾಯಿಗೆ' ಎಂಬ ಮೇಲ್ವಿಳಾಸವಿದ್ದುದನ್ನು ಕಂಡು ಪತ್ರವನ್ನೋದ ತೊಡಗಿದಳು.

"ಮಗು ಸುಶೀಲಾ,

ಮೊದಲಿಗೆ ನನ್ನನ್ನು ಕ್ಷಮಿಸಿದೆನೆಂದು ಹೇಳಿ ನಂತರ ಮುಂದೆ ಓದು. ನನ್ನಂತಹ ಪಾಪಿ ಇನ್ನು ಮುಂದೆ ಜೀವಿಸಬಾರದು. ನೀನು ನನ್ನನ್ನು ಕ್ಷಮಿಸುವೆಯೆಂದು ನಂಬಿ ಈ ಕೆಳಗಿನ ವಿಷಯವನ್ನು ನಿನಗೆ ತಿಳಿಸಬಿಚ್ಛಿಸುತ್ತೇನೆ.

ನಿನಗೆ ಜನ್ಮವಿತ್ತ ಸ್ತ್ರೀಯು ನನ್ನ ಗುಪ್ತ ಪ್ರಣಯಿನಿಯಾಗಿದ್ದಳೆಂದು ತಿಳಿಸಲು ನನಗೆ ನಾಚಿಕೆಯಾಗುವುದು. ಆಕೆಗಿನ್ನು ಮದುವೆಯಾಗಿರಲಿಲ್ಲ. ನನ್ನ ಸುಳ್ಳು ನೆವಗಳಿಗೆ, ಆಶೆಗಳಿಗೆ ಆಕೆ ಬಲಿಬಿದ್ದು ನನ್ನ ಹುಸಿ ಪ್ರೇಮಕ್ಕೆ ಆಹುತಿಯಾದಳು. ನನ್ನ ಪ್ರೀತಿಯ ಕುರುಹೆಂದು ನಾನಾಕೆಗೆ ನನ್ನುಂಗುರವನ್ನು ಕೊಟ್ಟಿದ್ದೆನು.

ನನ್ನ ಮನದ ಬಯಕೆಯು ಪೂರೈಸುವ ತನಕ ಆಕೆಯನ್ನು ಪ್ರೀತಿಸುವವನಂತೆ ನಟಿಸಿದೆನು. ಕಡೆಗಾಕೆಯನ್ನು ತ್ಯಜಿಸಿದೆನು. ಏಕೆಂದರೆ ನಮ್ಮಿಬ್ಬರ ಪಾಪವೃಕ್ಷವು ಹೂಬಿಟ್ಟಿದ್ದಿತು.

'ಅದೊಂದು ದಿನ ಆಕೆ ತನ್ನ ದಾದಿಯ ಮುಖಾಂತರ ನನ್ನನ್ನು ಬರಹೇಳಿದಳು. ನಾನು ದಾದಿಯನ್ನು ಹಿಂಬಾಲಿಸಿದೆನು. ದಾದಿಯ ಬಡ ಗುಡಿಸಲಿನಲ್ಲಿ ನಿನ್ನ ತಾಯಿಯು ಮಲಗಿದ್ದಳು. ಅಂದು ರಾತ್ರಿ ಆಕೆ ನಿನ್ನನ್ನು—ನಮ್ಮಿಬ್ಬರ ಪಾಪದ ಫಲವಾದ ನಿನ್ನನ್ನು—ಧರೆಗೊಪ್ಪಿಸಿದ್ದಳು.

ಅಂದು ನಿನ್ನ ತಾಯಿಯು ನಾನಾಕೆಗೆ ಕೊಟ್ಟಿದ್ದ ಉಂಗುರವನ್ನು ನಿನಗೆ ತೊಡಿಸುವಂತೆ ಹೇಳಿ ದಾದಿಯ ಕೈಗಿತ್ತಳು. ನಂತರ ಆಕೆ ಇಹಲೋಕವನ್ನು ಬಿಟ್ಟಳು. ನಾನೂ ... [illegible] ... ನೀನು

ನಿನ್ನೆ ತೋಟದಲ್ಲಿ ನಡೆದ ಪ್ರಸಂಗವನ್ನು ಮರೆತು ನನ್ನನ್ನು ಕ್ಷಮಿಸು. ನಾನೊಬ್ಬ ಪಾಪಿ, ಅಧಮ; ಸ್ವಪುತ್ರಿಯನ್ನೇ ಕೆಡಿಸಲೆತ್ನಿಸಿದ ನೀಚ. ದಯವಿಟ್ಟು ನನ್ನನ್ನು ಕ್ಷಮಿಸು ಪುತ್ರಿ.

ಇಂತಿ ನಿನ್ನ ಪಾಪಿ ಪಿತ."

ಪತ್ರವನ್ನೋದಿ ಸುಶೀಲೆಗೆ ಸಿಡಿಲು ಬಡಿದಂತಾಯಿತು. ದುಃಖದಿಂದ ತುಂಬಿದ ಹೃದಯದಿಂದ ಕೋಣೆಯಿಂದ ಹೊರಬಂದಳು.

ಮರುದಿನ ಊರ ಹೊರಗಿನ ಕೆರೆಯಲ್ಲೊಂದು ಶವವು ತೇಲುತ್ತಿದ್ದುದನ್ನು ಯಾರೋ ಎತ್ತಿ ದಂಡೆಗೆ ಹಾಕಿದರು. ಅದೊಬ್ಬ ಯುವಕನ ಮೃತದೇಹವಾಗಿತ್ತು. ಅದರ ಅಂಗಿಯ ಕಿಸೆಯಲ್ಲೊಂದು ಕಾಗದವಿದ್ದಿತು. ಬಿಡಿಸಿ ನೋಡಲಾಗಿ "ಪಾಪದ ಫಲ" ಎಂದು ಎರಡೇ ಎರಡು ಶಬ್ದಗಳಿದ್ದವದರಲ್ಲಿ!

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬೆಳೆಯುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

¼ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ.ಸಿ.ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ,

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್: ಷಾ ಕಂಪೆನಿ, ಹಂಪನಕಟ್ಟಾ ಮಂಗಳೂರು

Ready for Sale!

1941

SHARADA POCKET DIARIES

Small Size	0-5-0
" " (with pocket)	0-6-0
Big Size	0-9-0
" " (with pocket)	0-11-0

SHARADA PRESS, MANGALORE.

ಗಾಂಧೀ ಆಶ್ರಮದಲ್ಲಿ

ಚೀನದ ಜ್ಞಾನಯೋಗಿ

ತ್ಯಾಚಿತಾವರ ಆಗಮನ ಪರಿಚಯ

[ಶ್ರೀ. ಸಿ. ಪಿ. ಕಾಮತ್, ನಲ್ವಾಡಿ ವರ್ಧಾ ಇವರಿಂದ]

[ಡಾ। ತ್ಯಾಚಿತಾವರು ಚೀನದ ಶಿಷ್ಯಮಂಡಳಿ ಸಹಿತರಾಗಿ ಭಾರತವನ್ನು ಸಂದರ್ಶಿಸಿರುವರು; ಕಳೆದ ವಾರ ಅವರು ಗಾಂಧಿಜಿಯವರ ಆಶ್ರಮಕ್ಕೆ ಬಂದು, ಇಬ್ಬರು ಮಹಾಪುರುಷರ ಸತ್ ಸಂದರ್ಶನವಾದ ವಿಷಯ ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿರುವೆವು. ಗಾಂಧೀ ಆಶ್ರಮವಾಸಿಗಳಾಗಿರುವ ಶ್ರೀ. ಕಾಮತರು ಚೀನದ ಜ್ಞಾನಯೋಗಿಯ ಸ್ವರೂಪ ಪರಿಚಯವನ್ನು ತಮ್ಮ ಸರಲ ಸುಂದರ ಶೈಲಿಯಲ್ಲಿ ಮಾಡಿಕೊಟ್ಟಿದ್ದಾರೆ]

ಭಾರತೀಯ ವಿದ್ಯಾಲಯದಲ್ಲಿ ಡಾ। ಚಿತಾವರು ಭಾಷಣ ಕೊಟ್ಟಾಗ ಬರೆದುಕೊಂಡ ಚಿತ್ರ

ಬಹು ದಿವಸದಿಂದ ಸೇವಾಗ್ರಾಮಸ್ಥರು ಚೀನದ ಸತ್‌ಚಿತ್/ಸುವಾರ್ತಾ ಮಂಡಳದ ಬರುವಿಕೆಯನ್ನು ಲವಲವಿಕೆಯಿಂದ ಇದಿರುನೋಡುತ್ತಿದ್ದರು. ಚೀನಾ ಸ್ವಾತಂತ್ರ್ಯ ಸಂಗ್ರಾಮದ ನಾಯಕರು ತಮ್ಮ ಸರಕಾರ ಮಂಡಳದ ಪ್ರತಿನಿಧಿ ಕಾರಿಯೊಂದಿಗೆ ಮಹಾತ್ಮರಿಗೊಂದು ಪತ್ರ ಕಳುಹಿಸಿರುವರೆಂಬ ಕುತೂಹಲವು ಎಲ್ಲರ ನಿರೀಕ್ಷಣೆಗೆ ಕಾರಣವಾಗಿತ್ತು.

ಮಹಾತ್ಮರಿಗೆ ಪತ್ರ

ಆ ಪತ್ರವನ್ನು ಮಹಾಮಾನ್ಯ ತ್ಯಾಚಿತಾವ್‌ರವರು ಇಲ್ಲಿಗೆ ತಂದರು. ಸುಮಾರು ಹತ್ತು ಮಂದಿಗಳಿಂದ ಕೂಡಿದ್ದ ಈ ಚೀನೀ ರಾಯಭಾರ ವಂಗಡವು ಜಮುನಾಲಾಲರ ಅತಿಥಿಗೃಹದಲ್ಲಿ ತಂಗಿತ್ತು. ಇವರಿಗಾಗಿಯೇ ಬಜಾಜರು ಬೊಂಬಾಯಿಯಿಂದ ತುರಾತುರಿಯಾಗಿ ಧಾವಿಸಿ ಬಂದರು.

ತ್ಯಾಚಿತಾವ್‌ರವರ ಪರಿಚಯವು ಇಷ್ಟರಲ್ಲಿ ಎಲ್ಲರಿಗೂ ತಕ್ಕಮಟ್ಟಿಗೆ ಆಗಿರುವುದರಿಂದ ಅವರ ಉನ್ನತಸ್ಥಾನ ಪದವಿಗಳ ಕುರಿತು ಬರೆಯುವ ಅವಶ್ಯಕತೆ ಇಲ್ಲ. ಚೀನದ ಕೇಂದ್ರ ಸರಕಾರದ ಓರ್ವ ಪ್ರಭಾವಶಾಲಿ ಸದಸ್ಯರಿರುವರು.

ವ್ಯಕ್ತಿ ಪರಿಚಯ

ಶರೀರ ಪ್ರಮಾಣದಲ್ಲಿ ಗಾಂಧಿಜಿಯವರಷ್ಟೆ ಎನ್ನಬಹುದು. ಮುಖವರ್ಣ ಹೊಳೆಯುವ ಕೆಂಪು ಹಳದಿ ಮಿಶ್ರಣ. ದೂರದಿಂದ ಕಂಡ ಕೂಡಲೇ ಆದರ ಮನ್ನಣೆಗಳಿಗೆ ಯೋಗ್ಯವೆಂದೆನಿಸುವ ಪ್ರಶಾಂತ, ಗಂಭೀರ ಮುಖಭಾವ. ಇವರನ್ನು ಸಭ್ಯತನದ ಮೂರ್ತಿ ಎಂದರೂ ಎನ್ನಬಹುದು. ಬೌದ್ಧ ಧರ್ಮೀಯರ ಗುಣವೆಂಬಂತಹ ಸರಳತೆ ಸಭ್ಯತೆಗಳೇ ಇವರ ಪ್ರತಿಯೊಂದು ಚರ್ಯೆಯಲ್ಲಿ ವ್ಯಕ್ತ ತೋರುತ್ತಿರುವ ಮುಖ್ಯ ಗುಣ ವಿಶೇಷಗಳು.

ತ್ಯಾಚಿತಾವ್‌ರವರು ಸದಾ ಚೀನೀ ಉಡುಪಿನಲ್ಲಿಯೇ ಇರುತ್ತಾರೆ. ಕೈಯಲ್ಲಿ ಜಪಮಾಲೆ ಎಲ್ಲಾ ಸಮಯದಲ್ಲಿಯೂ ಇರುವುದೊಂದು. ಪ್ರಾರ್ಥನಾಭ್ಯಾಸದಲಿ ಮತ್ತು ಮತೀಯ ಶ್ರದ್ಧೆಯಲ್ಲಿನ ಇವರ ಆಳವಾದ ಭಕ್ತಿಯನ್ನು ತೋರಿಸುವುದು.

ವಿಶಾಲ ರಾಷ್ಟ್ರದೃಷ್ಟಿ

ಇಷ್ಟಿದ್ದರೂ ಡಾ. ತ್ಯಾಚಿತಾವ್‌ರವರು ಅಂಧಶ್ರದ್ಧೆಯವರಲ್ಲ. ವಿಶಾಲ ದೃಷ್ಟಿ ಭಾವನೆಯುಳ್ಳವರು. ಪರಿಶುದ್ಧ ಆಚಾರ ಭಾಷಣ ಮಾತುಕತೆಗಳಿಂದ ಗೊತ್ತಾಗುತ್ತದೆ. ಇವರು ಚೀನದಲ್ಲಿ ಮಹಾಪಂಡಿತರೆಂಬ ಕೀರ್ತಿಯನ್ನು ಗಳಿಸಿದ್ದು, ನೋಡಲು ಸರ್ವ ಸಾಮಾನ್ಯ ಚೀನೀಯನಂತೆ ಕಂಡರೂ ಅತ್ಯಾಧುನಿಕ ನಾಗರೀಕತೆಯ ಸಂಪರ್ಕವುಳ್ಳವರಿದ್ದಾರೆಂದು ಅವರ ಸಂಗಾತಿಯವರಿಂದ ತಿಳಿದುಬರುತ್ತದೆ.

ತ್ಯಾಚಿತಾವ್‌ರವರು ಭಾಷಣಗಳನ್ನು ಚೀನೀ ಭಾಷೆಯಲ್ಲಿಯೇ ಕೊಡುವರು. ಅವರು ಇತರ ಭಾಷೆಗಳನ್ನು ಕಲಿಯಲು ಸಮಯವನ್ನು ಹಾಳುಮಾಡಲಿಷ್ಟಪಡಲಿಲ್ಲವಂತೆ. ಅವರ ಸ್ವಂತ ಸೆಕ್ರೆಟರಿಯವರು ಒಳ್ಳೇ ಇಂಗ್ಲಿಷ್ ಬಲ್ಲವರಿದ್ದಾರೆ.

ಪ್ರವಾಸದ ಉದ್ದೇಶ

ಈ ಚೀನೀ ಮಂಡಳಿಯಲ್ಲಿ ಕ್ರೈಸ್ತರೂ ಕನ್‌ಫ್ಯೂಸಿ ಮತೀಯರೂ ಇದ್ದಾರೆ. ಹಿಂದುಸ್ಥಾನದ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ—ಮುಖ್ಯವಾಗಿ ಮುಖಂಡ ತ್ಯಾಚಿತಾವ್‌ರವರ ಇಚ್ಛೆ ಮೇರೆಗೆ ಬೌದ್ಧ ವ್ಯಕ್ತಿಗಳ ಪರಿಚಯ ಮಾಡುವುದೇ ಇವರ ಮುಖ್ಯ ಉದ್ದೇಶವಂತೆ.

ಅನ್ನ ಮತ್ತು ಹಣ್ಣುಗಳೇ ತ್ಯಾಚಿತಾವ್‌ರವರ ಮುಖ್ಯ ಆಹಾರ. ಅವರು ಚಾ, ಕಾಫಿ ಮತ್ತು ತಂಬಾಕು ಸೇವನೆಯ ದುರಭ್ಯಾಸಗಳುಳ್ಳವರಲ್ಲ.

ಮಹಾತ್ಮರ ಉಪದೇಶ

ಮಹಾತ್ಮರು ಅವರಿಗೆ [illegible]

ತ್ಯಾಚಿತಾವರು ಇದನ್ನು ಮೊದಲೇ ಬಲ್ಲವರಿರಬೇಕು. ಮಹಾತ್ಮರು ಅದರ ಆಧುನಿಕ ಪ್ರಯೋಗವನ್ನೂ ವಿವರಿಸಿದರು. ಮಹಾತ್ಮೆಯನ್ನೂ ಬಣ್ಣಿಸಿದರು.

ಭಾರತ ವರ್ಷವು ಹಲವು ಧರ್ಮಗಳ [illegible]

[illegible] ಮತ ಕೊಟ್ಟಿತು. ನಮ್ಮ ಮತ್ತು ಚೀನಿಯರ ಹಿಂದಿನ ಬಾಂಧವ್ಯ ಇಂದೂ ಮುಂದುವರಿಯಲು ಈ ಪರಸ್ಪರ ಮುಖಂಡರ ಭೇಟಿಯಿಂದ ಸಹಾಯವಾಗು

ಕಾಲ್ಮರಿ ಕುಂಟಾಗುವ ಯೌವನತ್ವದ ವ್ರಣಗಳಿಂದ ವಿಮುಕ್ತರಾಗಿರಿ

ಜ್ಯಾಂಬಕು ಅಸಹ್ಯವಾದ ಕಲೆಗಳನ್ನು ಎಂದೂ ಬಿಡುವುದಿಲ್ಲ

ಹುಣ್ಣು, ಪದ್ದು ಸಣ್ಣ ಗಾಯ ಮೊದಲಾದವುಗಳ ಮೇಲೆ ಯಾವಾಗಲೂ ರಾತ್ರಿ ಜ್ಯಾಂಬಕನ್ನು ಹಚ್ಚಿದರೆ ನಿಮಗೆ ಅದರ ವಿಷಯ ಚಿಂತೆಯೇ ಬೇಡ. ಜ್ಯಾಂಬಕಿನಲ್ಲಿರುವ ಗಿಡ ಮೂಲಿಕೆಗಳ ಔಷಧಿಯು ರೋಮಕೂಪಗಳಲ್ಲಿ ಪ್ರವೇಶಿಸಿ ಕ್ಷೀಣವಾದ ನರನಾಡಿಗಳನ್ನು ಬಲಗೊಳಿಸುತ್ತದೆ. ಜ್ಯಾಂಬಕು ಮೈಚರ್ಮವನ್ನು ಆರೋಗ್ಯವಾಗಿಯೂ ಎಲ್ಲಾ ಸಮಯದಲ್ಲಿಯೂ ಮೃದುವಾಗಿಯೂ ಇರಿಸುತ್ತದೆ. ಜ್ಯಾಂಬಕು ವ್ರಣ, ಹುಣ್ಣು, ಭಯಂಕರ ಗಜ್ಜಿ, ಗಾಯ ಮುಂತಾದ ಎಲ್ಲಾ ಚರ್ಮರೋಗಗಳನ್ನು ಗುಣಪಡಿಸುತ್ತದೆ ಎಂದು ಎಲ್ಲಾ ಕಡೆಗಳಲ್ಲಿಯೂ ಡಾಕ್ಟರರೂ ನರ್ಸುಗಳೂ ಹೊಗಳುತ್ತಾರೆ. ಜ್ಯಾಂಬಕು ಮುಲಾಮು ರೂ. 1 ಮತ್ತು 2 4 0, ಜ್ಯಾಂಬಕು ಸೋಪು ರೂ. 1 ಜ್ಯಾಂಬಕು ಪೌಡರು ರೂ. 1 ಏಜಂಟ್ಸ್ ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಿ. ಟಿ. ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬಿನಿಂದ ವಿರಹಿತವಾದುದು

ಆರೋಗ್ಯ ಮತ್ತು ಸೌಂದರ್ಯಕ್ಕೆ

ಈ ಇಮ್ಮಡಿ ಗುಣದ ಸಾಬೂನನ್ನೇ ಉಪಯೋಗಿಸಿರಿ

ಕಾಂತಿಯನ್ನುಂಟುಮಾಡುವ ಮತ್ತು ಔಷಧಿಯುಕ್ತವಾದ ಇಮ್ಮಡಿ ಗುಣಗಳಿರುವ ಸಾಬೂನು ಕುಟಿಕೂರಾ ಟಾಯ್ಲೆಟ್ ಸಾಬೂನು (Cuticura Toilet Soap) ನಿಮ್ಮ ಪ್ರಿಯ ಚರ್ಮವನ್ನು ಸೌಂದರ್ಯವುಳ್ಳದ್ದಾಗಿಯೂ ಆರೋಗ್ಯಸ್ಥಿತಿಯಲ್ಲಿರಿಸುವ ಕೆಲಸ ನಿರ್ವಹಿಸುತ್ತದೆ. ಈ ಸಾಬೂನಿನಿಂದ ಹೊರಟ ಮಹತ್ವದ ನೊರೆಯು ಚರ್ಮರಂಧ್ರಗಳಿಂದ ಕಲ್ಮಷಗಳನ್ನು ತೆಗೆಯುತ್ತದೆ. ಈ ಇಮ್ಮಡಿ ಗುಣಗಳಿರುವ ಸೌಂದರ್ಯಯುಕ್ತವಾದ ಸಾಬೂನನ್ನು ಉಪಯೋಗಿಸಿ ಸೌಂದರ್ಯವನ್ನು ಗಳಿಸಿರಿ.

ಕುಟಿಕೂರಾ ಸಾಬೂನು (Cuticura Soap) ಎಣ್ಣೆಯಂತೆ ಗುಣವುಳ್ಳದ್ದಾಗಿದೆ. ದೊರಗಾದ ಚರ್ಮವನ್ನು ನುಣುಪಾಗಿರಿಸುತ್ತದೆ.

ಸೌಮ್ಯ ಕ್ರಿಮಿನಾಶಕ ಗುಣವುಳ್ಳದ್ದು—ಚರ್ಮವನ್ನು ಸ್ವಚ್ಛವಾಗಿರಿಸುವುದು. ಮುದ್ದಣ, ಚರ್ಮವ್ಯಾಧಿಗಳಿದ್ದರೆ ಕುಟಿಕೂರಾ ಮುಲಾಮನ್ನು (Cuticura Ointment) ಉಪಯೋಗಿಸಿರಿ. ಇದರ ಕ್ರಿಮಿನಾಶಕ ಗುಣಯುಕ್ತವಾದ ಔಷಧಿಯು ಚರ್ಮವ್ಯಾಧಿಯನ್ನು ಕೂಡಲೇ ಗುಣಪಡಿಸುವುದು. ಸ್ನಾನದ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಉತ್ತಮವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ-ಸಾಬೂನು

CUTICURA SOAP

ವಿಜ್ಞಾನಯುಗ

ಮುತ್ತು ಕೊಟ್ಟರೆ ರೋಗ ಬರುವುದು

ಅಮೇರಿಕದಲ್ಲಿ ಮುತ್ತು ಕೊಡುವ ಅಭ್ಯಾಸವನ್ನು ನಿಷೇಧಿಸಲು ಒಂದು ಆಂದೋಲನವು ಆರಂಭವಾಗಿದೆ. ನ್ಯೂಯೋರ್ಕಿನ ಕ್ಷಯರೋಗಸಂಘದ ಡಾಕ್ಟರ್ ಮಿ. ಬಾಸಿಲ್ ಜಿ ಯೂಜ್ ಎಂಬವರೇ ಈ ಆಂದೋಲನದ ಸೂತ್ರಧಾರರಾಗಿರುವರು. ಮುತ್ತು ಕೊಡುವದರಿಂದ ಕ್ಷಯರೋಗದಂಥ ಅನೇಕ ರೋಗಗಳು ಒಬ್ಬರಿಂದ ಒಬ್ಬರಿಗೆ ಹರಡುವದೆಂದೂ, ಅದರಿಂದ ಪ್ರಪಂಚದಲ್ಲಿ ಪ್ರತಿವರ್ಷ ಸಾವಿರಾರು ಮಂದಿ ಸಾವಿನ ಬಲಿವೇದಿಯ ಮೇಲೆ ಬಲಿಯಾಗುತಿದ್ದಾರೆಂದೂ ಅವರು ಸಾಧಾರಣವಾಗಿ ಹೇಳಿದ್ದಾರೆ. ಈ ರೋಗಗಳ ಪ್ರಾಬಲ್ಯವನ್ನು ಕಡಿಮೆ ಮಾಡುವುದಕ್ಕೋಸ್ಕರ ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತವೆ. ಈ ಎಲ್ಲಾ ಆರ್ಥಿಕ ಸಾಮಾಜಿಕ ಹಾನಿಗೆ ಒಬ್ಬರನ್ನೊಬ್ಬರು ಮುತ್ತು ಕೊಡುವ ಪದ್ಧತಿಯೇ ಕಾರಣವಾಗಿದೆ ಎಂದು ಅವರು ಸಾರಿರುತ್ತಾರೆ.

ಮೊಳೆತ ಧಾನ್ಯಗಳು ಉತ್ತಮ ಆಹಾರವಾಗಿದೆ

ಹಣ್ಣುಹಂಪಲು ಮತ್ತು ಹಸುರು ತರಕಾರಿಗಳಲ್ಲಿ ಪೋಷಕ ಪದಾರ್ಥಗಳು ತುಂಬಾ ಇರುತ್ತದೆ. ಅದರೆ ಇವು ಎಲ್ಲಾ ಋತುಮಾನಗಳಲ್ಲಿ ದೊರೆಯುವದಿಲ್ಲ. ಪರಂತು ಕಡಲೆ, ಹೆಸರು, ತೊಗರಿ, ಹುರುಳಿ ಮೊದಲಾದ ಧಾನ್ಯಗಳನ್ನು ನೀರಲ್ಲಿ ನೆನೆಹಾಕಿ, ಮೊಳಕೆ ಬಂದ ತರುವಾಯ ಹಸಿಯಾಗಿಯೇ ತಿಂದರೆ ಅವುಗಳಿಂದ ಹಣ್ಣುಹಂಪಲು, ಹಸುರು ತರಕಾರಿಗಳಿಂದ ದೊರೆಯುವಷ್ಟು ಉತ್ತಮ ಪೋಷಕ ಪದಾರ್ಥಗಳು ಶರೀರಕ್ಕೆ ಧಾರಾಳವಾಗಿ ದೊರೆಯುವವೆಂದು ಅಮೇರಿಕದ ಗುಡ್‌ಹೆಲ್ತ್ ಎಂಬ ಪತ್ರಿಕೆ ಬರೆಯುತ್ತದೆ. ಒಹಿಯೋ ಯುನಿವರ್ಸಿಟಿಯ ವಿಜ್ಞಾನ ಪಂಡಿತರಾಗಿರುವ ಡಾ| ಓಸ್ಕರ ಏರ್ಫ ಎಂಬವರೂ, ಡಾಕ್ಟರ್ ಫ್ರಾನ್ಸಿನ ಪೊಟ್ಟೆಂಜರ ಎಂಬವರೂ ನಾನಾ ಪರೀಕ್ಷೆಗಳನ್ನು ನಡೆಸಿ ಮೇಲಿನ ಅಭಿಪ್ರಾಯವನ್ನು ಸಮರ್ಥಿಸಿರುವುದಲ್ಲದೆ ಮೊಳಕೆ ಬಂದ ಹಸಿಯ ಧಾನ್ಯಗಳನ್ನು ತಿನ್ನುವುದರಿಂದ ಪಶುಪ್ರಾಣಿ ಮತ್ತು ಮನುಷ್ಯರಿಗೆ ಕ್ಷಯರೋಗದ ಭೀತಿ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುವರು.

ಅದೃಶ್ಯ ವಿಮಾನಗಳು

ಈಗಿನ ಯುರೋಪಿನ ಯುದ್ಧದಲ್ಲಿ ಬ್ರಿಟಿಷರು ಜರ್ಮನರ ವಿರುದ್ಧ ಕಣ್ಣಿಗೆ ಕಾಣದಂಥ ವಿಚಿತ್ರ ವಿಮಾನಗಳನ್ನು ಉಪಯೋಗಿಸುತ್ತಿರುವರಾಗಿ ಸಮಾಚಾರವುಂಟು. ಜೊಸೇಫ ಡಸ್ಸಿಂಜರ ಎಂಬ ಪ್ರಸಿದ್ಧ ಐಂದ್ರಜಾಲಕರು ಇಂಥ ವಿಮಾನಗಳನ್ನು ತಯಾರಿಸುವ ಕ್ರಮಗಳನ್ನು ಕಂಡುಹಿಡಿದಿದ್ದರಂತೆ. ಈ ಕ್ರಮಗಳು ಹೇಗೋ ಬ್ರಿಟಿಷರಿಗೆ ಗೊತ್ತಾಗಿರುವವೆಂದು ಅವರು ಹೇಳುತ್ತಿರುವರು.

ಗಾಳಿಯಲ್ಲಿ ಹಾರುವ ಪ್ರಸಂಗ

ವಸ್ತುಗಳ ಭಾರಕ್ಕೆ ಭೂಮಿಯ ಗುರುತ್ವ, ಶಕ್ತಿ ಅಥವಾ ಕೇಂದ್ರ ಆಕರ್ಷಣ ಶಕ್ತಿಯು ಕಾರಣವಾಗಿದೆ. ಈ ಕೇಂದ್ರಾಕರ್ಷಣ ಶಕ್ತಿಯನ್ನು ಭೂಮಿಯ ತಿರುಗುವ ಶಕ್ತಿಯು ಇದಿರಿಸುತ್ತದೆ. ಆದ್ದರಿಂದ ಒಂದು ವಸ್ತುವಿನ ಭಾರವು ಭೂಮಿಯ ಅಕ್ಷಕ್ಕೆ ಸಮೀಪವಾದಂತೆ ಹೆಚ್ಚಾಗುತ್ತಲೂ, ಮಧ್ಯರೇಖೆಗೆ ಸಮೀಪವಾದಂತೆ ಕಡಿಮೆಯಾಗುತ್ತಲೂ ಇರುತ್ತದೆ. ಪರಂತು ಭೂಮಿಯ ತಿರುಗುವ ವೇಗವು ಹೆಚ್ಚಾದಂತೆ ಅದರ ಗುರುತ್ವ ಶಕ್ತಿಯು ಕಡಿಮೆಯಾಗುವುದು. ಕೆಲವು ವಿಜ್ಞಾನಿಗಳು ಲೆಕ್ಕ ಮಾಡಿ ಹೇಳಿರುವ ಪ್ರಕಾರ ಭೂಮಿಯ ತಿರುಗುವ ವೇಗವು ಈಗಿನದಕ್ಕಿಂತ ಹದಿನೇಳು ಹದಿನೆಂಟು ಪಾಲಷ್ಟು ಹೆಚ್ಚಾದರೆ, ಮತ್ತೆ ಭೂಮಧ್ಯರೇಖೆಯ ಮೇಲೆ ಅಥವಾ ಅದಕ್ಕೆ ಸಮೀಪವಾಗಿರುವ ಯಾವತ್ತು ವಸ್ತು ಒಡವೆಗಳಿಗೆ ಭಾರವೇ ಇಲ್ಲದಂತಾಗಿ ಅವು ಯಾವಾಗಲೂ ಗಾಳಿಯಲ್ಲಿ ಹಾರುತ್ತಿರುವಂತಾಗಬಹುದು! ಆಗ ಅಲ್ಲಿ ಆ ವಸ್ತು ಒಡವೆಗಳ ಮೇಲೆ ಭೂಮಿಯ ಕೇಂದ್ರ ಆಕರ್ಷಣ ಶಕ್ತಿಯೇ ಕಾಣಿಸಿಕೊಳ್ಳಲಾರದಂತೆ.

ಸೈನಿಕ ಚಲನೆಯನ್ನು ತೋರಿಸುವ ಟೊರ್ಪೆಡೋ

ಚಿಕಾಗೋದ ಟೆಲಿವಿಜನ್ ಅಗ್ರಗಾಮಿಗಳಾದ ಮಿ| ಯು. ವಿ. ಸಾನಾಬ್ರಿಯಾ ಎಂಬವರು ಕಂಡುಹಿಡಿದಿರುವ ಒಂದು ವಿಜಾತೀಯ ಟೊರ್ಪೆಡೋ, ಯುದ್ಧಪ್ರಪಂಚದಲ್ಲೇ ಮಹಾಕ್ರಾಂತಿಯನ್ನು ಉಂಟುಮಾಡುವದಾಗಿದೆ. ಸಮುದ್ರದಲ್ಲಿ ಶತ್ರುದಳಗಳ ಯುದ್ಧನಾವೆಗಳೊಳಗೆ ಸಂಗ್ರಾಮವು ನಡೆಯುತ್ತಿರುವ ಕಾಲದಲ್ಲಿ ಈ ಟೊರ್ಪೆಡೋದಲ್ಲಿರುವ ಒಂದು ಯಂತ್ರಸಲಕರಣೆಯು ವೈರಿದಳದ ಯುದ್ಧನಾವೆಗಳ ಚಲನೆಯ ಚಿತ್ರಗಳನ್ನು ಅನೇಕ ಮೈಲುಗಳ ದೂರದಲ್ಲಿರುವ ಮಿಲಿಟರಿ ಠಾಣೆಗೆ ವಾಯುತೆರೆಗಳ ಮೂಲಕ ಕಳುಹಿಸಿಕೊಡಬಲ್ಲುದು. ಆ ಚಿತ್ರಗಳನ್ನು ತಿಳಿದು ಬೇಕಾದಲ್ಲಿಗೆ ಹೊಸ ಯುದ್ಧನಾವೆ ಅಥವಾ ಬೇರೆ ಧ್ವಂಸಕಗಳನ್ನು ಕಳುಹಿಸಿ ಶತ್ರುಗಳನ್ನು ನಿಗ್ರಹಿಸಲಿಕ್ಕೆ ಇದು ಬಹಳ ಅನುಕೂಲವಾಗಿದೆ. ಅಮೆರಿಕದ ಮಿಲಿಟರಿ ಖಾತೆಯವರು ಈ ಶೋಧವನ್ನು ಬಹಳ ರಹಸ್ಯದಲ್ಲಿ ಇಟ್ಟಿರುತ್ತಾರೆ.

ಉಜ್ವಲ ನಾರ ಪತ್ರಿಕೆಯಾದ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

HALFTONE & LINE
BLOCK MAKING
UNDERTAKEN
Sharada Press,
MANGALORE

BHUVANENDRA PRODUCTS LTD.,
KATAPADI, S. K.

Why Doctors prescribe
"BHUVANENDRA"
NARAYANA TAILA
Because it sets right
the nervous system and gives good relief
from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!
ಯಾವ ಕಾರಣದಿಂದ?
'ಭುವನೇಂದ್ರ ನಾರಾಯಣ ತೈಲ'
ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.
ಸ್ಥಳೀಯ ಸ್ವೀಕೆಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ. ದ. ಕನ್ನಡ.

ದಿ ಕಂಬೈನ್ಡ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ★ ಕೊಡಿಯಾಲಬೈಲು.

ತಾ. 12-12-1940ರಿಂದ — ತಾ. 24-12-1940ರ ವರೆಗೆ

ಸೀತಾನದಿ ಜಾನುವಾರು ಸಂತೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮಾಸಿಕಸ್ರಾವವು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂತತಿಯು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಗುಣವಾಗುವುದಿಲ್ಲ. ನೋಡದೇ ಪೂರ್ತಿ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೆಟು—ಡಾ. ವೈದ್ಯ ಎಲ್. ಸಿ. ಪಿ. ಎಸ್. ಕೆಳನಾದಾರೂ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಇಲ್ಲ. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜೆ, S. M. C.

ಸಾಹುಕಾರ ಶ್ರೀನಿವಾಸರಂಗಪ್ಪೈ

[ಸ್ಥಾಪನೆ: ಕ್ರಿ. ಶ. 1858]

ಉಜ್ವಲ ಕಾಂತಿಯ

ವಜ್ರಗಳಿಗೆ

ನೂಲು ಮತ್ತು ಕೈಮಗ್ಗದ ವಸ್ತುಗಳ

ಖಾತ್ರಿ ವ್ಯಾಪಾರಕ್ಕೆ

ಸಾಹುಕಾರ ಮಹಾಲ್, ಮಂಗಳೂರು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲ್ಲಾಲ್, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

THE

Canara Banking Corporation Ltd.,

(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2½% ,,

Particulars of other kinds of deposits on application.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum, Savings Bank Deposits at 4½% per annum

—FIXED DEPOSITS—

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director.*

Regd. No. M/340

ಸ್ವದೇಶಾಭಿಮಾನಿ

ಸಂಪುಟ 34] ಶುಕ್ರವಾರ 6—12—1940 [ಸಂಚಿಕೆ 49

(ESTABLISHED 1908)

The Bombay Life Assurance Company, Ltd.,

FIGURES FOR 1939

Completed business exceeds	Rs 1 42 Crores
Total Funds exceed	Rs 1 52 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time Thisis the unique opportunity to Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut.	Car Street, Mangalore.	Central Station Road, Trivandrum.
Gautam Nivas, Charni Road, Girgaum, Bombay No. 4.	Post Box No. 337 Mount Road, Madras.	Visweswarapuram Circle, Bangalore City.

(Regd)

ಅಮೃತಾಂಜನ

ಕಲಿವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೆಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ... ಕಂಪೆನಿಯಲ್ಲಿ ದೊರೆಯುವುದು.

ಇಂದು ಸಾವಿರಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
Swadeshabhimani . Estd 1906

KANNADA ILLUSTRATED WEEKLY

ನೋಟೀಸು

R.E.P. 480/1940
in O.S. 147/35
R. I. A. 585/87

By order of the Court.

B. Achyuth Baliga,
Pleader for Petitioners
Puttur, 7-12-40.

ನೋಟೀಸು

O.S. 130/1940

ಸದರಿ ನೋಟೀಸಿನ ತಕ್ಕ ವ್ಯಾಜ್ಯವು ತಾ. 20—12—1940ನೇ ತಾರೀಖಿಗೆ ವಿಚಾರಣೆಗಿರುತ್ತದೆ.

B. Ramchandra Rao,
Pleader for Plaintiff.
Puttur, ತಾ. 2-12-40.

ನೋಟೀಸು

ದ. ಕ. ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 363/1940

ಪ್ರತಿವಾದಿರು

ತಾ. 6-1-1941ಕ್ಕೆ ಇಟ್ಟಿರುತ್ತದೆ.

ಕೋರ್ಟ ಹುಕ್ಕುಂ ಪ್ರಕಾರ

K. Venkataramana Gowda,
Advocate for Plaintiff.
ಪುತ್ತೂರು, 27-11-40.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. 563/1940.

ಮತ್ತು

ಪ್ರತಿವಾದಿಗಳು,

ಇವರೊಂದಿಗೆ

ತಾ. 6—7—1937ರಲ್ಲಿ ರೂ. 1500-0-0ಕ್ಕೆ ... ರೂ. 1088-1-5 ... R.I.A. 1494/1940ನೇ ಅರ್ಜಿ ... R.I.A. 1496/1940ನೇ ಅರ್ಜಿಯನ್ನು ಸಹಾ ತಾರೀಖು 20—12—1940ಕ್ಕೆ ಇಟ್ಟಿರುವುದರಿಂದ ... 11 ಘಂಟೆಗೆ ಕೋರ್ಟಿನಲ್ಲಿ ಹಾಜರಾಗತಕ್ಕದ್ದು.

(Sd) **A. V. N. Hebbar,**
Pleader for Plaintiff.
Kundapur, 1 12-1940

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ... ಮತ್ತು ಇತರ ಜಠರ ದೋಷಗಳನ್ನು ... ಶಕ್ತಿ, ಧಾತು ಪುಷ್ಟಿಯನ್ನು ಕೊಡುತ್ತದೆ.

ಮದ್ರಾಸು.

ರಾತ್ರಿ ಸುಖವಾದ ನಿದ್ದೆ ಬೇಕಬೇಕಾದರೆ ಒಂದು ಕಪ್ಪು 'ಓವಲ್‌ಟಿನ್' ಕುಡಿಯಿರಿ!

ನಿದ್ದೆ ಮಾಡಲು ಹಾಸಿಗೆಗೆ ಹೋಗುವ ಕೊಂಚ ಸಮಯದ ಮೊದಲು ಒಂದು ಕಪ್ಪು 'ಓವಲ್‌ಟಿನ್' ಕುಡಿದರೆ ರಾತ್ರಿ ಸುಖವಾದ ನಿದ್ದೆಯೂ ಪ್ರಾತಃಕಾಲ ಏಳುವಾಗ ಒಂದು ತರದ ಶಕ್ತಿಯು ಉಂಟಾಗುತ್ತದೆಂದು ಖಂಡಿತ ಹೇಳಬಹುದು.

ಇಷ್ಟು ಮಾತ್ರವಲ್ಲದೆ ಉತ್ತಮವಾಗಿ ಬಲಿತು ಸ್ಥಾಗಿದ ಬಾರ್ಲಿ, ದನದ ಹಾಲು ಮತ್ತು ಇತರ ಅಮೂಲ್ಯ ಜೀವ ವಿಟಮಿನು ಮತ್ತು ಫೋಸ್ಫೇಟ್ಸ್‌ಗಳಿಂದ ತಯಾರಿಸಲ್ಪಟ್ಟ 'ಓವಲ್‌ಟಿನ್' ಉತ್ತಮ ಆಹಾರ ಮಾತ್ರವಲ್ಲದೆ, ರಾತ್ರಿ ಸುಖವಾದ ನಿದ್ದೆಯೂ, ಶರೀರ ಬೆಳವಣಿಗೆಗೂ ಸಹಕಾರಿಯಾಗಿರುತ್ತದೆ. ಇತರ ನಕಲಿ ಪಾನೀಯಗಳನ್ನು ಬಿಡಿರಿ.

'ಓವಲ್‌ಟಿನ್'

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ವಿತರಣಾಕಾರರು:—

ಮೆಸರ್ಸ್ ಗ್ರಹೆಮ್ಸ್ ಟ್ರೇಡಿಂಗ್ ಕೊ (ಇಂಡಿಯಾ) ಲಿಮಿಟೆಡ

ಕ್ಯಾತೆನಿನ್ ಹೋಲ್ ಥರ್ಡ್ ಫ್ಲೋರ್ 310-811 ಲಿಂಗಚೆಟ್ಟಿ ಸ್ಟ್ರೀಟ್ ಮದ್ರಾಸ

ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ

'ಓವಲ್‌ಟಿನ್' ಬಿಸ್ಕತುಗಳು:—

ಮತ್ತು 8 ... ಟಿನ್ನುಗಳಲ್ಲಿ ಮಾರಲ್ಪಡುತ್ತದೆ

OV/

“ನ ನಿಶ್ಚಿತಾರ್ಥಾ ದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

13—12—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೩—೧೨—೧೯೪೦

ಸ್ವರಾಜ್ಯ ಕೊಡುವ ಮಾತು ಸ್ಪಷ್ಟವಾಗಿರಬೇಕು!

ಟೈಮ್ಸ್ ಪತ್ರಿಕೆಯಲ್ಲಿ ಅಗ್ರಲೇಖ

ಹಿಂದಿನ ವೈಸರಾಯರ ಹೇಳಿಕೆಗಳು

“ಭಾರತಕ್ಕೆ ನಾವು ಏನನ್ನು ಕೊಡಲಿರುವೆವು ಎಂಬುದನ್ನು ಸ್ಪಷ್ಟ ಮಾಡಬೇಕು. ನಾವು ಕೊಡಲಿರುವ ರಿಯಾಯಿತಿಗಳು ಯಾವುವು ಎಂಬುದು ಚೆನ್ನಾಗಿ ತಿಳಿಯುವಷ್ಟು ವಿವರವಾಗಿರಬೇಕು. ಸಂದೇಹಕರವಾದ ಮಾತುಗಳನ್ನು ಹೇಳಿ ಅವುಗಳನ್ನು ಭಾರತದ ಮುಖಂಡರು ತಿರಸ್ಕರಿಸುವಂತೆ ಮಾಡಬಾರದು. ನಾವು ಕೊಡುವ ರಿಯಾಯಿತಿಗಳ ಕುರಿತು ಅವರಿಗೆ ಸಂಪೂರ್ಣ ವಿವರಿಸಬೇಕು” ಹೀಗೆ ಲಂಡನಿನ ಪ್ರಸಿದ್ಧ ಪತ್ರಿಕೆಯಾದ ‘ಟಾಯಿಮ್ಸ್’ ಒಂದು ಅಗ್ರಲೇಖನವನ್ನು ಬರೆದು ಇಂದಿನ ಭಾರತದ ಪರಿಸ್ಥಿತಿಯ ಪರಿಹಾರಕ್ಕಾಗಿ ಸೂಚನೆಗಳನ್ನು ಬ್ರಿಟಿಷ್ ಸರಕಾರಕ್ಕೆ ಇತ್ತಿದೆ.

ಅದು ಮತ್ತೆ ಹೀಗೆಂದು ಹೇಳಿರುವುದು:—

“ಭಾರತದ ಸಮಸ್ಯೆಯನ್ನು ನಾವಿಂದು ಹೊಸದೃಷ್ಟಿಯಿಂದ ನೋಡಬೇಕು. ಸಂಪೂರ್ಣವಾಗಿಯಲ್ಲವಾದರೂ ಸಾಕಷ್ಟು ಭಾರತೀಯರ ದೃಷ್ಟಿಯಿಂದಲೇ ನೋಡಿ ಇಂದಿನ ಬಿಕ್ಕಟ್ಟನ್ನು ಬಗೆಹರಿಸಲು ಸರ್ವ ಪ್ರಯತ್ನಗಳನ್ನು ಕೂಡಲೇ ಕೈಕೊಳ್ಳಬೇಕು.

ಧೋರಣೆ ಬದಲಾಗಬೇಕು

“ಭಾರತದ ಕುರಿತು, ಬ್ರಿಟಿಷ್ ಅಧಿಕಾರಿಗಳ ದೃಷ್ಟಿ ಬೇರೆ ಇರುವುದು ಸಂಭವವಿದೆ. ಭಾರತದಲ್ಲಿ ಜಾತೀಯ ಸಮಸ್ಯೆ ಇರುವುದರಿಂದ ತಾವು ಅಧಕ್ಕೆ ಬೇಕಾದ ತೆರದಲ್ಲಿ ಬಣ್ಣಕೊಟ್ಟು, ಕೆಲಸ ಸಾಧಿಸಿಕೊಳ್ಳಬಹುದೆಂದು ಅವರು ತಿಳಿಯುವುದೂ ಸಾಧ್ಯವಿದೆ.

ಪ್ರಕೃತ ಪರಿಸ್ಥಿತಿ

“ಇಂದು ರಾಜಕೀಯದಲ್ಲಿ ಮುಂದಾಳುಗಳಾಗಿರುವವರು ಗಾಂಧಿಜಿ, ಜಿನ್ನಾ ಮತ್ತು ಇನ್ನು ಕೆಲವರ ಹಾಗೂ ಇತರ ಪ್ರಮುಖ ಮುಖಂಡರ ಹೊಸ ಅಭಿಪ್ರಾಯಗಳನ್ನು ನಿಷ್ಪಕ್ಷಪಾತಬುದ್ಧಿಯಿಂದ ಪರಿಶೀಲಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಭಾರತದ ಯುವಕರೂ ತಮ್ಮಲ್ಲಿ ಯಾವದೇ ವಿಧದಲ್ಲಿಯೂ ಒಕ್ಕಟ್ಟು ಹಾಳಾಗದಂತೆ, ಭಿನ್ನತೆ ಬರದಂತೆ ವರ್ತಿಸುವುದು ಅವಶ್ಯವಿದೆ. ಇಂದಿನ ಭಾರತದ ಹೃದಯಸಂವೇದಕವಾದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸರ್ವರೂ ಒಳ್ಳೆಯ ಆದರ ಭಾವದಿಂದ ಚೆನ್ನಾಗಿ ಪರಿಶೀಲಿಸಿ ಯೋಗ್ಯ ಪರಿಹಾರೋಪಾಯಗಳನ್ನು ಹುಡುಕುವುದು ಅವಶ್ಯವಾಗಿದೆ. ಬ್ರಿಟಿಷ್ ಸರಕಾರವು ಇಂದಿನ ಈ ಪರಿಸ್ಥಿತಿಯನ್ನು ಬಗೆಹರಿಸಿ ಶಾಂತಿಯನ್ನುಂಟುಮಾಡಲು ಹೊಸದೃಷ್ಟಿಯಿಂದ ಭಾರತದ ವಿಚಾರವನ್ನು ಯಾಕೆ ಪರೀಕ್ಷಿಸಬಾರದು?”

ಹೆಸ್ಟಿಂಗ್ಸರ ಹಿತವಚನ

ಲೋರ್ಡ್ ಹೇಸ್ಟಿಂಗ್ಸರು ಭಾರತದ ವೈಸರಾಯರಾಗಿದ್ದರು. ಆ ಪದವಿಯಲ್ಲಿದ್ದಾಗ ಅವರು ೧೮೧೮ನೆ ಇಸವಿಯ ಮೇ ತಿಂಗಳ ೨೦ನೆ ತಾರೀಕಿನ ದಿನ ಒಂದು ಮಹತ್ವ ಪತ್ರವನ್ನು ಬರೆದು, ಅದರಲ್ಲಿ ಭಾರತದ ಭವಿಷ್ಯದ ಕುರಿತು ಹೀಗೆಂದು ಕೆಲವು ಮಾತುಗಳನ್ನು ಆಡಿದ್ದರು.

ಪ್ರಯತ್ನ ವಿಶೇಷ ಮತ್ತು ಇಚ್ಛಾಪೂರ್ವಕವಾಗಿ ಅಲ್ಲವಾದರೂ ಕ್ರಮೇಣ ತನ್ನ ಕೈಗೆ ತೆಗೆದುಕೊಂಡ ಭಾರತದ ಶಾಸನ ಸೂತ್ರವನ್ನು ಪುನಃ ದೇಶೀಯರ ಕೈಗೇ ಬಿಟ್ಟುಕೊಡುವ ದಿನಗಳು ಬಹಳ ದೂರದಲ್ಲಿ ಇರಲಾರವು. ಇಂಗ್ಲಾಂಡು ಯಾರ ಬಲತ್ಕಾರವೂ ಇಲ್ಲದೆ ಸ್ವೇಚ್ಛೆ ಮತ್ತು ಆತ್ಮಪ್ರೇರಣೆಯಿಂದ ಭಾರತಕ್ಕೆ ಸ್ವರಾಜ್ಯದಾನವನ್ನು ಮಾಡುವುದು. ಆ ದಿನವು ಬ್ರಿಟಿಷರ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದಾಗುವುದು. ದೇಶೀಯರ ಕಲ್ಯಾಣಕ್ಕಾಗಿಯೇ ಬ್ರಿಟಿಷರು ಈ ದೇಶದ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡರು ಮತ್ತು ಅವರೇ, ಆ ದೇಶೀಯರ ಕಲ್ಯಾಣಕ್ಕಾಗಿ ದೇಶದ ಆಡಳಿತವನ್ನು ಅಲ್ಲಿಯ ಜನತೆಯ ಕೈಗೆ ಬಿಟ್ಟುಕೊಡುತಿದ್ದಾರೆ ಎಂಬುದು ‘ಆ ಸಮಯದಲ್ಲಿ ಸ್ಪಷ್ಟವಾಗಿ ಬ್ರಿಟಿಷರ ನ್ಯಾಯಬುದ್ಧಿಯ ಇನ್ನೊಂದು ದೃಷ್ಟಾಂತವು ಪ್ರಪಂಚಕ್ಕೆ ದೊರೆಯುವುದು. ಬ್ರಿಟಿಷರ ಈ ಸದ್ವರ್ತನೆಯಿಂದ ಇಂಗ್ಲಾಂಡು ಮತ್ತು ಹಿಂದುಸ್ಥಾನದ ವ್ಯಾಪಾರ ವಹಿವಾಟುಗಳ ಸಂಬಂಧವು ಮೊದಲಿಗಿಂತಲೂ ನೂರಾರು ಪಾಲು ಹೆಚ್ಚು ದೃಢವೂ ಸ್ಥಿರವೂ ಆಗುವುದು.’

ಮೊಕಾಲೆಯವರ ಮಾತು

ಹದಿನೈದು ವರ್ಷಗಳ ಅನಂತರ ೧೮೩೩ನೆ ಜುಲೈ ೧೦ನೆ ತಾರೀಕಿನ ದಿನ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಲೋರ್ಡ್ ಮೆಕಾಲೆಯವರು ಹೀಗೆಂದಿದ್ದರು:— “ಹಿಂದುಸ್ಥಾನದಲ್ಲಿ ನಮ್ಮ ಆಡಳಿತದ ಉದಾರ ನೀತಿ ಧೋರಣೆಗಳ ಫಲವಾಗಿ ದೇಶೀಜನರು ಸ್ವರಾಜ್ಯ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಹೆಚ್ಚು ಯೋಗ್ಯರಾಗುತ್ತ ಬರುವರು. ಅದರ ಪರಿಣಾಮವಾಗಿ ಅವರು ನಮ್ಮದೇ ಆಡಳಿತ ಕ್ರಮಗಳನ್ನು ಅಪೇಕ್ಷಿಸುವ ಒಂದು ಸುದಿನವು ಬಂದೇ ಬರುವುದು. ಅಂಥ ದಿನವು ಎಂದು ಬರುವುದೆಂದು ನಾನು ಹೇಳಲಾರೆ. ಆದರೆ ಅದರ ಬರುವಿಕೆಯನ್ನು ತಡೆಯುವ ಯಾವ ಕೆಲಸವನ್ನು ನಾನು ಮಾಡಲಾರೆ. ಅದು ಎಂದಿಗೆ ಬರುವುದೋ, ಅಂದೇ ಬ್ರಿಟಿಷರ ಇತಿಹಾಸದಲ್ಲಿ ಒಂದು ಮಹತ್ವಪೂರ್ಣ ಘಟನೆಯು ಸ್ವರ್ಣಾಕ್ಷರಗಳಿಂದ ಬರೆಯಲ್ಪಡುವಂತಾಗುವುದು.”

ಗ್ರೇಹಾಮ್ ಪೋಲರ ಲೇಖ

ಈ ಎರಡು ಸಂಗತಿಗಳನ್ನು ಎತ್ತಿಕೊಂಡು ಲಂಡನಿನ ಪೊಲಿಟಿಕಲ್ ಕ್ವಾರ್ಟರ್ಲಿ ಎಂಬ ಪತ್ರಿಕೆಯಲ್ಲಿ ‘ಭಾರತೀಯ ಸ್ವರಾಜ್ಯ’ ಎಂಬ ಕುರಿತು ಬರೆಯುತ್ತಾ ಮಜೂರ ಮುಖಂಡರಾಗಿರುವ ಗ್ರೇಹಾಮ್ ಪೋಲರವರು ಹೀಗೆಂದಿದ್ದಾರೆ:—“ಹಿಂದುಸ್ಥಾನ ಮತ್ತು ಇಂಗ್ಲಾಂಡು—ಈ ಎರಡು ದೇಶಗಳ ಪರಸ್ಪರ ಉನ್ನತಿ ಅಭಿವೃದ್ಧಿಗಳಿಗಾಗಿ ಇಂಗ್ಲಾಂಡಿನ ಸೌಭಾಗ್ಯದ ಮತ್ತು ಗೌರವಪೂರ್ಣವಾದ ಆ ದಿನವು ಇಂದು ನಾಳೆ ಬಂದೊದಗಲಿ ಎಂದು ನಾವು ಆಶಿಸುವ, ಪರಮಾತ್ಮನನ್ನು ಪ್ರಾರ್ಥಿಸುವ.”

The Jupiter General Insurance Co. Ltd., Bombay

(Incorporated in India)

PROGRAMME FOR YOUTH

HEAD OFFICE:—Ewart House, Fort, Bombay.

COURAGE must come from the soul within,
The man must furnish the will to win,
So figure it out for yourself, my lad,
You were born with all that the great have had,
With your equipment they all began,
Get hold of yourself, and say "I CAN"
And work for the Democratic Institution of your motherland.

K. P. NAYAK, *Chief Agent*,
THE JUPITER GENERAL INSURANCE CO. LTD., MANGALORE.

ಸ್ವದೇಶಾಭಿಮಾನಿ

ತಾರೀಕು 13—12—1940

ಪ್ರಾತಿನಿಧಿಕ ಸತ್ಯಾಗ್ರಹ

ಹಿಂದೆ ಒಮ್ಮೆ ಸೆರೆಮನೆ ಸೇರಿದ್ದವರೇ, ಚುನಾವಣೆಗಳಲ್ಲಿ ವಿಜಯಿಗಳಾಗಿ ಬಂದ್ದು ಮುಂದೆ ಸರಕಾರದ ಆಡಳಿತವನ್ನು ನಡೆಸುವ ಮಂತ್ರಿಗಳು ಪ್ರಧಾನಮಂತ್ರಿಗಳಾದರು. ಇಂದು ತಿರುಗಿ ಅದೇ ಜನರು ಸೆರೆಮನೆಗಳನ್ನೇ ಸೇರುತ್ತಿದ್ದಾರೆ. ಜನರು ಅರಮನೆಗೆ ಕಳುಹಿಸಿದರೆ ಸರಕಾರವು ಸೆರೆಮನೆಗೆ ದೂಡುತ್ತಿದೆ! ಕಾಲಚಕ್ರದ ಈ ತಿರುಗಾಟವನ್ನು ನೋಡಿ, ಜನರು, ಭಾರತೀಯರು ಬೆರಗಾಗುವುದರೊಡನೆ ಗಂಭೀರ ವಿಚಾರವನ್ನೂ ಮಾಡುತ್ತಿದ್ದಾರೆ. ಜನರ ಪ್ರತಿನಿಧಿಗಳನ್ನೇ ಸತ್ಯಾಗ್ರಹ ಹೂಡಬೇಕಾಗಿ ಅಪೇಕ್ಷಿಸಿದ ಗಾಂಧಿಜಿಯವರು ಜನತೆಯ ಕಣ್ಣ ಮುಂದೆ ಇಂತಹ ಗಂಭೀರ ಭೀಷಣಚಿತ್ರವೊಂದನ್ನು ತಂದು ನಿಲ್ಲಿಸಿದ್ದಾರೆ! ಪ್ರಧಾನ ಮಂತ್ರಿಗಳನ್ನು, ಮಂತ್ರಿಗಳನ್ನು, ಶಾಸನ ಸಭಾ ಸದಸ್ಯರನ್ನು ಸ್ಥಳೀಕ ಸಂಸ್ಥೆಗಳ ಜಿಲ್ಲೆ ನಗರಗಳ ಅಧ್ಯಕ್ಷರು ಹಾಗೂ ಚ್ಯಾರ್‌ಮಾನರಂತಹವರೆಲ್ಲರೂ ಹಿಂಬಾಲಿಸುತ್ತಾರೆ. ಜನರು ಅವರನ್ನು ಚುನಾಯಿಸಿ ಅಧಿಕಾರ ಮಾಡಲು ಯೋಗ್ಯರೆಂದು ಕಳುಹಿಸಿದರು; ಸರಕಾರವು ಅವರನ್ನು ಬಂಧಿಸಿ ಸೆರೆಮನೆಗೊಯ್ದಿತು! ನಿಜವಾಗಿಯೂ ಎಂತಹ ವಿಷಮ ಘಟನೆ! ಇದರ ಪರಿಣಾಮವು ಜನತೆಯ ಮೇಲೆ ಯಾವ ತೆರನಾಗಿ ಆಗುವುದೆಂಬುದನ್ನು ಸರಕಾರಕ್ಕಾದರೂ ಊಹಿಸಲಾಗುವುದಿಲ್ಲವೇ?

ಅಖಿಲ ಭಾರತದ ಸರ್ವಮಾನ್ಯ ವ್ಯಕ್ತಿ ನೆಹರುಗಳ ಬಂಧನದ ಮೇಲೆ ಗೋಚರವಾಯಿತು ಈ ದರ್ಶನ ಜನತೆಗೆ. ಕಾಂಗ್ರೆಸ್ ಕಾರ್ಯಕಾರೀ ಮಂಡಳದ ಪ್ರಭಾವಶಾಲಿಗಳಾದ ಸದಸ್ಯರು, ಸರ್ದಾರ ಪಟೇಲರು, ಅಸಫ್ ಅಲಿಯವರು, ಸರೋಜಿನಿದೇವಿಯವರು, ಬೂಲಾಬಾಯಿಯವರು ಒಬ್ಬೊಬ್ಬರೇ ಸೆರೆಮನೆಯ ಕತ್ತಲೆ ಕೋಣೆಗಳನ್ನು ಸೇರಿಬಿಟ್ಟರು!

ಮುಂದಿನ ಚಿತ್ರ ಪ್ರಾಂತದ ಪ್ರತಿನಿಧಿಗಳದು. ಪ್ರಧಾನ ಮಂತ್ರಿ, ಸ್ಪೀಕರರಿಂದ ತೊಡಗಿ ಮಂತ್ರಿಗಳು ಪಾರ್ಲಿಮೆಂಟರಿ ಸೆಕ್ರೆಟರಿಗಳು ಶಾಸನ ಸಭಾ ಸದಸ್ಯರು ಎಲ್ಲರೂ ಅಳುಕದೆ ಅಂಜದೆ ಮುಂದೊತ್ತಿದರು! ಇದನ್ನು ನೋಡಿ ಯಾರ ಹೃದಯ ಕರಗದಿರುವುದು? ಮಹಾವಿಚಾರವಂತರಾದ ಆಡಳಿತಗಾರರೆಂದು ಅಖಿಲ ಭಾರತದಲ್ಲಿಯೇ ಕೀರ್ತಿ ಹೊತ್ತ ರಾಜಾಜಿಯವರೂ ಸೆರೆಮನೆ ಪಾಲಾದರು! ಈ ಕರ್ಮಯೋಗಿಯ ವಿಚಾರಣೆ ನಡೆಸುತ್ತಿದ್ದ ಮ್ಯಾಜಿಸ್ಟ್ರೇಟರ ಹೃದಯವೂ ಕರಗಿ ಹೋಯಿತು! ಅವನಿಗೆ ಗೀತೆಯ ಮಾತನ್ನು ಎತ್ತಿ ಹೇಳಿ ಅವರು ಆತ್ಮಶಾಂತಿಯನ್ನು ಮಾಡಿಕೊಂಡರು!

ಇವಿಷ್ಟು ಅಖಿಲಭಾರತದ ಪ್ರಾಂತಗಳ ವಿಚಾರವಾಯಿತು! ಇಂದು ಜಿಲ್ಲೆ ನಗರ ಗ್ರಾಮಗಳ ಸರದಿಗಳೂ ಬಂದಿವೆ! ಬಹಳ ಗೌರವವಂತರೆನಿಸಿದ, ಯೋಗ್ಯ ಆಡಳಿತಗಾರರೆನಿಸಿದ, ಮುಂದಾಳುಗಳೆನಿಸಿದ ನಗರಾಧ್ಯಕ್ಷರೂ ಜಿಲ್ಲಾ ಬೋರ್ಡು ಅಧ್ಯಕ್ಷರಂತಹವರು ಸತ್ಯಾಗ್ರಹಕ್ಕೆ ಹೊರಟಿದ್ದಾರೆ. ಮುಂದೆ ಇವುಗಳ ಸದಸ್ಯರೂ ಬರಲಿರುವರೆಂದು ತಿಳಿಯುತ್ತೇವೆ. ಜನತಾ ಸತ್ಯಾಗ್ರಹಕ್ಕಿಂತ ಇದೇನೂ ಕಡಿಮೆ ತರದ್ದಲ್ಲ. ಕಡಿಮೆ ಪರಿಣಾಮಕಾರಿಯಲ್ಲ; ಇಷ್ಟಿದ್ದರೂ ಸರಕಾರವು ಈ ಚಿತ್ರವನ್ನು ತೆರೆದ ಕಣ್ಣುಗಳಿಂದ ನೋಡುವುದಿಲ್ಲವೆನಬಹುದೆ?

ಯಾತಕ್ಕಾಗಿ ಇಂತಹ ಸಂದರ್ಭವು ಒದಗಿತು? ಸರಕಾರವನ್ನು ತೊಂದರೆಯಲ್ಲಿ ಹಾಕುವುದು ಗಾಂಧಿಜಿಯವರಿಗೆ ಇಷ್ಟವೇ? ಈ ವಿಷಯಗಳನ್ನು ಈ ಸಂದರ್ಭದಲ್ಲಿ ಅವಶ್ಯವಾಗಿ ವಿಚಾರಿಸಬೇಕಾಗಿದೆ. ಇಂದು ಬ್ರಿಟಿಷ್ ಸರಕಾರವು ಜರ್ಮನಿಯೊಡನೆ ಮಹಾಯುದ್ಧಕ್ಕೆ ತೊಡಗಿದೆ. ಪ್ರಪಂಚದಲ್ಲಿ ಅದು ಮಹಾ ಗೊಂದಲವನ್ನೆಬ್ಬಿಸಿದೆ. ಇದೇ ಸಂದರ್ಭದಲ್ಲಿ, ಬ್ರಿಟನು ಭಾರತವೂ ಜರ್ಮನಿಯ ವಿರುದ್ಧ ಯುದ್ಧ ಮಾಡುವುದು ಎಂದು ಸಾರಿತು. ಈ ಸಮಯದಲ್ಲಿ, ಭಾರತೀಯರೊಡನೆ ಒಂದು ಮಾತೂ ಕೇಳಿದ್ದಿಲ್ಲ. ಆಗ ಪ್ರಾಂತಗಳಲ್ಲಿ ಜನತೆಯು ಆರಿಸಿದ ಜನರು ನಿರ್ವಹಿಸಿದ ಮಂತ್ರಿಮಂಡಳಗಳು ಅಧಿಕಾರ ನಡೆಸುತ್ತಿದ್ದುವು. ಪ್ರಜಾಪ್ರಭುತ್ವಕ್ಕಾಗಿ, ವ್ಯಕ್ತಿತ್ವ ಸ್ವಾತಂತ್ರ್ಯಕ್ಕಾಗಿ ಬ್ರಿಟನು ಇಂದು ಜರ್ಮನಿಯ ವಿರುದ್ಧ ಯುದ್ಧ ಸಾರಿದೆಯೆಂದು ಸ್ಪಷ್ಟವಾಗಿ ಹೇಳಿದೆ. ಆ ಸಲುವಾಗಿಯೇ ಭಾರತೀಯರೂ ಬ್ರಿಟನಿಗೆ ಬೆಂಬಲನಿಂತು ಜರ್ಮನಿಯನ್ನು ಇದಿರಿಸಬೇಕಾಗಿರುವುದರಿಂದ ಜರ್ಮನಿಯ ವಿರುದ್ಧ ಭಾರತವು ಹೋರಾಡತಕ್ಕ ಅವಶ್ಯಕತೆಯಾಗಿದೆಯೆಂದೇ ಸರಕಾರದ ಹೇಳಿಕೆಯಿದೆ. ಆದರೆ, ಪ್ರಜಾಪ್ರಭುತ್ವ ತತ್ವವನ್ನು ಮುಂದಿಟ್ಟು ಕೆಲಸಮಾಡುವ ಬ್ರಿಟನು, ಇಂತಹ ಅಸಾಮಾನ್ಯ ಸಂದರ್ಭವೊದಗಿದಾಗ, ಪ್ರಜಾಪ್ರತಿನಿಧಿಗಳೊಡನೆ ಒಂದು ಮಾತು ಕೇಳಬೇಡವೆ? ಹೀಗೆ ಮಾಡದೆ ಏಕಾಏಕಿ ಭಾರತವು ಯುದ್ಧಕ್ಕಿಳಿದಿದೆಯೆಂದು ಸಾರಿದ್ದು ಸರಿಯಲ್ಲವೆಂದು ಏಳು ಪ್ರಾಂತಗಳಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಮಂತ್ರಿಮಂಡಳದವರು ರಾಜಿನಾಮೆ ಕೊಟ್ಟು ಮರಳಿದರು. ಈ ವಿಷಯವನ್ನು ಸರಕಾರವು ಲಕ್ಷಿಸದೆ ತನ್ನ ಕಾರ್ಯವನ್ನು ತನ್ನಿಷ್ಟದಂತೆಯೇ ನಡೆಸಿತು.

ಮುಂದೆ ಕಾಂಗ್ರೆಸ್ ಮುಖಂಡರಲ್ಲಿ ಸಹಜವಾಗಿ ಈ ಬಗ್ಗೆ ವಿಚಾರಕ್ರಾಂತಿ ಹುಟ್ಟಿತು. ಹಲವರು ಈ ಸಂದರ್ಭದಲ್ಲಿ ಸರಕಾರದೊಡನೆ ಅಸಹಕಾರ ಹೂಡುವ ಆಂದೋಲನವನ್ನು ಆರಂಭಿಸಬೇಕೆಂದೇ ವಾದಿಸಿದರು. ಆದರೆ, ಒಂದೆಡೆ ಮಹಾಶತ್ರುವಿನೊಡನೆ ಪೇಚಾಟದ ಯುದ್ಧದಲ್ಲಿರುವ ಬ್ರಿಟನನ್ನು, ಅದರ ಕಷ್ಟಕಾಲದಲ್ಲಿ ನಾವು ಪೇಚಿನಲ್ಲಿ ಹಾಕಬಾರದೆಂದೂ, ನಾಜೀತತ್ವಕ್ಕೆ ನಾವೂ ವಿರುದ್ಧವಿರುವುದರಿಂದ, ನಮ್ಮ ಕೇಳಿಕೆಗೆ ಮನ್ನಣೆಕೊಟ್ಟರೆ ಬ್ರಿಟನಿನೊಡನೆ ಸಂಪೂರ್ಣ ಸಹಕರಿಸಬಹುದೆಂದೂ ಮುಂದಾಳುಗಳಾದವರು ತೀರ್ಮಾನಕ್ಕೆ ಬಂದರು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವುದು ಕಾಂಗ್ರೆಸಿನವರ ಕೇಳಿಕೆಯಾಗಿತ್ತು. ಆದರೆ ಸರಕಾರವು ಕಾಂಗ್ರೆಸ್ ಮುಖಂಡರ ಈ ಸದ್ಬುದ್ಧಿಯನ್ನು ಗಮನಿಸಲಿಲ್ಲ.

ಇಷ್ಟಾಗಲು, ಯಾವುದೇ ಕಾರ್ಯಕ್ರಮವಿಲ್ಲದೆ, ಜನತೆಯು ಹಿತದ ಸಲುವಾಗಿ ದುಡಿಯಲು ಹೊರಟ ಕಾಂಗ್ರೆಸ್ ಸಂಸ್ಥೆಗೆ ಸುಮ್ಮಗಿರಲು ಸಾಧ್ಯವಾಗಲಿಲ್ಲ. ಕಾಂಗ್ರೆಸಿನವರು ಇಂತಹ ಸಂದರ್ಭದಲ್ಲಿ ಉಚಿತವಾದ ಕಾರ್ಯವನ್ನು ಮಾಡಲು ಗಾಂಧಿಜಿಯವರೇ ಯೋಗ್ಯರೆಂದು—ಅವರನ್ನು—ದೂರ ನಿಂತಿದ್ದವರನ್ನು—ಆಹ್ವಾನಿಸಿ ನಮಗೆ ಮಾರ್ಗದರ್ಶಕರಾಗಿರೆಂದು ಸರ್ವ ಸೇನಾಪತಿಯನ್ನಾಗಿ ಮಾಡಿದರು. ಗಾಂಧಿಜಿ ಒಳ್ಳೆಯ ವಿಚಾರಮಾಡಿ ಒಂದು ಕಾರ್ಯಕ್ರಮವನ್ನು ತಯಾರಿಸಿದರು. ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸಿದರು.

ಮಾತನಾಡುವ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ಮೂಲ. ಅದೇ ಮೂಲವಾಗಿ ಗಾಂಧಿಜಿ ಸತ್ಯಾಗ್ರಹ ತೊಡಗಿಸಿದರು. ಮಾತನಾಡಲು ಸ್ವಾತಂತ್ರ್ಯವಿಲ್ಲವೆಂಬುದನ್ನು ಜಗತ್ತಿಗೆ ತೋರಿಸುವುದು ಅವರ ಉದ್ದೇಶವಾಗಿದೆ. ಇದರಿಂದ ಸರಕಾರಕ್ಕೆ ತೊಂದರೆಯುಂಟಾಗದಂತೆ ತಾನು ಆರಿಸಿದ, ಸತ್ಯ ಅಹಿಂಸಾಪಾಲಕರನ್ನೇ ಸತ್ಯಾಗ್ರಹಿಗಳಾಗಿ ಕಳುಹಿಸಿದರು. ಮೊದಲನೆಯ ಸತ್ಯಾಗ್ರಹಿ ವಿನೋಬಾಜಿಯಾದರು. ಆದರೆ ಮುಂದೆ, ನೆಹರುಗಳ ಬಂಧನವಾಯಿತು. ಅವರು ಹಿಂದೆ ಕೊಟ್ಟಿದ್ದ ಭಾಷಣಗಳು ಆಕ್ಷೇಪಕರವಾಗಿದ್ದುವೆಂಬ ಆರೋಪದಿಂದ. ಮತ್ತೆ ಸತ್ಯಾಗ್ರಹವು—ವೈಯಕ್ತಿಕವಾಗಿಯೇ—ಬೆಳೆಯಿತು. ಜನತೆಯ ಪ್ರತಿನಿಧಿಗಳಾಗಿರುವವರೇ ಸತ್ಯಾಗ್ರಹ ಹೂಡಿದರು. ಹೀಗೆ ಇಂದು ಜನತೆಯು ಆರಿಸಿ ಅಧಿಕಾರ ನಡೆಸಿರೆಂದು, ಅರಮನೆಗೆ ಕಳುಹಿಸಿದವರನ್ನು ಸರಕಾರವು ಬಂಧಿಸಿ ಸೆರೆಮನೆಗಳಿಗೆ ದೂಡುವ ವಿಷಮ ಚಿತ್ರ ಕಾಣುತ್ತಿದೆ. ಜನತೆ ಮತ್ತು ಸರಕಾರ ಹೀಗೆ ಭಿನ್ನಮಾರ್ಗದಲ್ಲಿ ನಡೆಯುವ ಒಂದು ವಿಚಿತ್ರವು ಇಂದು ಭಾರತೀಯರ ಮಾತ್ರವಲ್ಲ ಅಖಿಲ ಜಗತ್ತಿನ ಕಣ್ಣ ಮುಂದೆ ಇದೆಯೇ! ಭಾರತೀಯರು ಇದನ್ನು ಮನಸ್ಸಿಗೆ ತಂದುಕೊಂಡಿದ್ದಾರೆ. ಬ್ರಿಟನೂ ಈ ಕುರಿತು ಯೋಚಿಸದಿರುವುದು ಉಚಿತವಾಗಲಾರದು.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ವಿದ್ವಾನ್ ಶ್ರೀ ಕೆ. ಕೆ. ರೈ, ವಿರಚಿತ

ವ್ಯಾಕರಣ ಮತ್ತು ಪ್ರಬಂಧ

೬ನೆಯ ತರಗತಿಗೆ ೭ನೆಯ ತರಗತಿಗೆ ೮ನೆಯ ತರಗತಿಗೆ
೦-೨-೦ ೦-೨-೬ ೦-೩-೦

ಶ್ರೀ ಎಸ್. ರಾಮಕೃಷ್ಣಾಚಾರ್, ಬಿ. ಎ; ಎಲ್. ಟಿ. ವಿರಚಿತ

ಪ್ರಾಥಮಿಕ ಲಘುವಿಜ್ಞಾನ

೬ನೆಯ ತರಗತಿಗೆ ೦-೬-೦ ೭ನೆಯ ತರಗತಿಗೆ ೦-೬-೦

ಹೊಸ ಪುಸ್ತಕಗಳು

ಪ್ರಾಥಮಿಕ ಲಘುವಿಜ್ಞಾನ (ಶ್ರೀ ಎಸ್. ರಾಮಕೃಷ್ಣಾಚಾರ್)

೮ನೆಯ ತರಗತಿಗೆ ೦-೬-೦

ವ್ಯಾಕರಣ ಮತ್ತು ಪ್ರಬಂಧ (ಶ್ರೀ ಕೆ.ಕೆ. ರೈ) ೪ ಮತ್ತು ೫ನೆಯ ತರಗತಿಗಳಿಗಾಗಿ

ಶಿಶುಸಾಹಿತ್ಯದಲ್ಲಿ ಹೊಸಬೆಳಕು! ಮಕ್ಕಳಿಗೆ ಹಾಡಿನ ಸವಿ ಜಬ್ಬು!

ಶ್ರೀ. ಕಯ್ಯಾರ ಕಿಞ್ಞಣ್ಣರೈ, ವಿದ್ವಾನ್, ಇವರಿಂದ ರಚಿತವಾದ

ಮಕ್ಕಳ ಪದ್ಯಮಂಜರಿ

ಶಿಶುಗೀತೆ, ಅಭಿನಯಗೀತೆ, ಕಥಾ ಕವನಗಳು ಮತ್ತು ಹಲವು ಸುಂದರ ಕವಿತೆಗಳು!

ಮೊದಲನೆಯ ಪುಸ್ತಕ

೧ನೆಯ ತರಗತಿಯಿಂದ ೩ನೆಯ ತರಗತಿಯ ಶಿಶುಗಳಿಗಾಗಿ

ಎರಡನೆಯ ಪುಸ್ತಕ

೪ನೆಯ ೫ನೆಯ ತರಗತಿಗಳ ಬಾಲಕರಿಗಾಗಿ

ದೊರಕುವ ಸ್ಥಳ **ಶಾರದಾ ಛಾಪಖಾನೆ ಮಂಗಳೂರು**

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನು ಕೊಡಿರಿ.

ಸತ್ಯಾಗ್ರಹಕ್ಕೆ ಸಾರ್ವಜನಿಕ ಸ್ವರೂಪ ಕೊಡಲಾಗುವುದೆ?

ಗಾಂಧಿಜಿ ಇದನ್ನು ವಿವರಿಸುತ್ತಾರೆ

ಸತ್ಯಾಗ್ರಹದಲ್ಲಿ ಗಲಭೆ ಪ್ರದರ್ಶನಗಳಿರಕೂಡದು.

ಸರ್ದಾರ ಸಿಂಗರ ಪ್ರಕರಣದಿಂದ ಪಾಠ

ಪೆಂಟ್ಯಾಂಗುಲರ್ ಪಂದ್ಯಾಟ ಬೇಡ.

ವೈಯಕ್ತಿಕ ಸತ್ಯಾಗ್ರಹವೆಂದರೇನು? ಅದರ ಮಿತಿ ಏನು? ಅದು ಸಾರ್ವಜನಿಕ ಸತ್ಯಾಗ್ರಹವಾಗಬಲ್ಲುದೇ, ಹೇಗೆ? ಎಂದು ಶ್ರೀ ಮುಕುಂದಲಾಲ ಸರಕಾರರು ಮಹಾತ್ಮಾ ಗಾಂಧಿಜಿಯವರಿಗೆ ಪತ್ರ ಬರೆದು ಕೇಳಿದ್ದರು. ಅದಕ್ಕೆ ಉತ್ತರ ಬರೆದು 'ಸತ್ಯಾಗ್ರಹ'ದ ವಿಸ್ತಾರವನ್ನು ಗಾಂಧಿಜಿಯವರು ಹೀಗೆಂದು ವಿಶದೀಕರಿಸಿದ್ದಾರೆ.

ಭಾಷಣ ಸ್ವಾತಂತ್ರ್ಯ ಹಾಗೂ ಲೇಖನ ಸ್ವಾತಂತ್ರ್ಯ ಇವೆರಡು ಪ್ರಶ್ನೆಗಳ ಮೇಲ್ಲಿನ ವೈಯಕ್ತಿಕ ಸತ್ಯಾಗ್ರಹವು ಜನ್ಮವೆತ್ತಿತ್ತು ಎಂಬುದಕ್ಕೆ ಸಂಶಯವಿಲ್ಲ. ಆದರೆ ಇಂಥ ಪ್ರತಿಯೊಂದು ಪ್ರಶ್ನೆಯು ಗುರಿಯೂ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಡುವಂತಾದ್ದೇ ಆಗಿದೆ. ಮೊಟ್ಟಮೊದಲು ಈ ಚಳವಳವನ್ನು ~~ಇಬ್ಬರು ಅಥವಾ~~ ಮೂವರು ಕೆಲವು ಮಾತ್ರವೇ ಮಾಡಬೇಕೆಂದು ಆಲೋಚಿಸಿತು.

"ಆ ಬಳಿಕ ಎ. ಆಯ್. ಸಿ. ಸಿ. ಹಾಗೂ ವರ್ಕಿಂಗ್ ಕಮಿಟಿ ಸದಸ್ಯರಲ್ಲಿ ಮತ್ತು ಕೇಂದ್ರ ಹಾಗೂ ಪ್ರಾಂತೀಕ ಶಾಸನ ಸಭೆಯ ಸದಸ್ಯರಲ್ಲಿ ನಾನು ಆರಿಸಿದ ಜನರು ಮಾತ್ರವೇ ಸತ್ಯಾಗ್ರಹ ಹೂಡತಕ್ಕದ್ದು ಎಂಬ ನಿರ್ಣಯಕ್ಕೆ ಬಂದೆನು. ಕಾಲ ಮತ್ತು ಸಂದರ್ಭಗಳಿಗನುಸರಿಸಿ ಉಂಟಾದ ಪ್ರತಿಕ್ರಿಯೆಗೆ ತಕ್ಕಂತೆ ಸತ್ಯಾಗ್ರಹವು ಮಿತವಾಗಿ ವಿಸ್ತಾರಗೊಳ್ಳಬಹುದು. ಈಗಾಗಲೇ ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳದ ಸದಸ್ಯರ ಹೆಸರ ವರ್ಗೀಕರಣ ಮಾಡಿದ ಪಟ್ಟಿಯನ್ನು ಕಳಿಸುವಂತೆ ನಾನು ಕೇಳಿಕೊಂಡಿದ್ದೇನೆ. ಅದೇ ಮೇರೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿ, ತಾಲೂಕು ಕಾಂಗ್ರೆಸ್ ಕಮಿಟಿ, ಸರ್ಕಲ್ ಕಾಂಗ್ರೆಸ್ ಕಮಿಟಿ ಹಾಗೂ ಗ್ರಾಮ ಕಾಂಗ್ರೆಸ್ ಕಮಿಟಿಗಳ ಪಟ್ಟಿಯನ್ನು ಮುಂದೆ ತರಿಸಿಕೊಳ್ಳುವೆನು. ಸತ್ಯಾಗ್ರಹವು ವಿಸ್ತಾರವಾಗುವುದರಲ್ಲಿ ಅನುಮಾನವಿಲ್ಲ. ಆದರೆ ಎಷ್ಟು ವಿಸ್ತಾರವಾದಾಗ್ಯೂ ಅದು ವೈಯಕ್ತಿಕ ಸತ್ಯಾಗ್ರಹವಾಗಿಯೇ ಉಳಿಯುವುದು. ನನ್ನ ತತ್ವದಲ್ಲಿ ವಿಶ್ವಾಸವಿಟ್ಟು ನನ್ನ ಶರತುಗಳಿಗೆ ತಕ್ಕಂತೆ ನಡೆದುಕೊಳ್ಳುವವರನ್ನು ಮಾತ್ರ ನಾನು ಸತ್ಯಾಗ್ರಹಿಗಳನ್ನಾಗಿ ಆರಿಸುತ್ತೇನೆ. ಅಂಥವರು ಮಾತ್ರವೇ ಸತ್ಯಾಗ್ರಹ ಹೂಡಲು ಬದ್ಧರಿರುವರು."

"ಸತ್ಯಾಗ್ರಹದಲ್ಲಿ ಗಲಭೆ ಪ್ರದರ್ಶನಗಳಿರಕೂಡದು"

ಜನರಿಗೆ ಮಹಾತ್ಮರ ಬುದ್ಧಿವಾದ

ಬಾಬು ರಾಜೇಂದ್ರ ಪ್ರಸಾದರಿಗೆ ಮಹಾತ್ಮ ಗಾಂಧಿಯವರು ಸತ್ಯಾಗ್ರಹ ಚಳವಳದ ವಿಚಾರವಾಗಿ ಒಂದು ತಂತಿಯನ್ನು ಕಳುಹಿಸಿ ಕೆಲವು ಸಲಹೆಗಳನ್ನು ಕೊಟ್ಟಿರುವರು.

"ಸತ್ಯಾಗ್ರಹ ಚಳವಳವನ್ನು ನಡೆಸುವಾಗ ಸಾರ್ವಜನಿಕರು ಯಾವ ರೀತಿಯಿಂದಲೂ ಪ್ರದರ್ಶನವನ್ನೂ ಗಲಭೆಯನ್ನೂ ಮಾಡಕೂಡದು.

'ಸತ್ಯಾಗ್ರಹವನ್ನು ಆಚರಿಸುವವರು ತಾವು ಸತ್ಯಾಗ್ರಹವನ್ನು ಆಚರಿಸುವ ಬಗ್ಗೆ ತಿಳುವಳಿಕೆಯನ್ನು ಮೊದಲಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾತ್ರ ಕೊಡಬೇಕು. ಸಾರ್ವಜನಿಕರಿಗೆ ತಿಳಿಸಬೇಕಾಗಿಲ್ಲ.

ಶ್ರೀ. ಹರಿಕೃಷ್ಣ ಸಿಂಹರವರು ಪಾಟ್ನಾದಲ್ಲಿ ಸತ್ಯಾಗ್ರಹ ನಡೆಸಿದ ಕಾಲದಲ್ಲಿ ನಡೆದ ಗಲಭೆಗಳನ್ನು ಕೇಳಿ ನನಗೆ ಬಹಳ ವಿಷಾದವಾಯಿತು. ಬಿಹಾರ್ ಪ್ರಾಂತವು ಅಹಿಂಸೆಯ ಅನುಸರಣೆಯಲ್ಲಿಯೂ, ಸತ್ಯಾಗ್ರಹದ ಆಚರಣೆಯಲ್ಲಿಯೂ ಶಿಸ್ತು ವ್ಯವಸ್ಥೆ ಶಾಂತಿಗಳಿಂದ ನಡೆಯುವುದರಲ್ಲಿಯೂ ಕೀರ್ತಿಗಳಿಸಿದೆ. ಪಾಟ್ನಾದಲ್ಲಿ ನಡೆದ ಗಲಭೆ ಸುದ್ದಿಗಳನ್ನು ಕೇಳಿ ನನಗೆ ಒಂದು ರೀತಿಯ ಕಳವಳವುಂಟಾಯಿತು. ಸತ್ಯಾಗ್ರಹ ಆಚರಣೆಯಲ್ಲಿ ಯಾವ ರೀತಿಯಿಂದಲೂ ಗಲಭೆ ಪ್ರದರ್ಶನಗಳಿರಕೂಡದು. ಸಂಪೂರ್ಣ ಶಾಂತತೆಯಿರಬೇಕು. ಸತ್ಯಾಗ್ರಹ ಆಚರಿಸುವುದಾಗಿ ಸತ್ಯಾಗ್ರಹಿಗಳು ಅಧಿಕಾರಿಗಳಿಗೆ ಮಾತ್ರ ಮೊದಲಾಗಿ ತಿಳಿಸಬೇಕು. ನವೆಂಬರ್ ೨೭ರಲ್ಲಿ ಪಾಟ್ನಾದಲ್ಲಿ ನಡೆದ ಘಟನೆಗಳಿಂದ ಶ್ರೀ ಕೃಷ್ಣಸಿಂಹರವರ ಸತ್ಯಾಗ್ರಹಕ್ಕೆ ಕುಂದಕವೂ ಕಳಂಕವೂ ಉಂಟಾಯಿತು. ಇನ್ನು ಮುಂದೆ ಸತ್ಯಾಗ್ರಹದಲ್ಲಿ ಈ ರೀತಿ ಗಲಭೆಯು ನಡೆಯಲೇ ಕೂಡದು'

ಸರ್ದಾರಸಿಂಗರ ಪ್ರಕರಣ

ಮಹಾತ್ಮರ ಹೇಳಿಕೆ

ಪಂಜಾಬು ಶಾಸನ ಸಭೆಯಲ್ಲಿ ಕಾಂಗ್ರೆಸ್ ಸಭಾಸದರ ಮುಖಂಡರಾದ ಶ್ರೀ. ಸರ್ದಾರಸಿಂಗರು ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ವಿಚಾರಣೆಯ ಸಮಯ ಅವರು ತಪ್ಪಿ ನಡೆದ ಕುರಿತು, ಹಾಗೂ ಗಾಂಧಿಜಿಯವರಿಂದ ಅನುಮತಿ ಪಡೆಯದೆ ಸತ್ಯಾಗ್ರಹ ಹೂಡಿದ ವಿಷಯವಾಗಿ ಗಾಂಧಿಜಿಯವರು ಈ ಕೆಳಗಿನಂತೆ ಒಂದು ಹೇಳಿಕೆ ಕೊಟ್ಟಿರುವರು. ಸತ್ಯಾಗ್ರಹಿಗಳು ಇದನ್ನು ಅವಶ್ಯ ಗಮನಿಸಬೇಕು.

"ಕೋರ್ಟಿನಲ್ಲಿ ಸರದಾರ ಸಂಪೂರ್ಣಸಿಂಗರು ಮಾಡಿದ ಆಶ್ಚರ್ಯಕಾರಕವಾದ ಹೇಳಿಕೆಯನ್ನು ನಾನು ಈಗ ಓದಿದೆನು. ಅವರ ಹೆಸರನ್ನು ಯಾರು ಮಂಜೂರು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ"

'ನನ್ನ ಆಜ್ಞಾಪತ್ರದಲ್ಲಿ ಸಂಪೂರ್ಣಸಿಂಗ ಹಾಗೂ ಇಂಥ ಇನ್ನಿತರ ಹೆಸರನ್ನು ನಾನು ಕೊಟ್ಟಿಲ್ಲ. ಆದರೂ ಸಂಪೂರ್ಣಸಿಂಗರ ಸತ್ಯವನ್ನು ಹೇಳುವ ಧೈರ್ಯದ ಬಗ್ಗೆ ನಾನು ಅವರನ್ನು ಅಭಿನಂದಿಸುತ್ತೇನೆ. ತಮ್ಮ ರಾಜಕೀಯ ವರ್ಚಸ್ಸಿಗೆ ಕಲಂಕತಟ್ಟುವಂತಿದ್ದರೂ ಅವರು ಸತ್ಯವನ್ನು ಬಚ್ಚಿಡಲಿಲ್ಲ. ಈ ಪ್ರಕರಣವು ಉಳಿದವರ ಕಣ್ಣು ಮುಂದಿರಲಿ. ಈ ಮೂಲಕ ನಾನು ಎಲ್ಲರನ್ನು ಎಚ್ಚರಿಸ ಬಯಸುತ್ತೇನೆ.

'ನಿರರ್ಥಕವಾದ ಶುಷ್ಕ ಶಿಸ್ತಿನ ಹೆಸರಿನಲ್ಲಿ ಸಂಪೂರ್ಣಸಿಂಗರು ಸತ್ಯಾಗ್ರಹ ಹೂಡಿದ ಬಗ್ಗೆ ನಾನು ಯಾವ ಬೆಲೆಯನ್ನೂ ಕೊಡಲಾರೆನು. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಒಳ್ಳೆ ಅಟ್ಟಹಾಸದ ಪ್ರದರ್ಶನ ಮಾಡಿರುವದಾಗಿ ಓದಿದೆ. ವಿದ್ಯಾರ್ಥಿಗಳು ತಮ್ಮ 'ವೀರ'ನನ್ನು ಸಂಪೂರ್ಣಸಿಂಗರಲ್ಲಿ ಕಂಡು ಈ ರೀತಿ ಪ್ರದರ್ಶನ ಮಾಡಿದರೆಂದು ತಿಳಿಯಿತು. ಹೀಗೆ ಮಾಡುವದರಿಂದ ವಿದ್ಯಾರ್ಥಿಗಳು ರಾಷ್ಟ್ರಕಾರಣಕ್ಕೆ ಬಹಳ ಭಂಗಮಾಡಿದಂತಾಯಿತು. ಈ ಬಗೆಯ ಹದಗೆಟ್ಟ ಹಾಗೂ ಅಂಕೆತಪ್ಪಿದ ಪ್ರದರ್ಶನ ಕಾಂಗ್ರೆಸಿನವರ ಲಕ್ಷದಲ್ಲಿರಲಿ. ಅವರು ಮುಂದೆ ಈ ಬಗೆಯ ಪ್ರದರ್ಶನಕ್ಕೆ ಎಡೆಗೊಡದಂತೆ ಇದೊಂದು ಪಾಠವಾಗಲಿ. ಬುದ್ಧಿಪೂರ್ವಕವಾಗಿ ಅಥವಾ ಭಯದಾಯಕವಾದ ಸಂದರ್ಭದಲ್ಲಿ ಈ ಬಗೆಯ ಪ್ರದರ್ಶನ ಮಾಡುವದರಿಂದ ನಾವು ಎಷ್ಟು ಹೇಳಿದರೂ ಸರಕಾರವನ್ನು ತೊಂದರೆಯಲ್ಲಿ ಸಿಲುಕಿಸಿದಂತಾಗುವದು.'

'ಈ ಚಳವಳವನ್ನು ಕುರಿತು. ಕಾಂಗ್ರೆಸಿನವರಲ್ಲಿ ಅಚಲವಾದ ಹಾಗು ನಿಷ್ಠಾಪೂರ್ವಕವಾದ ನಿರ್ಧಾರವಿರಬೇಕು. ರಾಷ್ಟ್ರದ ಘನತೆ ಹಾಗು ಗೌರವವನ್ನು ಸಮರ್ಥಿಸುವಂಥ ರೀತಿಯಲ್ಲಿ ಅವರು ಸ್ವಾರ್ಥತ್ಯಾಗ ಮಾಡಬೇಕು'

ಪೆಂಟ್ಯಾಂಗ್ಯುಲರ್ ಕ್ರಿಕೆಟ್ ರದ್ದು ಮಾಡಬೇಕು

ಮಹಾತ್ಮರ ಹೇಳಿಕೆ

ಇದೇ ತಿಂಗಳು ೧೪ನೇ ತಾರೀಕಿನಿಂದ ಮುಂಬಯಿಯಲ್ಲಿ ಪ್ರಾರಂಭವಾಗಲಿರುವ ಪೆಂಟ್ಯಾಂಗ್ಯುಲರ್ ಕ್ರಿಕೆಟ್ ಪಂದ್ಯಾಟದ ಸಂಬಂಧವಾಗಿ ಮಹಾತ್ಮಾ ಗಾಂಧಿಜಿಯವರು ಈ ಕೆಳಗಿನಂತೆ ಒಂದು ಪ್ರಕಟನೆ ಹೊರಡಿಸಿರುತ್ತಾರೆ:—

"ಸತ್ಯಾಗ್ರಹಿಗಳನ್ನು ಅದರಲ್ಲಿಯೂ ಇತ್ತೀಚೆಗೆ ಹಲವು ರಾಷ್ಟ್ರದ ಮುಖಂಡರನ್ನು ಬಂಧಿಸಿದ ಬಗ್ಗೆ ದುಃಖ ವ್ಯಕ್ತಮಾಡುವದಕ್ಕಾಗಿ ಈ ಸಲ ಪೆಂಟ್ಯಾಗ್ಯುಲರ್ ಪಂದ್ಯಾಟವನ್ನೇ ರದ್ದುಮಾಡಬೇಕೆಂಬ ಚಳವಳ ನಡೆಯುತ್ತಿರುವದೆಂದು ನನಗೆ ಇದೀಗ ತಿಳಿದುಬಂದಿದೆ.

"ಈ ಪಂದ್ಯಾಟಗಳನ್ನು ನಿಲ್ಲಿಸಬೇಕೆಂದು ಚಳವಳ ಮಾಡುತ್ತಿರುವವರ ಬಗ್ಗೆಯೇ ನನಗೆ ಸಂಪೂರ್ಣ ಸಹಾನುಭೂತಿಯಿದೆ. ಯಾಕೆಂದರೆ ಸತ್ಯಾಗ್ರಹಿಯು ತನ್ನ ಚಳವಳಿಕ್ಕೆ ಜನತೆಯ ಬೆಂಬಲ ಪಡೆಯಲು ಬಗೆಬಗೆಯಿಂದ ಪ್ರಯತ್ನಿಸುತ್ತಾನೆ. ಅದರಂತೆ ಈಗ ನಾನಾದರೂ ಮಾಡಬೇಕಾಗಿದೆ. ಈಗಿನ ಸತ್ಯಾಗ್ರಹ ಚಳವಳ ಮತ್ತು ಇಂತಹ ಮೂಕ ಪ್ರದರ್ಶನಗಳಿಗೆ ಏನೂ ಸಂಬಂಧವಿಲ್ಲವೆಂಬುದು ನಿಜ, ಆದರೆ ಇಡೀ ಯುರೋಪು ಖಂಡದ ಜೀವನ ಮತ್ತು ಸಂಸ್ಕೃತಿಗಳನ್ನು ಹಾಳುಮಾಡಿ ಏಶಿಯಾ ಖಂಡಕ್ಕೂ ಹಬ್ಬಲು ಸಾಹಸಪಡುತ್ತಿರುವ ಯುದ್ಧದ ಬಗ್ಗೆ ಇಡೀ ವಿಚಾರವಂತ ಜಗತ್ತೇ ಆಲೋಚನೆ ಮಾಡುತ್ತಿರುವಾಗ, ಮತ್ತು ಚಿಂತಾಕ್ರಾಂತವಾಗಿರುವಾಗ ಇಂತಹ ಪೆಂಟ್ಯಾಂಗ್ಯುಲರ ಪಂದ್ಯಾಟಗಳನ್ನು ಆಡಿ ನಲಿಯುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಆದ್ದರಿಂದ ಅದನ್ನು ನಿಲ್ಲಿಸುವದೇ ಒಳಿತು.

ಜಾತೀಯ ಪಂದ್ಯಾಟ ನಿಲ್ಲಲಿ

"ಇದೇ ಸಮಯದಲ್ಲಿ ನಾನು ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಅದೆಂದರೆ ಜಾತೀಯ ಪಂದ್ಯಾಟಗಳ ವಿಚಾರ. ಬೇರೆ ಬೇರೆ ಕಾಲೇಜುಗಳ ಮತ್ತು ಸಂಸ್ಥೆಗಳ ನಡುವೆ ಪಂದ್ಯಾಟಗಳು ನಡೆಯುವದು ಯೋಗ್ಯವೆನಿಸಬಹುದು. ಆದರೆ ಹಿಂದೂ ಪಾರ್ಸಿ ಮುಸ್ಲಿಂ ಮೊದಲಾದ ಜಾತೀಯ ಟೀಮುಗಳನ್ನು ಕಟ್ಟಿಕೊಂಡು ಆಟವಾಡುವುದೂ ನನಗೆ ಸ್ವಲ್ಪವೂ ಸರಿಯೆನಿಸುವುದಿಲ್ಲ. ಜಾತೀಯ ಭಾವನೆಯಿಲ್ಲದಂತಹ ಒಂದು ರಂಗವನ್ನಾದರೂ ಇಟ್ಟುಕೊಳ್ಳಲು ನಮಗೆ ಸಾಧ್ಯವಿಲ್ಲವೆ?

"ಆದ್ದರಿಂದ ಈ ಪಂದ್ಯಾಟಗಳನ್ನು ನಿಲ್ಲಿಸಿ, ಕ್ರೀಡಾರಂಗದಿಂದ ಜಾತೀಯ ಭಾವನೆಯನ್ನು ತೆಗೆಯುವ ಬಗ್ಗೆ ಕೊನೆಯ ನಿರ್ಧಾರ ಮಾಡಬೇಕೆಂದು ನಾನು ಈ ಪಂದ್ಯಾಟಗಳಿಗೆ ಸಂಬಂಧಿಸಿದ ಅಧಿಕಾರಿಗಳೊಡನೆ ಮತ್ತು ಮುಂಬಯಿಯ ಕ್ರೀಡಾಪ್ರೇಮಿಗಳೊಡನೆ ಕೇಳಿಕೊಳ್ಳುತ್ತೇನೆ.

ಸೆರೆಮನೆಯಿಂದ ಸೋದರಿಗೆ ನೆಹರು ಒಂದು ಪತ್ರ ಬರೆದರು.

ಓದುತ್ತಾ ನೂಲುತ್ತಾ ದಿನ ಕಳೆಯುತ್ತಾರೆ.

ನೆಲವನ್ನು ಅಗೆಯುವ ಕಾಯಕಷ್ಟ ಮಾಡುತ್ತಾರೆ

ಮನಸ್ಸಿನಬಿರುಗಾಳಿಗಿಂತ ಕಾಯಕಷ್ಟವು ದೊಡ್ಡದಲ್ಲ

ಭಾರತದ ವೀರಾಗ್ರಣಿ ನೆಹರು ನಾಲ್ಕು ವರ್ಷಗಳ ಅವಮಾನಕರ ಶಿಕ್ಷೆಗಳಿಗಾಗಿ ಸೆರೆಯಾಳುತ್ತಿರುವುದನ್ನು ಸೇರಿ ಇಷ್ಟರಲ್ಲಿ ತಿಂಗಳೊಂದು ತುಂಬಿತು. ಅವರ ಸೆರೆಮನೆಯ ಜೀವನವೂ ಒಂದು ರಮಣೀಯ ವಿಷಯ. ತನ್ನ ತಂಗಿ ಕೃಷ್ಣಾ ಹಾತೀಸಿಂಗರಿಗೆ ಸೆರೆಮನೆಯಿಂದ ಅವರೊಂದು ಪತ್ರ ಬರೆದರು, ಅದರಲ್ಲಿ ಅವರ ಇಂದಿನ ಸೆರೆಮನೆಯ ಜೀವನ ರೀತಿಗಳನ್ನು ರಮ್ಯವಾಗಿ ವರ್ಣಿಸಿದ್ದಾರೆ; ಬಹಳ ಸ್ವಾರಸ್ಯವಾಗಿ ಬರೆದಿದ್ದಾರೆ. ಲೋಕದ ಪ್ರಭಾವಶಾಲಿಯಾದ ವ್ಯಕ್ತಿ ಸ್ವಾತಂತ್ರ್ಯ ವೀರನೊಬ್ಬನ ಬರಹ, ಅವರ ಮನಮೋಹಕವಾದ ಉದಾತ್ತ ಜೀವನದ ಈ ಘಟನೆ ಯಾರಿಗೆ ತಾನೆ ಆಪ್ಯಾಯನವೆನಿಸಲಾರದು?

ಆ ಪತ್ರದಲ್ಲಿ ಅವರು ತನ್ನ ಪ್ರಿಯ ಸೋದರಿಗೆ ಹೀಗೆಂದು ಬರೆದಿರುವರು:

"ನಾನು ಆರೋಗ್ಯದಿಂದಿದ್ದೇನೆ. ನನ್ನ ಆಲ ತಿಂಗಳ ಸೆರೆಮನೆಯ ಅವಧಿಯಲ್ಲಿ ನಾನೀಗ ಒಂದು ತಿಂಗಳನ್ನು ದಾಟಿದೆ. ನನಗೆ ಈ ಸಂಗತಿಯು ಮರೆತುಹೋಗಬಹುದಾದ ಸಂದರ್ಭವಿದ್ದರೂ, ಕಣ್ಣ ಮುಂದೆ ಬೆಳಗಿಬರುತ್ತಿರುವ ಈ ಪೂರ್ಣ ಚಂದಿರನು ನನಗೆ ನೆನಪನ್ನು ತರುತ್ತಾನೆ. ನಾನು ಆ ಹುಣ್ಣಿಮೆ ಚಂದಿರನನ್ನು ನೋಡುತ್ತಾ ಸೆರೆಮನೆಯನ್ನು ಸೇರಿದೆನು. ಆಯಾಸ, ಬೇಸರಗಳನ್ನು ಸಂಪೂರ್ಣ ನೀಗಾಡಿಸಿಕೊಳ್ಳಲು ನಾನು ಮನಮಾಡಿದೆನು. ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಲು ಕೆಲಕಾಲ ಬೇಕಾಗುತ್ತದೆ. ನಾನು ಬಹಳ ಓದಿದೆನು. ಬಹುಕಾಲ ಒಳ್ಳೆಯ ನೂಲನ್ನು ನೂತೆನು. ಸೆರೆಮನೆಯಲ್ಲಿ ಎಷ್ಟೊಂದು ಕೆಲಸಗಳನ್ನು ಮಾಡಬಹುದಾಗಿದೆ ಎಂಬುದು ಆಶ್ಚರ್ಯವನ್ನೇ ಹುಟ್ಟಿಸುತ್ತದೆ. ಶುದ್ಧವಾಗಿಡುವುದು, ನನ್ನ ಬಟ್ಟೆಗಳನ್ನು ತೊಳೆಯುವುದು, ಹೆಚ್ಚಾಗಿ ನಾನಿರುವ ಸ್ಥಳವನ್ನು ಸಾಧ್ಯವಾದಷ್ಟು ನಿರ್ಮಲವಾಗಿಯೂ, ಅಚ್ಚುಕಟ್ಟಾಗಿಯೂ ಇರಿಸುವುದು, ಇವು ಬೇಸರವಿಲ್ಲದಂತೆ, ಬಹಳ ಕಾಲವನ್ನು ಕಳೆದು ಬಿಡುತ್ತವೆ.

ಅಗೆಯುವುದು ಮತ್ತು ಆಸನಗಳು

'ನಾನು ನೆಲವನ್ನು ಅಗೆಯುವ ಕೆಲಸವನ್ನು ಆರಂಭಿಸಿದೆ; ಮೊದಮೊದಲು ಇದು ಬಹಳ ಕಾಯಕಷ್ಟವನ್ನೇ ಉಂಟುಮಾಡಿತು. ಏಕೆಂದರೆ ನೆಲವು ಬಹಳ ಒರಟಾಗಿತ್ತು. ಹಾಗಾಗಿ ಬೇಗನೇ ನಾನು ಆಯಾಸಗೊಳ್ಳುತ್ತಿದ್ದೆನು. ನಾನು ದಿನನಿತ್ಯದ ಅಭ್ಯಾಸದಿಂದ ಈಗ ಚನ್ನಾಗಿ ಹುಷಾರಿನಿಂದ ಕೆಲಸಮಾಡುತ್ತೇನೆ. ಆದರೂ ಇದು ಬಹಳ ಕಷ್ಟದ ಕೆಲಸವೇ ಆಗಿದೆ. ನಾನೀಗ ಶೀರ್ಷಾಸನ ಮತ್ತು ಸರ್ವಾಂಗಾಸನಗಳನ್ನು ಮಾಡುತ್ತಿದ್ದೇನೆ. ನನ್ನ ಶರೀರವು ಒರಟಾಗುತ್ತಾ ಬಂದುದರಿಂದ ನಾನದನ್ನು ಬೇಕಾದಂತೆ ಬಳಗಿಸಲು ಸಾಧ್ಯವಿರಲಿಲ್ಲ. ನಾನೀಗ ನನ್ನ ಮೊದಲಿನ ಶರೀರ ಪ್ರಕೃತಿಯನ್ನೇ ಹೊಂದಿದ್ದೇನೆ. ಪ್ರತಿಯೊಂದು ಅರುಣೋದಯವನ್ನೂ ನಾನಿಂದು ತಲೆಯನ್ನು ಬಾಗಿಸಿಕೊಂಡು ಸ್ವಾಗತಿಸುತ್ತಿದ್ದೇನೆ. ನಾನು ನಕ್ಷತ್ರಗಳು ಶುಭ್ರವಾಗಿ ಬೆಳಗುತ್ತಿರುವಾಗಲೇ ಬಹಳ ಮುಂಜಾವಕ್ಕೆ ಏಳುವೆನು. ಅಂತೆಯೇ ಬಹಳ ಬೇಗನೇ ಹಾಸಿಗೆ ಹಿಡಿದು ಮಲಗುವ ಅಭ್ಯಾಸವನ್ನೂ ಮಾಡಿಕೊಂಡಿದ್ದೇನೆ.

ಸಂಗಾತಿ ಬರುತ್ತಾನೆ

'ಉಚಿತ ಸ್ಥಗಳಲ್ಲಿ ನಾನು ನಿಶ್ಯಬ್ದನಾಗಿ ಈಗ ದೃಢನಾಗಿಯೇ ಇರುವೆನು. ಇದೆಲ್ಲವೂ ಒಳ್ಳೆಯದೇ ಎಂದು ನೀನೂ ಸಮ್ಮತಿಸುವೆಯಲ್ಲವೆ? ನನಗೊಬ್ಬ ಸಂಗಾತಿಯಿದ್ದ. ಆದರೆ ಈಗ ಅವನು ಹೊರಹಾಕಲ್ಪಟ್ಟಿದ್ದಾನೆ. ನಾನೀಗ ಏಕಾಂಗಿಯಾಗಿರುವೆ; ಆದರೆ ಬಹುಕಾಲವಲ್ಲ; ಏಕೆಂದರೆ ಬೇರೊಬ್ಬನು ನನ್ನೊಡನೆ ಬಂದು ಕೂಡಲಿರುವನೆಂದು ನನಗೆ ಹೇಳಿದ್ದಾರೆ.

'ತಿಂಗಳಿಗೆ ಎರಡು ಸಲ ನನ್ನನ್ನು ನೋಡಬಿಡುವ ಕಾನೂನಿದೆ. ತಿಂಗಳಿಗೆ ಎರಡು ಪತ್ರಗಳನ್ನು ನಾನು ಬರೆಯಬಹುದಂತೆ. ಅದೂ ಕೂಡ ಕೇವಲ ವ್ಯಾವಹಾರಿಕವಾಗಿ, ಮಾತ್ರ. ಈ ನಿಯಮವನ್ನು ಪ್ರಯಾಸದಿಂದ ದೀರ್ಘ ಮಾಡಲೂಬಹುದು. ಏಮರಿಯುವರೇ ಹೇಳಲಿಲ್ಲವೇ? ನಾನು ನನ್ನ ವಸತಿಯಲ್ಲಿಯೇ ಇದ್ದೇನೆ; ಬೇಕಾದಂತೆ ಭೇಟಿಯಾಗಲು ಸೌಕರ್ಯಗಳಿವೆ; ಇಷ್ಟ ಬಂದ ಹಾಗೆ ಪತ್ರ ಬರೆಯಬಹುದು, ಪುಸ್ತಕಗಳನ್ನು ಓದಬಹುದು ಎಂದು ಇತ್ಯಾದಿಯಾಗಿ? ಈ ಎಲ್ಲಾ ವಿವರಣೆಗಳು ಸಂಪೂರ್ಣ ಅಸತ್ಯವಾದ ಪಕ್ಷಕ್ಕೂ ನಾನು ಆ ಬಗ್ಗೆ ಜಗಳಾಡುವುದಿಲ್ಲ, ಆದರೆ ಜನರು ತಿಳಿಯಬಹುದು, ನಾನು ಒಂದು ವಿಧದ ಪ್ರತ್ಯೇಕ ಪರಿಸ್ಥಿತಿಯಲ್ಲಿದ್ದೇನೆ ಎಂದು. ಹಾಗಿಲ್ಲವಾದರೆ ನಾನು ವಿಚಿತ್ರವಾಗಿ ವರ್ತಿಸುವೆನೆಂದೂ ಅವರು ತಿಳಿಯುತ್ತಾರೆ ಇದು ಸಾಧಾರಣವಾಗಿ ಮರಗಳಿರದ ಅರಣ್ಯ ಜೀವನದಂತಿದೆ.

ಇಂದಿರೆ ಮರಳಿ ಬರಲಿ

'ಇಂದಿರೆ ಮರಳಿಬರಲು ನಿಶ್ಚಯಿಸಿರುವಳೆಂದು ಕೇಳಿ ನಾನು ಸಂತೋಷಗೊಂಡಿದ್ದೇನೆ. ಮರಳಿ ಬರುವಾಗ ಬೇಕಾದಷ್ಟು ಪ್ರಾಣಾಪಾಯಕರ ಸಂಗತಿಗಳು ಸಂಭವಿಸುವುದೂ ಸಾಧ್ಯವಿದೆ. ಆದರೆ ನಮ್ಮಿಂದ ಅಗಲಿದ್ದು ಜೀವನ ಮಾಡಲು ಕಷ್ಟ ಸಾಧ್ಯವಾಗಿರುವುದಕ್ಕಿಂತ ಆತಂಕಗಳನ್ನು ಎದುರಿಸುವುದೂ ಯೋಗ್ಯವಾದುದೇ? ಆಕೆ ಮರಳಿ ಬರಲು ಆತುರಪಡುವುದಿದ್ದರೆ ಹಾಗೆ ಮಾಡಲಿ, ಮತ್ತೆ ಅದಕ್ಕೆ ಬೇಕಾದ ಸಿದ್ಧತೆ ಮಾಡಲಿ.



ಕಾಯಕಷ್ಟ ದೊಡ್ಡದಲ್ಲ

"ನಮ್ಮೆಲ್ಲರ ಜೀವನಗಳೂ ಇಂದು ದಿನ ಹೋದಂತೆ ಕಷ್ಟಕರವಾಗಿಯೇ ಹೋಗುತ್ತವೆ. ನಮ್ಮ ಅಂದಿನ ಸುಖದ ದಿನಗಳು ಕಳೆದ ಕಾಲದೊಡನೆಯೇ ಮುಚ್ಚಿಹೋದವು! ಇಂದಿನ ಜೀವನಕ್ಕೆ ನಾವು ನಮ್ಮನ್ನು ಹೊಂದಿಸಿಕೊಳ್ಳಬೇಕಾಗಿದೆ. ಯಾವುದು ನಮಗೆ ದೊರಕುವುದಿಲ್ಲವೋ, ಅದಕ್ಕಾಗಿ ಹಸಿದುಕೊಳ್ಳುವುದು ಸರಿಯಲ್ಲ. ಮನಸ್ಸಿನ ಈ ಗಲಾಟೆಗಳಿಗೆ ಮತ್ತೀ ಬಿರುಗಾಳಿಗೆ ಹೋಲಿಸಿ ನೋಡಿದರೆ ಶಾರೀರಿಕ ಸಂಕಷ್ಟಗಳು ಬಹಳ ಅಲ್ಪವಾದವುಗಳು. ಜೀವನವು ಮೃದುವಾಗಿರಲಿ ಕಠಿಣವಾಗಿರಲಿ ಯಾವಾಗಲೂ ಮನುಷ್ಯನು ಅದರಿಂದ ಲಾಭ ಪಡೆಯಬಹುದು. ಆದರೆ ಕೊನೆಗೆ ಜೀವಸಾರ್ಥಕ್ಯವನ್ನು ಅನುಭವಿಸಬೇಕಾದರೆ, ಯಾರಾದರೂ, ಅದರ ಬೆಚ್ಚವೆಷ್ಟೆಂದು ಎಣಿಸಲೇಬಾರದು."



ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 302/1938
R. I. A. 507/1940

1. ಬಸಪ್ಪ ಅತ್ತಾರ, 2. ಬಾಳ ತೀನ ಸೆಟ್ಟಿ—
ಅರ್ಜಿದಾರರು

ಮತ್ತು

ಬಾಬುಗೌಡ ಸಾಂತಪ್ಪ ಗೌಡರ ಮಗ, ಮಂಗಳೂರು ತಾಲೂಕು ಕೊಂಬದಕು ಗ್ರಾಮಸ್ಥ—
ರೆಸ್ಪೋಂಡೆಂಟ್

ಮೇಲ್ಕಂಡ ದಾವೆಯಲ್ಲಿ [illegible] ಬಗ್ಗೆ 2ನೇ ಅರ್ಜಿದಾರನ [illegible] ಮಾಡಿದ ಮೇಲ್ಕಂಡ ಅರ್ಜಿಯು ತನ್ನ ಬಗ್ಗೆ ತಾರೀಖು 19-12-40ಕ್ಕೆ ಇಟ್ಟಿರುತ್ತದೆ ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

K. Balakrishna Rao,
ವಾದಿ ಕಡೆ ವಕೀಲ.

ಈ ವಾರದ ಕಥೆ.

ಎರಡು ಹೃದಯಗಳು

ಲೇಖಕರು ಪ್ರಮೋದ ಕುಮಾರ

ಆ ಎರಡು ಕಣ್ಣುಗಳು ಕಿಟಿಕಿಯ ಬಿರುಕಿಂದ ಇಣುಕು ಹಾಕಿ ಹೊಳೆಯುತ್ತಿದ್ದುವು. ಅಧರೊಂದಿಗೆ ಸ್ನೇಹಭಾವವನ್ನು ಹೇಳುವಂತೆ ಕೈಬಳೆಗಳೂ ಗಿಣಿಗಿಣಿ ಅನ್ನುತ್ತಿದ್ದುವು. ಆಗಾಗ ಬಂದರೆ ಗಳಿಗೆಯಲ್ಲಿ ಮಾಯವಾಗಿ ಮತ್ತೊಂದು ನಿಮಿಷದಲ್ಲಿ ಪುನಃ ಅಲ್ಲಿಯೇ ತೋರುತ್ತ ಏನೋ ಒಂದು ಆಹ್ಲಾದಭಾವನೆಯನ್ನು ಪ್ರಯತ್ನಪೂರ್ವಕವಾಗಿ ಪ್ರಕಟಿಸುತ್ತ ಬಾಲೆಯೊಬ್ಬಳು ಒಳಗೆ ಕಿಟಿಕಿಯ ಮರೆಗೆ ನಿಂತಿದ್ದಳು. ರಾಜು, ಹೊರಗೆ ಜಗಲಿಯಲ್ಲಿ ಮೇಜಿನ ಬಳಿ ಕುಳಿತುಕೊಂಡು ಪತ್ರಿಕೆಯನ್ನು ಓದಿ ಮುಗಿಸಿದನು 'ಇನ್ನು ಬರುತ್ತೇನೆ ರಾಯರೇ,' ಎಂದು ಹೊರಗೆ ಇಳಿದು ಹೋದನು

ಪ್ರತ್ಯೊಂದು ದಿನವೂ ಹೀಗೇ ಆಯಿತು. ಇಂಥ ಒಂದು ಅಂತರಂಗವು ಉಂಟೆಂದು ಹೇಗೆ ತಾನೇ ತಿಳಿಯುತ್ತಿದ್ದೀತು! ತನ್ನೆದೆಯನ್ನು ಇಣುಕು ಹಾಕುವ ವಸ್ತುವಿಗೆ ತಾನೇ ಮಾರು ಹೋದ ವೇಳೆ, ಅವನ ಮಾತೇನು? ಆದರೆ ಎದೆಯೊಳಗಿನಲ್ಲಿ ಆಸೆಯ ಕಾಡುಮಿಂಚೊಂದು ಉಂಟೆಂದು ಅವನಿಗೆ ಗೊತ್ತು, ಅದರ ಗುಟ್ಟೇನೆಂದು ಮಾತ್ರ ಗೊತ್ತಿಲ್ಲ. ಈ ಮನೆ, ಮನೆಯ ಚಾವಡಿ, ಅಲ್ಲಿರುವ ಕಿಟಿಕಿಯ ಸಂಧಿನಲ್ಲಿ ಮಿನುಗುತ್ತಿರುವ ಆ ಎರಡು ಕಣ್ಣುಗಳು, ಇವೆಲ್ಲಾ ಬಹುಕಾಲದ ಹಿಂದಿನ ಕನ್ನೆಳವೆಯ ದಿನಗಳನ್ನು ನೆನಪಿಗೆ ತರುವಂತೆ ಇದ್ದುವು. ಆದರೆ ಈಗ ಅವೆಲ್ಲಾ ಅವನಿಗೆ ಕನಸಿನಂತೆ ತೋರುತ್ತಿದ್ದುವು. ಮನಸ್ಸಿನ ಕಣ್ಣಿಗೆದುರು ಹಿಂದೊಂದು ಚಿತ್ರವು ಬಂದು ನಿಂತಂತೆ, ಒಂದೊಂದೇ ಅಳಿಸಿ ಹೋಗಿ ಮತ್ತೆ ಬೇರೇ ಕಾಣುವುದು.

ದಿನಗಳು ಕಳೆದಂತೆ ಆ ಎರಡು ಕಣ್ಣುಗಳಲ್ಲಿ ಕಂಬನಿಯ ಕಣ್ಣೀರಿನ ಥಳಥಳ ಹೊಳಪು ಒಂದಿಷ್ಟು ತೋರಹತ್ತಿತು. ಕಾಣದ ಬಗೆಯನ್ನು ಕಣ್ಣುಗಳೇ ಹೀಗೆ ಹೇಳುವಾಗ, ಇನ್ನೊಂದು ಹೃದಯ ಹೇಗೆ ಅರಿಯದಿದ್ದೀತೊ? ಆಶಿಸಿದ ಅವರ ವಸ್ತುವೊಂದು ಹತ್ತಿರ ಹತ್ತಿರ ಇದ್ದರೂ ಕೈಗೆಟುಕದಿದ್ದರೆ ಮತ್ತೂ ಮನದಿಚ್ಛೆ ಹೆಚ್ಚುವುದು ಸಹಜ. ಕನ್ನಡಿಯಲ್ಲಿ ಕಾಣುವ ಗಂಟೆಗೆ ಕೈಹಾಕುವ ಬಗೆಯಂತೆ ಆ ಎದೆಯನ್ನು ತಂಪುಗಾಣಿಸುವ ಬಗೆ ಅದಾರಿಗೆ ಗೊತ್ತಾಗಬೇಕು? ರಾಜು—ಅದು ಕನಸು ಇದು ನೆನಸು ಎಂದು; ಕತ್ತಲೆಯಾಯಿತು ನೆರಳುಗೂಡಿತು, ಎಂದು ಇಷ್ಟೇ ಯೋಚಿಸುತ್ತ ಸುಮ್ಮನಿರುತ್ತಿದ್ದನು. ಆದರೆ ಒಳಗಿನ ಜೀವ 'ರಾಜು, ವಿಠಲರಾಯರು ಇಲ್ಲದಾಗ ಒಮ್ಮೆ ಬರುತ್ತಿದ್ದರೆ!.......' ಎಂದು ಕಕಳಕನೆ ಕುದಿಯುತ್ತಿತ್ತು. ರಾಜುಗೆ ಅದೂ ಗೊತ್ತಾಗದಿಲ್ಲ.

ದಿನ ಕಳೆದು ತಿಂಗಳಾಗುತ್ತ ಬಂತು. ಇನ್ನೂ ಆ ಎರಡು ಹೃದಯಗಳಲ್ಲಿ ಯಾವುದೋ ಆಸೆಯ ತುಮುಲ ನರ್ತನವಾಗುತ್ತಿತ್ತು; ನಿರಾಶೆಯ ಅನುಭವವಾಗುತ್ತಿದ್ದಂತೆ ಸ್ವಲ್ಪ ಸ್ವಲ್ಪ ತಣಿಯುತ್ತಿತ್ತು.

ಅಳಿದೇ ಹೋಗಿದೆಯೆನ್ನುವುದು ಸುಳ್ಳಲ್ಲ' ಎಂದು ಅವಳ ಮನಸ್ಸು ಸಮಾಧಾನಗೊಂಡರೆ 'ಒಂದು ಹುಡುಗಿಯ ಮನಸ್ಸು ತೃಪ್ತಿಗೊಳಿಸಲು ಬಾರದ ಗಂಡಸು ಇದ್ದೇನ? ಎಂದು ಅವನೆದೆ ಚಿಂತಿಸುತ್ತಿತ್ತು'

ರಾಜು ಎಂದಿನಂತೆ ಬರುತ್ತಿದ್ದ ಅಲ್ಲಿಗೆ ಬಂದರೆ ವಿಠಲರಾಯರಲ್ಲಿ ತನಗೇನ ಕೆಲಸವೋ ಅದನ್ನು ಮುಗಿಸಿ ಹಿಂತಿರುಗಿ ಬಿಡುತ್ತಿದ್ದನು. ಹಾಗೆ ಬರುವಾಗಲಾದರೂ ಆ ಕಿಟಿಕಿಯ ಬಳಿಗೊಂದು ಬಾರಿಯಾದರೂ ಸರಿಯೇ ನೋಡಬಾರದಿತ್ತೆ? ಅವನಲ್ಲಿ ಆ ಧೈರ್ಯ ಇರಲಿಲ್ಲ'

'ಅಯ್ಯೋ!' ಎಂದು ಆ ಒಡವೆ ದುಃಖಿಸುತ್ತಿದ್ದಳು. ತಾನೇಕೆ ದುಃಖಿಸುತ್ತೇನೆಂಬುದೂ ಅವಳಿಗೆ ಯೋಚನೆ ಬರಲಿಲ್ಲ. ತನಗೊಬ್ಬ ಪತಿಯಿದ್ದ, ಅವನೊಡನಿನ್ನು ಬಾಳಿ ಬದುಕುವ ಆಸೆ ಮುಗಿಯಿತೆಂದಾದರೂ ಅವಳಿಗೆ ಭಾವನೆ ಆಗಲೊಲ್ಲದು. ಲೋಕವು ಇನ್ನು ಎಲ್ಲಿದ್ದೆಯಲ್ಲಿಯೂ ತನ್ನ ಅಭ್ಯುದಯಕ್ಕೆ ಕಾದಿರದಂತಿದೆ ಎಂದೂ ಅವಳಿಗೆ ಹೊಳೆಯಬಾರದಿತ್ತೆ? ತಾನು ವಿಧವೆಯೆಂದು ಸಂಪೂರ್ಣ ಮರೆತು ಹೋಯಿತೇಕೆ? ಪತಿಯೆಂಬವನೊಬ್ಬನ ಸಂಗಡ ಇನ್ನು ಸ್ವಲ್ಪ ಕಾಲವಾದರೂ ಬಾಳಿ ಬದುಕಬೇಕೆಂಬ ಹಂಬಲ-ಇನ್ನೂ ಹದಿನಾರರ ಆ ಸುಂದರ ಯುವತಿಯ ಎದೆಯಲ್ಲಿ ತಾಂಡವವಾಡುತಿತ್ತು.

ರಾಜು ಬಂದರೆ ಅವನೊಡನೆ ಒಂದೆರಡು ಗಳಿಗೆ ಮಾತನಾಡಬೇಕೆಂಬ ಅವಳ ಆಸೆ ತನ್ನ ಜೀವನದ ಕುರಿತು ತನಗಾದ ಅನ್ಯಾಯವನ್ನು ಅವನೊಡನಾದರೂ ಸ್ವಲ್ಪ ಹೇಳಿಕೊಳ್ಳೋಣ ಅನ್ನಿಸುತ್ತಿತ್ತು. ಆಗ ವಿಠಲರಾಯರ ನೆನಪು ಬಂದರೆ, 'ಅಯ್ಯೋ! ಇವರೊಬ್ಬ ಕರಾಳ ಮಾವ' ಎಂದು ಕೊರಗುತ್ತಿದ್ದಳು. ಮತ್ತೂ ಮತ್ತೂ, ಅವಳ ಭಾವನೆಗಳು ಬಿಗಿದ ಸಂಕಲೆಯಂತೆ ಎಳೆದರೆ ಬಿಚ್ಚಿ ಬರಲೊಲ್ಲದು, ಮುಗ್ಗರಿಸಿ ಮುರಿಯಲೊಲ್ಲದು; ಬಲವಾದ ನೋವನ್ನುಂಟುಮಾಡುತ್ತಿದ್ದಿತು ಮಾತ್ರ. 'ಮಾವನಿಗೇನು? ನಾನೇಕೆ ನನ್ನಕ್ಕೆ ಇದ್ದರಕ್ಕೆ ಒಬ್ಬನ ಸಂಗಡ ಮಾತ...

...ಸರು ಎಷ್ಟೊಂದು ಸ್ವಾರ್ಥಿಗಳು!' ಎಂದು ಮರುಗುವಳು.

ಒಂದು ದಿನ ಬಂತ ರಾಜು ಬಂದ. ಅವನು ಬರುವಾಗ ವಿಠಲರಾಯರು ಮನೆಯಲ್ಲಿ ಇರಲಿಲ್ಲ' ಎಂದಿನಂತೆ ಬಂದವನೇ ಜಗಲಿಯಲ್ಲಿ ಒಂದು ಕುರ್ಚಿಯನ್ನೆಳೆದು ಮೇಜಿಗೆ ಒರಗಿ ಕುಳಿತುಕೊಂಡು ಪತ್ರಿಕೆಯನ್ನು ನೋಡುತಿದ್ದ, ರಾಯರು ಒಳಗಿರಬಹುದೆಂದು ಆತುರದಿಂದ ಆಗಾಗ ಒಳಗಡೆಗೆ ನೋಡುತಿದ್ದ. ಅದೇ ಗಿಣಿ ಗಿಣಿ ಸದ್ದು ಮಾಡುತ್ತ, ನೈಯಾಂದ ಉಡುಗೆಯನ್ನು ತಿದ್ದಿಕೊಳ್ಳುತ್ತ, ನಯವಾದ ನೆಲದಲ್ಲಿ ಮೃದುವಾದ ಅಡಿಗಳನ್ನಿಡುತ್ತ ಅದೇ ಮಿನುಗುವ ಕಣ್ಣುಗಳಿಂದ ಅವಳು ಹೊರಬಂದಳು'

ರಾಜು ಕಣ್ಣೆತ್ತಿ ನೋಡಿದ, ಅವನಿಗೆ ಮಾತು ಬರಬೇಕೆ? ತೆರೆದ ಬಾಯಿ ಮುಚ್ಚಬೇಕೆ? ಪತ್ರವನ್ನೆತ್ತಿದ ಕೈಗಳಾದರೂ ಏಕೆ ಇನ್ನೂ ಜಗ್ಗಲಿಲ್ಲ? 'ಮಾಧವೀ' ಎಂದು ಮಾತು ಮಾತ್ರ ಅವನ ಬಾಯಿಯಿಂದ ಹೊರಬಿತ್ತು, ಅದರಲ್ಲಿ ಅವನ ಕಂಠಸ್ವರ ಬೆರೆತಿರಲಿಲ್ಲ!

ಅವಳಿಗೂ ಆಶ್ಚರ್ಯ! 'ರಾಜೂ' ಎಂದವಳೂ ಕರೆದಳು'

ಮತ್ತೆ ಅರೆಗಳಿಗೆಯ ಮೌನದಲ್ಲಿ ಸೂಜಿಬಿದ್ದರೂ ಗೊತ್ತಾಗುತ್ತಿತ್ತು' ರಾಜು ಕುಳಿತಿದ್ದ, ಮಾಧವಿ ನಿಂತಿದ್ದಳು. ಅವನು ಕುಳಿತಂತೆ, ಇವಳು ನಿಂತಂತೆ, ಒಬ್ಬನಿಗೆ ಕನಸಿನ ಸಾಮ್ರಾಜ್ಯ, ಇನ್ನೊಬ್ಬಳಿಗೆ ಸಾರಾಸಾರ ಕಲ್ಪನೆಯ ಪ್ರಪಂಚ. ಬಾಳುತ್ತ ನಡೆವ ಬನ್ನ ಎಂದರೆ ಬಯಸಿದ್ದು ಬಾರದೇ ಹೋಗುವುದು. ಇಬ್ಬರ ಎದೆಯಲ್ಲಿಯೂ ಒಂದೊಂದು ತುಮುಲ ತಾಂಡವ ನೃತ್ಯವೇ ಆಗುತ್ತಿತ್ತು! ಯಾವುದರರಿವೂ ಯಾರಿಗೂ ಆಗಲಿಲ್ಲ. 'ಅಂಥವನ ರಾಜು ಇಂದೂ ಆಗಿದ್ದರೆ ಎಷ್ಟೊಂದು ಸಂತೋಷ! ನನಗೆ ತೃಪ್ತಿಯನ್ನುಂಟು ಮಾಡುತ್ತಿದ್ದ!' ಎಂದು ಎಣಿಸಿದವಳಿಗೆ. 'ಮಾಧವಿ ಎಂಥ ನಿರ್ದೋಷಿ ಹುಡುಗಿ! ಅವಳಿಗೆ ಹೀಗಾಗಬಾರದಿತ್ತು' ಎಂದವನಿಗನಿಸಿತು.

'ನನ್ನ ಮಾತು ಅವನಿಗೆ ಈಗ ಬೇಕೆ...

...ಸವಿನುಡಿಯೆಲ್ಲಿ? ಇಂದಿನ ಪ್ರೌಢತ್ವದ ಸಂಕುಚಿತ ಭಾವನೆಯೆಲ್ಲಿ? ಅಂದು ಆ ದಿನ, ಇಂದು ಈ ದಿನ ಅದನ್ನು ನೆನೆದು ಹೇಗೆಲ್ಲಾ ಬಗೆದರೆ ಹೇಗಾದೀತು! ನಾನು ನೆನೆದುದೇನ? ಈಗ ನಡೆದುದೇನು? ...' ಎಂದು ಅವಳು ಯೋಚಿಸುವಳು. ರಾಜು ಮೊದಲಿನಂತೆ ಇಲ್ಲವೆಂದೇ ಅವಳ ಭಾವನೆ; ಅಂದಿನ ಆ ಸಲಿಗೆ, ಆ ವಿನೋದ, ಆ ಗೆಲುವು ಈಗ ಇರಲಿಕ್ಕಿಲ್ಲ. ಆದರೂ ಮಾತಾಡಬಾರದೇಕೆಂದು ಅವಳ ಮನಸ್ಸು ಮಾತ್ರ ಮುಂದರಿಯುತ್ತಿತ್ತು.

ರಾಜು ಸುಮ್ಮನಿದ್ದ. ಇಷ್ಟು ಹೊತ್ತು ಮಾಧವಿಯ ಮುಖ ನೋಡುತ್ತಲೇ ಇರಲಿಲ್ಲ. ಆ ಮುಖದಲ್ಲಿ ರಾಜು ನೋಡುವುದೇನಿದೆ? ತನ್ನ ಮನಸ್ಸನ್ನೇ ಅವನೊಂದಿಷ್ಟು ನೋಡಬೇಕಾಗಿ ಬಂತು. ಹಿಂದಿನ ಮಾತೆಲ್ಲ ನೆನೆದು ಅವನಿಗೇ ನಾಚಿಗೆಯಾಯಿತು. ಹುಡುಗತನವೆಂದರೆ ಬುದ್ಧಿ ಬಾರದ ಕಾಲವೆಂದೂ ಹುಡುಗತನದ ಭಾವನೆ ಈಗ ತಪ್ಪೆಂದೂ ತೋರಿತು. 'ಅಯ್ಯೋ! ನಾನು ಏನು ಅನ್ಯಾಯ ಮಾಡಿದೆ? ನನ್ನ ಚಿಕ್ಕ ದಿನ ಗೆಳತಿ ನನ್ನ ಮುಖ ನೋಡಿದರೆ ಅವಳಿಗೆ ಏನು ಏನೋ ಆಗುವುದು. ನನಗಂತೂ ಮನಸ್ಸು ನಾಚಿಗೆಯಿಂದಲೂ ಪಾಪದ ಭೀತಿಯಿಂದಲೂ ನೊಂದ ಕೊಡಿದೆ. ನನ್ನ ಕುರಿತು ಅವಳು ಏನು ಭಾವಿಸುವಳೋ' ಎಂದು ನೊಂದುಕೊಂಡ. ತಾನು ಏನು ಮಾಡಿದೆ ಎಂಬ ವಿಚಾರ ತಿಳಿಯುವುದಿಲ್ಲ, ತಾನು ತಪ್ಪುಮಾಡಿದವನೆಂದು ಮಾತ್ರ ತಿಳಿಯುತ್ತಿತ್ತು. ಅವನಿಗೆ ಬೇರೆ ಮಾತೇಕೆ ಬರಬೇಕು? ಮುಖವನ್ನು ನೋಡುವ ಬದಲು ಆ ಸುಂದರ ಪಾದಗಳೆರಡನ್ನೂ ನೋಡುತ್ತಿದ್ದಂತೆ ಅವನ ಮನಸ್ಸು ಕರಗಿ ಕರಗಿ ನೀರಾಗಿ ಕಣ್ಣುಗಳಲ್ಲಿ ತರಂಗ ತರಂಗವಾಗಿ ಹರಿಯಿತು.

ಅವಳು ಹತ್ತಿರ ಬಂದಳು. ಅವನು 'ತಂಗೀ!' ಎಂದು ಎದ್ದು ನಿಂತನು. ಅವಳು ಬೆಚ್ಚಿದ ಕಣ್ಣುಗಳಿಂದ ಒಂದು ತಡವೆ ರಾಜುವಿನ ಮುಖ ನೋಡಿದಳೋ ಇಲ್ಲವೋ, ಚಿಗರೆಯಂತೆ ಒಳಗೆ ಓಡಿದವಳೇ ಬಾಗಿಲು ದಬದಬನೆ ಕೂಡಿಸಿದಳು!

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

HALFTONE & LINE
BLOCK MAKING
UNDERTAKEN
Sharada Press,

ಚರ್ಚಿಲರು

ಯೆಹೂದ್ಯರನ್ನು ಜರ್ಮನಿಯಿಂದ ಬೆನ್ನಟ್ಟಿದರು!

ಚರ್ಚಿಲರು ಬರೆದ ಹಿಟ್ಲರರ ಜೀವನ ಪರಿಚಯ

೧೯೩೫ರ ವರೆಗಿನ ಜರ್ಮನಿ (ಲೇಖಾಂಕ ೪)

[ಹಿಂದಿನ ಲೇಖಾಂಕಗಳಲ್ಲಿ ಹಿಂದಿನ ಮಹಾಯುದ್ಧದ ಮೇಲೆ, ಜರ್ಮನಿಯು ಯುದ್ಧ ಸಿದ್ಧತೆ ಮಾಡುತ್ತಿದ್ದ ವಿಷಯವನ್ನೂ, ಹಿಟ್ಲರನು ಅಧಿಕಾರಕ್ಕೆ ಬಂದ ವಿಷಯವನ್ನೂ, ಜರ್ಮನರು ಆತನು ಹೇಳಿದಂತೆ ನಡೆದುಕೊಂಡು ಹೇಗೆ ವಿದೇಶಗಳೊಡನೆ ವಿದ್ವೇಷ ಬೆಳಸಿದರೆಂಬುದನ್ನೂ ತಿಳಿಸಿದೆ. ಇಲ್ಲಿ ಅದರ ಕೊನೆಯ ಭಾಗವು ಕೊಟ್ಟಿದೆ.]

ಜರ್ಮನ ದೇಶದೊಳಗಣ ಈ ದ್ವೇಷ ಸಂಬಂಧದ ಬದಲಾವಣೆಗಳು ಇನ್ನು ವಿಶೇಷ ತರದವುಗಳು. ೧೯೧೪-೧೮ರ ಯುದ್ಧದಲ್ಲಿ ಜರ್ಮನಿಯವರಿಗಾದ ಪರಾಜಯವು ಯಹೂದ್ಯರ ಶಾಂತಿಮಯವಾದ ದೇಶಾಭಿಮಾನವಿಲ್ಲದ ನಡತೆಯಿಂದ ಉಂಟಾಯಿತೆಂಬ ಸಂದೇಹವು ಜರ್ಮನಿಯಲ್ಲಿ ನೆಲೆಗೊಂಡಿತು. ಇವರು (ಯೆಹೂದ್ಯರು) ಕಮ್ಯೂನಿಷ್ಟರ ಆಧಾರಕ್ಕೆ ಮುಖ್ಯ ಕಾರಣರೆಂತಲೂ ಪರಾಜಿತರಾಗುವಂತೆ ಜರ್ಮನರ ಜತೆಯಲ್ಲಿ ಈ ಯೆಹೂದ್ಯರೇ ಕಾರಣರೆಂತಲೂ ಜನರು ಅಭಿಪ್ರಾಯಪಟ್ಟರು. ಈ ಇದರಿಂದಾಗಿ ಲಕ್ಷಕಟ್ಲೆಯಲ್ಲಿ ಜರ್ಮನಿಯಲ್ಲಿ ಜೀವಿಸಿರುವ ಈ ಯೆಹೂದ್ಯರನ್ನು ತಮ್ಮ ಸ್ಥಾನದಿಂದ ತಳ್ಳಿಹಾಕಿ ಅವರನ್ನು ಸಾಮಾಜಿಕ ಹಾಗೂ ಔದ್ಯೋಗಿಕ ಸ್ಥಾನದಿಂದ ತೆಗೆದು ಅವರ ಸ್ವಾಧೀನವಿರುವ ವರ್ತಮಾನ ಪತ್ರಿಕೆಗಳನ್ನು ನಿಲ್ಲಿಸಿ ಈ ಯೆಹೂದ್ಯ ಜನಾಂಗವೇ ಅತೀ ಕೀಳು ಮತ್ತು ನೀಚ ಜನಾಂಗವೆಂಬದಾಗಿ ಜರ್ಮನರು ಪ್ರಕಟಿಸಿರುವರು. ಈ ಕ್ರೂರ ಸೂಕ್ತಗಳನ್ನು ಜರ್ಮನಿಯವರು ಪ್ರಕಟಿಸಿರುವರಲ್ಲದೆ ಜರ್ಮನ ಸರಕಾರವು ಈ ಸೂತ್ರಗಳನ್ನು ಕೂಡಲೇ ಜಾರಿಗೆ ತಂದಿರುವುದು. ಹಿಂದೆ ಜರ್ಮನರಿಗೆ ಈ ಯೆಹೂದ್ಯರು ಮಾಡಿರುವ ಯಾವ ಸೇವೆಯೂ ಅಥವಾ ೧೯೧೪-೧೮ರ ಯುದ್ಧದಲ್ಲಿ ಅವರು ಪಡೆದ ಗಾಯಗಳೂ ಅವರ ನಿಶ್ಚಿತ ದೇಶಾಭಿಮಾನವೂ ಇವರನ್ನು ಉಳಿಸಲಿಲ್ಲ. ಅವರನ್ನು ಅವರ ತಾಯಿತಂದೆಗಳು ಯೆಹೂದ್ಯರಲ್ಲಿ ಜನ್ಮವೆತ್ತಿಸಿದರೆಂಬ ಒಂದು ಕಾರಣವೇ ಜರ್ಮನಿಯಲ್ಲಿ ದೊಡ್ಡ ಅಪರಾಧವಾಗಿ ಪರಿಣಮಿಸಿದೆ; ಇಡೀ ಪ್ರಪಂಚದಲ್ಲಿ ಪ್ರಖ್ಯಾತರಾದ ಯೆಹೂದ್ಯ ಶಾಸ್ತ್ರಜ್ಞರು ಬರಹಗಾರರು ಸಂಗೀತ ನಿಪುಣರೂ ಶಾಲೆಯಲ್ಲಿರುವ ಸಣ್ಣ ಯೆಹೂದ್ಯ ಮಕ್ಕಳೂ ಸಹಾ ಈ ರೀತಿ ಶಿಕ್ಷಿಸಲ್ಪಡುವರು. ಈ ಶಿಕ್ಷೆಯು ನ್ಯಾಯವಾದುದೆಂಬದಾಗಿ ಜರ್ಮನಿಯವರು ಗರ್ವವನ್ನು ತಾಳಿರುವರು.

ಪ್ರತಿ ಒಬ್ಬ ಸಮತಾವಾದಿಯ ಮೇಲೆ ಇದೇ ರೀತಿ ತೊಂದರೆಯು ಉಂಟಾಗಿದೆ. ಈ ರೀತಿ ಅವರನ್ನು ಜರ್ಮನ ಸರಕಾರವು ಶಿಕ್ಷಿಸುವುದು. ಮಜೂರ ಸಂಘದ ಮುಖಂಡರೂ ಲಿಬರಲ್ ಪಕ್ಷದ ಸುಶಿಕ್ಷಿತ ಜನರು ಈ ರೀತಿ ಶಿಕ್ಷೆಗೆ ಗುರಿಯಾಗುವರು. ಹಿಟ್ಲರನ ಯಾವ ಕೆಲಸವನ್ನು ಅವರು ವಿಮರ್ಶಿಸಿದರೆ ರಾಜದ್ರೋಹದ ಶಿಕ್ಷೆಗೆ ಒಳಗಾಗುವರು. ಸಾಧಾರಣವಾಗಿ ನ್ಯಾಯಸ್ಥಾನಗಳು ಖಾಸಗಿ ವಿವಾದಗಳನ್ನು ತೀರ್ಮಾನಿಸುತ್ತವೆ. ಆದರೆ ರಾಜಕೀಯ ತಕ್ಕರಾರುಗಳನ್ನು ಜನತೆಯ ಕೋರ್ಟುಗಳೇ ತನಿಖೆ ಮಾಡಬೇಕೆಂತ ಜರ್ಮನಿಯಲ್ಲಿ ನಿಶ್ಚಯವಾಗಿ ಈ ನಾಜಿಯವರ ಕೋರ್ಟುಗಳು ಈ ವಿವಾದಗಳನ್ನು ತನಿಖೆ ಮಾಡುತ್ತಲಿರುವವು. ಈ ಕೋರ್ಟುಗಳಲ್ಲಿ ಸಾವಿರಾರು ಜರ್ಮನಿಯವರು ಶಿಕ್ಷಿಸಲ್ಪಡುವರು. ಜರ್ಮನಿಯಲ್ಲಿ ಸೈನ್ಯವನ್ನು ತರಬೇತು ಮಾಡುವ ಬಗ್ಗೆ ಇಟ್ಟ ಮೈದಾನುಗಳು ಮತ್ತು ವಾಯುಹಡಗಗಳಿಗೆ ಬೇಕಾದ ಏರೋಡ್ರೋಮುಗಳು ಹೇಗೆ ಇರುವವೋ ಹಾಗೆಯೇ ಕೊನ್ಸೆಂಟ್ರೇಶನ್ ಕ್ಯಾಂಪ್ ಎಂಬ ಜೈಲುಗಳು ಸಹಾ ಇರುವವು. ಈ ಜೈಲುಗಳಲ್ಲಿ ಸಾವಿರಾರು ಜರ್ಮನರನ್ನು ಈ ಜರ್ಮನಿಯ ಪ್ರಜಾಪ್ರಭುತ್ವವಿಲ್ಲದ ನಿರಂಕುಶ ಪ್ರಜಾಪ್ರಭುತ್ವದ ಅಧಿಕಾರಕ್ಕೆ ವಿಧೇಯರಾಗಿ ನಡಿಯುವಂತೆ ಸರಕಾರವು ಬಲಾತ್ಕರಿಸುವುದು. ಯೆಹೂದ್ಯರ ಮೇಲಣ ದ್ವೇಷವು ಸ್ವಾಭಾವಿಕವಾಗಿ ಕ್ರೈಸ್ತ ಮತದ ಸೂತ್ರಗಳನ್ನು ಎದುರಾಡಿಸುವರೆ ಸುರುಮಾಡಿದೆ. ಈ ರೀತಿ ಊರಲ್ಲಿ ವಿರೋಧ ಭಾವಗಳು ಹೆಚ್ಚುತ್ತಲಿರುವವು. ಈಗ ಜರ್ಮನಿಯಲ್ಲಿ ಹೊಸತಾಗಿ ನಿರ್ಮಾಣವಾದ ಮತವೆಂದರೆ ಜರ್ಮನ ದೇಶವನ್ನು ಕ್ರೈಸ್ತ ಮತದ ಮೊದಲಿದ್ದ ಜರ್ಮನಿಯ ಪ್ರಾಚೀನ ದೇವತೆಗಳ ಸ್ವರೂಪಗಳಿಂದ ಆರಾಧಿಸುವ ಕ್ರಮವು. ಅದು ಜಾರಿಗೆ ಬಂದು ಕಥೊಲಿಕ ಜಾತಿಯ ಗುರುಗಳಿಗೂ ಪ್ರೊಟೆಸ್ಟಾಂಟ ಗುರುಗಳಿಗೂ ಜರ್ಮನಿಯ ಸರಕಾರದೊಡನೆ ವಿರೋಧ ಉಂಟಾಗಲು ಆರಂಭವಾಗಿದೆ. ಈಗ (೧೯೩೫)ರಲ್ಲಿ ಜರ್ಮನಿಯು ಈ ಪರಿಸ್ಥಿತಿಯಲ್ಲಿರುವುದು.

(ಮುಗಿದುದು)

K. L. KUDVA

NOTICE

The undersigned will sell by public auction the tile factory belonging to Mr. P. F. B. Albuquerque and particularised herebelow on Sunday the 15th of December 1940 at 10 A. M. in the Catholic Bank premises, Hampankatta, Mangalore. The upset price is fixed at Rs. 20,000/-. The successful bidder will deposit immediately after the sale 25% of the purchase money and the balance within 15 days thereafter failing which he will not only forfeit his deposit but will also be liable for damages resulting from a resale. The under-signed will execute the sale deed at the cost of the Purchaser.

If however there is an offer for the property not less than Rs 30,000/- before the date above, the undersigned will sell the property by private sale.

Description of property

Property situated in Mangalore Thota village, Hoige Bazaar Ward, in the town of Mangalore and comprised in S. No. 186/B—2 acres 20 cents in extent, and S. F. No. 187 - 4 cents in extent and 47 cents of land reclaimed from the Netravati River. The property consists of a tile factory with machinery Presses, frames etc. and also lime kilns office building, store rooms, sheds for storing tiles etc. The good will and trade marks of P. Albuquerque & Sons are also included.

Sd/- F. P. S. Albuquerque
,, M. S. Pais
,, L. C. Pais.
Trustees of the estate of P. F. B. Albuquerque & others

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ವ ಇತರ ಅವಗಢಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ನಿಶ್ಚಿತ ಬೋನಸ್ ಕೊಡಲಾಗುವುದು!

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ. 10/-
+
ಸರ್ವಸಾಧಾರಣ ಬೋನಸ್ ರೂ. 11/
—
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್
ಆರ್ಗನೈಸರ್
ಬೆಂಕ್ಲೆಂಡ್ ಪೇಟೆ, ಮಂಗಳೂರು.

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೇಜರ್
4/5 [illegible]

ಜಿಲ್ಲಾ ಸಮಾಚಾರ

★



ಮಂಗಳೂರು

ಶ್ರೀ ಯು. ಶ್ರೀನಿವಾಸ ಮಲ್ಯರ ಸತ್ಯಾಗ್ರಹ

೯ ತಿಂಗಳ ಶಿಕ್ಷೆ ಮತ್ತು ೫೦೦ ರೂ. ದಂಡ ತಪ್ಪಿದರೆ ಮೂರು ತಿಂಗಳ ಶಿಕ್ಷೆ:—

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೂ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರೂ, ಕರ್ನಾಟಕ ಪಾರ್ಲಿಮೆಂಟರಿ ಬೋರ್ಡಿನ ಛೇರ್ಮೆನರೂ ಆದ ಶ್ರೀ ಯು. ಶ್ರೀನಿವಾಸಮಲ್ಯರು, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಮೊದಲೇ ತಿಳಿಸಿದಂತೆ ತಾ. ೭ರಂದು ಪೂರ್ವಾಹ್ನ ಘಂಟೆ 8½ಗೆ ಬಂಟ್ವಾಳದ ವೆಂಕಟ್ರಮಣ ದೇವಸ್ಥಾನದ ಮುಂದುಗಡೆ ನೆರೆದಿದ್ದ ಪ್ರಚಂಡ ಜನಸಮೂಹದ ಮುಂದೆ, ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು.

ಶ್ರೀ ಮಲ್ಯರು ಶ್ರೀ. ವೆಂಕಟ್ರಾಯ ಬಾಳಿಗರೊಡನೆ ಮಂಗಳೂರಿಂದ ೭ ಗಂಟೆ ಹೊತ್ತಿಗೆ ಬಂಟ್ವಾಳಕ್ಕೆ ಬಂದರು ಅವರೊಡನೆ ಅವರ ಸೌಭಾಗ್ಯವತಿಯವರೂ ಬಂದಿದ್ದರು. ಶ್ರೀ ಮಲ್ಯರ ಸಹೋದರರಾದ ಡಾ ಯು ಪಿ ಮಲ್ಯರೇ ಮೊದಲಾದವರೂ ಸಕುಟುಂಬರಾಗಿ ಬಂದಿದ್ದರು ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಅನೇಕ ಮಂದಿ ಕಾಂಗ್ರೆಸ್ ಮುಂದಾಳುಗಳೂ ಬಂದು ನೆರೆದಿದ್ದರು. ಡಾ ಬೊ ಪ್ರಾಗಂಟಲ್ಕಾದ ಡಾ। ಪಿ. ಪಿ. ಶೆಟ್ಟರೂ ಆಗಮಿಸಿದ್ದರು. ಮಾತ್ರವಲ್ಲದೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರೀ ವರ್ಗದವರು ಪತ್ರಿಕಾ ಪ್ರತಿನಿಧಿಗಳೂ ಹಾಜರಿದ್ದರು. ಬಂಟ್ವಾಳದ ಆಸುಪಾಸುಗಳಿಂದ ಹಳ್ಳಿಯ ಜನ ಸಂದಣಿಯು ಬಂದು ನೆರೆದಿತ್ತು ಕೂಡಿದ ಜನ ಸಂಖ್ಯೆ ನಾಲ್ಕೈದು ಸಾವಿರ ಮಿಕ್ಕಿತ್ತು.

ಶ್ರೀ. ಮಲ್ಯರು ತನ್ನ ಪತ್ನಿಯೊಡನೆ ಮತ್ತು ಆಪ್ತವರ್ಗದವರೊಡನೆ ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ಹೋಗಿ ಅಲ್ಲಿ ದೇವರನ್ನು ಪ್ರಾರ್ಥಿಸಿದರು. ದೇವಾಲಯದಿಂದ ಮರಳುವಾಗ ಜನಸಂದಣಿಯು ಜಯಘೋಷ ಮಾಡಿತು. ಹೂವಿನ ಮಾಲೆಗಳು ನಾನಾ ಸಂಸ್ಥೆಗಳ ಪರವಾಗಿ ಅಪರಿಮಿತವಾಗಿ ಅವರ ಕೊರಳಿಗೆ ಹಾಕಲ್ಪಟ್ಟವು. ಯುದ್ಧ ವಿರುದ್ಧ ಘೋಷಣೆ ಮಾಡುವ ಹೊತ್ತಿಗೆ ಸರಿಯಾಗಿ ಅವರ ಸೌಭಾಗ್ಯವತಿಯರು ಬಂದು ಸತ್ಯಾಗ್ರಹಿಯಾದ ತನ್ನ ಪತಿಯ ಕೊರಳಿಗೆ ಪ್ರಸನ್ನತೆಯಿಂದ ಹೂಮಾಲೆ ಹಾಕಿದರು. ನೆರೆದ ಜನಸಂದಣಿಯು ಈ ಅಪೂರ್ವ ದೃಶ್ಯದಿಂದ ಉತ್ಸಾಹಪುಲಕಿತರಾಗಿ ಜಯ ಘೋಷವನ್ನು ಮಾಡಿ ತಮ್ಮ ಆನಂದವನ್ನು ಪ್ರದರ್ಶಿಸಿದರು. ಆ ಬಳಿಕ ಶ್ರೀ ಮಲ್ಯರು ಯುದ್ಧವಿರುದ್ಧ ಘೋಷಣೆಯನ್ನು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಓದಿ ಹೇಳಿದರು. ಆ ಮೊದಲೇ ಅಲ್ಲಿ ಬಂದು ಸಜ್ಜಿತರಾಗಿದ್ದ ಪೋಲೀಸ್ ಅಧಿಕಾರಿಗಳು ಅವರನ್ನು ಬಂಧಿಸಿ ಮಂಗಳೂರು ಸೆರೆಮನೆಗೆ ಕೊಂಡೊಯ್ದರು.

ಸೆರೆಮನೆಯಲ್ಲಿ ಶ್ರೀ. ಮಲ್ಯರ ವಿಚಾರಣೆಯಾಗಿ ಅವರಿಗೆ ೯ ತಿಂಗಳ ಸಾದಾ ಶಿಕ್ಷೆ ಮತ್ತು ೫೦೦ರೂ. ದಂಡ, ತಪ್ಪಿದರೆ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಶ್ರೀ. ವೆಂಕಟ್ರಾಯ ಬಾಳಿಗರ ಸತ್ಯಾಗ್ರಹ

೯ ತಿಂಗಳ ಶಿಕ್ಷೆ ೫೦೦ ರೂ. ದಂಡ ತಪ್ಪಿದರೆ ಮೂರು ತಿಂಗಳ ಶಿಕ್ಷೆ:—

ಮದ್ರಾಸು ಶಾಸನ ಸಭೆಯ ಸದಸ್ಯರೂ ಮಂಗಳೂರು ಮುನ್ಸಿಪಲ್ ಛೇರ್ಮೆನರೂ ಜಿಲ್ಲೆಯ ಪ್ರಸಿದ್ಧ ವಕೀಲರೂ ಆದ ಶ್ರೀ. ವೆಂಕಟ್ರಾಯ ಬಾಳಿಗರು ಮೊದಲೇ ಜಿಲ್ಲಾ ಮೆಜಿಸ್ಟ್ರೇಟರಿಗೆ ತಿಳಿಸಿದಂತೆ ತಾ ೭ರಂದು ಪೂರ್ವಾಹ್ನ ಗಂಟೆ 10½ಗೆ ಮಂಗಳೂರು ಮುನ್ಸಿಪಲ್ ಆಫೀಸಿನ ಮುಂದುಗಡೆ ಯುದ್ಧವಿರುದ್ಧ ಜಯ ಘೋಷ ಮಾಡಿ ಸತ್ಯಾಗ್ರಹ ಹೂಡಿದರು

ಶ್ರೀ. ಬಾಳಿಗರು ಶ್ರೀ. ಶ್ರೀನಿವಾಸ ಮಲ್ಯರೊಡನೆ ಬಂಟ್ವಾಳಕ್ಕೆ ತೆರಳಿದ್ದು ಅಲ್ಲಿಂದ ಮರಳಿ ಬಂದರು. ಮಂಗಳೂರಿನ ಮತ್ತು ನೆರೆಕರೆ ಗ್ರಾಮಗಳ ಜನಸಂದಣಿಯು ಶ್ರೀ ಬಾಳಿಗರ ಸತ್ಯಾಗ್ರಹದ ವಾರ್ತೆ ಕೇಳಿ ಎರಡು ತಾಸುಗಳ ಮುಂಚಿತವಾಗಿಯೇ ಗುಂಪು ಗುಂಪಾಗಿ ಬಂದು ನೆರೆದಿತ್ತು ಶ್ರೀ ಬಾಳಿಗರು ಸತ್ಯಾಗ್ರಹ ಹೂಡಲು ಬರುವಾಗ ಅವರ ಕಾರನ್ನು ಮುಂದೆ ತೆಗೆದು ಕೊಂಡು ಹೋಗುವುದೇ ಅಸಾಧ್ಯವಾಗುವಷ್ಟು ಜನರು ಗುಂಪುಗೂಡಿದ್ದರು. ಶ್ರೀ ಎ. ಬಿ ಶೆಟ್ಟಿ ಎಂ ಎಲ್ ಎ, ಡಾ। ವಿಟ್ಠಲ ಶೆಟ್ಟಿ ಶ್ರೀ। ಬೋಳಾರ ಭೋಜರಾವ್ ಮೊದಲಾದ ಪ್ರಮುಖ ಮುಂದಾಳುಗಳು ಬಂದಿದ್ದರು. ಹತ್ತು ಹನ್ನೆರಡು ಸಾವಿರಕ್ಕೆ ಮಿಕ್ಕ ಬಹುದಾದಷ್ಟು ಜನರು ನೆರೆದಿದ್ದರು. ನಿಶ್ಚಿತ ಸಮಯಕ್ಕೆ ಸ್ವಲ್ಪ ಮೊದಲೇ ಶ್ರೀ ಬಾಳಿಗರು ಬಂದರು. ಶ್ರೀ ಬಾಳಿಗರನ್ನು ನೋಡುವ ಜನರ ಉತ್ಸಾಹ ಹೆಚ್ಚಾಗಲು ಅವರು ಕಾರಿನ ಮೇಲೆ ನಿಂತು ಕೊಂಡರು. ಜನರು ಗಲಭೆ ಮಾಡದಂತೆ ಕೇಳಿಕೊಂಡರು. ಅವರ ಕೊರಳಿಗೆ ನಿರಂತರವಾಗಿ ಹೂವಮಾಲೆಗಳು ಬೀಳುತ್ತಿದ್ದವು. ಜನರ ಉತ್ಸಾಹ ಅಪರಿಮಿತವಾಗಿ ತೋರುತ್ತಿತ್ತು ಸಾಧಾರಣ ಒಂದು ತಾಸಿನವರೆಗೆ ಹೂಮಾಲೆಗಳನ್ನು ಹಾಕುವ ಕೆಲಸವೇ ನಡೆದಿತ್ತು. ಕೆಲವರು ಕಾರಿನ ಮೇಲೆ ಪುಷ್ಪವೃಷ್ಟಿ ಸುರಿಸುತ್ತಿದ್ದರು ಮುಸಲ್ಮಾನರೂ ಅಸಂಖ್ಯರಾಗಿ ಬಂದಿದ್ದರು ಒಬ್ಬ ಹರಿಜನ ಬಾಲಿಕೆಯೂ ಶ್ರೀ. ಬಾಳಿಗರಿಗೆ ಹೂಮಾಲೆಯನ್ನರ್ಪಿಸಿದಳು ಮುಸಲ್ಮಾನ ಪ್ರಮುಖರೂ ಕೆಲವರು ಬಾಳಿಗರಿಗೆ ಹೂಮಾಲೆ ಹಾಕಿ ಗೌರವಿಸಿದರು

ಬಳಿಕ ನಿಶ್ಚಿತ ಸಮಯಕ್ಕೆ ಸರಿಯಾಗಿ ಶ್ರೀ। ಬಾಳಿಗರು ಕಾರಿನ ಮೇಲೆಯೇ ನಿಂತುಕೊಂಡು ಗಂಭೀರವಾದ ಸ್ವರದಿಂದ ಮೊದಲು ಹಿಂದಿಯಲ್ಲಿಯೂ ಆ ಮೇಲೆ ಇಂಗ್ಲಿಷಿನಲ್ಲಿಯೂ ಯುದ್ಧ ವಿರುದ್ಧ ಘೋಷ ಮಾಡಿದರು ಮೊದಲೇ ಬಂದು ಸಜ್ಜಿತರಾಗಿದ್ದ ಪೋಲೀಸು ಅಧಿಕಾರಿಗಳು ಅವರನ್ನು ಬಂಧಿಸಿ ಸೆರೆಮನೆಗೊಯ್ದರು ಅಲ್ಲಿ ವಿಚಾರಣೆಯಾಗಿ ಅವರಿಗೆ ೯ ತಿಂಗಳ ಸಾದಾ ಶಿಕ್ಷೆ, ೫೦೦ರೂ ದಂಡ, ತಪ್ಪಿದರೆ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ತಾ ೭ರಂದು ಮಧ್ಯಾಹ್ನವೇ ಈ ಇಬ್ಬರೂ ಸತ್ಯಾಗ್ರಹಿಗಳನ್ನು ವೆಲ್ಲೂರು ಸೆರೆಮನೆಗೊಯ್ದರು ರೈಲ್ವೆ ಸ್ಟೇಶನಿನಲ್ಲಿಯೂ ಅನೇಕ ಪ್ರಮುಖರ ಮುಂದಾಳುಗಳು ಕಾಂಗ್ರೆಸು ಕೆಲಸಗಾರರು, ಮಹಾಜನರು ಬಂದಿದ್ದು ಇಬ್ಬರ ಸತ್ಯಾಗ್ರಹಿಗಳನ್ನೂ ಸಂಭ್ರಮದಿಂದ ಸೆರೆಮನೆಗೆ ಬೀಳ್ಕೊಟ್ಟರು. ಇವರಿಬ್ಬರನ್ನೂ ಬಿ ಕ್ಲಾಸಿನಲ್ಲಿ ಇರಿಸಲಾಗಿದೆ

ಬೀಡಿ ಕೆಲಸಗಾರರ ಪರಿಷತ್:— ಮಂಗಳೂರು ಬೀಡಿ ಕೆಲಸಗಾರರ ತೃತೀಯ ಪರಿಷತ್ತು ತಾ ೮ರಂದು ಡಾ। ಎಸ್ ಎಚ್ ಒಡೆಯರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಮೈದಾನದಲ್ಲಿ ಜರಗಿತು ಮಜೂರರ ಮೆರವಣಿಗೆಯೊಂದು ಕಾಂಗ್ರೆಸ್ ಆಫೀಸಿನಿಂದ ಹೊರಟು ನಗರದಲ್ಲಿ ಸುತ್ತಿ ಪರಿಷತ್ತಿನ ಮಂಟಪಕ್ಕೆ ಬಂದಿತು ಶ್ರೀ ಜನಾರ್ಧನ ಪೈಗಳು ಧ್ವಜವಂದನೆ ನಡೆಸಿದರು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಎಸ್ ಹೊಳ್ಳರು ಒಂದು ದೀರ್ಘ ಭಾಷಣ ಮಾಡಿ ಮಜೂರ ಚಳವಳಿಯ ಇತಿಹಾಸ ಕಾರ್ಯಕಲಾಪಗಳನ್ನು ವಿವರಿಸಿದರು ಅನಂತರ ಜಿಲ್ಲಾ ಪ್ರೆಸ್ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಕೆ ಕೃಷ್ಣರಾಯರು ಪರಿಷತ್ತಿನ ಉದ್ಘಾಟನೆಯನ್ನು ಮಾಡಿದರು ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಓದಿ ಹೇಳಿದರು. ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವಕಾಮತರು ವರದಿಯನ್ನೋದಿದರು.

ಮುಖ್ಯ ಠರಾವುಗಳು: ಅನೇಕ ವಿವಿಧ ಠರಾವುಗಳ ಮಂಜೂರಾದವು ಅವುಗಳಲ್ಲಿ ಜಿಲ್ಲೆಯ ಬೀಡಿ ಮಾಲಕರು ಕೆಲಸಗಾರರಿಗೆ ಸೇಠರಾ ಶಿವರಂತೆ ಮಜೂರಿ ಒದಗಿಸಬೇಕೆಂತಲೂ ೧೦೦೦ ಬೀಡಿಗಳಿಗೆ ಕನಿಷ್ಠ ೭ ಆಣೆ ಕೂಲಿ ಗೊತ್ತುಪಡಿಸಬೇಕೆಂತಲೂ ಕಾರಣವಿಲ್ಲದೆ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕದಂತೆಯೂ ಸಾಮುದಾಯಿಕ ಚಳವಳಿಯನ್ನು ಪ್ರಾರಂಭಿಸುವಂತೆ ಗಾಂಧೀಜಿಯವರನ್ನು ಕೇಳಿಕೊಳ್ಳುವಂತೆಯೂ ಸರಕಾರದ ಇಂದಿನ ಧೋರಣದಲ್ಲಿ ಅತೃಪ್ತಿ ತೋರಿಸುವಂತೆಯೂ ಪಾಸಾದ ಠರಾವುಗಳು ಮುಖ್ಯವಾದವುಗಳು.

ಹರತಾಳ —ಶ್ರೀಯುತರಾದ ಮಲ್ಯ ಮತ್ತು ಬಾಳಿಗರ ಬಂಧನವಾದ ಮರುದಿನ ನಗರದ ಪ್ರಸಿದ್ಧ ಬೀದಿಗಳಲ್ಲೆಲ್ಲಾ ಹರತಾಳ ಆಚರಿಸಲ್ಪಟ್ಟಿತು

ಯುದ್ಧ ಸಮಿತಿಯ ಆಶ್ರಯದಲ್ಲಿ ಭಾಷಣ:—ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ದ ಕ ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ೯ ಆರಾಧ್ಯರು ಒಂದು ಭಾಷಣವಿತ್ತರು. ಶ್ರೀ ಟಿ ಎಂ ಆರಾಧ್ಯ ಶ್ರೀ ಎಂ ಎಸ್ ಶ್ರೀಪತಿರನ್ನು ಅಧ್ಯಕ್ಷತೆ ವಹಿಸಲು ಸೂಚಿಸಿದರು. ಶ್ರೀ. ಆರ್ ಜಿ ಪಿ ಡಿ ಅಂದ್ರಾಡೆ ಮುನ್ಸಿಪಲ್ ಕೌನ್ಸಿಲರ (ಕಾಂಗ್ರೆಸ್ ಪಾರ್ಟಿ ಇವರು) ಅದನ್ನು ಅನುಮೋದಿಸಿದರು.

ಕಾರ್ಕಳ

ಗೀತಾಭಾಷಣ:—ಗೀತಾ ಜಯಂತಿ ಸಂಬಂಧಪಟ್ಟು ತಾ ೮ ಗುರುವಾರ ದಿನ ಸಾಯಂಕಾಲ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಗೀತಾ ಪ್ರೇಮಿಗಳ ಒಂದು ಸಾರ್ವಜನಿಕ ಸಭೆಯು ಕೂಡಿ ಶ್ರೀ ಬಿ ಅಚ್ಯುತರಾವ್ ಬಿ ಎ ಎಲ್ ಟಿ ಯವರು ಗೀತಾ ಮಹಾತ್ಮ್ಯದ ಕುರಿತು ಬೋಧಪ್ರದವಾದ ಭಾಷಣವನ್ನು ಕೊಟ್ಟರು.

ಉಡುಪಿ

ಭಾಷಣಗಳು:—ಕಳೆದ ತಾ ೪ರಂದು ಅಜ್ಜರಕಾಡು ಗಾಂಧಿ ಮೈದಾನಿನಲ್ಲಿ ಮೈಸೂರು ಆಸ್ಥಾನ ವಿದ್ವಾಂಸರುಗಳಾದ ಶ್ರೀ ಕೃಷ್ಣಮಾಚಾರ್ಯ ಮಾಧ್ವ ಧರ್ಮದ ವಿಷಯವಾಗಿಯೂ ಶ್ರೀ ಪದ್ಮನಾಭಾಚಾರ್ಯರು ಕನ್ನಡ ಸಾಹಿತ್ಯದಲ್ಲಿ ಆಧುನಿಕ ದೃಷ್ಟಿ ಎಂಬ ವಿಷಯದಲ್ಲಿಯೂ ಭಾಷಣವಿತ್ತರು ತಾ ೧ರಲ್ಲಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಪಂಡಿತ ವೆಂಕಟ್ರಮಣಾಚಾರ್ಯರು ಗೀತೆಯ ಮಹತ್ವ ಮತ್ತು ರಹಸ್ಯದ ಕುರಿತು ಉಪನ್ಯಾಸ ಮಾಡಿದರು

Canara High School Old Boys' Association Mangalore.

NOTICE.

is hereby given that the annual meeting of the General Body of the Association will be held on Wednesday the 25th December 1940 at 3 p. m in the A Subba Rao Pai, Memorial Hall, Canara High School, Mangalore.

All members of the Association are earnestly requested to be present.

Resolutions to be moved at the meeting should reach the Hon. Secretary by 23rd of December. 1940.

G. Upendra Prabhu,
G. S. Nagarkar,
Hon. joint Secretaries.
Canara High School
Mangalore, 11—12—1940.

Ready for Sale!

1941

SHARADA POCKET DIARIES

Small Size	0—5—0
„ „ (with pocket)	0— 6—0
Big Size	0— 9—0
„ „ (with pocket)	0—11—0

SHARADA PRESS, MANGALORE

ಜಪಾನು ಅಮೇರಿಕವನ್ನು ಎಚ್ಚರಿಸುತ್ತದೆ

★ ಯುದ್ಧ ವಾರ್ತೆ



ಹಿಟ್ಲರ್-ಮುಸಲನಿಗಳೊಳಗೆ ವೈಷಮ್ಯವೆ?

ಗ್ರೀಸಿನಲ್ಲಿ ಇಟಲಿಯನರ ಪರಾಜಯ

ಇಂಗ್ಲೆಂಡಿನ ಮೇಲೆ ಬಾರೀ ವಿಮಾನಧಾಳಿ

ಜಪಾನು ಎಚ್ಚರಿಸುತ್ತದೆ

ಅಮೇರಿಕವು ಇಟಲಿ ಜರ್ಮನಿಗಳ ವಿರುದ್ಧವಾಗಿ ಯುದ್ಧ ಹೂಡಿದರೆ ತಾವು ಅಮೇರಿಕದ ವಿರುದ್ಧ ಯುದ್ಧ ಹೂಡಬೇಕಾಗುವುದೆಂದು ಜಪಾನಿನ ವಿದೇಶಾಂಗ ಮಂತ್ರಿಗಳು ಹೇಳಿದರು.

ಅಮೇರಿಕ ಬ್ರಿಟನಿಗೆ ಧನ ಸಹಾಯ ಮಾಡುವ ವಿಚಾರ

ಇನ್ನೂ ನಿರ್ಧಾರಕ್ಕೆ ಬಂದಿಲ್ಲ

ಅಮೇರಿಕವು ಬ್ರಿಟನಿಗೆ ಧನ ಸಹಾಯ ಮಾಡುವ ವಿಚಾರವಾಗಿ ಇನ್ನೂ ಪೂರ್ಣ ನಿರ್ಧಾರಕ್ಕೆ ಬಂದಿಲ್ಲವೆಂದು ಹೇಳಲಾಗಿದೆ.

ಗ್ರೀಸ್ ಇಟಲಿ ಯುದ್ಧ

ಲಾಂಗೋ ಪ್ರದೇಶದಲ್ಲಿ ಕಾಳಗ

ಇಟಲಿಯನ್ನರೂ ಗ್ರೀಕರೂ ಬಹಳ ಸಾಹಸದಿಂದಲೇ ಕಾದಾಡುತ್ತಿದ್ದಾರೆ. ಲಾಂಗೋ ರಣರಂಗದಿಂದ ೮೦ ಮೈಲು ಮಧ್ಯ ಪ್ರದೇಶದಲ್ಲಿ ಘೋರ ಕಾಳಗ ನಡೆಯಿತು. ಇಟಲಿಯನರು ನಿರಾಶರಾಗಿ ಕಾದುತ್ತಿದ್ದಾರೆಂದು ಸುದ್ದಿ.

ಕಡಲ್ಗಾಲುವೆಯ ಮೇಲೆ ಗುಂಡಿನ ಮಳೆ

ಜರ್ಮನ್ ವೈಮಾನಿಕರು ಬಂದು ಬ್ರಿಟಿಷ್ ಕಡಲ್ಗಾಲುವೆ ಮೇಲೆ ಬಾಂಬಿನ ಮಳೆ ಸುರಿಸಿದರು.

ಮುಸಲನಿಯ ಬಗ್ಗೆ ಹಿಟ್ಲರನ ಅಸಮಾಧಾನವೇ?

ಸುದ್ದಿಗಾರನ ಹೇಳಿಕೆ

ಫ್ರಾನ್ಸಿನ ಮಂತ್ರಿಯಾದ ಲಾವಲನು ಬೇಗನೇ ಬರ್ಲಿನಿಗೆ ಹೋಗುವನೆಂದೂ ಅವರೊಡನೆ ಹೊಸ ಒಪ್ಪಂದವಾಗುವುದೆಂದೂ, ಇಟಲಿ ಗ್ರೀಸ್ ಯುದ್ಧದಲ್ಲಿ ಹಿಟ್ಲರನ ವರ್ತನೆಯೇ ಆತನಿಗೆ ಮುಸಲನಿಯ ಮೇಲಿರುವ ಅಸಮಾಧಾನವನ್ನು ವ್ಯಕ್ತಪಡಿಸುವುದೆಂದೂ ಟೈಮ್ಸ್ ಪತ್ರಿಕೆಯ ವಾಶಿಂಗ್‌ಟನ್ ಸುದ್ದಿಗಾರನ ಹೇಳಿಕೆ.

ಲಂಡನಿನ ಮೇಲೆ ಭಯಂಕರ ದಾಳಿ

ವಿಶೇಷ ಹಾನಿ

ತಾ. ೯ರಂದು ರಾತ್ರಿ ಲಂಡನಿನ ಮೇಲೆ ಜರ್ಮನ್ ವಿಮಾನಗಳು ಭಯಂಕರ ಧಾಳಿ ಮಾಡಿದವೆಂದೂ ವಿಶೇಷ ಹಾನಿಯಾಗಿದೆಯೆಂದೂ ತಿಳಿದುಬರುತ್ತದೆ.

ಚೀನೀಯರಿಗೆ ವಿಜಯ

ಮಾರ್ಷಲ್ ಚಿಯಾಂಗ್ ಕೈಶೇಕ್‌ರವರ ಭಾಷಣ

ಕ್ವಾಂಕೋವಿಗೆ ವಾಯುವ್ಯದಲ್ಲಿರುವ ಹೂಪೇ ಪ್ರಾಂತ್ಯದಲ್ಲಿ ಚೀನೀಯರಿಗೆ ಅತ್ಯಂತ ದೊಡ್ಡ ವಿಜಯವು ದೊರೆಯಿತು ಎಂಬದಾಗಿ ಮಾರ್ಷಲ್ ಚಿಯಾಂಗ್ ಕೈಶೇಕ್‌ರವರು ಮಾಡಿದ ಭಾಷಣವೊಂದರಲ್ಲಿ ತಿಳಿಸಿದರು.

ಬಲ್ಗೇರಿಯಾದ ತಾಟಸ್ಥ್ಯ

ವಿದೇಶಾಂಗ ಮಂತ್ರಿಯ ಭಾಷಣ

ಅಸೆಂಬ್ಲಿ ಸಭೆಯಲ್ಲಿ, ಬಲ್ಗೇರಿಯಾದ ವಿದೇಶಾಂಗ ಮಂತ್ರಿಯು ಮಾತನಾಡುತ್ತಾ, ಬಲ್ಗೇರಿಯಾವು ತಾಟಸ್ಥ್ಯನೀತಿಯನ್ನೇ ಪಾಲಿಸಿಕೊಂಡು ಬರುವುದಾಗಿ ಘೋಷಿಸಿದರು.

ದೇಶದ ತಾಟಸ್ಥ್ಯವನ್ನೂ, ಶಾಂತಿಯನ್ನೂ, ಭದ್ರತೆಯನ್ನೂ ಮತ್ತು ಸ್ವಾತಂತ್ರ್ಯವನ್ನೂ ರಕ್ಷಿಸಿಕೊಂಡು ಹೋಗುವುದೇ ಬಲ್ಗೇರಿಯಾದ ವಿದೇಶಾಂಗ ನೀತಿ ಎಂಬುದಾಗಿ ಅವರು ನುಡಿದರು.

ರೂಸ್‌ವೆಲ್ಟರು ಎಲ್ಲಿಗೆ ಹೋದರು?

ಯಾರಿಗೂ ತಿಳಿದಿಲ್ಲ

ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರು ಟುಸಾಲೂಸಾ ಎಂಬ ಹಡಗದಲ್ಲಿ ಕುಳಿತು ಎಲ್ಲಿಗೋ ಹೊರಟರು. ಆದರೆ ಅವರು ಎಲ್ಲಿಗೆ ಯಾವ ಕೆಲಸಕ್ಕೆ ಹೋದರೆಂದು ಯಾರಿಗೂ ತಿಳಿದುಬಂದಿಲ್ಲವಂತೆ.

ನ್ಯೂಯೋರ್ಕಿನಲ್ಲಿ ಮಹಾತ್ಮರ ಜನ್ಮದಿನಾಚರಣೆ

ಅಮೇರಿಕದ ಇಂಡಿಯಾ ಲೀಗಿನವರು ಮಹಾತ್ಮರ ಜನ್ಮದಿನೋತ್ಸವವನ್ನು ನ್ಯೂಯೋರ್ಕಿನಲ್ಲಿ ಆಚರಿಸಿದರು. ಅಮೇರಿಕದ ಹಲವು ಪ್ರಸಿದ್ಧ ಮುಖಂಡರು ಭಾರತದ ನಾಯಕ ಮಹಾತ್ಮಾಜಿಯವರನ್ನು ಪ್ರಶಂಸಿಸಿದರು. ಈ ಉತ್ಸವಕ್ಕೆ ಅಧ್ಯಕ್ಷ ರೂಸ್‌ವೆಲ್ಟರ ಪತ್ನಿಯೂ ಶುಭ ಸಂದೇಶ ಕಳುಹಿಸಿದ್ದರು.

ಜಯಕರ್-ವೈಸರಾಯ್ ಭೇಟಿ

ಭಾರತದ ಬ್ರಿಟನುಗಳಲ್ಲಿ ಶಾಂತಿ ಸಂಧಾನ ಪ್ರಯತ್ನಕ್ಕಾಗಿ ಪ್ರಯತ್ನಿಸಲು ಬ್ಯಾರಿಸ್ಟರ್ ಜಯಕರರು ವೈಸರಾಯರಲ್ಲಿಗೆ ತೆರಳಿರುವರು.

ಪೂಣೆಯ ಸೂಚನೆ ಒಪ್ಪಿದರೆ ಕಾಂಗ್ರೆಸು ಪುನರ್ವಿಚಾರ ಮಾಡುವುದು

ರಾಷ್ಟ್ರಪತಿಗಳ ಹೇಳಿಕೆ

ಪೂಣೆಯ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಮಾಡಿದ ಸೂಚನೆಗಳನ್ನು ಸರಕಾರವು ಸ್ವೀಕರಿಸುವ ಸಂದರ್ಭದಲ್ಲಿ ಕಾಂಗ್ರೆಸು ಇದರ ಸ್ಥಿತಿಯನ್ನು ಪುನರ್ವಿಚಾರ ಮಾಡುವುದಾಗಿ ರಾಷ್ಟ್ರಪತಿ ಅಜಾದರು ಪಾಟ್ನಾದಲ್ಲಿ ಹೇಳಿದರು.

ಸಂಧಾನ ಪ್ರಯತ್ನ

ಸಪ್ರೂ-ಜಗದೀಶರ ಮಾತುಕತೆ

ಸರ್ ಜಗದೀಶ ಪ್ರಸಾದರು ಅಲಹಾಬಾದಿಗೆ ಬಂದು ಸರ್ ತೇಜಬಹದೂರ್ ಸಪ್ರುಗಳೊಡನೆ ಭಾರತದ ಬಿಕ್ಕಟ್ಟನ್ನು ಬಗೆಹರಿಸುವ ವಿಚಾರವಾಗಿ ಚರ್ಚೆ ನಡೆಸಿದರೆಂದು ತಿಳಿದಿದೆ.

ಗಡಿನಾಡಿನ ಗಾಂಧಿ ಸತ್ಯಾಗ್ರಹ ಮಾಡುವುದಿಲ್ಲ

ಗಾಂಧೀಜಿಯವರ ಸೂಚನೆ

ಗಡಿನಾಡಿನ ಗಾಂಧಿಗಳೆಂದು ಪ್ರಸಿದ್ಧರಾದ ಖಾನ್ ಅಬ್ದುಲ್ ಗಫರ್ ಖಾನರು ಈಗ ಸತ್ಯಾಗ್ರಹ ಹೂಡಬಾರದಾಗಿ ಗಾಂಧಿಜಿಯವರು ತಿಳಿಸಿರುವರೆಂದು ತಿಳಿದಿದೆ. ಗಡಿನಾಡಿನಲ್ಲಿ ಸತ್ಯಾಗ್ರಹವನ್ನು ಅಲ್ಲಿನ ಮಾಜಿ ಪ್ರಧಾನ ಮಂತ್ರಿಗಳಾದ ಡಾ। ಖಾನ್ ಸಾಹೇಬರೇ ಆರಂಭಿಸುವರೆಂದು ತಿಳಿದಿದೆ.

ಗಫರ್ ಖಾನರ ಪತ್ರಿಕೆಯಿಂದ ಸರಕಾರ ಭದ್ರತೆ ಕೇಳಿತ್ತು

ಗಡಿನಾಡಿನ ಗಾಂಧಿ ಗಫರ್ ಖಾನರ ಪತ್ರಿಕೆಯಿಂದ ಒಂದು ಆಕ್ಷೇಪಾರ್ಹ ಕವಿತೆ ಪ್ರಸಿದ್ಧಿಸಿದ ಆರೋಪ ಹಾಕಿ ೧೦೦೦ ರೂಪಾಯಿ ಭದ್ರತೆ ಕೇಳಿದೆ.

ನೆಶನಲ್ ಹೆರಾಲ್ಡ್ ೬೦೦೦ ರೂ. ತೆತ್ತಿತು!

ನೆಹರುಗಳು ಲೇಖನ ಬರೆಯುವ ಪತ್ರಿಕೆ ನೇಶನಲ್ ಹೆರಾಲ್ಡಿನ ಮೇಲೆ ಆಕ್ಷೇಪಕರ ಲೇಖನ ಹೊರಡಿಸಿದ ಆರೋಪ ಹಾಕಿ ೬೦೦೦ ರೂಪಾಯಿ ಭದ್ರತೆ ಕೇಳಿದನ್ನು ಕೊಡಲಾಗಿದೆ.

ಪ್ಯಾರೇಲಾಲರ ಸತ್ಯಾಗ್ರಹ

ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ ಪ್ಯಾರೇಲಾಲರು ಸತ್ಯಾಗ್ರಹ ಹೂಡಲಿರುವರೆಂದು ತಿಳಿದಿದೆ.

ಬಂಗಾಳದ ಸೆರೆಮನೆಗಳಲ್ಲಿ ತಿರಿಗಿ ಉಪವಾಸ ವ್ರತ

ಹಿಜಲಿಯ ಜೈಲಿನಲ್ಲಿ ೩೧ ಮಂದಿ ನಿರಶ್ರನ ವ್ರತವನ್ನು ಕೈಕೊಂಡಿರುವರು. ಅಮೀಪೂರ ಜೈಲಿನಲ್ಲಿರುವ ಅನೇಕರು ಉಪವಾಸ ಮಾಡಿದ್ದಾರೆ. ಹಲವರ ಸ್ಥಿತಿ ಬಹಳ ಚಿಂತಾಜನಕವಾಗಿದೆ.

ಬೋಸ್ ಬಂಧುಗಳು ಕ್ಷಮೆ ಕೇಳಲಿ

ಮಹಾತ್ಮರ ಹೇಳಿಕೆ

ಬೋಸ್ ಸಹೋದರರ ಮೇಲೆ ಅವಿಧೇಯತೆಯ ಸಲುವಾಗಿ ಹಾಕಿದ ಶಿಸ್ತು ಜಾರಿಯ ಕ್ರಮವು ನ್ಯಾಯವಾಗಲಿಲ್ಲವೆಂದು ಬಂಗಾಳದ ಪ್ರಮುಖರೊಬ್ಬರು ಬರೆದ ಪತ್ರಕ್ಕೆ ಉತ್ತರ ಕೊಡುತ್ತಾ ತನಗೆ ಆ ಇಬ್ಬರು ಸಹೋದರರ ಮೇಲೆ ಬಹಳ ಮಮತೆ ಇದೆಯೆಂದೂ, ಆದರೆ ಅವಿಧೇಯತೆಗಾಗಿ ಕಾಂಗ್ರೆಸ್ಸು ಹಾಕಿದ ಶಿಸ್ತನ್ನು ಕ್ಷಮಾಪಣೆ ಕೇಳಿದರೆ ರದ್ದು ಮಾಡಲಾಗುವುದೆಂದೂ ತಿಳಿಸಿರುವರು.

ಸಂಧಾನ ಪ್ರಯತ್ನ

ಸರ್ ಸಪ್ರೂ ಮೊದಲಾದವರೊಡನೆ ಸರ್ ಹಸನ್ ಸುಹ್ರಾವರ್ಧಿಯವರ ಸಮಾಲೋಚನೆ

ಸತ್ಯಾಗ್ರಹ ಚಳವಳಿಯ ದೆಸೆಯಿಂದ ಭಾರತದ ರಾಜಕೀಯ ಪರಿಸ್ಥಿತಿಯು ವಿಷಮಾವಸ್ಥೆಗೆ ಬರುತ್ತಲಿರುವುದು ಕಾಂಗ್ರೆಸ್ ಪಕ್ಷಕ್ಕೆ ಸೇರದ ಕೆಲವು ಮುಖಂಡರಿಗೆ ಕಳವಳವನ್ನುಂಟುಮಾಡಿದೆ. ಬ್ರಿಟಿಷ್ ಸರಕಾರಕ್ಕೂ, ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ರಾಜಕೀಯ ಸಂಧಾನವನ್ನು ಏರ್ಪಡಿಸುವುದಕ್ಕಾಗಿ ದೇಶದ ಕೆಲವು ಪ್ರಮುಖ ಮುಖಂಡರು ಪ್ರಯತ್ನಪಡುತ್ತಲಿದ್ದಾರೆಂದು ತಿಳಿದುಬಂದಿದೆ.

ಅವರೆಲ್ಲರೂ ಸದ್ಯದಲ್ಲಿ ಸೇರಿ ಮಾತುಕತೆ ನಡೆಸುವರೆಂದೂ, ಒಂದು ಕಾರ್ಯಕ್ರಮವನ್ನು ಏರ್ಪಡಿಸುವರೆಂದೂ ಗೊತ್ತಾಗಿದೆ. 'ಮಾಡರೇಟ್' ಪಕ್ಷದ ಕೆಲವು ಪ್ರತಿನಿಧಿಗಳು ಮಹಾತ್ಮಾ ಗಾಂಧಿಯವರನ್ನೂ ಜಿನ್ನಾರನ್ನೂ ಭೇಟಿ ಮಾಡಿ ಮಾತುಕತೆ ನಡೆಸುವರು. ಯುದ್ಧಕಾಲದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಏರ್ಪಡಿಸತಕ್ಕ ರಾಜಕೀಯ ಸುಧಾರಣೆಗಳು ಯಾವುವು ಕಾಂಗ್ರೆಸ್ಸಿಗೂ ಲೀಗಿಗೂ ಸಾಮಾನ್ಯವಾಗಿ ಒಪ್ಪಿಗೆಯಾಗುವ ಅಂಶಗಳು ಯಾವುವು ಎಂಬುದನ್ನು ತಿಳಿದು, ಅನಂತರ ಎಲ್ಲರಿಗೂ ಸಾಮಾನ್ಯವಾಗಿ ಸಮ್ಮತವಾಗುವ ಕಾರ್ಯಕ್ರಮವನ್ನು ರಚಿಸಿ, ವೈಸರಾಯರನ್ನು ಭೇಟಿಮಾಡುವರು. ಈ ಸಂಧಾನ ಪ್ರಯತ್ನಗಳಿಗೆ ಅವಕಾಶ ಕೊಡಬೇಕೆಂದೂ, ಸತ್ಯಾಗ್ರಹವನ್ನು ಹಂಗಾಮಿಯಾಗಿ ನಿಲ್ಲಿಸಬೇಕೆಂದೂ ಈ ಮುಖಂಡರು ಗಾಂಧಿಯವರನ್ನು ಪ್ರಾರ್ಥಿಸುವರು.

ಹಿಂದೂ ಮಹಾಸಭೆಯ ಅಧ್ಯಕ್ಷತೆ

ಹಿಂದೂ ಮಹಾಸಭೆಯ ಅಧ್ಯಕ್ಷರನ್ನಾಗಿ ಶ್ರೀ. ವಿ. ಡಿ. ಸಾವರ್‌ಕಾರರನ್ನೇ ಮತ್ತೆ ಚುನಾಯಿಸಲಾಗಿದೆಯೆಂದು ಅಖಿಲಭಾರತ ಹಿಂದೂ ಮಹಾಸಭೆಯ ಜನರಲ್ ಸೆಕ್ರೆಟರಿಯವರು ತಿಳಿಸುತ್ತಾರೆ. ಶ್ರೀ ಸಾವರ್‌ಕಾರರು ಅಧ್ಯಕ್ಷರಾಗುವುದು ಇದು ನಾಲ್ಕನೆಯ ಸಲ.

ಸತ್ಯಾಗ್ರಹದ ಸುದ್ದಿ

ಲಾಹೋರಿನ ಅಸೆಂಬ್ಲಿ ಸದಸ್ಯರಾದ ಶ್ರೀ. ಮುನ್ನಿ ಹರಿಲಾಲರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಗೋರಖಪುರದ ಶಾಸನ ಸಭಾಸದಸ್ಯರೂ ಎ. ಐ. ಸಿ. ಸಿ. ಸದಸ್ಯರೂ ಆದ ಶ್ರೀ. ಪಂಡಿತ ದಶರಥ ಇವರಿಗೆ ಒಂದು ವರ್ಷದ ಶಿಕ್ಷೆ ವಿಧಿಸಲಾಗಿದೆ. ಗೋರಖಪುರದ ಸತ್ಯಾಗ್ರಹ ಕಮಿಟಿ ಸಂಘಟಕರಾದ ಡಾ। ಶೇಖರಲಾಲರಿಗೆ ಒಂದು ವರ್ಷ ಶಿಕ್ಷೆಯಾಗಿದೆ. ಲಖನೋದ ಶಾಸನ ಸಭಾಸದಸ್ಯರಾದ ಶಿವರಾಮ ವೈದ್ಯ ಇವರಿಗೆ ಒಂದು ವರ್ಷ ಶಿಕ್ಷೆ ರೂ. ೫೦ ದಂಡ ವಿಧಿಸಲಾಗಿದೆ. ಪತೇಗಡದಲ್ಲಿ ಸತ್ಯಾಗ್ರಹ ಹೂಡಿದ ಶ್ರೀಮತಿ ಉಮಾನೆಹರುಗಳಿಗೆ ಒಂದು ವರ್ಷ ಶಿಕ್ಷೆಯಾಗಿದೆ. ಲಖನೋದ ಎಂ. ಎಲ್. ಎ. ಪಂಡಿತ ಲಕ್ಷ್ಮೀಶಂಕರ ವಾಜಪೇಯರನ್ನು ಬಂಧಿಸಲಾಗಿದೆ. ಮಾಂಭೀರನ ಎಂ. ಎಲ್. ಎ. ಮತ್ತು ಎ. ಐ. ಸಿ. ಸಿ. ಸದಸ್ಯರಾದ ಶ್ರೀ ಲಖನ ಚಂದ್ರ ಸಿಂಗರಿಗೆ ಒಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಸೇಲಮಿನ ಶ್ರೀ. ನಟೇಶ ಚೆಟ್ಟಿಯರರಿಗೆ ೬ ತಿಂಗಳ ಶಿಕ್ಷೆ ವಿಧಿಸಲಾಗಿದೆ. ಅಕೋಲಾತಾಲೂಕ್ ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀ. ಸಂಪತ್ ರಾವ್ ಭೋಂಸಲೆ ಇವರನ್ನು ಬಂಧಿಸಲಾಗಿದೆ. ಸಂಯುಕ್ತ ಪ್ರಾಂತದ ಎಂ. ಎಲ್. ಎ. ಶ್ರೀ. ಜವಾಹಿರಲಾಲ ರೋಹತಾ ಇವರನ್ನು ಬಂಧಿಸಲಾಗಿದೆ. ಮೊರಾದಾಬಾದಿನ ಎಂ. ಎಲ್. ಎ. ಪಂಡಿತ ಶಂಕರ ದತ್ತರನ್ನು ಬಂಧಿಸಿದೆ. ಅಜಾಮಗಡಿನ ಎ. ಐ. ಸಿ. ಸಿ. ಸದಸ್ಯರಾದ ಶ್ರೀ. ರಘುನಾಥರೈಯವರನ್ನು ಬಂಧಿಸಿದೆ. ಬಂಗಾಳ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ. ಸುರೇಂದ್ರ ಮೋಹನ ಘೋಷರನ್ನು ಬಂಧಿಸಿದೆ. ಅರಂಬಾಗಿನ ಎ. ಐ. ಸಿ. ಸಿ. ಸದಸ್ಯರಾದ ಶ್ರೀ. ಪ್ರಫುಲ್ಲ ಚಂದ್ರ ಸೇನರನ್ನು ಬಂಧಿಸಲಾಗಿದೆ. ಕಲ್ಕತ್ತದ ಶ್ರೀ. ಶ್ರೀಶಚಂದ್ರ ಚಕ್ರವರ್ತಿಯವರು ಬಂಧಿತರಾದರು. ಮಿದನಪುರಿನ ಶ್ರೀ. ಹರಿಪಾದ ಚಟರ್ಜಿಯವರು ಬಂಧಿತರಾದರು. ಮುಜಾಫರ್‌ಪುರಿನ ಎಂ. ಎಲ್. ಎ. ಶ್ರೀ. ವಿಂಧ್ಯೇಶ್ವರ ಪ್ರಸಾದರು ಬಂಧಿತರಾದರು. ಮೋಂಘ್ಯರಿನ ಎಂ. ಎಲ್. ಎ. ಶ್ರೀ. ರಾಮಚರಿತಾರ್ ಪ್ರಸಾದ

ರ್ತೆ ★



ಜನರ ಪ್ರತಿನಿಧಿಗಳು ಬಂಧಿತರಾಗುತ್ತಾರೆ!

ಸತ್ಯಾಗ್ರಹ ಆಂದೋಲನವು ಉಗ್ರವಾಗುತ್ತಿದೆ!

ಪ್ಯಾರೇಲಾಲರು ಸತ್ಯಾಗ್ರಹ ಹೂಡಿದರು

ಕರ್ನಾಟಕದಲ್ಲಿ ಸತ್ಯಾಗ್ರಹ ಹಬ್ಬಿದೆ

ಸಪ್ರು--ಜಯಕರರ ಸಂಧಾನ ಪ್ರಯತ್ನಗಳು

ರೂ ಶ್ರೀ. ಬ್ರಹ್ಮದೇವ ನಾರಾಯಣ ಸಿಂಗರೂ ಬಂಧಿತರಾದರು. ಅನಂತಪುರದ ಎಂ ಎಲ್. ಎ. ಶ್ರೀ. ವೆಂಕಟಿ ನಾಯ್ಡು ಬಂಧಿತರಾದರು ಗುಡಿವಾಡದ ಹರಿಜನ ಎಂ ಎಲ್ ಎ. ಶ್ರೀ. ಕೂರ್ಮಯ್ಯನವರಿಗೆ ಆರು ತಿಂಗಳ ಶಿಕ್ಷೆಯಾಯಿತು. ಕರ್ನೂಲಿನ ಎಂ. ಎಲ್ ಸಿ ಶ್ರೀ. ಶಂಕರ ರೆಡ್ಡಿಯರಿಗೆ ೯ ತಿಂಗಳ ಶಿಕ್ಷೆ ೭೫೦ ರೂ. ದಂಡ ವಿಧಿಸಲಾಗಿದೆ. ರಾಜಮಂಡ್ರಿಯ ಎಂ ಎಲ್. ಎ ಶ್ರೀ. ಮದಿನ ಸುಬ್ಬರಾಯರು ಬಂಧಿತರಾದರು. ವೆಲ್ಲೂರಿನ ಎ ಐ ಸಿ. ಸಿ. ಸದಸ್ಯರಾದ ಶ್ರೀ ಶ್ರೀನಿವಾಸ ರಾಯರು ಬಂಧಿತರಾದರು ಕೊಡಗಿನ ಕೌನ್ಸಿಲ್ ಮೆಂಬರ್ ಶ್ರೀ ಕುಮಾರಯ್ಯನವರೂ ಬಂಧಿತರಾದರು

ಮಧುರದ ಮುಸ್ಲಿಂ ಎಂ ಎ ಗಳಾದ ಶ್ರೀ ಕೆ ಎಸ್ ಮಹಮ್ಮದ್ ಅಬ್ದುಲ್ ಕದರ್ ಇವರು ಬಂಧಿತರಾಗಿ ಒಂದು ವರ್ಷ ಸಜೆ ರೂ ೨೦೦ ದಂಡಕ್ಕೊಳಗಾಗಿರುವರು ಪೆದ್ದಾಪುರಂದ ಕೇಂದ್ರ ಎಂ. ಎಲ್. ಎ. ಶ್ರೀ ತಿರುಮಲರಾವ್ ಬಂಧಿತರಾಗಿ ೧೮ ತಿಂಗಳ ಕಠಿಣ ಶಿಕ್ಷೆ ರೂ ೨೦೦ ದಂಡಕ್ಕೊಳಗಾಗಿರುವರು ಕೇಂದ್ರ ಪ್ರಾಂತದ ಮಾಜಿ ಮಂತ್ರಿ ಶ್ರೀ ಡಿ. ಕೆ. ಮೇಘಾರವರು ಬಂಧಿತರಾಗಿರುವರು. ವಿಜಾಗಪಟ್ಟಣದ ಶ್ರೀಮಾನ್ ಮತ್ತು ಶ್ರೀಮತಿ ಎಂ. ಜಿ. ದೇಸಾಯಿ ಇವರು ಬಂಧಿತರಾಗಿರುವರು. ತಿರುನೆಲ್ವೇಲಿ ಕ್ಲಾಸ್ ಎಂ ಎಲ್ ಎ ಶ್ರೀ ಕೆ. ಷಣ್ಮುಗಂ ಇವರಿಗೆ ಒಂದು ತಿಂಗಳ ಸಜೆ ವಿಧಿಸಲಾಗಿದೆ ಬೆಜವಾಡದ ಎಂ ಎಲ್ ಎ. ಶ್ರೀ ಟಿ. ಎಸ್ ಪ್ರಸಾದರಿಗೆ ಮೂರು ತಿಂಗಳ ಸಜೆ ಮತ್ತು ೭೫೦ ರೂ ದಂಡವಿಧಿಸಲಾಗಿದೆ ರಾಜಮಂಡ್ರಿಯ ಶ್ರೀ ಚಟ್ಟಿ ಕೃಷ್ಣರಾವ್ ಇವರಿಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ವಲ್ಲಿಪುರಂನ ಹರಿಜನ ಎಂ. ಎಲ್. ಎ. ಶ್ರೀ ಕುಲಶೇಖರ ದಾಸ ಇವರಿಗೆ ಒಂದು ವರ್ಷದ ಸಜೆ ವಿಧಿಸಲಾಗಿದೆ. ಡಿಂಡಿಗಲ್ಲಿನ ಎಂ. ಎಲ್. ಎ. ಶ್ರೀ ಎಸ್. ಸಿ. ಬಾಲಕೃಷ್ಣನ್ ಇವರನ್ನು ಬಂಧಿಸಲಾಗಿದೆ. ಉದುಮಲ್ ಪೇಟೆಯ ಎಂ. ಎಲ್. ಎ. ಶ್ರೀ ಕೃಷ್ಣ ಕುಟುಂಬನ್ ಇವರನ್ನು ಬಂಧಿಸಲಾಗಿದೆ. ಮದ್ರಾಸಿನ ಹರಿಜನ ಎಂ. ಎಲ್. ಎ ಶ್ರೀ ಕೋಲಂದವೇಲು ನಾಯನಾರರನ್ನು ಬಂಧಿಸಲಾಗಿದೆ ದಾಧಾಬಾಯಿ ನೌರೋಜಿಯವರ ಮೊಮ್ಮಗಳು ಕುಮಾರಿ ಕುರ್ಷಿದ್ ಬೆನ್ನಾ ಇವರಿಗೆ ಮೂರು ತಿಂಗಳ ಸಜೆ ವಿಧಿಸಲಾಗಿದೆ ಕೇಂದ್ರ ಪ್ರಾಂತದ ಎಂ. ಎಲ್ ಎ ಶ್ರೀ ಮೋಹನಲಾಲ ಸಕ್ಸೇನರನ್ನು ಬಂಧಿಸಿ ಒಂದು ವರ್ಷ ಸಜೆ ವಿಧಿಸಲಾಗಿದೆ ಪ್ರತಾಪಗಡದ ಶ್ರೀ ರಾಮಸ್ವರೂಪ ಕಂಟೆರ ಇವರನ್ನು ಬಂಧಿಸಲಾಗಿದೆ ಲಕ್ನೋದ ಎಂ. ಎಲ್ ಎ ಶ್ರೀ ಎಚ್. ಅಂಗರವಾಲರನ್ನು ಬಂಧಿಸಲಾಗಿದೆ ಬೊಂಬಯಿಯ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀಮತಿ ಹಂಸಮೇಥಾರನ್ನು ಬಂಧಿಸಿದೆ ಬೊಂಬಯಿಯ ಲೇಬರ್ ಲೀಡರ್ ಶ್ರೀ ಆರ್. ಎ ಕೆಡ್ಗಿಕರನ್ನೂ ಬಂಧಿಸಲಾಗಿದೆ ಬೊಂಬಯಿಯ ಎ ಐ ಸಿ ಸಿ ಸದಸ್ಯರಾದ ಶ್ರೀ ಎಂ. ಜಿ ಕೇರರನ್ನೂ ಬಂಧಿಸಿದೆ ಲಾಹೋರಿನ ಎ ಐ ಸಿ ಸದಸ್ಯ ಶ್ರೀ ನವಾಬ್ ಜಾದಾ ಮಹಮ್ಮದಾಲಿಯರನ್ನು ಬಂಧಿಸಿದೆ ಪಾಟ್ನದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ವಿನೋದಾನಂದಜಾರರನ್ನು ಬಂಧಿಸಲಾಗಿದೆ ಕಟಕಿನ ಎಂ. ಎಲ್ ಎ ಶ್ರೀ ರಾಧಾಮೋಹನ ಶಾಹು ಇವರನ್ನು ಬಂಧಿಸಲಾಗಿದೆ ಜಬ್ಬಲ್ ಪುರದ ಶ್ರೀ ಹನುಮಂತರಕ್ಷೈ ಯವರನ್ನು ಬಂಧಿಸಿದೆ ಕೇಂದ್ರ ಪ್ರಾಂತದ ಶ್ರೀ ಲಕ್ಷ್ಮಣರಾವ್ ನಾಥ ಇವರನ್ನು ಬಂಧಿಸಿದೆ ಜಬ್ಬಲ್‌ಪುರದ ಎ ಐ ಸಿ ಸಿ ಮೆಂಬರ್ ಶ್ರೀ ನಿಲಾಂಜನ ಸಿಂಗರನ್ನು ಬಂಧಿಸಿದೆ ಒರಿಸ್ಸದ ಮಾಜಿ ಪ್ರಧಾನಮಂತ್ರಿ ಶ್ರೀ ವಿಶ್ವನಾಥ ದಾಸರನ್ನು ಬಂಧಿಸಲಾಗಿದೆ ಮುಂಬಯಿಯ ಮಾಜಿ ಮಂತ್ರಿ ಶ್ರೀ ಕೆ ಮುನ್ಷಿಯವರನ್ನು ಬಂಧಿಸಲಾಗಿದೆ ಬೊಂಬಯಿಯ ಎಂ. ಎಲ್. ಎ. ಶ್ರೀ ಎಸ್ ಜಿ. ಸೊಂಗನಕಾರರನ್ನು ಬಂಧಿಸಲಾಗಿದೆ. ಬೊಂಬಾಯಿ ಎಂ. ಎಲ್. ಎ ಶ್ರೀ. ಶಾಂತಿಲಾಲಶಾರನ್ನು ಬಂಧಿಸಿದೆ. ಬೊಂಬಯಿ ಕೇಂದ್ರ ಎಂ. ಎಲ್. ಎ. ಶ್ರೀ. ಎಸ್. ವಿ. ಗಾಡ್ಗಿಲ್‌ರನ್ನು ಮತ್ತು ಕೆ. ಎಂ. ಜೇಧೆ ಇವರನ್ನು ಬಂಧಿಸಿ ೧೮ ತಿಂಗಳ ಶಿಕ್ಷೆ ವಿಧಿಸಲಾಗಿದೆ. ಅಹಮ್ಮದಾಬಾದಿನ ಎ. ಐ. ಸಿ. ಸಿ. ಸದಸ್ಯರಾದ ಶ್ರೀ. ಬಲವಂತರೈ ಮೇಥಾರವರನ್ನು ಬಂಧಿಸಲಾಗಿದೆ.

ರಾಜಂಪೇಟೆಯ ಹರಿಜನ ಎಂ. ಎಲ್. ಎ. ಶ್ರೀ ಎಸ್. ನಾಗಯ್ಯ ಇವರನ್ನು ಬಂಧಿಸಿ ೬ ತಿಂಗಳ ಶಿಕ್ಷೆ ವಿಧಿಸಿದೆ ವಿಜಾಗಪಟ್ಟಣದ ಎಂ ಎಲ್. ಎ ಶ್ರೀ ಕೆ. ಸುಬ್ಬರಾಯರನ್ನು ಬಂಧಿಸಿ ೧ ವರ್ಷದ ಕಠಿಣ ಶಿಕ್ಷೆ ವಿಧಿಸಲಾಗಿದೆ ಬೆಜವಾಡದ ಎಂ ಎಲ್. ಎ. ಶ್ರೀ ಪಿ ವಿ ನರಸಿಂಹಂ ಇವರಿಗೆ ೯ ತಿಂಗಳ ಶಿಕ್ಷೆ ವಿಧಿಸಲಾಗಿದೆ ಮದ್ರಾಸಿನ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಬಾಷಿನೇದು ಇವರಿಗೆ ಒಂದು ವರ್ಷದ ಸಜೆ ವಿಧಿಸಲಾಗಿದೆ ಕೊಳ್ಳೆಂಗೋಡೆಯ ಎ ಐ ಸಿ ಸಿ ಸದಸ್ಯರಾದ ಶ್ರೀ ದೊರೆಸ್ವಾಮಿ ಚೆಟ್ಟಿಯಾರ್ ಇವರಿಗೆ ೧ ವರ್ಷ ಕಠಿಣ ಶಿಕ್ಷೆ ರೂ ೫೦೦ ದಂಡ ವಿಧಿಸಲಾಗಿದೆ. ಶಂಕರನಾಯನಾರ್ ಕೋವಿಲಿನ ಎಂ. ಎಲ್ ಎ ಶ್ರೀ ಸಟ್ಟಿನಾಥ ಕರಯಾಳರನ್ನು ಬಂಧಿಸಲಾಗಿದೆ.

ಕರ್ನಾಟಕದಲ್ಲಿ ಸತ್ಯಾಗ್ರಹ

ಡಾ: ನಾಗನಗೌಡರಿಗೆ ೧ ವರ್ಷ ಶಿಕ್ಷೆ ೬೦೦ ರೂ ದಂಡ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ, ಬಳ್ಳಾರಿ ಡಿ. ಬೋ ಪ್ರೆಸಿಡೆಂಟರೂ ಆದ ಡಾ. ನಾಗನಗೌಡ ಇವರು ಹೊಸಪೇಟೆಯಲ್ಲಿ ಸುಮಾರು ೧೫ ಸಾವಿರ ಜನಸಂಖ್ಯೆ ಸೇರಿದ ಮಹಾಸಭೆಯಲ್ಲಿ ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಅವರನ್ನು ಬಂಧಿಸಿ, ಒಂದು ವರ್ಷದ ಶಿಕ್ಷೆ, ೬೦೦, ರೂ ದಂಡ ತಪ್ಪಿದರೆ ೩ ತಿಂಗಳ ಶಿಕ್ಷೆ ವಿಧಿಸಿದೆ

ಶ್ರೀ ಜೋಶಿ ನಾರಾಯಣರಾಯರಿಗೆ ಶಿಕ್ಷೆ

ಮುಂಬಯಿ ಎಸೆಂಬ್ಲಿಯ ಉಪಾಧ್ಯಕ್ಷರೂ, ಎ ಐ ಸಿ ಸಿ ಸದಸ್ಯರೂ ಆದ ಶ್ರೀ. ಜೋಶಿ ನಾರಾಯಣ ರಾಯರು ಬೆಳಗಾಂವಿಯಲ್ಲಿ ನೆರೆದಿದ್ದ ೧೦ ೧೨ ಸಾವಿರ ಜನಸಮುದಾಯದ ಮುಂದು ಯುದ್ಧವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಇವರನ್ನು ಬಂಧಿಸಿ, ಒಂದು ವರ್ಷ ಶಿಕ್ಷೆ ವಿಧಿಸಿದರು.

ಶ್ರೀ. ಮಂಡಗಿಯವರಿಗೆ ಶಿಕ್ಷೆ

ಬೆಳಗಾವಿಯಲ್ಲಿ ಶ್ರೀ ಮಡಂಗಿ ಅನಂತರಾಯರು ಯುದ್ಧ ವಿರುದ್ಧ ಘೋಷಣೆ ಮಾಡಿ ಸತ್ಯಾಗ್ರಹ ಹೂಡಿದರು. ಅವರನ್ನು ಬಂಧಿಸಿ ಒಂದು ವರ್ಷ ಶಿಕ್ಷೆ ವಿಧಿಸಲಾಗಿದೆ.

ಶ್ರೀ ಕರುಂಬಯ್ಯನವರಿಗೆ ಶಿಕ್ಷೆ

ಕೊಡಗು ಕೌನ್ಸಿಲ್ ಸದಸ್ಯರಾದ ಶ್ರೀ ಕೆ. ಸಿ. ಕರುಂಬಯ್ಯನವರು ಸತ್ಯಾಗ್ರಹ ಮಾಡಿ ೬ ತಿಂಗಳ ಶಿಕ್ಷೆಗೊಳಗಾದರು.

ಶ್ರೀಗಳಾದ ಬೆಳ್ಳಿಯಪ್ಪ ಮತ್ತು ಕರಿಯಪ್ಪನವರ ಸತ್ಯಾಗ್ರಹ

ಕೊಡಗು ಪ್ರತಿನಿಧಿಗಳೂ ಡಿ. ಬೋ. ಪ್ರೆಸಿಡೆಂಟರೂ ಆದ ಶ್ರೀ ಬೆಳ್ಳಿಯಪ್ಪನವರೂ ತಾ ೧೧ರಂದು ಸತ್ಯಾಗ್ರಹ ಹೂಡಿದರು ಶ್ರೀ ಕರಿಯಪ್ಪನವರೂ ಅದೇ ದಿನ ಸತ್ಯಾಗ್ರಹ ಹೂಡಿದರು.

ಶ್ರೀ ದೇವಯ್ಯನವರಿಗೆ ಶಿಕ್ಷೆ

ಕೊಡಗಿನ ಎಂ. ಎಲ್. ಸಿ. ಶ್ರೀ ಕೆ. ದೇವಯ್ಯನವರು ಸತ್ಯಾಗ್ರಹ ಹೂಡಿ ಬಂಧಿತರಾಗಿರುವರು

ಶ್ರೀ ಸುಗಂಧಿಯರಿಗೆ ಶಿಕ್ಷೆ

ಮುಂಬಾಯಿ ಪ್ರಾಂತದ ಎಂ ಎಲ್ ಎ ಗಳಾದ ವಿಜಾಪುರದ ಶ್ರೀ ಮುರಿಗಪ್ಪಾ ಸುಗಂಧಿಯವರು ಸತ್ಯಾಗ್ರಹ ಹೂಡಿ ಬಂಧಿತರಾಗಿ ಒಂದು ವರ್ಷ ಶಿಕ್ಷೆಗೊಳಗಾದರು

ಶ್ರೀ ದೊಡ್ಡಮೇಟಿಯರ ಬಂಧನ

ಗದಗದ ಎಂ ಎಲ್ ಎ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಸತ್ಯಾಗ್ರಹ ಹೂಡಿ ಬಂಧಿತರಾಗಿರುವರು.

ಶ್ರೀ ಪರಮಣ್ಣ ಹೊಸಮನಿಯರ ಬಂಧನ

ಶ್ರೀ ಪರಮಣ್ಣ ಹೊಸಮನಿಯವರು ಕರ್ಜಗಿಯಲ್ಲಿ ಸತ್ಯಾಗ್ರಹಮಾಡಿ ಸೆರೆಮನೆ ಸೇರಿರುವರು,

ಶ್ರೀ ಅಂದಾನೆಪ್ಪ ಕವದಿಯರ ಬಂಧನ

ಧಾರವಾಡ ಎ ಐ ಸಿ. ಸಿ ಸದಸ್ಯರಾದ ಶ್ರೀ ಅಂದಾನೆಪ್ಪ ಕವದಿಯವರು ಸತ್ಯಾಗ್ರಹ ಹೂಡಿ ಬಂಧಿತರಾದರು

೧೩ನೇ ಪುಟಕ್ಕೆ ಮುಂದುವರಿದಿದೆ.

ಬಿಸಿ ಸುದ್ದಿ

ಕಾರಾಗೃಹದಲ್ಲಿ ಸೇರಿದ ಸರೋಜಿನಿ ದೇವಿಯವರ ಆರೋಗ್ಯ ಚೆನ್ನಾಗಿರದ ನಿಮಿತ್ತ ಅವರನ್ನು ಬಿಡುಗಡೆಮಾಡಲಾಗಿದೆ.

ನಾರ್ವೆಯಲ್ಲಿ ರಾಜಕೀಯ ಅಶಾಂತಿಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಈ ದಿನ ಶ್ರೀ ಸತ್ಯಮೂರ್ತಿಗಳು ಸತ್ಯಾಗ್ರಹ ಮಾಡುವರು.

ಗಾಂಧಿಜಿಯವರ ಕಾರ್ಯದರ್ಶಿ ಶ್ರೀ ಶ್ರೀ ಪ್ಯಾರೇಲಾಲರು ಬಂಧಿತರಾದರು.

ಸತ್ಯಾಗ್ರಹ ಸಮಾಚಾರ

ಆಂಧ್ರ ಮಹಾ ಸಭೆಯ ಅಧ್ಯಕ್ಷರೂ, ಮದ್ರಾಸು ಶಾಸನ ಸಭಾ ಸದಸ್ಯರೂ ಆದ ಶ್ರೀ ಎ ಅನಂತಶಯನಂ ಅಯ್ಯಂಗಾರರು ಬಂಧಿತರಾಗಿ ೯ ತಿಂಗಳ ಶಿಕ್ಷೆ ವಿಧಿಸಲಾಯಿತು. ಕೇಂದ್ರ ಶಾಸನ ಸಭೆಯ ಸದಸ್ಯರೂ, ಎ. ಐ. ಸಿ. ಸಿ. ಸದಸ್ಯರೂ ಆದ ಶ್ರೀ ತಿರುಮಲ ರಾಯರು ಬಂಧಿತರಾಗಿ ಹದಿನೆಂಟು ತಿಂಗಳ ಕಠಿಣ ಶಿಕ್ಷೆ ೨೦೦ ರೂ. ದಂಡ ವಿಧಿಸಲಾಯಿತು. ಮದ್ರಾಸು ಶಾಸನ ಸಭಾಸದಸ್ಯರಾದ ಶ್ರೀ. ಎಂ. ಸುಬ್ಬರಾಯರು ಬಂಧಿತರಾಗಿ ಒಂದು ವರ್ಷ ಶಿಕ್ಷೆ ಮತ್ತು ೧೦೦ ದಂಡ ವಿಧಿಸಲಾಯಿತು ಮದ್ರಾಸು ಶಾಸನ ಸಭಾಸದಸ್ಯರಾದ ಶ್ರೀ ವೆಂಕಟ್ರಾವ್ ರೆಡ್ಡಿಯವರು ಬಂಧಿತರಾಗಿ ೯ ತಿಂಗಳ ಕಠಿಣ ಶಿಕ್ಷೆ ಮತ್ತು ೫೦ ರೂ ದಂಡ ವಿಧಿಸಲಾಯಿತು. ಮದ್ರಾಸು ಎಂ. ಎಲ್ ಸಿ ಗಳಾದ ಶ್ರೀ. ಡಿ ವಿ. ರಾಮಸ್ವಾಮಿಯವರು ಬಂಧಿತರಾಗಿರುವರು ತಿನ್ನವೆಲ್ಲಿ ಡಿ. ಬೋ. ಪ್ರೆಸಿಡೆಂಟರಾದ ಶ್ರೀ. ವೀರಬಾಹು ಇವರು ಬಂಧಿತರಾಗಿರುವರು ಎ ಐ. ಸಿ. ಸಿ ಸದಸ್ಯರಾದ ಶ್ರೀ ಕೆ. ದಾಮೋದರನರು ಸ್ಥಾನಬದ್ಧರಾಗಿರುವರು. ಮದ್ರಾಸು ಎಂ ಎಲ್ ಎ ಗಳಾದ ಶ್ರೀ. ನಟೇಶ ಚೆಟ್ಟಿಯಾರರು ಬಂಧಿತರಾದರು ಕೇಂದ್ರ ಎಂ ಎಲ್ ಎಗಳಾದ ಶ್ರೀ ಟಿ ಎಸ್ ಅವಿನಾಶಿಲಿಂಗಂ ಇವರು ಸತ್ಯಾಗ್ರಹ ಮಾಡಿ ಬಂಧಿತರಾದರು ಮದ್ರಾಸು ಎಂ ಎಲ್. ಎ ಗಳಾದ ಶ್ರೀ ವೇದರತ್ನಂ ಪಿಳ್ಳೆಯವರು ಸತ್ಯಾಗ್ರಹ ಮಾಡಿ ಬಂಧಿತರಾಗಿ ೯ ತಿಂಗಳ ಕಠಿಣ ಸಜೆಗೊಳಗಾಗಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ ಅಸಫ್ ಆಲಿಯವರು ಬಂಧಿತರಾಗಿರುವರು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ನಾಲ್ಕು ತಿಂಗಳ ಶಿಕ್ಷೆ ವಿಧಿಸಲಾಗಿದೆ ಹಿಂದಿನ ರೆವಿನ್ಯೂ ಮಂತ್ರಿ ಶ್ರೀ ನಿತ್ಯಾನಂದ ಕಾನುನ್‌ಗೋ ಇವರು ಬಂಧಿತರಾಗಿರುವರು. ಸಂಯುಕ್ತ ಪ್ರಾಂತದ ಎಂ. ಎಲ್. ಎ. ಶ್ರೀಮತಿ ಉಮಾ ನೆಹರು ಇವರು ಬಂಧಿತರಾಗಿರುವರು ಸಂಯುಕ್ತ ಪ್ರಾಂತದ ಎಂ ಎಲ್ ಎ ಡಾ। ಹುಸೇನ್ ಜಾಹೀರರು ಬಂಧಿತರಾಗಿ ಒಂದು ವರ್ಷದ ಸಜೆಗೆ ಒಳಗಾಗಿರುವರು. ಲಕ್ನೋದ ಶ್ರೀ ಪ್ರೇಮ ಕೃಷ್ಣ ಖನ್ನನ್ ಇವರು ಬಂಧಿತರಾಗಿರುವರು. ಸಂಯುಕ್ತ ಪ್ರಾಂತದ ಎಂ. ಎಲ್. ಎ.ಗಳಾದ ಶ್ರೀ. ರುಹುಕುಂ ಸಿಂಗ್, (ಪಾರ್ಲಿಮೆಂಟರಿ ಸೆಕ್ರೆಟರಿ—ಮಾಜಿ) ಶ್ರೀ. ಭಗವಾನ್ ಸಿಂಗ್ ಮತ್ತು ಲೋಧನ್ ರಾವ್ ಇವರು ಬಂಧಿತರಾಗಿರುವರು. ಶ್ರೀಮತಿ ಸುಚೇತಾ ಕೃಪಾಲನಿ (ಶ್ರೀ. ಕೃಪಾಲನಿಯವರ ಪತ್ನಿ) ಇವರು ಬಂಧಿತರಾಗಿರುವರು ಲಖನೌದಿನ ಕಾಂಗ್ರೆಸ್ ಕೆಲಸಗಾರರಾದ ಶ್ರೀಮತಿ ಮೀನಾಕ್ಷಿ ದೇವಿ ಮತ್ತು ಸುಶೀಲಾ ಯಾದವ

ಇಬ್ಬರು ಮಹಿಳೆಯರು ಬಂಧಿತರಾದರು. ಮಧ್ಯಪ್ರಾಂತ್ಯದ ಎಂ. ಎಲ್. ಎ ಗಳಾದ ಶ್ರೀ. ಬಿ ಎಲ್. ಚಂಡಕ್ ಇವರು ಬಂಧಿತರಾದರು, ಅಲ್ಲಿನ ಎ. ಐ ಸಿ ಸಿ. ಸದಸ್ಯರಾದ ಶ್ರೀ ನಿರಾಂಜನ ಸಿಂಗ್ ಇವರು ಬಂಧಿತರಾದರು. ಕೇಂದ್ರ ಶಾಸನ ಸಭಾ ಸದಸ್ಯರಾದ ಗಯೆಯ ಶ್ರೀ. ಗೌರೀಶಂಕರ ಚರಣ ಸಿಂಗರು ಬಂಧಿತರಾದರು. ಕೇಂದ್ರ ಶಾಸನ ಸಭಾಸದಸ್ಯರಾದ ಲಾಹೋರಿನ ಶ್ರೀ. ಸರ್ದಾರ್ ಮಂಗಲ ಸಿಂಗ್ ಮತ್ತು ಚೀಟಿ ರಘುವೀರ ಇವರಿಬ್ಬರು ಬಂಧಿತರಾದರು ಜೆನ್ನೂರಿನ ಎ ಐ ಸಿ ಸಿ ಸದಸ್ಯರಾದ ಡಾ. ಜೀವನರತ್ನ ಧರರು ಬಂಧಿತರಾದರು. ಸೇರಾಂಪುರಿನ ಎ ಐ ಸಿ ಸಿ ಮೆಂಬರರಾದ ಡಾ. ಅಶುತೋಷದಾಸರು ಬಂಧಿತರಾದರು ಬಂಗಾಳದ ಮೊದಲನೆಯ ಸ್ತ್ರೀ

ಬಾಯಿ ಸುಬ್ಬರಾಯನರು ಬಂಧಿತರಾದರು. ಕೇಂದ್ರ ಪ್ರಾಂತ್ಯದ ವಾಣಿಜ್ಯ ಮಂತ್ರಿಗಳಾದ ಶ್ರೀ ಡಿ ಕೆ ಮೆಹ್ತಾ ಇವರು ಬಂಧಿತರಾಗಿ ಒಂದು ವರ್ಷದ ಕಠಿಣಶಿಕ್ಷೆಗೊಳಗಾಗಿದ್ದಾರೆ ಬಾರ್ಡೋಲಿಯ ಡಿ ಕಾ ಪ್ರೆಸಿಡೆಂಟರೂ ಶಾಸನ ಸಭಾಸದಸ್ಯರೂ ಆದ ಶ್ರೀ ಚೇದಲಾಲ ಗುಪ್ತರು ಬಂಧಿತರಾಗಿ ೬ ತಿಂಗಳ ಕಠಿಣ ಶಿಕ್ಷೆ ರೂ ೧೦೦ ದಂಡಕ್ಕೊಳಗಾಗಿದ್ದಾರೆ ಜಬ್ಬಲ್ಪುರದ ಎ ಐ ಸಿ ಸಿ ಸದಸ್ಯರಾದ ಶ್ರೀ. ನಿರಾಂಜನ ಸಿಂಗರು ಬಂಧಿತರಾಗಿ ೯ ತಿಂಗಳ ಕಠಿಣಶಿಕ್ಷೆ ೫೦ ರೂ ದಂಡವಿಧಿಸಲಾಗಿದೆ ನಾಸಿಕದ ಎಂ ಎಲ್ ಎ ಬಾಬುರಾವ್ ಸಖಾರಾಮ ಹಿರೆಯವರು ಬಂಧಿತರಾಗಿರುವರು. ಅಹಮ್ಮದಾಬಾದಿನ ಎ ಐ ಸಿ ಸಿ ಸದಸ್ಯರು ಮತ್ತು ಸ್ಟೇಟ್ ಕಾನ್ಫರೆನ್ಸಿನ ಸೆಕ್ರೆಟರಿ ಶ್ರೀ ಬಳವಂತರೈ ಮೆಹ್ತಾ



ಸಿ ಪಿ ಸಿ ಕೆಲಸಗಾರರ ಸಂಘದವರು ಶ್ರೀಗಳಾದ ಮಲ್ಯ ಮತ್ತು ಬಾಳಿಗರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು

ಸತ್ಯಾಗ್ರಹಿ ಕುಮಾರಿ ಲಬನ್ಯಲತಾ ಚಂದ (ಎ ಐ ಸಿ ಸಿ ಸದಸ್ಯೆಯರು) ಬಂಧಿತೆಯರಾದರು ಬೊಂಬಾಯಿಯ ಆಚಾರ್ಯ ಭಿಸೆಯವರು ಬಂಧಿತರಾಗಿ ಒಂದು ವರ್ಷ ಕಾರಾಗೃಹವಾಸಕ್ಕೊಳಗಾದರು ಬೊಂಬಯಿಯ ಮಾಜಿ ಮಂತ್ರಿಗಳಾದ ಡಾ ಗಿಲ್ಡರ್ ಸತ್ಯಾಗ್ರಹ ಹೂಡಿದರು ಬೊಂಬಯಿಯ ಎಂ ಎಲ್ ಎ ಗಳಾದ ಶ್ರೀಮತಿ ಲೀಲಾವತಿ ಮುನ್ಷಿಯವರು ಸತ್ಯಾಗ್ರಹ ಹೂಡಿದರು ಮುಂಬಯಿಯ ಎಂ ಎಲ್ ಎ ಗಳಾದ ಶ್ರೀ. ಜೀನಬಾಯಿ ಪಿ ಜೋಶಿಯವರು ಸತ್ಯಾಗ್ರಹ ಹೂಡಿದರು ಅಜಮೀರದ ಎ ಐ ಸಿ ಸಿ ಸದಸ್ಯರಾದ ಶ್ರೀ. ಬಾಲಕೃಷ್ಣ ಕೌಲರವರು ಬಂಧಿತರಾದರು. ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರೂ, ಹಿಂದಿನ ಮೇಯರರೂ ಆದ ಶ್ರೀ. ವೆಂಕಟ ಸ್ವಾಮಿ ನಾಯಿಡು ಇವರು ಸತ್ಯಾಗ್ರಹದಿಂದ ಬಂಧಿತರಾಗಿ ಆರು ತಿಂಗಳ ಶಿಕ್ಷೆಗೊಳಗಾದರು. ಮದ್ರಾಸಿನ ಮಾಜಿ ಮಂತ್ರಿಗಳಾದ ಡಾ. ಸುಬ್ಬರಾಯನರು ಬಂಧಿತರಾದರು. ಡಾ. ಸುಬ್ಬರಾಯನರ ಪತ್ನಿ ಕೇಂದ್ರಶಾಸನ ಸಭಾಸದಸ್ಯೆಯರಾದ ಶ್ರೀಮತಿ ರಾಧಾ

ರವರು ಬಂಧಿತರಾಗಿ ಒಂದು ವರ್ಷ ಕಠಿಣ ಶಿಕ್ಷೆಗೊಳಗಾಗಿರುವರು ಸಾಂಗ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾದ ಶ್ರೀ ಡಿ ಬಿ ಬರ್ವಾರವರು ಬಂಧಿತರಾಗಿ ೧ ವರ್ಷ ಕಠಿಣ ಶಿಕ್ಷೆ ಮತ್ತು ರೂ ೧೦೦ ದಂಡವಿಧಿಸಲಾಗಿದೆ ಪೂನದ ಶ್ರೀಮತಿ ದುರ್ಗಾಬಾಯಿ ಜೋಗ ೧೦೦ ರೂ ದಂಡವಿಲ್ಲದೇ ಮೂರುತಿಂಗಳ ಸಜೆಗೊಳಗಾಗಿರುವರು ಬಂಗಾಳದ ಎ ಐ ಸಿ ಸಿ ಸದಸ್ಯರಾದ ಶ್ರೀ ಚಾರುಚರಣ ಭಂಡಾರಿಯವರು ಬಂಧಿತರಾಗಿ ಒಂದು ವರ್ಷ ಸಜೆ ೨೦೦ ರೂ ದಂಡಕ್ಕೊಳಗಾಗಿರುವರು ದರ್‌ಬಾರಿನ ಎಂ ಎಲ್ ಎ ಶ್ರೀ ತೀಕಾರಾಮ ಮಂಜಿಯವರು ಬಂಧಿತರಾಗಿ ಒಂದು ವರ್ಷ ಶಿಕ್ಷೆಗೊಳಗಾಗಿರುವರು ಬಂಗಾಳದ ಎ ಐ ಸಿ. ಸಿ. ಸದಸ್ಯರಾದ ಶ್ರೀ ಜೀವನ ಲಾಲ ಪಂಡಿತರು ಬಂಧಿತರಾಗಿರುವರು ಗೋರಖಪುರದ ಮುಖಂಡರಾದ ಶ್ರೀ ಠಾಕೂರ ಸಿಂಗಾಸನಸಿಂಗರು ಬಂಧಿತರಾಗಿ ಮೂರು ತಿಂಗಳ ಶಿಕ್ಷೆಗೊಳಗಾಗಿರುವರು. ಕೋನ್‌ಪುರದ ಎಂ. ಎಲ್. ಎ. ಶ್ರೀ ಭಗತ್ ಫಯಲ್‌ದಾಸರು ಬಂಧಿತರಾಗಿರುವರು. ಒರಿಸ್ಸದ ಎಂ. ಎಲ್. ಎ. ಶ್ರೀ ಸದಾಶಿವ ತ್ರಿಪಾಠಿಯವರು ಬಂಧಿತರಾಗಿ ೧ ವರ್ಷ ಶಿಕ್ಷೆ, ರೂ ೧೦೦. ದಂಡಕ್ಕೊಳಗಾಗಿರುವರು. ಆಂಧ್ರದ ಮುಖಂಡರೂ, ಶಾಸನ ಸಭಾ ಸದಸ್ಯರೂ ಆದ ಶ್ರೀ ಕೋಟಿ ರೆಡ್ಡಿಯವರು ಬಂಧಿತರಾಗಿ ೪೫ ದಿನಗಳ ಶಿಕ್ಷೆ ೫೦ ರೂ ದಂಡಕ್ಕೊಳಗಾಗಿರುವರು. ನಸಾರ್ಪೂರದ ಎಂ ಎಲ್. ಎ ಶ್ರೀ ಜಿ. ವೆಂಕಣ್ಣ ಇವರು ಬಂಧಿತರಾಗಿ ಆರು ತಿಂಗಳ ಶಿಕ್ಷೆ ರೂ. ೧೫೦ ದಂಡಕ್ಕೊಳಗಾಗಿರುವರು ಓಂಗೋಲಿಯ ಎಂ ಎಲ್. ಎ ಶ್ರೀ ಪಿ. ಬೂಚೆಪ್ಪನವರು ಬಂಧಿತರಾಗಿ ೯ ತಿಂಗಳ ಶಿಕ್ಷೆಗೊಳಗಾಗಿರುವರು ಬೀಮಾವರಂದ ಎಂ ಎಲ್ ಎ ಮತ್ತು ಎಂ ಎಲ್. ಸಿ. ಗಳಾದ ದಂಡು ನಾರಾಯಣ ರಾಜು ಮತ್ತು ಗೋವಿಂದಾಚಾರಿ ಇವರು ಸತ್ಯಾಗ್ರಹ ಹೂಡಿದರು ಸುಡಿಯಟ್ಟಂಮಿನ ಕಾಂಗ್ರೆಸ್ ಧುರೀಣ ಶ್ರೀ ವಿ ವಿ ಗುಪ್ತರು ಬಂಧಿತರಾದರು ಕೇಂದ್ರ ಶಾಸನಸಭೆಯ ಪ್ರಧಾನ ವಿಪ್ ಶ್ರೀ ಜೋಗೇಂದ್ರ ಪ್ರಸಾದಮಿಶ್ರರು ಬಂಧಿತರಾಗಿ ೧೫ ತಿಂಗಳ ಶಿಕ್ಷೆ ರೂ ೧೦೦ ದಂಡಕ್ಕೊಳಗಾದರು. ಎಂ ಎಲ್. ಎ. ಗಳಾದ ಶ್ರೀ ಭಗವಾನ್ ದಿನ್‌ಮಿಶ್ರರು ಬಂಧಿತರಾಗಿ ೧೫ ತಿಂಗಳ ಶಿಕ್ಷೆ ರೂ ೧೨೮ ದಂಡಕ್ಕೊಳಗಾದರು ಲಾಹೋರಿನ ಎ ಐ ಸಿ ಸಿ. ಸದಸ್ಯರಾದ ಶ್ರೀ ನಂದಲಾಲರು ಬಂಧಿತರಾಗಿ ಒಂದು ವರ್ಷದ ಕಠಿಣ ಸಜೆ ರೂ ೨೦೦ ದಂಡಕ್ಕೊಳಗಾದರು ಒರಿಸ್ಸದ ಎಂ. ಎಲ್ ಎ ಶ್ರೀ ಪ್ರನ್ನಾಥಪಾಟ್ಕರರಿಗೆ ೯ ತಿಂಗಳ ಶಿಕ್ಷೆ ವಿಧಿಸಲಾಗಿದೆ ಲಾಹೋರಿನ ಡಾ। ಆರ್ ಕೃಷ್ಣ ಇವರಿಗೆ ೬ ತಿಂಗಳ ಕಠಿಣ ಶಿಕ್ಷೆ ರೂ ೫೦ ದಂಡ ವಿಧಿಸಲಾಗಿದೆ ಎ ಐ ಸಿ ಸಿ ಸದಸ್ಯರಾದ ಪಂಜಾಬಿನ ವಿದ್ಯಾರ್ಥಿ ನವಾಬ್‌ಜಾದ ಮಹಮ್ಮದಾಲಿಯವರು ಬಂಧಿತರಾದರು ಚಿತ್ತೂರಿನ ಹರಿಜನ ಎಂ. ಎಲ್ ಎ ಶ್ರೀ ಎಂ ದೊರೆಯಕಣ್ಣು ಇವರು ಬಂಧಿತರಾಗಿ ೬ ತಿಂಗಳ ಸಜೆಗೊಳಗಾದರು. ಪೊಲ್ಲಾಚಿಯ ಹರಿಜನ ಎಂ. ಎಲ್ ಎ ಶ್ರೀ ಎಸ್ ಕೃಷ್ಣನ್ ಇವರು ಬಂಧಿತರಾಗಿ ೪ ತಿಂಗಳ ಸಜೆ ೨೦೦ ರೂ ದಂಡ ವಿಧಿಸಲಾಗಿದೆ. ಮದರಾಸಿನ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ-ಶ್ರೀ ವರದಾಚಾರಿಯವರು ಬಂಧಿತರಾಗಿ ೬ ತಿಂಗಳ ಸಜೆಗೊಳಗಾಗಿರುವರು

ಬೆಂಗಳೂರು

ಬೆಂಗಳೂರು ಚುನಾವಣೆಯಲ್ಲಿ ಕಾಂಗ್ರೆಸಿಗೆ ಪ್ರಚಂಡ ವಿಜಯ;

೨೩ ಸ್ಥಳಗಳ ಕಾಂಗ್ರೆಸಿಗೂ

ಬೆಂಗಳೂರು ನಗರ ಸಭೆಯ ಚುನಾವಣೆಯಲ್ಲಿ ೨೩ ಚುನಾಯಿತ ಸ್ಥಳಗಳಿಗೂ ಕಾಂಗ್ರೆಸಿನವರೇ ಆರಿಸಿ ಬಂದರು. ಪರಾಜಿತರಾದವರಲ್ಲಿ ಅನೇಕರು ತಮ್ಮ ಚುನಾವಣಾ ಪ್ರವೇಶ ಧನವನ್ನೂ ಕಳಕೊಂಡಿದ್ದಾರೆ.

ಸ್ವದೇಶಾಭಿಮಾನಿಗೆ ಚಂದಾಧಾರರಾಗಿರಿ!



ವಿಚಿತ್ರ ಪ್ರಪಂಚ

ಗಂಡುಸರಿಗಿಂತ ಹೆಂಗುಸರು ಕಡಿಮೆಯಾದರೆ?

ಸಿಂಧದ ಜನಸಂಖ್ಯೆ ೩೯ ಲಕ್ಷ. ಇದರಲ್ಲಿ ೨೨ ಲಕ್ಷ ಗಂಡಸರು ಮತ್ತು ಕೇವಲ ೧೭ ಲಕ್ಷ ಹೆಂಗಸರು ಇರುತ್ತಾರೆ. ಅಂದರೆ ಸಿಂಧದಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆ ೫ ಲಕ್ಷದಷ್ಟು ಕಡಿಮೆ ಇರುತ್ತದೆ. ಹೀಗಾದ್ದರಿಂದ ಸಿಂಧದ ನಿವಾಸಿಗಳಿಗೆ ಅಗತ್ಯವುಳ್ಳಷ್ಟು ಲೈಂಗಿಕ ಸುಖವು ಇರುವುದಿಲ್ಲ. ಮಾನಸಿಕ ಪೀಡೆಯು ಬಹಳ ಇದೆ. ಸಿಂಧದಲ್ಲಿ ವಿಶೇಷವಾಗಿ ಗ್ರಾಮಾಂತರಗಳಲ್ಲಿ ಕನ್ಯಾಪಹಾರ, ಬಲಾತ್ಕಾರ, ಇತ್ಯಾದಿ ದುಷ್ಕೃತ್ಯಗಳು ನಡೆಯಲಿಕ್ಕೆ ಲೈಂಗಿಕ ಸುಖದ ಅಭಾವವೇ ಕಾರಣವೆಂದು ಕೆಲವರು ವಾದ ಮಾಡುತ್ತಿರುವರು.

◇

ನೇರಳೆ ನಾಲಿಗೆಯ ಹುಡುಗಿ

ಅಲಬೋರಾ ಜಿಲ್ಲೆಯ [illegible] ಎಂಬ ಊರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುವ [illegible] ಸಣ್ಣ ಬಾಲಿಕೆಗೆ ನೇರಳೆ ಬಣ್ಣದ ನಾಲಿಗೆ ಇದೆ. ಬಣ್ಣದ ಪೆನ್ಸಿಲು ತಿಕ್ಕಿ ಹೀಗಾಗಿರಬಹುದೆಂದು ಊಹಿಸಿ ಡಾಕ್ಟರ ಅವಳ ನಾಲಿಗೆಯನ್ನು ಸ್ವಚ್ಛ ಮಾಡಿ ನೋಡಿದರೂ ನಾಲಿಗೆಯ ಬಣ್ಣವು [illegible]ಲಿಲ್ಲ. ಮತ್ತೆ ವಿಚಾರಿಸಿದಾಗ ಹುಟ್ಟಿದಾಗಿನಿಂದ ಅವಳ ನಾಲಿಗೆಯ ಬಣ್ಣವು ನೇರಳೆಯಾಗಿತ್ತೆಂದು ಅವಳ ಪಾಲಕರು ಹೇಳಿದರು. ಖಾರದ ಜಿನಸುಗಳನ್ನು ತಿನ್ನುವಾಗ ಮಾತ್ರ ಅವಳಿಗೆ ಸ್ವಲ್ಪ ಉರಿಯಾಗುತ್ತದೆ. ಮತ್ತೆ ನೇರಳೆನಾಲಿಗೆಯ ದೆಸೆಯಿಂದ ಅವಳಿಗೆ ಯಾವ ಹಾನಿಯೂ ಇದ್ದಿರುವುದಿಲ್ಲ. ಮನುಷ್ಯರಿಗೆ ಇಂಥ ನಾಲಿಗೆ ಇರುವದು ಮತ್ತೆಲ್ಲಿಯೂ ಕಂಡುಬಂದಿಲ್ಲ. ಆದ್ದರಿಂದ ಇದು ಒಂದು ಆಶ್ಚರ್ಯ ಸಂಗತಿಯಾಗಿದೆ.

◇

ಊರಮನುಷ್ಯ ಕಾಡು ಕಪಿಯಾದನೆ?

ಯೂರೋಪಿನಲ್ಲಿ ಲೆಟವಿಯ ಎಂಬ ಒಂದು ಚಿಕ್ಕ ದೇಶವಿದೆ. ಆ ದೇಶದ ಒಂದು ಕಾಡಿನಲ್ಲಿ ಮರ ಕಡಿಯಲಿಕ್ಕೆ ಕೆಲವರು ಹೋದಾಗ ಅವರಿಗೆ ಒಬ್ಬ ಮನುಷ್ಯಪ್ರಾಣಿ ದೊರಕಿದ್ದಾನೆ. ನೋಡಲಿಕ್ಕೆ ಅವನು ಬಹಳ ಅದ್ಭುತನಾಗಿ ಕಂಡು ಬರುತ್ತಿದ್ದುದರಿಂದ ಆ ಜನರು ಅವನನ್ನು ಬಹಳ ಪರಿಶ್ರಮಪಟ್ಟು ಬಂಧಿಸಿದರು. ಅವನು ಮಂಗಗಳಂತೆ ಮರದಿಂದ ಮರಕ್ಕೆ ಹಾರುತ್ತಿದ್ದುದರಿಂದ ಅವನನ್ನು ಹಿಡಿಯುವುದು ತುಂಬಾ ಪ್ರಯಾಸದಾಯಕವಾಗಿತ್ತು. ಈ ಮನುಷ್ಯ ಕಪಿಗೆ ಮಾತು ಬರುವುದಿಲ್ಲ. ಯಾವಾಗಲೂ ಕಪಿ ಚೇಷ್ಟೆ ಮಾಡುತ್ತಿರುತ್ತಾನೆ. ಅವನ ಚರ್ಮ ಕೂಡಲು ಪ್ರಾಣಿಗಳಂತೆ ದಪ್ಪವಾಗಿಯೂ ಒರಟಾಗಿಯೂ ಇರುತ್ತದೆ. ಮೊದಲು ಮನುಷ್ಯನಾಗಿದ್ದರೂ, ಕಾಡಿಗೆ ಹೋಗಿ ಕಪಿ ಜೀವನ ನಡೆಸುತ್ತಿದ್ದುದರಿಂದ ಮನುಷ್ಯನಿಗಿಂತಲೂ ಬಲಶಾಲಿಯಾಗಿರುವನು. ಕಾಡಿನಲ್ಲಿ ಒಂದು ಗವಿಯಲ್ಲಿ ವಾಸಿಸಿಕೊಂಡು ಹಣ್ಣುಹಂಪಲು ಮಾಂಸ ಇತ್ಯಾದಿಯನ್ನು ಹಸಿಹಸಿಯಾಗಿ ತಿಂದುಕೊಂಡಿದ್ದ! ಆದರೆ ಅವನು ಊರು ಬಿಟ್ಟು ಕಾಡನ್ನು ಹೇಗೆ ಸೇರಿಕೊಂಡನೋ ಅದು ಮಾತ್ರ ತಿಳಿದಿರುವುದಿಲ್ಲ.

◇

ಬ್ಲೇಕ್ ಔಟ್ ನಾಯಿಗೂ ಬೇಡ

ವಿಮಾನದಾಳಿಗಳು ಹೆಚ್ಚಾಗಿ ರಾತ್ರಿ ಕಾಲದಲ್ಲಿ ಆಗುತ್ತವೆ. ಅವುಗಳಿಂದ ಕಾಪಾಡಿಕೊಳ್ಳುವುದಕ್ಕೋಸ್ಕರ ಪಟ್ಟಣವಾಸಿಗಳು ದೀಪದ ಪ್ರಕಾಶವು ಹೊರಗೆ ಬಾರದಂತೆ ದೀಪಗಳನ್ನು ಮುಚ್ಚಿಡುತ್ತಾರೆ. ಆದ್ದರಿಂದ ವೈರಿವಿಮಾನಗಳಿಗೆ ಗುರಿ ಇಟ್ಟು ಬಾಂಬು ಹಾಕುವುದು ಕಷ್ಟವಾಗುತ್ತದೆ. ಆದರೆ ಕತ್ತಲೆಯಲ್ಲಿ ಇಡೀ ರಾತ್ರಿಯನ್ನು ಕಳೆಯುವುದು ನಮಗೆ ಬಹಳ ಅಸಹ್ಯವೆನ್ನಿಸಬಹುದು. ಅದು ಜನರಿಗೆ ಮಾತ್ರವಲ್ಲ, ನಾಯಿಗಳಂಥ ಪ್ರಾಣಿಗಳಿಗೂ ಅಸಹ್ಯವಾಗಿದೆ. ವಿಲಾಯತಿಯ ಒಂದು ಊರಿನಲ್ಲಿ ಒಂದು ರಾತ್ರಿ ಬ್ಲೇಕ್ ಔಟ್ ನಡೆ ನಡೆದಿತ್ತು. ಯಾರೂ ಬೆಳಕು ಮಾಡದಂತೆ ಪೋಲೀಸ ಕಾವಲು ತುಂಬಾ ಇತ್ತು. ಆದರೆ ಒಂದು ಮನೆಯಲ್ಲಿ ಮಾತ್ರ ಬೆಳಕು! ಪೋಲೀಸರು ಮನೆಯನ್ನು ನುಗ್ಗಿ ನೋಡಿದರು — ಯಾರೂ ಇಲ್ಲ. ಒಂದು ನಾಯಿ ಮಾತ್ರ ವಿದ್ಯುಚ್ಛಕ್ತಿಯ ದೀಪದ ಕೆಳಗೆ ಮಲಗಿದೆ. ಪೋಲೀಸರು ಹೊರಗೆ ತಿರುಗಾಡಲಿಕ್ಕೆ ಹೋದ ಮನೆಯ ಯಜಮಾನಿಯನ್ನು ಹಿಡಿದು ತಂದು ಅವಳನ್ನು ತುಂಬಾ ಗದರಿಸಿದರು. ಆದರೆ ಅವಳು—'ಸ್ವಾಮಿ! ಈ ನಾಯಿಯೇ ದೀಪವನ್ನು ಉರಿಸಿದ್ದಿರಬೇಕು. ನಾನು ನಿರಪರಾಧಿ!' ಎಂದಳು. ಅವಳ ಮಾತು ಸತ್ಯವಾಗಿತ್ತು. ದೀಪದ ಸ್ವಿಚನ್ನು ಪರೀಕ್ಷಿಸಿದಾಗ ಅದರ ಮೇಲೆ ನಾಯಿಯ ಉಗುರಿನ ಗಾಯವಿತ್ತು. ನಾಯಿಯೇ ಸ್ವಿಚ್ಚನ್ನು ಒತ್ತಿ ಬೆಳಕು ಮಾಡಿತ್ತು!

◇

ಬಣ್ಣಬಣ್ಣದ ಜೋಳದ ತೆನೆಗಳು

ಅಮೇರಿಕದ ಕನೆಕ್ಟಿಕಟ್ ಎಂಬಲ್ಲಿಯ [illegible] ಎಂಬವರ ವಿನೋದ ವ್ಯಕ್ತಿ [illegible] ರೀತಿಯಿಂದ ಜೋಳಗಳನ್ನು ಬೆಳೆಸುವುದರಲ್ಲಿ ಪ್ರಸಿದ್ಧನಾಗಿದೆ. ಇವರ ವಿಶ್ವವಿದ್ಯಾಲಯದ ಪದವೀಧರರು [illegible] ಜೀವನ ಮಾಡುತ್ತಾರೆ. [illegible] ಕ್ರಮವಾಗಿ ಕೆಂಪು [illegible] ಮತ್ತು ನೀಲವರ್ಣದ ಜೋಳದ ಕಾಳುಗಳನ್ನು ಸಾಲುಸಾಲಾಗಿ [illegible] ಬೆಳೆ ಮಾಡಿರುವರು. ಇವುಗಳು [illegible] ಒಳ್ಳೇ ತೆನೆಬಿಟ್ಟವೆ. ಬಹಳ ರಮ್ಯವಾಗಿ ತೋರುತ್ತವೆ.

◇

ವಿಚಿತ್ರ ಹಾಸಿಗೆ

ಅಮೇರಿಕದ ಒಬ್ಬ [illegible] ಒಂದು ವಿಚಿತ್ರ ಹಾಸಿಗೆಯನ್ನು ತಯಾರಿಸಿದೆ. ಇದು ಹಸ್ತಕೌಶಲ್ಯದ ಉತ್ತಮ ಮಾದರಿಯಾಗಿ ಇರುವುದು. ಇದನ್ನು ಹೊಂದಿಕೊಂಡು [illegible] ಗಡಿಯಾರ, ಟೆಲಿಫೋನು, ರೇಡಿಯೋ ಇವೆಲ್ಲ ಇವೆ. ಒಬ್ಬನು ಮಲಗಿದಲ್ಲಿ ಮಲಗೇ ಇವೆಲ್ಲವುಗಳ ಉಪಯೋಗಮಾಡಿಕೊಳ್ಳಬಹುದು. ಮತ್ತೆ ಹಾಸಿಗೆ ಇರುವ ಕೋಣೆಯ ಹವಾಗುಣವನ್ನು ಬೇಕಾದಂತೆ ಪರಿವರ್ತಿಸಿಕೊಳ್ಳಲಿಕ್ಕೆ ಈ ಹಾಸಿಗೆಯಲ್ಲಿ ಸಲಕರಣೆ ಇದೆ. ಈ ಹಾಸಿಗೆಯಲ್ಲಿ ಮಲಗಿದ್ದಲ್ಲಿಂದಲೇ ಕೋಣೆಯ ಬಾಗಿಲನ್ನು ಮುಚ್ಚಬಹುದು. ಮತ್ತೆ ತೆರೆಯಬಹುದು. ಮಲಗಿದ್ದಲ್ಲಿಂದಲೇ ಕೋಣೆಯ ಹೊರಗಿದ್ದವರೊಡನೆ ಮಾತಾಡಲೂ ಅವರು ಮಾತಾಡುವದನ್ನು ಕೇಳಲೂ ಬಹುದು. ಮತ್ತೆ ಮಲಗಿದವನನ್ನು ಎಬ್ಬಿಸುವ ತನಕವೂ ಬಾರಿಸುವ ಒಂದು ಗಂಟೆಯೂ ಈ ಹಾಸಿಗೆಯಲ್ಲಿ ಇದೆ. ನಮ್ಮಲ್ಲಿಯ ಸುಖಭೋಗಿಗಳು ಇಂಥ ಇಂಥ ಒಂದು ಹಾಸಿಗೆಯನ್ನು ತರಿಸಿ ಅದರ ಸುಖ ನೋಡಬಾರದೇ?

ನಿಮ್ಮ ಮಕ್ಕಳ ಆರೋಗ್ಯವೇ ಭಾರತದ ಭವಿಷ್ಯ

“ಮಗುವು ಮನುಷ್ಯನ ತಂದೆ.” ಒಂದು ಜನಾಂಗದ ಭವಿಷ್ಯವು ಆ ದೇಶದ ಈಗಿನ ಮಕ್ಕಳ ಆರೋಗ್ಯವನ್ನವಲಂಬಿಸಿದೆ. ನಿಶ್ಶಕ್ತರಾದ ಮತ್ತು ದುರ್ಬಲರಾದ ಮಕ್ಕಳು ಬಾಲಪ್ರಾಶದಿಂದ [illegible] ಬೆಳೆಯುವರು. ಅದರ ರುಚಿಕರ ವಾಸನೆ ಕಂಡರೆ ಮಕ್ಕಳಿಗೆ ಪ್ರೀತಿ.

ದೇಹವನ್ನು ಪುಷ್ಟಿಕರವಾಗಿ ಬೆಳೆಸುತ್ತದೆ

ಬಾಲಪ್ರಾಶ

ಮಕ್ಕಳಿಗೆ ಎಣೆಯಿಲ್ಲದ ಟಾನಿಕ್

ಎಲ್ಲಾ ಕೆಮಿಸ್ಟರಲ್ಲಿಯೂ ಎಲ್ಲಾ ಮೊಸ್ತ ಅಂಗಡಿಗಳಲ್ಲಿಯೂ ದೊರೆಯುತ್ತದೆ

NA 4

ಲೋಕಶಾಂತಿಗಾಗಿ ದೇವರೊಡನೆ ಮೊರೆಯಿಡುತ್ತಾರೆ!

ಪೋಪರ ಉಪವಾಸದ ಮಹತ್ವ!

ಲೋಕಶಾಂತಿಗಾಗಿ ದೇವರೊಡನೆ ಮೊರೆಯಿಡಲು ಕ್ರಿಶ್ಚಿಯನ್ ಜಗದ್ಗುರುಗಳಾದ ಪೋಪರು ಒಂದು ವಾರಗಳ ತನಕ ಉಪವಾಸವನ್ನು ಆಚರಿಸುವರೆಂಬ ವಿಶೇಷ ವಾರ್ತೆಯು ಭಾರತದಲ್ಲಿಯೂ ಬಹಳವಾಗಿ ಆತುರವನ್ನುಂಟು ಮಾಡಿದೆ. ಗಾಂಧಿಜಿ ಜನರ ಹೃದಯ ಪರಿವರ್ತನೆಗಾಗಿ ಆಗಾಗ ಉಪವಾಸವನ್ನು ಕೈಕೊಂಡು ಹಲವು ಪವಾಡಗಳನ್ನೇ ಸಾಧಿಸಿದವರು. ಗಾಂಧಿಜಿಯವರ ಈ ವಿಶ್ವಾಸವನ್ನು ಬಲ್ಲ ನಮ್ಮ ಜನರಿಗೆ ಪೋಪರ ಈ ಉದ್ದೇಶವನ್ನು ಅರಿತುಕೊಳ್ಳಲು ಏನೂ ಪ್ರಯಾಸವಾಗಲಾರದು. ಇತರರ ಹೃದಯವನ್ನು ಬದಲಾಯಿಸಲು ಮಹಾತ್ಮಾಜಿ ಯಾವಾಗಲೂ ಉಪವಾಸ ಕೈಕೊಳ್ಳುವರು. ಪೋಪರು ದೇವರೊಡನೆ ಶಾಂತಿಗಾಗಿ ಮೊರೆಯಿಡಲು ಮಾಡುವ ಈ ಉಪವಾಸ, ಇಂದು ಹತ್ಯಾಕಾಂಡಕ್ಕೆ ಕೈಯೆತ್ತಿ ನಿಂತಿರುವ ಯೂರೋಪಿನ ಕ್ರಿಶ್ಚಿಯನ್ ಜನರ ಹೃದಯಗಳನ್ನು ಪರಿವರ್ತಿಸಬಲ್ಲುದೆ?

ಕೆಥೊಲಿಕ್ ಕ್ರಿಸ್ತಿಯನ್ ದೇವಾಲಯಗಳ ಒಡೆಯರು ಮತ್ತು ರಕ್ಷಕರು ಪೋಪರು. ಹೀಗಾಗಿ ಅವರು ಪ್ರಪಂಚದ ಮೂನ್ನೂರ ಅರುವತು ಮಿಲಿಯ ಕ್ರಿಶ್ಚಿಯನ್ನರ ಮಾರ್ಗದರ್ಶಕರಾಗಿದ್ದಾರೆ. ಆದರೆ ಈ ಧಾರ್ಮಿಕ ಪ್ರಭಾವವಮಾತ್ರವಲ್ಲದೆ, ಇನ್ನೂ ಹೆಚ್ಚಿನ ಮಾಹಾತ್ಮ್ಯೆ ಅವರಿಗಿದೆ. ಜಗತ್ತಿನ ಪುರಾತನ ಸರಕಾರದ ಮೊದಲ ಅಧಿಪತಿ ಅವರು. 'ವೆಟಿಕನ್' ಇಂದು ಒಂದು ಪ್ರತ್ಯೇಕ ಆಡಳಿತವಾಗಿದ್ದು, ಅದರ ರಾಯಭಾರಿಗಳು ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿಯೂ ಹೋಗಿ ನೆಲೆನಿಂತಿರುವರು. ರಾಜಕಾರಣಗಳಲ್ಲಿಯೂ ಕೈಹಾಕಿರುವರು. ಕ್ರಿಸ್ತಶಕದ ಆದಿಯಿಂದಲೇ ಆರಂಭಿಸಿ ಯೂರೋಪಿನಲ್ಲಿ ಹಲವಾರು ಬದಲಾವಣೆಗಳು ಕಂಡುಬಂದರೂ, ಪೋಪರು ನಿರಂತರವಾಗಿ ಇಂದಿನ ವರೆಗೂ ಧಾರ್ಮಿಕ ಮತ್ತು ರಾಜಕೀಯ ಅಧಿಪತ್ಯವನ್ನು ಪಡೆದೇ ಇದ್ದಾರೆ.

○ ○ ○ ○

ಇಂದು ಕ್ರಿಶ್ಚಿಯನ್ ಜಗದ್ಗುರು ಸ್ಥಾನವನ್ನು ಹೊಂದಿದ ಧನವಂತರು ಯುಜೆನಿಯೋ ಪೆಸೆಲಿ ಎಂಬ ಹೆಸರಿನ ಹನ್ನೆರಡನೆಯ ಪೋಪ್ ಪಯುಸರು. ಇವರಿಗೆ "ಶಾಂತಿಪ್ರಿಯ"ರೆಂದು ಬಿರುದು ಪ್ರಸಿದ್ಧವಾಗಿದೆ. ಇವರಿಗೆ ಈಗ [illegible] ವಯಸ್ಸು. ಅವರ [illegible]

(Opus justitiae pax) ಎಂಬುದು ಅವರ ಆದರ್ಶವಾಕ್ಯವಾಗಿದೆ.

ಇವರು ರೋಮ್ ನಗರದಲ್ಲಿ ಹುಟ್ಟಿದರು. ಇವರ ತಂದೆ ಪ್ರಸಿದ್ಧ ವಕೀಲರಿದ್ದರು. ಇವರು ಯೋಗ್ಯ ವಿದ್ಯಾಭ್ಯಾಸ ಹೊಂದಿ, ಸೆಮಿನರಿಯನ್ನು ಸೇರಿ ಗುರುಗಳಾದರು. ಆ ಮೇಲೆ ಕೆಲವೇ ಕಾಲದಲ್ಲಿ ಇವರು ಬಿಶಪರಾಗಿ, ಬೇಗನೇ ಕಾರ್ಡಿನಲ್ ಕೂಡಾ ಆದರು.

೧೯೧೭ರಲ್ಲಿ ಇವರನ್ನು ಮ್ಯುನಿಕಿಗೆ ಕಳುಹಿಸಿದಾಗಲೇ ಅವರು ಜಗತ್ತಿನ ಶಾಂತಿಗಾಗಿ ಹಂಬಲಿಸುವ ತನ್ನ ಕಾರ್ಯಸಾಧನೆಯನ್ನು ಆರಂಭಿಸಿದ್ದರು. ಸುಮಾರು ಹನ್ನೆರಡು ವರ್ಷಗಳ ವರೆಗೆ ಇವರು ಜರ್ಮನಿಯಲ್ಲಿ ಕಾರ್ಡಿನಲ್ ಆಗಿದ್ದರು. ೧೯೨೯ರಲ್ಲಿ ಇವರು ಬರ್ಲಿನಿನಲ್ಲಿ ಪಾಪಲ್ ನುನಿಶಿಯೋ ಆಗಿ ಪ್ರಶ್ಯಿಯನ್ ಸ್ಟೇಟ್ ಮತ್ತು ವೆಟಿಕಾನ್‌ಗಳೊಳಗಿನ ಧಾರ್ಮಿಕ ಅಂತಃಕಲಹಗಳನ್ನು ನಿವಾರಿಸಲು ಒಂದು ಒಪ್ಪಂದ ಮಾಡಿದರು. ಮುಂದೆ ಕೆಲವೇ ಸಮಯದಲ್ಲಿ 'ಪಾಪಲ್ ಸೆಕ್ರೆಟರಿ ಒಫ್ ಸ್ಟೇಟ್' ಆಗಿ ಚುನಾಯಿತರಾದರು. ೧೯೩೩ರಂದು ನಾಜಿಗಳೊಡನೆಯೂ ಒಂದು ಒಪ್ಪಂದವನ್ನು ಮಾಡಿಕೊಂಡರು.

○ ○ ○ ○

ಜರ್ಮನಿಯಲ್ಲಿ ಮೂರರಲ್ಲಿ ಒಂದು ಪಾಲು ಜನರು ಕೆಥೊಲಿಕರಾಗಿದ್ದಾರೆ. ಹೀಗಾಗಿ ಆಗಾಗ ಪೋಪರು ಮತ್ತು ಹಿಟ್ಲರರೊಳಗೆ ಅನೇಕ ವಿಷಯಗಳಲ್ಲಿ ವಾದಗಳು ಉಂಟಾಗುತ್ತಿದ್ದವು. ಪೋಪರು ನಾಜೀ ತರುಣ ಸಂಘವನ್ನು ಖಂಡಿಸುತ್ತಿದ್ದರು; ಏಕೆಂದರೆ ಈ ತರುಣ ಸಂಘದ ಪ್ರಾಬಲ್ಯದಿಂದ ಧರ್ಮವು ನಿರ್ನಾಮವಾಗಬಹುದೆಂದು ಅವರು ನಂಬಿದ್ದರು. ಇದ್ದರಿಂದಾಗಿಯೇ ಹನ್ನೊಂದನೆಯ ಪೋಪ್ ಪಯುಸರು, ಪ್ರಪಂಚದ ಎಲ್ಲಾ ಬಿಶಪರಿಗೂ ನಾಜಿ ಚಳವಳವು ಅಧಾರ್ಮಿಕ ಚಳವಳವೆಂಬ ಒಂದು ಪ್ರಕಟಣೆಯನ್ನು ಹೊರಡಿಸಿದರು. ಇದನ್ನು ಜರ್ಮನಿಯಲ್ಲಿ ಹಿಟ್ಲರನು ಬಹಿಷ್ಕರಿಸಿದರೂ, ಗುಪ್ತವಾಗಿ ಮತ್ತು ವಿಶಾಲವಾಗಿ ಇದು ಜರ್ಮನಿಯಲ್ಲಿಯೂ ಎಲ್ಲೆಲ್ಲೂ ಹರಡಿಯೇ ಬಿಟ್ಟಿತು.

ಆಸ್ಟ್ರೀಲಿಯ, ಚೆಕೊಸ್ಲವೇಕಿಯ, ಪೋಲೆಂಡ್ ಈ ಎಲ್ಲಾ ದೇಶಗಳಲ್ಲಿಯೂ ಬಹು ಮಂದಿ ಜನರು ಕೆಥೊಲಿಕರೇ ಆಗಿದ್ದಾರೆ. ಹೀಗಾಗಿ ಈ ರಾಜ್ಯಗಳ ಮೇಲೆ ಹಿಟ್ಲರ್ ಮಾಡಿದ ಆಘಾತ ಆಕ್ರಮಣಗಳು ಪೋಪರಿಗೆ ಬಹಳ ನೋವನ್ನೇ ಉಂಟುಮಾಡಿರಬೇಕು. ಪೋಪರಿಗೆ ಜರ್ಮನರು ಕೊಡುವ ಪೀಡೆಯನ್ನು ಕೇಳಿ ಪೋಪರು ಒಮ್ಮೆ ಬಹಳ ಕಳವಳದಿಂದ ಮಾತನಾಡಿದರು.

○ ○ ○ ○

ಇಟಲಿ ಯುದ್ಧಕ್ಕಿಳಿದ ಸಮಯ ಪೋಪರ ಅಸಮಧಾನ ಹೆಚ್ಚಾಯಿತು. ಪೋಪರು ಇಟಲಿಯನರೇ. ಆದರೂ ಮುಸಲನಿಯ ವರ್ತನೆಯನ್ನು ಅವರು ಅನುಮತಿಸಲಿಲ್ಲ. ಇಟಲಿಯಲ್ಲಿ ಸಾಮಾನ್ಯವಾಗಿ ಸಂಪೂರ್ಣ ಜನಸಂಖ್ಯೆಯೇ ಕೆಥೊಲಿಕರಾಗಿರುವಾಗ, ಪೋಪರದೊಂದು ಮಾತು ಅವರ ಮೇಲೆ ಯಾವ ಪ್ರಭಾವವನ್ನುಂಟುಮಾಡಬಹುದೆಂದು ನಾವು ಯೋಚಿಸಬಹುದಾಗಿದೆ. ಇಂದು ತಮ್ಮಿಂದ ತಾವೇ ಒಂದು ಸ್ವತಂತ್ರ ಆಡಳಿತದಲ್ಲಿರುವ ಪೋಪರು ವೆಟಿಕನ್‌ನ ಹೊರಗಿನ ವಿಷಯದಲ್ಲಿ ಯಾವುದೇ ಅಭಿಪ್ರಾಯವನ್ನಾದರೂ ಹೇಳದೆ ಸುಮ್ಮನಿರುವುದೂ ಸಾಧ್ಯವಾಗಿಲ್ಲ. ಸುಮಾರು ೩೮ ರಾಷ್ಟ್ರಗಳ ಪ್ರತಿನಿಧಿ ರಾಯಭಾರಿಗಳು ಅಲ್ಲಿ ಇರುವರು. ಜಗತ್ತಿನ ಎಲ್ಲಾ ರಾಷ್ಟ್ರಗಳ ಜನತೆಯ ಮೇಲೂ ಪೋಪರಿಗೆ ಹಿಡಿತವಿದೆ. ಹಲವು ಸಲ ಜಗತ್ತಿನ ರಾಜಕಾರಣದ ಮಧ್ಯಸ್ತಿಕೆ ಮಾಡಲು ಪೋಪರನ್ನು ಕೇಳಿಕೊಂಡದ್ದೂ ಇತ್ತು. ಆದರೆ ಅವರು ತಮ್ಮ ಧಾರ್ಮಿಕ ಕಾರ್ಯಗಳ ಕಡೆಗೆ ಹೆಚ್ಚಿನ ಗಮನಕೊಡಬೇಕಾಗಿದ್ದುದರಿಂದ, ಅಂತರ್‌ರಾಷ್ಟ್ರೀಯ ರಾಜಕಾರಣದಲ್ಲಿ ಭಾಗವಹಿಸಲು ತಿರಸ್ಕರಿಸಿದ್ದರು.

○ ○ ○ ○

ಇಂದಿನ ಪೋಪರು ಒಳ್ಳೆಯ ವಿದ್ವಾಂಸರಾಗಿದ್ದಾರೆ. ಹಲವು ಭಾಷೆಗಳನ್ನು ಚೆನ್ನಾಗಿ ಬಲ್ಲವರಿದ್ದಾರೆ. ಒಳ್ಳೆಯ ಕುಶಲ ಉಪದೇಶಿಯಾಗಿದ್ದಾರೆ. ಅವರು ಯೂರೋಪಿನ ರಾಷ್ಟ್ರಗಳನ್ನು ಸಂಚರಿಸಿ ಬಹಳ ಅನುಭವವನ್ನೂ ಗಳಿಸಿಕೊಂಡಿದ್ದಾರೆ.

○ ○ ○ ○

ಹಿಂದಕ್ಕೆ, ಪೋಪರು ಇಟಲಿಯನ್ ಸರಕಾರದ ಬಂದಿಗಳಂತೆ ಇದ್ದರು. ಏಕೆಂದರೆ ಆಗ ಇಟಲಿ ಸರಕಾರವು ವೆಟಿಕನ್‌ನ ಆಡಳಿತದ ಪ್ರಭಾವವನ್ನು ಒಪ್ಪಿರಲಿಲ್ಲ.

ಆದರೆ ೧೯೨೯ರ ಕರಾರಿನಂತೆ ಸರಕಾರಕ್ಕೂ ಪೋಪರಿಗೂ ಇರುವ ಈ ಭೇದವು ತಪ್ಪಿದೆ.

○ ○ ○ ○

ಇಂದು ಪೋಪರಿಗೂ ಮುಸಲ್ಲನಿಗೂ ಹಲವು ಸಂಗತಿಗಳಲ್ಲಿ ಭಿನ್ನಾಭಿಪ್ರಾಯವುಂಟು. ಫಾಸಿಸಂ ಮತ್ತು ನಾಜಿಸಂಗಳು ಕೆಥೊಲಿಕ್ ಧರ್ಮಕ್ಕೆ ವಿರುದ್ಧವಾದವುಗಳು. ಆದರೆ ಇಂದು ಹಿಟ್ಲರ್ ಮುಸಲನಿಗಳನ್ನು ಎದುರಾಡುವುದು ಅಸಾಧ್ಯವೆಂದ ಪೋಪರೂ ತಿಳಿದಿರುವರು. ಆದಾಗ್ಯೂ, ಇಂದು ಅವರ ಉಳಿದ ಒಂದೇ ಒಂದು ಅಸ್ತ್ರವೆಂದರೆ ದೇವರೊಡನೆ ಪ್ರಾರ್ಥನೆ. ಅದೇ ಅಸ್ತ್ರವನ್ನು ಇಂದು ಹೊರತೆಗೆದಿದ್ದಾರೆ. ಪೋಪರ ಉಪವಾಸದಿಂದ ಸರ್ವಶಕ್ತನ ಹೃದಯವು ಕರಗಬಹುದೆ?

○ ○ ○ ○

ಇದರ ಫಲಿತಾಂಶ ಏನೇ ಇರಲಿ ಪೋಪರ ಇಂದಿನ ಈ ನಿರ್ಧಾರವನ್ನು ಜಗತ್ತಿನ ಶಾಂತಿಪ್ರಿಯರೆಲ್ಲರೂ ಕೊಂಡಾಡಿದ್ದಾರೆ. ಮಹಾತ್ಮಾಜಿಯವರ ಉಪವಾಸದ ಉದ್ದೇಶವನ್ನು ಅರ್ಥ ಮಾಡದ ಹಲವು ಕ್ರಿಶ್ಚಿಯನರಿಗೆ ಇದೊಂದು ಉಪವಾಸದ ಅರ್ಥವನ್ನು ತಿಳಿಕೊಳ್ಳುವ ಅಪೂರ್ವ ಸಂದರ್ಭವಾಗಿದೆ. ಪೋಪರು, ಕ್ರಿಶ್ಚಿಯನ್ ಜಗದ್ಗುರುಗಳು, ಇಂದು ಜಗತ್ತಿನ ಶಾಂತಿಗಾಗಿ ದೇವರಲ್ಲಿ ಮೊರೆಯಿಡುತ್ತಿದ್ದಾರೆ.

ಮೂರು ವಾಚುಗಳು ಮತ್ತು 895 ಶೃಂಗಾರ ಸಾಮಗ್ರಿಗಳು
ರೂ. 1—4—0ಕ್ಕೆ ದೊರಕುವುವು

ನಮ್ಮ ಸುಗಂಧಕರವಾದ ಒಟ್ಟೋ ರೋಸ್‌ನ 2 ಬಾಟ್ಲಿಗಳನ್ನು ಒಮ್ಮೆಗೇ 1—4—0 ಕೊಟ್ಟು ಪಡೆಕೊಳ್ಳುವವರಿಗೆ ಒಂದು ಬೇಂಡ್ ಸಹಿತವಾದ ಬಂಗಾರದಗಿಲ್ಟಿನ ಡಮ್ಮಿ ರಿಸ್ಟ್‌ವಾಚ್ ಒಂದು ರೈಲ್ವೆ ಟೈಮ್ ಡಮ್ಮಿ ಪೊಕೆಟ್ ವಾಚ್, ಒಂದು ಸೇಫ್ಟೀ ರೇಜರ್ ಒಂದು ಬಾಚಣಿಗೆ, ಒಂದು ಶೇವಿಂಗ್ ಸೋಪು, ಒಂದು ಶೇವಿಂಗ್ ಬ್ರಷ್, ಒಂದು ಪಾಕೆಟ್ ಪೌಡರು, ಒಂದು ಕ್ಲಿಪ್ ಸಹಿತವಾದ ಪೆನ್ಸಿಲು, ಒಂದು ಸಿಗರೇಟ್ ಕೇಸ್, ಒಂದು ಸಿಗರೇಟ್ ಲೈಟರ್, ಒಂದು ಟವಲು, ಒಂದು ಉಂಗುರ, ಒಂದು [illegible] ಅಥವಾ ಒಂದು ಭದ್ರವಾದ 10 ವರ್ಷ ಗ್ಯಾರಂಟಿಯುಳ್ಳ ಟೈಂಪೀಸ್ ಕೊಡಲ್ಪಡುವುದು. ಪ್ಯಾಕಿಂಗ್ ಖರ್ಚು 12 ಆಣೆ ಹೆಚ್ಚಿಗೆ ಕೊಡಬೇಕಾಗುವುದು.

[illegible] The FRENCH WATCH Co.
Post Box No. 12216, CALCUTTA (S. B)

★ ಸಿನೇಮಾ ವೃತ್ತಿ ★

ಪಗ್ನೀಸರ ಮುಂದಿನ ಅಭಿನಯಕ್ಕೆ ರೂ. ೨೫ ಸಾವಿರ

ಪ್ರಸಿದ್ಧ ಭಕ್ತನಟರಾದ ಶ್ರೀ ವಿಷ್ಣು ಪಂತ ಪಗ್ನೀಸರು ಸಿರ್ಕೊ ಪ್ರೊಡಕ್ಷನ್ಸಿನವರ ಮುಂದಿನ ಚಿತ್ರವಾದ ಭಕ್ತ ವಿಧುರದಲ್ಲಿ ಅಭಿನಯಿಸುವರಷ್ಟೆ ಈ ಬಗ್ಗೆ ಅವರಿಗೆ ರೂ ೨೫ ಸಾವಿರಗಳ ಕರಾರು ಆಗಿದೆಯೆಂದು ತಿಳಿದು ಬರುತ್ತದೆ ಸ್ತ್ರೀ ಪಾತ್ರವನ್ನು ದುರ್ಗಾ ಖೋಟೆಯವರು ವಹಿಸುವುದೆಂದು ಸಾಧಾರಣ ವಾರ್ತೆ ಇದೆ

ಉಮರ್ ಖಯ್ಯಾಮಿನಲ್ಲಿ ವಸಂತಿ

ಪ್ರಭಾತದವರು ಮುಂದೆ ತಯಾರಿಸಲು ನಿಶ್ಚಯಿಸಿರುವ 'ಉಮರ್ ಖಯ್ಯಾಂ' ಚಿತ್ರದಲ್ಲಿ ಸುಪ್ರಸಿದ್ಧ ಬಾಲಿಕಾನಟಿ ವಸಂತಿಯನ್ನು ಅಭಿನಯಕ್ಕಾಗಿ ನಿರ್ದೇಶಕ ಶಾಂತಾರಾಮರು ನಿಯೋಗಿಸುವರೆಂದು ತಿಳಿದಿದೆ.

ಸಿರ್ಕೊ ಕಂಪೆನಿಯವರ ಗೀಳಿಗರ ಕಾರ್ಯಕ್ರಮ

ಸಿರ್ಕೊ ಕಂಪೆನಿಯವರು ಗೀಳಿಗನೆಯ ವರ್ಷದಲ್ಲಿ ಐದು ಚಿತ್ರಗಳನ್ನು ತಯಾರಿಸುವರೆಂದು ಗೊತ್ತಾಗಿದೆ (೧) ಭಕ್ತ ವಿಧುರ (ಪಗ್ನೀಸ್ ಮತ್ತು ದುರ್ಗಾ ಖೋಟೆಯವರ ಅಭಿನಯ) (೨) ಜವಾನ್ನರ್ (ಚಂದ್ರಮೋಹನ್ ಮತ್ತು ದುರ್ಗಾ ಖೋಟೆಯವರ ಅಭಿನಯ) (೩) ತಾಜ್ ಮಹಾಲ್ (ನಾಸೀಮ್ ಮತ್ತು ಚಂದ್ರಮೋಹನರ ಅಭಿನಯದಿಂದ) (೪) ಶಕುಂತಲಾ (ಶಾಂತಾ ಆಪ್ಟೆಯ ಅಭಿನಯ) (೫) ಮಹಾತ್ಮಾ ಅಕಬರ (ಚಂದ್ರಮೋಹನನ ಅಭಿನಯ)

'ಬಂಧನ್' ಚಿತ್ರಕ್ಕೆ ಮಹಾ ಪ್ರಶಸ್ತಿ

ಲಾಹೋರಿನಲ್ಲಿ ಹದಿಮೂರು ವಾರಗಳ ವರೆಗೆ ಬಂಧನ ಚಿತ್ರವು ನಿರಂತರವಾಗಿ ಪ್ರದರ್ಶಿಸಲ್ಪಟ್ಟಿತು, ಅಲ್ಲಿನ ಚೀಫ್ ಜಸ್ಟಿಸರಾದ ಸರ್ ಡೊಗ್ಲಾಸ್ ಯಂಗ್ ಇವರು ಈ ಚಿತ್ರವನ್ನು ನೋಡಲು ಬಂದಿದ್ದರು ಅವರು ಈ ಚಿತ್ರದ ವಿಷಯ ಅತ್ಯಾನಂದಿತರಾಗಿ ಬಹಳ ಪ್ರಶಂಸಾತ್ಮಕವಾದ ಮಾತುಗಳನ್ನು ಹೇಳಿದರು

ಲಾಹೋರ್ ಸ್ಟುಡಿಯೋದಲ್ಲಿ ಕರ್ದಾರ್

ನಿರ್ದೇಶಕ ಕರ್ದಾರರು ಮುಂದಿನ ಚಿತ್ರವಾದ 'ಸ್ವಾಮಿ' ಚಿತ್ರದ ತಯಾರಿಕೆಗಾಗಿ ಲಾಹೋರ್ ಸ್ಟುಡಿಯೋವನ್ನು ಸಂದರ್ಶಿಸಿದರು. ಈ ಚಿತ್ರವು ಪಂಜಾಬಿನ ಪ್ರಸಿದ್ಧ ನಾಟಕಕಾರರಾದ ಸಯ್ಯದ್ ಇಮ್ತಿಯಾಜ್ ಅಲಿತಾಜರಿಂದ ಬರೆಯಲ್ಪಟ್ಟಿದೆ

ನಾಸೀಮಳ ಸ್ಥಾನಕ್ಕೆ ಶೋಭನಳೆ?

ನಾಸೀಮಳು ಮಿನರ್ವಾ ಕಂಪೆನಿಯನ್ನು ಬಿಟ್ಟು ಹೋದಳು ಎಂಬಷ್ಟೇ ಆಶ್ಚರ್ಯಕರವಾಗಿ ಶೋಭನಳು ಮಿನರ್ವಾವನ್ನು ಸೇರಿದಳು ಎಂಬ ವಾರ್ತೆಯೂ ಬಂದಿದೆ ಹೀಗಿದ್ದರೂ ಈ ಎರಡು ಸುದ್ದಿಗಳೂ ಸತ್ಯವೇ ಎಂಬುದರಲ್ಲಿ ಸಂಶಯವಿಲ್ಲ ಮಿನರ್ವಾದವರ ಸಿಕಂದರ್ ಚಿತ್ರದಲ್ಲಿ ಮೊದಲು ನಾಸೀಮಳಿಗೆಂದು ಗೊತ್ತುಪಡಿಸಿದ ಪಾತ್ರವನ್ನು ಶೋಭನಳೇ ಅಭಿನಯಿಸಲಿರುವಳೆಂದೂ ತಿಳಿದುಬರುತ್ತದೆ

ಚಾರ್ಲಿಗೆ ರಾಜಮನ್ನಣೆ ದೊರಕಿತು!

ಜುನಾಗರಿನ ಮಹಾರಾಜಾ ನವಾಬ್ ಸಾಹೇಬರು 'ಮುಸಾಫಿರ್' ಚಿತ್ರದಲ್ಲಿನ ಚಾರ್ಲಿಯ ಅತ್ಯಂತ ಆಕರ್ಷಣೀಯ ನಟನಾ ಸಾಮರ್ಥ್ಯವನ್ನು ಕಂಡು ಸಂತಸಗೊಂಡು ಇದ್ದಾದ ದಿನ ಅವರು ಚಾರ್ಲಿಯನ್ನು ಅರಮನೆಗೆ ಆಮಂತ್ರಿಸಿದರು ಚಾರ್ಲಿಯನ್ನು ಅಭಿನಂದಿಸುವ ಸಲುವಾಗಿ ನವಾಬ್ ಸಾಹೇಬರು ಬಹಳ ಸಂಭ್ರಮದ ಸ್ವಾಗತ ಸತ್ಕಾರ ಕೂಟಗಳನ್ನು ಸಾರ್ವಜನಿಕವಾಗಿ ಏರ್ಪಡಿಸಿದ್ದರು

ಬಕ್ರಿದ್ ಸಮಯ ಮೇರಾರಾಜ್

ಪರಮೌಂಟಿನವರು ಆಕ್ಯಾಧುನಿಕ ಚಿತ್ರ ಮೇರಾ ರಾಜ್ ಚಿತ್ರವನ್ನು ಉತ್ತರ ಭಾರತದ ಹಲವು ಪ್ರಸಿದ್ಧ ನಗರಗಳಲ್ಲಿ ಬಕ್ರಿದ್ ಹಬ್ಬದ ಸಮಯ ಪ್ರದರ್ಶನಕ್ಕಾಗಿ ಈಗಾಗಲೇ ಏರ್ಪಾಡುಗಳು ಆಗಿವೆಯೆಂದು ತಿಳಿದಿದೆ.

ಲೀಲಾದೇವಿ

ರಣಜಿತಿನ 'ಮಿರ್ಜಾ ಸಹಿಬಾನ್'ನಲ್ಲಿ ಅಭಿನಯಿಸಿದ ಲೀಲಾದೇವಿಯು ನಾರ್ದರ್ನ್ ಇಂಡಿಯಾ ಮೂವಿಟೋನ್ ...

ಚರ್ಮರೋಗಗಳು ಇಂದ್ರಜಾಲದಂತೆ ಮಾಯವಾಗುವುದು

ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗುಣದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲುರುಕನ್ನು ಖಂಡಿತ ಗುಣಪಡಿಸುವುದು ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಕುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು

ಕಜ್ಜಿ ಕರ ತರಿಕಜ್ಜಿ ಗಾಯ ಪಟ್ಟು, ಪರಚ ವಿಕೆ, ಸುಟ್ಟಗಾಯ, ಮುದ್ದಣ ಮುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಸ್ಕೃತ್' ಎಂಬ ಮುಂದಿನ ಚಿತ್ರದಲ್ಲಿ ಅಭಿನಯಿಸುವಳೆಂದು ತಿಳಿದುಬರುತ್ತದೆ

ಮುಮ್ತಾಜ್ ಶಾಂತಿ

ಈಕೆ ಒಂದು ಪಂಜಾಬ್ ಕಂಪೆನಿಯವರ 'ಚಾ ಚೆ-ದಿ-ಕುಲಿ' ಎಂಬ ಚಿತ್ರದಲ್ಲಿ ಅಭಿನಯಿಸುವ ಸಲುವಾಗಿ ಕಲ್ಕತ್ತಕ್ಕೆ ಹೊರಟಿರುವಳು ಆ ಚಿತ್ರವು ನ್ಯೂಥಿಯೇಟರ್ಸ್ ಸ್ಟುಡಿಯೋದಲ್ಲಿ ತಯಾರಾಗುವುದು.

ನಾಸೀಮಳು ಸಿರ್ಕೋದಲ್ಲಿ

ಮಿನರ್ವಾ ನಟಿ ನಾಸೀಮಳು, ಈಗ ಸಿರ್ಕೋ ಪ್ರೊಡಕ್ಷನನ್ನು ತಿಂಗಳು ೩,೪೦೦ ರೂಪಾಯಿ ಸಂಬಳದಲ್ಲಿ ಸೇರಿರುವಳು. ಚಂದ್ರಮೋಹನನೊಡನೆ ಆಕೆ 'ತಾಜ್ ಮಹಾಲಿ'ನಲ್ಲಿ ಅಭಿನಯಿಸುವಳು ಮಜಹ್ಹರ್ ಖಾನನೂ ಸಿರ್ಕೋ ಕಂಪನಿಯನ್ನೇ ಸೇರಿರುವುದಾಗಿ ತಿಳಿದುಬಂದಿದೆ

ಸುರೇಂದ್ರ ಮತ್ತು ಸಿತಾರಾ

ಕರ್ದಾರರು ಪ್ರದರ್ಶಿಸುವ 'ಸ್ವಾಮಿ' ಚಿತ್ರದಲ್ಲಿ ಸಿತಾರಳೊಡನೆ ಸುರೇಂದ್ರನು ಮುಖ್ಯ ಪಾತ್ರವನ್ನು ವಹಿಸುವನೆಂದು ಗೊತ್ತಾಗಿದೆ.

ಮಿನರ್ವಾದಲ್ಲಿ ಸಿಂಹ

ಶ್ರೀ ಕೆ. ಎನ್. ಸಿಂಹ ಎಂಬ ಪ್ರಸಿದ್ಧ ...

ನಟನು ಈಗ ಮಿನರ್ವಾ ಮೂವಿಟೋನನ್ನು ಸೇರಿದ್ದು ಮುಂಬರುವ 'ಮಹಾತ್ಮಾ ಅಕಬರ' ಚಿತ್ರದಲ್ಲಿ ಪ್ರಮುಖ ಪಾತ್ರವಹಿಸುವುದಾಗಿಯೂ ಸುದ್ದಿಯಿದೆ

ಜಾಲ್ ಮರ್ಚೆಂಟನೊಡನೆ ಸಬಿತಾ

'ಸುದಾಮ' ಕಂಪೆನಿಯವರಿಗಾಗಿ ಸರ್ವೋತ್ತಮ ಬಾದಾಮಿಯವರು ಸಬಿತಾ ದೇವಿಯ ಇನ್ನೊಂದು ಚಿತ್ರವನ್ನು ತಯಾರಿಸಲಿರುವರೆಂದು ಸುದ್ದಿಯಿದೆ ಈ ಸಲ ಸಬಿತಾದೇವಿಯೊಡನೆ ಅಭಿನಯಿಸಲು ಅವರು ಜಾಲ್ ಮರ್ಚೆಂಟನನ್ನು ಆರಿಸಿರುವರಂತೆ ಅರುಣ ಮತ್ತು ~~ಶೋಭನಾ ಸಮರ್ಥರೂ ಇದರಲ್ಲಿ~~ ಅಭಿನಯಿಸುವರಂತೆ.

ಅನುರಾಧಾ

ಸಿರ್ಕೊ ಪ್ರೊಡಕ್ಷನಿನವರ ಅನುರಾಧಾ ಚಿತ್ರವು ಕಳೆದ ವಾರ ಪ್ರದರ್ಶಿತವಾಯಿತು ಶ್ರೀ ಮೋಹನ ಸಿಂಹರ ನಿರ್ದೇಶಕತ್ವ. ಇದು ಕಾಲೇಜ್ ಹುಡುಗಿಯೊಬ್ಬಳ ಕಥೆ, ಪೂರ್ಣಿಮಾ ಬೆನರ್ಜಿ, ತ್ರಿಲೋಕ ಕಪೂರ ಇವರು ಅಭಿನಯಿಸುವರು.

ಪುಸ್ತಕಾವಲೋಕನ: ರಾಗಿಣಿ

ಕನ್ನಡದಲ್ಲಿ ಭಾವಗೀತೆಗಳು ಇಂದು ... ಆನಂದಿಸುವಷ್ಟು, ಉಂಟಾಗಿವೆ. ಹೊಸ ಕವಿಗಳ ಹೊಸ ದೃಷ್ಟಿ ಇವು ಈ ಭಾವಗೀತೆಗಳು. ನೂತನ ಕವಿಗಳೊಬ್ಬರು, ತುಮಕೂರಿನ ಶ್ರೀ. ಎಸ್. ವಿ. ಪರಮೇಶ್ವರ ಭಟ್ಟರು 'ರಾಗಿಣಿ' ಎಂಬೀ ಭಾವಗೀತೆಗಳ ಹಾಗೂ ಇತರ ಕೆಲವು ಸುಂದರ ಕವಿತೆಗಳ ಸಂಗ್ರಹ ಪುಸ್ತಕವೊಂದನ್ನು ಬರೆದು ಅಂದವಾಗಿ ಮುದ್ರಿಸಿ ಪ್ರಕಾಶಪಡಿಸಿದ್ದಾರೆ. ತನ್ನ "ಮಲೆಯ ಋಣಗದಮ್ಮನಿಗಾಗಿ, ಆ ಮಲೆಯ ನೆನಹಿಗಾಗಿ ಮೆಚ್ಚಿ", ಕವಿಗಳ ಈ ಹೊಸ ಕಾವ್ಯಕ್ಕೆ ಹಿರಿಯ ಕವಿ ಶ್ರೀ. ಪುಟ್ಟಪ್ಪನವರು ಪದ್ಯರೂಪದಿಂದಲೇ ಒಂದು ಮುನ್ನುಡಿ ಬರೆದು ಬೆನ್ನು ತಟ್ಟಿದ್ದಾರೆ. 'ನವ ಗಾನಕೆ ನಾವೆ ಮೊದಲಿಗರೆಂ ಬ್ಬುಬ್ಬು ಗುರಿ'ಯೆಂದು ಧೈರ್ಯ ಹೇಳಿ, ಅನ್ಯರ ಮೆಚ್ಚಿಗಾಗಿ ಕೋಟಲೆಗೊಳಲೇಕೆಂದು ಸಮಾಧಾನಿಸಿ, ಕೊನೆಗೆ 'ತಮ್ಮ'ನ ಈ ಪೀಠಿಯನ್ನು ಕುರಿತು 'ಪೀಠಿಯ ಮುಂದೆ ವೇಣು; ವೇಣುವಿನ ಮುಂದೆ ವೀಣೆ; ಆ ಪದವಿಗಿಂ ಮಿಗಿಲಪ್ಪ ಪದವಿಯುಂ, ಕೀರ್ತಿಯುಂ, ಪುಣ್ಯಮುಂ, ಶಾಂತಿಯುಂ ಕಾಣೆನಾಂ' ಎಂದು ನಿರ್ಧಾರಪೂರ್ವಕ ನುಡಿದಿದ್ದಾರೆ. ಹೀಗೆ ಕವಿತೆಗಳನ್ನು ಬರೆದು ಪ್ರಕಾಶಿಸಿದ ಕಿರಿಯರೂ, ಅವರನ್ನು ಬೆನ್ನು ತಟ್ಟಿದ ಹಿರಿಯರೂ ಒಂದು ಬಗೆಯ ಆತ್ಮಸಂತೋಷದಿಂದ, ಹುಮ್ಮಸಿನಿಂದ ಈ ಗ್ರಂಥವನ್ನು ಕನ್ನಡಿಗರ ಮುಂದೆ ಇಟ್ಟಿದ್ದಾರೆ; ಕನ್ನಡ ಸರಸ್ವತಿಗೆ ಹೊಸತೊಂದು ಕಾಣಿಕೆ ಕೊಟ್ಟಿದ್ದಾರೆ.

ಕವಿಗಳು ವಿಸ್ತಾರವಾದೊಂದು 'ನನ್ನ ನುಡಿ'ಯನ್ನು ಬರೆದು ಅದರಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಭಾವಗೀತೆಗಳ ವಿಚಾರ ಲಾಕ್ಷಣಿಕ ಮತ್ತು ವ್ಯಾವಹಾರಿಕ ಸಿದ್ಧಾಂತಗಳನ್ನು ಒಂದುಗೂಡಿಸಿ ಒಂದು ಒಳ್ಳೆಯ ಪ್ರಬಂಧವನ್ನೇ ಬರೆದಿರುವರು. ಕಳೆದ ಹದಿನೈದು ವರ್ಷಗಳಿಂದ ಬರೆದ ಹಲವು ಕವಿತೆಗಳಲ್ಲಿ ಕೆಲವುಗಳ ಸಂಗ್ರಹವಿದಾಗಿದ್ದು, ಮಿಕ್ಕವುಗಳನ್ನು ಇನ್ನೊಂದು ಗ್ರಂಥಕ್ಕೆ ಅಳವಡಿಸಿಕೊಂಡಿರುವುದಾಗಿ ಹೇಳಿರುವುದು ವಾಚಕರಿಗೆ ಶ್ರೀಯುತರ ಮುಂದಿನ ಕೃತಿಯ ನಿರೀಕ್ಷಣೆಯಲ್ಲಿ ಆಸಕ್ತಿಯನ್ನೇ ಸಹಜವಾಗಿ ಹುಟ್ಟಿಸುತ್ತದೆ. ಭಾವಗೀತೆಗಳು ಕನ್ನಡದಲ್ಲಿ ಹೊಸತಾದುದರಿಂದ, ಆಂಗ್ಲ ಕಾವ್ಯಲೋಕವನ್ನು ನೋಡದ ಕನ್ನಡಿಗರಿಗೆ ಕವಿಗಳು 'ನನ್ನ ನುಡಿ'ಯಲ್ಲಿ ಹೇಳಿದ ವಿಚಾರಗಳು ಮಾರ್ಗದರ್ಶಿಗಳಾಗಬಲ್ಲವು.

ಒಟ್ಟು ಇದರಲ್ಲಿ ಮೂವತ್ತು ಕವನಗಳಿವೆ. ಕೊನೆಯ 'ಮಾಚಯ್ಯ' ಕವನವನ್ನು ಬಿಟ್ಟರೆ ಮಿಕ್ಕವು ಸ್ವತಂತ್ರ ಕವಿತೆಗಳು. 'ನಾವು ನಲಿವ' 'ರಾಧಾಕೃಷ್ಣ' 'ಹಾಡು' 'ಬೈಗಿನ ತೆನುಗತ್ತಲೆ ಹೊತ್ತು' 'ರಾಗಿಣಿ' 'ಗಿ' 'ಒಂದು ಹಾಡು' ಕವನಗಳಲ್ಲಿ ಕವಿ ಪ್ರೇಮದ ಹಾಡು ... ಕವಿತೆಗಳನ್ನು ಬರೆ... ಹೆಚ್ಚಾಗಿ ಪ್ರೇಮ ಭಾವನೆಗೇ ಈ ಪದ್ಯ ಸಂಗ್ರಹದಲ್ಲಿ ಅವಕಾಶಕೊಟ್ಟಂತೆ ಕಂಡುಬರುತ್ತದೆ. 'ರಾಗಿಣಿ' ಎಂಬೀ ಪುಸ್ತಕದ ಹೆಸರೂ ಅದನ್ನೇ ಸಾರುತ್ತದೆ. 'ರಾಧಾಕೃಷ್ಣ' ಒಂದು ಉತ್ತಮ ಪ್ರೇಮ ಚಿತ್ರ. ಈ ಚಿತ್ರವನ್ನು ಸಂಸ್ಕೃತದ ಹಲವು ಕವಿಗಳು ಚಿತ್ರಿಸಿದ್ದಾರೆ; ಆದರೆ ಹೊಸ ಕವಿಯ ಕುಂಚದಲ್ಲಿ ಇದಕ್ಕೆ ಹೊಸತೇ ಒಂದು ಸೊಬಗು ಬಂದಿದೆ. 'ರಾಗಿಣಿ' ಸಂಸ್ಕೃತಾಲಂಕಾರಿಕರ ರಸಲೋಕದ ಒಬ್ಬಳು ನಾಯಿಕೆಯೆನ್ನಬಹುದು; ಕವಿಗಳು ಈ ಚಿತ್ರವನ್ನು ಎಲ್ಲಿಂದಲೇ ಆಯ್ದುಕೊಂಡಿರಲಿ ಇದೂ ನವೀನವೂ, ಮೋಹಕವೂ ಆಗಿದೆ. 'ಹಾಡು' ಬಹಳ ಚಿಕ್ಕ ಕವನ. ಆದರೆ ಪ್ರೇಮ ಜೀವನದಲ್ಲಿ ಇದಕ್ಕೆ, ಈ ಚಿಕ್ಕ ಮಾತಿಗೇ ಹೆಚ್ಚಿನ ಸ್ವಾರಸ್ಯವುಂಟು.

'ದೀಪಹಚ್ಚಾ' ಇದು ಈ ಸಂಗ್ರಹದಲ್ಲಿ ಅತ್ಯುತ್ತಮ ಕವಿತೆಯೆಂದು ನಮ್ಮ ಮತ. 'ಜೀವದೇವ'ರ ನಂಟು ಇದರಲ್ಲಿ ಬಹಳ ಮಧುರವಾಗಿ ಮೋಹಕವಾಗಿ ಭವ್ಯವಾಗಿ ರೂಪಿತವಾಗಿದೆ. 'ಭಾವಗೀತೆ'ಯಲ್ಲಿ ಕವಿಯು ನಿಸರ್ಗದ ಅನುಭವದಿಂದ ಪಡೆದ ಆನಂದವು ವರ್ಣಿತವಾಗಿದೆ. 'ಇನಿತು ಸೊಗವಿದೇಕೆಂದು' ಈ ಕವಿತೆ ಜೀವನದಲ್ಲಿ ಆಸೆ ಭರವಸೆಗಳನ್ನು ಹುಟ್ಟಿಸುವಂತಹುದು. 'ರಂಜದ ಹೂವು' ಒಂದು ಸಂಸಾರಿಕ ಜೀವನದ ಹಾಡು. ವೀ. ಸೀ. ಯವರ 'ನಮ್ಮ ಮನೆಯಂಗಳದಿ ಬೆಳದೊಂದು ಹೂವನ್ನು...' ಎಂಬೀ ಕವಿತೆಯು ನೆನಪಾಗುತ್ತದೆ. ಇವರ 'ನಮ್ಮ ಹೂವಿದು ಅಕ್ಕ ನೋಡಿ ಮುದ್ದಿಡಿದಳು.' ಈ ಪಂಕ್ತಿಗಳನ್ನೋದುವಾಗ. 'ದೇವರಾಯನ ದುರ್ಗ' 'ವಿಜಯ ನಗರದ ಗಿಣಿಗಳು' 'ಕಾಟಾಣಿ' 'ಮಾಚಯ್ಯ' ಇವು ದೀರ್ಘ ಕವನಗಳು. ಕೊನೆಯದು ಕಥಾಕವನ. ಹಳೆಯ ಆ ದುರ್ಗವನ್ನು ನೋಡಿ ಹಾಡಿದ ಕವಿಗಳು 'ಯಾವೂರ ರಾಯನೋ, ಏ ಬಗೆಯ ವೀರನೊ, ಚಾಮರಾಂತಕ ಮಾರಾಯನೇನಾದನೋ! ಮಾನವನ ಕೈಮೆಗೆ ಕಡೆಗಿಷ್ಟೆ ಲಭ್ಯವು, ಹೆಸರೊಂದೆ ನಿಲ್ಲುವುದು ನಿಶ್ಚಯವು' ಹೀಗೆಂದು ನಿಟ್ಟುಸಿರೆಳೆದಿದ್ದಾರೆ. 'ವಿಜಯ ನಗರದ ಗಿಣಿಗಳು' ಕನ್ನಡಿಗರ ಗತವೈಭವವನ್ನು ನೆನಪಿಗೆ ತಂದು ಕೊಡುತ್ತದೆ. 'ಎಂತು ಶಾಂತಿಯೊಳಂತೆ ಕ್ರಾಂತಿಯೊಳಾವೆ ಮೊದಲಿಗರಲ್ಲಿ ಕಾದಲು' ಎಂಬ ಮಾತಿನಲ್ಲಿ ಕನ್ನಡಿಗರ ಕೆಚ್ಚೆದೆಯ ನಿರ್ಧಾರ ಬೆರೆತಿದೆ. 'ಕಾಟಾಣಿ' ಕವಿಗಳನ್ನು ಮರುಳುಗೊಳಿಸಿದ ಹಕ್ಕಿ. ಇದರ ಕುರಿತು ಈ ಕವಿಗಳು ಒಳ್ಳೆಯ ಆವೇಶದಿಂದಲೇ ಹಾಡಿರುವರು. 'ಬಾಳಿನ ಧುರದಲ್ಲಿ ಜಯವಲ್ಲದೆ ಬೇರಾವುದು ನೀನೆನಗಿರುವಲ್ಲಿ' ಹೀಗೆಂದು ಕವಿ ಕಾಟಾಣಿಯನ್ನು 'ಮುಕ್ತಿಯ ಪಥ ತೋರುವ ಪಾರ್ಥ ಸಾರಥಿ'ಯಾಗಿ ಕೊಂಡಾಡಿದ್ದಾರೆ. ಕೊನೆಯದು 'ಮಾಚಯ್ಯ' Wordsworth ಕವಿಯ Michael ಕವನದ ಭಾವಾನುವಾದ. ಮೈಸೂರು ವಿಶ್ವವಿದ್ಯಾನಿಲಯದವರು ಇದಕ್ಕೆ ಸ್ವರ್ಣಪದಕ ಸಲ್ಲಿಸಿದ್ದಾರೆಂದರೆ ಅನುವಾದದ ಔಚಿತ್ಯ ಬೇರೆ ಬರೆಯಬೇಕಾಗಿಲ್ಲ.

ಕನ್ನಡ ಕಾವ್ಯ ಅಭ್ಯಾಸಿಗಳು ಅವಶ್ಯ ಓದಿನೋಡಬೇಕಾದ ಪುಸ್ತಕ. ಪುಸ್ತಕದ ಅಚ್ಚುಕಟ್ಟೂ ಆಕರ್ಷಣೀಯವಿದೆ.

—ಕಯ್ಯಾರ

ರಾಗಿಣಿ:—ಕವಿ:-ಶ್ರೀ. ಎಸ್. ವಿ. ಪರಮೇಶ್ವರ ಭಟ್ಟ, ತುಮಕೂರು. ಕ್ರೌನ್ 1/8 ಆಕಾರದ ... ಪುಟಗಳು, ಬೆಲೆ ಎಂಟಾಣೆ.

ಆಹ್ವಾನ

ಧನವು ಹೇರಳವಾಗಿ ಕೂಡಿಕೆಯಾಗಿದೆ.

ಅದುಕಾರಣ ಧನಸಧಾನ್ಯಗಳು (ಕೃಷಿ ಉತ್ಪತ್ತಿ) ಸರಕಾರೀ ಪತ್ರಗಳು ವಿಮಾಪಾಲಿಸಿ ಮೊದಲಾದುವುಗಳ ಜವಾಬ್ದಾರಿಯ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲಗಳು ಸಿಗುವುವು. ಈ ಸೌಕರ್ಯಗಳ ಕಡೆಗೆ ಗಮನವಿತ್ತು ಸಂದರ್ಭದ ಸದುಪಯೋಗ ಮಾಡಿಕೊಳ್ಳಿ.

ಕೋಟಿದ್ರವ್ಯದ ವಹಿವಾಟು — ಸ್ಥಾಪಿತ:—೧೯೦೬

ಕೆನರಾ ಬೇಂಕ್ ಲಿಮಿಟೆಡ್.
CANARA BANK LIMITED.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಧಿಯಾಗಿದ್ದ ಬ್ರಹ್ಮಚರ್ಯವು ಹಾನಿಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಿತರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬೆಳೆಯುವ ಮುಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ'ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೇಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ
— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು: ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜಂಟ್ಸ್: ಪಾಯ್ ಕಂಪೆನಿ, ಹಂಪನಕಟ್ಟಾ ಮಂಗಳೂರು

ಉಪಾಯವಿಲ್ಲದೆ ಯುದ್ಧ ಮಾಡಬೇಕಾಯಿತು.

ಜಗತ್ತಿಗೆ ಯುದ್ಧವೇ ಬೇಕಾಗಿತ್ತು!

ಚರ್ಚಿಲರು ಸಮರವನ್ನು ಆಹ್ವಾನಿಸಿದರು

ಜರ್ಮನ್ ಕೂಲಿಗಾರರ ಮುಂದೆ ಹಿಟ್ಲರನ ಗರ್ಜನೆ

'ಇಂದಿನ ಘೋರ ಹೋರಾಟದ ಉದ್ದೇಶವು ಬಹಳ ದೊಡ್ಡದಿದೆ. ಕೇವಲ ಒಂದು ರಾಷ್ಟ್ರದವರು ಮತ್ತೊಂದು ರಾಷ್ಟ್ರವನ್ನು ಗೆಲ್ಲಬೇಕೆಂಬ ಉದ್ದೇಶದಿಂದ ಈ ಯುದ್ಧ ಹೂಡಿರುವರೆಂದು ತಿಳಿಯಬೇಡಿರಿ. ಈ ಯುದ್ಧದ ರಹಸ್ಯ ಬೇರೆ ಇದೆ. ಇದು ಎರಡು—ಹೊಸ ಮತ್ತು—ಹಳೆಯ ಜಗತ್ತುಗಳ ನಡುವಿನ ಯುದ್ಧ" ಹೀಗೆಂದು ಹಿಟ್ಲರನು ಶಸ್ತ್ರಾಸ್ತ್ರಗಳ ಕಾರಖಾನೆಯ ಕೆಲಸಗಾರರ ಸಭೆಯಲ್ಲಿ ಪ್ರಚಂಡ ಭಾಷಣ ಮಾಡುತ್ತಾ ಹೇಳಿದನು.

ಹಿಟ್ಲರನು ಸುಮಾರು ಒಂದು ಗಂಟೆ ೩೪ ಮಿನಿಟುಗಳ ವರೆಗೆ ಮಾತನಾಡಿದನು.

ಜನರಲ್ ಕೀಟೆಲ್, ಗೋರಿಂಗ, ಗೋಬೆಲ್ಸ್, ರೇಡರ್, ಡಾ. ಲೇ. ಮೊದಲಾದ ಜರ್ಮನ್ ಮುಖಂಡರು ಸಭೆಯಲ್ಲಿ ಹಾಜರಿದ್ದರು.

ಹದಿನೈದು ಅಡಿ ಎತ್ತರದಲ್ಲಿ ಕಬ್ಬಿಣದಿಂದ ಕಟ್ಟಲ್ಪಟ್ಟ ವೇದಿಕೆಯ ಮೇಲೆ ನಿಂತು ಹಿಟ್ಲರನು ಈ ವೀರಗರ್ಜನೆ ಮಾಡಿದನು.

ಮೊದಲು ಹಿಟ್ಲರನು ಸಣ್ಣ ದನಿಯಲ್ಲಿ ಮಾತನಾಡುತ್ತಾ ಬ್ರಿಟಿಶ ಸಾಮ್ರಾಜ್ಯದ ಮೇಲೆ ನಡೆದಿರುವ ಮುತ್ತಿಗೆಯನ್ನು ವಿವರಿಸಿದನು. ಬಳಿಕ ತನ್ನ ದನಿಯನ್ನು ಏರಿಸುತ್ತಾ ಆರ್ಭಟಿಸಿದನು.

ಈ ಯುದ್ಧದ ಮೂಲ

ಇಂದಿನ ಯುದ್ಧದ ಕಾರಣವನ್ನು ವಿವರಿಸುತ್ತಾ 'ಜರ್ಮನರು ಒಕ್ಕಟ್ಟಾಗಿರುವದು ಇದೀ ಜಗತ್ತಿಗೆ ಬೇಡವಾಗಿತ್ತು. ಯಾಕೆಂದರೆ ಅಂಥ ಜರ್ಮನಿಯು ತನ್ನ ಜನರ ಬೇಡಿಕೆಗಳ ಸಲುವಾಗಿ ಹೋರಾಡುವದು ಖಂಡಿತವೆಂದು ಎಲ್ಲರಿಗೂ ಗೊತ್ತಿತ್ತು' ಎಂದನು.

ಇಂಗ್ಲೆಂಡಿನ ಪತ್ರಿಕೆಗಳು

ಅನಂತರ ಅವನು ಇಂಗ್ಲೆಂಡನ್ನು ಉಗ್ರವಾಗಿ ಟೀಕಿಸಿ, 'ಬ್ರಿಟಿಶ್ ಪತ್ರಿಕೆಗಳು ಅಧೋಗತಿಳಿದಿವೆ. ಸ್ವಾತಂತ್ರ್ಯವೆಂಬುದು ಅವಕ್ಕಿಲ್ಲ. ಗುಲಾಮರಂತೆ ಅವು ತಮ್ಮ ಮಾಲಕರು ಹೇಳಿದಂತೆ ಕುಣಿಯುತ್ತವೆ. ಇಂಥ ಪತ್ರಿಕೆಗಳು ಬ್ರಿಟಿಶ್ ಸಾಮ್ರಾಜ್ಯದ ಮೇಲೆ ದೊಡ್ಡ ವಿಪತ್ತು ಬಂದಿದೆಯೆಂದು ಅನ್ನುತ್ತವೆ. ಇದು ನಿಜ. ಯಾಕೆಂದರೆ ಸ್ವಲ್ಪವೇ ದಿನಗಳಲ್ಲಿ, ನಾವು ಜರ್ಮನಿಯಲ್ಲಿ ಪ್ರಸಾರ ಮಾಡಿದ ವಿಚಾರಗಳು ಬ್ರಿಟಿಶ ಜನರಲ್ಲಿಯೂ ಪ್ರಸಾರವಾಗುವವು.' ಎಂದನು.

ಯುದ್ಧದಲ್ಲಿ ಸೋತರೆ

'ಈ ಯುದ್ಧದಲ್ಲಿ ನಾವು ಸೋತರೆ,

ಜರ್ಮನ್ ಜನಾಂಗವು ನಿರ್ನಾಮವಾಗುವದು ಖಂಡಿತ. ಯುದ್ಧ ಪ್ರಾರಂಭವಾಗಬಾರದೆಂದು ನಾನು ಬಗೆ ಬಗೆಯಿಂದ ಪ್ರಯತ್ನಿಸಿದೆ. ಶಸ್ತ್ರಸನ್ಯಾಸದ ಸಲುವಾಗಿ ನಾನು ಎಷ್ಟು ಪ್ರಯತ್ನ ಪಟ್ಟೆನೆಂಬುದು ನಿಮಗೆಲ್ಲ ಗೊತ್ತಿದೆ. ಆದರೆ ಜಗತ್ತಿಗೆ ಶಾಂತಿ ಬೇಕಾಗಿರಲಿಲ್ಲ. ಯುದ್ಧವೇ ಬೇಕಾಗಿತ್ತು. ಆದ್ದರಿಂದ ನಾನು ಬೇರೆ ಉಪಾಯಕಾಣದೆ ಅದಕ್ಕೆ ಕೈಹಾಕಬೇಕಾಯಿತು? ಎಂದು ಹೇಳಿದನು.

ಚರ್ಚಿಲ್ಲರಿಗೆ ಯುದ್ಧ ಬೇಕಾಗಿತ್ತು

'ಬ್ರಿಟಿಶರಿಗಿಂತ ಕಡಿಮೆಯವರೆಂಬ ಭಾವನೆ ನಮ್ಮಲ್ಲಿದ್ದದ್ದರಿಂದ ಕೆಲವರು ಅನ್ನುತ್ತಾರೆ. ಇದು ಸುಳ್ಳು. ಯುದ್ಧವಾಗಬಾರದೆಂದು ನಾನು ಬಗೆ ಬಗೆಯಿಂದ ಪ್ರಯತ್ನಿಸಿದುದು ನಿಜ. ಆದರೆ ಚರ್ಚಿಲ್ಲರಿಗೆ ಯುದ್ಧ ಬೇಕಾಗಿತ್ತು. ಹತ್ತು ವರ್ಷಗಳಿಂದಲೂ ಅವರು ಯುದ್ಧ, ಯುದ್ಧ ಎಂದು ಕೂಗುತ್ತಿದ್ದರು. ಈಗ ಬಂದಿದೆ. ಅದರಲ್ಲಿ ಬೇಕಾದ ಹಾಗೆ ಭಾಗವಹಿಸಲಿ.

ಹಿಟ್ಲರನು ಮೇಲಿನ ಮಾತನ್ನು ಹೇಳಿದಾಗ ಜನರು ಜಯ ಜಯಕಾರಮಾಡಿದರು.

ಜರ್ಮನರ ಶಕ್ತಿ

'ಈಗ ಆಕ್ರಮಿಸಿಕೊಂಡಿರುವ ದೇಶಗಳಿಂದ ಜರ್ಮನಿಯನ್ನು ಹೊರದೂಡುವದು ಶಕ್ಯವಿಲ್ಲ. ಈ ಜಗತ್ತಿನಲ್ಲಿರುವ ಯಾವ ರಾಷ್ಟ್ರದ ಕೈಯಲ್ಲಿಯೂ ಇದು ಸಾಧ್ಯವಿಲ್ಲ. ಜರ್ಮನ ಸಿಪಾಯಿಯು ನಿಂತ ಸ್ಥಳದಲ್ಲಿ ಬೇರೆ ಸಿಪಾಯಿಗಳು ಕಾಲಿಡಲಾರರು; ಕಾಲಿಡುವದು ಶಕ್ಯವಿಲ್ಲ.

'ಆದರೆ ಕೇವಲ ದಾಳಿಗಳನ್ನು ಮಾಡಿ ನಾಶಗೊಳಿಸಬೇಕೆಂಬ ಒಣ ಹಂಬಲ ನಮಗಿಲ್ಲ. ಪ್ರಸಂಗ ಮತ್ತು ಅವಶ್ಯಕತೆಗಳನ್ನು ನೋಡಿಕೊಂಡು ನಾವು ನಮ್ಮ ಮಾರ್ಗ ನಿರ್ಧರಿಸುತ್ತೇವೆ.

'ಕೊನೆಯ ನಿರ್ಣಯ ಮಾಡುವ ಕಾಲ ಬೇಗನೆ ಬರುವದು. ಆ ದಿನವನ್ನು ನಾನು ಗೊತ್ತುಮಾಡುವೆನು. ಆದರೆ ಈ ಬಗ್ಗೆ ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ' ಎಂದನು.

ಇಂಗ್ಲಂಡನ್ನು ಉಗ್ರಟೀಕೆಮಾಡುತ್ತಾ ಅವನು ಯುರೋಪ ಖಂಡದಲ್ಲಿ ಕಾಲಿಡಲು ಬ್ರಿಟನ್ನು ಪ್ರಯತ್ನಿಸಿದರೆ ಅವರು ... ಜರ್ಮನರನ್ನೆದುರಿಸಬೇಕಾಗುವದೆಂದು ಎಚ್ಚರಿಸಿದನು.

ಇಟಲಿ ಗ್ರೀಸ್ ಯುದ್ಧ

"ಜರ್ಮನಿಯಂತೆ ಇಟಲಿಯೂ ತನ್ನ ಬೇಡಿಕೆಗಳ ಸಲುವಾಗಿ ಹೋರಾಡುತ್ತಿದೆ." ಎಂದು ಹಿಟ್ಲರನು ಅಂದನು.

ಯುದ್ಧ ಮುಗಿದ ಮೇಲೆ?

ತನ್ನ ಭಾಷಣವನ್ನು ಮುಗಿಸುತ್ತಾ ಹಿಟ್ಲರನು ಜರ್ಮನ ಕೆಲಸಗಾರರನ್ನು ರೈತರನ್ನು ಮತ್ತು ಹೆಂಗಸರನ್ನು ಅಭಿನಂದಿಸಿದನು. ಮತ್ತು, 'ಯುದ್ಧ ಮುಗಿದ ಮೇಲೆ ನಾವು ಹೊಸ ಕೆಲಸ ಕೈಕೊಳ್ಳಬೇಕಾಗುವುದು; ಯುದ್ಧಾಗುಂಡು ಮಾಡುವುದನ್ನು ನಿಲ್ಲಿಸಿ ಕೋಟ್ಯಂತರ ಜನರ ಶಾಂತಿಯ ಸಲುವಾಗಿ ವಿಧಾಯಕ ಕೆಲಸಮಾಡಬೇಕಾಗುವದು.' ಎಂದು ಹೇಳಿದನು.

NOTICE

The undersigned learns that the tile factory belonging to him and which is worth more than a lakh of rupees, and particularised herebelow has been put up for auction by Messrs. F. P. S. Albuquerque. M. S. Pais, & L. C. Pais, trustees, on sunday the 15—12—1940 at 10 a. m. at the Catholic Bank premises, Hampankatta, Mangalore fixing the upset price as Rs. 20.000 together with a clause in the notice that if there is an offer for the property, of not less than Rs. 30,000 before the date fixed above they will sell the property by private sale They have also included in the sale notice that the good-will and trade-marks of P. Albuquerque & Sons will also be sold. The trust deed is itself under dispute. I have not transferred or disposed of otherwise the goodwill and trade-marks of P. Albuquerque and Sons either to the above-mentioned persons or to anybody till now. The trustees are also working to the detriment of the interests of the undersigned and his co-debtors and separate action will be taken against them.

Those who intend to buy or bid will please note the above contentions.

(Sd) P. F. B. Albuquerque.
Dated 11th December, 1940.
Light-house View
Bolar, Mangalore.

ಪೆರಡಾಲ

ಪಂಪೋತ್ಸವ:—ಇದೇ ಮಾರ್ಗಶಿರ ಬಾಳ ಯ (ಡಿಶಂಬರ ೧೮) ಬುಧವಾರ ಸಾಯಂ ಘಂಟೆ ೩ಕ್ಕೆ ಪೆಡಾರ್ಲ್ ಮಹಾಜನ ಸಂಸ್ಕೃತ ಕಾಲೇಜಿನ 'ಸಾಹಿತ್ಯ ಸಮಿತಿ'ಯ ಆಶ್ರಯದಲ್ಲಿ ಸಾಹಿತ್ಯ ಸಮಿತಿ ಮತ್ತು ದ. ಕ. ಪಂಡಿತ ಸಂಘ ಈ ಎರಡು ಸಂಸ್ಥೆಗಳ ಕೂಡುವಿಕೆಯಿಂದ ಕನ್ನಡ ಕವಿ ಸಾರ್ವಭೌಮನಾದ ಪಂಪನ ಉತ್ಸವವು ಜರಗಲಿರುವುದು. ಈ ಉತ್ಸವಕ್ಕೆ ಆಯಾ ಸಂಘಗಳ ಸದಸ್ಯರಿಗೂ ಇತರ ಸಮಸ್ತ ಕನ್ನಡ ಅಭಿಮಾನಿಗಳಿಗೂ ಸ್ವಾಗತವಿದೆ ಎಂದು ಸಂಘಗಳ ಕಾರ್ಯಕರ್ತರು ತಿಳಿಸುತ್ತಾರೆ.

ಸೊರಗಿ ಕಡ್ಡಿಯಂತಾದ ಮಕ್ಕಳಿಗೆ

ಡೋಂಗರೇ ಇವರ

ಬಾಲಾಮೃತ

ವನ್ನು ಕೊಡುವುದರಿಂದ ಅವರು ಶಕ್ತರೂ ತೇಜಃಪುಂಜರೂ ಆಗುತ್ತಾರೆ.

ಇದು ಮಧುರವಿದ್ದು ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ವಿಜ್ಞಾನಯುಗ

ಬೆಲೂನು ಬೆರೇಜು

ಲಂಡನಿನಂಥ ಆಯಕಟ್ಟಿನ ದೊಡ್ಡ ಪಟ್ಟಣಗಳ ಮೇಲೆ, ಯುದ್ಧಕಾಲದಲ್ಲಿ ಗಾಳಿತುಂಬಿದ ರಬ್ಬರಿನ ದೊಡ್ಡ ಚೀಲಗಳು ಎತ್ತರದಲ್ಲಿ ಹಾರಾಡುತ್ತಿರುವುದನ್ನು ಕಾಣಬಹುದು. ಇವುಗಳ ನಡುವೆ ಗಾಳಿಪಟಗಳು ಹಾರಾಡುತ್ತಿರುವುದೂ ಉಂಟು. ಇವುಗಳ ಸಮೂಹವನ್ನು ಬೆಲೂನು ಬೆರೇಜು ಎನ್ನುತ್ತಾರೆ. ಶತ್ರುಪಕ್ಷದ ವೈಮಾನಿಕ ಧಾಳಿಗಳನ್ನು ತಡೆದು ವೈರಿ ವಿಮಾನಗಳನ್ನು ಕೆಡವಿ ನಾಶಮಾಡಲಿಕ್ಕೆ ಈ ಬೆರೇಜುಗಳು ಸಹಾಯಮಾಡುತ್ತವೆ. ಬೆರೇಜುಗಳಲ್ಲಿರುವ ಪ್ರತಿಯೊಂದು ಗಾಳಿಚೆಂಡು ಅಥವಾ ಗಾಳಿಪಟಗಳಿಗೆ ಬಹಳ ಗಟ್ಟಿಯಾದ ಮತ್ತು ಬಹು ಸೂಕ್ಷ್ಮವಾಗಿರುವ ಉಕ್ಕಿನ ಸರಿಗೆಗಳನ್ನು ಕಟ್ಟಿರುತ್ತಾರೆ. ತಗ್ಗಿನಲ್ಲಿ ಹಾರುವ ವಿಮಾನಗಳ ರೆಕ್ಕೆಗಳಿಗೆ ಈ ಸರಿಗೆಗಳು ಸಿಕ್ಕಿಕೊಂಡು ವಿಮಾನಗಳು ಮುಂದಕ್ಕೆ ಹಾರಲಾಗದೆ ಕೆಳಗುರುಳುವುವು. ಹೀಗೆ ಉರುಳುವಾಗ ಕೆಲವು ಗಾಳಿಚೆಂಡು ಅಥವಾ ಗಾಳಿಪಟಗಳು ನಾಶವಾಗಬಹುದಾದರೂ ವಿಮಾನಗಳ ನಾಶದಿಂದ ಶತ್ರುಗಳಿಗೆ ಉಂಟಾಗುವ ನಷ್ಟವು ಬಹಳವಾಗಿದೆ. ಆದ್ದರಿಂದ ಬೆಲೂನು ಬೆರೇಜು ಎಂಬುದು ವೈರಿ ವಿಮಾನಗಳ ಧಾಳಿಯನ್ನು ಪ್ರತಿಭಟಿಸಲಿಕ್ಕೆ ಬಹು ಕಡಿಮೆ ಖರ್ಚಿನ ವೈಜ್ಞಾನಿಕ ಉಪಾಯವಾಗಿದೆ.

ಕ್ವಿನೀನಿನ ಮತ್ತೊಂದು ಉಪಯೋಗ

ಮಲೇರಿಯದಂಥ ಕೆಲವು ಜ್ವರಗಳನ್ನು ಗುಣಪಡಿಸಲಿಕ್ಕೆ ಕ್ವಿನೀನು ಅಮೋಘ ಔಷಧಿಯಾಗಿದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದರೆ ಅದು ವಿಮಾನ ಕೈಗಾರಿಕೆಯಲ್ಲಿಯೂ ಅತ್ಯುಪಯೋಗಕಾರಿಯಾದ ಒಂದು ಪದಾರ್ಥವಾಗಿರುವದೆಂಬುದು ವಿಜ್ಞಾನಿಗಳ ಇತ್ತೀಚಿನ ಕೆಲವು ಶೋಧಗಳಿಂದ ತಿಳಿದು ಬರುತ್ತದೆ. ವಿಮಾನಯಂತ್ರಗಳು ಬಹಳ ಬಿರುಸಿನಿಂದ ಚಲಿಸುತ್ತಿರುವಾಗ ಅಲ್ಲಿ ಬಹಳ ಕಾವು ಹೊರಡುತ್ತದೆ. ಅದರ ದೆಸೆಯಿಂದ ಯಂತ್ರಗಳ ಕೀಲುಗಳಿಗೆ ಹಾಕಿದ ಲುಬ್ರಿಕೇಟಿಂಗ ಎಣ್ಣೆ ತನ್ನ ಕೆಲಸವನ್ನು ಮುಗಿಸುವ ಮೊದಲೇ ಹಾಳಾಗುವುದು. ಎಂಜಿನಿನಿಂದ ಅತ್ಯಂತ ಕಾವು ಹೊರಡುತ್ತಿರುವಾಗಲೂ ಈ ಎಣ್ಣೆಯು ಕೆಡದಂತಿರಬೇಕಾದರೆ ಅದಕ್ಕೆ ಸ್ವಲ್ಪ ಕ್ವಿನೀನನ್ನು ಬೆರಸಿದರೆ ಸಾಕೆಂದು ಈಗ ಕಂಡುಬಂದಿದೆ.

ಜೀವಜಂತುಗಳ ಮೇಲೆ ಚಂದ್ರನ ಪ್ರಭಾವ

ಬಿದಿಗೆಯ ಚಂದ್ರನಂತೆ ಒಬ್ಬನ ಬೆಳವಣಿಗೆ ಇದೆ ಎಂದು ಹೇಳುವ ಮಾತು ಬರಿಯ ಗಾದೆ ಮಾತ್ರ ಆಗಿರುವುದಿಲ್ಲ; ಅದರಲ್ಲಿ ವೈಜ್ಞಾನಿಕ ಸತ್ಯವೂ ಇರುವುದು. ಚಂದ್ರನು ಬೆಳೆಯುತ್ತಿರಲಿಕ್ಕೂ ಜೀವಜಂತುಗಳ ಬೆಳವಣಿಗೆಗೂ ಪರಸ್ಪರ ಸಂಬಂಧವಿದೆ ಎಂಬುದು ಈಗ ಪ್ರಮಾಣಿತವಾಗಿದೆ. ಉತ್ತರ ಕೆರೋಲಿನದ ಸಮುದ್ರದಲ್ಲಿ ಬೆಳೆಯುವ ಒಂದು ಜಾತಿಯ ಗಿಡವು ಹುಣ್ಣಿಮೆ ಚಂದ್ರನೊಡನೆ ತನ್ನ ಸಂಪೂರ್ಣ ಬೆಳವಣಿಗೆಯನ್ನು ಪಡೆಯುವುದು. ಸಮುದ್ರದಲ್ಲಿರುವ ನಕ್ಷತ್ರ ಮೀನೂ ಇದೇ ರೀತಿ ಚಂದ್ರನ ಕಲೆಗಳೊಂದಿಗೆ ಸಂಬಂಧವನ್ನಿಟ್ಟುಕೊಂಡು ಬೆಳೆಯುತ್ತದೆ. ಇದೇ ರೀತಿ ಎಲ್ಲಾ ಜಾತಿಗಳ ಜೀವಜಂತು ಮರಗಿಡಗಳ ಮೇಲೆ ಚಂದ್ರನ ಪ್ರಭಾವವಿರುವದೆಂದು ಪ್ರೊಫೆಸರ್ ವ್ಯಾಟ್ ಎಂಬವರು ಹೇಳಿದ್ದಾರೆ. ಆದರೆ ಹಿಂದೂ ವೈಜ್ಞಾನಿಗಳಿಗೆ ಈ ಸಂಗತಿ, ಸಾವಿರಾರು ವರ್ಷಗಳ ಮೊದಲೇ ತಿಳಿದಿತ್ತೆಂಬುದು ನಮಗೆ ಅಭಿಮಾನಾಸ್ಪದವಾಗಿದೆ.

ಮೂತ್ರರೋಗಗಳಿಗೆ ನೀರುಳ್ಳಿ ಗಡ್ಡೆ

ನಮ್ಮ ಆಹಾರಪದಾರ್ಥಗಳಲ್ಲಿ ನೀರುಳ್ಳಿ ಸಾಮಾನ್ಯವಾಗಿದೆ. ಆದರೂ ಅನೇಕ ಮಂದಿ ಅದರ ಉಪಯೋಗವನ್ನು ತಿಳಿಯದೆಯೇ ಅದನ್ನು ಅಸಹ್ಯವೆಂದು ತಿರಸ್ಕರಿಸುತ್ತಾರೆ. ನೀರುಳ್ಳಿಯಲ್ಲಿ ಕಲ್ಸಿಯಂ, ಮೆಗ್ನೇಸಿಯಂ, ಪೊಟಾಸಿಯಂ, ಸೋಡಿಯಂ, ಗಂಧಕ ಮತ್ತು ಕಬ್ಬಿಣದಂಥ ಖನಿಜಗಳು ನಮ್ಮ ಶರೀರವನ್ನು ಕೂಡಿಕೊಳ್ಳುವ ಸಿದ್ಧ ಸ್ಥಿತಿಯಲ್ಲಿ ಇರುತ್ತವೆ. ಈ ಎಲ್ಲಾ ಪದಾರ್ಥಗಳು ನಮ್ಮ ಶರೀರ ಬೆಳವಣಿಗೆಗೂ ಆರೋಗ್ಯಕ್ಕೂ ಅತ್ಯಗತ್ಯವಾಗಿವೆ. ನೀರು ತುಂಬುವ ಮತ್ತು ಮೂತ್ರಪಿಂಡ ಸಂಬಂಧವಾದ ರೋಗಗಳನ್ನು ಗುಣಪಡಿಸಲಿಕ್ಕೆ ನೀರುಳ್ಳಿಯಲ್ಲಿ ತುಂಬಾ ಶಕ್ತಿ ಇದೆ ಎಂದು ಹಿಂದಿನವರು ಹೇಳಿರುವುದು ಸತ್ಯವಿರುತ್ತದೆ. ಪಿತ್ತಜನಕಾಂಗದ ಕೆಲವು ಕಾಯಿಲೆಗಳನ್ನು ನೀರುಳ್ಳಿ ಗುಣಮಾಡುವದು. ನೀರುಳ್ಳಿ ರಸದಲ್ಲಿ ಕ್ರಿಮಿನಾಶಕ ಗುಣ ಇದೆ. ಉಲ್ಲಾಸದಾಯಕ ಶಕ್ತಿ ಇದೆ. ನೀರುಳ್ಳಿಯು ಆರೋಗ್ಯಕ್ಕೆ ಅತ್ಯಂತ ಆವಶ್ಯಕವೆಂದು ವಿಜ್ಞಾನಿಗಳು ಪರೀಕ್ಷಿಸಿ ಹೇಳಿರುವರು.

ಹಾಲಿನಿಂದ ಉಣ್ಣೆ

ಹೊಲ್ಲೆಂಡ ಮೊದಲಾದ ಕೆಲವು ದೇಶಗಳಲ್ಲಿ ಜನರು ಮುಖ್ಯವಾಗಿ ಕೃಷಿ ಮತ್ತು ಪಶುಪಾಲನೆಯಿಂದ ಜೀವಿಸುತ್ತಾರೆ. ಅಲ್ಲಿ ಹಾಲು ಧಾರಾಳವಾಗಿ ದೊರೆಯುತ್ತದೆ. ತಿನ್ನಬಹುದಾದಷ್ಟನ್ನು ತಿಂದು ಮಾರಬಹುದಾದಷ್ಟನ್ನು ಮಾರಿಯೂ ಅಲ್ಲಿ ಹಾಲು ಖರ್ಚಾಗದೆ ಉಳಿಯುತ್ತದೆ. ಅದನ್ನು ಹಾಳುಮಾಡುವದೇ? ಕೂಡದು. ಆದುದರಿಂದ ವಿಜ್ಞಾನಿಗಳು ಈ ಹಾಲಿನಿಂದ ಬೇರೆ ಕೆಲವು ಪದಾರ್ಥಗಳನ್ನು ತಯಾರಿಸುವ ಕ್ರಮಗಳನ್ನು ಕಂಡುಹಿಡಿದಿದ್ದಾರೆ. ಅವುಗಳಲ್ಲಿ ಕೃತ್ರಿಮ ಉಣ್ಣೆಯನ್ನು ತಯಾರಿಸುವುದು ಮುಖ್ಯವಾಗಿದೆ. ಹಾಲಿನ ಗಿಣ್ಣಿನಿಂದ ತಯಾರಿಸಿದ ಉಣ್ಣೆಯು ಕುರಿ ಉಣ್ಣೆಯನ್ನೇ ಸಂಪೂರ್ಣವಾಗಿ ಹೋಲುತ್ತದೆ. ಮತ್ತೆ ಈ ಕೃತ್ರಿಮ ಉಣ್ಣೆಯ ಬಟ್ಟೆಗಳನ್ನು ಕುದಿಯುವ ನೀರಿನಲ್ಲಿ ಒಗೆದಾಗ, ಗಿಣ್ಣಿನ ದೆಸೆಯಿಂದ ಅಂಟಿಕೊಳ್ಳುವ ರೋಗಾಣುಗಳೂ ಸಂಪೂರ್ಣವಾಗಿ ನಾಶವಾಗುತ್ತವೆ. ಆದ್ದರಿಂದ ಇವುಗಳನ್ನು ಉಡುವುದರಿಂದ ರೋಗಬಾಧೆಯ ಭಯವೂ ಇರುವುದಿಲ್ಲ.

ಸ್ವದೇಶಾಭಿಮಾನಿಗೆ ಚಂದಾದಾರರಾಗಿರಿ!

BHUVANENDRA PRODUCTS LTD.,
KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರನಾರಾಯಣತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ, ಎಲ್ಲಾ ಬಗೆಯ ವಾತಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟಾಕಿಸ್ಟರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಶೈ, ರಥಬೀದಿ.
ಡಾ। ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ, ದ. ಕನ್ನಡ.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ★ ಕೊಡಿಯಾಲಬೈಲು

ತಾ, 10-12-1940ರಿಂದ — ತಾ. 24-12-1940ರ ವರೆಗೆ

ಸೀತಾನದಿ ಜಾನುವಾರು ಸಂತೆ

ಮೇಲ್ಕಂಡ ದಿವಸಗಳಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ಪೆಶ್ಯಲು ಸರ್ವಿಸುಗಳನ್ನು ಚಾಲುಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ಕಟ್ಟಳೆ ಏನು ಮಾಡಿದರೂ ಸುರುವಾಗುವುದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಕೊಡಿರಿ, [illegible] ಸರ್ಟಿಫಿಕೇಟು—ಡಾ. ವೈದ್ಯ ಎಲ್. ಸಿ. ಪಿ. ಎಸ್ ಕೆಳವಾಣಿಸಿರುವ, ಹಾಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಅ[illegible] ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರ ಡಬ್ಬಿಯ ಕ್ರಯರೂ. ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೊ. ವಿರಜಿ, S. M. C.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds, ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars:—

K. R. GURU, *Managing Director.*

THE
BANK OF MANGALORE LTD.,
MANGALORE.
ESTD 1931

Branches-
Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted

THE
Canara Banking Corporation Ltd.,
(INCORPORATED IN BRITISH INDIA)

Estd: 1906

Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2½% p. a.
6 to 9 „	3% „
One year	3½% „
Two years	4% „
SHORT TERM Deposits:	2½% p. a.
Current Accounts	1% p. a.
Savings Bank	2½% „

Particulars of other kinds of deposits on application.

Regd No M 340

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 13—12—1940 [ಸಂಚಿಕೆ 50

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs 1 42 Crores
Total Funds exceed	Rs 1 52 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time Thisis the unique opportunity to Agents to put through larger business To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sri Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT

Puthiyar Calicut	Car Street Mangalore	Central Station Road, Trivandrum
Gautam Nivas Chirni Road Girgaum Bombay No 4	Post Box No 557 Mount Road Madras	Visweswarapuram Circle, Bangalore City

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಚೊರಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

ಪಾರ್ಲಿಮೆಂಟರಿ ಸೆಕ್ರೆಟರಿಗಳು

ಕಠಿಣ ಶಿಕ್ಷೆಗಳಿಗೆ

ಗುರಿಯಾದರು

KANNADA ILLUSTRATED WEEKLY

... under Section 94 (1) of the Madras Elementary Education Act 1920, the Municipal Council may, with the previous sanction of the Government and shall, if so directed by the Government, levy an education tax on property or on profession. The Government in G. O. No. MS. 604 Education, dated 27th March 1940 directed that an education tax at 3/12 per cent of the annual value of lands and buildings per half year be levied in this Municipality from 1—4—1940. The rate given in this direction accorded with the rate which the council in its Resolution dated the 6th March 1939 wanted to levy from 1—10—1939 but which the Government declined to approve of. It has been stated that there has been no notification in the District Gazette or in any local papers under proviso to Section 78 (3) of the Madras Dt Municipalities Act in regard to the intention of the council to levy the tax. Such notifications of the intention of the council are unnecessary when the tax is levied under a direction issued by Government Under Section 36 of the Madras Elementary Education Act the provisions of the Madras Dt Municipalities Act relating to incidence assessment or realisation of taxes apply to education tax subject to the important proviso that Government have reserved power to direct that such provisions shall apply only subject to such modifications and restrictions as may be prescribed by Government. The Government have in exercise of these powers prescribed under Section 56 (2) (a) of Madras Elementary Education Act that proviso to section 78 (3) of the Madras Dt Municipalities Act requiring initial notification in the District Gazette and local paper shall not apply in any case where the education tax is levied on a direction issued by the Government. In the present case as the tax is levied under a direction issued by Government no notification was issued under proviso to section 78 (3) of the Madras Dt Municipalities Act.

The notification required under section 80 of the Madras District Municipalities Act was published in English and Kanarese in the District Gazette Extraordinary dated the 30th March 1940.

It is seen from the above that the levy of education tax is perfectly in order and the procedure laid down for publication of notifications has been strictly respected.

(Sd) B VENKATARAO BALIGA,
Chairman M C

Municipal Office Mangalore
Dated the 25th November 1240

ವಿದ್ವಾನ್ ಶ್ರೀ ಪಿ. ಕೃಷ್ಣಯ್ಯನವರು*

ಕನ್ನಡದ ಸಾಹಿತ್ಯ ಸಾಗರ-
ವನ್ನು ಮಥಿಸುತ, ಸಾರವನ್ನಾಗಿಹ
...

ಚಿಪ್ಪುತ್ತಲಿಹೆ ನೀನು.
ಇಂತು ಹಿಂಗನ್ನಡದ ಸೇವೆಯು
ನೋಂತರೂ ಸಂತೃಪ್ತನಾಗದೆ,
ಸಂತಸದಿ ಸಾಹಿತ್ಯ ಸೇವೆಯ-
ನೆಸಗಲನುತಿಸುತ,
ಕರಕೆಹರನ ದನೇಶ ಶತಕವ-
ನಂತೆಯೇ ವರ ಯಕ್ಷಗಾನವ
...

ಸಿರಲು, ನಿಜ ರಸನೆಯಲಿ ನಲಿಯುವ
ಹರಿಕಥೆಯ ಕೀರ್ತನವನೆಸಗುವೆ
ಭಕ್ತಿ ಭಾವದಲಿ!
ವರ ಮಹಾಜನ ಸಂಸ್ಕೃತದ ಮಂ-
ದಿರದಿ ಪೆರಡಾಲಿನಲಿ ಮೆರೆಯುವ
ಹಿರಿಯ ಕನ್ನಡೋಪಾಧ್ಯಾಯ! ಮಂಗಲ-
ವಕ್ಕೆ ನಿನಗನಿಶಂ!

—ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್.

*ವಿದ್ವಾನ್ ಶ್ರೀ ಪೆರಡಾಲ ಕೃಷ್ಣಯ್ಯನವರು ಮದ್ರಾಸು ವಿಶ್ವವಿದ್ಯಾನಿಲಯದ ಕನ್ನಡದ ಉಚ್ಚ ಪರೀಕ್ಷೆಗಳಿಗೆ ಶಿಕ್ಷಣವನ್ನೀಯುವ ಏಕಮಾತ್ರ ಸಂಸ್ಥೆಯಾದ ಪೆರಡಾಲಿನ ಮಹಾಜನ ಸಂಸ್ಕೃತ ಕೋಲೇಜಿನಲ್ಲಿ ಅದರ ಹುಟ್ಟಿನಿಂದ ಈ ವರೆಗೂ ಪ್ರಧಾನ ಕನ್ನಡಾಧ್ಯಾಪಕರಾಗಿದ್ದಾರೆ. ಇವರೇ ನನ್ನ ಕನ್ನಡದ ವಿದ್ಯಾಗುರುಗಳು. ಇದೇ ಕಳೆದ ತಾ. ೮-೧೧-೧೯೪೦ನೇ ಆದಿತ್ಯವಾರ ಕೋಲೇಜಿನ ಹಳೇ ವಿದ್ಯಾರ್ಥಿ ಸಂಘದವರು ಏರ್ಪಡಿಸಿದ ಸಭೆಯಲ್ಲಿ ಈ ಮಂಗಲಾಶಂಸನ ಕವನವು ಓದಲ್ಪಟ್ಟಿತು. ಕೋಲೇಜಿನ ಪ್ರಿನ್ಸಿಪಾಲರಾದ ಶ್ರೀ. ಬಿ. ನಾರಾಯಣಭಟ್ಟ, ಬಿ. ಎ. ಇವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. —ಲೇಖಕ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

20—12—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೦—೧೨—೧೯೪೦.

ಸಪ್ರುಗಳು ಸಂಧಾನ ಸೂಚನೆಯನ್ನು ತಂದಿರುವರು

ಭಾರತದ ಪರಿಸ್ಥಿತಿ ಕೆಡುತ್ತಲಿದೆ

ಬ್ರಿಟನು ಭಾರತಗಳ ಸೌಹಾರ್ದವಾಗಬೇಕು

ದೀರ್ಘ ಪ್ರಕಟಣೆಯ ಸಾರಾಂಶ

ಹಿಂದುಸ್ಥಾನದಲ್ಲಿ ಈಗಿನ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ವಿಷಯದಲ್ಲಿ ಸರ್ ತೇಜ್ ಬಹದ್ದೂರ್ ಸಪ್ರುಗಳು ಸುದೀರ್ಘ ಪ್ರಕಟನೆಯೊಂದನ್ನು ಹೊರಡಿಸಿ ಕೆಳಗಿನ ಸೂಚನೆಗಳನು ಮಾಡಿರುವರು:

೧. ಮಹಾತ್ಮಾಗಾಂಧಿ ಮತ್ತು ಜಿನ್ನಾ ಇವರು ಕೂಡಲೇ ಒಂದೆಡೆ ಸೇರಿ ಸದ್ಯದ ಪರಿಸ್ಥಿತಿಯ ಬಗ್ಗೆ ವಿಚಾರವಿನಿಮಯ ಮಾಡಬೇಕು. ಒಂದು ಬಗೆಯ ಒಡಂಬಡಿಕೆಗೆ ಬರಬೇಕೆಂಬ ನಿರ್ಧಾರದಿಂದ ಅವರು ಚರ್ಚೆ ನಡಿಸಬೇಕು.

೨. ಹಿಂದು ಮಹಾಸಭೆಯ ಒಪ್ಪಿಗೆ ಪ್ರತಿನಿಧಿಗಳನ್ನು ಸಿಕ್ ಮತ್ತು ಹರಿಜನ ಸದಸ್ಯರನ್ನು ಈ ಚರ್ಚೆಯಲ್ಲಿ ಭಾಗವಹಿಸಲು ಆಮಂತ್ರಿಸಬೇಕು.

೩. ಮತ್ತೆ ಅವರು ವೈಸರಾಯರನ್ನು ಭೇಟಿಯಾಗಿ ಯುದ್ಧ ನಡೆಯುವ ವರೆಗೆ ಅವರ ಕಾರ್ಯಕಾರಿ ಮಂಡಲದ ಪುನರ್ರಚನೆ ಮಾಡುವುದಕ್ಕವಶ್ಯವಾಗಿದೆಯೆಂಬ ಬಗ್ಗೆ ವೈಸರಾಯರನ್ನು ಒತ್ತಾಯಪಡಿಸಬೇಕು. ರಾಷ್ಟ್ರೀಯ ಸರಕಾರದಂತಹ ಸರಕಾರವು ಸ್ಥಾಪಿತವಾಗುವಂತೆ ಕಾರ್ಯಕಾರೀ ಮಂಡಳದ ಪುನರ್ರಚನೆಯಾಗಬೇಕು. ಸಂರಕ್ಷಣ ಖಾತೆಯ ಆಡಳಿತೆಯನ್ನು ಓರ್ವ ಹಿಂದೀಯನಿಗೆ ಒಪ್ಪಿಸಬೇಕು.

೪. ಯುದ್ಧಕ್ಕೆ ಬೇಕಾಗುವ ಮಹತ್ವದ ಸರಕುಗಳನ್ನು ಸಿದ್ಧಪಡಿಸುವುದಕ್ಕಾಗಿ ದೊಡ್ಡ ದೊಡ್ಡ ಔದ್ಯೋಗಿಕ ಕೈಗಾರಿಕೆಗಳನ್ನು ಹೊರಡಿಸಲು ವೈಸರಾಯರನ್ನು ಕೇಳಬೇಕು.

೫. ಪ್ರಾಂತಗಳಲ್ಲಿ ಕೂಡಲೇ ಘಟನಾತ್ಮಕ ಸರಕಾರಗಳು ಸ್ಥಾಪಿಸಬೇಕು.

ಅವರು ಮತ್ತೆ ಹೀಗೆಂದಿರುವರು:

ರಾಜಕೀಯ ಪರಿಸ್ಥಿತಿಯು ಕೆಡುತ್ತಲಿದೆ

ಭಾರತದ ರಾಜಕೀಯ ಪರಿಸ್ಥಿತಿಯು ಹದಗೆಟ್ಟು ವಿಷಮಾವಸ್ಥೆಗೆ ಬರುತ್ತಿದೆಯೆಂದು ಭಾರತದ ಪ್ರಮುಖ ಪತ್ರಿಕೆಗಳೆಲ್ಲವೂ ತಮ್ಮ ಲೇಖನಗಳ ಮೂಲಕ ವ್ಯಕ್ತಗೊಳಿಸಿವೆ. ಕಲ್ಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯೂ ಬೊಂಬಾಯಿಯ ಟೈಂಸ್ ಆಫ್ ಇಂಡಿಯಾ ಪತ್ರಿಕೆಯೂ ಭಾರತೀಯರಿಗೂ ಸರಕಾರಕ್ಕೂ ಸೌಹಾರ್ದತೆ ಏರ್ಪಡಬೇಕಾದುದು ತೀವ್ರ ಆವಶ್ಯಕತೆಯೆಂದು ಬರೆದಿರುತ್ತವೆ. ಇವೆರಡೂ ಆಂಗ್ಲೋ ಇಂಡಿಯನ್ ಪತ್ರಿಕೆಗಳು. ಈ ವಿಷಯವನ್ನು ಸರಕಾರದವರು ಗಮನಕ್ಕೆ ತರಬೇಕು. ಇಂದಿನ ವಿಷಮ ಪರಿಸ್ಥಿತಿಯು ಭಾರತಕ್ಕೂ ಬ್ರಿಟನಿಗೂ ಉಭಯತ್ರ ಗೌರವ ತರುವಂತಹದಲ್ಲ.

'ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಸಂಧಾನ ನಡೆಯಬೇಕೆಂದೂ, ಸೌಹಾರ್ದತೆಯ ಪರಿಹಾರವು ಏರ್ಪಡಬೇಕೆಂದೂ ಬಂಗಾಳದ ಮುಖ್ಯಮಂತ್ರಿಯಾದ ಫಜುಲುಲ್ ಹಕ್‌ರು ಮುಸ್ಲಿಂ ಲೀಗಿನ ಬಗ್ಗೆ ಈಚೆಗೆ ಪ್ರಯತ್ನಪಟ್ಟಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಪ್ರತಿನಿಧಿಗಳ ಬಂಧನ

'ಭಾರತದ ರಾಜಕೀಯ ಪರಿಸ್ಥಿತಿಯು ಏಕೆ ಈ ಸ್ಥಿತಿಗೆ ಬಂದಿದೆ, ಇದಕ್ಕೇನು ಪರಿಹಾರ ಎಂಬುದನ್ನು ಬ್ರಿಟನು ಬೇಗನೆ ಪರಿಶೀಲಿಸಬೇಕು.

'ಭಾರತದ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಮುಖಂಡರಾದವರೂ, ಜನಾದರಣೆಗೆ ಪಾತ್ರರಾದವರೂ ಕಳೆದ ವರ್ಷ ಈ ಕಾಲದಲ್ಲಿ ಮಂತ್ರಿಪದವಿಗಳಲ್ಲಿದ್ದು ಏಳು ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಆಡಳಿತ ನಡೆಸುತ್ತಿದ್ದ ಮಂತ್ರಿಗಳೂ ಇಂದು ಸೆರೆಮನೆಗಳಲ್ಲಿದ್ದಾರೆ. ಪಂಡಿತ ಜವಾಹರಲಾಲರಿಗೆ ಕೊಡಲಾದ ನಾಲ್ಕು ವರ್ಷಗಳ ಕಠಿಣಶಿಕ್ಷೆಯು ಬ್ರಿಟನಿನಲ್ಲಿ ಸಹಿತ ಕಳವಳವುಂಟುಮಾಡಿತು. ಪಾರ್ಲಿಮೆಂಟಿನಲ್ಲಿ ಪ್ರಶ್ನೆ ನಡೆಯಿತು. ಸರಕಾರದ ವಿರುದ್ಧ ವರ್ತನೆಯಿಂದ ಭಾರತೀಯ ಮನಸ್ಸು ಬ್ರಿಟನ್ನಿಗೆ ವಿರುದ್ಧವಾಗಿ ಪರಿಣಮಿಸುತ್ತದೆ.

ಎಲ್ಲಾ ಪಕ್ಷಗಳ ಸಮಾಲೋಚನೆ

'ಭಾರತ ಸಮಸ್ಯೆಯನ್ನು ಪರಿಹರಿಸಲು ಈಗ ಎಲ್ಲಾ ಪಂಗಡಗಳ ಮುಖಂಡರೂ ಸಮಾಲೋಚಿಸಿ ಒಂದು ಒಮ್ಮತದ ತೀರ್ಮಾನಕ್ಕೆ ಬರಬೇಕು. ಶಾಸನ ಸಭೆಗೆ ಜವಾಬ್ದಾರಿಯುಳ್ಳ ರಾಷ್ಟ್ರೀಯ ಸರಕಾರವು ಏರ್ಪಡಬೇಕು. ಹಿಂದಿನ ಭಾರತದ ಸರ್ಕಾರವನ್ನು ರಾಷ್ಟ್ರೀಯ ದೃಷ್ಟಿಯಿಂದ ಪುನರ್ರಚನೆ ಮಾಡಬೇಕು. ಬ್ರಿಟನು ಮತ್ತು ಭಾರತದ ಪರಸ್ಪರ ಸೌಹಾರ್ದತೆ ಸಮಾನತೆ ಮತ್ತು ಮೈತ್ರಿಗಳು ಏರ್ಪಡಬೇಕು.

The Jupiter General Insurance Co. Ltd., Bombay

(Incorporated in India)

PROGRAMME FOR YOUTH

HEAD OFFICE:—Ewart House, Fort, Bombay.

COURAGE must come from the soul within,
The man must furnish the will to win,
So figure it out for yourself, my lad,
You were born with all that the great have had,
With your equipment they all began,
Get hold of yourself, and say "I CAN."
And work for the Democratic Institution of your motherland.

K. P. NAYAK, Chief Agent,
THE JUPITER GENERAL INSURANCE CO. LTD., MANGALORE.

COCHIN JARS

AT —— PRE-WAR —— RATES

ANNOUNCING NEW TERMS AND DISCOUNTS TO DEALERS ONLY

All Our Cochin Jar Dealers Are Offered

A CASH DISCOUNT OF 6¼% ON USUAL RATES

FRESH STOCKS HAVE JUST ARRIVED — BOOK YOUR ORDERS EARLY

K. RAMA NAYK,
Chief Agent Cochin Potteries
Goilkatta Mangalore.

ಸ್ವದೇಶಾಭಿಮಾನಿ

ತಾರೀಕು 20—12—1940

ಹೇಳಿದ್ದೇ ಹೇಳುವುದು!

ಬ್ರಿಟಿಷ್ ಸರಕಾರದ ಭಾರತ ಪ್ರತಿನಿಧಿಗಳಾದ ಕರ್ನಲ್ ಎಮೆರಿಯವರೂ ಲಾರ್ಡ್ ಲಿನ್‌ಲಿತ್‌ಗೋರವರೂ ಈ ವಾರದಲ್ಲಿ ಭಾಷಣಗಳನ್ನಿತ್ತು ಬ್ರಿಟಿಷ್ ಸರಕಾರದ ರೀತಿನೀತಿಗಳೇನಿದೆಯೆಂಬುದನ್ನು ವ್ಯಕ್ತಪಡಿಸಿದರು. ಬ್ರಿಟನು ಬಹಳ ಕಾಲದಿಂದಲೇ ಭಾರತದ ಕಡೆಗೆ ಯಾವ ದೃಷ್ಟಿ ಇಟ್ಟು ಕೆಲಸಮಾಡುತ್ತದೆಯೋ ಅದೇ ದೃಷ್ಟಿಯಿಂದ ಇಂದೂ ಇದೆಯೆಂಬುದನ್ನಿಷ್ಟು ಖಚಿತಮಾಡಿದರು. ದೇಶದ ಭಿನ್ನ ಭಿನ್ನ ಪಂಗಡಗಳಲ್ಲಿ ಅಭಿಮತಭೇದವಿರುವುದರಿಂದ, ಭಾರತದ ಭಿನ್ನ ಪಕ್ಷದವರು ಒಂದಾಗಿ ತೀರ್ಮಾನಿಸಿಕೊಂಡ ಹೊರತು, ತಾವು ಹೆಚ್ಚಿನ ಭಾಗ ವಹಿಸಿ, ಇಂದು—ಈ ವಿಷಮ ಪರಿಸ್ಥಿತಿಯ—ಕಾರ್ಯವನ್ನು ಕೈಕೊಳ್ಳಲು ಸಿದ್ಧರಿರುವದಿಲ್ಲವೆಂದು ತಿಳಿಸಿದರು. ಭಾರತದಲ್ಲಿ ಈಗ ನಡೆಯುವ ಚಳವಳಿವು ಅಸಮರ್ಪಕವೆಂದು ತಿಳಿಸಿ, ತಮ್ಮ ಯುದ್ಧಕಾರ್ಯವನ್ನು ಮುಂದೊತ್ತುವ ನಿಶ್ಚಯವನ್ನು ನಿರ್ಧಾರಪೂರ್ವಕ ಸಾರಿದರು. ಭಾರತದ ರಾಜಕೀಯವು ಇಂದು ಪ್ರಕ್ಷುಬ್ಧವಾಗಿರುವಾಗ, ನಿರ್ವಾಹವಿಲ್ಲದೆ ಗಾಂಧಿಜಿ ವೈಯುಕ್ತಿಕ ಶಾಂತ ಸತ್ಯಾಗ್ರಹವನ್ನು ಆರಂಭಿಸಬೇಕಾಗಿ ಬರಲು, ಹೀಗೆ ಜನತಾಪ್ರತಿನಿಧಿಗಳಾದವರು ಸಾವಿರಾರು ಸಂಖ್ಯೆಯಿಂದ ಸೆರೆಮನೆಯ ಕತ್ತಲೆ ಕೋಣೆಗಳನ್ನು ಸೇರಿರುವಾಗ, ಜನತಾಭಿಪ್ರಾಯವು ಇಂತು ತಳಮಳಗೊಂಡಿರುವಾಗ, ಬ್ರಿಟನು ಭಾರತಗಳು ಸಂಧಿಸೂಚಕ ಯತ್ನಗಳನ್ನು ಕೈಕೊಳ್ಳಬೇಕೆಂದು ಮಂದಪಕ್ಷದವರು ಕಾರ್ಯಯೋಜನೆಗಳನ್ನು ಮುಂದಿಟ್ಟಿರುವಾಗ, ಈ ಇಬ್ಬರು ಅಧಿಕಾರಿಗಳ ಮಾತುಗಳೂ, ಆ ವಿಧದಲ್ಲಿ ಯಾವ ಉತ್ಸಾಹವನ್ನೂ ತೋರಿಸದೆ ರಾಶಿಯನ್ನೇ ಉಂಟುಮಾಡುವಂತಹದಾಗಿವೆ.

ಉಪದೇಶ ಪಾಂಡಿತ್ಯ

'ಮೊದಲು ಭಾರತ' ಎಂಬೀ ಮಾತಿನಿಂದ ಭಾರತಮಂತ್ರಿ ಎಮೆರಿಯವರು ತಮ್ಮ ಭಾಷಣವನ್ನು ಆರಂಭಿಸಿದರು. ಭಾರತದ ಸಮಸ್ಯೆ, ಭಾರತದ ವಿಚಾರಗಳು ಎಲ್ಲದಕ್ಕಿಂತಲೂ ಮೊದಲು ಎಂದು ಹೇಳುವ ವಾಕ್ಯ ಬಹಳ ಮಹತ್ವದ್ದು. ಭಾರತೀಯರೆಲ್ಲರೂ ಅದೇ ವಿಚಾರದಿಂದ [illegible] ಭಾರತೀಯರಿಗೆ [illegible] ಎಲ್ಲ [illegible]

[illegible] ಉತ್ಸಾಹವು ತೋರುತ್ತಿಲ್ಲದ, ಭಾರತೀಯ ಪಕ್ಷಗಳೊಳಗೆ ಭೇದಭಾವನೆಯಿದ್ದು ಅವರು ಒಂದಾಗಿ ಬಂದರೆ, ತಮ್ಮ ತಮ್ಮೊಳಗೆ ಒಪ್ಪಂದಮಾಡಿಕೊಂಡರೆ, ಭಾರತದ ಸಮಸ್ಯೆ ತೀರುತ್ತದೆಯೆನ್ನುವ ಅಭಿಪ್ರಾಯವೇ ತಲೆಯೆತ್ತಿ ತೋರುತ್ತದೆ. ಭಾರತದಲ್ಲಿ ಭಿನ್ನಭಿನ್ನ ಪಕ್ಷಗಳಿವೆ, ಅವುಗಳೊಳಗೆ ಅನೈಕ್ಯವಿದೆಯೆಂದು, ಹೇಳದ ಬಾಯಿಯಿಲ್ಲಿಯೇ ಸಾವಿರಾರು ಹೇಳುವುದು ಅಷ್ಟೇನೂ ಸವಿಯಾಗಿ ಕೇಳುವುದಿಲ್ಲ. ಆದರೆ ಭಾರತ ಸಚಿವರಾಗಿ, ಬ್ರಿಟನಿನ ಪ್ರತಿನಿಧಿಯಾಗಿ ಎಮೆರಿಯವರು ಯಾವ ಪ್ರಯೋಜನಕಾರಿಯಾದ ಕಾರ್ಯಯೋಜನೆಯನ್ನು ಜನತೆಯ ಮುಂದಿಟ್ಟಿದ್ದಾರೆಯೆಂಬುದನ್ನು ವಿಚಾರಿಸಿದರೆ ನಿರಾಶೆಪಡದೆ ನಿರ್ವಾಹವಿಲ್ಲ. ಅನ್ಯರಿಗೆ ಉಪದೇಶಮಾಡುವ ಪಾಂಡಿತ್ಯವನ್ನು ಎಲ್ಲರೂ ಸಂಪಾದಿಸಬಹುದು. ಆದರೆ ತಾವು ಅನ್ಯರಿಗೆ ಮಾಡತಕ್ಕ ಕರ್ತವ್ಯಗಳ ವಿಷಯದಲ್ಲಿ ಸರಿಯಾದ ತತ್ಪರತೆಯಿಂದ, ಕಾರ್ಯಯೋಜನೆಗಳನ್ನು ವಿಡಿಸಿ ಕೆಲಸ ಮಾಡುವುದು ಮಾತ್ರ ಭೂಷಣಪ್ರದವೆನಿಸುವುದು. ಕಲ್ಕತ್ತದ ಸಭೆಯಲ್ಲಿ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಹೇಳಿದ ಮಾತುಗಳಲ್ಲಿಯೂ ಇದಕ್ಕಿಂತ ಹೆಚ್ಚಿನದೇನೂ ಇಲ್ಲ. ಲಿನ್‌ಲಿತ್‌ಗೋರವರು ತಾವು ಭಾರತದ ಸಮಸ್ಯೆಯನ್ನು ತೀರಿಸಲು ಯಾವುದೇ ರೀತಿಯ ಉತ್ಸಾಹವನ್ನೂ ಕಾರ್ಯಯೋಜನೆಯನ್ನೂ ಅದರಲ್ಲಿ ತೋರ್ಪಡಿಸದೆ, ದೇಶದ ಭಿನ್ನ ಭಿನ್ನ ಪಕ್ಷಗಳೊಳಗಿನ ಎಲ್ಲಾ ಸಮಸ್ಯೆ ಪರಿಹಾರದ ಜವಾಬ್ದಾರಿಕೆಯನ್ನೂ ಹೊರಿಸಿಬಿಟ್ಟಿದ್ದಾರೆ. ಹೀಗೆ ಬ್ರಿಟನಿನ ಪ್ರತಿನಿಧಿಗಳು ಹೇಳಿದ ಮಾತನ್ನು ಮತ್ತೆ ಮತ್ತೆ ಹೇಳುವುದನ್ನು ನೋಡಿದರೆ ಭಾರತವನ್ನು ನಿರಂತರ ತಮ್ಮ ದಾಸ್ಯದಲ್ಲಿ ಇಟ್ಟುಕೊಳ್ಳುವ ಬಯಕೆಯನ್ನು ಅವರು ಇಟ್ಟುಕೊಂಡಿದ್ದಾರೆಂದೇ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಮಾತು ಸ್ಪಷ್ಟವಾಗಿಲ್ಲ

ಯಾವದೋ ಒಂದು ದೂರದ ಕಾಲದಲ್ಲಿ, ಯಾವುದೋ ಒಂದು ರೀತಿಯ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವ ಬಯಕೆ ನಮ್ಮದು ಎಂದು ಬ್ರಿಟನಿನ ಪ್ರತಿನಿಧಿಗಳು ಹೇಳುವುದರಿಂದ, ಭಾರತೀಯರನ್ನು ಖಂಡಿತವಾಗಿ ಸಮಾಧಾನಪಡಿಸಲು ಸಾಧ್ಯವಿಲ್ಲ. ಇಂದು ಸ್ವಾತಂತ್ರ್ಯದ ಯುಗ. ಯುರೋಪಿನಲ್ಲಿ ಸ್ವಾತಂತ್ರ್ಯದ ಬಿಸಿಯೇರಿ ಅದಕ್ಕಾಗಿ ರಕ್ತದ ಪ್ರವಾಹವೇ ಹರಿಯುತ್ತದೆ. ಬ್ರಿಟಿಷರು ತಮ್ಮ ಸ್ವಾತಂತ್ರ್ಯದ ರಕ್ಷಣೆಗಾಗಿ ರಕ್ತವನ್ನು ಚೆಲ್ಲುತ್ತಿದ್ದಾರೆ. ಆದರೆ ಭಾರತೀಯರು ಬಹಳ ಶಾಂತ ಅಹಿಂಸಾ ಮತದಿಂದ, ಕೇವಲ ಸತ್ಯನ್ಯಾಯದಿಂದ ತಮ್ಮ ಸ್ವಾತಂತ್ರ್ಯದ ಕುರಿತು ಮಾತಾಡಿದರೆ, ಸ್ವಾತಂತ್ರ್ಯದ ತೀರ್ಮಾನವಾಗಬೇಕೆಂದು ಹೇಳಿದರೆ ಅವರಿಗೆ ಈ ರೀತಿಯ ಅಸ್ಪಷ್ಟವಾದ ಉತ್ತರವನ್ನು ಕೊಡುವುದರ ಅರ್ಥವೇನು? ಇದರಿಂದ ತಮ್ಮ ಹೇಳಿಕೆಗಳನ್ನು ಭಾರತದ ಮುಖಂಡರು ತಿರಸ್ಕರಿಸುವಂತೆ ಬ್ರಿಟನಿನ ಪ್ರತಿನಿಧಿಗಳೇ ಮಾಡುತ್ತಿರುವರೆಂದು ಲಂಡನಿನ 'ಟೈಮ್ಸ್' ಪತ್ರಿಕೆಯೇ ತನ್ನ ಅಗ್ರಲೇಖದಲ್ಲಿ ಬ್ರಿಟನನ್ನು ಎಚ್ಚರಿಸುತ್ತದೆ. ಭಾರತಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುತ್ತೇವೆಯೆನ್ನುವ ಮಾತು ನಿಜವಾಗಿಯೂ ಸಂತೋಷಕರವಾದುದು. ಆದರೆ ಯಾವಾಗ ಯಾವ ರೀತಿಯಿಂದ ಎಂದೇನೂ ಹೇಳದೆ, ಇರುವುದು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನಾದರೂ ಕೊಡುವ [illegible] ಮಾತಿನ ಮೇಲೆ ಸಂದೇಹವನ್ನು ಹುಟ್ಟಿಸುವಂತಹದು. ಒಂದು ಕೆಲಸವನ್ನು ಮಾಡಲು ನಿರ್ಧಾರವಾಗಿದ್ದರೆ ಆ ಕೆಲಸವನ್ನು ಮಾಡಿ ತೀರಿಸುವ ಕಾರ್ಯಯೋಜನೆಗಳೂ ತಯಾರಾಗಬೇಕು. ಕಾರ್ಯಯೋಜನೆಗಳೇನೂ ಇಲ್ಲದೆ ಇರುವ ನಿರ್ಧಾರದಿಂದ ಯಾವ ಸಾರ್ಥಕ್ಯವನ್ನೂ ನಾವು ಎಣಿಸಲಾಗುವದಿಲ್ಲ. ಬ್ರಿಟನಿನ ಪ್ರತಿನಿಧಿಗಳು ಭಾರತದ ವಿಷಯವಾಗಿ, ಭಾರತಕ್ಕೆ ಕೊಡತಕ್ಕರುವೆವೆಂದು ಹೇಳುವ ಸಾಮಂತ ಸ್ವರಾಜ್ಯದ ವಿಷಯವಾಗಿಯೂ ಈ ಮಾತು ಅನ್ವಯಿಸುತ್ತದೆ.

ಸತ್ಯಾಗ್ರಹದ ವಿಷಯದಲ್ಲಿ

ಕಾಂಗ್ರೆಸು ಭಾಷಣ ಸ್ವಾತಂತ್ರ್ಯದ ವಿಷಯವಾಗಿ ಆರಂಭಿಸಿದ ವೈಯುಕ್ತಿಕ ಸತ್ಯಾಗ್ರಹದ ಕುರಿತು ಅವರ ಕೆಲವು ಮಾತುಗಳನ್ನು ಹೇಳಿದ್ದಾರೆ. ಭಾರತೀಯರೆಲ್ಲರೂ ಎಲ್ಲಾ ಪಂಗಡದವರೂ ಹಿಟ್ಲರ್ ವಾದವನ್ನು ವಿರೋಧಿಸುತ್ತಿರುವರೆಂದು ವೈಸರಾಯರು ಹೇಳುತ್ತಾ ಕಾಂಗ್ರೆಸು ಯುದ್ಧವಿರೋಧಕದ ಭಾಷಣ ಸ್ವಾತಂತ್ರ್ಯವನ್ನು ಅಪೇಕ್ಷಿಸಿದ ವಿಷಯ ಆಕ್ಷೇಪವೆತ್ತಿದ್ದಾರೆ. ಆದರೆ ಭಾರತದ ಜನಮತವನ್ನು ಕೇಳದೆ ತಮ್ಮ ಇಚ್ಛೆಯಂತೆ ಭಾರತವನ್ನು ಯುದ್ಧದಲ್ಲಿ ಸೇರಿಸಿದ ಹಿತವಾಗಲಿಲ್ಲವೆಂಬ ಕಾಂಗ್ರೆಸಿನ ಈ ಪ್ರಬಲವಾದ ನ್ಯಾಯವಾದ ಹೇಳಿಕೆಗೆ ಯಾವ ಸಮಾಧಾನವನ್ನೂ ಕೊಡಲಿಲ್ಲ. ಮತ್ತು ಗಾಂಧಿಜಿಯವರು ಕಾಂಗ್ರೆಸಿನವರೂ ಬ್ರಿಟನಿಗೆ ಈಗ ತೊಂದರೆಕೊಡಬಾರದೆಂದು ಸಾರಿದ ವಿಷಯ ಮಾತನಾಡುತ್ತಾ, ಈ ಚಳವಳದಿಂದ ಬ್ರಿಟನಿಗೆ ತೊಂದರೆಯಾಗುವುದೆಂದು ಸೂಚಿಸಿರುವರು. ಆದರೆ ಗಾಂಧಿಜಿಯವರು ಆರಂಭಿಸಿದ ಈ ಸತ್ಯಾಗ್ರಹ, ನಿಯಂತ್ರಿತ ಸತ್ಯಾಗ್ರಹವು ಸರಕಾರವನ್ನು ತೊಂದರೆಕೊಡುವಷ್ಟು ಗೊಂದಲದ ಸ್ವರೂಪವನ್ನೂ ಹೊಂದಿರುವುದಲ್ಲವೆಂದು ಯಾರೂ ತಿಳಿದುಕೊಳ್ಳಬಹುದು. ಕೊನೆಗೆ ಇಂತಹ ಚಳವಳದಿಂದ ವಿದೇಶಗಳಲ್ಲಿ ತಪ್ಪು ಅಭಿಪ್ರಾಯವು ಪ್ರಚಾರವಾಗುವ ಸಂಭವವಿರುವುದಾಗಿ ಅವರು ಶಂಕಿಸಿದ್ದಾರೆ. ಜನತೆಯ ಪ್ರತಿನಿಧಿಗಳು ಸೆರೆಮನೆಗೆ ಗುರಿಯಾಗುವುದರಿಂದ ವಿದೇಶಗಳಲ್ಲಿ ಉಂಟಾಗುವ ಅಭಿಪ್ರಾಯವು ತಪ್ಪೋ ಸರಿಯೋ, ಎಂಬುದನ್ನು ನ್ಯಾಯ ದೇವತೆಯೇ ನಿರ್ಣಯಿಸಬೇಕಾಗಿದೆ.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

THE
BANK OF MANGALORE LTD.,
H O MANGALORE
ESTD 1931
Branches - Moodabidri & Padubidri.

NOTICE

On and from 1st January 1941 the following are the revised rates of interest on deposits

FIXED DEPOSITS:

For 2 years or over	5½%
„ 1 „	4½%
„ 6 months	3½%
„ 3 months	3%

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted

ಪರದೇಶಗಳಲ್ಲಿ ತಪ್ಪು ತಿಳುವಳಿಕೆಯಾಗಬಹುದು

ಕಾಂಗ್ರೆಸ್ ಚಳವಳಕ್ಕಾಗಿ ವೈಸರಾಯ್ರ ವಿಷಾದ

ವ್ಯಾಪಾರೀ ಸಂಘದಲ್ಲಿ ವೈಸರಾಯರ ಭಾಷಣ

ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋ ಇವರು ಕಲ್ಕತ್ತದ ಎಸೋಸಿಯೇಟೆಡ್ ವ್ಯಾಪಾರೀ ಸಂಘದ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಭಾರತದ ರಾಜಕೀಯ ಬಿಕ್ಕಟ್ಟು ಮತ್ತು ಕಾಂಗ್ರೆಸಿನ ಧೋರಣೆಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದರು. ಅವರ ಭಾಷಣದಲ್ಲಿ ಕೊನೆಗೆ ಅವರು ಭಾರತದ ಬಿಕ್ಕಟ್ಟಿನ ವಿಷಯ ಹೇಳುತ್ತಾ ಎಲ್ಲಾ ಪಕ್ಷದವರೂ ಒಂದು ಒಪ್ಪಂದ ಮಾಡಿಕೊಂಡರೆ ಬ್ರಿಟಿಷ್ ಸರಕಾರವು ಶಕ್ಯವಿದ್ದ ಎಲ್ಲಾ ಸಹಾಯವನ್ನೂ ಮಾಡುವುದೆಂದರು.

ಸತ್ಯಾಗ್ರಹ ಚಳವಳದ ವಿಷಯವಾಗಿ ಅವರು ಹೀಗೆಂದರು:

ಇಂದು ದೇಶದಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲದಿಂದ ಒಂದು ಚಳವಳವು ನಡೆಯುತ್ತಿದೆಯೆಂದು ತಿಳಿಸಲು ನನಗೆ ತುಂಬಾ ವಿಷಾದವಾಗುತ್ತದೆ. ಈ ಚಳವಳದಿಂದ ಪರದೇಶಗಳಲ್ಲಿ ತುಂಬಾ ತಪ್ಪು ತಿಳುವಳಿಕೆಯಾಗುವ ಸಂಭವವುಂಟು. ಬ್ರಿಟಿಷ್ ಸರಕಾರದ ಯುದ್ಧ ಕಾರ್ಯದಲ್ಲಿ ತೊಂದರೆಯನ್ನುಂಟುಮಾಡುವುದಿಲ್ಲವೆಂದು ವಿಷ್ವಾಸಲ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ. ಆದರೆ ಬ್ರಿಟಿಷ್ ಸರಕಾರದ ಯುದ್ಧಕಾರ್ಯದಲ್ಲಿ ತನು ಮನ ಧನಸಹಾಯ ಮಾಡಬೇಡಿರೆಂದು ಪ್ರಚಾರಮಾಡುವ ಸ್ವಾತಂತ್ರ್ಯಬೇಕೆಂದು ಅವರು ಕೇಳುತ್ತಾರೆ.

ರಕ್ಷಿಸುವ ಜವಾಬ್ದಾರಿ ನಮ್ಮದು.

—ಹೀಗೆನ್ನುತ್ತಾ ವೈಸರಾಯರು ಈ ವಿಷಯದಲ್ಲಿ ಗಾಂಧಿಜಿ ಮತ್ತು ತಮ್ಮೊಳಗೆ ಆದ ಪತ್ರವ್ಯವಹಾರವನ್ನು ಸೂಚಿಸಿ ಹೀಗೆಂದರು. "ಪ್ರಾಮಾಣಿಕತೆಯಿಂದ ತಮ್ಮ ಅಭಿಪ್ರಾಯವನ್ನು ಸೂಚಿಸುವವರ ವಿಷಯವಾಗಿ ನನಗೆ ತುಂಬಾ ಗೌರವವಿದೆ. ಹಿಂಸೆಗೆ ಜಯವಾಗಬೇಕೆಂದಾಗಲಿ, ಯುದ್ಧ ಬೇಕೆಂದಾಗಲಿ ಯಾರೂ ಯುದ್ಧ ಮಾಡುವುದಿಲ್ಲ. ಆದರೆ, ಒಮ್ಮೆ ಯುದ್ಧ ಸಾರಿದ ಮೇಲೆ ಸಂರಕ್ಷಣೆಗಾಗಿ ಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ.

ಈ ದೇಶವನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದು. ಆದ್ದರಿಂದ ಈ ದೇಶದ ಯುದ್ಧ ಪ್ರಯತ್ನಗಳಿಗೆ ಯಾವ ರೀತಿಯಿಂದಲೂ ತಡೆಯುಂಟಾಗದಂತೆ ನಾವು ನೋಡಿಕೊಳ್ಳಬೇಕು. ಪ್ರತಿಯೊಬ್ಬ ಸಿಪಾಯಿಗೂ ಸಾಕಷ್ಟು ಶಸ್ತ್ರಾಸ್ತ್ರ ಮದ್ದುಗುಂಡುಗಳು ಸಿಗುವಂತೆ ನಾವು ನೋಡಬೇಕು. ಈ ಯತ್ನಗಳಿಗೆ ಭಾಷಣಗಳಿಂದ ಇನ್ನು ಯಾವುದೇ ವಿಧದ ಕಾರ್ಯಗಳಿಂದ ತಡೆಯುಂಟಾಗಬಾರದು. ತಡೆಯಾಗಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ. ಆದ್ದರಿಂದ ಈಗ ನಡೆಯುವ ಚಳವಳವು ದೇಶದ ಜನರ ನಿಜವಾದ ಭಾವನೆಗೆ ಸ್ವಲ್ಪವೂ ಸರಿಹೋಗುವುದಿಲ್ಲವೆಂದು ನನಗೆ ಅನ್ನಿಸಿದ್ದರಿಂದ ಈ ಚಳವಳವನ್ನು ಅಡಗಿಸಬೇಕಾಗಿದೆ. ಇದು ನನಗೆ ತುಂಬಾ ವಿಷಾದಕರವಾಗಿದೆ.

"ಭಾರತವು ಹಿಟ್ಲರ್ ಶಾಹಿಯನ್ನು ವಿರೋಧಿಸುತ್ತದೆ. ಎಲ್ಲಾ ಪಕ್ಷಗಳ ಮುಖಂಡರೂ ಈ ಕುರಿತು ಏಕಮತ್ಯದವರಾಗಿದ್ದಾರೆ. ಇನ್ನು ಮುಂದಾದರೂ ಇದೇ ಅಭಿಪ್ರಾಯವು ಉಳಿಯಲಿ ಎಂದು ನಾನು ಆಶಿಸುತ್ತೇನೆ"

ಮತ್ತೆ ಅವರು ಕಳೆದ ವರ್ಷದ ಘಟನೆಗಳನ್ನು ವಿಸ್ತೃತವಾಗಿ ವಿವರಿಸಿದ್ದಲ್ಲದೆ ಯುದ್ಧ ಪ್ರಯತ್ನಕ್ಕೆ ಭಾರತವು ಈ ವರೆಗೆ ಮಾಡಿದ ಸಹಾಯವನ್ನು, ಯುದ್ಧದ ಮೂಲಕ ಭಾರತದಲ್ಲಿ ನಡೆದ ಔದ್ಯೋಗಿಕ ಅಭಿವೃದ್ಧಿಯನ್ನೂ ತಿಳಿಸಿದರು. ಆ ಮೇಲೆ ಅವರು ರಾಜಕೀಯ ಬಿಕ್ಕಟ್ಟಿನ ಕುರಿತು ಮಾತನಾಡಿ ಘಟನಾತ್ಮಕ ತೊಡಕನ್ನು ಬಿಡಿಸಲು ಚಕ್ರವರ್ತಿ ಸರಕಾರದವರು ಹಾಗು ತಾವು ಮಾಡಿದ್ದ ಪ್ರಯತ್ನಗಳನ್ನು ಉಲ್ಲೇಖಿಸಿ, ಭಾರತದಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಆಗಸ್ಟ್ ಎಂಟನೇ ತಾರೀಕಿನ ತಮ್ಮ ಸೂಚನೆಗಳನ್ನು ಸ್ವೀಕರಿಸಲು ಮುಂದೆ ಬರುವರೆಂದು ತಮ್ಮ ಆಶೆಯಿದೆಯೆಂದೂ ತಿಳಿಸಿದರು. ಮತ್ತು ಅವರು ಈ ರೀತಿ ಹೇಳಿದರು. "ಚಕ್ರವರ್ತಿ ಸರಕಾರದವರು ಹಿಂದುಸ್ಥಾನದ ಘಟನಾತ್ಮಕ ಪ್ರಶ್ನೆಯನ್ನು ಬಿಡಿಸಲು ಬಹಳ ಆತುರರಿರುವರು. ಆದರೆ ಭಾರತದಲ್ಲಿ ಮುಖ್ಯ ಮುಖ್ಯ ಪಕ್ಷಗಳ ಗುರಿ, ಉದ್ದೇಶ ಹಾಗು ಹಿತಸಂಬಂಧಗಳಲ್ಲಿ ಐಕ್ಯವನ್ನುಂಟುಮಾಡಲು ನಮಗೆ ಶಕ್ಯವಾಗಿಲ್ಲ. ಭಾರತದ ಪ್ರಗತಿಗೆ ಈ ತರದ ಐಕ್ಯವು ಅವಶ್ಯವಾಗಿರುವದು. ಆದರೂ ನಾವು ಧೈರ್ಯಗುಂದಿಲ್ಲ. ಆದಷ್ಟು ಬೇಗನೆ ಸಾಮ್ರಾಂತ ಸ್ವರಾಜ್ಯವನ್ನು ದಯಪಾಲಿಸುವದೇ ನಮ್ಮ ಗುರಿಯಾಗಿರುವದು. ಈ ವರೆಗೆ ಮಾಡಿದ್ದಕ್ಕಿಂತ ಹೆಚ್ಚಿಗೇನೂ ನಾವು ಮಾಡುವದು ಉಳಿದಿಲ್ಲ. ಭಾರತದಲ್ಲಿ ಬೇರೆ ಬೇರೆ ಪಕ್ಷದವರು ಮತ್ತು ಅವುಗಳ ಮುಖಂಡರು ಸಮ್ಮಿಲಿತರಾಗಿ ಪರಸ್ಪರ ಒಡಂಬಡಿಕೆ ಮಾಡಿಕೊಂಡು ಬಿಕ್ಕಟ್ಟು ಬಗೆಹರಿಸಲು ಮುಂದೆ ಬರಬೇಕು. ಈ ಸಂಬಂಧದಲ್ಲಿ ಮುಂದಿನ ಹೆಜ್ಜೆ ಇಡದೆ ಇದ್ದುದಲ್ಲಿ ಚಕ್ರವರ್ತಿ ಸರಕಾರದ ದೋಷವೇನೂ ಇರುವದಿಲ್ಲ. ತಮಗೆ ಸಾಧ್ಯವಿದ್ದುದನ್ನೆಲ್ಲ ಅವರು ಮಾಡಿರುವರು. ಭಾರತದ ರಾಜಕೀಯ ಮುಖಂಡರು ಹಾಗು ರಾಜಕೀಯ ಪಕ್ಷಗಳು ಈ ಸಮಯದಲ್ಲಿ ತಮ್ಮ ತಮ್ಮಲ್ಲಿಯ ಭಿನ್ನಾಭಿಪ್ರಾಯಗಳನ್ನು ಒಂದಿಗಿಟ್ಟು ಪರಸ್ಪರ ಒಡಂಬಡಿಕೆ ಮಾಡಿಕೊಳ್ಳಲು ಯತ್ನಿಸಬೇಕೆಂದು ಅನೇಕರು ಸೂಚಿಸಿರುವರು. ಈ ಸೂಚನೆಗಳ ಸಂಬಂಧದಲ್ಲಿ ಚಕ್ರವರ್ತಿ ಸರಕಾರದವರು ಸದಿಚ್ಛೆ ಹಾಗು ಸಹಾನುಭೂತಿಯುಳ್ಳವರೇ ಇರುವರು.

ಔದ್ಯೋಗಿಕ ಅಭಿವೃದ್ಧಿ

ಅನಂತರ ವೈಸರಾಯರು ಔದ್ಯೋಗಿಕ ಅಭಿವೃದ್ಧಿಯ ಕುರಿತು ಈ ರೀತಿ ತಿಳಿಸಿದರು:—ಅಲ್ಯುಮಿನಮ್ ಉದ್ಯೋಗವು ಪ್ರಮುಖ ಉದ್ಯೋಗವಾಗಿದ್ದು ಅವಶ್ಯವಾದ ಯಾವತ್ತೂ ಸರಕು ಶೀಘ್ರದಲ್ಲಿ ಇಲ್ಲಿಯೇ ಹೊರಡಿಸಲ್ಪಡುವದು. ಭಾರತದ ಕಚ್ಚಾ ಸರಕುಗಳು ಹೇರಳವಾಗಿ ದೊರೆಯುತ್ತಿದ್ದು ನಮ್ಮ ಸರಕಾರದವರು ಈಗ ಕೊಟ್ಟ ಸೌಕರ್ಯಗಳಿಂದ ಯುದ್ಧಕ್ಕೆ ಅವಶ್ಯವಾದ ಹಾಗೂ ಮಹತ್ವದ್ದಾದ ಸರಕು ಶೀಘ್ರದಲ್ಲಿ ಭಾರತದಲ್ಲಿ ಹೊರಡುವುದು. ಶಾಂತತೆಯ ಕಾಲದಲ್ಲಿ ಈ ಸರಕು ಅಷ್ಟೇ ಮಹತ್ವದ್ದಿರುವುದು.

ಅನಂತರ ಅವರು ಪೂರೈಕೆ ಖಾತೆಯ ಮೇಲೆ ಮಾಡಲಾಗುತ್ತಿರುವ ಟೀಕೆಗಳ ಕುರಿತು ಹೀಗೆ ಹೇಳಿದರು. 'ಪೂರೈಕೆ ಖಾತೆಯು ಯಾವದೇ ಯೋಜನೆಯನ್ನು ತೀವ್ರ ಕೈಕೊಂಡು ಅವ್ಯಾಹತವಾಗಿ ಅದನ್ನು ನಡಿಸುವುದಿಲ್ಲವೆಂಬ ಟೀಕೆಗಳು ಮಾಡಲ್ಪಡುತ್ತಿವೆ. ಆದರೆ ಪೂರೈಕೆ ಖಾತೆಯ ಅಧಿಕಾರ ಹಾಗು ಕಾರ್ಯಗಳು ಇತರ ದೇಶಗಳಂತೆ ಇಲ್ಲಿಯೂ ಒಂದು ಮಟ್ಟಿಗೆ ಮರ್ಯಾದಿತವಾಗಿರುವುವು. ಈ ದೇಶದಲ್ಲಿಯ ಸಾಮಾನುಗಳನ್ನು ತೆಗೆದುಕೊಳ್ಳುವ ಪರದೇಶಗಳ ಅಧಿಕಾರಿಗಳಿಗೆ ತೀವ್ರ ಒತ್ತಾಯ ಮಾಡಲೇ ಬೇಕೆಂದು ಭಾರತ ಸರಕಾರಕ್ಕೆ ಅಧಿಕಾರವಿಲ್ಲ. ಬಿನ್ನಹಮಾಡಿಕೊಳ್ಳುವದಷ್ಟೇ ನಮ್ಮ ಕಡೆಗಿದೆ. ಮತ್ತು ಕಳೆದ ಸ್ವಲ್ಪ ವಾರಗಳಲ್ಲಿ ನಮ್ಮ ಬಿನ್ನಹಕ್ಕೆ ಸ್ವಲ್ಪ ಮನ್ನಣೆಯೂ ದೊರೆತಿದೆ. ಆದ್ದರಿಂದ ಇನ್ನು ಮುಂದೆ ಪೂರೈಕೆ ಖಾತೆಯು ತನ್ನ ಕಾರ್ಯವನ್ನು ಭರದಿಂದ ಸಾಗಿಸುವುದು. ಇದರಂತೆ ಮದ್ದುಗುಂಡುಗಳನ್ನೂ ಹೆಚ್ಚಾಗಿ ನಿರ್ಮಿಸುವದು ಕೈಕೊಳ್ಳಲಾಗಿದೆ.

ಪ್ರಾಚ್ಯ ರಾಷ್ಟ್ರಗಳ ಪರಿಷತ್ತು

ಕೊನೆಯಲ್ಲಿ ವೈಸರಾಯರು ಪ್ರಾಚ್ಯ ರಾಷ್ಟ್ರಗಳ ಪರಿಷತ್ತಿನ ಫಲಶ್ರುತಿಯನ್ನು ವಿವರಿಸುತ್ತ ಯುದ್ಧಕ್ಕೆ ಸಾಮಾನು ಪೂರೈಸುವಲ್ಲಿ ಸಂಘಟಿತ ಧೋರಣವನ್ನು ಕೈಕೊಳ್ಳಬೇಕೆಂದು ಪರಿಷತ್ತಿನಲ್ಲಿ ನಿಶ್ಚಿತವಾಗಿದ್ದು ಭಾರತ ಸರಕಾರದವರು ಆ ಸೂಚನೆಗಳಂತೆ ನಡೆಯಲು ಸಿದ್ಧರಿರುವರೆಂದು ಹೇಳಿ ತಮ್ಮ ಭಾಷಣ ಮುಗಿಸಿದರು.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction chit Funds ranging from Rs. 100/ to Rs. 5000/ run regularly on systematic lines. Unique Banking facilities to Businessmen and interested Public.

Apply for particulars—

K. R. GURU, *Managing Director*

ಪರಮ ರಹಸ್ಯ

ನಯನಾನಂದಕರವಾದ ಸೌಂದರ್ಯಕ್ಕೆ ಒಳ್ಳೆಯ ಸಂತಾನಕ್ಕೆ ಆರೋಗ್ಯವೇ ಕಾರಣ!

ಸ್ತ್ರೀಯರಿಗೆ ಎಂತಹ ಋತು ದೋಷಗಳೂ ಇಲ್ಲದೆ ಆರೋಗ್ಯವನ್ನು ಕಾಪಾಡುತ್ತಾ ಸಂತಾನ ಸಫಲತೆಯನ್ನುಂಟುಮಾಡುವ ಮಹಿಮಾನ್ವಿತ ರಸಾಯನವೇ ಲೋಧ್ರ. ಸ್ತ್ರೀಯರಿಗೆ ಆರೋಗ್ಯವು ಮುಖ್ಯ. ಆದ್ದರಿಂದಲೇ ಲೋಧ್ರ ಸೇವನೆಯೂ ಮುಖ್ಯ.

ಎಲ್ಲಾ ಮದ್ದಿನ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ.

ಕೇಸರಿ ಕುಟೀರಂ :: ರಾಯಪೇಟೆ :: ಮದರಾಸು

ಫೆಡರೇಶನಿಗೆ ನೈತಿಕ ಬೆಂಬಲವಿಲ್ಲ

ಆಶ್ರಿತ ಸಂಸ್ಥಾನಗಳಲ್ಲಿ ನಿರಂಕುಶ ಸರಕಾರ

ಭಾರತ ರಾಜಕೀಯದ ಕುರಿತು ಪ್ರೊ| ಕೀಥರ ಲೇಖನ

ಬ್ರಿಟನಿನ ಕರ್ತವ್ಯದ ಕುರಿತು ಹಿತೋಕ್ತಿ.

"ಹಿಂದು ಮುಸಲ್ಮಾನ ಸಮಸ್ಯೆಯು ಬ್ರಿಟಿಷ ಸರಕಾರದ ಕೈ ಚಳಕದಿಂದ ತೀರಲಿಕ್ಕಾಗದದು. ಆದರೆ ಸಂಸ್ಥಾನಗಳ ಪರಿಸ್ಥಿತಿಯನ್ನು ಸುಧಾರಿಸುವದು ಅದರ ಕರ್ತವ್ಯವೇ ಆಗಿದೆ. ಸಂಸ್ಥಾನಿಕ ಪ್ರಜೆಗಳು ಸ್ವರಾಜ್ಯಕ್ಕೆ ಅರ್ಹರಾಗಿದ್ದು ಅವರು ಸ್ವರಾಜ್ಯವನ್ನು ಅಪೇಕ್ಷಿಸುತ್ತಿರುವಾಗಲೂ ಬ್ರಿಟಿಷ ಸರಕಾರವು ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವವನ್ನು ಇರಗೊಡಿಸುವದು ತರ್ಕಕ್ಕೂ ಸರಿಬರುವದಿಲ್ಲ. ಅದು ವಾಂಛನೀಯವೂ ಅಲ್ಲ. ಆದ್ದರಿಂದಲೇ ಗೊತ್ತಾದ ಸಂಯುಕ್ತ ರಾಜ್ಯ ಘಟನೆಗೆ ನೈತಿಕ ಬೆಂಬಲವಿರುವದಿಲ್ಲವೆಂದು ಹೇಳುವದಾಗಿದೆ. ದೇಶೀ ರಾಜರು ತಮ್ಮ ಸಂಸ್ಥಾನಗಳಲ್ಲಿ ಸ್ವೇಚ್ಛಾಪರ ಅಪ್ರಾಗತಿಕ ಆಡಳಿತವನ್ನು ನಡೆಸಲಿಕ್ಕೆ ಸ್ವಾತಂತ್ರ್ಯ ಪಡೆದ, ಕೇಂದ್ರ ಸರಕಾರದಲ್ಲಿ ಪ್ರಜಾಪ್ರಭುತ್ವ ಕ್ರಮದ ಆಡಳಿತಕ್ಕೆ ಅವರು ಎಷ್ಟು ಬಾಧೆಗಳನ್ನು ತಂದೊಡ್ಡಲಿಕ್ಕಾಗಿಯೇ ಗೊತ್ತಾದ ರಾಜ್ಯ ಘಟನೆಯು ಇದೆಯೆಂದು ಯಾರೂ ಹೇಳಬಹುದು. ಆದ್ದರಿಂದ ಹಿಂದುಸ್ಥಾನದ ಪ್ರಗತಿಗೆ ಅದು ಎಷ್ಟುಮಾತ್ರಕ್ಕೂ ಅನುಕೂಲವಾಗಿಲ್ಲದಿದ್ದು ಎಲ್ಲಾ ದೃಷ್ಟಿಗಳಿಂದ ಸಂಪೂರ್ಣ ತ್ಯಾಜ್ಯವಾಗಿರುತ್ತದೆ." ಹೀಗೆಂದು ಅಖಿಲ ಪ್ರಪಂಚದಲ್ಲಿಯೇ ಬಹಳ ಧೀಮಂತ ರಾಜಕೀಯ ತಜ್ಞರೆನಿಸಿದ ಪ್ರೊಫೆಸರ್ ಕೀಥರು 'ಇಂಡಿಯನ್ ರಿವ್ಯೂ' ಪತ್ರಿಕೆಯಲ್ಲಿ ಒಂದು ವಿಚಾರಾತ್ಮಕ ಲೇಖನವನ್ನು ಬರೆದಿರುವರು. ಅವರು ಅದರಲ್ಲಿ ಮತ್ತು ಹೀಗೆಂದಿರುವರು:—

ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವ

ಸಂಸ್ಥಾನಗಳ ರಾಜಕೀಯ ಪರಿಸ್ಥಿತಿಯನ್ನು ಕುರಿತು ಪ್ರೊಫೆಸರ್ ಕೀಥರು ಹೀಗನ್ನುತ್ತಾರೆ:- ಅಲ್ಲಿಯೂ ವಿದ್ಯಮಾನಗಳು ಸಂಪೂರ್ಣ ಭಿನ್ನವೂ ವಿಚಿತ್ರವೂ ಆಗಿರುತ್ತವೆ. ಅಲ್ಲಿ ನಿರಂಕುಶ ಪ್ರಭುತ್ವವಿರುವದು ಸೂರ್ಯ ಬೆಳಕಿನಷ್ಟು ಸ್ಪಷ್ಟವಿರುತ್ತದೆ. ಅದು ಪ್ರಜೆಗಳ ಹಿತಕ್ಕಾಗಿಯಾದರೂ ಇದೆಯೋ ಎಂದು ನಾವು ಆಲೋಚಿಸಬೇಕು. ಹಾಗಿರುವದಿಲ್ಲವಾದರೆ ಪ್ರಜಾಭ್ಯುದಯಕ್ಕಾಗಿಯೇ ಸಂಸ್ಥಾನಗಳಲ್ಲಿ ಜವಾಬುದಾರಿ ಸರಕಾರವನ್ನು ಸ್ಥಾಪಿಸುವದು ದೇಶೀ ರಾಜರುಗಳ ಕರ್ತವ್ಯವಿರುತ್ತದೆಂದು ಅವರಿಗೆ ತಿಳಿಸುವದು ಸಾರ್ವಭೌಮ ಸರಕಾರದ ಧರ್ಮವಿದೆ. ಪ್ರಾಂತ್ಯಗಳಲ್ಲಿ ಜವಾಬುದಾರ ಸರಕಾರವಿರುವಾಗ ಸಂಸ್ಥಾನಗಳಲ್ಲಿ ನಿರಂಕುಶ ಸರಕಾರವಿರುವದರಲ್ಲಿ ಅರ್ಥವಿಲ್ಲ. ಯಾಕೆಂದರೆ ಜವಾಬುದಾರ ಸರಕಾರದ ಬ್ರಿಟಿಷ ಇಂಡಿಯಾ ಪ್ರಾಂತಗಳು ನಿರಂಕುಶ ಸರಕಾರದ ಸಂಸ್ಥಾನಗಳೊಂದಿಗೆ ಕೂಡಿ ಕೇಂದ್ರದಲ್ಲಿ ಸಂಯುಕ್ತ ಸರಕಾರವನ್ನು ಸ್ಥಾಪಿಸುವದು ಅಭ್ಯುದಯದ ಚಿಹ್ನೆಯಲ್ಲ. ಅದಕ್ಕೆ ನೀತಿಯ ಬೆಂಬಲವಿರುವದಿಲ್ಲ.

ಹಿಂದೂ ಮುಸ್ಲಿಂ ಪ್ರಶ್ನೆ

ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನರೂ ರಾಜಿಯಾಗಿ ತಮ್ಮ ರಾಜಕೀಯ ಭವಿಷ್ಯವನ್ನು ಕುರಿತು ಒಂದು ಒಮ್ಮತದ ನಿರ್ಧಾರಕ್ಕೆ ಬರುವ ಹಾಗೆ ಅವರನ್ನು ಒಡಂಬಡಿಸಬೇಕಾದದ್ದು ಬ್ರಿಟಿಷ ಸರಕಾರದ ಕರ್ತವ್ಯವಿರುತ್ತದೆ. ಹಿಂದು ಮುಸಲ್ಮಾನರು ರಾಜಕೀಯದ ದೃಷ್ಟಿಗಾದರೂ ಒಂದಾಗಿರಲಿಕ್ಕೆ ನಿಜವಾದ ಯಾವ ಅಭ್ಯಂತರವೂ ಇರುವದಿಲ್ಲ. ಧಾರ್ಮಿಕ ತಳಗಟ್ಟಿನ ಮೇಲೆ ಆಧರಿಸಿರುವ ರಾಜಕೀಯ ಜೀವನವು ಮಾತ್ರ ಹಿಂದೂ ಮುಸಲ್ಮಾನರಿಗೆ ತಕ್ಕುದಾಗಿದೆ ಎಂದು ಹೇಳಲಿಕ್ಕೆ ಆಧಾರವಿಲ್ಲ. ಆದ್ದರಿಂದ ತಂತಮ್ಮ ಧರ್ಮಾಚರಣೆಗೆ ಬೇಕಾದ ರಕ್ಷಣೋಪಾಯಗಳನ್ನು ರೂಪಿಸಿಕೊಂಡು ಹಿಂದು ಮುಸಲ್ಮಾನರು ಒಟ್ಟಾಗಿ ಒಂದು ಸ್ವರಾಜ್ಯ ಸರಕಾರವನ್ನು ರಚಿಸುವದೂ ಬ್ರಿಟನಿನಲ್ಲಿರುವಂತೆ ಹಿಂದುಸ್ಥಾನದಲ್ಲಿಯೂ ಬಹುಮತ ಸರಕಾರ ಕ್ರಮದಿಂದ ಜನತೆಯು ಲಾಭ ಪಡೆಯುವದೂ ಸಾಧ್ಯವಿದೆ.

ಕೊನೆಗೆ ಅವರು ಹೀಗೆಂದಿರುವರು:

"ಸ್ವರಾಜ್ಯಶಾಸನವನ್ನು ನೀವು ಒಪ್ಪಲೇ ಬೇಕೆಂದು ಹಿಂದುಸ್ಥಾನದ ಮುಸಲ್ಮಾನರನ್ನು ಒತ್ತಾಯಪಡಿಸುವುದು ಬ್ರಿಟಿಷ ಸರಕಾರಕ್ಕೆ ಹೇಗೆ ಅಸಾಧ್ಯವೋ, ಹಿಂದುಸ್ಥಾನವನ್ನು ವಿಭಾಗಿಸಿ ಅದರ ಒಂದು ತುಂಡನ್ನು ಮುಸಲ್ಮಾನರಿಗೆ ಕೊಡಿ ಎಂದು ಹಿಂದುಗಳನ್ನು ಒತ್ತಾಯಿಸುವದೂ ಬ್ರಿಟಿಷ ಸರಕಾರಕ್ಕೆ ಅಸಾಧ್ಯ ವಿಷಯವೇ ಆಗಿರುವುದು."

ನೋಟೀಸು.

1941-42ನೇ ಯಸ್ಸಿಯ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳ ಕಾಮಗಾರಿ ಬಗ್ಗೆ ರಿಜಿಸ್ಟ್ರಿಗೆ ದಾಖಲುಮಾಡಲ್ಪಟ್ಟ ಕಂಟ್ರಾಕ್ಟದಾರರಿಂದ ಮೊಹರು ಮಾಡಲ್ಪಟ್ಟ ಟೆಂಡರು ಯಾನೆ ದರಖಾಸ್ತಗಳು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರರ ಆಫೀಸಿನಲ್ಲಿ ತಾರೀಖು 7-1-41ನೇ ಅಪರಾಹ್ನ ಘಂಟೆ 4ರ ತನಕ ತೆಗೆದುಕೊಳ್ಳಲಾಗುವದು.

ಕಂಟ್ರಾಕ್ಟಿನ ಸಂಬಂಧಪಟ್ಟ ಅಂದಾಜುಪಟ್ಟಿಗಳು ವಗೈರೆ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರರ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ನೋಡಬಹುದು.

ವಿ. ಟಿ. ನಾರಾಯಣನ್ ನಾಯರ
ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರ್.
ತಾ. 8-12-1940



ಆಯುರ್ವೇದಾಶ್ರಮಂ
1898ರಲ್ಲಿ ಸ್ಥಾಪಿತವಾದುದು ಮದರಾಸು.
K. A. I.

Ready for Sale!

1941

SHARADA POCKET DIARIES

Small Size	0- 5-0
" " (with pocket)	0- 6-0
Big Size	0- 9-0
" " (with pocket)	0-11-0

SHARADA PRESS, MANGALORE.

ಮೂರು ವಾಚುಗಳು ಮತ್ತು 895 ಶೃಂಗಾರ ಸಾಮಗ್ರಿಗಳು
ರೂ. 1-4-0ಕ್ಕೆ ದೊರಕುವುವು



ನಮ್ಮ ಸುಗಂಧಕರವಾದ ಒಟ್ಟೋ ರೋಸ್‌ನ 2 ಬಾಟ್ಲಿಗಳನ್ನು ಸುಮ್ಮಗೇ 1-4-0 ಕೊಟ್ಟು ಪಡಕೊಳ್ಳುವವರಿಗೆ ಒಂದು ಬೇಂಡ್ ಸಹಿತವಾದ ಬಂಗಾರದಗಿಲ್ಟಿನ ಡಮ್ಮಿ ರಿಸ್ಟ್‌ವಾಚ್, ಒಂದು ಕ್ವೈಟ್ ಟೈಮ್ ಡಮ್ಮಿ ಪೋಕೆಟ್ ವಾಚ್, ಒಂದು ಸೇಫ್ಟೀ ರೇಜರ್ ಒಂದು ಬಾಚಣಿಗೆ, ಒಂದು ಶೇವಿಂಗ್ ಸೋಪ್ಪು, ಒಂದು ಶೇವಿಂಗ್ ಬ್ರಶ್ಶು, ಒಂದು ಪಾಕೆಟ್ ಪೌಡರು, ಒಂದು ಕ್ಲಿಪ್ ಸಹಿತವಾದ ಪೆನ್ಸಿಲು, ಒಂದು ಸಿಗರೇಟ್ ಕೇಸ್, ಒಂದು ಸಿಗರೇಟ್ ಲೈಟರ್, ಒಂದು ಟವೆಲು, ಒಂದು ಉಂಗುರ, ಒಂದು ಜಸ್ಟ್ ಡೀಟ್ ಫೋಕಸ್ ಫ್ಲ್ಯಾಶ್ ಒಂದು ಸ್ಪೆಷ್ ಲೈಟು ಅಥವಾ ಒಂದು ಭದ್ರವಾದ 10 ವರ್ಷ ಗ್ಯಾರಂಟಿಯುಳ್ಳ ಟೈಂಪೀಸ್ ಕೊಡಲ್ಪಡುವುದು. ಪ್ಯಾಕಿಂಗ್ ದರ 12 ಅಣೆ ಬೇರೆಗೆ ಕೊಡಬೇಕಾಗುವುದು.

ಕೆಳಗಿನ ವಿಳಾಸಕ್ಕೆ ಬರೆಯಿರಿ: **The FRENCH WATCH Co.,**
Post Box No. 12210, CALCUTTA (S. B.)

ಈ ವಾರದ ಕತೆ:

ಆ ನೆನಹು!

ಅನುವಾದಕರು:
ಶ್ರೀ. ಕೆ. ಎಸ್. ಶೆಣೈ ಕಾರ್ಕಳ

ಜಾತ್ರೆ ಸುಗ್ಗಿದ ಮೇಲೆ ನಾನು ಊರಿಗೆ ಹೊರಟಿದ್ದೆ. ಮನೋಹರ ಒಳಗಿನಿಂದ ಹೊರಗೆ ಬಂದು—'ಮಾಮಾ ಎಲ್ಲಿಗೆ ಹೊರಟದ್ದು? ಅಮ್ಮ ರೊಟ್ಟಿ ಮಾಡಿದ್ದಾಳೆ. ಹೋಳಿಗೆ ಮಾಡಿದ್ದಾಳೆ. ಲಾಡು ಮಾಡಿದ್ದಾಳೆ. ನಾನೂ ತಿಂದು ಬಂದೆ. ನಿನಗೂ ಇಟ್ಟಿದ್ದಾಳೆ. ಒಳಗೆ ಬಾ ಮಾಮಾ!' ಎಂದು ನನ್ನ ಕೈ ಹಿಡಿದು ಎಳೆದ.

ಜೀವನದಲ್ಲಿ ಸುದೀರ್ಘವಾದ ನಾಲ್ವತ್ತು ವರ್ಷಗಳನ್ನು ಕಳೆದಿದ್ದೆ. ಆದರೆ ನನ್ನ ಮೇಲೆ, ಮನೋಹರನ ಪ್ರೇಮ ಇಟ್ಟಂತೆ ಮತ್ತೆ ಯಾರೂ ಇಟ್ಟದನ್ನು ನಾನು ಕಂಡಿರಲಿಲ್ಲ. ನನಗೆ ಮಕ್ಕಳು ಇರಲಿಲ್ಲ. ಮನೆಯಲ್ಲಿ ಹೆಂಡತಿ ಬಿಟ್ಟು ಯಾರೂ ಇರಲಿಲ್ಲ. ತಂಗಿ, ಅಕ್ಕಾ, ಎಂದು ಕರೆಯುವ ಭಾಗ್ಯ ನನಗಿರಲಿಲ್ಲ. ಆದರೂ ಈ ಬಾಲಕನ ನಿಸ್ವಾರ್ಥ ಪ್ರೇಮವನ್ನು ನೋಡಿ ನನ್ನ ಹೃದಯವು ವಿಹ್ವಲವಾಯಿತು. ಅವನನ್ನು ತೊಡೆಯ ಮೇಲೆ ಕುಳ್ಳಿರಿಸಿ ತಲೆಯನ್ನು ಮುದ್ದಿಟ್ಟೆ.

ವರ್ಷಕ್ಕೊಮ್ಮೆ ಜಾತ್ರೆಗೆ ಬರುತ್ತಿದ್ದೆ. ಊರಲ್ಲಿ ಬೇರೆ ಯಾರೂ ಪರಿಚಯದವರು ಇರಲಿಲ್ಲವಾದ್ದರಿಂದ, ಬಂದಾಗ ನಾರಾಯಣರಾಯರಲ್ಲಿ ಉಳಕೊಳ್ಳುತ್ತಿದ್ದೆ. ನನ್ನ ಕಾಫಿ, ತಿಂಡಿ, ಊಟ, ಉಪಚಾರ, ಆರಾಮ ವಿರಾಮ ಎಲ್ಲ ಅವರಲ್ಲಿ. ಅವರ ಒಟ್ಟಿಗೆಯೇ ಆಗುತ್ತಿತ್ತು. ಆದ್ದರಿಂದ ಅವರಿಗೂ ನನಗೂ ಒಂದು ತರದ ಆತ್ಮೀಯತೆ ಉಂಟಾಗಿತ್ತು. ನಾನು ಮನೋಹರನ ತಲೆಯನ್ನೆತ್ತಿ—'ಮನ್ನೂ, ನಮ್ಮೂರಿಗೆ ಬರುವೆಯಾ?' ಎಂದು ಕೇಳಿದೆ.

'ನಿಮ್ಮೂರು! ಯಾವುದು ಮಾಮಾ?'

'ಮೈಸೂರು, ಮನ್ನೂ!'

'ಹಾಂ, ಹಾಂ, ದಸರೆಗೆ ನಾನು ಬರುವೆನು, ಅಮ್ಮ ಬರುವಳು, ಅಪ್ಪ ಬರುವನು. ಮಾಮಾ, ಮೈಸೂರು ಬಹಳ ದೂರವೆ?'

'ಇಲ್ಲ ಮನ್ನೂ! ಬಹಳ ಸಮೀಪ ಇದೆ.— ಓ ಅಂದರೆ ಅಲ್ಲಿ ಕೇಳಬಹುದು. ನೀವೆಲ್ಲಾ ಬರುವಿರಾ?'

'ಹೌದು ಮಾಮಾ! ಆದರೆ ನೀನು ಈಗ ಹೋಗಬಾರದು. ದಸರೆಗೆ ನಾವೆಲ್ಲ ಒಟ್ಟಿಗೆ ಹೋಗುವ.'

ಮನೋಹರನ ಮಾತು ಮುಗಿಯಬೇಕಾದರೆ ಅವನ ತಾಯಿ ನನ್ನನ್ನು ಒಳಗೆ ಕರೆದಳು. ಅಲ್ಲಿ ಫಲಾಹಾರ ಮಾಗುತ್ತಿದ್ದಾಗ ಮನೋಹರ ಪುನಹ ಅದೇ ಮಾತನ್ನು ತಂದೆಯ ಹತ್ತಿರ ಹೇಳಿದ. ನಾರಾಯಣರಾಯರು 'ಶಾಸ್ತ್ರಿಗಳೇ ಯಾಕಿಷ್ಟು ಅವಸರ! ಮೆಲ್ಲಗೆ ಹೋದರಾಯಿತು. ದಸರೆಗೆ ನಾವೂ ಬರುವೆವಂತೆ!' ಎಂದರು.

ಅವರು ಹೇಳಿದುದಕ್ಕಾಗಿ ಅಲ್ಲ, ಮನೋಹರನ ಮಾತನ್ನು ಮೀರಲಿಕ್ಕಾಗದೆ ನಾನು ಉಳಕೊಂಡೆ.

— ೨ —

ಮನೋಹರನ ಸುಖವೇ ಅವರ ಸುಖ. ಅವನ ಸಂತೋಷವೇ ಅವರ ಸಂತೋಷ. ನಾರಾಯಣರಾಯರ ಮನೆಯಲ್ಲಿ ನನಗೆ ಎಂದಿಗಿಂತಲೂ ಹೆಚ್ಚಿನ ಆದರ ಸತ್ಕಾರಗಳು ಆಗಲಾರಂಭಿಸಿದುವು. ನಾರಾಯಣರಾಯರು ಊರ ದೊಡ್ಡ ಶ್ರೀಮಂತರು. ಆದರೆ ಮನೆಯಲ್ಲಿ ನೌಕರ ಚಾಕರರು ಬಿಟ್ಟು ಆವರು ಮೂವರೇ ವಾಸವಾಗಿದ್ದರು. ಅವರು, ಅವರ ಹೆಂಡತಿ ಮತ್ತು ಚಿ. ಮನೋಹರ. ಮನೋಹರ ಆ ಮನೆಯಲ್ಲಿ ಅಂಧಕಾರವನ್ನು ದೂರಮಾಡುವ ಪ್ರಕಾಶಮಾನವಾದ ದೀಪದಂತಿದ್ದ.

ಒಂದು ಪ್ರಾತಃಕಾಲ ಮನೆಯ ಮುಂದುಗಡೆ ಯಾರೋ ಒಬ್ಬ ಮುದುಕಿ ಭಿಕ್ಷೆ ಬೇಡಿ ನಿಂತಿದ್ದಳು. ನಾಲ್ಕಡಿ ಎತ್ತರವಾದ ಅವಳ ಶರೀರದಲ್ಲಿ ಕೇವಲ ಗೇಣುದ್ದ ಹರಕು ಬಟ್ಟೆಯೊಂದಿತ್ತು. ಗುಳಿಬಿದ್ದ ಅವಳ ಕಣ್ಣುಗಳು ಬಡತನ ಮತ್ತು ಮುದಿತನಗಳ ಕಾತರತೆಯನ್ನು ಹೊರಸೂಸುತ್ತಿದ್ದವು. ಮನೋಹರ ಬಂದು 'ಏನು ಬೇಕಮ್ಮ?' ಎಂದು ಅವಳನ್ನು ವಿನಯದಿಂದ ಕೇಳಿದ. 'ಏನು ಕೊಟ್ಟರೂ ಆಗಬಹುದು' ಎಂದು ಮುದುಕಿ ಕರುಣಸ್ವರದಿಂದ ಹೇಳಿದಳು.

ಮನೋಹರ ಒಳಗೆ ಓಡಿ ಬಂದು ಹರಿವಾಣ ತುಂಬ ಹಬ್ಬದ ಭಕ್ಷ್ಯಗಳನ್ನು ಆವಳಿಗೆ ತಂದುಕೊಟ್ಟ. 'ಸದಾಕಾಲ ಬದುಕು' ಎಂದು ಅವಳು ಅವನನ್ನು ಹರಸಿ ಮುಂದಕ್ಕೆ ಕಾಲಿಟ್ಟಳು. ಅವನ ದೀನ ಜನರ ಮೇಲಿನ ಈ ಪ್ರೇಮವನ್ನು ನೋಡಿ ನನ್ನ ಕಣ್ಣುಗಳು ಆನಂದ ಬಾಷ್ಪದಿಂದ ತುಂಬಿ ಬಂದುವು.

— ೩ —

ಮುಂದಿನ ವರ್ಷ ಜಾತ್ರೆಗೆ ಹೊರಡುವಾಗ ನನ್ನ ಉತ್ಸಾಹ ಉಲ್ಲಾಸಗಳಿಗೆ ಮಿತಿ ಇರಲಿಲ್ಲ. ಮನೋಹರನಿಗಾಗಿ ಮೈಸೂರಿನ ಚಿತ್ರ ವಿಚಿತ್ರ ಆಟದ ಗೊಂಬೆಗಳನ್ನು ಹತ್ತೈವತ್ತು ರೂಪಾಯಿ ಕೊಟ್ಟು ಕೊಂಡುಹೋಗಿದ್ದೆ. ಮನೋಹರನ ಆ ಸುಕುಮಾರ ರೂಪವನ್ನು ನೋಡಲಿಕ್ಕೆ ಕಣ್ಣುಗಳು ವ್ಯಾಕುಲವಾಗಿದ್ದವು. ಮಾಮಾ ಶಬ್ದವನ್ನು ಕೇಳಲಿಕ್ಕೆ ಕಿವಿಗಳು ಉತ್ಕಂಠಿತವಾಗಿದ್ದುವು. ಅವನು ಸುತ್ತಿಕೊಡುವ ಹಿಳ್ಳವನ್ನು ತೆಗೆದುಕೊಳ್ಳಲಿಕ್ಕೆ ಕೈಗಳು ಲಾಲಾಯಿತವಾಗಿದ್ದುವು.

ಆದರೆ....?

ಮೋಟರಿನಿಂದ ಕೆಳಗಿಳಿಯಬೇಕಾದರೆ, 'ಮಾಮಾ' ಎಂದು ನನ್ನನ್ನು ಮುದ್ದಿನಿಂದ ಕರೆಯುವ ನನ್ನ ಅರಗಿಣಿ, ಗೂಡನ್ನು ಬಿಟ್ಟು ಅನಂತ ಆಕಾಶಕ್ಕೆ ಹಾರಿಹೋಗಿದೆ ಎಂದು ಕೇಳಿದೆ. ನನಗೆ ಸಿಡಿಲು ಬಡೆದಂತಾಯಿತು. ನಾನು ವಿಕ್ಷಿಪ್ತನಾದೆ. ಬಂದ ಅದೇ ಮೋಟರಿನಲ್ಲಿ ಪುನಹ ಊರಿಗೆ ಮರಳಿದೆ. ಆ ಮೇಲೆ ನಾನು ಜಾತ್ರೆಗೆ ಹೋಗಲೇ ಇಲ್ಲ. ಯಾರಾದರೂ 'ಊರ ಜಾತ್ರೆ' ಎಂದೊಡನೆ ಮನೋಹರನ ದಿವ್ಯ ರೂಪವು ಕಣ್ಣೆದುರಿನಲ್ಲಿ ನಲಿಯುತೊಡಗಿ ನನಗೆ ಹೇಗೋ ಹೇಗೋ ಆಗುತ್ತದೆ. ಅವನ ಮಾಮಾ ಎನ್ನುವ ಶಬ್ದವು ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತದೆ. ಇದು ಆಗಿ ವರ್ಷಗಳು ಕಳೆದು ಹೋಗಿದ್ದರೂ ಆ ರೂಪು, ಗುಣಗಳು ನನ್ನ ಸ್ಮೃತಿಪಟಲದಲ್ಲಿ ಮೊದಲಿನ ಹಾಗೆಯೇ ಅಂಕಿತವಾಗಿವೆ. ಆ ನೆನಹು ಎಳ್ಳಷ್ಟೂ ಮಾಸಿಹೋಗಿಲ್ಲ.

—ಆಧಾರದಿಂದ

HALFTONE & LINE
BLOCK MAKING
UNDERTAKEN

Sharada Press,
MANGALORE

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ,
ಆಶ್ಚರ್ಯಕರವಾದ ಔಷಧಿ.

GONO KILLER

ಡಾ! ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಸೀಲು ನೋಡಿರಿ.

ಎಲ್ಲಾ ತರದ ಮೂತ್ರರೋಗಗಳ ಮೇಲೆ. ಮಂತ್ರ ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಇಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬರುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, ಗೊನೊ—ರೋಕಸ್ ಎಂಬ ವಿಷಹಾರಿ, ಅದೇ ಮೇರೆಗೆ ಸ್ತ್ರೀಯರಾದ ಭಯಂಕರ ಪ್ರದರ ರೋಗ ಮತ್ತು ತತ್ಸಂಬಂಧವಾದ ಅನೇಕ ದುಃಖದಾಯಕ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವವು.

ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3–0–0 (ವಿ. ಪಿ. ಚಾರ್ಜು 8 ಆಣೆ ಬೇರೆ). ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಾಯಿ 4

Sole Manufacturer: Dr. D. N. JASANI, (S.B.M.) Vithalbhai Patel Road, BOMABY 4

Madras Agent: Appah & Co, China Bazar Madras.

ಮತ್ತೂ ಏನೆರಿಯುವರು ಮಾತಾಡುತ್ತಾರೆ

ಬ್ರಿಟಿಷ್ ಸಾಮ್ರಾಜ್ಯ ಶಾಶ್ವತವಾಗಿರಬೇಕಂತೆ—
ಅದರಿಂದಲೇ ಭಾರತದ ಹಿತವಂತೆ—
ಎಲ್ಲದಕ್ಕಿಂತಲೂ ಮೊದಲು ಭಾರತವಂತೆ—

ಲಂಡನಿನಲ್ಲಿ ಜರುಗಿದ ಒಂದು ಉಪಹಾರ ಸಮಾರಂಭದ ಕಾಲದಲ್ಲಿ ಭಾರತ ಸಚಿವರಾದ ಕರ್ನಲ್ ಎಮೆರಿಯುವರು ಭಾರತವನ್ನು ಕುರಿತು ಈ ಕೆಳಗಿನಂತೆ ಭಾಷಣವನ್ನು ಮಾಡಿದರು.

"ಮೊದಲು ಭಾರತ"

"ಮೊದಲು ಭಾರತ" ವೆಂಬುದು ಪ್ರತಿಯೊಬ್ಬ ಭಾರತೀಯನ ಲಕ್ಷ್ಯದಲ್ಲಿರಬೇಕು. ಇಂದಿನ ಕಠಿಣ ಪರಿಸ್ಥಿತಿಯಲ್ಲಂತೂ ಪ್ರತಿಯೊಬ್ಬ ಭಾರತೀಯನೂ ಭಾರತಕ್ಕಿಂತ ತಮಗೆ ಹೆಚ್ಚಿನದು ಬೇರೊಂದಿಲ್ಲವೆಂಬುದನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಪರಸ್ಪರ ತಮ್ಮ ತಮ್ಮೊಳಗಿನ ಸಂಬಂಧದಲ್ಲಾಗಲಿ, ಅಥವಾ ಸರಕಾರದೊಡನಿರುವ ಸಂಬಂಧದಲ್ಲಾಗಲಿ ಭಾರತವನ್ನು ಅವರು ಮರೆಯಬಾರದು. ಇಂಗ್ಲಿಷರು ಸಹ— ಅವರು ಭಾರತದಲ್ಲಿರಲಿ—ಅಥವಾ ಲಂಡನಿನಲ್ಲಿರಲಿ—ಭಾರತವನ್ನು ಮರೆಯಕೂಡದು. "ಮೊದಲು ಭಾರತ" ವೆಂಬ ನನ್ನ ಮಾತಿನ ಅರ್ಥವಾದರೂ ಸುಲಭವಿದೆ.

ಭಾರತದಲ್ಲಿ ಎಲ್ಲಾ ಇದೆ

"ಭಾರತದಲ್ಲಿ ವಿವಿಧತೆಯಿಂದ ಏಕತೆ ಇದೆ. ಅನುಪಮವಾದ ಒಕ್ಕಟ್ಟಿದೆ. ಅತೀ ಪ್ರಾಚೀನ ಇತಿಹಾಸವುಳ್ಳ ಆ ದೇಶವು ಸಾವಿರಾರು ಧಾಳಿಗಳಿಗೆ ಬಲಿಬಿದ್ದು ನುಗ್ಗಾಗಿದೆ. ಮೊದಲು ಆರ್ಯರು ನುಗ್ಗಿ ನೆಲೆನಿಂತರು. ಅನಂತರ ಮುಸಲ್ಮಾನರು ಧಾಳಿಮಾಡಿ ಗೆದ್ದರು. ಕೊನೆಗೆ ಇಂಗ್ಲಿಷರ ಆಳ್ವಿಕೆಗೆ ಬಂತು. ಆದರೆ ಯಾವ ಕಾಲದಲ್ಲಿಯೂ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಾದ ರಾಜಕೀಯ ಒಕ್ಕಟ್ಟು ಕಂಡುಬರಲಿಲ್ಲ. ಈ ಬಗೆಯ ರಾಜಕೀಯ ಒಕ್ಕಟ್ಟು ಆ ದೇಶದ ಸ್ವಾತಂತ್ರ್ಯದ ಶಾಂತ ಅಭಿವೃದ್ಧಿಗೆ ಅತ್ಯವಶ್ಯವಾಗಿದೆ. ಒಮ್ಮೆ ಭಾರತವು ಮೊದಲಿನಂತೆ ಹಲವು ಸ್ವತಂತ್ರ ದೇಶಗಳಾಗಿ ಮಾರ್ಪಡಿಸಲ್ಪಟ್ಟರೆ, ಮುಂದೆ ಅದರ ಪ್ರಗತಿ ಮತ್ತು ಉತ್ಕರ್ಷಗೆ ಮಾರ್ಗವಿಲ್ಲದಂತಾಗುವದು. ಮೊಗಲ ಸಾಮ್ರಾಜ್ಯವು ನಿಸ್ತೇಜವಾಗಿಳಿಗಿಂದಿದಾಗ ಉಂಟಾದ ಪರಿಸ್ಥಿತಿಯೇ ಆಗಲೂ ಉಂಟಾಗುವುದರಲ್ಲಿ ಅನುಮಾನವಿಲ್ಲ. ಆಗ ಪರಸ್ಪರ ಕಲಹವುಂಟಾಗಿ ಸ್ವತಂತ್ರ ಸಂಘಗಳು ತಲೆಯೆತ್ತದಂತಾಗುವದು. ತಮ್ಮ ದೇಶವನ್ನು ಹೊರಗಣ ಧಾಳಿಯಿಂದ ಹಾಗು ಅಂತಃಕಲಹದ ಕಾಡ್ಗಿಚ್ಚಿನಿಂದ ಪಾರು ಮಾಡಲು ಯಾರಿಗೂ ಶಕ್ತಿಯಿಲ್ಲದಂತಾಗುವದು. ಜಲಮಾರ್ಗವಾಗಿ ಹಾಗು ವಾಯುಮಾರ್ಗವಾಗಿ ಬರುವ ಶತ್ರುಗಳನ್ನು ತಡೆಯಲು ಶಕ್ತಿಯುಳ್ಳದಂತಾಗುವದು.

ಒಮ್ಮತ ಬೇಕು

"ಕಾಂಗ್ರೆಸಿನ ದೃಷ್ಟಿಯಿಂದ ನೋಡಲಿ ಭಾರತೀಯ ಮುಸ್ಲಿಮನ ದೃಷ್ಟಿಯಿಂದ ನೋಡಲಿ, ಇಂಗ್ಲಿಷರ ದೃಷ್ಟಿಯಿಂದ ನೋಡಲಿ—ಭಾರತದ ಪ್ರಶ್ನೆಯು ಮೊತ್ತಮೊದಲಿನದಾಗುವುದು. ಎಲ್ಲರೂ ಸಾಕಷ್ಟು ತಾಳ್ಮೆಯಿಂದ 'ಭಾರತವು ಮೊದಲು' ಎಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಎಲ್ಲರಿಗೆ ಅನುಕೂಲವಾಗುವಂತಹ ಒಕ್ಕಟ್ಟಿನಿಂದ ಭಾರತದ ಏಳ್ಗೆಯನ್ನು ಸಾಧಿಸಬೇಕಲ್ಲದೆ, ಹಠಹಿಡಿದು ತನ್ನಂತೆ ಆಗಬೇಕೆಂದು ಯಾವ ಪಕ್ಷವೂ ಆಗ್ರಹ ಮಾಡಲು ಕೂಡದು. ಭಾರತ ಹೀಗಿದ್ದಂತೆ ಇರಬೇಕು. ಪರಸ್ಪರ ಒಕ್ಕಟ್ಟು ಬೇಕು.

'ಬ್ರಿಟಿಷ್ ಸಾಮ್ರಾಜ್ಯವು ಶಾಶ್ವತವಾಗಿ ಬಾಳಬೇಕು—ಅದರಲ್ಲಿಯೇ ಬ್ರಿಟಿಸಿನ ಶಕ್ತಿ ಇದೆ ಎಂದು ನನ್ನ ನಂಬಿಗೆ. ಈ ತರದಲ್ಲಿ ಸಾಮ್ರಾಜ್ಯವು ಶಕ್ತಿಸಂಪನ್ನವಾಗಬೇಕಾದರೆ ಅದರಲ್ಲಡಕವಾದ ಪ್ರತಿಯೊಂದು ದೇಶಕ್ಕೂ ಸಂಪೂರ್ಣ ಸ್ವಾತಂತ್ರ್ಯ ದೊರೆತಿದ್ದು ಪ್ರಗತಿಗೆ ಅವಕಾಶವಿರಬೇಕು. ಹಾಗಾದರೆ ಮಾತ್ರ ಬ್ರಿಟಿಷ್ ಸಾಮ್ರಾಜ್ಯವು ಚಿರಸ್ಥಾಯಿಯಾಗಿ ಬಾಳಬಹುದು.

ವೈಸರಾಯರ ಹೇಳಿಕೆ

'ಈ ಗುರಿಯನ್ನು ಮುಂದಿಟ್ಟುಕೊಂಡು ಮೂರು ತಿಂಗಳ ಹಿಂದೆ ವೈಸರಾಯರು ತಮ್ಮ ಹೇಳಿಕೆಯನ್ನು ಮಾಡಿದರು. ತಾತ್ಕಾಲಿಕವಾಗಿ ಅದು ನಿರಾಕರಿಸಲ್ಪಟ್ಟಿತು. ಅದರಲ್ಲಿ ಏನೂ ಹುರುಳಿಲ್ಲವೆಂಬುದಾಗಿ ಅದು ನಿರಾಕರಿಸಲ್ಪಡಲಿಲ್ಲ. ಅಂದರೆ ಭಾರತದ ಜನರಲ್ಲಿ 'ಎಲ್ಲದಕ್ಕಿಂತ ಭಾರತ ಮೊದಲು' ಎಂಬ ತತ್ವವು ಇನ್ನೂ ಬಂದಿಲ್ಲ. ಅವ್ಯವಹಾರ್ಯವಾದ ಬೇಡಿಕೆ ಒಂದೆಡೆಯಲ್ಲಿ ವಿಶ್ವಾಸರಹಿತವಾದ ಸೂಚನೆ ಇನ್ನೊಂದೆಡೆಯಲ್ಲಿ ಹೀಗೆ ಅಲ್ಲಿಯ ಪರಿಸ್ಥಿತಿಯುಂಟಾದುದರಿಂದ ಅವರಲ್ಲಿ ಒಮ್ಮತವುಂಟಾಗಲಿಲ್ಲ, ಆದರೆ ಭಾರತದ ಹಣೆಯಲ್ಲಿ ಇಷ್ಟೇ ಬರೆದಿದೆ ಎಂದು ನಾನು ತಿಳಿದುಕೊಳ್ಳುವುದಿಲ್ಲ.

ತರುಣರು

ಭಾರತದ ಪ್ರತಿಯೊಂದು ಪಂಗಡ ಹಾಗು ಜಾತಿಗಳಲ್ಲಿ ಬುದ್ಧಿವಂತರಾದ ಜನರಿರಬಹುದು. ತರುಣರಲ್ಲಿ ಉಚ್ಚ ತತ್ವಗಳನ್ನು ಮನ್ನಿಸುವ ಅನೇಕ ವಾಸ್ತವವಾದಿಗಳಿರಬಹುದು. ಈಗ ಅವರು ಮುಂದೆ ಬಂದು ಬಿಕ್ಕಟ್ಟನ್ನು ಬಗೆಹರಿಸಲು ಯತ್ನಿಸಬೇಕು. ತಮ್ಮ ತಮ್ಮ ಹಕ್ಕುಗಳಿಗಾಗಿ ಬಡಿದಾಡುವ ಪಕ್ಷಗಳಿಂದ ಯಾವುದೂ ಸಾಧಿಸುವದಿಲ್ಲ. ಅಂಥವರನ್ನು ಒಂದುಗೂಡಿಸಬೇಕು. ಇದು ಪ್ರತಿಯೊಬ್ಬ ಬ್ರಿಟಿಷನಿಗೆ ಗೊತ್ತಿದ್ದಂತೆ ಪ್ರತಿಯೊಬ್ಬ ಭಾರತೀಯನಿಗೂ ಗೊತ್ತಿದೆ. ಆದುದರಿಂದ 'ಮೊದಲು ಭಾರತ' ವೆಂಬ ತತ್ವವನ್ನು ಮನ್ನಿಸಿ ಭಾರತೀಯ ಬಿಕ್ಕಟ್ಟನ್ನು ಬಗೆಹರಿಸಲು ಅಲ್ಲಿಯ ತರುಣರು ಮುಂದಾಗಬೇಕೆಂದು ನನ್ನ ಬಯಕೆ."

ಮಲಗಿದ್ದ ದೇವರು ಎಚ್ಚರಗೊಳ್ಳುವನು!

ಹಿಟ್ಲರನ ಅಕೃತ್ಯಕ್ಕೆ ದೇವರು ಮುನಿಯುವನು!

ಒಬ್ಬ ಸಂತ ಸ್ತ್ರೀಯ ಭವಿಷ್ಯವಾಣಿ!

ಕಲಹಪ್ರಿಯ ಹಿಟ್ಲರ್

ಅಲ್ಸೇಸಿನ ಡ್ಯೂಕನ ಮಗಳಾದ ಎಂಟನೆಯ ಶತಮಾನದಲ್ಲಿ ಜೀವಿಸಿದ್ದ ಸಂತಳಾದ ಒಡಾಯಲ್ ಎಂಬವಳು ತನ್ನ ಸಹೋದರನೊಬ್ಬನಿಗೆ ಬರೆದ ಒಂದು ಹಳೆಯ ಪತ್ರವು ಅಮೆರಿಕದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ; ಅದರ ವಿಷಯ ಅಲ್ಲಿ ತುಂಬಾ ಚರ್ಚೆ ನಡೆಯುತ್ತಲಿದೆ. ಈಗ ಯೂರೋಪಿನಲ್ಲಿ ನಡೆಯುತ್ತಿರುವ ಘಟನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಅವಳು ಆ ಸಮಯದಲ್ಲಿ ಆ ಪತ್ರವನ್ನು ಬರೆದಿರಬಹುದೇ ಎಂದು ಅನೇಕರಿಗೆ ಸಂದೇಹವಾಗಿದೆ. ೧೯೧೭ರಲ್ಲಿ ಅಮೆರಿಕವು ಜರ್ಮನಿಯ ವಿರುದ್ಧ ಯುದ್ಧ ಸಾರಿದ್ದನ್ನೂ ಆ ಪತ್ರದಲ್ಲಿ ಹೇಳಿರುವದರಿಂದ ಈ ಸಂತಸ್ತ್ರೀಗೆ ದಿವ್ಯ ಜ್ಞಾನವು ಪ್ರಾಪ್ತವಾಗಿತ್ತೆಂದೂ ಅವಳು ಹೇಳುವ ವಿಷಯಗಳೆಲ್ಲ ಸತ್ಯವೆಂದೂ ನಂಬಲಿಕ್ಕೆ ಅವಕಾಶವಾಗಿದೆ.

ಪತ್ರದ ಸಾರಾಂಶ

"ಡಾನ್ಯೂಬದ ದಂಡೆಯ ಮೇಲೆ ಒಬ್ಬ ಅತ್ಯಂತ ಕ್ರೂರನಾದ ಮಹಾಯೋದ್ಧನು ಜನಿಸುವನು. ಅವನ ಚಟುವಟಿಕೆಗಳಿಂದಾಗಿ ಜರ್ಮನ ರಾಷ್ಟ್ರವು ಅತ್ಯಂತ ಯುದ್ಧಾಸಕ್ತ ಮತ್ತು ಕಲಹಪ್ರಿಯ ಜನಾಂಗವೆಂದು ಅಪಕೀರ್ತಿಯನ್ನು ಪಡೆಯುವದು. ಈ ಯೋದ್ಧನು ಪ್ರಪಂಚದ ಮೇಲೆಯೇ ಭಯಂಕರ ಯುದ್ಧವನ್ನು ಹೂಡುವನು. ಅವನ ಅನುಯಾಯಿಗಳು ನೆಲ ಜಲ ವಾಯು ಮೂರರಮೇಲೂ ಓಡಾಡಿ ಭಯಂಕರ ಉತ್ಪಾತಗಳನ್ನು ಉಂಟು ಮಾಡುವರು. ಪ್ರಪಂಚವೇ ಅವನ ಪ್ರಾಣ ಶತ್ರುವಾಗುವದಾದರೂ ಅವನ ಆಕ್ರಮಣಗಳನ್ನು ತಡೆಯುವದು ಪ್ರಾರಂಭದಲ್ಲಿ ಸಾಧ್ಯವಾಗುವದಿಲ್ಲ. ಈ ಯುದ್ಧವು ದೀರ್ಘಕಾಲ ನಡೆಯುವದು. ಯುದ್ಧಾರಂಭವಾದ ಸುಮಾರು ಒಂದೂವರೆ ವರ್ಷಗಳ ತನಕವೂ ವಿಜಯಶ್ರೀಯು ಅವನಿಗೇ ಒಲಿಯುವಳು.

ಪತನಕ್ಕಾರಂಭ

"ಆ ಮೇಲೆ ಪುನಃ ಒಂದೂವರೆ ವರ್ಷಗಳ ತನಕ ಯುದ್ಧ ನಡೆಯುವದು: ಇಲ್ಲಿಂದ ಅವನ ಪತನಕ್ಕಾರಂಭವಾಗುತ್ತದೆ. ವಿಜಯ ಪರ್ವತದ ಅತ್ಯುಚ್ಚ ಶಿಖರವನ್ನು ಏರಿದ ಅವನು ಮತ್ತೆ ಅಲ್ಲಿಂದ ಕಾಲುಜಾರಿ ಬೀಳ ತೊಡಗುತ್ತಾನೆ. ಈ ಅವಧಿಯಲ್ಲಿ ಪ್ರಪಂಚದಲ್ಲಿ ಅನೇಕ ಆಶ್ಚರ್ಯ ಘಟನೆಗಳು ನಡೆಯುವವು. ಸುಮಾರು ೨೦ ರಾಷ್ಟ್ರಗಳು ಈ ಯುದ್ಧದಲ್ಲಿ ಭಾಗವಹಿಸಿ ಕೊಳ್ಳುವವು. ಕ್ರೂರನಾದ ಆ ಯೋದ್ಧನಿಗೆ ತನ್ನ ಅನುಯಾಯಿಗಳ ಮೇಲಿರುವ ವಿಶ್ವಾಸ ತಪ್ಪಿಹೋಗುವದು. ಎಲ್ಲೆಲ್ಲಿಯೂ ಶಾಂತಿ ಶಾಂತಿ ಎಂಬ ಕೂಗೇಳುವದು. ದೇವರೂ ಜರ್ಮನಿಯ ಕೃತ್ಯಗಳನ್ನು ಕಂಡು ಮುನಿದ ಹಾಗೆ ತೋರುವದು. ಎಲ್ಲಾ ಕಡೆಗಳಿಂದ ಶತ್ರುಪಕ್ಷದವರು ದಾಳಿ ಇಟ್ಟು ಜರ್ಮನಿಯನ್ನು ಹಾಳುಗೆಡವಿ ಧ್ವಂಸ ಮಾಡುವರು. ಅವರು ಜರ್ಮನ ಸೈನಿಕರನ್ನು ಸೋಲಿಸಿ ಚೆದರಿಸಿ ಹಾಕುವರು. ಜರ್ಮನಿಯಲ್ಲಿ ಒಂದು ಭಯಂಕರ ರೋಗವು ಕಾಣಿಸಿಕೊಂಡು ಅದರ ಸರ್ವನಾಶವಾಗುವದು.

ಪ್ರಪಂಚದಲ್ಲಿ ಶಾಂತಿ

"ಆಗಲೇ ಪ್ರಪಂಚದಲ್ಲಿ ಶಾಂತಿಯು ನೆಲೆಗೊಳ್ಳುವದು. ಸತ್ಯಕ್ಕೆ ವಿಜಯವಾಯಿತು. ಮಲಗಿದ್ದ ದೇವರು ಎಚ್ಚತ್ತನು ಎಂದು ಎಲ್ಲರೂ ಅವನನ್ನು ಸ್ತುತಿಸಿ ಶಾಂತಿ ಪಾಠ ಮಾಡುವರು."

ನಿಮ್ಮ ವ್ಯಾಪಾರ ಅಭಿವೃದ್ಧಿಯಾಗ ಬೇಕಾದರೆ ಇಂದೇ

ಸ್ವದೇಶಾಭಿಮಾನಿಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

ಶ್ರೀ. ಕೆ. ಆರ್ ಕಾರಂತ ಮತ್ತು ಶ್ರೀ. ಎ. ಬಿ. ಶೆಟ್ಟಿ ಇವರಿಗೆ ಶಿಕ್ಷೆ!

೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂ. ದಂಡ

ಮಹಾತ್ಮಾಜಿಯವರಿಂದ ಆರಿಸಲ್ಪಟ್ಟು, ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ ಸಿ. ರಾಜಗೋಪಾಲಾಚಾರಿಯವರಿಂದ ಸತ್ಯಾಗ್ರಹ ಹೂಡಲು ಅಧಿಕೃತರಾಗಿ ಮದ್ರಾಸು ಶಾಸನ ಸಭೆಯ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀಗಳಾದ ಕೆ. ಆರ್. ಕಾರಂತ ಎಂ. ಎಲ್. ಎ. ಮತ್ತು ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರಿಬ್ಬರೂ ಜಿಲ್ಲಾ ಮೆಜಿಸ್ಟ್ರೇಟರಿಗೆ ಮುಂಚಿತವಾಗಿ ತಿಳಿಸಿದಂತೆ, ತಾ ೧೫ರಂದು ಜಿಲ್ಲೆಯ ಯುದ್ಧ ಕಮಿಟಿಯ ಮೆಂಬರರಿಗೆ ಈ ಯುದ್ಧಕ್ಕೆ ಸಹಾಯ ಮಾಡುವುದು ಅಗೌರವಕರವೆಂಬರ್ಥದ ಪತ್ರ ಬರೆದ ಅಪಾದನೆಯ ಮೇರೆಗೆ ಸೆರೆಹಿಡಿಯಲ್ಪಟ್ಟು ಪ್ರತಿಯೊಬ್ಬರೂ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦೦ ರೂಪಾಯಿ ದಂಡನೆಗೆ ಗುರಿಯಾಗಿ ಸೆರೆಮನೆಯ ವಾಸವನ್ನನುಭವಿಸಿರುವರು.

ತಾ ೧೬ನೆಯ ಸೋಮವಾರ ಮುಂಜಾನೆ ೮ ಗಂಟೆಯ ಹೊತ್ತಿಗೆ ಶ್ರೀಗಳಾದ ಕಾರಂತರನ್ನೂ ಎ. ಬಿ. ಶೆಟ್ಟರನ್ನೂ ಅವರ ಮನೆಗಳಿಂದಲೇ ಸೆರೆಹಿಡಿದು 'ಪೋಲಿಸು ಗಾಡಿ'ಯಲ್ಲಿ ಮಂಗಳೂರಿನ ಸಬ್ ಜೈಲಿಗೆ ತಂದರು. ಶ್ರೀಯುತರಿಬ್ಬರೂ ಸತ್ಯಾಗ್ರಹ ಹೂಡುವ ವಿಷಯವಾಗಿ ಯಾವುದೇ ತರದ ಪ್ರಕಟಣೆ ಪ್ರದರ್ಶನಗಳನ್ನು ಅಪೇಕ್ಷಿಸದೆ ಬಹಳ ಶಾಂತರೀತಿಯಿಂದ ನಡೆದುದರಿಂದ, ಅವರನ್ನು ಬಂಧಿಸಿದ ಸುದ್ದಿಯು ಸೆರೆಹಿಡಿದ ವೇಳೆಯೇ ತಕ್ಷಣವಾಗಿ ನಗರದಲ್ಲಿ ಮಿಂಚುವೇಗದಿಂದ ಹರಡಿತ್ತು. ವಿಚಾರಣೆ ನಡೆವ ಕಾಲದಲ್ಲಿ ಜೈಲಿನ ಹೊರಗಡೆ ಜನರ ಗುಂಪು ಕಿಕ್ಕಿರಿದು ನೆರೆದಿತ್ತು.

ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಶ್ರೀ ಎಸ್. ಬಾಲಗುರುನಾಥ ಪಿಳ್ಳೆಯವರ ಮುಂದೆ ಜೈಲಿನಲ್ಲಿಯೇ ವಿಚಾರಣೆ ನಡೆಯಿತು. ವಿಚಾರಣೆಯ ಕಾಲದಲ್ಲಿ ನಗರದ ಪ್ರಮುಖ ವಕೀಲರು [illegible] ಬಂದು ಕೂಡಿದ್ದರು. ಶ್ರೀಗಳಾದ ಡಾ। ಯು. ಪಿ. ಮಲ್ಯ ಎಂ. ಆರ್. ಪೈ [illegible] ರಾಮರಾವ ಮಲ್ಯ [illegible] ಅಧಿಕಾರಿ ಡಾ। ಎಸ್. ಪಿ. ಅಡಪ ಮೊದಲಾದ ಪ್ರಮುಖ ಮುಂದಾಳುಗಳು, ಹಲವರು ಸ್ಥಳೀಕ ಸಂಸ್ಥೆಗಳ ಸದಸ್ಯರೂ, ಕಾಂಗ್ರೆಸ್ ಕೆಲಸಗಾರರೂ ಪತ್ರಿಕಾ ಪ್ರತಿನಿಧಿಗಳೂ ಬಂದಿದ್ದರು.

ಶ್ರೀ. ಕಾರಂತರು
ವಿಚಾರಣೆ

ಮೊದಲು ಶ್ರೀ ಕಾರಂತರ ಮೇಲಿನ ಆಪಾದನೆಯನ್ನು ರುಜುಪಡಿಸುವ ಬಗ್ಗೆ ಸಾಕ್ಷಿಗಳ ವಿಚಾರಣೆ ನಡೆಯಿತು. ಶ್ರೀ ಕಾರಂತರು ಯುದ್ಧ ಕಮಿಟಿ ಸದಸ್ಯರಿಗೆ ಪತ್ರ ಬರೆದ ರುಜುವಾತಿನ ಬಗ್ಗೆ ಮೊದಲನೆಯ ಸಾಕ್ಷಿ ಯುದ್ಧ ಕಮಿಟಿ ಮೆಂಬರರಾದ ಶ್ರೀ ಎಂ. ಎ. ತಲ್ವಾರರಾಗಿದ್ದರು. ಪ್ರೊಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಶ್ರೀ ಅಣ್ಣಪ್ಪನವರು ಶ್ರೀ ತಲ್ವಾರರನ್ನು ಸಾಕ್ಷಿಯಾಗಿ ವಿಚಾರಣೆ ಮಾಡಿದರು.

ಪ್ರಶ್ನೆ.—ಶ್ರೀ ಕಾರಂತರಿಂದ ನೀವು ಏನಾದರು ಪತ್ರ ಪಡೆದಿದ್ದೀರಾ?

ಉತ್ತರ.—ಹೌದು; ನಿನ್ನೆ ಸಂಜೆಗೆ (ಆ ಪತ್ರವು ಓದಿ ಹೇಳಲಾಯಿತು.)

ಪ್ರಶ್ನೆ.—ಅವರ ಪರಿಚಯ ನಿಮಗಿದೆಯೆ?

ಉ.—ಹೌದು, ಅವರು ಮಂಗಳೂರಿನ ಒಬ್ಬ ಪ್ರಮುಖ ವಕೀಲರು, ಕೆಲವು ವರ್ಷಗಳ ವರೆಗೆ ನಗರ ಸಭಾಸದಸ್ಯರಾಗಿದ್ದರು. ಹಿಂದೆ ಮದ್ರಾಸು ಸರಕಾರದ ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಿದ್ದರು. ಒಬ್ಬ ಪ್ರಭಾವಶಾಲಿಯಾದ ಗೃಹಸ್ಥರು. ಕುಂದಾಪುರ ತಾಲೂಕಿನ ಒಬ್ಬ ಐಶ್ವರ್ಯವಂತರಾದ ಭೂಮಾಲಿಕರು.

ಶ್ರೀ ಕಾರಂತರು ಸಾಕ್ಷಿಗಳಿಗೆ ಈ ಕೆಳಗಿನ ಪ್ರಶ್ನೆ ಹಾಕಿದರು.

ಶ್ರೀ. ಕಾರಂತ ಪರಕೀಯ ಜನಾಂಗವೊಂದು ನಮ್ಮನ್ನು ಆಳುತ್ತಿರುವುದು ಸರಿಯೆಂದು ನೀವು ಭಾವಿಸುತ್ತೀರಾ?

ಶ್ರೀ ತಲ್ವಾರ್.—ಈಗಿನ ಪರಿಸ್ಥಿತಿಯಲ್ಲಿ ಸರಿಯೆಂದು ಭಾವಿಸುತ್ತೇನೆ.

ಶ್ರೀ ಕಾರಂತ—ಭಾರತದ ಜನತೆಯೊಡನೆ ವಿಚಾರಿಸದೆ, ಜನತೆಯ ಪ್ರತಿನಿಧಿಗಳು ಪ್ರಾಂತಿಕ ಆಢಳಿತವನ್ನು ವಹಿಸಿ ಸರಕಾರ ನಡೆಸುತ್ತಿರಲು ಅವರೊಡನೆಯೂ ಕೇಳದೆ ನಮ್ಮ ದೇಶವನ್ನು ಬ್ರಿಟನಿನ ಈ ಯುದ್ಧಕ್ಕೆ ಎಳೆದದ್ದು ಸರಿಯೆಂದು ನೀವು ತಿಳಿಯುತ್ತೀರಾ?

ಶ್ರೀ ತಲ್ವಾರ್.—ಅವರು ನಮ್ಮ ದೊರೆಗಳಾದ್ದರಿಂದ ಹಾಗೆ ಮಾಡಿದ್ದು ಸರಿಯೆನ್ನುತ್ತೇನೆ.

ಆ ಮೇಲೆ ಇನ್ನೊಬ್ಬ ಯುದ್ಧ ಕಮಿಟಿ ಮೆಂಬರರಾದ ಶ್ರೀ ಸಿ. ಎಲ್. ಲೋಬೊ (ಕಾಂಗ್ರೆಸ್ ಪಕ್ಷದ ಮುನ್ಸಿಪಲ್ ಕೌನ್ಸಿಲರಾಗಿದ್ದವರು) ಇವರ ಸಾಕ್ಷಿ ವಿಚಾರಣೆ ನಡೆಯಿತು. ಅವರೂ ತನಗೆ ಶ್ರೀ ಕಾರಂತರು ಪತ್ರ ಬರೆದಿರುವುದಾಗಿ ಹೇಳಿ ಪತ್ರವನ್ನು ಓದಿ ಹೇಳಿದರು.

ಅವರೊಡನೆ ಶ್ರೀ ಕಾರಂತರು [illegible] ಎಂದು ಪ್ರಶ್ನೆ ಹಾಕಿದರು.

ಶ್ರೀ ಕಾರಂತ.—ಶ್ರೀ ಲೋಬೋರವರೇ ನಿಮ್ಮ ಹೃದಯಸಾಕ್ಷಿಯಾಗಿ, ನನ್ನ ಪತ್ರದ ಅಭಿಪ್ರಾಯವು ಸರಿಯೆಂದು ನಿಮಗೆ ತೋರುವುದಿಲ್ಲವೆ?

ಶ್ರೀ ಲೋಬೋ. ಮೌನ.

ಆ ಮೇಲೆ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಉಚ್ಚಿಲ ಕೃಷ್ಣರಾಯರ ಸಾಕ್ಷಿ ವಿಚಾರಣೆಯಾಯಿತು. ಅವರೊಡನೆ ಶ್ರೀ ಕಾರಂತರು [illegible] ಹಾಕಿದರು.

ಶ್ರೀ ಕಾರಂತ.—ನನ್ನ ತಂದೆಯವರು [illegible] ಇತ್ತಕ್ತೆ [illegible] ಕೊಡುವ [illegible] ಬಿಟ್ಟದ್ದಾರೆ [illegible] ಹೇಳಿದರೆ ನೀವು ಒಪ್ಪುವದಿಲ್ಲವೆನ್ನುತ್ತೀರಾ? (ಶ್ರೀ ಕಾರಂತರು [illegible] ಐಶ್ವರ್ಯವಂತ ಭೂಮಾಲೀಕರೆಂದು [illegible] ಹೇಳಿದ್ದರು.)

[illegible] ಒಪ್ಪುವುದಿಲ್ಲವೆನ್ನಲಾರೆ.

ಶ್ರೀ ಎ. ಬಿ. ಶೆಟ್ಟರು
ವಿಚಾರಣೆ

ಆ ಮೇಲೆ ಶ್ರೀ ಎ. ಬಿ. ಶೆಟ್ಟಿ ಮೇಲಿನ ಆರೋಪವನ್ನು ಕೈಗೆಯಲಾಯಿತು. ಇಬ್ಬರನ್ನೂ ಬಂಧಿಸಿದ ಸರ್ಕಲ್ ಇನ್ಸ್‌ಪೆಕ್ಟರರಾದ ಶ್ರೀ ಯು. ಕೃಷ್ಣರಾಯರು ಚಾರ್ಜ್‌ಶೀಟ್ ಒಪ್ಪಿಸಿದರು. ಅದನ್ನು ವಿಮರ್ಶಿಸಲಾಯಿತು. ಅವರು ಶ್ರೀ ಶೆಟ್ರು ಯುದ್ಧ ಕಮಿಟಿ ಮೆಂಬರರಾದ ಶ್ರೀಗಳು ಯು. ಪಿ. ಎಸ್. ಭಟ್ ಎಂ. ವೆಂಕಟೇಶಪ್ಪ, ಸಿ. ಎಲ್. ಲೋಬೊ ಮತ್ತು ತಲ್ವಾರಿಗೆ ಬರೆದ ಪತ್ರಗಳನ್ನು ಒಪ್ಪಿಸಿದರು. ಬಳಿಕ ಶ್ರೀ ತಲ್ವಾರರ ಸಾಕ್ಷಿ ವಿಚಾರಣೆ ನಡೆಯಿತು. ಹಿಂದಿನವರ ವಿಷಯದಲ್ಲಿ ಹೇಳಿದ ಮಾದರಿಯಲ್ಲಿಯೇ ಅವರು ಇವರ ವಿಷಯವಾಗಿಯೂ ಹೇಳಿದರು.

ಶ್ರೀ ಶೆಟ್ರು ಈ ಕೆಳಗಿನ ಪ್ರಶ್ನೆ ಹಾಕಿದರು.

ಶ್ರೀ ಶೆಟ್ಟಿ.—ನನ್ನ ಪತ್ರವು ನಿಮ್ಮ ಮೇಲೆ ಯಾವುದಾದರೂ ಪರಿಣಾಮವನ್ನು ಹುಟ್ಟಿಸಿತೆ?

ಶ್ರೀ ತಲ್ವಾರರು ದೀರ್ಘ ಉತ್ತರ ಕೊಡಲು ಪ್ರಾರಂಭಿಸುವಾಗ ಮೆಜಿಸ್ಟ್ರೇಟರು ತಡೆದು ಪ್ರಶ್ನೆಗೆ ತಕ್ಕ ಉತ್ತರ ಕೊಡಿರೆಂದರು.

ಶ್ರೀ. ತಲ್ವಾರ್.—ನನ್ನ ಮೇಲೆ ಪರಿಣಾಮವಾಗದಂತೆ ನಾನು ನೋಡಿಕೊಂಡೆನು.

ಶ್ರೀ ಶೆಟ್ಟಿ.—ಒಬ್ಬನು "ಬಹಳ ಐಶ್ವರ್ಯವಂತ" ನೆನಿಸಬೇಕಾದರೆ ನಿಮ್ಮ ಅಂದಾಜಿನಲ್ಲಿ ಹೇಗಿರಬೇಕು? (ಶ್ರೀ ಶೆಟ್ಟರು ಬಂಟ ಸಮಾಜದಲ್ಲಿ ಬಹಳ ಐಶ್ವರ್ಯವಂತರೆಂದು ಸಾಕ್ಷಿಗಳು ಹೇಳಿದ್ದರು.)

ಶ್ರೀ ತಲ್ವಾರ್.—ಸಾಮಾನ್ಯ ೫೦೦ ಮುಡಿ ಅಕ್ಕಿ ಇರುವವನಿರಬೇಕು.

ಶ್ರೀ. ಶೆಟ್ಟಿ.—ನನ್ನ ಆದಾಯ ಎಷ್ಟು ಎಂದು ನೀವು ತಿಳಿದಿರುವಿರಾ?

ಶ್ರೀ. ತಲ್ವಾರ್.—ಸರಿಯಾಗಿ ನನಗೆ ಗೊತ್ತಿಲ್ಲ.

ಆ ಮೇಲೆ ಶ್ರೀ ಉಚ್ಚಿಲ ಕೃಷ್ಣರಾಯರ ಸಾಕ್ಷಿ ವಿಚಾರಣೆಯಾಯಿತು. ಅವರು ಸಾಮಾನ್ಯವಾಗಿ ಹಿಂದಿನವರಿಗೆ ಹೇಳಿದ ರೀತಿಯೇ ಹೇಳಿದರು. ಅವರಿಗೆ ಶ್ರೀ. ಶೆಟ್ಟರು ಪ್ರಶ್ನೆ ಹಾಕಲಿಲ್ಲ.

ಆರೋಗ್ಯದ ವಿಷಯ ಮೆಜಿಸ್ಟ್ರೇಟರು ಪ್ರಶ್ನಿಸಿದಾಗ ಇಬ್ಬರೂ ತಮ್ಮ ಆರೋಗ್ಯ ಚೆನ್ನಾಗಿದೆಯೆಂದರು. ಶ್ರೀ ಕಾರಂತರು ಪ್ರಾಯ ೪೬ ವರ್ಷವೆಂದೂ ಶ್ರೀ ಶೆಟ್ಟರು ಪ್ರಾಯ ೫೮ ವರ್ಷವೆಂದೂ ಹೇಳಿದರು.

ಬಳಿಕ ಮೆಜಿಸ್ಟ್ರೇಟರು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ನಿಯಮಗಳ ಪ್ರಕಾರ ಪ್ರತಿಯೊಬ್ಬರಿಗೂ ೬ ತಿಂಗಳ ಕಠಿಣ ಶಿಕ್ಷೆ ೫೦೦ ರೂಪಾಯಿಗಳ ದಂಡ ತಪ್ಪಿದರೆ ಮೂರು ತಿಂಗಳ ಶಿಕ್ಷೆ ವಿಧಿಸಿರುವುದಾಗಿ ತೀರ್ಮಾನವಿತ್ತರು. ಇಬ್ಬರಿಗೂ ಬಿ ಕ್ಲಾಸು ಕೊಡಲಾಯಿತು.

ಅದೇ ದಿನ ಮಧ್ಯಾಹ್ನದ ರೈಲಿನಲ್ಲಿ ಶ್ರೀಯುತರಿಬ್ಬರನ್ನೂ ವೆಲ್ಲೂರು ಜೈಲಿಗೆ ಕರೆದೊಯ್ಯಲಾಯಿತು. ರೈಲ್ವೆ ಸ್ಟೇಶನಿನಲ್ಲಿ ಅಸಂಖ್ಯ ಜನಸಂದಣಿ ತುಂಬಿತ್ತು. ನಗರದ ಪ್ರಮುಖರು ಮಾತ್ರವಲ್ಲದೆ ದೂರದ ಹಳೆ ಹಳ್ಳಿಗಳಿಂದಲೂ ಅನೇಕ ಮಂದಿ ಸಭ್ಯಗೃಹಸ್ಥರು ಬಂದಿದ್ದರು. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ [illegible] ಡಾ। [illegible] ಮಲ್ಯ ಶ್ರೀ ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಡಾ। [illegible] ಕಿಣಿ ಶ್ರೀ ಬೋಜರಾವ್ ಬೋಳಾರ ಶ್ರೀ ಬಿ. ಅನಂತಯ್ಯ ಶ್ರೀ [illegible] ಡಾ। [illegible] ಶ್ರೀ [illegible] ಅಧಿಕಾರಿ ಮೊದಲಾದ ಪ್ರಮುಖರು [illegible] ರೈಲು ಬಂಡಿ ಹೊರಡುವಾಗ ಜೈ ಕಾರ [illegible] ಜಯ ಘೋಷವು ಮೊಳಗಿತು. ಶ್ರೀ ಕಾರಂತರೊಡನೆ ನಮ್ಮ ಪ್ರತಿನಿಧಿಗಳು [illegible] ದೇಶವು [illegible] ಕೇಳಿದಾಗ, ಮಹಾತ್ಮಾ [illegible] ಹೆಚ್ಚಿನ ಸಂದೇಶವೇ [illegible] ಕೊಡಲಿ ಎಂದರು.

ಬಂಧಿತರಾದರು

ಡಾ। ಬಿ. ಶಂಗಮ್ಮ ಎ. ಎಲ್. ಎ.

ಇವರು ಮಂಗಳೂರಿನ ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಶ್ರೀ ಭೋಜರಾವ್ ಬೋಳಾರ ಇವರ ಸೋದರಿ ಡಾ। ಬಿ. ಶಂಗಮ್ಮ ಎಫ್. ಆರ್. ಸಿ. ಎಸ್. (ಲಂಡನ್) ಸಂಯುಕ್ತ ಪ್ರಾಂತದ ಶಾಸನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯೆಯರು. ಇವರು ಸತ್ಯಾಗ್ರಹ ಹೂಡಿ ಬಂಧಿತರಾದರೆಂದು ತಿಳಿದುಬಂದಿದೆ. ಇವರು ಸರಕಾರೀ ಉದ್ಯೋಗದಲ್ಲಿದ್ದು ಎರಡನೆಯ ಸಲ ಲಂಡನಿನಿಂದ ಮರಳಿ ಬಂದವರು. ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ಸರಕಾರಿ ಉದ್ಯೋಗಕ್ಕೆ ರಾಜಿನಾಮೆಯಿತ್ತು, ಕಾಶಿಯಲ್ಲಿ ಸ್ವಂತ ವೈದ್ಯಕೀಯ ಉದ್ಯೋಗದಲ್ಲಿರುವರು.

ಪೆರಡಾಲ

ದಿ। ಶಂಕರ ಶಾಸ್ತ್ರಿಗಳ ಸ್ಮಾರಕ ಕಟ್ಟೋಣ:— ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದಂತೆ, ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾದ ದಿವಂಗತ ಮಹೋಪಾಧ್ಯಾಯ ಶಂಕರಶಾಸ್ತ್ರಿಗಳ ಸ್ಮಾರಕ ಶಿಲಾನಾಮೋಲ್ಲೇಖನ ಮಾತ್ರವಲ್ಲದೆ ಅವರ ಸ್ಮಾರಕವೆಂದು ಸಾರ್ವಜನಿಕ ವಾಚನಾಲಯದ ಸ್ಥಳವಾಗಿ ಕಟ್ಟೋಣವೊಂದನ್ನೂ ಕಟ್ಟಿಸಬೇಕೆಂದು ತಾ ೭ರಲ್ಲಿ ಸೇರಿದ ಹಳೆಯ ವಿದ್ಯಾರ್ಥಿಗಳ ಮಹಾಸಭೆಯಲ್ಲಿ ನಿರ್ಣಯವಾಗಿರುವುದು. ಈ ವಿಷಯದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳೆಲ್ಲರ ಉದಾರ ಸಹಕಾರವನ್ನು ಅಪೇಕ್ಷಿಸಲಾಗಿದೆ.

ತಾಲೂಕು ಹರಿಜನ ಸೇವಕಸಂಘ

ತಾಲೂಕು ಹರಿಜನ ಸೇವಕ ಸಂಘದ ಪ್ರಥಮ ಸಭೆಯು ತಾ ೮ರಲ್ಲಿ ಇಲ್ಲಿ ಶ್ರೀ ಬಿ. ಶ್ರೀಧರ ಶಕ್ತಿಲ್ಲಾಯ ಕಲ್ಲಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಹರಿಜನ ಸೇವಕರಿಂದ ಶ್ರೀ। ನಾರಾಯಣ ಶೆಟ್ಟಿಗಾರರು ಬಂದಿದ್ದರು. ಶ್ರೀಗಳಾದ ಡಾ। ಪಿ. ಎಸ್. ಶಾಸ್ತ್ರಿ, ಈಳಂತೋಡಿ ಕೃಷ್ಣ ಭಟ್ಟ, ಕುಲ್ಲಂಚಿಟ್ಟಿ ಕೃಷ್ಣಭಟ್ಟ, ಬಿ. ಜನಾರ್ಧನಯ್ಯ [illegible] ರಾಮಕೃಷ್ಣರಾವ್, ಕೆ. ಬಾಬು ಶೆಟ್ಟಿ ಮೊದಲಾದವರೂ ಹಾಜರಿದ್ದರು.

[illegible] ಹರಿಜನ [illegible] ವಿಷಯ ಕಾರ್ಯಕ್ರಮವನ್ನು ಕೈಕೊಳ್ಳುವರೆಂದು ಉಪಸಮಿತಿಯನ್ನು ನೇಮಿಸಲಾಯಿತು. ಕಾಸರಗೋಡು ತಾಲೂಕಿಗೆ ಸಂಬಂಧಪಟ್ಟ ಕಾಞಂಗಾಡ್, ಮಂಜೇಶ್ವರ ಮತ್ತು ಇತರ ಬೇರೆಬೇರೆ ಸ್ಥಳಗಳಲ್ಲಿ ನಡೆಯುವ ಹರಿಜನ ಕೆಲಸಗಳನ್ನು [illegible] ಸಂಘದ [illegible] ದಲ್ಲಿ [illegible] ಲಾಯಿತು. ಇನ್ನು ಹಲವು [illegible] ನಿರ್ಣಯಗಳೂ ಪಾಸಾದವು.

ಪುತ್ತೂರು

ಹರಿಜನ ಸೇವಕ ಸಂಘ:

ಪುತ್ತೂರು ತಾಲೂಕಿನಲ್ಲಿ ತಾಲೂಕು ಹರಿಜನ ಸೇವಕ ಸಂಘವನ್ನು ಸ್ಥಾಪಿಸುವ ಬಗ್ಗೆ ಪುತ್ತೂರಿನಲ್ಲಿ ಶ್ರೀ [illegible] ಇವರ ಅಧ್ಯಕ್ಷತೆಯಲ್ಲಿ [illegible] ಹರಿಜನ ಕೆಲಸಗಾರರ ಸಭೆಯು ಸೇರಿತು. ತಾಲೂಕು ಸಂಘವನ್ನು ಸ್ಥಾಪಿಸುವರೆ ಶ್ರೀ [illegible] ಸದಾಶಿವರಾಯರ ಅಧ್ಯಕ್ಷತೆಯಿಂದ [illegible] ತಾತ್ಕಾಲಿಕ ಕಮಿಟಿಯನ್ನು [illegible] ನಿಯಮಿಸಲಾಯಿತು.

ಉಡುಪಿ

ಪದ್ಮಸಾಲಿ ಸಮಾಜ. [illegible] ಶ್ರೀ [illegible] ಸಂಘದ ಅಧ್ಯಕ್ಷ [illegible] ಸ್ಥಾಪಿಸುವ [illegible] ಬಗ್ಗೆ [illegible] ಪದ್ಮಸಾಲಿ ಸಮಾಜ ಸೇವಾ ಸಂಘದ [illegible] ಕಳೆದ ರವಿವಾರ [illegible] ಶ್ರೀ [illegible] ದೇವಾಲಯದಲ್ಲಿ ಜರಗಿತು. ಸಂಘದ ಕಾರ್ಯದರ್ಶಿ [illegible] ಭಾಷಣ ಸಭೆಯ ಪರಿಚಯಗಳಾಗಿ ಅಧ್ಯಕ್ಷಸ್ಥಾನದಿಂದ ಶ್ರೀ. ಬ್ರಹ್ಮಾನಂದರು ಸ್ವಸಮಾಜಕ್ಕೆ ಸಂಘಗಳ ಅವಶ್ಯಕತೆ ಮತ್ತು ಮುಂಬರುವ ಜಿಲ್ಲಾ ಪರಿಷತ್ತಿನ ಕುರಿತೂ ಶ್ರೀ ಧರ್ಮಾನಂದರು ಕಾರಕಳ ಸಂಘದ ಕಾರ್ಯಕಲಾಪಗಳು ಮತ್ತು ಶ್ರೀ ಸುಬ್ಬಯ್ಯನವರು ಸಮಾಜದ ಮುನ್ನಡೆಯ ಕುರಿತೂ ಸುರಸ [illegible] ಮಾಡಿತ್ತರು.

ಕೊಂಕಣೆಪರಿಷತ್ತು:— ಕಾರವಾರದ ಶ್ರೀ ಎಂ. ಎಂ. [illegible] ಅಪೇಕ್ಷೆಯಂತೆ ಜ್ಯಾನವರಿಯಲ್ಲಿ ಉಡುಪಿಯಲ್ಲಿ ಕೊಂಕಣಿಭಾಷಾ ಪರಿಷತ್ತು ಜರಗಲಿರುವುದು. ಶ್ರೀ. ಜೆ. ಎ. ಸಾಲ್ಡಾನಾರನ್ನು ಅಧ್ಯಕ್ಷರಾಗಿ ಕೇಳಿಕೊಳ್ಳಲಾಗಿದೆಯೆಂದು ಅದರ ಕಾರ್ಯಕರ್ತರಾದ ಡಾ। ಮಾಧವ ಪೈಗಳು ತಿಳಿಸುತ್ತಾರೆ.

ಕಾರ್ಕಳ

ಪ್ರವೇಶೋತ್ಸವ: ದಕ್ಷಿಣಕನ್ನಡ ಜಿಲ್ಲಾ ಕಾರ್ಕಳ ತಾಲೂಕು ವರಂಗದಲ್ಲಿ ಹೊಸತಾಗಿ ಕಟ್ಟಿಸಿದ ಜೈನಮಠದ ಪ್ರವೇಶ ಸಮಾರಂಭವು ಇದೇ ಬರುವ ಜನವರಿ ತಾ. ೨೮ರಿಂದ ೩೦ರ ವರೆಗೆ ಜರಗಲಿರುವುದು. ಸರ್ವರಿಗೂ ಆಹ್ವಾನವಿದೆ ಎಂಬುದಾಗಿ ವರಂಗ ಮಠದ ಅಧಿಕಾರಿಗಳು ತಿಳಿಸುತ್ತಾರೆ.

ಲಾಯಿಡ್ ಜಾರ್ಜ ಮಂತ್ರಿಯಾಗುವರೆ? ★ ಯುದ್ಧ ವಾರ್ತೆ



ಪಿಟೇನ್ ಲಾವಲರೊಳಗೆ ಅಂತಃಕಲಹ

ಗ್ರೀಕರು ಮುಂದೆ ನುಗ್ಗುತ್ತಿದ್ದಾರೆ

ಲಂಡನಿನ ಮೇಲೆ ಬಾಂಬುಗಳು ಸುರಿದವು

ಲಾಯಿಡ್ ಜಾರ್ಜರು ಮಂತ್ರಿಮಂಡಳದಲ್ಲಿ ಸೇರುವರೆ?

ಕಳೆದ ಯುದ್ಧಕಾಲದಲ್ಲಿ ಮುಖ್ಯ ಮಂತ್ರಿಯಾಗಿದ್ದ ಡೇವಿಡ್ ಲಾಯಿಡ್ ಜಾರ್ಜರು ತಾ. ೧೭ರಂದು ೧೦ ಡಾನಿಂಗ್ ಸ್ಟ್ರೀಟಿನಲ್ಲಿ ಚರ್ಚಿಲರನ್ನು ಕಂಡು ಮಾತನಾಡಿದ್ದರಿಂದ ನಾನಾ ಊಹನೆಗಳಿಗೆ ಆಸ್ಪದವಾಗಿದೆ. ಕೆಲವರು ಇವರನ್ನು ಅಮೇರಿಕಕ್ಕೆ ರಾಯಭಾರಿಯಾಗಿ ಕಳುಹಿಸಲಾಗುವುದೇ ಎಂದು ತರ್ಕಿಸುವರು. ಮಂತ್ರಿಮಂಡಳದಲ್ಲಿ ಇವರನ್ನು ಸೇರಿಸಲಾಗುವುದೇ ಎಂದು ಹಲವರ ತರ್ಕವಿದೆ.

ಪೀಟೆನರನ್ನು ಅಪಹರಿಸುವ ಯತ್ನವೇ?

ಲಾವಲರ ಒಳಸಂಚು

ಪಿಟೇನರನ್ನು ಪ್ಯಾರಿಸಿಗೆ ಅಪಹರಿಸಿಕೊಂಡು ಹೋಗಬೇಕೆಂದು ಲಾವಲರು ಒಳಸಂಚು ನಡಿಸಿರುವರಾಗಿಯೂ ಆದ್ದರಿಂದ ಅವರನ್ನು ಮಂತ್ರಿಮಂಡಲದಿಂದ ತೆಗೆದುಹಾಕಲಾಯಿತೆಂದೂ ತಿಳಿದುಬರುತ್ತದೆ. ಪಿಟೇನರನ್ನು ಪ್ಯಾರಿಸಿಗೆ ಅಪಹರಿಸಿಕೊಂಡು ಹೋದರೆ ಕೇವಲ ತಮ್ಮ ಗೆಳೆಯರಿಂದ ಕೂಡಿ "ಮಂತ್ರಿಮಂಡಳವನ್ನು ಸ್ಥಾಪಿಸಬೇಕೆಂದು" ಲಾವಲರು ಊಹಿಸಿದ್ದರಂತೆ.

೧೦೧೯೦ ಟನ್ನುಗಳ ೨೩ ಹಡಗುಗಳ ಜಲಸಮಾಧಿ

ಬ್ರಿಟಿಷರ ನಷ್ಟಗಳು

ದಶಂಬ್ರರ ೮ನೇ ತಾರೀಕಿಗೆ ಮುಗಿಯುವ ಒಂದು ವಾರದಲ್ಲಿ ಬ್ರಿಟಿಷರ ಒಟ್ಟು ೨೩ ಹಡಗುಗಳು ಮುಳುಗಿದುವೆಂದೂ ಅವುಗಳ ಒಟ್ಟುಭಾರ ೧೦೧೯೦ ಟನ್ನುಗಳಾಗಬಹುದೆಂದೂ ಜರ್ಮನರು ಹೇಳುತ್ತಾರೆ.

ಇಂಗ್ಲಂಡಿನ ಮೇಲೆ ಧಾಳಿ

೧೮ ತಾಸುಗಳ ತನಕ ಬಾಂಬು

ತಾ. ೧೭ರಂದು ಇಂಗ್ಲೆಂಡಿನ ಮೇಲೆ, ವೈರಿ ವಿಮಾನಗಳು ಧಾಳಿಯಿಟ್ಟವು ಮನೆಕಟ್ಟಡಗಳು ಕುಸಿದು ಬಿದ್ದಿವೆ. ಅದೇ ದಿನ ಮ್ಯಾನಹಾಮಿನ ಮೇಲೆ ೧೦ ತಾಸುಗಳ ತನಕ ಬಾಂಬುಗಳು ಸುರಿದು ವಿಶೇಷ ಹಾನಿಯಾಗಿದೆ.

ಅಲ್ಬೇನಿಯದಲ್ಲಿ ಗ್ರೀಕರ ಮುನ್ನಡೆ

ಕ್ಲಾಪ್ಸುಜೋ ಮತ್ತು ಸೊಲ್ಲಮುಗಳ ಸುತ್ತ ಗ್ರೀಕರಿಗೂ ಇಟಲಿಯಾನರಿಗೂ ಯುದ್ಧ ನಡೆಯುತ್ತಿದೆ. ಈ ಯುದ್ಧದಲ್ಲಿ ಆಸ್ಟ್ರೇಲಿಯನ್, ನ್ಯುಝಿಲೆಂಡ್, ಇಂಡಿಯನ್ ಸೈನಿಕರೂ ಭಾಗವಹಿಸಿರುವರು. ಅಲ್ಬೇನಿಯದಲ್ಲಿ ಗ್ರೀಕರು ದಿನದಿಂದ ದಿನಕ್ಕೆ ಮುಂದೊತ್ತುತ್ತಲೇ ಇರುವರೆಂದು ಖಚಿತವಾಗಿ ತಿಳಿದಿದೆ.

ಜಪಾನು ಗಾಬರಿಗೊಂಡಿದೆಯೆ?

ಬ್ರಿಟನ ಅಮೇರಿಕಗಳು ಚೀನಕ್ಕೆ ಸಹಾಯ ಕೊಡಲು ನಿಶ್ಚಯಿಸಿರುವುದನ್ನು ಕಂಡು ಜಪಾನು ಗಾಬರಿಗೊಂಡಿದೆಯೆಂದು ಲಂಡನಿನ ಡೈಲಿ ಟೆಲಿಗ್ರಾಫ್ ಪತ್ರಿಕೆಯು ಬರೆಯುತ್ತದೆ.

ಅಮೇರಿಕದಿಂದ ಬ್ರಿಟನು ಸಾಲ ಕೇಳಿತು

ಧನಸಹಾಯ ಕೊಡಬೇಕೆಂದು ಬ್ರಿಟನು ಅಮೇರಿಕದೊಡನೆ ಕೇಳಿರುವುದಾಗಿ ವಾಶಿಂಗ್‌ಟನಿನಲ್ಲಿ ಸುದ್ದಿ ಹರಡಿರುತ್ತದೆ.

ಲಾವಲರ ಬಂಧನ

ಪಿಟೇನ್ ಸರಕಾರದಿಂದ ತಳ್ಳಿಹಾಕಲ್ಪಟ್ಟ ಲಾವಲರನ್ನು ಫ್ರೆಂಚ್ ಪೋಲೀಸರು ಸೆರೆಹಿಡಿದರು. ಅವರ ಮನೆಯನ್ನು ಶೋಧಿಸಿ ಕಾಗದ ಪತ್ರಗಳನ್ನು ಜಪ್ತಿ ಮಾಡಲಾಯಿತು. ಲಾವಲರ ಸ್ಥಳದಲ್ಲಿ ಫ್ಲ್ಯಾಂಡಿನ ಎಂಬವರನ್ನು ನೇಮಿಸಲಾಗಿದೆ.

"ರಕ್ತಕ ಕಾಲುವೆಯು ಹರಿಯಿತು"

ಲಿಬಿಯದಲ್ಲಿ ಬ್ರಿಟಿಷರ ಪ್ರವೇಶ

ಇಜಿಪ್ತ ಗಡಿನಾಡಿನ ಹತ್ತಿರ ಇಟಲಿಯನ್ ಸೈನಿಕರನ್ನು ಹಿಂದಟ್ಟುತ್ತಿದ್ದ ಬ್ರಿಟಿಷ್ ಸೈನಿಕರು ಇಟಲಿಯನರ ಪ್ರದೇಶಗಳನ್ನು ನುಗ್ಗಿದ್ದರೆಂದು ತಿಳಿಯುತ್ತದೆ. ಅಲ್ಲಿ ನಡೆದ ಕಾಳಗದಲ್ಲಿ ರಕ್ತದ ಕಾಲುವೆ ಹರಿಯಿತೆಂದು ತಿಳಿದು ಬರುತ್ತದೆ.

ಬರ್ಮಾ ರಸ್ತೆಯ ಮೇಲೆ ಬಾಂಬು

ಜಪಾನಿ ನೌಕಾಬಲದ ಕೆಲವು ವಿಮಾನಗಳು ಬರ್ಮಾ ರಸ್ತೆಯ ಮೇಲೆ ಬಾಂಬಿನ ಮಳೆ ಸುರಿಸಿರುವುದಾಗಿ ತಿಳಿದು ಬರುತ್ತದೆ.

ವಿಂಡ್ಸರರು ಅಮೇರಿಕಾ ರಾಯಭಾರಿಗಳಾಗುವರೆ?

ಅಮೇರಿಕದಲ್ಲಿ ಊಹಾಪೋಹ

ಲಾರ್ಡ ಲೋಥಿಯಾನರ ಮರಣದಿಂದ ಖಾಲಿಬಿದ್ದ ಅಮೇರಿಕದ ರಾಯಭಾರಿ ಸ್ಥಾನವು ಡ್ಯೂಕ್ ಓಫ್ ವಿಂಡ್ಸರರಿಗೆ ದೊರಕವುದೆಂದೂ, ರೂಸ್‌ವೆಲ್ಟರೊಡನೆ ಅವರ ಭೇಟಿಯು ಬೇಗನೇ ಆಗುವುದೆಂದೂ ಅಮೇರಿಕದಲ್ಲಿ ಊಹಾಪೋಹತಿದ್ದದೆ.

ಸತ್ಯಾಗ್ರಹಿಗಳು ಉಗ್ರ ಶಿಸ್ತು ಪಾಲಿಸಬೇಕು

ಮಹದೇವ ದೇಸಾಯಿಯವರ ಪ್ರಕಟಣೆ

ಸತ್ಯಾಗ್ರಹ ಮಾಡುವ ಸತ್ಯಾಗ್ರಹಿಗಳ ಸಂಬಂಧದಲ್ಲಿ ಗಾಂಧಿಜಿಯವರ ಅಪ್ಪಣೆ ಮೇರೆಗೆ ಶ್ರೀ ಮಹದೇವ ದೇಸಾಯಿಯವರು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಈಗ ಮೂರು ವರ್ಗದ ಜನರು ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ ಅವರು ಸತ್ಯಾಗ್ರಹ ಮಾಡಿ ಜೈಲನ್ನು ಸೇರಲೇಬೇಕೆಂಬ ಒತ್ತಾಯವಿಲ್ಲ. ಸದ್ಯದ ಚಳವಳದ ಬಗ್ಗೆ ಸ್ಪಷ್ಟೀಕರಣದ ಅಗತ್ಯವಿದೆ. ಸತ್ಯಾಗ್ರಹವು ಕೇವಲ ಐಚ್ಛಿಕ ರೀತಿಯದು. ಯಾರಿಗೆ ಸತ್ಯಾಗ್ರಹ ಮಾಡಲು ಮನಸ್ಸಿಲ್ಲವೋ ಅಂಥವರನ್ನು ಒತ್ತಾಯಪಡಿಸುವುದಿಲ್ಲ. ಅವರನ್ನು ಸತ್ಯಾಗ್ರಹದಿಂದ ಮುಕ್ತರನ್ನಾಗಿ ಮಾಡಲಾಗುವುದು. ಅಲ್ಲದೆ ಸತ್ಯಾಗ್ರಹ ಮಾಡಬೇಕೆಂಬ ಆತುರವುಳ್ಳವರು ಸಹ ವಿಧಾಯಕ ಕಾರ್ಯದಲ್ಲಿ ಹಾಗೂ ಅಹಿಂಸೆಯಲ್ಲಿ ವಿಶ್ವಾಸವುಳ್ಳವರಿರಬೇಕು ಎಂಬ ಶರ್ತಗಳು ಮಹತ್ವದ್ದಿವೆ. ಆ ಶರ್ತಗಳಂತೆ ಅವರು ಅರ್ಹರೆಂದು ತೋರಿದಲ್ಲಿ ಅವರ ದೇಹದಾರ್ಢ್ಯವು ಜೈಲಿನ ಜೀವನವನ್ನು ತಡೆಯುವಷ್ಟು ಸಶಕ್ತವಿದ್ದಲ್ಲಿ ಅವರಿಗೆ ಬೇರಾವ ಬಗೆಯ ತಾಪತ್ರಯಗಳೂ ಇರದಿದ್ದಲ್ಲಿ ಮಾತ್ರ ಅಂಥವರನ್ನು ಸತ್ಯಾಗ್ರಹಿಗಳನ್ನಾಗಿ ಆರಿಸಲಾಗುವುದು. ಒಮ್ಮೆ ಸತ್ಯಾಗ್ರಹಿಗಳೆಂದು ಆರಿಸಲ್ಪಟ್ಟ ಬಳಿಕ ಅವರು ಉಗ್ರವಾದ ಶಿಸ್ತನ್ನು ಪಾಲಿಸಿಕೊಂಡು ಆದರ್ಶ ಕೈದಿಗಳೆನಿಸಿ ಜೈಲನ್ನು ಸೇರಬೇಕು.

ಈ ಸಾರಿಯ ಸತ್ಯಾಗ್ರಹಿಗಳ ಆಯ್ಕೆಯಲ್ಲಿ ಒಂದು ಬಗೆಯಿಂದ ಅವರವರ ಯೋಗ್ಯತೆಯ ರೀತಿಯನ್ನು ಅನುಸರಿಸಲಾಗಿದೆ ಎಂದು ತಿಳಿದುಕೊಳ್ಳುವುದೆಂದರೆ ದುರ್ದೈವದ ಪ್ರಸಂಗ. ಶಕ್ಯವಿದ್ದಮಟ್ಟಿಗೆ ಕೇವಲ ಕಾಂಗ್ರೆಸ್ ಪ್ರತಿನಿಧಿಗಳನ್ನಷ್ಟೇ ಆರಿಸಲಾಗಿದೆ. ಎಷ್ಟೋ ಉತ್ತಮ ಕೆಲಸಗಾರರು ಉಚ್ಚ ತರಗತಿಯ ಸತ್ಯಾಗ್ರಹಿಗಳು ಇನ್ನೂ ಹೊರಗೆ ಇರುವರು. ಅಲ್ಲದೆ ತಮ್ಮ ಇಡೀ ಜೀವನವನ್ನೆ ವಿಧಾಯಕ ಕಾರ್ಯಕ್ಕೆ ಮೀಸಲಾಗಿಟ್ಟವರನ್ನು ಜೈಲಿಗೆ ಕಳಿಸುವುದಕ್ಕೆ ಗಾಂಧಿಜಿಯವರ ಸಿದ್ಧತೆಯಿಲ್ಲ.

ಯಾವಾಗ ಗಾಂಧಿಜಿಯವರಿಗೆ ಹೆಚ್ಚಿನ ತ್ಯಾಗವು ಅವಶ್ಯವೆನಿಸುತ್ತದೋ ಆಗ್ಯೆ ಅರ್ಹರಿದ್ದವರನ್ನೆಲ್ಲ ಸತ್ಯಾಗ್ರಹ ಮಾಡುವುದಕ್ಕೆ ಅವರು ಕರೆಯುವರು.

ಗಡಿನಾಡಿನಲ್ಲಿ ಸತ್ಯಾಗ್ರಹ

ಸತ್ಯಾಗ್ರಹಿಗಳನ್ನು ಕೈದು ಮಾಡುವುದಿಲ್ಲ

"ನಮಗೆ ಭಾಷಣ ಸ್ವಾತಂತ್ರ್ಯ ಸಿಕ್ಕಿತು"

ಅಬ್ದುಲ್ ಗಫರ್ ಖಾನರ ಹೇಳಿಕೆ

ಕಲದವಾರ ಗಡಿನಾಡಿನಲ್ಲಿ ಸತ್ಯಾಗ್ರಹವು ಆರಂಭವಾಗಿದೆ. ಮೊದಲನೆಯದಾಗಿ ಮಾಜಿ ಪ್ರಧಾನ ಮಂತ್ರಿ ಡಾ। ಖಾನಸಾಹೇಬರೇ ಮೆಜಿಸ್ಟ್ರೇಟರಿಗೆ ನೋಟೀಸ ಕೊಟ್ಟು ಸತ್ಯಾಗ್ರಹ ಪ್ರಾರಂಭಿಸಿದರು. ಆದರೆ ಅಲ್ಲಿ ಯಾರನ್ನೂ ಸೆರೆಹಿಡಿಯುವುದಿಲ್ಲ. ಕೆಲವು ಸತ್ಯಾಗ್ರಹಿಗಳು ಹಲವು ಸಲ ಸತ್ಯಾಗ್ರಹ ಮಾಡಿದರು, ಯುದ್ಧವಿರೋಧ ಘೋಷಣೆ ಮಾಡಿದರು. ಅವರನ್ನು ಸೆರೆಹಿಡಿಯಲಿಲ್ಲ. ಈ ವಿಷಯದಲ್ಲಿ ಗಡಿನಾಡಿನ ಗಾಂಧಿಗಳಾದ ಖಾನ್ ಅಬ್ದುಲ್ ಗಫರ್ ಖಾನರನ್ನು ಸಂದರ್ಶಿಸಿದಾಗ ಪತ್ರಿಕಾಪ್ರತಿನಿಧಿಯೊಡನೆ ಅವರು ನಮ್ಮನ್ನು ಸರಕಾರದವರು ಸೆರೆಹಿಡಿಯಲಿ ಹಿಡಿಯದಿರಲಿ ಆ ವಿಷಯ ನಮಗೆ ಯೋಚನೆಯಿಲ್ಲ. ನಾವು ಯುದ್ಧ ವಿರುದ್ಧ ಘೋಷಣೆ ಮಾಡುತ್ತಾ ಹೋಗುವೆವು. ಅದಕ್ಕೆ ಸರಕಾರವು ಪ್ರತಿಬಂಧ ಮಾಡದಿದ್ದರೆ ನಮ್ಮ ಪ್ರಾಂತದಲ್ಲಿ ಭಾಷಣ ಸ್ವಾತಂತ್ರ್ಯವು ದೊರಕಿತು ಎಂದು ಹೇಳಿದರು.

ಮಂತ್ರಿಮಂಡಳವನ್ನು ಸ್ಥಾಪಿಸುವ ಕಾ ರಾಯರುಗಳ ಯತ್ನ

ಪ್ರಾಂತಗಳಲ್ಲಿ ಮಂತ್ರಿಮಂಡಳಗಳನ್ನು ಸ್ಥಾಪಿಸುವ ಬಗ್ಗೆ ಕಾಪ್ರೇಡ್ ರಾಯರವರು ಯತ್ನಿಸುತ್ತಿರುವರಷ್ಟೆ? ಅವರು ಪತ್ರಿಕಾಪ್ರತಿನಿಧಿಗಳಿಗೆ ಈ ಪ್ರಯತ್ನದಲ್ಲಿ ತಮಗೆ ಮುಸ್ಲಿಂ ಲೀಗಿನ ಬೆಂಬಲ ದೊರಕಿದೆಯೆಂದು ಹೇಳಿದರು.

ಸರೋಜಿನಿಯರಿಗೆ ಅಪ್ಪಣೆ ಸಿಗಲಿಲ್ಲ

ಮಹಾತ್ಮರಲ್ಲಿಗೆ ಸೆರೆಮನೆಯಿಂದ ಬಿಡುಗಡೆಯಾಗಿ ಹೋಗಿದ್ದ ಸರೋಜಿನಿ ದೇವಿಯರಿಗೆ ಎರಡನೆಯ ಸಲ ಸತ್ಯಾಗ್ರಹ ಹೂಡಲು ಅವರ ಆರೋಗ್ಯ ಚೆನ್ನಾಗಿಲ್ಲವೆಂದು ಮಹಾತ್ಮಾಜಿಯವರು ಅನುಮತಿ ಕೊಡಲಿಲ್ಲವೆಂದು ತಿಳಿದು ಬಂದಿದೆ.

ಕೃಪಲಾನಿಯವರ ಸತ್ಯಾಗ್ರಹ

ಎ. ಐ. ಸಿ. ಸಿ. ಆಫೀಸಿನಲ್ಲಿ ಬಹಳ ಕೆಲಸವಿರುವುದರಿಂದ ಅದನ್ನು ಬೇಗನೇ ತೀರಿಸಿ ಆಚಾರ್ಯ ಕೃಪಲಾನಿಯವರೂ ಸತ್ಯಾಗ್ರಹ ಹೂಡುವರೆಂದು ಗೊತ್ತಾಗಿದೆ.

ಚೀನದ ಸ್ನೇಹಮಂಡಳ ಚೀನಕ್ಕೆ ಮರಳಿತು

ತಾಯಿ ಚಿತಾವರ ಸಂದೇಶ

ಕಳೆದ ಒಂದು ತಿಂಗಳಿಂದ ಭಾರತದಲ್ಲಿ ಸಂಚಾರ ಮಾಡುತ್ತಿದ್ದ ಚೀನಸ್ನೇಹ ಮಂಡಳವು ಮರಳಿ ಚೀನಕ್ಕೆ ಹೊರಟಿತು. ಅವರು ಅನೇಕ ಬೌದ್ಧಕ್ಷೇತ್ರಗಳನ್ನು ಸಂದರ್ಶಿಸಿ ಭಾರತದ ಅನೇಕ ಮುಖಂಡರನ್ನು ಭೇಟಿಯಾದರು. 'ನಾನು ಹಿಂದೂ ದೇಶದಿಂದ ವಿಶೇಷ ಅನುಭವವನ್ನು ಒಯ್ಯುತ್ತೇನೆ. ಚೀನದಿಂದ ಭಾರತಕ್ಕೆ ತಂದ ಸ್ವಾಧೀನತೆಯ ಮಹತ್ವದ ಸಂದೇಶವನ್ನು ನಾನು ಭಾರತದಿಂದ ಅಲ್ಲಿಗೆ ಒಯ್ಯುತ್ತೇನೆ' ಎಂದರು ತಾಯಿ ಚಿತಾವೊ ಇವರು.

ಪಂಜಾಬಿನಲ್ಲಿ ಸತ್ಯಾಗ್ರಹ

ಪಂಜಾಬಿನಲ್ಲಿ ಸತ್ಯಾಗ್ರಹ ಹೂಡಲು ತಾ. ೧೮ರ ಮೇಲೆ ಮಹಾತ್ಮ ಗಾಂಧಿಜಿಯವರು ಒಪ್ಪಿಗೆ ಇತ್ತಿರುವರು.

ಆಶ್ರಿತಸಂಸ್ಥಾನಗಳಲ್ಲಿ ಸತ್ಯಾಗ್ರಹ ಕೂಡದು

ಜಿಂದ್ ಸಂಸ್ಥಾನದ ರಾಜಕೀಯ ಕೆಲಸಗಾರರಾದ ಹಂಸರಾಜರು ಮಹಾತ್ಮರಿಗೆ ಪತ್ರಬರೆದು ಆಶ್ರಿತ ಸಂಸ್ಥಾನಗಳಲ್ಲಿ ಸತ್ಯಾಗ್ರಹ ನಡೆಸುವ ವಿಷಯವಾಗಿ ಕೇಳಿದ್ದಕ್ಕೆ ಅವರು ಸಂಸ್ಥಾನಗಳಲ್ಲಿ ವೈಂ... ಸತ್ಯಾಗ್ರಹ... ಹೇಳಿದರು.

ಸ...

ಕಾಂಗ್ರೆ... ಮುಖಂಡ... ಮಹರಾ... ಜಬಲಪು... ರಿಗೆ ೬ ತಿಂ... ಮಾವಲೆ... ಅಲ್ಲಿನ ವ... ೬ ತಿಂಗಳ... ರಾವ ದೇ... ವಿಶಾಖ... ಮೇನರಾದ... ಯರಿಗೆ ವ... ಪಿ ಎ ಎ... ಒಂದೊಂದ... ಪ್ರಾಂತ್ರದ... ಟರಿಗಳಾದ... ಯರಿಗೆ ೩... ೦ ಎಲ... ಯರಿಗೆ ... ೩೦೦ ರೂ... ಲಖನೌ... ಬಿ ಗುಪ್ತ... ವ. ಸಾ... ಕುಮಾರ್... ರಿಗೆ ೧ ವ... ಸೀತಾರಾ... ರಿಗೆ ೬ ತಿಂ... ದಂಡ. ... ಲೀಸ್ ಅ... ಮೌ ... ಬಂಧನ. ... ರಿಗೆ ೧೦೦೦... ಕಟಕಿನ ಎ... ಕೈಲಾಸಚ... ಕೆ. ನ. ... ಡಾ ಕಿಶೊ... ಸ. ಪ್ರಾಕ್ತು... ಅಧ್ಯಕ್ಷರಾದ... ರುದ್ದೀನ... ಜಬಲ್... ಳಾದ ಭ... ಲಾಯ... ಚೌಧರಿ... ಅಲ್ಲಿನ ಎ... ಸವಾಯಿ...



ಜನವರಿಯಲ್ಲಿ ಸತ್ಯಾಗ್ರಹಿಗಳ ಹೊಸ ಪಟ್ಟಿ

ಸತ್ಯಾಗ್ರಹದ ಕುರಿತು ಮಹಾತ್ಮರ ಅಭಿಮತ

ರಾಷ್ಟ್ರಪತಿ ಅಜಾದರು ಸತ್ಯಾಗ್ರಹ ಹೂಡುವರು

ಚೀನದ ಸ್ನೇಹಮಂಡಳ ಮರಳಿತು

ಅಲ್ಲಿ ವೈಯುಕ್ತಿಕ ಅಥವಾ ಸಾಮೂಹಿಕ ಸತ್ಯಾಗ್ರಹಗಳು ನಡೆಯಕೂಡದಾಗಿ ಹೇಳಿದರು.

ಸತ್ಯಾಗ್ರಹ ವಾರ್ತೆ

ಕಾಂಗ್ರೆಸ್ ಸಮತಾವಾದೀ ಪಕ್ಷದ ಮುಖಂಡರಾದ ಕಾಮ್ರೇಡ್ ಯುಸುಫ್ ಮೆಹರಾಲಿಯವರು ಸ್ಥಾನಬದ್ಧರಾದರು. ಜಬಲಪುರದ ಬದ್ರಿನಾರಾಯಣ ಸಿಂಗರಿಗೆ ೬ ತಿಂಗಳ ಕಠಿಣ ಸಜೆ. ಅಕೋಲೆಯ ಮಹಾವಲೆಯವರಿಗೆ ೯ ತಿಂಗಳ ಸಜೆ. ಅಲ್ಲಿನ ವಾಮನರಾವ ಪಾಟೀಲರಿಗೆ ೬ ತಿಂಗಳ ಸಜೆ ಮತ್ತು ವಾಸುದೇವರಾವ ದೇಶಮುಖರಿಗೆ ೪ ತಿಂಗಳ ಸಜೆ. ವಿಶಾಖ ಪಟ್ಟದ ಮುನ್ಸಿಪಲ್ ಚೇರ್ಮೇನರಾದ ಪಿ. ವೀರಭದ್ರ ಸ್ವಾಮಿಯರಿಗೆ ಮತ್ತು ಜಿ. ಬೋ. ಅಧ್ಯಕ್ಷರಾದ ಪಿ. ಎ. ಎಲ್. ಎನ್. ಸ್ವಾಮಿಯರಿಗೆ ಒಂದೊಂದು ವರ್ಷ. ಕ. ಸಜೆ. ಸಂ. ಪ್ರಾಂತ್ಯದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಸುಲೇಮಾನ ಅನಸಾರಿಯರಿಗೆ ೩ ತಿಂಗಳ ಸಾ. ಸ. ಮಧುರೆಯ ಎಂ. ಎಲ್. ಎ. ರಾಮಚಂದ್ರ ರೆಡ್ಡಿಯರಿಗೆ ೬ ತಿಂಗಳ ಸಾ. ಸ. ಮತ್ತು ೩೦೦ ರೂ. ದಂಡ.

ಲಖನೋ ಕಾಂ. ಕ. ಅಧ್ಯಕ್ಷ ಸಿ. ಬಿ. ಗುಪ್ತ (ಎಂ., ಎಲ್. ಎ.) ರಿಗೆ ೧ ವ. ಸಾ. ಸ. ಫೈನಿಯ ಹರೀಂದ್ರ ಕುಮಾರ್ ಸೂರಿ ಎಂ. ಎಲ್. ಎ. ರಿಗೆ ೧ ವ. ಸ. ಬಳ್ಳಾರಿಯ ಎಚ್. ಸೀತಾರಾಮ ರೆಡ್ಡಿ ಎಂ. ಎಲ್. ಎ. ರಿಗೆ ೬ ತಿಂ. ಕ. ಸ. ಮತ್ತು ೩೦೦ ರೂ. ದಂಡ. ಲಾಹೋರಿನ ಅ. ಭಾ. ಮಜಲೀಸ್ ಅಹಾರ ಪ್ರಾಂತಿಕ ಸಭಾಧ್ಯಕ್ಷ ಮೌ. ಹಬೀಬು ರಹಮಾನರಿಗೆ ಬಂಧನ. ಕಲ್ಕತ್ತದ ಬೇಗಮ ಸಾಹೇಬರಿಗೆ ೧೦೦೦ ರೂ. ದಂಡ ವಾ ತಿಂ. ಸಜೆ. ಕಟಕಿನ ಎ. ಐ. ಸಿ. ಸಿ. ಸದಸ್ಯರಾದ ಕೈಲಾಸಚಂದ್ರ ಮಹಂತರಿಗೆ ೬ ತಿಂ. ಕ. ಸ. ಶಿಶನಗಂಜದ ಎಂ. ಎಲ್. ಎ. ಡಾ. ಕಿಶೋರಿಲಾಲರಿಗೆ ೧. ವ. ಕ. ಸ. ಮತ್ತು ಸಂ. ಪ್ರಾಂ. ಕಾಂ. ಕ. ಅಧ್ಯಕ್ಷರಾದ ಮಿಯಾನ್ ಇಫ್ತಿಕರುದ್ದೀನ ಇವರಿಗೆ ಬಂಧನ.

ಜಬಲ್‌ಪುರದ ಎಂ. ಎಲ್. ಎ. ಗಳಾದ ಭಗವಂತ ರಾವ್ ಮಂಡಲಾಯ ಮತ್ತು ಗುಲಾಬಚಂದ ಚೌಧರಿ ಇವರಿಗೆ ೬ ತಿಂಗಳ ಕ. ಸ. ಅಲ್ಲಿನ ಎ. ಐ. ಸಿ. ಸಿ. ಮೆಂಬರರಾದ ಸವಾಯಿಮಲ್ಲ ಜೈನ ಮತ್ತು ಪಂ. ನರ್ಮದಾ ಪ್ರಸಾದ ಮಿಶ್ರ ಎಂ. ಎಲ್. ಎ. ಇವರಿಗೆ ೬ ತಿಂ. ಕ. ಸ. ಜಗಳಾಪದ ಎ. ಐ. ಸಿ. ಸಿ. ಮೆಂಬರರಾದ ದೇವಕಿನಂದನ ನಾರಾಯಣ ಮತ್ತು ಎಸೆಂಬ್ಲಿ ಮೆಂಬರರಾದ ಧನಜಿ ನಾನಾ ಚೌಧರಿ ಇವರಿಗೆ ೬ ತಿಂ. ಸಾ. ಸ. ಧಿಲ್ಲಿ ಪ್ರಾಂತಿಕ ಮಜಲೀಸ್ ಅಹ್ರಾರದ ಅಧ್ಯಕ್ಷ ಮೌಲಾನಾ ಅಬ್ದುಲ್ ಫರೂಕಿಯವರಿಗೆ ೨ ವ. ಕ. ಸ. ಗೌಹಾತಿಯ ಎಂ. ಎಲ್. ಎ. ಗಳಾದ ಗೌರೀಕಾಂತ ತಾಲೂಕದಾರರಿಗೆ ೬ ತಿಂ. ಸಾ. ಸ. ಕಾಶಿಯ ಪಂ. ಮದನ ಮೋಹನ ಮಾಲವೀಯರ ಪುತ್ರ ಪಂ. ಗೋವಿಂದ ಮಾಲವೀಯರೂ ಸಂ. ಪ್ರಾಂತದ ಹಿಂದಿನ ಮಂತ್ರಿ ಹಾಫೀಜ್ ಮಹಮ್ಮದ್ ಇವರೂ ಬಂಧಿತರು. ಕಲ್ಕತ್ತದ ಎಂ. ಎಲ್. ಎ. ಪ್ಯಾರಿ ಶಂಕರರಾವ್ ಇವರಿಗೆ ೬ ತಿಂ. ಸಾ. ಸ. ಮಧುರೆಯ ಎಲ್. ಎಲ್. ಎ. ಕೆ. ರಾಮಚಂದ್ರ ರೆಡ್ಡಿ ಇವರಿಗೆ ೬ ತಿಂ. ಕ. ಸ. ಆಂಧ್ರದ ಎಂ. ಎಲ್. ಎ. ಟಿ. ಸುಬ್ಬರಾಮ ರೆಡ್ಡಿಯವರಿಗೆ ೬ ತಿಂ. ಕ. ಸ. ಎಲ್ಲೂರು ಮುನಿಸಿಪಾಲಿಟಿ ಅಧ್ಯಕ್ಷರಾದ ಚಂದೂರಿ ರೆಡ್ಡಿಚಿನ್ನನವರಿಗೆ ೬ ತಿಂ. ಕ. ಸ. ಎಲ್ಲೂರು ಎ. ಐ. ಸಿ. ಸಿ. ಸದಸ್ಯರಾದ ಮೊ॥ ರಂಗಯ್ಯನವರಿಗೆ ೯ ತಿಂ. ಕ. ಸ. ಕೊಯಮುತ್ತೂರಿನ ಎಂ. ಎಲ್. ಎ. ವಿ. ಸಿ. ಫಲಸ್ವಾಮಿ ಗೌಡರಿಗೆ ೬ ತಿಂ. ಕ. ಸ. ಅಮಲಾಪುರಂನಿನ ಎಂ. ಎಲ್. ಸಿ. ಬಿ. ವೀರಸ್ವಾಮಿಯರಿಗೆ ೧ ವ. ಕ. ಸ. ನಂದ್ಯಾಳದ ಎ. ಐ. ಸಿ. ಸಿ. ಸದಸ್ಯರಾದ ಪಿ. ರಂಗರೆಡ್ಡಿಯರಿಗೆ ೧ ವ. ಕ. ಸ. ಮದ್ರಾಸಿನ ಎಂ. ಎಲ್. ಎ. ಜಿ. ರಂಗಯ್ಯ ನಾಯ್ಡು ಇವರಿಗೆ ಸ್ಥಾನಬದ್ಧತೆ. ಮದ್ರಾಸು ಎಂ. ಎಲ್. ಎ., ಸಿ. ಎಸ್. ಕುಮಾರಸ್ವಾಮಿಯರಿಗೆ ೯ ತಿಂ. ಕ. ಸ. ಭೀಮಾವರಂ ಜಿ. ಕಾಂ. ಕ. ಅಧ್ಯಕ್ಷ ಡಿ. ನಾರಾಯಣರಾಜು ಇವರಿಗೆ ೬ ತಿಂ. ಸ. ೨೦೦ ರೂ. ದಂಡ. ಮದರಾಸು ಎಂ. ಎಲ್. ಎ. ರೊಕ್ಕಲಿಂಗಂ ಇವರಿಗೆ ೯ ತಿಂ. ಸ. ರೂ. ೩೦೦ ದಂಡ. ಬಳ್ಳಾರಿಯ ಎಂ. ಎಲ್. ಎ. ಬಿ. ಆನಂತಾಚಾರ್ಯರಿಗೆ ೬ ತಿಂ. ಕ. ಸ. ರೂ. ೩೦೦ ದಂಡ. ಸಂ. ಪ್ರಾಂತದ ಎಂ. ಎಲ್. ಎ. ಗಳಾದ ಪಂ. ಜೀವನಲಾಲ ಪಂ. ಯಜ್ಞನಾರಾಯಣ ಮತ್ತು ಕುನಪರಹರ ಪ್ರಸಾದ ಸಿಂಗ್ ಇವರಿಗೆ ಬಂಧನ. ಅಲ್ಲಿನ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಆಚಾರ್ಯ ಜಗಲಕಿಶೋರ ಪಂ. ದ್ವಾರಕಾಪ್ರಸಾದ ಪಂ. ಲಕ್ಷ್ಮೀಶಂಕರ ಬಾಜಪೇಯ ಇವರಿಗೆ ಬಂಧನ. ಪೇಶಾವರದ ಎಂ. ಎಲ್. ಎ. ಖಾನ್ ಫಕೀರ್ ಖಾನರಿಗೆ ಬಂಧನ. ಚಿಸ್‌ತಾರದ ಎಂ. ಎಲ್. ಎ. ಎಸ್. ದತ್ತರಿಗೆ ಬಂಧನ.

ಹಜಾರಿಬಾಗಿನ ಎಂ. ಎಲ್. ಎ. ಗಳಾದ ಸುಖಲಾಲ ಸಿಂಗರಿಗೆ ೧ ವ. ಕ. ಸ. ಮತ್ತು ಅಲ್ಲಿನ ಎಂ. ಎಲ್. ಎ. ಸರಸ್ವತಿ ದೇವಿಯರಿಗೆ ೧ ವ. ಸಾ. ಸ. ಕೇಂದ್ರ ಎಂ. ಎಲ್. ಎ. ಗಳಾದ ನಾರಾಯಣಸಿಂಗರ ಬಂಧನ. ಮೋಂಗೀರಿನ ಎಂ. ಎಲ್. ಎ. ರಫಿ ಉದ್ದೀನರಿಗೆ ೪ ತಿಂ. ಕ. ಸ. ಬಂಗಾಳದ ಎಂ. ಎಲ್. ಎ. ಕಮಲಕೃಷ್ಣ ರೈ ಇವರಿಗೆ ೪ ತಿಂ. ಸಾ. ಸ. ಕೇಂದ್ರ ಎಂ. ಎಲ್. ಎ. ಸಂತಾನಂರಿಗೆ ೧ ವ. ಕ. ಸ. ಬೀಹಾರದ ಎಂ. ಎಲ್. ಎ. ಗಳಾದ ರಾಜಕಿಶೋರ ಸಿಂಗ ಮತ್ತು ಯದುವನ ಸಿಂಗರಿಗೆ ಬಂಧನ. ಜಬಲಪುರದ ಎಂ. ಎಲ್. ಎ. ರಾಜೇಂದ್ರ ಸಿಂಹರಿಗೆ ೬ ತಿಂ. ಕ. ಸ. ಗೋರಖಪುರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಸುಲೇಮಾ ಅನಸಾರಿಯವರಿಗೆ ಬಂಧನ. ಲಾಹೋರಿನ ಎ. ಐ. ಸಿ. ಸಿ. ಮೆಂಬರರಾದ ಸರ್ದಾರ ಗೋಪಾಲ ಸಿಂಗರಿಗೆ ೧ ವ. ಸ. ಮುರಾದಾಬಾದಿನ ಎಂ. ಎಲ್. ಎ. ಪಂ. ಶಂಕರ ದತ್ತ ೯ ತಿಂ. ಕ. ಸ. ಕೇಮಲಾದ ಎ. ಐ. ಸಿ. ಸಿ. ಸದಸ್ಯೆ ಕುಮಾರಿ ಬನಾಯಲತಾರಿಗೆ ಸ್ಥಾನಬದ್ಧತೆ. ಅಮರಾವತಿಯ ಎ. ಐ. ಸಿ. ಸಿ. ಸದಸ್ಯರಾದ ಬಿ. ಜಿ. ದೇಶಮುಖರಿಗೆ ರೂ. ೨೦೦ ದಂಡ. ಆಸಾಮಿನ ಹಿಂದಿನ ಪ್ರಧಾನಮಂತ್ರಿ ಗೋಪಿನಾಥ ಭಾರ್ದೋಲೀಯರಿಗೆ ೧ ವ. ಸಾ. ಸ.

(೧೨ನೇ ಪುಟಕ್ಕೆ ಮುಂದುವರಿಯುವುದು)

ಅಜಾದರ ಸತ್ಯಾಗ್ರಹ

ರಾಷ್ಟ್ರಪತಿಗಳಾದ ಮೌ॥ ಅಬುಲ ಕಲಂ ಅಜಾದರು ಈ ತಿಂಗಳ ಕೊನೆಯಲ್ಲಿಗೆ ಸತ್ಯಾಗ್ರಹ ಹೂಡುವರಾಗಿ ತಿಳಿದಿದೆ.

To All whom it may concern

Please take notice that the partnership in the concern of M/s Kulai Narashima Bhandary Ullal Ram Nayak, Mangalore, has been dissolved. The business continues in the single name of Kulai Narasimha Bhandary. Ullal Rama Nayak has no connection whatever in the said business.

(Sd) Kulai Narasimha Bhandary.

ಪ್ರಕಟಣೆ

ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವುದೇನಂದರೆ:—

ಪುತ್ತೂರು ತಾಲ್ಲೂಕು ಕಟಕ ಗ್ರಾಮದಲ್ಲಿರುತ್ತಿದ್ದ ಕಳ್ಳಿಪೂವಡ ಹೆಗ್ಗಡೇರು ಕುಟುಂಬದ ಸ್ಥಿರಚರ ಸೊತ್ತುಗಳ ಸಹಾಯದಿಂದ ತನ್ನ ಕುಟುಂಬ ಯಜಮಾನನಾಗಿ ಬೇರೆ ಸ್ಥಿರಚರ ಸೊತ್ತುಗಳ ಸಂಪಾದಿಸಿರುತ್ತಿದ್ದರು. ಆದರೆ ಆ ಸೊತ್ತುಗಳ ತನ್ನ ಸ್ವಂತದ್ದೆಂತ ಕಲ್ಪಿಸಿಕೊಂಡು ತನಗೆ ಮತ್ತು ಕಂಡಂತವರಿಗೆ ಆ ಆಸ್ತಿಗಳು ಕೊಟ್ಟಿರುವದಾಗಿಯೂ ಅವುಗಳ ಸಂಬಂಧ ಕೆಲವು ಸಾಲಗಳು ಉಂಟೆಂಬುದಾಗಿಯೂ ಒಂದು ಮರಣಶಾಸನ ದಸ್ತಾವೇಜು ರಿಜಿಸ್ಟರ್ ಆಪೀಸಿನಲ್ಲಿ ಗುಪ್ತವಾಗಿಟ್ಟು ಬರೆದಿಟ್ಟು ಸದ್ರಿ ಮರಣ ಶಾಸನವು ರಿಜಿಸ್ಟ್ರಿಯಾಗಿರುವುದಿ. ಆದರೆ ಅದರ ಪ್ರಕಾರ ಎಕ್ಸಿಕ್ಯೂಟರಾಗಿ ನೊಕ್ಕರು ಪಟ್ಟದ ಬೇರೆ ಗ್ರಾಹಸ್ಥರಿದ್ದರೂ ಪಕೀರಪ್ಪ ಎಚ್. ಟಿ. ಶೈ ಎಂಬವರು ಸರಿಯಾಗಿ ಆಸ್ತಿಯ ನೋಡದೆ ಸಾಲಗಳ ತೀರಿಸದೆ ಉಟ್ಟೆಕ್ಕಯನ್ನು ತನ್ನ ಸ್ವಂತಕ್ಕೆ ದುರುಪಯೋಗ ಪಡಿಸುತ್ತಿರುವುದರಿಂದ ನ್ಯಾಯವಾದ ಸಾಲಗಳು ಯಾವದು ನ್ಯಾಯವಲ್ಲದ ಸಾಲಗಳು ಯಾವದು ಎಂಬ ಭೇದವಿಲ್ಲದೆ ಮೋಸದಿಂದಲೂ ವಳಸಂಚಿನಿಂದಲೂ ಕೆಲವು ಆಸ್ತಿಗಳು ಸಾಲಗಳಿಗೆ ಬೋಲಂ ಪಟ್ಟಿ ಬರಾಮಿಯಾಗಿ ಬೇರೆ ಜನರ ಹೆಸರಲ್ಲಿ ದಾವೆ ಹಾಕಿಸಿ ಪಡೆಯುತ್ತಾರೆ. ಇಲ್ಲದ ಸಾಲಗಳನ್ನು ಕಲ್ಪಿಸಿ ಆ ಬಗ್ಗೆ ಕೆಲವು ಆಸ್ತಿಗಳು ಬ್ಯರಿಯಾಗುವಂತೆ ಯುಕ್ತಿಸುತ್ತಾರೆ. ಈ ರೀತಿಯಲ್ಲಿ ವರ್ತನೆ ಆದಕಾರಣ ಆಸ್ತಿಗಳ ಅಲ್ಲ ದಾಖ್ಲೆಗಳಿಗೆ ಕೋರ್ಟಿನ ಮೇಲಂ ಆಗುತ್ತವೆ. ಈ ಕೆಲಸಗಳಲ್ಲಿ ನಿವೃತ್ತಿ ಪಡಿಸುವದೆ ಎಂತ ಕಳ್ಳಿಪೂವಡ ಹೆಗ್ಗಡೇರ ಮೊಮ್ಮಗ ಉಮನಾಥಯ್ಯ ಹೆಗ್ಗಡೆ ಎಂಬವರು ದಕ್ಷಿಣ ಕನ್ನಡ ಜಿಲ್ಲಾ ಸಬೋರ್ಡಿನೇಟ್ ಕೋರ್ಟಿನ ಕ್ರಮಸಂಖ್ಯೆ 27/1936ನೇ ಮಾಡಿದ ವ್ಯಾಜ್ಯವು ಮೆಸೇಟಂಗ್ ಎಕ್ಸಿಕ್ಯೂಟರು ವಳಸಂಚ ಸೇರಿತ ಗ್ರಿಫಾಕಿದ್ದರೆ. ಆದರೆ ಈ ಪರೀಕ್ಷೆ ಆದ ವ್ಯಯಿನ್ನು ಆಗಲಿಕ್ಕಿರುವ ಕೋರ್ಟು ವಿಳಂಬಗಳು ಪೂವಡ ಹೆಗ್ಗಡೇರ ಬಾರಿಸ್ತರ ಮೇಲೆ ಬಾಧಿಸುವಂತಾದ್ದಲ್ಲ. ಈ ಕುರಿತು ಸದ್ಯದಲ್ಲೇ ಕುಟುಂಬದ ಬೇರೆಯವರು ಇನ್ನೊಂದು ವ್ಯಾಜ್ಯ ಮಾಡುತ್ತಾರೆ. ಈ ವ್ಯಾಜ್ಯವು ಕಾಲಗಾರು ಎಂತ ಬೇಕಾದರೆ ಮೇಲಿಯೂ ಮಾಡಬೇಕಾಗಿದೆ."

ಆದಕಾರಣ ಪಿಪಿನಗರ ಕಳ್ಳಿ ಪೂವಡ ಹೆಗ್ಗಡೇರ ರಿಜಿಸ್ಟ್ರಿ ವೀಲಿನಲ್ಲಿ ಸೇರಿದ ಆಸ್ತಿಗಳ ವ. ಅದರಲ್ಲಿ ಹೇಳುವ ಸಾಲಗಳ ಕುರಿತು ಯಾರೊಬ್ಬರೂ ಪ್ರತಿಸಿದರೆ ಅವರು ನಷ್ಟಕಷ್ಟಗಳಿಗೆ ಗುರಿಯಾಗಬೇಕಾದೀತೆಂತ ಈ ಮೂಲಕ ಸೂಚಿಸುವದಾಗಿರುತ್ತದೆ.

ಕುಟುಂಬದ ಮೆಂಬರರಲ್ಲೊಬ್ಬ

16-12-1940

ಲಾಯಿಡ್ ಜಾರ್ಜ್ ಮಂತ್ರಿಯಾಗುವರೆ?



ಪಿಟೇನ್ ಲಾವಲರೊಳಗೆ ಅಂತಃಕಲಹ

ಗ್ರೀಕರು ಮುಂದೆ ನುಗ್ಗುತ್ತಿದ್ದಾರೆ

ಲಂಡನಿನ ಮೇಲೆ ಬಾಂಬುಗಳು ಸುರಿದವು

ಲಾಯಿಡ್‌ಜಾರ್ಜರು ಮಂತ್ರಿಮಂಡಳದಲ್ಲಿ ಸೇರುವರೆ?

ಕಳೆದ ಯುದ್ಧಕಾಲದಲ್ಲಿ ಮುಖ್ಯ ಮಂತ್ರಿಯಾಗಿದ್ದ ಡೇವಿಡ್ ಲಾಯಿಡ್ ಜಾರ್ಜರು ತಾ. ೧೭ರಂದು ೧೦ ಡಾನಿಂಗ್ ಸ್ಟ್ರೀಟಿನಲ್ಲಿ ಚರ್ಚಿಲರನ್ನು ಕಂಡು ಮಾತನಾಡಿದ್ದರಿಂದ ನಾನಾ ಊಹನೆಗಳಿಗೆ ಆಸ್ಪದವಾಗಿದೆ. ಕೆಲವರು ಇವರನ್ನು ಅಮೇರಿಕಕ್ಕೆ ರಾಯಭಾರಿಯಾಗಿ ಕಳುಹಿಸಲಾಗುವುದೇ ಎಂದು ತರ್ಕಿಸುವರು. ಮಂತ್ರಿಮಂಡಳದಲ್ಲಿ ಇವರನ್ನು ಸೇರಿಸಲಾಗುವುದೇ ಎಂದು ಹಲವರ ತರ್ಕವಿದೆ.

ಪೀಟೇನರನ್ನು ಅಪಹರಿಸುವ ಯತ್ನವೇ?

ಲಾವಲರ-ಒಳಸಂಚು

ಪಿಟೇನರನ್ನು ಪ್ಯಾರಿಸಿಗೆ ಅಪಹರಿಸಿಕೊಂಡು ಹೋಗಬೇಕೆಂದು ಲಾವಲರು ಒಳಸಂಚು-ನಡಿಸಿರುವರಾಗಿಯೂ ಆದ್ದರಿಂದ ಅವರನ್ನು ಮಂತ್ರಿಮಂಡಲದಿಂದ ತೆಗೆದುಹಾಕಲಾಯಿತೆಂದೂ ತಿಳಿದುಬರುತ್ತದೆ. ಪಿಟೇನರನ್ನು ಪ್ಯಾರಿಸಿಗೆ ಅಪಹರಿಸಿಕೊಂಡು ಹೋದರೆ ಕೇವಲ ತಮ್ಮಗೆಳೆಯರಿಂದ ಕೂಡಿ ಮಂತ್ರಿಮಂಡಳವನ್ನು ಸ್ಥಾಪಿಸಬೇಕೆಂದು ಲಾವಲರು ಊಹಿಸಿದ್ದರಂತೆ.

೧೦೧೯೭೦ ಟನ್ನುಗಳ ೨೩ ಹಡಗಗಳ ಜಲಸಮಾಧಿ

ಬ್ರಿಟಿಷರ ನಷ್ಟಗಳು

ದಶಂಬರ ೮ನೇ ತಾರೀಕಿಗೆ ಮುಗಿಯುವ ಒಂದು ವಾರದಲ್ಲಿ ಬ್ರಿಟಿಷರ ಒಟ್ಟು ೨೩ ಹಡಗುಗಳು ಮುಳುಗಿದುವೆಂದೂ ಅವುಗಳ ಒಟ್ಟುಭಾರ ೧೦೧೯೭೦ ಟನ್ನುಗಳಾಗಬಹುದೆಂದೂ ಜರ್ಮನರು

ಇಂಗ್ಲಂಡಿನ ಮೇಲೆ ಧಾಳಿ

೧೦ ತಾಸುಗಳ ತನಕ ಬಾಂಬು

ತಾ. ೧೭ರಂದು ಇಂಗ್ಲಂಡಿನ ಮೇಲೆ ವೈರಿ ವಿಮಾನಗಳು ಧಾಳಿಯಿಟ್ಟವು. ಮನೆಕಟ್ಟಡಗಳು ಕುಸಿದು ಬಿದ್ದಿವೆ. ಅದೇ ದಿನ ವ್ಯಾನಚೆಸ್ಟರಿನ ಮೇಲೆ ೧೦ ತಾಸುಗಳ ತನಕ ಬಾಂಬುಗಳು ಸುರಿದು ವಿಶೇಷ ಹಾನಿಯಾಗಿದೆ.

ಅಲ್ಬೇನಿಯದಲ್ಲಿ ಗ್ರೀಕರ ಮುನ್ನಡೆ

ಕ್ಯಾಪ್ಸಜೋ ಮತ್ತು ಸೊಲ್ಲಮುಗಳ ಸುತ್ತು ಗ್ರೀಕರಿಗೂ ಇಟೆಲಿಯಾನರಿಗೂ ಯುದ್ಧ ನಡೆಯುತ್ತಿದೆ. ಈ ಯುದ್ಧದಲ್ಲಿ ಆಸ್ಟ್ರೇಲಿಯನ್, ನ್ಯೂಝಿಲೆಂಡ್, ಇಂಡಿಯನ್ ಸೈನಿಕರೂ ಭಾಗವಹಿಸಿರುವರು. ಅಲ್ಬೇನಿಯದಲ್ಲಿ ಗ್ರೀಕರು ದಿನದಿಂದ ದಿನಕ್ಕೆ ಮುಂದೊತ್ತುತ್ತಲೇ ಇರುವರೆಂದು ಖಚಿತವಾಗಿ ತಿಳಿದಿದೆ.

ಜಪಾನು ಗಾಬರಿಗೊಂಡಿದೆಯೆ?

ಬ್ರಿಟನು ಅಮೇರಿಕಗಳು ಚೀನಕ್ಕೆ ಸಹಾಯ ಕೊಡಲು ನಿಶ್ಚಯಿಸಿರುವುದನ್ನು ಕಂಡು ಜಪಾನು ಗಾಬರಿಗೊಂಡಿದೆಯೆಂದು ಲಂಡನಿನ ಡೈಲಿ ಟೆಲಿಗ್ರಾಪ್ ಪತ್ರಿಕೆಯು ಬರೆಯುತ್ತದೆ.

ಅಮೇರಿಕದಿಂದ ಬ್ರಿಟನು ಸಾಲ ಕೇಳಿತು

ಧನಸಹಾಯ ಕೊಡಬೇಕೆಂದು ಬ್ರಿಟನು ಅಮೇರಿಕದೊಡನೆ ಕೇಳಿರುವುದಾಗಿ ವಾಶಿಂಗ್‌ಟನಿನಲ್ಲಿ ಸುದ್ದಿ ಹರದಿರುತ್ತದೆ.

ಲಾವಲರ ಬಂಧನ

ಪಿಟೇನ್ ಸರಕಾರದಿಂದ ತಳ್ಳಿಹಾಕಲ್ಪಟ್ಟ ಲಾವರನ್ನು ಫ್ರೆಂಚ್ ಪೋಲೀಸರು ಸೆರೆಹಿಡಿದರು. ಅವರ ಮನೆಯನ್ನು ಶೋಧಿಸಿ ಕಾಗದ ಪತ್ರಗಳನ್ನು ಜಪ್ತಿ ಮಾಡಲಾಯಿತು. ಲಾವಲರ ಸ್ಥಳದಲ್ಲಿ ಪ್ಲಾಂಡಿನ ಎಂಬವರನ್ನು ನೇಮಿಸಲಾಗಿದೆ.

"ರಕ್ತಕ ಕಾಲುವೆಯು ಹರಿಯಿತು"

ಲಿಬಿಯದಲ್ಲಿ ಬ್ರಿಟಿಷರ ಪ್ರವೇಶ

ಇಜಿಪ್ಟ ಗಡಿನಾಡಿನ ಹತ್ತಿರ ಇಟಲಿಯನ್ ಸೈನಿಕರನ್ನು ಹಿಂದಟ್ಟುತ್ತಿದ್ದ ಬ್ರಿಟಿಷ್ ಸೈನಿಕರು ಇಟಲಿಯನರ ಪ್ರದೇಶಗಳನ್ನು ನುಗ್ಗಿದರೆಂದು ತಿಳಿಯುತ್ತದೆ. ಅಲ್ಲಿ ನಡೆದ ಕಾಳಗದಲ್ಲಿ ರಕ್ತದ ಕಾಲುವೆ ಹರಿಯಿತು ಎಂದು ತಿಳಿದು ಬರುತ್ತದೆ.

ಬರ್ಮಾ ರಸ್ತೆಯ ಮೇಲೆ ಬಾಂಬು

ಜಪಾನಿ ನೌಕಾಬಲದ ಕೆಲವು ವಿಮಾನಗಳು ಬರ್ಮಾ ರಸ್ತೆಯ ಮೇಲೆ ಬಾಂಬಿನ ಮಳೆ ಸುರಿಸಿರುವುದಾಗಿ ತಿಳಿದು ಬರುತ್ತದೆ.

ವಿಂಡ್ಸರರು ಅಮೇರಿಕಾ ರಾಯಭಾರಿಗಳಾಗುವರೆ?

ಅಮೇರಿಕದಲ್ಲಿ ಊಹಾಪೋಹ

ಲಾರ್ಡ್ ಲೋಥಿಯಾನರ ಮರಣದಿಂದ ಖಾಲಿಬಿದ್ದ ಅಮೇರಿಕದ ರಾಯಭಾರಿ ಸ್ಥಾನವು ಡ್ಯೂಕ್ ಓಫ್ ವಿಂಡ್ಸರರಿಗೆ ದೊರಕುವುದೆಂದೂ, ರೂಸ್‌ವೆಲ್ಟರರೊಡನೆ ಅವರ ಭೇಟಿಯು ಬೇಗನೇ ಆಗುವುದೆಂದೂ ಅಮೇರಿಕದಲ್ಲಿ ಊಹಾಪೋಹವಿದ್ದಿದೆ.

ಸತ್ಯಾಗ್ರಹಿಗಳು ಉಗ್ರ ಶಿಸ್ತು ಪಾಲಿಸಬೇಕು

ಮಹದೇವ ದೇಸಾಯಿಯವರ ಪ್ರಕಟಣೆ

ಸತ್ಯಾಗ್ರಹ ಮಾಡುವ ಸತ್ಯಾಗ್ರಹಿಗಳ ಸಂಬಂಧದಲ್ಲಿ ಗಾಂಧಿಜಿಯವರ ಅಪ್ಪಣೆ ಮೇರೆಗೆ ಶ್ರೀ. ಮಹದೇವ ದೇಸಾಯಿಯವರು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಈಗ ಮೂರು ವರ್ಗದ ಜನರು ಸತ್ಯಾಗ್ರಹ ಮಾಡುತ್ತಿದ್ದಾರೆ. ಆದರೆ ಅವರು ಸತ್ಯಾಗ್ರಹ ಮಾಡಿ ಜೈಲನ್ನು ಸೇರಲೇಬೇಕೆಂಬ ಒತ್ತಾಯವಿಲ್ಲ. ಸದ್ಯದ ಚಳವಳದ ಬಗ್ಗೆ ಸ್ಪಷ್ಟೀಕರಣದ ಅಗತ್ಯವಿದೆ. ಸತ್ಯಾಗ್ರಹವು ಕೇವಲ ಐಚ್ಛಿಕ ರೀತಿಯದು.' ಯಾರಿಗೆ ಸತ್ಯಾಗ್ರಹ ಮಾಡಲು ಮನಸ್ಸಿಲ್ಲವೋ ಅಂಥವರನ್ನು ಒತ್ತಾಯಪಡಿಸುವುದಿಲ್ಲ. ಅವರನ್ನು ಸತ್ಯಾಗ್ರಹದಿಂದ ಮುಕ್ತರನ್ನಾಗಿ ಮಾಡಲಾಗುವುದು. ಅಲ್ಲದೆ ಸತ್ಯಾಗ್ರಹ ಮಾಡಬೇಕೆಂಬ ಆತುರವುಳ್ಳವರು ಸಹ ವಿಧಾಯಕ ಕಾರ್ಯದಲ್ಲಿ ಹಾಗೂ ಅಹಿಂಸೆಯಲ್ಲಿ ವಿಶ್ವಾಸವುಳ್ಳವರಿರಬೇಕು ಎಂಬ ಶರ್ತಗಳು ಮಹತ್ವದ್ದಿವೆ. ಆ ಶರ್ತಗಳಂತೆ ಅವರು ಅರ್ಹರೆಂದು ತೋರಿದಲ್ಲಿ ಅವರ ದೇಹದಾರ್ಢ್ಯವು ಜೈಲಿನ ಜೀವನವನ್ನು ತಡೆಯುವಷ್ಟು ಸಶಕ್ತವಿದ್ದಲ್ಲಿ ಅವರಿಗೆ ಬೇರಾವ ಬಗೆಯ ತಾಪತ್ರಯಗಳೂ ಇರದಿದ್ದಲ್ಲಿ ಮಾತ್ರ ಅಂಥವರನ್ನು ಸತ್ಯಾಗ್ರಹಿಗಳನ್ನಾಗಿ ಆರಿಸಲಾಗುವುದು. ಚುನ್ಮ ಸತ್ಯಾಗ್ರಹಿಗಳೆಂದು ಆರಿಸಲ್ಪಟ್ಟ ಬಳಿಕ ಅವರು ಉಗ್ರವಾದ ಶಿಸ್ತನ್ನು ಪಾಲಿಸಿಕೊಂಡು ಆದರ್ಶ ಕೈದಿಗಳೆನಿಸಿ ಜೈಲನ್ನು ಸೇರಬೇಕು.

'ಈ ಸಾರಿಯ ಸತ್ಯಾಗ್ರಹಿಗಳ ಆಯ್ಕೆಯಲ್ಲಿ ಒಂದು ಬಗೆಯಿಂದ ಅವರವರ ಯೋಗ್ಯತೆಯ ರೀತಿಯನ್ನು ಅನುಸರಿಸಲಾಗಿದೆ ಎಂದು ತಿಳಿದುಕೊಳ್ಳುವುದೆಂದರೆ ದುರ್ದೈವದ ಪ್ರಸಂಗ. ಶಕ್ಯವಿದ್ದ ಮಟ್ಟಿಗೆ ಕೇವಲ ಕಾಂಗ್ರೆಸ್ ಪ್ರತಿನಿಧಿಗಳನ್ನಷ್ಟೇ ಆರಿಸಲಾಗಿದೆ. ಎಷ್ಟೋ ಉತ್ತಮ ಕೆಲಸಗಾರರು ಉಚ್ಚ ತರಗತಿಯ ಸತ್ಯಾಗ್ರಹಿಗಳು ಇನ್ನೂ ಹೊರಗೆ ಇರುವರು. ಅಲ್ಲದೆ ತಮ್ಮ ಇಡೀ ಜೀವನವನ್ನೆ ವಿಧಾಯಕ ಕಾರ್ಯಕ್ಕೆ ಮೀಸಲಾಗಿಟ್ಟವರನ್ನು ಜೈಲಿಗೆ ಕಳಿಸುವುದಕ್ಕೆ ಗಾಂಧಿಜಿಯವರ ಸಿದ್ಧತೆಯಿಲ್ಲ.

'ಯಾವಾಗ ಗಾಂಧಿಜಿಯವರಿಗೆ ಹೆಚ್ಚಿನ ತ್ಯಾಗವು ಅವಶ್ಯವೆನಿಸುತ್ತದೋ ಆಗ್ಯೆ ಅರ್ಹರಿದ್ದವರನ್ನೆಲ್ಲ ಸತ್ಯಾಗ್ರಹ ಮಾಡುವುದಕ್ಕೆ ಅವರು ಕರೆಯುವರು.

ಗಡಿನಾಡಿನಲ್ಲಿ ಸತ್ಯಾಗ್ರಹ

ಸತ್ಯಾಗ್ರಹಿಗಳನ್ನು ಕೈದು ಮಾಡುವುದಿಲ್ಲ

"ನಮಗೆ ಭಾಷಣ ಸ್ವಾತಂತ್ರ್ಯ ಸಿಕ್ಕಿತು

ಅಬ್ದುಲ್ ಗಫರ್‌ಖಾನರ ಹೇಳಿಕೆ

ಕಲದವಾರ ಗಡಿನಾಡಿನಲ್ಲಿ ಸತ್ಯಾಗ್ರಹವು ಆರಂಭವಾಗಿದೆ. ಮೊದಲನೆಯದಾಗಿ ಮಾಜಿ ಪ್ರಧಾನ ಮಂತ್ರಿ ಡಾ। ಖಾನಸಾಹೇಬರೇ ಮೆಜಿಸ್ಟ್ರೇಟರಿಗೆ ನೋಟೀಸ ಕೊಟ್ಟು ಸತ್ಯಾಗ್ರಹ ಪ್ರಾರಂಭಿಸಿದರು. ಆದರೆ ಅಲ್ಲಿಯಾರನ್ನೂ ಸೆರೆಹಿಡಿಯುವುದಿಲ್ಲ. ಕೆಲವು ಸತ್ಯಾಗ್ರಹಿಗಳು ಹಲವು ಸಲ ಸತ್ಯಾಗ್ರಹ ಮಾಡಿದರು, ಯುದ್ಧವಿರೋಧ ಘೋಷಣೆ ಮಾಡಿದರು. ಅವರನ್ನು ಸೆರೆಹಿಡಿಯಲಿಲ್ಲ. ಈ ವಿಷಯದಲ್ಲಿ ಗಡಿನಾಡಿನ ಗಾಂಧಿಗಳಾದ ಖಾನ್ ಅಬ್ದುಲ್ ಗಫರ್ ಖಾನರನ್ನು ಸಂದರ್ಶಿಸಿದಾಗ ಪತ್ರಿಕಾಪ್ರತಿನಿಧಿಯೊಡನೆ ಅವರು ನಮ್ಮನ್ನು ಸರಕಾರದವರು ಸೆರೆಹಿಡಿಯಲಿ ಹಿಡಿಯದಿರಲಿ ಆ ವಿಷಯ ನಮಗೆ ಯೋಚನೆಯಿಲ್ಲ. ನಾವು ಯುದ್ಧವಿರುದ್ಧ ಘೋಷಣೆ ಮಾಡುತ್ತಾ ಹೋಗುವೆವು. ಅದಕ್ಕೆ ಸರಕಾರವು ಪ್ರತಿಬಂಧ ಮಾಡದಿದ್ದರೆ ನಮ್ಮ ಪ್ರಾಂತದಲ್ಲಿ ಭಾಷಣ ಸ್ವಾತಂತ್ರ್ಯವು ದೊರಕಿತು ಎಂದು ಹೇಳಿದರು.

ಮಂತ್ರಿಮಂಡಳವನ್ನು ಸ್ಥಾಪಿಸುವ ಕಾಂಗ್ರೆಸ್‌ ರಾಯರ ಯುಕ್ತಿ

ಪ್ರಾಂತಗಳಲ್ಲಿ ಮಂತ್ರಿಮಂಡಳಗಳನ್ನು ಸ್ಥಾಪಿಸುವ ಬಗ್ಗೆ ಕಾಮ್ರೇಡ್ ರಾಯರು ಯುಕ್ತಿಸುತ್ತಿರುವರಷ್ಟೆ? ಅವರು ಪತ್ರಿಕಾಪ್ರತಿನಿಧಿಗಳಿಗೆ ಈ ಪ್ರಯತ್ನದಲ್ಲಿ ತಮಗೆ ಮುಸ್ಲಿಂ ಲೀಗಿನ ಬೆಂಬಲ ದೊರಕಿದೆಯೆಂದು ಹೇಳಿದರು.

ಸರೋಜಿನಿಯವರಿಗೆ ಅಪ್ಪಣೆ ಸಿಗಲಿಲ್ಲ

ಮಹಾತ್ಮಾರಲ್ಲಿಗೆ ಸೆರೆಮನೆಯಿಂದ ಬಿಡುಗಡೆಯಾಗಿ ಹೋಗಿದ್ದ ಸರೋಜಿನಿ ದೇವಿಯರಿಗೆ ಎರಡನೆಯ ಸಲ ಸತ್ಯಾಗ್ರಹ ಹೂಡಲು ಅವರ ಆರೋಗ್ಯ ಚೆನ್ನಾಗಿಲ್ಲವೆಂದು ಮಹಾತ್ಮಾಜಿಯವರು ಅನುಮತಿ ಕೊಡಲಿಲ್ಲವೆಂದು ತಿಳಿದು ಬಂದಿದೆ.

ಕೃಪಲಾನಿಯವರ ಸತ್ಯಾಗ್ರಹ

ಎ. ಐ. ಸಿ. ಸಿ. ಆಫೀಸಿನಲ್ಲಿ ಬಹಳ ಕೆಲಸವಿರುವುದರಿಂದ ಅದನ್ನು ಬೇಗನೇ ತೀರಿಸಿ ಆಚಾರ್ಯ ಕೃಪಲಾನಿಯವರೂ ಸತ್ಯಾಗ್ರಹ ಹೂಡುವರೆಂದು ಗೊತ್ತಾಗಿದೆ.

ಚೀನದ ಸ್ನೇಹಮಂಡಳ ಚೀನಕ್ಕೆ ಮರಳಿತು

ತಾಯಿ ಚಿತಾವರ ಸಂದೇಶ

ಕಳೆದ ಒಂದು ತಿಂಗಳಿಂದ ಭಾರತದಲ್ಲಿ ಸಂಚಾರ ಮಾಡುತ್ತಿದ್ದ ಚೀನಸ್ನೇಹಮಂಡಳವು ಮರಳಿ ಚೀನಕ್ಕೆ ಹೊರಟಿತು. ಅವರು ಅನೇಕ ಬೌದ್ಧಕ್ಷೇತ್ರಗಳನ್ನು ಸಂದರ್ಶಿಸಿ ಭಾರತದ ಅನೇಕ ಮುಖಂಡರನ್ನು ಭೇಟಿಯಾದರು. 'ನಾನು ಹಿಂದೂದೇಶದಿಂದ ವಿಶೇಷ ಅನುಭವವನ್ನು ಒಯ್ಯುತ್ತೇನೆ. ಚೀನದಿಂದ ಭಾರತಕ್ಕೆ ತಂದ ಸ್ವದೇಶಕ್ಕಿಂತಲೂ ಮಹತ್ವದ ಸಂದೇಶವನ್ನು ನಾನು ಭಾರತದಿಂದ ಅಲ್ಲಿಗೆ ಒಯ್ಯುತ್ತೇನೆ' ಎಂದರು ತಾಯಿ ಚಿತಾವೊ ಇವರು.

ಪಂಜಾಬಿನಲ್ಲಿ ಸತ್ಯಾಗ್ರಹ

ಪಂಜಾಬಿನಲ್ಲಿ ಸತ್ಯಾಗ್ರಹ ಹೂಡಲು ತಾ. ೧೪ರ ಮೇಲೆ ಮಹಾತ್ಮಾ ಗಾಂಧಿಜಿಯವರು ಒಪ್ಪಿಗೆ ಇತ್ತಿರುವರು.

ಆಶ್ರಿತಸಂಸ್ಥಾನಗಳಲ್ಲಿ ಸತ್ಯಾಗ್ರಹ ಕೂಡದು

ಜಿಂದ್ ಸಂಸ್ಥಾನದ ರಾಜಕೀಯ ಕೆಲಸಗಾರರಾದ ಹಂಸರಾಜರು ಮಹಾತ್ಮರಿಗೆ ಪತ್ರಬರೆದು ಆಶ್ರಿತ ಸಂಸ್ಥಾನಗಳಲ್ಲಿ ಸತ್ಯಾಗ್ರಹ ನಡೆಸುವ ವಿಷಯವಾಗಿ ಕೇಳಿದಕ್ಕೆ ಅವರು ಸಂಸ್ಥಾನಗ





ಜನವರಿಯಲ್ಲಿ ಸತ್ಯಾಗ್ರಹಿಗಳ ಹೊಸ ಪಟ್ಟಿ?

ಸತ್ಯಾಗ್ರಹದ ಕುರಿತು ಮಹಾತ್ಮರ ಅಭಿಮತ

ರಾಷ್ಟ್ರಪತಿ ಅಜಾದರು ಸತ್ಯಾಗ್ರಹ ಹೂಡುವರು

ಚೀನದ ಸ್ನೇಹಮಂಡಳ ಮರಳಿತು

ಲ್ಲಿ ವೈಯುಕ್ತಿಕ ಅಥವಾ ಸಾಮೂಹಿಕ ಸತ್ಯಾಗ್ರಹಗಳು ನಡೆಯಕೂಡದಾಗಿ ಹೇಳಿದರು.

ಸತ್ಯಾಗ್ರಹ ವಾರ್ತೆ

ಕಾಂಗ್ರೆಸ್ ಸಮತಾವಾದೀ ಪಕ್ಷದ ಮುಖಂಡರಾದ ಕಾಮ್ರೇಡ್ ಯೂಸುಫ್ ಮೆಹರಾಲಿಯವರು ಸ್ಥಾನಬದ್ಧರಾದರು. ಜಬಲಪೂರದ ಬದ್ರಿನಾರಾಯಣ ಸಿಂಗರಿಗೆ ೬ ತಿಂಗಳ ಕಠಿಣ ಸಜೆ. ಅಕೋಲೆಯ ಮಾವಲೆಯವರಿಗೆ ೯ ತಿಂಗಳ ಸಜೆ. ಅಲ್ಲಿನ ವಾಮನರಾವ ಪಾಟೀಲರಿಗೆ ೬ ತಿಂಗಳ ಸಜೆ ಮತ್ತು ನಾಮದೇವ ರಾವ ದೇಶಮುಖರಿಗೆ ೪ ತಿಂಗಳ ಸಜೆ. ವಿಶಾಖ ಪಟ್ಟದ ಮುನ್ಸಿಪಲ್ ಛೇರ್ಮನರಾದ ಪಿ. ವೀರಭದ್ರ ಸ್ವಾಮಿಯರಿಗೆ ಮತ್ತು ಜಿ. ಬೋ. ಅಧ್ಯಕ್ಷರಾದ ಪಿ. ಎ. ಎಲ್. ಎನ್. ಸ್ವಾಮಿಯರಿಗೆ ಒಂದೊಂದು ವರ್ಷ. ಕ. ಸಜೆ. ಸಂ. ಪ್ರಾಂತ್ಯದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಸುಲೇಮಾನ ಅನಸಾರಿಯರಿಗೆ ೩ ತಿಂಗಳ ಸಾ. ಸ. ಮಧುರೆಯ ಎಂ. ಎಲ್. ಎ. ರಾಮಚಂದ್ರ ರೆಡ್ಡಿಯರಿಗೆ ೬ ತಿಂಗಳ ಕ. ಸ. ಮತ್ತು ೩೦೦ ರೂ. ದಂಡ.

ಲಖನೋ ಜಿ. ಕಾಂ. ಕ. ಅಧ್ಯಕ್ಷ ಸಿ. ಬಿ. ಗುಪ್ತ (ಎಂ. ಎಲ್. ಎ.)ರಿಗೆ ೧ ವ. ಸಾ. ಸ. ಘೆನಿಯ ಹರೀಂದ್ರ ಕುಮಾರ್ ಸೂರ ಎಂ. ಎಲ್. ಎ. ರಿಗೆ ೧ ವ. ಸ. ಬಳ್ಳಾರಿಯ ಎಚ್. ಸೀತಾರಾಮ ರೆಡ್ಡಿ ಎಂ. ಎಲ್. ಎ. ರಿಗೆ ೬ ತಿಂ. ಕ. ಸ. ಮತ್ತು ೩೦೦ ರೂ. ದಂಡ. ಲಾಹೋರಿನ ಅ. ಭಾ. ಮಜಲೀಸ್ ಅಹಾರ ಪ್ರಾಂತಿಕ ಸಭಾಧ್ಯಕ್ಷ ಮೌ. ಹಬೀಬು ರಹಮಾನರಿಗೆ ಬಂಧನ. ಕಲ್ಕತ್ತದ ಬೇಗಮ ಸಾಹೇಬರಿಗೆ ೧೦೦೦ ರೂ. ದಂಡ ಮಾ ತಿಂ. ಸಜೆ. ಕಟಕಿನ ಎ. ಐ. ಸಿ. ಸಿ. ಸದಸ್ಯರಾದ ಕೈಲಾಸಚಂದ್ರ ಮಹಂತರಿಗೆ ೬ ತಿಂ. ಕ. ಸ. ಕಿಶನಗಂಜದ ಎಂ. ಎಲ್. ಎ. ಡಾ. ಕಿಶೋರಿಲಾಲರಿಗೆ ೧ ವ. ಕ. ಸ. ಮತ್ತು ಪಂ. ಪ್ರಾಂ. ಕಾಂ. ಕ. ಅಧ್ಯಕ್ಷರಾದ ಮಿಯಾನ್ ಇಫ್ತಿಕರುದ್ದೀನ ಇವರಿಗೆ ಬಂಧನ.

ಜಬಲ್‌ಪುರದ ಎಂ. ಎಲ್. ಎ.ಗಳಾದ ಭಗವಂತ ರಾವ್ ಮುಸಲಾಯ ಮತ್ತು ಗುಲಾಬಚಂದ ಚೌಧರಿ ಇವರಿಗೆ ೬ ತಿಂಗಳ ಕ. ಸ. ಅಲ್ಲಿನ ಎ. ಐ. ಸಿ. ಸಿ. ಮೆಂಬರರಾದ ಸವಾಯಿಮಲ್ಲ ಜೈನ ಮತ್ತು ಪಂ. ನರ್ಮದಾ ಪ್ರಸಾದ ಮಿಶ್ರ ಎಂ. ಎಲ್. ಎ. ಇವರಿಗೆ ೬ ತಿಂ. ಕ. ಸ. ಜಗಳಾಪದ ಎ. ಐ. ಸಿ. ಸಿ. ಮೆಂಬರರಾದ ದೇವಕಿನಂದನ ನಾರಾಯಣ ಮತ್ತು ಎಸೆಂಬ್ಲಿ ಮೆಂಬರರಾದ ಧನಜಿ ನಾನಾ ಚೌಧರಿ ಇವರಿಗೆ ೬ ತಿಂ. ಸಾ. ಸ. ಢಿಲ್ಲಿ ಪ್ರಾಂತಿಕ ಮಜಲೀಸ್ ಅಹ್ರಾರರ ಅಧ್ಯಕ್ಷ ಮೌಲಾನಾ ಅಬ್ದುಲ್ ಪರೂಕಿಯವರಿಗೆ ೨ ವ. ಕ. ಸ. ಗೌಹಾತಿಯ ಎಂ. ಎಲ್. ಎ.ಗಳಾದ ಗೌರೀಕಾಂತ ತಾಲೂಕದಾರರಿಗೆ ೬ ತಿಂ. ಸಾ. ಸ. ಕಾಶಿಯ ಪಂ. ಮದನಮೋಹನ ಮಾಲವೀಯರ ಪುತ್ರ ಪಂ. ಗೋವಿಂದ ಮಾಲವೀಯರೂ ಸಂ. ಪ್ರಾಂತದ ಹಿಂದಿನ ಮಂತ್ರಿ ಹಾಫೀಜ್ ಮಹಮ್ಮದ್ ಇವರೂ ಬಂಧಿತರು. ಕಲ್ಕತ್ತದ ಎಂ. ಎಲ್. ಎ. ಪ್ಯಾರಿ ಶಂಕರರಾವ್ ಇವರಿಗೆ ೬ ತಿಂ. ಸಾ. ಸ. ಮಧುರೆಯ ಎಲ್. ಎಲ್. ಎ. ಕೆ. ರಾಮಚಂದ್ರ ರೆಡ್ಡಿ ಇವರಿಗೆ ೬ ತಿಂ. ಕ. ಸ. ಆಂಧ್ರದ ಎಂ. ಎಲ್. ಸಿ. ಟಿ. ಸುಬ್ಬರಾಮ ರೆಡ್ಡಿಯವರಿಗೆ ೬ ತಿಂ. ಕ. ಸ. ಎಲ್ಲೂರು ಮುನಿಸಿಪಾಲಿಟಿ ಅಧ್ಯಕ್ಷರಾದ ಚಂಡೂರಿ ರತ್ನಮ್ಮನವರಿಗೆ ೬ ತಿಂ. ಕ. ಸ. ಎಲ್ಲೂರು ಎ. ಐ. ಸಿ. ಸಿ. ಸದಸ್ಯರಾದ ಮು. ರಂಗಯ್ಯನವರಿಗೆ ೯ ತಿಂ. ಕ. ಸ. ಕೊಯಮುತ್ತೂರಿನ ಎಂ. ಎಲ್. ಎ. ವಿ. ಸಿ. ಫಲಸ್ವಾಮಿ ಗೌಡರಿಗೆ ೬ ತಿಂ. ಕ. ಸ. ಅಮಲಾಪುರಂದಿನ ಎಂ. ಎಲ್. ಸಿ. ಜಿ. ವೀರಸ್ವಾಮಿಯರಿಗೆ ೧ ವ. ಕ. ಸ. ನಂದ್ಯಾಳದ ಎ. ಐ. ಸಿ. ಸಿ. ಸದಸ್ಯರಾದ ಪಿ. ರಂಗರೆಡ್ಡಿಯರಿಗೆ ೧ ವ. ಕ. ಸ. ಮದ್ರಾಸಿನ ಎಂ. ಎಲ್. ಎ. ಜಿ. ರಂಗಯ್ಯ ನಾಯ್ಡು ಇವರಿಗೆ ಸ್ಥಾನಬದ್ಧತೆ. ಮದ್ರಾಸು ಎಂ. ಎಲ್. ಎ., ಪಿ. ಎಸ್. ಕುಮಾರ ಸ್ವಾಮಿಯರಿಗೆ ೯ ತಿಂ. ಕ. ಸ. ಭೀಮಾವರಂ ಜಿ. ಕಾಂ. ಕ. ಅಧ್ಯಕ್ಷ ಡಿ. ನಾರಾಯಣರಾಜು ಇವರಿಗೆ ೬ ತಿಂ. ಸ. ೨೦೦ ರೂ. ದಂಡ. ಮದರಾಸು ಎಂ. ಎಲ್. ಎ. ರೊಕ್ಕಲಿಂಗಂ ಇವರಿಗೆ ೯ ತಿಂ. ಸ. ರೂ. ೩೦೦ ದಂಡ. ಬಳ್ಳಾರಿಯ ಎಂ. ಎಲ್. ಎ. ಬಿ. ಅನಂತಾಚಾರ್ಯರಿಗೆ ೬ ತಿಂ. ಕ. ಸ. ರೂ. ೩೦೦ ದಂಡ. ಸಂ. ಪ್ರಾಂತದ ಎಂ. ಎಲ್. ಎ.ಗಳಾದ ಪಂ. ಜೀವನಲಾಲ ಪಂ. ಯಜ್ಞನಾರಾಯಣ ಮತ್ತು ಕುನಪ್ಪರಹರ ಪ್ರಸಾದ ಸಿಂಗ್ ಇವರಿಗೆ ಬಂಧನ. ಅಲ್ಲಿನ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಆಚಾರ್ಯ ಜುಗಲಕಿಶೋರ ಪಂ. ದ್ವಾರಕಾ ಪ್ರಸಾದ ಪಂ. ಲಕ್ಷ್ಮೀಶಂಕರ ವಾಜಪೇಯ ಇವರಿಗೆ ಬಂಧನ. ಪೇಶಾವರದ ಎಂ. ಎಲ್. ಎ. ಖಾನ್ ಫಕೀರ್ ಖಾನರಿಗೆ ಬಂಧನ. ಚಿಸ್ತಪರದ ಎಂ. ಎಲ್. ಎ. ಎಸ್. ದತ್ತರಿಗೆ ಬಂಧನ.

ಹಜಾರಿಬಾಗಿನ ಎಂ. ಎಲ್. ಎ. ಗಳಾದ ಸುಖಲಾಲ ಸಿಂಗರಿಗೆ ೧ ವ. ಕ. ಸ. ಮತ್ತೊಬ್ಬ ಎಂ. ಎಲ್. ಎ. ಸರಸ್ವತಿ ದೇವಿಯರಿಗೆ ೧ ವ. ಸಾ ಸ. ಕೇಂದ್ರ ಎಂ. ಎಲ್. ಎ.ಗಳಾದ ನಾರಾಯಣಸಿಂಗರ ಬಂಧನ. ಮೋಂಗೀರಿನ ಎಂ. ಎಲ್. ಎ. ರಫಿ ಉದ್ದೀನರಿಗೆ ೪ ತಿಂ. ಕ. ಸ. ಬಂಗಾಳದ ಎಂ. ಎಲ್. ಎ. ಕಮಲಕೃಷ್ಣ ರೈ ಇವರಿಗೆ ೪ ತಿಂ. ಸಾ. ಸ. ಕೇಂದ್ರ ಎಂ. ಎಲ್. ಎ. ಸಂತಾನಂರಿಗೆ ೧ ವ. ಕ. ಸ. ಬೀಹಾರದ ಎಂ. ಎಲ್. ಎ.ಗಳಾದ ರಾಜಕಿಶೋರ ಸಿಂಗ್ ಮತ್ತು ಯದುವನ ಸಿಂಗರಿಗೆ ಬಂಧನ. ಜಬಲಪುರದ ಎಂ. ಎಲ್. ಎ. ರಾಜೇಂದ್ರ ಸಿಂಹರಿಗೆ ೬ ತಿಂ. ಕ. ಸ. ಗೋರಖಪುರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಸುಲೇಮಾ ಅನಸಾರಿಯರಿಗೆ ಬಂಧನ. ಲಾಹೋರಿನ ಎ. ಐ. ಸಿ. ಸಿ. ಮೆಂಬರರಾದ ಸರ್ದಾರ ಗೋಪಾಲ ಸಿಂಗರಿಗೆ ೧ ವ. ಸ. ಮುರಾದಾಬಾದಿನ ಎಂ. ಎಲ್. ಎ. ಪಂ. ಶಂಕರ ದತ್ತ ೯ ತಿಂ. ಕ. ಸ. ಕೋಮಿಲಾದ ಎ. ಐ. ಸಿ. ಸಿ. ಸದಸ್ಯೆ ಕುಮಾರಿ ಬನಾಯಲತಾರಿಗೆ ಸ್ಥಾನಬದ್ಧತೆ. ಅಮರಾವತಿಯ ಎ. ಐ. ಸಿ. ಸಿ. ಸದಸ್ಯರಾದ ಬಿ. ಜಿ. ದೇಶಮುಖರಿಗೆ ರೂ. ೨೦೦ ದಂಡ. ಆಸಾಮಿನ ಹಿಂದಿನ ಪ್ರಧಾನಮಂತ್ರಿ ಗೋಪಿನಾಥ ಬಾರ್ಡೋಲಿಯರಿಗೆ ೧ ವ. ಸಾ. ಸ.

(೧೨ನೇ ಪುಟಕ್ಕೆ ಮುಂದುವರಿದಿದೆ)

ಆಜಾದರ ಸತ್ಯಾಗ್ರಹ

ರಾಷ್ಟ್ರಪತಿಗಳಾದ ಮೌ. ಅಬುಲ್ ಕಲಂ ಅಜಾದರು ಈ ತಿಂಗಳ ಕೊನೆಯೊಳಗೆ ಸತ್ಯಾಗ್ರಹ ಹೂಡುವರಾಗಿ ತಿಳಿದಿದೆ.

To All whom it may concern

Please take notice that the partnership in the concern of M/s Kulai Narasimha Bhandary Ullal Ram Nayak, Mangalore, has been dissolved. The business continues in the single name of Kulai Narasimha Bhandary. Ullal Rama Nayak has no connection whatever in the said business.

(Sd) Kulai Narasimha Bhandary.

ಪ್ರಕಟಣೆ

ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವದೇನಂದರೆ:—

ಮೃತರಾದ ಕಾಲ್ಯ ಕಟಕ ಗ್ರಾಮದಲ್ಲಿರುತ್ತಿದ್ದ ಕಲ್ಲಿಪೂವಣ ಹೆಗ್ಗಡೆಯು ಕುಟುಂಬದ ಸ್ಥಿರಚರ ಸೊತ್ತುಗಳ ಸಹಾಯದಿಂದ ತನ್ನ ಕುಟುಂಬದ ಯಜಮಾನನಾಗಿ ಬೇರಲೆ ಸ್ಥಿರಚರ ಸೊತ್ತುಗಳು ಸಂಪಾದಿಸಿರುತ್ತಿದ್ದರು. ಆದರೆ ಆ ಸೊತ್ತುಗಳು ತನ್ನ ಸ್ವಂತದ್ದೆಂತ ಕಲ್ಪಿಸಿಕೊಂಡು ತನಗೆ ಮುಕ್ತಿ ಕಂಡಂತವರಿಗೆ ಆ ಆಸ್ತಿಗಳು ಕೊಟ್ಟಿರುವದಾಗಿಯೂ ಅವುಗಳ ಸಂಬಂಧ ಕೆಲವು ಸಾಲಗಳು ಉಂಟೆಂಬಂತೆ ಯೂ ಒಂದು ಮರಣಶಾಸನ ದಸ್ತೈವಜು ರಿಜಿಸ್ತ್ರಿ ಆಫೀಸಿನಲ್ಲಿ ಗುಪ್ತವಾಗಿಟ್ಟು ಮರಣಪಟ್ಟಿ ನಂತ್ರ ಆ ಮರಣ ಶಾಸನವು ರಿಜಿಸ್ತ್ರಿ ಆಗಿರುವದೆ. ಆದರೆ ಅದರ ಪ್ರಕಾರ ಎಕ್ಸಿಕ್ಯೂಟರರಾಗಿ ಮೊಕ್ತ್ರಿರು ಪಟ್ಟವರು ಬೇರೆ ಗ್ರಹಸ್ತರಿದ್ದರೂ ವಕೀಲ್ ಎಚ್. ಪಿ. ಶ್ಯಾನಿ ಎಂಬವರು ಸರಿಯಾಗಿ ಆಚಂತೆ ನೋಡದೆ ಸಾಲಗಳು ತೀರಿಸದೆ ಉಬ್ಬಳ್ಳಿಯನ್ನು ತನ್ನ ಸ್ವಂತಕ್ಕೆ ದುರುಪಯೋಗ ಪಡಿಸಿ ನ್ಯಾಯವಾದ ಸಾಲಗಳು ಯಾವದು, ನ್ಯಾಯವಲ್ಲದ ಸಾಲಗಳು ಯಾವದು ಎಂಬ ಭೇದವಿಲ್ಲದೆ ಮೋಸದಿಂದಲೂ ವಕಸಂಚನಿಂದಲೂ ಕೆಲವು ಆಸ್ತಿಗಳು ಸಾಲಗಳಿಗೆ ಲೀಲಂ ಪಡ್ಸಿ ಬನಾಮಿಯಾಗಿ ಬೇರೆ ಜನರ ಹೆಸರಿಗೆ ಬರೆಸುತ್ತಿರುತ್ತಾರೆ. ಇಲ್ಲದ ಸಾಲಗಳನ್ನು ಕಲ್ಪಿಸಿ ಆ ಬಗ್ಗೆ ಕೆಲವು ಆಸ್ತಿಗಳು ವ್ಯಯವಾಗುವಂತೆ ಯತ್ನಿಸುತ್ತಾರೆ. ಈ ರೀತಿಯಲ್ಲಿ ವರ್ತನೆ ಆದರೆ ಆ ಆಸ್ತಿಗಳು ಅಲ್ಲ ಕೂಳ್ಯೂರಿನ ಕೋರ್ಟು ಲೀಲಂ ಆಗುತ್ತದೆ. ಈ ಕೆಲಸಗಳಲ್ಲಿ ನಿವೃತ್ತಿ ಪಡಿಸುವರೆ ಎಂತ ಕಲ್ಲಿಪೂವಣ ಹೆಗ್ಗಡೇರ ಮೊಮ್ಮಗ ಕುಞ್ಞಾರಯ್ಯ ಹೆಗ್ಗಡೆ ಎಂಬವರು ದಕ್ಷಿಣ ಕನ್ನಡ ಜಿಲ್ಲಾ ಸಬೋರ್ಡಿನೇಟ್ ಕೋರ್ಟು ಕ್ರಮನಂಬ್ರ 27/1936ನೇಗೆ ಹೂಡಿದ ವ್ಯಾಜ್ಯವು ಮೆನೇಜಿಂಗ್ ಎಕ್ಸಿಕ್ಯೂಟರರ ವಶಸಂಚ ಸೇರಿತೆ ಗೃಹಾಸ್ತದ್ದಾರೆ. ಆದರೆ ಈ ವರೆಗೆ ಆದ ಪೂಮುಸ್ಸು ಆಗಬೇಕ್ಕಾದ ಕೋರ್ಟು ಲೀಲಂಗಳು ಪೂವಣ ಹೆಗ್ಗಡೇರ ವಾರಿಸ್ತಾರ ಮೇಲೆ ಬಾಧಿಸುವಂತಾದ್ದಲ್ಲ. ಈ ಕುರಿತು ಸದ್ಯದಲ್ಲೇ ಕುಟುಂಬದ ಬೇರೆಯವರು ಇನ್ನೊಂದು ವ್ಯಾಜ್ಯ ಹೂಡುತ್ತಾರೆ. ಈ ವ್ಯಾಜ್ಯವು ಸಾಲಗಾರರ್‍ರು ಎಂತ ಹೇಳುವವರ ಮೇಲೆಯೂ ಹೂಡಲಿಕ್ಕಿದೆ.

ಆದಕಾರಣ ಯಾರಿಗೂ ಕಲ್ಲಿ ಪೂವಣ ಹೆಗ್ಗಡೇರ ವಿಷಯ ವಿಲ್ಲಿನಲ್ಲಿ ಸೇರಿದ ಆಸ್ತಿಗಳ ಆ ಅದರಲ್ಲಿ ಹೇಳುವ ಸಾಲಗಳ ಕುರಿತು ಯಾರೊಬ್ಬರೂ ವಹಿಸಿದರೆ ಅವರೇ ನಷ್ಟಕಷ್ಟಗಳಿಗೆ ಗುರಿಯಾಗಬೇಕಾಗುತ್ತದೆಂದು ಈ ಮೂಲಕ ತಿಳಿಸುವದಾಗುತ್ತದೆ.

ಕುಟುಂಬದ ಮೆಂಬರರಲ್ಲೊಬ್ಬ.

16-12-1940

ಸತ್ಯಾಗ್ರಹ ಸಮಾಚಾರ

ಮದ್ರಾಸಿನ ... ಗಳಾದ ಶ್ರೀ ... ಮತ್ತು ... ಇವರಿಗೆ ... ತಿಂ. ಕ. ಸ. ಮತ್ತು ರೂ. ೫೦೦ ದಂಡ ... ನಾಗಪುರದ ಎಂ. ಎಲ್. ಎ. ಶ್ರೀ ಗಜಾಧರ ಪ್ರಸಾದ ಬಂಧನ. ನಾಗಪುರದ ಎಂ. ಎಲ್. ಎ. ಮತ್ತು ಲೋಕಲ್ ಬೋರ್ಡು ಎ. ಐ. ಸಿ. ಸಿ. ಮೆಂಬರ್ ಜೆ. ಪಿ. ಚೌದರೀ (ಎಂ. ಎಲ್. ಎ) ಇವರಿಗೆ ೬ ತಿಂ. ಕ. ಸ. ಮೀರತಿನ ಎಂ. ಎಲ್. ಎ. ರಘುವಂಶ ನಾರಾಯಣ ಸಿಂಗರಿಗೆ ೧ ವ. ಸಾ. ಸ. ನಾಗಪುರದ ಎಂ. ಎಲ್ ಎ. ಶಿವದಾಸಡಾಗರಿಗೆ ೯ ತಿಂ ಕ. ಸ. ಮೀರತಿನ ಎಂ. ಎಲ್. ಎ. ಶ್ರೀಮತಿ ಪ್ರಕಾಶವತಿ ಇವರಿಗೆ ೬ ತಿಂ. ಸಾ ಸ. ಕಟಕಿನ ಎಂ. ಎಲ್ ಎ. ಗೋವಿಂದ ಪ್ರಧಾನರಿಗೆ ೧ ವ. ಸಾ. ಶಿ. ಮತ್ತು ೧೦೦ ರೂ. ದಂಡ ಗೌಹಾತಿನ ಎಂ. ಎಲ್. ಎ. ಮತ್ತು ಎ ಐ ಸಿ. ಸಿ. ಮೆಂಬರ್ ವಿಷ್ಣುರಾಮ ಮೇಧಿಯರಿಗೆ ೧ ವ ಸಾ. ಸ ತೆಂಕಾಸಿಯ ಎಂ ಎಲ್ ಎ. ಎಸ್. ಸತ್ಯನಾಥ ಕಿರೆಯಲಾಲರಿಗೆ ೧ ವ. ಕ. ಸ. ಮತ್ತು ೫೦೦ ರೂ. ದಂಡ ಕಲ್ಲಿಕೋಟೆಯ ಹರಿಜನ ಎಂ ಎಲ್ ಎ ಇ ಕಣ್ಣನ್ನರಿಗೆ ೧ ವ ಕ ಸ ಮತ್ತು ೫೦೦ ರೂ. ದಂಡ ಅಲ್ಲಾಹಾಬಾದಿನ ಎಂ ಎಲ್ ಎ ಹರಿಲಾಲರಿಗೆ ೧ ವ ಸಾ ಸ ನಾಗಪುರದ ಮೊದಲನೆಯ ಸ್ತ್ರೀ ಸತ್ಯಾಗ್ರಹಿ ಶ್ರೀ ರುಕ್ಮಿಣೀ ಬಾಯಿ ಕೊರ್ಡೆ ಇವರಿಗೆ ೫೦೦ ರೂ. ದಂಡ ಇಲ್ಲವೆ ೩ ತಿಂ ಸಾ ಸ ನಾಗಪುರದ ಎಂ ಎಲ್ ಎ ಶೇರ್ ಶಿವದಾಸ ಡಾಗ್ ಇವರಿಗೆ ೯ ತಿಂ ಸಾ ಸ. ರೂ ೫೦೦ ದಂಡ ನಾಗಪುರದ ಎಂ ಎಲ್ ಎ ಜಾಲಾರರಿಗೆ ೬ ತಿಂ ಕ. ಸ. ಲಖನೋದ ಎಂ. ಎಲ್ ಎ. ಶತ್ರುಘ್ನ ಸಿಂಗರಿಗೆ ೧೮ ತಿಂ ಕ. ಸ. ಮತ್ತು ೫೦೦ ರೂ ದಂಡ, ಡಿಲ್ಲಿಯಲ್ಲಿ ಹತ್ತು ಜನ ಆಹ್ವಾರ ಸ್ವಯಂಸೇವಕರಿಗೆ ಎರಡೆರಡು ವರ್ಷ ಕ ಸ ಪುಣೆಯ ಡಾ। ತಾರಾಬಾಯಿ ಜೋಗಳೆಕರ ಇವರಿಗೆ ಎರಡು ದಿನ ಸಜೆ ೨೦೦ ರೂ. ದಂಡ. ಪುಣೆಯ ರಾಮಹರಿಕಾರರಿಗೆ ೧ ವ. ಕ. ಸ ಮತ್ತು ೨೦೦ ರೂ ದಂಡ. ಲಾಹೋರಿನ ಎಂ ಎಲ್ ಎ.ಗಳಾದ ಸರ್ದಾರ ಕಪೂರ ಸಿಂಗ್ ಮತ್ತು ಸರ್ದಾರ ಮಂಗಳ ಸಿಂಗ ಇವರಿಗೆ ೧ ವ. ಕ. ಸ. ಅಸ್ಸಾಮಿನ ಮಂತ್ರಿ ಪಕ್ರುದ್ದೀನರಿಗೆ ೧ ವ. ಸಾ ಸ. ಲಖನೋದ ಎಂ. ಎಲ್. ಎ.ಗಳಾದ ಪಂ। ರಾಮಚಂದ್ರ ಮತ್ತು ರಾಥೋಸಿಂಗ ಇವರ ಬಂಧನ.

ಮದ್ರಾಸಿನ ಕೇಂದ್ರ ಎಂ. ಎಲ್. ಎ. ಶ್ರೀ. ಸತ್ಯಮೂರ್ತಿಗಳಿಗೆ ೯ ತಿಂ. ಸಾ. ಸ. ಸಂ। ಪ್ರಾಂತದ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ರಫಿ ಮಹಮ್ಮದ್ ಕಿದ್ವಾಯಿಯರ ಬಂಧನ. ಲಖನೋ ಎಂ. ಎಲ್. ಎ. ನರೇಂದ್ರದೇವ ಶರ್ಮರಿಗೆ ೧ ವ. ಕ. ಸ. ನಾಗಪುರದ ಮುನಿಸಿಪಲ್ ಚೇರ್‌ಮನ್ ಪಂ. ದಿನಕರ ಶಾಸ್ತ್ರಿಯವರಿಗೆ ೬ ತಿಂ. ಸಾ ಸ. ಅಹಮ್ಮದ ನಗರದ ಎಂ. ಎಲ್. ಎ. ಫಿರೋದಿಯಾ ಇವರಿಗೆ ೬ ತಿಂ ಸಾ. ಸ. ಪಾಟ್ನದ ಪಂ. ಪ್ರಜಾಪತಿ ಮಿಶ್ರರಿಗೆ ೧ ವರ್ಷ ಕ. ಸ. ಅಲ್ಲಿನ ಎಂ. ಎಲ್. ಎ. ಕುಣಾವಾರ ಭಗವಾನ ಸಿಂಗರಿಗೆ ೧ ವ. ಕ. ಸ. ಮೊರದಾಬಾದಿನ ಎಂ. ಎಲ್. ಎ. ಪಂ ಶಂಕರ ದತ್ತರಿಗೆ ೯ ತಿಂ. ಕ. ಸ. ಮಹಾತ್ಮರ ಕಾರ್ಯದರ್ಶಿ ಪ್ಯಾರೇಲಾಲರಿಗೆ ೩ ತಿಂ. ಸಾ ಸ. ಪಾಟ್ನದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಜಗತ್ ನಾರಾಯಣಲಾಲರಿಗೆ ೧ ವ. ಕ ಸ ಕಲ್ಕತ್ತಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಹಿಂದಿನ ಅಧ್ಯಕ್ಷ ಡಾ। ಸುರೇಶ ಚಂದ್ರ ಬ್ಯಾನರ್ಜಿಯರಿಗೆ ೧ ವ ಕ ಸ. ಮದ್ರಾಸು ಎಂ ಎಲ್ ಎ ವಿ. ಜಿ. ಗುಪ್ತರಿಗೆ ೬ ತಿಂ ಸ ಲಖನೋದ ಡಾ। ಜವಾಹಿರಲಾಲ ರೋಟಗಿಯರಿಗೆ ೧ ವ ಸಾ ಸ ಅಲ್ಲಿನ ಚೌಧರಿ ಬುದ್ಧೂ ಸಿಂಗರಿಗೆ ೧ ವ. ಕ ಸ. ಮತ್ತು ೨೦೦ ರೂ ದಂಡ ಪಂ ಸೀತಾರಾಮ ಶುಕ್ಲರಿಗೆ ೯ ತಿಂ ಸ ಮತ್ತು ೫೦೦ ದಂಡ ಮಹಾಶಯ ಹನುಮಂತ ಪ್ರಸಾದರಿಗೆ (ಹರಿಜನ) ೩ ತಿಂ ಕ ಸ. ಹರಿಗೋವಿಂದ ಸಿಂಗರಿಗೆ ೧ ವ. ಸ. ಮೋಹನಲಾಲ ಶಾ, ಮದನಮೋಹನ್ ಉಪಾಧ್ಯಾಯ ಮತ್ತು ಮೌ. ಮಹಮ್ಮದ್ ಇಸ್ಮಾಯಿಲ್ ಇವರ ಬಂಧನಗಳು. ಅಲಾಬಾದಿನ ಎಂ. ಎಲ್. ಎ. ಪಂ. ರಮಾಕಾಂತ ಮಾಲವೀಯರಿಗೆ ಬಂಧನ. ಬೀಹಾರಿನ ಎಂ. ಎಲ್ ಎ.ಗಳಾದ ಹರಿ ಕಿಶೋರ ಪ್ರಸಾದ, ನವಾಲಾಲ ಝುಂಡಾ, ಶ್ರೀಧರಸಿಂಗ ಮತ್ತು ರಾಜೇಂದ್ರ ಮಿಶ್ರರಿಗೆ ಒಂದೊಂದು ವರ್ಷ ಸಜೆ ಮದನಪಲ್ಲಿಯ ಜಿ। ಬೋ। ಅಧ್ಯಕ್ಷ ರಾಧಾಕೃಷ್ಣ ರೆಡ್ಡಿಯವರಿಗೆ (ಎಂ ಎಲ್ ಎ) ೬ ತಿಂ ಸಾ ಸ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ

ಸತ್ಯಾಗ್ರಹದ ಮುಂದಿನ ಹಜ್ಜೆ

ಇದೇ ೭ನೇ ತಾರೀಕಿನ ದಿವಸ ಪ್ರಾಂತೀಯ ಕಚೇರಿಯಿಂದ ೨೦೦ ಸತ್ಯಾಗ್ರಹಿಗಳ ಎರಡನೇ ಪಟ್ಟಿಯೊಂದಿಗೆ ಮಹಾತ್ಮಾಜೀಯವರ ಕಡೆಗೆ ಶ್ರೀ ಶಂಕರ ಕುರ್ತಕೋಟಿಯವರನ್ನು ಕಳಿಸಲಾಗಿತ್ತು. ನಮ್ಮ ಕೆಲಸದಲ್ಲಿ ಬರುವ ಹಲವು ಅಡಚಣಿಗಳು ಗಾಂಧಿಜೀಯವರ ಮುಂದೆ ಇಡಲು ಹೇಳಲಾಗಿತ್ತು ಗಾಂಧಿಜೀಯವರಿಂದ ಬಂದ ಆ ದೇಶದ ಆಶಯವನ್ನು ಇಲ್ಲಿ ಕೊಡಲಾಗಿದೆ

ನಾವು ಕಳಿಸಿದ ಎರಡನೇ ಪಟ್ಟಿಯನ್ನು ಪರಿಶೀಲಿಸಿ ಗಾಂಧಿಜಿಯವರು ಇಷ್ಟರಲ್ಲಿಯೇ ತಮ್ಮ ಮಂಜೂರಾತಿಯನ್ನು ಕಳಿಸಲಿರುವರು. ಕೆಲವು ಪ್ರಾಂತಗಳಲ್ಲಿ ಮೊದಲನೇ ಪಟ್ಟಿಯು ಮುಗಿದಿಲ್ಲವಾದ್ದರಿಂದ ಅವರಿಗೆ ಹೆಚ್ಚು ಅವಕಾಶವನ್ನು ಕೊಡುವುದರಸಲುವಾಗಿ ಈ ಎರಡನೇ ಪಟ್ಟಿಯಲ್ಲಿಯ ಸತ್ಯಾಗ್ರಹಿಗಳಿಗೆ ಜನವರಿ ಮೊದಲನೇ ವಾರದಲ್ಲಿ ಸತ್ಯಾಗ್ರಹ ಮಾಡಲು ಅಪ್ಪಣೆ ಕೊಡುವರು. ಅದರ ಸಂಗಡ ಅವರು ಕಳಿಸಬಹುದಾದ ಆದೇಶಗಳನ್ನು ಕಳಿಸುತ್ತಾ ಹೋಗುವೆವು. ಹೆಸರು ಮಂಜೂರಾತಿಯಾದ ಸತ್ಯಾಗ್ರಹಿಗಳು ಒಬ್ಬರೂ ಬಿಡದೆ ಸತ್ಯಾಗ್ರಹ ಮಾಡಿಯೇ ತೀರಬೇಕೆಂದು ಗಾಂಧಿಜಿಯವರ ಇಚ್ಛೆ. ಆದರೆ ಅವರಿಂದ ಮನ್ನಣೆ ಬಾರದೆ ಯಾರೂ ಸತ್ಯಾಗ್ರಹ ಮಾಡತಕ್ಕದ್ದಲ್ಲವೆಂಬುದನ್ನು ಲಕ್ಷ್ಯದಲ್ಲಿಡಬೇಕು,

ಸತ್ಯಾಗ್ರಹಿಗಳು ತಮ್ಮ ಸರತಿ ಬರುವವರೆಗೆ ವಿಧಾಯಕ ಕಾರ್ಯಕ್ರಮದಲ್ಲಿಯೇ ಮಗ್ನರಾಗಬೇಕು. ಈಗ ದೊರೆತಿರುವ ಅವಧಿಯನ್ನು ಕೆಲಸಗಾರರಾಗಲೀ ಕಾಂಗ್ರೆಸ್ ಸಮಿತಿಗಳಾಗಲೀ ವ್ಯರ್ಥವಾಗಿ ಕಳೆಯಬಾರದು ಈ ಅವಧಿಯಲ್ಲಿ ಹೆಚ್ಚಾಗಿ ಸತ್ಯಾಗ್ರಹಿಗಳನ್ನು ಕೂಡಿಸಲಿಕ್ಕೆ ಪ್ರಯತ್ನಿಸಬೇಕು. ಕಾಂಗ್ರೆಸ ಸದಸ್ಯರೆಲ್ಲದವರನ್ನು ಮೊದಲು ಸದಸ್ಯರನ್ನಾಗಿ ಮಾಡಿ ನಂತರ ಸತ್ಯಾಗ್ರಹಿಗಳನ್ನಾಗಿ ಮಾಡಬೇಕು ಈ ಪ್ರಕಾರ ಕೂಡಿಸಿದ ಸತ್ಯಾಗ್ರಹಿಗಳ ವಿವರವನ್ನೆಲ್ಲ ಒಪ್ಪಿಗೆಯ ಪತ್ರದಲ್ಲಿ ತುಂಬಿಸಿ ಅವರ ಸಹಿ ತೆಗೆದುಕೊಂಡು ನಮ್ಮ ಕಚೇರಿಗೆ ಕಳಿಸಿಕೊಡಬೇಕು ಇದು ಸದ್ಯದ ಅತೀ ಮಹತ್ವದ ಕೆಲಸವಾಗಿರುವುದು ಈ ಪ್ರಕಾರ ಸತ್ಯಾಗ್ರಹಿಗಳನ್ನು ಸೇರಿಸುವಾಗ್ಗೆ ಯಾರ ಮೇಲೆಯೂ ಒತ್ತಾಯ ಮಾಡತಕ್ಕದಲ್ಲ. ಸ್ವಂತ ಇಚ್ಛೆಯಿಂದ ಬರುವವರನ್ನೆ ಸೇರಿಸತಕ್ಕದ್ದು.

ಸಾರ್ವಜನಿಕ ಸಭೆಗಳನ್ನು ಆಗಾಗ ಕೂಡಿಸಿ ಪರಿಸ್ಥಿತಿಯನ್ನು ಜನತೆಗೆ ತಿಳಿಸಿ ಹೇಳುವುದು ಅತ್ಯಗತ್ಯವಾಗಿರುವುದು. ಸಭೆಗಳಲ್ಲಿ ಯುದ್ಧವಿರೋಧಕ ಭಾಷಣಗಳನ್ನು ಮಾಡಕೂಡದು ಸತ್ಯಾಗ್ರಹ ಮಾಡುವ ಸಮಯದಲ್ಲಿ ಸಾರ್ವಜನಿಕ ಸಭೆಗಳನ್ನಾಗಲೀ ಮೆರವಣಿಗೆ ಮುಂತಾದ ಲೋಕಮತ ಪ್ರದರ್ಶನಗಳನ್ನಾಗಲೀ ಮಾಡದಿರುವದು ಉತ್ತಮ. ಸತ್ಯಾಗ್ರಹಿಯು ತಾನು ಹೇಳತಕ್ಕ ಘೋಷಣೆಯನ್ನು ಒಂದು ವಿಶಿಷ್ಟ ಸ್ಥಳದಿಂದ ಹೇಳುತ್ತ ಹಾಗೇ ಮುಂದೆ ಕೈದಾಗುವವರೆಗೆ ಸಾಗಬೇಕು. ಸಾಮಾನ್ಯವಾಗಿ ಸತ್ಯಾಗ್ರಹಿಗಳು ಕೈದಾದ ನಂತರ ಕೋರ್ಟಿನಲ್ಲಿ ತಮ್ಮ ಹೇಳಿಕೆಯನ್ನೇನೂ ಕೊಡುವ ಅಗತ್ಯವಿಲ್ಲ. ಹಾಗು ಅವರು ಕೋರ್ಟಿನಲ್ಲಿ ಸಮರ್ಥಿಸಿಕೊಳ್ಳುವದೂ ಅವಶ್ಯವಿಲ್ಲವೆಂದು ಅಧ್ಯಕ್ಷ ಕೃಷ್ಣಾಜಿ ವಂಜೀಕರರು ತಿಳಿಸುತ್ತಾರೆ.

THE

Canara Industrial & Banking Syndicate, Ltd.,

UDIPI, S INDIA

Estd) (1925

Authorised Capital	Rs 50,00,000
Subscribed Capital	Rs 12,80,500
Paid-up Capital	Rs 5,16,808
Reserves	Rs 2,07,000

Our new issue of Rs. 40 lakhs of 5% Tax free Cumulative Preference Shares of Rs. 10 each is an ideal form of safe and remunerative investment with unique features

The Directors have decided to levy premium on the above shares applied for on and after 1st January 1941.

The rate premium will be

On an application for 10 to 19 shares a premium of Re 1.

„	20 to 29	„	Rs 2·
„	30 to 39	„	Rs 3·
„	40 to 49	„	Rs 4·
„	50 to 59	„	Rs 5·
„	60 to 69	„	Rs 6·
„	70 to 79	„	Rs 7·
„	80 to 89	„	Rs 8,
„	90 to 99	„	Rs 9·

There will be no premium on any application of 100 shares or more·

Apply for prospectus:—



ವಿಚಿತ್ರ ಪ್ರಪಂಚ

ಸತ್ತರೂ ಬದುಕಿಸಬಲ್ಲರೆ!

ಯಂತ್ರಮಂತ್ರಗಳಲ್ಲಿ ಶಕ್ತಿ ಇರುವುದಾದರೆ, ಮತ್ತು ಅಂಥ ಶಕ್ತಿಯನ್ನು ಪಡೆದಿರುವವರು ಪ್ರಪಂಚದಲ್ಲಿ ಯಾರಾದರೂ ಇರುವರಾದರೆ, ಅವರು ಟಿಬೇಟ್ ದೇಶದ ಜನರೆಂದು ಪ್ರಸಿದ್ಧಿಯಿದೆ. ಈ ವಿಚಿತ್ರ ಜನರು ತಮ್ಮ ಮೆಯ್ಯನ್ನೇ ರೇಡಿಯೋದಂತೆ ಉಪಯೋಗಿಸಿಕೊಂಡು ದೂರದ ಘಟನೆಗಳನ್ನು ಆಗ ತಾನೇ ನಡೆದಂತೆ ತಿಳಿಯಬಲ್ಲರು. ಯಾರು ಸುಳ್ಳು ಹೇಳಿದರೂ, ಈ ಜನರಿಗೆ ಅದು ಸುಲಭವಾಗಿ ಗೊತ್ತಾಗುತ್ತದೆ. ಇವರಿಗೆ ಸತ್ತವರನ್ನು ಮಂತ್ರಶಕ್ತಿಯಿಂದ ಬದುಕಿಸುವ ಸಾಮರ್ಥ್ಯವಿರುವದೆಂದು ಹೇಳಲಾಗುತ್ತಿದೆ. ಹೆರಿಸನ್ ಫೋರ್ಮನ್ ಎಂಬವನು ಒಮ್ಮೆ ಅಲಖ್ ಸಾಂಗ ಎಂಬ ಸನ್ಯಾಸಿನಿಯೊಂದಿಗೆ ಒಂದು ಗುಪ್ತ ಮಂದಿರ ದರ್ಶನಕ್ಕೆ ಹೋಗಿದ್ದಾಗ ಅಲ್ಲಿ ಕೆಲವು ರಕ್ತ ಪಿಪಾಸು ದ್ದೊಡ್ಡ ಗಬ್ಬಿಲಗಳು ಅವರನ್ನು ಮುತ್ತಿ ಕಟ್ಟಿ ಚಿತ್ರ ಹಿಂಸೆಯನ್ನು ಕೊಟ್ಟವು. ಅದನ್ನು ನೋಡಿ ಹೆರಿಸನ್ ಫೋರ್ಮನನು ಕೆಲವು ಗಬ್ಬಿಲಗಳನ್ನು ಕೊಂದನು. ಆದರೆ ಸಾಂಗನು ಆ ಸತ್ತ ಗಬ್ಬಿಲಗಳ ಮೇಲೆ ಕೈ ಎತ್ತಿದೊಡನೆಯೇ ಅವು ಪುನಃ ಜೀವಪಡೆದುವು. ಅವಳು ಅವುಗಳೊಡನೆ ಏನೋ ಮಾತುಗಳನ್ನು ಪಿಸುಗುಟ್ಟಿದಾಗ ಅವು ಹೊರಟು ಹೋದವು. ಆ ಗಬ್ಬಿಲಗಳು ಕಚ್ಚಿದ ಅವಳ ಮೈಯ ಗಾಯಗಳೂ ಮಾಯವಾದುವು. ಟಿಬೇಟಿನ ಜನರು ಮನೋವಿಜ್ಞಾನ ಮತ್ತು ಆತ್ಮಜ್ಞಾನದಲ್ಲಿ ಪಾರಂಗತರಾಗಿರುತ್ತಾರೆಂದು ಅಲ್ಲಿಗೆ ಹೋದ ವಿದೇಶೀಯರು ಏಕಮತವುಳ್ಳವರಾಗಿದ್ದಾರೆ.

◈

೧೨೨ನೆಯ ವರ್ಷ ಪ್ರಾಯದಲ್ಲಿ ಮದುವೆ!

ರೆಡ್ ಇಂಡಿಯನರೆಂಬ ಅಮೇರಿಕದ ಮೂಲನಿವಾಸಿಗಳು ಪ್ರಪಂಚದಲ್ಲಿಯೇ ಅತ್ಯಂತ ದೀರ್ಘಾಯುಗಳಾಗಿರುವರೆಂದು ತಿಳಿದುಬಂದಿದೆ. ಕಳೆದ ಬಾರಿ ಜಾನೇಶ ಮಾರಿ ತೆಗೆಯಲ್ಪಟ್ಟಿರವಾಗ ಅವರಲ್ಲಿ ಒಬ್ಬ ೧೩೦ ವರ್ಷಪ್ರಾಯದ ಹಣ್ಣು ಮುದುಕನು ದೊರೆತನು. ಆ ಸಮಯಕ್ಕೆ ತಾನು ಮುದುಕನಾಗಿದ್ದುದರಿಂದ ೧೮೬೦ರ ಅಂತರ್ಯುದ್ಧದಲ್ಲಿ ತಾನು ಸೇರಿರಲಿಲ್ಲವೆಂದು ಅವನು ಹೇಳಿದ್ದನು. ಈ ಮಹಾಶಯನು ೧೮೧೦ರ ಜುಲಾಯಿ ತಿಂಗಳಲ್ಲಿ ಹುಟ್ಟಿದ್ದ. ಅವನು ರೆಡ್ ಇಂಡಿಯನನಾಗಿರುವುದೇ ಹೀಗೆ ದೀರ್ಘಾಯುವಾಗಲಿಕ್ಕೆ ಕಾರಣವೆಂದು ಅವನು ಹೇಳಿದ್ದಾನೆ. ಬೇರೆ ಯಾರಿಗಿಂತಲೂ ರೆಡ್ ಇಂಡಿಯನರು ಹೆಚ್ಚುಕಾಲ ಬದುಕುವರು. ಅವರು ಮನಸೇಚ್ಛೆ ಕುಡಿದು ಮಜಾ ಮಾಡುವರು. ಈ ಮಹಾಶಯನಿಗೆ ೧೭ ಬಾರಿ ವಿವಾಹವಾಯಿತು. ಹೆಂಡಂದಿರು ಮುದುಕಿಯರಾಗುತ್ತ ಬಂದುದರಿಂದ ಅವನು ಅವರನ್ನು ಬಿಟ್ಟು ಹೊಸ ಹೊಸ ಮದುವೆಗಳನ್ನು ಮಾಡಿದ್ದ. ಕೊನೆಯ ಮದುವೆ ೧೨೨ನೆ ವರ್ಷ ಪ್ರಾಯದಲ್ಲಾಯಿತು.

◈

ತಮ್ಮನ್ನು ತಾವೇ ಹೂಳಿಟ್ಟವರು

ಕೆಲವು ಶತಮಾನಗಳ ಹಿಂದೆ ನಡೆದ ಕತೆ ಇದು—ಸ್ವೀಡನಿನ ಒಂದಾನೊಂದು ಗ್ರಾಮದಲ್ಲಿ ಸೀನುವ ಒಂದಾನೊಂದು ರೋಗವು ತಲೆದೋರಿತು. ಒಮ್ಮೆ ಒಬ್ಬನಿಗೆ ಸೀನು ಬಂತೆಂದರೆ ಅವನು ಅದರಿಂದಲೇ ಸಾಯಬೇಕು. ಸತ್ತೇ ಸೀನುವುದು ನಿಲ್ಲಬೇಕು. ಹೀಗಾಗಿ ಈ ರೋಗದಿಂದ ಬಹುಮಂದಿ ಸತ್ತರು. ಕೊನೆಗೆ ಸತ್ತವರನ್ನು ಹೂಳುವುದಕ್ಕೂ ಜನರು ದೊರೆಯುವುದು ಕಠಿನವಾಗಿ ಪ್ರತಿಯೊಬ್ಬರು ತಮಗೆ ತಾವೇ ಹೊಂಡಗಳನ್ನು ತೋಡಿಟ್ಟು, ಸೀನುವುದು ಆರಂಭವಾದೊಡನೆ ತಮ್ಮ ತಮ್ಮ ಹೊಂಡಗಳಲ್ಲಿ ಕೂತುಕೊಳ್ಳುತಿದ್ದರು. ಮತ್ತು ಒಬ್ಬರನ್ನೊಬ್ಬರು—'ದೇವರು ನಿನ್ನನ್ನು ಆಶೀರ್ವದಿಸಲಿ' ಎನ್ನುತಿದ್ದರು. ಈ ರೋಗದ ದೆಸೆಯಿಂದ ಆ ಕಾಲದಲ್ಲಿ ನೂರಕಡಾ ೬೫ರಷ್ಟು ಜನರು ಸತ್ತರು. ಈ ಕಾರಣದಿಂದ ಈಗ ಯಾರಾದರೂ ಸ್ವೀಡನಿನಲ್ಲಿ ಸೀನಿದರೆ—'ದೇವರು ನಿನಗೆ ಒಳ್ಳೆಯದು ಮಾಡಲಿ' ಎಂದು ಹೇಳುವುದು ವಾಡಿಕೆಯಾಗಿದೆ.

◈

ಮನಸ್ಸಾಕ್ಷಿ ಕೇಳಲಿಲ್ಲ!

ಅಮೇರಿಕದ ನ್ಯೂಜೆರ್ಸಿ ಎಂಬಲ್ಲಿ ಒಬ್ಬನು ಈ ೧೮ಎಂಟು ವರ್ಷಗಳ ಮೊದಲು ಟೆಲಿಫೋನು ಮೂಲಕ ಮಾತನಾಡಲು ಒಂದು ಸಾರ್ವಜನಿಕ ಕಟ್ಟೆಗೆ ಹೋಗಿ ಹಣ ಹಾಕಿದನು. ಆದರೆ ಅವನಿಗೆ ಬೇಕಾದ ಕಡೆಗೆ ಟೆಲಿಫೋನು ಜೋಡಿಸುವುದು ಸಾಧ್ಯವಾಗಲಿಲ್ಲವಾದ್ದರಿಂದ ಹಾಕಿದ ಹಣವನ್ನು ಮರಳಿ ಪಡೆಯಲಿಕ್ಕೆ ಗುಬ್ಬಿ ಒತ್ತಿದನು. ಆದರೆ ಅದೇ ಸಮಯಕ್ಕೆ ಯಂತ್ರ ಹಾಳಾದುದರಿಂದ ಅವನಿಗೆ ಹಾಕಿದ್ದಕ್ಕೆ ತಲೂ ಒಂದು ಡಾಲರು ಎಂಟು ಸೆಂಟುಗಳ ಹೆಚ್ಚಿಗೆ ದೊರೆಕಿತು. ಅದನ್ನವನು ಟೆಲಿಫೋನ ಕಂಪನಿಗೆ ಹಿಂತಿರುಗಿಸಬೇಕಾಗಿತ್ತಾದರೂ ಸ್ವಂತಕ್ಕೆ ಉಪಯೋಗಿಸಿಕೊಂಡನು. ಆದರೆ ೮ ವರ್ಷಗಳ ಅನಂತರ ಅವನ ಮನಸ್ಸಾಕ್ಷಿ ಜಾಗ್ರತವಾಗಿ ಮೊನ್ನೆ ತಾನೇ, ಅವನು ತಾನಾಗಿ ಹೋಗಿ ಕಂಪನಿಗೆ ಬಡ್ಡಿ ಸಮೇತ ಆ ಹಣವನ್ನು ಹಿಂತಿರುಗಿ ಎಲ್ಲಾ ಸಂಗತಿಗಳನ್ನು ತಿಳಿಸಿದ.

◈

ಪ್ರಪಂಚದಲ್ಲಿಯೇ ದೊಡ್ಡ ಸರೋವರ!

ಕೊಲಂಬಿಯ ನದಿಗೆ ಗ್ರೆಂಡ ಕೋಲೀ ಡೇಮ್ ಎಂಬ ಒಂದು ಬಹು ದೊಡ್ಡ ಅಣೆಕಟ್ಟನ್ನು ಕಟ್ಟುತಿದ್ದಾರೆ. ಈ ಅಣೆಕಟ್ಟು ೪೩೦ ಅಡಿ ಉದ್ದವಾಗಿಯೂ ೫೦೦ ಅಡಿ ಎತ್ತರವಾಗಿಯೂ ಮೇಲುಗಡೆ ೫೦೦ ಅಡಿ ಅಗಲವಾಗಿಯೂ ಇರುವುದು. ಇದಕ್ಕೆ ಉಪಯೋಗಿಸಿದ್ದ ಕಾಂಕ್ರೀಟು ಸಿಮೆಂಟು ಅಮೇರಿಕದ ಅತ್ಲಾಂತಿಕ ದಂಡೆಯಿಂದ ಪೆಸಿಫಿಕ್ ದಂಡೆಯ ತನಕ ಪೂರ್ವ_ಪಶ್ಚಿಮ ಒಂದು ದೊಡ್ಡ ರಾಜಮಾರ್ಗವನ್ನು ಕಟ್ಟಿಸಲಿಕ್ಕೆ ಸಾಕಾಗುವಷ್ಟು ಇರುವುದು. ಇಷ್ಟು ದೊಡ್ಡ ಅಣೆಕಟ್ಟನ್ನು ಕಟ್ಟಿಸಲಿಕ್ಕೆ ೮೦ ಮಿಲಿಯ ಪವನುಗಳು ಖರ್ಚಾಗುವವು. ಮತ್ತು ಅದರ ಮುಖದಿಂದ ಉಂಟಾದ ಜಲಾಶಯವು ೧೫೦ ಮೈಲುಗಳಷ್ಟು ಉದ್ದವಾದ ಅತಿ ದೊಡ್ಡ ಕೃತಕ ಸರೋವರವಾಗುವುದು.

◈

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ
★
ಬೆಂಕಿಯ ಅನಾಹುತ
★
ಕಡಲಿನ ಅಪಾಯ
★
ಮೋಟಾರು ಅವಗಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ!
★
ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಕ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/-
+
ಸರ್ವಸಾಧಾರಣ ಬೋನಸ್ ರೂ 11/
ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ★

ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್. ನಾಯಕ್
ಆರ್ಗನೈಸರ್
ಬೆಂಟ್ಲೆಂಡ್ ಪೇಟೆ, ಮಂಗಳೂರು.

ಅಥವಾ

ಕೆ. ಕೆ. ಶ್ರೀನಿವಾಸನ್
ಬ್ರಾಂಚ್ ಮ್ಯಾನೆಜರ್
4/5 ಫಸ್ಟ್ ಲೈನ್ ಬೀಚ್ ಮದ್ರಾಸ

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ಅರಮನೆಯಿಂದ ಸೆರೆಮನೆಗೆ ನಡೆದ ಸಾಂಬಮೂರ್ತಿ

ಸ್ಪೀಕರರಾಗಿಯೇ ಜೈಲಿನಲ್ಲಿದ್ದಾರೆ

ತ್ಯಾಗಜೀವನದ ಒಂದು ಭವ್ಯ ಚಿತ್ರ

ಮಾನ್ಯ ಶ್ರೀ ಸಾಂಬಮೂರ್ತಿಯವರು ಮದ್ರಾಸು ಶಾಸನ ಸಭೆಯ ಅಧ್ಯಕ್ಷರಾಗಿಯೇ ಇದ್ದಂತೆ (Speaker of the Madras Legislative Assembly) ಸೆರೆಯವಾರೆ ಬಂಧಿತರಾದರು. ಅರಮನೆಯಿಂದಲೇ ಅವರು ಸೆರೆಮನೆಗೆ ಹೊಯ್ಯಲ್ಪಟ್ಟರು. ಡಿಫೆನ್ಸ್ ಕಾನೂನು ಅವರನ್ನು ವೆಲ್ಲೂರು ಸೆರೆಯಲ್ಲಿ ದಿಗ್ಬಂಧಿತರಾಗಿರಿಸಿತು! ಈಗಲೂ ಕೂಡಾ ಅವರು ಶಾಸನ ಸಭೆಯ ಅಧ್ಯಕ್ಷರಾಗಿಯೇ (Speaker) ಇದ್ದಾರೆ! ಹೊಸ ರಾಜ್ಯ ಘಟನೆಯು ಪ್ರಾಂತಿಕ ಆಡಳಿತವು ಎಷ್ಟರ ಮಟ್ಟಿಗೆ ಜನರ ಕಣ್ಣೆದುರಲ್ಲಿಯೇ ನಿರ್ಬಂಧಕ್ಕೆ ಒಳಗಾಯಿತು ಅಪಹಾಸ್ಯಕ್ಕೆ ಗುರಿಯಾಯಿತು! ಎಂಬುದು ಇಂದು ಜಗತ್ತಿಗೇ ಹೀಗೆ ವಿದಿತವಾಗಿದೆ.

ಕಾಂಗ್ರೆಸು ಮಂತ್ರಿಗಳು ಅಧಿಕಾರದಲ್ಲಿದ್ದ ಸುವರ್ಣ ಕಾಲದಲ್ಲಿ ಶ್ರೀ ಬುಲುಸು ಸಾಂಬಮೂರ್ತಿಗಳನ್ನು ಶಾಸನ ಸಭೆಯ ಅಧ್ಯಕ್ಷರಾಗುವರು ಎಂಬ ಸುದ್ದಿ ಬಂದಾಗ ಜನರು ಒಮ್ಮೆ ವಿಸ್ಮಯಗೊಂಡರು. ಹಲವರು ಇದೂ ರಾಜಾಜಿಯವರ ಒಂದು ಹಾಸ್ಯೋಕ್ತಿಯೆಂದೇ ನಂಬಿದ್ದರು! ಆದರೆ ಕಡೆಗೆ ಅದೇ ನಿಜವಾಯಿತು! ನಿರಂತರ ವಿರುದ್ಧ ಪಕ್ಷದ ಮೇಲೆ ಅಪ್ರಮಿತ ವಾಗ್ಬಾಣಗಳನ್ನು ಸುರಿಸಬಲ್ಲ ಪ್ರಚಂಡ ವಾಗ್ಮಿವರ್ಯ, ಕೊನೆಗೆ ಅಧ್ಯಕ್ಷನಾಗಿ ಆರಿಸಲ್ಪಟ್ಟು ಬಾಯಿಮುಚ್ಚಿ ಮೌನ ಸನ್ಯಾಸವನ್ನು ವಹಿಸಬೇಕಾಯಿತು! ಬೇರೆಬೇರೆ ಪಕ್ಷದ ನಾಯಕ ಪ್ರತಿನಾಯಕರ ಚರ್ಚೆಯನ್ನು ಕಣ್ಣಾರೆ ಕಾಣುತ್ತಾ, ಕಿವಿಯಾರೆ ಕೇಳುತ್ತಾ ಮೂಕನಂತೆ ಕುಳಿತರು! ಗಂಭೀರವಾಗಿ ನಟಿಸಿದರು! ಅರೆಬತ್ತಲೆ ವೇಷದಲ್ಲಿಯೇ ಅಧ್ಯಕ್ಷ ಪೀಠದಲ್ಲಿ ವಿರಾಜಮಾನರಾದರು.

○ ○ ○ ○

ಸಾಂಬಮೂರ್ತಿಯವರು ಕೋಕನಾಡಿನಲ್ಲಿ ಒಬ್ಬ ಲಾಯರಾಗಿ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು! ತನ್ನ ಉದ್ಯೋಗದಲ್ಲಿ ಶ್ರದ್ಧೆಯಿಂದ ಆಸಕ್ತಿಯಿಂದ ಹೆಸರುವಾಸಿಯಾದರು. ಸೊತ್ತು, ಧನ, ಆಸ್ತಿಪಾಸ್ತಿಗಳನ್ನು ಕೂಡಿಡುವ ವಿಷಯದಲ್ಲಿ ಏನೊಂದೂ ವಿಶ್ವಾಸ ಅವರಿಗೆ ಇರಲೇ ಇಲ್ಲ; ಹೀಗಾಗಿ ತಾನು ಸಂಪಾದಿಸಿದಷ್ಟನ್ನೂ — ಅಧಿಕ್ಯಂತಲೂ ಹೆಚ್ಚಾಗಿಯೇ — ವ್ಯಯವೂ ಮಾಡಿದರು! ಯಾರೇ ಆಗಲಿ ಅವರ ಮಾತಿಗೆ ಸಮ್ಮತಿಸದೆ ಇರುವಂತಿರಲಿಲ್ಲ; ಅಂತಹ ಮಧುರವಾದ, ಹೃತ್ಪೂರ್ವಕವಾದ ಮಾತುಕತೆ ಅವರದು! ಹಾಗಾಗಿ ತಮ್ಮ ವೃತ್ತಿಯಲ್ಲಿಯೂ, ಸಾರ್ವಜನಿಕರಲ್ಲಿಯೂ ಬಹಳ ಮೆಚ್ಚಿಗೆಯವರಾಗಿ ಹೆಸರು ಹೊಂದಿದ್ದರು. ಮನೆಯಲ್ಲಿ ಒಳ್ಳೆ ಸಿರಿತನದ ಬಾಳುವೆಯಿತ್ತು. ಮನೆತುಂಬ ಅತಿಥಿ ಅಭ್ಯಾಗತರು ಇದ್ದರು; ಇಂತಹ ಜೀವನ ಅವರಿಗೆ ಹೆಚ್ಚು ಸಂತೋಷಕರವೂ ಆಗಿತ್ತು.

○ ○ ○ ○

ಗಾಂಧಿಜಿ ಅಸಹಕಾರದ ಕಹಳೆಯೂದಿದರು! ಅದನ್ನು ಕೇಳಿ ಎಚ್ಚೆತ್ತನಂತವರಲ್ಲಿ ಇವರೊಬ್ಬರು. ೧೯೨೧ರಲ್ಲಿ ಮದ್ರಾಸಿನ ಯಾತ್ರೆ ಮುಗಿಸಿದ ಮೇಲೆ ಮಹಾತ್ಮಾಜಿ "ಅರೆಬತ್ತಲೆ"ಯ ವೇಷ ಹಾಕಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದರು. ಸಾಂಬಮೂರ್ತಿಯವರೂ ಮಹಾತ್ಮರನ್ನೇ ಅನುಸರಿಸಿದರು. ವಕೀಲಿ ಬಿಟ್ಟುಬಿಟ್ಟರು. ಸಿರಿತನದ ಜೀವನ ದೂರಮಾಡಿದರು. ಅವರ ತ್ಯಾಗವು ಹೃತ್ಪೂರ್ವಕವಾದ ಆತ್ಮನಿರ್ಧಾರವಾಗಿತ್ತು; ಆ ತ್ಯಾಗ ಮುಂದಿನ ಸೇವೆಯಿಂದ ಪೂರ್ಣತೆಗೂ ಸಾಗಿತು!

○ ○ ○ ○

ಈ ಹೊಸ ಜೀವನದ ಸಂತಸದಲ್ಲಿ ಅವರು ದೇಶದ ಮೂಲೆ ಮೂಲೆಗಳನ್ನು ಸಂಚರಿಸಿದರು! ಜನತೆಯಲ್ಲಿ ಹೊಸ ಸ್ಫೂರ್ತಿ ತುಂಬಿತು ಈ ತ್ಯಾಗಿಯ ಜೀವನದರ್ಶನದಿಂದ. ತನ್ನ ಗಂಭೀರ ಮತ್ತು ಮೇಘಸದೃಶ ನಿನಾದಸಿದ್ಧ ಅವರು ಸ್ವರಾಜ್ಯದ ಉದಯರಾಗವನ್ನು ಹಾಡುತ್ತಾ ಸಂಚರಿಸಿದರು! ಜನತೆಯ ಹೃದಯದಲ್ಲಿ ಆ ಸ್ಫೂರ್ತಿಮಯ ದಿನಗಳು ಇಂದಿಗೂ ಅಚ್ಚಳಿಯದೆ ಉಳಿದಿವೆ.

೧೯೨೧ನೆಯ ವರ್ಷವು ಭಾರತದ ಇತಿಹಾಸದಲ್ಲಿ ಬಹಳ ಉಜ್ವಲ ಭವಿಷ್ಯವನ್ನು ಕಂಡ ದಿನ. ಭಾರತವು ಹಿಂದೆಂದೂ ಆಗದ ರೀತಿ ಒಮ್ಮತವಾಗಿ ಐಕ್ಯಗೊಂಡಿತು. ಹಿಂದೂ ಮುಸ್ಲಿಮರು ಭೇದ ಭಾವವನ್ನು ಮರೆತು ಅನ್ಯೋನ್ಯ ಆಲಿಂಗಿಸಿಕೊಂಡರು! ಭುಜಕ್ಕೆ ಭುಜತಾಗಿಸಿ ಸ್ವರಾಜ್ಯದ ಹೋರಾಟದಲ್ಲಿ ಸೈನಿಕರಾಗಿ ಸರ್ವರೂ ಒಂದೇ ಪದಗತಿಯಿಂದ ಮುಂದೊತ್ತಿದರು. ಒಂದೇ ವರ್ಷದಲ್ಲಿ ಸ್ವರಾಜ್ಯ ಪಡೆಯಬೇಕೆಂದು ಗಾಂಧಿಜಿ ಸಾರಿದರು. ತಿಲಕ ಸ್ವರಾಜ್ಯ ನಿಧಿ ಕೋಟಿ ಸಂಖ್ಯೆಗೆ ಏರಿತ್ತು. ಖಿಲಾಫತ್ ಪ್ರಕರಣವು ಅಭೂತಪೂರ್ವ ಐಕ್ಯವನ್ನು ತಂದೊದಗಿಸಿತು. ಪಂಡಿತ ಜವಾಹಿರಲಾಲರಂತಹ ಉಗ್ರ ಯುವಕರ ರಕ್ತ ಕುದಿಕುದಿದಿತ್ತು ಹೋರಾಟಕ್ಕೆ. ಶ್ರೀ. ಸತ್ಯಮೂರ್ತಿಗಳ ಜೀವನದಲ್ಲಿಯೂ ಅದೇ ತರದ ಸ್ಫೂರ್ತಿ ಚಿಮ್ಮುತ್ತಿತ್ತು.

○ ○ ○ ○

ಸ್ವಾತಂತ್ರ್ಯ ಮಂತ್ರವು ಸಾಂಬಮೂರ್ತಿಗಳ ದಿನದಿನದ ಘೋಷವಾಯಿತು. ಶ್ರೀ ಶ್ರೀನಿವಾಸ ಅಯ್ಯಂಗಾರರಂತವರೂ ಅವರಿಗೆ ಬೆಂಬಲವಿತ್ತರು. ಶ್ರೀ ಸಾಂಬಮೂರ್ತಿಯವರು ಈ ತನ್ನ ಪ್ರಚಾರ ಕಾರ್ಯವನ್ನು ಆರಂಭಿಸಿದರು. ೧೯೨೦ರಲ್ಲಿ ಮದ್ರಾಸಿನ ಗೋಖಲೆ ಹಾಲಿನಲ್ಲಿ ನೆರೆದ ಪ್ರಾಂತಿಕ ರಾಜಕೀಯ ಪರಿಷತ್ತಿನಲ್ಲಿ ಸಾಂಬಮೂರ್ತಿಗಳ ಸಿಂಹಗರ್ಜನೆಯು ಸ್ವಾತಂತ್ರ್ಯನಾದವನ್ನು ಮುಗಿಲು ಮುಟ್ಟಿಸಿತು. ಈ ಮುಂದೆ ೧೯೨೯ರ ಲಾಹೋರ್ ಕಾಂಗ್ರೆಸಿನಲ್ಲಿ ಸರ್ವಸ್ವಾತಂತ್ರ್ಯ ಸ್ಥಾಪಿತವಾಗಿ ನಿರ್ಣಯರೂಪಕ್ಕೆ ಬಂತು. ಶ್ರೀ ಸಾಂಬಮೂರ್ತಿಗಳು ಇದರ ಮೊದಲ ಪ್ರವಾದಿ.

○ ○ ○ ○

ಸತ್ಯಾಗ್ರಹ ಸಮರದ ಕರೆ ಬಂದಾಗ ಅವರು ಯೋಧರಾಗಿ ಎಲ್ಲಾ ಸಮಯಗಳಲ್ಲಿಯೂ ಮುನ್ನುಗ್ಗಿದರು. ಎಲ್ಲಾ ಸಮಯಗಳಲ್ಲಿಯೂ ಸೆರೆಮನೆಯ ವಾಸವನ್ನು ಅನುಭವಿಸಿದರು. ಸೆರೆಮನೆಯಲ್ಲಿಯೂ 'ಸಿ' ಕ್ಲಾಸ್ ಕೈದಿಗಳ ಬಗ್ಗೆ ಅವರು ಹೋರಾಡದೆ ಬಿಡಲಿಲ್ಲ. ರಾಜಾಜಿಯಂತವರು ಸೆರೆಮನೆಯಲ್ಲಿ ಸತ್ಯಾಗ್ರಹಿಗಳು ವಿಧೇಯತೆಯನ್ನು ತೋರಿಸುವುದು ನ್ಯಾಯವೆಂದು ಹೇಳಿದರೆ, ಸಾಂಬಮೂರ್ತಿಗಳು ಅಲ್ಲಿಯು ತಮ್ಮ ನಾಡಿನ ಜನರ ಸಂತಾಪ ಸಂಕಟಗಳಿಗಾಗಿ ಮರುಗಿ ಹೋರಾಡುವರು. ಇಂತ ವರ್ತನೆಗಳು ಈ ಉಭಯ ಮುಖಂಡರ ಸ್ವಭಾವ ಭೇದವನ್ನು ಸಮನಾಗಿ ಚಿತ್ರಿಸಬಲ್ಲವು.

○ ○ ○ ○

ಸಾಹಸಮಾಡಿ ಸಂತೋಷಪಡುವ ಜೀವನ ಸಾಂಬಮೂರ್ತಿಗಳದು. ಅವರ ಇಡೀ ಜೀವನ ಅದಕ್ಕೇ ಮೀಸಲು; ಅವರ ಹೃದಯ ಮನಸ್ಸುಗಳು ಅದಕ್ಕೇ ಸಿದ್ಧ. ೧೯೩೦ರ ಆಂದೋಲನದಲ್ಲಿ ವೆಲ್ಲೂರ ಕಡೆಗೆ ಮೊದಲು ಧಾವಿಸಿದವರು ಸಾಂಬಮೂರ್ತಿ!

○ ○ ○ ○

ಮುಂದೆ, ಪ್ರಾಂತಿಕ ಸರಕಾರವು ೧೯೩೭ರಲ್ಲಿ ಪ್ರಾಂತದಲ್ಲಿ ಸ್ಥಾಪಿತವಾದಾಗ ಅವರು ಅಧ್ಯಕ್ಷರಾದರು; ಅಧ್ಯಕ್ಷರಾದವರು ರಾಜಕೀಯದಲ್ಲಿ ಭಾಗವಹಿಸಕೂಡದು ಎಂಬ ನಿಯಮವನ್ನು ಅವರು ಅಂಗೀಕರಿಸಿಕೊಂಡರು. ನಿರಂತರ ಹಲಕಾಲದಿಂದ ಗುಡುಗುತ್ತಿದ್ದ ಕಂಠ ಮತ್ತೆ ಕೆಲಕಾಲ ಮೂಕಮೌನವನ್ನು ಆಶ್ರಯಿಸಿತು; ಬಹುಶಃ ಮುಂದಿನ ನಿರಂತರದ ನಿರರ್ಗಳ ಘರ್ಜನೆಗಿರಬಹುದು! ಅಂತೂ ಸಾಂಬಮೂರ್ತಿಯವರು ಅಧ್ಯಕ್ಷರಾಗಿ ಗಂಭೀರತೆಯಿಂದ, ನಿಷ್ಪಕ್ಷಪಾತದಿಂದ, ಪೂರ್ಣಸಹಿಷ್ಣುತೆಯಿಂದ ಕಾರ್ಯಭಾರವನ್ನು ಚೆನ್ನಾಗಿ ನಿರ್ವಹಿಸಿದರು.

○ ○ ○ ○

ಮದ್ರಾಸಿನ ಗವರ್ನರರು, ಮೊನ್ನೆ ಸಾಂಬಮೂರ್ತಿಯವರು ಅಧ್ಯಕ್ಷರಾಗಿಯೇ ಸತ್ಯಾಗ್ರಹ ಪ್ರಾರಂಭಿಸುವ ಕಾಲದಲ್ಲಿ ಬರೆದಷ್ಟು ತೀವ್ರವೂ ಗಂಭೀರವೂ ಆದ ಪತ್ರವನ್ನು, ನಿಷೇಧ ಸೂಚನೆಯನ್ನು ಬೇರೆ ಪಡೆದಿರಲಿಕ್ಕಿಲ್ಲ. ಮದ್ರಾಸು ಶಾಸನ ಸಭೆಯ ಬಾಗಿಲನ್ನು ತನಗೆ ಮುಚ್ಚಿಬಿಟ್ಟ ಅವರ ಹೇಳಿಕೆಯು ಯಾವ ನಿಷ್ಪಕ್ಷಪಾತೀ ಅಧಿಕಾರಿಯ ಹೃದಯವನ್ನೂ ಕದಲಿಸದಿರಲಿಕ್ಕಿಲ್ಲ. ಮಹಾತ್ಮಾಜಿಯವರ ಕರೆ ಕೇಳಿದ ಕೂಡಲೇ ಅವರು ಇಂದೂ ಶಾಸನ ಸಭೆಯ ಅಧ್ಯಕ್ಷರಾಗಿಯೇ ಬಂಧನವನ್ನು ಬಯಸಿದರು. ವೆಲ್ಲೂರು ಸೆರೆಮನೆಯು ಇಂದು ಶಾಸನ ಸಭಾಧ್ಯಕ್ಷರನ್ನು ಪ್ರಧಾನ ಮಂತ್ರಿಗಳನ್ನು ಮಂತ್ರಿಗಳನ್ನು ಶಾಸನ ಸಭಾ ಸದಸ್ಯರನ್ನು ಸತ್ಕಾರಮಾಡುವ ಅಪೂರ್ವ ಭಾಗ್ಯವನ್ನು ಪಡೆದಿದೆ! ಸೆರೆಮನೆಯಲ್ಲಿಯೇ ಸಾಂಬಮೂರ್ತಿ ಶಾಸನ ಸಭೆಯೊಂದನ್ನು ಕೂಡಿಸಬಹುದಲ್ಲವೆ!

K. K. Rai.

NOTICE

In the Court of the District Munsif of Mangalore

S. C. No. 742/1940.

Between:—

K. Venkatesha Baliga *Plaintiff*

and

Damodar Achari... *Defendant*

To Defendant Damodar Achari Merchant at Kinnigolli Mangalore Taluk.

Take notice that the above named plaintiff has filed the above suit for recovery of Rs. 44–3–4 and interest and costs of suit being the amount due to him on account of dealings carried on by you with him and the same is posted to 6–1–1941 at 10-30 A. M. for final disposal. You are hereby summoned to appear in the above court on the said date in person or by a pleader failing which the said suit will be heard and decided in your absence.

(By order of court)

U. A. MALLYA,

Vakil for Plaintiff.

Mangalore, Date 14–12–1940

★ ಸಿನೆಮಾ ಪುಟ ★

ನಾಸೀಮಳೂ ಹೊಸ ಕಂಪೆನಿ ಆರಂಭ ಮಾಡುವಳೆ?

ಸೋದರಿ ನಟಿ ಲೀಲಾ ಚಿಟ್ನಿಸಳು ತನ್ನದೇ ಆದ ಚಲಚ್ಚಿತ್ರ ಕಂಪೆನಿಯೊಂದನ್ನು ಪ್ರಾರಂಭಿಸಿದ ಕಾರಣ, ಉತ್ಸಾಹಗೊಂಡ ನಾಸೀಮಳೂ ಈಗ ತನ್ನ ಸ್ವಂತ ಕಂಪೆನಿಯೊಂದನ್ನು ಪ್ರಾರಂಭಿಸುವಳೆಂದು ಬೊಂಬಾಯಿ ಮಿರರ್ ಪತ್ರಿಕೆಯ ಸುದ್ದಿಗಾರನು ಅಭಿಪ್ರಾಯಪಡುತ್ತಾನೆ.

ಮರಗಳೆಡೆಯಿಂದಲೇ ಪ್ರೇಮ ಮಾಡಬೇಕೆ?

ಭಾರತೀಯ ಚಲಚಿತ್ರಗಳ ಕುರಿತು ಕೆಲವು ಟೀಕೆಗಳು

ಲಾಹೋರಿನ ಸ್ಕ್ರೀನ್ ವರ್ಲ್ಡ್ ಎಂಬ ಪತ್ರಿಕೆಯಲ್ಲಿ ಶ್ರೀ ಎಚ್ ಎಲ್ ಪಕ್ಕಿರ್ ಎಂಬುವರು ಒಂದು ಟೀಕಾತ್ಮಕ ಲೇಖನ ಬರೆಯುತ್ತ, ಇಂದಿನ ಭಾರತೀಯ ಚಲಚ್ಚಿತ್ರಗಳ ಕೆಲವು ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ ಹಲವು ಚಿತ್ರಗಳ ಅನುಕರಣೆಯೊಂದಲ್ಲದೆ ಬೇರೆ ಇಲ್ಲದೆ ಅವುಗಳಲ್ಲಿ ಭಿನ್ನತೆ ನೂತನತೆಗಳ ಇಲ್ಲವೇ ಇಲ್ಲವೆಂದು ಆ ಲೇಖನದಲ್ಲಿ ಅವರು ಬರೆದಿರುವರು

ಅವರ ಲೇಖನದ ಸಾರಾಂಶವು ಹೀಗಿದೆ —

"ಚಲಚ್ಚಿತ್ರ ನಿರ್ಮಾಪಕರು ಕುರಿ ಮಂದೆಗಳಂತೆ ವರ್ತಿಸುತ್ತಾರೆ ಯಾರು ಮೊದಲು ಒಂದನ್ನು ಆರಂಭಿಸಿದನೋ ಉಳಿದವರೆಲ್ಲರೂ ಅವನನ್ನೇ ಅನುಕರಿಸುತ್ತಾರೆ. ಅನುಕರಿಸುವಾಗ ಒಂದು ಸು ವಿಚಾರ ಮಾಡುವುದಿಲ್ಲ, ಹಿಂದು ಮುಂದು ನೋಡುವುದೂ ಇಲ್ಲ ಉದಾಹರಣೆಗೆ ನಿರ್ದೇಶಕ ದೇವಕಿ ಬೋಸರು ತನ್ನ ಚಿತ್ರದಲ್ಲಿ ಒಬ್ಬ ಕುಂಟ ಭಿಕ್ಷುಕನನ್ನು ತಂದರು; ಅದು ಬಹಳ ಜಯವುದವಾಗಿಯೇ, ಇತ್ತು ಅದರ ಪರಿಣಾಮವೆಂದರೆ ಮುಂದೆ ಹಲವು ಚಿತ್ರಗಳಲ್ಲಿ ಒಳ್ಳೆಯ ಕಂಠವುಳ್ಳ ಕೆ. ಸಿ. ಡೇಯನ್ನು ಅನುಕರಿಸಬಲ್ಲ ಹಾಡುಗಾರನೊಬ್ಬ ಕಣ್ಣು ಮುಚ್ಚಿಕೊಂಡು ಹಾಡತೊಡಗಿದನು. ಈ ಅವಸ್ಥೆ ಹಲವು ವರ್ಷಕಾಲ ನಡೆಯುತ್ತಾ ಬಂತು

ಮುಂದೆ ನಿರ್ದೇಶಕ ದೇವಕಿ ಬೋಸರು ತನ್ನ ಪೂರಣ ಭಾಗತ್‌ನಲ್ಲಿ ನಾಯಕ ಕರುಣಾವಸ್ಥೆಯಿಂದ ಪೂರಣ್, ಪೂರಣ್, ಎಂದು ಕೂಗುತ್ತಾ ಓಡುವ ದೃಶ್ಯ ತೋರಿಸಿದರು. ಆ ಬಳಿಕ ಎಲ್ಲಾ ಚಿತ್ರಗಳ ನಾಯಕಿಯರೂ ಕರುಣಾಮಯಿಯರಾಗಿ ಕೂಗುತ್ತಾ ಕೂಗುತ್ತಾ ಓಡಾಡತೊಡಗಿದರು

ಮೊದಲು ಬೊಂಬಾಯಿ ಟಾಕೀಸಿನವರು ಒಂದು ಚಿತ್ರದಲ್ಲಿ ಪ್ರೇಯಸಿಯ ತೊಡೆಯ ಮೇಲೆ ಮಲಗಿ ಪ್ರೇಮದ ಭಾವವನ್ನು ತೋರುವ ಪ್ರಿಯನು ಪ್ರೇಮ ಸಾಧನವಾದ 'ನೀನೆಂದೂ ಹೇಳುವ' ಹಾಡನ್ನು ಹಾಡುವ ದೃಶ್ಯ ತೋರಿಸಿದರ ಮತ್ತೆ ಹಲವು ಚಿತ್ರಗಳಲ್ಲಿ ನಾಯಕರು ನಾಯಕಿಯರ ತೊಡೆ ಮೇಲೆ ಹಾಡ ಹೆಚ್ಚಿತು

ಪ್ರತಿಯೊಬ್ಬ ನಿರ್ಮಾಪಕನೂ ಸ್ವಂತಿಕೆಯನ್ನೇ ಅನುಕರಿಸುವುದು ಪ್ರತಿಯೊಬ್ಬ ನಾಯಕಿಯೂ, ಕಾಪಿ ಬಾಲಳನ್ನೇ ಅನುಕರಿಸುವುದು. ಇಂದಿನ ಬಹುತೇಕವಾಗಿ ಹೊರಡುವ ನಟನೆ, ಹಾಡು, ಮಾತು ಎಲ್ಲವೂ ಒಂದೇ ತರದವುಗಳೇ, ಅನುಕರಣೆಯಲ್ಲದೆ ಹೊಸತಿಲ್ಲ, ಸ್ವತಂತ್ರ ರೀತಿಯಿಲ್ಲ

ನಾಯಕ ನಾಯಕಿಯರ ಎಲ್ಲಾ ಪ್ರೇಮ ಸಂದರ್ಶನವು ಎಲ್ಲಾ ಸಿನೆಮಗಳಲ್ಲಿಯೂ ಒಂದು ಮರದ ಬಳಿಯಲ್ಲಿಯೇ ಅದರೆಡೆಯಲ್ಲಿ ನಿಂತೇ ಅವರು ಪ್ರೇಮ ಸಂಗೀತಗಳನ್ನು ಹಾಡಬೇಕು ಬೇರೆ ಬೇರೆ 'ಪೋಸ್' ಗಳಲ್ಲಿ ಅವರು ತಮ್ಮ ಪ್ರೇಮದ ವಿವಿಧ ಭಾವಗಳನ್ನು ನಟಿಸಿ ತೋರಿಸಬೇಕು. ಮತ್ತೆ ಹೂದೋಟದಲ್ಲಿ ಅಲೆದಾಡಬೇಕು. ಪುಷ್ಪಗಳನ್ನು ಸ್ಪರ್ಶಿಸಿ ಮುದ್ದಿಡಬೇಕು ಈ ವ್ಯಾಪಾರವನ್ನು ನೋಡಿನೋಡಿ ಚಲಚ್ಚಿತ್ರ ದರ್ಶಕರಿಗೆ ಇಂದು ಬೇಸರ ಬಂದಿದೆ.

ಇಂತಹವುಗಳಲ್ಲಿ ಭಿನ್ನತೆಯು ಅವಶ್ಯವಾಗಿ ಬೇಕೇ ಬೇಕು. ಪ್ರೇಮವನ್ನು ಮರದೆಡೆಗಳಲ್ಲಿಯೇ ಮಾತ್ರವಲ್ಲ, ಪರ್ವತ ಬಳಿಯಲ್ಲಿಯೂ ಕಲ್ಲು ಬಂಡೆಗಳ ಮೇಲೆ ಕುಳಿತೂ, ಮೋಟರು ಸೈಕಲು ವಾಹನಗಳ, ಯಾತ್ರೆಯಲ್ಲಿಯೂ ಕಾಫಿ ಹೋಟೆಲುಗಳಲ್ಲಿಯೂ ನೀರಾಟದಲ್ಲಿಯೂ ಅಂಗಡಿಗಳಲ್ಲಿಯೂ ಎಲ್ಲೆಲ್ಲಿಯೂ ಮಾಡಬಹುದು. ಇಂದಿನ ಹಲವು ಚಿತ್ರಗಳು, ಅವುಗಳ ನಿರ್ದೇಶಕ ನಿರ್ಮಾಪಕರಿಗೆ ಒಂದು ಚಿಕ್ಕಾಸಿನಷ್ಟು ಸ್ವತಂತ್ರ ಶೈಲಿಯ ತಿಳುವಳಿಕೆಯಿಲ್ಲವೆಂಬುದನ್ನೇ ಸ್ಪಷ್ಟವಾಗಿ ತಿಳಿಸುತ್ತವೆ

ನಾವು ಪಾಶ್ಚಾತ್ಯರನ್ನೇ ಇಂದು ನಮ್ಮ ಜೀವನದಲ್ಲಿ ಸದಾ ಅನುಕರಿಸುತ್ತೇವೆ ಟೊಮೆಟೊ ಚಾಕಲೇಟುಗಳಂತೆ ಪ್ರೇಮ ಜೀವನವೂ ನಮ್ಮದು ಅವರದೇ ಮಾದರಿಯಾಗಿದೆ ನಮ್ಮ ಸಂಸ್ಕೃತಿಯಲ್ಲಿ— ಹಿಂದೂ ಸಂಸ್ಕೃತಿಯಲ್ಲಿ, ಮುಸ್ಲಿಂ ಸಂಸ್ಕೃತಿಯಲ್ಲಿ ಅಥವಾ ಇನ್ನಾವುದೇ ಭಾರತೀಯ ಧರ್ಮಸಂಸ್ಕೃತಿಯಲ್ಲಿ ಪ್ರೇಮ ಜೀವನದ ನೆಲೆಯೇನೆಂಬುದನ್ನು ನಾವು ತಿಳಿದು ಮೈಗೂಡಿಸುವುದಿಲ್ಲ, ಚಿತ್ರಿಸಿ ತೋರಿಸುವುದಿಲ್ಲ. ಹಾಗಾಗಿ ಇಂದು ಭಾರತೀಯ ಚಲಚ್ಚಿತ್ರ ಪ್ರೇಕ್ಷಕರು ನಿಜವಾಗಿಯೂ ಬೇಸರಪಡುವಂತಾಗಿದೆ.

ಲೀಲಾ ಚಿಟ್ನೀಸಳ "ಕಾಂಚನ್"

ಲೀಲಾ ಚಿಟ್ನೀಸಳು ಪ್ರಾರಂಭಿಸಿದ ಚಿತ್ರ ಪ್ರೊಡಕ್ಷನಿನ ಮೊದಲನೆಯ ಚಿತ್ರ 'ಕಾಂಚನ್' ಇಂದು ೩೫,೦೦೦ ಫೀಟಿಗಿಂತ ಹೆಚ್ಚು ಈ ಒಂದ್ಮೂರಿಂಗಳೊಳಗೆಯೆ ತಯಾರಾಗಿದೆಯೆಂದು ತಿಳಿದು ಬರುತ್ತದೆ. ರಣಜಿತ್ ಸ್ಟುಡಿಯೋದಲ್ಲಿ ಈ ಚಿತ್ರವು ತಯಾರಾಗುತ್ತಿದೆ. ಶ್ರೀ ಚಂದೂಲಾಲ್ ಶಹಾರೇ ಇದರ ಕಾರ್ಯಭಾಗದಲ್ಲಿರುವರು ಲೀಲಾ ಚಿಟ್ನಿಸಳ ಪ್ರಧಾನ ನಾಯಿಕಾ ಪಾತ್ರ ವಹಿಸುತ್ತಾಳೆ ಅವಳು ಇನ್ನು ನಾಯಕ ಪಾತ್ರದಲಿ ಶಿವರಾವ್ ವಾಸಿಷ್ಠ, ಮುಬಾರಕ್, ನಾಗೇಂದ್ರ ಮೊದಲಾದ ಇತರ ಪ್ರಸಿದ್ಧ ನಟರೂ ಅಭಿನಯಿಸುವರು

ದುರ್ಗಾಖೋಟೆಗೆ ಬೇಕಾದ ಪಾತ್ರವೇ ದೊರೆಯಿತು

'ಚರಣೋಕಿ ದಾಸಿ'ಯಲ್ಲಿ

ದುರ್ಗಾಖೋಟೆ ಒಮ್ಮೆ 'ಪತಿಗೆ ಮನೆಯ ಒದಗಿಯಾಗಿ ಹತ್ತು ಮಂದಿಗೆ ಹೇಳುವ, ಅಧಿಕಾರವುಳ್ಳ ಪಾತ್ರನಟನೆಯಲ್ಲಿಯೇ ಇಷ್ಟ' ಎಂದು ಹೇಳಿದ್ದಳು. ಇಂದಿನ ಆಕೆಯ ಹೊಸಚಿತ್ರ 'ಚರಣೋಕಿ ದಾಸಿ'ಯಲ್ಲಿ ಅದೇ ತರದ ಪಾತ್ರವು ಕೊಡಲಾಗಿದೆ ಹಾಗಾದರೆ ದುರ್ಗಾಖೋಟೆಯ ಈ ಅಭಿನಯದ ಯಶಸ್ವಿತೆಯ ಕುರಿತು ಬೇರೆ ಪ್ರಚಾರ ಬೇಕಾಗಿಲ್ಲ. ವನಮಾಲಳೂ ಇದರಲ್ಲಿ ಅಭಿನಯಿಸುವಳೆಂದು ತಿಳಿದಿದೆ. ಅತ್ರಿ ಪಿಕ್ಚರ್ಸಿನವರು ಇದನ್ನು ತಯಾರಿಸುವರು.

ನಾವೆಲ್ಲರೂ ಅದನ್ನು ಉಪಯೋಗಿಸುತಿದ್ದೇವೆ!

ಅಜ್ಜಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರ (Cuticura Talcum Powder) ಅಗತ್ಯವಾಗಿದೆ ಕುಟಿಕೂರಾ ಟಾಲ್ಕಮು (Cuticura Talcum) ಚರ್ಮವನ್ನು ತಂಪಾಗಿರಿಸಿ ಹೊಸ ಆಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯ ಗುಣವೇ ಕಾರಣವಾಗಿರುತ್ತದೆ ಮೈಗೆ ತುರಿಕಜ್ಜಿಗಳಾದರೆ ಕೂಡಲೇ ಗುಣಪಡಿಸುತ್ತದೆ ... ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡು ಡಾಕ್ಟರರು ಇದನ್ನೇ ಶಿಫಾರಸ ಮಾಡುತ್ತಾರೆ ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಉಳಿಯುವುದು

ನಿಮ್ಮ ದಿನ ನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ ಇದೇ ಒಂದು ಟಿನ್ನನ್ನು ಕೊಂಡುಕೊಳ್ಳಿ ... ಕುಟಿಕೂರಾ ಟಾಲ್ಕಮು (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

ಹಿಂದೂ-ಮುಸ್ಲಿಂ [illegible] ಐಕ್ಯದ ಮೊದಲ ಹೆಜ್ಜೆ

[illegible] ಸಹಿಷ್ಣುತೆ ಇರಬೇಕು

ಮುಸಲ್ಮಾನ ಸುಶಿಕ್ಷಿತರ ಲೇಖನ

ಎರಡನೆಯ ಗಾಂಧಿಯೆನಿಸಿದ ಗಡಿನಾಡಿನ ಅಬ್ದುಲ್‌ಗಫರ್‌ಖಾನ್

ಹಿಂದೂ ಮುಸಲ್ಮಾನರೊಳಗೆ ಈಗೀಗ ಪರಸ್ಪರ ಸೌಹಾರ್ದ ಮತ್ತು ಸಹನಾಶಕ್ತಿಯು ಕಡಿಮೆಯಾಗುತ್ತಿರುವುದರಿಂದಲೇ ಈ ಎರಡು ಜಾತಿಗಳೊಳಗಿನ ಒಡಕು ಬೆಳೆಯುತ್ತಾ ಬರುತ್ತಿದೆ. ಇದು ಪರಸ್ಪರ ತಪ್ಪು ಅಭಿಪ್ರಾಯಗಳು ಹರಡಲಿಕ್ಕೂ ಪರಸ್ಪರ ವಿರೋಧ ಕಾರ್ಯಗಳನ್ನು ಮಾಡಲಿಕ್ಕೂ ಕಾರಣವಾಗಿದೆ ಎಂದು ಸೋಶಿಯಲ್ ವೆಲ್‌ಫೇರ್ ಪತ್ರಿಕೆಯಲ್ಲಿ ಮುಹಮ್ಮದಾಲಿ ಅಲ್-ಹಜ್ ಸಾಲ್‌ಮೊನ್ ಎಂಬ ಮುಸಲ್ಮಾನ ಸುಶಿಕ್ಷಿತರು ಬರೆಯುತ್ತಾರೆ.

ಅವರು ಹೀಗೆಂದು ಬರೆಯುತ್ತಾರೆ:— ಆಧುನಿಕ ಪಾಶ್ಚಾತ್ಯ ನಾಗರಿಕತೆಯ ಅಂಧಾನುಸರಣೆ ಮಾಡಿದ ದುಷ್ಪರಿಣಾಮವಾಗಿ ಈ ಎರಡು ಜಾತಿಗಳೊಳಗೆ ಉಂಟಾಗಿರುವ ಸಾಂಪತ್ತಿಕ ವೈಷಮ್ಯವು ಅವುಗಳ ಪರಸ್ಪರ ಹೋರಾಟಕ್ಕೆ ಎಡೆಮಾಡಿಕೊಟ್ಟಿತು. ಆದ್ದರಿಂದ ಪಾಕಿಸ್ತಾನದ ನಿರ್ಮಾಣ ಮಾಡದೆಯೇ ಹಿಂದು ಮುಸಲ್ಮಾನರೊಳಗಿನ ಬಿಕ್ಕಟ್ಟನ್ನು ಪರಿಹರಿಸುವುದು ಸುಲಭವಿದೆ.

ಮುಗಲರ ಕಾಲದಲ್ಲಿ

'ಹಿಂದುಸ್ತಾನವನ್ನು ಅಕ್ಬರನಂಥ ಮುಸಲ್ಮಾನ ರಾಜರು ಆಳುತ್ತಿದ್ದಾಗ ಯಾರೂ ಪಾಕಿಸ್ತಾನದ ಶಬ್ದವನ್ನು ಬಾಯಿಯಿಂದ ಉಚ್ಚರಿಸಿ ಆಡಿರಲಿಲ್ಲ. ಮುಗಲರ ರಾಜದರ್ಬಾರಿನಲ್ಲಿ ಮುಸಲ್ಮಾನ ಸರದಾರರಂತೆ ಅನೇಕ ಮಂದಿ ಹಿಂದೂ ಪ್ರಸಿದ್ಧ ಸರದಾರರೂ [illegible] ಸ್ನೇಹದಿಂದ ಇದ್ದರು. [illegible] ಹಿಂದುಗಳ [illegible] ಯೂ ಇದ್ದಿಲ್ಲ. ಆ ಸಮಯದಲ್ಲಿ ಹಿಂದೂ ಮುಸಲ್ಮಾನರು ಪರಸ್ಪರ ಸ್ನೇಹ ಮತ್ತು ಸೌಹಾರ್ದದಿಂದ ಕಾಣುತ್ತಿದ್ದರು. ಆದುದರಿಂದಲೇ ಅಕ್ಬರನ ಕಾಲದಲ್ಲಿ ರಾಜಾ ತೋಡರಮಲ, ಬೀರಬಲ ಮೊದಲಾದವರು ತಮ್ಮ ನೀತಿಯನ್ನು ಅನುಸರಿಸಿ ಕಾರ್ಯ ಸಾಧಿಸುವುದು ಸಾಧ್ಯವಾಯಿತು. ಭಾರತೀಯ ಇತಿಹಾಸದಲ್ಲಿ ಇವರಂತೆ ಮುಗಲರ ದರ್ಬಾರದಲ್ಲಿ ರಾರಾಜಿಸುತ್ತಿದ್ದ ಇನ್ನೂ ಅನೇಕರ ಹೆಸರುಗಳನ್ನು ನೋಡಬಹುದು.

ಈಚೆಗೆ, ನವೀನ ಕಾಲದ ಪ್ರವೇಶವಾದ ಬಳಿಕವೇ ಒಕ್ಕಟ್ಟಾಗಿ, ಒಂದಾಗಿದ್ದ ಹಿಂದೂ ಮುಸಲ್ಮಾನರು ಬೇರೆ ಬೇರೆಯಾಗಿ ಆಚಾರ ಬೇರೆ ಮಾಡಿಕೊಳ್ಳುವ ಚಿಹ್ನೆಗಳು ತೋರಿಬರುತ್ತವೆ. ಹಿಂದು ಮುಸಲ್ಮಾನ ಸಂಬಂಧದಲ್ಲಿ ಎಲ್ಲಿಯೋ ಏನೋ ಕೊಳೆಯತೊಡಗಿದೆ ಎಂಬುದು ಇದರಿಂದ ತಿಳಿಯುತ್ತದೆ. ಈ ಎರಡು ಜಾತಿಗಳು ಹಲವು ಶತಮಾನಗಳಿಂದ ಈ ದೇಶದಲ್ಲಿ ಸ್ನೇಹದಿಂದ ನೆಲಸಿವೆ.

ಒಡಕು ನಿವಾರಣೆ ಉಪಾಯ

'ಈ ಒಡಕನ್ನು ನಿವಾರಿಸಲಿಕ್ಕೆ ಪಾಕಿಸ್ತಾನವೊಂದೇ ಉಪಾಯವಲ್ಲ. ಅದಕ್ಕಿಂತಲೂ ಉತ್ತಮ ಮತ್ತು ಸುಲಭವಾದ ಬೇರೆ ಅನೇಕ ಉಪಾಯಗಳಿವೆ. ಅವುಗಳಲ್ಲಿ ಮುಖ್ಯವಲ್ಲದಿದ್ದರೂ, ಒಂದು ಉಪಾಯ ಯಾವುದೆಂದರೆ— ಹಿಂದು ಮುಸಲ್ಮಾನರು ಒಬ್ಬರೊಬ್ಬರ ಮತಧರ್ಮ ಸಂಪ್ರದಾಯಗಳನ್ನು ಪೂಜ್ಯತೆ ಕೊಟ್ಟು ಗೌರವಿಸುವದಾಗಿದೆ ಮತ್ತು ಪರಸ್ಪರ ಸಹಾಯ ಸಹಕಾರ ಕೊಟ್ಟು ಕೂಡಿ ನಡೆಯುವದಾಗಿದೆ. ಆದ್ದರಿಂದ ಈ ಎರಡು ಜಾತಿಗಳೊಳಗಿನ ಮುಖಂಡರು ಒಬ್ಬರೊಬ್ಬರ ಧರ್ಮತತ್ತ್ವಗಳನ್ನು ತಿಳಕೊಳ್ಳಲಿಕ್ಕೆ ಪ್ರಯತ್ನಿಸಬೇಕು. ಹಿಂದುಗಳು ಮುಸಲ್ಮಾನ ಧರ್ಮಸ್ಥಾಪಕರಾದ ಮಹಮ್ಮದ ಪೈಗಂಬರರ ಜೀವನೇತಿಹಾಸ ಮತ್ತು ಮುಸಲ್ಮಾನ ಧರ್ಮತತ್ತ್ವಗಳನ್ನು ಅರಿತುಕೊಳ್ಳಬೇಕು. ಅದರಂತೆ ಮುಸಲ್ಮಾನರು ಕೂಡ ಗೀತೆ, ವೇದ ಮೊದಲಾದ ಹಿಂದುಗಳ ಪವಿತ್ರ ಗ್ರಂಥಗಳ ಅಧ್ಯಯನ ಮಾಡಬೇಕು ಮತ್ತು ಶ್ರೀ ಕೃಷ್ಣನಂಥ ಹಿಂದೂ ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಿ ಅವರ ಜೀವನ ತತ್ವಗಳನ್ನು ಗ್ರಹಿಸಬೇಕು.'

ಕಂಠದ ಬೇನೆ ಖಂಡಿತ ಗುಣ

[illegible] ನೀವು ಕಂಗಾಲಾಗಿದ್ದೀರಾ? [illegible] ದಿನವೂ ಸಂಕಟಪಡುವಂತೆ ಆಗುವ ರೋಗದಿಂದ ಖಂಡಿತವಾಗಿ ಪೆಪ್ಸನ್ನು ತೆಗೆದುಕೊಳ್ಳಿರಿ. ಇದು ವಿಷಹಾರಿಯಾದ ಶ್ವಾಸ ಯೋಗ್ಯವಾದ ಮಾತ್ರೆಗಳು. ಎಲ್ಲಾ ಬಗೆಯ ಕಂಠದ ಉಪದ್ರವಗಳನ್ನು ಬೇಗನೇ ಗುಣಪಡಿಸುವುದು.

ಬಾಯಲ್ಲಿ ಹಾಕಿದ ಕೂಡಲೇ ಅದು ಕರಗುವುದು. ಆದರಿಂದ ಒಳ್ಳೆಯ ಮನೋಹರವಾದ ಔಷಧಿ ಗುಣವುಳ್ಳ ರಸವು ಹೊರಟು, ನಿಮ್ಮ ಶ್ವಾಸಕೋಶವನ್ನು ಸೇರುವುದು. ಪೆಪ್ಸು ಹೀಗೆ ನೋವನ್ನು ಕಡಿಮೆಮಾಡಿ, ನೋವಿನಿಂದ ಬೇನೆಗೊಂಡ ನಿಮ್ಮ ಕಂಠನಾಳಕ್ಕೆ ಶಕ್ತಿಯನ್ನು ಕೊಡುತ್ತದೆ. ಮಾತ್ರವಲ್ಲದೆ ರೋಗಾಣುಗಳನ್ನೂ ನಾಶಗೊಳಿಸುತ್ತದೆ. ಪೆಪ್ಸನ್ನು ತೆಗೆದುಕೊಳ್ಳಲು ಬಹಳ ಆನಂದ ಗಾರ್ಗ್ಲ್‌ಗಳಿಗಿಂತ ಹೆಚ್ಚು ಬಾಳಿಕೆಯುಳ್ಳದ್ದೂ ಆಗಿದೆ.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ರೂ. 1ಕ್ಕೆ ದೊರಕುವುದು.
ಏಜಂಟ್ಸ್: ಮೆಸರ್ಸ್ ದಾಧಾ ಮತ್ತು ಕಂಪೆನಿ, ಜಾರ್ಜ್‌ಟೌನ್ ಮದ್ರಾಸು

ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಕವಾದ ಶ್ವಾಸನೀಯ ಗುಳಿಗೆಗಳು

NACET BLADES



ನೇಸೆಟ್ ಬ್ಲೇಡುಗಳು

ತೃಪ್ತಿಕರವಾಗಿ ಮುಖಕ್ಷೌರವಾಗಬೇಕಾದರೆ, ಹರಿತ, ಸುಖ ಮತ್ತು ನಯ ಇವು ಮೂರು ಗುಣಗಳು ಇರಬೇಕು. ನೇಸೆಟ್ ಬ್ಲೇಡುಗಳು ಬಹಳ ಆಶ್ಚರ್ಯಕರವಾಗುವಷ್ಟು ಕಡಿಮೆ ಕ್ರಯದಲ್ಲಿ ಈ ಮೂರು ಗುಣಗಳನ್ನೂ ಕೊಡುತ್ತವೆ. ಪ್ರತಿಯೊಂದು ಬ್ಲೇಡಿನಿಂದ ಎಷ್ಟು ಸಲ ಕ್ಷೌರಮಾಡಬಹುದಾಗಿದೆಯೆಂಬುದನ್ನು ನೋಡಿ ನೀವು ಆಶ್ಚರ್ಯಪಡಲಿರುವಿರಿ.

I.N.B.2.

ಮಾರಾಟಕ್ಕೆ ಸಿದ್ಧವಾಗಿದೆ

1941ನೆ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್ ...	೦—೫—೦
(ಪೋಕೆಟ್ ಇದ್ದದಕ್ಕೆ) ...	೦—೬—೦
ದೊಡ್ಡ ಸೈಜ್ ...	೦—೯—೦
(ಪೋಕೆಟ್ ಇದ್ದದಕ್ಕೆ) ...	೦—೧೧—೦

ಶಾರದಾ ಛಾಪಖಾನೆ, ಮಂಗಳೂರು.

ಪುಸ್ತಕಾವಲೋಕನ:

ಸ್ವಾಮೀ ವಿವೇಕಾನಂದರ ಭಕ್ತಿ ಯೋಗ*

ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯಕೋಟಿಯಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು. ಭಾರತದ ಧಾರ್ಮಿಕ ಸಾಂಸ್ಕೃತಿಕ ಜ್ಯೋತಿಪ್ರಕಾಶದನ್ನು ಪಾಶ್ಚಾತ್ಯ ಪ್ರಪಂಚದಲ್ಲಿಯೂ ಬೆಳಗಿಸಿದ ವೀರ ಸನ್ಯಾಸಿ ಅವರು. ಅವರ ಮಾತುಗಳು ಧಾರ್ಮಿಕ ಸಾಂಸ್ಕೃತಿಕ ಸ್ಫೂರ್ತಿ ಚೈತನ್ಯವನ್ನು ಕೊಡುವ ಅಮರಗೀತೆಗಳು. ವಿವೇಕಾನಂದರ ಧಾರ್ಮಿಕ ಗ್ರಂಥಗಳು ಕನ್ನಡದಲ್ಲಿ ಇದು ಮೊದಲು ಒಂದೋ ಎರಡೋ ಬಂದಿವೆ. ಅವರ ಪತ್ರಗಳೂ ಕೆಲ ಮಾತ್ರ ಅಲ್ಲಿ ಇಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಪ್ರಗತಿಹೊಂದಿದ ಇತರ ಪ್ರಾಂತಿಕ ಭಾಷೆಗಳಲ್ಲಿ ವಿಪುಲವಾಗಿರುವಂತೆ ಕನ್ನಡದಲ್ಲಿ ಇಲ್ಲ. ಜನತೆಯಲ್ಲಿ ಸಾಕಷ್ಟು ಪ್ರಚಾರವೂ ಆಗಿಲ್ಲ.

ಈ ಮಾರ್ಗದಲ್ಲಿ ಯತ್ನಿಸಲು ಮನ ಮಾಡಿಕೊಂಡು, ಮನೋಹರ ಗ್ರಂಥ ಭಂಡಾರದ ಶ್ರೀ ಕುಲಕರ್ಣಿಯವರು ಈ ಗ್ರಂಥವನ್ನು ಮೊದಲನೆಯದಾಗಿ ಈಗ ಪ್ರಕಾಶಪಡಿಸಿದ್ದಾರೆ. ಇದನ್ನು ಕನ್ನಡಿಸಿದವರು ಶ್ರೀ. ಗೋರೂರು ಅಯ್ಯಂಗಾರರೆಂದರೆ ಅನುವಾದದ ಸ್ವಾರಸ್ಯ ಬೇರೆ ವಿವರಿಸಬೇಕಾದುದಿಲ್ಲ. ಸ್ವಾಮಿ ವಿವೇಕಾನಂದರಂತಹವರ ಕೃತಿಯನ್ನು ಅನುವಾದಿಸುವವರಿಗೆ ಶ್ರೀ. ರಾಮಕೃಷ್ಣ ಮಠದ ಸಮೀಪ ಪರಿಚಯ ಸಂಬಂಧ ಇರಬೇಕಾದುದು ಅವಶ್ಯವೇ ಆಗಿದೆ. ಶ್ರೀ. ಗೋರೂರು ರಾಮಸ್ವಾಮಿ ಅಯ್ಯಂಗಾರರು ಅಂತಹ ಪರಿಚಯದಿಂದಲೇ ಈ ಗ್ರಂಥವನ್ನು ಕನ್ನಡಿಸಲು ಕೈಹಚ್ಚಿದವರೆನ್ನುವುದೂ ಗಮನಿಸತಕ್ಕ ವಿಷಯವಾಗಿದೆ.

ಭಕ್ತಿಯ ಲಕ್ಷಣ, ಈಶ್ವರ ವೇದಾಂತ ಭಕ್ತಿಯೋಗದ ಗುರಿ, ಗುರುವಿನ ಅವಶ್ಯಕತೆ, ಗುರುಶಿಷ್ಯರ ಯೋಗ್ಯತೆಗಳು, ಅವತಾರ ಪುರುಷ ಗುರುಗಳು, ಮಂತ್ರ—ಓಂ ಶಬ್ದ ಜ್ಞಾನ, ಪ್ರತಿಮಾರಾಧನೆ, ಇಷ್ಟ ನಿಷ್ಠೆ ರೀತಿ ಮತ್ತು ಸಾಧನೆ. ಸಾಧಕನ ತ್ಯಾಗ, ಭಕ್ತನಲ್ಲುಂಟಾಗುವ ತ್ಯಾಗ, ಭಕ್ತಿಯ ಸ್ವಾಭಾವಿಕತೆ ಮತ್ತು ರಹಸ್ಯ, ಭಕ್ತಿಯು ಪ್ರಕಟವಾಗುವ ರೀತಿಗಳು, ವಿಶ್ವಪ್ರೇಮ ಮತ್ತು ತ್ಯಾಗ, ಪರಜ್ಞಾನ ಮತ್ತು ಪರಭಕ್ತಿ, ಪ್ರೇಮ ತ್ರಿಕೋಣ; ಪ್ರೇಮ ಸ್ವರೂಪಿಯಾದ ದೇವರು, ಪ್ರೇಮಾನ್ವಯಗಳಾದ ವ್ಯಾವಹಾರಿಕ ಪ್ರಕಾರಗಳು, ಹೀಗೆ ಬೇರೆ ಬೇರೆ ಪ್ರಕರಣಗಳಲ್ಲಿ ಭಕ್ತಿಯೋಗವು ಪ್ರವೃತವಾಗಿದೆ. ಭಕ್ತಿಯೋಗದ ಆಳ ಅರ್ಥವನ್ನು ವಿವೇಕಾನಂದರು ತಮ್ಮ ಅನುಭವ ಜ್ಞಾನಧೀಶಕ್ತಿಗಳಿಂದ ಹೃದಯಂಗಮವಾಗಿ ವಿಶದೀಕರಿಸಿದ್ದಾರೆ. ವಿವೇಕಾನಂದರ ಬರವಣಿಗೆಯನ್ನು ಯಾವ ಭಾರತೀಯನಿಗೂ ಪರಿಚಯ ಮಾಡಿಕೊಡುವ ಅಗತ್ಯವಿಲ್ಲ.

ಮನೋಹರ ಗ್ರಂಥ ಭಂಡಾರದ ಶ್ರೀ ಕುಲಕರ್ಣಿಯವರು ವಿವೇಕಾನಂದರ ಸಂಪೂರ್ಣ ಕೃತಿಗಳನ್ನು ಪ್ರಕಾಶಪಡಿಸ ಬಯಸಿದ್ದನ್ನು ಇಲ್ಲಿ ಸೂಚಿಸಿದ್ದಾರೆ. ಕನ್ನಡಿಗರು ಇಂತಹ ಉತ್ಸಾಹಿಗಳ—ಸಾಹಸಿಗಳ ಬೆನ್ನು ತಟ್ಟಬೇಕು. ವಿವೇಕಾನಂದರ ಕೃತಿಗಳು ಕನ್ನಡ ಭಾಷಾಮಾತೆಗೆ ಅಮೂಲ್ಯ ಆಭರಣಗಳು. ಮನೋಹರ ಗ್ರಂಥ ಭಂಡಾರದವರ ಈ ಸದಿಚ್ಛೆಯು ಕನ್ನಡಿಗರ ಪ್ರೋತ್ಸಾಹದಿಂದ ಯಶಸ್ವಿಯಾಗಿ ಕೈಗೂಡಲಿ ಎಂದು ನಾವು ಬಯಸುತ್ತೇವೆ.

—ಕಯ್ಯಾರ

*ಕನ್ನಡಿಸಿದವರು: ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರಕಾಶಕರು: ಮನೋಹರ ಗ್ರಂಥ ಭಂಡಾರ. ಧಾರವಾಡ. ಕ್ರಾನ್‌೧/೮ ಆಕಾರದ ೯೮ ಪುಟಗಳು. ಬೆಲೆ ಹತ್ತು ಅಣೆ.

ಸುಕ್ರ ಸಂಜೀವನ

ಭಾರತ ದೇಶದಂಥ ಪ್ರಾಚೀನ ಋಷಿಗಳ ನಿಯಮಗಳನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜರಾಗಿದ್ದಾರೆ. ಪ್ರಾಚೀನ ಸಂಸ್ಕೃತಿಯ ತಿಳುವಳಿಕೆ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಆದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ "ಸುಕ್ರ ಸಂಜೀವನ"ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

½ ಸೇರಿಗೆ ರೂ. 4



ಅಧ್ಯಕ್ಷ ಡಾ. [illegible]

ಆಯುರ್ವೇದ ಶಾಸ್ತ್ರಿ

[illegible]

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಡಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A. ಬ್ರಾಡ್ವೆ, ಮದ್ರಾಸು.

[illegible]

ಮಂಗಳೂರು ಏಜಂಟ್ಸ್: ಪಾ ಕಂಪೆನಿ, ಹಂಪನಕಟ್ಟಾ ಮಂಗಳೂರು

ಆಹ್ವಾನ

ಧನವು ಹೇರಳವಾಗಿ ಕೂಡಿಕೆಯಾಗಿದೆ.

ಅದು ಕಾರಣ ದವಸಧಾನ್ಯಗಳು (ಕೃಷಿ. ಉತ್ಪತ್ತಿ) ಸರಕಾರೀ ಪತ್ರಗಳು ವಿಮಾಪಾಲಿಸಿ ಮೊದಲಾದುವುಗಳ ಜವಾಬ್ದಾರಿಯ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲಗಳು ಸಿಗುವವು. ಈ ಸೌಕರ್ಯಗಳ ಕಡೆಗೆ ಗಮನವಿತ್ತು ಸಂದರ್ಭದ ಸದುಪಯೋಗ ಮಾಡಿಕೊಳ್ಳಿ

ಕೋಟಿದ್ರವ್ಯದ ವಹಿವಾಟು. ಸ್ಥಾಪಿತ:—೧೯೦೬

ಕೆನರಾ ಬೇಂಕ್ ಲಿಮಿಟೆಡ್.

CANARA BANK LIMITED.

Wanted—

Agents, Sub-organizers and District organizers to represent the clock insurance policy on salary and commission basis.

Insist upon a policy under clock insurance scheme

1. 20 scholarships of Rs. 4 each awarded in addition to the sum assured without extra charge.
2. Clocks given free.
3. 9 scholarships of Rs. 5 each already awarded.

For terms apply to

K. Balakrishna Shetty

District Inspector

Kurukshetra Provident Insurance Co. Ltd., Mangalore.

Now camping at Padupet, Udipi, S. K.

ವಿಜ್ಞಾನಯುಗ

ಅಮೇರಿಕದ ನೂತನ ಯುದ್ಧಾಸ್ತ್ರಗಳು

ಈ ವರೆಗೆ ಬೇರೆಯಾರೊಬ್ಬನೂ ಕನಸು ಮನಸುಗಳಲ್ಲಿ ಯೂ ಕಂಡು ಕೇಳರಿಯದ ಎರಡು ಬಹು ಭಯಂಕರ ಯುದ್ಧಾಸ್ತ್ರಗಳನ್ನು ಅಮೆರಿಕದ ವಿಲಿಯಂ ಬಿ. ಹೇಲ್ ಮತ್ತು ಆರ್ಥರ್ ಡೆಬ್ಲು ಶಾಡೋವವಸ್ಕಿ ಎಂಬಿಬ್ಬರು ವಿಜ್ಞಾನಿಗಳು ಕಂಡುಹಿಡಿಯುತ್ತಾರೆ. ಇವುಗಳಲ್ಲಿ ಮೊದಲನೆಯದು ಗಾಳಿಯ ಕೋವಿ. ಈ ಕೋವಿ ಗಾಳಿಯ ಒತ್ತಾಟದಿಂದ ಒಂದೊಂದು ಮಿನುಟಿಗೆ ಅರ್ಧ ಇಂಚಿನ ಹತ್ತು ಸಾವಿರಗಳಷ್ಟು ಗುಂಡುಗಳನ್ನು ಎಸೆಯಬಲ್ಲುದು. ಇನ್ನೊಂದು, ಭಯಂಕರವಾಗಿ ಉರಿಕೊಟ್ಟು ಸಿಡಿಯುವ ಬಾಂಬು. ಇದರ ಸ್ಫೋಟನದಿಂದ ಒಂದೊಂದು ಮೈಲು ದೂರದಲ್ಲಿರುವ ಬಹು ಭದ್ರವಾದ ದೊಡ್ಡ ಕಟ್ಟಡಗಳೂ ಅಲುಗಾಡಿವೆ. ಈ ಅಸ್ತ್ರಗಳು ಯುದ್ಧದಲ್ಲಿ ಇನ್ನೂ ಬಳಕೆಗೆ ಬಂದಿರುವುದಿಲ್ಲ. ಅವುಗಳ ರಚನಾಕ್ರಮವು ಇನ್ನೂ ರಹಸ್ಯವಾಗಿ ಇದೆ. ಆದರೆ ಅವು ಪ್ರಚಾರಕ್ಕೆ ಬಂದ ಮೇಲೆ ಯುದ್ಧದ ಸ್ವರೂಪವನ್ನು ಇಂದಿಗಿಂತಲೂ ನೂರಾರು ಪಾಲು ಭಯಂಕರವಾಗುವುದಕ್ಕೆ ಸಂದೇಹವಿಲ್ಲ.

ಇನ್‌ಫ್ಲುಯೆಂಜಕ್ಕೆ ಹೊಸ ಔಷಧಿ

ಇನ್‌ಫ್ಲುಯೆಂಜ ಎನ್ನುವ ರೋಗ ಈಚೆಗೆ ಕೆಲವು ವರುಷಗಳಿಂದ ಪ್ರಪಂಚದಲ್ಲೆಲ್ಲ ಹರಡಿ ಬಹಳ ಹಾವಳಿಯನ್ನುಂಟು ಮಾಡಿದೆ. ಪ್ರತಿ ವರ್ಷ ಇದರಿಂದ ಲಕ್ಷಾಂತರ ಜನರು ಸಾಯುತ್ತಾರೆ. ಇದರ ನಿವಾರಣೆಗೆ ನಾನಾ ಉಪಾಯಗಳನ್ನು ಕಂಡುಹಿಡಿದಿದ್ದರೂ ಯಾವುದೂ ಸಂಪೂರ್ಣ ಫಲಕಾರಿಯಾಗಲಿಲ್ಲ. ಈಗ ಬ್ರಿಟನಿನ ವಿಜ್ಞಾನಿಗಳು ಇದರ ಹಾವಳಿಯನ್ನು ತಡೆಯುವುದಕ್ಕೋಸ್ಕರ ಒಂದು ಹೊಸ ಉಪಾಯವನ್ನು ಅನುಸರಿಸಿದ್ದಾರೆ. ಅದು ಹಿಂದಿನ ಮಿಕ್ಕ ಎಲ್ಲಾ ಉಪಾಯಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯೂ ಕಂಡುಬಂದಿದೆ. ಒಂದು ಜಾತಿಯ ಯಾಗ್ನಿ ನೇರಳೆಬಣ್ಣದ ಪ್ರಕಾಶಕಿರಣಗಳಲ್ಲಿ ಇನ್‌ಫ್ಲುಯೆಂಜ ರೋಗಾಣುಗಳು ನಾಶವಾಗುತ್ತವೆ ಎಂದು ತಿಳಿದುಬಂದಿದೆ. ಈ ರೋಗದ ಹಾವಳಿ ವಿಶೇಷವಾಗಿರುವ ಚಳಿಗಾಲದಲ್ಲಿ ಬ್ರಿಟಿಸಿನ ವಿಜ್ಞಾನಿಗಳು ಈ ಪ್ರಕಾಶ ಕಿರಣಗಳನ್ನು ಸ್ಥಿರಕರ ಮೇಲೆ ಚೆಲ್ಲಿ ಅವರಿಗೆ ಈ ರೋಗ ತಟ್ಟದ ಹಾಗೆ ಮಾಡಿದ್ದಾರೆ. ಸಿ. ಜೀವಾತು ಇರುವ ಆಹಾರ ಪದಾರ್ಥಗಳನ್ನು ವಿಶೇಷವಾಗಿ ಭುಂಜಿಸುವದರಿಂದ ಶರೀರದಲ್ಲಿ ಈ ರೋಗ ನಿರೋಧಕ ಶಕ್ತಿ ಹೆಚ್ಚಾಗುವದಂತೆ.

ಕೆಂಪು ಸಕ್ಕರೆಯಿಂದ ಗುಣವಿಲ್ಲ!

ಬಿಳಿ ಸಕ್ಕರೆಗಿಂತಲೂ ಕೆಂಪು ಸಕ್ಕರೆಯಲ್ಲಿ ಪೋಷಕಾರಿಕಗಳೂ ಜೀವಾತುಗಳೂ ಧಾರಾಳವಾಗಿರುವವೆಂಬುದು ಈ ವರೆಗಿನ ಆಹಾರ ತಜ್ಞರ ಮತವಾಗಿರುವದಷ್ಟೆ? ಈ ಅಭಿಪ್ರಾಯವನ್ನೇ ಸತ್ಯವೆಂದು ನಂಬಿಕೊಂಡು ಅನೇಕರು ಬಿಳಿ ಸಕ್ಕರೆಯಿಂದಲ್ಲ ಕೆಂಪು ಸಕ್ಕರೆಯನ್ನೇ ಉದ್ದೇಶಪೂರ್ವಕವಾಗಿ ಉಪಯೋಗಿಸುತ್ತ ಬಂದಿರುವರು. ಪರಂತು ಹಿಂದಿನ ಆಹಾರ ತತ್ವಜ್ಞರ ಈ ಮಾತಿನಲ್ಲಿ ಹುರುಳಿಲ್ಲವೆಂದು ಕೆಂಬ್ರಿಜ್ ವಿಶ್ವವಿದ್ಯಾಲಯದ ಸಿ. ಡಬ್ಲ್ಯು. ಕೋಲ್ ಎಂಬವರು ಹೇಳುತ್ತಾರೆ. ಕೆಂಪು ಸಕ್ಕರೆಯು ಬಿಳಿ ಸಕ್ಕರೆಗಿಂತ ಶುಚಿಯಾಗಿರಬಹುದಾದರೂ, ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವಾಗ ಅದರಲ್ಲಿ ಸೇರಿಕೊಳ್ಳುವ ಮಣ್ಣು ದೂಳು ಮೊದಲಾದವನ್ನು ಪರೀಕ್ಷಿಸಿ ತಿಳಿಯುವುದು ಕಷ್ಟವಾಗಿದೆ. ಬಿಳಿ ಸಕ್ಕರೆಯಲ್ಲಿ ಇಲ್ಲದ ಯಾವ ಪೋಷಕ ಪದಾರ್ಥವೂ ಕೆಂಪು ಸಕ್ಕರೆಯಲ್ಲಿ ಇರುವದಿಲ್ಲ. ಆದ್ದರಿಂದ ಕೆಂಪು ಸಕ್ಕರೆಯ ಉಪಯೋಗದಿಂದ ಅನಾರೋಗ್ಯವು ಹೆಚ್ಚಾಗುವ ಸಂಭವವುಂಟೆಂಬುದು ಅವರ ಅಭಿಪ್ರಾಯವಾಗಿದೆ.

ತಾಸಿಗೆ ಐನೂರು ಮೈಲಿಯ ವಿಮಾನಗಳು

ಈಗ ಅತಿ ಹೆಚ್ಚು ವೇಗದಿಂದ ಹಾರಾಡುವ ವಿಮಾನಗಳೆಂದರೆ ತಾಸಿಗೆ ೩೦೦-೪೦೦ ಮೈಲು ಹೋಗುವಂಥವುಗಳಾಗಿವೆ. ಆದರೆ ಇನ್ನೈದು ವರ್ಷಗಳ ಅವಧಿಯೊಳಗೆ ತಾಸಿಗೆ ೫೦೦ ಮೈಲುಗಳಷ್ಟು ಹಾರಾಡಬಹುದಾದ ವಿಮಾನಗಳು ಪ್ರಚಾರಕ್ಕೆ ಇರಬಹುದೆಂದು ಅಮೇರಿಕದ ಇಬ್ಬರು ಪ್ರಸಿದ್ಧ ಇಂಜಿನಿಯರರು ಹೇಳಿದ್ದಾರೆ. ಈ ಅವಧಿಯೊಳಗೆ ವಿಮಾನ ರಚನೆಯಲ್ಲಿ ಅನೇಕ ಪರಿವರ್ತನೆಗಳಾಗುವವು. ಮತ್ತು ಈ ಪರಿವರ್ತನೆಗಳ ದೆಸೆಯಿಂದ ವಿಮಾನಗಳು ಹಾರಾಡುವ ವೇಗವನ್ನು ಬಹಳ ಹೆಚ್ಚಿಸಲಿಕ್ಕೆ ಆಗುವದೆಂದು ಹೇಳಲಾಗಿದೆ. ಆದ್ದರಿಂದ ಇನ್ನೈದು ವರ್ಷಗಳಲ್ಲಿ ಸಂಚಾರಿಗಳಿಗೆ ಪ್ರಪಂಚವು ಮತ್ತಷ್ಟು ಸಣ್ಣದಾಗುವುದು.

ವಸ್ತುಗಳನ್ನು ಉರಿಸುವ ಪ್ರಚಂಡ ಬಾಂಬು

ಈಗ ಯುದ್ಧದಲ್ಲಿ ಉಪಯೋಗಿಸಲಾಗುತ್ತಿರುವ ಕೆಲವು ಜಾತಿಯ ಬಾಂಬುಗಳು ಸ್ಫೋಟನವಾದಾಗ ಪ್ರಚಂಡ ಉರಿಯನ್ನು ಕೊಟ್ಟು ವಸ್ತುಒಡವೆಗಳನ್ನು ಸುಡುವವು. ಇವನ್ನು ಇನ್‌ಸೆಂಡಿಯರಿ ಬಾಂಬುಗಳೆಂದು ಹೇಳುತ್ತಾರೆ. ಇವು ಒಂದೆಡೆ ಬಿದ್ದುವೆಂದರೆ ಅಲ್ಲಿ ಅಗ್ನಿಪ್ರಳಯ ಉಂಟಾದ ಹಾಗೆಯೇ ಸರಿ. ಇವು ಒಂದೊಂದು ಎರಡು ರಾತಲುಗಳಷ್ಟೇ ಭಾರವಿರುತ್ತವೆ. ಆದರೆ ಇವುಗಳ ಉರಿಯ ಶಾಖವು ೨೫೦೦ ಫೇರನ್‌ಹೀಟ್ ಡಿಗ್ರಿಗಳಷ್ಟು ಇರುತ್ತದೆ ಮತ್ತು ಜ್ವಾಲೆಯು ಬಹಳ ದೂರದ ತನಕ ಹಾರುತ್ತದೆ. ಸಾಮಾನ್ಯವಾಗಿ ಇವು ಉರಿಯುತ್ತಿರುವಾಗ ಹತ್ತಿರ ಹೋಗಲಿಕ್ಕೆ ಆಗುವುದೇ ಇಲ್ಲ. ಇನ್ನು ಹೋಗುವವರು ಅದಕ್ಕಾಗಿಯೇ ತಯಾರಿಸಿದ ಬೆಂಕಿ ತಡೆಯುವ ಕವಚಗಳನ್ನು ಧರಿಸಿಹೋಗಬೇಕು. ಅವರು ಇಂಥ ಬೆಂಕಿಯನ್ನು ನೊಂದಿಸಲಿಕ್ಕೆ ವಿಶೇಷ ತರಬೇತಿಯನ್ನೂ ಅನುಭವವನ್ನೂ ಪಡೆದಿದ್ದಿರಬೇಕು.

BHUVANENDRA PRODUCTS LTD.,

KATAPADI, S. K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ!   ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ,
ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ವೀಕೃತರು:—
ಯು. ಪಾಂಡುರಂಗ ನಾಯಕ್, ರಥಬೀದಿ.
ರಾಘವೇಂದ್ರ ರಂಗ ಷೈ, ರಥಬೀದಿ.
ಡಾ. ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ದಿ ಕಂಬೈನ್ಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಉಡುಪಿ ಶ್ರೀಕೃಷ್ಣ ಸನ್ನಿಧಿಯಲ್ಲಿ

ಪೂರ್ವಾಚಾರ್ಯರ ಸಂಪ್ರದಾಯದಂತೆ ಸಪ್ತೋತ್ಸವವು

ತಾ. **8-1-1941** ಬುಧವಾರ ರಾತ್ರಿ ಸಪ್ತೋತ್ಸವಾರಂಭ

,, **13-1-1941** ಸೋಮವಾರ ಮಕರಸಂಕ್ರಮಣ ಮಹಾರಥೋತ್ಸವ

,, **14-1-1941** ಮಂಗಳವಾರ ಹಗಲು ಚೂರ್ಣೋತ್ಸವ (ಅವಭೃತ)

,, **5-2-1941** ಬುಧವಾರ ಶ್ರೀ ಮಧ್ವನವಮಿ ಮಹೋತ್ಸವ

ಈ ಸಂದರ್ಭದಲ್ಲಿ ಬರುವ ಯಾತ್ರಾರ್ಥಿಗಳಿಗೆ ಪರ್ಯಾಯ ಶ್ರೀ ಅದ್ಮಾರುಮಠದಿಂದ ಸಕಲ ಸೌಕರ್ಯಗಳೂ ಏರ್ಪಡಿಸಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು.

JOINT MANAGERS.

The Combined Booking Agency,
MANGALORE.

The Joint Booking Office,
KODIALBAIL.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office: UDIPI, S. Kanara.

Our attractive Rates on Deposits.

FIXED DEPOSITS

3 to 6 months	2¼% p. a.
6 to 9 ,, ...	3% ,,
One year	3½% ,,
Two years	4% ,,
SHORT TERM Deposits:	2½% p. a.
Current Account:	1% p. a.
Savings Bank:	2¼% *

Particulars of other kinds of deposits on application.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

U. K. BHUJANGA NAYAK
CLOTH COMMISSION AGENT
SHEVAPET, SALEM.

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲು, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

ಬಹಳ ಮಕ್ಕಳು ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ಬೇಕಾದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. [illegible] ಸುರುವಾಗುವುದಿಲ್ಲ. [illegible] ಎಲ್. [illegible] ಎಸ್. [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ [illegible] ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. [illegible]

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C.

Regd. No. M.3406

ಸ್ವದೇಶಾಭಿಮಾನಿ

ಸಂಪುಟ 34] ತಾರೀಖು 20-12-1940 [ಸಂಚಿಕೆ 51

(ESTABLISHED 1908)

The Bombay Life Assurance Company, Ltd.

FIGURES FOR 1939

Completed business exceeds	Rs 1 42 Crores
Total Funds exceed	Rs 1 52 Crores
Premium income during the year exceeds	Rs 37½ Lakhs
Claims paid during the year exceed	Rs 10 Lakhs

THE INSURANCE POLICIES

Form Best Investment in War time Thisis the unique opportunity to Agents to put through larger business To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs

The Bombay Life Building,

Sri Lalubhai Samaldas Road

Gandhi Nagar, UDIPI.

OR ANY OF OUR FOLLOWING OFFICES AT

Puthiyara	Car Street,	Central Station Road
Calicut	Mangalore	Trivandrum
Gautam Nivas Charni Road	Post Box No 337	Visweswarapuram Circle
Girgaum Bombay No 4	Mount Road Madras	Bangalore City

(Regd)

ಅಮೃತಾಂಜನ

ಕಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ದೋಷಮು ಮೊದಲಾದ ಎಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬ್ಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

Estd. 1906

ಸ್ವದೇಶಾಭಿಮಾನಿ

SWADESHABHIMANI

KANNADA ILLUSTRATED WEEKLY

ಶಹರ್ನೆ ಖಾಗಿ ತೀರ್ಮಾನಿಸಲಾಗುವದು.

ಗಳೂರು) J. M. Sequeira

-12-40 } Vakil for Plaintiff.

ನೋಟೀಸು

ಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 721/1040

ಸಿಸಿಲಿಯ ಕುಲಾಸೊ— ವಾದಿ

ಮತ್ತು

ವಿಕ್ಟರ್ ಕೌರಿಯ, ಡೆನಿಸ್ ಕುಲಾಸೊ, ಕೋಜಿಮ್ ಕುಲಾಸೊ, ಅಲೆಕ್ಸಾಂಡರ್ ಕುಲಾಸೊ, ರೋಸಿಯಾ ಕುಲಾಸೊ, ಮೇರಿ ಕುಲಾಸೊ, ಜೋಜೆಫ್ ಕುಲಾಸೊ	ಪ್ರತಿವಾದಿಗಳು

ಲ್ಯಂಡ ವ್ಯಾಜ್ಯದ 2ರಿಂದ 6ನೇ ವರೆಗಿನ ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ವಾದಿಯು 1ನೇ ಪ್ರತಿವಾದಿಯಿಂದ ... ಗೇಣಿ ಬಗ್ಗೆ ಮೇಲ್ಕಂಡ ದಾವಾ ದಾಖಲು ಮಾಡಿ ... 7ನೇ ವರೇಗಿನ ಪ್ರತಿವಾದಿಗಳ ಪಕ್ಷದಲ್ಲಿ ಪ್ರತಿವಾದಿಗಳ ಮೇಲೆ ಡಿಕ್ರಿ ಆಗಬೇಕೆಂತ ವಗೈರೆ ... ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 6-1-41ಕ್ಕೆ ಅಷ್ಯರು ತನ್ನಿಗೆ ಇಟ್ಟಿರುವದರಿಂದ ಈ ... ಪ್ರತಿವಾದಿಗೆ ತಿಳಿಯಪಡಿಸುವದೇನಂದರೆ, ತಾರೀಕು 6-1-41ಕ್ಕೆ ಹಾಜರಾಗಿ ತಮ್ಮ ... ಹರಣೆಗಳನ್ನು ದಾಖಲು ಮಾಡುವರೇ ... ಏಕಪಕ್ಷವಾಗಿ ತೀರ್ಮಾನಿಸಲಾಗುವದು.—

ಗಳೂರು | J. M. Sequeira

-12-40 | Vakil for Plaintiff

ಕೆ ವ್ಯಾಪಾರ ಅಭಿವೃದ್ಧಿಯು ... ಬೇಕಾದರೆ ...

ಯಾವಾಗಲೂ ನೈಸರ್ಗಿಕವಾದ ಆಹಾರವೇ ಉತ್ತಮ. ತಾಯಂದಿರು ತಮ್ಮ ಮಕ್ಕಳಿಗೆ ಅಂಥಾ ನೈಸರ್ಗಿಕ ಆಹಾರವಾದ ಮೊಲೆಹಾಲನ್ನುಣ್ಣಿಸಿ ಅವನ್ನು ಏನೊಂದು ಪ್ರಯಾಸ ಪಡದೆ ಸಂಗೋಪನೆ ಮಾಡುವ ಶಕ್ತಿಯು ಬರಬೇಕಾದರೆ ಬಾಣಾಂತಿತನದ ಮೊದಲೂ ನಂತರವೂ 'ಓವಲ್‌ಟಿನ್'ನ್ನು ಸೇವಿಸಬೇಕು. ಇದರಿಂದ ತಾಯಂದಿರಿಗೆ ಹಾಲು ಸಮೃದ್ಧವಾಗುವುದೆಂಬುದು ಖಾತ್ರಿ.



ಪ್ರಕೃತಿಯು ಸಂಪನ್ನವಾದ ಶಕ್ತಿವರ್ಧಕ ಆಹಾರ—ನೆನೆಹಾಕಿ ಹುರಿದ ಬಾರ್ಲಿ, ದನದ ಹಸಿ ಹಾಲು ಮತ್ತು ನೈಸರ್ಗಿಕ ಆಹಾರ ಸತ್ವ (Vitamins)ಗಳಿಂದ ತಯಾರಿಸಲ್ಪಟ್ಟ ಈ 'ಓವಲ್ಟಿನ್' ಪರಿಪೂರ್ಣವಾಗಿ ರುಚಿಕರವಾದ ಆಹಾರವಾಗಿದ್ದು ತಾಯಂದಿರಿಗೆ ಆರೋಗ್ಯ, ತ್ರಾಣ ಮತ್ತು ಚೇತನವನ್ನುಂಟುಮಾಡಿ ಪೋಷಿಸುತ್ತದೆ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ವಿತರಣಾಕಾರರು: **ಮೆಸರ್ಸ್ ಗ್ರೇಹೆಮ್ಸ್ ಟ್ರೇಡಿಂಗ್ ಕೊ (ಇಂಡಿಯಾ) ಲಿಮಿಟೆಡ್,**

ಕೈತನೆಸ್ ಹೋಲ್, ಥರ್ಡ್ ಫ್ಲೋರ್ 310-311, ಲಿಂಗಿಚೆಟ್ಟಿ ಸ್ಟ್ರೀಟ್ ಮದ್ರಾಸು

ಕಲ್ಕತ್ತಾ, ಬೊಂಬಾಯಿ ಮತ್ತು ಕರಾಚಿ.

'ಓವಲ್‌ಟಿನ್'

'ಓವಲ್‌ಟಿನ್ ಬಿಸ್ಕಿಟುಗಳು' ರುಚಿಕರ, ಜೀರ್ಣಕ ಮತ್ತು ಪೋಷಣಯುಕ್ತವಾದವು. ಎಲ್ಲಾ ಸಮಯಕ್ಕೂ ಉತ್ತಮವಾದ ಬಿಸ್ಕುಟುಗಳು. ಇವುಗಳಲ್ಲಿ 'ಓವಲ್ಟಿನ್' ಕೂಡಿರುವುದರಿಂದ ಅವು ಅತ್ಯಮೂಲ್ಯವಾಗಿದೆ. 4 ಔನ್ಸು ಮತ್ತು 8 ಔನ್ಸು ಪೆಕೆಟುಗಳಲ್ಲಿಯೂ ಒಂದು ಪೌಂಡಿನ ಟಿನ್ನುಗಳಲ್ಲಿಯೂ ಮಾರಲ್ಪಡುತ್ತದೆ.

OVI/8440

"ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ನಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

27—12—1940] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. ೨೭—೧೨—೧೯೪೦

ಭಾರತದ ಬೆಂಬಲ ದೊರಕಿಸಿಕೊಳ್ಳದಿದ್ದರೆ....?

ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಹಾನರ್ಥಕಾರ

ಬ್ರಿಟಿಷ್ ಮುಖಂಡರು ಎಚ್ಚರಿಸುತ್ತಾರೆ

ಗಾರ್ಡಿಯನ್ ಪತ್ರಿಕೆಯ ಅಗ್ರಲೇಖ

ಪಾಕಿಸ್ತಾನ ಯೋಜನೆಗೆ ಕುರಾನ್ ಸಮ್ಮತಿಯಿಲ್ಲ.



ವೈಸರಾಯರು

ವರ್ನನ್ ಬಾರ್ಟ್‌ಲೆಟ್ ರವರು ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟಿನ ಸಂಬಂಧದಲ್ಲಿ ನ್ಯೂಸ್ ಕ್ರಾನಿಕಲ್ ಪತ್ರಿಕೆಯಲ್ಲಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಭಾರತೀಯರ ಬೆಂಬಲವನ್ನು ದೊರಕಿಸದೆ ಇರುವದು ನಮ್ಮ ಸಾಮ್ರಾಜ್ಯಕ್ಕೆ ಕಲ್ಪನಾತೀತವಾದ ಅನಿಷ್ಟಕರವಿರುವುದು ಅಲ್ಲದೆ ಜಗತ್ತಿನ ಸ್ವತಂತ್ರ ಜನರಿಗೂ ಅದು ವಿನಾಶಕರವಾದದ್ದಿರುವುದು. ಹಿಂದುಸ್ಥಾನಕ್ಕೆ ಇಂಥ ದಿವಸ ಸಾಮಂತ ಸ್ವರಾಜ್ಯ ಕೊಡಲಾಗುವದೆಂದು ವಚನ ಕೊಟ್ಟು ಅದರ ಪರಿಣಾಮವೇನಾಗುವದೆಂಬುದನ್ನು ನೋಡಬಾರದೇಕೆ? ಅಲ್ಲಿ ಅಲ್ಪಸಂಖ್ಯಾಕರು ಇರುತ್ತಿರುವದು ನನಗೆ ಗೊತ್ತಿದೆ. ಮತ್ತು ಅವರ ವಿಷಯವಾಗಿ ನಾನು ಸಹಾನುಭೂತಿಯುಳ್ಳವನಾಗಿರುವೆನು. ಯಾಕೆಂದರೆ ನಾನೂ ಅಲ್ಪಸಂಖ್ಯಾಕನೇ ಇರುತ್ತೇನೆ. ಇದರಂತೆ ಸಂಸ್ಥಾನಿಕರು ಇರುತ್ತಿರುವದೂ ನನಗೆ ಗೊತ್ತುಂಟು. ಆದರೆ ಅವರ ವಿಷಯವಾಗಿ ನಾನು ಲಕ್ಷ್ಯಕೊಡುವದಿಲ್ಲ. ಯಾಕೆಂದರೆ ಬ್ರಿಟಿಶ ಸಂರಕ್ಷಣೆಯಲ್ಲಿ ಅವರಿಗೆ ಭದ್ರತೆ ದೊರಕಿದ್ದರೂ ತಮ್ಮ ಪ್ರಜೆಗಳ ಕಲ್ಯಾಣದ ಸಂಬಂಧದಲ್ಲಿ ಪ್ರಯತ್ನಮಾಡಿದರೆಂದರೆ ಅವರಲ್ಲಿ ಸ್ವಲ್ಪವೇ ಜನರಿರುವರು. ಆದರೆ ಬಹುಸಂಖ್ಯಾಕರಿಗೂ ಅವರ ಹಕ್ಕುಗಳು ಇರುತ್ತವೆಯೆಂಬುದನ್ನು ನಾವು ಮರೆಯಕೂಡದು. ಅಧಿಕಾರಿಗಳು ಅಲ್ಪಸಂಖ್ಯಾಕರ ತೊಂದರೆಗಳನ್ನು ಒತ್ತಿ ಒತ್ತಿ ಹೇಳುತ್ತಿರುವಾಗ ನನಗೆ ಥಟ್ಟನೇ ನೆನಪಿಗೆ ಬರುವನು. ಪ್ರೋಸ್ಪೆರೋ ಹಾಗೂ ಸುಡೇಟನಗಳಲ್ಲಿಯ ಜರ್ಮನ್ ಅಲ್ಪಸಂಖ್ಯಾಕರ ಸಂಬಂಧದಲ್ಲಿ ಅವನೂ ಇದೇ ರೀತಿ ಮಾಡಿದನು.

ಮೆಂಚೆಸ್ಟರ್ ಗಾರ್ಡಿಯನಿನ ಟೀಕೆ

ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ವೈಸರಾಯರ ಕಲ್ಕತ್ತೆಯ ಭಾಷಣ ಸಂಬಂಧದಲ್ಲಿ ಒಂದು ಅಗ್ರಲೇಖವನ್ನು ಬರೆದು, ಹೀಗೆ ಟೀಕಿಸಿದೆ:—

"ಸರಕಾರಕ್ಕೆ ತನಗೆ ಶಕ್ಯವಿದ್ದುದನ್ನೆಲ್ಲ ಮಾಡಿರುವುದೆಂದು ವೈಸರಾಯರು ಹೇಳುವದು ಅಸಮಂಜಸವಾಗಿದೆ. ಈ ರೀತಿ ಹೇಳುವದು ವಿಘಾತಕವಾಗಿದ್ದು ದೇಶದ ಕಲ್ಯಾಣವನ್ನು ಬಯಸುವ ಜವಾಬದಾರಿ ಜನರು ಇಂಥ ಶಬ್ದಗಳನ್ನು ಉಚ್ಚರಿಸತಕ್ಕದ್ದಲ್ಲ. ಯಾಕೆಂದರೆ ಇತಿಹಾಸದ ಪುಟಗಳನ್ನು ನಾವು ತಿರುವಿ ಹಾಕಿದ್ದಾದರೆ, ಶಕ್ಯವಿದ್ದುದನ್ನು ಮಾಡಿರುವುದಾಗಿ ಸರಕಾರವು ಹೇಳುತ್ತಲೇ ಹೆಚ್ಚಿನದನ್ನು ಮಾಡದಿದ್ದುದು ಕಂಡುಬರುತ್ತದೆ. ಕೆಲವು ಅಧಿಕಾರಿಗಳು ಹಿಂದುಯರಲ್ಲಿಯ ಭೇದಭಾವಗಳ ಕಡೆಗೆ ಬೆರಳು ತೋರಿಸಿ ಏನನ್ನೂ ಮಾಡದಿರಬಹುದು. ಆದರೆ ಈ ರೀತಿ ಕರ್ತವ್ಯ ಪರಾಙ್ಮುಖರಾಗುವದರಲ್ಲಿ ಜಾಣತನವಾಗಲೀ ಧೈರ್ಯವಾಗಲಿ ಏನೂ ಇರುವದಿಲ್ಲ. ವೈಸರಾಯರು ಹಿಂದುಸ್ಥಾನದಲ್ಲಿಯ ಮುಖಂಡರೊಡನೆ ವಿಚಾರವಿನಿಮಯ ಮಾಡಿ ಬಿಕ್ಕಟ್ಟನ್ನು ಬಿಡಿಸಲು ಪುನಃ ಒಮ್ಮೆ ಪ್ರಯತ್ನ ಮಾಡಬೇಕು. ಇಲ್ಲವೆ ಈ ದೇಶದಲ್ಲಿಯ ಕೆಲವರು ಹಿಂದುಸ್ಥಾನಕ್ಕೆ ಹೋಗಿ ಯತ್ನಮಾಡಿ ನೋಡಬೇಕು. ಹಿಂದುಸ್ಥಾನದ ಬಗ್ಗೆ ನಮಗೆ ಶಕ್ಯವಿದ್ದುದನ್ನು ಮಾಡಿರುವದಾಗಿ ಹೇಳಿದರೆ ಅದು ಒಪ್ಪತಕ್ಕದ್ದಲ್ಲ."

ಪಾಕಿಸ್ತಾನ ಯೋಜನೆಗೆ ಕುರಾನಿನ ಬೆಂಬಲವಿಲ್ಲ

ಮೌಲ್ವಿ ಸಯ್ಯದ ಹಬೀಬುಲರ ಪ್ರಕಟಣೆ

ಅಖಿಲ ಬಂಗಾಲ ಕೃಷಿಕ ಪ್ರಜಾಸಮಿತಿಯ ಅಧ್ಯಕ್ಷರಾದ ಮೌಲ್ವಿ ಸಯ್ಯದ ಹಬೀಬುಲ ರಹಿಮಾನ ಅವರು ಕೆಳಗಿನ ಒಂದು ಪ್ರಕಟಣೆ ಕೊಟ್ಟಿದ್ದಾರೆ.

"ಜಿನ್ನಾರು ಪಾಕಿಸ್ತಾನ ಯೋಜನೆಯ ಹುಚ್ಚು ಕಲ್ಪನೆಯನ್ನು ಇನ್ನೂ ಬಿಟ್ಟುಕೊಟ್ಟಿಲ್ಲ. ದೇಶದ ಪ್ರಚಲಿತ ರಾಜಕೀಯ ಹಾಗೂ ಆರ್ಥಿಕ ಸಮಸ್ಯೆಗಳು ಪರಿಹಾರವೆಂಬುದನ್ನು ಅವರು ಉದ್ದೇಶಪೂರ್ವಕವಾಗಿ ಮರೆಮಾಡುತ್ತಿರುವರು. ಅವರ ಪಾಕಿಸ್ತಾನ ಯೋಜನೆಗೆ ಕುರಾನಿನ ಏನೂ ಬೆಂಬಲವಿಲ್ಲ. ಕ್ರಿಶ್ಚಿಯನರು, ಯಹೂದಿಗಳು ಮತ್ತು ಅರಬರಲ್ಲಿ ಸ್ನೇಹ ಸಂಬಂಧ ಬೆಳಸಿ ಮಹಮ್ಮದ ಪೈಗಂಬರರು ಬಲಿಷ್ಟವಾದ ಅರಬ ರಾಷ್ಟ್ರವನ್ನು ನಿರ್ಮಾಣಮಾಡಿದರು. ಈ ಇಸ್ಲಾಮ ಪರಂಪರೆಯು ಕಳೆದ ೧೩ ಶತಮಾನಗಳಿಂದಲೂ ಹಾಗೆಯೇ ನಡೆಯುತ್ತ ಬಂದಿತ್ತು. ಹಿಂದುಸ್ಥಾನದಲ್ಲಿ ಆಳಿದ ಮುಸಲ್ಮಾನ ಅರಸರೂ ಇದೇ ಧೋರಣ ಸ್ವೀಕರಿಸಿ ಹಿಂದಿ ರಾಷ್ಟ್ರವನ್ನು ಕಟ್ಟಿದರು. ಆದ್ದರಿಂದ ಜಾಣರಾದ ಮುಸಲ್ಮಾನರಾರೂ ಜಿನ್ನರ ಈ ಯೋಜನೆಯಲ್ಲಿ ಸಹಕರಿಸಿ ಹಿಂದಿನ ಉದಾರ ಪರಂಪರೆಯನ್ನು ಹಾಳುಗೆಡಿಸುವರಲ್ಲೆಂದು ನನಗೆ ಆಶೆಯಿದೆ. ಮುಸಲ್ಮಾನರ ಬಹುಸಂಖ್ಯಾಕ ಪ್ರಾಂತಗಳಲ್ಲಿ ಪಂಜಾಬ್ ಗಡಿನಾಡು ಹಾಗೂ ಸಿಂಧ ಪ್ರಾಂತಗಳು ಅಂದರೆ ಸರ್. ಸಿಕಂದರ ಹಯಾತಖಾನ, ಖಾನ ಅಬ್ದುಲ್ ಗಫರಖಾನ ಮೊದಲಾದವರು, ಪಾಕಿಸ್ತಾನ ಯೋಜನೆಯನ್ನು ಧಿಕ್ಕರಿಸಿರುವರು. ಇದಲ್ಲದೆ ಬಂಗಾಳದ ಮುಖ್ಯ ಪ್ರಧಾನರಾದ ಫಜಲುಲ್ ಹಕ್ಕರಿಗೂ ಜಿನ್ನರ ಈ ಯೋಜನೆಯು ಮನಸ್ಸಿಗೆ ಬಂದಿಲ್ಲ. ಜಿನ್ನರು ಪಾಕಿಸ್ತಾನ ಯೋಜನೆಗೆ ಬ್ರಿಟಿಷರ ಸಮ್ಮತಿ ದೊರಕಿಸಲು ಎಷ್ಟೇ ಪ್ರಯತ್ನ ಮಾಡಿದರೂ ಹಿಂದಿ ಮುಸಲ್ಮಾನರು ಮಾತ್ರ ಅವರ ಈ ಬಲೆಗೆ ಬೀಳುವದಿಲ್ಲ."

The Jupiter General Insurance Co. Ltd., Bombay

(Incorporated in India)

PROGRAMME FOR YOUTH

HEAD OFFICE:—Ewart House, Fort, Bombay.

COURAGE must come from the soul within,
The man must furnish the will to win,
So figure it out for yourself, my lad,
You were born with all that the great have had,
With your equipment they all began,
Get hold of yourself, and say "I CAN"
And work for the Democratic Institution of your motherland.

K. P. NAYAK, *Chief Agent*,

THE JUPITER GENERAL INSURANCE CO. LTD., MANGALORE.

HALFTONE & LINE BLOCK MAKING UNDERTAKEN

Sharada Press, MANGALORE

ಸ್ವದೇಶಾಭಿಮಾನಿ

ಮಂಗಳೂರು 27—12—1940

"ಬ್ರಿಟಿಷ್ ಮಿತ್ರರು"

ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯ ಕೆಲವು ಮಿತ್ರರು ಬ್ರಿಟನು-ಭಾರತಗಳೊಳಗೆ ಸ್ನೇಹ ಸೌಹಾರ್ದಗಳು ಬೆಳೆಯಬೇಕೆಂಬ ವಿಚಾರವಾಗಿ ಒಂದು ಸುದೀರ್ಘ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಈ ಪತ್ರ ಬರೆದ 'ಬ್ರಿಟಿಷ್ ಮಿತ್ರ'ರಲ್ಲಿ ಬ್ರಿಟನಿನ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ಇರುವರು. ಇವರು ಭಾರತ ಮತ್ತು ಬ್ರಿಟನುಗಳ ಸಂಬಂಧದಲ್ಲಿ ಈಗ ಉಂಟಾಗಿರುವ ವಿಷಮತೆಯನ್ನು ಪರೀಕ್ಷಿಸಿ, ಸದುದ್ದೇಶ ಪ್ರೇರಿತವಾಗಿಯೇ ಈ ಪತ್ರವನ್ನು ಬರೆದಿರುವರೆಂದು ನಂಬಬಹುದಾಗಿದೆ. ಆದರೆ ಅವರು ತಮ್ಮ ಪತ್ರದಲ್ಲಿ ಎತ್ತಿದ ಕೆಲವು ವಿಷಯಗಳಿಂದ ಅವರಿಗೆ ಇಂದು ಭಾರತದ ಸಂಭವಗಳ ಕುರಿತು ತೀರಾ ಅಜ್ಞಾನವಿರುತ್ತದೆಯೆಂಬುದಿಷ್ಟು ಸ್ಪಷ್ಟವಾಗುತ್ತದೆ; ಮಾತ್ರವಲ್ಲದೆ ಅವರು ಪುರುಷಾರ್ಥವಿಲ್ಲದ, ನೂತನವಲ್ಲದ, ಉಪದೇಶವನ್ನು ಕೊಡಹತ್ತಿದ್ದಾರೆಯೆಂಬುದನ್ನೂ ನಾವು ವಿಷಾದಪೂರ್ವಕವಾಗಿ ಹೇಳಬೇಕಾಗುತ್ತದೆ.

ಬ್ರಿಟನು ಭಾರತಗಳೊಳಗೆ ಇಂದು ಎದ್ದಿರುವ ಈ ವಿಷಮ ಪ್ರಸಂಗವು 'ತಪ್ಪು ತಿಳುವಳಿಕೆ' (Misunderstanding) ಯಿಂದಲಾಗಿಯೆಂಬುದು ಅವರ ಅಭಿಪ್ರಾಯವಾಗಿದೆ. ಆದರೆ ಇದು ತಪ್ಪು ತಿಳುವಳಿಕೆಯಿಂದಲ್ಲವೆಂಬುದು ಅವರಿಗೆ ತಿಳಿಸಬೇಕಾಗಿದೆ. ಭಾರತದ ಕುರಿತು ಬ್ರಿಟನಿನ ನೀತಿಯೇನಿದೆಯೆಂಬುದನ್ನು ಬ್ರಿಟನಿನ ಪರವಾಗಿ ವೈಸರಾಯರೂ ಭಾರತ ಸಚಿವರೂ ಹಲವು ಸಲ ಹೇಳಿದ್ದಾರೆ. ಭಾರತದ ಅಭಿಪ್ರಾಯವೇನೆಂಬುದನ್ನೂ ಎಲ್ಲಾ ರಾಜಕೀಯ ಪಕ್ಷಗಳೂ ತಿಳಿಸಿವೆ; ಹಲವು ಬಾರಿ ಸಾರಿವೆ. ಹೀಗಿರಲು ಒಬ್ಬರ ಅಭಿಪ್ರಾಯವನ್ನು ಇನ್ನೊಬ್ಬರು ತಿಳಿಯಲು ಸಾಕಷ್ಟು ಅವಕಾಶವಿದ್ದಾಗ ತಪ್ಪು ತಿಳುವಳಿಕೆಯಿಂದ ಇಂದಿನ ವಿಷಮ ಪ್ರಸಂಗವು ಬಂದೊದಗಿದೆಯೆಂದು ಹೇಳಲು ಸಾಧ್ಯವಿಲ್ಲ. ಬ್ರಿಟನು ಇಂದಿನ ಯುದ್ಧದಲ್ಲಿ ಜೀವನ ಮರಣದ ಸಂಗ್ರಾಮದಲ್ಲಿ ತನ್ನ ಅಸ್ತಿತ್ವಕ್ಕಾಗಿ ಹೋರಾಡುತ್ತಿದೆಯೆಂದು ಬ್ರಿಟಿಷ್ ಪ್ರಧಾನರೇ ಸ್ಪಷ್ಟಪಡಿಸಿರುವರು. ಭಾರತವಾದರೂ ತನ್ನ ಅಸ್ತಿತ್ವಕ್ಕಾಗಿ ಹೋರಾಡದೆ ನಿರ್ವಾಹವಿರಲಿಲ್ಲ. ಭಾರತವೂ 'ಜೀವನಮರಣದ ಸಂಗ್ರಾಮಕ್ಕೆ' ತೊಡಗಿದೆ. ಭಾರತ ಸ್ವಾತಂತ್ರ್ಯದ ಕುರಿತು ಬ್ರಿಟನು ನಿರ್ಲಕ್ಷ್ಯದಿಂದ ವರ್ತಿಸಿದ ಬಗ್ಗೆ, ಈ ವಿಷಯವು [illegible]

[illegible]

ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯ ಪಕ್ಷದಲ್ಲಿಯೂ ಸಮಾನನವಾದ ಸಾಲಿನಲ್ಲಿ ರುವಂತೆ ಮಾಡುವುದು ಬ್ರಿಟನಿನ ಧ್ಯೇಯವೆಂದು ಅವರು ತಮ್ಮ ಪತ್ರದಲ್ಲಿ ಬರೆದಿರುವರು. ಇಂತಹ ಸಂದರ್ಭದಲ್ಲಿ ಭಾರತವು ಅವರ ಇಚ್ಛೆಗೆ ತಡೆಯುಂಟು ಮಾಡಿತೆಂದು ಅವರು ಹೇಳುತ್ತಾರೆಯೇ? ಸಾಮಂತ ಸ್ವರಾಜ್ಯವಾಗಲಿ, ಸಂಪೂರ್ಣ ಸ್ವರಾಜ್ಯವಾಗಲಿ ಭಾರತವು ರಾಜಕೀಯ ಸಂಘಟನೆಯ ಹಾದಿಯಲ್ಲಿ ಮುಂದುವರಿಯಬೇಕಾದರೆ ಅದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕು. ಅಂತಹ ಸಂದರ್ಭವನ್ನು ಭಾರತಕ್ಕೆ ಕಲ್ಪಿಸಿಕೊಡಲಿಲ್ಲ. ಭಾರತದ ಜನತೆಯ ಕೈಯಲ್ಲಿ ಆ ಅಧಿಕಾರವುಂಟೆಂದು ಬ್ರಿಟನು ತೋರಿಸಲಿಲ್ಲ. ಹೊಸರಾಜ್ಯ ಘಟನೆಯಂತೆ ಭಾರತದ ಜನತೆಯು ಪ್ರಾಂತಿಕ ಸರಕಾರಕ್ಕೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿದರು. ಪ್ರಾಂತಿಕ ಆಡಳಿತವು ವಿಶೇಷ ಯೋಗ್ಯತೆಯಿಂದಲೇ ನಡೆಯಿತು ಎಂಬುದನ್ನು ಬ್ರಿಟಿಷ್ ಪ್ರತಿನಿಧಿಗಳೇ ಕಂಠೋಕ್ತ ಒಪ್ಪಿದ್ದರು. ಆದರೆ, ಭಾರತದ ಜನಮತವನ್ನು ಕೇಳದೆ, ಭಾರತದ ಆರಿಸಿದ ಪ್ರತಿನಿಧಿಗಳನ್ನು ವಿಚಾರಿಸದೆ, ಮಹಾಯುದ್ಧದಂತಹ ಕಠಿಣಕಾರ್ಯಕ್ಕೆ ಬ್ರಿಟನು ಸ್ವೇಚ್ಛೆಯಿಂದ ಭಾರತವನ್ನು ಇಳಿಸಿತು. ಜನತೆಯ ರಾಜಕೀಯ ಸಂಘಟನೆಯಲ್ಲಿ ಪ್ರಗತಿಹೊಂದುವ ಅವಕಾಶವನ್ನು ಒಂದು ರೀತಿಯಿಂದ ಕಡೆದೂ, ಮತ್ತೆ ಇತರ ಅವಕಾಶವನ್ನು ಕಲ್ಪಿಸಿಕೊಡದೆಯೂ, ಭಾರತೀಯರೇ ತಮ್ಮ ರಾಜ್ಯಘಟನೆಯನ್ನು ಮಾಡಿಕೊಂಡು ಸುಧಾರಿಸಿಕೊಳ್ಳಬೇಕೆಂದು ಹೇಳುವ ಮಾತಿಗೆ ಬೆಲೆಯಿಲ್ಲ.

ಬ್ರಿಟನಿನ ಇತರ ಪ್ರತಿನಿಧಿಗಳು ಹೇಳಿದಂತೆ, ವೈಸರಾಯ್, ಭಾರತ ಸಚಿವರು ಆಗಾಗ ಹೇಳುತ್ತಾ ಬಂದಂತೆ, ಭಾರತದ ಸಮಸ್ಯೆಯ ಕುರಿತು ಮಾತೆತ್ತುತ್ತಾ ಇವರೂ ಇಲ್ಲಿ ಅಲ್ಪಸಂಖ್ಯಾತರ ಮತ್ತು ಸಂಸ್ಥಾನಗಳ ಕುರಿತು ಬೆರಳು ತೋರಿಸಿದ್ದಾರೆ. ಭಾರತದ ಈ ಕೆಲವು ವಿಚಾರದಲ್ಲಿ ತಮ್ಮ ಹೊಣೆಗಾರಿಕೆಯಿದೆಯೆಂದೂ ತಿಳಿಸಿದ್ದಾರೆ. ಹೀಗೆ ತಮ್ಮ ಹಿಂದಿನವರು ಹಾಡಿದ ಹಾಡಿನ ಪಲ್ಲವಿಯನ್ನು ಇವರೂ ತಿರಿಗಿ ಹಾಡಿದ್ದಾರೆ. ಎಲ್ಲಾ ಅಲ್ಪಸಂಖ್ಯಾತರನ್ನೂ ಸಂಪೂರ್ಣ ಸಂತಯಿಸಿ ಕೊಂಡು ಭಾರತದಂತಹ ಪ್ರಬಲ ಜನಸಂಖ್ಯೆಯ ರಾಷ್ಟ್ರವೊಂದು, ಯಾವುದಾದರೂ ಒಂದು ಕಾಲದಲ್ಲಿ ಸ್ವಾತಂತ್ರ್ಯವನ್ನು ಪಡೆಕೊಳ್ಳಲು ಸಾಧ್ಯವಿದೆಯೇ ಎಂದು ಸಂಶಯ ಪಡಬೇಕಾಗಿದೆ. ಅಲ್ಪಸಂಖ್ಯಾತರ ಮತ್ತು ಸಂಸ್ಥಾನಗಳ ನ್ಯಾಯವಾದ ಕೇಳಿಕೆಗಳನ್ನು ಮಾತ್ರ ಮುಂದಿಟ್ಟುಕೊಂಡು [illegible]

[illegible] ಸ್ವಾತಂತ್ರ್ಯವನ್ನು ಬ್ರಿಟನು ಕೊಡಲು ಸಿದ್ಧವಿಲ್ಲದಿದ್ದರೆ ಇದನ್ನು ಪ್ರಾಮಾಣಿಕತೆಯೆನ್ನುವುದು ಸಾಧ್ಯವಾಗಲಾರದು.

ಪತ್ರದ ಕೊನೆಯಲ್ಲಿ ಬಹಳ ಮನಮುಟ್ಟುವ ಮಾತುಗಳನ್ನು ಹೇಳಿದ್ದಾರೆ. ಜಗತ್ತಿನ ಶಾಂತಿಗಾಗಿ ಭಾರತವು ಬ್ರಿಟನಿನ ಬೆನ್ನ ಹಿಂದೆ ಬರಬೇಕೆಂದು ನಿವೇದಿಸಿಕೊಂಡಿದ್ದಾರೆ. ಇಂದಿನ ರಾಜಕೀಯ ಪ್ರಗತಿಯ ಕಾಲದಲ್ಲಿ, ಕೇವಲ ಹೃದಯಸ್ಪರ್ಶಿಯಾದ ಮಾತುಗಳಿಗೆ ಹೆಚ್ಚು ಬೆಲೆ ಬರಲಾರದು. ಮಾತುಗಳ ಹಿಂದೆ ನೀತಿಯಿರಬೇಕು. ಪ್ರಾಮಾಣಿಕತನಬೇಕು. ಹೇಳುವ ಮಾತಿನೊಡನೆ ಆ ರೀತಿಯ ಮಧುರ ಸಂಬಂಧವನ್ನು ತೋರಿಸುವ ಕಾರ್ಯಯೋಜನೆಗಳಿರಬೇಕು. ಅವು ಯಾವವೂ ಇಲ್ಲದೆ ಮಧುರ ನಿವೇದನೆಯಿಂದ ಮಾತ್ರ ಭಾರತೀಯರನ್ನು ಇಂದು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಕನಸಿನ ಗೋಪುರವಾಗಿದೆ.

ಖಾದೀ ಪ್ರಚಾರ

ಅಖಿಲಭಾರತ ಚರಕಾ ಸಂಘದ ಗ್ರೇಕ್ಷನೆಯ ಇಸವಿಯ ವಾರ್ಷಿಕ ವರದಿಯು ಪ್ರಕಟವಾಗಿದೆ. ಖಾದಿಗೆ ಕಳೆದ ವರ್ಷದಲ್ಲಿ ಆದ ಪ್ರಚಾರ, ಜನರ ಅನುಕೂಲತೆಗೆ ಸರಿಯಾಗಿ ಚರಕಾಸಂಘದವರು ಒದಗಿಸಿದ ಸೌಕರ್ಯ, ಇದರಿಂದ ಭಾರತದ ಬಡತನದ ನಿವಾರಣೆಯಲ್ಲಿ ಇದ್ದ ಪ್ರಯೋಜನಗಳನ್ನು ಈ ವರದಿಯು ನಮ್ಮ ಕಣ್ಣ ಮುಂದಿಡುತ್ತದೆ.

ಗ್ರೇಕ್ಷಲರಲ್ಲಿ ಪ್ರಾಂತಗಳಲ್ಲಿ ಕಾಂಗ್ರೆಸು ಮಂತ್ರಿಮಂಡಲಗಳು ಸ್ಥಾಪಿತವಾದಂದಿನಿಂದ ಖಾದಿಯ ಕಡೆಗೆ ಜನರು ಹೆಚ್ಚು ಲಕ್ಷ್ಯ ಕೊಡತೊಡಗಿದರು. ಹೀಗಾಗಿ ದೇಶದ ಬೇರೆ ಬೇರೆ ಕೇಂದ್ರಗಳಲ್ಲಿ ಹೆಚ್ಚು ಚಟುವಟಿಕೆಗಳಿಂದ ಕಳೆದ ವರ್ಷಗಳಲ್ಲಿ ಖಾದೀ ಕಾರ್ಯವು ಜರಗಿರುತ್ತದೆ. ಗ್ರೇಕ್ಷಲನೆಯ ಇಸವಿಯಲ್ಲಿ ಖಾದಿಯು ಬಹಳವಾಗಿ ಮಾರಾಟವಾಗಿದೆ. ಹಿಂದಿನ ವರ್ಷಕ್ಕಿಂತ ನೇಕಡಾ ಒಲರಷ್ಟು ಹೆಚ್ಚಿನ ವ್ಯಾಪಾರವಾಗಿದೆಯೆಂದು ಗಮನಾರ್ಹವಾದ ವಿಷಯವೇ ಆಗಿರುವುದು.

ಈ ಸಂದರ್ಭದಲ್ಲಿ ಅಧಿಕೃತವಲ್ಲದ ಖಾದಿಯನ್ನು ಮಾರಾಟಮಾಡುವವರು ಮುಂದೆ ಬಂದು, ಶುದ್ಧ ಖಾದಿಯೊಡನೆ, ಅಖಿಲಭಾರತ ಚರಕಾಸಂಘದವರೊಡನೆ ಮಾಡಿದ ನೀಚಸ್ಪರ್ಧೆಯಿಂದಾಗಿ ಖಾದೀ ಯೋಜನೆಯಲ್ಲಿ ಬಹಳ ತೊಡಕಾಗಿದೆಯೆಂಬುದನ್ನು ಇದರಲ್ಲಿ ತಿಳಿಸಿದ್ದಾರೆ. ಇಂತಹ ವಿಷಯಗಳನ್ನು ಜನತೆಯು ನಿಜವಾದ ಖಾದಿ ಯಾವುದು ಎಂದು ಸರಿಯಾಗಿ ತಿಳಕೊಳ್ಳದೆ ವಿನಾ ತಡೆಯಲು ಸಾಧ್ಯವಾಗುವುದಿಲ್ಲ. ಇಂದು ಬರಿಯ ಕೈನೂಲಿನ ಬಟ್ಟೆಯೆಂಬ ವಿಷಯದಿಂದ ವಸ್ತ್ರ ನಾವು ಅಂಗಡಿಗಳಲ್ಲಿ ರುವ ಬಟ್ಟೆಗಳನ್ನೆಲ್ಲಾ ಶುದ್ಧಖಾದಿಯೆಂದು ತಿಳಿದುಕೊಳ್ಳುವುದು ಸರಿಯಾದುದಲ್ಲ. ಖಾದಿಗೆ ಬೆಲೆಯೇರಿರುವ ಕಾರಣ ಖಾದೀ ಭಂಡಾರವಲ್ಲದೆ ಬೇರೆ ಕಡೆಗಳಲ್ಲಿ ಸಿಗುವ ಬಟ್ಟೆಗಳನ್ನು-ಸ್ವದೇಶಾಭಿಮಾನಕ್ಕಾಗಿಯೋ ಕೆಲವರು, ತಕ್ಕ ತಿಳಿಯದೆ ಕೆಲವರು ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಾರೆ. ಖಾದಿಯನ್ನು ಮಾಡುವ ಕೆಲಸಗಾರರಿಗೆ ಬಹಳ ಕಡಿಮೆ ಕೂಲಿಯಿದ್ದುದರಿಂದ ಅವರ ದಿನಕೂಲಿ ಹೆಚ್ಚು ಮಾಡಬೇಕೆಂಬ ಉದ್ದೇಶವಿಟ್ಟುದರಿಂದ ಖಾದಿಯು ಇತರ ಬಟ್ಟೆಗಳಿಗಿಂತ ಇಂದು ಹೆಚ್ಚು ಬೆಲೆಯುಳ್ಳದ್ದಾಗಿದೆ. ಇಂತಹ ಸಂದರ್ಭದಲ್ಲಿ ಸ್ವಂತ ಅಂಗಡಿಯಿಟ್ಟು ಖಾದೀ ವ್ಯಾಪಾರ ಮಾಡುವವರು ಚರಕಾಸಂಘದೊಡನೆ ಸ್ಪರ್ಧೆಮಾಡಿ ಶುದ್ಧವಲ್ಲದ ಖಾದಿಯನ್ನು ಮಾರಾಟಮಾಡಿ ದೇಶದ ಸಾಂಪತ್ತಿಕ ಪ್ರಗತಿಗೆ ಹಾನಿತರುವರೆಂಬ ರಾಷ್ಟ್ರೀಯ ದೃಷ್ಟಿಯಿಂದ ಅಖಿಲಭಾರತ ಚರಕಾಸಂಘದವರು ಸ್ವತಂತ್ರ ವ್ಯಾಪಾರಿಗಳಿಗೆ ಖಾದೀ ಮಾರಾಟಮಾಡಲು ಅಧಿಕಾರ ಕೊಡಬಾರದಾಗಿ ಗ್ರೇಕ್ಷಲರಲ್ಲಿ ನಿಶ್ಚಯಿಸಿದ್ದರು. ಇದಕ್ಕಾಗಿ ಚರಕಾಸಂಘವನ್ನು ಸ್ವಂತ ವ್ಯಾಪಾರಿಗಳು ದೂರತೊಡಗಿದರು. ಆದರೆ, ಬಡ ಕೂಲಿಗಾರರಿಗೆ ಸಂಬಳ ಹೆಚ್ಚಿಸಬೇಕೆಂಬ ತತ್ವದ ಮೇಲೆ ಚರಕಾಸಂಘವು ಖಾದಿಯ ಕ್ರಯವನ್ನು ಹೆಚ್ಚಿಸಿರಲು, ಜನರ ಖಾದೀ ಪ್ರೇಮವನ್ನು ದುರುಪಯೋಗಿಸಿ, ಅವರನ್ನು ವಂಚಿಸುವ ಮೂಲಕ, ಸ್ವಂತ ವ್ಯಾಪಾರಿಗಳು ತಮ್ಮ ಸ್ವಾರ್ಥಲಾಭಕ್ಕಾಗಿ ಇಂತಹ ರಾಷ್ಟ್ರೀಯ ಕೈಗಾರಿಕೆಗೆ ಹಾನಿ ತರುವುದು ನ್ಯಾಯವೆನಿಸಲಾರದು.

ಆದರೆ ಇತ್ತೀಚೆಗೆ, ಚರಕಾ ಸಂಘದವರು ಮರ್ಯಾದವಂತರಾದ ಸ್ವಂತ ಖಾದೀ ವ್ಯಾಪಾರಿಗಳಿಗೆ ಮಾರಾಟದ ಅಧಿಕಾರ ಕೊಡಲು ನಿಶ್ಚಯಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಅವರು ಒಂದು ನಗರದಲ್ಲಿ ಖಾದೀ ಭಂಡಾರವಿದ್ದರೆ, ಜನರು ಹೆಚ್ಚು ಖಾದಿಯನ್ನು ಅಪೇಕ್ಷಿಸುವ ಸಂದರ್ಭದಲ್ಲಿ ಮಾತ್ರ ಆ ಅಧಿಕಾರ ಕೊಡುತ್ತಾರೆ ಮಾತ್ರವಲ್ಲದೆ ಹಾಗೆ ಅಧಿಕಾರ ಹೊಂದಿದವರು ಇತರ ವಿದೇಶೀ ವ್ಯಾಪಾರವಾಗಲಿ ಮಾಡಬಾರದಾಗಿ ವಿಧಿಸಿದ್ದಾರೆ.

ಹೇಗಿದ್ದರೂ ಇಂದು ಖಾದಿಯು ರಾಷ್ಟ್ರೀಯ ಉದ್ಯಮವಾಗಿದೆ; ಖಾದಿಯು ಭಾರತದ ದಾರಿದ್ರ್ಯ ನಿವಾರಣೆಗೆ ಅತ್ಯಂತ ಸಹಕಾರಿಯೆಂದೂ ಖಾದಿಯನ್ನುಡುವುದು ನಮ್ಮ ಧರ್ಮವೆಂದೂ, ಖಾದಿಯನ್ನು ಕೊಂಡುಕೊಳ್ಳುವಾಗ ಶುದ್ಧ ಖಾದಿಯನ್ನೇ ಕೊಂಡುಕೊಳ್ಳಬೇಕೆಂದೂ ಸಾಕಷ್ಟು ಪ್ರಚಾರವಾಗಬೇಕು. ಅಖಿಲಭಾರತ ಚರಕಾ ಸಂಘದವರು ತಮ್ಮ ಪಾಲಿನ ರಚನಾತ್ಮಕ ಕಾರ್ಯದಲ್ಲಿ ತಲ್ಲೀನರಾಗಿ ದುಡಿಯುತ್ತಿದ್ದಾರೆ. ಕಾಂಗ್ರೆಸ್ ಕೆಲಸಗಾರರಾದವರು ಈ ಕಡೆಗೆ ವಿಶೇಷ ಗಮನಕೊಡುವುದು ಅವಶ್ಯವಾಗಿದೆ.

ನೆಹರುಗಳೊಡನೆ ಸೆರೆಮನೆಯಲ್ಲಿ ಕಳೆದ ಹದಿನೈದು ದಿನಗಳು!

ಎಸೆಂಬ್ಲಿ ಮೆಂಬರರೊಬ್ಬರ ಅನುಭವ

ಆರೋಗ್ಯಕ್ಕಾಗಿ ಶಿರಾಸನ ಮಾಡುತ್ತಾರೆ

ಲೇಖನಿ ತಿರುಗಿಸಿದ ಕೈಯಲ್ಲಿ ಗುದ್ದಲಿ ಹಿಡಿದಿರುವರು

"ಅವರ ಬಳಿಯಿರುವುದಕ್ಕಿಂತ ಹೆಚ್ಚಿನ ಆನಂದವು ನನಗೆ ಬೇರಿಲ್ಲ. ಆದರೂ ಅವರ ಬಳಿ ಇರುವುದೆಂದರೆ ನನಗೆ ಒಂದು ತೆರನ ಭಯ ಭೀತಿ. ನಾನು ಅವರ ಹೃದಯದ ಹತ್ತಿರ ಇರಬಹುದೆಂದು ನನಗೆ ಗೊತ್ತಿತ್ತು. ಆದರೆ ಅವರ ವ್ಯಕ್ತಿತ್ವದ ಬಳಿ ಇರುವುದೆಂದರೆ ಬಹಳ ಕಷ್ಟ. ಈ ವಿಚಾರಗಳೊಡನೆ ನಾನು ಅವರನ್ನು ಜೈಲಿನ ಪ್ರವೇಶದ್ವಾರದ ಬಳಿ ಪಾದಗಳನ್ನು ಸ್ಪರ್ಶಿಸಿಕೊಂಡೇ ಸ್ವಾಗತಿಸಿದೆ. ತಮ್ಮ ಪ್ರೀತಿಯ ಮುಂದಾಳುವು ಕತ್ತಲೆ ಕೋಣೆಯನ್ನು ಸೇರುವ ಆ ಭವ್ಯ ದೃಶ್ಯದಿಂದ ಉತ್ಸಾಹಿತರೂ ಉದ್ವಿಗ್ನರೂ ಆದ ಕಾಂಗ್ರೆಸ್ ಮಂದಿ ಜೈಲಿನ ಹೊರಗಡೆಯಿಂದ 'ವಂದೇ ಮಾತರಂ' "ಜವಾಹಿರಲಾಲಕೀಜೈ' ಎಂದು ಜಯಘೋಷವನ್ನು ಮಾಡುತ್ತಾ ಇದ್ದರು. ಅವರ ಮುಖಭಾವದಲ್ಲಿ ಸ್ಥಿರವಾದ ಧೈರ್ಯವನ್ನು ನಾನು ಕಂಡೆನು. ನಾಲ್ಕು ವರ್ಷಗಳ ಕಠಿಣ ಸೆರೆಮನೆಯ ವಾಸವೂ ಅವರ ಪ್ರಕೃತಿ ಸಹಜ ಧೈರ್ಯವನ್ನು ಕೆಡಿಸಿರಲಿಲ್ಲ."

ಹೀಗೆಂದು ನ್ಯಾಶನಲ್ ಹೆರಾಲ್ಡಿನಲ್ಲಿ ಪಂಡಿತ ನೆಹರುಗಳೊಡನೆ ಸೆರೆಮನೆಯಲ್ಲಿದ್ದ ಪಂ। ಹರೀಶಚಂದ್ರ ಬಜಪೆ, ಎಂ. ಎಲ್. ಎ. ಇವರು ಬರೆಯುತ್ತಾರೆ. ನಾಕೆ ಭಾರತೀಯ ನಿಜವಾದ ಪ್ರೀತಿಯ ಆ ವ್ಯಕ್ತಿಯೊಡನೆ ಹದಿನೈದು ದಿನಗಳನ್ನು ಕಳೆದ ಅನೇಕ ಸುದ್ದಿಗಳನ್ನು ಅವರು ಈ ರೀತಿಯಿಂದ ವರ್ಣಿಸುತ್ತಾರೆ:

ನವಂಬರ ೧೭ನೆಯ ತಾರೀಕಿನ ದಿನ ರಾತ್ರಿ ೧೦ ಗಂಟೆಗೆ ಡೆಹರಾಡೂನ್ ಸೆರೆಮನೆಯಲ್ಲಿ 'ಏ' ಕ್ಲಾಸಿನ ಕೈದಿಗಳನ್ನಿಡುವ ಕೋಣೆಯ ಕಠಿಣವಾದ ಬಾಗಿಲು ದರ್ರೆಂದು ತೆಗೆಯಲ್ಪಟ್ಟಿತು. ಪಂಡಿತ ನೆಹರುಗಳನ್ನು ಅಲ್ಲಿನ ಕೋಣೆಯೊಂದರಲ್ಲಿ ಇಡಲಾಯಿತು.

ನೆಹರುಗಳು ಸೆರೆಮನೆಗೆ ತರಲ್ಪಡುವರೆಂಬುದನ್ನು ಅತ್ಯಂತ ಗುಪ್ತವಾಗಿರಿಸಲಾಗಿತ್ತು. ಅವರಿಗೆ ನಾಲ್ಕು ವರ್ಷ ಕ್ರೂರ ಅಮಾನುಷ ಶಿಕ್ಷೆಯಾಗಿದ್ದ ಸುದ್ದಿ ಕೆಲವು ದಿನಗಳ ಹಿಂದೆಯೇ ನಮಗೆ ತಿಳಿದಿತ್ತು. ಆದ್ದರಿಂದ ಅವರ ಸಲುವಾಗಿಯೇ ಸೆರೆಮನೆಯಲ್ಲಿ ಈ ಎಲ್ಲಾ ವ್ಯವಸ್ಥೆಗಳಿರಬಹುದೆಂದು ನಾನು ಊಹಿಸಿದ್ದೆನು. ನನ್ನ ಕೋಣೆಯಲ್ಲಿದ್ದ ಶ್ರೀ ಕೃಷ್ಣಪಾಲೀವಾಲರನ್ನು ಬೇರೆ ಕಡೆಗೆ ಒಯ್ಯಲಾಯಿತು. ನನ್ನ ಕೋಣೆಯಲ್ಲಿ ನಾನೊಬ್ಬನೇ ಇರಹತ್ತಿದೆನು. ಆದರೆ ಮುಂದೆ ಕೆಲವು ದಿನಗಳಲ್ಲಿಯೇ ಈ ಪ್ರಖ್ಯಾತ ಕೈದಿಯೊಡನೆ ಕಠಿಣ ಜೀವನದ ಅನುಭವವನ್ನು ಪಡೆವ ಭಾಗ್ಯವು ನನಗೆ ದೊರಕಿತು."

ಒಳ್ಳೆಯ ತೋಟಗಾರ

"ಗೋರಖಪುರದಿಂದ ಅವರನ್ನು ಡೆಹ್ರೂಡೆನ್ ಸೆರೆಮನೆಗೆ ಒಯ್ಯಲಾಯಿತು. ಕಿಟಕಿಗಳನ್ನು ಮುಚ್ಚಿದ ರೈಲು ಬಂಡಿಯ ಕೋಣೆಯಲ್ಲಿ ಕುಳ್ಳಿರಿಸಿ, ಅವರನ್ನು ಲಖ್ನೋದ ಡಾಲಿಗಂಜ್ ರೈಲ್ವೆ ಸ್ಟೇಶನ್‌ವರೆಗೆ ತಂದರು. ಈ ಸಂಚಾರಕ ಸೆರೆಮನೆಯಲ್ಲಿಯೂ ಅವರಿಗೆ ಹೊರಗಡೆಯ ಪ್ರಕೃತಿಯ ಭವ್ಯ ದೃಶ್ಯವನ್ನು ನೋಡಲು ಎಡೆಗೊಡಲಿಲ್ಲ. ಅಲ್ಲಿಂದ ಮುಚ್ಚಿದ ಒಂದು ಕಾರಿನಲ್ಲಿ ಕುಳ್ಳಿರಿಸಿಕೊಂಡು ರೋಸಾ ಎಂಬಲ್ಲಿಗೆ ತಂದರು. ಅಲ್ಲಿ ಡೆಹ್ರಾಡನ್ ಪೋಲೀಸು ಸುಪರಿಂಟೆಂಡೆಂಟರು, ಮೋಟರು ಕಾರು ಹಿಡಿದು ಕಾಯುತ್ತಿದ್ದರು. ಅವರು ತಾವು ತಂದಿದ್ದ ಮೋಟರು ಕಾರಿನಲ್ಲಿ ಕುಳ್ಳಿರಿಸಿ ಪಂಡಿತರನ್ನು ಡೆಹ್ರಾಡೆನ್ ಸೆರೆಮನೆಗೊಯ್ದರು. ರೈಲು ಬಂಡಿಗಳಲ್ಲಿ, ಕಾರುಮೋಟರುಗಳಲ್ಲಿ ನಿತ್ಯ ಅಲೆದಾಡುವ ಅಭ್ಯಾಸ ಅವರಿಗಿದ್ದರೂ ಈ ವಿಧದ ಪ್ರಯಾಣದಿಂದ ಅವರು ಬಹಳ ಆಯಾಸಗೊಂಡವರಂತೆ ಕಾಣುತ್ತಿದ್ದರು. ಆದರೆ ವಿಶ್ರಾಂತಿಯೆಂಬುದ ಅವರಿಗೆ ಗೊತ್ತೇ ಇಲ್ಲ. ಬೆಳಗು ಮುಂಜಾವಕ್ಕೇ ಅವರು ಉತ್ಸಾಹದಿಂದ ಎದ್ದು, ಒಂದು ಗುದ್ದಲಿ ತೆಗೆದು ಸೆರೆಮನೆಯ ತೋಟವನ್ನು ಇತರ ಕೂಲಿಗಳಂತೆ ಅಗೆಯ ತೊಡಗುವರು.

ಒಂದು ಘಳಿಗೆಯ ವರೆಗೆ ಅವರಿಗೆ ವಿಶ್ರಾಂತಿಯೆಂಬುದೇ ಇರಲಿಲ್ಲ. ಯಾರು ತನ್ನ ಕೈಯಲ್ಲಿ ಮೃದುವಾದ ಲೇಖನಿ ಹಿಡಿದು ಬರೆವ ನಿತ್ಯ ಅಭ್ಯಾಸಿಗಳೋ, ಅವರೇ ಕಠಿಣ ಪದದ ಗುದ್ದಲಿಯನ್ನು ಕೂಲಿಯೊಬ್ಬನಂತೇ ಆಯಾಸವಿಲ್ಲದೆ ಉಪಯೋಗಿಸಿಕೊಂಡರು. ಅವರ ಕೆಂಪು ಮುಖವು ಪ್ರಸನ್ನತೆ ಆನಂದಗಳಿಂದ ಆವರಿಸಿದ್ದುದನ್ನು, ಆ ಭವ್ಯ ಮನೋಹರ ಚಿತ್ರವನ್ನು ನಾನು ಆಗ ನೋಡುತ್ತಿದ್ದೆ. ಅವರು ನನಗೂ ಕೆಲಸಮಾಡಲು ಹೇಳುತ್ತಿದ್ದರು, ಆದರೆ ಅವರಿಗಾಗಿ ಗೊತ್ತುಮಾಡಿದ ಕೆಲಸವನ್ನು ನಾನು ಮಾಡಲು ಬಿಡುತ್ತಿರಲಿಲ್ಲ. ನಾನು ಅವರ ಬದಲಾಗಿ ನೆಲವನ್ನು ಅಗೆಯಲು ಅಪೇಕ್ಷೆಪಟ್ಟೆ, ಆದರೆ ಅದರಿಂದ ಅವರು ಬೇಸರ ತೋರಿಸಿದರು. ತಮ್ಮ ಗೆಳೆಯರು ಡೆಹ್ರಾಡನಿನಿಂದ ಕಳುಹಿಸಿದ ಒಳ್ಳೆಯ ಬೀಜಗಳನ್ನು ಹೆಕ್ಕಿಕೊಂಡು, ಒಬ್ಬ ಒಳ್ಳೆಯ ತೋಟಗಾರನಂತೆ ಅವರೂ ಆ ಬೀಜಗಳನ್ನು ಯೋಗ್ಯ ಸ್ಥಳದಲ್ಲಿ ಬಿತ್ತಿ ಗೊಬ್ಬರ/ನೀರುಗಳಿಂದ ಅವುಗಳನ್ನು ಆರೈಕೆ ಮಾಡಿದರು. ಅವರ ಆ ಕೃಷಿಯು ದೇಶದ ಭವಿಷ್ಯತ್ತನ್ನೇ ಬದಲು ಮಾಡುವ ಸಾಮರ್ಥ್ಯ ಪಡೆದಿದ್ದಿತು.

ಶಿಸ್ತಿನ ದಿನಚರಿ

"ಸೆರೆಮನೆಯೊಳಗೂ ಅವರು ಬಹಳ ಶಿಸ್ತಿನ ಜೀವನವನ್ನು ನಡೆಸುತ್ತಾರೆ. ಬೆಳಗು ಮುಂಜಾವಕ್ಕೆ ೫ರಿಂದ ೫-೩೦ರ ಒಳಗೆ ಏಳುತ್ತಾರೆ. ಮತ್ತೆ ಸ್ವಲ್ಪ ವ್ಯಾಯಾಮ ತೆಗೆದುಕೊಳ್ಳುತ್ತಾರೆ. ಅವರು ತಮ್ಮ ಮಾಂಸಖಂಡಗಳನ್ನು ಗಟ್ಟಿಮಾಡಿಕೊಳ್ಳುವುದಕ್ಕಿಂತ ವಿಸ್ತಾರ ಮಾಡಿಕೊಳ್ಳಲು ಗಮನಕೊಡುತ್ತಾರೆ. ಅವರ ವ್ಯಾಯಾಮಗಳಲ್ಲಿ ಶಿರಾಸನವು ಒಂದು. ಅಥವಾ ಮೇಲೆ ಜೈಲು ಆವರಣದೊಳಗೆ ಅವರು ಒಮ್ಮೆ ಸುತ್ತಾಡಿ ಬರುತ್ತಾರೆ. ಸಾಧಾರಣ ಎಂಟು ಗಂಟೆಗೆ ಎರಡು ತುಂಡು ಬ್ರೆಡ್ಡುಗಳೊಡನೆ ಟೀ ಕುಡಿದು ಚರಕಾ ಹಿಡಿದು ನೂಲಲು ತೊಡಗುತ್ತಾರೆ. ಒಂದು ತಾಸಿಗಿಂತ ಹೆಚ್ಚಿನ ಹೊತ್ತು ನೂಲುತ್ತಾರೆ. ೧೧-೩೦ಕ್ಕೆ ಅವರು ಊಟ ಮಾಡುವರು. ಅಕ್ಕಿ, ತರಕಾರಿ, ಗೋಧಿಗಳಿಂದ ಕೂಡಿದ ಆಹಾರ. ಚಪಾತಿಗಳನ್ನು ತಾವಾಗಿಯೇ ತಯಾರಿಸುತ್ತಾರೆ. ಭಾರತೀಯ ರೀತಿಯಲ್ಲಿಯೇ ಊಟ ಮಾಡುವರು. ಆಮೇಲೆ ಸ್ವಲ್ಪ ವಿಶ್ರಾಂತಿ ಹೊಂದಿ ಓದಲು ಆರಂಭಿಸುತ್ತಾರೆ. ಸಾಧಾರಣ ೫ ಗಂಟೆಯ ಹೊತ್ತಿಗೆ ಟೀ ಕುಡಿದು ಒಮ್ಮೆ ಸುತ್ತಾಡಿ ಬರುತ್ತಾರೆ. ೭-೩೦ಕ್ಕೆ ಸಂಜೆಯ ಆಹಾರ ತೀರಿಸಿ, ಎರಡು ತಾಸುಗಳ ತನಕ ಓದಿ ನಿದ್ರೆ ಮಾಡುತ್ತಾರೆ.

ಇರುವ ಕಿರುಕೋಣೆ

ಒಂದು ಕಿರುಕೋಣೆ, ಅದರ ಸುತ್ತು ಆವರಣವಾಗಿರುವ ಗೋಡೆ ಬಹಳ ಉನ್ನತವಾಗಿಲ್ಲ, ಆ ಗೋಡೆಯು ಕೋಣೆಯನ್ನು ಬಳಸಿಕೊಂಡು ಹಿಂಬಾಗದಲ್ಲಿ ಬಹು ಎತ್ತರವಾಗಿರುವ ಇನ್ನೊಂದು ಗೋಡೆಗೆ ಅಂಟಿಕೊಂಡಿದೆ. ಬದಿಯಲ್ಲಿಯೇ ಇನ್ನೊಂದು ಆವರಣ. ಅದನ್ನು ಹಿಂದೆ ಗಲ್ಲಿಗೇರಿಸುವವರ ಕೆಲಸ ಮುಗಿಸಲು ಉಪಯೋಗಿಸುತ್ತಿದ್ದರು. ಜೀವನದ ಅಂತ್ಯಕಾಲವನ್ನು ಒಂದರೆಕ್ಷಣದಲ್ಲಿಯೇ ಕಾಣಬೇಕಾದ ಬಂಧಿತರನ್ನು ಅಲ್ಲಿ ಇಡುತ್ತಿದ್ದರು. ಈ ಕೋಣೆಯಲ್ಲಿ ಪಂಡಿತ ನೆಹರುಗಳು ಇದ್ದಾರೆ. ಭಾರತದ ತೇಜಸ್ವೀ ಮೂರ್ತಿ, ಸ್ವಾತಂತ್ರ್ಯ ಸಂಗ್ರಾಮದ ನರಕೇಸರಿ ಇಂದು ಅಲ್ಲಿ ಬಂಧಿತರಾಗಿ ಗಾಂಭೀರ್ಯತೆಯಿಂದ ನಾಲ್ಕು ವರ್ಷಗಳ ಅಮಾನುಷ ಶಿಕ್ಷೆಯನ್ನು ಅನುಭವಿಸುತ್ತಾರೆ.

ಎಮೆರಿಯವರ ತಪ್ಪು ಹೇಳಿಕೆ

"ಪಾರ್ಲಿಮೆಂಟಿನಲ್ಲಿ, ಭಾರತದಲ್ಲಿ ಯುದ್ಧ ವಿಚಾರದ ವಿಷಯ ಚರ್ಚೆ ನಡೆದಾಗ, ಮಾತುಕತೆ ಬಂದು, ಭಾರತ ಸಚಿವರಾದ ಎಮೆರಿಯವರು, ನೆಹರುಗಳಿಗೆ ಸೆರೆಮನೆಯಲ್ಲಿ ಬಹಳ ಸೌಕರ್ಯಗಳಿವೆಯೆಂದರು. ನಾನು ಅವರೊಡನೆ ಸೆರೆಮನೆಯಲ್ಲಿ ಹದಿನೈದು ದಿನಗಳ ತನಕ ಇದ್ದೆನು. ನನಗೆ ಯಾವ ವಿಶೇಷ ಸೌಕರ್ಯವೂ ಕಾಣಲಿಲ್ಲ. ಎಮೆರಿಯವರ ಹೇಳಿಕೆ ಸಾರ್ವಜನಿಕರನ್ನು ತಪ್ಪು ಗ್ರಹಿಸುವಂತೆ ಮಾಡುವುದಾಗಿದೆ. ಉಳಿದವರೊಂದಿಗೆ ಪಂಡಿತರನ್ನು ಇಟ್ಟಿರುವುದಾಗಿ ಎಮೆರಿಯವರು ಹೇಳುತ್ತಾರೆ. ಆ ಉಳಿದವರೆಂದರೆ ನಾನೇ. ಶಿಕ್ಷಿತನಾದ ಇನ್ನೊಬ್ಬ ಕೈದಿಯು ಯಾವನಾದರೂ ಒಬ್ಬ ಸ್ವತಂತ್ರ ವ್ಯಕ್ತಿಯಲ್ಲ. ಅವನ ಕುಟುಂಬದವನಲ್ಲ. ನನ್ನ ಬಿಡುಗಡೆಯಾದ ನಂತರ ಅವರು ಒಬ್ಬರೇ ಆ ಕೋಣೆಯಲ್ಲಿರುವರು. ಹಿಂದೆ ಹೊರಗಿನಿಂದ ಒಬ್ಬ ಅಡಿಗೆಯವನನ್ನು ಅವರಿಗೆ ಕೊಟ್ಟಿದ್ದರು. ಈಗ ಅವನನ್ನೂ ತೆಗೆದಿರುವರು. ಇದರ ಕಾರಣವು ಅಧಿಕಾರಿಗಳಿಗೇ ಗೊತ್ತು. ಆದರೆ ಅವನಿಗೆ ಅಡಿಗೆ ಮಾಡಲು ಬರುತ್ತಿರಲೇ ಇಲ್ಲ. ನೆಹರುಗಳಿಗೆ ಎಮೆರಿಯವರು ಹೇಳುವ ವಿಶೇಷ ಸೌಕರ್ಯ ಬಿಟ್ಟು, [illegible] ಸ್ವಾತಂತ್ರ್ಯ [illegible] ನನ್ನ ಅನುಭವಕ್ಕೆ ಬಂದಿಲ್ಲ.

ಆಹ್ವಾನ

ಧನವು ಹೇರಳವಾಗಿ ಕೂಡಿಕೆಯಾಗಿದೆ.

ಅದುಕಾರಣ ಜವಸಧಾನ್ಯಗಳು (ಕೃಷಿ ಉತ್ಪತ್ತಿ) ಸರಕಾರೀ ಪತ್ರಗಳು ವಿಮಾಪಾಲಿಸಿ ಮೊದಲಾದುವುಗಳ ಜವಾಬ್ದಾರಿಯ ಮೇಲೆ ಕಡಿಮೆ ದರದ ಬಡ್ಡಿಯಲ್ಲಿ ಸಾಲಗಳು ಸಿಗುವುವು. ಈ ಸೌಕರ್ಯಗಳ ಕಡೆಗೆ ಗಮನವಿತ್ತು ಸಂದರ್ಭದ ಸದುಪಯೋಗ ಮಾಡಿಕೊಳ್ಳಿ.

ಕೋಟಿದ್ರವ್ಯದ ವಹಿವಾಟು

ಸ್ಥಾಪಿತ:—೧೯೦೬

ಕೆನರಾ ಬೇಂಕ್ ಲಿಮಿಟೆಡ್.

CANARA BANK LIMITED.

ನಾವು ಆತ್ಮರಕ್ಷಣೆಯನ್ನು ಮಾಡಿಕೊಂಡಿದ್ದೇವೆ.

ಕಠಿಣ ಪ್ರಸಂಗಗಳು ಬರಬಹುದು!

ಬ್ರಿಟಿಷ ಸೈನಿಕರ ಯುದ್ಧೋತ್ಸಾಹ!

ಯುದ್ಧಕಾರ್ಯದ ವಿಷಯ ಚರ್ಚಿಲರ ಭಾಷಣ



ಚರ್ಚಿಲರು

ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಚರ್ಚಿಲ್ಲರು ಈ ವಾರದಲ್ಲಿ ಒಂದು ಮಹತ್ವದ ಭಾಷಣವಿತ್ತು ಅದರಲ್ಲಿ ಬ್ರಿಟಿಷರ ಯುದ್ಧ ಕಾರ್ಯಗಳ ವರ್ಣನೆಗಳನ್ನು ಮಾಡಿರುವರು. ಜಗತ್ತಿನ ಯುದ್ಧ ಕಾರ್ಯಗಳನ್ನು ವಿವರಿಸಿದರು. ಬ್ರಿಟನು ಈ ಯುದ್ಧದಲ್ಲಿ ಹೊಂದಿದ ಅನುಭವಗಳನ್ನು ಹೇಳಿದರು. ಬ್ರಿಟನಿಗೆ ಇನ್ನೂ ಕಠಿಣ ಪ್ರಸಂಗಗಳು ಬರಬಹುದೆಂದರು. ಇನ್ನೂ ಜೋರಾಗಿ ವಿಮಾನ ಧಾಳಿಗಳಾಗಬಹುದೆಂದರು. ಬ್ರಿಟನು ಸಧೈರ್ಯವಾಗಿ ಬಂದುದೆಲ್ಲವನ್ನೂ ಎದೆಗೊಟ್ಟು ಎದುರಿಸುವುದೆಂದರು.

ಇಟಲಿಯನರ ಮೇಲೆ ಸಹಾನುಭೂತಿ

ಜೂರಜಬ್ಬದ ಯುದ್ಧದಲ್ಲಿ ಆಸ್ಟ್ರೇಲಿಯನ್ ಸೈನಿಕರು ಮಾಡಿದ ಸಾಹಸಗಳನ್ನು ವರ್ಣಿಸುತ್ತಾ ಅಲ್ಲಿ ಇಟಲಿಯನ್ ಸೈನಿಕರು ತಮ್ಮ ಹಿಂದಿನ ಕ್ಷಾತ್ರತೇಜವನ್ನು ಪರಾಕ್ರಮವನ್ನು ತೋರಿಸಲಿಲ್ಲವೆಂದರು. ಈ ಸಂದರ್ಭದಲ್ಲಿ ತನಗೆ ಇಟಲಿಯನರ ಮೇಲೆ ಯಾವುದೇ ತರದ ದ್ವೇಷವಿಲ್ಲವೆಂದೂ ಸಹಾನುಭೂತಿಯಿಂದೆಯೆಂದೂ ತಿಳಿಸಿದರು

ಬ್ರಿಟಿಷ್ ಸೈನ್ಯವು ಬಹಳ ಕಷ್ಟದಿಂದ, ಅನುಪಮ ಸಾಹಸದಿಂದ ಮರಳಿನ ಅರಣ್ಯದಲ್ಲಿ ಹೋರಾಡಿದುದನ್ನು ಬಹಳ ಗಂಭೀರವಾಗಿ ವರ್ಣಿಸಿದರು ಬ್ರಿಟಿಷರಿಗೆ ಇದರಲ್ಲಿ ಬಹಳ ಕಡಿಮೆ ನಷ್ಟವಾಗಿದೆಯೆಂದೂ, ಹಾಗಾಗಿ ಬ್ರಿಟಿಷ ಯೋಧರ ಉತ್ಸಾಹ ಹೆಚ್ಚಿರುವುದೆಂದೂ ಹೇಳಿದರು.

ಸಿದಿಬರಾಣಿ ಧಾಳಿ

ಸಿದಿಬರಾಣಿಯಲ್ಲಿ ಬ್ರಿಟಿಷ್ ಸೈನಿಕರಿಗೆ ಆದ ವಿಜಯವು ಬಹಳ ಸಾಹಸದ್ದಾಗಿದೆಯೆಂದು ಸ್ಪಷ್ಟಪಡಿಸಿದರು. ಈ ಯುದ್ಧದಲ್ಲಿ ಗೆಲ್ಲಬೇಕಾದರೆ ಕಠಿಣ ವಿಪತ್ತುಗಳಿಗೆ ಎದೆ ಗೊಡುವ ದೃಢ ಸಂಕಲ್ಪವಿರಬೇಕೆಂದೂ, ಹೀಗೆ ಮಾಡಿದರೆ ಮಾತ್ರ ಬ್ರಿಟನ್ನು ತನ್ನ ಯೋಗ್ಯತೆಯನ್ನು ಸ್ಪಷ್ಟಪಡಿಸಿದಂತಾಗುವುದೆಂದೂ ಸಾರಿದರು.

[illegible]

[illegible]

...ಚನ್ನಾಗಿ ತೋರಿಸಿದ್ದಾರೆಂದು ತಿಳಿಸಿ, ನಾವು ಇನ್ನು ಮುಂದೆಯೂ ಪ್ರತ್ಯೆಯ ಸಜ್ಜಿತರಾಗಿ, ವಿಜಯಮಾರ್ಗದಲ್ಲಿ ಮುಂದುವರಿಯುಂತಾಗಬೇಕೆಂದು ಹುರಿದುಂಬಿಸಿದರು. ಮತ್ತೆ ಈ ವರ್ಷದಲ್ಲಿ ಆದ ಅನುಭವವು ತೃಪ್ತಿಕರವಾಗಿದೆಯೆನ್ನುತ್ತಾ, ನಮ್ಮ ದೇಶವನ್ನು ರಕ್ಷಿಸುವ ಮತ್ತು ಇನ್ನಿತರ ಸಾಹಸಗಳನ್ನು ಮಾಡುವ ಶಕ್ತಿ ನಮಗಿರುವುದೆಂದೂ ಹೇಳಿದರು.

ಶಸ್ತ್ರಾಸ್ತ್ರಗಳ ಸಿದ್ಧತೆಯಿದೆ

ಇದುವರೆಗೆ ಶತ್ರುಗಳಲ್ಲಿರುವಂತಹ ಶಸ್ತ್ರಸಾಮಾಗ್ರಿಗಳು ತಮ್ಮಲ್ಲಿರಲಿಲ್ಲವೆಂದೂ, ಈಗ ಸರ್ವಸಿದ್ಧತೆಯಿರುವುದೆಂದೂ ಹೇಳುತ್ತಾ, ೧೯೪೧ ರಲ್ಲಿ ನಮ್ಮ ಶಸ್ತ್ರಸಿದ್ಧತೆಯ ಕಾರ್ಯವು ಇಂದಿಗಿಂತಲೂ ಹೆಚ್ಚಾಗುವುದೆಂದು ತಿಳಿಸಿ, ತಮಗೆ ಬೇಕಾದಷ್ಟು ಸಾಮಗ್ರಿಗಳು ಇಂದು ಅಮೇರಿಕದಿಂದ ಸಿಗುವುದೆಂದು ಹೇಳಿ, ಪಾರ್ಲಿಮೆಂಟಿನ ಸಭಾಸದರು ಇನ್ನೂ ಹೆಚ್ಚಾಗಿ ಯುದ್ಧ ಕಾರ್ಯದಲ್ಲಿ ಕೆಲಸ ಮಾಡಬೇಕೆಂದರು

ಕಠಿನ ಕಾಲ ಬರಲಿದೆ

ಇನ್ನು ಮುಂದಿನ ಯುದ್ಧವು ಯಾವ ಕಾಲದ ವರೆಗೆ ಸಾಗುವುದೆಂದು ನಮಗೆ ಈಗ ಹೇಳಬರುವುದಿಲವೆಂದೂ, ಆದ ಕಾರಣ ಆಹಾರ ಸಾಮಾಗ್ರಿಗಳ ವಿಷಯದಲ್ಲಿ ಹೆಚ್ಚಿನ ಜಾಗರೂಕತೆಯಿಂದ ವರ್ತಿಸಬೇಕೆಂದೂ, ಈ ಯುದ್ಧವು ಬಹುಕಾಲ ಮುಂದುವರಿಯುವುದು ಶಕ್ಯವಿರುವುದೆಂದೂ, ಇನ್ನು ಕೆಲವೇ ದಿನಗಳಲ್ಲಿಯೇ ನಮಗೆ ಬಹಳ ಕಠಿಣ ಪ್ರಸಂಗವು ಬರಬಹುದೆಂದೂ, ಎಂತಹ ವಿಪತ್ತೇ ಬರಲಿ, ಬಹಳ ಎಚ್ಚರದಿಂದ ಎದುರಿಸಲು ಸಿದ್ಧರಾಗಿರಬೇಕೆಂದೂ ಹೇಳಿದರು ಲಂಡನಿಗೆ ಧಾಳಿಯಾಗುವ ಭೀತಿ ಬಹಳವಾಗಿರುವುದೆಂದರು

ರಕ್ಷಣೆಯ ಸಿದ್ಧತೆಗಳು

ಸ್ಕಾಟ್ಲೇಂಡಿನ ಒಂದು ತುದಿಯಿಂದ ಆಯರ್ಲೇಂಡಿನ ಇನ್ನೊಂದು ತುದಿಯವರೆಗೆ ಸೈನಿಕರು ತೋಪುಗಳಿಂದ ಸಜ್ಜಿತರಾಗಿ ನಿಂತಿರುವವೆಂದೂ, ಅವರಲ್ಲಿ ಉತ್ಸಾಹವು ತುಂಬಿ ತುಳುಕುತ್ತಿವೆಯೆಂದೂ, ಫ್ರೆಂಚರ ಅಪಜಯದಿಂದ ನಾವು ಎಚ್ಚರಗೊಂಡು ಹೆಚ್ಚು ಜಾಗರೂಕರಾಗಿರಬೇಕೆಂದೂ ತಿಳಿಸಿದರು

ತಮ್ಮ ಸೈನ್ಯವು ಬೇಕಾದಾಗ ಬೇಕಾದಲ್ಲಿಗೆ ಚಲಿಸಲು ಸಿದ್ಧವಿರುವುದಾಗಿ ಹೇಳಿ, ಹಿಂದೆ ನೆಪೋಲಿಯನನು ಹೇಗೆ ಶಕ್ತಿವಂತ, ಸಾಮರ್ಥ್ಯವಂತ ಸಿದ್ಧನೋ ಹಾಗೆಯೇ ಇಂದು ಹಿಟ್ಲರನೂ ಇರುವವನಾದರೂ, ಆತನ ತನ್ನ ಶಕ್ತಿ ಸರ್ವಸ್ವವನ್ನು ಉಪಯೋಗಿಸಿ ಕಾರ್ಯಮಾಡುವವನಾದರೂ, ಇದುವರೆಗೆ ಹಾಗೆ ಮಾಡುತ್ತಿರುವವನಾದರೂ, ನಾವು ಅವನ ವಿಷಯದಲ್ಲಿ ಹೆಚ್ಚಿನ ಜಾಗರೂಕತೆಯಿಂದಲೆ ಇರಬೇಕೆಂದರು. ಮತ್ತೆ ಧಾಳಿಗಳಾಗುವ ವಿಷಯದಲ್ಲಿ, ಇಂದು ಧಾಳಿಗಳು ಕಡಿಮೆಯಾಗಿ ಕಂಡುಬಂದರೂ ಇದು ಬಲು ಬೇಗನೆ ತೀಕ್ಷ್ಣತೆಗೊಳ್ಳಬಹುದೆಂದೂ ಎಚ್ಚರಿಸಿದ್ದರು.

ಅಟ್ಲಾಂಟಿಕಿನ ಮಹತ್ವ

ಕೆಲದಿನಗಳಿಂದ ಅಟ್ಲಾಂಟಿಕ್ ಸಾಗರದಲ್ಲಿ ಹಡಗಗಳನ್ನು ಮುಳುಗಿಸುವ ಕಾರ್ಯವು ನಡೆದಿರುವುದರ ಕಡೆ ಗಮನವೆಳೆಯುತ್ತಾ, ಅಟ್ಲಾಂಟಿಕ ಮಾರ್ಗದ ಸುರಕ್ಷಿತತೆಯ ಬಗ್ಗೆ ತಾವು ಬಹಳ ಎಚ್ಚರವಿರಬೇಕೆಂದರು

ಕೊನೆಗೆ ಅವರು ಹೀಗೆಂದರು —

"ಇದುವರೆಗೆ ಗಂಡಾಂತರದೊಳಗಿಂದ ಪಾರಾಗಿ ಉಳಿದುದಕ್ಕೆ ನಾವು ಆನಂದಿತರು ಎಷ್ಟೋ ಜನರು, ನಮ್ಮ ಆಪ್ತರೂ ಸಹ ನಮ್ಮ ಶಕ್ತಿಯ ಬಗ್ಗೆ ಸಂದೇಹಗೊಂಡಿದ್ದರು ಹೇಗಿದ್ದರೂ ಕಠಿಣತೆಯಿಂದ ಪಾರಾಗಿ ನಾವು ಆತ್ಮರಕ್ಷಣೆ ಮಾಡಿಕೊಂಡಿದ್ದೇವೆ "

ಸ್ವದೇಶಾಭಿಮಾನಿಗೆ - ಚಂದಾದಾರರಾಗಿರಿ.

ನಿಶ್ಚಿತ ಬೋನಸ್ ಕೊಡಲಾಗುವುದು!

ನಮ್ಮ ಕಂಪೆನಿಯಲ್ಲಿ ★ ಬೆಂಕಿಯ ಅನಾಹುತ ★ ಕಡಲಿನ ಅಪಾಯ ★ ವ ಇತರ ಅಪಘಡಗಳಿಗೆ ಸಂಬಂಧಿಸಿದ ಭದ್ರತೆಯ ವಿಮೆಗಳನ್ನು ಸಹಾ ಸ್ವೀಕರಿಸಲಾಗುವುದು

ವಿಮೆ ಮಾಡುವ ಮಹನೀಯರಿಗೆ ನಮ್ಮ ಗ್ಯಾರಂಟೀಡ್ ಬೋನಸ್ ಅಥವಾ ನಿಶ್ಚಿತ ಬೋನಸ್ (ಎಂಡೋಮೆಂಟ್) ಪಾಲಿಸಿಯಷ್ಟು ಉತ್ತಮ ತರದ ಪಾಲಿಸಿಯು ಬೇರೊಂದಿಲ್ಲ. ಈ ಪಾಲಿಸಿಯ ಕ್ರಮದಂತೆ ನಮ್ಮ ಸರ್ವಸಾಧಾರಣ ಬೋನಸ್ ಮಾತ್ರವಲ್ಲದೆ ವರ್ಷಾವಧಿ ಹೆಚ್ಚಿಗೆ ರೂ. 10/ ನಿಶ್ಚಿತವಾಗಿ ಕೊಡಲ್ಪಡುತ್ತದೆ! ★ ಹೆಚ್ಚಿನ ಮಾಹಿತಿಗಳನ್ನು ನಮ್ಮ ಸ್ಥಳೀಯ ಪ್ರತಿನಿಧಿಗಳಿಂದ ತಿಳಕೊಳ್ಳಿರಿ.

ಕಾಯಂ ನಿಶ್ಚಿತ ಬೋನಸ್ ರೂ 10/- + ಸರ್ವಸಾಧಾರಣ ಬೋನಸ್ ರೂ 11/ ══ ಹೀಗೆ ಜುಮ್ಲಾ ರೂ. 21/-ರ ಬೋನಸ್ ಇದೆ!

★ ದಿ ನ್ಯೂ ಇಂಡಿಯಾ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ★
ಹೆಡ್ ಆಫೀಸ್—ಬೊಂಬಾಯಿ

ಕೆ. ಎನ್ ನಾಯಕ್ ಆರ್ಗನೈಸರ್ ಸೆಂಟ್ರಲ್ ... ಮಂಗಳೂರು ಅಥವಾ ಕೆ. ಕೆ. ಶ್ರೀನಿವಾಸನ್ ಬ್ರಾಂಚ್ ಮ್ಯಾನೆಜರ್ 4/5 ಫಸ್ಟ್ ಲ್ಯಾನ್ ಬೀಚ್ ಮದ್ರಾಸು

ಪಾರದೆ ಕತೆ

ವೀರ ರಮಣಿ

ಕತೆಗಾರರು
ಕೆ ಎಸ್
ಕಾಯಿತಾರ್ಯ

ಸಂಧ್ಯಾ ಸಮಯ. ಮೊದಲೇ ಭೀಕರವಾಗಿದ್ದ ಆ ವನವು ಅಂಧಕಾರದಿಂದ ಮತ್ತಷ್ಟು ಭೀಕರವಾಗಿ ಕಾಣಿಸತೊಡಗಿತು. ಅಂಧಕಾರವ್ಯಾಪ್ತವಾದ ಆ ವನವು ಕೆಚ್ಚೆದೆಯ ಕಡುಗಲಿಗಳಿಗೂ ಅಂಜಿಕೆಯನ್ನು ಉಂಟುಮಾಡುವುದಾಗಿತ್ತು. ಸೂರ್ಯಾಸ್ತಮಾನದ ಒಂದೆರಡು ಕ್ಷಣಗಳಲ್ಲಿಯೇ ಓರ್ವ ತರುಣಿಯು ಅಸ್ತವ್ಯಸ್ತವಾಗಿ ಮುಖದಲ್ಲಿ ಬಿದ್ದಿದ್ದ ದೀರ್ಘಕೇಶಗಳನ್ನು ಕೈಯಿಂದ ಸರಿಪಡಿಸುತ್ತಾ ತರುಲತಾ ಜಗಳ ಬಳಿ ಹಿಡಿದು ಬರುತ್ತಿದ್ದಳು ಮುಂದೊತ್ತಿ ಆಳೆಯ ಮರಗಳ ಮಧ್ಯದಿಂದ ಅರಣ್ಯದ ಒಳಹೊಕ್ಕಳು. ಅಲ್ಲೊಂದು ಭೀಕರ ಸಮಾಧಿಯು ಮಾತ್ರ ಕಾಣಬರುತಿತ್ತು. ತರುಣಿಯು ಇದರ ಬಳಿ ಸಾರಿದ್ದಳು. ಸಮಾಧಿಯ ದರ್ಶನದಿಂದ ಆ ತರುಣಿಯ ಸ್ಥಿತಿಯು ತೀರಾ ಬದಲಾಯಿತು ಒಂದೇ ಸವನೆ ಕಂಬನಿಗಳು ಸುರಿಯಲಾರಂಭಿಸಿದವು ಹೆಚ್ಚುಕಾಲ ಆಕೆಗೆ ನಿಂತುಕೊಂಡಿರಲಾಗಲಿಲ್ಲ ಅಲ್ಲೇ ಕುಳಿತಳು ಸಮಾಧಿಯನ್ನು ಬಿಗಿಯಾಗಿ ಹಿಡಿದುಕೊಂಡು ದುಃಖದ ಆವೇಶದಿಂದ ಅಳತೊಡಗಿದಳು

'ಈ ನಿನ್ನ ಮಗಳ ಗತಿಯನ್ನು ಕಂಡು ಇನ್ನಾದರೂ ನಿನ್ನ ಹೃದಯ ಕರಗುವುದಿಲ್ಲವೇನಮ್ಮಾ' ನನ್ನನ್ನು ಈ ಗತಿಯಲ್ಲಿ ನೂಕಿ ನೀನು ಹೊರಟು ಹೋದೆಯಾ? ಅಪ್ಪಾಜಿಯು ಯುದ್ಧದಲ್ಲಿ ಮಡಿದನೆಂದು ನೀನು ನಿನ್ನ ಪತಿಯ ಧರ್ಮಕ್ಕನುಸರಿಸಿ ಸಹಗಮನ ಮಾಡಿ ಧನ್ಯಳಾದೆ ಆದರೆ ಅಂದು ನನ್ನನ್ನು ನೀನು ಸಣ್ಣವಳೆಂದು ಪರಿಗಣಿಸಿ ತ್ಯಜಿಸಿ ಹೊರಟು ಹೋದೆ! ಮ್ಲೇಚ್ಛರಾಜನ ಗೆಳೆಯನಾದ ಚಿಕ್ಕಪ್ಪನ ಬಳಿಯಲ್ಲಿ ಒಲಿಗೊಟ್ಟು ಅಗಲಿ ಹೋದೆ ಅಮ್ಮಾ! ಈಗ ನಿನ್ನ ಈ ಮಗಳ ಗತಿ ನಿನಗೆ ತಿಳಿದಿದೆಯೆ? ಇಲ್ಲ, ತಾಯಿ, ಬಾದಶಹನ ಸ್ಮಶಾನಸದೃಶ ಅರಮನೆಯಲ್ಲಿ ನನ್ನನ್ನು ನೂಕಬಯಸುವ ಚಿಕ್ಕಪ್ಪನ ಅಭಿಪ್ರಾಯ ನಿನಗೆ ತಿಳಿದಿಲ್ಲ ನಿನ್ನ ಕೋರಿಕೆಯಂತೆ ಚಿತ್ತೂರ ರಜಪೂತ ಕುಲಜನಾದ ವೀರಸಿಂಹನಿಗೆ ನನ್ನನ್ನು ಚಿಕ್ಕಪ್ಪನು ಕೊಡುವನೆಂದು ನೀನೆಣಿಸಿದ್ದೆ. ಆದರೆ ಅವೆಲ್ಲಾ ಮಾಯೆಯ ಅರಮನೆಯಾಗಿ ಹೋಯಿತು ಅಮ್ಮಾ! ಇನ್ನಾದರೂ ನನ್ನನ್ನು ನಿನ್ನ ಬಳಿಗೆ ಕರೆದೊಯ್ಯು'

ಅಶ್ವಾರೋಹಿಯೊಬ್ಬನು ಶೀಘ್ರವಾಗಿ ಅದೇ ಸಮಾಧಿಯ ಸಮೀಪಕ್ಕೆ ಬಂದುಬಿಟ್ಟನು! ಕೈಯಲ್ಲಿ ಭೀಕರವಾದ ಖಡ್ಗವೊಂದಿತ್ತು. ಉಗ್ರವಾದ ಆತನ ಮುಖಕ್ಕನುಗುಣವಾಗಿ ಆತನ ದೇಹದ ಕಟ್ಟೂ ಭೀಕರವಾಗಿತ್ತು. ತರುಣನು ಕುದುರೆಯಿಂದಿಳಿದು ಸಮೀಪ ಸಮೀಪಕ್ಕೆ ಬಂದ. ತರುಣಿಯು ಆತನನ್ನು ಕಂಡು ದೂರದೂರ ಸರಿದಳು. 'ಕಮಲೀ, ದೂರ ಸರಿಯದಿರು. ನೀನಿಂದು ಬಾದಶಹರ ಅರಮನೆಯ ಸುಖವನ್ನನುಭವಿಸಬೇಕಾಗಿದೆ. ಅದಕ್ಕಾಗಿ ನಿನ್ನನ್ನು ಕರೆದೊಯ್ಯಲು ಬಂದ ಬಾದಶಹರ ಪ್ರೀತಿಗೆ ಪಾತ್ರನಾದ ಸೇನಾಪತಿ ರಹಿಮಖಾನನೇ ನಾನು. ಬಾ. ಕುದುರೆಯನ್ನೇರು' ತರುಣನು ವಿಕಟವಾಗಿ ನಕ್ಕು ಹೇಳಿದ

'ದುಷ್ಟ ಹಿಂದಕ್ಕೆ ಸರಿ, ಒಂದು ಹೆಜ್ಜೆಯಾದರೂ ಮುಂದಕ್ಕೆ ಇಟ್ಟೀಯೆ!'

'ಕಮಲೆ, ಈ ಬಂಡು ಮಾತಿಗೆ ಈ ಖಾನನು ಹೊಸಬನಲ್ಲ. ನಿನ್ನಂತಹ ಎಷ್ಟೋ ಹೆಂಗಳೆಯರನ್ನು ಬಾದಶಹನ ಅರಮನೆಯ ದಾಸಿಯರನ್ನಾಗಿ ಮಾಡಿದ ರಹೀಮಖಾನನು ನಾನು. ವೀರಸಿಂಹನೇ ಪತಿಯಾಗಬೇಕೆಂದು ನೀನು ಕಾಯುತ್ತಿರುವೆಯಾದರೆ ಇಂದಿಗೆ ಅದನ್ನು ಬಿಟ್ಟುಬಿಡು ವೀರಸಿಂಹನ ಆಟಗಳೊಂದೂ ನಮ್ಮಲ್ಲಿ ಸಾಗವು ನಿನ್ನ ಚಿಕ್ಕಪ್ಪನೇ ನಮ್ಮವನೆಂದ ಮೇಲೆ ನೀನಾದರೂ ಎಂದಿನವರೆಗೆ ಈ ರೀತಿ ಹಟವನ್ನು ಕಡಮಾಡಬೇಡ ಬಾ, ಕುದುರೆಯನ್ನೇರು'

ದೂ, ನೀಚ, ಪಾಪಿಗಳಾದ ನಿಮಗೆ ಸರ್ವವೂ ಸಾಧ್ಯವೆಂದು ತೋರಬಹುದು ಆದರೆ ನೀನು ಸತ್ಯವೊಂದು ಉಂಟೆಂದು ಮಾತ್ರ ತಿಳಿದುಕೋ, ಓರ್ವ ಅಬಲೆಯ ಅಪಹರಣದಲ್ಲಿ ನಿನ್ನ ರಾಕ್ಷಸೀ ಕೃತ್ಯವು ಅದೇನೋ ಸಾಧ್ಯವಿರಬಹುದು ಆದರೆ ಓರ್ವ ಸ್ತ್ರೀಯ ಮಾನಭಂಗವು ಅಪಾಯಕರವೆಂದು ಮಾತ್ರ ನೆನಪಿಡು'

'ಕಮಲೆ, ಇನ್ನು ಇಂತಹ ಒಣ ಹರಟೆ ಸಾಕು ಹೆಚ್ಚು ವಿಳಂಬವಾದರೆ ನಿನ್ನ ವಿರಹದಿಂದ ತೊಳಲುತ್ತಿರುವ ಬಾದಶಹನು ನನ್ನಮೇಲೆ ಕೋಪಿಸಲೂಬಹುದು.' ಎನ್ನುತ್ತಾ ಖಾನನು ಮುಂದೆ ಬರತೊಡಗಿದ. ಕಮಲೆಯು ಸರ್ವಾಂಗವೂ ಕಂಪಿಸತೊಡಗಿತು. ಆವೇಶದಿಂದ ಆಕೆಯು ಕ್ರೋಧೋನ್ಮತ್ತಳಾದ ಸಿಂಹಿಣಿಯಂತಾದಳು ಆದರೆ ಅವೆಲ್ಲಾ ಖಾನನ ಮುಂದೆ ನಿಷ್ಫಲವಾದುವು. ಖಾನನು ನಸುನಗುತ್ತಾ, 'ಹುಡುಗೀ ಇದೆಲ್ಲಾ ಹುಚ್ಚು ನಟನೆ' ಎಂದವನೇ ಮುಂದೊತ್ತಿ ಬಂದು ಕಮಲೆಯ ಹಸ್ತಗಳನ್ನು ಎಳೆಯಲು ಹವಣಿಸಿದ.

ಮುಟ್ಟನ್ನು ಸೀಳಿಕೊಂಡು ಯಾರೋ ಓರ್ವ ವ್ಯಕ್ತಿಯು ಝಳಝಳಿಸುವ ಖಡ್ಗಹಸ್ತನಾಗಿ ಅಲ್ಲಿಗೆ ಬಂದನು. ಕಮಲೆಯ ಹಸ್ತಗಳನ್ನು ಸೆಳೆಯಬಯಸುವ ಖಾನನ ಹಸ್ತಗಳಿಗೆ ಬಲವಾದ ಏಟೂ ಬಿದ್ದಿತು ಒಮ್ಮೆಲೇ ತನ್ನ ಮೇಲೆ ಬಿದ್ದ ಪೆಟ್ಟನ್ನು ಖಾನನು ಸಹಿಸದೆ ಆವೇಶದಿಂದ ತನ್ನ ಖಡ್ಗವನ್ನು ಆ ವ್ಯಕ್ತಿಯ ಮೇಲೆ ಬೀಸಿದನು ದೈವಾತ್ ಅದು ತಪ್ಪಿಹೋಯಿತು ಖಾನನು ಮತ್ತೊಮ್ಮೆ ಹೊಡೆಯಲು ಹವಣಿಸುತ್ತಿರುವುದನ್ನು ಕಂಡ ಆ ವ್ಯಕ್ತಿಯು ತನ್ನ ಖಡ್ಗವನ್ನು ಬಲವಾಗಿ ಖಾನನ ಎದೆಯಲ್ಲಿ ನಟ್ಟುಬಿಟ್ಟಿತು ಖಡ್ಗವು ಎದೆಯನ್ನು ಸೀಳಿ ಹೊರಕ್ಕೆ ಬಂದಿತು. ಖಾನನು ಬಿದ್ದುಬಿಟ್ಟನು, ಆತನ ಇಹಲೋಕ ವ್ಯವಹಾರವು ಸಮಾಪ್ತಿಯಾಯಿತು

★

ಒದಗಿದ ವಿಪತ್ತಿನಿಂದ ಪಾರುಮಾಡಿದ ಆ ವ್ಯಕ್ತಿ ಯಾರೆಂಬ ವಿಚಾರದಲ್ಲಿರಬಹುದು. ಆತನೇ ಕಮಲೆಯು ತನಗೆ ಪತಿಯಾಗಬೇಕೆಂದು ಬಯಸಿದ ವೀರಸಿಂಹನು. ಮೆಲ್ಲಗೆ ಕಮಲೆಯು ಒಳ್ಳೆಯವನೆಂದು ಕಮಲೆಯೂ ಆತನು ವೀರಸಿಂಹನೆಂದು ಬಹು ಬೇಗನೆ ತಿಳಿದಳು ಲಜ್ಜಿತಳಾಗಿ ತಲೆತಗ್ಗಿಸಿದ್ದಳು "ಕಮಲೆ, ನಾಚದಿರು ಬಲವಾದ ಸೇನೆ ಹಿಂದಿನಿಂದ ಬರುತ್ತಿದೆ. ನೀನು ನನ್ನ ಅಪಾಯವನ್ನೂಹಿಸಿ, ನಿನ್ನ ಸಖಿಯ ಮೂಲಕ ಕಳುಹಿಸಿದ ಪತ್ರವನ್ನು ಕಂಡು ಇಲ್ಲಿಗೆ ಬಂದೆ ನಿನ್ನ ಚಿಕ್ಕಪ್ಪನ ಕಾರ್ಯವು ಭೀಕರವಾಗಿದೆ ಆದುದರಿಂದ ಈಗ ನಾವು ಇಲ್ಲಿಂದ ತೆರಳಬೇಕು ಚಿತ್ತೂರಿನಲ್ಲಿರುವ ನಿನ್ನ ಅಜ್ಜ ಸಿಂಹಕೇತುವಿನಲ್ಲಿಗೆ ತೆರಳುವ" ಎಂದೆನ್ನುತ್ತಾ ವೀರಸಿಂಹನು ಮುಂದುವರಿದು ಹೋದನು ಹಿಂದಿನಿಂದ ಖುರಪುಟಗಳ ಶಬ್ದಗಳು ಕೇಳಬಂದುವು. ವೀರಸಿಂಹನು ಹಿಂತಿರುಗಿ ನೋಡಿದ ದೂರದಿಂದ ಕುದುರೆಗಳು ಬರುತ್ತಿದ್ದುವು. ವೀರಸಿಂಹ ಕಮಲೆಯರು ಅವಾಕ್ಕಾದರು.

ನಾಲ್ಕು ಕಡೆಗಳಿಂದಲೂ ಕುದುರೆಗಳು ಬರತೊಡಗಿದುವು. ತೀರಾ ಸಮೀಪಕ್ಕೆ ಬಂದುವು ವೀರಸಿಂಹನು ಅಲ್ಲಿಯೇ ಧೈರ್ಯದಿಂದ ನಿಂತನು ಒಬ್ಬೊಬ್ಬ ಮುಸಲ್ಮಾನ ಸವಾರರೇ ಕೆಳಗಿಳಿದರು. ವೀರಸಿಂಹನನ್ನು ಮುತ್ತಿದರು. ವೀರಸಿಂಹನದೇನಿಲ್ಲ. ಆದರೆ ಕಮಲೆಯು ವಿಪತ್ತಿನ ದೆಸೆಯಿಂದ ಏಕಾಂತವಾಗಿ ಸೆರೆಗಳೊಂದಿಗೆ ಕಾದಾಡಿದನು. ಸೈನ್ಯದಲ್ಲಿದ್ದ ಕಮಲೆಯ ಚಿಕ್ಕಪ್ಪನೇ ಕಮಲೆಯನ್ನು ಬಂಧಿಸಿ ಸೈನ್ಯದ ಸ್ವಾಧೀನವಮಾಡಿದನು! ರಾಜ್ಯದ ದುರಾಶೆಯಿಂದ ಮತ್ತನಾದ ಆತನೇ ಕಮಲೆಯನ್ನು ಬಲಿಗೊಟ್ಟನು. ಕಮಲೆಯ ವಿಪತ್ತನ್ನು ಕಂಡ ವೀರಸಿಂಹನು ಈಗ ಎದೆಗೆಟ್ಟನು. ಸೈನಿಕರು ಸುಲಭವಾಗಿಯೇ ಏಕಾಂಗಿಯಾಗಿ ಹೋರಾಡುವ ಆತನನ್ನು ಬಂಧಿಸಿದರು. ತಮ್ಮ ಸೇನಾಪತಿಯನ್ನು ಕೊಲೆಮಾಡಿದ ಆತನನ್ನು ಬಾದಶಹನ ಸನ್ನಿಧಿಯಲ್ಲಿ ಚಿತ್ರಹಿಂಸೆಮಾಡಿ ಕೊಲೆಮಾಡುವ ಆಶೆಯಿಂದ ಆಗ ಕೊಲ್ಲಲಿಲ್ಲ

★

ಅಂದು ವಿಚಾರಣೆಯ ದಿನ ಜನರು ಕಿಕ್ಕಿರಿದಿದ್ದರು. ಒಂದೆಡೆ ಅಪರಾಧಿ ವೀರಸಿಂಹನು ನಿಂತಿದ್ದನು ಇನ್ನೊಂದೆಡೆ ದೀನವದನಳಾಗಿ ಕಮಲೆಯು ಕುಳಿತಿದ್ದಳು. ಬಾದಶಹನು ಬಂದನು ಸಭೆಯು ಮೌನವಾಯಿತು ಬಾದಶಹನು ಆಸನದಲ್ಲಿ ಮಂಡಿಸಿದನು ಮತ್ತೆ ಗಂಭೀರವಾಣಿಯಿಂದ ಬಾದಶಹನು ಹೇಳತೊಡಗಿದನು ನನ್ನ ಇಚ್ಛೆಗೆ ವಿರುದ್ಧವಾಗಿ ಯಃಕಶ್ಚಿತ್ ಮನುಷ್ಯನಾದ ನೀನು ಅಡ್ಡಬಂದೆ ಆ ಸಂದರ್ಭದಲ್ಲಿ ತನ್ನ ಸೇನಾಪತಿಯ ನನ್ನು ಕೊಂದು ಮಹಾಅಪರಾಧವನ್ನು ಮಾಡಿದೆ ಆದ ಕಾರಣ ಈ ಅಪರಾಧಗಳಿಂದ ಉಂಟಾದ ಆನಂದದಿಂದ ನಿನಗೆ ಶಿಕ್ಷೆಯನ್ನು ಕೊಡಬೇಕೆಂದಿರುವೆನು ಈ ಬಾದಶಹನ ವೀರಖಡ್ಗಕ್ಕೆ ಮಣಿದ ಸ್ವಸ್ಥಾನವನ್ನು ತೆರಳು'

'ಬಾದಶಹ, ಈ ಬಿಸಿರಕ್ತವು ಎಂದಿನವರೆಗೆ ಈ ಹೃದಯದಲ್ಲಿದೆಯೋ, ಅಂದಿನವರೆಗೆ ಈ ವೀರನು ಧರ್ಮವಿರೋಧಿಯಾದ ನೀಚ ಕಲಂಕ ಖಡ್ಗಕ್ಕೆ ಮಣಿಯಲಾರನು. ವೀರಕ್ಷತ್ರಿಯ ರಮಣಿಯರ ಮಾನಭಂಗಕಾಲದಲ್ಲಿ ಸುರಿಸುವ ಈ ರಕ್ತವು ನಿನಗಾಗಲಿ ನಿನ್ನ ಖಡ್ಗಕ್ಕಾಗಲಿ ಹೆದರುವಂತಿಲ್ಲ

ಮೂರ್ಖ, ಯಾರ ಮುಂದೆ ಮಾತು ಬೆಳೆಸುವೆ ವಿಚಾರವಿರಲಿ"

ಓರ್ವ, ಪಾಪಿ ಬಾದಶಹನೊಂದಿಗೆ'

ವೀರಸಿಂಹನ ಕಲಿತನದ ಈ ಮಾತುಗಳನ್ನು ಕೇಳಿ ಬಾದಶಹನು ಸಹಿಸದಾದ "ಪ್ರಾಣದ ಆಶೆಯಿಲ್ಲವೇ ನಿನಗೆ"

"ಮ್ಲೇಚ್ಛ, ಪ್ರಾಣದಾಶೆಯಿಲ್ಲ ಧರ್ಮದ ಆಶೆಯು ನನಗಿದೆ ವೀರ ಸ್ವರ್ಗದ ಆಶೆ" ಬಾದಶಹನು ತಡೆಯಲಿಲ್ಲ ತಲೆಯನ್ನು ಹಾರಿಸಲು ಅಪ್ಪಣೆಯಾಯಿತು. ಸೈನಿಕರು ವೀರಸಿಂಹನ ತಲೆಯನ್ನು ಹಾರಿಸಿಬಿಟ್ಟರು. 'ಜಯ ಭುವನೇಶ್ವರಿ' ಎನ್ನುತ್ತಾ ವೀರಸಿಂಹನ ತಲೆಯು ನೆಲಕ್ಕುರುಳಿತು. ಕಮಲೆಯು ಸಿಂಹಿಣಿಯಂತೆ ನೆಗೆದು ಮುಂದೆ ಬಂದು ಅಲ್ಲೇ ಬಿದ್ದಿದ್ದ ವೀರಸಿಂಹನ ಖಡ್ಗವನ್ನು ತೆಗೆದು 'ಮ್ಲೇಚ್ಛ! ನಿನಗೆ ಧಿಕ್ಕಾರ, ಈ ರಮಣಿಯ ಆಶೆಯು ನಿನಗೆ ಬೇಡ ಇದು ವೀರಸಿಂಹನ ಪವಿತ್ರ ಆತ್ಮಕ್ಕೆ' ಎಂದನ್ನುತ್ತಾ ತನ್ನ ಎದೆಯಲ್ಲಿ ಆ ಖಡ್ಗವನ್ನು ನಟ್ಟಳು. ಬಾದಶಹನು "ಕಮಲಾ" ಎನ್ನುತ್ತಾ ಓಡಿಬರು ನೋಡುತ್ತಾನೆ! ಏನನ್ನು? ತನ್ನ ಕ್ರೌರ್ಯಕರ್ಮದ ಫಲವನ್ನು, ವೀರ ದಂಪತಿಗಳ ಪವಿತ್ರ ದೇಹಗಳನ್ನು!

[ಕಲ್ಪಿತ ಕಥೆ]

ಸಂಪೂರ್ಣ ಸಿಂಗರ ಪ್ರಕರಣ

ಮಹಾತ್ಮರ ಹೇಳಿಕೆ

ಕಾಂಗ್ರೆಸಿನಿಂದ ತಳ್ಳಿ ಹಾಕಲಾಯಿತು

ಆಜಾದರ ಪತ್ರ



ಆಜಾದರು

ಸರ್ದಾರ ಸಂಪೂರ್ಣ ಸಿಂಗರ ವಿಷಯವಾಗಿ ಮಹಾತ್ಮಾ ಗಾಂಧಿಜಿ ಯವರು ಒಂದು ಮಹತ್ವದ ಪ್ರಕಟಣೆಯನ್ನು ಕೊಟ್ಟಿರುವರು

'ಸರ್ದಾರ ಸಂಪೂರ್ಣಸಿಂಗರು ಸತ್ಯಾಗ್ರಹ ಹೂಡಲು ಸಂಪೂರ್ಣ ಅಧಿಕಾರವುಳ್ಳವರಿದ್ದರೂ, ಅವರಿಗೆ ಅಪ್ಪಣೆ ಕೊಡುವುದು ಸಾಧ್ಯವಿಲ್ಲ. ಯಾಕೆಂದರೆ ವಿಚಾರಣೆಯ ಕಾಲದಲ್ಲಿ ಅವರ ವರ್ತನೆಯು ತುಂಬಾ ಅಯೋಗ್ಯದ್ದಾಗಿತ್ತು

'ಅಹಿಂಸೆಯಲ್ಲಿ ತನ್ನ ವಿಶ್ವಾಸವಿದೆಯೆಂದು ನ್ಯಾಯವಾಗಿ ಯಾರೂ ಹೇಳಲಾರರೆಂದು ಅವರು ಹೇಳುವರು. ಆದರೂ, ಅಹಿಂಸೆಯಲ್ಲಿ ವಿಶ್ವಾಸವಿರಲಿ, ಇಲ್ಲದಿರಲಿ, ಶಿಸ್ತಿನಿಂದ ನಡೆಯಬೇಕಾದರೆ ಅಹಿಂಸೆಯಿಂದ ನಡೆಯಬೇಕೆಂದು ಅವರಿಗೆ ಈಗ ತಿಳಿದಿದೆ. ನಾನು ಅವರಿಗೆ ಅವರ ತಪ್ಪನ್ನು ಸುಧಾರಿಸಿಕೊಳ್ಳುವ ಬಗ್ಗೆಯನ್ನು ತೋರಿಸಿರುವೆನು. ಅವರು ನನ್ನ ಸೂಚನೆಯನ್ನು ವಿಚಾರಮಾಡುವುದಾಗಿ ತಿಳಿಸಿರುವರು. ಆದ್ದರಿಂದ ಸಾರ್ವಜನಿಕರು ಸರ್ದಾರ ಸಿಂಗರ ವರ್ತನೆಯ ವಿಷಯದಲ್ಲಿ ಕೊನೆಯ ತೀರ್ಮಾನಕ್ಕೆ ಬರಬಾರದಾಗಿ ಅಪೇಕ್ಷಿಸುತ್ತೇನೆ

'ಪಂಜಾಬಿನಲ್ಲಿ ತನಗೆ ಗೊತ್ತಿದ್ದ ಮಟ್ಟಿಗೆ ಅಹಿಂಸೆಯಲ್ಲಿ ವಿಶ್ವಾಸವುಳ್ಳವರು ಯಾರೂ ಇಲ್ಲವೆಂದೂ ಶಿಸ್ತಿನ ಸಲುವಾಗಿ ಅದನ್ನು ಪಾಲಿಸುತ್ತಿರುವರೆಂದೂ ನನಗೆ ಸರ್ದಾರರು ಹೇಳಿದರು. ಇದು ನಿಜವಾಗಿದ್ದರೆ ವಿಚಾರಣೀಯ ವಿಷಯವೇ ಆಗಿರುವುದು. ಅಂತಹ ಪ್ರತಿಯೊಬ್ಬರಿಗೂ ನಾನು ಹೋರಾಟದಿಂದ ಹಿಂದೆಗೆಯಲು ಕೇಳಿಕೊಳ್ಳುತ್ತೇನೆ. ಕಾಂಗ್ರೆಸ್ಸಿನವರಿಗೆ ಕಾಂಗ್ರೆಸ್ಸಿನ ಮೂಲಭೂತ ತತ್ವಗಳಲ್ಲಿ ವಿಶ್ವಾಸವಿಲ್ಲದಿದ್ದರೆ ಅಂಥವರ ಮುಂದಾಳುತನ ವಹಿಸಿ ನಾನು ಜಯವನ್ನು ಸಂಪಾದಿಸುವುದು ಸಾಧ್ಯವಾಗಲಾರದು

ಸಿಂಗರನ್ನು ಕಾಂಗ್ರೆಸ್ ಪಕ್ಷದಿಂದ ತಳ್ಳಿ ಹಾಕಲಾಯಿತು

ಪಂಜಾಬ ಅಸೆಂಬ್ಲಿಯ ಕಾಂಗ್ರೆಸ್ ಪಕ್ಷದ ಧುರೀಣರಾದ ಸರದಾರ ಸಂಪೂರ್ಣ ಸಿಂಗರು ಕಾಂಗ್ರೆಸ್ ಪಕ್ಷದಿಂದ ಹೊರಗೆ ಹಾಕಲ್ಪಟ್ಟಿರುವರು. ಸತ್ಯಾಗ್ರಹ ಸಂಬಂಧದಲ್ಲಿ ಇತ್ತೀಚೆಗೆ ಸೆರೆಯಾದ ನಂತರ ಅವರು ನಡೆದುಕೊಂಡ ವಿಚಿತ್ರ ರೀತಿಯೇ ಇದಕ್ಕೆ ಕಾರಣವಾಗಿರುವುದು.

ಈ ಸಂಬಂಧದಲ್ಲಿ ರಾಷ್ಟ್ರಪತಿ ಆಝಾದರು ಅವರಿಗೆ ಕೆಳಗಿನ ಅಭಿಪ್ರಾಯದ ಒಂದು ಪತ್ರವನ್ನೂ ಬರೆದಿರುವರು

'ನೀವು ಕಳಿಸಿದ ಸ್ಪಷ್ಟೀಕರಣದಲ್ಲಿ ಏನೂ ಹುರುಳಿರುವುದಿಲ್ಲ. ಕೋರ್ಟಿನಲ್ಲಿ ಕೇಳಲಾದ ಪ್ರಶ್ನೆಗಳಿಗೆ ನೀವು ಕೊಟ್ಟ ಉತ್ತರ ನೋಡಿದರೆ ಯುದ್ಧದ ಸಂಬಂಧದಲ್ಲಿ ಕಾಂಗ್ರೆಸ್ಸು ಸ್ವೀಕರಿಸಿದ ನಿರ್ಣಯದಲ್ಲಿ ನಿಮ್ಮ ವಿಶ್ವಾಸವಿಲ್ಲವೆಂಬುದು ಸ್ಪಷ್ಟವಾಗಿ ತೋರುವುದು. ಹೀಗಿದ್ದರೂ ನೀವು ಸತ್ಯಾಗ್ರಹ ಮಾಡಿ ಸ್ವತಃ ಅಪಹಾಸ್ಯಕ್ಕೆ ಒಳಗಾಗಿದ್ದಲ್ಲದೆ ನೀವು ಧುರೀಣರಾಗಿದ್ದ ಕಾಂಗ್ರೆಸ್ ಪಕ್ಷವನ್ನೂ ಅಪಹಾಸ್ಯಕ್ಕೆ ಈಡ ಮಾಡಿದಿರಿ

THE PIE-MONEY BANK LTD.,
Maidan Road, MANGALORE.
Undertakes all kinds of Banking Business Current account at 2½% per annum. Savings Bank Deposits at 4½% per annum
FIXED DEPOSITS
For 2 Years 5% 1 Year 4½% For 6 months 4% 3 months 3½%
Auction chit Funds ranging from Rs. 100/ to Rs. 5000/ run regularly on systematic lines Unique Banking facilities to Businessmen and interested Public.
Apply for particulars:—
K. R. GURU, Managing Director.

ಪ್ರಕಾಶಿಸುವ ನೇತ್ರಗಳು ಆರೋಗ್ಯ ಜೀವನದ ಚಿಹ್ನೆ



ವಿಪರೀತವಾದ ಕೆಲಸ, ಮತ್ತು ಸರಿಯಾದ ಪೋಷಣೆಯಿಲ್ಲದಿರುವಿಕೆ, ಇವುಗಳೇ ನರಗಳ ದೌರ್ಬಲ್ಯಕ್ಕೂ ಮತ್ತು ಸಾಮಾನ್ಯ ನಿಶ್ಶಕ್ತಿಗೂ ಕಾರಣ. ಜೀವಾಮೃತಂ ಸೇವಿಸಿ ನಿಮ್ಮ ದೇಹವನ್ನು ಬೆಳೆಸಿರಿ. ಜೀವಶಕ್ತಿಯಿಂದ ಸಂಜೀವಿಸಿ

ಬಲಿದ ನರಗಳಿಗೆ ಜೀವಾಮೃತಂ

ಜೀವಾಮೃತಂ
ನರಗಳಿಗೆ
ಅತ್ಯುತ್ತಮ ಟಾನಿಕ್

K A 2

ಎಲ್ಲಾ ಕೆಮಿಸ್ಟರಲ್ಲಿಯೂ, ಎಲ್ಲಾ ದೊಡ್ಡ ಅಂಗಡಿಗಳಲ್ಲಿಯೂ ದೊರೆಯುತ್ತದೆ.

THE

Canara Industrial & Banking Syndicate, Ltd.,

UDIPI, S. INDIA

Estd.) (1925

Authorised Capital	Rs 50,00,000
Subscribed Capital	Rs 12,80,500
Paid-up Capital	Rs 5,16,808
Reserves	Rs 2,07,000

Our new issue of Rs 40 lakhs of 5% Tax free Cumulative Preference Shares of Rs. 10 each is an ideal form of safe and remunerative investment with unique features

The Directors have decided to levy premium on the above shares applied for on and after 1st January 1941.

The rate premium will be -

On an application for	10 to 19	shares a premium of	Re 1.
„	20 to 29	„	Rs 2.
„	30 to 39	„	Rs 3.
„	40 to 49	„	Rs 4.
„	50 to 59	„	Rs 5.
„	60 to 69	„	Rs 6.
„	70 to 79	„	Rs 7.
„	80 to 89	„	Rs 8.
„	90 to 99	„	Rs 9.

There will be no premium on any application of 100 shares or more.

Apply for prospectus:—

ಜಿಲ್ಲಾ ಸಮಾಚಾರ

ಮಂಗಳೂರು

ಕೆನರಾ ಹೈಸ್ಕೂಲ್ ವರ್ಧಂತಿ: ಇದು ಜಿಲ್ಲಾ ಕಲೆಕ್ಟರಾದ ಶ್ರೀ ಯಂ. ಪಿ. ಸುಬ್ರಹ್ಮಣ್ಯಂ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಡಿ. ಕಾಮತರು ಟೋಸ್ಟ್ ಭಾಷಣ ಮಾಡಿದರು ಹೆಡ್ ಮಾಸ್ತರರು ಶಾಲಾ ವರದಿ ಯನ್ನೊಪ್ಪಿಸಿದರು. ಆ ಮೇಲೆ ಬಹುಮಾನ ವಿತರಣೆಯಾಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಿಗೆ ಉಪದೇಶವಿತ್ತರು. ಶ್ರೀ ಯಂ. ಮಾಧವರಾಯರು ವಂದನಾರ್ಪಣೆ ಮಾಡಿದರು 'ಲವಕುಶ' 'ಚೋಯಿಸ್' ಎಂಬೀ ಕನ್ನಡ ನಾಟಕಗಳೂ 'ರಣಜಿತ್ ಸಿಂಗ್' ಎಂಬ ಹಿಂದೀ ನಾಟಕವೂ ಅಭಿನಯಿಸಲ್ಪಟ್ಟವು ಉತ್ಸವಕ್ಕೆ ಅನೇಕ ಮಂದಿ ಸದ್ಗೃಹಸ್ಥರು ಬಂದಿದ್ದರು.

ಸಂತಾಪ ಸೂಚನೆ:—ಜಸ್ಟಿಸ್ ಪಾರ್ಟಿಯ ಮಂಗಳೂರು ಶಾಖೆಯ ಸಭೆಯೊಂದು ಶ್ರೀ ಯಂ. ಎಸ್ ಶ್ರೀಪತಿ ಅಧ್ಯಕ್ಷತೆಯಲ್ಲಿ ಸೇರಿ ದಿವಂಗತ ದಿ! ಬ! ಮಹಾಬಲ ಹೆಗ್ಗಡೆಯವರ ಬಗ್ಗೆ ಸಂತಾಪ ಸೂಚಕ ಠರಾವು ಮಾಡಿತು

ದಿ ಕೆನರಾ ಇಂಡಸ್ಟ್ರಿಯಲ್ ಬೇಂಕಿಂಗ್ ಸಿಂಡಿಕೇಟ್, ಲಿ

ಈ ಸಂಸ್ಥೆಯು ೪೦ ಲಕ್ಷ ರೂಪಾಯಿಗಳ ಪ್ರತಿಯೊಂದು ಶೇರಿಗೆ ೧೦ ರೂಪಾಯಿಯ ದರದ ಟೇಕ್ಸ್ ಫ್ರೀ ಶೇರುಗಳ ಹೊಸ ಯೋಜನೆಯೊಂದನ್ನು ಸಾರ್ವಜನಿಕರ ವಂತಿಗೆಗಾಗಿ ಹೊರಡಿಸಿರುವುದು ಈ ಶೇರುಗಳನ್ನು ಪ್ರತಿ ೧೦ ಶೇರುಗಳಿಗೆ ರೂ ೧ ರ ಪ್ರೀಮಿಯಮ್ ನಂತೆ ಮಾರಾಟ ಮಾಡಲು ನಿಶ್ಚಯಿಸಿದ್ದಾರೆ. ನೂರಕ್ಕಿಂತ ಮೇಲೆ ಶೇರುಗಳನ್ನು ಪಡಕೊಂಡವರಿಗೆ ಪ್ರೀಮಿಯಮ್ ವಿನಾಯಿತಿ [illegible] ಡುವವು.

ಈ ಬೇಂಕು ನಮ್ಮ ಜಿಲ್ಲೆಯಲ್ಲಿ ಅಭಿವೃದ್ಧಿ ಕರವಾಗಿರುವ ಬ್ಯಾಂಕುಗಳಲ್ಲಿ ಒಂದಾಗಿದೆ ಕಳೆದ [illegible] ವರ್ಷಗಳಿಂದ ಈ ಬೇಂಕು ಇದರ [illegible] ವಹಿವಾಟುಗಳಲ್ಲಿ ಬಹಳ ಪ್ರಖ್ಯಾತಿಗೆ ಬಂದಿದೆ ಇದರ ಸಂಚಾಲಕರ ದಕ್ಷತೆ, ಚಾತುರ್ಯಗಳು ಇದರ ಈ ಅಭಿವೃದ್ಧಿಗೆ ಕಾರಣವೆಂದು [illegible] ಬಾರದು ಮೊದಲು ಒಂದು [illegible] ರೂಪಾಯಿಗಳ ಮೂಲ ಧನದಿಂದ, ೩೦ ಸಾವಿರ ರೂಪಾಯಿಗಳ ಠೇವು ನಿಧಿಯಿಂದ ಪ್ರಾರಂಭಿಸಲ್ಪಟ್ಟು ಈಗಾಗಲೇ ೫೦,೦೦೦೦೦ ರೂಪಾಯಿಗಳ ಮೂಲಧನವುಳ್ಳದ್ದಾಗಿಯೂ, ೧೫,೮೦,೫೦೦ ರೂಪಾಯಿಗಳ ಠೇವು ಧನವುಳ್ಳದ್ದಾಗಿಯೂ ಇರುತ್ತದೆ ಮೊದಲಿಂದಲೂ ಬೇಂಕು, ಶೇರ್ ಹೋಲ್ಡರಿಗೆಸ ಮಾನ್ಯ ಶೇರುಗಳಿಗೆ ಶೇಕಡಾ ೧೫ ರ ವರೆಗೂ ಪ್ರಿಫರೆನ್ಸ್ ಶೇರುಗಳ ಮೇಲೆ ಶೇಕಡಾ ೬ ರಂತೆಯೂ ಡಿವಿಡೆಂಡು ಹಂಚಿದೆ ಸಾರ್ವಜನಿಕರು ಈಗ ತೆರೆಯಲಾದ ಹೊಸ ಯೋಜನೆಯಿಂದ ಅಧಿಕ ಪ್ರಯೋಜನ ಪಡೆಯುವರಾಗಿ ನಂಬುತ್ತೇವೆ

ಪೆರಡಾಲ

ಪಂಪೋತ್ಸವ:—ತಾ ೧೮ ರಂದು ಪೆರಡಾಲ ಮಹಾಜನ ಸಂಸ್ಕೃತ ಕಲಾಶಾಲೆಯಲ್ಲಿ ಸಾಹಿತ್ಯ ಸಮಿತಿ ಮತ್ತು ದ ಕ ಪಂಡಿತ ಸಂಘ ಇವುಗಳ ಸಹಕಾರದಿಂದ ಪಂಪೋತ್ಸವವು ಶ್ರೀ ಸೇಡಿಯಾಪು ಕೃಷ್ಣಭಟ್ಟ, ವಿದ್ವಾನ್, ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀರ್ಶೇಷ ದೇವಶಿಖಾಮಣಿ ಆಳಸಿಂಗಾಚಾರ್ಯರ ನಿಧನದ ಕುರಿತು ಸಂತಾಪ ಪ್ರದರ್ಶನವನ್ನು ಮಾಡಲಾಯಿತು, ಆ ಮೇಲೆ ಪೆರಡಾಲ ಕಲಾಶಾಲೆಯ ಕನ್ನಡ ಪಂಡಿತರಾದ ಶ್ರೀ ಪಿ ಕೃಷ್ಣಯ್ಯನವರು ಪಂಪಕವಿ, ಆತನ ದೇಶ, ಕಾಲ ಆತನ ಕಾವ್ಯ ಇವುಗಳ ವಿಷಯವಾಗಿ ರಸವತ್ತಾದ ಭಾಷಣವನ್ನು ಮಾಡಿದರು. ಅನಂತರ ಪಂಪನ ಮಹತ್ವ ಆತನ ಪಾತ್ರಚಿತ್ರಣ ಕೌಶಲ್ಯ, ಪಂಪೋತ್ಸವವನ್ನು ಜರಗಿಸುವ ಉದ್ದೇಶ ಇತ್ಯಾದಿ ವಿಷಯಗಳನ್ನೆತ್ತಿಕೊಂಡು ಶ್ರೀ ಪಿ. ಎಂ. ಮುತ್ತಣ್ಣ ಎಮ್ ಕೃಷ್ಣ ಶಂಭುಭಟ್ಟ, ಪಿ ಗೋಪಾಲ ಕೃಷ್ಣ ಕೆ. ವೆಂಕಟ ಕೃಷ್ಣವರ್ಣ, ಡಿ, ವಿಷ್ಣುಮೂರ್ತಿ ಹೊಳ್ಳ, ಬಿ ಶಂಕರ ಭಟ್ಟ, ಎಂ. ರಮಾಬಾಯಿ, ಬಿ, ನಾರಾಯಣ ಭಟ್ಟ, ಇವರೇ ಮೊದಲಾದ ಮಹನೀಯರು ಉಪನ್ಯಾಸವಿತ್ತರು ಅಧ್ಯಕ್ಷರು ತಮ್ಮ ಕೊನೆಯ ಭಾಷಣದಲ್ಲಿ ಪಂಪನ ಕಾವ್ಯವು ಸರ್ವಗುಣ ಸಂಪನ್ನವಾದದ್ದೆಂತು, ಪುರಾತನ ಕವಿಗಳಲ್ಲಿ ಅವನಂತೆ ದೇಶಾಭಿಮಾನವನ್ನು ಉಜ್ವಲಗೊಳಿಸತಕ್ಕ ಕವಿತೆಗಳನ್ನು ಬರೆದವರು ವಿರಳ, ಪಂಪನು ನಮ್ಮ ರಾಷ್ಟ್ರೀಯ ಕವಿ ಎಂಬಿತ್ಯಾದಿ ವಿಷಯಗಳನ್ನು ದೃಷ್ಟಾಂತಗಳ ಮೂಲಕ ಸ್ಪಷ್ಟಪಡಿಸಿದರು, ಮತ್ತು ಆತನ ಉತ್ಸವವನ್ನು ಏಕೆ ಜರಗಿಸಬೇಕೆಂಬುದನ್ನೂ ಯುಕ್ತಿ ಯುಕ್ತವಾಗಿ ತಿಳಿಸಿದರು ನಾಟಕವಾಗಿ ಮಾರ್ಪಡಿಸಿದ ರನ್ನಕವಿಯ ಗಧಾಯುದ್ಧವನ್ನು ಕಾಲೇಜಿನ ವಿದ್ಯಾರ್ಥಿಗಳು ಆ ದಿನ ರಾತ್ರಿ ಸೊಗಸಾಗಿ ಅಭಿನಯಿಸಿದರು. ಯಕ್ಷಗಾನವೂ ಸುಶ್ರಾವ್ಯವಾಗಿ ನಡೆಯಿತು

ವಾರ್ಷಿಕೋತ್ಸವ:—ಇದೇ ತಿಂಗಳ ೩೦ನೇ ತಾರೀಕು ಅಪರಾಹ್ನ ೩ ಗಂಟೆಗೆ ಪೆರಡಾಲ ಮ! ಸಂ! ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಪುತ್ತೂರು ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಶ್ರೀ ಕೆ ಯಸ್ ಪರಮೇಶ್ವರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮಾತೃ ಶಾಲಾಕಟ್ಟಡದಲ್ಲಿ ಜರಗುವ ಈ ಉತ್ಸವಕ್ಕೆ ತಾವು ದಯಮಾಡಿ ಬಂದು ಸಂಘದ ಪುರೋಭಿವೃದ್ಧಿಯನ್ನು ಕುರಿತು ಹಿತೋಪದೇಶಗಳನ್ನು ಕೊಟ್ಟು ನಮ್ಮನ್ನು ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿಗಳ ಸವಿನಯ ವಿನಂತಿಯಿದೆ

ಕಾಸರಗೋಡು

ಬಂಧನ – ಶ್ರೀ ಕೃಷ್ಣನ್ ನಾಯರ್:—ಚಿರ್ಕಕಲ್ [illegible] ಸೇವಾ ಸಂಘದ ಶ್ರೀ ಕೃಷ್ಣನ್ ನಾಯರರನ್ನು ಜನಾಹರಲಾಲರ ಪ್ರಕಟಣೆಯನ್ನು ಹಂಚುತ್ತಿರುವ ರೆಂಬ ಆಪಾದನೆಯ ಮೇರೆಗೆ ತಾ ೨೦ ರಂದು ಬ್ಯಾದ [illegible] ಪುತ್ತೂರು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆದು ಒಂದು ವರ್ಷ ಕಠಿಣ ಅಥವಾ ೬ ತಿಂಗಳು ಕಠಿಣ ಸಜೆಗೆ ಗುರಿಮಾಡಿದ್ದಾರೆ ಇವರಿಗೆ ಸಿ ಕ್ಲಾಸ್ ಕೊಡಲಾಗಿದೆ

ಎಡನೀರ್:—ತಾ ೧೬ನೇ ಸೋಮವಾರ ದಿನ ಬೆಳಗ್ಗೆ ಗಂಟೆ ೧೦ ೩೦ಕ್ಕೆ ಎಡನೀರು ಮಠದ ಶ್ರೀ ಈಶ್ವರಾನಂದ ಭಾರತೀ ಸ್ವಾಮಿಗಳವರು ಕಟ್ಟಿಸುವ ಬೋರ್ಡು ಪ್ರಾಥಮಿಕ ಶಾಲೆಯ ಶಂಕುಸ್ಥಾಪನೆಯ ಸಮಾರಂಭವು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಕೆ ವಿಠ್ಠಲ ಸೆಟ್ಟಿರಿಂದ ಜರುಗಿಸಲ್ಪಟ್ಟಿತು

ಸ್ವಾಮಿಜಿಗಳ ಸ್ವಾಗತ ಭಾಷಣವನ್ನು ಓದಿದ ತರುವಾಯ ಸ್ವಾಮಿಗಳ ಈ ಸ್ತುತ್ಯಕಾರ್ಯವನ್ನು ಹೊಗಳಿ ಡಾ, ಶಾಸ್ತ್ರಿ, ಮಹಮ್ಮದಶೆನ್ನಾಬ್ ಬಿ ಎಸ್ ಕಕ್ಕಿಲ್ಲಾಯ, ಬಾಬುಶೆಟ್ಟಿ ಮತ್ತು ಸುಂದರ ರಾಮ ಶೆಟ್ಟಿಯವರು ಮಾತನಾಡಿದರು ಮತ್ತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಡಿ ಬೋ, ಮಾಡುವ ಯತ್ನಗಳನ್ನು ವಿವರಿಸಿ, ಆರ್ಥಿಕ ದುಸ್ಥಿತಿಯಿಂದ ಬಳಲುತ್ತಿರುವ ಬೋರ್ಡಿಗೆ ಹೆಚ್ಚಿನ ಕೆಲಸಗಳನ್ನು ಮಾಡಲಿಕ್ಕಿರುವ ಅನಾನುಕೂಲತೆಗಳನ್ನು ವಿವರಿಸುತ್ತಾ ಸ್ವಾಮಿಗಳಂತಹ ಮಹನೀಯರು ಈ ರೀತಿಯಿಂದ ವಿದ್ಯಾಪ್ರಚಾರಕ್ಕೆ ಸಹಾಯಮಾಡಿ ಪ್ರೋತ್ಸಾಹಿಸುವುದು ಅಭಿನಂದನೀಯವೆಂದು ಹೇಳಿದರು

ಅತಿಥಿಗಳನ್ನು ಸ್ವಾಮಿಜಿಯವರು ಆದಿರಾತಿಥ್ಯಗಳಿಂದ ಸತ್ಕರಿಸಿದರು.

ಪುತ್ತೂರು

ಸಹಕಾರಿ, ತರಬೇತಿ:— ಪುತ್ತೂರು ತಾಲೂಕಿನ ಗುತ್ತಿಗಾರ್ ಬೋ! ಹಿ! ಶಾಲೆಯಲ್ಲಿ ತಾ. ೧೫ ರಲ್ಲು ಸಹಕಾರಿ ತರಬೇತಿ ಕ್ಲಾಸು ಜರಗಿತು. ಶ್ರೀ ಹಿ, ರಾ, ಮಲ್ಯರು ಗ್ರಾಮ ಸಂಘಟನೆ ಮತ್ತು ಸಹಕಾರಿ ಚಳವಳಗಳ ಕುರಿತು ಭಾಷಣವಿತ್ತರು ಪುತ್ತೂರು ಡಿ! ಇ! ರಾದ ಶ್ರೀ ನಜರೇತರು ಅಧ್ಯಕ್ಷತೆವಹಿಸಿದ್ದರು

ಎಮ್ಮಾರ್ಳ:— ಇದೇ ತಾ ೨೧-೧೨ ೪೦ ನೇ ಶನಿವಾರ ಪೂರ್ವಾಹ್ನ ಎಮ್ಮಾರ್ಳ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕ ಸಂಘದ ಮಾಸಿಕ ಸಭೆಯು ಎಲ್ಲೂರು ಹಾ! ಎಲಿಮೆಂಟರಿ ಶಾಲೆಯ ಹೆಡ್ ಮಾಸ್ತರರಾದ ಶ್ರೀ ಸಂಜೀವರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು

ಕಾರ್ಕಳ

ಪ್ರಮಾಣಿತ ಪ್ರಚಾರಕರು—ಇಲ್ಲಿ ಹಲವು ವರ್ಷಗಳಿಂದ ಹಿಂದೀ ಪ್ರಚಾರಕಾರ್ಯದಲ್ಲಿ ನಿರತರಾಗಿರುವ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಎಲ್ಲ ಪರೀಕ್ಷೆಗಳಿಗೂ ಹಿಂದೀ ಭಾಷಾ ಶಿಕ್ಷಣವನ್ನು ಕೊಡುವ ಆ ಶ್ರೇಣಿಯ ಪ್ರಚಾರಕರಾಗಿ ಸಭೆಯಿಂದ ಪ್ರಮಾಣಿತರಾಗಿದ್ದಾರೆ

ದಯಾನಂದರ ಸಂದೇಶ:—ಸಾರ್ವದೇಶಿಕ ಆರ್ಯ ಪ್ರತಿನಿಧಿ ಸಭೆಯ ಮುಖಂಡರಾದ ಮಹಾತ್ಮಾ ನಾರಾಯಣ ಸ್ವಾಮಿಯವರು ತಾ ೧ [illegible] ದಿನ ಇಲ್ಲಿ ಆಗಮಿಸಿದ್ದರು. ಸ್ಥಳೀಯ ಆರ್ಯ ಸಮಾಜಿಗಳ ಅವರಿಗೆ ಸಂಭ್ರಮದ ಸ್ವಾಗತವಿತ್ತು ಸತ್ಕರಿಸಿದರು. ಶ್ರೀ ಸ್ವಾಮಿಯವರು ದಯಾನಂದರ ಸಂದೇಶದ ಕುರಿತು ಭಾಷಣವನ್ನು ಹಿಂದಿಯಲ್ಲಿ ಕೊಟ್ಟು ಎಲ್ಲೂ ವೈದಿಕ ಧರ್ಮಾನುಯಾಯಿಗಳಾಗುವುದರಿಂದಲೇ ಲೋಕಶಾಂತಿಯು ಸ್ಥಾಪಿತವಾಗುವದೆಂದರು.

ಉಡುಪಿ

ಕೊಂಕಣಿ ಭಾಷೆ ಮಾತನಾಡುವ ಎಲ್ಲಾ ಜಾತಿಯ [illegible] ಪರಿಷತ್ತು ಇದೇ ತಾ ೩೧ನೇ ಮಂಗಳವಾರ ಸ್ಥಳೀಯ ಶ್ರೀ ರಾಮಕೃಷ್ಣ [illegible] ನಲ್ಲಿ ಜರಗುವುದು. ಇದರ ಅಧ್ಯಕ್ಷಸ್ಥಾನವನ್ನು ಮಂಗಳೂರಿನ ಶ್ರೀ ಜೆ ಸಲ್ಡಾನಾ ಬಿ ಎ ಎಲ್ ಎಲ್ ಬಿ ಎಂ ಎಲ್ ಸಿ ರಿಟಾಯರ್ಡ್ ಜಜ್ ಇವರು ವಹಿಸುವರು ಈ ಪರಿಷತ್ತಿಗೆ ಕೊಂಕಣಿ ಭಾಷೆ ಮಾತನಾಡುವ ಎಲ್ಲ ಜಾತಿಯ ಜನರಿಗೂ ಸ್ವಾಗತವಿದೆ ಪರಿಷತ್ತಿನ ಖರ್ಚನ್ನು ಡಾ ಮಾಧವ ಪೈಗಳು ವಹಿಸಿಕೊಂಡಿರುವುದರಿಂದ ಡೆಲಿಗೇಟ್ ಫೀ ಪ್ರವೇಶ ಫೀ ಮೊದಲಾದ ಯಾವ ಫೀಸು ಇಲ್ಲದ್ದರಿಂದ ಸರ್ವರೂ ಇದರಲ್ಲಿ ಭಾಗವಹಿಸಿ ಪರಿಷತ್ತನ್ನು ಯಶಸ್ವಿಗೊಳಿಸಬೇಕಾಗಿ ಸ್ವಾಗತ ಮಂಡಳಿಯು ವಿನಂತಿ ಮಾಡುತ್ತದೆ

೨೬ನೆಯ ಕನ್ನಡ ಸಾಹಿತ್ಯ ಸಮ್ಮೇಲನ ಧಾರವಾಡ

ಅಧಿವೇಶನದ ತಾರೀಖುಗಳು ೨೭, ೨೮ ೨೯ ದಿಸೆಂಬರ, ೧೯೪೦ ಅಧಿವೇಶನದ ಸ್ಥಳ 'ವಿದ್ಯಾಮಂದಿರ,' ಕಡಪಾ ಬೈಲು ಸಮ್ಮೇಲನದ ಉದ್ಘಾಟಕರು. ರಾಜಸೇವಾಪ್ರಸಕ್ತ ದಿ ಒ ಕೆ ರಾಮಸ್ವಾಮಿ ಜೆ ಪಿ, ಬಿ ಎಸ್ ಸಿ, ಮುಂಬಯಿ. ಅಧ್ಯಕ್ಷರು ಶ್ರೀವಾನ್ ಚಂದ್ರಶೇಖರ ಶಾಸ್ತ್ರಿಗಳು, ವ್ಯಾಕರಣ ತೀರ್ಥ, ಪ್ರಿನ್ಸಿಪಾಲ್, ಸಂಸ್ಕೃತ ಕಾಲೇಜು, ಮೂಡಗಿರಿ ಸ್ವಾಗತಾಧ್ಯಕ್ಷರು ಪ್ರೊ. ಶಿ. ಶಿ. ಬಸವನಾಳ, ಎಂ.ಎ, ಲಿಂಗರಾಜ ಕಾಲೇಜು, ಬೆಳಗಾಂವಿ.

ಸಾಹಿತ್ಯಗೋಷ್ಠಿ:— ಅಧ್ಯಕ್ಷರು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಎಂ. ಎ, ಸ್ವಾಗತಾಧ್ಯಕ್ಷರು- ಪ್ರೊ. ಶಿ. ಶಿ. ಬಸವನಾಳ, ಎಂ ಎ,

ಮಹಿಳಾಗೋಷ್ಠಿ:- ಅಧ್ಯಕ್ಷಿಣಿಯರು- ಡಾ, ಸಾವಿತ್ರಿಬಾಯಿ ನಾಗನಗೌಡಾ ಪಾಟೀಲ ಎಂ. ಬಿ, ಬಿ, ಎಸ್, ಹೊಸಪೇಟೆ ಸ್ವಾಗತಾಧ್ಯಕ್ಷಿಣಿಯರು ಶ್ರೀಮತಿ ಸೌ, ಶಾಂತಕ್ಕಾ ಮಳಿಮಠ,

ಮುಂಬಯಿ

ಕರ್ನಾಟಕ ನೂತನ ಸಂಗೀತ ಸಭಾ, ಮುಂಬಾಯಿ:— ಮುಂಬಾಯಿ ಕೋಟೆಯೊಳಗಿನ ಕನ್ನಡಿಗರಿಂದ ಸ್ಥಾಪಿತವಾಗಿ, ಕನ್ನಡ ಭಾಷೆ ಮತ್ತು ನಾಟ್ಯಕಲಾ ಪ್ರಚಾರಕ್ಕಾಗಿ ದುಡಿಯುತ್ತಿರುವ ಕನ್ನಡ ಸಂಗೀತ ಸಭಾ, ಕರ್ನಾಟಕ ಫ್ರೆಂಡ್ಸ್ ಯೂನಿಯನ್ ಮತ್ತು ಕರ್ನಾಟಕ ನೂತನ ಸಂಗೀತ ಸಭೆಗಳ ಸಂಘಟನೆ ಮಾಡಿ ಮೂರು ಸಭೆಗಳ ಏಕರೂಪ ಧ್ಯೇಯ ಸಾಧನೆಗಾಗಿ, ವಿಶಾಲ ಕ್ಷೇತ್ರದಲ್ಲಿ ಒಂದಾಗಿ ಕಲೆತು ಕನ್ನಡ ಜನಾಂಗದ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಭಾಗವಹಿಸುವ ಹಿರಿದಾಸೆಯಿಂದ, ಸಂಘಟನಾ ಕಾರ್ಯದಲ್ಲಿ ಇಳಿದಿದ್ದೇವೆ ಇದಕ್ಕೆ ಒಪ್ಪಿಗೆ ಮತ್ತು ತಕ್ಕಷ್ಟು ಪ್ರೋತ್ಸಾಹ ಉಳಿದೆರಡು ಸಭೆಗಳಿಂದಲೂ ಸಿಕ್ಕಿರುವುದು ಮುಂಬಾಯಿ ಕರ್ನಾಟಕಸ್ಥರ ಸಹಾನುಭೂತಿಯಿಂದ [illegible] ಉದ್ಯಮದಲ್ಲಿ ವಿಜಯಿಗಳಾಗುವೆಂಬ ಭರವಸೆಯಿದೆ ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ:— ಕಳೆದ ೨೮ ವರ್ಷಗಳಿಂದ ಶ್ರೀ ಗೋಕರ್ಣನಾಥ ಸಂಘ ಬೃಹತ್ ಶ್ರೀ ನಾರಾಯಣ ಪರಮಹಂಸಸ್ಮಾರಕ ಮಂಡಳಿ ಬಿಲ್ಲವರ ಎಸೋಸಿಯೇಶನ್ ಮತ್ತು ಬಿಲ್ಲವರ ಪರಸ್ಪರ ಸಹಾಯಕ ಫಂಡು ಎಂಬ ಸಂಸ್ಥೆಗಳಲ್ಲಿ ಪೂರ್ಣ [illegible] ದಿಂದ ಕಾರ್ಯಕಲಾಪಗಳನ್ನು ನಡ್ಸುಗೊಳಿಸಿ ಅವುಗಳ ಸುವ್ಯವಸ್ಥೆಗೆ ಕಾರಣೀಭೂತರಾದ ಶ್ರೀ ಮುಕ್ಕ ಅಪ್ಪಣ್ಣವರು ಉದ್ಯೋಗದಿಂದ ನಿವೃತ್ತಿ ಹೊಂದಿ ಸ್ವಗ್ರಾಮಕ್ಕೆ ತೆರಳುವುದರಿಂದ ಬಿಲ್ಲವ ಎಸೋಸಿಯೇಶನಿಂದ ಆದ [illegible] ೪೦ ರ ವಿಶೇಷ ಮಹಾಸಭೆಯಲ್ಲಿ [illegible] ಚೌಕಟ್ಟಿನಲ್ಲಿ ಸರ್ವಾಧ್ಯಕ್ಷರಿಂದ [illegible] ಮಾನಪತ್ರವನ್ನು ಅವರಿಗೆ ಅರ್ಪಿಸಲಾಗಿದೆ

ಇನ್ನು ಮುಂದೆ ಹೊಸ ಆಕರ್ಷಕ ಹೊದಿಕೆಯಿಂದ ಮಾರಲ್ಪಡುವ

ದಮ್ಮಿನ ಮೇಲಿನ ವಿಖ್ಯಾತ ಔಷಧ

ಪುರೋಹಿತ

– ಶ್ವಾಸ ಹಾರಿ –

ಮ. ಸ್ಟಾಕಿಂಗಿನ ಪರಿಚಯ ಮಾಡಿಕೊಳ್ಳಿರಿ. ನಕಲು ಆಗುವ ಸಂಭವವಿದೆ

ಕ್ರಯವು ಮೊದಲಿನಂತೆಯೇ ೩ ಔ, ೬ ಔ. ಮತ್ತು ೧೨ ಔ ಬಾಟಲಿಗಳಿಗೆ ಕ್ರಮವಾಗಿ ರೂ ೨-೩-೩, ರೂ. ೩ ೧೩, ಮತ್ತು ೬—೮,

ತರಿಸಿಕೊಳ್ಳುವ ವಿಳಾಸ

ಡಾ ಪುರೋಹಿತ ಫಾರ್ಮಸೀ,

– ಕೊಲ್ಹಾಪುರ. –

ಪಿಟೇನರು ನಾಜಿಗಳು ಹೇಳಿದಂತಿಲ್ಲ!

★ ಯುದ್ಧ ವಾರ್ತೆ



ಮುಸಲಿನಿಯು ಅನ್ಯಾಯ ಮಾಡುತ್ತಾನೆ.

ಚರ್ಚಿಲರು ಹೇಳುತ್ತಾರೆ

ಹೆಲಿಫಾಕ್ಸರು ಅಮೇರಿಕದ ರಾಯಭಾರಿಗಳು!

ಬ್ರಿಟನಿಗೆ ಅಮೇರಿಕದ ಬೆಂಬಲ.

ನಾಜೀ ಕೇಳಿಕೆಗೆ ತಿರಸ್ಕಾರ

ಫ್ರಾನ್ಸಿನಲ್ಲಿ ನಾಜಿಗಳು ಕೇಳಿದ ಕೇಳಿಕೆಗಳನ್ನು ಮಾರ್ಶಲ್ ಪಿಟೇನರು ತಿರಸ್ಕರಿಸಿದರು. ಮುಂದೆ ಹಿಟ್ಲರನು ಯಾವ ಧೋರಣೆಯನ್ನು ಕೈಕೊಳ್ಳುವನು ಎಂಬ ಬಗ್ಗೆ ಕುತೂಹಲವೆದ್ದಿದೆ.

ಗ್ರೀಕರ ಜಯ

ಗ್ರೀಕರು ಮುಂದೊತ್ತುತ್ತಿರುವರು. ಚಿಂಬಾರಾ ಪ್ರದೇಶವು ಅವರ ಸ್ವಾಧೀನವಾಗಿದೆ.

ಮುಸಲನಿಯು ಮಾಡಿದ ತಾಪ

ಚರ್ಚಿಲ್ಲರ ಭಾಷಣ

ಚರ್ಚಿಲರು ಭಾಷಣ ಮಾಡುತ್ತಾ ಇಟಲಿಯನರಿಗೆ ಮುಸಲನಿಯು ಅವರನ್ನು ಯುದ್ಧಕ್ಕೆಳೆದನೆಂದೂ ಹಾಗಾಗಿ ಆತನೇ ಮಹಾತಾಪ ಮಾಡಿದನೆಂದೂ ಹೇಳಿದರು.

ಹಿಂದಡಿಯಿಡೆವು

ಗೊಬೆಲ್ಸನ ಗರ್ಜನೆ

ಜರ್ಮನಿಯ ಪ್ರಚಾರಖಾತೆಯ ಮಂತ್ರಿಯಾದ ಡಾ. ಗೊಬೆಲ್ಸನು ಹ್ಯಾಂಬರ್ಗದಲ್ಲಿ ಕಾರಖಾನೆಯ ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡಿದನು. ಅವನ ಭಾಷಣವು ಕಳೆದ ವಾರ ಹಿಟ್ಲರನು ಮಾಡಿದ ಭಾಷಣದಂತೆಯೇ ಇತ್ತು. 'ಬ್ರಿಟಿಷರ ವೈಮಾನಿಕ ದಾಳಿಯಿಂದ ಹಾನಿಯಾಗಿರುವದು ನಿಜ. ಆದರೆ ನಾವೆಂದಿಗೂ ಹಿಂದಡಿಯಿಡೆವು. ಈ ನಮ್ಮ ಹೋರಾಟವು ಜರ್ಮನ್ ಜನಾಂಗದ ಭವಿಶ್ಯವನ್ನೇ ನಿರ್ಧರಿಸುವುದು' ಎಂದು ಗರ್ಜಿಸಿದನು.

ಇಜಿಪ್ತ ರಣಭೂಮಿಯಲ್ಲಿ ಹಿಂದೀ ಸೈನಿಕರ ಸಾಹಸ

ಇಜಿಪ್ತ ರಣಭೂಮಿಯಲ್ಲಿ ಹಿಂದೀ ಸೈನಿಕರು ಮಾಡಿದ ಸಾಹಸವನ್ನು ಕುರಿತು ಹಿಂದುಸ್ಥಾನ ಸರಕಾರದವರು ಒಂದು ಪ್ರಕಟಣೆ ಹೊರಡಿಸಿರುತ್ತಾರೆ:

ಹಿಂದೀ ಸೈನಿಕರ ಒಂದು ದಂಡು ಸೀದಿ ಬರಾನಿಯ ಹತ್ತಿರ ಮಾರ್ಶಲ್ ಗ್ರಾಜಿಯಾನಿಯವರ ದಂಡುಗಳನ್ನು ಭೇದಿಸಿತೆಂದು ತಿಳಿದುಬರುತ್ತದೆ. ಈ ಭಾಗದಲ್ಲಿ ಮೊದಲು ಹಲ್ಲೆಯನ್ನು ಪ್ರಾರಂಭಿಸಿದವರು ಹಿಂದೀಯರೇ.

ಈ ಹಿಂದೀ ದಂಡಿನಲ್ಲಿ ಮುಸಲ್ಮಾನರು, ಸೀಖರು, ರಜಪೂತರು, ಮರಾಠರು, ಜಾಠರು ಮತ್ತು ಮದ್ರಾಸಿಗಳು ಮೊದಲಾದ ಸಿಪಾಯಿಗಳಿದ್ದರು. ಇವರು ಈ ಬಗೆಯ ದಾಳಿಗಾಗಿ ಕಳೆದ ಕೆಲವು ತಿಂಗಳುಗಳಿಂದ ಇಜಿಪ್ತ ಮರುಭೂಮಿಯಲ್ಲಿ ಶಿಕ್ಷಣಪಡೆಯುತ್ತಿದ್ದರು:

ಹೆಲಿಫ್ಯಾಕ್ಸರು ಅಮೇರಿಕಕ್ಕೆ ಬ್ರಿಟಿಷ್ ರಾಯಭಾರಿಯಾದರು

ಅಂಥನಿ ಈಡನರು ವಿದೇಶಾಂಗ ಮಂತ್ರಿಯಾಗುವರು?

ಲಾರ್ಡ್ ಲಾಥಿಯಾನರ ಮರಣದಿಂದ ಖಾಲಿಯಾದ ಬ್ರಿಟಿಷ್ ರಾಯಭಾರಿ ಸ್ಥಾನಕ್ಕೆ ಲಾರ್ಡ್ ಹೆಲಿಫ್ಯಾಕ್ಸರು ನಿಯೋಜಿತರಾದರು. ಅಂಥನಿ ಈಡನರೇ ಹೆಲಿಫ್ಯಾಕ್ಸರ ಸ್ಥಾನದಲ್ಲಿ ಪರರಾಷ್ಟ್ರಗಳ ಕಾರ್ಯದರ್ಶಿಗಳಾದರು.

ಮೆಂಚೆಸ್ಟರಿನ ಮೇಲೆ ಧಾಳಿ

ಕಾಮನ್ಸ್ ಸಭೆಯ ಆವಾರಕ್ಕೆ ಪೆಟ್ಟು

ತಾ. ೨೩ರಂದು ಜರ್ಮನ್ ವೈಮಾನಿಕರು ಮೆಂಚೆಸ್ಟರಿನ ಮೇಲೆ ಧಾಳಿ ಮಾಡಿದರು. ಲಂಡನಿನ ಮೇಲೆಯೂ ಹಲವು ಕಡೆ ಬಾಂಬುಗಳು ಬಿದ್ದುವು. ಇದರಿಂದ ಕಾಮನ್ಸ್ ಸಭೆಯ ಆವಾರಕ್ಕೂ ಪೆಟ್ಟು ಆಗಿದೆಯೆಂದೂ ತಿಳಿದು ಬರುತ್ತದೆ.

ಜರ್ಮನಿ ಮೇಲೆಯೂ ಧಾಳಿ

ಬ್ರಿಟಿಷ್ ವೈಮಾನಿಕರು ಜರ್ಮನ್ ಮೇಲೆಯೂ ಧಾಳಿಮಾಡಿ ಅನೇಕ ಬಾಂಬುಗಳನ್ನೆಸೆದರು.

ಸ್ಮಿಗ್ಲೆರಿಜರ ಪಲಾಯನ

ಪೋಲೆಂಡಿನ ಹಿಂದಿನ ಸೇನಾಪತಿ ಸ್ಮಿಗ್ಲೆರಿಜರು ಪಲಾಯನಮಾಡಿರುವರೆಂದು ವಾರ್ತೆಯಿದೆ.

ಇಟಲಿಯ ಕುಟಿಲ ನೀತಿ ಸ್ಪೈನನ್ನು ಸಿಟ್ಟಿಗೆಬ್ಬಿಸುತ್ತದೆ

ಕೆಲವು ಸ್ಪಾನಿಶ್ ವ್ಯಾಪಾರಿ ಹಡಗುಗಳನ್ನು ಮುಂಚಿತವಾಗಿ ತಿಳಿಸದೆ ಮುಳುಗಿಸಬೇಕೆಂದು ಇಟಲಿಯ ಸಬ್‌ಮೆರಿನ್‌ಗಳು ಯತ್ನಿಸುತ್ತಿವೆಯೆಂದು ಬ್ರಿಟಿಷರು ತಿಳಿಸುತ್ತಾರೆ.

ಕಪ್ಪುಸಮುದ್ರದಲ್ಲಿ ಗಂಡಾಂತರ

ರುಮೇನಿಯದ ಎಚ್ಚರಿಕೆ

ಡ್ಯಾನೂಬಿನ ಮುಂಗಡೆಯಲ್ಲಿ ಕಪ್ಪು ಸಮುದ್ರದಲ್ಲಿ ರುಮೇನಿಯ ತೋಟಗಳನ್ನು ಹಾಕಿದ್ದು ಹಡಗುಸಂಚಾರಕ್ಕೆ ಅಪಾಯಕರವಾಗಿ ಮಾಡಿದೆ.

ರೋಮಿನಲ್ಲಿ ಒಳಸಂಚು

೨೪ ಜನರಿಗೆ ಶಿಕ್ಷೆ

ರಾಜದ್ರೋಹದ ಆರೋಪದೆಯ ಮೇರೆಗೆ ರೋಮಿನಲ್ಲಿ ೨೪ ಜನರಿಗೆ ಕಠಿಣ ಶಿಕ್ಷೆಗೆಳಿಗೆ ಗುರಿಮಾಡಲಾಗಿದೆ. ನಾಳೆಯಲ್ಲಿ ಹಲವರು ರಾಜದ್ರೋಹಿಗಳಿರುವರೆಂದು ಸರಕಾರದ ಅಂದಾಜಾಗಿರುತ್ತದೆ.

೫೦,೦೦೦ ಮಂದಿ ಜರ್ಮನರು ಬಂದಿರುವರೆಂದು ಸುದ್ದಿ

೫೦ ಸಾವಿರ ಜರ್ಮನ್ ಸೈನಿಕರು ಯಥೇಚ್ಛವಾಗಿ ಯುದ್ಧಸಾಮಗ್ರಿಗಳೊಡನೆ ಬಂದು ಇಟಲಿಯ ದಕ್ಷಿಣಭಾಗದಲ್ಲಿರುವ ನೇಪಲ್ಸ್ ಮತ್ತು ಬಾರಿಬಂದರಗಳಲ್ಲಿ ಶೇಖರರಾಗಿರುವರೆಂದು ಸುದ್ದಿಯಿದೆ.

ಜರ್ಮನಿಯಲ್ಲಿ ಹೊಸ ಜಪಾನ್ ರಾಯಭಾರಿ

ರಶ್ಯಕ್ಕೂ ಜರ್ಮನಿಗೂ ಬಾಂಧವ್ಯವು ಬಹುಕಾಲ ನಿಲ್ಲಲಾರದೆಂದು ಹೇಳಿದ ಲೆ. ಕ. ಓಷಿಮಾರವರು ತಿರಿಗಿ ಜರ್ಮನಿಯಲ್ಲಿ ಜಪಾನಿ ರಾಯಭಾರಿಗಳಾಗಿ ನೇಮಕಹೊಂದಿರುವರು. ಅವರು ಕೆಲ ದಿನಗಳ ಹಿಂದೆ ರಶ್ಯವನ್ನು ತುಳಿದು ಹಾಕಬೇಕೆಂದು ಹಿಟ್ಲರನು ನಿಶ್ಚಯಿಸಿರುವನೆಂದಿರುವರು.

ಜನವರಿಯಲ್ಲಿ ಜರ್ಮನಿ ಧಾಳಿ

ಜರ್ಮನರ ಧಾಳಿಯು ಜನವರಿ ತಿಂಗಳಲ್ಲಿ ತೀವ್ರವಾಗಿ ನಡೆಯಬಹುದೆಂದು ವಾರ್ತೆ ಹರಡಿದೆ. ಬ್ರಿಟಿಷ್ ಪ್ರಧಾನರಾದ ಚರ್ಚಿಲ್ಲರೂ ತಮ್ಮ ಹೇಳಿಕೆಯಲ್ಲಿ ಅಂತಹ ಸಂಶಯವನ್ನು ಸೂಚಿಸಿರುವರು.

ಬ್ರಿಟನಿಗೆ ಅಮೇರಿಕದ ಸಹಾಯ

ರೂಜ್‌ವೆಲ್ಟರ ಯೋಜನೆ

ಬ್ರಿಟನಿಗೆ ಯುದ್ಧ ಸಹಾಯಮಾಡುವ ವಿಚಾರವಾಗಿ ರೂಸ್‌ವೆಲ್ಟರು ಒಂದು ಯೋಜನೆ ತಯಾರಿಸಿರುವರಂತೆ. ಇದರಿಂದ ಎರಡು ದೇಶಗಳಿಗೂ ಪ್ರಯೋಜನವಾಗಲಿದೆಯಂತೆ. ಯುದ್ಧದಲ್ಲಿ ಅಮೇರಿಕವು ಸೇರುವ ಸಂಭವವಿಲ್ಲವೆಂದು ಹೇಳಿರುವರು. ದುಡ್ಡಿಲ್ಲದ ಕಾರಣ ಬ್ರಿಟನು ಯುದ್ಧವನ್ನು ನಿಲ್ಲಿಸಬಾರದು ಎಂಬುದು ರೂಸ್‌ವೆಲ್ಟರ ಅಭಿಪ್ರಾಯವಂತೆ. ಅಮೇರಿಕವು ಸಾಲ ಕೊಡದ ವಿನಾ ವ್ಯಾಪಾರವು ಸಾಧ್ಯವಿಲ್ಲವೆಂದು ಬ್ರಿಟನೂ ತಿಳಿಸಿರುವದೆಂದು ಸುದ್ದಿ.

ಫಿನ್ಲೆಂಡ್ ಅಧ್ಯಕ್ಷರ ಮರಣ

ಕಳೆದ ವರ್ಷ ರಶ್ಯದೊಡನೆ ಫಿನ್ಲೆಂಡ್ ಯುದ್ಧ ಹೂಡಿದ್ದಾಗ ಅಪ್ರತಿಮ ಸಾಹಸದಿಂದ ಕಾದಾಡಿದ ಪ್ರೆಸಿಡೆಂಟ್ ಕೆಲಿಯೋ ಇವರು ಮರಣಹೊಂದಿರುವರು. ಅವರ ಸ್ಥಾನದಲ್ಲಿ ರೈಟಿಯವರು ಅಧ್ಯಕ್ಷರಾಗಿರುವರು.

೮ ತಿಂಗಳಲ್ಲಿ ೫೦೦೦ ಸಲ ಧಾಳಿ

ಕಳೆದ ಎಂಟು ತಿಂಗಳಲ್ಲಿ ಚಾನಲ್ ಬಂದರದಿಂದ ಡೊಡಿಕಾನಿಜನ ವರೆಗೆ ೫೦೦೦ ಸಲ ವಿಮಾನಧಾಳಿ ನಡೆಯಿತೆಂದು ತಿಳಿದುಬರುತ್ತದೆ.

ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಸತ್ಯಾಗ್ರಹವಿಲ್ಲ

ಮಹಾತ್ಮಾ ಗಾಂಧಿಯವರ ಸೂಚನೆ

ಕ್ರಿಸ್‌ಮಸ ಹಬ್ಬದ ಕಾಲದಲ್ಲಿ ಅಂದರೆ ಡಿಸೆಂಬರ ೨೩ನೇ ತಾರೀಖಿನಿಂದ ಜನವರಿ ೮ನೇ ತಾರೀಖಿನ ವರೆಗೆ (ಎರಡೂ ದಿನಗಳ ಕೂಡಿ) ಸತ್ಯಾಗ್ರಹ ಮಾಡತಕ್ಕದ್ದಲ್ಲವೆಂದು ಶ್ರೀ ಮಹದೇವ ದೇಸಾಯಿಯು ಗಾಂಧಿಯವರ ಸೂಚನೆಯ ಮೇರೆಗೆ ಪ್ರಕಟಣೆ ಹೊರಡಿಸಿರುತ್ತಾರೆ.

ಇನ್ನು ಮುಂದೆ ಸತ್ಯಾಗ್ರಹ ಮಾಡಬೇಕೆನ್ನುವವರೆಲ್ಲರೂ ಗಾಂಧಿಜಿಯವರ ಕರಾರುಗಳಿಗೆ ಒಪ್ಪಿ ಪ್ರಾಂತೀಕ ಕಾಂಗ್ರೆಸ ಕಮೀಟಿಗೇ ಅರ್ಜಿ ಮಾಡಿಕೊಳ್ಳಬೇಕೆಂದೂ ಹೇಳಲಾಗಿದೆ.

"ಅನೇಕ ಜನ ವಿದ್ಯಾರ್ಥಿಗಳೂ ಸತ್ಯಾಗ್ರಹಮಾಡಲು ಮುಂದೆ ಬಂದಿದ್ದಾರೆ. ಆದರೆ ಇವರಾದರೂ ಸತ್ಯಾಗ್ರಹಿಯ ಕರಾರುಗಳನ್ನು ಅಕ್ಷರಶ: ಪಾಲಿಸಬೇಕು. ತಮ್ಮ ಅಭ್ಯಾಸವನ್ನು ನಿಲ್ಲಿಸಿಬಿಡುವ ಇಚ್ಛೆಯಿಲ್ಲದವರು ಮತ್ತು ತಂದೆತಾಯಿಗಳ ಅಪ್ಪಣೆಯಿಲ್ಲದವರು ಸತ್ಯಾಗ್ರಹ ಮಾಡಲು ಮುಂದೆ ಬರಬಾರದು ಎಂದು ಶ್ರೀ ದೇಸಾಯರು ಅಂದಿರುವರು.

ವಿದ್ಯಾರ್ಥಿಗಳ ಮೇಲೆ ಲಾಠಿ

ಅನ್ನಾಮಲೆಯ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿ ಪ್ರಯೋಗ ಮಾಡಿದರು. ಇವರಲ್ಲಿ ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಗಳಲ್ಲಿರುವರು. ಈ ಬಗ್ಗೆ ವಿದ್ಯಾರ್ಥಿಗಳು ವೈಸ್ ಛಾನ್ಸೆಲರಲ್ಲಿಗೆ ಒಂದು ಶಿಷ್ಟ ಮಂಡಳ ಒಯ್ದಿರುವರು. ಪ್ರಾಂತದ ಎಲ್ಲೆಡೆಗಳಲ್ಲಿಯೂ ಈ ಬಗ್ಗೆ ಖಂಡನೆಯ ಠರಾವುಗಳಾಗಿವೆ. ಇದರ ಸ್ವರೂಪನು ಧೂಳಿಯಲ್ಲಿ ೪೦೦ ವಿದ್ಯಾರ್ಥಿಗಳು ಚಿದಂಬರದಲ್ಲಿ ಒಂದು ದಿನ ಅನ್ನಾಹಾರಗಳನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಕಾಮತರ ಬಂಧನ

ಸೇವಾ ಗ್ರಾಮದ ಚೆಲ್ಲ ಕಾರಖಾನೆಯ ಅಧಿಕಾರದಲ್ಲಿರುವ ಶ್ರೀ ಕಾಮತರನ್ನು ಸತ್ಯಾಗ್ರಹದಲ್ಲಿ ಸೆರೆಹಿಡಿಯಲಾಗಿದೆ.

ಶೇಟ್ ಜಮ್ನಾಲಾಲ ಬಜಾಜರ ಬಂಧನ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭಾಸದರಾದ ಶ್ರೀ ಬಜಾಜರನ್ನು ವರ್ಧಾದಲ್ಲಿ ಬಂಧಿಸಿರುವರು.

ಗಾಂಧಿಜಿಯವರ ಆರೋಗ್ಯ ಚನ್ನಾಗಿಲ್ಲ

ಕೆಲದಿನಗಳಿಂದ ಗಾಂಧಿಜಿಯವರ ಆರೋಗ್ಯ ಚನ್ನಾಗಿರುವುದಿಲ್ಲವೆಂದು ತಿಳಿದಿದೆ. ರಕ್ತದ ಒತ್ತಾಟವು ಆರಂಭವಾಗಿರುವುದು.

ಟರ್ಕಿಯ ಶಿಷ್ಟ ಮಂಡಳ ಗಡಿನಾಡಿನಲ್ಲಿ

ಟರ್ಕಿಯ ಮಿಲಿಟರಿ ಶಿಷ್ಟ ಮಂಡಳವೊಂದು ಅಫಘಾನಿಸ್ಥಾನದ ಮೂಲಕ ಪೇಶಾವರಕ್ಕೆ ಬಂದಿರುವುದು. ಅವರಿಗೆ ಸಂಭ್ರಮದ ಸ್ವಾಗತ ಸತ್ಕಾರಗಳು ನಡೆದವು.

ಬೀಡಿ ಕಾರ್ಖಾನೆಗಳಲ್ಲಿ ಮುಷ್ಕರ

ಪಾಲ್ಘಾಟಿನ ಛಮದು ಸ್ವಾಗರವೆಂಬಲ್ಲಿ ...

COCHIN JARS ★

And

PICKLING SEASON ★

What a Coincidence!

—But, among South Kanara's buying families, it is COCHIN JAR that season after season carries the greatest weight in PICKLES-TASTE that is long remembered after each dinner.

DEALERS: *The 6½ cash discount still continues.*

Fresh stocks: Await your early orders.

K. RAMA NAYAK,

Chief Agent Cochin Potteries

Mangalore.



ಕ್ರಿಸ್‌ಮಸಿನಲ್ಲಿ ಸತ್ಯಾಗ್ರಹವಿಲ್ಲ!

ಪೋಪರು ಮಹಾತ್ಮರನ್ನು ಅಭಿನಂದಿಸಿದರು

ಜಮುನಾಲಾಲ ಬಜಾಜರು ಬಂಧಿತರಾದರು.

ಮಧುರೆಯಲ್ಲಿ ಹಿಂದೂ ಮಹಾಸಭಾ ಪರಿಷತ್ತು

ರುವ ಬೀಡಿ ಕಾರ್ಖಾನೆಯೊಂದರಲ್ಲಿ ಕೆಲಸಗಾರರು ತಮಗೆ ಆದ ಅನ್ಯಾಯದ ಸಲುವಾಗಿ ಮುಷ್ಕರ ಹೂಡಿರುವರು. ಅವರಲ್ಲಿ ಕೆಲವು ಮುಖಂಡರನ್ನು ಕೈದು ಮಾಡಲಾಗಿದೆ.

ಸಾವರ್ಕಾರ್-ರಾಯ್ ಭೇಟಿ

ಬೊಂಬಾಯಿಯಲ್ಲಿ ಶ್ರೀ ಎಂ. ಎನ್. ರಾಯಿಗಳು ಬ್ಯಾ. ಸಾವರ್ಕಾರರನ್ನು ಭೇಟಿಯಾಗಿ ಸಧ್ಯದ ರಾಜಕೀಯ ವಿಚಾರವಾಗಿ ಮಾತುಕತೆ ನಡೆಸಿದರೆಂದು ತಿಳಿದು ಬರುತ್ತದೆ.

ಜನವರಿ ೫ರವರೆಗೂ ಸತ್ಯಾಗ್ರಹ ಕೂಡದು

ಕ್ರಿಸ್‌ಮಸ್ ಕಾಲದಲ್ಲಿ ಸತ್ಯಾಗ್ರಹ ಹೂಡಬಾರದೆಂದು ಪ್ರಕಟಿಸಿದ ಗಾಂಧಿಜಿಯವರು ತಾ. ೫ರ ವರೆಗೂ ಸತ್ಯಾಗ್ರಹ ಹೂಡಬಾರದಾಗಿ ಹೇಳಿರುವರು.

ಪೋಪರು ಗಾಂಧಿಜಿಯನ್ನು ಅಭಿನಂದಿಸಿದರು

ಕ್ರಿಸ್‌ಮಸ್‌ನಲ್ಲಿ ಸತ್ಯಾಗ್ರಹ ಹೂಡಬಾರದಾಗಿ ಪ್ರಕಟಿಸಿದ ಗಾಂಧಿಜಿಯವರ ಉದಾತ್ತ ಗುಣವನ್ನು ಹೊಗಳಿ ಪೋಪರು ಒಂದು ಅಭಿನಂದನಾ ಪತ್ರವನ್ನು ಗಾಂಧಿಜಿಯವರಿಗೆ ಕಳುಹಿಸಿರುವರೆಂದು ಸುದ್ದಿ ಬಂದಿದೆ.

ಪಂಜಾಬಿನಲ್ಲಿ ರಾಷ್ಟ್ರಪತಿಗಳ ಸಂಚಾರ

ಈ ವಾರದಲ್ಲಿ ರಾಷ್ಟ್ರಪತಿ ಅಜಾದರು ಪಂಜಾಬ ಪ್ರಾಂತವನ್ನು ಸಂಚರಿಸಲಿರುವರೆಂದು ತಿಳಿದು ಬಂದಿದೆ.

ಮೋಹನ ಕುಮಾರ ಮಂಗಲಂ ಬಂಧನ

ಡಾ। ಸುಬ್ಬರಾಯನರ ಪುತ್ರ ಮೋಹನ ಕುಮಾರ ಮಂಗಲಂ ಭಾರ್-ಎಟ್-ಲಾ ಇವರನ್ನು ಬಂಧಿಸಲಾಗಿದೆ. ಇವರನ್ನು ಹಿಡಿದುಕೊಟ್ಟವರಿಗೆ ೧೦೦ ರೂಪಾಯಿ ಬಹುಮಾನವೆಂದು ಸರಕಾರವು ಪ್ರಕಟಿಸಿತ್ತು.

ಗಡಿನಾಡಿನಲ್ಲಿ ಯುದ್ಧ ವಿರುದ್ಧ ಪ್ರಚಾರ

ಗಡಿನಾಡಿನಲ್ಲಿ ಸತ್ಯಾಗ್ರಹ ಮಾಡಿದವರನ್ನು ಬಂಧಿಸದಿರುವ ಕಾರಣ ಹಿಂದಿನ ಪ್ರಧಾನ ಮಂತ್ರಿ ಡಾ। ಖಾನಸಾಹೇಬರು ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಯುದ್ಧ ವಿರುದ್ಧ ಪ್ರಚಾರ ಭಾಷಣಗಳನ್ನು ಮಾಡುತ್ತಿದ್ದಾರೆ.

ಸಿ. ಯಂ. ಪೂಣಚ್ಚರಿಗೆ ಶಿಕ್ಷೆ

ಕೊಡಗಿನ ಮುಂದಾಳುಗಳಾದ ಶ್ರೀ. ಸಿ. ಎಂ. ಪೂಣಚ್ಚ ಇವರನ್ನು ಬಂಧಿಸಲಾಗಿದೆ.

ವಿದ್ಯಾರ್ಥಿಗಳಿಗಾಗಿ

ತಾಯಿ ಚಿತಾಪೋರವರ ಹನ್ನೆರಡು ಸಂದೇಶಗಳು

ಡಾ। ತಾಯಿ.ಚಿ-ತಾಪೋರವರ ತಮ್ಮ ದೇಶಕ್ಕೆ ಮರಳಿ ಹೋಗುವಾಗ್ಗೆ ಇಲ್ಲಿಯ ಲಖನೌ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಈ ಕೆಳಗಿನ ಮಹತ್ವದ ಹನ್ನೆರಡು ಆದೇಶಗಳನ್ನು ಕೊಟ್ಟು ಹೋಗಿದ್ದಾರೆ. ಅವು ಲಖನೌ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಇಡೀ ಭರತಖಂಡದ ವಿದ್ಯಾರ್ಥಿ ವರ್ಗಕ್ಕೆ ಮಹತ್ವವಾದವುಗಳಿರುವವು ಅವುಗಳನ್ನು ಇಲ್ಲಿ ಕೊಡಲು ಅಪೇಕ್ಷಿಸುತ್ತೇವೆ.

೧. ರಾಜನಿಷ್ಠೆ ಮತ್ತು ಧೈರ್ಯಗಳು ದೇಶಭಕ್ತಿಯ ತಳಹದಿಗಳಾಗಿವೆ.

(೨) ಪುತ್ರೀಯ ಶ್ರದ್ಧೆಯು ಸದ್ಗುಣದ ತಳಹದಿಯು.

(೩) ಸಂಪ್ರಸಾದ ಮತ್ತು ಪ್ರೀತಿಗಳು ವಿಶ್ವ ಬಂಧುತ್ವದ ತಳಹದಿಗಳು.

(೪) ನಂಬಿಗೆ ಮತ್ತು ನೀತಿಗಳು ಸದ್ವರ್ತನೆ ಸಾಗಿಸಲು ಮುಖ್ಯ ತಳಹದಿಗಳಾಗಿವೆ.

(೫) ಸ್ನೇಹಾನುವರ್ತನವೇ (ರಾಜಿಯಿಂದಿರುವದೆ) ಜಗತ್ತಿನಲ್ಲಿ ವ್ಯವಹರಿಸಲು ಮೂಲ ತಳಹದಿ.

(೬) ಮರ್ಯಾದೆ ಮತ್ತು ವಿನಯಗಳು ಸುವ್ಯವಸ್ಥೆಯ ಕಾರ್ಯಕ್ಕೆ ತಳಹದಿಗಳು.

(೭) ಆಜ್ಞಾಧಾರಕತ್ವವು ಅಧಿಕಾರ ಸ್ವೀಕರಿಸಲು ತಳಹದಿಯಾಗಿದೆ.

(೮) ನಿಶ್ಚಲ ಪ್ರಯತ್ನ ಮತ್ತು ಮಿತವ್ಯಯಗಳು ಸೇವೆಯ ತಳಹದಿಗಳು.

(೯) ಅಚ್ಚುಕಟ್ಟುತನ ಮತ್ತು ಸ್ವಚ್ಛತೆಗಳು ಪುಷ್ಟಪ್ರಕೃತಿಯ ತಳಗಲ್ಲುಗಳು.

(೧೦) ಸಾಹಾಯ್ಯವೇ ಸುಖದಮೂಲ

(೧೧) ಜ್ಞಾನವೇ ಜಾಗ್ರತಿಕ ಲಾಭದ ತಳಹದಿ.

(೧೨) ಸ್ಥಿರ ಪ್ರಯತ್ನವೇ ಗೆಲುವಿನ ಮೂಲ.

ರಾಷ್ಟ್ರಪತಿಗಳ ಸಂದೇಶ

ಚರಕದ ಮಹತ್ವ

ರಾಜಕೀಯ ವಿಚಾರ

ಕಲ್ಕತ್ತದಲ್ಲಿ ಒಂದು ಸಾರ್ವಜನಿಕ ಭಾಷಣವೀಯುತ್ತಾ ರಾಷ್ಟ್ರಪತಿ ಅಜಾದರು ನೂಲುವುದು ಶಿಸ್ತಿನ ಮೊದಲನೆಯ ಹಜ್ಜೆಯೆಂದೂ, ಚರಕವು ನಮ್ಮ ರಾಷ್ಟ್ರದ ಪ್ರಗತಿಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆಯೆಂದೂ ಹೇಳಿದರು.

ರಾಜಕೀಯ ವಿಚಾರವಾಗಿ ಮಾತನಾಡುತ್ತಾ ಅವರು ಈ ಸಲದ ಚಳವಳವು ಪ್ರತಿನಿಧಿಕ ಸ್ವರೂಪದ್ದಾಗಿರುವುದೆಂದು, ಚಳವಳವು ಕ್ರಮಬದ್ಧವಾಗಿ ಸಾಗುವುದೆಂದು, ಕಾಂಗ್ರೆಸಿನ ನಾಯಕರ ಆಜ್ಞೆಯ ಸದಸ್ಯರೂ ಚಳವಳದಲ್ಲಿ ಭಾಗವಹಿಸ್ಬೇಕಾಗುವುದೆಂದು ಹೇಳಿದರು.

ಬಂಗಾಳ ಸದಸ್ಯರ ಮೇಲೆ ಶಿಸ್ತು

ಬಂಗಾಳದ ಕಾಂಗ್ರೆಸ್ ಎಂ. ಎಲ್. ಎ.ಗಳು ೧೬ ಜನರ ಮೇಲೆ ರಾಷ್ಟ್ರಪತಿಗಳು ಶಿಸ್ತುಜಾರಿ ಮಾಡುವರೆಂದು ಸುದ್ದಿಯಿದೆ.

ಕಾಮನ್ಸ್ ಸಭೆಯಲ್ಲಿ ಭಾರತದ ವಿಚಾರವಾಗಿ ಪ್ರಶ್ನೋತ್ತರಗಳು

ಕಾಮನ್ಸ್ ಸಭೆಯಲ್ಲಿ ಸೊರೆನ್ಸರವರು ಭಾರತದ ವಿಷಯವಾಗಿ ಭಾರತ ಸಚಿವ ಎಮೆರಿಯವರೊಡನೆ ಪ್ರಶ್ನೋತ್ತರ ಮಾಡಿದರು. ಎಮೆರಿಯವರು ವೈಸರಾಯರ ಹೇಳಿಕೆಯನ್ನು ಸಮರ್ಥಿಸಿ ಮಾತನಾಡಿದರು.

ಹಿಂದಿನ ಮಂತ್ರಿಗಳಿಗೆ ಶಿಕ್ಷೆ

ಯುಕ್ತಪ್ರಾಂತದ ಹಿಂದಿನ ಮಂತ್ರಿ ಪ್ಯಾರಿಲಾಲ ಶರ್ಮರಿಗೆ ಶಿಕ್ಷೆಯಾಗಿದೆ.

ಪತ್ರಿಕಾ ಕಚೇರಿಗಳ ಜಪ್ತಿ

ಕಲ್ಕತ್ತದ ಹಿಂದೂಸ್ಥಾನ ಸ್ಟೇಂಡಾರ್ಡ್ ಮತ್ತು ಆನಂದಬಜಾರ್ ಪತ್ರಿಕೆಗಳ ಕಚೇರಿಗಳನ್ನು ಜಪ್ತಿ ಮಾಡಿರುವರು.

THE
BANK OF MANGALORE LTD.,
H. O. MANGALORE.
ESTD. 1931
Branches:-
Moodabidri & Padubidri.

NOTICE

On and from 1st January 1941 the following are the revised rates of interest on deposits:

FIXED DEPOSITS:

For 2 years or over	...	5½%
„ 1 „	...	4½%
„ 6 months	...	3½%
„ 3 months	...	3

Interest Payable Quarterly.

SAVINGS BANK DEPOSITS:

On daily balances on balances over Rs. 5-0-0 in multiples of Rs. 5-0-0 @ 3%.

All kinds of banking business transacted

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 372/1940

ಕೆಂಚಪ್ಪ ಬಂಗಪ್ಪ ಶೈ ಕೊಡ — ವಾದಿರು
ನೀಲಪ್ಪ ಕೊಟ್ಟಾರಿ ಕೊಡ 3 ಜನರು — ಪ್ರತಿವಾದಿರು

ಪ್ರತಿವಾದಿರು:—

1. ಸೀನಪ್ಪ ಕೊಟ್ಟಾರಿ—ಪದ್ಮ ಕೊಟ್ಟಾರಿ ಅಳಿಯ
3. ಕಿನ್ನಿಯಾನೆ ಸರಸ್ವತಿ—ಪದ್ಮ ಕೊಟ್ಟಾರಿ ಹೊಸ, ಪುತ್ತೂರು ತಾಲ್ಲೂಕು ನರಿಮೊಗ್ರು ಗ್ರಾಮದ ಶ್ವಂಗಕದಲ್ಲಿ.

ವಾದಿರು ಪ್ರತಿವಾದಿರಿಂದ ಬಹ ದಾವಾ ಧಿ. ಪ್ರೋನೋಟಿನ ಅಸ್ಲು ಬಡ್ಡಿ ಸಹಿತ ರೂ. 73ನ್ನು ಬರಮಾಡಿ ಕೊಳ್ಳುವದೆ ದಾಖಲು ಮಾಡಿದ ಕೋರ್ಟಿನ ತನ್ನಾಕ್ಕದ ತಾ. 8-1-1941ಕ್ಕೆ ನಿಶ್ಚಯಿಸಿರುತ್ತದೆ. ಈ ದ್ವಾದಗೆ ಪ್ರತಿವಾದಿಗಳು ತಮ್ಮ ಆಕ್ಷೇಪಗಳೇನಾದರೂ ಇದ್ದರೆ ಕೋರ್ಟಿಗೆ 10ಘಂಟೆಗೆ ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಬೇಕೆಂದು ತಿಳಿಸಲಾಗಿದೆ. ಇವರು ತಪ್ಪಿದಲ್ಲಿ ಅವರನ್ನು ಗೈರ್ಹಾಜರ್ ಮಾಡಿ ಈ ದಾವೆಯನ್ನು ಮುಂದಿನ ತಪ್ಪಿಯಿಂದ ತೀರ್ಮಾನವಾಗುವದು ಎಂದು ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿದೆ.

Puttur } B. Ramachandra Rao.
16-12-40 } Pleader for plaintiffs.

ಯುರೋಪಿನಲ್ಲಿ ಕ್ರಾಂತಿ ಮೂಲಕ ಹೊಸ ಲೋಕ ವ್ಯವಸ್ಥೆಯೆ?

ಹಿಟ್ಲರನನ್ನು ಗೆಲ್ಲುವ ಉಪಾಯ

ಜರ್ಮನಿಯ ವಿರುದ್ಧ ಪ್ರಚಾರ ಕಾರ್ಯವಾಗಬೇಕು

ಪ್ರಸಿದ್ಧ ಗ್ರಂಥಕರ್ತರ ಅಭಿಪ್ರಾಯ

ಪ್ರಚಾರ ಕಾರ್ಯದಲ್ಲಿ ಪ್ರವೀಣನಾದ ಜರ್ಮನಿಯ ಗೊಬೆಲ್ಸ್

ನಾಝಿಗಳ ಪ್ರಭಾವದಲ್ಲಿ ಸಿಲುಕಿ ತಲೆಯೆತ್ತಿ ನಡೆಯಲಾಗದ ಫ್ರಾನ್ಸು, ಪೋಲಾಂಡ, ಚೆಕೊಸ್ಲೊವೆಕಿಯ ಮೊದಲಾದ ರಾಷ್ಟ್ರಗಳಲ್ಲಿ ಉರಿಕಾರುವಂಥ ಪ್ರಚಾರ ಕಾರ್ಯವನ್ನು ನಡೆಸುವುದರಿಂದ ಆ ರಾಜ್ಯಗಳಲ್ಲಿ ಮಹಾಕ್ರಾಂತಿ ಉಂಟಾಗಿ ಅಲ್ಲಿ ನಾಝಿಗಳ ಪ್ರತಿಷ್ಠೆ ಪ್ರಭಾವಗಳು ಕುಗ್ಗುವುದೂ, ಆ ರಾಜ್ಯಗಳು ಪುನಃ ಸ್ವತಂತ್ರವಾಗುವುದೂ ಸಾಧ್ಯವಿದೆ ಎಂದು ಡೈಲಿ ಹೆರಾಲ್ಡ್ ಪತ್ರಿಕೆಯ ನಿವೃತ್ತ ಸಂಪಾದಕರಾದ ಫ್ರಾನ್ಸಿಸ್ ವಿಲಿಯಮ್ಸ್ ಎಂಬವರು ತಮ್ಮ 'ಕ್ರಾಂತಿಯಿಂದ ಯುದ್ಧ' ಎಂಬ ಗ್ರಂಥದಲ್ಲಿ ಬರೆದಿರುತ್ತಾರೆ. ಯುದ್ಧ ಮೂಲಕ ಬ್ರಿಟಿಷರು ಹಿಟ್ಲರನನ್ನು ಸೋಲಿಸುವುದಕ್ಕಿಂತ ಅವನಿಗಧೀನ ರಾಜ್ಯಗಳಲ್ಲಿ ಕ್ರಾಂತಿ ಏಳುವುದರಿಂದ ಅವನನ್ನು ಸೋಲಿಸುವುದು ಸುಲಭವೆಂಬುದು ವಿಲಿಯಮ್ಸ್ಸರ ಅಭಿಪ್ರಾಯವಾಗಿದೆ.

ವ್ಯವಸ್ಥಿತ ಪ್ರಚಾರ ಶಿಕ್ಷಣ

ಈ ಅಧೀನ ರಾಜ್ಯಗಳಲ್ಲಿ ಕ್ರಾಂತಿ ಏಳಲಿಕ್ಕಾಗಿ ಸಫಲ ಪ್ರಚಾರಕಾರ್ಯವು ನಡೆಯಬೇಕಾದರೆ, ಅದು ವ್ಯವಸ್ಥಿತ ಕ್ರಮದಿಂದ ಕಾಲಕಾಲಕ್ಕೆ ಸರಿಯಾಗಿ ಆಗುತ್ತಿರಬೇಕು. ಅಸ್ತವ್ಯಸ್ತವಾಗಿ, ಗೊತ್ತು ಗುರಿಗಳಿಲ್ಲದೆ ನಡೆಯುವ ಪ್ರಚಾರಕಾರ್ಯದಿಂದ ಏನೂ ಫಲವಿಲ್ಲ. ಆದಂಥ ಪ್ರಚಾರ ಕಾರ್ಯದಿಂದ ಕಲಿತ ರಕ್ತವು ಬಿಸಿಯಾಗಿ ಉರಿಕಾರಬೇಕು. ಆದುದರಿಂದ ಪ್ರಚಾರದ ಸೂತ್ರ ಸಂಚಾಲನವು ಅನುಭವಿಕ ತಜ್ಞರ ಮೂಲಕವಾಗಿಯೇ ಆಗಬೇಕು. ಅದಕ್ಕೋಸ್ಕರ ಒಂದು ಕಾಲೇಜನ್ನು ಸ್ಥಾಪಿಸಿ ಅದರಲ್ಲಿ ಪ್ರಚಾರಕಾರ್ಯದ ಅನುಭವಿಕ ತಜ್ಞರನ್ನು ತಯಾರುಮಾಡಬೇಕೆಂದು ವಿಲಿಯಮ್ಸರು ಸೂಚಿಸಿದ್ದಾರೆ. ತರಬೇತಿ ಹೊಂದಿದ ಈ ತಜ್ಞರು ಅಧೀನರಾಜ್ಯಗಳಿಗೆ ಹೋದ ಬಳಿಕ ಅಲ್ಲಿ ಅವರು ಈಗಲೂ ಅಸ್ತಿತ್ವದಲ್ಲಿರುವ ಗುಪ್ತ ಸಂಘ ಸಂಸ್ಥೆಗಳೊಂದಿಗೆ ವ್ಯವಹಾರ ಸಂಬಂಧವನ್ನು ಕಟ್ಟಿಕೊಂಡು ತಮ್ಮ ಕಾರ್ಯಕಲಾಪಗಳನ್ನು ಮುಂದುವರಿಸಬೇಕೆಂದಿರುವರು.

ಕಾರ್ಯ ಚಾತುರ್ಯ ಧೈರ್ಯ ಸ್ಥೈರ್ಯ

ಇವೇ ಮೊದಲಾದ ಉಚ್ಚ ಗುಣಗಳು ಇಲ್ಲದೆ ಈ ಕಾರ್ಯವನ್ನು ಮುಂದುವರಿಸುವುದು ಸಾಧ್ಯವಿಲ್ಲ. ಆದುದರಿಂದ ಎಲ್ಲಾ ದೃಷ್ಟಿಯಿಂದ ಯೋಗ್ಯರಾದವರನ್ನೇ ಈ ಕಾರ್ಯಕ್ಕೆ ಆರಿಸುವುದು ಅತಿ ಅಗತ್ಯವಾಗಿದೆ. ಈ ಕೆಲಸಗಾರರು ನಾಜಿಗಳ ಕೇಂದ್ರಗಳನ್ನು ಸೇರಿ ಅಲ್ಲಿ ಅವರೇ ಆಗಿ ಗುಪ್ತರೂಪದಿಂದ ತಮ್ಮ ಕಾರ್ಯಗಳನ್ನು ಸಾಧಿಸಬೇಕು. ಆದುದರಿಂದ ಪ್ರಜಾಸತ್ತೆಯಲ್ಲಿ ವಿಶ್ವಾಸವೂ ಶ್ರದ್ಧೆಯೂ ಇರುವ ಅಂತರಾಷ್ಟ್ರೀಯ ಎಲ್ಲಾ ಮುಖ್ಯ ವ್ಯಕ್ತಿಗಳು ಸೇರಿ ಈ ಶಿಕ್ಷಣದ ಪಾಠ್ಯಕ್ರಮವನ್ನು ರಚಿಸಿ ಕಾರ್ಯಸಂಚಾಲನ ಕ್ರಮವನ್ನು ಹೇಳಿಕೊಡುವುದು ಅಗತ್ಯ.

ಪತ್ರಿಕೆಗಳಿಂದ ಫಲವಿಲ್ಲ

ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಅಥವಾ ರೇಡಿಯೋಗಳಲ್ಲಿ ಭಾಷಣಗಳನ್ನು ಕೊಟ್ಟು ಅಧೀನ ರಾಜ್ಯಗಳ ಜನರನ್ನು ಕ್ರಾಂತಿಗೆ ಸಿದ್ಧಗೊಳಿಸಲಿಕ್ಕಾಗುವುದಿಲ್ಲ. ತಜ್ಞ ಕೆಲಸಗಾರರು ಹೋಗಿ ಆ ಜನರೊಳಗೆ ಸೇರಿಕೊಂಡು ಕೆಲಸ ಮಾಡಬೇಕು. ಕ್ರಾಂತಿಕಾರಿ ಸಾಹಿತ್ಯವನ್ನು ರಚಿಸಿ ಅದನ್ನು ಆ ಜನರೊಳಗೆ ಗುಪ್ತರೂಪದಿಂದ ಹಂಚಿ ಅವರ ಶರೀರ ಮನಸ್ಸುಗಳನ್ನು ಕ್ರಾಂತಿಗೆ ಸಿದ್ಧಮಾಡಬೇಕು. ಅಧೀನ ರಾಜ್ಯಗಳ ಈಗಿನ ದುರ್ಗತಿಗೆ ಅವುಗಳ ಹಿಂದಿನ ಸರಕಾರಗಳೂ ಬ್ರಿಟನೂ ಕಾರಣವೆಂದು ನಾಜಿ ಪ್ರಚಾರಕರು ಆ ಅಧೀನ ರಾಜ್ಯಗಳ ಜನರಿಗೆ ಹೇಳಿಕೊಟ್ಟು ಅವರ ಮನಸ್ಸನ್ನು ಕೆಡಿಸುತ್ತಾ ಇದ್ದಾರೆ. ಇದನ್ನು ತಡೆದು ಇದಕ್ಕೆ ಪ್ರತಿಕೂಲವಾದ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕು. ಬ್ರಿಟನು ಸಕಾಲದಲ್ಲಿ ಸುಭಟರ ಸಹಾಯವನ್ನು ಕಳುಹಿಸಿಕೊಡದೆ ಮೋಸಮಾಡಿದುದರಿಂದಲೇ ಫ್ರಾನ್ಸಿನ ಪತನವಾಯಿತೆಂದು ಜರ್ಮನರ ಬೋಧನೆಯಿಂದ ದೃಢವಾಗಿ ನಂಬುವ ಫ್ರೆಂಚರಿದ್ದಾರೆ. ಫ್ರಾನ್ಸ್ ಸರಕಾರದ ಅಸಡ್ಡೆಯಿಂದಲೇ ಫ್ರಾನ್ಸಿನ ಪತನವಾಯಿತೆಂದು ತಿಳಿಯುವವರೂ ಇದ್ದಾರೆ. ಇಂಥ ಜನರಿಗೆ ಪೂರ್ವಸ್ಥಿತಿಯನ್ನು ತಂದುಕೊಡುವ ಆಸೆ ಭರವಸೆಗಳನ್ನು ಕೊಟ್ಟು ಫಲವಿಲ್ಲ. ಅವರು ಉಜ್ವಲ ಭವಿಷ್ಯದ ಕನಸು ಕಾಣುವಂತೆ ಮಾಡಬೇಕು. ಆ ಕನಸು ಈಗಿನ ಎಲ್ಲಾ ರಾಜ್ಯ ವ್ಯವಸ್ಥೆಗಳಿಗಿಂತ ಹೆಚ್ಚಿನ ಸುಂದರ ಆದ ವ್ಯವಸ್ಥೆಯನ್ನು ಕಾಣಬೇಕು. ಹೀಗಾದರೆ ಮಾತ್ರ ಪ್ರಚಾರವು ಸಫಲವಾಗಿ ಕ್ರಾಂತಿಮೂಲಕ ಯುರೋಪಿನಲ್ಲಿ ನವೀನ ರಾಜ್ಯವ್ಯವಸ್ಥೆ ಆಗುವುದು.

ಒಂದು ಪೆಟ್ಟಿಗೆ 'ಜಾಂಬಕ್'ನ್ನು ನಿಮ್ಮಲ್ಲಿ ಸದಾ ಇಟ್ಟುಕೊಳ್ಳಿರಿ

ಗಾಯಗಳಿಗೆ ಮತ್ತು ವ್ರಣಗಳಿಗೆ ಶೀಘ್ರ ಗುಣಕಾರಿಯಾದ ಔಷಧ



ಹಲವು ಕಾಲದಿಂದ ಪ್ರಸಿದ್ಧವಾಗಿ ಹೆಸರುಹೊಂದಿದ ಜಾಂಬಕ್, ಚರ್ಮ ರೋಗಗಳಿಗೆ ಅತ್ಯುತ್ತಮವಾದ ಲೇಪವಾಗಿರುವುದು; ಎಲ್ಲಾ ತರದ ಕಡಿತ, ಬೊಕ್ಕೆ, ಸುಟ್ಟಗಾಯ ಮತ್ತು ಕಾಲು ನೋವು ಮೊದಲಾದುವುಗಳಿಗೂ, ವಿಷ ಗಾಯವೇ ಮೊದಲಾದ ಕಠಿಣ ಬಾಧೆಗಳಿಗೂ ಜಾಂಬಕಿಗಿಂತ ಅಮೂಲ್ಯವಾದ ಬೇರೆ ವನಸ್ಪತಿ ಔಷಧಿಗಳನ್ನು ನೀವು ಪಡೆಯಲಾರಿರಿ. ಡಾಕ್ಟರರು, ನರ್ಸುಗಳು ಎಲ್ಲಾ ಕಡೆಗಳಲ್ಲಿಯೂ ಇದನ್ನೇ ಉಪಯೋಗಿಸುತ್ತಾರೆ. ಮಾತ್ರವಲ್ಲದೆ ಇದನ್ನು ಬಹಳ ಉತ್ತಮವೆಂದು ಕೊಂಡಾಡಿದ್ದಾರೆ. ಜಾಂಬಕ್ ಲೇಪಕ್ಕೆ ಬೆಲೆ 1 ರೂ. ಹಾಗೂ 2—4—0 ಆಗಿದೆ. ಜಾಂಬಕ್ ಸೋಪಿಗೆ 1 ರೂ. ಜಾಂಬಕ್ ಪೌಡರಿಗೆ 1 ರೂ.

ಏಜೆಂಟ್ಸ್:—ಮೆಸರ್ಸ್ ದಾದಾ ಎಂಡ್ ಕೊ. ಪಿ. ಟಿ. ಮದರಾಸು

ಯಾವಾಗಲೂ ಜಾಂಬಕ್ಕನ್ನೇ ಉಪಯೋಗಿಸಿರಿ

ZAM-BUK

ಇದರಲ್ಲಿ ಪ್ರಾಣಿಗಳ ಕೊಬ್ಬು ಸೇರಿಲ್ಲ

ಅಮೃತ

ರಕ್ತ ಶುದ್ಧಿಯನ್ನು ಮಾಡುವ ನರಗಳ ದೌರ್ಬಲ್ಯವನ್ನು ಪರಿಹರಿಸುವ ಟಾನಿಕ್!

ಮಲಬದ್ಧತೆ, ಅಜೀರ್ಣ, ಮತ್ತು ಇತರ ಜಠರ ದೋಷಗಳನ್ನು ನಿವೃತ್ತಿಗೊಳಿಸುತ್ತದೆ; ಕ್ಷೀಣಗೊಂಡವರಿಗೆ ತಿರಿಗಿ ಶಕ್ತಿ ಧಾತು ಪುಷ್ಟಿಯನ್ನು ಕೊಡುತ್ತದೆ.

ವಿಶೇಷ ವಿಷಯಗಳಿಗೆ ಯಾವುದೇ ಕೆಮಿಸ್ಟರಲ್ಲಾಗಲಿ, ಇಲ್ಲವೇ ಇದರಲ್ಲಾಗಲಿ ವಿಚಾರಿಸಿರಿ.

"ಕೇಸರೀ ಕುಟೀರಂ"

ಇಂಡಿಯನ್ ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್

ರಾಯಪೇಟೆ, ಮದ್ರಾಸು.

ಮಾರಾಟಕ್ಕೆ ಸಿದ್ಧವಾಗಿದೆ

1941ನೆ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜ್	...	...	೦—೫—೦
(ಪೋಕೆಟ್ ಇದ್ದದಕ್ಕೆ) ...		...	೦—೬—೦
ದೊಡ್ಡ ಸೈಜ್	...	...	೦—೯—೦
(ಪೋಕೆಟ್ ಇದ್ದದಕ್ಕೆ) ...		...	೦—೧೧—೦

ಶಾರದಾ ಛಾಪಖಾನೆ, ಮಂಗಳೂರು.

ವಿಚಿತ್ರ ಪ್ರಪಂಚ



ಸ್ವೈರಕ್ತದಿಂದಲೇ ಪ್ರತಿಜ್ಞೆಗೆ ಸಹಿ ಹಾಕಿದ

ಬೊಂಬಾಯಿಯ ಒಬ್ಬ ತರುಣನು ತನ್ನ ಸ್ವೈ ರಕ್ತದಿಂದಲೇ ಪ್ರತಿಜ್ಞೆಯನ್ನು ಬರೆದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನನ್ನೂ ಒಬ್ಬ ಯೋದ್ಧಾಳುವನ್ನಾಗಿ ಸ್ವೀಕರಿಸಬೇಕೆಂದು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಗೆ ಒಂದು ಪತ್ರವನ್ನು ಕಳುಹಿಸಿದನು. ಕಾಂಗ್ರೆಸಿನ ನಾಲ್ಕಾಣೆ ಸದಸ್ಯನಾಗಲಿಕ್ಕೂ ಮೊದಲು ಅವನು ಇದೇ ರೀತಿ ಪತ್ರ ಬರೆದಿದ್ದ. "ನಾನು ಎಲ್ಲಾ ಸಂಗತಿಗಳನ್ನು ಆಲೋಚಿಸಿ ಈ ನಿರ್ಣಯಕ್ಕೆ ಬಂದಿದ್ದೇನೆ. ಕಾಂಗ್ರೆಸು ಮತ್ತು ದೇಶಕ್ಕಾಗಿ ನನ್ನ ದೇಹ ಮಾಂಸ ಎರಡನ್ನೂ ಕೊಡಲು ಸಿದ್ಧನಿರುವೆನೆಂದು ಸೂಚಿಸಲಿಕ್ಕಾಗಿಯೇ ಈ ಅರ್ಜಿಯನ್ನು ನನ್ನ ಸ್ವೈರಕ್ತದಿಂದ ಬರೆದಿರುವೆನು' ಎಂದು ಅವನು ಹೇಳಿರುವನು. ಕಾಂಗ್ರೆಸ್ ಕಮಿಟಿಯು ಆತನನ್ನು ಸತ್ಯಾಗ್ರಹಿಯನ್ನಾಗಿ ತೆಗೆದುಕೊಂಡಿಲ್ಲವಾಗಿ ತಿಳಿದಿದೆ.

◈

ಎಂದೂ ಬಿಸಿಮಾಡದ ನೀರು

ಐರ್ಲೆಂಡಿನ ಫ್ಲೋರ ಎಂಬ ಹಳ್ಳಿಯ ಒಂದು ಪುರಾತನ [illegible] ಮರದ ಬುಡದಲ್ಲಿರುವ ಒಂದೇ ಸನ್ಯಾಸಿ ಮಠಕ್ಕೆ ಹೊಂದಿಕೊಂಡು ಒಂದು ಬಾವಿ ಇದೆ. ಈ ಬಾವಿಯೂ ಬಹು ಪುರಾತನವಾಗಿದೆ. ಅದರೊಳಗಿಂದ ನೀರು ಯಾವಾಗಲೂ ಉಕ್ಕಿ ಹರಿಯುತ್ತಿರುತ್ತದೆ. ನೋಡಲಿಕ್ಕೆ ಅದು ಇತರ ಬಾವಿಗಳ ಸಾಧಾರಣ ನೀರಿನಂತೆಯೇ ಇದೆ. ಆದರೆ ಯಾರೂ ಅದನ್ನು ಕುದಿಸುವುದಿಲ್ಲ, ಅದು ಕುದಿಯುವುದೂ ಇಲ್ಲವೆಂದು ಜನರ ಭಾವನೆ ಇದೆ. ಯಾರಾದರೂ ಆ ಬಾವಿ ನೀರನ್ನು ಕುದಿಸಲಿಕ್ಕೆ ಪ್ರಯತ್ನಿಸಿದರೆ ಅವನು ತನ್ನ ಎಲ್ಲಾ ಸೌಭಾಗ್ಯಗಳನ್ನು ಕಳಕೊಂಡು ಅಪಮೃತ್ಯುವಿಗೆ ಬಲಿಯಾಗುವನೆಂದು ಹೇಳುತ್ತಾರೆ. ಸುಮಾರು ೨೦೦ ವರ್ಷಗಳ ಹಿಂದೆ ಯಾರೋ ಒಬ್ಬನು ಆ ಬಾವಿ ನೀರನ್ನು ಕುದಿಸಲಿಕ್ಕೆ ಒಲೆಯ ಮೇಲಿಟ್ಟಾಗಲೇ ಅವನು ತಲೆಕೆಟ್ಟು ಹುಚ್ಚನಾದನು. ಅಂದಿನಿಂದ ಯಾರೂ ಈ ಕಾರ್ಯಕ್ಕೆ ಪ್ರವರ್ತಿಸಿಲ್ಲ. ಒಂದಾನೊಂದು ಕಾಲದಲ್ಲಿ ಸಮೀಪದ ಸನ್ಯಾಸಾಶ್ರಮದಲಿ ವಾಸವಾಗಿದ್ದ ಒಬ್ಬ ಸಾಧು ರಾತ್ರಿ ಈ ಬಾವಿಯಲ್ಲಿ ಮುಳುಗಿ ಪರಮಾತ್ಮನ ಧ್ಯಾನ ಮಾಡುತಿದ್ದುದರಿಂದ ನೀರಿಗೆ ಈ ಗುಣ ಬಂದಿದೆ ಎಂದು ಎಣಿಸಲಾಗಿದೆ.

◈

ಅದೃಷ್ಟವನ್ನು ಬಾಡಿಗೆಗಿಟ್ಟವ

ಪೋಲಾಂಡಿನವನಾಗಿದ್ದು ಈಗ ಅಮೆರಿಕೆಗೆ ಹೋಗಿ ವಾಸವಾಗಿರುವ ಡಿ ಬಾಂಡೂವ್ಸ್ಕಿ ಎಂಬಾತನು ತನ್ನ ದುರದೃಷ್ಟವನ್ನೇ ಬಾಡಿಗೆಗಿಡುವ ಕಠಿನ ಪರಿಸ್ಥಿತಿಗೆ ಗುರಿಯಾಗಿರುವನು. ಇವನಿಗೆ ಎಲ್ಲಿ ಹೋದರಲ್ಲಿ ಅಪಜಯ, ಅಪಕೀರ್ತಿ ಅಲ್ಲದೆ ಮತ್ತೇನೂ ಪ್ರಾಪ್ತವಾಗುವುದಿಲ್ಲ. ತಿಂದ ಅನ್ನವೂ, ಕುಡಿದ ನೀರೂ ಕೂಡಾ ಜೀರ್ಣವಾಗದೆ ಅವನಿಗೆ ವಾಂತಿಯಾಗುತ್ತದೆ. ಆದುದರಿಂದ 'ಯಾರಾದರೂ ನನ್ನ ಅದೃಷ್ಟವನ್ನು ಕೊಂಡುಕೊಳ್ಳಿ. ನಾನು ಇದಿರಾಳಿಗಳ ಪಕ್ಷದಲ್ಲಿ ಇರುವೆನಾದರೆ ಅವರನ್ನು ಪ್ರತಿಯೊಂದು ಕಾರ್ಯದಲ್ಲಿ ಸೋಲಿಸಬಹುದಾದುದರಿಂದ, ನನ್ನ ಅದೃಷ್ಟವನ್ನು ಕೊಂಡವರಿಗೆ ಹಿಡಿದ ಎಲ್ಲಾ ಕೆಲಸಗಳಲ್ಲಿ ಜಯಪ್ರಾಪ್ತಿ ಇದೆ' ಎಂದಿದ್ದಾನೆ. ಆದರೆ ಲಾಭದ ಹಾದಿಯನ್ನು ತೋರಿಸಿಯೂ, ಯಾರೂ ಅವನ ಅದೃಷ್ಟವನ್ನು ಕೊಂಡುಕೊಳ್ಳಲಿಕ್ಕೂ, ಕೊನೆಯ ಪಕ್ಷ ಪರೀಕ್ಷಾರ್ಥ ಬಾಡಿಗೆ ತೆಗೆದುಕೊಳ್ಳಲಿಕ್ಕೆ ಕೂಡ ಮುಂದಾಗಿರುವುದಿಲ್ಲ! ಇದಕ್ಕಿನ್ನ ಬೇಕಲ್ಲವೆ, ದುರದೃಷ್ಟವೆಂದು?

◈

ಗಂಡಸರನ್ನು ಹಾರೈಸಿರುವ ಹೆಂಗಸರು!

ಹೆಂಗಸರನ್ನು ಹಾರೈಸಿ ಗಂಡಸರಿರುವುದು ಎಲ್ಲರೂ ಕೇಳಿದ, ನೋಡಿದ ಸಂಗತಿ. ಆದರೆ ಅದೆ ರೀತಿ ಪನಾಮಾ ಕಡಲು ದಂಡೆಗೆ ಸಮೀಪವಿರುವ ಓಸ್ಟ್ಯಾಗರ್ ಐಲೆಂಡ್ ಎಂಬಲ್ಲಿ ಸಾನ್‌ಬ್ಲಾಸ್ ಎಂಬ ಜಾತಿಯ ಸ್ತ್ರೀಯರು ಗಂಡಸರನ್ನು ಹಾರೈಸಿ ಒಡಾಡುತ್ತಿರುತ್ತಾರೆ. ಇವರು ಶ್ರೀಮಂತೆಯರಿರುತ್ತಾರೆ. ಉಣ್ಣಲಿಕ್ಕೆ, ತಿನ್ನಲಿಕ್ಕೆ ಯಾವುದರಲ್ಲಿಯೂ ಕೊರತೆ ಇರುವುದಿಲ್ಲ. ಬಹಳ ರೂಪವತಿಯರಾಗಿಯೂ ಇದ್ದಾರೆ. ಆದರೆ ಅಲ್ಲಿ ಗಂಡಸರೆ ಮಾತ್ರ ಇರುವುದಿಲ್ಲ. ಪ್ರಾಯಕ್ಕೆ ಬಂದ ಮೇಲೆ ಈ ಹೆಮ್ಮಕ್ಕಳು ವಿರಹವೇದನೆಯಿಂದ ನೊಂದು ಬೆಂದು, ಸುಟ್ಟು ಸುಣ್ಣವಾಗುತ್ತಾರೆ. ಅಲ್ಲಿ ತೆಂಗಿನ ಕಾಯಿ ಬಹಳ ಆಗುತ್ತದೆ. ಅವನ್ನು ಕೊಂಡುಕೊಳ್ಳಲಿಕ್ಕೆ ನಾವೆಗಳನ್ನು ತೆಗೆದುಕೊಂಡು ವ್ಯಾಪಾರಿಗಳು ಬರುತ್ತಾರೆ. ಆದರೆ ಆ ದ್ವೀಪದ ದಂಡೆಯ ಮೇಲೆ ಕಾಲಿಡುವುದಿಲ್ಲ. ಯಾಕಂದರೆ ಅಲ್ಲಿಗೆ ಹೋದ ಪುರುಷರನ್ನು ಈ ಕಾಮಿನಿಯರು ಮೋಹಿಸಿ ಮತ್ತೆ ಮರಳಲಿಕ್ಕೇ ಬಿಡುವುದಿಲ್ಲವಂತೆ. ಗಂಡಸರಿಗಾಗಿ ಈ ಹೆಂಗುಸರು ಎಷ್ಟು ಮಂದಿ ಈ ಹೆಂಗಸರೊಂದಿಗೆ ವಿವಾಹವಾಗಿ ಇರಲಿಕ್ಕೆ ಇಚ್ಛಿಸಿದರೂ ಅವರು ಏನೊಂದು ದ್ವೇಷ, ಮತ್ಸರ ಇಲ್ಲದೆ ಜೀವಿಸಲಿಕ್ಕೆ ಸಮ್ಮತಿಸುವರು.

◈

ಇಂಗ್ಲಿಷ್ ಮಹಿಳೆಯ ವರ್ಣದ್ವೇಷ

ವರ್ಣದ್ವೇಷವು ಇಂಗ್ಲೀಷರಲ್ಲಿಯೂ ತುಂಬಾ ಇದೆ. ತಾವು ಗೌರಕಾಯರು, ಭಾರತೀಯರು ಕರಿವರ್ಣದವರು, ತಾವು ಆಳುವವರು ಭಾರತೀಯರು ಆಳಿಸಿಕೊಳ್ಳುವವರು, ತಾವು ಉಚ್ಚರು ಆದುದರಿಂದ ಭಾರತೀಯರು ಅಲ್ಪರು ಎಂಬ ದುರ್ಭಾವನೆ ಅವರಲ್ಲಿದೆ. ಅದನ್ನವರು ಆಗಾಗ ಹೊರಗೆ ತೋರಿಸುವುದು ಕೂಡ ಇದೆ. ಕೆಲವೇ ದಿನಗಳ ಹಿಂದೆ ನಡೆದ ಘಟನೆ ಇದು. ವಿರೀಲಿಯಿಂದ ಇಬ್ಬರು ಮೊದಲನೆ ದರ್ಜೆಯ ಟಿಕೇಟು ತೆಗೆದುಕೊಂಡು ಪ್ರಯಾಣ ಹೊರಟಿದ್ದರು. ಅವರೊಳಗೆ ಒಬ್ಬಳು ಇಂಗ್ಲಿಷ್ ಮಹಿಳೆ, ಇನ್ನೊಬ್ಬ ಭಾರತೀಯ ಭದ್ರ ಪುರುಷ. ಆದರೆ ಅವಳು ಅವನೊಂದಿಗೆ ಒಂದೇ ಗಾಡಿಯಲಿ ಪ್ರಯಾಣ ಮಾಡಲಿಕ್ಕೆ ನಿರಾಕರಿಸಿದಳು. ಅವಳಿಗೋಸ್ಕರ ಪ್ರತ್ಯೇಕ ಪ್ರಯಾಣ ವ್ಯವಸ್ಥೆ ಮಾಡಲಿಕ್ಕಾಗಿ ರೈಲು ಒಂದು ತಾಸು ವಿಳಂಬವಾಗಿ ಹೊರಟಿತು. ಹೇಗಿದ್ದರೂ ಇದು ಇಂಗ್ಲಿಷರ ರಾಜ್ಯವಷ್ಟೆ. ಅವರು ಹಾಗೆ ಮಾಡುವುದು ಸಹಜ. ಆದರೆ ಯುದ್ಧದಂಥ ಆಪತ್ಕಾಲದಲ್ಲಿ ಉಚ್ಚರೂ ಆಳುವವರೂ ಗೌರಕಾಯರೂ ಎನ್ನುವ ಇಂಗ್ಲಿಷರೂ ಅಲ್ಪರೂ, ಆಳಿಸಿಕೊಳ್ಳುವವರೂ ಕರಿವರ್ಣದವರೂ ಆಗಿರುವ ಭಾರತೀಯರನ್ನು ಆಶ್ರಯಿಸಿ ಅವರ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತಾರಲ್ಲ? ಇದು ಬಹಳ ಆಶ್ಚರ್ಯವನ್ನುಂಟುಮಾಡುತ್ತದೆ.

BHUVANENDRA PRODUCTS LTD.,

KATAPADI, S K.

Why Doctors prescribe

"BHUVANENDRA"

NARAYANA TAILA

Because it sets right the nervous system and gives good relief from Rheumatic complaints.

ಅತ್ಯಂತ ಸುಖ! ತುಂಬಾ ಉಲ್ಲಾಸ!!

ಯಾವ ಕಾರಣದಿಂದ?

'ಭುವನೇಂದ್ರ ನಾರಾಯಣ ತೈಲ'

ಮೈಗೆ ಹಚ್ಚಿ ಸ್ನಾನ ಮಾಡುವುದರಿಂದ.

ಎಲ್ಲಾ ಬಗೆಯ ವಾತ ಪೀಡೆಯು ದೂರವಾಗುವುದಲ್ಲದೆ ನರಗಳಿಗೆ ಹೊಸ ಚೇತನ ಕೊಡುವುದು.

ಸ್ಥಳೀಯ ಸ್ಟೋಕಿಸ್ಟರು:—

ಯು. ಪಾಂಡುರಂಗ ನಾಯಕ್, ರಥಬೀದಿ

ರಾಘವೇಂದ್ರ ರಂಗ ಶೈ, ರಥಬೀದಿ.

ಡಾ. ಎಮ್. ಎಸ್. ಪ್ರಭು, ಸಿ. ಪಿ. ಸಿ. ಬಿಲ್ಡಿಂಗ್ಸ್.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

"ದೇವರೇ, ಅಜ್ಞಾನಿಗಳ ತಪ್ಪನ್ನು ಕ್ಷಮಿಸು!"

ಮಹಾತ್ಮಾ ಏಸುವಿನ ಮರಣ ಸಂದೇಶ

ಕ್ರಿಸ್‌ಮಸ್ ಹಬ್ಬದ ಪುಣ್ಯ ಸ್ಮಾರಕ.

ಯೇಸು ತನ್ನ ಜನ್ಮಕಾಲದಲ್ಲಿ ಜನತೆಯ ಆದರಕ್ಕೆ ಪಾತ್ರನಾಗಲಿಲ್ಲ. ಜನರು ಆ ಮಹಾ ಸಂತನನ್ನು ಶಿಲುಬೆಗೇರಿಸಿ ಕೊಂದರು; ಆತನ ಸತ್ಯ ಅಹಿಂಸೆ ನ್ಯಾಯನೀತಿಗಳು ಪಶುವೃತ್ತಿಯ ಜನರಿಗೆ ಆಗ ಹಿತವೆನಿಸಲಿಲ್ಲ. ಕೊನೆಗೆ ತನ್ನ ತತ್ವಕ್ಕಾಗಿ, ಧರ್ಮಕ್ಕಾಗಿ ಆ ಮಹಾತ್ಮನು ತನ್ನನ್ನು ಬಲಿದಾನ ಮಾಡಬೇಕಾಯಿತು. ಶಿಲುಬೆಯಲ್ಲಿ ಪ್ರಾಣ ಬಿಡಬೇಕಾಯಿತು. ಆದರಿಂದ ಆತನ ಮಹತ್ವ ಬೆಳಗಿತು! ಯೇಸುವಿನ ಜೀವನ ಸಾಫಲ್ಯವಾಯಿತು; ಆತನ ಸಂದೇಶ ದೇಶವಿದೇಶಗಳನ್ನು ಹಬ್ಬಿತು! ಆದರೆ ಇಂದು ಯೇಸುವಿನ ಶಿಷ್ಯರು, ಆತನ ಮತಾನುಯಾಯಿಗಳು ಯುರೋಪಿನಲ್ಲಿ ಎಂತಹ ಹತ್ಯಾಕಾಂಡಕ್ಕೆ, ಅಮಾನುಷ ಹಿಂಸೆಗೆ ಇಳಿದಿದ್ದಾರೆ. ದೇವಕುಮಾರನು ಇದರಿಂದ ನೋಯಲಾರನೆ?

೧೯೪೦ ವರ್ಷಗಳ ಮೊದಲು ಜೆರುಸಲೇಮು ರಾಜ್ಯದ ಸ್ಥಿತಿಯು ಬಹಳ ಕೆಟ್ಟುದಿದ್ದಿತು. ಅಲ್ಲಿಯ ಯಹೂದಿ ಅರಸು ಹಿರೋದನು ಬಹು ದೊಡ್ಡ ಅತ್ಯಾಚಾರಿಯಾಗಿದ್ದನು. ಅರ್ಚಕರು ಮತ್ತು ಪಂಡಿತರು ಎನ್ನಿಸಿಕೊಳ್ಳುವ ಜನರು ಕೂಡ ಸರ್ವಸಾಧಾರಣ ಹಳ್ಳಿಗರನ್ನು ಬಹಳವಾಗಿ ಪೀಡಿಸಿ ಕಷ್ಟಕೊಡುತಿದ್ದರು. ರಾಜ್ಯದಲ್ಲಿ ಎಲ್ಲೆಲ್ಲಿಯೂ ಹಾಹಾಕಾರವು ಎದ್ದಿದ್ದಿತು. ಈ ಅತ್ಯಾಚಾರ ಅನಾಚಾರಗಳನ್ನು ನಿಲ್ಲಿಸಿ ಜನರಿಗೆ ಶಾಂತಿಯ ಮಾರ್ಗವನ್ನು ತೋರಿಸುವುದಕ್ಕಾಗಿ ದೇವಕುಮಾರ ಯೇಸುವಿನ ಅವತಾರವಾಯಿತು.

ಯೇಸುವಿನ ತಂದೆಯ ಹೆಸರು ಯೋಸೆಫನೆಂದು. ತಾಯಿಯ ಹೆಸರು ಮೇರಿ. ಯೇಸು ಅವತಾರ ತಾಳುವ ಸಮಯಕ್ಕೆ ಇವರು ಬಹಳ ಬಡತನದಲ್ಲಿದ್ದರು. ಹುಟ್ಟಿದ ಮಗುವನ್ನು ಸಾಕುವ ಶಕ್ತಿಯೂ ಅವರಲ್ಲಿ ಇರಲಿಲ್ಲ. ಆದ್ದರಿಂದ ಕುರಿ ಮೇಯಿಸುವ ಕುರುಬರವರು ಯೇಸುವನ್ನು ಸಾಕಿಸಲಹಿ ದೊಡ್ಡವರನ್ನಾಗಿ ಮಾಡಿದರು. ಈ ಕಾರಣದಿಂದಲೇ ಯೇಸುವನ್ನು ಕುರುಬರ ಹುಡುಗನೆಂದು ಕರೆಯುವರು. ಯೇಸು ಯಾವುದಾದರೂ ಮಠ ಅಥವಾ ಶಾಲೆಗೆ ಹೋಗಿ ಜ್ಞಾನಾರ್ಜನೆ ಮಾಡಲಿಲ್ಲ. ಆದರೆ ಚಿಕ್ಕಂದಿನಿಂದಲೂ ದೇಶಭ್ರಮಣದಲ್ಲಿ ಅವನಿಗೆ ಬಹಳ ಅಭಿರುಚಿ. ಆದ್ದರಿಂದ ಬಹಳ ದೇಶಗಳನ್ನು ಸಂಚರಿಸಿ ಅವನು ಲೋಕಜ್ಞಾನವನ್ನು ಸಂಪಾದಿಸಿದನು. ಪ್ರಪಂಚದಲ್ಲಿ ಸರ್ವತ್ರ ದುಃಖವನ್ನು ನೋಡಿ ಅವನ ಹೃದಯವು ಕರಗಿ ನೀರಾಯಿತು. [illegible] ರೋಗಿಗಳು, ಅಂಗಹೀನರು, ಅನಾಥರು, ದುರ್ಬಲರು ಮೊದಲಾದ ಸಮಾಜದ ದೀನಹೀನ ಜನರ ಸೇವೆ ಶುಶ್ರೂಷೆಗಳನ್ನು ಮಾಡಿ ಯೇಸುವಿಗೆ ಅಪಾರ ಆನಂದವಾಗುತಿತ್ತು. ಈ ರೀತಿಯ ಪ್ರಪಂಚದ ಸೇವೆ ಶುಶ್ರೂಷೆಗಳಿಂದಲೇ ಮನುಷ್ಯ ಜನ್ಮವು ಚರಿತಾರ್ಥವಾಗುವುದೆಂದು ಅವನು ತಿಳಿದಿದ್ದನು.

ಹಲವು ದೇಶಗಳನ್ನು ತಿರುಗಾಡಿ ಬಂದು ಲೋಕಜ್ಞಾನವನ್ನು ಸಂಪಾದಿಸಿದ ಅನಂತರ ಯೇಸು, ಧರ್ಮಸ್ಥಾಪನೆಯ ಪವಿತ್ರ ಕಾರ್ಯದಲ್ಲಿ ತೊಡಗಿದನು. ಕ್ಷಮೆಯೇ ಅವನ ಧರ್ಮದ ಮುಖ್ಯ ಸಿದ್ಧಾಂತವಾಗಿದ್ದಿತು. 'ಒಬ್ಬನು ನಿನ್ನ ಒಂದು ಕೆನ್ನೆಗೆ ಹೊಡೆದಾಗ ಅವನಿಗೆ ಇನ್ನೊಂದು ಕೆನ್ನೆಯನ್ನು ತೋರಿಸು' ಎಂಬುದು ಯೇಸುವಿನ ಉಪದೇಶದ ಸಾರವಾಗಿದೆ. ಎಲ್ಲರೂ ಸ್ನೇಹ, ಪ್ರೇಮ, ಬಂಧುಭಾವ ಮತ್ತು ಸಹಾನುಭೂತಿಯಿಂದ ಇರಬೇಕೆಂದು ಅವನು ಅನ್ನುತಿದ್ದನು. ಅವನ ಈ ಉಪದೇಶಗಳಿಂದ ಅನೇಕರು ಅವನ ಅನುಯಾಯಿಗಳಾದರು. ಅವರೇ ಮುಂದೆ ಈಸಾಯಿಗಳು ಅಥವಾ ಕ್ರೈಸ್ತರು ಅನ್ನಿಸಿಕೊಂಡರು. ಅವನು ಸ್ಥಾಪಿಸಿದ ಧರ್ಮವನ್ನು ಕ್ರೈಸ್ತಧರ್ಮವೆಂದು ಹೇಳುತ್ತಾರೆ. ಕ್ರೈಸ್ತಧರ್ಮವು ಪ್ರಬಲವಾಗುತ್ತ ಬಂದ ಹಾಗೆ ಅವನ ಲೋಕಪ್ರಿಯತೆಯು ಹೆಚ್ಚಿತು. ಶತ್ರುಗಳ ಸಂಖ್ಯೆಯೂ ಹೆಚ್ಚಾಗ ತೊಡಗಿತು. ಯಹೂದಿಯರು ಅವನ ಪ್ರಾಣಘಾತಕರಾದರು. ಅರಸು ಸುಳ್ಳು ದೋಷಾರೋಪಣೆ ಮಾಡಿ ಅವನನ್ನು ಶೂಲಕ್ಕೇರಿಸಿದನು. ಆಗಲೂ ಕೂಡ ಯೇಸು 'ಹೇ ಸ್ವಾಮಿ; ಈ ಜನರು ಏನೂ ತಿಳಿಯದ ಅಜ್ಞಾನಿಗಳು. ಇವರ ತಪ್ಪನ್ನು ಕ್ಷಮಿಸು; ಇವರನ್ನು ಉದ್ಧಾರ ಮಾಡು' ಎಂದು ತನ್ನನ್ನು ಶೂಲಕ್ಕೇರಿಸುತ್ತಿದ್ದ ಜನರನ್ನು ಕುರಿತು ಪರಮಾತ್ಮನನ್ನು ಪ್ರಾರ್ಥಿಸಿದನು.

ಜೀವನದ ಒಂದು ಘಟನೆ

ಯೇಸುವಿನಲ್ಲಿ ಕ್ಷಮಾಗುಣವು ಮೂರ್ತಿಮಂತವಾಗಿದ್ದಿತು. ಒಮ್ಮೆ ಅವನು ಒಂದು ಹಳ್ಳಿಯಲ್ಲಿ ಧರ್ಮೋಪದೇಶ ಮಾಡಲಿಕ್ಕೆ ಹೋಗಿದ್ದಾಗ ಅವನ ಕೆಲವು ಶತ್ರುಗಳು ಒಬ್ಬ ವ್ಯಭಿಚಾರಿಣಿ ಸ್ತ್ರೀಯನ್ನು ಅವನ ಮುಂದೆ ನಿಲ್ಲಿಸಿ—'ಇವಳು ಪಾಪಾಚರಣೆ ಮಾಡುವ ಸ್ತ್ರೀ; ವ್ಯಭಿಚಾರ ಮಾಡುತ್ತಾಳೆ. ಇಂಥ ಸ್ತ್ರೀಯರನ್ನು ಕಲ್ಲುಗಳಿಂದ ಹೊಡೆದು ಕೊಂದುಹಾಕಬೇಕೆಂದು ಶಾಸ್ತ್ರಗಳಲ್ಲಿ ಹೇಳಿದೆ. ನೀವು ಇವಳ ನ್ಯಾಯ ಮಾಡಿರಿ' ಎಂದರು. ಯೇಸುವು ಅವಳನ್ನು ಕಲ್ಲುಗಳಿಂದ ಹೊಡೆಯಲಿಕ್ಕೆ ಹೇಳಿದರೆ ಅವನ ಕ್ಷಮಾಧರ್ಮಕ್ಕೆ ಕಲಂಕ ಬರುತಿದ್ದಿತು. ಅವಳನ್ನು ಕ್ಷಮಿಸಿದ್ದರೂ, ಆತನು ಸಮಾಜದಲ್ಲಿ ವ್ಯಭಿಚಾರವನ್ನು ಪ್ರೋತ್ಸಾಹಿಸುತ್ತಾನೆಂದು ಹೇಳಬಹುದಾಗಿದ್ದಿತು. ಏನು ಹೇಳಿದರೂ ಯೇಸುವಿನ ಮೇಲೆ ದೋಷಾರೋಪಣೆ ಮಾಡಲಿಕ್ಕಾಗಬೇಕೆಂದು ಶತ್ರುಗಳು ಈ ಉಪಾಯವನ್ನು ಮಾಡಿದ್ದರು. ಎದುರಿನಲ್ಲಿ ಪ್ರಾಣಭಯದಿಂದ ನಡುಗುತ್ತ ನಿಂತಿರುವ ಆ ಸ್ತ್ರೀಯನ್ನು ನೋಡಿ ಯೇಸು ಆಲೋಚನಾಪರನಾದನು. ಅವನು ಸ್ವಲ್ಪ ಸಮಯದ ತನಕ ಯಾವ ಮಾತನ್ನು ಆಡದಿರುವದನ್ನು ನೋಡಿ ಗುಂಪುಕಟ್ಟಿ ನಿಂತಿದ್ದ ಶತ್ರುಜನರು ಗಲಭೆ ಮಾಡಲು ಸುರುಮಾಡಿದರು. ಆಗ ಯೇಸು—'ನೀವು ಇವಳನ್ನು ಕಲ್ಲಿನಿಂದ ಹೊಡೆದು ಕೊಂದುಹಾಕಬಹುದು. ಇವಳಿಗೆ ಇದೇ ಶಿಕ್ಷೆ ತಕ್ಕದ್ದಾಗಿದೆ. ಆದರೆ ಯಾರು ಇದು ತನಕ ಯಾವ ಅಪರಾಧವನ್ನೂ ಪಾಪಾಚರಣೆಯನ್ನೂ ಮಾಡಿರುವದಿಲ್ಲವೋ ಅವನೇ ಅವಳಿಗೆ ಮೊದಲ ಕಲ್ಲನ್ನು ಹೊಡೆಯಬೇಕು' ಎಂದು ಹೇಳಿ ಸುಮ್ಮನಾದನು.

ಕ್ಷಮಾದಾನ

ಇದನ್ನು ಕೇಳಿ ಯೇಸುವನ್ನು ಅವಮಾನ ಮಾಡಲಿಕ್ಕೆ ಬಂದಿದ್ದ ಆ ಎಲ್ಲಾ ಜನರು ಒಬ್ಬೊಬ್ಬರಾಗಿ ಜಾರಿದರು. ಯಾವ ಅಪರಾಧ ಅಥವಾ ಪಾಪವನ್ನು ಮಾಡದ ಮನುಷ್ಯನು ಅವರಲ್ಲಿ ಒಬ್ಬನೂ ಇರಲಿಲ್ಲ. ಸ್ವಲ್ಪ ಸಮಯದ ನಂತರ, ಅಲ್ಲಿ ಆ ವ್ಯಭಿಚಾರಿಣಿ ಸ್ತ್ರೀ ಒಬ್ಬಳೇ ನಿಂತಿದ್ದಳು. ಅವಳನ್ನು ಕುರಿತು ಯೇಸು—'ತಂಗಿ! ಹಾಗಾದರೆ ನೀನೂ ಹೋಗು! ದೇವರು ನಿನ್ನನ್ನು ಕ್ಷಮಿಸಿದ್ದಾನೆ. ಮುಂದೆ ಇಂಥ ಕಾರ್ಯಗಳನ್ನು ಮಾಡಬೇಡ' ಎಂದು ಅವಳನ್ನು ಕಳುಹಿಸಿಕೊಟ್ಟನು. ಮುಂದೆ ಅವಳು ತನ್ನ ವ್ಯಭಿಚಾರ ವೃತ್ತಿಯನ್ನು ಪೂರ್ಣ ಬಿಟ್ಟುಬಿಟ್ಟಳು. ಯೇಸುವಿನ ಶಿಷ್ಯಳಾದಳು.

ಯೇಸುವಿನ ಜೀವನವು ಇಂತಹುದೇ ಅನೇಕ ಸುಂದರ ಘಟನೆಗಳಿಂದ ತುಂಬಿದೆ.

ಸುಕ್ರ ಸಂಜೀವನ

ಭಾರತ ದೇಶವಿಂದು ಪ್ರಾಚೀನ ಋಷಿಗಳ ನಿಯಮಗಳಿಗನುಸಾರವಾಗಿ ನಡೆಯುವ ದೇಶವಾಗಿಲ್ಲ. ಪ್ರತಿಯೊಬ್ಬ ಭಾರತೀಯನ ಮೂಲ ನಿಯಮವಾಗಿದ್ದ ಬ್ರಹ್ಮಚರ್ಯವು ಪಾಲನೆಯಲ್ಲಿಲ್ಲದೆ ಎಂದೋ ಮರೆತು ಹೋಗಿದ್ದುದರ ಪರಿಣಾಮವಾಗಿ ಭಾರತೀಯರಿಂದು ನಿಸ್ತೇಜಕರಾಗಿರುತ್ತಾರೆ. ಪ್ರಾಚೀನ ಸಂಸ್ಕೃತಿಯ ತಿಳುವೇ ಇಲ್ಲದುದರಿಂದಲೂ ತಕ್ಕ ವಿದ್ಯಾಭ್ಯಾಸವಿಲ್ಲದಿದ್ದುದರಿಂದಲೂ ನಾವು ನಮ್ಮ ಆತ್ಮಸಂಯಮನವನ್ನು ಕಳೆದುಕೊಂಡಿದ್ದೇವೆ.

ಅದುದರಿಂದ ಬಳಲುವ ಮಂದಿಗೆಲ್ಲ ನಮ್ಮ ವಿನಂತಿ ಏನೆಂದರೆ 'ಸುಕ್ರ ಸಂಜೀವನ" ವನ್ನು ಉಪಯೋಗಿಸಿ ಆಯುರ್ವೇದದ ಮಹತ್ವವನ್ನು ತಿಳಿಯಿರೆಂಬುದೇ. ಈ ಔಷಧಿಯು ಮಾತ್ರ ಅವರಿಗೆ ಸಂಪೂರ್ಣ ಗುಣವನ್ನು ದೊರಕಿಸಿ ಕೊಟ್ಟು, ಆರೋಗ್ಯವನ್ನೂ ಶಕ್ತಿಯನ್ನೂ ಯೌವನದ ತೇಜಸ್ಸನ್ನೂ ತರುವುದು.

$\frac{1}{4}$ ಸೇರಿಗೆ ರೂ. 4



ಅಧ್ಯಕ್ಷ ಡಾ। ಜೋಗೆಶ್ ಚಂದ್ರಘೋಷ್, ಎಂ.ಎ., ಎಫ್.ಸಿ.ಎಸ್ (ಲಂಡನ್) ಎಂ. ಸಿ. ಎಸ್ (ಅಮೇರಿಕ)
ಆಯುರ್ವೇದ ಶಾಸ್ತ್ರಿ,
ಭಾಗಲ್ಪೂರ ಕಾಲೇಜಿನ ಮಾಜಿ ಕೆಮಿಸ್ಟ್ರಿ ಪ್ರೊಫೆಸರರು.

ಪ್ರಮುಖ ಆಯುರ್ವೇದೀಯ ಸಂಸ್ಥೆ

ಸಾಧನಾ ಔಷಧಾಲಯ

— ಢಾಕ್ಕಾ, ಬಂಗಾಲ —

ಮದ್ರಾಸು ಕೇಂದ್ರ: 17A, ಬ್ರಾಡ್ವೆ, ಮದ್ರಾಸು.

ಶಾಖೆಗಳು ಮತ್ತು ಏಜನ್ಸಿಗಳು ಪ್ರಪಂಚದಲ್ಲೆಲ್ಲಾ ಇವೆ.

ಮಂಗಳೂರು ಏಜೆಂಟ್ಸ್: ಪಾ ಕಂಪನಿ, ಹಂಪನಕಟ್ಟಾ ಮಂಗಳೂರು.

★ ಸಿನೇಮಾ ಪ್ರಪಂಚ ★

ನ್ಯೂ ಥಿಯೇಟರ್ಸಿನ ಮುಂದಿನ ಯೋಜನೆಗಳು

ಶ್ರೀ ಬಿ. ಯನ್. ಸರ್ಕಾರರು ತನ್ನ ಸ್ಟುಡಿಯೋದ ಕೆಲಸವನ್ನು ಅತ್ಯಂತ ಭರದಿಂದ ಸಾಗಿಸುವ ಯೋಜನೆಗಳನ್ನು ಮಾಡುತ್ತಿದ್ದಾರೆ. 'ನರ್ತಕಿ' ಮತ್ತು 'ಲಗನ್' ಚಿತ್ರಗಳ ನಂತರ ನ್ಯೂ ಥಿಯೇಟರ್ಸಿನ ಕಾರ್ಯಕ್ರಮವು ಕಡಿಮೆಯಾಗುವುದೆಂದು ಹೇಳುವುದರಲ್ಲಿ ಆಧಾರವಿಲ್ಲ. ಸೈಗಲ್, ನವಾಬ್, ಕಾನನ್ ಬಾಲ, ಮತ್ತು ಲೀಲಾ ದೇಸಾಯಿ ಇವರು ಹಿಂದಿನಂತೆ ಮುಂದೂ ಅದೇ ಕಂಪೆನಿಯಲ್ಲಿರುವರು.

ನಾಸೀಮ್ ತಿರಿಗಿ ಮಿನೆರ್ವಾಕ್ಕೆ?

ಬೊಂಬಾಯಿಯಿಂದ ಒಂದು ಸುದ್ದಿ ಬಂದಿದೆ. 'ಪುಕಾರ್'ನಲ್ಲಿ ನೂರ್ ಜಹಾನಳ ಪಾತ್ರವನ್ನು ಅಭಿನಯಿಸಿದ ನಾಸೀಮಳು ಮಿನೆರ್ವಾ ಚಿತ್ರವನ್ನು ಅಗಲಿ ಸಿರ್ಕೋ ಪ್ರೊಡಕ್ಷನ್ಸಿಗೆ ಸೇರಿದ್ದಾಳಷ್ಟೆ? ಈಗ ಅವಳು ತಿರಿಗಿ ಮಿನೆರ್ವಾಕ್ಕೆ ಸೇರಿ 'ತಾಜ್ ಮಹಾಲ್' ಚಿತ್ರದಲ್ಲಿ ತನಗೆ ಮುಂಚಿತವಾಗಿ ನಿಶ್ಚಯಿಸಿದ ಪಾತ್ರವನ್ನು ಅಭಿನಯಿಸುವವಳೆಂದು ತಿಳಿದಿದೆ.

ದೇವಕಿ ಬೋಸರು ಬೊಂಬಾಯಿಗೆ

ಶಾಂತಾ ಆಪ್ಟೆಯ ಚಿತ್ರ

'ನರ್ತಕಿ' ಚಿತ್ರವನ್ನು ಮುಗಿಸಿ, ಈಗ ದೇವಕಿ ಬೋಸರು ಶಾಂತಾ ಆಪ್ಟೆಯು ಅಭಿನಯಿಸುವ ಶಾಕುಂತಳ ಚಿತ್ರವನ್ನು ನಿರ್ದೇಶಿಸಲು ಬೊಂಬಾಯಿಗೆ ತೆರಳಿರುವರು. ಇದು ಸಿರ್ಕೋ ಪ್ರೊಡಕ್ಷನ್ಸಿನ ಚಿತ್ರವಾಗಿದೆ.

ಸೋಹ್ರಾಬ್ ಮೋಡಿ ಪಂಜಾಬಿಗೆ

ಹೊಸ ಚಿತ್ರದ ನಿರ್ಮಾಣಕ್ಕೆ

'ಸಿಕಂದರ್ ಎ ಅಜಾಮ್' ಚಿತ್ರದ ತಯಾರಿಗಾಗಿ ನಿರ್ದೇಶಕ ಸೊಹ್ರಾಬ್ ಮೋಡಿಯವರು ಬಹಳ ಭರದ ಕೆಲಸ ಮಾಡುತ್ತಿದ್ದಾರೆ. ಈ ಚಿತ್ರಕ್ಕೆ ಪ್ರಕೃತಿ ಸೌಂದರ್ಯವನ್ನು ಒದಗಿಸಲು ಅವರು ಪಂಜಾಬಿನ ತಕ್ಷಶಿಲೆಗೆ ತೆರಳಿರುವರೆಂದು ತಿಳಿದಿದೆ. ಅಲ್ಲಿಂದ ಬೊಂಬಾಯಿಗೆ ಮರಳಿ ಬರುವಾಗ, ಲಾಹೋರ್, ಢಿಲ್ಲಿ ಮತ್ತು ಆಗ್ರಾಗಳ ಸುಂದರ ಪ್ರಕೃತಿ ಚಿತ್ರಗಳನ್ನು ತೆಗೆಯುವರು.

ಶಾಂತಾರಾಮರಿಗೆ ಪಂಜಾಬಿನಲ್ಲಿ ಸ್ವಾಗತ

ಪ್ರಭಾತ ಚಿತ್ರ ಕಂಪೆನಿಯ ನಿರ್ದೇಶಕರಾದ ಶ್ರೀ ವಿ. ಶಾಂತಾರಾಮರು ಪಂಜಾಬಿಗೆ ಪ್ರಯಾಣಮಾಡುವರೆಂಬ ವಾರ್ತೆಯು ಅಲ್ಲಿಯ ಮಿಲಿಯಾಂತರ ಸಿನೇಮಾಪ್ರಿಯರ ಹೃದಯಗಳಲ್ಲಿ ಆನಂದವನ್ನು ತುಂಬಿಸಿದೆ. ಜನವರಿ ಆಖೈರಿ ಒಳಗೆ ಅವರು ಪಂಜಾಬಿಗೆ ತೆರಳಲಿರುವರಂತೆ. ಕೆಲವೇ ತಿಂಗಳ ಹಿಂದೆ ಅವರು ಮದ್ರಾಸಿಗೆ ಪ್ರಯಾಣಮಾಡಿದ್ದು ಅಲ್ಲಿಯ ಅಪೂರ್ವ ಸ್ವಾಗತ ಸತ್ಕಾರಗಳನ್ನು ಪಡೆದಿದ್ದರು.

'ಖಾಜಾಂಚಿ'

ಪಂಚೋಲಿ ಆರ್ಟ್ ಫಿಕ್ಚರ್ಸಿನವರ ಹಿಂದೂಸ್ತಾನಿ ಚಿತ್ರವಾದ ಖಾಜಾಂಚಿ ಎಂಬುದು ಕೈವಭಕ್ತಿ ಪ್ರೇರಿತವಾದ ಕಥೆಯು. ಸಂಸಾರ ಮತ್ಸರಗಳನ್ನು ಅದು ತೆರೆದು ತೋರಿಸುತ್ತದೆ. ಈ ಚಿತ್ರವು ಈ ವಾರದಲ್ಲಿಯೇ ಕೊನೆಗೊಳ್ಳಲಿದೆ.

ಕಿಸ್ಮೆತ್ತಿನಲ್ಲಿ ಇಲ್ಲಾ ದೇಸಾಯಿ

ಕಿಸ್ಮೆತ್ ಚಿತ್ರದಲ್ಲಿ ಪ್ರಸಿದ್ಧ ನಟಿ ಇಲ್ಲಾ ದೇಸಾಯಿಯು ಅಭಿನಯಿಸುವಳು. 'ಮಿರ್ಜಾ ಸಾಹೇಬನ್' ಚಿತ್ರದಲ್ಲಿ ಅಭಿನಯಿಸಿ ಆಕೆ ತನ್ನ ಕಲಾಸಾಮರ್ಥ್ಯವನ್ನು ತೋರಿಸಿರುವಳು. ನಗರ ಮತ್ತು ಹಳ್ಳಿವಾಸಗಳ ಚಿತ್ರೀಕರಣವು ಇದರಲ್ಲಿದೆ.

"ಗೀತಾ" ಪ್ರದರ್ಶಿತವಾಗುವುದು

ಬರುವ ವಾರದಲ್ಲಿಯೇ ಸಿರ್ಕೋ ಪ್ರೊಡಕ್ಷನ್ಸಿನವರ ಚಂದ್ರಮೋಹನ ಮತ್ತು ದುರ್ಗಾ ಖೋಟೆ ಅಭಿನಯಿಸಿದ 'ಗೀತಾ' ಚಿತ್ರವು ಪ್ರದರ್ಶಿತವಾಗುವುದೆಂದು ತಿಳಿದಿದೆ. ಗೀತಾ ಎಂಬುದು

ಒಂದು ಸಾಮಾಜಿಕ ಕಥೆ. 'ಅಮರ ಜ್ಯೋತಿ'ಯ ನಂತರ ಚಂದ್ರಮೋಹನ ಮತ್ತು ದುರ್ಗಾ ಖೋಟೆಯರು ಜತೆಗೂಡಿ ಅಭಿನಯಿಸುವುದು ಇದೇ ಮೊದಲನೆಯ ಸಲ.

ಕ್ರಿಸ್‌ಮಸ್‌ನಲ್ಲಿ 'ರಾಜನರ್ತಕಿ'

ವಾಡಿಯಾ ಮೂವಿಟೋನಿನಲ್ಲಿ ಶ್ರೀ ಮಧು ಬೋಸರ ನಿರ್ದೇಶಕತ್ವದಲ್ಲಿ ಮಹಾನಟಿ ಸಾಧನಾ ಬೋಸಳ ನಟನೆಯಿಂದ ರಚಿತವಾದ ಪ್ರಖ್ಯಾತ ಚಿತ್ರ 'ರಾಜನರ್ತಕಿ'ಯು ಕ್ರಿಸ್‌ಮಸ್ ಸಮಯದಲ್ಲಿ ಬೊಂಬಾಯಿಯಲ್ಲಿ ಪ್ರಚಲಿತವಾಗುವುದು. ಪೃಥ್ವೀರಾಜ್, ಅಹೀನ್ ಚೌಧರಿ, ನಯಂಪಳ್ಳಿ, ಮೊದಲಾದವರೂ ಅಭಿನಯಿಸುವರು.



ಕೋಮಲವಾದ ಚರ್ಮಕ್ಕೆ ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನಿಂದ (Cuticura Medicated Toilet Soap) ಹೆಚ್ಚಿನ ರಕ್ಷಣೆಯನ್ನು ಕೊಡಿರಿ. ಇತರ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣಪಡಿಸುವ ಗುಣವುಳ್ಳ ಔಷಧಿಗಳು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಕೋಮಲವಾಗಿರಿಸುವುದು.
ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನಯವಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ದೊರಕುತ್ತದೆ

ಕುಟಿಕೂರಾ ಸೋಪ್
CUTICURA SOAP

ಕಾನನದೇವಿ ಸಿನೆಮಾರಂಗದಿಂದ ನಿವೃತ್ತಳಾಗುವುದಿಲ್ಲ

ಕಲಾಸೇವೆಗಾಗಿ ಆತುರ

ವಿವಾಹಿತಳಾದ ಕಾನನ್ ದೇವಿಯು ಮುಂದಕ್ಕೆ ಸಿನೇಮಾದಲ್ಲಿ ಪಾತ್ರವಹಿಸುವ ಸಂಭವವಿಲ್ಲವೆಂದ ದಟ್ಟವಾದ ಸುದ್ದಿ ಹರಡಿತ್ತು. ಈ ವಿಷಯವಾಗಿ ಆಕೆಯೊಡನೆ ಪ್ರಶ್ನಿಸಲು "ನಾನು ಯಾವುದೇ ಜೀವನದಲ್ಲಿರಲಿ ನನ್ನ ಪ್ರೀತಿಯ ಕಲೆಯನ್ನು ಬಿಡಲು ಮನಸ್ಸಿಲ್ಲದವಳಾಗಿದ್ದೇನೆ. ನಾನು ಪ್ರೀತಿಸುವ ನನ್ನ ಪತಿಯು ಸದಭಿಪ್ರಾಯದಿಂದಲೂ ಪ್ರೇಮ ಸಹಕಾರಗಳಿಂದಲೂ ನಾನು ಮುಂದಕ್ಕೂ ಸಿನೇಮಾರಂಗದಲ್ಲಿಯೇ ಕಲಾಸೇವೆ ಮಾಡುತ್ತಿರಲು ಅಪೇಕ್ಷೆಯುಳ್ಳವಳಾಗಿರುವೆನು" ಹೀಗೆಂದು ಅವಳು ಹೇಳಿದಳೆಂದು ಅಮೃತ ಬಜಾರ್ ಪತ್ರಿಕೆಯ ವಾರ್ತೀದಾರನು ಬರೆಯುತ್ತಾನೆ.

ಪೂಜಾ

ನೇಶನಲ್ ಸ್ಟುಡಿಯೋದವರ ಚಿತ್ರ 'ಪೂಜಾ' ತಯಾರಾಗುವುದು. ಶ್ರೀ ಕರ್ದಾರರು ಇದನ್ನು ನಿರ್ದೇಶಿಸುವರು. ಸರ್ದಾರ್ ಅಖ್ತರಳು ಮತ್ತು ಸಿತಾರಾ ಇದರಲ್ಲಿ ಎರಡು ಮುಖ್ಯಪಾತ್ರಗಳನ್ನು ವಹಿಸುವಳು. ಜಹೂರ್‌ರಾಜಾ ನಾಯಕ ಪಾತ್ರವನ್ನು ಅಭಿನಯಿಸುವನು. ಸರೇ ದಿನ ಮೊದಲು ನಾಯಕ ಪಾತ್ರ ವಹಿಸುವುದಾಗಿ ನಿಶ್ಚಯವಾಗಿತ್ತು. ಆದರೆ ಆತನಿಗೆ ಕುದುರೆ ಸವಾರಿಯಲ್ಲಿ ಒದಗಿದ ಆಕಸ್ಮಿಕವಾದೊಂದು ಅಪಘಾತದಿಂದ ನಟಿಸಲು ಸಾಧ್ಯವಾಗಲಿಲ್ಲ.

೫೦,೦೦೦ ರೂ. ಸಂಬಳದಲ್ಲಿ

ನಿರ್ದೇಶಕ ಎ. ಆರ್. ಕರ್ದಾರರು ನೇಶನಲ್ ಸ್ಟುಡಿಯೋವನ್ನು ಬಿಟ್ಟು, ವರ್ಷವೊಂದರ ೫೦,೦೦೦ ರೂಪಾಯಿಗಳ ವೇತನ ನಿಶ್ಚಯದಿಂದ ಸಿರ್ಕೋ ಪ್ರೊಡಕ್ಷನ್ಸಿನ ಸ್ವಾಮಿನಾಥ ಮತ್ತು 'ಮಹಾತ್ಮಾ ಅಕ್ಬರ್' ಚಿತ್ರಗಳ ನಿರ್ದೇಶಕತ್ವ ವಹಿಸಲು ತೆರಳಿರುವರೆಂದು ತಿಳಿದಿದೆ.

ವಿದೇಶಕ್ಕೆ ನಾಲ್ಕು ಚಿತ್ರಗಳು

ಶ್ರೀ ರಾಮ ಬಾಗಾಯಿಯವರು ಹೋಲಿವುಡ್ಡಿಗೆ ತೆರಳಿದಾಗ ತಮ್ಮೊಡನೆ ಆದ್ಮೀ, ಧ್ಯಾನೇಶ್ವರ್, ದುನಿಯಾ ನ ಮಾನೆ, ಮತ್ತು ಸಂಗನ್ ಈ ನಾಲ್ಕು ಚಿತ್ರಗಳನ್ನು ತೆಗೆದುಕೊಂಡು ಹೋಗಿರುವರೆಂದು ತಿಳಿದುಬಂದಿದೆ. ಈ ಚಿತ್ರಗಳು ಅಲ್ಲಿ ಭಾರತೀಯ ಚಲಚ್ಚಿತ್ರ ಪ್ರಗತಿಯ ಪ್ರದರ್ಶನಕ್ಕಾಗಿ ಒಯ್ಯಲಾಗಿವೆ.

ಇಲ್ಲಿ ಮಾಡುವುದೇನು? ಅಲ್ಲಿ ಹೇಳುವುದೇನು?

ಬ್ರಿಟನ್ನಿನ ವರ್ತನೆಯನ್ನು ಬ್ರಿಟಿಷ್ ಪತ್ರಿಕೆ ಟೀಕಿಸುತ್ತದೆ.

ಗಾಂಧೀಜಿ ಭಾರತದಲ್ಲಿ ಧೀಮಂತ ವ್ಯಕ್ತಿ!

ಕೇಂದ್ರ ಸರಕಾರದ ಕಾರ್ಯನಿರ್ವಹಣ ಮಂಡಳಿಯ ವಿಸ್ತರಣದ ಕುರಿತು ವಾಯ್ಸರಾಯರು ಹೇಳಿದ ಮಾತುಗಳನ್ನು ವಿಮರ್ಶಿಸುತ್ತಾ ಬ್ರಿಟಿಷ ಸರಕಾರದ ಮನೋಭಿಪ್ರಾಯ ವೇನೋ ಉಚ್ಚವಾಗಿರಬಹುದು, ಆದರೆ ಅದು ಯಾರಿಗೂ ತೃಪ್ತಿಯನ್ನು ಕೊಡದ ಒಡಂಬಡಿಕೆಯಾಗಿದೆ ಎಂದು ಬ್ರಿಟನಿನ ನ್ಯೂಸ್ ರೆವ್ಯೂ ಪತ್ರಿಕೆ ಒಂದು ಸಂಪಾದಕೀಯ ಲೇಖನವನ್ನು ಬರೆದಿದೆ

ಅದು ಹೀಗೆಂದು ವಾದಿಸಿದೆ

ಭಾರತದ ಧೀಮಂತ ವ್ಯಕ್ತಿ

'ಮಹಾತ್ಮಾ ಗಾಂಧಿಯವರು ಸಮಗ್ರ ಭಾರತದ ಅತ್ಯಂತ ಧೀಮಂತ ವ್ಯಕ್ತಿಯಾಗಿದ್ದಾರೆ ಮಹತ್ವದ ನಿರ್ಣಯಗಳನ್ನು ಮಾಡುವುದಕ್ಕೋಸ್ಕರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿಯಲ್ಲಿ ಕೂಡಿದ್ದಾಗ ಬ್ರಿಟಿಷ್ ಸರಕಾರವು ಈ ಗಾಂಧಿಜಿಯವರನ್ನೇ ಹೊಂದಿಕೊಂಡಿತ್ತು ಅವು ಕಾಂಗ್ರೆಸ್ ಇತಿಹಾಸದ ಮಹತ್ವದ ದಿನಗಳು ಅವು ಬ್ರಿಟಿಷ್ ಸರಕಾರವು ಜೀವನಮರಣದ ಸಂದಿಗ್ಧದಲ್ಲಿ ಸಿಲುಕಿದಾಗ ಅದಕ್ಕೆ ಸಹಾಯಮಾಡಬೇಕೇ ಬೇಡವೇ ಎಂದು ನಿರ್ಣಯಿಸಬೇಕಾದ ದಿನಗಳಾಗಿದ್ದವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ರಕ್ಷಣೆಗಾಗಿ ಹೂಡಿದ ಹೋರಾಟದಲ್ಲಿ ಭಾರತದ ಸಹಾಯವು ಬ್ರಿಟಿಷ್ ಸರಕಾರಕ್ಕೆ ಅನಿವಾರ್ಯವಾಗಿತ್ತು

ರಾಷ್ಟ್ರವಾದಿಗಳ ಧೋರಣ

'ಜನತೆಗೆ ಪ್ರಜಾಪ್ರಭುತ್ವವಾಗಲಿ, ಸ್ವಾತಂತ್ರ್ಯವಾಗಲಿ ದೊರೆಯದಿರುವಷ್ಟು ಕಾಲ ಬ್ರಿಟನಿನ ಯುದ್ಧದಲ್ಲಿ ಭಾರತೀಯ ಜನತೆಯು ಅದಕ್ಕೆ ಯಾವ ಪ್ರಕಾರವೂ ಸಹಾಯಮಾಡಬಾರದೆಂಬ ಧೋರಣೆಯನ್ನು ರಾಷ್ಟ್ರವಾದಿ ಕಾಂಗ್ರೆಸ್ ಜನರು ಇಟ್ಟುಕೊಂಡಿದ್ದಾರೆ ಈ ಕಾಂಗ್ರೆಸ್ ಜನರನ್ನು ಸಮಾಧಾನಗೊಳಿಸುವುದಕ್ಕೋಸ್ಕರ ಎಂಬಂತೆ ಯುದ್ಧ ಮುಗಿದ ಮೇಲೆ ಡೊಮಿನಿಯನ್ ಸ್ಟೇಟಸನ ಭರವಸೆಯೊಂದಿಗೆ ವ್ಯಕ್ತತ ವಾಯ್ಸರಾಯರ ಕೌನ್ಸಿಲಿಗೆ ಪ್ರಜಾಪ್ರಮುಖರಲ್ಲಿ ಕೆಲವರನ್ನು ತೆಗೆದುಕೊಳ್ಳುವುದೆಂದೂ, ಯುದ್ಧಕಾರ್ಯಗಳನ್ನು ಮುಂದೊತ್ತಲಿಕ್ಕೆ ದೇಶೀಯರಾದ ಪ್ರತಿನಿಧಿಗಳಿಂದ ಕೂಡಿದ ಒಂದು ಸಲಹೆಗಾರ ಮಂಡಲವನ್ನು ರಚಿಸುವುದೆಂದೂ ಬ್ರಿಟಿಷ ಸರಕಾರವು ಹೇಳಿತು. ಈ ಯೋಜನೆಯನ್ನು ಆಲೋಚಿಸಲಿಕ್ಕೆ ಕಾಂಗ್ರೆಸ್ಸು ಬಹಳ ತಲೆ ಕೆಡಿಸಿಕೊಳ್ಳಬೇಕಾಗಲಿಲ್ಲ. ಬ್ರಿಟಿಷ್ ಸರಕಾರವು ಸದ್ಭಾವನೆಯಿಂದ ಪ್ರೇರಿತವಾಗಿಯೇ ಈ ಯೋಜನೆಯನ್ನು ಮುಂದಿಟ್ಟಿದ್ದಿರಬಹುದು. ಆದರೆ ಅದು ಅತ್ಯಂತ ಅತೃಪ್ತಿಕರ ಒಡಂಬಡಿಕೆಯಾಗಿತ್ತು. ಪ್ರಜಾಪ್ರಮುಖರಿಂದು ಯಾರನ್ನು ಬೇಕಾದರೂ ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರವು ವೈಸರಾಯರಿಗೆ ಇತ್ತು ಮತ್ತು ಬ್ರಿಟಿಷ ಸರಕಾರದ ಮನೋನುಕೂಲವನ್ನು ನೋಡಿಯೇ ತಮ್ಮ ರಾಜ್ಯಗಳ ಆಡಳಿತವನ್ನು ನಡೆಸುವ ದೇಶೀರಾಜರುಗಳ ಮೂಲಕ ಅವರು ಯಾವ ಕಾರ್ಯವನ್ನಾದರೂ ತಮಗೆ ಬೇಕಾದಂತೆ ಸಾಧಿಸಿಕೊಳ್ಳಬಹುದಾಗಿತ್ತು. ಆದ್ದರಿಂದಲೇ ಕಾಂಗ್ರೆಸ್ಸು ಈ ಯೋಜನೆಯನ್ನು ತಿರಸ್ಕರಿಸಬೇಕಾಯಿತು

ಬ್ರಿಟನಿನಲ್ಲಿ ಪ್ರಚಾರವಿಲ್ಲ

'ಭಾರತದಲ್ಲಿ ಈಗ ಏನ ನಡೆಯುತ್ತಿದೆ ಎಂಬ ಯಾವ ಸಂಗತಿಯೂ ಬ್ರಿಟನಿನ ಜನತೆಗೆ ತಿಳಿದಿರುವುದಿಲ್ಲ ಬ್ರಿಟಿಷ ಸರಕಾರದ ಪ್ರಚಾರಖಾತೆಯು ಮಂತ್ರಿಮಂಡಲವು ಇಲ್ಲಿಯ ಸರಕಾರಕ್ಕೆ ಅನುಕೂಲವಾಗಿಯೇ ಭಾರತದ ಸ್ಥಿತಿಗತಿಗಳನ್ನು ಇಲ್ಲಿಯ ಜನರಿಗೆ ತಿಳಿಸುತ್ತಾ ಇದೆ ಮಹಾತ್ಮಾ ಗಾಂಧಿಯವರ ಬೇಡಿಕೆಗಳಿಗೆ ಬ್ರಿಟಿಷ್ ಸರಕಾರವು ಕೊಟ್ಟ 'ನ'ಕಾರದ ಉತ್ತರ ಮತ್ತೆ ಆರಂಭವಾದ ಪ್ರಾತಿನಿಧಿಕ ಸತ್ಯಾಗ್ರಹ ಯಾವುದರ ವಿಷಯವಾಗಿಯೂ ಒಂದಕ್ಷರವನ್ನು ಕೂಡ ಬರೆಯದೆ ಹಿಂದುಸ್ಥಾನದ ಸ್ಥಿತಿಗತಿಗಳನ್ನು ಕುರಿತು ಒಂದು ರೈಲ್ವೆ ಸ್ಟೇಶನಿನಲ್ಲಿ ಈ ಮಂತ್ರಿಮಂಡಲವು ಬರೆದ ಕೆಲವು ವಾಕ್ಯಗಳು ಈ ಪ್ರಕಾರ ಇವೆ—'ಹೆಚ್ಚಿನ ವಿಷಯಗಳಲ್ಲಿ ಭಾರತವು ತನಗೆ ಬೇಕಾದಂತೆ ಆಡಳಿತ ನಡೆಸುವ ಸ್ವಾತಂತ್ರ್ಯವು ಅದಕ್ಕೆ ಪ್ರಾಪ್ತವಾಗಿದೆ ಸಾಮ್ರಾಜ್ಯಾಂತರ್ಗತ ಸ್ವಾತಂತ್ರ್ಯ ಪರಿವಾರದಲ್ಲಿ ತಕ್ಕ ಸ್ಥಾನವನ್ನು ಪಡೆಯಲಿಕ್ಕೆ ಭಾರತವೂ ಮುನ್ನಡೆಯುತ್ತಾ ಇದೆ. ಆಗ ಅದು ತನ್ನ ಇತಿಹಾಸದಲ್ಲಿ ಇದೇ ಮೊದಲನೆಯದಾಗಿ ಪ್ರಜಾಪ್ರಭುತ್ವದ ಸ್ವರಾಜ್ಯಸುಖವನ್ನು ಅನುಭವಿಸತೊಡಗುವುದು' ಇಲ್ಲಿ ಹೇಳುವುದಕ್ಕೂ ಅಲ್ಲಿ ಆಗಿರುವುದಕ್ಕೂ ಎಷ್ಟು ಆಜಗಜಾಂತರದ ಭೇದವಿದೆ!

ಕಫ ಮತ್ತು ಶೀತಬಾಧೆಗೆ ಅತ್ಯುತ್ತಮ ಔಷಧಿ

ಕಂಠದ, ಎದೆಯ ಮತ್ತು ಶ್ವಾಸಕೋಶಗಳ ನೋವಿಗೆ ಪೆಪ್ಸ್ ಅತ್ಯಮೂಲ್ಯವಾದ ಔಷಧಿಯು ಇದು ಮಾತ್ರೆಯ ರೂಪದಲ್ಲಿದ್ದು ಶ್ವಾಸಯೋಗ್ಯವಾಗಿರುತ್ತದೆ. ಇದರ ಅದ್ಭುತ ಗುಣಕಾರಿ ಸತ್ವವು ಪ್ರಸಿದ್ಧವಾದ 'ಪೈನ್ ಫೋರೆಸ್ಟ್ ಗಾಳಿ'ಗೆ ಸದೃಶವಾಗಿದೆ.

ಬಾಯಲ್ಲಿ ಹಾಕಿದ ಕೂಡಲೇ ಕರಗಿ ಶ್ವಾಸಕೋಶಗಳಿಗೆ ತೆಗೆದುಕೊಳ್ಳಲು ಯೋಗ್ಯವಾದ ಔಷಧಿ ರಸವನ್ನು ಈ ಮಾತ್ರೆಗಳು ಕೊಡುತ್ತವೆ ಕಂಠವನ್ನು ಸಂಗೋಪಿಸುತ್ತವೆ ಮಾತ್ರವಲ್ಲದೆ ಎದೆಯ ಹಾಗೂ ಶ್ವಾಸಕೋಶಗಳ ಯಾವುದೇ ತರದ ನೋವುಗಳನ್ನು ಬೇಗನೇ ಗುಣಪಡಿಸುತ್ತದೆ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ 1 ರೂಪಾಯಿ ಬೆಲೆಗೆ ದೊರಕುತ್ತವೆ

ಏಜೆಂಟರು

ಮೆಸರ್ಸ್ ಧಾಬಾ ಎಂಡ್ ಕೋ ಪಿ.ಟಿ. ಮದ್ರಾಸು

ಯಾವಾಗಲೂ ಪೆಪ್ಸನ್ನು ಉಪಯೋಗಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

Wanted—

Agents, Sub organizers and District organizers to represent the clock insurance policy on salary and commission basis

Insist upon a policy under clock insurance scheme

1. 20 scholarships of Rs. 4 each awarded in addition to the sum assured without extra charge.
2. Clocks given free
3. 9 scholarships of Rs. 5 each already awarded

For terms apply to

K. Balakrishna Shetty

District Inspector

Kurukshetra Provident Insurance Co. Ltd.,
Mangalore.

Now camping at Padupet, Udipi, S K

ಮೂರು ವಾಚುಗಳು ಮತ್ತು 895 ಶೃಂಗಾರ ಸಾಮಗ್ರಿಗಳು ರೂ. 1—4—0ಕ್ಕೆ ದೊರಕುವುವು

ನಮ್ಮ ಸುಗಂಧಕರವಾದ ಒಟ್ಟೋ ರೋಸ್‌ನ 2 ಬಾಟ್ಲಿಗಳನ್ನು ಒಮ್ಮೆಗೇ 1—4—0 ಕೊಟ್ಟು ಪಡಕೊಳ್ಳುವವರಿಗೆ ಒಂದು ಬೇಂಡ್ ಸಹಿತವಾದ ಬಂಗಾರದಗಿಲ್ಟಿನ ಡಮ್ಮಿ ರಿಸ್ಟ್‌ವಾಚ್ ಒಂದು ರೈಲ್ವೆ ಟೈಮ್ ಡಮ್ಮಿ ಪೊಕೆಟ್ ವಾಚ್, ಒಂದು ಸೇಫ್ಟೀ ರೇಜರ್ ಒಂದು ಬಾಚಣಿಗೆ, ಒಂದು ಶೇವಿಂಗ್ ಸೋಪು, ಒಂದು ಶೇವಿಂಗ್ ಬ್ರಶ್ಶು, ಒಂದು ಪಾಕೆಟ್ ಪೌಡರು, ಒಂದು ಕ್ಲಿಪ್ ಸಹಿತವಾದ ಪೆನ್ಸಿಲು, ಒಂದು ಸಿಗರೇಟ್ ಕೇಸ್, ಒಂದು ಸಿಗರೇಟ್ ಲೈಟರ್, ಒಂದು ಟವೆಲು, ಒಂದು ಉಂಗುರ, ಒಂದು ಸೆಟ್ ಪೋಕೆಸ್ ವುಲ್ಸ ಒಂದು ಟಾರ್ಚ್ ಲೈಟು ಅಥವಾ ಒಂದು ಭದ್ರವಾದ 10 ವರ್ಷ ಗ್ಯಾರಂಟಿಯುಳ್ಳ ಟೈಂಪೀಸ್ ಕೊಡಲ್ಪಡುವುದು. ಪ್ಯಾಕಿಂಗ್ ದರ 12 ಆಣೆ ಹೆಚ್ಚಿಗೆ ಕೊಡಬೇಕಾಗುವುದು.

ಕೆಳಗಿನ ವಿಳಾಸಕ್ಕೆ ಬರೆಯಿರಿ: **The FRENCH WATCH Co.,**

Post Box No. 12216, CALCUTTA (S. B.)



ನೋಟಗಳು

ಬ್ರಿಟಿಷ್ ಮಂತ್ರಿಮಂಡಳಕ್ಕೆ ಲಾಯಿಡು ಜಾರ್ಜರನ್ನು ಸೇರಿಸಲಾಗುವುದು ಎಂಬ ವಾರ್ತೆಯು ಲಂಡನಿನಿಂದ ಹೊರಟಿದೆ.

ಚೆಂಬರ್ಲಿನ ಮಂತ್ರಿಮಂಡಳವನ್ನು ಕಟ್ಟುಗ್ರವಾಗಿ ಟೀಕಿಸಿದವರು ಲಾಯಿಡ್ ಜಾರ್ಜರು.

ಅದಾದ ಮೇಲೆ ಕೆಲವೇ ದಿನಗಳಲ್ಲಿ ಚೆಂಬರ್ಲಿನರು ತನ್ನ ಪದವಿಗೆ ರಾಜಿನಾಮೆಯಿತ್ತು ಚರ್ಚಿಲ್ಲರಿಗೆ ತನ್ನ ಪೀಠವನ್ನು ಬಿಟ್ಟುಕೊಟ್ಟರು.

ಅಂತೂ ಚರ್ಚಿಲ್ಲರಿಗೆ ಪ್ರಧಾನ ಪದವಿ ದೊರಕಿಸುವಲ್ಲಿ ಲಾಯಿಡ್ ಜಾರ್ಜರದೂ ಒಂದು ಭಾಗವಿದೆಯೆಂದು ಅರ್ಥ ಮಾಡಿಕೊಳ್ಳಬಹುದು.

ಲಾಯಿಡ್ ಜಾರ್ಜರನ್ನು ಚರ್ಚಿಲರು ಮೊನ್ನೆ ತನ್ನ ನಿವಾಸಕ್ಕೆ ಕರೆದು ಮಾತನಾಡಿದರು.

ಆ ಕಾರಣದಿಂದಲೇ ಈಗ ಈ ಸುದ್ದಿಯು ಹರಡಲು ಅವಕಾಶವುಂಟಾಗಿದೆ.

ಮಧ್ಯಪ್ರಾಂತದ ಕಾಂಗ್ರೆಸ್ ಎಂ. ಎಲ್. ಎ. ಶ್ರೀ ಜಗತ್‌ದಾರರೆಂಬವರು ಮೊದಲು ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಮಿಶ್ರರ ವಿರುದ್ಧ ಹಲವು ಆರೋಪಗಳನ್ನು ಹೊರಿಸಿ ಕಾಂಗ್ರೆಸಿಗೆ ಅವಿಧೇಯತೆಯನ್ನು ತೋರಿಸಿದ್ದರು.

ಕಾಂಗ್ರೆಸು, ಅವರ ಮೇಲೆ ಶಿಸ್ತು ಜಾರಿಯನ್ನು ಮಾಡಿ ಹೊರಹಾಕಿತು.

ಶ್ರೀ. ಜಗತ್‌ದಾರರ ಮನಸ್ಸು ಇಂದಿನ ಈ ಸತ್ಯಾಗ್ರಹ ಕಾಲದಲ್ಲಿ ಬಹಳ ಪರಿವರ್ತನೆ ಹೊಂದಿದೆ.

"ಹಿಂದೆ, ಸತ್ಯಾಗ್ರಹಗಳಾಗಿದ್ದಾಗ, ತಾನು ಬಿಡದೆ ಮುಂದೊತ್ತಿದವನಿದ್ದೇನೆ; ನನ್ನ ಆ ಪ್ರತಿಜ್ಞೆಯನ್ನು ಈ ಸಲವೂ ಪೂರೈಸುವ ಆಸೆ ಉತ್ಸಾಹಗಳಿವೆ, ಮಹಾತ್ಮಾಜಿ, ಈ ಸಲವೂ ನನ್ನನ್ನು ಸತ್ಯಾಗ್ರಹಿಯಾಗಿ ಆರಿಸಿರಿ" ಎಂದು ಅವರು ಗಾಂಧಿಜಿಯೊಡನೆ ಮೊರೆಯಿಟ್ಟರು!

ಗಾಂಧಿಜಿ ಅವರ ಮೇಲೆ ಶಿಸ್ತು ಜಾರಿಯಾದುದರ ಕಡೆಗೆ ಅವರ ಗಮನವೆಳೆದರು.

ಶ್ರೀ ಜಗತ್‌ದಾರರ ಬಿನ್ನಹ ರಾಷ್ಟ್ರಪತಿಗಳ ಬಳಿ ನಡೆಯಿತು; ಹೇಗಾದರೂ ನನ್ನನ್ನು ಸತ್ಯಾಗ್ರಹಿಯಾಗಿ ಆರಿಸಿರೆಂದು.

ರಾಷ್ಟ್ರಪತಿ ಅಜಾದರ ಹೃದಯವೂ ಇದರಿಂದ ಕರಗಿಹೋಯಿತು, "ಅವರ ಹಿಂದಿನ ತಪ್ಪು ಕೆಲಸವನ್ನು ನಾನು ನನ್ನ ಕಂಬನಿಗಳಿಂದ ತೊಳೆಯುತ್ತೇನೆ" ಎನ್ನುತ್ತಾ ಅವರು ಶಿಸ್ತನ್ನು ಹಿಂದೆಗೆದರು.

ಶ್ರೀ. ಜಗತ್‌ದಾರರು ಪ್ರಾಯದ ಜವ್ವನಿಗರಲ್ಲ; ಮುಪ್ಪಿನ ಮುದುಕರು. ೭೦ರ ಗಡಿದಾಟಿದವರು!

ಪರಿವರ್ತನೆಯಾಗುವುದು ಯುಗಧರ್ಮ!

ಬದಲಾವಣೆಗಳಾಗುತ್ತಿರುವುದು ಇಂದಿನ ಯುಗಧರ್ಮ. ಅದರಲ್ಲೂ ಇಂದಿನ 'ವಿಜ್ಞಾನ' ಯುಗದ ಬದಲಾವಣೆಗಳು ಮಿಂಚು ವೇಗವನ್ನೂ ಮೀರಿದವುಗಳು.

ಯೂರೋಪಿನ ಯುದ್ಧವು ಇದಕ್ಕೆ ದೊಡ್ಡ ನಿದರ್ಶನ. ಇಂದು ಕಂಡ ರಾಷ್ಟ್ರ ನಾಳೆಗಿಲ್ಲ. ನಿನ್ನೆ ಬೆಳಗಿದ ದೇಶ ಇಂದು ಅಳಿದಿದೆ. ಈಗ ನಗುತ್ತಿರುವ ಜನರು ನಾಳೆಯೋ ಅಳಬೇಕಾಗುವುದೋ ಎಂಬ ಭೀತಿ ಎಲ್ಲರಿಗೂ ಇದೆ.

ಪ್ರಪಂಚವೆಲ್ಲಾ ಅದರಲ್ಲೂ ಬ್ರಿಟಿಷ್ ಪ್ರಪಂಚವು— ಅರಿತುಬಿಟ್ಟನೆಂದು ಹೇಳುತ್ತಿದ್ದ ಹಿಟ್ಲರನೂ ಇಂದು ಪ್ರಬಲನಾಗಿ ಮುಂದೊತ್ತಿದ್ದಾನೆ. ಹಿಟ್ಲರನಿಗೆ ಪರಾಕ್ರಮವುಂಟೆಂದು ಚರ್ಚಿಲ್ಲರೂ ಈಗ ಒಪ್ಪುತ್ತಾರೆ. ಆದರೆ ಬ್ರಿಟಿಷರು ಗೆಲ್ಲುವುದು ಖಂಡಿತವೆಂದು ಬ್ರಿಟಿಷ್ ಪ್ರಧಾನರು ನಿರ್ಧಾರವನ್ನೂ ಮಾಡಿಕೊಂಡಿದ್ದಾರೆ.

ರಶ್ಯಾ ಜರ್ಮನ್‌ಗಳೊಳಗೆ ಒಮ್ಮತವಿದೆಯೆಂಬುದು ಹಿಟ್ಲರನ ಹೇಳಿಕೆಯಾದರೆ, ಅವುಗಳು ಅನ್ಯೋನ್ಯ ಮುಸುಗುತ್ತಿವೆಯೆಂದು ಬ್ರಿಟಿಷರ ವಾದ.

ಜಪಾನಿನ ರಾಯಭಾರಿಯೊಬ್ಬನೂ ಈಗ ಬ್ರಿಟಿಷರ ಮಾತನ್ನೇ ದೃಢಪಡಿಸುತ್ತಾನೆ.

"ರಶ್ಯವನ್ನು ತುಳಿದು ಹದಮಾಡಲು ಹಿಟ್ಲರನು ಬಯಸುತ್ತಾನೆ" ಎಂದು ಜರ್ಮನಿಯಲ್ಲಿ ಜಪಾನಿನ ಹೊಸ ರಾಯಭಾರಿಯಾಗಿ ನೇಮಕಹೊಂದಿದ ಲೆ| ಕ| ಓಶಿಮಾ ಇವನ ಹೇಳಿಕೆ.

ಲೆ| ಕ| ಓಶಿಮಾ ಮೊದಲಿಂದಲೇ ರಶ್ಯಾ ವಿದ್ವೇಷಿಯೆಂಬುದು ರಾಜನೀತಿಜ್ಞರಿಗೆ ಚೆನ್ನಾಗಿ ತಿಳಿದ ವಿಚಾರವಾಗಿದೆ.

ಅಮೇರಿಕದಲ್ಲಿ ಮೊನ್ನೆ ಭಾರೀ ಚುನಾವಣೆ ನಡೆಯಿತಷ್ಟೆ. ಅಧ್ಯಕ್ಷ ಸ್ಥಾನಕ್ಕೆ ವೆಂಡಲ್ ವಿಲ್ಕಿಯನ್ನು ಸೋಲಿಸಿ, ರೂಸ್‌ವೆಲ್ಟರೇ ಮೂರನೆಯ ಸಲವೂ ಅಧ್ಯಕ್ಷರಾಗಿ ಬಂದರು. ಅಮೇರಿಕದಲ್ಲಿ ಇದೊಂದು ಅಸಂಭವವೇ ಸಂಭವಿಸಿತು.

ಆದರೆ ರೂಸ್‌ವೆಲ್ಟರು ಇನ್ನಾರು ತಿಂಗಳಲ್ಲಿಯೇ ವಿರಾಮ ಹೊಂದುವರೆಂದೂ ತಮ್ಮ ಅಧ್ಯಕ್ಷ ಪೀಠವನ್ನು ಬಿಟ್ಟುಕೊಡುವರೆಂದೂ ನ್ಯೂಸ್‌ರಿವ್ಯೂ ಪತ್ರಿಕೆಯು ತಿಳಿಸುತ್ತದೆ.

ಇಷ್ಟು ಮಾತ್ರವಲ್ಲದೆ ಅವರು ತನ್ನ ಸ್ಥಾನಕ್ಕೆ, ಹೆನ್ರಿ, ಎ. ವಾಲೆಸರನ್ನು ನಿಯೋಜಿಸುವರೆಂದೂ ಅದು ಅಧಿಕೃತವಾಗಿ ಪ್ರಕಟಿಸುತ್ತದೆ.

Ready for Sale!

1941

SHARADA POCKET DIARIES

Small Size	0 – 5 – 0
" " (with pocket)	0 – 6 – 0
Big Size	0 – 9 – 0
" " (with pocket)	0 – 11 – 0

SHARADA PRESS, MANGALORE.



ವಿಜ್ಞಾನಯುಗ

ನಾಯಿ ರೋಮದಿಂದ ರೇಶ್ಮೆನೂಲು

ಯುದ್ಧ ಪ್ರಸಂಗದಿಂದ ಬ್ರಿಟನಿಗೆ ರೇಶ್ಮೆನೂಲು ಆಮದಾಗುವುದು ಬಹು ಮಟ್ಟಿಗೆ ನಿಂತುಹೋಗಿರುವದರಿಂದ ಬ್ರಿಟಿಷರು ಈಗ ಕೃತಕರೇಶ್ಮೆಯಿಂದ ದಿನಕಳೆಯಬೇಕಾಗಿ ಬಂದಿರುವುದು. ಆದರೂ ಕೃತಕ ರೇಶ್ಮೆಯನ್ನು ತಯಾರಿಸುವ ಹಿಂದಿನ ಉಪಾಯಗಳಲ್ಲಿ ಯಾವುದೂ ಅವರ ಹೆಚ್ಚಿನ ಪ್ರಯೋಜನಕ್ಕೆ ಈಗ ಬರದಾಗಿದೆ. ಕಾರಣ, ಅದಕ್ಕೆ ಬೇಕಾದ ಕಚ್ಚಾ ಸಾಮಾಗ್ರಿಗಳೂ ಈಗ ಸಕಾಲದಲ್ಲಿ ದೊರೆಯುವುದಿಲ್ಲ. ಆದ್ದರಿಂದ ಬ್ರಿಟನಿನ ವಿಜ್ಞಾನಿಗಳು ನಾಯಿಯ ರೋಮದಿಂದ ಕೃತಕ ರೇಶ್ಮೆಯನ್ನು ತಯಾರಿಸುವುದನ್ನು ಕಂಡುಹಿಡಿದಿದ್ದಾರೆ. ಬ್ರಿಟನಿನಲ್ಲಿ ನಾಯಿಗಳನ್ನು ಸಾಕುವದು ಸರ್ವಜನಪ್ರಿಯವಾದ ಒಂದು ವಿನೋದವೃತ್ತಿಯಾಗಿದೆ ಆದ್ದರಿಂದ ಅಲ್ಲಿ ನಾಯಿರೋಮವೂ ಧಾರಾಳವಾಗಿ ದೊರೆಯುತ್ತಿರುವುದು ಇದನ್ನೇ ಕೃತಕ ರೇಶ್ಮೆಗೆ ಉಪಯೋಗಿಸುವುದರಿಂದ ಒಂದೇಟಿನಿಂದ ಎರಡು ಫಲಗಳನ್ನು ಪಡೆದಂತಾಗಿದೆ. ಮೊದಲನೆಯದಾಗಿ ಬೆಲೆಯಿಲ್ಲದ ನಾಯಿರೋಮಕ್ಕೆ ಬೆಲೆ ಬರುವಂತಾಯಿತು ಎರಡನೆಯದಾಗಿ ಯುದ್ಧಕಾಲದ ಅವಶ್ಯಕತೆಯೂ ಪೂರ್ತಿಯಾದಂತಾಯಿತು

ಪ್ರಾಚೀನ ಭಾರತದಲ್ಲಿ ಗ್ಯಾಸ್ ಮಾಸ್ಕ್‌ಗಳು

ಯುದ್ಧಕಾಲದಲ್ಲಿ ವಿಷಗಾಳಿಯಿಂದುಂಟಾಗುವ ಅಪಘಡಗಳಿಂದ ತಪ್ಪಿಸಿಕೊಳ್ಳಲಿಕ್ಕೆ ಗ್ಯಾಸ್‌ಮಾಸ್ಕುಗಳೆಂಬ ಮುಖವಾಡಗಳನ್ನು ಉಪಯೋಗಿಸುವ ವಿಷಯವು ಆಧುನಿಕ ಯುರೋಪಿಯನರಿಗೆ ಮಾತ್ರ ತಿಳಿದಿರುವುದು. ಅದು ಪ್ರಾಚೀನ ಕಾಲದ ಭಾರತೀಯ ವಿಜ್ಞಾನಿಗಳಿಗೂ ಆಯುರ್ವೇದ ಪಂಡಿತರಿಗೂ ತಿಳಿದಿತ್ತೆಂದು ಪಂಜಾಬು ಪ್ರಾಂತೀಯ ಆಯುರ್ವೇದ ಸಮ್ಮೇಲನದ ಅಧ್ಯಕ್ಷರಾದ ಪಂಡಿತ ಬಾರ್ಕತ್ ರಾಮರು ತಮ್ಮ ಅಧ್ಯಕ್ಷಭಾಷಣದಲ್ಲಿ ಹೇಳಿದ್ದಾರೆ. ಆಯುರ್ವೇದವು ಚತುರ್ವೇದಗಳಂತೆ ಬಹು ಪುರಾತನವಾಗಿರುವುದು. ಈ ಆಯುರ್ವೇದದಿಂದಲೇ ಯೂನಾನಿ ಕ್ರಮವು ಏರ್ಪಟ್ಟಿತು. ದೇಶವು ಪರತಂತ್ರವಾದ್ದರಿಂದ ಅತಿ ಉತ್ಕೃಷ್ಟವಾದ ಆಯುರ್ವೇದ ಚಿಕಿತ್ಸಾಪದ್ಧತಿಯು ಪ್ರೋತ್ಸಾಹವಿಲ್ಲದೆ ಮೂಲೆಗುಂಪಾಯಿತು. ಅದರೊಂದಿಗೆ ದೇಶದ ವೈಜ್ಞಾನಿಕ ಮಹತ್ವವೂ ಕಡಿಮೆಯಾಯಿತು ಎಂಬುದರಲ್ಲಿ ಸಂದೇಹವಿಲ್ಲ

ಗಿಡಮರಗಳಿಂದ ಪೆಟ್ರೋಲು

ಪೆಟ್ರೋಲಿನ ಉಪಯೋಗವು ಮಿತಿಮೀರಿರುವ ಈ ಕಾಲದಲ್ಲಿ ಯಾವಾಗ ಪೆಟ್ರೋಲಿನ ಪೂರೈಕೆ ನಿಂತು ಹೋದೀತೋ ಎಂದು, ಅನೇಕರು ಚಿಂತಾಕುಲರಾಗಿರುವರು. ಈ ಸಂದರ್ಭದಲ್ಲಿ ಪ್ರೊಫೆಸರ್ ಅರ್ನೆಸ್ಟ್ ಬರ್ಲ ಎಂಬ ವಿಜ್ಞಾನಿಗಳು ಮಾಡಿರುವ ಒಂದು ಶೋಧದಿಂದ ಹೊಸ ಆಶೆಯು ಉಂಟಾಗಿದೆ ಈ ವಿಜ್ಞಾನಿಗಳು ಗಿಡಮರಗಳಿಂದ ಪೆಟ್ರೋಲು ತಯಾರಿಸುವ ಕ್ರಮವನ್ನು ಕಂಡು ಹಿಡಿದಿದ್ದಾರೆ. ಅಲ್ಲದೆ ಗಿಡಮರಗಳಿಂದ ಕಲ್ಲಿದ್ದಲು ಮೊದಲಾದವನ್ನು ತಯಾರಿಸಬಹುದಾಗಿ ಅವರು ಹೇಳಿರುವರು ಆದರೆ ಅವರ ಈ ಹೊಸಕ್ರಮವು ಬೇಗನೇ ಬಳಕೆಗೆ ಬರುವಂತೆ ಇಲ್ಲ. ಭೂಮಿಯಿಂದ ಪೆಟ್ರೋಲು ಕಲ್ಲಿದ್ದಲು ಮೊದಲಾದುವನ್ನು ಬೇಕಾದಷ್ಟು ತೆಗೆಯಲಿಕ್ಕೆ ಬರುತ್ತಿರುವಷ್ಟು ಕಾಲ, ಈ ಪ್ರೊಫೆಸರರ ವಿಧಾನವು ಬಳಕೆಗೆ ಬರಲು, ಹೆಚ್ಚು ಖರ್ಚಿನದ್ದಾಗುತ್ತದೆ ಭೂಮಿಯೊಳಗಿನ ಉಗ್ರಾಣವು ಮುಗಿದ ಅನಂತರವೇ ಪ್ರೊಫೆಸರರ ಚಳಕಾರ ಕ್ರಮವು ಲಾಭಕಾರಿಯಾಗುವದು ಮತ್ತು ಅದು ಉಪಯೋಗಕ್ಕೆ ಬರುವದುಎಂದು ಅಂದಾಜು ಮಾಡಲಾಗಿದೆ

ಭಾರತ ಸರಕಾರದ ಧನ ಸಹಾಯ

ಕಲ್ಕತ್ತಾ ವಿಶ್ವವಿದ್ಯಾಲಯದ ಸಾಯನ್ಸ ಕೊಲೇಜಿಗೆ ಭಾರತ ಸರಕಾರವು ಎಂಟು ಸಾವಿರ ರೂಪಾಯಿಗಳನ್ನು ಕೊಟ್ಟು, ಈ ಹಣವನ್ನು ವೈಜ್ಞಾನಿಕ ಉಪಕರಣಗಳು, ಔಷಧಿಗಳು, ಮೊಲ್ಯಾಸಸುಗಳು ಮತ್ತು ಪ್ಲೆಸ್ಟಿಕುಗಳ ಸಂಶೋಧನೆಗಳ ಬಗ್ಗೆ ಉಪಯೋಗಿಸಬೇಕೆಂದು ತಿಳಿಸಿದೆ ಇಂತಹ ವಿಷಯದಲ್ಲಿ ಯಾರು ಎಷ್ಟು ಸಹಾಯ ಮಾಡಿದರೂ ಅದು ಕಡಿಮೆಯೇ ಯಾಕೆಂದರೆ ಇತರ ದೇಶಗಳ ಸಾಲಿನಲ್ಲಿ ನಮ್ಮ ದೇಶದ ವೈಜ್ಞಾನಿಕ ಅಭಿವೃದ್ಧಿಯು ಬಹಳ ಕಡಿಮೆ ಎಂದು ಹೇಳಬಹುದು

ಬೆಸ್ತರ ಸಹಾಯಕ್ಕೆ ಎರೆಹುಳುಗಳು

ಯಂತ್ರನಿರ್ಮಾಣದಿಂದ ಹೊಸ ಯುಗ ಆರಂಭವಾಯಿತೆಂಬುದರಲ್ಲಿ ಸಂದೇಹವಿಲ್ಲ ಯಂತ್ರಗಳಿಂದ ಸಮಾಜಕ್ಕೆ ಹಾನಿಯಾಗುತ್ತದೆ. ಆದರೆ ಯಂತ್ರಗಳು ಮನುಷ್ಯನಿಗೆ ಗುಲಾಮರಾದಾಗ ಅವುಗಳಿಂದ ಸಮಾಜಕ್ಕೆ ಲಾಭವಾಗುತ್ತದೆ. ಅಮೇರಿಕವು ಯಂತ್ರನಿರ್ಮಾಣದಲ್ಲಿ ಇತರ ಎಲ್ಲ ದೇಶಗಳಿಗಿಂತ ಮುಂದುವರಿದಿದೆ. ಅಲ್ಲಿ ಯಾವ ಸಾಮಾನು ಬೇಕಾದರೂ ಕೈಯಿಂದ ಎತ್ತಿ ತರಬೇಕಾದ್ದಿಲ್ಲ. ಪ್ಲಾಟ್ ಮೆಶೀನು ಎಂಬ ಯಂತ್ರವಿದೆ ಮೊದಲೇ ಮಾಡಿಟ್ಟ ವ್ಯವಸ್ಥೆಯಂತೆ ಅದು ಕೇಳಿದ ವಸ್ತುವನ್ನು ಎತ್ತಿಕೊಡುವುದು ಬೆಸ್ತರಿಗೆ ಮೀನು ಹಿಡಿಯಲಿಕ್ಕೆ ಎರೆಹುಳುಗಳು ಬೇಕಾಗಿವೆಯಷ್ಟೆ ಈಗ ಅವರು ಆ ಹುಳುಗಳನ್ನು ಹುಡುಕಿಕೊಂಡು ಹೊಲಗಳಲ್ಲಿ ಅಲೆಯಬೇಕಾಗಿಲ್ಲ ಕಂಪೆನಿಯವರು ಬೇಕಾದಷ್ಟು ಎರೆಹುಳಗಳನ್ನು ಸಪ್ಲೈ ಮಾಡುವರು ಕಂಪೆನಿಯ ಕಾರ್ಯಾಲಯದಲ್ಲಿ ಒಂದು ಪ್ಲಾಟ್ ಮೆಶಿನು ಇದೆ ಬೆಸ್ತನು ಬಂದು ಅದರಲ್ಲಿ ನಾಣ್ಯ ಹಾಕಿದರಾಯಿತು ಅದರ ಬೆಲೆಗೆ ತಕ್ಕಷ್ಟು ಎರೆಹುಳುಗಳು ಆ ಯಂತ್ರದಿಂದ ಹೊರಬಂದು ಅವನ ಬುಟ್ಟಿಯಲ್ಲಿ ಬೀಳುವುವು ಕಂಪೆನಿಗೆ ಈ ವೃತ್ತಿಯಿಂದ ತುಂಬಾ ಲಾಭವಾಗುತ್ತಿದೆಯಂತೆ ಇದರಿಂದ ಬೆಸ್ತರಿಗೆ ಲಾಭವಾಯಿತೋ ಹಾನಿಯಾಯಿತೋ ಅದು ಮುಂದಕ್ಕೆ ತಿಳಿಯಬೇಕು

ಕಿತ್ತಳೆಗಳಿಗೆ ಕೃತಕ ಬಣ್ಣ

ಕಿತ್ತಳೆ ಹಣ್ಣಿನಲ್ಲಿ ಸಿ ಜೀವಾತು ತುಂಬಾ ಇರುತ್ತದೆ ಆದ್ದರಿಂದ ಮಕ್ಕಳಿಗೆ ಅದು ಅತ್ಯುತ್ತಮವಾದ ಪೋಷಕ ಪದಾರ್ಥವಾಗಿದೆ ಬೇರೆ ಬೇರೆ ಋತುಕಾಲ ಮತ್ತು ಬೇರೆ ಬೇರೆ ಜಾತಿಯ ಕಿತ್ತಳೆ ಹಣ್ಣುಗಳ ಗುಣ ರೂಪು ಬಣ್ಣ ಆಕಾರಗಳಲ್ಲಿ ವ್ಯತ್ಯಾಸವು ಇರುತ್ತದೆ ಇವುಗಳ ವ್ಯತ್ಯಾಸವನ್ನು ಇಟ್ಟುಕೊಂಡೇ, ಇಷ್ಟರ ತನಕ ಉತ್ತಮ ಜಾತಿಯ ಕಿತ್ತಳೆ ಹಣ್ಣುಗಳನ್ನು ಆರಿಸುವುದು ಸುಲಭವಾಗುತ್ತಿತ್ತು. ಪರಂತು ಈಗ ಕಿತ್ತಳೆ ಹಣ್ಣುಗಳಿಗೆ ವೈಜ್ಞಾನಿಕ ಕ್ರಮದಲ್ಲಿ ಕೃತಕ ಬಣ್ಣವನ್ನು ಕೊಡಲು ಆರಂಭಿಸಿರುವುದರಿಂದ, ಬಣ್ಣ ವ್ಯತ್ಯಾಸದಿಂದ ಕಿತ್ತಳೆ ಜಾತಿಗಳನ್ನು ತಿಳಿಯುವುದು ಕಷ್ಟವಾಗಿದೆ. ಎಥಿಲಿನ ಗೇಸದಲ್ಲಿ ನೂರು ನಾಲು ದಿನಗಳ ತನಕ ಇಡುವದರಿಂದ ಕಿತ್ತಳೆಗಳಿಗೆ ಉತ್ತಮ ಬಣ್ಣವು ಬರುತ್ತದೆ. ಪರಂತು ಇದು ಹಳೆಯ ಕ್ರಮವಾಯಿತು ಆದರೆ ಈಗ ಕೋಲ್ ತಾರ್ ಎಂಬ ಬಣ್ಣದ ನೀರಿನಲ್ಲಿ ಕಿತ್ತಳೆ ಹಣ್ಣುಗಳನ್ನು ಮುಳುಗಿಸಿ ಇಡುವುದರಿಂದ ಅವುಗಳಿಗೆ ಉತ್ತಮವಾದ, ಶುಭ್ರವಾದ ಮತ್ತು ಸುಂದರವಾದ ಬಣ್ಣವು ಬರುತ್ತದೆ. ಆದರೆ ಹೀಗೆ ಕಿತ್ತಳೆಗಳಿಗೆ ಕೃತಕ ಬಣ್ಣವನ್ನು ಕೊಡುವುದರಿಂದ ಅವುಗಳ ಪೋಷಕ ಗುಣವು ಕುಂದುತ್ತದೋ ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ.

ಪುಸ್ತಕ-ವಿಮರ್ಶೆ

ಕಣ್ಣು ಮತ್ತು ಅದರ ರಕ್ಷಣೆ:— ಬರೆದವರು —ಡಾ। ಶ್ಯಾಮಣ್ಣ ಬಿ ಎ, ಎಂ. ಬಿ. ಬಿ. ಎಸ್. ಮೈಸೂರು ವಿಶ್ವವಿದ್ಯಾಲಯದ ಪ್ರಚಾರ ಪುಸ್ತಕಮಾಲೆಯ ೨೦ನೆಯ ಪುಸ್ತಕ. ಬೆಲೆ ಎರಡಾಣೆ.

ಮನುಷ್ಯನ ಪ್ರಧಾನವಾದೊಂದು ಅಂಗವು ಕಣ್ಣು ಅದರ ರಕ್ಷಣೆಯ ವಿಷಯವಾಗಿ ಮನುಷ್ಯನು ಎಷ್ಟು ಜಾಗರೂಕನಾಗಿದ್ದರೂ ಸಾಲದು. ಜನರು ಮಾಡುವ ಹಲವು ತೆರದ ನಿರ್ಲಕ್ಷ್ಯದಿಂದ ಈಗೀಗ ಕಣ್ಣಿನ ರೋಗಗಳು ಹೆಚ್ಚುತ್ತಿವೆ. ಆದರೆ ಕಣ್ಣಿನ ವಿಷಯವಾಗಿ, ಅದರ ರಕ್ಷಣೆಯ ವಿಷಯವಾಗಿ ತಿಳಕೊಳ್ಳುವುದರಿಂದ ಕಣ್ಣು ಬೇನೆಯನ್ನು ಬರದಂತೆ ಮಾಡಬಹುದು ಆ ಸಲುವಾಗಿ ಡಾ। ಶ್ಯಾಮಣ್ಣನವರು ಈ ಪುಸ್ತಕದಲ್ಲಿ ಅಗತ್ಯ ವಿಚಾರಗಳನ್ನು ಸಚಿತ್ರವಾಗಿಯೂ ಸರಳವಾಗಿಯೂ ವಿವರಿಸಿರುವರು

ಸಾರ್ವಜನಿಕ ವೆಚ್ಚ:— ಬರೆದವರು ಎಂ ಎಚ್ ಗೋಪಾಲ್ ಎಂ. ಎ, ಪಿ. ಎಚ್ ಡಿ ಮೈಸೂರು ವಿಶ್ವವಿದ್ಯಾಲಯದ ಪ್ರಚಾರ ಪುಸ್ತಕಮಾಲೆಯ ೨೧ನೆಯ ಪುಸ್ತಕ ಬೆಲೆ ಎರಡಾಣೆ

ಜನತೆ ಮತ್ತು ಸರಕಾರಗಳ ಸಂಬಂಧವು ಈಗೀಗ ಹೆಚ್ಚು ಹೆಚ್ಚಾಗುತ್ತಾ ಬರುತ್ತಿದೆ, ಇಂತಹ ಸಂದರ್ಭಗಳಲ್ಲಿ ರಾಜ್ಯದ ಆಡಳಿತವನ್ನು ತಿಳಿಸುವ ಪುಸ್ತಕಗಳ ಅಗತ್ಯವಿದೆ ಸಾರ್ವಜನಿಕ ವೆಚ್ಚವು ನಮ್ಮ ಗ್ರಾಮ ಪಂಚಾಯಿತಿಯಿಂದ ಹಿಡಿದು, ಕೇಂದ್ರ ಸರಕಾರದ ವರೆಗೆ ಇರುವ ಹಣಕಾಸಿನ ವಿಚಾರ ಈ ಪುಸ್ತಕವು ಆ ವಿಚಾರವನ್ನೊಳಗೊಂಡಿದೆ. ಈ ವಿಸ್ತಾರವಾದ ವಿಷಯವನ್ನು ಲೇಖಕರು, ಸಮಂಜಸವಾಗಿ ಕೂಲಂಕಷವಾಗಿ ಅಂಕೆಸಂಖ್ಯೆಗಳೊಡನೆ ಈ ಪುಸ್ತಕದಲ್ಲಿ ಸ್ವಲ್ಪದರಲ್ಲಿ ಕೊಟ್ಟಿದ್ದಾರೆ. ಮೈಸೂರಿನ ಆಡಳಿತೆಯ ವೆಚ್ಚದ ಕುರಿತೂ ಪ್ರತ್ಯೇಕ ಪ್ರಕರಣವೊಂದನ್ನು ಬರೆದಿರುವರು

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ

ಕಂಬಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

ಉಡುಪಿ ಶ್ರೀಕೃಷ್ಣ ಸನ್ನಿಧಿಯಲ್ಲಿ

ಪೂರ್ವಾಚಾರ್ಯರ ಸಂಪ್ರದಾಯದಂತೆ ಸಪ್ತೋತ್ಸವವು

ತಾ. 8-1-1941 ಬುಧವಾರ ರಾತ್ರಿ ಸಪ್ತೋತ್ಸವಾರಂಭ
,, 13-1-1941 ಸೋಮವಾರ ಮಕರಸಂಕ್ರಮಣ ಮಹಾರಥೋತ್ಸವ
,, 14-1-1941 ಮಂಗಳವಾರ ಹಗಲು ಚೂರ್ಣೋತ್ಸವ (ಅವಭೃತ)
,, 5-2-1941 ಬುಧವಾರ ಶ್ರೀ ಮಧ್ವನವಮಿ ಮಹೋತ್ಸವ

ಸಂದರ್ಭದಲ್ಲಿ ಬರುವ ಯಾತ್ರಾರ್ಥಿಗಳಿಗೆ ಪರ್ಯಾಯ ಶ್ರೀ ಅದ್ಮಾರುಮಠದಿಂದ ಸಕಲ ಸೌಕರ್ಯಗಳೂ ಏರ್ಪಡಿಸಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಪತ್ರ ಮೂಲಕವಾಗಲಿ ಅಥವಾ ಸ್ವತಹಾ ಬಂದು ತಿಳಕೊಳ್ಳಬಹುದು

JOINT MANAGERS.

The Combined Booking Agency, MANGALORE.

The Joint Booking Office, KODIALBAIL.

THE
Canara Banking Corporation Ltd.,
(INCORPORATED IN BRITISH INDIA)
Estd: 1906
Head Office UDIPI S. Kanara

Our attractive Rates on Deposits.

FIXED DEPOSITS

3 to 6 months	2½% p. a
6 to 9 ,,	3% ,,
One year	3½% ,,
Two years	4% ,,
SHORT TERM Deposits	2½% p. a
Current Account	1% p. a
Savings Bank.	2½% *

Particulars of other kinds of deposits on application.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ರೀತಿಯ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಡೋಂಗರೆ ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ
ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆಶಯ ಅಶಕ್ತಿಯಾಗುತ್ತದೆ.—ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೂರು [illegible] ಔಷಧ ಬೇಡಿರಿ. [illegible] ವೈದ್ಯ ಎಲ್. ಸಿ. ಪಿ. ಎಸ್. [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ [illegible] ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯರೂ. ೪—೦—೦ ವಿ. ಪಿ. ಆ. ೮

ವಿಳಾಸ: ಸರ್ವೋದಯ ವಿಶ್ವ ಔಷಧಾಲಯ [illegible] ಮಿರಜ್, S. M. C.

Regd. No. M 340

ಸ್ವದೇಶಾಭಿಮಾನಿ

27-12-1940

(ESTABLISHED 1908).

The Bombay Life Assurance Company, Ltd.

FIGURES FOR 1939

Completed business exceeds	Rs. 1.42 Crores
Total Funds exceed	Rs. 1.52 Crores
Premium income during the year exceeds ...	Rs. 37½ Lakhs
Claims paid during the year exceed	Rs. 10 Lakhs

THE INSURANCE POLICIES

Form Best Investment in War time. This is the unique opportunity Agents to put through larger business. To Insure or to Represent,

Please apply to

KOCHIKAR BROTHERS, LIMITED.

MADRAS BRANCH SECRETARIES AND

Chief Agents for Bombay City & Suburbs,

The Bombay Life Building,

Sir Lalubhai Samaldas Road,

Gandhi Nagar, UDIPI.

OR ANY OF OUR FOLLOWING OFFICES AT:

Puthiyara, Calicut

Car Street, Mangalore.

Central Station Road, Trivandrum.

Gautam Nivas, Charni Road, Girgaum, Bombay No. 4.

Post Box No. 337 Mount Road, Madras.

Visweswarapuram Circle, Bangalore City.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಚಾಕು ತಗುಲ್ಪುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ... ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

... ದೊರೆಯುವುದು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!